ಶ್ರೀರಸ್ತು.

ಆಳಿದ ಮಹಾಸ್ವಾಮಿಯವರಾದ ಮಹೀಶೂರ ಶ್ರೀಮನ್ಮಹಾರಾಜ

ಶ್ರೀಕೃಷ್ಣರಾಜ ಒಡೆಯರ್ ಬಹದ್ದೂರ್ ರವರಿಂದ ರಚಿಸಲ್ಪಟ್ಟ

## ಶ್ರೀಕೃಷ್ಣರಾಜ ವಾಣೀವಿಲಾಸವೆಂಬ

# ಮಹಾಭಾರತದ ಕನ್ನಡ ಟೀಕು.

## ಅರಣ್ಯಪರ್ವ.

ಶ್ರೀಮನ್ಮಹಾರಾಜ ಶ್ರೀಚಾಮರಾಜೇಂದ್ರ ಒಡೆಯರ್ ಬಹದ್ದೂರ್ ಜಿ. ಸಿ. ಎಸ್. ಐ. ಮಹಾಸ್ವಾಮಿಯವರ ಅಜ್ಞಾನುಸಾರವಾಗಿ



ಮೈಸೂರು:

ಸರಕಾರದ ಬ್ರ್ಯಾಂಚ್ ಮುದ್ರಾಕ್ಷರಶಾಲೆಯಲ್ಲಿ ಮುದ್ರಿಸಲ್ಪಟ್ಟಿತು,

೧೮೯೦.

# ಪೀಠಿಕೆ.

ಶ್ರೀಮದಶೇಷ ಜಗಜ್ಜನ್ಮಾದಿಕಾರಣಸ್ವರೂಪನೂ ಅವಾಙ್ಮನಸಗೋಚರನೂ ಅಪ್ರಮೇಯನೂ ಆದ ಪರಬ್ರಹ್ಮನಿಂದ ಪರಿಕಲ್ಪಿತವಾದ ಜಗತ್ತಿನಲ್ಲಿ ಪರಮಕಾರುಣಿಕರೂ ಷಡ್ಗುಣೈಶ್ವರ್ಯಸಂಪನ್ನರೂ ಮಹಾನುಭಾವರೂ ಆದ ವೇದವ್ಯಾಸ ಮಹರ್ಷಿಗಳು ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವಣವೇದ, ಶಿಕ್ಷೆ, ವ್ಯಾಕರಣ, ಛಂದಸ್ಸು, ನಿರುಕ್ತ, ಜ್ಯೋತಿಷ, ಕಲ್ಪ, ಮೀಮಾಂಸಾಶಾಸ್ತ್ರ, ನ್ಯಾಯಶಾಸ್ತ್ರ, ಪುರಾಣ, ಧರ್ಮಶಾಸ್ತ್ರಗಳೆಂಬ ಹದಿನಾಲ್ಕು ವಿದ್ಯೆಗಳ ರಹಸ್ಯಾರ್ಥಗಳು ಪ್ರತ್ಯೇಕ ಪ್ರತ್ಯೇಕವಾಗಿರುವದರಿಂದ ಮಂದ ಮಧ್ಯಮಬುದ್ಧಿಗಳುಳ್ಳ ಮನುಷ್ಯರಿಗೆ ಸುಲಭವಾಗಿ ತಿಳಿಯುವದಕ್ಕೆ ಅಶಕ್ಯಗಳೆಂದು ತಿಳಿದು ; ಸಮಸ್ತ ಜನಗಳಿಗೂ ಆ ಹದಿನಾಲ್ಕು ವಿದ್ಯೆಗಳ ರಹಸ್ಯಾರ್ಥಗಳನ್ನು ಒಂದೇ ಗ್ರಂಥದಿಂದ ತಿಳುಹಿಸಬೇಕೆಂಬ ಪರಮಾನುಗ್ರಹವುಳ್ಳವರಾಗಿ ; ಆದಿಪರ್ವ, ಸಭಾಪರ್ವ, ಅರಣ್ಯಪರ್ವ, ವಿರಾಟಪರ್ವ, ಉದ್ಯೋಗಪರ್ವ, ಭೀಷ್ಮಪರ್ವ, ದ್ರೋಣಪರ್ವ, ಕರ್ಣಪರ್ವ, ಶಲ್ಯಪರ್ವ, ಗದಾಪರ್ವ, ಸ್ತ್ರೀಪರ್ವ, ಶಾಂತಿಪರ್ವ, ಅನುಶಾಸನಿಕಪರ್ವ, ಅಶ್ವಮೇಧಪರ್ವ, ಆಶ್ರಮವಾಸಿಕಪರ್ವ, ಮೌಸಲಪರ್ವ, ಮಹಾಪ್ರಸ್ಥಾನಪರ್ವ, ಸ್ವರ್ಗಾರೋಹಣಪರ್ವಗಳೆಂಬ ಹದಿನೆಂಟು ಪರ್ವಗಳಿಂದ ಪರಿಶೋಭಿತವಾಗಿಯೂ, ಆಶ್ಚರ್ಯಕರವಾದ ಅನೇಕ ಇತಿಹಾಸಗಳಿಂದ ಕೇಳತಕ್ಕವರಿಗೆ ಮನೋಹರವಾಗಿಯೂ, ಧರ್ಮಾದಿಚತುರ್ವಿಧಪುರುಷಾರ್ಥಗಳಿಗೆ ಸಾಧಕವಾಗಿಯೂ, ರಾಜನೀತಿಯನ್ನೂ ಅನೇಕವಾದ ಧರ್ಮಸೂಕ್ಷ್ಮಗಳನ್ನೂ ತಿಳಿಯುವದಕ್ಕೆ ಸುಲಭವಾಗಿಯೂ, ವಿದ್ವಜ್ಜನಗಳಿಂದ ಶ್ಲಾಘನೀಯವಾಗಿಯೂ, ಸಕಲ ಶಾಸ್ತ್ರಾರ್ಥಪ್ರತಿಪಾದಕವಾಗಿಯೂ, ಪಂಚಮವೇದವೆಂದು ಪ್ರಖ್ಯಾತವಾಗಿಯೂ, ಇರುವ ಸಪಾದ ಲಕ್ಷಗ್ರಂಥಸಂಖ್ಯೆಯುಳ್ಳ ಮಹಾಭಾರತವೆಂಬ ಇತಿಹಾಸವನ್ನು ರಚಿಸಿದರು.

ಆ ಇತಿಹಾಸದ ತಾತ್ಪರ್ಯವನ್ನು ತಿಳಿಯುವದು ಸಂಸ್ಕೃತವನ್ನು ತಿಳಿಯದವರಿಗೆ ಅಶಕ್ಯವಾದದ್ದರಿಂದ, ಆ ಮಹಾಭಾರತದ ಅಭಿಪ್ರಾಯವು ಸಕಲಜನಸಾಧಾರಣವಾಗಿ ಸುಲಭವಾಗಿ ತಿಳಿಯಬೇಕೆಂದು ಯೋಚಿಸಿ ಲೋಕೋಪಕಾರಾರ್ಥವಾಗಿ, ಶ್ರೀಮತ್ಸಮಸ್ತಭೂಮಂಡಲ ಮಂಡನಾಯಮಾನ ನಿಖಿಲದೇಶಾವತಂಸ ಕರ್ಣಾಟಕಜನಪದಸಂಪದಧಿಷ್ಠಾನಭೂತ ಶ್ರೀಮನ್ಮಹೀಶೂರಮಹಾಸಂಸ್ಥಾನಮಧ್ಯದೇದೀಪ್ಯಮಾನ ಸಕಲಕಲಾನಿಧಿ ಕುಲಕ್ರಮಾಗತರಾಜ ಕ್ಷಿತಿಪಾಲಪ್ರಮುಖ ನಿಖಿಲನಿಜರಾಜಾಧಿರಾಜ ಮಹಾರಾಜ ಚಕ್ರವರ್ತಿಮಂಡಲಾನುಭೂತದಿವ್ಯರತ್ನಸಿಂಹಾಸನಾರೂಢ ಶ್ರೀಮದ್ರಾಜಾಧಿರಾಜ ಪರಮೇಶ್ವರ ಪ್ರೌಢಪ್ರತಾಪಾಪ್ರತಿಮವೀರ ನರಪತಿ ಬಿರುದೆಂತೆಂಬರಗಂಡ ಲೋಕೈಕವೀರ ಯದುಕುಲಪಯಃಪಾರಾವಾರಕಲಾನಿಧಿ ಶಂಖಚಕ್ರಕುಠಾರಾಂಕುಶಮಕರಮತ್ಸ್ಯಶರಭಸಾಳ್ವಗಂಡಭೇರುಂಡ ಧರಣೀವರಾಹಹನುಮದ್ಗರುಡಕಂಠೀರವಾದ್ಯನೇಕಬಿರುದಾಂಕಿತ ಶ್ರೀಚಾಮರಾಜಮಹೀಪಾಲಧರ್ಮಪತ್ನೀ ಕೆಂಪನಂಜಮಾಂಬಾಗರ್ಭಸುಧಾಂಬುಧಿರಾಕಾಸುಧಾಕರಾಯಮಾನ ಶ್ರೀಚಾಮುಂಡಿಕಾವರಪ್ರಸಾದೋದ್ಭವರಾದ ಆತ್ರೇಯಸಗೋತ್ರಆಶ್ವಲಾಯನಸೂತ್ರಋಕ್ಶಾಖಾನುವರ್ತಿಗಳಾದ ಶ್ರೀಮಹೀಶೂರಪುರವರಾಧೀಶ ಶ್ರೀಮತ್ಕೃಷ್ಣರಾಜ ಒಡೆಯರ್ ಬಹದ್ದೂರರವರು ಪುರಾತನವಾದ ಮಹಾಭಾರತದ ಪುಸ್ತಕಗಳಲ್ಲಿರುವಂತೆ ಅದರ ಅಭಿಪ್ರಾಯವನ್ನು ಲೇಶಮಾತ್ರವೂ ಬಿಡದೆ, ವಿದ್ವಾಂಸರ ಸಹಾಯದಿಂದ ಕರ್ಣಾಟಕ ಭಾಷೆಯಲ್ಲಿ ಟೀಕಿಸಿ, "ಶ್ರೀಕೃಷ್ಣರಾಜ ವಾಣೀವಿಲಾಸ" ವೆಂಬ ಹೆಸರಿನಿಂದ ಈ ವಾಕ್ಯರೂಪವಾದ ಗ್ರಂಥವನ್ನು ಸ್ವಸ್ತಿ ಶ್ರೀವಿಜಯಾಭ್ಯುದಯ ಶಾಲಿವಾಹನ ಶಕ ೧೭೬೨ನೇ ವಿಕ್ರಮನಾಮ ಸಂವತ್ಸರದ ಚೈತ್ರಶುದ್ಧ ೧ ಬುಧವಾರದಲ್ಲಿ ಸಂಪೂರ್ಣವಾಗಿ ರಚಿಸಿದರು.

ಈ ಗ್ರಂಥವು ರಚಿಸಲ್ಪಟ್ಟು ಬಹಳ ದಿವಸಗಳಾದಾಗ್ಯೂ ಪ್ರಚಾರಕ್ಕೆ ಅವಕಾಶವನ್ನು ಪಡೆಯದಿತ್ತು. ಈಚೆಗೆ ಶ್ರೀಮನ್ಮಹೀಶೂರ ಮಹಾರಾಜರವರಾದ ಶ್ರೀಚಾಮರಾಜೇಂದ್ರ ಒಡೆಯರ್ ಬಹದ್ದೂರ್ ಜಿ. ಸಿ. ಎಸ್. ಐ. ಯವರ ಆಜ್ಞಾನುಸಾರವಾಗಿ ಮೈಸೂರಲ್ಲಿ ಸ್ಥಾಪಿಸಲ್ಪಟ್ಟಿದ್ದ ಅರಮನೇ ಇಲಾಖೆ ಜಗನ್ಮೋಹನ ಮುದ್ರಾಕ್ಷರಶಾಲೆಯಲ್ಲಿ ವಿರಾಟಪರ್ವವೂ ಉದ್ಯೋಗಪರ್ವವೂ; ಬೆಂಗಳೂರಲ್ಲಿರುವ ಚಾಮುಂಡೇಶ್ವರೀ ಮುದ್ರಾಶಾಲೆಯಲ್ಲಿ ಆದಿಪರ್ವವೂ ಸಭಾಪರ್ವವೂ ಭೀಷ್ಮಪರ್ವವೂ ದ್ರೋಣಪರ್ವವೂ ಶಲ್ಯಪರ್ವವೂ ಸಾಪ್ತಿಕಪರ್ವವೂ ಸ್ತ್ರೀಪರ್ವವೂ ಮತ್ತು ಶಾಂತಿಪರ್ವವೂ; ಮೈಸೂರಲ್ಲಿರುವ ಸರಕಾರದ ಬ್ರ್ಯಾಂಚ್ ಮುದ್ರಾಶಾಲೆಯಲ್ಲಿ ಕರ್ಣಪರ್ವವೂ ಅರಣ್ಯಪರ್ವವೂ ಲೋಕೋಪಕಾರಾರ್ಥವಾಗಿ ಮುದ್ರಿಸಿ ಪ್ರಚಾರಪಡಿಸಲ್ಪಟ್ಟವೆ.

ಈ ಅರಣ್ಯಪರ್ವವನ್ನು ಶ್ರೀಮನ್ಮಹಾರಾಜರವರ ದರ್ಬಾರ್ ಬಕ್ಷಿಯವರಾದ ರಾಯ ಬಹದ್ದೂರ್ ಅಂಬಲ್ ನರಸಿಂಹಅಯ್ಯಂಗಾರವರು ಶ್ರೀಮನ್ಮಹಾರಾಜರವರ ಆಜ್ಞಾನುಸಾರವಾಗಿ ಅರಮನೆಯ ವಿದ್ವಾಂಸರಾದ ಗರಳಪುರಿ ವೇ॥ ಐಯ್ಯಶಾಸ್ತ್ರಿಗಳು, ಶ್ರೀಮನ್ಮಹಾರಾಜ್ಞಿಯವರ ಗರಲ್ ಸ್ಕೂಲ್ ಅಸಿಸ್ಟೆಂಟ್ ಮಾಸ್ಟರ್ ಎಮ್. ಲಕ್ಷ್ಮೀನಾರಣಪ್ಪನವರು ಮುಂತಾದವರುಗಳಿಂದ ತಪ್ಪುಗಳಿಲ್ಲದಂತೆ ಪರಿಶೋಧನೆಮಾಡಿಸಿ, ಮುದ್ರಿಸುವಂತೆ ಅಪ್ಪಣೆಕೊಡಿಸಿದ ಮೇರೆಗೆ ಈ ಪರ್ವವನ್ನು ಆ ವಿದ್ವಾಂಸರ ಸಹಾಯದಿಂದ ಸಾಧ್ಯವಾದಮಟ್ಟಿಗೆ ಚೆನ್ನಾಗಿ ಪರಿಶೋಧಿಸಿ ಮುದ್ರಿಸಿದೆ.

ಮೈಸೂರು,
ಶಪಟಂಬರ್ ೧೮೯೨.

ಬೆ. ಚಿ. ರಾಜಪ್ಪ,
ಸರಕಾರದ ಬ್ರ್ಯಾಂಚ್ ಮುದ್ರಾಶಾಲೆಯ ಫೋರ್‌ಮ್ಯಾನ್.

# ವಿ ಷ ಯ ಸೂ ಚಿ ಕೆ .

ಶ್ರೀರಸ್ತು.

# ಶ್ರೀಕೃಷ್ಣರಾಜ ವಾಣೀವಿಲಾಸವೆಂಬ ಮಹಾಭಾರತದ ಕನ್ನಡ ಟೀಕು.

## ಅರಣ್ಯಪರ್ವ.

### ೧ನೇ ಅಧ್ಯಾಯ.—ಪಾಂಡವರು ವನವಾಸಕ್ಕೆ ತೆರಳಿದ ವೃತ್ತಾಂತ.

ಸೂತಪೌರಾಣಿಕನು ನೈಮಿಶಾರಣ್ಯವಾಸಿಗಳಾದ ಶೌನಕಾದಿ ಋಷಿಗಳನ್ನು ಕುರಿತು ಹೇಳುತ್ತಾನೆ:—ಕೇಳಿರೈ ಋಷಿಗಳಿರಾ, ಆ ಬಳಿಕ ಜನಮೇಜಯನು ವೈಶಂಪಾಯನಮುನೀಂದ್ರನನ್ನು ಕುರಿತು—ಎಲೈ ವೈಶಂಪಾಯನ ಮುನೀಂದ್ರನೆ, ಮಂತ್ರಿಸಹಿತರಾಗಿ ವೈರವನ್ನು ಬೆಳಸುತ್ತಿರುವ ದುರಾತ್ಮರಾದ ಕೌರವರೊಡನೆ ಪಗಡೆಯನ್ನಾಡಿ, ಅವರ ವಂಚನೆಯಿಂದ ಸಕಲೈಶ್ವರ್ಯಗಳನ್ನೂ ಸೋತು, ಕ್ರೋಧವನ್ನುಂಟುಮಾಡತಕ್ಕ ಅವರ ದುರ್ಭಾಷೆಗಳನ್ನು ಕೇಳಿ, ದುಃಖಿತರಾವ ನಮ್ಮ ಪೂರ್ವಪಿತಾಮಹರಾದ ಪಾಂಡವರು ದ್ರೌಪದೀ ಸಹಿತರಾಗಿ ವನವಾಸಕ್ಕೆ ಹೋದರಷ್ಟೆ. ಆಗ ಲೋಕಪಾಲರಂತೆ ತೇಜಸ್ವಿಗಳಾದ ಅವರ ಸಂಗಡ ಯಾರುಯಾರು ಹೋದರು? ಶೂರರಾದ ಆ ಮಹಾತ್ಮರು ಅರಣ್ಯದಲ್ಲಿ ಹನ್ನೆರಡು ವರ್ಷಗಳನ್ನು ಹ್ಯಾಗೆ ಕಳೆದರು? ಈ ಮಹಾತ್ಮರು ವನವಾಸ ಮಾಡುವಾಗ, ಯಾವ ಯಾವ ಅರಣ್ಯದಲ್ಲಿ ಏನೇನು ಆಹಾರಮಾಡಿಕೊಂಡು, ಯಾವ ರೀತಿಯಿಂದಿದ್ದರು? ಭಾಗ್ಯವತಿಯಾಗಿಯೂ ಸತ್ಯಶೀಲೆಯಾಗಿಯೂ ಪತಿವ್ರತಾಶಿರೋಮಣಿಯಾಗಿಯೂ ಇದ್ದುಕೊಂಡು ಎಂದಿಗೂ ದುಃಖವನ್ನರಿಯದ ದ್ರೌಪದಿಯು ಆ ವನವಾಸ ಕ್ಲೇಶವನ್ನು ಹ್ಯಾಗೆ ಸಹಿಸಿಕೊಂಡಿದ್ದಳು? ಎಲೈ ಮುನೀಂದ್ರನೆ, ಮಹಾತೇಜಸ್ವಿಗಳಾದ ಆ ಪಾಂಡವರ ಸುಚರಿತ್ರೆಯನ್ನು ನಿನ್ನಿಂದ ಕೇಳಬೇಕೆಂದು ನನಗೆ ಕುತೂಹಲ ಉಂಟಾಗಿರುವದು. ಅದನ್ನು ವಿಸ್ತಾರವಾಗಿ ವಿವರಿಸಿ ಹೇಳಬೇಕೆಂದು ಕೇಳಿದನು.

ಆ ಮಾತನ್ನು ಕೇಳಿ, ವೈಶಂಪಾಯನ ಮುನೀಂದ್ರನು ಹೇಳುತ್ತಾನೆ—ಎಲೈ ರಾಯನೆ, ಪಗಡೆ ಯಾಟದಲ್ಲಿ ಸೋತ ಪಾಂಡವರು ತಮ್ಮತಮ್ಮ ಆಯುಧಗಳನ್ನು ತೆಗೆದುಕೊಂಡು, ದ್ರೌಪದಿಯೊಡನೆ ಹಸ್ತಿನಾವತಿಯ ವರ್ಧಮಾನವೆಂಬ ಪುರದ್ವಾರದಿಂದ ಉತ್ತರಾಭಿಮುಖವಾಗಿ ಹೊರಡಲು, ಆಗ ಇಂದ್ರಸೇನ ಮೊದಲಾದ ಹದಿನಾಲ್ಕುಮಂದಿ ಭೃತ್ಯರು ರಥಗಳನ್ನು ಸಿದ್ಧಪಡಿಸಿಕೊಂಡು, ಸುಭದ್ರೆ ಮೊದಲಾದ ಸ್ತ್ರೀಜನರನ್ನು ಕರೆದುಕೊಂಡು, ಅವರ ಸಂಗಡ ಹೊರಟರು. ಆಗ ಹಸ್ತಿನಾಪುರದಲ್ಲಿದ್ದ ಪ್ರಜೆಗಳೆಲ್ಲರೂ ಪಾಂಡವರು ವನವಾಸಕ್ಕೆ ಹೋದದ್ದನ್ನು ತಿಳಿದು ವ್ಯಸನ ಪಡುತ್ತ, ಭೀಷ್ಮ, ವಿದುರ, ದ್ರೋಣ, ಕೃಪರನ್ನು ಭಾರಿಭಾರಿಗೂ ನಿರ್ಭಯವಾಗಿ ನಿಂದಿಸುತ್ತ, ಈ ಮುಂದೆ ಹೇಳುವ ಪ್ರಕಾರವಾಗಿ ಒಬ್ಬರಿಗೊಬ್ಬರು ಮಾತನಾಡಿಕೊಳ್ಳುತ್ತಿದ್ದರು. "ಅಯ್ಯೋ! ಈ ಪಾಪಾತ್ಮನಾದ ದುರ್ಯೋಧನನು ದುರಾತ್ಮರಾದ ಶಕುನಿ, ಕರ್ಣ, ದುಶ್ಶಾಸನರ ಸಹಾಯದಿಂದ ದಯಾರಹಿತನಾಗಿ, ಗುರುಜನರಲ್ಲಿ ದ್ವೇಷಮಾಡಿ, ನೀಚಸ್ವಭಾವದಿಂದ ಸದಾಚಾರವನ್ನು ಬಿಟ್ಟು, ಸಜ್ಜನರನ್ನು ತ್ಯಜಿಸಿ, ದುರಭಿಮಾನಿಯಾಗಿ ದ್ರವ್ಯಾಶೆಯಿಂದ ಎಲ್ಲಾ

ರಾಜ್ಯವನ್ನೂ ತಾನೇ ಆಳಬೇಕೆಂದು ಅಪೇಕ್ಷಿಸಿರುವನಲ್ಲಾ ! ಇನ್ನು ಮೇಲೆ ಈ ಕೌರವವಂಶವೂ, ನಾವೂ, ನಮ್ಮ ಮನೆಗಳೂ, ಈ ಭೂಮಂಡಲವೂ ಬಂದೂ ಕ್ಷೇಮದಿಂದಿರಲಾರವು. ಆದ್ದರಿಂದ ಜಿತೇಂದ್ರಿಯರಾಗಿಯೂ, ದಯಾಶಾಲಿಗಳಾಗಿಯೂ, ಮಹಾನುಭಾವರಾಗಿಯೂ, ಧರ್ಮಾತ್ಮರಾಗಿಯೂ, ಅಕಾರ್ಯದಲ್ಲಿ ಲಜ್ಜೆಯುಳ್ಳವರಾಗಿಯೂ, ಕೀರ್ತಿಶಾಲಿಗಳಾಗಿಯೂ ಇರುವ ಪಾಂಡವರ ಸಂಗಡ ನಾವೂ ಅರಣ್ಯಕ್ಕೆ ಹೋಗುವದೇ ಒಳ್ಳೇದು." ಈ ರೀತಿಯಲ್ಲಿ ಮಾತನಾಡಿಕೊಂಡು, ಕರ್ತವ್ಯವನ್ನು ನಿಶ್ಚಯಿಸಿ, ಸಕಲರೂ ಪಾಂಡುವರ ಸಮೀಪಕ್ಕೆ ಬಂದು, ಅವರಿಗೆ ವಂದನೆಯನ್ನು ಮಾಡಿ ಅವರೊಡನೆ "ಎಲೈ ಮಹಾತ್ಮರಾದ ಪಾಂಡವರೆ, ನಿಮಗೆ ಮಂಗಳವಾಗಲಿ! ನಿಮ್ಮಗಲಿ ವ್ಯಸನಪಡುವ ನಮ್ಮನ್ನು ಬಿಟ್ಟು, ನೀವೆಲ್ಲಿಗೆ ಹೋಗುವಿರಿ! ನೀವೆಲ್ಲಿಗೆ ಗಮಿಸಿದರೂ ನಾವೂ ನಿಮ್ಮ ಸಂಗಡಲೇ ಬರುವೆವು. ದಯಾಶೂನ್ಯರಾದ ಕೌರವರು ಅಧರ್ಮದಿಂದ ನಿಮ್ಮನ್ನು ಸೋಲಿಸಿದ್ದನ್ನು ಕೇಳಿ ಭಯಪಟ್ಟಿರುವ ನಮ್ಮನ್ನು ನೀವು ಕೈ ಬಿಡಕೂಡದು. ನಿಮಗೆ ಆಶ್ರಿತರಾಗಿಯೂ ಮಿತ್ರರಾಗಿಯೂ ನಿರಂತರದಲ್ಲೂ ಹಿತಚಿಂತಕರಾಗಿಯೂ ಇರುವ ನಾವು ದುಷ್ಟನಾದ ದುರ್ಯೋಧನನ ರಾಜ್ಯದಲ್ಲಿದ್ದರೆ, ನಮಗೆ ಕ್ಷೇಮ ಉಂಟಾಗಲಾರದು. ಎಲೈ ಪುರುಷಶ್ರೇಷ್ಟರೇ ಕೇಳಿ : ಲೋಕದಲ್ಲಿ ಒಳ್ಳೇಗುಣವೂ ಕೆಟ್ಟಗುಣವೂ ಉಂಟಾಗುವುದು ಸಹವಾಸದಿಂದಲೇ. ಅದು ಹ್ಯಾಗೆಂದರೆ, ಗಂಧದ್ರವ್ಯದ ಸಂಬಂಧದಿಂದ ಬಟ್ಟೆ, ನೀರು, ತೈಲ, ಭೂಮಿ ಮೊದಲಾದದ್ದು ವಾಸನೆಯನ್ನು ಹೊಂದುವಹಾಗೆ ಸಹವಾಸದಿಂದಲೇ ಎಲ್ಲಾ ಗುಣಗಳೂ ಉಂಟಾಗುವವು. ಮೂಢರ ಸಹವಾಸವು ಅಜ್ಞಾನಕ್ಕೆ ಕಾರಣವಾದದ್ದು ; ಸಜ್ಜನರ ಸಹವಾಸವು ದಿನದಿನಕ್ಕೆ ಧರ್ಮವೃದ್ಧಿಗೆ ಕಾರಣವಾದದ್ದು. ಆದ್ದರಿಂದ, ಶ್ರೇಯಸ್ಸನ್ನು ಅಪೇಕ್ಷಿಸತಕ್ಕವರು ಪ್ರಾಜ್ಞರಾಗಿಯೂ ವೃದ್ಧರಾಗಿಯೂ ಸುಶೀಲರಾಗಿಯೂ ತಪಸ್ವಿಗಳಾಗಿಯೂ ಇರುವ ಸಜ್ಜನರ ಸಹವಾಸವನ್ನು ಮಾಡಬೇಕು. ಯಾರ ಜನ್ಮವೂ ಜ್ಞಾನವೂ ಚರಿತ್ರೆಯೂ ಪರಿಶುದ್ಧವಾದವುಗಳೋ, ಅವರ ಜೊತೆಯಲ್ಲಿ ವಾಸಮಾಡುವದು ಶಾಸ್ತ್ರಾಧ್ಯಯನಕ್ಕಿಂತಲೂ ಶ್ರೇಷ್ಠವಾದದ್ದು. ಇದುವರೆಗೂ ಯಾವ ಧರ್ಮಸಾಧನೆಯನ್ನೂ ಮಾಡಿಕೊಳ್ಳದೆ ಇರುವ ನಾವು ಪುಣ್ಯಶೀಲರಾದ ನಿಮ್ಮ ಜೊತೆಯಲ್ಲಿದ್ದುಕೊಂಡು ಪುಣ್ಯವನ್ನು ಸಂಪಾದಿಸಿಕೊಳ್ಳುವೆವು. ದುರ್ಜನರ ದರ್ಶನ, ಸ್ಪರ್ಶನ, ಸಲ್ಲಾಪ, ಸಹವಾಸಾದಿಗಳಿಂದ ಧರ್ಮವೂ ಸದಾಚಾರವೂ ನಷ್ಟವಾಗುವುದಲ್ಲದೆ, ಚಿತ್ತಶುದ್ಧಿಯೂ ಕೆಟ್ಟುಹೋಗುವದು ; ಮತ್ತು ನೀಚರ ಸಹವಾಸದಿಂದ ಎಂತವರಿಗಾದರೂ ಬುದ್ಧಿಯು ಕೆಟ್ಟುಹೋಗುವದು. ದೊಡ್ಡವರ ಸಹವಾಸದಿಂದ ಒಳ್ಳೇಬುದ್ಧಿಯುಂಟಾಗುವದು ; ಮಧ್ಯಮರಾದ ಪುರುಷರ ಸಹವಾಸದಿಂದ ಅವರ ಬುದ್ಧಿಯೇ ಉಂಟಾಗುವದು. ಎಲೈ ಪಾಂಡವರೆ, ಲೋಕಕ್ಕೂ ವೇದಕ್ಕೂ ಸಮ್ಮತವಾಗಿಯೂ, ಧರ್ಮಾರ್ಥಕಾಮಗಳನ್ನು ಸಂಪಾದಿಸತಕ್ಕವುಗಳಾಗಿಯೂ ಇರುವ ಸಮಸ್ತಸದ್ಗುಣಗಳೂ ಮಹಾತ್ಮರಾದ ನಿಮ್ಮಲ್ಲಿ ನೆಲೆಗೊಂಡಿರುವದರಿಂದ, ಶ್ರೇಯಸ್ಕಾಮಿಗಳಾದ ನಾವು ಗುಣವಂತರಾದ ನಿಮ್ಮ ಸಮೀಪದಲ್ಲಿ ವಾಸಮಾಡಬೇಕೆಂದು ಅಪೇಕ್ಷಿಸುತ್ತೇವೆ" ಎಂದು ನುಡಿದರು.

ಆ ಮಾತನ್ನು ಕೇಳಿ ಧರ್ಮರಾಯನು ಅವರನ್ನು ಕುರಿತು "ಪ್ರಜೆಗಳಿರಾ, ನಮ್ಮಲ್ಲಿ ಅಂಥಾಗುಣ ಬಂದೂ ಇಲ್ಲದಿದ್ದಾಗ್ಯೂ ಅವುಗಳಿರುವಂತೆ ವಿಶ್ವಾಸದಿಂದಲೂ ದಯೆಯಿಂದಲೂ ನಮ್ಮನ್ನು ಶ್ಲಾಘಿಸುವಿರಿ. ಇದರಿಂದ ನಾವು ಧನ್ಯರೇಸರಿ! ತಮ್ಮಂದಿರೊಡಗೂಡಿರುವ ನಾನು ಬಂದು ಮಾತನ್ನು ಹೇಳಿಕೊಳ್ಳುವೆನು. ನಮ್ಮಲ್ಲಿರುವ ಸ್ನೇಹದಿಂದಲೂ ಕೃಪೆಯಿಂದಲೂ ನೀವು ಅನ್ಯಥಾ ನಡೆಯಕೂಡದು. ಹಸ್ತಿನಾನಗರದಲ್ಲಿ ವಾಸಮಾಡುತ್ತಿರುವ ಭೀಷ್ಮಾಚಾರ್ಯರನ್ನೂ, ವಿದುರನನ್ನೂ, ಧೃತರಾಷ್ಟ್ರರಾಯನನ್ನೂ, ನಮ್ಮ ತಾಯಿಯಾದ ಕುಂತೀದೇವಿಯನ್ನೂ, ನಮ್ಮ ಸ್ನೇಹಿತರಾದವರನ್ನೂ ನಮಗೋಸ್ಕರ ನೀವು ಪಟ್ಟಣದಲ್ಲೇ ಇದ್ದುಕೊಂಡು ಕಾಪಾಡಬೇಕು. ನಿಮ್ಮನ್ನು ಹೊಂದಿರತಕ್ಕವರೆಲ್ಲಾ ದುಃಖಪಟ್ಟಾರು ! ನಮಗೋಸ್ಕರ ಬಹುದೂರ ಬಂದಿರಿ. ಇನ್ನು ಹಿಂತಿರುಗಿರಿ. ನೀವು ನಮ್ಮ ಹಿಂದೆ ಬಂದರೆ ನಮಗೆ ವಿರುದ್ಧವನ್ನು ಎಣಿಸಿದಹಾಗಾಗುವದು. ನಮ್ಮ ಸ್ವಜನರನ್ನೆಲ್ಲಾ ನಿಮ್ಮ ಅಧೀನಮಾಡಿರುವೆವು. ಅವರನ್ನು ನೀವು ಪ್ರೀತಿಯಿಂದ ಕಾಣಬೇಕು. ಈ ಕಾರ್ಯವು ಎಲ್ಲಾ ಕಾರ್ಯಗಳಿಗಿಂತಲೂ ಉತ್ತಮವಾದದ್ದೆಂದು ನನ್ನ ಮನಸ್ಸಿನಲ್ಲಿ ತಿಳಿದಿರುವೆನು. ನೀವು ಹಾಗೆ ಮಾಡಿದರೆ, ನನಗೆ ತುಂಬಾ ಸಂತೋಷ ಉಂಟಾಗುವದಲ್ಲದೆ, ನನಗೆ ಸತ್ಕಾರವನ್ನು ಮಾಡಿದಹಾಗೂ ಆಗುವದು" ಎನಲು, ಆ ಮಾತನ್ನು ಕೇಳಿ, ಪ್ರಜೆಗಳೆಲ್ಲರೂ ತಮ್ಮ ಕೋರಿಕೆಯು

ಸಿದ್ಧಿಸದೇ ಹೋದದ್ದರಿಂದ, "ಹಾ! ಧರ್ಮರಾಯನೆ!" ಎಂಬ ಆರ್ತಸ್ವರದಿಂದ ಹಂಬಲಿಸುತ್ತ, ಆತನ ಗುಣಗಳನ್ನೇ ಪುನಃಪುನಃ ಸ್ಮರಿಸುತ್ತ, ಹಿಂತಿರುಗುವದಕ್ಕೆ ಇಷ್ಟವಿಲ್ಲದೆ ಇದ್ದಾಗ್ಯೂ, ಪಾಂಡವರ ಅಪ್ಪಣೆಯಿಂದ ಹಿಂತಿರುಗಿ ಹಸ್ತಿನಾನಗರಕ್ಕೆ ಹೊರಟು ಹೋದರು.

ಬಳಿಕ ಪಾಂಡವರು ರಥಗಳನ್ನೇರಿ ಗಂಗಾತೀರದಲ್ಲಿರುವ ಪ್ರಮಾಣವೆಂಬ ಹೆಸರುಳ್ಳ ಒಂದು ಆಲದ ಮರದ ಕೆಳಗೆ ಇಳಿದು, ತಮ್ಮ ನಿತ್ಯಕರ್ಮಗಳನ್ನು ನೆರವೇರಿಸಿ, ಆ ಗಂಗೋದಕವನ್ನೇ ಪಾನಮಾಡಿ ದುಃಖದಿಂದ ಆ ರಾತ್ರಿಯನ್ನು ಕಳೆದರು. ಆ ಸಮಯದಲ್ಲಿ ಕೆಲವುಮಂದಿ ಬ್ರಾಹ್ಮಣರು ಅಗ್ನಿಹೋತ್ರಸಹಿತರಾಗಿಯೂ, ಕೆಲವರು ಅಗ್ನಿಹೋತ್ರರಹಿತರಾಗಿಯೂ, ಶಿಷ್ಯರಿಂದಲೂ ಬಂಧುಗಳಿಂದಲೂ ಕೂಡಿಕೊಂಡು, ವಿಶ್ವಾಸದಿಂದ ಪಾಂಡವರ ಸಮೀಪಕ್ಕೆ ಬಂದರು. ವೇದವೇದಾಂಗ ಪಾರಂಗತರಾದ ಆ ಬ್ರಾಹ್ಮಣರಿಂದ ಸಹಿತನಾದ ಧರ್ಮರಾಯನು ಅಧಿಕವಾಗಿ ಶೋಭಿಸುತ್ತಿದ್ದನು. ರಮ್ಯವಾಗಿಯೂ ದಾರುಣವಾಗಿಯೂ ಇರುವ ಆ ನಿಶೀಥಸಮಯದಲ್ಲಿ ಅಗ್ನಿಹೋತ್ರಿಗಳಾದ ಆ ಬ್ರಾಹ್ಮಣರು ವೇದಘೋಷದಿಂದ ಪಾಂಡವರಿಗೆ ಆಶೀರ್ವಾದವನ್ನು ಮಾಡಿ ಮಾತನಾಡಲುಪಕ್ರಮಿಸಿ, ಹಂಸಧ್ವನಿಗೆ ಸಮಾನವಾದ ಕಂಠಸ್ವರದಿಂದ ಕುರುಶ್ರೇಷ್ಠನಾದ ಧರ್ಮರಾಯನನ್ನು ಸಮಾಧಾನಪಡಿಸುತ್ತ ಆ ರಾತ್ರಿಯನ್ನು ಕಳೆದರು.

## ೨ನೇ ಅಧ್ಯಾಯ.—ಶೌನಕನು ಧರ್ಮರಾಯನಿಗೆ ಹೇಳಿದ ಕಥೆ.

ಆ ಬಳಿಕ ಪಾಂಡವರು ಆ ರಾತ್ರಿ ಕಳೆಯಲು, ಪ್ರಾತಃಕಾಲದಲ್ಲಿ ನಿತ್ಯಕರ್ಮಗಳನ್ನು ನೆರವೇರಿಸಿ ಮುಂದೆ ವನಕ್ಕೆ ತೆರಳುವ ಸಮಯದಲ್ಲಿ, ಅನೇಕರಾದ ಯತಿಗಳೂ ಬ್ರಾಹ್ಮಣರೂ ಎದುರಿಗೆ ನಿಲ್ಲಲು, ಅವರನ್ನು ನೋಡಿ ಧರ್ಮರಾಯನು "ಎಲೈ ಬ್ರಾಹ್ಮಣರೆ, ನಾವು ರಾಜ್ಯವನ್ನೂ ಐಶ್ವರ್ಯವನ್ನೂ ಕಳೆದುಕೊಂಡು ದುಃಖಿತರಾಗಿ, ನಮ್ಮಗಳ ಆಹಾರಕ್ಕೆ ಫಲಮೂಲಮಾಂಸಗಳನ್ನು ನಂಬಿಕೊಂಡು, ಅನೇಕ ಮೃಗಗಳಿಂದಲೂ ಸರ್ಪಗಳಿಂದಲೂ ಭಯಂಕರವಾದ ವನಕ್ಕೆ ಹೋಗುತ್ತಿರುವೆವು. ವನವಾಸವು ಬ್ರಾಹ್ಮಣರಾದ ನಿಮಗೆ ಕ್ಲೇಶಕರವಾಗುವದು. ನಿಮಗೆ ಕ್ಲೇಶವನ್ನುಂಟುಮಾಡಿದರೆ ದೇವತೆಗಳಿಗೂ ಬಾಧೆ ಬರುವದೆಂಬಲ್ಲಿ, ನಮ್ಮಂತವರಿಗೆ ಹೇಳತಕ್ಕದ್ದೇನು? ಆದ್ದರಿಂದ ನೀವು ನಿಮಗೆ ಎಲ್ಲಿಸುಖವೋ ಅಲ್ಲಿಗೆ ಮರಳಿ ಹೋಗಬಹುದು" ಎಂದು ನುಡಿದನು. ಆಮಾತನ್ನು ಕೇಳಿ, ಆ ಬ್ರಾಹ್ಮಣರು "ಎಲೈ ರಾಯನೆ, ವನದಲ್ಲಿ ನಿಮ್ಮಂತೇ ನಾವೂ ಸುಖದುಃಖಗಳನ್ನು ಅನುಭವಿಸಿಕೊಂಡಿರುವೆವು. ಭಕ್ತರಲ್ಲಿ ವಿಶ್ವಾಸವುಳ್ಳ ದೇವತೆಗಳುಸಹ ಸದಾಚಾರಪರರಾದ ಬ್ರಾಹ್ಮಣರಲ್ಲಿ ವಿಶೇಷವಾಗಿ ವಿಶ್ವಾಸವುಳ್ಳವರಾಗಿರುವರು; ಹೀಗಿರುವಲ್ಲಿ ಧರ್ಮಜ್ಞರಾದ ನೀವು ಆಶ್ರಿತರಾದ ನಮ್ಮನ್ನು ಪರಿತ್ಯಜಿಸಬಹುದೆ?" ಎನಲು, ಆಮಾತನ್ನು ಕೇಳಿ ಧರ್ಮರಾಯನು "ಎಲೈ ಬ್ರಾಹ್ಮಣರೆ, ನನಗೂ ಬ್ರಾಹ್ಮಣರಲ್ಲಿ ವಿಶೇಷವಾಗಿ ಭಕ್ತಿಯಿರುವದು! ಸಹಾಯಭೂತರಾಗಿ ಬರತಕ್ಕ ನಿಮ್ಮನ್ನು ಬಿಡುವದು ನನಗೆ ದುಃಖಕರವಾಗಿರುವದು! ಈಗ ನಮ್ಮೆಲ್ಲರನ್ನೂ ಪೋಷಿಸುವದಕ್ಕಾಗಿ ಕಂದಮೂಲ ಫಲಗಳನ್ನು ನನ್ನ ತಂಮ್ಮಂದಿರಷ್ಟೆ ತರತಕ್ಕವರು? ಅವರು ದ್ರೌಪದಿಗೆ ಉಂಟಾದ ಅವಮಾನದಿಂದಲೂ, ರಾಜ್ಯನಾಶದಿಂದಲೂ ದುಃಖಾಕ್ರಾಂತರಾಗಿರುವರು! ಮೊದಲೇ ದುಃಖಿತರಾಗಿರುವ ಅವರನ್ನು ನಮ್ಮೆಲ್ಲರನ್ನೂ ಪೋಷಿಸುವ ವಿಷಯದಲ್ಲೂ ಹ್ಯಾಗೆ ಕ್ಲೇಶಪಡಿಸಲಿ!" ಎಂದು ಹಂಬಲಿಸಿದನು. ಆ ಮಾತನ್ನು ಕೇಳಿ ಬ್ರಾಹ್ಮಣರು "ಎಲೈ ರಾಯನೆ, ನಮ್ಮನ್ನು ಪೋಷಿಸತಕ್ಕ ಚಿಂತೆಯನ್ನು ನೀನು ಮಾಡಬೇಡ. ಅರಣ್ಯದಲ್ಲಿ ನಾವೇ ಕಂದಮೂಲಾದಿಗಳನ್ನು ತಂದು, ನಮ್ಮ ಉದರ ಪೋಷಣೆಯನ್ನು ಮಾಡಿಕೊಂಡು, ಭಗವದ್ಧ್ಯಾನದಿಂದಲೂ ಮಂತ್ರಜಪಾದಿಗಳಿಂದಲೂ ನಿಮ್ಮ ಶ್ರೇಯಃಪ್ರಾರ್ಥನೆಯನ್ನು ಮಾಡುತ್ತ, ನಾನಾಪ್ರಕಾರವಾದ ರಮಣೀಯವಾದ ಇತಿಹಾಸಗಳನ್ನು ನಿಮಗೆ ಹೇಳುತ್ತ, ನಿಮ್ಮನ್ನು ಸಂತೋಷಪಡಿಸುತ್ತ ನಾವೂ ಸಂತೋಷಪಡುತ್ತಿರುವೆವು" ಎಂದು ಹೇಳಿದರು. ಅದನ್ನು ಕೇಳಿ, ಧರ್ಮರಾಯನು "ಎಲೈ ಬ್ರಾಹ್ಮಣರೆ, ನೀವು ಹೇಳಿದ್ದೆಲ್ಲಾ ನಿಜವೇಸರಿ; ನಿಮ್ಮ ಸಹವಾಸವೂ ನಮಗೆ ಬೇಕಾದದ್ದೇ. ಆದರೆ ಕ್ಲೇಶಕ್ಕೆ ಅನರ್ಹರಾದ ನೀವು ಕಂದಮೂಲಾದಿಗಳನ್ನು ತಂದು ಆತ್ಮಪೋಷಣೆಯನ್ನು ಮಾಡಿಕೊಳ್ಳುತ್ತ, ನನ್ನಲ್ಲಿ ವಿಶ್ವಾಸದಿಂದ ಕ್ಲೇಶಪಡುವದನ್ನು ನಾನು ಹ್ಯಾಗೆ ನೋಡಲಿ?

ಇದು ನನಗೆ ತುಂಬಾಕೊರತೆಯನ್ನು ಉಂಟುಮಾಡುವದಲ್ಲದೆ, ಅಪಮಾನವನ್ನೂ ಉಂಟುಮಾಡುವದು! ಆಹಾ! ಇದಕ್ಕೆಲ್ಲಾ ಕಾರಣಭೂತರಾದ ಪಾಪಾತ್ಮರಾದ ಕೌರವರನ್ನು ನಿಂದಿಸಬೇಕು" ಎಂದು ನುಡಿದು, ದುಃಖಪಡುತ್ತ ಅಲ್ಲೇ ಭೂಮಿಯಲ್ಲಿ ಕೂತುಕೊಂಡನು.

ಆಗ ಸಾಂಖ್ಯಶಾಸ್ತ್ರದಲ್ಲೂ ಯೋಗಶಾಸ್ತ್ರದಲ್ಲೂ ನಿಪುಣನಾಗಿ, ಆತ್ಮವಿಚಾರಪರನಾದ, ಶೌನಕನೆಂಬ ಬ್ರಾಹ್ಮಣಶ್ರೇಷ್ಠನು ಚಿಂತಾಕುಲನಾದ ಧರ್ಮ ರಾಯನನ್ನು ನೋಡಿ "ಎಲೈ ರಾಯನೆ ಕೇಳು, ನಿರಂತರದಲ್ಲಿಯೂ ಅನೇಕವಾದ ದುಃಖಗಳೂ ಭಯಗಳೂ ಮೂಢನಾದವನಿಗೆ ಸಂಭವಿಸುವವು; ಅವು ಜ್ಞಾನಿಯಾದವನಿಗೆ ಸಂಭವಿಸಲಾರವು. ವಿವೇಕವನ್ನು ಕೆಡಿಸತಕ್ಕದ್ದಾಗಿಯೂ, ಬಹುದೋಷಯುಕ್ತವಾಗಿಯೂ, ಶ್ರೇಯಸ್ಸಿಗೆ ಪ್ರತಿಬಂಧಕವಾಗಿಯೂ ಇರುವ ಕಾರ್ಯದಲ್ಲಿ, ನಿಮ್ಮಂತಾ ಬುದ್ಧಿಶಾಲಿಗಳು ಎಂದಿಗೂ ಪ್ರವರ್ತಿಸುವದಿಲ್ಲ. ಯೋಗಶಾಸ್ತ್ರೋಕ್ತವಾದ ಯಮನಿಯಮ ಮೊದಲಾದ ಅಷ್ಟಾಂಗಯೋಗಗಳಿಂದ ಕೂಡಿರುವ ಬುದ್ಧಿಯು ಸಕಲ ಶ್ರೇಯಸ್ಸನ್ನೂ ಉಂಟುಮಾಡುವದೆಂದು ಶ್ರುತಿ ಸ್ಮೃತಿಗಳು ಹೇಳುವವು. ಅಂತ ಬುದ್ಧಿಯು ನಿನ್ನಲ್ಲಿ ಸ್ಥಿರವಾಗಿರುವದು. ಧನಹಾನಿಯೂ ಬಡತನವೂ ಸ್ವಜನಗಳಿಗೆ ಕಷ್ಟದಶೆಯೂ ಮನೋವ್ಯಥೆಯೂ ರೋಗವೂ ಸಂಭವಿಸಿದ ಕಾಲದಲ್ಲಿ, ನಿಮ್ಮಂತವರು ಎಂದಿಗೂ ವ್ಯಥೆಪಡುವದಿಲ್ಲ. ಈ ವಿಷಯದಲ್ಲಿ ಜನಕರಾಯನು ಕೆಲವು ಧೈರ್ಯಸಂಪಾದಕವಾದ ಮಾತುಗಳನ್ನು ಹೇಳಿರುವನು. ಅವುಗಳನ್ನು ವಿವರಿಸುವೆನು ಕೇಳು: ಲೋಕದಲ್ಲಿ ಜನಗಳು ಮನಸ್ಸಿನಿಂದಲೂ ದೇಹದಿಂದಲೂ ಹುಟ್ಟಿದ ದುಃಖಗಳಿಂದ ಪೀಡಿತರಾಗುವರು. ಅಂತ ದುಃಖಗಳನ್ನು ಪರಿಹಾರಮಾಡಿಕೊಳ್ಳುವದಕ್ಕೆ ತಕ್ಕ ಉಪಾಯವನ್ನು ಸಂಕ್ಷೇಪವಾಗಿಯೂ ವಿಸ್ತಾರವಾಗಿಯೂ ಹೇಳುವೆನು ಕೇಳು. ವ್ಯಾಧಿ, ಇಷ್ಟನಿವೃತ್ತಿ, ಅನಿಷ್ಟಪ್ರಾಪ್ತಿ, ಸಂಚಾರಶ್ರಮ ಈ ನಾಲ್ಕು ಕಾರಣಗಳಿಂದ ಶರೀರಕ್ಕೆ ದುಃಖ ಉಂಟಾಗುವದು. ವ್ಯಾಧಿಯು ಅದಕ್ಕೆ ಪ್ರತಿಕ್ರಿಯೆ ಮಾಡುವದರಿಂದಲೂ, ಆಧಿಯು ನಿರಂತರದಲ್ಲೂ ಅದನ್ನು ಮನಸ್ಸಿಗೆ ಹಚ್ಚಿಕೊಳ್ಳದೆ ಯೋಗಧ್ಯಾನಪರನಾಗಿ ಇರುವದರಿಂದಲೂ ಪರಿಹಾರವಾಗುವದು. ಈ ಎರಡು ಉಪಾಯಗಳಿಂದಲೂ, ಲೋಕಾನುಭವಸಿದ್ಧವಾಗಿ ಮನಸ್ಸಿಗೆ ಪ್ರಿಯವಾಗಿರುವ ಮಾತುಗಳಿಂದಲೂ, ಬುದ್ಧಿಶಾಲಿಗಳಾದ ವಿದ್ವಾಂಸರು ಮೊದಲೇ ಆಧಿ ವ್ಯಾಧಿಗಳನ್ನು ಪರಿಹರಿಸಿಕೊಳ್ಳುವರು. ಮನಸ್ಸಿನಲ್ಲಿ ಹುಟ್ಟಿದ ವ್ಯಥೆಯು, ಕಾಯಿಸಿದ ಕಬ್ಬಿಣದ ಗುಂಡು ತನ್ನ ಸಂಬಂಧದಿಂದ ಪಾತ್ರೆಯಲ್ಲಿರುವ ನೀರನ್ನು ತಳಮಳಗುಟ್ಟಿಸುವಂತೆ, ಶರೀರವನ್ನು ಸಂತಾಪಪಡಿಸುವದು. ಆ ಮನೋವ್ಯಥೆಯನ್ನು, ನೀರಿನಿಂದ ಬೆಂಕಿಯನ್ನು ಆರಿಸುವಂತೆ, ವಿವೇಕದಿಂದ ಹೋಗಲಾಡಿಸಿಕೊಳ್ಳಬೇಕು. ಮನೋ ವ್ಯಥೆಯು ನಷ್ಟವಾಗಲು, ಶರೀರಸಂತಾಪವೂ ಶಾಂತವಾಗುವದು.. ಮನೋವ್ಯಥೆಗೆ ಕಾರಣವಾದಂಥಾದ್ದು ಸ್ನೇಹವು. ಆ ಸ್ನೇಹದಿಂದ ಸಂಗವುಂಟಾಗಿ ಅದರಿಂದ ಸಕಲರೂ ದುಃಖವನ್ನು ಅನುಭವಿಸುವರು; ಸ್ನೇಹದಿಂದಲೇ ದುಃಖವೂ ಭಯವೂ ಉಂಟಾಗುವವು. ಸ್ನೇಹದಿಂದಲೇ ಶೋಕವೂ ಸಂತೋಷವೂ ಆಯಾಸವೂ ಉಂಟಾಗುವವು. ಸ್ನೇಹದಿಂದಲೇ ಚಿಂತೆಯೂ ವಿಷಯಾಭಿಲಾಷೆಯೂ ಉಂಟಾಗುವವು. ಚಿಂತೆಯೂ ವಿಷಯಾಭಿಲಾಷೆಯೂ ಶ್ರೇಯಸ್ಸನ್ನು ಕೆಡಿಸುವವು. ಇವೆರಡರಲ್ಲಿ ಚಿಂತೆಯೆಂಬುವದು, ಎಷ್ಟುಸ್ವಲ್ಪವಾಗಿದ್ದರೂ, ಗಿಡದ ಪೊಟರೆಯಲ್ಲಿ ಬಿದ್ದ ಬೆಂಕೀಕಿಡಿಯು ಗಿಡವನ್ನೇ ನಾಶ ಮಾಡುವಹಾಗೆ ಮನುಷ್ಯನನ್ನು ನಾಶಮಾಡುವದು. ವಿಷಯಾಭಿಲಾಷೆಯೆಂಬುವದು ಸ್ವಲ್ಪವಾದದ್ದಾದಾಗ್ಯೂ, ಧರ್ಮಾರ್ಥಗಳನ್ನು ನಾಶಮಾಡುವದು. ಸ್ನೇಹದಲ್ಲಿ ವಿಯೋಗವೆಂಬ ದೋಷವಿರುವದೆಂದು ತಿಳಿದು ಅದನ್ನು ತ್ಯಜಿಸಿದ ಪುರುಷನು ವಿರಕ್ತನೆನಿಸಿಕೊಳ್ಳುವನು. ಅಂತವನಿಗೆ ಕ್ರೋಧದ್ವೇಷಗಳಿರಲಾರವು. ಆದ್ದರಿಂದ ಸ್ವಜನರಲ್ಲಿಯೂ ಮಿತ್ರರಲ್ಲಿಯೂ ಧನದಲ್ಲಿಯೂ ಸ್ನೇಹವನ್ನು ಮಾಡಬಾರದು; ತಮ್ಮ ಶರೀರವಿಷಯದಲ್ಲಿರತಕ್ಕ ಸ್ನೇಹವನ್ನೂ ಕೂಡ ಜ್ಞಾನದಿಂದ ನಿವೃತ್ತಿಮಾಡಿಕೊಳ್ಳಬೇಕು. ಶಾಸ್ತ್ರಜ್ಞರಾಗಿಯೂ ಜಿತೇಂದ್ರಿಯರಾಗಿಯೂ ಜ್ಞಾನಸಂಪನ್ನರಾಗಿಯೂ ಇರುವಂತವರಲ್ಲಿ ಸ್ನೇಹವೆಂಬುವದು, ತಾವರೇ ಎಲೆಯ ಮೇಲಣ ನೀರಿನಂತೆ ಅಂಟದೇ ಇರುವದು. ಯಾವ ಮನುಷ್ಯನಿಗೆ ವಿಷಯಾಭಿಲಾಷೆಯುಂಟಾಗುವದೋ ಆತನು ಕಾಮಾಂಧನಾಗುವನು. ಅಂತವನಿಗೆ ಆಶೆಯುಂಟಾಗುವದು. ಅದರಿಂದ ಮನಸ್ಸಿನಲ್ಲಿ ಹಾಹಾಕಾರವು ಉಂಟಾಗುವದು. ನಿತ್ಯವೂ ಭಯಂಕರವಾಗಿಯೂ ಪಾಪಜನಕವಾಗಿಯೂ ಅಧರ್ಮವನ್ನು ಹೆಚ್ಚಿಸತಕ್ಕದ್ದಾಗಿಯೂ, ಅಜ್ಞಾನಿಗಳಿಂದ ಬಿಡಲಸಾಧ್ಯವಾಗಿಯೂ

ಇರುವ ಆ ಆಶೆಯು, ಮನುಷ್ಯನು ಜೀರ್ಣನಾದರೂ ತಾನು ಜೀರ್ಣವಾಗದೇ ಇರುವದು. ಪ್ರಾಣಾಂತಕವಾದ ರೋಗದಂತಿರುವ ಆ ಆಶೆಯನ್ನು ಬಿಟ್ಟವನಿಗೆ ಸುಖವುಂಟಾಗುವದು. ಕೊನೆಮೊದಲಿಲ್ಲದ ಆ ಆಶೆಯು ಮನುಷ್ಯರ ಮನಸ್ಸನ್ನು ಆಶ್ರಯಿಸಿಕೊಂಡು, ಪ್ರಳಯಾಗ್ನಿಯು ಭೂತಗಳನ್ನು ನಾಶಮಾಡುವಂತೆ, ಸಕಲರನ್ನೂ ನಾಶಮಾಡುವದು. ಕಾಷ್ಠದಲ್ಲಿ ಹುಟ್ಟಿದ ಅಗ್ನಿಯು ಕಾಷ್ಠವನ್ನೇ ನಾಶಮಾಡುವಂತೆ, ಮೂಢನಲ್ಲಿ ಹುಟ್ಟಿದ ಆಶೆಯು ಅವನನ್ನೇ ನಾಶಮಾಡುವದು. ಪ್ರಾಣಿಗಳಿಗೆ ಮೃತ್ಯುವಿನಿಂದ ಭಯವಿರುವಹಾಗೆ, ದ್ರವ್ಯವಂತರಿಗೆ ರಾಜರಿಂದಲೂ ನೀರಿನಿಂದಲೂ ಬೆಂಕಿಯಿಂದಲೂ ಕಳ್ಳರಿಂದಲೂ ಬಂಧುಜನಗಳಿಂದಲೂ ನಿತ್ಯವೂ ಭಯವಿರುವದು. ಆಕಾಶದಲ್ಲಿರುವ ಮಾಂಸವನ್ನು ಪಕ್ಷಿಗಳೂ, ಭೂಮಿಯಲ್ಲಿರುವ ಮಾಂಸವನ್ನು ದುಷ್ಟಮೃಗಗಳೂ, ನೀರಿನಲ್ಲಿರುವ ಮಾಂಸವನ್ನು ಮೀನುಗಳೂ ಭಕ್ಷಿಸುವವು; ಆದರೆ ಧನವಂತನಾದವನು ಎಲ್ಲಿದ್ದರೂ ಎಲ್ಲರಿಂದಲೂ ಭಕ್ಷಿಸಲ್ಪಡುವನು. ದ್ರವ್ಯದಿಂದಲೇ ಕೆಲವರಿಗೆ ಕೇಡು ಸಂಭವಿಸುವದು. ಯಾವಾಗಲೂ ದ್ರವ್ಯಾಸಕ್ತಿಯುಳ್ಳವನಿಗೆ ಶ್ರೇಯಸ್ಸುಂಟಾಗಲಾರದು. ಆದ್ದರಿಂದ, ದ್ರವ್ಯಪ್ರಾಪ್ತಿಯು ಆಶೆಯನ್ನೂ ಅಜ್ಞಾನವನ್ನೂ ಕೃಪಣತ್ವವನ್ನೂ ಅಹಂಕಾರವನ್ನೂ ದುರಭಿಮಾನವನ್ನೂ ಭಯವನ್ನೂ ವ್ಯಥೆಯನ್ನೂ ಉಂಟುಮಾಡುವದೆಂದು ಪ್ರಾಜ್ಞರಾದವರು ಹೇಳುವರು. ಅಂತ ದ್ರವ್ಯವನ್ನು ಸಂಪಾದಿಸುವದರಲ್ಲಿಯೂ, ಸಂಪಾದಿಸಿದ್ದನ್ನು ಸಂರಕ್ಷಿಸುವದರಲ್ಲಿಯೂ, ಆ ದ್ರವ್ಯಕ್ಕೆ ನಾಶವುಂಟಾದಲ್ಲಿಯೂ, ಅಧಿಕವಾದ ದುಃಖವುಂಟಾಗುವದು. ದ್ರವ್ಯಾಶೆಯಿಂದಲೇ ಒಬ್ಬರನ್ನೊಬ್ಬರು ಕೊಲ್ಲುವರು. ದುಃಖಪರಿಹಾರಕ್ಕೋಸ್ಕರ ದ್ರವ್ಯವನ್ನಪೇಕ್ಷಿಸಿದರೆ ಶತ್ರುಗಳು ಹೆಚ್ಚುವರು. ಆದ್ದರಿಂದ, ಎಲ್ಲಾ ದುಃಖಗಳಿಗೂ ಕಾರಣವಾದ ದ್ರವ್ಯವು ನಾಶವಾದ ಕಾಲದಲ್ಲಿ, ವಿವೇಕಿಗಳಾದವರು ದುಃಖಪಡಬಾರದು. ದ್ರವ್ಯಾಶೆಯುಳ್ಳ ಪುರುಷರಿಗೆ ಎಂದಿಗೂ ಸಂತೋಷವುಂಟಾಗಲಾರದು. ಅಂತ ದ್ರವ್ಯದಲ್ಲಿ ವೈರಾಗ್ಯವನ್ನು ಪಡೆದ ಪ್ರಾಜ್ಞರು ಸದಾ ಸಂತೋಷದಿಂದಿರುವರು. ಎಂದಿಗಾದರೂ ಆಶೆಯೆಂಬುವದಕ್ಕೆ ಪಾರವುಂಟೆ? ಇದನ್ನು ತಿಳಿದು ಸಂತೋಷದಿಂದಿರುವದೇ ಉತ್ತಮವೆಂದು ದೊಡ್ಡವರು ಹೇಳುವರು. ಯೌವನವೂ, ರೂಪವೂ, ಜೀವನವೂ, ಶ್ರೇಷ್ಠವಸ್ತುಗಳೂ, ಐಶ್ವರ್ಯವೂ, ಉತ್ತಮವಾದ ಗೃಹವೂ, ಅನಿತ್ಯವಾದವುಗಳಾದ್ದರಿಂದ, ಬುದ್ಧಿವಂತನಾದವನು ಅವುಗಳಲ್ಲಿ ಆಶೆಯನ್ನಿಡಬಾರದು. ನಾನಾ ದುಃಖಗಳಿಗೂ ಕಾರಣಭೂತವಾದ ದ್ರವ್ಯವನ್ನು ಸಂಗ್ರಹಮಾಡುವದಕ್ಕೆ ಪ್ರಯತ್ನಮಾಡಬಾರದು. ಲೋಕದಲ್ಲಿ ದ್ರವ್ಯವನ್ನು ಸಂಗ್ರಹಮಾಡಿ ಇಟ್ಟುಕೊಂಡವರೊಳಗೆ, ಯಾರಾದರೂ ಮತ್ತೊಬ್ಬರ ಬಾಧೆಯಿಲ್ಲದೇ ಇರುವವರು ಇರುವರೆ? ಆದ್ದರಿಂದ ಧರ್ಮಜ್ಞರಾದವರು ದ್ರವ್ಯಾಶೆಯನ್ನು ಬಿಟ್ಟರೆ, ಲೋಕದಲ್ಲಿ ಪ್ರಶಂಸೆಯನ್ನು ಹೊಂದುವರು. ಕೆಸರನ್ನು ತುಳಿದು ಕಾಲನ್ನು ತೊಳೆದುಕೊಳ್ಳುವದಕ್ಕಿಂತಲೂ ಅದನ್ನು ತುಳಿಯದೇ ಇರುವದು ಹ್ಯಾಗೆ ಉತ್ತಮವಾದದ್ದೋ ಹಾಗೆ, ಧರ್ಮಾಚರಣೆಗೋಸ್ಕರಲಾದರೂ ದ್ರವ್ಯವನ್ನು ಅಪೇಕ್ಷಿಸುವದಕ್ಕಿಂತಲೂ ದ್ರವ್ಯಾಶೆಯನ್ನೇ ಬಿಡುವದು ಉತ್ತಮವಾದದ್ದು. ಈ ರೀತಿಯಲ್ಲಿ ಜನಕರಾಯನು ನುಡಿದಿರುವನಾದ್ದರಿಂದ, ಎಲೈ ಧರ್ಮರಾಯನೆ, ನಿನಗೆ ಧರ್ಮವನ್ನು ಸಂಪಾದಿಸಬೇಕೆಂಬ ಅಪೇಕ್ಷೆಯಿದ್ದರೆ ದ್ರವ್ಯದಲ್ಲಿ ಅಪೇಕ್ಷೆಯನ್ನು ಮಾಡಬೇಡ" ಎಂದು ನುಡಿದನು.

ಅದನ್ನು ಕೇಳಿ, ಧರ್ಮರಾಯನು ಶೌನಕಮುನೀಂದ್ರನನ್ನು ಕುರಿತು "ಎಲೈ ಬ್ರಾಹ್ಮಣೋತ್ತಮನೇ ಕೇಳು: ನನ್ನ ಪೋಷಣೆಗೋಸ್ಕರ ನಾನು ದ್ರವ್ಯದಲ್ಲಿ ಆಶೆಪಡತಕ್ಕವನಲ್ಲ. ಬ್ರಾಹ್ಮಣರ ಪೋಷಣೆಗಾಗಿ ದ್ರವ್ಯವನ್ನಪೇಕ್ಷಿಸುವೆನೇ ಹೊರತು, ಲೋಭದಿಂದ ಅಪೇಕ್ಷಿಸತಕ್ಕವನಲ್ಲ. ಗೃಹಸ್ಥಾಶ್ರಮದಲ್ಲಿರುವ ನಮ್ಮಂತವರು ಆಶ್ರಿತರನ್ನು ದ್ರವ್ಯವಿಲ್ಲದೆ ಹ್ಯಾಗೆ ತಾನೇ ಪರಿಪಾಲಿಸತಕ್ಕದ್ದು? ಗೃಹಸ್ಥನಾದವನು ತನ್ನ ಸ್ವತ್ತನ್ನು ತನ್ನನ್ನು ಹೊಂದಿದವರಿಗೆಲ್ಲಾ ಹಂಚಿ ಕೊಟ್ಟು, ತನ್ನ ಮನೆಗೆ ಬಂದ ಅರ್ಥಿಗಳಿಗೂ ಕೊಡಬೇಕು. ಹುಲ್ಲು, ಸ್ಥಳ, ನೀರು, ಒಳ್ಳೇಮಾತು, ಈ ನಾಲ್ಕೂ ಸಜ್ಜನರ ಮನೆಗಳಲ್ಲಿ ಅರ್ಥಿಗಳಿಗಾಗಿ ಯಾವಾಗಲೂ ಸಿದ್ಧವಾಗಿಯೇ ಇರುವವು. ರೋಗಪೀಡಿತನಾಗಿ ಬಂದವನಿಗೆ ಮಲಗುವದಕ್ಕೆ ಹಾಸಿಗೆಯನ್ನೂ, ಮಾರ್ಗಾಯಾಸದಿಂದ ಬಂದವನಿಗೆ ಕೂತುಕೊಳ್ಳುವದಕ್ಕೆ ಪೀಠವನ್ನೂ, ಬಾಯಾರಿ ಬಂದವನಿಗೆ ನೀರನ್ನೂ, ಹಸಿದು ಬಂದವನಿಗೆ ಅನ್ನವನ್ನೂ ಕೊಟ್ಟು, ಕೃಪಾದೃಷ್ಟಿಯಿಂದ ನೋಡಿ, ಒಳ್ಳೇ ಮಾತುಗಳಿಂದ ಮನಃಪೂರ್ವಕವಾಗಿ ಸಂತೋಷಪಡಿಸತಕ್ಕದ್ದು ಗೃಹಸ್ಥಾಶ್ರಮಿಯಾದವನಿಗೆ ನಿತ್ಯವಾದ ಧರ್ಮವು. ತನಗಿಂತಲೂ ದೊಡ್ಡವರಾದವರು ಮನೆಗೆ ಬಂದರೆ, ಶೀಘ್ರವಾಗಿ ಎದ್ದು ಎದುರುಗೊಂಡು, ನಮಸ್ಕಾರವನ್ನು ಮಾಡಿ,

ಪೀಠದಮೇಲೆ ಕುಳ್ಳಿರಿಸಿ, ಪೂಜೆಯನ್ನು ಮಾಡಬೇಕು. ಅಗ್ನಿಹೋತ್ರವನ್ನೂ, ವೃಷಭವನ್ನೂ, ಅತಿಥಿಗಳನ್ನೂ, ಜ್ಞಾತಿಗಳನ್ನೂ, ಬಂಧುಗಳನ್ನೂ, ಹೆಂಡರನ್ನೂ, ಮಕ್ಕಳನ್ನೂ, ಭೃತ್ಯರನ್ನೂ, ರಕ್ಷಿಸದೇ ಇರುವ ಯಜಮಾನನಿಗೆ ಹಾನಿಯುಂಟಾಗುವದು. ತನಗೊಬ್ಬನಿಗಾಗಿ ಪಾಕವನ್ನೂ, ಯಜ್ಞಕರ್ಮವಿಲ್ಲದೆ ಪಶುಹಿಂಸೆಯನ್ನೂ, ಅಸಾಕ್ಷಿಕವಾಗಿ ಭೋಜನವನ್ನೂ ಮಾಡಕೂಡದು. ಗೃಹಸ್ಥನಾದವನು ಪ್ರಾತಃಕಾಲದಲ್ಲೂ ಸಾಯಂಕಾಲದಲ್ಲೂ ವೈಶ್ವದೇವವನ್ನು ಮಾಡಿ, ನಾಯಿಗಳಿಗೂ ಚಂಡಾಲರಿಗೂ ಕಾಗೆಗಳಿಗೂ ನೆಲದಮೇಲೆ ಬಲಿಪ್ರದಾನವನ್ನು ಮಾಡಿ, ಅನಂತರ ತಾನು ಭೋಜನಮಾಡಿದರೆ, ವಿಘಸಾಶಿಯೆಂತಲೂ ಅಮೃತಾಶಿಯೆಂತಲೂ ಎನ್ನಿಸಿಕೊಳ್ಳುವನು. ಭೋಜನಮಾಡಿ ಉಳಿದದ್ದನ್ನು ವಿಘಸವೆಂತಲೂ, ಯಜ್ಞಶೇಷವನ್ನು ಅಮೃತವೆಂತಲೂ ದೊಡ್ಡವರು ಹೇಳುವರು. ಅತಿಥಿಗಳನ್ನು ಸೌಮ್ಯದೃಷ್ಟಿಯಿಂದ ನೋಡುವದು, ಅವರಲ್ಲಿ ಮನಃಪೂರ್ವಕವಾಗಿ ನಡೆದುಕೊಳ್ಳುವದು, ಅವರ ಸಂಗಡ ಒಳ್ಳೇಮಾತನ್ನಾಡುವದು, ಅವರ ಸಂಗಡ ಸ್ವಲ್ಪದೂರ ಹೋಗುವದು, ಅವರು ಬಂದರೆ ಸಮೀಪದಲ್ಲಿ ಕೂತುಕೊಳ್ಳುವದು, ಈ ಐದೂ ಅತಿಥಿಸತ್ಕಾರವೆಂಬ ಯಜ್ಞಕ್ಕೆ ದಕ್ಷಿಣೆಗಳಾಗಿರುವವು. ಅಪರಿಚಿತನಾಗಿ ಮಾರ್ಗಾಯಾಸದಿಂದ ಬಂದವನಿಗೆ ಮೃಷ್ಟಾನ್ನವನ್ನಿಕ್ಕಿದವನಿಗೆ, ಅಧಿಕವಾಗಿ ಪುಣ್ಯ ಉಂಟಾಗುವದು. ಈ ರೀತಿಯಿಂದ ನಡೆದುಕೊಳ್ಳುವ ಗೃಹಸ್ಥನಿಗೆ ಉತ್ಕೃಷ್ಟವಾದ ಧರ್ಮವು ಸಂಘಟಿಸುವದೆಂದು ದೊಡ್ಡವರು ಹೇಳುವರು. ಎಲೈ ಬ್ರಾಹ್ಮಣನೆ, ಇವುಗಳಲ್ಲೆಲ್ಲಾ ನಿನ್ನ ಮತವೇನು ?" ಎಂದು ನುಡಿದನು.

ಆ ಮಾತನ್ನು ಕೇಳಿ, ಶೌನಕನು ಧರ್ಮರಾಯನನ್ನು ನೋಡಿ "ಎಲೈ ಯುಧಿಷ್ಠಿರನೆ, ಲೋಕದಲ್ಲಿ ಸತ್ಪುರುಷರು ಯಾವ ಕೆಲಸವನ್ನು ಮಾಡುವದಕ್ಕೆ ಲಜ್ಜಿಪಡುವರೋ ಆ ಕೆಲಸವನ್ನೇ ಮಾಡಿ ದುರ್ಜನರು ಸಂತೋಷಪಡುವರು! ಈ ಪ್ರಪಂಚವ್ಯಾಪಾರವು ವಿಪರೀತವಾಗಿರುವದು! ಇದಾಶ್ಚರ್ಯ! ಬಹು ಕಷ್ಟವಾದದ್ದು! ವಿಷಯಾಭಿಲಾಷೆಯುಳ್ಳ ಮೂಢನಾದ ಪುರುಷನು ಅಜ್ಞಾನದಿಂದಲೂ, ಅನುರಾಗದಿಂದಲೂ, ಶರೀರಸೌಖ್ಯಕ್ಕಾಗಿ ಪರರ ಭುಕ್ತಶೇಷವನ್ನು ಭುಂಜಿಸುವನು. ಸ್ವಾಧೀನ ತಪ್ಪಿ ಹೋಗತಕ್ಕ ದುಷ್ಟವಾದ ಕುದುರೆಗಳಿಂದ ಸಾರಥಿಯು ಏನೂ ತೋರದೆ ಮೂಢನಾಗುವಂತೆ, ಮನುಷ್ಯನು ತಿಳಿದುತಿಳಿದೂ ವಿಷಯಾಭಿಮುಖವಾದ ಇಂದ್ರಿಯಗಳಿಂದ ಸೆಳೆಯಲ್ಪಟ್ಟು, ಜ್ಞಾನಶೂನ್ಯನಾಗುವನು. ಯಾವಾಗ ಇಂದ್ರಿಯಗಳು ವಿಷಯಾಭಿಮುಖವಾಗುವವೋ ಆಗ, ಮನಸ್ಸಿನಲ್ಲಿ ಒಂದು ಸಂಕಲ್ಪ ಉಂಟಾಗುವದು. ಯಾವ ಮನುಷ್ಯನ ಮನಸ್ಸು ಇಂದ್ರಿಯ ಸುಖವನ್ನನುಭವಿಸಬೇಕೆಂದು ಅಪೇಕ್ಷಿಸುವುದೋ ಆತನು, ಕುತೂಹಲದಿಂದ ಆ ಸುಖಾನುಭವದಲ್ಲಿ ಪ್ರವರ್ತಿಸಿ, ಸಂಕಲ್ಪದಿಂದುಂಟಾದ ಕಾಮಬಾಣದಿಂದ ಪೆಟ್ಟುಬಿದ್ದು, ಪತಂಗದ ಹುಳುವು ಲೋಭದಿಂದ ದೀಪದಲ್ಲಿ ಬೀಳುವಹಾಗೆ, ಮೋಹವೆಂಬ ಅಗ್ನಿಯಲ್ಲಿ ಬೀಳುವನು. ಆ ಬಳಿಕ ಆ ಪುರುಷನು ಯಥೇಚ್ಛವಾದ ಆಹಾರವಿಹಾರಗಳಿಂದ ಜ್ಞಾನಶೂನ್ಯನಾಗಿ ಸ್ವರೂಪಜ್ಞಾನವು ಇಲ್ಲದವನಾಗುವನು. ಈ ಪ್ರಕಾರ ಸಂಸಾರದಲ್ಲಿ ಆಸಕ್ತನಾದ ಮನುಷ್ಯನು ಅಜ್ಞಾನದಿಂದಲೂ ಪ್ರಾಚೀನಕರ್ಮದಿಂದಲೂ ಆಶೆಯಿಂದಲೂ ಬ್ರಹ್ಮಾದಿ ತೃಣಾಂತವಾಗಿರುವ ಪ್ರಾಣಿಗಳಲ್ಲಿ ಅನೇಕ ಜನ್ಮಗಳನ್ನು ಹೊಂದಿ, ಭೂಮಿಯಲ್ಲಿಯೂ ಆಕಾಶದಲ್ಲಿಯೂ ಜಲದಲ್ಲಿಯೂ ಜನ್ಮವನ್ನು ಹೊಂದಿ, ಚಕ್ರದಂತೆ ಸುತ್ತುತ್ತಿರುವನು. ಎಲೈ ರಾಯನೆ, ಅಜ್ಞಾನಿಗಳಿಗೆ ಇಂತ ದುರ್ಗತಿಯೇ ಪ್ರಾಪ್ತವಾಗುವದು. ಇನ್ನು ಜ್ಞಾನಿಗಳ ಗತಿಯನ್ನು ಹೇಳುವೆನು ಕೇಳು : ಶ್ರೇಯಸ್ಕರವಾದ ಧರ್ಮದಲ್ಲಿ ಆಸಕ್ತರಾಗಿ ಮೋಕ್ಷವನ್ನು ಅಪೇಕ್ಷಿಸುವ ಪುರುಷರು ಕರ್ಮಗಳನ್ನು ಮಾಡಬೇಕೆಂತಲೂ ಬಿಡಬೇಕೆಂತಲೂ ವೇದದಲ್ಲಿ ಎರಡುಪ್ರಕಾರವಾಗಿಯೂ ಹೇಳಿರುವದರಿಂದ, ಅಹಂಕಾರವನ್ನು ಬಿಟ್ಟು ಈಶ್ವರಾರ್ಪಣ ಬುದ್ಧಿಯಿಂದ ಸಕಲಧರ್ಮಗಳನ್ನೂ ಆಚರಿಸುವರು. ಯಾಗ, ಅಧ್ಯಯನ, ದಾನ, ತಪಸ್ಸು, ಸತ್ಯ, ಕ್ಷಮೆ, ದಮೆ, ಅಲೋಭ ಈ ಎಂಟೂ ಧರ್ಮವನ್ನು ಸಂಪಾದಿಸುವದಕ್ಕೆ ಮಾರ್ಗಗಳಾಗಿರುವವು. ಮೊದಲು ಹೇಳಿದ ಯಾಗಮೊದಲಾದವು ನಾಲ್ಕೂ ಕರ್ಮಮಾರ್ಗಗಳೆನ್ನಿಸಿಕೊಳ್ಳುವವು ; ಸತ್ಯ ಮೊದಲಾದ ನಾಲ್ಕೂ ಮೋಕ್ಷಮಾರ್ಗಗಳೆನ್ನಿಸಿಕೊಳ್ಳುವವು. ಈ ಅಹಂಕಾರವನ್ನು ಬಿಟ್ಟು, ಶುದ್ಧಾಂತಃಕರಣನಾಗಿ, ಈಶ್ವರಾರ್ಪಣ ಬುದ್ಧಿಯಿಂದಲೇ ಕರ್ಮಗಳನ್ನು ಮಾಡಬೇಕು. ಈಶ್ವರಾರ್ಪಣವಾಗಬೇಕೆಂಬ ಸಂಕಲ್ಪದಿಂದಲೂ, ಇಂದ್ರಿಯನಿಗ್ರಹದಿಂದಲೂ, ಸಮೀಚೀನವಾದ ನಿಯಮವಿಶೇಷದಿಂದಲೂ, ಸದ್ಗುರು ಶುಶ್ರೂಷೆಯಿಂದಲೂ, ಉಚಿತಾಹಾರದಿಂದಲೂ, ವೇದಾಧ್ಯಯನದಿಂದಲೂ,

ಚಿತ್ತವೃತ್ತಿ ನಿರೋಧದಿಂದಲೂ, ಸಂಸಾರಬಂಧವನ್ನು ತಪ್ಪಿಸಿಕೊಳ್ಳಲಿಚ್ಛಯಿಸತಕ್ಕವರು ಕರ್ಮಫಲಾಪೇಕ್ಷೆಯಿಲ್ಲದೆ ಕರ್ಮಗಳನ್ನು ಮಾಡುವರು. ದೇವತೆಗಳೂ, ಏಕಾದಶರುದ್ರರೂ, ಸಾಧ್ಯರೂ, ದ್ವಾದಶಾದಿತ್ಯರೂ, ಅಷ್ಟವಸುಗಳೂ, ಅಶ್ವಿನೀದೇವತೆಗಳೂ, ರಾಗದ್ವೇಷಗಳನ್ನು ಬಿಟ್ಟು, ಯೋಗಸಂಪತ್ತಿಯಿಂದ ಪಾಲನಶಕ್ತಿಯನ್ನು ಪಡೆದು, ಈ ಜಗತ್ತನ್ನು ಪಾಲಿಸುತ್ತಿರುವರು. ಎಲೈ ಧರ್ಮರಾಯನೆ, ಹಾಗೆ ನೀನೂ ಅಧಿಕನಾಗಿ ಶಾಂತಿಗುಣವನ್ನು ಹೊಂದಿ, ತಪಸ್ಸಿದ್ಧಿಯನ್ನೂ ಯೋಗಸಿದ್ಧಿಯನ್ನೂ ಸಂಪಾದಿಸು. ಯಜ್ಞಾದಿ ಕರ್ಮಗಳಿಗೆ ಮುಖ್ಯವಾದ ಸಿದ್ಧಿಯನ್ನೂ ಇಹಲೋಕಕ್ಕೂ ಪರಲೋಕಕ್ಕೂ ಬೇಕಾದ ಮುಖ್ಯವಾದ ಸಿದ್ಧಿಯನ್ನೂ ನೀನು ಹೊಂದೇ ಇರುವೆ. ಬ್ರಾಹ್ಮಣರ ಸಂರಕ್ಷಣೆಗೋಸ್ಕರ ಈಗ ತಪಸ್ಸಿದ್ಧಿಯನ್ನು ಸಂಪಾದಿಸು. ತಪಸ್ಸಿನಿಂದ ಸಿದ್ಧನಾದ ಪುರುಷನು ಏನೇನು ಅಪೇಕ್ಷಿಸುವನೋ ಅವುಗಳನ್ನೆಲ್ಲಾ ತಪಃಪ್ರಭಾವದಿಂದ ಹೊಂದುವನು. ಆದ್ದರಿಂದ ನೀನು ತಪಸ್ಸನ್ನು ಮಾಡಿ ನಿನ್ನ ಮನೋರಥವನ್ನು ನೆರವೇರಿಸಿಕೊ" ಎಂದನು.

### ೩ನೇ ಅಧ್ಯಾಯ.—ಧರ್ಮರಾಯನು ಸೂರ್ಯನ ನಾಮಗಳನ್ನು ಪಠಿಸಿ ಅಕ್ಷಯಪಾತ್ರೆಯನ್ನು ಪಡೆದದ್ದು.

ವೈಶಂಪಾಯನ ಮುನೀಂದ್ರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯನೆ, ಆ ಬಳಿಕ ಧರ್ಮರಾಯನು ಶೌನಕನು ಹೇಳಿದ ಮಾತನ್ನು ಕೇಳಿ, ತಮ್ಮಂದಿರೊಡಗೂಡಿ, ಪುರೋಹಿತರಾದ ಧೌಮ್ಯರನ್ನು ನೋಡಿ "ಎಲೈ ಪುರೋಹಿತರೆ, ವೇದವೇದಾಂಗ ಪಾರಂಗತರಾದ ಈ ಬ್ರಾಹ್ಮಣರು ವನವಾಸಕ್ಕೆ ಹೊರಟಿರುವ ನನ್ನನ್ನು ಅನುಸರಿಸಿ ಬರುತ್ತಿರುವರು. ರಾಜ್ಯವನ್ನು ಕಳೆದುಕೊಂಡು ಧನಹೀನನಾಗಿ ದುಃಖಪಡುತ್ತಿರುವ ನಾನು ಈಗ ನಮ್ಮನ್ನು ಅನುಸರಿಸಿ ಬರುವ ಈ ಬ್ರಾಹ್ಮಣರನ್ನು ಪೋಷಿಸುವದಕ್ಕೂ, ಬಿಟ್ಟು ಬಿಡುವದಕ್ಕೂ ಅಸಮರ್ಥನಾಗಿರುವೆನು. ಈಗ ನನಗೆ ದಾನಶಕ್ತಿಯೂ ಇಲ್ಲ. ಇಂತ ಸಮಯದಲ್ಲಿ ನಾನೇನು ಮಾಡತಕ್ಕದ್ದು?" ಎನಲು, ಆ ಮಾತನ್ನು ಕೇಳಿ, ಧೌಮ್ಯರು ಒಂದು ಮುಹೂರ್ತ ಯೋಚಿಸಿ, ಯೋಗಮಾರ್ಗದಿಂದ ಅದಕ್ಕೆ ತಕ್ಕ ಉಪಾಯವನ್ನು ನಿಶ್ಚಯಿಸಿ, ಧರ್ಮರಾಯನನ್ನು ಕುರಿತು, "ಎಲೈ ಧರ್ಮರಾಯನೆ ಕೇಳು, ಮೊದಲು ಬ್ರಹ್ಮನು ಸಕಲ ಪ್ರಾಣಿಗಳನ್ನೂ ಸೃಷ್ಟಿಸಿದಾಗ, ಆ ಪ್ರಾಣಿಗಳು ಹಸಿವಿನಿಂದಲೂ ಬಾಯಾರಿಕೆಯಿಂದಲೂ ಪೀಡಿತರಾಗಲು, ಅದನ್ನು ನೋಡಿ ಸೂರ್ಯನು, ಮಕ್ಕಳಲ್ಲಿ ಪ್ರೀತಿಯುಳ್ಳ ತಂದೆಯಂತೆ, ಕರುಣದಿಂದ ಉತ್ತರಾಯಣದಲ್ಲಿ ತನ್ನ ಕಿರಣಗಳಿಂದ ಭೂಮಿಯಲ್ಲಿರುವ ನೀರನ್ನು ಆಕರ್ಷಣೆ ಮಾಡಿ, ದಕ್ಷಿಣಾಯನದಲ್ಲಿ ತೇಜೋರೂಪದಿಂದ ಭೂಮಿಯನ್ನು ಪ್ರವೇಶಿಸಿದನು. ಬಳಿಕ ಕ್ಷೇತ್ರಭೂತವಾದ ಆ ಭೂಮಿಯಲ್ಲಿ, ಓಷಧೀಶ್ವರನಾದ ಚಂದ್ರನು ಅಂತರಿಕ್ಷದಲ್ಲಿ ಆ ಸೂರ್ಯತೇಜಸ್ಸಿಗೆ ಮೇಘಾಕಾರವನ್ನುಂಟುಮಾಡಿ, ಅದರಿಂದ ಹುಟ್ಟಿದ ನೀರಿನಿಂದ ಪೈರುಗಳನ್ನು ಉಂಟುಮಾಡಿದನು. ಈ ರೀತಿಯಲ್ಲಿ ತೇಜೋರೂಪದಿಂದ ಭೂಮಿಯನ್ನು ಹೊಕ್ಕ ಸೂರ್ಯನು ಚಂದ್ರಕಿರಣಗಳಿಂದ ನೆನೆಯಿಸಲ್ಪಟ್ಟು, ಮೊಳಕೆಯಾಗಿ ಎದ್ದ ಪೈರುಗಳನ್ನು ವೃದ್ಧಿಪಡಿಸಿದನು; ಅದರಿಂದ ಷಡ್ರಸಯುಕ್ತವಾದ ಧಾನ್ಯಗಳುಂಟಾದವು; ಪರಿಶುದ್ಧವಾದ ಆ ಧಾನ್ಯವೇ ಭೂಮಿಯಲ್ಲಿ ಸಕಲ ಪ್ರಾಣಿಗಳಿಗೂ ಅನ್ನವಾಯಿತು. ಈ ಪ್ರಕಾರ ಸಕಲಪ್ರಾಣಿಗಳಿಗೂ ಪ್ರಾಣಾಧಾರಕವಾದ ಅನ್ನ ಉಂಟಾಗುವದಕ್ಕೆ ಕಾರಣನಾದ ಸೂರ್ಯನೇ, ಮಕ್ಕಳಿಗೆ ತಂದೆ ರಕ್ಷಕನಾಗಿರುವಂತೆ ಜಗತ್ತಿಗೆ ರಕ್ಷಕನಾಗಿರುವನು. ಅಂತ ಸೂರ್ಯನಿಗೆ ನೀನು ಶರಣಾಗತನಾಗು. ಪೂರ್ವದಲ್ಲಿ ಸತ್ಕುಲದಲ್ಲಿ ಹುಟ್ಟಿ ಸತ್ಕರ್ಮನಿಷ್ಠರಾಗಿ ಪರಿಶುದ್ಧಾತ್ಮರಾದ ಭೌಮ, ಕಾರ್ತವೀರ್ಯಾರ್ಜುನ, ಪೃಥು, ನಹುಷ ಮೊದಲಾದ ಅರಸುಗಳು ಅಧಿಕವಾದ ತಪಸ್ಸನ್ನು ಮಾಡಿ, ಆ ತಪೋಯೋಗದಲ್ಲಿ ನಿರತರಾಗಿ, ಸಕಲ ಪ್ರಾಣಿಗಳ ದುಃಖವನ್ನೂ ಪರಿಹರಿಸಿದರು. ಸತ್ಕರ್ಮಗಳಿಂದ ಪರಿಶುದ್ಧನಾದ ನೀನೂ, ಅದೇಪ್ರಕಾರ ತಪಸ್ಸನ್ನು ಮಾಡಿ ಧರ್ಮದಿಂದ ಬ್ರಾಹ್ಮಣರನ್ನು ರಕ್ಷಿಸು" ಎಂದು ನುಡಿದರು.

ಆ ಮಾತನ್ನು ಕೇಳಿ, ಜನಮೇಜಯರಾಯನು ವೈಶಂಪಾಯನ ಮುನೀಂದ್ರನನ್ನು ಕುರಿತು—"ಎಲೈ ಮುನೀಂದ್ರನೆ, ಕುರುಕುಲಶ್ರೇಷ್ಠನಾದ ಧರ್ಮರಾಯನು ವಿಚಿತ್ರತೇಜಃಪುಂಜನಾದ ಸೂರ್ಯನನ್ನು ಬ್ರಾಹ್ಮಣರ

ನಿಮಿತ್ತವಾಗಿ ಹ್ಯಾಗೆ ಉಪಾಸನೆ ಮಾಡಿದನು ?" ಎಂದು ಕೇಳಲು, ವೈಶಂಪಾಯನನು "ಎಲೈ ರಾಜೇಂದ್ರನೆ, ನೀನು ಶುಚಿರ್ಭೂತನಾಗಿಯೂ ಏಕಾಗ್ರಚಿತ್ತನಾಗಿಯೂ ನಿಶ್ಚಿಂತನಾಗಿಯೂ ಕೇಳು. ಎಲೈ ರಾಜೇಂದ್ರನೆ, ಒಂದು ವ್ಯವಧಾನ ಕಾಲವನ್ನು ಗೊತ್ತುಮಾಡಿಕೊ. ಎಲ್ಲವನ್ನು ವಿಸ್ತಾರವಾಗಿ ಹೇಳುವೆನು. ಮಹಾತ್ಮನಾದ ಧರ್ಮರಾಯನಿಗೆ ಧೌಮ್ಯರು ಸೂರ್ಯಾಷ್ಟೋತ್ತರವನ್ನು ಉಪದೇಶಿಸಿದ ಕ್ರಮವನ್ನು ಹೇಳುವೆನು ಕೇಳು :—

ಸೂರ್ಯಃ, ಅರ್ಯಮಾ, ಭಗಃ, ತ್ವಷ್ಟಾ, ಪೂಷಾ, ಅರ್ಕಃ, ಸವಿತಾ, ರವಿಃ, ಗಭಸ್ತಿಮಾನ್, ಅಜಃ, ಕಾಲಃ, ಮೃತ್ಯುಃ, ಧಾತಾ, ಪ್ರಭಾಕರಃ, ಪೃಥಿವೀ, ಆಪಃ, ತೇಜಃ, ಖಂ, ವಾಯುಃ, ಪರಾಯಣಂ, ಸೋಮಃ, ಬೃಹಸ್ಪತಿಃ, ಶುಕ್ರಃ, ಬುಧಃ, ಅಂಗಾರಕಃ, ಇಂದ್ರಃ, ವಿವಸ್ವಾನ್, ದೀಪ್ತಾಂಶುಃ, ಶುಚಿಃ, ಶೌರಿಃ, ಶನೈಶ್ಚರಃ, ಬ್ರಹ್ಮಾ, ವಿಷ್ಣುಃ, ರುದ್ರಃ, ಸ್ಕಂದಃ, ವೈಶ್ರವಣಃ, ಯಮಃ, ವೈದ್ಯುತಃ, ಜಾಠರಃ, ಅಗ್ನಿಃ, ಐಂಧನಃ, ತೇಜಸಾಂಪತಿಃ, ಧರ್ಮಧ್ವಜಃ, ವೇದಕರ್ತಾ, ವೇದಾಂಗಃ, ವೇದವಾಹನಃ, ಕೃತಂ, ತ್ರೇತಾ, ದ್ವಾಪರಃ, ಕಲಿಃ, ಸರ್ವಮಲಾಶ್ರಯಃ, ಕಲಾ, ಕಾಷ್ಠಾ, ಮುಹೂರ್ತಃ, ಕ್ಷಪಾ, ಯಾಮಃ, ಕ್ಷಣಃ, ಸಂವತ್ಸರಕರಃ, ಅಶ್ವತ್ಥಃ, ಕಾಲಚಕ್ರಃ, ವಿಭಾವಸುಃ, ಪುರುಷಃ, ಶಾಶ್ವತಃ, ಯೋಗೀ, ವ್ಯಕ್ತಾವ್ಯಕ್ತಃ, ಸನಾತನಃ, ಕಾಲಾಧ್ಯಕ್ಷಃ, ಪ್ರಜಾಧ್ಯಕ್ಷಃ, ವಿಶ್ವಕರ್ಮಾ, ತಮೋನುದಃ, ವರುಣಃ, ಸಾಗರಃ, ಅಂಶಃ, ಜೀಮೂತಃ, ಜೀವನಃ, ಅರಿಹಾ, ಭೂತಾಶ್ರಯಃ, ಭೂತಪತಿಃ, ಸರ್ವಲೋಕನಮಸ್ಕೃತಃ, (ಸ್ರಷ್ಟಾ, ಸಂವರ್ತಕಃ, ವಹ್ನಿಃ, ಸರ್ವಾದಿಃ, ಅಲೋಲುಪಃ, ಅನಂತಃ, ಕಪಿಲಃ, ಭಾನುಃ, ಕಾಮದಃ, ಸರ್ವತೋಮುಖಃ,) ಜಯಃ, ವಿಶಾಲಃ, ವರದಃ, ಸರ್ವಧಾತುನಿಷೇಚಿತಾ, ಮನಸ್ಸುಪರ್ಣಃ, ಭೂತಾದಿಃ, ಶೀಘ್ರಗಃ, ಪ್ರಾಣಧಾರಣಃ, ಧನ್ವಂತರಿಃ, ಧೂಮಕೇತುಃ, ಆದಿದೇವಃ, ಅದಿತಿಸುತಃ, ದ್ವಾದಶಾತ್ಮಾ, ಅರವಿಂದಾಕ್ಷಃ, ಪಿತಾ, ಮಾತಾ, ಪಿತಾಮಹಃ, ಸ್ವರ್ಗದ್ವಾರಂ, ಪ್ರಜಾದ್ವಾರಂ, ಮೋಕ್ಷದ್ವಾರಂ, ತ್ರಿವಿಷ್ಟಪಂ, ದೇಹಕರ್ತಾ, ಪ್ರಶಾಂತಾತ್ಮಾ, ವಿಶ್ವಾತ್ಮಾ, ವಿಶ್ವತೋಮುಖಃ, ಚರಾಚರಾತ್ಮಾ, ಸೂಕ್ಷ್ಮಾತ್ಮಾ, ಮೈತ್ರೇಯಃ, ಕರುಣಾನ್ವಿತಃ.

ಅಧಿಕವಾದ ತೇಜಸ್ಸುಳ್ಳ ಸೂರ್ಯನ ಶ್ಲಾಘನೀಯವಾದ ಈ ನೂರೆಂಟು ನಾಮಗಳೂ ಪೂರ್ವದಲ್ಲಿ ಸ್ವಯಂಭುವಾದ ಬ್ರಹ್ಮನು ಹೇಳಿದವುಗಳು. ಎಲೈ ಧರ್ಮರಾಯನೇ, ದೇವತೆಗಳಿಂದಲೂ ಪಿತೃಗಳಿಂದಲೂ ಯಕ್ಷರಿಂದಲೂ ದೈತ್ಯರಿಂದಲೂ ರಾಕ್ಷಸರಿಂದಲೂ ಸಿದ್ಧರಿಂದಲೂ ಸೇವಿತನಾಗಿಯೂ, ಕುಂದಣದಂತೆಯೂ ಯಜ್ಞೇಶ್ವರನಂತೆಯೂ ದೇದೀಪ್ಯಮಾನನಾಗಿಯೂ ಇರುವ ಸೂರ್ಯನನ್ನು, ನಿನಗೆ ಹಿತವಾಗುವದಕ್ಕೋಸ್ಕರ ವಂದಿಸುವೆನು. ಸೂರ್ಯೋದಯಕಾಲದಲ್ಲಿ ಯಾರು ಏಕಾಗ್ರಚಿತ್ತರಾಗಿ ಈ ಅಷ್ಟೋತ್ತರವನ್ನು ಪಠನಮಾಡುವರೋ ಅವರು, ಪತಿವ್ರತೆಯಾದ ಹೆಂಡತಿಯನ್ನೂ, ಸುಪುತ್ರನನ್ನೂ, ಯಥೇಚ್ಛದ್ರವ್ಯವನ್ನೂ, ಧೈರ್ಯವನ್ನೂ, ಧಾರಣಾಶಕ್ತಿಯನ್ನೂ, ಜನ್ಮಾಂತರಸ್ಮರಣೆಯನ್ನೂ ಹೊಂದುವರು. ಯಾವ ಪುರುಷನು ಪರಿಶುದ್ಧಾತ್ಮನಾಗಿ ಸಾವಧಾನತೆಯಿಂದ ಸಕಲ ದೇವತೆಗಳಲ್ಲಿ ಶ್ರೇಷ್ಠನಾದ ಸೂರ್ಯನಾರಾಯಣನ ಅಷ್ಟೋತ್ತರರೂಪವಾದ ಈ ಸ್ತೋತ್ರವನ್ನು ಪಠನಮಾಡುವನೋ ಆ ಪುರುಷನು, ದುಃಖವೆಂಬ ಕಾಡುಗಿಚ್ಚಿನಿಂದೊಡಗೂಡಿರುವ ಸಂಸಾರದಿಂದ ಮುಕ್ತನಾಗಿ, ಮನಸ್ಸಿನಲ್ಲಿ ಅಪೇಕ್ಷಿಸಿದ ಇಷ್ಟಾರ್ಥಗಳನ್ನು ಪಡೆಯುವನೆಂದು ಧೌಮ್ಯರು ಧರ್ಮರಾಯನಿಗೆ ಸೂರ್ಯಾಷ್ಟೋತ್ತರವನ್ನು ಉಪದೇಶಮಾಡಿದರು.

ಈ ಪ್ರಕಾರ ಕಾಲೋಚಿತವಾಗಿ ಧೌಮ್ಯರು ಹೇಳಿದ ಮಾತನ್ನು ಕೇಳಿ, ಬ್ರಾಹ್ಮಣರ ಪೋಷಣಾರ್ಥವಾಗಿ ಚಿಂತಿಸುತ್ತ, ದೃಢಮನಸ್ಕನಾಗಿ ನಿಯಮವನ್ನು ಧರಿಸಿ, ಪರಿಶುದ್ಧಾತ್ಮನಾಗಿ ಜಿತೇಂದ್ರಿಯನಾದ ಧರ್ಮರಾಯನು ಗಂಗಾನದಿಯಲ್ಲಿ ಅವಗಾಹನಸ್ನಾನವನ್ನು ನೆರವೇರಿಸಿ ಶುದ್ಧಾಚಮನವನ್ನು ಮಾಡಿ, ಸೂರ್ಯಾಭಿಮುಖವಾಗಿ ನಿಂತು, ಅಷ್ಟೋತ್ತರನಾಮಗಳನ್ನು ಪಠಿಸುತ್ತ, ಪುಷ್ಪಗಳಿಂದ ಸೂರ್ಯನನ್ನು ಅರ್ಚಿಸಿ, ಇತರ ಸಂಭಾಷಣೆಯನ್ನು ಬಿಟ್ಟು, ಪ್ರಾಣಾಯಾಮವನ್ನು ಮಾಡಿ ಧ್ಯಾನನಿರತನಾಗಿ, ವಾಯುವನ್ನೇ ಆಹಾರಮಾಡಿಕೊಂಡು, ಸೂರ್ಯನನ್ನು ಸ್ತೋತ್ರಮಾಡ ಉಪಕ್ರಮಿಸಿದನು. ಏನೆಂದರೆ : "ಎಲೈ ಸೂರ್ಯನೆ, ನೀನು ಲೋಕಕ್ಕೆಲ್ಲಾ ಕಣ್ಣಾಗಿಯೂ, ಸಮಸ್ತಪ್ರಾಣಿಗಳಿಗೂ ಆತ್ಮನಾಗಿಯೂ, ಕಾರಣನಾಗಿಯೂ, ಅಂತರ್ಯಾಮಿಯಾಗಿಯೂ, ಜ್ಞಾನಿಗಳಾದ ಯೋಗಿಗಳಿಗೆ ಆಶ್ರಯನಾಗಿಯೂ,

ಗತಿಪ್ರದನಾಗಿಯೂ, ಮೋಕ್ಷವನ್ನು ಅಪೇಕ್ಷಿಸುವವರಿಗೆ ತಡೆಯಿಲ್ಲದ ಮಾರ್ಗವನ್ನು ಕೊಡುವವನಾಗಿಯೂ ಇರುವೆ! ನೀನು ಸಕಲ ಲೋಕಗಳನ್ನೂ ಧರಿಸಿ, ಲೋಕಕ್ಕೆಲ್ಲಾ ಪ್ರಕಾಶವನ್ನುಂಟುಮಾಡಿ, ಲೋಕವನ್ನು ಪವಿತ್ರಮಾಡಿ, ಪ್ರತ್ಯುಪಕಾರಾಪೇಕ್ಷೆಯಿಲ್ಲದೆ ಲೋಕವನ್ನು ಸಂರಕ್ಷಿಸುತ್ತಿರುವೆ! ಸಕಲ ಋಷಿಗಳಿಂದಲೂ ಪೂಜಿತನಾದ ನಿನ್ನನ್ನು, ವೇದಪಾರಂಗತರಾದ ಬ್ರಾಹ್ಮಣರು, ಪ್ರಾತಃಕಾಲದಲ್ಲೆದ್ದು ತಮ್ಮ ನಿತ್ಯಕರ್ಮಗಳನ್ನು ನೆರವೇರಿಸಿಕೊಂಡು, ಸ್ವಶಾಖೋಕ್ತಗಳಾದ ಮಂತ್ರಗಳಿಂದ ಉಪಾಸನೆಮಾಡುವರು. ಸಿದ್ಧರೂ, ಚಾರಣರೂ, ಗಂಧರ್ವರೂ, ಯಕ್ಷರೂ, ಗುಹ್ಯರೂ, ಪನ್ನಗರೂ, ವರಗಳನ್ನಪೇಕ್ಷಿಸಿ ಅಂತರಿಕ್ಷದಲ್ಲಿ ನಡೆಯುವ ನಿನ್ನ ದಿವ್ಯರಥವನ್ನು ಅನುಸರಿಸಿ ಬರುವರು. ಅಷ್ಟವಸುಗಳೂ, ಏಕಾದಶರುದ್ರರೂ, ದ್ವಾದಶಾದಿತ್ಯರೂ, ಪ್ರಜಾಪತಿಯೂ, ವಷಟ್ಕಾರವೂ, ವಿಮಾನಚಾರಿಗಳಾದ ಇತರ ದೇವತೆಗಳೂ, ಉಪೇಂದ್ರನೊಡಗೂಡಿದ ಇಂದ್ರನೂ, ನಿನ್ನನ್ನು ಪೂಜಿಸಿ ಜ್ಞಾನವನ್ನು ಪಡೆದಿರುವರು. ವಿದ್ಯಾಧರರೂ, ಸಾಧ್ಯರೂ, ಗುಹ್ಯಕರೂ, ಪಿತೃಗಣವೂ, ಆಕಾಶದಲ್ಲಿ ಸಂಚರಿಸತಕ್ಕ ದೇವತೆಗಳೂ, ಭೂಮಿಯಲ್ಲಿ ಸಂಚರಿಸತಕ್ಕ ಮನುಷ್ಯೋತ್ತಮರೂ, ಮರೀಚಿಪರೂ, ವಾಲಖಿಲ್ಯರೂ, ನಿನ್ನನ್ನು ಪೂಜಿಸಿ, ದಿವ್ಯವಾದ ಮಂದಾರಮಾಲಿಕೆಯನ್ನು ಧರಿಸಿ, ತಮ್ಮ ಮನೋರಥಗಳನ್ನು ಪಡೆದು, ಲೋಕದಲ್ಲಿ ಮಹನೀಯರೆನ್ನಿಸಿಕೊಂಡಿರುವರು. ಎಲೈ ಸೂರ್ಯನೆ, ಚತುರ್ಮುಖ ಬ್ರಹ್ಮನೊಡಗೂಡಿರುವ ಏಳು ಲೋಕಗಳಲ್ಲಿಯೂ ನಿನಗಿಂತಲೂ ಶ್ರೇಷ್ಠನಾದವನನ್ನು ನಾನು ಕಾಣೆ! ಲೋಕದಲ್ಲಿ ದೊಡ್ಡದಾಗಿಯೂ ಪರಾಕ್ರಮವುಳ್ಳದ್ದಾಗಿಯೂ ಇರುವ ಅನೇಕ ಪ್ರಾಣಿವರ್ಗವಿರುವುದು; ಆದರೆ ನಿನ್ನಷ್ಟು ತೇಜಸ್ಸು ಯಾವ ಪ್ರಾಣಿಗೂ ಇಲ್ಲ! ತೇಜಸ್ಸಿಗೆಲ್ಲಾ ಅಧಿಪತಿಯಾದ ನಿನ್ನಲ್ಲೇ ಸಕಲ ತೇಜಸ್ಸೂ ಇರುವದು! ಪೃಥಿವ್ಯಾದಿ ಪಂಚಭೂತಗಳೂ ಬುದ್ಧಿಯೂ ಧರ್ಮ ಮೊದಲಾದ ಸಾತ್ವಿಕಭಾವಗಳೂ ನಿನ್ನಲ್ಲೇ ಇರುವವು. ವಿಶ್ವಕರ್ಮನು ನಿನ್ನ ತೇಜಸ್ಸಿನಿಂದಲೇ ಸುದರ್ಶನವೆಂಬ ಚಕ್ರವನ್ನು ನಿರ್ಮಾಣಮಾಡಿದನು! ಆ ಚಕ್ರವನ್ನು ಧರಿಸಿ ನಾರಾಯಣನು ದೇವಶತ್ರುಗಳಾದ ದೈತ್ಯರನ್ನೆಲ್ಲಾ ನಾಶಮಾಡಿದನು. ನೀನು ಬೇಸಗೆಯಲ್ಲಿ ಸಕಲ ಪ್ರಾಣಿಗಳಲ್ಲಿಯೂ, ಸಕಲ ಮೂಲಿಕೆಗಳಲ್ಲಿಯೂ ಇರುವ ಸಾರಾಂಶವನ್ನು ಸ್ವೀಕರಿಸಿ, ಅದನ್ನು ವರ್ಷಾಕಾಲದಲ್ಲಿ ವರ್ಷಿಸುವೆ! ವರ್ಷಾಕಾಲದಲ್ಲಿ ನಿನ್ನ ಕೆಲವು ಕಿರಣಗಳು ಸಂತಾಪಪಡಿಸುವವು; ಕೆಲವು ದಹಿಸುವವು; ಕೆಲವು ಮೇಘಗಳಾಗಿ ಗರ್ಜನೆಯನ್ನು ಮಾಡುತ್ತಲೂ ಮಿಂಚುಗಳಾಗಿ ಹೊಳೆಯುತ್ತಲೂ, ಮಳೆಯನ್ನು ಕರೆಯುವುವು. ಚಳಿಗಾಳಿಗಳಿಂದ ಪೀಡಿತರಾದ ಪ್ರಾಣಿಗಳಿಗೆ ನಿನ್ನ ಕಿರಣಗಳು ಎಷ್ಟು ಸುಖವನ್ನುಂಟುಮಾಡುವವೋ ಅಷ್ಟುಸುಖವನ್ನು ಮೇಲುಹೊದ್ದಿಕೆಗಳೂ ಕಂಬಳಿಗಳೂ ಉಂಟುಮಾಡಲಾರವು! ಸುದರ್ಶನ ಮೊದಲಾದ ಉಪದ್ವೀಪಗಳೊಡನೆ ಹದಿಮೂರು ದ್ವೀಪಗಳುಳ್ಳ ಈ ಭೂಮಂಡಲವನ್ನು, ನಿನ್ನ ಕಿರಣಗಳಿಂದ ಪ್ರಕಾಶಮಾಡುವೆ! ಈ ಮೂರುಲೋಕಗಳ ಹಿತಕ್ಕೋಸ್ಕರಲೇ ನೀನು ಪ್ರವರ್ತಿಸುತ್ತಿರುವೆ! ನಿನ್ನ ಉದಯವಾಗದೇಹೋದರೆ ಲೋಕವೆಲ್ಲಾ ಅಂಧಕಾರಮಯವಾಗುವದಲ್ಲದೆ, ವಿದ್ವಾಂಸರಾದವರು ಧರ್ಮಾರ್ಥಕಾಮಗಳ ಸಾಧನೆಯಲ್ಲಿ ಪ್ರವರ್ತಿಸದೇ ಹೋಗುವರು! ನಿನ್ನನುಗ್ರಹದಿಂದಲೇ ಬ್ರಾಹ್ಮಣರೂ ಕ್ಷತ್ರಿಯರೂ ವೈಶ್ಯರೂ ಅಗ್ನ್ಯಾಧಾನ, ಪಶುಬಂಧ, ಇಷ್ಟಿ, ಮಂತ್ರ, ಯಜ್ಞ, ತಪಸ್ಸು, ಮೊದಲಾದವುಗಳ ಫಲವನ್ನು ಹೊಂದುವರು. ಚತುರ್ಮುಖ ಬ್ರಹ್ಮನ ಸಹಸ್ರ ಯುಗಪ್ರಮಾಣವುಳ್ಳ ಒಂದು ಅಹಸ್ಸಿನ ಆದ್ಯಂತ ವಿಭಾಗಗಳೂ ನಿನ್ನಿಂದಲೇ ಉಂಟಾಗುವವೆಂದು ಕಾಲಜ್ಞಾನಿಗಳು ಹೇಳುವರು! ಮನುಗಳಿಗೂ, ಮನುಪುತ್ರರಿಗೂ, ಮನ್ವಂತರಾಧಿಪತಿಗಳಿಗೂ, ಪ್ರಪಂಚಕ್ಕೂ, ಮನುಷ್ಯೇತರರಿಗೂ, ನೀನೇ ಅಧಿಪತಿಯಾದವನು! ಪ್ರಳಯಕಾಲವು ಪ್ರಾಪ್ತವಾಗಲು, ನಿನ್ನ ಕೋಪದಿಂದ ಹುಟ್ಟಿದ ಸಂವರ್ತಕವೆಂಬ ಅಗ್ನಿಯು ಮೂರುಲೋಕಗಳನ್ನೂ ಭಸ್ಮಮಾಡಿ ತಾನೇ ತಾನಾಗಿರುವದು! ನಿನ್ನ ಕಿರಣಗಳಿಂದ ಉಂಟಾದ ವಿಚಿತ್ರವಿಚಿತ್ರವಾದ ಮೇಘಗಳು ಐರಾವತಮೇಘದಿಂದಲೂ ಸಿಡಿಲುಗಳಿಂದಲೂ ಕೂಡಿ, ಉದ್ಭಿಜ ಮೊದಲಾದ ನಾಲ್ಕುವಿಧವಾದ ಪ್ರಾಣಿಗಳನ್ನೂ ನೀರಿನಲ್ಲಿ ಮುಳುಗಿಸಿಬಿಡುವವು. ಆಗ ನೀನು ನಿನ್ನ ಸ್ವರೂಪವನ್ನು ಹನ್ನೆರಡು ಭಾಗಮಾಡಿಕೊಂಡು, ಅರುಣ ಮೊದಲಾದ ಹನ್ನೆರಡು ಹೆಸರುಗಳನ್ನು ಪಡೆದು, ಜಲಮಯವಾಗಿರುವ ಈ ಪ್ರಪಂಚವನ್ನು ಕಿರಣಗಳಿಂದ ಶೋಷಿಸಿಬಿಡುವೆ! ನಿನ್ನನ್ನೇ ವಿಷ್ಣುವೆಂತಲೂ, ರುದ್ರನೆಂತಲೂ, ಚತುರ್ಮುಖಬ್ರಹ್ಮನೆಂತಲೂ, ಇಂದ್ರನೆಂತಲೂ, ಅಗ್ನಿಯೆಂತಲೂ, ಸೂಕ್ಷ್ಮವಾದ ಮನಸ್ಸಿಗೆ ಅಭಿ

ಮಾನಿಯೆಂತಲೂ, ಶಾಶ್ವತವಾದ ಪರಬ್ರಹ್ಮವೆಂತಲೂ, ದೊಡ್ಡವರು ಹೇಳುವರು! ಹಂಸ, ಸವಿತೃ, ಭಾನು, ಅಂಶುಮಾಲಿ, ವೃಷಾಕಪಿ, ವಿವಸ್ವಂತ, ಮಿಹಿರ, ಪೂಷ, ಮಿತ್ರ, ಧರ್ಮ, ಸಹಸ್ರರಶ್ಮಿ, ಆದಿತ್ಯ, ತಪನ, ಗವಾಂಪತಿ, ಮಾರ್ತಾಂಡ, ಅರ್ಕ, ರವಿ, ಸೂರ್ಯ, ಶರಣ್ಯ, ದಿನಕೃತ್ತು, ದಿವಾಕರ, ಸಪ್ತಸಪ್ತಿ, ಧಾಮಕೇಶಿ, ವಿರೋಚನ, ಆಶುಗಾಮಿ, ತಮೋಘ್ನ, ಹರಿತಾಶ್ವ, ಮೊದಲಾದ ನಾಮಗಳಿಂದ ನಿನ್ನನ್ನು ಕರೆಯುವರು. ಯಾವ ಮನುಷ್ಯನು ಸಪ್ತಮೀದಿವಸವೇ ಆಗಲಿ, ಷಷ್ಠೀದಿವಸವೇ ಆಗಲಿ, ಅಹಂಕಾರವನ್ನು ಬಿಟ್ಟು ಮನಃಪೂರ್ವಕವಾಗಿ ಭಕ್ತಿಯಿಂದ ನಿನ್ನ ಪೂಜಿಸುವನೋ ಆತನು ಐಶ್ವರ್ಯವಂತನಾಗುವನು. ಯಾರು ನಿನ್ನಲ್ಲೀ ವಿಶ್ವಾಸವುಳ್ಳವರಾಗಿ ನಿನಗೆ ನಮಸ್ಕಾರಮಾಡುವರೋ ಅವರ ಆಧಿವ್ಯಾಧಿಗಳೂ ವಿಪತ್ತುಗಳೂಸಹ ನಷ್ಟವಾಗುವವು! ನಿನ್ನ ಧ್ಯಾನದಲ್ಲಿ ನಿರತರಾದಂಥಾವರು ಪಾಪರಹಿತರಾಗಿ, ಸಕಲ ವ್ಯಾಧಿಗಳನ್ನೂ ಪರಿಹರಿಸಿಕೊಂಡು, ಬಹುಕಾಲ ಸುಖವಾಗಿರುವರು! ಎಲೈ ಅನ್ನದಾತನಾದ ಸೂರ್ಯನೆ, ಆಪತ್ತಿನಿಂದ ಪೀಡಿತರಾದವರಿಗೆ ವಿಶ್ವಾಸದಿಂದ ಅತಿಥಿಸತ್ಕಾರವನ್ನು ಮಾಡಬೇಕೆಂದು ಅಪೇಕ್ಷಿಸುತ್ತಿರುವ ನನಗೆ ಅನ್ನಪ್ರದಾನವನ್ನು ಮಾಡು. ನಿನ್ನ ಪಾದಭಾಗವನ್ನು ಆಶ್ರಯಿಸಿ, ಮಿಂಚು ಸಿಡಿಲು ಮೊದಲಾದದ್ದನ್ನು ನಿರ್ಮಿಸತಕ್ಕ ಮಾಠರ, ಅರುಣ, ದಂಡ ಮೊದಲಾದ ನಿನ್ನ ಅನುಚರರಿಗೂ ನಮಸ್ಕರಿಸುವೆನು. ಮತ್ತು ನಿಗ್ರಹಾನುಗ್ರಹಸಾಮರ್ಥ್ಯವುಳ್ಳ ಕ್ಷುಭೆ, ಮೈತ್ರಿಗಳೊಡಗೂಡಿದ ಗೌರಿ, ಪದ್ಮೆ, ಬ್ರಾಹ್ಮಿ, ಮಾಹೇಶ್ವರಿ ಮೊದಲಾದ ಭೂತಮಾತೃಗಳಿಗೂ ನಮಸ್ಕಾರಮಾಡುವೆನು. ಇವರು ಶರಣಾಗತನಾದ ನನ್ನನ್ನು ಸಂರಕ್ಷಿಸಲಿ!" ಎಂದು ಪ್ರಾರ್ಥಿಸಿದನು.

ಈ ಪ್ರಕಾರ ಧರ್ಮರಾಯನಿಂದ ಸ್ತುತಿಸಲ್ಪಟ್ಟ ಜಗತ್ಪೂಜ್ಯನಾದ ಸೂರ್ಯನು, ಅಗ್ನಿಯಂತೆ ಪ್ರಕಾಶಮಾನವಾದ ಶರೀರದಿಂದ ದೇದೀಪ್ಯಮಾನನಾಗಿ, ಧರ್ಮರಾಯನ ಸ್ತುತಿಗೆ ಸಂತೋಷಪಟ್ಟು ಪ್ರತ್ಯಕ್ಷನಾಗಿ, "ಎಲೈ ಧರ್ಮರಾಯನೆ, ನಿನ್ನ ಮನಸ್ಸಿನಲ್ಲಿ ಏನೇನು ಅಪೇಕ್ಷೆ ಇರುವದೋ ಅದನ್ನೆಲ್ಲಾ ನೀನು ಪಡೆಯುವೆ. ನೀನು ಹನ್ನೆರಡು ವರ್ಷ ವನವಾಸಮಾಡುವವರೆಗೂ ನಿನಗೆ ನಾನು ಅನ್ನವನ್ನು ಕೊಡುತ್ತೇನೆ. ಈ ತಾಮ್ರದ ಪಾತ್ರೆಯನ್ನು ಸ್ವೀಕರಿಸು. ದ್ರೌಪದಿಯು ಈ ಪಾತ್ರೆಯಿಂದ ಶಾಕ, ಫಲ, ಮೂಲ, ಮಾಂಸಗಳನ್ನೂ ಷಡ್ರಸೋಪೇತವಾದ ನಾಲ್ಕುವಿಧವಾದ ಪಕ್ವಾನ್ನವನ್ನೂ ಎಷ್ಟು ಅಪೇಕ್ಷಿಸುವಳೋ, ಅಷ್ಟೂ ಇದರಿಂದ ಈ ಹೊತ್ತು ಮೊದಲು ಅಕ್ಷಯವಾಗುವದು. ಇನ್ನು ಹದಿನಾಲ್ಕನೇ ವರ್ಷದಲ್ಲಿ ನಿನಗೆ ಹೋಗಿರುವ ರಾಜ್ಯವು ಪ್ರಾಪ್ತವಾಗುವದು" ಎಂದು ನುಡಿದು ಅಂತರ್ಧಾನವನ್ನು ಹೊಂದಿದನು.

ಎಲೈ ಜನಮೇಜಯನೆ, ದೃಢಮನಸ್ಕನಾಗಿ ಏಕಾಗ್ರಚಿತ್ತದಿಂದ ವರವನ್ನಪೇಕ್ಷಿಸಿ ಯಾವ ಪುರುಷನು ಈ ಸ್ತೋತ್ರವನ್ನು ಪಠನಮಾಡುವನೋ, ಆತನು ಬಯಸಿದ ಇಷ್ಟಾರ್ಥವು ದುರ್ಲಭವಾದಾಗ್ಯೂ, ಅದನ್ನು ಸೂರ್ಯನು ಕೊಡುವನು. ಸ್ತ್ರೀಯಾಗಲೀ ಪುರುಷನಾಗಲೀ ಯಾರು ಈ ಸ್ತೋತ್ರವನ್ನು ನಿತ್ಯವೂ ಜಪಿಸುವರೋ ಅಥವಾ ಪದೇಪದೇ ಕೇಳುವರೋ ಅವರು, ಪುತ್ರಾಪೇಕ್ಷಿಗಳಾಗಿದ್ದರೆ ಪುತ್ರನನ್ನೂ, ಧನಾಪೇಕ್ಷಿಗಳಾಗಿದ್ದರೆ ಧನವನ್ನೂ, ವಿದ್ಯಾಪೇಕ್ಷಿಗಳಾಗಿದ್ದರೆ ವಿದ್ಯೆಯನ್ನೂ ಪಡೆಯುವರು. ಈ ಸ್ತೋತ್ರವನ್ನು ನಿತ್ಯವೂ ಸಾಯಂಪ್ರಾತಃಕಾಲಗಳಲ್ಲಿ ಸ್ತ್ರೀಯೇ ಆಗಲಿ ಪುರುಷನೇ ಆಗಲಿ ಪಠಿಸಿದ್ದೇ ಆದರೆ, ಸಕಲ ಕಷ್ಟವೂ ನಿವೃತ್ತಿಯಾಗುವದು; ಕಾರಾಗೃಹವಾಸ ಮೊದಲಾದ ನಿರ್ಬಂಧವೂ ನಿವೃತ್ತಿಯಾಗುವುದು. ಈ ಅಷ್ಟೋತ್ತರವನ್ನು ಪೂರ್ವದಲ್ಲಿ ಚತುರ್ಮುಖ ಬ್ರಹ್ಮನು ಮಹಾತ್ಮನಾದ ಇಂದ್ರನಿಗೆ ಉಪದೇಶಮಾಡಿದನು. ಇದು ಆ ಇಂದ್ರನಿಂದ ನಾರದರಿಗೆ ಪ್ರಾಪ್ತವಾಯಿತು; ನಾರದರಿಂದ ಧೌಮ್ಯರಿಗೆ ಪ್ರಾಪ್ತವಾಯಿತು; ಧೌಮ್ಯರಿಂದ ಧರ್ಮರಾಯನು ಉಪದೇಶ ತೆಗೆದುಕೊಂಡು ಅದರಿಂದ ತನ್ನ ಇಷ್ಟಾರ್ಥಗಳನ್ನು ಪಡೆದನು. ಈ ಸ್ತೋತ್ರವನ್ನು ನಿತ್ಯವೂ ಪಠನಮಾಡತಕ್ಕವನು ಯುದ್ಧದಲ್ಲಿ ಜಯವನ್ನು ಹೊಂದಿ, ಬೇಕಾದಷ್ಟು ದ್ರವ್ಯವನ್ನು ಸಂಪಾದಿಸಿ, ಸಕಲ ಪಾಪಗಳನ್ನು ಕಳೆದುಕೊಂಡು, ಅನಂತರದಲ್ಲಿ ಸೂರ್ಯಲೋಕವನ್ನು ಹೊಂದುವನು.

ಎಲೈ ಜನಮೇಜಯನೇ ಕೇಳು, ಈಪ್ರಕಾರ ಧರ್ಮರಾಯನು ಸೂರ್ಯನಿಂದ ವರವನ್ನು ಪಡೆದು ಗಂಗೆಯಿಂದ ಮೇಲಕ್ಕೆ ಎದ್ದು, ಧೌಮ್ಯರ ಪಾದಕ್ಕೆ ವಂದನೆಯನ್ನುಮಾಡಿ, ತಮ್ಮಂದಿರನ್ನು ಆಲಿಂಗನೆ ಮಾಡಿಕೊಂಡು,

ದ್ರೌಪದಿಯು ನಮಸ್ಕಾರಮಾಡಲು ಆಕೆಯೊಡನೆ ಅಡಿಗೇಮನೆಯಲ್ಲಿ ಖಾದ್ಯ, ಲೇಹ್ಯ, ಚೋಷ್ಯ, ಪೇಯ ಎಂಬ ನಾಲ್ಕುವಿಧವಾದ ಪಕ್ವಾನ್ನವನ್ನು ಸ್ವಲ್ಪವಾಗಿ ಮಾಡಿಸಿದಾಗ್ಯೂ ಅದು ಅಕ್ಷಯವಾಗಿ ಹೆಚ್ಚುತ್ತಿರಲು, ಅದರಿಂದ ಬ್ರಾಹ್ಮಣರಿಗೆ ಭೋಜನಮಾಡಿಸಿದನು. ಬಳಿಕ ತಮ್ಮಂದಿರೂ ಭೋಜನ ಮಾಡಿದನಂತರ, ವಿಘಸವೆಂಬ ಹೆಸರುಳ್ಳ ಮಿಕ್ಕ ಅನ್ನವನ್ನು ತಾನು ಭೋಜನಮಾಡಿದನು. ಆ ಧರ್ಮರಾಯನು ಭೋಜನಮಾಡಿ ಮಿಕ್ಕ ಅನ್ನವನ್ನು ದ್ರೌಪದಿಯು ಭೋಜನಮಾಡಿದಳು. ಆಕೆ ಭೋಜನಮಾಡಿದಬಳಿಕ ಆ ಅನ್ನವು ಮುಗಿಯಿತು. ಹೀಗೆ ಪ್ರತಿ ದಿವಸವೂ ಧರ್ಮರಾಯನು ಸೂರ್ಯನಂತೆ ಪ್ರಕಾಶಮಾನನಾಗಿ, ಸೂರ್ಯನ ವರಪ್ರಭಾವದಿಂದ ಬ್ರಾಹ್ಮಣರಿಗೆ ಬೇಕಾದ ಇಷ್ಟಾರ್ಥಗಳನ್ನು ಕೊಡುತ್ತಿದ್ದನು. ಆಗ ಪುರೋಹಿತರು ಮೊದಲಾದ ಸಕಲರಾದ ಬ್ರಾಹ್ಮಣರೂ ಉಕ್ತವಾದ ತಿಥಿ, ನಕ್ಷತ್ರ, ಪರ್ವಕಾಲಗಳಲ್ಲಿ ವಿಧಿಮಂತ್ರಗಳಿಂದ ಯಜ್ಞಕ್ಕೆ ಯೋಗ್ಯವಾದ ಆಜ್ಯ ಪಶು ಪುರೋಡಾಶ ಮೊದಲಾದವುಗಳನ್ನು ನೆರವೇರಿಸುತ್ತಿದ್ದರು. ಬಳಿಕ ಪಾಂಡವರು ಧೌಮ್ಯರ ಆಶೀರ್ವಾದವನ್ನು ಕೈಕೊಂಡು ಬ್ರಾಹ್ಮಣರೊಡನೆ ಕಾಮ್ಯಕವನಕ್ಕೆ ಹೋದರು.

## ೪ನೇ ಅಧ್ಯಾಯ.—ಧೃತರಾಷ್ಟ್ರ ವಿದುರರ ಸಂವಾದ.

ವೈಶಂಪಾಯನ ಮುನೀಂದ್ರನು ಜನಮೇಜಯರಾಯನನ್ನು ಕುರಿತು—ಎಲೈ ಜನಮೇಜಯರಾಯನೇ ಕೇಳು, ಪಾಂಡವರು ವನವಾಸಕ್ಕೆ ಹೋದಬಳಿಕ, ಇತ್ತ ಧೃತರಾಷ್ಟ್ರರಾಯನು ಸುಖವಾಗಿ ಪೀಠದಮೇಲೆ ಕೂತುಕೊಂಡು, ಮನಸ್ಸಿನಲ್ಲಿ ಸಂತಾಪಪಡುತ್ತ, ವಿಶೇಷವಾಗಿ ಬುದ್ಧಿಶಾಲಿಯಾದ ವಿದುರನನ್ನು ಕುರಿತು, "ಎಲೈ ವಿದುರನೆ, ನೀನು ಬುದ್ಧಿಯಲ್ಲಿ ಬೃಹಸ್ಪತಿಗೆ ಸಮಾನನಾದವನು ; ಧರ್ಮಸೂಕ್ಷ್ಮವನ್ನು ಚೆನ್ನಾಗಿ ತಿಳಿದವನು ; ಮತ್ತು ಕೌರವರಿಗೂ ಪಾಂಡವರಿಗೂ ಸಮ್ಮತನಾಗಿ ಪಕ್ಷಪಾತವಿಲ್ಲದೇ ಇರತಕ್ಕವನು. ಪುತ್ರಸಹಿತನಾದ ನನಗೂ ಪಾಂಡವರಿಗೂ ಈಗ ಹಿತವಾದದ್ದನ್ನು ಹೇಳು. ಪಾಂಡವರು ವನವಾಸಕ್ಕೆ ಹೋದರಷ್ಟೆ? ಇನ್ನುಮೇಲೆ ನಮ್ಮ ಪಟ್ಟಣದಲ್ಲಿರುವ ಪ್ರಜೆಗಳೆಲ್ಲರೂ ನಮ್ಮನ್ನೇ ಹ್ಯಾಗೆ ಅನುಸರಿಸಿಕೊಂಡಿದ್ದಾರು? ಅವರು ನಮಗೆ ಹ್ಯಾಗೆ ಕೇಡನ್ನು ಮಾಡದೇ ಇದ್ದಾರು? ಇದಕ್ಕೇನು ಮಾಡಬೇಕೊ ಅದನ್ನು ನೀನು ಚೆನ್ನಾಗಿ ಬಲ್ಲೆ ಹೇಳು" ಎನಲು, ಅದನ್ನು ಕೇಳಿ ವಿದುರನು "ಎಲೈ ರಾಯನೆ, ಧರ್ಮಾರ್ಥಕಾಮಗಳೆಂಬ ತ್ರಿವರ್ಗದಲ್ಲಿ ಧರ್ಮವೇ ಮುಖ್ಯವಾದದ್ದು. ಅಂಥಾ ಧರ್ಮವು ರಾಜ್ಯಕ್ಕೆ ಕಾರಣವಾಗಿರುವದು. ಅಂಥಾ ಧರ್ಮವನ್ನಾಶ್ರಯಿಸಿ, ನೀನು ನಿನ್ನ ಶಕ್ತಿಯಿಂದ ನಿನ್ನ ಮಕ್ಕಳನ್ನೂ ಪಾಂಡವರನ್ನೂ ರಕ್ಷಿಸು. ನಿನ್ನ ಮಗನಾದ ದುರ್ಯೋಧನನು ಧರ್ಮಸ್ವರೂಪನಾಗಿಯೂ ಸತ್ಯಸಂಧನಾಗಿಯೂ ಇರುವ ಧರ್ಮರಾಯನನ್ನು ಕರೆಯಿಸಿ, ಪಾಪಾತ್ಮರಾದ ಶಕುನಿ ಮೊದಲಾದವರನ್ನು ಮುಂದಿಟ್ಟುಕೊಂಡು, ಅವರನ್ನು ವಂಚಿಸಿ ಪಗಡೇ ಆಟದಲ್ಲಿ ಸೋಲಿಸಿದನು. ಈ ದೋಷವನ್ನು ಪರಿಹಾರಮಾಡಿಕೊಂಡು ನಿನ್ನ ಮಗನಾದ ದುರ್ಯೋಧನನು ಲೋಕದಲ್ಲಿ ಚೆನ್ನಾಗಿರುವದಕ್ಕೂ, ದುಷ್ಟಾತ್ಮರಾದ ಶಕುನಿ ಮೊದಲಾದವರು ಪಾಂಡವರಿಗೆ ಮಾಡಿದ ಅವಮಾನವು ಪರಿಹಾರವಾಗುವದಕ್ಕೂ ಮಾಡಬೇಕಾದ ತಕ್ಕ ಉಪಾಯವನ್ನು ನಾನು ಬಲ್ಲೆನು. ಎಲೈ ರಾಯನೆ, ನೀನು ಪಾಂಡವರಿಗೆ ಪೂರ್ವದಲ್ಲಿ ಏನೇನು ಕೊಟ್ಟದ್ದೆಯೋ ಅವೆಲ್ಲವನ್ನೂ ಅವರೇ ಅನುಭವಿಸಲಿ. ರಾಜನಾದವನು ಪರರ ವಸ್ತುವನ್ನು ಅಪೇಕ್ಷಿಸದೇ ಸ್ವಾರ್ಜಿತದಿಂದಲೇ ಸಂತೋಷಪಡಬೇಕು. ಇದು ಉತ್ತಮವಾದ ಧರ್ಮವು. ಹೀಗೆ ಮಾಡಿದರೆ, ನಿನ್ನ ಯಶಸ್ಸಿಗೆ ಏನೂ ಕುಂದುಕವಿರುವದಿಲ್ಲ ; ಜ್ಞಾತಿಗಳಲ್ಲೂ ಭೇದವುಂಟಾಗುವದಿಲ್ಲ ; ಧರ್ಮಕ್ಕೂ ಲೋಪ ಬರುವದಿಲ್ಲ. ಶಕುನಿಗೆ ಮಾನಭಂಗವಾಗುವಂತೆ ಪಾಂಡವರನ್ನು ಸಂತೋಷಪಡಿಸತಕ್ಕದ್ದು ನಿನಗೆ ಮುಖ್ಯವಾದ ಕಾರ್ಯವು. ಹೀಗೆ ಪಾಂಡವರಿಗೆ ಕೊಟ್ಟು ಉಳಿದ ಭಾಗವು ನಿನ್ನ ಮಕ್ಕಳಿಗಾಗಲಿ. ಈ ಕಾರ್ಯವನ್ನು ಜಾಗ್ರತೆಯಾಗಿ ಮಾಡು. ಹೀಗೆ ನೀನು ಮಾಡದೇಹೋದರೆ, ಕೌರವರಿಗೆ ನಾಶವುಂಟಾಗುವದು ನಿಜ. ಮಹಾಬಲಶಾಲಿಗಳಾದ ಭೀಮಾರ್ಜುನರು ಕೋಪಗೊಂಡರೆ, ಶತ್ರುಸೈನ್ಯದಲ್ಲಿ ಒಬ್ಬನಾದರೂ ಉಳಿದಾನೆ? ಪಾಂಡವರಲ್ಲಿ ಸವ್ಯಸಾಚಿಯೆನಿಸಿಕೊಂಡು ದಿವ್ಯಾಸ್ತ್ರಗಳನ್ನು ತಿಳಿದಿರುವ ಅರ್ಜುನನು ರಣಧೀರನಾಗಿರುವನು. ಪಾಂಡವರಲ್ಲಿ

ಶ್ರೇಷ್ಠವಾದ ಗಾಂಡೀವಧನುಸ್ಸಿರುವದು. ಅವರಲ್ಲಿ ಬಾಹುಬಲಶಾಲಿಯಾದ ಭೀಮಸೇನನು ಯೋಧಾಗ್ರೇಸರನಾಗಿರುವನು. ಲೋಕದಲ್ಲಿ ಇವರಿಗೆ ಅಸಾಧ್ಯವಾದದ್ದು ಯಾವದು? ಎಲೈ ರಾಯನೆ, ದುರ್ಯೋಧನನು ಹುಟ್ಟಿದ ಕಾಲದಲ್ಲೇ, ಕುಲಘಾತಕನಾದ ಇವನನ್ನು ಪರಿತ್ಯಾಗಮಾಡು ಎಂದು ನಾನು ಹೇಳಿದೆನು. ಅದನ್ನು ನೀನು ಅನ್ಯಥಾ ತಿಳಿದು ಹಾಗೆ ಮಾಡದೇಹೋದೆ. ಈಗಲೂ ನಿನಗೆ ಹಿತವನ್ನು ಹೇಳಿರುವೆನು; ಅದನ್ನು ನೀನು ನಡೆಯಿಸದೇ ಹೋದರೆ ಮುಂದೆ ನಿನಗೆ ಪಶ್ಚಾತ್ತಾಪವುಂಟಾಗುವದು. ನಿನ್ನ ಮಗನಾದ ದುರ್ಯೋಧನನು, ಪಾಂಡವರೊಡನೆ ಸೇರಿ ಸಂತೋಷದಿಂದ ಏಕರಾಜ್ಯವನ್ನು ಅನುಭವಿಸುವದಕ್ಕೆ ಒಡಂಬಟ್ಟದ್ದೇ ಆದರೆ, ಅವರವರ ಪ್ರೀತಿಯಿಂದ ನಿನಗೆ ಸಂತಾಪವುಂಟಾಗುವದಿಲ್ಲ. ಅವನು ಒಡಂಬಡದೇ ಹೋದರೆ, ದುಷ್ಟನಾದ ಅವನನ್ನು ನಿಗ್ರಹಿಸಿ ಎಲ್ಲರ ಸುಖಕ್ಕೋಸ್ಕರಲೂ ಪಾಂಡುಪುತ್ರನಾದ ಧರ್ಮರಾಯನಿಗೆ ರಾಜ್ಯಾಧಿಕಾರವನ್ನು ಕೊಡು. ರಾಗದ್ವೇಷಾದಿಗಳಿಲ್ಲದ ಧರ್ಮರಾಯನು ಧರ್ಮದಿಂದ ರಾಜ್ಯಭಾರವನ್ನು ಮಾಡಲಿ. ಬಳಿಕ ಭೂಮಂಡಲವಲ್ಲಿರುವ ಸಕಲರಾದ ಅರಸುಗಳೂ ತತ್ಕ್ಷಣವಲ್ಲಿ ವೈಶ್ಯರಂತೆ ಕಪ್ಪವನ್ನು ಕೊಡುತ್ತ ನಮ್ಮನ್ನು ಆಶ್ರಯಿಸುವರು. ದುರ್ಯೋಧನ, ಶಕುನಿ, ಕರ್ಣರು ಪಾಂಡವರನ್ನು ಪ್ರೀತಿಯಿಂದ ಅನುಸರಿಸಿಕೊಂಡಿರಲಿ. ದುಶ್ಶಾಸನನು ಕ್ಷಮಿಸಬೇಕೆಂದು ಭೀಮಸೇನನನ್ನೂ ದ್ರೌಪದಿಯನ್ನೂ ಸಹ ಸಭೆಯಲ್ಲಿ ಬೇಡಿಕೊಳ್ಳಲಿ. ನೀನು ಧರ್ಮರಾಯನನ್ನು ಸಮಾಧಾನಪಡಿಸಿ ಆತನಿಗೆ ಮರ್ಯಾದೆಯಿಂದ ರಾಜ್ಯದಲ್ಲಿ ಪಟ್ಟಾಭಿಷೇಕವನ್ನು ಮಾಡು. ಎಲೈ ಧೃತರಾಷ್ಟ್ರನೆ, ನಾನೇನು ಮಾಡತಕ್ಕದ್ದು? ಎಂದು ನೀನು ಕೇಳಿದ್ದಕ್ಕೆ, ಇನ್ನೇನು ನಾನು ಹೇಳತಕ್ಕದ್ದಿದೆ? ನಾನು ಹೇಳಿದಂತೆ ನಡೆದುಕೊಂಡರೆ ನೀನು ಕೃತಕೃತ್ಯನಾಗುವೆ" ಎಂದು ನುಡಿದನು.

ಆ ಮಾತನ್ನು ಕೇಳಿ ಧೃತರಾಷ್ಟ್ರನು "ಎಲೈ ವಿದುರನೆ, ನೀನು ಪಾಂಡವರನ್ನೂ ನನ್ನನ್ನೂ ಸಹ ಉದ್ದೇಶಿಸಿ ಇದೇ ಮಾತುಗಳನ್ನು ಮೊದಲೇ ಸಭೆಯಲ್ಲಿ ಹೇಳಿದೆ. ಈ ಮಾತು ಪಾಂಡವರಿಗೆ ಹಿತವಾಗಿಯೂ ನನ್ನ ಮಕ್ಕಳಿಗೆ ಅಹಿತವಾಗಿಯೂ ಇರುವದರಿಂದ ನನ್ನ ಮನಸ್ಸು ಒಡಂಬಡುವದಿಲ್ಲ. ನೀನು ಹೇಳಿದ ಮಾತುಗಳೆಲ್ಲಾ ಪಾಂಡವರಲ್ಲಿ ಪಕ್ಷಪಾತದಿಂದ ಹೇಳಿದವುಗಳೆಂದು ಈಗ ನಿಶ್ಚಯವಾಯಿತು. ಆದುದರಿಂದ ನೀನು ನನಗೆ ಹಿತವನ್ನೆಣಿಸತಕ್ಕವನಲ್ಲವೆಂದು ಈಗ ತಿಳಿದೆ. ಪಾಂಡವರಿಗೋಸ್ಕರ ನನ್ನ ಮಗನನ್ನು ನಾನು ಹ್ಯಾಗೆ ಪರಿತ್ಯಾಗಮಾಡೇನು? ಆದರೆ ಪಾಂಡವರು ನನ್ನ ಮಕ್ಕಳೇ ಅಹುದು; ದುರ್ಯೋಧನನಾದರೋ ನನ್ನ ಶರೀರದಿಂದಲೇ ಹುಟ್ಟಿರುವನು. ತನ್ನ ಹೊಟ್ಟೆಯಲ್ಲಿ ಹುಟ್ಟಿದ ಮಗನನ್ನು ಪರರಿಗೋಸ್ಕರ ತ್ಯಾಗಮಾಡು ಎಂದು ಲೋಕದಲ್ಲಿ ಸಮಬುದ್ಧಿಗಳಾದವರು ಯಾರುತಾನೇ ಹೇಳುವರು? ನೀನು ಪಾಂಡವರಲ್ಲಿ ಪಕ್ಷಪಾತದಿಂದ ಹೀಗೆ ಕುಟಿಲವಾಗಿ ನುಡಿದಿರುವೆ. ನಿನಗೆ ಬೇಕಾದಷ್ಟು ಬಹುಮಾನ ಮಾಡುತ್ತೇನೆ. ನೀನು ಇಲ್ಲಿದ್ದರೆ ಇರು; ಹೋದರೆ ಹೋಗು. ನಿನ್ನ ಇಚ್ಛೆಯಿದ್ದಂತೆ ಮಾಡು. ಲೋಕದಲ್ಲಿ ಕೆಟ್ಟನಡತೆಯುಳ್ಳ ಸ್ತ್ರೀಗೆ ಎಷ್ಟು ಒಳ್ಳೇಮಾತುಗಳನ್ನಾಡಿದಾಗ್ಯೂ, ಅವಳು ಎಂದಿಗಾದರೂ ಪತಿಯನ್ನು ಬಿಟ್ಟು ಹೋಗತಕ್ಕವಳು" ಎಂದು ನುಡಿದು, ಎದ್ದು, ಜಾಗ್ರತೆಯಾಗಿ ಅಂತಃಪುರಕ್ಕೆ ಹೊರಟು ಹೋದನು. ಬಳಿಕ ವಿದುರನು ಇನ್ನು ಮೇಲೆ ಈ ಕೌರವರ ವಂಶವು ಉಳಿಯತಕ್ಕದ್ದಲ್ಲವೆಂದು ಹೇಳುತ್ತ ಪಾಂಡವರಿರುವ ಸ್ಥಳಕ್ಕೆ ಹೊರಟು ಹೋದನು.

## ೫ನೇ ಅಧ್ಯಾಯ.—ವಿದುರನು ಪಾಂಡವರ ಸಮೀಪಕ್ಕೆ ಬಂದದ್ದು.

ಅನಂತರದಲ್ಲಿ ವೈಶಂಪಾಯನಮುನೀಂದ್ರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯನೆ, ಈ ಕಡೆಯಲ್ಲಿ ಪುರುಷಶ್ರೇಷ್ಠರಾದ ಪಾಂಡವರು ಪರಿವಾರಸಹಿತರಾಗಿ ವನವಾಸಕ್ಕೋಸ್ಕರ ಗಂಗಾತೀರದಿಂದ ಕುರುಕ್ಷೇತ್ರಕ್ಕೆ ಹೋಗಿ, ಸರಸ್ವತಿ, ದೃಷದ್ವತಿ, ಯಮುನೆ ಎಂಬ ಪುಣ್ಯನದಿಗಳಲ್ಲಿ ಸ್ನಾನವನ್ನು ಮಾಡಿಕೊಂಡು, ಅನೇಕ ವನಗಳನ್ನು ದಾಟಿ, ಅಲ್ಲಿಂದ ಪಶ್ಚಿಮದಿಕ್ಕಿಗೆ ಹೊರಟು, ಸರಸ್ವತೀತೀರದಲ್ಲಿ ನೀರಿಲ್ಲದೇ ಸ್ವಲ್ಪಗಿಡಗಳುಳ್ಳ ಸಮಭೂಮಿ

ದಲ್ಲಿ ಋಷಿಗಳಿಗೆ ಪ್ರಿಯವಾದ ಕಾಮ್ಯಕವೆಂಬ ವನವನ್ನು ನೋಡಿ, ಅನೇಕ ಮೃಗಪಕ್ಷಿಗಳಿಂದ ಕೂಡಿರುವ ಆ ವನದಲ್ಲಿ ಋಷಿಗಳು ಸಮಾಧಾನಪಡಿಸುತ್ತಿರಲು, ಅವರೊಡನೆ ವಾಸಮಾಡುತ್ತಿದ್ದರು. ಆಗ ವಿದುರನು ಪಾಂಡವರನ್ನು ನೋಡಬೇಕೆಂಬ ಕುತೂಹಲದಿಂದ ತಾನೊಬ್ಬನೇ ವೇಗಶಾಲಿಗಳಾದ ಕುದುರೆಗಳನ್ನು ಕಟ್ಟಿರುವ ರಥವನ್ನೇರಿ, ಕಾಮ್ಯಕವನಕ್ಕೆ ಬಂದು, ದ್ರೌಪದಿಯಿಂದಲೂ ತಮ್ಮಂದಿರಿಂದಲೂ ಬ್ರಾಹ್ಮಣರಿಂದಲೂ ಸಹಿತನಾಗಿ ವಿಜನವಾದ ಪ್ರದೇಶದಲ್ಲಿ ಕೂತುಕೊಂಡಿರುವ ಧರ್ಮಾತ್ಮನಾದ ಧರ್ಮರಾಯನನ್ನು ನೋಡಿದನು.

ಆಗ ಸತ್ಯಸಂಧನಾದ ಧರ್ಮರಾಯನು ದೂರದಲ್ಲಿ ಶೀಘ್ರವಾಗಿ ಬರುತ್ತಿರುವ ವಿದುರನನ್ನು ನೋಡಿ, ಭೀಮಸೇನನನ್ನು ಕುರಿತು "ಎಲೈ ಭೀಮನೆ, ವಿದುರನು ಬಂದು ಏನು ಹೇಳುವನೋ! ಈತನು ಶಕುನಿಯ ಮಾತಿನಿಂದ ಪಗಡೆಯನ್ನಾಡುವದಕ್ಕೋಸ್ಕರ ಬಾ ಎಂದು ಕರೆಯುವದಕ್ಕೆ ಬರುವನೋ! ಆ ಕ್ಷುದ್ರನಾದ ಶಕುನಿಯು ಪುನಃ ಪಗಡೆಯನ್ನಾಡಿ, ನಮ್ಮ ಆಯುಧಗಳನ್ನೇನಾದರೂ ಗೆಲ್ಲುವನೋ! ಯಾರಾದರೂ ನನ್ನನ್ನು ದ್ಯೂತವನ್ನಾಡುವದಕ್ಕೆ ಕರೆದರೆ, ಅದಕ್ಕೆ ಹಿಂಜರಿಯುವದಕ್ಕೆ ನನ್ನಿಂದಾಗಲಾರದು. ಗಾಂಡೀವ ಧನುಸ್ಸನ್ನು ಜೂಜಿಗಿಟ್ಟು ಕಳೆದುಕೊಂಡರೆ, ನಮಗೆ ರಾಜ್ಯಪ್ರಾಪ್ತಿಯಾಗುವದು ಸಂಶಯ" ಎಂದು ನುಡಿದನು. ಬಳಿಕ ಎಲ್ಲರೂ ಎದ್ದು ವಿದುರನನ್ನು ಕರೆದುಕೊಂಡು ಬಂದು ಸತ್ಕರಿಸಲು, ಆ ವಿದುರನು ಪಾಂಡವರ ಸಮೀಪದಲ್ಲಿ ಕೂತುಕೊಂಡನು. ಬಳಿಕ ಪಾಂಡವರು ಮಾರ್ಗಾಯಾಸವನ್ನು ಪರಿಹಾರಮಾಡಿಕೊಂಡ ವಿದುರನನ್ನು ಕುರಿತು—ಎಲೈ ವಿದುರನೆ, ನೀನು ಇಲ್ಲಿಗೆ ಬರುವದಕ್ಕೆ ನಿಮಿತ್ತವೇನೆಂದು ಕೇಳಲು, ಆತನು ಪಾಂಡವರಿಗೆ ಧೃತರಾಷ್ಟ್ರನ ನಡತೆಗಳನ್ನೆಲ್ಲಾ ವಿಸ್ತಾರವಾಗಿ ಹೇಳಲುಪಕ್ರಮಿಸಿದನು.

" ಎಲೈ ಧರ್ಮರಾಯನೆ, ನೀವು ಅರಣ್ಯಕ್ಕೆ ಬಂದಬಳಿಕ, ಧೃತರಾಷ್ಟ್ರರಾಯನು ಹಿತೋಪದೇಶದಿಂದ ಕಾಪಾಡತಕ್ಕ ನನ್ನನ್ನು ಕರೆಯಿಸಿ, ಮರ್ಯಾದೆಯನ್ನು ಮಾಡಿ, 'ನೀನು ಉಭಯಪಕ್ಷದವರಿಗೂ ಸಮನಾದ್ದರಿಂದ ನನಗೂ ಪಾಂಡವರಿಗೂ ಪಥ್ಯವಾಗಿರುವ ಮಾತನ್ನು ಹೇಳು' ಎಂದು ನನ್ನನ್ನು ಕೇಳಿದನು. ಆಗ ನಾನು ಕೌರವರಿಗೂ ಧೃತರಾಷ್ಟ್ರನಿಗೂ ಹಿತಕರವಾಗಿಯೂ ಪಥ್ಯವಾಗಿಯೂ ಇರುವ ಮಾತುಗಳನ್ನು ಹೇಳಿದೆನು; ಅವು ಅವನಿಗೆ ರುಚಿಸದೆ ಹೋದವು. ಬಳಿಕ ನಾನು ಆತನ ಸಂಗಡ ನನಗೆ ವೈರವು ತಕ್ಕದ್ದಲ್ಲವೆಂದು ತಿಳಿದೆನು. ಎಲೈ ಪಾಂಡವರೆ, ರೋಗಿಗೆ ಪಥ್ಯವಾದ ಅನ್ನವೂ, ದುಷ್ಟಳಾದ ಸ್ತ್ರೀಗೆ ಶ್ರೋತ್ರಿಯನ ಮನೆಯಲ್ಲಿ ವಾಸವೂ, ಚಿಕ್ಕವಯಸ್ಸುಳ್ಳ ಸ್ತ್ರೀಗೆ ಅರವತ್ತು ವರ್ಷ ವಯಸ್ಸುಳ್ಳ ಗಂಡನೂ ಹ್ಯಾಗೆ ರುಚಿಸುವದಿಲ್ಲವೋ ಹಾಗೆ, ನಾನು ಹೇಳಿದ ಶ್ರೇಯಸ್ಕರವಾದ ಮಾತು ಧೃತರಾಷ್ಟ್ರನಿಗೆ ರುಚಿಸದೇ ಹೋಯಿತು. ಇನ್ನು ಮೇಲೆ ಕೌರವರಿಗೆ ವಿನಾಶವು ಸಿದ್ಧವು. ಧೃತರಾಷ್ಟ್ರನು ಕ್ಷೇಮವನ್ನು ಹೊಂದಲಾರನು. ನಾನು ಹೇಳಿದ ಹಿತವಚನವು ತಾವರೇ ಎಲೆಯ ಮೇಲೆ ಹಾಕಿದ ನೀರಿನಂತೆ ಆತನ ಮನಸ್ಸಿಗೆ ಅಂಟದೇ ಹೋಗಲು, ಆಗ ಧೃತರಾಷ್ಟ್ರನು ಕೋಪದಿಂದ ನನ್ನನ್ನು ನೋಡಿ 'ಎಲೈ ವಿದುರನೆ ನಿನಗೆಲ್ಲಿ ವಿಶ್ವಾಸವಿರುವದೋ ಅಲ್ಲಿಗೆ ಹೋಗು. ನಾನು ಪಟ್ಟಣವನ್ನು ಪರಿಪಾಲಿಸುವದಕ್ಕೇ ಆಗಲಿ, ಸಕಲ ಭೂಮಿಯನ್ನೂ ಪರಿಪಾಲಿಸುವದಕ್ಕೇ ಆಗಲಿ ಪುನಃ ನಿನ್ನ ಸಹಾಯವನ್ನು ಅಪೇಕ್ಷಿಸತಕ್ಕವನಲ್ಲ' ಎಂದು ನುಡಿದು ನನ್ನನ್ನು ಪರಿತ್ಯಾಗಮಾಡಿದನು. ಎಲೈ ರಾಜೇಂದ್ರನೆ, ನಾನು ನಿನಗೆ ರಾಜನೀತಿಯನ್ನು ಹೇಳಬೇಕೆಂದು ನಿನ್ನ ಸಮೀಪಕ್ಕೆ ಬಂದೆನು. ಮೊದಲು ಸಭೆಯಲ್ಲಿ ನಾನು ಹೇಳಿದ ಮಾತುಗಳನ್ನೆಲ್ಲಾ ನೀನು ಮರೆಯಬೇಡ; ಇನ್ನೂ ಹೇಳತಕ್ಕ ನೀತಿಗಳನ್ನು ಹೇಳುವೆನು ಕೇಳು. ಯಾವ ಪುರುಷನು ಶತ್ರುಗಳಿಂದ ಎಷ್ಟು ಕ್ಲೇಶವುಂಟಾದಾಗ್ಯೂ ಸಹಿಸಿಕೊಂಡು ಕಾಲನಿರೀಕ್ಷಣೆಯನ್ನು ಮಾಡುವನೋ ಆ ಪುರುಷನು, ಬೆಂಕೀಕಿಡಿಯು ಹುಲ್ಲಿನಿಂದ ವೃದ್ಧಿಯನ್ನು ಹೊಂದುವಂತೆ, ಸಹಾಯಸಂಪತ್ತಿನಿಂದ ವೃದ್ಧಿಯನ್ನು ಹೊಂದಿ, ಸಕಲ ಭೂಮಂಡಲವನ್ನೂ ತಾನೊಬ್ಬನೇ ಅನುಭವಿಸುವನು; ಯಾವವನ ದ್ರವ್ಯವನ್ನು ಆತನಿಗೆ ಸಹಾಯಕರಾದವರು ಸಾಧಾರಣವಾಗಿ ಅನುಭವಿಸುವರೋ ಆತನಿಗೆ, ದುಃಖಬಂದ ಕಾಲದಲ್ಲಿ ಆ ದುಃಖವನ್ನು ಅವರೂ ಅನುಭವಿಸುವರು. ಇದು ಸಹಾಯಕರಾಗತಕ್ಕ ಜನರನ್ನು ಸಂಪಾದಿಸತಕ್ಕ ಉಪಾಯವು. ಅಂಥಾ ಸಹಾಯಸಂಪತ್ತಿಯುಂಟಾದರೆ ಸಕಲ ಭೂಮಂಡ

ಲವೂ ಸ್ವಾಧೀನವಾಗುವದು. ಆದ್ದರಿಂದ ಸಹಾಯಜನರೊಡನೆ ಸತ್ಯವಾಗಿ ನಡೆಯುವದೂ, ಸಮಾನ ಯೋಗಕ್ಷೇಮು ದಿಂದಿರುವದೂ, ಪ್ರಯೋಜನಕರವಾದ ಮಾತುಗಳನ್ನಾಡುವದೂ, ಪಙ್ಕ್ತಿಯಲ್ಲಿ ಭೇದವಿಲ್ಲದೇ ಊಟಮಾಡುವದೂ, ಅವರ ಮುಂದೆ ಆತ್ಮಶ್ಲಾಘನೆಯನ್ನು ಮಾಡಿಕೊಳ್ಳದೆ ಇರುವದೂ, ರಾಜನ ವೃದ್ಧಿಗೆ ಕಾರಣಭೂತವಾದವುಗಳು. ”

ಈ ರೀತಿಯಲ್ಲಿ ವಿದುರನು ನುಡಿಯಲು, ಅದನ್ನು ಕೇಳಿ ಧರ್ಮರಾಯನು ವಿದುರನನ್ನು ನೋಡಿ “ ಎಲೈ ವಿದುರನೆ, ನೀನು ಹೇಳಿದಂತೆ ನಾನು ಒಳ್ಳೇಬುದ್ಧಿಯನ್ನು ಹೊಂದಿ, ಜಾಗರೂಕನಾಗಿ ನಡೆದುಕೊಳ್ಳುತ್ತೇನೆ. ಇದು ಹೊರತು ಯಾವ ಯಾವ ದೇಶಕಾಲಗಳಲ್ಲಿ ಹ್ಯಾಗೆಹ್ಯಾಗೆ ನಡೆದುಕೊಳ್ಳಬೇಕೋ ಅವುಗಳನ್ನೂ ನೀನು ವಿವರಿಸಿದರೆ, ಆದೇಪ್ರಕಾರ ನಾನು ನಡೆದುಕೊಳ್ಳುವದಕ್ಕೆ ಸಿದ್ಧನಾಗಿರುವೆನು ” ಎಂದು ನುಡಿದನು.

## ೬ನೇ ಅಧ್ಯಾಯ.—ಧೃತರಾಷ್ಟ್ರನು ಸಂಜಯನಿಂದ ವಿದುರನನ್ನು ಕರೆಯಿಸಿದ್ದು.

ಅನಂತರದಲ್ಲಿ ವೈಶಂಪಾಯನ ಮುನೀಂದ್ರನು ಜನಮೇಜಯ ರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ವಿದುರನು ಪಾಂಡವರಿರುವ ಆಶ್ರಮಕ್ಕೆ ಹೋದಬಳಿಕ, ಈ ಕಡೆಯಲ್ಲಿ ಪ್ರಾಜ್ಞನಾದ ಧೃತರಾಷ್ಟ್ರನು ಸಂಧಿ ವಿಗ್ರಹ ಮೊದಲಾದ ಕಾರ್ಯಗಳಲ್ಲಿ ಸಮರ್ಥನಾದ ಆ ವಿದುರನ ಮಹಿಮೆಯನ್ನೂ, ಪಾಂಡವರಿಗೆ ಮುಂದೆ ಹೆಚ್ಚತಕ್ಕ ಅಭಿವೃದ್ಧಿಯನ್ನೂ ತಿಳಿದು, ಪಶ್ಚಾತ್ತಾಪಯುಕ್ತನಾಗಿ, ಸಭೆಯ ಬಾಗಿಲಿಗೆ ಬಂದು, ವಿದುರನಲ್ಲಿ ದ್ವೇಷ ಮಾಡಿದ್ದರಿಂದ ತಮ್ಮೆಲ್ಲರಿಗೂ ಹಾನಿಯುಂಟಾಗುವದೆಂಬ ಚಿಂತೆಯಿಂದ ಜ್ಞಾನತಪ್ಪಿ, ಅಲ್ಲಿರುವ ಅರಸುಗಳ ಎದುರಿಗೆ ಮೂರ್ಛಿತನಾಗಿ ಬಿದ್ದು, ಹಾಗೇ ಮೂರ್ಛೆಯನ್ನು ತಿಳಿದೆದ್ದು ಸಮೀಪದಲ್ಲಿರುವ ಸಂಜಯನನ್ನು ಕುರಿತು “ ಎಲೈ ಸಂಜಯನೆ, ಸಾಕ್ಷಾದ್ಧರ್ಮಸ್ವರೂಪನಾಗಿಯೂ, ನನಗೆ ಮಿತ್ರನಾಗಿಯೂ, ತಮ್ಮನಾಗಿಯೂ, ಇರುವ ವಿದುರನನ್ನು ನೆನದು ಈಗ ನನ್ನ ಹೃದಯವು ತಲ್ಲಣಿಸುವದು. ಧರ್ಮಜ್ಞನಾದ ಆತನನ್ನು ನೀನು ಜಾಗ್ರತೆಯಾಗಿ ಕರೆದುಕೊಂಡು ಬಾ ” ಎಂದು ಭ್ರಾತೃಸ್ನೇಹದಿಂದ ದೀನವಾಗಿ ರೋದನ ಮಾಡುತ್ತ, ಆತನ ಸ್ಮರಣೆಯಿಂದ ಪಶ್ಚಾತ್ತಾಪವನ್ನು ಹೊಂದಿ “ ಎಲೈ ಸಂಜಯನೆ ಹೋಗು. ಪಾಪಾತ್ಮನಾದ ನಾನು ಕೋಪದಿಂದ ವಿದುರನನ್ನು ಆಚೆಗೆ ಕಳುಹಿಸಿದೆನು. ಆತನು ಬದುಕಿರುವನೋ ಇಲ್ಲವೋ ತಿಳಿಯೆ. ಪ್ರಾಜ್ಞನಾಗಿಯೂ ಅಧಿಕ ಬುದ್ಧಿಶಾಲಿಯಾಗಿಯೂ ಇರುವ ವಿದುರನು ಎಂದಿಗೂ ನನಗೆ ಸ್ವಲ್ಪವಾದರೂ ಅಹಿತವನ್ನು ಮಾಡಿದವನಲ್ಲ; ಅಂಥಾವನಿಗೆ ನಾನು ಅಹಿತವನ್ನು ಮಾಡಿದೆನು. ಇನ್ನು ನನ್ನ ಪ್ರಾಣಗಳು ನಿಲ್ಲಲಾರವು. ನೀನು ಬೇಗ ಹೋಗಿ ಆತನನ್ನು ಕರೆದುಕೊಂಡು ಬಾ ” ಎಂದು ನುಡಿದನು.

ಆ ಮಾತನ್ನು ಕೇಳಿ ಸಂಜಯನು ಧೃತರಾಷ್ಟ್ರನನ್ನು ಕುರಿತು ಮರ್ಯಾದೆಯಿಂದ ‘ ಒಳ್ಳೇದು ಹಾಗಾಗಲಿ ’ ಎಂದು ನುಡಿದು, ಶೀಘ್ರನಾಗಿ ಪಾಂಡವರಿರುವ ವನಕ್ಕೆ ಹೋಗಿ, ವಿದುರನಿಂದಲೂ ಬ್ರಾಹ್ಮಣರಿಂದಲೂ ಸಹಿತನಾಗಿ, ತಮ್ಮಂದಿರಿಂದ ರಕ್ಷಿತನಾಗಿ ಕೂತುಕೊಂಡು, ದೇವತೆಗಳಿಂದ ರಕ್ಷಿತನಾದ ದೇವೇಂದ್ರನಂತೆ ಪ್ರಕಾಶಿಸುತ್ತ, ಕೃಷ್ಣಾಜಿನವನ್ನು ಹೊದ್ದುಕೊಂಡು ಕುಳಿತಿದ್ದ ಧರ್ಮರಾಯನನ್ನು ಕಂಡು ನಮಸ್ಕಾರಮಾಡಿ, ಭೀಮಾರ್ಜುನ ನಕುಲ ಸಹದೇವರಿಗೆ ಉಚಿತವಾಗಿ ಮರ್ಯಾದೆಯನ್ನು ಮಾಡಿದನು. ಬಳಿಕ ಧರ್ಮರಾಯನು ಕುಶಲಪ್ರಶ್ನೆಯನ್ನು ಮಾಡಲು, ಸಂಜಯನು ಸುಖವಾಗಿ ಕೂತುಕೊಂಡು, ತಾನು ಬಂದ ಕಾರ್ಯವನ್ನು ಆತನಿಗೆ ತಿಳುಹಿಸಿ, ವಿದುರನನ್ನು ನೋಡಿ “ ಎಲೈ ವಿದುರನೆ, ಧೃತರಾಷ್ಟ್ರನು ನಿನ್ನನ್ನು ಸ್ಮರಿಸುತ್ತಿರುವನು. ನೀನು ಬಂದು ಕಂಡು ಆತನನ್ನು ಬದುಕಿಸು. ಹೊರಡಲು ಪಾಂಡವರ ಅನುಮತಿಯನ್ನು ತೆಗೆದುಕೊ. ಧೃತರಾಷ್ಟ್ರನ ಅಪ್ಪಣೆಯಾಗಿರುವದು. ಹಸ್ತಿನಾನಗರಕ್ಕೆ ಹೊರಡು ” ಎಂದು ನುಡಿಯಲು, ಅದನ್ನು ಕೇಳಿ ಸ್ವಜನರಲ್ಲಿ ವಾತ್ಸಲ್ಯವುಳ್ಳ ವಿದುರನು ಧರ್ಮರಾಯನ ಅನುಮತಿಯಿಂದ ಹಸ್ತಿನಾನಗರಕ್ಕೆ ಬಂದು, ಧೃತರಾಷ್ಟ್ರನನ್ನು ಮಾತನಾಡಿಸಿದನು.

ಬಳಿಕ ಸಂತಾಪಯುಕ್ತನಾದ ಧೃತರಾಷ್ಟ್ರನು ವಿದುರನನ್ನು ಕುರಿತು “ ಎಲೈ ವಿದುರನೆ, ದೈವಯೋಗದಿಂದ ಬಂದೆಯಾ! ನನ್ನನ್ನು ಜ್ಞಾಪಿಸಿಕೊಂಡೆಯಾ! ಅಹೋರಾತ್ರಿಯಲ್ಲೂ ನಾನು ನಿನ್ನನ್ನು ನೆನೆದು ನೆನೆದು,

ಜಾಗರಣೆ ಮಾಡುತ್ತಿದ್ದೆನು. ಅದರಿಂದ ನನ್ನ ಶರೀರವು ಬಾಡಿಹೋಗಿರುವದು" ಎಂದು ನುಡಿದು, ಆತನನ್ನು ತೊಡೆಯಮೇಲೆ ಕೂರಿಸಿಕೊಂಡು, ಶಿರಸ್ಸನ್ನು ಆಘ್ರಾಣಿಸಿ, "ನಾನು ಯಾವ ಮಾತುಗಳನ್ನಾಡಿದ್ದಾಗ್ಯೂ ಅದನ್ನು ನೀನು ಕ್ಷಮಿಸಬೇಕು" ಎಂದು ನುಡಿದನು. ಆ ಮಾತನ್ನು ಕೇಳಿ ವಿದುರನು "ಎಲೈ ರಾಯನೆ, ನಾನು ಕ್ಷಮಿಸೇ ಇರುವೆನು. ನನಗೆ ನೀನು ಹಿರಿಯವನಲ್ಲವೆ? ನಿನ್ನನ್ನು ನೋಡಬೇಕೆಂದು ಶೀಘ್ರನಾಗಿ ಬಂದಿರುವೆನು. ಲೋಕ ದಲ್ಲಿ ಧರ್ಮಜ್ಞರಾದ ಪುರುಷರು ದೀನರಾದ ಜನರಲ್ಲಿ ಕೃಪೆಯನ್ನು ಮಾಡುವರು. ಈ ವಿಷಯದಲ್ಲಿ ವಿಚಾರವೇ ನಿದೆ? ನನಗೆ ಪಾಂಡವರು ಹ್ಯಾಗೋ ಕೌರವರೂ ಹಾಗೆಯೇ ಸರಿ; ಆದರೆ ಪಾಂಡವರು ಈಗ ದೀನರಾಗಿರುವರಲ್ಲಾ ಎಂದು ನನಗೆ ಅವರ ಸಮೀಪಕ್ಕೆ ಹೋಗಬೇಕೆಂದು ಬುದ್ಧಿಯುಂಟಾಯಿತು" ಎಂದು ನುಡಿದನು. ಬಳಿಕ ತೇಜ ಸ್ವಿಗಳಾಗಿಯೂ ಅಣ್ಣತಮ್ಮಂದಿರಾಗಿಯೂ ಇರುವ ವಿದುರ ಧೃತರಾಷ್ಟ್ರರು ಅನ್ಯೋನ್ಯವಾಗಿ ಸಮಾಧಾನವನ್ನು ಮಾಡಿಕೊಂಡು ಅಧಿಕವಾಗಿ ಸಂತೋಷಪಟ್ಟರು.

---

೩ನೇ ಅಧ್ಯಾಯ.—ಕೌರವಾದಿಗಳು ಪಾಂಡವರಮೇಲೆ ಬೀಳದಂತೆ ವೇದವ್ಯಾಸರು ತಡೆದದ್ದು.

ಅನಂತರದಲ್ಲಿ ವೈಶಂಪಾಯನ ಮುನೀಂದ್ರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯ ರಾಯನೆ, ಧೃತರಾಷ್ಟ್ರನು ಪ್ರಾಜ್ಞನಾದ ವಿದುರನನ್ನು ಕರೆಯಿಸಿ ಸಮಾಧಾನಪಡಿಸಿದ್ದನ್ನು ಕೇಳಿ, ದುರ್ಬುದ್ಧಿ ಯಾದ ದುರ್ಯೋಧನನು ಬಹು ಸಂಕಟಪಟ್ಟು, ಕರ್ಣ, ಶಕುನಿ, ದುಶ್ಶಾಸನರನ್ನು ಕರೆಯಿಸಿ, ಅಜ್ಞಾನದಿಂದ ರಾಗ ದ್ವೇಷಗಳನ್ನು ಹೊಂದಿ ಅವರ ಸಂಗಡ ಹೀಗೆಂದನು: "ಯಾವಾಗಲೂ ಪಾಂಡವರಿಗೆ ಮಿತ್ರನಾಗಿ ಹಿತವನ್ನು ಬಯಸುವ ಬುದ್ಧಿಶಾಲಿಯಾದ ವಿದುರನು ಪುನಃ ಧೃತರಾಷ್ಟ್ರನಿಗೆ ಮಂತ್ರಿಯಾಗಿ ಬಂದು ಸೇರಿದನು. ಈತನು ಧೃತರಾಷ್ಟ್ರನ ಬುದ್ಧಿಯನ್ನು ಸ್ವಾಧೀನಪಡಿಸಿಕೊಂಡು, ಪಾಂಡವರನ್ನು ಇಲ್ಲಿಗೆ ಕರೆತರಿಸುವಷ್ಟರೊಳಗೆ ನೀವು ನನಗೆ ಹಿತವಾಗುವಹಾಗೆ ಮಂತ್ರಾಲೋಚನೆಯನ್ನು ಮಾಡಿರಿ. ಪಾಂಡವರು ಪುನಃ ಇಲ್ಲಿಗೆ ಬಂದ ಪಕ್ಷದಲ್ಲಿ, ಯಾವ ಬಾಧಕವಿಲ್ಲದಿದ್ದರೂ ನಾನು ಆಹಾರವನ್ನು ಬಿಟ್ಟು ಶೋಷಿಸಿ ಹೋಗುವೆನು. ಅಥವಾ ವಿಷವನ್ನು ಕುಡಿದಾದರೂ, ನೇಣುಹಾಕಿಕೊಂಡಾದರೂ, ಶಸ್ತ್ರಘಾತ ಮಾಡಿಕೊಂಡಾದರೂ, ಅಗ್ನಿಪ್ರವೇಶ ಮಾಡಿಯಾದರೂ, ಪ್ರಾಣವನ್ನು ಕಳೆ ದುಕೊಳ್ಳುವೆನು. ಪುನಃ ಐಶ್ವರ್ಯವನ್ನು ಪಡೆವ ಅವರನ್ನು ನಾನು ನೋಡಿ ಸಹಿಸೆನು" ಎಂದು ಹೇಳಿದನು.

ಆ ಮಾತನ್ನು ಕೇಳಿ ಶಕುನಿಯು ದುರ್ಯೋಧನನನ್ನು ನೋಡಿ "ಎಲೈ ದುರ್ಯೋಧನನೆ, ಯಾತಕ್ಕೋಸ್ಕರ ನೀನು ಮೂಢಬುದ್ಧಿಯನ್ನು ಹೊಂದಿರುವೆ? ಪಾಂಡವರು ಸಮಯನಿಬಂಧನೆಯನ್ನು ಮಾಡಿಕೊಂಡು, ಅರಣ್ಯಕ್ಕೆ ಹೋಗಿರುವರು. ನೀನು ಯೋಚಿಸಿದಹಾಗೆ ಏನೂ ನಡೆಯಲಾರದು. ಸತ್ಯಸಂಧರಾದ ಪಾಂಡವರು ನಿಮ್ಮ ತಂದೆಯ ಮಾತನ್ನು ಎಂದಿಗೂ ಕೇಳಲಾರರು; ಒಂದು ಪಕ್ಷದಲ್ಲಿ ಅವರು ಧೃತರಾಷ್ಟ್ರನ ಮಾತನ್ನು ಕೇಳಿ ಸಮಯನಿಬಂಧ ನೆಯನ್ನು ತಪ್ಪಿ ಪುನಃ ಇಲ್ಲಿಗೆ ಬಂದರೂ, ಈ ವಿಷಯದಲ್ಲಿ ನಮಗೂ ಅವರಿಗೂ ವಿವಾದ ನಡದೇ ನಡೆಯುವುದು. ಮತ್ತು ಆ ಕಾಲದಲ್ಲಿ ನಾವೆಲ್ಲರೂ ಮಧ್ಯಸ್ಥರಾಗುವೆವು. ಧೃತರಾಷ್ಟ್ರನ ಚಿತ್ತಾನುವರ್ತಿಗಳಾದ ಇತರರು, ಪಾಂಡ ವರು ತಮ್ಮ ಪ್ರತಿಜ್ಞೆಯನ್ನು ಮೀರಿಬಂದ ತಪ್ಪನ್ನು ಚೆನ್ನಾಗಿ ತಿಳಿದಿದ್ದಾಗ್ಯೂ, ಅವರಿಗೆ ಭಯಪಟ್ಟು ಎಲ್ಲಿ ಬೇಕಾ ದರೂ ತಪ್ಪಿಸಿಕೊಂಡಿರಲಿ" ಎಂದು ನುಡಿಯಲು, ಆ ಮಾತನ್ನು ಕೇಳಿ ದುಶ್ಶಾಸನನು 'ಎಲೈ ಪ್ರಾಜ್ಞನಾದ ಮಾವನೆ, ನೀನು ಹೇಳಿದ ಹಾಗೇ ಸರಿ. ನಿನ್ನ ಬುದ್ಧಿಯು ನನಗೆ ಯಾವಾಗಲೂ ಸಮ್ಮತವಾಗಿರುವದು' ಎಂದು ನುಡಿದನು. ಅದನ್ನು ಕೇಳಿ ಕರ್ಣನು 'ಎಲೈ ದುರ್ಯೋಧನನೆ, ನಿನಗೆ ಇಷ್ಟವಾವದ್ದರಲ್ಲೇ ಯಾವಾಗಲೂ ನಮ್ಮ ದೃಷ್ಟಿಯಿ ರುವದು. ನಮ್ಮೆಲ್ಲರಿಗೂ ಐಕಮತ್ಯವಿದ್ದೇ ಇರುವದು. ಧೀರರಾದ ಪಾಂಡವರು ಸಮಯನಿಬಂಧನೆಗೆ ತಪ್ಪಿ ಬರ ಲಾರರು; ಒಂದುವೇಳೆ ತಿಳಿಯದೆ ಬಂದದ್ದೇ ಆದರೆ, ಅವರನ್ನು ಪುನಃ ಜೂಜಾಡಿ ಸೋಲಿಸು" ಎಂದು ನುಡಿದನು.

ಹೀಗೆ ಕರ್ಣನು ಹೇಳಿದ್ದನ್ನು ಕೇಳಿ, ದುರ್ಯೋಧನನು ಆತನು ತನ್ನ ಪರಾಕ್ರಮಕ್ಕೆ ಸರಿಯಾದ ಮಾತನ್ನು ಆಡದೇ ಹೋದದ್ದರಿಂದ, ಅಧಿಕವಾಗಿ ಸಂತೋಷಪಡದೆ ಥಟ್ಟನೆ ಮುಖವನ್ನು ತಿರಿಗಿಸಿಕೊಂಡನು. ಬಳಿಕ ಕರ್ಣನು

ದುರ್ಯೋಧನನ ಅಭಿಪ್ರಾಯವನ್ನು ತಿಳಿದು, ಕೋಪದಿಂದ ಕಣ್ಣುಗಳನ್ನು ತೆರೆದು, ಧೈರ್ಯದಿಂದ ಮೈಯುಬ್ಬಿಸಿಕೊಂಡು, ಶಕುನಿ ದುಶ್ಶಾಸನರನ್ನು ಕುರಿತು "ನೀವು ನನ್ನ ಮತವನ್ನು ಕೇಳಿರಿ : ನಾವೆಲ್ಲರೂ ನಮ್ಮರಸನಿಗೆ ಕೈಗಳಂತೆ ಕೆಲಸಮಾಡುವವರಾಗಿ, ಆತನಿಗೆ ಹಿತವನ್ನು ಬಯಸೋಣ. ನಾವೆಲ್ಲರೂ ಎಷ್ಟು ಜಾಗರೂಕರಾಗಿದ್ದರೂ ಧೃತರಾಷ್ಟ್ರನು ಅಡ್ಡಿಯಾಗಿ ಬರುವದರಿಂದ, ದುರ್ಯೋಧನನಿಗೆ ಪ್ರಿಯವನ್ನು ಮಾಡಲಾರೆವು. ಆದರೂ ನಾವೆಲ್ಲರೂ ಆಯುಧಗಳನ್ನು ತೆಗೆದುಕೊಂಡು, ರಥಗಳನ್ನೇರಿ ಸನ್ನದ್ಧರಾಗಿ, ವನದಲ್ಲಿರುವ ಪಾಂಡವರನ್ನು ಸಂಹರಿಸುವದಕ್ಕೆ ಹೋಗೋಣ. ಅವರೆಲ್ಲರೂ ಶಾಂತರಾಗಿ ಯಾರಿಗೂ ಕಾಣಿಸಿಕೊಳ್ಳದೆ ಹೊರಟು ಹೋದರೆ, ಕೌರವರೂ ನಾವೂ ಸಹ ನಿರ್ಬಾಧಕವಾಗಿರುತ್ತೇವೆ. ಪಾಂಡವರು ಖಿನ್ನರಾಗಿಯೂ ಶೋಕಾಕ್ರಾಂತರಾಗಿಯೂ ಸಹಾಯಶೂನ್ಯರಾಗಿಯೂ ಎಲ್ಲಿನವರಿಗಿರುವರೋ, ಅಷ್ಟರೊಳಗೇ ಅವರನ್ನು ನಾವು ಜಯಿಸಬಹುದು ಎಂದು ನನಗೆ ತೋರುವದು" ಎನಲು, ಈ ಮಾತನ್ನು ಕೇಳಿ ಎಲ್ಲರೂ ಹಾಗೇ ಆಗಲೆಂದು ಕರ್ಣನನ್ನು ಶ್ಲಾಘನೆಮಾಡಿ, ಬೇರೆ ಬೇರೆ ತಮ್ಮತಮ್ಮ ರಥಗಳನ್ನೇರಿ, ಕ್ರೋಧಾವೇಶದಿಂದ ಪಾಂಡವರನ್ನು ಸಂಹರಿಸಬೇಕೆಂದು ನಿಶ್ಚಯಿಸಿಕೊಂಡು ಹೊರಟರು. ಆಗ ಷಡ್ಗುಣೈಶ್ವರ್ಯ ಸಂಪನ್ನರಾಗಿಯೂ ಲೋಕಪೂಜ್ಯರಾಗಿಯೂ ಮಹಾತ್ಮರಾಗಿಯೂ ಇರುವ ವೇದವ್ಯಾಸರು ತಮ್ಮ ದಿವ್ಯದೃಷ್ಟಿಯಿಂದ ನೋಡಿ, ಕೌರವರು ಹೀಗೆ ಯೋಚಿಸಿಕೊಂಡು ಹೊರಟದ್ದನ್ನು ತಿಳಿದು ಬಂದು, ಇಂಥ ಕಾರ್ಯವನ್ನು ಮಾಡಕೂಡದೆಂದು ಅವರನ್ನು ತಡೆದು, ಸಭೆಯಲ್ಲಿರುವ ಧೃತರಾಷ್ಟ್ರನ ಸಮೀಪಕ್ಕೆ ಬಂದರು.

## ೮ನೇ ಅಧ್ಯಾಯ.—ವೇದವ್ಯಾಸರ ವಾಕ್ಯ.

ಅನಂತರದಲ್ಲಿ ವೈಶಂಪಾಯನ ಮುನೀಂದ್ರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯ ರಾಯನೇ, ಅನಂತರದಲ್ಲಿ ವೇದವ್ಯಾಸರು ಧೃತರಾಷ್ಟ್ರನನ್ನು ನೋಡಿ "ಎಲೈ ಧೃತರಾಷ್ಟ್ರನೆ, ಕೌರವರೆಲ್ಲರಿಗೂ ಹಿತವಾಗುವ ಹಾಗೆ ಹೇಳುವ ನನ್ನ ಮಾತನ್ನು ಮನಸ್ಸಿಗೆ ತಂದುಕೊ. ದುರ್ಯೋಧನ ಮೊದಲಾದವರು ಕಪಟ ದ್ಯೂತದಿಂದ ಪಾಂಡವರನ್ನು ಸೋಲಿಸಿ ವನಕ್ಕೆ ಕಳುಹಿಸಿದ್ದು ನನಗೆ ಸಮ್ಮತವಾದದ್ದಲ್ಲ. ಪಾಂಡವರು ಹದಿಮೂರು ವರ್ಷ ವನವಾಸವನ್ನು ನೆರವೇರಿಸಿದ ಬಳಿಕ ಕೌರವರಿಂದುಂಟಾದ ದುಃಖಗಳನ್ನು ಸ್ಮರಿಸಿಕೊಂಡು, ಕೋಪದಿಂದ ಅವರಮೇಲೆ ವಿಷಕ್ಕೆ ಸಮಾನವಾದ ಶಸ್ತ್ರಗಳನ್ನು ಪ್ರಯೋಗಿಸುವರು. ಮೂಢಾತ್ಮನಾದ ನಿನ್ನ ಮಗನು ಕ್ರೋಧಾವೇಶವನ್ನು ಹೊಂದಿ ರಾಜ್ಯಾಭಿಲಾಷೆಯಿಂದ ಯಾವಾಗಲೂ ಪಾಂಡವರನ್ನು ಹಿಂಸಿಸಬೇಕೆಂದೇ ಯೋಚಿಸುತ್ತಿರುವನು. ಅವನು ಅಂಥಾ ಕೆಲಸದಲ್ಲಿ ಪ್ರವರ್ತಿಸದಂತೆ ತಡೆಮಾಡು. ಅವನು ಸಮಾಧಾನವನ್ನು ತಂದುಕೊಳ್ಳಲಿ. ಅರಣ್ಯದಲ್ಲಿರುವ ಪಾಂಡವರನ್ನು ಸಂಹರಿಸಬೇಕೆಂದು ಇಚ್ಛಯಿಸಿ ತನ್ನ ಪ್ರಾಣಗಳನ್ನು ಕಳೆದುಕೊಳ್ಳುವನು. ವಿದುರನೂ ಭೀಷ್ಮನೂ ಕೃಪಾಚಾರ್ಯನೂ ದ್ರೋಣಾಚಾರ್ಯನೂ ನಾನೂ ಹ್ಯಾಗೆ ಸಮಸ್ತವನ್ನೂ ತಿಳಿದಿರುವೆವೋ ಹಾಗೆ ಸಾಧುವಾದ ನೀನೂ ತಿಳಿದಿರುವೆ. ಎಲೈ ಪ್ರಾಜ್ಞನೆ, ಸ್ವಜನರಲ್ಲಿ ಕಲಹಮಾಡುವದು ನಿಂದಿತವಾದದ್ದು. ಅದರಿಂದ ಅಧರ್ಮವೂ ಅಪಕೀರ್ತಿಯೂ ಉಂಟಾಗುವವು. ಅದಕ್ಕೆ ನೀನು ಗುರಿಯಾಗಬೇಡ. ಪಾಂಡವರ ವಿಷಯದಲ್ಲಿ ದುರ್ಯೋಧನನ ಆಲೋಚನಪರವಾದ ಬುದ್ಧಿಯು ಹ್ಯಾಗಿರುವದು ನೋಡು. ಅದನ್ನು ಉಪೇಕ್ಷಿಸಿದ್ದೇ ಆದರೆ ಮಹತ್ತಾದ ಅನರ್ಥವುಂಟಾಗುವದು. ಆ ಮಂದಬುದ್ಧಿಯುಳ್ಳ ದುರ್ಯೋಧನನು ತಾನೂ ಅರಣ್ಯಕ್ಕೆ ಹೋಗಿ ಪಾಂಡವರ ಸಂಗಡ ಕೆಲವು ಕಾಲ ಇದ್ದಪಕ್ಷದಲ್ಲಿ, ಅವರ ಸಹವಾಸದಿಂದ ಅವನಿಗೆ ಅವರಲ್ಲಿ ಸ್ನೇಹವುಂಟಾದರೆ, ನೀನೂ ಕೃತಕೃತ್ಯನಾಗುವೆ. ಆದರೆ ಪುರುಷನು ಹುಟ್ಟುವಾಗ ಅವನ ಜೊತೆಯಲ್ಲೇ ಯಾವ ಗುಣ ಹುಟ್ಟುವದೋ ಆ ಗುಣವು, ಅವನು ಮೃತನಾದರೂ ತಾನು ನಷ್ಟವಾಗದೆ, ಮತ್ತೊಂದು ಜನ್ಮದಲ್ಲೂ ಅವನನ್ನೇ ಅನುವರ್ತಿಸುವದು ಎಂದು ದೊಡ್ಡವರು ಹೇಳುವರು. ನೀನೂ ಭೀಷ್ಮ ದ್ರೋಣ ವಿದುರರೂ ಸಹ ಇನ್ನುಮೇಲೆ ಯಾವದು ಯುಕ್ತವೆಂದು ತಿಳಿಯುವಿರೋ ಆ ಕಾರ್ಯವನ್ನು ಮೊದಲು ಮಾಡತಕ್ಕದ್ದು; ಹಾಗೆ ಮಾಡದೇಹೋದರೆ ನಿಮಗೆ ಕೇಡು ಸಂಭವಿಸುವದು" ಎಂದು ನುಡಿದರು.

## ೯ನೇ ಅಧ್ಯಾಯ.—ಇಂದ್ರ, ಸುರಭಿ ಸಂವಾದ.

ಅನಂತರದಲ್ಲಿ ವೈಶಂಪಾಯನ ಮುನೀಂದ್ರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯ ರಾಯನೆ, ಬಳಿಕ ಧೃತರಾಷ್ಟ್ರನು ವೇದವ್ಯಾಸರನ್ನು ಕುರಿತು “ ಎಲೈ ವೇದವ್ಯಾಸರೆ, ಇವರು ದ್ಯೂತವನ್ನಾಡಬೇಕೆಂಬವು ನನಗೆ ಅಸಮ್ಮತವಾಗಿದ್ದರೂ, ದೈವಪ್ರೇರಣೆಯಿಂದ ಅದರಲ್ಲಿ ಪ್ರವರ್ತಿಸಿದೆನು. ಈ ಕಾರ್ಯವು ಭೀಷ್ಮ, ದ್ರೋಣ, ವಿದುರ, ಗಾಂಧಾರಿ ಮೊದಲಾದವರಿಗೆ ಯಾರಿಗೂ ಸಮ್ಮತವಾದದ್ದಲ್ಲ. ಇದರಿಂದ ಹೀಗಾಗುವದೆಂದು ತಿಳಿಯದೆ ಪ್ರವರ್ತಿಸಿದ್ದಾಯಿತು. ಇವುಗಳನ್ನೆಲ್ಲಾ ತಿಳಿದಿದ್ದಾಗ್ಯೂ, ಬುದ್ಧಿಹೀನನಾದ ದುರ್ಯೋಧನನನ್ನು ಪುತ್ರಸ್ನೇಹದಿಂದ ಪರಿತ್ಯಾಗ ಮಾಡಲಾರೆನು ” ಎಂದು ನುಡಿದನು. ಅದನ್ನು ಕೇಳಿ ವೇದವ್ಯಾಸರು “ ಎಲೈ ಧೃತರಾಷ್ಟ್ರನೆ, ನೀನು ಹೇಳಿದ್ದು ಯಥಾರ್ಥವೇ ಸರಿ. ಲೋಕದಲ್ಲಿ ಮಗನಿಗಿಂತಲೂ ಶತ್ರುವಾದವನೂ, ಮಗನಿಗಿಂತಲೂ ಪ್ರಿಯವಾದ ವಸ್ತುವೂ ಮತ್ತೊಂದಿಲ್ಲ ಎಂಬುವದನ್ನು ನಾನು ಚೆನ್ನಾಗಿ ಬಲ್ಲೆನು. ಪೂರ್ವದಲ್ಲಿ ಕಾಮಧೇನುವು ತನ್ನ ಮಕ್ಕಳ ಕಷ್ಟವನ್ನು ನೋಡಿ ಕಣ್ಣೀರು ಹಾಕಿದ್ದನ್ನು ತಿಳಿದು ಇಂದ್ರನೂ ಕೂಡ, ಎಷ್ಟು ಐಶ್ವರ್ಯವಿದ್ದಾಗ್ಯೂ ಮಕ್ಕಳಿಗಿಂತಲೂ ಹೆಚ್ಚಾದ ವಸ್ತುವು ಮತ್ತೊಂದಿಲ್ಲವೆಂದು ತಿಳಿದಿರುವನು. ಈ ವಿಷಯದಲ್ಲಿ ಇಂದ್ರ, ಸುರಭಿ ಸಂವಾದವೆಂಬ ಒಂದು ಇತಿಹಾಸವನ್ನು ಹೇಳುತ್ತೇನೆ ಕೇಳು.

ಪೂರ್ವದಲ್ಲಿ ಕಾಮಧೇನುವು ಸ್ವರ್ಗದಲ್ಲಿ ರೋದನ ಮಾಡುತ್ತಿರಲು, ಅದನ್ನು ನೋಡಿ ಕರುಣಾಶಾಲಿಯಾದ ಇಂದ್ರನು “ ಎಲೈ ಕಾಮಧೇನುವೆ, ಯಾತಕ್ಕೆ ರೋದನ ಮಾಡುತ್ತಿರುವೆ ? ದೇವತೆಗಳೂ ಮನುಷ್ಯರೂ ಸರ್ಪಗಳೂ ಕ್ಷೇಮವಾಗಿರುವರಷ್ಟೆ ? ಇವರುಗಳಿಗೆ ಏನೂ ಕೊರತೆಯಿಲ್ಲವಲ್ಲ ? ” ಎಂದನು. ಬಳಿಕ ಕಾಮಧೇನುವು ಇಂದ್ರನನ್ನು ಕುರಿತು “ ಎಲೈ ಮಹೇಂದ್ರನೆ, ದೇವತೆಗಳಿಗೆ ಅಧಿಪತಿಯಾದ ನಿನಗೆ ಮತ್ತೊಬ್ಬರ ಕಷ್ಟವು ಹ್ಯಾಗೆ ತಿಳಿದೀತು ? ನಾನಾದರೋ ಪುತ್ರಶೋಕದಿಂದ ರೋದನ ಮಾಡುತ್ತಿರುವೆನು. ಭೂಲೋಕದಲ್ಲಿ ಅತಿ ಕ್ರೂರನಾದ ಒಬ್ಬ ಶೂದ್ರನು ದುರ್ಬಲವಾಗಿಯೂ ಕೃಶವಾಗಿಯೂ ಇರುವ ನನ್ನ ಮಗುವಾದ ಒಂದು ಎತ್ತನ್ನು ನೇಗಲಿಗೆ ಕಟ್ಟಿ, ಮುಳ್ಳಿನ ಕೋಲಿನಿಂದ ತಿವಿಯುತ್ತ ತುಂಬಾ ಬಾಧಿಸುತ್ತಿರುವನು. ಇದೋ ನೋಡು, ಈ ಬಾಧೆಯಿಂದ ಅದು ಅಲ್ಲಲ್ಲಿ ಬೀಳುತ್ತಿರುವದು. ಇದನ್ನು ನೋಡಿ ಕೃಪೆಯಿಂದ ನನ್ನ ಮನಸ್ಸು ತಲ್ಲಣಿಸುತ್ತಿರುವದು. ಈ ಎರಡು ಎತ್ತುಗಳಲ್ಲಿ ಒಂದು ಎತ್ತಿಗೆ ಬಲವೂ ಪುಷ್ಟಿಯೂ ಹೆಚ್ಚಾಗಿರುವದರಿಂದ, ಅದು ಹೆಚ್ಚಾದ ಭಾರವನ್ನು ವಹಿಸುವದು ; ರಕ್ತಮಾಂಸಗಳಿಲ್ಲದೆ ಕೃಶವಾಗಿಯೂ ದುರ್ಬಲವಾಗಿಯೂ ಇರುವ ಮತ್ತೊಂದು ಅತಿಶ್ರಮದಿಂದ ಆ ಭಾರವನ್ನು ವಹಿಸುತ್ತಿರುವದು. ಇದನ್ನು ನೋಡಿ ನಾನು ದುಃಖಪಡುತ್ತಿರುವೆನು ” ಎಂದು ನುಡಿಯಲು, ದೇವೇಂದ್ರನು “ ಎಲೆ ಕಾಮಧೇನುವೆ, ನಿನ್ನ ಸಂತತಿಯಲ್ಲಿ ಹುಟ್ಟಿದ ಅನೇಕ ಎತ್ತುಗಳು ಇದೇರೀತಿಯಾಗಿ ಭಾರವನ್ನು ಹೊರುತ್ತ ಹಿಂಸಿಸಲ್ಪಡುತ್ತಿರುವಲ್ಲಿ, ಒಬ್ಬ ಮಗನು ಹಿಂಸಿಸಲ್ಪಡುವನೆಂದು ಅವನೊಬ್ಬನಲ್ಲೇ ನಿನಗೆ ಇಷ್ಟೊಂದು ಕರುಣವುಂಟಾಗುವದಕ್ಕೆ ಕಾರಣವೇನು ? ” ಎಂದು ನುಡಿದನು. ಬಳಿಕ ಕಾಮಧೇನುವು “ ನನಗೆ ಅನೇಕ ಸಹಸ್ರಮಂದಿ ಮಕ್ಕಳಿದ್ದಾಗ್ಯೂ, ಎಲ್ಲರಲ್ಲಿಯೂ ನನಗೆ ಪ್ರೀತಿಯು ಸಮಾನವಾಗಿರುವದು. ಅವುಗಳಲ್ಲಿ ಈ ಎತ್ತು ದುರ್ಬಲವಾದ್ದರಿಂದ ಇದರಲ್ಲಿ ನನಗೆ ತುಂಬಾ ಪ್ರೀತಿಯುಂಟಾಗಿರುವದು ” ಎಂದು ನುಡಿಯಲು, ಇಂದ್ರನು ಅದನ್ನು ಕೇಳಿ ಆಶ್ಚರ್ಯಪಟ್ಟು, ಪ್ರಾಣಕ್ಕಿಂತಲೂ ಮಗನೇ ಅಧಿಕನಾದವನೆಂದೆಣಿಸಿ, ಆ ಕ್ಷಣದಲ್ಲಿ ಆ ದುಷ್ಟ ಶೂದ್ರನಿಗೆ ಉಳುವದಕ್ಕೆ ವಿಘ್ನವುಂಟಾಗುವಂತೆ ದೊಡ್ಡದಾಗಿ ಮಳೆಯನ್ನು ಕರೆದನು.

“ ಎಲೈ ಧೃತರಾಷ್ಟ್ರನೆ, ಆ ಕಾಮಧೇನು ನುಡಿದಂತೆ ಎಲ್ಲಾ ಮಕ್ಕಳಲ್ಲಿಯೂ ನಿನಗೆ ಕೃಪೆಯು ಸಮಾನವಾಗಿರಲಿ. ಅವರೊಳಗೆ ಹೀನಸ್ಥಿತಿಯನ್ನು ಪಡೆದವರಲ್ಲಿ ಅಧಿಕವಾದ ಕೃಪೆಯಿರಬೇಕು. ನನಗೆ ಪಾಂಡುರಾಯನು ಹ್ಯಾಗೆ ಮಗನೋ ನೀನೂ ಪ್ರಾಜ್ಞನಾದ ವಿದುರನೂ ಸಹ ಹಾಗೇಸರಿ ; ಈ ಮಾತನ್ನು ನಿನಗೆ ವಿಶ್ವಾಸದಿಂದ ಹೇಳುವೆನು. ಆದರೆ ನಿನಗೆ ನೂರುಮಂದಿ ಮಕ್ಕಳಿರುವರು ; ಪಾಂಡುರಾಯನಿಗೆ ಐದೇಮಂದಿ ಮಕ್ಕಳಿರುವರು. ಆ ಐದುಮಂದಿಯೂ ಕಪಟವನ್ನರಿತವರಲ್ಲ ; ಅವರು ಈಗ ಬಹಳ ದುಃಖಪಡುತ್ತಿರುವರು. ಇಂತವರು

ಹ್ಯಾಗೆ ಬದುಕ್ಯಾರು ? ಹ್ಯಾಗೆ ವೃದ್ಧಿಯನ್ನು ಹೊಂದ್ಯಾರು ! ಎಂದು ದೀನರಾದ ಅವರ ವಿಷಯದಲ್ಲಿ ನನ್ನ ಮನಸ್ಸು ಸಂತಾಪಪಡುತ್ತಿರುವದು. ಎಲೈ ರಾಜನೆ, ನಿನ್ನ ಮಕ್ಕಳು ಬದುಕಿರಬೇಕೆಂದು ನಿನಗೆ ಅಪೇಕ್ಷೆಯಿದ್ದರೆ, ನಿನ್ನ ಮಗನಾದ ದುರ್ಯೋಧನನು ಪಾಂಡವರೊಡನೆ ಸೇರಿ ಸಮಾಧಾನವನ್ನು ಮಾಡಿಕೊಳ್ಳಲಿ " ಎಂದು ನುಡಿದರು.

## ೧೦ನೇ ಅಧ್ಯಾಯ.—ಮೈತ್ರೇಯ ಋಷಿಯು ದುರ್ಯೋಧನನಿಗೆ ಶಾಪ ಕೊಟ್ಟಿದ್ದು.

ಅನಂತರದಲ್ಲಿ ವೈಶಂಪಾಯನ ಮುನೀಂದ್ರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯ ರಾಯನೆ, ಆ ಬಳಿಕ ಧೃತರಾಷ್ಟ್ರನು ವೇದವ್ಯಾಸರನ್ನು ನೋಡಿ " ಎಲೈ ಮಹಾತ್ಮರೆ, ತಾವು ಹೇಳಿದ ಹಾಗೇಸರಿ ; ಇದನ್ನು ನಾನೂ ಈ ಸಭೆಯಲ್ಲಿರತಕ್ಕವರೂ ಸಹ ತಿಳಿದಿರುವೆವು. ಕೌರವರಿಗೆ ಯಾವದು ಶ್ರೇಯಸ್ಕರವಾದ ದ್ದೆಂದು ತಾವು ತಿಳಿದಿರುವಿರೋ ಅದನ್ನೇ ಭೀಷ್ಮ ದ್ರೋಣ ವಿದುರರು ನನಗೆ ತಿಳಿಸುತ್ತಿರುವರು. ತಮಗೆ ನಮ್ಮ ವಂಶದಲ್ಲಿ ಕೃಪೆಯೂ ನನ್ನಲ್ಲಿ ಅನುಗ್ರಹವೂ ಇದ್ದರೆ, ಈ ದುರಾತ್ಮನಾದ ದುರ್ಯೋಧನನನ್ನು ತಾವೇ ಶಿಕ್ಷಿಸಬೇಕು " ಎನಲು, ವೇದವ್ಯಾಸರು " ಎಲೈ ಧೃತರಾಷ್ಟ್ರನೆ, ಋಷಿಶ್ರೇಷ್ಠನಾದ ಮೈತ್ರೇಯನು ಪಾಂಡವರನ್ನು ಕಂಡು ನಮ್ಮನ್ನು ನೋಡಬೇಕೆಂದು ಇಲ್ಲಿಗೆ ಬರುವನು. ಆತನು ಕೌರವಕುಲಕ್ಕೆ ಹಿತವಾಗುವದಕ್ಕೋಸ್ಕರ ದುರ್ಯೋಧನ ನಿಗೆ ಹಿತೋಪದೇಶವನ್ನು ಮಾಡುವನು. ಆತನು ಹೇಳಿದಂತೆ ನಿನ್ನ ಮಗನು ಸದ್ವಿಚಾರವಾಗಿ ನಡೆದುಕೊಳ್ಳ ಬೇಕು ; ಹಾಗೆ ನಡೆದುಕೊಳ್ಳದೇ ಹೋದರೆ ಕೋಪದಿಂದ ಆತನಿಗೆ ಶಾಪವನ್ನು ಕೊಡುವನು " ಎಂದು ಹೇಳಿ ಸ್ವಚ್ಛಂದವಾಗಿ ಹೊರಟುಹೋದರು.

ಆ ಬಳಿಕ ಮೈತ್ರೇಯ ಮಹರ್ಷಿಯು ಅಲ್ಲಿಗೆ ಬರಲು, ಧೃತರಾಷ್ಟ್ರನು ಎದ್ದು ಪುತ್ರಸಹಿತನಾಗಿ ಆ ಮಹರ್ಷಿಗೆ ಅರ್ಘ್ಯಪಾದ್ಯಾಚಮನೀಯಗಳಿಂದ ಪೂಜೆಯನ್ನು ಮಾಡಿ, ಪೀಠದಲ್ಲಿ ಕುಳ್ಳಿರಿಸಿ, ಕೈಮುಗಿದು ಕೊಂಡು, ವಿಶ್ರಮಿಸಿಕೊಂಡ ಆತನನ್ನು ಕುರಿತು " ಎಲೈ ಮುನಿಶ್ರೇಷ್ಠನೆ, ಕುರುಜಾಂಗಲ ಪ್ರದೇಶದಿಂದ ಸುಖ ವಾಗಿ ದಯಮಾಡಿಸೋಣವಾಯಿತೆ? ಶೂರರಾದ ಪಾಂಡವರು ಸುಖವಾಗಿರುವರೆ ? ಅವರು ತಾವು ಮಾಡಿದ ಪ್ರತಿ ಜ್ಞೆಯನ್ನು ನೆರವೇರಿಸುವದರಲ್ಲಿ ತಾತ್ಪರ್ಯವುಳ್ಳವರಾಗಿರುವರೆ ? ಮತ್ತು ಅವರಿಗೆ ಕೌರವರಲ್ಲಿ ಭ್ರಾತೃತ್ವಾಭಿಮಾ ನವು ನಷ್ಟವಾಗದೆ ಇರುವದೆ ? " ಎಂದು ಪ್ರಶ್ನೆಮಾಡಿದನು. ಅದನ್ನು ಕೇಳಿ ಮೈತ್ರೇಯನು " ಎಲೈ ಧೃತರಾ ಷ್ಟ್ರನೆ, ನಾನು ತೀರ್ಥಯಾತ್ರಾನಿಮಿತ್ತವಾಗಿ ಸ್ವಚ್ಛಂದವಾಗಿ ಸಂಚರಿಸುತ್ತ, ಕುರುಜಾಂಗಲಕ್ಕೆ ಹೋಗಿ, ಕಾಮ್ಯಕ ವನದಲ್ಲಿ ಕೃಷ್ಣಾಜಿನವನ್ನು ಹೊದ್ದುಕೊಂಡು ಜಟಾಧಾರಿಯಾಗಿ ತಪೋವನದಲ್ಲಿ ವಾಸಮಾಡುತ್ತಿರುವ ಮಹಾತ್ಮನಾದ ಧರ್ಮರಾಯನನ್ನು ನೋಡಿದೆನು. ಆಗ ಆ ಮಹಾತ್ಮನನ್ನು ನೋಡುವದಕ್ಕೋಸ್ಕರ ಅನೇಕ ಋಷಿಗಳು ಬಂದಿ ದ್ದರು. ನಿನ್ನ ಮಕ್ಕಳು ನೀತಿಯನ್ನು ತಪ್ಪಿ ಅನರ್ಥವಾದ ದ್ಯೂತದಲ್ಲಿ ಪ್ರಯೋಜನ ಬುದ್ಧಿಯನ್ನಿಟ್ಟಿದ್ದರಿಂದ, ಅವರಿಗೆ ಮಹತ್ತಾದ ಭಯವು ಪ್ರಾಪ್ತವಾಗಿರುವದೆಂದು ಅಲ್ಲಿ ನಾನು ಕೇಳಿದೆನು. ನನಗೆ ನಿನ್ನಲ್ಲಿ ಅಧಿಕವಾದ ಸ್ನೇಹವೂ ಪ್ರೀತಿಯೂ ಇರುವದರಿಂದ, ಕೌರವರಿಗೆ ಹಿತವಾಗಬೇಕೆಂದೆಣಿಸಿ ಅಲ್ಲಿಂದಿಲ್ಲಿಗೆ ಬಂದಿರುವೆನು. ನೀನೂ ಭೀಷ್ಮನೂ ಜೀವಸಹಿತರಾಗಿರುವ ಕಾಲದಲ್ಲಿ ನಿನ್ನ ಮಕ್ಕಳು ಪಾಂಡವರೊಡನೆ ವಿರೋಧಮಾಡತಕ್ಕದ್ದು ಯೋಗ್ಯ ವಾದದ್ದಲ್ಲ. ಅವರೆಲ್ಲರಿಗೂ ನೀನು ಮೇಟೀಕಂಬದ ಹಾಗಿದ್ದುಕೊಂಡು ಅವರನ್ನು ನಿಗ್ರಹಿಸುವದಕ್ಕೂ ಅನುಗ್ರಹಿ ಸುವದಕ್ಕೂ ಸಮರ್ಥನಾಗಿದ್ದೂ, ಇಂಥಾ ಘೋರವಾದ ಅನರ್ಥವುಂಟಾಗುತ್ತಿದ್ದರೂ, ಅದನ್ನು ನೀನು ಹ್ಯಾಗೆ ಉಪೇಕ್ಷಿಸಿದೆ ? ಸಭೆಯಲ್ಲಿ ಕಳ್ಳರ ನಡತೆಯು ಹ್ಯಾಗೆ ಶೋಭಿಸುವದಿಲ್ಲವೋ ಹಾಗೆ, ನೀನೂ ಇದರಿಂದ ಋಷಿಗಳ ಗುಂಪಿನಲ್ಲಿ ಶೋಭಿಸಲಾರೆ ? " ಎಂದು ನುಡಿದು, ಬಳಿಕ ಕ್ರೋಧಾವೇಶವುಳ್ಳ ದುರ್ಯೋಧನನ ಕಡೆಗೆ ತಿರುಗಿ, ಮೃದು ಮಧುರವಾದ ಭಾಷಣಗಳಿಂದ " ಎಲೈ ಬಾಹುಶಾಲಿಯಾದ ದುರ್ಯೋಧನನೆ, ನಿನಗೆ ಹಿತವಾದ ಒಂದು ಮಾತನ್ನು ಹೇಳುವೆನು ಕೇಳು. ನೀನು ಪಾಂಡವರಲ್ಲಿ ದ್ರೋಹಚಿಂತೆಯನ್ನು ಮಾಡಬೇಡ. ನಿಮಗೂ ಪಾಂಡವರಿಗೂ ಲೋ ಕಕ್ಕೂ ಹಿತವಾದ ಕಾರ್ಯವನ್ನು ಮಾಡು. ಪುರುಷಶ್ರೇಷ್ಠರಾದ ಆ ಪಾಂಡವರು ಪರಾಕ್ರಮಶಾಲಿಗಳು, ಯುದ್ಧದಲ್ಲಿ

ಸಮರ್ಥರು ; ಎಲ್ಲರೂ ಹತ್ತುಸಾವಿರ ಆನೇ ಬಲವುಳ್ಳವರು, ವಜ್ರದಂತೆ ದೃಢವಾದ ಶರೀರವುಳ್ಳವರು, ಸತ್ಯವಂತರು, ಮತ್ತು ದೇವಶತ್ರುಗಳಾಗಿಯೂ ಕಾಮರೂಪಿಗಳಾಗಿಯೂ ಇರುವ ಬಕ ಹಿಡಿಂಬ ಮೊದಲಾದ ರಾಕ್ಷಸರನ್ನು ಸಂಹಾರ ಮಾಡಿದವರು. ಇಂಥಾ ಪಾಂಡವರು ಇಲ್ಲಿಂದ ಹೊರಟು ರಾತ್ರಿವೇಳೆಯಲ್ಲಿ ಘೋರವಾದ ಅರಣ್ಯದಲ್ಲಿ ಹೋಗುತ್ತಿರಲು, ಕಿರ್ಮ್ಮಿರನೆಂಬ ದಾನವನು ಮಧ್ಯಮಾರ್ಗದಲ್ಲಿ ಮಹತ್ತಾದ ಪರ್ವತದಂತೆ ಅಡ್ಡಲಾಗಿ ಬಂದು ಅವರನ್ನು ತಡೆದನು. ಅವನನ್ನು ನೋಡಿ ಯುದ್ಧದಲ್ಲಿ ಉತ್ಸಾಹವುಳ್ಳ ಬಲಿಷ್ಟನಾದ ಭೀಮಸೇನನು, ಹುಲಿಯು ಕ್ಷುದ್ರಮೃಗವನ್ನು ಕೊಲ್ಲುವಂತೆ ಸಂಹಾರಮಾಡಿದನು. ಎಲೈ ದುರ್ಯೋಧನನೆ, ಮೊದಲು ಪಾಂಡವರು ದಿಗ್ವಿಜಯ ಮಾಡುವ ಕಾಲದಲ್ಲಿ, ಭೀಮಸೇನನು ಹತ್ತುಸಾವಿರ ಆನೇಬಲವುಳ್ಳ ಜರಾಸಂಧನನ್ನು ಯುದ್ಧದಲ್ಲಿ ಸಂಹರಿಸಿದ್ದನ್ನು ನೀನು ತಿಳಿದೇಯಿರುವೆ. ಇದಲ್ಲದೆ ಪಾಂಡವರಿಗೆ ಶ್ರೀಕೃಷ್ಣನು ಸಂಬಂಧಿಯಾಗಿರುವನು ; ಧೃಷ್ಟದ್ಯುಮ್ನ ಮೊದಲಾದ ದ್ರುಪದರಾಯನ ಮಕ್ಕಳು ಭಾವಮೈದಿಂದರಾಗಿರುವರು. ಇಂಥಾ ಸಹಾಯಸಂಪತ್ತುಳ್ಳ ಪಾಂಡವರ ಸಂಗಡ, ಜರಾಮರಣ ಸಹಿತನಾದ ಯಾವ ಮನುಷ್ಯ ತಾನೇ ಕಲಹಮಾಡಬೇಕೆಂದು ಅಪೇಕ್ಷಿಸಿಯಾನು ? ನೀನು ಅವರೊಡನೆ ಸಂಧಿಯನ್ನು ಮಾಡಿಕೊ ; ನನ್ನ ಮಾತನ್ನು ಕೇಳು ; ಕೋಪವನ್ನು ಬಿಡು" ಎಂದು ಹೇಳಿದನು.

ಆ ಮಾತನ್ನು ಕೇಳಿ ದುರ್ಯೋಧನನು, ಆನೇ ಸೊಂಡಿಲಿನಂತಿರುವ ತನ್ನ ತೊಡೆಯನ್ನು ತಟ್ಟಿಕೊಳ್ಳುತ್ತ ನಸುನಕ್ಕು, ಯಾವ ಮಾತನ್ನೂ ಆಡದೆ ತಲೆಯನ್ನು ಬಗ್ಗಿಸಿಕೊಂಡು, ಭೂಮಿಯನ್ನು ಕಾಲಿನ ಹೆಬ್ಬೆಟ್ಟಿನಿಂದ ಕೆರೆಯುತ್ತಿರಲು, ಮೈತ್ರೇಯನು ತನ್ನ ಮಾತನ್ನು ಕೇಳದೇ ಇರುವ ಆ ದುರ್ಯೋಧನನನ್ನು ನೋಡಿ, ದೈವಪ್ರೇರಣೆಯಿಂದ ಆತನಿಗೆ ಶಾಪವನ್ನು ಕೊಡುವದಕ್ಕೆ ಯತ್ನಿಸಿ, ಶುದ್ಧಾಚಮನವನ್ನು ಮಾಡಿ, ಕ್ರೋಧಾವೇಶದಿಂದ ಕಣ್ಣುಗಳನ್ನು ಕೆಂಪು ಮಾಡಿಕೊಂಡು "ಎಲೈ ದುಷ್ಟಾತ್ಮನಾದ ದುರ್ಯೋಧನನೆ, ನೀನು ನನ್ನನ್ನು ಅನಾದರಿಸಿ ಈ ಮಾತನ್ನು ಕೇಳದೇ ಹೋದದ್ದರಿಂದ, ನಿನ್ನ ದುರಭಿಮಾನಕ್ಕೆ ತಕ್ಕ ಫಲವನ್ನು ಅನುಭವಿಸುವೆ. ನೀನು ದ್ರೋಹವನ್ನು ಮಾಡಿದ್ದರಿಂದ ಪಾಂಡವರಿಗೂ ನಿನಗೂ ಮಹತ್ತಾದ ಯುದ್ಧ ಉಂಟಾಗುವದು. ಆ ಯುದ್ಧದಲ್ಲಿ ಬಲಿಷ್ಠನಾದ ಭೀಮಸೇನನು ಗದಾಪ್ರಹಾರದಿಂದ ನಿನ್ನ ತೊಡೆಯನ್ನು ಭೇದಿಸಲಿ" ಎಂದು ಶಾಪವನ್ನು ಕೊಟ್ಟನು. ಆ ಶಾಪವಚನವನ್ನು ಕೇಳಿ, ಧೃತರಾಷ್ಟ್ರನು ಆ ಮೈತ್ರೇಯನನ್ನು ನೋಡಿ "ಎಲೈ ಮಹಾತ್ಮನೆ, ಎಂದಿಗೂ ಹಾಗೆ ಆಗದೇ ಇರುವಂತೆ ನೀನು ಅನುಗ್ರಹಿಸಬೇಕು" ಎಂದು ಪ್ರಾರ್ಥಿಸಲು, ಅದನ್ನು ಕೇಳಿ ಮೈತ್ರೇಯನು "ಎಲೈ ಧೃತರಾಷ್ಟ್ರನೇ, ನಿನ್ನ ಮಗನಾದ ದುರ್ಯೋಧನನು ಇನ್ನಾದರೂ ಪಾಂಡವರಲ್ಲಿ ದ್ರೋಹವನ್ನು ಎಣಿಸದೆ ಶಾಂತಿಗುಣವನ್ನು ಹೊಂದಿದರೆ ನಾನು ಕೊಟ್ಟ ಶಾಪವು ಆತನನ್ನು ಹೊಂದುವದಿಲ್ಲ ; ಇಲ್ಲದಿದ್ದರೆ ಅದು ಅವನನ್ನು ತಗಲುವದೇ ಸರಿ" ಎಂದು ನುಡಿದನು. ಬಳಿಕ ಧೃತರಾಷ್ಟ್ರನು ಭೀಮಸೇನನ ಬಲವನ್ನು ತಿಳಿದುಕೊಳ್ಳಬೇಕೆಂದು ಅಪೇಕ್ಷೆಯುಳ್ಳವನಾಗಿ ಮೈತ್ರೇಯನನ್ನು ಕುರಿತು "ಎಲೈ ಮಹಾನುಭಾವನೆ, ಭೀಮಸೇನನು ಕಿರ್ಮ್ಮಿರನನ್ನು ಹ್ಯಾಗೆ ಸಂಹಾರಮಾಡಿದನು ?" ಎನಲು, ಮೈತ್ರೇಯನು "ಎಲೈ ಧೃತರಾಷ್ಟ್ರನೆ, ನಿನ್ನ ಮಗನಾದ ದುರ್ಯೋಧನನು ನಾನು ಹೇಳಿದ ಮಾತುನ್ನು ಕೇಳದೇ ಹೋದನು ; ಆದ್ದರಿಂದ ನಾನು ಇನ್ನು ಮಾತನಾಡುವದಿಲ್ಲ. ಇಲ್ಲಿಂದ ನಾನು ಹೊರಟು ಹೋದಮೇಲೆ ಅದೆಲ್ಲವನ್ನೂ ವಿದುರನು ನಿನಗೆ ತಿಳುಹಿಸುವನು" ಎಂದು ಹೇಳಿ ಸ್ವೇಚ್ಛೆಯಿಂದ ಹೊರಟು ಹೋದನು. ಆಗ ದುರ್ಯೋಧನನು ಭೀಮಸೇನನಿಂದ ಕಿರ್ಮ್ಮಿರನು ಹತನಾದನೆಂಬ ಶತ್ರುವಿನ ಯಶಸ್ಸನ್ನು ಕೇಳುವದಕ್ಕೆ ಸಹಿಸದೆ ಆಸ್ಥಾನದಿಂದ ಹೊರಕ್ಕೆ ಹೊರಟು ಹೋದನು.

## ೧೧ನೇ ಅಧ್ಯಾಯ.—ಭೀಮಸೇನನಿಂದ ಕಿರ್ಮ್ಮಿರನ ವಧೆ.

ಅನಂತರದಲ್ಲಿ ವೈಶಂಪಾಯನ ಮುನೀಂದ್ರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯನೆ, ಆ ಬಳಿಕ ಧೃತರಾಷ್ಟ್ರನು ವಿದುರನನ್ನು ಕುರಿತು—ಎಲೈ ವಿದುರನೆ, ಭೀಮಸೇನನಿಗೂ ಕಿರ್ಮ್ಮಿರನಿಗೂ ಹ್ಯಾಗೆ ಯುದ್ಧವಾಯಿತು ? ಅದನ್ನು ವಿವರಿಸೆನಲು, ವಿದುರನು "ಎಲೈ ರಾಯನೆ, ಅತಿಶಯವಾದ ಪರಾಕ್ರಮವುಳ್ಳ

ಭೀಮಸೇನನು ಕಿಮ್ಮೀರನೆಂಬ ರಾಕ್ಷಸನನ್ನು ಸಂಹಾರಮಾಡಿದ್ದನ್ನು ಹೇಳುವೆನು ಕೇಳು. ಪಾಂಡವರ ವೃತ್ತಾಂತವನ್ನು ಕೇಳುವಾಗಲೆಲ್ಲಾ ಆ ಕಿಮ್ಮೀರನ ವಧೆಯನ್ನು ನಾನು ಕೇಳಿರುವೆನು. ದ್ಯೂತದಲ್ಲಿ ಪರಾಜಿತರಾದ ಪಾಂಡವರು ಹಸ್ತಿನಾನಗರದಿಂದ ಹೊರಟು, ಮೂರು ಹಗಲೂರಾತ್ರಿ ಮಾರ್ಗವನ್ನು ನಡೆದು, ಕಾಮ್ಯಕವನವನ್ನು ಸೇರಿದರು. ಭಯಂಕರವಾದ ಅರ್ಧರಾತ್ರಿ ಸಮಯದಲ್ಲಿ ಎಲ್ಲರೂ ನಿದ್ರೆಮಾಡುವಾಗ, ಕ್ರೂರರಾಗಿಯೂ ಮನುಷ್ಯರನ್ನು ತಿನ್ನತಕ್ಕವರಾಗಿಯೂ ಇರುವ ರಾಕ್ಷಸರ ಸಂಚಾರವು ವಿಶೇಷವಾದ್ದರಿಂದ, ಆ ಸಮಯದಲ್ಲಿ ಋಷಿಗಳೂ ವನಚಾರಿಗಳಾದ ಗೋಪಾಲಕರೂ ಆ ರಾಕ್ಷಸರ ಭಯದಿಂದ ಆ ವನವನ್ನು ಬಿಟ್ಟು ದೂರ ಹೋಗುವರು. ಅಂಥಾ ಸಮಯದಲ್ಲೇ ಪಾಂಡವರು ಆ ವನವನ್ನು ಪ್ರವೇಶ ಮಾಡಲು, ಆ ಸಮಯದಲ್ಲಿ ವ್ಯಕ್ತವಾಗಿ ಕಾಣಿಸುವ ಎಂಟು ಕೋರದಾಡೆಗಳಿಂದಲೂ ಕೆಂಪಾದ ಕಣ್ಣುಗಳಿಂದಲೂ ಅಗ್ನಿಜ್ವಾಲೆಗಳಂತಿರುವ ಮುಂದೇಕೂದಲುಗಳಿಂದಲೂ ಕೂಡಿ ಬಕಪಕ್ಷಿಗಳಿಂದಲೂ ಮಿಂಚುಗಳಿಂದಲೂ ಸೂರ್ಯಕಿರಣಗಳಿಂದಲೂ ಕೂಡಿದ ನೀಲಮೇಘದಂತೆ ತೋರುವ ಕಿಮ್ಮೀರನೆಂಬ ರಾಕ್ಷಸನು ಕೈಯಲ್ಲಿ ಉರಿಯುವ ಕೊಳ್ಳಿಯನ್ನು ಹಿಡಿದುಕೊಂಡು, ಭಯಂಕರವಾದ ಮುಖವುಳ್ಳವನಾಗಿ, ದೊಡ್ಡದಾದ ತನ್ನ ಎರಡು ಕೈಗಳನ್ನೂ ಚಾಚಿ ಪಾಂಡವರ ದಾರಿಯನ್ನು ತಡೆದು, ಘೋರವಾದ ರಾಕ್ಷಸಮಾಯೆಯನ್ನು ಕಲ್ಪಿಸುತ್ತ ಮೇಘದಂತೆ ಬಹಳವಾಗಿ ಗರ್ಜಿಸಿದನು. ಆ ಗರ್ಜನೆಯನ್ನು ಕೇಳಿ, ಸಕಲವಾದ ಪಕ್ಷಿಗಳೂ ಭಯಪಟ್ಟು ಕೂಗಿಕೊಳ್ಳುತ್ತ ದಿಕ್ಕುದಿಕ್ಕಿಗೆ ಓಡಿಹೋದವು; ಜಲಚರಪ್ರಾಣಿಗಳೆಲ್ಲವೂ ನೀರಿನಿಂದ ಮೇಲಕ್ಕೆ ಹಾರಿಬಿದ್ದವು. ಮತ್ತು ಆ ವನದಲ್ಲಿದ್ದ ಸಿಂಹ, ಹುಲಿ, ಕಾಡುಹಂದಿ, ಕಾಡುಕೋಣ, ಆನೆ ಮೊದಲಾದ ದೊಡ್ಡದೊಡ್ಡ ಮೃಗಗಳು ಅಲ್ಲೋಲ ಕಲ್ಲೋಲವಾಗಲು, ಆ ವನವೇ ಆಚೆಗೆ ಹೊರಟು ಹೋಗುವಂತೆ ತೋರಿತು. ಆಗ ಕಿಮ್ಮೀರನು ರಭಸದಿಂದ ಬರುತ್ತಿರಲು, ಅವನ ತೊಡೆಗಳಿಂದ ಹುಟ್ಟಿದ ಗಾಳಿಯು ವೇಗದಿಂದ ಸಮೀಪದಲ್ಲಿದ್ದ ಬಳ್ಳಿಗಳು ತಮ್ಮ ಕೆಂಪಾದ ಚಿಗುರುಗಳೆಂಬ ಕೈಗಳಿಂದ ವೃಕ್ಷಗಳನ್ನು ಅಪ್ಪಿಕೊಂಡವು; ಆ ಕ್ಷಣದಲ್ಲಿ ಬಿರುಗಾಳಿ ಬೀಸಿತು; ಆ ಗಾಳಿಯಿಂದ ಎದ್ದ ಧೂಳು ಆಕಾಶವನ್ನು ತುಂಬಲು, ಅದರಿಂದ ನಕ್ಷತ್ರಗಳೊಂದೂ ಕಾಣದೇ ಹೋದವು. ಆ ಕಾಲದಲ್ಲಿ ಆ ಕಿಮ್ಮೀರನು, ವಿಷಯಾಸಕ್ತವಾದ ಪಂಚೇಂದ್ರಿಯಗಳಿಗೆ ದುಃಖವು ಹ್ಯಾಗೆ ಕಾಣಿಸಿಕೊಳ್ಳದೇ ಇರುವದೋ ಹಾಗೆ, ಕೃಷ್ಣಾಜಿನಗಳನ್ನು ಹೊದ್ದಿರುವ ಪಾಂಡವರಿಗೆ ಕಾಣಿಸಿಕೊಳ್ಳದೆ, ಆ ವನದ ಬಾಗಿಲಿಗೆ ಅಡ್ಡಲಾಗಿ ಮೈನಾಕಪರ್ವತದಂತೆ ನಿಂತನು. ಆಗ ಕಮಲಾಕ್ಷಿಯಾಗಿಯೂ ದುಶ್ಶಾಸನನ ಕೈಯಿಂದ ಸೆಳದು ಕೆದರಲ್ಪಟ್ಟ ಮುಂದೇಕೂದಲುಗಳುಳ್ಳವಳಾಗಿಯೂ ಇರುವ ದ್ರೌಪದಿಯು ಎಂದಿಗೂ ನೋಡದೇಇರತಕ್ಕ ಘೋರರೂಪವುಳ್ಳ ಆ ರಾಕ್ಷಸನನ್ನು ನೋಡಿ ಭಯಪಟ್ಟು, ಐದುಪರ್ವತಗಳ ಮಧ್ಯದಲ್ಲಿರುವ ನದಿಯೋಪಾದಿಯಲ್ಲಿ ಪಾಂಡವರ ಮಧ್ಯದಲ್ಲಿ ನಡುಗುತ್ತ ನಿಂತಳು. ಆ ಸಮಯದಲ್ಲಿ ಪಾಂಡವರು ಐದುಮಂದಿಯೂ ವಿಷಯಗಳಲ್ಲಿ ಅಭಿಮುಖಗಳಾದ ಪಂಚೇಂದ್ರಿಯಗಳು ಸುಖಸಾಧನವಾದ ರತಿಯನ್ನು ಪರಿಗ್ರಹಿಸುವಂತೆ ಭಯಭ್ರಾಂತಳಾದ ಆ ದ್ರೌಪದಿಯನ್ನು ಹಿಡಿದುಕೊಂಡರು. ಅಷ್ಟರೊಳಗೆ ಪುರೋಹಿತನಾದ ಧೌಮ್ಯನು, ಪಾಂಡವರು ನೋಡುತ್ತಿರಲು, ರಕ್ಷೋಘ್ನವಾದ ನಾನಾವಿಧ ಮಂತ್ರಗಳನ್ನು ಪ್ರಯೋಗಿಸಿ ಆ ಘೋರವಾದ ರಾಕ್ಷಸಮಾಯೆಯನ್ನು ನಾಶಮಾಡಿದನು. ಆಗ ಕಾಮರೂಪಿಯಾಗಿಯೂ ಕ್ರೂರನಾಗಿಯೂ ಬಲಿಷ್ಠನಾಗಿಯೂ ಇರುವ ಆ ರಾಕ್ಷಸನು, ತನ್ನ ಮಾಯೆ ನಷ್ಟವಾಗಲು, ಕೋಪದಿಂದ ಕಣ್ಣುಗಳನ್ನು ದೊಡ್ಡದಾಗಿ ತೆರೆದು ಯಮನಂತೆ ಕಾಣಿಸಿಕೊಂಡನು. ಬುದ್ಧಿಶಾಲಿಯಾದ ಧರ್ಮರಾಯನು ಅವನನ್ನು ನೋಡಿ "ನೀನು ಯಾರು? ಯಾರ ಮಗ? ನಿನ್ನ ಕೆಲಸವೇನು ಹೇಳು" ಎಂದು ನುಡಿಯಲು, ಆ ಕಿಮ್ಮೀರನು "ನಾನು ಬಕಾಸುರನ ಒಡಹುಟ್ಟಿದವನು; ನನ್ನನ್ನು ಕಿಮ್ಮೀರನೆಂದು ಹೇಳುವರು. ನಾನು ಮನುಷ್ಯರನ್ನು ಯುದ್ಧದಲ್ಲಿ ಸೋಲಿಸಿ ನಿತ್ಯವೂ ಅವರನ್ನು ಆಹಾರಮಾಡಿಕೊಂಡು, ನಿರ್ಜನವಾದ ಈ ಕಾಮ್ಯಕವನದಲ್ಲಿ ನಿರ್ಭಯವಾಗಿ ವಾಸಮಾಡುತ್ತಿರುವೆನು. ನೀವು ಯಾರು? ನನಗೆ ಆಹಾರರೂಪವಾಗಿ ನನ್ನ ಸಮೀಪಕ್ಕೆ ಬಂದಿರುವಿರಿ. ಈಗ ನಾನು ಯುದ್ಧದಲ್ಲಿ ನಿಮ್ಮನ್ನು ಜಯಿಸಿ ತಿಂದು ಕ್ಷುದ್ಬಾಧೆಯನ್ನು ಪರಿಹರಿಸಿಕೊಳ್ಳುವೆನು" ಎಂದನು. ಆ ದುರಾತ್ಮನ ಘೋರವಾದ ಆ ಮಾತನ್ನು ಕೇಳಿ, ಧರ್ಮರಾಯನು ತಮ್ಮ ಕುಲನಾಮಾದಿಗಳನ್ನು ಯಥಾಸ್ಥಿತವಾಗಿ ಹೇಳಲುಪಕ್ರಮಿಸಿ, "ಎಲೈ ಕಿಮ್ಮೀರನೆ, ನಾನು ಪಾಂಡು

ಪುತ್ರನಾದ ಧರ್ಮರಾಯನು ; ಇದನ್ನು ನೀನು ಕೇಳಿ ಬಲ್ಲೆಯಷ್ಟೆ ? ನಾನು ರಾಜ್ಯವನ್ನು ಕಳೆದುಕೊಂಡು ತಮ್ಮಂದಿರಾದ ಭೀಮಾರ್ಜುನ ನಕುಲಸಹದೇವರಿಂದೊಡಗೂಡಿ ವನವಾಸಕ್ಕಾಗಿ ಹೊರಟು, ನಿನಗೆ ವಾಸಸ್ಥಾನವಾಗಿರುವ ಈ ವನಕ್ಕೆ ಬಂದಿರುವೆನು " ಎಂದು ನುಡಿದನು. ಬಳಿಕ ಕಿರ್ಮ್ಮೀರನು " ಎಲೈ ಧರ್ಮರಾಯನೆ, ಬಹು ಕಾಲದಿಂದ ನನ್ನ ಮನಸ್ಸಿನಲ್ಲಿದ್ದದ್ದನ್ನು ನನ್ನ ಅದೃಷ್ಟವಶದಿಂದ ಈ ದಿನ ದೇವರು ನೆರವೇರಿಸಿದ ಹಾಗಾಯಿತು ; ನಾನು ಆಯುಧವನ್ನು ಧರಿಸಿಕೊಂಡು ಭೀಮಸೇನನನ್ನು ಸಂಹರಿಸಬೇಕೆಂದು ಎಲ್ಲಾ ಕಡೆಯಲ್ಲೂ ಹುಡುಕುತ್ತಿದ್ದೆನು; ಆತನು ಇದುವರೆಗೂ ಸಿಕ್ಕಿರಲಿಲ್ಲ. ನನ್ನ ಸಹೋದರನನ್ನು ಸಂಹಾರಮಾಡಿದ ಆತನು ನನ್ನ ಅಪೇಕ್ಷೆಯಿದ್ದಂತೆ ದೈವಯೋಗದಿಂದ ಈ ಹೊತ್ತು ಸಿಕ್ಕಿದನು. ಈ ಭೀಮಸೇನನು ಏಕಚಕ್ರಪುರದಲ್ಲಿ ಬ್ರಾಹ್ಮಣವೇಷವನ್ನು ಧರಿಸಿಕೊಂಡು, ಮಂತ್ರಬಲವನ್ನಾಶ್ರಯಿಸಿ, ನನ್ನ ಪ್ರಿಯಸಹೋದರನಾದ ಬಕನನ್ನು ಸಂಹಾರ ಮಾಡಿದನೇ ಹೊರತು, ಇವನಿಗೆ ಶರೀರದಲ್ಲಿ ಅಂಥಾ ಬಲವೇನಾದರೂ ಇರುವದೆ ? ಇದಲ್ಲದೆ ದುರಾತ್ಮನಾದ ಈತನು ನನಗೆ ಪರಮಮಿತ್ರನಾದ ವನಚಾರಿಯಾದ ಹಿಡಿಂಬನನ್ನು ಸಂಹಾರಮಾಡಿ, ಆತನ ತಂಗಿಯಾದ ಹಿಡಿಂಬಿಯನ್ನು ಅಪಹಾರ ಮಾಡಿದನು. ಅಂಥಾ ಅವಿವೇಕಿಯಾದ ಭೀಮಸೇನನು ನಾವು ಸಂಚಾರಮಾಡುವ ಈ ಅರ್ಧರಾತ್ರಿಸಮಯದಲ್ಲಿ ಘೋರವಾದ ನನ್ನ ವನಕ್ಕೆ ಬಂದಿರುವನು. ಈತನನ್ನು ಸಂಹಾರಮಾಡಿ ಬಹುಕಾಲದಿಂದಿರುವ ನನ್ನ ಹಗೆಯನ್ನು ತೀರಿಸಿಕೊಳ್ಳುವೆನು; ಈತನ ಅಧಿಕವಾದ ರಕ್ತದಿಂದ ನನ್ನ ಸಹೋದರನಾದ ಬಕನಿಗೆ ತರ್ಪಣವನ್ನು ಮಾಡುವೆನು ; ರಾಕ್ಷಸ ಕಂಟಕನಾದ ಈತನನ್ನು ಸಂಹರಿಸಿ ಬಕಹಿಡಿಂಬರ ಋಣವನ್ನು ಕಳೆದುಕೊಂಡು ವಿಶೇಷವಾಗಿ ಸಮಾಧಾನ ಮಾಡಿಕೊಳ್ಳುವೆನು. ಪೂರ್ವದಲ್ಲಿ ಬಕನು ಈತನನ್ನು ತಿನ್ನದೆ ಬಿಟ್ಟುಬಿಟ್ಟನು ; ಈಗ ನಿನ್ನೆದುರಿಗೇ ಅಧಿಕವಾದ ಶಕ್ತಿಯುಳ್ಳ ಈತನನ್ನು ಸಂಹರಿಸಿ ತಿಂದು, ಅಗಸ್ತ್ಯನು ವಾತಾಪಿಯನ್ನು ಜೀರ್ಣಿಸಿಕೊಂಡಂತೆ ಜೀರ್ಣಿಸಿಕೊಳ್ಳುವೆನು " ಎಂದು ನುಡಿಯಲು, ಅದನ್ನು ಕೇಳಿ, ಸತ್ಯಸಂಧನಾದ ಧರ್ಮರಾಯನು ಕೋಪದಿಂದ ಆ ಕಿರ್ಮ್ಮೀರನನ್ನು ನೋಡಿ "ಎಲೈ ದುಷ್ಟನೆ, ಎಂದಿಗೂ ನಿನ್ನಿಂದ ಈ ಕೆಲಸವಾಗಲಾರದು " ಎಂದು ಜಬರಿಸಿಕೊಂಡನು.

ಆ ಬಳಿಕ ಮಹಾಬಾಹುವಾದ ಭೀಮಸೇನನು ಹತ್ತುಮಾರುದ್ದವುಳ್ಳ ಒಂದು ವೃಕ್ಷವನ್ನು ಮುರಿದು, ಅದರ ಎಲೆಯನ್ನೆಲ್ಲಾ ತರಿದುಹಾಕಿ, ಆ ಕಿರ್ಮ್ಮೀರನೊಡನೆ ಯುದ್ಧಕ್ಕೆ ಸನ್ನದ್ಧನಾದನು. ಅಷ್ಟರೊಳಗಾಗಿ ಅರ್ಜುನನೂ ಕೂಡ ಪರ್ವತದಂತೆ ಭಾರವುಳ್ಳ ಗಾಂಡೀವಧನುಸ್ಸಿಗೆ ನಿಮಿಷಮಾತ್ರದಲ್ಲಿ ಹೆದೆಯನ್ನೇರಿಸಿ ಯುದ್ಧಸನ್ನದ್ಧನಾಗಲು, ಭೀಮಸೇನನು ಅರ್ಜುನನನ್ನು ತಡೆದು, ಮೇಘದಂತೆ ಗರ್ಜಿಸುತ್ತಿರುವ ಆ ರಾಕ್ಷಸನನ್ನು ಎದುರಿಸಿ, ' ನಿಲ್ಲು ನಿಲ್ಲು ! ಓಡಿಹೋಗಬೇಡ ' ಎಂದು ನುಡಿದು, ಕೋಪದಿಂದ ನಡುಕಟ್ಟನ್ನು ಬಿಗಿದು ಕಟ್ಟಿ, ಕೈಯಿಂದ ಕೈಯನ್ನು ತೀಡಿ, ಹಲ್ಲುಮುಡಿಯನ್ನು ಕಚ್ಚಿ, ಯಮದಂಡಕ್ಕೆ ಸಮಾನವಾದ ಆ ವೃಕ್ಷವನ್ನು ತಿರುಗಿಸಿ, ದೇವೇಂದ್ರನು ವಜ್ರಾಯುಧದಿಂದ ಪರ್ವತಕ್ಕೆ ಪೆಟ್ಟಿಕ್ಕುವಂತೆ, ಆ ರಾಕ್ಷಸನ ತಲೆಯಮೇಲೆ ಪೆಟ್ಟಿಕ್ಕಿದನು. ಆ ಪೆಟ್ಟಿಗೆ ಸ್ವಲ್ಪವೂ ಅಲ್ಲಾಡದೆ, ಆ ರಾಕ್ಷಸನು ಜ್ವಲಿಸುತ್ತಿರುವ ಸಿಡಿಲಿನಂತಿರುವ ಒಂದು ಕೊಳ್ಳಿಯನ್ನು ಭೀಮಸೇನನ ಮೇಲೆ ಪ್ರಯೋಗಿಸಿದನು ; ಅದನ್ನು ಭೀಮಸೇನನು ಎಡಗಾಲಿನಿಂದ ಒದ್ದುಬಿಟ್ಟನು. ಬಳಿಕ ಆ ರಾಕ್ಷಸನು ಮತ್ತೊಂದು ವೃಕ್ಷವನ್ನು ಕಿತ್ತುಕೊಂಡು, ದಂಡಧಾರಿಯಾದ ಯಮನಂತೆ ಭೀಮನ ಸಂಗಡ ಯುದ್ಧಕ್ಕೆ ತೊಡಗಿದನು. ಈ ಪ್ರಕಾರ ಭೀಮಸೇನಕಿರ್ಮ್ಮೀರರು, ತಾರಾದೇವಿಯ ನಿಮಿತ್ತವಾಗಿ ಹೋರಾಡುತ್ತಿದ್ದ ವಾಲಿಸುಗ್ರೀವರಂತೆ, ಎಲ್ಲಾ ವೃಕ್ಷಗಳೂ ನಾಶವಾಗುವವರೆಗೂ ವೃಕ್ಷಗಳಿಂದ ಯುದ್ಧ ಮಾಡಿದರು. ಆ ಯುದ್ಧದಲ್ಲಿ ಪರಸ್ಪರವಾಗಿ ಅವರ ತಲೆಯಮೇಲೆ ಬಿದ್ದು ಹೊಡಿಕೇ ಹುಲ್ಲಿನಂತೆ ಜಜ್ಜುಜಜ್ಜಾದ ಅನೇಕ ವೃಕ್ಷಗಳು, ಸರೋವರವನ್ನು ಹೊಕ್ಕು ಕಮಲಗಳಿಂದ ಹೋರಾಡುವಾಗ ಮದ್ದಾನೆಗಳಮೇಲೆ ಬಿದ್ದ ಕಮಲಗಳಂತೆ ಚೂರುಚೂರಾಗಿ, ವೃಕ್ಷಗಳ ತ್ವಕ್ಕಿನಂತೆ ತೂರಿಹೋಗುತ್ತ ಪ್ರಕಾಶಿಸಿದವು. ಈ ರೀತಿಯಾಗಿ ರಾಕ್ಷಸಶ್ರೇಷ್ಠನಾದ ಕಿರ್ಮ್ಮೀರನಿಗೂ ಪುರುಷಶ್ರೇಷ್ಠನಾದ ಭೀಮಸೇನನಿಗೂ ಒಂದು ಮುಹೂರ್ತಕಾಲ ವೃಕ್ಷಯುದ್ಧವು ನಡೆಯಿತು. ಬಳಿಕ ಕಿರ್ಮ್ಮೀರನು ಕ್ರೋಧದಿಂದ ಯುದ್ಧಮಾಡುತ್ತಿದ್ದ ಭೀಮನಮೇಲೆ ಒಂದು ಪರ್ವತದ ಕೋಡುಗಲ್ಲನ್ನು ತೆಗೆದು ಹಾಕಿದನು. ಅದಕ್ಕೆ ಭೀಮಸೇನನು ಚಲಿಸದೆ ನಿಂತಿರಲು, ಆ ರಾಕ್ಷಸನು ಶಿಲಾತಾಡನದಿಂದ ಜಡನಾಗಿ ನಿಂತಿರುವ ಭೀಮಸೇನನನ್ನು, ರಾಹುವು ಸೂರ್ಯನನ್ನು

ಅಪ್ಪಿಕೊಂಡು ಹೋಗುವಂತೆ, ಎರಡು ಕೈಗಳನ್ನೂ ಚಾಚಿ ಅಪ್ಪಿಕೊಂಡು ಹೋದನು. ಬಳಿಕ ಅವರಿಬ್ಬರೂ ಒಬ್ಬರನ್ನೊಬ್ಬರು ತಬ್ಬಿಕೊಂಡು ಎಳೆದಾಡುತ್ತಾ, ಗೂಳಿಗಳಂತೆಯೂ ಉಗುರುಗಳಿಂದಲೂ ಕೋರೆಹಲ್ಲುಗಳಿಂದಲೂ ಹೋರಾಡುವ ಹೆಬ್ಬುಲಿಗಳಂತೆಯೂ ಪ್ರಕಾಶಿಸುತ್ತಿದ್ದರು. ಹೀಗೆ ಅವರಿಬ್ಬರಿಗೂ ಘೋರವಾದ ಯುದ್ಧವು ನಡೆಯಿತು. ಆಗ ಭೀಮಸೇನನು ದುರ್ಯೋಧನನಿಂದ ಉಂಟಾದ ಅವಮಾನದಿಂದಲೂ ತನ್ನ ಬಾಹುಬಲದಿಂದಲೂ ಕೊಬ್ಬಿದವನಾಗಿ, ದ್ರೌಪದಿಯ ನೋಟದಿಂದ ಮತ್ತಷ್ಟು ಬಲವು ಹೆಚ್ಚಲು, ಮದ್ದಾನೆಯು ಮದ್ದಾನೆಯನ್ನು ಸೆಳೆಯುವಹಾಗೆ ಆ ರಾಕ್ಷಸನನ್ನು ಕೈಗಳಿಂದ ಹಿಡಿದುಕೊಂಡನು. ಆಗ ಆ ರಾಕ್ಷಸನೂ ಹಾಗೆಯೇ ಭೀಮಸೇನನನ್ನು ಹಿಡಿದುಕೊಳ್ಳಲು, ಭೀಮಸೇನನು ಅವನನ್ನು ಸೆಳೆದನು. ಆಗ ಯುದ್ಧದಲ್ಲಿ ಅವರ ಬಾಹುಗಳ ಪರಸ್ಪರವಾದ ಸಂಘರ್ಷಣದಿಂದುಂಟಾದ ಶಬ್ದವು ಒಡೆಯುತ್ತಿರುವ ಬಿದುರುಬೊಂಬುಗಳ ಧ್ವನಿಯಂತೆ ಘೋರವಾಗಿ ಕೇಳಿಸಿತು. ಆಗ ಭೀಮಸೇನನು ಆ ರಾಕ್ಷಸನನ್ನು ಲಕ್ಷ್ಯಮಾಡದೆ ವೇಗದಿಂದ ಅತನ ನಡುವಿಗೆ ನುಗ್ಗಿ, ಬಿರುಗಾಳಿಯು ವೃಕ್ಷವನ್ನು ನಡುಗಿಸುವಂತೆ ನಡುಗಿಸಿಬಿಟ್ಟನು. ಹೀಗೆ ಭೀಮಸೇನನು ಬಲವಾಗಿ ಹಿಡಿಯಲು, ಆ ರಾಕ್ಷಸನು ನಡುಗುತ್ತ, ತನ್ನ ಶಕ್ತಿ ಇರುವಷ್ಟೂ ಭೀಮಸೇನನನ್ನು ಎಳೆದನು. ಅನಂತರದಲ್ಲಿ ಭೀಮಸೇನನು ಕಿರ್ಮ್ಮೀರನ ಬಲವು ತಗ್ಗಿದ್ದನ್ನು ನೋಡಿ, ಹಗ್ಗದಿಂದ ಪಶುವನ್ನು ಕಟ್ಟುವಂತೆ ತನ್ನ ಎರಡು ಕೈಗಳಿಂದಲೂ ಅವನನ್ನು ಬಿಗಿದು ಹಿಡಿದು, ಒಡೆದುಹೋದ ಭೇರಿಯಂತೆ ಧ್ವನಿಮಾಡುತ್ತ ದುರ್ಬಲನಾಗಿ ಏನುತ್ತಿರುವ ಅವನನ್ನು ಬಹಳಹೊತ್ತು ತಿರುಗಿಸಿ, ಪಶುವನ್ನು ಹಿಂಸಿಸುವಂತೆ ಹಿಂಸಿಸಿ, ಅವನ ನಡುವಿನ ಮೇಲೆ ತನ್ನ ಮೊಳಕಾಲಿನಿಂದ ತಿವಿದು, ತನ್ನ ಕೈಗಳಿಂದ ಅತನ ಕೊರಳನ್ನು ಔಕಿದನು. ಆಗ ಮೈಯೆಲ್ಲಾ ಜಜ್ಜುಜಜ್ಜಾಗಿ, ಕಣ್ಣುಗುಡ್ಡು ಮೇಲಾಗಿ, ಬಟ್ಟೆಯೆಲ್ಲಾ ಹರಿದು ಹೋಗಿ, ವ್ಯಥೆಪಡುತ್ತಿದ್ದ ಅವನನ್ನು ಪುನಃ ಭೂಮಿಯಲ್ಲಿ ತಿರುಗಿಸಿ, ' ಎಲೈ ರಾಕ್ಷಸಾಧಮನೆ, ನೀನು ಯಮಲೋಕವನ್ನು ಹೊಂದಿದರೂ, ಅಲ್ಲೂ ಹಿಡಿಂಬ ಬಕಾಸುರರ ಕಣ್ಣೀರನ್ನು ಒರಸಲಾರೆ ' ಎಂದು ನುಡಿಯುತ್ತಾ, ಜಾರಿಹೋದ ವಸ್ತ್ರಾಭರಣಗಳುಳ್ಳವನಾಗಿ ಶ್ವಾಸವನ್ನು ಬಿಡುತ್ತ ಜ್ಞಾನ ತಪ್ಪಿ ಪ್ರಾಣವನ್ನು ಬಿಟ್ಟ ಅವನನ್ನು ಬಿಟ್ಟುಬಿಟ್ಟನು.

ಮಹಾಮೇಘದೋಪಾದಿಯಲ್ಲಿದ್ದ ಆ ಕಿರ್ಮ್ಮೀರನು ಹತನಾದ ಬಳಿಕ, ಪಾಂಡವರು ದ್ರೌಪದಿಯನ್ನು ಮುಂದುಮಾಡಿಕೊಂಡು, ಸಂತೋಷದಿಂದ ಭೀಮಸೇನನ ಅನೇಕವಾದ ಗುಣಗಳನ್ನು ಹೊಗಳುತ್ತ, ದ್ವೈತವನಕ್ಕೆ ಹೊರಟು ಹೋದರು. ಈ ರೀತಿಯಾಗಿ ಕಿರ್ಮ್ಮೀರನನ್ನು ಧರ್ಮರಾಯನ ಅಪ್ಪಣೆಯಿಂದ ಭೀಮಸೇನನು ಯುದ್ಧದಲ್ಲಿ ಸಂಹರಿಸಿದನು. ಅನಂತರದಲ್ಲಿ ಆ ವನವು ನಿಷ್ಕಂಟಕವಾಗಲು, ಅಜೇಯರಾದ ಆ ಧರ್ಮರಾಯಾದಿಗಳು ಸಂತೋಷಪಡುತ್ತಾ, ಪ್ರೇಮದಿಂದ ಭೀಮಸೇನನನ್ನು ಶ್ಲಾಘಿಸುತ್ತ ಕ್ಷೇಮದಿಂದ ಆ ವನವನ್ನು ಹೊಕ್ಕರು. ಎಲೈ ರಾಯನೆ, ಆ ವನದ ಮಾರ್ಗದಲ್ಲಿ ನಾನು ಹೋಗುವಾಗ ದುಷ್ಟನಾಗಿಯೂ ಭಯಂಕರನಾಗಿಯೂ ಇದ್ದ ಆ ಕಿರ್ಮ್ಮೀರನು ಭೀಮನಿಂದ ಹತನಾಗಿ ಅಲ್ಲಿ ಬಿದ್ದಿದ್ದದ್ದನ್ನು ನೋಡಿದೆನು ; ಮತ್ತು ಅಲ್ಲಿ ಬಂದಿದ್ದ ಬ್ರಾಹ್ಮಣರ ಮುಖದಿಂದಲೂ ಈ ಕಿರ್ಮ್ಮೀರನು ಭೀಮನಿಂದ ಹತನಾದನೆಂದು ಕೇಳಿದೆನು " ಎಂದು ನುಡಿದನು. ಈ ವೃತ್ತಾಂತವನ್ನೆಲ್ಲಾ ಕೇಳಿ ಧೃತರಾಷ್ಟ್ರನು ನಿಟ್ಟುಸುರುಗಳನ್ನು ಬಿಡುತ್ತ ರೋಗದಿಂದ ಪೀಡಿತನಾದವನಂತೆ ಚಿಂತಾಕ್ರಾಂತನಾದನು.

## ೧೨ನೇ ಅಧ್ಯಾಯ.—ಪಾಂಡವರು ಶ್ರೀಕೃಷ್ಣನ ಮಾಹಾತ್ಮ್ಯವನ್ನು ಕೊಂಡಾಡಿದ್ದು.

ಅನಂತರದಲ್ಲಿ ವೈಶಂಪಾಯನ ಮುನೀಂದ್ರನು ಜನಮೇಜಯನನ್ನು ಕುರಿತು—ಕೇಳು ಜನಮೇಜಯನೆ, ಅಂಧಕ ವೃಷ್ಣಿ ಭೋಜ ಮೊದಲಾದ ಯಾದವರೂ, ಧೃಷ್ಟದ್ಯುಮ್ನ ಮೊದಲಾದ ಪಾಂಚಾಲರೂ, ಚೇದಿದೇಶಾಧೀಶ್ವರನಾದ ಧೃಷ್ಟಕೇತುವೂ, ಲೋಕವಿಖ್ಯಾತರಾದ ಕೇಕಯದೇಶಾಧಿಪತಿಗಳೂ, ಈ ಪ್ರಕಾರದಿಂದ ಜೂಜಿನಲ್ಲಿ ಸೋತ ಪಾಂಡವರು ಅರಣ್ಯಕ್ಕೆ ಹೋಗಿ ಅನೇಕ ಕ್ಲೇಶಗಳನ್ನು ಅನುಭವಿಸುತ್ತಿರುವ ವೃತ್ತಾಂತವನ್ನು ಕೇಳಿ, ಅಧಿಕವಾಗಿ ಕೋಪಿಸಿಕೊಂಡು, ಧೃತರಾಷ್ಟ್ರನ ಮಕ್ಕಳನ್ನು ನಿಂದಿಸುತ್ತ, ಅಕಟಕಟಾ ! ಈಗೇನು ಮಾಡತಕ್ಕದ್ದು

ಎಂದು ವಿಚಾರಮಾಡುತ್ತ, ಶ್ರೀಕೃಷ್ಣನನ್ನು ಮುಂದು ಮಾಡಿಕೊಂಡು ಪಾಂಡವರ ಸಮೀಪಕ್ಕೆ ಹೋಗಿ ಧರ್ಮರಾಯನಿಗೆ ನಮಸ್ಕಾರಮಾಡಿ, ಆತನ ಸುತ್ತಲೂ ಕೂತುಕೊಂಡರು. ಆಗ ಶ್ರೀಕೃಷ್ಣನು ಧರ್ಮರಾಯನನ್ನು ನೋಡಿ ಖೇದಪಡುತ್ತ, ಸಕಲರಾದ ಅರಸುಗಳನ್ನೂ ಕುರಿತು “ದುರ್ಯೋಧನ, ಕರ್ಣ, ದುಶ್ಶಾಸನ, ದುರಾತ್ಮನಾದ ಶಕುನಿ, ಇವರ ರಕ್ತವನ್ನು ಭೂಮಿಯು ಹೀರುವದು; ಇವರನ್ನೂ ಇವರಿಗೆ ಸಹಾಯವಾಗಿ ಬರುವ ಅರಸುಗಳನ್ನೂ ಸಹ ಯುದ್ಧದಲ್ಲಿ ನಾವು ಸಂಹಾರಮಾಡಿ, ಕುರುದೇಶದ ಅಧಿಪತ್ಯದಲ್ಲಿ ಧರ್ಮರಾಯನಿಗೆ ಪಟ್ಟಾಭಿಷೇಕವನ್ನು ಮಾಡೋಣ. ಲೋಕದಲ್ಲಿ ವಂಚಕನಾಗಿರುವ ಪುರುಷನನ್ನು ಸಂಹರಿಸುವದು ಅರಸುಗಳಿಗೆ ಧರ್ಮವಾದದ್ದು” ಎಂದು ನುಡಿಯುತ್ತ, ಪಾಂಡವರಿಗುಂಟಾದ ಅವಮಾನದಿಂದ ಸಕಲ ಪ್ರಜೆಗಳನ್ನೂ ದಹಿಸಿಬಿಡುವನೋ ಎಂಬಂತೆ ಕೋಪೋದ್ದೀಪಿತನಾಗಿರಲು, ಆತನನ್ನು ನೋಡಿ, ಅರ್ಜುನನು ಆ ಕೋಪವನ್ನು ಸಮಾಧಾನ ಮಾಡಬೇಕೆಂದೆಣಿಸಿ, ಕೀರ್ತಿಶಾಲಿಯಾಗಿಯೂ ಮಹಾತ್ಮನಾಗಿಯೂ ಸಕಲಾಂತರ್ಯಾಮಿಯಾಗಿಯೂ ಅಪ್ರಮೇಯನಾಗಿಯೂ ಅಧಿಕವಾಗಿ ತೇಜೋವಂತನಾಗಿಯೂ ಬ್ರಹ್ಮಾದಿಗಳಿಗೆ ನಿಯಾಮಕನಾಗಿಯೂ ಸತ್ಯಜ್ಞಾನ ಸ್ವರೂಪನಾಗಿಯೂ ಸಕಲ ಲೋಕಾಧಿಪತಿಯಾಗಿಯೂ ಇರುವ, ಆತನ ಪೂರ್ವಾವತಾರಗಳಲ್ಲಿ ನಡೆದ ಚರಿತ್ರೆಗಳನ್ನು ಹೊಗಳಲುಪಕ್ರಮಿಸಿ, “ಎಲೈ ಮಹಾನುಭಾವನೆ, ಪೂರ್ವದಲ್ಲಿ ನೀನು ಗಂಧಮಾದನ ಪರ್ವತದಲ್ಲಿ ಇದ್ದುಕೊಂಡು, ಎಲ್ಲಿ ಸಾಯಂಕಾಲವಾಗುವದೋ ಅಲ್ಲೇ ವಾಸಮಾಡುತ್ತ, ಹತ್ತು ಸಾವಿರ ವರುಷ ಋಷಿಯಾಗಿ ಸಂಚರಿಸುತ್ತಿದ್ದೆ; ಹನ್ನೊಂದುಸಹಸ್ರ ವರ್ಷ ಪುಷ್ಕರಕ್ಷೇತ್ರದಲ್ಲಿ ಜಲಾಹಾರವನ್ನು ಮಾಡಿಕೊಂಡಿದ್ದೆ; ನೂರು ವರುಷ ಬದರಿಕಾಶ್ರಮದಲ್ಲಿ ವಾಯುವನ್ನು ಭಕ್ಷಿಸಿಕೊಂಡು, ಊರ್ಧ್ವಬಾಹುವಾಗಿ ಒಂದೇ ಕಾಲಿನಲ್ಲಿ ನಿಂತು ಕೊಂಡಿದ್ದೆ. ಸರಸ್ವತೀತೀರದಲ್ಲಿ ಆಹಾರವಿಲ್ಲದೆ ಮೈ ನರಗಳು ಕಾಣಿಸುವಷ್ಟು ಕೃಶನಾಗಿ, ಮೈಮೇಲೆ ಬಟ್ಟೆಯನ್ನು ಹೊದ್ದುಕೊಳ್ಳದೆ, ಹನ್ನೆರಡು ವರುಷ ಮಾಡತಕ್ಕ ಸತ್ರಯಾಗದಲ್ಲಿ ಬದ್ಧದೀಕ್ಷನಾಗಿದ್ದೆ. ಅನಂತರದಲ್ಲಿ ಪುಣ್ಯವಂತರಾದ ಜನಗಳಿಂದ ಸೇವಿಸಲ್ಪಟ್ಟ ಪ್ರಭಾಸಕ್ಷೇತ್ರದಲ್ಲಿ, ದಿವ್ಯಸಹಸ್ರವರ್ಷ ಒಂದೇ ಕಾಲಿನಿಂದ ನಿಂತು ನಿಯಮವನ್ನು ವಹಿಸಿದ್ದೆ. ಎಲ್ಲರೂ ಹೀಗೆ ನಡೆಯಲಿ ಎಂದು ತಿಳಿಸುವದಕ್ಕೋಸ್ಕರ ನೀನು ಇಂಥಾ ನಿಯಮಗಳಿಂದ ತಪಸ್ಸನ್ನು ಮಾಡಿದೆ ಎಂದು ನನಗೆ ವ್ಯಾಸರು ಹೇಳಿರುವರು. ಸಕಲಪ್ರಾಣಿಗಳ ಉತ್ಪತ್ತಿಸ್ಥಿತಿಲಯಗಳಿಗೂ ಕಾರಣನಾಗಿಯೂ, ಪಂಚಭೂತ ಮೊದಲಾದವುಗಳಿಗೆ ನಿಯಾಮಕನಾಗಿಯೂ, ತಪಸ್ಸುಗಳಿಗೆ ಆಶ್ರಯನಾಗಿಯೂ, ಯಜ್ಞಸ್ವರೂಪನಾಗಿಯೂ ಇರುವ ನೀನು, ಭೂಪುತ್ರನಾದ ನರಕಾಸುರನನ್ನು ಸಂಹಾರಮಾಡಿ, ಅವನು ಅಪಹರಿಸಿಕೊಂಡು ಹೋಗಿದ್ದ ಅದಿತಿದೇವಿಯ ರತ್ನತಾಟಂಕಗಳನ್ನು ತೆಗೆದುಕೊಂಡು, ಅಶ್ವಮೇಧಯಾಗಾರ್ಥವಾಗಿ ಅಹಂಕಾರತತ್ವದಿಂದ ಉತ್ಪನ್ನವಾದ ಕುದುರೆಯನ್ನು ಬಿಟ್ಟು ಸಮಸ್ತಲೋಕಗಳನ್ನೂ ಜಯಿಸಿದೆ. ಮತ್ತು ಲೋಕಪೂಜ್ಯನಾದ ನೀನು ಸಮಸ್ತ ದೈತ್ಯದಾನವರನ್ನೂ ಸಂಹರಿಸಿ, ಇಂದ್ರನಿಗೆ ತ್ರೈಲೋಕ್ಯಾಧಿಪತ್ಯವನ್ನು ಕೊಟ್ಟು ಮನುಷ್ಯರಲ್ಲಿ ಅವತಾರವನ್ನು ಮಾಡಿದೆ. ಅಂಥಾ ನಾರಾಯಣಸ್ವರೂಪನಾದ ನೀನು ಭಕ್ತರ ಪಾಪಗಳನ್ನು ನಾಶಮಾಡುತ್ತ, ಬ್ರಹ್ಮ, ಚಂದ್ರ, ಸೂರ್ಯ, ಧರ್ಮ, ಧಾತೃ, ಯಮ, ಅಗ್ನಿ, ವಾಯು, ಕುಬೇರ, ರುದ್ರ, ಕಾಲ, ಆಕಾಶ, ಭೂಮಿ, ದಿಕ್ಕು, ಇವುಗಳಿಗೂ ಇನ್ನೂ ಚರಾಚರಪ್ರಾಣಿಗಳಿಗೂ ಶ್ರೇಷ್ಠನಾಗಿಯೂ, ಇವರನ್ನು ಸೃಷ್ಟಿಸಿದವನಾಗಿಯೂ, ಇವರಿಗೆಲ್ಲಾ ಮುಖ್ಯಾಶ್ರಯನಾಗಿಯೂ, ದೇವೋತ್ತಮನಾಗಿಯೂ ಇದ್ದುಕೊಂಡು, ಮಹಾತೇಜೋವಂತನಾಗಿ ಪ್ರಕಾಶಿಸುತ್ತ, ಚೈತ್ರರಥವೆಂಬ ವನದಲ್ಲಿ ವಸಂತಾದಿ ಋತುಗಳಲ್ಲಿ ಯಜ್ಞಗಳನ್ನು ಮಾಡಿ, ಒಂದೊಂದು ಯಜ್ಞದಲ್ಲಿಯೂ ಅನೇಕ ಸಹಸ್ರ ಹೊನ್ನುಗಳನ್ನು ಭಾಗಿಸಿ ಬ್ರಾಹ್ಮಣರಿಗೆ ಕೊಟ್ಟು, ಅದಿತಿದೇವಿಗೆ ಮಗನಾಗಿ, ವಿಷ್ಣುವೆಂಬ ಹೆಸರಿನಿಂದ ಖ್ಯಾತಿಯನ್ನು ಹೊಂದಿ, ದೇವೇಂದ್ರನಿಗೆ ತಮ್ಮನೆನಿಸಿಕೊಂಡೆ. ಮತ್ತು ನೀನು ಬಾಲಕನಾಗಿದ್ದು ಮಹಾತೇಜಸ್ವಿಯಾಗಿ, ಮೂರುಹೆಜ್ಜೆಗಳಿಂದ ಮೂರು ಲೋಕಗಳನ್ನೂ ಆಕ್ರಮಿಸಿದೆ. ಸರ್ವಾಂತರ್ಯಾಮಿಯಾದ ನೀನು ಆಕಾಶವನ್ನು ವ್ಯಾಪಿಸಿ, ಸೂರ್ಯನಲ್ಲಿ ನಿಂತು, ಆತನನ್ನು ನಿನ್ನ ತೇಜಸ್ಸಿನಿಂದ ಪ್ರಕಾಶಮಾಡಿದೆ. ಅನೇಕ ಅವತಾರಗಳನ್ನು ಮಾಡಿ, ಅಧರ್ಮಪರರಾದ ದೈತ್ಯರನ್ನು ನಾಶಮಾಡಿದೆ. ಮತ್ತು ಮುರಪಾಶವನ್ನು ಕತ್ತರಿಸಿ, ನಿಸುಂದನರಕರನ್ನು ಸಂಹಾರ ಮಾಡಿ, ಪ್ರಾಗ್ಜ್ಯೋತಿಷ ಪಟ್ಟಣದ ಮಾರ್ಗವನ್ನು ನಿಷ್ಕಂಟಕವನ್ನಾಗಿ ಮಾಡಿದೆ. ಜಾರೂ

ಧೀಪುರದಲ್ಲಿ ಆಹೃತಿ ಕ್ರಾಥ ಶಿಶುಪಾಲರನ್ನೂ, ಜರಾಸಂಧ ಶೈಬ್ಯ ಶತಧನ್ವರನ್ನೂ ಸಂಹಾರಮಾಡಿದೆ. ಮೇಘ ಧ್ವನಿಗೆ ಸಮಾನವಾದ ಧ್ವನಿಯುಳ್ಳದ್ದಾಗಿಯೂ, ಸೂರ್ಯನಿಗೆ ಸಮಾನವಾದ ತೇಜಸ್ಸುಳ್ಳದ್ದಾಗಿಯೂ ಇರುವ ರಥವನ್ನೇರಿ, ಯುದ್ಧದಲ್ಲಿ ರುಕ್ಮಿಯನ್ನು ಜಯಿಸಿ, ರುಕ್ಮಿಣಿಯನ್ನು ವಿವಾಹ ಮಾಡಿಕೊಂಡೆ. ಮತ್ತು ಇಂದ್ರದ್ಯುಮ್ನ, ಯವನ, ಕಶೇರು, ಸಾಭಪತಿಯಾದ ಸಾಲ್ವ, ಇವರನ್ನು ಸಂಹಾರಮಾಡಿ, ಆಕಾಶದಲ್ಲಿ ಸಂಚರಿಸುತ್ತಿದ್ದ ಸಾಭಪುರವನ್ನು ಕೆಳಕ್ಕೆ ಕೆಡಹಿ, ಇರಾವತೀಪಟ್ಟಣದಲ್ಲಿ ಕಾರ್ತವೀರ್ಯನಿಗೆ ಸಮಾನನಾದ ಭೋಜರಾಯನನ್ನೂ ಗೋಪತಿಯಾದ ತಾಲಕೇತುವನ್ನೂ ಸಂಹರಿಸಿ, ಭೋಗವತಿಯೆಂಬ ಉಪನಾಮವುಳ್ಳದ್ದಾಗಿಯೂ, ಋಷಿಗಳಿಗೆ ಮನೋಹರವಾಗಿಯೂ, ಪುಣ್ಯತಮವಾಗಿಯೂ ಇರುವ ದ್ವಾರಕಾ ಪಟ್ಟಣವನ್ನು ಸ್ವಾಧೀನ ಮಾಡಿಕೊಂಡೆ; ಮುಂದೆ ನೀನೇ ಆ ಪಟ್ಟಣವನ್ನು ಸಮುದ್ರದಲ್ಲಿ ಮುಳುಗಿಸಿಯೂ ಬಿಡುವೆ. ಇಂಥಾ ನಿನ್ನಲ್ಲಿ ಕ್ರೋಧವೂ ಮಾತ್ಸರ್ಯವೂ ಅಸತ್ಯವೂ ನಿರ್ದಯೆಯೂ ವಕ್ರಭಾವವೂ ಎಂದಿಗೂ ಇಲ್ಲವಾದ್ದರಿಂದಲೇ, ಸಕಲರಾದ ಋಷಿಗಳೂ ಸಕಲಪ್ರಾಣಿಗಳ ಹೃದಯಾಕಾಶದಲ್ಲಿ ಸೂರ್ಯನಂತೆ ಪ್ರಕಾಶಿಸುತ್ತಿರುವ ನಿನ್ನನ್ನು ಪ್ರಾರ್ಥನೆಮಾಡಿ ಮೋಕ್ಷವನ್ನು ಅಪೇಕ್ಷಿಸುವರು. ಯುಗಪ್ರಳಯದಲ್ಲಿ ಸಕಲಭೂತಗಳನ್ನೂ ನಿನ್ನ ಶಕ್ತಿಯಿಂದಲೇ ನೀನು ಉಪಸಂಹಾರವನ್ನು ಮಾಡಿ, ನಿನ್ನಲ್ಲೇ ಅಡಗಿಸಿಕೊಂಡು, ನೀರಿನಲ್ಲಿ ಶಯನ ಮಾಡುವೆ. ಮೊದಲು ಚೈತ್ರರಥವೆಂಬ ವನದಲ್ಲಿ ಅನೇಕವಾಗಿ ದಕ್ಷಿಣೆಗಳನ್ನು ಕೊಟ್ಟು, ಅಶ್ವಮೇಧ ಮೊದಲಾದ ಯಜ್ಞಗಳನ್ನು ಮಾಡಿದೆ. ಅಂಥಾ ಯಜ್ಞಗಳನ್ನು ಇದುವರಿಗೂ ಯಾರೂ ಮಾಡಿದವರಿಲ್ಲ; ಮುಂದಕ್ಕೆ ಮಾಡುವವರೂ ಇಲ್ಲ. ನೀನು ಬಾಲಕನಾಗಿರುವ ಕಾಲದಲ್ಲಿ ಬಲರಾಮನೊಡಗೂಡಿ ಮಾಡಿದ ಕಾರ್ಯಗಳನ್ನು ವರ್ಣಿಸುವದಕ್ಕೆ ಯಾರಿಗೆ ಶಕ್ಯವಾಗುವದು! ಮತ್ತು ಪೂರ್ವದಲ್ಲಿ, ನಿನ್ನ ನಾಭೀಕಮಲದಿಂದ ಸಕಲಜಗತ್ತನ್ನೂ ನಿರ್ಮಾಣಮಾಡತಕ್ಕವನಾದ ಚರಾಚರಪ್ರಾಣಿಗಳಿಗೆ ಗುರುವಾದ ಚತುರ್ಮುಖಬ್ರಹ್ಮನು ಹುಟ್ಟಲು, ಆತನನ್ನು ಸಂಹರಿಸುವದಕ್ಕೋಸ್ಕರ ಮಧುಕೈಟಭರೆಂಬ ದಾನವರು ಉದ್ಯುಕ್ತರಾದರು. ಆಗ ಆ ದಾನವರ ದುರುಳತನವನ್ನು ನೋಡಿ ಕೋಪಗೊಂಡ ನಿನ್ನ ಹಣೆಯಲ್ಲಿ ತ್ರಿಲೋಚನನಾದ ಶೂಲಪಾಣಿಯಾದ ರುದ್ರನು ಹುಟ್ಟಿದನು. ನಿನ್ನ ಶರೀರದಿಂದ ಉತ್ಪನ್ನರಾದ ಆ ಬ್ರಹ್ಮರುದ್ರರಿಬ್ಬರೂ ನಿನ್ನ ಆಜ್ಞಾಧಾರಕರೆಂದು ನಾರದರು ಹೇಳಿರುವರು. ಎಲೈ ಪುಂಡರೀಕಾಕ್ಷನೆ, ನೀನು ಕೈಲಾಸಭವನದಲ್ಲಿ ಬ್ರಾಹ್ಮಣರೊಡನೆ ವಾಸಮಾಡಿಕೊಂಡಿದ್ದೆ" ಎಂದು ಶ್ರೀಕೃಷ್ಣನನ್ನು ಸ್ತೋತ್ರಮಾಡಿ ಆತನ ಶರೀರಭೂತನಾದ ಅರ್ಜುನನು ಸುಮ್ಮನಾದನು.

ಅ ಬಳಿಕ ಕೃಷ್ಣನು ಅರ್ಜುನನನ್ನು ನೋಡಿ "ಎಲೈ ಅರ್ಜುನನೆ, ನನ್ನವನೇ ನೀನು, ನಿನ್ನವನೇ ನಾನು; ನಿನ್ನ ಆಶ್ರಿತರೇ ನನ್ನ ಆಶ್ರಿತರು, ನಿನ್ನ ಶತ್ರುಗಳೇ ನನ್ನ ಶತ್ರುಗಳು; ನಿನ್ನ ಮಿತ್ರರೇ ನನ್ನ ಮಿತ್ರರು ಎಂದು ತಿಳಿ. ನರನಾರಾಯಣರೆಂಬ ಋಷಿಗಳಲ್ಲಿ ನರನೇ ನೀನು, ನಾರಾಯಣನೇ ನಾನು. ನಾವಿಬ್ಬರೂ ಈಗ ಲೋಕದಲ್ಲಿ ಅವತರಿಸಿರುವೆವು. ನಿನಗೆ ನಾನೂ ಬೇರೆಯಲ್ಲ, ನನಗೆ ನೀನೂ ಬೇರೆಯಲ್ಲ. ನಮ್ಮಿಬ್ಬರ ಭೇದವನ್ನು ವಿಚಾರ ಮಾಡತಕ್ಕದ್ದು ಸರ್ವರಿಗೂ ಅಶಕ್ಯವಾದದ್ದು" ಎಂದು ನುಡಿದನು. ಆಗ ದ್ರೌಪದಿಯು ಧೃಷ್ಟದ್ಯುಮ್ನ ಮೊದಲಾದ ಸಹೋದರರಿಂದ ಸಹಿತಳಾಗಿ, ಆ ಶೂರರ ಸಭೆಯಲ್ಲಿ ಸಕಲರಾಜರೂ ಅಧಿಕವಾದ ಕೋಪವುಳ್ಳವರಾಗಿರಲು, ಅವರ ಮಧ್ಯದಲ್ಲಿ ಕೂತುಕೊಂಡಿರುವ ಶ್ರೀಕೃಷ್ಣನಿಗೆ ಶರಣಾಗತಳಾಗಬೇಕೆಂದೆಣಿಸಿ, ದುರ್ಯೋಧನನು ಮಾಡಿದ ಅವಮಾನದಿಂದ ಕ್ರೋಧಾವೇಶವುಳ್ಳವಳಾಗಿ, ಶ್ರೀಕೃಷ್ಣನ ಸನ್ನಿಧಿಗೆ ಬಂದು, "ಎಲೈ ಪುಂಡರೀಕಾಕ್ಷನಾದ ಶ್ರೀಕೃಷ್ಣನೆ, ಸೃಷ್ಟಿಗಿಂತಲೂ ಮೊದಲು ನೀನೊಬ್ಬನೇ ಇದ್ದುಕೊಂಡು, ಸೃಷ್ಟಿಕಾಲವು ಬರಲು ಸಕಲಜಗತ್ತನ್ನೂ ಸೃಷ್ಟಿಸಿದವನಾದ್ದರಿಂದ, ನಿನ್ನನ್ನು ಸೃಷ್ಟಿಕರ್ತನಾದ ಬ್ರಹ್ಮನೆಂದು ಅಸಿತದೇವಲರು ಹೇಳಿರುವರು. ಎಲೈ ಮಧುಸೂದನನೆ, ಜಗದ್ವ್ಯಾಪಕನಾದ್ದರಿಂದ ನೀನು ವಿಷ್ಣುವೆಂದನ್ನಿಸಿಕೊಂಡಿರುವೆ. ಮತ್ತು ಯಜ್ಞಕರ್ತನಾಗಿಯೂ ಯಜ್ಞಸ್ವರೂಪನಾಗಿಯೂ ಇರುವ ನಿನ್ನ ಪ್ರೀತ್ಯರ್ಥವಾಗಿಯೇ ಸಕಲರೂ ಯಜ್ಞವನ್ನು ಮಾಡುವರೆಂದು ಜಾಮದಗ್ನ್ಯರು ಹೇಳಿರುವರು. ಸಕಲರಾದ ಋಷಿಗಳೂ ನಿನ್ನನ್ನು ಕ್ಷಮಾಸ್ವರೂಪನೆಂತಲೂ ಸತ್ಯಸ್ವರೂಪನೆಂತಲೂ ಹೇಳಿರುವರು. ಪಂಚಭೂತಗಳಿಗೆ ನಿಯಾಮಕನಾದ ನಿನ್ನ ದೆಸೆಯಿಂದುಂಟಾದ ಯಜ್ಞವೇ ನೀನೆಂದು ಕಶ್ಯಪರು ಹೇಳಿರುವರು. ಎಲೈ ಜಗತ್ಕರ್ತನೆ, ಸಕಲರಾದ ಸಾಧ್ಯರಿಗೂ ದೇವತೆಗಳಿಗೂ ಏಕಾದಶ

ರುದ್ರರಿಗೂ ನೀನು ಅಧಿಪತಿಯೆಂದು ನಾರದರು ಹೇಳಿರುವರು. ಎಲೈ ಭೂತೇಶನೆ, ಬಾಲಕನಾದವನು ಆಟದ ಪದಾರ್ಥಗಳಿಂದ ಆಡುವಹಾಗೆ, ಬ್ರಹ್ಮ, ರುದ್ರ, ಇಂದ್ರ ಮೊದಲಾದ ದೇವತೆಗಳೊಡನೆ ನೀನು ಪದೇಪದೇ ಆಟವಾಡುತ್ತಿರುವೆ. ಎಲೈ ಪ್ರಭುವಾದ ಕೃಷ್ಣನೆ, ನೀನು ಶಿರಸ್ಸಿನಿಂದ ಆಕಾಶವನ್ನೂ ಪಾದಗಳಿಂದ ಭೂಮಿಯನ್ನೂ ವ್ಯಾಪಿಸಿಕೊಂಡು, ಸಕಲಲೋಕಗಳನ್ನೂ ಉದರದಲ್ಲಿಟ್ಟುಕೊಂಡಿರುವೆಯಾದ್ದರಿಂದ, ನಿನ್ನನ್ನು ಪುರಾಣಪುರುಷನೆಂದು ಹೇಳುವರು. ಬ್ರಹ್ಮಚರ್ಯವ್ರತದಿಂದಲೂ ಗೃಹಸ್ಥಾಶ್ರಮಧರ್ಮದಿಂದಲೂ ವಾನಪ್ರಸ್ಥಧರ್ಮದಿಂದಲೂ ಪರಿಶುದ್ಧಾತ್ಮರಾದವರಿಗೂ, ಆತ್ಮಜ್ಞಾನದಿಂದ ತೃಪ್ತರಾದ ಯತಿಗಳಿಗೂ, ಋಷಿಗಳಿಗೂ, ಸಕಲಧರ್ಮಗಳನ್ನೂ ತಿಳಿದು ಹಿಮ್ಮೆಟ್ಟದೆ ಯುದ್ಧಮಾಡಿ ಪುಣ್ಯವನ್ನು ಸಂಪಾದಿಸಿದ ರಾಜರ್ಷಿಗಳಿಗೂ, ನೀನೇ ಗತಿಪ್ರದನಾಗಿಯೂ ಬ್ರಹ್ಮಸ್ವರೂಪನಾಗಿಯೂ ಇರುವೆ. ಎಲೈ ಕೃಷ್ಣನೆ, ವ್ಯಾಪಕನಾಗಿಯೂ ಪ್ರೇರಕನಾಗಿಯೂ ಇರುವ ನೀನು ಸಕಲ ಪ್ರಾಣಿಗಳಲ್ಲೂ ನಿಂತು ಅವರಿಂದ ಕರ್ಮಗಳನ್ನು ಮಾಡಿಸುವೆ. ಎಲೈ ಸ್ವಾಮಿಯೆ, ಸಮಸ್ತಲೋಕಗಳೂ ಸಮಸ್ತಲೋಕಪಾಲಕರೂ ನಕ್ಷತ್ರಗಳೂ ದಿಕ್ಕುಗಳೂ ಆಕಾಶವೂ ಸೂರ್ಯ ಚಂದ್ರ ಮೊದಲಾದ ಗ್ರಹಗಳೂ ಸಕಲವೂ ನಿನ್ನಲ್ಲೇ ಇರುವವು. ಸಕಲ ಪ್ರಾಣಿಗಳಿಗೂ ಸಂಸಾರವೂ, ಸಾತ್ವಿಕರಿಗೆ ಮೋಕ್ಷವೂ, ಸಕಲಲೋಕವ್ಯಾಪಾರಗಳೂ ಸಹ ನಿನ್ನಿಂದಲೇ ಉಂಟಾಗುವವು. ಎಲೈ ಮಧುಸೂದನನೆ, ದೇವತೆಗಳಿಗೂ ಮನುಷ್ಯರಿಗೂ ಸಕಲ ಪ್ರಾಣಿಗಳಿಗೂ ಸ್ವಾಮಿಯಾದ ನಿನ್ನಲ್ಲಿ ಪ್ರೀತಿಯಿಂದ ನನ್ನ ದುಃಖವನ್ನೆಲ್ಲಾ ತಿಳಿಸುವೆನು. ಐದುಮಂದಿ ಪಾಂಡವರಿಗೆ ಪತ್ನಿಯಾಗಿಯೂ ನಿನ್ನ ಪ್ರೀತಿಗೆ ಪಾತ್ರಳಾಗಿಯೂ ಧೃಷ್ಟದ್ಯುಮ್ನನಿಗೆ ತಂಗಿಯಾಗಿಯೂ ಇರುವ ನಾನು ದುರ್ಯೋಧನನ ಸಭೆಯಲ್ಲಿ ಸೆಳೆಯಲ್ಪಡಬಹುದೆ? ಆ ಸಮಯದಲ್ಲಿ ನಾನು ರಜಸ್ವಲೆಯಾಗಿ ಒಂದೇ ಬಟ್ಟೆಯನ್ನುಟ್ಟು ಕೇಶಶೋಧನೆ ಮೊದಲಾದದ್ದನ್ನು ಮಾಡಿಕೊಳ್ಳದೆ ಮಲಿನಭಾವದಿಂದ ಅಶುಚಿಯಾಗಿರಲು, ಪಾಪಾತ್ಮನಾದ ದುಶ್ಶಾಸನನು ಭಯದಿಂದ ನಡುಗುತ್ತಿದ್ದ ನನ್ನನ್ನು ಗುರುಜನರಿಂದಲೂ ಅನೇಕ ರಾಜರಿಂದಲೂ ಕೂಡಿದ್ದ ಸಭೆಗೆ ಸೆಳೆದುಕೊಂಡು ಬರಲು, ದುಷ್ಟಾತ್ಮರಾದ ಧೃತರಾಷ್ಟ್ರನ ಮಕ್ಕಳು ನನ್ನನ್ನು ನೋಡಿ ಪರಿಹಾಸಮಾಡುತ್ತ, ನನ್ನನ್ನು ದಾಸೀಭಾವದಿಂದ ಅನುಭವಿಸಬೇಕೆಂದು ಇಚ್ಛಯಿಸಿದರಲ್ಲಾ! ಪಾಂಡವರೂ ಪಾಂಚಾಲರೂ ಯಾದವರೂ ಜೀವಸಹಿತ ಬದುಕಿರುವ ಕಾಲದಲ್ಲೇ, ಭೀಷ್ಮಧೃತರಾಷ್ಟ್ರರಿಗೆ ಸೊಸೆಯಾಗಿರುವ ನನ್ನನ್ನು ಪರರು ಬಲತ್ಕಾರದಿಂದ ಗೌಡಿಯಾಗೆಂದು ಹೇಳಿದರಲ್ಲಾ! ಆ ಸಮಯದಲ್ಲಿ ಬಲಾಢ್ಯರೆಂಬದಾಗಿಯೂ ಯುದ್ಧದಲ್ಲಿ ಸಮರ್ಥರೆಂಬದಾಗಿಯೂ ಪ್ರಸಿದ್ಧಿಯುಳ್ಳ ಪಾಂಡವರು, ತಮಗೆ ಧರ್ಮಪತ್ನಿಯಾಗಿಯೂ ಕೀರ್ತಿವತಿಯಾಗಿಯೂ ಇರುವ ನಾನು ದುಃಖಪಡುತ್ತಿದ್ದರೂ ಸುಮ್ಮನೇ ನೋಡುತ್ತಿದ್ದರಲ್ಲಾ! ಅವರನ್ನು ನಾನೇನನ್ನಲಿ! ಈ ಭೀಮಸೇನನ ಬಾಹುಬಲವನ್ನೂ ಅರ್ಜುನನ ಗಾಂಡೀವಧನುಸ್ಸನ್ನೂ ಎಷ್ಟು ನಿಂದಿಸಿದರೆತಾನೇ ಪ್ರಯೋಜನವೇನು? ಎಲೈ ಜನಾರ್ದನನೆ, ಕ್ಷುದ್ರರಾದ ಕೌರವರಿಂದ ಪೀಡಿತಳಾದ ನನ್ನನ್ನು ನೋಡಿಯೂ ನನ್ನ ಪತಿಗಳು ಸಹಿಸಿ ಸುಮ್ಮನಿದ್ದರಲ್ಲಾ! ಲೋಕದಲ್ಲಿ ದುರ್ಬಲರಾದ ಪುರುಷರೂಕೂಡ ತಮ್ಮತಮ್ಮ ಪತ್ನಿಯರನ್ನು ರಕ್ಷಿಸುವರು. ಯಾರಿಗಾದರೂ ತಮ್ಮತಮ್ಮ ಪತ್ನಿಯರನ್ನು ರಕ್ಷಿಸತಕ್ಕದ್ದು ಧರ್ಮವೆಂದು ದೊಡ್ಡವರು ಹೇಳಿರುವರು. ಹಾಗೆ ಧರ್ಮಮಾರ್ಗವನ್ನು ಅನುಸರಿಸಿ ಪತ್ನಿಯನ್ನು ರಕ್ಷಿಸಿದರೆ ತನ್ನ ಸಂತತಿಯು ರಕ್ಷಿತವಾಗುವದು; ಆ ಸಂತಾನ ರಕ್ಷಣೆಯಿಂದ ತಾನೂ ರಕ್ಷಿತನಾಗುವನು. ತಾನೇ ತನ್ನಪತ್ನಿಯಲ್ಲಿ ಹುಟ್ಟುವನಾದ್ದರಿಂದ ಆ ಪತ್ನಿಯು ಜಾಯೆ ಎನಿಸಿಕೊಳ್ಳುವಳು. ಪತ್ನಿಯಾದವಳು ತನ್ನ ಪತಿಯೇ ತನ್ನ ಗರ್ಭದಲ್ಲಿ ಹುಟ್ಟುವನಾದ್ದರಿಂದ, ಆತನನ್ನು ತಾನೂ ರಕ್ಷಿಸಬೇಕು. ಶರಣಾಗತರಾದವರನ್ನು ಎಂದಿಗೂ ಪರಿತ್ಯಾಗಮಾಡದೇ ಇರತಕ್ಕ ಈ ಪಾಂಡವರು, ತಮ್ಮನ್ನೇ ಸೇರಿರುವ ನನ್ನನ್ನು ದುರಾತ್ಮಕರಾದ ಕೌರವರು ದುಃಖಪಡಿಸುತ್ತಿದ್ದರೂ, ಸುಮ್ಮನೇ ನೋಡುತ್ತ ಉಪೇಕ್ಷಿಸಿದರು. ಕ್ರಮವಾಗಿ ಧರ್ಮ, ಭೀಮ, ಅರ್ಜುನ, ನಕುಲಸಹದೇವರಿಂದ ನನ್ನಲ್ಲಿ ಜನಿಸಿದ ಪ್ರತಿವಿಂಧ್ಯ, ಸುತಸೋಮ, ಶ್ರುತಕೀರ್ತಿ, ಶತಾನೀಕ, ಶ್ರುತಕರ್ಮರೆಂಬ ಐದುಮಂದಿ ಮಹಾರಥಿಕರಾದ ತಮ್ಮ ಕುಮಾರರನ್ನು ರಕ್ಷಿಸುವದಕ್ಕೋಸ್ಕರಲಾದರೂ ಅವರು ನನ್ನನ್ನು ರಕ್ಷಿಸದೇ ಹೋದರು. ಎಲೈ ಜನಾರ್ದನನೆ, ಈ ಕುಮಾರರು ಮಹಾರಥಿಕನಾದ ಪ್ರದ್ಯುಮ್ನನಿಗೆ ಸಮಾನರಾದವರು; ಯುದ್ಧದಲ್ಲಿ ಯಾರಿಂದಲೂ ಜಯಿಸಲಶಕ್ಯರು. ಇವರು ದುರ್ಬಲರಾದ ದುರ್ಯೋ

ಧನಾದಿಗಳು ಮಾಡಿದ ಅಪರಾಧವನ್ನು ಯಾತಕ್ಕೆ ಸಹಿಸಿಯಾರು? ದುರ್ಯೋಧನಾದಿಗಳು ಅಧರ್ಮದಿಂದ ನಮ್ಮ ರಾಜ್ಯವನ್ನು ಅಪಹರಿಸಿ, ಪಾಂಡವರನ್ನು ದಾಸರನ್ನಾಗಿ ಮಾಡಿಕೊಂಡು, ರಜಸ್ವಲೆಯಾಗಿ ಬಂದೇ ಬಟ್ಟೆಯನ್ನುಟ್ಟಿದ್ದ ನನ್ನನ್ನು ಸಭೆಗೆ ಎಳತರಿಸಿದರು. ಈ ಲೋಕಪ್ರಸಿದ್ಧವಾದ ಗಾಂಡೀವಧನುಸ್ಸಿಗೆ ಹೆದೆಯನ್ನೇರಿಸುವದಕ್ಕೆ, ಅರ್ಜುನನೂ ಭೀಮನೂ ನೀನೂ ಹೊರತಾಗಿ ಲೋಕದಲ್ಲಿ ಇನ್ನ್ಯಾರೂ ಸಮರ್ಥರಾದವರಿಲ್ಲ. ಇಂಥಾ ಧನುಸ್ಸಿನ ಸಹಾಯವುಳ್ಳ ಅರ್ಜುನನ ಪರಾಕ್ರಮವನ್ನೂ ಭೀಮಸೇನನ ಬಾಹುಬಲವನ್ನೂ ನಾನು ಏನೆಂದು ನಿಂದಿಸಲಿ? ಅಂಥಾ ಅಪರಾಧವನ್ನು ಮಾಡಿದ ದುರ್ಯೋಧನನು ಇವರೆದುರಿಗೆ ಬಂದು ಮುಹೂರ್ತವಾದರೂ ಬದುಕಿರಬಹುದೆ? ಆತನು ಬಾಲ್ಯಾರಭ್ಯ ಪ್ರತಿನಿಯಮದಿಂದ ವೇದಾಧ್ಯಯನ ಮಾಡುತ್ತ ಯಾರಿಗೂ ಹಿಂಸೆಯನ್ನು ಮಾಡದೇ ಇದ್ದ ಇವರನ್ನು ಕುಂತೀದೇವಿಯೊಡನೆ ರಾಜ್ಯದಿಂದ ಹೊರಕ್ಕೆ ಹೊರಡಿಸಿಬಿಟ್ಟನು; ಮತ್ತು ಭೀಮಸೇನನಿಗೆ ಅನ್ನದಲ್ಲಿ ಕ್ರೂರವಾದ ವಿಷವನ್ನು ಹಾಕಿಸಿದನು. ಈ ಭೀಮಸೇನನು ಆಯುಶ್ಶೇಷ ಇದ್ದದ್ದರಿಂದ ಸ್ವಲ್ಪವೂ ವಿಕಾರವಿಲ್ಲದಂತೆ ತೋರುತ್ತಿದ್ದ ಆ ಅನ್ನದೊಡನೆ ಆ ವಿಷವನ್ನು ಜೀರ್ಣಿಸಿಕೊಂಡನು. ಮತ್ತು ಆ ದುರಾತ್ಮನು ಗಂಗಾತೀರದಲ್ಲಿದ್ದ ಪ್ರಮಾಣಕೋಟಿಯೆಂಬ ವಟವೃಕ್ಷದ ಕೆಳಗೆ ನಿದ್ರೆಯನ್ನು ಮಾಡುತ್ತಿದ್ದ ಭೀಮಸೇನನನ್ನು ಹಗ್ಗಗಳಿಂದ ಕಟ್ಟಿಸಿ, ಗಂಗಾನದಿಯ ಮಡುವಿನಲ್ಲಿ ಹಾಕಿಸಿ, ತನ್ನ ಪಟ್ಟಣಕ್ಕೆ ಹೊರಟು ಹೋದನು. ಆಗ ಮಹಾಬಾಹುಶಾಲಿಯಾದ ಭೀಮಸೇನನು ಎಚ್ಚತ್ತು, ಆ ಹಗ್ಗವನ್ನು ಕಿತ್ತುಹಾಕಿ ಗಂಗಾನದಿಯಿಂದ ಮೇಲಕ್ಕೆ ಬಂದು, ಪುನಃ ಅಲ್ಲೇ ಮಲಗಿಕೊಂಡು ನಿದ್ರೆಮಾಡುತ್ತಿರಲು, ಆ ದುರಾತ್ಮನು ತನ್ನ ಸಾರಥಿಯನ್ನು ಕಳುಹಿಸಿ, ಘೋರವಾದ ಕೃಷ್ಣಸರ್ಪಗಳನ್ನು ತರಿಸಿ, ಅವುಗಳಿಂದ ಈತನ ಎಲ್ಲಾ ಅಂಗಗಳಲ್ಲೂ ಕಚ್ಚಿಸಿದನು. ಅದಕ್ಕೂ ಈತನು ಮರಣವನ್ನು ಹೊಂದದೆ ಎಚ್ಚತ್ತು, ಆ ಸರ್ಪಗಳನ್ನೂ ದುರ್ಯೋಧನನಿಗೆ ಪ್ರಿಯನಾದ ಸಾರಥಿಯನ್ನೂ ಮುಂಗೈಯಿಂದ ಬಡಿದು ಸಂಹರಿಸಿಬಿಟ್ಟನು. ದುರಾತ್ಮನಾದ ಆ ದುರ್ಯೋಧನನು ವಾರಣಾವತ ಪಟ್ಟಣದಲ್ಲಿ ಅರಗಿನ ಮನೆಯಲ್ಲಿ ಮಲಗಿದ್ದ ಈ ಐದುಮಂದಿಯನ್ನೂ ಕುಂತೀದೇವಿಯನ್ನೂ ಸಹ ಸುಡಬೇಕೆಂದೆಣಿಸಿದನು. ಇಂಥಾ ದುಷ್ಟಕಾರ್ಯವನ್ನು ಯಾರಾದರೂ ಮಾಡುವರೆ? ಆ ಅರಗಿನಮನೆಗೆ ಬೆಂಕಿಯನ್ನು ಹಚ್ಚಿಸಲು, ಕುಂತೀದೇವಿಯು ಎಲ್ಲಾ ಕಡೆಯಲ್ಲೂ ವ್ಯಾಪಿಸುತ್ತಿರುವ ಆ ಉರಿಯನ್ನು ಸಹಿಸಲಾರದೆ ಭಯಪಟ್ಟು ದುಃಖಪಡುತ್ತ 'ಹಾಹಾ! ಕೆಟ್ಟೆನಲ್ಲಾ! ಈಗ ಈ ಬೆಂಕಿಯು ಹ್ಯಾಗೆ ಶಾಂತವಾದೀತು? ಅನಾಥಳಾದ ನಾನು ಈ ಬಾಲಕರೊಡನೆ ನಷ್ಟಳಾಗಿ ಹೋಗುವೆನಲ್ಲಾ!' ಎಂದು ರೋದನ ಮಾಡುತ್ತಿರಲು, ವಾಯುವಿನಂತೆ ವೇಗವೂ ಪರಾಕ್ರಮವೂ ಉಳ್ಳ ಭೀಮಸೇನನು ನಮ್ಮ ಅತ್ತೆಯಾದ ಕುಂತಿಯನ್ನೂ ಯುಧಿಷ್ಠಿರ ಮೊದಲಾದ ಸಹೋದರರನ್ನೂ ಸಮಾಧಾನಪಡಿಸಿ 'ನಿಮ್ಮೆಲ್ಲರನ್ನೂ ಎತ್ತಿಕೊಂಡು ಪಕ್ಷಿರಾಜನಾದ ಗರುಡನಂತೆ ಹಾರಿಹೋಗುವೆನು. ನಿಮಗೆ ಏನೂ ಭಯಕೆಲಸವಿಲ್ಲ' ಎಂದು ನುಡಿದು, ಎಡದ ಭಾಗದಲ್ಲಿ ಕುಂತಿಯನ್ನೂ ಬಲದ ಭಾಗದಲ್ಲಿ ಧರ್ಮರಾಯನನ್ನೂ ಹೆಗಲಮೇಲೆ ನಕುಲಸಹದೇವರನ್ನೂ ಬೆನ್ನಿನಲ್ಲಿ ಅರ್ಜುನನನ್ನೂ ಎತ್ತಿಕೊಂಡು, ಜಾಗ್ರತೆಯಾಗಿ ಅರಗಿನ ಮನೆಯಿಂದ ಹೊರಟು ಹೋಗಿ, ಅವರೆಲ್ಲರನ್ನೂ ವೇಗದಿಂದ ಆ ಬೆಂಕಿಯ ಉರಿಯಿಂದ ತಪ್ಪಿಸಿದನು. ಬಳಿಕ ಅವರೆಲ್ಲರೂ ಆ ದಿವಸರಾತ್ರಿ ಅರಣ್ಯಮಾರ್ಗದಲ್ಲಿ ನಡೆದು ಹಿಡಿಂಬನ ವನದ ಸಮೀಪಕ್ಕೆ ಹೋಗಿ, ದುಃಖಿತರಾಗಿ ಆಯಾಸದಿಂದ ಅಲ್ಲಿ ಮಲಗಿರಲು, ಹಿಡಿಂಬನ ತಂಗಿಯಾದ ಹಿಡಿಂಬಿಯೆಂಬ ರಾಕ್ಷಸಸ್ತ್ರೀಯು ಆಹಾರನಿಮಿತ್ತವಾಗಿ ಆ ಸ್ಥಳಕ್ಕೆ ಬಂದು, ಭೂಮಿಯಮೇಲೆ ಮಲಗಿರುವ ಪಾಂಡವರನ್ನೂ ಕುಂತಿಯನ್ನೂ ನೋಡಿ, ಅವರೊಳಗೆ ಭೀಮಸೇನನನ್ನು ಮೋಹಿಸಿ, ಅವನ ಎರಡು ಪಾದಗಳನ್ನೂ ತನ್ನ ತೊಡೆಯಮೇಲಿರಿಸಿಕೊಂಡು ಮೃದುವಾದ ಕೈಗಳಿಂದ ಒತ್ತುತ್ತ ಉಲ್ಲಾಸದಿಂದಿದ್ದಳು. ಆ ಸಮಯದಲ್ಲಿ ಪರಾಕ್ರಮಶಾಲಿಯಾದ ಈ ಭೀಮಸೇನನು ಎದ್ದು ಆಕೆಯನ್ನು ನೋಡಿ 'ಎಲೌ ಮಂಗಳಾಂಗಿಯೆ, ನೀನು ಯಾರು? ಯಾತಕ್ಕೆ ಇಲ್ಲಿಗೆ ಬಂದೆ? ನಿನ್ನ ಅಪೇಕ್ಷೆಯೇನು ಹೇಳು' ಎನಲು, ಕಾಮರೂಪಿಣಿಯಾದ ಆ ಹಿಡಿಂಬಿಯು ಭೀಮಸೇನನನ್ನು ನೋಡಿ, 'ಪರಾಕ್ರಮಶಾಲಿಯಾದ ನಮ್ಮ ಅಣ್ಣನಾದ ಹಿಡಿಂಬನೆಂಬ ರಾಕ್ಷಸನು ನಿಮ್ಮನ್ನು ಸಂಹರಿಸುವದಕ್ಕೋಸ್ಕರ ಇಲ್ಲಿಗೆ ಬರುವನು. ನೀವು ಶೀಘ್ರವಾಗಿ ಇಲ್ಲಿಂದ ಹೊರಟುಹೋಗಿ; ತಡಮಾಡಬೇಡಿ' ಎಂದು ನುಡಿದಳು. ಬಳಿಕ ಭೀಮಸೇನನು 'ಎಲೌ ಮಂಗಳಾಂಗಿಯೆ, ನಾನು ಆ ರಾಕ್ಷಸನಿಗೆ ಭಯಪಡತಕ್ಕವನಲ್ಲ; ಅವನು ಇಲ್ಲಿಗೆ

ಬಂದರೆ ಈಗಲೇ ಅವನನ್ನು ಸಂಹಾರಮಾಡಿಬಿಡುವೆನು' ಎಂದು ಗರ್ವದಿಂದ ನುಡಿದನು. ಈ ರೀತಿಯಲ್ಲಿ ಅವರಿಬ್ಬರೂ ಮಾತನಾಡುತ್ತಿರುವದನ್ನು ಕೇಳಿ ಘೋರರೂಪನಾದ ಆ ರಾಕ್ಷಸಾಧಮನು ಘರ್ಜಿಸುತ್ತ ತನ್ನ ತಂಗಿಯನ್ನು ನೋಡಿ 'ಎಲೆ ಹಿಡಿಂಬಿಯೆ, ನೀನು ಯಾರಸಂಗಡ ಮಾತನಾಡುತ್ತಿರುವೆ ? ಅವನನ್ನು ಬೇಗ ನನ್ನ ಹತ್ತರಕ್ಕೆ ಕರೆದುಕೊಂಡು ಬಾ ; ನಾವಿಬ್ಬರೂ ತಿಂದುಬಿಡೋಣ ; ತಡಮಾಡಬೇಡ' ಎಂದು ಕೂಗಿದನು. ಆಗ ದಯಾವತಿಯಾದ ಹಿಡಿಂಬಿಯು ಭೀಮಸೇನನಲ್ಲಿ ವ್ಯಾಮೋಹವುಳ್ಳವಳಾದ್ದರಿಂದ, ತಮ್ಮ ಅಣ್ಣನಮಾತನ್ನು ಕಿವಿಮೇಲೆ ಹಾಕಿಕೊಳ್ಳದೇ ಸುಮ್ಮನಿರಲು, ಆಗ ಮನುಷ್ಯರನ್ನು ತಿಂದು ಕೊಬ್ಬಿದ್ದ ಹಿಡಿಂಬನು ಘೋರವಾಗಿ ಧ್ವನಿಯನ್ನು ಮಾಡುತ್ತ ಕೋಪದಿಂದ ಶೀಘ್ರವಾಗಿ ಭೀಮಸೇನನನ್ನು ಅಟ್ಟಿಕೊಂಡು ಬಂದು, ವಜ್ರಾಯುಧಕ್ಕೆ ಸಮಾನವಾಗಿಯೂ ಸಿಡಿಲಿನಂತೆ ಘೋರವಾಗಿಯೂ ಇರುವ ಆತನ ಕೈಯನ್ನು ತನ್ನ ಕೈಯಿಂದ ಹಿಡಿದು ಔಕಿ ಎಳೆದನು. ಅದನ್ನು ಸಹಿಸದೆ ಭೀಮಸೇನನು ಆ ರಾಕ್ಷಸನ ಮೇಲೆ ಕೋಪಿಸಿಕೊಳ್ಳಲು, ಬಳಿಕ ಅವರಿಬ್ಬರಿಗೂ ಘೋರವಾದ ಯುದ್ಧವು ಉಪಕ್ರಮವಾಯಿತು. ಆಗ ಅವರಿಬ್ಬರೂ ಸರ್ವಾಸ್ತ್ರಸಂಪನ್ನರಾದ ವೃತ್ರಾಸುರಮಹೇಂದ್ರರಂತೆ ಬಹುಕಾಲ ಯುದ್ಧಕ್ರೀಡೆಯನ್ನು ಮಾಡಿದಮೇಲೆ, ಬಲಶಾಲಿಯಾದ ಭೀಮಸೇನನು ತನ್ನ ಪರಾಕ್ರಮದಿಂದ ಹಿಡಿಂಬನನ್ನು ಸಂಹಾರಮಾಡಿ, ತಾಯಿಯ ಅನುಮತಿಯಿಂದಲೂ ಅಣ್ಣತಮ್ಮಂದಿರ ಅನುಮತಿಯಿಂದಲೂ ಆ ಹಿಡಿಂಬಿಯನ್ನು ವಿವಾಹಮಾಡಿಕೊಂಡು, ಆಕೆಯಲ್ಲಿ ಘಟೋತ್ಕಚನೆಂಬ ಮಗನನ್ನು ಪಡೆದನು. ಅನಂತರದಲ್ಲಿ ಕುಂತೀದೇವಿಯಿಂದೊಡಗೂಡಿರುವ ಈ ಐದುಮಂದಿಯೂ ಬ್ರಾಹ್ಮಣರೊಡನೆ ಏಕಚಕ್ರಪಟ್ಟಣಕ್ಕೆ ಹೊರಟರು. ಇವರಿಗೆ ಹಿತಚಿಂತಕರಾದ ವೇದವ್ಯಾಸರು ಮಾರ್ಗದಲ್ಲಿ ಇವರನ್ನು ನೋಡಿ ಮುಂದೆ ನಡೆಯತಕ್ಕದ್ದನ್ನು ತಿಳಿಹಿಸಿದರು. ಬಳಿಕ ಇವರು ಏಕಚಕ್ರನಗರವನ್ನು ಸೇರಿದರು. ಅಲ್ಲಿಯೂ ಈ ಭೀಮಸೇನನು ಹಿಡಿಂಬನಿಗೆ ಸಮಾನನಾಗಿ ಮನುಷ್ಯರನ್ನು ಆಹಾರಮಾಡುತ್ತಿದ್ದ ಬಕನೆಂಬ ಅಸುರನನ್ನು ಸಂಹಾರಮಾಡಿ, ಅಣ್ಣತಮ್ಮಂದಿರೊಡನೆಯೂ ತಾಯಿಯೊಡನೆಯೂ ದ್ರುಪದರಾಯನಪಟ್ಟಣಕ್ಕೆ ಸ್ವಯಂವರೋತ್ಸವಾರ್ಥವಾಗಿ ಹೊರಟುಬಂದನು. ಎಲೈ ಕೃಷ್ಣನೆ, ನೀನು ಯುದ್ಧದಲ್ಲಿ ಸಕಲ ರಾಜರನ್ನೂ ಜಯಿಸಿ, ರುಕ್ಮಿಣಿಯನ್ನು ಸ್ವಯಂವರದಲ್ಲಿ ಹ್ಯಾಗೆ ಪರಿಗ್ರಹಿಸಿದೆಯೋ ಅದೇಪ್ರಕಾರ, ಅರ್ಜುನನು ನನ್ನನ್ನು ಪರಿಗ್ರಹಿಸಿದನು. ಆ ಸ್ವಯಂವರದಲ್ಲಿ ಅರ್ಜುನನು ಅಸಾಧ್ಯವಾದ ಕಾರ್ಯವನ್ನು ಮಾಡಿ, ಯುದ್ಧಕ್ಕೆ ಬಂದ ರಾಜರೆಲ್ಲರನ್ನೂ ಜಯಿಸಿ ನನ್ನನ್ನು ಸಂಪಾದಿಸಿದನು. ನಾನು ಅನೇಕಪ್ರಕಾರವಾದ ಕ್ಲೇಶಗಳನ್ನು ಅನುಭವಿಸಿ, ನಮ್ಮ ಅತ್ತೆಯನ್ನು ಅಗಲಿ ಪುರೋಹಿತರಾದ ಧೌಮ್ಯರನ್ನು ಮುಂದೆಮಾಡಿಕೊಂಡು ಹೀಗೆ ದುಃಖಪಡುತ್ತಿರುವೆನು. ಕ್ಷುದ್ರರಾದ ದುರ್ಯೋಧನಾದಿಗಳಿಗಿಂತಲೂ ಅಧಿಕವಾದ ಸಾಮರ್ಥ್ಯವುಳ್ಳವರಾಗಿಯೂ ಸಿಂಹದಂತೆ ಪರಾಕ್ರಮಶಾಲಿಗಳಾಗಿಯೂ ಇರುವ ಈ ಪಾಂಡವರು, ಶತ್ರುಗಳಿಂದ ಕ್ಲೇಶಪಡಿಸಲ್ಪಟ್ಟ ನನ್ನನ್ನು ಹ್ಯಾಗೆ ಉಪೇಕ್ಷಿಸಿರುವರು ? ಪಾಪಸ್ವಭಾವವುಳ್ಳವರಾಗಿಯೂ ಪಾಪಕರ್ಮವನ್ನು ಮಾಡುವರಾಗಿಯೂ ಬಲಹೀನರಾಗಿಯೂ ಇರುವ ದುರ್ಯೋಧನಾದಿಗಳಿಂದ ಉಂಟಾದ ಇಂಥಾ ದುಃಖಗಳನ್ನು ಸಹಿಸಿ, ಬಹುಕಾಲದಿಂದ ಸಂತಾಪಪಡುತ್ತಿರುವೆನು. ಅಮಾನುಷವಾದ ರೀತಿಯಿಂದ ಸತ್ಕುಲದಲ್ಲಿ ಹುಟ್ಟಿದವಳಾಗಿಯೂ, ಪಾಂಡವರಿಗೆ ಪತ್ನಿಯಾಗಿಯೂ, ಮಹಾತ್ಮನಾದ ಪಾಂಡುರಾಯನಿಗೆ ಸೊಸೆಯಾಗಿಯೂ, ಪತಿವ್ರತಾಶ್ರೇಷ್ಠಳಾಗಿಯೂ ಇರುವ ನನ್ನನ್ನು, ವೀರರಾದ ಈ ಐದುಮಂದಿಯೂ ಎದುರಿಗೆ ನೋಡುತ್ತಿರುವಾಗಲೇ, ಪಾಪಾತ್ಮನಾದ ದುಶ್ಶಾಸನನು ಮುಂದಲೆಯನ್ನು ಹಿಡಿದು ಸಭೆಗೆ ಎಳೆದುಕೊಂಡು ಬರಬಹುದೆ ?" ಎಂದು ನುಡಿದು, ಕೆಂದಾವರೆಗೆ ಸಮಾನವಾಗಿಯೂ ಮೃದುವಾಗಿಯೂ ಇರುವ ತನ್ನ ಕೈಯಿಂದ ಮುಖವನ್ನು ಮುಚ್ಚಿಕೊಂಡು ಗಟ್ಟಿಯಾಗಿ ರೋದನಮಾಡುತ್ತಾ, ಶುಭವಾದ ಲಕ್ಷಣವುಳ್ಳವುಗಳಾಗಿಯೂ ಪರಸ್ಪರ ಸಂಗತಗಳಾಗಿಯೂ ಪೀನೋನ್ನತಗಳಾಗಿಯೂ ಇರುವ ಸ್ತನಗಳನ್ನು ಕಣ್ಣೀರಿನಿಂದ ನೆನಸುತ್ತ, ಭಾರಿಭಾರಿಗೂ ನಿಟ್ಟುಸುರುಗಳನ್ನು ಬಿಡುತ್ತ, ಹಾಗೇ ಕಣ್ಣುಗಳನ್ನು ಒರಸಿಕೊಳ್ಳುತ್ತ, ಕೋಪದಿಂದ ಗದ್ಗದಸ್ವರವುಳ್ಳವಳಾಗಿ ಕೃಷ್ಣನನ್ನು ನೋಡಿ, "ಎಲೈ ಮಧುಸೂದನನೆ, ಈ ಸಮಯದಲ್ಲಿ ಎಲ್ಲರೂ ಇದ್ದಾಗ್ಯೂ ಯಾರೂ ನನ್ನ ದುಃಖವನ್ನು ಮನಸ್ಸಿಗೆ ಹಚ್ಚಿಕೊಳ್ಳದೆ ನನ್ನನ್ನು ಉಪೇಕ್ಷೆಮಾಡಿದ್ದರಿಂದ, ನನ್ನ ಪಾಲಿಗೆ ನನ್ನ ಪತಿಗಳೂ ನನ್ನ ಮಕ್ಕಳೂ ನನ್ನ ಅಣ್ಣತಮ್ಮಂದಿರೂ ನನ್ನ ಬಂಧುಜನಗಳೂ ನೀನೂಸಹ ಇಲ್ಲದಹಾಗಾಯಿತು. ಆ ಸಭೆಯ ಮಧ್ಯದಲ್ಲಿ ಕರ್ಣನು

ನನ್ನನ್ನು ಹಾಸ್ಯಮಾಡುತ್ತಾ ಆಡಿದ ಮಾತುಗಳಿಂದ ಉಂಟಾದ ನನ್ನ ದುಃಖವು ಸಮಾಧಾನವಾಗಲಾರದು. ಎಲೈ ಜಗದೀಶನಾದ ಕೃಷ್ಣನೆ, ನಿನಗೆ ನಾನು ಸೋದರತ್ತೆಯ ಮಕ್ಕಳ ಪತ್ನಿಯೆಂಬ ಸಂಬಂಧದಿಂದಲೂ, ನಿನಗಿರುವ ಪ್ರಭುಶಕ್ತಿಯಿಂದಲೂ, ನಾನು ಅಗ್ನಿಕುಂಡದಲ್ಲಿ ಹುಟ್ಟಿದವಳೆಂಬ ಗೌರವದಿಂದಲೂ, ನಿನ್ನಲ್ಲಿ ನನಗಿರುವ ಭಕ್ತಿಯಿಂದಲೂ, ಈ ನಾಲ್ಕು ಕಾರಣಗಳಿಂದಲೂ ನೀನೇ ನನ್ನನ್ನು ರಕ್ಷಿಸಬೇಕು" ಎಂದು ಹೇಳಿಕೊಂಡಳು.

ಬಳಿಕ ಆ ಮಾತನ್ನು ಕೇಳಿ, ಶ್ರೀಕೃಷ್ಣನು ಆ ದ್ರೌಪದಿಯನ್ನು ನೋಡಿ "ಎಲೌ ದ್ರೌಪದಿಯೆ, ಹೆದರಬೇಡ. ಯಾರಮೇಲೆ ನೀನು ಇಷ್ಟು ಆಗ್ರಹವನ್ನು ಮಾಡುವೆಯೋ ಅವರ ಸ್ತ್ರೀಯರು, ಯುದ್ಧದಲ್ಲಿ ಅರ್ಜುನನ ಬಾಣಗಳಿಂದ ಪೀಡಿತರಾಗಿ ಭೂಮಿಯಲ್ಲಿ ಬಿದ್ದು ಮೃತರಾದ ತಮ್ಮತಮ್ಮ ಪತಿಗಳನ್ನು ನೋಡಿ ರೋದನ ಮಾಡುವರು. ಪಾಂಡವರಿಗೆ ಯಾವದು ಪ್ರಯೋಜನಕರವಾದದ್ದೋ ಅಂಥಾ ಕಾರ್ಯವನ್ನು ನಾನು ಮಾಡುವೆನು. ಈ ವಿಷಯದಲ್ಲಿ ನಾನು ನಿಜವಾಗಿ ನಿನಗೆ ಅಭಯವನ್ನು ಕೊಟ್ಟಿರುವೆನು. ನೀನು ವ್ಯಸನಪಡಬೇಡ. ನೀನು ಎಲ್ಲಾ ರಾಜಸ್ತ್ರೀಯರಿಂದಲೂ ಪೂಜಿಸಿಕೊಳ್ಳತಕ್ಕ ಪದವಿಯನ್ನು ಹೊಂದುವೆ. ಆಕಾಶವು ಭೂಮಿಯಲ್ಲಿ ಬಿದ್ದರೂ, ಹಿಮವತ್ಪರ್ವತವು ಎರಡು ಹೋಳಾಗಿ ಸೀಳಿದರೂ, ಭೂಮಿಯು ಪುಡಿಪುಡಿಯಾದರೂ, ಸಮುದ್ರವು ಶೋಷಿಸಿ ಹೋದರೂ, ನನ್ನ ಮಾತು ಎಂದಿಗೂ ವ್ಯರ್ಥವಾಗಲಾರದು" ಎಂದು ಶ್ರೀಕೃಷ್ಣನು ಉತ್ತರ ಕೊಟ್ಟನು. ಅದನ್ನು ಕೇಳಿ ದ್ರೌಪದಿಯು, ಅರ್ಜುನನನ್ನು ತಿರುಗಿ ನೋಡಲು, ಅರ್ಜುನನು ದ್ರೌಪದಿಯನ್ನು ನೋಡಿ, "ಎಲೆ ಕಮಲನಯನೆ, ನೀನು ವ್ಯಸನಪಡಬೇಡ. ಮಧುಸೂದನನು ನುಡಿದಹಾಗೇ ಆಗುವದೇ ಹೊರತಾಗಿ ಮತ್ತೊಂದು ಪ್ರಕಾರವಾಗಿ ಎಂದಿಗೂ ಆಗಲಾರದು" ಎಂದು ನುಡಿದನು. ಅದನ್ನು ಕೇಳಿ ಧೃಷ್ಟದ್ಯುಮ್ನನು "ಎಲೆ ತಂಗಿ, ನಾನು ದ್ರೋಣಾಚಾರ್ಯನನ್ನು ಸಂಹಾರಮಾಡುವೆನು ; ಶಿಖಂಡಿಯು ಭೀಷ್ಮನನ್ನು ಕೊಲ್ಲುವನು ; ಭೀಮಸೇನನು ದುರ್ಯೋಧನನನ್ನು ವಧಿಸುವನು ; ಅರ್ಜುನನು ಕರ್ಣನನ್ನು ತೀರಿಸುವನು. ಶ್ರೀಕೃಷ್ಣಬಲರಾಮರನ್ನು ಆಶ್ರಯಿಸಿರುವ ನಮ್ಮನ್ನು ಯುದ್ಧರಂಗದಲ್ಲಿ ಮಹೇಂದ್ರನೂಕೂಡ ಜಯಿಸಲಾರನು ; ಹೀಗಿರುವಲ್ಲಿ ಹೀನಬಲರಾದ ದುರ್ಯೋಧನಾದಿಗಳು ಎಷ್ಟುಮಾತ್ರದವರು ?" ಎಂದು ನುಡಿದನು. ಒಡನೆಯೇ ಸಕಲರಾದ ಅರಸುಗಳೂ ಶ್ರೀಕೃಷ್ಣನಿಗೆ ಎದುರಾಗಿ ಕೂತುಗೊಂಡು ವಿಸ್ಮಯದಿಂದ ಆತನನ್ನೇ ನೋಡುತ್ತಿರಲು, ಆಗ ಆತನು ಆ ಅರಸುಗಳ ಮಧ್ಯದಲ್ಲಿ ಪುನಃ ಮಾತನಾಡಲಾರಂಭಿಸಿದನು.

## ೧೩ನೇ ಅಧ್ಯಾಯ.—ಶ್ರೀಕೃಷ್ಣಸ್ವಾಮಿಯ ವಾಕ್ಯ.

ಅನಂತರದಲ್ಲಿ ವೈಶಂಪಾಯನ ಮುನೀಂದ್ರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯನೆ, ಶ್ರೀಕೃಷ್ಣನು ಧರ್ಮರಾಯನನ್ನು ನೋಡಿ "ಎಲೈ ಧರ್ಮರಾಯನೆ, ನೀವು ಜೂಜಾಡಿದ ಕಾಲದಲ್ಲಿ ನಾನು ದ್ವಾರಕಾಪಟ್ಟಣದಲ್ಲೇ ಇದ್ದರೆ, ನಿನಗೆ ಇಂಥಾ ಸಂಕಟ ಪ್ರಾಪ್ತವಾಗುತ್ತಿರಲಿಲ್ಲ. ಆಗ ಧೃತರಾಷ್ಟ್ರನೇ ಆಗಲಿ ದುರ್ಯೋಧನನೇ ಆಗಲಿ ನನ್ನನ್ನು ಕರೆಯಿಸದೇ ಇದ್ದಾಗ್ಯೂ, ನಾನಾಗಿ ಬಂದು ಭೀಷ್ಮ, ದ್ರೋಣ, ಬಾಹ್ಲಿಕ, ಮೊದಲಾದವರನ್ನು ಕರೆಯಿಸಿ, ಜೂಜಿನಲ್ಲಿ ಅನೇಕ ದುರ್ಗುಣಗಳಿರುವವೆಂದು ತಿಳಿಯಪಡಿಸಿ, ಅದನ್ನು ನಿಲ್ಲಿಸುತ್ತಿದ್ದೆನು ; ಮತ್ತು ನಿನ್ನಮಕ್ಕಳು ಜೂಜಾಡುವದನ್ನು ನಿಲ್ಲಿಸೆಂದು ನಿನ್ನ ನಿಮಿತ್ತವಾಗಿ ಧೃತರಾಷ್ಟ್ರನಿಗೂ ಹೇಳುತ್ತಿದ್ದೆನು. ಎಲೈ ರಾಜೇಂದ್ರನೆ, ಪೂರ್ವದಲ್ಲಿ ನಳಚಕ್ರವರ್ತಿಯು ಜೂಜಿನಿಂದಲೇ ರಾಜ್ಯವನ್ನು ಕಳೆದುಕೊಂಡನು ; ಜೂಜಿನಿಂದ ಅಕಸ್ಮಾತ್ತಾಗಿ ನಾಶವುಂಟಾಗುವದು ; ಜೂಜಾಡತಕ್ಕವನು ಸೋಲುತ್ತಿದ್ದರೂ, ಗೆಲ್ಲುವೆನೆಂಬ ಆಶೆಯಿಂದ ಪುನಃ ಪುನಃ ಆಡುವನು. ಸ್ತ್ರೀಯರು, ಜೂಜು, ಬೇಟೆ, ಮದ್ಯಪಾನ, ಈ ನಾಲ್ಕೂ ಅನುರಾಗದಿಂದುಂಟಾಗುವವು. ಈ ನಾಲ್ಕೂ ದುಃಖಚತುಷ್ಟಯವೆನ್ನಿಸಿಕೊಳ್ಳುವವು. ಇವುಗಳಿಂದ ಮನುಷ್ಯನು ಐಶ್ವರ್ಯವನ್ನು ಕಳೆದುಕೊಳ್ಳುವನು. ಈ ನಾಲ್ಕರಲ್ಲಿಯೂ ಇರತಕ್ಕ ದೋಷಗಳನ್ನು ಶಾಸ್ತ್ರಜ್ಞರಾದವರು ತಿಳಿದಿರುವರು. ಜೂಜಿನಲ್ಲಿ ಎಲ್ಲಕ್ಕಿಂತಲೂ ಹೆಚ್ಚಾಗಿ ದೋಷವಿರುವದೆಂದು ದೊಡ್ಡವರು ಹೇಳುವರು. ಜೂಜಿನಿಂದ ಒಂದೇದಿವಸದಲ್ಲಿ ಸಕಲ ದ್ರವ್ಯ

ನಾಶವೂ ಮಹತ್ತಾದ ವ್ಯಸನವೂ ಉಂಟಾಗುವವು ; ಧರ್ಮಾರ್ಥಕಾಮಗಳೂ ಅನುಭವಕ್ಕೆ ಬರದೆ ನಷ್ಟವಾಗಿ ಹೋಗುವವು ; ಮತ್ತು ಕರ್ಣಕಠೋರವಾದ ಮಾತುಗಳು ಹೊರಡುವವು. ಇದಲ್ಲದೆ ಜೂಜಾಡುವವರಿಗೆ ಮಹತ್ತಾದ ಮಾತ್ಸರ್ಯವೂ ಉಂಟಾಗುವವು. ಹೀಗೆಯೇ ಇನ್ನೂ ಅನೇಕ ದೋಷಗಳುಂಟಾಗುವವೆಂದು ಧೃತರಾಷ್ಟ್ರನಿಗೆ ಹೇಳುತ್ತಿದ್ದೆನು. ಹೀಗೆ ನಾನು ಹೇಳಿದ ಮಾತುಗಳನ್ನು ಆತನು ಕೇಳಿದ್ದರೆ, ಕೌರವರಿಗೆ ಕ್ಷೇಮವುಂಟಾಗಿ ಧರ್ಮವೂ ಲಭಿಸುತ್ತಿತ್ತು ; ಪ್ರಿಯವಾಗಿಯೂ ಪಥ್ಯವಾಗಿಯೂ ಇದ್ದ ನನ್ನ ಮಾತನ್ನು ದುರ್ಯೋಧನನು ಕೇಳದೆ ಹೋಗಿದ್ದ ಪಕ್ಷದಲ್ಲಿ ಅವನನ್ನು ನನ್ನ ಸಾಮರ್ಥ್ಯದಿಂದ ನಿಗ್ರಹಿಸುತ್ತಿದ್ದೆನು, ಮತ್ತು ಅವನಿಗೆ ಮಿತ್ರರಾಗಿಯೂ, ದುಷ್ಟಾತ್ಮರಾಗಿಯೂ, ಅನ್ಯಾಯವಾಗಿ ಪಗಡೆ ಆಡತಕ್ಕವರಾಗಿಯೂ ಇದ್ದವರನ್ನೂ, ಅವನನ್ನು ಅನುವರ್ತಿಸಿದ್ದ ಸಭಾಸ್ತಾರರನ್ನೂ ಸಹ ಸಂಹರಿಸಿ ಬಿಡುತ್ತಿದ್ದೆನು. ಮಾಡತಕ್ಕದ್ದೇನು ! ಆಗ ನಾನು ದ್ವಾರಕಾಪಟ್ಟಣದಲ್ಲಿ ಇರಲಿಲ್ಲ. ಅದರಿಂದ ನೀವು ಜೂಜಾಡಿ ಇಂಥಾ ವ್ಯಸನಕ್ಕೆ ಗುರಿಯಾದಿರಿ. ನಾನು ದ್ವಾರಕಾಪಟ್ಟಣಕ್ಕೆ ಬಂದಮೇಲೆ, ನೀನು ಜೂಜಾಡಿ ಇಂಥಾ ವ್ಯಸನಕ್ಕೆ ಗುರಿಯಾದದ್ದನ್ನು ಸಾತ್ಯಕಿಯ ಮುಖದಿಂದ ಕೇಳಿ, ಅಧಿಕವಾಗಿ ಕಳವಳಪಟ್ಟು, ನಿನ್ನನ್ನು ನೋಡಬೇಕೆಂಬ ಅಪೇಕ್ಷೆಯಿಂದ ಇಲ್ಲಿಗೆ ಜಾಗ್ರತೆಯಾಗಿ ಬಂದೆನು. ಎಲೈ ಭರತಶ್ರೇಷ್ಠನಾದ ಧರ್ಮರಾಯನೆ, ನೀವೆಲ್ಲರೂ ಇಂಥಾ ವ್ಯಸನವನ್ನು ಹೊಂದಿದಿರಲ್ಲಾ ! ತಮ್ಮಂದಿರೊಡನೆ ದುಃಖದಲ್ಲಿ ಮುಳುಗಿರುವ ನಿನ್ನನ್ನು ನಾನು ನೋಡುತ್ತಿರುವೆನಲ್ಲಾ ! ಹಾ ! ಕಷ್ಟ ! " ಎಂದನು.

---

೧೫ನೇ ಅಧ್ಯಾಯ.–ಶ್ರೀಕೃಷ್ಣನು ಧರ್ಮರಾಯನಿಗೆ ಸಾಲ್ವನ ಯುದ್ಧದ ವಿವರಣೆಯನ್ನು ಹೇಳಿದ್ದು.

ಅನಂತರದಲ್ಲಿ ವೈಶಂಪಾಯನ ಮುನೀಂದ್ರನು ಜನಮೇಜಯರಾಯನನ್ನು ಕುರಿತು–ಎಲೈ ಜನಮೇಜಯನೇ ಕೇಳು, ಆಗ ಧರ್ಮರಾಯನು ಕೃಷ್ಣನನ್ನು ಕುರಿತು " ಎಲೈ ವೃಷ್ಣಿಶ್ರೇಷ್ಠನಾದ ಕೃಷ್ಣನೆ, ನಾವು ಜೂಜಾಡುವ ಕಾಲದಲ್ಲಿ ನೀನು ದ್ವಾರಕಾಪಟ್ಟಣದಲ್ಲಿ ಯಾತಕ್ಕಿರಲಿಲ್ಲ ? ಎಲ್ಲಿ ಹೋಗಿದ್ದೆ ? ಅಲ್ಲೇನು ಮಾಡಿದೆ ? " ಎಂದು ಪ್ರಶ್ನೆಮಾಡಿದನು. ಅದಕ್ಕೆ ಶ್ರೀಕೃಷ್ಣನು " ಎಲೈ ಭರತಶ್ರೇಷ್ಠನಾದ ಯುಧಿಷ್ಠಿರನೆ, ಸಾಲ್ವನನ್ನು ಸಂಹರಿಸುವದಕ್ಕೋಸ್ಕರ ನಾನು ಆತನ ರಾಜಧಾನಿಯಾದ ಸೌಭಪುರಕ್ಕೆ ಹೋಗಿದ್ದೆನು. ಆತನನ್ನು ಸಂಹರಿಸುವದಕ್ಕೆ ಕಾರಣವನ್ನು ಹೇಳುವೆನು ಕೇಳು : ದಮಘೋಷಪುತ್ರನೂ ಮಹಾಬಾಹುವೂ ಮಹಾತೇಜಸ್ವಿಯೂ ಮಹಾಕೀರ್ತಿಶಾಲಿಯೂ ದುರಾತ್ಮನೂ ಆದ–ಶಿಶುಪಾಲನು, ನೀನು ಮಾಡಿದ ರಾಜಸೂಯ ಯಾಗದಲ್ಲಿ ನನಗೆ ಮಾಡಿದ ಅಗ್ರಪೂಜೆಯನ್ನು ಸಹಿಸಲಾರದೆ ರೋಷಾವೇಶವುಳ್ಳವನಾದನು. ಆಗ ಅವನನ್ನು ನಾನು ಸಂಹಾರಮಾಡಿದೆನು. ಅದನ್ನು ಕೇಳಿ ಸಾಲ್ವನು ಅಧಿಕವಾದ ಕ್ರೋಧವುಳ್ಳವನಾಗಿ, ನಾನು ನಿನ್ನ ಸಮೀಪದಲ್ಲಿರುವ ಕಾಲದಲ್ಲಿ ನನ್ನಿಂದ ರಹಿತವಾಗಿದ್ದ ದ್ವಾರಕಾಪಟ್ಟಣಕ್ಕೆ ಕಾಮಚಾರಿಯಾದ ಸೌಭಪುರದಲ್ಲಿ ಕೂತುಕೊಂಡು ಬಂದು, ವೃಷ್ಣಿಶ್ರೇಷ್ಠರಾದ ನಮ್ಮ ಕುಮಾರರೊಡನೆ ಯುದ್ಧವನ್ನು ಮಾಡಿ, ಘಾತುಕನಂತೆ ಕೆಲವುಮಂದಿ ವೃಷ್ಣಿಶ್ರೇಷ್ಠರಾದ ಬಾಲಕರನ್ನು ಹಿಂಸೆಮಾಡಿ, ಬಹುಜನವನ್ನು ಸಂಹರಿಸಿ, ಪಟ್ಟಣದಲ್ಲಿದ್ದ ಉಪವನಗಳನ್ನು ಹಾಳುಮಾಡಿ ' ವೃಷ್ಣಿಕುಲಾಧಮನೂ ವಸುದೇವಪುತ್ರನೂ ಆದ ಮಂದಬುದ್ಧಿಯುಳ್ಳ ವಾಸುದೇವನು ಎಲ್ಲಿ ಹೋಗಿರುವನು ? ಯಾವಾಗಲೂ ಯುದ್ಧವನ್ನು ಬಯಸುವ ಅವನ ಗರ್ವವನ್ನು ಯುದ್ಧದಲ್ಲಿ ನಾಶಮಾಡಿ ಬಿಡುವೆನು. ಎಲೈ ಯಾದವರಾ, ಅವನು ಎಲ್ಲಿರುವನು ? ಯಥಾರ್ಥವಾಗಿ ಹೇಳಿ. ಅಲ್ಲಿಗೆ ನಾನು ಹೋಗಿ ಕಂಸ, ಕೇಶಿ ಮೊದಲಾದವರನ್ನು ಸಂಹಾರಮಾಡಿದ ಆತನನ್ನು ಸಂಹರಿಸಿ ಹಿಂತಿರಿಗಿ ಬರುವೆನು. ಅವನನ್ನು ಸಂಹರಿಸದೆ ನಾನು ಹಿಂತಿರುಗಿ ಬರತಕ್ಕವನಲ್ಲ. ಈ ವಿಷಯದಲ್ಲಿ ನಾನು ಯಥಾರ್ಥವಾಗಿ ಆಯುಧವನ್ನು ಹಿಡಿದು ಪ್ರಮಾಣ ಮಾಡುತ್ತೇನೆ. ಅವನೆಲ್ಲಿ ? ಅವನೆಲ್ಲಿ ? ' ಎಂದು ನನ್ನ ಸಂಗಡ ಯುದ್ಧಮಾಡಬೇಕೆಂಬ ಅಪೇಕ್ಷೆಯಿಂದ ಅಲ್ಲಲ್ಲೇ ಓಡಾಡುತ್ತ, ' ಪಾಪಿಷ್ಠನೂ ಕ್ಷುದ್ರನೂ ವಿಶ್ವಾಸಘಾತುಕನೂ ಆದ ಕೃಷ್ಣನನ್ನು, ಶಿಶುಪಾಲನ ಸಂಹಾರದಿಂದುಂಟಾದ ಕ್ರೋಧದಿಂದ ಯಮನ ಪಟ್ಟಣಕ್ಕೆ ಕಳುಹಿಸಿಬಿಡುವೆನು. ಪಾಪಸ್ವಭಾವವುಳ್ಳ ಕೃಷ್ಣನು ನನ್ನ ಸಹೋದರನಾದ ಭೂಪಾಲಶಿಶುಪಾಲನನ್ನು ಸಂಹಾರಮಾಡಿದನು. ಅವನನ್ನು

ಭೂತಲದಲ್ಲಿ ಸಂಹಾರಮಾಡಿಬಿಡುವೆನು. ನನ್ನ ತಮ್ಮನಾದ ಶಿಶುಪಾಲನು ಬಾಲಕನು ಮತ್ತು ಧೊರೆಯಾದವನು. ಅಂಥಾವನನ್ನು ಕೃಷ್ಣನು ಯುದ್ಧರಂಗದಲ್ಲಿ ಸಂಹಾರಮಾಡಲಿಲ್ಲ; ಆ ಮಹಾವೀರನು ಅಜಾಗರೂಕನಾಗಿದ್ದ ಕಾಲದಲ್ಲಿ ಅವನನ್ನು ಸಂಹಾರಮಾಡಿದನು. ಆದ್ದರಿಂದ ಆ ಜನಾರ್ದನನನ್ನು ನಾನು ಸಂಹಾರಮಾಡುವೆನು' ಎಂದು ಇಂಥಾ ಮಾತುಗಳಿಂದ ನನ್ನನ್ನು ನಿಂದಿಸುತ್ತ, ಕಾಮಚಾರಿಯಾದ ಸೌಭಪುರದಲ್ಲಿ ಕೂತುಕೊಂಡು ಆಕಾಶಕ್ಕೆ ಹೊರಟುಹೋದನು. ನಾನು ದ್ವಾರಕಾಪಟ್ಟಣಕ್ಕೆ ಹೋದಬಳಿಕ, ಮಾರ್ತಿಕಾವತ ದೇಶದಲ್ಲಿ ವಾಸಮಾಡತಕ್ಕ ದುರ್ಬುದ್ಧಿಯುಳ್ಳ ಸಾಲ್ವನು ನನ್ನ ವಿಷಯದಲ್ಲಿ ದುಷ್ಟಸ್ವಭಾವವುಳ್ಳವನಾಗಿ ಏನೇನು ನಡಿಸಿದ್ದನೋ ಅದನ್ನೆಲ್ಲಾ ಕೇಳಿ, ಮನಸ್ಸಿನಲ್ಲಿ ಕೋಪಗೊಂಡು, ಪಾಪಿಷ್ಠನಾದ ಅವನು ದ್ವಾರಕಾಪಟ್ಟಣದಲ್ಲಿ ಯುದ್ಧಮಾಡಿದ್ದನ್ನೂ ನನ್ನನ್ನು ನಿಂದಿಸಿದ್ದನ್ನೂ ಅವನ ಅಧಿಕವಾದ ಅಹಂಕಾರವನ್ನೂ ಸಹ ತಿಳಿದು, ಅವನನ್ನು ಸಂಹರಿಸಬೇಕೆಂದು ಮನಸ್ಸಿನಲ್ಲಿ ನಿಶ್ಚಯಿಸಿಕೊಂಡು, ಅವನ ಸಂಹಾರಕ್ಕೋಸ್ಕರ ಪ್ರಯಾಣಮಾಡಿದೆನು. ಅಲ್ಲಲ್ಲಿ ಹುಡುಕುತ್ತಾ, ನಾನು ಅವನನ್ನು ಸಮುದ್ರದ್ವೀಪದಲ್ಲಿ ಕಂಡೆನು. ಅನಂತರದಲ್ಲಿ ನಾನು ಪಾಂಚಜನ್ಯವೆಂಬ ಶಂಖವನ್ನು ಊದಿ, ಆ ಸಾಲ್ವನನ್ನು ಯುದ್ಧಕ್ಕೆ ಕರೆದು, ಯುದ್ಧರಂಗದಲ್ಲಿ ನಿಂತುಕೊಂಡೆನು. ಅಲ್ಲಿದ್ದ ದಾನವರಿಗೂ ನನಗೂ ಬಂದು ಮುಹೂರ್ತಕಾಲ ಯುದ್ಧವು ನಡೆಯಿತು. ಆಗ ಅವರು ನನ್ನ ಕೈಗೆ ಸಿಕ್ಕಲು, ಎಲ್ಲರನ್ನೂ ಭೂಮಿಯಲ್ಲಿ ಹತಮಾಡಿಬಿಟ್ಟೆನು. ಈ ಕಾರ್ಯಕ್ಕೋಸ್ಕರ ನಾನು ಹೋಗಿದ್ದೆನಾದ್ದರಿಂದ, ನೀವು ಜೂಜಾಡುವ ಕಾಲದಲ್ಲಿ ಬರಲಿಲ್ಲ. ಆ ಬಳಿಕ ಹಸ್ತಿನಾಪುರದಲ್ಲಿ ಅನ್ಯಾಯವಾಗಿ ಜೂಜಾಡಿದ್ದನ್ನು ಕೇಳಿ, ದುಃಖಿತರಾದ ನಿಮ್ಮನ್ನು ನೋಡಬೇಕೆಂಬ ಅಪೇಕ್ಷೆಯಿಂದ ಜಾಗ್ರತೆಯಾಗಿ ಇಲ್ಲಿಗೆ ಬಂದೆನು."

## ೧೫ನೇ ಅಧ್ಯಾಯ.—ಶ್ರೀಕೃಷ್ಣನು ಧರ್ಮರಾಯನಿಗೆ ಸಾಲ್ವನ ವಧೆಯನ್ನು ವಿಸ್ತರಿಸಿದ್ದು.

ಅನಂತರದಲ್ಲಿ ವೈಶಂಪಾಯನ ಮುನೀಂದ್ರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಆ ಬಳಿಕ ಧರ್ಮರಾಯನು ಶ್ರೀಕೃಷ್ಣನನ್ನು ಕುರಿತು "ಎಲೈ ಮಹಾಬಾಹುಶಾಲಿಯಾದ ವಾಸುದೇವನೆ, ಸಾಲ್ವವಧೆಯನ್ನು ವಿಸ್ತಾರವಾಗಿ ಹೇಳು. ಆ ಕಥೆಯನ್ನು ನೀನು ಎಷ್ಟು ಹೇಳುತ್ತಿದ್ದರೂ, ಇನ್ನೂ ಕೇಳಬೇಕೆಂದು ಅಪೇಕ್ಷೆಯುಂಟಾಗುವದು" ಎಂದನು. ಅದನ್ನು ಕೇಳಿ ಶ್ರೀಕೃಷ್ಣನು "ಎಲೈ ಧರ್ಮರಾಯನೆ, ನಾನು ಶಿಶುಪಾಲನನ್ನು ಸಂಹರಿಸಿದ್ದನ್ನು ಕೇಳಿ, ಆ ದುಷ್ಟಾತ್ಮನಾದ ಸಾಲ್ವನು ದಂಡೆತ್ತಿ ಬಂದು ದ್ವಾರಕಾನಗರಕ್ಕೆ ಎಲ್ಲಾ ಕಡೆಯಲ್ಲೂ ಮುತ್ತಿಗೆ ಹಾಕಿ, ಆಕಾಶದಲ್ಲಿ ಸಂಚರಿಸುವ ತನ್ನ ಸೌಭಪುರದಲ್ಲಿ ಆತ್ಮರಕ್ಷಣೆಯನ್ನು ಮಾಡಿಕೊಳ್ಳುತ್ತ ನಿಂತು, ದ್ವಾರಕಾಪಟ್ಟಣದಲ್ಲಿರತಕ್ಕವರ ಸಂಗಡ ಯುದ್ಧಕ್ಕೆ ತೊಡಗಿದನು. ಆಗ ಎಲ್ಲಾ ಕಡೆಯಲ್ಲೂ ನಿರಂತರವಾದ ಬಾಣವರ್ಷಗಳಿಂದ ಯುದ್ಧವು ನಡೆಯಿತು. ಆ ಸಮಯದಲ್ಲಿ ಪತಾಕೆಗಳಿಂದಲೂ, ಹೆಬ್ಬಾಗಿಲುಗಳಿಂದಲೂ, ಸೈನ್ಯಸಮೂಹದಿಂದಲೂ, ಕೋಟೆಕೊತ್ತಲುಗಳಿಂದಲೂ, ಕೋವಿಗಳಿಂದಲೂ, ಸುರಂಗವನ್ನು ಮಾಡತಕ್ಕ ಕಾರೇಗಾರರಿಂದಲೂ, ಈಟೀಕೋಲುಗಳಿಂದಲೂ, ಮೇಲುಮಾಳಿಗೆಗಳಿಂದಲೂ, ಊರುಬಾಗಿಲುಗಳಿಂದಲೂ, ಸೇನಾನಿವೇಶನಸ್ಥಾನಗಳಿಂದಲೂ, ಶತ್ರುಗಳ ಗುಂಪಿನಮೇಲೆ ಎಸೆಯುವದಕ್ಕಾಗಿ ಸಿದ್ಧಮಾಡಿದ್ದ ಉರಿವ ಕೊಳ್ಳಿಗಳಿಂದಲೂ, ಬಾಣಬಿರುಸುಗಳಿಂದಲೂ, ಶಕ್ತ್ಯಾಯುಧಗಳಿಂದಲೂ, ಎಣ್ಣೆಯನ್ನು ತುಂಬಿರುವ ಬಿದ್ದಿಗೇ ಬುರುಡೆಗಳಿಂದಲೂ, ಭೇರಿ ತಂಬಟೆ ಮೊದಲಾದ ವಾದ್ಯಗಳಿಂದಲೂ, ತೋಮರಾಯುಧಗಳಿಂದಲೂ, ಅಂಕುಶಗಳಿಂದಲೂ, ಫಿರಂಗಿಗಳಿಂದಲೂ, ಹಲಾಯುಧಗಳಿಂದಲೂ, ಭುಶುಂಡಿಗಳಿಂದಲೂ, ಗುಂಡಾಗಿರುವ ಕಲ್ಲುಗಳಿಂದಲೂ, ಗಂಡುಕೊಡಲಿಗಳಿಂದಲೂ, ಕಾದಗುಂಡುಗಳನ್ನು ಹಾಕಿ ಹೊಡೆಯತಕ್ಕ ಲೋಹಮಯವಾಗಿಯೂ ಚರ್ಮಮಯವಾಗಿಯೂ ಇರುವ ಯಂತ್ರಗಳಿಂದಲೂ, ಆ ದ್ವಾರಕಾಪಟ್ಟಣವು ರಾಜನೀತಿಯ ಪ್ರಕಾರ ಸಂರಕ್ಷಿಸಲ್ಪಡುತ್ತಿತ್ತು. ಅನೇಕ ಪ್ರಕಾರವಾದ ರಥಗಳಿಂದಲೂ, ಗದ ಸಾಂಬ ಉದ್ಧವ ಮೊದಲಾದವರಿಂದಲೂ, ಅನೇಕ ಯುದ್ಧಗಳಲ್ಲಿ ಪರಾಕ್ರಮವನ್ನು ತೋರಿಸಿರುವವರಾಗಿಯೂ ಶೂರರಾಗಿಯೂ ಪ್ರಸಿದ್ಧವಾದ ವೀರವಂಶದಲ್ಲಿ ಹುಟ್ಟಿದವರಾಗಿಯೂ ಶತ್ರುಗಳನ್ನು ನಿವಾರಣೆ

ಹೊಡುವವರಲ್ಲಿ ಸಮರ್ಥರಾಗಿಯೂ ಇರುವ ಯೋಧಶ್ರೇಷ್ಠರಿಂದಲೂ, ಮಧ್ಯಭಾಗದಲ್ಲಿರುವ ಗುಲ್ಮಸ್ಥಾನದಿಂದಲೂ, ಇನ್ನೂ ಅನೇಕಮಂದಿ ಕಾವಲುಗಾರರಿಂದಲೂ, ಶತ್ರುಗಳ ಸೇನೆಯನ್ನು ಓಡಿಸತಕ್ಕವರಾಗಿಯೂ ಭಲ್ಲೆಗಳನ್ನು ಧರಿಸಿರತಕ್ಕವರಾಗಿಯೂ ಇರುವ ರಾವುತರಿಂದಲೂ, ಆ ಪಟ್ಟಣವು ಚೆನ್ನಾಗಿ ರಕ್ಷಿತವಾಗಿತ್ತು. ಆ ಪಟ್ಟಣದಲ್ಲಿ ಯಾವ ಪ್ರಮಾದವೂ ಬರದಂತೆ ಪಟ್ಟಣವನ್ನು ರಕ್ಷಿಸತಕ್ಕ ಉಗ್ರಸೇನ, ಉದ್ಧವ ಮೊದಲಾದವರು 'ಈ ಪಟ್ಟಣದಲ್ಲಿ ಯಾರೂ ಮದ್ಯಪಾನವನ್ನು ಮಾಡಕೂಡದು' ಎಂದು ಡಂಗುರ ಹಾಕಿಸಿದರು. ಸಮಸ್ತರಾದ ವೃಷ್ಣ್ಯಂಧಕರೂ ತಾವು ಅಜಾಗರೂಕರಾಗಿದ್ದರೆ ಸಾಲ್ವರಾಯನು ತಮ್ಮನ್ನು ಸಂಹರಿಸಿಬಿಡುವನೆಂದು ತಿಳಿದು ಬಹಳ ಜಾಗರೂಕರಾಗಿದ್ದರು. ಆ ಪಟ್ಟಣದಲ್ಲಿ ಬೊಕ್ಕಸವನ್ನು ರಕ್ಷಿಸತಕ್ಕವರು ಅಲ್ಲಿದ್ದ ನಟನರ್ತಕಗಾಯಕರನ್ನು ಪಟ್ಟಣದಿಂದ ಹೊರಕ್ಕೆ ಹೊರಡಿಸಿಬಿಟ್ಟಿದ್ದರು. ಮತ್ತು ಆ ಪಟ್ಟಣದಲ್ಲಿದ್ದ ಸೇತುವೆಗಳನ್ನೆಲ್ಲಾ ಒಡೆದು ಹಾಕಿ ಅಗಳುಗಳಲ್ಲಿ ಶೂಲಗಳನ್ನು ನೆಡಿಸಿದ್ದರು; ಸಮುದ್ರದಲ್ಲಿ ನಾವೆಗಳು ನಡೆಯದಂತೆ ಅಡ್ಡಿಮಾಡಿದ್ದರು; ಅಲ್ಲಲ್ಲಿ ಬಾವಿಗಳನ್ನೂ ಗುಪ್ತವಾದ ಅಗ್ನಿಸ್ಥಾನಗಳನ್ನೂ ರಕ್ಷಿಸಿಕೊಂಡಿದ್ದರು; ಪಟ್ಟಣದ ಹೊರಗೆ ಸುತ್ತಲೂ ಒಂದು ಕೋಶಪರ್ಯಂತವೂ ಯಾರೂ ಸಂಚಾರಮಾಡದಂತೆ ಕಬ್ಬಿಣದಮುಳ್ಳು ಮೊದಲಾದವುಗಳನ್ನು ಭೂಮಿಯಲ್ಲಿ ನೆಡಿಸಿದ್ದರು. ಯಾವಾಗಲೂ ಸ್ವಭಾವವಾಗಿ ವಿಷಮವಾಗಿಯೂ ಶತ್ರುಗಳಿಂದ ಪ್ರವೇಶಿಸಲಶಕ್ಯವಾಗಿಯೂ ಅನೇಕವಾದ ಆಯುಧಗಳಿಂದ ರಕ್ಷಿತವಾಗಿಯೂ ಇದ್ದ ಆ ಪಟ್ಟಣವು ಮತ್ತಷ್ಟು ವಿಶೇಷವಾಗಿ ಅಮರಾವತೀ ಪಟ್ಟಣದಂತೆ ರಕ್ಷಿತವಾಗಿತ್ತು. ಆ ಪಟ್ಟಣದ ಮೇಲೆ ಸಾಲ್ವನು ದಂಡೆತ್ತಿಬಂದ ಕಾಲದಲ್ಲಿ, ಆ ಪಟ್ಟಣದಿಂದ ಹೊರಕ್ಕೆ ಹೋಗತಕ್ಕವರೂ, ಹೊರಗಿನಿಂದ ಒಳಕ್ಕೆ ಬರತಕ್ಕವರೂ ಯಾರೂ ರಾಜಮುದ್ರೆಯಿಲ್ಲದೆ ಸಂಚಾರಮಾಡುತ್ತಿರಲಿಲ್ಲ. ಆ ಪಟ್ಟಣದ ಎಲ್ಲಾ ದಾರಿಗಳಲ್ಲಿಯೂ ಚೌಕಗಳಲ್ಲಿಯೂ ಅನೇಕವಾದ ಆನೆಕುದುರೆಗಳ ಸೈನ್ಯಗಳು ತುಂಬಿದ್ದವು. ಆಗ ಆ ಸೈನ್ಯಗಳಿಗೆಲ್ಲಾ ತಿಂಗಳು ಸಂಬಳವನ್ನೂ ಒಳ್ಳೇ ಊಟವನ್ನೂ ಬೇಕಾದ ಆಯುಧಸಾಮಗ್ರಿಗಳನ್ನೂ ಕೊಟ್ಟು ವಿಶೇಷವಾಗಿ ಪ್ರೋತ್ಸಾಹಪಡಿಸುತ್ತಿದ್ದರು. ಆ ಸೈನ್ಯದಲ್ಲಿ ಬೆಳ್ಳಿ ಚಿನ್ನದ ನಾಣ್ಯಗಳು ಹೊರತು ಇತರ ನಾಣ್ಯಗಳನ್ನು ಯಾರಿಗೂ ಸಂಬಳಕ್ಕಾಗಿ ಕೊಡಲಿಲ್ಲ. ಒಬ್ಬನಿಗಾದರೂ ಸಂಬಳವನ್ನು ಕೊಡುವದಕ್ಕೆ ತಿಂಗಳನ್ನು ಅತಿಕ್ರಮಿಸಲಿಲ್ಲ. ಆ ಕಾಲದಲ್ಲಿ ಹೊಸದಾಗಿ ಒಬ್ಬನನ್ನೂ ಸೈನ್ಯದಲ್ಲಿ ಒದಗಿಸಿಕೊಳ್ಳಲಿಲ್ಲ; ಆ ಸೈನ್ಯದಲ್ಲಿ ಎಲ್ಲರೂ ಪ್ರಖ್ಯಾತವಾದ ಪರಾಕ್ರಮವುಳ್ಳವರಾಗಿದ್ದರು. ಎಲೈ ಧರ್ಮರಾಯನೆ, ಈ ರೀತಿಯಾಗಿ ಆ ದ್ವಾರಕಾಪಟ್ಟಣವು ಬಹುಮಂದಿ ಸಮರ್ಥರಿಂದ ಕೂಡಿದ ಉಗ್ರಸೇನರಾಯನಿಂದ ಸಂರಕ್ಷಿಸಲ್ಪಟಿತ್ತು."

## ೧೬ನೇ ಅಧ್ಯಾಯ.—ಸಾಲ್ವ ಪ್ರದ್ಯುಮ್ನ ಮೊದಲಾದವರ ಯುದ್ಧ.

ಅನಂತರದಲ್ಲಿ ವೈಶಂಪಾಯನ ಮುನೀಂದ್ರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಆ ಬಳಿಕ ಶ್ರೀಕೃಷ್ಣನು ಪುನಃ ಧರ್ಮರಾಯನನ್ನು ಕುರಿತು "ಎಲೈ ಧರ್ಮರಾಯನೆ, ಸೌಭರಾಜನಾದ ಸಾಲ್ವನು ಅನೇಕ ವೀರಭಟರಿಂದಲೂ ಆನೆಗಳಿಂದಲೂ ಕೂಡಿರುವ ಸೈನ್ಯದೊಡನೆ ಬಂದು, ದ್ವಾರಕಾನಗರವನ್ನು ಪ್ರವೇಶಿಸಿದನು. ಆತನಿಂದ ರಕ್ಷಿತವಾದ ಚತುರಂಗಸೈನ್ಯವು ಶ್ಮಶಾನಪ್ರದೇಶವನ್ನೂ ದೇವಾಲಯಪ್ರದೇಶವನ್ನೂ ಹುತ್ತಗಳಿರತಕ್ಕ ಪ್ರದೇಶವನ್ನೂ ದೊಡ್ಡದೊಡ್ಡ ಮರಗಳಿರತಕ್ಕ ಪ್ರದೇಶವನ್ನೂ ಬಿಟ್ಟು, ಜಲಸಮೃದ್ಧಿ ಇರತಕ್ಕ ಸಮಭೂಮಿಯಲ್ಲಿ ಇಳಿದುಕೊಂಡಿತು. ಆ ಸೈನ್ಯವನ್ನು ವಿಭಾಗಿಸಿ ಅಲ್ಲಲ್ಲಿ ನಿಲ್ಲಿಸಲು, ಆ ಪಟ್ಟಣಕ್ಕೆ ಧಾನ್ಯಗಳು ಬರತಕ್ಕ ಮಾರ್ಗಗಳಿಗೆಲ್ಲಾ ತಡೆಯುಂಟಾದ್ದರಿಂದ, ಜನಗಳು ತಿರುಗಾಡುವದಕ್ಕೂ ಮಾರ್ಗವಿಲ್ಲದೆ ಹೋಯಿತು. ಸಾಲ್ವನು ಗುಡಾರಗಳನ್ನು ಅಲ್ಲಲ್ಲಿ ಹಾಕಿಸಲು, ಗುಟ್ಟಾಗಿ ಬಗ್ಗಿನಡೆದು ಹೋಗುವದಕ್ಕೂ ಎಲ್ಲಿಯೂ ಮಾರ್ಗವಿಲ್ಲದೆ ಹೋಯಿತು. ಆ ಸೈನ್ಯವು ಸಕಲಾಯುಧಸಮೇತವಾಗಿಯೂ, ನೀತಿಜ್ಞರಾದ ಜನಗಳಿಂದ ಕೂಡಿರುವದಾಗಿಯೂ, ಆನೆ ಕುದುರೆ ರಥಗಳಿಂದ ನಿಬಿಡವಾಗಿಯೂ, ಕಾಲಾಳುಗಳಿಂದಲೂ ಧ್ವಜಗಳಿಂದಲೂ ಪರಿಪೂರ್ಣವಾಗಿಯೂ, ಸಂತುಷ್ಟರಾಗಿಯೂ, ಪುಷ್ಟರಾಗಿಯೂ ಇರುವ ಸೈನಿಕರಿಂದ ಕೂಡಿರುವದಾಗಿಯೂ, ವೀರರ

ಚಿಹ್ನೆಗಳಿಂದ ಶೋಭಿಸುವದಾಗಿಯೂ, ಚಿತ್ರವಿಚಿತ್ರವಾದ ಪತಾಕೆಗಳಿಂದಲೂ ರಥಗಳಿಂದಲೂ ಧನುಸ್ಸುಗಳಿಂದಲೂ ಸನ್ನದ್ಧವಾಗಿಯೂ ಇದ್ದುಕೊಂಡು, ಅಲ್ಲಲ್ಲಿ ನಿಂತು ಗರುಡನಂತೆ ವೇಗದಿಂದ ಪಟ್ಟಣವನ್ನು ಮುತ್ತಿಕೊಂಡಿತು.

ಈ ಪ್ರಕಾರ ಬರತಕ್ಕ ಸಾಲ್ವನ ಸೈನ್ಯವನ್ನು ನೋಡಿ ಸಹಿಸದೆ, ವೃಷ್ಣಿಕುಮಾರಕರು ತಾವೂ ಸನ್ನದ್ಧರಾಗಿ ಯುದ್ಧಕ್ಕೆ ತೊಡಗಿದರು. ಆಗ ಚಾರುದೇಷ್ಣ, ಸಾಂಬ, ಪ್ರದ್ಯುಮ್ನ ಮೊದಲಾದ ಮಹಾರಥಿಕರು ಚಿತ್ರವಾದ ಅಲಂಕಾರಗಳಿಂದಲೂ ಧ್ವಜಗಳಿಂದಲೂ ರಥಗಳಿಂದಲೂ ಸನ್ನದ್ಧರಾಗಿ, ಸಾಲ್ವರಾಜನ ಸೈನಿಕರೊಡನೆ ಯುದ್ಧಮಾಡುವದಕ್ಕೆ ಆರಂಭಿಸಿದರು. ಆಗ ಸಾಂಬನು ಧನುಸ್ಸನ್ನು ಧರಿಸಿ ಸಂತುಷ್ಟನಾಗಿ, ಸಾಲ್ವನ ಸೇನಾಪತಿಯಾದ ಕ್ಷೇಮವೃದ್ಧಿಯ ಸಂಗಡ ಯುದ್ಧಕ್ಕೆ ತೊಡಗಿ, ಇಂದ್ರನು ಮಳೆಯನ್ನು ಕರೆಯುವಂತೆ ಆತನ ಮೇಲೆ ಬಾಣವೃಷ್ಟಿಯನ್ನು ಕರೆದನು. ಘೋರವಾದ ಆ ಬಾಣವೃಷ್ಟಿಯನ್ನು ಕ್ಷೇಮವೃದ್ಧಿಯು ಸಹಿಸಿ, ಹಿಮವತ್ಪರ್ವತದಂತೆ ಚಲಿಸದೆ ನಿಂತು, ತಾನೂ ಮಾಯೆಯಿಂದ ಮಹತ್ತಾದ ಅನೇಕ ಬಾಣಗಳನ್ನು ಸಾಂಬನಮೇಲೆ ವರ್ಷಿಸಿದನು. ಬಳಿಕ ಸಾಂಬನು ಮಾಯೆಯಿಂದ ಕಲ್ಪಿತವಾದ ಆ ಬಾಣಗಳನ್ನು ಮಾಯೆಯಿಂದಲೇ ಪರಿಹರಿಸಿ, ಆತನ ರಥದಮೇಲೆ ಅನೇಕಸಹಸ್ರ ಬಾಣಗಳನ್ನು ಪ್ರಯೋಗಮಾಡಿದನು. ಆ ಬಾಣಗಳಿಂದ ಪೀಡಿತನಾದ ಸೇನಾಪತಿಯಾದ ಆ ಕ್ಷೇಮವೃದ್ಧಿಯು ವೇಗಶಾಲಿಗಳಾದ ಕುದುರೆಗಳನ್ನು ಕಟ್ಟಿರುವ ರಥವನ್ನೇರಿ ಪಲಾಯನಮಾಡಿದನು. ಬಳಿಕ ಮತ್ತೊಬ್ಬ ವೇಗವಂತನೆಂಬ ಸೇನಾಪತಿಯು ಸಾಂಬನಮೇಲೆ ಕಾಣಿಸಿಕೊಳ್ಳಲು, ಸತ್ಯಪರಾಕ್ರಮನಾಗಿಯೂ ವೃಷ್ಣಿಕುಲಶ್ರೇಷ್ಠನಾಗಿಯೂ ಇರುವ ಸಾಂಬನು ಆತನ ಮೇಲೆ ಯುದ್ಧಕ್ಕೆ ಹೊರಟು, ಆತನ ವೇಗವನ್ನು ಸಹಿಸಿಕೊಂಡು ನಿಂತು, ಅತಿಭಯಂಕರವಾದ ಗದೆಯನ್ನು ವೇಗವಾಗಿ ತಿರುಗಿಸಿ, ಆತನ ಮೇಲೆ ಪ್ರಯೋಗಿಸಿದನು. ಆ ಗದಾಪ್ರಹಾರದಿಂದ, ಆ ವೇಗವಂತನು, ಬಿರುಗಾಳಿಯಿಂದ ಕೀಳಲ್ಪಟ್ಟು ಬೇರುಸಡಲಿದ ವೃಕ್ಷವು ಮುರಿದುಬೀಳುವಹಾಗೆ ಹತನಾಗಿ, ಭೂಮಿಯಲ್ಲಿ ಬಿದ್ದು ಮೃತನಾದನು. ಬಳಿಕ ಸಾಂಬನು ಸಾಲ್ವನ ಸೈನ್ಯವನ್ನು ಹೊಕ್ಕು ಯುದ್ಧಮಾಡಿದನು. ಆಗ ಮಹಾರಥಿಕನಾದ ವಿವಿಂಧ್ಯನೆಂಬ ದಾನವನು ಸಾಲ್ವನ ಆಜ್ಞೆಯಿಂದ ದೊಡ್ಡದಾದ ಧನುಸ್ಸನ್ನು ಹಿಡಿದು, ಚಾರುದೇಷ್ಣನೊಡನೆ ಯುದ್ಧಕ್ಕೆ ತೊಡಗಿದನು. ಆಗ ಅವರಿಬ್ಬರಿಗೂ ಪೂರ್ವದಲ್ಲಿ ವೃತ್ರಮಹೇಂದ್ರರಿಗೆ ನಡೆದ ಯುದ್ಧದಂತೆ ಘೋರವಾದ ಯುದ್ಧವು ನಡೆಯಿತು ; ಅನ್ಯೋನ್ಯವಾಗಿ ಮಹಾಬಲಶಾಲಿಗಳಾದ ಅವರಿಬ್ಬರೂ, ಕ್ರೋಧಾವೇಶದಿಂದ ಸಿಂಹಗಳಂತೆ ಘರ್ಜಿಸುತ್ತ ಬಾಣಗಳಿಂದ ಹೋರಾಡಿದರು. ಆಗ ಮಹಾರಥಿಕನಾದ ರುಕ್ಮಿಣೀಪುತ್ರನಾದ ಪ್ರದ್ಯುಮ್ನನು ಕೋಪಗೊಂಡು, ಸೂರ್ಯಾಗ್ನಿಗಳಿಗೆ ಸಮಾನವಾದ ಶತ್ರುನಾಶಕವಾದ ಒಂದು ಮಹಾಸ್ತ್ರವನ್ನು ಬಾಣದಲ್ಲಿ ಅಭಿಮಂತ್ರಿಸಿ, ವಿವಿಂಧ್ಯನ ಮೇಲೆ ಪ್ರಯೋಗಿಸಿದನು. ಆ ಅಸ್ತ್ರದಿಂದ ವಿವಿಂಧ್ಯನು ಪ್ರಾಣವನ್ನು ಬಿಟ್ಟು ರಥದಿಂದ ಕೆಳಕ್ಕೆ ಬಿದ್ದನು. ಆಗ ಸಾಲ್ವನು ವಿವಿಂಧ್ಯನು ಹತನಾದದ್ದನ್ನೂ ತನ್ನ ಸೈನ್ಯವೆಲ್ಲಾ ಓಡಿಹೋಗುವದನ್ನೂ ನೋಡಿ, ಆಕಾಶದಲ್ಲಿ ಸಂಚರಿಸುವ ಸೌಭವನ್ನು ಏರಿ ತಾನೇ ಯುದ್ಧಕ್ಕೆ ಸನ್ನದ್ಧನಾದನು. ಅದನ್ನು ನೋಡಿ ದ್ವಾರಕಾಪಟ್ಟಣದಲ್ಲಿದ್ದ ಸಕಲ ಸೈನ್ಯವೂ ದಿಕ್ಕುದಿಕ್ಕುಗಳಿಗೆ ಓಡಿಹೋಗಲು, ಪ್ರದ್ಯುಮ್ನನು ಯುದ್ಧಸನ್ನದ್ಧನಾಗಿ, ಆ ಸೈನ್ಯವನ್ನು ಸಮಾಧಾನಪಡಿಸಿ, ಸೈನಿಕರನ್ನು ಕುರಿತು ‘ ಎಲೈ ಸೈನಿಕರಾ, ಅನೇಕ ರಾಜರಿಂದೊಡಗೂಡಿರುವ ಸಾಲ್ವನನ್ನು, ನನ್ನ ಸಾಮರ್ಥ್ಯದಿಂದ ಯುದ್ಧದಲ್ಲಿ ಓಡಿಸಿ ಬಿಡುವೆನು. ನೀವೆಲ್ಲರೂ ಸುಮ್ಮನೇ ನಿಂತು ಇದನ್ನು ನೋಡುತ್ತಿರಿ. ಆಕರ್ಣಾಂತವಾಗಿ ಧನುಸ್ಸನ್ನು ಸೆಳೆದು ಬಿಡತಕ್ಕವುಗಳಾಗಿಯೂ, ಉಕ್ಕಿನ ಅಲಗುಗಳುಳ್ಳವುಗಳಾಗಿಯೂ, ಸರ್ಪಗಳಂತೆ ವೇಗವುಳ್ಳವುಗಳಾಗಿಯೂ ಇರುವ ಬಾಣಗಳಿಂದ ಸಾಲ್ವನ ಸೈನ್ಯವನ್ನೆಲ್ಲಾ ನಾಶಮಾಡಿಬಿಡುವೆನು. ಎಲೈ ಯಾದವರಾ, ನೀವೆಲ್ಲರೂ ಸಮಾಧಾನಮಾಡಿಕೊಳ್ಳಿರಿ ; ಭಯಪಡಬೇಡಿರಿ. ನನ್ನ ಕೈಗೆ ಸಿಕ್ಕಿರುವ ದುಷ್ಟಾತ್ಮನಾದ ಸಾಲ್ವನು ಈಗಲೇ ನಷ್ಟವಾಗಿ ಹೋಗುವನು ’ ಎಂದು ಸಂತೋಷದಿಂದ ನುಡಿಯುತ್ತಿರಲು, ಆ ಯಾದವ ಸೈನ್ಯವು ಸಂತೋಷದಿಂದ ನಿಂತು ಶತ್ರುಗಳೊಡನೆ ಯುದ್ಧವನ್ನು ಮಾಡಿತು. ”

## ೧೭ನೇ ಅಧ್ಯಾಯ.–ಪ್ರದ್ಯುಮ್ನ ಸಾಲ್ವರ ಮೂರ್ಛೆ.

ಅನಂತರದಲ್ಲಿ ವೈಶಂಪಾಯನಮುನೀಂದ್ರನು ಜನಮೇಜಯರಾಯನನ್ನು ಕುರಿತು–ಕೇಳು ಜನಮೇಜಯ ರಾಯನೆ, ಆ ಬಳಿಕ ಶ್ರೀಕೃಷ್ಣನು ಪುನಃ ಧರ್ಮರಾಯನನ್ನು ಕುರಿತು "ಎಲೈ ಯುಧಿಷ್ಠಿರನೆ, ಪ್ರದ್ಯುಮ್ನನು ಯಾದವರಿಗೆ ಹೇಳಿ, ಹಲ್ಲಣ ಮೊದಲಾದದ್ದನ್ನು ಧರಿಸಿ, ಆಕಾಶದಲ್ಲಿ ಹಾರಿಹೋಗುವಷ್ಟು ವೇಗವುಳ್ಳ ಕುದುರೆಗಳನ್ನು ಕಟ್ಟಿದ ಸುವರ್ಣರಥವನ್ನೇರಿ, ಬಾಯತೆರೆದಿರುವ ಯಮನಂತೆ ಕಾಣಿಸುವ ಮೀನಧ್ವಜವನ್ನು ಎತ್ತಿಕಟ್ಟಿ, ಬತ್ತಳಿಕೆಗಳನ್ನೂ ಖಡ್ಗವನ್ನೂ ಧರಿಸಿ, ಉಡುವಿನ ಚರ್ಮದಿಂದ ಮಾಡಿದ ಚೀಲವನ್ನು ಬೆರಳುಗಳಲ್ಲಿ ತೊಟ್ಟು, ಧನುಷ್ಟಂಕಾರವನ್ನು ಮಾಡಿ, ಶತ್ರುಗಳನ್ನು ಧಿಕ್ಕರಿಸುತ್ತ, ಮಹತ್ತಾದ ಸೈನ್ಯದೊಡನೆ ಹೊರಟು, ಮಿಂಚಿನಂತೆ ಚಪಲವಾದ ಧನುಸ್ಸನ್ನು ಎರಡು ಕೈಗಳಿಂದಲೂ ಪರ್ಯಾಯವಾಗಿ ತಿರುಗಿಸುತ್ತ, ಸೌಭಪುರದಲ್ಲಿರತಕ್ಕ ದಾನವರನ್ನೆಲ್ಲಾ ಮೋಹಪಡಿಸಿದನು. ಆತನು ಯುದ್ಧದಲ್ಲಿ ಧನುಸ್ಸಿನ ಹೆದೆಯನ್ನು ಎಳೆಯುವದು, ಧನುಸ್ಸಿನಲ್ಲಿ ಬಾಣಸಂಧಾನ ಮಾಡುವದು, ಬಾಣಗಳಿಂದ ಶತ್ರುಗಳನ್ನು ಸಂಹರಿಸುವದು, ಇವುಗಳ ಅವಕಾಶವು ಯಾರಿಗೂ ತಿಳಿಯುತ್ತಿರಲಿಲ್ಲ. ಆ ಯುದ್ಧದಲ್ಲಿ ಪ್ರದ್ಯುಮ್ನನ ಮುಖದಲ್ಲಿ ವಿಕಾರವೂ ಅಂಗಗಳಲ್ಲಿ ಕಂಪವೂ ಉಂಟಾಗಲಿಲ್ಲ. ಆಶ್ಚರ್ಯಕರವಾದ ಅತಿಶಯಪರಾಕ್ರಮವುಳ್ಳ ಆತನ ಅಧಿಕವಾದ ಸಿಂಹನಾದವೇ ಎಲ್ಲರಿಗೂ ಕೇಳಿಸುತ್ತಿತ್ತು. ಸುವರ್ಣದಂಡದ ಮೇಲೆ ಕುಳಿತು ಬಾಯಿತೆರೆದುಕೊಂಡಿರುವದಾಗಿಯೂ ಮೀನುಗಳಲ್ಲಿ ಶ್ರೇಷ್ಠವಾಗಿಯೂ ಇರುವ ಆತನ ಧ್ವಜರೂಪವಾದ ಮೀನು, ಸ್ವಾಲ್ವಸೇನಾಮುಖದಲ್ಲಿ ಶತ್ರುಗಳನ್ನು ಭಯಪಡಿಸುತ್ತ ಆತನ ಶ್ರೇಷ್ಠವಾದ ರಥದ ಮೇಲೆ ಪ್ರಕಾಶಿಸಿತು. ಆಗ ಶತ್ರುನಾಶಕನಾದ ಪ್ರದ್ಯುಮ್ನನು ಜಾಗ್ರತೆಯಾಗಿ ಹೊರಟು, ಸಾಲ್ವನೊಡನೆ ಯುದ್ಧಮಾಡಬೇಕೆಂಬ ಕುತೂಹಲದಿಂದ ಆತನ ಎದುರಿಗೆ ಬಂದನು. ಅದನ್ನು ನೋಡಿ ಸಹಿಸದೆ, ಸಾಲ್ವನು ರೋಷಾವೇಶವುಳ್ಳವನಾಗಿ ಆ ಸೌಭಪುರದಿಂದ ಕೆಳಕ್ಕೆ ಇಳಿದು, ಪ್ರದ್ಯುಮ್ನನೊಡನೆ ಯುದ್ಧಕ್ಕೆ ಉಪಕ್ರಮಿಸಿದನು. ಬಲಿಚಕ್ರವರ್ತಿಗೂ ಇಂದ್ರನಿಗೂ ನಡೆದ ಯುದ್ಧದಂತೆ ಅವರಿಬ್ಬರಿಗೂ ನಡೆದ ಯುದ್ಧವನ್ನು ಎಲ್ಲರೂ ನೋಡುತ್ತಿದ್ದರು. ಆಗ ಸಾಲ್ವನು ಮಾಯಾಕಲ್ಪಿತವಾಗಿಯೂ ಸುವರ್ಣಮಯವಾದ ಅಲಂಕಾರಗಳಿಂದ ಶೋಭಿಸುವದಾಗಿಯೂ ಧ್ವಜಪತಾಕೆಗಳಿಂದಲೂ ಘಟ್ಟಿಯಾದ ದೂರಿಯಿಂದಲೂ ಬತ್ತಳಿಕೆಗಳಿಂದಲೂ ಕೂಡಿರುವದಾಗಿಯೂ ಇರುವ ರಥವನ್ನೇರಿ, ಪ್ರದ್ಯುಮ್ನನ ಮೇಲೆ ಬಾಣಗಳನ್ನು ಪ್ರಯೋಗಿಸಿದನು. ಬಳಿಕ ಪ್ರದ್ಯುಮ್ನನು ತನ್ನ ಭುಜವೇಗದಿಂದ ಯುದ್ಧದಲ್ಲಿ ಸಾಲ್ವನು ಮೋಹಿಸುವಂತೆ ಆತನ ಮೇಲೆ ಬಾಣವೃಷ್ಟಿಯನ್ನು ಕರೆದನು. ಸಾಲ್ವನು ಆ ಬಾಣಗಳಿಂದ ಪೆಟ್ಟುಬಿದ್ದು ಸಹಿಸದೆ, ನನ್ನ ಮಗನಮೇಲೆ ಉರಿಯುತ್ತಿರುವ ಬೆಂಕಿಗೆ ಸಮಾನವಾದ ಬಾಣಗಳನ್ನು ಪ್ರಯೋಗಿಸಿದನು. ಮಹಾಬಲಶಾಲಿಯಾದ ಪ್ರದ್ಯುಮ್ನನು ತನ್ನ ಮೇಲೆ ಬೀಳತಕ್ಕ ಆ ಬಾಣಗಳನ್ನೆಲ್ಲಾ ಛೇದಿಸಿದನು. ಆಗ ಸಾಲ್ವನು ತೀಕ್ಷ್ಣವಾದ ಅನೇಕ ಬಾಣಗಳನ್ನು ನನ್ನ ಮಗನಮೇಲೆ ಪ್ರಯೋಗಿಸಲು, ಆ ಬಾಣಗಳಿಂದ ಪೀಡಿತನಾದ ಪ್ರದ್ಯುಮ್ನನು ಮರ್ಮಭೇದಕವಾದ ಬಾಣವನ್ನು ಸಾಲ್ವನ ಮೇಲೆ ಜಾಗ್ರತೆಯಾಗಿ ಪ್ರಯೋಗಿಸಿದನು. ಆ ಬಾಣವು ಸಾಲ್ವನ ಹೃದಯವನ್ನು ಭೇದಿಸಿ, ಅದರಿಂದ ಅವನು ಮೂರ್ಛಿತನಾಗಿ ಬಿದ್ದನು. ಆಗ ಆತನ ಕಡೆಯವರಾಗಿದ್ದ ದಾನವರು ಭೂಮಿಯನ್ನು ಭೇದಿಸಿಕೊಂಡು ಓಡಿಹೋದರು; ಉಳಿದ ಸೈನ್ಯವೆಲ್ಲಾ ಹಾಹಾಕಾರಪಡುತ್ತಿತ್ತು. ಬಳಿಕ ಸಾಲ್ವನು ಮೂರ್ಛೆಯನ್ನು ತಿಳಿದು ಎದ್ದು, ಪ್ರದ್ಯುಮ್ನನ ಮೇಲೆ ಅನೇಕಬಾಣಗಳನ್ನು ಪ್ರಯೋಗಿಸಿದನು. ಆ ಬಾಣಗಳಿಂದ ಪೆಟ್ಟುಬಿದ್ದು, ಕಂಠಮೂಲದಲ್ಲಿ ಅಧಿಕವಾಗಿ ಪೀಡಿತನಾಗಿ, ಪ್ರದ್ಯುಮ್ನನು ಸುಮ್ಮನೆ ರಥದಮೇಲೆ ನಿಂತಿರಲು, ಸಾಲ್ವನು ಆತನನ್ನು ಬಾಣದಿಂದ ಹೊಡೆದು, ತನ್ನ ಧ್ವನಿಯಿಂದ ಭೂಮಿಯನ್ನೆಲ್ಲಾ ತುಂಬಿಬಿಡುವಂತೆ ಸಿಂಹನಾದವನ್ನು ಮಾಡಿ, ಘೋರವಾದ ಅನೇಕ ಬಾಣಗಳನ್ನು ಆತನ ಮೇಲೆ ಪ್ರಯೋಗಿಸಿದನು. ಆ ಅನೇಕಬಾಣಗಳಿಂದ ಪೀಡಿತನಾದ ಪ್ರದ್ಯುಮ್ನನು ಯುದ್ಧರಂಗದಲ್ಲಿ ನಿಶ್ಚೇಷ್ಟಿತನಾಗಿ ಅಧಿಕವಾದ ಮೂರ್ಛೆಯನ್ನು ಹೊಂದಿದನು."

## ೧೮ನೇ ಅಧ್ಯಾಯ.—ದಾರುಕಿ ಪ್ರದ್ಯುಮ್ನರ ಸಂವಾದ.

ಅನಂತರದಲ್ಲಿ ವೈಶಂಪಾಯನ ಮುನೀಂದ್ರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯ ರಾಯನೆ, ಶ್ರೀಕೃಷ್ಣನು ಧರ್ಮರಾಯನನ್ನು ಕುರಿತು "ಎಲೈ ಧರ್ಮರಾಯನೆ, ಆ ಯುದ್ಧದಲ್ಲಿ ಪರಾಕ್ರಮ ಶಾಲಿಯಾದ ಪ್ರದ್ಯುಮ್ನನು ಮೂರ್ಛಿತನಾಗಲು, ಸೈನಿಕರಾದ ಯಾದವರೆಲ್ಲರೂ ಭಗ್ನಮನೋರಥರಾಗಿ ವ್ಯಥೆಪಡುತ್ತ, ಹಾಹಾಕಾರವನ್ನು ಮಾಡಿದರು; ಶತ್ರುಗಳಿಗೆಲ್ಲಾ ಹೆಚ್ಚಾದ ಸಂತೋಷವುಂಟಾಯಿತು. ಆಗ ಸಾರಥಿಯಾದ ದಾರುಕಿಯು ಬಹುಶಿಕ್ಷಿತನಾದ್ದರಿಂದ, ಶೀಘ್ರನಾಗಿ ಕುದುರೆಗಳನ್ನು ಕಟ್ಟಿರುವ ಪ್ರದ್ಯುಮ್ನನ ರಥವನ್ನು ಯುದ್ಧ ರಂಗದಿಂದ ಆಚೆಗೆ ಜಾಗ್ರತೆಯಾಗಿ ತೆಗೆದುಕೊಂಡು ಹೋದನು. ಆ ರಥವು ಸ್ವಲ್ಪದೂರ ಹೋಗುವಷ್ಟರೊಳಗೆ ಮಹಾರಥಿಕನಾದ ಪ್ರದ್ಯುಮ್ನನು ಮೂರ್ಛೆಯನ್ನು ತಿಳಿದು, ಕೈಯ್ಯಲ್ಲಿ ಧನುಸ್ಸನ್ನು ಹಿಡಿದು 'ಎಲೈ ಸಾರಥಿಯೆ, ಎಂಥಾ ಕೆಲಸವನ್ನು ಮಾಡಿದೆ? ಯಾತಕ್ಕೋಸ್ಕರ ಹಿಂದಕ್ಕೆ ರಥವನ್ನು ತಿರುಗಿಸಿದೆ? ವೃಷ್ಣಿವಂಶದಲ್ಲಿ ಹುಟ್ಟಿದ ಶೂರರಿಗೆ ಇದು ಧರ್ಮವಲ್ಲ. ಯುದ್ಧರಂಗದಲ್ಲಿ ಸಾಲ್ವನನ್ನು ನೋಡಿ ನಿನಗೆ ಬುದ್ಧಿವಿಕಾರವೂ, ಯುದ್ಧವನ್ನು ನೋಡಿ ಭಯವೂ ಉಂಟಾಗಲಿಲ್ಲವಷ್ಟೆ? ಯಾತಕ್ಕೆ ಹೀಗೆ ಮಾಡಿದೆ? ಹೇಳು' ಎನಲು, ದಾರುಕಿಯು 'ಎಲೈ ಪ್ರದ್ಯುಮ್ನನೆ, ನನಗೆ ಬುದ್ಧಿವಿಕಾರವೂ ಭಯವೂ ಏನೂ ಉಂಟಾಗಲಿಲ್ಲ; ಸಾಲ್ವನನ್ನು ಜಯಿಸುವದು ನಿನಗೆ ಕಷ್ಟ ವಾಗಿತ್ತೆಂದು ತಿಳಿದು ಮೆಲ್ಲಗೆ ರಥವನ್ನು ಹಿಂತಿರುಗಿಸಿದೆನು. ಪಾಪಿಯಾದ ಆ ಸಾಲ್ವನು ಬಲಾಢ್ಯನು. ಯುದ್ಧ ದಲ್ಲಿ ರಥಿಕನು ಮೂರ್ಛಿತನಾದರೆ, ಆತನನ್ನು ಸಾರಥಿಯಾದವನು ರಕ್ಷಿಸಬೇಕು. ಎಲೈ ಆಯುಷ್ಮಂತನಾದ ಪ್ರದ್ಯುಮ್ನನೆ, ಯುದ್ಧದಲ್ಲಿ ಯಾವಾಗಲೂ ನಿನ್ನನ್ನು ನಾನು ರಕ್ಷಿಸಬೇಕು, ನನ್ನನ್ನು ನೀನೂ ರಕ್ಷಿಸಬೇಕು' ಎಂದು ತಿಳಿದು ರಥವನ್ನು ಹಿಂತಿರುಗಿಸಿದೆನು. 'ಎಲೈ ಮಹಾಬಾಹುವೆ, ಆ ಯುದ್ಧದಲ್ಲಿ ನೀನೊಬ್ಬನು ಅನೇಕದಾನ ವರೊಡನೆ ಯುದ್ಧಮಾಡತಕ್ಕದ್ದು ಸರಿಯಲ್ಲವೆಂದು ತಿಳಿದು ನಾನು ರಥವನ್ನು ಹಿಂತಿರುಗಿಸಿದೆನು' ಎಂದು ನುಡಿದನು. ಆ ಮಾತನ್ನು ಕೇಳಿ, ಪ್ರದ್ಯುಮ್ನನು 'ಎಲೈ ಸಾರಥಿಯೆ, ರಥವನ್ನು ಯುದ್ಧರಂಗಕ್ಕೆ ತಿರುಗಿಸು. ಇನ್ನು ಮೇಲೆ ನೀನು ಎಂಥಾ ಕಷ್ಟಸಂಭವಿಸಿದರೂ ಇಂಥಾ ಕಾರ್ಯವನ್ನು ಮಾಡಬೇಡ. ನಾನು ಬದುಕಿರುವ ವರೆಗೂ ಎಂದಿಗೂ ಯುದ್ಧದಿಂದ ಹಿಂತಿರುಗತಕ್ಕವನಲ್ಲ. ಯಾವನು ಯುದ್ಧವನ್ನು ಬಿಟ್ಟು ಹೋಗುವನೋ, ಯಾವನು ನಿನಗೆ ಶರಣಾಗತನಾಗಿರುವೆನೆಂದು ಕೆಳಗೆ ಬಿದ್ದವನನ್ನೂ ಸ್ತ್ರೀಯನ್ನೂ ಬಾಲಕನನ್ನೂ ಮುದುಕನನ್ನೂ ರಥಹೀನನಾದ ವನನ್ನೂ ಮೂರ್ಛಿತನಾದವನನ್ನೂ ಶಸ್ತ್ರಾಸ್ತ್ರಗಳನ್ನೆಲ್ಲಾ ಕಳೆದುಕೊಂಡವನನ್ನೂ ಸಂಹರಿಸುವನೋ, ಅಂಥ ವನೂ ವೃಷ್ಣಿಕುಲದಲ್ಲಿ ಹುಟ್ಟಿರುವನೇ? ಎಲೈ ಸಾರಥಿಯೆ, ನೀನು ಸಾರಥಿಕುಲದಲ್ಲಿ ಹುಟ್ಟಿ, ಸಾರಥ್ಯದಲ್ಲಿ ಕುಶಲ ನಾಗಿ, ಯುದ್ಧದಲ್ಲಿಯೂ ಯಾದವರ ಧರ್ಮವನ್ನು ತಿಳಿದವನಾಗಿರುವೆ. ಇನ್ನುಮೇಲೆ ನೀನು ಪುನಃ ಈ ಪ್ರಕಾರ ವಾಗಿ ರಥವನ್ನು ಹಿಂತಿರುಗಿಸಬೇಡ. ನಾನು ಯುದ್ಧದಿಂದ ಹಿಂತಿರುಗಿದ್ದನ್ನೂ, ಬೆನ್ನುಮೇಲೆ ಪೆಟ್ಟುತಿಂದದ್ದನ್ನೂ, ಮೂರ್ಛಿತನಾದದ್ದನ್ನೂ, ಯುದ್ಧರಂಗದಿಂದ ಓಡಿಹೋದದ್ದನ್ನೂ ಕೇಳಿ, ಅಜೇಯನಾದ ಶ್ರೀಕೃಷ್ಣನೂ, ಪರಾಕ್ರ ಮಶಾಲಿಯಾದ ಬಲರಾಮನೂ, ಮಹತ್ತಾದ ಧನುಸ್ಸನ್ನು ಧರಿಸಿರುವ ಪುರುಷಶ್ರೇಷ್ಠನಾದ ಸಾತ್ಯಕಿಯೂ, ಯುದ್ಧ ದಲ್ಲಿ ಜಯಶೀಲನಾದ ಸಾಂಬನೂ, ಚಾರುದೇಷ್ಣನೂ, ಗದಸಾರಣರೂ, ಮಹಾಬಲಶಾಲಿಯಾದ ಅಕ್ರೂರನೂ ಸಹ ಏನಂದಾರು? ಶೂರನೂ ಎಲ್ಲರಿಂದಲೂ ಮಾನಿತನೂ ಶಾಂತನೂ ಯಾವಾಗಲೂ ಪೌರುಷವುಳ್ಳವನೂ ಎನ್ನಿಸಿಕೊಂ ಡಿರುವ ನನ್ನನ್ನು ಯಾದವಸ್ತ್ರೀಯರು ಏನಂದಾರು? ಈ ಪ್ರದ್ಯುಮ್ನನು ಭಯಪಟ್ಟು ಮಹತ್ತಾದ ಯುದ್ಧ ವನ್ನು ಬಿಟ್ಟು ಬಂದಿರುವನು. ಇವನನ್ನು ನಿಂದಿಸಬೇಕು ಎಂದು ಎಲ್ಲರೂ ಹೇಳುವರೇ ಹೊರತು ಇದು ಸರಿ ಯಾದದ್ದೆಂದು ಯಾರೂ ಹೇಳರು. ಹೀಗೆ ಧಿಕ್ಕರಿಸಿ ಎಲ್ಲರೂ ಪರಿಹಾಸಮಾಡುವದು, ನನಗೂ ನನ್ನಂಥವ ನಿಗೂ ಮರಣಕ್ಕಿಂತಲೂ ಹೆಚ್ಚಾದದ್ದು. ಎಲೈ ಸಾರಥಿಯೆ, ಪುನಃ ನೀನು ಹೀಗೆ ರಥವನ್ನು ಯುದ್ಧರಂಗದಿಂದ ಹಿಂತಿರುಗಿಸಬೇಡ. ಮಧುಸೂದನನಾದ ಶ್ರೀಕೃಷ್ಣನು ಎಲ್ಲಾ ಭಾರವನ್ನೂ ನನ್ನಲ್ಲಿ ಇಟ್ಟು, ಧರ್ಮರಾಯನ ರಾಜ ಸೂಯಯಾಗಕ್ಕೆ ತೆರಳಿದನು. ಆದ್ದರಿಂದ ಈಗ ನಾನು ಈ ಅಪಮಾನವನ್ನು ಹ್ಯಾಗೆ ಸಹಿಸಬಹುದು? ಸಾಲ್ವ ನೊಡನೆ ನಾನು ಯುದ್ಧಮಾಡುವದಕ್ಕೆ ಹೊರಡುವ ಕಾಲದಲ್ಲೇ ಕೃತವರ್ಮನೂ ಹೊರಟನು. ನಾನೇ ಸಾಲ್ವನನ್ನು

ಸಿವಾರಿಸುವೆನಾದ್ದರಿಂದ ನೀನು ಬರಬೇಡ, ಇಲ್ಲೇ ಇರು ಎಂದು ಹೇಳಿದೆನು. ಆತನೂ ನನ್ನಲ್ಲಿ ಗೌರವವನ್ನಿಟ್ಟು ಹಿಂತಿರುಗಿದನು. ಈಗ ನಾನು ಯುದ್ಧರಂಗವನ್ನು ಬಿಟ್ಟು ಮಹಾರಥಿಕನಾದ ಆತನ ಬಳಿಗೆ ಹೋಗಿ ಏನು ಹೇಳಲಿ? ಮತ್ತು ಶೂರನಾದ ಸಾಂಬನಿಗೂ ಗದಾಚಕ್ರಧಾರಿಯಾದ ಪುಂಡರೀಕಾಕ್ಷನಾದ ಶ್ರೀಕೃಷ್ಣನಿಗೂ ಮಹಾಬಲಶಾಲಿಯಾದ ಸಾತ್ಯಕಿಗೂ ಬಲರಾಮನಿಗೂ ಏನು ಹೇಳಲಿ? ಯಾವಾಗಲೂ ನನ್ನೊಡನೆ ಸ್ಪರ್ಧೆಯನ್ನು ಮಾಡುವ ಮಿಕ್ಕಾದ ಯಾದವರ ಸಂಗಡಲೂ ಏನು ಹೇಳಲಿ? ಎಲೈ ಸಾರಥಿಯೆ, ಈ ಯುದ್ಧರಂಗವನ್ನು ಬಿಟ್ಟು, ಬಾಣಗಳಿಂದ ಪೆಟ್ಟುತಿಂದು ಮೂರ್ಛಿತನಾಗಿ, ನಿನ್ನಿಂದ ಹಿಂದಕ್ಕೆ ತರಲ್ಪಟ್ಟಮೇಲೆ ನಾನು ಹ್ಯಾಗೆ ಪ್ರಾಣಸಹಿತನಾಗಿರಲಿ? ಬೇಗ ರಥವನ್ನು ಯುದ್ಧರಂಗಕ್ಕೆ ತಿರುಗಿಸು. ಇನ್ನುಮೇಲೆ ಎಂಥಾ ಕಷ್ಟತಾನೇ ಪ್ರಾಪ್ತವಾದರೂ ಹೀಗೆ ಮಾಡಬೇಡ. ಎಲೈ ಸಾರಥಿಯೆ, ನಾನು ಕಷ್ಟದಿಂದ ಬದುಕಿರುವದನ್ನು ದೊಡ್ಡದೆಂದು ತಿಳಿದಿಲ್ಲ. ಕೈಲಾಗದವನಂತೆ ಯುದ್ಧದಲ್ಲಿ ಭಯಪಟ್ಟು, ಶತ್ರುಗಳ ಬಾಣಗಳಿಂದ ಪೆಟ್ಟುತಿಂದು, ನಾನು ಯಾವಾಗಲಾದರೂ ಹಿಂತಿರುಗಿ ಓಡಿಹೋದದ್ದನ್ನು ನೀನು ಬಲ್ಲೆಯಾ? ಈಗ ನೀನು ಯುದ್ಧರಂಗವನ್ನು ಬಿಟ್ಟು ಹಿಂತಿರುಗಿದ್ದು ಯುಕ್ತವಾದದ್ದಲ್ಲ. ನನಗೆ ಯುದ್ಧದಲ್ಲಿ ತುಂಬಾ ಕುತೂಹಲವಿರುವದು. ಯುದ್ಧವು ಎಲ್ಲಿ ನಡೆಯುವದೋ ಅಲ್ಲಿಗೆ, ನೀನು ರಥವನ್ನು ಶೀಘ್ರವಾಗಿ ನಡೆಯಿಸು' ಎಂದು ಪ್ರದ್ಯುಮ್ನನು ದಾರುಕಿಗೆ ಹೇಳಿದನು."

## ೧೯ನೇ ಅಧ್ಯಾಯ.—ಪ್ರದ್ಯುಮ್ನನ ಬಾಣಪ್ರಹಾರದಿಂದ ಸಾಲ್ವನು ಓಡಿಹೋಗುವಿಕೆ.

ಅನಂತರದಲ್ಲಿ ವೈಶಂಪಾಯನ ಮುನೀಂದ್ರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಆ ಬಳಿಕ ಶ್ರೀಕೃಷ್ಣನು ಪುನಃ ಧರ್ಮರಾಯನನ್ನು ಕುರಿತು "ಎಲೈ ಧರ್ಮರಾಯನೆ, ಬಳಿಕ ದಾರುಕಿಯು ಮಹಾಬಲಶಾಲಿಯಾದ ಪ್ರದ್ಯುಮ್ನನನ್ನು ಕುರಿತು 'ಎಲೈ ರುಕ್ಮಿಣೀನಂದನನೆ, ಯುದ್ಧದಲ್ಲಿ ಕುದುರೆಯನ್ನು ನಡಿಸತಕ್ಕ ನನಗೆ ಯಾವಭಯವೂ ಉಂಟಾಗಲಿಲ್ಲ. ಯಾದವರಿಗೆ ಯುದ್ಧದಲ್ಲಿರತಕ್ಕ ಶಕ್ತಿಯನ್ನೂ ನಾನು ಬಲ್ಲೆ. ಎಲೈ ಆಯುಷ್ಮಂತನೆ, ಸಾರಥ್ಯವನ್ನು ಮಾಡತಕ್ಕ ನಾನು ಯುದ್ಧದಲ್ಲಿ ಸಾರಥಿಯಾದವನಿಗೆ ಎಲ್ಲಾ ವಿಷಯದಲ್ಲಿಯೂ ರಥಿಕನಾದವನನ್ನು ರಕ್ಷಿಸುವದಕ್ಕಿಂತಲೂ ಬೇರೆ ಕರ್ತವ್ಯ ಯಾವದೂ ಇಲ್ಲವೆಂಬ ಹಿರಿಯರ ಉಪದೇಶವನ್ನು ಸ್ಮರಿಸಿಕೊಂಡು, ಸಾಲ್ವನ ಬಾಣದಿಂದ ಪೆಟ್ಟುಬಿದ್ದು ನೀನು ವ್ಯಥೆಯಿಂದ ಮೂರ್ಛಿತನಾದ್ದರಿಂದ ರಥವನ್ನು ಹಿಂದಕ್ಕೆ ತಿರುಗಿಸಿದೆನು. ಆ ನೀನು ದೈವಯೋಗದಿಂದ ಹಾಗೇ ಮೂರ್ಛೆಯನ್ನು ತಿಳಿದೆ. ದಾರುಕನಿಗೆ ಮಗನಾಗಿ ಅವನಂತೆ ಸಾರಥ್ಯದಲ್ಲಿ ಶಿಕ್ಷಿತನಾಗಿರುವ ನಾನು, ಈಗ ಕುದುರೆಗಳನ್ನು ನಡಿಸುವೆನು; ಆ ಚಾತುರ್ಯವನ್ನು ನೋಡು. ಪ್ರಸಿದ್ಧವಾದ ಸಾಲ್ವನ ಸೈನ್ಯವನ್ನು ಭಯವಿಲ್ಲದೆ ನಾನು ಪ್ರವೇಶಿಸುವೆನು' ಎಂದು ಮಧುರವಾಗಿಯೂ ಮೃದುವಾಗಿಯೂ ನಿಜವಾಗಿಯೂ ಇರುವ ಮಾತನ್ನು ನುಡಿದು, ಒಡನೆ ಕುದುರೆಗಳನ್ನು ಹಗ್ಗಗಳಿಂದ ಹಿಡಿದು ಚಬುಕುಮಾಡಿ, ಮಂಡಲಾಕಾರವಾಗಿಯೂ, ಸಮನಾಗಿಯೂ, ವಕ್ರವಾಗಿಯೂ, ಸವ್ಯವಾಗಿಯೂ, ಅಪಸವ್ಯವಾಗಿಯೂ, ಇನ್ನೂ ಅನೇಕಗತಿಭೇದದಿಂದ ವಿಚಿತ್ರವಿಚಿತ್ರವಾಗಿ ರಥವನ್ನು ಶೀಘ್ರವಾಗಿ ನಡಿಸಿದನು. ಹಗ್ಗಗಳಿಂದ ಹಿಡಿಯಲ್ಪಟ್ಟ ಚಾವಟಿಯಿಂದ ಪೆಟ್ಟುಬಿದ್ದ ರಥಾಶ್ವಗಳು, ಆಕಾಶಮಾರ್ಗದಲ್ಲಿ ಹಾರಿ ಹೋಗುತ್ತಿವೆಯೋ ಎಂಬಂತೆ ವೇಗದಿಂದ ಹೊರಟವು. ಆಗ ಆ ಕುದುರೆಗಳು ದಾರುಕಿಯ ಹಸ್ತಲಾಘವವನ್ನು ತಿಳಿದು ಕಿಚ್ಚಿಗೆ ಸಿಕ್ಕಿದವರಂತೆ ನೆಲವನ್ನು ಕಾಲಿನಿಂದ ಸೋಕದೆ ಇರುವವೋ ಎಂಬಹಾಗೆ ಕಾಣಿಸಿಕೊಂಡವು. ಹೀಗೆ ಸಾರಥಿಯಾದ ದಾರುಕಿಯು ಸ್ವಲ್ಪ ಪ್ರಯತ್ನದಿಂದಲೇ ಸಾಲ್ವನ ಸೈನ್ಯವು ಎಡದಕಡೆಗಾಗುವಂತೆ ರಥವನ್ನು ನಡಿಸಿದನು. ಅದನ್ನು ನೋಡತಕ್ಕವರಿಗೆ ಆಶ್ಚರ್ಯವುಂಟಾಯಿತು. ಆ ಸಮಯದಲ್ಲಿ ಸಾಲ್ವನು ಪ್ರದ್ಯುಮ್ನನಿಗೆ ತಾನು ಎಡದಕಡೆಯಾದದ್ದನ್ನು ಸಹಿಸದೆ, ಆತನ ಸಾರಥಿಯನ್ನು ಮೂರು ಬಾಣಗಳಿಂದ ಹೊಡೆದನು. ಆ ಬಾಣಗಳನ್ನು ಲಕ್ಷ್ಯಮಾಡದೆ, ದಾರುಕಿಯು ಪುನಃ ಆ ಸಾಲ್ವನನ್ನು ಎಡದಕಡೆ ಮಾಡಿಕೊಂಡೇ ರಥವನ್ನು ನಡಿಸಿದನು. ಬಳಿಕ ಸಾಲ್ವನು ನಾನಾವಿಧವಾದ ಬಾಣಗಳನ್ನು ನನ್ನ ಮಗನಾದ ಪ್ರದ್ಯುಮ್ನನಮೇಲೆ ಪ್ರಯೋಗಿಸಲು, ಆ ಪ್ರದ್ಯುಮ್ನನು ಆ ಬಾಣಗಳು

ತನ್ನಮೇಲೆ ಬೀಳುವಷ್ಟರೊಳಗೇ ಅವುಗಳನ್ನು ಮಧ್ಯದಲ್ಲಿ ಕತ್ತರಿಸಿ, ತನ್ನ ಹಸ್ತಲಾಘವವನ್ನು ತೋರಿಸಿ ನಸುನಕ್ಕನು. ಅವನ್ನು ನೋಡಿ, ಸಾಲ್ವನು ರಾಕ್ಷಸಮಾಯೆಯನ್ನು ಕಲ್ಪಿಸಿ ಅನೇಕ ಬಾಣಗಳನ್ನು ಪ್ರಯೋಗಿಸಿದನು. ಪ್ರದ್ಯುಮ್ನನು ಆ ಸಾಲ್ವನು ಪ್ರಬಲವಾದ ದಾನವಾಸ್ತ್ರವನ್ನು ಪ್ರಯೋಗಿಸಿದ್ದನ್ನು ತಿಳಿದು, ಬ್ರಹ್ಮಾಸ್ತ್ರದಿಂದ ಅದನ್ನು ಕತ್ತರಿಸಿದನು. ಆ ಬ್ರಹ್ಮಾಸ್ತ್ರದಿಂದ ಹೊರಟ ಬಾಣಗಳು ಆ ದಾನವಾಸ್ತ್ರವನ್ನು ನಾಶಮಾಡಿ, ಸಾಲ್ವನ ಶಿರಸ್ಸಿನಲ್ಲಿಯೂ ವಕ್ಷಸ್ಥಳದಲ್ಲಿಯೂ ಮುಖದಲ್ಲಿಯೂ ನಾಟಿಕೊಂಡು ರಕ್ತಪಾನವನ್ನು ಮಾಡಿದವು. ಅವರಿಂದ ಸಾಲ್ವನು ಮೂರ್ಛಿತನಾಗಿ ಬಿದ್ದನು. ಆಗ ಪ್ರದ್ಯುಮ್ನನು ಸಕಲರಾದ ಯಾದವರಿಂದಲೂ ಹೊಗಳಲ್ಪಟ್ಟು, ಘೋರವಾದ ವಿಷಜ್ವಾಲೆಗೂ ಅಗ್ನಿಜ್ವಾಲೆಗೂ ಸಮಾನವಾದ ಮತ್ತೊಂದು ಬಾಣವನ್ನು ಧನುಸ್ಸಿನಲ್ಲಿ ಸಂಧಾನಮಾಡಿ ಹೆದೆಯನ್ನು ಎಳೆಯಲು, ಅಂತರಿಕ್ಷದಲ್ಲಿ ಹಾಹಾಕಾರವು ಹುಟ್ಟಿತು ; ಇಂದ್ರಾದಿಸಕಲ ದೇವತೆಗಳೂ ನಾರದರನ್ನೂ ಮನೋವೇಗವುಳ್ಳ ವಾಯುವನ್ನೂ ಪ್ರದ್ಯುಮ್ನನ ಬಳಿಗೆ ಕಳುಹಿಸಿಕೊಟ್ಟರು. ಆ ನಾರದವಾಯುಗಳಿಬ್ಬರೂ ಬಂದು, ‘ ಎಲೈ ಪ್ರದ್ಯುಮ್ನನೆ, ಸಾಲ್ವರಾಜನು ನಿನ್ನಿಂದ ಅವಧ್ಯನಾದವನು. ಈ ಬಾಣವನ್ನು ಉಪಸಂಹಾರಮಾಡಿಕೊ. ಈಗ ನೀನು ತೊಟ್ಟಿರುವ ಬಾಣದಿಂದ ಯುದ್ಧದಲ್ಲಿ ಅವಧ್ಯನಾದವನು ಯಾವನೂ ಇಲ್ಲ. ಆದರೆ ದೇವಕೀಪುತ್ರನಾದ ಶ್ರೀಕೃಷ್ಣನು ಸಾಲ್ವನಿಗೆ ಸಂಹಾರಕನಾದವನೆಂದು ಬ್ರಹ್ಮಸಂಕಲ್ಪವಿರುವದರಿಂದ, ಅದು ವ್ಯರ್ಥವಾಗಕೂಡದೆಂದು ಇಂದ್ರಾದಿದೇವತೆಗಳು ನಿನಗೆ ಹೇಳಿಕಳುಹಿಸಿಕೊಟ್ಟಿರುವರು ’ ಎಂದು ನುಡಿಯಲು, ಅದನ್ನು ಕೇಳಿ ಪ್ರದ್ಯುಮ್ನನು ಸಂತುಷ್ಟನಾಗಿ, ಆ ಉತ್ತಮವಾದ ಅಸ್ತ್ರವನ್ನು ಉಪಸಂಹರಿಸಿಕೊಂಡು, ಧನುಸ್ಸಿನಿಂದ ಬಾಣವನ್ನು ತೆಗೆದು ಬತ್ತಳಿಕೆಯಲ್ಲಿ ಹಾಕಿಬಿಟ್ಟನು. ಬಳಿಕ ಕ್ರೂರನಾದ ಸಾಲ್ವನು ಮೂರ್ಛೆಯನ್ನು ತಿಳಿದು, ಪ್ರದ್ಯುಮ್ನನ ಬಾಣದಿಂದ ಪೀಡಿತನಾದ್ದರಿಂದ ಮನಸ್ಸನ್ನು ಚಿಕ್ಕದುಮಾಡಿಕೊಂಡು, ಸಾಭದಮೇಲೆ ಕೂತುಕೊಂಡು, ದ್ವಾರಕಾಪಟ್ಟಣವನ್ನು ಬಿಟ್ಟು ಸೈನ್ಯಸಮೇತನಾಗಿ ಆಕಾಶಮಾರ್ಗದಲ್ಲಿ ಓಡಿಹೋದನು. ”

## ೨೦ನೇ ಅಧ್ಯಾಯ.—ಶ್ರೀಕೃಷ್ಣಸಾಲ್ವರ ಯುದ್ಧ.

ಅನಂತರದಲ್ಲಿ ವೈಶಂಪಾಯನ ಮುನೀಂದ್ರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಶ್ರೀಕೃಷ್ಣನು ಧರ್ಮರಾಯನನ್ನು ಕುರಿತು “ ಎಲೈ ರಾಜೇಂದ್ರನೆ, ಸಾಲ್ವನು ಆನರ್ತನಗರವನ್ನು ಬಿಟ್ಟು ಹೋದ ಬಳಿಕ, ನಾನು ನಿನ್ನ ರಾಜಸೂಯಯಾಗವು ಸಮಾಪ್ತವಾದ ಮೇಲೆ ಇಲ್ಲಿಂದ ಹೊರಟು ಅಲ್ಲಿಗೆ ಹೋಗಿ, ಕಳೆಯೇ ಇಲ್ಲದಿರುವ ದ್ವಾರಕಾ ಪಟ್ಟಣವನ್ನು ನೋಡಿದೆನು. ಆ ಪಟ್ಟಣದಲ್ಲಿ ವೇದಾಧ್ಯಯನವೂ ಯಜ್ಞಾದಿಕರ್ಮಗಳೂ ಎಲ್ಲೂ ತೋರದೆ ಹೋದವು ; ಸ್ತ್ರೀಯರೆಲ್ಲರೂ ಅಲಂಕಾರರಹಿತರಾಗಿದ್ದರು ; ಮತ್ತು ಉದ್ಯಾನಗಳಿದ್ದ ಸ್ಥಳಗಳಲ್ಲಿ ಅವುಗಳ ಗುರುತುಗಳು ಮಾತ್ರ ಕಾಣುತ್ತಿದ್ದವು. ಅದನ್ನೆಲ್ಲಾ ನೋಡಿ ಮನಸ್ಸಿಗೆ ಶಂಕೆಯುಂಟಾಗಿ, ನಾನು ಕೃತವರ್ಮನನ್ನು ಕಂಡು ‘ ಎಲೈ ಕೃತವರ್ಮನೆ; ಇದೇನು ? ಪಟ್ಟಣದಲ್ಲಿರುವ ಯಾದವ ಸ್ತ್ರೀಯರಿಗೂ ಪುರುಷರಿಗೂ ನೆಮ್ಮದಿ ಇಲ್ಲದೇ ಇರುವ ಹಾಗೆ ತೋರುವದು. ಇದನ್ನು ಕೇಳಬಿಚ್ಛೈಯಿಸುವೆನು. ನಿಜವಾಗಿ ಹೇಳು ’ ಎನಲು, ಕೃತವರ್ಮನು ಸಾಲ್ವನು ಪಟ್ಟಣಕ್ಕೆ ಮುತ್ತಿಗೆ ಹಾಕಿದ್ದು ಮೊದಲುಗೊಂಡು ಪ್ರದ್ಯುಮ್ನನಿಂದ ಬಿಡಿಸಿಕೊಂಡು ಹಿಂದಕ್ಕೆ ಹೊರಟು ಹೊದದ್ದರವರೆಗೂ ನಡೆದ ಸಕಲ ವೃತ್ತಾಂತವನ್ನೂ ವಿಸ್ತಾರವಾಗಿ ಹೇಳಿದನು. ಅದನ್ನು ಕೇಳಿ ನಾನು ಸಾಲ್ವನನ್ನು ಸಂಹರಿಸಬೇಕೆಂದು ಮನಸ್ಸಿನಲ್ಲಿ ನಿಶ್ಚಯಿಸಿ, ಪಟ್ಟಣದಲ್ಲಿದ್ದ ಪ್ರಜೆಗಳನ್ನೆಲ್ಲಾ ಸಮಾಧಾನಪಡಿಸಿ, ರಾಜನಾದ ಉಗ್ರಸೇನನನ್ನೂ ವಸುದೇವನನ್ನೂ ಎಲ್ಲಾ ವೃಷ್ಣಿವೀರರನ್ನೂ ಸಂತೋಷಪಡಿಸಿ, ‘ ಎಲೈ ಯಾದವರೆ, ನೀವು ಪಟ್ಟಣದ ರಕ್ಷಣೆಯಲ್ಲಿ ಯಾವಾಗಲೂ ಜಾಗರೂಕರಾಗಿರಬೇಕು ; ನಾನು ಈಗ ಸಾಲ್ವನ ಸಂಹಾರಾರ್ಥವಾಗಿ ಪ್ರಯಾಣಮಾಡುವೆನು. ನಾನು ಆತನನ್ನು ಸಂಹರಿಸದೆ ಮರಳಿ ದ್ವಾರಕಾಪಟ್ಟಣವನ್ನು ಪ್ರವೇಶಿಸತಕ್ಕವನಲ್ಲ. ಸಾಲ್ವನೊಡನೆ ಆ ಸಾಭಪುರವನ್ನು ನಾಶಮಾಡಿಯೇ ನಿಮ್ಮನ್ನು ಪುನಃ ನೋಡತಕ್ಕವನು. ನೀಚ, ಮಂದ್ರ, ತಾರ, ಭಾವದಿಂದ ತ್ರಿಸ್ಸಾಮಸ್ವರಯುಕ್ತವಾಗಿ ಶತ್ರುಗಳಿಗೆ

ಭಯಂಕರವಾದ ಭೇರಿಯನ್ನು ಹೊಡೆಯಿರಿ. ಎಲೈ ವೀರಶಿಖಾಮಣಿಗಳಿರಾ, ನೀವು ಮನಸ್ಸಮಾಧಾನ ಮಾಡಿಕೊಂಡು, ಸಂತೋಷದಿಂದ ಸಾಲ್ವನನ್ನು ಜಯಿಸೆಂದು ನನ್ನನ್ನು ಹರಸಿರಿ' ಎಂದು ಅವರಿಂದ ಆಶೀರ್ವಾದವನ್ನು ಪಡೆದು, ಬ್ರಾಹ್ಮಣರಿಂದ ಸ್ವಸ್ತಿವಾಚನವನ್ನು ಮಾಡಿಸಿಕೊಂಡು, ಅವರಿಗೆ ನಮಸ್ಕಾರಮಾಡಿ, ಶೈಬ್ಯ ಸುಗ್ರೀವ ಮೇಘಪುಷ್ಪ ವಲಾಹಕಗಳೆಂಬ ನಾಲ್ಕು ಕುದುರೆಗಳನ್ನು ಕಟ್ಟಿರುವ ರಥವನ್ನೇರಿ, ಪಾಂಚಜನ್ಯವೆಂಬ ಶಂಖವನ್ನು ದಿಕ್ಕುಗಳಲ್ಲಿ ಪ್ರತಿಧ್ವನಿಯುಂಟಾಗುವಂತೆ ಊದಿ, ಜಯಾಪೇಕ್ಷೆಯುಳ್ಳದ್ದಾಗಿಯೂ ಸಿದ್ಧವಾಗಿಯೂ ಮಹತ್ತಾಗಿಯೂ ಇರುವ ಚತುರಂಗಸೈನ್ಯದೊಡನೆ ಹೊರಟು, ಅನೇಕ ದೇಶ, ದ್ವೀಪ, ಪರ್ವತ, ವನ, ನದಿ, ಸರೋವರಗಳನ್ನು ದಾಟಿ, ಮಾರ್ತಿಕಾವತ ದೇಶವನ್ನು ಪ್ರವೇಶಿಸಿದೆನು. ಅಲ್ಲಿ ಸಾಲ್ವನು ಸೌಭದಲ್ಲಿ ಕುಳಿತುಕೊಂಡು ಸಮುದ್ರತೀರದಲ್ಲಿ ಹೋಗುತ್ತಿದ್ದನೆಂದು ಕೇಳಿ, ನಾನು ಆತನ ಬೆನ್ನಟ್ಟಿ ಹೋದೆನು. ಬಳಿಕ ದುರಾತ್ಮನಾದ ಆ ಸಾಲ್ವನು ಸಮುದ್ರವನ್ನು ಸೇರಿ, ಆ ಸಮುದ್ರಮಧ್ಯದಲ್ಲಿ ಹೊಕ್ಕು, ದೂರದಲ್ಲಿ ಬರುವ ನನ್ನನ್ನು ಪರಿಹಾಸಮಾಡುವವನಂತೆ ಬಾರಿಬಾರಿಗೂ ಯುದ್ಧಕ್ಕೆ ಕರೆದನು. ನಾನು ಶಾರ್ಙ್ಗಧನುಸ್ಸಿನಲ್ಲಿ ಪರರ ಮರ್ಮವನ್ನು ಭೇದಿಸತಕ್ಕ ಅನೇಕ ಬಾಣಗಳನ್ನು ಸಂಧಾನಮಾಡಿ ಅವನ ಸೌಭದಮೇಲೆ ಪ್ರಯೋಗಿಸಿದೆನು. ಆ ಬಾಣಗಳು ಆ ಸೌಭವನ್ನು ಭೇದಿಸದೆ ಇರಲು, ನನಗೆ ತುಂಬಾ ಕೋಪವುಂಟಾಯಿತು. ಆಗ ಪಾಪಾತ್ಮನೂ ದೈತ್ಯಾಧಮನೂ ಆದ ಸಾಲ್ವನು ನನ್ನಮೇಲೂ, ನನ್ನ ಸೈನಿಕರಮೇಲೂ, ಸಾರಥಿಯಮೇಲೂ, ಬಹಳವಾಗಿ ಬಾಣವೃಷ್ಟಿಯನ್ನು ಕರೆದನು. ಅದನ್ನು ಲಕ್ಷ್ಯಮಾಡದೆ ನಾವು ಯುದ್ಧಮಾಡುತ್ತಿರಲು, ಸಾಲ್ವನ ಸೈನಿಕರು ಸಮೀಪಸಮೀಪದಲ್ಲಿ ಗಿಣ್ಣುಗಳುಳ್ಳ ಅನೇಕಸಹಸ್ರಬಾಣಗಳನ್ನು ನನ್ನಮೇಲೆ ಪ್ರಯೋಗಿಸಿ, ಮರ್ಮಭೇದಕವಾದ ಬಾಣಗಳಿಂದ ನನ್ನ ರಥವನ್ನೂ ಸಾರಥಿಯಾದ ದಾರುಕಿಯನ್ನೂ ಕುದುರೆಗಳನ್ನೂ ಮುಚ್ಚಿದರು. ಆಗ ನನ್ನ ರಥ, ಕುದುರೆ, ಸಾರಥಿ, ಸೈನಿಕರೂಸಹ ಆ ಬಾಣಗಳು ಕವಿದು ಕಾಣಿಸದೆ ಹೋದರು. ಆ ಸಮಯದಲ್ಲಿ, ನಾನು ಧನುಸ್ಸಿನಲ್ಲಿ ಅಲೌಕಿಕವಾದ ಅಸ್ತ್ರವಿದ್ಯೆಯಿಂದ ಬಾಣಗಳನ್ನು ಅಭಿಮಂತ್ರಿಸಿ, ಧನುಸ್ಸಿನಲ್ಲಿ ಸಂಧಾನಮಾಡಿ ಪ್ರಯೋಗಿಸಿದೆನು. ಅದರಿಂದ ಆಕಾಶಮಾರ್ಗದಲ್ಲಿ ಸಂಚರಿಸುವ ಸಾಲ್ವನ ಸೌಭವಿಮಾನವು ಒಂದು ಹರದಾರಿ ಸರಿದು, ನಮ್ಮ ಸೈನಿಕರಿಗೆ ಯಾರಿಗೂ ಕಾಣಿಸದೆ ಹೋಯಿತು. ಆಗ ನಮ್ಮ ಸೈನಿಕರೆಲ್ಲರೂ ನಾಟ್ಯರಂಗದಲ್ಲಿ ದೃಷ್ಟಿಯನ್ನಿಟ್ಟು ನೋಡತಕ್ಕ ಜನರಂತೆ ಚಪ್ಪಾಳೆ ಹಾಕುತ್ತ, ಅಧಿಕವಾಗಿ ಸಿಂಹನಾದವನ್ನು ಮಾಡಿ, ನನಗೆ ಸಂತೋಷವುಂಟಾಗುವಂತೆ ಮಾಡಿದರು. ನನ್ನಿಂದ ಪ್ರಯೋಗಿಸಲ್ಪಟ್ಟ ವಿಚಿತ್ರವಾದ ಗರಿಗಳುಳ್ಳ ಬಾಣಗಳು ಸೌಭಪುರದಲ್ಲಿರುವ ದಾನವರ ಶರೀರಗಳಲ್ಲಿ ಚಿಟ್ಟೇಹುಳುಗಳಂತೆ ಹೊಕ್ಕಿಕೊಂಡವು. ತೀಕ್ಷ್ಣವಾದ ಆ ಬಾಣಗಳಿಂದ ಪೆಟ್ಟುಬಿದ್ದು ಸಮುದ್ರದಲ್ಲಿ ಬೀಳುವ ಆ ದಾನವರ ಕೋಲಾಹಲಶಬ್ದವು ಆ ಸೌಭವಿಮಾನದಿಂದ ಅಧಿಕವಾಗಿ ಕೇಳಬಂತು. ಆ ದಾನವರ ತೋಳೂ ಹೆಗಲೂ ಶಿರಸ್ಸೂ ಛಿನ್ನಭಿನ್ನವಾಗಲು, ಅವರು ಘೋರವಾದ ಧ್ವನಿಯನ್ನು ಮಾಡುತ್ತ, ಸಮುದ್ರದಲ್ಲಿ ಬಿದ್ದರು. ಅವರೆಲ್ಲರನ್ನೂ ಸಮುದ್ರದಲ್ಲಿರುವ ಪ್ರಾಣಿಗಳು ಭಕ್ಷಿಸಿಬಿಟ್ಟವು. ಬಳಿಕ ನಾನು ಗೋಕ್ಷೀರದಂತೆಯೂ, ಮೊಲ್ಲೇಹೂವಿನಂತೆಯೂ, ಚಂದ್ರನಂತೆಯೂ, ತಾವರೇಕಾವಿನ ಎಳೆಗಳಂತೆಯೂ, ಬೆಳ್ಳಿಯಂತೆಯೂ ಶುಭ್ರವಾಗಿರುವ ಪಾಂಚಜನ್ಯವೆಂಬ ಶಂಖವನ್ನು ಬಲವಾಗಿ ಊದಿದೆನು. ಅನಂತರದಲ್ಲಿ ಸಾಲ್ವನು ತನ್ನ ಸೈನಿಕರು ಹತರಾಗಿ ಸಮುದ್ರದಲ್ಲಿ ಬಿದ್ದದ್ದನ್ನು ನೋಡಿ, ಮಹತ್ತರವಾದ ಮಾಯೆಯಿಂದ ನನ್ನ ಸಂಗಡ ಯುದ್ಧಮಾಡಿದನು. ಆ ಯುದ್ಧದಲ್ಲಿ ಅನೇಕವಾದ ಗಧಾಯುಧಗಳೂ, ಹಲಾಯುಧಗಳೂ, ಭಲ್ಲಾಯುಧಗಳೂ, ಶೂಲಾಯುಧಗಳೂ, ಗಂಡುಕೊಡಲಿಗಳೂ, ಕತ್ತಿಗಳೂ, ಮತ್ತು ಷಣ್ಮುಖ ಇಂದ್ರ ವರುಣ ಯಮ ಇವರ ಆಯುಧಗಳಿಗೆ ಸಮಾನವಾದ ಶಕ್ತ್ಯಾಯುಧ ವಜ್ರಾಯುಧ ಪಾಶಾಯುಧ ದಂಡಾಯುಧಗಳೂ, ಬಾಣಗಳೂ, ಪಟ್ಟಸ ಭೂಸುಂಡಿ ಮೊದಲಾದ ಆಯುಧಗಳೂ, ನಿರಂತರವಾಗಿ ನನ್ನ ಮೇಲೆ ಬಿದ್ದವು. ಆತನ ಮಾಯೆಯನ್ನು ನಾನೂ ಮಾಯೆಯಿಂದಲೇ ನಾಶಮಾಡಿದೆನು. ಆ ಮಾಯೆ ನಷ್ಟವಾಗಲು ಸಾಲ್ವನು ಪರ್ವತಶಿಖರಗಳಿಂದ ನನ್ನೊಡನೆ ಯುದ್ಧಮಾಡುತ್ತ, ಪುನಃ ಮಾಯೆಯಿಂದ ಕತ್ತಲೆ ಕವಿದಹಾಗೂ, ಹಾಗೇ ಬೆಳಕಾದಹಾಗೂ, ಆಕಾಶದಲ್ಲಿ ಮೋಡ ಕವಿದಂತೆಯೂ, ಕೂಡಲೆ ನಿರ್ಮಲವಾದಂತೆಯೂ, ಒಂದು ಕಾಲದಲ್ಲಿ ಶೀತ ತೋರುವಹಾಗೂ, ಮತ್ತೊಂದು ಕಾಲದಲ್ಲಿ ಉಷ್ಣತೋರುವಹಾಗೂ, ಶಸ್ತ್ರವೃಷ್ಟಿಗಳಾಗುವಹಾಗೂ ಮಾಡುತ್ತ,

ನನ್ನ ಸಂಗಡ ಯುದ್ಧವನ್ನು ಮಾಡಿದನು. ಆದನ್ನು ತಿಳಿದು, ನಾನು ಮಾಯೆಯಿಂದಲೇ ಆ ಮಾಯೆಯನ್ನು ನಾಶ ಮಾಡಿ, ಸಮಯೋಚಿತವಾಗಿ ಎಲ್ಲಾಕಡೆಯಲ್ಲೂ ಬಾಣಗಳನ್ನು ಪ್ರಯೋಗಿಸುತ್ತ ಯುದ್ಧವನ್ನು ಮಾಡಿದೆನು. ಬಳಿಕ ಸಾಲ್ವನ ಮಾಯೆಯಿಂದ ಆಕಾಶದಲ್ಲಿ ಅನೇಕ ಸೂರ್ಯ ಚಂದ್ರ ನಕ್ಷತ್ರಗಳು ಕಾಣಿಸಿದವು. ಆಗ ಹಗಲು, ರಾತ್ರಿ, ದಿಕ್ಕು,ಯಾವದೂ ಕಾಣಿಸಲಿಲ್ಲ. ಆಗ ನಾನು ಭ್ರಾಂತನಾಗಿ ಪ್ರಜ್ಞಾಸ್ತ್ರವನ್ನು ಪ್ರಯೋಗಿಸಿ, ಆ ಸಾಲ್ವನ ಮಾಯಾಮಯವಾದ ಅಸ್ತ್ರವನ್ನು, ಗಾಳಿಯು ಅರಳೆಯನ್ನು ತೂರುವಂತೆ ಪರಿಪರಿಸಿಬಿಟ್ಟೆನು. ಆ ಯುದ್ಧವು ನೋಡತಕ್ಕವರಿಗೆಲ್ಲಾ ರೋಮಾಂಚವನ್ನು ಉಂಟುಮಾಡುತ್ತಾ ಘೋರವಾಗಿತ್ತು."

## ೨೧ನೇ ಅಧ್ಯಾಯ.—ಶ್ರೀಕೃಷ್ಣಸಾಲ್ವರ ಯುದ್ಧ.

ಅನಂತರದಲ್ಲಿ ವೈಶಂಪಾಯನ ಮುನೀಂದ್ರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯ ರಾಯನೆ, ಶ್ರೀಕೃಷ್ಣನು ಧರ್ಮರಾಯನನ್ನು ಕುರಿತು "ಎಲೈ ಪುರುಷಶ್ರೇಷ್ಠನಾದ ಧರ್ಮರಾಯನೆ, ಈ ಪ್ರಕಾರ ಶತ್ರುವಾದ ಸಾಲ್ವನು ನನ್ನೊಡನೆ ಯುದ್ಧಮಾಡುತ್ತ ಪುನಃ ಆಕಾಶಮಾರ್ಗವನ್ನು ಹಿಡಿದನು. ಬಳಿಕ ಮುಧಾತ್ಮನಾದ ಆತನು ಜಯಾಪೇಕ್ಷೆಯುಳ್ಳವನಾಗಿ, ರೋಷಾವೇಶದಿಂದ ನನ್ನ ಮೇಲೆ ಫಿರಂಗಿಗಳನ್ನೂ ಗದೆಗಳನ್ನೂ ಪ್ರಕಾಶಮಾನಗಳಾದ ಶೂಲಗಳನ್ನೂ ಖಡ್ಗಗಳನ್ನೂ ಪ್ರಯೋಗಿಸಿದನು. ಆಗ ನಾನು ಬಾಣಗಳಿಂದ ಆ ಆಯುಧಗಳನ್ನು ಆಕಾಶದಲ್ಲಿ ಬರುವಾಗಲೇ ಎರಡು ಮೂರು ತುಂಡಾಗುವ ಹಾಗೆ ಶೀಘ್ರವಾಗಿ ಖಂಡಿಸಲು, ಆಕಾಶದಲ್ಲಿ ಮಹತ್ತಾದ ಶಬ್ದವುಂಟಾಯಿತು. ಸಾಲ್ವನು ಸಮೀಪಸಮೀಪದಲ್ಲಿ ಗಿಣ್ಣುಗಳುಳ್ಳ ಅನೇಕಸಹಸ್ರ ಬಾಣಗಳಿಂದ ಸಾರಥಿಯಾದ ದಾರುಕಿಯನ್ನೂ ಕುದುರೆಗಳನ್ನೂ ರಥಗಳನ್ನೂ ಹೊಡೆದನು. ದಾರುಕಿಯು ಖೇದಪಡುತ್ತ ನನ್ನನ್ನು ನೋಡಿ 'ಎಲೈ ಕೃಷ್ಣನೆ, ನಾನು ರಥದಮೇಲೆ ಕೂತಿರಬೇಕಲ್ಲಾ ಎಂದು ಕೂತಿರುವೆನು. ಸಾಲ್ವನ ಬಾಣಗಳಿಂದ ಪೀಡಿತವಾದ ನನ್ನ ಅವಯವಗಳೆಲ್ಲಾ ವ್ಯಥೆಪಡುತ್ತಿರುವವು. ಇನ್ನು ನಾನು ರಥದಮೇಲಿರಲಾರೆನು' ಎಂದು ನುಡಿಯಲು, ಆ ದೀನವಾದ ವಚನವನ್ನು ಕೇಳಿ, ಬಾಣಘಾತದಿಂದ ಪೀಡಿತನಾದ ಆತನನ್ನು ನೋಡಿದೆನು. ಆತನ ವಕ್ಷಸ್ಥಳದಲ್ಲಿಯೂ ಶಿರಸ್ಸಿನಲ್ಲಿಯೂ ಶರೀರದಲ್ಲಿಯೂ ಭುಜಗಳಲ್ಲಿಯೂ ಬಾಣಗಳು ನಾಟದೆಯಿರುವ ಪ್ರದೇಶವನ್ನು ಸ್ವಲ್ಪವಾದರೂ ನಾನು ನೋಡಲಿಲ್ಲ. ದೊಡ್ಡಮಳೆಯು ಒಂದು ಪರ್ವತದಿಂದ ಗೈರಿಕಾದಿಧಾತುಗಳು ಸ್ರವಿಸುವಂತೆ, ಬಾಣಪೀಡಿತವಾದ ಆತನ ಶರೀರದಿಂದ ರಕ್ತವು ಸ್ರವಿಸುತ್ತಿತ್ತು. ಕುದುರೆಗಳ ಹಗ್ಗಗಳನ್ನು ಕೈಯಲ್ಲಿ ಹಿಡಿದು ಈ ರೀತಿಯಾಗಿ ವ್ಯಥೆಪಡುತ್ತಿರುವ ಆತನನ್ನು ನಾನು ಸಮಾಧಾನ ಪಡಿಸುತ್ತಿರಲು, ಉಗ್ರಸೇನನ ಸೇವಕನಾದ ಒಬ್ಬ ಮನುಷ್ಯನು ದ್ವಾರಕಾಪಟ್ಟಣದಿಂದ ಜಾಗ್ರತೆಯಾಗಿ ಬಂದು, ರಥವನ್ನೇರಿ ಬಿಕ್ಕಿಬಿಕ್ಕಿ ದುಃಖಪಡುತ್ತ, ಮಿತ್ರಭಾವದಿಂದ ತನ್ನ ಯಜಮಾನನು ಹೇಳಿ ಕಳುಹಿಸಿಕೊಟ್ಟ ಮಾತನ್ನು ಹೇಳಿದನು. ಎಲೈ ಯುಧಿಷ್ಠಿರನೆ, ಅದನ್ನು ಹೇಳುವೆನು ಕೇಳು: 'ಎಲೈ ಕೇಶವನೆ, ವಸುದೇವನಿಗೆ ಸ್ನೇಹಿತನಾಗಿಯೂ ದ್ವಾರಕಾಧಿಪತಿಯಾಗಿಯೂ ಇರುವ ಉಗ್ರಸೇನರಾಯನು ನಿನಗೊಂದು ಮಾತನ್ನು ಹೇಳಿ ಕಳುಹಿಸಿಕೊಟ್ಟಿರುವನು. ಅದನ್ನು ಲಾಲಿಸು: ನೀನು ದ್ವಾರಕಾಪಟ್ಟಣದಲ್ಲಿ ಇಲ್ಲದೇ ಇರುವಾಗ, ಸಾಲ್ವನು ಅಲ್ಲಿಗೆ ಬಂದು, ನಿಮ್ಮ ತಂದೆಯಾದ ವಸುದೇವನನ್ನು ಬಲಾತ್ಕಾರದಿಂದ ಸಂಹರಿಸಿಬಿಟ್ಟನು. ಇನ್ನು ಯುದ್ಧಸಾಕು, ಹಿಂತಿರುಗು. ಇನ್ನು ನೀನು ದ್ವಾರಕಾಪಟ್ಟಣವನ್ನು ರಕ್ಷಿಸಿಕೊಂಡಿರುವದೇ ಒಳ್ಳೇದು' ಎಂದು ನುಡಿದನು. ಅಪ್ರಿಯವಾದ ಆ ಮಾತನ್ನು ಕೇಳಿ, ನಾನು ಮನಸ್ಸಿನಲ್ಲಿ ವಿಷಾದವನ್ನು ಹೊಂದಿ, ಮುಂದೆ ಯಾವದನ್ನು ಮಾಡಬೇಕೋ ಯಾವದನ್ನು ಬಿಡಬೇಕೋ ಎಂಬ ನಿಶ್ಚಯವೇ ಗೊತ್ತಾಗದೆ, ಸಾತ್ಯಕಿಯನ್ನೂ ಬಲರಾಮನನ್ನೂ ಮಹಾರಥನಾದ ಪ್ರದ್ಯುಮ್ನನನ್ನೂ ಮನಸ್ಸಿನಲ್ಲಿ ನಿಂದಿಸಿದೆನು. ಎಲೈ ಧರ್ಮರಾಯನೆ, ನಾನು ಸಾಲ್ವನ ಸಂಗಡ ಯುದ್ಧಮಾಡುವದಕ್ಕೆ ಹೊರಟಾಗ, ದ್ವಾರಕಾನಗರವನ್ನೂ ವಸುದೇವ ಮೊದಲಾದವರನ್ನೂ ರಕ್ಷಿಸುವದಕ್ಕೋಸ್ಕರ ಬಲರಾಮ ಮೊದಲಾದವರನ್ನು ನೇಮಿಸಿದ್ದೆನು. ಈಗ ಮಹಾ

ಬಾಹುವಾದ ಬಲರಾಮನೂ, ಶತ್ರುಸಂಹಾರಕನಾದ ಸಾತ್ಯಕಿಯೂ, ಪ್ರದ್ಯುಮ್ನನೂ, ಶೂರನಾದ ಚಾರುದೇಷ್ಣನೂ, ಸಾಂಬ ಮೊದಲಾದವರೂ ಸಹ ಜೀವಸಹಿತರಾಗಿರುವರೆ? ಎಂದು ಮನಸ್ಸಿನಲ್ಲಿ ವಿಷಾದಪಡುತ್ತ, ಸ್ವಲ್ಪ ಹೊತ್ತು ಸುಮ್ಮನಿದ್ದು, 'ಬಲರಾಮ ಮೊದಲಾದವರು ಜೀವವಂತರಾಗಿದ್ದರೆ ವಜ್ರಾಯುಧವನ್ನು ಧರಿಸಿದ ಇಂದ್ರನಿಗೂ ಕೂಡ ವಸುದೇವನನ್ನು ಸಂಹರಿಸುವದು ಅಶಕ್ಯವು. ಬಲರಾಮ ಮೊದಲಾದವರೂ ವಸುದೇವನೂಸಹ ನಿಜವಾಗಿ ಮೃತರಾಗಿರಬಹುದು' ಎಂದು ಮನಸ್ಸಿನಲ್ಲಿ ನಿಶ್ಚಯಿಸಿಕೊಂಡು, ನಾನು ಎಲ್ಲರೂ ನಾಶವನ್ನು ಹೊಂದಿದರಲ್ಲಾ! ಎಂದು ಪದೇಪದೇ ವ್ಯಥೆಪಡುತ್ತ ಪುನಃ ಸಾಲ್ವನ ಸಂಗಡ ಯುದ್ಧಕ್ಕೆ ತೊಡಗಿದೆನು. ಆ ಯುದ್ಧವಾಗುವ ಸಮಯದಲ್ಲಿ ವಸುದೇವನು ಮೃತನಾಗಿ ಸಾಲ್ವನ ಸಾಭವಿಮಾನದಿಂದ ಕೆಳಕ್ಕೆ ಬೀಳುತ್ತಿದ್ದನು. ಅದನ್ನು ನೋಡಿ ನನಗೆ ತುಂಬಾ ಭ್ರಾಂತಿಯುಂಟಾಯಿತು. ಆ ಸಾಭವಿಮಾನದಿಂದ ಕೆಳಕ್ಕೆ ಬೀಳುತ್ತಿದ್ದ ನಮ್ಮ ತಂದೆಯ ಆಕಾರವು ಪುಣ್ಯನಾಶವಾಗಿ ಸ್ವರ್ಗದಿಂದ ಬೀಳುತ್ತಿದ್ದ ಯಯಾತಿರಾಯನಂತೆ ಕಾಣಿಸಿತು. ಆಗ ಚದುರಿದ ಬಿಳೀಪಾಗುಳ್ಳವನಾಗಿಯೂ, ಬಿಚ್ಚಿಹೋದ ವಸ್ತ್ರವುಳ್ಳವನಾಗಿಯೂ, ಕೆದರಿದ ಮಂಡೇಕೂದಲುಳ್ಳವನಾಗಿಯೂ ಇದ್ದ ನಮ್ಮ ತಂದೆಯು, ಪುಣ್ಯವು ನಷ್ಟವಾಗಲು ಭೂಮಿಯಮೇಲೆ ಬೀಳುವ ಗ್ರಹದಂತೆ ಕಾಣಿಸಿಕೊಂಡನು. ಬಳಿಕ ಶ್ರೇಷ್ಠವಾದ ಶಾರ್ಙ್ಗಧನುಸ್ಸೂ ನನ್ನ ಕೈಯಿಂದ ಜಾರಿ ಕೆಳಕ್ಕೆ ಬಿತ್ತು. ಎಲೈ ಧರ್ಮರಾಯನೆ, ಆಗ ನಾನು ಭ್ರಾಂತನಾಗಿ ರಥದಮೇಲೆ ಸುಮ್ಮನೆ ಕುಳಿತಿದ್ದೆನು. ಮೃತನಾದವನಂತೆ ರಥದ ಮೇಲೆ ಕುಳಿತಿದ್ದ ನನ್ನನ್ನು ನೋಡಿ, ನಮ್ಮ ಸೈನಿಕರೆಲ್ಲರೂ ಹಾಹಾಕಾರವನ್ನು ಮಾಡಿದರು. ಕೈಕಾಲುಗಳನ್ನು ಚಾಚಿಕೊಂಡು ಸಾಭಪುರದಿಂದ ಕೆಳಕ್ಕೆ ಬಿದ್ದ ನಮ್ಮ ತಂದೆಯ ರೂಪವು ಆಕಾಶದಿಂದ ಕೆಳಕ್ಕೆ ಬಿದ್ದ ಪಕ್ಷಿಯ ರೂಪದಂತೆ ಕಾಣಿಸಿತು. ನೆಲದ ಮೇಲೆ ಬಿದ್ದ ಆತನನ್ನು ಆ ದಾನವರು ಶೂಲ ಪಟ್ಟಕತ್ತಿ ಮೊದಲಾದ ಆಯುಧಗಳಿಂದ ಹೊಡೆದರು. ಅದನ್ನು ನೋಡಿ ನನ್ನ ಮನಸ್ಸು ತಲ್ಲಣಿಸಿತು. ಬಳಿಕ ಒಂದು ಮುಹೂರ್ತದಮೇಲೆ ನಾನು ಪ್ರಜ್ಞೆಯನ್ನು ತಂದುಕೊಂಡು, ಘೋರವಾದ ಆ ಯುದ್ಧರಂಗದಲ್ಲಿ ಆ ಸಾಭಪುರವನ್ನೂ ಸಾಲ್ವನನ್ನೂ ವೃದ್ಧನಾದ ನಮ್ಮ ತಂದೆಯಾದ ವಸುದೇವನನ್ನೂ ಸಹ ಕಾಣಲಿಲ್ಲವು. ಆ ಬಳಿಕ ನಾನು ಇದೆಲ್ಲಾ ಸಾಲ್ವನ ಮಾಯೆಯೆಂದು ಮನಸ್ಸಿನಲ್ಲಿ ನಿಶ್ಚಯಿಸಿ, ಜಾಗರೂಕನಾಗಿ ಪುನಃ ಅನೇಕ ಪ್ರಕಾರವಾಗಿ ಬಾಣಗಳನ್ನು ಪ್ರಯೋಗಿಸಿದೆನು."

## ೨೨ನೇ ಅಧ್ಯಾಯ.—ಶ್ರೀಕೃಷ್ಣನಿಂದ ಸಾಲ್ವನ ವಧೆ.

ಅನಂತರದಲ್ಲಿ ವೈಶಂಪಾಯನ ಮುನೀಂದ್ರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯನೆ, ಶ್ರೀಕೃಷ್ಣನು ಧರ್ಮರಾಯನನ್ನು ನೋಡಿ "ಎಲೈ ಯುಧಿಷ್ಠಿರನೆ, ಬಳಿಕ ನಾನು ಪ್ರಕಾಶಮಾನವಾದ ಶಾರ್ಙ್ಗಧನುಸ್ಸನ್ನು ಹಿಡಿದು, ಬಾಣಗಳನ್ನು ಪ್ರಯೋಗಿಸಿ, ಆ ದಾನವರ ಶಿರಸ್ಸುಗಳನ್ನು ಸಾಭದಿಂದ ಕೆಳಕ್ಕೆ ಕೆಡಹಿದೆನು. ಮತ್ತು ಶ್ಲಾಘ್ಯವಾದ ಅಲಗುಗಳೂ ತೀಕ್ಷ್ಣವಾದ ತೇಜಸ್ಸೂ ಉಳ್ಳವುಗಳಾಗಿ ಸರ್ಪಗಳಂತೆ ಕ್ರೂರವಾಗಿರುವ ಮೇಲಕ್ಕೆ ಹೋಗತಕ್ಕ ಬಾಣಗಳನ್ನು ಶಾರ್ಙ್ಗಧನುಸ್ಸಿನಲ್ಲಿ ಸಂಧಾನಮಾಡಿ ಸಾಲ್ವನಮೇಲೆ ಪ್ರಯೋಗಿಸಿದೆನು. ಎಲೈ ಕುರುಕುಲಶ್ರೇಷ್ಠನಾದ ಧರ್ಮರಾಯನೆ, ಆಗ ಸಾಲ್ವನ ಸಾಭವಿಮಾನವು ಆತನ ಮಾಯೆಯಿಂದ ಕಣ್ಣಿಗೆ ಕಾಣಿಸದೆ ಹೋಯಿತು. ಅದನ್ನು ನೋಡಿ ನನಗೆ ಪರಮಾಶ್ಚರ್ಯವಾಯಿತು. ಆಗ ನಾನು ಸ್ಥಿರವಾಗಿ ಯುದ್ಧಕ್ಕೆ ನಿಂತಿರಲು, ಆ ದಾನವರು ವಿಕಾರವಿಕಾರವಾದ ಮಂಡೇಕೂದಲೂ ಮುಖವೂ ಉಳ್ಳವರಾಗಿ ಗಟ್ಟಿಯಾಗಿ ಅರಚಿಕೊಂಡರು. ಆ ಶಬ್ದವನ್ನು ತಿಳಿದು, ನಾನು ಜಾಗ್ರತೆಯಾಗಿ ಆ ದಾನವರ ಸಂಹಾರಕ್ಕೋಸ್ಕರ ಶಬ್ದವೇದಿಯೆಂಬ ಅಸ್ತ್ರವನ್ನು ಧನುಸ್ಸಿನಲ್ಲಿ ಸಂಧಾನಮಾಡಲು, ಆ ಶಬ್ದವು ನಿಂತುಹೋಯಿತು. ನಾನು ಪ್ರಯೋಗಿಸಿದ ಆ ಅಸ್ತ್ರದಿಂದ ಹೊರಟು ಸೂರ್ಯನಂತೆ ಪ್ರಕಾಶಮಾನವಾಗಿ ಉರಿಯುತ್ತಿದ್ದ ಶಬ್ದವೇದಿಗಳಾದ ಆ ಬಾಣಗಳಿಂದ ಆ ಅರಚಿಕೊಳ್ಳುತ್ತಿದ್ದ ದಾನವರೆಲ್ಲರೂ ಹತರಾಗಿ ಹೋದರು. ಆಕಡೆ ಆ ಶಬ್ದವು ನಿಂತುಹೋಗಲು, ಮತ್ತೊಂದುಕಡೆ ಅದೇಪ್ರಕಾರ ಶಬ್ದವಾಯಿತು. ಅದನ್ನು ತಿಳಿದು ಅತ್ತಲಾಗಿಯೂ ಬಾಣಗಳನ್ನು ಪ್ರಯೋಗಿಸಿದೆನು. ಬಳಿಕ

ಇದೇರೀತಿಯಾಗಿ ಎಲ್ಲಾ ದಿಕ್ಕುಗಳಲ್ಲಿಯೂ ಕೆಳಗೂ ಮೇಲೂ ಸಹ ಮಹಾಶಬ್ದವುಂಟಾಯಿತು. ಎಲ್ಲಾ ಕಡೆಗಳಲ್ಲಿಯೂ ನಾನು ಬಾಣಗಳನ್ನು ಪ್ರಯೋಗಿಸಲು, ಹಾಗೆ ಶಬ್ದಮಾಡಿದ ದಾನವರೆಲ್ಲರೂ ಹತರಾಗಿ ಹೋದರು. ಬಳಿಕ ಸ್ವೇಚ್ಛೆಯಿಂದ ಹೋಗತಕ್ಕ ಆ ವಿಮಾನವು ನನ್ನ ಕಣ್ಣುಗಳನ್ನು ಭ್ರಮೆಪಡಿಸುತ್ತ, ಸಮುದ್ರತೀರದಲ್ಲಿರುವ ಪ್ರಾಗ್ಜ್ಯೋತಿಷವೆಂಬ ಪಟ್ಟಣವನ್ನು ಸೇರಿ ಪುನಃ ಕಾಣಿಸಿಕೊಂಡಿತು. ಲೋಕನಾಶಕನಾದ ಸಾಲ್ವನು ಘೋರವಾದ ರೂಪವನ್ನು ಧರಿಸಿ, ನನ್ನ ಮೇಲೆ ಪರ್ವತವೃಷ್ಟಿಯನ್ನು ಕರೆದು ಅದರಿಂದ ನನ್ನನ್ನು ಮುಚ್ಚಿದನು. ಆ ಪರ್ವತಗಳು ನನ್ನ ಮೇಲೆ ಹುತ್ತದಂತೆ ಬೆಳೆದವು. ಆಗ ನಾನೂ ನನ್ನ ಸಾರಥಿಯೂ ನನ್ನ ಕುದುರೆಗಳೂ ನನ್ನ ರಥವೂ ಪರ್ವತಗಳ ರಾಶಿಯಲ್ಲಿ ಮುಚ್ಚಿಹೋಗಿ ಯಾರಿಗೂ ಕಾಣಿಸದೇ ಹೋದೆವು. ಬಳಿಕ ನಮ್ಮ ಸೈನಿಕರಾದ ವೃಷ್ಣಿವೀರರು ಭಯಪಟ್ಟು ದಿಕ್ಕುದಿಕ್ಕಿಗೆ ಓಡಿಹೋದರು. ಎಲೈ ಧರ್ಮರಾಯನೆ, ನಾನು ಪರ್ವತಗಳಿಂದ ಮುಚ್ಚಿಸಿಕೊಂಡು ಕಾಣಿಸದೆ ಹೋಗಲು, ಖೇಚರರೂ ಭೂಚರರೂ ಸ್ವರ್ಗಲೋಕವಾಸಿಗಳೂಸಹ ಹಾಹಾಕಾರವನ್ನು ಮಾಡಿದರು. ನನಗೆ ಮಿತ್ರರಾದವರೆಲ್ಲರೂ ಮನಸ್ಸಿನಲ್ಲಿ ವಿಷಾದಪಟ್ಟು ದುಃಖಾಕ್ರಾಂತರಾಗಿ ಗಟ್ಟಿಯಾಗಿ ರೋದನವನ್ನು ಮಾಡಿದರು; ನಮಗೆ ದ್ವೇಷಿಗಳಾದ ದಾನವರೆಲ್ಲರೂ ಸಂತೋಷಪಟ್ಟರು. ಈ ರೀತಿಯಾಗಿ ಸಾಲ್ವನು ನನ್ನನ್ನು ಜಯಿಸಿದ್ದನ್ನು ನನಗೆ ಎಚ್ಚರಿಕೆಯಾದ ಬಳಿಕ ನಾನು ಸಾರಥಿಯ ಮುಖದಿಂದ ಕೇಳಿ, ಸಕಲ ಪರ್ವತಗಳನ್ನು ಭೇದಿಸತಕ್ಕ ಇಂದ್ರ ದೇವತಾಕವಾದ ವಜ್ರಾಸ್ತ್ರದಿಂದ ಆ ಪರ್ವತಗಳನ್ನೆಲ್ಲಾ ನಾಶಮಾಡಿದೆನು. ಆಗ ಪರ್ವತಗಳ ಭಾರದಿಂದ ಪೀಡಿತಗಳಾಗಿ ಕಾಲಾಡಿಸುವದಕ್ಕೂ ಶಕ್ತಿಯಿಲ್ಲದೇ ಇದ್ದ ನನ್ನ ಕುದುರೆಗಳು ನಡುಗುವ ಹಾಗೆ ಇದ್ದವು. ನನ್ನ ವಜ್ರಾಸ್ತ್ರದಿಂದ ಆ ಪರ್ವತಗಳೆಲ್ಲಾ ನಾಶವಾಗಲು, ಆಕಾಶದಲ್ಲಿ ಮೇಘಗಳನ್ನು ಭೇದಿಸಿಕೊಂಡು ಈಚೆಗೆ ಹೊರಟುಬಂದ ಸೂರ್ಯನಂತಿದ್ದ ನನ್ನನ್ನು ನೋಡಿ ನಮ್ಮ ಸೈನಿಕರೆಲ್ಲರೂ ಅತ್ಯಂತ ಸಂತೋಷವನ್ನು ಹೊಂದಿದರು. ಬಳಿಕ ನನ್ನ ಸಾರಥಿಯಾದ ದಾರುಕಿಯು ಸಾಲ್ವನು ಪ್ರಯೋಗಿಸಿದ ಪರ್ವತಗಳ ಭಾರದಿಂದ ವ್ಯಥೆಪಟ್ಟು, ನಡೆಯುವದಕ್ಕೂ ಶಕ್ತಿಯಿಲ್ಲದೆ ಇದ್ದ ರಥಾಶ್ವಗಳನ್ನೂ ನನ್ನನ್ನೂ ನೋಡಿ 'ಎಲೈ ಶ್ರೀಕೃಷ್ಣನೆ, ಇಗೋ ಸಾಭಪತಿಯಾದ ಸಾಲ್ವನು ನಿಂತಿರುವನು, ಚೆನ್ನಾಗಿ ನೋಡು. ಅವನನ್ನು ಇದುವರೆಗೂ ಉಪೇಕ್ಷೆ ಮಾಡಿದ್ದು ಸಾಕು. ಇನ್ನು ಅವನನ್ನು ಸಂಹರಿಸುವದಕ್ಕೆ ಯತ್ನಮಾಡು. ಈ ಸಾಲ್ವನ ವಿಷಯದಲ್ಲಿ ಮೃದುಸ್ವಭಾವನಾಗಬೇಡ, ಅವನಲ್ಲಿ ಸ್ನೇಹವನ್ನೂ ಇಡಬೇಡ; ಶೀಘ್ರವಾಗಿ ಅವನನ್ನು ಸಂಹರಿಸು; ಅವನನ್ನು ಬದುಕಿಸುವ ಯೋಚನೆಯನ್ನು ಮಾಡಬೇಡ. ಎಲೈ ಶತ್ರುಸಂಹಾರಕನಾದ ಶ್ರೀಕೃಷ್ಣನೆ, ವೀರನಾದವನು ಶತ್ರುವನ್ನು ತನ್ನ ಸರ್ವಶಕ್ತಿಯಿಂದಲೂ ಸಂಹರಿಸಬೇಕು. ಬಲಶಾಲಿಯಾದವನು ಶತ್ರುವು ದುರ್ಬಲನೆಂದು ತಿಳಿದು ಅವನನ್ನು ಉಪೇಕ್ಷಿಸಕೂಡದು. ಶತ್ರುವಾದವನು ಯುದ್ಧಮಾಡದೆ ಇದ್ದರೂ ಉಪೇಕ್ಷೆಮಾಡಬಾರದು ಎಂಬಲ್ಲಿ, ಯುದ್ಧಕ್ಕೆ ಬಂದ ಅವನನ್ನು ಉಪೇಕ್ಷೆಮಾಡಬಹುದೆ? ಎಲೈ ಪುರುಷೋತ್ತಮನಾದ ಶ್ರೀಕೃಷ್ಣನೆ, ಸರ್ವಪ್ರಯತ್ನದಿಂದಲೂ ಅವನನ್ನು ನೀನು ಜಯಿಸು. ಇನ್ನು ಕಾಲವಿಳಂಬವನ್ನು ಮಾಡಬೇಡ. ಇವನು ಸಾಮಾನ್ಯವಾಗಿ ಯುದ್ಧಮಾಡಿದರೆ ಎಂದಿಗೂ ಜಯಿಸುವದಕ್ಕೆ ಸಾಧ್ಯನಾಗತಕ್ಕವನಲ್ಲ. ಇವನು ಮೊದಲು ದ್ವಾರಕಾಪಟ್ಟಣಕ್ಕೆ ಮುತ್ತಿಗೆಹಾಕಿ, ಹಾನಿಯನ್ನು ಉಂಟುಮಾಡಿದನು; ಈಗ ನಿನ್ನ ಸಂಗಡಲೂ ಯುದ್ಧಕ್ಕೆ ತೊಡಗಿರುವನು. ಆದ್ದರಿಂದ ಇವನು ನಿನಗೆ ಸ್ನೇಹಿತನೆನಿಸಿಕೊಳ್ಳಲಾರನು' ಎಂದು ಇವೇಮೊದಲಾದ ತತ್ಕಾಲೋಚಿತವಾದ ಮಾತುಗಳನ್ನು ಆಡಲು, ಆವುಗಳನ್ನು ಕೇಳಿ ನಾನು ಯಥಾರ್ಥವೆಂದು ತಿಳಿದು, ಯುದ್ಧದಲ್ಲಿ ಆ ಸಾಭಪುರವನ್ನು ಕೆಡಹಿ, ಸಾಲ್ವನನ್ನು ಸಂಹರಿಸಬೇಕೆಂದು ಮನಸ್ಸಿನಲ್ಲಿ ನಿಶ್ಚಯಿಸಿ, 'ಒಂದು ಮುಹೂರ್ತ ಸುಮ್ಮನಿರು' ಎಂದು ಸಾರಥಿಯಾದ ದಾರುಕಿಗೆ ಹೇಳಿ, ಬಳಿಕ ಪ್ರತಿಕ್ರಿಯೆಯಿಲ್ಲದೆ ಇರುವದಾಗಿಯೂ ಅಭೇದ್ಯವಾಗಿಯೂ ಜಾಜ್ವಲ್ಯಮಾನವಾಗಿಯೂ ದಿವ್ಯವಾಗಿಯೂ ನನಗೆ ಪ್ರಿಯವಾಗಿಯೂ ಇರುವ ಆಗ್ನೇಯಾಸ್ತ್ರವನ್ನು ಶಾರ್ಙ್ಗಧನುಸ್ಸಿನಲ್ಲಿ ಸಂಧಾನಮಾಡಿ ಪ್ರಯೋಗಿಸಿ, ಯುದ್ಧದಲ್ಲಿ ಯಕ್ಷ ರಾಕ್ಷಸ ದಾನವ ಮ್ಲೇಚ್ಛರಾಜರು ಮೊದಲಾದ ಸಕಲ ಶತ್ರುಗಳನ್ನೂ ನಾಶಮಾಡತಕ್ಕದ್ದಾಗಿಯೂ, ತೀಕ್ಷ್ಣವಾದ ಅಗ್ರಭಾಗವುಳ್ಳದ್ದಾಗಿಯೂ, ಪ್ರಳಯಕಾಲದ ಯಮನಂತೆ ಘೋರವಾಗಿಯೂ, ನಿರ್ಮಲವಾಗಿಯೂ ಇರುವ ಮಹತ್ತಾದ ಸುದರ್ಶನವೆಂಬ ಚಕ್ರವನ್ನು ಕರೆದು, 'ಎಲೈ ಅಸ್ತ್ರವೆ, ನಿನ್ನ ಶಕ್ತಿಯಿಂದ ಈ ಸಾಭಪುರ

ವನ್ನೂ ನನ್ನ ಶತ್ರುಗಳಾದ ದಾನವರನ್ನೂ ಸಂಹರಿಸು' ಎಂದು ಆಜ್ಞಾಪಿಸಿ, ಕೋಪಗೊಂಡು ಅದನ್ನು ಬಾಹುಬಲದಿಂದ ಆ ಸೌಭಪುರದಮೇಲೆ ಪ್ರಯೋಗಿಸಿದೆನು. ಆಗ ಆಕಾಶಮಾರ್ಗದಲ್ಲಿ ಹೋಗತಕ್ಕ ಆ ಸುದರ್ಶನವೆಂಬ ಚಕ್ರದ ರೂಪವು ಪ್ರಳಯಕಾಲದಲ್ಲಿ ತಪಿಸತಕ್ಕ ಎರಡನೇ ಸೂರ್ಯನ ರೂಪದಂತೆ ಕಾಣಿಸುತ್ತಾ, ತೇಜೋವಿಹೀನವಾದ ಸಾಲ್ವನ ಸೌಭಪುರವನ್ನು ಹೊಕ್ಕು, ಗರಗಸವು ದೊಡ್ಡ ಮರವನ್ನು ಭೇದಿಸುವಂತೆ ಅದನ್ನು ಎರಡು ಪಾಲಾಗಿ ಕತ್ತರಿಸಿತು. ಬಳಿಕ ಆ ಸುದರ್ಶನದ ಶಕ್ತಿಯಿಂದ ಎರಡು ಭಾಗವಾಗಿ ಸೀಳಿಹೋದ ಆ ಸೌಭಪುರವು ಮಹೇಶ್ವರನ ಬಾಣದಿಂದ ಭಿನ್ನವಾದ ತ್ರಿಪುರದಂತೆ ಕೆಳಕ್ಕೆ ಬಿತ್ತು. ಬಳಿಕ ಆ ಚಕ್ರವು ನನ್ನ ಕೈಯಲ್ಲೇ ಬಂದು ಸೇರಿಕೊಂಡಿತು. ಆಗ ನಾನು ಪುನಃ ಚಕ್ರವನ್ನು ಹಿಡಿದು 'ಸಾಲ್ವನನ್ನು ಸಂಹರಿಸು' ಎಂದು ಹೇಳಿ ಶೀಘ್ರವಾಗಿ ಆತನ ಮೇಲೆ ಪ್ರಯೋಗಿಸಲು, ಅದು ತನ್ನ ಮೇಲೆ ಗದಾಪ್ರಹಾರವನ್ನು ಮಾಡುತ್ತಿದ್ದ ಸಾಲ್ವನನ್ನು ಎರಡು ಭಾಗವಾಗಿ ಬೇಗ ಖಂಡಿಸಿ, ಯುದ್ಧರಂಗದಲ್ಲಿ ತನ್ನ ತೇಜಸ್ಸಿನಿಂದ ಉರಿಯುತ್ತಿತ್ತು. ಬಳಿಕ ನಾನು ಅನೇಕ ಬಾಣಗಳನ್ನು ಪ್ರಯೋಗಿಸಲು, ಅವುಗಳಿಂದ ಪೀಡಿತರಾದ ದಾನವರೆಲ್ಲರೂ ಭಯಪಟ್ಟು ಹಾಹಾಕಾರಮಾಡುತ್ತ ದಿಕ್ಕುದಿಕ್ಕಿಗೆ ಓಡಿ ಹೋದರು. ಅನಂತರದಲ್ಲಿ ನಾನು ಮುರಿದುಹೋದ ಆ ಸೌಭವಿಮಾನದ ಸಮೀಪದಲ್ಲಿ ರಥವನ್ನು ನಿಲ್ಲಿಸಿ, ಸಂತೋಷದಿಂದ ಶಂಖವನ್ನು ಧ್ವನಿಮಾಡಿ, ನನ್ನ ಮಿತ್ರರಿಗೆಲ್ಲಾ ಸಂತೋಷವನ್ನು ಉಂಟುಮಾಡಿದೆನು. ಮೇರುಪರ್ವತ ಶಿಖರದಂತಿರುವ ಆ ವಿಮಾನದಲ್ಲಿದ್ದ ಮಾಳಿಗೆಗಳೂ ಗೋಪುರಗಳೂ ಸುಟ್ಟುಹೋಗುತ್ತಿರುವದನ್ನು ನೋಡಿ, ಅಲ್ಲಿದ್ದ ಸಾಲ್ವನ ಸ್ತ್ರೀಯರೆಲ್ಲರೂ ಓಡಿಹೋದರು. ಈ ಪ್ರಕಾರ ನಾನು ಸೌಭಪುರವನ್ನು ನಾಶಮಾಡಿ ಸಾಲ್ವನನ್ನು ಸಂಹರಿಸಿ, ತಿರುಗಿ ದ್ವಾರಕಾನಗರಕ್ಕೆ ಬಂದು, ಮಿತ್ರರಿಗೆಲ್ಲಾ ಸಂತೋಷವನ್ನು ಉಂಟುಮಾಡಿದೆನು. ಈ ಕಾರಣದಿಂದಲೇ ನಾನು ನೀವು ದ್ಯೂತವನ್ನಾಡುವ ಸಮಯದಲ್ಲಿ ಹಸ್ತಿನಾನಗರಕ್ಕೆ ಬರಲಿಲ್ಲ. ನಾನು ಬಂದಿದ್ದರೆ ಸುಯೋಧನನನ್ನು ನಿಗ್ರಹಿಸುತ್ತಿದ್ದೆನು ; ಅಥವಾ ದ್ಯೂತವನ್ನಾದರು ಆಗದ ಹಾಗೆ ಮಾಡುತ್ತಿದ್ದೆನು. ಎಲೈ ಧರ್ಮರಾಯನೆ, ಒಡೆದು ಹೋದ ಏರಿಯು ನೀರನ್ನು ಹ್ಯಾಗೆ ತಡೆಯಲಾರದೋ ಹಾಗೆ, ಕಾರ್ಯವು ಅತಿಕ್ರಮಿಸಿ ಹೋದಬಳಿಕ ಈಗ ನಾನೇನು ಮಾಡತಕ್ಕದ್ದು?"

ಈ ರೀತಿಯಾಗಿ ಧರ್ಮರಾಯನ ಸಂಗಡ ಹೇಳಿ, ಪುರುಷಶ್ರೇಷ್ಠನಾಗಿಯೂ ಮಹಾಬಾಹುವಾಗಿಯೂ ಶ್ರೀಮಂತನಾಗಿಯೂ ಇರುವ ಆ ಮಧುಸೂದನನು ಪಾಂಡವರೊಡನೆ ಯೋಗಕ್ಷೇಮವನ್ನು ಮಾಡಿ, ಆ ಧರ್ಮರಾಯನಿಗೆ ನಮಸ್ಕಾರವನ್ನು ಮಾಡಿ, ಆ ಧರ್ಮರಾಯನು ತನ್ನ ಶಿರಸ್ಸಿನಲ್ಲಿ ಆಘ್ರಾಣಮಾಡಲು, ಭೀಮಾರ್ಜುನರನ್ನು ಆಲಿಂಗನಮಾಡಿಕೊಂಡು, ನಕುಲಸಹದೇವರಿಂದ ನಮಸ್ಕಾರವನ್ನು ಮಾಡಿಸಿಕೊಂಡು, ಧೌಮ್ಯಾಚಾರ್ಯರಿಂದ ಸನ್ಮಾನವನ್ನು ಹೊಂದಿ, ಕಣ್ಣೀರು ಸುರಿಸುತ್ತಿರುವ ದ್ರೌಪದಿಯಿಂದ ಪೂಜಿತನಾಗಿ, ಸೂರ್ಯನೋಪಾದಿಯಲ್ಲಿ ಪ್ರಕಾಶಮಾನವಾಗಿಯೂ ಶೈಬ್ಯ, ಸುಗ್ರೀವ, ಮೇಘಪುಷ್ಪ, ವಲಾಹಕಗಳೆಂಬ ಕುದುರೆಗಳನ್ನು ಕಟ್ಟಿರುವದಾಗಿಯೂ ಇರುವ ಸುವರ್ಣಮಯವಾದ ರಥವನ್ನೇರಿ, ಅದರಮೇಲೆ ಸುಭದ್ರೆಯನ್ನೂ ಅಭಿಮನ್ಯುವನ್ನೂ ಕೂರಿಸಿಕೊಂಡು, ಧರ್ಮರಾಯನನ್ನು ಸಮಾಧಾನಪಡಿಸಿ ದ್ವಾರಕಾನಗರಕ್ಕೆ ಪ್ರಯಾಣಮಾಡಿದನು.

ಬಳಿಕ ಧೃಷ್ಟದ್ಯುಮ್ನನು ದ್ರೌಪದೀಕುಮಾರರನ್ನು ಕರೆದುಕೊಂಡು ತನ್ನ ಪಟ್ಟಣಕ್ಕೆ ಪ್ರಯಾಣಮಾಡಿದನು. ಚೇದಿದೇಶಾಧಿಪತಿಯಾದ ಶಿಶುಪಾಲನ ಮಗನಾದ ಧೃಷ್ಟಕೇತುವು ನಕುಲನ ಹೆಂಡತಿಯಾದ ರೇಣುಮತಿಯೆಂಬ ತನ್ನ ತಂಗಿಯನ್ನು ಕರೆದುಕೊಂಡು, ಪಾಂಡವರೊಡನೆ ಯೋಗಕ್ಷೇಮವಿಚಾರವನ್ನು ಮಾಡಿ, ಮನೋಹರವಾದ ಶುಕ್ತಿಮತಿಯೆಂಬ ತನ್ನ ಪಟ್ಟಣಕ್ಕೆ ಪ್ರಯಾಣಮಾಡಿದನು. ಮಹಾ ಪರಾಕ್ರಮಶಾಲಿಗಳಾಗಿಯೂ ಸಹದೇವನಿಗೆ ಭಾವಮೈದಂದಿರಾಗಿಯೂ ಅಣ್ಣತಮ್ಮಂದಿರಾಗಿಯೂ ಇರುವ ಕೈಕಯರೂ ಪಾಂಡವರೊಡನೆ ಯೋಗಕ್ಷೇಮವಿಚಾರವನ್ನು ಮಾಡಿ, ಧರ್ಮರಾಯನ ಅಪ್ಪಣೆಯಿಂದ ತಮ್ಮ ಪಟ್ಟಣಕ್ಕೆ ಪ್ರಯಾಣಮಾಡಿದರು. ಪಾಂಡವರ ಸಂಗಡ ಬಂದಿದ್ದ ಬ್ರಾಹ್ಮಣರೂ ವೈಶ್ಯರೂ ಇನ್ನೂ ಸ್ವದೇಶವಾಸಿಗಳಾದ ಜನಗಳೂಸಹ, ಪಾಂಡವರು ನಿಮ್ಮ ನಿಮ್ಮ ಸ್ಥಳಕ್ಕೆ ಹೋಗಿ ಎಂದು ಹೇಳಿದರೂ ಅವರಸಂಗಡಲೇ ವಾಸಮಾಡುತ್ತಿದ್ದರು. ಎಲೈ ಜನಮೇಜಯನೆ,

ಧರ್ಮರಾಯನು ಕಾಮ್ಯಕವನದಲ್ಲಿ ವಾಸಮಾಡುತ್ತಿರುವಾಗ ಆ ಮಹಾತ್ಮರ ಸಮಾಗಮವು ನೋಡತಕ್ಕವರಿಗೆ ಬಹಳ ಆಶ್ಚರ್ಯಕರವಾಗಿತ್ತು. ಧರ್ಮರಾಯನು ನಿರ್ಮಲವಾದ ಮನಸ್ಸಿನಿಂದ ಬ್ರಾಹ್ಮಣರ ಆಜ್ಞೆಯನ್ನು ತೆಗೆದುಕೊಂಡು ತನ್ನ ಭೃತ್ಯರಿಗೆ ರಥವನ್ನು ಸಿದ್ಧಪಡಿಸತಕ್ಕದ್ದೆಂದು ಅಜ್ಞಾಪಿಸಿದನು.

---

## ೨೩ನೇ ಅಧ್ಯಾಯ.—ಪುರಜನರ ಪ್ರಲಾಪ.

ಅನಂತರದಲ್ಲಿ ವೈಶಂಪಾಯನಮುನೀಂದ್ರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಶ್ರೀಕೃಷ್ಣನು ದ್ವಾರಕಾಪಟ್ಟಣಕ್ಕೆ ಪ್ರಯಾಣಮಾಡಿದ ಬಳಿಕ, ಮಹೇಶ್ವರನಂತೆ ಪ್ರಕಾಶಮಾನರಾಗಿಯೂ ಶೂರರಾಗಿಯೂ ಇರುವ ಪಾಂಡವರು ದ್ರೌಪದಿಯಿಂದಲೂ ಪುರೋಹಿತರಾದ ಧೌಮ್ಯರಿಂದಲೂ ಸಹಿತರಾಗಿ, ಷಡಂಗವೇದಪಾರಂಗತರಾಗಿಯೂ ಮಂತ್ರಜ್ಞರಾಗಿಯೂ ಇರುವ ಬ್ರಾಹ್ಮಣರಿಗೆ ಹೊನ್ನುಗಳನ್ನೂ ವಸ್ತ್ರಗಳನ್ನೂ ಗೋವುಗಳನ್ನೂ ದಾನಮಾಡಿ, ಉತ್ತಮವಾದ ಅಶ್ವಗಳನ್ನು ಕಟ್ಟಿರುವ ಶ್ರೇಷ್ಠವಾದ ರಥಗಳನ್ನೇರಿ ಮತ್ತೊಂದು ವನಕ್ಕೆ ಪ್ರಯಾಣಮಾಡಿದರು. ಮೊದಲೇ ಶಸ್ತ್ರಪಾಣಿಗಳಾದ ಇಪ್ಪತ್ತುಮಂದಿ ಭೃತ್ಯರು ಧನುಸ್ಸುಗಳನ್ನೂ ಬಾಣಗಳನ್ನೂ ಬತ್ತಳಿಕೆಗಳನ್ನೂ ಯಂತ್ರಗಳನ್ನೂ ಇನ್ನೂ ಅನೇಕವಾದ ಆಯುಧಗಳನ್ನೂ ತೆಗೆದುಕೊಂಡು ದ್ವಾರಕಾಪಟ್ಟಣಕ್ಕೆ ಹೊರಟುಹೋದರು. ಬಡನೆಯೇ ಸುಭದ್ರೆಯು ವಸ್ತ್ರಾಭರಣಗಳನ್ನು ತೆಗೆದುಕೊಂಡು ಆಕೆಯ ದಾಸದಾಸೀಜನರು ಹೊರಡಲು, ಅವರನ್ನು ರಥದಮೇಲೆ ಕೂರಿಸಿಕೊಂಡು ಇಂದ್ರಸೇನನು ದ್ವಾರಕಾಪಟ್ಟಣಕ್ಕೆ ಹೋದನು. ಅನಂತರದಲ್ಲಿ ಬಲಶಾಲಿಗಳಾದ ನಗರವಾಸಿಗಳು ಬಂದು ಧರ್ಮರಾಯನಿಗೆ ಪ್ರದಕ್ಷಿಣೆಯನ್ನು ಮಾಡಿದರು. ಕುರುಜಾಂಗಲದೇಶದಲ್ಲಿ ಮುಖ್ಯರಾದವರೂ ಬ್ರಾಹ್ಮಣರೂಸಹ ಧರ್ಮರಾಯನೊಡನೆ ಮಾತನಾಡುವದಕ್ಕೆ ಬರಲು, ಮಹಾತ್ಮನಾದ ಆ ಧರ್ಮರಾಯನು ತಮ್ಮಂದಿರೊಡಗೂಡಿ ತಂದೆಯಾದವನು ಮಕ್ಕಳನ್ನು ವಿಶ್ವಾಸಿಸುವಂತೆ ಆದರಪೂರ್ವಕವಾಗಿ ಅವರೆಲ್ಲರೊಡನೆಯೂ ಸಂತೋಷದಿಂದ ಮಾತನಾಡತೊಡಗಿದನು. ಆ ಜನಗಳೂ ಕೂಡ ಮಕ್ಕಳು ತಂದೆಯನ್ನು ಹ್ಯಾಗೆ ಭಾವಿಸುವರೋ ಹಾಗೆ ಕುರುಕುಲಶ್ರೇಷ್ಠನಾದ ಧರ್ಮರಾಯನನ್ನು ಭಾವಿಸಿ, ಆತನನ್ನು ಸುತ್ತುವರಿದುಕೊಂಡು, "ಎಲೈ ಧರ್ಮಸ್ವರೂಪನಾದ ಧರ್ಮರಾಯನೆ, ನೀನು ನಮ್ಮೆಲ್ಲರಿಗೂ ನಾಥನಾಗಿದ್ದೆ. ಕುರುಕುಲಶ್ರೇಷ್ಠನಾದ ನೀನು ಈಗ ನಮ್ಮನ್ನೂ ನಗರವಾಸಿಗಳಾದ ಜನಗಳನ್ನೂ ದೇಶವಾಸಿಗಳಾದ ಜನಗಳನ್ನೂಸಹ ಬಿಟ್ಟು, ಮಕ್ಕಳನ್ನು ಬಿಟ್ಟು ತಂದೆಯು ಹೋಗುವಹಾಗೆ ಎಲ್ಲಿ ಹೋಗುವೆ?" ಎಂದು ನುಡಿದು, ಲಜ್ಜೆಪಡುತ್ತ, ಕಣ್ಣೀರುತುಂಬಿಕೊಂಡು, "ಯಾವಾಗಲೂ ಧರ್ಮಪರನಾಗಿ ಸತ್ಪುರುಷನೆನಿಸಿಕೊಂಡಿರುವ ಧರ್ಮರಾಯನಿಗೆ ಕೇಡುಮಾಡಿದ ಕ್ರೂರನಾದ ದುರ್ಯೋಧನನನ್ನೂ ಪಾಪಿಯಾದ ಶಕುನಿಯನ್ನೂ ಕರ್ಣನನ್ನೂ ನಿಂದಿಸಬೇಕು. ಅಕಟಕಟಾ! ಮಹಾತ್ಮನಾಗಿಯೂ ಅಪಾರವಾದ ಸಾಮರ್ಥ್ಯವುಳ್ಳವನಾಗಿಯೂ ಇರುವ ಧರ್ಮರಾಯನು ಇಂದ್ರಪ್ರಸ್ಥಪುರವನ್ನು ತಾನೇ ಮಹೇಶ್ವರನ ಕೈಲಾಸಭವನದಂತೆ ಪ್ರಕಾಶಿಸುವಹಾಗೆ ಮಾಡಿ, ಈಗ ಆ ಪಟ್ಟಣವನ್ನು ಬಿಟ್ಟು ಎಲ್ಲಿ ಹೋಗುವನು! ಮತ್ತು ದೇವಸಭೆಗೆ ಸಮಾನವಾಗಿ ದೇವತೆಗಳಿಂದ ರಕ್ಷಿತವಾದ ದೇವಮಾಯೆಯಂತೆ ಕಂಗೊಳಿಸುವ ಅಸದೃಶವಾದ ಸಭೆಯನ್ನು ತನಗೋಸ್ಕರ ಮಯನು ನಿರ್ಮಾಣಮಾಡಿದ್ದರೂ, ಧರ್ಮರಾಯನು ಅದನ್ನೂ ಬಿಟ್ಟು ಎಲ್ಲಿಗೆ ಹೋಗುವನು!" ಎಂದು ಮಾತನಾಡಿಕೊಳ್ಳುತ್ತಿದ್ದರು. ಆಗ ಧರ್ಮಾರ್ಥಕಾಮವಿಚಾರಜ್ಞನೂ ಮಹಾತೇಜೋವಂತನೂ ಆದ ಅರ್ಜುನನು ಆ ಜನಗಳನ್ನು ಕುರಿತು "ಎಲೈ ಪ್ರಜೆಗಳಿರಾ, ಮಹಾನುಭಾವನಾದ ಧರ್ಮರಾಯನು ವನವಾಸವನ್ನು ನೆರವೇರಿಸಿ, ಶತ್ರುಗಳ ಯಶಸ್ಸನ್ನು ನಾಶಮಾಡಿ, ತನ್ನ ರಾಷ್ಟ್ರವನ್ನು ಪುನಃ ತಾನು ತೆಗೆದುಕೊಳ್ಳುವನು. ಚಿಂತಿಸಬೇಡಿ" ಎಂದು ಗಟ್ಟಿಯಾಗಿ ಹೇಳಿ, ಬ್ರಾಹ್ಮಣಶ್ರೇಷ್ಠರನ್ನು ನೋಡಿ "ಎಲೈ ಬ್ರಾಹ್ಮಣರೆ, ತಪೋನಿಷ್ಠರಾಗಿ ಧರ್ಮಾರ್ಥಗಳನ್ನು ತಿಳಿದಿರುವ ನೀವು ಪುರಜನರೊಡಗೂಡಿಯೂ ಪ್ರತ್ಯೇಕವಾಗಿಯೂ ನಮಗೆ ಕಾರ್ಯಸಿದ್ಧಿಯಾಗುವಹಾಗೆ ಪ್ರಾರ್ಥನೆಮಾಡಿರಿ" ಎಂದು

ನುಡಿದನು. ಅದನ್ನು ಕೇಳಿ ಆ ಬ್ರಾಹ್ಮಣರೂ ಪುರಜನರೂಸಹ ಸಂತೋಷದಿಂದ ಧರ್ಮಾತ್ಮರಲ್ಲಿ ಶ್ರೇಷ್ಠನಾದ ಧರ್ಮರಾಯನಿಗೆ ಪ್ರದಕ್ಷಿಣವಾಗಿ ಬಂದು, ಅವನಿಗೆ ಸಂತೋಷವನ್ನುಂಟುಮಾಡಿ, ಆತನನ್ನೂ ಭೀಮಾರ್ಜುನ ನಕುಲ ಸಹದೇವರನ್ನೂ ದ್ರೌಪದಿಯನ್ನೂ ಸಹ ಮಾತನಾಡಿಸಿ, ಧರ್ಮರಾಯನ ಅನುಜ್ಞೆಯನ್ನು ತೆಗೆದುಕೊಂಡು, ಅವರನ್ನು ಬಿಟ್ಟು ಹೋಗುವದಕ್ಕೆ ಮನಸ್ಸಿಲ್ಲದೆ, ತಮ್ಮತಮ್ಮ ಸ್ಥಾನಗಳಿಗೆ ಹೊರಟುಹೋದರು.

## ೨೪ನೇ ಅಧ್ಯಾಯ.—ಪಾಂಡವರು ಕಾಮ್ಯಕವನದಿಂದ ದ್ವೈತವನಕ್ಕೆ ಬಂದುಸೇರಿದ್ದು.

ಅನಂತರದಲ್ಲಿ ವೈಶಂಪಾಯನಮುನೀಂದ್ರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯನೆ, ಆಬಳಿಕ ಸತ್ಯಪ್ರತಿಜ್ಞನಾಗಿಯೂ ಧರ್ಮಾತ್ಮನಾಗಿಯೂ ಇರುವ ಧರ್ಮರಾಯನು ತನ್ನ ತಮ್ಮಂದಿರೆಲ್ಲರನ್ನೂ ಕುರಿತು "ನಾವು ದುಷ್ಟಜನರಿಲ್ಲದ ಅರಣ್ಯದಲ್ಲಿ ಹನ್ನೆರಡುವರುಷ ವಾಸಮಾಡಬೇಕಷ್ಟೆ. ಯಾವ ಅರಣ್ಯವು ಅನೇಕ ಮೃಗಪಕ್ಷಿಗಳಿಂದಲೂ, ಪುಷ್ಪಫಲಭರಿತಗಳಾದ ವೃಕ್ಷಗಳಿಂದಲೂ, ಪುಣ್ಯಶೀಲರಾದ ಋಷಿಗಳಿಂದಲೂ ರಮ್ಯವಾಗಿಯೂ ಮಂಗಳಕರವಾಗಿಯೂ ಇರುವದೋ, ಅಲ್ಲಿ ನಾವು ಸುಖವಾಗಿ ವಾಸಮಾಡೋಣ" ಎನಲು, ಅದನ್ನು ಕೇಳಿ, ಅರ್ಜುನನು ಮಹಾರಾಜಶ್ರೇಷ್ಠನೂ ಧೀರನೂ ಆದ ಧರ್ಮರಾಯನಲ್ಲಿ ಗುರುಭಕ್ತಿಯನ್ನಿಟ್ಟು "ಎಲೈ ಮಹಾನುಭಾವನೆ, ನೀನು ವೃದ್ಧರಾದ ಋಷಿಗಳ ಸೇವೆಯನ್ನು ಚೆನ್ನಾಗಿಮಾಡಿರುವೆ. ಈ ಲೋಕದಲ್ಲಿ ನಿನಗೆ ತಿಳಿಯದೆ ಇರತಕ್ಕದ್ದು ಯಾವದೂ ಇಲ್ಲ. ನೀನು ವೇದವ್ಯಾಸರು ಮೊದಲಾದ ಅನೇಕ ಬ್ರಾಹ್ಮಣರನ್ನೂ ಸ್ವೇಚ್ಛೆಯಿಂದ ದೇವ ಬ್ರಹ್ಮ ಗಂಧರ್ವ ಸ್ವರ್ಗಾದಿ ಸಕಲಲೋಕಗಳಲ್ಲಿಯೂ ನಿತ್ಯವೂ ಸಂಚರಿಸುತ್ತಿರುವ ಮಹಾತಪಸ್ವಿಯಾದ ನಾರದರನ್ನೂ ಸೇವಿಸಿರುವೆ; ಬ್ರಾಹ್ಮಣರ ನಿಶ್ಚಯವನ್ನೂ ಸಾಮರ್ಥ್ಯವನ್ನೂ ನೀನು ಚನ್ನಾಗಿ ಬಲ್ಲೆ; ಮತ್ತು ಶ್ರೇಯಸ್ಸಿಗೆ ಇದು ಕಾರಣವೆಂಬುವದೂ ನಿನಗೆ ತಿಳಿಯುವದು. ಎಲ್ಲಿ ವಾಸಮಾಡಬೇಕೆಂದು ನಿನಗೆ ಇಷ್ಟವೋ ಅಲ್ಲಿ ವಾಸಮಾಡೋಣ. ಈ ದ್ವೈತವನವು ಪುಣ್ಯತಮವಾದ ಉದಕದಿಂದಲೂ ಪುಷ್ಪಫಲಗಳುಳ್ಳ ವೃಕ್ಷಗಳಿಂದಲೂ ನಾನಾವಿಧ ಪಕ್ಷಿಗಳಿಂದಲೂ ಕೂಡಿರುವದರಿಂದ, ಈ ಪ್ರದೇಶವು ನಮ್ಮ ವಾಸಕ್ಕೆ ಯೋಗ್ಯವಾಗಿರುವದು. ಇದು ನಿನಗೆ ಒಪ್ಪಿದರೆ ಇಲ್ಲೇ ಹನ್ನೆರಡು ವರ್ಷವೂ ವಿಹರಿಸುತ್ತಿರೋಣ; ಹಾಗಲ್ಲದಿದ್ದರೆ ನಿನಗೆ ಇನ್ನೆಲ್ಲಿ ಇಷ್ಟವಾಗಿರುವದೋ ಅಲ್ಲಿ ವಾಸಮಾಡೋಣ" ಎಂದು ನುಡಿದನು. ಆ ಮಾತನ್ನು ಕೇಳಿ ಧರ್ಮರಾಯನು "ಎಲೈ ಅರ್ಜುನನೆ, ನೀನು ಹೇಳಿದ್ದು ನನಗೂ ಸಮ್ಮತವಾಗಿದೆ. ಪುಣ್ಯತಮವಾದ ಈ ದ್ವೈತವನದಲ್ಲಿ ನಾವು ವಾಸಮಾಡೋಣ" ಎಂದು ನುಡಿದನು.

ಬಳಿಕ ಧರ್ಮಾತ್ಮರಾದ ಪಾಂಡವರು ಅಗ್ನಿಹೋತ್ರಿಗಳಾಗಿಯೂ ನಿರಗ್ನಿಗಳಾಗಿಯೂ ವೇದಾಧ್ಯಯನನಿರತರಾಗಿಯೂ ಇರುವ ಬಹುಮಂದಿ ಬ್ರಾಹ್ಮಣರೊಡನೆಯೂ, ವಾನಪ್ರಸ್ಥರೊಡನೆಯೂ ಸನ್ಯಾಸಿಗಳೊಡನೆಯೂ, ಮಹಾತ್ಮರಾದ ಯೋಗಸಿದ್ಧರೊಡನೆಯೂ, ವ್ರತನಿಷ್ಠರಾದ ಋಷಿಗಳೊಡನೆಯೂ ಹೊರಟು ದ್ವೈತವನವನ್ನು ಸೇರಿದರು. ಆಗ ಅಲ್ಲಿ ಧರ್ಮರಾಯನು ವರ್ಷಾಕಾಲದಲ್ಲಿ ಪುಷ್ಪಿಸಿದ ಹೊಂಗೆ, ಓಲೆ, ಮಾವು, ಹಿಪ್ಪೆ, ಅಶೋಕ, ಕಡಹ, ಸರ್ಜಕ, ಅರ್ಜುನ, ಕಾರಾಚ, ಇವು ಮೊದಲಾದ ವೃಕ್ಷಗಳಿಂದ ಮನೋಹರವಾದ ಆ ವನವನ್ನು ನೋಡಿ ಸಂತೋಷಿಸಿದನು. ಆ ವೃಕ್ಷಗಳ ಕೊನೆಗಳಲ್ಲಿ ನವಿಲು, ಕಾಗೆ, ಚಕೋರ, ಸಾರಸ, ಕೋಗಿಲೆ, ಮೊದಲಾದ ಪಕ್ಷಿಗಳು ಮನೋಹರವಾಗಿ ಧ್ವನಿಮಾಡುತ್ತಿದ್ದವು. ಧರ್ಮರಾಯನು ಆ ವನದಲ್ಲಿ ಪರ್ವತಗಳಂತೆ ಮಹತ್ತರಗಳಾಗಿ ಹೆಣ್ಣಾನೆಗಳೊಡಗೂಡಿರುವ ಮದ್ದಾನೆಗಳ ಗುಂಪುಗಳನ್ನು ನೋಡುತ್ತಾ ಹೊರಟು, ಮನೋಹರವಾದ ಸರಸ್ವತೀನದಿಯನ್ನು ಹೊಂದಿ, ಪರಿಶುದ್ಧರಾಗಿಯೂ ಜಟಾಚೀರಧಾರಿಗಳಾಗಿಯೂ ಇರುವ ಧರ್ಮಾತ್ಮರಿಗೆ ವಾಸಭೂತವಾದ ಆ ವನದಲ್ಲಿ ತಪಸ್ಸಿದ್ಧಿಯನ್ನು ಹೊಂದಿದ ಅನೇಕರಾದ ಋಷಿಗಳನ್ನು ಕಂಡು, ತಮ್ಮಂದಿರೊಡನೆ ರಥದಿಂದಿಳಿದು, ಬ್ರಾಹ್ಮಣರೊಡಗೂಡಿ ಇಂದ್ರನು ಸ್ವರ್ಗವನ್ನು ಪ್ರವೇಶಿಸುವಂತೆ ಆ ವನವನ್ನು ಪ್ರವೇಶಿಸಿದನು. ಆಗ

ಆ ವನನಿವಾಸಿಗಳಾದ ಚಾರಣರೂ ತಪಸ್ಸಿದ್ಧರಾದ ಮಹರ್ಷಿಗಳೂಸಹ ರಾಜಶ್ರೇಷ್ಠನಾಗಿಯೂ ಧೀರನಾಗಿಯೂ ಸತ್ಯಸಂಧನಾಗಿಯೂ ಇರುವ ಧರ್ಮರಾಯನನ್ನು ನೋಡಲಿಚ್ಛೆಯುಳ್ಳವರಾಗಿ ಗುಂಪಾಗಿ ಅಲ್ಲಿಗೆ ಬಂದು ಆತನನ್ನು ಸುತ್ತುವರಿದರು. ಬಳಿಕ ಪುಣ್ಯಶೀಲನಾದ ಧರ್ಮರಾಯನು ಕೈಮುಗಿದುಕೊಂಡು ಅವರಿಗೆ ನಮಸ್ಕಾರವನ್ನು ಮಾಡಿ, ಅವರಿಂದ ರಾಜಯೋಗ್ಯವಾಗಿಯೂ ದೇವಯೋಗ್ಯವಾಗಿಯೂ ಪಿತೃಯೋಗ್ಯವಾಗಿಯೂ ಇರುವ ಮರ್ಯಾದೆಯನ್ನು ಪಡೆದು, ಬ್ರಾಹ್ಮಣರಿಂದಲೂ ಧರ್ಮಾತ್ಮರಾದ ಋಷಿಗಳಿಂದಲೂ ಸಹಿತನಾಗಿ, ಪುಷ್ಪಿಸಿರುವ ದೊಡ್ಡದಾದ ಒಂದು ಕದಂಬವೃಕ್ಷದಕೆಳಗೆ ಕೂತುಕೊಂಡನು. ಆಬಳಿಕ ಭರತಕುಲಶ್ರೇಷ್ಠರಾದ ಭೀಮಾರ್ಜುನ ನಕುಲಸಹದೇವರೂ ದ್ರೌಪದಿಯೂಸಹ ತಮ್ಮತಮ್ಮ ವಾಹನಗಳನ್ನು ಬಿಟ್ಟು ಸ್ವೇಚ್ಛೆಯಿಂದ ಆ ಧರ್ಮರಾಯನ ಸಮೀಪದಲ್ಲಿ ಕೂತುಕೊಂಡರು. ಆ ಮಹಾತ್ಮರಾದ ಪಾಂಡವರು ಕೂತುಕೊಂಡಿರುವಾಗ, ಅನೇಕವಾದ ಬಳ್ಳಿಗಳು ಸುತ್ತಿಕೊಂಡು ಬಾಗಿರುವ ಆ ಕಂದಂಬವೃಕ್ಷವು ಮದಿಸಿದ ಆನೆಗಳಿಂದ ಕೂಡಿರುವ ಮಹಾಪರ್ವತದಂತೆ ಶೋಭಿಸುತ್ತಿತ್ತು.

## ೨೫ನೇ ಅಧ್ಯಾಯ.—ಪಾಂಡವರ ಸಮೀಪಕ್ಕೆ ಮಾರ್ಕಂಡೇಯ ಋಷಿಯು ಬಂದದ್ದು.

ಅನಂತರದಲ್ಲಿ ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯನೆ, ಬಳಿಕ ಇಂದ್ರಸಮಾನರಾಗಿಯೂ ಸುಖಕ್ಕೆ ಯೋಗ್ಯರಾಗಿಯೂ ಇರುವ ಪಾಂಡವರು ಆ ದ್ವೈತವನವನ್ನು ಹೊಂದಿ, ಅಲ್ಲಿ ಕಷ್ಟದಿಂದ ವಾಸಮಾಡಿಕೊಂಡು, ಸರಸ್ವತೀನದೀತೀರದಲ್ಲಿರುವ ಮಂಗಳಕರವಾದ ಸಾಲವನದಲ್ಲಿ ವಿಹರಿಸುತ್ತಿರಲು, ಮಹಾನುಭಾವನೂ ಕುರುಶ್ರೇಷ್ಠನೂ ಆದ ಧರ್ಮರಾಯನು ಆ ವನದಲ್ಲಿ ವಾಸಮಾಡುವ ಯತಿಗಳನ್ನೂ ಋಷಿಗಳನ್ನೂ ಬ್ರಾಹ್ಮಣಶ್ರೇಷ್ಠರನ್ನೂ ಉತ್ತಮವಾದ ಫಲಮೂಲಗಳಿಂದ ತೃಪ್ತಿಪಡಿಸುತ್ತಿದ್ದನು. ಆಗ ತೇಜೋವಂತರಾದ ಪುರೋಹಿತರಾದ ಧೌಮ್ಯಾಚಾರ್ಯರು ದರ್ಶಪೂರ್ಣಮಾಸಗಳನ್ನೂ ಪಿಂಡ ಪಿತೃಯಜ್ಞ ದರ್ಶಶ್ರಾದ್ಧ ಮೊದಲಾದ ಕ್ರಿಯೆಗಳನ್ನೂ ಕ್ರಮವಾಗಿ ಪಾಂಡವರಿಂದ ಮಾಡಿಸುತ್ತಿದ್ದರು.

ಈ ರೀತಿಯಲ್ಲಿ ಶ್ರೀಮಂತರಾದ ಪಾಂಡವರು ರಾಜ್ಯವನ್ನು ಬಿಟ್ಟು ಆ ವನದಲ್ಲಿ ವಾಸಮಾಡುತ್ತಿರಲು, ಅಧಿಕ ತೇಜಸ್ಸಂಪನ್ನನೂ ವೃದ್ಧನೂ ಆದ ಮಾರ್ಕಂಡೇಯಮಹರ್ಷಿಯು ಅತಿಥಿಯಾಗಿ ಅಲ್ಲಿಗೆ ಬಂದನು. ಆಗ ದೇವತೆಗಳಿಗೂ ಋಷಿಗಳಿಗೂ ಮನುಷ್ಯರಿಗೂ ಪೂಜ್ಯನೆನಿಸಿ ಪ್ರಜ್ವಲಿಸುತ್ತಿರುವ ಯಜ್ಞೇಶ್ವರನಂತೆ ಪ್ರಕಾಶಮಾನನಾದ ಆ ಮಹರ್ಷಿಯನ್ನು ನೋಡಿ, ಅಪ್ರತಿಮಬಲಪರಾಕ್ರಮಶಾಲಿಯೂ ಕುರುಶ್ರೇಷ್ಠನೂ ಆದ ಧರ್ಮರಾಯನು ಆತನಿಗೆ ಪೂಜೆಯನ್ನು ಮಾಡಿದನು. ಸರ್ವಜ್ಞನೂ ತೇಜಸ್ವಿಯೂ ಆದ ಮಾರ್ಕಂಡೇಯನು ಮಹರ್ಷಿಗಳ ಮಧ್ಯದಲ್ಲಿ ದ್ರೌಪದಿಯನ್ನೂ ಧರ್ಮರಾಯನನ್ನೂ ಭೀಮಾರ್ಜುನರನ್ನೂ ನೋಡಿ, ಮನಸ್ಸಿನಲ್ಲಿ ಶ್ರೀರಾಮನನ್ನು ಸ್ಮರಿಸಿಕೊಂಡು ಸಂತೋಷಿಸಿ ಮುಗುಳ್ನಗೆ ನಕ್ಕನು. ಅದನ್ನು ನೋಡಿ ಧರ್ಮರಾಯನು ಮನಸ್ಸನ್ನು ಚಿಕ್ಕದು ಮಾಡಿಕೊಂಡು, ಆ ಋಷಿಯನ್ನು ಕುರಿತು "ಎಲೈ ಮಾರ್ಕಂಡೇಯನೆ, ಈ ಋಷಿಗಳೆಲ್ಲರೂ ನನ್ನನ್ನು ನೋಡಿ ಮನಸ್ಸಂಕೋಚಮಾಡಿಕೊಂಡಿರುವರು; ನೀನುಮಾತ್ರ ನನ್ನನ್ನು ನೋಡಿ ಈ ಋಷಿಗಳೆಲ್ಲರೂ ನೋಡುತ್ತಿರಲು, ಸಂತೋಷಯುಕ್ತನಾಗಿ ಯಾತಕ್ಕೋಸ್ಕರ ಆಶ್ಚರ್ಯಪಡುತ್ತಿರುವೆ?" ಎಂದು ಕೇಳಿದನು. ಅದಕ್ಕೆ ಮಾರ್ಕಂಡೇಯನು "ಅಯ್ಯಾ ಧರ್ಮರಾಯನೆ, ನನಗೆ ಸಂತೋಷವೂ ಇಲ್ಲ, ಆಶ್ಚರ್ಯವೂ ಇಲ್ಲ, ಮತ್ತು ಸಂತೋಷದಿಂದುಂಟಾದ ಗರ್ವವೂ ಇಲ್ಲ; ನಿನ್ನ ವಿಪತ್ತನ್ನು ನೋಡಿ ನನಗೆ ಸತ್ಯಸಂಧನಾದ ದಶರಥರಾಮನ ಸ್ಮೃತಿಬಂತು. ಆ ಶ್ರೀರಾಮನು ಪಿತೃವಾಕ್ಯಪರಿಪಾಲನೆಗೋಸ್ಕರ ಲಕ್ಷ್ಮಣನೊಡನೆ ಧನುರ್ಧಾರಿಯಾಗಿ ವನವಾಸಮಾಡುತ್ತಿದ್ದದ್ದನ್ನು ಋಶ್ಯಮೂಕಪರ್ವತದ ತಪ್ಪಲಲ್ಲಿ ನಾನು ನೋಡಿದ್ದೆನು. ಇಂದ್ರನಿಗೆ ಸಮಾನನೂ ಯಮನಿಗೆ ನಿಯಾಮಕನೂ ಇಂದ್ರನೇ ತಾನಾಗಿ ನಮುಚಿದಾನವನನ್ನು ಸಂಹಾರಮಾಡಿದವನೂ ಅಜೇಯನೂ ಮಹಾತ್ಮನೂ ದೋಷರಹಿತನೂ ಆದ ಶ್ರೀರಾಮನು ಪಿತೃವಾಕ್ಯವನ್ನು ಪರಿಪಾಲಿಸತಕ್ಕದ್ದು ತನಗೆ ಧರ್ಮವೆಂದೆಣಿಸಿ, ರಾಜ್ಯಭೋಗಗಳನ್ನು ಬಿಟ್ಟು, ಅರಣ್ಯದಲ್ಲಿ ವಾಸಮಾಡಿದನೇ ಹೊರತು, ತಾನು ಬಹುಸಮರ್ಥನೆಂದು ಭಾವಿಸಿಕೊಂಡು ಅಧರ್ಮವನ್ನು ಆಚರಿ

ಸಲಿಲ್ಲ. ನಾಭಾಗ, ಭಗೀರಥ ಮೊದಲಾದ ರಾಜರು ಸಮುದ್ರದವರಿಗೂ ಇರುವ ಭೂಮಿಯನ್ನು ಜಯಿಸಿ, ಸತ್ಯದಿಂದಲೇ ಪುಣ್ಯಲೋಕಗಳನ್ನೂ ಜಯಿಸಿದರೇ ಹೊರತು, ತಾವು ಬಹುಸಮರ್ಥರೆಂದು ಅಧರ್ಮವನ್ನು ಆಚರಿಸಲಿಲ್ಲ. ಸತ್ಯಸಂಧನಾದ ಅಳರ್ಕ, ಕಾಶ, ಕರೂಷ ಮೊದಲಾದ ರಾಜರು ರಾಜ್ಯಗಳನ್ನೂ ಕೋಶಗಳನ್ನೂ ಬಿಟ್ಟು, ಸತ್ಯದಿಂದಲೇ ಪುಣ್ಯಲೋಕಗಳನ್ನು ಜೈಸಿದರೇ ಹೊರತು, ತಾವು ಬಹು ಸಮರ್ಥರೆಂದು ಅಧರ್ಮವನ್ನು ಆಚರಿಸಲಿಲ್ಲ. ಮಹಾತ್ಮರಾದ ಸಪ್ತರ್ಷಿಗಳು ಅನಾದಿಯಾದ ವೇದವಾಕ್ಯಗಳಿಂದ ಉಕ್ತವಾದ ಅಗ್ನಿಹೋತ್ರಾದಿಕರ್ಮಗಳಿಂದ ದೇವರನ್ನು ಆರಾಧಿಸುತ್ತ, ಸತ್ಯದಿಂದಲೇ ಆಕಾಶದಲ್ಲಿ ಪ್ರಕಾಶಿಸುತ್ತಿರುವರೇ ಹೊರತು, ತಾವು ಬಹು ಸಮರ್ಥರೆಂದು ಅಧರ್ಮವನ್ನು ಆಚರಿಸಲಿಲ್ಲ. ಮತ್ತು ಮಹಾಬಲಶಾಲಿಗಳಾಗಿಯೂ ಪರ್ವತಶಿಖರಕ್ಕೆ ಸಮಾನಗಳಾದ ದೊಡ್ಡ ಕೊಂಬುಗಳುಳ್ಳವುಗಳಾಗಿಯೂ ಇರುವ ಆನೆಗಳು ಭಗವಂತನಿಗೆ ಅಧೀನಗಳಾಗಿ ಸತ್ಯಕ್ಕೆ ಕಟ್ಟುಬಿದ್ದಿರುವವೇ ಹೊರತು, ತಾವು ಬಹು ಸಮರ್ಥಗಳೆಂದು ಅಧರ್ಮವನ್ನು ಆಚರಿಸುವದಿಲ್ಲ. ಎಲೈ ಧರ್ಮರಾಯನೇ ನೋಡು, ಸರ್ಪವೊದಲಾದ ಪ್ರಾಣಿಗಳು ತಮ್ಮ ಜಾತಿಗೆ ಯೋಗ್ಯವಾಗಿ ದೇವರಿಂದ ಕ್ಲೃಪ್ತವಾಗಿರುವ ಕರ್ಮಗಳನ್ನು ಸತ್ಯದಿಂದಲೇ ಆಚರಿಸಿಕೊಂಡಿರುವವೇ ಹೊರತಾಗಿ, ತಾವು ಬಹು ಸಮರ್ಥಗಳೆಂದು ಅಧರ್ಮವನ್ನು ಆಚರಿಸುವದಿಲ್ಲ. ಎಲೈ ಧರ್ಮರಾಯನೆ, ನೀನೂ ಸತ್ಯವಂತನಾಗಿಯೂ, ಧರ್ಮಾತ್ಮನಾಗಿಯೂ, ಯೋಗ್ಯವಾದ ಕಾರ್ಯವನ್ನು ಮಾಡತಕ್ಕವನಾಗಿಯೂ, ಅಕಾರ್ಯದಲ್ಲಿ ಲಜ್ಜೆಯುಳ್ಳವನಾಗಿಯೂ ಇರುವದರಿಂದ, ಎಲ್ಲರಿಗಿಂತಲೂ ಅಧಿಕವಾದ ಯಶಸ್ಸನ್ನು ಪಡೆದು ತೇಜೋನಿಧಿಯಾದ ಸೂರ್ಯನಿಗೆ ಸಮಾನವಾದ ತೇಜಸ್ಸಿನಿಂದ ಪ್ರಕಾಶಿಸುತ್ತಿರುವೆ. ಎಲೈ ಮಹಾನುಭಾವನೆ, ನೀನು ಪ್ರತಿಜ್ಞೆ ಮಾಡಿರುವಂತೆ ಈ ಕಷ್ಟವಾದ ವನವಾಸವನ್ನು ನೆರವೇರಿಸಿದ ಬಳಿಕ, ನಿನ್ನ ಮಹತ್ತಾದ ಭುಜಪರಾಕ್ರಮದಿಂದ ಕೌರವರನ್ನು ಜಯಿಸಿ ಐಶ್ವರ್ಯವನ್ನು ಪಡೆಯುವೆ" ಎಂದು ನುಡಿದು, ಆ ಮಹರ್ಷಿಯು ಆ ಋಷಿಸಭೆಯಲ್ಲಿ ಸತ್ಪುರುಷರಿಂದೊಡಗೂಡಿದ ಪಾಂಡವರನ್ನೂ ಧೌಮ್ಯಾಚಾರ್ಯರನ್ನೂ ಸಹ ಯಥೋಚಿತವಾಗಿ ಮಾತಾಡಿಸಿ, ಬಳಿಕ ಉತ್ತರದಿಕ್ಕಿಗೆ ಪ್ರಯಾಣಮಾಡಿದರು.

## ೨೭ನೇ ಅಧ್ಯಾಯ.—ಪಾಂಡವರಿಗೆ ಬಕದಾಲ್ಭ್ಯಋಷಿಗಳು ನೀತಿ ಹೇಳಿದ್ದು.

ವೈಶಂಪಾಯನಮುನೀಂದ್ರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯನೆ, ಬಳಿಕ ಮಹಾತ್ಮರಾದ ಪಾಂಡವರು ಆ ದ್ವೈತವನದಲ್ಲಿ ವಾಸಮಾಡುತ್ತಿರಲು, ಆ ವನವೆಲ್ಲವೂ ಬ್ರಾಹ್ಮಣರಿಂದ ನಿಬಿಡವಾಗಿಯೂ, ಎಲ್ಲಾ ಕಡೆಯಲ್ಲೂ ಬ್ರಾಹ್ಮಣರ ವೇದಘೋಷದಿಂದ ಬ್ರಹ್ಮಲೋಕಕ್ಕೆ ಸಮಾನವಾಗಿಯೂ ಇತ್ತು; ಆ ಬ್ರಾಹ್ಮಣರು ಋಗ್ವೇದ ಯಜುರ್ವೇದ ಸಾಮವೇದ ಗದ್ಯಗಳನ್ನು ಪಠನೆಮಾಡುತ್ತಿರಲು, ಆ ಶಬ್ದವು ಕೇಳತಕ್ಕವರಿಗೆ ಮನೋಹರವಾಗಿತ್ತು. ಮತ್ತು ಆಗ ಶೂರರಾದ ಪಾಂಡವರ ಧನುಷ್ಟಂಕಾರಧ್ವನಿಯೂ ವಿದ್ವಾಂಸರ ವೇದಘೋಷವೂ ಸೇರಿದ್ದುದರಿಂದ, ಬ್ರಾಹ್ಮಣ್ಯದೊಡನೆ ಕ್ಷಾತ್ರವೂ ಒಡಗೂಡಿ ಅಧಿಕವಾಗಿ ಶೋಭಿಸುತ್ತಿತ್ತು. ಧರ್ಮರಾಯನು ಸಂಧ್ಯಾವಂದನೆಯನ್ನು ಮಾಡಿ ಋಷಿಗಳೊಡನೆ ಕುಳಿತಿರಲು, ಬಕದಾಲ್ಭ್ಯರು ಆತನನ್ನು ನೋಡಿ, "ಎಲೈ ರಾಜೇಂದ್ರನೆ, ಈ ವನದಲ್ಲಿ ತಪಸ್ವಿಗಳಾದ ಬ್ರಾಹ್ಮಣರು ಪ್ರಜ್ವಲಿಸುತ್ತಿರುವ ಯಜ್ಞೇಶ್ವರನಲ್ಲಿ ಹೋಮವನ್ನು ಮಾಡುತ್ತಿರುವರು. ಈ ಸಮಯವನ್ನು ನೋಡು: ಭೃಗು, ಅಂಗಿರಸ್ಸು, ವಸಿಷ್ಠ, ಕಾಶ್ಯಪ, ಅಗಸ್ತ್ಯ, ಅತ್ರಿ ಇವರ ವಂಶಗಳಲ್ಲಿ ಉತ್ಪನ್ನರಾಗಿಯೂ ಮಹಾತ್ಮರಾಗಿಯೂ ವ್ರತನಿಷ್ಠರಾಗಿಯೂ ಎಲ್ಲಾ ಲೋಕಗಳಲ್ಲಿಯೂ ಶ್ರೇಷ್ಠತ್ವವನ್ನು ಪಡೆದಿರುವರಾಗಿಯೂ ಇರುವ ಈ ಬ್ರಾಹ್ಮಣರು ನಿನ್ನಿಂದ ರಕ್ಷಿತರಾಗಿ, ಈ ಪುಣ್ಯತಮವಾದ ದ್ವೈತವನದಲ್ಲಿ ಧರ್ಮಾಚರಣೆಯನ್ನು ಮಾಡಿಕೊಂಡಿರುವರು. ಎಲೈ ಧರ್ಮರಾಯನೆ, ನಾನೊಂದು ಮಾತನ್ನು ಹೇಳುವೆನು. ಅದನ್ನು ನೀನು ತಮ್ಮಂದಿರೊಡಗೂಡಿ ಕೇಳು: ಬ್ರಾಹ್ಮಣರೊಡನೆ ಕ್ಷತ್ರಿಯರೂ ಕ್ಷತ್ರಿಯರೊಡನೆ ಬ್ರಾಹ್ಮಣರೂ ಹೊಂದಿಕೊಂಡಿದ್ದರೆ, ಅದರಿಂದ ಒಣಗಿದ ಕಾಡು ಗಾಳಿಯೊಡಗೂಡಿದ ಬೆಂಕಿಯಿಂದ ಹ್ಯಾಗೆ ಸುಟ್ಟುಹೋಗುವದೋ ಹಾಗೆ, ಮಹತ್ತಾದ ಯುದ್ಧರಂಗದಲ್ಲಿ ಶತ್ರುಗಳು ನಾಶವಾಗಿ ಹೋಗುವರು.

ಬ್ರಾಹ್ಮಣನ ಸಹಾಯವಿಲ್ಲದ ಕ್ಷತ್ರಿಯನು ಬಹುಕಾಲ ಐಶ್ವರ್ಯವನ್ನು ಅನುಭವಿಸಲಾರನು. ಆದ್ದರಿಂದ ಈಲೋಕವನ್ನೂ ಪರಲೋಕವನ್ನೂ ಜಯಿಸಲಿಚ್ಛೆಯುಳ್ಳ ಕ್ಷತ್ರಿಯನು ಧರ್ಮಾರ್ಥಗಳನ್ನು ಚೆನ್ನಾಗಿ ತಿಳಿದ ಜ್ಞಾನಸಂಪನ್ನನಾದ ಬ್ರಾಹ್ಮಣನನ್ನು ಸಹಾಯಮಾಡಿಕೊಳ್ಳಬೇಕು. ಅಂಥಾ ಬ್ರಾಹ್ಮಣಸಹಾಯವುಳ್ಳ ಕ್ಷತ್ರಿಯನೇ ಶತ್ರುಗಳನ್ನು ಜಯಿಸುವನು. ಕ್ಷತ್ರಿಯನಿಗೆ ಪ್ರಜಾಪಾಲನವೆಂಬ ಧರ್ಮವು ಶ್ರೇಯಸ್ಕರವಾದದ್ದು. ಅಂಥಾ ಧರ್ಮವನ್ನು ಆತನು ಬ್ರಾಹ್ಮಣನ ಸಹಾಯದಿಂದ ಪಡೆಯಬೇಕು. ವಿರೋಚನಪುತ್ರನಾದ ಬಲಿಚಕ್ರವರ್ತಿಯು ಬ್ರಾಹ್ಮಣನ ಸಹಾಯವಿಲ್ಲದೆ ತನ್ನ ಇಷ್ಟಾರ್ಥವನ್ನು ಪಡೆಯಲಿಲ್ಲ, ಮತ್ತು ಆತನಿಗೆ ಬ್ರಾಹ್ಮಣನ ಸಹಾಯದಿಂದಲೇ ಅಕ್ಷಯವಾದ ಐಶ್ವರ್ಯವುಂಟಾಯಿತು. ಆತನು ಬ್ರಾಹ್ಮಣನ ನೀತಿಬಲದಿಂದ ಸಮಸ್ತ ಭೂಮಂಡಲಾಧಿಪತ್ಯವನ್ನೂ ಹೊಂದಿ, ಬಳಿಕ ಆ ಬ್ರಾಹ್ಮಣರಲ್ಲಿ ದ್ವೇಷಮಾಡಿದ್ದರಿಂದ ಅಧೋಗತಿಯನ್ನು ಹೊಂದಿದನು. ಯಾವ ಕ್ಷತ್ರಿಯನು ಬ್ರಾಹ್ಮಣರ ಸಹಾಯವನ್ನು ಬಿಟ್ಟು ಬಹುಕಾಲ ಮತ್ತೊಂದು ವರ್ಣದ ಸಹಾಯವನ್ನು ಅಪೇಕ್ಷಿಸುವನೋ ಅಂಥವನು, ಸಕಲೈಶ್ವರ್ಯಸಮೇತವಾದ ಭೂಮಿಯನ್ನು ಕಳೆದುಕೊಳ್ಳುವನು. ಬ್ರಾಹ್ಮಣನು ಯಾವ ಕ್ಷತ್ರಿಯನನ್ನು ನೀತಿಮಾರ್ಗದಿಂದ ಶಿಕ್ಷಿಸುವನೋ ಅಂಥ ಕ್ಷತ್ರಿಯನಿಗೆ, ನಾಲ್ಕು ಸಮುದ್ರದವರಿಗೂ ಇರತಕ್ಕ ಭೂಮಂಡಲವು ಸ್ವಾಧೀನವಾಗುವದು. ಯುದ್ಧರಂಗದಲ್ಲಿ ಅಂಕುಶವನ್ನು ಹಿಡಿದಿರತಕ್ಕ ಮಾವುತನು ಇಲ್ಲದೇ ಹೋದರೆ ಆನೆಯ ಸಾಮರ್ಥ್ಯವು ಹ್ಯಾಗೆ ನಷ್ಟವಾಗುವದೋ ಹಾಗೆ, ಬ್ರಾಹ್ಮಣನ ಸಹಾಯವಿಲ್ಲದ ಕ್ಷತ್ರಿಯನ ಬಲವು ನಷ್ಟವಾಗುವದು. ಎಲೈ ರಾಯನೆ, ಬ್ರಾಹ್ಮಣನಲ್ಲಿ ಅಸದೃಶವಾದ ಜ್ಞಾನವೂ ಕ್ಷತ್ರಿಯನಲ್ಲಿ ಅಸಮಾನವಾದ ಬಲವೂ ಇರುವವು. ಈಯೆರಡೂ ಒಂದಕ್ಕೊಂದು ಸೇರಿದ್ದರೆ ಸಕಲರೂ ಸಂತೋಷಪಡುವರು. ಅಗ್ನಿಯು ಗಾಳಿಯ ಸಹಾಯದಿಂದ ಮಹತ್ತಾಗಿ ಬಣಗಿದ ಮೆಳೆಯನ್ನು ಹ್ಯಾಗೆ ದಹಿಸುವದೋ ಹಾಗೆ, ಕ್ಷತ್ರಿಯನು ಬ್ರಾಹ್ಮಣನ ಸಹಾಯದಿಂದ ಅಭಿವೃದ್ಧಿಯನ್ನು ಹೊಂದಿ, ಶತ್ರುಗಳನ್ನು ನಾಶಮಾಡುವನು. ಕ್ಷತ್ರಿಯನಾದವನು ಪಡೆಯದೆ ಇರತಕ್ಕದ್ದನ್ನು ಪಡೆಯುವದಕ್ಕೂ, ಪಡೆದದನ್ನು ವೃದ್ಧಿಪಡಿಸುವದಕ್ಕೂ, ಬುದ್ಧಿವಂತನಾದ ಬ್ರಾಹ್ಮಣನೊಡನೆ ಆಲೋಚಿಸಬೇಕು. ಎಲೈ ಧರ್ಮರಾಯನೆ, ನೀನು ಪಡೆಯದೆ ಇರತಕ್ಕದ್ದನ್ನು ಪಡೆಯುವದಕ್ಕೂ ಪಡೆದದ್ದನ್ನು ವೃದ್ಧಿಪಡಿಸುವದಕ್ಕೂ, ಸಂಪಾದಿಸಿದ್ದನ್ನು ಸತ್ಪಾತ್ರದಲ್ಲಿ ವಿನಿಯೋಗಿಸುವದಕ್ಕೂ, ಕೀರ್ತಿವಂತನಾಗಿಯೂ ವೇದಶಾಸ್ತ್ರಗಳನ್ನು ತಿಳಿದ ವಿದ್ವಾಂಸನಾಗಿಯೂ ಇರುವ ಬ್ರಾಹ್ಮಣನನ್ನೇ ಸೇವಿಸು. ನಿನಗೆ ನಿತ್ಯವೂ ಬ್ರಾಹ್ಮಣರಲ್ಲಿ ಅಧಿಕವಾದ ವಿಶ್ವಾಸವಿರುವದು. ಅದರಿಂದ ನಿನ್ನ ಯಶಸ್ಸು ಎಲ್ಲಾ ಲೋಕಗಳಲ್ಲಿಯೂ ಹರಡಿಕೊಂಡು ಪ್ರಕಾಶಿಸುತ್ತಿರುವದು." ಹೀಗೆ ಆ ಬಕದಾಲ್ಭ್ಯರು ಧರ್ಮರಾಯನಿಗೆ ಹೇಳಿ ಆತನನ್ನು ಪ್ರಶಂಸೆ ಮಾಡಿದಮೇಲೆ, ಅಲ್ಲಿದ್ದ ಬ್ರಾಹ್ಮಣರು ಬಕದಾಲ್ಭ್ಯರನ್ನು ಪೂಜಿಸಿ ಬಹಳ ಸಂತೋಷವನ್ನು ಹೊಂದಿದರು. ಬಳಿಕ ದ್ವೈಪಾಯನ, ನಾರದ, ಜಾಮದಗ್ನ್ಯ, ಪೃಥುಶ್ರವ, ಇಂದ್ರದ್ಯುಮ್ನ, ಭಾಲುಕಿ, ಕೃತಚೇತ, ಸಹಸ್ರಪಾತ್ತು, ಕರ್ಣಶ್ರವ, ಮುಂಜ, ಲವಣಾಶ್ವ, ಕಾಶ್ಯಪ, ಹಾರೀತ, ಸ್ಥೂಣಕರ್ಣ, ಅಗ್ನಿವೇಶ್ಯ, ಶೌನಕ, ಕೃತವಾಕ್ಕು, ಸುವಾಕ್ಕು, ಬೃಹದಶ್ವ, ವಿಭಾವಸು, ಊರ್ಧ್ವರೇತ, ವೃಷಾಮಿತ್ರ, ಸುಹೋತ್ರ, ಹೋತ್ರವಾಹನ ಇವರೇ ಮೊದಲಾದ ಋಷಿಗಳೂ ಇನ್ನೂ ವ್ರತನಿಷ್ಠರಾದ ಬ್ರಾಹ್ಮಣರೂಸಹ ಋಷಿಗಳು ಇಂದ್ರನನ್ನು ಪೂಜಿಸುವಂತೆ ಧರ್ಮರಾಯನನ್ನು ಪೂಜಿಸಿದರು.

## ೨೭ನೇ ಅಧ್ಯಾಯ.—ದ್ರೌಪದಿಯ ಪರಿತಾಪವಾಕ್ಯ.

ಅನಂತರದಲ್ಲಿ ವೈಶಂಪಾಯನಮುನೀಂದ್ರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯನೆ, ಬಳಿಕ ಪಾಂಡವರು ದ್ರೌಪದಿಯೊಡನೆ ಆ ವನದಲ್ಲಿದ್ದುಕೊಂಡು, ಆ ಸಾಯಂಕಾಲದಲ್ಲಿ ದುಃಖಪಡುತ್ತ, ಒಂದು ಕಡೆಯಲ್ಲಿ ಕೂತುಕೊಂಡು ಪೂರ್ವದಲ್ಲಿ ನಡೆದ ವೃತ್ತಾಂತವನ್ನು ಹೇಳುತ್ತಿದ್ದರು. ಆಗ ದರ್ಶನೀಯಳೂ ಅಭಿಜ್ಞೆಯೂ ಪತಿವ್ರತೆಯೂ ಪಾಂಡವಪ್ರಿಯೆಯೂ ಆದ ಆ ದ್ರೌಪದಿಯು ಧರ್ಮರಾಯನನ್ನು ಕುರಿತು ಮಾತನಾಡಲುಪಕ್ರಮಿಸಿದಳು: "ರಾಜೇಂದ್ರನೆ, ಪಾಪಿಷ್ಠನಾಗಿಯೂ ಘಾತುಕನಾಗಿಯೂ ದುರಾತ್ಮನಾಗಿಯೂ ಇರುವ ದುರ್ಯೋ

ಧನನು ನಾವು ಇಷ್ಟು ದುಃಖಪಡುತ್ತಿದ್ದರೂ ತಾನು ಸ್ವಲ್ಪವೂ ವ್ಯಸನಪಡದೇ ಇರುವನಲ್ಲ! ಆ ಪಾಪಾತ್ಮನಾದ ದುರ್ಯೋಧನನು ಕೃಷ್ಣಾಜಿನವನ್ನು ಧರಿಸಿರುವ ನಿನ್ನನ್ನು ನನ್ನೊಡನೆ ವನವಾಸಕ್ಕೆ ಕಳುಹಿಸಿ, ಸ್ವಲ್ಪವಾದರೂ ಪಶ್ಚಾತ್ತಾಪ ಪಡಲಿಲ್ಲವಲ್ಲ! ದುಷ್ಟಾತ್ಮನಾದ ಆ ದುರ್ಯೋಧನನು ಧರ್ಮಾತ್ಮನಾಗಿಯೂ ಜ್ಯೇಷ್ಠನಾಗಿಯೂ ಇರುವ ನಿನ್ನ ಸಂಗಡ ಅತ್ಯಂತ ಕಠಿನವಾದ ಮಾತುಗಳನ್ನಾಡಿದನಲ್ಲ! ಅವನ ಹೃದಯವು ಉಕ್ಕಿನಿಂದ ಮಾಡಿದ್ದಾಗಿರಬಹುದೆ? ಪಾಪಶೀಲನಾದ ಆ ದುರಾತ್ಮನು ಸುಖಪಡುವದಕ್ಕೆ ಯೋಗ್ಯನಾಗಿಯೂ ದುಃಖಪಡುವದಕ್ಕೆ ಅನರ್ಹನಾಗಿಯೂ ಇರುವ ನಿನಗೆ ತನ್ನ ಮಿತ್ರರೊಡಗೂಡಿ ಇಂಥ ದುಃಖವನ್ನುಂಟುಮಾಡಿ, ತಾನು ಸಂತೋಷಪಡುತ್ತಿರುವನು. ಭರತಶ್ರೇಷ್ಠನಾದ ಧರ್ಮರಾಯನೆ, ನೀನು ಕೃಷ್ಣಾಜಿನವನ್ನು ಧರಿಸಿ ಅರಣ್ಯಕ್ಕೆ ಹೊರಡಲು, ಪಾಪಾತ್ಮನಾದ ದುರ್ಯೋಧನ, ಕರ್ಣ, ದುರಾತ್ಮನಾದ ಶಕುನಿ, ದುರ್ಭ್ರಾತೃವಾದ ದುಶ್ಶಾಸನ, ಈ ನಾಲ್ಕುಮಂದಿಯ ಕಣ್ಣಿನಲ್ಲಿ ಮಾತ್ರ ನೀರು ಬರಲಿಲ್ಲ; ಉಳಿದ ಎಲ್ಲಾ ಕೌರವರೂ ದುಃಖಪಡುತ್ತ ಕಣ್ಣೀರನ್ನು ಸುರಿಸಿದರು. ಮಹಾರಾಜನೆ ಕೇಳು, ಸುಖಕ್ಕೆ ಯೋಗ್ಯನಾಗಿ ದುಃಖಕ್ಕೆ ಅನರ್ಹನಾದ ನಿನ್ನ ಈ ಹಾಸಿಗೆಯನ್ನು ನೋಡಿ, ನಾನು ಪೂರ್ವದಲ್ಲಿ ನೀನು ಎಂಥಾ ಹಾಸಿಗೆಯಲ್ಲಿ ಪವಡಿಸುತ್ತಿದ್ದೆಯೋ ಅದನ್ನು ನೆನೆದು ವ್ಯಸನಪಡುತ್ತೇನೆ, ಮತ್ತು ಪೂರ್ವದಲ್ಲಿ ಸಭಾಮಧ್ಯದೊಳಗೆ ಗಜದಂತದಿಂದ ಮಾಡಿದ ರತ್ನಖಚಿತವಾದ ಸಿಂಹಾಸನದಮೇಲೆ ಕೂತುಕೊಳ್ಳುತ್ತಿದ್ದ ನೀನು ಈಗ ದರ್ಭಾಸನದಲ್ಲಿ ಕೂತುಕೊಂಡಿರುವದನ್ನು ನೋಡಿ ಅಧಿಕವಾಗಿ ದುಃಖಿಸುತ್ತೇನೆ. ಪೂರ್ವದಲ್ಲಿ ಮಯನಿರ್ಮಿತವಾದ ಸಭೆಯೊಳಗೆ ಅನೇಕ ರಾಜರಿಂದ ಆವೃತನಾಗಿದ್ದು, ಈಗ ಹಾಗಿಲ್ಲದಿರುವ ನಿನ್ನನ್ನು ನೋಡುತ್ತಿರುವ ನನ್ನ ಮನಸ್ಸಿಗೆ ಹ್ಯಾಗೆ ಸಮಾಧಾನ ಉಂಟಾದೀತು? ದಿವ್ಯವಾದ ಗಂಧವನ್ನು ಲೇಪಿಸಿಕೊಂಡು ಸೂರ್ಯನಂತೆ ಪ್ರಕಾಶಮಾನನಾಗಿದ್ದ ನೀನು ಈಗ ಮಲಿನಭಾವದಿಂದಿರುವದನ್ನು ನೋಡಿ ನನಗೆ ಮೂರ್ಛೆಯುಂಟಾಗುವದು! ಶುಭ್ರವಾದ ದಿವ್ಯಪೀತಾಂಬರವನ್ನುಟ್ಟಿದ್ದ ನಿನ್ನನ್ನು ನೋಡಿದ ನಾನು ಈಗ ನೀನು ನಾರುಮಡಿಯನ್ನುಟ್ಟಿರುವದನ್ನು ನೋಡುತ್ತಿರುವೆನಲ್ಲಾ! ರಾಜೇಂದ್ರನೆ, ಮೊದಲು ನಿನ್ನ ಮನೆಯಲ್ಲಿ ಸ್ತ್ರೀಯರು ಅನೇಕರಾದ ಬ್ರಾಹ್ಮಣರಿಗೆ ಅವರವರ ಅಪೇಕ್ಷಾನುಗುಣವಾಗಿ ಷಡ್ರಸೋಪೇತವಾದ ಅನ್ನವನ್ನು ಚಿನ್ನದ ಪಾತ್ರೆಗಳಿಂದ ಬಡಿಸುತ್ತಿದ್ದರು, ಮತ್ತು ನೀನು ಗೃಹಸ್ಥಾಶ್ರಮಿಗಳಿಗೂ ವಾನಪ್ರಸ್ಥರಿಗೂ ಸಂನ್ಯಾಸಿಗಳಿಗೂ ಅವರವರಿಗೆ ಬೇಕಾದಹಾಗೆ ಷಡ್ರಸೋಪೇತವಾದ ಪಕ್ವಾನ್ನಗಳನ್ನು ಮಾಡಿಸಿ, ಮನೆಯಲ್ಲಿ ಭೋಜನಮಾಡಿಸುತ್ತಿದ್ದೆ; ಈಗ ಅದನ್ನು ನೋಡದೇ ಇರುವ ನನ್ನ ಮನಸ್ಸಿಗೆ ಹ್ಯಾಗೆ ಸಮಾಧಾನವುಂಟಾದೀತು? ಪೂರ್ವದಲ್ಲಿ ಕುಂಡಲಾದ್ಯಾಭರಣಗಳನ್ನು ಧರಿಸಿ ಯೌವನಲಕ್ಷ್ಮೀಪರಿಷ್ಕೃತಾಂಗರಾದ ನಿನ್ನ ತಮ್ಮಂದಿರಾದ ಭೀಮಾರ್ಜುನರು ಸೂಪಶಾಸ್ತ್ರನಿಪುಣರಾದ ಅಡಿಗೆಯವರು ಚೆನ್ನಾಗಿ ಪಕ್ವಮಾಡಿದ ಷಡ್ರಸೋಪೇತವಾದ ಅನ್ನವನ್ನು ಭೋಜನಮಾಡುತ್ತಿದ್ದರು; ದುಃಖಕ್ಕೆ ಅನರ್ಹರಾದ ಅಂಥಾ ನಿನ್ನ ಸಹೋದರರೆಲ್ಲರೂ ಈಗ ಈ ವನದಲ್ಲಿ ಕಂದಮೂಲಾದಿಗಳಿಂದ ಜೀವನಮಾಡುತ್ತಿರುವದನ್ನು ನೋಡುತ್ತಿರುವೆನಲ್ಲಾ! ನನ್ನ ಮನಸ್ಸಿಗೆ ಹ್ಯಾಗೆ ಸಮಾಧಾನವುಂಟಾಗುವದು? ಸುಖಕ್ಕೆ ಯೋಗ್ಯನಾಗಿಯೂ ದುಃಖಕ್ಕೆ ಅನರ್ಹನಾಗಿಯೂ ಧೀರನಾಗಿಯೂ ಇರುವ ಭೀಮಸೇನನು ಈಗ ತನ್ನ ಪೋಷಣೆಯನ್ನು ತಾನೇ ಮಾಡಿಕೊಳ್ಳುತ್ತಿರುವದನ್ನು ನೋಡುತ್ತಿರುವ ನಿನಗೆ, ಶತ್ರುಗಳ ವಿಷಯದಲ್ಲಿ ಯಾತಕ್ಕೋಸ್ಕರ ಕೋಪಹುಟ್ಟದೆ ಇರುವದು? ದುಃಖಪಡುತ್ತ ವನವಾಸಮಾಡುತ್ತಿರುವ ಭೀಮಸೇನನನ್ನು ನೋಡಿ, ಇಂಥಾ ಕಾಲದಲ್ಲಿಯೂ ನಿನಗೆ ಕೋಪವು ಯಾತಕ್ಕೆ ಹೆಚ್ಚಾಗದೆ ಇರುವದು? ಪೂರ್ವದಲ್ಲಿ ಅನೇಕಪ್ರಕಾರವಾದ ವಾಹನಗಳಿಂದಲೂ ಬಗೆಬಗೆಯಾದ ವಸ್ತ್ರಗಳಿಂದಲೂ ಪ್ರಕಾಶಿಸುತ್ತಿದ್ದ ಭೀಮಸೇನನು ಈಗ ವನದಲ್ಲಿ ಹೀಗೆ ಕಷ್ಟಪಡುತ್ತಿರುವದನ್ನು ನೋಡಿಯೂ, ಯಾತಕ್ಕೋಸ್ಕರ ನಿನಗೆ ಕೋಪವು ಹೆಚ್ಚದೆ ಇರುವದು? ಸಮರ್ಥನಾದ ಈ ಭೀಮಸೇನನು, ಯುದ್ಧದಲ್ಲಿ ಸಮಸ್ತರಾದ ಕೌರವರನ್ನು ಸಂಹಾರಮಾಡುವದಕ್ಕೆ ಉತ್ಸಾಹವುಳ್ಳವನಾಗಿದ್ದರೂ, ನೀನು ಮಾಡಿದ ಪ್ರತಿಜ್ಞೆಯಲ್ಲಿ ದೃಷ್ಟಿಯನ್ನಿಟ್ಟು, ಎಲ್ಲವನ್ನೂ ಸಹಿಸಿಕೊಂಡಿರುವನು. ತಾನು ಎರಡು ಬಾಹುಗಳುಳ್ಳವನಾದಾಗ್ಯೂ, ಶೀಘ್ರವಾಗಿ ಬಾಣಗಳನ್ನು ಸಂಧಾನಮಾಡುವದರಲ್ಲಿಯೂ ಪ್ರಯೋಗಿಸುವದರಲ್ಲಿಯೂ ಸಹಸ್ರಬಾಹುಗಳುಳ್ಳ ಕಾರ್ತವೀರ್ಯಾರ್ಜುನನಿಗೆ ಸಮಾನನಾಗಿ, ಪ್ರಳಯಕಾಲದ ಯಮನಂತಿರುವ ಅರ್ಜುನನು ತನ್ನ ಶಸ್ತ್ರಪ್ರಭಾವದಿಂದ ಸಕಲ ರಾಜರನ್ನೂ ಜಯಿಸಿ

ಸ್ವಾಧೀನಪಡಿಸಿಕೊಂಡದ್ದರಿಂದ, ಅವರೆಲ್ಲರೂ ನಿನ್ನ ರಾಜಸೂಯಯಾಗದಲ್ಲಿ ಬ್ರಾಹ್ಮಣರಿಗೆ ಶುಶ್ರೂಷೆಯನ್ನು ಮಾಡುತ್ತಿದ್ದರು. ದೇವದಾನವರಿಂದ ಪೂಜಿತನಾಗಿ, ಪುರುಷಶ್ರೇಷ್ಠನಾಗಿ, ಸುಖಕ್ಕೆ ಯೋಗ್ಯನಾಗಿದ್ದರೂ ದುಃಖಪಡುತ್ತ ಆ ಅರ್ಜುನನು ಹೀಗೆ ವನವಾಸ ಮಾಡುತ್ತಿರುವದನ್ನು ನೋಡುತ್ತಿದ್ದರೂ, ನಿನಗೆ ಯಾತಕ್ಕೋಸ್ಕರ ಶತ್ರುಗಳ ವಿಷಯದಲ್ಲಿ ಕೋಪವುಂಟಾಗದೆ ಇರುವದು? ಈಗ ಇದನ್ನೆಲ್ಲಾ ನೋಡಿಯೂ ನಿನಗೆ ಕೋಪವುಂಟಾಗದೆ ಇರುವದನ್ನು ನೋಡಿದರೆ, ನನಗೆ ತುಂಬಾ ಕಳವಳವುಂಟಾಗುತ್ತಿರುವದು. ಈ ಅರ್ಜುನನು ತಾನೊಬ್ಬನೇ ರಥಿಕನಾಗಿ ಹೋಗಿ, ದೇವತೆಗಳನ್ನೂ ಮನುಷ್ಯರನ್ನೂ ಸರ್ಪಗಳನ್ನೂ ಜಯಿಸಿ, ಅವರಿಂದ ಆಶ್ಚರ್ಯಕರವಾದ ವಾಹನಗಳನ್ನೂ ಆನೆಗಳನ್ನೂ ಕುದುರೆಗಳನ್ನೂ ಯಥೇಚ್ಛದ್ರವ್ಯವನ್ನೂ ಬಲಾತ್ಕಾರದಿಂದ ಕಪ್ಪವಾಗಿ ತೆಗೆದುಕೊಂಡು ಬಂದನು. ಅಂಥಾ ಅರ್ಜುನನು ಈಗ ವನವಾಸವನ್ನು ಮಾಡುವದನ್ನು ನೋಡಿಯೂ, ನಿನಗೆ ಯಾತಕ್ಕೋಸ್ಕರ ಕೋಪವುಂಟಾಗದೆ ಇರುವದು? ಏಕಕಾಲದಲ್ಲಿ ವೇಗದಿಂದ ಐನೂರು ಬಾಣಗಳನ್ನು ಪ್ರಯೋಗಿಸತಕ್ಕ ಸಾಮರ್ಥ್ಯವುಳ್ಳ ಅರ್ಜುನನು ಈಗ ವನವಾಸಮಾಡುವದನ್ನು ನೋಡಿಯೂ, ನಿನಗೆ ಯಾತಕ್ಕೋಸ್ಕರ ಶತ್ರುಗಳ ಮೇಲೆ ಕೋಪವುಂಟಾಗದೇ ಇರುವದು? ಶ್ಯಾಮಲಾಂಗನಾಗಿಯೂ ಶರೀರಪುಷ್ಟಿಯುಳ್ಳವನಾಗಿಯೂ ಯೌವ್ವನಸ್ಥನಾಗಿಯೂ ಖಡ್ಗಮುಷ್ಟ್ಯಾದ್ಯಾಯುಧಧಾರಿಗಳಲ್ಲಿ ಶ್ರೇಷ್ಠನಾಗಿಯೂ ಯುದ್ಧದಲ್ಲಿ ಸಮರ್ಥನಾಗಿಯೂ ಇರುವ ನಕುಲನು ಈಗ ವನವಾಸಮಾಡುತ್ತಿರುವದನ್ನು ನೋಡಿಯೂ, ನಿನಗೆ ಶತ್ರುಗಳಮೇಲೆ ಯಾತಕ್ಕೋಸ್ಕರ ಕೋಪವು ಹೆಚ್ಚದೆ ಇರುವದು? ರೂಪವಂತನಾಗಿಯೂ ಶೂರನಾಗಿಯೂ ಇರುವ ಮಾದ್ರೀಪುತ್ರನಾದ ಸಹದೇವನು ವನವಾಸ ಮಾಡುವದನ್ನು ನೋಡಿಯೂ, ಯಾತಕ್ಕೋಸ್ಕರ ಕ್ಷಮೆಯನ್ನು ಧರಿಸಿಕೊಂಡಿರುವೆ? ದುಃಖಕ್ಕೆ ಅನರ್ಹರಾದ ಇವರಿಬ್ಬರೂ ದುಃಖಪಡುವದನ್ನು ನೋಡಿಯೂ ಯಾತಕ್ಕೋಸ್ಕರ ನಿನಗೆ ಕೋಪವು ಹೆಚ್ಚದೆ ಇರುವದು? ಮತ್ತು ದ್ರುಪದರಾಯನ ಕುಲದಲ್ಲಿ ಹುಟ್ಟಿ, ಧೃಷ್ಟದ್ಯುಮ್ನನಿಗೆ ತಂಗಿಯಾಗಿ, ಮಹಾನುಭಾವನಾದ ಪಾಂಡುರಾಯನಿಗೆ ಸೊಸೆಯಾಗಿ, ವೀರರಾದ ನಿಮ್ಮೈವರಿಗೂ ಪತ್ನಿಯಾಗಿ, ನಿಮ್ಮನ್ನೇ ಅನುಸರಿಸಿಕೊಂಡಿರುವ ನಾನು ಹೀಗೆ ವನವಾಸ ಮಾಡುವದನ್ನು ನೋಡಿಯೂ, ನೀನು ಸಹಿಸಿಕೊಂಡಿರುವದಕ್ಕೆ ಕಾರಣವೇನು? ಭರತಶ್ರೇಷ್ಠನಾದ ಧರ್ಮರಾಯನೆ, ಈರೀತಿಯಾಗಿ ಕಷ್ಟಪಡುತ್ತಿರುವ ತಮ್ಮಂದಿರನ್ನೂ ನನ್ನನ್ನೂ ನೋಡಿಯೂ, ನಿನ್ನ ಮನಸ್ಸಿನಲ್ಲಿ ವ್ಯಥೆಯಿಲ್ಲದೆ ಇರುವದನ್ನು ನೋಡಿದರೆ, ಶತ್ರುಗಳ ವಿಷಯದಲ್ಲಿ ನಿನಗೆ ಸ್ವಲ್ಪವೂ ಕೋಪವಿಲ್ಲವೆಂದು ನಿಶ್ಚಯಿಸಬೇಕಾಗಿದೆ. ಕೋಪಿಷ್ಠನಾಗಿ ದುಷ್ಟನಿಗ್ರಹ ಮಾಡತಕ್ಕದ್ದೇ ಕ್ಷತ್ರಿಯಜನ್ಮಕ್ಕೆ ಸಾಫಲ್ಯವಾದ್ದರಿಂದ, ಲೋಕದಲ್ಲಿ ಕೋಪವಿಲ್ಲದಿರುವ ಕ್ಷತ್ರಿಯನೇ ಇಲ್ಲ. ಈಗ ಕ್ಷತ್ರಿಯ ಶಬ್ದಾರ್ಥವು ನಿನ್ನಲ್ಲಿ ವ್ಯತ್ಯಸ್ತವಾಗಿ ತೋರುವದು. ಯಾವಕ್ಷತ್ರಿಯನು ಸಮಯದಲ್ಲಿ ತನ್ನ ಕೋಪವನ್ನು ತೋರಿಸದೇ ಹೋಗುವನೋ, ಅಂಥವನನ್ನು ಸಕಲರೂ ತಿರಸ್ಕರಿಸುವರಾದ್ದರಿಂದ, ನೀನು ಶತ್ರುಗಳ ವಿಷಯದಲ್ಲಿ ಸ್ವಲ್ಪವಾದರೂ ಕ್ಷಮೆಯನ್ನು ಮಾಡಬೇಡ. ಕೋಪದಿಂದಲೇ ಶತ್ರುಗಳನ್ನು ಸಂಹರಿಸಬೇಕು. ಈ ವಿಷಯದಲ್ಲಿ ಸಂಶಯವಿಲ್ಲ. ಕ್ಷಮಿಸತಕ್ಕ ಕಾಲಪ್ರಾಪ್ತವಾಗಲು, ಯಾವ ಕ್ಷತ್ರಿಯನು ಕ್ಷಮಿಸದೇ ಹೋಗುವನೋ, ಆತನು ಸಕಲ ಪ್ರಾಣಿಗಳಿಗೂ ಅಹಿತನಾಗಿ ಈ ಲೋಕದಲ್ಲೂ ಪರಲೋಕದಲ್ಲೂ ಹಾನಿಯನ್ನು ಪಡೆಯುವನು."

## ೨೮ನೇ ಅಧ್ಯಾಯ.—ದ್ರೌಪದಿ ವಾಕ್ಯ.

ವೈಶಂಪಾಯನಮುನೀಂದ್ರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯನೆ, ದ್ರೌಪದಿಯು ಧರ್ಮರಾಯನನ್ನು ನೋಡಿ "ಮಹಾರಾಜನೆ, ನಾನು ಹೇಳಿದ ವಿಷಯದಲ್ಲಿ ಪೂರ್ವದಲ್ಲಿ ಪ್ರಹ್ಲಾದನಿಗೂ ವಿರೋಚನ ಪುತ್ರನಾದ ಬಲಿಗೂ ನಡೆದ ಪರಸ್ಪರ ಸಂವಾದರೂಪದ ಒಂದು ಇತಿಹಾಸವನ್ನು ಹೇಳುವೆನು ಕೇಳು.

ಪೂರ್ವದಲ್ಲಿ ಬಲಿಚಕ್ರವರ್ತಿಯು ಧರ್ಮಸೂಕ್ಷ್ಮವನ್ನು ಕೇಳಲಿಚ್ಛಯಿಸಿ ತನಗೆ ಪಿತಾಮಹನಾಗಿಯೂ ಪ್ರಾಜ್ಞನಾಗಿಯೂ ಅಸುರಶ್ರೇಷ್ಠನಾಗಿಯೂ ಇರುವ ಪ್ರಹ್ಲಾದನನ್ನು ಕುರಿತು 'ಎಲೈ ಪ್ರಹ್ಲಾದನೆ, ಲೋಕದಲ್ಲಿ

ಕ್ಷಮೆಯೇ ದೊಡ್ಡದೋ, ಅಥವಾ ಕ್ರೋಧವೇ ದೊಡ್ಡದೋ? ಈ ವಿಷಯದಲ್ಲಿ ನನಗೆ ಸಂಶಯವುಂಟಾಗಿರುವದು. ಇದನ್ನು ಪರಿಹರಿಸಿ ಈ ಎರಡರಲ್ಲಿ ಯಾವದು ಶ್ರೇಯಸ್ಕರವಾದದ್ದೋ ಅದನ್ನು ನನಗೆ ಹೇಳು. ನಿನ್ನ ಆಜ್ಞೆಯಾದಂತೆ ನಾನು ನಡೆದುಕೊಳ್ಳುವೆನು' ಎಂದು ಪ್ರಶ್ನೆಮಾಡಲು, ಪ್ರಹ್ಲಾದನು ಅದರ ನಿಶ್ಚಯವನ್ನು ತಿಳಿದವನಾದ್ದರಿಂದ, ಹೀಗೆ ಸಂಶಯದಿಂದ ಪ್ರಶ್ನೆಮಾಡುವ ಬಲಿಯನ್ನು ಕುರಿತು ಹೇಳಲುಪಕ್ರಮಿಸಿದನು, ಏನೆಂದರೆ: 'ಎಲೈ ಬಲಿಚಕ್ರವರ್ತಿಯೇ ಕೇಳು, ಪುರುಷನಿಗೆ ಯಾವಾಗಲೂ ಕೋಪವು ಶ್ರೇಯಸ್ಕರವಾದದ್ದಲ್ಲ ಮತ್ತು ಯಾವಾಗಲೂ ಕ್ಷಮೆಯೂ ಶ್ರೇಯಸ್ಕರವಾದದ್ದಲ್ಲ. ಇದನ್ನು ನಿಜವಾಗಿ ತಿಳಿ. ಯಾವ ಪುರುಷನು ಯಾವಾಗಲೂ ಕ್ಷಮೆಯನ್ನು ತಾಳಿರುವನೋ ಆತನಿಗೆ ಬಹಳ ಹಾನಿಯುಂಟಾಗುವದು. ಭೃತ್ಯರೂ ಶತ್ರುಗಳೂ ಇತರಜನಗಳೂಸಹ ಆತನನ್ನು ತಿರಸ್ಕರಿಸುವರು; ಕ್ಷಮಾವಂತನಾದ ಅರಸಿಗೆ ಯಾವ ಪ್ರಾಣಿಯೂ ತಗ್ಗಿನಡೆಯುವದಿಲ್ಲ. ಆದ್ದರಿಂದ ಯಾವಾಗಲೂ ಕ್ಷಮೆಯನ್ನು ತಾಳಿರುವದು ಪ್ರಾಜ್ಞರಿಂದ ತಿರಸ್ಕರಿಸಲ್ಪಟ್ಟಿರುವದು. ಅರಸಾದವನು ಯಾವಾಗಲೂ ಕ್ಷಮಾವಂತನಾಗಿದ್ದರೆ, ಅಲ್ಪಜ್ಞರಾದ ಭೃತ್ಯರು ದುಷ್ಟಸ್ವಭಾವದಿಂದ ಆ ಅರಸನನ್ನು ನಿರಾಕರಿಸಿ, ಆತನ ದ್ರವ್ಯವನ್ನು ಅಪಹರಿಸಬೇಕೆಂದು ಅಪೇಕ್ಷಿಸುವರು. ದುಷ್ಟಸ್ವಭಾವವುಳ್ಳ ಅಧಿಕಾರಿಗಳು ಆತನ ವಾಹನಗಳನ್ನೂ ವಸ್ತ್ರಗಳನ್ನೂ, ಆಭರಣಗಳನ್ನೂ, ಹಾಸಿಗೆ ಪೀಠ ಭೋಜನ ಪಾನ ಸಾಮಗ್ರಿ ಮೊದಲಾದವುಗಳನ್ನೂ ತಮ್ಮ ಮನಸ್ಸು ಬಂದಹಾಗೆ ಅಪಹರಿಸುವರು. ಕ್ಷಮಾವಂತನಾದ ರಾಜನು ಈ ಪದಾರ್ಥವನ್ನು ಮತ್ತೊಬ್ಬನಿಗೆ ಕೊಡೆಂದು ತನ್ನವರಿಗೆ ಕಟ್ಟುಮಾಡಿದರೂ, ಅದನ್ನು ಕೊಡದೆಹೋಗುವರು. ಲೋಕದಲ್ಲಿ ಜನರು ಕ್ಷಮಾವಂತನಾದ ಅರಸಿಗೆ ಯೋಗ್ಯವಾದ ಮರ್ಯಾದೆಯನ್ನು ಮಾಡದೆ ಅವಮಾನಮಾಡುವರು. ರಾಜರಿಗೆ ಅಂಥಾ ಅವಮಾನವು ಮರಣಕ್ಕಿಂತಲೂ ದುಃಖಕರವಾದದ್ದು. ಲೋಕದಲ್ಲಿ ಭೃತ್ಯರೂ ಪರಿಚಾರಕರೂ ಮಕ್ಕಳೂ ಇತರರೂ ಸಹ ಯಾವಾಗಲೂ ಕ್ಷಮಾವಂತನಾದ ಅರಸಿನ ಸಂಗಡ ಕಠಿನವಾದ ಮಾತುಗಳನ್ನಾಡುವರು. ಅರಸಾದವನು ಯಾವಾಗಲೂ ಕ್ಷಮಾವಂತನಾಗಿರಲು, ದುಷ್ಟರಾದವರು ಆತನನ್ನು ಲಕ್ಷ್ಯಮಾಡದೆ ಆತನ ಪತ್ನಿಯರೊಡನೆ ವಿಹರಿಸಬೇಕೆಂದು ಅಪೇಕ್ಷಿಸುವರು. ಈ ರೀತಿಯಾಗಿ ಯಾವಾಗಲೂ ಸ್ವೇಚ್ಛೆಯಿಂದ ಮೆರೆಯುವ ಜನಗಳಿಗೆ ರಾಜನಾದವನು ಸ್ವಲ್ಪವಾದರೂ ಶಿಕ್ಷೆಯನ್ನು ಮಾಡದೆ ಹೋದರೆ, ಅವರು ದುಷ್ಟರಾಗಿ ಯಾವಾಗಲೂ ರಾಜನಿಗೆ ಅಪಕಾರವನ್ನೇ ಮಾಡುವರು. ಇವೇ ಮೊದಲಾದ ಅನೇಕ ದೋಷಗಳು ಕ್ಷಮಾವಂತರಿಗೆ ಸಂಭವಿಸುವವು. ಎಲೈ ಬಲಿಚಕ್ರವರ್ತಿಯೆ, ಇನ್ನುಮೇಲೆ ಯಾವಾಗಲೂ ಕೋಪಸ್ವಭಾವವುಳ್ಳವನಿಗೆ ಉಂಟಾಗತಕ್ಕ ದೋಷಗಳನ್ನು ವಿವರಿಸುವೆನು ಕೇಳು: ಯಾವ ಪುರುಷನು ರಜೋಗುಣವನ್ನು ತಾಳಿ, ಮನೆಯಲ್ಲೇ ಆಗಲಿ, ಹೊರಗೇ ಹಾಗಲಿ, ಯಾವಾಗಲೂ ಕೋಪಿಸಿಕೊಳ್ಳುತ್ತ, ತನ್ನ ಕೋಪದಿಂದ ಜನರನ್ನು ಮನಸ್ಸುಬಂದ ಹಾಗೆ ದಂಡಿಸುವನೋ, ಅಂಥವನಿಗೆ ಮಿತ್ರರಲ್ಲಿಯೂ ಸ್ವಜನರಲ್ಲಿಯೂ ಇತರಜನರಲ್ಲಿಯೂ ವಿರೋಧವುಂಟಾಗುವದು. ಅವರೂ ಈತನನ್ನು ಅವಮಾನಪಡಿಸುವರು. ಆದರಿಂದ ಆತನಿಗೆ ಅರ್ಥಹಾನಿಯೂ ನಿಂದೆಯೂ ಸಂತಾಪವೂ ಬುದ್ಧಿವಿಕಾರವೂ ಉಂಟಾಗುವವು, ಮತ್ತು ಆತನಿಗೆ ಶತ್ರುವೃದ್ಧಿಯೂ ಆಗುವದು. ಯಾವ ಪುರುಷನು ಕೋಪದಿಂದ ಅನ್ಯಾಯವಾಗಿ ಎಲ್ಲರನ್ನೂ ಮನಸ್ಸುಬಂದಹಾಗೆ ದಂಡಿಸುವನೋ, ಆತಸಿಗೆ ಐಶ್ವರ್ಯವೂ ಪ್ರಾಣವೂ ಶೀಘ್ರವಾಗಿ ನಷ್ಟವಾಗುವವು, ಮತ್ತು ಸ್ವಜನರೂ ಸಹ ಆತನನ್ನು ಬಿಟ್ಟುಬಿಡುವರು. ಯಾವ ಪುರುಷನು ತನ್ನ ದ್ರವ್ಯವನ್ನು ಅಭಿವೃದ್ಧಿಪಡಿಸತಕ್ಕವರಲ್ಲಿಯೂ, ಅದನ್ನು ಅಪಹರಿಸತಕ್ಕವರಲ್ಲಿಯೂ ಕೋಪಗೊಂಡೇ ಇರುವನೋ, ಆತನನ್ನು ನೋಡಿ ಜನರು ಹಾವು ಸೇರಿದ ಮನೆಯನ್ನು ನೋಡಿ ಭಯಪಡುವಂತೆ ಭಯಪಡುವರು. ಯಾವನನ್ನು ನೋಡಿ ಜನರು ಭಯಪಡುವರೋ, ಅಂಥವನಿಗೆ ಐಶ್ವರ್ಯವೆಂಬುವದು ಹ್ಯಾಗುಂಟಾದೀತು? ಜನರು ಅಂಥವನಿಗೆ ಕೇಡನ್ನುಂಟುಮಾಡುವದಕ್ಕೋಸ್ಕರ ರಂಧ್ರಾನ್ವೇಷಣ ಮಾಡುತ್ತಿರುವರು. ಆದ್ದರಿಂದ ವಿವೇಕಿಯಾದ ಪುರುಷನು ಯಾವಾಗಲೂ ಕೋಪವುಳ್ಳವನಾಗಿಯೂ, ಯಾವಾಗಲೂ ಕ್ಷಮೆಯುಳ್ಳವನಾಗಿಯೂ ಇರಕೂಡದು. ಯಾವ ಪುರುಷನು ಕಾಲವರಿತು ಕೋಪವನ್ನೂ ಕ್ಷಮೆಯನ್ನೂ ತೋರಿಸುವನೋ, ಆತನು ಇಹದಲ್ಲೂ ಪರದಲ್ಲೂ ಸುಖವನ್ನು ಹೊಂದುವನು. ಎಲೈ ಬಲಿಚಕ್ರವರ್ತಿಯೆ, ಮನುಷ್ಯನು ಯಾವಾಗ ಕ್ಷಮಾವಂತನಾಗಿರಬೇಕೋ, ಯಾವಾಗ ಕೋಪವುಳ್ಳವನಾಗಿರಬೇಕೋ, ಅದನ್ನು ವಿವರಿಸು

ವೆನು ಕೇಳು : ಲೋಕದಲ್ಲಿ ಮನುಷ್ಯನು ತನಗೆ ಉಪಕಾರಮಾಡಿದವನು ಬಹಳವಾಗಿ ಅಪರಾಧಮಾಡಿದರೂ, ಆ ಉಪಕಾರವನ್ನು ಸ್ಮರಿಸಿ, ಆತನ ವಿಷಯದಲ್ಲಿ ಕ್ಷಮಾವಂತನಾಗಿರಬೇಕು ; ಅಜ್ಞಾನದಿಂದ ಅಪರಾಧಮಾಡಿದವನ ವಿಷಯದಲ್ಲೂ ಕ್ಷಮೆಯುಳ್ಳವನಾಗಿರಬೇಕು. ಲೋಕದಲ್ಲಿ ಎಲ್ಲರೂ ವಿವೇಕಶಾಲಿಗಳಾಗಿರುವದಿಲ್ಲ ; ಕೆಲವರು ಬುದ್ಧಿಪೂರ್ವಕವಾಗಿ ಅಪರಾಧವನ್ನು ಮಾಡಿದರೂ, ತಾವು ಅಜ್ಞಾನದಿಂದ ಹಾಗೆ ಮಾಡಿದೆವೆಂದು ಅಪಲಪಿಸುವರು. ಅಂಥವರ ಅಪರಾಧವು ಸ್ವಲ್ಪವಾಗಿದ್ದರೂ ಕ್ಷಮಿಸದೆ, ಅವರನ್ನು ಶಿಕ್ಷಿಸಬೇಕು. ಎಲ್ಲಾ ಪ್ರಾಣಿಗಳ ವಿಷಯದಲ್ಲೂ ಮೊದಲು ಒಂದು ಅಪರಾಧವನ್ನು ಕ್ಷಮಿಸಬೇಕು ; ಇನ್ನೊಂದಾವರ್ತಿ ಸ್ವಲ್ಪ ಅಪರಾಧವನ್ನು ಮಾಡಿದರೂ ಆತನನ್ನು ಶಿಕ್ಷಿಸಬೇಕು. ಯಾವನಾದರೂ ತಿಳಿಯದೆ ಅಪರಾಧಮಾಡಿದರೆ, ಅದನ್ನು ಬುದ್ಧಿವಂತರಿಂದ ಪರೀಕ್ಷಿಸಿ, ಆತನ ಅಪರಾಧವನ್ನೂ ಕ್ಷಮಿಸಬೇಕು. ಎಲೈ ಬಲಿಚಕ್ರವರ್ತಿಯೆ, ಸಾಮೋಪಾಯದಿಂದಲೇ ಕ್ರೂರನಾದ ಮನುಷ್ಯನೂ ಮೃದುವಾದ ಮನುಷ್ಯನೂ ಸಹ ಸ್ವಾಧೀನಕ್ಕೆ ಬರುವರು. ಲೋಕದಲ್ಲಿ ಸಾಮೋಪಾಯಕ್ಕೆ ಅಸಾಧ್ಯವಾದದ್ದು ಯಾವದೂ ಇಲ್ಲ. ಆದ್ದರಿಂದ ಸಾಮೋಪಾಯವೇ ಶ್ರೇಷ್ಠವಾದದ್ದು. ಲೋಕದಲ್ಲಿ ವಿವೇಕಿಯಾದವನು ಸಾಮ ಮೊದಲಾದ ಚತುರೋಪಾಯಗಳೊಳಗೆ ಯಾವ ಉಪಾಯವನ್ನು ತೋರಿಸಬೇಕಾದರೂ, ತನ್ನ ಬಲಾಬಲಗಳನ್ನೂ ದೇಶಕಾಲಗಳನ್ನೂ ನೋಡಬೇಕು. ದೇಶಕಾಲಗಳನ್ನು ನೋಡದೆ ಮಾಡಿದ ಕಾರ್ಯವು ಸಿದ್ಧಿಸುವದಿಲ್ಲ. ಆದಕಾರಣ ಯಾವದಕ್ಕೂ ದೇಶಕಾಲಗಳನ್ನು ನಿರೀಕ್ಷಿಸಬೇಕು. ಕೆಲವರ ಅಪರಾಧವನ್ನು ಲೋಕಕ್ಕೆ ಭಯಪಟ್ಟು ಕ್ಷಮಿಸಬೇಕು. ಇವೆಲ್ಲಾ ಕ್ಷಮಿಸತಕ್ಕ ಕಾಲಗಳೆಂದು ದೊಡ್ಡವರು ಹೇಳಿರುವರು' ಎಂದು ಪ್ರಹ್ಲಾದನು ಬಲಿಚಕ್ರವರ್ತಿಗೆ ಹೇಳಿರುವನು. ರಾಜೇಂದ್ರನಾದ ಧರ್ಮರಾಯನೆ, ಈಗ ನೀನು ಕ್ಷಮೆಯನ್ನು ಬಿಟ್ಟು ಕೋಪವನ್ನು ಮಾಡುವದಕ್ಕೆ ತಕ್ಕ ಸಮಯವಾದ್ದರಿಂದ, ಅಪಕಾರಿಗಳಾಗಿಯೂ ರಾಜ್ಯದಲ್ಲಿ ಲೋಭವುಳ್ಳವರಾಗಿಯೂ ಇರುವ ಧೃತರಾಷ್ಟ್ರನ ಮಕ್ಕಳಾದ ದುರ್ಯೋಧನಾದಿಗಳಲ್ಲಿ ನಿನ್ನ ಕೋಪವನ್ನು ತೋರಿಸು. ಅವರ ವಿಷಯದಲ್ಲಿ ಇದು ಕ್ಷಮಿಸತಕ್ಕ ಕಾಲವಲ್ಲ. ಲೋಕದಲ್ಲಿ ಕ್ಷಮಾವಂತನಾದ ಪುರುಷನು ಎಲ್ಲರಿಂದಲೂ ಅವಮಾನವನ್ನು ಹೊಂದುವನು ; ಕೋಪಿಷ್ಠನಾದ ಪುರುಷನಿಗೆ ಎಲ್ಲರೂ ಭಯಪಡುವರು. ಆದ್ದರಿಂದ ಯಾವ ಪುರುಷನು ಕ್ಷಮಿಸತಕ್ಕ ಕಾಲವನ್ನೂ ಕೋಪಮಾಡತಕ್ಕ ಕಾಲವನ್ನೂ ತಿಳಿದು ಕ್ಷಮೆಯನ್ನೂ ಕೋಪವನ್ನೂ ತೋರಿಸುವನೋ, ಆತನೇ ರಾಜನೆಂದೆನ್ನಿಸಿಕೊಳ್ಳುವನು."



## ೨೯ನೇ ಅಧ್ಯಾಯ.—ಧರ್ಮರಾಯ ದ್ರೌಪದಿಯರ ಸಂವಾದ.

ವೈಶಂಪಾಯನ ಮುನೀಂದ್ರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯನೆ, ಬಳಿಕ ಯುಧಿಷ್ಠಿರನು ದ್ರೌಪದಿಯನ್ನು ನೋಡಿ "ಎಲೆ ಮಹಾಪ್ರಾಜ್ಞಳಾದ ದ್ರೌಪದಿಯೆ, ಕ್ರೋಧವೆಂಬುವದು ಮನುಷ್ಯನಿಗೆ ಹಾನಿಕರವಾದದ್ದು. ಕೋಪವನ್ನು ಜಯಿಸಿದರೆ, ಅದರಿಂದ ಮನುಷ್ಯನು ವೃದ್ಧಿಯನ್ನು ಹೊಂದುವನು. ಆದ್ದರಿಂದ ಕ್ರೋಧವು ಹಾನಿವೃದ್ಧಿಗಳಿಗೆ ಕಾರಣವಾದದ್ದೆಂದು ತಿಳಿ. ಎಲೆ ಮಂಗಳಾಂಗಿಯೆ, ಯಾವ ಪುರುಷನು ಕ್ರೋಧವನ್ನು ಯಾವಾಗಲೂ ತಡೆಯದೆ ಇರುವನೋ, ಆತನನ್ನು ಆ ಕೋಪವೇ ಅತಿದಾರುಣವಾಗಿ ನಾಶಮಾಡುವದು. ಜನಗಳ ನಾಶಕ್ಕೆ ಕ್ರೋಧವೇ ಕಾರಣವಾಗಿರುವದು. ಆದ್ದರಿಂದ ನಮ್ಮಂಥವರು ಸ್ವರ್ಗಾದಿಲೋಕಗಳಿಗೆ ಕುಂದುಕವನ್ನು ಉಂಟುಮಾಡುವ ಕ್ರೋಧವನ್ನು ಹ್ಯಾಗೆತಾನೇ ಮತ್ತೊಬ್ಬರ ಮೇಲೆ ತೋರಿಸಬಹುದು? ಕೋಪಗೊಂಡ ಪುರುಷನು ಯಾವನುತಾನೆ ಪಾಪಕಾರ್ಯವನ್ನು ಮಾಡುವದಿಲ್ಲ? ಕೋಪಗೊಂಡವನು ತನ್ನ ಗುರುವನ್ನಾದರೂ ಸಂಹರಿಸುವನು. ಕೋಪಿಷ್ಠನಾದವನು ಕಠಿನವಾದ ಮಾತುಗಳಿಂದ ದೊಡ್ಡವರಿಗೂ ಅವಮಾನಮಾಡುವನು. ಕೋಪಿಷ್ಠನಾದವನಿಗೆ ಸ್ವಲ್ಪವಾದರೂ ಈ ಮಾತನ್ನು ಆಡಬಹುದು, ಈ ಮಾತನ್ನು ಆಡಬಾರದೆಂಬ ಜ್ಞಾನವಿರುವದಿಲ್ಲ. ಕೋಪಬಂದ ಕಾಲದಲ್ಲಿ ಅದನ್ನು ತಡೆಯದೆ ಇರುವ ಪುರುಷನು ಎಂಥಾ ಕೆಟ್ಟ ಕೆಲಸವನ್ನಾದರೂ ಮಾಡಿಬಿಡುವನು ; ಎಂಥಾ ಕೆಟ್ಟಮಾತುಗಳನ್ನಾದರೂ ಆಡಿಬಿಡುವನು. ಆತನು ಅಪರಾಧ

ಮಾಡದೆ ಇರುವವರನ್ನು ದಂಡಿಸುವನು, ಅಪರಾಧಮಾಡಿದವರನ್ನು ಪೂಜಿಸುವನು. ಕೋಪಿಷ್ಠನಾದವನು ತನ್ನನ್ನು ತಾನೇ ಸಂಹರಿಸಿಕೊಳ್ಳುವನು. ಆದ್ದರಿಂದ ಕ್ರೋಧದಲ್ಲಿ ಇಂಥ ಅನೇಕ ದೋಷಗಳಿರುವವೆಂದು ತಿಳಿದೇ, ಇಹಪರ ಲೋಕಗಳಲ್ಲಿ ಉತ್ತಮವಾದ ಶ್ರೇಯಸ್ಸನ್ನು ಅಪೇಕ್ಷಿಸತಕ್ಕ ದೊಡ್ಡವರು ಆ ಕ್ರೋಧವನ್ನು ಜಯಿಸಿರುವರು. ಇದನ್ನು ತಿಳಿದು ನಮ್ಮಂಥವರು ಕ್ರೋಧವನ್ನು ಹ್ಯಾಗೆ ಮಾಡಬಹುದು ? ಎಲೆ ದ್ರೌಪದಿಯೆ, ಇದನ್ನೆಲ್ಲಾ ನಾನು ಚೆನ್ನಾಗಿ ತಿಳಿದವನಾದ್ದರಿಂದಲೇ, ನನಗೆ ಕೋಪವು ಹೆಚ್ಚುವದಿಲ್ಲ. ವಿವೇಕಿಯಾದವನು ತನ್ನೊಡನೆ ಕೋಪಗೊಂಡವನಮೇಲೆ ಪ್ರತಿಯಾಗಿ ಕೋಪಗೊಳ್ಳದೆ, ತನ್ನನ್ನೂ ಪರರನ್ನೂ ಸಹ ಭಯವಿಲ್ಲದಹಾಗೆ ರಕ್ಷಿಸುತ್ತ, ತನಗೂ ಪರರಿಗೂ ಸಹ ದೋಷವುಂಟಾಗದಂತೆ ಮಾಡುವನು. ಮತ್ತು ತಾನು ಅಸಮರ್ಥನಾಗಿ ಅಜ್ಞಾನದಿಂದ ಕ್ಲೇಶಪಡುತ್ತ ಬಲವಂತರಾದವರಲ್ಲಿ ಕೋಪಿಸಿಕೊಳ್ಳುವ ಮನುಷ್ಯನು ತನಗೆತಾನೇ ನಾಶವನ್ನು ಹೊಂದುವನು. ಕ್ರೋಧವನ್ನು ಜಯಿಸದೆ ಇರತಕ್ಕ ಅಂಥ ಮನುಷ್ಯನಿಗೆ ಯಾವಗತಿಯೂ ಇಲ್ಲದೆ ಹೋಗುವದರಿಂದ, ಅಸಮರ್ಥನಾದವನು ಕ್ರೋಧವನ್ನು ಜಯಿಸಬೇಕು. ಸಮರ್ಥನಾದ ವಿದ್ವಾಂಸನು ತನಗೆ ಕೇಡನ್ನು ಯೋಚಿಸತಕ್ಕವನ ಮೇಲೆ ಕೋಪಬಂದಾಗ ಅದನ್ನು ತೋರಿಸದೆ, ಅವನಿಗೂ ಹಾನಿಯನ್ನುಂಟುಮಾಡದೆ, ತಾನು ಇಹಪರಗಳಲ್ಲಿ ಸುಖವನ್ನು ಪಡೆಯುವನು. ಆದ್ದರಿಂದ ದುರ್ಬಲನಾದ ಪುರುಷನೂ ಬಲವಂತನಾದ ಪುರುಷನೂ ಸಹ, ಎಂಥಾ ಆಪತ್ತು ಸಂಭವಿಸಿದರೂ ತನ್ನ ವಿವೇಕದಿಂದ ಕ್ರೋಧವನ್ನು ತ್ಯಜಿಸಿ, ಯಾವಾಗಲೂ ಕ್ಷಮೆಯನ್ನು ಹೊಂದಬೇಕು. ಆದ್ದರಿಂದಲೇ, ಲೋಕದಲ್ಲಿ ಸಜ್ಜನರು ಕ್ರೋಧವನ್ನು ನಿಗ್ರಹಿಸುವದೇ ಉತ್ತಮಗುಣವೆಂದು ಶ್ಲಾಘಿಸುವರು. ಕ್ಷಮಾವಂತನಾದ ಸತ್ಪುರುಷನಿಗೆ ಎಲ್ಲೆಲ್ಲಿಯೂ ಜಯವುಂಟಾಗುವದು. ಇದು ಸಜ್ಜನರಿಗೆ ಸಮ್ಮತವಾದದ್ದು. ಸುಳ್ಳಾಡದೆ ಸತ್ಯದಿಂದ ನಡೆಸುಕೊಳ್ಳುವದರಿಂದಲೂ, ಕ್ರೂರಸ್ವಭಾವವನ್ನು ಬಿಟ್ಟು ಶಾಂತಭಾವದಿಂದಿರುವದರಿಂದಲೂ ಶ್ರೇಯಸ್ಸುಂಟಾಗುವದು. ಸಜ್ಜನರು ಕ್ರೋಧವು ಬಹುದೋಷಯುಕ್ತವಾದದ್ದೆಂದು ತಿಳಿದು ಅದನ್ನು ತ್ಯಜಿಸಿರುವರು. ಮತ್ತು ಅನೇಕ ಶಾಸ್ತ್ರಾರ್ಥಗಳನ್ನು ತಿಳಿದ ವಿದ್ವಾಂಸರು ಕ್ರೋಧವನ್ನು ಜಯಿಸಿದವನನ್ನೇ ತೇಜೋವಂತನೆಂದು ಹೇಳುವರು. ಆದ್ದರಿಂದ ನಮ್ಮಂಥವರು ದುರ್ಯೋಧನನ ಸಂಹಾರಕ್ಕೋಸ್ಕರವಾದರೂ ಹ್ಯಾಗೆತಾನೇ ಕೋಪಗೊಳ್ಳಬಹುದು ? ಯಾವ ಮನುಷ್ಯನು ತನಗೆ ಕೋಪಬಂದಾಗ ಅದನ್ನು ತನ್ನ ಜ್ಞಾನದಿಂದ ನಿಗ್ರಹಿಸುವನೋ, ಆತನೊಳಗೆ ಕೋಪವಿಲ್ಲವೆಂದೇ ನಿಶ್ಚಯಿಸಬೇಕು. ಅಂಥ ಪುರುಷನನ್ನು ತತ್ವಜ್ಞರಾದ ವಿದ್ವಾಂಸರು ತೇಜೋವಂತನೆಂದು ಹೇಳುವರು. ಕೋಪಿಷ್ಠನಾದ ಮನುಷ್ಯನು ತಾನು ಮಾಡತಕ್ಕ ಕಾರ್ಯಗಳನ್ನೇ ಸರಿಯಾಗಿ ತಿಳಿಯಲಾರನು ; ಕಾರ್ಯಾಕಾರ್ಯಗಳನ್ನೂ ಲೋಕಮರ್ಯಾದೆಯನ್ನೂ ತಿಳಿಯದೆ ಹೋಗುವನು ; ನಿರಪರಾಧಿಗಳನ್ನೂ ಹಿಂಸಿಸುವನು ; ತನಗೆ ಗುರುಗಳಾದವರಿಗೂ ಕಠಿನವಾದ ಮಾತುಗಳಿಂದ ವ್ಯಥೆಯನ್ನುಂಟುಮಾಡುವನು. ಆದಕಾರಣ ಕೋಪವನ್ನು ಜಯಿಸುವದೇ ಸಾಮರ್ಥ್ಯವೇ ಹೊರತು, ಮತ್ತೊಂದು ಸಾಮರ್ಥ್ಯವೆನ್ನಿಸಿಕೊಳ್ಳುವದಿಲ್ಲ. ಕಾರ್ಯದಲ್ಲಿ ಕುಶಲತ್ವವೂ, ಶತ್ರುಜಯಕ್ಕೆ ತಕ್ಕ ಉಪಾಯವನ್ನು ಚಿಂತಿಸುವದೂ, ಶತ್ರುಗಳನ್ನು ತಿರಸ್ಕರಿಸತಕ್ಕ ಶಕ್ತಿಯೂ, ಶೀಘ್ರವಾಗಿ ಕೆಲಸವನ್ನು ಮಾಡುವದೂ, ಇವೆಲ್ಲವೂ ತೇಜೋವಂತನಾದ ಪುರುಷನ ಗುಣಗಳು. ಕ್ರೋಧವನ್ನು ಜಯಿಸದಿರುವ ಪುರುಷನಲ್ಲಿ ಈ ಗುಣಗಳು ಯಾವವೂ ಸರಿಯಾಗಿ ಇರುವದಿಲ್ಲ. ಕ್ರೋಧವನ್ನು ಬಿಟ್ಟ ಪುರುಷನು ಒಳ್ಳೇ ತೇಜಸ್ಸನ್ನು ಪಡೆಯುವನು ; ಕ್ರುದ್ಧನಾದವನಿಗೆ ದೇಶಕಾಲಗಳಿಗೆ ಉಪಯುಕ್ತವಾದ ತೇಜಸ್ಸು ಲಭಿಸಲಾರದು. ಅಜ್ಞಾನಿಗಳಾದವರು ಕೋಪವನ್ನೇ ತೇಜಸ್ಸೆಂದು ತಿಳಿದಿರುವರು. ರಜೋಗುಣದಿಂದ ಹುಟ್ಟುವ ಈ ಕ್ರೋಧವೆಂಬುವದು ಲೋಕನಾಶಕ್ಕೋಸ್ಕರಲೇ ಮನುಷ್ಯರನ್ನು ಆಶ್ರಯಿಸಿರುವದು. ಆದ್ದರಿಂದ ಒಳ್ಳೇಕೆಲಸವನ್ನು ಮಾಡತಕ್ಕ ಪುರುಷನು ಯಾವಾಗಲೂ ಕೋಪವನ್ನು ಬಿಟ್ಟಿರಬೇಕು. ಲೋಕದಲ್ಲಿ ಸ್ವಧರ್ಮವನ್ನು ಬಿಟ್ಟ ಪತಿತನಿಗಿಂತಲೂ ಕೋಪಿಷ್ಠನು ಹೀನನಾದವನು. ಎಲೆ ದೇವಿಯೆ, ದುರ್ಬುದ್ಧಿಗಳಾಗಿಯೂ ಜ್ಞಾನಶೂನ್ಯರಾಗಿಯೂ ಇರುವ ದುರ್ಯೋಧನಾದಿಗಳು ಕ್ಷಮೆಯನ್ನೂ ಋಜುಮಾರ್ಗವನ್ನೂ ಉಲ್ಲಂಘಿಸಿದರೆಂದರೆ, ನಾನು ಉತ್ತಮವಾದ ಕ್ಷಮಾಗುಣವನ್ನು ಹ್ಯಾಗೆತಾನೇ ಉಲ್ಲಂಘಿಸಬಹುದು ? ಈ ಲೋಕದಲ್ಲಿ ಕ್ಷಮಾಗುಣದ ವಿಷಯದಲ್ಲಿ ಭೂಮಿಗೆ ಸಮಾನರಾದವರು ಇಲ್ಲದೆ ಹೋದರೆ ಮನುಷ್ಯನಿಗೆ ಪರಸ್ಪರವಾಗಿ ಸಂಧಿಯೆಂಬುವದೇ

ಇಲ್ಲದೆ ಹೋಗುವದು. ಕೋಪವೆಂಬುವದು ಕಲಹಕ್ಕೆ ಮೂಲಭೂತವಾದದ್ದು. ಕುಪಿತನಾದವನು ತನಗೆ ವ್ಯಥೆಯನ್ನುಂಟುಮಾಡಿದವನನ್ನು ಪ್ರತಿಯಾಗಿ ತಾನೂ ವ್ಯಥೆಪಡಿಸುವನು, ಮತ್ತು ಗುರುವಾದವನು ತನ್ನನ್ನು ಹೊಡೆದವರೆ ಆತನನ್ನು ತಾನೂ ಹೊಡೆಯುವನು. ಈ ಪ್ರಕಾರ ಪ್ರಾಣಿಗಳಿಗೆ ನಾಶವುಂಟಾಗಿ ಅಧರ್ಮವು ಹೆಚ್ಚುವದು. ಕುಪಿತನಾದ ಪುರುಷನು ತನ್ನನ್ನು ಬೈದವನನ್ನು ಪ್ರತಿಯಾಗಿ ಬೈಯುವನು ; ತನ್ನನ್ನು ಹೊಡೆದವನನ್ನು ಪ್ರತಿಯಾಗಿ ಹೊಡೆಯುವನು. ಕುಪಿತರಾದ ತಂದೆಗಳು ಮಕ್ಕಳನ್ನು ಸಂಹರಿಸುವರು ; ಹಾಗೆಯೇ ಕುಪಿತರಾದ ಮಕ್ಕಳು ತಮ್ಮ ತಂದೆಯನ್ನು ಸಂಹರಿಸುವರು. ಕುಪಿತನಾದ ಗಂಡನು ಹೆಂಡತಿಯನ್ನು ಸಂಹರಿಸುವನು ; ಕುಪಿತಳಾದ ಹೆಂಡತಿಯು ಗಂಡನನ್ನು ಸಂಹರಿಸುವಳು. ಈ ಪ್ರಕಾರ ಜನಗಳು ಕೋಪಮಾಡುತ್ತಿದ್ದರೆ ಲೋಕದಲ್ಲಿ ಉತ್ಪತ್ತಿಯೆಂಬುವದೇ ಇಲ್ಲದೆ ಹೋಗುವದು. ಎಲೆ ಸುಮುಖಿಯೆ, ಅನ್ಯೋನ್ಯವಾಗಿ ಪ್ರಜೆಗಳಿಗೆ ಸಂಧಿಯೂ, ದಂಪತಿಗಳಿಗೆ ಪ್ರೀತಿಯೂ, ಉತ್ಪತ್ತಿಗೆ ಕಾರಣಗಳೆಂದು ತಿಳಿ. ರಾಜನಾದವನು ಕ್ರೋಧಾವೇಶವುಳ್ಳವನಾದರೆ, ಸಕಲರಾದ ಪ್ರಜೆಗಳೂ ನಾಶವನ್ನು ಹೊಂದುವರು. ಕೋಪವೆಂಬುವದು ಜನರ ಹಾನಿಗೂ ಐಶ್ವರ್ಯನಾಶಕ್ಕೂ ಕಾರಣವೆಂದು ತಿಳಿ. ಆದ್ದರಿಂದ ಲೋಕದಲ್ಲಿ ಕ್ಷಮಾವಂತರಾದವರು ಭೂಮಿಗೆ ಸಮಾನರಾಗಿರುವರು. ಅವರಿಂದಲೇ ಸಕಲ ಪ್ರಾಣಿಗಳಿಗೂ ಉತ್ಪತ್ತಿಯೂ ಐಶ್ವರ್ಯವೂ ಉಂಟಾಗುವವು. ಪುರುಷನು ವಿಪತ್ಕಾಲದಲ್ಲಿ ಕ್ಷಮೆಯನ್ನು ತಾಳಬೇಕು. ಕೋಪವುಳ್ಳ ಅಸಮರ್ಥನು ತನ್ನ ಮೇಲೆ ಬಲವಂತನಾದವನು ಆಕ್ರೋಶಮಾಡಿದರೂ ತನ್ನನ್ನು ಹೊಡೆದರೂ ಹ್ಯಾಗೆ ಕ್ಷಮಿಸುವನೋ ಹಾಗೆ, ಯಾವ ಸಮರ್ಥನಾದ ಪುರುಷನು ನಿರಂತರದಲ್ಲೂ ಕ್ರೋಧವನ್ನು ಜಯಿಸಿ ಕ್ಷಮೆಯನ್ನು ಪಡೆಯುವನೋ, ಆತನನ್ನೇ ಲೋಕದಲ್ಲಿ ವಿದ್ವಾಂಸನೆಂತಲೂ ಪುರುಷಶ್ರೇಷ್ಠನೆಂತಲೂ ದೊಡ್ಡವರು ಹೇಳುವರು. ಮತ್ತು ಆತನು ಸ್ವರ್ಗಾದಿ ಪುಣ್ಯಲೋಕಗಳಲ್ಲಿ ಸುಖಪಡುವನು. ಅಲ್ಪಜ್ಞನಾಗಿ ಕ್ರೋಧಯುಕ್ತನಾದ ಪುರುಷನು ಇಹದಲ್ಲೂ ಕೆಟ್ಟು, ಪರಲೋಕದ ಸುಖವನ್ನೂ ಕಳೆದುಕೊಳ್ಳುವನು. ಎಲೆ ದ್ರೌಪದಿಯೆ, ಈ ವಿಷಯದಲ್ಲಿ ಕ್ಷಮಾವಂತರೊಳಗೆ ಶ್ರೇಷ್ಠನಾದ ಕಾಶ್ಯಪನು ಹೇಳಿರುವ ಗಾಥೆಗಳನ್ನು ಹೇಳುವೆನು ಕೇಳು :

ಪುರುಷನಿಗೆ ಧರ್ಮದಿಂದಲೂ ಯಜ್ಞದಿಂದಲೂ ವೇದಾಧ್ಯಯನದಿಂದಲೂ ಶಾಸ್ತ್ರಾಭ್ಯಾಸದಿಂದಲೂ ಉಂಟಾಗತಕ್ಕ ಫಲವು ಕ್ಷಮೆಯಿಂದಲೇ ಉಂಟಾಗುವವೆಂದು ತಿಳಿದು, ವಿವೇಕಿಯಾದವನು ಎಲ್ಲಾ ವಿಷಯದಲ್ಲೂ ಕ್ಷಮೆಯನ್ನು ತಾಳಬೇಕು. ಕ್ಷಮೆಯಿಂದಲೇ ಬ್ರಾಹ್ಮಣಜನ್ಮವೂ ಬ್ರಹ್ಮಜ್ಞಾನವೂ ಉಂಟಾಗುವವು. ಮಾಡಿದ ತಪಸ್ಸು ಕ್ಷಮೆಯಿಂದಲೇ ಫಲಿಸುವದು ಮತ್ತು ಮುಂದೆ ಮಾಡತಕ್ಕ ತಪಸ್ಸೂ ಕ್ಷಮೆಯಿಂದಲೇ ರಕ್ಷಿತವಾಗುವದು. ಕ್ಷಮಾವಂತನನ್ನೇ ಪರಿಶುದ್ಧನೆಂದು ಹೇಳುವರು. ಕ್ಷಮೆಯಿಂದಲೇ ಈ ಲೋಕವು ನಿಂತಿರುವದು. ಯಜ್ಞಮಾಡಿದವರಿಗೂ ವೇದಾಧ್ಯಯನಮಾಡಿದವರಿಗೂ ತಪಸ್ಸುಮಾಡಿದವರಿಗೂ ಎಂಥ ಲೋಕಗಳು ಪ್ರಾಪ್ತವಾಗುವವೋ ಅವುಗಳಿಗಿಂತಲೂ ಉತ್ತಮವಾದ ಲೋಕಗಳನ್ನು ಕ್ಷಮಾವಂತನಾದವನು ಪಡೆಯುವನು. ತೇಜೋವಂತರಾದವರಿಗೆ ಕ್ಷಮೆಯೇ ತೇಜಸ್ಸು ; ತಪೋನಿಷ್ಠರಿಗೆ ಕ್ಷಮೆಯೇ ಪರಬ್ರಹ್ಮವು ; ಸತ್ಯಶೀಲರಿಗೆ ಕ್ಷಮೆಯೇ ಸತ್ಯವು. ದಕ್ಷಿಣಾಗ್ನಿ, ಗಾರ್ಹಪತ್ಯ, ಆಹವನೀಯ ಎಂಬ ಮೂರು ಅಗ್ನಿಗಳಿಂದ ಯಜ್ಞಾದಿಕರ್ಮಗಳನ್ನು ಮಾಡತಕ್ಕವರಿಗೂ, ವಾಪೀ ಕೂಪ ತಟಾಕ ಮೊದಲಾದ ಧರ್ಮಕಾರ್ಯಗಳನ್ನು ಮಾಡತಕ್ಕವರಿಗೂ, ಬೇರೆಬೇರೆ ಲೋಕಗಳಿರುವವು ; ಕ್ಷಮಾವಂತರಿಗೆ ಬ್ರಹ್ಮಲೋಕದಲ್ಲೇ ಸಕಲರಿಂದಲೂ ಪೂಜಿತವಾದ ಲೋಕಗಳಿರುವವು. ಎಲೆ ದ್ರೌಪದಿಯೆ, ಇಂಥಾ ಕ್ಷಮೆಯನ್ನು ನಮ್ಮಂಥವರು ಹ್ಯಾಗೆತಾನೇ ಬಿಡಬಹುದು ? ಬ್ರಹ್ಮಜ್ಞಾನವೂ ಸತ್ಯವೂ ಯಜ್ಞವೂ ದಿವ್ಯಲೋಕಗಳೂ ಕ್ಷಮೆಯಿಂದಲೇ ಲಭಿಸತಕ್ಕವುಗಳಾದ್ದರಿಂದ, ಬುದ್ಧಿವಂತನಾದ ಪುರುಷನು ಯಾವಾಗಲೂ ಕ್ಷಮೆಯನ್ನು ತಾಳಿರಬೇಕು. ಯಾವ ಪುರುಷನು ಯಾವಾಗ ಕ್ಷಮೆಯನ್ನು ತಾಳುವನೋ ಆಗಲೇ ಆತನಿಗೆ ಬ್ರಹ್ಮಜ್ಞಾನವುಂಟಾಗುವದು. ಕ್ಷಮಾವಂತನಾದವನಿಗೆ ಈ ಲೋಕದಲ್ಲಿ ಸನ್ಮಾನವೂ ಪರಲೋಕದಲ್ಲಿ ಉತ್ತಮವಾದ ಗತಿಯೂ ಉಂಟಾಗುವವು. ಯಾವ ಪುರುಷನು ತನ್ನ ಕೋಪವನ್ನು ಕ್ಷಮೆಯಿಂದ ಪರಿಹರಿಸಿಕೊಳ್ಳುವನೋ, ಆತನು ಬ್ರಹ್ಮಲೋಕದಲ್ಲಿ ವಾಸಮಾಡುವನು. ಆದ್ದರಿಂದ ಕ್ಷಮೆಯೇ ಉತ್ತಮವಾದದ್ದೆಂದು ಕಾಶ್ಯಪನು

ಹೇಳಿರುವನು. ಎಲೆ ದ್ರೌಪದಿಯೆ, ಈ ಗಾಥೆಯ ಶ್ರವಣದಿಂದ ನೀನು ಸಂತುಷ್ಟಳಾಗಿ ನಿನ್ನ ಕ್ರೋಧವನ್ನು ಬಿಡು. ನಮಗೆ ಪಿತಾಮಹನಾದ ಭೀಷ್ಮನೂ, ದೇವಕೀನಂದನನಾದ ಶ್ರೀಕೃಷ್ಣನೂ, ನಮಗೆ ಆಚಾರ್ಯರಾದ ದ್ರೋಣಾಚಾರ್ಯರೂ, ಕೃಪಾಚಾರ್ಯರೂ, ಅಶ್ವತ್ಥಾಮಾಚಾರ್ಯರೂ, ವ್ಯಾಸರೂ, ವಿದುರ ಸಂಜಯ ಸೋಮದತ್ತ ಯುಯುತ್ಸು ಮೊದಲಾದವರೂ ಸಹ ಯಾವಾಗಲೂ ಕ್ಷಮೆಯೇ ಶ್ರೇಷ್ಠವೆಂದು ಹೇಳುತ್ತಿರುವರು; ಮತ್ತು ಧೃತರಾಷ್ಟ್ರನು ಯಾವಾಗಲೂ ಅವರ ಪ್ರೇರಣೆಯಿಂದ ಕ್ಷಮೆಯನ್ನು ಹೊಂದಿ ನಮಗೆ ರಾಜ್ಯವನ್ನು ಕೊಡಬಹು ದೆಂದು ತೋರುವದು. ಒಂದುವೇಳೆ ಲೋಭದಿಂದ ಕೊಡದೆ ಹೋದರೆ, ಪುತ್ರಸಮೇತನಾಗಿ ಆತನೇ ನಾಶವನ್ನು ಹೊಂದುವನು. ಈ ಕಾಲವು ಬಹಳ ಘೋರವಾಗಿ ಕಾಣುವದರಿಂದ ಕೌರವರಿಗೆ ನಾಶವುಂಟಾದೀತು. ಮುಂದೆ ಹೀಗೆ ನಡೆಯುವದೆಂದು ನಾನು ಮೊದಲೇ ನಿಶ್ಚಯಿಸಿಕೊಂಡಿರುವೆನು. ದುರ್ಯೋಧನನು ರಾಜ್ಯಭಾರಕ್ಕೆ ಅನರ್ಹ ನಾದ್ದರಿಂದಲೇ, ಈ ರೀತಿಯಾಗಿ ಕ್ಷಮಾಗುಣವನ್ನು ಹೊಂದದೆ ಇರುವನು ; ನಾನು ರಾಜ್ಯಾಧಿಪತ್ಯಕ್ಕೆ ಅರ್ಹನಾ ದ್ದರಿಂದಲೇ, ನನಗೆ ಕ್ಷಮೆಯುಂಟಾಗಿರುವದು. ಎಲೆ ದ್ರೌಪದಿಯೆ, ಆತ್ಮಜ್ಞಾನಿಗಳಿಗೆ ಕ್ಷಮೆಯೇ ಸದ್ವೃತ್ತಿಯೆಂ ತಲೂ ಅಹಿಂಸೆಯೆಂತಲೂ ಯಥಾರ್ಥವಾಗಿ ತಿಳಿದೇ ನಾನು ಅದನ್ನು ಆಶ್ರಯಿಸಿರುವೆನು” ಎಂದು ಹೇದಳಿನು.

## ೩೦ನೇ ಅಧ್ಯಾಯ.—ದ್ರೌಪದಿ ಧರ್ಮರಾಯರ ಸಂವಾದ.

ವೈಶಂಪಾಯನಮುನೀಂದ್ರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಆ ಬಳಿಕ ದ್ರೌಪದಿಯು ಧರ್ಮರಾಯನನ್ನು ಕುರಿತು “ರಾಜೇಂದ್ರನೆ, ವಂಶಪಾರಂಪರ್ಯದಿಂದ ಪ್ರಾಪ್ತನಾದ ರಾಜ್ಯ ಭಾರವನ್ನು ವಹಿಸುವದರಲ್ಲಿ ನಿನ್ನ ಬುದ್ಧಿಯು ಬೇರೆಯಾಗಿರುವದಲ್ಲ! ಅಕಟಕಟಾ! ನಿನಗೆ ಹೀಗೆ ಬುದ್ಧಿವ್ಯಾ ಮೋಹವನ್ನು ಕಲ್ಪಿಸಿದ ಈಶ್ವರನಿಗೂ ಪ್ರಾಚೀನಕರ್ಮಕ್ಕೂ ನಮಸ್ಕಾರ. ಲೋಕದಲ್ಲಿ ಜನಗಳು ತಮ್ಮ ತಮ್ಮ ಕರ್ಮಗಳಿಗನುಸಾರವಾಗಿಯೇ ಪ್ರತ್ಯೇಕಪ್ರತ್ಯೇಕವಾಗಿ ಅನೇಕವಿಧವಾದ ಜನ್ಮಗಳನ್ನೆತ್ತುವದರಿಂದ, ಕರ್ಮ ಗಳನ್ನು ಅತಿಕ್ರಮಿಸಲಾಗದು. ಹೀಗಿದ್ದರೂ ಅಜ್ಞಾನಿಗಳಾದ ಜನಗಳು ಆ ಕರ್ಮಗಳಿಂದುಂಟಾಗತಕ್ಕ ದುಃಖ ಗಳನ್ನು ಕಳೆದುಕೊಳ್ಳಲಿಚ್ಛೈಯಿಸುವರು. ಜನ್ಮಾಂತರಕರ್ಮಕ್ಕೆ ಅಧೀನನಾದ ಪುರುಷನು ಧರ್ಮದಿಂದಲೂ, ದಯೆಯಿಂದಲೂ, ಕ್ಷಮೆಯಿಂದಲೂ, ಋಜುಸ್ವಭಾವದಿಂದಲೂ, ಲೋಕಾಪವಾದ ಭೀತಿಯಿಂದಲೂ, ಈ ಜನ್ಮದಲ್ಲಿ ಯಾವಾಗಲಾದರೂ ಐಶ್ವರ್ಯವನ್ನು ಪಡೆಯಲಾರನು. ಇದಕ್ಕೆ ಪ್ರಕೃತದಲ್ಲಿ ದುಸ್ಸಹವಾದ ವ್ಯಸನವನ್ನು ಹೊಂದಿ ರುವ ನೀನೇ ದೃಷ್ಟಾಂತಭೂತನಾಗಿರುವೆ. ಇಂಥ ವ್ಯಸನವನ್ನು ಅನುಭವಿಸುವದಕ್ಕೆ ನೀನೂ ಪರಾಕ್ರಮಶಾಲಿಗ ಳಾದ ನಿನ್ನ ತಮ್ಮಂದಿರೂ ಸಹ ಅನರ್ಹರಾಗಿರುವಿರಿ. ರಾಜ್ಯಭಾರಮಾಡುತ್ತಿದ್ದಾಗಲೂ ಈಗಲೂ ಯಾವಾಗಲೂ ನಿನ್ನ ತಮ್ಮಂದಿರು ಈ ಲೋಕದಲ್ಲಿ ಧರ್ಮವೇ ತಮ್ಮ ಪ್ರಾಣಕ್ಕಿಂತಲೂ ಅಧಿಕವಾದದ್ದೆಂದು ತಿಳಿದಿರುವರು. ನೀನು ರಾಜ್ಯಭಾರಮಾಡುವದೂ ನೀನು ಬದುಕಿರುವದೂ ಧರ್ಮಕ್ಕೋಸ್ಕರಲೇ ಎಂದು ಪೂಜ್ಯರಾದ ಬ್ರಾಹ್ಮಣರೂ ದೇವತೆಗಳೂ ತಿಳಿದಿರುವರು. ನೀನು ಭೀಮಾರ್ಜುನರನ್ನೂ ನಕುಲಸಹದೇವರನ್ನೂ ನನ್ನನ್ನೂ ಸಹ ಬಿಟ್ಟು ಬಿಟ್ಟರೂ ನನಗೆ ಸಮಾಧಾನ ; ನೀನು ಧರ್ಮವನ್ನು ಬಿಡೆಂದು ಮಾತ್ರ ನಾನು ಎಂದಿಗೂ ಹೇಳತಕ್ಕವಳಲ್ಲ. ಯಾವ ರಾಜನು ಧರ್ಮವನ್ನು ಪರಿಪಾಲಿಸುವನೋ ಅಂಥವನನ್ನು ಆ ಧರ್ಮವೇ ಪಾಲಿಸುವದು ಎಂದು ನಾನು ಶಾಸ್ತ್ರಜ್ಞ ರಿಂದ ಕೇಳಿರುವೆನು ; ಆದರೆ ಅಂಥ ಧರ್ಮವು ಈಗ ನಿನ್ನನ್ನು ರಕ್ಷಿಸದೆ ಇರುವದು. ಪುರುಷಶ್ರೇಷ್ಠನಾದ ಧರ್ಮ ರಾಯನೆ, ಮನುಷ್ಯನ ನೆರಳು ಯಾವಾಗಲೂ ಆತನನ್ನೇ ಅನುಸರಿಸಿರುವಂತೆ ಮತ್ತೊಂದನ್ನು ಅನುವರ್ತಿಸದಿರುವ ನಿನ್ನ ಬುದ್ಧಿಯು ಯಾವಾಗಲೂ ಧರ್ಮವನ್ನೇ ಅನುವರ್ತಿಸಿಕೊಂಡಿರುವದು. ಮತ್ತು ನೀನು ರಾಜ್ಯಭಾರಮಾ ಡುತ್ತಿದ್ದ ಕಾಲದಲ್ಲಿ ನಿನಗೆ ಸಮಾನರಾದವರನ್ನೂ ನಿನಗಿಂತಲೂ ಕೀಳಾಗಿರತಕ್ಕವರನ್ನೂ ಕೂಡ ಅವಮಾನಪಡಿಸು ತ್ತಿರಲಿಲ್ಲವೆಂಬಲ್ಲಿ, ದೊಡ್ಡವರಾದವರನ್ನು ಹೇಳತಕ್ಕದ್ದೇನು? ಆ ಕಾಲದಲ್ಲಿ ನೀನು ಸ್ವಲ್ಪವೂ ಗರ್ವಿಷ್ಠನಾಗಿದ್ದವನಲ್ಲ; ಸ್ವಾಹಾಕಾರಗಳಿಂದ ದೇವತೆಗಳನ್ನೂ, ಸ್ವಧಾಕಾರಗಳಿಂದ ಪಿತೃಗಳನ್ನೂ, ಬೇಕಾದ ಇಷ್ಟಾರ್ಥಗಳಿಂದ ಬ್ರಾಹ್ಮಣ

ರನ್ನೂ ಪೂಜಿಸಿ ಸಂತೋಷಪಡಿಸುತ್ತಿದ್ದೆ; ಮೋಕ್ಷಾಶ್ರಮಿಗಳಾದ ಯತಿಗಳನ್ನೂ, ಗೃಹಸ್ಥಾಶ್ರಮಿಗಳನ್ನೂ, ವಾನಪ್ರಸ್ಥಾಶ್ರಮಿಗಳನ್ನೂ, ಚಿನ್ನದ ಪಾತ್ರೆಗಳನ್ನು ಧರಿಸಿದ ಸ್ತ್ರೀಯರಿಂದ ಭೋಜನಮಾಡಿಸಿ ಅವರಿಗೆಲ್ಲಾ ಯಥೇಚ್ಛವಾಗಿ ಚಿನ್ನದ ಪಾತ್ರೆಗಳನ್ನು ಕೊಡುತ್ತಿದ್ದೆ. ಆಗ ಅಲ್ಲಿ ನಾನೂ ನಿನಗೆ ಪರಿಚಾರಕಳಾಗಿದ್ದೆ. ನಿನ್ನ ಮನೆಯಲ್ಲಿದ್ದ ವಸ್ತುಗಳೆಲ್ಲಾ ಬ್ರಾಹ್ಮಣರಿಗೆ ಕೊಡುವದಕ್ಕೋಸ್ಕರಲೇ ಇದ್ದವು. ಮನೆಯಲ್ಲಿ ಶಾಂತಿಕರ್ಮಕ್ಕೋಸ್ಕರ ವೈಶ್ವದೇವವನ್ನು ಮಾಡಿ, ಅತಿಥಿಗಳಿಗೆ ಅನ್ನದಾನವನ್ನು ಮಾಡಿ, ಬಳಿಕ ನೀನು ಆ ಅವಶಿಷ್ಟವಾದ ಅನ್ನವನ್ನು ಭೋಜನಮಾಡುತ್ತಿದ್ದೆ. ನಿರಂತರದಲ್ಲೂ, ನೀನು ಅನೇಕ ಇಷ್ಟಿಗಳನ್ನೂ, ಪಶುಬಂಧಗಳನ್ನೂ, ಕಾಮ್ಯನೈಮಿತ್ತಿ ಕರ್ಮಗಳನ್ನೂ, ಗೃಹ್ಯಾಗ್ನಿಯಿಂದ ಸಾಧ್ಯವಾದ ಇಷ್ಟಿಗಳನ್ನೂ, ಯಜ್ಞಕರ್ಮಗಳನ್ನೂ ಮಾಡುತ್ತಿದ್ದೆ. ರಾಜ್ಯವನ್ನು ಕಳೆದುಕೊಂಡು ವಿಜನವಾಗಿಯೂ ಕಳ್ಳರಿಗೆ ಆಶ್ರಯವಾಗಿಯೂ ಇರುವ ಈ ಮಹಾರಣ್ಯದಲ್ಲಿ ವಾಸಮಾಡುತ್ತಿದ್ದರೂ, ನೀನು ನಿನ್ನ ಧರ್ಮವನ್ನುಮಾತ್ರ ಬಿಡದೆ ಇರುವೆ. ಮತ್ತು ಉತ್ತಮವಾದ ಅನೇಕ ದಕ್ಷಿಣೆಗಳುಳ್ಳ ಅಶ್ವಮೇಧ, ರಾಜಸೂಯ, ಪುಂಡರೀಕ, ಗೋಸವ ಮೊದಲಾದ ಅನೇಕ ಯಜ್ಞಗಳನ್ನು ಮಾಡಿದ ನೀನು ವಿಪರೀತ ಬುದ್ಧಿಯಿಂದ ಪಗಡೇ ಆಟದಲ್ಲಿ ಪರಾಜಯವನ್ನು ಹೊಂದಿ, ರಾಜ್ಯವನ್ನೂ ದ್ರವ್ಯವನ್ನೂ ಆಯುಧಗಳನ್ನೂ ತಮ್ಮಂದಿರನ್ನೂ ನನ್ನನ್ನೂ ಸಹ ಸೋತು ಬಿಟ್ಟೆ. ಋಜುಸ್ವಭಾವವುಳ್ಳವನಾಗಿಯೂ ದಯಾಳುವಾಗಿಯೂ ದಾನಶೀಲನಾಗಿಯೂ ಅಕಾರ್ಯದಲ್ಲಿ ಲಜ್ಜೆಯುಳ್ಳವನಾಗಿಯೂ ಸತ್ಯವಾದಿಯಾಗಿಯೂ ಇರುವ ಇಂಥ ನಿನ್ನ ಬುದ್ಧಿಯು ಹ್ಯಾಗೆ ಪಗಡೇ ಆಟದಲ್ಲಿ ಆಸಕ್ತವಾಯಿತೋ ಎಂದು ಚಿತಿಸುತ್ತಿರುವ ನನ್ನ ಮನಸ್ಸು ಅಧಿಕವಾಗಿ ಮೋಹಭಾವವನ್ನು ಹೊಂದಿ ಸಂತಾಪಪಡುತ್ತಿರುವದು. ನಿನಗೆ ಇಂಥ ದುಃಖವೂ ವಿಪತ್ತೂ ಸಂಭವಿಸಿರುವದನ್ನು ನೋಡಿ ನಾನು ಬಹಳವಾಗಿ ವ್ಯಸನಪಡುತ್ತಿರುವೆನು. ರಾಜೇಂದ್ರನೆ, ಈ ವಿಷಯದಲ್ಲಿ ಒಂದು ಪುರಾತನವಾದ ಇತಿಹಾಸವನ್ನು ಹೇಳುವೆನು ಕೇಳು :

ಪ್ರಾಣಿಗಳು ಹ್ಯಾಗೆ ಈಶ್ವರನಿಗೆ ಅಧೀನವಾಗಿರುವವೋ ಹಾಗೆ, ತಮ್ಮಧೀನದಲ್ಲಿ ತಾವಿರುವದಿಲ್ಲ. ಈಶ್ವರನು ಪ್ರಾಣಿಗಳ ಜನ್ಮಾಂತರಕರ್ಮಕ್ಕೆ ಅನುಸಾರವಾಗಿ, ಅವರಿಗೆ ಪ್ರಿಯವಾದ ಸುಖವನ್ನೂ ಅಪ್ರಿಯವಾದ ದುಃಖವನ್ನೂ ಸಹ ಉಂಟುಮಾಡುವನು. ಪುರುಷಶ್ರೇಷ್ಠನಾದ ಧರ್ಮರಾಯನೆ, ಮರದಿಂದ ಮಾಡಿದ ಬೊಂಬೆಯು ಸೂತ್ರಧಾರಿಯಿಂದ ಪ್ರೇರಿತವಾಗಿ ಹ್ಯಾಗೆ ಅಂಗಾಂಗಚೇಷ್ಟೆಗಳನ್ನು ಮಾಡುವದೋ ಹಾಗೆ, ಸಕಲ ಪ್ರಜೆಗಳೂ ಈಶ್ವರಪ್ರೇರಣೆಯಿಂದ ಕರ್ಮಗಳನ್ನು ಮಾಡುವರು. ಆಕಾಶವು ಹ್ಯಾಗೆ ಎಲ್ಲಾಕಡೆಯಲ್ಲೂ ವ್ಯಾಪಿಸಿಕೊಂಡಿರುವದೋ ಹಾಗೆ, ಸಮರ್ಥನಾದ ಈಶ್ವರನು ಎಲ್ಲಾಪ್ರಾಣಿಗಳಲ್ಲೂ ವ್ಯಾಪಿಸಿಕೊಂಡು, ಅವರಿಂದ ಪುಣ್ಯಪಾಪಕರ್ಮಗಳನ್ನು ಮಾಡಿಸುವನು. ಸೂತ್ರದಿಂದ ಬದ್ಧವಾದ ಪಕ್ಷಿಯು ಹ್ಯಾಗೆ ಪರಾಧೀನವಾಗಿರುವದೋ, ಎಳೆಯಲ್ಲಿ ಪೋಣಿಸಿದ ಮಣಿಯು ಹ್ಯಾಗೆ ಅದರಲ್ಲಿ ಸಿಕ್ಕಿರುವದೋ, ಮೂಗುದಾರ ಹಾಕಿದ ಎತ್ತು ಹ್ಯಾಗೆ ಸ್ವಾತಂತ್ರ್ಯವಿಲ್ಲದೆ ಇರುವದೋ ಹಾಗೆ, ಮನುಷ್ಯನು ಈಶ್ವರನಿಗೆ ಅಧೀನನಾಗಿ, ತನಗೇನೂ ಶಕ್ತಿಯಿಲ್ಲದೆ ಮತ್ತೊಬ್ಬರನ್ನೂ ತನ್ನನ್ನೂ ಸಹ ಆಳಲಾರನು. ಈಶ್ವರನ ಆಜ್ಞೆಗೆ ಒಳಪಟ್ಟ ಮನುಷ್ಯನು ಅಂತರ್ಯಾಮಿಯಾದ ಆತನಿಂದ ಪ್ರೇರಿತನಾಗಿ, ಆತನ ವಶದಲ್ಲೇ ಇದ್ದುಕೊಂಡು, ಸ್ವಾತಂತ್ರ್ಯವೇ ಇಲ್ಲದೆ, ಕಾಲರೂಪನಾದ ಈಶ್ವರನನ್ನು ಅನುಸರಿಸಿರುವನು. ದಡಕುಸಿದು ಪ್ರವಾಹದಲ್ಲಿ ಬಿದ್ದ ವೃಕ್ಷವು ಆ ಪ್ರವಾಹವನ್ನೇ ಅನುಸರಿಸಿ ಹೋಗುವಂತೆ, ಅಜ್ಞಗಳಾದ ಪ್ರಾಣಿಗಳು ಸುಖದುಃಖಗಳನ್ನು ಅನುಭವಿಸುವದಕ್ಕೆ ತಮಗೆ ಸಾಮರ್ಥ್ಯವಿಲ್ಲದೆ ಈಶ್ವರಪ್ರೇರಣೆಯಿಂದಲೇ ಸ್ವರ್ಗವನ್ನೇ ಆಗಲಿ ನರಕವನ್ನೇ ಆಗಲಿ ಹೊಂದುವವು. ಹುಲ್ಲಿನ ಅಗ್ರಭಾಗಗಳು ಹ್ಯಾಗೆ ಬಲವಾದ ಗಾಳಿಗೆ ಅಧೀನವಾಗಿರುವವೋ ಹಾಗೆ, ಸಕಲ ಪ್ರಾಣಿಗಳೂ ಈಶ್ವರನಿಗೆ ಅಧೀನವಾಗಿರುವವು. ಈಶ್ವರನು ಪ್ರಾಣಿಗಳಿಗೆ ಪಾಪಕರ್ಮಗಳನ್ನೂ ಪುಣ್ಯಕರ್ಮಗಳನ್ನೂ ಮಾಡುವಹಾಗೆ ಪ್ರೇರಿಸಿ, ಅವರಲ್ಲಿ ತಾನು ವ್ಯಾಪ್ತನಾಗಿ, ಪರಸ್ಪರ ಉಪಕಾರ್ಯೋಪಕಾರಕಭಾವವನ್ನುಹೊಂದಿದ್ದರೂ ತಾನು ಇಂಥವನೆಂದು ಕಾಣಿಸಿಕೊಳ್ಳದೆ ಇರುವನು. ಮತ್ತು ಈಶ್ವರನು ಶರೀರ ಸಹಿತನಾದ ಜೀವನಿಂದ ಶುಭಾಶುಭಫಲಗಳನ್ನು ಕೊಡತಕ್ಕ ಕರ್ಮಗಳನ್ನು ಮಾಡಿಸುವನು. ಆದ್ದರಿಂದ ಕ್ಷೇತ್ರವೆಂಬ ಸಂಜ್ಞೆಯನ್ನು ಪಡೆದಿರುವ ಶರೀರವು ಈಶ್ವರನ ವಾಸಕ್ಕೆ ಕಾರಣವಾದದ್ದೆಂದು ಹೇಳುವರು. ರಾಜನೇ,

ಈಶ್ವರನ ಮಾಯಾಪ್ರಭಾವವು ಹ್ಯಾಗಿರುವದು ನೋಡು. ಆತನು ತನ್ನ ಮಾಯೆಯಿಂದ ಪ್ರಾಣಿಗಳಿಗೆ ಅಜ್ಞಾನವನ್ನು ಕಲ್ಪಿಸಿ, ಅವರಿಂದಲೇ ಅವರನ್ನು ಸಂಹಾರಮಾಡಿಸುವನು. ಈ ಪ್ರಪಂಚಸ್ಥಿತಿಯನ್ನು ತತ್ವಜ್ಞಾನಿಗಳಾದ ಮುನಿಗಳು ತಿಳಿದಿರುವಂತೆ ಮೂಢಾತ್ಮರು ತಿಳಿಯರಾದ್ದರಿಂದ, ಅವರು ಮರುಭೂಮಿಯಲ್ಲಿ ಬಿದ್ದ ಸೂರ್ಯಕಿರಣಗಳನ್ನು ಜಲಪ್ರವಾಹವೆಂದು ತಿಳಿಯುವಂತೆ, ಭ್ರಾಂತಿಯಿಂದ ಮತ್ತೊಂದು ಪ್ರಕಾರವಾಗಿ ತಿಳಿಯುವರು. ಅಜ್ಞರಾದವರು ದುಃಖಮಯವಾದ ಈ ಪ್ರಪಂಚವನ್ನು ಸುಖಕರವಾದದ್ದೆಂದು ತಿಳಿಯುವರು. ಲೋಕದಲ್ಲಿ ಜನಗಳು ಬಂದು ಪ್ರಕಾರವಾಗಿ ಯೋಚಿಸಿದ್ದ ಕಾರ್ಯವನ್ನು ಈಶ್ವರನು ಮತ್ತೊಂದು ಪ್ರಕಾರವಾಗಿ ಮಾಡುವನು, ಮತ್ತು ಆ ಕಾರ್ಯವನ್ನು ನಾನಾಪ್ರಕಾರವಾಗಿ ಮಾಡಿಬಿಡುವನು. ರಾಜೇಂದ್ರನೆ, ಷಡ್ಗುಣೈಶ್ವರ್ಯಸಂಪನ್ನನಾಗಿಯೂ, ಸಕಲರಿಗೂ ಸ್ವಾಮಿಯಾಗಿಯೂ ಇರುವ ಪರಮಾತ್ಮನು, ಅಚೇತನವಾದ ಕಾಷ್ಠದಿಂದ ಕಾಷ್ಠವನ್ನೂ ಕಲ್ಲಿನಿಂದ ಕಲ್ಲನ್ನೂ ಕಬ್ಬಿಣದಿಂದ ಕಬ್ಬಿಣವನ್ನೂ ಭೇದಿಸುವಂತೆ, ತನ್ನ ಮಾಯಾಪ್ರಭಾವದಿಂದ ಪ್ರಾಣಿಗಳಿಂದಲೇ ಪ್ರಾಣಿಗಳನ್ನು ಸಂಹರಿಸುವನು. ಆತನು ಸರ್ವದಾ ಪ್ರಾಣಿಗಳಿಗೆ ಪರಸ್ಪರವಾಗಿ ಸಂಬಂಧವನ್ನೂ ವಿಯೋಗವನ್ನೂ ಉಂಟುಮಾಡುತ್ತ, ಸ್ವಚ್ಛಂದನಾಗಿರುವ ಬಾಲಕನು ಚೆಂಡು ಬುಗುರಿ ಮೊದಲಾದವುಗಳಿಂದ ಹ್ಯಾಗೆ ಕ್ರೀಡಿಸುವನೋ ಹಾಗೆ, ಪ್ರಾಣಿಗಳಿಂದ ತಾನೂ ಕ್ರೀಡಿಸುತ್ತಿರುವನು. ಈಶ್ವರನು ಪ್ರಾಣಿಗಳಲ್ಲಿ ತಾಯಿತಂದೆಗಳಂತೆ ಪ್ರೀತಿಯುಳ್ಳವನಾಗಿರುವದಿಲ್ಲ. ಕ್ರೂರರಾದವರು ಹ್ಯಾಗೆ ಕೋಪದಿಂದ ನಿರ್ದಯರಾಗಿರುವರೋ ಹಾಗೆ ಆ ಪ್ರಾಣಿಗಳಲ್ಲಿ ನಿರ್ದಯನಾಗಿರುವದರಿಂದ, ಈಶ್ವರನನ್ನು ದಯಾಳುವಲ್ಲವೆಂದು ಹೇಳಬೇಕು. ಒಳ್ಳೇ ಸ್ವಭಾವವುಳ್ಳವರಾಗಿಯೂ ಅಕಾರ್ಯದಲ್ಲಿ ಲಜ್ಜೆಯುಳ್ಳವರಾಗಿಯೂ ಇರುವ ದೊಡ್ಡವರಿಗೆ ಜೀವನಕ್ಕೆ ಮಾರ್ಗವಿಲ್ಲದೆ ಇರುವದನ್ನೂ, ನೀಚರಾದವರು ಸುಖಪಡುತ್ತ ಸರ್ವದಾ ಧನಚಿಂತಾಪರವಶರಾಗಿರುವದನ್ನೂ ನೋಡಿದರೆ, ಈಶ್ವರನು ದಯಾಳುವೆಂದು ಹ್ಯಾಗೆ ಹೇಳಬಹುದು? ಆರ್ಯಪುತ್ರನೆ, ನಿನಗೆ ಸಂಭವಿಸಿರುವ ಆಪತ್ತನ್ನೂ ದುರ್ಯೋಧನನಿಗೆ ಪ್ರಾಪ್ತವಾಗಿರುವ ಐಶ್ವರ್ಯವನ್ನೂ ನೋಡಿ, ಈಶ್ವರನಲ್ಲಿ ವೈಷಮ್ಯವಿರುವದೆಂದು ಆತನನ್ನು ನಾನು ನಿಂದಿಸುವೆನು. ಶಾಸ್ತ್ರವನ್ನು ಅತಿಕ್ರಮಿಸಿ, ಕ್ರೂರನೂ ಲುಬ್ಧನೂ ಆಗಿ, ಧರ್ಮಕ್ಕೆ ಶತ್ರುವಾಗಿರುವ ದುರ್ಯೋಧನನಿಗೆ ಐಶ್ವರ್ಯವನ್ನು ಕೊಟ್ಟದ್ದರಿಂದ, ಈಶ್ವರನಿಗೆ ಏನು ಪ್ರಯೋಜನವಾಯಿತು? ಕರ್ಮಫಲವು ಕರ್ಮವನ್ನು ಮಾಡಿದವನನ್ನೇ ಹೊಂದುವದೇ ಹೊರತು ಮತ್ತೊಬ್ಬನನ್ನು ಹೊಂದುವದಿಲ್ಲವಾದ್ದರಿಂದ, ಪಾಪಕರ್ಮವನ್ನು ಮಾಡಿಸಿದ ಈಶ್ವರನಿಗೇ ಆ ಪಾಪಫಲವುಂಟಾಗಲಿ. ಹಾಗಾಗದೆ ಹೋದಪಕ್ಷದಲ್ಲಿ, ಈಶ್ವರನು ತನಗೆ ಆ ಪಾಪಲೇಪವಿಲ್ಲದೆ ತನ್ನ ಶಕ್ತಿಯಿಂದ ದುರ್ಬಲರಾದ ಪ್ರಾಣಿಗಳನ್ನು ನರಕದಲ್ಲಿ ಕೆಡಹಿಬಿಡುವನಲ್ಲಾ! ಎಂದು ವ್ಯಸನಪಡುವೆನು" ಎಂದು ಹೇಳಿದಳು.

### ೩೧ನೇ ಅಧ್ಯಾಯ.—ಧರ್ಮರಾಯ ದ್ರೌಪದಿಯರ ಸಂವಾದ.

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಬಳಿಕ ಧರ್ಮರಾಯನು ದ್ರೌಪದಿಯನ್ನು ಕುರಿತು "ಎಲೆ ದ್ರೌಪದಿಯೆ, ಮನೋಹರವಾಗಿಯೂ ಮೃದುವಾಗಿಯೂ ವಿಚಿತ್ರವಾದ ಶಬ್ದಾರ್ಥಸಂದರ್ಭವುಳ್ಳದ್ದಾಗಿಯೂ ಇರುವ ನಿನ್ನ ಮಾತುಗಳನ್ನು ನಾನು ಕೇಳಿದೆನು. ಆದರೆ ಆ ಮಾತುಗಳು ವೇದಶಾಸ್ತ್ರಗಳಿಗೆ ವಿರುದ್ಧವಾಗಿರುವದರಿಂದ, ಅಂಥಾ ಮಾತುಗಳನ್ನು ನೀನಾಡಬಹುದೆ? ನಾನು ಫಲಾಪೇಕ್ಷೆಯಿಂದ ಕರ್ಮಗಳನ್ನು ಮಾಡತಕ್ಕವನಲ್ಲ; ದೇವಋಣವನ್ನೂ ಋಷಿಋಣವನ್ನೂ ಪಿತೃಋಣವನ್ನೂ ಕಳೆದುಕೊಳ್ಳುವದಕ್ಕೋಸ್ಕರ ಯಜ್ಞಾದಿಕರ್ಮಗಳನ್ನು ಆಚರಿಸುತ್ತಿರುವೆನು. ಆ ಯಜ್ಞಾದಿಕರ್ಮಗಳಿಗೆ ಫಲವಿದ್ದರೂ ಇಲ್ಲದೆಹೋದರೂ ಗೃಹಸ್ಥಾಶ್ರಮಿಯಾದವನು ಅವುಗಳನ್ನು ಆಚರಿಸಬೇಕೆಂದು ಶಾಸ್ತ್ರವಿರುವದರಿಂದ, ನಾನು ಅಂಥ ಕರ್ಮಗಳನ್ನು ಫಲಾಪೇಕ್ಷೆಯಿಲ್ಲದೆ ಯಥಾಶಕ್ತಿಯಾಗಿ ಆಚರಿಸುತ್ತಿರುವೆನು. ಶಾಸ್ತ್ರಗಳನ್ನು ವಿಚಾರದೆ, ಸತ್ಪುರುಷರ ನಡತೆಯನ್ನು ನೋಡಿ, ಯಾವಾಗಲೂ ನನ್ನ ಮನಸ್ಸು ಸ್ವಭಾವದಿಂದಲೇ ಧರ್ಮಮಾರ್ಗವನ್ನು ಆಶ್ರಯಿಸಿರುವದು. ಯಾವ ಪುರುಷನು ಸ್ವರ್ಗಾದಿಫಲವನ್ನು ಅಪೇಕ್ಷಿಸಿ ಧರ್ಮವನ್ನು ಆಚರಿಸು

ವನೋ ಆತನು, ತಾನು ಮಾಡಿದ ಧರ್ಮಕ್ಕೆ ಮುಖ್ಯವಾದ ಫಲವನ್ನು ಹೊಂದದೆ, ಧರ್ಮವಾದಿಗಳಲ್ಲಿ ನೀಚನೆಂದೆನಿಸಿಕೊಳ್ಳುವನು. ಯಾವನು ಧರ್ಮವನ್ನಾಚರಿಸಿ ಅದರಲ್ಲಿ ನಂಬಿಗೆಯನ್ನಿಡುವದಿಲ್ಲವೋ, ಅಂಥಾ ಪಾಪಬುದ್ಧಿಯಾದ ಪುರುಷನು ನಾಸ್ತಿಕನಾಗಿ ಆ ಧರ್ಮವನ್ನು ಹೊಂದದೆ ಹೋಗುವನು. ಇದನ್ನು ನಾನು ವೇದಪ್ರಾಮಾಣ್ಯದಿಂದ ಹೇಳುವೆನು. ಆದ್ದರಿಂದ ನೀನು ಧರ್ಮದಲ್ಲಿ ಸಂಶಯಬುದ್ಧಿಯನ್ನು ಮಾಡಬೇಡ. ಧರ್ಮದಲ್ಲಿ ಶಂಕೆಪಡತಕ್ಕ ಪುರುಷನು ಇಹಪರಗತಿಗಳೆರಡರನ್ನೂ ಕಳೆದುಕೊಳ್ಳುವನು. ಯಾವ ಪುರುಷನು ವಿವೇಕವಿಲ್ಲದೆ ಧರ್ಮದಲ್ಲೂ ಧರ್ಮಕ್ಕೆ ಮೂಲವಾದ ಪ್ರಮಾಣವಾಕ್ಯಗಳಲ್ಲೂ ಶಂಕೆಪಡುವನೋ, ಆ ಪುರುಷನು ವೇದಕ್ಕೆ ಶೂದ್ರನು ಹ್ಯಾಗೆ ಹೊರಚ್ಚಾಗುವನೋ ಹಾಗೆ ಮೋಕ್ಷಪದವಿಗೆ ಹೊರಚ್ಚಾಗುವನು. ಸತ್ಕುಲದಲ್ಲಿ ಹುಟ್ಟಿ ವೇದಾಧ್ಯಯನವನ್ನು ಮಾಡಿ ಧರ್ಮಪರನಾಗಿರುವವನು ಬಾಲಕನಾದರೂ, ಆತನನ್ನು ವೃದ್ಧರಾದವರಲ್ಲಿ ಗಣನೆ ಮಾಡಬೇಕು. ಧರ್ಮಜ್ಞರಾದವರು ರಾಜರ್ಷಿಯಾದವನನ್ನೂ ಹಾಗೆ ಭಾವಿಸಬೇಕು. ಯಾವ ಪುರುಷನು ಶಾಸ್ತ್ರವನ್ನು ಅತಿಕ್ರಮಿಸಿ ಬುದ್ಧಿಶೂನ್ಯನಾಗಿ ಧರ್ಮದಲ್ಲಿ ನಂಬಿಗೆಯನ್ನಿಡದೆ ಇರುವನೋ, ಅಂಥವನನ್ನು ಶೂದ್ರರಿಗಿಂತಲೂ ಕಳ್ಳರಿಗಿಂತಲೂ ಪಾಪಿಷ್ಠನಾದವನೆಂದು ತಿಳಿಯಬೇಕು. ಎಲೆ ದ್ರೌಪದಿಯೆ, ಗಂಭೀರವಾದ ಹೃದಯವುಳ್ಳ ಮಾರ್ಕಂಡೇಯನು ಮಹತ್ತಾದ ತಪಸ್ಸನ್ನುಮಾಡಿ ಅಂಥ ಧರ್ಮದಿಂದ ಚಿರಂಜೀವಿಯಾದನು. ಇದನ್ನು ನೀನು ಪ್ರತ್ಯಕ್ಷವಾಗಿ ತಿಳಿದಿರುವೆ. ವ್ಯಾಸ, ವಸಿಷ್ಠ, ಮೈತ್ರೇಯ, ನಾರದ, ಲೋಮಶ, ಶುಕ ಮೊದಲಾದ ಮಹಾತ್ಮರಾದ ಋಷಿಗಳು ದಿವ್ಯಯೋಗಬಲದಿಂದ ದೇವತೆಗಳಿಗಿಂತಲೂ ಅಧಿಕರೆಂದೆನಿಸಿಕೊಂಡು, ಶಾಪಾನುಗ್ರಹಶಕ್ತಿಯುಳ್ಳವರಾಗಿರುವದನ್ನು ನೀನು ಪ್ರತ್ಯಕ್ಷವಾಗಿಯೇ ನೋಡುತ್ತಿರುವೆ. ದೇವತೆಗಳಂತೆ ಪ್ರಸಿದ್ಧರಾದ ಆ ಮಹರ್ಷಿಗಳು ವೇದವೇದ್ಯವಾದ ವಸ್ತುವನ್ನು ಪ್ರತ್ಯಕ್ಷವಾಗಿ ತಿಳಿದವರಾಗಿ, ಯಾವಾಗಲೂ ಧರ್ಮವನ್ನೇ ಮುಖ್ಯವಾಗಿ ಆಚರಿಸಬೇಕೆಂದು ಹೇಳುತ್ತಿರುವರು. ಆದ್ದರಿಂದ ನೀನು ಅಜ್ಞಾನದಿಂದ ದೇವರನ್ನೂ ಧರ್ಮವನ್ನೂ ನಿಂದಿಸತಕ್ಕದ್ದು ಸರಿಯಲ್ಲ. ಮೂಢನಾದವನು ತತ್ವಜ್ಞಾನವುಳ್ಳವರನ್ನು ಉನ್ಮತ್ತರೆಂದು ತಿಳಿಯುವನು. ಧರ್ಮದಲ್ಲಿ ಶಂಕೆಪಡುವ ಮೂಢನು ಮತ್ತೊಬ್ಬರು ಹೇಳಿದ ಪ್ರಮಾಣದಲ್ಲಿ ನಂಬಿಗೆಯಿಲ್ಲದೆ, ಆತ್ಮಪ್ರಮಾಣದಿಂದಲೇ ಅಹಂಕಾರಪಡುತ್ತ, ಧರ್ಮವನ್ನು ಅನಾದರಿಸುತ್ತ, ಲೋಕದಲ್ಲಿ ಪ್ರತ್ಯಕ್ಷವಾಗಿರುವ ಇಂದ್ರಿಯಸುಖವನ್ನೇ ದೊಡ್ಡದೆಂದು ಭಾವಿಸಿಕೊಂಡು, ಧರ್ಮಾಚರಣೆಯಲ್ಲಿ ಅನ್ಯಥಾ ಬುದ್ಧಿಯನ್ನುಮಾಡುವನು. ಈ ಪ್ರಕಾರ ಧರ್ಮದಲ್ಲಿ ಶಂಕಪಡುವ ಮೂಢಾತ್ಮನಿಗೆ ಪ್ರಾಯಶ್ಚಿತ್ತವೇ ಇಲ್ಲ. ದ್ರವ್ಯದಲ್ಲಿ ಲೋಭವುಳ್ಳ ಪಾಪಿಷ್ಠನು ಧರ್ಮಜ್ಞರಿಗೆ ಲಭಿಸತಕ್ಕ ಉತ್ತಮವಾದ ಗತಿಯನ್ನು ಹೊಂದಲಾರನು. ವೇದಶಾಸ್ತ್ರಗಳಲ್ಲಿ ಪ್ರಾಮಾಣ್ಯವಿಲ್ಲದೆ ಅವುಗಳನ್ನು ನಿಂದಿಸುತ್ತ ಅಧಿಕವಾದ ಕಾಮವನ್ನೂ ಲೋಭವನ್ನೂ ಹೊಂದಿದ ಮೂಢಾತ್ಮನು ನರಕವನ್ನು ಹೊಂದುವನು. ಎಲೆ ಮಂಗಳಾಂಗಿಯೆ, ಯಾವ ಪುರುಷನು ಯಾವಾಗಲೂ ವೇದಶಾಸ್ತ್ರಗಳಲ್ಲಿ ಶಂಕೆಪಡದೆ ಅವುಗಳಲ್ಲಿ ನಿಶ್ಚಯಬುದ್ಧಿಯುಳ್ಳವನಾಗಿ ಧರ್ಮವನ್ನಾಚರಿಸುವನೋ, ಆತನು ನಿತ್ಯಾನಂದಸ್ವರೂಪವಾದ ಮೋಕ್ಷವನ್ನು ಪಡೆಯುವನು. ವೇದಶಾಸ್ತ್ರಪ್ರಮಾಣಗಳನ್ನು ಉಲ್ಲಂಘಿಸಿ ಧರ್ಮವನ್ನು ಪರಿಪಾಲಿಸದೆ ಇರುವ ಮೂಢನು, ಎಷ್ಟುಜನ್ಮಗಳನ್ನೆತ್ತಿದಾಗ್ಯೂ ಸುಖವನ್ನು ಪಡೆಯಲಾರನು. ಯಾವವನಿಗೆ ವೇದಶಾಸ್ತ್ರಗಳೂ ಶಿಷ್ಟಾಚಾರಗಳೂ ಪ್ರಮಾಣವಾಗದೆ ಇರುವವೋ, ಅಂಥವನಿಗೆ ಇಹಸುಖವೂ ಪರಸುಖವೂ ನಿಜವಾಗಿ ಇಲ್ಲವೆಂದು ತಿಳಿ. ಎಲೆ ದ್ರೌಪದಿಯೆ, ಸರ್ವಶಾಸ್ತ್ರಾರ್ಥಗಳನ್ನೂ ತಿಳಿದು ಸರ್ವಜ್ಞರಾಗಿರುವ ಮಹರ್ಷಿಗಳಿಂದ ಪ್ರೋಕ್ತವಾಗಿಯೂ ಅನಾದಿಯಾಗಿಯೂ ಶಿಷ್ಟರಿಂದ ಆಚರಿತವಾಗಿಯೂ ಇರುವ ಧರ್ಮದಲ್ಲಿ ನೀನು ಶಂಕೆಯನ್ನಿಡಬೇಡ. ಹಡಗಿನ ವ್ಯಾಪಾರವನ್ನು ಮಾಡುವ ವರ್ತಕರಿಗೆ ಸಮುದ್ರವನ್ನು ದಾಟಿ ಹೋಗುವದಕ್ಕೆ ಹಡಗು ಹ್ಯಾಗೆ ಸಾಧನವಾಗಿರುವದೋ ಹಾಗೆ, ಪರಲೋಕಸುಖವನ್ನು ಅಪೇಕ್ಷಿಸತಕ್ಕವರಿಗೆ ಧರ್ಮವೇ ಸಾಧನವಾಗಿರುವದು. ಧರ್ಮಾತ್ಮರು ಆಚರಿಸುವ ಧರ್ಮಕ್ಕೆ ಫಲವಿಲ್ಲದೆ ಹೋದ ಪಕ್ಷದಲ್ಲಿ, ಯಾರೂ ಉತ್ತಮಗತಿಯನ್ನು ಹೊಂದದೆ ಸಕಲರೂ ಅಜ್ಞಾನದಲ್ಲಿ ಮುಳುಗಿ ಹೋಗುವರು ; ಅವರಿಗೆ ಎಂದಿಗೂ ಸುಖವಿಲ್ಲದೆ ಅವರು ಪಶುಗಳಂತೆ ಜೀವಿಸಬೇಕಾಗುವದು ; ಅವರಿಗೆ ಎಂದಿಗೂ ಜ್ಞಾನೋದಯವೇ ಆಗದೆ, ಅವರು ಯಾವ ಪ್ರಯೋಜನವನ್ನೂ ಪಡೆಯದೆ ಹೋಗುವರು. ತಪಸ್ಸು, ಬ್ರಹ್ಮ

ಚರ್ಯ, ಯಜ್ಞ, ವೇದಾಧ್ಯಯನ, ದಾನ, ಋಜುತ್ವ, ಇವೆಲ್ಲಾ ನಿಷ್ಫಲವಾಗುವ ಪಕ್ಷದಲ್ಲಿ, ಶಿಷ್ಟರು ಅವುಗಳನ್ನು ಆಚರಿಸದೆ ಹೋಗುವರು. ಯಜ್ಞಾದಿಕ್ರಿಯೆಗಳು ನಿಷ್ಫಲವಾಗುವ ಪಕ್ಷದಲ್ಲಿ, ಅವುಗಳೆಲ್ಲಾ ಸುಳ್ಳಾಗಬೇಕಾಗುವದು. ಧರ್ಮವು ನಿಷ್ಫಲವಾಗುವ ಪಕ್ಷದಲ್ಲಿ ದೊಡ್ಡವರಾದ ಋಷಿಗಳೂ ದೇವತೆಗಳೂ ಅಸುರರೂ ಗಂಧರ್ವರೂ ರಾಕ್ಷಸರೂ ಸಹ ಧರ್ಮದಲ್ಲಿ ವಿಶೇಷವಾದ ಆದರವುಳ್ಳವರಾಗಿ ಯಾತಕ್ಕೋಸ್ಕರ ಅಂಥ ಧರ್ಮಗಳನ್ನು ಆಚರಿಸುವರು? ಅವರೆಲ್ಲರೂ ತಾವು ಆಚರಿಸಿದ ಧರ್ಮಕ್ಕೆ ಈಶ್ವರನು ಫಲವನ್ನು ಕೊಡುವದು ನಿಶ್ಚಯವೆಂದು ತಿಳಿದೇ ಧರ್ಮವನ್ನು ಆಚರಿಸುವರು. ಆದ್ದರಿಂದ, ಧರ್ಮವು ಅನಾದಿಯಾಗಿಯೂ ಅನಂತವಾಗಿಯೂ ಇರತಕ್ಕದ್ದೆಂದು ತಿಳಿ. ಲೋಕದಲ್ಲಿ ಧರ್ಮಕ್ಕೂ ಫಲವುಂಟು, ಅಧರ್ಮಕ್ಕೂ ಫಲವುಂಟು, ಮತ್ತು ಜ್ಞಾನಕ್ಕೂ ತಪಸ್ಸಿಗೂ ಸಹ ಫಲವುಂಟು. ಎಲೆ ಕೃಷ್ಣೆ, ಧರ್ಮಕ್ಕೆ ಫಲವುಂಟೆಂಬುವ ವಿಷಯದಲ್ಲಿ ನಿನ್ನ ಉತ್ಪತ್ತಿಯನ್ನೂ ಪ್ರತಾಪಶಾಲಿಯಾದ ಧೃಷ್ಟದ್ಯುಮ್ನನ ಉತ್ಪತ್ತಿಯನ್ನೂ ಯೋಚಿಸಿಕೊ. ಈ ನಿದರ್ಶನವೇ ಸಾಕಾಗಿದೆ. ವಿದ್ವಾಂಸನಾದವನು ತಾನು ಮಾಡಿದ ಕರ್ಮಕ್ಕೆ ಫಲವನ್ನು ಪಡೆದು, ಆ ಫಲವು ಸ್ವಲ್ಪವಾದರೂ ಅದರಿಂದಲೇ ಸಂತೋಷಪಡುವನು. ಬುದ್ಧಿಹೀನರಾದ ಮೂಢರು, ತಾವು ಮಾಡಿದ ಕರ್ಮಕ್ಕೆ ಅಧಿಕವಾಗಿ ಫಲವಾದರೂ, ಅದರಿಂದ ಸಂತುಷ್ಟರಾಗದೆ ಹೋಗುವರು. ಅಂಥವರು ಮೃತರಾದರೂ, ತಾವು ಮಾಡಿದ ಕರ್ಮಕ್ಕೆ ಪರಲೋಕದಲ್ಲೂ ಸುಖವನ್ನು ಹೊಂದದೆ ಹೋಗುವರು. ವೇದೋಕ್ತವಾದ ಪುಣ್ಯಕರ್ಮದ ಫಲವೂ ಪಾಪಕರ್ಮದ ಫಲವೂ ಅಜ್ಞಾನವೂ ಜ್ಞಾನವೂ ಸಹ ದೇವತಾರಹಸ್ಯಗಳು. ಈ ವಿಷಯವು ಯಾವನಿಗಾದರೂ ಒಬ್ಬನಿಗೆ ತಿಳಿಯುವದು; ಉಳಿದವರೆಲ್ಲರೂ ಈ ವಿಷಯದಲ್ಲಿ ಮೋಹಪಡುತ್ತಿರುವರು. ಯಾವನು ಇದನ್ನು ತಿಳಿಯನೋ ಆತನು, ಎಷ್ಟು ಕಲ್ಪಗಳಾದಾಗ್ಯೂ ಶ್ರೇಯಸ್ಸನ್ನು ಪಡೆಯಲಾರನು. ದೇವತೆಗಳ ಮಾಯೆಯೂ ಗೂಢವಾದ್ದರಿಂದ, ಆ ರಹಸ್ಯವನ್ನು ಪ್ರಕಾಶಪಡಿಸದೆ ರಕ್ಷಿಸಿಕೊಂಡಿರಬೇಕು. ಆಹಾರರಹಿತರಾಗಿಯೂ ವ್ರತನಿಷ್ಠರಾಗಿಯೂ ನಿರ್ಮಲಾಂತಃಕರಣರಾಗಿಯೂ ಇರುವ ಬ್ರಾಹ್ಮಣರು ತಪಸ್ಸಿನಿಂದ ಪಾಪರಹಿತರಾಗಿ ಈ ದೇವತಾರಹಸ್ಯವನ್ನು ತಿಳಿಯುವರು. ಫಲವಾಗಲಿಲ್ಲವೆಂದು ಧರ್ಮದ ವಿಷಯದಲ್ಲೂ ದೇವತೆಗಳ ವಿಷಯದಲ್ಲೂ ಶಂಕೆಪಡಕೂಡದು. ಪ್ರಯತ್ನಪಟ್ಟು ಯಾಗವನ್ನೂ, ಅಸೂಯೆಯಿಲ್ಲದೆ ದಾನವನ್ನೂ ಮಾಡಬೇಕು. ಎಲೆ ದ್ರೌಪದಿಯೆ, ಈ ಲೋಕದಲ್ಲಿ ಕರ್ಮಕ್ಕೂ ಫಲವುಂಟು. ಧರ್ಮವು ಶಾಶ್ವತವಾದದ್ದೆಂದು ಬ್ರಹ್ಮನು ಸನತ್ಕುಮಾರ ಮೊದಲಾದ ತನ್ನ ಮಾನಸಪುತ್ರರಿಗೆ ಉಪದೇಶಮಾಡಿರುವನು. ಕಶ್ಯಪಮಹರ್ಷಿಯೂ ಈ ವಿಷಯವನ್ನು ಚೆನ್ನಾಗಿ ತಿಳಿದಿರುವನು. ಆದ್ದರಿಂದ ಈ ವಿಷಯದಲ್ಲಿ ನಿನ್ನ ಸಂಶಯವು ಮಂಜಿನಂತೆ ಅಡಗಿಹೋಗಲಿ. ಇನ್ನುಮೇಲೆ ನೀನು ಈ ನನ್ನ ಅಭಿಪ್ರಾಯಗಳನ್ನೆಲ್ಲಾ ನಿಶ್ಚಯವೆಂದು ತಿಳಿ. ನಾಸ್ತಿಕಬುದ್ಧಿಯನ್ನು ಬಿಡು. ಸಕಲ ಪ್ರಾಣಿಗಳಿಗೂ ಕರ್ಮಫಲವನ್ನು ಕೊಡತಕ್ಕ ಈಶ್ವರನನ್ನು ನಿಂದಿಸಬೇಡ. ಇದನ್ನು ನೀನು ಚೆನ್ನಾಗಿ ಕಲಿತುಕೊ. ಮುಂದೆ ನಿನ್ನ ಬುದ್ಧಿಯು ಈ ಪ್ರಕಾರವಾಗದಂತೆ ಮಾಡಬೇಕೆಂದು ಈಶ್ವರನನ್ನು ಪ್ರಾರ್ಥಿಸು. ಯಾವ ಈಶ್ವರನ ಪ್ರಸಾದದಿಂದ ಮನುಷ್ಯನಾದವನು ಉತ್ತಮವಾದ ದೇವತ್ವವನ್ನು ಹೊಂದುವನೋ, ಅಂಥ ಈಶ್ವರನನ್ನು ಎಷ್ಟು ಕಷ್ಟದಶೆ ಬಂದಾಗ್ಯೂ ಅನಾದರಿಸಬೇಡ" ಎಂದನು.

## ೩೧ನೇ ಅಧ್ಯಾಯ.—ದ್ರೌಪದೀ ಧರ್ಮರಾಯರ ಸಂವಾದ.

ವೈಶಂಪಾಯನಮುನೀಂದ್ರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯನೆ, ಆ ಬಳಿಕ ದ್ರೌಪದಿಯು ಧರ್ಮರಾಯನನ್ನು ಕುರಿತು "ಧರ್ಮರಾಯನೆ, ಎಷ್ಟು ಕಷ್ಟಕಾಲ ಪ್ರಾಪ್ತವಾದರೂ ನಾನು ಧರ್ಮವನ್ನು ಅವಮಾನಪಡಿಸತಕ್ಕವಳೂ ಅಲ್ಲ, ಅದನ್ನು ನಿಂದಿಸತಕ್ಕವಳೂ ಅಲ್ಲ. ಹೀಗಿರುವಲ್ಲಿ, ಸಕಲ ಪ್ರಾಣಿಗಳಿಗೂ ಅಧಿಪತಿಯಾದ ಈಶ್ವರನನ್ನು ನಾನು ಯಾತಕ್ಕೆ ನಿಂದಿಸೇನು? ಆದರೆ ಈಗ ನಾನು ಬಹಳವಾಗಿ ದುಃಖಪಟ್ಟವಳಾದ್ದರಿಂದ ಹೀಗೆ ಹೇಳಿದೆನೆಂದು ತಿಳಿ. ನಾನು ಇನ್ನೂ ಹೀಗೆಯೇ ಆಡತಕ್ಕವಳೆಂದು ತಿಳಿದುಕೋ. ವಿವೇಕಿಯಾದವನು ಈ ಲೋಕದಲ್ಲಿ ಕರ್ಮವನ್ನು ಮಾಡಲೇಬೇಕು. ಕರ್ಮವಿಲ್ಲದೆ ಹೋದರೆ, ಸ್ಥಾವರಪ್ರಾಣಿಗಳೂ

ಜಂಗಮಪ್ರಾಣಿಗಳೂ ಸಹ ಜೀವಿಸಲಾರವು. ತಿರ್ಯಗ್ಜಾತಿಯಲ್ಲಿ ಹುಟ್ಟಿದ ಹಸುವಿನ ಕರುವು ತನ್ನ ತಾಯಿಯ ಸ್ತನ್ಯಪಾನವನ್ನು ಜನ್ಮಾಂತರಕರ್ಮವನ್ನು ಅನುಸರಿಸಿಯೇ ಮಾಡುವದು. ಶಿಲೆಗಳಿಂದ ಮಾಡಿದ ಪ್ರತಿಮೆ ಮೊದಲಾದವುಗಳು ತಮ್ಮ ಜನ್ಮಾಂತರಕರ್ಮದ ಬಲದಿಂದಲೇ ನೆರಳಾದ ಸ್ಥಳದಲ್ಲಿ ವಾಸಮಾಡುವವು. ಆದ್ದರಿಂದ ಸಕಲ ಪ್ರಾಣಿಗಳೂ ತಮ್ಮತಮ್ಮ ಕರ್ಮಾನುಸಾರವಾಗಿಯೇ ಜೀವಿಸುವವು. ಭರತಶ್ರೇಷ್ಠನಾದ ಧರ್ಮರಾಯನೆ, ಜಂಗಮಪ್ರಾಣಿಗಳಲ್ಲಿ ವಿಶೇಷವಾಗಿ ಮನುಷ್ಯರು ಜನ್ಮಾಂತರಕರ್ಮದಿಂದಲೇ ಇಹಪರ ಲೋಕಗಳಲ್ಲಿ ಜೀವನೋಪಾಯವನ್ನು ಪಡೆಯಲಿಚ್ಛೈಯಿಸುವರು. ಆದ್ದರಿಂದ, ಸಕಲಪ್ರಾಣಿಗಳೂ ಪೂರ್ವಜನ್ಮದ ಕರ್ಮವನ್ನು ಅನುಸರಿಸಿಯೇ ಈ ಜನ್ಮದಲ್ಲಿ ಕರ್ಮಗಳನ್ನು ಮಾಡುತ್ತ, ಆ ಕರ್ಮಗಳಿಗೆ ಲೋಕಸಾಕ್ಷಿಕವಾದ ಪ್ರತ್ಯಕ್ಷಫಲವನ್ನು ಅನುಭವಿಸುವರು. ನೀರಿನಲ್ಲಿ ಬಕಪಕ್ಷಿಯು ಜನ್ಮಾಂತರಸಂಸ್ಕಾರವನ್ನು ಅನುಸರಿಸಿ ಹ್ಯಾಗೆ ತನ್ನ ಜೀವನೋಪಾಯವನ್ನು ಹೊಂದುವದೋ ಹಾಗೆ, ಸಕಲಪ್ರಾಣಿಗಳೂ ತಮ್ಮ ಪೂರ್ವಜನ್ಮದ ಕರ್ಮವನ್ನು ಅನುಸರಿಸಿ ಈಗಲೂ ಕರ್ಮವನ್ನು ಮಾಡುತ್ತ ಜೀವಿಸುವರು. ಈಶ್ವರನೂ ಪೂರ್ವಕಲ್ಪದ ರೀತಿಯನ್ನು ಅನುಸರಿಸಿಯೇ ಪ್ರಪಂಚವನ್ನು ನಿರ್ಮಿಸುವನು; ಧರ್ಮವೂಕೂಡ ಜನ್ಮಾಂತರಸಂಸ್ಕಾರವನ್ನು ಅನುಸರಿಸಿಯೇ ಪುರುಷನಿಗೆ ಕರ್ಮವನ್ನು ಮಾಡುವಂತೆ ಪ್ರೇರಿಸುವದು. ಕರ್ಮವನ್ನು ಮಾಡದಿರುವ ಪ್ರಾಣಿಗೆ ಎಂದಿಗೂ ಜೀವನವು ದೊರೆಯಲಾರದು. ಆದ್ದರಿಂದ ಕರ್ಮವನ್ನು ಮಾಡಬೇಕೇ ಹೊರತು ಎಂದಿಗೂ ಬಿಡಕೂಡದು. ಧರ್ಮರಾಯನೆ, ಹೀಗಿರುವದರಿಂದ ನೀನು ಉತ್ಸಾಹಶಾಲಿಯಾಗಿ ಕರ್ಮವನ್ನು ಮಾಡು. ಈ ವಿಷಯದಲ್ಲಿ ಆಲಸ್ಯವನ್ನು ವಹಿಸಬೇಡ. ಯಾವ ಪುರುಷನು ಕರ್ಮವನ್ನು ಮಾಡುವದರಲ್ಲಿ ಚತುರನೋ, ಅಂಥವನು ಸಾವಿರಜನಗಳಲ್ಲಿ ಒಬ್ಬನು ಇರುವನೋ ಇಲ್ಲವೋ ತಿಳಿಯದು. ಅಂಥ ಪುರುಷನಿಗೆ ಕರ್ಮದಿಂದ ಫಲಪ್ರಾಪ್ತಿಯಾಗುವದು. ಅಷ್ಟುಮಾತ್ರದಿಂದಲೇ ಸಂತುಷ್ಟನಾಗದೆ, ಆತನು ಪಡೆದ ದ್ರವ್ಯವನ್ನು ಅಭಿವೃದ್ಧಿಪಡಿಸುವದಕ್ಕೂ ರಕ್ಷಿಸುವದಕ್ಕೂ ಪ್ರಯತ್ನಮಾಡಬೇಕು. ಪುನಃಪುನಃ ಸಂಗ್ರಹಮಾಡದೆ, ಇರುವ ದ್ರವ್ಯವನ್ನೇ ವೆಚ್ಚಮಾಡುವದಕ್ಕೆ ಉಪಕ್ರಮಿಸಿದರೆ, ಹಿಮವತ್ಪರ್ವತದಷ್ಟಿರುವ ದ್ರವ್ಯವಾದರೂ ಕ್ಷೀಣವಾಗುವದು. ಧರ್ಮರಾಯನೆ, ಭೂಮಿಯಲ್ಲಿ ಪ್ರಾಣಿಗಳು ಕರ್ಮವನ್ನು ಮಾಡದೆ ಹೋದರೆ ಕೆಟ್ಟುಹೋಗುವರು. ಮತ್ತು ಮಾಡಿದ ಕರ್ಮಗಳಿಗೆ ಫಲವಾಗದೆ ಹೋದಪಕ್ಷದಲ್ಲೂ, ಪ್ರಾಣಿಗಳಿಗೆ ವೃದ್ಧಿಯಾಗಲಾರದು. ಕೆಲವು ಕರ್ಮಗಳಿಗೆ ಫಲವುಂಟಾಗದಿದ್ದರೂ, ಅಂಥ ಕರ್ಮಗಳನ್ನೂ ಜನರು ಮಾಡುವರು. ಎಲ್ಲಾ ಕರ್ಮಗಳಿಗೂ ಫಲವೇ ಇಲ್ಲದ ಪಕ್ಷದಲ್ಲಿ, ಜನರಿಗೆ ಜೀವನೋಪಾಯವೇ ಇಲ್ಲದ ಹಾಗಾಗುವದು. ಲೋಕದಲ್ಲಿ ಅದೃಷ್ಟದಿಂದಲೇ ಧನಲಾಭವಾಗುವದೆಂದು ನಂಬಿರುವವನೂ, ಜನ್ಮಾಂತರ ಕರ್ಮವೇ ಇಲ್ಲವೆಂದು ಹೇಳುವವನೂ ಸಹ ವಂಚಕರೆನ್ನಿಸಿಕೊಳ್ಳುವರು. ಜನ್ಮಾಂತರಕರ್ಮವನ್ನನುಸರಿಸಿ ಈ ಜನ್ಮದಲ್ಲಿ ಮಾಡಿದ ಕರ್ಮವು ಫಲವನ್ನು ಕೊಡುವದೆಂದು ಯಾವನು ತಿಳಿದಿರುವನೋ, ಅವನನ್ನೇ ದೊಡ್ಡವರು ಶ್ಲಾಘಿಸುವರು. ಯಾವ ಪುರುಷನು ದೈವವನ್ನೇ ನಂಬಿಕೊಂಡು ಯತ್ನಮಾಡದೆ ಸುಮ್ಮನಿರುವನೋ, ಅಂಥ ಬುದ್ಧಿಶೂನ್ಯನಾದವನು ನೀರಿನಲ್ಲಿ ಹಾಕಿದ ಹಸೀಗಡಿಗೆಯಂತೆ ನಷ್ಟನಾಗುವನು. ಜನ್ಮಾಂತರಕರ್ಮವು ಸುಳ್ಳೆಂತಲೂ, ಪುರುಷನು ಕರ್ಮಮಾಡದೆ ತನಗೆತಾನೇ ಫಲವನ್ನು ಹೊಂದುವನೆಂತಲೂ ಹೇಳುವ ದುರ್ಬುದ್ಧಿಯಾದ ಚಾರ್ವಾಕನೂಕೂಡ ತಾನು, ಶಕ್ತನಾಗಿದ್ದರೂ ಕರ್ಮವನ್ನು ಮಾಡದೆ ಹೋದರೆ, ಅನಾಥನಾದ ದುರ್ಬಲನು ಹ್ಯಾಗೆ ಬಹುಕಾಲ ಜೀವಿಸುವದಿಲ್ಲವೋ ಹಾಗೆ ಬಹುಕಾಲ ಜೀವಿಸುವದಿಲ್ಲ. ಲೋಕದಲ್ಲಿ ಯಾವನಾದರೂ ಒಬ್ಬನು ಯಾವ ಪ್ರಯತ್ನವೂ ಇಲ್ಲದೆ ಅಕಸ್ಮಾತ್ತಾಗಿ ದ್ರವ್ಯವನ್ನು ಹೊಂದಿದರೆ, ಅದನ್ನು ಹಠವೆಂದು ಹೇಳುವರು. ದೇವತಾರಾಧನೆಯನ್ನು ಮಾಡುವ ಪುರುಷನಿಗೆ ದ್ರವ್ಯಪ್ರಾಪ್ತಿಯಾದರೆ, ಅದನ್ನು ದೈವವೆಂದು ಹೇಳುವರು. ಪುರುಷನು ಪ್ರಯತ್ನಮಾಡಿ ಪ್ರತ್ಯಕ್ಷವಾಗಿ ದ್ರವ್ಯವನ್ನು ಪಡೆದರೆ, ಅದನ್ನು ಪೌರುಷವೆಂದು ಹೇಳುವರು. ಯಾವ ಪ್ರಯತ್ನವನ್ನೂ ಮಾಡದೆ ಪುರುಷನು ಜನ್ಮಾಂತರಕರ್ಮಬಲದಿಂದ ದ್ರವ್ಯವನ್ನು ಹೊಂದಿದರೆ, ಅದನ್ನು ಸ್ವಾಭಾವಿಕವೆಂದು ಹೇಳುವರು. ಈ ರೀತಿಯಾಗಿ ಹಠದಿಂದಲೂ ಪೌರುಷದಿಂದಲೂ ಸ್ವಭಾವದಿಂದಲೂ ಪ್ರಾಪ್ತವಾದ ದ್ರವ್ಯವನ್ನು ಜನ್ಮಾಂತರಕರ್ಮದ ಫಲವೆಂದೇ ತಿಳಿಯಬೇಕು. ಈಶ್ವರನು ಪ್ರಾಣಿಗಳಿಗೆ ಅವರವರ ಪೂರ್ವಕರ್ಮಾನುಸಾರವಾಗಿ ಆಯಾಕಾರಣಗಳಿಂದ ಉಂಟಾದ ಕರ್ಮಫಲವನ್ನು

ವಿಭಾಗಮಾಡಿ ಅವರವರಿಗೆ ಕೊಡುವನು. ಮನುಷ್ಯನು ಯಾವ ಶುಭಕರ್ಮವನ್ನಾಗಲಿ ಮಾಡಿದರೆ, ಅದನ್ನು ಈಶ್ವರನಿಂದ ಪಡೆದ ಜನ್ಮಾಂತರ ಕರ್ಮಫಲವೆಂದು ತಿಳಿಯಬೇಕು. ಕರ್ಮವನ್ನು ಮಾಡುವದಕ್ಕೆ ದೇಹವು ಕಾರಣವಾದದ್ದು. ಅಂಥ ದೇಹವುಳ್ಳ ಪುರುಷನು ಅಸ್ವತಂತ್ರನಾದ್ದರಿಂದ, ಈಶ್ವರನು ಆತನಿಗೆ ಕರ್ಮವನ್ನು ಮಾಡುವಂತೆ ಪ್ರೇರಿಸುವನು. ಹೀಗೆ ಆ ಪುರುಷನು ಕರ್ಮವನ್ನು ಮಾಡುವನು. ಪುರುಷನು ತನಗಾಗತಕ್ಕ ಪ್ರಯೋಜನವನ್ನು ಮೊದಲು ಮನಸ್ಸಿನಲ್ಲಿ ನಿಶ್ಚಯಿಸಿಕೊಂಡು, ಆಮೇಲೆ ಬುದ್ಧಿಪೂರ್ವಕವಾಗಿ ಪ್ರಯತ್ನ ಮಾಡುವನಾದ್ದರಿಂದ, ತಾನೂ ಆ ವಿಷಯದಲ್ಲಿ ಕಾರಣನಾಗುವನು. ಪಟ್ಟಣ ಮನೆ ಮೊದಲಾದವುಗಳು ಪುರುಷ ಪ್ರಯತ್ನದಿಂದ ಉಂಟಾಗುವದರಿಂದ, ಜನ್ಮಾಂತರಕರ್ಮವೇ ಕಾರಣವೆಂದು ನಿಶ್ಚಯಿಸುವದಕ್ಕೆ ಆಗುವದಿಲ್ಲ. ಎಳ್ಳಿನಲ್ಲಿ ಎಣ್ಣೆ ಬರುವದಕ್ಕೂ, ಗೋವಿನಲ್ಲಿ ಕ್ಷೀರವು ಉತ್ಪತ್ತಿಯಾಗುವದಕ್ಕೂ, ಕಾಷ್ಠದಲ್ಲಿ ಬೆಂಕಿಯು ಹುಟ್ಟುವದಕ್ಕೂ, ಬುದ್ಧಿಶಾಲಿಯಾದವನು ತನ್ನ ಬುದ್ಧಿಯಿಂದ ಹ್ಯಾಗೆ ಉಪಾಯವನ್ನು ಯೋಚಿಸುವನೋ ಹಾಗೆ, ಪುರುಷನು ಕರ್ಮಕ್ಕೆ ಫಲವುಂಟಾಗುವದಕ್ಕೂ ಉಪಾಯವನ್ನು ಯೋಚಿಸಿ, ಬಳಿಕ ಅದಕ್ಕೆ ತಕ್ಕ ಪ್ರಯತ್ನವನ್ನು ಮಾಡಿ ಕಾರ್ಯಸಿದ್ಧಿಯನ್ನು ಹೊಂದುವನು. ಈ ಪ್ರಕಾರವಾಗಿಯೇ ಸಕಲ ಪ್ರಾಣಿಗಳೂ ಕರ್ಮದಿಂದ ಫಲವನ್ನು ಹೊಂದುವವು. ಕರ್ಮದಿಂದುಂಟಾದ ಫಲಭೇದಗಳನ್ನು ನೋಡಿ, ಈ ಕರ್ಮವು ಸರಿಯಾಗಿ ಮಾಡಿದ್ದೆಂತಲೂ, ಈ ಕರ್ಮವು ಸರಿಯಾಗಿ ಮಾಡಿದ್ದಲ್ಲವೆಂತಲೂ ತಿಳಿದುಕೊಳ್ಳಬಹುದು. ಕರ್ಮದಿಂದ ಉಂಟಾಗತಕ್ಕ ಫಲಗಳಿಗೆ ಪುರುಷನು ಕಾರಣನಾಗದೆ ಹೋದರೆ, ಯಾಗಮಾಡುವದಕ್ಕೂ ಕೆರೆ ತೋಟ ಮೊದಲಾದವುಗಳನ್ನು ಮಾಡುವದಕ್ಕೂ ಫಲವೇ ಇಲ್ಲದೆ ಹೋದೀತು; ಮತ್ತು ಇವನು ಗುರುವೆಂತಲೂ ಇವನು ಶಿಷ್ಯನೆಂತಲೂ ಲೋಕದಲ್ಲಿ ವ್ಯವಹಾರವೇ ಇಲ್ಲದೆ ಹೋದೀತು? ಲೋಕದಲ್ಲಿ ಪುರುಷನು ಕರ್ಮವನ್ನು ಮಾಡುವದಕ್ಕೆ ಕಾರಣನಾದ್ದರಿಂದಲೇ, ಆ ಕರ್ಮಫಲವು ಸಿದ್ಧಿಸಿದರೆ ಆ ಪುರುಷನನ್ನು ಎಲ್ಲರೂ ಶ್ಲಾಘಿಸುವರು. ಮಾಡಿದ ಕರ್ಮವು ಫಲಿಸದೆ ಹೋದರೆ ಎಲ್ಲರೂ ಆತನನ್ನು ನಿಂದಿಸುವರು. ಆದ್ದರಿಂದ ಪುರುಷನು ಹ್ಯಾಗೆ ತಾನೇ ಕಾರಣನಾಗದೆ ಹೋದಾನು? ಚಾರ್ವಾಕರು ಹಠದಿಂದಲೇ ಎಲ್ಲಾ ಕಾರ್ಯಗಳೂ ಸಿದ್ಧಿಸುವವೆಂತಲೂ, ಪಾಷಂಡಿಗಳು ದೈವದಿಂದಲೇ ಕಾರ್ಯಸಿದ್ಧಿಯಾಗುವದೆಂತಲೂ, ಪ್ರಾಕೃತಜನರು ಪ್ರಯತ್ನದಿಂದಲೇ ಕರ್ಮವು ಫಲಿಸುವದೆಂತಲೂ ಹೇಳುವರು. ಹೀಗೆ ಮೂರು ವಿಧವಾದ ಮತಗಳಿದ್ದರೂ, ವೇದಶಾಸ್ತ್ರಸಂಪನ್ನರಾದವರು ಈ ಮೂರು ಮತದವರಿಗೂ ಕಾರ್ಯಸಿದ್ಧಿಯಾಗಬೇಕಾದರೆ ಧರ್ಮಾಧರ್ಮರೂಪವಾದ ಜನ್ಮಾಂತರಕರ್ಮವೇ ಕಾರಣವೆಂದು ಹೇಳುವರು. ಮೂರ್ಖರಾದ ಜನರು ಹಠದಿಂದಲೂ ದೈವದಿಂದಲೂ ಪ್ರಯತ್ನದಿಂದಲೂ ಪುರುಷನು ಫಲವನ್ನು ಹೊಂದುವನೇ ಹೊರತು ಜನ್ಮಾಂತರಕರ್ಮವು ಕಾರಣವಲ್ಲವೆಂದು ಹೇಳುವರು. ಈಶ್ವರನು ಶುಭಾಶುಭಫಲಗಳನ್ನು ಕೊಡದೆ ಪ್ರಾಣಿಗಳು ತಮಗೆ ತಾವೇ ಫಲವನ್ನು ಹೊಂದುವಹಾಗಿದ್ದರೆ, ಲೋಕದಲ್ಲಿ ಕೃಪಣನಾದವನೇ ಇಲ್ಲದೆ ಹೋಗಬೇಕಾದೀತು. ಜನ್ಮಾಂತರ ಕರ್ಮವಿಲ್ಲದೆ ಹೋದಪಕ್ಷದಲ್ಲಿ, ಪುರುಷನು ಯಾವಯಾವ ಫಲಗಳನ್ನು ಅಪೇಕ್ಷಿಸಿ ಕರ್ಮಗಳನ್ನು ಮಾಡುವನೋ ಆ ಕರ್ಮಗಳಿಗೆಲ್ಲಾ ಆಯಾ ಫಲವಾಗಬೇಕಾಯಿತು. ಹಠ ಮೊದಲಾದವುಗಳು ಅರ್ಥಪ್ರಾಪ್ತಿಗೆ ಕಾರಣವಾಗಿದ್ದರೂ, ಜನ್ಮಾಂತರಕರ್ಮವೇ ಫಲವಾಗುವದಕ್ಕೂ ಆಗದೆ ಇರುವದಕ್ಕೂ ಮುಖ್ಯಕಾರಣವೆಂದು ಯಾವನು ತಿಳಿಯದೆ ಹೋಗುವನೋ, ಆತನು ದೇಹವಂತೆ ಜಡನೆಂದು ತಿಳಿಯಬೇಕು. ಮನುಚಕ್ರವರ್ತಿಯು ಕರ್ಮವನ್ನು ಮಾಡೇ ಮಾಡಬೇಕೆಂದು ನಿಶ್ಚಯವಾಗಿ ಹೇಳಿರುವನು. ಯಾವ ಕರ್ಮವನ್ನೂ ಮಾಡದೆ ಸುಮ್ಮನಿರುವ ಹಠವಾದಿಯು ತಿರಸ್ಕಾರವನ್ನು ಪಡೆಯುವನು. ಯುಧಿಷ್ಠಿರನೆ, ಲೋಕದಲ್ಲಿ ಸರಿಯಾಗಿ ಕರ್ಮವನ್ನು ಮಾಡುವವನು ಪ್ರಾಯಶಃ ಒಳ್ಳೇ ಫಲವನ್ನು ಹೊಂದುವನು; ಹಾಗಲ್ಲದೆ ಆಲಸ್ಯವನ್ನು ವಹಿಸುವವನಿಗೆ ಫಲಪ್ರಾಪ್ತಿಯಾಗಲಾರದು. ರಾಜೇಂದ್ರನೆ, ಮಾಡಿದ ಕರ್ಮಕ್ಕೆ ಅಂಗವೈಕಲ್ಯದಿಂದ ಫಲವಾಗದೆ ಹೋದರೆ, ಅದು ಸಫಲವಾಗುವಂತೆ ತಕ್ಕ ಪ್ರಾಯಶ್ಚಿತ್ತವನ್ನು ಮಾಡಿ ಪುನಃ ಆ ಫಲವನ್ನು ಪಡೆಯಬಹುದು; ಅಂಗವೈಕಲ್ಯವಿಲ್ಲದೆ ಕರ್ಮಮಾಡಿಯೂ ಫಲಿಸದೆ ಹೋದರೆ, ಆ ವಿಷಯದಲ್ಲಿ ಮಾಡಿದವನ ದೋಷವೇನೂ ಇಲ್ಲವೆಂದು ಹೇಳುವರು. ಯಾವಾಗಲೂ ಅಲಸನಾಗಿ ಪ್ರಯತ್ನವನ್ನೇ ಮಾಡದಿರುವ ಪುರುಷನು ದರಿದ್ರನಾಗುವನು. ಕಾರ್ಯಸಮರ್ಥನಾದ ಪುರುಷನು ಕರ್ಮ

ಫಲವನ್ನು ಹೊಂದಿ, ಐಶ್ವರ್ಯವನ್ನು ಪಡೆಯುವನು. ಸಂಶಯಗ್ರಸ್ತರಾದ ಪುರುಷರಿಗೆ ಫಲಸಿದ್ಧಿಯಾಗಲಾರದು. ಸಂಶಯವಿಲ್ಲದವರು ಫಲಸಿದ್ಧಿಯನ್ನು ಹೊಂದುವರು. ಸಂಶಯವಿಲ್ಲದವರಾಗಿಯೂ ಪ್ರಯತ್ನವನ್ನು ಮಾಡತಕ್ಕವರಾಗಿಯೂ ಇರುವ ಧೀರರಾದ ಮನುಷ್ಯರು ದುರ್ಲಭರು. ರಾಜೇಂದ್ರನೆ, ಈಗ ನನಗೆ ರಾಜ್ಯನಾಶರೂಪವಾದ ಅನರ್ಥವು ವಿಶೇಷವಾಗಿ ಪ್ರಾಪ್ತವಾಗಿರುವದು. ಇದಕ್ಕಾಗಿ ನೀನು ಪುರುಷಪ್ರಯತ್ನವನ್ನು ಮಾಡಿದ್ದೇ ಆದರೆ, ಆ ಅನರ್ಥವು ನಿಸ್ಸಂದೇಹವಾಗಿ ಉಂಟಾಗಲಾರದು. ಅಥವಾ ಪುರುಷಪ್ರಯತ್ನಮಾಡಿಯೂ ನಮಗೆ ರಾಜ್ಯಪ್ರಾಪ್ತಿಯಾಗದೆ ಹೋದರೆ, ನಿನಗೂ ಭೀಮಾರ್ಜುನನಕುಲಸಹದೇವರಿಗೂ ನಿಶ್ಚಯವಾಗಿ ರಾಜ್ಯದಲ್ಲಿ ಆಶೆ ತಪ್ಪಿಹೋಗಿ, ಅದರಿಂದ ನನಗೂ ದುಃಖ ನಿವೃತ್ತಿಯಾಗುವದು. ಕರ್ಮಮಾಡಿದ ಪುರುಷನು ಆ ಕರ್ಮಕ್ಕೆ ಹ್ಯಾಗೆ ಫಲವನ್ನು ಹೊಂದುವನೋ ಹಾಗೆ, ನೀನು ಪುರುಷಪ್ರಯತ್ನವನ್ನು ಮಾಡಿದರೆ ನಮಗಾಗಲಿ ಕೌರವರಿಗಾಗಲಿ ಫಲವಾದದ್ದನ್ನು ಜಾಗ್ರತೆಯಾಗಿ ತಿಳಿಯಬಹುದು. ಲೋಕದಲ್ಲಿ ಒಕ್ಕಲಿಗನು ನೇಗಲಿನಿಂದ ಹೊಲವನ್ನು ಉತ್ತು ಬೀಜವನ್ನು ಬಿತ್ತಿ, ಅನಂತರ ತಾನು ಸುಮ್ಮನಾಗುವನು. ಅದು ಫಲವಾಗುವದಕ್ಕೆ ಕಾರಣಭೂತನಾದ ಪರ್ಜನ್ಯನು ಮಳೆಯನ್ನು ಕರೆಯದೆಹೋದರೆ, ಆ ಒಕ್ಕಲಿಗನ ತಪ್ಪೇನೂ ಇಲ್ಲ. ಅದರಂತೆ ಧೀರನಾದ ಪುರುಷನು ತಾನು ಸರಿಯಾಗಿ ಪ್ರಯತ್ನಮಾಡಿ ಅದು ದೈವಾಧೀನದಿಂದ ಫಲಿಸದೆ ಹೋದರೆ, ಆ ವಿಷಯದಲ್ಲಿ ತನ್ನ ತಪ್ಪೇನೂ ಇಲ್ಲವೆಂದು ತಿಳಿದು, ತನ್ನನ್ನು ನಿಂದಿಸಿಕೊಳ್ಳಲಾರನು. ಪುರುಷನು ತಾನು ಕರ್ಮವನ್ನು ಮಾಡಿದರೂ ಫಲಿಸುವದಿಲ್ಲವಲ್ಲಾ ಎಂದು ವೈರಾಗ್ಯವನ್ನು ಹೊಂದಬಾರದು. ವೈರಾಗ್ಯವನ್ನು ಬಿಡುವದೂ ಪುರುಷಪ್ರಯತ್ನವನ್ನು ಮಾಡುವದೂ ಸಹ ಅರ್ಥಸಿದ್ಧಿಗೆ ಕಾರಣವಾದವುಗಳು. ಕರ್ಮಕ್ಕೆ ಫಲವಾಗಲಿ ಆಗದೆ ಹೋಗಲಿ, ಕರ್ಮವನ್ನು ಮಾಡಲೇಮಾಡಬೇಕು. ಅನೇಕ ಕಾರಣಗಳು ಸೇರಿದಗೆ ಮಾಡಿದ ಕರ್ಮವು ಫಲಿಸುವದು. ಮಾಡಿದ ಕರ್ಮಕ್ಕೆ ಯಾವದಾದರೂ ಒಂದು ಅಂಗನ್ಯೂನವಾದರೆ, ಫಲವೂ ನ್ಯೂನವಾಗುವದು. ಮುಖ್ಯವಾದ ಅಂಗವೇ ನ್ಯೂನವಾದರೆ, ಆ ಕರ್ಮವು ನಿಷ್ಫಲವಾಗುವದು. ಪ್ರಯತ್ನವನ್ನೇ ಮಾಡದೆಹೋದರೆ, ಯಾವ ಫಲವೂ ಉಂಟಾಗುವದಿಲ್ಲ. ಮತ್ತು ತನ್ನ ಸಾಮರ್ಥ್ಯವೂ ಪ್ರಕಾಶವಾಗುವದಿಲ್ಲ. ಧೀರನಾದ ಪುರುಷನು ತನ್ನ ಶಕ್ತ್ಯನುಸಾರವಾಗಿ ಬುದ್ಧಿವಿಶೇಷದಿಂದ ತನಗೆ ಒಳ್ಳೇದಾಗಬೇಕೆಂದು ದೇಶಕಾಲಗಳನ್ನು ಅನುಸರಿಸಿ ಸಾಮಾದ್ಯುಪಾಯಗಳಿಂದ ಒಳ್ಳೇಕೆಲಸವನ್ನು ಮಾಡುವನು. ಆದಕಾರಣ ಶೂರನಾದವನು ಜಾಗರೂಕನಾಗಿ ಕರ್ಮವನ್ನು ಮಾಡಬೇಕು. ಮುಖ್ಯವಾಗಿ ಕರ್ಮವು ಫಲಿಸುವದಕ್ಕೆ ಪುರುಷಪ್ರಯತ್ನವೇ ಸಹಕಾರಿಯಾದದ್ದು. ಕಾರ್ಯಸಿದ್ಧಿಯಾಗುವದಕ್ಕೆ ಬುದ್ಧಿಶಾಲಿಯಾದವನು ಚೆನ್ನಾಗಿ ಪರ್ಯಾಲೋಚಿಸಿ, ಅನೇಕ ಗುಣಗಳುಳ್ಳ ಸಾಮೋಪಾಯದಿಂದಲೇ ಕಾರ್ಯಸಿದ್ಧಿಯನ್ನು ಪಡೆಯಬೇಕು. ಅದರಿಂದ ಕಾರ್ಯಸಿದ್ಧಿಯಾಗದೆ ಹೋದರೆ, ಪ್ರಶಸ್ತವಾದ ಭೇದೋಪಾಯವನ್ನು ಮಾಡಬೇಕು. ಶತ್ರುವಿಗೆ ಹಾನಿಯನ್ನು ಉಂಟುಮಾಡಬೇಕಾದರೆ, ಆತನ ವ್ಯಸನಕಾಲವನ್ನೂ ಆತನು ದೇಶಾಂತರಕ್ಕೆ ಹೋಗತಕ್ಕ ಕಾಲವನ್ನೂ ನಿರೀಕ್ಷಿಸಬೇಕು. ಹೀಗೆ ಉಪಾಯವನ್ನು ತಿಳಿದ ಪುರುಷನಿಗೆ ಸಮುದ್ರವಾದರೂ ಪರ್ವತವಾದರೂ ಸ್ವಾಧೀನವಾಗಬಹುದು ಎಂಬಲ್ಲಿ ಮರಣವನ್ನು ಹೊಂದುವ ಮನುಷ್ಯನು ಎಷ್ಟುಮಾತ್ರದವನು? ಶೂರನಾದ ಯಾವ ಮನುಷ್ಯನು ಯಾವಾಗಲೂ ಶತ್ರುವಿನ ರಂಧ್ರಾನ್ವೇಷಣವನ್ನು ಮಾಡುತ್ತ ಪ್ರಯತ್ನವಂತನಾಗಿರುವನೋ, ಆತನು ಸ್ವಕೀಯರಲ್ಲಿ ತನ್ನ ತಪ್ಪೇನೂ ಇಲ್ಲವೆಂದೆನ್ನಿಸಿಕೊಳ್ಳುವನು. ಪುರುಷನು 'ಅಸಮರ್ಥನಾದ ನಾನು ಹ್ಯಾಗೆ ಪ್ರಯತ್ನಮಾಡಲಿ' ಎಂದು ತನ್ನನ್ನು ತಾನು ತಿರಸ್ಕಾರಮಾಡಿಕೊಳ್ಳಬಾರದು. ಹಾಗೆ ತಿರಸ್ಕಾರಮಾಡಿಕೊಂಡವನು ಐಶ್ವರ್ಯವನ್ನು ಹೊಂದಲಾರನು. ಭರತಶ್ರೇಷ್ಠನಾದ ಧರ್ಮರಾಯನೆ, ಈ ರೀತಿಯಾಗಿ ಜನಗಳಿಗೆ ಫಲಸಿದ್ಧಿಯಾಗುವದು ಸ್ವಾಭಾವಿಕವಾದದ್ದು. ಈ ವಿಷಯದಲ್ಲಿ ಕಾಲಾವಸ್ಥೆಗಳ ಅನುಕೂಲ್ಯವನ್ನು ಸಹ ತಿಳಿದು ಮಾಡುವ ಪ್ರಯತ್ನವೇ ಕಾರ್ಯಸಿದ್ಧಿಗೆ ಕಾರಣವಾದದ್ದು. ಪೂರ್ವದಲ್ಲಿ ನಮ್ಮ ಮನೆಯಲ್ಲಿ ವಾಸಮಾಡುತ್ತಿದ್ದ ವಿದ್ವಾಂಸನಾದ ಒಬ್ಬ ಬ್ರಾಹ್ಮಣನು ನಮ್ಮ ತಂದೆಗೂ ನಮ್ಮ ಅಣ್ಣತಮ್ಮಂದಿರಿಗೂ ಬೃಹಸ್ಪತಿಪ್ರೋಕ್ತವಾದ ಈ ನೀತಿಯನ್ನು ಹೇಳಿದನು. ಅದನ್ನು ನಾನು ನಮ್ಮ ಅಣ್ಣತಮ್ಮಂದಿರ ಮುಖದಿಂದ ಕೇಳಿದ್ದೆನು. ನಾನು ನಮ್ಮ ತಂದೆಯ ಸಮೀಪದಲ್ಲಿ ಕೆಲಸಮಾಡುತ್ತ ಆತನನ್ನು ಶುಶ್ರೂಷೆಮಾಡುತ್ತಿರಲು, ಆ ಬ್ರಾಹ್ಮಣನು ನನಗೆ ಒಳ್ಳೇಮಾತುಗಳನ್ನು ಹೇಳಿ ಬೃಹಸ್ಪತಿಪ್ರೋಕ್ತವಾದ ಈ ನೀತಿಯನ್ನು ಉಪದೇಶಮಾಡಿದನು." ಎಂದು ಹೇಳಿದಳು.

## ೩೩ನೇ ಅಧ್ಯಾಯ.—ಭೀಮಸೇನ ಧರ್ಮರಾಯರ ಸಂವಾದ.

ವೈಶಂಪಾಯನಮುನೀಂದ್ರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಬಳಿಕ ಭೀಮಸೇನನು ಧರ್ಮರಾಯನ ಸಂಗಡ ದ್ರೌಪದಿಯು ಹೇಳಿದ ಮಾತನ್ನು ಕೇಳಿ, ಕೋಪಗೊಂಡು, ಸಹಿಸದೆ ನಿಟ್ಟುಸುರುಬಿಡುತ್ತ, ಧರ್ಮರಾಯನನ್ನು ಕುರಿತು "ಎಲೈ ಧರ್ಮರಾಯನೆ, ನೀನು ಧರ್ಮಯುಕ್ತವಾಗಿಯೂ ಸತ್ಪುರುಷರಿಗೆ ಯೋಗ್ಯವಾಗಿಯೂ ಇರುವ ರಾಜ್ಯಪ್ರಾಪ್ತಿಯಾಗತಕ್ಕ ಮಾರ್ಗವನ್ನು ಅನುಸರಿಸು. ರಾಜ್ಯಹೀನ ರಾಗಿ ಧರ್ಮಕಾಮಾರ್ಥಗಳನ್ನು ಪಡೆಯದಿರುವ ನಾವು ತಪೋವನದಲ್ಲಿ ವಾಸಮಾಡುವದರಿಂದ ಪ್ರಯೋಜನವೇನು? ಪಾಪಾತ್ಮನಾದ ದುರ್ಯೋಧನನು ನಮ್ಮ ರಾಜ್ಯವನ್ನು ಧರ್ಮದಿಂದಲೂ ಋಜುಸ್ವಭಾವದಿಂದಲೂ ಪರಾಕ್ರಮದಿಂದಲೂ ತೆಗೆದುಕೊಳ್ಳದೆ, ದ್ಯೂತದಲ್ಲಿ ವಂಚನೆಯಿಂದ ಅಪಹರಿಸಿರುವನು. ಬಲಶಾಲಿಯಾದ ಸಿಂಹದ ಆಹಾರವನ್ನು ಅಪ ಹರಿಸತಕ್ಕ ದುರ್ಬಲವಾದ ನರಿಯಂತೆಯೂ, ಭೂತಬಲಿಶೇಷವನ್ನು ಆಹಾರಮಾಡತಕ್ಕ ನಾಯಿಯಂತೆಯೂ, ದುರ್ಬಲನಾದ ದುರ್ಯೋಧನನು ನಮ್ಮ ರಾಜ್ಯವನ್ನು ಅಪಹರಿಸಿರುವನು. ಎಲೈ ಧರ್ಮರಾಯನೆ, ಸ್ವಲ್ಪವಾದ ಧರ್ಮವನ್ನು ಅವಲಂಬಿಸಿ, ಧರ್ಮಕಾಮಗಳಿಗೆ ಕಾರಣವಾದ ಅರ್ಥರೂಪವಾದ ರಾಜ್ಯವನ್ನು ಬಿಟ್ಟು, ಯಾತ ಕ್ಕೋಸ್ಕರ ನೀನು ದುಃಖದಿಂದ ಸಂತಾಪಪಡುತ್ತಿರುವೆ? ಗಾಂಡೀವಧನುರ್ಧಾರಿಯಾದ ಅರ್ಜುನನು ರಕ್ಷಿಸುತ್ತಿರಲು, ಇಂದ್ರನಿಂದಲೂ ಅಪಹರಿಸುವದಕ್ಕೆ ಅಶಕ್ಯವಾದ ನಮ್ಮ ರಾಜ್ಯವನ್ನು ನಾವೆಲ್ಲರೂ ನೋಡುತ್ತಿರಲು, ನಿನ್ನ ಪ್ರಮಾದ ದಿಂದ ದುರ್ಯೋಧನನು ಅಪಹರಿಸಿದನು. ಆತನು ಕೈಯಿಲ್ಲದವನ ಬಿಲ್ವಫಲವನ್ನೂ ಕಾಲಿಲ್ಲದವನ ಹಸುವನ್ನೂ ಅಪಹರಿಸುವಹಾಗೆ, ನಮ್ಮ ಐಶ್ವರ್ಯವನ್ನು ನಾವು ಬದುಕಿರುವಾಗಲೇ ನಿನ್ನ ನಿಮಿತ್ತದಿಂದ ಅಪಹರಿಸಿದನು. ಧರ್ಮದಲ್ಲೇ ವಿಶ್ವಾಸವುಳ್ಳ ನಿನಗೆ ಧರ್ಮವೇ ಇಷ್ಟವಾದದ್ದೆಂದು ತಿಳಿದು, ನಾವು ಇಂಥ ಮಹತ್ತಾದ ವ್ಯಸನವನ್ನು ಹೊಂದಿ, ನಿನ್ನ ಸಮಾಧಾನೋಕ್ತಿಗಳಿಂದ ಮನಸ್ಸನ್ನು ತಡೆದುಕೊಂಡು, ಮಿತ್ರರಿಗೆಲ್ಲಾ ದುಃಖವನ್ನೂ ಶತ್ರುಗಳಿ ಗೆಲ್ಲಾ ಸಂತೋಷವನ್ನೂ ಉಂಟುಮಾಡಿದೆವು. ನಿನ್ನ ಸಮಾಧಾನವಚನಗಳನ್ನು ಕೇಳಿಕೊಂಡು, ನಾವು ದುಷ್ಟಾ ತ್ಮರಾದ ದುರ್ಯೋಧನಾದಿಗಳನ್ನು ಜಾಜಾಡುವಾಗಲೇ ಸಂಹಾರಮಾಡದೆ ಬಿಟ್ಟ ದುಷ್ಕೃತವೇ ನಮ್ಮನ್ನು ಸಂತಾಪ ಪಡಿಸುತ್ತಿರುವದು.

ಎಲೈ ಧರ್ಮರಾಯನೆ, ದುರ್ಬಲರಿಗೆ ತಕ್ಕದ್ದಾಗಿಯೂ ಬಲಶಾಲಿಗಳಿಗೆ ಅನರ್ಹವಾಗಿಯೂ ಇರುವ ಈ ವನವಾಸವನ್ನು ನೀನೇ ಅನುಭವಿಸು. ಇದು ನನಗೂ ಕೃಷ್ಣನಿಗೂ ಅರ್ಜುನನಿಗೂ ಅಭಿಮನ್ಯುವಿಗೂ ಸೃಂಜಯರಿಗೂ ನಕುಲಸಹದೇವರಿಗೂ ಸಹ ಸಮ್ಮತವಲ್ಲ. ರಾಜನಾದ ನೀನು ಯಾವಾಗಲೂ ಧರ್ಮದಲ್ಲೇ ಆದರವುಳ್ಳವನಾಗಿ, ಅದಕ್ಕಾಗಿಯೇ ವ್ರತಗಳನ್ನು ಆಚರಿಸುತ್ತ, ಕೃಶನಾಗಿ ವೈರಾಗ್ಯದಿಂದ ನಪುಂಸಕನಂತೆ ಜೀವಿ ಸುತ್ತಿರುವೆಯಲ್ಲಾ! ಹಾಹಾ! ನಷ್ಟವಾದ ತಮ್ಮ ಐಶ್ವರ್ಯವನ್ನು ಮರಳಿ ಸಂಪಾದಿಸುವದಕ್ಕೆ ಅಶಕ್ತರಾದ ಬುದ್ಧಿ ಯಿಲ್ಲದ ಜನರು, ತಮ್ಮ ಪ್ರಯೋಜನವನ್ನು ಕೆಡಿಸತಕ್ಕದ್ದಾಗಿಯೂ ನಿಷ್ಫಲವಾಗಿಯೂ ಇರುವ' ವೈರಾಗ್ಯದಲ್ಲಿ ಪ್ರೀತಿಯನ್ನು ಇಡುವರು. ನೀನು ಬುದ್ಧಿಶಾಲಿಯಾಗಿಯೂ ಸಮರ್ಥನಾಗಿಯೂ ನಮ್ಮ ಪರಾಕ್ರಮವನ್ನು ತಿಳಿದವ ನಾಗಿಯೂ ಇದ್ದರೂ, ಯಾವಾಗಲೂ ದಯಾಪರನಾಗಿ ಮುಂದೆ ಬರತಕ್ಕ ಅನರ್ಥವನ್ನು ತಿಳಿಯದೆ ಇರುವೆ. ಕ್ಷಮಾ ವಂತರಾಗಿಯೂ ಸಜ್ಜನರಾಗಿಯೂ ಇರುವ ನಮ್ಮನ್ನು ನೋಡಿ ದುರ್ಯೋಧನಾದಿಗಳು ಅಸಮರ್ಥರನ್ನಾಗಿ ಭಾವಿಸು ವರು. ಈ ದುಃಖವು ಯುದ್ಧದಲ್ಲಿ ಸಂಭವಿಸುವ ಮರಣಕ್ಕೆ ಸಮಾನವಾದದ್ದು. ರಾಜ್ಯಕ್ಕಾಗಿ ಹಿಂಜರಿಯದೆ ಧರ್ಮದಿಂದ ಯುದ್ಧಮಾಡತಕ್ಕ ನಮ್ಮೆಲ್ಲರಿಗೂ ಯುದ್ಧದಲ್ಲಿ ಮರಣವಾದರೂ ಅದೂ ಶ್ರೇಯಸ್ಕರವಾದದ್ದೇ. ಹೀಗೆ ಆಗುವದರಿಂದ ನಾವು ಉತ್ತಮವಾದ ಲೋಕವನ್ನು ಹೊಂದಬಹುದು; ಅಥವಾ ಶತ್ರುಗಳಾದ ದುರ್ಯೋಧನಾದಿ ಗಳನ್ನು ಯುದ್ಧದಲ್ಲಿ ಸಂಹರಿಸಿ ಸಕಲ ಭೂಮಂಡಲವನ್ನೂ ಗೆದ್ದುಕೊಂಡರೂ, ಅದೂ ನಮಗೆ ಶ್ರೇಯಸ್ಕರ ವಾದದ್ದೇಸರಿ. ಆದ್ದರಿಂದ, ಶತ್ರುಗಳಿಗೆ ಪ್ರತಿಕ್ರಿಯೆಯನ್ನು ಮಾಡಲಿಚ್ಛಯಿಸುತ್ತಾ ಅಧಿಕವಾದ ಕೀರ್ತಿಯನ್ನು ಅಪೇಕ್ಷಿಸುತ್ತಿರುವ ಸ್ವಧರ್ಮಪರರಾದ ನಾವು ಈಗ ಅವಶ್ಯವಾಗಿ ಯುದ್ಧವನ್ನು ಮಾಡಬೇಕು. ಮಾಡತಕ್ಕ ಕಾರ್ಯ

ವನ್ನು ಚೆನ್ನಾಗಿ ತಿಳಿದು ನಮ್ಮ ಸ್ವತ್ತಿಗೋಸ್ಕರ ಯುದ್ಧವನ್ನು ಮಾಡುವ ನಮ್ಮ ರಾಜ್ಯವು ಮತ್ತೊಬ್ಬರಿಗೆ ಸೇರಿದರೂ, ಆಗಲೂ ಜನರು ನಮ್ಮನ್ನು ಶ್ಲಾಘಿಸುವರೇ ಹೊರತು ನಿಂದಿಸಲಾರರು.

ಎಲೈ ಧರ್ಮರಾಯನೇ, ಮಿತ್ರರಿಗೂ ತನಗೂ ಕ್ಷೀಣಗತಿಯನ್ನು ಉಂಟುಮಾಡುವ ಧರ್ಮವು ಕುತ್ಸಿತ ಧರ್ಮಕ್ಕೆ ಕಾರಣವಾಗಿ ವ್ಯಸನವೆಂದೆನ್ನಿಸಿಕೊಳ್ಳುವದು. ಜೀವವಿಲ್ಲದ ಶರೀರವನ್ನು ಸುಖದುಃಖಗಳು ಬಿಟ್ಟುಬಿಡುವಂತೆ, ಸರ್ವಥಾ ಧರ್ಮವೇ ನಿತ್ಯವಾದದ್ದೆಂದು ಹೇಳುವ ದುರ್ಬಲನಾದ ಪುರುಷನನ್ನು ಧರ್ಮಾರ್ಥಗಳು ಬಿಟ್ಟುಬಿಡುವವು. ಯಾವವನ ಧರ್ಮವು ಅರ್ಥಕಾಮಗಳಿಗೆ ಉಪಯೋಗಿಸದೆ ಧರ್ಮಾರ್ಥವಾಗಿಯೇ ಇರುವದೋ, ಆತನು ಕ್ಲೇಶಪಡುವನು. ಮತ್ತು ಆತನು ಕುರುಡನು ಸೂರ್ಯಪ್ರಭೆಯನ್ನು ಕಾಣದಂತೆ ಧರ್ಮಪದಾರ್ಥವನ್ನೇ ಕಾಣದೆ ಮೂಢನೆನಿಸಿಕೊಳ್ಳುವನು. ಯಾವವನ ಅರ್ಥವು ಸ್ವಪ್ರಯೋಜನಕ್ಕಾಗಿಯೇ ಇರುವದೋ, ಆತನು ಆ ಅರ್ಥವನ್ನು ವೆಚ್ಚಮಾಡುವದರಲ್ಲಿ ಚತುರನೆನಿಸಿಕೊಳ್ಳದೆ, ಕಾಡಿನಲ್ಲಿ ಹಸುವನ್ನು ಸಂರಕ್ಷಿಸುವ ಗೋಪಾಲನಿಗೆ ಸಮಾನನೆನಿಸಿಕೊಳ್ಳುವನು. ಯಾವವನು ಅಧಿಕವಾಗಿ ಅರ್ಥವನ್ನೇ ಅಪೇಕ್ಷಿಸುತ್ತ ಧರ್ಮವನ್ನೂ ಕಾಮವನ್ನೂ ಪಡೆಯದೆ ಇರುವನೋ, ಆತನು ಬ್ರಹ್ಮಹತ್ಯವನ್ನು ಮಾಡಿದ ನೀಚನಾದ ಪುರುಷನಂತೆ ಸಕಲ ಪ್ರಾಣಿಗಳಿಂದಲೂ ವಧ್ಯನಾಗುವನು. ಯಾವವನು ಯಾವಾಗಲೂ ಕಾಮವನ್ನೇ ಅಪೇಕ್ಷಿಸುತ್ತ ಧರ್ಮವನ್ನೂ ಅರ್ಥವನ್ನೂ ಪಡೆಯದೆ ಇರುವನೋ, ಆತನಿಗೆ ಮಿತ್ರರು ನಷ್ಟರಾಗುವದಲ್ಲದೆ ಧರ್ಮಾರ್ಥಗಳೂ ತಪ್ಪಿಹೋಗುವವು. ಧರ್ಮಾರ್ಥಹೀನನಾಗಿ ಸ್ವೇಚ್ಛೆಯಿಂದ ಕಾಮವನ್ನು ಅನುಭವಿಸುವಾತನು, ತನ್ನ ಕಾಮವು ತೀರಿದಬಳಿಕ, ನೀರು ಹೋದಮೇಲೆ ಮೀನು ಹ್ಯಾಗೆ ಮರಣವನ್ನು ಹೊಂದುವದೋ ಹಾಗೆ, ಮರಣವನ್ನು ಹೊಂದುವನು. ಇದುನಿಶ್ಚಯ. ಆದ್ದರಿಂದ ಪಂಡಿತನಾದವನು ಯಾವಾಗಲೂ ಧರ್ಮಾರ್ಥಗಳ ವಿಷಯದಲ್ಲಿ ಪ್ರಮಾದವನ್ನು ಹೊಂದಿಯೇ ಇರುವನು. ಆ ಧರ್ಮಾರ್ಥಗಳೇ,ಅರಣಿಯು ಅಗ್ನಿಗೆ ಕಾರಣವಾಗಿರುವಂತೆ ಕಾಮಕ್ಕೆ ಕಾರಣವಾಗಿರುವವು. ಸರ್ವಪ್ರಕಾರದಿಂದಲೂ ಧರ್ಮವು ಅರ್ಥಕ್ಕೂ ಅರ್ಥವು ಧರ್ಮಕ್ಕೂ ಮೂಲಭೂತವಾಗಿರುವವು. ಈ ಧರ್ಮಾರ್ಥಗಳು ಮೇಘದಿಂದ ಸಮುದ್ರವೂ ಸಮುದ್ರದಿಂದ ಮೇಘವೂ ವೃದ್ಧಿಯನ್ನು ಹೊಂದುವಂತೆ ಒಂದರಿಂದೊಂದು ವೃದ್ಧಿಯನ್ನು ಹೊಂದುವವು. ಸ್ರಕ್ಚಂದನವನಿತಾದಿ ವಿಷಯಗಳ ಸಂಬಂಧದಿಂದಲೂ ಸುವರ್ಣಾದಿದ್ರವ್ಯಗಳ ಲಾಭದಿಂದಲೂ ಮನುಷ್ಯನಿಗೆ ಎಂಥಾ ಪ್ರೀತಿಯುಂಟಾಗುವದೋ, ಆ ಪ್ರೀತಿಯೇ ಮನಸ್ಸಂಕಲ್ಪರೂಪವಾದ ಕಾಮವೆನಿಸಿಕೊಳ್ಳುವದು. ಅದಕ್ಕೆ ಮತ್ತೊಂದು ಆಕಾರವಿಲ್ಲ. ಲೋಕದಲ್ಲಿ ದೊಡ್ಡದಾದ ಒಂದು ಧರ್ಮಕಾರ್ಯವನ್ನು ಮಾಡಬೇಕೆಂದು ಅಪೇಕ್ಷಿಸುವ ಪುರುಷನು ದ್ರವ್ಯವನ್ನು ಬಯಸುವನು. ಹೀಗೆಯೇ ಕಾಮಾರ್ಥಿಯಾದ ಪುರುಷನೂ ದ್ರವ್ಯವನ್ನೇ ಅಪೇಕ್ಷಿಸುವನು. ಕಾಮವನ್ನು ಪಡೆದನಂತರ ಅದರಿಂದ ಮತ್ತೊಂದನ್ನು ಅಪೇಕ್ಷಿಸುವದಿಲ್ಲ. ಕಾಷ್ಠದಿಂದ ಭಸ್ಮವುಂಟಾಗಿ ಆ ಭಸ್ಮದಿಂದ ಮತ್ತೊಂದು ಭಸ್ಮವು ಹ್ಯಾಗುಂಟಾಗುವದಿಲ್ಲವೋ ಹಾಗೆ, ಅರ್ಥದಿಂದ ಕಾಮವುಂಟಾಗಿ ಕಾಮದಿಂದ ಮತ್ತೊಂದು ಕಾಮವುಂಟಾಗುವದಿಲ್ಲ. ಹಕ್ಕಿಬೇಟೆಗಾರನು ಪಕ್ಷಿಗಳನ್ನು ಹ್ಯಾಗೆ ಹಿಂಸಿಸುವನೋ ಹಾಗೆ, ಅಧರ್ಮಿಷ್ಠನಾದ ಪುರುಷನು ಪ್ರಾಣಿಗಳನ್ನು ಹಿಂಸಿಸುವನು. ಯಾವ ಮೂಢನು ಕಾಮದಿಂದಲೂ ದ್ರವ್ಯಲಾಭದಿಂದಲೂ ಧರ್ಮಸ್ವರೂಪವನ್ನು ತಿಳಿಯದೆ ಹೋಗುವನೋ, ಆತನನ್ನು ಇಹದಲ್ಲೂ ಪರದಲ್ಲೂ ಎಲ್ಲರೂ ಹಿಂಸೆಮಾಡುವರು.

ಎಲೈ ರಾಜೇಂದ್ರನೇ, ಕಾಮವು ಸ್ತ್ರೀ ಧನ ಗೋವು ಗಜ ಅಶ್ವ ಮೊದಲಾದ ದ್ರವ್ಯಗಳಿಂದ ಉಂಟಾಗತಕ್ಕದ್ದು. ಈ ದ್ರವ್ಯಕ್ಕೆ ಸ್ತ್ರೀ ಧನ ಮೊದಲಾದವು ಪ್ರಕೃತಿಯೆಂತಲೂ ತ್ಯಾಗ ಭೋಗ ಮೊದಲಾದವು ವಿಕೃತಿಯೆಂತಲೂ ನೀನು ತಿಳಿದೇ ಇರುವೆ. ಸ್ತ್ರೀ ಗೋವು ಮೊದಲಾದ ದ್ರವ್ಯಗಳು ಇಲ್ಲದೆಹೋದರೂ, ಅಥವಾ ಇದ್ದು ಅವಕ್ಕೆ ಜರಾಮರಣಾದಿಗಳಿಂದ ನಾಶವುಂಟಾದರೂ, ಹೀಗಾಗುವದಕ್ಕೆ ಪ್ರಾಜ್ಞರಾದವರು ಅನರ್ಥವೆಂದು ಹೇಳುವರು. ಅಂಥಾ ಅನರ್ಥವು ಈಗ ನಮಗೆ ಸಂಭವಿಸಿರುವದು. ಶಬ್ದಾದಿವಿಷಯಗಳಲ್ಲಿ ಆಸಕ್ತವಾದ ಶ್ರೋತ್ರಾದಿ ಪಂಚೇಂದ್ರಿಯಗಳಿಗೂ, ಸಂಕಲ್ಪವೆಂಬ ವಿಷಯದಲ್ಲಿ ಆಸಕ್ತವಾದ ಮನಸ್ಸಿಗೂ, ನಿಶ್ಚಯವೆಂಬ ವಿಷಯದಲ್ಲಿ ಆಸಕ್ತವಾದ ಹೃದಯಕ್ಕೂ, ಯಾವ ಪ್ರೀತಿಯುಂಟಾಗುವದೋ ಅದೇ ಕರ್ಮಫಲರೂಪವಾದ ಕಾಮವೆಂದು ನಾನು ತಿಳಿದಿರುವೆನು.

ಹೀಗೆ ಧರ್ಮಾರ್ಥಕಾಮಗಳು ಪ್ರತ್ಯೇಕಪ್ರತ್ಯೇಕವಾಗಿ ಇರುವದನ್ನು ನೋಡಿ, ವಿವೇಕಿಯಾದವನು ಯಾವಾಗಲೂ ಧರ್ಮಪರನಾಗಿಯೇ ಆಗಲಿ, ಅರ್ಥಪರನಾಗಿಯೇ ಆಗಲಿ, ಕಾಮಪರನಾಗಿಯೇ ಆಗಲಿ ಇರಕೂಡದು ; ಪರಂತು, ಎಲ್ಲಾ ಕಾಲದಲ್ಲೂ ಅವೆಲ್ಲವನ್ನೂ ಸೇವಿಸಬೇಕು. ಅದು ಹ್ಯಾಗೆಂದರೆ, ಪುರುಷನು ಪ್ರತಿದಿವಸದಲ್ಲೂ ಮೊದಲು ಭಾಗದಲ್ಲಿ ಧರ್ಮಪರನಾಗಿಯೂ, ಮಧ್ಯಭಾಗದಲ್ಲಿ ಅರ್ಥಪರನಾಗಿಯೂ, ಕೊನೇಭಾಗದಲ್ಲಿ ಕಾಮಪರನಾಗಿಯೂ ಇರಬೇಕು. ಇದು ಶಾಸ್ತ್ರೋಕ್ತವಾದ ನಿಯಮವು. ಮನುಷ್ಯನು ಪೂರ್ವವಯಸ್ಸಿನಲ್ಲಿ ಕಾಮಪರನಾಗಿಯೂ ಮಧ್ಯವಯಸ್ಸಿನಲ್ಲಿ ಅರ್ಥಪರನಾಗಿಯೂ ಅಂತ್ಯವಯಸ್ಸಿನಲ್ಲಿ ಧರ್ಮಪರನಾಗಿಯೂ ಇರಬೇಕು. ಈ ಪ್ರಕಾರ ಕಾಲವಿಭಾಗವನ್ನು ಮಾಡಿಕೊಂಡು, ಕಾಲಜ್ಞನಾದ ವಿವೇಕಿಯಾದವನು ಧರ್ಮಾರ್ಥಕಾಮಗಳನ್ನು ಸೇವಿಸಬೇಕು.

ಎಲೈ ಕುರುಶ್ರೇಷ್ಠನಾದ ಧರ್ಮರಾಯನೆ, ಸುಖವನ್ನಪೇಕ್ಷಿಸತಕ್ಕ ಪುರುಷನಿಗೆ ಉಪಾಯಯುಕ್ತವಾದ ಬುದ್ಧಿಯಿಂದ ಮಹತ್ತಾದ ಐಶ್ವರ್ಯವನ್ನು ಪಡೆಯುವದಾದರೂ ಅಥವಾ ಮೋಕ್ಷವನ್ನು ಪಡೆಯುವದಾದರೂ ಶ್ರೇಯಸ್ಕರವು. ಆದ್ದರಿಂದ ನೀನು ಜಾಗ್ರತೆಯಾಗಿ ರಾಜ್ಯಲಾಭಕ್ಕೋಸ್ಕರ ಪ್ರಯತ್ನಮಾಡು. ಇಹಪರಸುಖಗಳೆರಡೂ ಇಲ್ಲದಿರುವ ಮನುಷ್ಯನ ಜೀವನವು ರೋಗಿಯ ಜೀವನದಂತೆ ದುಃಖಕರವಾಗಿರುವದು. ಎಲೈ ಧರ್ಮರಾಯನೆ, ನೀನು ಧರ್ಮಸ್ವಭಾವವನ್ನು ತಿಳಿದು ಅದನ್ನು ಯಾವಾಗಲೂ ಆಚರಿಸುತ್ತಿರುವೆ. ಇದನ್ನು ತಿಳಿದೇ ದೊಡ್ಡವರಾದವರು ಕರ್ಮದಲ್ಲಿ ಆದರವನ್ನುಂಟುಮಾಡುವ ವೇದವಾಕ್ಯವನ್ನು ನಿನಗೋಸ್ಕರ ಹೇಳುವರು.

ಎಲೈ ಧರ್ಮರಾಯನೆ, ಅತಿಥಿಸತ್ಕಾರ ದಾನ ಯಜ್ಞ ವೇದಾಧ್ಯಯನ ಋಜುಸ್ವಭಾವ ಇವುಗಳೆಲ್ಲಾ ಉತ್ತಮವಾದ ಧರ್ಮಗಳಾದ್ದರಿಂದ, ಇವುಗಳು ಈ ಲೋಕದಲ್ಲೂ ಪರಲೋಕದಲ್ಲೂ ಶ್ರೇಯಸ್ಸನ್ನು ಕೊಡುವವು. ಇವುಗಳನ್ನು ಆಚರಿಸುವದು ಅರ್ಥಹೀನನಾದವನಿಗೆ ಶಕ್ಯವಲ್ಲ. ಇನ್ನೂ ಅನೇಕ ಗುಣಗಳಿದ್ದಾಗ್ಯೂ ಧರ್ಮವೆಂಬುವದೇ ಜಗತ್ತಿಗೆ ಕಾರಣವಾದ್ದರಿಂದ, ಧರ್ಮಕ್ಕಿಂತಲೂ ಹೆಚ್ಚಾದದ್ದು ಯಾವದೂ ಇಲ್ಲ. ಅಂಥ ಧರ್ಮವು ಅರ್ಥ ಹೊರತು ಲಭಿಸುವದಿಲ್ಲ. ಅಂಥ ಅರ್ಥವನ್ನು ಯಾವಾಗಲೂ ಧರ್ಮಬುದ್ಧಿಯುಳ್ಳ ಪುರುಷನು ಯಾಚನೆಯಿಂದಲೂ ಭಯದಿಂದಲೂ ಹೊಂದಲಾರನು. ಯಾಚನಾವೃತ್ತಿಯು ಬ್ರಾಹ್ಮಣನಿಗೆ ಯೋಗ್ಯವಾದದ್ದೇ ಹೊರತು, ಕ್ಷತ್ರಿಯನಿಗೆ ಯೋಗ್ಯವಾದದ್ದಲ್ಲ. ಆದ್ದರಿಂದ ನೀನು ಪರಾಕ್ರಮದಿಂದಲೇ ಅರ್ಥವನ್ನು ಸಂಪಾದಿಸುವದಕ್ಕೆ ಪ್ರಯತ್ನ ಮಾಡು. ಕ್ಷತ್ರಿಯನಾದವನಿಗೆ ಯಾಚನಾವೃತ್ತಿಯೂ ಕೃಷಿಜೀವನವೂ ಪರಸೇವೆಯೂ ಶಾಸ್ತ್ರವಿಹಿತವಲ್ಲ. ಆತನಿಗೆ ವಿಶೇಷವಾಗಿ ಉತ್ಸಾಹಶಕ್ತಿಯೇ ಮುಖ್ಯವಾದ ಧರ್ಮವು. ಆದ್ದರಿಂದ ನೀನು ಸ್ವಧರ್ಮವಾದ ಕ್ಷಾತ್ರವನ್ನು ಅವಲಂಬಿಸಿ ಶತ್ರುಗಳನ್ನು ನಿಗ್ರಹಿಸು. ನನ್ನಿಂದಲೂ ಅರ್ಜುನನಿಂದಲೂ ಕೌರವರೆಂಬ ವನವನ್ನು ನಾಶಮಾಡಿಸು. ದೊಡ್ಡವರಾದ ವಿದ್ವಾಂಸರು ಕ್ಷತ್ರಿಯನಿಗೆ ಪ್ರಭುತ್ವವೇ ಧರ್ಮವೆಂದು ಹೇಳುವರಾದ್ದರಿಂದ ನೀನು ಅಂಥ ಪ್ರಭುತ್ವವನ್ನು ಪಡೆ ; ಹೀನಸ್ಥಿತಿಯಲ್ಲಿರುವದಕ್ಕೆ ಅಪೇಕ್ಷೆಪಡಬೇಡ.

ಎಲೈ ರಾಜೇಂದ್ರನೆ, ಕ್ರೂರವಾದ ಯಾವ ಕ್ಷಾತ್ರಕ್ಕೆ ಜನರು ಭಯಪಡುವರೋ ಅಂಥ ಕ್ಷಾತ್ರಧರ್ಮವನ್ನು ಪಡೆಯುವ ಕುಲದಲ್ಲಿ ನೀನು ಹುಟ್ಟಿರುವೆ, ಮತ್ತು ಅನಾದಿಯಾದ ಎಲ್ಲಾ ಧರ್ಮಗಳನ್ನೂ ತಿಳಿದಿರುವೆ. ಇವುಗಳನ್ನು ಚೆನ್ನಾಗಿ ಆಲೋಚಿಸು. ಕ್ಷತ್ರಿಯನಾದವನಿಗೆ ಪ್ರಜಾಪಾಲನದಿಂದುಂಟಾಗತಕ್ಕ ಧರ್ಮವು ನಿಂದಿತವಾದದ್ದಲ್ಲ. ಅನಾದಿಸಿದ್ಧವಾದ ಈ ಕ್ಷಾತ್ರಧರ್ಮವು ಕ್ಷತ್ರಿಯನಾದ ನಿನಗೆ ವಿಹಿತವಾದದ್ದು. ಅಂಥ ಕ್ಷಾತ್ರಧರ್ಮವನ್ನು ನೀನು ಬಿಟ್ಟಪಕ್ಷದಲ್ಲಿ, ಲೋಕದಲ್ಲಿ ಹಾಸ್ಯಾಸ್ಪದನಾಗುವೆ. ಮನುಷ್ಯರಿಗೆ ಸ್ವಧರ್ಮವನ್ನು ಬಿಡುವದು ಯೋಗ್ಯವಾದದ್ದಲ್ಲ. ನೀನು ಈ ಮನಸ್ಸನ್ನು ಜೋಲುಬಿಡದೆ, ಕ್ಷಾತ್ರಧರ್ಮವನ್ನು ಅವಲಂಬಿಸಿ, ಪರಾಕ್ರಮಶಾಲಿಯಾಗಿ, ಎತ್ತು ಹ್ಯಾಗೆ ಬಂಡಿಯ ಭಾರವನ್ನು ವಹಿಸುವದೋ ಹಾಗೆ, ರಾಜ್ಯಭಾರವನ್ನು ವಹಿಸು. ಕೇವಲ ಧರ್ಮಬುದ್ಧಿಯುಳ್ಳ ಯಾವ ರಾಜನೂ ಭೂಮಿಯನ್ನು ಗೆಲ್ಲಲಿಲ್ಲ, ಮತ್ತು ಎಂದಿಗೂ ಸಂಪತ್ತನ್ನು ಹೊಂದದಿರತಕ್ಕ ದಾರಿದ್ರ್ಯವನ್ನೂ ಹೋಗಲಾಡಿಸಿಕೊಳ್ಳಲಿಲ್ಲ. ಬೇಟೆಗಾರನು ಆಹಾರವನ್ನು ಹಾಕಿ ಮೋಸದಿಂದ ಮೃಗಪಕ್ಷಿಗಳ ಮಾಂಸವನ್ನು ಹ್ಯಾಗೆ ಸಂಪಾದಿಸುವನೋ ಹಾಗೆ, ಬುದ್ಧಿವಂತನಾದವನು ಶತ್ರುಪಕ್ಷದಲ್ಲಿರುವ ಲುಬ್ಧರಾದ ಕ್ಷುದ್ರಜನರಿಗೆ

ಬೇಕಾದ ಆಹಾರಗಳನ್ನು ಕೊಟ್ಟು ಮೋಸಪಡಿಸಿ ರಾಜ್ಯವನ್ನು ಸಂಪಾದಿಸಬೇಕು. ದೇವತೆಗಳು ತಮಗಿಂತ ಮೊದಲು ಹುಟ್ಟಿ ತಮಗೆ ಭ್ರಾತೃಗಳಾಗಿ ಐಶ್ವರ್ಯವಂತರಾಗಿರುವ ದೈತ್ಯರನ್ನು ಮೋಸದಿಂದಲೇ ಜಯಿಸಿರುವರು. ಆದ್ದರಿಂದ ನೀನೂ ಅದೇಪ್ರಕಾರ ತಿಳುವಳಿಕೆಯುಳ್ಳವನಾಗಿ ಮೀಮಾಂಸಕನ್ಯಾಯವನ್ನು ಅನುಸರಿಸಿ ಸಂವತ್ಸರ ಶಬ್ದಕ್ಕೆ ದಿನಪರವಾಗಿ ಅರ್ಥವನ್ನು ಕಲ್ಪಿಸಿ, ಬಲವಂತರಾದ ಶತ್ರುಗಳನ್ನು ಮೋಸದಿಂದ ಜಯಿಸು. ಯುದ್ಧದಲ್ಲಿ ಅರ್ಜುನನಿಗೆ ಸಮಾನನಾಗಿ ಧನುರ್ಧಾರಿಯಾದ ಯೋಧನು ಯಾವನಿರುವನು ? ಗದಾಯುದ್ಧದಲ್ಲಿ ನನಗೆ ಸಮಾನನಾದವನೂಕೂಡ ಮುಂದಾದರೂ ಯಾವನಾದರೂ ಹುಟ್ಟುವನೆ ?

ಎಲೈ ರಾಯನೆ, ಬಲಿಷ್ಠನಾದವನು ಸ್ವಶಕ್ತಿಯಿಂದಲೇ ಯುದ್ಧಮಾಡುವನೇ ಹೊರತು ಆಪ್ತವಾಕ್ಯದಿಂದಲಾಗಲಿ, ಶತ್ರುಪಕ್ಷದವರೊಡನೆ ಸಂಧಿಯನ್ನು ಮಾಡಿಕೊಂಡಾಗಲಿ, ಯುದ್ಧವನ್ನು ಮಾಡುವದಿಲ್ಲ. ಆದ್ದರಿಂದ ನೀನೂ ನಿನ್ನ ಶಕ್ತಿಯನ್ನೇ ಅವಲಂಬಿಸು. ಐಶ್ವರ್ಯವನ್ನು ಪಡೆಯುವದಕ್ಕೆ ಶಕ್ತಿಯೇ ಮೂಲಭೂತವಾದದ್ದು. ಇದಕ್ಕಿಂತಲೂ ಬೇರೆಯಾದ ಮತ್ತೊಂದು ಉಪಾಯವು ಹಿಮಕಾಲವೃಕ್ಷಚ್ಛಾಯದಂತೆ ನಿಷ್ಪ್ರಯೋಜಕವಾಗುವದು. ಹೆಚ್ಚಾಗಿ ಫಲಗಳನ್ನು ಅಪೇಕ್ಷಿಸತಕ್ಕವನು ಅದಕ್ಕಾಗಿ ಬೀಜವನ್ನು ಹಾಕುವಂತೆ, ಹೆಚ್ಚಾಗಿ ಸಂಪತ್ತನ್ನು ಅಪೇಕ್ಷಿಸತಕ್ಕವನು ಅದಕ್ಕಾಗಿ ಸ್ವಲ್ಪ ದ್ರವ್ಯವನ್ನು ವೆಚ್ಚಮಾಡಬೇಕು. ಈ ವಿಷಯದಲ್ಲಿ ನೀನು ಸಂಶಯಪಡಬೇಡ. ತಾನು ವೆಚ್ಚಮಾಡಿದ ದ್ರವ್ಯಕ್ಕೆ ಅಧಿಕವಾದ ಲಾಭವಾಗದಿದ್ದರೆ, ಆ ವೆಚ್ಚವು ಸರಿಯಾದದ್ದಲ್ಲವೆಂದೆನಿಸಿಕೊಳ್ಳುವದು. ಅಂಥಾ ಭಾಗದಲ್ಲಿ ಪ್ರಯತ್ನಪಡುವದು ಕತ್ತೇವೈಯನ್ನು ಉಜ್ಜುವದರಂತೆ ಆ ಯಾಸಕ್ಕೆ ಕಾರಣವಾಗುವದು. ಎಲೈ ಪುರುಷಶ್ರೇಷ್ಠನೆ, ಯಾವ ಮನುಷ್ಯನು ಸ್ವಲ್ಪವಾದ ಧರ್ಮವನ್ನು ಬಿಟ್ಟು ಮಹತ್ತಾದ ಧರ್ಮವನ್ನು ಸಾಧಿಸಿಕೊಳ್ಳುವನೋ, ಅತನು ನಿಜವಾಗಿ ವಿದ್ವಾಂಸನೆನಿಸಿಕೊಳ್ಳುವನು. ಬುದ್ಧಿವಂತರಾದವರು ಮಿತ್ರಸಹಾಯವುಳ್ಳ ಶತ್ರುಗಳಲ್ಲಿ ಮಿತ್ರರಿಂದಲೇ ಭೇದವನ್ನು ಕಲ್ಪಿಸಿ, ಮಿತ್ರಭೇದವನ್ನು ಹೊಂದಿದ ಅಲ್ಪಬುದ್ಧಿಗಳಾದ ಆ ಶತ್ರುಗಳನ್ನು ಸ್ವಾಧೀನಪಡಿಸಿಕೊಳ್ಳುವರು. ಎಲೈ ರಾಯನೆ, ಬಲಿಷ್ಠನಾದವನು ಸ್ವಶಕ್ತಿಯಿಂದಲೇ ಶತ್ರುಗಳನ್ನು ಜೈಸಿ ಸಕಲಪ್ರಜೆಗಳನ್ನೂ ಸ್ವಾಧೀನಪಡಿಸಿಕೊಳ್ಳುವನೇ ಹೊರತು, ಇತರ ಪ್ರಯತ್ನದಿಂದಲೂ ಒಳ್ಳೇ ಮಾತುಗಳಿಂದಲೂ ಶತ್ರುಜಯದಲ್ಲಿ ಪ್ರವರ್ತಿಸನು. ಜೇನುಹುಳುಗಳು ಗುಂಪಾಗಿ ಜೇನನ್ನು ತೆಗೆಯತಕ್ಕವನನ್ನು ಹ್ಯಾಗೆ ಹಿಂಸಿಸುವವೋ, ಹಾಗೆಯೇ ಅನೇಕಮಂದಿ ದುರ್ಬಲರಾದವರು ಗುಂಪುಕೂಡಿದರೆ ಒಬ್ಬ ಬಲವಂತನಾದವನನ್ನು ಸಂಹರಿಸಬಹುದು. ಎಲೈ ರಾಯನೆ, ಸೂರ್ಯನು ಸಮಸ್ತ ಜನಗಳನ್ನೂ ತನ್ನ ತೇಜಸ್ಸಿನಿಂದ ಮೊದಲು ಸಂತಾಪಪಡಿಸಿ ಬಳಿಕ ಹ್ಯಾಗೆ ಸಂರಕ್ಷಿಸುವನೋ ಹಾಗೆ ನೀನೂ ಸಂರಕ್ಷಿಸು. ನೀತಿಮಾರ್ಗದಿಂದ ಪ್ರಜೆಗಳನ್ನು ರಕ್ಷಿಸುವದೇ ಕ್ಷತ್ರಿಯನಿಗೆ ಅನಾದಿಯಾದ ಧರ್ಮವೆಂದು ನಾನು ಕೇಳಿರುವೆನು. ಈ ಧರ್ಮವನ್ನೇ ನಮ್ಮ ಹಿರಿಯವರೆಲ್ಲರೂ ಆಶ್ರಯಿಸಿದ್ದರು. ಕ್ಷತ್ರಿಯನು ಸ್ವಧರ್ಮದಿಂದ ಯುದ್ಧಮಾಡಿ ಜಯವನ್ನೇ ಆಗಲಿ ಮರಣವನ್ನೇ ಆಗಲಿ ಪಡೆದು ಯಾವ ಉತ್ತಮವಾದ ಗತಿಯನ್ನು ಹೊಂದುವನೋ, ಅಂಥಾ ಗತಿಯು ಆತನಿಗೆ ತಪಸ್ಸಿನಿಂದಲೂ ಉಂಟಾಗಲಾರದು. ಈ ನಿನ್ನ ವ್ಯಥೆಯನ್ನು ನೋಡಿ ಜನಗಳು ಲೋಕದಲ್ಲಿ ಸೂರ್ಯಚಂದ್ರರಿಗೂ ಪ್ರಕಾಶವು ತಪ್ಪಿಹೋಗುವದು ಎಂದು ನಿಶ್ಚಯಿಸುವರು. ಜನಗಳು ನಿನ್ನನ್ನು ಹೊಗಳುತ್ತಲೂ ದುರ್ಯೋಧನನನ್ನು ನಿಂದಿಸುತ್ತಲೂ ಅಲ್ಲಲ್ಲಿ ಗುಂಪುಕೂಡುತ್ತಿರುವರು. ಎಲೈ ರಾಯನೆ, ಬ್ರಾಹ್ಮಣರೂ ಕೌರವರೂ ಗುಂಪುಗುಂಪಾಗಿ ಸಂತೋಷದಿಂದ ನಿನ್ನ ಸತ್ಯಸಂಧತ್ವವನ್ನು ಶ್ಲಾಘಿಸುತ್ತಿರುವರು. ಇದೊಂದು ವಿಶೇಷವಾದದ್ದು.

ಎಲೈ ಧರ್ಮರಾಯನೆ, ನೀನು ಅಜ್ಞಾನದಿಂದಲೇ ಆಗಲಿ, ದೈನ್ಯದಿಂದಲೇ ಆಗಲಿ, ಲೋಭದಿಂದಲೇ ಆಗಲಿ, ಕಾಮದಿಂದಲೇ ಆಗಲಿ, ದ್ರವ್ಯಾಶೆಯಿಂದಲೇ ಆಗಲಿ, ಸ್ವಲ್ಪವಾದರೂ ಸುಳ್ಳಾಡಿದವನಲ್ಲವೆಂದು ಎಲ್ಲರೂ ನಿನ್ನನ್ನು ಶ್ಲಾಘಿಸುವರು. ಲೋಕದಲ್ಲಿ ರಾಜನಾದವನು ರಾಜ್ಯಪ್ರಾಪ್ತಿಗೋಸ್ಕರ ಮೊದಲು ಪಾಪಕೃತ್ಯವನ್ನು ಮಾಡಿಸಿ, ಬಳಿಕ ಅನೇಕ ಯಜ್ಞಗಳನ್ನು ಮಾಡಿ, ಬ್ರಾಹ್ಮಣರಿಗೆ ಅಧಿಕವಾದ ದಕ್ಷಿಣೆಗಳನ್ನು ಕೊಟ್ಟು ಅನೇಕಪ್ರಕಾರ ಗೋದಾನ ಭೂದಾನಗಳನ್ನು ಮಾಡಿ, ಅಂಧಕಾರದಿಂದ ಚಂದ್ರನು ಬಿಡಿಸಿಕೊಳ್ಳುವಂತೆ ಆ ಪಾಪದಿಂದ ಬಿಡಿಸಿಕೊಳ್ಳುವನು. ನೀನೂ ಹೀಗೆ ನಡೆದರೆ ಸಕಲರಾದ ನಗರವಾಸಿಗಳೂ ದೇಶವಾಸಿಗಳೂ ಆಬಾಲವೃದ್ಧರೂ ನಿನ್ನನ್ನು ಬಹುಪ್ರಕಾರದಿಂದ ಶ್ಲಾಘಿಸುವರು.

ಎಲೈ ಯುಧಿಷ್ಠಿರನೆ, ನಮ್ಮ ರಾಜ್ಯವು ಈಗ ದುರ್ಯೋಧನನಲ್ಲಿರುವದು ನಾಯಿದೊಗಲಿನ ಚೀಲದಲ್ಲಿ ಹಾಲಿರುವಂತೆಯೂ, ಶೂದ್ರನಲ್ಲಿ ವೇದಾಕ್ಷರವಿರುವಂತೆಯೂ, ಕಳ್ಳನಲ್ಲಿ ಸತ್ಯವಿರುವಂತೆಯೂ, ಸ್ತ್ರೀಯಲ್ಲಿ ಬಲವಿರುವಂತೆಯೂ ಆಯಿತೆಂದು ಸ್ತ್ರೀಯರೂ ವೃದ್ಧರೂ ಬಾಲಕರೂ ಸಹ ಯಾವಾಗಲೂ ಇದೇ ಮಾತನ್ನಾಡುತ್ತಿರುವರು. ಎಲೈ ರಾಜೇಂದ್ರನೆ, ನಿನ್ನ ನಿಮಿತ್ತದಿಂದ ರಾಜ್ಯವು ನಷ್ಟವಾಗಿ ನಮ್ಮೊಡನೆ ನೀನು ಇಂಥಾ ದುರವಸ್ಥೆಯನ್ನು ಹೊಂದಿರಲು, ನಾವೆಲ್ಲರೂ ಕೆಟ್ಟೆವಲ್ಲಾ ! ಆದ್ದರಿಂದ ನೀನು ಯುದ್ಧಸಾಮಗ್ರಿಗಳೊಡಗೂಡಿದ ರಥವನ್ನೇರಿ, ಶತ್ರುಜಯದಿಂದ ಸಂಪಾದಿಸುವ ದ್ರವ್ಯವನ್ನು ಬ್ರಾಹ್ಮಣರಿಗೆ ಕೊಡುವದಕ್ಕೋಸ್ಕರ ಶೀಘ್ರವಾಗಿ ಹೊರಡು. ಮತ್ತು ಬ್ರಾಹ್ಮಣರಿಂದ ಆಶೀರ್ವಾದವನ್ನು ಮಾಡಿಸಿಕೊಂಡು, ದೃಢವಾದ ಧನುಸ್ಸುಗಳನ್ನು ಧರಿಸಿರುವರಾಗಿಯೂ, ಸಕಲಾಸ್ತ್ರಗಳನ್ನೂ ಬಲ್ಲವರಾಗಿಯೂ, ಸರ್ಪಗಳಂತೆ ಕ್ರೂರರಾಗಿಯೂ, ಶೂರರಾಗಿಯೂ ಇರುವ ತಮ್ಮಂದಿರಾದ ನಮ್ಮೊಡಗೂಡಿ, ನೀನು ಶತ್ರುಗಳಾದ ದೈತ್ಯರನ್ನು ಸಂಹರಿಸುವದಕ್ಕೋಸ್ಕರ ದೇವತೆಗಳೊಡಗೂಡಿ ಹೊರಟ ಇಂದ್ರನಂತೆ ಪ್ರಕಾಶಿಸುತ್ತ, ಹಸ್ತಿನಾನಗರಕ್ಕೆ ಹೋಗಿ, ದುರ್ಯೋಧನನಿಂದ ನಮ್ಮೈಶ್ವರ್ಯವನ್ನು ತೆಗೆದುಕೊ. ಗಾಂಡೀವ ಧನುಸ್ಸಿನಿಂದ ಬಿಡಲ್ಪಟ್ಟ ಹದ್ದಿನ ಗರಿಗಳನ್ನು ಕಟ್ಟಿದ ಸರ್ಪಸಮಾನವಾಗಿರುವ ಅರ್ಜುನನ ಬಾಣಗಳನ್ನು ಯುದ್ಧದಲ್ಲಿ ಯಾರುತಾನೇ ಸಹಿಸ್ಯಾರು? ಯುದ್ಧದಲ್ಲಿ ಕೋಪಗೊಂಡ ನನ್ನ ಗದಾಪ್ರಹಾರವನ್ನು ಯಾವ ವೀರನೇ ಆಗಲಿ ಯಾವ ಕುದುರೆಯೇ ಆಗಲಿ ಯಾವ ಆನೆಯೇ ಆಗಲಿ ಸಹಿಸಬಲ್ಲದು? ನಮಗೆ ಸೃಂಜಯರೂ ಕೇಕಯರೂ ಸಾತ್ಯಕಿಯೂ ಇವರೆಲ್ಲರೂ ಸಹಾಯರಾಗಿರಲು, ಹ್ಯಾಗೆತಾನೇ ರಾಜ್ಯಪ್ರಾಪ್ತಿಯಾಗದೆ ಇದ್ದೀತು? ನೀನು ಮಹತ್ತಾದ ಬಲದಿಂದ ಯುಕ್ತನಾಗಿ ತಕ್ಕ ಪ್ರಯತ್ನವನ್ನು ಮಾಡಿದರೆ, ಹ್ಯಾಗೆತಾನೇ ಶತ್ರುವಿನ ಕೈಸೇರಿರುವ ರಾಜ್ಯವು ನಿನ್ನ ಅಧೀನವಾಗದೆ ಹೋಗುವದು?" ಎಂದನು.

## ೩೪ನೇ ಅಧ್ಯಾಯ.—ಧರ್ಮರಾಯ ಭೀಮಸೇನರ ಸಂವಾದ.

ವೈಶಂಪಾಯನಮುನೀಂದ್ರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯನೆ, ಬಳಿಕ ಸತ್ಯಸಂಧನೂ ಅಜಾತಶತ್ರುವೂ ಮಹಾನುಭಾವನೂ ಆದ ಧರ್ಮರಾಯನು ಭೀಮಸೇನನ ಮಾತುಗಳನ್ನು ಕೇಳಿ, ಧೈರ್ಯವನ್ನುತಾಳಿ "ಎಲೈ ಭೀಮಸೇನನೆ, ನೀನು ಹೇಳಿದ್ದೆಲ್ಲಾ ನಿಜವಾದದ್ದು. ಈ ವಿಷಯದಲ್ಲಿ ಸಂಶಯವೇನೂ ಇಲ್ಲ. ಆದರೆ ನಿನ್ನ ವಾಗ್ಬಾಣಗಳಿಂದ ನಾನು ಬಹಳವಾಗಿ ಪೀಡಿತನಾದರೂ, ನಿನ್ನನ್ನುಮಾತ್ರ ನಿಂದಿಸಲಾರೆನು. ನನ್ನ ಅವಿವೇಕದಿಂದಲೇ ನಿಮಗೆ ಇಂಥ ಘೋರವಾದ ವ್ಯಸನವು ಪ್ರಾಪ್ತವಾಯಿತು. ನಾನು ದುರ್ಯೋಧನನ ರಾಜ್ಯಕೋಶಗಳನ್ನು ಅಪಹರಿಸಬೇಕೆಂಬ ಅಪೇಕ್ಷೆಯಿಂದ ಜೂಜಾಡುವದಕ್ಕೆ ಯತ್ನಿಸಿದೆನು. ಆಗ ದುರ್ಯೋಧನನಿಗೋಸ್ಕರ ಅಕ್ಷಹೃದಯವನ್ನು ಬಲ್ಲ ವಂಚಕನಾದ ಶಕುನಿಯು ನನ್ನೊಡನೆ ಜೂಜಾಡುವದಕ್ಕೆ ತೊಡಗಿದನು. ಪರ್ವತಪ್ರದೇಶದಲ್ಲಿ ವಾಸಮಾಡುವ ಮೋಸಗಾರನಾದ ಆ ಶಕುನಿಯು, ಸಭಾಮಧ್ಯದಲ್ಲಿ ದಾಳಗಳನ್ನು ಹಾಕುತ್ತ ಮೋಸವನ್ನು ತಿಳಿಯದಿರುವ ನನ್ನನ್ನು ಮೋಸದಿಂದ ಗೆದ್ದನು. ಅದರಿಂದ ನಾನು ಇಂಥ ವ್ಯಸನಕ್ಕೆ ಗುರಿಯಾದೆನು. ಆ ದಾಳಗಳು ಶಕುನಿಗೆ ಅನುಕೂಲವಾಗಿ ಸಮನಾಗಿಯೂ ವಿಷಮವಾಗಿಯೂ ಬೀಳುತ್ತಿದ್ದದ್ದನ್ನು ನೋಡಿ, ನನಗೆ ಧೈರ್ಯನಾಶಕವಾದ ಕೋಪವುಂಟಾದ್ದರಿಂದ, ನಾನು ದ್ಯೂತವನ್ನು ಆಡಬಾರದೆಂದು ಮನಸ್ಸನ್ನು ನಿಗ್ರಹಿಸಲಾರದೆ ಹೋದೆನು. ಎಲೈ ಭೀಮಸೇನನೆ, ಆ ಸಮಯದಲ್ಲಿ ಪುರುಷಪ್ರಯತ್ನದಿಂದಲೂ ಗೌರವದಿಂದಲೂ ಪರಾಕ್ರಮದಿಂದಲೂ ಪಗಡೆಯ ಆಟದಲ್ಲಿ ಆಸಕ್ತವಾದ ಮನಸ್ಸನ್ನು ತಿರುಗಿಸುವದಕ್ಕೆ ಆಗದೆಹೋಯಿತು. ಆದರೆ ನೀನಾಡತಕ್ಕ ಮಾತುಗಳಿಗೆ ನಾನು ಅಸೂಯೆಪಡತಕ್ಕವನಲ್ಲ. ಮುಖ್ಯವಾಗಿ ಆಗತಕ್ಕದ್ದು ಯಾವದೋ ಅದು ಆಯಿತು. ದುರ್ಯೋಧನನು ನಮ್ಮ ರಾಜ್ಯದಮೇಲಣ ಅಪೇಕ್ಷೆಯಿಂದ ನಮಗೆ ಇಂಥ ವ್ಯಸನವನ್ನು ಉಂಟುಮಾಡಿ ಭೃತ್ಯತ್ವವನ್ನೂ ಕಲ್ಪಿಸಿದನು. ಅಂಥ ಕಾಲದಲ್ಲಿ ದ್ರೌಪದಿಯು ನಮಗೆ ರಕ್ಷಕಳಾದಳು. ಎರಡನೇ ಆವರ್ತಿ ಜೂಜಾಡುವದಕ್ಕೋಸ್ಕರ ಸಭೆಗೆ ನಾವು ಬರಲು, "ಈ ಬಂದಾಟದಲ್ಲಿ ನೀನು ಸೋತರೆ, ಸ್ವೇಚ್ಛಂದವಾಗಿ ಹನ್ನೆ

ರಡು ವರುಷ ವನವಾಸವನ್ನೂ, ಒಂದು ವರುಷ ಅಜ್ಞಾತವಾಸವನ್ನೂ, ನೀನು ತಮ್ಮಂದಿರೊಡನೆ ಮಾಡಬೇಕು" ಎಂದು ಸಭಾಜನರ ಸಮಕ್ಷದಲ್ಲಿ ನನ್ನನ್ನು ಕುರಿತು ದುರ್ಯೋಧನನು ಹೇಳಿದ ಪಂಥವನ್ನು ನೀನೂ ಅರ್ಜುನನೂ ಸಹ ತಿಳಿದೇ ಇರುವಿರಿ. ಆತನು ನನ್ನನ್ನು ನೋಡಿ "ಅಜ್ಞಾತವಾಸವನ್ನು ಮಾಡುವ ಕಾಲದಲ್ಲಿ ನಮ್ಮ ಚಾರರಿಗೆ ನೀವು ಕಾಣಿಸಿಕೊಂಡದ್ದೇ ಆದರೆ, ಪುನಃ ಹನ್ನೆರಡು ವರುಷ ವನವಾಸವನ್ನೂ ಒಂದು ವರುಷ ಅಜ್ಞಾತವಾಸವನ್ನೂ ಮಾಡುವದಕ್ಕೆ ನಿಶ್ಚಯಿಸಿಕೊಂಡು ನೀನು ಪ್ರತಿಜ್ಞೆಯನ್ನು ಮಾಡು. ಆ ಅಜ್ಞಾತವಾಸದಲ್ಲಿ ನೀನು ನಮ್ಮ ಚಾರರಿಗೆ ಕಾಣಿಸಿಕೊಳ್ಳದೆ ನಿನ್ನ ಪ್ರತಿಜ್ಞೆಯನ್ನು ನೆರವೇರಿಸಿಕೊಂಡರೆ, ವಿತಸ್ತ ಮೊದಲಾದ ಐದು ನದಿಗಳಿಂದ ಕೂಡಿದ ಈ ದೇಶವು ನಿನ್ನದೇಸರಿ. ಈ ಕೌರವಸಭೆಯಲ್ಲಿ ನಾನು ಸತ್ಯವಾಗಿ ಹೇಳುವೆನು. ಎಲೈ ಧರ್ಮರಾಯನೆ, ಈ ಆಟದಲ್ಲಿ ನಾವು ಸೋತದ್ದೇ ಆದರೆ ನಾವೂ ಸಕಲೈಶ್ವರ್ಯವನ್ನೂ ಬಿಟ್ಟು ಹನ್ನೆರಡು ವರುಷ ವನವಾಸವನ್ನೂ ಒಂದು ವರುಷ ಅಜ್ಞಾತವಾಸವನ್ನೂ ಮಾಡುವೆವು" ಎಂದು ನುಡಿದನು. ನಾನು ಹಾಗೇ ಆಗಲೆಂದು ಆ ಸಭೆಯಲ್ಲಿ ಒಪ್ಪಿಕೊಂಡೆನು. ಬಳಿಕ ದ್ಯೂತಕ್ಕೆ ಆರಂಭವಾಗಿ, ಅದರಲ್ಲಿ ಸೋತು, ನಾವು ಈ ಅರಣ್ಯಕ್ಕೆ ಬಂದು ಬಹಳವಾಗಿ ಕ್ಲೇಶಪಡುತ್ತ ಹೀಗೆ ಸಂಚಾರಮಾಡುತ್ತಿರುವೆವು. ಇಷ್ಟಾದರೂ ಸಮಾಧಾನವನ್ನು ಹೊಂದದೆ, ದುರ್ಯೋಧನನು ಮತ್ತಷ್ಟು ರೋಷಾವೇಶವುಳ್ಳವನಾಗಿ ತನ್ನ ವಶದಲ್ಲಿರುವ ಕುರುದೇಶದ ಜನಗಳನ್ನು ಪ್ರಬಲವಾಗಿ ಅಲ್ಲಲ್ಲಿ ದುರ್ಗರಕ್ಷಣಾರ್ಥವಾಗಿ ನೇಮಿಸಿರುವನು. ಸತ್ಪುರುಷರ ಮುಂದೆ ನಾನು ಆಪ್ರಕಾರ ಕಟ್ಟನ್ನು ಮಾಡಿಕೊಂಡು ಈಗ ರಾಜ್ಯದ ನಿಮಿತ್ತವಾಗಿ ಹ್ಯಾಗೆ ಅದಕ್ಕೆ ತಪ್ಪುವದಕ್ಕಾದೀತು? ದೊಡ್ಡವರಾದವರಿಗೆ ಧರ್ಮವನ್ನು ಬಿಟ್ಟು ರಾಜ್ಯವನ್ನು ಪರಿಪಾಲಿಸುವದಕ್ಕಿಂತಲೂ ಮರಣವೇ ಉತ್ತಮವಾದದ್ದು. ಎಲೈ ಭೀಮಸೇನನೆ, ಪಗಡೆಯಾಡುವ ಕಾಲದಲ್ಲೇ ನೀನು ಶತ್ರುಗಳನ್ನು ಸಂಹಾರಮಾಡಬೇಕೆಂಬ ಇಚ್ಛೆಯಿಂದ ಗದೆಯನ್ನು ಹಿಡಿದು ಶೌರ್ಯವನ್ನು ತೋರಿಸುವದಕ್ಕೆ ಉಪಕ್ರಮಿಸಿದೆ. ಆಗ ನಿನ್ನನ್ನು ಅರ್ಜುನನು ತಡೆದನು. ಪರಾಕ್ರಮಶಾಲಿಯಾದ ನೀನು ನಾವು ಸಮಯನಿಬಂಧನೆಯನ್ನು ಮಾಡಿಕೊಳ್ಳುವದಕ್ಕಿಂತಲೂ ಮೊದಲೇ ಈಗ ಹೇಳಿದ ಮಾತುಗಳನ್ನು ಹೇಳಿದ್ದರೆ, ಯಾವದು ತಾನೇ ಮಾಡುವದಕ್ಕೆ ಅಶಕ್ಯವಾಗಿತ್ತು? ಈಗ ಇಂಥಾ ಕಷ್ಟದಶೆಯನ್ನು ಹೊಂದಿದ ಬಳಿಕ, ಯಾತಕ್ಕೋಸ್ಕರ ನನಗೆ ಇಷ್ಟೊಂದು ಮಾತುಗಳನ್ನು ಹೇಳುವೆ? ಎಲೈ ಭೀಮಸೇನನೆ, ಮೊದಲೇ ದುಃಖಿತನಾದ ನಾನು ಈ ಮಾತುಗಳನ್ನು ಕೇಳಿ ವಿಷಪಾನವನ್ನು ಮಾಡಿದವನಂತೆ ಅಧಿಕವಾಗಿ ಸಂತಾಪಪಡುತ್ತಿರುವೆನು. ದ್ರೌಪದಿಯ ದುಃಖವನ್ನು ನೋಡಿ ನಾನು ಇದನ್ನೆಲ್ಲಾ ಸಹಿಸಿಕೊಂಡಿರುವೆನು. ಆದರೆ ಕೌರವರ ಸಭೆಯಲ್ಲಿ ಸಮಯನಿಬಂಧನೆಯನ್ನು ಮಾಡಿಕೊಂಡು ನುಡಿದಂತೆ ನಡೆಯದೆ ಈಗ ನೀನು ಹೇಳಿದಂತೆ ಮಾಡುವದು ಅಶಕ್ಯವಾದದ್ದು. ಆದ್ದರಿಂದ ಬೀಜವನ್ನು ಬಿತ್ತಿದ ಒಕ್ಕಲಿಗನು ಫಲಕಾಲವನ್ನು ನಿರೀಕ್ಷಿಸುವಂತೆ, ನೀನು ಮುಂದೆ ಬರತಕ್ಕ ಸುಖಕಾಲವನ್ನು ನಿರೀಕ್ಷಿಸು. ಮತ್ತೊಬ್ಬರಿಂದ ವಂಚಿತನಾದವನು ತನಗೆ ವಂಚನೆಯನ್ನು ಮಾಡಿದ ಶತ್ರುಗಳು ಪ್ರಬಲರಾದದ್ದನ್ನು ತಿಳಿದು, ಬಳಿಕ ಅವರನ್ನು ತನ್ನ ಪೌರುಷದಿಂದ ನಾಶಮಾಡಿದರೆ, ಅವನು ಲೋಕದಲ್ಲಿ ಶೂರನಾಗಿ ಬದುಕುತ್ತ, ಮಹತ್ತಾದ ಪ್ರಖ್ಯಾತಿಯನ್ನು ಹೊಂದಿ, ಅಖಂಡವಾದ ಐಶ್ವರ್ಯವನ್ನು ಪಡೆಯುವನು; ಆತನಿಗೆ ಶತ್ರುಗಳೆಲ್ಲರೂ ಪಾದಾಕ್ರಾಂತರಾಗುವರು; ದೇವತೆಗಳು ಇಂದ್ರನನ್ನು ಆಶ್ರಯಿಸುವಂತೆ ಮಿತ್ರರೆಲ್ಲರೂ ಆತನನ್ನೇ ಕ್ಷಿಪ್ರದಲ್ಲಿ ಆಶ್ರಯಿಸುವರು. ಎಲೈ ಭೀಮಸೇನನೆ, ನನ್ನ ಪ್ರತಿಜ್ಞೆಯು ಸತ್ಯವಾದದ್ದೆಂದು ತಿಳಿ. ನಾನು ಧರ್ಮವನ್ನೇ ದೇವತ್ವಕ್ಕಿಂತಲೂ ಪ್ರಾಣಕ್ಕಿಂತಲೂ ಕೂಡ ಅಧಿಕವಾದದ್ದೆಂದು ತಿಳಿದಿರುವೆನು. ರಾಜ್ಯ, ಮಕ್ಕಳು, ಯಶಸ್ಸು, ಧನ, ಇವೆಲ್ಲವೂ ಸತ್ಯದ ಹದಿನಾರನೆಯ ಒಂದಂಶಕ್ಕೂ ಸಮಾನವಾಗಲಾರವು" ಎಂದನು.

## ೩೫ನೇ ಅಧ್ಯಾಯ —ಭೀಮಸೇನ ಧರ್ಮರಾಯರ ಸಂವಾದ.

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯನೆ, ಬಳಿಕ ಭೀಮಸೇನನು ಧರ್ಮರಾಯನನ್ನು ಕುರಿತು "ಎಲೈ ಮಹಾರಾಜನೆ, ಸೂಕ್ಷ್ಮವಾದ ಅಂಜನಚೂರ್ಣವು ಸೂಜಿಯು

ಕೊನೆಯಿಂದ ಸ್ವಲ್ಪಸ್ವಲ್ಪವಾಗಿ ಅದನ್ನು ತೆಗೆಯುತ್ತಿದ್ದರೆ ಹ್ಯಾಗೆ ಕಡಮೆಯಾಗುತ್ತಾ ಬರುವದೋ ಹಾಗೆ, ಮನುಷ್ಯನ ಆಯುಸ್ಸು ನಿಮಿಷನಿಮಿಷಕ್ಕೂ ಕಡಮೆಯಾಗುತ್ತಾ ಬರುವದು. ಆದರೂ ನೀನು ಕಾಲಕ್ಕೆ ಅಧೀನನಾಗಿಯೂ, ನೊರೆಯಂತೆ ನಿಸ್ಸಾರನಾಗಿಯೂ, ವೃಕ್ಷದಮೇಲೆ ಪಕ್ವವಾಗಿರುವ ಹಣ್ಣಿನಂತೆ ಬಿದ್ದು ಹೋಗತಕ್ಕವನಾಗಿಯೂ, ಮರ್ತ್ಯನಾದ್ದರಿಂದ ಮರಣವನ್ನು ಹೊಂದತಕ್ಕವನಾಗಿಯೂ ಇದ್ದುಕೊಂಡು, ಸಕಲರನ್ನೂ ನಾಶಮಾಡತಕ್ಕದ್ದಾಗಿಯೂ, ಬಾಣದಂತೆ ವೇಗದಿಂದ ಹೋಗುವದಾಗಿಯೂ, ಕೊನೆಯಿಲ್ಲದ್ದಾಗಿಯೂ, ನದೀಪ್ರವಾಹದಂತೆ ದಿನದಿನವೂ ಮುಂದುಮುಂದಕ್ಕೆ ಹೋಗತಕ್ಕದ್ದಾಗಿಯೂ ಇರುವ ಕಾಲದಿಂದ ಗಡುವನ್ನು ಮಾಡಿಕೊಂಡು, ಕಾಲವನ್ನು ಪ್ರತ್ಯಕ್ಷನಾಗಿ ತಿಳಿದಿರುವಂತೆ ಭಾವಿಸಿಕೊಂಡಿರುವೆಯಲ್ಲಾ ! ಆ ಕಾಲವು ನೀನು ಮಾಡಿಕೊಂಡಿರುವ ಗಡುವನ್ನು ಪಾಲಿಸೀತೆ ? ಯಾವನು ಅಪರಿಮಿತವಾದ ಆಯುಸ್ಸುಳ್ಳವನೋ, ಅಥವಾ ತನ್ನ ಆಯುಃಪ್ರಮಾಣವನ್ನು ತಿಳಿದಿರುವನೋ, ಮತ್ತು ಸಮಸ್ತವನ್ನೂ ಪ್ರತ್ಯಕ್ಷವಾಗಿ ತಿಳಿಯುವನೋ, ಅಂಥವನು ಕಾಲವನ್ನು ನಿರೀಕ್ಷಿಸ ಬಲ್ಲನೇ ಹೊರತು, ಉಳಿದವರಿಗೆ ಅದು ಶಕ್ಯವಾದದ್ದೆ ? ನಾವು ನಿರೀಕ್ಷಿಸತಕ್ಕ ಕಾಲವು ಹದಿಮೂರು ವರುಷಗಳಾದ್ದರಿಂದ, ಅದು ನಮ್ಮ ಆಯುಸ್ಸನ್ನು ಕ್ಷೀಣಮಾಡಿ, ನಮಗೆ ಮರಣವನ್ನು ಉಂಟುಮಾಡುವದು. ಪ್ರಾಣಿಗಳಿಗೆ ಮರಣವು ಅವರ ಶರೀರದ ಸಂಗಡಲೇ ನಿತ್ಯವಾಗಿರುವದರಿಂದ, ಆ ಮರಣವುಂಟಾಗುವದಕ್ಕಿಂತಲೂ ಮೊದಲೇ ನಾವು ರಾಜ್ಯಕ್ಕೋಸ್ಕರ ಪ್ರಯತ್ನವನ್ನು ಮಾಡೋಣ. ಯಾವ ಮನುಷ್ಯನು ಲೋಕದಲ್ಲಿ ಮಹತ್ತಾದ ಕೀರ್ತಿಯನ್ನು ಹೊಂದದಿರುವನೋ, ಆತನು ಗಣನೆಗೇ ಬರದೆ ಭೂಭಾರಭೂತನಾಗಿ, ಶತ್ರುಗಳಲ್ಲಿರುವ ತನ್ನ ವೈರವನ್ನು ಕಳೆದುಕೊಳ್ಳಲಾರದೆ, ದುರ್ಬಲವಾದ ಎತ್ತಿನಂತೆ ಕ್ಷೀಣಗತಿಯನ್ನು ಹೊಂದುವನು. ಯಾವನು ತನ್ನ ವೈರವನ್ನು ತೀರಿಸಿಕೊಳ್ಳುವದಿಲ್ಲವೋ, ಅಂಥ ಅಲ್ಪಬಲನಾಗಿಯೂ ಅಲ್ಪಯತ್ನನಾಗಿಯೂ ಇರುವ ಪುರುಷನ ಜನ್ಮವು ದುಷ್ಕುಲದಲ್ಲಿ ಹುಟ್ಟಿದವನ ಜನ್ಮದಂತೆ ನಿಷ್ಫಲವಾದದ್ದೆಂದು ನಾನು ತಿಳಿದಿರುವೆನು. ಎಲೈ ರಾಜೇಂದ್ರನೆ, ನಿನ್ನ ಬಾಹುಗಳು ಧನಾಧಿಪತಿಗಳಾಗಿರುವವು. ನಿನ್ನ ಕೀರ್ತಿಯು ಪೃಥುಚಕ್ರವರ್ತಿಯ ವಂಶಕ್ಕೆ ತಕ್ಕದ್ದಾಗಿರುವದು. ಇಂಥ ನೀನು ಯುದ್ಧರಂಗದಲ್ಲಿ ಶತ್ರುವನ್ನು ಸಂಹರಿಸಿ, ಭುಜಬಲದಿಂದ ಸಂಪಾದಿಸಿದ ಐಶ್ವರ್ಯವನ್ನು ಅನುಭವಿಸು. ಪುರುಷನಾದವನು ತನಗೆ ದ್ರೋಹಮಾಡಿದವನನ್ನು ಸಂಹರಿಸಿ, ಆಗಲೇ ತಾನು ನರಕವನ್ನು ಹೊಂದಿದರೂ, ಅದೂ ಸ್ವರ್ಗಕ್ಕೆ ಸಮಾನವಾದದ್ದು. ಕೋಪದ ಬೇಗೆಯು ಕಿಚ್ಚಿನ ಬೇಗೆಗಿಂತಲೂ ಹೆಚ್ಚಾದದ್ದಾದಕಾರಣ, ಅದರಿಂದ ನಾನು ಹಗಲುರಾತ್ರಿಗಳನ್ನೂ ತಿಳಿಯದೆ, ಮನಸ್ಸಿನಲ್ಲೇ ಬೇಯುತ್ತಿರುವೆನು. ಹೆದೆಯನ್ನು ಸೆಳೆಯುವದರಲ್ಲಿ ಸಮರ್ಥನಾದ ಈ ಅರ್ಜುನನೂ ಕೂಡ ಅಧಿಕವಾಗಿ ಸಂತಾಪಪಡುತ್ತ, ಸಿಂಹದಂತೆ ಇದ್ದಕಡೆಯಲ್ಲೇ ಇರುವನು. ಈತನು ತಾನೊಬ್ಬನೇ ಲೋಕದಲ್ಲಿರುವ ಧನುರ್ಧಾರಿಗಳೆಲ್ಲರನ್ನೂ ಸಂಹಾರಮಾಡತಕ್ಕವನಾಗಿದ್ದರೂ, ತನ್ನ ಮನಸ್ಸಿನ ಸಂತಾಪವನ್ನು ದೊಡ್ಡಆನೆಯಂತೆ ತಡೆದುಕೊಂಡಿರುವನು. ನಕುಲಸಹದೇವರೂ, ವೀರಮಾತೆಯಾದ ಕುಂತಿಯೂ, ಸೃಂಜಯ ಮೊದಲಾದ ಬಾಂಧವರೂ, ನಿನಗೆ ಪ್ರಿಯವನ್ನೇ ಕೋರುತ್ತ ಜಡರಂತೆಯೂ ಮೂಕರಂತೆಯೂ ಆಗಿರುವರು. ನಾನೊಬ್ಬನೂ ಪ್ರತಿವಿಂಧ್ಯನಿಗೆ ತಾಯಿಯಾದ ದ್ರೌಪದಿಯೊಬ್ಬಳೂ ಸಹ ಬಹಳವಾಗಿ ಸಂತಾಪಪಡುತ್ತಿರುವೆವು. ನಾನು ಎಲ್ಲರಿಗೂ ಹಿತವಾಗಬೇಕೆಂದು ಮಾತಾಡುವೆನೇ ಹೊರತು ಬೇರೆ ಏನೂ ಇಲ್ಲ. ನಮ್ಮವರೆಲ್ಲರೂ ಮಹತ್ತಾದ ವ್ಯಸನವನ್ನು ಹೊಂದಿ ಯುದ್ಧವನ್ನೇ ಬಯಸುತ್ತಿರುವರು. ಎಲೈ ಮಹಾರಾಜನೆ, ದುರ್ಬಲರಾಗಿಯೂ ನೀಚರಾಗಿಯೂ ಇರುವ ದುರ್ಯೋಧನಾದಿಗಳು, ನಮ್ಮ ರಾಜ್ಯವನ್ನು ಆಕ್ರಮಿಸಿಕೊಂಡು ಅನುಭವಿಸುತ್ತಿರುವರಲ್ಲಾ ! ಇದಕ್ಕಿಂತಲೂ ಕೆಟ್ಟದಾದ ಆಪತ್ತು ನಮಗೆ ಮತ್ತೊಂದು ಯಾವದು ?

ಎಲೈ ಯುಧಿಷ್ಠಿರನೆ, ಪ್ರಕೃತಿದೋಷದಿಂದ ನೀನು ಸತ್ಯವನ್ನು ಬಿಡುವದು ಹ್ಯಾಗೆಂದು ಲಜ್ಜೆಪಡುತ್ತ, ದಯೆಯಿಂದ ಅನೇಕ ಕ್ಲೇಶಗಳನ್ನು ಸಹಿಸಿಕೊಂಡಿರುವೆ. ಇದು ಯಾರಿಗೂ ಒಪ್ಪತಕ್ಕದ್ದಲ್ಲ. ಮೂಢನಾಗಿಯೂ ಅರ್ಥಜ್ಞಾನವಿಲ್ಲದವನಾಗಿಯೂ ಗುರು ಹೇಳಿದಷ್ಟುಮಾತ್ರವೇ ಬರಲಿಸಿದವನಾಗಿಯೂ ಇರುವ ವೇದಪಾಠಕನ ಬುದ್ಧಿಯು ಹ್ಯಾಗೆ ತತ್ವಾರ್ಥವನ್ನು ತಿಳಿಯದಿರುವದೋ ಹಾಗೆ, ನಿನ್ನ ಬುದ್ಧಿಯೂ ಇರುವದು. ದಯಾಳುವಾದ ನೀನು ಬ್ರಾಹ್ಮಣನಂತೆ ಕಾಣಿಸುತ್ತಿರುವೆಯಲ್ಲಾ ! ಇಂಥ ನೀನು ಕ್ಷತ್ರಿಯಕುಲದಲ್ಲಿ ಹ್ಯಾಗೆ ಹುಟ್ಟಿದೆ ?

ಕ್ಷತ್ರಿಯಕುಲದಲ್ಲಿ ಹುಟ್ಟಿದವರು ಪ್ರಾಯಶಃ ಕ್ರೂರಸ್ವಭಾವವುಳ್ಳವರಾಗಿಯೇ ಇರುವರಲ್ಲ! ಮನುಚಕ್ರವರ್ತಿಯು ಹೇಳಿರುವ ಸಕಲವಾದ ರಾಜಧರ್ಮಗಳನ್ನೂ ಕೇಳಿರುವ ನೀನು, ಕ್ರೂರರಾಗಿಯೂ ವಂಚಕರಾಗಿಯೂ ದ್ವೇಷಿಗಳಾಗಿಯೂ ಶಾಂತಿಗುಣವೇ ಇಲ್ಲದವರಾಗಿಯೂ ಇರುವ ದುರಾತ್ಮಕರಾದ ದುರ್ಯೋಧನಾದಿಗಳಲ್ಲಿ ಯಾತಕ್ಕೋಸ್ಕರ ಕ್ಷಮೆಯನ್ನು ಧರಿಸಿರುವೆ? ಎಲೈ ಪುರುಷಶ್ರೇಷ್ಠನಾದ ಧರ್ಮರಾಯನೆ, ಮಾಡತಕ್ಕ ಕಾರ್ಯಗಳು ಬಹಳವಾಗಿದ್ದರೂ, ಹೆಬ್ಬಾವಿನಂತೆ ಸುಮ್ಮನಿರುವೆಯಲ್ಲಾ! ನೀನು ಬುದ್ಧಿಶಾಲಿಯಾಗಿಯೂ ಪರಾಕ್ರಮಸಂಪನ್ನನಾಗಿಯೂ ಶಾಸ್ತ್ರಜ್ಞನಾಗಿಯೂ ಸತ್ಕುಲಪ್ರಸೂತನಾಗಿಯೂ ಇದ್ದರೂ, ಒಂದು ಹಿಡಿ ಹುಲ್ಲಿನಿಂದ ಹಿಮವತ್ಪರ್ವತವನ್ನು ಮರೆಮಾಡುವಹಾಗೆ, ನಮ್ಮನ್ನು ಮರೆಮಾಡುವದಕ್ಕೆ ಬಯಸುತ್ತಿರುವೆ. ಆಕಾಶದಲ್ಲಿರುವ ಸೂರ್ಯನಿಗೆ ಯಾರಿಗೂ ಕಾಣಿಸಿಕೊಳ್ಳದಂತೆ ಸಂಚರಿಸುವದು ಹ್ಯಾಗೆ ಅಶಕ್ಯವಾದದ್ದೋ ಹಾಗೆ, ಜಗತ್ಪ್ರಸಿದ್ಧನಾದ ನಿನಗೂ ಅಜ್ಞಾತವಾಸಮಾಡುವದು ಅಶಕ್ಯವಾದದ್ದು. ನೀರಿರುವ ಪ್ರದೇಶದಲ್ಲಿ ಹುಟ್ಟಿ ಅನೇಕವಾದ ಕೊಂಬೆಗಳೂ ಎಲೆಗಳೂ ಪುಷ್ಪಗಳೂ ಉಳ್ಳ ದೊಡ್ಡದಾದ ಮರದಂತೆಯೂ ಬಿಳೀ ಆನೆಯಂತೆಯೂ ಇರುವ ಅರ್ಜುನನು ಹ್ಯಾಗೆ ಅಜ್ಞಾತವಾಸವನ್ನು ಮಾಡುವನು? ಎಲೈ ಕೌಂತೇಯನೆ, ಸಿಂಹದ ಮರಿಗಳಂತಿರುವ ಸಹೋದರರಾದ ಈ ನಕುಲಸಹದೇವರು ಅಜ್ಞಾತವಾಸವನ್ನು ಮಾಡುವದು ಹ್ಯಾಗೆ? ಪುಣ್ಯತಮವಾದ ಕೀರ್ತಿಯುಳ್ಳವಳಾಗಿಯೂ ರಾಜಪುತ್ರಿಯಾಗಿಯೂ ಶೂರರಾದ ಮಕ್ಕಳನ್ನು ಪಡೆದವಳಾಗಿಯೂ ಲೋಕಪ್ರಸಿದ್ಧಳಾಗಿಯೂ ಇರುವ ದ್ರೌಪದಿಯು ಅಜ್ಞಾತವಾಸವನ್ನು ಮಾಡಬಲ್ಲಳೆ? ನನ್ನನ್ನೂ ಕೂಡ ಎಳೇ ಮಕ್ಕಳು ಮೊದಲಾಗಿ ಸಕಲಜನರೂ ತಿಳಿದಿರುವರು. ಆದ್ದರಿಂದ ನಾನು ಅಜ್ಞಾತವಾಸಮಾಡುವದು ಮೇರುಪರ್ವತವನ್ನು ಮುಚ್ಚುವಹಾಗೆಂದು ತಿಳಿದಿರುವೆನು. ನಾವು ರಾಜ್ಯಭಾರಮಾಡುವಾಗ ಧೃತರಾಷ್ಟ್ರನ ಕಡೆಯವರಾದ ಅರಸುಗಳನ್ನೂ ಅರಸುಮಕ್ಕಳನ್ನೂ ರಾಜ್ಯದಿಂದ ಆಚೆಗೆ ಓಡಿಸಿಬಿಟ್ಟೆವು. ನಮ್ಮಿಂದ ನಿರಾಕೃತರಾದ ಅವರೆಲ್ಲರೂ ಅಸಮಾಧಾನವುಳ್ಳವರಾಗಿ, ಧೃತರಾಷ್ಟ್ರನಿಗೆ ಪ್ರೀತಿಯನ್ನು ಉಂಟುಮಾಡುವದಕ್ಕೋಸ್ಕರ ಈ ಕಾಲದಲ್ಲಿ ನಮಗೆ ಏನಾದರೂ ಕೆಟ್ಟದ್ದನ್ನು ಮಾಡಬೇಕೆಂದು ಯೋಚಿಸಿ, ಅಜ್ಞಾತವಾಸದಲ್ಲಿರುವಾಗ ನಮ್ಮನ್ನು ಕಂಡುಹಿಡಿಯುವದಕ್ಕೋಸ್ಕರ ಅನೇಕಮಂದಿ ಗೂಢಚಾರರನ್ನು ಕಳುಹಿಸುವರು. ಆ ಗೂಢಚಾರರು ನಮ್ಮನ್ನು ಕಂಡುಹಿಡಿದು ಅವರಿಗೂ ತಿಳಿಸುವರು. ಬಳಿಕ ನಮಗೆ ಮಹತ್ತಾದ ಭಯವುಂಟಾಗುವದು. ಎಲೈ ಧರ್ಮರಾಯನೆ, ನಾವು ಹದಿಮೂರು ತಿಂಗಳು ಸರಿಯಾಗಿ ವನವಾಸ ಮಾಡಿದೆವು. ಆ ಹದಿಮೂರು ತಿಂಗಳಿಗೆ ಪ್ರಮಾಣವಚನದಿಂದ ಹದಿಮೂರು ಸಂವತ್ಸರಗಳಾದವೆಂದು ತಿಳಿ. ಯಜ್ಞದಲ್ಲಿ ಸೋಮಲತೆ ಸಿಕ್ಕದೆ ಹೋದರೆ, ಪ್ರತಿನಿಧಿಯಾಗಿ ಪೂತಿಕಾಲತೆಯಿಂದ ಅಭಿಷವವನ್ನು ಮಾಡಿ ಆ ಯಜ್ಞಕರ್ಮವನ್ನು ನೆರವೇರಿಸಬಹುದೆಂದು ಶ್ರುತಿಯಿರುವದರಿಂದ, ಅದರಂತೆ ಸಂವತ್ಸರಕ್ಕೂ ಮಾಸವನ್ನು ಪ್ರತಿನಿಧಿಯನ್ನಾಗಿ ಮಾಡಿಕೊಳ್ಳಬಹುದೆಂದು ದೊಡ್ಡವರು ಹೇಳಿರುವರು. ಆದ್ದರಿಂದ ನೀನೂ ಹಾಗೆಯೇ ನಡೆದುಕೊ. ಇದರಿಂದ ಸುಳ್ಳಾಡಿದ ದೋಷವುಂಟಾಗುವದೆಂದು ನಿನಗೆ ತೋರಿದ ಪಕ್ಷದಲ್ಲಿ, ಸಾಧುವಾಗಿಯೂ ಸರಿಯಾಗಿ ಭಾರವನ್ನು ಹೊರತಕ್ಕದ್ದಾಗಿಯೂ ಇರುವ ಎತ್ತಿಗೆ ಸಂಪೂರ್ಣವಾದ ಆಹಾರವನ್ನು ಕೊಟ್ಟು ದೋಷವನ್ನು ಪರಿಹಾರ ಮಾಡಿಕೊ. ಲೋಕದಲ್ಲಿ ಕ್ಷತ್ರಿಯರಾದವರಿಗೆ ಯುದ್ಧಕ್ಕಿಂತಲೂ ಪ್ರತ್ಯೇಕವಾದ ಮತ್ತೊಂದು ಧರ್ಮವಿಲ್ಲವಾದ್ದರಿಂದ ನೀನು ಶತ್ರುಸಂಹಾರಕ್ಕೆ ನಿಶ್ಚಯವನ್ನು ಮಾಡಿಕೊ" ಎಂದನು.

## ೩೬ನೇ ಅಧ್ಯಾಯ.—ಧರ್ಮರಾಯ ಭೀಮಸೇನರ ಸಂವಾದ.

ವೈಶಂಪಾಯನ ಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯನೆ, ಆ ಬಳಿಕ ಪುರುಷಶ್ರೇಷ್ಠನಾದ ಧರ್ಮರಾಯನು ಭೀಮಸೇನನ ಮಾತುಗಳನ್ನು ಕೇಳಿ ನಿಟ್ಟುಸುರುಬಿಟ್ಟು, ಹಾಗೆಯೇ ಯೋಚಿಸುತ್ತ "ನಾನು ರಾಜಧರ್ಮಗಳನ್ನೂ ವರ್ಣಾಶ್ರಮಧರ್ಮಗಳನ್ನೂ ನಿಶ್ಚಯವಾಗಿ ಕೇಳಿರುವೆನು. ಯಾವ ಮನುಷ್ಯನು ಮುಂದಾಗುವದನ್ನೂ ಈಗಾಗುತ್ತಿರುವದನ್ನೂ ತಿಳಿಯುವನೋ, ಆತನು ಪಂಡಿತನೆನಿಸಿಕೊಳ್ಳುವನು.

ಉತ್ತಮವಾಗಿಯೂ ತಿಳಿಯಲಶಕ್ಯವಾಗಿಯೂ ಇರುವ ಧರ್ಮಮಾರ್ಗವನ್ನು ತಿಳಿದೂ, ನಾನು ಮೇರುಪರ್ವತವನ್ನು ಮರ್ದಿಸುವಂತೆ ಹ್ಯಾಗೆ ಧರ್ಮವನ್ನು ಬಲಾತ್ಕಾರದಿಂದ ಭಂಗಪಡಿಸಲಿ!" ಎಂದು ಒಂದು ಮುಹೂರ್ತ ಯೋಚಿಸಿ, ಮುಂದಿನ ಕರ್ತವ್ಯವನ್ನು ನಿಶ್ಚಯಿಸಿಕೊಂಡು, ಒಡನೆಯೇ ಭೀಮಸೇನನನ್ನು ಕುರಿತು "ಎಲೈ ಭೀಮಸೇನನೆ, ನೀನು ಹೇಳುವದೆಲ್ಲಾ ಸರಿಯಾಗಿಽ; ಆದರೆ ಈಗ ನಾನು ಹೇಳುವ ಮಾತನ್ನು ಕೇಳು: ಯಾರು ಕೇವಲ ಸಾಹಸದಿಂದ ಮಹತ್ತಾದ ಪಾಪಕೃತ್ಯಗಳನ್ನು ಮಾಡುವರೋ, ಅವರು ಅದರಿಂದ ವ್ಯಥೆಪಡುವರು. ಚೆನ್ನಾಗಿ ಆಲೋಚಿಸಿ ಮನಸ್ಸಿಗೆ ತಂದುಕೊಂಡು ವಿಚಾರದಿಂದ ನಿಶ್ಚಯಿಸಿ ಸರಿಯಾಗಿ ಮಾಡಿದ ಕಾರ್ಯವು, ದೈವಾನುಕೂಲ್ಯವೂ ಇದ್ದರೆ ಸಿದ್ಧಿಸುವದು. ಕೇವಲ ಚಾಪಲ್ಯದಿಂದಲೂ ಸಾಮರ್ಥ್ಯದಿಂದಲೂ ಗರ್ವದಿಂದಲೂ ಕೂಡಿ ನೀನು ರಾಜ್ಯಕ್ಕೋಸ್ಕರ ಯುದ್ಧವನ್ನು ಮಾಡಬೇಕೆಂದು ತಿಳಿದಿರುವೆ. ಈ ವಿಷಯದಲ್ಲಿ ನಾನು ಹೇಳುವದನ್ನು ಕೇಳು: ಭೂರಿಶ್ರವಸ್ಸು, ಶಲ, ಜಲಸಂಧ, ಪರಾಕ್ರಮಶಾಲಿಯಾದ ಭೀಷ್ಮ, ದ್ರೋಣ, ಅಶ್ವತ್ಥಾಮ, ಶೂರನಾದ ಕರ್ಣ, ಸಮರ್ಥರಾದ ದುರ್ಯೋಧನಾದಿಕೌರವರು, ಇವರೆಲ್ಲರೂ ಯಾವಾಗಲೂ ಕೌತುಕರಾಗಿಯೂ ಅಸ್ತ್ರವಿದ್ಯದಲ್ಲಿ ಪಾರಂಗತರಾಗಿಯೂ ಇರುವರು. ಪೂರ್ವದಲ್ಲಿ ನಮ್ಮಿಂದ ಜಿತರಾದ ಅರಸುಗಳೆಲ್ಲರೂ ದುರ್ಯೋಧನನ ಪಕ್ಷವನ್ನು ಆಶ್ರಯಿಸಿ, ಅವನೊಡನೆ ಸ್ನೇಹಮಾಡಿಕೊಂಡು, ದುರ್ಯೋಧನನಲ್ಲಿ ಹ್ಯಾಗೆ ಪ್ರೀತಿಯನ್ನು ಮಾಡುವರೋ ಹಾಗೆ, ನಮ್ಮಲ್ಲಿ ಪ್ರೀತಿಯನ್ನು ಮಾಡರು. ಅವರೆಲ್ಲರೂ ಪುತ್ರರಿಂದಲೂ ಮಂತ್ರಿಗಳಿಂದಲೂ ಸೈನ್ಯದಿಂದಲೂ ಕೂಡಿ, ದುರ್ಯೋಧನನಿಂದ ಬಹುಮಾನಿತರಾಗಿ, ಗುಂಪುಗುಂಪಾಗಿ ಸೈನ್ಯವಿಭಾಗವನ್ನು ಮಾಡಿಕೊಂಡು, ಧನಸಂಪತ್ತಿನಿಂದಲೂ ಸೈನ್ಯಸಂಪತ್ತಿನಿಂದಲೂ ಯುಕ್ತರಾಗಿ, ಯುದ್ಧರಂಗದಲ್ಲಿ ವಿಶೇಷವಾಗಿ ಸಾಹಸವನ್ನು ತೋರಿಸಿ ದುರ್ಯೋಧನನಿಗೋಸ್ಕರ ತಮ್ಮತಮ್ಮ ಪ್ರಾಣಗಳನ್ನಾದರೂ ಕೊಡುವರೆಂದು ನನಗೆ ನಿಜವಾಗಿ ತೋರಿರುವದು. ಮಹಾತ್ಮರಾದ ಭೀಷ್ಮ ದ್ರೋಣ ಕೃಪರು ನಮ್ಮಲ್ಲಿಯೂ ದುರ್ಯೋಧನಾದಿಗಳಲ್ಲಿಯೂ ಸರಿಯಾದ ನಡತೆಯುಳ್ಳವರಾಗಿದ್ದರೂ, ದುರ್ಯೋಧನನ ಅನ್ನದಿಂದ ಜೀವಿಸಿಕೊಂಡಿದ್ದರಾದಕಾರಣ, ಆ ಋಣವನ್ನು ಅವಶ್ಯವಾಗಿ ಪರಿಹರಿಸಿಕೊಳ್ಳಬೇಕಾದ್ದರಿಂದ, ಬಿಡಲಶಕ್ಯವಾದ ತಮ್ಮತಮ್ಮ ಪ್ರಾಣಗಳನ್ನು ಸಹ ಯುದ್ಧದಲ್ಲಿ ಬಿಡತಕ್ಕವರೆಂದು ನನಗೆ ತೋರುವದು. ಅಸ್ತ್ರವಿದ್ಯದಲ್ಲಿ ಪಾರಂಗತರಾಗಿಯೂ ಸಕಲ ಧರ್ಮಗಳನ್ನೂ ತಿಳಿದವರಾಗಿಯೂ ಇರುವ ಅವರೆಲ್ಲರೂ ಇಂದ್ರಾದಿದೇವತೆಗಳಿಂದಲೂ ಜಯಿಸಲಶಕ್ಯರೆಂದು ನಾನು ತಿಳಿದಿರುವೆನು. ಅವರಲ್ಲಿ ಯಾವಾಗಲೂ ಯುದ್ಧಾಪೇಕ್ಷೆಯುಳ್ಳವನಾಗಿಯೂ ಮಹಾರಥಿಕನಾಗಿಯೂ ಕ್ರೋಧಾವೇಶವುಳ್ಳವನಾಗಿಯೂ ಸಕಲಾಸ್ತ್ರಸಂಪನ್ನನಾಗಿಯೂ ಇರುವ ಕರ್ಣನು ತಿರಸ್ಕರಿಸಲಸಾಧ್ಯನಾಗಿರುವನು. ಇಂಥ ಪುರುಷಶ್ರೇಷ್ಠರಾದ ಅವರೆಲ್ಲರನ್ನೂ ಯುದ್ಧರಂಗದಲ್ಲಿ ಜಯಿಸುವದು ಅಸಾಧ್ಯವಾಗಿರುವಲ್ಲಿ, ಅಸಹಾಯನಾದ ನೀನು ದುರ್ಯೋಧನನನ್ನು ಹ್ಯಾಗೆ ಗೆಲ್ಲುವೆ? ಇದನ್ನೂ ಧನುರ್ಧಾರಿಗಳಲ್ಲೆಲ್ಲ ಅಗ್ರಗಣ್ಯನಾಗಿರುವ ಕರ್ಣನ ಅಸ್ತ್ರವಿದ್ಯಾಚಾತುರ್ಯವನ್ನೂ ಯಾವಾಗಲೂ ಚಿಂತಿಸುತ್ತ ನಾನು ನಿದ್ರೆಯನ್ನು ಕೂಡ ಮಾಡದೆ ಇರುವೆನು" ಎಂದು ನುಡಿದನು. ಆ ಮಾತನ್ನು ಕೇಳಿ ಭೀಮಸೇನನು ಕೋಪದಿಂದ ಬಹಳವಾಗಿ ಮೈಯನ್ನು ನಡುಗಿಸುತ್ತ, ವಿಮನಸ್ಕನಾಗಿ ಯಾವ ಮಾತನ್ನೂ ಆಡದೆ ಸುಮ್ಮನಿದ್ದನು. ಆಗ ಸತ್ಯವತೀ ಪುತ್ರರೂ ಮಹಾಯೋಗಿಗಳೂ ಆದ ವೇದವ್ಯಾಸರು ಅಲ್ಲಿಗೆ ದಯಮಾಡಿಸಲು, ಧರ್ಮರಾಯನು ತಮ್ಮಂದಿರೊಡಗೂಡಿ ಎದುರುಗೊಂಡು ಹೋಗಿ ಅವರನ್ನು ಶಾಸ್ತ್ರೋಕ್ತವಾಗಿ ಸತ್ಕರಿಸಿದನು.

ಬಳಿಕ ವ್ಯಾಸರು ಧರ್ಮರಾಯನನ್ನು ನೋಡಿ "ಎಲೈ ಧರ್ಮರಾಯನೆ, ನಿನ್ನ ಮನಸ್ಸಿನ ಅಭಿಪ್ರಾಯವು ನನಗೆ ತಿಳಿದು ಬಂದುದರಿಂದ, ನಾನು ಕುತೂಹಲದಿಂದ ಜಾಗ್ರತೆಯಾಗಿ ಇಲ್ಲಿಗೆ ಬಂದೆನು. ಭೀಷ್ಮ ದ್ರೋಣ ಕೃಪರಿಂದಲೂ ಅಶ್ವತ್ಥಾಮನಿಂದಲೂ ದುರ್ಯೋಧನ ದುಶ್ಶಾಸನರಿಂದಲೂ ನಿನಗೆ ಯಾವಭಯವು ಮನಸ್ಸಿನಲ್ಲಿ ಹುಟ್ಟಿರುವದೋ, ಆ ಭಯವನ್ನು ಶಾಸ್ತ್ರೋಕ್ತವಾದ ಒಂದು ಕ್ರಿಯೆಯಿಂದ ಪರಿಹಾರ ಮಾಡಿಸಿಬಿಡುವೆನು. ನೀನು ಅದನ್ನು ಕೇಳಿ ಧೈರ್ಯವನ್ನು ತಾಳಿ, ಆ ಕ್ರಿಯೆಯನ್ನು ನೆರವೇರಿಸಿ, ಜಾಗ್ರತೆಯಾಗಿ ನಿನ್ನ ಮನಸ್ಸಿನ ಸಂತಾಪವನ್ನು ಹೋಗಲಾಡಿಸಿಕೊ" ಎಂದು ಹೇಳಿ, ಏಕಾಂತವಾದ ಸ್ಥಳಕ್ಕೆ ಧರ್ಮರಾಯನನ್ನು ಕರೆದುಕೊಂಡು ಹೋಗಿ, ಆತನನ್ನು ಕುರಿತು ಈ ವಕ್ಷ್ಯಮಾಣಪ್ರಕಾರವಾಗಿ ಹೇಳಿದನು: "ಎಲೈ ಧರ್ಮರಾಯನೆ, ನಿನಗೆ ಶ್ರೇಯೋಭಿ

ವೃದ್ಧಿಕರವಾದ ಒಳ್ಳೇಕಾಲವು ಪ್ರಾಪ್ತವಾಗಿರುವದು. ಈಗ ನಾನು ಉಪದೇಶಮಾಡುವ ಕ್ರಿಯೆಯಿಂದ ಅರ್ಜುನನು ಸಕಲ ಶತ್ರುಗಳನ್ನೂ ನಿಗ್ರಹಿಸುವನು. ಮೂರ್ತಿಮತ್ತಾದ ಸಿದ್ಧಿಯಂತಿರುವ ಪ್ರತಿಸ್ಮೃತಿಯೆಂಬ ಈ ವಿದ್ಯೆಯನ್ನು ಶರಣಾಗತನಾದ ನಿನಗೆ ಉಪದೇಶಮಾಡುವೆನು. ಅದನ್ನು ನೀನು ಸ್ವೀಕರಿಸು. ಈ ವಿದ್ಯೆಯನ್ನು ಪಡೆದು ಪರಾಕ್ರಮಶಾಲಿಯಾದ ಅರ್ಜುನನು ನಿಮ್ಮ ರಾಜ್ಯವನ್ನು ಸಾಧಿಸುವನು. ಈತನು ಮಹಾ ತೇಜೋವಂತನಾಗಿಯೂ ನಾರಾಯಣನ ಸಹಾಯವುಳ್ಳವನಾಗಿಯೂ ಜಯಿಸಲಶಕ್ಯನಾಗಿಯೂ ಶಾಶ್ವತನಾಗಿಯೂ ಇರುವ ಪುರಾತನ ಋಷಿಯಾದ್ದರಿಂದ, ತನ್ನ ತಪಸ್ಸಿನಿಂದಲೂ ಪರಾಕ್ರಮದಿಂದಲೂ ದೇವತೆಗಳನ್ನು ಕೂಡ ನೋಡುವದಕ್ಕೆ ಸಮರ್ಥನಾಗಿರುವನು. ಈತನು ಇಂದ್ರ ರುದ್ರ ವರುಣ ಯಮ ಕುಬೇರ ಮೊದಲಾದ ದೇವತೆಗಳ ದೆಸೆಯಿಂದ ದಿವ್ಯಾಸ್ತ್ರಗಳನ್ನು ಪಡೆಯಲಿ. ಅದರಿಂದ ಮಹತ್ತಾದ ಕಾರ್ಯವನ್ನು ಮಾಡುವನು. ಎಲೈ ಧರ್ಮರಾಯನೆ, ನೀನು ಬಹುಮಂದಿ ಬ್ರಾಹ್ಮಣರೊಡನೆ ಒಂದೇ ಸ್ಥಳದಲ್ಲಿ ವಾಸಮಾಡುವದರಿಂದ, ನಿನಗೆ ಸಂತೋಷವುಂಟಾಗಲಾರದು. ಇಲ್ಲಿ ವಾಸಮಾಡಿಕೊಂಡು ತಪಸ್ಸುಮಾಡುತ್ತಿರುವ ಋಷಿಗಳಿಗೆ ಭಯವುಂಟಾಗುವದು. ಅದ್ದರಿಂದ ನಿಮ್ಮ ವಾಸಕ್ಕೆ ಯೋಗ್ಯವಾದ ಮತ್ತೊಂದು ವನಕ್ಕೆ ಹೋಗುವ ಆಲೋಚನೆಯನ್ನು ಮಾಡು" ಎಂದು ಲೋಕಸ್ವಭಾವವನ್ನು ತಿಳಿದವರಾದ ವ್ಯಾಸರು ಪರಿಶುದ್ಧಾತ್ಮನಾದ ಆ ಧರ್ಮರಾಯನಿಗೆ ಹೇಳಿ, ಪ್ರತಿಸ್ಮೃತಿಯೆಂಬ ಆ ಉತ್ತಮವಾದ ವಿದ್ಯೆಯನ್ನು ಆತನಿಗೆ ಉಪದೇಶಮಾಡಿ ಅಂತರ್ಧಾನವನ್ನೈದಿದರು.

ಬಳಿಕ ಧರ್ಮರಾಯನು ಆ ಪ್ರತಿಸ್ಮೃತಿಯೆಂಬ ಮಂತ್ರವನ್ನು ಕಾಲಕಾಲದಲ್ಲೂ ಮನಸ್ಸಿನಿಂದ ಅಭ್ಯಾಸಮಾಡುತ್ತ ದೃಢಪಡಿಸಿಕೊಂಡು, ಬಳಿಕ ವ್ಯಾಸರು ಹೇಳಿದಂತೆ ಆ ದ್ವೈತವನವನ್ನು ಬಿಟ್ಟು, ಸರಸ್ವತೀ ತೀರದಲ್ಲಿರುವ ಕಾಮ್ಯಕವನಕ್ಕೆ ಹೊರಟನು. ಅಗ ವೇದವೇದಾಂಗ ಪಾರಂಗತರಾದ ಬ್ರಾಹ್ಮಣರು ಇಂದ್ರನನ್ನು ಅನುಸರಿಸಿ ಹೋಗುವ ಋಷಿಗಳಂತೆ ಆತನನ್ನು ಅನುಸರಿಸಿ ಹೊರಟರು. ಈ ಪ್ರಕಾರ, ಧನುರ್ವೇದ ಪಾರಂಗತರಾದ ಪಾಂಡವರು ಅಮಾತ್ಯರಿಂದಲೂ ಪರಿವಾರ ಜನರಿಂದಲೂ ಬ್ರಾಹ್ಮಣರಿಂದಲೂ ಸಹಿತರಾಗಿ ಕಾಮ್ಯಕವನಕ್ಕೆ ಹೋಗಿ, ಬ್ರಾಹ್ಮಣರ ವೇದಘೋಷವನ್ನು ಕೇಳುತ್ತ, ಪರಿಶುದ್ಧವಾದ ಬಾಣಗಳಿಂದ ಅಲ್ಲಲ್ಲಿ ಮೃಗಗಳನ್ನು ಬೇಟೆಯಾಡುತ್ತ, ದೇವತೆಗಳಿಗೂ ಪಿತೃಗಳಿಗೂ ಬ್ರಾಹ್ಮಣರಿಗೂ ಶಾಸ್ತ್ರೋಕ್ತವಾಗಿ ಸಂತರ್ಪಣೆಯನ್ನು ಮಾಡುತ್ತ, ಸ್ವೇಚ್ಛೆಯಿಂದ ಅಲ್ಲಿ ವಾಸಮಾಡಿಕೊಂಡಿದ್ದರು.

## ೩೭ನೇ ಅಧ್ಯಾಯ.—ಅರ್ಜುನನು ಉಪದೇಶವನ್ನು ಪಡೆದು ಇಂದ್ರನ ದರ್ಶನವನ್ನು ಮಾಡುವಿಕೆ.

ವೈಶಂಪಾಯನ ಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಬಳಿಕ ಈ ರೀತಿಯಾಗಿ ಪಾಂಡವರು ಕಾಮ್ಯಕವನದಲ್ಲಿ ವಾಸಮಾಡುತ್ತಿರಲು, ಧರ್ಮಾತ್ಮನಾದ ಯುಧಿಷ್ಠಿರನು ಒಂದಾನೊಂದುದಿವಸ ವೇದವ್ಯಾಸರು ಉಪದೇಶಮಾಡಿದ ಮಂತ್ರವನ್ನು ಸ್ಮರಿಸಿಕೊಂಡು, ಪ್ರಾಜ್ಞನಾದ ಅರ್ಜುನನನ್ನು ಏಕಾಂತದಲ್ಲಿ ಕೂರಿಸಿಕೊಂಡು, ಒಳ್ಳೇ ಮಾತುಗಳನ್ನು ಹೇಳಿ, ಆತನ ಕೈ ಹಿಡಿದುಕೊಂಡು ಹಾಗೆಯೇ ವನವಾಸವನ್ನು ಸ್ಮರಿಸಿಕೊಂಡು, "ಎಲೈ ಅರ್ಜುನನೆ, ಭೀಷ್ಮ ದ್ರೋಣ ಕೃಪ ಕರ್ಣ ಅಶ್ವತ್ಥಾಮರಲ್ಲಿ ಧನುರ್ವೇದವು ನಾಲ್ಕು ಪಾದದಿಂದಲೂ ನೆಲೆಗೊಂಡಿರುವದು. ಇವರು ಐಂದ್ರ ವಾರುಣ ಬ್ರಾಹ್ಮ್ಯ ಮೊದಲಾದ ಅಸ್ತ್ರಗಳನ್ನೂ ಸಾಮಾನ್ಯವಾದ ಬಾಣಗಳನ್ನೂ ಸಹ ಪ್ರಯೋಗಿಸತಕ್ಕ ಕ್ರಮವನ್ನೂ, ಅವುಗಳಿಗೆ ಪ್ರತೀಕಾರ ಮಾಡುವದನ್ನೂ ಚೆನ್ನಾಗಿ ತಿಳಿದಿರುವರು. ದುರ್ಯೋಧನನು ಭೀಷ್ಮಾದಿಗಳನ್ನು ಒಳ್ಳೇ ಮಾತಿನಿಂದ ಪ್ರತ್ಯೇಕ ಪ್ರತ್ಯೇಕವಾಗಿ ಸಂತೋಷಪಡಿಸಿ, ಅವರಲ್ಲಿ ಗುರುಭಾವವನ್ನು ಇಟ್ಟುಕೊಂಡಿರುವನು. ಆತನು ತಮ್ಮ ಕಡೆ ಇರುವ ಎಲ್ಲಾ ಯೋಧರಲ್ಲೂ ವಿಶೇಷವಾಗಿ ಪ್ರೀತಿಯನ್ನಿಟ್ಟಿರುವನು. ಆತನಿಂದ ಸನ್ಮಾನಿತರಾದ ಅವರೆಲ್ಲರೂ ಅವನಿಗೆ ಒಳ್ಳೇದನ್ನೇ ಯೋಚಿಸುವರು. ಸಮಯ ಬಂದಕಾಲದಲ್ಲಿ ಅವರೆಲ್ಲರೂ ತಮ್ಮತಮ್ಮ ಸಾಮರ್ಥ್ಯವನ್ನು ತೋರಿಸದೆ ಬಿಡರು. ಈಗ ಅನೇಕ ಗ್ರಾಮಗಳನ್ನೂ ಪಟ್ಟಣಗಳನ್ನೂ ವನಗಳನ್ನೂ ಸಮುದ್ರಗಳನ್ನೂ ಸುವರ್ಣ

ಮೊದಲಾದ ಉತ್ತಮವಸ್ತುಗಳು ಹುಟ್ಟತಕ್ಕ ಪ್ರದೇಶಗಳನ್ನೂ ಪಡೆದು ಸಕಲವಾದ ಭೂಮಂಡಲವನ್ನೂ ತನ್ನ ಸ್ವಾಧೀನವಲ್ಲಿ ಇಟ್ಟುಕೊಂಡಿರುವನು. ಎಲೈ ಅರ್ಜುನನೆ, ನನಗೆ ನೀನೇ ಹಿತನಾದವನು. ನಿನ್ನಿಂದಲೇ ನಮ್ಮ ಸಕಲ ಕಾರ್ಯಗಳೂ ನೆರವೇರಬೇಕು. ಪ್ರಕೃತದಲ್ಲಿ ಈ ಕಾರ್ಯವನ್ನು ಮಾಡತಕ್ಕದ್ದೆಂದು ನನಗೆ ತೋರಿರುವದು: ವೇದವ್ಯಾಸರು ನನಗೆ ಬಂದು ರಹಸ್ಯವಾದ ಮಂತ್ರವನ್ನು ಉಪದೇಶಮಾಡಿರುವರು. ಆ ಮಂತ್ರವನ್ನು ಪ್ರಯೋಗಿಸಿದ್ದೇ ಆದರೆ, ಸಕಲ ರಾಜ್ಯವೂ ನಮ್ಮಧೀನವಾಗುವದು. ಆ ಮಂತ್ರವನ್ನು ನೀನು ಸಮಾಧಾನಚಿತ್ತನಾಗಿ ಸ್ವೀಕರಿಸಿ, ತಡೆಮಾಡದೆ ದೇವತೆಗಳ ಅನುಗ್ರಹವನ್ನು ಸಂಪಾದಿಸುವದಕ್ಕೋಸ್ಕರ ಉಗ್ರವಾದ ತಪಸ್ಸನ್ನು ಮಾಡು. ಅದಕ್ಕಾಗಿ ಧನುಸ್ಸನ್ನೂ ಖಡ್ಗವನ್ನೂ ಕವಚವನ್ನೂ ಧರಿಸಿಕೊಂಡು, ವ್ರತನಿಷ್ಠನಾಗಿ, ಯಾರಿಗೂ ಕಾಣಿಸಿಕೊಳ್ಳದೆ ಉತ್ತರದಿಕ್ಕಿಗೆ ಪ್ರಯಾಣಮಾಡು. ಪೂರ್ವದಲ್ಲಿ ವೃತ್ರಾಸುರನದೆಸೆಯಿಂದ ಭಯಪಟ್ಟ ಇಂದ್ರನಿಗೆ ಸಕಲರಾದ ದೇವತೆಗಳೂ ತಮ್ಮತಮ್ಮ ಅಸ್ತ್ರಗಳನ್ನು ಕೊಟ್ಟಿರುವರು. ಆದ್ದರಿಂದ, ಎಲ್ಲಾ ದಿವ್ಯಾಸ್ತ್ರಗಳೂ ಆತನೊಬ್ಬನಲ್ಲೇ ಇರುವವು. ಆತನನ್ನು ಕಂಡು, ನೀನು ಆತನಿಂದ ಆ ಅಸ್ತ್ರಗಳನ್ನು ಪಡೆದುಕೊ. ಆತನು ಈ ಮಂತ್ರಪ್ರಭಾವದಿಂದ ಆ ಅಸ್ತ್ರಗಳನ್ನೆಲ್ಲಾ ನಿನಗೆ ಕೊಡುವನು. ಈಗಲೇ ನೀನು ವ್ರತವನ್ನು ಸ್ವೀಕರಿಸಿ ಇಂದ್ರನನ್ನು ಕಾಣುವದಕ್ಕೆ ಹೊರಡು" ಎಂದು ಹೇಳಿ, ಶಾಸ್ತ್ರೋಕ್ತವಾಗಿ ವಾಙ್ನಿಯಮ ಮೊದಲಾದ ವ್ರತಾಚರಣೆಯಲ್ಲಿ ದೀಕ್ಷಿತನಾದ ತಮ್ಮನಾದ ಆ ಅರ್ಜುನನಿಗೆ ಆ ಮಂತ್ರವನ್ನು ಉಪದೇಶಮಾಡಿ, ಇಂದ್ರನ ದರ್ಶನಕ್ಕೆ ಹೋಗೆಂದು ಕಳುಹಿಸಿಕೊಟ್ಟನು.

ಬಳಿಕ ಅರ್ಜುನನು ಧರ್ಮರಾಯನ ಅಪ್ಪಣೆಯನ್ನು ತೆಗೆದುಕೊಂಡು, ಗಾಂಡೀವಧನುಸ್ಸನ್ನು ಧರಿಸಿ, ಅಕ್ಷಯವಾದ ಬತ್ತಳಿಕೆಯನ್ನು ಕಟ್ಟಿ, ಕವಚವನ್ನು ತೊಟ್ಟು, ಉಡುವಿನ ಚರ್ಮದಿಂದ ಮಾಡಿದ ಕೈತೊಡವುಗಳನ್ನು ಹಾಕಿಕೊಂಡು, ಅಗ್ನಿಯಲ್ಲಿ ಹೋಮಮಾಡಿ, ಬ್ರಾಹ್ಮಣರಿಗೆ ಅನೇಕ ದ್ರವ್ಯವನ್ನು ದಾನಮಾಡಿ, ಅವರಿಂದ ಸ್ವಸ್ತಿವಾಚನವನ್ನು ಮಾಡಿಸಿ, ಊರ್ಧ್ವಾಕಾರವಾಗಿ ನಿಶ್ವಾಸಬಿಡುತ್ತ, ಮೇಲೆ ನೋಡಿ, ಕೌರವರ ಸಂಹಾರಾರ್ಥವಾಗಿ ಇಂದ್ರನನ್ನು ಕಾಣುವದಕ್ಕೆ ಹೊರಟನು. ಆಗ ಅಲ್ಲಿರುವ ಬ್ರಾಹ್ಮಣರೂ ಸಿದ್ಧರೂ ಅದೃಶ್ಯರಾದ ವನದೇವತೆಗಳೂ ಸಹ ಧನುರ್ಧಾರಿಯಾಗಿ ಹೊರಟ ಅರ್ಜುನನನ್ನು ನೋಡಿ "ಎಲೈ ಅರ್ಜುನನೆ, ನೀನು ಮನಸ್ಸಿನಲ್ಲಿ ಏನೇನು ಬಯಸುವೆಯೋ ಅವುಗಳೆಲ್ಲಾ ನಿನಗೆ ಜಾಗ್ರತೆಯಾಗಿ ಸಿದ್ಧಿಸಲಿ. ಬಳ್ಳೇದು ಹೋಗಿಬಾ. ನಿನಗೆ ನಿಜವಾಗಿ ಜಯವಾಗಲಿ" ಎಂದು ಆಶೀರ್ವಾದವನ್ನು ಮಾಡಿದರು. ಈ ಪ್ರಕಾರ ಬ್ರಾಹ್ಮಣರ ಆಶೀರ್ವಾದವನ್ನು ಸ್ವೀಕರಿಸಿ ಹೊರಟ ಶೂರನಾದ ಅರ್ಜುನನನ್ನು ನೋಡಿ, ದ್ರೌಪದಿಯು ಕುಂತಿ ಮೊದಲಾದವರನ್ನು ಮನಸ್ಸಿನಲ್ಲಿ ಸ್ಮರಿಸಿಕೊಂಡು, "ಮಹಾಬಾಹುವಾದ ಅರ್ಜುನನೆ, ಕುಂತಿಯು ನೀನು ಹುಟ್ಟಿದಾಗ ನಿನಗೆ ಯಾವಯಾವ ಮಂಗಳವಾಗಲೆಂದು ಹರಸಿದಳೋ, ಅವುಗಳೆಲ್ಲಾ ನಿನಗೆ ಉಂಟಾಗಲಿ. ಮತ್ತು ನಿನ್ನ ಮನೋರಥಗಳೆಲ್ಲಾ ನೆರವೇರಲಿ. ಈ ನಮ್ಮ ಕ್ಷತ್ರಿಯಕುಲದಲ್ಲಿ ಯಾರೂ ಹುಟ್ಟಬಾರದು. ಭಿಕ್ಷಾಟನೆಯಿಂದ ಜೀವಿಸತಕ್ಕ ಬ್ರಾಹ್ಮಣರಿಗೆ ನಮಸ್ಕರಿಸುವೆನು. ಪಾಪಾತ್ಮನಾದ ದುರ್ಯೋಧನನು ರಾಜಸಭೆಯಲ್ಲಿ ನನ್ನನ್ನು ನೋಡಿ ಹಾಸ್ಯಮಾಡುತ್ತ, 'ಎಲೆ ಗೋಜಾತಿಯವಳೆ' ಎಂದು ಕೂಗಿ, ಅಯುಕ್ತವಾಗಿ ಬಹು ಅವಮಾನಕರವಾದ ಮಾತುಗಳನ್ನು ಆಡಿದನಲ್ಲಾ! ಆ ದುಃಖಕ್ಕಿಂತಲೂ ನೀನು ನನ್ನನ್ನಗಲಿ ಪ್ರಯಾಣಮಾಡುವ ದುಃಖವು ಹೆಚ್ಚಾಗಿರುವದು. ನಿನ್ನ ಸಹೋದರರು ಯಾವಾಗಲೂ ನಿನ್ನ ಶೌರ್ಯವನ್ನೇ ಹೊಗಳುತ್ತ, ನಿನ್ನ ಕಥೆಗಳಿಂದಲೇ ಕಾಲವನ್ನು ಕಳೆಯುತ್ತಿದ್ದರು. ನೀನು ಬಹುಕಾಲ ಪರಸ್ಥಳದಲ್ಲಿದ್ದರೆ, ನಮಗೆ ಭೋಗಗಳಲ್ಲಿಯೂ ದ್ರವ್ಯದಲ್ಲಿಯೂ ಬದುಕುವದರಲ್ಲಿಯೂ ಸಂತೋಷಬುದ್ಧಿಯುಂಟಾದೀತೆ? ಪಾರ್ಥನೆ, ನಿನ್ನಲ್ಲೇ ನಮ್ಮ ಸುಖದುಃಖಗಳೂ ಜೀವಿತಮರಣಗಳೂ ರಾಜ್ಯವೂ ಐಶ್ವರ್ಯವೂ ಸಹ ಇರುವವು. ಇದೇ ನಾನು ಹೇಳತಕ್ಕದ್ದು. ನೀನು ಹೋಗಿ ಬಾ; ನಿನಗೆ ಮಂಗಳವಾಗಲಿ. ನೀನು ಬಲವಂತರೊಡನೆ ವಿರೋಧವನ್ನು ಮಾಡಿಕೊಳ್ಳಬೇಡ. ನಿರ್ವಿಘ್ನವಾಗಿ ಕಾರ್ಯಸಿದ್ಧಿಯಾಗುವದಕ್ಕೋಸ್ಕರ ಜಾಗ್ರತೆಯಾಗಿ ಪ್ರಯಾಣಮಾಡು. ಸೃಷ್ಟಿಕರ್ತನಾದ ಬ್ರಹ್ಮನಿಗೂ ಅದೃಷ್ಟಕ್ಕೂ ನಮಸ್ಕಾರಮಾಡುವೆನು. ನಿನಗೆ ಕ್ಷೇಮವಾಗಲಿ; ಪ್ರಯಾಣಮಾಡು. ಧನಂಜಯನೆ, ಹ್ರೀ, ಶ್ರೀ, ಕೀರ್ತಿ, ದ್ಯುತಿ, ಪುಷ್ಟಿ, ಉಮೆ, ಲಕ್ಷ್ಮಿ, ಸರಸ್ವತಿ, ಇವರೆಲ್ಲರೂ ಮಾರ್ಗಸ್ಥನಾದ

ನಿನ್ನನ್ನು ರಕ್ಷಿಸಲಿ. ಹಿರಿಯರ ಪೂಜೆಯಲ್ಲಿ ಆಸಕ್ತನಾಗಿ ಜ್ಯೇಷ್ಠಭ್ರಾತೃವಿನ ಆಜ್ಞೆಯನ್ನು ಅನುವರ್ತಿಸಿಕೊಂಡಿರುವ ನಿನ್ನ ಸಂರಕ್ಷಣಾರ್ಥವಾಗಿ ನಾನು ಅಷ್ಟವಸುಗಳಿಗೂ ಏಕಾದಶರುದ್ರರಿಗೂ ದ್ವಾದಶಾದಿತ್ಯರಿಗೂ ಏಕೋನಪಂಚಾಶನ್ಮರುತ್ತುಗಳಿಗೂ ವಿಶ್ವೇದೇವತೆಗಳಿಗೂ ಸಾಧ್ಯರಿಗೂ ಶರಣಾಗತಳಾಗಿರುವೆನು. ಭೂಮಿಯಲ್ಲೂ ಆಕಾಶದಲ್ಲೂ ಸ್ವರ್ಗದಲ್ಲೂ ಇರುವ ಸಕಲ ಭೂತಗಳೂ ಇನ್ನೂ ಕಾರ್ಯವಿಘ್ನವನ್ನು ಮಾಡತಕ್ಕ ಭೂತಗಳೂ ಸಹ ನಿನಗೆ ಒಳ್ಳೇದನ್ನು ಮಾಡಲಿ" ಎಂದು ನುಡಿದು ಸುಮ್ಮನಾದಳು.

ಬಳಿಕ ಮಹಾಬಾಹುವಾದ ಅರ್ಜುನನು ಧರ್ಮರಾಯನಿಗೂ ಭೀಮಸೇನನಿಗೂ ಧೌಮ್ಯಾಚಾರ್ಯರಿಗೂ ಪ್ರದಕ್ಷಿಣನಮಸ್ಕಾರಗಳನ್ನು ಮಾಡಿ, ಪ್ರಕಾಶಮಾನವಾದ ಧನುಸ್ಸನ್ನು ಧರಿಸಿಕೊಂಡು ಪ್ರಯಾಣಮಾಡಲು, ಇಂದ್ರದೇವತಾಕವಾದ ಯೋಗದಲ್ಲಿ ಹೊರಟ ಶೂರನಾದ ಆತನಿಗೆ ಸಕಲ ಭೂತಗಳೂ ಮಾರ್ಗವನ್ನು ಕೊಟ್ಟವು. ಆ ಬಳಿಕ, ಧೀರನಾದ ಅರ್ಜುನನು ಯೋಗಬಲದಿಂದ ಮನೋವೇಗವುಳ್ಳವನಾಗಿ ಋಷಿಗಳಿಗೆ ಆಶ್ರಯವಾದ ಅನೇಕ ಪರ್ವತಗಳನ್ನು ದಾಟಿ, ದೇವತೆಗಳಿಗೆ ವಾಸಸ್ಥಾನವಾಗಿಯೂ ಪುಣ್ಯತಮವಾಗಿಯೂ ಇರುವ ಹಿಮವತ್ಪರ್ವತವನ್ನೂ ಗಂಧಮಾದನ ಪರ್ವತವನ್ನೂ ಒಂದೇ ಹಗಲಿನಲ್ಲಿ ವಾಯುವಿನಂತೆ ದಾಟಿ, ಹಗಲೂ ರಾತ್ರಿಯೂ ಜಾಗರೂಕನಾಗಿ ಹೋಗುತ್ತಾ ಅನೇಕ ದುರ್ಗಮಸ್ಥಾನಗಳನ್ನು ದಾಟಿ, ಇಂದ್ರಕೀಲ ಪರ್ವತವನ್ನು ಸೇರಿ, ಅಲ್ಲಿ ನಿಲ್ಲಲು, 'ಎಲೈ ಅರ್ಜುನನೆ, ನಿಲ್ಲುನಿಲ್ಲು' ಎಂದು ಅಶರೀರವಾಣಿಯಾಯಿತು. ಅದನ್ನು ಕೇಳಿ ಆತನು ನಾಲ್ಕುಕಡೆಯೂ ದೃಷ್ಟಿಸಿ ನೋಡಿ, ಒಂದು ವೃಕ್ಷದ ಕೆಳಗೆ ಕೂತುಕೊಂಡು, ಬ್ರಹ್ಮತೇಜಸ್ಸಿನಿಂದ ಪ್ರಕಾಶಮಾನನೂ ಜಟಾಧಾರಿಯೂ ಕೃಶನೂ ಆದ ಹೊಂಬಣ್ಣವಾದ ಅಂಗಕಾಂತಿಯುಳ್ಳ ಒಬ್ಬ ಋಷಿಯನ್ನು ಕಂಡನು. ಬಳಿಕ ಆ ಮಹಾತಪಸ್ವಿಯು ಅಲ್ಲಿ ನಿಂತಿದ್ದ ಅರ್ಜುನನನ್ನು ನೋಡಿ "ಅಯ್ಯಾ, ನೀನು ಯಾರು? ಇದೇನು? ನೀನು ಧನುರ್ಬಾಣಗಳನ್ನೂ ಕವಚವನ್ನೂ ಖಡ್ಗವನ್ನೂ ಕೈತೊಡವುಗಳನ್ನೂ ಧರಿಸಿಕೊಂಡು, ಕ್ಷತ್ರಿಯಧರ್ಮವನ್ನು ಅನುಸರಿಸಿ ಬಂದಿರುವೆ? ಈ ಪ್ರದೇಶವು ಕ್ರೋಧಹರ್ಷಗಳನ್ನು ಜಯಿಸಿ ತಪಸ್ವಿಗಳಾಗಿಯೂ ಶಾಂತರಾಗಿಯೂ ಇರುವ ಬ್ರಾಹ್ಮಣರಿಗೆ ಆಶ್ರಯವಾಗಿರುವದು. ಇಲ್ಲಿ ಆಯುಧಗಳಿಂದ ಏನುಪ್ರಯೋಜನ? ಇಲ್ಲಿ ಯುದ್ಧಮಾಡತಕ್ಕವರೇ ಇಲ್ಲ. ನೀನು ಪುಣ್ಯತಮವಾದ ಸ್ಥಾನಕ್ಕೆ ಬಂದಿರುವೆ. ಈ ಧನುಸ್ಸನ್ನು ತೆಗೆದಿಡು. ಲೋಕದಲ್ಲಿ ತೇಜೋವಂತನಾಗಿಯೂ ಶೂರನಾಗಿಯೂ ಇರುವ ಪುರುಷನೂ ಇರುವನೆ?" ಎಂದು ಪರಿಹಾಸದ ತೆರದಿಂದ ಮಾತನಾಡಿದನು. ಆದರಿಂದ ದೃಢವಾದ ಮನೋನಿಶ್ಚಯವುಳ್ಳ ಅರ್ಜುನನು ಮನಶ್ಚಾಂಚಲ್ಯವನ್ನು ಹೊಂದದಿರಲು, ಆ ಬ್ರಾಹ್ಮಣನು ಸಂತುಷ್ಟನಾಗಿ ನಸುನಗುತ್ತ, "ಎಲೈ ಶತ್ರುನಾಶಕನಾದ ಅರ್ಜುನನೆ, ನಾನು ಇಂದ್ರನು. ನಿನಗೆ ಶುಭವಾಗಲಿ. ನೀನು ವರವನ್ನು ಬೇಡಿಕೊ" ಎಂದು ನುಡಿದನು. ಅದನ್ನು ಕೇಳಿ, ಕುರುಕುಲಶ್ರೇಷ್ಠನಾದ ಅರ್ಜುನನು ಆ ದೇವೇಂದ್ರನಿಗೆ ನಮಸ್ಕಾರವನ್ನು ಮಾಡಿ "ಎಲೈ ಮಹಾನುಭಾವನೆ, ಇಂಥ ಅಪೇಕ್ಷೆಯಿಂದಲೇ ನಾನು ಬಂದಿರುವೆನು; ನನಗೆ ವರವನ್ನು ಕೊಡು. ನಿನ್ನಿಂದ ಸಕಲವಾದ ಅಸ್ತ್ರಗಳನ್ನೂ ತಿಳಿದುಕೊಳ್ಳಬೇಕೆಂದು ನಾನು ಅಪೇಕ್ಷಿಸಿರುವೆನು" ಎನಲು, ಅದನ್ನು ಕೇಳಿ ಸಂತುಷ್ಟನಾದ ಇಂದ್ರನು "ಎಲೈ ಧನಂಜಯನೆ, ಇಲ್ಲಿಗೆ ಬಂದ ನಿನಗೆ ಅಸ್ತ್ರಗಳಿಂದ ಏನು ಪ್ರಯೋಜನ? ನೀನು ಪುಣ್ಯತಮವಾದ ಈ ಕ್ಷೇತ್ರಕ್ಕೆ ಬಂದಿರುವನಾದ್ದರಿಂದ, ಬೇಕಾದಭೋಗಗಳನ್ನು ಬೇಡಿಕೊ" ಎಂದು ನುಡಿದನು. ಆ ಮಾತನ್ನು ಕೇಳಿ ಅರ್ಜುನನು "ಎಲೈ ಸಹಸ್ರಾಕ್ಷನೆ, ನಾನು ಲೋಭದಿಂದಲೂ ಕಾಮದಿಂದಲೂ ದೇವತ್ವವನ್ನೂ ಸುಖವನ್ನೂ ಸಕಲರಾದ ದೇವತೆಗಳ ಐಶ್ವರ್ಯವನ್ನೂ ಅಪೇಕ್ಷಿಸತಕ್ಕವನಲ್ಲ. ಸಹೋದರರನ್ನು ಅರಣ್ಯದಲ್ಲಿ ಬಿಟ್ಟು, ಶತ್ರುಗಳಲ್ಲಿರುವ ವೈರವನ್ನೂ ತೀರಿಸಿಕೊಳ್ಳದೆ, ಹಾಗೆ ನಾನು ಭೋಗಗಳನ್ನು ಅಪೇಕ್ಷಿಸಿದ್ದೇ ಆದರೆ, ಲೋಕದಲ್ಲಿ ಬಹುಕಾಲ ಅಪಕೀರ್ತಿಗೆ ಗುರಿಯಾದೇನು?" ಎನಲು, ಸರ್ವರಿಂದಲೂ ಪೂಜ್ಯನಾದ ಇಂದ್ರನು ಒಳ್ಳೇಮಾತುಗಳಿಂದ ಅರ್ಜುನನನ್ನು ಸಮಾಧಾನಪಡಿಸಿ "ಎಲೈ ಮಗುವೆ, ನೀನು ಶೂಲಪಾಣಿಯಾಗಿಯೂ ತ್ರಿಲೋಚನನಾಗಿಯೂ ಭೂತನಾಥನಾಗಿಯೂ ಇರುವ ಈಶ್ವರನನ್ನು ಯಾವಾಗ ನೋಡುವೆಯೋ, ಆಗ ನಿನಗೆ ನಾನು ಸಕಲವಾದ ಅಸ್ತ್ರಗಳನ್ನೂ ಕೊಡುವೆನು. ಅದಕ್ಕೆ ನೀನು ಪ್ರಯತ್ನವನ್ನು

ನೋಡು. ಆ ಮಹಾದೇವನ ದರ್ಶನದಿಂದ ನೀನು ಸಿದ್ಧನಾಗಿ ಸ್ವರ್ಗಲೋಕಕ್ಕೆ ಬರುವೆ' ಎಂದು ನುಡಿದು ಅಂತ ರ್ಧಾನವನ್ನು ಹೊಂದಿದನು. ಆಗ ಅರ್ಜುನನೂ ಅಲ್ಲೇ ಯೋಗನಿಷ್ಠನಾಗಿದ್ದನು" ಎಂದು ವೈಶಂಪಾಯನ ಮುನೀಂದ್ರನು ಜನಮೇಜಯರಾಯನಿಗೆ ಹೇಳಿದನು.

೩೮ನೇ ಅಧ್ಯಾಯ.—ಅರ್ಜುನನ ತಪಸ್ಸನ್ನು ಕುರಿತು ಈಶ್ವರನಿಗೂ ಋಷಿಗಳಿಗೂ ಸಂವಾದ.

ಅನಂತರದಲ್ಲಿ ಜನಮೇಜಯರಾಯನು ವೈಶಂಪಾಯನಮುನೀಶ್ವರನನ್ನು ಕುರಿತು "ಎಲೈ ಪೂಜ್ಯನಾದ ವೈಶಂಪಾಯನಮಹರ್ಷಿಯೆ, ನಿರಾಯಾಸವಾಗಿ ಕಾರ್ಯವನ್ನು ಮಾಡತಕ್ಕವನಾಗಿಯೂ ಪುರುಷಶ್ರೇಷ್ಠನಾಗಿಯೂ ಆಜಾನುಬಾಹುವಾಗಿಯೂ ಯೋಧಾಗ್ರೇಸರನಾಗಿಯೂ ಯುದ್ಧದಲ್ಲಿ ಅಜೇಯನಾಗಿಯೂ ತೇಜೋವಂತನಾಗಿಯೂ ಇರುವ ಅರ್ಜುನನು ದಿವ್ಯಾಸ್ತ್ರಗಳನ್ನು ಹ್ಯಾಗೆ ಪಡೆದನು? ನಿರ್ಜನವಾದ ಅರಣ್ಯವನ್ನು ನಿರ್ಭಯವಾಗಿ ಪ್ರವೇಶಿಸಿ, ಅಲ್ಲಿದ್ದುಕೊಂಡು ಯಾವ ಕಾರ್ಯವನ್ನು ಮಾಡಿದನು? ದೇವೇಂದ್ರನನ್ನೂ ಮಹಾದೇವನನ್ನೂ ಹ್ಯಾಗೆ ಸಂತೋಷಪಡಿಸಿದನು? ಅರ್ಜುನನು ಮಹಾದೇವನೊಡನೆ ಆಶ್ಚರ್ಯಕರವಾಗಿಯೂ ಕೇಳತಕ್ಕವರಿಗೆ ರೋಮಾಂಚವಾಗುವ ಹಾಗೂ ಅಮೋಘವಾದ ಯುದ್ಧವನ್ನು ಮಾಡಿದನಷ್ಟೆ. ಆ ಯುದ್ಧವನ್ನು ಕೇಳಿ, ಪುರುಷಶ್ರೇಷ್ಠರಾದ ಶೂರರಾದ ಧರ್ಮರಾಯ ಮೊದಲಾದವರಿಗೂ ಕೂಡ ದೈನ್ಯದಿಂದಲೂ ಹರ್ಷದಿಂದಲೂ ಆಶ್ಚರ್ಯದಿಂದಲೂ ಮನಸ್ಸಿಗೆ ಕಂಪವುಂಟಾಗಿರಬಹುದು. ಶೂರನಾದ ಅರ್ಜುನನು ಸ್ವಲ್ಪವಾದರೂ ನಿಂದಿತವಾದ ಕಾರ್ಯವನ್ನು ಮಾಡತಕ್ಕವನಲ್ಲ. ಆತನು ಇನ್ನೂ ಏನೇನು ಸಾಹಸವನ್ನು ಮಾಡಿರುವನೋ, ಅದನ್ನೆಲ್ಲಾ ವಿಸ್ತಾರವಾಗಿ ಕೇಳುವದಕ್ಕೆ ಕುತೂಹಲಪಡುತ್ತಿರುವೆನು. ನೀನು ದೈವಮಾನುಷ ವ್ಯಾಪಾರಗಳನ್ನೆಲ್ಲಾ ತಿಳಿದಿರುವೆಯಾದ್ದರಿಂದ, ನನ್ನಲ್ಲಿ ಅನುಗ್ರಹವಿಟ್ಟು ಈ ವೃತ್ತಾಂತವನ್ನು ವಿವರಿಸು" ಎಂದು ನುಡಿದನು.

ಆ ಮಾತನ್ನು ಕೇಳಿ, ವೈಶಂಪಾಯನಮುನೀಂದ್ರನು—ಎಲೈ ಜನಮೇಜಯನೆ, ದಿವ್ಯವಾಗಿಯೂ ಮಹತ್ತಾಗಿಯೂ ಆಶ್ಚರ್ಯಕರವಾಗಿಯೂ ಇರುವ ಮಹಾತ್ಮನಾದ ಅರ್ಜುನನ ಕಥೆಯನ್ನು ಹೇಳುವೆನು ಕೇಳು. ಅರ್ಜುನನು ದೇವದೇವನಾದ ಈಶ್ವರನ ಶರೀರಸಂಪರ್ಕವನ್ನು ಹೊಂದಿ ಆತನೊಡನೆ ಯುದ್ಧಕ್ಕೆ ತೊಡಗಿದ್ದನ್ನು ಹೇಳುವೆನು ಕೇಳು. ಅಪರಿಮಿತವಾದ ಪರಾಕ್ರಮವುಳ್ಳವನಾಗಿಯೂ ಮಹಾರಥಿಕನಾಗಿಯೂ ಮಹಾ ಬಲಶಾಲಿಯಾಗಿಯೂ ಮಹಾಬಾಹುವಾಗಿಯೂ ತಪಸ್ಸಿನಲ್ಲಿ ನಿಶ್ಚಲಚಿತ್ತನಾಗಿ ದೃಢವಾದ ನಿಶ್ಚಯವುಳ್ಳವನಾಗಿಯೂ ಇರುವ ಇಂದ್ರಪುತ್ರನಾದ ಅರ್ಜುನನು ಧರ್ಮರಾಯನ ಅಪ್ಪಣೆಯಿಂದ ಸುರಾಧೀಶ್ವರನಾದ ಮಹೇಂದ್ರನನ್ನೂ ದೇವದೇವನಾದ ಶಂಕರನನ್ನೂ ಕಾಣುವದಕ್ಕೋಸ್ಕರ, ಚಿನ್ನದ ಹಿಡಿಯುಳ್ಳ ಖಡ್ಗವನ್ನೂ ದಿವ್ಯವಾದ ಗಾಂಡೀವಧನುಸ್ಸನ್ನೂ ಧರಿಸಿ, ಕಾರ್ಯಸಿದ್ಧಿಗೋಸ್ಕರ ತಾನೊಬ್ಬನೇ ಉತ್ತರದಿಕ್ಕಿಗೆ ಹೊರಟು, ಜಾಗ್ರತೆಯಾಗಿ ಹಿಮವತ್ಪರ್ವತಕ್ಕೆ ಹೋಗಿ, ಬಹುಕಂಟಕಯುಕ್ತವಾಗಿಯೂ ಘೋರವಾಗಿಯೂ ಇರುವ ಮತ್ತು ಬಗೆಬಗೆಯಾದ ಪುಷ್ಪ ಫಲ ಪಕ್ಷಿ ಮೃಗ ಸಿದ್ಧಚಾರಣರಿಂದ ಕೂಡಿ ಮನುಷ್ಯಸಂಚಾರವಿಲ್ಲದ ಆ ಪರ್ವತದ ಶಿಖರದಲ್ಲಿರುವ ಒಂದು ವನವನ್ನು ಸೇರಿದನು. ಆಗ ಆಕಾಶದಲ್ಲಿ ವೇದಘೋಷವೂ ವಾದ್ಯಘೋಷವೂ ಉಂಟಾಗಿ ಪುಷ್ಪವೃಷ್ಟಿಯು ಆಯಿತು, ಮತ್ತು ಮೇಘಗಳು ಆಕಾಶವನ್ನೆಲ್ಲಾ ಹರಡಿಕೊಂಡವು. ಬಳಿಕ ಅರ್ಜುನನು ಹಿಮವತ್ಪರ್ವತದ ಸಮೀಪದಲ್ಲಿರುವ ಅನೇಕ ವನ ದುರ್ಗಗಳನ್ನು ದಾಟಿ, ಆ ಪರ್ವತದ ಹಿಂಭಾಗದಲ್ಲಿ ವಾಸಮಾಡುತ್ತ, ಅಲ್ಲಿ ಮನೋಹರವಾಗಿ ಧ್ವನಿಮಾಡುವ ಪಕ್ಷಿಗಳಿಂದ ಯುಕ್ತವಾಗಿ ಪುಷ್ಪಭರಿತವಾದ ವೃಕ್ಷಗಳನ್ನೂ, ಹಂಸ ಸಾರಸ ಕಾರಂಡವಪಕ್ಷಿಗಳ ಧ್ವನಿಗಳಿಂದ ಮನೋಹರವಾಗಿಯೂ ವೈಡೂರ್ಯದಂತೆ ನಿರ್ಮಲವಾದ ಉದಕವುಳ್ಳದ್ದಾಗಿಯೂ ವಿಸ್ತಾರವಾದ ಸುಳಿಗಳುಳ್ಳದ್ದಾಗಿಯೂ ಇರುವ ಪುಣ್ಯನದಿಗಳನ್ನೂ, ಗಂಡುಕೋಗಿಲೆ ಕ್ರೌಂಚ ನವಿಲು ಮೊದಲಾದ ಪಕ್ಷಿಗಳ ಧ್ವನಿಯಿಂದ ಮನೋಹರವಾಗಿರುವ ವನಗಳನ್ನೂ ನೋಡುತ್ತ, ಸಂತುಷ್ಟವಾದ ಮನಸ್ಸುಳ್ಳವನಾಗಿ, ರಮಣೀಯವಾದ ಆ ಪ್ರದೇಶದಲ್ಲಿ ನಿಂತು, ಹುಲ್ಲಿನಿಂದ ಮಾಡಿದ ವಸ್ತ್ರವನ್ನುಟ್ಟು, ಕೃಷ್ಣಾಜಿನವನ್ನೂ ದಂಡವನ್ನೂ ಧರಿಸಿ, ಭೂಮಿಯಲ್ಲಿ ಉದುರಿದ ಒಣಗಿದ

ಎಲೆಗಳನ್ನೇ ಮೂರುದಿವಸಕ್ಕೊಂದುಸಾರಿ ಆಹಾರಮಾಡುತ್ತ, ತಿಂಗಳಿಗೊಂದಾವರ್ತಿ ಫಲಾಹಾರವನ್ನು ಮಾಡುತ್ತ, ಹೀಗೆ ಮೊದಲುತಿಂಗಳನ್ನು ಕಳೆದು, ಬಳಿಕ ಆರುದಿವಸಕ್ಕೊಂದಾವರ್ತಿ ಒಣಗಿದ ಎಲೆಗಳನ್ನು ಆಹಾರಮಾಡುತ್ತ, ಮೂರನೇ ತಿಂಗಳಲ್ಲಿ ಪಕ್ಷಕ್ಕೊಂದುದಿವಸ ಆಹಾರಮಾಡುತ್ತ, ನಾಲ್ಕನೇ ತಿಂಗಳು ಬರಲು ವಾಯುಭಕ್ಷಣೆಯನ್ನು ಮಾಡಿಕೊಂಡು, ಊರ್ಧ್ವಬಾಹುವಾಗಿ ಯಾವದನ್ನೂ ಆಶ್ರಯಿಸದೆ ಪಾದಾಂಗುಷ್ಠದಿಂದ ನಿಂತು ಘೋರವಾದ ತಪಸ್ಸನ್ನು ಮಾಡುತ್ತಿದ್ದನು. ಈ ಪ್ರಕಾರ ಘೋರವಾದ ತಪಸ್ಸನ್ನು ಮಾಡುತ್ತಿದ್ದ ಅರ್ಜುನನ ಜಟೆಗಳು ನಿರಂತರ ಸ್ನಾನದಿಂದ ಮಿಂಚುಗಳಂತೆಯೂ ಕೆಂದಾವರೆಗಳಂತೆಯೂ ಹೊಳೆಯುತ್ತಿದ್ದವು. ಈ ಪ್ರಕಾರ ಆತನು ಮಾಡುತ್ತಿದ್ದ ಘೋರವಾದ ತಪಸ್ಸನ್ನು ಪಿನಾಕಪಾಣಿಯಾದ ಈಶ್ವರನಿಗೆ ತಿಳಿಸಬೇಕೆಂದು ಅಲ್ಲಿದ್ದ ಮಹಾತ್ಮರಾದ ಋಷಿಗಳೆಲ್ಲರೂ ಹೊರಟು, ಮಹೇಶ್ವರನ ಸನ್ನಿಧಿಯನ್ನು ಸೇರಿ ನಮಸ್ಕರಿಸಿ "ಎಲೈ ಮಹಾದೇವನೆ, ಮಹಾ ತೇಜಶ್ಶಾಲಿಯಾದ ಅರ್ಜುನನು ಹಿಮವತ್ಪರ್ವತದ ಹಿಂಭಾಗದಲ್ಲಿರುವ ಇಂದ್ರಕೀಲದಲ್ಲಿದ್ದುಕೊಂಡು, ದಿಕ್ಕುಗಳನ್ನೆಲ್ಲಾ ಹೊಗೆ ಸುತ್ತಿಕೊಂಡಿರುವಂತೆ ಮಾಡುತ್ತ, ಪಾರವೇ ಇಲ್ಲದ ಘೋರವಾದ ತಪಸ್ಸನ್ನು ಮಾಡುತ್ತಿರುವನು. ಅವನ ಉದ್ದೇಶವೇನೋ ಅದನ್ನು ನಾವರಿಯೆವು. ಆತನು ತಪಸ್ಸಿನಿಂದ ನಮಗೆಲ್ಲಾ ಬಹಳವಾಗಿ ಸಂತಾಪವನ್ನು ಉಂಟುಮಾಡುತ್ತಿರುವನು. ಅದನ್ನು ನೀನು ನಿವಾರಿಸಬೇಕು" ಎಂದು ಹೇಳಿಕೊಳ್ಳಲು, ಅದನ್ನು ಕೇಳಿ ಪಾರ್ವತೀಪತಿಯಾದ ಈಶ್ವರನು "ಎಲೈ ಮಹರ್ಷಿಗಳೆ, ಅರ್ಜುನನ ನಿಮಿತ್ತವಾಗಿ ನೀವು ವಿಷಾದಪಡತಕ್ಕ ಕೆಲಸವಿಲ್ಲ. ನೀವು ನಿರ್ಭಯವಾಗಿ ಸಂತೋಷದಿಂದ ಬೇಗ ಹಿಂತಿರುಗಿ ಹೋಗಿ. ಅರ್ಜುನನ ಮನಸ್ಸಿನಲ್ಲಿರುವ ಸಂಕಲ್ಪವನ್ನು ನಾನು ಬಲ್ಲೆನು. ಆತನು ಸ್ವರ್ಗಪ್ರಾಪ್ತಿಯಾಗಬೇಕೆಂತಲೂ ಐಶ್ವರ್ಯವುಂಟಾಗಬೇಕೆಂತಲೂ ಆಯುಸ್ಸು ಹೆಚ್ಚಬೇಕೆಂತಲೂ ಬಯಸತಕ್ಕವನಲ್ಲ; ಅತನಿಗೆ ಯಾವ ಮನೋರಥವಿರುವದೋ ಅದನ್ನು ನಾನು ಈಗಲೇ ನೆರವೇರಿಸುವೆನು" ಎಂದು ನುಡಿದನು. ಅದನ್ನು ಕೇಳಿ ಸತ್ಯವಾದಿಗಳಾದ ಆ ಋಷಿಗಳೆಲ್ಲರೂ ಸಂತುಷ್ಟರಾಗಿ ತಮ್ಮತಮ್ಮ ಸ್ಥಾನಕ್ಕೆ ಹೊರಟುಹೋದರು.

## ೩೯ನೇ ಅಧ್ಯಾಯ.—ಕಿರಾತವೇಷದ ಈಶ್ವರ ಅರ್ಜುನರ ಯುದ್ಧವು ಮತ್ತು ಪಾರ್ವತೀಪರಮೇಶ್ವರರ ದರ್ಶನವು.

ವೈಶಂಪಾಯನ ಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಬಳಿಕ ಮಹಾತ್ಮರಾದ ಋಷಿಗಳೆಲ್ಲರೂ ಹೊರಟು ಹೋದನಂತರ ಪಿನಾಕಪಾಣಿಯೂ ಸಕಲಪಾಪನಾಶಕನೂ ಷಡ್ಗುಣೈಶ್ವರ್ಯಸಂಪನ್ನನೂ ಆದ ಈಶ್ವರನು ಕಿರಾತವೇಷವನ್ನು ತಾಳಿ, ಸುವರ್ಣವೃಕ್ಷದಂತೆ ತೋರುತ್ತ, ಎರಡನೇ ಮೇರುಪರ್ವತದಂತೆ ಮಹೋನ್ನತನಾಗಿ ಕಾಣಿಸುತ್ತ, ಪ್ರಕಾಶಮಾನವಾದ ಧನುಸ್ಸನ್ನೂ ಸರ್ಪಗಳಿಗೆ ಸಮಾನವಾದ ಬಾಣಗಳನ್ನೂ ಧರಿಸಿಕೊಂಡು, ಮೂರ್ತೀಭವಿಸಿದ ಯಜ್ಞೇಶ್ವರನೋಪಾದಿಯಲ್ಲಿ ಪ್ರಕಾಶಿಸುತ್ತ, ತನಗೆ ಸಮಾನವಾದ ನೇಮವೂ ವೇಷವೂ ಉಳ್ಳ ಪಾರ್ವತೀದೇವಿಯಿಂದಲೂ ನಾನಾವಿಧವಾದ ವೇಷಗಳನ್ನು ತಾಳಿದ ಪ್ರಮಥಗಣದಿಂದಲೂ ಇನ್ನೂ ಅನೇಕಮಂದಿ ಸ್ತ್ರೀಯರಿಂದಲೂ ಕೂಡಿ, ಶೀಘ್ರವಾಗಿ ಹೊರಟು, ಅರ್ಜುನನಿರುವ ಸ್ಥಳವನ್ನು ಸೇರಲು, ಆ ಸ್ಥಳವು ಬಹಳ ಶೋಭಿಸಿತು. ಆಗ ಗಿರಿನದಿಗಳ ಶಬ್ದವೂ ಪಕ್ಷಿಗಳ ಧ್ವನಿಯೂ ಒಂದು ಕ್ಷಣದಲ್ಲಿ ಅಡಗಲು ಆ ವನವು ನಿಶ್ಶಬ್ದವಾಯಿತು. ಬಳಿಕ ಆ ಈಶ್ವರನು ಆಯಾಸವಿಲ್ಲದೆ ಸಕಲ ಕಾರ್ಯಗಳನ್ನೂ ಮಾಡುವ ಶಕ್ತಿಯುಳ್ಳ ಆ ಅರ್ಜುನನ ಸಮೀಪಕ್ಕೆ ಹೋಗಿ, ಹಂದಿಯ ರೂಪವನ್ನು ತಾಳಿ ಅರ್ಜುನನನ್ನು ಸಂಹರಿಸಬೇಕೆಂದು ಕುತೂಹಲಪಡುತ್ತ ಅದ್ಭುತಾಕಾರನಾಗಿ ಬರುತ್ತಿದ್ದ ದನುಪುತ್ರನಾದ ಮೂಕನೆಂದು ಪ್ರಸಿದ್ಧನಾದ ದುಷ್ಟದಾನವನನ್ನು ನೋಡಿದನು. ಆ ಕಾಲದಲ್ಲಿ ಅರ್ಜುನನೂ ಆತನನ್ನು ನೋಡಿ, ಗಾಂಡೀವಧನುಸ್ಸನ್ನು ಹಿಡಿದು, ಅದಕ್ಕೆ ಹೆದೆಯನ್ನೇರಿಸಿ, ಪ್ರತಿಧ್ವನಿಹುಟ್ಟುವಂತೆ ಧನುಷ್ಟಂಕಾರವನ್ನು ಮಾಡಿ, ಸರ್ಪಗಳಿಗೆ ಸಮಾನವಾದ ಬಾಣಗಳನ್ನು ತೊಟ್ಟು, ಆ ದಾನವನನ್ನು ಕುರಿತು "ಎಲೈ ದುಷ್ಟದಾನವನೆ, ನಿರಪರಾಧಿಯಾಗಿ ಇಲ್ಲಿ ಬಂದಿರುವ ನನ್ನನ್ನು ನೀನು ಸಂಹರಿಸಬೇಕೆಂದು ಅಪೇಕ್ಷಿಸುತ್ತಿರುವೆ ಯಾದ್ದರಿಂದ, ಮೊದಲೇ ನಾನು

ನಿನ್ನನ್ನು ಯಮನ ಮನೆಗೆ ಕಳುಹಿಸಿಕೊಡುವೆನು" ಎಂದು ಹೇಳುತ್ತಾ, ಅವನನ್ನು ಸಂಹರಿಸುವವಕ್ಕೆ ಉದ್ಯುಕ್ತನಾದನು. ಆಗ ಅದನ್ನು ನೋಡಿ ಕಿರಾತರೂಪಿಯಾದ ಈಶ್ವರನು ಜಾಗ್ರತೆಯಾಗಿ ಅರ್ಜುನನನ್ನು ತಡೆದು "ಇಂದ್ರಕೀಲಪರ್ವತದಂತಿರುವ ಈ ಕಾಡುಹಂದಿಯನ್ನು ನಾನೇ ಮೊದಲು ಬೇಟೇ ಆಡಬೇಕೆಂದು ಅಟ್ಟಿಕೊಂಡು ಬಂದಿರುವೆನು. ಹೊಡೆಯುವವಕ್ಕೆ ನೀನ್ಯಾರು?" ಎಂದು ನುಡಿದನು. ಆ ಮಾತನ್ನು ಲಕ್ಷ್ಯಮಾಡದೆ, ಅರ್ಜುನನು ಆ ಕಾಡುಹಂದಿಯ ಮೇಲೆ ಬಾಣವನ್ನು ಪ್ರಯೋಗಿಸಲು, ಆ ಸಮಕಾಲದಲ್ಲೇ ಮಹಾನುಭಾವನಾದ ಈಶ್ವರನೂ ಕೂಡ ಆ ಕಾಡುಹಂದಿಯ ಮೇಲೆ ಅಗ್ನಿಜ್ವಾಲೆಗೆ ಸಮಾನವಾಗಿಯೂ ಸಿಡಿಲಿಗೆ ಸಾಟಿಯಾಗಿಯೂ ಇರುವ ಬಾಣವನ್ನು ಪ್ರಯೋಗಿಸಿದನು. ಅರ್ಜುನನಿಂದಲೂ ಈಶ್ವರನಿಂದಲೂ ಬಿಡಲ್ಪಟ್ಟ ಆ ಯೆರಡು ಬಾಣಗಳೂ ವರಾಹರೂಪಿಯಾದ ಆ ದಾನವನ ಪರ್ವತೋಪಮಾನವಾದ ಶರೀರದಲ್ಲಿ ಏಕಕಾಲದಲ್ಲಿ ಬಿದ್ದವು. ಆ ಎರಡುಬಾಣಗಳ ಸಂಘಟ್ಟನದಿಂದ ಉಂಟಾದ ಶಬ್ದವು ಪರ್ವತದ ಮೇಲೆ ಬಿದ್ದ ಇಂದ್ರನ ಆಯುಧವಾದ ಸಿಡಿಲಿನ ಶಬ್ದಕ್ಕೆ ಸಮಾನವಾಗಿತ್ತು. ಆಗ ಆ ಕಾಡಹಂದಿಯು ಸರ್ಪಗಳಂತೆ ಕ್ರೂರವಾಗಿ ಪ್ರಕಾಶಮಾನವಾದ ಅನೇಕ ಬಾಣಗಳಿಂದ ಪೆಟ್ಟುಬಿದ್ದು, ಭಯಂಕರವಾದ ತನ್ನ ನಿಜವಾದ ದಾನವರೂಪವನ್ನು ಹೊಂದಿ ಮರಣವನ್ನು ಹೊಂದಿತು.

ಬಳಿಕ ಅರ್ಜುನನು, ಅನೇಕಸ್ತ್ರೀಯರೊಡಗೂಡಿ ಕಿರಾತವೇಷದಿಂದ ತನ್ನನ್ನು ವ್ಯಕ್ತಪಡಿಸಿಕೊಳ್ಳದೆ ಸುವರ್ಣದಂತೆ ಪ್ರಕಾಶಮಾನನಾಗಿರುವ ಆ ಪುರುಷಶ್ರೇಷ್ಠನನ್ನು ನೋಡಿ, ಪ್ರೀತಿಯುಕ್ತನಾಗಿ ನಸುನಗುತ್ತ "ನೀನು ಯಾರು? ಶೂನ್ಯವಾದ ಈ ಅರಣ್ಯದಲ್ಲಿ ಸ್ತ್ರೀಯರೊಡಗೂಡಿ ಸಂಚರಿಸುತ್ತಿರುವೆ? ಸುವರ್ಣಚ್ಛಾಯನಾದ ನಿನಗೆ ಘೋರವಾದ ಈ ಅರಣ್ಯದಲ್ಲಿ ಭಯವುಂಟಾಗುವದಿಲ್ಲವೆ? ನಾನು ಅಟ್ಟಿಕೊಂಡು ಬಂದ ಈ ಕಾಡುಹಂದಿಯನ್ನು ನೀನು ಯಾತಕ್ಕೆ ಹೊಡೆದೆ? ಇಲ್ಲಿಗೆ ಬಂದ ಈ ದೈತ್ಯನನ್ನು ನಾನೇ ಮೊದಲು ಅಟ್ಟಿದವನು. ಸ್ವೇಚ್ಛೆಯಿಂದ ಇದರ ಮೇಲೆ ಬಾಣವನ್ನು ಬಿಟ್ಟು ನನಗೆ ಅವಮಾನಮಾಡಿದ ನೀನು ಜೀವಸಹಿತ ನನ್ನಿಂದ ಬಿಡಿಸಿಕೊಂಡು ಹೋಗಲಾರೆ. ಈಗ ನೀನು ನನ್ನ ವಿಷಯದಲ್ಲಿ ಹೀಗೆ ಮಾಡಿದ್ದು ಬೇಟೆಯ ಧರ್ಮವಲ್ಲ. ಆದಕಾರಣ ಈ ಪರ್ವತವನ್ನು ಆಶ್ರಯಿಸಿರುವ ನಿನ್ನ ಪ್ರಾಣವನ್ನು ಕಳೆದುಬಿಡುವೆನು" ಎಂದು ನುಡಿದನು. ಆ ಮಾತನ್ನು ಕೇಳಿ ಕಿರಾತರೂಪಿಯಾದ ಈಶ್ವರನು ನಸುನಗುತ್ತ ಸವ್ಯಸಾಚಿಯಾದ ಅರ್ಜುನನನ್ನು ಕುರಿತು ಮೃದುಮಧುರವಾಗಿ ಮಾತನಾಡಲುಪಕ್ರಮಿಸಿ, "ಎಲೈ ವೀರನೆ, ನನ್ನ ನಿಮಿತ್ತವಾಗಿ ನಿನಗೆ ಈ ವನದಲ್ಲಿ ಭಯಕೆಲಸವಿಲ್ಲ. ಈ ಸ್ಥಳವು ಯಾವಾಗಲೂ ವನವಾಸ ಮಾಡತಕ್ಕ ನಮಗೆ ಯೋಗ್ಯವಾದದ್ದು. ನೀನು ಯಾತಕ್ಕೋಸ್ಕರ ಈ ಪ್ರದೇಶದಲ್ಲಿ ಅತಿ ಕಷ್ಟವಾದ ವಾಸವನ್ನು ಬಯಸಿದೆ? ಎಲೈ ತಪಸ್ವಿಯೆ, ಅನೇಕ ಪ್ರಾಣಿಗಳಿಗೆ ಆಶ್ರಯವಾದ ಘೋರವಾದ ಈ ವನದಲ್ಲಿ ನಾವು ವಾಸಮಾಡಬಲ್ಲೆವು. ಯಜ್ಞೇಶ್ವರನಂತೆ ತೇಜಸ್ವಿಯಾಗಿಯೂ ಸುಕುಮಾರನಾಗಿಯೂ ಸುಖಪಡುವದಕ್ಕೆ ಯೋಗ್ಯನಾಗಿಯೂ ಇರುವ ನೀನು ಶೂನ್ಯವಾದ ಈ ವನದಲ್ಲಿ ಒಬ್ಬನೇ ಹ್ಯಾಗೆ ಸಂಚರಿಸಬಲ್ಲೆ?" ಎನಲು, ಅದನ್ನು ಕೇಳಿ ಅರ್ಜುನನು "ನಾನು ಗಾಂಡೀವಧನುಸ್ಸನ್ನೂ ಅಗ್ನಿಗೆ ಸಮಾನವಾದ ಬಾಣವನ್ನೂ ಧರಿಸಿ, ಈ ಘೋರವಾದ ಅರಣ್ಯದಲ್ಲಿ ಎರಡನೇ ಕುಮಾರಸ್ವಾಮಿಯಂತೆ ವಾಸಮಾಡುತ್ತಿರುವೆನು. ನನ್ನನ್ನು ಸಂಹರಿಸಬೇಕೆಂದು ಬಂದ ವರಾಹರೂಪಿಯಾದ ಈ ಘೋರದಾನವನನ್ನು ನಾನು ಸಂಹರಿಸಿದೆನು" ಎಂದು ನುಡಿದನು. ಆ ಮಾತನ್ನು ಕೇಳಿ, ಕಿರಾತರೂಪಿಯಾದ ಈಶ್ವರನು "ಎಲೈ ಮಂದಾತ್ಮನೆ, ಈ ದಾನವನು ನನ್ನ ಧನುಸ್ಸಿನಿಂದ ಬಿಟ್ಟ ಬಾಣಗಳ ಪೆಟ್ಟಿನಿಂದ ಹತನಾಗಿ ಯಮಲೋಕವನ್ನು ಹೊಂದಿದನು. ಇವನನ್ನು ಮೊದಲು ಗುರಿಯಿಟ್ಟು ಅಟ್ಟಿಕೊಂಡು ಬಂದವನು ನಾನೇ; ನನ್ನ ಪೆಟ್ಟಿನಿಂದಲೇ ಇವನು ಮೃತನಾದದ್ದು. ಹೀಗಿದ್ದರೂ ಬಲಶಾಲಿಯೆಂಬ ಕೊಬ್ಬಿನಿಂದ ನೀನು ನಿನ್ನ ದೋಷವನ್ನು ಕಂಡವರ ಮೇಲೆ ಹಾಕುತ್ತಿರುವೆ. ಇದು ಸರಿಯಾದದ್ದಲ್ಲ. ನೀನು ಬಹಳ ಗರ್ವಿಷ್ಠನಾಗಿರುವೆ. ನಾನುಬೇರೆ ನಿನ್ನನ್ನು ಜೀವಸಹಿತವಾಗಿ ಬಿಡತಕ್ಕವನಲ್ಲ. ಸಿಡಿಲಿನಂತಿರುವ ಬಾಣಗಳನ್ನು ನಿನ್ನಮೇಲೆ ಬಿಡುತ್ತೇನೆ. ಅದನ್ನು ಸ್ಥಿರವಾಗಿ ನಿಂತು ತಡೆದುಕೊಂಡು ನೀನೂ ನನ್ನಮೇಲೆ ಬಾಣಗಳನ್ನು ಪ್ರಯೋಗಿಸಿ, ನಿನ್ನ ಸರ್ವಶಕ್ತಿಯನ್ನೂ ತೋರಿಸು" ಎಂದು ನುಡಿದನು. ಆ ಮಾತನ್ನು ಕೇಳಿ ಅರ್ಜುನನು ಬಹಳವಾಗಿ ಕೋಪಗೊಂಡು, ಆ ದೇವದೇವನ ಮೇಲೆ ಬಾಣಗಳನ್ನು ಪ್ರಯೋಗಿಸಲು, ಆತನು ಸಂತೋಷ

ದಿಂದ ಆ ಬಾಣಗಳನ್ನು ತಡೆದುಕೊಂಡು “ ಎಲೈ ಮೂಢನೆ, ಇನ್ನೂ ನಿನ್ನ ಶಕ್ತಿಯಿರುವಷ್ಟು ನನ್ನಮೇಲೆ ಮರ್ಮಭೇದಕವಾದ ಬಾಣಗಳನ್ನು ಪ್ರಯೋಗಿಸು ” ಎಂದು ನುಡಿದನು. ಅದನ್ನು ಕೇಳಿ ಅರ್ಜ-ನನು ತಡೆಮಾಡದೆ ಆತನ ಮೇಲೆ ಬಾಣವೃಷ್ಟಿಯನ್ನೇ ಕರೆದನು. ಬಳಿಕ ಅವರಿಬ್ಬರೂ ಕ್ರೋಧಾವೇಶದಿಂದ ಜಾಜ್ವಲ್ಯಮಾನರಾಗಿ ವಿಷಸರ್ಪಗಳಂತೆ ಕ್ರೂರವಾದ ಬಾಣಗಳಿಂದ ಪರಸ್ಪರವಾಗಿ ಹೊಡೆದಾಡಲುಪಕ್ರಮಿಸಿದರು. ಆಗ ಅರ್ಜ-ನನು ಕಿರಾತರೂಪಿಯಾದ ಈಶ್ವರನ ಮೇಲೆ ಬಾಣವೃಷ್ಟಿಯನ್ನು ಕರೆಯಲು, ಅದನ್ನೂ ಆತನು ಸಂತುಷ್ಟವಾದ ಮನಸ್ಸಿನಿಂದ ಮುಹೂರ್ತಮಾತ್ರ ತಡೆದುಕೊಂಡು, ತನ್ನ ಶರೀರದಲ್ಲಿ ಸ್ವಲ್ಪವೂ ಗಾಯವಿಲ್ಲದೆ ಪರ್ವತದಂತೆ ಚಲಿಸದೆ ನಿಂತನು. ಅರ್ಜುನನು ತನ್ನ ಬಾಣವೃಷ್ಟಿಯು ಆತನಲ್ಲಿ ವ್ಯರ್ಥವಾದದ್ದನ್ನು ನೋಡಿ ಅಧಿಕವಾಗಿ ಆಶ್ಚರ್ಯಪಡುತ್ತ, ಭಾಪುಭಾಪು ಎಂದು ಆತನನ್ನು ಶ್ಲಾಘಿಸಿ, “ ಹಿಮವತ್ಪರ್ವತವನ್ನು ಆಶ್ರಯಿಸಿಕೊಂಡಿರುವ ಸುಕುಮಾರಾಂಗನಾದ ಈ ಕಿರಾತನು ಗಾಂಡೀವಧನುಸ್ಸಿನಿಂದ ಬಿಟ್ಟ ಬಾಣಗಳನ್ನು ಸಹಿಸಿಕೊಂಡು ಸ್ವಲ್ಪವೂ ಖೇದಪಡದೆ ಇರುವನಲ್ಲ! ಈತನು ಯಾರು! ಸಾಕ್ಷಾದ್ದೇವದೇವನಾದ ರುದ್ರನೋ, ಯಕ್ಷನೋ, ದೇವತೆಯೋ, ದಾನವನೋ, ತಿಳಿಯದಲ್ಲಾ! ಆದರೆ ಶ್ರೇಷ್ಠವಾದ ಈ ಪರ್ವತದಲ್ಲಿ ದೇವತೆಗಳು ಸೇರುವದುಂಟು. ಅನೇಕಪ್ರಕಾರವಾಗಿ ನಾನು ಬಿಟ್ಟ ಬಾಣಗಳ ವೇಗವನ್ನು ಸಹಿಸಬೇಕಾದರೆ, ಪಿನಾಕಪಾಣಿಯಾದ ಈಶ್ವರ ಹೊರತು ಮತ್ತೊಬ್ಬನು ಸಮರ್ಥನಾಗುವನೆ? ಈತನು ಈಶ್ವರನಿಗಿಂತಲೂ ಬೇರೆ ಮತ್ತೊಬ್ಬ ಸಮರ್ಥನಾದ ದೇವತೆಯೇ ಆಗಲಿ ಯಕ್ಷನೇ ಆಗಲಿ ಆಗಿದ್ದರೆ, ಇವನನ್ನು ತೀಕ್ಷ್ಣವಾದ ಬಾಣಗಳಿಂದ ನಾನು ಯಮಪಟ್ಟಣಕ್ಕೆ ಕಳುಹಿಸುವೆನು ” ಎಂದು ನಿಶ್ಚಯಿಸಿಕೊಂಡು, ಉತ್ಸಾಹದಿಂದ ಸೂರ್ಯನು ಕಿರಣಗಳನ್ನು ಪ್ರಸರಿಸುವಂತೆ ಮರ್ಮಭೇದಕವಾದ ನಾರಾಚಗಳೆಂಬ ಬಾಣವಿಶೇಷಗಳನ್ನು ಆತನ ಮೇಲೆ ಅನೇಕಪ್ರಕಾರವಾಗಿ ಪ್ರಯೋಗಿಸಿದನು. ಲೋಕಪೂಜ್ಯನಾದ ಈಶ್ವರನು ಸಂತುಷ್ಟಹೃದಯನಾಗಿಯೇ, ಪರ್ವತವು ಆನೆಕಲ್ಲುಮಳೆಯನ್ನು ಸಹಿಸುವಂತೆ ಅವುಗಳನ್ನೂ ಸಹಿಸಿಕೊಂಡನು. ಈಪ್ರಕಾರ ಆ ಬಂದು ಕ್ಷಣದೊಳಗಾಗಿ ತನ್ನ ಬಾಣಗಳೆಲ್ಲಾ ಮುಗಿದುಹೋಗಲು, ಅದನ್ನು ತಿಳಿದು ಅರ್ಜುನನು ಬಹಳವಾಗಿ ಭಯಪಟ್ಟು, ಮೊದಲು ಖಾಂಡವದಹನಕಾಲದಲ್ಲಿ ಪ್ರಸನ್ನನಾಗಿ ತನಗೆ ಅಕ್ಷಯವಾದ ಬತ್ತಳಿಕೆಗಳನ್ನು ಕೊಟ್ಟ ಯಜ್ಞೇಶ್ವರನನ್ನು ನೆನೆದು, ‘ ಆಹಾ! ಬಾಣಗಳೆಲ್ಲಾ ಮುಗಿದುಹೋದವಲ್ಲಾ! ಇನ್ನು ಧನುಸ್ಸಿನಿಂದ ಏನನ್ನು ಪ್ರಯೋಗಿಸಲಿ? ಈ ಪುರುಷನು ಯಾರೋ ತಿಳಿಯದು. ನನ್ನ ಬಾಣಗಳನ್ನೆಲ್ಲಾ ನುಂಗಿಬಿಟ್ಟನು. ಶೂಲಾಗ್ರದಿಂದ ಆನೆಯನ್ನು ಕೊಲ್ಲುವಂತೆ ಈತನನ್ನು ಧನುಸ್ಸಿನ ಕೊನೆಯಿಂದ ಸಂಹರಿಸಿ ದಂಡಪಾಣಿಯಾದ ಯಮನ ಮನೆಗೆ ಕಳುಹಿಸಿಕೊಡುವೆನೆಂದು ಯೋಚಿಸಿ, ಧನುಸ್ಸಿನ ಹೆದೆಯಿಂದ ಆ ಕಿರಾತರೂಪನಾದ ಈಶ್ವರನನ್ನು ಸೆಳೆದುಕೊಂಡು, ಧನುಸ್ಸಿನ ಕೊನೆಯಿಂದ ಹೊಡೆದು, ವಜ್ರಕ್ಕೆ ಸಮಾನವಾದ ಮುಷ್ಟಿಯಿಂದ ಗುದ್ದಿದನು.’ ಹೀಗೆ ಪೆಟ್ಟುತಿಂದ ಆ ಕಿರಾತೇಶ್ವರನು ಆ ಗಾಂಡೀವಧನುಸ್ಸನ್ನೇ ನುಂಗಿಬಿಟ್ಟನು. ಬಳಿಕ ಮಹಾವೀರನಾದ ಅರ್ಜುನನು ಯುದ್ಧವನ್ನು ಕೊನೆಮುಟ್ಟಿಸಬೇಕೆಂಬ ಅಪೇಕ್ಷೆಯಿಂದ ಖಡ್ಗವನ್ನು ಹಿಡಿದು, ವೇಗದಿಂದ ಆ ಕಿರಾತೇಶ್ವರನ ಸಮೀಪಕ್ಕೆ ಹೋಗಿ, ಪರ್ವತದಮೇಲೆ ಪ್ರಯೋಗಿಸಿದರೂ ತುಂಡಾಗದೆ ಇರತಕ್ಕ ತೀಕ್ಷ್ಣವಾದ ಆ ಖಡ್ಗವನ್ನು ಭುಜಬಲದಿಂದ ಆತನ ಶಿರಸ್ಸಿನ ಮೇಲೆ ಪ್ರಯೋಗಿಸಲು, ಆ ಖಡ್ಗವು ಆತನ ಶಿರಸ್ಸಿಗೆ ತಗಲಿದಮಾತ್ರಕ್ಕೆ ಪುಡಿಪುಡಿಯಾಗಿ ಹೋಯಿತು. ಅನಂತರದಲ್ಲಿ ಅರ್ಜುನನು ಮರಗಳಿಂದಲೂ ಕಲ್ಲುಗಳಿಂದಲೂ ಆತನಸಂಗಡ ಹೋರಾಡಲುಪಕ್ರಮಿಸಿದನು. ಅದೆಲ್ಲವನ್ನೂ ಆ ದೇವದೇವನು ನುಂಗಿಬಿಟ್ಟನು. ಆ ಬಳಿಕ ಮಹಾಬಲಶಾಲಿಯಾದ ಅರ್ಜುನನು ಮುಖದಲ್ಲಿ ಕ್ರೋಧಾಗ್ನಿಯು ಪ್ರಜ್ವಲಿಸುತ್ತಿರಲು, ವಜ್ರಾಯುಧಕ್ಕೆ ಸಮಾನವಾದ ಮುಷ್ಟಿಗಳಿಂದ ಯಾರಿಂದಲೂ ಜಯಿಸಲಶಕ್ಯನಾದ ಕಿರಾತರೂಪಿಯಾದ ಆತನನ್ನು ಹೊಡೆದನು. ಆಗ ಷಡ್ಗುಣೈಶ್ವರ್ಯಸಂಪನ್ನನಾದ ಮಹಾದೇವನು ಅತಿದಾರುಣವಾಗಿಯೂ ಸಿಡಿಲಿಗೆ ಸಮಾನವಾಗಿಯೂ ಇರುವ ತನ್ನ ಮುಷ್ಟಿಗಳಿಂದ ಅರ್ಜುನನನ್ನು ಮರ್ದನಮಾಡಿದನು. ಹೀಗೆ ಅವರಿಬ್ಬರೂ ಮುಷ್ಟಿಯುದ್ಧವನ್ನು ಮಾಡುತ್ತಿರಲು, ಛಟಛಟ ಎಂಬ ಶಬ್ದವು ಅತಿ ಘೋರವಾಗಿ ಕೇಳಿಸಿತು. ಇಂದ್ರ ವೃತ್ರರೋಪಾದಿಯಲ್ಲಿ ಮುಷ್ಟಿಯುದ್ಧವನ್ನು ಮಾಡುತ್ತಿದ್ದ ಅವರಿಬ್ಬರ ಹೋರಾಟವು ಬಂದು ಮುಹೂರ್ತಕಾಲ ಭಯಂಕರವಾಗಿತ್ತು. ಆ ಸಮಯದಲ್ಲಿ ಬಲಶಾಲಿಯಾದ

ಅರ್ಜುನನು ತನ್ನ ಎದೆಯಿಂದ ಆ ಕಿರಾತೇಶ್ವರನನ್ನು ಪೀಡಿಸಲು, ಬಲಶಾಲಿಯಾದ ಆತನು ಬಹಳವಾಗಿ ಹೆಣಗಾಡು ತ್ತಿರುವ ಅರ್ಜುನನನ್ನು ಪೆಟ್ಟಿಕ್ಕಿದನು. ಈ ಪ್ರಕಾರ ಅವರಿಬ್ಬರೂ ಭುಜದಿಂದ ಭುಜವನ್ನೂ ಎದೆಯಿಂದ ಎದೆ ಯನ್ನೂ ತಾಕಿಸುತ್ತ ಹೆಣಗಾಡುತ್ತಿರಲು, ಅವರ ಶರೀರದಲ್ಲಿ ಕಿಡಿಗಳಿಂದಲೂ ಹೊಗೆಯಿಂದಲೂ ಕೂಡಿದ ಅಗ್ನಿಯು ಉತ್ಪನ್ನವಾಯಿತು. ಬಳಿಕ ಮಹಾದೇವನು ಅರ್ಜುನನಿಗೆ ಮೂರ್ಛೆಯುಂಟಾಗುವ ಹಾಗೆ ಆತನ ಶರೀರವನ್ನು ತನ್ನ ಶರೀರದಿಂದ ಬಲವಾಗಿ ಪೀಡಿಸಿ, ಕೋಪದಿಂದ ತನ್ನ ಪರಾಕ್ರಮವನ್ನು ತೋರಿಸಲು, ದೇವದೇವನಿಂದ ಬಲವಾಗಿ ಆಕ್ರಮಿಸಲ್ಪಟ್ಟು ಕೈಕಾಲುಗಳು ಸೋತು, ಮುದುರಿ ಮೊಟ್ಟೆಕಟ್ಟಿದಂತೆ ಕಾಣಿಸುತ್ತಿದ್ದ ಅರ್ಜುನನು ಉಸುರು ಕೂಡ ಆಡದೆ ನಿಶ್ಚೇಷ್ಟನಾಗಿ ಮೃತನಾದವನಂತೆ ನೆಲದಲ್ಲಿ ಬಿದ್ದಿದ್ದು, ಒಂದು ಮುಹೂರ್ತಕಾಲದಮೇಲೆ ಮೂರ್ಛೆ ಯನ್ನು ತಿಳಿದು ಎದ್ದು, ಮೈಯೆಲ್ಲಾ ರಕ್ತವಾಗಿ ಬಹುದುಃಖಪಡುತ್ತ, ರಕ್ಷಕನಾದ ಈಶ್ವರನಿಗೆ ಶರಣಾಗತನಾಗಿ, ಅಲ್ಲೇ ಮೃತ್ತಿಕೆಯಿಂದ ಒಂದು ಶಿವಲಿಂಗವನ್ನು ಮಾಡಿ ಅದರಲ್ಲಿ ಪಿನಾಕಪಾಣಿಯಾದ ಈಶ್ವರನನ್ನು ಭಾವಿಸಿ, ಪುಷ್ಪ ಗಳಿಂದ ಪೂಜಿಸಲು, ಆ ಪುಷ್ಪಗಳು ಕಿರಾತರೂಪಿಯಾದ ದೇವದೇವನ ತಲೆಯಮೇಲೆ ಇದ್ದದ್ದನ್ನು ನೋಡಿ ಸಂತೋ ಷಪಟ್ಟು, ಸ್ವಸ್ಥಚಿತ್ತನಾಗಿ ಆತನ ಚರಣಗಳಿಗೆ ನಮಸ್ಕಾರಮಾಡಿದನು. ಆದರಿಂದ ಈಶ್ವರನು ಸಂತುಷ್ಟನಾಗಿ ಮೇಘಧ್ವನಿಯಂತೆ ಗಂಭೀರವಾದ ಧ್ವನಿಯಿಂದ ಶರೀರದ ಸಂಧಿಬಂಧಗಳು ಸಡಲಿಹೋಗಿ ಆಶ್ಚರ್ಯಪಡುತ್ತಿರುವ ಅರ್ಜುನ ನನ್ನು ನೋಡಿ ಮಾತನಾಡಲುಪಕ್ರಮಿಸಿದನು: "ಎಲೈ ಅರ್ಜುನನೆ, ನಿನ್ನ ಅಸದೃಶವಾದ ಸಾಹಸಕ್ಕೂ ಪರಾಕ್ರ ಮಕ್ಕೂ ಧೈರ್ಯಕ್ಕೂ ನಾನು ಮೆಚ್ಚಿದೆನು. ನಿನಗೆ ಸಮಾನನಾದ ಕ್ಷತ್ರಿಯನು ಯಾವನೂ ಇಲ್ಲ. ನೀನು ತೇಜ ಸ್ಸಿನಲ್ಲೂ ಪರಾಕ್ರಮದಲ್ಲೂ ನನಗೆ ಸಮಾನನಾದವನು. ಎಲೈ ಬಾಹುಶಾಲಿಯೆ, ನಿನ್ನ ವಿಷಯದಲ್ಲಿ ನಾನು ಸಂತು ಷ್ಟನಾಗಿರುವೆನು. ನನ್ನನ್ನು ನೋಡು. ನೀನು ಪುರಾತನನಾದ ಋಷಿಯು. ನಿನಗೆ ದಿವ್ಯದೃಷ್ಟಿಯನ್ನು ಕೊಡುವೆನು ನೋಡು. ನೀನು ರಣರಂಗದಲ್ಲಿ ಸಕಲಶತ್ರುಗಳನ್ನೂ ದೇವತೆಗಳನ್ನೂ ಕೂಡ ಜಯಿಸುವೆ. ಮತ್ತೊಂದು ಅಸ್ತ್ರದಿಂದ ನಿವಾರಣೆ ಮಾಡಲಶಕ್ಯವಾದ ಒಂದು ಅಸ್ತ್ರವನ್ನು ನಿನಗೆ ನಾನು ಪ್ರೀತಿಯಿಂದ ಕೊಡು ವೆನು. ನಾನು ಕೊಡುವ ಅಸ್ತ್ರವನ್ನು ಕ್ಷಣಕಾಲದಲ್ಲಿ ಧಾರಣೆಮಾಡಿಕೊಳ್ಳಲು ನೀನು ಸಮರ್ಥನಾದವನು" ಎಂದನು. ಶೂರನಾದ ಅರ್ಜುನನು ದೇವದೇವನಾಗಿಯೂ ಶೂಲಪಾಣಿಯಾಗಿಯೂ ಕೈಲಾಸಪತಿಯಾಗಿಯೂ ಮಹಾತೇಜಸ್ವಿಯಾಗಿಯೂ ಪಾರ್ವತೀಸಮೇತನಾಗಿಯೂ ಇರುವ ಈಶ್ವರನನ್ನು ಕಂಡು, ಸಾಷ್ಟಾಂಗನಮಸ್ಕಾರ ವನ್ನು ಮಾಡಿ, ಆತನನ್ನು ಪ್ರಸನ್ನೀಕರಿಸಿಕೊಂಡು, "ಕಪರ್ದಿಯಾಗಿಯೂ ಸಕಲ ದೇವತೆಗಳಿಗೂ ಸ್ವಾಮಿಯಾ ಗಿಯೂ ನೀಲಕಂಠನಾಗಿಯೂ ಜಟಾಧರನಾಗಿಯೂ ತ್ರಿನೇತ್ರನಾಗಿಯೂ ಇರುವ ಎಲೈ ಮಹಾದೇವನೆ, ನಿನ್ನನ್ನು ಸಕಲ ಕಾರಣಗಳಿಗೂ ಮೂಲಕಾರಣನಾದವನೆಂತಲೂ, ಜಗತ್ತನ್ನು ನಿರ್ಮಾಣಮಾಡಿದವನೆಂತಲೂ, ಸಕಲ ದೇವತೆ ಗಳಿಗೂ ಅಸುರರಿಗೂ ಮನುಷ್ಯರಿಗೂ ಅಜೇಯನಾದವನೆಂತಲೂ ನಾನು ತಿಳಿದಿರುವೆನು. ನೀನೇ ಶಿವರೂಪನಾ ಗಿಯೂ, ವಿಷ್ಣುರೂಪನಾಗಿಯೂ, ಹರಿಹರಾತ್ಮಕನಾಗಿಯೂ, ದಕ್ಷಬ್ರಹ್ಮನ ಯಜ್ಞವನ್ನು ನಾಶಮಾಡಿದವನಾಗಿ ಯೂ, ಫಾಲನೇತ್ರನಾಗಿಯೂ, ಸರ್ವವ್ಯಾಪಕನಾಗಿಯೂ, ಶೂಲಪಾಣಿಯಾಗಿಯೂ, ಸಕಲರ ಇಷ್ಟಾರ್ಥಗಳನ್ನು ಕೊಡತಕ್ಕವನಾಗಿಯೂ, ಕಿರಾತವೇಷಧಾರಿಯಾಗಿಯೂ, ಶುದ್ಧಸ್ವರೂಪನಾಗಿಯೂ ಇರುವೆ. ಇಂಥ ನಿನಗೆ ಸಾಷ್ಟಾಂಗನಮಸ್ಕಾರಗಳನ್ನು ಮಾಡುವೆನು. ಸಕಲ ಭೂತಗಳಿಗೂ ಈಶ್ವರನಾಗಿಯೂ, ಪ್ರಮಥಗಣಗಳಿಗೆ ಅಧಿಪತಿಯಾಗಿಯೂ, ಪ್ರಪಂಚಕ್ಕೆ ಕಾರಣಭೂತವಾದವುಗಳಿಗೆಲ್ಲಾ ಆದಿಕಾರಣಭೂತನಾಗಿಯೂ, ಪ್ರಕೃತಿಪುರುಷ ನನ್ನು ಅತಿಕ್ರಮಿಸಿದವನಾಗಿಯೂ, ಅತಿಸೂಕ್ಷ್ಮನಾಗಿಯೂ, ಸಕಲ ಪಾಪಪರಿಹಾರಕನಾಗಿಯೂ ಇರುವ ನಿನಗೆ ನಮಸ್ಕಾರವನ್ನು ಮಾಡುವೆನು. ಎಲೈ ಶಂಕರನೆ, ನನ್ನ ಅಪರಾಧವನ್ನು ನೀನು ಕ್ಷಮಿಸು. ನಾನು ನಿನ್ನ ದರ್ಶನ ಮಾಡಬೇಕೆಂಬ ಅಪೇಕ್ಷೆಯಿಂದ, ಸಕಲ ಋಷಿಗಳಿಗೂ ಆಶ್ರಯಭೂತವಾಗಿಯೂ ನಿನಗೆ ಪ್ರಿಯವಾಗಿಯೂ ಇರುವ ಈ ಇಂದ್ರಕೀಲಪರ್ವತಕ್ಕೆ ಬಂದೆನು. ಎಲೈ ಮಹಾನುಭಾವನಾದ ಈಶ್ವರನೆ, ಸಮಸ್ತರಿಂದಲೂ ವಂದ ನೀಯನಾದ ನೀನು ಪ್ರಸನ್ನನಾಗಬೇಕು. ನಿನ್ನ ಸಂಗಡ ಅತಿಸಾಹಸದಿಂದಲೂ ಅಜ್ಞಾನದಿಂದಲೂ ಹೋರಾಡಿ ಮಹಾ ಪರಾಧವನ್ನು ಮಾಡಿದೆನು. ಆ ಅಪರಾಧವನ್ನೆಣಿಸದೆ ನೀನು ಶರಣಾಗತನಾದ ನನ್ನಲ್ಲಿ ಕ್ಷಮೆಯನ್ನು ಮಾಡು"

ಎಂದು ಸ್ತೋತ್ರಮಾಡಿದನು. ಅದನ್ನು ಕೇಳಿ ವೃಷಭಧ್ವಜನಾದ ಮಹಾತೇಜೋವಂತನಾದ ಈಶ್ವರನು ಅರ್ಜುನನ ಕೈಯನ್ನು ಹಿಡಿದು, "ಎಲೈ ಅರ್ಜುನನೆ, ನಾನು ಕ್ಷಮಿಸೇ ಇರುವೆನು" ಎಂದು ಹೇಳಿ, ಸಂತುಷ್ಟನಾಗಿ ಎರಡು ತೋಳುಗಳಿಂದಲೂ ಬಾಚಿ ತಬ್ಬಿಕೊಂಡು, ಆತನನ್ನು ಕುರಿತು ಸಮಾಧಾನಪೂರ್ವಕವಾಗಿ ಈವಕ್ಷ್ಯ ಪ್ರಮಾಣಪ್ರಕಾರವಾಗಿ ಮಾತನಾಡಿದನು.

## ೪೧ನೇ ಅಧ್ಯಾಯ.—ಪರಮೇಶ್ವರನು ಅರ್ಜುನನಿಗೆ ಪಾಶುಪತಾಸ್ತ್ರವನ್ನು ಕೊಟ್ಟದ್ದು.

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಆ ಬಳಿಕ ದೇವದೇವನಾದ ಈಶ್ವರನು "ಎಲೈ ಸಮರ್ಥನಾದ ಅರ್ಜುನನೆ, ನೀನು ಪೂರ್ವಜನ್ಮದಲ್ಲಿ ನಾರಾಯಣನ ಸಹಾಯವುಳ್ಳವನಾಗಿ ನರನೆಂಬ ಋಷಿಯಾಗಿದ್ದು, ಬದರಿಕಾಶ್ರಮದಲ್ಲಿ ಅನೇಕಸಹಸ್ರವರ್ಷ ಉಗ್ರವಾದ ತಪಸ್ಸನ್ನು ಮಾಡುತ್ತಿದ್ದೆ. ಪುರುಷೋತ್ತಮನಾದ ವಿಷ್ಣುವಿನಲ್ಲಿಯೂ ನಿನ್ನಲ್ಲಿಯೂ ಅಧಿಕವಾದ ಸಾಮರ್ಥ್ಯವಿರುವದು. ನಿಮ್ಮಿಬ್ಬರ ಸಾಮರ್ಥ್ಯದಿಂದಲೇ ಈ ಪ್ರಪಂಚವು ನಿಂತಿರುವದು. ಇಂದ್ರನಿಗೆ ಸ್ವರ್ಗಲೋಕದಲ್ಲಿ ಪಟ್ಟಾಭಿಷೇಕವಾಗತಕ್ಕ ಕಾಲದಲ್ಲಿ, ಮೇಘಧ್ವನಿಯಂತೆ ಗಂಭೀರವಾದ ಧ್ವನಿಯುಳ್ಳ ಈ ಧನುಸ್ಸನ್ನು ಹಿಡಿದು ನೀನೂ ನಾರಾಯಣನೂ ಸಹ ದಾನವರನ್ನು ನಾಶಮಾಡಿದಿರಿ. ನಿನ್ನ ಹಸ್ತದಿಂದ ಧರಿಸುವದಕ್ಕೆ ಯೋಗ್ಯವಾದ ಯಾವ ಧನುಸ್ಸನ್ನು ನಾನು ಮಾಯೆಯಿಂದ ನುಂಗಿದೆನೋ, ಆ ಈಗಾಂಡೀವವೆಂಬ ಧನುಸ್ಸೂ, ನಿನಗೆ ಯೋಗ್ಯವಾದ ಈ ಅಕ್ಷಯವಾದ ಬತ್ತಳಿಕೆಗಳೂ, ಇದೋ ಮರಳಿ ನಿನ್ನನ್ನೇ ಸೇರುವವು. ನಿನ್ನ ಶರೀರವು ಯಥಾಪ್ರಕಾರ ದೃಢವಾಗಿ ನಿನ್ನ ಆಯಾಸವೆಲ್ಲಾ ಪರಿಹಾರವಾಗುವದು. ನಿನ್ನ ವಿಷಯದಲ್ಲಿ ನಾನು ಸಂತುಷ್ಟನಾಗಿರುವೆನು. ಎಲೈ ಅರ್ಜುನನೆ, ನೀನು ಸತ್ಯವಾದ ಪರಾಕ್ರಮವುಳ್ಳವನು. ನನ್ನ ದೆಸೆಯಿಂದ ನೀನು ಯಾವ ವರವನ್ನು ಬಯಸುವೆಯೋ, ಅದನ್ನು ನಾನು ಕೊಡುವೆನು ಸ್ವೀಕರಿಸು. ಮನುಷ್ಯರಲ್ಲಿ ನಿನಗೆ ಸಮಾನನಾದ ಪುರುಷನು ಯಾವನೂ ಇಲ್ಲ. ದೇವಲೋಕದಲ್ಲೂ ಕೂಡ ನಿನಗಿಂತಲೂ ಶ್ರೇಷ್ಠನಾದ ಕ್ಷತ್ರಿಯನು ಯಾವನೂ ಇಲ್ಲ" ಎಂದು ನುಡಿದನು.

ಬಳಿಕ ಅರ್ಜುನನು ಆ ದೇವದೇವನನ್ನು ಕುರಿತು "ಎಲೈ ಪ್ರಭುವಾದ ವೃಷಭಧ್ವಜನೆ, ನೀನು ಅಕ್ಕರೆಯಿಂದ ನನಗೆ ವರವನ್ನು ಕೊಡುವನಾದರೆ, ಬ್ರಹ್ಮಶಿರೋನಾಮಕವೂ ಭಯಂಕರವೂ ಆದ ಯಾವದಿವ್ಯಾಸ್ತ್ರದಿಂದ ನೀನು ಜಗತ್ತನ್ನು ನಾಶಮಾಡುವೆಯೋ, ಅಂಥ ಪಾಶುಪತಾಸ್ತ್ರವನ್ನು ನಾನು ಬೇಡುವೆನು. ಆ ಅಸ್ತ್ರವನ್ನು ಪಡೆದುಕೊಂಡು, ನಾನು ಕರ್ಣ ಭೀಷ್ಮ ದ್ರೋಣಾದಿಗಳೊಡನೆ ನನಗೆ ಪ್ರಾಪ್ತವಾಗುವ ಯುದ್ಧದಲ್ಲಿ ನಿನ್ನ ಅನುಗ್ರಹದಿಂದ ಅವರೆಲ್ಲರನ್ನೂ ನಿಗ್ರಹಿಸುವೆನು, ಮತ್ತು ಅನೇಕಮಂದಿ ದಾನವರನ್ನೂ ರಾಕ್ಷಸರನ್ನೂ ಭೂತಗಳನ್ನೂ ಪಿಶಾಚಗಳನ್ನೂ ಗಂಧರ್ವರನ್ನೂ ಸರ್ಪಗಳನ್ನೂ ಸಹ ಯುದ್ಧದಲ್ಲಿ ಆ ಅಸ್ತ್ರಬಲದಿಂದ ಸುಟ್ಟುಬಿಡುವೆನು. ಯಾವ ಪಾಶುಪತಾಸ್ತ್ರವನ್ನು ಅಭಿಮಂತ್ರಿಸಿದ ಮಾತ್ರಕ್ಕೆ ಅದರಿಂದ ಅನೇಕ ಶೂಲಾಯುಧಗಳೂ ಘೋರವಾದ ಗದಾಯುಧಗಳೂ ಸರ್ಪಗಳಂತಿರುವ ಬಾಣಗಳೂ ಹುಟ್ಟುವವೋ, ಅಂಥ ಪಾಶುಪತಾಸ್ತ್ರದಿಂದ ಭೀಷ್ಮ ದ್ರೋಣ ಕೃಪರೊಡನೆ ಯುದ್ಧಮಾಡಬೇಕೆಂಬುವದೇ ನನ್ನ ಮೊದಲನೇ ಪ್ರಾರ್ಥನೆಯಾಗಿರುವದು. ಎಲೈ ಪೂಜ್ಯನಾದ ಈಶ್ವರನೆ, ನಿನ್ನ ಅನುಗ್ರಹದಿಂದ ನಾನು ಈ ಮನೋರಥವನ್ನು ಪಡೆದು ಕೃತಕೃತ್ಯನಾಗಿ ಸಮರ್ಥನಾಗಬೇಕು" ಎನಲು, ಈಶ್ವರನು ಎಲೈ "ಲೋಕೈಕವೀರನಾದ ಅರ್ಜುನನೆ, ನನಗೆ ಪ್ರಿಯವಾದ ಪಾಶುಪತಾಸ್ತ್ರವನ್ನು ನಿನಗೆ ಕೊಡುವೆನು. ನೀನು ಆ ಅಸ್ತ್ರವನ್ನು ಗ್ರಹಿಸುವದರಲ್ಲಿಯೂ ಪ್ರಯೋಗಿಸುವದರಲ್ಲಿಯೂ ಉಪಸಂಹಾರ ಮಾಡುವದರಲ್ಲಿಯೂ ಸಮರ್ಥನಾಗಿರುವೆ. ಈ ಅಸ್ತ್ರವನ್ನು ಇಂದ್ರ ವರುಣ ಯಮ ಕುಬೇರ ವಾಯು ಮೊದಲಾದ ಯಾವ ದಿಕ್ಪಾಲಕರೂ ಅರಿಯರು; ಹೀಗಿರುವಲ್ಲಿ ಮನುಷ್ಯರೇನು ಬಲ್ಲರು? ಎಲೈ ಪಾರ್ಥನೆ, ಈ ಅಸ್ತ್ರವನ್ನು ದುಡುಕಿ ಅಲ್ಪಬಲನಾದ ಪುರುಷನ ಮೇಲೆ ಪ್ರಯೋಗಿಸಕೂಡದು. ಒಂದುವೇಳೆ ಪ್ರಯೋಗಿಸಿದಲ್ಲಿ, ಅದು ಜಗತ್ತನ್ನೇ ನಾಶಮಾಡಿಬಿಡುವದು. ಚರಾಚರಾತ್ಮಕವಾದ ಈ ಮೂರು ಲೋಕದಲ್ಲೂ ಈ ಅಸ್ತ್ರಕ್ಕೆ ಅವಧ್ಯನಾದವನೇ ಇಲ್ಲ.

ಈ ಅಸ್ತ್ರವನ್ನು ಮನಸ್ಸಂಕಲ್ಪಮಾತ್ರದಿಂದಲೂ ದರ್ಶನಮಾತ್ರದಿಂದಲೂ ವಾಙ್ಮಾತ್ರದಿಂದಲೂ ಬಾಣದಿಂದಲೂ ಪ್ರಯೋಗಿಸಬಹುದು" ಎಂದನು.

ಆ ಬಳಿಕ ಅರ್ಜುನನು ಶುಚಿರ್ಭೂತನಾಗಿ ಏಕಾಗ್ರಚಿತ್ತದಿಂದ ಮಹಾದೇವನ ಸನ್ನಿಧಿಗೆ ಹೋಗಿ "ಎಲೈ ವಿಶ್ವೇಶ್ವರನೆ, ಆ ಅಸ್ತ್ರವನ್ನು ನನಗೆ ಉಪದೇಶಮಾಡಬೇಕು" ಎಂದು ಪ್ರಾರ್ಥಿಸಲು, ಆಗ ಈಶ್ವರನು ಆ ಅಸ್ತ್ರದ ಪ್ರಯೋಗೋಪಸಂಹಾರಗಳ ರಹಸ್ಯವನ್ನು ಅರ್ಜುನನಿಗೆ ಉಪದೇಶಮಾಡಿದನು. ಬಳಿಕ ಆ ಅಸ್ತ್ರವು ಪಾರ್ವತೀಪತಿಯಾದ ಈಶ್ವರನ ಸನ್ನಿಧಿಯಲ್ಲಿ ಹ್ಯಾಗೆ ನಿಲ್ಲುವದೋ ಹಾಗೆ, ಮೂರ್ತಿಮಂತನಾದ ಯಮನಂತಿರುವ ಅರ್ಜುನನ ಸಮೀಪದಲ್ಲಿ ಬಂದು ನಿಲ್ಲಲು, ಅರ್ಜುನನು ಪ್ರೀತಿಯಿಂದ ಅದನ್ನು ಪರಿಗ್ರಹಿಸಿದನು. ಆ ಸಮಯದಲ್ಲಿ, ಪರ್ವತಗಳಿಂದಲೂ ಕಾಡುಗಳಿಂದಲೂ ಗ್ರಾಮಗಳಿಂದಲೂ ಪಟ್ಟಣಗಳಿಂದಲೂ ಗಣಿಗಳಿಂದಲೂ ಸಮುದ್ರದಿಂದಲೂ ಕೂಡಿರುವ ಭೂಮಿಯು ನಡುಗಿತು; ಆಕಾಶಮಾರ್ಗದಲ್ಲಿ ಶಂಖದುಂದುಭಿಭೇರೀಶಬ್ದವು ಮೊಳಗಿತು. ಆ ಮುಹೂರ್ತದಲ್ಲಿ ಅನೇಕ ಉತ್ಪಾತಗಳು ಬಾರಿಬಾರಿಗೂ ತೋರಿದವು. ಮಹಾ ತೇಜಸ್ವಿಯಾದ ಅರ್ಜುನನ ಸಮೀಪದಲ್ಲಿ ಜಾಜ್ವಲ್ಯಮಾನವಾಗಿಯೂ ಘೋರವಾಗಿಯೂ ನಿಂತಿದ್ದ ಆ ಅಸ್ತ್ರವು ದೇವ ದಾನವರಿಗೆಲ್ಲಾ ಕಾಣಿಸಿತು. ಪರಾಕ್ರಮಶಾಲಿಯಾದ ಅರ್ಜುನನ ಶರೀರದಲ್ಲಿ ಯಾವಯಾವ ದೋಷಗಳಿದ್ದವೋ ಅವೆಲ್ಲವೂ ಈಶ್ವರನ ಸ್ಪರ್ಶದಿಂದ ನಾಶವಾದವು. ಬಳಿಕ ಅರ್ಜುನನು ಈಶ್ವರನಿಗೆ ಸಾಷ್ಟಾಂಗನಮಸ್ಕಾರವನ್ನು ಮಾಡಿ, ಕೈಮುಗಿದುಕೊಂಡು ಆ ದೇವದೇವನನ್ನು ನೋಡುತ್ತಿರಲು, ತ್ರಿಲೋಕಾಧಿಪತಿಯೂ ಉಮಾಪತಿಯೂ ಕೈಲಾಸಾಧಿಪತಿಯೂ ಸ್ವತಂತ್ರನೂ ಮಹಾ ತೇಜಃಪುಂಜನೂ ಆದ ಈಶ್ವರನು ದೈತ್ಯದಾನವಪಿಶಾಚರನ್ನು ನಿಗ್ರಹಿಸುವ ಶಕ್ತಿಯುಳ್ಳ ಆ ಗಾಂಡೀವಧನುಸ್ಸನ್ನು ಪುರುಷಶ್ರೇಷ್ಠನಾದ ಅರ್ಜುನನಿಗೆ ಕೊಟ್ಟು, ಸ್ವರ್ಗಕ್ಕೆ ಹೋಗುವಂತೆ ಆತನಿಗೆ ಅನುಜ್ಞೆಮಾಡಿ, ಅನೇಕ ಋಷಿಗಳಿಂದ ಕೂಡಿದ ಇಂದ್ರಕೀಲಪರ್ವತವನ್ನು ಬಿಟ್ಟು, ಶುಭ್ರವಾದ ತಪ್ಪಲೂ ಗುಹೆಗಳೂ ಉಳ್ಳದ್ದಾಗಿಯೂ ಮಂಗಳಕರವಾಗಿಯೂ ಇರುವ ಕೈಲಾಸಪರ್ವತಕ್ಕೆ ಪಾರ್ವತೀಸಮೇತನಾಗಿ ಅಂತರ್ಧಾನವಾಗಿ ಹೊರಟು ಹೋದನು.

## ೪೧ನೇ ಅಧ್ಯಾಯ.—ಅರ್ಜುನನಿಗೆ ಇಂದ್ರಾದಿ ಅಷ್ಟದಿಕ್ಪಾಲಕರ ದರ್ಶನವೂ ಅಸ್ತ್ರಗಳ ಸಂಪ್ರಾಪ್ತಿಯೂ.

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯನೆ, ಈ ರೀತಿಯಲ್ಲಿ ಪಿನಾಕಪಾಣಿಯಾದ ಈಶ್ವರನು ಸಕಲಜನರೂ ನೋಡುತ್ತಿರಲು, ಸೂರ್ಯನು ಅಸ್ತಂಗತನಾಗುವಂತೆ ಅಂತರ್ಧಾನವನ್ನು ಹೊಂದಿದ ಬಳಿಕ, ಶತ್ರುಸಂಹಾರಕನಾದ ಅರ್ಜುನನು ಬಹಳವಾಗಿ ಆಶ್ಚರ್ಯಪಟ್ಟು, "ನಾನು ಮಹಾದೇವನನ್ನು ಸಾಕ್ಷಾತ್ತಾಗಿ ದರ್ಶನಮಾಡಿದ್ದರಿಂದಲೂ, ಆತನ ಅನುಗ್ರಹಕ್ಕೆ ಪಾತ್ರನಾದ್ದರಿಂದಲೂ ಧನ್ಯನಾದೆನು. ವರಪ್ರದನಾಗಿಯೂ ಪಿನಾಕಪಾಣಿಯಾಗಿಯೂ ಇರುವ ಈಶ್ವರನು ನಿಜರೂಪದಿಂದ ನನಗೆ ದರ್ಶನವನ್ನು ಕೊಟ್ಟದ್ದರಿಂದಲೂ, ಆತನನ್ನು ನಾನು ಹಸ್ತದಿಂದ ಸ್ಪರ್ಶಮಾಡಿದ್ದರಿಂದಲೂ ನಾನು ಕೃತಾರ್ಥನಾದೆನು. ಇನ್ನು ಯುದ್ಧದಲ್ಲಿ ಸಮಸ್ತರಾದ ಶತ್ರುಗಳನ್ನೂ ಜಯಿಸುವೆನು. ನಾನು ಬಂದಕಾರ್ಯವು ನೆರವೇರಿತು" ಎಂದು ಮನಸ್ಸಿನಲ್ಲಿ ಎಣಿಸುತ್ತಿರಲು, ಆಗ ವೈಡೂರ್ಯರತ್ನದಂತೆ ಹೊಳೆಯುತ್ತಾ, ಜಲಚರಪ್ರಾಣಿಗಳಿಂದಲೂ ಸರ್ಪಗಳಿಂದಲೂ ನದೀನದಗಳಿಂದಲೂ ದೈತ್ಯರಿಂದಲೂ ಸಾಧ್ಯರಿಂದಲೂ ದೇವತೆಗಳಿಂದಲೂ ಸುತ್ತುವರಿಯಲ್ಪಟ್ಟು, ಜಲಾಧಿಪತಿಯಾದ ವರುಣನು ತನ್ನ ತೇಜಸ್ಸಿನಿಂದ ಎಲ್ಲಾ ದಿಕ್ಕುಗಳನ್ನೂ ಪ್ರಕಾಶಗೊಳಿಸುತ್ತ, ಅರ್ಜುನನನ್ನು ನೋಡುವದಕ್ಕೋಸ್ಕರ ಆತನ ಸಮೀಪಕ್ಕೆ ಬಂದನು. ಬಳಿಕ ಚಿನ್ನದಂತೆ ಹೊಳೆಯುವ ಮೈಯುಳ್ಳವನಾಗಿ, ಯಕ್ಷರಿಂದ ಸಹಿತನಾಗಿ, ಆಶ್ಚರ್ಯಕರವಾದ ರೂಪವುಳ್ಳ ಸಂಪದ್ಯುಕ್ತನಾದ ಧನಾಧಿಪತಿಯಾದ ಕುಬೇರನು ತನ್ನ ದಿವ್ಯವಾದ ವಿಮಾನದ ಕಾಂತಿಯಿಂದ ಆಕಾಶವನ್ನು ಪ್ರಕಾಶಮಾಡುತ್ತ, ಅರ್ಜುನನನ್ನು ನೋಡುವದಕ್ಕೋಸ್ಕರ ಆತನ ಸಮೀಪಕ್ಕೆ ಬಂದನು. ಆ ಬಳಿಕ ಲೋಕನಾಶಕನಾಗಿಯೂ, ತೇಜೋವಂತನಾಗಿಯೂ, ಮನುಷ್ಯರೂಪವನ್ನು ಧರಿಸಿದ

ಲೋಕಪೂಜ್ಯರಾದ ಪಿತೃದೇವತೆಗಳೊಡಗೂಡಿದವನಾಗಿಯೂ, ಮಹತ್ತಾದ ಮಹಿಮೆಯುಳ್ಳವನಾಗಿಯೂ ಇರುವ ಸೂರ್ಯಪುತ್ರನಾದ ಯಮಧರ್ಮರಾಯನು ತನ್ನ ವಿಮಾನದ ಪ್ರಭೆಯಿಂದ ಮೂರುಲೋಕಗಳನ್ನೂ ಗುಹ್ಯಕರನ್ನೂ ಗಂಧರ್ವರನ್ನೂ ಸರ್ಪಗಳನ್ನೂ ಪ್ರಕಾಶಪಡಿಸುತ್ತ, ಪ್ರಳಯಕಾಲದ ಎರಡನೇ ಸೂರ್ಯನಂತೆ ತೋರುತ್ತ, ಅರ್ಜುನನನ್ನು ನೋಡುವದಕ್ಕೋಸ್ಕರ ಆತನ ಸಮೀಪಕ್ಕೆ ಬಂದನು. ಅನಂತರ ಬಂದು ಮುಹೂರ್ತದ ಮೇಲೆ ದೇವೇಂದ್ರನು ಶಚೀದೇವಿಯೊಡನೆ ಐರಾವತವನ್ನೇರಿ, ದೇವತೆಗಳೂ ಗಂಧರ್ವರೂ ತಪೋಧನರಾದ ಋಷಿಗಳೂ ಸ್ತೋತ್ರಮಾಡುತ್ತಿರಲು, ಶ್ವೇತಚ್ಛತ್ರವನ್ನು ಹಿಡಿಸಿಕೊಂಡು, ಶುಭ್ರವಾದ ಮೇಘದಮೇಲೆ ತೋರುವ ನಕ್ಷತ್ರಾಧಿಪತಿಯಾದ ಚಂದ್ರನಂತೆ ಪ್ರಕಾಶಿಸುತ್ತ, ಇಂದ್ರಕೀಲಪರ್ವತದ ಶಿಖರಕ್ಕೆ ಬಂದು, ಆಗತಾನೆ ಉದಿಸಿದ ಸೂರ್ಯನಂತೆ ಕಂಗೊಳಿಸಿದನು.

ಬಳಿಕ ಧರ್ಮಜ್ಞನಾಗಿಯೂ ಬುದ್ಧಿಶಾಲಿಯಾಗಿಯೂ ಇರುವ ಯಮನು ದಕ್ಷಿಣದಿಕ್ಕಿನಲ್ಲಿ ನಿಂತು ಅರ್ಜುನನನ್ನು ನೋಡಿ “ ಎಲೈ ಅರ್ಜುನನೆ, ಇಲ್ಲಿಗೆ ಬಂದಿರತಕ್ಕ ಲೋಕಪಾಲಕರಾದ ನಮ್ಮನ್ನು ನೋಡು. ನಿನಗೆ ದಿವ್ಯದೃಷ್ಟಿಯನ್ನು ಕೊಡುವೆವು. ಅದಕ್ಕೆ ನೀನು ಯೋಗ್ಯನಾದವನು. ಮಹಾಬಲಶಾಲಿಯಾದ ನೀನು ಮಹಾತ್ಮನಾದ ನರನೆಂಬ ಪುರಾತನಋಷಿಯು. ಬ್ರಹ್ಮನ ಅಪ್ಪಣೆಯಿಂದ ನೀನು ಮನುಷ್ಯನಾಗಿ ಅವತರಿಸಿರುವೆ. ನಿನಗೆ ಪಿತಾಮಹನಾಗಿಯೂ ವಸುಪುತ್ರನಾಗಿಯೂ ಧರ್ಮಾತ್ಮನಾಗಿಯೂ ಮಹಾ ಪರಾಕ್ರಮಶಾಲಿಯಾಗಿಯೂ ಇರುವ ಭೀಷ್ಮನನ್ನು ನೀನು ಸಂಹರಿಸಬೇಕು. ದ್ರೋಣಾಚಾರ್ಯರು ಅಗ್ನಿಗೆ ಸಮಾನವಾದ ತೇಜಸ್ಸುಳ್ಳ ಕ್ಷತ್ರಿಯಕುಲವನ್ನು ಪ್ರಬಲಮಾಡಿರುವರು. ಪರಾಕ್ರಮಶಾಲಿಗಳಾದ ದಾನವರು ಈಗ ಮನುಷ್ಯರಾಗಿ ಹುಟ್ಟಿರುವರು. ಇವರೆಲ್ಲರನ್ನೂ ನಿವಾತಕವಚರೆಂಬ ದಾನವರನ್ನೂ ನೀನು ಸಂಹರಿಸಬೇಕು. ಇದಲ್ಲದೆ ಸರ್ವಲೋಕಪ್ರಕಾಶಕನಾದ ಸೂರ್ಯನ ಅಂಶದಿಂದ ವೀರಶ್ರೇಷ್ಠನಾದ ಕರ್ಣನು ಜನಿಸಿರುವನು. ಆತನನ್ನೂ ನೀನು ಸಂಹರಿಸಬೇಕು. ಇನ್ನೂ ಅನೇಕಮಂದಿ ದೇವತೆಗಳೂ ದಾನವರೂ ರಾಕ್ಷಸರೂ ಸಹ ತಮ್ಮತಮ್ಮ ಅಂಶದಿಂದ ಭೂಮಿಯಲ್ಲಿ ಹುಟ್ಟಿರುವರು. ಅವರು ನಿನ್ನಿಂದ ಯುದ್ಧದಲ್ಲಿ ಹತರಾಗಿ, ತಮ್ಮತಮ್ಮ ಕರ್ಮಗಳಿಗೆ ಅನುಸಾರವಾದ ಗತಿಯನ್ನು ಪಡೆಯುವರು. ಆ ಬಳಿಕ ನಿನ್ನ ಕೀರ್ತಿಯು ಲೋಕದಲ್ಲಿ ಅಕ್ಷಯವಾಗಿ ನಿಲ್ಲುವದು. ನೀನು ಮಹತ್ತಾದ ಯುದ್ಧದಲ್ಲಿ ಮಹಾದೇವನನ್ನು ಸಂತೋಷಪಡಿಸಿರುವೆ. ನೀನು ಶ್ರೀಕೃಷ್ಣನೊಡಗೂಡಿ ಭೂಭಾರವನ್ನು ಪರಿಹರಿಸಬೇಕು. ಆದ್ದರಿಂದ, ಎಲೈ ಮಹಾಬಾಹುಶಾಲಿಯಾದ ಅರ್ಜುನನೆ, ಪ್ರತ್ಯಸ್ತ್ರವಿಲ್ಲದಿರುವ ದಂಡವೆಂಬ ಈ ಅಸ್ತ್ರವನ್ನು ನಿನಗೆ ನಾನು ಕೊಡುವೆನು. ಇದನ್ನು ಸ್ವೀಕರಿಸು. ಇದರಿಂದ ನೀನು ಮುಂದೆ ಯುದ್ಧದಲ್ಲಿ ಮಹತ್ತಾದ ಕಾರ್ಯವನ್ನು ಸಾಧಿಸುವೆ ” ಎಂದು ಮೇಘಧ್ವನಿಗೆ ಸಮಾನವಾದ ಧ್ವನಿಯಿಂದ ಶುಭವಾಗಿ ನುಡಿಯಲು, ಅರ್ಜುನನು ಹೀಗೆಯೇ ಮಾಡತಕ್ಕದ್ದೆಂದು ವಿಚಾರಪೂರ್ವಕವಾಗಿ ಪ್ರಯೋಗೋಪಸಂಹಾರಗಳನ್ನು ಮಾಡತಕ್ಕ ಮಂತ್ರದೊಡನೆ ಆ ದಂಡಾಸ್ತ್ರವನ್ನು ಸ್ವೀಕರಿಸಿದನು. ಅನಂತರದಲ್ಲಿ ನೀಲಮೇಘಶ್ಯಾಮನಾದ ಜಲಾಧಿಪತಿಯಾದ ವರುಣನು ಪಶ್ಚಿಮದಿಕ್ಕಿನಲ್ಲಿ ನಿಂತು ಅರ್ಜುನನನ್ನು ನೋಡಿ “ ಎಲೈ ಅರ್ಜುನನೆ, ವಿಶಾಲತಾಮ್ರೇಕ್ಷಣನಾದ ನೀನು ಕ್ಷತ್ರಿಯಧರ್ಮದಲ್ಲೇ ಇರುವದರಿಂದ, ಕ್ಷತ್ರಿಯಶ್ರೇಷ್ಠನೆನಿಸಿಕೊಂಡಿರುವೆ. ನಾನು ಜಲಾಧಿಪತಿಯಾದ ವರುಣನು. ನನ್ನನ್ನು ನೋಡು. ಪ್ರಯೋಗೋಪಸಂಹಾರಗಳನ್ನು ಮಾಡತಕ್ಕ ಮಂತ್ರದೊಡನೆ ಈ ವರುಣಪಾಶಗಳನ್ನು ನಿನಗೆ ಕೊಡುವೆನು. ತಾರಕಾಮಯವೆಂಬ ಯುದ್ಧದಲ್ಲಿ ಪ್ರಬಲರಾದ ಅನೇಕಮಂದಿ ದೈತ್ಯರನ್ನು ಈ ಪಾಶಗಳಿಂದ ನಾನು ಕಟ್ಟಿಹಾಕಿರುವೆನು. ಆದ್ದರಿಂದ ನಾನು ಅನುಗ್ರಹಿಸಿಕೊಡುವ ಈ ಪಾಶಾಯುಧಗಳನ್ನು ನೀನು ಸ್ವೀಕರಿಸು. ಇವುಗಳಿಂದ ವಧ್ಯನಾದ ಪುರುಷನನ್ನು ಯಮನೂ ಬಿಡಿಸಲಾರನು. ಯಾವಾಗ ನೀನು ಈ ಪಾಶಗಳನ್ನು ಧರಿಸಿ ಯುದ್ಧಕ್ಕೆ ತೊಡಗುವೆಯೋ ಆಗ, ಭೂಮಂಡಲವು ಶತ್ರುಶೂನ್ಯವಾಗುವದರಲ್ಲಿ ಸಂದೇಹವಿಲ್ಲ ” ಎಂದು ನುಡಿದು ಆ ಪಾಶಗಳನ್ನು ಅರ್ಜುನನಿಗೆ ಅನುಗ್ರಹಿಸಿದನು.

ಹೀಗೆ ಯಮನೂ ವರುಣನೂ ಅಸ್ತ್ರದಾನವನ್ನು ಮಾಡಲು, ಕೈಲಾಸವಾಸಿಯಾಗಿಯೂ ಧನಾಧ್ಯಕ್ಷನಾಗಿಯೂ ಇರುವ ಕುಬೇರನು ಅರ್ಜುನನನ್ನು ನೋಡಿ “ ಎಲೈ ಮಹಾಪರಾಕ್ರಮಶಾಲಿಯಾದ ಅರ್ಜುನನೆ, ನಾನು

ಶ್ರೀಕೃಷ್ಣನ ಸಂದರ್ಶನದಿಂದ ಎಂಥ ಸಂತೋಷವನ್ನು ಹೊಂದುವೆನೋ ಅಂಥ ಸಂತೋಷವನ್ನು ನಿನ್ನ ದರ್ಶನದಿಂದ ಹೊಂದಿದೆನು. ಎಲೈ ಸವ್ಯಸಾಚಿಯೆ, ಪೂರ್ವಕಲ್ಪದಲ್ಲಿ ನೀನು ನಿರಂತರದಲ್ಲಿಯೂ ನಮ್ಮೊಡನೆ ಶಾಂತಾತ್ಮನಾಗಿದ್ದೆ. ಈಗ ನಿನ್ನನ್ನು ನೋಡಿದಮಾತ್ರಕ್ಕೆ ನಾನು ನಿನಗೆ ಈ ದಿವ್ಯಾಸ್ತ್ರವನ್ನು ಕೊಡುವೆನೆಂದಿರುವೆನು. ಜಯಿಸಲಶಕ್ಯರಾದ ದೇವತೆಗಳನ್ನಾದರೂ ನೀನು ಇದರಿಂದ ಜಯಿಸುವೆ. ಉತ್ತಮವಾದ ಈ ಅಸ್ತ್ರವನ್ನು ನೀನು ನನ್ನಿಂದ ತಡಮಾಡದೆ ಸ್ವೀಕರಿಸು. ನನಗೆ ಪ್ರಿಯವಾಗಿಯೂ, ಅಂತರ್ಧಾನಶಕ್ತಿಯುಳ್ಳದ್ದಾಗಿಯೂ, ಪ್ರತಾಪವನ್ನೂ ಬಲವನ್ನೂ ಕಾಂತಿಯನ್ನೂ ವೃದ್ಧಿಪಡಿಸತಕ್ಕದ್ದಾಗಿಯೂ, ಶತ್ರುನಾಶಕವಾಗಿಯೂ ಇರುವ ಪ್ರಸ್ವಾಪನವೆಂದು ಪ್ರಸಿದ್ಧವಾದ ಈ ಅಸ್ತ್ರದಿಂದ ನೀನು ದುರ್ಯೋಧನನ ಸಕಲಸೈನ್ಯಗಳನ್ನೂ ಸುಟ್ಟುಬಿಡುವೆ. ಪೂರ್ವದಲ್ಲಿ ತ್ರಿಪುರಸಂಹಾರಕಾಲದಲ್ಲಿ ಮಹಾತ್ಮನಾದ ಈಶ್ವರನು ಈ ಅಸ್ತ್ರವನ್ನು ಪ್ರಯೋಗಿಸಿ, ಎಲ್ಲಾ ಅಸುರರನ್ನೂ ದಹಿಸಿಬಿಟ್ಟನು. ಈಗ ಇದನ್ನು ನಿನಗೆ ಕೊಡಬೇಕೆಂತಲೇ ನಾನು ಸಿದ್ಧಮಾಡಿಕೊಂಡಿರುವೆನು. ಮಹಾವೀರುವಿನಂತೆ ಗೌರವಶಾಲಿಯಾದ ನೀನು ಇದನ್ನು ಧಾರಣೆಮಾಡುವದಕ್ಕೂ ಪ್ರಯೋಗಿಸುವದಕ್ಕೂ ಉಪಸಂಹಾರ ಮಾಡುವದಕ್ಕೂ ಶಕ್ತನಾಗಿರುವೆ" ಎನಲು, ಮಹಾಬಾಹುವಾದ ಅರ್ಜುನನು ದಿವ್ಯವಾದ ಆ ಕೌಬೇರಾಸ್ತ್ರವನ್ನು ಕುಬೇರನ ದೆಸೆಯಿಂದ ಮಂತ್ರವತ್ತಾಗಿ ಪರಿಗ್ರಹಿಸಿದನು.

ಅನಂತರದಲ್ಲಿ ದೇವರಾಜನಾದ ಮಹೇಂದ್ರನು ಅನಾಯಾಸವಾಗಿ ಕಾರ್ಯವನ್ನು ನಿರ್ವಹಿಸಬಲ್ಲ ಅರ್ಜುನನನ್ನು ನೋಡಿ, ಮೇಘಧ್ವನಿಗೂ ದುಂದುಭಿಧ್ವನಿಗೂ ಸಮಾನವಾದ ಕಂಠಧ್ವನಿಯುಳ್ಳವನಾಗಿ, ಮನೋಹರವಾದ ವಚನಗಳಿಂದ ಆತನನ್ನು ಸಮಾಧಾನಮಾಡುತ್ತ, "ಎಲೈ ಕುಂತೀಪುತ್ರನಾದ ಮಹಾಬಲಶಾಲಿಯಾದ ಅರ್ಜುನನೆ, ಸಮರ್ಥನಾದ ನೀನು ಪುರಾತನಋಷಿಯು ಮತ್ತು ಈಗಲೂ ಉತ್ತಮವಾದ ತಪಸ್ಸಿದ್ಧಿಯನ್ನು ಪಡೆದಿರುವೆ. ನೀನು ದೇವತೆಗಳಿಗೆಲ್ಲಾ ಆಶ್ರಯಭೂತನಾಗಿ, ದೊಡ್ಡದಾದ ದೇವಕಾರ್ಯವನ್ನು ನೆರವೇರಿಸಬೇಕಾಗಿರುವದರಿಂದ, ಸ್ವರ್ಗಲೋಕಕ್ಕೆ ಹೊರಡಲು ಸಿದ್ಧನಾಗು. ನಮ್ಮ ಸಾರಥಿಯಾದ ಮಾತಲಿಯು ನಿನ್ನ ನಿಮಿತ್ತವಾಗಿ ರಥವನ್ನು ಇಲ್ಲಿಗೆ ತೆಗೆದುಕೊಂಡು ಬರುವನು. ನೀನು ಸ್ವರ್ಗಕ್ಕೆ ಬಂದ ಬಳಿಕ ನಿನಗೆ ನಾನು ಅನೇಕ ದಿವ್ಯಾಸ್ತ್ರಗಳನ್ನು ಕೊಡುವೆನು" ಎಂದು ನುಡಿದನು. ಅರ್ಜುನನು ಇಂದ್ರಕೀಲಪರ್ವತದ ಶಿಖರಕ್ಕೆ ಬಂದ ಆ ಲೋಕಪಾಲಕರನ್ನು ನೋಡಿ ಆಶ್ಚರ್ಯಪಟ್ಟು, ಅವರಿಗೆಲ್ಲಾ ಒಳ್ಳೆಮಾತುಗಳಿಂದಲೂ ಉದಕದಿಂದಲೂ ಫಲಗಳಿಂದಲೂ ಯಥಾಶಾಸ್ತ್ರವಾಗಿ ಸತ್ಕಾರವನ್ನು ಮಾಡಲು, ಆ ಸಕಲರಾದ ದೇವತೆಗಳೂ ಅರ್ಜುನನಿಗೆ ಪ್ರತಿಯಾಗಿ ಸನ್ಮಾನವನ್ನು ಮಾಡಿ, ಯಥೇಚ್ಛವಾಗಿ ಮನೋವೇಗದಿಂದ ಬಂದಂತೆ ತಮ್ಮತಮ್ಮ ಸ್ಥಾನಗಳಿಗೆ ಹೊರಟು ಹೋದರು. ಬಳಿಕ ಪುರುಷಶ್ರೇಷ್ಠನಾದ ಅರ್ಜುನನು ಆ ಲೋಕಪಾಲರ ದೆಸೆಯಿಂದ ಅಸ್ತ್ರಗಳನ್ನು ಪಡೆದುಕೊಂಡು, ತನ್ನನ್ನು ಕೃತಾರ್ಥನನ್ನಾಗಿ ಭಾವಿಸಿ ಆನಂದಸಮುದ್ರದಲ್ಲಿ ಮಗ್ನನಾದನು.

## ೪೨ನೇ ಅಧ್ಯಾಯ.—ಅರ್ಜುನನು ಅಮರಾವತೀ ಪಟ್ಟಣಕ್ಕೆ ಹೋದದ್ದು.

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಇಂದ್ರಾದಿ ಲೋಕಪಾಲಕರು ಹೊರಟುಹೋದ ಬಳಿಕ, ಶತ್ರುಸಂಹಾರಕನಾದ ಅರ್ಜುನನು ದೇವೇಂದ್ರನ ರಥವನ್ನು ಸ್ಮರಿಸಲು, ಮಾತಲಿಯಿಂದ ಸಹಿತವಾದ ಆ ರಥವು ತನ್ನ ತೇಜಸ್ಸಿನಿಂದ ಆಕಾಶವನ್ನು ಬೆಳಗುತ್ತ, ಮೇಘಧ್ವನಿಗೆ ಸಮಾನವಾದ ಧ್ವನಿಯಿಂದ ದಿಕ್ಕುಗಳನ್ನೆಲ್ಲಾ ತುಂಬುತ್ತ, ಮೇಘಮಂಡಲವನ್ನು ಭೇದಿಸಿಕೊಂಡು ಬರುವಂತೆ ಅರ್ಜುನನ ಬಳಿಗೆ ಬಂದು ಸೇರಿತು. ವಾಯುವೇಗವುಳ್ಳ ಹತ್ತುಸಾವಿರ ಕುದುರೆಗಳನ್ನು ಕಟ್ಟಿರುವದಾಗಿಯೂ, ಮಾಯಾಮಯವಾಗಿಯೂ, ತನ್ನ ತೇಜಸ್ಸಿನಿಂದ ನೋಡತಕ್ಕವರ ಕಣ್ಣನ್ನು ಮುಚ್ಚಿಸುವಷ್ಟು ಪ್ರಕಾಶಮಾನವಾಗಿಯೂ ಇರುವ ಆ ದಿವ್ಯರಥವು ಕತ್ತಿಗಳಿಂದಲೂ, ಭಯಂಕರವಾದ ಶಕ್ತಿಗಳಿಂದಲೂ, ಘೋರವಾದ ಗದೆಗಳಿಂದಲೂ,

ದಿವ್ಯಪ್ರಭಾವವುಳ್ಳ ಭಲ್ಲ್ಯಗಳಿಂದಲೂ, ಮಹತ್ತಾದ ಕಾಂತಿಯುಳ್ಳ ಮಿಂಚುಗಳಿಂದಲೂ, ಸಿಡಿಲುಗಳಿಂದಲೂ, ಚಕ್ರಗಳಿಂದಲೂ, ತುಪಾಕಿಗಳಿಂದಲೂ, ಮೇಘದಂತೆ ಗುಡುಗನ್ನೂ ಸಿಡಿಲಿನಂತೆ ಮಹಾಶಬ್ದವನ್ನೂ ಕಲ್ಪಿಸಿ ಬಿರುಗಾಳಿಯನ್ನು ಹುಟ್ಟಿಸತಕ್ಕ ವಾಯುಯಂತ್ರಗಳಿಂದಲೂ, ದೊಡ್ಡದಾದ ಆಕಾರವುಳ್ಳದ್ದಾಗಿಯೂ ಕ್ರೂರವಾದ ವಿಷಜ್ವಾಲೆಗಳನ್ನು ಕಾರುವವಾಗಿಯೂ ಇರುವ ಸರ್ಪಗಳಿಂದಲೂ, ಶುಭ್ರವಾದ ಮೇಘಸಮೂಹದಂತಿರುವ ದೊಡ್ಡದೊಡ್ಡ ಕಲ್ಲುಗಳಿಂದಲೂ, ಸುವರ್ಣದಂಡವುಳ್ಳದ್ದಾಗಿಯೂ ಕನ್ನೈದಿಲೆಯಂತೆ ನೀಲವಾದ ಕಾಂತಿಯಿಂದ ಹೊಳೆಯುವದಾಗಿಯೂ ಇರುವ ವೈಜಯಂತವೆಂಬ ಧ್ವಜದಿಂದಲೂ ಶೋಭಾಯಮಾನವಾಗಿತ್ತು. ಆ ರಥದಲ್ಲಿ ದಿವ್ಯವಾದ ಸುವರ್ಣಭೂಷಣಗಳನ್ನು ಧರಿಸಿಕೊಂಡು ಕೂತಿರುವ ಸಾರಥಿಯಾದ ಮಾತಲಿಯನ್ನು ನೋಡಿ, ಮಹಾಪರಾಕ್ರಮಶಾಲಿಯಾದ ಅರ್ಜುನನು ಈತನೇ ದೇವೇಂದ್ರನೋ ಏನೋ ಎಂದು ವಿಚಾರಪಡುತ್ತಿರಲು, ಸಾರಥಿಯಾದ ಮಾತಲಿಯು ರಥದಿಂದ ಕೆಳಕ್ಕೆ ಇಳಿದು ವಿನಯಸಂಪನ್ನನಾಗಿ ಅರ್ಜುನನನ್ನು ಕುರಿತು “ ಎಲೈ ಇಂದ್ರಪುತ್ರನಾದ ಅರ್ಜುನನೆ, ಶ್ರೀಮಂತನಾದ ದೇವೇಂದ್ರನು ನಿನ್ನನ್ನು ನೋಡಬೇಕೆಂದು ಬಯಸುತ್ತಿರುವನು. ಈ ಇಂದ್ರರಥವನ್ನು ನೀನು ಆರೋಹಣಮಾಡು. ನಿಮ್ಮ ತಂದೆಯಾದ ದೇವೇಂದ್ರನು ನನ್ನ ಸಂಗಡ ಸ್ವರ್ಗಲೋಕಕ್ಕೆ ನೀನು ಗಮಿಸತಕ್ಕ ಕಾಲದಲ್ಲಿ ಸಕಲದೇವತೆಗಳೂ ಆತನನ್ನು ಎದುರುಗೊಳ್ಳಬೇಕೆಂದು ಅಪ್ಪಣೆ ಕೊಟ್ಟಿರುವನು. ಆತನು ತಾನೂ ದೇವತೆಗಳೊಡನೆಯೂ ಗಂಧರ್ವರೊಡನೆಯೂ ಅಪ್ಸರಸ್ತ್ರೀಯರೊಡನೆಯೂ ಸಹಿತನಾಗಿ, ನಿನ್ನನ್ನು ನೋಡಬೇಕೆಂದು ಬಹು ಕುತೂಹಲದಿಂದ ನಿನ್ನನ್ನೇ ನಿರೀಕ್ಷಿಸುತ್ತಿರುವನು. ಆತನ ಆಜ್ಞೆಯಿಂದ ನೀನು ಭೂಲೋಕದ ದೆಸೆಯಿಂದ ಸ್ವರ್ಗಲೋಕಕ್ಕೆ ಬಂದು, ಸಕಲ ದಿವ್ಯಾಸ್ತ್ರಗಳನ್ನೂ ಪಡೆದುಕೊಂಡು ಮರಳಿ ಭೂಲೋಕಕ್ಕೆ ಬರುವೆ. ನನ್ನೊಡನೆ ಈ ಇಂದ್ರರಥವನ್ನು ಆರೋಹಣಮಾಡು ” ಎಂದು ನುಡಿದನು.

ಅನಂತರದಲ್ಲಿ ಅರ್ಜುನನು ಮಾತಲಿಯನ್ನು ಕುರಿತು “ ಎಲೈ ಮಾತಲಿಯೆ, ಅನೇಕದಕ್ಷಿಣಾಸಹಿವಾಗಿ ಅನೇಕ ರಾಜಸೂಯಾಶ್ವಮೇಧ ಯಾಗಗಳನ್ನು ಮಾಡಿದ ಮಹಾಭಾಗ್ಯಶಾಲಿಗಳಾದ ರಾಜರಿಗೂ ದೇವತೆಗಳಿಗೂ ದಾನವರಿಗೂ ಕೂಡ ಈ ರಥವನ್ನೇರುವದು ದುರ್ಲಭವು. ತಪಸ್ಸನ್ನು ಮಾಡದಿರುವವನಿಗೆ ಈ ದಿವ್ಯವಾದ ರಥವನ್ನು ನೋಡುವದಕ್ಕೂ ಸ್ಪರ್ಶಮಾಡುವದಕ್ಕೂ ಅಶಕ್ಯವೆಂಬಲ್ಲಿ, ಆರೋಹಣಮಾಡುವದಕ್ಕೆ ಹ್ಯಾಗೆ ಶಕ್ಯವಾದೀತು ? ಮೊದಲು ನೀನು ಶೀಘ್ರವಾಗಿ ಈ ರಥವನ್ನು ಆರೋಹಣಮಾಡಿ ಕುದುರೆಗಳನ್ನು ಬಲವಾಗಿ ಹಿಡಿದು ಕೂತುಕೊಂಡ ಮೇಲೆ, ಪುಣ್ಯವಮಾಡಿದವನು ಉತ್ತಮವಾದ ಪದವಿಯನ್ನೇರುವಂತೆ ನಾನು ಈ ರಥವನ್ನೇರುವೆನು” ಎನಲು, ಇಂದ್ರಸಾರಥಿಯಾದ ಮಾತಲಿಯು ಶೀಘ್ರವಾಗಿ ರಥವನ್ನೇರಿ ಕುದುರೆಗಳ ಹಗ್ಗಗಳನ್ನು ಎಳೆದು ಹಿಡಿದುಕೊಂಡನು. ಬಳಿಕ ಅರ್ಜುನನು ಸಂತೋಷದಿಂದ ಗಂಗಾನದಿಯಲ್ಲಿ ಸ್ನಾನಮಾಡಿ, ಶುಚಿರ್ಭೂತನಾಗಿ ವಿಧಿವತ್ತಾಗಿ ಜಪವನ್ನು ಮಾಡಿ, ಆ ಬಳಿಕ ಪಿತೃತರ್ಪಣವನ್ನು ಮಾಡಿ, ಪರ್ವತಶ್ರೇಷ್ಠವಾದ ಆ ಮಂದರಪರ್ವತವನ್ನು ನೋಡಿ “ ಎಲೈ ಪರ್ವತರಾಜನೆ, ನೀನು ಸಾಧುಗಳೂ ಪುಣ್ಯಶೀಲರೂ ಆಗಿರುವದಲ್ಲದೆ ಸ್ವರ್ಗ ಮೊದಲಾದ ದಿವ್ಯಲೋಕಗಳನ್ನು ಬಯಸುತ್ತಿರುವ ತಪಸ್ವಿಗಳಿಗೆ ಯಾವಾಗಲೂ ಆಶ್ರಯನಾಗಿರುವೆ. ಯಾವಾಗಲೂ ನಿನ್ನನುಗ್ರಹದಿಂದ ಬ್ರಾಹ್ಮಣರೂ ಕ್ಷತ್ರಿಯರೂ ವೈಶ್ಯರೂ ಸ್ವರ್ಗವನ್ನು ಪಡೆದು ದೇವತೆಗಳೊಡನೆ ವಿಹರಿಸುತ್ತಿರುವರು. ಎಲೈ ಪರ್ವತಶ್ರೇಷ್ಠನೆ, ನಿನ್ನ ತಪ್ಪಲಲ್ಲಿ ನಾನು ಮನೋಹರವಾದ ಲತಾಮಂಟಪಗಳನ್ನೂ ಗಿರಿಗಳನ್ನೂ ಪುಣ್ಯತೀರ್ಥಗಳನ್ನೂ ನೋಡುತ್ತ, ಅಲ್ಲಲ್ಲಿ ದಿವ್ಯವಾಗಿಯೂ ಸುಗಂಧವಾಗಿಯೂ ಇರುವ ಫಲಗಳನ್ನು ಭಕ್ಷಿಸುತ್ತ, ನಿನ್ನಲ್ಲಿ ಹುಟ್ಟಿದ ನದಿಗಳಲ್ಲಿ ಅಮೃತದಂತೆ ಮಧುರವಾಗಿರುವ ನಿರ್ಮಲೋದಕವನ್ನು ಪಾನಮಾಡುತ್ತ, ಶಿಶುವು ತಂದೆಯ ತೊಡೆಯಮೇಲೆ ಸುಖವಾಗಿರುವಂತೆ ನಿತ್ಯವೂ ಅಪ್ಸರಸ್ತ್ರೀಯರಿಂದ ಆಶ್ರಿತವಾಗಿಯೂ ವೇದಘೋಷವುಳ್ಳದ್ದಾಗಿಯೂ ಇರುವ ನಿನ್ನ ತಪ್ಪಲುಗಳಲ್ಲಿ ತಪೋನಿಷ್ಠನಾಗಿ ವಿಹರಿಸುತ್ತ, ಸುಖವಾಗಿ ವಾಸಮಾಡಿಕೊಂಡಿದ್ದೆನು. ಆದ್ದರಿಂದ ನಿನ್ನ ಅಪ್ಪಣೆಯಾದರೆ ಸ್ವರ್ಗಕ್ಕೆ ಹೋಗಿ ಬರುವೆನು ” ಎಂದು ಹೇಳಿ, ದೇದೀಪ್ಯಮಾನನಾದ ಸೂರ್ಯನಂತೆ ಆ ದಿವ್ಯರಥವನ್ನು ಆರೋಹಣಮಾಡಿ ಸಂತೋಷಪಡುತ್ತ, ಸೂರ್ಯನಂತೆ ತೇಜೋಮಯವಾಗಿ ಆಶ್ಚರ್ಯಕರವಾದ ಆ ರಥದಲ್ಲಿ ಕುಳಿತು ಗಗನಮಾರ್ಗವನ್ನೈದಿ, ಆ ಪರ್ವತದಲ್ಲಿ ತಪಸ್ಸುಮಾಡುತ್ತಿದ್ದ ಮನುಷ್ಯರ ಕಣ್ಣಿಗೆ ಅದೃಶ್ಯನಾದನು. ಹೀಗೆ ತೆರಳುವಾಗ ಆಕಾಶಮಾರ್ಗ

ವಲ್ಲಿ ಆಶ್ಚರ್ಯಕರಗಳಾದ ಅನೇಕ ದಿವ್ಯವಿಮಾನಗಳು ಆತನ ದೃಷ್ಟಿಪಥವನ್ನೈದಿದವು. ಆ ವಿಮಾನಗಳು ಅಲ್ಲಿ ಸೂರ್ಯ-ಚಂದ್ರಾಗ್ನಿಗಳ ಪ್ರಕಾಶವಿಲ್ಲದೆಯಿದ್ದರೂ ಪುಣ್ಯಪ್ರಭಾವದಿಂದುಂಟಾದ ತಮ್ಮ ತೇಜಸ್ಸಿನಿಂದಲೇ ನಕ್ಷತ್ರರೂಪಗಳಾಗಿ ಪ್ರಕಾಶಿಸುತ್ತ, ದೊಡ್ಡವಾಗಿದ್ದರೂ ದೂರದಲ್ಲಿರುವದರಿಂದ ದೀಪಗಳಂತೆ ಚಿಕ್ಕಚಿಕ್ಕವಾಗಿ ಕಾಣಿಸುತ್ತಿದ್ದವು. ಅರ್ಜುನನು ತಮ್ಮತಮ್ಮ ಸ್ಥಾನಗಳಲ್ಲಿ ತೇಜೋಮಯವಾಗಿರುವ ಅವುಗಳನ್ನೂ, ತಪಸ್ಸಿನಿಂದ ಸಿದ್ಧಿಯನ್ನು ಪಡೆದು ಗುಂಪುಗುಂಪಾಗಿ ಸ್ವರ್ಗಕ್ಕೆ ಹೋಗುತ್ತಿರುವ ರಾಜರ್ಷಿಗಳನ್ನೂ, ಸಿದ್ಧರನ್ನೂ, ಯುದ್ಧದಲ್ಲಿ ಹತರಾದ ವೀರರನ್ನೂ, ಸೂರ್ಯನಂತೆ ಪ್ರಕಾಶಮಾನವಾದ ತೇಜಸ್ಸುಳ್ಳ ಅನೇಕಸಹಸ್ರ ಗಂಧರ್ವರನ್ನೂ, ಗುಹ್ಯಕರನ್ನೂ, ಋಷಿಗಳನ್ನೂ, ಅಪ್ಸರಸ್ತ್ರೀಯರನ್ನೂ, ಸ್ವಯಂಪ್ರಕಾಶಗಳಾದ ಉತ್ತಮಲೋಕಗಳನ್ನೂ ನೋಡಿ, ಆಶ್ಚರ್ಯಯುಕ್ತನಾಗಿ ಮಾತಲಿಯನ್ನು ಕುರಿತು "ಎಲೈ ಮಾತಲಿಯೆ, ಇವರೆಲ್ಲರೂ ಯಾರು" ಎಂದು ಕೇಳಿದನು. ಮಾತಲಿಯು "ಎಲೈ ಪಾರ್ಥನೆ, ತಮ್ಮತಮ್ಮ ಸ್ಥಾನಗಳಲ್ಲಿದ್ದುಕೊಂಡಿರುವ ಈ ಪುಣ್ಯಾತ್ಮರು ಭೂಲೋಕದಲ್ಲಿರುವವರಿಗೆ ನಕ್ಷತ್ರರೂಪವಾಗಿ ಕಾಣಿಸುವರು" ಎಂದು ನುಡಿದನು. ಬಡನೆ ಅರ್ಜುನನು ಸ್ವರ್ಗದ ಬಾಗಿಲಿನಲ್ಲಿ ಮಂಗಳಕರವಾಗಿಯೂ ಜಯಶಾಲಿಯಾಗಿಯೂ ನಾಲ್ಕು ಕೊಂಬುಗಳುಳ್ಳದ್ದಾಗಿಯೂ ಶಿಖರಗಳುಳ್ಳ ಕೈಲಾಸಪರ್ವತವನ್ನು ಹೋಲುವದಾಗಿಯೂ ಇರುವ ಐರಾವತವೆಂಬ ದೇವೇಂದ್ರನ ಆನೆಯನ್ನು ನೋಡುತ್ತ, ಪುಣ್ಯವಂತರಾದ ರಾಜರಿಗೆ ಲಭಿಸತಕ್ಕ ಉತ್ತಮಲೋಕಗಳನ್ನೆಲ್ಲಾ ಅತಿಕ್ರಮಿಸಿ ಸಿದ್ಧಮಾರ್ಗವನ್ನು ಆಕ್ರಮಿಸಿದ ರಾಜಶ್ರೇಷ್ಠನಾದ ಮಾಂಧಾತಚಕ್ರವರ್ತಿಯಂತೆ ಸಿದ್ಧಮಾರ್ಗವನ್ನು ಆಕ್ರಮಿಸಿ, ಸ್ವರ್ಗಲೋಕವನ್ನು ಸೇರಿ, ಅಮರಾವತಿಯೆಂದು ಪ್ರಖ್ಯಾತಿಯನ್ನು ಪಡೆದಿರುವ ದೇವೇಂದ್ರನ ರಾಜಧಾನಿಯನ್ನು ನೋಡಿದನು.

## ೪೩ನೇ ಅಧ್ಯಾಯ.–ಅರ್ಜುನನು ಇಂದ್ರಸಭಾದರ್ಶನ ಮಾಡಿದ್ದು.

ವೈಶಂಪಾಯನ ಮುನೀಶ್ವರನು ಜನಮೇಜಯರಾಯನನ್ನು ಕುರಿತು–ಕೇಳು ಜನಮೇಜಯರಾಯನೆ, ಆಗ ಅರ್ಜುನನು ಅಲ್ಲಿ ಮನೋಹರವಾದ ವಾಸನೆಯುಳ್ಳ ಸೌಗಂಧಿಕಾಪುಷ್ಪದ ಪರಿಮಳಭಾರವನ್ನು ವಹಿಸಿ ಬೀಸುತ್ತಿದ್ದ ಮಂದಮಾರುತದಿಂದ ಸೇವಿತನಾಗಿ, ಎಲ್ಲಾ ಋತುಗಳಲ್ಲಿಯೂ ಬಿಡತಕ್ಕ ಪುಷ್ಪಗಳನ್ನು ತಾಳಿರುವ ಪುಣ್ಯತಮವಾದ ವೃಕ್ಷಗಳಿಂದ ಶೋಭಿತವಾಗಿಯೂ, ಸಿದ್ಧರಿಂದಲೂ ಚಾರಣರಿಂದಲೂ ಸೇವಿತವಾಗಿಯೂ, ರಮ್ಯವಾಗಿಯೂ ಇರುವ ಅಮರಾವತೀ ಪಟ್ಟಣವನ್ನು ಪ್ರವೇಶಿಸಿ, ಅಪ್ಸರಸ್ತ್ರೀಯರಿಂದ ವಿಹರಿಸಲ್ಪಡುತ್ತಾ ಮನೋಹರವಾದ ಪುಷ್ಪಗಳನ್ನು ತಾಳಿ ಅಲ್ಲಿ ಸಂಚರಿಸುವವರನ್ನು ಕರೆಯುತ್ತಿರುವವೋ ಎಂಬಂತಿರುವ ದಿವ್ಯವಾದ ವೃಕ್ಷಗಳಿಂದ ರಮಣೀಯವಾದ ನಂದನವನವನ್ನು ನೋಡಿದನು. ಪುಣ್ಯವಂತರ ವಾಸಕ್ಕೆ ಯೋಗ್ಯವಾದ ಆ ಪಟ್ಟಣವು ತಪಸ್ಸುಮಾಡದೆ ಇರತಕ್ಕವರಿಗೂ, ಆಹಿತಾಗ್ನಿಗಳಾಗದೆ ಇರತಕ್ಕವರಿಗೂ, ಯುದ್ಧದಲ್ಲಿ ಹಿಮ್ಮೆಟ್ಟಿ ಬಂದವರಿಗೂ, ಯಜ್ಞವನ್ನು ಮಾಡದೆ ಇರತಕ್ಕವರಿಗೂ, ಗಂಗಾದಿಪುಣ್ಯತೀರ್ಥಗಳಲ್ಲಿ ಸ್ನಾನಮಾಡದೆ ಇರತಕ್ಕವರಿಗೂ, ದಾನಶೂನ್ಯರಾದವರಿಗೂ, ದೇವತಾಸ್ವರೂಪವನ್ನು ತಿಳಿಯದೆ ಉಕ್ತವಾದ ದಕ್ಷಿಣೆಯನ್ನೂ ಕೊಡದೆ ವೃಥಾ ಪಶುಹಿಂಸೆಯನ್ನು ಮಾಡಿ ಯಜ್ಞವನ್ನು ಮಾಡಿದ ಲುಬ್ಧರಿಗೂ, ಮದ್ಯಪಾಯಿಗಳೂ ಗುರುಪತ್ನೀಗಮನರೂ ಆದವರಿಗೂ, ವೃಥಾ ಮಾಂಸಭಕ್ಷಣೆಯನ್ನು ಮಾಡತಕ್ಕ ಹಿಂಸಕರಾದ ದುರಾತ್ಮರಿಗೂ, ಕಣ್ಣಿಂದಲಾದರೂ ನೋಡುವದಕ್ಕೆ ಅಶಕ್ಯವಾದದ್ದು. ದಿವ್ಯವಾದ ಗಾನಧ್ವನಿಯಿಂದ ಮನೋಹರವಾದ ನಂದನವನ್ನು ನೋಡುತ್ತ, ಮಹಾಬಾಹುಶಾಲಿಯಾದ ಅರ್ಜುನನು ಇಂದ್ರನಿಗೆ ಪ್ರಿಯವಾದ ಆ ಅಮರಾವತೀಪಟ್ಟಣವನ್ನು ಪ್ರವೇಶಮಾಡಿ, ಅಲ್ಲಿ ಗಂಧರ್ವರಿಂದಲೂ ಅಪ್ಸರಸೆಯರಿಂದಲೂ ಹೊಗಳಿಸಿಕೊಳ್ಳುತ್ತಾ, ದಿವ್ಯಪುಷ್ಪಗಳ ಪರಿಮಳವನ್ನು ವಹಿಸಿ ಪುಣ್ಯತಮವಾಗಿರುವ ಮಂದಮಾರುತವು ಬೀಸುತ್ತಿರಲು, ಅಲ್ಲಲ್ಲಿ ಕಾಮಚಾರಿಗಳಾಗಿ ನಿಂತಿರುವ ಅನೇಕಸಹಸ್ರ ವಿಮಾನಗಳನ್ನೂ ಪಾನಭೂಮಿಗಳನ್ನೂ ಕಂಡು ಆನಂದಭರಿತನಾದನು. ಬಳಿಕ ಅಲ್ಲಿ ಗಂಧರ್ವರು ದಿವ್ಯವಾದ ವಾದ್ಯಧ್ವನಿಯನ್ನು ಮಾಡುತ್ತಲೂ, ಋಷಿಗಳು ಆಶೀರ್ವಾದವನ್ನು ಮಾಡುತ್ತಲೂ, ಸಿದ್ಧರು ಸ್ತುತಿಯನ್ನು ಮಾಡುತ್ತಲೂ, ಅರ್ಜುನನಿಗೆ ಮರ್ಯಾ

ದೆಯನ್ನು ಮಾಡಿದರು. ಅರ್ಜುನನು ಶಂಖ ದುಂದುಭಿ ಧ್ವನಿಗಳಿಂದ ಮನೋಹರವಾಗಿಯೂ ವಿಸ್ತಾರವಾಗಿಯೂ ಇರುವ ಸುರವೀಥಿಯೆಂಬ ನಕ್ಷತ್ರಮಾರ್ಗವನ್ನು ಇಂದ್ರನ ಆಜ್ಞೆಯಿಂದ ಪ್ರವೇಶಿಸಿ, ಅಲ್ಲಲ್ಲೇ ದೇವತೆಗಳಿಂದ ಸ್ತೋತ್ರಮಾಡಿಸಿಕೊಳ್ಳುತ್ತ, ಆಯಾಸ್ಥಾನಗಳಲ್ಲಿ ಸಾಧ್ಯರನ್ನೂ ವಿಶ್ವೇದೇವತೆಗಳನ್ನೂ ಏಕೋನಪಂಚಾಶನ್ಮರುತ್ತುಗಳನ್ನೂ ಅಶ್ವಿನೀದೇವತೆಗಳನ್ನೂ ದ್ವಾದಶಾದಿತ್ಯರನ್ನೂ ಅಷ್ಟವಸುಗಳನ್ನೂ ಏಕಾದಶರುದ್ರರನ್ನೂ ಪರಿಶುದ್ಧಾತ್ಮರಾದ ಬ್ರಹ್ಮರ್ಷಿಗಳನ್ನೂ ದಿಲೀಪ ಮೊದಲಾದ ಅನೇಕಮಂದಿ ರಾಜರ್ಷಿಗಳನ್ನೂ ನಾರದ ತುಂಬುರರನ್ನೂ ಹಾಹಾ ಹೂಹೂ ಎಂಬ ಗಂಧರ್ವರನ್ನೂ ಸಹ ಅವರವರ ಗೌರವಾನುಸಾರವಾಗಿ ಕಂಡು, ಬಳಿಕ ದುಷ್ಟನಿಗ್ರಹವನ್ನು ಮಾಡತಕ್ಕವನಾಗಿಯೂ, ಶತಾಶ್ವಮೇಧಗಳನ್ನು ಮಾಡಿದವನಾಗಿಯೂ, ಸುವರ್ಣದಂಡಯುಕ್ತವಾದ ಶ್ವೇತಚ್ಛತ್ರದಿಂದಲೂ ದಿವ್ಯಪರಿಮಳಯುಕ್ತವಾದ ತಂಗಾಳಿಯನ್ನು ಬೀಸತಕ್ಕ ಬೀಸಣಿಗೆಗಳಿಂದಲೂ ಸೇವಿತನಾಗಿಯೂ, ವಿಶ್ವಾವಸು ಮೊದಲಾದ ಸ್ತುತಿಪಾಠಕರಾದ ಗಂಧರ್ವರಿಂದಲೂ ಋಗ್ಯಜುಸ್ಸಾಮವೇದಗಳನ್ನು ಅಧ್ಯಯನಮಾಡಿದ ಬ್ರಾಹ್ಮಣರಿಂದಲೂ ಸ್ತೋತ್ರಮಾಡಿಸಿಕೊಳ್ಳುತ್ತ ಇದ್ದ ತನ್ನ ತಂದೆಯಾದ ದೇವರಾಜನಾದ ಇಂದ್ರನನ್ನು ಪ್ರತ್ಯಕ್ಷವಾಗಿ ಕಂಡು, ಆತನ ಸನ್ನಿಧಿಗೆ ಹೋಗಿ ನಮಸ್ಕಾರವನ್ನು ಮಾಡಿದನು. ಆಗ ದೇವೇಂದ್ರನು ತನ್ನ ಆಜಾನುವಾದ ಬಾಹುಗಳಿಂದ ಅರ್ಜುನನನ್ನು ಎತ್ತಿಕೊಂಡು, ದೇವಋಷಿಗಳಿಂದ ಸೇವಿತವಾದ ಪುಣ್ಯತಮವಾದ ತನ್ನ ಸಿಂಹಾಸನದಮೇಲೆ ತನ್ನ ಸಮೀಪದಲ್ಲಿ ಕುಳ್ಳಿರಿಸಿಕೊಂಡು, ವಿನಯಶಾಲಿಯಾದ ಆತನ ಶಿರಸ್ಸನ್ನು ಆಘ್ರಾಣಮಾಡಿ, ತೊಡೆಯಮೇಲೆ ಕುಳ್ಳಿರಿಸಿಕೊಂಡನು. ಆ ಸಮಯದಲ್ಲಿ ಮಹಾತ್ಮನಾದ ಅರ್ಜುನನು ಇಂದ್ರನ ಆಜ್ಞೆಯಿಂದ ಆತನ ಸಿಂಹಾಸನದ ಮೇಲೆ ಕೂತುಕೊಂಡು ಎರಡನೇ ಇಂದ್ರನಂತೆ ಪ್ರಕಾಶಿಸಿದನು. ಆ ಬಳಿಕ ದೇವೇಂದ್ರನು ಪುಣ್ಯತಮವಾದ ತನ್ನ ಕೈಯಿಂದ ಅರ್ಜುನನ ಶುಭವಾದ ಮುಖವನ್ನು ಸವರಿ ಒಳ್ಳೇ ಮಾತುಗಳನ್ನಾಡುತ್ತ, ಧನುಷ್ಟಂಕಾರದಿಂದಲೂ ಬಾಣಪ್ರಯೋಗದಿಂದಲೂ ಚಿನ್ನದ ಕಂಬದಂತೆ ಕಠಿನವಾಗಿಯೂ ದೀರ್ಘವಾಗಿಯೂ ಶುಭವಾಗಿಯೂ ಇರುವ ಅರ್ಜುನನ ಬಾಹುಗಳನ್ನು ವಜ್ರಾಯುಧವನ್ನು ಧರಿಸಿ ಜಿಡ್ಡುಕಟ್ಟಿರುವ ತನ್ನ ಕೈಯಿಂದ ಮೆಲ್ಲಗೆ ಸವರುತ್ತ ಪುನಃಪುನಃ ತಟ್ಟಿದನು. ಆ ಇಂದ್ರನು ಸಂತೋಷದಿಂದ ಕಣ್ಣುಗಳನ್ನು ಚೆನ್ನಾಗಿ ಬಿಟ್ಟುಕೊಂಡು ಆಶ್ಚರ್ಯಪಡುವನೋಪಾದಿಯಲ್ಲಿ ಅರ್ಜುನನನ್ನು ಎಷ್ಟು ನೋಡಿದರೂ ತೃಪ್ತಿಯನ್ನೇ ಪಡೆಯದೆ ಹೋದನು. ಆಗ ಒಂದೇ ಸಿಂಹಾಸನದಲ್ಲಿ ಕೂತಿದ್ದ ಆ ಇಂದ್ರಾರ್ಜುನರು ಚತುರ್ದಶಿಯಲ್ಲಿ ಏಕರಾಶಿಗತರಾದ ಸೂರ್ಯಚಂದ್ರರು ಆಕಾಶವನ್ನು ಪ್ರಕಾಶಗೊಳಿಸುವಂತೆ ಆ ದೇವಸಭೆಯನ್ನು ಪ್ರಕಾಶಗೊಳಿಸಿದರು. ಆ ಕಾಲದಲ್ಲಿ ಗಾನದಲ್ಲಿ ಕುಶಲರಾದ ಗಂಧರ್ವರೂ, ಸಾಮದಲ್ಲಿ ಕುಶಲರಾದ ತುಂಬುರರೂ ಸಹ, ಗಾನವನ್ನೂ ಮನೋಹರವಾದ ಸಾಮಗಾನವನ್ನೂ ಮಾಡುತ್ತಿದ್ದರು; ಅಲ್ಲಿ ಘೃತಾಚಿ, ಮೇನಕೆ, ರಂಭೆ, ಪೂರ್ವಚಿತ್ತಿ, ಸ್ವಯಂಪ್ರಭೆ, ಊರ್ವಶಿ, ಮಿಶ್ರಕೇಶಿ, ದಂಡಗೌರಿ, ವರೂಥಿನಿ, ಗೋಪಾಲಿ, ಸಹಜನ್ಯೆ, ಕುಂಭಯೋನಿ, ಪ್ರಜಾಗರೆ, ಚಿತ್ರಸೇನೆ, ಚಿತ್ರಲೇಖೆ, ಸಹೆ, ಮಧುರಸ್ವರೆ, ಇವರೇ ಮೊದಲಾದ ಕಮಲಾಕ್ಷಿಯರಾದ ಶ್ಲಾಘ್ಯವಾದ ಕಟಿಪ್ರದೇಶವೂ ಜಘನವೂ ಉಳ್ಳ ಮತ್ತು ಸಿದ್ಧರನ್ನು ಸಹ ಮರುಳುಗೊಳಿಸಿ ಆಹ್ಲಾದಪಡಿಸುವದರಲ್ಲಿ ನಿಪುಣರಾದ ಅನೇಕಸಹಸ್ರ ಅಪ್ಸರಸ್ತ್ರೀಯರು ಪೀನೋನ್ನತಪಯೋಧರಗಳು ಚಲಿಸುತ್ತಿರಲು, ತಮ್ಮ ಮಧುರವಾದ ಕಟಾಕ್ಷಗಳಿಂದ ಸಭಿಕರ ಆಲೋಚನಾತ್ಮಕವಾದ ಚಿತ್ತವೃತ್ತಿಯನ್ನೂ ಅಧ್ಯವಸಾಯರೂಪವಾದ ಬುದ್ಧಿಯನ್ನೂ ಸಂಕಲ್ಪವಿಕಲ್ಪಾತ್ಮಕವಾದ ಮನಸ್ಸನ್ನೂ ಅಪಹಾರಮಾಡುತ್ತ, ಅಲ್ಲಲ್ಲಿ ನರ್ತನ ಮಾಡುತ್ತಿದ್ದರು.

## ೪೪ನೇ ಅಧ್ಯಾಯ.—ಅರ್ಜುನನು ಚಿತ್ರಸೇನನಿಂದ ಗಾಂಧರ್ವ ವೇದವನ್ನು ಗ್ರಹಿಸಿದ್ದು.

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಆ ಬಳಿಕ ದೇವತೆಗಳೂ ಗಂಧರ್ವರೂ ದೇವೇಂದ್ರನ ಅಭಿಪ್ರಾಯವನ್ನು ತಿಳಿದು, ಶೀಘ್ರವಾಗಿ ಅರ್ಜುನನಿಗೆ ಉತ್ತಮವಾದ ಅರ್ಘ್ಯಪಾದ್ಯಾಚಮನೀಯಗಳಿಂದ ಚೆನ್ನಾಗಿ ಸತ್ಕಾರವನ್ನು ಮಾಡಿ, ದೇವೇಂದ್ರನ ಅರಮನೆಯನ್ನು ಪ್ರವೇಶ

ಮಾಡಿಸಿದರು. ಈ ಪ್ರಕಾರ ಸಮ್ಮಾನಿತನಾದ ಅರ್ಜುನನು ಇಂದ್ರನ ಅರಮನೆಯಲ್ಲಿ ವಾಸಮಾಡುತ್ತ, ಆತನ ಹಸ್ತದಿಂದಲೇ ದಿವ್ಯಾಸ್ತ್ರಗಳ ಪ್ರಯೋಗೋಪಸಂಹಾರಗಳನ್ನು ಶಿಕ್ಷಾಪೂರ್ವಕವಾಗಿ ಅಭ್ಯಾಸಮಾಡುತ್ತ, ಇಂದ್ರನಿಗೆ ಪ್ರಿಯವಾಗಿಯೂ ಶತ್ರುಗಳಿಗೆ ದುಸ್ಸಹವಾಗಿಯೂ ಇರುವ ವಜ್ರಾಸ್ತ್ರವನ್ನೂ, ಅಕಾಲದಲ್ಲಿ ಮೇಘೋದಯವಾಗುವದರಿಂದಲೂ ನವಿಲುಗಳು ನರ್ತನಮಾಡುವದರಿಂದಲೂ ಮಹತ್ತಾದ ಧ್ವನಿಯಾಗುವದರಿಂದಲೂ ದೇಶಾಂತರದಲ್ಲಿರತಕ್ಕವರಿಗೆ "ಇದು ಅಶನಿಯೆಂಬ ಅಸ್ತ್ರದ ಪ್ರಭಾವವು" ಎಂದು ಜ್ಞಾನವನ್ನುಂಟುಮಾಡತಕ್ಕ ಅಶನಿನಾಮಕವಾದ ಅಸ್ತ್ರವನ್ನೂ, ಇನ್ನೂ ಅನೇಕ ಅಸ್ತ್ರಗಳನ್ನೂ ಸಹ ಗ್ರಹಿಸಿ, ಅಣ್ಣತಮ್ಮಂದಿರನ್ನು ನೆನೆಯುತ್ತ ಇಂದ್ರನ ಆಜ್ಞೆಯಿಂದ ಅಲ್ಲಿ ಐದುವರುಷ ಸುಖವಾಗಿ ವಾಸಮಾಡಿದನು. ಆ ಸಮಯದಲ್ಲಿ ಇಂದ್ರನು ಅಸ್ತ್ರವಿದ್ಯಾಪಾರಂಗತನಾದ ಅರ್ಜುನನನ್ನು ನೋಡಿ "ಎಲೈ ಕೌಂತೇಯನೆ, ಇಲ್ಲಿನಂತೆ ಮನುಷ್ಯಲೋಕದಲ್ಲಿ ನೃತ್ಯಗೀತ ವಾದ್ಯಗಳಿಲ್ಲವಾದ್ದರಿಂದ, ಅವುಗಳನ್ನು ಚಿತ್ರಸೇನನೆಂಬ ಗಂಧರ್ವರಾಜನ ದೆಸೆಯಿಂದ ನೀನು ಪಡೆದುಕೊ. ಇದರಿಂದ ನಿನಗೆ ಶ್ರೇಯಸ್ಸುಂಟಾಗುವದು" ಎಂದು ಹೇಳಿ, ತನಗೆ ಸ್ನೇಹಿತನಾದ ಚಿತ್ರಸೇನನನ್ನು ಕುರಿತು ಅರ್ಜುನನಿಗೆ ವಿದ್ಯಾಭ್ಯಾಸಮಾಡಿಸುವಂತೆ ಹೇಳಿದನು. ಬಳಿಕ ಅರ್ಜುನನು ಚಿತ್ರಸೇನನ ಸಂಗಡ ಸುಖವಾಗಿದ್ದುಕೊಂಡು, ಆತನ ದೆಸೆಯಿಂದ ನೃತ್ಯಗೀತ ವಾದ್ಯಗಳನ್ನು ವಿಶೇಷವಾಗಿ ಗ್ರಹಿಸಿದನು. ಹೀಗಿದ್ದರೂ ಅರ್ಜುನನು ದ್ಯೂತದಲ್ಲಿ ನಡೆದ ವೃತ್ತಾಂತವನ್ನು ಸ್ಮರಿಸಿಕೊಂಡು, ಶಕುನಿ ದುಶ್ಶಾಸನರನ್ನು ಸಂಹಾರಮಾಡಲಿಲ್ಲವಲ್ಲಾ ! ಎಂಬ ಆಕ್ರೋಶದಿಂದ ಸ್ವಲ್ಪವಾದರೂ ಸಂತೋಷವಿಲ್ಲದೆ, ಚಿತ್ರಸೇನನ ಸಹವಾಸಮಾತ್ರದಿಂದ ಸ್ವಲ್ಪಸ್ವಲ್ಪ ಮನಸ್ಸಮಾಧಾನ ಹೊಂದುತ್ತಾ, ಗಾಂಧರ್ವವೇದವನ್ನು ಸಾಂಗವಾಗಿ ಅಭ್ಯಾಸಮಾಡಿ, ತನ್ನ ತಾಯಿಯಾದ ಕುಂತಿಯನ್ನೂ ಅಣ್ಣತಮ್ಮಂದಿರಾದ ಪಾಂಡವರನ್ನೂ ನೆನೆದುಕೊಂಡು ಮನಸ್ಸಿಗೆ ನೆಮ್ಮದಿಯಿಲ್ಲದೆ ಇದ್ದನು.

## ೪೫ನೇ ಅಧ್ಯಾಯ.—ಊರ್ವಶೀ ಚಿತ್ರಸೇನರ ಸಂವಾದ.

ವೈಶಂಪಾಯನ ಮುನೀಂದ್ರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಆ ಬಳಿಕ ಇಂದ್ರನು ಅರ್ಜುನನ ದೃಷ್ಟಿಯು ಊರ್ವಶಿಯ ಮೇಲೆ ಬಿದ್ದದ್ದನ್ನು ತಿಳಿದು, ಮೊದಲೇ ಚಿತ್ರಸೇನನನ್ನು ರಹಸ್ಯವಾಗಿ ಕರೆದು "ಎಲೈ ಚಿತ್ರಸೇನನೆ, ಅಪ್ಸರಶ್ರೇಷ್ಠಳಾದ ಊರ್ವಶಿಯನ್ನು ಅರ್ಜುನನ ಬಳಿಗೆ ಹೋಗುವಂತೆ ಹೇಳಿ ಕಳುಹಿಸಿಕೊಡು. ಆತನನ್ನು ನಾನು ಹ್ಯಾಗೆ ಅಸ್ತ್ರವಿದ್ಯಾ ಪಾರಂಗತನನ್ನಾಗಿ ಮಾಡಿದೆನೋ ಹಾಗೆ ನೀನು ಆತನನ್ನು ಸ್ತ್ರೀವಿಹಾರವಿಷಯದಲ್ಲಿ ಚತುರನನ್ನಾಗಿ ಮಾಡು" ಎಂದು ಹೇಳಲು, ಗಂಧರ್ವರಾಜನಾದ ಚಿತ್ರಸೇನನು ಹಾಗೆಯೇ ಆಗಲೆಂದು ಇಂದ್ರನ ಆಜ್ಞೆಯನ್ನು ಅನುಸರಿಸಿ ಅಪ್ಸರಶ್ರೇಷ್ಠಳಾದ ಊರ್ವಶಿಯ ಬಳಿಗೆ ರಹಸ್ಯವಾಗಿ ಹೋಗಿ, ಆಕೆಯನ್ನು ಕಂಡು ಸಂತುಷ್ಟನಾಗಿ, ಕುಶಲಪ್ರಶ್ನೆ ಮೊದಲಾದ ಪ್ರಿಯೋಕ್ತಿಗಳಿಂದ ಆಕೆಯು ಮರ್ಯಾದೆಯನ್ನು ಮಾಡಲು, ಸುಖವಾಗಿ ಕೂತುಕೊಂಡು ಆಕೆಯನ್ನು ಕುರಿತು ಮಂದಹಾಸಪೂರ್ವಕವಾಗಿ ಮಾತನಾಡಲುಪಕ್ರಮಿಸಿದನು : "ಎಲೆ ಸುಂದರಾಂಗಿಯೆ, ನಿನ್ನ ಕಟಾಕ್ಷಕ್ಕೆ ಪಾತ್ರನಾದ ದೇವೇಂದ್ರನಿಂದ ಪ್ರೇರಿತನಾಗಿ ನಾನು ಈಗ ಇಲ್ಲಿಗೆ ಬಂದಿರುವೆನೆಂದು ತಿಳಿ. ತನ್ನ ಸಹಜವಾದ ಸುಗುಣಗಳಿಂದ ದೇವಮನುಷ್ಯರಲ್ಲಿ ಶ್ರೇಷ್ಠನಾಗಿಯೂ, ಕಾಂತಿಯಿಂದಲೂ ನಡತೆಯಿಂದಲೂ ಸೌಂದರ್ಯದಿಂದಲೂ ವ್ರತಚರ್ಯದಿಂದಲೂ ಇಂದ್ರಿಯನಿಗ್ರಹದಿಂದಲೂ ಕಾಯಬಲದಿಂದಲೂ ಪ್ರತಾಪದಿಂದಲೂ ಸಮಯೋಚಿತವಾದ ಪ್ರತಿಭೆಯಿಂದಲೂ ಪ್ರಖ್ಯಾತನಾಗಿಯೂ, ಶರೀರತೇಜಸ್ಸಿನಿಂದಲೂ ವಿದ್ಯೈಶ್ವರ್ಯಗಳ ತೇಜಸ್ಸಿನಿಂದಲೂ ಕೂಡಿರುವನಾಗಿಯೂ, ಕ್ಷಮಾವಂತನಾಗಿಯೂ, ಮಾತ್ಸರ್ಯವಿಲ್ಲದವನಾಗಿಯೂ, ಷಡಂಗಗಳಿಂದಲೂ ಉಪನಿಷತ್ತುಗಳಿಂದಲೂ ಆಖ್ಯಾನಗಳಿಂದಲೂ ಕೂಡಿರುವ ನಾಲ್ಕು ವೇದಗಳನ್ನೂ ಅಧ್ಯಯನಮಾಡಿರುವನಾಗಿಯೂ, ಇಂದ್ರಿಯನಿಗ್ರಹ ಜಾಗರೂಕತೆ ದಯೆ ವಯಸ್ಸು ರಕ್ಷಣಶಕ್ತಿ ಆತ್ಮಸ್ತುತಿರಾಹಿತ್ಯ ನಿರಹಂಕಾರತ್ವ ಆಶುಬೋಧ ಪ್ರಿಯೋಕ್ತಿ ಎಂಬ ಎಂಟು ಗುಣಗಳುಳ್ಳ ಗುರುಶುಶ್ರೂಷೆಯನ್ನು ಮಾಡಿದವನಾಗಿಯೂ, ಗುರುಶುಶ್ರೂಷೆ ಶ್ರವಣ ಗ್ರಹಣ ಧಾರಣ ಊಹ ಅಪೋಹ ವಿಜ್ಞಾನ ತತ್ವಜ್ಞಾನವೆಂಬ ಎಂಟು

ಗುಣಗಳುಳ್ಳ ಮೇಧೆಯನ್ನು ಪಡೆದಿರುವನಾಗಿಯೂ, ಪರಿಶುದ್ಧರಾದ ಮಾತಾಪಿತೃಗಳ ವಂಶವುಳ್ಳವನಾಗಿಯೂ, ವಿಧವಿಧವಾದ ಅನ್ನಪಾನಗಳಿಂದ ಮಿತ್ರರನ್ನು ಪೋಷಿಸತಕ್ಕವನಾಗಿಯೂ, ಸತ್ಯವಾಕ್ಯನಾಗಿಯೂ, ಪೂಜ್ಯನಾಗಿಯೂ, ವಾಗ್ಮಿಯಾಗಿಯೂ, ಆಶ್ರಿತಾಭಿಮಾನವುಳ್ಳವನಾಗಿಯೂ, ಎಲ್ಲರ ಪ್ರೇಮಕ್ಕೂ ಆಸ್ಪದನಾಗಿಯೂ, ಯುದ್ಧದಲ್ಲಿ ಸ್ಥಿರಪರಾಕ್ರಮನಾಗಿಯೂ, ಶ್ಲಾಘ್ಯವಾದ ತನ್ನ ಗುಣಗಳಿಂದ ಇಂದ್ರಪರುಣರಿಗೆ ಸಮಾನನಾಗಿಯೂ, ಮಹಾವೀರನಾಗಿಯೂ ಇರುವ ಅರ್ಜುನನನ್ನು ನೀನೂ ಬಲ್ಲೆಯಷ್ಟೆ? ಆತನು ಸ್ವರ್ಗಸುಖವನ್ನೂ ಅನುಭವಿಸಲಿ! ಆತನು ಇಂದ್ರನ ಅಪ್ಪಣೆಯಿಂದ ನಿನಗೆ ಪಾದಾಕ್ರಾಂತನಾಗಿರುವನು. ಆದ್ದರಿಂದ, ಎಲೆ ಮಂಗಳಾಂಗಿಯೆ, ನೀನು ಆತನ ಮನೋರಥವನ್ನು ಪೂರ್ಣಮಾಡು" ಎಂದು ಚಿತ್ರಸೇನನು ಮಂದಹಾಸಯುಕ್ತನಾಗಿ ಮರ್ಯಾದೆಯಿಂದ ನುಡಿದನು. ಈ ಮಾತುಗಳನ್ನು ಕೇಳಿ ಗರ್ವೋತ್ಕೃಷ್ಟಳಾದ ಊರ್ವಶಿಯು ಪ್ರೀತಿಯುಕ್ತಳಾಗಿ ಚಿತ್ರಸೇನನನ್ನು ಕುರಿತು "ಎಲೈ ಚಿತ್ರಸೇನನೆ, ನೀನು ಹೇಳಿದ್ದೆಲ್ಲಾ ಯಥಾರ್ಥವು. ನೀನು ಅರ್ಜುನನ ಕೆಲವು ಸುಗುಣಗಳನ್ನು ಮಾತ್ರ ಹೇಳಿದೆ; ನಾನು ಮೊದಲೇ ಬಬ್ಬ ಪುರುಷನ ದೆಸೆಯಿಂದ ಆತನ ಗುಣಾತಿಶಯಗಳನ್ನು ಕೇಳಿ ವಿರಹವ್ಯಥೆಯಿಂದ ತಪಿಸುತ್ತಿದ್ದೆನು. ಆದ್ದರಿಂದ ಆತನನ್ನು ಈ ಸಮಯದಲ್ಲಿ ವರಿಸುವದಕ್ಕೆ ನಾನು ಯಾತಕ್ಕೆ ಹಿಮ್ಮೆಟ್ಟೇನು? ಈಗ ದೇವೇಂದ್ರನ ಅಜ್ಞೆಯಿಂದಲೂ ನಿನ್ನ ಪ್ರೀತಿಪೂರ್ವಕವಾದ ಪ್ರೇರಣೆಯಿಂದಲೂ ಅರ್ಜುನನ ಗುಣವಿಶೇಷಗಳಿಂದಲೂ ಆತನ ವಿಷಯದಲ್ಲಿ ನಾನು ನಿಶ್ಚಯವಾಗಿಯೂ ಮನ್ಮಥಪೀಡಿತೆಯಾಗಿ ಸಂತಾಪಪಡುತ್ತಿರುವೆನು. ಇನ್ನು ನೀನು ಹೋಗು. ಆತನ ಇಚ್ಛಾನುಸಾರವಾಗಿ ನಾನು ಸುಖವಾಗಿ ಆತನ ಬಳಿಗೆ ಬರುವೆನು" ಎಂದು ಹೇಳಿದಳು.

## ೪೬ನೇ ಅಧ್ಯಾಯ.—ಅರ್ಜುನನಿಗೆ ಊರ್ವಶಿಯಿಂದ ಶಾಪಬಂದದ್ದು.

ವೈಶಂಪಾಯನ ಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯನೆ, ಬಳಿಕ ಕೃತಕೃತ್ಯನಾದ ಗಂಧರ್ವರಾಜನನ್ನು ಕಳುಹಿಸಿಕೊಟ್ಟು, ಊರ್ವಶಿಯು ನಗೆಮೊಗವುಳ್ಳವಳಾಗಿ, ಅರ್ಜುನನ ಪ್ರಾರ್ಥನೆಯಿಂದ ಅಧಿಕವಾಗಿ ಕುತೂಹಲಪಡುತ್ತ, ಮಂಗಳಸ್ನಾನವನ್ನು ಮಾಡಿ, ಮನೋಹರವಾದ ಆಭರಣಗಳನ್ನು ಧರಿಸಿ, ದಿವ್ಯವಾದ ಗಂಧವನ್ನು ತೊಡೆದುಕೊಂಡು, ನೂತನವಾದ ಪುಷ್ಪಗಳನ್ನು ಮುಡಿದುಕೊಂಡು, ಅರ್ಜುನನ ಸೌಂದರ್ಯದಿಂದಲೂ ಮನ್ಮಥನ ಬಾಣಗಳಿಂದಲೂ ಪೆಟ್ಟುಬಿದ್ದ ಮನಸ್ಸುಳ್ಳವಳಾಗಿ, ಮನ್ಮಥೋದ್ರೇಕದಿಂದ ದಿವ್ಯವಾದ ಮೇಲುಹಾಸಿಗೆಯುಳ್ಳ ವಿಸ್ತಾರವಾದ ದಿವ್ಯಶಯನದ ಮೇಲೆ ಮನಸ್ಸಂಕಲ್ಪರೂಪವಾದ ಮನೋರಥದಿಂದ ಪ್ರಾಪ್ತನಾದ ಅರ್ಜುನನೊಡನೆ ಉತ್ತಮ ಮನೋಭಾವದಿಂದಲೂ ನಿಶ್ಚಲಚಿತ್ತದಿಂದಲೂ ವಿಹರಿಸಬೇಕೆಂಬ ಅಭಿಲಾಷೆಯಿಂದ ಪೂರ್ಣಚಂದ್ರೋದಯದಿಂದ ರಮಣೀಯವಾದ ಸಾಯಂಕಾಲ ಸಮಯದಲ್ಲಿ ಅರ್ಜುನನ ವಾಸಭವನವನ್ನು ಕುರಿತು ಹೊರಟು, ಮೃದುವಾಗಿಯೂ ಕುಟಿಲವಾಗಿಯೂ ಉದ್ದವಾಗಿಯೂ ದಿವ್ಯವಾದ ಪುಷ್ಪಗಳನ್ನು ಮುಡಿದಿರುವದಾಗಿಯೂ ಇರುವ ಜಡೆಯಿಂದೊಪ್ಪುತ್ತ, ಮನೋಹರವಾಗಿ ಹುಬ್ಬುಗಳನ್ನು ಹಾರಿಸುತ್ತ, ಮೃದುಮಧುರವಾಗಿ ಮಾತನಾಡುತ್ತ, ಕಾಂತಿಯುಕ್ತವಾಗಿಯೂ ಸೌಮ್ಯವಾಗಿಯೂ ಇರುವ ತನ್ನ ಮುಖದಿಂದ ಚಂದ್ರನೊಡನೆ ಹೋರಾಡುವಳಂತೆ ತೋರುತ್ತ, ದಿವ್ಯವಾದ ಗಂಧ ಕುಂಕುಮಗಳಿಂದ ಲೇಪಿಸಲ್ಪಟ್ಟ ರಮ್ಯವಾದ ಅಗ್ರಭಾಗವುಳ್ಳವುಗಳಾಗಿ ಮುತ್ತಿನ ಹಾರದಿಂದ ಮನೋಜ್ಞವಾಗಿರುವ ಸ್ತನಗಳು ಒಂದನ್ನೊಂದು ಘರ್ಷಿಸುತ್ತಿರಲು ಅವುಗಳ ಭಾರದಿಂದ ಹೆಜ್ಜೆಹೆಜ್ಜೆಗೂ ತಗ್ಗಿತಗ್ಗಿ ನಡೆಯುತ್ತ, ತ್ರಿವಳಿಯುಕ್ತವಾಗಿಯೂ ಕೃಶವಾಗಿಯೂ ಇರುವ ನಡುವಿನಿಂದಲೂ ಆಶ್ಚರ್ಯವಾಗಿಯೂ ಪರ್ವತದಂತೆ ವಿಸ್ತಾರವಾಗಿಯೂ ದೊಡ್ಡದಾಗಿಯೂ ಇರುವ ಕಟಿಪಶ್ಚಾದ್ಭಾಗದಿಂದಲೂ ದೇವಋಷಿಗಳ ಮನಸ್ಸನ್ನಾದರೂ ಅಪಹರಿಸತಕ್ಕದ್ದಾಗಿಯೂ ಸೂಕ್ಷ್ಮವಾದ ವಸ್ತ್ರದಿಂದ ಯುಕ್ತವಾಗಿಯೂ ರತ್ನಖಚಿತವಾದ ನಡುವಿನ ಪಟ್ಟಿಯಿಂದ ಅಲಂಕೃತವಾಗಿಯೂ ದೋಷರಹಿತವಾಗಿಯೂ ನಿರ್ಮಲವಾಗಿಯೂ ಮನ್ಮಥನಿಗೆ ಆವಾಸಭೂತವಾಗಿಯೂ ಇರುವ ಕಟಿಪುರೋಭಾಗದಿಂದಲೂ ಶೋಭಿಸುತ್ತ, ಅಣಗಿರುವ ಹರಡುಳ್ಳದ್ದಾಗಿಯೂ ಎಳೆಗೆಂಪಾದ ಬೆರಳುಗಳುಳ್ಳದ್ದಾಗಿಯೂ ಆಮೇಬೆನ್ನಿನಂತೆ ಉಬ್ಬಿರುವದಾಗಿಯೂ ಸಣ್ಣಸಣ್ಣ

ಗೆಜ್ಜೆಗಳುಳ್ಳ ಕಾಲುಸರಗಳಿಂದ ಅಲಂಕೃತವಾಗಿಯೂ ಇರುವ ಪಾದಗಳಿಂದ ಕಂಗೊಳಿಸುತ್ತ, ಸ್ವಲ್ಪ ಮಧುಪಾನ ದಿಂದ ಸಂತುಷ್ಟಳಾಗಿ, ಮನ್ಮಥಾವಿರ್ಭಾವದಿಂದಲೂ ನಾನಾಪ್ರಕಾರವಾದ ಹಾವಭಾವಗಳಿಂದಲೂ ನೋಡುವವರಿಗೆ ಕುತೂಹಲವನ್ನುಂಟುಮಾಡುತ್ತ, ಮೇಘದಂತೆ ನೀಲವರ್ಣವುಳ್ಳ ಸೂಕ್ಷ್ಮವಾದ ಮೇಲುಹೊದ್ದಿಕೆಯನ್ನು ಧರಿಸಿ ಆಕಾಶದಲ್ಲಿ ಮೇಘಗಳಿಂದ ಪರಿವೇಷ್ಟಿಸಲ್ಪಟ್ಟ ಸೂಕ್ಷ್ಮವಾದ ಚಂದ್ರಕಲೆಯಂತೆ ಪ್ರಕಾಶಿಸುತ್ತ, ಬಹಳವಾದ ಆಶ್ಚ ರ್ಯಗಳಿಗೆ ಸ್ಥಾನವಾಗಿರುವ ಸ್ವರ್ಗಲೋಕದಲ್ಲೂ ವಿಶೇಷವಾಗಿ ನೋಡತಕ್ಕದ್ದಾದ ಅಂಗಸೌಷ್ಠವವುಳ್ಳವಳಾಗಿ, ಸಿದ್ಧಚಾರಣ ಗಂಧರ್ವ ಸಹಿತಳಾಗಿ ವಾಯುವೇಗ ಮನೋವೇಗಗಳಿಂದ ಕ್ಷಣಮಾತ್ರದಲ್ಲಿ ಪಾಂಡುಪುತ್ರನಾದ ಅರ್ಜು ನನಿರುವ ಮನೆಗೆ ಬಂದು, ಮಂದಹಾಸದಿಂದ ತಾನು ಬಂದಿರುವದನ್ನು ದ್ವಾರಪಾಲಕರಿಂದ ಅರ್ಜುನನಿಗೆ ತಿಳಿಯಿಸಿ, ನಿರ್ಮಲವಾಗಿಯೂ ಮನೋಹರವಾಗಿಯೂ ಇರುವ ಆ ಮನೆಯನ್ನು ಪ್ರವೇಶಿಸಿದಳು. ರಾತ್ರಿಕಾಲದಲ್ಲಿ ತನ್ನ ಮನೆಗೆ ಬಂದ ಆ ಊರ್ವಶಿಯನ್ನು ನೋಡಿ, ಅರ್ಜುನನು ಮನಸ್ಸಿನಲ್ಲಿ ಶಂಕೆಗೊಂಡು, ಲಜ್ಜಾಕ್ರಾಂತವಾದ ನೇತ್ರ ವುಳ್ಳವನಾಗಿ ಆಕೆಗೆ ನಮಸ್ಕರಿಸಿ ಗುರುಜನಕ್ಕೆ ತಕ್ಕ ಸತ್ಕಾರವನ್ನು ಮಾಡಿ, "ಎಲೌ ಅಪ್ಸರಶ್ರೇಷ್ಠಳಾದ ಊರ್ವ ಶಿಯೆ, ಇದೋ ನಾನು ನಿನಗೆ ಸಾಷ್ಟಾಂಗ ಪ್ರಣಾಮಗಳನ್ನು ಮಾಡುವೆನು. ನಿನ್ನ ಸೇವಕನಾದ ನನಗೆ ಏನನ್ನು ಆಜ್ಞಾಪಿಸುವೆ? ಇದೋ ಮಾಡಲು ನಾನು ಸಿದ್ಧನಾಗಿರುವೆನು" ಎಂದು ನುಡಿದನು. ಆ ಮಾತನ್ನು ಕೇಳಿ ಊರ್ವ ಶಿಯು ಬುದ್ಧಿವಿಕಾರವನ್ನು ಹೊಂದಿ, ಒಡನೆ ಅರ್ಜುನನನ್ನು ಕುರಿತು "ಎಲೈ ಪುರುಷಶ್ರೇಷ್ಠನಾದ ಅರ್ಜುನನೆ, ಚಿತ್ರಸೇನನು ನನ್ನ ಸಂಗಡ ಹೇಳಿದ ಮಾತುಗಳನ್ನು ಹೇಳುವೆನು ಕೇಳು. ಆತನ ಮಾತಿನಿಂದಲೇ ನಾನು ಇಲ್ಲಿಗೆ ಬಂದೆನು. ಸ್ವರ್ಗಲೋಕಕ್ಕೆ ನೀನು ಬಂದ ಮಹೋತ್ಸವಕಾಲದಲ್ಲಿ ದೇವೇಂದ್ರನು ಮನಸ್ಸಿಗೆ ಆನಂದಕರವಾದ ಸಭೆಯನ್ನು ಮಾಡಿಕೊಂಡಿರಲು, ಅಲ್ಲಿಗೆ ಏಕಾದಶರುದ್ರರೂ ದ್ವಾದಶಾದಿತ್ಯರೂ ಅಶ್ವಿನೀದೇವತೆಗಳೂ ಅಷ್ಟವಸು ಗಳೂ ಮಹರ್ಷಿಗಳೂ ರಾಜರ್ಷಿಗಳೂ ಸಿದ್ಧ ಚಾರಣ ಯಕ್ಷರೂ ಸರ್ಪಶ್ರೇಷ್ಠರೂ ಬಂದು ತಮತಮಗೆ ಉಚಿ ತವಾದ ಸ್ಥಾನಗಳಲ್ಲಿ ಮರ್ಯಾದಾನುಸಾರವಾಗಿ ಕೂತುಕೊಂಡು ತಮ್ಮತಮ್ಮ ಐಶ್ವರ್ಯದಿಂದಲೂ ಮಹಿಮೆಯಿಂ ದಲೂ ಸೂರ್ಯಚಂದ್ರಾಗ್ನಿಗಳಂತೆ ಪ್ರಕಾಶಿಸುತ್ತಿರಲು, ಗಂಧರ್ವರು ವೀಣೆಯನ್ನು ನುಡಿಸುತ್ತ ದಿವ್ಯವಾದ ಗಾನ ವನ್ನು ಮಾಡುತ್ತಿರಲು, ಶ್ರೇಷ್ಠರಾದ ಅಪ್ಸರಸ್ತ್ರೀಯರು ಮನೋಹರವಾಗಿ ನಾಟ್ಯಮಾಡುತ್ತಿರಲು, ಆ ಸಮಯದಲ್ಲಿ ನೀನು ಕಣ್ಣೆವೆಯನ್ನು ಇಕ್ಕದೆ ನನ್ನೊಬ್ಬಳನ್ನು ನೋಡಿದೆಯಷ್ಟೆ? ಆ ದೇವಸಭೆಯಾದ ಬಳಿಕ ಸಕಲರಾದ ದೇವತೆಗಳೂ ಅಪ್ಸರಸ್ತ್ರೀಯರೂ ಋಷಿಗಳೂ ಉಳಿದವರೆಲ್ಲರೂ ನಿಮ್ಮ ತಂದೆಯಾದ ಇಂದ್ರನ ಅಪ್ಪಣೆಯನ್ನು ತೆಗೆದುಕೊಂಡು ತಮ್ಮತಮ್ಮ ಸ್ಥಾನಗಳಿಗೆ ಹೋದರು. ಬಳಿಕ ಚಿತ್ರಸೇನನು ಇಂದ್ರನ ಆಜ್ಞೆಯಿಂದ ನನ್ನ ಬಳಿಗೆ ಬಂದು ನನ್ನನ್ನು ಕುರಿತು "ನಿನ್ನ ನಿಮಿತ್ತವಾಗಿ ಇಂದ್ರನು ನನ್ನನ್ನು ಇಲ್ಲಿಗೆ ಕಳುಹಿಸಿಕೊಟ್ಟಿರುವನು. ನೀನು ಆ ದೇವೇಂದ್ರನಿಗೂ ನನಗೂ ನಿನಗೂ ಸಹ ಪ್ರಿಯವಾಗುವಂತೆ ಮಾಡು. ಎಲೆ ಮಂಗಳಾಂಗಿಯೆ, ಯುದ್ಧದಲ್ಲಿ ಇಂದ್ರನಿಗೆ ಸಮಾನನಾಗಿಯೂ ಶೂರನಾಗಿಯೂ ಯಾವಾಗಲೂ ಉದಾರಸ್ವಭಾವವುಳ್ಳವನಾಗಿಯೂ ಇರುವ ಅರ್ಜು ನನನ್ನು ನೀನು ಬಯಸಬೇಕು" ಎಂದು ಹೇಳಿದನು. "ಎಲೈ ಅರ್ಜುನನೆ, ಆದ್ದರಿಂದ ನಾನು ನಿಮ್ಮ ತಂದೆಯಾದ ದೇವೇಂದ್ರನಿಂದಲೂ ಗಂಧರ್ವರಾಜನಾದ ಚಿತ್ರಸೇನನಿಂದಲೂ ಆಜ್ಞಪ್ತಳಾಗಿ ನಿನ್ನನ್ನು ಸೇವಿಸುವದಕ್ಕೋಸ್ಕರ ಬಂದಿ ರುವೆನು. ನಿನ್ನ ಗುಣಗಳನ್ನು ಕೇಳಿ ನಿನ್ನಲ್ಲೇ ಮನಸ್ಸಿಟ್ಟು ಮನ್ಮಥವಶಳಾದ ನನಗೂ ಬಹುಕಾಲದಿಂದ ಈ ಅಪೇಕ್ಷೆಯಿತ್ತು" ಎಂದು ನುಡಿದಳು.

ಅದನ್ನು ಕೇಳಿ ಅರ್ಜುನನು ಲಜ್ಜಾಯುಕ್ತನಾಗಿ ಎರಡು ಕೈಗಳಿಂದಲೂ ಕಿವಿಗಳನ್ನು ಮುಚ್ಚಿಕೊಂಡು "ಎಲೌ ಭಾಗ್ಯವತಿಯೆ, ನೀನು ನನ್ನ ಸಂಗಡ ಹೀಗೆ ಮಾತನಾಡಬಹುದೆ? ಅಯ್ಯೋ! ಇಂಥಾ ಮಾತುಗಳನ್ನು ಕೇಳಿ ನನ್ನ ಕಿವಿಯು ವ್ಯರ್ಥವಾಯಿತಲ್ಲ! ನನಗೆ ನೀನು ನಿಜವಾಗಿ ಗುರುಪತ್ನಿಗೆ ಸಮಾನಳಾದವಳು. ಮಹಾ ಭಾಗ್ಯವತಿಯಾದ ಕುಂತೀದೇವಿಯೂ ಶಚೀದೇವಿಯೂ ಹ್ಯಾಗೋ, ಹಾಗೆ ನಿನ್ನನ್ನೂ ನಾನು ಭಾವಿಸಿರುವೆನು. ಇದರಲ್ಲಿ ಸಂಶಯವಿಲ್ಲ. ಎಲೌ ಹಸನ್ಮುಖಿಯೆ, ನಾನು ಇಂದ್ರಸಭೆಯಲ್ಲಿ ವಿಶೇಷವಾಗಿ ನಿನ್ನನ್ನೇ ನೋಡಿದ್ದಕ್ಕೆ ಕಾರಣವನ್ನು ನಿಜವಾಗಿ ಹೇಳುವೆನು ಕೇಳು. ನೀನು ನಮ್ಮ ಪೌರವಂಶಕ್ಕೆ ತಾಯಿಯಾದವಳೆಂದು ತಿಳಿದು ನಾನು

ಆ ಸಭೆಯಲ್ಲಿ ಚೆನ್ನಾಗಿ ಕಣ್ಣುತೆರೆದು ನಿನ್ನನ್ನು ನೋಡಿದೆನೇ ಹೊರತು, ಇನ್ನಾವ ಭಾವದಿಂದಲೂ ನೋಡಲಿಲ್ಲ. ನೀನು ನನ್ನನ್ನು ಬೇರೆ ವಿಧವಾಗಿ ಭಾವಿಸಕೂಡದು. ನಮ್ಮ ವಂಶವನ್ನು ಅಭಿವೃದ್ಧಿ ಪಡಿಸಿದ ನೀನು ನನಗೆ ಗುರುಜನಕ್ಕಿಂತಲೂ ಅಧಿಕವಾಗಿ ಭಾವಿಸುವದಕ್ಕೆ ಯೋಗ್ಯಳು" ಎಂದು ನುಡಿಯಲು, ಊರ್ವಶಿಯು ಅದನ್ನು ಕೇಳಿ "ಎಲೈ ಇಂದ್ರಪುತ್ರನಾದ ಅರ್ಜುನನೆ, ಅಪ್ಸರಸ್ತ್ರೀಯರಾದ ನಮಗೆ ಒಬ್ಬ ಪುರುಷನಲ್ಲೇ ವಿಹರಿಸಬೇಕೆಂಬ ಯಾವ ನಿರ್ಬಂಧವೂ ಇಲ್ಲವಾದಕಾರಣ, ನನ್ನನ್ನು ನೀನು ಗುರುಜನರಲ್ಲಿ ಸೇರಿಸಬೇಡ. ನಿಮ್ಮ ವಂಶದಲ್ಲಿ ಪುರು ಚಕ್ರವರ್ತಿಯ ಮಕ್ಕಳು ಮರಿಮಕ್ಕಳೆಲ್ಲರೂ ತಮ್ಮತಮ್ಮ ತಪಃಪ್ರಭಾವದಿಂದ ಈ ಲೋಕದಲ್ಲಿ ಅಪ್ಸರಸ್ತ್ರೀಯರಾದ ನಮ್ಮಲ್ಲಿ ವಿಹರಿಸುತ್ತಿರುವರು. ಇದರಿಂದ ಅವರು ಏನನ್ನೂ ಅತಿಕ್ರಮಿಸಿದ ಹಾಗಾಗಲಿಲ್ಲ. ಆದ್ದರಿಂದ ಮನ್ಮಥಪೀಡಿತೆಯಾಗಿ ನಿನ್ನನ್ನೇ ಬಯಸಿಬಂದ ನನ್ನನ್ನು ತ್ಯಾಗಮಾಡದೆ ಪ್ರಸನ್ನನಾಗಿ ಪರಿಗ್ರಹಿಸು" ಎಂದು ನುಡಿದಳು. ಅದಕ್ಕೆ ಅರ್ಜುನನು "ಎಲೌ ಪೂಜ್ಯಳೆ, ನಾನು ಸತ್ಯವಾಗಿ ಒಂದು ಮಾತನ್ನು ಹೇಳುವೆನು ಕೇಳು. ಅದನ್ನು ದಿಕ್ಕುಗಳೂ ವಿದಿಕ್ಕುಗಳೂ ದೇವತೆಗಳೂ ಸಾಕ್ಷಿಗಳಾಗಿ ಕೇಳಲಿ. ನನಗೆ ಕುಂತಿದೇವಿಯೂ ಮಾದ್ರೀದೇವಿಯೂ ಶಚೀದೇವಿಯೂ ಹ್ಯಾಗೆ ಪೂಜ್ಯರೋ ಹಾಗೆ, ನಮ್ಮ ವಂಶಕ್ಕೆ ಕಾರಣಭೂತೆಯಾದ ನೀನೂ ಪೂಜ್ಯಳು. ನಿನ್ನ ಚರಣಗಳಿಗೆ ನಾನು ತಲೆಬಾಗಿ ನಮಸ್ಕಾರಮಾಡುವೆನು. ನೀನು ಮರಳಿಹೋಗು. ನನಗೆ ನೀನು ತಾಯಿಯಂತೆ ಮಾನ್ಯಳಾದವಳು ಮತ್ತು ನಿನಗೆ ನಾನು ಪುತ್ರನಂತೆ ಪಾಲಿಸುವದಕ್ಕೆ ಯೋಗ್ಯನಾದವನು" ಎಂದು ನುಡಿದನು. ಆ ಮಾತುಗಳನ್ನು ಕೇಳಿ, ಊರ್ವಶಿಯು ಕ್ರೋಧಾವೇಶವುಳ್ಳವಳಾಗಿ ಹುಬ್ಬು ಗಂಟುಹಾಕಿಕೊಂಡು, ಮೈಯನ್ನು ನಡುಗಿಸುತ್ತ, ಅರ್ಜುನನನ್ನು ನೋಡಿ "ಎಲೈ ಅರ್ಜುನನೆ, ನಿಮ್ಮ ತಂದೆಯಾದ ದೇವೇಂದ್ರನ ಅಪ್ಪಣೆಯಿಂದ ಮನ್ಮಥನ ಬಾಣಕ್ಕೆ ಒಳಗಾಗಿ ನಾನಾಗಿ ಒಲಿದು ನಿನ್ನ ಮನೆಗೆ ಬಂದರೂ, ನೀನು ನನ್ನನ್ನು ಸಂತೋಷಪಡಿಸದೆ ಹೋದೆಯಾದಕಾರಣ, ಸ್ತ್ರೀಯರ ಮಧ್ಯದಲ್ಲಿ ಮಾನವಿಲ್ಲದೆ ಪುರುಷತ್ವವನ್ನು ಕಳೆದುಕೊಂಡು ನರ್ತಕನೆನಿಸಿಕೊಂಡು ನಪುಂಸಕನಂತಿರು" ಎಂದು ಆತನಿಗೆ ಶಾಪವನ್ನು ಕೊಟ್ಟು, ಕೋಪದಿಂದ ತುಟಿಯನ್ನು ನಡುಗಿಸುತ್ತಾ, ನಿಟ್ಟುಸುರು ಬಿಡುತ್ತ, ಶೀಘ್ರವಾಗಿ ಹಿಂತಿರುಗಿ ತನ್ನ ಮನೆಗೆ ಹೊರಟು ಹೋದಳು.

ಬಳಿಕ ಅರ್ಜುನನು ಜಾಗ್ರತೆಯಾಗಿ ಚಿತ್ರಸೇನನ ಬಳಿಗೆ ಹೋಗಿ, ಆ ರಾತ್ರಿ ನಡೆದ ಊರ್ವಶಿಯ ವೃತ್ತಾಂತವನ್ನೆಲ್ಲಾ ಯಥಾಸ್ಥಿತವಾಗಿ ಹೇಳಿ, ಆ ಊರ್ವಶಿಯು ತನಗೆ ಕೊಟ್ಟ ಶಾಪವನ್ನು ವಿವರಿಸಿ ಹೇಳಲು, ಚಿತ್ರಸೇನನು ಆ ವೃತ್ತಾಂತವನ್ನೆಲ್ಲಾ ದೇವೇಂದ್ರನಿಗೆ ತಿಳುಹಿಸಿದನು. ಬಳಿಕ ಇಂದ್ರನು ಏಕಾಂತದಲ್ಲಿ ಅರ್ಜುನನನ್ನು ಕರೆಯಿಸಿ, ಒಳ್ಳೇಮಾತುಗಳಿಂದ ಸಮಾಧಾನವನ್ನು ಹೇಳಿ, ನಸುನಗುತ ಆತನನ್ನು ಕುರಿತು "ಎಲೈ ಕುಮಾರನೆ, ನಿಮ್ಮ ತಾಯಿಯಾದ ಕುಂತೀದೇವಿಯು ಸತ್ಪುತ್ರನಾದ ನಿನ್ನಿಂದ ಈಗ ಸುಪುತ್ರೆಯೆನಿಸಿಕೊಂಡಳು. ನೀನು ಧೈರ್ಯದಿಂದ ಋಷಿಗಳನ್ನೂ ಜಯಿಸಿಬಿಟ್ಟೆ. ಎಲೈ ಮಗನೆ, ಊರ್ವಶಿಯು ಕೊಟ್ಟ ಶಾಪಕ್ಕಾಗಿ ನೀನು ಚಿಂತಿಸಬೇಡ. ಆ ಶಾಪವು ಮುಂದೆ ನಿನಗೊಂದು ದೊಡ್ಡ ಸಾಧಕವಾಗುವದು. ಹದಿಮೂರನೇ ವರ್ಷದಲ್ಲಿ ನೀವು ಭೂಲೋಕದಲ್ಲಿ ಅಜ್ಞಾತವಾಸವನ್ನು ಮಾಡಬೇಕಷ್ಟೆ? ಆ ಒಂದು ವರುಷವನ್ನು ಕಳೆಯುವದಕ್ಕೆ ಆ ಶಾಪವು ನಿನಗೆ ಪ್ರಯೋಜನಕರವಾಯಿತು. ಆ ಬಳಿಕ ನೀನು ಪುರುಷತ್ವವನ್ನು ಪಡೆಯುವೆ" ಎಂದು ನುಡಿಯಲು, ಅದನ್ನು ಕೇಳಿ ಸಂತುಷ್ಟನಾದ ಅರ್ಜುನನು ಆ ಶಾಪವಿಷಯದಲ್ಲಿ ಚಿಂತಾಪರನಾಗದೆ, ಗಂಧರ್ವರಾಜನಾದ ಚಿತ್ರಸೇನನಿಂದೊಡಗೂಡಿ ಸುಖವಾಗಿ ಆ ಸ್ವರ್ಗದಲ್ಲಿ ವಿಹರಿಸುತ್ತಿದ್ದನು. "ಎಲೈ ಜನಮೇಜಯನೆ, ಪಾಂಡುಪುತ್ರನಾದ ಅರ್ಜುನನ ಈ ವೃತ್ತಾಂತವನ್ನು ಯಾರು ನಿರಂತರವೂ ಕೇಳುವರೋ ಅವರಿಗೆ ಪಾಪಜನಕವಾದ ವಿಷಯಸುಖದಲ್ಲಿ ಮನಸ್ಸು ಪ್ರವರ್ತಿಸುವದಿಲ್ಲ. ಇಂದ್ರಪುತ್ರನಾದ ಅರ್ಜುನನ ಪರಿಶುದ್ಧವಾದ ಈ ವೃತ್ತಾಂತವನ್ನು ಕೇಳಿದ ಅರಸುಗಳು ಮದ ಡಂಭ ರಾಗ ದ್ವೇಷಗಳನ್ನು ತ್ಯಜಿಸಿ, ಸ್ವರ್ಗಲೋಕವನ್ನು ಹೊಂದಿ ಸುಖವಾಗಿ ವಿಹರಿಸುವರು" ಎಂದು ವೈಶಂಪಾಯನಮುನೀಶ್ವರನು ಜನಮೇಜಯರಾಯನಿಗೆ ವಿವರಿಸಿದನು.

೪೭ನೇ ಅಧ್ಯಾಯ.—ಇಂದ್ರನಾಜ್ಞೆಯಿಂದ ಲೋಮಶಮಹರ್ಷಿಯು ಧರ್ಮರಾಯನ ಬಳಿಗೆ ಬಂದದ್ದು.

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಆ ಬಳಿಕ ಬಂದಾನೊಂದು ಕಾಲದಲ್ಲಿ ಲೋಮಶಮಹರ್ಷಿಯು ಅಲ್ಲಲ್ಲಿ ಸಂಚಾರಮಾಡುತ್ತ, ಇಂದ್ರನನ್ನು ನೋಡಬೇಕೆಂದು ಇಂದ್ರಭವನಕ್ಕೆ ಬಂದು, ಆತನಿಗೆ ವಂದನೆಯನ್ನು ಮಾಡಿ, ಇಂದ್ರನಾಜ್ಞೆಯಿಂದ ದರ್ಭೆಯನ್ನು ಹಾಸಿರತಕ್ಕ ಪೀಠದಮೇಲೆ ಕುಳಿತು, ಅಲ್ಲಿದ್ದ ಋಷಿಗಳಿಂದ ಪೂಜಿತನಾಗಿ, ಇಂದ್ರನ ಅರ್ಧಾಸನದಲ್ಲಿ ಕುಳಿತಿರುವ ಅರ್ಜುನನನ್ನು ನೋಡಿ "ಕ್ಷತ್ರಿಯನಾದ ಈ ಅರ್ಜುನನು ಇಂದ್ರನ ಅರ್ಧಾಸನವನ್ನು ಹ್ಯಾಗೆ ಪೊಂದಿದನು? ಇವನು ಅಂಥ ಸುಕೃತವನ್ನೇನುಮಾಡಿರುವನು? ಇವನು ಯಾವಯಾವ ಪುಣ್ಯಲೋಕಗಳನ್ನು ಜಯಿಸಿ ಎಲ್ಲಾ ದೇವತೆಗಳಿಂದ ಪೂಜ್ಯವಾದ ಈ ಪದವಿಯನ್ನು ಪಡೆದಿರುವನು?" ಎಂದು ಮನಸ್ಸಿನಲ್ಲಿ ಆಲೋಚಿಸುತ್ತಿರಲು, ಆತನ ಅಭಿಪ್ರಾಯವನ್ನು ತಿಳಿದು ಶಚೀಪತಿಯಾದ ಇಂದ್ರನು ಮಂದಹಾಸಯುಕ್ತನಾಗಿ ಆ ಋಷಿಯನ್ನು ಕುರಿತು "ಎಲೈ ಮಹರ್ಷಿಯೆ, ನಿನ್ನ ಮನಸ್ಸಿನಲ್ಲಿರುವ ಆಲೋಚನೆಗೆ ನಾನು ಸಮಾಧಾನವನ್ನು ಹೇಳುವೆನು ಕೇಳು. ಈತನು ಎಲ್ಲಾ ಮನುಷ್ಯರಂತೆ ಮನುಷ್ಯತ್ವವನ್ನು ಪಡೆದವನಲ್ಲ. ಕುಂತೀದೇವಿಯಲ್ಲಿ ಹುಟ್ಟಿದ ಈತನು ನನಗೆ ಮಗನಾಗಬೇಕು. ದಿವ್ಯಾಸ್ತ್ರಗಳನ್ನು ಪಡೆಯಬೇಕೆಂಬ ಒಂದು ಕಾರಣದಿಂದ ಈತನು ಇಲ್ಲಿಗೆ ಬಂದಿರುವನು. ಈತನು ಪುರಾತನನಾದ ಋಷಿಯೆಂಬುವದನ್ನು ನೀನು ಕಾಣೆ. ಈತನು ಯಾರೋ, ಇಲ್ಲಿಗೆ ಯಾತಕ್ಕೆ ಬಂದಿರುವನೋ, ಅವುಗಳನ್ನೆಲ್ಲಾ ಹೇಳುವೆನು ಕೇಳು. ನರನಾರಾಯಣರೆಂಬ ಪುರಾತನರಾದ ಋಷಿಶ್ರೇಷ್ಠರೇ ಈ ಅರ್ಜುನ ಕೃಷ್ಣರೆಂದು ತಿಳಿ. ಮೂರುಲೋಕದಲ್ಲೂ ಪ್ರಸಿದ್ಧರಾದ ಇವರಿಬ್ಬರೂ ಒಂದು ಕಾರ್ಯಕ್ಕಾಗಿ ಪುಣ್ಯತಮವಾದ ಭೂಮಿಯಲ್ಲಿ ಅವತರಿಸಿರುವರು. ಇವರಿಬ್ಬರೂ ದೇವತೆಗಳಿಗೂ ಮಹಾತ್ಮರಾದ ಋಷಿಗಳಿಗೂ ನೋಡುವದಕ್ಕೆ ಅಶಕ್ಯವಾದ ಪುಣ್ಯತಮವಾದ ಬದರಿಕಾಶ್ರಮದಲ್ಲಿ ವಾಸಮಾಡುತ್ತಿದ್ದರು. ಅಲ್ಲಿಂದಲೇ ಸಿದ್ಧಚಾರಣರಿಂದ ಸೇವಿತಳಾದ ಗಂಗೆಯು ಪ್ರವಹಿಸಿದ್ದು. ಮಹಾತ್ಮರಾದ ಇವರಿಬ್ಬರೂ ನನ್ನ ಪ್ರಾರ್ಥನೆಯಿಂದ ಭೂಮಿಯಲ್ಲಿ ಅವತಾರಮಾಡಿದರು. ಇವರೇ ಸಕಲ ಭೂಭಾರವನ್ನೂ ಪರಿಹಾರಮಾಡುವವರು. ವರಪ್ರಭಾವದಿಂದ ಮತ್ತರಾಗಿ ನಮಗೆ ಕೇಡನ್ನು ಬಯಸುತ್ತ ದುರಾತ್ಮರಾಗಿರುವ ನಿವಾತಕವಚರೆಂಬ ಅಸುರರು ಬಲಶಾಲಿಗಳಾಗಿ ಗರ್ವಪಡುತ್ತ, ದೇವತೆಗಳನ್ನು ನಾಶಮಾಡಬೇಕೆಂದು ಯೋಚಿಸುತ್ತಿರುವರು. ದನುಪುತ್ರರಾದ ಪಾತಾಳವಾಸಿಗಳಾದ ಆ ಘೋರರಾಕ್ಷಸರು ವರಪ್ರಭಾವದಿಂದ ದೇವತೆಗಳನ್ನೂ ಲಕ್ಷ್ಯಮಾಡದೆ ಇರುವರು. ಸಕಲ ದೇವತೆಗಳೂ ಒಟ್ಟಾದರೂ ಅವರ ಸಂಗಡ ಹೋರಾಡುವದಕ್ಕಾಗುವದಿಲ್ಲ. ಪೂರ್ವದಲ್ಲಿ ಭೂಮಿಯನ್ನು ಪಾತಾಳದವರಿಗೂ ತೋಡಿದ ಅರವತ್ತುಸಾವಿರಮಂದಿ ಸಗರರಾಯನ ಮಕ್ಕಳನ್ನು ದರ್ಶನಮಾತ್ರದಿಂದ ಭಸ್ಮರಾಶಿಯಾಗಿ ಮಾಡಿದ ಕಪಿಲನಾಮಕನಾದ ನಾರಾಯಣನು ಈ ಭೂಮಿಯಲ್ಲಿ ಶ್ರೀಕೃಷ್ಣನಾಗಿ ಅವತರಿಸಿರುವನು. ಆತನೂ ಈ ಅರ್ಜುನನೂ ಸೇರಿ ಯುದ್ಧದಲ್ಲಿ ಮಹತ್ತಾದ ನಮ್ಮ ಕಾರ್ಯವನ್ನು ನೆರವೇರಿಸಬೇಕಾಗಿರುವದು. ಆ ಕೃಷ್ಣನು, ಮಡುವಿನಲ್ಲಿರುವ ಸರ್ಪಗಳನ್ನು ಸಂಹರಿಸುವಂತೆ, ಪಾತಾಳವಾಸಿಗಳಾದ ನಿವಾತಕವಚರನ್ನು ಪರಿವಾರಸಹಿತವಾಗಿ ದರ್ಶನಮಾತ್ರದಿಂದಲೇ ಸಂಹಾರಮಾಡುವದಕ್ಕೆ ಸಮರ್ಥನಾಗಿರುವನು. ಆದರೆ ಇಂಥ ಸ್ವಲ್ಪಕಾರ್ಯವನ್ನು ಆತನಿಗೆ ಹೇಳಕೂಡದು. ತೇಜೋರಾಶಿಯಾದ ಆತನು ಉದ್ಯುಕ್ತನಾದರೆ ಜಗತ್ತನ್ನೇ ದಹಿಸಿಬಿಟ್ಟಾನು. ಆ ನಿವಾತಕವಚರನ್ನು ಸಂಹರಿಸುವದಕ್ಕೆ ಶೂರನಾದ ಈ ಅರ್ಜುನನೇ ಸಾಕು. ಈತನು ಆ ನಿವಾತಕವಚರನ್ನು ಸಂಹಾರಮಾಡಿ ಪುನಃ ಭೂಲೋಕಕ್ಕೆ ಹೋಗುವನು. ಎಲೈ ಲೋಮಶನೆ, ಅಷ್ಟರಲ್ಲಿ ನೀನು ನನ್ನಾಜ್ಞೆಯಿಂದ ಭೂಲೋಕಕ್ಕೆ ಹೋಗಿ, ಕಾಮ್ಯಕವನದಲ್ಲಿ ವಾಸಮಾಡುತ್ತಿರುವ ಧರ್ಮಾತ್ಮನಾದ ಧರ್ಮರಾಯನನ್ನು ಕಂಡು ಆತನ ಸಂಗಡ ಈ ಮಾತನ್ನು ಹೇಳು: ಏನೆಂದರೆ 'ಅರ್ಜುನನ ವಿಷಯವಾಗಿ ನೀನು ಕಳವಳಪಡಬೇಡ. ಆತನು ಅಸ್ತ್ರವಿದ್ಯಾಪಾರಂಗತನಾಗಿ ಜಾಗ್ರತೆಯಾಗಿ ಬರುವನು. ಬಾಹುಪರಾಕ್ರಮವೂ ಅಸ್ತ್ರಶಕ್ತಿಯೂ ಇಲ್ಲದೆ ಭೀಷ್ಮದ್ರೋಣಾದಿಗಳನ್ನು ಯುದ್ಧದಲ್ಲಿ ನಿಗ್ರಹಿಸುವದು ಅಶಕ್ಯವಾದದ್ದು. ಮಹಾ ಪರಾಕ್ರಮಶಾಲಿಯಾಗಿಯೂ ಧೀರವಾದ ಮನಸ್ಸುಳ್ಳವನಾಗಿಯೂ ಇರುವ ಅರ್ಜುನನು ದಿವ್ಯಾಸ್ತ್ರಗಳನ್ನೆಲ್ಲಾ ಪಡೆದುಕೊಂಡಿರುವನು; ಮತ್ತು ದಿವ್ಯವಾದ ನೃತ್ತಗೀತವಾದ್ಯಗಳಲ್ಲೂ

ಪಾರಂಗತನಾಗಿರುವನು. ಎಲೈ ಧರ್ಮರಾಯನೆ, ನೀನೂ ತಮ್ಮಂದಿರೊಡಗೂಡಿ ಗೋಪ್ಯವಾಗಿರುವ ಅನೇಕ ಪುಣ್ಯತೀರ್ಥಗಳಿಗೆ ಹೋಗಿ, ಅಲ್ಲಿ ಸ್ನಾನಮಾಡಿ ಪಾಪವನ್ನು ಕಳೆದುಕೊಂಡು ಪರಿಶುದ್ಧಾತ್ಮನಾಗಿ, ಬಳಿಕ ನಿನ್ನ ರಾಜ್ಯವನ್ನು ಸುಖವಾಗಿ ಅನುಭವಿಸುವೆ.' ಎಲೈ ಬ್ರಾಹ್ಮಣಶ್ರೇಷ್ಠನಾದ ಲೋಮಶನೆ, ಈ ಮಾತುಗಳನ್ನು ಆತನಿಗೆ ಹೇಳಿ, ದುರ್ಗಮವಾದ ಪರ್ವತಗಳಲ್ಲಿಯೂ ವಿಷಮವಾದ ಪ್ರದೇಶಗಳಲ್ಲಿಯೂ ಕ್ರೂರರಾದ ರಾಕ್ಷಸರು ಸಂಚರಿಸುತ್ತಿರುವರಾದ್ದರಿಂದ ಅಂಥ ಪ್ರದೇಶದಲ್ಲಿ ಸಂಚಾರಮಾಡುವ ಆ ಧರ್ಮರಾಯನನ್ನು ನೀನೂ ರಕ್ಷಿಸಿಕೊಂಡಿರು" ಎಂದು ನುಡಿದನು. ಆಗ ಜಿತೇಂದ್ರಿಯನಾದ ಅರ್ಜುನನು ಲೋಮಶಮಹರ್ಷಿಯನ್ನು ನೋಡಿ "ಎಲೈ ಮಹರ್ಷಿಯೆ, ಪಾಂಡುಪುತ್ರನಾದ ಧರ್ಮರಾಯನು ಹ್ಯಾಗೆ ನಿನ್ನಿಂದ ರಕ್ಷಿತನಾಗಿ ತೀರ್ಥಯಾತ್ರೆಯನ್ನು ಮಾಡುತ್ತ ಬ್ರಾಹ್ಮಣರಿಗೆ ದಾನವನ್ನು ಮಾಡಬೇಕೋ, ಹಾಗೆ ಆತನನ್ನು ನೀನು ರಕ್ಷಿಸಬೇಕು" ಎಂದು ನುಡಿದನು. ಅದನ್ನು ಕೇಳಿ ಮಹಾತಪಸ್ವಿಯಾದ ಲೋಮಶನು ಹಾಗೆಯೇ ಆಗಲೆಂದು ಒಪ್ಪಿಕೊಂಡು, ಭೂಲೋಕಕ್ಕೆ ಬಂದು, ಅನೇಕ ಋಷಿಗಳಿಂದಲೂ ತಮ್ಮಂದಿರಿಂದಲೂ ಕೂಡಿ ಕಾಮ್ಯಕವನದಲ್ಲಿ ವಾಸಮಾಡುತ್ತಿದ್ದ ಪರಾಕ್ರಮಶಾಲಿಯಾದ ಧರ್ಮರಾಯನನ್ನು ಕಂಡನು ಎಂದು ವೈಶಂಪಾಯನ ಮುನೀಶ್ವರನು ಜನಮೇಜಯರಾಯನಿಗೆ ವಿವರಿಸಿದನು.

## ೪೮ನೇ ಅಧ್ಯಾಯ.—ಧೃತರಾಷ್ಟ್ರನು ಕುಮಾರರನ್ನು ಕುರಿತು ಚಿಂತಿಸಿದ್ದು.

ಜನಮೇಜಯರಾಯನು ವೈಶಂಪಾಯನಮುನೀಶ್ವರನನ್ನು ಕುರಿತು—ಎಲೈ ವೈಶಂಪಾಯನಮುನೀಶ್ವರನೆ, ಪರಾಕ್ರಮಶಾಲಿಯಾದ ಅರ್ಜುನನ ಅತ್ಯಾಶ್ಚರ್ಯಕರವಾದ ಇಂಥ ವ್ಯಾಪಾರವನ್ನು ಕೇಳಿ, ಪ್ರಜ್ಞಾವಂತನಾದ ಧೃತರಾಷ್ಟ್ರರಾಯನು ಏನು ಹೇಳಿದನು? ಎನಲು, ವೈಶಂಪಾಯನನು—ಎಲೈ ರಾಯನೆ, ಅಂಬಿಕಾಪುತ್ರನಾದ ಧೃತರಾಷ್ಟ್ರರಾಯನು ವ್ಯಾಸರ ಮುಖದಿಂದ ಅರ್ಜುನನು ಸ್ವರ್ಗಕ್ಕೆ ಹೋದದ್ದನ್ನು ಕೇಳಿ, ಸಂಜಯನನ್ನು ಕುರಿತು "ಎಲೈ ಸಂಜಯನೆ, ಅರ್ಜುನನ ವ್ಯಾಪಾರಗಳನ್ನೆಲ್ಲಾ ನಾನು ತಿಳಿದಿರುವೆನು. ಈ ಸಂಗತಿಯನ್ನು ನಿಜವಾಗಿ ನೀನೇನಾದರೂ ಕೇಳಿರುವೆಯಾ? ಪಾಪಾತ್ಮನಾದ ದುರ್ಯೋಧನನು ದುರ್ಬುದ್ಧಿಯಿಂದ ಗ್ರಾಮ್ಯವ್ಯಾಪಾರದಲ್ಲಿದ್ದುಕೊಂಡು, ಉನ್ಮತ್ತನಾಗಿ ಸಕಲ ಭೂಮಂಡಲವನ್ನೂ ನಾಶಮಾಡುವನು. ಯಾವ ಧರ್ಮರಾಯನು ಯಾವಾಗಲೂ ವಿನೋದದಲ್ಲಿಯೂ ಕೂಡ ಅಸತ್ಯವನ್ನು ನುಡಿಯದೆ ಇರುವನೋ, ಅಂಥ ಧರ್ಮರಾಯನ ಪಕ್ಷದಲ್ಲಿ ಅರ್ಜುನನು ಯೋಧಾಗ್ರೇಸರನಾಗಿರಲು, ಆತನಿಗೆ ತ್ರೈಲೋಕ್ಯಾಧಿಪತ್ಯವಾದರೂ ಆಗಬಹುದು. ಸಾಣೇಹಿಡಿದು ತೀಕ್ಷ್ಣವಾದ ಅಗ್ರಭಾಗವುಳ್ಳ ಕರ್ಣಿನಾರಾಚಾದಿ ಬಾಣಗಳನ್ನು ಧನುಸ್ಸಿನಲ್ಲಿ ತೊಟ್ಟು ಪ್ರಯೋಗಿಸತಕ್ಕ ಅರ್ಜುನನ ಎದುರಿಗೆ ಜರಾಮರಣ ವರ್ಜಿತನಾದ ಮೃತ್ಯುವಾದರೂ ನಿಲ್ಲಬಲ್ಲನೆ? ಈ ಅಜೇಯರಾದ ಪಾಂಡವರೊಡನೆ ನಮ್ಮವರಿಗೆ ಯುದ್ಧವುಂಟಾಗುವದಾದ್ದರಿಂದ, ದುರಾತ್ಮರಾದ ನನ್ನ ಮಕ್ಕಳೆಲ್ಲರೂ ಮೃತ್ಯುವಿನ ಅಧೀನವೇ ಆಗುವರು. ಯುದ್ಧದಲ್ಲಿ ಗಾಂಡೀವಧನುರ್ಧಾರಿಯಾದ ಅರ್ಜುನನನ್ನು ಎದುರಿಸಿ ಯುದ್ಧಮಾಡತಕ್ಕ ಮಹಾರಥಿಕನಾದವನು ಯಾವನಾದರೂ ಇರುವನೆ? ಎಷ್ಟು ಯೋಚಿಸಿದಾಗ್ಯೂ ಒಬ್ಬನೂ ತೋರುವದಿಲ್ಲ. ಭೀಷ್ಮ ದ್ರೋಣ ಕರ್ಣರು ಆತನನ್ನು ಎದುರಿಸಿ ಯುದ್ಧಮಾಡಿದರೆ ಮಾಡಬಹುದು? ಆ ವಿಷಯದಲ್ಲೂ ನನಗೆ ಸಂಶಯವೇ. ನಮ್ಮವರಿಗೆ ಜಯವಾಗಲಾರದು. ಯಾತಕ್ಕೆಂದರೆ, ಕರ್ಣನು ದಯಾಳುವಾದವನು, ಮತ್ತು ಅವನು ಯುದ್ಧದಲ್ಲಿ ಪ್ರಮಾದವನ್ನು ಹೊಂದತಕ್ಕವನು. ಭೀಷ್ಮಾಚಾರ್ಯರೂ ದ್ರೋಣಾಚಾರ್ಯರೂ ಸಹ ವೃದ್ಧರು. ಅರ್ಜುನನಾದರೋ ಕೋಪಿಷ್ಠನಾಗಿಯೂ ಬಲವಂತನಾಗಿಯೂ ಸಾಹಸಿಯಾಗಿಯೂ ದೃಢವಾದ ಪರಾಕ್ರಮವುಳ್ಳವನಾಗಿಯೂ ಇರುವನು. ಹ್ಯಾಗಾದರೂ ಘೋರವಾದ ಯುದ್ಧವೇನೋ ಆಗುವದು. ಆ ಯುದ್ಧದಲ್ಲಿ ಉಭಯಪಕ್ಷದವರೂ ಅಸ್ತ್ರವಿದ್ಯಾಪಾರಂಗತರಾಗಿಯೂ ಅನೇಕ ಯುದ್ಧಗಳಲ್ಲಿ ಮಹತ್ತಾದ ಯಶಸ್ಸನ್ನು ಸಂಪಾದಿಸಿದವರಾಗಿಯೂ ಇರುವರಾದ್ದರಿಂದ, ಎಲ್ಲರೂ ಚಕ್ರವರ್ತಿಪದವಿಯನ್ನೇ ಅಪೇಕ್ಷಿಸತಕ್ಕವರಾಗಿರುವರು. ಯುದ್ಧದಲ್ಲಿ ಈ ಅರಸುಗಳಿಗಾಗಲಿ ಅಥವಾ

ಅರ್ಜುನನಿಗಾಗಲಿ ನಾಶವುಂಟಾದ ಹೊರತು ಈ ಕಲಹವು ಶಾಂತವಾಗಲಾರದು. ಲೋಕದಲ್ಲಿ ಅರ್ಜುನನನ್ನು ಸಂಹರಿಸತಕ್ಕವನೇ ಆಗಲಿ ಜಯಿಸತಕ್ಕವನೇ ಆಗಲಿ ಯಾವನೂ ಕಾಣುವದಿಲ್ಲ. ಹೀಗಿರುವಲ್ಲಿ ನಮ್ಮ ಮೇಲಿರತಕ್ಕ ಅರ್ಜುನನ ಕೋಪವು ಹ್ಯಾಗೆ ಶಾಂತವಾದೀತು? ಇಂದ್ರನಿಗೆ ಸಮಾನವಾದ ಪರಾಕ್ರಮವುಳ್ಳ ಆ ಅರ್ಜುನನು ಪೂರ್ವದಲ್ಲಿ ಖಾಂಡವವನವನ್ನು ಅಗ್ನಿಗೆ ಆಹುತಿಯಾಗಿ ಕೊಟ್ಟನು; ಮಹತ್ತಾದ ರಾಜಸೂಯಯಾಗದಲ್ಲಿ ಸಕಲರಾದ ರಾಜರನ್ನೂ ಜೈಸಿದನು. ಎಲೈ ಸಂಜಯನೆ, ಇಂದ್ರನ ವಜ್ರಾಯುಧವು ಪರ್ವತದ ಮೇಲೆ ಬಿದ್ದರೆ ಆ ಪರ್ವತವನ್ನು ಸ್ವಲ್ಪವಾದರೂ ಉಳಿಸುವದು; ಅರ್ಜುನನ ಬಾಣಗಳು ಬಿದ್ದದ್ದೇ ಆದರೆ ಆ ಬಾಣಗಳು ಯಾರನ್ನೂ ಸ್ವಲ್ಪವಾದರೂ ಉಳಿಸದೆ ನಿಶ್ಶೇಷವಾಗಿ ನಾಶಮಾಡಿ ಬಿಡುವವು. ಸೂರ್ಯನ ಕಿರಣಗಳು ಹ್ಯಾಗೆ ಈ ಚರಾಚರಾತ್ಮಕವಾದ ಪ್ರಪಂಚವನ್ನು ತಪಿಸುವವೋ ಹಾಗೆ, ಅರ್ಜುನನ ಬಾಣಗಳು ನನ್ನ ಮಕ್ಕಳನ್ನು ತಪಿಸುವವು. ಆ ಅರ್ಜುನನ ರಥಧ್ವನಿಯನ್ನು ಕೇಳಿದಮಾತ್ರಕ್ಕೆ ಭಯಪಟ್ಟು, ನಮ್ಮ ಸೈನ್ಯವು ನಾಲ್ಕುಕಡೆಗೂ ಚದರಿ ಹೋಗುವಂತೆ ನನಗೆ ತೋರುವದು. ಯುದ್ಧದಲ್ಲಿ ಸ್ಥಿರವಾಗಿ ನಿಂತು ಬಾಣವೃಷ್ಟಿಯಿಂದ ಶತ್ರುಗಳನ್ನು ಸಂಹರಿಸತಕ್ಕ ಅರ್ಜುನನು, ಸಕಲ ಪ್ರಾಣಿಗಳನ್ನೂ ನಾಶಮಾಡುವದಕ್ಕೋಸ್ಕರ ಬ್ರಹ್ಮನು ಸೃಷ್ಟಿಸಿರುವ ಯಮನಂತಿರುವನು. ಆತನನ್ನು ಜಯಿಸುವದಕ್ಕೆ ಯಾರಿಂದತಾನೇ ಆದೀತು?"

## ೪೯ನೇ ಅಧ್ಯಾಯ.—ಸಂಜಯ ಧೃತರಾಷ್ಟ್ರರ ಸಂವಾದ.

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಅನಂತರದಲ್ಲಿ ಸಂಜಯನು ಧೃತರಾಷ್ಟ್ರನನ್ನು ಕುರಿತು "ಎಲೈ ಧೃತರಾಷ್ಟ್ರನೆ, ದುರ್ಯೋಧನನ ವಿಷಯವಾಗಿ ನೀನು ಏನೇನು ಹೇಳಿದೆಯೋ ಅದೆಲ್ಲಾ ಯಥಾರ್ಥವೇಸರಿ. ಮಹಾ ಪರಾಕ್ರಮಶಾಲಿಗಳಾದ ಪಾಂಡವರು ತಮಗೆ ಧರ್ಮಪತ್ನಿಯಾಗಿಯೂ ಕೀರ್ತಿಸಂಪನ್ನಳಾಗಿಯೂ ಇರುವ ದ್ರೌಪದಿಯನ್ನು ಸಭೆಗೆ ಎಳೆತಂದದ್ದನ್ನು ನೋಡಿ, ಆಗಲಿಂದಲೂ ಕ್ರೋಧಾವೇಶವುಳ್ಳವರಾಗಿರುವರು. ಅವರು ಕರ್ಣ ದುಶ್ಶಾಸನರ ಅತಿನಿಷ್ಠುರವಾದ ದುರ್ಭಾಷೆಗಳನ್ನು ಕೇಳಿ ಬಹಳ ಜುಗುಪ್ಸೆಪಡುತ್ತಿರುವರೆಂದು ನಾನು ತಿಳಿಯುತ್ತೇನೆ. ಎಲೈ ಮಹಾರಾಜನೆ, ಅರ್ಜುನನು ಯುದ್ಧದಲ್ಲಿ ಕಿರಾತವೇಷಧಾರಿಯಾದ ಮಹೇಶ್ವರನನ್ನು ಗಾಂಡೀವಧನುಸ್ಸಿನ ಪ್ರಹಾರದಿಂದ ಸಂತೋಷಪಡಿಸಿದನೆಂದು ನಾನು ಕೇಳಿರುವೆನು. ದೇವದೇವನಾದ ಆ ಈಶ್ವರನು ಅರ್ಜುನನನ್ನು ಪರೀಕ್ಷಿಸುವದಕ್ಕೋಸ್ಕರ, ಕಿರಾತವೇಷವನ್ನು ತಾಳಿ ಆತನೊಡನೆ ಯುದ್ಧಕ್ಕೆ ತೊಡಗಿದನು. ಆಗ ಅಸ್ತ್ರನಿಮಿತ್ತವಾಗಿ ತಪಸ್ಸುಮಾಡುತ್ತಿದ್ದ ಪರಾಕ್ರಮಶಾಲಿಯಾದ ಅರ್ಜುನನನ್ನು ಸಮಸ್ತದಿಕ್ಪಾಲಕರೂ ನೋಡುವದಕ್ಕೆ ಆತನ ಬಳಿಗೆ ಹೋದರು. ಭೂಲೋಕದಲ್ಲಿ ಇಂದ್ರಾದಿದೇವತೆಗಳನ್ನು ಪ್ರತ್ಯಕ್ಷವಾಗಿ ನೋಡುವದಕ್ಕೆ ಅರ್ಜುನನು ಹೊರತು ಮತ್ತೊಬ್ಬ ಮನುಷ್ಯನು ಸಮರ್ಥನೆ? ಪೃಥಿವಿ, ಅಪ್ಪು, ತೇಜಸ್ಸು, ವಾಯು, ಆಕಾಶ, ಸೂರ್ಯ, ಚಂದ್ರ, ಯಜಮಾನ ಈಯೆಂಟು ಶರೀರವುಳ್ಳ ಪರಮೇಶ್ವರನ ಸಂಗಡ ಯುದ್ಧಮಾಡಿ ಸೋಲದೆಹೋದ ಅರ್ಜುನನನ್ನು ಯುದ್ಧದಲ್ಲಿ ಸೋಲಿಸುವದಕ್ಕೆ ಯಾವ ಪುರುಷನು ಸಮರ್ಥನಾದಾನು? ದ್ರೌಪದಿಯನ್ನು ಸಭೆಗೆ ಎಳೆತಂದು ಪಾಂಡವರಿಗೆ ಕೋಪವನ್ನುಂಟು ಮಾಡಿದ ನಿನ್ನ ಮಕ್ಕಳಿಂದಲೇ ಇಂಥ ಘೋರವಾದ ಯುದ್ಧವಾಗುವಹಾಗಾಯಿತು. ನಿನ್ನ ಮಗನಾದ ದುರ್ಯೋಧನನು ಪತಿವ್ರತೆಯಾದ ದ್ರೌಪದಿಗೆ ತನ್ನ ತೊಡೆಗಳನ್ನು ತೋರಿಸಿದ್ದನ್ನು ನೋಡಿ, ಕೋಪದಿಂದ ತುಟಿಯನ್ನು ನಡುಗಿಸುತ್ತಾ ಭೀಮಸೇನನು "ಎಲೈ ಪಾಪಾತ್ಮನಾದ ದುರ್ಯೋಧನನೆ, ಹದಿಮೂರುವರುಷ ಕಳೆದಬಳಿಕ, ಕಪಟದಿಂದ ದ್ಯೂತವನ್ನಾಡಿದ ನಿನ್ನ ತೊಡೆಯನ್ನು ಭಯಂಕರವಾದ ಈ ಗದೆಯಿಂದಲೇ ಮುರಿಯುವೆನು" ಎಂದು ಹೇಳಿದನು. ಅದು ನಿಜ. ಯೋಧರಲ್ಲಿ ಅಗ್ರೇಸರರಾಗಿಯೂ, ಅಪರಿಮಿತವಾದ ಪರಾಕ್ರಮವುಳ್ಳವರಾಗಿಯೂ, ಅಸ್ತ್ರವಿದ್ಯೆಯಲ್ಲಿ ಪಂಡಿತರಾಗಿಯೂ, ದೇವತೆಗಳಿಂದಲೂ ಜಯಿಸಲಶಕ್ಯರಾಗಿಯೂ ಇರುವ ಪಾಂಡವರೆಲ್ಲರೂ ನಿನ್ನ ಮಕ್ಕಳು ದ್ರೌಪದಿಗೆ ಮಾಡಿದ ಅವಮಾನದಿಂದ ಕ್ರೋಧಾವೇಶವುಳ್ಳವರಾಗಿರುವರಾದ್ದರಿಂದ, ಯುದ್ಧರಂಗದಲ್ಲಿ ನಿನ್ನ ಮಕ್ಕಳೆಲ್ಲರನ್ನೂ ನಾಶಮಾಡಿಬಿಡುವರು" ಎಂದು ನುಡಿದನು.

ಅದನ್ನು ಕೇಳಿ ಧೃತರಾಷ್ಟ್ರನು ಸಂಜಯನನ್ನು ಕುರಿತು "ಎಲೈ ಸೂತನೆ, ನಿಷ್ಠುರವಾಗಿ ಮಾತನಾಡಿದ ಕರ್ಣನು ಮಾಡಿದ್ದೇನು? ದ್ರೌಪದಿಯನ್ನು ಸಭೆಗೆ ಎಳೆತಂದದ್ದೇ ವೈರವುಂಟಾಗುವದಕ್ಕೆ ಸಾಕಾಗಿದೆ. ನನ್ನ ಮಕ್ಕಳು ಇನ್ನೂ ವಿವೇಕವನ್ನು ತಂದುಕೊಳ್ಳದಿರುವರು. ಅವರಲ್ಲಿ ಜ್ಯೇಷ್ಠನಾದ ದುರ್ಯೋಧನನು ನೀತಿಶೂನ್ಯನಾಗಿರುವನು. ನಾನು ದೃಷ್ಟಿಹೀನನಾಗಿಯೂ ಕಾರ್ಯದಲ್ಲಿ ಅಸಮರ್ಥನಾಗಿಯೂ ಇರುವದನ್ನು ನೋಡಿ, ಮಂದಬುದ್ಧಿಯಾದ ದುರ್ಯೋಧನನು ನನ್ನ ಮಾತನ್ನು ಕೇಳದಿರುವನು. ಅವನಿಗೆ ಮಂತ್ರಿಗಳಾಗಿರುವ ಮೂಢರಾದ ಕರ್ಣ ಶಕುನಿ ಮೊದಲಾದವರು ಆ ಬುದ್ಧಿಶೂನ್ಯನಿಗೆ ಇನ್ನೂ ಕೆಟ್ಟ ನಡತೆಗಳನ್ನೇ ಕಲಿಸುತ್ತಿರುವರು. ಪರಾಕ್ರಮಶಾಲಿಯಾದ ಅರ್ಜುನನು ಸಾಧಾರಣವಾಗಿ ಪ್ರಯೋಗಿಸಿದ ಬಾಣಗಳುಕೂಡ ನನ್ನ ಮಕ್ಕಳನ್ನು ನಾಶಮಾಡಿಬಿಡುವವು ಎಂಬಲ್ಲಿ, ಆತನು ಕೋಪಾವೇಶದಿಂದ ಬಾಣಗಳನ್ನು ಪ್ರಯೋಗಿಸಿದ್ದೇ ಆದರೆ ಆ ಬಾಣಗಳು ಇವರನ್ನು ನಾಶಮಾಡದೆ ಬಿಡುವವೇ? ಅರ್ಜುನನು ಬಾಹುಬಲದಿಂದ ಪ್ರಯೋಗಿಸಲು, ದಿವ್ಯಾಸ್ತ್ರಮಂತ್ರದಿಂದ ಅಭಿಮಂತ್ರಿತವಾಗಿ ಗಾಂಡೀವಧನುಸ್ಸಿನಿಂದ ಹೊರಟ ಬಾಣಗಳು ದೇವತೆಗಳನ್ನಾದರೂ ಗೆದ್ದುಬಿಡುವವು. ತ್ರೈಲೋಕ್ಯಾಧಿಪತಿಯಾದ ಶ್ರೀಕೃಷ್ಣನು ಅರ್ಜುನನಿಗೆ ಮಂತ್ರಿಯಾಗಿಯೂ ಮಿತ್ರನಾಗಿಯೂ ರಕ್ಷಕನಾಗಿಯೂ ಇರುವಲ್ಲಿ ಆ ಅರ್ಜುನನು ಯಾರನ್ನುತಾನೆ ಜಯಿಸಲಾರನು? ಸಾಕ್ಷಾನ್ಮಹಾದೇವನು ತನ್ನ ಎರಡು ಬಾಹುಗಳಿಂದ ಅರ್ಜುನನೊಡನೆ ಹೋರಾಡಿದನೆಂದು ಜಗತ್ಪ್ರಸಿದ್ಧವಾಗಿರುವದು. ಇದು ಮಹಾಶ್ಚರ್ಯಕರವಾದದ್ದು. ಪೂರ್ವದಲ್ಲಿ ಅರ್ಜುನನು ಶ್ರೀಕೃಷ್ಣನೊಡಗೂಡಿ ಖಾಂಡವವನದಹನಕಾಲದಲ್ಲಿ ಯಜ್ಞೇಶ್ವರನಿಗೆ ಸಹಾಯಮಾಡಿದ್ದು ಸರ್ವರಿಗೂ ಪ್ರತ್ಯಕ್ಷವಾಗಿ ತಿಳಿದಿರುವದು. ಭೀಮಸೇನನೂ ಅರ್ಜುನನೂ ವಾಸುದೇವನೂ ಸಹ ಕೋಪಗೊಂಡದ್ದೇ ಆದರೆ, ನನ್ನ ಮಕ್ಕಳೆಲ್ಲರೂ ಅಮಾತ್ಯರೊಡನೆಯೂ ಶಕುನಿಯೊಡನೆಯೂ ಸಹ ಸರ್ವಥಾ ನಾಶವನ್ನೇ ಹೊಂದುವರು" ಎಂದು ಸಂಜಯನು ಧೃತರಾಷ್ಟ್ರನಿಗೆ ಹೇಳಿದನೆಂಬದಾಗಿ ಜನಮೇಜಯರಾಯನಿಗೆ ವೈಶಂಪಾಯನನು ಹೇಳಿದನು.

## ೫ನೇ ಅಧ್ಯಾಯ.—ಧರ್ಮರಾಯಾದಿಗಳು ಅರ್ಜುನನ ಅಗಲಿಕೆಯಿಂದ ಕಳವಳಪಟ್ಟದ್ದು.

ಅನಂತರದಲ್ಲಿ ಜನಮೇಜಯರಾಯನು ವೈಶಂಪಾಯನಮುನೀಂದ್ರನನ್ನು ಕುರಿತು "ಎಲೈ ವೈಶಂಪಾಯನನೆ, ರಾಜನಾದ ಧೃತರಾಷ್ಟ್ರನು ಶೂರರಾದ ಪಾಂಡವರನ್ನು ವನವಾಸಕ್ಕೆ ಕಳುಹಿಸಿ, ಈಗ ವ್ಯಸನಪಡುವದು ನಿರರ್ಥಕವಾದದ್ದು. ಮಹಾರಥಿಕರಾದ ಪಾಂಡವರಿಗೆ ಕೋಪವನ್ನು ಹುಟ್ಟಿಸಿದ ಮೂಢನಾದ ದುರ್ಯೋಧನನನ್ನು ಧೃತರಾಷ್ಟ್ರನು ಯಾತಕ್ಕೆ ಉಪೇಕ್ಷಿಸಿದನು? ಪಾಂಡವರು ವನವಾಸದಲ್ಲಿ ಏನನ್ನು ಆಹಾರಮಾಡಿಕೊಂಡಿದ್ದರು? ವನದಲ್ಲಿ ಹುಟ್ಟಿದ ಧಾನ್ಯಗಳನ್ನು ಆಹಾರಮಾಡಿಕೊಂಡಿದ್ದರೋ ಅಥವಾ ಗ್ರಾಮ್ಯವಾದ ಧಾನ್ಯವನ್ನು ಆಹಾರಮಾಡುತ್ತಿದ್ದರೊ? ಇವುಗಳನ್ನು ವಿವರಿಸಿ ಹೇಳು" ಎನಲು, ವೈಶಂಪಾಯನಮುನೀಂದ್ರನು ಜನಮೇಜಯರಾಯನನ್ನು ಕುರಿತು—ಎಲೈ ರಾಯನೆ, ಶೂರರಾಗಿಯೂ ಧನುರ್ಧಾರಿಗಳಾಗಿಯೂ ಇರುವ ಪಾಂಡವರು ವನವಾಸಮಾಡುತ್ತಿರಲು, ಅಗ್ನಿಹೋತ್ರಿಗಳಾದವರೂ, ಯತಿಗಳೂ, ಸ್ನಾತಕವ್ರತವನ್ನು ಮಾಡಿದ ಮಹಾತ್ಮರೂ, ಮೋಕ್ಷಮಾರ್ಗವನ್ನು ತಿಳಿದಿರುವ ಮಹಾತ್ಮರೂ ಸಹ, ಹತ್ತುಸಾವಿರಮಂದಿ ಬ್ರಾಹ್ಮಣರು ಅವರನ್ನು ಅನುಸರಿಸಿ ಬರಲು, ಆಗ ಪಾಂಡವರು ವನದಲ್ಲಿ ಬೆಳೆದ ಧಾನ್ಯಗಳನ್ನೂ, ವನದಲ್ಲಿ ಸಂಚರಿಸುವ ಹುಲ್ಲೆ ಸಾರಗ ಮುಂತಾದ ಭಕ್ಷಣಕ್ಕೆ ಯೋಗ್ಯವಾದ ಇತರ ಮೃಗಗಳನ್ನೂ ವಿಷಲೇಪವಿಲ್ಲದಿರುವ ಬಾಣಗಳಿಂದ ಬೇಟೆಯಾಡಿ ತಂದು ಅಗ್ರಭಾಗವನ್ನು ಬ್ರಾಹ್ಮಣರಿಗೆ ಕೊಟ್ಟು, ಉಳಿದ ಭಾಗಗಳನ್ನು ತಾವು ಆಹಾರಮಾಡುತ್ತಿದ್ದರು. ಅವರಲ್ಲಿ ಒಬ್ಬನಾದರೂ ರೋಗಪೀಡಿತನಾಗಿಯೂ ತೇಜಸ್ಸಿಲ್ಲದವನಾಗಿಯೂ ಕೃಶನಾಗಿಯೂ ಬಲಶೂನ್ಯನಾಗಿಯೂ ದೀನನಾಗಿಯೂ ಭೀತನಾಗಿಯೂ ಇರಲಿಲ್ಲ. ಧರ್ಮಾತ್ಮನಾದ ಧರ್ಮರಾಯನು ಅವರೆಲ್ಲರನ್ನೂ ತನ್ನ ಪ್ರಿಯಪುತ್ರರನ್ನೂ ಸಹೋದರರಾದ ಭ್ರಾತೃಗಳನ್ನೂ ಜ್ಞಾತಿಗಳನ್ನೂ ಸಹ ಪೋಷಿಸುವಂತೆ ಪೋಷಿಸುತ್ತಿದ್ದನು. ಆಗ ಕೀರ್ತಿವತಿಯಾದ ದ್ರೌಪದಿಯು

ಬ್ರಾಹ್ಮಣರಿಗೂ ತನ್ನ ಪತಿಗಳಿಗೂ ತಾಯಿಯು ಮಕ್ಕಳಿಗೆ ಭೋಜನಮಾಡಿಸುವಂತೆ ಮೊದಲು ಭೋಜನಮಾಡಿಸಿ, ಬಳಿಕ ಉಳಿದದ್ದನ್ನು ತಾನು ಭೋಜನಮಾಡುತ್ತಿದ್ದಳು. ಆ ವನವಾಸದಲ್ಲಿ ಪ್ರತಿದಿವಸವೂ ಪೂರ್ವದಿಕ್ಕಿಗೆ ಧರ್ಮರಾಯನೂ, ದಕ್ಷಿಣದಿಕ್ಕಿಗೆ ಭೀಮಸೇನನೂ, ಪಶ್ಚಿಮದಿಕ್ಕಿಗೆ ನಕುಲನೂ, ಉತ್ತರದಿಕ್ಕಿಗೆ ಸಹದೇವನೂ ಧನುರ್ಧಾರಿಗಳಾಗಿ ಮಾಂಸನಿಮಿತ್ತವಾಗಿ ಬೇಟೆಗೆ ಹೊರಟು, ಅಲ್ಲಿದ್ದ ಮೃಗಗಳನ್ನು ಸಂಹಾರಮಾಡುತ್ತಿದ್ದರು. ಈ ಪ್ರಕಾರ ಪಾಂಡವರು ಕಾಮ್ಯಕವನದಲ್ಲಿ ವಾಸಮಾಡುತ್ತ, ಅರ್ಜುನನನ್ನು ಅಗಲಿ ಕಳವಳಪಡುತ್ತ, ವೇದಾಧ್ಯಯನ ಜಪ ಹೋಮ ಮೊದಲಾದ ಸತ್ಕರ್ಮಾಚರಣೆಯಲ್ಲಿ ನಿಷ್ಠರಾಗಿ ವನವಾಸದಲ್ಲಿ ಐದು ವರುಷಗಳನ್ನು ಕಳೆದರು.

## ೫೧ನೇ ಅಧ್ಯಾಯ.—ಧೃತರಾಷ್ಟ್ರ ವಿಲಾಪ.

ವೈಶಂಪಾಯನ ಮುನೀಂದ್ರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಆ ಬಳಿಕ ಧೃತರಾಷ್ಟ್ರರಾಯನು ವನವಾಸದಲ್ಲಿರುವ ಪಾಂಡವರ ಅಮಾನುಷವಾದ ಅದ್ಭುತಚರಿತ್ರೆಯನ್ನು ಕೇಳಿ ಮನಸ್ಸಿನಲ್ಲಿ ಚಿಂತೆಪಡುತ್ತ, ದೈನ್ಯವನ್ನು ಹೊಂದಿ, ದೀರ್ಘವಾಗಿ ನಿಟ್ಟುಸುರನ್ನು ಬಿಡುತ್ತಾ, ಸಂಜಯನನ್ನು ಕುರಿತು "ಎಲೈ ಸಂಜಯನೆ, ನನ್ನ ಮಕ್ಕಳ ದ್ಯೂತದಿಂದುಂಟಾದ ದುಶ್ಚರ್ಯವನ್ನೂ, ಶೂರರಾದ ಪಾಂಡವರ ಶೌರ್ಯ ಧೈರ್ಯ ಸ್ಥೈರ್ಯಗಳನ್ನೂ, ಅವರಿಗೆ ಅಣ್ಣತಮ್ಮಂದಿರಲ್ಲಿರತಕ್ಕ ಅಮಾನುಷವಾದ ಪರಸ್ಪರಾನುರಾಗವನ್ನೂ ಚಿಂತಿಸಿಚಿಂತಿಸಿ, ಅಹೋರಾತ್ರದಲ್ಲೂ ಒಂದು ಕ್ಷಣವಾದರೂ ನನ್ನ ಮನಸ್ಸಿಗೆ ಸಮಾಧಾನವುಂಟಾಗದಿರುವದು. ಅಶ್ವಿನೀದೇವತೆಗಳಿಗೆ ಮಕ್ಕಳಾಗಿಯೂ, ಇಂದ್ರನಿಗೆ ಸಮಾನವಾದ ತೇಜಸ್ಸುಳ್ಳವರಾಗಿಯೂ, ಮಹಾ ಭಾಗ್ಯಶಾಲಿಗಳಾಗಿಯೂ ಇರುವ ನಕುಲಸಹದೇವರು ಯುದ್ಧದಲ್ಲಿ ಬಹು ಸಮರ್ಥರಾಗಿರುವರು. ಮತ್ತು ದೃಢವಾದ ಆಯುಧಗಳನ್ನು ಧರಿಸಿ, ದೂರದಲ್ಲಿರುವ ಲಕ್ಷ್ಯವನ್ನು ಭೇದಿಸತಕ್ಕವರಾಗಿ, ಕರಲಾಘವವುಳ್ಳವರಾಗಿಯೂ ನಿರಂತರದಲ್ಲೂ ಯುದ್ಧೋತ್ಸಾಹವುಳ್ಳವರಾಗಿಯೂ ಇರುವ ಭೀಮಾರ್ಜುನರು ಯುದ್ಧವಾಗುವದನ್ನೇ ನಿಶ್ಚಯಿಸಿಕೊಂಡಿರುವರು. ಸಿಂಹದಂತೆ ಪರಾಕ್ರಮಶಾಲಿಗಳಾದ ಅವರಿಬ್ಬರೂ ಅಶ್ವಿನೀದೇವತೆಗಳಂತೆ ಶತ್ರುಗಳಿಗೆ ದುಸ್ಸಹರಾಗಿ ಯುದ್ಧರಂಗದಲ್ಲಿ ಮುಂದಾಗಿ ನಿಂತದ್ದೇ ಆದರೆ, ನಮ್ಮ ಸೈನ್ಯದಲ್ಲಿ ಯಾರೂ ಉಳಿಯಲಾರರೆಂದು ನಾನು ತಿಳಿದಿರುವೆನು. ಯುದ್ಧದಲ್ಲಿ ಮಹಾರಥಿಕರಾಗಿಯೂ ದೇವಪುತ್ರರಾಗಿಯೂ ಕೋಪಿಷ್ಠರಾಗಿಯೂ ಇರುವ ಅವರಿಬ್ಬರೂ ದ್ರೌಪದಿಗೆ ಉಂಟಾದ ಅವಮಾನವನ್ನು ಸಹಿಸತಕ್ಕವರಲ್ಲ. ಸತ್ಯಸಂಧರಾದ ವಾಸುದೇವನಿಂದ ರಕ್ಷಿತರಾದ ಧನುರ್ಧಾರಿಗಳಾದ ಯಾದವರೂ, ಪರಾಕ್ರಮಶಾಲಿಗಳಾದ ಪಾಂಚಾಲರೂ ಸಹ, ಯುದ್ಧದಲ್ಲಿ ನನ್ನ ಮಕ್ಕಳ ಸೈನ್ಯವನ್ನೆಲ್ಲಾ ನಾಶಮಾಡಿ ಬಿಡುವರು. ಬಲರಾಮನಿಂದಲೂ ಕೃಷ್ಣನಿಂದಲೂ ಶಿಕ್ಷಿತರಾದ ಯಾದವರ ವೇಗವನ್ನು ಯುದ್ಧದಲ್ಲಿ ನಮ್ಮವರೆಲ್ಲರೂ ಒಟ್ಟಾದರೂ ಸಹಿಸಲಾರರು. ಅವರ ಮಧ್ಯದಲ್ಲಿ ಅದ್ಭುತಪರಾಕ್ರಮವುಳ್ಳವನಾಗಿಯೂ ಮಹಾಧನುರ್ಧಾರಿಯಾಗಿಯೂ ಇರುವ ಭೀಮಸೇನನು ಶತ್ರುವೀರನಾಶಕರವಾದ ಗದೆಯನ್ನು ಯಾವಾಗಲೂ ಮೇಲೆ ಎತ್ತಿ ಹಿಡಿದುಕೊಂಡು ಯುದ್ಧರಂಗದಲ್ಲಿ ಸಂಚರಿಸುತ್ತಿರುವನು. ಆಗ ಆ ಭೀಮಸೇನನ ಗದಾವೇಗವನ್ನೂ, ಸಿಡಿಲಿನ ಧ್ವನಿಗೆ ಸಮಾನವಾದ ಅರ್ಜುನನ ಗಾಂಡೀವಧನುಸ್ಸಿನ ಟಂಕಾರಶಬ್ದವನ್ನೂ ಸಹ, ನಮ್ಮ ಸೇನೆಯಲ್ಲಿರುವ ಅರಸುಗಳು ಸಹಿಸಲಾಪರೆ? ಆಗ ನಾನು ಪೂರ್ವದಲ್ಲಿ ನನ್ನ ಹಿತಕ್ಕೋಸ್ಕರ ನನ್ನ ಮಿತ್ರರು ನುಡಿದ ಯಾವ ಮಾತುಗಳನ್ನು ನಾನು ದುರ್ಯೋಧನನ ಅಧೀನನಾಗಿ ಕೇಳದೆಹೋದೆನೋ, ಅಂಥ ಸ್ಮರಣೀಯವಾದ ಮಾತುಗಳೆಲ್ಲಾ ನನ್ನ ನೆನಪಿಗೆ ಬರುವವು" ಎಂದು ನುಡಿದನು.

ಅದನ್ನು ಕೇಳಿ ಸಂಜಯನು ಧೃತರಾಷ್ಟ್ರನನ್ನು ಕುರಿತು "ಎಲೈ ರಾಯನೆ, ನಿನ್ನ ಮಕ್ಕಳು ನೀತಿಯನ್ನು ತಪ್ಪಿ ನಡೆದದ್ದನ್ನು ನೀನು ಉಪೇಕ್ಷಿಸಿ ಬಿಟ್ಟೆ. ನೀನು ಸಮರ್ಥನಾಗಿದ್ದರೂ, ಅಜ್ಞಾನದಿಂದ ದುರ್ಮಾರ್ಗಕ್ಕೆ ಹೋಗದಂತೆ ನಿನ್ನ ಮಗನಿಗೆ ಬುದ್ಧಿಯನ್ನು ಹೇಳದೆಹೋದೆ. ನಾಶರಹಿತನಾದ ಮಧುಸೂದನನು ದ್ಯೂತದಲ್ಲಿ ಪಾಂಡವರು

ಪರಾಜಿತರಾದದ್ದನ್ನು ಕೇಳಿ, ಜಾಗ್ರತೆಯಾಗಿ ಕಾಮ್ಯಕವನಕ್ಕೆ ಬಂದು, ಅಲ್ಲಿ ಅವರನ್ನು ಸಮಾಧಾನಪಡಿಸಿದನು. ದ್ರುಪದರಾಯನ ಮಕ್ಕಳಾದ ಧೃಷ್ಟದ್ಯುಮ್ನಾದಿಗಳೂ, ವಿರಾಟರಾಯನೂ, ಧೃಷ್ಟಕೇತುವೂ, ಮಹಾರಥಿಕರಾದ ಕೇಕಯರೂ, ಪರಾಜಿತರಾದ ಪಾಂಡವರಬಳಿಗೆ ಬಂದು ಅವರ ಸಂಗಡ ಆಡಿದ ಮಾತುಗಳನ್ನು ನಾನು ಚಾರರ ಮುಖದಿಂದ ತಿಳಿದು ನಿನಗೆ ಹೇಳಿರುವೆನು. ಪಾಂಡವರ ಬಳಿಗೆ ಶ್ರೀಕೃಷ್ಣನು ಬಂದಾಗ, ಆತನನ್ನು ಅರ್ಜುನನಿಗೆ ನೀನು ಯುದ್ಧದಲ್ಲಿ ಸಾರಥ್ಯವನ್ನು ಮಾಡಬೇಕೆಂದು ಅವರು ಹೇಳಲು, ಆತನು ಅದಕ್ಕೆ ಒಪ್ಪಿಕೊಂಡನು. ಇದಲ್ಲದೆ ಕೃಷ್ಣಾಜಿನವನ್ನು ಹೊದ್ದು ಅರಣ್ಯಕ್ಕೆ ಬಂದ ಪಾಂಡವರನ್ನು ನೋಡಿ, ಆ ಕೃಷ್ಣನು ಕ್ರೋಧಾವೇಶವುಳ್ಳವನಾಗಿ ಧರ್ಮರಾಯನನ್ನು ಕುರಿತು 'ಎಲೈ ಧರ್ಮರಾಯನೆ, ರಾಜಸೂಯಯಾಗದಲ್ಲಿ ವಂಗ, ಅಂಗ, ಪೌಂಡ್ರ, ಓಡ್ರ, ಚೋಳ, ದ್ರವಿಡ, ಸಾಗರಾನೂಪ, ಸಾಗರಪ್ರಾಂತ, ಸಿಂಹಳ, ಬರ್ಬರ, ಮ್ಲೇಚ್ಛ, ಲಂಕೆ, ಪಶ್ಚಿಮರಾಷ್ಟ್ರ, ಪಲ್ಲವ, ದರದ, ಕಿರಾತ, ಯವನ, ಶಕ, ಹಾರ, ಹೂಣ, ಚೀನ, ತುಷಾರ, ಸೈಂಧವ, ಜಾಗುಡ, ರಮಠ, ಸ್ತ್ರೀರಾಜ್ಯ, ತಂಗಣ, ಕೇಕಯ, ಮಾಲವ, ಕಾಶ್ಮೀರ, ಈ ದೇಶಗಳ ಅರಸುಗಳನ್ನು ತಮ್ಮ ಶಸ್ತ್ರತೇಜಸ್ಸಿನಿಂದ ಗೆದ್ದು, ಅವರನ್ನು ಆ ಯಜ್ಞದಲ್ಲಿ ಸೇವಕರನ್ನಾಗಿ ಮಾಡಿಕೊಂಡು, ಇಂದ್ರಪ್ರಸ್ಥಪಟ್ಟಣದಲ್ಲಿ ಇತರ ರಾಜರಿಗೆ ದುರ್ಲಭವಾದ ಯಾವ ನಿಮ್ಮ ಐಶ್ವರ್ಯವನ್ನು ನಾನು ನೋಡಿದ್ದೆನೋ, ಆ ಐಶ್ವರ್ಯವು ಈಗ ದುರ್ಯೋಧನಾದಿಗಳ ಅಧೀನವಾಗಿರುವದು. ದುರ್ಯೋಧನಾದಿಗಳ ಪ್ರಾಣಸಹಿತವಾಗಿ ಆ ನಿಮ್ಮ ಐಶ್ವರ್ಯವನ್ನು ನಾನು ಈಗಲೇ ನಿಮಗೆ ತಂದುಕೊಡುವೆನು. ಎಲೈ ಧರ್ಮರಾಯನೆ, ಬಲರಾಮ ಭೀಮಾರ್ಜುನ ನಕುಲ ಸಹದೇವ ಅಕ್ರೂರ ಗದ ಸಾಂಬ ವೀರ ಧೃಷ್ಟದ್ಯುಮ್ನ ಶಿಶುಪಾಲಪುತ್ರ ಸಹದೇವರನ್ನು ಒಡನೆ ಕರೆದುಕೊಂಡು, ನಾನು ದುರ್ಯೋಧನ ದುಶ್ಶಾಸನ ಕರ್ಣ ಶಕುನಿಗಳನ್ನೂ ಅವರಿಗೆ ಸಹಾಯವಾಗಿ ಬಂದ ಅರಸುಗಳನ್ನೂ ಸಹ ರಣರಂಗದಲ್ಲಿ ಸಂಹರಿಸುವೆನು. ಬಳಿಕ ನೀನು ಧೃತರಾಷ್ಟ್ರನ ಐಶ್ವರ್ಯವನ್ನು ಪಡೆದು ತಮ್ಮಂದಿರೊಡಗೂಡಿ ಹಸ್ತಿನಾನಗರದಲ್ಲಿ ವಾಸಮಾಡುತ್ತ ಭೂಮಂಡಲವನ್ನು ಸುಖವಾಗಿ ಪರಿಪಾಲಿಸು' ಎಂದು ನುಡಿದನು. ಅದನ್ನು ಕೇಳಿ ಧರ್ಮರಾಯನು ಧೃಷ್ಟದ್ಯುಮ್ನ ಮೊದಲಾದ ಶೂರರು ಕೇಳುತ್ತಿರಲು, ಸಭೆಯಲ್ಲಿ ಕೃಷ್ಣನನ್ನು ಕುರಿತು 'ಎಲೈ ಜನಾರ್ದನನೆ, ಸತ್ಯವಾದ ನಿನ್ನ ವಚನವನ್ನು ನಾನು ಪರಿಗ್ರಹಿಸಿದೆನು. ಹದಿಮೂರು ವರುಷ ನಮ್ಮ ವನವಾಸವು ಮುಗಿದಬಳಿಕ ಪುತ್ರ ಮಿತ್ರಾಮಾತ್ಯಸಹಿತರಾದ ಶತ್ರುಗಳನ್ನೆಲ್ಲಾ ನೀನು ಸಂಹಾರಮಾಡು. ನನ್ನನ್ನು ಸತ್ಯಸಂಧನೆಂದೆನ್ನಿಸು. ಯಾಕೆಂದರೆ, ನಾನು ಹನ್ನೆರಡು ವರುಷ ವನವಾಸವನ್ನೂ ಒಂದು ವರುಷ ಅಜ್ಞಾತವಾಸವನ್ನೂ ಮಾಡುವೆನೆಂದು ಅರಸುಗಳ ಮಧ್ಯದಲ್ಲಿ ಒಪ್ಪಿಕೊಂಡಿರುವೆನು' ಎಂದು ನುಡಿದನು. ಅದನ್ನು ಕೇಳಿ, ಆ ಸಭೆಯಲ್ಲಿದ್ದ ಧೃಷ್ಟದ್ಯುಮ್ನ ಮೊದಲಾದವರೆಲ್ಲರೂ 'ಎಲೈ ಧರ್ಮರಾಯನೆ, ಹೀಗೆ ನುಡಿಯುವದು ನಿನ್ನಂಥವನಿಗೇ ತಕ್ಕದ್ದು' ಎಂದು ಹೇಳಿ, ಕ್ರೋಧಾವೇಶಯುಕ್ತನಾದ ಶ್ರೀಕೃಷ್ಣನನ್ನು ತತ್ಕಾಲೋಚಿತವಾದ ಸವಿನುಡಿಗಳಿಂದ ಸಮಾಧಾನಪಡಿಸಿ, ಆತನು ಕೇಳುತ್ತಿರಲು ಕ್ಲೇಶಕ್ಕೆ ಅನರ್ಹಳಾದ ದ್ರೌಪದಿಯನ್ನು ನೋಡಿ 'ಎಲೌ ದೇವಿಯೆ, ದುರ್ಯೋಧನನು ನಿನ್ನ ಕೋಪದಿಂದಲೇ ನಾಶವಾಗುವನು. ನಾವು ನಿಜವನ್ನು ಹೇಳುವೆವು. ಎಲೌ ಮಂಗಳಾಂಗಿಯೆ, ನೀನು ವ್ಯಸನಪಡಬೇಡ. ಜಗಡೆಯಾಟದಲ್ಲಿ ಸೋತ ನಿನ್ನನ್ನು ನೋಡಿ ಆಗ ಯಾರು ಹಾಸ್ಯಮಾಡಿದರೋ ಅವರ ಮಾಂಸಗಳನ್ನು ತಿನ್ನುತ್ತ, ಹದ್ದು ಕಾಗೆ ತೋಳ ಮೊದಲಾದವುಗಳು ಅವರನ್ನು ಹಾಸ್ಯಮಾಡುವವು. ಮತ್ತು ಆ ಸಮಯದಲ್ಲಿ ನಿನ್ನನ್ನು ಯಾರು ಸಭೆಗೆ ಎಳೆತಂದರೋ, ಅವರ ತಲೆಗಳನ್ನು ಎಳೆದುಕೊಂಡು ಅವರ ರಕ್ತವನ್ನು ರಣಹದ್ದುಗಳೂ ನರಿಗಳೂ ಕುಡಿಯುವವು; ಅವರ ಶರೀರಗಳನ್ನು ಭೂಮಿಯಲ್ಲಿ ರಾಕ್ಷಸರು ಎಳೆದುಕೊಂಡುಹೋಗಿ ತಿನ್ನುವದನ್ನು ನೀನು ನೋಡುವೆ. ಆ ಸಭೆಯಲ್ಲಿ ಯಾರು ನಿನಗೆ ಕ್ಲೇಶವುಂಟಾಗುವಹಾಗೆ ಮಾಡಿದರೋ, ಅದನ್ನು ನೋಡಿ ಯಾರುಯಾರು ಉಪೇಕ್ಷೆ ಮಾಡಿದರೋ, ಅಂಥವರ ಛೇದಿತವಾದ ಶಿರಸ್ಸುಗಳ ರಕ್ತವನ್ನ ಭೂಮಿಯು ಪಾನಮಾಡುವದು' ಎಂದು ಇವೇ ಮೊದಲಾದ ವಾಕ್ಯಗಳಿಂದ ಆಕೆಯನ್ನು ಸಮಾಧಾನ ಮಾಡಿದರು.

ಎಲೈ ಧೃತರಾಷ್ಟ್ರನೆ, ಶೂರರಾಗಿಯೂ ತೇಜಸ್ವಿಗಳಾಗಿ ಯುದ್ಧಸನ್ನಾಹವುಳ್ಳವರಾಗಿಯೂ ಮಹಾ ರಥಿಕರಾಗಿಯೂ ಮಹಾತ್ಮರಾಗಿಯೂ ಅಜೇಯರಾಗಿಯೂ ಇರುವ ಭೀಮಾರ್ಜುನ ನಕುಲಸಹದೇವ ಪ್ರದ್ಯುಮ್ನ ಬಲ

ರಾಮ ಸಾತ್ಯಕಿ ಕೇಕಯ ಪಾಂಚಾಲ ವಿರಾಟಾದಿ ಸಕಲ ವೀರರೂ, ತಮ್ಮತಮ್ಮ ಬಂಧುಜನರಿಂದಲೂ ಸೈನ್ಯಗಳಿಂದಲೂ ಸಹಿತರಾಗಿ, ಶ್ರೀಕೃಷ್ಣನನ್ನು ಮುಂದೆಮಾಡಿಕೊಂಡು, ಹದಿಮೂರು ವರುಷವಾದ ಬಳಿಕ ಧರ್ಮರಾಯನೊಡನೆ ಯುದ್ಧಕ್ಕೆ ಬಂದು ನಿಲ್ಲುವರು. ಆ ಯುದ್ಧರಂಗದಲ್ಲಿ ಕ್ರೋಧಾವೇಶವುಳ್ಳ ಸಿಂಹಗಳಂತಿರುವ ಅವರ ಮುಂದೆ, ಜೀವದಮೇಲೆ ಆಸೆಯುಳ್ಳ ಯಾವ ಪುರುಷನುತಾನೇ ಯುದ್ಧಕ್ಕೆ ನಿಂತಾನು ?" ಎಂದು ಹೇಳಿದನು. ಆ ಮಾತುಗಳನ್ನು ಕೇಳಿ, ಧೃತರಾಷ್ಟ್ರನು ಎಲೈ ಸಂಜಯನೆ, ದ್ಯೂತಕಾಲದಲ್ಲಿ ವಿದುರನೂ 'ನೀನು ಪಾಂಡವರನ್ನು ದ್ಯೂತದಲ್ಲಿ ಜೈಸಿದ್ದೇಆದರೆ, ರಕ್ತಪ್ರವಾಹವನ್ನು ಉಂಟುಮಾಡತಕ್ಕ ಮಹಾಭಯಂಕರವಾದ ವಿನಾಶಕಾಲವು ಕೌರವರಿಗೆ ನಿಶ್ಚಯವಾಗಿ ಬರುವದು' ಎಂದು ನನ್ನಸಂಗಡ ಹೇಳಿದನು. ಎಲೈ ಸಂಜಯನೆ, ಮೊದಲು ವಿದುರನು ಹೇಳಿದಂತೆಯೇ ಆಗುವದೆಂದು ನಾನು ತಿಳಿದಿರುವೆನು. ಪಾಂಡವರಿಗೆ ವನವಾಸವು ಕಳೆದಬಳಿಕ ಯುದ್ಧವಾಗುವದು ನಿಜ. ಇದಕ್ಕೆ ಸಂಶಯವಿಲ್ಲವೆಂಬದಾಗಿ ಹೇಳಿದನು—ಎಂದು ವೈಶಂಪಾಯನಮುನೀಶ್ವರನು ಜನಮೇಜಯರಾಯನಿಗೆ ವಿವರಿಸಿದನು.

## ೫೧ನೇ ಅಧ್ಯಾಯ.—ಬೃಹದಶ್ವರು ಬಂದು ಧರ್ಮರಾಯನ ದುಃಖಶಮನ ಮಾಡಿದ್ದು.

ಜನಮೇಜಯರಾಯನು ವೈಶಂಪಾಯನಮುನೀಂದ್ರನನ್ನು ಕುರಿತು—ಎಲೈ ಮುನೀಂದ್ರನೆ, ಮಹಾತ್ಮನಾದ ಅರ್ಜುನನು ದಿವ್ಯಾಸ್ತ್ರಗಳನ್ನು ಪಡೆಯುವದಕ್ಕೋಸ್ಕರ ಇಂದ್ರಲೋಕಕ್ಕೆ ಹೋದಬಳಿಕ, ಪಾಂಡವರು ಏನು ಮಾಡಿದರು ?—ಎಂದು ಕೇಳಲು, ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಎಲೈ ರಾಯನೆ, ಅರ್ಜುನನು ಅಸ್ತ್ರನಿಮಿತ್ತವಾಗಿ ಇಂದ್ರಲೋಕಕ್ಕೆ ಹೋಗಲು, ಭರತಶ್ರೇಷ್ಠರಾದ ಪಾಂಡವರು ದ್ರೌಪದೀಸಮೇತರಾಗಿ ಕಾಮ್ಯಕವನದಲ್ಲಿ ವಾಸಮಾಡುತ್ತ, ಒಂದಾನೊಂದುದಿವಸ ಹಸುರಾಗಿ ಗರಿಕೆ ಬೆಳೆದು ಮನೋಹರವಾಗಿರುವ ಏಕಾಂತವಾದ ಪ್ರದೇಶದಲ್ಲಿ ಕುಳಿತುಕೊಂಡು, ಅರ್ಜುನನನ್ನು ನೆನೆದು ದುಃಖಾಕ್ರಾಂತರಾಗಿ ಕಂಬನಿಗಳನ್ನು ತುಂಬಿಕೊಂಡು, ಆತನ ವಿಯೋಗದಿಂದಲೂ ರಾಜ್ಯನಾಶದಿಂದಲೂ ವ್ಯಸನಪಡುತ್ತಿದ್ದರು. ಆಗ ಮಹಾಬಾಹುಶಾಲಿಯಾದ ಭೀಮಸೇನನು ಧರ್ಮರಾಯನನ್ನು ನೋಡಿ "ಎಲೈ ಮಹಾರಾಜನೆ, ನಿನ್ನಾಜ್ಞೆಯಿಂದ ಅರ್ಜುನನು ಅಸ್ತ್ರನಿಮಿತ್ತವಾಗಿ ಇಂದ್ರಲೋಕಕ್ಕೆ ಹೊರಟುಹೋದನು. ನಮ್ಮ ಪ್ರಾಣಗಳೆಲ್ಲಾ ಆತನಲ್ಲೇ ಇರುವವು. ಆತನು ನಷ್ಟನಾದ ಪಕ್ಷದಲ್ಲಿ ಪಾಂಚಾಲರೂ ಸಾತ್ಯಕಿಯೂ ವಾಸುದೇವನೂ ಪುತ್ರಸಹಿತರಾದ ನಾವೂ ಸಹ ನಾಶವನ್ನು ಹೊಂದುವೆವು. ಇದು ನಿಶ್ಚಯವು. ಮಹಾತ್ಮನಾದ ಅರ್ಜುನನು ಈ ಕ್ಲೇಶಗಳನ್ನೆಲ್ಲಾ ಚಿಂತಿಸುತ್ತ, ನಿನ್ನ ಆಜ್ಞೆಯಿಂದ ಇಂದ್ರಲೋಕಕ್ಕೆ ಹೋದನು. ಇದಕ್ಕಿಂತಲೂ ನಮಗೆ ಅಧಿಕವಾದ ದುಃಖವು ಯಾವದಿರುವದು? ಆ ಮಹಾತ್ಮನ ಬಾಹುಬಲಾಶ್ರಯದಿಂದ ಯುದ್ಧರಂಗದಲ್ಲಿ ಸಮಸ್ತರಾದ ಶತ್ರುಗಳನ್ನೂ ಜಯಿಸಿ, ಭೂಮಿಯನ್ನು ನಮ್ಮ ಸ್ವಾಧೀನಮಾಡಿಕೊಳ್ಳುವೆವೆಂದು ನಾನು ತಿಳಿದುಕೊಂಡಿದ್ದೆನು. ಗಾಂಡೀವಧನುರ್ಧಾರಿಯಾದ ಆತನ ಪ್ರಭಾವವನ್ನು ನಂಬಿಕೊಂಡು, ನಾನು ಸಭಾಮಧ್ಯದಲ್ಲೇ ಶಕುನಿಸಹಿತರಾದ ದುರ್ಯೋಧನಾದಿಗಳನ್ನು ಸಂಹಾರಮಾಡದೆ ಬಿಟ್ಟೆನು. ನಾವೆಲ್ಲರೂ ಬಾಹುಬಲವುಳ್ಳವರಾಗಿದ್ದರೂ, ಆ ಕಾಲದಲ್ಲಿ ನಿನ್ನ ನಿಮಿತ್ತವಾಗಿ ಕೋಪವನ್ನು ಸಹಿಸಿಕೊಂಡಿದ್ದೆವು. ಈಗಲೂ ಶ್ರೀಕೃಷ್ಣನಿಂದ ಪಾಲಿತರಾದ ನಾವು ಆತನೊಡಗೂಡಿ ಕರ್ಣಾದಿಶತ್ರುಗಳನ್ನೆಲ್ಲಾ ಸಂಹಾರಮಾಡಿ, ಸ್ವಬಾಹುಬಲದಿಂದ ಸಂಪಾದಿಸಿದ ಸಕಲ ಭೂಮಂಡಲವನ್ನೂ ಪರಿಪಾಲಿಸೋಣ. ಎಲೈ ಧರ್ಮರಾಯನೆ, ನೀನು ಜೂಜಾಡಿದ ದೋಷದಿಂದಲ್ಲವೇ ನಾವೆಲ್ಲರೂ ಹೀಗೆ ಕಷ್ಟಪಡಬೇಕಾಯಿತು ? ದುರ್ಬಲರಾಗಿದ್ದ ಮೂರ್ಖದುರ್ಯೋಧನಾದಿಗಳು ನಮ್ಮ ದ್ರವ್ಯದಿಂದ ಬಲವಂತರಾದರು. ನೀನು ಕ್ಷಾತ್ರಧರ್ಮವನ್ನು ಪರ್ಯಾಲೋಚಿಸು. ಕ್ಷತ್ರಿಯನಿಗೆ ರಾಜ್ಯಪರಿಪಾಲನಮಾಡುವದೇ ಧರ್ಮವೆಂದೂ, ವನವಾಸಮಾಡುವದು ಅಧರ್ಮವೆಂದೂ ದೊಡ್ಡವರು ಹೇಳುವರು. ಅಂಥ ಕ್ಷತ್ರಿಯಧರ್ಮವನ್ನು ತಿಳಿದಿರುವ ನೀನು ಧರ್ಮಮಾರ್ಗವನ್ನು ತಪ್ಪಬೇಡ. ಹನ್ನೆರಡು ವರುಷಕ್ಕಿಂತಲೂ ಮೊದಲೇ, ದುರ್ಯೋಧನಾದಿಗಳನ್ನು ಸಂಹರಿಸೋಣ. ವನದಿಂದ ಹಿಂದಕ್ಕೆ ತಿರುಗು. ನಾನು ಶ್ರೀಕೃಷ್ಣನನ್ನು ಕರೆತರಿಸಿ, ಸೈನ್ಯವನ್ನು ಸೇರಿಸಿಕೊಂಡು, ಜಾಗ್ರತೆಯಾಗಿ

ದುರ್ಯೋಧನಾದಿಗಳನ್ನು ಯಮಲೋಕಕ್ಕೆ ಕಳುಹಿಸಿಬಿಡುವೆನು. ನಾನೊಬ್ಬನೇ ದುರ್ಯೋಧನನನ್ನೂ, ಕರ್ಣನನ್ನೂ; ಶಕುನಿಯನ್ನೂ, ಮಿಕ್ಕಾದವರನ್ನೂ, ಅವರಿಗೆ ಸಹಾಯರಾಗಿ ಬಂದ ರಾಜರನ್ನೂ ಸಹ ಸಂಹಾರಮಾಡಿಬಿಡುವೆನು. ಬಳಿಕ ನೀನು ಬಲವಂತನಾಗುವೆ. ಎಲೈ ಮಹಾರಾಜನೆ, ಈ ರೀತಿಯಾಗಿ ನಡೆದುಕೊಂಡರೆ ನಮಗೆ ಯಾವ ಪಾಪವೂ ಸಂಭವಿಸಲಾರದು. ನಾವು ರಾಜ್ಯವನ್ನು ಹೊಂದಿ, ನಾನಾವಿಧವಾದ ಯಜ್ಞಗಳಿಂದ ಪಾಪಪರಿಹಾರವನ್ನು ಮಾಡಿಕೊಂಡು, ಉತ್ತಮವಾದ ಸ್ವರ್ಗಲೋಕವನ್ನು ಹೊಂದೋಣ. ಎಲೈ ಧರ್ಮರಾಯನೆ, ನಮಗೆಲ್ಲರಿಗೂ ಅರಸಾದ ನೀನು ಧರ್ಮದಲ್ಲೇ ಆಸಕ್ತಿಯುಳ್ಳವನಾಗಿ ಮಾಡತಕ್ಕ ಕೆಲಸದಲ್ಲಿ ಆಲಸ್ಯವನ್ನು ಹೊಂದಿ ಬಾಲಕನಂತೆ ಹಠವನ್ನು ಮಾಡದಿದ್ದರೆ, ನಾನು ಹೇಳಿದಂತೆಯೇ ಆಗುವದು. ವಂಚಕರನ್ನು ವಂಚನೆಯಿಂದಲೇ ಸಂಹರಿಸಿದರೆ, ಅದರಿಂದ ಏನೂ ಪಾಪ ಸಂಭವಿಸುವದಿಲ್ಲವೆಂದು ಧರ್ಮಜ್ಞರಾದವರು ಹೇಳುವರು. ಇದು ನಿಶ್ಚಯವು. ಎಲೈ ಮಹಾರಾಜನೆ, ಸಹಸ್ರಸಂವತ್ಸರ ಮಾಡತಕ್ಕ ಸತ್ರಯಾಗದಲ್ಲಿ ಸಂವತ್ಸರಶಬ್ದವು ದಿನಪರವಾಗುವದಕ್ಕೋಸ್ಕರ, ಪ್ರಾಜಾಪತ್ಯಕೃಛ್ರದಿಂದ ಒಂದು ಅಹೋರಾತ್ರಿಯು ಒಂದು ಸಂವತ್ಸರಕ್ಕೆ ಸಮಾನವಾಗುವದೆಂದು ವೇದವಲ್ಲಿ ಹೇಳಿರುವದು. ಅಂಥ ವೇದವಚನವು ನಿನಗೆ ಪ್ರಮಾಣವಾಗಿದ್ದರೆ, ನಾವು ಕಳೆಯತಕ್ಕ ಹದಿಮೂರು ವರುಷಗಳಿಗೆ ಪ್ರತಿನಿಧಿಯಾದ ಹದಿಮೂರು ದಿವಸಗಳಿಗಿಂತ ಹೆಚ್ಚಾದ ಕಾಲವು ಕಳೆದಿರುವದರಿಂದ, ಹದಿಮೂರು ವರುಷಗಳು ಮುಗಿದವೆಂದು ತಿಳಿ. ಇನ್ನು ಸಪರಿವಾರನಾದ ದುರ್ಯೋಧನನನ್ನು ಸಂಹರಿಸುವದಕ್ಕೆ ಕಾಲ ಒದಗಿರುವದು. ಆ ದುರ್ಯೋಧನನು ನಮ್ಮೆದುರಿಗೇ ಸಕಲ ಭೂಮಂಡಲವನ್ನೂ ಆಳುತ್ತಿರುವನು. ದ್ಯೂತಪ್ರಿಯನಾದ ನಿನ್ನಿಂದ ಹೀಗಾಯಿತು. ನಾವೆಲ್ಲರೂ ಅಜ್ಞಾತವಾಸವನ್ನು ಮಾಡುವ ಹೊತ್ತಿಗೆ ಪ್ರಾಯೇಣ ನಷ್ಟರಾಗಿ ಹೋಗುವೆವು. ಯಾತಕ್ಕೆಂದರೆ, ದುಷ್ಟಾತ್ಮನಾದ ದುರ್ಯೋಧನನು ಚಾರರ ಮುಖದಿಂದ ತಿಳಿಯದೆ ಇರತಕ್ಕ ಪ್ರದೇಶವೇ ಇಲ್ಲ. ಆದ್ದರಿಂದ ನೀಚನಾದ ಆ ದುರ್ಯೋಧನನು ಅಜ್ಞಾತವಾಸಕಾಲದಲ್ಲಿ ನಮ್ಮನ್ನು ಕಂಡುಹಿಡಿದು ಛದ್ಮದಿಂದ ಪುನಃ ವನವಾಸಕ್ಕೆ ಕಳುಹಿಸುವನು. ಒಂದುವೇಳೆ ಪಾಪಿಷ್ಠನಾದ ಆತನಿಗೆ ಕಾಣಿಸಿಕೊಳ್ಳದೆ ಹ್ಯಾಗಾದರೂ ನಾವು ಅಜ್ಞಾತವಾಸವನ್ನು ಮುಗಿಸಿಗೊಂಡು ಬಂದರೆ, ಆತನು ನಮ್ಮನ್ನು ನೋಡಿ ಪುನಃ ಜೂಜಾಡುವದಕ್ಕೆ ಕರೆಯುವನು. ಆಗ ನೀನು ಅದಕ್ಕೆ ಹಿಂಜರಿಯದೆ, ಪುನಃ ಜೂಜಾಡುವದಕ್ಕೆ ಆರಂಭಮಾಡುವೆ. ಆ ದುರಾತ್ಮನು ಜೂಜಿನಲ್ಲಿ ಬಹಳ ಸಮರ್ಥನು. ನಿನಗೆ ಅದರಲ್ಲಿ ಅಷ್ಟು ಸಾಮರ್ಥ್ಯವಿಲ್ಲವಾದ್ದರಿಂದ ಸೋತು ಪುನಃ ವನಕ್ಕೆ ಬರುವೆ. ಇದು ಯಥಾರ್ಥವು. ಎಲೈ ಮಹಾರಾಜನೆ, ಯಾವಜ್ಜೀವವೂ ನಾವು ಕಾರ್ಪಣ್ಯದಿಂದಿರಬಾರದೆಂದು ನಿನ್ನ ಮನಸ್ಸಿನಲ್ಲಿದ್ದರೆ, ಕಪಟಿಗಳನ್ನು ಕಪಟದಿಂದಲೇ ಸಂಹರಿಸುವದು ಯುಕ್ತವಾದದ್ದೆಂದು ವೇದದಲ್ಲಿ ಹೇಳಿರುವ ಸಮಸ್ತ ಧರ್ಮಗಳನ್ನೂ ಪರ್ಯಾಲೋಚಿಸು. ಎಲೈ ಮಹಾರಾಜನೆ, ನೀನು ಆಜ್ಞೆಯನ್ನು ಕೊಟ್ಟದ್ದೇ ಆದರೆ, ಒಣಗಿದ ಹೊದೆಯಲ್ಲಿ ಬಿದ್ದ ಅಗ್ನಿಯು ಅದನ್ನು ಹ್ಯಾಗೆ ದಹಿಸಿಬಿಡುವದೋ ಹಾಗೆ, ನಾನು ಮೂಢನಾದ ದುರ್ಯೋಧನನನ್ನು ನನ್ನ ಶಕ್ತಿಗೆ ಅನುಸಾರವಾಗಿ ಸಂಹಾರಮಾಡಿಬಿಡುವೆನು. ನೀನು ಆಜ್ಞೆಯನ್ನು ಕೊಡು" ಎನಲು, ಆ ಮಾತನ್ನು ಕೇಳಿ ಧರ್ಮರಾಯನು ಭೀಮಸೇನನನ್ನು ಸಮಾಧಾನಪಡಿಸಿ, ಆತನ ಶಿರಸ್ಸನ್ನು ಆಘ್ರಾಣಮಾಡಿ "ಎಲೈ ಮಹಾಬಾಹುಶಾಲಿಯಾದ ಭೀಮಸೇನನೆ, ನೀನು ದುರ್ಯೋಧನನನ್ನು ಸಂಹಾರಮಾಡಬಲ್ಲೆ. ಈ ವಿಷಯದಲ್ಲಿ ಸಂದೇಹವಿಲ್ಲ. ಹದಿಮೂರು ವರುಷವಾದಬಳಿಕ, ಗಾಂಡೀವಧನುರ್ಧಾರಿಯಾದ ಅರ್ಜುನನೊಡಗೂಡಿ ಈ ಕೆಲಸವನ್ನು ನೆರವೇರಿಸು. ದುರ್ಯೋಧನನ ಸಂಹಾರಕ್ಕೆ ಕಾಲವು ಪ್ರಾಪ್ತವಾಗಿರುವದೆಂದು ನೀನು ಹೇಳಿದೆ. ಆದರೆ ನಾನು ಸುಳ್ಳಾಡುವದಕ್ಕೆ ಒಡಂಬಡಲಾರೆನು. ಇದುವರಿಗೂ ನಾನು ಸುಳ್ಳಾಡಿದವನಲ್ಲ. ಎಲೈ ಭೀಮನೆ, ನಾವು ಮಾಡಿದ ಪ್ರತಿಜ್ಞೆ ತೀರಿದ ಬಳಿಕ ಪುತ್ರಮಿತ್ರಾಮಾತ್ಯಸಹಿತನಾಗಿಯೂ ಪಾಪಾತ್ಮನಾಗಿಯೂ ವಂಚಕನಾಗಿಯೂ ಇರುವ ದುರ್ಯೋಧನನನ್ನು ನೀನು ಕಪಟಮಾರ್ಗವಿಲ್ಲದೆಯೇ ಸಂಹರಿಸು" ಎಂದು ನುಡಿಯುತ್ತಿದ್ದನು.

ಹೀಗೆ ನುಡಿಯುತ್ತಿರುವ ಸಮಯದಲ್ಲಿ ಮಹರ್ಷಿಯಾದ ಬೃಹದಶ್ವನು ಅಲ್ಲಿಗೆ ಬಂದನು. ಆಗ ಧರ್ಮರಾಯನು ಧರ್ಮಾತ್ಮನಾದ ಆ ಋಷಿಯನ್ನು ನೋಡಿ, ಶಾಸ್ತ್ರೋಕ್ತವಾಗಿ ಮಧುಪರ್ಕಾದಿಗಳಿಂದ ಸತ್ಕರಿಸಿ, ಪೀಠದ ಮೇಲೆ ಕುಳ್ಳಿರಿಸಿ, ಆತನು ಶ್ರಮಪರಿಹಾರ ಮಾಡಿಕೊಂಡಬಳಿಕ ಆತನನ್ನು ಕುರಿತು ದೈನ್ಯದಿಂದ "ಎಲೈ ಮಹಾ

ತ್ಮನೆ, ದ್ಯೂತದಲ್ಲಿ ಕುಶಲರಾಗಿಯೂ ವಂಚಕರಾಗಿಯೂ ಪಾಪಾತ್ಮರಾಗಿಯೂ ಇರುವ ದುರ್ಯೋಧನಾದಿಗಳು ದ್ಯೂತ ವಿದ್ಯೆಯನ್ನು ತಿಳಿಯದಿರತಕ್ಕ ನನ್ನನ್ನು ಕರೆಯಿಸಿ, ಕಪಟದಿಂದ ಜೂಜಾಡಿ, ನನ್ನ ರಾಜ್ಯವನ್ನೂ ಧನವನ್ನೂ ಅಪಹರಿಸಿದರು; ಪ್ರಾಣಗಳಿಗಿಂತಲೂ ಪ್ರಿಯತಮಳಾಗಿಯೂ ನಮಗೆ ಪತ್ನಿಯಾಗಿಯೂ ಇರುವ ದ್ರೌಪದಿಯನ್ನು ಸಭೆಗೆ ಎಳೆತಂದು ಅವಮಾನಪಡಿಸಿದರು; ಪುನಃ ಆ ಪಾಪಾತ್ಮರು ಅನುದ್ಯೂತವನ್ನು ಪಕ್ರಮಿಸಿ, ಆಗಲೂ ಕಪಟ ದಿಂದ ನನ್ನನ್ನು ಗೆದ್ದು, ನಮಗೆ ಕೃಷ್ಣಾಜಿನವನ್ನು ಹೊದ್ದಿಸಿ, ದಾರುಣವಾದ ವನವಾಸಕ್ಕೆ ಕಳುಹಿಸಿದರು. ನಾನು ಜೂಜಾಡುವಾಗ ಆ ಪಾಪಾತ್ಮರಾದ ದುರ್ಯೋಧನಾದಿಗಳು ಆಡಿದ ಕಠಿನವಾದ ಮಾತುಗಳನ್ನು ಕೇಳಿಕೊಂಡು ದುಃಖ ಪಡುತ್ತ, ಅತಿಕಷ್ಟನಾದ ಈ ವನವಾಸವನ್ನು ಮಾಡುತ್ತಿರುವೆನು. ಜೂಜಾಡುವದಕ್ಕೆ ಉಪಕ್ರಮಿಸಿದಾಗಲಿಂ ದಲೂ ನಮ್ಮ ಮಿತ್ರರು ಆಪ್ತರಾಗಿ ಹೇಳುತ್ತಿದ್ದ ಪ್ರಿಯವಾದ ಮಾತುಗಳನ್ನು ಮನಸ್ಸಿನಲ್ಲಿ ನೆನೆನೆನೆದು ಯಾವಾ ಗಲೂ ಚಿಂತಿಸುತ್ತಿರುವೆನು. ನಮ್ಮ ಪ್ರಾಣಗಳೆಲ್ಲಾ ಗಾಂಡೀವಧನುರ್ಧಾರಿಯಾದ ಅರ್ಜುನನಲ್ಲೇ ಇರುವವು. ಆತನು ಈಗ ಇಲ್ಲದಿರುವದರಿಂದ ನನ್ನ ಶಕ್ತಿಯೆಲ್ಲಾ ಅಡಗಿಹೋಗಿರುವದು. ಎಲೈ ಮಹಾತ್ಮನೆ, ಸಮರ್ಥನಾ ಗಿಯೂ ದಯಾಶಾಲಿಯಾಗಿಯೂ ಹಿತವಾದ ಮಾತುಗಳನ್ನು ಹೇಳತಕ್ಕವನಾಗಿಯೂ ಇರುವ ಅರ್ಜುನನು ಯಾವಾಗ ಅಸ್ತ್ರವಿದ್ಯಾಪಾರಂಗತನಾಗಿ ಇಲ್ಲಿಗೆ ಬರುವನೋ! ಪುನಃ ಆತನನ್ನು ಕಂಡು ನಾನು ನಿಶ್ಚಿಂತನಾಗಿರುವೆನೆ! ನನ್ನಂಥ ಭಾಗ್ಯಹೀನನಾದ ಅರಸು ಲೋಕದಲ್ಲಿ ಯಾವನಾದರೂ ಉಂಟೆ! ಅಂಥವನನ್ನು ನೀನು ಎಲ್ಲಾದರೂ ಕೇಳಿರು ವೆಯಾ? ನೋಡಿರುವೆಯಾ? ನನ್ನಂತೆ ದುಃಖಪಡತಕ್ಕ ಪುರುಷನು ಎಲ್ಲೂ ಇಲ್ಲವೆಂದು ನಾನು ತಿಳಿದಿರುವೆನು!” ಎಂದು ಹೇಳಿದನು. ಆ ಮಾತುಗಳನ್ನು ಕೇಳಿ ಬೃಹದಶ್ವಋುಷಿಯು ಧರ್ಮರಾಯನನ್ನು ಕುರಿತು “ಎಲೈ ಮಹಾ ರಾಜನೆ ಕೇಳು. ನೀನು ನಿನಗಿಂತಲೂ ಭಾಗ್ಯಹೀನನಾದ ಪುರುಷನು ಯಾವನೂ ಇಲ್ಲವೆಂದು ಹೇಳಿದೆಯಲ್ಲಾ. ನಿನಗಿಂತಲೂ ಹೆಚ್ಚಾಗಿ ದುಃಖವನ್ನು ಅನುಭವಿಸಿದ ಅರಸಿನ ವೃತ್ತಾಂತವನ್ನು ಹೇಳುವೆನು ಕೇಳು” ಎನಲು, ಧರ್ಮರಾಯನು “ಎಲೈ ಮಹಾತ್ಮನೆ, ಇಂಥ ಅವಸ್ಥೆಯನ್ನು ಹೊಂದಿದ ಆ ಅರಸಿನ ವೃತ್ತಾಂತವನ್ನು ಕೇಳಬೇ ಕೆಂದು ನನಗೆ ಕುತೂಹಲವುಂಟಾಗಿರುವದು. ಅದನ್ನು ಹೇಳು” ಎಂದನು. ಅದಕ್ಕೆ ಬೃಹದಶ್ವನು ಹೇಳುತ್ತಾನೆ: “ಎಲೈ ರಾಯನೆ, ನೀನು ತಮ್ಮಂದಿರೊಡಗೂಡಿ ಚಿಂತಾರಹಿತನಾಗಿ ನಾನು ಹೇಳುವ ಆ ಅರಸಿನ ವೃತ್ತಾಂತವನ್ನು ಕೇಳು. ನಿಷಧದೇಶದಲ್ಲಿ ವೀರಸೇನನೆಂದು ಪ್ರಸಿದ್ಧನಾದ ಒಬ್ಬ ಅರಸು ಇದ್ದನು. ಆತನಿಗೆ ಸಕಲ ಧರ್ಮಾರ್ಥಗ ಳಲ್ಲೂ ನಿಪುಣನಾದ ನಳನೆಂಬ ಒಬ್ಬ ಮಗನಿದ್ದನು. ಆ ನಳಮಹಾರಾಜನನ್ನು ಪುಷ್ಕರನೆಂಬ ಒಬ್ಬ ರಾಜನು ದ್ಯೂತದಲ್ಲಿ ವಂಚನೆಯಿಂದ ಸೋಲಿಸಲು, ಆತನು ತನ್ನ ಪತ್ನಿಯಾದ ದಮಯಂತಿಯೊಡನೆ ಕೂಡಿ ದುಃಖಪಡುತ್ತ ವನವಾಸವನ್ನು ಮಾಡುತ್ತಿದ್ದನು. ಆಗ ಭೃತ್ಯರೇ ಆಗಲಿ, ರಥ ಮೊದಲಾದ ವಾಹನಗಳೇ ಆಗಲಿ, ಅಣ್ಣತಮ್ಮಂ ದಿರೇ ಆಗಲಿ, ಬಂಧುಜನಗಳೇ ಆಗಲಿ, ಯಾರೂ ಆತನ ಸಂಗಡ ಇರಲಿಲ್ಲ. ಈಗ ನೀನು ವನವಾಸಮಾಡುವ ಕಾಲದಲ್ಲಿ ಶೂರರಾಗಿಯೂ ದೇವತೆಗಳಿಗೆ ಸಮಾನರಾಗಿಯೂ ಇರುವ ತಮ್ಮಂದಿರೂ, ಬ್ರಹ್ಮದೇವನಿಗೆ ಸಮಾನ ರಾದ ಬ್ರಾಹ್ಮಣಶ್ರೇಷ್ಠರೂ ಸಹ ನಿನ್ನ ಸಂಗಡ ಇರುವರು. ಆದ್ದರಿಂದ, ನೀನು ವ್ಯಸನಪಡಕೂಡದು” ಎನಲು, ಅದನ್ನು ಕೇಳಿ ಧರ್ಮರಾಯನು “ಎಲೈ ಮಹರ್ಷಿಯೆ, ಮಹಾನುಭಾವನಾದ ಆ ನಳಚಕ್ರವರ್ತಿಯ ಚರಿತ್ರೆ ಯನ್ನು ವಿಸ್ತಾರವಾಗಿ ಹೇಳು. ಅದನ್ನು ಕೇಳಬೇಕೆಂದು ನನಗೆ ಕುತೂಹಲವುಂಟಾಗಿರುವದು” ಎಂದು ನುಡಿದನು.

## ೫೩ನೇ ಅಧ್ಯಾಯ.—ನಳೋಪಾಖ್ಯಾನ—ಬೃಹದಶ್ವ ಯುಧಿಷ್ಠಿರ ಸಂವಾದ,

ವೈಶಂಪಾಯನಮುನೀಂದ್ರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಬಳಿಕ ಬೃಹದಶ್ವನು ಧರ್ಮರಾಯನನ್ನು ಕುರಿತು “ಎಲೈ ರಾಯನೆ ಕೇಳು. ವೀರಸೇನನಿಗೆ ಪುತ್ರನಾಗಿಯೂ ಸಕಲ ಗುಣಯುಕ್ತನಾಗಿಯೂ ರೂಪವಂತನಾಗಿಯೂ ಅಶ್ವಶಾಸ್ತ್ರದಲ್ಲಿ ಚತುರನಾಗಿಯೂ ಬಲಶಾಲಿಯಾಗಿಯೂ ಇದ್ದ

ಆ ನಳಮಹಾರಾಜನು ದೇವೇಂದ್ರನಂತೆ ಎಲ್ಲಾ ರಾಜರಿಗಿಂತಲೂ ಶ್ರೇಷ್ಠನೆನಿಸಿಕೊಂಡು, ತೇಜಸ್ಸಿನಿಂದ ಸೂರ್ಯನ ಹಾಗೆ ಪ್ರಕಾಶಿಸುತ್ತಿದ್ದನು. ಆತನು ಸಾಂಗವಾಗಿ ವೇದಾಧ್ಯಯನ ಮಾಡಿದವನಾಗಿಯೂ, ಬ್ರಾಹ್ಮಣಪ್ರಿಯನಾಗಿಯೂ, ಶೂರನಾಗಿಯೂ, ಅಕ್ಷೋಹಿಣೀಪತಿಯಾಗಿಯೂ, ಸತ್ಯವಾದಿಯಾಗಿಯೂ, ಉದಾರಸ್ವಭಾವನಾಗಿಯೂ, ಜಿತೇಂದ್ರಿಯನಾಗಿಯೂ, ಉತ್ತಮರಾದ ಯುವತಿಯರಿಂದ ಅಪೇಕ್ಷಿಸಲ್ಪಡತಕ್ಕ ಸೌಂದರ್ಯವುಳ್ಳವನಾಗಿಯೂ, ಧನುರ್ಧರಾಗ್ರೇಸರನಾಗಿಯೂ ಇದ್ದನು. ಆತನು ಸಾಕ್ಷಾನ್ಮನುಚಕ್ರವರ್ತಿಯಂತೆ ಪ್ರಜೆಗಳನ್ನು ಸಂರಕ್ಷಿಸುತ್ತ, ನಿಷಧದೇಶಕ್ಕೆ ಅಧಿಪತಿಯಾಗಿ, ಯಾವಾಗಲೂ ಅಕ್ಷಕ್ರೀಡೆಯಲ್ಲಿ ಆಸಕ್ತನಾಗಿದ್ದನು. ಹೀಗಿರುವಲ್ಲಿ ವಿದರ್ಭದೇಶಕ್ಕೆ ಅಧಿಪತಿಯೂ, ಅತ್ಯಂತ ಪರಾಕ್ರಮಶಾಲಿಯೂ, ಸಕಲ ಗುಣಭರಿತನೂ ಆದ ಭೀಮನೆಂಬ ಮಹಾರಾಜನು ತನಗೆ ಸಂತಾನವಾಗಬೇಕೆಂದು ಪತ್ನಿಯೊಡಗೂಡಿ ಅನೇಕ ನಿಯಮವ್ರತಗಳನ್ನು ಮಾಡುತ್ತ, ಅದಕ್ಕೆ ತಕ್ಕ ಪ್ರಯತ್ನಗಳನ್ನು ಮಾಡುತ್ತಿದ್ದನು. ಒಂದಾನೊಂದುದಿನ ದಮನೆಂಬ ಒಬ್ಬ ಬ್ರಹ್ಮರ್ಷಿಯು ಆತನ ಸಮೀಪಕ್ಕೆ ಬರಲು ಆ ಧರ್ಮಜ್ಞನಾದ ಭೀಮಭೂಪಾಲನು ಪತ್ನಿಯೊಡಗೂಡಿ ತೇಜೋವಂತನಾದ ಆ ಬ್ರಹ್ಮರ್ಷಿಯನ್ನು ಅರ್ಘ್ಯಪಾದ್ಯಾಚಮನೀಯಾದಿಸತ್ಕಾರಗಳಿಂದ ಸಂತೋಷಪಡಿಸಿದನು. ಆಗ ಆ ಋಷಿಯು ಪ್ರಸನ್ನನಾಗಿ, ಪತ್ನೀಸಹಿತನಾದ ಆ ಭೀಮಭೂಪಾಲನಿಗೆ ಸಂತಾನವಾಗುವಂತೆ ವರವನ್ನು ಕೊಟ್ಟನು. ಬಳಿಕ ಆತನಿಗೆ ಸಕಲಗುಣಸಂಪನ್ನರೂ ತೇಜಸ್ವಿಗಳೂ ಪರಾಕ್ರಮಸಂಪನ್ನರೂ ಆದ ದಮ ದಾಂತ ದಮನ ಎಂಬ ಮೂರುಮಂದಿ ಗಂಡುಮಕ್ಕಳೂ, ರೂಪು ತೇಜಸ್ಸು ಯಶಸ್ಸು ಕಾಂತಿ ಸೌಭಾಗ್ಯಗಳಿಂದ ಮೆರೆಯುತ್ತಿರುವ ದಮಯಂತಿಯೆಂಬ ಉತ್ತಮಳಾದ ಕನ್ಯೆಯೂ ಸಹ ಜನಿಸಿದರು. ತರುವಾಯ ಆ ದಮಯಂತಿಗೆ ಕ್ರಮವಾಗಿ ಯೌವನವುಂಟಾಗಲು, ದಿವ್ಯಾಲಂಕಾರಭೂಷಿತರಾದ ಅನೇಕಮಂದಿ ಗೌಡಿಯರೂ, ಅನೇಕಮಂದಿ ಸಖೀಜನರೂ ಸಹ ಆಕೆಯನ್ನು ಶಚೀದೇವಿಯನ್ನು ಸೇವಿಸುವಂತೆ ಸೇವಿಸುತ್ತಿದ್ದರು. ಆ ಸಖಿಯರ ಮಧ್ಯದಲ್ಲಿ ಸಕಲಾಭರಣಾಲಂಕೃತೆಯಾಗಿಯೂ ಸುಂದರಾಂಗಿಯಾಗಿಯೂ ಲಕ್ಷ್ಮಿಯಂತೆ ಅಧಿಕವಾದ ರೂಪಸಂಪತ್ತಿಯುಳ್ಳವಳಾಗಿಯೂ ವಿಸ್ತಾರವಾದ ಕಣ್ಣುಗಳುಳ್ಳವಳಾಗಿಯೂ ಇರುವ ಆ ದಮಯಂತಿಯು ವರ್ಷಾಕಾಲದ ಮಿಂಚಿನಂತೆ ಪ್ರಕಾಶಿಸುತ್ತಿದ್ದಳು. ಅಂಥ ರೂಪವತಿಯಾದ ಸ್ತ್ರೀಯು ದೇವಯಕ್ಷಮನುಷ್ಯರಲ್ಲಿ ಎಲ್ಲಿಯೂ ಹಿಂದೆ ಕೇಳಿಯೂ ನೋಡಿಯೂ ಸಹ ಇಲ್ಲ. ಆಕೆಯು ದೇವತೆಗಳ ಮನಸ್ಸನ್ನಾದರೂ ಸ್ವಾಧೀನಪಡಿಸಿಕೊಳ್ಳುವಷ್ಟು ರೂಪಾತಿಶಯವುಳ್ಳವಳು. ಪುರುಷಶ್ರೇಷ್ಠನಾದ ನಳಮಹಾರಾಜನೂ ಕೂಡ, ಅನಂಗತ್ವಹೋದ ಮನ್ಮಥನಂತೆ ರೂಪಸಂಪನ್ನನಾಗಿದ್ದನು. ಅಂಥ ನಳಮಹಾರಾಜನನ್ನು ದಮಯಂತಿಯ ಬಳಿಯಲ್ಲೂ ದಮಯಂತಿಯನ್ನು ನಳಮಹಾರಾಜನ ಬಳಿಯಲ್ಲೂ ನಿತ್ಯವೂ ಚಾರರು ಪ್ರಶಂಸೆ ಮಾಡುತ್ತಿರಲು, ಈ ಪ್ರಕಾರ ಪರಸ್ಪರಗುಣಾತಿಶಯಗಳನ್ನು ಕೇಳಿಕೇಳಿ ಅವರಿಬ್ಬರಿಗೂ ಪರಸ್ಪರಾನುರಾಗವು ವೃದ್ಧಿಯಾಗುತ್ತ ಬಂತು. ಆಗ ನಳಮಹಾರಾಜನು ದಮಯಂತಿಯ ಗುಣಗಳನ್ನು ಕೇಳಿ, ಮನಸ್ಸಿನಲ್ಲಿ ಕಾಮಬಾಧೆಯನ್ನು ಸಹಿಸಲಾರದೆ, ಅಂತಃಪುರದ ಸಮೀಪದಲ್ಲಿರುವ ಉದ್ಯಾನವನದಲ್ಲಿ ಏಕಾಂತವಾಗಿ ವಾಸಮಾಡುತ್ತ, ಆ ವನದಲ್ಲಿ ಸಂಚರಿಸುತ್ತಿದ್ದ ಚಿನ್ನದ ರೆಕ್ಕೆಗಳುಳ್ಳ ಹಂಸಪಕ್ಷಿಗಳನ್ನು ಕಂಡು, ಅವುಗಳಲ್ಲಿ ಒಂದು ಪಕ್ಷಿಯನ್ನು ಹಿಡಿದುಕೊಳ್ಳಲು, ಆ ಪಕ್ಷಿಯು ನಳಮಹಾರಾಜನನ್ನು ನೋಡಿ 'ಎಲೈ ಮಹಾರಾಜನೆ, ನೀನು ನನ್ನನ್ನು ಹಿಂಸೆಮಾಡಬೇಡ. ನಾನು ನಿನಗೆ ಒಂದು ಉಪಕಾರವನ್ನು ಮಾಡುವೆನು. ಅದೇನೆಂದರೆ, ನಾನು ಇಲ್ಲಿಂದ ದಮಯಂತಿಯ ಬಳಿಗೆ ಹೋಗಿ, ಅಲ್ಲಿ ನಿನ್ನ ಗುಣಾತಿಶಯಗಳನ್ನು ಶ್ಲಾಘನೆಮಾಡಿ, ಆಕೆಗೆ ಮತ್ತೊಬ್ಬನಲ್ಲಿ ಅನುರಾಗ ವುಂಟಾಗದಂತೆ ಮಾಡುವೆನು' ಎಂದು ನುಡಿಯಲು, ನಳನು ಆ ಪಕ್ಷಿಯನ್ನು ಬಿಟ್ಟುಬಿಟ್ಟನು. ಬಳಿಕ ಅಲ್ಲಿದ್ದ ಎಲ್ಲಾ ಹಂಸಪಕ್ಷಿಗಳೂ ಮೇಲಕ್ಕೆ ಹಾರಿ ವಿದರ್ಭದೇಶಕ್ಕೆ ಹೋಗಿ, ದಮಯಂತಿ ಇರತಕ್ಕ ಪ್ರಮದಾವನದಲ್ಲಿ ಸಂಚರಿಸುತ್ತಿದ್ದವು. ಆಗ ಸಖೀಜನರಿಂದೊಡಗೂಡಿದ ದಮಯಂತಿಯು ವಿಚಿತ್ರವಾದ ರೂಪವನ್ನು ತಾಳಿರುವ ಆ ಹಂಸಪಕ್ಷಿಗಳನ್ನು ನೋಡಿ, ಅವುಗಳನ್ನು ಶೀಘ್ರವಾಗಿ ಹಿಡಿದುಕೊಳ್ಳಬೇಕೆಂಬ ಕುತೂಹಲದಿಂದ ಪ್ರಯತ್ನಮಾಡಲು, ಆ ಪಕ್ಷಿಗಳೆಲ್ಲವೂ ಆ ವನದಲ್ಲಿ ಚೆಲ್ಲಾಪಿಲ್ಲಿಯಾಗಿ ಎಲ್ಲಾ ಕಡೆಯಲ್ಲೂ ಹರವಿಕೊಂಡವು. ಬಳಿಕ ದಮಯಂತಿಯ ಸಖೀಜನರೆಲ್ಲರೂ ಒಬ್ಬೊಬ್ಬರು ಒಂದೊಂದು ಪಕ್ಷಿಯನ್ನು ಹಿಡಿಯುವದಕ್ಕೆ ಹೋದರು. ಆಗ ದಮಯಂತಿಯು ಯಾವ ಪಕ್ಷಿಯನ್ನು ಹಿಡಿ

ಡುವವಕ್ಕೋಸ್ಕರ ಹೋದಳೋ, ನಳರಾಜಗೃಹೀತವಾಗಿದ್ದ ಆ ಪಕ್ಷಿಯು ಮನುಷ್ಯರಂತೆ ಮಾತನಾಡುತ್ತ ದಮಯಂತಿಯನ್ನು ಕುರಿತು 'ಎಲೌ ದಮಯಂತಿಯೆ, ನಿಷಧದೇಶಕ್ಕೆ ಅಧಿಪತಿಯಾದ ನಳನೆಂಬ ಮಹಾರಾಜನು ರೂಪಿನಲ್ಲಿ ಅಶ್ವಿನೀದೇವತೆಗಳಿಗೆ ಸಮಾನನಾಗಿರುವನು. ಪುರುಷರಲ್ಲಿ ಆತನಿಗೆ ಸಮಾನವಾದ ರೂಪುಳ್ಳವರು ಯಾರೂ ಇಲ್ಲ. ಆತನು ಶರೀರವನ್ನು ಧರಿಸಿದ ಮನ್ಮಥನಂತೆ ಸುಂದರಾಂಗನಾಗಿರುವನು. ಎಲೌ ಮಂಗಳಾಂಗಿಯೆ, ಆತನಿಗೆ ನೀನು ಪತ್ನಿಯಾದದ್ದೇ ಆದರೆ, ನಿನ್ನ ಜನ್ಮವೂ ನಿನ್ನ ರೂಪವೂ ಸಫಲವಾಗುವವು. ನಾವು ದೇವತೆಗಳನ್ನೂ ಗಂಧರ್ವರನ್ನೂ ಮನುಷ್ಯರನ್ನೂ ಸರ್ಪಗಳನ್ನೂ ರಾಕ್ಷಸರನ್ನೂ ಸಹ ನೋಡಿರುವೆವು; ಆದರೆ ನಳಮಹಾರಾಜನ ಹಾಗೆ ಸೌಂದರ್ಯಶಾಲಿಯಾದವನನ್ನು ಮಾತ್ರ ನಾವು ಎಲ್ಲಿಯೂ ನೋಡಲಿಲ್ಲ. ನೀನು ಸ್ತ್ರೀಯರಲ್ಲಿ ಶಿಖಾಮಣಿಯಾಗಿಯೂ ಆತನು ಪುರುಷರಲ್ಲಿ ಶ್ರೇಷ್ಠನಾಗಿಯೂ ಇರುವಿರಿ. ಲೋಕೋತ್ತರವಾದ ಸೌಂದರ್ಯವುಳ್ಳ ನಿಮ್ಮಿಬ್ಬರಿಗೂ ಸಮಾಗಮವಾದರೆ ಬಹಳ ಶ್ಲಾಘ್ಯವಾಗಿರುವದು' ಎನಲು, ದಮಯಂತಿಯು ಆ ಹಂಸವನ್ನು ಕುರಿತು "ಎಲೈ ಹಂಸವೆ, ನೀನು ಇಲ್ಲಿ ಹೇಳಿದಹಾಗೆಯೇ ಆ ನಳಮಹಾರಾಜನ ಸನ್ನಿಧಿಗೆ ಹೋಗಿ ಅಲ್ಲೂ ಹೇಳು' ಎಂದು ಪ್ರಾರ್ಥಿಸಿದಳು. ಆ ಮಾತನ್ನು ಕೇಳಿ ಹಂಸಪಕ್ಷಿಯು ಹಾಗೆಯೇ ಆಗಲೆಂದು ದಮಯಂತಿಯ ಸಂಗಡ ಹೇಳಿ, ಅಲ್ಲಿಂದ ನಿಷಧದೇಶಕ್ಕೆ ಬಂದು, ನಳಮಹಾರಾಜನ ಸಂಗಡ ಆ ವೃತ್ತಾಂತವನ್ನೆಲ್ಲಾ ಹೇಳಿತು" ಎಂದು ಬೃಹದಶ್ವನು ಧರ್ಮರಾಯನಿಗೆ ಹೇಳಿದನು.

---

## ೫೪ನೇ ಅಧ್ಯಾಯ.—ನಳೋಪಾಖ್ಯಾನ—(ದಮಯಂತೀ ಸ್ವಯಂವರ).

ವೈಶಂಪಾಯನ ಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯನೆ, ಬಳಿಕ ಬೃಹದಶ್ವನು ಧರ್ಮರಾಯನನ್ನು ಕುರಿತು "ಎಲೈ ಧರ್ಮರಾಯನೆ, ಆ ದಮಯಂತಿಯು ಹಂಸದ ಮಾತನ್ನು ಕೇಳಿದಾಗಲಿಂದಲೂ ನಳಮಹಾರಾಜನಲ್ಲೇ ಮನಸ್ಸು ನೆಟ್ಟು, ಸ್ವಸ್ಥಚಿತ್ತಳಾಗದೆ ಚಿಂತಾಪರಳಾಗಿ ದೈನ್ಯವನ್ನು ಹೊಂದಿ, ಮುಖದಲ್ಲಿ ಕಾಂತಿಯಿಲ್ಲದೆ, ಬಡವಾಗಿ ನಿಟ್ಟುಸುರುಗಳನ್ನು ಬಿಡುತ್ತ, ಯಾವಾಗಲೂ ಹುಚ್ಚರಂತೆ ಮೇಲುನೋಟವುಳ್ಳವಳಾಗಿ ನಳನನ್ನೇ ಹಂಬಲಿಸುತ್ತ, ಮನ್ಮಥವಿಕಾರದಿಂದ ಕ್ಷಣಮಾತ್ರದಲ್ಲೇ ಬೆಳ್ಳಗಾದಳು. ಆಕೆಯು ಅಹೋರಾತ್ರಿಯಲ್ಲೂ ಹಾಸಿಗೆಯಮೇಲೂ ಮಲಗಳು; ಪೀಠದಮೇಲೂ ಕೂತುಕೊಳ್ಳಳು; ಆಹಾರ ಮೊದಲಾದವುಗಳಿಂದ ಶರೀರಸೌಖ್ಯವನ್ನೂ ಅಪೇಕ್ಷೆಯನ್ನಿಡದೆ ಅದೇ ಚಿಂತೆಯಿಂದ ಹಾ ಹಾ ಎನ್ನುತ್ತ ಕಂಬನಿಗಳನ್ನು ತುಂಬುತ್ತಿದ್ದಳು. ಈ ಪ್ರಕಾರ ಅಸ್ವಸ್ಥಳಾಗಿದ್ದ ಆಕೆಯ ಮನೋಭಾವವನ್ನು ತಿಳಿದು, ಸಖೀಜನರು ವಿದರ್ಭರಾಜನಾದ ಭೀಮಮಹಾರಾಜನ ಬಳಿಗೆ ಹೋಗಿ ಆಕೆಯಿರತಕ್ಕ ಸ್ಥಿತಿಯನ್ನು ಬಿನ್ನವಿಸಿದರು. ಅದನ್ನು ಕೇಳಿ ಆ ರಾಯನು 'ಇದೇನು ನನ್ನ ಮಗಳು ಈಗ ಇಷ್ಟೊಂದು ಅಸ್ವಸ್ಥಚಿತ್ತಳಾಗಿರುವಳು!' ಎಂದು ಬಹಳವಾಗಿ ಯೋಚಿಸುತ್ತ, ಆಕೆಗೆ ಯೌವನವುಂಟಾಗಿರುವದನ್ನು ತಿಳಿದು, ಆಕೆಗೆ ಸ್ವಯಂವರಮಹೋತ್ಸವವನ್ನು ಬೆಳಸಬೇಕೆಂದು ಮಂತ್ರಾಲೋಚನೆಯಿಂದ ನಿಶ್ಚಯಿಸಿಕೊಂಡು, ದಮಯಂತಿಯ ಸ್ವಯಂವರಮಹೋತ್ಸವಕ್ಕಾಗಿ ಸಕಲರಾದ ರಾಜರಿಗೂ ಹೇಳಿ ಕಳುಹಿಸಿದನು. ಆ ವೃತ್ತಾಂತವನ್ನು ಕೇಳಿ ಸಕಲರಾದ ರಾಜರೂ ವಿಚಿತ್ರವಿಚಿತ್ರವಾದ ಆಭರಣಗಳಿಂದಲೂ ವಸ್ತ್ರಗಳಿಂದಲೂ ಅಲಂಕೃತರಾಗಿ, ಶಾಘ್ಯವಾದ ಉಡುಪುಗಳನ್ನು ಧರಿಸಿರುವ ಸೈನ್ಯಗಳಿಂದ ಯುಕ್ತರಾಗಿ, ಆನೆ ಕುದುರೆ ರಥಗಳ ಧ್ವನಿಗಳಿಂದ ಭೂಮಿಯನ್ನೆಲ್ಲಾ ತುಂಬುತ್ತ, ವಿದರ್ಭದೇಶಕ್ಕೆ ಬಂದು ಭೀಮಮಹಾರಾಜನನ್ನು ಕಾಣಿಸಿಕೊಂಡರು. ಬಳಿಕ ಭೀಮಮಹಾರಾಜನು ತನ್ನ ಮಗಳ ಸ್ವಯಂವರಮಹೋತ್ಸವಕ್ಕಾಗಿ ಬಂದ ಆ ರಾಜರಿಗೆಲ್ಲಾ ತನ್ನ ವೈಭವಕ್ಕೆ ಅನುಸಾರವಾಗಿ ಮರ್ಯಾದೆಯನ್ನು ಮಾಡಿದನು. ಆ ಬಳಿಕ ಆ ಅರಸುಗಳೆಲ್ಲರೂ ತಮ್ಮತಮ್ಮ ಮಾನಾನುಗುಣವಾದ ಮರ್ಯಾದೆಯನ್ನು ಪಡೆದು, ಅಲ್ಲಿ ಪಾಳ್ಯವನ್ನು ಇಳುಹಿಸಿಕೊಂಡಿದ್ದರು. ಇಷ್ಟರಲ್ಲೇ ಮಹಾಪ್ರಾಜ್ಞರೂ ವ್ರತನಿಷ್ಠರೂ ಮಹಾತ್ಮರೂ ದೇವರ್ಷಿಗಳೂ ಆದ ನಾರದರೂ ಪರ್ವತಋಷಿಗಳೂ ಭೂಲೋಕದಲ್ಲಿ ಸಂಚಾರಮಾಡಿಕೊಂಡು, ದೇವಲೋಕಕ್ಕೆ ಹೋಗಿ, ಇಂದ್ರನ ಅರಮನೆ

ಯನ್ನು ಹೊಕ್ಕು, ಆತನನ್ನು ಕಾಣಲು, ಇಂದ್ರನು ಅವರಿಬ್ಬರನ್ನೂ ಸತ್ಕರಿಸಿ ಕುಶಲಪ್ರಶ್ನೆಯನ್ನು ಮಾಡಿ 'ಎಲೈ ಮಹಾತ್ಮರೆ, ಸರ್ವತ್ರ ಎಲ್ಲರೂ ಕ್ಷೇಮವಾಗಿರುವರೆ?' ಎಂದು ಕೇಳಲು, ಅವರಿಬ್ಬರೂ ಇಂದ್ರನನ್ನು ಕುರಿತು 'ಎಲೈ ದೇವೇಂದ್ರನೆ, ನಾವು ಎಲ್ಲೆಲ್ಲಿ ಹೋದರೂ ಕ್ಷೇಮವಾಗಿಯೇ ಇರುವೆವು. ಭೂಲೋಕದಲ್ಲಿರತಕ್ಕ ಸಕಲರಾದ ಅರಸುಗಳೂ ಕ್ಷೇಮವಾಗಿರುವರು' ಎನಲು, ಅದನ್ನು ಕೇಳಿ ಇಂದ್ರನು 'ಎಲೈ ಮಹಾತ್ಮರೆ, ರಾಜಧರ್ಮವನ್ನು ಬಲ್ಲವರಾಗಿಯೂ ಯುದ್ಧದಲ್ಲಿ ಹಿಂತಿರುಗದೆ ಪ್ರಾಣದಮೇಲೆ ಆಶೆಯನ್ನು ಬಿಟ್ಟು ಯುದ್ಧಮಾಡತಕ್ಕವರಾಗಿಯೂ ಇರುವ ಅರಸುಗಳು ಶಸ್ತ್ರಗಳಿಂದ ಹತರಾಗಿ ಈ ಅಮರಾವತೀ ಪಟ್ಟಣಕ್ಕೆ ಬಂದದ್ದೇ ಆದರೆ, ಅವರಿಗೆ ಈ ಲೋಕವು ನನಗೆ ಬೇಕಾದ ಸುಖಗಳನ್ನುಂಟುಮಾಡುವಂತೆ ಅಕ್ಷಯವಾದ ಸುಖವನ್ನುಂಟುಮಾಡುವದು. ನನಗೆ ಅತಿಥಿಗಳಾಗಿಯೂ ಇಷ್ಟರಾಗಿಯೂ ಇಲ್ಲಿಗೆ ಬರತಕ್ಕ ಅಂಥ ಶೂರರಾದ ಕ್ಷತ್ರಿಯರು ಯಾರೂ ಬರುತ್ತಿರುವದನ್ನು ನಾನು ಕಾಣೆನಲ್ಲ! ಅವರೆಲ್ಲರೂ ಏನಾಗಿರುವರು?' ಎಂದು ಕೇಳಿದನು. ಆಗ ನಾರದಮಹರ್ಷಿಯು ಇಂದ್ರನನ್ನು ಕುರಿತು 'ಎಲೈ ಮಹೇಂದ್ರನೆ, ಭೂಲೋಕದಲ್ಲಿರುವ ಅರಸುಗಳು ಇಲ್ಲಿಗೆ ಬಾರದಿರುವದಕ್ಕೆ ಕಾರಣವನ್ನು ಹೇಳುವೆನು ಕೇಳು. ವಿದರ್ಭದೇಶಾಧೀಶ್ವರನಾದ ಭೀಮಮಹಾರಾಜನಿಗೆ ಮಗಳಾದ ದಮಯಂತಿಯೆಂಬ ಒಬ್ಬ ಕನ್ಯಕೆ ಇರುವಳು; ಆಕೆಯು ಭೂಮಂಡಲದಲ್ಲಿರುವ ಎಲ್ಲಾ ಸ್ತ್ರೀಯರಿಗಿಂತಲೂ ಅಧಿಕವಾದ ಸೌಂದರ್ಯವುಳ್ಳವಳಾಗಿರುವಳು; ಆಕೆಗೆ ಸ್ವಯಂವರ ಮಹೋತ್ಸವವು ಶೀಘ್ರವಾಗಿಯೇ ಬೆಳೆಯತಕ್ಕದ್ದಾಗಿರುವದು. ಅಂಥ ಸ್ತ್ರೀರತ್ನವನ್ನು ಅಪೇಕ್ಷಿಸಿ ಭೂಮಂಡಲದಲ್ಲಿರುವ ಸಕಲರಾದ ರಾಜಕುಮಾರರೂ ಆ ಸ್ವಯಂವರಮಹೋತ್ಸವಾರ್ಥವಾಗಿ ಅಲ್ಲಿಗೆ ಹೋಗುತ್ತಿರುವರು' ಎಂದು ನುಡಿಯುತ್ತಿರಲು, ಆ ಸಮಯದಲ್ಲಿ ಮಹೇಂದ್ರನನ್ನು ಕಾಣುವದಕ್ಕಾಗಿ ಅಲ್ಲಿಗೆ ಬಂದಿದ್ದ ಅಗ್ನಿಮೊದಲಾದ ಲೋಕಪಾಲಕರೆಲ್ಲರೂ ನಾರದರು ಹೇಳಿದ ಆ ವಿಶೇಷವರ್ತಮಾನವನ್ನು ಕೇಳಿ ಸಂತೋಷಪಟ್ಟು, ಇಂದ್ರನನ್ನು ಕುರಿತು 'ಎಲೈ ಮಹೇಂದ್ರನೆ, 'ನಾವೆಲ್ಲರೂ ಆ ದಮಯಂತೀಸ್ವಯಂವರಮಹೋತ್ಸವಕ್ಕೆ ಹೋಗೋಣ' ಎಂದು ನುಡಿದು, ಒಡನೆಯೇ ಎಲ್ಲರೂ ತಮ್ಮತಮ್ಮ ವಾಹನಗಳನ್ನೇರಿ ಸಪರಿವಾರರಾಗಿ ವಿದರ್ಭದೇಶವನ್ನು ಕುರಿತು ಹೊರಟರು. ಆಗ ಧೀರನಾದ ನಳಮಹಾರಾಜನೂ ಕೂಡ ಆ ಮಹೋತ್ಸವಕ್ಕೆ ಸಕಲರಾಜರೂ ಬಂದಿರುವದನ್ನು ತಿಳಿದು, ತಾನೂ ದಮಯಂತಿಯಲ್ಲಿ ಅಧಿಕವಾದ ಅನುರಾಗವುಳ್ಳವನಾಗಿ ಅಲ್ಲಿಗೆ ಹೊರಟು ಬರುತ್ತಿರಲು, ಇಂದ್ರಾದಿ ಲೋಕಪಾಲಕರು ಮೂರ್ತಿಯನ್ನು ಧರಿಸಿದ ಮನ್ಮಥನಂತೆ ಭೂಮಿಯಲ್ಲಿ ಪ್ರತ್ಯಕ್ಷವಾಗಿ ಕಾಣಿಸುತ್ತ ಸೂರ್ಯನಂತೆ ತೇಜೋವಂತನಾದ ಆ ನಳಮಹಾರಾಜನನ್ನು ಮಧ್ಯಮಾರ್ಗದಲ್ಲಿ ನೋಡಿ, ಆತನ ರೂಪಾತಿಶಯಕ್ಕೆ ಆಶ್ಚರ್ಯಪಟ್ಟು, ದಮಯಂತಿಯಲ್ಲಿ ತಮಗಿರುವ ಆಶೆಯನ್ನು ತೊರೆದು, ತಮ್ಮ ವಿಮಾನಗಳನ್ನು ಆಕಾಶದಲ್ಲಿ ನಿಲ್ಲಿಸಿ ಕೆಳಕ್ಕೆ ಇಳಿದು, ನಳಮಹಾರಾಜನನ್ನು ಕುರಿತು 'ಎಲೈ ನಳಮಹಾರಾಜನೆ, ನೀನು ಸತ್ಯವ್ರತನಾದವನು. ನೀನು ನಮಗೆ ದೂತನಾಗಿ ಸಹಾಯವನ್ನು ಮಾಡು' ಎಂದು ನುಡಿದರು" ಎಂಬದಾಗಿ ಬೃಹದಶ್ವನು ರಾಯನಿಗೆ ಹೇಳಿದನು.

## ೫೫ನೇ ಅಧ್ಯಾಯ.—ನಳೋಪಾಖ್ಯಾನ—(ನಳನು ಇಂದ್ರಾದಿಗಳಿಗೆ ದೂತನಾದದ್ದು).

ಅನಂತರದಲ್ಲಿ ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯನೆ, ಬಳಿಕ ಬೃಹದಶ್ವನು ಧರ್ಮರಾಯನನ್ನು ನೋಡಿ "ಎಲೈ ಧರ್ಮರಾಯನೆ, ಆಗ ನಳಮಹಾರಾಯನು ದೇವತೆಗಳು ಹೇಳಿದ ಮಾತನ್ನು ಕೇಳಿ, ಹಾಗೆಯೇ ಆಗಲೆಂದು ಒಪ್ಪಿಕೊಂಡು, ಕೈಮುಗಿದುಕೊಂಡು ಅವರ ಎದುರಿಗೆ ನಿಂತು, ಅವರನ್ನು ಕುರಿತು 'ನೀವು ಯಾರು? ನನ್ನನ್ನು ದೂತನಾಗಬೇಕೆಂದು ಬಯಸಿದ ಈತನು ಯಾರು? ನಿಮಗೆ ನನ್ನಿಂದ ಆಗತಕ್ಕ ಕಾರ್ಯವೇನು? ಯಥಾರ್ಥವಾಗಿ ಹೇಳಬೇಕು' ಎನಲು, ಆ ಮಾತನ್ನು ಕೇಳಿ ಇಂದ್ರನು 'ಎಲೈ ನಳರಾಜನೆ, ನಾವು ದೇವತೆಗಳು. ನಾವು ದಮಯಂತಿಯ ಸ್ವಯಂವರಾರ್ಥವಾಗಿ ಬಂದಿರುವೆವು. ನಾನು ಮಹೇಂದ್ರನು, ಆತನು ಅಗ್ನಿಯು, ಈತನು ಜಲಾಧಿಪತಿಯಾದ ವರುಣನು, ಇವನು ಸಕಲಪ್ರಾಣಿಗಳ ಶರೀರವನ್ನೂ ತೆಗೆದುಕೊಂಡು ಹೋಗತಕ್ಕ ಯಮನು. ನೀನು ದಮಯಂತಿಯ ಬಳಿಗೆ ಹೋಗಿ

'ಇಂದ್ರಾಗ್ನಿ ಯಮವರುಣರು ನಿನ್ನನ್ನು ವರಿಸಬೇಕೆಂಬ ಅಪೇಕ್ಷೆಯಿಂದ ನಿನ್ನನ್ನು ನೋಡುವದಕ್ಕಾಗಿ ನಿನ್ನ ಸ್ವಯಂವರಮಹೋತ್ಸವಕ್ಕೆ ಬಂದಿರುವರು. ಇವರಲ್ಲಿ ಯಾವನಾದರೂ ಒಬ್ಬನನ್ನು ನೀನು ಪತಿಭಾವದಿಂದ ವರಿಸು ' ಎಂದು ಆಕೆಯ ಸಂಗಡ ಹೇಳು ' ಎಂದು ನುಡಿದನು. ಆ ಮಾತನ್ನು ಕೇಳಿ, ನಳಮಹಾರಾಜನು ಕೈಮು ಗಿದುಕೊಂಡು ' ಎಲೈ ಮಹೇಂದ್ರನೆ, ನೀವು ಯಾವ ಕಾರ್ಯಕ್ಕೋಸ್ಕರ ಬಂದಿರುವಿರೋ, ಅದೇ ಕಾರ್ಯಕ್ಕೋಸ್ಕರ ನಾನೂ ಬಂದಿರುವೆನಾದ್ದರಿಂದ, ನೀವು ಇಂಥ ಕಾರ್ಯಕ್ಕೋಸ್ಕರ ಆಕೆಯ ಬಳಿಗೆ ನನ್ನನ್ನು ಕಳುಹಿಸಿಕೊಡಕೂ ಡದು. ಒಬ್ಬ ಸ್ತ್ರೀಯಲ್ಲಿ ಅಪೇಕ್ಷೆಯುಳ್ಳ ಯಾವ ಪುರುಷನುತಾನೇ ಮತ್ತೊಬ್ಬರಿಗಾಗಿ ಆಕೆಯಸಂಗಡ ಇಂಥ ಮಾತುಗಳನ್ನು ಹೇಳುವದಕ್ಕೆ ಒಡಂಬಟ್ಟಾನು ? ಈ ವಿಷಯದಲ್ಲಿ ನೀವು ಕ್ಷಮಿಸಬೇಕು ' ಎಂದು ನುಡಿದನು. ಬಳಿಕ ಆ ದೇವತೆಗಳೆಲ್ಲರೂ ' ಎಲೈ ನಳರಾಜನೆ, ನೀನು ಹಾಗೆಯೇ ಆಗಲೆಂದು ಮೊದಲು ಒಪ್ಪಿಕೊಂಡು, ಈಗ ಹಾಗೆ ನಡೆದುಕೊಳ್ಳದಿರುವದಕ್ಕೆ ಕಾರಣವೇನು ? ಸಾವಕಾಶ ಮಾಡಬೇಡ. ಜಾಗ್ರತೆಯಾಗಿ ಆಕೆಯ ಬಳಿಗೆ ಹೋಗಿ ನಾವು ಹೇಳಿದ ಮಾತುಗಳನ್ನು ತಿಳಿಸು ' ಎನಲು, ನಳಮಹಾರಾಜನು ' ಎಲೈ ಲೋಕಪಾಲಕರೆ, ಆ ದಮಯಂತಿ ಇರತಕ್ಕ ರಾಣಿವಾಸವು ಬಹುಮಂದಿ ಕಾವಲುಗಾರರಿಂದ ರಕ್ಷಿಸಲ್ಪಟ್ಟಿರುವದು. ಅಲ್ಲಿ ನಮ್ಮಂಥವರು ಹ್ಯಾಗೆ ಪ್ರವೇಶ ಮಾಡುವದಕ್ಕಾದೀತು ? ' ಎಂದು ಕೇಳಿದನು. ಆ ಮಾತನ್ನು ಕೇಳಿ ಮಹೇಂದ್ರನು ' ಎಲೈ ನಳ ರಾಜನೆ, ನಿನ್ನನ್ನು ಯಾರೂ ಕಾಣದಂತೆ ಅಲ್ಲಿ ಪ್ರವೇಶ ಮಾಡತಕ್ಕ ಶಕ್ತಿಯನ್ನು ನಾನು ಕೊಟ್ಟಿರುವೆನು. ನೀನು ಹೋಗು ' ಎನಲು, ನಳನು ಹಾಗೆಯೇ ಆಗಲೆಂದು ಒಪ್ಪಿಕೊಂಡು, ದಮಯಂತಿಯ ಅಂತಃಪುರಕ್ಕೆ ಹೋಗಿ, ಅಲ್ಲಿ ಸಖೀಜನರಿಂದೊಡಗೂಡಿ, ಶರೀರಕಾಂತಿಯಿಂದ ದೇದೀಪ್ಯಮಾನಳಾಗಿ, ಸ್ತ್ರೀಶಿರೋಮಣಿಯಾಗಿಯೂ ಅತ್ಯಂತ ಸುಕುಮಾರಾಂಗಿಯಾಗಿಯೂ ಕೃಶಮಧ್ಯೆಯಾಗಿಯೂ ವಿಶಾಲನೇತ್ರಗಳುಳ್ಳವಳಾಗಿಯೂ ಇರುವದಲ್ಲದೆ, ಮುಖ ಕಾಂತಿಯಿಂದ ಚಂದ್ರನ ಪ್ರಕಾಶವನ್ನು ತಿರಸ್ಕರಿಸುತ್ತಾ, ಮಂದಹಾಸದಿಂದೊಪ್ಪುತ್ತಿದ್ದ ವಿದರ್ಭರಾಜಪುತ್ರಿಯಾದ ದಮಯಂತಿಯನ್ನು ಕಂಡನು. ಒಡನೆಯೇ ಆತನಿಗೆ ಮನ್ಮಥೋದ್ರೇಕವುಂಟಾಯಿತು ; ಆದರೆ ದೇವತೆಗಳಿಗೆ ಕೊಟ್ಟ ಭಾಷೆಯನ್ನು ಸತ್ಯವಾಗಿ ನಡೆಯಿಸಬೇಕೆಂಬ ಪ್ರಜ್ಞೆಹುಟ್ಟಿ ಆ ಮನ್ಮಥವಿಕಾರವನ್ನು ತಡೆದುಕೊಂಡನು.

ಬಳಿಕ ಆ ಅಂತಃಪುರದಲ್ಲಿದ್ದ ಸ್ತ್ರೀಯರೆಲ್ಲರೂ ಆ ನಳಮಹಾರಾಜನನ್ನು ನೋಡಿ ಸಂಭ್ರಾಂತರಾಗಿ ಆತನ ತೇಜಸ್ಸಿಗೆ ಗಾಬರಿಪಟ್ಟು, ತಮ್ಮತಮ್ಮ ಪೀಠಗಳಿಂದೆದ್ದು ' ಈತನು ಯಾರು ? ದೇವತೆಯೋ, ಯಕ್ಷನೋ, ಗಂಧರ್ವನೋ ! ಮಹಾತ್ಮನಾದ ಈತನ ರೂಪೂ ತೇಜಸ್ಸೂ ಧೈರ್ಯವೂ ಆಶ್ಚರ್ಯಕರವಾಗಿರುವವು ' ಎಂದು ವಿಚಾರ ಮಾಡುತ್ತಾ, ಆತನನ್ನು ಪೂಜ್ಯನನ್ನಾಗಿ ಮನಸ್ಸಿನಲ್ಲಿ ಎಣಿಸಿ, ಸಂತೋಷದಿಂದ ಶ್ಲಾಘಿಸುತ್ತ, ಲಜ್ಜೆಯಿಂದ ಆತನ ಸಂಗಡ ಮಾತನಾಡುವದಕ್ಕೆ ಹಿಂಜರಿದು ಸುಮ್ಮನಿದ್ದರು. ಆಗ ದಮಯಂತಿಯು ತನ್ನನ್ನು ನೋಡಿ ಆಶ್ಚರ್ಯಪಡು ತ್ತಿರುವ ಆ ನಳನನ್ನು ನೋಡಿ, ಮಂದಹಾಸದೊಡಗೂಡಿ, ಮೃದುಮಧುರವಾದ ಮಾತುಗಳಿಂದ ' ಎಲೈ ಸುಂದ ರಾಂಗನೆ, ನೀನು ಯಾರು ? ನನ್ನ ಮನಸ್ಸಿನಲ್ಲಿ ಕಾಮವನ್ನು ವೃದ್ಧಿಪಡಿಸುತ್ತ, ದೇವಶಾಪುರುಷನಂತೆ ಬಂದಿರುವ ನೀನು ಯಾರೆಂದು ತಿಳಿಯಬೇಕೆಂದು ನಾನು ಬಯಸುತ್ತಿರುವೆನು. ಈ ರಾಣಿವಾಸವು ಮತ್ತೊಬ್ಬ ಪುರುಷನು ಪ್ರವೇಶಿಸುವದಕ್ಕೆ ಆಸ್ಪದವಿಲ್ಲದಂತೆ ರಕ್ಷಿತವಾಗಿರುವದು. ಇಂಥ ಸ್ಥಳಕ್ಕೆ ಯಾರಿಗೂ ಕಾಣಿಸಿಕೊಳ್ಳದಂತೆ ನೀನು ಬಂದಬಗೆ ಹ್ಯಾಗೆ ? ನಮ್ಮ ಮಹಾರಾಜನ ಆಜ್ಞೆಯು ಬಹಳ ಕಠಿನವಾಗಿರುವದಲ್ಲಾ ! ' ಎಂದು ನುಡಿದಳು. ಆಮಾತನ್ನು ಕೇಳಿ, ನಳನು ದಮಯಂತಿಯನ್ನು ಕುರಿತು ' ಎಲೆ ಮಂಗಳಾಂಗಿಯೆ, ನಾನು ನಳಮಹಾರಾಜನು ; ದೇವತೆಗಳಿಗೆ ದೂತನಾಗಿ ಇಲ್ಲಿಗೆ ಬಂದಿರುವೆನು. ಇಂದ್ರಾಗ್ನಿಯಮವರುಣರು ನಿನ್ನನ್ನು ವರಿಸಬೇಕೆಂದು ಅಪೇಕ್ಷಿಸುವರು. ಅವರಲ್ಲಿ ಯಾರನ್ನಾದರೂ ಒಬ್ಬನನ್ನು ನೀನು ಪತಿಯನ್ನಾಗಿ ವರಿಸಬೇಕು. ಅವರ ಪ್ರಭಾ ವದಿಂದಲೇ ನಾನು ಯಾರಿಗೂ ಕಾಣಿಸಿಕೊಳ್ಳದಂತೆ ಇಲ್ಲಿಗೆ ಬಂದೆನು. ನಾನು ಬರುವ ಕಾಲದಲ್ಲಿ ನನ್ನನ್ನು ಯಾರೂ ಕಾಣಲೂ ಇಲ್ಲ, ತಡೆಯಲೂ ಇಲ್ಲ. ಎಲೆ ಮಂಗಳಾಂಗಿಯೆ, ಈ ಕಾರ್ಯಕ್ಕೋಸ್ಕರಲೇ ದೇವತೆಗಳು ನನ್ನನ್ನು ಇಲ್ಲಿಗೆ ಕಳುಹಿಸಿಕೊಟ್ಟಿರುವರು. ಇದನ್ನು ತಿಳಿದು, ನೀನು ನಿನ್ನ ಇಚ್ಛೆಬಂದಂತೆ ನಡದುಕೊ ' ಎಂದು ನಳನು ದಮಯಂತಿಗೆ ಹೇಳಿದನು ” ಎಂಬ ಅರ್ಥವನ್ನು ಬೃಹದಶ್ವನು ಧರ್ಮರಾಯನಿಗೆ ಹೇಳಿದನು.

### ೫೬ನೇ ಅಧ್ಯಾಯ.—ನಳೋಪಾಖ್ಯಾನ—(ಅಂತಃಪುರದಲ್ಲಿ ನಳದಮಯಂತಿಯರ ಸಂವಾದ).

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಬೃಹದಶ್ವನು ಯುಧಿಷ್ಠಿರನನ್ನು ಕುರಿತು "ಎಲೈ ಯುಧಿಷ್ಠಿರನೆ, ಬಳಿಕ ದಮಯಂತಿಯು ಭಕ್ತಿಯಿಂದ ದೇವತೆಗಳಿಗೆ ನಮಸ್ಕಾರಮಾಡಿ, ಮಂದಹಾಸಯುಕ್ತಳಾಗಿ ನಳಮಹಾರಾಜನನ್ನು ಕುರಿತು 'ಎಲೈ ಮಹಾರಾಜನೆ, ನೀನು ನನ್ನನ್ನು ವರಿಸು. ನಾನು ನಿನಗೆ ಸೇವಕಳಾಗಿರುವೆನು. ನಾನೂ ನನ್ನದಾಗಿ ಇನ್ನೇನು ವಸ್ತುಗಳಿರುವವೋ ಅವೆಲ್ಲವೂ ನಿನ್ನವೆಂದು ತಿಳಿ. ವಿಶ್ವಾಸಪೂರ್ವಕವಾಗಿ ನೀನು ನನ್ನನ್ನು ವರಿಸು. ಹಂಸಪಕ್ಷಿಗಳು ನನಗೆ ಹೇಳಿದ ಮಾತುಗಳು ನನ್ನನ್ನು ಸಂತಾಪಪಡಿಸುತ್ತಿರುವವು. ಸ್ವಯಂವರಮಹೋತ್ಸವದಲ್ಲಿ ನಿನ್ನನ್ನು ವರಿಸುವ ನಿಮಿತ್ತವಾಗಿ ನಾನು ಎಲ್ಲಾ ರಾಜರನ್ನೂ ಸೇರಿಸಿರುವೆನು. ಪ್ರಿಯನೆ, ನಿನ್ನನ್ನೇ ಬಯಸಿರತಕ್ಕ ನನ್ನನ್ನು ನೀನು ತಿರಸ್ಕರಿಸಿದ್ದೇ ಆದರೆ, ನಿನ್ನ ನಿಮಿತ್ತವಾಗಿ ನಾನು ವಿಷಪಾನವನ್ನಾದರೂ ಮಾಡುವೆನು ; ಅಥವಾ ಅಗ್ನಿಪ್ರವೇಶವನ್ನಾದರೂ ಮಾಡುವೆನು ; ಇಲ್ಲದಿದ್ದರೆ ನೀರಿನಲ್ಲಾದರೂ ಬಿದ್ದುಬಿಡುವೆನು ; ಹಾಗೂ ಅಲ್ಲದಿದ್ದರೆ, ನೇಣನ್ನಾದರೂ ಹಾಕಿಕೊಳ್ಳುವೆನು' ಎಂದು ನುಡಿಯಲು, ನಳನು ಆಕೆಯನ್ನು ಕುರಿತು 'ಎಲೆ ಮಂಗಳಾಂಗಿಯೆ, ಇಂದ್ರಾದಿ ಲೋಕಪಾಲಕರು ನಿನ್ನನ್ನು ಅಪೇಕ್ಷಿಸುತ್ತಿರುವಾಗ, ನೀನು ಮನುಷ್ಯನನ್ನು ಯಾತಕ್ಕೆ ಬಯಸುವೆ ? ಮಹಾತ್ಮರಾಗಿಯೂ ಐಶ್ವರ್ಯಸಂಪನ್ನರಾಗಿಯೂ ಲೋಕಪಾಲಕರಾಗಿಯೂ ಇರುವ ಇಂದ್ರಾದಿದೇವತೆಗಳ ಪಾದರಜಸ್ಸಿಗೆಸಹ ನಾನು ಸಮಾನನಾದವನಲ್ಲ. ಆದ್ದರಿಂದ ನೀನು ಅವರಲ್ಲೇ ಮನಸ್ಸನ್ನು ಮಾಡು. ದೇವತೆಗಳಿಗೆ ವಿರುದ್ಧವಾದದ್ದನ್ನು ಆಚರಿಸತಕ್ಕ ಮನುಷ್ಯನು ಮೃತ್ಯುವಿನ ಪಾಲಾಗುವನು. ಎಲೆ ಶುಭಾಂಗಿಯೆ, ನನ್ನನ್ನು ರಕ್ಷಿಸುವದಕ್ಕೋಸ್ಕರ ನೀನು ದೇವಶ್ರೇಷ್ಠರಾದ ಲೋಕಪಾಲಕರನ್ನು ವರಿಸಿ, ದಿವ್ಯವಾಗಿಯೂ ನಿರ್ಮಲವಾಗಿಯೂ ಇರುವ ವಸ್ತ್ರಗಳನ್ನೂ, ವಿಚಿತ್ರವಾದ ಹಾರಗಳನ್ನೂ, ಉತ್ತಮವಾದ ಆಭರಣಗಳನ್ನೂ ಅನುಭವಿಸು. ಈ ಸಮಸ್ತವಾದ ಭೂಮಂಡಲವನ್ನೂ ಸಂಕೋಚಮಾಡಿ ಯಾವನು ಗ್ರಾಸಮಾಡುವನೋ ಅಂಥ ದೇವಶ್ರೇಷ್ಠನಾದ ಯಜ್ಞೇಶ್ವರನನ್ನು ಯಾವಳುತಾನೇ ಪತಿಯನ್ನಾಗಿ ವರಿಸದೆ ಇದ್ದಾಳು ? ಸಕಲರಾದ ಪ್ರಾಣಿಗಳೂ ಯಾವವನ ದಂಡಕ್ಕೆ ಭಯಪಟ್ಟು ಧರ್ಮವನ್ನೇ ಅನುಸರಿಸುವರೋ, ಅಂಥ ಯಮನನ್ನು ಯಾವಳು ತಾನೇ ಪತಿಯನ್ನಾಗಿ ವರಿಸದಿದ್ದಾಳು ? ಧರ್ಮಾತ್ಮನಾಗಿಯೂ ಮಹಾನುಭಾವನಾಗಿಯೂ ದೈತ್ಯದಾನವರಿಗೆ ನಾಶಕರನಾಗಿಯೂ ಸಕಲ ದೇವತೆಗಳಿಗೂ ಒಡೆಯನಾಗಿಯೂ ಇರುವ ಮಹೇಂದ್ರನನ್ನು ಯಾವಳುತಾನೇ ಪತಿಯನ್ನಾಗಿ ವರಿಸದೆ ಇದ್ದಾಳು ? ಎಲೆ ದಮಯಂತಿಯೆ, ನಿನ್ನಮನಸ್ಸಿಗೆ ಒಪ್ಪಿದ್ದೇ ಆದರೆ ಆ ಲೋಕಪಾಲರಲ್ಲಿ ವರುಣನನ್ನು ನೀನು ವರಿಸು. ಈ ವಿಷಯದಲ್ಲಿ ಮತ್ತೊಂದು ಪ್ರಕಾರ ಯೋಚಿಸದೆ ಈ ಮಿತ್ರವಾಕ್ಯವನ್ನು ನಡೆಯಿಸು' ಎಂದು ನುಡಿದನು. ಅದನ್ನು ಕೇಳಿ ದಮಯಂತಿಯು ದುಃಖದಿಂದ ಕಂಬನಿಗಳನ್ನು ತುಂಬಿ, ನಳನನ್ನು ಕುರಿತು 'ಮಹಾರಾಜನೆ, ನಾನು ಸಮಸ್ತದೇವತೆಗಳಿಗೂ ನಮಸ್ಕಾರಮಾಡಿ ನಿನ್ನನ್ನೇ ವರಿಸತಕ್ಕವಳು. ಇದನ್ನು ನಾನು ಯಥಾರ್ಥವಾಗಿ ಹೇಳುವೆನು' ಎಂದು ನುಡಿದು, ನಡುಗುತ್ತ ಕೈಮುಗಿದುಕೊಂಡು ನಿಂತಿರಲು, ನಳಮಹಾರಾಜನು ಆಕೆಯನ್ನು ನೋಡಿ 'ಎಲೆ ಮಂಗಳಾಂಗಿಯೆ, ನಾನು ದೇವತೆಗಳಿಗೆ ದೂತನಾಗಿ ಬಂದಿರುವೆನು. ನಾನು ಹೇಳಿದ್ದನ್ನು ನೀನು ನಡಿಸು. ದೇವತೆಗಳಿಗೆ ಮಾತುಕೊಟ್ಟು ಅವರಿಗೋಸ್ಕರ ಈ ಕಾರ್ಯದಲ್ಲಿ ಪ್ರವರ್ತಿಸಿರತಕ್ಕ ನಾನು ಆತ್ಮಾರ್ಥವಾಗಿ ನಿನ್ನನ್ನು ವರಿಸುವದಕ್ಕೆ ಹ್ಯಾಗೆ ಒಡಂಬಡಲಿ ? ದೂತಕೃತ್ಯಕ್ಕೆ ಬಂದವನು ಸ್ವಪ್ರಯೋಜನವನ್ನು ಮಾಡಿಕೊಳ್ಳುವದೇ ಧರ್ಮವಾಗಿರುವ ಪಕ್ಷದಲ್ಲಿ ನಾನು ಹಾಗೆಯೇ ಪ್ರವರ್ತಿಸುವೆನು. ನೀನೂ ತದನುಸಾರವಾಗಿಯೇ ನಡೆದುಕೊ' ಎಂದು ನುಡಿದನು. ಅದನ್ನು ಕೇಳಿ ಶುಚಿಸ್ಮಿತೆಯಾದ ದಮಯಂತಿಯು ಗದ್ಗದಸ್ವರದಿಂದ ಮೆಲ್ಲಗೆ ಮಾತನಾಡುತ್ತ, ನಳರಾಜನನ್ನು ಕುರಿತು 'ಎಲೈ ಮಹಾರಾಜನೆ, ಯಾರಿಗೂ ಬಾಧೆಯಿಲ್ಲದಿರುವ ಉಪಾಯವನ್ನು ನಾನು ಅರುಹುವೆನು. ಅದರಿಂದ ನಿನಗೆ ಯಾವ ದೋಷವೂ ಉಂಟಾಗಲಾರದು. ಪುರುಷಶ್ರೇಷ್ಠನಾದ ನೀನೂ ಇಂದ್ರಾದಿ ದೇವತೆಗಳೂ ಸಹ ನನ್ನ ಸ್ವಯಂವರಮಂಟಪಕ್ಕೆ ಬಿಜಯಂಗೈದರೆ, ಆಗ

ನಾನು ದೇವತೆಗಳ ಸನ್ನಿಧಾನದಲ್ಲಿ ನಿನ್ನನ್ನು ವರಿಸುತ್ತೇನೆ. ಹೀಗಾದ ಪಕ್ಷದಲ್ಲಿ ಯಾವ ದೋಷವೂ ಉಂಟಾಗಲಾರದು' ಎಂದಳು. ನಳಮಹಾರಾಜನು ಅಲ್ಲಿಂದ ಮರಳಿ ದೇವತೆಗಳಿರತಕ್ಕ ಸ್ಥಳಕ್ಕೆ ಹೊರಟು ಬಂದನು. ಆಗ ಇಂದ್ರಾದಿ ದೇವತೆಗಳು ಆತನನ್ನು ನೋಡಿ 'ಎಲೈ ರಾಯನೆ, ಶುಚಿಸ್ಮಿತೆಯಾದ ಆ ದಮಯಂತಿಯನ್ನು ನೀನು ಕಂಡೆಯಾ? ನಮ್ಮ ವಿಷಯದಲ್ಲಿ ಏನು ಹೇಳಿದಳು? ಅಲ್ಲಿ ನಡೆದ ವೃತ್ತಾಂತವನ್ನೆಲ್ಲಾ ವಿವರಿಸು' ಎಂದು ಕೇಳಲು, ನಳಮಹಾರಾಜನು 'ಎಲೈ ಲೋಕಪಾಲಕರಾ, ನಿಮ್ಮ ಆಜ್ಞೆಯನ್ನು ವಹಿಸಿ ಹೋದ ನಾನು ಅನೇಕಮಂದಿ ವೃದ್ಧರಾದ ಕಂಚುಕಿಗಳಿಂದ ರಕ್ಷಿತವಾದ ದಮಯಂತಿಯ ರಾಣಿವಾಸವನ್ನು ಪ್ರವೇಶಮಾಡಿದೆನು. ಅಲ್ಲಿ ನಿಮ್ಮ ಪ್ರಭಾವದಿಂದ ದಮಯಂತಿಯೊಬ್ಬಳು ಹೊರತಾಗಿ ಮತ್ತೊಬ್ಬನು ಯಾವನೂ ನನ್ನನ್ನು ಕಾಣಲಿಲ್ಲ. ಆ ರಾಣಿವಾಸದಲ್ಲಿ ದಮಯಂತಿಯ ಸಖೀಜನರನ್ನು ನಾನು ನೋಡಿದೆನು; ಅವರೂ ನನ್ನನ್ನು ನೋಡಿ ಆಶ್ಚರ್ಯಪಟ್ಟರು. ಎಲೈ ಸುರಶ್ರೇಷ್ಠರೆ, ಆ ದಮಯಂತಿಯ ಬಳಿಯಲ್ಲಿ ನಾನು ನಿಮ್ಮನ್ನು ಶ್ಲಾಘನೆಮಾಡಲು, ಆ ಚಂದ್ರಮುಖಿಯು ನಿಮ್ಮಲ್ಲಿ ಅನುರಾಗವಿಲ್ಲದೆ ನನ್ನಲ್ಲೇ ಅನುರಾಗಪಟ್ಟು 'ನಿನ್ನೊಡನೆ ಲೋಕಪಾಲಕರು ನನ್ನ ಸ್ವಯಂವರಮಂಟಪಕ್ಕೆ ಬರಲಿ; ಅವರ ಸನ್ನಿಧಾನದಲ್ಲಿಯೇ ನಿನ್ನನ್ನು ನಾನು ವರಿಸುವೆನು; ಅದರಿಂದ ನಿನಗೆ ಯಾವ ದೋಷವೂ ಉಂಟಾಗಲಾರದು' ಎಂದು ನನ್ನ ಸಂಗಡ ಹೇಳಿದಳು. ಇಷ್ಟೇ ಅಲ್ಲಿ ನಡೆದ ವೃತ್ತಾಂತವು. ಉಳಿದ ವಿಷಯದಲ್ಲಿ ನಿಮಗೆ ತೋರಿದಂತೆ ಮಾಡಬಹುದು" ಎಂದು ಹೇಳಿದ ಅರ್ಥವನ್ನು ಬೃಹದಶ್ವನು ಧರ್ಮರಾಯನಿಗೆ ಹೇಳಿದನು.

## ೫೭ನೇ ಅಧ್ಯಾಯ.—ನಳೋಪಾಖ್ಯಾನ—(ದಮಯಂತಿಯು ನಳರಾಜನನ್ನು ವರಿಸಿದ್ದು).

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯನೆ, ಬೃಹದಶ್ವನು ಧರ್ಮರಾಯನನ್ನು ಕುರಿತು "ಎಲೈ ಧರ್ಮರಾಯನೆ, ಅನಂತರದಲ್ಲಿ ಶುಭತಿಥಿ ನಕ್ಷತ್ರ ಯುಕ್ತವಾದ ಪುಣ್ಯತಮವಾದ ಮುಹೂರ್ತದಲ್ಲಿ ಭೀಮಭೂಪಾಲಕನು ಸಕಲರಾಜರಿಗೂ ಸ್ವಯಂವರಮಂಟಪಕ್ಕೆ ಬರುವಂತೆ ಹೇಳಿಕಳುಹಿಸಿಕೊಡಲು, ಅವನ್ನು ಕೇಳಿ ಅರಸುಗಳೆಲ್ಲರೂ ಕಾಮಪೀಡಿತರಾಗಿ ದಮಯಂತಿಯನ್ನು ಬಯಸುತ್ತ, ಅಲ್ಲಿಗೆ ಬಂದು ದಿವ್ಯಸುಗಂಧಾನುಲೇಪನರಾಗಿ, ಪುಷ್ಪಮಾಲಿಕೆಗಳನ್ನು ಮುಡಿದು, ನಾನಾ ದಿವ್ಯಹಾರಮಣಿಕುಂಡಲಾದ್ಯಾಭರಣ ಯುಕ್ತರಾಗಿ, ಸುವರ್ಣಸ್ತಂಭ ತೋರಣಾದಿಗಳಿಂದ ಶೋಭಾಯಮಾನವಾದ ಸ್ವಯಂವರಮಂಟಪವನ್ನು ಸಿಂಹಗಳು ಪರ್ವತವನ್ನು ಪ್ರವೇಶಿಸುವಂತೆ ಪ್ರವೇಶಮಾಡಿ, ನಾನಾವಿಧವಾದ ಸಿಂಹಾಸನಗಳ ಮೇಲೆ ಕೂತುಕೊಂಡರು. ಆ ಸಭೆಯು ಆ ಅರಸುಗಳಿಂದ ಪೂರ್ಣವಾಗಿ, ಸರ್ಪಶ್ರೇಷ್ಠರಿಂದ ಪರಿಪೂರ್ಣವಾದ ಭೋಗವತೀ ಪಟ್ಟಣದಂತೆಯೂ ವ್ಯಾಘ್ರಗಳಿಂದ ಕೂಡಿದ ಪರ್ವತದ ಗುಹೆಯಂತೆಯೂ ಪ್ರಕಾಶಿಸುತ್ತಿತ್ತು. ಆ ಅರಸುಗಳ ಮಹಾಬಾಹುಗಳು ಪರಿಘೋಪಮವಾಗಿ ಆಕಾರದಲ್ಲೂ ವರ್ಣದಲ್ಲೂ ಮನೋಹರವಾಗಿ ಐದು ತಲೆಗಳುಳ್ಳ ಘಟಸರ್ಪಗಳಂತೆ ತೋರುತ್ತಿದ್ದವು. ಅವರ ಮುಖಗಳು ಮೃದುವಾದ ಮೀಸೆಗಳಿಂದಲೂ ಸುಂದರವಾದ ಮೂಗಿನಿಂದಲೂ ವಿಶಾಲವಾದ ಕಣ್ಣುಗಳಿಂದಲೂ ಶ್ಲಾಘ್ಯವಾದ ಹುಬ್ಬುಗಳಿಂದಲೂ ಕೂಡಿ, ಅಂತರಿಕ್ಷದಲ್ಲಿರುವ ನಕ್ಷತ್ರಗಳಂತೆ ಪ್ರಕಾಶಿಸುತ್ತಿದ್ದವು. ಆ ಸಮಯದಲ್ಲಿ ದಮಯಂತಿಯು ನಗೆಮೊಗವುಳ್ಳವಳಾಗಿ, ತನ್ನ ಕಾಂತಿಯಿಂದ ಆ ಅರಸುಗಳ ಕಣ್ಣುಗಳನ್ನೂ ಮನಸ್ಸುಗಳನ್ನೂ ಸೆಳೆಯುತ್ತಾ ಆ ಸ್ವಯಂವರಮಂಟಪಕ್ಕೆ ಪ್ರವೇಶ ಮಾಡಲು, ಆಕೆಯ ಸುಂದರವಾದ ಅಂಗಗಳನ್ನು ನೋಡಿ ಅರಸುಗಳ ದೃಷ್ಟಿಯು ಅಲ್ಲೇ ತಗಲಿಕೊಂಡು ಮತ್ತೊಂದುಕಡೆ ಚಲಿಸದೆಹೋದವು. ಬಳಿಕ ಸ್ತುತಿಪಾಠಕರು ಅಲ್ಲಿದ್ದ ಅರಸುಗಳ ಹೆಸರುಗಳನ್ನು ಕ್ರಮವಾಗಿ ಹೊಗಳುತ್ತಿರಲು, ದಮಯಂತಿಯು ಅವರೆಲ್ಲರನ್ನೂ ನೋಡಿ, ಆ ಬಳಿಕ ನಳಮಹಾರಾಜನಂತೆಯೇ ಒಂದೇ ಪ್ರಕಾರವಾದ ರೂಪನ್ನು ಧರಿಸಿ ಕುಳಿತಿದ್ದ ಐದುಮಂದಿ ಪುರುಷರನ್ನು ನೋಡಿ, ಅವರಲ್ಲಿ ಸಂದೇಹ ಬುದ್ಧಿಯಿಂದ ಇಂತವನೇ ನಳಮಹಾರಾಜನೆಂದು ಗೊತ್ತು ಹಿಡಿಯಲಾರದೆ, ಆ ಐದುಮಂದಿಯಲ್ಲಿ ಯಾರನ್ನು ನೋಡಿದರೂ ನಳಮಹಾರಾಜನೆಂದೇ ಭ್ರಾಂತಿಪಡುತ್ತ, ಹಾಗೆಯೇ ಬುದ್ಧಿಯಿಂದ ಯೋಚಿಸಿ, ಈ ಐದುಮಂದಿಯಲ್ಲಿ ದೇವತೆಗಳು ಯಾರೋ ನಳನು ಯಾರೋ ತಿಳಿಯತಕ್ಕದ್ದು ಹ್ಯಾಗೆಂದು

ವಿಚಾರಪರಳಾಗಿ ದುಃಖಪಡುತ್ತ 'ನಾನು ವೃದ್ಧರ ಮುಖದಿಂದ ದೇವತೆಗಳು ಈಪ್ರಕಾರ ಇರುವರೆಂದು ಅವರ ಗುರುತುಗಳನ್ನು ಕೇಳಿದ್ದೆನು. ಈ ಸ್ಥಳದಲ್ಲಿರುವ ಇವರಲ್ಲಿ ಆಗುರುತುಗಳು ಯಾವವೂ ತೋರುವದಿಲ್ಲ' ಎಂದು ನಾನಾಪ್ರಕಾರವಾಗಿ ಮತ್ತುಮತ್ತು ವಿಚಾರಮಾಡಿ 'ನಾನು ದೇವತೆಗಳಿಗೆ ಶರಣಾಗತಳಾಗುವದಕ್ಕೆ ಇದು ತಕ್ಕ ಸಮಯವು' ಎಂದು ನಿಶ್ಚಯಿಸಿಕೊಂಡು, ವಾಕ್ಕಿನಿಂದಲೂ ಮನಸ್ಸಿನಿಂದಲೂ ದೇವತೆಗಳಿಗೆ ನಮಸ್ಕಾರವನ್ನು ಮಾಡಿ ಕೈಮುಗಿದುಕೊಂಡು ನಿಂತು, ಭಕ್ತಿಭರದಿಂದ ನಡುಗುತ್ತ 'ಹಂಸಪಕ್ಷಿಗಳ ಮಾತುಗಳನ್ನು ಕೇಳಿ ನಿಷಧದೇಶಾಧೀಶ್ವರನಾದ ನಳನನ್ನೇ ನಾನು ಪತಿಯನ್ನಾಗಿ ವರಿಸಿದ್ದು ಸತ್ಯವಾಗಿದ್ದರೆ, ದೇವತೆಗಳು ಆತನನ್ನು ನನಗೆ ಕೊಡಲಿ; ಮನಸ್ಸಿನಿಂದಲೂ ವಾಕ್ಕಿನಿಂದಲೂ ನಾನು ನಳಮಹಾರಾಜನನ್ನು ಅತಿಕ್ರಮಿಸದೆ ಇದ್ದದ್ದು ಸತ್ಯವಾಗಿದ್ದರೆ, ದೇವತೆಗಳು ಆತನನ್ನು ನನಗೆ ಕೊಡಲಿ; ಆ ನಳಮಹಾರಾಜನೇ ನನಗೆ ಪತಿಯಾಗಬೇಕೆಂದು ದೇವತಾಸಂಕಲ್ಪವು ಸತ್ಯವಾಗಿದ್ದರೆ, ದೇವತೆಗಳು ಆತನನ್ನೇ ನನಗೆ ಕೊಡಲಿ; ನಳಮಹಾರಾಜನೇ ಪತಿಯಾಗಬೇಕೆಂದು ನಾನು ವ್ರತವನ್ನು ಆಚರಿಸಿದ್ದು ಸತ್ಯವಾಗಿದ್ದರೆ, ದೇವತೆಗಳು ಅವನನ್ನೇ ನನಗೆ ಕೊಡಲಿ; ಈ ಐದುಮಂದಿಯಲ್ಲಿ ಪುಣ್ಯಚರಿತ್ರನಾದ ನಳಮಹಾರಾಜನನ್ನು ನಾನು ಹ್ಯಾಗೆ ತಿಳಿಯಬೇಕೋ ಹಾಗೆ ನನ್ನಲ್ಲಿ ಅನುಗ್ರಹವಿಟ್ಟು ಈ ಲೋಕಪಾಲಕರು ತಮ್ಮತಮ್ಮ ನಿಜರೂಪವನ್ನು ತೋರಿಸಲಿ' ಎಂದು ದೀನವಾಗಿ ಪ್ರಾರ್ಥಿಸಿದಳು. ಅದನ್ನು ಕೇಳಿ, ದೇವತೆಗಳು ದಮಯಂತಿಗೆ ನಳಮಹಾರಾಜನಲ್ಲಿರತಕ್ಕ ನಿಜವಾದ ಅನುರಾಗವನ್ನೂ ಉತ್ತಮವಾದ ಮನಶ್ಶುದ್ಧಿಯನ್ನೂ ಯಥಾರ್ಥವಾದ ಬುದ್ಧಿಯನ್ನೂ ಅಧಿಕವಾದ ಭಕ್ತಿಯನ್ನೂ ತಿಳಿದು, ಆಕೆಯ ಪ್ರಾರ್ಥನೆಗೆ ಅನುಸಾರವಾಗಿ ತಮಗಿರತಕ್ಕ ದೇವತಾಚಿಹ್ನೆಗಳನ್ನು ಪ್ರಕಾಶಪಡಿಸಿದರು. ಆಗ ದಮಯಂತಿಯು ಬೆವರಿಲ್ಲದವರಾಗಿಯೂ ಎವೆಯಿಕ್ಕದ ಕಣ್ಣುಗಳುಳ್ಳವರಾಗಿಯೂ ಅಮ್ಲಾನ ಪುಷ್ಪಮಾಲಿಕೆಗಳನ್ನು ಧರಿಸಿದವರಾಗಿಯೂ ನಿರ್ಮಲರಾಗಿಯೂ ಭೂಸ್ಪರ್ಶವಿಲ್ಲದವರಾಗಿಯೂ ಇರುವ ಆ ದೇವತೆಗಳನ್ನೂ ಛಾಯಾದ್ವಿತೀಯನಾಗಿಯೂ ಮ್ಲಾನಪುಷ್ಪಮಾಲಿಕೆಗಳನ್ನು ಧರಿಸಿದವನಾಗಿಯೂ ಬೆವರು ಮೊದಲಾದ ಕಲ್ಮಷಗಳುಳ್ಳವನಾಗಿಯೂ ಎವೆಯಿಕ್ಕುವ ಕಣ್ಣುಗಳುಳ್ಳವನಾಗಿಯೂ, ಭೂಮಿಯಮೇಲೆ ಇರುವನಾಗಿಯೂ ಇರುವ ನಳಮಹಾರಾಜನನ್ನು ನೋಡಿ, ಅವರಲ್ಲಿ ಈತನೇ ನಳಮಹಾರಾಜನೆಂದು ತಿಳಿದು, ಲಜ್ಜಾಯುಕ್ತಳಾಗಿ ಸೂಕ್ಷ್ಮವಾದ ಕರವಸ್ತ್ರದಿಂದ ಹಿಡಿದಿದ್ದ ಉತ್ತಮವಾದ ಪುಷ್ಪಮಾಲಿಕೆಯನ್ನು ಆ ನಳಮಹಾರಾಜನ ಕೊರಳಿಗೆ ಹಾಕಿ ಆತನನ್ನು ಪತಿಯನ್ನಾಗಿ ವರಿಸಿದಳು.

ಬಳಿಕ ಅಲ್ಲಿದ್ದ ಸಕಲರಾದ ರಾಜರೂ ಹಾಹಾಕಾರ ಮಾಡುತ್ತಿರಲು, ಸಕಲರಾದ ದೇವತೆಗಳೂ ಮಹರ್ಷಿಗಳೂ ಸಹ ಆಶ್ಚರ್ಯಯುಕ್ತರಾಗಿ ನಳಮಹಾರಾಜನನ್ನು ಭಾಪು ಭಾಪು ಎಂದು ಶ್ಲಾಘನೆಮಾಡಿದರು. ಅನಂತರದಲ್ಲಿ ವೀರಸೇನನ ಪುತ್ರನಾದ ನಳನು ಸಂತುಷ್ಟಹೃದಯನಾಗಿ, ಅಂಗನಾಮಣಿಯಾದ ದಮಯಂತಿಯನ್ನು ಸಂತವಿಟ್ಟು ಆಕೆಯನ್ನು ಕುರಿತು 'ಎಲೆ ಮಂಗಳಾಂಗಿಯೆ, ನಿನ್ನನ್ನೇ ಬಯಸಿ ದೇವತೆಗಳು ಇಲ್ಲಿಗೆ ಬಂದರೂ, ಅವರಲ್ಲಿ ಅನುರಾಗಪಡದೆ ನೀನು ಅವರ ಸನ್ನಿಧಿಯಲ್ಲಿ ಮನುಷ್ಯಮಾತ್ರನಾದ ನನನ್ನು ಪತಿಯನ್ನಾಗಿ ವರಿಸಿದೆಯಾದ ಕಾರಣ, ಯಾವಜ್ಜೀವವೂ ನಾನು ನೀನು ಹೇಳಿದಂತೆ ನಡೆದುಕೊಳ್ಳುತ್ತೇನೆ. ಇದು ಸತ್ಯವಾದದ್ದು' ಎಂದು ನುಡಿಯಲು, ದಮಯಂತಿಯು ಕೈಮುಗಿದುಕೊಂಡು ನಿಂತು, ನಳನನ್ನು ಕುರಿತು ಆತನು ನುಡಿದಂತೆಯೇ ತಾನೂ ನುಡಿದು ಆತನನ್ನು ಪ್ರಶಂಸೆಮಾಡಿದಳು. ಹೀಗೆ ಪರಸ್ಪರವಾಗಿ ಪ್ರೀತಿಯುಕ್ತರಾದ ಅವರಿಬ್ಬರೂ ಅಗ್ನಿ ಮೊದಲಾದ ದೇವತೆಗಳನ್ನು ನೋಡಿ ಮನಃಪೂರ್ವಕವಾಗಿ ಅವರಿಗೆ ಶರಣಾಗತರಾದರು. ಆ ಬಳಿಕ ನಳನನ್ನು ದಮಯಂತಿಯು ವರಿಸಿದ್ದನ್ನು ನೋಡಿ ಸಂತೋಷಪಟ್ಟು, ಮಹಾ ತೇಜಸ್ವಿಗಳಾದ ಆ ಲೋಕಪಾಲಕರಲ್ಲಿ ಮಹೇಂದ್ರನು ನಳಮಹಾರಾಜನಿಗೆ ಯಜ್ಞದಲ್ಲಿ ದೇವತೆಗಳು ಪ್ರತ್ಯಕ್ಷವಾಗಿ ದರ್ಶನವನ್ನು ಕೊಡುವಂತೆಯೂ, ಉತ್ತಮವಾದ ಗತಿಯಾಗುವಂತೆಯೂ ಎರಡು ವರಗಳನ್ನು ಪ್ರೀತಿಪೂರ್ವಕವಾಗಿ ಕೊಟ್ಟನು. ಬಳಿಕ ಯಜ್ಞೇಶ್ವರನು ಆತನು ಅಪೇಕ್ಷಿಸಿದ ಸ್ಥಳದಲ್ಲಿ ತನ್ನ ಆವಿರ್ಭಾವವಾಗುವಂತೆಯೂ, ಆತನಿಗೆ ತನ್ನ ಲೋಕಪ್ರಾಪ್ತಿಯಾಗುವಂತೆಯೂ ಎರಡು ವರಗಳನ್ನು ಕೊಟ್ಟನು. ಯಮನು ಆತನು ಬಯಸಿದಂತೆ ಅನ್ನದಲ್ಲಿ ರುಚಿಗಳುಂಟಾಗುವಂತೆಯೂ, ಆತನಿಗೆ

ವಿಶೇಷವಾಗಿ ಧರ್ಮಜ್ಞಾನವುಂಟಾಗುವಂತೆಯೂ, ಎರಡು ವರಗಳನ್ನು ಕೊಟ್ಟನು. ವರುಣನು ಆತನು ಅಪೇಕ್ಷಿಸಿದ ಸ್ಥಳದಲ್ಲಿ ನೀರು ಬರುವಹಾಗೂ, ಆತನು ಧರಿಸಿದ ಪುಷ್ಪಮಾಲಿಕೆಗಳು ಬಾಡದೆ ಪರಿಮಳಯುಕ್ತವಾಗಿರುವ ಹಾಗೂ, ಎರಡು ವರಗಳನ್ನು ಕೊಟ್ಟನು. ಈಪ್ರಕಾರ ಆ ನಾಲ್ಕುಮಂದಿ ಲೋಕಪಾಲಕರೂ ನಳಮಹಾರಾಜನಿಗೆ ಎಂಟು ವರಗಳನ್ನು ಕೊಟ್ಟು ತಮ್ಮತಮ್ಮ ಲೋಕಗಳಿಗೆ ಹೊರಟು ಹೋದರು. ಬಳಿಕ ಅಲ್ಲಿಗೆ ಬಂದಿದ್ದ ಸಕಲರಾದ ಅರಸುಗಳೂ ಆ ಸ್ವಯಂವರಮಹೋತ್ಸವವನ್ನು ನೋಡಿ ಆಶ್ಚರ್ಯಪಟ್ಟು, ಸಂತೋಷಯುಕ್ತರಾಗಿ ತಮ್ಮತಮ್ಮ ದೇಶಗಳಿಗೆ ಹೊರಟು ಹೋದರು. ತರುವಾಯ ಮಹಾತ್ಮನಾದ ಭೀಮಭೂಪಾಲಕನು ಸಂತೋಷದಿಂದ ದಮಯಂತಿಗೂ ನಳಮಹಾರಾಜನಿಗೂ ವಿವಾಹಮಹೋತ್ಸವವನ್ನು ಬೆಳಸಲು, ಪುರುಷಶ್ರೇಷ್ಠನಾಗಿಯೂ ಪುಣ್ಯಶ್ಲೋಕನಾಗಿಯೂ ಇರುವ ನಳನು ಕೆಲವು ದಿವಸ ಸುಖವಾಗಿ ಅಲ್ಲಿದ್ದು, ಭೀಮಭೂಪಾಲಕನ ಅಜ್ಞೆಯನ್ನು ತೆಗೆದುಕೊಂಡು ತನ್ನ ಪಟ್ಟಣಕ್ಕೆ ಬಂದು, ಶಚೀದೇವಿಯೊಡನೆ ಮಹೇಂದ್ರನು ವಿಹಾರಮಾಡುವಂತೆ ನಾರೀಶಿರೋಮಣಿಯಾದ ದಮಯಂತಿಯೊಡನೆ ವಿಹಾರಮಾಡುತ್ತ, ಬಹಳ ಸಂತುಷ್ಟನಾಗಿ ಸೂರ್ಯನಂತೆ ಪ್ರಕಾಶಿಸುತ್ತ, ಪ್ರಜಾನುರಾಗವನ್ನು ಸಂಪಾದಿಸಿಕೊಂಡು ಧರ್ಮಮಾರ್ಗದಿಂದ ರಾಜ್ಯಪರಿಪಾಲನವನ್ನು ಮಾಡುತ್ತ ನಹುಷಪುತ್ರನಾದ ಯಯಾತಿಮಹಾರಾಜನಂತೆ ಅನೇಕ ದಕ್ಷಿಣೆಗಳುಳ್ಳ ಅಶ್ವಮೇಧ ಮೊದಲಾದ ಅನೇಕ ಯಜ್ಞಗಳನ್ನು ಮಾಡಿ, ರಮಣೀಯವಾದ ತೋಟಗಳಲ್ಲಿಯೂ ಕ್ರೀಡಾವನಗಳಲ್ಲಿಯೂ ದಮಯಂತಿಯೊಡಗೂಡಿ ವಿಹರಿಸುತ್ತಿದ್ದನು. ಮಹಾತ್ಮನೂ ಇಂದ್ರಸಮಾನನೂ ಆದ ಆ ನಳರಾಜನಿಗೆ ದಮಯಂತಿಯಲ್ಲಿ ಇಂದ್ರಸೇನನೆಂಬ ಮಗನೂ ಇಂದ್ರಸೇನೆಯೆಂಬ ಮಗಳೂ ಜನಿಸಿದರು. ಈ ಪ್ರಕಾರ ನಳಮಹಾರಾಜನು ಸುಖದಿಂದ ರಾಜ್ಯಭಾರವನ್ನು ಮಾಡುತ್ತಿದ್ದನು" ಎಂದು ಬೃಹದಶ್ವನು ಧರ್ಮರಾಯನಿಗೆ ಹೇಳಿದನು.

## ೫೮ನೇ ಅಧ್ಯಾಯ.—ನಳೋಪಾಖ್ಯಾನ—(ಇಂದ್ರ ಕಲಿಪುರುಷರ ಸಂವಾದ.)

ಅನಂತರದಲ್ಲಿ ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಬಳಿಕ ಬೃಹದಶ್ವನು ಧರ್ಮರಾಯನನ್ನು ಕುರಿತು "ಎಲೈ ಧರ್ಮರಾಯನೆ, ಬಳಿಕ ಮಹಾ ತೇಜಸ್ವಿಗಳಾದ ಲೋಕಪಾಲಕರು ದಮಯಂತಿಯು ನಳನನ್ನು ವರಿಸಿದ್ದನ್ನು ನೋಡಿಕೊಂಡು ದೇವಲೋಕಕ್ಕೆ ಹೋಗುತ್ತಾ, ಮಾರ್ಗದಲ್ಲಿ ದ್ವಾಪರನೊಡಗೂಡಿ ಬರುತ್ತಿದ್ದ ಕಲಿಯನ್ನು ನೋಡಿದರು. ಆಗ ಬಲಿವೃತ್ರರಿಗೆ ಶತ್ರುವಾದ ಇಂದ್ರನು ಆ ಕಲಿಯನ್ನು ಕುರಿತು 'ಎಲೈ ಕಲಿಯೆ, ನೀನು ದ್ವಾಪರನನ್ನು ಸಹಾಯಮಾಡಿಕೊಂಡು ಎಲ್ಲಿಗೆ ಹೋಗುವೆ?' ಎಂದು ಕೇಳಲು, ಕಲಿಯು 'ಎಲೈ ಇಂದ್ರನೆ, ದಮಯಂತಿಯಲ್ಲಿ ನನ್ನ ಮನಸ್ಸು ಆಸಕ್ತವಾಗಿರುವದರಿಂದ, ಆಕೆಯ ಸ್ವಯಂವರಕ್ಕೆ ನಾನು ಹೋಗುತ್ತಿರುವೆನು' ಎಂದು ನುಡಿದನು. ಅದನ್ನು ಕೇಳಿ ಇಂದ್ರನು ನಸುನಗುತ, 'ಎಲೈ ಕಲಿಯೆ, ದಮಯಂತೀಸ್ವಯಂವರವು ನೆರವೇರಿತು. ನಮ್ಮೆದುರಿಗೇ ದಮಯಂತಿಯು ನಳಮಹಾರಾಜನನ್ನು ವರಿಸಿದಳು' ಎನಲು, ಕಲಿಯು ಕೋಪಯುಕ್ತನಾಗಿ ಆ ದೇವತೆಗಳನ್ನು ಕುರಿತು 'ಎಲೈ ಲೋಕಪಾಲರೆ, ದಮಯಂತಿಯು ದೇವತೆಗಳ ಮಧ್ಯದಲ್ಲಿ ಮನುಷ್ಯಮಾತ್ರನಾದವನನ್ನು ವರಿಸಿದ್ದು ಅಯುಕ್ತವಾದ ಕಾರಣ, ಆಕೆಗೆ ಶಿಕ್ಷೆಮಾಡತಕ್ಕದ್ದು ನ್ಯಾಯವಾಗಿದೆ' ಎಂದು ನುಡಿದನು. ಅದನ್ನು ಕೇಳಿ ಲೋಕಪಾಲಕರು ಕಲಿಯನ್ನು ಕುರಿತು 'ಎಲೈ ಕಲಿಯೆ, ನಮ್ಮ ಅಜ್ಞೆಯನ್ನು ತೆಗೆದುಕೊಂಡೇ ದಮಯಂತಿಯು ನಳನನ್ನು ವರಿಸಿರುವಳು. ಸಕಲಧರ್ಮಗಳನ್ನೂ ತಿಳಿದು, ಶಾಸ್ತ್ರೋಕ್ತವಾಗಿ ವ್ರತಾಚರಣೆಯನ್ನು ಮಾಡಿ, ಇತಿಹಾಸಗಳೊಡಗೂಡಿ ನಾಲ್ಕು ವೇದಗಳನ್ನೂ ಅಧ್ಯಯನಮಾಡಿ, ಸಕಲಗುಣಪೂರ್ಣನಾಗಿರುವ ನಳಮಹಾರಾಜನನ್ನು ಯಾವ ಸ್ತ್ರೀಯುತಾನೆ ವರಿಸದೆ ಇದ್ದಾಳು? ಯಾವವನ ಮನೆಯಲ್ಲಿ ಅತಿಥಿಗಳೂ ಯಜ್ಞಗಳಲ್ಲಿ ದೇವತೆಗಳೂ ನಿತ್ಯವೂ ಯಥೋಕ್ತವಾಗಿ ತೃಪ್ತಿಯನ್ನು ಹೊಂದುವರೋ, ಯಾವವನು ಅಹಿಂಸಾಪರನಾಗಿಯೂ ಸತ್ಯ

ವಾದಿಯಾಗಿಯೂ ದೃಢವ್ರತನಾಗಿಯೂ ಇರುವನೋ, ಯಾವವನಲ್ಲಿ ಧೈರ್ಯವೂ ಜ್ಞಾನವೂ ತಪಸ್ಸೂ ಬಾಹ್ಯಾಭ್ಯಂತರಪರಿಶುದ್ಧ್ಯವೂ ಬಹಿರಿಂದ್ರಿಯನಿಗ್ರಹವೂ ಮನೋನಿಗ್ರಹವೂ ದೃಢವಾಗಿರುವವೋ, ಅಂಥ ಲೋಕಪಾಲರಿಗೆ ಸಮಾನನಾದ ಪುರುಷಶ್ರೇಷ್ಠನಾದ ನಳಮಹಾರಾಜನನ್ನು ಯಾವ ಸ್ತ್ರೀಯುತಾನೆ ವರಿಸದೆ ಬಿಟ್ಟಾಳು ? ಎಲೈ ಕಲಿಯೆ, ಇಂಥ ಗುಣಸಂಪನ್ನನಾದ ನಳರಾಜನಮೇಲೆ ಆಕ್ರೋಶಮಾಡುವದಕ್ಕೆ ಯಾವವನು ಅಪೇಕ್ಷಿಸುವನೋ, ಆ ಮೂಢನು ತನ್ನಮೇಲೆ ತಾನೇ ಆಕ್ರೋಶಮಾಡಿಕೊಂಡು ತನಗೆತಾನೇ ನಾಶವಾಗಿ ಹೋಗುವನು. ಇಂಥ ಗುಣಸಂಪನ್ನನಾದ ಆ ನಳನಮೇಲೆ ಯಾವವನು ಆಕ್ರೋಶಮಾಡುವನೋ, ಆತನು ಅಗಾಧವಾಗಿಯೂ ವಿಸ್ತಾರವಾಗಿಯೂ ಇರುವ ಮಡುವುಳ್ಳ ನರಕದಲ್ಲಿ ಬೀಳುವನು' ಎಂದು ನುಡಿದು ಅವರೆಲ್ಲರೂ ಸ್ವರ್ಗಕ್ಕೆ ಹೊರಟು ಹೋದರು. ಬಳಿಕ ಕಲಿಯು ತನಗೆ ಸಹಾಯನಾಗಿರುವ ದ್ವಾಪರನನ್ನು ಕುರಿತು 'ಎಲೈ ದ್ವಾಪರನೆ, ನನಗೆ ನಳನಮೇಲೆ ಇರತಕ್ಕ ಆಗ್ರಹವನ್ನು ನಾನು ಸೈರಿಸಲಾರೆನು. ಆದ್ದರಿಂದ ನಾನು ಆತನಲ್ಲೇ ವಾಸವಾಗಿದ್ದುಕೊಂಡು, ಆತನನ್ನು ರಾಜ್ಯಭ್ರಷ್ಟನನ್ನಾಗಿ ಮಾಡಿ, ಆತನಿಗೂ ದಮಯಂತಿಗೂ ವಿಯೋಗವನ್ನುಂಟುಮಾಡುವೆನು. ನೀನು ಪಗಡೆಯಾಡುವ ದಾಳವನ್ನು ಪ್ರವೇಶಿಸಿ ನನಗೆ ಸಹಾಯಮಾಡು' ಎಂದು ಕಲಿಯು ದ್ವಾಪರನಿಗೆ ಹೇಳಿದನು ಎಂದು" ಬೃಹದಶ್ವನು ಧರ್ಮರಾಯನಿಗೆ ಹೇಳಿದನು.

### ೫೯ನೇ ಅಧ್ಯಾಯ.—ನಳೋಪಾಖ್ಯಾನ—(ಪುಷ್ಕರನೊಡನೆ ನಳನು ಜೂಜಾಡಿದ್ದು.)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಬೃಹದಶ್ವನು ಧರ್ಮರಾಯನನ್ನು ಕುರಿತು "ಎಲೈ ಧರ್ಮರಾಯನೆ, ಕಲಿಯು ಈ ಪ್ರಕಾರ ದ್ವಾಪರನ ಸಂಗಡ ಸಂಕೇತವನ್ನು ಮಾಡಿಕೊಂಡು, ನಳಮಹಾರಾಜನ ರಾಜಧಾನಿಗೆ ಬಂದು, ಆತನಲ್ಲಿ ಪ್ರವೇಶಮಾಡುವದಕ್ಕೆ ಸಮಯವನ್ನು ಕಾಯುತ್ತ ಅಲ್ಲೇ ಹನ್ನೆರಡು ವರುಷ ಇದ್ದನು. ಬಳಿಕ ಒಂದು ದಿವಸ ನಳಮಹಾರಾಜನು ಮೂತ್ರವಿಸರ್ಜನೆಯನ್ನು ಮಾಡಿ, ಪಾದಪ್ರಕ್ಷಾಳನವನ್ನು ಮಾಡಿಕೊಳ್ಳದೆ ಶುದ್ಧಾಚಮನವನ್ನು ಮಾಡಿ ಸಂಧ್ಯಾವಂದನೆಯನ್ನು ಮಾಡುತ್ತಿರಲು, ಅದನ್ನು ನೋಡಿ ಕಲಿಯು ನಳನನ್ನು ಪ್ರವೇಶಿಸಿ, ಮತ್ತೊಂದು ರೂಪದಿಂದ ಆತನ ಸಹೋದರನಾದ ಪುಷ್ಕರನ ಸಮೀಪಕ್ಕೆ ಹೋಗಿ, ಆತನನ್ನು ಕುರಿತು 'ಎಲೈ ಪುಷ್ಕರನೆ, ನೀನು ನಳನ ಸಂಗಡ ಪಗಡೆಯನ್ನಾಡು. ನಾನು ನಿನಗೆ ಸಹಾಯಮಾಡುವೆನು. ಅದರಿಂದ ನಿನಗೆ ಜಯವುಂಟಾಗುವದು. ನಿಷಧದೇಶಕ್ಕೆ ಹೊರಡು. ಅಲ್ಲಿ ನೀನು ಪಗಡೆಯಾಟದಲ್ಲಿ ನಳರಾಜನನ್ನು ಸೋಲಿಸಿ, ಆತನ ರಾಜ್ಯವನ್ನು ತೆಗೆದುಕೊ' ಎನಲು, ಪುಷ್ಕರನು ನಳನ ಬಳಿಗೆ ಹೊರಟನು. ಕಲಿಯು ವೃಷಭರೂಪವನ್ನು ಧರಿಸಿ ಆತನ ಸಂಗಡ ಹೊರಟನು. ಶೂರನಾದ ಆ ಪುಷ್ಕರನು ವೀರನಾದ ನಳನ ಬಳಿಗೆ ಬಂದು, ಆತನನ್ನು ಕುರಿತು 'ಎಲೈ ಮಹಾರಾಜನೆ, ನಾವಿಬ್ಬರೂ ಪಗಡೆಯನ್ನಾಡೋಣ. ಇದೋ, ನಾನು ಈ ವೃಷಭವನ್ನು ಜೂಜಿಗಿಡುವೆನು' ಎಂದು ಪುನಃ ಪುನಃ ಹೇಳಲು, ಅದನ್ನು ಕೇಳಿ ಮಹಾತ್ಮನಾದ ನಳನು ದಮಯಂತಿಯು ನೋಡುತ್ತಿರಲು ಪುಷ್ಕರನು ತನ್ನನ್ನು ಪಗಡೆಯಾಟಕ್ಕೆ ಕರೆಯುವದನ್ನು ಸಹಿಸದೆ, ದೈವಪ್ರೇರಣೆಯಿಂದ ಅದಕ್ಕೆ ಒಡಂಬಟ್ಟು, ಕಲಿಯ ಆವೇಶದಿಂದ ಚಿನ್ನ ಬೆಳ್ಳಿ ವಾಹನ ವಸ್ತ್ರ ಮೊದಲಾದವುಗಳನ್ನೆಲ್ಲಾ ಪಂಥವಾಗಿ ಒಡ್ಡಿ, ಆ ಪುಷ್ಕರನೊಡನೆ ಜೂಜಾಡಿ ಎಲ್ಲವನ್ನೂ ಸೋತನು. ಹೀಗೆ ಕಲಿಯ ಆವೇಶದಿಂದ ಅಕ್ಷಕ್ರೀಡೆಯಲ್ಲಿ ಆಸಕ್ತನಾದ ಆ ನಳಮಹಾರಾಜನನ್ನು ತಡೆಯುವದಕ್ಕೆ ಮಂತ್ರಿ ಮೊದಲಾದ ಯಾವ ಹಿತಚಿಂತಕರೂ ಶಕ್ತರಾಗದೆ ಹೋದರು. ಬಳಿಕ ಪಟ್ಟಣದ ಜನಗಳೆಲ್ಲರೂ ಮಂತ್ರಿಗಳೊಡನೆ ಕೂಡಿ ನಳನು ಜೂಜಾಡುವದನ್ನು ತಪ್ಪಿಸಬೇಕೆಂದು ಆತನನ್ನು ಕಾಣುವದಕ್ಕೆ ಬರಲು, ಆಗ ದ್ವಾರಪಾಲಕನು ದಮಯಂತಿಯ ಸನ್ನಿಧಾನಕ್ಕೆ ಬಂದು 'ಪಟ್ಟಣದ ಜನಗಳು ಕಾರ್ಯಾರ್ಥವಾಗಿ ಮಹಾರಾಜನನ್ನು ಕಾಣಬೇಕೆಂದು ಬಂದು ಅರಮನೆ ಬಾಗಿಲಿನಲ್ಲಿ ನಿಂತಿರುವರು. ಇದನ್ನು ಮಹಾರಾಜನಿಗೆ ತಿಳಿಸಬೇಕು' ಎಂದು ಅರಿಕೆಮಾಡಲು, ದಮಯಂತಿಯು ಸಕಲ ಧರ್ಮಗಳನ್ನೂ ತಿಳಿದಿರುವ ಮಹಾರಾಜನು ಜೂಜಿನಲ್ಲಿ ಆಸಕ್ತನಾಗಿರು

ವವನ್ನು ಸೈರಿಸಲಾರದೆ, ಶೋಕಾಕ್ರಾಂತಳಾಗಿ ಕಂಬನಿಗಳನ್ನು ತುಂಬಿ ದುಃಖಪಡುತ್ತ, ಆತನ ಸಮೀಪಕ್ಕೆ ಹೋಗಿ, ಗದ್ಗದಸ್ವರದಿಂದ 'ಮಹಾರಾಜನೆ, ನಿನ್ನನ್ನು ಕಾಣುವದಕ್ಕೋಸ್ಕರ ಮಂತ್ರಿಗಳೊಡನೆ ಪುರಜನರು ರಾಜಭಕ್ತಿಯಿಂದ ಬಾಗಿಲಲ್ಲಿ ಕಾದುಕೊಂಡಿರುವರು. ಅವರಿಗೆ ದರ್ಶನವನ್ನು ಕೊಡು' ಎಂದು ಬಾರಿಬಾರಿಗೂ ಹೇಳಿದಳು. ಹಾಗೆ ವ್ಯಸನಪಡುತ್ತಿರುವಳನ್ನು ನೋಡಿಯೂ, ನಳನು ಕಲಿಯ ಆವೇಶದಿಂದ ಆಕೆಯ ಸಂಗಡ ಏನೂ ಮಾತನಾಡದೆ ಹೋದನು. 'ಅದನ್ನು ತಿಳಿದ ಮಂತ್ರಿಗಳೂ ಪುರಜನರೂ ಸಹ ಓಹೋ! ಇನ್ನು ನಮ್ಮ ಮಹಾರಾಜನು ಕೆಟ್ಟುಹೋದನು' ಎಂದು ದುಃಖಪಡುತ್ತ, ತಮ್ಮತಮ್ಮ ಮನೆಗೆ ಹೊರಟು ಹೋದರು. ಎಲೈ ಯುಧಿಷ್ಠಿರನೆ, ಪುಣ್ಯಶ್ಲೋಕನಾದ ನಳಮಹಾರಾಜನು ಹೀಗೆ ಬಹುಕಾಲ ಪುಷ್ಕರನೊಡನೆ ಜೂಜಾಡಿ ತನ್ನ ಸರ್ವಸ್ವವನ್ನೂ ಸೋಲುತ್ತ ಬಂದನು" ಎಂದು ಬೃಹದಶ್ವನು ಧರ್ಮರಾಯನಿಗೆ ಹೇಳಿದನು.

---

೬೦ನೇ ಅಧ್ಯಾಯ.—ನಳೋಪಾಖ್ಯಾನ—(ದಮಯಂತಿಯು ಮಕ್ಕಳನ್ನು ತಂದೆಯ ಪಟ್ಟಣಕ್ಕೆ ಕಳುಹಿಸಿದ್ದು.)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಬೃಹದಶ್ವನು ಧರ್ಮರಾಯನನ್ನು ಕುರಿತು "ಎಲೈ ಧರ್ಮರಾಯನೆ, ಆಗ ಜಾಗರೂಕಳಾದ ದಮಯಂತಿಯು ಪಗಡೆಯಾಟದಲ್ಲೇ ಆಸಕ್ತನಾದ ಪುಣ್ಯಶ್ಲೋಕನಾದ ನಳನು ಉನ್ಮತ್ತನಂತಿರುವದನ್ನು ನೋಡಿ ಭಯಪಟ್ಟು ದುಃಖಿಸುತ್ತ, ಆತನು ಪಾಪಕರವಾದ ಪಗಡೆಯಾಟದಲ್ಲಿ ಲಂಪಟನಾಗಿರುವದನ್ನು ಚಿಂತಿಸುತ್ತ, ಆತನಿಗೆ ಒಳ್ಳೇದನ್ನು ಮಾಡಬೇಕೆಂದು ಯೋಚಿಸಿ, ಜೂಜಿನಲ್ಲಿ ಸರ್ವಸ್ವವನ್ನೂ ಕಳೆದುಕೊಂಡಿರುವ ಆತನ ಸಮೀಪಕ್ಕೆ ಬಂದು, ಯಶೋವತಿಯಾಗಿಯೂ ಹಿತಚಿಂತಕಳಾಗಿಯೂ ಸಕಲ ಕಾರ್ಯಗಳಲ್ಲೂ ಕುಶಲೆಯಾಗಿಯೂ ತನ್ನಲ್ಲಿ ವಿಶ್ವಾಸವುಳ್ಳವಳಾಗಿಯೂ ಒಳ್ಳೇ ಮಾತುಗಳನ್ನಾಡತಕ್ಕವಳಾಗಿಯೂ ಪರಿಚಾರಕಳಾಗಿಯೂ ತನ್ನನ್ನು ಪೋಷಿಸಿದವಳಾಗಿಯೂ ಇರುವ ಬೃಹತ್ಸೇನೆಯನ್ನು ನೋಡಿ 'ಎಲೈ ಬೃಹತ್ಸೇನೆಯೆ, ರಾಜಾಜ್ಞೆಯಿಂದ ಮಂತ್ರಿಗಳನ್ನು ಕರೆದುಕೊಂಡು ಬಾ. ಮಹಾರಾಜನು ಪಗಡೆಯಾಟದಲ್ಲಿ ಎಷ್ಟು ದ್ರವ್ಯವನ್ನು ಸೋತಿರುವನೋ ಅದನ್ನೂ ಇನ್ನು ಎಷ್ಟು ದ್ರವ್ಯ ಉಳಿದಿರುವದೋ ಅದನ್ನೂ ಸಹ ಅವರಿಗೆ ತಿಳುಹಿಸು ಹೋಗು' ಎಂದಳು. ಹಾಗೆಯೇ ಆಕೆಯು ಹೋಗಿ ತಿಳುಹಿಸಲು, ಸಕಲ ಮಂತ್ರಿಗಳೂ ನಳನ ಆಜ್ಞೆಯನ್ನು ತಿಳಿದು 'ನಮಗೆ ಭಾಗ್ಯವುಂಟಾದೀತೆ?' ಎಂದು ಮಾತನಾಡಿಕೊಳ್ಳುತ್ತ, ಮಹಾರಾಜನ ಬಳಿಗೆ ಬಂದರು. ಆಗ ಪುನಃ ಸಕಲ ಪ್ರಜೆಗಳೂ ದರ್ಶನಾರ್ಥವಾಗಿ ಅಲ್ಲಿಗೆ ಬಂದದ್ದನ್ನು ತಿಳಿದು, ದಮಯಂತಿಯು ಮಂತ್ರಿಗಳೂ ಪ್ರಜೆಗಳೂ ರಾಜಕಾರ್ಯಾರ್ಥವಾಗಿ ಬಂದಿರುವರೆಂದು ನಳನಿಗೆ ತಿಳುಹಿಸಿದಳು. ಆತನು ಅದನ್ನು ಕೇಳದೆಹೋಗಲು, ದಮಯಂತಿಯು ಗಂಡನು ತನ್ನ ಮಾತನ್ನು ಲಕ್ಷ್ಯಮಾಡದೆ ಹೋದದ್ದನ್ನು ನೋಡಿ, ಲಜ್ಜೆಯಿಂದ ರಾಣಿವಾಸಕ್ಕೆ ಹೊರಟುಹೋಗಿ, ನಳನಿಗೆ ಪ್ರತಿಕೂಲವಾಗಿ ದಾಳಗಳು ಬೀಳುವದನ್ನೂ ಆತನು ಸರ್ವಸ್ವವನ್ನೂ ಕಳೆದುಕೊಂಡದ್ದನ್ನೂ ಕೇಳಿ, ಪುನಃ ಬೃಹತ್ಸೇನೆಯನ್ನು ಕುರಿತು 'ಎಲೆ ಬೃಹತ್ಸೇನೆಯೆ, ಈಗ ಮಹತ್ತಾದ ಕಾರ್ಯವಾಗಬೇಕಾಗಿರುವದು. ನೀನು ಮಹಾರಾಜನ ಅಪ್ಪಣೆಯಾಗಿರುವದೆಂದು ಹೇಳಿ, ಸಾರಥಿಯಾದ ವಾರ್ಷ್ಣೇಯನನ್ನು ಕರೆತರಿಸು' ಎನಲು, ಬೃಹತ್ಸೇನೆಯು ಆಪ್ತರಾದ ಭೃತ್ಯರಿಂದ ವಾರ್ಷ್ಣೇಯನನ್ನು ಕರೆತರಿಸಿದಳು. ಬಳಿಕ ದೇಶಕಾಲಜ್ಞಳಾದ ದಮಯಂತಿಯು ವಾರ್ಷ್ಣೇಯನನ್ನು ಕುರಿತು 'ಎಲೈ ವಾರ್ಷ್ಣೇಯನೆ, ಮಹಾರಾಜನು ನಿನ್ನ ವಿಷಯದಲ್ಲಿ ಯಾವಾಗಲೂ ಹಿತವನ್ನೇ ಚಿಂತಿಸುತ್ತಿದ್ದದ್ದನ್ನು ನೀನು ಚೆನ್ನಾಗಿ ತಿಳಿದಿರುವೆಯಷ್ಟೆ? ಈಗ ವಿಷಮಸ್ಥಿತಿಯನ್ನು ಹೊಂದಿರುವ ಆತನಿಗೆ ನೀನು ಸಹಾಯವನ್ನು ಮಾಡಬೇಕು. ಎಲೈ ವಾರ್ಷ್ಣೇಯನೆ, ಪಗಡೆಯಾಟದಲ್ಲಿ ನಮ್ಮ ಮಹಾರಾಜನಿಗೆ ಪುಷ್ಕರನಿಂದ ಹ್ಯಾಗೆಹ್ಯಾಗೆ ಪರಾಜಯವುಂಟಾಗುವದೋ ಹಾಗೆಹಾಗೆಲ್ಲಾ ಆತನಿಗೆ ಜೂಜಿನಲ್ಲಿ ಆಸಕ್ತಿಯು ಹೆಚ್ಚುತ್ತಿರುವದು; ಆ ಆಟದಲ್ಲಿ ದಾಳಗಳು ಪುಷ್ಕರನಿಗೆ ಅನುಕೂಲವಾಗಿಯೂ ನಮ್ಮ ಮಹಾರಾಜನಿಗೆ ಪ್ರತಿಕೂಲವಾ

ಗಿಯೂ ಬೀಳುವವು; ಇಷ್ಟಾದರೂ ನಮ್ಮ ಮಹಾರಾಜನು ಮಿತ್ರರೂ ಸ್ವಜನಗಳೂ ಹೇಳಿದ ಮಾತುಗಳನ್ನು ಲಕ್ಷೀಕರಿಸದೆ ಇರುವನು. ಪಗಡೆಯಾಟದಲ್ಲೇ ಆಸಕ್ತನಾಗಿ ಆತನು ನನ್ನ ಮಾತನ್ನೂ ಸಹ ಕೇಳದಿರುವನು. ಇದನ್ನು ನೋಡಿದರೆ, ಮಹಾತ್ಮನಾದ ಆ ಮಹಾರಾಜನಲ್ಲಿ ಏನೂ ದೋಷವಿಲ್ಲವೆಂದು ಭಾವಿಸುತ್ತೇನೆ. ಇದೆಲ್ಲಕ್ಕೂ ದೈವವೇ ಕಾರಣವೆಂದು ತಿಳಿಯಬೇಕಾಗಿದೆ. ಎಲೈ ಸಾರಥಿಯೆ, ನಿನಗೆ ಶರಣಾಗತಳಾಗಿರುವೆನು. ನನ್ನ ಮಾತನ್ನು ಲಾಲಿಸು. ಈಗ ನನ್ನ ಮನಸ್ಸಿಗೆ ಏನೋ ಕಳವಳವುಂಟಾಗಿರುವದು. ನಮ್ಮ ಮಹಾರಾಜನು ಇದೇಪ್ರಕಾರ ಜೂಜಿನಲ್ಲೇ ಆಸಕ್ತನಾಗಿದ್ದರೆ, ಒಂದುವೇಳೆ ಆತನಿಗೆ ಕೇಡು ಸಂಭವಿಸಬಹುದು. ಆದ್ದರಿಂದ ಶೀಘ್ರಗಾಮಿಗಳಾದ ಕುದುರೆಗಳನ್ನು ಕಟ್ಟಿದ ಮಹಾರಾಜನ ರಥವನ್ನು ಸಿದ್ಧಪಡಿಸಿ ಅದರ ಮೇಲೆ ಈ ಎರಡು ಮಕ್ಕಳನ್ನೂ ಕುಳ್ಳಿರಿಸಿಕೊಂಡು, ಕುಂಡಿನನಗರಕ್ಕೆ ಹೋಗಿ, ಅಲ್ಲಿ ನಮ್ಮ ತಂದೆಯ ಅರಮನೆಯಲ್ಲಿ ಈ ಮಕ್ಕಳನ್ನೂ ಆ ರಥರಥಾಶ್ವಗಳನ್ನೂ ಸಹ ಬಿಟ್ಟು, ಬಳಿಕ ನೀನು ಅಲ್ಲಾದರೂ ಇನ್ನೆಲ್ಲಾದರೂ ನಿನ್ನ ಇಷ್ಟಾನುಸಾರವಾಗಿ ಇದ್ದುಕೊಂಡಿರು' ಎಂದು ನುಡಿದಳು. ಅದನ್ನು ಕೇಳಿ ಸಾರಥಿಯಾದ ವಾರ್ಷ್ಣೇಯನು ಮುಖ್ಯಮುಖ್ಯರಾದ ಮಂತ್ರಿಗಳ ಬಳಿಗೆ ಹೋಗಿ, ಅವರ ಸಂಗಡ ಈ ಮಾತನ್ನು ತಿಳುಹಿಸಿದನು. ಅವರೆಲ್ಲರೂ ಯೋಚಿಸಿ ಹಾಗೆಯೇ ಮಾಡತಕ್ಕದ್ದು ಯುಕ್ತವಾದದ್ದೆಂದು ನಿಶ್ಚಯಿಸಿ ವಾರ್ಷ್ಣೇಯನಿಗೆ ಆಜ್ಞಾಪಿಸಲು, ವಾರ್ಷ್ಣೇಯನು ಇಂದ್ರಸೇನೆಯೆಂಬ ಕನ್ಯೆಯನ್ನೂ ಇಂದ್ರಸೇನನೆಂಬ ಕುಮಾರನನ್ನೂ ರಥದ ಮೇಲೆ ಕುಳ್ಳಿರಿಸಿಕೊಂಡು, ವಿದರ್ಭದೇಶಕ್ಕೆ ಹೋಗಿ ಕುಂಡಿನನಗರವನ್ನು ಹೊಕ್ಕು, ಆ ಎರಡು ಮಕ್ಕಳನ್ನೂ ಭೀಮಮಹಾರಾಜನಿಗೆ ಒಪ್ಪಿಸಿ, ರಥವನ್ನೂ ಕುದುರೆಗಳನ್ನೂ ಅಲ್ಲಿಯೇ ಬಿಟ್ಟು, ದುಃಖದಿಂದ ಕಂಬನಿಗಳನ್ನು ಸುರಿಸುತ್ತ, ಜೀವನಾರ್ಥವಾಗಿ ಅಲ್ಲಲ್ಲಿ ಸಂಚರಿಸುತ್ತ, ಅಯೋಧ್ಯಾನಗರಕ್ಕೆ ಬಂದು, ಋತುಪರ್ಣಮಹಾರಾಜನನ್ನು ಕಂಡು ಆತನಿಂದ ಸಂಬಳವನ್ನು ಮಾಡಿಸಿಕೊಂಡು ಆತನಿಗೆ ಸಾರಥಿಯಾಗಿದ್ದನು" ಎಂದು ಬೃಹದಶ್ವನು ಧರ್ಮರಾಯನಿಗೆ ಹೇಳಿದನು.

## ೬೧ನೇ ಅಧ್ಯಾಯ.—ನಳೋಪಾಖ್ಯಾನ—(ನಳನು ಸರ್ವಸ್ವವನ್ನೂ ಸೋತು ಪಟ್ಟಣವನ್ನು ಬಿಟ್ಟು ಹೋದದ್ದು.)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಬೃಹದಶ್ವನು ಧರ್ಮರಾಯನನ್ನು ಕುರಿತು "ಎಲೈ ಧರ್ಮರಾಯನೆ, ವಾರ್ಷ್ಣೇಯನು ರಾಜಕುಮಾರರನ್ನು ಕರೆದುಕೊಂಡು ಹೋದಬಳಿಕ ಪುಷ್ಕರನು ಜೂಜಿನಲ್ಲಿ ಪುಣ್ಯಶ್ಲೋಕನಾದ ನಳಮಹಾರಾಜನ ರಾಜ್ಯವನ್ನೂ ಕೋಶವನ್ನೂ ಸಂಪೂರ್ಣವಾಗಿ ಅಪಹರಿಸಿ, ಆತನನ್ನು ಕುರಿತು ಪರಿಹಾಸಮಾಡುತ್ತ 'ಎಲೈ ನಳಮಹಾರಾಜನೆ, ಪಂತಕ್ಕೆ ಇನ್ನೇನಾದರೂ ದ್ರವ್ಯ ಉಳಿದಿದ್ದರೆ ಅದನ್ನೂ ಒಡ್ಡಿ ಪುನಃ ಜೂಜಾಡಬಹುದು. ನಿನ್ನ ಸರ್ವಸ್ವವನ್ನೂ ನಾನು ಗೆದ್ದುಕೊಂಡೆನು. ಇನ್ನು ದಮಯಂತಿಯೊಬ್ಬಳು ಮಾತ್ರ ಉಳಿದಿರುವಳು. ಆಕೆಯನ್ನು ಪಂತಕ್ಕೆ ಒಡ್ಡುವ ಪಕ್ಷದಲ್ಲಿ ಹಾಗೆ ಮಾಡಬಹುದು' ಎನಲು, ಅದನ್ನು ಕೇಳಿ ಎದೆವೊಡೆದು ನಳರಾಜನು ಅಧಿಕವಾದ ಕೋಪದಿಂದ ಆತನ ಸಂಗಡ ಏನೂ ಮಾತನಾಡದೆ ಸ್ವಲ್ಪಕಾಲ ಸುಮ್ಮನಿದ್ದು, ಅನಂತರ ತನ್ನ ಮೈಮೇಲಿದ್ದ ಆಭರಣಗಳನ್ನೆಲ್ಲಾ ತೆಗೆದು ಅಲ್ಲಿಯೇ ಬಿಸಾಟು, ಮಹತ್ತಾದ ಐಶ್ವರ್ಯವನ್ನು ಬಿಟ್ಟು ಮಿತ್ರರಿಗೆಲ್ಲಾ ದುಃಖವನ್ನುಂಟುಮಾಡುತ್ತ ಉಟ್ಟ ಬಟ್ಟೆಯೊಡನೆ ಅಲ್ಲಿಂದ ಹೊರಕ್ಕೆ ಹೊರಟನು. ಆಗ ದಮಯಂತಿಯೂ ಉಟ್ಟ ಬಟ್ಟೆಯೊಡನೆ ಆತನನ್ನೇ ಅನುಸರಿಸಿ ಹೊರಡಲು, ನಳನು ಪಟ್ಟಣದ ಹೊರಗೆ ಮೂರು ರಾತ್ರಿ ಪತ್ನಿಯೊಡನೆ ವಾಸಮಾಡಿಕೊಂಡಿದ್ದನು. ಆಗ ಪುಷ್ಕರನು 'ಈ ಪಟ್ಟಣದಲ್ಲಿರತಕ್ಕವರು ಯಾರಾದರೂ ನಳನಿಗೆ ಸತ್ಕಾರವನ್ನು ಮಾಡಿದ್ದೇ ಆದರೆ ಅವರಿಗೆ ಮರಣಾಂತಶಿಕ್ಷೆಯನ್ನು ಮಾಡಿಸುವೆನು' ಎಂದು ಡಂಗುರವನ್ನು ಹಾಕಿಸಲು, ಅದನ್ನು ಕೇಳಿ ಪುರಜನರೆಲ್ಲರೂ ನಳನನ್ನು ದ್ವೇಷಿಸುತ್ತ ಆತನಿಗೆ ಸತ್ಕಾರವನ್ನು ಮಾಡದೆ ಹೋದರು. ಆಗ ನಳನು ಆ ಪಟ್ಟಣದ ಹೊರಗೆ ಮೂರುದಿವಸವೂ ಜಲಾಹಾರವನ್ನು ಮಾಡಿಕೊಂಡಿದ್ದು, ಹಸಿವನ್ನು ಸಹಿಸಲಾರದೆ ಫಲಮೂಲಗಳನ್ನು ಕಿತ್ತುಕೊಂಡು ಆಹಾರಮಾಡಿ, ದಮಯಂತಿಯೊಡನೆ ದಾರಿಯನ್ನು ನಡೆದು ಬಹುದಿವಸ ಹಸಿವಿ

ನಿಂದ ಪೀಡಿತನಾಗಿ, ಮಾರ್ಗದಲ್ಲಿ ಸುವರ್ಣದಂತಿರುವ ರೆಕ್ಕೆಗಳುಳ್ಳ ಪಕ್ಷಿಗಳನ್ನು ಕಂಡು, ಆದಿವಸ ತನಗೆ ಬಳ್ಳೇ ಆಹಾರವು ಸಿಕ್ಕಿತೆಂದೂ ಅದರಿಂದ ತನಗೆ ದ್ರವ್ಯ ಲಭಿಸುವದೆಂದೂ ಯೋಚಿಸಿ, ಬಳಿಕ ತಾನು ಉಟ್ಟಿದ್ದ ಬಟ್ಟೆಯನ್ನು ಬಿಚ್ಚಿ, ಆ ಪಕ್ಷಿಗಳನ್ನು ಹಿಡಿಯುವದಕ್ಕೋಸ್ಕರ ಅವುಗಳ ಮೇಲೆ ಬೀಸಿದನು. ಆ ಪಕ್ಷಿಗಳು ಆ ಬಟ್ಟೆಯನ್ನು ಎತ್ತಿಕೊಂಡು ಆಕಾಶಮಾರ್ಗಕ್ಕೆ ಹಾರಿ, ದಿಗಂಬರನಾಗಿ ದೈನ್ಯದಿಂದ ತಲೆಯನ್ನು ಬಗ್ಗಿಸಿಕೊಂಡು ಭೂಮಿಯಮೇಲೆ ನಿಂತಿದ್ದ ನಳರಾಜನನ್ನು ನೋಡಿ 'ಎಲೈ ಬುದ್ಧಿಹೀನನಾದ ನಳನೆ, ನೀನು ವಸ್ತ್ರಸಹಿತನಾಗಿ ಹೋಗುವದನ್ನು ನಾವು ಸೈರಿಸದೆ ನಿನ್ನ ವಸ್ತ್ರವನ್ನು ಅಪಹರಿಸಬೇಕೆಂದೆಣಿಸಿ ಇಲ್ಲಿಗೆ ಬಂದೆವು. ನಮ್ಮನ್ನು ಪಕ್ಷಿಗಳೆಂದು ತಿಳಿಯಬೇಡ. ನೀನು ಜೂಜಾಡುವಾಗ ಇದ್ದ ಪಗಡೇದಾಳಗಳೇ ನಾವು' ಎಂದು ನುಡಿದವು. ಆಗ ನಳನು ದಾಳಗಳು ಪಕ್ಷಿರೂಪ ವಾಗಿರುವದನ್ನೂ ತಾನು ದಿಗಂಬರನಾದದ್ದನ್ನೂ ಸಹ ನೋಡಿ, ದಮಯಂತಿಯನ್ನು ಕುರಿತು 'ಎಲೆ ಸತಿಯೆ, ಈ ದಾಳಗಳ ವೈಷಮ್ಯದಿಂದಲೇ ನಾನು ಐಶ್ವರ್ಯವನ್ನು ಕಳೆದುಕೊಂಡು ರಾಜ್ಯಭ್ರಷ್ಟನಾಗಿ, ಹಸಿವಿನಿಂದ ಪೀಡಿತನಾಗಿ ಜೀವನೋಪಾಯವಿಲ್ಲದೆ ದುಃಖಪಡುತ್ತಿರುವೆನು. ಪಗಡೆಯಾಟವಾಡಿದ ನಿಮಿತ್ತದಿಂದಲೇ ಪುರಜನರು ಯಾರೂ ನನ್ನನ್ನು ಸತ್ಕರಿಸದೆ ಹೋದರು. ನಮಗೆ ಇಷ್ಟು ಕೇಡನ್ನು ಮಾಡಿದ ಆ ದಾಳಗಳು ಪಕ್ಷಿರೂಪಗಳಾಗಿ ಈಗ ನನ್ನ ಬಟ್ಟೆಯನ್ನೂ ಅಪಹರಿಸಿಕೊಂಡು ಹೋಗುತ್ತಿರುವವು ನೋಡು. ಈಗ ನಾನು ಮಹತ್ತಾದ ವಿಷಮಸ್ಥಿತಿಯನ್ನು ಹೊಂದಿ, ವೈಮನಸ್ಯದಿಂದ ದುಃಖಪಡುತ್ತಿರುವೆನು. ನಾನು ನಿನಗೆ ಪತಿಯಾದ್ದರಿಂದ ನಿನಗೊಂದು ಹಿತವಾದ ಮಾತನ್ನು ಹೇಳುವೆನು ಕೇಳು. ಇತ್ತಲು ಈ ಮಾರ್ಗಗಳು ದಕ್ಷಿಣದಿಕ್ಕಿಗೆ ಹೋಗುವವು. ಇಲ್ಲಿ ಅವಂತೀಪಟ್ಟಣವನ್ನೂ ಋಕ್ಷವಂತವೆಂಬ ಪರ್ವತವನ್ನೂ ದಾಟಿ ಹೋದರೆ, ಮಹತ್ತಾದ ವಿಂಧ್ಯಪರ್ವತವೂ ಸಮುದ್ರಗಾಮಿನಿಯಾದ ಪಯೋಷ್ಣಿಯೆಂಬ ನದಿಯೂ ಅನೇಕ ಫಲಮೂಲಗಳಿಂದ ಕೂಡಿರುವ ಋಷ್ಯಾಶ್ರಮಗಳೂ ಸಿಕ್ಕುವವು. ಇದೇ ಮಾರ್ಗವು ವಿದರ್ಭದೇಶಕ್ಕೂ ಕೋಸಲದೇಶಕ್ಕೂ ಹೋಗುವದು. ಅದರಿಂದ ಆಚೆಗೆ ದಕ್ಷಿಣದೇಶವಿರುವದು' ಎಂದು ದುಃಖಿತನಾಗಿ ಬಾರಿಬಾರಿಗೂ ಹೇಳಲು, ದಮಯಂತಿಯು ಕಂಬನಿಗಳನ್ನು ತುಂಬಿ, ದುಃಖಾಕ್ರಾಂತಳಾಗಿ ನಳಮಹಾರಾಜನನ್ನು ಕುರಿತು 'ಮಹಾರಾಜನೆ, ನಿನ್ನ ಮನೋಗತವನ್ನು ಬಹಳವಾಗಿ ಚಿಂತಿಸಿಚಿಂತಿಸಿ ನನ್ನ ಹೃದಯವು ಭಯದಿಂದ ನಡುಗುತ್ತಿರುವದು ; ನನ್ನ ಕೈಕಾಲುಗಳು ಸೋತುಹೋಗುತ್ತಿರುವವು. ರಾಜ್ಯವನ್ನೂ ಕೋಶವನ್ನೂ ಉಡುವ ಬಟ್ಟೆಯನ್ನೂ ಸಹ ಕಳೆದುಕೊಂಡು ಹಸಿವಿನಿಂದ ಬಳಲುತ್ತಿರುವ ನಿನ್ನೊಬ್ಬನನ್ನೇ ಈ ನಿರ್ಜನವಾದ ಕಾಡಿನಲ್ಲಿ ಬಿಟ್ಟು ನಾನು ಹ್ಯಾಗೆ ಹೋಗಲಿ! ರಾಜ್ಯಸುಖವನ್ನು ನೆನೆದು ಚಿಂತಿಸುತ್ತ ಹಸಿವಿನಿಂದ ಪೀಡಿತನಾದ ನಿನ್ನ ಸಂಗಡಲೇ ನಾನೂ ಇದ್ದುಕೊಂಡು ನಿನ್ನ ಶ್ರಮವನ್ನು ಪರಿಹಾರಮಾಡುವೆನು. ಲೋಕದಲ್ಲಿ ಪತ್ನಿಗೆ ಸಮಾನವಾದ ವಸ್ತುವು ಯಾವದಿರುವದು? ಎಲ್ಲಾ ದುಃಖಗಳಿಗೂ ಪತ್ನಿಯು ಔಷಧಪ್ರಾಯಳಾದವಳೆಂದು ದೊಡ್ಡವರು ಹೇಳುವರು. ಇದನ್ನು ನಾನು ಯಥಾರ್ಥವಾಗಿ ಹೇಳುವೆನು' ಎಂದು ಕರುಣರಸದಿಂದ ಬಹಳವಾಗಿ ಮರುಗುತ್ತಾ ನುಡಿದಳು. ಅದನ್ನು ಕೇಳಿ ನಳನು 'ಎಲೆ ಮಂಗಳಾಂಗಿಯೆ, ನೀನು ಹೇಳಿದಹಾಗೆಯೇ ಸರಿ. ಆರ್ತನಾದ ಪುರುಷನಿಗೆ ಪತ್ನಿಯಂಥಾ ಮಿತ್ರನೂ ಔಷಧವೂ ಇಲ್ಲವೆಂಬುವದು ನಿಶ್ಚಯವು. ನನಗೆ ನಿನ್ನನ್ನು ಬಿಡಬೇಕೆಂಬ ಅಪೇಕ್ಷೆಯೇನೂ ಇಲ್ಲ. ಯಾತಕ್ಕೆ ಹೀಗೆಲ್ಲಾ ಶಂಕಿಸುವೆ ? ನನ್ನ ಶರೀರವನ್ನಾದರೂ ನಾನು ಬಿಟ್ಟೇನೇಹೊರತು ನಿನ್ನನ್ನು ಬಿಡತಕ್ಕವನೆ ?' ಎನಲು, ದಮಯಂತಿಯು 'ಮಹಾರಾಜನೆ, ನಿನಗೆ ನನ್ನನ್ನು ಬಿಡಬೇಕೆಂಬ ಅಪೇಕ್ಷೆ ಇಲ್ಲದಿರುವ ಪಕ್ಷದಲ್ಲಿ ಯಾತಕ್ಕೋಸ್ಕರ ವಿದರ್ಭದೇಶದ ಮಾರ್ಗವನ್ನು ತಿಳುಹಿಸಿದೆ ? ನಾನೂ ನಿನ್ನ ಜೊತೆಯಲ್ಲಿಯೇ ಬರತಕ್ಕವಳು. ನನ್ನನ್ನು ನೀನು ಬಿಡಕೂಡದು. ನೀನು ಕಲಿಪುರುಷನಿಂದ ಆವಿಷ್ಟವಾದ ಮನಸ್ಸಿನಿಂದ ನನ್ನನ್ನು ಬಿಟ್ಟುಬಿಡುವೆ. ಆದ್ದರಿಂದಲೇ ವಿದರ್ಭದೇಶದ ಮಾರ್ಗವನ್ನು ನನಗೆ ಪದೇಪದೇ ತಿಳಿಸುತ್ತ ಬಂದೆ ; ಅದರಿಂದ ನನಗೆ ಅಧಿಕವಾದ ದುಃಖವುಂಟಾಗಿ ರುವದು. ಹಾಗೆ ನಾನು ನಮ್ಮ ಜ್ಞಾತಿಗಳ ಮನೆಗೆ ಹೋಗತಕ್ಕದ್ದು ನಿನಗೆ ಇಷ್ಟವಾಗಿದ್ದಪಕ್ಷದಲ್ಲಿ, ನಾವಿಬ್ಬರೂ ಜೊತೆಯಾಗಿ ವಿದರ್ಭದೇಶಕ್ಕೆ ಹೋಗೋಣ. ಅಲ್ಲಿ ನಮ್ಮ ತಂದೆಯು ನಿನ್ನನ್ನು ಬಹಳ ಮರ್ಯಾದೆಯಿಂದ ಕಂಡು ಸತ್ಕರಿಸುವನು. ಆತನಿಂದ ಮರ್ಯಾದೆಯನ್ನು ಪಡೆದು, ನೀನು ನನ್ನೊಡನೆ ಆತನ ಅರಮನೆಯಲ್ಲಿ ಸುಖವಾಗಿರು" ಎಂದು ದಮಯಂತಿಯು ನಳನಿಗೆ ಹೇಳಿದ ಅರ್ಥವನ್ನು ಬೃಹದಶ್ವನು ಧರ್ಮರಾಯನಿಗೆ ಹೇಳಿದನು.

೬೨ನೇ ಅಧ್ಯಾಯ.—ನಳೋಪಾಖ್ಯಾನ—(ನಳನು ನಿದ್ರೆಗೈಯುತ್ತಿದ್ದ ದಮಯಂತಿಯನ್ನು ಬಿಟ್ಟು ಹೋದದ್ದು)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಆ ಬಳಿಕ ನಳಮಹಾರಾಜನು ದಮಯಂತಿಯನ್ನು ಕುರಿತು 'ಎಲೆ ಪ್ರಿಯಳೆ, ನಿಮ್ಮ ತಂದೆಯ ರಾಜ್ಯವು ನಿನಗೆ ಹ್ಯಾಗೋ ನನಗೂ ಹಾಗೆಯೇಸರಿ. ಈ ವಿಷಯದಲ್ಲಿ ಸಂದೇಹವಿಲ್ಲ. ಆದರೂ ನಾನು ಈ ದುರವಸ್ಥೆಯಲ್ಲಿ ಅಲ್ಲಿಗೆ ಹೋಗತಕ್ಕವನಲ್ಲ. ಮೊದಲು ಐಶ್ವರ್ಯವಂತನಾಗಿ ನಿನಗೆ ಸಂತೋಷವನ್ನು ಹೆಚ್ಚಿಸುತ್ತ ಅಲ್ಲಿಗೆ ಬಂದಿದ್ದ ನಾನು ಈಗ ರಾಜ್ಯಭ್ರಷ್ಟನಾಗಿ ನಿನಗೆ ದುಃಖವನ್ನು ಹೆಚ್ಚಿಸುತ್ತ ಹ್ಯಾಗೆ ಅಲ್ಲಿಗೆ ಬರಲಿ?" ಎಂದು ಅರ್ಧಬಟ್ಟೆಯನ್ನುಟ್ಟಿರುವ ಮಂಗಳಾಂಗಿಯಾದ ದಮಯಂತಿಯನ್ನು ಬಾರಿಬಾರಿಗೂ ಸಂತವಿಟ್ಟನು. ಹೀಗೆ ಅವರಿಬ್ಬರೂ ಒಂದೇ ಬಟ್ಟೆಯನ್ನುಟ್ಟುಕೊಂಡು, ಹಸಿವುಬಾಯಾರಿಕೆಗಳಿಂದ ಪೀಡಿತರಾಗಿ ಅಲ್ಲಲ್ಲೇ ತಿರುಗಾಡುತ್ತಾ ಜನಸಮೂಹ ಸೇರತಕ್ಕ ಒಂದಾನೊಂದು ಸಭಾಸ್ಥಳಕ್ಕೆ ಹೋಗಿ ಅಲ್ಲಿ ಕೂತುಕೊಂಡರು. ಆಗ ವಸ್ತ್ರಹೀನನೂ ಮಲಿನನೂ ಆಗಿ ಮೈಯೆಲ್ಲಾ ಧೂಳುತುಂಬಿಕೊಂಡು ಬಳಲಿರುವ ನಳಮಹಾರಾಜನು ದಮಯಂತಿಯೊಡನೆ ಹಾಸಿಕೊಳ್ಳುವುಕ್ಕೆ ಮಂದಲಿಗೆ ಕೂಡ ಇಲ್ಲದೆ ಭೂಮಿಯ ಮೇಲೆ ಮಲಗಲು, ಮಂಗಳಾಂಗಿಯೂ ಸುಕುಮಾರಿಯೂ ಆದ ದೀನದಶೆಯನ್ನು ಹೊಂದಿದ್ದ ದಮಯಂತಿಯು ದುಃಖಪಡುತ್ತ ನಿದ್ರೆಯನ್ನು ತಡೆಯಲಾರದೆ ನೆಲದಮೇಲೆ ಮಲಗಿದಳು. ಆಕೆಯು ಗಾಢನಿದ್ರೆಯನ್ನು ಮಾಡುತ್ತಿದ್ದ ಸಮಯದಲ್ಲಿ ನಳನು ದುಃಖಾಕ್ರಾಂತಹೃದಯನಾಗಿ, ಪೂರ್ವದಂತೆ ನಿದ್ರೆಬರದೆ ತನಗೆ ರಾಜ್ಯವು ನಷ್ಟವಾದದ್ದನ್ನೂ ಮಿತ್ರರು ತನ್ನನ್ನು ತ್ಯಾಗಮಾಡಿದ್ದನ್ನೂ ಅರಣ್ಯದಲ್ಲಿ ಪ್ರಾಪ್ತವಾದ ದುರವಸ್ಥೆಯನ್ನೂ ನೆನಸಿಕೊಂಡು, 'ಈ ಕೆಲಸವನ್ನು ಮಾಡಿದರೇನೋ ಬಿಟ್ಟರೇನೊ? ನನಗೆ ಮರಣವೇ ಶ್ರೇಯಸ್ಕರವಾದದ್ದೋ, ಅಥವಾ ಇವಳನ್ನು ಇಲ್ಲೇ ಬಿಟ್ಟು ಹೋಗುವದೇ ಶ್ರೇಯಸ್ಕರವಾದದ್ದೋ? ನನ್ನಲ್ಲಿ ಅನುರಕ್ತಳಾಗಿರುವ ಇವಳು ನನ್ನ ದೆಸೆಯಿಂದ ತಾನೂ ದುಃಖಪಡುವಳು. ನನ್ನನ್ನು ಅಗಲಿದ್ದೇ ಆದರೆ ಒಂದುವೇಳೆ ತಮ್ಮ ಸ್ವಜನದಬಳಿಗೆ ಹೋಗುವಳು. ಇವಳು ನನ್ನನ್ನೇ ಅನುಸರಿಸಿಕೊಂಡು ಬಂದದ್ದೇ ಆದರೆ ದುಃಖವನ್ನೇ ಪಡೆಯುವಳು. ಇದಕ್ಕೆ ಸಂಶಯವಿಲ್ಲ. ನಾನು ಇವಳನ್ನು ಇಲ್ಲೇ ಬಿಟ್ಟು ಹೋದರೆ ಇವಳಿಗೆ ದುಃಖಾನುಭವವು ಸಂಶಯವಾದದ್ದು. ಒಂದು ವೇಳೆ ಇವಳು ಸ್ವಜನರನ್ನೇ ಪುನಃ ಸೇರಿದರೆ ಸುಖವಾಗಿರುವಳು' ಎಂದು ಈ ಪ್ರಕಾರವಾಗಿ ನಿಶ್ಚಯಿಸಿಕೊಂಡು ಪುನಃ ಪುನಃ ಬಹುಪ್ರಕಾರವಾಗಿ ವಿಚಾರಮಾಡಿ, ಆಕೆಯನ್ನು ಬಿಟ್ಟು ಹೋಗುವದೇಸರಿ ಎಂದು ಎಣಿಸಿ 'ಈಕೆಯು ಮಹಾ ಪುಣ್ಯಶಾಲಿನಿಯೂ, ಕೀರ್ತಿವತಿಯೂ, ನನ್ನಲ್ಲಿಯೇ ಸರ್ವದಾ ಭಕ್ತಿಯುಳ್ಳ ಮಹಾ ಪತಿವ್ರತೆಯೂ; ಅದ್ದರಿಂದ ದಾರಿಯಲ್ಲಿ ಈಕೆಗೆ ಹಾನಿಯನ್ನುಂಟುಮಾಡಲು ಯಾರಿಗೂ ಶಕ್ಯವಲ್ಲ' ಎಂದು ಕಲಿಪ್ರೇರಣೆಯಿಂದ ಬುದ್ಧಿಹುಟ್ಟಲು, ಈರ್ವರೂ ಏಕವಸ್ತ್ರ ಪರಿವೃತರಾಗಿದ್ದುದರಿಂದ ಏನುಮಾಡಬೇಕೆಂದು ಚಿಂತಿಸಿ, ವಸ್ತ್ರಾರ್ಧವನ್ನು ಕತ್ತರಿಸಿಕೊಂಡು ಹೋಗಬೇಕೆಂದು ಯೋಚಿಸಿದನು. ಹ್ಯಾಗೆ ಕತ್ತರಿಸುವದೋ ತೋರದಲ್ಲಾ ಎಂದು ಚಿಂತಿಸಿ, ನಳಮಹಾರಾಜನು ಆಗ ಆ ಸಭೆಯ ನಾಲ್ಕುದಿಕ್ಕುಗಳಲ್ಲೂ ಹುಡುಕಿ ನೋಡಲು, ಒರೆಯಿಲ್ಲದ ಒಂದು ಕತ್ತಿಯು ಸಿಕ್ಕಿತು. ನಳನು ಒರೆಯಿಲ್ಲದ ಆ ಕತ್ತಿಯನ್ನು ತೆಗೆದುಕೊಂಡು ಅದರಿಂದ ಆಕೆಯ ಅರ್ಧಬಟ್ಟೆಯನ್ನು ಕತ್ತರಿಸಿ ಅದನ್ನು ಉಟ್ಟುಕೊಂಡು, ನಿದ್ರೆಯಿಂದ ಪ್ರಜ್ಞೆಯಿಲ್ಲದಿರುವಳನ್ನು ಬಿಟ್ಟು ಸ್ವಲ್ಪದೂರ ಓಡಿಹೋಗಿ, ಬಿಟ್ಟು ಹೋಗಲಾರದೆ ಮರಳಿ ಹಿಂದಕ್ಕೆ ಬಂದು, ಆಕೆಯನ್ನು ನೋಡಿ ರೋದನಮಾಡುತ್ತ, 'ಇವಳನ್ನು ಪೂರ್ವದಲ್ಲಿ ವಾಯುವೂ ಸೂರ್ಯನೂ ಸಹ ನೋಡದೆ ಇದ್ದರು. ಈಗ ಇವಳು ಈ ಸಭಾಸ್ಥಳದಲ್ಲಿ ದಿಕ್ಕಿಲ್ಲದವಳಂತೆ ಮಲಗಿರುವಳು. ಈ ಶುಚಿಸ್ಮಿತೆಯು ಉಳಿದ ಅರ್ಧಬಟ್ಟೆಯನ್ನುಟ್ಟು ಎಚ್ಚತ್ತಮೇಲೆ ಹುಚ್ಚು ಹಿಡಿದವಳಂತೆ ಹ್ಯಾಗಾಗುವಳೋ! ಪತಿವ್ರತಾ ಶಿರೋಮಣಿಯಾಗಿಯೂ ಮಂಗಳಾಂಗಿಯಾಗಿಯೂ ರೂಪವತಿಯಾಗಿಯೂ ನನಗೆ ಪ್ರಿಯಳಾಗಿಯೂ ಇರುವ ಈ ಭೀಮಮಹಾರಾಜಪುತ್ರಿಯು ಅನೇಕ ಮೃಗಗಳಿಂದಲೂ ಸರ್ಪಗಳಿಂದಲೂ ಆಕ್ರಮಿಸಲ್ಪಟ್ಟ ಈ ಘೋರವಾದ ಅರಣ್ಯದಲ್ಲಿ ನನ್ನ ವಿಯೋಗವನ್ನು ಹೊಂದಿ ಹ್ಯಾಗೆ ಸಂಚಾರ ಮಾಡ್ಯಾಳು! ಎಲೆ ಭಾಗ್ಯಶಾಲಿನಿಯಾದ ದಮಯಂತಿಯೇ, ನೀನು ಪತಿವ್ರತಾಧರ್ಮವನ್ನು ಆಶ್ರಯಿಸಿರುವಳಾದ್ದರಿಂದ ನಿನ್ನನ್ನು ದ್ವಾದಶಾದಿತ್ಯರೂ ಏಕಾದಶರುದ್ರರೂ

ಅಷ್ಟವಸುಗಳೂ ಅಶ್ವಿನೀದೇವತೆಗಳೂ ಏಕೋನಪಂಚಾಶನ್ಮರುತ್ತುಗಳೂ ಸಹ ರಕ್ಷಿಸಲಿ ' ಎಂದು ಹರಕೆಯನ್ನು ಹಾಕಿ, ಓಡಿ ಹೋಗುವದಕ್ಕೆ ಉದ್ಯುಕ್ತನಾಗಿ, ಪುನಃ ಪುನಃ ಆಸ್ಥಳಕ್ಕೆ ಬರುತ್ತ ಹೋಗುತ್ತ ದುಃಖಪಡುತ್ತಿದ್ದನು. ಆಗ ಕಲಿಯ ಆವೇಶದಿಂದಲೂ ಆಕೆಯಲ್ಲಿ ಸಹಜವಾಗಿಗುವ ಪ್ರೇಮದಿಂದಲೂ ಆಕೆಯನ್ನು ಬಿಟ್ಟು ಹೋಗುವದಕ್ಕೂ ಅಲ್ಲಿಯೇ ಇರುವದಕ್ಕೂ ಯಾವದಕ್ಕೂ ಮುಂದೆತೋರದೆ, ಆತನ ಮನಸ್ಸು ಎರಡುಪ್ರಕಾರವಾಗಿ ಸ್ವಲ್ಪಹೊತ್ತು ಡೋಲಾಯಮಾನವಾಗಿತ್ತು. ಬಳಿಕ ಕಡೆಗೆ ಕಲಿಯ ಆವೇಶ ಬಲವಾಗಿ, ಅಜ್ಞಾನ ಕವಿದು ಆತನು ಬಹುದೀನವಾಗಿ ರೋದನವನ್ನು ಮಾಡಿ, ಮಲಗಿದ್ದ ಆ ದಮಯಂತಿಯನ್ನು ಬಿಟ್ಟು, ದುಃಖಿತನಾಗಿ ಯಾವದನ್ನೂ ಯೋಚಿಸದೆ ಹೊರಟು ಹೋದನು " ಎಂದು ಧರ್ಮರಾಯನಿಗೆ ಬೃಹದಶ್ವನು ಹೇಳಿದನು.

---

## ೬೩ನೇ ಅಧ್ಯಾಯ—ನಳೋಪಾಖ್ಯಾನ—(ದಮಯಂತಿಯು ನಳನನ್ನು ಕಾಣದೆ ಪ್ರಲಾಪಿಸಿದ್ದು).

ವೈಶಂಪಾಯನ ಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಬೃಹದಶ್ವನು ಧರ್ಮರಾಯನನ್ನು ಕುರಿತು, " ಎಲೈ ಧರ್ಮರಾಯನೆ, ನಳಮಹಾರಾಜನು ಹೊರಟು ಹೋದ ಬಳಿಕ, ದಮಯಂತಿಯು ಮಾರ್ಗಾಯಾಸವು ಪರಿಹಾರವಾಗಲು ನಿದ್ರೆಯಿಂದ ಎಚ್ಚತ್ತು, ನಿರ್ಜನವಾದ ಆ ಅರಣ್ಯದಲ್ಲಿ ಭಯಪಡುತ್ತ, ಸಮೀಪದಲ್ಲಿ ಪತಿಯಿಲ್ಲದಿರುವದನ್ನು ನೋಡಿ ಅಧಿಕವಾಗಿ ದುಃಖಪಡುತ್ತ, ' ಮಹಾರಾಜನೆ ' ಎಂದು ಗಟ್ಟಿಯಾಗಿ ಕೂಗುತ್ತ, ' ಹಾ ನಾಥನೆ ! ಹಾ ಸ್ವಾಮಿಯೆ ! ನನ್ನನ್ನು ಯಾತಕ್ಕೆ ಬಿಟ್ಟುಹೋದೆ ? ಈ ನಿರ್ಜನವಾದ ಆರಣ್ಯದಲ್ಲಿ ನಾನೊಬ್ಬಳೇ ಭಯಪಡುತ್ತ ನಷ್ಟಳಾಗಿ ಹೋಗುವೆನಲ್ಲಾ ! ಮಹಾರಾಜನೆ, ಧರ್ಮಜ್ಞನಾದ ನೀನು ನನ್ನ ಸ್ವಯಂವರಕಾಲದಲ್ಲಿ ' ನಿನ್ನನ್ನು ನಾನು ಬಿಡತಕ್ಕವನಲ್ಲ ' ಎಂದು ಸತ್ಯವಾಗಿ ನುಡಿದು, ಈಗ ಅರಣ್ಯದಲ್ಲಿ ನನ್ನನ್ನು ಬಿಟ್ಟುಹೋದೆಯಲ್ಲಾ ! ನೀನು ಹ್ಯಾಗೆ ಸತ್ಯವಂತನೆನಿಸಿಕೊಳ್ಳುವೆ ? ನನ್ನಿಂದ ಯಾವ ಅಪಕಾರವೂ ಇಲ್ಲದಿದ್ದಾಗ್ಯೂ, ಪರರಿಂದ ಆದ ಅಪಕಾರವನ್ನು ಸಹಿಸಿಕೊಂಡು ನಿನ್ನನ್ನೇ ಅನುವರ್ತಿಸಿ ನಡೆವ ಪತ್ನಿಯಾದ ನನ್ನನ್ನು ಬಿಟ್ಟು ನೀನು ಹ್ಯಾಗೆ ಹೋದೆ ? ಪೂರ್ವದಲ್ಲಿ ನೀನು ಲೋಕಪಾಲಕರ ಸನ್ನಿಧಿಯಲ್ಲಿ ನನ್ನವಿಷಯವಾಗಿ ಯಾವ ಮಾತುಗಳನ್ನಾಡಿದೆಯೋ, ಅವುಗಳನ್ನು ನಡಿಸು ! ಹಾ ನರೇಂದ್ರನೆ, ಈ ಅರಣ್ಯದಲ್ಲಿ ನಿನ್ನಿಂದ ಬಿಡಲ್ಪಟ್ಟ ನಾನು ಮುಹೂರ್ತಕಾಲವಾದರೂ ಬದುಕಿರುವೆನಲ್ಲಾ ! ಇದನ್ನು ನೋಡಿದರೆ ಅಕಾಲದಲ್ಲಿ ಮನುಷ್ಯರಿಗೆ ಮೃತ್ಯುವು ಬರುವದಿಲ್ಲವೆಂದು ತೋರುವದು. ನಿನ್ನ ವಿನೋದವನ್ನು ಇಷ್ಟಕ್ಕೆಸಾಕುಮಾಡು. ಈ ಅರಣ್ಯದಲ್ಲಿ ನನಗೆ ಅಧಿಕವಾಗಿ ಭಯವಾಗುತ್ತಿರುವದು ! ಮತ್ತೊಬ್ಬರಿಂದ ತಿರಸ್ಕರಿಸಲಶಕ್ಯನಾದ ನೀನು ನನಗೆ ದರ್ಶನವನ್ನು ಕೊಡು. ಮಹಾರಾಜನೆ, ಈ ಲತಾಗುಲ್ಮಗಳಲ್ಲಿ ಮರೆಯಾಗಿರುವಂತೆ ನನ್ನ ಕಣ್ಣಿಗೆ ಇದೋ ಇದೋ ಕಾಣಿಸಿಕೊಳ್ಳುತ್ತಲೇ ಇರುವೆಯಲ್ಲಾ ! ಯಾತಕ್ಕೋಸ್ಕರ ನನ್ನಸಂಗಡ ಮಾತನಾಡದಿರುವೆ ? ಇಂಥ ದುರವಸ್ಥೆಯನ್ನು ಹೊಂದಿ ದುಃಖಪಡುತ್ತಿರುವ ನನ್ನ ಬಳಿಗೆ ಬಂದು ನನ್ನನ್ನು ಸಮಾಧಾನಪಡಿಸದೆ ಇರುವೆಯಲ್ಲಾ ! ಇದು ಬಹಳ ಕ್ರೂರವಾದ ಕಾರ್ಯವಲ್ಲವೆ ? ನಾನು ನನಗೋಸ್ಕರ ಏನೂ ವ್ಯಸನಪಡುವದಿಲ್ಲ. ಈ ಅರಣ್ಯದಲ್ಲಿ ನೀನೊಬ್ಬನೇ ಏನಾಗುವೆಯೋ ಎಂದು ನಿನ್ನನಿಮಿತ್ತವಾಗಿ ವ್ಯಸನಪಡುವೆನೇ ಹೊರತು ಇನ್ನ್ಯಾತಕ್ಕೂ ನಾನು ಸ್ವಲ್ಪವೂ ವ್ಯಸನ ಪಡತಕ್ಕವಳಲ್ಲ. ಮಹಾರಾಜನೆ, ನೀನು ಹಸಿವಿನಿಂದಲೂ ಬಾಯಾರಿಕೆಯಿಂದಲೂ ಮಾರ್ಗಾಯಾಸದಿಂದಲೂ ಪೀಡಿತನಾಗಿ ಸಾಯಂಕಾಲದ ವೇಳೆಯಲ್ಲಿ ಮರದ ಕೆಳಗೆ ನನ್ನನ್ನೂ ಸಹ ಕಾಣದೆ ಏನಾಗುವೆಯೊ ! ' ಎಂದು ಹಂಬಲಿಸುತ್ತಾ ಆ ದಮಯಂತಿಯು, ಬಹು ಶೋಕದಿಂದ ಕಂಬನಿಗಳನ್ನು ಸುರಿಸಿಕೊಂಡು ಅಲ್ಲಲ್ಲೇ ಓಡಾಡುತ್ತಲೂ, ಅಲ್ಲಲ್ಲೇ ಮೂರ್ಛಿತಳಾಗಿ ಬೀಳುತ್ತಲೂ, ಹಾಗೆಯೇ ಎಚ್ಚತ್ತು ಏಳುತ್ತಲೂ, ಪುನಃ ಭಯಪಟ್ಟು ಅಲ್ಲಲ್ಲೇ ಅಡಗಿಕೊಳ್ಳುತ್ತಲೂ, ಬಾರಿಬಾರಿಗೂ ನಳಮಹಾರಾಜನನ್ನು ಕೂಗುತ್ತಲೂ, ನಿಟ್ಟುಸುರು ಬಿಡುತ್ತ ಗಟ್ಟಿಯಾಗಿ ರೋದನಮಾಡುತ್ತಲೂ, ಯಾವ ಕಲಿಯ ವ್ಯರ್ಥವಾದ ದ್ವೇಷದಿಂದ ನಿಷಧ ದೇಶಾಧಿಪತಿಯಾದ ತನ್ನ ಪತಿಯು ಅತ್ಯಂತ ದುಃಖವನ್ನು ಹೊಂದಿದನೋ ಆ ಕಲಿಯು ತಮ್ಮ ದುಃಖಕ್ಕಿಂತಲೂ ಹೆಚ್ಚಾದ ದುಃಖವನ್ನನುಭವಿಸಲೆಂದೂ, ಯಾವ

ಪಾಪಿಯಾದ ಕಲಿಯು ಪಾಪರಹಿತನಾದ ತನ್ನ ಪತಿಯ ಮನಸ್ಸನ್ನು ಇಷ್ಟು ದುಃಖಪಡುವಹಾಗೆ ಮಾಡಿದನೋ ಆ ಕಲಿಯು ಅವಕ್ಕಿಂತಲೂ ಹೆಚ್ಚಾದ ದುಃಖವನ್ನು ಅನುಭವಿಸುತ್ತಾ ಕಷ್ಟದಿಂದ ಜೀವಿಸಲೆಂದೂ ಕಲಿಗೆ ಶಾಪವನ್ನು ಕೊಟ್ಟು, ದುಷ್ಟ ಮೃಗಗಳಿಂದ ಕೂಡಿದ ಆ ಅರಣ್ಯದಲ್ಲಿ ಪತಿಯನ್ನು ಹುಡುಕುತ್ತಾ ಅಲ್ಲಲ್ಲೇ ಹುಚ್ಚು ಹಿಡಿದವಳಂತೆ ಪ್ರಲಾಪಿಸುತ್ತಾ, 'ಹಾ ಹಾ! ಮಹಾರಾಜನೆ!' ಎಂದು ಹೆಣ್ಣು ಕುರುವಕ್ಕಿಯಂತೆ ಅತ್ಯಂತ ದೀನವಾಗಿ ಮೊರೆಯಿಡುತ್ತ, ಮುಂದಕ್ಕೆ ಬರುತ್ತಿದ್ದಳು. ಆಗ ದಾರಿಯಲ್ಲಿ ಹಸಿವಿನಿಂದ ಬಾಯಿ ತೆರೆದಿದ್ದ ಒಂದು ಹೆಬ್ಬಾವು ತನ್ನ ಸಮೀಪದಲ್ಲಿ ತಿರುಗಾಡುತ್ತಿರುವ ಆ ದಮಯಂತಿಯನ್ನು ನುಂಗಿತು. ಆ ಕಾಲದಲ್ಲಿ ದಮಯಂತಿಯು ದುಃಖಾಕ್ರಾಂತಳಾಗಿ, ನಳಮಹಾರಾಜನ ನಿಮಿತ್ತವಾಗಿ ಎಷ್ಟು ವ್ಯಸನಪಡುವಳೋ ತನ್ನ ನಿಮಿತ್ತವಾಗಿ ಅಷ್ಟು ವ್ಯಸನಪಡದೆ 'ಹಾ ನಾಥನೆ! ಈ ನಿರ್ಜನವಾದ ವನದಲ್ಲಿ ಈ ಹೆಬ್ಬಾವು ಅನಾಥರಾದವರನ್ನು ನುಂಗುವಂತೆ ನನ್ನನ್ನು ನುಂಗುತ್ತಿರುವದಲ್ಲಾ! ಯಾತಕ್ಕೋಸ್ಕರ ನೀನು ಬಂದು ಬಿಡಿಸಿಕೊಳ್ಳದಿರುವೆ? ನೀನು ಬಾರಿಬಾರಿಗೂ ನನ್ನನ್ನು ಜ್ಞಾಪಿಸಿಕೊಂಡು ಹ್ಯಾಗಿರುವೆಯೋ! ನೀನು ಈಗ ಈ ಅರಣ್ಯದಲ್ಲಿ ನನ್ನನ್ನು ಬಿಟ್ಟು ಹ್ಯಾಗೆ ಹೊರಟುಹೋದೆ? ನೀನು ಕಲಿಯಿಂದ ಮುಕ್ತನಾಗಿ ಪುನಃ ಸರಿಯಾದ ಜ್ಞಾನವನ್ನೂ ಧನವನ್ನೂ ಪಡೆದಮೇಲೆ ಆಗ ನನ್ನಿಂದ ರಹಿತನಾಗಿ ಹ್ಯಾಗೆ ಜೀವಿಸುವೆ? ಅರಣ್ಯದಲ್ಲಿ ಮಾರ್ಗಾಯಾಸದಿಂದಲೂ ಹಸಿವಿನಿಂದಲೂ ಬಳಲಿದ ನಿನ್ನ ಶ್ರಮವನ್ನು ಈಗ ಯಾರು ಪರಿಹಾರ ಮಾಡಿಯಾರು?' ಎಂದು ಗಟ್ಟಿಯಾಗಿ ಮೊರೆಯಿಡುತ್ತ ಪ್ರಲಾಪಿಸುತ್ತಿರಲು, ಆ ಘೋರವಾದ ಅರಣ್ಯದಲ್ಲಿ ಸಂಚರಿಸುತ್ತಿದ್ದ ಒಬ್ಬ ಬೇಟೆಗಾರನು ಆಕೆಯ ರೋದನಧ್ವನಿಯನ್ನು ಕೇಳಿ ಶೀಘ್ರವಾಗಿ ಅಲ್ಲಿಗೆ ಬಂದು, ಹೆಬ್ಬಾವು ಆ ದಮಯಂತಿಯನ್ನು ನುಂಗುತ್ತಿರುವದನ್ನು ನೋಡಿ, ತನ್ನ ಕೈಯಲ್ಲಿದ್ದ ಶಸ್ತ್ರದಿಂದ ಅದರ ಮುಖದಿಂದ ಆರಂಭಿಸಿ ಅದರ ಮೈಯನ್ನು ಉದ್ದಕ್ಕೂ ಸೀಳಿ ಆಕೆಯನ್ನು ಬಿಡಿಸಿ, ನೀರಿನಿಂದ ಆಕೆಯ ಶರೀರವನ್ನು ತೊಳೆದು ಸಂತವಿಟ್ಟು, ಆಹಾರಮಾಡಿಸಿ ಆಕೆಯನ್ನು ಕುರಿತು, 'ಎಲೆ ಮೃಗಾಕ್ಷಿಯೆ, ನೀನು ಯಾರಪತ್ನಿ? ಈ ಅರಣ್ಯಕ್ಕೆ ಹ್ಯಾಗೆ ಬಂದೆ? ಈ ಮಹತ್ತಾದ ವಿಪತ್ತು ನಿನಗೆ ಹ್ಯಾಗೆ ಸಂಭವಿಸಿತು?' ಎಂದು ಕೇಳಲು, ದಮಯಂತಿಯು ನಡೆದ ವೃತ್ತಾಂತವನ್ನೆಲ್ಲಾ ಯಥಾಸ್ಥಿತವಾಗಿ ಆತನಿಗೆ ತಿಳಿಸಿದಳು.

ಬಳಿಕ ಆ ವ್ಯಾಧನು ಅರ್ಧವಸ್ತ್ರವನ್ನುಟ್ಟು, ಪೀವರವಾದ ಕಟಿಪಶ್ಚಾದ್ಭಾಗವೂ ಸ್ತನಗಳೂ ಉಳ್ಳವಳಾಗಿ, ಸುಕುಮಾರಾಂಗಿಯಾಗಿ, ಪೂರ್ಣಚಂದ್ರನಿಗೆ ಸಮಾನವಾದ ಮುಖವೂ ವಕ್ರವಾದ ರೆಪ್ಪೆಗಳಿಂದ ಕೂಡಿದ ನೇತ್ರಗಳೂ ಉಳ್ಳವಳಾಗಿ, ಮಧುರವಾಗಿ ಮಾತನಾಡುತ್ತಿರುವ ದಮಯಂತಿಯನ್ನು ನೋಡಿ ಕಾಮಪೀಡಿತನಾಗಿ, ಆಕೆಯನ್ನು ಮೃದುಮಧುರವಾದ ನುಡಿಗಳಿಂದ ಸಮಾಧಾನ ಪಡಿಸುತ್ತಿರಲು, ಅದನ್ನು ತಿಳಿದು ಪತಿವ್ರತಾಶಿರೋಮಣಿಯಾದ ದಮಯಂತಿಯು ಅಧಿಕವಾದ ರೋಷವುಳ್ಳವಳಾಗಿ, ಕೋಪಾವೇಶದಿಂದ ಉರಿಯುತ್ತಿರುವಂತೆ ತೋರಿದಳು. ಆಗ ಕಾಮಾತುರನಾದ ಆ ನೀಚವ್ಯಾಧನು ಪಾಪಬುದ್ಧಿಯಿಂದ, ಅಗ್ನಿಜ್ವಾಲೆಗೆ ಸಮಾನಳಾಗಿ ಮತ್ತೊಬ್ಬರಿಗೆ ವಶಳಾಗದಿರತಕ್ಕ ಆಕೆಯನ್ನು ಬಲಾತ್ಕಾರದಿಂದ ವಶಮಾಡಿಕೊಳ್ಳಬೇಕೆಂದು ಯೋಚಿಸಿದನು. ಆಸಮಯದಲ್ಲಿ ರಾಜ್ಯವನ್ನು ಕಳೆದುಕೊಂಡು ಪತಿಯನ್ನಗಲಿ ದುಃಖಪಡುತ್ತಿರುವ ದಮಯಂತಿಯು, ಹೇಳುವದಕ್ಕೆಸಹ ಅಶಕ್ಯವಾದ ಆ ವಿಪತ್ಕಾಲದಲ್ಲಿಯೂ ಕೋಪದಿಂದ ಆ ವ್ಯಾಧನಿಗೆ ಶಾಪವನ್ನು ಕೊಡಬೇಕೆಂದು ಯೋಚಿಸಿ, 'ನಾನು ನಳಮಹಾರಾಜನನ್ನು ಹೊರತು ಮತ್ತೊಬ್ಬನನ್ನು ಮನಸ್ಸಿನಲ್ಲೂ ಎಣಿಸದಿದ್ದವಳಾದರೆ, ಮೃಗಮಾಂಸದಿಂದ ಜೀವಿಸುವ ಪಾಪಿಯಾದ ಈ ವ್ಯಾಧನು ನಾಶವಾಗಿ ಹೋಗಲಿ' ಎಂದು ಶಾಪವನ್ನು ಕೊಟ್ಟಳು. ಒಡನೆಯೇ ಆ ವ್ಯಾಧನು ಮೃತನಾಗಿ ಕಾಡುಕಿಚ್ಚಿನಿಂದ ಸುಡಲ್ಪಟ್ಟ ವೃಕ್ಷದಂತೆ ಭೂಮಿಯಲ್ಲಿ ಬಿದ್ದನು" ಎಂದು ಬೃಹದಶ್ವನು ಧರ್ಮರಾಯನಿಗೆ ಹೇಳಿದನು.

## ೬೪ನೇ ಅಧ್ಯಾಯ.—ನಳೋಪಾಖ್ಯಾನ—(ದಮಯಂತೀವಿಲಾಪ).

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಬೃಹದಶ್ವನು ಧರ್ಮರಾಯನನ್ನು ಕುರಿತು " ಎಲೈ ಧರ್ಮರಾಯನೆ, ಕಮಲಾಕ್ಷಿಯಾದ ಆ ದಮಯಂತಿಯು ಈ ಪ್ರಕಾರ ಆ ವ್ಯಾಧನನ್ನು ಕೊಂದು, ಬಹಳವಾಗಿ ಶಬ್ದಮಾಡುವ ಚಿಮ್ಮಂಡೇಹುಳುಗಳ ಧ್ವನಿಯಿಂದ ಕೂಡಿರುವದಾಗಿಯೂ, ಸಿಂಹ ಆನೆ ಸಾರಗ ಹುಲಿ ಕಾಡುಕೋಣ ಕರಡಿ ಮೊದಲಾದ ಮೃಗಗಳಿಂದಲೂ ನಾನಾವಿಧವಾದ ಪಕ್ಷಿಗಳಿಂದಲೂ ಆಶ್ರಿತವಾಗಿಯೂ, ಮ್ಲೇಂಛರಿಗೂ ಕಳ್ಳರಿಗೂ ಆಶ್ರಯವಾಗಿಯೂ, ಸರ್ಜಕ ಬಿದುರು ಧವ ಅಶ್ವತ್ಥ ತೂಬರೆ ಇಂಗಳ ಮುತ್ತುಗ ಅರ್ಜುನ ಬೇವು ಹುಲಿಗೆ ದೂದಿ ನೇರಳೆ ಮಾವು ಲೋಧ್ರ ಕಗ್ಗಲಿ ಮತ್ತಿ ಬೆತ್ತ ಸರಳ ದೇವದಾರು ನೆಲ್ಲಿ ಫಣಿಯಾಲ ಕಡಹ ಅತ್ತಿ ಎಲಚಿ ಬಿಲ್ವಪತ್ರೆ ಆಲ ಮೊರಟೆ ತಾಳೆ ಖರ್ಜೂರ ಅಳಲೆ ತಾರೆ ಮೊದಲಾದ ಅನೇಕ ವೃಕ್ಷಗಳಿಂದ ಕೂಡಿರುವದಾಗಿಯೂ, ಭಯಂಕರವಾಗಿಯೂ ಶೂನ್ಯವಾಗಿಯೂ ಇರುವ ಒಂದು ಅರಣ್ಯವನ್ನು ಹೊಕ್ಕು, ಅಲ್ಲಿ ನಾನಾಪ್ರಕಾರವಾದ ಗೈರಿಕಾದಿಧಾತುಗಳಿಂದ ಕೂಡಿದ ಅನೇಕ ಪರ್ವತಗಳನ್ನೂ, ಪಕ್ಷಿಗಳು ಧ್ವನಿಮಾಡುತ್ತಿರುವ ಬಳ್ಳಿಗಳ ಪೊದರುಗಳನ್ನೂ, ಆಶ್ಚರ್ಯಕರವಾದ ಗುಹೆಗಳನ್ನೂ, ನದಿಗಳನ್ನೂ, ಕೆರೆಗಳನ್ನೂ, ಕೊಳಗಳನ್ನೂ, ಬಾವಿಗಳನ್ನೂ, ಹಳ್ಳಗಳನ್ನೂ, ನಾನಾವಿಧ ಭಯಂಕರವಾದ ಮೃಗಗಳನ್ನೂ, ಪಕ್ಷಿಗಳನ್ನೂ, ಪಿಶಾಚಗಳನ್ನೂ, ಸರ್ಪಗಳನ್ನೂ, ರಾಕ್ಷಸರನ್ನೂ, ಬೆಟ್ಟದ ಕೋಡುಗಳನ್ನೂ, ಕೋತಿಗಳನ್ನೂ, ಆಶ್ಚರ್ಯಕರವಾದ ಗಿರಿನದಿಗಳನ್ನೂ ನೋಡಿದಳು. ಆಕೆಯು ತೇಜಸ್ಸಿನಿಂದಲೂ ಯಶಸ್ಸಿನಿಂದಲೂ ಉತ್ತಮವಾದ ರೂಪಿನಿಂದಲೂ ಧೈರ್ಯದಿಂದಲೂ ಯುಕ್ತಳಾಗಿ, ಪತಿಯಾದ ನಳಮಹಾರಾಜನನ್ನು ಹುಡುಕಿಕೊಂಡು ಅಲ್ಲಲ್ಲಿ ಸಂಚರಿಸುತ್ತಾ, ಗುಂಪುಗುಂಪಾಗಿ ಬರುವ ಕಾಡುಕೋಣಗಳನ್ನೂ ಹಂದಿಗಳನ್ನೂ ಕರಡಿಗಳನ್ನೂ ಹಾವುಗಳನ್ನೂ ಸಹ ನೋಡುತ್ತ, ಯಾವದಕ್ಕೂ ಭಯಪಡದೆ, ಘೋರವಾದ ಆ ಅರಣ್ಯದಲ್ಲಿ ಪತಿವಿಯೋಗದಿಂದ ದುಃಖಪಡುತ್ತ, ಅಲ್ಲಿದ್ದ ಒಂದು ವಿಸ್ತಾರವಾದ ಕಲ್ಲಿನಮೇಲೆ ಕುಳಿತುಕೊಂಡು ವ್ಯಸನಪಡುತ್ತ, ' ಹಾ ಮಹಾರಾಜನೆ! ವಿಶಾಲವಾದ ವಕ್ಷಸ್ಥಲವುಳ್ಳವನಾಗಿಯೂ ಮಹಾಬಾಹುಶಾಲಿಯಾಗಿಯೂ ನಿಷಧದೇಶಕ್ಕೆ ಅಧಿಪತಿಯಾಗಿಯೂ ಇರುವ ನೀನು ಈ ನಿರ್ಜನವಾದ ವನದಲ್ಲಿ ನನ್ನನ್ನು ಬಿಟ್ಟು ಎಲ್ಲಿಗೆ ಹೋದೆ! ನೀನು ಅನೇಕ ದಕ್ಷಿಣೆಗಳನ್ನು ಕೊಟ್ಟು ಅಶ್ವಮೇಧ ಮೊದಲಾದ ಯಜ್ಞಗಳನ್ನು ಮಾಡಿ ನನ್ನ ವಿಷಯದಲ್ಲಿ ಹ್ಯಾಗೆ ಸುಳ್ಳಾಗಿ ನಡದೆ? ಪುರುಷಶ್ರೇಷ್ಠನಾದ ನೀನು ನನ್ನಲ್ಲಿ ಆಡಿದ ಮಾತುಗಳನ್ನೆಲ್ಲಾ ಸ್ಮರಿಸಿಕೊ. ಹಂಸಪಕ್ಷಿಗಳು ನನ್ನೆದುರಿಗೂ ನಿನ್ನೆದುರಿಗೂ ಆಡಿದ ಮಾತುಗಳನ್ನು ಜ್ಞಾಪಿಸಿಕೊ. ಲೋಕದಲ್ಲಿ ಸಾಂಗೋಪಾಂಗವಾಗಿ ಅಧ್ಯಯನಮಾಡಿದ ನಾಲ್ಕು ವೇದಗಳೂ ಒಂದುಭಾಗ, ಸತ್ಯವೊಂದೇ ಒಂದುಭಾಗ; ಆದ್ದರಿಂದ ನೀನು ಪೂರ್ವದಲ್ಲಿ ನನ್ನಲ್ಲಿ ಹೇಳಿದ ಮಾತುಗಳನ್ನು ಸತ್ಯವಾದವುಗಳನ್ನಾಗಿ ಮಾಡಿಕೊ. ಹಾ! ಮಹಾವೀರನಾದ ನಳಮಹಾರಾಜನೆ, ನಿನ್ನವಳಾದ ನಾನು ಈ ಘೋರವಾದ ಅರಣ್ಯದಲ್ಲಿ ನಷ್ಟಳಾಗಿ ಹೋಗುವೆನಲ್ಲಾ! ಯಾತಕ್ಕೆ ನನ್ನನ್ನು ಮಾತನಾಡಿಸದಿರುವೆ? ಹಸಿವಿನಿಂದ ಬಾಯಿತೆರದುಕೊಂಡು ನೋಡಲಶಕ್ಯವಾದ ಕ್ರೂರವಾದ ಈ ಹುಲಿಯು ನನ್ನನ್ನು ತಿಂದುಬಿಡುವದಲ್ಲಾ! ಈ ಸಮಯದಲ್ಲಿ ನನ್ನನ್ನು ಯಾತಕ್ಕೆ ರಕ್ಷಿಸದಿರುವೆ? ಪೂರ್ವದಲ್ಲಿ ನೀನು ನನ್ನ ಸಂಗಡ ' ನಿನಗಿಂತಲೂ ನನಗೆ ಪ್ರೀತಿಪಾತ್ರಳಾದವಳು ಯಾವಳೂ ಇಲ್ಲ ' ಎಂದು ನುಡಿದೆಯಲ್ಲಾ! ಆ ಮಾತನ್ನು ಈಗ ಯಥಾರ್ಥಮಾಡಿಕೊ. ನಿನಗೆ ಇಷ್ಟಳಾಗಿ ಈ ಅರಣ್ಯದಲ್ಲಿ ಹುಚ್ಚುಹಿಡಿದವಳಂತೆ ರೋದನಮಾಡುತ್ತಿರುವ ಪತ್ನಿಯಾದ ನನ್ನ ಸಂಗಡ ನನಗೆ ಪ್ರಿಯನಾದ ನೀನು ಯಾತಕ್ಕೆ ಮಾತನಾಡದೆ ಇರುವೆ? ಹಾ! ಶತ್ರುಸಂಹಾರಕನಾದ ಮಹಾರಾಜನೆ, ಕೃಶಳೂ, ದೀನಳೂ, ಮಲಿನಳೂ, ವಿವರ್ಣಳೂ ಆಗಿ, ಅರ್ಧವಸ್ತ್ರವನ್ನುಟ್ಟು ಅನಾಥಳಂತೆ ರೋದನಮಾಡುತ್ತಾ, ಗುಂಪಿನಿಂದ ತಪ್ಪಿಸಿಕೊಂಡು ಬಂದ ಹುಲ್ಲೆಯಂತೆ ಏಕಾಕಿನಿಯಾಗಿರುವ ನನ್ನನ್ನು ಪೂಜ್ಯನಾದ ನೀನು ಯಾತಕ್ಕೋಸ್ಕರ ಕನಿಕರಿಸಿ ನೋಡದಿರುವೆ? ಹಾ! ಮಹಾರಾಜನೆ, ನಾನು ಪತಿವ್ರತೆಯಾದ ದಮಯಂತಿಯು. ಈ ಘೋರವಾದ ಅರಣ್ಯದಲ್ಲಿ ನಾನೊಬ್ಬಳೇ ಇರುವೆನಲ್ಲಾ! ಯಾತಕ್ಕೋಸ್ಕರ ನನ್ನ ಸಂಗಡ ಮಾತನಾಡದೆ ಇರುವೆ? ಹಾ! ನರಶ್ರೇಷ್ಠನೆ, ಸತ್ಕುಲಪ್ರಸೂತನೂ ಶೀಲಸಂಪನ್ನನೂ ಸುಂದರಾಂಗನೂ ಆದ ನಿನ್ನನ್ನು ಈಗ ನಾನು ಈ ಪರ್ವತದಲ್ಲಿ

ಕಾಣದೆ ಇರುವೆನಲ್ಲಾ! ಸಿಂಹಗಳಿಂದಲೂ ಹುಲಿಗಳಿಂದಲೂ ಕೂಡಿರುವ ಈ ಘೋರವಾದ ಅರಣ್ಯದಲ್ಲಿ ನೀನು ಮಲಗಿರುವದನ್ನೂ ಕೂತಿರುವದನ್ನೂ ನಿಂತಿರುವದನ್ನೂ ಅಥವಾ ನನಗೆ ದುಃಖವನ್ನುಂಟುಮಾಡುತ್ತ ಹೋಗುತ್ತಿರುವದನ್ನೂ ಕೂಡ ತಿಳಿಯದೆ, ನಾನು ನಿನ್ನ ನಿಮಿತ್ತವಾಗಿ ವ್ಯಸನಪಡುತ್ತ ಇಲ್ಲಿ ಯಾರನ್ನು ಕೇಳಲಿ? ಈ ಅರಣ್ಯದಲ್ಲಿದ್ದುಕೊಂಡು ನಾನು 'ನೀವೇನಾದರೂ ನಳಮಹಾರಾಜನನ್ನು ಕಂಡಿರಾ?' ಎಂದು ಯಾರನ್ನುತಾನೇ ಕೇಳಲಿ! 'ನಿನಗೆ ಅನುರೂಪನೂ, ಮಹಾತ್ಮನೂ, ಶತ್ರುಸಂಹಾರಕನೂ, ಕಮಲಾಕ್ಷನೂ, ಆದ ಯಾವ ಮಹಾರಾಜನನ್ನು ನೀನು ಹುಡುಕುತ್ತಿರುವೆಯೋ ಆತನೇ ಇವನು ಎಂದು ಯಾವನಾದರೂ ಮಧುರವಾಗಿ ಮಾತನಾಡುವದನ್ನು ನಾನು ಕೇಳಿಯೇನೆ?' ಎಂದು ಪ್ರಲಾಪಿಸುತ್ತಾ ಕಾಡಿನಲ್ಲಿ ಬರುತ್ತಿದ್ದಳು.

ಬಳಿಕ ಅಲ್ಲಿ ನಾಲ್ಕುಕೋರೆದಾಡೆಗಳುಳ್ಳದ್ದಾಗಿಯೂ ಮಹತ್ತಾದ ದವಡೆಗಳುಳ್ಳದ್ದಾಗಿಯೂ ಇರುವ ಹುಲಿಯು ಎದುರಾಗಿ ಬಂತು. ದಮಯಂತಿಯು ನಿರ್ಭಯವಾಗಿ ಅದರ ಮುಂದೆ ಹೋಗುವೆನೆಂದು ಯೋಚಿಸಿ, ಅದರ ಬಳಿಗೆ ಹೋಗಿ ಮುಂದೆ ನಿಂತು, 'ಎಲೈ ಶಾರ್ದೂಲನೆ, ನೀನು ಈ ಅರಣ್ಯಕ್ಕೆ ಅಧಿಪತಿಯಾದವನು; ನಾನು ವಿದರ್ಭರಾಜಪುತ್ರಿಯಾದ ದಮಯಂತಿಯು. ಶತ್ರುಸಂಹಾರಕನಾದ ನಿಷಧದೇಶಾಧಿಪತಿಯಾದ ನಳಮಹಾರಾಜನ ಪತ್ನಿಯು. ಪತಿಯನ್ನಗಲಿ ದುಃಖದಿಂದ ಏಕಾಕಿನಿಯಾಗಿ ಇಲ್ಲಿ ಆತನನ್ನು ಹುಡುಕುತ್ತಿರುವೆನು. ನೀನೇನಾದರೂ ಆತನನ್ನು ಕಂಡೆಯಾ? ಹಾಗೆ ತಿಳಿದಿದ್ದಪಕ್ಷದಲ್ಲಿ ಆತನೆಲ್ಲಿ ಹೋದನೋ ಅದನ್ನು ನನಗೆ ಹೇಳಬಾರದೆ? ಹಾಗೆ ಹೇಳಬಾರದೆಂದು ನಿನಗೆ ತೋರಿದ ಪಕ್ಷದಲ್ಲಿ, ನನ್ನನ್ನು ತಿಂದುಬಿಡು. ಅದರಿಂದ ನನಗೆ ಈ ದುಃಖ ನಿವೃತ್ತಿಯಾಗುವದು' ಎಂದು ಎಣಿಸಿದಾಗ್ಯೂ, ಇದೂ ಅವಳ ಗೋಳನ್ನು ಕೇಳಿ ಸಮಾಧಾನಪಡಿಸದೆ ಹೋಯಿತು. ಬಳಿಕ ದಮಯಂತಿಯು ಅಲ್ಲಿ ದಿವ್ಯವಾದ ಬಂದು ನದಿಯನ್ನು ಕಂಡು 'ಸಮುದ್ರಗಾಮಿನಿಯಾಗಿಯೂ ಸ್ವಾದುವಾದ ಉದಕವುಳ್ಳದ್ದಾಗಿಯೂ ಇರುವ ನದಿಯನ್ನಾದರೂ ಕೇಳಿ ನಳಮಹಾರಾಜನನ್ನು ವಿಚಾರಿಸಲೆ? ಅಥವಾ ಮನೋಹರವಾಗಿಯೂ, ನಾನಾ ವಿಧವಾದ ವರ್ಣಗಳುಳ್ಳದ್ದಾಗಿಯೂ, ದೊಡ್ಡದೊಡ್ಡದಾದ ಬಂಡೆಗಳಿಂದಲೂ ಶಿಖರಗಳಿಂದಲೂ ಗೈರಿಕಾದಿಧಾತುಗಳಿಂದಲೂ ಯುಕ್ತವಾಗಿಯೂ, ಬಗೆಬಗೆಯಾದ ಕಲ್ಲುಗಳಿಂದ ಅಲಂಕೃತವಾಗಿಯೂ, ಈ ಮಹಾರಣ್ಯಕ್ಕೆ ಧ್ವಜಪ್ರಾಯವಾಗಿಯೂ, ಸಿಂಹ ಶಾರ್ದೂಲ ಗಜ ವರಾಹ ಭಲ್ಲೂಕ ಸಾರಂಗ ಮೊದಲಾದ ಮೃಗಗಳಿಗೆ ಆಶ್ರಯವಾಗಿಯೂ, ಅನೇಕ ಪಕ್ಷಿಗಳ ಕಲಕಲಧ್ವನಿಯುಳ್ಳದ್ದಾಗಿಯೂ, ಮುತ್ತುಗ ಅಶೋಕ ಪಗಡೆ ಸುರಗಿ ಕಾರಾಚ ಧವ ಘಣಿಯಾಲ ಮೊದಲಾದ ವೃಕ್ಷಗಳಿಂದಲೂ ಹೂವಿನ ಗಿಡಗಳಿಂದಲೂ ಶೋಭಿತವಾಗಿಯೂ, ಅನೇಕ ಜಲಪಕ್ಷಿಗಳಿಂದ ಕೂಡಿದ ಗಿರಿನದಿಗಳಿಂದ ಮನೋಹರವಾಗಿಯೂ ಇರುವ ಈ ಪರ್ವತರಾಜನನ್ನಾದರೂ ನಳಮಹಾರಾಜನ ವೃತ್ತಾಂತವನ್ನು ಕೇಳಲೆ?' ಎಂದು ಯೋಚಿಸಿ ಅದರ ಮುಂದೆ ಹೋಗಿ ನಿಂತು, 'ಎಲೈ ಪರ್ವತಶ್ರೇಷ್ಠನೆ, ನೋಡುವವರಿಗೆ ಮನೋಹರನಾಗಿಯೂ ಬಹುಪ್ರಾಣಿಗಳಿಗೆ ಆಶ್ರಯನಾಗಿಯೂ ಮಂಗಳಕರನಾಗಿಯೂ ಇರುವ ನಿನಗೆ ನಾನು ನಮಸ್ಕಾರಮಾಡುವೆನು. ನಾನು ರಾಜಪುತ್ರಿಯಾಗಿಯೂ ರಾಜನಿಗೆ ಸೊಸೆಯಾಗಿಯೂ ರಾಜಪತ್ನಿಯಾಗಿಯೂ ಇರುವವಳಲ್ಲದೆ ದಮಯಂತಿಯೆಂದು ಪ್ರಸಿದ್ಧಳಾದವಳು. ನಮ್ಮ ತಂದೆಯು ಮಹಾರಥಿಕನಾಗಿಯೂ, ವರ್ಣಾಶ್ರಮಧರ್ಮಗಳಿಗೆ ರಕ್ಷಕನಾಗಿಯೂ, ಅನೇಕ ದಕ್ಷಿಣೆಗಳನ್ನು ಕೊಟ್ಟು ರಾಜಸೂಯಾಶ್ವಮೇಧಯಾಗಗಳನ್ನು ಮಾಡುವದಕ್ಕೆ ಅರ್ಹನಾಗಿಯೂ, ಬ್ರಾಹ್ಮಣಪ್ರಿಯನಾಗಿಯೂ, ಸಾಧುವ್ಯಾಪಾರವುಳ್ಳವನಾಗಿಯೂ, ಸತ್ಯವಾದಿಯಾಗಿಯೂ, ಅಸೂಯಾರಹಿತನಾಗಿಯೂ, ಶೀಲವಂತನಾಗಿಯೂ, ಪರಾಕ್ರಮಶಾಲಿಯಾಗಿಯೂ, ಮಹತ್ತಾದ ಐಶ್ವರ್ಯವುಳ್ಳವನಾಗಿಯೂ, ಧರ್ಮಜ್ಞನಾಗಿಯೂ, ಶುಚಿರ್ಭೂತನಾಗಿಯೂ, ಸಕಲ ಶತ್ರುಗಳನ್ನೂ ಜಯಿಸಿ ಸಮರ್ಥನಾಗಿ ವಿದರ್ಭದೇಶಾಧಿಪತಿಯಾಗಿಯೂ ಇರುವ ಭೀಮಭೂಪಾಲಕನು. ನಿಷಧದೇಶಾಧಿಪತಿಯಾದ ವೀರಸೇನನೆಂದು ಪ್ರಖ್ಯಾತನಾದ ಮಹಾರಾಜನು ನನಗೆ ಮಾವನಾಗಬೇಕು. ಆ ವೀರಸೇನರಾಯನಿಗೆ ಮಗನಾಗಿಯೂ, ಸಂಪದ್ಯುಕ್ತನಾಗಿಯೂ, ಸತ್ಯಪರಾಕ್ರಮನಾಗಿಯೂ, ಕ್ರಮಪ್ರಾಪ್ತವಾದ ತನ್ನ ತಂದೆಯ ರಾಜ್ಯವನ್ನು ಆಳುತ್ತಿದ್ದವನಾಗಿಯೂ, ಶತ್ರುನಾಶಕನಾಗಿಯೂ, ಶ್ಯಾಮವರ್ಣನಾಗಿಯೂ, ಪುಣ್ಯಶ್ಲೋಕನೆಂದು ಪ್ರಖ್ಯಾತನಾಗಿಯೂ, ಬ್ರಾಹ್ಮಣಪ್ರಿಯನಾಗಿಯೂ, ವೇದಾಧ್ಯಯನಸಂಪನ್ನನಾಗಿಯೂ, ವಾಗ್ಮಿಯಾಗಿಯೂ, ಪುಣ್ಯಕಾರ್ಯಗಳಲ್ಲಿ ಆಸ

ಕ್ತನಾಗಿಯೂ, ಸೋಮಪಾನಮಾಡಿದವನಾಗಿಯೂ, ಧರ್ಮಾಗ್ನಿಯನ್ನಿಟ್ಟಿರುವನಾಗಿಯೂ, ಯಾಗಕರ್ತೃವಾಗಿಯೂ, ದಾತೃವಾಗಿಯೂ, ಯುದ್ಧದಲ್ಲಿ ಚತುರನಾಗಿಯೂ, ವರ್ಣಾಶ್ರಮಗಳನ್ನು ಪರಿಪಾಲಿಸುವದರಲ್ಲಿ ಸಮರ್ಥನಾಗಿಯೂ ಇರುವ ನಳಮಹಾರಾಜನು ನನಗೆ ಪತಿಯಾಗಬೇಕು. ಈಗ ನಾನು ಐಶ್ವರ್ಯವನ್ನು ಕಳೆದುಕೊಂಡು, ಪತಿಯನ್ನಗಲಿ, ಅನಾಥಳಾಗಿ ವ್ಯಸನಪಡುತ್ತ, ಆತನನ್ನು ಹುಡುಕಿಕೊಂಡು ಇಲ್ಲಿ ಬಂದಿರುವೆನು. ಎಲೈ ಪರ್ವತಶ್ರೇಷ್ಠನೆ, ನೀನು ಗಗನಚುಂಬಿಗಳಾದ ಅನೇಕ ಶೃಂಗಗಳಿಂದ ಕೂಡಿರುವನಾದ್ದರಿಂದ, ಈ ಘೋರವಾದ ಅರಣ್ಯದಲ್ಲಿ ಮತ್ತಗಜಗಾಮಿಯಾಗಿಯೂ, ಬುದ್ಧಿಶಾಲಿಯಾಗಿಯೂ, ಮಹಾಬಾಹುಶಾಲಿಯಾಗಿಯೂ, ಪರಾಕ್ರಮಶಾಲಿಯಾಗಿಯೂ ಕೋಪಯುಕ್ತನಾಗಿಯೂ, ಯಶೋವಂತನಾಗಿಯೂ, ನಿಷಧದೇಶಕ್ಕೆ ಅಧಿಪತಿಯಾಗಿಯೂ, ಇರುವ ನಳಮಹಾರಾಜನನ್ನು ನೀನು ಕಂಡೆಯಾ ? ಏಕಾಕಿನಿಯಾಗಿ ದುಃಖದಿಂದ ಕಳವಳಪಡುತ್ತಿರುವ ನನ್ನನ್ನು, ನಿನ್ನ ಮಗಳು ದುಃಖಪಡುತ್ತಿದ್ದರೆ ಹ್ಯಾಗೆ ಸಮಾಧಾನಮಾಡುವೆಯೋ ಹಾಗೆ ಯಾತಕ್ಕೋಸ್ಕರ ಸಮಾಧಾನಮಾಡದೇ ಇರುವೆ ? ಹಾ ! ಪತಿಯೆ, ಸತ್ಯಸಂಧನಾಗಿಯೂ ಧರ್ಮಜ್ಞನಾಗಿಯೂ ಶೂರನಾಗಿಯೂ ಇರುವ ನೀನು ಈ ಅರಣ್ಯದಲ್ಲಿದ್ದರೆ ನನಗೆ ದರ್ಶನವನ್ನು ಕೊಡು ; ಹಾ ! ಮಹಾರಾಜನೆ, ಮನೋಹರವಾಗಿಯೂ, ಮೇಘದಂತೆ ಗಂಭೀರವಾಗಿಯೂ, ಅಮೃತೋಪಮಾನವಾಗಿಯೂ ಇರುವ 'ಎಲೆ ವೈದರ್ಭಿ' ಎಂಬ ಮಂಗಳಕರವಾದ ನಿನ್ನ ಮಾತನ್ನು ನಾನೆಂದಿಗೆ ಕೇಳುವೆನು ! ಹಾ ! ಧರ್ಮಜ್ಞನೆ ಸತ್ಯವಾಗಿಯೂ, ಧೀರನಾಗಿಯೂ, ನನ್ನ ದುಃಖವನ್ನು ಪರಿಹಾರ ಮಾಡತಕ್ಕದ್ದಾಗಿಯೂ ಇರುವ ಮಾತನ್ನಾಡಿ ಭಯಪಡುತ್ತಿರುವ ನನ್ನನ್ನು ಸಮಾಧಾನಪಡಿಸು' ಎಂದು ಆ ಪರ್ವತವನ್ನು ಕುರಿತು ಹೇಳಿ, ಬಳಿಕ ಸರ್ವಾಂಗಸುಂದರಿಯಾದ ನಳಮಹಾರಾಜಪತ್ನಿಯಾದ ಆ ದಮಯಂತಿಯು ಅಲ್ಲಿಂದ ಉತ್ತರದಿಕ್ಕಿಗೆ ಹೊರಟು, ಮೂರುದಿವಸ ದಾರಿಯನ್ನು ನಡೆದು, ದಿವ್ಯವಾದ ವನದಿಂದ ಶೋಭಿತವಾಗಿಯೂ, ವಸಿಷ್ಠ ಭೃಗು ಅತ್ರಿ ಋಷಿಗಳಿಗೆ ಸಮಾನರಾಗಿಯೂ ತಪೋನಿಷ್ಠರಾಗಿಯೂ ಜಿತೇಂದ್ರಿಯರಾಗಿಯೂ ನಿಯತವಾದ ಆಹಾರವುಳ್ಳವರಾಗಿಯೂ ಶುಚಿರ್ಭೂತರಾಗಿಯೂ ಪರ್ಣಾಹಾರ ಜಲಾಹಾರ ವಾತಾಹಾರಗಳನ್ನು ಮಾಡುತ್ತಾ ಮೋಕ್ಷಮಾರ್ಗವನ್ನು ಅಪೇಕ್ಷಿಸಿ ನಾರುಮಡಿಯನ್ನೂ ಕೃಷ್ಣಾಜಿನವನ್ನೂ ಧರಿಸಿರುವ ಮಹಾತ್ಮರಾದ ಋಷಿಗಳಿಂದ ಕೂಡಿರುವದಾಗಿಯೂ, ನಾನಾವಿಧವಾದ ಪಕ್ಷಿಗಳಿಗೂ ಮೃಗಗಳಿಗೂ ಕಪಿಗಳಿಗೂ ಆಶ್ರಿತವಾಗಿಯೂ ಇರುವ ಬಂದು ಋಷ್ಯಾಶ್ರಮವನ್ನು ಕಂಡು, ಸ್ವಲ್ಪ ಮನಸ್ಸಮಾಧಾನವನ್ನು ಮಾಡಿಕೊಂಡು, ಆ ಆಶ್ರಮವನ್ನು ಹೊಕ್ಕು ವೃದ್ಧರಾದ ಮಹರ್ಷಿಗಳಿಗೆ ವಿನಯದಿಂದ ವಂದನೆಯನ್ನು ಮಾಡಿ ಅವರ ಮುಂದೆ ನಿಂತುಕೊಂಡಳು.

ಅನಂತರದಲ್ಲಿ ಅಲ್ಲಿದ್ದ ಸಕಲರಾದ ಋಷಿಗಳೂ ಆಕೆಯನ್ನು ನೋಡಿ 'ಎಲೆ ಮಗಳೆ, ನಿನಗೆ ಸುಖಾಗಮನವೆ ?' ಎಂದು ಕೇಳಿ, ಆಕೆಗೆ ಯಥೋಕ್ತವಾಗಿ ಸತ್ಕಾರವನ್ನು ಮಾಡಿ, ಕೂತುಕೊ ಎಂದು ನುಡಿದು, 'ಎಲೆ ಮಗಳೆ, ನಮ್ಮಿಂದ ನಿನಗೇನಾಗಬೇಕು ?' ಎಂದು ಕೇಳಿದರು. ಬಳಿಕ ದಮಯಂತಿಯು ಆ ಋಷಿಗಳನ್ನು ಕುರಿತು 'ಎಲೈ ಪೂಜ್ಯರೆ, ತಮ್ಮ ತಪಸ್ಸು ನಿರ್ವಿಘ್ನವಾಗಿ ನಡೆಯುತ್ತಿರುವದೆ ? ತಮ್ಮ ಅಗ್ನಿಹೋತ್ರಗಳು ಸುರಕ್ಷಿತವಾಗಿರುವವೆ ? ನಿಮ್ಮ ಋಷಿಧರ್ಮಗಳು ಸರಿಯಾಗಿ ನಡೆಯುತ್ತಿರುವವೆ ? ಇಲ್ಲಿರುವ ಎಲ್ಲಾ ಮೃಗಗಳೂ ಪಕ್ಷಿಗಳೂ ಕುಶಲವಾಗಿರುವವೆ ?' ಎಂದು ಕೇಳಲು, ಆ ಋಷಿಗಳು 'ಎಲೌ ಕೀರ್ತಿಶಾಲಿನಿಯೆ, ಎಲ್ಲಾ ಭಾಗದಲ್ಲೂ ಕುಶಲವು. ನೀನು ಯಾರು ? ಯಾವಕಾರ್ಯವನ್ನು ಬಯಸಿ ಇಲ್ಲಿಗೆ ಬಂದೆ ? ನಿನ್ನ ಉತ್ತಮವಾದ ಸೌಂದರ್ಯವನ್ನೂ ಕಾಂತಿಯನ್ನೂ ನೋಡಿ, ನಮಗೆ ಬಹಳ ಆಶ್ಚರ್ಯವಾಗಿರುವದು. ನೀನು ದುಃಖವನ್ನು ಬಿಟ್ಟು ಸಮಾಧಾನಮಾಡಿಕೊ. ನೀನು ಈ ಅರಣ್ಯಕ್ಕೆ ಅಭಿಮಾನದೇವತೆಯೋ, ಅಥವಾ ಈ ಪರ್ವತಕ್ಕೆ ಅಭಿಮಾನದೇವತೆಯೋ, ಇಲ್ಲದಿದ್ದರೆ ಈ ನದಿಗೆ ಅಭಿಮಾನದೇವತೆಯೋ ನಿಜವಾಗಿ ಹೇಳು' ಎಂದು ಕೇಳಿದರು. ಅದನ್ನು ಕೇಳಿ ದಮಯಂತಿಯು ಆ ಋಷಿಗಳನ್ನು ಕುರಿತು 'ನಾನು ಅರಣ್ಯಾಭಿಮಾನದೇವತೆಯೂ ಅಲ್ಲ, ಪರ್ವತಾಭಿಮಾನದೇವತೆಯೂ ಅಲ್ಲ, ಅಥವಾ ನದ್ಯಭಿಮಾನದೇವತೆಯೂ ಅಲ್ಲ ; ಎಲೈ ತಪಸ್ವಿಗಳಿರಾ, ನನ್ನನ್ನು ನೀವು ಮನುಷ್ಯಮಾತಳೆಂದು ತಿಳಿಯಿರಿ. ನನ್ನ ವೃತ್ತಾಂತವನ್ನು ವಿಸ್ತಾರವಾಗಿ ಹೇಳುವೆನು ಕೇಳಿ. ನಾನು ವಿದರ್ಭದೇಶಾಧಿಪತಿಯಾದ ಭೀಮಭೂಪಾಲಕನ ಮಗಳು ; ನಿಷಧದೇಶಾಧಿಪತಿಯಾದ ನಳಮಹಾರಾಜನ ಪತ್ನಿಯು. ಧರ್ಮಾತ್ಮನಾದ ಆ ನಳಮಹಾ

ರಾಜನು ದುಷ್ಟಾತ್ಮರೂ ವಂಚಕರೂ ನೀಚರೂ ದುರ್ಬುದ್ಧಿಗಳೂ ಪಗಡೆಯಾಟದಲ್ಲಿ ಸಮರ್ಥರೂ ಆದ ಕೆಲವರೊಡನೆ ಜೂಜಾಡಿ ರಾಜ್ಯವನ್ನೂ ಕೋಶವನ್ನೂ ಕಳೆದುಕೊಂಡು, ರಾಜಧಾನಿಯನ್ನು ಬಿಟ್ಟು ವನಕ್ಕೆ ಬಂದನು. ಅಂಥ ರಾಜೇಂದ್ರನಿಗೆ ನಾನು ಪತ್ನಿಯಾಗಬೇಕು. ನನ್ನನ್ನು ದಮಯಂತಿಯೆಂದು ಕರೆಯುವರು. ನಾನು ಆತನನ್ನು ನೋಡುವದಕ್ಕೋಸ್ಕರ ಬಂದು, ಈ ಅರಣ್ಯದಲ್ಲಿಯೂ ಪರ್ವತಗಳಲ್ಲಿಯೂ ನದೀತೀರಗಳಲ್ಲಿಯೂ ಸರೋವರಪ್ರಾಂತಗಳಲ್ಲಿಯೂ ಹಳ್ಳಕೊಳ್ಳಗಳಲ್ಲಿಯೂ ಆ ಮಹಾತ್ಮನನ್ನು ಹುಡುಕುತ್ತ, ದುಃಖಿತಳಾಗಿ ಸಂಚರಿಸುತ್ತಿರುವೆನು. ಮಹಾತ್ಮರಾದ ನಿಮ್ಮ ಈ ರಮ್ಯವಾದ ತಪೋವನಕ್ಕೇನಾದರೂ ಆ ಮಹಾರಾಜನು ಬಂದಿರುವನೆ ? ಎಲೈ ಮಹಾನುಭಾವರೆ, ಆತನ ನಿಮಿತ್ತವಾಗಿ ನಾನು ದುಷ್ಟಮೃಗಗಳಿಂದ ಕೂಡಿರುವ ಭಯಂಕರವಾದ ಈ ಘೋರಾರಣ್ಯಕ್ಕೆ ಬಂದಿರುವೆನು. ಇನ್ನು ಕೆಲವು ದಿವಸಗಳೊಳಗಾಗಿ ನನ್ನ ಪತಿಯನ್ನು ನಾನು ಕಾಣದೆ ಹೋದರೆ, ಯೋಗಬಲದಿಂದ ಈ ಶರೀರವನ್ನು ತ್ಯಾಗಮಾಡಿ ಮೋಕ್ಷವನ್ನು ಪಡೆಯುವೆನು. ಮಹಾತ್ಮನಾದ ಆತನನ್ನು ಅಗಲಿ ನಾನು ಬದುಕಿದ್ದರಿಂದ ಪ್ರಯೋಜನವೇನು ? ಈಗ ಪತಿಯನ್ನಗಲಿ ದುಃಖಪಡುತ್ತಿರುವ ನಾನು ಹ್ಯಾಗೆತಾನೇ ಇರಲಿ ?' ಎಂದು ಮೊರೆಯಿಡುತ್ತಾ ರೋದನಮಾಡತೊಡಗಿದಳು. ಮಹಾನುಭಾವರಾದ ಆ ಋಷಿಗಳು ಆಕೆಯನ್ನು ಕುರಿತು 'ಎಲೌ ಮಂಗಳಾಂಗಿಯೆ, ಮುಂದೆ ನಿನಗೆ ಒಳ್ಳೇ ಸುಖಕಾಲವು ಪ್ರಾಪ್ತವಾಗುವದು. ಇದನ್ನು ನಾವು ತಪಶ್ಶಕ್ತಿಯಿಂದ ಬಲ್ಲೆವು. ನಳಮಹಾರಾಜನು ಪುನಃ ನಿಷಧದೇಶಕ್ಕೆ ಅಧಿಪತಿಯಾಗಿ, ಧರ್ಮಾತ್ಮರಲ್ಲಿ ಶ್ರೇಷ್ಠನೆನಿಸಿಕೊಂಡು, ದುಃಖದಿಂದಲೂ ಪಾಪದಿಂದಲೂ ಮುಕ್ತನಾಗಿ, ಸಕಲೈಶ್ವರ್ಯಸಂಪನ್ನನಾಗಿ, ಶತ್ರುಗಳಿಗೆ ಭಯಂಕರನೂ, ಮಿತ್ರರಿಗೆ ಸುಖಪ್ರದನೂ ಆಗಿರುವದನ್ನು ನೀನು ಕ್ಷಿಪ್ರದಲ್ಲೇ ನೋಡುವೆ' ಎಂದು ನುಡಿದು, ತಮ್ಮ ತಮ್ಮ ಅಗ್ನಿಹೋತ್ರಗಳಿಂದಲೂ ಆ ತಪೋವನದಿಂದಲೂ ಸಹ ಆ ಮಹರ್ಷಿಗಳು ಅಂತರ್ಧಾನವನ್ನು ಹೊಂದಿದರು.

ಬಳಿಕ ದಮಯಂತಿಯು ಮಹತ್ತಾದ ಆ ಅದ್ಭುತವನ್ನು ನೋಡಿ ಆಶ್ಚರ್ಯಪಡುತ್ತ 'ಇದೇನು! ನನಗೇನಾದರೂ ಸ್ವಪ್ನವಾಯಿತೆ? ಹೀಗೆಲ್ಲಾ ಆಗುವದಕ್ಕೆ ಕಾರಣವೇನು ? ಆ ಆಶ್ರಮವೆಲ್ಲಿ? ಆ ಋಷಿಗಳೆಲ್ಲಿ? ಮನೋಹರವಾದ ಉದಕವುಳ್ಳ ಆ ಪುಣ್ಯನದಿ ಎಲ್ಲಿ ಹೋಯಿತು? ಪುಷ್ಪಗಳಿಂದಲೂ ಫಲಗಳಿಂದಲೂ ಭರಿತವಾಗಿದ್ದ ಆ ವೃಕ್ಷಗಳು ಎಲ್ಲಿ ಮರೆಯಾದವು?' ಎಂದು ಹಾಗೇ ಧ್ಯಾನಿಸುತ್ತ, ಪತಿಶೋಕದಿಂದ ಪೀಡಿತಳಾಗಿ, ವಿವರ್ಣವಾದ ಮುಖವುಳ್ಳವಳಾಗಿ, ಮತ್ತೊಂದು ಅರಣ್ಯಪ್ರದೇಶಕ್ಕೆ ಹೋಗಿ, ಕಂಬನಿಗಳನ್ನು ತುಂಬಿಕೊಂಡು ಪ್ರಲಾಪಿಸುತ್ತ, ಅಲ್ಲಿ ಪುಷ್ಪಗಳಿಂದಲೂ ಚಿಗುರುಗಳಿಂದಲೂ ಪಕ್ಷಿಧ್ವನಿಗಳಿಂದಲೂ ಮನೋಹರವಾದ ಒಂದು ಅಶೋಕ ವೃಕ್ಷವನ್ನು ಕಂಡು, ಅದರ ಸಮೀಪಕ್ಕೆ ಹೋಗಿ, ಅದನ್ನು ನೋಡಿ ಈ ವನಮಧ್ಯದಲ್ಲಿರುವ ಈ ವೃಕ್ಷವು ಅನೇಕ ಪುಷ್ಪಫಲರೂಪವಾದ ಅಲಂಕಾರಗಳಿಂದ ಕೂಡಿ ದೊಡ್ಡಬೆಟ್ಟದಂತೆ ಉನ್ನತವಾಗಿ ಶೋಭಿಸುತ್ತಿರುವದು ; ಇದು ಆಶ್ಚರ್ಯಕರವಾದದ್ದು ಎಂದು ಹೇಳುತ್ತಾ ಅದನ್ನು ಕುರಿತು 'ಎಲೈ ಮನೋಹರವಾದ ಅಶೋಕ ವೃಕ್ಷವೆ, ನೀನು ನನ್ನನ್ನು ಶೋಕರಹಿತಳನ್ನಾಗಿ ಮಾಡು. ಶತ್ರುಸಂಹಾರಕನಾಗಿಯೂ ನಿಷಧದೇಶಕ್ಕೆ ಅಧಿಪತಿಯಾಗಿಯೂ, ಸುಕುಮಾರಾಂಗನಾಗಿಯೂ, ನನಗೆ ಪ್ರಿಯನಾಗಿಯೂ, ಅರ್ಧವಸ್ತ್ರವನ್ನು ಧರಿಸಿ ಸಂಚರಿಸುತ್ತಾ ವ್ಯಸನಪಡುತ್ತಿರುವನಾಗಿಯೂ ಇರುವ ನಳಮಹಾರಾಜನು ಶೋಕಭಯರಹಿತನಾಗಿ ಮಾರ್ಗಾಯಾಸವಿಲ್ಲದೆ ಈ ಅರಣ್ಯಕ್ಕೆ ಬಂದದ್ದನ್ನು ನೀನೇನಾದರೂ ಕಂಡೆಯಾ? ಎಲೈ ಶೋಕನಾಶಕರವಾದ ಅಶೋಕ ವೃಕ್ಷವೆ, ನೀನು ನಾವಿಬ್ಬರೂ ಹ್ಯಾಗೆ ಶೋಕರಹಿತರಾಗಿರುವೆವೋ ಹಾಗೆ ಮಾಡಿ, ನಿನ್ನ ಅಶೋಕವೆಂಬ ಹೆಸರನ್ನು ಸಾರ್ಥಕಮಾಡಿಕೊ' ಎಂದು ದುಃಖಪಡುತ್ತ, ಆ ವೃಕ್ಷವನ್ನು ಸುತ್ತುಹಾಕಿಕೊಂಡು ಅಲ್ಲಿಂದ ಮತ್ತೊಂದು ಘೋರವಾದ ಅಡವಿಯನ್ನು ಹೊಕ್ಕು, ಅಲ್ಲಿ ಅನೇಕವಾದ ವೃಕ್ಷಗಳನ್ನೂ ನದಿಗಳನ್ನೂ ರಮ್ಯವಾದ ಪರ್ವತಗಳನ್ನೂ ಮೃಗಗಳನ್ನೂ ಪಕ್ಷಿಗಳನ್ನೂ ಪರ್ವತಗುಹೆಗಳನ್ನೂ ಪರ್ವತದ ತಪ್ಪಲುಗಳನ್ನೂ ಭಯಂಕರವಾದ ಮಹಾನದಿಗಳನ್ನೂ ಕಂಡು, ಅಲ್ಲಲ್ಲೇ ನಳಮಹಾರಾಜನನ್ನು ಹುಡುಕುತ್ತ, ಬಹುದೂರ ನಡೆದು, ಅಲ್ಲಿ ರಮ್ಯವಾಗಿಯೂ ಶೀತೋದಕವುಳ್ಳದ್ದಾಗಿಯೂ ಮಹತ್ತಾದ ಮಡುಗಳುಳ್ಳದ್ದಾಗಿಯೂ ಭಾವಂಜೇಗಿಡಗಳಿಂದ ಶೋಭಿತವಾದ ದಡವುಳ್ಳದ್ದಾಗಿಯೂ, ಹಂಸ ಚಕ್ರವಾಕ

ಕುರವಕ್ಕಿಗಳ ಕಲಕಲಧ್ವನಿಯಿಂದ ಕೂಡಿರುವದಾಗಿಯೂ, ಆಮೆ ಮೊಸಳೆ ಮೀನು ಮೊದಲಾದ ಜಲಚರಪ್ರಾಣಿಗಳಿಂದ ಭಯಂಕರವಾಗಿಯೂ, ಅಲ್ಲಲ್ಲೇ ಮರಳು ಗುಡ್ಡೆಗಳಿಂದ ರಮಣೀಯವಾಗಿಯೂ ಇರುವ ಒಂದು ದೊಡ್ಡ ನದಿಯನ್ನು ದಾಟುತ್ತಿರುವ ಆನೆ ಕುದುರೆ ರಥಗಳಿಂದ ನಿಬಿಡವಾದ ಒಂದು ಜನಸಮೂಹವನ್ನು ನೋಡಿ, ಅಲ್ಲಿ ಹೊಕ್ಕು, ಅರ್ಧವಸ್ತ್ರವನ್ನುಟ್ಟು, ಕೃಶಳಾಗಿ, ಧೂಳುಕವಿದಿರುವ ಮುಂಗುರುಳುಳ್ಳವಳಾಗಿ, ಹುಚ್ಚಳಂತೆ ವಿವರ್ಣಳಾಗಿ ವ್ಯಸನಪಡುತ್ತಿದ್ದಳು. ಈ ಪ್ರಕಾರವಿರುವ ದಮಯಂತಿಯನ್ನು ನೋಡಿ, ಆ ಗುಂಪಿನಲ್ಲಿ ಕೆಲವರು ಭಯಪಟ್ಟು ಓಡಿಹೋದರು; ಕೆಲವರು ಬಹಳವಾಗಿ ಚಿಂತಿಸುತ್ತಿದ್ದರು; ಕೆಲವರು ಗಟ್ಟಿಯಾಗಿ ಅರಚಿಕೊಂಡರು; ಕೆಲವರು ಆಕೆಯನ್ನು ನೋಡಿ ಹಾಸ್ಯಮಾಡಿದರು; ಕೆಲವರು ಆಕೆಯಲ್ಲಿ ದೋಷಾರೋಪಣೆಯನ್ನು ಮಾಡಿದರು; ಕೆಲವರು ಆಕೆಯನ್ನು ಕರುಣಿಸಿದರು. ಮತ್ತು ಕೆಲವರು ಆಕೆಯನ್ನು ನೋಡಿ ‘ ಎಲೌ ಮಂಗಳಾಂಗಿಯೆ, ನೀನು ಯಾರು? ಯಾರನ್ನು ಸೇರಿದವಳು? ಈ ಅರಣ್ಯದಲ್ಲಿ ಏನನ್ನು ಹುಡುಕುತ್ತಿರುವೆ? ನಿನ್ನನ್ನು ನೋಡಿದರೆ, ನಮಗೆ ವ್ಯಸನವಾಗುವದಲ್ಲಾ! ನೀನು ಮನುಷ್ಯಳೋ, ವನದೇವತೆಯೋ, ಪರ್ವತಾಭಿಮಾನದೇವತೆಯೋ, ದಿಗ್ದೇವತೆಯೋ, ಯಕ್ಷಿಯೋ, ರಾಕ್ಷಸಿಯೋ, ಅಥವಾ ಉತ್ತಮಸ್ತ್ರೀಯೋ, ಯಾರೋ ಯಥಾರ್ಥವಾಗಿ ಹೇಳು. ನಾವು ನಿನಗೆ ಶರಣಾಗತರಾಗಿರುವೆವು. ಸರ್ವಪ್ರಕಾರದಿಂದಲೂ ನಮ್ಮನ್ನು ರಕ್ಷಿಸಿ ನಮಗೆ ಒಳ್ಳೇದನ್ನು ಮಾಡು. ಈ ನಮ್ಮ ಜನವೆಲ್ಲವೂ ಇಲ್ಲಿಂದ ಕ್ಷೇಮವಾಗಿ ಬೇಗ ಮುಂದಕ್ಕೆ ಪ್ರಯಾಣಮಾಡಿ ಸುಖವಾಗಿರುವಂತೆ ಮಾಡು’ ಎಂದರು. ಆಗ ಪತಿವ್ರತಾಶಿರೋಮಣಿಯಾದ ದಮಯಂತಿಯು ಪತಿಯನ್ನಗಲಿ ವ್ಯಸನಪಡುತ್ತ, ಆ ಗುಂಪಿನಲ್ಲಿರುವವರನ್ನು ಕುರಿತು ‘ ಇಲ್ಲಿರುವ ವರ್ತಕನೂ ಆತನಿಗೆ ಸಹಾಯರಾಗಿರತಕ್ಕ ಅಬಾಲವೃದ್ಧರಾದ ಸಮಸ್ತರೂ ಕೇಳಿರಿ: ನಾನು ಮನುಷ್ಯಸ್ತ್ರೀಯು, ವಿದರ್ಭರಾಜನ ಮಗಳು, ವೀರಸೇನರಾಯನ ಸೊಸೆಯು, ನಳಮಹಾರಾಜನ ಪತ್ನಿಯು. ಈ ಅರಣ್ಯದಲ್ಲಿ ನನ್ನ ಪತಿಯಾದ ಆತನನ್ನು ಹುಡುಕುತ್ತಿರುವೆನು. ಆ ಮಹಾರಾಜನನ್ನು ನೀವೇನಾದರೂ ಕಂಡಿದ್ದರೆ ಬೇಗ ಹೇಳಿ’ ಎಂದು ಕೇಳಿದಳು. ಅದನ್ನು ಕೇಳಿ ಆ ಜನಸಮೂಹಕ್ಕೆ ಅಧಿಪತಿಯಾದ ಶುಚಿಯೆಂಬ ವರ್ತಕನು ದಮಯಂತಿಯನ್ನು ಕುರಿತು ‘ ಎಲೌ ಮಂಗಳಾಂಗಿಯೆ, ನನ್ನ ಮಾತನ್ನು ಕೇಳು. ನಾನು ಈ ಗುಂಪಿಗೆ ಒಡೆಯನಾದವನು. ನನ್ನ ಹೆಸರನ್ನು ಶುಚಿಯೆಂದು ಹೇಳುವರು. ನಿರ್ಜನವಾದ ಈ ಅರಣ್ಯದಲ್ಲಿ ನಾನು ಅನೇಕ ಆನೆಗಳನ್ನೂ ಸಿಂಹಗಳನ್ನೂ ಕಾಡುಕೋಣಗಳನ್ನೂ ಹುಲಿಗಳನ್ನೂ ಕರಡಿಗಳನ್ನೂ ನೋಡಿದೆನು. ನಿನ್ನೊಬ್ಬಳನ್ನು ಹೊರತಾಗಿ ಇನ್ನ್ಯಾವ ಮನುಷ್ಯಮಾತ್ರದವನನ್ನೂ ನೋಡಲಿಲ್ಲ. ಹೀಗಿರುವಲ್ಲಿ ನಿನ್ನ ಪತಿಯಾದ ನಳನೆಂಬುವನನ್ನು ನಾನು ಹ್ಯಾಗೆ ಕಾಣಲಿ? ಯಕ್ಷಾಧಿಪತಿಯಾದ ಮಣಿಭದ್ರನು ಈ ಅರಣ್ಯದಲ್ಲಿ ನಮ್ಮನ್ನು ರಕ್ಷಿಸಲಿ’ ಎಂದನು. ಆಗ ದಮಯಂತಿಯು ಆ ವರ್ತಕಶ್ರೇಷ್ಠನನ್ನೂ ಉಳಿದವರನ್ನೂ ಸಹ ನೋಡಿ ‘ ಈ ಜನಸಮೂಹವು ಎತ್ತ ಹೋಗುವದು? ನನಗೆ ತಿಳಿಯಿಸಿರಿ’ ಎಂದು ಕೇಳಿದಳು. ಅದಕ್ಕೆ ಆ ವರ್ತಕನು ಆ ಜನಗಳೆಲ್ಲರೂ ಚೇದಿದೇಶಾಧಿಪತಿಯಾದ ಸತ್ಯಸಂಧನಾದ ಸುಬಾಹುರಾಜನ ಪಟ್ಟಣಕ್ಕೆ ಲಾಭವನ್ನು ಸಂಪಾದಿಸುವದಕ್ಕೋಸ್ಕರ ಹೋಗುವರೆಂದು ತಿಳಿಸಿದನು” ಎಂದು ಬೃಹದಶ್ವನು ಧರ್ಮರಾಯನಿಗೆ ಹೇಳಿದನು.

## ೬೫ನೇ ಅಧ್ಯಾಯ.—ನಳೋಪಾಖ್ಯಾನ—(ದಮಯಂತಿಯು ಸುಬಾಹುವಿನ ಪಟ್ಟಣವನ್ನು ಸೇರಿದ್ದು.)

ವೈಶಂಪಾಯನ ಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಬೃಹದಶ್ವನು ಯುಧಿಷ್ಠಿರನನ್ನು ಕುರಿತು, “ ಎಲೈ ಧರ್ಮರಾಯನೆ, ಆ ವರ್ತಕನಮಾತನ್ನು ಕೇಳಿ ದಮಯಂತಿಯು ಪತಿಯನ್ನು ಹುಡುಕುತ್ತ, ಆ ಜನಸಮೂಹದೊಡನೆಯೇ ಹೊರಟಳು. ಬಳಿಕ ಆ ಜನಸಮೂಹವು ಬಹುದಿವಸ ದಾರಿಯನ್ನು ನಡೆದು ಬಳಲಿ, ಘೋರವಾದ ಒಂದು ಅರಣ್ಯದಲ್ಲಿ ತಿಳಿಯಾಗಿಯೂ ಶೀತಳವಾಗಿಯೂ ಇರುವ ನೀರುಳ್ಳದ್ದಾಗಿ, ಕಮಲ ಕಲ್ಹಾರ ಮೊದಲಾದ ಪುಷ್ಪಗಳಿಂದ ರಮಣೀಯವಾಗಿ, ಸರ್ವತೋಭದ್ರವಾಗಿರುವ ಪದ್ಮಸಾಗಂಧಿಕವೆಂಬ ಒಂದು ಸರೋವರವನ್ನು ಕಂಡು, ಆ ಪ್ರದೇಶವು ಫಲ ಪುಷ್ಪ ತೃಣ ಕಾಷ್ಠಗಳಿಂದ ಭರಿತವಾಗಿಯೂ ಅನೇಕ ಪಕ್ಷಿಧ್ವನಿಯಿಂದ ಮನೋಹರವಾಗಿಯೂ ಇದ್ದದ್ದರಿಂದ ಅಲ್ಲಿಯೇ

ಇಳಿಯಬೇಕೆಂದು ಬಯಸಿ, ತಮ್ಮ ಸ್ವಾಮಿಯ ಅಪ್ಪಣೆಯಿಂದ ಆ ಸರೋವರದ ಪಶ್ಚಿಮಭಾಗದಲ್ಲಿ ಇಳಿದು ಕೊಂಡಿದ್ದರು. ಆ ದಿವಸ ಅರ್ಧರಾತ್ರಿಯಲ್ಲಿ ಎಲ್ಲರೂ ಮಾರ್ಗಾಯಾಸದಿಂದ ನಿಶ್ಶಬ್ದವಾಗಿ ಮಲಗಿರಲು, ಒಂದು ಮದ್ದಾನೆಗುಂಪು ಬಾಯಾರಿ ನೀರುಕುಡಿಯುವದಕ್ಕೋಸ್ಕರ ಆನೆಗಳ ಮದೋದಕದಿಂದ ಪರಿಮಳಯುಕ್ತವಾದ ಒಂದು ಗಿರಿನದಿಯ ಸಮೀಪಕ್ಕೆ ಬಂದು, ಆ ಜನಸಮೂಹವನ್ನೂ ಅಲ್ಲಿರುವ ಊರಾನೆಗಳನ್ನೂ ಸಹ ನೋಡಿ, ಆ ಆನೆಗಳ ಸಂಗಡ ಹೋರಾಡಬೇಕೆಂದು ಅವುಗಳನ್ನು ಅಟ್ಟಿಕೊಂಡು ಹೋದವು. ಆಗ ಆ ಆನೆಗಳು ಬಂದ ಕೂಡನೆ ಬಂದು ಹೋರಾಡುವ ವೇಗವು ಪರ್ವತದ ತುದಿಯಿಂದ ಜಾರಿ ನೆಲದಮೇಲೆ ಬೀಳುವ ಕೋಡುಗಲ್ಲುಗಳ ವೇಗದಂತೆ ದುಸ್ಸಹವಾಗಿತ್ತು. ಹೀಗೆ ಹೋರಾಡುತ್ತಿದ್ದ ಆ ಆನೆಗಳಿಂದ ಆ ಅರಣ್ಯದ ಮಾರ್ಗಗಳೆಲ್ಲಾ ನಷ್ಟವಾಗಿ ಹೋದವು. ಆ ಸಮಯದಲ್ಲಿ ಆ ಆನೆಗಳು ಸರೋವರದ ಮಾರ್ಗದಲ್ಲಿ ಮಲಗಿಕೊಂಡು ಭಯಪಟ್ಟು ಹೊರಳಾಡುತ್ತಿದ್ದ ಆ ಜನಸಮೂಹವನ್ನು ತುಳಿದುಹಾಕಲು, ಆ ಜನಗಳು ನಿದ್ರಾಲಸ್ಯದಿಂದ ಏನೂ ತೋರದೆ ಹಾಹಾಕಾರಪಡುತ್ತ, ಎಲ್ಲಾದರೂ ಹೋಗಿ ತಪ್ಪಿಸಿಕೊಂಡು ಬದುಕೇವೇ ಎಂದು ಅಲ್ಲಿದ್ದ ಬಂದು ಪೊದರನ್ನು ಹೊಗಬೇಕೆಂದು ಓಡಿಹೋಗುತ್ತಿದ್ದರು. ಆಗ ಆ ವನಗಜಗಳು ಅವರಲ್ಲಿ ಕೆಲವರನ್ನು ಕೊಂಬುಗಳಿಂದಲೂ ಕೆಲವರನ್ನು ಸೊಂಡಿಲುಗಳಿಂದಲೂ ಸಂಹಾರಮಾಡಿ ಅವರ ಒಂಟೆಗಳನ್ನೂ ಕುದುರೆಗಳನ್ನೂ ಆಳುಗಳನ್ನೂ ಧ್ವಂಸಮಾಡಲುಪಕ್ರಮಿಸಲು, ಅವರೆಲ್ಲರೂ ಭಯದಿಂದ ಓಡಿಹೋಗುತ್ತ ಒಬ್ಬರಮೇಲೆ ಒಬ್ಬರು ಬಿದ್ದು ಅರಚಿಕೊಳ್ಳುತ್ತ ಭೂಮಿಯಲ್ಲಿ ಬಿದ್ದರು. ಆಗ ಕೆಲವರು ಅಲ್ಲಿದ್ದ ದೊಡ್ಡದೊಡ್ಡ ಮರಗಳನ್ನೇರಿ ಭಯದಿಂದ ನಡುಗುತ್ತ ಬಿದ್ದರು. ಹೀಗೆ ನಾನಾಪ್ರಕಾರವಾಗಿ ಆ ಜನಗಳು ಆನೆಗಳಿಂದಲೂ ದೈವಗತಿಯಿಂದಲೂ ಹತರಾಗಿ ಹೋದರು. ಆಕಾಲದಲ್ಲಿ 'ಇದೋ ಇಲ್ಲಿ ಕಾಡುಕಿಚ್ಚು ಎದ್ದಿರುವದು ! ಕಷ್ಟ ! ಕಷ್ಟ ! ಓಡಿಹೋಗಿ ಓಡಿಹೋಗಿ ! ನಿಮ್ಮನಿಮ್ಮನ್ನು ರಕ್ಷಿಸಿಕೊಳ್ಳಿರಿ ರಕ್ಷಿಸಿಕೊಳ್ಳಿರಿ ! ಈ ರತ್ನರಾಶಿಗಳೆಲ್ಲಾ ಸಿಡಿದು ಹೋಗುವವು, ಆರಿಸಿಕೊಳ್ಳಿರಿ ; ಈ ಧನವು ಸಾಮಾನ್ಯವಾದದ್ದಲ್ಲ ; ನನ್ನ ಮಾತು ನಿಜ ; ಸಾರಿಸಾರಿ ಹೇಳುತ್ತೇನೆ ; ಚೆನ್ನಾಗಿ ಯೋಚಿಸಿರಿ' ಎಂದು ಮಾತನಾಡಿಕೊಂಡು ಭಯದಿಂದ ಓಡಿಹೋಗುವ ಜನಗಳ ಮಹತ್ತಾದ ಶಬ್ದವು ಮೂರು ಲೋಕಕ್ಕೂ ಭಯಂಕರವಾಗಿ ಕೇಳಿಸಿತು.

ಈ ಪ್ರಕಾರ ಆ ಜನಗಳು ನಷ್ಟರಾಗುತ್ತಿರಲು, ಕಮಲಾಕ್ಷಿಯಾದ ದಮಯಂತಿಯು ಎಚ್ಚತ್ತು, ಭಯಭ್ರಾಂತಳಾಗಿ ಸಮಸ್ತಲೋಕಕ್ಕೂ ಭಯಂಕರವಾದ ಎಂದೂ ನೋಡದಿರುವ ಆ ಜನಗಳ ನಾಶವನ್ನು ನೋಡಿ, ನಿಟ್ಟುಸುರುಬಿಡುತ್ತ, ಭಯದಿಂದ ಏನೂ ತೋರದೆ ಸುಮ್ಮನೆ ನಿಂತುಬಿಟ್ಟಳು. ಆ ಜನಸಮೂಹದಲ್ಲಿ ಆ ಆನೆಗಳ ಬಾಧೆಯನ್ನು ತಪ್ಪಿಸಿಕೊಂಡು ಉಳಿದವರೆಲ್ಲರೂ ಗುಂಪುಕೂಡಿ 'ಯಾವ ದುಷ್ಕರ್ಮದಿಂದ ನಮಗೆ ಇಂಥ ಕೇಡು ಸಂಭವಿಸಿತು ? ಮಹಾ ಯಶೋವಂತನಾದ ಮಣಿಭದ್ರನನ್ನು ನಾವು ಪೂಜಿಸದೆ ಇದ್ದದ್ದರಿಂದಲೋ, ಅಥವಾ ಶ್ರೀಮಂತನಾಗಿಯೂ ಯಕ್ಷಾಧಿಪತಿಯಾಗಿಯೂ ಸಮರ್ಥನಾಗಿಯೂ ಇರುವ ಕುಬೇರನನ್ನು ಪೂಜಿಸದೆ ಇದ್ದದ್ದರಿಂದಲೋ, ಹಾಗಲ್ಲದ ಪಕ್ಷದಲ್ಲಿ ನಮ್ಮ ಕಾರ್ಯಕ್ಕೆ ವಿಘ್ನಮಾಡತಕ್ಕ ದೇವತೆಗಳಿಗೆ ನಾವು ಪ್ರಯಾಣಮಾಡುವಾಗ ಪೂಜೆಯನ್ನು ಮಾಡದೆ ಇದ್ದದ್ದರಿಂದಲೋ ಹೀಗಾಗಿರುವದು. ಅಥವಾ ಇಂಥ ಕೇಡು ಸಂಭವಿಸಿದ್ದು ನಾವು ಪ್ರಯಾಣಮಾಡತಕ್ಕ ಕಾಲದಲ್ಲಿ ಉಂಟಾದ ಶಕುನಗಳ ಫಲವೇ ಆಗಿರಬಹುದು ? ಇದೇ ನಿಶ್ಚಯ. ಈಗ ನಮಗೆ ಗ್ರಹಚಾರವೇನೂ ವಿಪರೀತವಾಗಿ ಕಾಣಿಸುವದಿಲ್ಲ. ಹೀಗಾಗುವದಕ್ಕೆ ಕಾರಣವೇನು ?' ಎಂದು ಮಾತನಾಡಿಕೊಂಡರು. ತಮ್ಮ ಜ್ಞಾತಿಗಳ ದ್ರವ್ಯವೆಲ್ಲಾ ನಷ್ಟವಾದದ್ದನ್ನು ನೋಡಿ, ವ್ಯಸನಪಡುತ್ತಾ, ಅವರಲ್ಲಿ ಕೆಲವರು 'ದೀನಳಾಗಿ ಹುಚ್ಚಳಂತಿರುವ ಯಾವಳೋ ಒಬ್ಬ ಸ್ತ್ರೀಯು ಅಮಾನುಷವಾದ ರೂಪವನ್ನು ಧರಿಸಿಕೊಂಡು, ವಿಕಾರವಾದ ಆಕಾರವುಳ್ಳವಳಾಗಿ, ನಮ್ಮ ಗುಂಪನ್ನು ಸೇರಿರುವಳು. ಅವಳೇ ಈ ಘೋರವಾದ ಮಾಯೆಯನ್ನು ಕಲ್ಪಿಸಿರಬಹುದು. ಆದ್ದರಿಂದ ಅವಳು ರಾಕ್ಷಸಿಯೋ, ಯಕ್ಷಿಯೋ, ಪಿಶಾಚವೋ, ಯಾವಳೋ ಒಬ್ಬಳಾಗಿರಬಹುದು. ಅವಳ ದುಷ್ಕೃತ್ಯದಿಂದಲೇ ನಮಗೆ ಇಂಥ ಕೇಡು ಸಂಭವಿಸಿತು. ಈ ವಿಷಯದಲ್ಲಿ ಸಂದೇಹವಿಲ್ಲ. ಅನೇಕ ಮಂದಿಗೆ ದುಃಖವನ್ನುಂಟುಮಾಡಿ ಗುಂಪುಗುಂಪನ್ನೇ ನಾಶಮಾಡಿದವಳನ್ನು

ಈಗ ನಾವು ಕಂಡದ್ದೇ ಆದರೆ, ಅವಳ ಮೇಲೆ ಧೂಳನ್ನು ಹುಯ್ದು ಮಣ್ಣುಹೆಂಟೆಗಳಿಂದಲೂ ತೃಣಕಾಷ್ಟಗಳಿಂದಲೂ ದೊಣ್ಣೆಗಳಿಂದಲೂ ಮುಷ್ಟಿಗಳಿಂದಲೂ ಸಹ ನಮ್ಮ ಗುಂಪನ್ನು ಸಂಹಾರಮಾಡತಕ್ಕ ದುರ್ದೇವತಾ ಸ್ವರೂಪಳಾದ ಅವಳನ್ನು ಖಂಡಿತವಾಗಿ ಸಂಹರಿಸಿ ಬಿಡೋಣ' ಎಂದು ಮಾತಾಡಿಕೊಳ್ಳುತ್ತಿದ್ದರು. ಹೀಗೆ ಆಡಿಕೊಳ್ಳುತ್ತಿದ್ದ ಅವರ ಕ್ರೂರವಾದ ಮಾತುಗಳನ್ನು ಕೇಳಿ ದಮಯಂತಿಯು ಲಜ್ಜೆಪಡುತ್ತ, ನಡನಡುಗಿ ಮತ್ತೊಂದು ಅರಣ್ಯಕ್ಕೆ ಓಡಿಹೋಗಿ, ಆ ಅನರ್ಥವನ್ನು ಮನಸ್ಸಿನಲ್ಲಿ ಶಂಕಿಸುತ್ತ, 'ಅಕಟಾ! ವಿಧಿಯು ನನ್ನ ಮೇಲೆ ಬಹಳ ಕೋಪವನ್ನು ತೋರಿಸಿರುವದು. ಅದರಿಂದ ನನಗೆ ಎಲ್ಲಿಹೋದರೂ ಕ್ಷೇಮವಾಗದಿರುವದು. ಇದು ಯಾವ ದುಷ್ಕರ್ಮದ ಫಲವೋ ತಿಳಿಯದು. ಯಾರ ವಿಷಯದಲ್ಲೂ ನಾನು ಮನೋವಾಕ್ಕಾಯಕರ್ಮಗಳಿಂದಲೂ ಅಣುಮಾತ್ರವಾದರೂ ಅಪಕಾರವನ್ನು ಮಾಡಿದವಳಲ್ಲ. ಯಾತರಿಂದ ಹೀಗಾಯಿತೋ? ಅನಿವಾರ್ಯವಾದ ಈ ಕಷ್ಟತರವಾದ ಆಪತ್ತು ನನಗೆ ಸಂಭವಿಸಬಹುದೆ? ಅಯ್ಯೋ! ಶತ್ರುಗಳು ನನ್ನ ಪತಿಯ ರಾಜ್ಯವನ್ನು ಅಪಹರಿಸಿಕೊಂಡರು; ಸ್ವಜನರಿಂದ ತಿರಸ್ಕಾರವೂ ಉಂಟಾಯಿತು; ಪತಿಯನ್ನೂ ಅಗಲಿದೆನು; ಮಕ್ಕಳೂ ಸಮೀಪದಲ್ಲಿಲ್ಲದೆ ಹೋದರು. ಅನೇಕ ದುಷ್ಟಗಜಗಳುಳ್ಳ ಈ ಘೋರಾರಣ್ಯದಲ್ಲಿ ಅನಾಥಳಾಗಿ ವಾಸಮಾಡುವೆನಲ್ಲಾ! ಇದೆಲ್ಲವೂ ನಾನು ಜನ್ಮಾಂತರದಲ್ಲಿ ಮಾಡಿದ ಪಾಪದಿಂದಲೇ ಸಂಭವಿಸಿರುವದು' ಎಂದು ದುಃಖಪಡುತ್ತಿದ್ದಳು.

ಅನಂತರದಲ್ಲಿ ಎರಡನೇದಿವಸ ಹತಶೇಷರಾದ ಆ ಜನಗಳು ಆ ಅನರ್ಥವನ್ನು ನೆನೆನೆನೆದು, ಅಲ್ಲಿ ಹತರಾದ ಅಣ್ಣತಮ್ಮಂದಿರನ್ನೂ ತಂದೆಯನ್ನೂ ಮಕ್ಕಳನ್ನೂ ಮಿತ್ರರನ್ನೂ ಕುರಿತು ಶೋಕಿಸುತ್ತ ಅಲ್ಲಿಂದ ಮುಂದಕ್ಕೆ ಹೊರಟರು. ಅಲ್ಲಿದ್ದ ದಮಯಂತಿಯು 'ನಾನು ಎಂಥಾಪಾಪವನ್ನು ಮಾಡಿರುವೆನೋ! ಅಕಟಾ! ನಾನಿರತಕ್ಕ ಈ ನಿರ್ಜನವಾದ ಅರಣ್ಯಕ್ಕೆಬಂದ ಜನಸಮೂಹವನ್ನು ಮಂದಭಾಗ್ಯಳಾದ ನನ್ನ ಪಾಪದಿಂದಲೆ ಆನೇಗುಂಪು ಬಂದು ಸಂಹಾರಮಾಡಿತೇ! ಈಗಲೂಕೂಡ ನಾನು ಇನ್ನೂಬಹಳದುಃಖವನ್ನು ಅನುಭವಿಸಬೇಕಾಗಿರುವದು. ದುಃಖಪೀಡಿತಳಾದ ನನ್ನನ್ನು ಆ ಆನೇಗುಂಪು ಸಂಹಾರಮಾಡದೆ ಹೋಯಿತು. ಕಾಲಬರದೆ ಮರಣವನ್ನು ಹೊಂದುವದಿಲ್ಲವೆಂದು ದೊಡ್ಡವರು ಹೇಳುವದು ನಿಜವಾದದ್ದು. ಮನುಷ್ಯರಿಗೆ ದೈವೇಚ್ಛೆಯಿಂದ ಆಗದೆ ಯಿರತಕದ್ದು ಯಾವದೂ ಇಲ್ಲ. ನಾನು ಬಾಲ್ಯದಲ್ಲಿ ಮನೋವಾಕ್ಕರ್ಮಗಳಿಂದಲೂ ಯಾವ ಪಾಪವನ್ನೂ ಮಾಡಿದವಳಲ್ಲ. ಯಾತರಿಂದ ಈ ದುಃಖವು ಪ್ರಾಪ್ತವಾಯಿತೋ ತಿಳಿಯದು. ಆದರೆ ನನ್ನ ಸ್ವಯಂವರನಿಮಿತ್ತವಾಗಿ ಲೋಕಪಾಲಕರು ಬಂದಿದ್ದರು. ನಾನು ನಳನನ್ನು ವರಿಸಬೇಕೆಂದು ಅವರನ್ನು ನಿರಾಕರಿಸಿದೆನು. ಆದಕಾರಣ ಅವರ ಪ್ರಭಾವದಿಂದಲೇ ನಾನು ನನ್ನಪತಿಯನ್ನುಅಗಲಿದೆನು' ಎಂದು ಹೀಗೆ ಬಹುಪ್ರಕಾರವಾಗಿ ಪ್ರಲಾಪಮಾಡುತ್ತ, ಮತ್ತು ಮತ್ತು ದುಃಖಾಕ್ರಾಂತಳಾಗಿ ಹತಶೇಷರಾದ ಆ ಜನಗಳಿಂದಲೂ ಮಾರ್ಗಸ್ಥರಾದ ವೇದಪಾರಂಗತರಾದ ಬ್ರಾಹ್ಮಣರಿಂದಲೂ ಸಹಿತಳಾಗಿ, ಶರತ್ಕಾಲದ ಚಂದ್ರರೇಖೆಯಂತೆ ಪ್ರಕಾಶಿಸುತ್ತ, ಬಹುದಿವಸ ದಾರಿಯನ್ನುನಡೆದು ಸತ್ಯವಂತನಾದ ಚೇದಿದೇಶಾಧಿಪತಿಯಾದ ಸುಬಾಹುಮಹಾರಾಜನ ರಾಜಧಾನಿಯನ್ನು ಸಂಧ್ಯಾಕಾಲದಲ್ಲಿ ಪ್ರವೇಶಿಸಿದಳು. ಅಲ್ಲಿ ಪುರಜನರು ಕೃಶಳೂ ದೀನಳೂ ಕೆದರಿದ ಕೇಶಪಾಶವುಳ್ಳವಳೂ ಆಗಿ ಧೂಳು ಕವಿದು ಅರ್ಧಬಟ್ಟೆಯನ್ನುಟ್ಟಿರುವ ದಮಯಂತಿಯನ್ನು ನೋಡಿದರು. ಆಗ ಆ ಪಟ್ಟಣದಲ್ಲಿದ್ದ ಹುಡುಗರೆಲ್ಲರೂ ಹುಚ್ಚಳೆಂತೆ ಅಲ್ಲಿ ಹೋಗುತ್ತಿದ್ದ ಆಕೆಯ ಹಿಂದೆ ವಿನೋದದಿಂದ ಹೊರಡಲು, ಆ ದಮಯಂತಿಯು ಹಾಗೆಯೇ ಅರಮನೆಯ ಸಮೀಪಕ್ಕೆಬಂದಳು. ಆಗ ಅರಮನೆಯ ಉಪ್ಪರಿಗೇಮೇಲಿದ್ದ ಚೇದಿರಾಜನ ತಾಯಿಯು ಹುಡುಗರು ಸುತ್ತುಕೊಂಡಿರುವ ಆಕೆಯನ್ನುನೋಡಿ, ತನ್ನ ಸಮೀಪದಲ್ಲಿರುವ ಗೌಡಿಯನ್ನು ಕುರಿತು 'ಎಲೆ ಧಾತ್ರಿಯೆ, ನಮ್ಮಅರಮನೆಯ ಸಮೀಪದಲ್ಲಿ ಹೋಗುತ್ತಿರುವ ಬಾಲೆಯು ಜನಗಳ ಗಲಭೆಯಿಂದ ಕ್ಲೇಶಪಟ್ಟು ವ್ಯಸನಪಡುತ್ತ, ತನ್ನನ್ನು ರಕ್ಷಿಸತಕ್ಕವರನ್ನು ಹುಡುಕುತ್ತಿರುವಳು. ಆಕೆಯ ರೂಪು ಈ ಅರಮನೆಯನ್ನೆಲ್ಲಾ ಪ್ರಕಾಶಮಾಡುವಂತೆ ಕಾಣುವದು. ಹುಚ್ಚಳಂತೆ ಕಾಣಿಸುವ ಮಂಗಳಾಂಗಿಯಾದ ಆಕೆಯು ಲಕ್ಷ್ಮೀದೇವಿಯಂತೆ ವಿಶಾಲವಾದ ಕಣ್ಣುಗಳುಳ್ಳವಳಾಗಿರುವಳು. ನೀನು ಹೋಗಿ ಆಕೆಯನ್ನು ನನ್ನಬಳಿಗೆ ಕರೆದುಕೊಂಡು ಬಾ' ಎನಲು, ಆ ಗೌಡಿಯು ಉಪ್ಪರಿಗೆಯಿಂದ ಕೆಳಕ್ಕೆ ಇಳಿದುಬಂದು, ಆ

ಹುಡುಗರ ಗಲಭೆಯನ್ನು ತಪ್ಪಿಸಿ, ಆ ದಮಯಂತಿಯನ್ನು ಆ ಉತ್ತಮವಾದ ಉಪ್ಪರಿಗೆಯಮೇಲೆ ಕರೆದುಕೊಂಡು ಹೋಗಿ ಆಕೆಯನ್ನು ಕುರಿತು 'ಎಲೌ ಮಂಗಳಾಂಗಿಯೆ, ಈ ಪ್ರಕಾರ ಕ್ಲೇಶಪಡುತ್ತಿದ್ದರೂ ನಿನ್ನ ರೂಪವನ್ನು ನೋಡಿದರೆ ಶ್ಲಾಘ್ಯವಾಗಿ ಕಾಣುವದು. ಈ ನಿನ್ನ ಶರೀರವು ಮೇಘಮಂಡಲದಲ್ಲಿ ಹೊಳೆಯುವ ಮಿಂಚಿನಂತೆ ಹೊಳೆಯುತ್ತಿರುವದು. ಆಭರಣಗಳನ್ನು ಧರಿಸಿಕೊಳ್ಳದಿರುವ ನಿನ್ನ ರೂಪವನ್ನು ನೋಡಿದರೆ ಮನುಷ್ಯರ ರೂಪಿನಂತೆ ತೋರುವದಿಲ್ಲ. ದೇವತಾಸ್ತ್ರೀಯಂತೆ ಕಾಣಿಸುತ್ತಿರುವ ನೀನು ಮತ್ತೊಬ್ಬರ ಸಹಾಯವಿಲ್ಲದಿದ್ದರೂ ಯಾರಿಗೂ ಭಯಪಡದೆ ಇರುವೆ. ನೀನು ಯಾರು? ಯಾರ ಹೆಂಡತಿ?' ಹೇಳು ಎನಲು, ಅದನ್ನು ಕೇಳಿ ದಮಯಂತಿಯು ಆಕೆಯನ್ನು ನೋಡಿ 'ನಾನು ಮನುಷ್ಯಸ್ತ್ರೀಯು, ಪತಿವ್ರತೆಯಾದವಳು, ಒಳ್ಳೇಜಾತಿಯಲ್ಲಿ ಹುಟ್ಟಿದವಳು; ನನ್ನ ಇಚ್ಛೆಯಿದ್ದಸ್ಥಳದಲ್ಲಿ ಅಂತಃಪುರಸ್ತ್ರೀಯರಿಗೆ ಅಲಂಕಾರಮಾಡಿಕೊಂಡು ಗೌಡಿಯಾಗಿರತಕ್ಕವಳು. ಮತ್ತು ನಾನು ಫಲಮೂಲಗಳನ್ನು ಆಹಾರಮಾಡಿಕೊಂಡು ಏಕಾಕಿನಿಯಾಗಿ ಎಲ್ಲಿ ಸಾಯಂಕಾಲವಾಗುವದೋ ಅಲ್ಲಿ ವಾಸಮಾಡಿಕೊಂಡಿರತಕ್ಕವಳು. ನನ್ನ ಪತಿಯು ಅಪರಿಮಿತವಾದ ಗುಣಗಳುಳ್ಳವನು, ನನ್ನಲ್ಲಿ ವಿಶೇಷವಾದ ಪ್ರೀತಿಯುಳ್ಳವನು. ನಾನೂ ಆತನನ್ನು ಛಾಯೆಯಂತೆ ಅನುಸರಿಸಿಕೊಂಡಿದ್ದವಳು. ಆತನು ದೈವಸಂಯೋಗದಿಂದ ಜೂಜಿನಲ್ಲಿ ಬಹಳವಾಗಿ ಆಸಕ್ತನಾಗಿ ಅದರಲ್ಲಿ ಸೋತು ಒಬ್ಬನೇ ಅರಣ್ಯಕ್ಕೆ ಹೊರಟನು. ಸರ್ವಸ್ವವನ್ನೂ ಕಳೆದುಕೊಂಡು ಒಂದೇ ಬಟ್ಟೆಯನ್ನುಟ್ಟು ಹುಚ್ಚನಂತೆ ಭ್ರಾಂತನಾಗಿ ಅರಣ್ಯಕ್ಕೆ ಹೊರಟ ಆತನನ್ನು ಸಮಾಧಾನಪಡಿಸಿಕೊಂಡು, ನಾನೂ ಆತನ ಜೊತೆಯಲ್ಲಿಯೇ ಅರಣ್ಯಕ್ಕೆ ಬಂದೆನು. ಆ ವೀರನು ಒಂದಾನೊಂದು ದಿವಸ ಹಸಿವಿನಿಂದ ಬಹಳವಾಗಿ ಪೀಡಿತನಾಗಿ, ಮನಸ್ಸು ಕೆಟ್ಟುಹೋಗಿ, ಏನೋ ಒಂದು ನಿಮಿತ್ತದಿಂದ ಆ ಒಂದು ವಸ್ತ್ರವನ್ನೂ ಪರಿತ್ಯಜಿಸಿಬಿಟ್ಟನು. ಈ ಪ್ರಕಾರ ಹುಚ್ಚನಂತೆ ಬಟ್ಟೆಯಿಲ್ಲದೆ ಜ್ಞಾನಹೀನನಾಗಿದ್ದ ಆತನನ್ನೇ ಅನುಸರಿಸಿಕೊಂಡಿದ್ದ ನಾನು ರಾತ್ರಿಯಲ್ಲೆಲ್ಲಾ ನಿದ್ರೆಮಾಡದೆ ದುಃಖಿಸುತ್ತಿದ್ದೆನು. ಬಹುದಿವಸವಾದ ಬಳಿಕ ಆತನು ಒಂದು ದಿವಸ ನಾನು ನಿದ್ರೆಮಾಡುತ್ತಿದ್ದ ಸಮಯದಲ್ಲಿ ನನ್ನ ಅರ್ಧವಸ್ತ್ರವನ್ನು ಕತ್ತರಿಸಿಕೊಂಡು ನಿರಪರಾಧಳಾದ ನನ್ನನ್ನು ಬಿಟ್ಟು ಹೊರಟು ಹೋದನು. ಬಳಿಕ ನಾನು ಎದ್ದುನೋಡಿ ಆತನನ್ನು ಕಾಣದೆ, ಅಹೋರಾತ್ರಿಯಲ್ಲೂ ವ್ಯಸನಪಡುತ್ತ ಕಮಲಗರ್ಭದಂತೆ ಶರೀರ ಕಾಂತಿಯುಳ್ಳವನೂ ಸಮರ್ಥನೂ ದೇವತೆಗಳಿಗೆ ಸಮಾನನೂ ಆದ ಆ ನನ್ನ ಪ್ರಾಣೇಶ್ವರನನ್ನು ಹುಡುಕಿ ಎಲ್ಲಿಯೂ ಕಾಣದೆ ಹೀಗೆ ಕ್ಲೇಶಪಡುತ್ತಿರುವೆನು' ಎಂದು ನುಡಿದಳು.

ಅನಂತರ ರಾಜಮಾತೆಯು ಕಂಬನಿಗಳನ್ನು ತುಂಬಿ ದೀನವಾಗಿ ಪ್ರಲಾಪಿಸುತ್ತಿರುವ ದಮಯಂತಿಯನ್ನು ನೋಡಿ ತಾನೂ ವ್ಯಸನಪಟ್ಟು 'ಎಲೆ ಮಂಗಳಾಂಗಿಯೆ, ನಿನ್ನಲ್ಲಿ ನನಗೆ ತುಂಬಾ ಪ್ರೀತಿಯುಂಟಾಗಿರುವದು. ನೀನು ನಮ್ಮ ಅರಮನೆಯಲ್ಲೇ ವಾಸಮಾಡಿಕೊಂಡಿರು. ನಿನ್ನ ಗಂಡನನ್ನು ಹುಡುಕಿಕೊಂಡು ಬರುವಂತೆ ನನ್ನ ಭೃತ್ಯರನ್ನು ಕಳುಹಿಸುವೆನು. ಒಂದುವೇಳೆ ನಿನ್ನ ಗಂಡನು ಅಲ್ಲಲ್ಲಿ ಸಂಚಾರಮಾಡುತ್ತ ಇಲ್ಲಿಗೆ ಬಂದರೂ ಬಂದಾನು. ನೀನು ಇಲ್ಲೇ ವಾಸಮಾಡಿಕೊಂಡಿದ್ದರೆ ನಿನ್ನ ಪತಿಯನ್ನು ನೀನು ಸೇರುವೆ' ಎನಲು, ಅದನ್ನು ಕೇಳಿ ದಮಯಂತಿಯು, ಆ ರಾಜಮಾತೆಯನ್ನು ಕುರಿತು 'ಎಲೌ ದೇವಿಯೆ, ನಾನು ಇಲ್ಲಿ ವಾಸಮಾಡಬೇಕಾದರೆ ಒಂದು ಸಮಯ ನಿಬಂಧನೆಯನ್ನು ಮಾಡಿಕೊಂಡು ವಾಸಮಾಡತಕ್ಕವಳು. ನಾನು ಉಚ್ಛಿಷ್ಟಭೋಜನವನ್ನು ಮಾಡತಕ್ಕವಳಲ್ಲ, ಮತ್ತೊಬ್ಬರ ಕಾಲು ತೊಳೆಯತಕ್ಕವಳಲ್ಲ, ಪರಪುರುಷರ ಸಂಗಡ ಮಾತನಾಡತಕ್ಕವಳಲ್ಲ; ಯಾವ ಪುರುಷನಾದರೂ ನನ್ನನ್ನು ಅಪೇಕ್ಷಿಸಿದ್ದೇ ಆದರೆ ಅಂಥ ಮೂಢನಿಗೆ ಮರಣಾಂತ ದಂಡನೆಯನ್ನು ಮಾಡಿಸಬೇಕೆಂದು ನನ್ನ ವ್ರತವಿರುವದು. ನಾನು ನನ್ನ ಪತಿಯ ಸಮಾಚಾರವನ್ನು ತಿಳಿಯುವದಕ್ಕೋಸ್ಕರ ಬ್ರಾಹ್ಮಣರನ್ನು ಕಂಡು ಅವರ ಸಂಗಡ ಮಾತನಾಡತಕ್ಕವಳು. ಹೀಗೆ ನಡಿಸಿಕೊಟ್ಟರೆ ಈ ನಿಬಂಧನೆಯಿಂದ ನಾನು ಇಲ್ಲಿ ವಾಸಮಾಡಿಕೊಂಡಿರತಕ್ಕವಳು. ಹಾಗಾಗದ ಪಕ್ಷದಲ್ಲಿ ಇಲ್ಲಿರುವದಕ್ಕೆ ನನಗೆ ಮನಸ್ಸಿಲ್ಲ' ಎಂದು ನುಡಿದಳು. ಅದಕ್ಕೆ ರಾಜಮಾತೆಯು ಹಾಗೆಯೇ ಆಗಲೆಂದು ಒಪ್ಪಿಕೊಂಡು, ತನ್ನ ಮಗಳಾದ ಸುನಂದೆಯೆಂಬವಳನ್ನು ಕರೆತರಿಸಿ 'ಎಲೆ ಸುನಂದೆಯೆ, ದೇವತಾಸ್ತ್ರೀಯಂತಿರುವ ಈಕೆಯು ನಿನ್ನಷ್ಟೇ ವಯಸ್ಸುಳ್ಳವಳಾಗಿರುವಳು. ಇವಳು ನಿನಗೆ ಅಲಂಕಾರ ಮಾಡಿಕೊಂಡಿರುವಳು. ಇವಳನ್ನು ನೀನು ಸಖಿಯನ್ನಾಗಿ ಮಾಡಿಕೊಂಡು ಇವಳೊಡನೆ ನಿರ್ಭಯವಾಗಿ

ಯಾವಾಗಲೂ ಸಂತೋಷಪಡುತ್ತಿರು’ ಎನಲು, ಸುನಂದೆಯು ಸಂತೋಷಪಟ್ಟು ದಮಯಂತಿಯನ್ನು ತನ್ನ ಮನೆಗೆ ಕರೆದುಕೊಂಡು ಹೋಗಿ, ಸಖೀಜನರಿಂದೊಡಗೂಡಿ ಆಕೆಯನ್ನು ಉಚಿತವಾಗಿ ಕಂಡುಕೊಂಡಿದ್ದಳು. ಆಗ ದಮಯಂತಿಯು ತನ್ನ ಇಷ್ಟಾನುಸಾರವಾಗಿ ಆ ಸುನಂದೆಯಿಂದ ಸನ್ಮಾನವನ್ನು ಪಡೆದು ನಿರ್ಭಯವಾಗಿ ಅಲ್ಲಿ ವಾಸ ಮಾಡಿಕೊಂಡಿದ್ದಳು” ಎಂದು ಬೃಹದಶ್ವನು ಧರ್ಮರಾಯನಿಗೆ ಹೇಳಿದನು.

---

### ೬೬ನೇ ಅಧ್ಯಾಯ.–ನಳೋಪಾಖ್ಯಾನ–(ಕಾರ್ಕೋಟನಿಗೂ ನಳನಿಗೂ ಸಂವಾದ.)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು–ಕೇಳು ಜನಮೇಜಯರಾಯನೆ, ಬೃಹದಶ್ವನು ಯುಧಿಷ್ಠಿರನನ್ನು ಕುರಿತು “ಎಲೈ ಧರ್ಮರಾಯನೆ, ಆ ಬಳಿಕ ಇತ್ತ ದಮಯಂತಿಯನ್ನು ಬಿಟ್ಟುಹೋದ ನಳಮಹಾರಾಜನು ಆ ಘೋರವಾದ ಅರಣ್ಯದಲ್ಲಿ ಮಹತ್ತಾಗಿ ಉರಿಯುತ್ತಿರುವ ಕಾಡುಕಿಚ್ಚನ್ನು ನೋಡಿ, ಅದರ ಮಧ್ಯದಲ್ಲಿ ‘ಎಲೈ ಪುಣ್ಯಶ್ಲೋಕನಾದ ನಳಮಹಾರಾಜನೆ ಬೇಗಬೇಗ ಬಾ’ ಎಂದು ಕೂಗುತ್ತಿರುವ ಒಂದು ಪ್ರಾಣಿಯ ಶಬ್ದವನ್ನು ಕೇಳಿ, ಅದನ್ನು ಕುರಿತು ಭಯಪಡಬೇಡವೆಂದು ನುಡಿದು, ಒಡನೆಯೇ ಆ ಕಿಚ್ಚನ್ನು ಹೊಕ್ಕು, ಅಲ್ಲಿ ಮೈಯನ್ನು ಮುದುರಿಕೊಂಡು ಮಲಗಿರುವ ಒಬ್ಬ ಸರ್ಪರಾಜನನ್ನು ಕಂಡನು. ಆಗ ಆ ಸರ್ಪರಾಜನು ಕೈ ಮುಗಿದುಕೊಂಡು ನಡುಗುತ್ತ ನಳನನ್ನು ಕುರಿತು ‘ಎಲೈ ನಳಮಹಾರಾಜನೆ, ನಾನು ಕಾರ್ಕೋಟಕನೆಂಬ ಹೆಸರುಳ್ಳ ಸರ್ಪರಾಜನು. ನಾನು ಬ್ರಹ್ಮರ್ಷಿಯಾದ ಮಹಾತಪಸ್ವಿಯಾದ ನಾರದನನ್ನು ವಂಚಿಸಿದ್ದಕ್ಕಾಗಿ, ಆತನು ಅಧಿಕವಾಗಿ ಕೋಪಿಸಿಕೊಂಡು–ನೀನು ಚಲನರಹಿತನಾಗಿ ಇಲ್ಲೇ ಬಿದ್ದಿರು. ಯಾವಾಗ ನಳಮಹಾರಾಜನು ಬಂದು ನಿನ್ನನ್ನು ಇಲ್ಲಿಂದ ಆಚೆಗೆ ತೆಗೆದುಹಾಕುವನೋ, ಆಗ ನಿನಗೆ ಈ ಶಾಪವಿಮೋಚನೆಯಾಗುವದು–ಎಂದು ಶಾಪವನ್ನು ಕೊಟ್ಟನು. ಎಲೈ ರಾಯನೆ, ಆ ಶಾಪದಿಂದ ನಾನು ಒಂದು ಹೆಜ್ಜೆ ಹೋಗುವದಕ್ಕೂ ಸಾಮರ್ಥ್ಯವಿಲ್ಲದೆ ಹೀಗೆ ಬಿದ್ದಿರುವೆನು. ನನ್ನನ್ನು ನೀನು ರಕ್ಷಿಸು. ನಿನಗೆ ಶ್ರೇಯಸ್ಸಾಗುವಂತೆ ನಾನು ಉಪದೇಶಮಾಡುತ್ತೇನೆ. ನಿನಗೆ ನಾನು ಸ್ನೇಹಿತನಾಗಿರುತ್ತೇನೆ. ಸರ್ಪಗಳಲ್ಲಿ ನನಗೆ ಸರಿಯಾದವರು ಯಾರೂ ಇಲ್ಲ. ನಾನು ಹಗುರವಾಗುತ್ತೇನೆ. ಇಲ್ಲಿಂದ ಜಾಗ್ರತೆಯಾಗಿ ನನ್ನನ್ನು ತೆಗೆದುಕೊಂಡು ಹೋಗು’ ಎಂದು ನುಡಿದು, ತತ್‌ಕ್ಷಣದಲ್ಲೇ ಅಂಗುಷ್ಠಪ್ರಮಾಣವುಳ್ಳವನಾದನು. ನಳನು ಆ ಕಾರ್ಕೋಟಕನನ್ನು ತೆಗೆದುಕೊಂಡು ಕಾಡುಕಿಚ್ಚಿಲ್ಲದ ಒಂದು ಪ್ರದೇಶಕ್ಕೆಹೋಗಿ ಅಲ್ಲಿ ಅವನನ್ನು ಬಿಡಬೇಕೆಂದು ಯೋಚಿಸುತ್ತಿರಲು, ಅದನ್ನು ತಿಳಿದು ಕಾರ್ಕೋಟಕನು ‘ಎಲೈ ರಾಯನೆ, ನೀನು ನಿನ್ನ ಹೆಜ್ಜೆಗಳನ್ನು ಎಣಿಸಿಕೊಂಡು ನಡೆ. ನಿನಗೆ ಶ್ರೇಯಸ್ಸುಂಟಾಗುವದು’ ಎಂದು ಹೇಳಿದನು. ಬಳಿಕ ನಳಮಹಾರಾಜನು ಹಾಗೆಯೇ ಆಗಲೆಂದು ‘ಏಕಂ, ದ್ವೇ, ತ್ರೀಣಿ, ಚತ್ವಾರಿ, ಪಂಚ, ಷಟ್, ಸಪ್ತ, ಅಷ್ಟೌ, ನವ’ ಎಂದು ಒಂಭತ್ತು ಹೆಜ್ಜೆಗಳ ವರೆಗೂ ಎಣಿಸಿ ಹತ್ತನೇ ಹೆಜ್ಜೆಗೆ ದಶ ಎಂದು ಎಣಿಸಿದೊಡನೆಯೇ ಕಾರ್ಕೋಟಕನು ಆತನನ್ನು ಕಚ್ಚಲು, ನಳಮಹಾರಾಜನ ರೂಪು ವಿಕಾರವನ್ನು ಹೊಂದಿತು. ಅದನ್ನು ನೋಡಿ ನಳನು ಆಶ್ಚರ್ಯಯುಕ್ತನಾಗಿ, ನಿಜರೂಪನ್ನು ಹೊಂದಿದ ಕಾರ್ಕೋಟಕನನ್ನು ನೋಡಿದನು. ಆಗ ಕಾರ್ಕೋಟಕನು ನಳಮಹಾರಾಜನನ್ನು ಸಮಾಧಾನಪಡಿಸಿ, ಆತನನ್ನು ಕುರಿತು ‘ಎಲೈ ನಳಮಹಾರಾಜನೆ, ಇಂಥ ಸಮಯದಲ್ಲಿ ನೀನು ನಳನೆಂದು ಜನಗಳಿಗೆ ತಿಳಿಯಬಾರದೆಂದು ನಾನು ನಿನ್ನ ರೂಪು ವ್ಯತ್ಯಾಸವಾಗುವಹಾಗೆ ಮಾಡಿದೆನು. ಯಾವ ಕಲಿಯಿಂದ ನಿನಗೆ ಇಷ್ಟು ದುಃಖವು ಪ್ರಾಪ್ತವಾಯಿತೋ ಆ ಕಲಿಯು ನಿನ್ನ ಶರೀರದಲ್ಲಿ ಹೊಕ್ಕಿರುವನಾದ ಕಾರಣ, ನನ್ನ ಘೋರವಾದ ವಿಷದಿಂದುಂಟಾಗತಕ್ಕ ವ್ಯಥೆಯನ್ನು ಪಿಶಾಚಹಿಡಿದ ಶರೀರಕ್ಕೆ ಆಗತಕ್ಕ ಹಿಂಸೆಯನ್ನು ಪಿಶಾಚವೇ ಅನುಭವಿಸುವಂತೆ ಆ ಕಲಿಯೇ ಅನುಭವಿಸುವನು. ಕಲಿಯು ನಿನ್ನ ಶರೀರದಲ್ಲಿ ಹೊಕ್ಕಿರುವ ವರೆಗೂ ಅವನು ಈ ವಿಷದ ಬಾಧೆಯನ್ನು ಅನುಭವಿಸಿಕೊಂಡಿರುವನು. ದುಃಖಕ್ಕೆ ಅನರ್ಹನಾಗಿಯೂ ನಿರಪರಾಧಿಯಾಗಿಯೂ ಇರುವ ನಿನ್ನ ವಿಷಯದಲ್ಲಿ ಕೇಡನ್ನು ಮಾಡಿದ ಕಲಿಯಮೇಲೆ ಅಸೂಯೆಯಿಂದ ನನಗೆ ತುಂಬಾ ಕೋಪವುಂಟಾಗಿ, ನಿನ್ನನ್ನು ರಕ್ಷಿಸುವದಕ್ಕೋಸ್ಕರ ಈ ಕಾರ್ಯವನ್ನು ಮಾಡಿರುವೆನು. ನಿನಗೆ ಕ್ರೂರಜಂತುಗಳ

ದೆಸೆಯಿಂದಲೂ ಶತ್ರುಗಳ ದೆಸೆಯಿಂದಲೂ ಭಯ ಕೆಲಸವಿಲ್ಲ. ನನ್ನ ಅನುಗ್ರಹದಿಂದ ನಿನಗೆ ಬ್ರಹ್ಮಜ್ಞಾನವು ಲಭಿಸುವದು. ನನ್ನ ವಿಷದಿಂದಲೂ ನಿನಗೆ ಬಾಧೆ ಕೆಲಸವಿಲ್ಲ. ಯುದ್ಧದಲ್ಲಿ ನಿನಗೆ ಜಯವುಂಟಾಗುವದು. ನೀನು ಇಲ್ಲಿಂದ ಹೊರಟು 'ನಾನು ಸಾರಥ್ಯವನ್ನು ಮಾಡತಕ್ಕವನು. ನನ್ನನ್ನು ಬಾಹುಕನೆಂದು ಹೇಳುವರು' ಎಂದು ಹೇಳಿಕೊಳ್ಳುತ್ತ, ಅಯೋಧ್ಯಾಧಿಪತಿಯಾದ ಋತುಪರ್ಣರಾಯನ ಸಮೀಪಕ್ಕೆ ಹೋಗಿ, ನಿನ್ನಲ್ಲಿರುವ ಅಶ್ವಹೃದಯವನ್ನು ಆತನಿಗೆ ಉಪದೇಶಮಾಡಿ, ಆತನಲ್ಲಿರುವ ಅಕ್ಷಹೃದಯವನ್ನು ನೀನು ಉಪದೇಶಮಾಡಿಸಿಕೊ. ಇಕ್ಷ್ವಾಕು ಕುಲದಲ್ಲಿ ಶ್ರೇಷ್ಠನಾದ ಋತುಪರ್ಣರಾಯನು ನಿನಗೆ ಮಿತ್ರನಾಗಿ ಒಳ್ಳೇದನ್ನು ಮಾಡುವನು. ನೀನು ನಿನ್ನ ಪತ್ನಿಯನ್ನು ಸೇರಿ, ಮಕ್ಕಳೊಡನೆ ರಾಜ್ಯವನ್ನು ಹೊಂದಿ ಸುಖವಾಗಿರುವೆ. ಇನ್ನು ದುಃಖವನ್ನು ಬಿಡು. ಇದೋ, ಈ ಎರಡು ವಸ್ತ್ರಗಳನ್ನು ನಿನಗೆ ಕೊಡುವೆನು. ನೀನು ಯಾವಾಗ ನಿನ್ನ ನಿಜರೂಪವನ್ನು ಬಯಸುವೆಯೋ ಆಗ ನನ್ನನ್ನು ಸ್ಮರಿಸಿ ಈ ವಸ್ತ್ರವನ್ನು ಧರಿಸಿದರೆ ನಿನ್ನ ನಿಜರೂಪವು ಬರುವದು' ಎಂದು ಹೇಳಿ ಆತನಿಗೆ ದಿವ್ಯವಾದ ಎರಡು ವಸ್ತ್ರಗಳನ್ನು ಕೊಟ್ಟು, ಅಲ್ಲಿಯೇ ಅಂತರ್ಧಾನವನ್ನು ಹೊಂದಿದನು" ಎಂದು ಬೃಹದಶ್ವನು ಧರ್ಮರಾಯನಿಗೆ ಹೇಳಿದನು.

---

## ೬೭ನೇ ಅಧ್ಯಾಯ.—ನಳೋಪಾಖ್ಯಾನ—(ನಳನು ಋತುಪರ್ಣರಾಯನ ಅರಮನೆಯಲ್ಲಿ ಅಜ್ಞಾತವಾಸವನ್ನು ಮಾಡಿದ್ದು)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಎಲೈ ಜನಮೇಜಯರಾಯನೆ ಬೃಹದಶ್ವನು ಧರ್ಮರಾಯನನ್ನು ಕುರಿತು "ಎಲೈ ಧರ್ಮರಾಯನೆ, ಕಾರ್ಕೋಟಕನು ಅಂತರ್ಧಾನವನ್ನು ಹೊಂದಿದ ಬಳಿಕ ನಳನು ಅಲ್ಲಿಂದ ಹೊರಟು ಹತ್ತನೇ ದಿವಸ ಋತುಪರ್ಣರಾಯನ ರಾಜಧಾನಿಯನ್ನು ಸೇರಿ, ಆ ಮಹಾರಾಜನ ಬಳಿಗೆ ಹೋಗಿ, ಆತನನ್ನು ಕುರಿತು 'ಎಲೈ ಮಹಾರಾಜನೆ, ನಾನು ಕುದುರೆಗಳನ್ನು ನಡೆಯಿಸತಕ್ಕವನು. ಇದರಲ್ಲಿ ನನಗೆ ಸಮಾನನಾದವನು ಯಾರೂ ಇಲ್ಲ. ನನ್ನನ್ನು ಬಾಹುಕನೆಂದು ಕರೆಯುವರು. ಯಾವ ಕೆಲಸಗಳಲ್ಲಾದರೂ ಕಷ್ಟಸಂಭವಿಸಿದಾಗ ನನ್ನ ಆಲೋಚನೆಯನ್ನು ಕೇಳಬಹುದು. ನಾನು ಕುಶಲವಿದ್ಯೆಗಳನ್ನೂ ತಿಳಿದಿರುವೆನು. ನಾನು ಎಲ್ಲರಿಗಿಂತಲೂ ಅತಿಶಯವಾಗಿ ಷಡ್ರಸೋಪೇತವಾದ ಅಡಿಗೆಯನ್ನು ಮಾಡಬಲ್ಲೆನು. ಇನ್ನೂ ಲೋಕದಲ್ಲಿ ಯಾವ ಯಾವ ಶಿಲ್ಪವಿದ್ಯೆಗಳಿರುವವೋ ಅವುಗಳನ್ನೆಲ್ಲಾ ನಾನು ಬಲ್ಲೆನು. ಮತ್ತೊಬ್ಬರಿಂದ ಮಾಡುವದಕ್ಕೆ ಅಶಕ್ಯವಾದ ಕಾರ್ಯಗಳನ್ನು ಮಾಡುವದಕ್ಕೂ ನಾನು ಪ್ರಯತ್ನಮಾಡಬಲ್ಲೆನು. ನನ್ನನ್ನು ಸಂಬಳಕೊಟ್ಟು ನಿನ್ನ ಬಳಿಯಲ್ಲಿ ಇರಿಸಿಕೊ' ಎನಲು, ಋತುಪರ್ಣರಾಯನು ನಳನನ್ನು ಕುರಿತು 'ಎಲೈ ಬಾಹುಕನೆ, ನೀನು ಹೇಳಿದಂತೆ ಎಲ್ಲಾ ಕೆಲಸಗಳನ್ನೂ ಮಾಡುವೆ. ಇಲ್ಲಿ ವಾಸಮಾಡಿಕೊಂಡಿರು. ನಿನಗೆ ಒಳ್ಳೇದಾಗುವದು. ನಿನಗೂ ವಾಹನದ ಮೇಲೆ ಯಾವಾಗಲೂ ಶೀಘ್ರವಾಗಿ ಸಂಚಾರಮಾಡುವದರಲ್ಲಿ ಬುದ್ಧಿ ಪ್ರವರ್ತಿಸುವದು. ನೀನು ನಮ್ಮ ಕುದುರೆಗಳು ಶೀಘ್ರವಾಗಿ ನಡೆಯುವಂತೆ ಅವುಗಳಿಗೆ ಶಿಕ್ಷೆಮಾಡುತ್ತ, ನಮ್ಮ ಅಶ್ವಶಾಲೆಯಲ್ಲಿ ಅಶ್ವಾಧ್ಯಕ್ಷನಾಗಿರು. ನಿನಗೆ ತಿಂಗಳು ಒಂದಕ್ಕೆ ಹತ್ತುಸಾವಿರ ವರಹ ಸಂಬಳವನ್ನು ಕೊಡುವೆನು. ನಮ್ಮ ಅಶ್ವಶಾಲೆಯಲ್ಲಿರುವ ವಾರ್ಷ್ಣೇಯ ಜೀವಲರಿಬ್ಬರೂ ನಿನ್ನಧೀನರಾಗಿರುವರು. ಅವರ ಜೊತೆಯಲ್ಲಿ ನೀನು ಇಲ್ಲಿಯೇ ವಾಸಮಾಡಿಕೊಂಡಿರು' ಎಂದು ನುಡಿದನು.

ಈ ರೀತಿಯಾಗಿ ಋತುಪರ್ಣರಾಯನಿಂದ ಬಹುಮಾನವನ್ನು ಪಡೆದು, ನಳನು ವಾರ್ಷ್ಣೇಯ ಜೀವಲರೊಡಗೂಡಿ ಆ ರಾಜಧಾನಿಯಲ್ಲಿಯೇ ವಾಸಮಾಡಿಕೊಂಡು, ಯಾವಾಗಲೂ ದಮಯಂತಿಯನ್ನೇ ಚಿಂತಿಸುತ್ತ, ಪ್ರತಿದಿವಸವಲ್ಲಿಯೂ ಸಾಯಂಕಾಲದಲ್ಲಿ—

ಕಂದ॥ ಪಸಿವಿಂ ಬಾಯಾರಿಕೆಯಿಂ । ಬಿಸುಸುಯ್ಯುತೆ ಬಳಲಿ ನೆನೆಯುತಾಕುಮತಿಯುನಾ ॥
ಬಿಸಜಾಕ್ಷಿ ಯೆಲ್ಲಿ ತಾಂ ಪವ । ಡಿಸುವಳೊ ಹಾ ಯಾರ ಸೇರಿ ಜೀವಿಸುತಿಹಳೋ ॥

ಈ ಶ್ಲೋಕವನ್ನು ಹೇಳುತ್ತಿದ್ದನು. ಅದನ್ನು ಕೇಳಿ ಜೊತೆಯಲ್ಲಿದ್ದ ಜೀವಲನು 'ಎಲೈ ಬಾಹುಕನೆ, ಯಾವಳ

ವಿಷಯವಾಗಿ ನೀನು ಹೀಗೆ ಶೋಕಿಸುತ್ತಿರುವೆ? ಆಕೆ ಯಾರು? ಅದನ್ನು ಕೇಳಲಿಚ್ಛಯಿಸುವೆನು' ಎನಲು, ನಳನು 'ಎಲೈ ಜೀವಲನೆ, ಯಾವನೋ ಒಬ್ಬ ಮಂದಬುದ್ಧಿಯಾದವನಿಗೆ ಅತಿಪ್ರಿಯಳಾದ ಒಬ್ಬ ಸ್ತ್ರೀಯಿದ್ದಳು. ಆ ಮಂದಬುದ್ಧಿಯ ಮಾತು ಸ್ಥಿರವಾದದ್ದಲ್ಲ. ಅವನು ಏನೋ ಒಂದು ನಿಮಿತ್ತದಿಂದ ಆಕೆಯನ್ನು ಅಗಲಿ ನಿದ್ರಾಹಾರವಿಲ್ಲದೆ ಅಹೋರಾತ್ರಿಗಳಲ್ಲಿಯೂ ದುಃಖದಿಂದ ಅಲ್ಲಲ್ಲಿ ಸುತ್ತುತ್ತ, ರಾತ್ರಿವೇಳೆಯಲ್ಲಿ ಆಕೆಯನ್ನು ನೆನೆದುಕೊಂಡು ಈ ಶ್ಲೋಕವನ್ನು ಹೇಳುವನು. ಹೀಗೆ ಅವನು ಬಹಳಕಡೆ ಸುತ್ತಿ ಏಳ್ಗೋ ಒಂದು ಕಡೆಯಲ್ಲಿ ತನಗೆ ಅನರ್ಹವಾದ ಏನೋ ಒಂದನ್ನು ಆಶ್ರಯಿಸಿಕೊಂಡು, ಪದೇಪದೇ ಆಕೆಯನ್ನು ನೆನೆನೆನೆದು ದುಃಖಪಡುತ್ತಿರುವನು. ಆ ಸ್ತ್ರೀಯು ಕಷ್ಟದಶೆ ಬಂದಾಗ ಅರಣ್ಯದಲ್ಲೂ ಆತನನ್ನೇ ಅನುಸರಿಸಿಕೊಂಡಿದ್ದಳು. ಆ ಪುಣ್ಯಹೀನನು ಆಕೆಯನ್ನು ಅರಣ್ಯದಲ್ಲಿ ತ್ಯಜಿಸಿಹೋದನು. ಬಾಲೆಯಾದ ಆಕೆಯು ಏಕಾಕಿನಿಯಾಗಿ ದಾರಿಯನ್ನು ತಿಳಿಯದೆ ಇರತಕ್ಕವಳು. ಅರಣ್ಯವಾಸಕ್ಕೆ ಅನರ್ಹಳಾದ ಆಕೆಯು ಬದುಕಿದ್ದ ಪಕ್ಷದಲ್ಲಿ ಹಸಿವು ಬಾಯಾರಿಕೆಗಳಿಂದ ಪೀಡಿತಳಾಗಿ ಬಹುಕಷ್ಟವನ್ನು ಅನುಭವಿಸುವಳು. ಭಾಗ್ಯಹೀನನಾದ ಆ ಮಂದಬುದ್ಧಿಯು ದುಷ್ಟಮೃಗಗಳಿಂದ ಕೂಡಿದ ಘೋರವಾದ ಆ ಅರಣ್ಯದಲ್ಲಿ ಅಂಥ ಸ್ತ್ರೀಯನ್ನು ಪರಿತ್ಯಜಿಸಿ ಹೋದನು' ಎಂದು ಅವನೊಡನೆ ಮಾತನಾಡುತ್ತ, ಪುನಃಪುನಃ ದಮಯಂತಿಯನ್ನು ನೆನೆದು ದುಃಖಪಡುತ್ತ, ಋತುಪರ್ಣರಾಯನ ಅರಮನೆಯಲ್ಲಿ ಅಜ್ಞಾತವಾಸವನ್ನು ಮಾಡಿಕೊಂಡಿದ್ದನು" ಎಂದು ಬೃಹದಶ್ವನು ಧರ್ಮರಾಯನಿಗೆ ಹೇಳಿದನು.

---

## ೬೮ನೇ ಅಧ್ಯಾಯ.—ನಳೋಪಾಖ್ಯಾನ—(ಭೀಮನು ನಳದಮಯಂತಿಯರನ್ನು ಹುಡುಕಿಸಿದ್ದು.)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಎಲೈ ಜನಮೇಜಯರಾಯನೆ, ಬೃಹದಶ್ವನು ಧರ್ಮರಾಯನನ್ನು ಕುರಿತು "ಎಲೈ ಧರ್ಮರಾಯನೆ, ನಳಮಹಾರಾಜನು ರಾಜ್ಯವನ್ನು ಕಳೆದುಕೊಂಡು ಪತ್ನಿಯನ್ನಗಲಿ ಋತುಪರ್ಣರಾಯನನ್ನು ಸೇರಿದ ಬಳಿಕ, ಭೀಮಭೂಪಾಲಕನು ಬ್ರಾಹ್ಮಣರ ಸಂಗಡ 'ಎಲೈ ಬ್ರಾಹ್ಮಣರೆ, ನೀವು ಇಲ್ಲಿಂದ ಹೊರಟು ನಳಮಹಾರಾಜನನ್ನೂ ದಮಯಂತಿಯನ್ನೂ ಹುಡುಕಿಕೊಂಡು ಬನ್ನಿರಿ. ನಿಮ್ಮಲ್ಲಿ ಯಾರಾದರೂ ಅವರನ್ನು ಹುಡುಕಿ ಕರೆದುಕೊಂಡು ಬಂದರೆ, ಅಂಥವರಿಗೆ ಅಗ್ರಹಾರಗಳನ್ನೂ ದೊಡ್ಡದೊಡ್ಡ ಗ್ರಾಮಗಳನ್ನೂ ಸಾವಿರ ಗೋವುಗಳನ್ನೂ ಕೊಡುತ್ತೇನೆ' ಎಂದು ಹೇಳಿ, ಅವರಿಗೆ ಮಾರ್ಗದ ವೆಚ್ಚಕ್ಕೋಸ್ಕರ ಬೇಕಾದಷ್ಟು ದ್ರವ್ಯವನ್ನು ಕೊಟ್ಟು, ಅವರನ್ನು ಕುರಿತು 'ಎಲೈ ಬ್ರಾಹ್ಮಣರೆ, ನೀವು ನಳಮಹಾರಾಜನನ್ನೂ ದಮಯಂತಿಯನ್ನೂ ಸಹ ಕಂಡು ಇಲ್ಲಿಗೆ ಅವರನ್ನು ಕರೆದುಕೊಂಡುಬರುವದು ಅಶಕ್ಯವಾದ ಪಕ್ಷದಲ್ಲಿ, ನೀವು ಅವರು ಇರುವ ಸ್ಥಳವನ್ನು ಹೇಳಿದಾಗ್ಯೂ ನಿಮಗೆ ಸಾವಿರಗೋವುಗಳನ್ನು ಕೊಡುವೆನು' ಎಂದು ಹೇಳಿ ಕಳುಹಿಸಿದನು. ಅದಕ್ಕೆ ಬ್ರಾಹ್ಮಣರು ಸಂತೋಷಪಟ್ಟು, ಎಲ್ಲಾ ಕಡೆಗೂ ಹೊರಟು, ಅಲ್ಲಲ್ಲಿ ರಾಜಧಾನಿಗಳಲ್ಲಿಯೂ ದೇಶಗಳಲ್ಲಿಯೂ ಸಹ ದಮಯಂತೀನಳರನ್ನು ಹುಡುಕಿ ಎಲ್ಲಿಯೂ ಕಾಣದಿರಲು, ಅವರಲ್ಲಿ ಸುದೇವನೆಂಬ ಒಬ್ಬ ಬ್ರಾಹ್ಮಣನು ರಮಣೀಯವಾದ ಚೇದಿದೇಶಕ್ಕೆ ಹೋಗಿ, ಅಲ್ಲಲ್ಲಿ ದಮಯಂತೀನಳರನ್ನು ಹುಡುಕುತ್ತ, ಸುಬಾಹುಮಹಾರಾಜನ ಅರಮನೆಯಲ್ಲಿ ಬ್ರಾಹ್ಮಣರು ಪುಣ್ಯಾಹವಾಚನೆಯನ್ನು ಮಾಡುವ ಸಮಯದಲ್ಲಿ ಸುನಂದೆಯಸಂಗಡ ಇದ್ದ ದಮಯಂತಿಯನ್ನು ನೋಡಿ, ವಿಶಾಲಾಕ್ಷಿಯಾಗಿಯೂ ಮಲಿನಳಾಗಿಯೂ ಅಧಿಕವಾಗಿ ಕೃಶಳಾಗಿಯೂ ಹೊಗೆಯಿಂದ ಕಾಣಿಸದಿರುವ ಸೂರ್ಯನಪ್ರಭೆಯಂತೆ ಸ್ವಲ್ಪವಾಗಿ ತೋರುವ ಅಸದೃಶವಾದ ರೂಪುಳ್ಳವಳಾಗಿಯೂ ಇರುವ ಆಕೆಯನ್ನು ಗುರುತುಗಳಿಂದ ಅವಳೇ ದಮಯಂತಿಯೆಂದು ನಿಶ್ಚಯಿಸಿಕೊಂಡು, 'ಪೂರ್ವದಲ್ಲಿ ನಾನು ಹ್ಯಾಗೆ ನೋಡಿದ್ದೆನೋ ಹಾಗೆಯೇ ಈಕೆಯ ರೂಪು ಕಾಣಿಸುವದು. ಲೋಕಕ್ಕೆ ಮನೋಹರಳಾದ ಲಕ್ಷ್ಮಿಯಂತಿರುವ ಈಕೆಯನ್ನು ನೋಡಿ ಈ ಹೊತ್ತು ನಾನು ಕೃತಾರ್ಥನಾದೆನು. ಮನೋಹರವಾಗಿ ವರ್ತುಲಾಕಾರವಾಗಿರುವ ಸ್ತನಗಳುಳ್ಳ ಯೌವನಮಧ್ಯಸ್ಥೆಯಾದ ಈಕೆಯು ತನ್ನ ಶರೀರಕಾಂತಿಯಿಂದ ಸಕಲ ದಿಕ್ಕುಗಳನ್ನೂ ಬೆಳಗುತ್ತಿರುವಳು; ಮನ್ಮಥನ ಪತ್ನಿಯಾದ ರತೀದೇವಿಯಂತೆ ಶೋಭಿಸುತ್ತ ರಮ್ಯವಾದ ಕಮಲದಳ

ದಂತೆ ವಿಶಾಲವಾದ ನೇತ್ರಗಳುಳ್ಳವಳಾಗಿ ಲೋಕಕ್ಕೆಲ್ಲಾ ಪ್ರಿಯವಾದ ಪೂರ್ಣಚಂದ್ರಪ್ರಭೆಯಂತೆ ತೋರುತ್ತಿರುವಳು. ಈಕೆಯು ವಿದರ್ಭರಾಜನೆಂಬ ಸರೋವರದ ದೆಸೆಯಿಂದ ಹುಟ್ಟಿ ದೈವಯೋಗದಿಂದ ಕಿತ್ತುಹಾಕಲ್ಪಟ್ಟು ಕೆಸರಂಟಿದು ಲಿನವಾಗಿರುವ ತಾವರೇಬಳ್ಳಿಯಂತೆ ತೋರುತ್ತಿರುವಳು. ರಾಹುಗ್ರಸ್ತವಾದ ಚಂದ್ರನುಳ್ಳ ಪೂರ್ಣಿಮಾರಾತ್ರಿಯಂತೆ ತೋರುತ್ತ, ಪತಿಯನ್ನಗಲಿದ ಶೋಕದಿಂದ ದೀನಳಾಗಿ, ಪ್ರವಾಹವು ಬತ್ತಿಹೋದನದಿಯಂತೆ ಕಾಣಿಸುತ್ತಿರುವಳು. ಆನೆಯು ಕಿತ್ತುಹಾಕಲು ಎಲೆಗಳೂ ಹುವ್ವುಗಳೂ ನಷ್ಟವಾಗಿ ಭಯದಿಂದ ಹಾರಿಹೋದ ಪಕ್ಷಿಗಳುಳ್ಳದ್ದಾಗಿರುವ ತಾವರೇಬಳ್ಳಿಯಂತೆ, ಕಾಂತಿಹೀನಳಾಗಿಯೂ ಸುಕುಮಾರಳಾಗಿಯೂ ಹೆಚ್ಚು ಕಡಮೆಯಿಲ್ಲದ ಕರಚರಣಮೊದಲಾದ ಅವಯವಗಳುಳ್ಳವಳಾಗಿಯೂ ರತ್ನಗೃಹದಲ್ಲಿ ವಾಸಮಾಡುವದಕ್ಕೆ ಯೋಗ್ಯಳಾಗಿಯೂ ಇರುವ ಆ ದಮಯಂತಿಯು, ಕಿತ್ತು ಹೊರಕ್ಕೆ ಬಿಸಾಡಲು ಬಿಸಲಿನಿಂದ ಬಾಡಿದ ತಾವರೇಬಳ್ಳಿಯಂತೆ ಪ್ರಕಾಶರಹಿತಳಾಗಿರುವಳು. ರೂಪಾತಿಶಯವೂ ಗಂಭೀರವಾದ ಸ್ವಭಾವವೂ ಉಳ್ಳ ಈಕೆಯು ಆಭರಣಗಳನ್ನು ಧರಿಸುವದಕ್ಕೆ ಯೋಗ್ಯಳಾಗಿದ್ದಾಗ್ಯೂ ಆಭರಣಗಳಿಲ್ಲದೆ ಆಕಾಶದಲ್ಲಿ ಮೋಡಕವಿದು ಚೆನ್ನಾಗಿ ಕಾಣಿಸದಿರುವ ನೂತನವಾದ ಚಂದ್ರರೇಖೆಯಂತೆ ಪ್ರಕಾಶವಾಗಿ ತೋರದಿರುವಳು. ಬಂಧುಜನವನ್ನಗಲಿ ತನಗೆ ಬೇಕಾದ ಭೋಗಗಳಿಲ್ಲದೆ ಈಕೆಯು ಪತಿಯನ್ನು ನೋಡಬೇಕೆಂಬ ಅಪೇಕ್ಷೆಯಿಂದ ಇಂಥ ಕಷ್ಟದಶೆಯಲ್ಲೂ ಇನ್ನೂ ಶರೀರವನ್ನು ಧರಿಸಿಕೊಂಡಿರುವಳು. ಲೋಕದಲ್ಲಿ ಸ್ತ್ರೀಯರಿಗೆ ಆಭರಣವಿಲ್ಲದೆ ಇದ್ದಾಗ್ಯೂ ಪತಿಯೇ ಉತ್ತಮವಾದ ಆಭರಣವು. ಆದ್ದರಿಂದ ಈಕೆಯು ಎಷ್ಟುರೂಪುಳ್ಳವಳಾಗಿದ್ದರೂ ಪತಿಯನ್ನಗಲಿರುವದರಿಂದ ಶೋಭಿಸದೆ ಇರುವಳು. ಈಕೆಯನ್ನು ಅಗಲಿರುವ ಆ ನಳಮಹಾರಾಜನೂ ಬಹಳವಾಗಿ ಕ್ಲೇಶಪಡುತ್ತ ಈಕೆಗೋಸ್ಕರ ತನ್ನ ಶರೀರವನ್ನಿರಿಸಿಕೊಂಡಿರುವನೇ ಹೊರತಾಗಿ ಶರೀರವನ್ನು ಬಿಟ್ಟಿರಲಾರನು. ಕಪ್ಪಾದ ಮುಂಗುರುಳುಳ್ಳವಳಾಗಿಯೂ ಕಮಲದಳದಂತೆ ವಿಶಾಲವಾದ ಕಣ್ಣುಗಳುಳ್ಳವಳಾಗಿಯೂ ಸುಖಪಡುವದಕ್ಕೆ ಯೋಗ್ಯಳಾಗಿದ್ದರೂ ದುಃಖಪಡುತ್ತಿರುವ ಈಕೆಯನ್ನುಕಂಡು, ಅಕಟಕಟಾ! ನನ್ನಮನಸ್ಸಿಗೂ ವ್ಯಥೆಯುಂಟಾಗಿರುವದಲ್ಲಾ! ಈ ಮಂಗಳಾಂಗಿಯು ಯಾವಾಗ ದುಃಖವನ್ನು ಪರಿಹರಿಸಿಕೊಂಡು ಚಂದ್ರನೊಡಗೂಡಿದ ರೋಹಿಣಿಯಂತೆ ತನ್ನಪತಿಯಾದ ನಳಮಹಾರಾಜನನ್ನು ಸೇರಿ ಸಂತೋಷಪಟ್ಟಾಳು. ನಳಮಹಾರಾಜನು ಈಕೆಯನ್ನು ಸೇರಿದರೆ, ರಾಜ್ಯಭ್ರಷ್ಟನಾದ ರಾಜನು ಪುನಃ ರಾಜ್ಯವನ್ನು ಹೊಂದಿದರೆ ಹ್ಯಾಗೆ ಸಂತೋಷಪಡುವನೋ ಹಾಗೆ ತಾನೂ ಸಂತೋಷಪಡುವನು. ಉತ್ತಮವಾದ ಕುಲದಲ್ಲಿ ಹುಟ್ಟಿ, ಸುಶೀಲಸಂಪನ್ನರಾಗಿ, ಅನುರೂಪವಾದ ವಯಸ್ಸುಳ್ಳ ಇವರಿಬ್ಬರೂ ಒಬ್ಬರನ್ನೊಬ್ಬರು ಸೇರುವದಕ್ಕೆ ಅರ್ಹರಾದವರು. ಅಧಿಕವಾದ ಪರಾಕ್ರಮವುಳ್ಳ ನಳಮಹಾರಾಜನ ಪತ್ನಿಯಾದ ದಮಯಂತಿಯು ಪತಿಯನ್ನು ನೋಡಬೇಕೆಂದು ಅಪೇಕ್ಷೆಯುಳ್ಳವಳಾಗಿರುವಂತೆ ತೋರುವದರಿಂದ, ಈಕೆಯನ್ನು ನಾನು ಈಗ ಸಮಾಧಾನಪಡಿಸತಕ್ಕದ್ದು ಯುಕ್ತವಾದದ್ದು' ಎಂದು ನಿಶ್ಚಯಿಸಿ, ಅನೇಕ ಕಾರಣಗಳಿಂದಲೂ ಇನ್ನೂ ಅನೇಕ ಗುರುತುಗಳಿಂದಲೂ ಈಕೆಯು ದಮಯಂತಿಯೇ ಎಂದು ನಿರ್ಧರಮಾಡಿಕೊಂಡು, ಆಕೆಯ ಬಳಿಗೆ ಹೋಗಿ 'ಎಲೌ ದಮಯಂತಿಯೆ, ನಾನು ನಿನ್ನ ಸಹೋದರನಿಗೆ ಪ್ರಿಯಮಿತ್ರನಾದ ಸುದೇವನೆಂಬವನು. ನಿಮ್ಮ ತಂದೆಯಾದ ಭೀಮಭೂಪಾಲಕನ ಅಪ್ಪಣೆಯಿಂದ ನಾನು ನಿನ್ನನ್ನು ಹುಡುಕುವದಕ್ಕೋಸ್ಕರ ಇಲ್ಲಿಗೆ ಬಂದೆನು. ನಿಮ್ಮ ತಂದೆತಾಯಿಗಳೂ ನಿನ್ನಸಹೋದರರೂ ಸಹ ಕುಶಲರಾಗಿರುವರು. ಆಯುಷ್ಮಂತರಾದ ನಿನ್ನ ಇಬ್ಬರು ಮಕ್ಕಳೂ ಕುಶಲರಾಗಿರುವರು. ನಿನ್ನ ಬಂಧುಜನಗಳೆಲ್ಲರೂ ನಿನ್ನ ನಿಮಿತ್ತವಾಗಿ ವ್ಯಸನಪಡುತ್ತ ದೀನದಶೆಯನ್ನು ಹೊಂದಿರುವರು. ನಿನ್ನನ್ನು ಹುಡುಕುವದಕ್ಕೋಸ್ಕರ ಅನೇಕಮಂದಿ ಬ್ರಾಹ್ಮಣರು ಈ ಭೂಮಂಡಲದಲ್ಲೆಲ್ಲಾ ಸಂಚರಿಸುತ್ತಿರುವರು' ಎಂದು ನುಡಿಯಲು, ದಮಯಂತಿಯು ಈತನು ಸುದೇವನೇಸರಿ ಎಂದು ನಿಶ್ಚಯಿಸಿಕೊಂಡು, ಕ್ರಮವಾಗಿ ಸ್ವಜನರ ಯೋಗಕ್ಷೇಮಗಳನ್ನು ವಿಚಾರಿಸಿ, ತನ್ನ ಸಹೋದರನಿಗೆ ಮಿತ್ರನಾದ ಆತನನ್ನು ನೋಡಿ ಬಹಳವಾಗಿ ವ್ಯಸನಪಡುತ್ತ ರೋದನಮಾಡಿದಳು.

ಅದನ್ನು ನೋಡಿ, ರಾಜಪುತ್ರಿಯಾದ ಸುನಂದೆಯು ತಾನೂ ದುಃಖಪಟ್ಟು ತನ್ನ ತಾಯಿಯ ಬಳಿಗೆ ಹೋಗಿ ಆಕೆಯನ್ನು ಕುರಿತು 'ಎಲೆ ತಾಯೆ, ನಮ್ಮ ಸೈರಂಧ್ರಿಯು ಒಬ್ಬ ಬ್ರಾಹ್ಮಣನ ಸಂಗಡ ಮಾತನಾಡುತ್ತ ಅಧಿಕವಾಗಿ ರೋದನಮಾಡುತ್ತಿರುವಳು. ಅದನ್ನು ನೀನು ತಿಳಿಯಬೇಕಾದ ಪಕ್ಷದಲ್ಲಿ ವಿಚಾರಿಸಿ ತಿಳಿದುಕೊಳ್ಳ

ಬಹುದು' ಎಂದು ನುಡಿದಳು. ಬಳಿಕ ರಾಜಮಾತೆಯು ರಾಣಿವಾಸದಿಂದ ಹೊರಗೆ ಬಂದು ದಮಯಂತಿಯು ಆ ಬ್ರಾಹ್ಮಣನೊಡನೆ ಎಲ್ಲಿ ಮಾತನಾಡುತ್ತಿದ್ದಳೋ ಅಲ್ಲಿಗೆ ಬಂದು, ಆ ಬ್ರಾಹ್ಮಣನನ್ನು ಕರೆತರಿಸಿ 'ಎಲೈ ಬ್ರಾಹ್ಮಣನೆ, ಈಕೆಯು ಯಾರ ಪತ್ನಿಯು? ಯಾರ ಮಗಳು? ಪತಿಯನ್ನೂ ಬಂಧುಗಳನ್ನೂ ಅಗಲಿ ದೇವಶಾಸ್ತ್ರೀಗೆ ಸಮಾನಳಾದ ಈಕೆಯು ಯಾತಕ್ಕೋಸ್ಕರ ಹೀಗಿರುವಳು? ಇವೆಲ್ಲವನ್ನೂ ಕೇಳಬೇಕೆಂದು ನನಗೆ ಕುತೂಹಲವಿರುವದು. ನೀನು ಯಥಾರ್ಥವಾಗಿ ಹೇಳು' ಎನಲು, ಸುದೇವನು ಸುಖವಾಗಿ ಕೂತುಕೊಂಡು ಆ ರಾಜಮಾತೆಯ ಸಂಗಡ ದಮಯಂತಿಯ ವೃತ್ತಾಂತವನ್ನು ಹೇಳಲುಪಕ್ರಮಿಸಿದನು" ಎಂದು ಬೃಹದಶ್ವನು ಯುಧಿಷ್ಠಿರನಿಗೆ ಹೇಳಿದನು.

೬೯ನೇ ಅಧ್ಯಾಯ.—ನಳೋಪಾಖ್ಯಾನ—(ಚೇದಿರಾಯನ ಪಟ್ಟಣದಲ್ಲಿ ದಮಯಂತಿಯು ಸಿಕ್ಕಿದ್ದು.)

ವೈಶಂಪಾಯನಮುನೀಶ್ವರನು ಜನಮೇಜಯರಾಯರಾಯನನ್ನು ಕುರಿತು—ಕೇಳು ಜನಮೇಜಯನೆ, ಬೃಹದಶ್ವನು ಧರ್ಮರಾಯನನ್ನು ಕುರಿತು "ಎಲೈ ಧರ್ಮರಾಯನೆ, ಆಗ ಸುದೇವನು ರಾಜಮಾತೆಯನ್ನು ನೋಡಿ 'ಎಲೌ ರಾಜಮಾತೆಯೆ, ಮಂಗಳಾಂಗಿಯಾದ ಈಕೆಯು ಧರ್ಮಾತ್ಮನಾದ ವಿದರ್ಭದೇಶಾಧಿಪತಿಯಾದ ಭೀಮಭೂಪಾಲಕನ ಮಗಳು, ದಮಯಂತಿಯೆಂಬ ಹೆಸರಿನಿಂದ ಪ್ರಸಿದ್ಧಳಾದವಳು, ನಿಷಧದೇಶಾಧಿಪತಿಯಾದ ವೀರಸೇನರಾಯನಿಗೆ ಪುತ್ರನಾದ ನಳಮಹಾರಾಜನ ಪತ್ನಿಯಾದವಳು. ಆ ನಳಮಹಾರಾಜನು ತನ್ನ ಸಹೋದರನ ಸಂಗಡ ಜೂಜಾಡಿ ರಾಜ್ಯವನ್ನು ಕಳೆದುಕೊಂಡು ಪತ್ನಿಯೊಡನೆ ಅರಣ್ಯಕ್ಕೆ ಹೊರಟುಹೋಗಿ, ಇದುವರೆಗೂ ಯಾರಿಗೂ ಕಾಣಿಸಿಕೊಳ್ಳದಿರುವನು. ನಾವು ದಮಯಂತಿಯನ್ನು ಎಲ್ಲಾ ಕಡೆಯಲ್ಲೂ ಹುಡುಕುತ್ತ ಇಲ್ಲಿಗೆ ಬರಲು, ಈ ದಮಯಂತಿಯು ನಿಮ್ಮ ಅರಮನೆಯಲ್ಲಿ ನನಗೆ ಸಿಕ್ಕಿದಳು. ಲೋಕದಲ್ಲಿ ಈಕೆಯಂತೆ ರೂಪವತಿಯರಾದ ಸ್ತ್ರೀಯರು ಯಾರೂ ಇಲ್ಲ. ಇದೋ ಈಕೆಯ ಹುಬ್ಬುಗಳ ಮಧ್ಯದಲ್ಲಿ ಸಹಜವಾದ ಒಂದು ಕೆಂಪು ಮಚ್ಚೆ ಇರುವದು. ಯೌವನಮಧ್ಯಸ್ಥಳಾದ ಈಕೆಯ ಕೆಂದಾವರೆಯಂತಿರುವ ಆ ಗುರುತು ಚೆನ್ನಾಗಿ ಕಾಣಿಸದೆ ಇದ್ದರೂ ಅದನ್ನು ಗೊತ್ತುಹಿಡಿದೆನು. ಈಗ ಆಗುರುತು ಮಲಿನವಾಗಿ ಮೇಘಾವೃತನಾದ ಚಂದ್ರನಂತೆ ಪ್ರಕಾಶಿಸದೆ ಇರುವದು. ಈಕೆಯ ಐಶ್ವರ್ಯನಿಮಿತ್ತವಾಗಿ ಬ್ರಹ್ಮನು ಈ ಗುರುತನ್ನು ನಿರ್ಮಾಣಮಾಡಿರುವನು. ಮತ್ತು ಈಕೆಯ ಶರೀರವು ಮಲಿನವಾಗಿರುವದರಿಂದ, ರೂಪೂ ಚೆನ್ನಾಗಿ ಕಾಣಿಸದೆ ಇರುವದು. ಸುವರ್ಣಚ್ಛಾಯೆಯುಳ್ಳ ಈಕೆಯ ಶರೀರವು ಮಂಗಳಸ್ನಾನ ಮೊದಲಾದವುಗಳು ಇಲ್ಲದಿರುವದರಿಂದ ಸ್ಪಷ್ಟವಾಗಿ ಪ್ರಕಾಶಿಸದೆ ಇರುವದು. ಇಂಥ ಶರೀರದಿಂದಲೂ ಆ ಗುರುತಿನಿಂದಲೂ ನಾನು ಸೆಕೆಯಿಂದ ಅಗ್ನಿಯನ್ನು ತಿಳಿಯುವಂತೆ ಈಕೆಯನ್ನು ದಮಯಂತಿಯೆಂದು ತಿಳಿದೆನು' ಎಂದು ನುಡಿದನು.

ಅದನ್ನು ಕೇಳಿ ಸುನಂದೆಯು ದಮಯಂತಿಯ ಹುಬ್ಬುಗಳ ಮಧ್ಯದಲ್ಲಿರುವ ಕೊಳೆಯನ್ನು ತೊಳೆದು ನೋಡಲು, ಆ ಕೆಂಪುಗುರುತು ಮೋಡವಿಲ್ಲದ ಆಕಾಶದಲ್ಲಿ ಚಂದ್ರನು ಪ್ರಕಾಶಿಸುವಂತೆ ಪ್ರಕಾಶಿಸಿತು. ಅದನ್ನು ನೋಡಿ ರಾಜಮಾತೆಯೂ ಸುನಂದೆಯೂ ಸಹ ವ್ಯಸನಪಟ್ಟು, ಒಂದು ಮುಹೂರ್ತಕಾಲ ದಮಯಂತಿಯನ್ನು ಅಪ್ಪಿಕೊಂಡು ಕಂಬನಿಗಳನ್ನು ಸುರಿಸುತ್ತ, ರಾಜಮಾತೆಯು ಆಕೆಯನ್ನು ಕುರಿತು 'ಎಲೆ ಮಗಳೆ, ನೀನು ನನ್ನ ತಂಗೀಮಗಳೆಂದು ಈ ಗುರುತಿನಿಂದ ಈಗ ನನಗೆ ಗೊತ್ತಾಯಿತು. ನಾನೂ ನಿಮ್ಮತಾಯಿಯೂ ದಶಾರ್ಣದೇಶಾಧಿಪತಿಯಾದ ಸುದಾಮರಾಯನ ಕುಮಾರಿಯರು. ಆತನು ಭೀಮಭೂಪಾಲನಿಗೆ ನಿಮ್ಮ ತಾಯಿಯನ್ನೂ ವೀರಬಾಹುವಿಗೆ ನನ್ನನ್ನೂ ಕೊಟ್ಟು ವಿವಾಹಮಾಡಿದನು. ನೀನು ದಶಾರ್ಣದೇಶಾಧಿಪತಿಯಾದ ನಮ್ಮ ತಂದೆಯಮನೆಯಲ್ಲಿ ಹುಟ್ಟಿದಾಗ ನಿನ್ನನ್ನು ನಾನುನೋಡಿದ್ದೆನು. ನಿನಗೆ ನಮ್ಮಮನೆಯು ನಿಮ್ಮ ತಂದೆಯಮನೆಯು ಹ್ಯಾಗೊ ಹಾಗೆಯೇ ಎಂದು ತಿಳಿ. ಈ ನನ್ನ ಐಶ್ವರ್ಯವೆಲ್ಲಾ ನಿನ್ನದೆ ಎಂದು ಎಣಿಸು' ಎನಲು, ಆ ಮಾತನ್ನು ಕೇಳಿ ದಮಯಂತಿಯು ಸಂತೋಷದಿಂದ ಆಕೆಗೆ ವಂದನೆಯನ್ನುಮಾಡಿ, 'ಎಲೆ ತಾಯೆ, ನಾನು ನಿಮ್ಮ ಮನೆಯಲ್ಲಿ ಯಾರಿಗೂ ತಿಳಿಯದಂತೆ ಇದ್ದರೂ, ನಿನ್ನಿಂದ ರಕ್ಷಿತಳಾಗಿ ಬೇಕಾದ ಇಷ್ಟಾರ್ಥಗಳನ್ನು ಪಡೆದು ಸುಖವಾಗಿಯೇ

ವಾಸಮಾಡಿಕೊಂಡಿದ್ದೆನು. ಈ ವಿಷಯದಲ್ಲಿ ಏನೂ ಸಂಶಯವಿಲ್ಲ. ಎಲೆ ತಾಯೆ, ನಾನು ತಂದೆ ತಾಯಿಗಳನ್ನು ಅಗಲಿ ಬಹಳದಿವಸವಾಯಿತು. ನನ್ನ ಚಿಕ್ಕಚಿಕ್ಕ ಮಕ್ಕಳೆರಡೂ ತಂದೆ ತಾಯಿಗಳನ್ನಗಲಿ ಎಷ್ಟು ದುಃಖಪಡುತ್ತಿರುವವೋ ತಿಳಿಯದು. ನೀನು ನನಗೆ ಪ್ರಿಯವನ್ನು ಮಾಡಬೇಕೆಂದೆಣಿಸಿದರೆ, ನಮ್ಮ ತಂದೆಯ ಮನೆಗೆ ಹೋಗಬೇಕೆಂದು ನನಗೆ ಅಪೇಕ್ಷೆಯುಂಟಾಗಿರುವವರಿಂದ, ಅಲ್ಲಿಗೆ ನನ್ನನ್ನು ಕಳುಹಿಸಿಕೊಡುವದಕ್ಕೆ ಶೀಘ್ರವಾಗಿ ವಾಹನವನ್ನು ಸಿದ್ಧಮಾಡಿಸು' ಎಂದು ಹೇಳಲು, ಅದನ್ನು ಕೇಳಿ ರಾಜಮಾತೆಯು ಹಾಗೇ ಆಗಲೆಂದು ನುಡಿದು, ತನ್ನ ಮಗನ ಅನುಮತಿಯಿಂದ ದಮಯಂತಿಯ ರಕ್ಷಣಾರ್ಥವಾಗಿ ಸೈನ್ಯವನ್ನು ಸಿದ್ಧಪಡಿಸಿ, ಪರಿಜನಗಳೊಡನೆ ಆಕೆಯನ್ನು ತಂದೆಯ ಮನೆಗೆ ಕಳುಹಿಸಿಕೊಟ್ಟಳು.

ಬಳಿಕ ದಮಯಂತಿಯು ಶೀಘ್ರವಾಗಿ ವಿದರ್ಭದೇಶಕ್ಕೆ ಹೋಗಿ ತಮ್ಮ ತಂದೆಯನ್ನು ಸೇರಲು, ಬಂಧುಜನಗಳೆಲ್ಲರೂ ಆಕೆಯನ್ನು ನೋಡಿ ಸಂತೋಷಪಟ್ಟು ಆಕೆಗೆ ಸನ್ಮಾನವನ್ನು ಮಾಡಿದರು. ಆಗ ದಮಯಂತಿಯು ತನ್ನ ಎರಡು ಮಕ್ಕಳನ್ನೂ ನೋಡಿ ಸಂತೋಷಪಟ್ಟು, ಬಂಧುಜನಗಳನ್ನೂ ತಂದೆತಾಯಿಗಳನ್ನೂ ಸಖೀಜನರನ್ನೂ ಕುಶಲಪ್ರಶ್ನೆಯಿಂದ ಸಂತೋಷಪಡಿಸಿ, ವೇದೋಕ್ತಕ್ರಮದಿಂದ ಬ್ರಾಹ್ಮಣರನ್ನೂ ದೇವತೆಗಳನ್ನೂ ಪೂಜಿಸಿದಳು. ಆ ಭೀಮಭೂಪಾಲಕನು ಸಂತುಷ್ಟನಾಗಿ ಆ ಸುದೇವನಿಗೆ ತಾನು ಆಡಿದಪ್ರಕಾರ ಸಾವಿರಗೋವುಗಳನ್ನೂ ಒಂದು ದೊಡ್ಡಗ್ರಾಮವನ್ನೂ ಅನೇಕ ದ್ರವ್ಯವನ್ನೂ ಸಹ ಕೊಟ್ಟನು. ಆ ದಿವಸ ರಾತ್ರಿ ದಮಯಂತಿಯು ವಿಶ್ರಮಿಸಿಕೊಂಡು ತಮ್ಮ ತಾಯಿಯ ಸಂಗಡ ಮಾತನಾಡಲುಪಕ್ರಮಿಸಿ, 'ಎಲೆ ತಾಯೆ, ನಾನು ಜೀವಿಸಿಕೊಂಡಿರಬೇಕೆಂದು ನಿನಗೆ ಇಚ್ಛೆಯಿದ್ದರೆ, ಪುರುಷಶ್ರೇಷ್ಠನಾದ ನಳಮಹಾರಾಜನನ್ನು ಹುಡುಕಿಸಿ ಕರೆತರಿಸುವದಕ್ಕೆ ಯತ್ನಮಾಡು. ಈ ಮಾತನ್ನು ಸತ್ಯವಾಗಿ ಹೇಳುವೆನು' ಎನಲು, ಅದನ್ನು ಕೇಳಿ ಭೀಮಭೂಪಾಲನ ಪತ್ನಿಯು ಕಂಬನಿಗಳನ್ನು ತುಂಬಿ ದುಃಖದಿಂದ ಉತ್ತರವನ್ನೇ ಕೊಡದೇ ದುಃಖಪಡುತ್ತಿದ್ದಳು. ಹೀಗೆ ಅವರಿಬ್ಬರೂ ದುಃಖಾಕ್ರಾಂತರಾಗಿರುವದನ್ನು ನೋಡಿ ಅಂತಃಪುರದಲ್ಲಿದ್ದ ಸ್ತ್ರೀಯರೆಲ್ಲರೂ ಅಧಿಕವಾಗಿ ರೋದನಮಾಡಿದರು. ಬಳಿಕ ರಾಜಪತ್ನಿಯು ಮಹಾರಾಜನಾದ ಭೀಮಭೂಪಾಲನನ್ನು ಕುರಿತು 'ಮಹಾರಾಜನೆ, ನಿನ್ನ ಮಗಳಾದ ದಮಯಂತಿಯು ಪತಿಯ ನಿಮಿತ್ತವಾಗಿ ಬಹಳವಾಗಿ ವ್ಯಸನಪಡುತ್ತ ತನ್ನ ಪತಿಯನ್ನು ಹುಡುಕಿಸಬೇಕೆಂದು ಲಜ್ಜೆಯನ್ನು ಬಿಟ್ಟು ತಾನೇ ಹೇಳಿದಳು. ಆದ್ದರಿಂದ ಪುಣ್ಯಶ್ಲೋಕನಾದ ನಳಮಹಾರಾಜನನ್ನು ಹುಡುಕುವದಕ್ಕೋಸ್ಕರ ಭೃತ್ಯರನ್ನು ಕಳುಹಿಸಿಕೊಡು' ಎಂದು ನುಡಿದಳು. ಅದೇಪ್ರಕಾರ ಭೀಮಭೂಪಾಲನು ತನಗೆ ಅಧೀನರಾಗಿರುವ ಬ್ರಾಹ್ಮಣರನ್ನು ನಳಮಹಾರಾಜನನ್ನು ಹುಡುಕುವ ನಿಮಿತ್ತವಾಗಿ ಎಲ್ಲಾ ದಿಕ್ಕುಗಳಿಗೂ ಕಳುಹಿಸಿಕೊಟ್ಟನು.

ಆಗ ಆ ಬ್ರಾಹ್ಮಣರು ದಮಯಂತಿಯನ್ನು ಕಂಡು ನಳಮಹಾರಾಜನನ್ನು ಹುಡುಕುವದಕೋಸ್ಕರ ತಾವು ಹೊರಡುತ್ತೇವೆಂದು ಹೇಳಲು, ದಮಯಂತಿಯು ಆ ಬ್ರಾಹ್ಮಣರನ್ನು ಕುರಿತು 'ಎಲೈ ಪೂಜ್ಯರಾದ ಬ್ರಾಹ್ಮಣರೆ, ನೀವು ಅಲ್ಲಲ್ಲಿ ಜನಗಳು ಗುಂಪುಕೂಡುವ ಸ್ಥಳಗಳಿಗೆ ಹೋಗಿ—ನಿನ್ನನ್ನೇ ಅನುವರ್ತಿಸಿಕೊಂಡು ನಿನಗೆ ಪ್ರಿಯಳಾಗಿ ಘೋರವಾದ ಅರಣ್ಯದಲ್ಲಿ ನಿದ್ರೆಮಾಡುತ್ತಿದ್ದವಳನ್ನು ನೀನು ಪರಿತ್ಯಜಿಸಿ, ಆಕೆಯ ಅರ್ಧವಸ್ತ್ರವನ್ನು ಖಂಡಿಸಿಕೊಂಡು ಎಲ್ಲಿ ಹೊರಟುಹೋದೆ? ಆಸ್ತ್ರೀಯು ನೀನು ಬಿಟ್ಟುಹೋಗುವಾಗ ಹ್ಯಾಗಿದ್ದಳೋ ಹಾಗೆಯೇ ಇದ್ದುಕೊಂಡು ಆ ಅರ್ಧವಸ್ತ್ರವನ್ನೇ ಉಟ್ಟುಕೊಂಡು, ನಿನ್ನ ಆಗಮನವನ್ನೇ ನಿರೀಕ್ಷಿಸುತ್ತ, ದುಃಖಾಗ್ನಿಯಿಂದ ಸಂತಾಪಪಡುತ್ತಿರುವಳು. ನಿನ್ನ ನಿಮಿತ್ತವಾಗಿ ನಿರಂತರದಲ್ಲೂ ದುಃಖಪಡುತ್ತಿರುವ ಆಕೆಯ ವಿಷಯದಲ್ಲಿ ಕರುಣಿಸಿ, ನೀನು ನಮಗೆ ಪ್ರತ್ಯುತ್ತರವನ್ನು ಕೊಡು—ಎಂದು ಇವೇ ಮೊದಲಾದ ಮಾತುಗಳನ್ನು ಅತನಿಗೆ ನನ್ನಲ್ಲಿ ದಯೆಯುಂಟಾಗುವಂತೆ ಹೇಳಬೇಕು.—ಆಕೆಯ ಶರೀರವೆಂಬ ವನವನ್ನು ಕಾಲವೆಂಬ ವಾಯುವಿನಿಂದ ಅಭಿವೃದ್ಧಿ ಹೊಂದಿದ ಶೋಕವೆಂಬ ಅಗ್ನಿಯು ದಹಿಸುತ್ತಿರುವದು. ಇಂಥ ಸಮಯದಲ್ಲಿ ಆಕೆಯ ಪತಿಯಾದವನು ಆಕೆಯನ್ನು ಪೋಷಿಸಿ ರಕ್ಷಿಸಬೇಕು. ಈ ಎರಡು ಕಾರ್ಯಗಳನ್ನೂ ಧರ್ಮಜ್ಞನಾದ ನೀನು ಯಾತಕ್ಕೋಸ್ಕರ ಬಿಟ್ಟಿರುವೆ?—ಎಂದು ನುಡಿಯಿರಿ.—ಲೋಕದಲ್ಲಿ ನೀನು ಪ್ರಸಿದ್ಧನಾಗಿಯೂ ಪ್ರಾಜ್ಞನಾಗಿಯೂ ಸತ್ಕುಲಪ್ರಸೂತನಾಗಿಯೂ ದಯಾಳುವಾಗಿಯೂ ಇದ್ದರೂ

ನನ್ನ ದೌರ್ಭಾಗ್ಯದಿಂದ ದಯಾಶೂನ್ಯನಾಗಿರುವೆ ಎಂದು ನಾನು ತಿಳಿದಿರುವೆನು. ಪುರುಷಶ್ರೇಷ್ಠನಾದ ನೀನು ನನ್ನ ವಿಷಯದಲ್ಲಿ ಕರುಣಿಸು. ಆ ನೃಶಂಸ್ಯವೆಂಬ ಉತ್ತಮವಾದ ಧರ್ಮವು ನಿನ್ನಲ್ಲೇ ಇದೆ ಎಂದು ಪ್ರಸಿದ್ಧವಾಗಿರುವದಿಲ್ಲವೇ ?—ಎಂದು ನಾನು ಬಾರಿಬಾರಿಗೂ ನುಡಿಯುತ್ತಿದೇನೆಂಬ ಈ ಮಾತುಗಳನ್ನು ನೀವು ಅಲ್ಲಲ್ಲಿ ಸಭೆಗಳಲ್ಲಿ ಹೇಳತಕ್ಕದ್ದು. ಇದನ್ನೆಲ್ಲಾ ಕೇಳಿ ಯಾವ ಪುರುಷನು ವ್ಯಸನಪಡುತ್ತ ನಿಮಗೆ ಉತ್ತರವನ್ನು ಕೊಡುವನೋ, ಆತನು ಯಾವನೋ, ಎಲ್ಲಿ ಇರುವನೋ, ಏನು ಪ್ರತ್ಯುತ್ತರವನ್ನು ಕೊಡುವನೋ, ಅವುಗಳನ್ನೆಲ್ಲಾ ತಿಳಿದುಕೊಂಡು ಬಂದು ನನಗೆ ಹೇಳಿರಿ. ಈ ಮಾತುಗಳನ್ನೆಲ್ಲಾ ನಾನಾಡಿದಂತೆ ಆತನಿಗೆ ತೋರ್ಪಡಿಸದೆ, ನೀವು ಹೋದ ಕೆಲಸವನ್ನು ಮಾಡಿಕೊಂಡು ಮರಳಿ ಬನ್ನಿರಿ. ನಿಮ್ಮ ಮಾತಿಗೆ ಪ್ರತ್ಯುತ್ತರವನ್ನು ಕೊಡುವ ಆ ಪುರುಷನು ದರಿದ್ರನಾಗಿದ್ದರೂ, ಐಶ್ವರ್ಯವಂತನಾಗಿದ್ದರೂ, ಅಸಮರ್ಥನಾಗಿದ್ದರೂ, ಆತನು ಏನು ಮಾಡಿಕೊಂಡಿರುವನೋ ಅದನ್ನು ತಿಳಿದು ಬನ್ನಿರಿ' ಎಂದು ಹೇಳಿದಳು. ಅದಕ್ಕೆ ಬ್ರಾಹ್ಮಣರು ಹಾಗೆಯೇ ಆಗಲೆಂದು ಒಪ್ಪಿಕೊಂಡು, ನಳಮಹಾರಾಜನನ್ನು ಹುಡುಕುವದಕ್ಕೋಸ್ಕರ ಎಲ್ಲಾ ಕಡೆಗೂ ಹೊರಟು, ಅನೇಕ ದೇಶಗಳಲ್ಲಿಯೂ, ಅಲ್ಲಲ್ಲಿರುವ ರಾಜಧಾನಿಗಳಲ್ಲಿಯೂ, ದೊಡ್ಡದೊಡ್ಡ ಗ್ರಾಮಗಳಲ್ಲಿಯೂ, ಬೇಡರಿರುವ ಹಳ್ಳಿಗಳಲ್ಲಿಯೂ, ಋಷ್ಯಾಶ್ರಮಗಳಲ್ಲಿಯೂ ಹುಡುಕಿ, ಎಲ್ಲಿಯೂ ಆತನನ್ನು ಕಾಣದೆ, ಅಲ್ಲಲ್ಲಿ ಜನಗಳು ಗುಂಪುಕೂಡಿದ ಸ್ಥಳಗಳಲ್ಲಿ ದಮಯಂತಿ ಹೇಳಿದ ಮಾತುಗಳನ್ನು ಹೇಳುತ್ತಿದ್ದರು" ಎಂದು ಬೃಹದಶ್ವನು ಧರ್ಮರಾಯನಿಗೆ ಹೇಳಿದನು.

## ೭೦ನೇ ಅಧ್ಯಾಯ.—ನಳೋಪಾಖ್ಯಾನ—(ಪರ್ಣಾದನು ನಡೆದ ವೃತ್ತಾಂತವನ್ನು ದಮಯಂತಿಗೆ ಹೇಳಿದ್ದು.)

ವೈಶಂಪಾಯನ ಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಬೃಹದಶ್ವನು ಧರ್ಮರಾಯನನ್ನು ಕುರಿತು "ಎಲೈ ಧರ್ಮರಾಯನೆ, ಹೀಗೆ ಬಹುಮಂದಿ ಬ್ರಾಹ್ಮಣರು ನಳಮಹಾರಾಜನನ್ನು ಹುಡುಕುತ್ತಿರಲು, ಅವರೊಳಗೆ ಪರ್ಣಾದನೆಂಬ ಒಬ್ಬ ಬ್ರಾಹ್ಮಣನು ವಿದರ್ಭನಗರಕ್ಕೆ ಬಂದು ದಮಯಂತಿಯನ್ನು ಕಂಡು 'ಎಲೌ ದಮಯಂತಿಯೆ, ನಾನು ನಳಮಹಾರಾಜನನ್ನು ಹುಡುಕಿಕೊಂಡು ಅಯೋಧ್ಯಾನಗರಕ್ಕೆ ಹೋಗಿ, ಋತುಪರ್ಣರಾಯನನ್ನು ಕಂಡು, ಆತನ ಸಮೀಪದಲ್ಲಿ ನೀನು ಹೇಳಿದ ಮಾತುಗಳನ್ನೆಲ್ಲಾ ಆಡಿದೆನು. ಆತನೂ ಆತನ ಪರಿಜನರೂ ಯಾರೂ ಪ್ರತ್ಯುತ್ತರವನ್ನು ಹೇಳಲಿಲ್ಲ. ಬಳಿಕ ಆತನ ಅಪ್ಪಣೆಯನ್ನು ತೆಗೆದುಕೊಂಡು ಬರುತ್ತಿರಲು, ಋತುಪರ್ಣರಾಯನಿಗೆ ಸಾರಥಿಯಾಗಿಯೂ ಸಣ್ಣಸಣ್ಣನಾದ ಕೈಗಳುಳ್ಳವನಾಗಿಯೂ ಕುರೂಪಿಯಾಗಿಯೂ ಕುದುರೆಗಳನ್ನು ಶೀಘ್ರನಾಗಿ ನಡಿಸುವದರಲ್ಲಿ ಕುಶಲನಾಗಿಯೂ ಅಡಿಗೆ ಮಾಡುವದರಲ್ಲಿ ಚತುರನಾಗಿಯೂ ಇರುವ ಬಾಹುಕನೆಂಬ ಒಬ್ಬ ಪುರುಷನು ನಿರ್ಜನವಾದ ಪ್ರದೇಶದಲ್ಲಿ ಬಹಳವಾಗಿ ನಿಟ್ಟುಸುರುಗಳನ್ನು ಬಿಟ್ಟು, ಬಿಕ್ಕಿಬಿಕ್ಕಿ ರೋದನಮಾಡುತ್ತ, ನನ್ನ ಸಂಗಡ ಕುಶಲಪ್ರಶ್ನೆಯನ್ನು ಮಾಡಿ,—ಲೋಕದಲ್ಲಿ ಕುಲಸ್ತ್ರೀಯರು ಎಂಥ ಕಷ್ಟದಶೆಯನ್ನು ಹೊಂದಿದಾಗ್ಯೂ ತಮ್ಮನ್ನು ತಾವೇ ರಕ್ಷಿಸಿಕೊಳ್ಳುವರು. ಅದರಿಂದ ಅವರು ಸ್ವರ್ಗ ಮೊದಲಾದ ಉತ್ತಮಗತಿಗಳನ್ನು ಸತ್ಯವಾಗಿ ಪಡೆಯುವರು. ಈ ವಿಷಯದಲ್ಲಿ ಸಂದೇಹವಿಲ್ಲ. ಅವರು, ತಮ್ಮ ಪತಿಗಳು ತಮ್ಮನ್ನಗಲಿದರೂ, ಯಾವಾಗಲೂ ಅವರ ವಿಷಯದಲ್ಲಿ ಕೋಪಮಾಡದೆ, ತಮ್ಮ ಪ್ರಾಣಗಳನ್ನು ತಮ್ಮ ಪಾತಿವ್ರತ್ಯದಿಂದಲೇ ಧರಿಸಿಕೊಂಡಿರುವರು. ಅಂಥ ಸ್ತ್ರೀಯು ಮೂಢನಾಗಿಯೂ ಸುಖವು ತಪ್ಪಿ ಕಷ್ಟದಶೆಯನ್ನು ಹೊಂದಿದವನಾಗಿಯೂ ಇರುವ ಪತಿಯಿಂದ ಬಿಡಲ್ಪಟ್ಟರೂ, ಆತನ ಮೇಲೆ ಕೋಪವನ್ನು ಮಾಡದಿರುವಳು. ಹಸಿವು ಬಾಯಾರಿಕೆಗಳನ್ನು ಹೋಗಲಾಡಿಸಿಕೊಳ್ಳುವದಕ್ಕೋಸ್ಕರ ಪ್ರಯತ್ನಮಾಡಿ, ಪಕ್ಷಿಗಳು ತನ್ನ ವಸ್ತ್ರವನ್ನು ಅಪಹರಿಸಲು, ಮನೋವ್ಯಥೆಯಿಂದ ಪೀಡಿತನಾದ ಆತನ ವಿಷಯದಲ್ಲಿ ಅಂಥ ಸ್ತ್ರೀಯು ಕೋಪಮಾಡದಿರುವಳು. ಮತ್ತು ಅಂಥ ಸ್ತ್ರೀಯು ಪತಿಯು ತನ್ನನ್ನು ಪುರಸ್ಕರಿಸಿದರೂ, ಪುರಸ್ಕರಿಸದೆ ಇದ್ದರೂ, ರಾಜ್ಯವನ್ನು ಕಳೆದುಕೊಂಡು ಐಶ್ವರ್ಯಹೀನನಾಗಿ ಹಸಿವು ಬಾಯಾರಿಕೆಗಳಿಂದ ಪೀಡಿತನಾಗಿ ದುಃಖಸಮುದ್ರದಲ್ಲಿ ಮುಳುಗಿರುವ ಅಂಥವನ ವಿಷಯದಲ್ಲಿ ಎಂದಿಗೂ ಕೋಪಮಾಡದಿರುವಳು—ಎಂದು ನುಡಿದನು. ಎಲೌ ದಮ

ಯಂತಿಯೆ, ಆ ಮಾತನ್ನು ಕೇಳಿ, ನಾನು ಜಾಗ್ರತೆಯಾಗಿ ಇಲ್ಲಿಗೆ ಹೊರಟುಬಂದೆನು. ಮುಂದೆ ನಿನಗೆ ತೋರಿ ದಂತೆ ಮಾಡಬಹುದು. ಈ ಸಮಾಚಾರವನ್ನೆಲ್ಲಾ ನಿಮ್ಮ ತಂದೆಗೆ ತಿಳಿಸು' ಎಂದು ಹೇಳಿದನು. ಅದನ್ನು ಕೇಳಿ ದಮಯಂತಿಯು ಕಂಬನಿಗಳನ್ನು ತುಂಬಿ, ಅಂತರಂಗದಲ್ಲಿ ತಾಯಿಯ ಬಳಿಗೆ ಹೋಗಿ 'ಎಲೌ ತಾಯೆ, ನಾನು ನಿನ್ನ ಸನ್ನಿಧಾನದಲ್ಲಿಯೇ ಸುದೇವನಿಗೆ ಕೆಲವು ಮಾತುಗಳನ್ನು ಹೇಳಿ ಆತನನ್ನು ಅಯೋಧ್ಯಾಧಿಪತಿಯಾದ ಋತು ಪರ್ಣರಾಯನ ಬಳಿಗೆ ಕಳುಹಿಸಿಕೊಡುತ್ತೇನೆ. ನನಗೆ ಪ್ರಿಯವಾಗಬೇಕೆಂದು ನಿನಗೆ ಅಪೇಕ್ಷೆಯಿದ್ದರೆ, ಈ ನನ್ನ ಅಭಿಪ್ರಾಯವನ್ನು ನಮ್ಮ ತಂದೆಗೆ ತಿಳಿಸಬೇಡ. ಪ್ರಾಜ್ಞನಾದ ಸುದೇವನು ನನ್ನನ್ನು ಹ್ಯಾಗೆ ಇಲ್ಲಿಗೆ ಕರೆದು ಕೊಂಡು ಬಂದನೋ ಹಾಗೆಯೇ, ನಳಮಹಾರಾಜನನ್ನೂ ಜಾಗ್ರತೆಯಾಗಿ ಇಲ್ಲಿಗೆ ಕರೆದುಕೊಂಡು ಬರುವದಕ್ಕೋಸ್ಕರ ಅಯೋಧ್ಯಾನಗರಕ್ಕೆ ಹೋಗಲಿ' ಎಂದು ನುಡಿದು, ಬಳಿಕ ಮಾರ್ಗಾಯಾಸವನ್ನು ಪರಿಹಾರಮಾಡಿಕೊಂಡ ಆ ಪರ್ಣಾದನಿಗೆ ಅಧಿಕವಾಗಿ ಧನವನ್ನು ಕೊಟ್ಟು, ಸನ್ಮಾನವನ್ನು ಮಾಡಿ, ಆತನನ್ನು ಕುರಿತು 'ಎಲೈ ಬ್ರಾಹ್ಮಣ ಶ್ರೇಷ್ಠನೆ, ನೀನು ನನಗೆ ಮಹತ್ತಾದ ಉಪಕಾರವನ್ನು ಮಾಡಿದೆ. ಇಂಥ ಉಪಕಾರವನ್ನು ಮತ್ತೊಬ್ಬರು ಮಾಡಲಾರರು. ಇದರಿಂದ ನಾನು ನನ್ನ ಪತಿಯನ್ನು ಶೀಘ್ರವಾಗಿ ಸೇರುವೆನು. ಆತನೂ ಇಲ್ಲಿಗೆ ಬಂದ ಬಳಿಕ ನಿನಗೆ ನಾನು ಇನ್ನೂ ಅಧಿಕವಾಗಿ ದ್ರವ್ಯವನ್ನು ಕೊಡುವೆನು' ಎಂದು ಹೇಳಿದಳು. ಆಗ ಪರ್ಣಾದನು ಸಂತೋಷಪಟ್ಟು ದಮಯಂತಿಗೆ ಮಂಗಳಾಶೀರ್ವಾದವನ್ನು ಮಾಡಿ, ಕೃತಾರ್ಥನಾಗಿ ತನ್ನ ಮನೆಗೆ ಹೊರಟು ಹೋದನು.

ಬಳಿಕ ದಮಯಂತಿಯು ನಳವಿಯೋಗದಿಂದ ಬಹಳವಾಗಿ ವ್ಯಸನಪಡುತ್ತ, ತಮ್ಮ ತಾಯಿಯ ಬಳಿಯಲ್ಲಿ ಸುದೇವನನ್ನು ಕುರಿತು 'ಎಲೈ ಸುದೇವನೆ, ನೀನು ಸ್ವೇಚ್ಛೆಯಿಂದ ಸಂಚರಿಸುವ ಪಕ್ಷಿಯಂತೆ ವೇಗದಿಂದ ಅಯೋಧ್ಯಾಧಿಪತಿ ಯಾದ ಋತುಪರ್ಣರಾಯನ ಬಳಿಗೆ ಹೋಗಿ,—ಎಲೈ ಮಹಾರಾಜನೆ, ದಮಯಂತಿಗೆ ಪುನಸ್ಸ್ವಯಂವರ ಮಹೋತ್ಸವವು ಬೆಳೆಯುವದು. ಅದಕ್ಕಾಗಿ ಬಹುಮಂದಿ ರಾಜರೂ ರಾಜಕುಮಾರರೂ ಬರುವರು. ನಾಳೇದಿವಸವೇ ಸ್ವಯಂವರಮಹೋತ್ಸವವು ಬೆಳೆಯುವದು. ಅಷ್ಟರೊಳಗೆ ಅಲ್ಲಿಗೆ ಹೋಗತಕ್ಕ ಸಾಮರ್ಥ್ಯವಿದ್ದರೆ ನೀನು ಹೋಗ ಬಹುದು. ಶೂರನಾದ ನಳಮಹಾರಾಜನು ಬದುಕಿರುವನೋ ಇಲ್ಲವೋ ತಿಳಿಯಲಿಲ್ಲ. ಆಕೆಯು ನಾಳೇದಿವಸ ಸೂರ್ಯೋದಯಕಾಲಕ್ಕೆ ಸರಿಯಾಗಿ ಮತ್ತೊಬ್ಬ ಪತಿಯನ್ನು ವರಿಸುವಳು—ಎಂದು ಈ ಮಾತನ್ನು ಆತನ ಸಂಗಡ ಹೇಳು' ಎಂದಳು. ಸುದೇವನು ಹಾಗೆಯೇ ಆಗಲೆಂದು, ಶೀಘ್ರವಾಗಿ ಅಯೋಧ್ಯಾನಗರಕ್ಕೆ ಹೋಗಿ, ಋತುಪರ್ಣ ರಾಯನನ್ನು ಕಂಡು, ದಮಯಂತಿ ಹೇಳಿದ ಮಾತುಗಳನ್ನೆಲ್ಲಾ ಆತನಿಗೆ ತಿಳುಹಿಸಿದನು" ಎಂದು ಬೃಹದಶ್ವನು ಧರ್ಮರಾಯನಿಗೆ ಹೇಳಿದನು.

ಖಿನೇ ಅಧ್ಯಾಯ.—ನಳೋಪಾಖ್ಯಾನ—(ಋತುಪರ್ಣರಾಯನು ಬಾಹುಕನೊಂದಿಗೆ ವಿದರ್ಭದೇಶಕ್ಕೆ ಹೊರಟದ್ದು.)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯನೆ, ಬೃಹದಶ್ವನು ಧರ್ಮರಾಯನನ್ನು ಕುರಿತು "ಎಲೈ ಧರ್ಮರಾಯನೆ, ಋತುಪರ್ಣರಾಯನು ಸುದೇವನ ಮಾತನ್ನು ಕೇಳಿ, ಆತನನ್ನು ಒಳ್ಳೇ ಮಾತುಗಳಿಂದ ಸತ್ಕರಿಸಿ, ಅಶ್ವಹೃದಯವನ್ನು ತಿಳಿದಿರುವ ಸಾರಥಿಯಾದ ಬಾಹುಕನನ್ನು ನೋಡಿ 'ಎಲೈ ಬಾಹುಕನೆ, ನಾಳೇದಿವಸ ದಮಯಂತಿಗೆ ಸ್ವಯಂವರ ಮಹೋತ್ಸವ ಬೆಳೆಯುವದರಿಂದ, ಒಂದೇ ಹಗಲಿನಲ್ಲಿ ವಿದರ್ಭದೇಶಕ್ಕೆ ಹೋಗಬೇಕೆಂದು ಬಯಸುತ್ತೇನೆ. ನಿನಗೆ ಹ್ಯಾಗೆ ತೋರುವದು?' ಎನಲು, ಅದನ್ನು ಕೇಳಿ ಮಹಾತ್ಮನಾದ ನಳಮಹಾರಾಜನು, ಬಹಳವಾದ ವ್ಯಥೆಯಿಂದ ಮನಸ್ಸು ಒಡೆದು ಹೋಗಿ, ಚಿಂತಾಕ್ರಾಂತನಾಗಿ,— ದಮಯಂತಿಯು ಹೀಗೆ ಮಾಡತಕ್ಕವಳೆ! ಪತಿಯನ್ನೇ ಚಿಂತಿಸುತ್ತ ದೀನಳಾಗಿರುವ ಆಕೆಯು ನನ್ನನ್ನು ಸೇರು ವದಕ್ಕೋಸ್ಕರ ಇಂಥ ಉಪಾಯವನ್ನು ಯೋಚಿಸಿದ್ದರೂ ಯೋಚಿಸಿರಬಹುದು. ಪಾಪಬುದ್ಧಿಯಾದ ನೀಚನಾದ ನಾನು ಆಕೆಯನ್ನು ವಂಚಿಸಿದೆನು. ಲೋಕದಲ್ಲಿ ಸ್ತ್ರೀಸ್ವಭಾವವು ಅತಿ ಚಪಲವಾದದ್ದು; ನಾನೂ ಆಕೆಯ ವಿಷಯದಲ್ಲಿ ಬಹಳ ತಪ್ಪನ್ನು ಮಾಡಿರುವೆನು. ಒಂದುವೇಳೆ ಆಕೆಯು, ನಾನು ಅಗಲಿ ಹೋಗಿ ಬಹುದಿವಸ ದೂರವಾ

ಗಿರುವದರಿಂದ, ನನ್ನ ವಿಯೋಗವನ್ನು ಸಹಿಸದೆ ಬಹಳವಾಗಿ ದುಃಖಪಟ್ಟು, ನನ್ನಲಶೆಯನ್ನೇ ಬಿಟ್ಟು, ನನ್ನಲ್ಲಿ ಪ್ರೀತಿಯಿಲ್ಲದೆ ಈಗ ಇಂಥ ಆಲೋಚನೆಯನ್ನು ಮಾಡಿದ್ದರೂ ಮಾಡಿರಬಹುದು. ಆಕೆಯು ಮಕ್ಕಳೊಂದಿಗಳಾದ್ದರಿಂದ ಎಂದಿಗೂ ಇಂಥ ಆಲೋಚನೆಯನ್ನು ಮಾಡಲಾರಳು. ಇದರಲ್ಲಿ ಸುಳ್ಳು ಯಾವದೋ, ಯಥಾರ್ಥ ಯಾವದೋ, ಅಲ್ಲಿಗೇ ಹೋಗಿ ನಿಜವಾಗಿ ತಿಳಿಯಬೇಕು. ಆದ್ದರಿಂದ ನಾನು ಋತುಪರ್ಣರಾಯನ ಇಚ್ಛಾನುಸಾರವಾಗಿ ಸ್ವಕಾರ್ಯಕ್ಕೋಸ್ಕರ ಶೀಘ್ರವಾಗಿ ಅಲ್ಲಿಗೆ ಹೋಗತಕ್ಕದ್ದೇಸರಿ' ಎಂದು ನಿಶ್ಚಯಿಸಿಕೊಂಡು, ಮನಸ್ಸಿನಲ್ಲಿ ಖೇದಪಡುತ್ತ, ಕೈಮುಗಿದುಕೊಂಡು, ಋತುಪರ್ಣರಾಯನನ್ನು ಕುರಿತು 'ಎಲೈ ಮಹಾರಾಜನೆ, ಒಂದು ಹಗಲಿನಲ್ಲೇ ನಾನು ವಿದರ್ಭದೇಶಕ್ಕೆ ನಿನ್ನ ಇಷ್ಟಾನುಸಾರವಾಗಿ ನಿನ್ನನ್ನು ಕರೆದುಕೊಂಡು ಹೋಗುತ್ತೇನೆ' ಎಂದು ಒಪ್ಪಿಕೊಂಡು, ಬಳಿಕ ರಾಜಾಜ್ಞೆಯಿಂದ ಅಶ್ವಶಾಲೆಗೆ ಹೋಗಿ ಅಲ್ಲಿರುವ ಕುದುರೆಗಳನ್ನು ಪರೀಕ್ಷಿಸುತ್ತ, ಋತುಪರ್ಣರಾಯನು ತ್ವರೆಗೊಳಿಸುತ್ತಿರಲು, ದಾರಿನಡೆಯುವದರಲ್ಲಿ ಸಮರ್ಥಗಳಾಗಿಯೂ ತೇಜಸ್ಸಿನಿಂದಲೂ ಶಕ್ತಿಯಿಂದಲೂ ಕೂಡಿರುವವಾಗಿಯೂ, ಒಳ್ಳೇ ಜಾತಿಯಲ್ಲಿ ಹುಟ್ಟಿದವುಗಳಾಗಿಯೂ, ಒಳ್ಳೇ ಗುಣಗಳುಳ್ಳವುಗಳಾಗಿಯೂ, ದುರ್ಲಕ್ಷಣಗಳಿಲ್ಲದಿರತಕ್ಕವುಗಳಾಗಿಯೂ, ದೊಡ್ಡದಾದ ಮೂಗೂ ದೊಡ್ಡದಾದ ದವಡೆಗಳೂ ಉಳ್ಳವುಗಳಾಗಿಯೂ, ಹತ್ತು ಸುಳಿಗಳುಳ್ಳವುಗಳಾಗಿಯೂ, ಸಿಂಧುದೇಶದಲ್ಲಿ ಹುಟ್ಟಿದವುಗಳಾಗಿಯೂ, ವಾಯುವಿಗೆ ಸಮಾನವಾದ ವೇಗವುಳ್ಳವುಗಳಾಗಿಯೂ ಇರುವ ಕೃಶವಾದ ಕುದುರೆಗಳನ್ನು ತೆಗೆದುಕೊಂಡು ಬಂದನು. ಅವುಗಳನ್ನು ನೋಡಿ, ಋತುಪರ್ಣರಾಯನು ಕೋಪಿಸಿಕೊಂಡು, ನಳನನ್ನು ಕುರಿತು 'ಎಲೈ ಬಾಹುಕನೆ, ಇದೇನು! ನೀನು ನಾನು ಹೇಳಿದ ಕಾರ್ಯವನ್ನು ನೆರವೇರಿಸುವ ವಿಷಯದಲ್ಲಿ ಮೋಸಮಾಡುವಂತೆ ತೋರುತ್ತದೆ. ಅಲ್ಪವಾದ ಶಕ್ತಿಯೂ ವೇಗವೂ ಉಳ್ಳ ಈ ಕುದುರೆಗಳು ಹ್ಯಾಗೆ ರಥವನ್ನು ಎಳೆದಾವು? ಇಂಥ ಕುದುರೆಗಳಿಂದ ನಾನು ಹ್ಯಾಗೆ ಬಹುದೂರ ಹೋಗುವದಕ್ಕಾದೀತು?' ಎಂದು ನುಡಿದನು. ಅವನ್ನು ಕೇಳಿ ಬಾಹುಕನು ಆತನನ್ನು ಕುರಿತು 'ಎಲೈ ರಾಯನೆ, ಹಣೆಯಮೇಲೆ ಒಂದು ಸುಳಿಯೂ ತಲೇಮೇಲೆ ಎರಡು ಸುಳಿಗಳೂ ಪಾರ್ಶ್ವಗಳಲ್ಲಿ ಎರಡು ಸುಳಿಗಳೂ ಉಪಪಾರ್ಶ್ವಗಳಲ್ಲಿ ಎರಡು ಸುಳಿಗಳೂ ವಕ್ಷಸ್ಥಳದಲ್ಲಿ ಎರಡೆರಡು ಸುಳಿಗಳೂ ಬೆನ್ನಿನಲ್ಲಿ ಎರಡು ಸುಳಿಗಳೂ ಪೃಷ್ಟಭಾಗದಲ್ಲಿ ಒಂದು ಸುಳಿಯೂ ಸಹ ಇರತಕ್ಕ ಅಶ್ವವು ಉತ್ತಮವಾದದ್ದು. ಈ ಲಕ್ಷಣಗಳು ಈ ಕುದುರೆಗಳಲ್ಲಿರುವದರಿಂದ ಇವು ಜಾಗ್ರತೆಯಾಗಿ ವಿದರ್ಭದೇಶಕ್ಕೆ ಹೋಗುವದರಲ್ಲಿ ಸಂದೇಹವಿಲ್ಲ. ಇದರ ಮೇಲೆ ನೀನು ಇನ್ನ್ಯಾವ ಕುದುರೆಗಳನ್ನು ತರಬೇಕೆಂದು ಅಪೇಕ್ಷಿಸಿದರೂ ಆ ಕುದುರೆಗಳನ್ನೇ ತಂದು ರಥಕ್ಕೆ ಕಟ್ಟುವೆನು' ಎಂದನು. ಆಗ ಋತುಪರ್ಣರಾಯನು 'ಎಲೈ ಬಾಹುಕನೆ, ನೀನೇ ಅಶ್ವಹೃದಯವನ್ನು ತಿಳಿಯುವದರಲ್ಲಿ ಕುಶಲನಾದ್ದರಿಂದ ಯಾವ ಕುದುರೆಗಳು ವೇಗದಿಂದ ಹೋಗುವವೆಂದು ನೀನು ತಿಳಿದಿರುವೆಯೋ, ಅಂಥ ಕುದುರೆಗಳನ್ನೇ ರಥಕ್ಕೆ ಕಟ್ಟು' ಎಂದು ನುಡಿದನು. ಬಳಿಕ ನಳನು ಒಳ್ಳೇ ಜಾತಿಯಲ್ಲಿ ಹುಟ್ಟಿ ಒಳ್ಳೇ ಗುಣಗಳುಳ್ಳ ವೇಗಶಾಲಿಗಳಾದ ನಾಲ್ಕು ಕುದುರೆಗಳನ್ನು ಕಟ್ಟಿ ರಥವನ್ನು ಸಿದ್ಧಪಡಿಸಲು, ಋತುಪರ್ಣರಾಯನು ಜಾಗ್ರತೆಯಾಗಿ ಆ ರಥವನ್ನೇರಿದನು. ಬಳಿಕ ಆ ಉತ್ತಮವಾದ ಕುದುರೆಗಳು ಮೊಳಕಾಲುಗಳನ್ನೂರಿ ಭೂಮಿಯ ಮೇಲೆ ಬೀಳಲು, ಅಶ್ವಹೃದಯವನ್ನು ತಿಳಿದಿರುವ ನಳನು ಅಧಿಕವಾದ ವೇಗವೂ ಬಲವೂ ಉಳ್ಳ ಆ ಕುದುರೆಗಳನ್ನು ಸಮಾಧಾನಮಾಡಿ, ಹಗ್ಗವನ್ನು ಎಳೆದು ಹಿಡಿದು, ರಥವನ್ನು ನಡಿಸುವದಕ್ಕೆ ಉಪಕ್ರಮಿಸಿ ಸಾರಥಿಯಾದ ವಾರ್ಷ್ಣೇಯನನ್ನು ಅಲ್ಲೇ ತನ್ನ ಸಮೀಪದಲ್ಲಿ ಕುಳ್ಳಿರಿಸಿಕೊಂಡು, ವೇಗವಾಗಿ ನಡೆಯುವಂತೆ ಕುದುರೆಗಳಿಗೆ ಅಶ್ವಶಾಸ್ತ್ರಕ್ರಮದಿಂದ ಸಂಜ್ಞೆಯನ್ನು ಮಾಡಲು, ಆ ಕುದುರೆಗಳು ರಥಿಕನನ್ನು ಮೋಹಿಸುವಂತೆ ಆಕಾಶದಲ್ಲಿ ಹಾರಿ ಹೊರಟವು. ಈ ಪ್ರಕಾರ ವಾಯುವೇಗದಿಂದ ರಥವನ್ನು ತೆಗೆದುಕೊಂಡು ಹೋಗುವ ಆ ಕುದುರೆಗಳನ್ನು ನೋಡಿ, ಋತುಪರ್ಣರಾಯನು ಬಹಳವಾಗಿ ಆಶ್ಚರ್ಯಪಟ್ಟನು.

ಆಗ ವಾರ್ಷ್ಣೇಯನು ಆ ರಥದ ಶಬ್ದವನ್ನು ಕೇಳಿ, ಬಾಹುಕನು ಆ ಕುದುರೆಗಳನ್ನು ಹಿಡಿದಿರತಕ್ಕ ಕ್ರಮವನ್ನು ನೋಡಿ, 'ಈತನು ಇಂದ್ರನ ಸಾರಥಿಯಾದ ಮಾತಲಿಯಾಗಿರಬಹುದು! ಆತನ ಲಕ್ಷಣಗಳೆಲ್ಲಾ ಈತನಲ್ಲಿ ತೋರುತ್ತಿರುವವು. ಅಥವಾ ಅಶ್ವಹೃದಯವನ್ನು ತಿಳಿದಿರುವ ಶಾಲಿಹೋತ್ರನು ಮನುಷ್ಯರೂಪವನ್ನು ತಾಳಿಕೊಂಡು

ಏನಾದರೂ ಬಂದಿರುವನೋ? ಅಲ್ಲದಿದ್ದರೆ ಅಶ್ವಹೃದಯಜ್ಞನಾದ ವೀರನಾದ ನಳಮಹಾರಾಜನೇ ಇಲ್ಲಿಗೆ ಬಂದಿರುವನೋ ಏನೋ! ಹಾಗೂ ಅಲ್ಲದಿದ್ದರೆ ಈ ಬಾಹುಕನು ಸಹ ನಳಮಹಾರಾಜನು ತಿಳಿದಿದ್ದಷ್ಟು ಅಶ್ವಹೃದಯವನ್ನು ತಿಳಿದಿರಬಹುದು. ಯಾಕೆಂದರೆ, ಅಶ್ವಲಕ್ಷಣವನ್ನು ತಿಳಿಯುವದರಲ್ಲಿ ನಳಮಹಾರಾಜನೂ ಈ ಬಾಹುಕನೂ ಸಹ ಸಮಾನರಾಗಿ ಕಾಣಿಸುವರು. ಆತನಿಗೂ ಈತನಿಗೂ ವಯಸ್ಸೂ ಸಮಾನವಾಗಿರುವದು. ಈತನು ಅಶ್ವಹೃದಯವನ್ನು ತಿಳಿದಿರುವ ಮಹಾವೀರನಾದ ನಳಮಹಾರಾಜನೇ, ಬೇರೆ ಅಲ್ಲ. ಆಹಾ! ಹೀಗೂ ಹೇಳುವದಕ್ಕೆ ಆಗುವದಿಲ್ಲ. ಲೋಕದಲ್ಲಿ ಮಹಾತ್ಮರು ದೈವಾಜ್ಞೆಗೆ ಕಟ್ಟುಬಿದ್ದು ತಮ್ಮ ರೂಪವನ್ನು ಮರೆಸಿಕೊಂಡು ಭೂಮಿಯಲ್ಲಿ ಸಂಚರಿಸುವರು. ಈ ಬಾಹುಕನ ಅಂಗವಿಕಾರವನ್ನು ನೋಡಿದರೆ, ಶಾಸ್ತ್ರೋಕ್ತಪ್ರಮಾಣಗಳಿಂದ ಈತನೇ ನಳಮಹಾರಾಜನೆಂಬುವ ವಿಷಯದಲ್ಲಿ ನನಗೆ ಬುದ್ಧಿ ಭೇದವೇನೂ ಉಂಟಾಗುವದಿಲ್ಲ. ಆತನೇ ತನ್ನ ಸ್ವರೂಪವನ್ನು ಮರೆಸಿಕೊಂಡು ಹೀಗಿರುವನೆಂದೇ ನನ್ನ ಬುದ್ಧಿಗೆ ತೋರುವದು. ಈತನ ವಯಸ್ಸು ನಳಮಹಾರಾಜನ ವಯಸ್ಸಿನಷ್ಟೇ ಇರುವದು; ರೂಪಮಾತ್ರ ವ್ಯತ್ಯಾಸವಾಗಿರುವದು. ಇದನ್ನೆಲ್ಲಾ ನೋಡಿ ವಿಚಾರಮಾಡಿದರೆ, ಈ ಬಾಹುಕನೇ ಸಕಲಗುಣಸಂಪನ್ನನಾದ ನಳಮಹಾರಾಜನೆಂದು ನನಗೆ ತೋರುವದು' ಎಂದು ಈ ಪ್ರಕಾರದಿಂದ ಬಹಳವಾಗಿ ವಿಚಾರಮಾಡಿ ಚಿಂತಿಸುತ್ತಿದ್ದನು. ಆಗ ಋತುಪರ್ಣರಾಯನು ಬಾಹುಕನ ಮನಸ್ಸಿನ ಏಕಾಗ್ರತೆಯನ್ನೂ, ಉತ್ಸಾಹವನ್ನೂ, ಕುದುರೆಗಳನ್ನು ಹಿಡಿಯತಕ್ಕ ಚಾತುರ್ಯವನ್ನೂ, ರಥವನ್ನು ಶೀಘ್ರವಾಗಿ ನಡಿಸುವದರಲ್ಲಿರತಕ್ಕ ಮಹತ್ತಾದ ಕೌಶಲ್ಯವನ್ನೂ ಸಹ ನೋಡಿ ಬಹಳವಾಗಿ ಸಂತೋಷಪಟ್ಟನು" ಎಂದು ಬೃಹದಶ್ವನು ಧರ್ಮರಾಯನಿಗೆ ಹೇಳಿದನು.

## ೭೧ನೇ ಅಧ್ಯಾಯ.—ನಳೋಪಾಖ್ಯಾನ—(ನಳನನ್ನು ಕಲಿಯು ಬಿಟ್ಟು ಹೋದದ್ದು.)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಬೃಹದಶ್ವನು ಧರ್ಮರಾಯನನ್ನು ಕುರಿತು "ಎಲೈ ಧರ್ಮರಾಯನೆ, ಬಳಿಕ ಋತುಪರ್ಣರಾಯನ ರಥವು ನಳನ ಕೌಶಲ್ಯದಿಂದ ಅನೇಕ ನದಿಗಳನ್ನೂ ಬೆಟ್ಟಗಳನ್ನೂ ಸರೋವರಗಳನ್ನೂ ವನಗಳನ್ನೂ ಸಹ ಆಕಾಶದಲ್ಲಿ ಸಂಚರಿಸುವ ಪಕ್ಷಿಯಂತೆ ಅತಿಕ್ರಮಿಸಿ ಹೋಗುತ್ತಿರಲು, ಋತುಪರ್ಣರಾಯನು ತಾನು ಹೊದ್ದಿದ್ದ ವಸ್ತ್ರವು ಕೆಳಗೆ ಜಾರಿಬಿದ್ದದ್ದನ್ನು ನೋಡಿ ಅದನ್ನು ತೆಗೆದುಕೊಳ್ಳಬೇಕೆಂದು ನಳನನ್ನು ಕುರಿತು 'ಎಲೈ ಬುದ್ಧಿಶಾಲಿಯಾದ ಬಾಹುಕನೆ, ಕೆಳಗೆ ಬಿದ್ದ ವಸ್ತ್ರವನ್ನು ಈ ವಾರ್ಷ್ಣೇಯನು ತಂದು ಕೊಡುವ ವರೆಗೂ, ಬಹುವೇಗದಿಂದ ಹೋಗುತ್ತಿರುವ ಈ ಕುದುರೆಗಳನ್ನು ಸ್ವಲ್ಪ ನಿಲ್ಲಿಸು' ಎಂದು ನುಡಿದನು. ಅದನ್ನು ಕೇಳಿ ನಳನು, 'ಎಲೈ ಋತುಪರ್ಣಮಹಾರಾಜನೆ, ನಿನ್ನ ವಸ್ತ್ರವು ಬಹುದೂರ ಬಿದ್ದಿರುವದು. ಅಲ್ಲಿಂದ ನಾವು ಒಂದು ಯೋಜನ ಮುಂದಕ್ಕೆ ಬಂದೆವು. ಮರಳಿ ಆ ವಸ್ತ್ರವನ್ನು ತೆಗೆದುಕೊಳ್ಳುವದು ಅಶಕ್ಯವಾದದ್ದು' ಎಂದನು. ಋತುಪರ್ಣರಾಯನು ತಾನು ಹೋಗುವ ದಾರಿಯಲ್ಲಿರತಕ್ಕ ವನದಲ್ಲಿರುವ ಒಂದು ತಾರೇ ಮರವನ್ನು ನೋಡಿ, ನಳನನ್ನು ಕುರಿತು 'ಎಲೈ ಸಾರಥಿಯಾದ ಬಾಹುಕನೆ, ನನಗೆ ಗಣಿತವಿದ್ಯೆಯಲ್ಲಿರುವ ಅಧಿಕವಾದ ಪಾಂಡಿತ್ಯವನ್ನು ನಿನಗೆ ತೋರಿಸುತ್ತೇನೆ ನೋಡು. ಲೋಕದಲ್ಲಿ ಸರ್ವರೂ ಸರ್ವವನ್ನೂ ತಿಳಿದಿರುವದಿಲ್ಲ. ಆದ್ದರಿಂದ ಸರ್ವಜ್ಞನಾದವನು ಒಬ್ಬನೂ ಇಲ್ಲ. ಜ್ಞಾನವೆಂಬುವದು ಒಬ್ಬ ಪುರುಷನನ್ನೇ ಆಶ್ರಯಿಸಿರತಕ್ಕದ್ದಲ್ಲ. ಈ ವೃಕ್ಷದಲ್ಲಿ ಎಷ್ಟು ಎಲೆಗಳಿರುವವೋ ಎಷ್ಟು ಕಾಯಿಗಳಿರುವವೋ ಅವುಗಳನ್ನು ಲೆಕ್ಕಮಾಡಿ ಹೇಳುವೆನು. ಇವುಗಳಲ್ಲಿ ಕೆಳಗೆ ಬಿದ್ದಿರತಕ್ಕದ್ದು ನೂರಿಪ್ಪತ್ತೊಂದು ಎಲೆಗಳು, ಕಾಯಿ ಒಂದು. ಈ ವೃಕ್ಷದ ದೊಡ್ಡದಾದ ಎರಡು ಕೊಂಬೆಗಳಲ್ಲಿ ಮಾತ್ರ ಇರತಕ್ಕ ಎಲೆಗಳನ್ನೂ ಕಾಯಿಗಳನ್ನೂ ಲೆಕ್ಕಮಾಡಿ ಹೇಳುವೆನು ಕೇಳು. ಅನೇಕ ಸಣ್ಣಸಣ್ಣ ಕೊಂಬೆಗಳುಳ್ಳ ಈ ಎರಡು ದೊಡ್ಡ ಕೊಂಬೆಗಳಲ್ಲಿ ಐದುಕೋಟಿ ಎಲೆಗಳೂ ಎರಡು ಸಾವಿರದ ತೊಂಭತ್ತೈದು ಕಾಯಿಗಳೂ ಇರುವವು. ನೀನು ಬೇಕಾದರೆ ಈ ಎರಡು ಕೊಂಬೆಗಳಲ್ಲಿಯೂ ಎಣಿಸು' ಎಂದು ನುಡಿದನು. ಬಳಿಕ ನಳನು ರಥವನ್ನು ನಿಲ್ಲಿಸಿ, 'ಎಲೈ ರಾಯನೆ, ನೀನು ಪರೋಕ್ಷದಲ್ಲಿ ಹೇಳಿದ್ದನ್ನು ನಾನು ಪ್ರತ್ಯಕ್ಷವಾಗಿ ನೋಡಿ ತಿಳಿಯುವದಕ್ಕೋಸ್ಕರ ಈ

ಎರಡು ಕೊಂಬೆಗಳನ್ನೂ ಕತ್ತರಿಸಿ ಲೆಕ್ಕಮಾಡುವೆನು. ನೀನು ಹೇಳಿದಂತೆ ಸರಿಯಾಗಿದ್ದರೆ ಆಗ ನೀನು ಹೇಳಿದ್ದನ್ನು ಒಪ್ಪಿಕೊಳ್ಳುತ್ತೇನೆ. ನೀನು ಪರೋಕ್ಷದಲ್ಲಿ ಹೇಳಿದ ಲೆಕ್ಕವು ಸರಿಯಾಗಿದೆಯೋ ಇಲ್ಲವೋ ತಿಳಿಯದಾದ್ದರಿಂದ, ನಾನು ಈ ಕೊಂಬೆಗಳನ್ನು ನಿನ್ನೆದುರಿಗೆ ಕತ್ತರಿಸಿ ಎಲೆಗಳನ್ನೂ ಕಾಯಿಗಳನ್ನೂ ಲೆಕ್ಕಮಾಡುವೆನು. ಒಂದು ಮುಹೂರ್ತಕಾಲ ಈ ವಾರ್ಷ್ಣೇಯನು ಕುದುರೆಗಳ ಹಗ್ಗವನ್ನು ಹಿಡಿದುಕೊಂಡಿರಲಿ' ಎನಲು, ಋತುಪರ್ಣರಾಯನು 'ಎಲೈ ಬಾಹುಕನೆ, ಸಾವಕಾಶಮಾಡುವದಕ್ಕೆ ಇದು ಸಮಯವಲ್ಲ' ಎಂದನು. ಆಗ ಬಾಹುಕನು 'ಎಲೈ ರಾಯನೆ, ಒಂದು ಮುಹೂರ್ತಕಾಲ ಸಾವಕಾಶಮಾಡು. ನಿನಗೆ ಅಷ್ಟೊಂದು ತ್ವರೆಯಿದ್ದರೆ ಈ ವಾರ್ಷ್ಣೇಯನು ಸಾರಥ್ಯವನ್ನು ಮಾಡುವನು. ಇದೇ ಮಾರ್ಗವಾಗಿಯೇ ನೀನು ವಿದರ್ಭದೇಶಕ್ಕೆ ಹೋಗು' ಎಂದು ನುಡಿದನು. ಬಳಿಕ ಋತುಪರ್ಣನು 'ಎಲೈ ಬಾಹುಕನೆ, ನಿನ್ನಂತೆ ಸಾರಥ್ಯವನ್ನು ಮಾಡತಕ್ಕವನು ಭೂಮಂಡಲದಲ್ಲಿ ಯಾವನೂ ಇಲ್ಲ. ನಿನ್ನ ಸಹಾಯದಿಂದಲೇ ನಾನು ವಿದರ್ಭದೇಶವನ್ನು ಸೇರಬೇಕೆಂದು ಅಪೇಕ್ಷಿಸುತ್ತೇನೆ. ನಿನಗೆ ನಾನು ಶರಣಾಗತನಾಗಿರುವೆನು. ನನಗೆ ನೀನು ಮಾರ್ಗದಲ್ಲಿ ವಿಘ್ನವನ್ನು ಮಾಡಬೇಡ. ನಾಳೆ ಸೂರ್ಯೋದಯವಾಗುವದರೊಳಗಾಗಿ ನೀನು ವಿದರ್ಭದೇಶಕ್ಕೆ ನನ್ನನ್ನು ಕರೆದುಕೊಂಡು ಹೋದರೆ, ನಿನಗೆ ಬೇಕಾದದ್ದನ್ನು ಕೊಡುವೆನು' ಎಂದು ಹೇಳಿದನು. ಅನಂತರ ನಳಮಹಾರಾಜನು ಋತುಪರ್ಣನನ್ನು ಕುರಿತು 'ಎಲೈ ರಾಯನೆ, ಈ ಕೊಂಬೆಗಳಲ್ಲಿರುವ ಎಲೆಗಳನ್ನೂ ಕಾಯಿಗಳನ್ನೂ ಎಣಿಸಿ, ಬಳಿಕ ನಾನು ವಿದರ್ಭದೇಶಕ್ಕೆ ಬರುವೆನು. ನನ್ನ ಮಾತನ್ನು ನಡೆಯಿಸು' ಎನಲು, ಋತುಪರ್ಣರಾಯನು ತನಗೆ ಮನಸ್ಸಿಲ್ಲದೆ ಬಾಹುಕನನ್ನು ಕುರಿತು 'ಎಲೈ ಬಾಹುಕನೆ, ಈ ಕೊಂಬೆಯ ಒಂದು ಭಾಗದಲ್ಲಿರುವ ಎಲೆಗಳನ್ನೂ ಕಾಯಿಗಳನ್ನೂ ನಾನು ಹೇಳುವೆನು ಅದನ್ನು ನೀನೆಣಿಸಿದರೆ ಸಾಕು. ಅದರಿಂದ ನಿನಗೆ ನನ್ನ ಮಾತಿನಲ್ಲಿ ವಿಶ್ವಾಸವುಂಟಾಗುವದು' ಎಂದನು.

ಆಗ ನಳನು ರಥದಿಂದ ಜಾಗ್ರತೆಯಾಗಿ ಇಳಿದು, ಆ ವೃಕ್ಷವನ್ನು ಕತ್ತರಿಸಿ ಆ ಕೊಂಬೆಯಲ್ಲಿರುವ ಎಲೆಗಳನ್ನೂ ಕಾಯಿಗಳನ್ನೂ ಎಣಿಸಲು, ಅದರಲ್ಲಿ ಆ ಋತುಪರ್ಣರಾಯನು ಹೇಳಿದಷ್ಟೇ ಇದ್ದದ್ದನ್ನು ನೋಡಿ ಆಶ್ಚರ್ಯಪಟ್ಟು, 'ಎಲೈ ರಾಯನೆ, ನಿನ್ನ ಸಾಮರ್ಥ್ಯವು ಅತ್ಯದ್ಭುತವಾದದ್ದು. ಯಾವ ವಿದ್ಯೆಯಿಂದ ಇದರ ಸಂಖ್ಯೆಯನ್ನು ನೀನು ತಿಳಿದೆಯೋ ಆ ವಿದ್ಯೆಯನ್ನು ಕೇಳಬೇಕೆಂದು ನನಗೆ ಇಚ್ಛೆಯುಂಟಾಗಿರುವದು' ಎಂದು ನುಡಿದನು. ಆಗ ಋತುಪರ್ಣರಾಯನು ವಿದರ್ಭದೇಶಕ್ಕೆ ಹೋಗುವದರಲ್ಲಿ ತ್ವರೆಪಡುತ್ತ 'ಎಲೈ ಬಾಹುಕನೆ, ನಾನು ಅಕ್ಷಹೃದಯವನ್ನು ತಿಳಿದಿರುವೆನು. ಮತ್ತು ಗಣಿತಮಾಡುವದರಲ್ಲಿ ಬಹಳ ಚತುರನು' ಎನಲು, ಅದನ್ನು ಕೇಳಿ ನಳನು 'ಎಲೈ ರಾಯನೆ, ನಿನ್ನಲ್ಲಿರುವ ಈ ವಿದ್ಯೆಯನ್ನು ನನಗೆ ಹೇಳಿಕೊಡು; ನನ್ನಲ್ಲಿರುವ ಅಶ್ವಹೃದಯವನ್ನು ನಿನಗೆ ಹೇಳಿಕೊಡುವೆನು' ಎಂದನು. ಆಗ ಋತುಪರ್ಣರಾಯನು ಕಾರ್ಯಗೌರವದಿಂದಲೂ ಅಶ್ವಹೃದಯದಲ್ಲಿ ಅಪೇಕ್ಷೆಯಿಂದಲೂ ಹಾಗೆಯೇ ಆಗಲೆಂದು ಒಪ್ಪಿಕೊಂಡು 'ಎಲೈ ಬಾಹುಕನೆ, ಈ ಅಕ್ಷಹೃದಯವು ಶ್ರೇಷ್ಠವಾದದ್ದು. ಇದನ್ನು ನೀನು ಗ್ರಹಿಸು' ಎಂದು ಅದನ್ನು ಉಪದೇಶಮಾಡಿ, 'ಗಣಿತವಿದ್ಯೆಯನ್ನು ನೀನೇ ತಿಳಿದುಕೊಳ್ಳಬಲ್ಲೆ; ನನಗೆ ನೀನು ಹೇಳಿಕೊಡುತ್ತೇನೆಂದ ಅಶ್ವಹೃದಯವು ನನ್ನದಾಗಿ ನಿನ್ನಲ್ಲಿ ನಿಕ್ಷೇಪವಾಗಿರುವದು' ಎಂದು ನುಡಿದನು.

ಈ ಪ್ರಕಾರ ನಳನು ಋತುಪರ್ಣರಾಯನಿಂದ ಅಕ್ಷಹೃದಯವನ್ನು ಗ್ರಹಿಸಲು, ನಳನನ್ನು ಆಕ್ರಮಿಸಿಕೊಂಡಿದ್ದ ಕಲಿಯು ತನ್ನ ಮುಖದಿಂದ ಕಾರ್ಕೋಟಕವಿಷವನ್ನು ಕಕ್ಕಿಕೊಳ್ಳುತ್ತ ಆತನ ಶರೀರವನ್ನು ಬಿಟ್ಟು ಹೊರಟು ಹೋದನು. ಯಾವ ಕಲಿಯಿಂದ ಪೀಡಿತನಾದ ನಳಮಹಾರಾಜನು ಬಹುಕಾಲ ಮೂಢಾತ್ಮನಾಗಿದ್ದನೋ ಅಂಥ ಕಲಿಗೆ ದಮಯಂತಿಯು ಕೊಟ್ಟಿದ್ದ ಘೋರವಾದ ಶಾಪವು ನಿವೃತ್ತವಾಗಲು, ಆ ಕಲಿಗೆ ನಿಜರೂಪವುಂಟಾಯಿತು. ಅದನ್ನು ನೋಡಿ ನಿಷಧದೇಶಾಧಿಪತಿಯಾದ ನಳಮಹಾರಾಜನು ಕೋಪದಿಂದ ಆತನಿಗೆ ಶಾಪವನ್ನು ಕೊಡಬೇಕೆಂದು ಇಚ್ಛೈಯಿಸಲು, ಅದನ್ನು ತಿಳಿದು ಕಲಿಯು ಭಯಪಟ್ಟು ನಡುಗುತ್ತ ಕೈಮುಗಿದುಕೊಂಡು ನಳಮಹಾರಾಜನನ್ನು ಕುರಿತು 'ಎಲೈ ನಳಮಹಾರಾಜನೆ, ಕೋಪವನ್ನು ತಡೆದುಕೊ. ನಿನಗೆ ಉತ್ತಮವಾದ ಯಶಸ್ಸುಂಟಾಗುವಂತೆ ನಾನು ಮಾಡುವೆನು. ನಿನ್ನಿಂದ ಬಿಡಲ್ಪಟ್ಟ ದಮಯಂತಿಯು ಕೋಪಗೊಂಡು ನನಗೆ ಶಾಪವನ್ನು ಕೊಟ್ಟಾಗಲಿಂದಲೂ ನಾನು ಬಹಳ ವ್ಯಥೆಯನ್ನು ಅನುಭವಿಸಿಕೊಂಡು, ನಾಗರಾಜನಾದ ಕಾರ್ಕೋಟಕನ ವಿಷದಿಂದ ಅಹೋ

ರಾತ್ರಿಗಳಲ್ಲಿಯೂ ತಾಪಪಡುತ್ತ ನಿನ್ನಲ್ಲಿ ಬಹುಕಷ್ಟದಿಂದ ವಾಸಮಾಡಿಕೊಂಡಿದ್ದೆನು. ಈಗ ನಾನು ನಿನಗೆ ಶರಣಾಗತನಾಗಿರುವೆನು. ನಾನು ಹೇಳುವ ಈ ಮಾತನ್ನು ಕೇಳು. ಭಯಾರ್ತನಾದ ನನಗೆ ನೀನು ಶಾಪಕೊಡದೆ ಹೋದ ಪಕ್ಷದಲ್ಲಿ ಲೋಕದಲ್ಲಿ ಯಾರು ಆಲಸ್ಯವನ್ನು ಬಿಟ್ಟು ನಿನ್ನನ್ನು ಸ್ಮರಣೆಮಾಡುವರೋ ಅವರಿಗೆ ನನ್ನಿಂದ ಉಂಟಾಗತಕ್ಕ ಭಯವು ಎಂದಿಗೂ ಕೆಲಸವಿಲ್ಲ' ಎಂದು ಹೇಳಿದನು. ಅದನ್ನು ಕೇಳಿ ನಳಮಹಾರಾಜನು ತನ್ನ ಕೋಪವನ್ನು ಸಮಾಧಾನಮಾಡಿಕೊಂಡನು. ಆಗ ಕಲಿಯು ಭಯದಿಂದ ಯಾರಿಗೂ ಕಾಣಿಸಿಕೊಳ್ಳದೆ ಶೀಘ್ರವಾಗಿ ಆ ತಾರೇಮರವನ್ನು ಹೊಕ್ಕನು. ಕಲಿಯು ತಾರೇಮರವನ್ನು ಸೇರಿದ್ದರಿಂದ, ಆ ಮೊದಲು ಲೋಕದಲ್ಲಿ ತಾರೇ ಮರವು ನಿಂದಿತವಾಯಿತು. ಈ ಪ್ರಕಾರ ಕಲಿಯು ತನ್ನನ್ನು ಬಿಟ್ಟು ಹೊರಟುಹೋಗಲು, ಶೂರನಾದ ನಳಮಹಾರಾಜನು ಸಂತಾಪರಹಿತನಾಗಿ ಆ ತಾರೇಮರದ ಕಾಯಿಗಳನ್ನು ಲೆಕ್ಕಮಾಡಿ ಸಂತೋಷಪಟ್ಟು, ತೇಜೋವಂತನಾಗಿ ರಥವನ್ನೇರಿ ವೇಗಶಾಲಿಗಳಾದ ಕುದುರೆಗಳಿಂದ ಮುಂದಕ್ಕೆ ಹೊರಟು, ಪಕ್ಷಿಗಳಂತೆ ಹಾರಿಹೋಗುತ್ತಿರುವ ಉತ್ತಮವಾದ ಆ ಕುದುರೆಗಳನ್ನು ಮತ್ತಷ್ಟು ಚಬುಕುಮಾಡಿ ವಿದರ್ಭದೇಶವನ್ನು ಕುರಿತು ಶೀಘ್ರವಾಗಿ ತೆರಳಿದನು. ನಳಮಹಾರಾಜನು ಮುಂದಕ್ಕೆ ಪ್ರಯಾಣಮಾಡಲು, ಕಲಿಯೂ ತನ್ನ ವಾಸಸ್ಥಾನಕ್ಕೆ ಹೊರಟುಹೋದನು. ಕಲಿಯು ತನ್ನನ್ನು ಬಿಟ್ಟುಹೋದನಂತರ ನಳಮಹಾರಾಜನು ಸಂತಾಪರಹಿತನಾದಾಗ್ಯೂ, ಆತನ ಶರೀರವಿಕಾರಮಾತ್ರ ಹಾಗೆಯೇ ಇತ್ತು" ಎಂದು ಬೃಹದಶ್ವನು ಯುಧಿಷ್ಠಿರನಿಗೆ ಹೇಳಿದನು.

೪೪ನೇ ಅಧ್ಯಾಯ.—ನಳೋಪಾಖ್ಯಾನ—(ಋತುಪರ್ಣರಾಯನು ಬಾಹುಕನೊಂದಿಗೆ ಕುಂಡಿನನಗರವನ್ನು ಪ್ರವೇಶಮಾಡಿದ್ದು.)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೇ, ಬೃಹದಶ್ವನು ಧರ್ಮರಾಯನನ್ನು ಕುರಿತು "ಎಲೈ ಧರ್ಮರಾಯನೆ, ಬಳಿಕ ಪರಾಕ್ರಮಶಾಲಿಯಾದ ಋತುಪರ್ಣರಾಯನು ಸಾಯಂಕಾಲದಲ್ಲಿ ವಿದರ್ಭದೇಶವನ್ನು ಸೇರಲು, ಅಲ್ಲಿದ್ದ ಚಾರರು ಆ ಸಮಾಚಾರವನ್ನು ಭೀಮಭೂಪಾಲನಿಗೆ ಅರಿಕೆಮಾಡಿದರು. ಆಗ ಭೀಮಭೂಪಾಲನು ಆ ಮಹಾರಾಜನು ಇಲ್ಲಿಗೆ ಬರಬಹುದೆಂದು ನುಡಿಯಲು, ಋತುಪರ್ಣರಾಯನು ತನ್ನ ರಥಧ್ವನಿಯು ದಿಕ್ಕುಗಳಲ್ಲೆಲ್ಲಾ ಮೊಳಗುತ್ತಿರಲು, ಕುಂಡಿನನಗರವನ್ನು ಪ್ರವೇಶಮಾಡಿದನು. ಆಗ ಆ ರಥಧ್ವನಿಯನ್ನು ಕೇಳಿ ಅಲ್ಲಿದ್ದ ನಳಮಹಾರಾಜನ ರಥಾಶ್ವಗಳು ನಳನ ಸನ್ನಿಧಾನದಲ್ಲಿ ಮೊದಲು ಹ್ಯಾಗೆ ಸಂತೋಷಪಡುತ್ತಿದ್ದವೋ ಹಾಗೆ ಸಂತೋಷಪಟ್ಟವು. ಆ ದಮಯಂತಿಯು ಮೇಘಧ್ವನಿಯಂತೆ ಗಂಭೀರವಾದ ನಳಮಹಾರಾಜನು ನಡಿಸತಕ್ಕ ಆ ರಥಧ್ವನಿಯನ್ನು ಕೇಳಿ ಬಹಳ ಆಶ್ಚರ್ಯವನ್ನು ಹೊಂದಿ, ಅದನ್ನು ಕೇಳಿದರೆ ಅದು ಪೂರ್ವದಲ್ಲಿ ನಳಮಹಾರಾಜನು ನಡಿಸುತ್ತಿದ್ದ ರಥದ ಧ್ವನಿಯಂತೆಯೇ ಇರುವದೆಂದು ಮನಸ್ಸಿನಲ್ಲೇ ತಿಳಿದುಕೊಂಡಳು. ಆ ವೇಳೆಯಲ್ಲಿ ಉಪ್ಪರಿಗೆಯಮೇಲಿದ್ದ ನವಿಲುಗಳೂ ಗಜಶಾಲೆಯಲ್ಲಿದ್ದ ಆನೆಗಳೂ ಅಶ್ವಶಾಲೆಯಲ್ಲಿದ್ದ ಕುದುರೆಗಳೂ ಸಹ ಮೇಘಧ್ವನಿಯಂತಿರುವ ಆ ರಥಧ್ವನಿಯನ್ನು ಕೇಳಿ ಅತಿಸಂತೋಷದಿಂದ ಪ್ರತಿಧ್ವನಿಯನ್ನು ಮಾಡಿದವು.

ಆ ಸಮಯದಲ್ಲಿ ದಮಯಂತಿಯು 'ಭೂಮಂಡಲವನ್ನೆಲ್ಲಾ ತುಂಬಿಕೊಂಡಿರುವಂತೆ ಕೇಳಿಸುತ್ತಿರುವ ಈ ರಥಧ್ವನಿಯು ನನ್ನ ಮನಸ್ಸಿಗೆ ಬಹಳ ಸಂತೋಷವನ್ನುಂಟುಮಾಡುವದರಿಂದ, ನಡಿಸತಕ್ಕವನು ನಳಮಹಾರಾಜನೇ ಆಗಿರಬಹುದು. ಈಗ ನಾನು ಪೂರ್ಣಚಂದ್ರನಂತೆ ಮುಖವುಳ್ಳವನಾಗಿಯೂ ಅಸಂಖ್ಯಾತವಾದ ಗುಣಗಳುಳ್ಳವನಾಗಿಯೂ ಇರುವ ವೀರನಾದ ನಳಮಹಾರಾಜನನ್ನು ನಾನು ನೋಡದೆ ಹೋದ ಪಕ್ಷದಲ್ಲಿ ಪ್ರಾಣವನ್ನು ತ್ಯಜಿಸುವೆನು. ಈಗ ಆ ನಳಮಹಾರಾಜನ ಸುಖಕರವಾದ ವಕ್ಷಸ್ಥಳವನ್ನು ನಾನು ಅಪ್ಪಿಕೊಳ್ಳದೆ ಹೋದಪಕ್ಷದಲ್ಲಿ ಬದುಕಲಾರೆನು. ಈ ವಿಷಯದಲ್ಲಿ ಸಂಶಯವಿಲ್ಲ. ಮೇಘಧ್ವನಿಯಂತೆ ಗಂಭೀರವಾದ ಕಂಠಧ್ವನಿಯುಳ್ಳ ನಳಮಹಾರಾಜನು ಈಗ ನನ್ನನ್ನು ಸೇರದೆ ಹೋದಪಕ್ಷದಲ್ಲಿ, ನಾನು ಸುವರ್ಣಕ್ಕೆ ಸಮಾನವಾದ ಕಾಂತಿಯುಳ್ಳ ಅಗ್ನಿಯನ್ನು ಪ್ರವೇಶಮಾಡುವೆನು. ಸಿಂಹದಂತೆ ಪರಾಕ್ರಮಶಾಲಿಯಾಗಿಯೂ ಮದಗಜದಂತೆ ಗಮನವುಳ್ಳವನಾಗಿಯೂ ಇರುವ

ನಳಮಹಾರಾಜನು ಈಗ ಇಲ್ಲಿಗೆ ಬರದೆ ಹೋದ ಪಕ್ಷದಲ್ಲಿ ನಾನು ಉಳಿಯುತಕ್ಕವಳಲ್ಲ. ನಾನು ಯಾವಾಗಲೂ ಆಟವಾಡುವಾಗಲಾದರೂ ಯಾರ ವಿಷಯದಲ್ಲಿಯೂ ಅನೃತವನ್ನು ಚಿಂತಿಸಿದವಳಲ್ಲ; ಯಾರ ವಿಷಯದಲ್ಲಿಯೂ ಅಪಕಾರವನ್ನು ಎಣಿಸಿದವಳಲ್ಲ; ಆಡಿದ ಮಾತನ್ನು ತಪ್ಪಿದವಳಲ್ಲ. ನನ್ನ ಪತಿಯಾದ ನಳಮಹಾರಾಜನು ಸಮರ್ಥನಾಗಿಯೂ, ಕ್ಷಮೆಯುಳ್ಳವನಾಗಿಯೂ, ಶೂರನಾಗಿಯೂ, ದಾನಪರನಾಗಿಯೂ, ಎಲ್ಲಾ ರಾಜರಿಗಿಂತಲೂ ಶ್ರೇಷ್ಠನಾಗಿಯೂ ಇದ್ದವನು. ಆತನು ಪರಸ್ತ್ರೀಯರಲ್ಲಿ ನಪುಂಸಕನಂತೆ ಇದ್ದುಕೊಂಡು ಗೂಢವಾಗಾದರೂ ನೀಚಕಾರ್ಯವನ್ನು ಮಾಡತಕ್ಕವನಲ್ಲ. ಅಂಥ ಮಹಾನುಭಾವನ ಸುಗುಣಗಳನ್ನು ಯಾವಾಗಲೂ ಚಿಂತಿಸುತ್ತಿರುವ ಈ ನನ್ನ ಹೃದಯವು ಆತನ ವಿಯೋಗವನ್ನು ಹೊಂದಿ ದುಃಖದಿಂದ ಒಡೆದುಹೋಗುತ್ತಿರುವದು' ಎಂದು ಈ ಪ್ರಕಾರವಾಗಿ ಜ್ಞಾನ ತಪ್ಪಿದವಳಂತೆ ವ್ಯಸನಪಡುತ್ತ, ಪುಣ್ಯಶ್ಲೋಕನಾದ ಆತನನ್ನು ನೋಡಬೇಕೆಂದು ಉಪ್ಪರಿಗೆಯನ್ನು ಏರಿ, ಆ ಅರಮನೆಯ ಮಧ್ಯಭಾಗದಲ್ಲಿರುವ ಅಂಗಳದಲ್ಲಿ ಬಂದಿದ್ದ ರಥವನ್ನು ಕಂಡು, ಆ ರಥದಮೇಲೆ ವಾರ್ಷ್ಣೇಯ ಬಾಹುಕರಿಂದೊಡಗೂಡಿದ ಋತುಪರ್ಣರಾಯನನ್ನು ನೋಡಿದಳು.

ಬಳಿಕ ವಾರ್ಷ್ಣೇಯಬಾಹುಕರು ರಥವನ್ನು ನಿಲ್ಲಿಸಿ ಕೆಳಕ್ಕಿಳಿದು ಕುದುರೆಗಳನ್ನು ಬಿಚ್ಚಲು, ಋತುಪರ್ಣರಾಯನು ರಥದಿಂದ ಕೆಳಕ್ಕಿಳಿದು, ಪರಾಕ್ರಮಶಾಲಿಯಾದ ಭೀಮಭೂಪಾಲಕನ ಬಳಿಗೆ ಹೋಗಲು, ಭೀಮಭೂಪಾಲಕನು ಆತನನ್ನು ತಕ್ಕ ಮರ್ಯಾದೆಯಿಂದ ಪುರಸ್ಕರಿಸಿದನು. ಬಳಿಕ ಋತುಪರ್ಣರಾಯನು ಭೀಮಭೂಪಾಲಕನಿಂದ ಮರ್ಯಾದೆಯನ್ನು ಪಡೆದು, ಮನೋಹರವಾದ ಆ ಕುಂಡಿನನಗರದಲ್ಲಿ ವಾಸಮಾಡುತ್ತ, ಭಾರಿಭಾರಿಗೂ ನೋಡುತ್ತಿದ್ದರೂ ಅಲ್ಲಿ ಯಾವ ವಿಶೇಷವನ್ನೂ ಕಾಣದೆ, ಅಕಸ್ಮಾತ್ತಾಗಿ ಪ್ರಾಪ್ತಿಸಿದ ಸ್ತ್ರೀಕೃತವಾದ ಮಂತ್ರಾಲೋಚನೆಯನ್ನು ತಿಳಿಯದೆ ಹೋದನು. ಆಗ ಭೀಮಭೂಪಾಲಕನು ದಮಯಂತಿಗೆ ಸ್ವಯಂವರವಾಗುವದೆಂದು ಪರ್ಣಾದನು ಹೇಳಿದ ಮಾತಿನಿಂದ ಋತುಪರ್ಣನು ಬಂದಿರುವನೆಂದು ತಿಳಿಯದೆ, ಆತನನ್ನು ಕುರಿತು 'ಎಲೈ ಮಹಾರಾಜನೆ, ನಿನಗೆ ಸುಖಾಗಮನವೆ? ಯಾವ ಕಾರ್ಯಕ್ಕೋಸ್ಕರ ಇಲ್ಲಿಗೆ ಬಂದೆ?' ಎಂದು ಕೇಳಲು, ಬುದ್ಧಿಶಾಲಿಯಾದ ಋತುಪರ್ಣರಾಯನು ಆ ಕುಂಡಿನನಗರದಲ್ಲಿ ಯಾವ ರಾಜರೂ ರಾಜಕುಮಾರರೂ ಸ್ವಯಂವರಾರ್ಥವಾಗಿ ಬಂದಿರುವದನ್ನೂ ಸ್ವಯಂವರಪ್ರಸಕ್ತಿಯನ್ನೂ ಬ್ರಾಹ್ಮಣರ ಸಮಾಗಮವನ್ನೂ ಕಾಣದೆ, ಮನಸ್ಸಿನಲ್ಲಿಯೇ ಆಲೋಚನೆಮಾಡಿ, ಭೀಮಭೂಪಾಲಕನನ್ನು ಕುರಿತು 'ಎಲೈ ಮಹಾರಾಜನೆ, ನಿನಗೆ ವಂದನೆಯನ್ನು ಮಾಡುವದಕ್ಕೋಸ್ಕರ ನಾನು ಇಲ್ಲಿಗೆ ಬಂದೆನು' ಎಂದನು. ಆಗ ಭೀಮಭೂಪಾಲನು ಆಶ್ಚರ್ಯಪಟ್ಟು, 'ಈತನು ಅನೇಕ ಗ್ರಾಮಗಳನ್ನು ಅತಿಕ್ರಮಿಸಿ ಬಹು ದೂರದಿಂದ ಬಂದಿರುವನು! ಹೀಗೆ ಇವನು ಬರುವದಕ್ಕೆ ಕಾರಣವೇನೊ! ಅನೇಕ ರಾಜರನ್ನು ಬಿಟ್ಟು ನನಗೆಮಾತ್ರ ವಂದನೆಯನ್ನು ಮಾಡಲು ಬಂದಿರುವೆನೆಂದು ಹೇಳುವನು. ಇದೇನು! ಈ ಸ್ವಲ್ಪಕಾರ್ಯಕ್ಕೋಸ್ಕರ ಈತನು ಬಂದಿರುವನೆ?' ಎಂದು ಚಿಂತಿಸುತ್ತ, ಯಾವದೊಂದು ನಿಶ್ಚಯವನ್ನೂ ಕಾಣದೆ, ಮರುದಿನ ಸೂರ್ಯೋದಯವಾದಮೇಲೆ ಇದಕ್ಕೇನು ಕಾರಣವೋ ತಿಳಿಯಬೇಕೆಂದೂ, ಆಗ ಇಂಥಾದ್ದೆಂದು ತಿಳಿಯತಕ್ಕದ್ದಲ್ಲವೆಂದೂ ಯೋಚಿಸಿ, ಆತನನ್ನು ಸತ್ಕರಿಸಿ 'ಎಲೈ ಋತುಪರ್ಣರಾಯನೆ, ಬಹು ದೂರದಿಂದ ಬಂದಿರುವೆಯಾದ್ದರಿಂದ, ನಿನಗೆ ಬಹಳ ಆಯಾಸವುಂಟಾಗಿರುವದು. ಸ್ವಲ್ಪ ವಿಶ್ರಮಿಸಿಕೊ' ಎಂದು ನುಡಿದನು. ಅನಂತರ ಋತುಪರ್ಣರಾಯನು ಭೀಮಭೂಪಾಲಕನ ಪ್ರಿಯೋಕ್ತಿಗಳಿಂದ ಸಂತೋಷಪಟ್ಟು, ತಾನು ಇಳಿದುಕೊಳ್ಳುವದಕ್ಕೆ ಗೊತ್ತುಮಾಡಿದ ಅರಮನೆಗೆ ವಾರ್ಷ್ಣೇಯನೊಡನೆಯೂ ರಾಜಭೃತ್ಯರೊಡನೆಯೂ ತೆರಳಿದನು. ಬಳಿಕ ಬಾಹುಕನು ರಥವನ್ನು ತೆಗೆದುಕೊಂಡು ರಥಶಾಲೆಗೆ ಬಂದು, ಅಲ್ಲಿ ರಥವನ್ನು ಬಿಟ್ಟು, ಕುದುರೆಗಳನ್ನು ಬಿಚ್ಚಿ, ಅವುಗಳಿಗೆ ಅಶ್ವಶಾಸ್ತ್ರದಲ್ಲಿ ಹೇಳಿರುವ ಪ್ರಕಾರ ಉಪಚಾರವನ್ನು ಮಾಡಿ, ತಾನು ರಥದಮೇಲೆ ಕುಳಿತುಕೊಂಡನು. ಆಗ ದಮಯಂತಿಯು ವ್ಯಸನಪಡುತ್ತ, ಋತುಪರ್ಣರಾಯನನ್ನೂ ವಾರ್ಷ್ಣೇಯನನ್ನೂ ಕುರೂಪಿಯಾಗಿರುವ ಬಾಹುಕನನ್ನೂ ನೋಡಿ, 'ಈ ರಥಧ್ವನಿಯು ನಳಮಹಾರಾಜನ ರಥಧ್ವನಿಯಂತೆ ಕೇಳಿಸಿತು; ನಳಮಹಾರಾಜನು ಮಾತ್ರ ಕಾಣಿಸುವದಿಲ್ಲವಲ್ಲಾ! ವಾರ್ಷ್ಣೇಯನ ಸಾರಥ್ಯದಿಂದ ಇಂಥ ಧ್ವನಿಯುಂಟಾಗಿರ ಬಹುದು. ಆತನೂ ನಳ

ಮಹಾರಾಜನಂತೆ ಸಾರಥ್ಯಮಾಡುವದನ್ನು ಕಲಿತಿರಬಹುದು. ಆದ್ದರಿಂದಲೇ ಈ ರಥಧ್ವನಿಯು ನಳಮಹಾರಾಜನು ನಡಿಸತಕ್ಕ ರಥಧ್ವನಿಯಂತೆ ಕೇಳಬಂತು. ಹಾಗಲ್ಲದಿದ್ದರೆ ನಳನಂತೆ ಋತುಪರ್ಣನೂ ಮಹಾರಾಜನಾದ್ದರಿಂದ, ಈತನ ರಥಧ್ವನಿಯೂ ನಳನ ರಥಧ್ವನಿಯಂತೆ ಕೇಳಿಸಿರಬಹುದು’ ಎಂದು ವಿಚಾರಮಾಡಿ, ನಳಮಹಾರಾಜನನ್ನು ಹುಡುಕಿ ತಿಳಿಯುವದಕ್ಕೋಸ್ಕರ ತನ್ನ ದೂತಿಯನ್ನು ಕಳುಹಿಸಿದಳು” ಎಂದು ಬೃಹದಶ್ವನು ಧರ್ಮರಾಯನಿಗೆ ಹೇಳಿದನು.

### ೭೪ನೇ ಅಧ್ಯಾಯ.—ನಳೋಪಾಖ್ಯಾನ—(ಬಾಹುಕನಿಗೂ ಕೇಶಿನಿಗೂ ಸಂವಾದ.)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಬೃಹದಶ್ವನು “ಎಲೈ ಧರ್ಮರಾಯನೇ ಕೇಳು, ಆಗ ದಮಯಂತಿಯು ತನ್ನ ದೂತಿಯನ್ನು ಕುರಿತು” ಎಲೆ ಕೇಶಿನಿಯೆ, ನೀನು ಹೋಗಿ ಚಿಕ್ಕಚಿಕ್ಕದಾದ ತೋಳುಗಳುಳ್ಳವನಾಗಿ, ವಿಕಾರವಾಗಿ ಈ ರಥದೊಳಗೆ ಕುಳಿತುಕೊಂಡಿರುವ ಈ ಸಾರಥಿಯು ಯಾರೋ ತಿಳಿ. ನೀನು ಆತನ ಬಳಿಗೆ ಹೋಗಿ, ಮೃದುವಾದ ನುಡಿಗಳಿಂದ ಆತನ ನಿಜಸ್ಥಿತಿಯು ಗೊತ್ತಾಗುವಂತೆ ಕುಶಲಪ್ರಶ್ನೆಯನ್ನು ಮಾಡು. ಈತನನ್ನು ನೋಡಿ ನನ್ನ ಮನಸ್ಸಿನಲ್ಲಿ ಪ್ರೀತಿಯೂ ಹೃದಯದಲ್ಲಿ ಆನಂದವೂ ಉಂಟಾಗಿರುವವು. ಆದ್ದರಿಂದ ಈತನು ನಳನಾಗಿರಬಹುದೆಂದು ನನಗೆ ಶಂಕೆಯುಂಟಾಗಿದೆ. ಈತನ ಬಳಿಯಲ್ಲಿ ನೀನು ಮೊದಲು ಪರ್ಣಾದನು ನುಡಿದ ಮಾತುಗಳನ್ನು ಹೇಳಿ, ಅದಕ್ಕೆ ಈತನು ಪ್ರತ್ಯುತ್ತರವನ್ನು ಏನು ಹೇಳುವನೋ ಅವನ್ನು ತಿಳಿದುಕೊಂಡು ಬಾ ಎಂದು ಹೇಳಿದಳು. ಆಗ ದೂತಿಯಾದ ಕೇಶಿನಿಯು ವಿನಯಸಂಪನ್ನಳಾಗಿ, ಬಾಹುಕನ ಬಳಿಗೆ ಹೋಗಿ, ದಮಯಂತಿಯು ಉಪ್ಪರಿಗೆಯಮೇಲೆ ನೋಡುತ್ತಿರಲು, ಆತನನ್ನು ಕುರಿತು ‘ಎಲೈ ಪುರುಷಶ್ರೇಷ್ಠನೆ, ನಿನಗೆ ಸುಖಾಗಮನವೆ? ನೀನು ಕ್ಷೇಮವಾಗಿರುವೆಯಾ? ದಮಯಂತಿಯು ಹೇಳಿ ಕಳುಹಿಸಿರುವ ಮಾತುಗಳನ್ನು ನಿನಗೆ ತಿಳುಹಿಸುವೆನು. ನೀನು ಅವುಗಳನ್ನು ಆದರಿಸಿ ಕೇಳು. ನೀವು ಯಾವಾಗ ರಾಜಧಾನಿಯಿಂದ ಹೊರಟಿರಿ? ಯಾತಕ್ಕೋಸ್ಕರ ಇಲ್ಲಿಗೆ ಬಂದಿರಿ? ಇದನ್ನು ದಮಯಂತಿಯು ತಿಳಿಯಲಿಚ್ಛೈಸುವಳು? ಯಥಾರ್ಥವಾಗಿ ಹೇಳಬೇಕು’ ಎನಲು, ಬಾಹುಕನು ‘ಎಲೌ ಮಂಗಳಾಂಗಿಯೆ, ಮಹಾರಾಜನಾದ ಋತುಪರ್ಣರಾಯನು ಒಬ್ಬ ಬ್ರಾಹ್ಮಣನ ಮುಖದಿಂದ ದಮಯಂತಿಗೆ ಎರಡನೇ ಸ್ವಯಂವರವು ನಾಳೇದಿವಸವಾಗುವದೆಂದು ಕೇಳಿ, ಒಂದು ದಿವಸಕ್ಕೆ ನೂರುಗಾವುದ ನಡೆಯತಕ್ಕವಾಗಿಯೂ ವಾಯುವೇಗವುಳ್ಳವುಗಳಾಗಿಯೂ ಇರುವ ಕುದುರೆಗಳನ್ನು ಕಟ್ಟಿದ ರಥವನ್ನೇರಿ ಇಲ್ಲಿಗೆ ಬಂದನು. ಆತನಿಗೆ ನಾನು ಸಾರಥಿಯಾಗಬೇಕು’ ಎಂದನು. ಅದಕ್ಕೆ ಕೇಶಿನಿಯು ‘ಎಲೈ ಪುರುಷಶ್ರೇಷ್ಠನೆ, ನಿಮ್ಮ ಸಂಗಡ ಬಂದಿರುವ ಮೂರನೆಯವನು ಯಾರು? ಆತನು ಯಾತಕ್ಕೋಸ್ಕರ ಬಂದಿರುವನು? ನೀನು ಯಾರವನು? ಆತನಿಗೆ ನೀನು ಸಾರಥಿಯಾದದ್ದು ಹ್ಯಾಗೆ?’ ಎನಲು, ಬಾಹುಕನು ‘ಎಲೌ ಮಂಗಳಾಂಗಿಯೆ, ನಮ್ಮಲ್ಲಿ ಮೂರನೆಯವನಾದವನು ಪುಣ್ಯಶ್ಲೋಕನಾದ ನಳಮಹಾರಾಜನ ಸಾರಥಿಯು, ವಾರ್ಷ್ಣೇಯನೆಂದು ಪ್ರಸಿದ್ಧನಾದವನು. ನಳಮಹಾರಾಜನು ರಾಜ್ಯಭ್ರಷ್ಟನಾಗಿ ಹೊರಟು ಹೋಗಲು, ಆ ವಾರ್ಷ್ಣೇಯನು ಋತುಪರ್ಣರಾಜನ ಬಳಿಗೆ ಬಂದು ಸೇರಿದನು. ನಾನು ಅಶ್ವಶಾಸ್ತ್ರವನ್ನು ಬಲ್ಲವನು, ಮತ್ತು ಸಾರಥ್ಯಮಾಡುವದರಲ್ಲೂ ಸಮರ್ಥನಾದವನು. ಋತುಪರ್ಣರಾಯನು ತನ್ನ ಸಾರಥ್ಯದಲ್ಲಿಯೂ, ತನಗೆ ಅಡಿಗೇ ಮಾಡುವ ಕಾರ್ಯದಲ್ಲಿಯೂ, ನನ್ನನ್ನು ಬಯಸಿ ಇಟ್ಟುಕೊಂಡಿರುವನು’ ಎಂದು ನುಡಿದನು. ಬಳಿಕ ಕೇಶಿನಿಯು ‘ಎಲೈ ಬಾಹುಕನೆ, ನಳನು ಎಲ್ಲಿ ಹೋಗಿರುವನೋ ಅದನ್ನೇನಾದರೂ ವಾರ್ಷ್ಣೇಯನು ತಿಳಿದಿರುವನೆ? ಆ ಸಂಗತಿಯನ್ನು ನಿನ್ನ ಸಂಗಡ ಏನಾದರೂ ಹೇಳಿರಬಹುದೆ?’ ಎನಲು, ಬಾಹುಕನು ‘ಎಲೌ ಮಂಗಳಾಂಗಿಯೆ, ವಾರ್ಷ್ಣೇಯನು ಪುಣ್ಯಶ್ಲೋಕನಾದ ನಳಮಹಾರಾಜನ ಕುಮಾರರನ್ನು ಇಲ್ಲಿ ಬಿಟ್ಟು, ತನ್ನ ಇಚ್ಛೆಬಂದಂತೆ ಹೊರಟು ಹೋದನು. ನಳಮಹಾರಾಜನು ಎಲ್ಲಿ ಹೋದನೋ ಅದನ್ನು ವಾರ್ಷ್ಣೇಯನು ಅರಿಯನು. ಆ ನಳಮಹಾರಾಜನು ರೂಪಾಂತರವನ್ನು ಹೊಂದಿ, ಈ ಭೂಮಂಡಲದಲ್ಲಿಯೇ ಗುಟ್ಟಾಗಿ ಸಂಚರಿಸುತ್ತಿರುವನು. ಆತ

ನನ್ನು ಮತ್ತೊಬ್ಬನೂ ತಿಳಿಯಲಾರನು. ಈಗ ನಳಮಹಾರಾಜನನ್ನು ಆತನ ಆತ್ಮವೂ ಆತನ ಪತ್ನಿಯೂ ಸಹ ಬಲ್ಲರು. ಆತನು ಎಂದಿಗೂ ತನ್ನ ಗುರುತನ್ನು ಹೇಳಿಕೊಳ್ಳತಕ್ಕವನಲ್ಲ' ಎಂದು ನುಡಿದನು. ಅದನ್ನು ಕೇಳಿ ಕೇಶಿನಿಯು 'ಎಲೈ ಬಾಹುಕನೆ, ಮೊದಲು ಅಯೋಧ್ಯಾನಗರಕ್ಕೆ ಬಂದ ಬ್ರಾಹ್ಮಣನು ಆಗ—ಎಲೈ ಧೂರ್ತನೆ ನನ್ನ ಅರ್ಧ ವಸ್ತ್ರವನ್ನು ಖಂಡಿಸಿಕೊಂಡು ನಿನಗೆ ಪ್ರಿಯಳಾಗಿ ನಿನ್ನನ್ನೇ ಅನುವರ್ತಿಸಿಕೊಂಡು ಕಾಡಲ್ಲಿ ಮಲಗಿದ್ದ ಪತ್ನಿಯಾದ ನನ್ನನ್ನು ಬಿಟ್ಟು ಎಲ್ಲಿ ಹೋದೆ? ಆ ನಾನು ನೀನು ಬಿಟ್ಟು ಹೋಗತಕ್ಕ ಕಾಲದಲ್ಲಿ ಹ್ಯಾಗಿದ್ದೆನೋ ಈಗಲೂ ಹಾಗೆಯೇ ಇದ್ದುಕೊಂಡು ನಿನ್ನನ್ನೇ ನಿರೀಕ್ಷಿಸುತ್ತ, ಅರ್ಧವಸ್ತ್ರವನ್ನೇ ಉಟ್ಟುಕೊಂಡು ಅಹೋರಾತ್ರಿಯಲ್ಲೂ ದುಃಖದಿಂದ ಸಂತಾಪಪಡುತ್ತಿರುವೆನು. ಹೀಗೆ ದುಃಖಪಡುತ್ತಿರುವ ನನಗೆ ಪ್ರತ್ಯುತ್ತರವನ್ನು ಕೊಟ್ಟು ನನ್ನ ವಿಷಯದಲ್ಲಿ ಪ್ರಸನ್ನನಾಗು—ಎಂದು ದಮಯಂತಿಯು ಹೀಗೆ ಹೇಳಿ ಕಳುಹಿಸಿಕೊಟ್ಟ ವಾಕ್ಯವನ್ನು ನುಡಿಯುತ್ತಿದ್ದನಷ್ಟೆ? ಎಲೈ ಬಾಹುಕನೆ, ಅದಕ್ಕೆ ನೀನು ದಮಯಂತಿಗೆ ಪ್ರಿಯವಾಗುವ ಹಾಗೆ ಯಾವ ಪ್ರತ್ಯುತ್ತರವನ್ನು ಹೇಳಿದೆಯೋ ಅದನ್ನು ಇನ್ನೊಂದಾವರ್ತಿ ಹೇಳು. ಪತಿವ್ರತೆಯಾದ ದಮಯಂತಿಯು ಇದನ್ನು ಕೇಳಬೇಕೆಂದು ಅಪೇಕ್ಷಿಸುವಳು' ಎಂದಳು. ಈ ಮಾತುಗಳನ್ನು ಕೇಳಿದೊಡನೆ ನಳಮಹಾರಾಜನು ಮನಸ್ಸಿನಲ್ಲಿ ಬಹಳವಾಗಿ ವ್ಯಥೆಪಟ್ಟು, ಕಂಬನಿಗಳನ್ನು ತುಂಬಿ, ಹಾಗೆಯೇ ದುಃಖವನ್ನು ತಡೆದುಕೊಂಡು, ಮನಸ್ಸಿನಲ್ಲಿಯೇ ಸಂತಾಪಪಡುತ್ತ, ಕೇಶಿನಿಯನ್ನು ಕುರಿತು 'ಎಲೌ ಮಂಗಳಾಂಗಿಯೇ, ಸತ್ಕುಲದಲ್ಲಿ ಹುಟ್ಟಿದ ಸ್ತ್ರೀಯರು ತಮಗೆ ಎಂಥ ಕಷ್ಟದಶೆ ಪ್ರಾಪ್ತವಾದರೂ ತಮ್ಮ ಮನಸ್ಸನ್ನು ತಾವೇ ನಿಗ್ರಹಿಸಿಕೊಂಡು ಸ್ವರ್ಗವನ್ನು ಜಯಿಸುವರು. ಈ ವಿಷಯದಲ್ಲಿ ಸಂಶಯವಿಲ್ಲ. ಉತ್ತಮಸ್ತ್ರೀಯರು ಪತಿಯಾದವನು ತಮ್ಮನ್ನು ಬಿಟ್ಟು ಹೋದರೂ, ಅವನಮೇಲೆ ಕೋಪಮಾಡದೆ ತಮ್ಮ ಸಚ್ಚರಿತ್ರವೆಂಬ ಕವಚದಿಂದ ಪ್ರಾಣವನ್ನು ರಕ್ಷಿಸಿಕೊಂಡಿರುವರು. ವಿಷಮಸ್ಥಿತಿಯನ್ನು ಹೊಂದಿ ಮೂಢನಾಗಿ ಸುಖವಿಲ್ಲದಿರತಕ್ಕ ಪತಿಯಿಂದ ಬಿಡಲ್ಪಟ್ಟರೂ, ಪತಿವ್ರತಾಸ್ತ್ರೀಯು ಅವನ ವಿಷಯದಲ್ಲಿ ಕೋಪವನ್ನು ಮಾಡತಕ್ಕವಳಲ್ಲ. ಹಸಿವಿನಿಂದ ಆಹಾರವನ್ನು ಬಯಸಿ, ಆಗ ಪಕ್ಷಿಗಳು ತನ್ನ ವಸ್ತ್ರವನ್ನು ಅಪಹರಿಸಿಕೊಂಡು ಹೋಗಲು, ಮನೋವ್ಯಥೆಯನ್ನು ಹೊಂದಿ ಸಂತಾಪಪಡುತ್ತಿರುವ ಆತನ ವಿಷಯದಲ್ಲಿ ಯೌವನಮಧ್ಯಸ್ಥೆಯಾದ ಪತ್ನಿಯು ಕೋಪಮಾಡತಕ್ಕವಳಲ್ಲ. ಐಶ್ವರ್ಯವನ್ನು ಕಳೆದುಕೊಂಡು ರಾಜ್ಯಭ್ರಷ್ಟನಾಗಿ ಹಸಿವು ಬಾಯಾರಿಕೆಗಳನ್ನು ತಡೆಯಲಾರದೆ ವ್ಯಸನಸಮುದ್ರದಲ್ಲಿ ಮುಳುಗಿರುವ ಪತಿಯು ತನ್ನನ್ನು ಪುರಸ್ಕರಿಸಿದರೂ, ಪುರಸ್ಕರಿಸದೆ ಹೋದರೂ, ಪತಿವ್ರತೆಯಾದವಳು ಆತನ ವಿಷಯದಲ್ಲಿ ಕೋಪಿಸಿಕೊಳ್ಳತಕ್ಕವಳಲ್ಲ' ಎಂದು ಮಾತನಾಡುತ್ತ, ಧಾರಾಕಾರವಾಗಿ ಸುರಿಯುವ ಕಣ್ಣೀರನ್ನು ನಿಲ್ಲಿಸಿಕೊಳ್ಳಲಾರದೆ ರೋದನಮಾಡುವದಕ್ಕೆ ಉಪಕ್ರಮಿಸಿದನು. ಬಳಿಕ ಕೇಶಿನಿಯು ದಮಯಂತಿಯ ಸನ್ನಿಧಾನಕ್ಕೆ ಹೋಗಿ, ಬಾಹುಕನು ವಿಕಾರವಾಗಿರುವದನ್ನೂ, ಆತನು ಹೇಳಿದ ಎಲ್ಲಾ ಮಾತುಗಳನ್ನೂ ಸಹ ಆಕೆಗೆ ಅರಿಕೆಮಾಡಿದಳು" ಎಂದು ಬೃಹದಶ್ವನು ಧರ್ಮರಾಯನಿಗೆ ಹೇಳಿದನು,

### ೭೬ನೇ ಅಧ್ಯಾಯ.—ನಳೋಪಾಖ್ಯಾನ.—(ಕೇಶಿನಿಯೂ ದಮಯಂತಿಯೂ ಬಾಹುಕನನ್ನು ಪರೀಕ್ಷಿಸುವಿಕೆ.)

ವೈಶಂಪಾಯನಮುನೀಶ್ವರು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಬೃಹದಶ್ವನು ಧರ್ಮರಾಯನನ್ನು ಕುರಿತು "ಎಲೈ ಧರ್ಮರಾಯನೆ, ಬಳಿಕ ದಮಯಂತಿಯು ಕೇಶಿನಿಯ ಮಾತನ್ನು ಕೇಳಿ ಬಹಳವಾಗಿ ವ್ಯಸನಪಟ್ಟು, ಆತನೇ ನಳನಾಗಿರಬಹುದೆಂದು ಶಂಕಿಸುತ್ತ, ಕೇಶಿನಿಯನ್ನು ಕುರಿತು 'ಎಲೆ ಕೇಶಿನಿಯೆ, ನೀನು ಇನ್ನೊಂದಾವರ್ತಿ ಬಾಹುಕನ ಬಳಿಗೆ ಹೋಗಿ ಆತನ ಸಂಗಡ ಮಾತನಾಡದೆ ಸುಮ್ಮನಿದ್ದುಕೊಂಡು, ಆತನ ನಡವಳಿಕೆಯನ್ನು ತಿಳಿದು ಆತನನ್ನು ಇನ್ನೂ ಪರೀಕ್ಷಿಸು. ಆತನು ಯಾವ ಕೆಲಸವನ್ನು ಮಾಡಿದರೂ ಅದರಲ್ಲಿ ಆತನಿಗೆ ಇರತಕ್ಕ ಚಾತುರ್ಯವನ್ನು ನೀನು ನೋಡಿ ತಿಳಿದುಕೊ. ಎಷ್ಟು ಕೇಳಿದರೂ ಆತನಿಗೆ ನೀನು ಜಾಗ್ರತೆಯಾಗಿ ಸರ್ವಥಾ ಬೆಂಕಿಯನ್ನೂ ನೀರನ್ನೂ ಕೊಡಕೂಡದು. ಆತನಲ್ಲಿ ದೇವತಾ

ಚಿಹ್ನೆಯಿರುವದೋ ಮನುಷ್ಯಚಿಹ್ನೆಯಿರುವದೋ ಅದನ್ನೂ, ಇನ್ನೂ ಆತನ ವಿಶೇಷವಾದ ಚರ್ಯೆಗಳನ್ನೂ ನೀನು ತಿಳಿದುಕೊಂಡು ಬಂದು ನನಗೆ ಹೇಳು' ಎಂದಳು. ಕೇಶಿನಿಯು ಒಡನೆಯೇ ಬಾಹುಕನ ಬಳಿಗೆ ಹೋಗಿ ಆತನ ಲಕ್ಷಣಗಳನ್ನೆಲ್ಲಾ ತಿಳಿದುಕೊಂಡು ಬಂದು ದಮಯಂತಿಯನ್ನು ಕುರಿತು 'ಎಲೌ ದಮಯಂತಿಯೆ, ಈ ಬಾಹುಕನಂತೆ ಪರಿಶುದ್ಧಾತ್ಮನಾದ ಪುರುಷನನ್ನು ನಾನು ಎಲ್ಲಿಯೂ ಕೇಳಿಯೂ ಇಲ್ಲ, ನೋಡಿಯೂ ಇಲ್ಲ. ಸಂಚಾರವಮಾಡತಕ್ಕ ಬಾಗಲು ಚಿಕ್ಕದಾಗಿದ್ದರೂ ಈತನು ಅದನ್ನು ನೋಡಿ ತಲೆಯನ್ನು ಬಗ್ಗಿಸದೆ ಅಲ್ಲಿ ಸಂಚಾರವಮಾಡುವನು. ಈತನು ಸಂಚಾರವಮಾಡತಕ್ಕ ಕಾಲದಲ್ಲಿ ಬಾಗಿಲು ಚಿಕ್ಕದಾಗಿದ್ದರೂ ಅದು ತನಗೆತಾನೇ ವಿಶಾಲವಾಗುವದು. ನಮ್ಮ ಮಹಾರಾಜನು ಋತುಪರ್ಣರಾಯನ ಊಟಕ್ಕೋಸ್ಕರ ಬಗೆಬಗೆಯಾದ ಮೃಗಗಳ ಮಾಂಸವನ್ನು ಅಲ್ಲಿಗೆ ಕಳುಹಿಸಿಕೊಟ್ಟನು. ಅದನ್ನು ತೊಳೆಯುವದಕ್ಕೋಸ್ಕರ ಅಲ್ಲಿ ನೀರಿಲ್ಲದ ಅನೇಕ ಪಾತ್ರೆಗಳನ್ನು ಇಟ್ಟಿದ್ದರು. ಬಾಹುಕನು ಕಣ್ಣಿಂದ ನೋಡಿದಮಾತ್ರಕ್ಕೆ ಅವೆಲ್ಲವೂ ನೀರು ತುಂಬಿದವು. ಆ ನೀರಿನಿಂದ ಬಾಹುಕನು ಆ ಮಾಂಸವನ್ನು ತೊಳೆದು, ಅದನ್ನು ಪಕ್ವಮಾಡುವದಕ್ಕೋಸ್ಕರ ಬಂದುಹಿಡಿ ಹುಲ್ಲನ್ನು ಕೈಯಲ್ಲಿ ಹಿಡಿದು ಬಿಸಲಿಗೆ ತೋರಿಸಲು, ಒಡನೆಯೇ ಅದರಲ್ಲಿ ಬೆಂಕಿಯುಂಟಾಯಿತು. ಅದರಿಂದ ಆ ಮಾಂಸವನ್ನು ಪಕ್ವಮಾಡಿದನು. ಈ ಆಶ್ಚರ್ಯವನ್ನು ಆತನಲ್ಲಿ ನಾನು ನೋಡಿದೆನು. ಇದಕ್ಕಿಂತಲೂ ದೊಡ್ಡದಾದ ಇನ್ನೊಂದು ಆಶ್ಚರ್ಯವನ್ನು ಆತನಲ್ಲಿ ಕಂಡೆನು. ಅದೇನೆಂದರೆ, ಆತನು ಕೈಯಿಂದ ಬೆಂಕಿಯನ್ನು ಮುಟ್ಟಿದರೂ ಅದು ಆತನನ್ನು ಸುಡದಿರುವದು. ಆತನು ಅಪೇಕ್ಷಿಸಿದಷ್ಟು ನೀರು ಜಾಗ್ರತೆಯಾಗಿ ಹರಿದುಬರುವದು. ಇದಕ್ಕಿಂತಲೂ ಹೆಚ್ಚಾದ ಇನ್ನೊಂದು ಆಶ್ಚರ್ಯವನ್ನು ಆತನಲ್ಲಿ ಕಂಡೆನು. ಅದೇನೆಂದರೆ, ಆತನು ಹೂವುಗಳನ್ನು ಎರಡು ಕೈಗಳಿಂದಲೂ ಹೊಸಗಿಬಿಟ್ಟರೂ, ಅವುಗಳು ಮತ್ತಷ್ಟು ಅಧಿಕವಾಗಿ ಪರಿಮಳಭರಿತವಾಗಿ ಅರಳಿ ಮನೋಹರವಾಗಿ ಕಾಣಿಸುತ್ತಿದ್ದವು. ಇಂಥ ಆಶ್ಚರ್ಯಗಳನ್ನು ನಾನು ಕಂಡೆನು' ಎಂದು ಹೇಳಿದಳು.

ಬಳಿಕ ದಮಯಂತಿಯು ಪುಣ್ಯಶ್ಲೋಕನಾದ ನಳನ ನಡವಳಿಕೆಗಳನ್ನು ಕೇಳಿ, ಆ ಪಾಕಕ್ರಿಯೆಯಿಂದಲೂ ಪಂಚಭೂತಸಿದ್ಧಿಯಿಂದಲೂ ನಳನೇ ಬಂದಿರುವನೆಂದು ತಿಳಿದು, ಹಾಗೆಯೇ ಆತನ ಶರೀರವಿಕಾರದಿಂದ ಬಾಹುಕನು ತನ್ನ ಪತಿಯಾದ ನಳನು ಅಹುದೋ ಅಲ್ಲವೋ ಎಂಬ ಸಂಶಯದಿಂದ ರೋದನಮಾಡುತ್ತ, ಪುನಃ ಕೇಶಿನಿಯನ್ನು ಕುರಿತು 'ಎಲೆ ಕೇಶಿನಿಯೆ, ಮತ್ತೊಂದಾವರ್ತಿ ನೀನು ಮತ್ತನಾದ ಬಾಹುಕನ ಬಳಿಗೆ ಹೋಗಿ ಆತನು ಪಕ್ವಮಾಡಿದ ಮಾಂಸವನ್ನು ಇಲ್ಲಿಗೆ ತೆಗೆದುಕೊಂಡು ಬಾ' ಎನಲು, ಕೇಶಿನಿಯು ಪುನಃ ಬಾಹುಕನ ಬಳಿಗೆ ಹೋಗಿ ಆತನು ಪಕ್ವಮಾಡಿದ ಬಿಸಿಬಿಸಿಯಾದ ಮಾಂಸವನ್ನು ಆತನನ್ನು ಕೇಳದೆ ತೆಗೆದುಕೊಂಡು ಶೀಘ್ರವಾಗಿ ಬಂದು ದಮಯಂತಿಗೆ ಕೊಡಲು, ದಮಯಂತಿಯು ಆ ಮಾಂಸವನ್ನು ಭಕ್ಷಿಸಿ ಪೂರ್ವದಲ್ಲಿ ನಳನು ಪಕ್ವಮಾಡುತ್ತಿದ್ದ ಮಾಂಸದ ರುಚಿಯನ್ನು ವಿಶೇಷವಾಗಿ ಬಲ್ಲವಳಾದ್ದರಿಂದ ಈ ಸಾರಥಿಯಾದ ಬಾಹುಕನೇ ನಳನೆಂದು ತಿಳಿದು, ಬಹಳವಾಗಿ ವ್ಯಸನಪಟ್ಟು ಗಟ್ಟಿಯಾಗಿ ರೋದನಮಾಡಿ, ದುಃಖಾತಿಶಯದಿಂದ ಮೈಮರೆತು, ಬಳಿಕ ಮುಖವನ್ನು ಚನ್ನಾಗಿ ತೊಳೆದುಕೊಂಡು, ತನ್ನ ಎರಡು ಮಕ್ಕಳನ್ನೂ ಕೇಶಿನಿಯ ಜೊತೆಯಲ್ಲಿ ಆತನ ಬಳಿಗೆ ಕಳುಹಿಸಿಕೊಟ್ಟಳು. ಆಗ ಬಾಹುಕನು ತನ್ನ ಮಕ್ಕಳಾದ ಇಂದ್ರಸೇನೆಯನ್ನೂ ಇಂದ್ರಸೇನನನ್ನೂ ನೋಡಿ ಜಾಗ್ರತೆಯಾಗಿ ಬಂದು ದೇವಕುಮಾರರಂತೆ ಸುಂದರಾಂಗರಾದ ಆ ಎರಡು ಮಕ್ಕಳನ್ನೂ ಅಪ್ಪಿಕೊಂಡು, ಮುದ್ದಾಡಿ ತೊಡೆಯಮೇಲೆ ಕೂರಿಸಿಕೊಂಡು, ಬಿಕ್ಕಿಬಿಕ್ಕಿ ಅಳುತ್ತ, ಆ ಮಕ್ಕಳಲ್ಲಿ ತನಗಿರತಕ್ಕ ವಾತ್ಸಲ್ಯವನ್ನು ಬಹಳವಾಗಿ ತೋರಿಸಿ, ಅವರನ್ನು ಜಾಗ್ರತೆಯಾಗಿ ತೊಡೆಯಿಂದ ಕೆಳಕ್ಕೆ ಇಳುಹಿಸಿ ಕೇಶಿನಿಯನ್ನು ಕುರಿತು 'ಎಲೌ ಮಂಗಳಾಂಗಿಯೆ, ಈ ಎರಡು ಮಕ್ಕಳೂ ನನ್ನ ಮಕ್ಕಳಿಗೆ ಸಮಾನವಾಗಿ ತೋರುತ್ತಿರುವವು. ಆದ್ದರಿಂದ ಈ ಮಕ್ಕಳನ್ನು ನೋಡಿ ನಾನು ಕಣ್ಣೀರು ಹಾಕಿದೆನು. ಪದೇಪದೇ ನೀನು ನನ್ನ ಬಳಿಗೆ ಬರುತ್ತಿದ್ದರೆ ಜನಗಳು ನೋಡಿ ನಮ್ಮಲ್ಲಿ ಏನಾದರೂ ಬಂದು ದೋಷವನ್ನು ಕಲ್ಪಿಸಿ ಶಂಕೆಪಟ್ಟಾರು? ನಾವು ದೇಶದೇಶಗಳನ್ನು ಸುತ್ತತಕ್ಕವರು. ನೀನು ನಿನ್ನಿಷ್ಟಾನುಸಾರವಾಗಿ ಹೋಗಿ ಬಾ' ಎಂದು ನಳನು ಕೇಶಿನಿಗೆ ಹೇಳಿದನು" ಎಂದು ಬೃಹದಶ್ವನು ಧರ್ಮರಾಯನಿಗೆ ಹೇಳಿದನು.

೭೬ನೇ ಅಧ್ಯಾಯ.—ನಳೋಪಾಖ್ಯಾನ—(ನಳನು ದಮಯಂತಿಗೆ ತನ್ನ ನಿಜರೂಪವನ್ನು ತೋರಿಸಿದ್ದು.)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಬೃಹದಶ್ವನು ಧರ್ಮರಾಯನನ್ನು ಕುರಿತು "ಎಲೈ ಧರ್ಮರಾಯನೆ, ಬಳಿಕ ಕೇಶಿನಿಯು ಪುಣ್ಯಶ್ಲೋಕನಾದ ಬುದ್ಧಿಶಾಲಿಯಾದ ನಳಮಹಾರಾಜನ ಆ ವಿಕಾರವನ್ನೆಲ್ಲಾ ನೋಡಿ, ದಮಯಂತಿಯ ಸಮೀಪಕ್ಕೆ ಹೋಗಿ ಎಲ್ಲವನ್ನೂ ವಿವರಿಸಿ ಹೇಳಿದಳು. ಅದನ್ನು ಕೇಳಿ, ದಮಯಂತಿಯು ದುಃಖಿತಳಾಗಿ, ನಳನನ್ನು ನೋಡಬೇಕೆಂಬ ಅಪೇಕ್ಷೆಯಿಂದ ಕೇಶಿನಿಯನ್ನು ಕುರಿತು 'ಎಲೆ ಕೇಶಿನಿಯೆ, ನಾನು ಬಾಹುಕನನ್ನು ನಳನೆಂಬ ಶಂಕೆಯಿಂದ ಬಹುವಿಧವಾಗಿ ಪರೀಕ್ಷಿಸಿದೆನು. ಆತನ ನಡತೆಯನ್ನೆಲ್ಲಾ ನೋಡಿದರೆ ನಳನಾಗಿಯೇ ತೋರುವನು; ರೂಪಿನಲ್ಲಿ ಮಾತ್ರ ನನಗೆ ಸಂಶಯವುಂಟಾಗಿರುವದು. ಆದ್ದರಿಂದ ಆತನನ್ನು ನಾನೇ ಸ್ವತಃ ನೋಡಿ ತಿಳಿಯಬೇಕೆಂದು ಬಯಸುವೆನು; ಅಥವಾ ಆತನನ್ನೇ ಇಲ್ಲಿಗೆ ಬರಮಾಡಿದರೂ ಸರಿ; ಅಲ್ಲದಿದ್ದರೆ, ನಾನೇ ಅಲ್ಲಿಗೆ ಹೋಗುವದಕ್ಕೆ ಅಪ್ಪಣೆಯನ್ನು ಕೊಟ್ಟರೂ ಸರಿ. ಇದು ನಮ್ಮ ತಂದೆಗೆ ತಿಳಿದಂತಾಗಲಿ, ತಿಳಿಯದಂತಾಗಲಿ, ಹ್ಯಾಗಾದರೂ ಈ ವಿಷಯದಲ್ಲಿ ಸರಿಯಾದ ಸಂವಿಧಾನವನ್ನು ಮಾಡಬೇಕೆಂದು ಇದನ್ನೆಲ್ಲಾ ನಾನು ಹೇಳಿದಂತೆ ನಮ್ಮ ತಾಯಿಗೆ ಅರಿಕೆ ಮಾಡು' ಎಂದು ಹೇಳಿ ಕಳುಹಿಸಲು, ಅವನ್ನೆಲ್ಲಾ ಕೇಶಿನಿಯ ಮುಖದಿಂದ ದಮಯಂತೀತಾಯಿಯು ತಿಳಿದು ತನ್ನ ಮಗಳ ಅಭಿಪ್ರಾಯವನ್ನು ಭೀಮಭೂಪಾಲಕನಿಗೆ ತಿಳುಹಿಸಿದಳು. ಬಳಿಕ ತಂದೆತಾಯಿಗಳಿಬ್ಬರೂ ತನ್ನ ಇಷ್ಟಾನುಸಾರವಾಗಿ ಆಜ್ಞೆಯನ್ನು ಕೊಡಲು, ದಮಯಂತಿಯು ತಾನಿರತಕ್ಕ ಸ್ಥಳಕ್ಕೆ ನಳನನ್ನು ಕರೆತರಿಸಲು, ನಳನು ಅಲ್ಲಿಗೆ ಬಂದು ದಮಯಂತಿಯನ್ನು ನೋಡಿ ಕೂಡಲೇ ಕಂಬನಿಗಳನ್ನು ತುಂಬಿ ದುಃಖಿಸಿದನು. ಆಗ ಮಲಿನವಸ್ತ್ರವನ್ನು ಧರಿಸಿಕೊಂಡು ಜಡೆಗಟ್ಟಿದ ಮುಂಡೇಕೂದಲುಗಳುಳ್ಳವಳಾಗಿ ಧೂಳುಕವಿದು ಮಲಿನಳಾದ ದಮಯಂತಿಯು ದುಃಖಪಡುತ್ತಿರುವ ನಳನನ್ನು ನೋಡಿ ತಾನೂ ಬಹಳವಾಗಿ ದುಃಖಪಡುತ್ತ ಆತನ ಸಂಗಡ ಮಾತನಾಡಲುಪಕ್ರಮಿಸಿದಳು. 'ಎಲೈ ಬಾಹುಕನೆ, ಪೂರ್ವದಲ್ಲಿ ನಿರ್ಜನವಾದ ಅರಣ್ಯದಲ್ಲಿ ಮಲಗಿದ್ದ ಸ್ತ್ರೀಯನ್ನು ಬಿಟ್ಟು ಹೋದ ಒಬ್ಬ ಧರ್ಮಜ್ಞನಾದ ಪುರುಷನನ್ನು ನೀನು ಬಲ್ಲೆಯಾ? ಮಾರ್ಗಾಯಾಸದಿಂದ ಬಳಲಿ ನಿದ್ರೆಮಾಡುತ್ತಿದ್ದ ನಿರಪರಾಧಳಾದ ತನ್ನ ಪ್ರಿಯಪತ್ನಿಯನ್ನು ಪುಣ್ಯಶ್ಲೋಕನಾದ ನಳಮಹಾರಾಜನೊಬ್ಬ ಹೊರತು ಮತ್ತೊಬ್ಬನು ಬಿಟ್ಟು ಹೋದಾನೆ? ಹೀಗೆ ನನ್ನೊಬ್ಬಳನ್ನೇ ಅರಣ್ಯದಲ್ಲಿ ಬಿಟ್ಟು ಹೋದನಲ್ಲಾ! ಆತನಿಗೆ ತಿಳಿಯದೆ ನಾನೇನು ಅಪರಾಧವನ್ನು ಮಾಡಿದ್ದೆನು? ನನ್ನ ಸ್ವಯಂವರಕಾಲದಲ್ಲಿ ಇಂದ್ರಾದಿದೇವತೆಗಳು ಬಂದು ಪ್ರಾರ್ಥಿಸಿದಾಗ್ಯೂ ಅವರನ್ನು ಬಿಟ್ಟು ಆತನನ್ನೇ ನಾನು ವರಿಸಿದೆನು. ಆತನುಮಾತ್ರ ತನ್ನಲ್ಲೇ ಅನುರಕ್ತಳಾಗಿ ತನ್ನನ್ನೇ ಅನುವರ್ತಿಸಿಕೊಂಡಿದ್ದ ಪುತ್ರವತಿಯಾದ ನನ್ನನ್ನು ಹ್ಯಾಗೆ ಬಿಟ್ಟುಹೋದನು? ಆತನು ಅಗ್ನಿಸಾಕ್ಷಿಕವಾಗಿ ನನ್ನ ಪಾಣಿಗ್ರಹಣವನ್ನು ಮಾಡಿಕೊಂಡು ದೇವತೆಗಳ ಮುಂದೆ—ನಿನ್ನನ್ನು ನಾನು ಬಿಡತಕ್ಕವನಲ್ಲ—ಎಂದು ಹೇಳಿದ ಸತ್ಯವಚನವು ಎಲ್ಲಿ ಹೋಯಿತು?' ಎಂದು ನುಡಿದಳು. ಆಗ ಆಕೆಯ ಎರಡು ಕಣ್ಣುಗಳಲ್ಲಿಯೂ ದುಃಖದಿಂದ ನೀರು ಬೀಳುತ್ತಿರಲು, ಕೆಂಪಾದ ಕಡೆಗಣ್ಣುಳ್ಳದ್ದಾಗಿಯೂ ಕಪ್ಪಾದ ಕಾಂತಿಯುಳ್ಳದ್ದಾಗಿಯೂ ಇರುವ ಆಕೆಯ ಕಣ್ಣಿನಲ್ಲಿ ನೀರು ಸುರಿಯುವದನ್ನು ನೋಡಿ ನಳನು ದುಃಖಿತಳಾದ ಆಕೆಯನ್ನು ಕುರಿತು 'ಎಲೆ ಕೋಮಲಾಂಗಿಯೆ, ನಾನಾಗಿ ರಾಜ್ಯವನ್ನು ಕಳೆದುಕೊಂಡವನೂ ಅಲ್ಲ, ನಿನ್ನನ್ನು ಬಿಟ್ಟವನೂ ಅಲ್ಲ; ಇದಿಷ್ಟೂ ಕಲಿಪುರುಷನಿಂದ ನಡೆಯಿತು. ಅರಣ್ಯದಲ್ಲಿ ವಾಸಮಾಡುತ್ತ ಅಹೋರಾತ್ರಿಯಲ್ಲೂ ನನ್ನ ನಿಮಿತ್ತವಾಗಿ ಶೋಕಪಡುತ್ತಿದ್ದ ನೀನು ಪಾಪಿಷ್ಠನಾದ ಆ ಕಲಿಗೆ ಘೋರವಾದ ಶಾಪವನ್ನು ಕೊಡಲು, ಆ ಶಾಪಾಗ್ನಿಯಿಂದ ಅವನು ಸಂತಾಪಪಡುತ್ತ ಬೆಂಕಿಯಲ್ಲಿ ಬಿದ್ದ ಬೆಂಕಿಯಂತೆ ನನ್ನ ಶರೀರದಲ್ಲಿ ವಾಸಮಾಡಿಕೊಂಡಿದ್ದು, ನನ್ನ ಪ್ರಯತ್ನದಿಂದಲೂ ತಪೋಬಲದಿಂದಲೂ ನನ್ನಿಂದ ಪರಾಜಿತನಾಗಿ ನನ್ನನ್ನು ಬಿಟ್ಟು ಹೋದನು. ಬಳಿಕ ನಾನು ನಿನ್ನ ನಿಮಿತ್ತವಾಗಿ ಇಲ್ಲಿಗೆ ಬಂದೆನು. ಮತ್ತಾವ ಕಾರಣಕ್ಕೋಸ್ಕರಲೂ ನಾನು ಬಂದವನಲ್ಲ. ಇನ್ನು ನಮ್ಮಿಬ್ಬರಿಗೂ ದುಃಖವು ಪರಿಹಾರವಾಯಿತು. ಎಲೆ ಮಂಗಳಾಂಗಿಯೆ, ಲೋಕದಲ್ಲಿ ಸ್ತ್ರೀಯಾದವಳು ತನ್ನಲ್ಲಿ ಅನುರಕ್ತನಾದ ಪತಿಯನ್ನು ಬಿಟ್ಟು ನಿನ್ನಂತೆ ಮತ್ತೊಬ್ಬ ಪುರುಷನನ್ನು ಎಂದಿಗಾದರೂ ವರಿಸುವದುಂಟೆ? ಜಾರಸ್ತ್ರೀಯು

ತನ್ನ ಇಚ್ಛಾನುಸಾರವಾಗಿ ತನಗೆ ಅನುರೂಪನಾದ ಪುರುಷನನ್ನು ವರಿಸುವಂತೆ, ಈಗ ದಮಯಂತಿಯು ಎರಡನೇ ಗಂಡನನ್ನು ವರಿಸುವಳೆಂದು ರಾಜಾಜ್ಞೆಯಿಂದ ದೂತರು ದೇಶದೇಶದಲ್ಲೂ ಸಾರುತ್ತಿರುವರಲ್ಲಾ! ಅದನ್ನು ಕೇಳಿದ್ದರಿಂದ ಋತುಪರ್ಣರಾಯನು ತದರ್ಥವಾಗಿ ತ್ವರೆಗೊಂಡು ಇಲ್ಲಿಗೆ ಬಂದಿರುವನು' ಎಂದು ನುಡಿದನು. ಅದನ್ನು ಕೇಳಿ ದಮಯಂತಿಯು ಭಯದಿಂದ ನಡುಗುತ್ತ ಕೈಮುಗಿದುಕೊಂಡು 'ಮಹಾರಾಜನೆ, ನೀನು ನನ್ನಲ್ಲಿ ದೋಷವನ್ನು ಎಣಿಸಬೇಡ. ದೇವತೆಗಳನ್ನುಕೂಡ ಬಿಟ್ಟು ನಿನ್ನನ್ನು ನಾನು ವರಿಸಿರುವೆನು. ನೀನು ಇಲ್ಲಿಗೆ ಬರುವದಕ್ಕೋಸ್ಕರಲೇ ಅನೇಕಮಂದಿ ಬ್ರಾಹ್ಮಣರು ನಾನು ಹೇಳಿ ಕಳುಹಿಸಿಕೊಟ್ಟ ಮಾತನ್ನು ಎಲ್ಲಾ ಕಡೆಯಲ್ಲೂ ಪ್ರಕಟಮಾಡುತ್ತ ದೇಶದೇಶಗಳಿಗೆಲ್ಲಾ ಹೋಗಿರುವರು. ಅವರಲ್ಲಿ ಪರ್ಣಾದನೆಂಬ ಬುದ್ಧಿಶಾಲಿಯಾದ ಬ್ರಾಹ್ಮಣನು ಅಯೋಧ್ಯಾಧಿಪತಿಯಾದ ಋತುಪರ್ಣರಾಯನ ಮನೆಯಲ್ಲಿ ನಿನ್ನನ್ನು ಕಂಡು, ನಾನು ಹೇಳಿ ಕಳುಹಿಸಿಕೊಟ್ಟ ಮಾತನ್ನು ಆಡಲು, ಅದಕ್ಕೆ ನೀನು ಪ್ರತ್ಯುತ್ತರವನ್ನು ಹೇಳಿದ್ದನ್ನು ತಿಳಿದುಕೊಂಡು ಬಂದು, ಅದನ್ನು ಆತನು ನನಗೆ ತಿಳುಹಿಸಿದನು. ಬಳಿಕ ನಾನು ಒಂದು ಹಗಲಿನಲ್ಲಿ ನೂರು ಗಾವುದ ಕುದುರೆಯನ್ನು ನಡಿಸುವದರಲ್ಲಿ ನೀನು ಹೊರತು ಮತ್ತೊಬ್ಬನು ಸಮರ್ಥನಲ್ಲವೆಂದು ತಿಳಿದು, ನಿನ್ನನ್ನು ಇಲ್ಲಿಗೆ ಬರಮಾಡಿಕೊಳ್ಳುವದಕ್ಕಾಗಿ ಇಂಥ ಉಪಾಯವನ್ನು ಮಾಡಿದೆನು. ನಾನು ಸತ್ಯವಾಗಿ ನಿನ್ನ ಪಾದವನ್ನು ಮುಟ್ಟಿ ಹೇಳುವೆನು. ನಾನು ಮನಸ್ಸಿನಿಂದಲೂ ಸ್ವಲ್ಪವಾದ ದುಷ್ಕೃತ್ಯವನ್ನೂ ಮಾಡಿದವಳಲ್ಲ. ನಾನೇನಾದರೂ ಅಂಥ ದುಷ್ಕಾರ್ಯವನ್ನು ಮಾಡಿದ್ದಪಕ್ಷದಲ್ಲಿ ಸಕಲ ಭೂತಗಳಿಗೂ ಸಾಕ್ಷಿಯಾಗಿ ಲೋಕದಲ್ಲಿ ಸಂಚರಿಸುತ್ತಿರುವ ವಾಯುದೇವನೂ, ಲೋಕಗಳನ್ನೆಲ್ಲಾ ಸುತ್ತುತ್ತಿರುವ ಸೂರ್ಯನೂ ಸಕಲ ಭೂತಗಳಲ್ಲಿಯೂ ಸಾಕ್ಷೀಭೂತನಾಗಿರುವ ಚಿತ್ತಾಭಿಮಾನಿಯಾದ ಚಂದ್ರನೂ ನನ್ನ ಪ್ರಾಣವನ್ನು ಅಪಹರಿಸಲಿ. ಸ್ವರ್ಗ ಮರ್ತ್ಯ ಪಾತಾಳಗಳೆಂಬ ಮೂರು ಲೋಕಗಳನ್ನೂ ಧರಿಸಿಕೊಂಡಿರುವ ಈ ಮೂರು ಮಂದಿ ದೇವತೆಗಳೂ ಇನ್ನೂ ಉಳಿದ ದೇವತೆಗಳೂ ಸಹ ನನ್ನ ವಿಷಯದಲ್ಲಿ ನಿಜಸ್ಥಿತಿಯನ್ನು ಹೇಳಲಿ. ಹಾಗೆ ನಾನೇನಾದರೂ ಅಕಾರ್ಯದಲ್ಲಿ ಪ್ರವರ್ತಿಸಿದ್ದಪಕ್ಷದಲ್ಲಿ, ನನ್ನನ್ನು ನಿರಾಕರಿಸಲಿ' ಎಂದಳು. ಅದನ್ನು ಕೇಳಿ ಅಂತರಿಕ್ಷದಲ್ಲಿ ವಾಯುದೇವನು ನಳನನ್ನು ಕುರಿತು 'ಎಲೈ ನಳಮಹಾರಾಜನೆ, ಈಕೆಯು ಪಾಪಕೃತ್ಯವನ್ನು ಮಾಡಿದವಳಲ್ಲ. ಇದೋ ನಾನು ಯಥಾರ್ಥವಾಗಿ ಹೇಳುವೆನು. ಪತಿವ್ರತಾಶಿರೋಮಣಿಯಾದ ಈ ದಮಯಂತಿಯು ತನ್ನಲ್ಲಿರುವ ಪಾತಿವ್ರತ್ಯವೆಂಬ ನಿಧಿಯನ್ನು ನಾವು ಸಾಕ್ಷೀಭೂತರಾಗಿರಲು, ಮೂರು ವರ್ಷದಿಂದಲೂ ಸಂರಕ್ಷಿಸಿಕೊಂಡು ಬಂದಿರುವಳು. ನೀನು ಇಲ್ಲಿಗೆ ಬರುವ ನಿಮಿತ್ತವಾಗಿ ಎರಡನೇ ಸ್ವಯಂವರವೆಂಬ ಉಪಾಯವನ್ನು ಚಿಂತಿಸಿದಳು. ಒಂದು ಹಗಲಿನಲ್ಲಿ ನೂರುಗಾವುದ ಬರತಕ್ಕವನು ನೀನು ಹೊರತು ಮತ್ತಾವಪುರುಷನು ಬಂದಾನು? ನಿನಗೆ ದಮಯಂತಿಯೂ ದಮಯಂತಿಗೆ ನೀನೂ ಅನುಗುಣರಾಗಿರುವಿರಿ. ಪ್ರಿಯಪತ್ನಿಯಾದ ಈಕೆಯೊಡಗೂಡಿ ನೀನು ಸುಖವಾಗಿರು. ಈ ವಿಷಯದಲ್ಲಿ ಸಂಶಯಪಡಬೇಡ' ಎಂದು ನುಡಿಯಲು, ತತ್ಕ್ಷಣವೇ ಆಕಾಶದಿಂದ ಪುಷ್ಪವೃಷ್ಟಿಯಾಯಿತು. ದೇವದುಂದುಭಿಗಳು ಮೊಳಗಿದವು. ಪರಿಮಳಯುಕ್ತವಾದ ಗಾಳಿಯು ಮೆಲ್ಲಗೆ ಬೀಸಿತು.

ಆಗ ನಳಮಹಾರಾಜನು ಆ ಆಶ್ಚರ್ಯವನ್ನು ನೋಡಿ, ದಮಯಂತಿಯಲ್ಲಿದ್ದ ಶಂಕೆಯನ್ನು ಬಿಟ್ಟು, ಕಾರ್ಕೋಟಕನು ಕೊಟ್ಟ ದಿವ್ಯವಾದ ಆ ವಸ್ತ್ರವನ್ನು ಆತನ ಸ್ಮರಣಾನಂತರ ಹೊದ್ದುಕೊಂಡು ತನ್ನ ನಿಜರೂಪವನ್ನು ಪಡೆದನು. ಆಗ ನಿಜರೂಪವನ್ನು ಹೊಂದಿದ ನಳಮಹಾರಾಜನನ್ನು ನೋಡಿ, ಭೀಮಭೂಪಾಲಕನ ಕುಮಾರಿಯಾದ ದಮಯಂತಿಯು ಪುಣ್ಯಶ್ಲೋಕನಾದ ಆತನನ್ನು ದೃಢವಾಗಿ ಆಲಿಂಗಿಸಿಕೊಂಡು ಗಟ್ಟಿಯಾಗಿ ರೋದನಮಾಡಿದಳು. ಆಗ ತೇಜಸ್ವಿಯಾದ ನಳಮಹಾರಾಜನೂ ದಮಯಂತಿಯನ್ನು ಆಲಿಂಗಿಸಿಕೊಂಡು ತನ್ನ ಎರಡು ಮಕ್ಕಳನ್ನೂ ಎತ್ತಿಕೊಂಡು ಸಂತೋಷಪಟ್ಟನು. ಆ ಸಮಯದಲ್ಲಿ ವಿಶಾಲಾಕ್ಷಿಯಾದ ದಮಯಂತಿಯು ನಳಮಹಾರಾಜನ ಮುಖವನ್ನು ತನ್ನ ಎದೆಯಮೇಲೆ ಇರಿಸಿಕೊಂಡು, ದುಃಖಾಕ್ರಾಂತಳಾಗಿ ನಿಟ್ಟುಸುರುಬಿಟ್ಟಳು. ಹಾಗೆಯೇ ನಳಮಹಾರಾಜನೂ ಧೂಳುಕವಿದಿದ್ದರೂ ಪರಿಶುದ್ಧಳಾಗಿರುವ ಆಕೆಯನ್ನು ಆಲಿಂಗಿಸಿಕೊಂಡು ಬಹಳ

ಹೊತ್ತು ದುಃಖಿಸುತ್ತಿರಲು, ಇವರಿಬ್ಬರ ವೃತ್ತಾಂತವನ್ನು ದಮಯಂತಿಯ ತಾಯಿಯು ತನ್ನ ಪತಿಯಾದ ಭೀಮ ಭೂಪಾಲನಿಗೆ ಪ್ರೀತಿಯಿಂದ ಹೇಳಿದಳು. ಆ ಮಾತನ್ನು ಕೇಳಿ ಭೀಮಭೂಪಾಲನು ದಮಯಂತಿಯೊಡನೆ ಮಂಗಳ ಸ್ನಾನವನ್ನು ಮಾಡಿ ಸುಖದಿಂದಿರುವ ನಳಮಹಾರಾಜನನ್ನು ನಾಳೆ ಪ್ರಾತಃಕಾಲಕ್ಕೆ ನಾನು ನೋಡುವೆನೆಂದು ನುಡಿದನು. ಆ ರಾತ್ರಿ ನಳನೂ ದಮಯಂತಿಯೂ ಸಹ ಅರಣ್ಯದಲ್ಲಿ ತಾವಿದ್ದಾಗ ನಡೆದ ವೃತ್ತಾಂತಗಳನ್ನು ಪರಸ್ಪರ ವಾಗಿ ಹೇಳಿಕೊಳ್ಳುತ್ತ, ಸಂತೋಷದಿಂದ ಅಂತಃಪುರದಲ್ಲಿದ್ದರು. ಹೀಗೆ ನಳಮಹಾರಾಜನು ತಾನು ರಾಜ್ಯವನ್ನು ಕಳೆದುಕೊಂಡ ನಾಲ್ಕನೇ ವರ್ಷದಲ್ಲಿ ತನ್ನ ಪತ್ನಿಯಾದ ದಮಯಂತಿಯನ್ನು ಸೇರಿ, ಸಂಪದ್ಯುಕ್ತನಾಗಿ, ತನ್ನ ಇಷ್ಟವು ನೆರವೇರಲು ಅಧಿಕವಾಗಿ ಸಂತೋಷಪಟ್ಟನು. ದಮಯಂತಿಯೂ ಸಹಿತ, ಅರ್ಧ ಬೆಳೆದುಬಂದಿರುವ ಪೈರಿನಿಂದ ಕೂಡಿದ ಭೂಮಿಯು ಮಳೆಯು ಬರಲು ಮನೋಹರವಾಗಿ ಶೋಭಿಸುವಂತೆ, ನಳಮಹಾರಾಜನನ್ನು ಸೇರಿ ಅಧಿಕವಾಗಿ ಶೋಭಿಸಿದಳು. ಆ ಸಮಯದಲ್ಲಿ ದಮಯಂತಿಯು, ಆ ರಾತ್ರಿ ನಿದ್ರೆಮಾಡದೆ, ಸಂತಾಪರಹಿತಳಾಗಿ ತನ್ನ ಇಷ್ಟವು ನೆರವೇರಲು ಅಧಿಕವಾದ ಸಂತೋಷವನ್ನು ಹೊಂದಿ, ಚಂದ್ರನಿಂದೊಡಗೂಡಿದ ರಾತ್ರಿಯಂತೆ ಪ್ರಕಾಶಿಸುತ್ತಿದ್ದಳು" ಎಂದು ಬೃಹದಶ್ವನು ಧರ್ಮರಾಯನಿಗೆ ಹೇಳಿದನು.

---

೭೭ನೇ ಅಧ್ಯಾಯ.—ನಳೋಪಾಖ್ಯಾನ—(ನಳನು ಋತುಪರ್ಣರಾಯನಿಗೆ ಅಶ್ವಹೃದಯವನ್ನು ಹೇಳಿದ್ದು.)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೇ, ಬೃಹದಶ್ವನು ಧರ್ಮರಾಯನನ್ನು ಕುರಿತು "ಎಲೈ ಧರ್ಮರಾಯನೆ, ಬಳಿಕ ಆ ರಾತ್ರಿ ಕಳೆಯಲು, ಪ್ರಾತಃಕಾಲದಲ್ಲಿ ನಳಮಹಾರಾಜನು ದಮಯಂತಿಯೊಡನೆ ಮಂಗಳಸ್ನಾನವನ್ನು ಮಾಡಿ, ವಸ್ತ್ರಾಭರಣಾದಿಗಳಿಂದ ಅಲಂಕೃತನಾಗಿ, ಮಾವನಾದ ಭೀಮಭೂಪಾಲಕನನ್ನು ಕಂಡು ಮರ್ಯಾದೆಯಿಂದ ಆತನಿಗೆ ನಮಸ್ಕಾರಮಾಡಿದನು. ಬಳಿಕ ದಮಯಂತಿಯೂ ತನ್ನ ತಂದೆಗೆ ವಂದನೆಯನ್ನು ಮಾಡಿದಳು. ಆಗ ಭೀಮಭೂಪಾಲಕನು ಸಂತೋಷದಿಂದ ನಳಮಹಾರಾಜನನ್ನು ಪುತ್ರನಂತೆ ಭಾವಿಸಿ, ಆತನ ಯೋಗ್ಯತಾನುಸಾರವಾಗಿ ಮರ್ಯಾದೆಯನ್ನು ಮಾಡಿ, ನಳಮಹಾರಾಜನೊಡಗೂಡಿದ ಪತಿವ್ರತಾಶಿರೋಮಣಿಯಾದ ದಮಯಂತಿಯನ್ನು ಒಳ್ಳೇಮಾತುಗಳಿಂದ ಸಮಾಧಾನಪಡಿಸಿದನು. ಬಳಿಕ ನಳಮಹಾರಾಜನು ಭೀಮಭೂಪಾಲಕನು ಮಾಡಿದ ಮರ್ಯಾದೆಯನ್ನು ಅಂಗೀಕರಿಸಿ ಆ ಭೀಮಭೂಪಾಲಕನಿಗೆ ತಾನು ಮಾಡತಕ್ಕ ವಿನಯಪೂರ್ವಕವಾದ ಪ್ರತಿ ಮರ್ಯಾದೆಯನ್ನು ಮಾಡಿದನು. ಆ ಸಮಯದಲ್ಲಿ ಆ ಪಟ್ಟಣದಲ್ಲಿದ್ದ ಪ್ರಜೆಗಳೆಲ್ಲರೂ ನಳಮಹಾರಾಜನು ತಮ್ಮ ಪಟ್ಟಣಕ್ಕೆ ಬಂದು ದಮಯಂತಿಯನ್ನು ಸೇರಿದ್ದನ್ನು ನೋಡಿ, ಸಂತೋಷದಿಂದ ಕೋಲಾಹಲಧ್ವನಿಯನ್ನು ಮಾಡುತ್ತಾ, ಆ ಪಟ್ಟಣವನ್ನೆಲ್ಲಾ ವಿಚಿತ್ರವಿಚಿತ್ರವಾದ ತೋರಣಗಳಿಂದಲೂ ಪತಾಕೆಗಳಿಂದಲೂ ಧ್ವಜಗಳಿಂದಲೂ ಅಲಂಕರಿಸಿ, ರಾಜಮಾರ್ಗಗಳನ್ನೆಲ್ಲಾ ನಿರ್ಮಲಮಾಡಿ ನೀರುಚಲ್ಲಿ, ಪುಷ್ಪಗಳಿಂದ ಅಲಂಕಾರಮಾಡಿ, ತಮ್ಮತಮ್ಮ ಮನೇಬಾಗಿಲುಗಳಲ್ಲಿ ಬಾಳೇಕಂಬಗಳನ್ನೂ ಪುಷ್ಪಗುಚ್ಛಗಳನ್ನೂ ಕಟ್ಟಿ ಅಲಂಕಾರಮಾಡಿದರು. ಮತ್ತು ಅಲ್ಲಿದ್ದ ದೇವಸ್ಥಾನಗಳನ್ನೆಲ್ಲಾ ಮನೋಹರವಾಗಿ ಅಲಂಕಾರಮಾಡಿದರು. ಇದನ್ನೆಲ್ಲಾ ನೋಡಿ ಋತುಪರ್ಣರಾಯನು ಬಾಹುಕನ ವೇಷವನ್ನು ಧರಿಸಿದ್ದ ನಳಮಹಾರಾಜನು ದಮಯಂತಿಯೊಡಗೂಡಿದ್ದನ್ನು ಕೇಳಿ ಬಹಳವಾಗಿ ಸಂತೋಷಪಟ್ಟು, ನಳಮಹಾರಾಜನನ್ನು ತನ್ನ ಬಳಿಗೆ ಬರಮಾಡಿಕೊಂಡು, ಆತನನ್ನು ಕುರಿತು 'ನನ್ನಲ್ಲಿ ಏನಪರಾಧವಿದ್ದರೂ ಕ್ಷಮಿಸಬೇಕು' ಎಂದು ಬೇಡಿಕೊಂಡನು. ಆಗ ಬುದ್ಧಿಶಾಲಿಯಾದ ನಳಮಹಾರಾಜನೂ ತಾನು ಆತನ ಬಳಿಯಲ್ಲಿದ್ದದ್ದಕ್ಕೆ ತಕ್ಕ ಕಾರಣಗಳನ್ನು ತಿಳುಹಿಸಿ, 'ನಾನೇನು ಅಪರಾಧಮಾಡಿದ್ದಾಗ್ಯೂ ಮಹಾರಾಜನಾದ ನೀನು ಕ್ಷಮಿಸಬೇಕು' ಎಂದು ಆತನನ್ನು ತಾನೂ ಬೇಡಿಕೊಂಡು, ಆತನಿಗೆ ತಕ್ಕ ಮರ್ಯಾದೆಯನ್ನು ಮಾಡಿದನು. ಋತುಪರ್ಣರಾಯನು ಆಶ್ಚರ್ಯಪಟ್ಟು ನಡೆದ ಸಂಗತಿಯನ್ನೆಲ್ಲಾ ಯಥಾರ್ಥವಾಗಿ ತಿಳಿದು, ನಳಮಹಾರಾಜನನ್ನು ಕುರಿತು 'ಎಲೈ ನಳಮಹಾರಾಜನೆ, ನೀನು ದೈವಯೋಗದಿಂದ ನಿನ್ನ ಪತ್ನಿಯಾದ ದಮಯಂತಿಯನ್ನು ಸೇರಿದೆ. ಇದು ಎಲ್ಲರಿಗೂ ಬಹಳ ಸಂತೋಷಕರವಾದದ್ದು'

ಎಂದು ನುಡಿದು, ನೀನು ನಮ್ಮ ಮನೆಯಲ್ಲಿ ಅಜ್ಞಾತವಾಸಮಾಡುವಾಗ ತಿಳಿದಾಗಲೀ ತಿಳಿಯದಾಗಲೀ ನಿನ್ನ ವಿಷಯದಲ್ಲಿ ನಾನೇನಾದರೂ ಅಪರಾಧವನ್ನು ಮಾಡಿದ್ದ ಪಕ್ಷದಲ್ಲಿ, ಅದನ್ನು ನೀನು ಕ್ಷಮಿಸಬೇಕು' ಎಂದು ಕೇಳಿಕೊಂಡನು. ಬಳಿಕ ನಳಮಹಾರಾಜನು ಋತುಪರ್ಣರಾಯನನ್ನು ಕುರಿತು 'ಎಲೈ ಮಹಾರಾಜನೆ, ನನ್ನ ವಿಷಯದಲ್ಲಿ ನೀನು ಸ್ವಲ್ಪವೂ ಅಪರಾಧವನ್ನು ಮಾಡಿದವನಲ್ಲ. ಹಾಗೆ ನೀನೊಂದುವೇಳೆ ಅಪರಾಧವನ್ನು ಮಾಡಿದ್ದರೂ, ಆ ವಿಷಯದಲ್ಲಿ ನಾನು ಕೋಪಮಾಡಿಕೊಳ್ಳತಕ್ಕವನಾದರಲ್ಲವೆ ಕ್ಷಮಿಸಬೇಕು? ಪೂರ್ವದಿಂದಲೂ ನೀನು ನನಗೆ ಮಿತ್ರನಾಗಿಯೂ, ಸಂಬಂಧಿಯಾಗಿಯೂ ಇದ್ದವನು. ಇಲ್ಲಿಂದ ಮುಂದಕ್ಕೂ ನೀನು ನನ್ನಲ್ಲಿ ವಿಶೇಷವಾದ ಪ್ರೀತಿಯನ್ನು ಇಡಬೇಕು. ನಾನು ಪೂರ್ವದಲ್ಲಿ ನಮ್ಮ ಅರಮನೆಯಲ್ಲಿ ಹ್ಯಾಗೆ ಸುಖವಾಗಿದ್ದೆನೋ ಹಾಗೆಯೇ ನಿನ್ನ ಅರಮನೆಯಲ್ಲೂ ನನಗೆ ಬೇಕಾದಹಾಗೆ ಸುಖವಾಗಿಯೇ ಇದ್ದೆನು. ಎಲೈ ಮಹಾರಾಜನೆ, ಅಶ್ವಹೃದಯವೆಂಬ ವಿದ್ಯೆಯು ನಿನ್ನದಾಗಿ ನನ್ನಲ್ಲಿರುವದು. ಈಗ ನೀನು ಅಪೇಕ್ಷಿಸಿದ ಪಕ್ಷದಲ್ಲಿ ಅದನ್ನು ನಿನಗೆ ಕೊಡುವೆನು' ಎಂದು ನುಡಿದು, ಆತನಿಗೆ ಆ ಅಶ್ವಹೃದಯವನ್ನು ಉಪದೇಶಮಾಡಿದನು. ಋತುಪರ್ಣರಾಯನು ಶಾಸ್ತ್ರೋಕ್ತಕ್ರಮದಿಂದ ಆ ಅಶ್ವಹೃದಯವನ್ನು ಪರಿಗ್ರಹಿಸಿ, ಇದಕ್ಕೆ ಪ್ರತಿನಿಧಿಯಾಗಿ ನಾನು ಪೂರ್ವದಲ್ಲೇ ನಳಮಹಾರಾಜನಿಗೆ ಅಕ್ಷಹೃದಯವನ್ನು ಕೊಟ್ಟಿರುವೆನೆಂದು ತಿಳಿದುಕೊಂಡು, ಮತ್ತೊಬ್ಬ ಸಾರಥಿಯನ್ನು ಮಾಡಿಕೊಂಡು ಅಯೋಧ್ಯಾನಗರಕ್ಕೆ ಹೊರಟುಹೋದನು. ಬಳಿಕ ನಳಮಹಾರಾಜನು ಆ ಕುಂಡಿನನಗರದಲ್ಲಿ ಸ್ವಲ್ಪಕಾಲ ವಾಸಮಾಡಿಕೊಂಡಿದ್ದನು" ಎಂದು ಬೃಹದಶ್ವನು ಧರ್ಮರಾಯನಿಗೆ ಹೇಳಿದನು.

### ೭೮ನೇ ಅಧ್ಯಾಯ.—ನಳೋಪಾಖ್ಯಾನ—(ನಳನು ಪುಷ್ಕರನಿಂದ ಸಕಲವನ್ನೂ ಜೈಸಿದ್ದು.)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಬೃಹದಶ್ವನು ಧರ್ಮರಾಯನನ್ನು ಕುರಿತು "ಎಲೈ ಧರ್ಮರಾಯನೆ, ಬಳಿಕ ನಳಮಹಾರಾಜನು ಒಂದು ತಿಂಗಳ ಪರ್ಯಂತವೂ ಭೀಮಭೂಪಾಲಕನ ಮನೆಯಲ್ಲಿ ವಾಸಮಾಡಿಕೊಂಡಿದ್ದು, ಅನಂತರ ಹದಿನಾರು ಆನೆಗಳೂ ಐವತ್ತು ಕುದುರೆಗಳೂ ಆರುನೂರುಮಂದಿ ಕಾಲಾಳುಗಳೂ ತನ್ನ ಸಂಗಡ ಬರಲು, ಶುಭ್ರವಾದ ರಥವನ್ನೇರಿ ಕೆಲವುಮಂದಿ ಸೇವಕರೊಡಗೂಡಿ ಭೂಮಿಯನ್ನು ನಡುಗಿಸುವ ಹಾಗೆ ವೇಗದಿಂದ ತ್ವರೆಪಡುತ್ತ, ಸಂರಂಭಯುಕ್ತನಾಗಿ ವಿದರ್ಭದೇಶದಿಂದ ಹೊರಟು ನಿಷಧದೇಶವನ್ನು ಸೇರಿ, ಪುಷ್ಕರನ ಬಳಿಗೆ ಹೋಗಿ ಅವನನ್ನು ನೋಡಿ 'ಎಲೈ ಪುಷ್ಕರನೆ, ನಾನು ಬಹು ದ್ರವ್ಯವನ್ನು ಸಂಪಾದಿಸಿಕೊಂಡು ಬಂದಿರುವೆನು. ಅದನ್ನೂ ದಮಯಂತಿಯನ್ನೂ ಇನ್ನೂ ನನಗಿರುವ ಸರ್ವಸ್ವವನ್ನೂ ಪಂತಕ್ಕೆ ಒಡ್ಡಿ, ನಿನ್ನೊಡನೆ ಪಗಡೆಯಾಟವನ್ನು ಆಡಬೇಕೆಂದು ನಿಶ್ಚಯಿಸಿಕೊಂಡು ಬಂದಿರುವೆನು. ಇದಕ್ಕೆ ಪ್ರತಿಯಾಗಿ ನೀನು ರಾಜ್ಯವನ್ನು ಪಂತಕ್ಕೆ ಒಡ್ಡಿ ಮೊದಲಾಟವನ್ನು ಆಡು. ಎರಡನೇ ಆಟದಲ್ಲಿ ನಮ್ಮನಮ್ಮ ಪ್ರಾಣಗಳನ್ನೇ ಪಂತಕ್ಕೆ ಒಡ್ಡಿ ಆಟವಾಡೋಣ. ಮತ್ತೊಬ್ಬನ ರಾಜ್ಯವನ್ನೇಆಗಲಿ ಧನವನ್ನೇಆಗಲಿ ಗೆದ್ದಬಳಿಕ, ಸೋತವನು ಎರಡನೇಆವರ್ತಿ ಪಂತಕ್ಕೆ ಏನನ್ನು ಒಡ್ಡುವನೋ ಅದಕ್ಕೆ ಸಮನಾದದ್ದನ್ನು ಗೆದ್ದವನೂ ಒಡ್ಡತಕ್ಕದ್ದು ಧರ್ಮವಾದದ್ದು. ಹಾಗೆ ಜೂಜಾಡುವದಕ್ಕೆ ನಿನಗೆ ಅಪೇಕ್ಷೆಯಿಲ್ಲದ ಪಕ್ಷದಲ್ಲಿ, ನಾನೂ ನೀನೂ ದ್ವಂದ್ವಯುದ್ಧವನ್ನು ಮಾಡೋಣ. ಅದರಿಂದ ನಮ್ಮಿಬ್ಬರೊಳಗೆ ಯಾರಿಗಾದರೂ ಒಬ್ಬರಿಗೆ ನಾಶವುಂಟಾಗುವದು. ಎಲೈ ಪುಷ್ಕರನೆ, ವಂಶಪಾರಂಪರ್ಯವಾಗಿ ಅನುಭವಿಸತಕ್ಕ ರಾಜ್ಯವು ನಷ್ಟವಾಗಲು, ಅದನ್ನು ಯಾವ ಉಪಾಯದಿಂದಲಾದರೂ ಪುನಃ ಪಡೆದುಕೊಳ್ಳಬೇಕೆಂದು ವೃದ್ಧರಾದವರ ಶಾಸನವಿರುವದರಿಂದ ನೀನು ಅಕ್ಷದ್ಯೂತದಲ್ಲಾಗಲಿ, ಅಥವಾ ಯುದ್ಧಕ್ಕೆ ಧನುಸ್ಸನ್ನು ಹಿಡಿಯುವದರಲ್ಲಾಗಲಿ ಸಿದ್ಧನಾಗು' ಎಂದು ನುಡಿದನು. ಅದನ್ನು ಕೇಳಿ ಪುಷ್ಕರನು ತನಗೇ ಜಯವಾಗುವದೆಂದೆಣಿಸಿ ನಸುನಗುತ, ನಳಮಹಾರಾಜನನ್ನು ಕುರಿತು 'ಎಲೈ ನಳನೆ, ನೀನು ದೈವಯೋಗದಿಂದ ಪುನಃ ಜೂಜಾಡುವದಕ್ಕೆ ತಕ್ಕ

ದ್ರವ್ಯವನ್ನು ಸಂಪಾದಿಸಿಕೊಂಡು ಬಂದೆ. ದೈವಯೋಗದಿಂದ ದಮಯಂತಿಯ ಕಷ್ಟವೂ ನಿವೃತ್ತಿಯಾಗುವಹಾಗಾಯಿತು ; ದೈವಯೋಗದಿಂದ ನೀನು ದಮಯಂತಿಯೊಡನೆ ಜೀವಿಸಿಕೊಂಡಿರುವೆ. ಈಗ ನೀನು ಸಂಪಾದಿಸಿಕೊಂಡು ಬಂದಿರುವ ಧನವನ್ನೆಲ್ಲಾ ನಾನು ಜಯಿಸಿದ ಬಳಿಕ, ಸರ್ವಾಲಂಕಾರಭೂಷಿತಳಾದ ದಮಯಂತಿಯು ಅಪ್ಸರಸ್ತ್ರೀಯು ಇಂದ್ರನನ್ನು ಸೇರುವಂತೆ ನನ್ನನ್ನು ಸೇರುವಳು. ಈ ಆಟಕ್ಕಾಗಿ ನೀನು ಯಾವಾಗ ಬರುವೆಯೋ ಎಂದು ನಿತ್ಯವೂ ನಿನ್ನನ್ನು ಸ್ಮರಿಸುತ್ತ ನಿರೀಕ್ಷಣೆ ಮಾಡುತ್ತಿದ್ದೆನು. ನಿನ್ನಹೊರತು ಮತ್ತೊಬ್ಬರ ಸಂಗಡ ಜೂಜಾಡುವದರಲ್ಲಿ ನನಗೆ ಕುತೂಹಲವಿಲ್ಲ. ಬಹುದಿವಸದಿಂದ ನಾನು ಮನಸ್ಸಿನಲ್ಲಿ ಯೋಚಿಸುತ್ತಿದ್ದ ದೋಷರಹಿತಳಾದ ಈ ದಮಯಂತಿಯನ್ನು ಈಗ ಜೂಜಿನಲ್ಲಿ ಗೆದ್ದು ಕೃತಾರ್ಥನಾಗುವೆನು ' ಎಂದು ಹೇಳಿದನು. ಹೀಗೆ ಅಸಂಗತವಾಗಿ ಮಾತನಾಡತಕ್ಕ ಪುಷ್ಕರನ ಮಾತನ್ನು ಕೇಳಿ, ನಳಮಹಾರಾಜನು ಕೋಪದಿಂದ ಕಣ್ಣುಕೆಂಪಾಗಲು, ಖಡ್ಗದಿಂದ ಪುಷ್ಕರನ ಶಿರಸ್ಸನ್ನು ಕಡಿಯಬೇಕೆಂದು ಇಚ್ಛೈಯಿಸಿ ' ಎಲೈ ನೀಚನೆ, ಬರೀಮಾತುಗಳಿಂದೇನು ಪ್ರಯೋಜನ ? ಜೂಜನ್ನಾಡೋಣ. ನಾನು ಜಯಿಸಿದಬಳಿಕ ನೀನು ಇಂಥ ಮಾತನ್ನು ಆಡಲಾರೆ ' ಎಂದನು. ಒಡನೆ ಅವರಿಬ್ಬರಿಗೂ ಜೂಜಾಟವು ಉಪಕ್ರಮವಾಯಿತು. ಆಗ ಮೊದಲನೇ ಆಟದಲ್ಲೇ ನಳಮಹಾರಾಜನು ಸಕಲ ರಾಜ್ಯ, ಕೋಶ, ರತ್ನಗಳೊಡನೆ ಪುಷ್ಕರನನ್ನು ಆತನ ಪ್ರಾಣಗಳಸಹಿತ ಜಯಿಸಿ, ನಸುನಗುತ ಆತನನ್ನು ಕುರಿತು ' ಎಲೈ ಪುಷ್ಕರನೆ, ನಿಷ್ಕಂಟಕವಾಗಿಯೂ ಸಮೃದ್ಧಿಯುಳ್ಳದ್ದಾಗಿಯೂ ಇರುವ ಈ ಸಕಲರಾಜ್ಯವೂ ಇನ್ನು ನನ್ನದಾಯಿತು. ಎಲೈ ರಾಜಾಧಮನೆ, ನೀನು ದಮಯಂತಿಯನ್ನು ಕಣ್ಣೆತ್ತಿ ನೋಡುವದಕ್ಕೂ ಶಕ್ತನಲ್ಲ. ಪರಂತು, ನೀನು ಪರಿವಾರಸಮೇತನಾಗಿ ಆಕೆಗೆ ಸೇವಕನಾದೆ. ಪೂರ್ವದಲ್ಲಿ ನೀನು ನನ್ನನ್ನು ಜಯಿಸಿದ್ದು ಕಲಿಪುರುಷನ ಶಕ್ತಿಯಿಂದಲೇ ಹೊರತು ನಿನ್ನ ಶಕ್ತಿಯಿಂದಲ್ಲ. ಮೂಢನಾದ ನೀನುಮಾತ್ರ ಸ್ವಶಕ್ತಿಯಿಂದ ಜಯಿಸಿದೆನೆಂದು ತಿಳಿದುಕೊಂಡಿರುವೆ. ನಾನಾದರೋ ಮತ್ತೊಬ್ಬರು ಮಾಡಿದ ಅಪರಾಧವನ್ನು ಸ್ವಲ್ಪವಾದರೂ ನಿನ್ನಮೇಲೆ ಕೆಡಹತಕ್ಕವನಲ್ಲ. ಈಗ ನಿನ್ನನ್ನು ಪ್ರಾಣಸಹಿತವಾಗಿ ಬಿಟ್ಟುಬಿಡುವೆನು, ಹೋಗು ; ಸುಖವಾಗಿ ಜೀವಿಸಿಕೊ. ನಿನ್ನ ಭಾಗಕ್ಕೆ ಬರತಕ್ಕ ರಾಜ್ಯವನ್ನು ಸಕಲ ಸಾಮಗ್ರಿಗಳೊಡನೆಯೂ ನಿನಗೆ ನಾನು ಕೊಟ್ಟುಬಿಡುತ್ತೇನೆ. ಪೂರ್ವದಂತೆ ನಿನ್ನಲ್ಲಿ ನಾನು ಪ್ರೀತಿಯನ್ನೂ ಇಟ್ಟಿರುವೆನು. ನೀನು ನನ್ನಲ್ಲಿ ಸ್ನೇಹವನ್ನು ಎಂದಿಗೂ ತಪ್ಪಬೇಡ. ಎಲೈ ಪುಷ್ಕರನೆ, ನೀನು ನನಗೆ ತಮ್ಮನು. ನೀನು ನೂರುವರುಷ ಸುಖವಾಗಿ ಜೀವಿಸು ' ಎಂದು ನುಡಿದು, ಸಮಾಧಾನ ಮಾಡಿ, ಸಂತೋಷದಿಂದ ಬಾರಿಬಾರಿಗೂ ಅಪ್ಪಿಕೊಂಡು, ಆತನನ್ನು ಆತನ ರಾಜಧಾನಿಗೆ ಕಳುಹಿಸಿಕೊಟ್ಟನು.

ಆಗ ಪುಷ್ಕರನು ಪುಣ್ಯಶ್ಲೋಕನಾದ ನಳಮಹಾರಾಜನಿಗೆ ನಮಸ್ಕಾರವನ್ನು ಮಾಡಿ, ಕೈಮುಗಿದುಕೊಂಡು ' ಎಲೈ ಮಹಾರಾಜನೆ, ಮಹಾಪರಾಧಿಯಾದ ನನಗೆ ನಿನ್ನ ಕೈಗೆ ಸಿಕ್ಕಿದ್ದ ನನ್ನ ಪ್ರಾಣವನ್ನೂ ರಾಜ್ಯವನ್ನೂ ಸಹ ನೀನು ಮರಳಿ ಕೊಟ್ಟದ್ದರಿಂದ, ನಿನ್ನ ಕೀರ್ತಿಯು ಲೋಕದಲ್ಲಿ ಅಕ್ಷಯವಾಗಿರಲಿ. ಹತ್ತುಸಾವಿರ ವರುಷ ನೀನು ಸುಖವಾಗಿ ಜೀವಿಸು ' ಎಂದು ನುಡಿದು, ಒಂದು ತಿಂಗಳು ಸಂತೋಷದಿಂದ ಅಲ್ಲೇ ವಾಸಮಾಡಿಕೊಂಡಿದ್ದು, ಬಳಿಕ ಪರಿವಾರಸಮೇತನಾಗಿ ತನ್ನ ರಾಜಧಾನಿಯನ್ನು ಕುರಿತು ಹೊರಟನು. ಆಗ ನಳಮಹಾರಾಜನು ಬೇಕಾದಷ್ಟು ದ್ರವ್ಯವನ್ನು ಕೊಟ್ಟು, ಪುಷ್ಕರನನ್ನು ಆತನ ರಾಜಧಾನಿಗೆ ಕಳುಹಿಸಿಕೊಟ್ಟು, ಮಹತ್ತಾದ ಸೈನ್ಯದಿಂದಲೂ ವಿನಯಸಂಪನ್ನರಾದ ಪರಿಜನರೊಡನೆಯೂ ಕೂಡಿ ಸೂರ್ಯನಂತೆ ಪ್ರಕಾಶಿಸುತ್ತ, ಸಂಪದ್ಯುಕ್ತನಾಗಿ ತನ್ನ ರಾಜಧಾನಿಯನ್ನು ಪ್ರವೇಶ ಮಾಡಿ, ಪುರಜನರನ್ನೆಲ್ಲಾ ಸಮಾಧಾನಮಾಡಿದನು. ಆಗ ಸಕಲರಾದ ನಗರವಾಸಿಗಳೂ ದೇಶವಾಸಿಗಳೂ ಮಂತ್ರಿಗಳೂ ಸಹ ಕೈಮುಗಿದುಕೊಂಡು, ಸಂತೋಷದಿಂದ ರೋಮಾಂಚಿತ ಶರೀರರಾಗಿ, ನಳಮಹಾರಾಜನನ್ನು ಕುರಿತು ' ಎಲೈ ಮಹಾರಾಜನೆ, ಈಗ ನಾವೆಲ್ಲರೂ ಸಂತೋಷ ಭರಿತರಾಗಿ, ದೇವತೆಗಳು ಮಹೇಂದ್ರನನ್ನು ಸೇವಿಸುವದಕ್ಕೆ ಬರುವಂತೆ ಪುನಃ ನಿನ್ನನ್ನು ಸೇವಿಸುವದಕ್ಕೆ ಬಂದಿರುವೆವು ' ಎಂದು ನುಡಿದರು " ಎಂದು ಬೃಹದಶ್ವನು ಧರ್ಮರಾಯನಿಗೆ ಹೇಳಿದನು.

೭೯ನೇ ಅಧ್ಯಾಯ.—ನಳೋಪಾಖ್ಯಾನ—(ದಮಯಂತಿಯು ಮಕ್ಕಳೊಡನೆ ನಳರಾಜನನ್ನು ಸೇರಿ ಸಂತೋಷದಿಂದಿದ್ದದ್ದು.)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಬೃಹದಶ್ವನು ಧರ್ಮರಾಯನನ್ನು ಕುರಿತು "ಎಲೈ ಧರ್ಮರಾಯನೆ, ಬಳಿಕ ಆ ಪಟ್ಟಣದಲ್ಲಿರುವ ಸಮಸ್ತಜನರೂ ದುಃಖರಹಿತರಾಗಿ ಸಂತೋಷಪಡುತ್ತ ಮಹೋತ್ಸವವನ್ನು ಬೆಳಸಲು, ನಳಮಹಾರಾಜನು ದಮಯಂತಿಯನ್ನು ಕರೆಯಿಸಿಕೊಳ್ಳುವದಕ್ಕೋಸ್ಕರ ವಿದರ್ಭದೇಶಕ್ಕೆ ಅನೇಕ ಸೈನ್ಯಗಳನ್ನು ಕಳುಹಿಸಿಕೊಡಲು, ಮಹಾ ಪರಾಕ್ರಮಶಾಲಿಯಾದ ಭೀಮಭೂಪಾಲಕನು ಮಗಳಾದ ದಮಯಂತಿಗೆ ಸತ್ಕಾರಪೂರ್ವಕವಾಗಿ ಮರ್ಯಾದೆಯನ್ನು ಮಾಡಿ ಆಕೆಯನ್ನು ನಿಷಧದೇಶಕ್ಕೆ ಕಳುಹಿಸಿಕೊಟ್ಟನು. ದಮಯಂತಿಯು ಮಕ್ಕಳೊಡನೆ ನಿಷಧದೇಶಕ್ಕೆ ಬಂದು ಸೇರಲು, ನಳಮಹಾರಾಜನು ಸಂತುಷ್ಟಹೃದಯನಾಗಿ, ದೇವೇಂದ್ರನು ನಂದನವನದಲ್ಲಿ ವಿಹಾರಮಾಡುವಂತೆ ಜಂಬೂದ್ವೀಪದಲ್ಲಿ ವಿಹಾರ ಮಾಡಿಕೊಂಡು, ಪುನಃ ತನ್ನ ರಾಜ್ಯವನ್ನು ಆಳುತ್ತಿದ್ದನು. ಈ ಪ್ರಕಾರ ನಳಮಹಾರಾಜನು ನಷ್ಟವಾದ ರಾಜ್ಯವನ್ನು ಪುನಃ ಸಂಪಾದಿಸಿಕೊಂಡು, ಕೀರ್ತಿಶಾಲಿಯಾಗಿ, ಶಾಸ್ತ್ರೋಕ್ತಕ್ರಮದಿಂದ ಬಹು ದಕ್ಷಿಣೆಗಳುಳ್ಳ ಅನೇಕ ಯಾಗಗಳನ್ನು ಮಾಡಿದನು. ಎಲೈ ಧರ್ಮರಾಯನೆ, ನೀನೂ ಅದೇಪ್ರಕಾರ ರಾಜ್ಯವನ್ನು ಪುನಃ ಪಡೆದು ಪುತ್ರಮಿತ್ರಾಮಾತ್ಯ ಸಹಿತನಾಗಿ ಶೀಘ್ರದಲ್ಲೇ ಪ್ರಕಾಶಮಾನನಾಗುವೆ. ಈ ಪ್ರಕಾರ ಮಹಾಶೂರನಾದ ನಳಮಹಾರಾಜನು ಪಗಡೆಯಾಟದಲ್ಲಿ ಸೋತು ಪತ್ನೀಸಮೇತನಾಗಿ ಮಹತ್ತಾದ ದುಃಖವನ್ನು ಅನುಭವಿಸಿ, ಬಳಿಕ ತಾನೊಬ್ಬನೇ ಘೋರವಾದ ಶೋಕವನ್ನು ಹೊಂದಿ, ಪುನಃ ಅಭ್ಯುದಯವನ್ನು ಪಡೆದನು. ನೀನಾದರೋ, ತಮ್ಮಂದಿರಿಂದಲೂ ದ್ರೌಪದಿಯಿಂದಲೂ ಸಹಿತನಾಗಿ ಈ ಘೋರವಾದ ಅರಣ್ಯದಲ್ಲಿ ಧರ್ಮವನ್ನೇ ಆಚರಿಸುತ್ತ, ವೇದವೇದಾಂಗ ಪಾರಂಗತರಾದ ಮಹಾತ್ಮರಾದ ಬ್ರಾಹ್ಮಣರಿಂದೊಡಗೂಡಿ ಸುಖದಿಂದಿರುವೆ. ಹೀಗಿರುವಲ್ಲಿ ಯಾತಕ್ಕೋಸ್ಕರ ವ್ಯಸನಪಡುತ್ತಿರುವೆ? ಎಲೈ ಧರ್ಮರಾಯನೆ, ನಾಗರಾಜನಾದ ಕಾರ್ಕೋಟಕ, ದಮಯಂತಿ, ನಳಮಹಾರಾಜ, ರಾಜರ್ಷಿಯಾದ ಋತುಪರ್ಣರಾಯ, ಇವರ ನಾಮೋಚ್ಚಾರಣವನ್ನು ಯಾರು ಮಾಡುತ್ತಾರೋ ಅವರಿಗೆ ಕಲಿಪುರುಷನ ಬಾಧೆಯು ತಪ್ಪುವದು. ಕಲಿಪುರುಷನ ಬಾಧೆಯನ್ನು ನಿವೃತ್ತಿ ಮಾಡತಕ್ಕ ಈ ಇತಿಹಾಸವನ್ನು ನಿನ್ನಂಥವನು ಕೇಳಿದ್ದೇ ಆದರೆ, ಮನಸ್ಸಿಗೆ ಸಮಾಧಾನವುಂಟಾಗುವದು. ಎಲೈ ರಾಜನೆ, ಮನುಷ್ಯರ ಸಂಪತ್ತು ಯಾವಾಗಲೂ ಅಸ್ಥಿರವಾದ್ದರಿಂದ, ಅಂಥ ಸಂಪತ್ತು ಬಂದರೂ ಹೋದರೂ ಆ ವಿಷಯದಲ್ಲಿ ನೀನು ಚಿಂತಿಸಬೇಡ. ಈ ನಳೋಪಾಖ್ಯಾನವನ್ನು ಕೇಳಿದ್ದರಿಂದ, ನೀನು ಮನಸ್ಸಿಗೆ ಸಮಾಧಾನ ಮಾಡಿಕೊಂಡು ವ್ಯಸನವನ್ನು ಬಿಡು. ದೈವಾನುಕೂಲ್ಯವಿಲ್ಲದೆ ಪುರುಷಪ್ರಯತ್ನವು ನಷ್ಟವಾಗಲು, ಶೂರರಾದ ಪುರುಷರು ಅದಕ್ಕಾಗಿ ಎಂದಿಗೂ ವ್ಯಸನಪಡತಕ್ಕವರಲ್ಲ. ಮಹತ್ತಾದ ಈ ನಳೋಪಾಖ್ಯಾನವನ್ನು ಯಾರು ಹೇಳುವರೋ, ಪದೇಪದೇ ಯಾರು ಕೇಳುವರೋ, ಅಂಥವರಿಗೆ ದಾರಿದ್ರ್ಯಪರಿಹಾರವಾಗಿ ಐಶ್ವರ್ಯ ಪ್ರಾಪ್ತಿಯಾಗುವದು; ಮತ್ತು ಅವರು ಧನ್ಯರಾಗುವರು. ಪುರಾತನವಾದ ಈ ಇತಿಹಾಸವನ್ನು ಕೇಳತಕ್ಕವರಿಗೆ ಪುತ್ರಪೌತ್ರಾಭಿವೃದ್ಧಿಯೂ, ಮನುಷ್ಯರಲ್ಲಿ ಪೂಜ್ಯತ್ವವೂ, ಆರೋಗ್ಯಭಾಗ್ಯವೂ, ಸಂತೋಷಾತಿಶಯವೂ ಉಂಟಾಗುವವು. ಈ ವಿಷಯದಲ್ಲಿ ಸಂಶಯವಿಲ್ಲ. ಈಗ ನೀನು ಅಕ್ಷಜ್ಞನಾದ ಶಕುನಿಯು ಪುನಃ ನನ್ನನ್ನು ಜೂಜಾಡುವದಕ್ಕೆ ಕರೆಯುವನಲ್ಲಾ ಎಂದು ಭಯಪಡುತ್ತಿರುವೆ. ಈ ಭಯವನ್ನು ನಾನು ಪರಿಹಾರಮಾಡುತ್ತೇನೆ. ಎಲೈ ಧರ್ಮರಾಯನೆ, ನಾನು ಅಕ್ಷಹೃದಯವನ್ನು ಚೆನ್ನಾಗಿ ತಿಳಿದಿರುವೆನು. ಅದನ್ನು ನಿನಗೆ ಅನುಗ್ರಹಪೂರ್ವಕವಾಗಿ ಉಪದೇಶಮಾಡುತ್ತೇನೆ; ನೀನು ಸ್ವೀಕರಿಸು" ಎಂದು ನುಡಿದನು. ಅದನ್ನು ಕೇಳಿ ಧರ್ಮರಾಯನು ಸಂತೋಷಪಟ್ಟು, ಬೃಹದಶ್ವಮಹರ್ಷಿಯನ್ನು ಕುರಿತು "ಎಲೈ ಮಹರ್ಷಿಯೆ, ನಾನು ಯಥಾರ್ಥವಾಗಿ ಅಕ್ಷಹೃದಯವನ್ನು ತಿಳಿಯಬೇಕೆಂದು ಬಯಸುವೆನು" ಎನಲು, ಬೃಹದಶ್ವನು ಮಹಾತ್ಮನಾದ ಧರ್ಮರಾಯನಿಗೆ ಅಕ್ಷಹೃದಯವನ್ನು ಉಪದೇಶಮಾಡಿ, ಸ್ನಾನಾದಿ ನಿತ್ಯಕರ್ಮಗಳನ್ನು ಮಾಡುವದಕ್ಕೋಸ್ಕರ ಅಲ್ಲಿಂದ ಹೊರಟುಹೋದನು.

ಆ ಬಳಿಕ ಧರ್ಮರಾಯನು ಆಯಾ ಪುಣ್ಯತೀರ್ಥಗಳಿಂದಲೂ ಪುಣ್ಯತಮವಾದ ಪರ್ವತಗಳಿಂದಲೂ ತಪೋವನಗಳಿಂದಲೂ ಗುಂಪುಗುಂಪಾಗಿ ಬಂದ ತಪಸ್ವಿಗಳಾದ ಬ್ರಾಹ್ಮಣರ ಮುಖದಿಂದ ಅರ್ಜುನನು ವಾಯುಭಕ್ಷಣೆ

ಯನ್ನು ಮಾಡುತ್ತ ದೃಢವಾದ ನಿಯಮದಿಂದ ಮತ್ತೊಬ್ಬರಿಗೆ ಅಶಕ್ಯವಾದ ಘೋರವಾದ ತಪಸ್ಸನ್ನು ಮಾಡುತ್ತಿರುವನೆಂದೂ, ಈ ಪ್ರಕಾರ ಘೋರವಾದ ತಪಸ್ಸನ್ನು ಪೂರ್ವದಲ್ಲಿ ಯಾರೂ ಮಾಡಲಿಲ್ಲವೆಂದೂ, ಧರ್ಮಪುರುಷನೇ ಈ ಪ್ರಕಾರವಾಗಿ ಶರೀರವನ್ನು ಧರಿಸಿಕೊಂಡು ಏಕಾಕಿಯಾಗಿ ತಪಸ್ಸು ಮಾಡುತ್ತಿರುವಂತೆ ಆತನು ಕಾಣಿಸುತ್ತಿರುವನೆಂದೂ ಕೇಳಿ, ಪ್ರಿಯಭ್ರಾತೃವಾದ ಅರ್ಜುನನನ್ನು ನೆನೆದುನೆನೆದು, ಈ ಘೋರವಾದ ಅರಣ್ಯದಲ್ಲಿ ನಮಗೆ ಯಾರು ರಕ್ಷಕರು ಎಂದು ವ್ಯಸನಪಡುತ್ತ, ಮನಸ್ಸಿನಲ್ಲಿ ತಲ್ಲಣಗೊಂಡು, ದಿವ್ಯಜ್ಞಾನಸಂಪನ್ನರಾದ ಬ್ರಾಹ್ಮಣರ ಮುಖದಿಂದ ಆಗಾಗ್ಯೆ ಅರ್ಜುನನ ವೃತ್ತಾಂತವನ್ನೇ ಕೇಳುತ್ತಿದ್ದನು—ಎಂದು ವೈಶಂಪಾಯನಮುನೀಂದ್ರನು ಜನಮೇಜಯರಾಯನಿಗೆ ವಿವರಿಸಿದನು.

---

## ೮೦ನೇ ಅಧ್ಯಾಯ.—ಅರ್ಜುನನು ಬರಲಿಲ್ಲವೆಂದು ಭೀಮಾದಿಗಳು ಚಿಂತಿಸುವಿಕೆ.

ಅನಂತರದಲ್ಲಿ ಜನಮೇಜಯರಾಯನು ವೈಶಂಪಾಯನಮುನೀಶ್ವರನನ್ನು ಕುರಿತು "ಎಲೈ ಮುನೀಂದ್ರನೆ, ನಮ್ಮ ಪ್ರಪಿತಾಮಹನಾದ ಅರ್ಜುನನು ಕಾಮ್ಯಕವನದಿಂದ ಹೊರಟು ಹೋಗಲು, ಆತನನ್ನು ಅಗಲಿದ ಪಾಂಡವರು ಏನು ಮಾಡಿದರು? ದೇವತೆಗಳಿಗೆ ನಾರಾಯಣನು ಹ್ಯಾಗೆ ರಕ್ಷಕನೋ ಹಾಗೆ ಶತ್ರುಸಂಹಾರಕನಾದ ಅರ್ಜುನನು ಪಾಂಡವರಿಗೆ ರಕ್ಷಕನಾದವನಲ್ಲವೆ? ಇಂದ್ರನಿಗೆ ಸಮಾನವಾದ ಪರಾಕ್ರಮವುಳ್ಳವನಾಗಿಯೂ ಯುದ್ಧದಲ್ಲಿ ಹಿಮ್ಮೆಟ್ಟದವನಾಗಿಯೂ ಇರುವ ಅರ್ಜುನನನ್ನು ಅಗಲಿ ನಮ್ಮ ಪಿತಾಮಹರಾದ ಪಾಂಡವರು ಆ ವನದಲ್ಲಿ ಇದ್ದ ಬಗೆ ಹ್ಯಾಗೆ?" ಎನಲು, ವೈಶಂಪಾಯನಮುನೀಶ್ವರನು—ಎಲೈ ರಾಯನೆ, ಶೂರನಾದ ಅರ್ಜುನನು ಕಾಮ್ಯಕವನದಿಂದ ದಿವ್ಯಾಸ್ತ್ರಗಳನ್ನು ಸಂಪಾದಿಸುವದಕ್ಕೋಸ್ಕರ ಹೊರಟು ಹೋಗಲು, ಪಾಂಡವರು ದುಃಖಪಡುತ್ತ, ರೆಕ್ಕೆ ಮುರಿದ ಪಕ್ಷಿಗಳಹಾಗೂ, ಧಾರವು ಕಿತ್ತುಹೋದ ಮುತ್ತಿನ ಸರದಂತೆಯೂ ಶೋಭಿಸದೆ, ಸಂತೋಷರಹಿತರಾಗಿ ಆ ವನದಲ್ಲಿ ವಾಸಮಾಡುತ್ತಿದ್ದರು. ಆಗ ಕುಬೇರನಿಂದ ರಹಿತವಾದ ಚೈತ್ರರಥವೆಂಬ ವನವು ಹ್ಯಾಗೆ ಶೋಭಿಸದಿರುವದೋ ಹಾಗೆ, ಶೂರನಾದ ಅರ್ಜುನನಿಂದ ರಹಿತವಾದ ಆ ಕಾಮ್ಯಕವನವು ಪ್ರಕಾಶಿಸದೆ ಇತ್ತು. ಆಗ ಪರಾಕ್ರಮಶಾಲಿಗಳಾದ ಪಾಂಡವರು ಬ್ರಾಹ್ಮಣರ ನಿಮಿತ್ತವಾಗಿ ಶುದ್ಧವಾದ ಬಾಣಗಳಿಂದ ಆಹಾರಕ್ಕೆ ಯೋಗ್ಯವಾದ ಶ್ರೇಷ್ಠವಾದ ಮೃಗಗಳನ್ನು ಸಂಹರಿಸಿ, ಅವುಗಳ ಮಾಂಸವನ್ನೂ ಕಂದಮೂಲಫಲಗಳನ್ನೂ ತಂದು ಯಜ್ಞಾರ್ಥವಾಗಿ ಬ್ರಾಹ್ಮಣರಿಗೆ ಕೊಟ್ಟು, ತಾವೂ ಆ ಮಾಂಸವನ್ನೂ ಕಂದಮೂಲಫಲಗಳನ್ನೂ ಆಹಾರಮಾಡುತ್ತ, ವ್ಯಸನದಿಂದಲೇ ಆ ವನದಲ್ಲಿ ವಾಸಮಾಡುತ್ತಿದ್ದರು. ಆಗ ವಿಶೇಷವಾಗಿ ದ್ರೌಪದಿಯು ತನ್ನ ಮಧ್ಯಮಪತಿಯಾದ ಅರ್ಜುನನನ್ನು ಪದೇಪದೇ ಸ್ಮರಿಸಿಕೊಂಡು, ಪಾಂಡವರಿಗೆ ಅಗ್ರಜನಾದ ಧರ್ಮರಾಯನನ್ನು ಕುರಿತು 'ಮಹಾರಾಜನೆ, ಎರಡು ಬಾಹುಗಳುಳ್ಳವನಾದಾಗ್ಯೂ ಸಹಸ್ರ ಬಾಹುಗಳುಳ್ಳ ಕಾರ್ತವೀರ್ಯಾರ್ಜುನನಿಗೆ ಸಮಾನನಾದ ಅರ್ಜುನನು ಇಲ್ಲದಿರುವದರಿಂದ, ಈ ವನವೂ ಈ ಪ್ರದೇಶಗಳೆಲ್ಲವೂ ಶೂನ್ಯವಾಗಿ ಕಾಣಿಸುತ್ತಿರುವವು. ಬಹಳ ಆಶ್ಚರ್ಯಕರವಾಗಿ ಪುಷ್ಪಿಸಿರುವ ವೃಕ್ಷಗಳಿಂದ ರಮಣೀಯವಾದ ಈ ವನವು ನೀಲಮೇಘಶ್ಯಾಮನಾಗಿಯೂ, ಮದಿಸಿದ ಆನೆಯಂಥ ನಡಿಗೆಯುಳ್ಳವನಾಗಿಯೂ, ಕಮಲದಳದಂತೆ ನೇತ್ರಗಳುಳ್ಳವನಾಗಿಯೂ ಇರುವ ಅರ್ಜುನನು ಇದ್ದರೆ ಹ್ಯಾಗೆ ಶೋಭಿಸುತ್ತಿತ್ತೋ ಹಾಗೆ, ಈಗ ಶೋಭಿಸದೆ ಇರುವದು. ಯಾವ ಅರ್ಜುನನ ಧನುಷ್ಟಂಕಾರಧ್ವನಿಯು ಸಿಡಿಲಿನ ಧ್ವನಿಯಂತೆ ಕೇಳಿಸುತ್ತಿತ್ತೋ, ಅಂಥ ಸವ್ಯಸಾಚಿಯಾದ ಅರ್ಜುನನನ್ನು ಸ್ಮರಿಸಿಕೊಂಡು ನಾನು ಸ್ವಲ್ಪವಾದರೂ ಸುಖವನ್ನು ಹೊಂದದಿರುವೆನು' ಎಂದು ನುಡಿದಳು.

ಹೀಗೆ ದ್ರೌಪದಿಯು ದೀನಳಾಗಿ ಮಾತನಾಡುವದನ್ನು ಕೇಳಿ ಭೀಮಸೇನನು ಆಕೆಯನ್ನು ಕುರಿತು 'ಎಲೈ ಮಂಗಳಾಂಗಿಯೆ, ನೀನಾಡತಕ್ಕ ಮಾತುಗಳನ್ನು ಕೇಳಿದರೆ ನನ್ನ ಮನಸ್ಸಿಗೆ ಅಮೃತಪಾನಮಾಡಿದರೆ ಎಷ್ಟು ಸಂತೋಷವಾಗುವದೋ ಅಷ್ಟು ಸಂತೋಷವಾಗುವದು. ಯಾವ ಅರ್ಜುನನ ಬಾಹುಗಳು ದೀರ್ಘವಾಗಿಯೂ ಸಮವಾಗಿಯೂ ದಪ್ಪವಾಗಿಯೂ ಲಾಳಮುಂಡಿಗೆಗೆ ಸಮಾನವಾಗಿಯೂ ಧನುಸ್ಸಿನ ಹೆದೆಯನ್ನು ಎಳೆಯುವದರಿಂದ

ಜೆಡ್ಡುಗಟ್ಟಿ ಖಡ್ಗಾಯುಧವನ್ನೂ ಧನುಸ್ಸನ್ನೂ ಧರಿಸಿ ಸುವರ್ಣಮಯವಾದ ಬಾಹುಪುರಿಗಳಿಂದ ಅಲಂಕೃತವಾಗಿ ಐದು ತಲೆಗಳುಳ್ಳ ಘಟಸರ್ಪದಂತೆ ಪ್ರಕಾಶಿಸುವನೋ, ಅಂಥ ಅರ್ಜುನನು ಇಲ್ಲದಿರುವದರಿಂದ ಈ ಕಾಮ್ಯಕವನವು ಸೂರ್ಯನಿಲ್ಲದ ಅಂತರಿಕ್ಷದಂತೆ ಕಾಂತಿಹೀನವಾಗಿರುವದು. ಮಹಾಬಾಹುವಾದ ಯಾವ ಅರ್ಜುನನನ್ನು ಆಶ್ರಯಿಸಿ ಪಾಂಚಾಲರೂ ಕೌರವರೂ ಸಹ ಯುದ್ಧದಲ್ಲಿ ಸಮರ್ಥರಾದ ದೇವತೆಗಳಿಗೂಕೂಡ ಭಯಪಡದಿರುವರೋ, ಯಾವ ಅರ್ಜುನನ ಬಾಹುಬಲವನ್ನಾಶ್ರಯಿಸಿ ನಾವು ಸಕಲರಾದ ಶತ್ರುಗಳನ್ನೂ ಸಂಹಾರಮಾಡಿ ಭೂಮಂಡಲವೆಲ್ಲವನ್ನೂ ಸಂಪಾದಿಸುವೆವೆಂದು ತಿಳಿದುಕೊಂಡಿದ್ದೆವೋ, ಅಂಥ ಶೂರನಾದ ಅರ್ಜುನನು ಈಗ ಇಲ್ಲಿ ಇಲ್ಲದಿರುವದರಿಂದ, ಈ ಕಾಮ್ಯಕವನದಲ್ಲಿ ನಾನೂಕೂಡ ಧೈರ್ಯಹೀನನಾಗಿರುವೆನು. ಎಲ್ಲಾ ದಿಕ್ಕುಗಳೂ ಅಂಧಕಾರ ಕವಿದಂತೆ ಕಾಣಿಸುತ್ತಿರುವವು' ಎಂದು ನುಡಿದನು.

ಬಳಿಕ ನಕುಲನು ಕಂಬನಿಗಳನ್ನು ತುಂಬಿ ಗದ್ಗದಸ್ವರವುಳ್ಳವನಾಗಿ, 'ಯಾವ ಅರ್ಜುನನು ಯುದ್ಧರಂಗದಲ್ಲಿ ನಡೆಯಿಸಿದ ದಿವ್ಯವಾದ ಯುದ್ಧವಿಶೇಷಗಳನ್ನು ದೇವತೆಗಳೂಕೂಡ ಶ್ಲಾಘಿಸುತ್ತಿರುವರೋ, ಅಂಥ ಅರ್ಜುನನು ಈಗ ಇಲ್ಲಿ ಇಲ್ಲದಿರುವದರಿಂದ ಯಾರ ಮನಸ್ಸಿಗೆತಾನೇ ಸಂತೋಷವಿರುವದು? ಶೂರನಾದ ಯಾವ ಅರ್ಜುನನು ದಿಗ್ವಿಜಯಕಾಲದಲ್ಲಿ ಉತ್ತರದಿಕ್ಕಿಗೆ ಹೋಗಿ, ಶೂರರಾದ ಅನೇಕಸಹಸ್ರ ಗಂಧರ್ವರನ್ನು ಜಯಿಸಿ, ಅವರಿಂದ ವಿಚಿತ್ರವಾದ ವರ್ಣಗಳುಳ್ಳವುಗಳಾಗಿಯೂ ವಾಯುವೇಗ ಮನೋವೇಗಗಳಿಗೆ ಸಮಾನವಾದ ವೇಗವುಳ್ಳವುಗಳಾಗಿಯೂ ಇರುವ ಅನೇಕ ಕುದುರೆಗಳನ್ನು ಕಪ್ಪವಾಗಿ ತೆಗೆದುಕೊಂಡುಬಂದು, ರಾಜಸೂಯಯಾಗದಲ್ಲಿ ತಮ್ಮ ಅಣ್ಣನಾದ ಧರ್ಮರಾಯನಿಗೆ ಪ್ರೀತಿಯಿಂದ ಒಪ್ಪಿಸಿದನೋ, ಅಂಥ ಗಾಂಡೀವಧನುರ್ಧಾರಿಯೂ ಭೀಮಸೇನನಿಗೆ ತಮ್ಮನೂ ಆದ ಇಂದ್ರನಿಗೆ ಸಮಾನನಾದ ಅರ್ಜುನನು ಈಗ ಇಲ್ಲಿ ಇಲ್ಲದಿರುವದರಿಂದ, ಈ ಕಾಮ್ಯಕವನದಲ್ಲಿ ವಾಸಮಾಡುವದಕ್ಕೆ ನನಗೆ ಅಪೇಕ್ಷೆಯಿಲ್ಲವು' ಎನಲು, ಬಳಿಕ ಸಹದೇವನು 'ಯಾವ ಅರ್ಜುನನು ದಿಗ್ವಿಜಯವನ್ನು ಮಾಡಿಕೊಂಡು, ಅನೇಕ ದ್ರವ್ಯಗಳನ್ನೂ ಅನೇಕಮಂದಿ ಕನ್ಯೆಯರನ್ನೂ ತೆಗೆದುಕೊಂಡು ಬಂದು ರಾಜಸೂಯಯಾಗದಲ್ಲಿ ಧರ್ಮರಾಯನಿಗೆ ಒಪ್ಪಿಸಿದನೋ, ಮತ್ತು ಶ್ರೀಕೃಷ್ಣನ ಸಮ್ಮತಿಯಿಂದ ಸುಭದ್ರೆಯನ್ನು ಅಪಹರಿಸಿ ಯುದ್ಧದಲ್ಲಿ ಗುಂಪುಕೂಡಿ ಬಂದ ಯಾದವರನ್ನು ಜಯಿಸಿದನೋ, ಅಂಥ ಅರ್ಜುನನ ಪೀಠವು ನಮ್ಮ ಪರ್ಣಶಾಲೆಯಲ್ಲಿ ಬರಿದಾಗಿರುವದನ್ನು ನೋಡಿದರೆ, ನನ್ನ ಮನಸ್ಸು ಸ್ವಲ್ಪವೂ ಸಮಾಧಾನವನ್ನು ಹೊಂದದಿರುವದು. ಅರ್ಜುನನು ಇಲ್ಲದಿರುವ ಈ ಕಾಮ್ಯಕವನವು ವಾಸಮಾಡುವದಕ್ಕೆ ರಮಣೀಯವಾಗಿಲ್ಲದ್ದರಿಂದ, ನಾವು ಈ ವನದಿಂದ ಮತ್ತೊಂದು ವನಕ್ಕೆ ಹೋಗುವದು ಯುಕ್ತವೆಂದು ನನಗೆ ತೋರುವದು' ಎಂದು ನುಡಿದನು.

## ೮೧ನೇ ಅಧ್ಯಾಯ.—ತೀರ್ಥಯಾತ್ರಾಪ್ರಶಂಸೆ—(ನಾರದಯುಧಿಷ್ಠಿರ ಸಂವಾದ.)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು "ಕೇಳು ಜನಮೇಜಯರಾಯನೆ, ಹಾಗೆ ಭೀಮ ನಕುಲಸಹದೇವರು ದ್ರೌಪದಿಯೊಡನೆ ಅರ್ಜುನನ್ನು ನೆನೆದು ಕಳವಳಪಡುತ್ತ ಆಡತಕ್ಕ ಮಾತುಗಳನ್ನು ಕೇಳಿ ಧರ್ಮರಾಯನು ಚಿಂತೆಪಡುತ್ತಿದ್ದನು. ಆಗ ಹೋಮ ಮಾಡಿದ ಅಗ್ನಿಯಂತೆ ಪ್ರಕಾಶಮಾನನಾಗಿ ಬ್ರಹ್ಮತೇಜಸ್ಸಿನಿಂದ ಮೆರೆಯುತ್ತ, ಮಹಾತ್ಮನಾದ ದೇವಋಷಿಯಾದ ನಾರದನು ಅಲ್ಲಿಗೆ ಬರಲು, ಆತನನ್ನು ನೋಡಿ ಧರ್ಮರಾಯನು ತಮ್ಮಂದಿರೊಡನೆ ಎದ್ದು ಪೂಜೆಯನ್ನು ಮಾಡಿ, ದೇವತೆಗಳಿಂದ ಪರಿವೇಷ್ಟಿತನಾದ ಇಂದ್ರನಂತೆ ತಮ್ಮಂದಿರೊಡಗೂಡಿ ಪ್ರಕಾಶಿಸಿದನು. ಆ ಕಾಲದಲ್ಲಿ ದ್ರುಪದಪುತ್ರಿಯಾದ ದ್ರೌಪದಿಯು ಸೂರ್ಯಪ್ರಭೆಯು ಮೇರುಪರ್ವತವನ್ನು ಹ್ಯಾಗೆ ಅನುಸರಿಸಿರುವದೋ, ಸಾವಿತ್ರೀದೇವಿಯು ವೇದಗಳನ್ನು ಹ್ಯಾಗೆ ಅನುಸರಿಸಿರುವಳೋ ಹಾಗೆ, ತನ್ನ ಪತಿಗಳಾದ ಧರ್ಮರಾಯ ಮೊದಲಾದವರನ್ನು ಕ್ಷಣಮಾತ್ರವೂ ಬಿಡದೆ ಧರ್ಮದಿಂದ ಅನುವರ್ತಿಸಿಕೊಂಡಿದ್ದಳು. ಆ ವೇಳೆಯಲ್ಲಿ ನಾರದಮಹರ್ಷಿಯು ಧರ್ಮರಾಯನು ಮಾಡಿದ ಪೂಜೆಯನ್ನು ಸ್ವೀಕರಿಸಿ,

ಮಹಾತ್ಮನಾದ ಆತನನ್ನು ಒಳ್ಳೇ ಮಾತುಗಳಿಂದ ಸಮಾಧಾನಪಡಿಸಿ 'ಎಲೈ ಧರ್ಮರಾಯನೆ, ಈಗ ನಿನಗೆ ನಾನು ಏನು ಕೊಡಲಿ? ಹೇಳು' ಎನಲು, ಅದನ್ನು ಕೇಳಿ ಧರ್ಮರಾಯನು ತಮ್ಮಂದಿರೊಡಗೂಡಿ ಮಹಾತ್ಮನಾದ ನಾರದನಿಗೆ ನಮಸ್ಕಾರಮಾಡಿ ಕೈಮುಗಿದುಕೊಂಡು 'ಎಲೈ ಮಹಾನುಭಾವನೆ, ಲೋಕಪೂಜ್ಯನಾದ ನೀನು ಸಂತುಷ್ಟನಾದರೆ, ನಿನ್ನ ಅನುಗ್ರಹದಿಂದ ನನ್ನ ಕಾರ್ಯವೆಲ್ಲಾ ನೆರವೇರಿತೆಂದು ನಾನು ತಿಳಿಯುತ್ತೇನೆ. ನೀನು ತಮ್ಮಂದಿರೊಡಗೂಡಿದ ನನ್ನಲ್ಲಿ ಅನುಗ್ರಹ ಮಾಡಬೇಕೆಂದು ಅಪೇಕ್ಷಿಸಿದರೆ, ನನ್ನ ಮನಸ್ಸಿನಲ್ಲಿರತಕ್ಕ ಸಂಶಯವನ್ನು ಪರಿಹರಿಸು. ತೀರ್ಥಯಾತ್ರೆಯಲ್ಲಿ ಆಸಕ್ತನಾದ ಪುರುಷನು ಭೂಮಂಡಲವನ್ನು ಸಂಚರಿಸುವನಷ್ಟೆ? ಅದರಿಂದ ಯಾವ ಫಲವುಂಟಾಗುವದೋ ಅದನ್ನು ನನಗೆ ತಿಳುಹಿಸು' ಎಂದು ಕೇಳಿದನು.

ಆ ಮಾತನ್ನು ಕೇಳಿ ನಾರದಮಹರ್ಷಿಯು 'ಎಲೈ ರಾಯನೆ, ಪೂರ್ವದಲ್ಲಿ ಪುಲಸ್ತ್ಯಮಹರ್ಷಿಯ ದೆಸೆಯಿಂದ ಬುದ್ಧಿಶಾಲಿಯಾದ ಭೀಷ್ಮನು ತೀರ್ಥಯಾತ್ರಾ ಫಲವನ್ನು ಕೇಳಿರುವನು; ಅದನ್ನು ನಿನಗೆ ತಿಳುಹಿಸುವೆನು; ಮನಸ್ಸಮಾಧಾನಮಾಡಿಕೊಂಡು ಕೇಳು: ಪೂರ್ವದಲ್ಲಿ ಧರ್ಮಾತ್ಮನಾದ ಭೀಷ್ಮನು ಪಿತೃಗಳ ನಿಮಿತ್ತವಾಗಿ ವ್ರತವನ್ನು ಧರಿಸಿ, ಋಷಿಗಳೊಡಗೂಡಿ ದೇವಋಷಿ ಗಂಧರ್ವರಿಂದ ಸೇವಿತವಾದ ಪುಣ್ಯತಮವಾದ ಗಂಗಾದ್ವಾರಕ್ಷೇತ್ರದಲ್ಲಿ ವಾಸಮಾಡುತ್ತ, ಶಾಸ್ತ್ರೋಕ್ತವಾಗಿ ದೇವಋಷಿ ಪಿತೃತರ್ಪಣಗಳನ್ನು ಮಾಡಿಕೊಂಡಿದ್ದನು. ಹೀಗೆ ಕೆಲವು ಕಾಲವಾಗಲು, ಒಂದಾನೊಂದು ದಿವಸ, ತಾನು ಜಪಮಾಡುವ ಕಾಲದಲ್ಲಿ ಬ್ರಹ್ಮತೇಜಸ್ಸಿನಿಂದ ಪ್ರಕಾಶಮಾನನಾಗಿಯೂ, ಘೋರವಾದ ತಪಸ್ಸನ್ನು ಮಾಡಿದವನಾಗಿಯೂ, ಅದ್ಭುತಾಕಾರನಾಗಿಯೂ ಇರುವ ಪುಲಸ್ತ್ಯಮಹರ್ಷಿಯು ಅಲ್ಲಿಗೆ ಬಂದದ್ದನ್ನು ನೋಡಿ, ಆಶ್ಚರ್ಯವನ್ನೂ ಸಂತೋಷವನ್ನೂ ಸಹ ಹೊಂದಿ, ಶಾಸ್ತ್ರೋಕ್ತವಾಗಿ ಅರ್ಘ್ಯಪಾದ್ಯಾಚಮನೀಯಗಳಿಂದ ಆತನನ್ನು ಪೂಜಿಸಿ, ವಂದನೆಯನ್ನು ಮಾಡಿ ಮನಶ್ಚಾಂಚಲ್ಯವಿಲ್ಲದೆ 'ಎಲೈ ಮಹಾನುಭಾವನೆ ನಾನು ಭೀಷ್ಮನು; ತಮಗೆ ದಾಸನಾಗಿರುವೆನು. ತಮ್ಮ ದರ್ಶನಮಾತ್ರದಿಂದ ನನ್ನ ಸಕಲಪಾಪವೂ ಪರಿಹಾರವಾಯಿತು' ಎಂದು ನುಡಿದು, ಕೈ ಮುಗಿದುಕೊಂಡು ಸುಮ್ಮನೆ ನಿಂತಿರಲು, ಆ ಪುಲಸ್ತ್ಯಋಷಿಯು ವ್ರತನಿಷ್ಠನಾಗಿ ವೇದಾಧ್ಯಯನದಿಂದ ಕೃಶನಾದ ಕುರುಕುಲಶ್ರೇಷ್ಠನಾದ ಭೀಷ್ಮನನ್ನು ನೋಡಿ ಮನಸ್ಸಿನಲ್ಲಿ ಸಂತೋಷಪಟ್ಟನು' ಎಂದು ನಾರದನು ಧರ್ಮರಾಯನಿಗೆ ಹೇಳಿದನು."

## ೮೨ನೇ ಅಧ್ಯಾಯ.–ತೀರ್ಥಯಾತ್ರಾಪ್ರಶಂಸೆ (ನಾರದ ಯುಧಿಷ್ಠಿರ ಸಂವಾದವು).

ವೈಶಂಪಾಯನಮುನೀಶ್ವರು ಜನಮೇಜಯರಾಯನನ್ನು ಕುರಿತು–ಕೇಳು ಜನಮೇಜಯರಾಯನೆ, ನಾರದನು ಧರ್ಮರಾಯನನ್ನು ಕುರಿತು "ಎಲೈ ಧರ್ಮರಾಯನೆ, ಆಗ ಪುಲಸ್ತ್ಯನು ಭೀಷ್ಮನನ್ನು ಕುರಿತು 'ಎಲೈ ಧರ್ಮಜ್ಞನಾದ ಭೀಷ್ಮನೆ, ನಿನ್ನ ವಿನಯದಿಂದಲೂ ಶಮದಮಾದಿ ಗುಣಗಳಿಂದಲೂ ಸತ್ಯದಿಂದಲೂ ವ್ರತಾನುಷ್ಠಾನದಿಂದಲೂ ನಾನು ಬಹಳವಾಗಿ ಸಂತುಷ್ಟನಾದೆನು. ನೀನು ಪಿತೃಭಕ್ತಿಯಿಂದ ಇಂಥ ಧರ್ಮವನ್ನು ಆಚರಿಸುವೆಯಾದಕಾರಣ, ನನ್ನನ್ನು ನೋಡಿದೆ. ನನಗೂ ನಿನ್ನಲ್ಲಿ ಅಧಿಕವಾದ ಪ್ರೀತಿಯುಂಟಾಗಿರುವದು. ನನ್ನ ದರ್ಶನವು ನಿಷ್ಫಲವಾಗತಕ್ಕದಲ್ಲ. ನನ್ನಿಂದ ನಿನಗೆ ಏನಾಗಬೇಕೋ ಹೇಳು. ನೀನು ಬೇಡಿದ್ದನ್ನು ನಾನು ಕೊಡುತ್ತೇನೆ' ಎನಲು, ಭೀಷ್ಮನು 'ಎಲೈ ಮಹಾನುಭಾವನೆ, ಲೋಕಪೂಜ್ಯನಾದ ನಿನ್ನ ದರ್ಶನವಾದ್ದರಿಂದಲೂ, ನೀನು ಸಂತುಷ್ಟನಾದ್ದರಿಂದಲೂ, ನನ್ನ ಕಾರ್ಯವೆಲ್ಲಾ ಕೈಗೂಡಿತೆಂದು ನಾನು ಭಾವಿಸುವೆನು. ಧರ್ಮಜ್ಞನಾದ ನೀನು ನನ್ನಲ್ಲಿ ಅನುಗ್ರಹ ಮಾಡತಕ್ಕವನಾದರೆ, ನನ್ನ ಸಂಶಯವನ್ನು ಪರಿಹರಿಸು. ಈಗ ತೀರ್ಥಯಾತ್ರಾ ವಿಷಯದಲ್ಲಿ ನನ್ನ ಮನಸ್ಸಿಗೆ ಏನೋ ಒಂದು ಧರ್ಮಸಂಶಯ ಉಂಟಾಗಿರುವದು. ಅದನ್ನು ನಿನ್ನ ದೆಸೆಯಿಂದ ತಿಳಿದುಕೊಳ್ಳಬೇಕೆಂದು ಅಪೇಕ್ಷಿಸುವೆನು. ಯಾವ ಮನುಷ್ಯನು ತೀರ್ಥಯಾತ್ರಾ ನಿಮಿತ್ತವಾಗಿ ಭೂಪ್ರದಕ್ಷಿಣೆಯನ್ನು ಮಾಡುವನೋ, ಆದರಿಂದ ಆತನಿಗೆ ಯಾವ ಫಲವುಂಟಾಗುವದು? ಅದರ ಯಾಥಾರ್ಥ್ಯವನ್ನು ತಿಳುಹಿಸು' ಎಂದು ನುಡಿದನು.

ಅದನ್ನು ಕೇಳಿ ಪುಲಸ್ತ್ಯನು 'ಎಲೈ ಭೀಷ್ಮನೆ, ಋಷಿಗಳಿಗೆಲ್ಲಾ ಆಶ್ರಯವಾದ ತೀರ್ಥಗಳಿಂದ ಉಂಟಾಗ ತಕ್ಕ ಫಲಗಳನ್ನು ನಿನಗೆ ತಿಳುಹಿಸುವೆನು. ಅದನ್ನು ನೀನು ಏಕಾಗ್ರಚಿತ್ತನಾಗಿ ಕೇಳು. ಯಾವ ಮನುಷ್ಯನ ಕೈಗಳು ಪರರನ್ನು ಹಿಂಸೆಮಾಡದೆ ಇರುವವೋ, ಯಾವ ಮನುಷ್ಯನ ಪಾದಗಳು ಪರಿಶುದ್ಧವಾದ ಪ್ರದೇಶಗಳಲ್ಲಿ ಸಂಚರಿಸುವವೋ, ಯಾವ ಮನುಷ್ಯನ ಮನಸ್ಸು ಪರರಿಗೆ ಅನಿಷ್ಟವನ್ನು ಚಿಂತಿಸದೆ ಇರುವದೋ, ಯಾವ ಮನುಷ್ಯನು ಅಭ್ಯಾಸಮಾಡಿದ ವಿದ್ಯೆಯು ಬ್ರಹ್ಮಜ್ಞಾನಕ್ಕೆ ಸಾಧಕವಾಗಿರುವದೋ, ಯಾವ ಪುರುಷನ ತಪಸ್ಸು ಡಂಭರಹಿತವಾಗಿರುವದೋ, ಆ ಪುರುಷನೇ ತೀರ್ಥಯಾತ್ರಾಫಲವನ್ನು ಹೊಂದತಕ್ಕವನು. ಯಾವ ಪುರುಷನು ಪರರಿಂದ ದಾನವನ್ನು ತೆಗೆದುಕೊಳ್ಳದೆ ದೇವರು ತನಗೆ ಕೊಟ್ಟಿರುವ ದ್ರವ್ಯದಿಂದಲೇ ಸಂತುಷ್ಟನಾಗಿ ಅಹಂಕಾರ ಪಡದಿರುವನೋ ಆತನೇ ತೀರ್ಥಯಾತ್ರಾಫಲವನ್ನು ಹೊಂದತಕ್ಕವನು. ಯಾವ ಮನುಷ್ಯನು ಡಂಭವಿಲ್ಲದೆ ತನ್ನ ಜೀವನಕ್ಕಾಗಿ ವಿಶೇಷಪ್ರಯತ್ನವನ್ನು ಮಾಡದೆ ಪಾಪಕೃತ್ಯದಲ್ಲಿ ಪ್ರವರ್ತಿಸದೆ ಲಘುವಾಗಿ ಆಹಾರಮಾಡುತ್ತ ಜಿತೇಂದ್ರಿಯನಾಗಿರುವನೋ, ಆತನೇ ತೀರ್ಥಯಾತ್ರಾ ಫಲವನ್ನು ಹೊಂದತಕ್ಕವನು. ಎಲೈ ರಾಜೇಂದ್ರನೆ, ಯಾವ ಪುರುಷನು ಕೋಪರಹಿತನಾಗಿ ಸತ್ಯವನ್ನೇ ನುಡಿಯುತ್ತ ವ್ರತನಿಷ್ಠನಾಗಿ ಸಕಲ ಪ್ರಾಣಿಗಳಲ್ಲೂ ದಯಾಶಾಲಿಯಾಗಿರುವನೋ, ಆತನು ತೀರ್ಥಯಾತ್ರಾಫಲವನ್ನು ಹೊಂದುವನು. ವೇದೋಕ್ತವಾದ ಯಜ್ಞಗಳನ್ನು ಈ ಲೋಕದಲ್ಲಿ ಮಾಡತಕ್ಕ ವಿಧಾನವನ್ನೂ, ಅಂಥ ಯಜ್ಞಗಳನ್ನು ಮಾಡಿ ಮರಣವನ್ನು ಹೊಂದಿದವರಿಗೆ ಪರಲೋಕದಲ್ಲಿ ಯಾವಯಾವ ಫಲಗಳಾಗುವವೋ ಅವುಗಳನ್ನೂ ಸಹ ಋಷಿಗಳು ಹೇಳಿರುವರು. ಆ ಯಜ್ಞಗಳು ಬಹು ದ್ರವ್ಯಗಳಿಂದಲೂ ಅನೇಕ ಉಪಕರಣಗಳಿಂದಲೂ ಸಾಧ್ಯವಾದ್ದರಿಂದ, ದರಿದ್ರರಿಗೆ ಅಸಾಧ್ಯವಾಗಿರುವವು. ಅಂಥ ಯಜ್ಞಗಳು ಐಶ್ವರ್ಯವಂತರಾದ ರಾಜರಿಂದ ಮಾಡಲ್ಪಡತಕ್ಕವುಗಳಾಗಿರುವವೇ ಹೊರತು, ಸಹಾಯರಹಿತರಾಗಿಯೂ, ದ್ರವ್ಯಹೀನರಾಗಿಯೂ, ಬೇಕಾದ ಸಾಮಗ್ರಿಗಳಿಲ್ಲದಿರುವವರಾಗಿಯೂ, ಪತ್ನಿಯಿಲ್ಲದವರಾಗಿಯೂ, ದರಿದ್ರರಾಗಿಯೂ ಇರುವ ಪುರುಷರಿಂದ ಮಾಡುವದಕ್ಕೂ ಅವುಗಳ ಫಲವನ್ನು ಹೊಂದುವದಕ್ಕೂ ಅಶಕ್ಯವಾದವುಗಳು. ಎಲೈ ಭೀಷ್ಮನೆ, ಆದರೂ ಸರ್ವಜನಸಾಧಾರಣವಾಗಿ ಆ ಯಜ್ಞಫಲಕ್ಕೆ ಸಮಾನವಾದ ಫಲವನ್ನು ಹೊಂದುವದಕ್ಕೆ ಒಂದು ಉಪಾಯವಿರುವದು. ಅದನ್ನು ಹೇಳುವೆನು ಕೇಳು. ಇದು ಋಷಿಗಳಿಗೆ ಸಮ್ಮತವಾದದ್ದು, ಮತ್ತು ರಹಸ್ಯವಾಗಿ ಇಟ್ಟುಕೊಳ್ಳತಕ್ಕದ್ದು. ಪುಣ್ಯತಮವಾದ ತೀರ್ಥಯಾತ್ರೆಯನ್ನು ಮಾಡುವದರಿಂದ ಸಕಲವಾದ ಯಜ್ಞಫಲಗಳೂ ಪ್ರಾಪ್ತವಾಗುವವು. ಹರಿವಾಸರಗಳಲ್ಲಿ ಉಪವಾಸವನ್ನೂ ಮಾಡದೆ, ತೀರ್ಥಯಾತ್ರೆಯನ್ನೂ ಮಾಡದೆ, ಸುವರ್ಣವನ್ನೂ ಗೋವುಗಳನ್ನೂ ಬ್ರಾಹ್ಮಣರಿಗೆ ದಾನಮಾಡದೆ ಇರತಕ್ಕ ಪುರುಷನು ದರಿದ್ರನಾಗಿ ಹುಟ್ಟುವನು. ಯಾವ ಪುರುಷನು ನಿಯಮದಿಂದ ತೀರ್ಥಯಾತ್ರೆಯನ್ನು ಮಾಡುವನೋ ಆತನು, ವಿಶೇಷವಾದ ದಕ್ಷಿಣೆಗಳುಳ್ಳ ಅಗ್ನಿಷ್ಟೋಮ ಮೊದಲಾದ ಯಜ್ಞಗಳನ್ನು ಮಾಡಿದವನಿಗಿಂತಲೂ ಅಧಿಕವಾದ ಫಲವನ್ನು ಹೊಂದುವನು.

ಎಲೈ ಭೀಷ್ಮನೆ, ಮೂರುಲೋಕದಲ್ಲೂ ಪ್ರಸಿದ್ಧವಾದ ಪುಷ್ಕರವೆಂಬ ತೀರ್ಥವು ಭೂಲೋಕದಲ್ಲಿ ಪ್ರಖ್ಯಾತವಾಗಿರುವದು. ಅಲ್ಲಿ ದೇವದೇವನಾದ ಬ್ರಹ್ಮನು ವಾಸ ಮಾಡುತ್ತಿರುವನು. ಆ ತೀರ್ಥದಲ್ಲಿ ಅನೇಕಕೋಟಿ ತೀರ್ಥಗಳು ತ್ರಿಸಂಧ್ಯಾಕಾಲದಲ್ಲೂ ಸನ್ನಿಹಿತವಾಗಿರುವವು. ಆ ತೀರ್ಥದಲ್ಲಿ ದ್ವಾದಶಾದಿತ್ಯರೂ ಅಷ್ಟವಸುಗಳೂ ಏಕಾದಶರುದ್ರರೂ ಸಾಧ್ಯರೂ ಏಕೋನ ಪಂಚಾಶನ್ಮರುತ್ತುಗಳೂ ಗಂಧರ್ವರೂ ಅಪ್ಸರಸ್ಸುಗಳೂ ಸಹ ಸರ್ವದಾ ಸನ್ನಿಹಿತರಾಗಿರುವರು. ಅಲ್ಲಿ ಪುಣ್ಯಶಾಲಿಗಳಾದ ದೇವತೆಗಳೂ ದೈತ್ಯರೂ ಬ್ರಹ್ಮರ್ಷಿಗಳೂ ಯೋಗನಿಷ್ಠರಾಗಿ ತಪಸ್ಸನ್ನು ಮಾಡುತ್ತಿರುವರು. ಉದಾರವಾದ ಮನಸ್ಸುಳ್ಳ ಯಾವ ಪುರುಷನು ಆ ತೀರ್ಥವನ್ನು ಮನಸ್ಸಿನಿಂದಲಾದರೂ ಸ್ಮರಿಸುವನೋ ಆತನು ಸಕಲ ಪಾಪಗಳನ್ನೂ ಕಳೆದುಕೊಂಡು ಸ್ವರ್ಗಲೋಕದಲ್ಲಿ ಪೂಜ್ಯತೆಯನ್ನು ಪಡೆಯುವನು. ಆ ಪುಷ್ಕರತೀರ್ಥದಲ್ಲಿ ಕಮಲಾಸನನಾದ ಪೂಜ್ಯನಾದ ಚತುರ್ಮುಖಬ್ರಹ್ಮನು ನಿರಂತರವಲ್ಲೂ ಸಂತುಷ್ಟನಾಗಿ ವಾಸಮಾಡುತ್ತಿರುವನು. ಪೂರ್ವದಲ್ಲಿ ಅನೇಕಮಂದಿ ದೇವತೆಗಳೂ ಋಷಿಗಳೂ ಆ ಪುಷ್ಕರ

ತೀರ್ಥದಲ್ಲಿ ಉತ್ತಮವಾದ ಸಿದ್ಧಿಯನ್ನು ಪಡೆದು ಪುಣ್ಯಶಾಲಿಗಳಾಗಿರುವರು. ಪಿತೃಗಳನ್ನೂ ದೇವತೆಗಳನ್ನೂ ಪೂಜೆ ಮಾಡತಕ್ಕ ಪುರುಷನು ಆ ತೀರ್ಥದಲ್ಲಿ ಸ್ನಾನವನ್ನು ಮಾಡಿದ್ದೇ ಆದರೆ, ಆತನಿಗೆ ಹತ್ತು ಅಶ್ವಮೇಧಯಾಗಗಳನ್ನು ಮಾಡಿದಷ್ಟು ಫಲವುಂಟಾಗುವದೆಂದು ದೊಡ್ಡವರು ಹೇಳುವರು. ಯಾವನು ಪುಷ್ಕರಕ್ಷೇತ್ರದಲ್ಲಿ ವಾಸಮಾಡುತ್ತ ಒಬ್ಬ ಬ್ರಾಹ್ಮಣನಿಗಾದರೂ ಅನ್ನೋದಕವನ್ನು ಕೊಡುವನೋ, ಅಂಥವನು ಲೋಕಾಂತರವನ್ನು ಹೊಂದಿದ ಬಳಿಕ ಅತಿಶಯವಾದ ಸಂತೋಷವನ್ನು ಹೊಂದುವನು. ಆ ಕ್ಷೇತ್ರದಲ್ಲಿ ವಾಸಮಾಡತಕ್ಕವನು ತಾನು ಆಹಾರಮಾಡತಕ್ಕ ಗೆಡ್ಡೆಯನ್ನೇ ಆಗಲಿ ಫಲವನ್ನೇ ಆಗಲಿ ಶಾಕವನ್ನೇ ಆಗಲಿ ಅಸೂಯೆಯಿಲ್ಲದೆ ಆಸ್ತಿಕ್ಯಬುದ್ಧಿಯಿಂದ ಬ್ರಾಹ್ಮಣನಿಗೆ ಕೊಟ್ಟದ್ದೇ ಆದರೆ, ಆ ಪುಣ್ಯಪ್ರಭಾವದಿಂದ ಆತನು ಅಶ್ವಮೇಧಯಾಗದ ಫಲವನ್ನು ಪಡೆಯುವನು. ಪುಣ್ಯತಮವಾದ ಆ ತೀರ್ಥದಲ್ಲಿ ಬ್ರಾಹ್ಮಣನಾಗಲಿ ಕ್ಷತ್ರಿಯನಾಗಲಿ ವೈಶ್ಯನಾಗಲಿ ಶೂದ್ರನಾಗಲಿ ಸ್ನಾನಮಾಡಿದ್ದೇಆದರೆ, ಅಂಥವರಿಗೆ ಪುನರ್ಜನ್ಮವಿಲ್ಲದಿರುವದು. ಯಾವ ಪುರುಷನು ಕಾರ್ತಿಕಮಾಸದಲ್ಲಿ ಪುಷ್ಕರಕ್ಷೇತ್ರಕ್ಕೆ ಹೋಗುವನೋ, ಆ ಪುರುಷನು ವಿಶೇಷವಾಗಿ ಬ್ರಹ್ಮಲೋಕದಲ್ಲಿ ಅಕ್ಷಯವಾದ ಅನೇಕ ಪುಣ್ಯಲೋಕಗಳನ್ನುಹೊಂದುವನು. ಸ್ತ್ರೀಯಾಗಲಿ ಪುರುಷನಾಗಲಿ ಆ ಪುಷ್ಕರತೀರ್ಥದಲ್ಲಿ ಸಾಯಂಪ್ರಾತಃಕಾಲಗಳಲ್ಲಿ ಭಕ್ತಿಯಿಂದ ಆ ಕ್ಷೇತ್ರಾಭಿಮಾನಿಯಾದ ದೇವತೆಯನ್ನು ಸ್ಮರಿಸಿ ಸ್ನಾನಮಾಡಿದ್ದೇ ಆದರೆ, ಅಷ್ಟುಮಾತ್ರಕ್ಕೆ ಅಂಥವನು ಸಕಲ ತೀರ್ಥಸ್ನಾನಫಲವನ್ನೂ ಪಡೆದು ಜನ್ಮಪ್ರಭೃತಿ ಮಾಡಿದ ಪಾಪಗಳನ್ನೆಲ್ಲಾ ಕಳೆದುಕೊಳ್ಳುವನು. ದೇವತೆಗಳಿಗೆಲ್ಲಾ ನಾರಾಯಣನು ಹ್ಯಾಗೆ ಆದಿಮೂರ್ತಿಯೋ ಹಾಗೆ, ತೀರ್ಥಗಳಿಗೆಲ್ಲಾ ಈ ಪುಷ್ಕರತೀರ್ಥವು ಆದಿತೀರ್ಥವಾದದ್ದೆಂದು ದೊಡ್ಡವರು ಹೇಳುವರು. ಯಾವ ಪುರುಷನು ಪುಷ್ಕರಕ್ಷೇತ್ರದಲ್ಲಿ ನೇಮದಿಂದ ಶುಚಿರ್ಭೂತನಾಗಿ ಹನ್ನೆರಡುವರುಷ ವಾಸಮಾಡುವನೋ, ಅಂಥವನು ಸಕಲ ಯಜ್ಞಫಲಗಳನ್ನೂ ಹೊಂದಿ ಬ್ರಹ್ಮಲೋಕವನ್ನು ಹೊಂದುವನು. ಯಾವ ಪುರುಷನು ಪುಷ್ಕರಕ್ಷೇತ್ರದಲ್ಲಿ ಕಾರ್ತಿಕಮಾಸದಲ್ಲಿ ಒಂದು ತಿಂಗಳೂ ವಾಸಮಾಡುವನೋ, ಅಂಥವನು ನೂರುವರುಷ ಮಾಡಿದ ಅಗ್ನಿಹೋತ್ರದ ಫಲವನ್ನು ಹೊಂದುವನು. ಪರಿಶುದ್ಧವಾದ ಅರ್ಕಪುಷ್ಕರ ಚಂದ್ರಪುಷ್ಕರ ವಹ್ನಿಪುಷ್ಕರ ಎಂಬ ಮೂರುಪುಷ್ಕರಗಳೂ, ಗಂಗೆ ಯಮುನೆ ಸರಸ್ವತಿ ಎಂಬ ಮೂರುನದಿಗಳೂ ಸಹ ಅನಾದಿಸಿದ್ಧವಾಗಿರುವವು. ಇವುಗಳ ಮೂಲವನ್ನು ತಿಳಿಯುವದು ಅಶಕ್ಯವಾದದ್ದು. ಪುಷ್ಕರಕ್ಷೇತ್ರಕ್ಕೆ ಹೋಗುವದೂ ಅಲ್ಲಿ ವಾಸಮಾಡುವದೂ ಅಲ್ಲಿ ತಪಸ್ಸು ಮಾಡುವದೂ ಅಲ್ಲಿ ದಾನಮಾಡುವದೂ ಸಹ ದುಷ್ಕರಗಳಾದ ಕೆಲಸಗಳು. ವ್ರತಾಚರಣೆಯಿಂದ ಆಹಾರನಿಯಮವನ್ನು ಮಾಡಿಕೊಂಡು ಹನ್ನೆರಡುದಿವಸ ಪುಷ್ಕರಕ್ಷೇತ್ರದಲ್ಲಿ ವಾಸಮಾಡಿ, ಬಳಿಕ ದೇವಋಷಿ ಪಿತೃಗಳಿಂದ ಸೇವಿತವಾಗಿರುವ ಜಂಬೂಮಾರ್ಗವೆಂಬ ಪುಣ್ಯತೀರ್ಥಕ್ಕೆ ಪ್ರದಕ್ಷಿಣೆಯಾಗಿ ಹೋಗಿ, ಅಲ್ಲಿ ಸ್ನಾನಮಾಡಿ, ಅಲ್ಲೇ ಐದುರಾತ್ರಿ ವಾಸಮಾಡಿದ ಪುರುಷನು ಪರಿಶುದ್ಧಾತ್ಮನಾಗಿ, ದುರ್ಗತಿಯನ್ನು ಹೊಂದದೆ ಉತ್ತಮವಾದ ಸಿದ್ಧಿಯನ್ನೂ ಬೇಕಾದ ಇಷ್ಟಾರ್ಥಗಳನ್ನೂ ಪಡೆದು, ಅಶ್ವಮೇಧಯಾಗದ ಫಲವನ್ನು ಹೊಂದುವನು. ಆ ಜಂಬೂಮಾರ್ಗದಿಂದ ಹಿಂತಿರುಗಿ ತಂಡುಲಿಕಾಶ್ರಮಕ್ಕೆ ಹೋದ ಮನುಷ್ಯನು, ಎಂದಿಗೂ ದುರ್ಗತಿಯನ್ನು ಪಡೆಯದೆ ಬ್ರಹ್ಮಲೋಕವನ್ನು ಹೊಂದುವನು. ಅಲ್ಲಿಂದ ಮುಂದಕ್ಕೆ ಹೊರಟು ಅಗಸ್ತ್ಯಸರಸ್ಸೆಂಬ ಪುಣ್ಯತೀರ್ಥಕ್ಕೆ ಹೋಗಿ, ಪಿತೃಗಳಿಗೂ ದೇವತೆಗಳಿಗೂ ಪೂಜೆಮಾಡಿ, ಮೂರು ರಾತ್ರಿ ಅಲ್ಲಿ ಉಪವಾಸಮಾಡಿದವನು ಅಗ್ನಿಷ್ಟೋಮಯಜ್ಞದ ಫಲವನ್ನು ಪಡೆಯುವನು. ಅಲ್ಲಿ ಶಾಕಾಹಾರವನ್ನೇ ಆಗಲಿ ಫಲಾಹಾರವನ್ನೇ ಆಗಲಿ ಮಾಡಿಕೊಂಡಿದ್ದವನು ಕುಮಾರಸ್ವಾಮಿಯ ಲೋಕವನ್ನು ಹೊಂದುವನು. ಬಳಿಕ ಲೋಕಪೂಜ್ಯವೂ ಸಂಪದ್ಯುಕ್ತವೂ ಆದ ಕಣ್ವಾಶ್ರಮಕ್ಕೆ ಹೋಗಿ, ಪುಣ್ಯತಮವಾಗಿ ಪುರಾತನವಾಗಿರುವ ಧರ್ಮಾರಣ್ಯವನ್ನು ಪ್ರವೇಶಮಾಡಿ, ಅಲ್ಲಿ ಪಿತೃಗಳನ್ನೂ ದೇವತೆಗಳನ್ನೂ ಪೂಜಿಸಿ, ವ್ರತನಿಷ್ಠನಾಗಿ ಆಹಾರನಿಯಮವನ್ನು ಮಾಡಿದವನು ಸಕಲ ಪಾಪಗಳನ್ನೂ ಕಳೆದುಕೊಂಡು ಬೇಕಾದ ಇಷ್ಟಾರ್ಥಗಳನ್ನು ಕೊಡತಕ್ಕ ಯಜ್ಞದ ಫಲವನ್ನು ಹೊಂದುವನು. ಬಳಿಕ ಪ್ರದಕ್ಷಿಣೆಯಾಗಿ ಬಂದು, ಯಯಾತಿ ಪತನವೆಂಬ ಪುಣ್ಯಸ್ಥಳವನ್ನು ಪ್ರವೇಶಮಾಡಿದ್ದೇಆದರೆ, ಅಶ್ವಮೇಧಯಾಗದ ಫಲವನ್ನು ಹೊಂದುವನು. ಅಲ್ಲಿಂದ ನಿಯಮವಂತನಾಗಿ ಮಹಾಕಾಳವೆಂಬ ಕ್ಷೇತ್ರಕ್ಕೆ ಹೋಗಿ, ಆಹಾರನಿಯಮವನ್ನು ಮಾಡಿಕೊಂಡು, ಅಲ್ಲಿರುವ ಕೋಟಿತೀರ್ಥದಲ್ಲಿ ಸ್ನಾನಮಾಡಿದ್ದೇ ಆದರೆ, ಅಶ್ವಮೇಧ

ಯಜ್ಞದ ಫಲವನ್ನು ಪಡೆಯುವನು. ಅಲ್ಲಿಂದ ಸ್ಥಾಣುತೀರ್ಥಕ್ಕೆ ಹೋಗಿ, ಮೂರುಲೋಕದಲ್ಲೂ ಪ್ರಸಿದ್ಧನಾಗಿ ಅಲ್ಲಿರತಕ್ಕ ರುದ್ರವಟನೆಂಬ ಪರಮೇಶ್ವರನಿಗೆ ನಮಸ್ಕಾರಮಾಡಿದ್ದೇ ಆದರೆ, ಸಹಸ್ರಗೋದಾನ ಮಾಡಿದ್ದರಿಂದುಂಟಾಗತಕ್ಕ ಫಲವನ್ನು ಹೊಂದಿ, ಮಹಾದೇವನ ಅನುಗ್ರಹದಿಂದ ಸಂಪದ್ಯುಕ್ತವಾಗಿಯೂ ನಿಶ್ಯತ್ರುವಾಗಿಯೂ ಇರುವ ಪ್ರಮಥಗಣಾಧಿಪತ್ಯವನ್ನು ಪಡೆಯುವನು. ಅಲ್ಲಿಂದ ಮೂರುಲೋಕದಲ್ಲೂ ಪ್ರಸಿದ್ಧವಾದ ನರ್ಮದಾನದಿಗೆ ಹೋಗಿ ಸ್ನಾನಮಾಡಿ, ಪಿತೃಗಳಿಗೂ ದೇವತೆಗಳಿಗೂ ತರ್ಪಣವನ್ನು ಮಾಡಿದ್ದೇ ಆದರೆ, ಅಗ್ನಿಷ್ಟೋಮಯಜ್ಞದ ಫಲವನ್ನುಪಡೆಯುವನು. ಅಲ್ಲಿಂದ ದಕ್ಷಿಣಸಿಂಧುವಿಗೆ ಹೋಗಿ, ಬ್ರಹ್ಮಚರ್ಯದಿಂದ ಜಿತೇಂದ್ರಿಯನಾಗಿದ್ದ ಪುರುಷನು ಅಗ್ನಿಷ್ಟೋಮಫಲವನ್ನು ಹೊಂದಿ ದೇವತೆಗಳ ವಿಮಾನವನ್ನೇರುವನು. ಅಲ್ಲಿಂದ ಚರ್ಮಣ್ವತೀನದಿಗೆ ಹೋಗಿ, ಅಲ್ಲಿ ಆಹಾರನಿಯಮವನ್ನು ಮಾಡಿಕೊಂಡಿದ್ದು, ಅಲ್ಲಿರುವ ರಂತಿದೇವರಾಯನ ಅನುಜ್ಞೆಯನ್ನು ಪಡೆದವನು ಅಗ್ನಿಷ್ಟೋಮಯಜ್ಞದ ಫಲವನ್ನು ಪಡೆಯುವನು.

ಎಲೈ ಧರ್ಮಜ್ಞನಾದ ಭೀಷ್ಮನೆ, ಅಲ್ಲಿಂದ ಹಿಮವತ್ಪುತ್ರನಾದ ಅರ್ಬುದಪರ್ವತಕ್ಕೆ ಹೋಗಬೇಕು. ಆ ಸ್ಥಳದಲ್ಲೇ ಪಾತಾಳಲೋಕಕ್ಕೆ ಹೋಗುವದಕ್ಕಾಗಿ ಪೂರ್ವದಲ್ಲಿ ಬಿಲವಿತ್ತು. ಅಲ್ಲಿರುವ ತ್ರಿಲೋಕಪ್ರಸಿದ್ಧವಾದ ವಶಿಷ್ಠಾಶ್ರಮದಲ್ಲಿ ಒಂದು ರಾತ್ರಿ ಉಪವಾಸವನ್ನು ಮಾಡಿದ್ದೇ ಆದರೆ, ಸಹಸ್ರಗೋದಾನ ಮಾಡಿದ್ದರಿಂದುಂಟಾಗತಕ್ಕ ಫಲವನ್ನು ಪಡೆಯುವನು. ಅಲ್ಲಿಂದ ಪಿಂಗತೀರ್ಥಕ್ಕೆ ಹೋಗಿ, ಬ್ರಹ್ಮಚರ್ಯದಿಂದ ಜಿತೇಂದ್ರಿಯನಾಗಿ ಅಲ್ಲಿ ಸ್ನಾನಮಾಡಿದ್ದೇ ಆದರೆ, ನೂರು ಕಪಿಲಾಗೋದಾನ ಮಾಡಿದ್ದರಿಂದುಂಟಾಗತಕ್ಕ ಫಲವನ್ನು ಪಡೆಯುವನು. ಎಲೈ ರಾಜೇಂದ್ರನೆ, ಅಲ್ಲಿಂದ ಪ್ರಭಾಸತೀರ್ಥಕ್ಕೆ ಹೋಗಬೇಕು. ಅಲ್ಲಿ ವಾಯುಸಾರಥಿಯೂ ದೇವತೆಗಳಿಗೆ ಮುಖಭೂತನೂ ಆದ ಯಜ್ಞೇಶ್ವರನು ನಿರಂತರದಲ್ಲೂ ವಾಸಮಾಡುತ್ತಿರುವನು. ಆ ಪ್ರಭಾಸತೀರ್ಥದಲ್ಲಿ ನೇಮದಿಂದ ಶುಚಿರ್ಭೂತನಾಗಿ ಸ್ನಾನಮಾಡಿದವನು ಅಗ್ನಿಷ್ಟೋಮ ಅತಿರಾತ್ರಯಾಗಗಳ ಫಲವನ್ನು ಹೊಂದುವನು. ಅಲ್ಲಿಂದ ಸರಸ್ವತೀ ಸಾಗರಸಂಗಮಕ್ಕೆ ಹೋಗಿ, ಅಗ್ನಿಯಂತೆ ಪ್ರಕಾಶಮಾನವಾದ ಆ ತೀರ್ಥದಲ್ಲಿ ಸ್ನಾನಮಾಡಿ, ನೇಮದಿಂದ ದೇವಪಿತೃತರ್ಪಣವನ್ನು ಮಾಡಿ, ಮೂರುರಾತ್ರಿ ಅಲ್ಲಿ ವಾಸಮಾಡಿದ್ದೇ ಆದರೆ, ಆತನು ಚಂದ್ರನಂತೆ ಪ್ರಕಾಶಿಸುತ್ತ ಸಹಸ್ರ ಗೋದಾನದ ಫಲವನ್ನೂ ಅಶ್ವಮೇಧದ ಫಲವನ್ನೂ ಹೊಂದಿ ಸ್ವರ್ಗಸೌಖ್ಯವನ್ನು ಪಡೆಯುವನು. ಆ ಬಳಿಕ ವರದಾನತೀರ್ಥಕ್ಕೆ ಹೋಗಬೇಕು. ಅಲ್ಲಿ ದೂರ್ವಾಸಮಹರ್ಷಿಯು ವಿಷ್ಣುವಿಗೆ ವರವನ್ನು ಕೊಟ್ಟಿರುವನು. ಅಂಥ ತೀರ್ಥದಲ್ಲಿ ಸ್ನಾನಮಾಡಿದರೆ, ಸಹಸ್ರಗೋದಾನದ ಫಲವು ಲಭಿಸುವದು. ಅಲ್ಲಿಂದ ದ್ವಾರವತಿಗೆ ಹೋಗಿ, ಅಲ್ಲಿ ಆಹಾರನಿಯಮವನ್ನು ಮಾಡಿಕೊಂಡು ಪಿಂಡಾರಕತೀರ್ಥದಲ್ಲಿ ಸ್ನಾನವನ್ನು ಮಾಡಿದಂತವನಿಗೆ ಬಹು ಸುವರ್ಣಲಾಭವಾಗುವದು. ಆ ತೀರ್ಥದಲ್ಲಿ ಪದ್ಮಾಕಾರವಾದ ಲಕ್ಷಣವುಳ್ಳ ಮುದ್ರೆಗಳು ಈಗಲೂ ಕಾಣುತ್ತಿರುವವು. ಇದು ಆಶ್ಚರ್ಯಕರವಾದದ್ದು. ಆ ಸ್ಥಳದಲ್ಲಿ ತ್ರಿಶೂಲದ ಗುರುತುಗಳುಳ್ಳ ಪದ್ಮಗಳು ಕಾಣಿಸುತ್ತಿರುವವು. ಅಲ್ಲಿ ಯಾವಾಗಲೂ ಮಹಾದೇವನು ಸನ್ನಿಹಿತನಾಗಿರುವನು. ಬಳಿಕ ಸಿಂಧುಸಾಗರ ಸಂಗಮಕ್ಕೆ ಹೋಗಿ, ಅಲ್ಲಿ ಸಮುದ್ರಸ್ನಾನವನ್ನು ಮಾಡಿ, ನೇಮದಿಂದ ದೇವತೆಗಳಿಗೂ ಪಿತೃಗಳಿಗೂ ಋಷಿಗಳಿಗೂ ತರ್ಪಣವನ್ನುಮಾಡಿ, ಅಲ್ಲಿ ದಿವ್ಯತೇಜಸ್ಸಿನಿಂದ ಪ್ರಕಾಶಮಾನನಾದ ಶಂಕುಕರ್ಣೇಶ್ವರನನ್ನು ಪೂಜಿಸಿದವನು ಹತ್ತು ಅಶ್ವಮೇಧಯಜ್ಞಗಳ ಫಲವನ್ನು ಪಡೆದು ವರುಣಲೋಕವನ್ನು ಹೊಂದುವನೆಂದು ದೊಡ್ಡವರು ಹೇಳುವರು. ಅಲ್ಲಿಂದ ಪ್ರದಕ್ಷಿಣೆಯಾಗಿ ಹೊರಟು, ಮೂರುಲೋಕದಲ್ಲೂ ದಮಿಯೆಂದು ಪ್ರಸಿದ್ಧವಾದ ಸಕಲ ದೇವತೆಗಳಿಂದಲೂ ಸ್ತುತಿಸಲ್ಪಟ್ಟ ಪಾಪಪರಿಹಾರಕವಾದ ಪುಣ್ಯತೀರ್ಥವನ್ನು ಸೇರಿ, ಅಲ್ಲಿ ಸ್ನಾನಮಾಡಿ ಬ್ರಹ್ಮಾದಿಗಳಿಂದ ಪೂಜಿತನಾದ ಸಕಲದೇವತೆಗಳಿಂದಲೂ ಕೂಡಿರುವ ಮಹಾದೇವನನ್ನು ಪೂಜಿಸಿದವನು ಜನ್ಮಪ್ರಭೃತಿ ತಾನು ಮಾಡಿದ ಪಾಪವನ್ನೆಲ್ಲಾ ಕಳೆದುಕೊಂಡು ಅಶ್ವಮೇಧಯಜ್ಞದ ಫಲವನ್ನು ಪಡೆಯುವನು.

ಪೂರ್ವದಲ್ಲಿ ಪ್ರಭುವಾದ ಮಹಾವಿಷ್ಣುವು ದೈತ್ಯರನ್ನೂ ದಾನವರನ್ನೂ ಸಂಹರಿಸಿ, ಆ ಪುಣ್ಯತೀರ್ಥದಲ್ಲಿ ಸ್ನಾನಮಾಡಿದನು. ಎಲೈ ಭೀಷ್ಮನೆ, ಅಲ್ಲಿಂದ ಪುಣ್ಯತಮವಾದ ವಸುಧಾರೆಗೆ ಹೋದಮಾತ್ರಕ್ಕೆ ಅಶ್ವಮೇಧಫಲ

ವನ್ನು ಪಡೆಯುವನು. ಅಲ್ಲಿ ನೇಮದಿಂದ ಸ್ನಾನಮಾಡಿ ದೇವತೆಗಳಿಗೂ ಪಿತೃಗಳಿಗೂ ತರ್ಪಣವನ್ನು ಮಾಡಿದರೆ, ವಿಷ್ಣುಲೋಕದಲ್ಲಿ ಪೂಜ್ಯನಾಗುವನು. ಅಲ್ಲಿರತಕ್ಕ ವಸುಸರಸ್ಸೆಂಬ ತೀರ್ಥದಲ್ಲಿ ಸ್ನಾನಮಾಡಿ ಆ ವುದಕವನ್ನು ಪಾನಮಾಡಿದರೆ, ಅಷ್ಟವಸುಗಳ ಪ್ರೀತಿಗೆ ಪಾತ್ರನಾಗುವನು. ಅಲ್ಲಿಂದ ಸಿಂಧೂತ್ತಮವೆಂಬ ಸಕಲಪಾಪ ಪರಿಹಾರಕವಾದ ತೀರ್ಥಕ್ಕೆ ಹೋಗಿ ಅಲ್ಲಿ ಸ್ನಾನಮಾಡಿದರೆ, ಬಹು ಸುವರ್ಣಲಾಭವಾಗುವದು. ಅಲ್ಲಿಂದ ಭದ್ರತುಂಗಕ್ಕೆ ಹೋಗಿ ಶುಚಿರ್ಭೂತನಾಗಿ ಅಲ್ಲಿ ಸ್ನಾನಮಾಡಿದರೆ, ಬ್ರಹ್ಮಲೋಕದಲ್ಲಿ ಉತ್ತಮವಾದ ಗತಿಯನ್ನು ಪಡೆಯುವನು. ಅಲ್ಲಿಂದ ಸಿದ್ಧಪುರುಷರಿಂದ ಸೇವಿತವಾದ ಕುಮಾರಿಕಾತೀರ್ಥ ಶಕ್ರತೀರ್ಥಗಳಿಗೆ ಹೋಗಿ ಅಲ್ಲಿ ಸ್ನಾನಮಾಡಿದರೆ, ಸ್ವರ್ಗಲೋಕಸಾಖ್ಯವನ್ನು ಶೀಘ್ರವಾಗಿ ಪಡೆಯುವನು. ಅಲ್ಲಿಂದ ಸಿದ್ಧಪುರುಷರಿಂದ ಸೇವಿತವಾದ ರೇಣುಕಾತೀರ್ಥಕ್ಕೆ ಹೋಗಿ ಅಲ್ಲಿ ಸ್ನಾನಮಾಡಿದ ಪುರುಷನು ಚಂದ್ರನಂತೆ ನಿಷ್ಕಲ್ಮಷನಾಗಿ ಪ್ರಕಾಶಿಸುವನು. ಅನಂತರದಲ್ಲಿ ಪಂಚನದಕ್ಕೆ ಹೋಗಿ, ಆಹಾರನಿಯಮವನ್ನು ಮಾಡಿಕೊಂಡು ಅಲ್ಲಿ ಸ್ನಾನಮಾಡಿದರೆ, ಐದು ಯಜ್ಞದ ಫಲವನ್ನು ಹೊಂದುವನು. ಬಳಿಕ ಭೀಮಸ್ಥಾನಕ್ಕೆ ಹೋಗಿ, ಅಲ್ಲಿರುವ ಯೋನಿಯೆಂದು ಪ್ರಸಿದ್ಧವಾದ ಪುಣ್ಯತೀರ್ಥದಲ್ಲಿ ಸ್ನಾನಮಾಡಿದ ಪುರುಷನು ದಿವ್ಯಾಲಂಕಾರಶೋಭಿತನಾಗಿ, ದೇವತಾಪುತ್ರನಾಗಿ ಹತ್ತುಸಾವಿರ ಗೋದಾನಮಾಡಿದ್ದರಿಂದುಂಟಾಗುವ ಫಲವನ್ನು ಹೊಂದುವನು. ಬಳಿಕ ತ್ರಿಲೋಕಪ್ರಸಿದ್ಧವಾದ ಶ್ರೀಕುಂಡವೆಂಬ ಕ್ಷೇತ್ರಕ್ಕೆ ಹೋಗಿ, ಬ್ರಹ್ಮದೇವನಿಗೆ ನಮಸ್ಕಾರಮಾಡಿದವನು ಸಹಸ್ರ ಗೋದಾನಫಲವನ್ನು ಹೊಂದುವನು. ಅಲ್ಲಿಂದ ವಿಮಲತೀರ್ಥಕ್ಕೆ ಹೋಗಬೇಕು. ಆ ತೀರ್ಥದಲ್ಲಿ ಸುವರ್ಣರೂಪವಾಗಿಯೂ ರಜತರೂಪವಾಗಿಯೂ ಮೀನುಗಳು ಈಗಲೂ ಕಾಣಿಸುತ್ತಿರುವವು. ಅಲ್ಲಿ ಸ್ನಾನಮಾಡಿದ ಪುರುಷನು ಸಕಲ ಪಾಪವನ್ನೂ ಕಳೆದುಕೊಂಡು, ಇಂದ್ರಲೋಕದಲ್ಲಿ ಉತ್ತಮವಾದ ಸುಖವನ್ನು ಪಡೆಯುವನು. ಅಲ್ಲಿಂದ ಹೊರಟು ಕಾಶ್ಮೀರದೇಶದಲ್ಲಿರುವ ವಿತಸ್ತೆಯೆಂಬ ನದಿಗೆ ಹೋಗಬೇಕು. ಅಲ್ಲಿ ಸಕಲಪಾಪಪರಿಹಾರಕವಾದ ವಿತಸ್ತೆಯೆಂಬ ಹೆಸರುಳ್ಳ ತೀರ್ಥವು ಇರುವದು. ಅಲ್ಲಿ ತಕ್ಷಕನು ವಾಸಮಾಡುತ್ತಿರುವನು. ಆ ತೀರ್ಥದಲ್ಲಿ ಸ್ನಾನಮಾಡಿ ದೇವ ಪಿತೃತರ್ಪಣವನ್ನು ಮಾಡಿದವನು, ಸಕಲ ಪಾಪವನ್ನೂ ಕಳೆದುಕೊಂಡು ಪರಿಶುದ್ಧಾತ್ಮನಾಗಿ, ವಾಜಪೇಯಯಜ್ಞಫಲವನ್ನು ಹೊಂದಿ ಉತ್ತಮವಾದ ಗತಿಯನ್ನು ಪಡೆಯುವನು.

ಅನಂತರದಲ್ಲಿ ತ್ರಿಲೋಕಪ್ರಸಿದ್ಧವಾದ ಬಡಬಾತೀರ್ಥಕ್ಕೆ ಹೋಗಿ, ಅಲ್ಲಿ ಸಾಯಂಸಂಧ್ಯಾಕಾಲದಲ್ಲಿ ಸ್ನಾನಮಾಡಿ, ಯಜ್ಞೇಶ್ವರನಿಗೆ ಯಥಾಶಕ್ತಿಯಾಗಿ ಚರುವನ್ನು ಸಮರ್ಪಣೆ ಮಾಡಿದ್ದೇ ಆದರೆ, ಪಿತೃಗಳಿಗೆ ಅಕ್ಷಯವಾದ ದಾನವನ್ನು ಮಾಡಿದಂತಾಗುವದೆಂದು ದೊಡ್ಡವರು ಹೇಳುವರು. ಅಲ್ಲಿ ಋಷಿಗಳೂ ಪಿತೃದೇವತೆಗಳೂ ಗಂಧರ್ವರೂ ಅಪ್ಸರಸ್ಸುಗಳೂ ಗುಹ್ಯಕರೂ ಕಿನ್ನರರೂ ಯಕ್ಷರೂ ಸಿದ್ಧರೂ ವಿದ್ಯಾಧರರೂ ದೇವತೆಗಳೂ ಮನುಷ್ಯರೂ ರಾಕ್ಷಸರೂ ದೈತ್ಯರೂ ಏಕಾದಶರುದ್ರರೂ ಚತುರ್ಮುಖಬ್ರಹ್ಮನೂ ಸಹ ಸಾವಿರವರ್ಷ ನೇಮದಿಂದ ಉತ್ತಮವಾದ ದೀಕ್ಷೆಯನ್ನು ತಾಳಿ ವಿಷ್ಣುಪ್ರೀತಿಕರವಾದ ಚರುವನ್ನು ಯಜ್ಞೇಶ್ವರನಲ್ಲಿ ಏಳೇಳು ವೇದಋಕ್ಕುಗಳಿಂದ ಹವನವನ್ನು ಮಾಡಿ ವಿಷ್ಣುವನ್ನು ಸ್ತುತಿಸಿದರು. ಅದರಿಂದ ಸಂತುಷ್ಟನಾದ ವಿಷ್ಣುವು ಅವರಿಗೆ ಬೇಕಾದ ಇಷ್ಟಾರ್ಥಗಳನ್ನೂ ಅಷ್ಟೈಶ್ವರ್ಯವನ್ನೂ ಕೊಟ್ಟು, ಮೇಘದಲ್ಲಿ ಮಿಂಚು ಮರೆಯಾಗುವಂತೆ ಅಂತರ್ಧಾನವನ್ನು ಹೊಂದಿದನು. ಆದ್ದರಿಂದ ಆ ತೀರ್ಥವು ಮೂರುಲೋಕದಲ್ಲೂ ಸಪ್ತಚರು ಎಂದು ಪ್ರಸಿದ್ಧಿಯನ್ನು ಹೊಂದಿತು. ಅಲ್ಲಿ ವಿಷ್ಣುಪ್ರೀತ್ಯರ್ಥವಾಗಿ ಯಜ್ಞೇಶ್ವರನಲ್ಲಿ ಚರುಹೋಮವನ್ನು ಮಾಡಿದಂಥ ಪುರುಷನು ಹತ್ತು ಸಾವಿರ ಗೋದಾನಮಾಡಿದ ಫಲವನ್ನೂ ನೂರು ರಾಜಸೂಯಯಾಗಮಾಡಿದ ಫಲವನ್ನೂ ಸಾವಿರ ಅಶ್ವಮೇಧ ಯಾಗ ಮಾಡಿದ ಫಲವನ್ನೂ ಹೊಂದುವನು. ಬಳಿಕ ಅಲ್ಲಿಂದ ಹೊರಟು ರುದ್ರಪದಕ್ಕೆ ಹೋಗಿ ಮಹಾದೇವನನ್ನು ಪೂಜಿಸಿದವನು ಅಶ್ವಮೇಧದ ಫಲವನ್ನು ಹೊಂದುವನು. ಅಲ್ಲಿಂದ ಮಣಿಮಂತಕ್ಷೇತ್ರಕ್ಕೆ ಹೋಗಿ, ಬ್ರಹ್ಮಚರ್ಯವ್ರತದಿಂದ ಒಂದು ದಿವಸ ಉಪವಾಸಮಾಡಿದ್ದೇ ಆದರೆ, ಅಗ್ನಿಷ್ಟೋಮಯಾಗದ ಫಲವನ್ನು ಹೊಂದುವನು. ಅಲ್ಲಿಂದ ಲೋಕಪ್ರಸಿದ್ಧವಾದ ದೇವಿಕಾನದಿಗೆ ಹೋಗಬೇಕು. ಅಲ್ಲಿಯೇ ಬ್ರಾಹ್ಮಣರು ಹುಟ್ಟಿದ್ದು. ಆ ಪುಣ್ಯ

ಸ್ಥಳವು ಮೂರುಲೋಕದಲ್ಲೂ ಪ್ರಸಿದ್ಧನಾದ ಮಹಾದೇವನಿಗೆ ವಾಸಸ್ಥಾನವಾಗಿರುವದು. ಅಲ್ಲಿ ಸ್ನಾನಮಾಡಿ ಮಹಾದೇವನಿಗೆ ಪೂಜೆಯನ್ನು ಮಾಡಿ, ಆತನಿಗೆ ಯಥಾಶಕ್ತಿ ಚರುವನ್ನು ನಿವೇದನಮಾಡಿದವನು ಬೇಕಾದ ಇಷ್ಟಾರ್ಥವನ್ನು ಕೊಡತಕ್ಕ ಯಜ್ಞದ ಫಲವನ್ನು ಪಡೆಯುವನು. ಅಲ್ಲಿಂದ ಕಾಮವೆಂಬ ರುದ್ರತೀರ್ಥಕ್ಕೆ ಹೋಗಿ, ಅಲ್ಲಿ ಸ್ನಾನಮಾಡಿದವನು ಜಾಗ್ರತೆಯಾಗಿ ಇಷ್ಟಸಿದ್ಧಿಯನ್ನು ಪಡೆಯುವನು. ಅಲ್ಲಿಂದ ಯಜನ ಯಾಜನ ಬ್ರಹ್ಮವಾಲುಕ ಪುಷ್ಪಾಂಭ ಎಂಬ ತೀರ್ಥಗಳಿಗೆ ಹೋಗಿ, ಅಲ್ಲಿ ಸ್ನಾನಮಾಡಿದವನು ಮರಣಾನಂತರದಲ್ಲಿ ಯಾವ ದುಃಖವನ್ನೂ ಅನುಭವಿಸದಿರುವನು. ಹಿಂದೆ ಹೇಳಿದ ದೇವಿಕಾನದಿಯು ಅರ್ಧಯೋಜನ ಅಗಲವುಳ್ಳದ್ದಾಗಿಯೂ, ಐದುಯೋಜನ ಉದ್ದವುಳ್ಳದ್ದಾಗಿಯೂ, ಪುಣ್ಯತಮವಾಗಿಯೂ, ದೇವಋಷಿಗಳಿಂದ ಸೇವಿತವಾಗಿಯೂ ಇರುವದು. ಬಳಿಕ ದೀರ್ಘಸತ್ರವೆಂಬ ಕ್ಷೇತ್ರಕ್ಕೆ ಹೋಗಬೇಕು. ಅಲ್ಲಿ ಬ್ರಹ್ಮಾದಿದೇವತೆಗಳೂ ಸಿದ್ಧರೂ ಋಷಿಗಳೂ ವ್ರತನಿಷ್ಠರಾಗಿ ದೀಕ್ಷಾಬದ್ಧರಾಗಿರುವರು. ಅಲ್ಲಿಗೆ ಹೋದಮಾತ್ರದಿಂದಲೇ ರಾಜಸೂಯಾಶ್ವಮೇಧಯಾಗಗಳನ್ನು ಮಾಡಿದ ಪುಣ್ಯವು ಲಭಿಸುವದು. ಅಲ್ಲಿಂದ ಆಹಾರನಿಯಮವನ್ನು ಮಾಡಿಕೊಂಡು, ವಿನಶನವೆಂಬ ತೀರ್ಥಕ್ಕೆ ಹೋಗಬೇಕು. ಅಲ್ಲಿರುವ ಮೇರುಪೃಷ್ಠದಲ್ಲಿ ಸರಸ್ವತೀನದಿಯು ಗುಪ್ತಗಾಮಿನಿಯಾಗಿರುವದು, ಮತ್ತು ಚಮಸೋದ್ಭೇದ ಶಿವೋದ್ಭೇದ ನಾಗೋದ್ಭೇದ ಎಂಬ ಮೂರುಸ್ಥಳಗಳಲ್ಲಿ ಪ್ರತ್ಯಕ್ಷವಾಗಿ ಹರಿಯುತ್ತಿರುವದು. ಚಮಸೋದ್ಭೇದದಲ್ಲಿ ಸ್ನಾನಮಾಡಿದರೆ ಅಗ್ನಿಷ್ಟೋಮಯಾಗದ ಫಲವೂ, ಶಿವೋದ್ಭೇದದಲ್ಲಿ ಸ್ನಾನಮಾಡಿದರೆ ಸಹಸ್ರಗೋದಾನದ ಫಲವೂ, ನಾಗೋದ್ಭೇದದಲ್ಲಿ ಸ್ನಾನಮಾಡಿದರೆ ನಾಗಲೋಕಪ್ರಾಪ್ತಿಯೂ ಉಂಟಾಗುವವು. ಆ ಸರಸ್ವತೀನದಿಯು ಯಾವ ಪ್ರದೇಶದಲ್ಲಿ ಮೊಲದಂತ ಆಕಾರವುಳ್ಳ ಕಮಲಗಳು ವರ್ಷಕ್ಕೊಂದಾವರ್ತಿ ಕಾರ್ತಿಕಮಾಸದಲ್ಲಿ ಕಾಣುವವೋ, ಅಂಥ ದುರ್ಲಭವಾದ ಶಶಯಾನವೆಂಬ ತೀರ್ಥಕ್ಕೆ ಹೋಗಿ, ಅಲ್ಲಿ ಸ್ನಾನಮಾಡಿದಂಥವನು ಚಂದ್ರನಂತೆ ಪ್ರಕಾಶಿಸುತ್ತ, ಸಹಸ್ರ ಗೋದಾನಫಲವನ್ನು ಹೊಂದುವನು. ಅಲ್ಲಿಂದ ಹೊರಟು, ನೇಮದಿಂದ ಕುಮಾರಕೋಟಿತೀರ್ಥಕ್ಕೆ ಹೋಗಿ, ಅಲ್ಲಿ ಸ್ನಾನಮಾಡಿ ಪಿತೃಗಳಿಗೂ ದೇವತೆಗಳಿಗೂ ಪೂಜೆಯನ್ನು ಮಾಡಿದವನು ಹತ್ತುಸಾವಿರ ಗೋದಾನಮಾಡಿದ ಫಲವನ್ನು ಪಡೆದು, ತನ್ನ ಕುಲವನ್ನೆಲ್ಲಾ ಉದ್ಧಾರಮಾಡುವನು. ಅಲ್ಲಿಂದ ಹೊರಟು, ನೇಮದಿಂದ ರುದ್ರಕೋಟಿತೀರ್ಥಕ್ಕೆ ಹೋಗಬೇಕು. ಪೂರ್ವದಲ್ಲಿ ಕೋಟಿಮಂದಿ ಋಷಿಗಳು ಮಹಾದೇವನ ದರ್ಶನವನ್ನು ಮಾಡಬೇಕೆಂಬ ಅಪೇಕ್ಷೆಯಿಂದ 'ನಾನು ಮೊದಲು ದರ್ಶನಮಾಡಬೇಕು, ನಾನು ಮೊದಲು ದರ್ಶನ ಮಾಡಬೇಕು' ಎಂದು ಬಹಳವಾದ ಸಂತೋಷದಿಂದ ಆ ಪುಣ್ಯಸ್ಥಳಕ್ಕೆ ಹೋದರು. ಆಗ ಪರಮೇಶ್ವರನು ತನ್ನ ಯೋಗಮಹಿಮೆಯಿಂದ ಮಹಾತ್ಮರಾದ ಆ ಋಷಿಗಳ ಕ್ಲೇಶವನ್ನು ಪರಿಹಾರಮಾಡುವದಕ್ಕೋಸ್ಕರ, ಆ ಋಷಿಗಳ ಮುಂದುಗಡೆಯಲ್ಲಿ ತಾನೂ ಕೋಟಿರೂಪುಗಳನ್ನು ತಾಳಿ ನಿಂತನು. ಆ ಸಮಯದಲ್ಲಿ ಆ ಋಷಿಗಳೆಲ್ಲರೂ ಮಹಾದೇವನನ್ನು 'ನಾನು ಮೊದಲು ನೋಡಿದೆನು. ನಾನು ಮೊದಲು ನೋಡಿದೆನು' ಎಂದು ತಿಳಿದುಕೊಂಡರು. ಆಗ ಮಹಾದೇವನು ಮಹಾತ್ಮರಾದ ಆ ಋಷಿಗಳ ಅಧಿಕವಾದ ಭಕ್ತಿಗೆ ಮೆಚ್ಚಿ, 'ಎಲೈ ಋಷಿಗಳಿರಾ, ನಿಮಗೆ ಇಂದುಮೊದಲು ಧರ್ಮ ವೃದ್ಧಿಯಾಗಲಿ' ಎಂದು ಅವರಿಗೆ ವರವನ್ನು ಕೊಟ್ಟನು. ಎಲೈ ಭೀಷ್ಮನೆ, ಆ ರುದ್ರಕೋಟಿತೀರ್ಥದಲ್ಲಿ ಸ್ನಾನಮಾಡಿ ಶುಚಿರ್ಭೂತನಾದ ಮನುಷ್ಯನು ಅಶ್ವಮೇಧಯಜ್ಞದ ಫಲವನ್ನು ಹೊಂದಿ ತನ್ನ ಕುಲವನ್ನು ಉದ್ಧಾರಮಾಡುವನು. ಅಲ್ಲಿಂದ ಲೋಕಪ್ರಸಿದ್ಧವಾದ ಸರಸ್ವತೀಸಂಗಮಕ್ಕೆ ಹೋಗಬೇಕು. ಬ್ರಹ್ಮಾದಿದೇವತೆಗಳೂ ತಪೋಧನರಾದ ಋಷಿಗಳೂ ಚೈತ್ರಶುದ್ಧ ಚತುರ್ದಶೀ ದಿವಸ ಆ ಪುಣ್ಯತೀರ್ಥಕ್ಕೆ ಹೋಗಿ ಅಲ್ಲಿ ಸ್ನಾನಮಾಡಿ ಅಲ್ಲಿರುವ ಕೇಶವನನ್ನು ಸೇವಿಸುವರು. ಆ ಪುಣ್ಯಸ್ಥಳದಲ್ಲಿ ಋಷಿಗಳು ಅನೇಕ ಸಂವತ್ಸರ ಮಾಡತಕ್ಕ ಸತ್ರಯಾಗವನ್ನು ಮಾಡಿ ಮುಗಿಸಿರುವರು. ಆ ತೀರ್ಥದಲ್ಲಿ ಸ್ನಾನಮಾಡಿದವರು ಬಹು ಸುವರ್ಣಲಾಭವನ್ನು ಹೊಂದಿ, ಸಕಲ ಪಾಪಗಳನ್ನೂ ಕಳೆದುಕೊಂಡು ಪರಿಶುದ್ಧಾತ್ಮರಾಗಿ, ಸಹಸ್ರ ಗೋದಾನಫಲವನ್ನು ಪಡೆದು, ಬ್ರಹ್ಮಲೋಕವನ್ನು ಹೊಂದುವರು' ಎಂದು ಪುಲಸ್ತ್ಯನು ಭೀಷ್ಮನಿಗೆ ಹೇಳಿದನು."

## ೮೩ನೇ ಅಧ್ಯಾಯ.—ತೀರ್ಥಯಾತ್ರಾಪ್ರಶಂಸೆ—(ನಾರದ ಯುಧಿಷ್ಠಿರ ಸಂವಾದ.)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೇ, ನಾರದನು ಧರ್ಮರಾಯನನ್ನು ಕುರಿತು, “ಎಲೈ ಧರ್ಮರಾಯನೆ ಆ ಪುಲಸ್ತ್ಯನು ಭೀಷ್ಮನೊಡನೆ ಹೇಳಿದ್ದೇನೆಂದರೆ ‘ಎಲೈ ಭೀಷ್ಮನೆ, ಆ ಬಳಿಕ ಮಹನೀಯವಾದ ಕುರುಕ್ಷೇತ್ರಕ್ಕೆ ಹೋಗಿ ಆ ಕ್ಷೇತ್ರವನ್ನು ದರ್ಶನಮಾಡಿದ ಮಾತ್ರಕ್ಕೆ ಸಕಲಪಾಪಗಳೂ ಪರಿಹಾರವಾಗುವವು. ಯಾವ ಮನುಷ್ಯನು ‘ಕುರುಕ್ಷೇತ್ರಕ್ಕೆ ಹೋಗುವೆನು, ಅಲ್ಲಿ ವಾಸಮಾಡುವೆನು’ ಎಂದು ಯಾವಾಗಲೂ ನುಡಿಯುತ್ತಿರುವನೋ, ಆ ಪುರುಷನು ಸಕಲ ಪಾಪಗಳನ್ನೂ ಕಳೆದುಕೊಳ್ಳುವನು. ಆ ಕುರುಕ್ಷೇತ್ರದಲ್ಲಿ ಬೀಸುವ ಗಾಳಿಯಿಂದ ತೂರಿಕೊಂಡುಬಂದ ಧೂಳೂಕೂಡ ಸೋಕಿದರೆ ಪಾಪಿಯಾದ ಮನುಷ್ಯನಿಗೂ ಉತ್ತಮವಾದ ಗತಿಯನ್ನುಂಟುಮಾಡುವದು. ಸರಸ್ವತೀನದಿಗೆ ದಕ್ಷಿಣವಾಗಿಯೂ ದೃಷದ್ವತೀನದಿಗೆ ಉತ್ತರವಾಗಿಯೂ ಇರುವ ಕುರುಕ್ಷೇತ್ರದಲ್ಲಿ ಯಾವ ಮನುಷ್ಯನು ವಾಸಮಾಡುವನೋ, ಆ ಮನುಷ್ಯನು ಸ್ವರ್ಗಲೋಕದಲ್ಲಿ ವಾಸಮಾಡುವನು. ಮತ್ತು ಆ ಕ್ಷೇತ್ರದಲ್ಲಿ ಬ್ರಹ್ಮಾದಿದೇವತೆಗಳೂ ಋಷಿಗಳೂ ಸಿದ್ಧರೂ ಚಾರಣರೂ ಗಂಧರ್ವರೂ ಅಪ್ಸರಸ್ಸುಗಳೂ ಯಕ್ಷರೂ ನಾಗರೂ ಸಹ ವಾಸಮಾಡುತ್ತಿರುವರಾದ್ದರಿಂದ, ಅಲ್ಲಿ ಒಂದು ತಿಂಗಳು ಯಾವ ಮನುಷ್ಯನು ವಾಸಮಾಡುವನೋ ಆತನು ಮಹತ್ತಾದ ಪುಣ್ಯವನ್ನು ಪಡೆಯುವನು. ಯಾವ ಪುರುಷನು ಕುರುಕ್ಷೇತ್ರಕ್ಕೆ ಹೋಗುವೆನೆಂದು ಮನಸ್ಸಿನಲ್ಲೆಣಿಸುವನೋ, ಆತನು ಸಕಲ ಪಾಪಗಳನ್ನೂ ಕಳೆದುಕೊಂಡು ಬ್ರಹ್ಮಲೋಕವನ್ನು ಹೊಂದುವನು. ಯಾವ ಪುರುಷನು ಶ್ರದ್ಧೆಯಿಂದ ಕುರುಕ್ಷೇತ್ರಕ್ಕೆ ಹೋಗುವನೋ, ಅವನು ರಾಜಸೂಯಾಶ್ವಮೇಧಯಾಗಗಳ ಫಲವನ್ನು ಪಡೆಯುವನು. ಬಳಿಕ ಅಲ್ಲಿರುವ ದ್ವಾರಪಾಲಕನಾದ ಮಹಾಬಲಿಷ್ಠನಾದ ಮಂಕಣಕನೆಂದು ಹೆಸರುಳ್ಳ ಯಕ್ಷನಿಗೆ ನಮಸ್ಕಾರಮಾಡಿದರೆ, ಸಹಸ್ರ ಗೋದಾನದ ಫಲವುಂಟಾಗುವದು.

ಬಳಿಕ ವಿಷ್ಣುಸ್ಥಾನವೆಂಬ ತೀರ್ಥಕ್ಕೆ ಹೋಗಿ ಅಲ್ಲಿ ಸ್ನಾನಮಾಡಿ, ನಿರಂತರದಲ್ಲೂ ಅಲ್ಲಿ ಸನ್ನಿಹಿತನಾಗಿರುವ ಮೂರುಲೋಕಕ್ಕೂ ಉತ್ಪತ್ತಿಕಾರಣನಾದ ಶ್ರೀಹರಿಗೆ ನಮಸ್ಕಾರಮಾಡಿದಂಥವನು ಅಶ್ವಮೇಧಯಾಗದ ಫಲವನ್ನು ಪಡೆದು ವಿಷ್ಣುಲೋಕವನ್ನು ಹೊಂದುವನು. ಅಲ್ಲಿಂದ ಮೂರುಲೋಕದಲ್ಲೂ ಪ್ರಸಿದ್ಧವಾದ ಪಾರಿಪ್ಲವತೀರ್ಥಕ್ಕೆ ಹೋಗಿ ಸ್ನಾನಮಾಡಿದ ಮನುಷ್ಯನು ಅಗ್ನಿಷ್ಟೋಮ ಅತಿರಾತ್ರಯಜ್ಞಗಳ ಫಲವನ್ನು ಹೊಂದುವನು. ಅಲ್ಲಿಂದ ಪೃಥಿವೀತೀರ್ಥಕ್ಕೆ ಹೋಗಿ ಸ್ನಾನಮಾಡಿದವನು ಸಹಸ್ರ ಗೋದಾನದ ಫಲವನ್ನು ಹೊಂದುವನು. ಅಲ್ಲಿಂದ ಶಾಲೂಕಿನೀತೀರ್ಥಕ್ಕೆ ಹೋಗಿ ಸ್ನಾನಮಾಡಿದವನು ಹತ್ತು ಅಶ್ವಮೇಧಯಜ್ಞಗಳ ಫಲವನ್ನು ಹೊಂದುವನು. ಅಲ್ಲಿಂದ ಸರ್ಪದೇವಿಯೆಂಬ ನಾಗತೀರ್ಥಕ್ಕೆ ಹೋಗಿ ಸ್ನಾನಮಾಡಿದವನು ಅಗ್ನಿಷ್ಟೋಮದ ಫಲವನ್ನು ಪಡೆದು ನಾಗಲೋಕವನ್ನು ಹೊಂದುವನು. ಅಲ್ಲಿಂದ ಹೊರಟು ತರಂತುಕನೆಂದು ಹೆಸರುಳ್ಳ ದ್ವಾರಪಾಲಕನನ್ನು ಕಂಡು ಒಂದು ರಾತ್ರಿ ಅಲ್ಲಿ ವಾಸಮಾಡಿದರೆ, ಸಹಸ್ರ ಗೋದಾನಮಾಡಿದ ಫಲವನ್ನು ಪಡೆಯುವನು. ಅಲ್ಲಿಂದ ಪಂಚನದಕ್ಕೆ ಹೋಗಿ ಆಹಾರನಿಯಮವನ್ನು ಮಾಡಿಕೊಂಡು ಕೋಟಿತೀರ್ಥದಲ್ಲಿ ಸ್ನಾನಮಾಡಿದ ಪುರುಷನು ಅಶ್ವಮೇಧಯಜ್ಞದ ಫಲವನ್ನು ಹೊಂದುವನು. ಅಲ್ಲಿಂದ ಅಶ್ವಿನೀದೇವತೆಗಳ ತೀರ್ಥಕ್ಕೆ ಹೋಗಿ ಅಲ್ಲಿ ಸ್ನಾನಮಾಡಿದವನು ರೂಪವಂತನಾಗುವನು. ಅಲ್ಲಿಂದ ಪುಣ್ಯತಮವಾದ ವರಾಹತೀರ್ಥಕ್ಕೆ ಹೋಗಬೇಕು. ಪೂರ್ವದಲ್ಲಿ ಮಹಾವಿಷ್ಣುವು ವರಾಹರೂಪವನ್ನು ತಾಳಿದ್ದು ಆ ತೀರ್ಥದಲ್ಲೇ. ಆ ತೀರ್ಥದಲ್ಲಿ ಸ್ನಾನಮಾಡಿದವನು ಅಗ್ನಿಷ್ಟೋಮಫಲವನ್ನು ಪಡೆಯುವನು. ಅಲ್ಲಿಂದ ಜಯಂತಿಯೆಂಬ ಸ್ಥಳದಲ್ಲಿರುವ ಸೋಮತೀರ್ಥಕ್ಕೆ ಹೋಗಿ ಸ್ನಾನಮಾಡಿದವನು ರಾಜಸೂಯಫಲವನ್ನು ಹೊಂದುವನು. ಅಲ್ಲಿಂದ ಏಕಹಂಸವೆಂಬ ತೀರ್ಥಕ್ಕೆ ಹೋಗಿ ಸ್ನಾನಮಾಡಿದವನು ಸಹಸ್ರ ಗೋದಾನಫಲವನ್ನು ಹೊಂದುವನು. ಅಲ್ಲಿಂದ ಕೃತಶೌಚವೆಂಬ ತೀರ್ಥಕ್ಕೆ ಹೋಗಿ ಸ್ನಾನಮಾಡಿದವನು ಪೌಂಡರೀಕಯಾಗದ ಫಲವನ್ನು ಹೊಂದುವನು. ಅಲ್ಲಿಂದ ಮುಂಜವಟವೆಂಬ ಹೆಸರುಳ್ಳ ಪುಣ್ಯತಮವಾದ ಸ್ಥಾಣುಕ್ಷೇತ್ರಕ್ಕೆ ಹೋಗಿ ಒಂದುರಾತ್ರಿ ಉಪವಾಸಮಾಡಿದವನು ಪ್ರಮಥಗಣಕ್ಕೆ ಅಧಿಪತಿಯಾಗುವನು. ಅಲ್ಲೇ ಲೋಕಪ್ರಸಿದ್ಧವಾದ ಯಕ್ಷಿಣಿಯನ್ನು ಕಂಡದ್ದೇ ಆದರೆ ಬೇಕಾದ ಇಷ್ಟಾರ್ಥಗಳನ್ನು ಪಡೆಯುವನು. ಅದೇ ಕುರುಕ್ಷೇತ್ರಕ್ಕೆ ಬಾಗಿಲಾಗಿರುವದೆಂದು ದೊಡ್ಡವರು ಹೇಳುವರು.

ಈ ಪ್ರಕಾರ ಪ್ರದಕ್ಷಿಣೆಯಾಗಿ ಹೊರಟು ಕುರುಕ್ಷೇತ್ರಕ್ಕೆ ಸೇರಿದ ತೀರ್ಥಗಳಲ್ಲಿ ಸ್ನಾನಮಾಡಿ ಪಿತೃಗಳಿಗೂ ದೇವತೆಗಳಿಗೂ ತರ್ಪಣವನ್ನು ಮಾಡಿದವನು ಅಶ್ವಮೇಧಫಲವನ್ನು ಪಡೆಯುವನು. ಇದೇಪ್ರಕಾರ ಪರಶುರಾಮನು ತೀರ್ಥಯಾತ್ರೆಯನ್ನು ಮಾಡಿ ಕೃತಾರ್ಥನಾದನು. ಅಲ್ಲಿಂದ ರಾಮಹ್ರದಕ್ಕೆ ಹೋಗಬೇಕು. ಪೂರ್ವದಲ್ಲಿ ಪರಶುರಾಮನು ತನ್ನ ಪರಾಕ್ರಮದಿಂದ ಕ್ಷತ್ರಿಯರನ್ನೆಲ್ಲಾ ಜಯಿಸಿ ಐದು ಮಡುಗಳನ್ನು ಮಾಡಿ ಅವುಗಳಲ್ಲಿ ಆ ಕ್ಷತ್ರಿಯರ ರಕ್ತವನ್ನು ತುಂಬಿ ಆ ರಕ್ತದಿಂದ ತಮ್ಮ ಪಿತೃಗಳಿಗೆ ತರ್ಪಣವನ್ನು ಮಾಡಲು, ಆ ಪಿತೃಗಳೆಲ್ಲಾ ತೃಪ್ತಿಯನ್ನು ಪಡೆದು ಪರಶುರಾಮನನ್ನು ಕುರಿತು—ಎಲೈ ಭಾರ್ಗವರಾಮನೆ, ನೀನು ಪಿತೃಗಳಲ್ಲಿ ಮಾಡಿದ ಭಕ್ತಿಯನ್ನೂ ನಿನ್ನ ಪರಾಕ್ರಮವನ್ನೂ ನಾವು ಮೆಚ್ಚಿದೆವು. ನೀನು ಬೇಕಾದ ವರವನ್ನು ಬೇಡು. ಅದನ್ನು ನಾವು ಕೊಡುವೆವು—ಎಂದು ನುಡಿದರು. ಅವನ್ನು ಕೇಳಿ ಪರಾಕ್ರಮಶಾಲಿಯಾದ ಪರಶುರಾಮನು ಆಕಾಶಮಾರ್ಗದಲ್ಲಿರುವ ಪಿತೃಗಳನ್ನು ನೋಡಿ ಕೈ ಮುಗಿದುಕೊಂಡು—ಎಲೈ ಪಿತೃಗಳಿರಾ, ನನ್ನ ವಿಷಯದಲ್ಲಿ ನೀವು ಸಂತುಷ್ಟರಾಗಿ ನನ್ನಲ್ಲಿ ಅನುಗ್ರಹಮಾಡಿ ವರವನ್ನು ಕೊಡುವರಾದರೆ, ನಾನು ಕೋಪದಿಂದ ಕ್ಷತ್ರಿಯರನ್ನು ಸಂಹಾರಮಾಡಿದರಿಂದುಂಟಾದ ಪಾಪವು ಪರಿಹಾರವಾಗುವಹಾಗೂ, ನಾನು ತಪಸ್ಸಿದ್ಧಿಯನ್ನು ಪಡೆಯುವಹಾಗೂ, ಈ ಐದು ಮಡುವುಗಳೂ ಲೋಕದಲ್ಲಿ ಪ್ರಸಿದ್ಧವಾದ ಪುಣ್ಯತೀರ್ಥಗಳಾಗುವಹಾಗೂ ವರವನ್ನು ಕೊಡಿರಿ—ಎನಲು, ಆಗ ಪಿತೃದೇವತೆಗಳು ಆತನ ವಾಕ್ಯವನ್ನು ಕೇಳಿ ಸಂತೋಷಪಟ್ಟು ಪರಶುರಾಮನನ್ನು ಕುರಿತು—ಎಲೈ ರಾಮನೆ, ನೀನು ವಿಶೇಷವಾಗಿ ಪಿತೃಭಕ್ತಿಯುಳ್ಳವನಾದಕಾರಣ, ನೀನು ರೋಷಾವೇಶದಿಂದ ಕ್ಷತ್ರಿಯರನ್ನು ನಾಶಮಾಡಿದ ಪಾಪವು ಪರಿಹಾರವಾಗಲಿ. ಆ ಕ್ಷತ್ರಿಯರು ತಮ್ಮತಮ್ಮ ಪಾಪಕರ್ಮದಿಂದಲೇ ನಷ್ಟರಾಗಿ ಹೋಗುವರು. ಮತ್ತು ನಿನ್ನ ತಪಸ್ಸು ಅಭಿವೃದ್ಧಿಯನ್ನು ಹೊಂದಲಿ. ನಿನ್ನಿಂದ ನಿರ್ಮಿತವಾದ ಈ ಐದು ಮಡುವುಗಳೂ ಪುಣ್ಯತೀರ್ಥಗಳಾಗಿ ಲೋಕದಲ್ಲಿ ಪ್ರಸಿದ್ಧಿಯನ್ನು ಪಡೆಯಲಿ. ಈ ತೀರ್ಥಗಳಲ್ಲಿ ಸ್ನಾನಮಾಡಿ ಯಾವ ಪುರುಷನು ಪಿತೃಗಳಿಗೆ ತರ್ಪಣವನ್ನು ಕೊಡುವನೋ, ಆತನ ವಿಷಯದಲ್ಲಿ ಪಿತೃಗಳೆಲ್ಲಾ ಸಂತುಷ್ಟರಾಗಿ ಆತನಿಗೆ ಬೇಕಾದ ಇಷ್ಟಾರ್ಥಗಳನ್ನು ಕೊಡತಕ್ಕ ಸ್ವರ್ಗಲೋಕವನ್ನು ಕೊಡುವರು—ಎಂದು ವರವನ್ನು ಕೊಟ್ಟು, ಆತನ ಅನುಜ್ಞೆಯನ್ನು ತೆಗೆದುಕೊಂಡು ಅಂತರ್ಧಾನವನ್ನು ಹೊಂದಿದರು. ಆದ್ದರಿಂದ ಈ ಐದು ಮಡುವುಗಳೂ ರಾಮಹ್ರದವೆಂದು ಪ್ರಸಿದ್ಧಿಯನ್ನು ಪಡೆದಿರುವವು. ಈ ಮಡುವುಗಳಲ್ಲಿ ನೇಮದಿಂದ ಸ್ನಾನಮಾಡಿ ಪರಶುರಾಮನನ್ನು ಪೂಜೆಮಾಡಿದವನಿಗೆ ಬಹು ಸುವರ್ಣ ಲಾಭವಾಗುವದು.

ಬಳಿಕ ವಂಶಮೂಲವೆಂಬ ತೀರ್ಥಕ್ಕೆ ಹೋಗಿ ಅಲ್ಲಿ ಸ್ನಾನಮಾಡಿದವನು ತನ್ನ ವಂಶವನ್ನು ಉದ್ಧಾರಮಾಡುವನು. ಅಲ್ಲಿಂದ ಕಾಯಶೋಧನವೆಂಬ ತೀರ್ಥಕ್ಕೆ ಹೋಗಿ ಅಲ್ಲಿ ಸ್ನಾನಮಾಡಿದವನು ಪರಿಶುದ್ಧವಾದ ಶರೀರವುಳ್ಳವನಾಗಿ ಉತ್ತಮಲೋಕವನ್ನು ಪಡೆಯುವನು. ಅಲ್ಲಿಂದ ಲೋಕಪ್ರಸಿದ್ಧವಾದ ಲೋಕೋದ್ಧಾರವೆಂಬ ತೀರ್ಥಕ್ಕೆ ಹೋಗಿ ಅಲ್ಲಿ ಸ್ನಾನಮಾಡಿದ ಮನುಷ್ಯನು ತಮ್ಮ ಪಿತೃಗಳಿಗೆಲ್ಲಾ ಉತ್ತಮವಾದ ಲೋಕವನ್ನುಂಟುಮಾಡುವನು. ಅಲ್ಲಿಯೇ ಮಹಾನುಭಾವನಾದ ಮಹಾವಿಷ್ಣುವು ಲೋಕಗಳನ್ನು ಉದ್ಧಾರಮಾಡಿರುವನು. ಬಳಿಕ ಆಹಾರನಿಯಮವನ್ನು ಮಾಡಿಕೊಂಡು ಶ್ರೀತೀರ್ಥಕ್ಕೆ ಹೋಗಿ ಅಲ್ಲಿ ಸ್ನಾನಮಾಡಿ ಪಿತೃಗಳನ್ನೂ ದೇವತೆಗಳನ್ನೂ ಪೂಜೆಮಾಡಿದವನು ಉತ್ತಮವಾದ ಐಶ್ವರ್ಯವನ್ನು ಪಡೆಯುವನು. ಅಲ್ಲಿಂದ ಹೊರಟು ಕಪಿಲಾತೀರ್ಥಕ್ಕೆ ಹೋಗಿ ಬ್ರಹ್ಮಚರ್ಯವ್ರತದಿಂದ ಸ್ನಾನಮಾಡಿ ತಮ್ಮ ಪಿತೃಗಳನ್ನೂ ದೇವತೆಗಳನ್ನೂ ಪೂಜಿಸಿದವನು ಸಹಸ್ರಕಪಿಲಾಗೋದಾನವನ್ನು ಮಾಡಿದ ಫಲವನ್ನು ಹೊಂದುವನು. ಅಲ್ಲಿಂದ ಸೂರ್ಯತೀರ್ಥಕ್ಕೆ ಹೋಗಿ ನೇಮದಿಂದ ಅಲ್ಲಿ ಸ್ನಾನಮಾಡಿ ಪಿತೃಗಳನ್ನೂ ದೇವತೆಗಳನ್ನೂ ಪೂಜೆಮಾಡಿ ಉಪವಾಸಮಾಡಿದವನು ಅಗ್ನಿಷ್ಟೋಮ ಫಲವನ್ನು ಹೊಂದಿ ಸೂರ್ಯಲೋಕವನ್ನು ಪಡೆಯುವನು. ಬಳಿಕ ಗೋತೀರ್ಥಕ್ಕೆ ಹೋಗಿ ಅಲ್ಲಿ ಸ್ನಾನಮಾಡಿದವನು ಸಹಸ್ರ ಗೋದಾನಮಾಡಿದ ಫಲವನ್ನು ಹೊಂದುವನು. ಅಲ್ಲಿಂದ ಶಂಖಿನೀತೀರ್ಥಕ್ಕೆ ಹೋಗಿ ಅಲ್ಲಿ ಸ್ನಾನಮಾಡಿದವನೂ ದೇವೀತೀರ್ಥದಲ್ಲಿ ಸ್ನಾನಮಾಡಿದವನೂ ಸಹ ಉತ್ತಮವಾದ ಲೋಕವನ್ನು ಪಡೆಯುವರು. ಅಲ್ಲಿಂದ ಹೊರಟು ಸರಸ್ವತೀ ತೀರಕ್ಕೆ ಹೋಗಿ ಅಲ್ಲಿರುವ ದ್ವಾರಪಾಲಕನಾದ ತರಂಡಕನನ್ನು ಕಂಡು ಅಲ್ಲಿ

ರುವ ಕುಬೇರತೀರ್ಥದಲ್ಲಿ ಸ್ನಾನಮಾಡಿದವನು ಅಗ್ನಿಷ್ಟೋಮಫಲವನ್ನು ಪಡೆಯುವನು. ಅಲ್ಲಿಂದ ಬ್ರಹ್ಮಾವರ್ತಕ್ಕೆ ಹೋಗಿ ಅಲ್ಲಿ ಸ್ನಾನಮಾಡಿದರೆ ಬ್ರಹ್ಮಲೋಕ ಪ್ರಾಪ್ತಿಯಾಗುವದು. ಬಳಿಕ ಸುತೀರ್ಥವೆಂಬ ತೀರ್ಥಕ್ಕೆ ಹೋಗಿ ಅಲ್ಲಿ ಸ್ನಾನಮಾಡಿ ನಿರಂತರದಲ್ಲೂ ಅಲ್ಲಿ ಸನ್ನಿಹಿತರಾಗಿರುವ ಪಿತೃಗಳನ್ನೂ ದೇವತೆಗಳನ್ನೂ ಪೂಜೆಮಾಡಿದವನು ಅಶ್ವಮೇಧಫಲವನ್ನು ಹೊಂದಿ ಪಿತೃಲೋಕವನ್ನು ಪಡೆಯುವನು. ಅಲ್ಲಿಂದ ಅಂಬುಮತಿಯಲ್ಲಿರುವ ಸುತೀರ್ಥಕತೀರ್ಥದಲ್ಲೂ ಕಾಶೀಶ್ವರತೀರ್ಥದಲ್ಲೂ ಸ್ನಾನಮಾಡಿದವನು ಸರ್ವವ್ಯಾಧಿಗಳನ್ನೂ ಕಳೆದುಕೊಂಡು ಬ್ರಹ್ಮಲೋಕದಲ್ಲಿ ಪೂಜಿತನಾಗುವನು. ಅಲ್ಲಿಂದ ಮಾತೃತೀರ್ಥಕ್ಕೆ ಹೋಗಿ ಸ್ನಾನಮಾಡಿದವನು ಐಶ್ವರ್ಯವನ್ನೂ ಸಂತಾನವನ್ನೂ ಪಡೆಯುವನು. ಅಲ್ಲಿಂದ ಆಹಾರನಿಯಮವನ್ನು ಮಾಡಿಕೊಂಡು ಶೀತವನವೆಂಬ ತೀರ್ಥಕ್ಕೆ ಹೋಗಬೇಕು. ಆ ತೀರ್ಥವು ಬಹಳ ದುರ್ಲಭವಾದದ್ದು. ಅದನ್ನು ದರ್ಶನಮಾಡಿದ ಮಾತ್ರದಿಂದಲೂ, ಆ ತೀರ್ಥವನ್ನು ತಲೆಯಮೇಲೆ ಪ್ರೋಕ್ಷಣೆ ಮಾಡಿಕೊಂಡ ಮಾತ್ರದಿಂದಲೂ, ಮನುಷ್ಯನು ಪರಿಶುದ್ಧನಾಗುವನು. ಅಲ್ಲಿಂದ ಶ್ವಾವಿಲ್ಲೋಮಾಪಹವೆಂಬ ತೀರ್ಥಕ್ಕೆ ಹೋಗಬೇಕು. ತೀರ್ಥಯಾತ್ರಾಪರರಾದ ಜ್ಞಾನಿಗಳಾದ ಬ್ರಾಹ್ಮಣರು ಅಲ್ಲಿಗೆ ಹೋಗಿ ಸ್ನಾನಮಾಡಿ, ಅಧಿಕವಾದ ಪ್ರೀತಿಯಿಂದ ಪ್ರಾಣಾಯಾಮಗಳನ್ನು ಮಾಡಿ, ತಮ್ಮ ಶರೀರದ ರೋಮಗಳನ್ನು ನಿವೃತ್ತಿಮಾಡಿಕೊಂಡು ಪರಿಶುದ್ಧಾತ್ಮರಾಗಿ, ಉತ್ತಮವಾದ ಗತಿಯನ್ನು ಹೊಂದುವರು. ಬಳಿಕ ದಶಾಶ್ವಮೇಧಿಕವೆಂಬ ತೀರ್ಥದಲ್ಲಿ ಸ್ನಾನಮಾಡಿದವನು ಉತ್ತಮವಾದ ಗತಿಯನ್ನು ಪಡೆಯುವನು. ಅಲ್ಲಿಂದ ಪ್ರಸಿದ್ಧವಾದ ಮಾನುಷತೀರ್ಥಕ್ಕೆ ಹೋಗಬೇಕು. ಅಲ್ಲಿ ಕಿರಾತನ ಬಾಣದಿಂದ ಪೆಟ್ಟುಬಿದ್ದ ಕೃಷ್ಣಮೃಗಗಳು ಆ ತೀರ್ಥದಲ್ಲಿ ಬಿದ್ದದ್ದರಿಂದ ಮನುಷ್ಯರೂಪವನ್ನು ಹೊಂದಿದವು. ಅಂಥ ತೀರ್ಥದಲ್ಲಿ ಸ್ನಾನಮಾಡಿ ಬ್ರಹ್ಮಚರ್ಯವ್ರತವನ್ನು ಧರಿಸಿದವನು ಸಕಲಪಾಪಗಳನ್ನೂ ಕಳೆದುಕೊಂಡು ಪರಿಶುದ್ಧನಾಗಿ ಸ್ವರ್ಗಲೋಕವನ್ನು ಹೊಂದುವನು. ಆ ಮಾನುಷತೀರ್ಥಕ್ಕೆ ಬಂದು ಹರದಾರಿಯ ಆಚೆ ಸಿದ್ಧಪುರುಷರಿಂದ ಸೇವಿತರಾದ ಆಪಗೆಯೆಂಬ ನದಿಯಿರುವದು. ಅಲ್ಲಿ ಸ್ನಾನಮಾಡಿ ಪಿತೃಗಳನ್ನೂ ದೇವತೆಗಳನ್ನೂ ಉದ್ದೇಶಮಾಡಿ ಸಾವೆಯಕ್ಕಿಯಲ್ಲಿ ಅನ್ನವನ್ನು ಮಾಡಿ ಒಬ್ಬ ಬ್ರಾಹ್ಮಣನಿಗೆ ಭೋಜನ ಮಾಡಿಸಿದರೂ ಕೋಟಿಬ್ರಾಹ್ಮಣರಿಗೆ ಭೋಜನ ಮಾಡಿಸಿದ ಪುಣ್ಯವುಂಟಾಗುವದು. ಅಲ್ಲಿ ಸ್ನಾನಮಾಡಿ ಪಿತೃಗಳಿಗೂ ದೇವತೆಗಳಿಗೂ ಪೂಜೆಯನ್ನು ಮಾಡಿ ಒಂದು ರಾತ್ರಿ ಅಲ್ಲಿ ವಾಸಮಾಡಿದ್ದೇ ಆದರೆ, ಅಗ್ನಿಷ್ಟೋಮ ಫಲವುಂಟಾಗುವದು. ಅಲ್ಲಿಂದ ಹೊರಟು ಬ್ರಹ್ಮದೇವನಿಗೆ ಉತ್ತಮಸ್ಥಾನವಾದ ಬ್ರಹ್ಮೋದುಂಬರವೆಂದು ಪ್ರಸಿದ್ಧವಾದ ಕ್ಷೇತ್ರಕ್ಕೆ ಹೋಗಿ ಅಲ್ಲಿರುವ ಸಪ್ತರ್ಷಿಕುಂಡಗಳಲ್ಲಿ ಸ್ನಾನಮಾಡಿ ಮಹಾತ್ಮರಾದ ಕಪಿಲಋಷಿಗಳಿರತಕ್ಕ ಕೇದಾರಕ್ಷೇತ್ರದಲ್ಲಿರುವ ಬ್ರಹ್ಮದೇವನನ್ನು ಕಂಡ ಮನುಷ್ಯನು ಸಕಲ ಪಾಪಗಳನ್ನೂ ಕಳೆದುಕೊಂಡು ಪರಿಶುದ್ಧನಾಗಿ ಬ್ರಹ್ಮಲೋಕವನ್ನು ಹೊಂದುವನು. ಎಲೈ ಭೀಷ್ಮನೆ, ಕಪಿಲಋಷಿಗಳ ಕೇದಾರಕ್ಷೇತ್ರಕ್ಕೆ ಹೋಗುವದು ಬಹಳ ದುರ್ಘಟವಾದದ್ದು. ಅಲ್ಲಿಗೆ ಹೋಗಿ ತಪಸ್ಸನ್ನು ಮಾಡಿದವನು ಸಕಲಪಾಪಗಳನ್ನೂ ಕಳೆದುಕೊಂಡು ಅಂತರ್ಧಾನಶಕ್ತಿಯನ್ನು ಪಡೆಯುವನು. ಅಲ್ಲಿಂದ ಲೋಕಪ್ರಸಿದ್ಧವಾದ ಸರಕತೀರ್ಥಕ್ಕೆ ಹೋಗಿ ಸ್ನಾನಮಾಡಿ ಕೃಷ್ಣಚತುರ್ದಶಿಯ ದಿವಸ ಅಲ್ಲಿರುವ ಪರಮೇಶ್ವರನನ್ನು ದರ್ಶನಮಾಡಿದವನು ಬೇಕಾದ ಇಷ್ಟಾರ್ಥಗಳನ್ನು ಪಡೆದು ಸ್ವರ್ಗಲೋಕವನ್ನು ಹೊಂದುವನು. ಆ ಸರಕತೀರ್ಥದಲ್ಲಿಯೂ ರುದ್ರಕೋಟಿತೀರ್ಥದಲ್ಲಿಯೂ ರುದ್ರಕೂಪದಲ್ಲಿಯೂ ರುದ್ರಹ್ರದಗಳಲ್ಲಿಯೂ ಯಾವಾಗಲೂ ಮೂರುಕೋಟಿ ತೀರ್ಥಗಳು ಸನ್ನಿಹಿತವಾಗಿರುವವು. ಆ ಸರಕತೀರ್ಥದ ಬಳಿಯಲ್ಲೇ ಇಳಾಸ್ಪಂದವೆಂಬ ತೀರ್ಥವಿರುವದು. ಅಲ್ಲಿ ಸ್ನಾನಮಾಡಿ ಪಿತೃಗಳನ್ನೂ ದೇವತೆಗಳನ್ನೂ ಪೂಜೆಮಾಡಿದವನು ದುರ್ಗತಿಯನ್ನು ಪಡೆಯದೆ ವಾಜಪೇಯಯಜ್ಞದ ಫಲವನ್ನು ಪಡೆಯುವನು. ಬಳಿಕ ಕಿಂದಾನ ಕಿಂಜಪ್ಯ ಎಂಬ ಎರಡು ತೀರ್ಥಗಳಲ್ಲಿಯೂ ಸ್ನಾನಮಾಡಿ ಯಥಾಶಕ್ತಿಯಾಗಿ ದಾನವನ್ನೂ ಜಪವನ್ನೂ ಮಾಡಿದರೆ, ಅನಂತ ಫಲವನ್ನು ಪಡೆಯುವನು. ಆ ಬಳಿಕ ಜಿತೇಂದ್ರಿಯನಾಗಿ ಭಕ್ತಿಯಿಂದ ಕಲಸೀತೀರ್ಥದಲ್ಲಿ ಸ್ನಾನಮಾಡಿದವನು ಅಗ್ನಿಷ್ಟೋಮ ಫಲವನ್ನು ಪಡೆಯುವನು. ಸರಕತೀರ್ಥದ ಪೂರ್ವಭಾಗದಲ್ಲಿ ಅಂಬಾಜನ್ಮವೆಂಬ ಪ್ರಸಿದ್ಧವಾದ ನಾರದತೀರ್ಥವಿರುವದು. ಅಲ್ಲಿಗೆ ಹೋಗಿ ಸ್ನಾನಮಾಡಿ ಪ್ರಾಣವನ್ನು ಬಿಟ್ಟವನು ನಾರದರ ಆಜ್ಞೆಯಿಂದ ಉತ್ತಮವಾದ ಲೋಕವನ್ನು ಹೊಂದುವನು. ಅಲ್ಲಿಂದ

ಹೊರಟು ಶುಕ್ಲಪಕ್ಷದ ದಶಮೀದಿವಸ ಪುಂಡರೀಕತೀರ್ಥಕ್ಕೆ ಹೋಗಿ ಸ್ನಾನಮಾಡಿದ ಮನುಷ್ಯನು ಪೌಂಡರೀಕ ಯಜ್ಞದ ಫಲವನ್ನು ಪಡೆಯುವನು. ಅಲ್ಲಿಂದ ಮೂರುಲೋಕದಲ್ಲೂ ಪ್ರಸಿದ್ಧವಾದ ತ್ರಿವಿಷ್ಟಪಕ್ಷೇತ್ರಕ್ಕೆ ಹೋಗಬೇಕು. ಅಲ್ಲಿ ಸರ್ವಪಾಪಪರಿಹಾರಕವಾದ ವೈತರಣಿಯೆಂಬ ನದಿಯಿರುವದು. ಅಲ್ಲಿ ಸ್ನಾನಮಾಡಿ ಶೂಲಪಾಣಿಯಾದ ಈಶ್ವರನನ್ನು ಪೂಜಿಸಿದವನು ಸಕಲಪಾಪಗಳನ್ನೂ ಕಳೆದುಕೊಂಡು ಪರಿಶುದ್ಧನಾಗಿ ಉತ್ತಮವಾದ ಗತಿಯನ್ನು ಪಡೆಯುವನು. ಅಲ್ಲಿಂದ ಫಲಕವನಕ್ಕೆ ಹೋಗಬೇಕು. ಅಲ್ಲಿ ಸಕಲದೇವತೆಗಳೂ ಅನೇಕವರ್ಷಗಳಿಂದ ತಪಸ್ಸುಮಾಡುತ್ತಿರುವರು. ಅಲ್ಲಿರುವ ದೃಷದ್ವತೀನದಿಯಲ್ಲಿ ಸ್ನಾನಮಾಡಿ ಆ ದೇವತೆಗಳನ್ನು ಪೂಜೆಮಾಡಿದವನು ಅಗ್ನಿಷ್ಟೋಮ ಅತಿರಾತ್ರ ಯಜ್ಞಗಳ ಫಲವನ್ನು ಹೊಂದುವನು. ಅಲ್ಲಿಂದ ಸರ್ವದೇವತೀರ್ಥಕ್ಕೆ ಹೋಗಿ ಅಲ್ಲಿ ಸ್ನಾನಮಾಡಿದವನು ಸಹಸ್ರಗೋದಾನದ ಫಲವನ್ನು ಪಡೆಯುವನು. ಅಲ್ಲಿಂದ ಪಾಣಿಖಾತವೆಂಬ ತೀರ್ಥಕ್ಕೆ ಹೋಗಿ ಸ್ನಾನಮಾಡಿ ದೇವತೆಗಳಿಗೆ ಪೂಜೆಮಾಡಿದವನು ಅಗ್ನಿಷ್ಟೋಮ ಅತಿರಾತ್ರ ರಾಜಸೂಯ ಯಜ್ಞಗಳ ಫಲವನ್ನು ಹೊಂದಿ ಋಷಿಲೋಕವನ್ನು ಹೊಂದುವನು. ಅಲ್ಲಿಂದ ಮಿಶ್ರತೀರ್ಥಕ್ಕೆ ಹೋಗಬೇಕು. ಅಲ್ಲಿ ಮಹಾತ್ಮರಾದ ವ್ಯಾಸರು ಬ್ರಾಹ್ಮಣರ ನಿಮಿತ್ತವಾಗಿ ಸಕಲತೀರ್ಥಗಳನ್ನೂ ಸೇರಿಸಿರುವರೆಂದು ಲೋಕಪ್ರಸಿದ್ಧವಾಗಿರುವದು. ಅಲ್ಲಿ ಸ್ನಾನಮಾಡಿದವನು ಸಕಲತೀರ್ಥಗಳಲ್ಲಿಯೂ ಸ್ನಾನಮಾಡಿದ ಫಲವನ್ನು ಪಡೆಯುವನು. ಅಲ್ಲಿಂಗ ಆಹಾರನಿಯಮವನ್ನು ಮಾಡಿಕೊಂಡು ವ್ಯಾಸವನಕ್ಕೆ ಹೋಗಿ ಅಲ್ಲಿ ಮನೋಜವವೆಂಬ ತೀರ್ಥದಲ್ಲಿ ಸ್ನಾನಮಾಡಿದವನು ಸಹಸ್ರಗೋದಾನದ ಫಲವನ್ನು ಪಡೆಯುವನು. ಅಲ್ಲಿಂದ ಮಧುವಟಿಯೆಂಬ ಕ್ಷೇತ್ರಕ್ಕೆ ಹೋಗಿ ಅಲ್ಲಿರುವ ದೇವೀತೀರ್ಥದಲ್ಲಿ ಸ್ನಾನಮಾಡಿ ಶುಚಿಯಾಗಿ ಪಿತೃದೇವತೆಗಳನ್ನು ಪೂಜೆಮಾಡಿದವನು ದೇವಿಯ ಅನುಜ್ಞೆಯಿಂದ ಸಹಸ್ರಗೋದಾನಫಲವನ್ನು ಪಡೆಯುವನು. ಅಲ್ಲಿಂದ ಹೊರಟು ಕೈಶಿಕೀ ದೃಷದ್ವತೀ ಸಂಗಮಕ್ಕೆ ಹೋಗಿ ಅಲ್ಲಿ ಸ್ನಾನಮಾಡಿ ಆಹಾರನಿಯಮವನ್ನು ಮಾಡಿಕೊಂಡಿದ್ದವನು ಸಕಲಪಾಪಗಳನ್ನೂ ಕಳೆದುಕೊಳ್ಳುವನು. ಅನಂತರದಲ್ಲಿ ವ್ಯಾಸಸ್ಥಲಿಗೆ ಹೋಗಬೇಕು. ಅಲ್ಲಿ ಮಹಾತ್ಮನಾದ ವ್ಯಾಸನು ಪುತ್ರಶೋಕದಿಂದ ಪೀಡಿತನಾಗಿ ದೇಹತ್ಯಾಗವನ್ನು ಮಾಡಬೇಕೆಂದು ಪ್ರಾಯೋಪವೇಶವನ್ನು ಮಾಡಲು, ದೇವತೆಗಳೆಲ್ಲರೂ ಬಂದು ಸಮಾಧಾನವನ್ನು ಹೇಳಿ ಆತನನ್ನು ಮೇಲಕ್ಕೆ ಎಬ್ಬಿಸಿದ್ದರಿಂದ, ಆ ಕ್ಷೇತ್ರಕ್ಕೆ ವ್ಯಾಸಸ್ಥಲಿಯೆಂಬ ಹೆಸರುಂಟಾಯಿತು. ಅಲ್ಲಿಗೆ ಹೋದಮಾತ್ರಕ್ಕೆ ಪುರುಷನು ಸಹಸ್ರಗೋದಾನದ ಫಲವನ್ನು ಪಡೆಯುವನು. ಅಲ್ಲಿಂದ ಕಿಂದತ್ತವೆಂಬ ಕೂಪಕ್ಕೆ ಹೋಗಿ ಒಂದು ಬಳ್ಳ ಎಳ್ಳನ್ನು ದಾನಮಾಡಿದವನು ಉತ್ತಮವಾದ ಸಿದ್ಧಿಯನ್ನು ಹೊಂದಿ ದೇವಪಿತೃಋಷಿ ಋಣಗಳನ್ನು ಕಳೆದುಕೊಳ್ಳುವನು. ಅಲ್ಲಿಂದ ದೇವೀತೀರ್ಥಕ್ಕೆ ಹೋಗಿ ಸ್ನಾನಮಾಡಿದವನು ಸಹಸ್ರಗೋದಾನದ ಫಲವನ್ನು ಪಡೆಯುವನು. ಅಲ್ಲಿಂದ ಹೊರಟು ಲೋಕಪ್ರಸಿದ್ಧವಾದ ಅಹಸ್ಸು ಸುದಿನ ಎಂಬ ತೀರ್ಥಗಳಿಗೆ ಹೋಗಿ ಸ್ನಾನಮಾಡಿದವನು ಸೂರ್ಯಲೋಕವನ್ನು ಹೊಂದುವನು. ಅಲ್ಲಿಂದ ಮೂರುಲೋಕದಲ್ಲೂ ಪ್ರಸಿದ್ಧವಾದ ಮೃಗಧೂಮವೆಂಬ ತೀರ್ಥಕ್ಕೆ ಹೋಗಬೇಕು. ಅಲ್ಲಿ ಗಂಗಾಸ್ನಾನವನ್ನು ಮಾಡಿ ಮಹಾದೇವನಿಗೆ ಪೂಜೆಯನ್ನು ಮಾಡಿದವನು ಅಶ್ವಮೇಧಫಲವನ್ನು ಪಡೆಯುವನು. ಅಲ್ಲಿಂದ ವಾಮನತೀರ್ಥಕ್ಕೆ ಹೋಗಿ ಅಲ್ಲಿ ಸ್ನಾನಮಾಡಿ ವಾಮನಾವತಾರಿಯಾದ ವಿಷ್ಣುವನ್ನು ಪೂಜೆಮಾಡಿದವನು ಸಕಲ ಪಾಪಗಳನ್ನೂ ಕಳೆದುಕೊಂಡು ವಿಷ್ಣುಲೋಕವನ್ನು ಹೊಂದುವನು. ಬಳಿಕ ಕುಲಂಪುನವೆಂಬ ತೀರ್ಥಕ್ಕೆ ಹೋಗಿ ಸ್ನಾನಮಾಡಿದವನು ತನ್ನ ಕುಲವನ್ನೇ ಪಾವನಮಾಡುವನು.

ಆ ಬಳಿಕ ಪವನಹ್ರದವೆಂಬ ಹೆಸರುಳ್ಳ ವಾಯುತೀರ್ಥದಲ್ಲಿ ಸ್ನಾನಮಾಡಿದವನು ವಾಯುಲೋಕದಲ್ಲಿ ಪೂಜ್ಯನಾಗುವನು. ಅನಂತರ ಅಮರಹ್ರದಕ್ಕೆ ಹೋಗಿ ಅಲ್ಲಿ ಸ್ನಾನಮಾಡಿ ಇಂದ್ರನನ್ನು ಪೂಜಿಸಿದವನು ದೇವತೆಗಳ ಅನುಗ್ರಹದಿಂದ ಸ್ವರ್ಗಲೋಕದಲ್ಲಿ ಪೂಜ್ಯನಾಗುವನು. ತದನಂತರ ಶಾಲಿಹೋತ್ರತೀರ್ಥ ಶಾಲಿಸೂರ್ಯತೀರ್ಥಗಳಲ್ಲಿ ಸ್ನಾನಮಾಡಿದವನು ಸಹಸ್ರಗೋದಾನದ ಫಲವನ್ನು ಪಡೆಯುವನು. ಅಲ್ಲಿಂದ ಹೊರಟು ಸರಸ್ವತೀ ನದಿಯಲ್ಲಿರುವ ಶ್ರೀಕುಂಜವೆಂಬ ತೀರ್ಥದಲ್ಲಿ ಸ್ನಾನಮಾಡಿದವನು ಅಗ್ನಿಷ್ಟೋಮ ಫಲವನ್ನು ಪಡೆಯುವನು. ಅಲ್ಲಿಂದ ನೈಮಿಶಕುಂಜತೀರ್ಥಕ್ಕೆ ಹೋಗಬೇಕು. ಆ ತೀರ್ಥದಲ್ಲಿ ವಾಸಮಾಡಿಕೊಂಡಿರುವ ತಪಸ್ವಿಗಳಾದ

ನೈಮಿಶಾರಣ್ಯವಾಸಿಗಳಾದ ಋಷಿಗಳು ತೀರ್ಥಯಾತ್ರಾನಿಮಿತ್ತವಾಗಿ ಕುರುಕ್ಷೇತ್ರಕ್ಕೆ ಹೋಗಿ, ಸರಸ್ವತೀನದಿಯಲ್ಲಿ ಲತಾಗೃಹವನ್ನು ರಚನೆಮಾಡಿಕೊಂಡು ಸಂತೋಷವನ್ನು ಪಡೆದರು. ಅಂಥ ನೈಮಿಶಕುಂಜವೆಂಬ ತೀರ್ಥದಲ್ಲಿ ಸ್ನಾನಮಾಡಿದವನು ಅಗ್ನಿಷ್ಟೋಮಫಲವನ್ನು ಪಡೆಯುವನು. ಅಲ್ಲಿಂದ ಕನ್ಯಾತೀರ್ಥಕ್ಕೆ ಹೋಗಿ ಅಲ್ಲಿ ಸ್ನಾನಮಾಡಿದವನು ಸಹಸ್ರಗೋದಾನದ ಫಲವನ್ನು ಪಡೆಯುವನು. ಅಲ್ಲಿಂದ ಬ್ರಹ್ಮತೀರ್ಥಕ್ಕೆ ಹೋಗಿ ಬ್ರಾಹ್ಮಣನಾದವನು ಸ್ನಾನಮಾಡಿದರೆ ಪರಿಶುದ್ಧಾತ್ಮನಾಗಿ ಉತ್ತಮವಾದ ಗತಿಯನ್ನು ಪಡೆಯುವನು; ಕ್ಷತ್ರಿಯ ವೈಶ್ಯ ಶೂದ್ರರು ಸ್ನಾನಮಾಡಿದರೆ ಬ್ರಾಹ್ಮಣ ಜನ್ಮವನ್ನು ಪಡೆಯುವರು. ಅಲ್ಲಿಂದ ಸೋಮತೀರ್ಥಕ್ಕೆ ಹೋಗಿ ಸ್ನಾನಮಾಡಿದವನು ಚಂದ್ರಲೋಕವನ್ನು ಹೊಂದುವನು. ಬಳಿಕ ಸಪ್ತಸಾರಸ್ವತವೆಂಬ ತೀರ್ಥಕ್ಕೆ ಹೋಗಬೇಕು. ಆ ತೀರ್ಥದಲ್ಲಿ ಮಂಕಣಕನೆಂಬ ಋಷಿಯು ತಪಸ್ಸಿದ್ಧಿಯನ್ನು ಪಡೆದು ದರ್ಭೆಯ ತುದಿಯಿಂದ ಗಾಯವಾಗಿ ತನ್ನ ಕೈಯಿಂದ ಶಾಕರಸವು ಹೊರಡಲು, ಅದನ್ನು ನೋಡಿ ಸಂತೋಷದಿಂದ ನರ್ತನಮಾಡುವದಕ್ಕೆ ಉಪಕ್ರಮಿಸಿದನು. ಆಗ ಸ್ಥಾವರಜಂಗಮಪ್ರಾಣಿಗಳು ಆತನ ತೇಜಸ್ಸಿನಿಂದ ಭ್ರಾಂತಿಯನ್ನು ಹೊಂದಿ ನರ್ತನಮಾಡಿದವು. ಆ ಸಮಯದಲ್ಲಿ ಬ್ರಹ್ಮಾದಿ ದೇವತೆಗಳೂ ಸಕಲ ಋಷಿಗಳೂ ಸಹ ಮಹಾದೇವನನ್ನು ಕುರಿತು—ಎಲೈ ಪರಮೇಶ್ವರನೆ, ಈ ಮಂಕಣಕಋಷಿಯು ನರ್ತನವನ್ನು ಮಾಡದೆ ಇರುವಹಾಗೆ ಮಾಡು—ಎಂದು ಪ್ರಾರ್ಥಿಸಲು, ಮಹಾದೇವನು ದೇವತೆಗಳ ಕಾರ್ಯವನ್ನು ನೆರವೇರಿಸುವದಕ್ಕೋಸ್ಕರ ಬ್ರಾಹ್ಮಣರೂಪವನ್ನು ತಾಳಿ ಆ ಮಂಕಣಕಋಷಿಯ ಸಮೀಪಕ್ಕೆ ಹೋಗಿ—ಎಲೈ ಧರ್ಮಜ್ಞನಾದ ಮಹರ್ಷಿಯೆ, ಯಾತಕ್ಕೋಸ್ಕರ ನೀನು ನರ್ತನವನ್ನು ಮಾಡುವೆ? ಹೀಗೆ ನೀನು ಸಂತೋಷಪಡುತ್ತಿರುವದಕ್ಕೆ ಕಾರಣವೇನು?—ಎಂದನು. ಅದಕ್ಕೆ ಆ ಮಂಕಣಕಋಷಿಯು—ಎಲೈ ಬ್ರಾಹ್ಮಣನೆ, ಧರ್ಮಮಾರ್ಗದಲ್ಲಿದ್ದುಕೊಂಡು ತಪಸ್ಸಿದ್ಧಿಯನ್ನು ಪಡೆದ ನನ್ನ ಕೈಯಿಂದ ಶಾಕರಸವು ಹೊರಟದ್ದು ನಿನ್ನ ಕಣ್ಣಿಗೆ ಕಾಣಿಸುವದಿಲ್ಲವೇ ಏನು? ಈ ಶಾಕರಸವನ್ನು ನೋಡಿ ನಾನು ಸಂತೋಷಭರಿತನಾಗಿ ನರ್ತನವನ್ನು ಮಾಡುತ್ತಿರುವೆನು—ಎಂದು ನುಡಿದನು. ಅದನ್ನು ಕೇಳಿ, ಮಹಾದೇವನು ನಸುನಕ್ಕು, ಆ ಶಾಕರಸವು ಹೊರಟದ್ದನ್ನು ನೋಡಿ ಅಜ್ಞಾನವನ್ನು ಪಡೆದ ಆ ಋಷಿಯನ್ನು ಕುರಿತು—ಎಲೈ ಮಹರ್ಷಿಯೆ, ಇದನ್ನು ನೋಡಿದ್ದರಿಂದ ನನಗೇನೂ ಆಶ್ಚರ್ಯವು ತೋರುವದಿಲ್ಲ. ಈಗ ನೀನು ನನ್ನನ್ನು ನೋಡು—ಎಂದು ನುಡಿದು ತನ್ನ ಅಂಗುಷ್ಠದಿಂದ ಮತ್ತೊಂದು ಅಂಗುಷ್ಠವನ್ನು ಬಡಿಯಲು, ಅಲ್ಲಿ ಗಾಯವಾಗಿ ಹಿಮದಂತೆ ಶುಭ್ರವಾದ ವಿಭೂತಿಯು ಸುರಿಯುವದಕ್ಕೆ ಉಪಕ್ರಮಿಸಿತು. ಅದನ್ನು ನೋಡಿ ಮಂಕಣಕಋಷಿಯು ನಾಚಿಕೊಂಡು, ಈತನೇ ಮಹಾದೇವನೆಂದು ತಿಳಿದು, ಆತನ ಪಾದಕ್ಕೆರಗಿ, ಈತನಗಿಂತಲೂ ಹೆಚ್ಚಾದ ದೈವವು ಮತ್ತೊಂದಿಲ್ಲವೆಂದು ಭಾವಿಸಿಕೊಂಡು, ಆತನನ್ನು ಕುರಿತು—ಎಲೈ ಮಹಾದೇವನೆ, ಸಕಲ ಜಗತ್ತಿಗೂ ನೀನೇ ಗತಿಪ್ರದನಾದವನು. ನೀನು ಚರಾಚರಾತ್ಮಕವಾದ ಈ ಪ್ರಪಂಚವನ್ನು ನಿರ್ಮಾಣಮಾಡಿ ಪ್ರಳಯಕಾಲದಲ್ಲಿ ಪುನಃ ಅವುಗಳನ್ನೆಲ್ಲಾ ಗ್ರಾಸಮಾಡಿಬಿಡುವೆ. ದೇವತೆಗಳಿಗೂ ನಿನ್ನ ಸ್ವರೂಪವನ್ನು ತಿಳಿಯುವದು ಅಶಕ್ಯವಾದದ್ದು. ಹೀಗಿರುವಲ್ಲಿ ನಾನು ಹ್ಯಾಗೆ ತಿಳಿದೇನು? ನಿನ್ನಲ್ಲಿಯೇ ಬ್ರಹ್ಮಾದಿಸಕಲದೇವತೆಗಳೂ ಕಾಣಿಸುತ್ತಿರುವರು. ಈ ಸಕಲಲೋಕಗಳಿಗೂ ಸೃಷ್ಟಿಕರ್ತನೂ ನೀನೆ. ಸೃಷ್ಟಿಯನ್ನು ಮಾಡತಕ್ಕವನೂ ನೀನೆ. ನಿನ್ನ ಅನುಗ್ರಹದಿಂದ ಸಕಲರಾದ ದೇವತೆಗಳೂ ಸಂತುಷ್ಟರಾಗುವರು—ಎಂದು ಸ್ತುತಿಸಿ,—ಎಲೈ ಪರಮೇಶ್ವರನೆ, ನಿನ್ನ ಅನುಗ್ರಹದಿಂದ ನನ್ನ ತಪಸ್ಸು ಕ್ಷೀಣವಾಗದೆ ಇರಬೇಕು—ಎಂದು ನುಡಿದನು. ಬಳಿಕ ಮಹಾದೇವನು ಸಂತುಷ್ಟನಾಗಿ, ಬ್ರಹ್ಮರ್ಷಿಯಾದ ಮಂಕಣಕನನ್ನು ಕುರಿತು—ಎಲೈ ಮಹರ್ಷಿಯೆ, ನನ್ನ ಅನುಗ್ರಹದಿಂದ ನಿನ್ನ ತಪಸ್ಸು ಸಹಸ್ರಗುಣವಾಗಿ ಅಭಿವೃದ್ಧಿಯನ್ನು ಹೊಂದಲಿ. ಈ ನಿನ್ನ ಆಶ್ರಮದಲ್ಲೇ ನಾನೂ ವಾಸಮಾಡುತ್ತಿರುವೆನು. ಈ ಸಪ್ತಸಾರಸ್ವತತೀರ್ಥಸ್ನಾನಮಾಡಿ ಯಾರು ನನ್ನನ್ನು ಪೂಜಿಸುವರೋ ಅವರು ಈ ಲೋಕದಲ್ಲೂ ಪರಲೋಕದಲ್ಲೂ ಬೇಕಾದ ಇಷ್ಟಾರ್ಥಗಳನ್ನು ಪಡೆದು ಸಾರಸ್ವತಲೋಕವನ್ನು ಹೊಂದುವರು—ಎಂದು ಹೇಳಿ ಅಂತರ್ಧಾನವನ್ನು ಹೊಂದಿದನು.

ಅಲ್ಲಿಂದ ಮೂರುಲೋಕದಲ್ಲೂ ಪ್ರಸಿದ್ಧವಾದ ಭಾರ್ಗವತೀರ್ಥಕ್ಕೆ ಹೋಗಬೇಕು. ಅಲ್ಲಿ ಬ್ರಹ್ಮಾದಿ ದೇವತೆಗಳೂ ತಪಸ್ವಿಗಳಾದ ಋಷಿಗಳೂ ಕುಮಾರಸ್ವಾಮಿಯೂ ಮೂರು ಸಂಧ್ಯಾಕಾಲಗಳಲ್ಲಿಯೂ ಭಾರ್ಗವನಿಗೆ ಪ್ರೀತಿಯಾಗಬೇಕೆಂದು ಸನ್ನಿಹಿತರಾಗಿರುವರು. ಅಂಥ ಭಾರ್ಗವತೀರ್ಥದಲ್ಲಿಯೂ ಕಪಾಲಮೋಚನವೆಂಬ ತೀರ್ಥದಲ್ಲಿಯೂ ಸ್ನಾನಮಾಡಿದವನಿಗೆ ಸಕಲಪಾಪಗಳೂ ಪರಿಹಾರವಾಗುವವು. ಅಲ್ಲಿಂದ ಅಗ್ನಿತೀರ್ಥಕ್ಕೆ ಹೋಗಿ ಸ್ನಾನಮಾಡಿದವನು ಅಗ್ನಿಲೋಕವನ್ನು ಹೊಂದಿ ತನ್ನ ಕುಲವನ್ನು ಉದ್ಧಾರಮಾಡುವನು. ಅಲ್ಲೇ ವಿಶ್ವಾಮಿತ್ರತೀರ್ಥವಿರುವದು. ಅಲ್ಲಿ ಸ್ನಾನಮಾಡಿದವನು ಬ್ರಾಹ್ಮಣ್ಯವನ್ನು ಪಡೆಯುವನು. ಅಲ್ಲಿಂದ ಬ್ರಹ್ಮಯೋನಿಯೆಂಬ ತೀರ್ಥಕ್ಕೆ ಹೋಗಿ ಸ್ನಾನಮಾಡಿದವನು ಶುಚಿರ್ಭೂತನಾಗಿ ಬ್ರಹ್ಮಲೋಕವನ್ನು ಹೊಂದಿ ತನ್ನ ಏಳು ಕುಲವನ್ನೂ ಉದ್ಧಾರಮಾಡುವನು. ಅಲ್ಲಿಂದ ಮೂರುಲೋಕದಲ್ಲೂ ಪ್ರಸಿದ್ಧವಾದ ಪೃಥೂದಕವೆಂಬ ಕುಮಾರಸ್ವಾಮಿಯ ತೀರ್ಥಕ್ಕೆ ಹೋಗಿ ಸ್ನಾನಮಾಡಿ ಪಿತೃಗಳನ್ನೂ ದೇವತೆಗಳನ್ನೂ ಪೂಜಿಸಿದ ಸ್ತ್ರೀಯೇ ಆಗಲಿ ಪುರುಷನೇ ಆಗಲಿ ಜ್ಞಾನದಿಂದಲೇ ಆಗಲಿ ಅಜ್ಞಾನದಿಂದಲೇ ಆಗಲಿ ಮಾಡಿದ ಪಾಪವನ್ನು ಕಳೆದುಕೊಂಡು ಅಶ್ವಮೇಧಫಲವನ್ನು ಪಡೆದು ಸ್ವರ್ಗಲೋಕವನ್ನು ಹೊಂದುವರು. ಲೋಕದಲ್ಲಿ ಕುರುಕ್ಷೇತ್ರವು ಪುಣ್ಯತಮವಾದದ್ದು ; ಅದಕ್ಕಿಂತಲೂ ಸರಸ್ವತೀ ನದಿಯು ಶ್ರೇಷ್ಠವಾದದ್ದು ; ಇವೆಲ್ಲಕ್ಕಿಂತಲೂ ಪೃಥೂದಕತೀರ್ಥವು ಶ್ರೇಷ್ಠವಾದದ್ದು. ಅಂಥ ಪೃಥೂದಕತೀರ್ಥದಲ್ಲಿ ಯಾವ ಮನುಷ್ಯನು ಜಪಪರನಾಗಿ ಶರೀರವನ್ನು ತ್ಯಾಗಮಾಡುವನೋ, ಆತನು ಪುನರ್ಜನ್ಮವನ್ನು ಪಡೆಯಲಾರನೆಂದು ಮಹಾತ್ಮರಾದ ವ್ಯಾಸರೂ ಸನತ್ಕುಮಾರರೂ ಹೇಳಿರುವರು. ಆದ್ದರಿಂದ ಪೃಥೂದಕತೀರ್ಥಕ್ಕಿಂತಲೂ ಪಾವನವಾದ ತೀರ್ಥವು ಮತ್ತೊಂದಿಲ್ಲ. ಅಂಥ ಪೃಥೂದಕತೀರ್ಥದಲ್ಲಿ ಪಾಪಿಯಾದವನು ಸ್ನಾನಮಾಡಿದರೂ, ಅಂಥವನೂ ಸ್ವರ್ಗಗತಿಯನ್ನು ಹೊಂದುವನೆಂದು ದೊಡ್ಡವರು ಹೇಳುವರು. ಬಳಿಕ ಅಲ್ಲಿರತಕ್ಕ ಮಧುಸ್ರವತೀರ್ಥದಲ್ಲಿ ಸ್ನಾನಮಾಡಿದವನು ಸಹಸ್ರಗೋದಾನದ ಫಲವನ್ನು ಪಡೆಯುವನು. ಎಲೈ ರಾಜೇಂದ್ರನೆ, ಅಲ್ಲಿಂದ ಕ್ರಮವಾಗಿ ಹೊರಟು ಮೂರುಲೋಕದಲ್ಲೂ ಪ್ರಸಿದ್ಧವಾಗಿಯೂ ಲೋಕಪಾವನವಾಗಿಯೂ ಇರುವ ಸರಸ್ವತೀಯಮುನಾಸಂಗಮಕ್ಕೆ ಹೋಗಿ ಸ್ನಾನಮಾಡಿ ಮೂರುರಾತ್ರಿ ಅಲ್ಲೇ ಉಪವಾಸ ಮಾಡಿಕೊಂಡಿದ್ದವನಿಗೆ, ಬ್ರಹ್ಮಹತ್ಯಾದೋಷವಿದ್ದರೂ ಪರಿಹಾರವಾಗಿ ಅಗ್ನಿಷ್ಟೋಮ ಅತಿರಾತ್ರ ಯಜ್ಞಗಳ ಫಲವುಂಟಾಗುವದು, ಮತ್ತು ಆತನು ತನ್ನ ಏಳು ಕುಲವನ್ನೂ ಉದ್ಧಾರಮಾಡುವನು. ಅಲ್ಲೇ ದರ್ಭಿಯೆಂಬ ಋಷಿಯು ಬ್ರಾಹ್ಮಣರಲ್ಲಿ ತನಗಿದ್ದ ದಯೆಯಿಂದ ಅರ್ಧಕೀಲವೆಂಬ ತೀರ್ಥವನ್ನು ನಿರ್ಮಾಣಮಾಡಿರುವನು. ಆ ತೀರ್ಥದಲ್ಲಿ ಸ್ನಾನಮಾಡಿದವನು ಅಲ್ಲಿನ ವ್ರತೋಪವಾಸಗಳಿಂದಲೂ ಉಪನಯನ ಸಂಸ್ಕಾರದಿಂದಲೂ ಮಂತ್ರಪುನಶ್ಚರಣೆಯಿಂದಲೂ ಬ್ರಾಹ್ಮಣ್ಯವನ್ನು ಪಡೆಯುವನು. ಈ ವಿಷಯದಲ್ಲಿ ಸಂಶಯವಿಲ್ಲ. ಕ್ರಿಯಾಸಿದ್ಧಿಯೂ ಮಂತ್ರಪುನಶ್ಚರಣೆಯೂ ಇಲ್ಲದೆ ಸ್ನಾನಮಾಡಿದವನು ವ್ರತಫಲವನ್ನು ಪಡೆದು ಜ್ಞಾನಿಯಾಗುವನು. ಇದನ್ನು ಪೂರ್ವಿಕರು ಕಂಡಿರುವರು. ಆ ದರ್ಭಿಋಷಿಯು ನಾಲ್ಕು ಸಮುದ್ರದ ತೀರ್ಥಗಳನ್ನೂ ತಂದು ಅಲ್ಲಿ ನಾಲ್ಕು ತೀರ್ಥಗಳನ್ನು ಮಾಡಿರುವನು. ಅವುಗಳಲ್ಲಿ ಸ್ನಾನಮಾಡಿದವನು ದುರ್ಗತಿಯನ್ನು ಪಡೆಯದೆ ನಾಲ್ಕುಸಾವಿರ ಗೋದಾನದ ಫಲವನ್ನು ಪಡೆಯುವನು.

ಅಲ್ಲಿಂದ ಹೊರಟು ಲೋಕಪ್ರಸಿದ್ಧವಾದ ಶತತೀರ್ಥ ಸಹಸ್ರತೀರ್ಥಗಳಿಗೆ ಹೋಗಿ ಸ್ನಾನಮಾಡಿ ದಾನವನ್ನೂ ಉಪವಾಸವನ್ನೂ ಮಾಡಿದವನು ಅದಕ್ಕೆ ಸಹಸ್ರಗುಣವಾಗಿ ಫಲವನ್ನು ಪಡೆದು ಸಹಸ್ರಗೋದಾನಫಲವನ್ನು ಪಡೆಯುವನು. ಅಲ್ಲಿಂದ ರೇಣುಕಾತೀರ್ಥಕ್ಕೆ ಹೋಗಿ ಸ್ನಾನಮಾಡಿ ಪಿತೃಗಳಿಗೂ ದೇವತೆಗಳಿಗೂ ಪೂಜೆಮಾಡಿದವನು ಸಕಲಪಾಪಗಳನ್ನೂ ಕಳೆದುಕೊಂಡು ಅಗ್ನಿಷ್ಟೋಮದ ಫಲವನ್ನು ಪಡೆಯುವನು. ಅಲ್ಲಿಂದ ವಿಮೋಚನವೆಂಬ ತೀರ್ಥಕ್ಕೆ ಹೋಗಿ ಕ್ರೋಧವನ್ನು ಬಿಟ್ಟು ಜಿತೇಂದ್ರಿಯನಾಗಿ ಅಲ್ಲಿ ಸ್ನಾನಮಾಡಿದವನು ದಾನಪರಿಗ್ರಹ ಮಾಡಿದ್ದರಿಂದುಂಟಾದ ಸಕಲದೋಷಗಳನ್ನೂ ಪರಿಹಾರಮಾಡಿಕೊಳ್ಳುವನು. ಅಲ್ಲಿಂದ ಪಂಚವಟಿಗೆ ಹೋಗಿ ಬ್ರಹ್ಮಚರ್ಯವ್ರತವನ್ನು ಧರಿಸಿ ಜಿತೇಂದ್ರಿಯನಾಗಿ ಯೋಗೀಶ್ವರನಾದ ವೃಷಭಧ್ವಜನಾದ ಮಹಾದೇವನನ್ನು ಪೂಜಿಸಿದವನು ಪುಣ್ಯಶಾಲಿಯಾಗಿ ಸತ್ಪುರುಷರು ವಾಸಮಾಡುವ ಲೋಕದಲ್ಲಿ ಪೂಜ್ಯನಾಗುವನು. ಅಲ್ಲೇ ತಮ್ಮ ತೇಜಸ್ಸಿನಿಂದಲೇ

ಪ್ರಕಾಶಮಾನವಾದ ತೈಜಸ ವಾರುಣವೆಂಬ ತೀರ್ಥಗಳಿರುವವು. ಆ ಪ್ರದೇಶದಲ್ಲೇ ಬ್ರಹ್ಮಾದಿದೇವತೆಗಳೂ ತಪಸ್ವಿಗಳಾದ ಋಷಿಗಳೂ ಕುಮಾರಸ್ವಾಮಿಗೆ ದೇವತೆಗಳ ಸೇನಾಧಿಪತ್ಯಕ್ಕೆ ಪಟ್ಟಾಭಿಷೇಕವನ್ನು ಮಾಡಿದರು. ಆ ತೀರ್ಥಗಳಲ್ಲಿ ಸ್ನಾನಮಾಡಿದವನೂ, ಆ ತೈಜಸತೀರ್ಥಕ್ಕೆ ಪೂರ್ವಭಾಗದಲ್ಲಿರುವ ಕುರುತೀರ್ಥದಲ್ಲಿ ವ್ರತನಿಷ್ಠನಾಗಿ ಸ್ನಾನಮಾಡಿದವನೂ ಸಹ ಸಕಲಪಾಪಗಳನ್ನೂ ಕಳೆದುಕೊಂಡು ಬ್ರಹ್ಮಲೋಕವನ್ನು ಹೊಂದುವರು. ಅಲ್ಲಿಂದ ಹೊರಟು ಸ್ವರ್ಗದ್ವಾರವೆಂಬ ತೀರ್ಥಕ್ಕೆ ಹೋಗಿ ಆಹಾರನಿಯಮವನ್ನು ಮಾಡಿಕೊಂಡು ಸ್ನಾನಮಾಡಿದವನು ಸ್ವರ್ಗಲೋಕವನ್ನೂ ಬ್ರಹ್ಮಲೋಕವನ್ನೂ ಹೊಂದುವನು. ಅಲ್ಲಿಂದ ಹೊರಟು ಅನರಕತೀರ್ಥಕ್ಕೆ ಹೋಗಿ ಸ್ನಾನಮಾಡಿದವನು ದುರ್ಗತಿಯನ್ನು ಪಡೆಯುವದಿಲ್ಲ. ಅಲ್ಲಿಯೇ ಚತುರ್ಮುಖಬ್ರಹ್ಮನು ಸಕಲದೇವತೆಗಳಿಂದಲೂ ಶ್ರೀನಾರಾಯಣನಿಂದಲೂ ಕೂಡಿ ಸನ್ನಿಹಿತನಾಗಿರುವನು, ಮತ್ತು ಅಲ್ಲಿಯೇ ಪರಮೇಶ್ವರನೂ ಪಾರ್ವತಿಯೂ ಸಹ ಸನ್ನಿಹಿತರಾಗಿರುವರು. ಅಲ್ಲಿ ಪಾರ್ವತಿಯ ದರ್ಶನವನ್ನೂ ಈಶ್ವರನ ದರ್ಶನವನ್ನೂ ಪದ್ಮನಾಭನಾದ ನಾರಾಯಣನ ದರ್ಶನವನ್ನೂ ಮಾಡಿದವನು ಪ್ರಕಾಶಮಾನನಾಗಿ ಸಕಲತೀರ್ಥಸ್ನಾನದ ಫಲವನ್ನೂ ಪಡೆದು, ಸಕಲದುಃಖಗಳನ್ನೂ ಪರಿಹರಿಸಿಕೊಂಡು, ವಿಷ್ಣುಲೋಕವನ್ನು ಹೊಂದುವನು. ಬಳಿಕ ತೀರ್ಥಯಾತ್ರಾಪರನಾದವನು ಸ್ವಸ್ತಿಪುರಕ್ಕೆ ಹೋಗಿ ಅಲ್ಲಿಂದ ಪ್ರದಕ್ಷಿಣೆಯಾಗಿ ಬಂದರೆ ಸಹಸ್ರಗೋದಾನದ ಫಲವನ್ನು ಪಡೆಯುವನು.

ಅಲ್ಲಿಂದ ಪಾವನತೀರ್ಥಕ್ಕೆ ಹೋಗಿ ಸ್ನಾನಮಾಡಿ ಪಿತೃಗಳಿಗೂ ದೇವತೆಗಳಿಗೂ ತರ್ಪಣವನ್ನು ಮಾಡಿದವನು ಅಗ್ನಿಷ್ಟೋಮದ ಫಲವನ್ನು ಪಡೆಯುವನು. ಅಲ್ಲಿಯೇ ಗಂಗಾಹ್ರದವೆಂಬ ಕೂಪವಿರುವದು. ಅಲ್ಲಿ ಮೂರು ಕೋಟಿ ತೀರ್ಥಗಳೂ ಸನ್ನಿಹಿತವಾಗಿರುವವು. ಅಲ್ಲಿ ಸ್ನಾನಮಾಡಿದವನು ಸ್ವರ್ಗಲೋಕವನ್ನು ಪಡೆಯುವನು ; ಮತ್ತು ಅಲ್ಲಿರುವ ನದಿಗಳಲ್ಲಿ ಸ್ನಾನಮಾಡಿ ಮಹೇಶ್ವರನನ್ನು ಪೂಜಿಸಿದವನು ಪ್ರಮಥಗಣಾಧಿಪತ್ಯವನ್ನು ಪಡೆಯುವನು. ಅಲ್ಲಿಂದ ಮೂರುಲೋಕದಲ್ಲೂ ಪ್ರಸಿದ್ಧವಾದ ಸ್ಥಾಣುವಟತೀರ್ಥಕ್ಕೆ ಹೋಗಿ ಸ್ನಾನಮಾಡಿ ಅಲ್ಲಿ ಬಂದು ರಾತ್ರಿ ವಾಸಮಾಡಿದವನು ರುದ್ರಲೋಕವನ್ನು ಹೊಂದುವನು. ಅಲ್ಲಿಂದ ವಸಿಷ್ಠಾಶ್ರಮಕ್ಕೆ ಹೋಗಿ ಅಲ್ಲಿರುವ ಬದರೀಪಾಚನವನದಲ್ಲಿ ಬೋರೇಹಣ್ಣು ಭಕ್ಷಣೆಮಾಡಿಕೊಂಡು ಮೂರುರಾತ್ರಿ ಇದ್ದು ಉಪವಾಸಮಾಡಿದವನು ಮತ್ತು ಹನ್ನೆರಡುವರ್ಷವೂ ಬೋರೇಹಣ್ಣನ್ನೇ ಆಹಾರಮಾಡಿಕೊಂಡಿದ್ದವನೂ ವಸಿಷ್ಠರಿಗೆ ಸಮಾನನಾಗುವನು. ಅಲ್ಲಿಂದ ರುದ್ರಮಾರ್ಗವೆಂಬತೀರ್ಥಕ್ಕೆ ಹೋಗಿ ಸ್ನಾನಮಾಡಿ ಅಹೋರಾತ್ರಿ ಉಪವಾಸಮಾಡಿದವನು ಇಂದ್ರಲೋಕದಲ್ಲಿ ಪೂಜ್ಯನಾಗುವನು. ಅಲ್ಲಿಂದ ಏಕರಾತ್ರತೀರ್ಥಕ್ಕೆ ಹೋಗಿ ಸ್ನಾನಮಾಡಿ ಸತ್ಯಶೀಲನಾಗಿ ನೇಮದಿಂದಿದ್ದವನು ಬ್ರಹ್ಮಲೋಕದಲ್ಲಿ ಪೂಜ್ಯನಾಗುವನು. ಅಲ್ಲಿಂದ ತೇಜೋರಾಶಿಯಾದ ಮಹಾತ್ಮನಾದ ಸೂರ್ಯನ ಆಶ್ರಮಕ್ಕೆ ಹೋಗಿ ಅಲ್ಲಿರುವ ತೀರ್ಥದಲ್ಲಿ ಸ್ನಾನಮಾಡಿ ಸೂರ್ಯನನ್ನು ಪೂಜೆಮಾಡಿದವನು ಸೂರ್ಯಲೋಕವನ್ನು ಹೊಂದಿ ತನ್ನ ಕುಲವನ್ನು ಉದ್ಧಾರಮಾಡುವನು. ಅಲ್ಲಿಂದ ಸೋಮತೀರ್ಥಕ್ಕೆ ಹೋಗಿ ಸ್ನಾನಮಾಡಿದವನು ಚಂದ್ರಲೋಕವನ್ನು ಹೊಂದುವನು ; ಅಲ್ಲಿಂದ ಮಹಾತ್ಮನಾದ ದಧೀಚಿಋಷಿಯ ಪುಣ್ಯತಮವಾದ ತೀರ್ಥಕ್ಕೆ ಹೋಗಬೇಕು. ಅಲ್ಲಿ ಅಂಗಿರಸ್ಸುಗಳ ಮಕ್ಕಳಾದ ಸಾರಸ್ವತರು ವಾಸಮಾಡುತ್ತಿರುವರು. ಅಲ್ಲಿ ಸ್ನಾನಮಾಡಿದ ಪುರುಷನು ವಾಜಪೇಯಯಜ್ಞದ ಫಲವನ್ನು ಪಡೆದು ಸಾರಸ್ವತಲೋಕವನ್ನು ಹೊಂದುವನು. ಅಲ್ಲಿಂದ ಆಹಾರನಿಯಮವನ್ನು ಮಾಡಿಕೊಂಡು ಬ್ರಹ್ಮಚರ್ಯವ್ರತದಿಂದ ಕನ್ಯಾಶ್ರಮಕ್ಕೆ ಹೋಗಿ ಮೂರುರಾತ್ರಿ ಉಪವಾಸಮಾಡಿದವನು ನೂರು ಕನ್ಯಾದಾನದ ಫಲವನ್ನು ಪಡೆದು ಸ್ವರ್ಗಲೋಕವನ್ನು ಹೊಂದುವನು. ಅಲ್ಲಿಂದ ಹೊರಟು ಸನ್ನಿಹತೀತೀರ್ಥಕ್ಕೆ ಹೋಗಬೇಕು. ಅಲ್ಲಿಗೆ ಪುಣ್ಯವಂತರಾದ ಬ್ರಹ್ಮಾದಿದೇವತೆಗಳೂ ಮಹರ್ಷಿಗಳೂ ಪ್ರತಿತಿಂಗಳಲ್ಲೂ ಬರುತ್ತಿರುವರು. ಆ ತೀರ್ಥದಲ್ಲಿ ಸೂರ್ಯಚಂದ್ರರ ಗ್ರಹಣಕಾಲಗಳಲ್ಲಿ ಸ್ನಾನಮಾಡಿದವನು ನೂರು ಅಶ್ವಮೇಧಯಾಗಗಳ ಫಲವನ್ನು ಪಡೆಯುವನು. ಎಲೈ ಭೀಷ್ಮನೆ, ಭೂಮಿಯಲ್ಲೂ ಅಂತರಿಕ್ಷದಲ್ಲೂ ಇರುವ ನದಿಗಳೂ ತಟಾಕಗಳೂ ಗಿರಿನದಿಗಳೂ ಸರೋವರಗಳೂ ಭಾವಿಗಳೂ ಮಡವುಗಳೂ ಇನ್ನೂ ಅನೇಕ ತೀರ್ಥಗಳೂ ಸಹ ಪ್ರತಿತಿಂಗಳಲ್ಲೂ ಅಲ್ಲಿ ಸನ್ನಿಹಿತವಾಗಿರುವದರಿಂದ, ಅದು ಸನ್ನಿಹಿತೀ ಎಂದು ಪ್ರಸಿದ್ಧಿಯನ್ನು ಹೊಂದಿತು. ಅಲ್ಲಿ ಸ್ನಾನಪಾನ ಮಾಡಿದವನು ಸ್ವರ್ಗಲೋಕವನ್ನು ಹೊಂದುವನು. ಮತ್ತು ಅಮಾವಾಸ್ಯಾದಿವಸದಲ್ಲಿಯೂ ಸೂರ್ಯಚಂದ್ರಗ್ರಹಣಕಾಲಗಳ

ಲ್ಲಿಯೂ ಯಾರು ಅಲ್ಲಿ ಶ್ರಾದ್ಧವನ್ನು ಮಾಡುವರೋ, ಅವರು ಶಾಸ್ತ್ರೋಕ್ತವಾಗಿ ಮಾಡಿದ ಸಹಸ್ರಅಶ್ವಮೇಧಗಳ ಫಲವನ್ನು ಪಡೆಯುವರು. ಸ್ತ್ರೀಯೇಆಗಲಿ ಪುರುಷನೇಆಗಲಿ ಅಲ್ಲಿ ಸ್ನಾನಮಾಡಿದ್ದೇ ಆದರೆ, ಅವರು ಎಷ್ಟುಪಾಪ ಗಳನ್ನುಮಾಡಿದ್ದರೂ ಅವೆಲ್ಲಾ ಪರಿಹಾರವಾಗಿ ತಾವರೇ ಬಣ್ಣವಾದ ವಿಮಾನವನ್ನೇರಿ ಬ್ರಹ್ಮಲೋಕವನ್ನು ಹೊಂದು ವರು. ಅಲ್ಲಿಂದ ಕೋಟಿತೀರ್ಥಕ್ಕೆ ಹೋಗಿ ಸ್ನಾನಮಾಡಿ ಪ್ರಚಕ್ರಕನೆಂಬ ದ್ವಾರಪಾಲಕನಿಗೆ ನಮಸ್ಕಾರಮಾಡಿ ದವನಿಗೆ ಬಹು ಸುವರ್ಣಲಾಭವಾಗುವದು. ಅಲ್ಲಿಂದ ಗಂಗಾಹ್ರದಕ್ಕೆ ಹೋಗಿ ಬ್ರಹ್ಮಚರ್ಯವ್ರತನಿಷ್ಠನಾಗಿ ಅಲ್ಲಿ ಸ್ನಾನಮಾಡಿದವನು ರಾಜಸೂಯಾಶ್ವಮೇಧಯಜ್ಞಗಳ ಫಲವನ್ನು ಪಡೆಯುವನು. ಭೂಮಿಯಲ್ಲಿ ನೈಮಿಷ ತೀರ್ಥವೂ ಅಂತರಿಕ್ಷದಲ್ಲಿ ಪುಷ್ಕರತೀರ್ಥವೂ ಕ್ಷೇತ್ರಗಳಲ್ಲಿ ಕುರುಕ್ಷೇತ್ರವೂ ಮೂರುಲೋಕಗಳಲ್ಲೂ ಶ್ರೇಷ್ಠ ಗಳಾಗಿರುವವು. ಕುರುಕ್ಷೇತ್ರದ ಧೂಳೂಕೂಡ ಗಾಳಿಯಿಂದ ತೂರಿಕೊಂಡುಬಂದು ಯಾವ ಪುರುಷನಮೇಲೆ ಬೀಳುವದೋ, ಆ ಪುರುಷನು ಪಾಪಿಯಾದರೂ ಉತ್ತಮಗತಿಯನ್ನು ಪಡೆಯುವನು. ದೃಷದ್ವತೀನದಿಯ ಉತ್ತರ ಭಾಗದಲ್ಲಿಯೂ ಸರಸ್ವತೀನದಿಯ ದಕ್ಷಿಣಭಾಗದಲ್ಲಿಯೂ ಇರುವ ಕುರುಕ್ಷೇತ್ರದಲ್ಲಿ ಯಾರು ವಾಸಮಾಡುವರೋ ಅವರು ಸ್ವರ್ಗಲೋಕದಲ್ಲಿ ವಾಸಮಾಡುವರು. ಯಾವ ಪುರುಷನು 'ಕುರುಕ್ಷೇತ್ರಕ್ಕೆ ಹೋಗುವೆನು. ಅಲ್ಲಿ ವಾಸ ಮಾಡುವೆನು' ಎಂದು ಬಾಯಿಂದಹೇಳುವನೋ, ಅಂಥವನೂಕೂಡ ಸಕಲಪಾಪಗಳನ್ನೂ ಕಳೆದುಕೊಳ್ಳುವನು. ಬ್ರಹ್ಮದೇವನಿಗೆ ವಾಸಸ್ಥಾನವಾಗಿಯೂ ಪುಣ್ಯತಮವಾಗಿಯೂ ಬ್ರಹ್ಮರ್ಷಿಗಳಿಂದ ಸೇವಿತವಾಗಿಯೂ ಇರುವ ಕುರುಕ್ಷೇತ್ರದಲ್ಲಿ ಯಾರು ವಾಸಮಾಡುವರೋ ಅವರು ಎಂದಿಗೂ ದುಃಖಪಡತಕ್ಕವರಲ್ಲ. ತರಂತು, ತಾರಂತುಕ ತೀರ್ಥಗಳ ಮಧ್ಯದಲ್ಲಿಯೂ ರಾಮಹ್ರದ ಚಮಚಕ್ರಕತೀರ್ಥಗಳಿಗೆ ಮಧ್ಯದಲ್ಲಿಯೂ ಕುರುಕ್ಷೇತ್ರದ ಶಮಂತ ಪಂಚಕವಿರುವದು. ಈ ಕ್ಷೇತ್ರವು ಬ್ರಹ್ಮದೇವನು ಮಾಡಿದ ಯಾಗಕ್ಕೆ ಉತ್ತರವೇದಿಕೆಯಾದದ್ದು'. ಎಂದು ಪುಲಸ್ತ್ಯನು ಭೀಷ್ಮನಿಗೆ ಹೇಳಿದನು."

## ೮೪ನೇ ಅಧ್ಯಾಯ.—ತೀರ್ಥಯಾತ್ರಾಪ್ರಶಂಸೆ—(ನಾರದಯುಧಿಷ್ಠಿರ ಸಂವಾದ.)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ನಾರ ದನು ಧರ್ಮರಾಯನನ್ನು ಕುರಿತು ಇಂತೆಂದನು :—ಪುಲಸ್ತ್ಯನು ಭೀಷ್ಮನನ್ನು ಕುರಿತು 'ಎಲೈ ಭೀಷ್ಮನೆ, ಬಳಿಕ ತೀರ್ಥಯಾತ್ರಾಪರನಾದವನು ಲೋಕೋತ್ತಮವಾದ ಧರ್ಮತೀರ್ಥಕ್ಕೆ ಹೋಗಬೇಕು. ಅಲ್ಲಿ ಯಮನು ತಪಸ್ಸು ಮಾಡಿ ತನ್ನ ಹೆಸರಿನಿಂದ ಆ ಪುಣ್ಯತೀರ್ಥವನ್ನು ನಿರ್ಮಾಣಮಾಡಿರುವನು. ಅಲ್ಲಿ ಸ್ನಾನಮಾಡಿದ ಮನುಷ್ಯನು ಧರ್ಮಶೀಲನಾಗಿ ತನ್ನ ಏಳುಕುಲವನ್ನೂ ಉದ್ಧಾರಮಾಡುವನು. ಈ ವಿಷಯದಲ್ಲಿ ಸಂಶಯವಿಲ್ಲ. ಅಲ್ಲಿಂದ ಜ್ಞಾನ ಪಾವನವೆಂಬ ತೀರ್ಥಕ್ಕೆ ಹೋಗಿ ಸ್ನಾನಮಾಡಿದವನು ಅಗ್ನಿಷ್ಟೋಮ ಫಲವನ್ನು ಪಡೆದು ಋಷಿಲೋಕವನ್ನು ಹೊಂದುವನು. ಅಲ್ಲಿಂದ ಹೊರಟು ಸೌಗಂಧಿಕಾವನಕ್ಕೆ ಹೋಗಬೇಕು. ಅಲ್ಲಿ ಬ್ರಹ್ಮಾದಿದೇವತೆಗಳೂ ಸಿದ್ಧ ಚಾರಣಗಂಧರ್ವರೂ ಕಿನ್ನರಮಹೋರಗರೂ ಸನ್ನಿಹಿತರಾಗಿರುವರು. ಆ ವನಕ್ಕೆ ಪ್ರವೇಶಮಾಡಿದ ಮಾತ್ರಕ್ಕೆ ಸಕಲಪಾಪವೂ ಪರಿಹಾರವಾಗುವದು. ಅಲ್ಲಿಂದ ಮುಂದೆ ಪ್ಲಕ್ಷಾದೇವಿಯೆಂಬದಾಗಿಯೂ ಪುಣ್ಯಾದೇವಿಯೆಂಬದಾ ಗಿಯೂ ಪ್ರಸಿದ್ಧಿಯನ್ನು ಪಡೆದಿರುವ ಸರಸ್ವತೀನದಿಯಿರುವದು. ನದಿಗಳಲ್ಲಿ ಶ್ರೇಷ್ಠವಾದ ಆ ಸರಸ್ವತೀನದಿಯು ಅಲ್ಲೊಂದು ಮಹತ್ತಾದ ಹುತ್ತದ ದೆಸೆಯಿಂದ ಪ್ರವಹಿಸುತ್ತಿರುವದು. ಪುಣ್ಯತಮವಾದ ಆ ತೀರ್ಥದಲ್ಲಿ ಸ್ನಾನ ಮಾಡಿ ಪಿತೃಗಳನ್ನೂ ದೇವತೆಗಳನ್ನೂ ಪೂಜಿಸಿದವನು ಅಶ್ವಮೇಧದ ಫಲವನ್ನು ಪಡೆಯುವನು. ಆ ಹುತ್ತಕ್ಕೆ ಬಲಿಷ್ಠನಾದ ಪುರುಷನು ಯಜ್ಞೋಪಕರಣವಾದ ಶಮ್ಯೆಯೆಂಬ ದೊಣ್ಣೆಯನ್ನು ಬೀಸಿ ಎಸೆದರೆ, ಅದು ಎಷ್ಟುದೂರ ದಲ್ಲಿ ಬೀಳುವದೋ ಅದಕ್ಕೆ ಆರರಷ್ಟು ದೂರದಲ್ಲಿ ದುರ್ಲಭವಾದ ಈಶಾನಾಧ್ಯುಷಿತವೆಂಬ ತೀರ್ಥವಿರುವದು. ಅಲ್ಲಿ ಸ್ನಾನಮಾಡಿದವನು ಸಹಸ್ರಕಪಿಲಾಗೋದಾನದ ಫಲವನ್ನೂ ವಾಜಪೇಯಯಜ್ಞದ ಫಲವನ್ನೂ ಪಡೆಯು ವನೆಂದು ದೊಡ್ಡವರು ಹೇಳುವರು. ಅಲ್ಲಿಂದ ಸುಗಂಧ ಶತಕುಂಭ ಪಂಚಯಕ್ಷ ಎಂಬ ಕ್ಷೇತ್ರಗಳಿಗೆ ಹೋದ

ಮನುಷ್ಯನು ಸ್ವರ್ಗಲೋಕದಲ್ಲಿ ಪೂಜ್ಯನಾಗುವನು. ಅಲ್ಲಿಂದ ತ್ರಿಶೂಲಖಾತವೆಂಬ ತೀರ್ಥಕ್ಕೆ ಹೋಗಿ ಸ್ನಾನ ಮಾಡಿ ದೇವತೆಗಳಿಗೂ ಪಿತೃಗಳಿಗೂ ತರ್ಪಣಮಾಡಿ ಶರೀರತ್ಯಾಗವಮಾಡಿದವನು ಪ್ರಮಥಗಣಾಧಿಪತ್ಯವನ್ನು ಹೊಂದುವನು. ಅಲ್ಲಿಂದ ಶಾಕಂಭರೀದೇವಿಗೆ ವಾಸಸ್ಥಾನವಾಗಿ ಮೂರು ಲೋಕದಲ್ಲೂ ಪ್ರಸಿದ್ಧವಾದ ಶಾಕಂಭರೀಕ್ಷೇತ್ರಕ್ಕೆ ಹೋಗಬೇಕು. ಅಲ್ಲಿ ಆ ದೇವಿಯು ತಿಂಗಳಿಗೆ ಒಂದಾವರ್ತಿ ಶಾಕಾಹಾರವನ್ನು ಮಾಡಿಕೊಂಡು ಒಂದು ದಿವ್ಯ ಸಹಸ್ರವರ್ಷ ವ್ರತನಿಷ್ಠಳಾಗಿದ್ದಳು. ಆ ದೇವಿಯು ತನ್ನ ದರ್ಶನಾರ್ಥವಾಗಿ ತಪೋಧನರಾದ ಋಷಿಗಳು ಭಕ್ತಿಯಿಂದ ಬರಲು, ಅವರಿಗೆಲ್ಲಾ ಶಾಕದಿಂದ ಆತಿಥ್ಯವನ್ನು ಮಾಡಿದಳು. ಆದ್ದರಿಂದ ಆಕೆಗೆ ಶಾಕಂಭರಿಯೆಂದು ಹೆಸರುಂಟಾಯಿತು. ಅಲ್ಲಿಗೆ ಹೋಗಿ ಬ್ರಹ್ಮಚರ್ಯವ್ರತದಿಂದ ಮೂರು ದಿವಸ ಶಾಕಾಹಾರವನ್ನು ಮಾಡಿಕೊಂಡಿದ್ದವನಿಗೆ ಹನ್ನೆರಡುವರುಷ ಶಾಕಾಹಾರವನ್ನು ಮಾಡಿಕೊಂಡಿದ್ದರೆ ಯಾವ ಫಲವುಂಟಾಗುವದೋ ಆ ಫಲವು ದೇವಿಯ ಅನುಗ್ರಹದಿಂದ ಉಂಟಾಗುವದು. ಅಲ್ಲಿಂದ ಮೂರುಲೋಕದಲ್ಲೂ ಪ್ರಸಿದ್ಧವಾದ ಸುವರ್ಣಾಖ್ಯವೆಂಬ ಕ್ಷೇತ್ರಕ್ಕೆ ಹೋಗಬೇಕು. ಅಲ್ಲಿ ವಿಷ್ಣುವು ಈಶ್ವರನ ಅನುಗ್ರಹವನ್ನು ಸಂಪಾದಿಸಬೇಕೆಂದು ಈಶ್ವರನನ್ನು ಆರಾಧನೆ ಮಾಡಿ, ದೇವತೆಗಳಿಗೂ ದುರ್ಲಭಗಳಾದ ವರಗಳನ್ನು ಪಡೆದನು. ಆಗ ಸಂತುಷ್ಟನಾದ ಈಶ್ವರನು—ಎಲೈ ಮಹಾವಿಷ್ಣುವೆ, ಲೋಕದಲ್ಲೆಲ್ಲಾ ನೀನು ಮುಖ್ಯನೆಂದೆನ್ನಿಸಿಕೊಂಡು ಎಲ್ಲರಿಗೂ ಪ್ರೀತಿಪಾತ್ರನಾಗುವೆ—ಎಂದು ನುಡಿದನು. ಆ ಪುಣ್ಯಕ್ಷೇತ್ರಕ್ಕೆ ಹೋಗಿ ಈಶ್ವರನನ್ನು ಪೂಜಿಸಿದವನು ಅಶ್ವಮೇಧಫಲವನ್ನು ಹೊಂದಿ ಪ್ರಮಥಗಣಾಧಿಪತ್ಯವನ್ನು ಹೊಂದುವನು. ಅಲ್ಲಿಂದ ಧೂಮಾವತಿಯೆಂಬ ಕ್ಷೇತ್ರಕ್ಕೆ ಹೋಗಿ ಮೂರುರಾತ್ರಿ ಉಪವಾಸಮಾಡಿದವನು ಮನಸ್ಸಿಗೆ ಬೇಕಾದ ಇಷ್ಟಾರ್ಥವನ್ನೆಲ್ಲಾ ಪಡೆಯುವನು. ಆ ಶಾಕಂಭರೀಕ್ಷೇತ್ರಕ್ಕೆ ದಕ್ಷಿಣಭಾಗದಲ್ಲಿ ರಥಾವರ್ತವೆಂಬ ಕ್ಷೇತ್ರವಿರುವದು. ವಿಶ್ವಾಸದಿಂದ ಅಲ್ಲಿಗೆ ಹೋದವನು ಮಹಾದೇವನ ಅನುಗ್ರಹದಿಂದ ಉತ್ತಮವಾದ ಗತಿಯನ್ನು ಪಡೆಯುವನು. ಅಲ್ಲಿಂದ ಪ್ರದಕ್ಷಿಣೆಯಾಗಿ ಹೊರಟು ಸರ್ವಪಾಪಪರಿಹಾರಕವಾದ ಧಾರಾತೀರ್ಥಕ್ಕೆ ಹೋಗಿ ಅಲ್ಲಿ ಸ್ನಾನಮಾಡಿದವನು ಎಂದಿಗೂ ದುಃಖವನ್ನು ಪಡೆಯದಿರುವನು. ಅಲ್ಲಿಂದ ಹೊರಟು ಮಹಾಪರ್ವತಕ್ಕೆ ನಮಸ್ಕಾರಮಾಡಿ ಸ್ವರ್ಗದ್ವಾರಕ್ಕೆ ಸಮಾನವಾದ ಗಂಗಾದ್ವಾರಕ್ಕೆ ಹೋಗಿ ಕೋಟಿತೀರ್ಥದಲ್ಲಿ ಸ್ನಾನಮಾಡಿ ಒಂದು ರಾತ್ರಿ ಉಪವಾಸಮಾಡಿದವನು ಸಹಸ್ರಗೋದಾನದ ಫಲವನ್ನೂ ಪೌಂಡರೀಕಯಜ್ಞದ ಫಲವನ್ನೂ ಪಡೆದು ತನ್ನ ಕುಲವನ್ನು ಉದ್ಧಾರಮಾಡುವನು. ಅಲ್ಲಿಂದ ಹೊರಟು ಸಪ್ತಗಂಗೆ ತ್ರಿಗಂಗೆ ಶಕ್ರಾವರ್ತ ಎಂಬ ತೀರ್ಥಗಳಲ್ಲಿ ಸ್ನಾನಮಾಡಿ ಪಿತೃಗಳಿಗೂ ದೇವತೆಗಳಿಗೂ ತರ್ಪಣಮಾಡಿದವನು ಲೋಕದಲ್ಲಿ ಪೂಜ್ಯನಾಗುವನು. ಅಲ್ಲಿಂದ ಕನಖಲವೆಂಬ ತೀರ್ಥಕ್ಕೆ ಹೋಗಿ ಸ್ನಾನಮಾಡಿ ಮೂರುರಾತ್ರಿ ಉಪವಾಸಮಾಡಿದವನು ಅಶ್ವಮೇಧದ ಫಲವನ್ನು ಪಡೆದು ಸ್ವರ್ಗಲೋಕವನ್ನು ಹೊಂದುವನು. ಅಲ್ಲಿಂದ ತೀರ್ಥಯಾತ್ರಾಪರನಾದವನು ಕಪಿಲಾವಟಕ್ಕೆ ಹೋಗಿ ಒಂದು ರಾತ್ರಿ ಉಪವಾಸಮಾಡಿದರೆ ಸಹಸ್ರಗೋದಾನದ ಫಲವನ್ನು ಪಡೆಯುವನು. ಅಲ್ಲಿಂದ ನಾಗರಾಜನಾದ ಮಹಾತ್ಮನಾದ ಕಪಿಲನ ತೀರ್ಥಕ್ಕೆ ಹೋಗಿ ಸ್ನಾನಮಾಡಿದನು ಸಹಸ್ರಕಪಿಲಾ ಗೋದಾನದ ಫಲವನ್ನು ಪಡೆಯುವನು. ಅಲ್ಲಿಂದ ಲಲಿತಕವೆಂಬ ಶಂತನುತೀರ್ಥಕ್ಕೆ ಹೋಗಿ ಸ್ನಾನಮಾಡಿದವನು ಉತ್ತಮವಾದ ಗತಿಯನ್ನು ಪಡೆಯುವನು.

ಅಲ್ಲಿಂದ ಗಂಗಾಯಮುನಾಸಂಗಮಕ್ಕೆ ಹೋಗಿ ಸ್ನಾನಮಾಡಿದವನು ಹತ್ತು ಅಶ್ವಮೇಧಯಜ್ಞಗಳ ಫಲವನ್ನು ಪಡೆದು ತನ್ನ ಕುಲವನ್ನು ಉದ್ಧಾರಮಾಡುವನು. ಅಲ್ಲಿಂದ ಲೋಕಪ್ರಸಿದ್ಧವಾದ ಸುಗಂಧವೆಂಬ ತೀರ್ಥಕ್ಕೆ ಹೋಗಿ ಸ್ನಾನಮಾಡಿದವನು ಸಕಲಪಾಪಗಳನ್ನೂ ಕಳೆದುಕೊಂಡು ಬ್ರಹ್ಮಲೋಕದಲ್ಲಿ ಪೂಜ್ಯನಾಗುವನು. ಅಲ್ಲಿಂದ ರುದ್ರಾವರ್ತಕ್ಕೆ ಹೋಗಿ ಸ್ನಾನಮಾಡಿದವನು ಸ್ವರ್ಗಲೋಕವನ್ನು ಹೊಂದುವನು. ಅಲ್ಲಿಂದ ಗಂಗಾಸರಸ್ವತೀಸಂಗಮಕ್ಕೆ ಹೋಗಿ ಸ್ನಾನಮಾಡಿದವನು ಸ್ವರ್ಗಲೋಕವನ್ನು ಪಡೆಯುವನು. ಅಲ್ಲಿರುವ ಭದ್ರಕರ್ಣೇಶ್ವರನನ್ನು ಶಾಸ್ತ್ರೋಕ್ತಕ್ರಮದಿಂದ ಪೂಜಿಸಿದವನು ಸ್ವರ್ಗಲೋಕದಲ್ಲಿ ಪೂಜ್ಯನಾಗುವನು. ಅಲ್ಲಿಂದ ಕುಬ್ಜಾಂಬರಕವೆಂಬ ಕ್ಷೇತ್ರಕ್ಕೆ ಹೋದವನು ಸಹಸ್ರಗೋದಾನದ ಫಲವನ್ನು ಪಡೆದು ಸ್ವರ್ಗಲೋಕವನ್ನು ಹೊಂದುವನು. ಅಲ್ಲಿಂದ ಅರುಂಧತೀವಟಕ್ಕೆ ಹೋಗಿ ಸಾಮುದ್ರಕತೀರ್ಥದಲ್ಲಿ ಬ್ರಹ್ಮಚರ್ಯವ್ರತನಿಷ್ಠನಾಗಿ ಸ್ನಾನ

ಮಾಡಿ ಮೂರುರಾತ್ರಿ ಉಪವಾಸಮಾಡಿದವನು ಸಹಸ್ರಗೋದಾನದ ಫಲವನ್ನೂ ಅಶ್ವಮೇಧದ ಫಲವನ್ನೂ ಪಡೆದು ತನ್ನ ಕುಲವನ್ನು ಉದ್ಧಾರಮಾಡುವನು. ಅಲ್ಲಿಂದ ಬಹ್ಮಾವರ್ತಕ್ಕೆ ಹೋಗಿ ಬ್ರಹ್ಮಚರ್ಯವ್ರತದಿಂದ ಇದ್ದುಕೊಂಡು ಸ್ನಾನಮಾಡಿದವನು ಅಶ್ವಮೇಧದ ಫಲವನ್ನು ಪಡೆದು ಚಂದ್ರಲೋಕವನ್ನು ಹೊಂದುವನು. ಅಲ್ಲಿಂದ ಯಮುನಾನದಿಯ ಉತ್ಪತ್ತಿಸ್ಥಾನಕ್ಕೆ ಹೋಗಿ ಅಲ್ಲಿ ಸ್ನಾನಮಾಡಿದವನು ಅಶ್ವಮೇಧಫಲವನ್ನು ಪಡೆದು ಸ್ವರ್ಗಲೋಕವನ್ನು ಹೊಂದುವನು. ಅಲ್ಲಿಂದ ಲೋಕಪೂಜ್ಯವಾದ ದೇವೀಸಂಕ್ರಮಣವೆಂಬ ತೀರ್ಥಕ್ಕೆ ಹೋಗಿ ಸ್ನಾನಮಾಡಿದವನು ಅಶ್ವಮೇಧದ ಫಲವನ್ನು ಪಡೆದು ಸ್ವರ್ಗಲೋಕವನ್ನು ಹೊಂದುವನು. ಬಳಿಕ ಸಿದ್ಧಗಂಧರ್ವರಿಂದ ಸೇವಿತವಾದ ಸಿಂಧುನದಿಯ ಉತ್ಪತ್ತಿಸ್ಥಾನಕ್ಕೆ ಹೋಗಿ ಸ್ನಾನಮಾಡಿ ಐದುರಾತ್ರಿ ಉಪವಾಸಮಾಡಿದವನಿಗೆ ಬಹು ಸುವರ್ಣಲಾಭವಾಗುವದು. ಅಲ್ಲಿಂದ ಹೊರಟು, ಹೋಗುವದಕ್ಕೆ ಅಶಕ್ಯವಾದ ವೇದೀತೀರ್ಥಕ್ಕೆ ಹೋಗಿ ಸ್ನಾನಮಾಡಿದವನು ಅಶ್ವಮೇಧದ ಫಲವನ್ನು ಪಡೆದು, ಸ್ವರ್ಗಲೋಕವನ್ನು ಹೊಂದುವನು. ಅಲ್ಲಿಂದ ಹೊರಟು ಋಷಿಕುಲ್ಯವೆಂಬ ಕ್ಷೇತ್ರದಲ್ಲಿ ವಾಸಿಷ್ಠವೆಂಬ ತೀರ್ಥಗಳಿಗೆ ಹೋಗಬೇಕು. ಅಲ್ಲಿರುವರೆಲ್ಲಾ ಬ್ರಾಹ್ಮಣರಾಗಿಯೇ ಇರುವರು. ಅವುಗಳಲ್ಲಿ ಸ್ನಾನಮಾಡಿ ಪಿತೃಗಳಿಗೂ ದೇವತೆಗಳಿಗೂ ಪೂಜೆಮಾಡಿದವನು ಸಕಲಪಾಪಗಳನ್ನೂ ಕಳೆದುಕೊಂಡು ಋಷಿಲೋಕವನ್ನು ಹೊಂದುವನು. ಅಲ್ಲಿಂದ ಭೃಗುತುಂಗವೆಂಬ ತೀರ್ಥಕ್ಕೆ ಹೋಗಿ ಅಲ್ಲಿ ಒಂದುತಿಂಗಳು ಶಾಕಾಹಾರಮಾಡಿಕೊಂಡಿದ್ದವನು ವಾಜಪೇಯಯಜ್ಞದ ಫಲವನ್ನು ಪಡೆಯುವನು. ಅಲ್ಲಿಂದ ಹೊರಟು ವೀರಪ್ರಮೋಕ್ಷವೆಂಬ ತೀರ್ಥಕ್ಕೆ ಹೋಗಿ ಸ್ನಾನಮಾಡಿದವನು ಸಕಲಪಾಪಗಳನ್ನೂ ಕಳೆದುಕೊಳ್ಳುವನು. ವಿಶೇಷವಾಗಿ ಕೃತ್ತಿಕಾನಕ್ಷತ್ರ ಮಖಾನಕ್ಷತ್ರಗಳಲ್ಲಿ ಅಲ್ಲಿ ಸ್ನಾನಮಾಡಿದವನು ಅಗ್ನಿಷ್ಟೋಮ ಅತಿರಾತ್ರಯಜ್ಞಗಳ ಫಲವನ್ನು ಪಡೆಯುವನು.

ಅಲ್ಲಿಂದ ವಿದ್ಯಾತೀರ್ಥಕ್ಕೆ ಹೋಗಿ ಪ್ರಾತಸ್ಸಂಧ್ಯಾಕಾಲದಲ್ಲಿ ಸ್ನಾನಮಾಡಿದವನಿಗೆ ವಿದ್ಯಾಲಾಭವುಂಟಾಗುವದು. ಅಲ್ಲಿಂದ ಮಹಾಶ್ರಮಕ್ಕೆ ಹೋಗಿ ಅಲ್ಲಿ ಒಂದುರಾತ್ರಿ ವಾಸಮಾಡಿದವನು ಸಕಲಪಾಪಗಳನ್ನೂ ಕಳೆದುಕೊಳ್ಳುವನು. ಅಲ್ಲಿ ಏಕಭುಕ್ತವನ್ನು ಮಾಡಿಕೊಂಡಿದ್ದವನಿಗೆ ಪುಣ್ಯಲೋಕಪ್ರಾಪ್ತಿಯಾಗುವದು. ಮಹಾಲಯವೊಂದುತಿಂಗಳೂ ಏಕಭುಕ್ತಮಾಡಿಕೊಂಡಿದ್ದವನು ಸಕಲಪಾಪಗಳನ್ನೂ ಕಳೆದುಕೊಂಡು ಐಶ್ವರ್ಯವನ್ನು ಪಡೆದು ಹಿಂದೂ ಮುಂದೂ ಹತ್ತುತಲೆಯ ವರೆಗೂ ತನ್ನ ಪಿತೃಗಳನ್ನೆಲ್ಲಾ ಉದ್ಧಾರಮಾಡುವನು. ಅಲ್ಲಿಂದ ಹೊರಟು ಬ್ರಹ್ಮದೇವನಿಂದ ಸೇವಿತವಾದ ವೇತಸಿಕಾತೀರ್ಥಕ್ಕೆ ಹೋಗಿ ಸ್ನಾನಮಾಡಿದವನು ಅಶ್ವಮೇಧಫಲವನ್ನು ಪಡೆದು ಶುಕ್ರಲೋಕವನ್ನು ಹೊಂದುವನು. ಅಲ್ಲಿಂದ ಹೊರಟು ಸಿದ್ಧರಿಂದ ಸೇವಿತವಾದ ಸುಂದರಿಕಾತೀರ್ಥಕ್ಕೆ ಹೋಗಿ ಸ್ನಾನಮಾಡಿದವನು ರೂಪವಂತನಾಗುವನು. ಇದನ್ನು ಪೂರ್ವಿಕರು ಕಂಡಿರುವರು. ಬಳಿಕ ಬ್ರಹ್ಮಚರ್ಯದಿಂದ ಬ್ರಾಹ್ಮಣೀತೀರ್ಥಕ್ಕೆ ಹೋಗಿ ಸ್ನಾನಮಾಡಿದವನು ಪದ್ಮವರ್ಣವಾದ ವಿಮಾನವನ್ನೇರಿ ಬ್ರಹ್ಮಲೋಕವನ್ನು ಹೊಂದುವನು. ಅಲ್ಲಿಂದ ಸಕಲಸಿದ್ಧರಿಂದಲೂ ಸೇವಿತವಾದ ನೈಮಿಷಾರಣ್ಯಕ್ಕೆ ಹೋಗಬೇಕು. ಅಲ್ಲಿ ಸಕಲದೇವತೆಗಳಿಂದಲೂ ಕೂಡಿ ಬ್ರಹ್ಮದೇವನು ವಾಸಮಾಡುತ್ತಿರುವನು. ನೈಮಿಷಾರಣ್ಯಕ್ಕೆ ಹೋಗುವನೆಂದು ಎಣಿಸಿದ ಮಾತ್ರಕ್ಕೆ ಅರ್ಧಪಾಪ ಪರಿಹಾರವಾಗುವದು ; ಅಲ್ಲಿಗೆ ಹೋದ ಬಳಿಕ ಸಕಲಪಾಪವೂ ಪರಿಹಾರವಾಗುವದು ; ಅಲ್ಲಿ ಒಂದುತಿಂಗಳು ವಾಸಮಾಡಿದ್ದೇ ಆದರೆ, ಭೂಮಂಡಲದಲ್ಲಿರುವ ಸಕಲತೀರ್ಥಗಳಲ್ಲೂ ಸ್ನಾನಮಾಡಿದ ಫಲವುಂಟಾಗುವದು ; ಅಲ್ಲಿ ಅಹಾರನಿಯಮವನ್ನು ಮಾಡಿಕೊಂಡು ಸ್ನಾನವನ್ನು ಮಾಡಿದವನು ಗೋಮೇಧಯಜ್ಞದ ಫಲವನ್ನು ಪಡೆದು ತನ್ನ ಏಳುಕುಲವನ್ನೂ ಉದ್ಧಾರಮಾಡುವನು. ಪುಣ್ಯತಮವಾದ ಉತ್ತಮವಾದ ಆ ನೈಮಿಷಾರಣ್ಯದಲ್ಲಿ ಉಪವಾಸಮಾಡಿ ಯಾವ ಮನುಷ್ಯನು ಪ್ರಾಣವನ್ನು ಬಿಡುವನೋ, ಆತನು ಎಲ್ಲಾ ಪುಣ್ಯಲೋಕಗಳಲ್ಲೂ ಸಂತೋಷವನ್ನು ಪಡೆಯುವನೆಂದು ದೊಡ್ಡವರು ಹೇಳುವರು. ಅಲ್ಲಿಂದ ಗಂಗೋದ್ಭೇದಕ್ಕೆ ಹೋಗಿ ಮೂರುರಾತ್ರಿ ಉಪವಾಸಮಾಡಿದವನು ವಾಜಪೇಯಯಜ್ಞದ ಫಲವನ್ನು ಹೊಂದಿ ಬ್ರಹ್ಮಜ್ಞಾನಿಯಾಗುವನು. ಅಲ್ಲಿರುವ ಸರಸ್ವತೀತೀರ್ಥಕ್ಕೆ ಹೋಗಿ ಸ್ನಾನಮಾಡಿ ಪಿತೃಗಳಿಗೂ ದೇವತೆಗಳಿಗೂ ತರ್ಪಣಮಾಡಿದವನು ಸಾರಸ್ವತಲೋಕದಲ್ಲಿ ಸಂತೋಷವನ್ನು ಪಡೆಯುವನು. ಅಲ್ಲಿಂದ ಬಾಹುದಾನದಿಗೆ ಹೋಗಿ ಸ್ನಾನಮಾಡಿ ಬ್ರಹ್ಮಚರ್ಯ

ವ್ರತದಿಂದ ಒಂದುರಾತ್ರಿ ಅಲ್ಲಿದ್ದವನು ಸ್ವರ್ಗಲೋಕವನ್ನು ಹೊಂದುವನು, ಮತ್ತು ಆತನು ಸತ್ರಯಾಗದ ಫಲವನ್ನು ಹೊಂದುವನು. ಅಲ್ಲಿಂದ ಹೊರಟು ಪುಣ್ಯಶಾಲಿಗಳಾದ ಜನರಿಂದ ಸೇವಿತವಾದ ಪುಣ್ಯತಮವಾದ ಕ್ಷೀರವತೀನದಿಗೆ ಹೋಗಿ ಸ್ನಾನಮಾಡಿ ಪಿತೃಗಳನ್ನೂ ದೇವತೆಗಳನ್ನೂ ಪೂಜಿಸಿದವನು ವಾಜಪೇಯಯಜ್ಞದ ಫಲವನ್ನು ಪಡೆಯುವನು. ಅಲ್ಲಿಂದ ವಿಮಲಾಶೋಕವೆಂಬ ತೀರ್ಥಕ್ಕೆ ಹೋಗಿ ಸ್ನಾನಮಾಡಿ ಒಂದುರಾತ್ರಿ ಉಪವಾಸಮಾಡಿದವನು ಸ್ವರ್ಗಲೋಕವನ್ನು ಹೊಂದುವನು. ಅಲ್ಲಿ ಸರಯೂನದಿಯಲ್ಲಿರುವ ಗೋಪ್ರತಾರವೆಂಬ ತೀರ್ಥಕ್ಕೆ ಹೋಗಬೇಕು. ಅಲ್ಲಿ ದಶರಥರಾಮನು ತನ್ನ ಪರಿವಾರದೊಡನೆ ದೇಹವನ್ನು ಬಿಟ್ಟು, ಆ ತೀರ್ಥದ ಮಹಿಮೆಯಿಂದ ಸ್ವರ್ಗಲೋಕವನ್ನು ಹೊಂದಿರುವನು. ಆ ತೀರ್ಥದಲ್ಲಿ ಸ್ನಾನಮಾಡಿದವನು ರಾಮನ ಅನುಗ್ರಹದಿಂದ ಸಕಲಪಾಪಗಳನ್ನೂ ಕಳೆದುಕೊಂಡು ಪರಿಶುದ್ಧಾತ್ಮನಾಗಿ ಸ್ವರ್ಗಲೋಕವನ್ನು ಹೊಂದುವನು. ಅಲ್ಲಿಂದ ಗೋಮತೀ ನದಿಯಲ್ಲಿರುವ ರಾಮತೀರ್ಥಕ್ಕೆ ಹೋಗಿ ಸ್ನಾನಮಾಡಿದವನು ಅಶ್ವಮೇಧಫಲವನ್ನು ಪಡೆದು ತನ್ನ ಕುಲವನ್ನು ಉದ್ಧಾರಮಾಡುವನು. ಅಲ್ಲಿಯೇ ಶತಸಾಹಸ್ರಕವೆಂಬ ತೀರ್ಥವಿರುವದು; ಅಲ್ಲಿ ನೇಮದಿಂದ ಸ್ನಾನಮಾಡಿದವನು ಸಹಸ್ರಗೋದಾನದ ಫಲವನ್ನು ಪಡೆಯುವನು.

ಅಲ್ಲಿಂದ ಉತ್ತಮವಾದ ಭರ್ತೃಸ್ನಾನವೆಂಬ ತೀರ್ಥಕ್ಕೆ ಹೋಗಿ ಸ್ನಾನವನ್ನು ಮಾಡಿದವನು ಅಶ್ವಮೇಧದ ಫಲವನ್ನು ಪಡೆಯುವನು; ಅಲ್ಲಿರುವ ಕೋಟಿತೀರ್ಥದಲ್ಲಿ ಸ್ನಾನಮಾಡಿ ಕುಮಾರಸ್ವಾಮಿಯನ್ನು ಪೂಜೆಮಾಡಿದವನು ಸಹಸ್ರಗೋದಾನದ ಫಲವನ್ನು ಪಡೆದು ತೇಜೋವಂತನಾಗುವನು. ಅಲ್ಲಿಂದ ವಾರಣಾಸೀಕ್ಷೇತ್ರಕ್ಕೆ ಹೋಗಿ ಈಶ್ವರನನ್ನು ಪೂಜೆಮಾಡಿ ಕಪಿಲಾಹ್ರದತೀರ್ಥದಲ್ಲಿ ಸ್ನಾನಮಾಡಿದವನು ರಾಜಸೂಯಯಜ್ಞದ ಫಲವನ್ನು ಪಡೆಯುವನು. ಅಲ್ಲಿಂದ ಅವಿಮುಕ್ತವೆಂಬ ತೀರ್ಥಕ್ಕೆ ಹೋಗಿ ಅದನ್ನು ನೋಡಿದ ಮಾತ್ರದಿಂದಲೇ ಬ್ರಹ್ಮಹತ್ಯಾದೋಷವು ಪರಿಹಾರವಾಗುವದು. ಅಲ್ಲಿಂದ ದುರ್ಲಭವಾದ ಮಾರ್ಕಂಡೇಯತೀರ್ಥಕ್ಕೆ ಹೋಗಿ ಸ್ನಾನಮಾಡಿ ಪ್ರಾಣವನ್ನು ಬಿಟ್ಟವನು ಮೋಕ್ಷವನ್ನು ಪಡೆಯುವನು. ಅಲ್ಲಿಂದ ಲೋಕಪ್ರಸಿದ್ಧವಾದ ಗೋಮತೀಗಂಗಾಸಂಗಮಕ್ಕೆ ಹೋಗಿ ಸ್ನಾನವನ್ನು ಮಾಡಿದವನು ಅಗ್ನಿಷ್ಟೋಮ ಫಲವನ್ನು ಪಡೆದು ತನ್ನ ಕುಲವನ್ನು ಉದ್ಧಾರಮಾಡುವನು. ಅಲ್ಲಿಂದ ಗಯೆಗೆ ಹೋಗಿ ಬ್ರಹ್ಮಚರ್ಯವ್ರತದಿಂದಿದ್ದವನು ಅಶ್ವಮೇಧಫಲವನ್ನು ಪಡೆದು ತನ್ನ ಕುಲವನ್ನು ಉದ್ಧಾರಮಾಡುವನು. ಆ ಗಯೆಯಲ್ಲಿ ಪ್ರಸಿದ್ಧವಾದ ಅಕ್ಷಯವಟವೆಂಬ ವಟವೃಕ್ಷವಿರುವದು; ಆ ವೃಕ್ಷದ ಕೆಳಗೆ ತಮ್ಮ ಪಿತೃಗಳಿಗೆ ಪಿಂಡಪ್ರದಾನವನ್ನು ಮಾಡಿದ್ದೇ ಆದರೆ ಅದು ಅಕ್ಷಯವಾಗುವದು. ಬಳಿಕ ಮಹಾನದಿಯಲ್ಲಿ ಸ್ನಾನಮಾಡಿ ಪಿತೃಗಳಿಗೂ ದೇವತೆಗಳಿಗೂ ತರ್ಪಣ ಮಾಡಿದವನು ಅಕ್ಷಯವಾದ ಲೋಕವನ್ನು ಹೊಂದಿ ತನ್ನ ಕುಲವನ್ನು ಉದ್ಧಾರಮಾಡುವನು. ಅಲ್ಲಿಂದ ಹೊರಟು ಧರ್ಮಾರಣ್ಯದಿಂದ ಶೋಭಿತವಾದ ಬ್ರಹ್ಮಶಿರಸ್ಸಿಗೆ ಹೋಗಿ ಸಾಯಂಪ್ರಾತಃಕಾಲಗಳಲ್ಲಿ ಸ್ನಾನಮಾಡಿದವನು ಬ್ರಹ್ಮಲೋಕವನ್ನು ಹೊಂದುವನು. ಆ ಸರೋವರದಲ್ಲೇ ಬ್ರಹ್ಮದೇವನು ಯಜ್ಞವನ್ನು ಮಾಡಿ ಯೂಪಸ್ತಂಭವನ್ನು ನೆಟ್ಟಿರುವನು; ಅದಕ್ಕೆ ಪ್ರದಕ್ಷಿಣೆ ಮಾಡಿದವನು ವಾಜಪೇಯಯಜ್ಞದ ಫಲವನ್ನು ಪಡೆಯುವನು. ಅಲ್ಲಿಂದ ಹೊರಟು ಲೋಕಪ್ರಸಿದ್ಧವಾದ ಧೇನುಕವೆಂಬ ಪರ್ವತಕ್ಕೆ ಹೋಗಿ ಅಲ್ಲಿ ತಿಲಧೇನುವನ್ನು ದಾನಮಾಡಿ ಒಂದು ರಾತ್ರಿ ಉಪವಾಸ ಮಾಡಿದವನು ಸಕಲ ಪಾಪವನ್ನೂ ಕಳೆದುಕೊಂಡು ಶುದ್ಧಾತ್ಮನಾಗಿ ಚಂದ್ರಲೋಕವನ್ನು ಹೊಂದುವನು. ಆ ಸ್ಥಳದಲ್ಲಿ ಈಗಲೂ ಕರುವಿನಿಂದ ಕೂಡಿ ಸಂಚರಿಸುವ ಒಂದು ಕಪಿಲಾಧೇನುವಿನ ಕಾಲಿನ ಗುರುತುಗಳು ಆಶ್ಚರ್ಯಕರವಾಗಿ ಕಾಣಿಸುತ್ತಿರುವವು. ಅದನ್ನು ಸ್ಪರ್ಶಮಾಡಿದ್ದೇ ಆದರೆ ಸಕಲವಾದ ಅಮಂಗಳವೂ ಪರಿಹಾರವಾಗುವದು. ಅಲ್ಲಿಂದ ಮಹಾನುಭಾವನಾದ ಈಶ್ವರನಿಗೆ ವಾಸಸ್ಥಾನವಾದ ಗೃಧ್ರವಟವೆಂಬ ಕ್ಷೇತ್ರಕ್ಕೆ ಹೋಗಿ ಭಸ್ಮಸ್ನಾನಮಾಡಿ ಈಶ್ವರನನ್ನು ಪೂಜಿಸಿದ ಬ್ರಾಹ್ಮಣನು ಹನ್ನೆರಡುವರುಷ ಮಾಡಿದ ಉತ್ತಮವಾದ ವ್ರತದ ಪುಣ್ಯವನ್ನು ಪಡೆಯುವನು; ಇತರ ವರ್ಣದವರು ಹಾಗೆ ನಡೆದುಕೊಂಡರೆ ಸಕಲ ಪಾಪವನ್ನೂ ಕಳೆದುಕೊಳ್ಳುವರು. ಬಳಿಕ ಗಂಧರ್ವರ ಗಾನದಿಂದ ಮನೋಹರವಾದ ಉದಯಪರ್ವತಕ್ಕೆ ಹೋಗಬೇಕು. ಅಲ್ಲಿ ಸಾವಿತ್ರೀದೇವಿಯ ಹೆಜ್ಜೆಯಿರುವದು. ಅಲ್ಲಿ ಬ್ರಾಹ್ಮ

ಣನು ವ್ರತನಿಷ್ಠನಾಗಿ ಸಂಧ್ಯಾವಂದನೆಯನ್ನು ಮಾಡಿದ್ದೇ ಆದರೆ, ಹನ್ನೆರಡುವರುಷ ಸಂಧ್ಯಾವಂದನೆಯನ್ನು ಮಾಡಿದ ಫಲವನ್ನು ಹೊಂದುವನು. ಅಲ್ಲಿಯೇ ಯೋನಿದ್ವಾರವೆಂಬ ಸ್ಥಳವಿರುವದು. ಅಲ್ಲಿಗೆ ಹೋದ ಪುರುಷನು ಪುನರ್ಜನ್ಮ ವನ್ನು ಪಡೆಯದಿರುವನು. ಕೃಷ್ಣಪಕ್ಷದಲ್ಲೂ ಶುಕ್ಲಪಕ್ಷದಲ್ಲೂ ಯಾವ ಪುರುಷನು ಗಯಾಕ್ಷೇತ್ರದಲ್ಲಿ ವಾಸ ಮಾಡುವನೋ, ಆತನು ತನ್ನ ಏಳು ಕುಲವನ್ನೂ ಉದ್ಧಾರಮಾಡುವನು. ಲೋಕದಲ್ಲಿ ಅನೇಕಮಂದಿ ಪುತ್ರರಿ ದ್ದರೆ ಅವರಲ್ಲಿ ಒಬ್ಬನಾದರೂ ಗಯಾಕ್ಷೇತ್ರಕ್ಕೆ ಹೋಗಿ ಪಿತೃಗಳಿಗೆ ಪಿಂಡಪ್ರದಾನವನ್ನು ಮಾಡಿಯಾನು ? ಆದ್ದ ರಿಂದ ಪುಣ್ಯವಂತರಾದವರು ಅನೇಕಮಂದಿ ಪುತ್ರರನ್ನು ಅಪೇಕ್ಷಿಸಬೇಕು, ಅಥವಾ ಅಶ್ವಮೇಧಯಾಗವನ್ನಾಗಲೀ ನೀಲವೃಷೋತ್ಸರ್ಜನವನ್ನಾಗಲೀ ಮಾಡಬೇಕು. ಅಲ್ಲಿಂದ ಫಲ್ಗುನೀನದಿಗೆ ಹೋಗಿ ಸ್ನಾನಮಾಡಿದವನು ಅಶ್ವಮೇಧ ಫಲವನ್ನು ಪಡೆದು ಮಹತ್ತಾದ ಸಿದ್ಧಿಯನ್ನು ಪಡೆಯುವನು.

ಅನಂತರದಲ್ಲಿ ನಿರಂತರದಲ್ಲೂ ಧರ್ಮಪುರುಷನು ಸನ್ನಿಹಿತನಾಗಿರತಕ್ಕ ಧರ್ಮಪ್ರಸ್ಥಕ್ಷೇತ್ರಕ್ಕೆ ಹೋಗಿ, ಅಲ್ಲಿ ಒಂದು ಬಾವಿಯನ್ನು ತೋಡಿ, ಆವುದಕದಲ್ಲಿ ಸ್ನಾನಮಾಡಿ ಶುಚಿರ್ಭೂತನಾಗಿ ಪಿತೃಗಳಿಗೂ ದೇವತೆಗ ಳಿಗೂ ತರ್ಪಣವನ್ನು ಮಾಡಿದವನು ಸಕಲಪಾಪಗಳನ್ನೂ ಕಳೆದುಕೊಂಡು ಸ್ವರ್ಗವನ್ನು ಹೊಂದುವನು. ಅಲ್ಲಿಂದ ಮಹಾತ್ಮರಾದ ಮತಂಗಮಹರ್ಷಿಗಳ ಆಶ್ರಮವನ್ನು ಪ್ರವೇಶಿಸಿದವನು ಸಕಲದುಃಖಗಳನ್ನೂ ನಿವೃತ್ತಿ ಮಾಡಿಕೊಂಡು ಗೋಮೇಧಯಜ್ಞದ ಫಲವನ್ನು ಪಡೆಯುವನು. ಅಲ್ಲಿರತಕ್ಕ ಧರ್ಮಪುರುಷನನ್ನು ಸ್ಪರ್ಶ ಮಾಡಿದವನು ಅಶ್ವಮೇಧದ ಫಲವನ್ನು ಪಡೆಯುವನು. ಅಲ್ಲಿಂದ ಉತ್ತಮವಾದ ಬ್ರಹ್ಮಸ್ಥಾನಕ್ಕೆ ಹೋಗಿ ಬ್ರಹ್ಮ ದೇವರಿಗೆ ನಮಸ್ಕಾರಮಾಡಿದವನು ರಾಜಸೂಯಾಶ್ವಮೇಧಯಾಗಗಳ ಫಲವನ್ನು ಪಡೆಯುವನು. ಅಲ್ಲಿಂದ ರಾಜಗೃಹವೆಂಬ ತೀರ್ಥಕ್ಕೆ ಹೋಗಿ ಸ್ನಾನಮಾಡಿದವನು ಕಾಕ್ಷೀವಂತಋಷಿಯಂತೆ ಸಂತುಷ್ಟನಾಗುವನು. ಅಲ್ಲಿರುವ ಯಕ್ಷಿಣಿಗೆ ನಿವೇದನಮಾಡಿದ ಪ್ರಸಾದವನ್ನು ಭುಂಜಿಸಿದವನಿಗೆ ಆ ಯಕ್ಷಿಣಿಯ ಅನುಗ್ರಹದಿಂದ ಬ್ರಹ್ಮಹತ್ಯಾದೋಷವು ಪರಿಹಾರವಾಗುವದು. ಅಲ್ಲಿಂದ ಮಣಿನಾಗವೆಂಬ ತೀರ್ಥಕ್ಕೆ ಹೋಗಿ ಆ ತೀರ್ಥವನ್ನು ಪಾನಮಾಡಿ ಒಂದುರಾತ್ರಿ ಅಲ್ಲಿ ವಾಸಮಾಡಿದವನು ಸಹಸ್ರಗೋದಾನದ ಫಲವನ್ನು ಪಡೆಯುವನು. ಅಂಥವನಿಗೆ ಸರ್ಪವು ಕಚ್ಚಿದರೂ ಆ ವಿಷದ ಬಾಧೆಯು ಉಂಟಾಗದಿರುವದು. ಅಲ್ಲಿಂದ ಹೊರಟು ಮಹರ್ಷಿಗಳಾದ ಗೌತ ಮರ ಆಶ್ರಮಕ್ಕೆ ಹೋಗಿ ಅಹಲ್ಯಾಹ್ರದದಲ್ಲಿ ಸ್ನಾನಮಾಡಿದವನು ಐಶ್ವರ್ಯವನ್ನೂ ಉತ್ತಮವಾದ ಗತಿಯನ್ನೂ ಪಡೆ ಯುವನು. ಅಲ್ಲಿ ಮೂರುಲೋಕದಲ್ಲೂ ಪ್ರಸಿದ್ಧವಾದ ಒಂದು ಕೆರೆಯಿರುವದು. ಅದರಲ್ಲಿ ಸ್ನಾನಮಾಡಿ ದವನು ಅಶ್ವಮೇಧಯಾಗದ ಫಲವನ್ನು ಪಡೆಯುವನು. ಅಲ್ಲಿಂದ ಹೊರಟರೆ ಜನಕರಾಯನು ನಿರ್ಮಾಣಮಾಡಿದ ದೇವತೆಗಳಿಂದ ಪೂಜಿತವಾದ ಒಂದು ಬಾವಿ ಸಿಕ್ಕುವದು. ಆ ತೀರ್ಥದಲ್ಲಿ ಸ್ನಾನಮಾಡಿದವನು ವಿಷ್ಣುಲೋಕ ವನ್ನು ಹೊಂದುವನು. ಅಲ್ಲಿಂದ ಸಕಲ ಪಾಪಪರಿಹಾರಕವಾದ ವಿನಶನವೆಂಬ ಕ್ಷೇತ್ರಕ್ಕೆ ಹೋದವನು ಅಶ್ವಮೇಧ ಯಜ್ಞದ ಫಲವನ್ನು ಪಡೆದು ಚಂದ್ರಲೋಕವನ್ನು ಹೊಂದುವನು. ಅಲ್ಲಿಂದ ಸಕಲತೀರ್ಥಗಳಲ್ಲೂ ಶ್ರೇಷ್ಠ ವಾದ ಗಂಡಕೀನದಿಗೆ ಹೋಗಿ ಸ್ನಾನಮಾಡಿದವನು ಅಶ್ವಮೇಧಫಲವನ್ನು ಪಡೆದು ಸೂರ್ಯಲೋಕವನ್ನು ಹೊಂದು ವನು. ಅಲ್ಲಿಂದ ಲೋಕಪ್ರಸಿದ್ಧವಾದ ವಿಶಲ್ಯಾನದಿಗೆ ಹೋಗಿ ಸ್ನಾನಮಾಡಿದವನು ಅಗ್ನಿಷ್ಟೋಮಫಲವನ್ನು ಪಡೆದು ಸ್ವರ್ಗಲೋಕವನ್ನು ಹೊಂದುವನು. ಅಲ್ಲಿಂದ ಅಧಿವಂಗವೆಂಬ ತಪೋವನಕ್ಕೆ ಹೋದವನು ಗುಹ್ಯಕ ಲೋಕವನ್ನು ಹೊಂದಿ ಸಂತೋಷಪಡುವನು. ಅಲ್ಲಿಂದ ಹೊರಟು ಸಿದ್ಧರಿಂದ ಸೇವಿತವಾದ ಕಂಪನಾನದಿಗೆ ಹೋಗಿ ಸ್ನಾನಮಾಡಿದವನು ಪೌಂಡರೀಕಯಜ್ಞದ ಫಲವನ್ನು ಪಡೆದು ಸ್ವರ್ಗಲೋಕವನ್ನು ಹೊಂದುವನು. ಅಲ್ಲಿಂದ ಹೊರಟು ಮಹೇಶ್ವರಧಾರೆಗೆ ಹೋಗಿ ಸ್ನಾನಮಾಡಿದವನು ಅಶ್ವಮೇಧದ ಫಲವನ್ನು ಪಡೆದು ತನ್ನ ಕುಲವನ್ನು ಉದ್ಧಾರಮಾಡುವನು. ಅಲ್ಲಿಂದ ದೇವಪುಷ್ಕರಣಿಗೆ ಹೋಗಿ ಸ್ನಾನಮಾಡಿದವನು ಅಶ್ವಮೇಧದ ಫಲವನ್ನು ಪಡೆದು ಉತ್ತಮವಾದ ಗತಿಯನ್ನು ಹೊಂದುವನು. ಅಲ್ಲಿಂದ ಹೊರಟು ಬ್ರಹ್ಮಚರ್ಯವ್ರತನಿಷ್ಠನಾಗಿ ಸೋಮಪದ ಕ್ಷೇತ್ರಕ್ಕೆ ಹೋಗಿ ಮಹೇಶ್ವರಪದವೆಂಬ ತೀರ್ಥದಲ್ಲಿ ಸ್ನಾನಮಾಡಿದವನು ಅಶ್ವಮೇಧದ ಫಲವನ್ನು ಪಡೆಯುವನು.

ಅಲ್ಲಿ ಒಂದುಕೋಟಿ ತೀರ್ಥಗಳು ಸೇರಿರುವವು. ಅಲ್ಲಿ ಒಬ್ಬ ದುರಾತ್ಮನಾದ ಅಸುರನು ಆ ತೀರ್ಥವನ್ನು ಅಪಹಾರಮಾಡುವದನ್ನು ನೋಡಿ ಆತನನ್ನು ಸಂಹಾರಮಾಡಿ ಕೂರ್ಮರೂಪವನ್ನು ಧಾರಣೆಮಾಡಿದ ಮಹಾವಿಷ್ಣುವು ಆ ತೀರ್ಥವನ್ನು ಉದ್ಧಾರಮಾಡಿರುವನು. ಅಲ್ಲಿ ಸ್ನಾನಮಾಡಿದವನು ಪೌಂಡರೀಕಯಜ್ಞದ ಫಲವನ್ನು ಪಡೆದು ವಿಷ್ಣುಲೋಕಕ್ಕೆ ಹೋಗುವನು. ಅಲ್ಲಿಂದ ಹೊರಟು ನಾರಾಯಣಸ್ಥಾನಕ್ಕೆ ಹೋಗಬೇಕು. ಅಲ್ಲಿ ನಾರಾಯಣನು ಯಾವಾಗಲೂ ಸನ್ನಿಹಿತನಾಗಿರುವನು. ಆತನನ್ನು ಬ್ರಹ್ಮಾದಿದೇವತೆಗಳೂ, ಸಕಲರಾದ ಋಷಿಗಳೂ, ದ್ವಾದಶಾದಿತ್ಯರೂ, ಏಕಾದಶರುದ್ರರೂ, ಯಾವಾಗಲೂ ಸೇವಿಸುತ್ತಿರುವರು. ಆಶ್ಚರ್ಯಕರವಾದ ಚರಿತ್ರೆಯುಳ್ಳ ಮಹಾವಿಷ್ಣುವು ಆ ಸ್ಥಳದಲ್ಲಿ ಸಾಲಗ್ರಾಮರೂಪದಿಂದ ಪ್ರಸಿದ್ಧಿಯನ್ನು ಪಡೆದಿರುವನು. ಅಂಥ ನಾರಾಯಣನ ದರ್ಶನವನ್ನು ಮಾಡಿದವನು ಅಶ್ವಮೇಧದ ಫಲವನ್ನು ಪಡೆದು ವಿಷ್ಣುಲೋಕವನ್ನು ಹೊಂದುವನು. ಅಲ್ಲಿಯೇ ಸಕಲ ಪಾಪಪರಿಹಾರಕವಾದ ಒಂದು ಬಾವಿಯಿರುವದು. ಅದರಲ್ಲಿ ನಾಲ್ಕು ಸಮುದ್ರಗಳ ತೀರ್ಥಗಳೂ ಯಾವಾಗಲೂ ಸನ್ನಿಹಿತವಾಗಿರುವವು. ಅಲ್ಲಿ ಸ್ನಾನಮಾಡಿದವನು ಉತ್ತಮವಾದ ಗತಿಯನ್ನು ಪಡೆಯುವನು. ಅಲ್ಲಿರುವ ಮಹಾದೇವನ ದರ್ಶನವನ್ನು ಮಾಡಿದವನು ಪಾಪರಹಿತನಾಗಿ ಮೇಘಮಂಡಲದಿಂದ ಈಚೆಗೆ ಬಂದ ಚಂದ್ರನಂತೆ ಪ್ರಕಾಶಿಸುವನು. ಅಲ್ಲಿಂದ ಹೊರಟು ನೇಮದಿಂದ ಜಾತಿಸ್ಮರವೆಂಬ ತೀರ್ಥಕ್ಕೆ ಹೋಗಿ ಸ್ನಾನಮಾಡಿ ಶುಚಿರ್ಭೂತನಾದವನಿಗೆ ಪೂರ್ವಜನ್ಮಸ್ಮರಣೆಯುಂಟಾಗುವದು. ಅಲ್ಲಿರುವ ವೃಷಭಧ್ವಜನಾದ ಈಶ್ವರನಿಗೆ ಪೂಜೆಮಾಡಿ ಉಪವಾಸವನ್ನು ಮಾಡಿದವನು ಬೇಕಾದ ಇಷ್ಟಾರ್ಥಗಳನ್ನು ಪಡೆಯುವನು. ಅಲ್ಲಿಂದ ಹೊರಟು ಸಕಲಪಾಪಪರಿಹಾರಕನಾದ ವಾಮನರೂಪವನ್ನು ಧರಿಸಿರುವ ನಾರಾಯಣನ ಸನ್ನಿಧಿಗೆ ಹೋಗಿ ಆತನಿಗೆ ನಮಸ್ಕಾರಮಾಡಿದವನು ಉತ್ತಮವಾದ ಗತಿಯನ್ನು ಹೊಂದುವನು. ಅಲ್ಲಿಂದ ಹೊರಟು ಸಕಲ ಪಾಪಪರಿಹಾರಕವಾದ ಕುಶಿಕಾಶ್ರಮಕ್ಕೆ ಹೋಗಬೇಕು. ಅಲ್ಲಿ ಪಾಪಪರಿಹಾರಕವಾದ ಕೌಶಿಕಿಯೆಂಬ ನದಿಯಿರುವದು; ಅಲ್ಲಿ ಸ್ನಾನಮಾಡಿದವನು ರಾಜಸೂಯಯಾಗದ ಫಲವನ್ನು ಪಡೆಯುವನು. ಅಲ್ಲಿಂದ ಪುಣ್ಯತಮವಾದ ಚಂಪಕಾರಣ್ಯಕ್ಕೆ ಹೋಗಿ ಅಲ್ಲಿ ಒಂದು ರಾತ್ರಿ ವಾಸಮಾಡಿದವನು ಸಹಸ್ರಗೋದಾನದ ಫಲವನ್ನು ಪಡೆಯುವನು. ಅಲ್ಲಿಂದ ಪರಮದುರ್ಲಭವಾದ ಜೇಷ್ಠಿಲವೆಂಬ ತೀರ್ಥಕ್ಕೆ ಹೋಗಿ ಅಲ್ಲಿ ಸ್ನಾನಮಾಡಿ ಒಂದುರಾತ್ರಿ ಇದ್ದವನು ಸಹಸ್ರ ಗೋದಾನದ ಫಲವನ್ನು ಪಡೆಯುವನು; ಅಲ್ಲಿರುವ ಮಹಾತ್ಮನಾದ ಪಾರ್ವತೀಸಮೇತನಾಗಿರುವ ವಿಶ್ವೇಶ್ವರನನ್ನು ದರ್ಶನಮಾಡಿದವನು ಮಿತ್ರಾವರುಣಲೋಕವನ್ನು ಹೊಂದುವನು; ಅಲ್ಲಿ ಒಂದುರಾತ್ರಿ ಉಪವಾಸಮಾಡಿದವನು ಅಗ್ನಿಷ್ಟೋಮದ ಫಲವನ್ನು ಪಡೆಯುವನು. ಅಲ್ಲಿಂದ ಕನ್ಯಾಸಂವೇದ್ಯವೆಂಬ ಕ್ಷೇತ್ರಕ್ಕೆ ಹೋಗಿ ಅಲ್ಲಿ ಆಹಾರನಿಯಮವನ್ನು ಮಾಡಿಕೊಂಡಿದ್ದವನು ವೈವಸ್ವತಮನುವಿನ ಲೋಕವನ್ನು ಹೊಂದುವನು. ಅಲ್ಲಿ ಸ್ವಲ್ಪ ದಾನವನ್ನು ಮಾಡಿದಾಗ್ಯೂ, ಅದು ಅಕ್ಷಯವಾಗುವದೆಂದು ಋಷಿಗಳು ಹೇಳುವರು.

ಅಲ್ಲಿಂದ ಪ್ರಸಿದ್ಧವಾದ ನಿರ್ವೀರತೀರ್ಥಕ್ಕೆ ಹೋಗಿ ಸ್ನಾನಮಾಡಿದವನು ಅಶ್ವಮೇಧಫಲವನ್ನು ಪಡೆದು ವಿಷ್ಣುಲೋಕವನ್ನು ಹೊಂದುವನು. ಅಲ್ಲಿ ಯಾರು ದಾನವನ್ನು ಮಾಡುವರೋ ಅವರು ಇಂದ್ರಲೋಕವನ್ನು ಪಡೆಯುವರು. ಅಲ್ಲಿಯೇ ಲೋಕಪ್ರಸಿದ್ಧವಾದ ವಸಿಷ್ಠಮಹರ್ಷಿಗಳ ಆಶ್ರಮವಿರುವದು; ಅಲ್ಲಿರುವ ತೀರ್ಥದಲ್ಲಿ ಸ್ನಾನಮಾಡಿದವನು ವಾಜಪೇಯಯಜ್ಞದ ಫಲವನ್ನು ಪಡೆಯುವನು. ಅಲ್ಲಿಂದ ಅನೇಕ ಬ್ರಹ್ಮರ್ಷಿಗಳಿಂದ ಸೇವಿತವಾದ ದೇವಕೂಟತೀರ್ಥಕ್ಕೆ ಹೋಗಿ ಸ್ನಾನಮಾಡಿದವನು ಅಶ್ವಮೇಧಫಲವನ್ನು ಪಡೆದು ತನ್ನ ಕುಲವನ್ನೇ ಉದ್ಧಾರಮಾಡುವನು. ಅಲ್ಲಿಂದ ಕೌಶಿಕಹ್ರದಕ್ಕೆ ಹೋಗಬೇಕು. ವಿಶ್ವಾಮಿತ್ರಋಷಿಗಳು ಬ್ರಾಹ್ಮಣ್ಯವನ್ನು ಪಡೆದದ್ದು ಅಲ್ಲಿಯೇ. ಅಲ್ಲಿ ಒಂದು ತಿಂಗಳು ವಾಸಮಾಡಿದವನು ಅಶ್ವಮೇಧದ ಫಲವನ್ನು ಪಡೆಯುವನು. ಅಲ್ಲಿಂದ ಸರ್ವತೀರ್ಥವೆಂಬ ಮಡುವಿಗೆ ಹೋಗಿ ಅಲ್ಲಿ ಸ್ನಾನಮಾಡಿದವನು ದುರ್ಗತಿಯನ್ನು ಪಡೆಯದೆ ಐಶ್ವರ್ಯವಂತನಾಗುವನು. ಅಲ್ಲಿಂದ ಹೊರಟು ವೀರಾಶ್ರಮದಲ್ಲಿ ವಾಸಮಾಡುತ್ತಿರುವ ಕುಮಾರಸ್ವಾಮಿಯನ್ನು ಕಂಡು ನಮಸ್ಕಾರಮಾಡಿದವನು ಅಶ್ವಮೇಧಫಲವನ್ನು ಪಡೆಯುವನು. ಅಲ್ಲಿಂದ ಲೋಕಪ್ರಸಿದ್ಧವಾದ ಅಗ್ನಿಧಾರವೆಂಬ ತೀರ್ಥಕ್ಕೆ

ಹೋಗಿ ಸ್ನಾನಮಾಡಿ ಅಲ್ಲಿರುವ ಮಹಾವಿಷ್ಣುವನ್ನು ದರ್ಶನಮಾಡಿದವನು ಅಗ್ನಿಷ್ಟೋಮದ ಫಲವನ್ನು ಪಡೆಯುವನು. ಅಲ್ಲಿಂದ ಹಿಮವತ್ಪರ್ವತದ ಸಮೀಪದಲ್ಲಿರುವ ಬ್ರಹ್ಮಸರೋವರಕ್ಕೆ ಹೋಗಿ ಸ್ನಾನಮಾಡಿದವನು ಅಗ್ನಿಷ್ಟೋಮದ ಫಲವನ್ನು ಪಡೆಯುವನು. ಅದೇ ಬ್ರಹ್ಮಸರಸ್ಸಿನ ದೆಸೆಯಿಂದ ಲೋಕಪ್ರಸಿದ್ಧವಾದ ಪರಮಪಾವನವಾದ ಕುಮಾರಧಾರೆಯೆಂಬ ತೀರ್ಥವು ಪ್ರವಹಿಸುವದು. ಅದರಲ್ಲಿ ಸ್ನಾನಮಾಡಿದವನು ಕೃತಾರ್ಥನಾಗುವನು. ಅಲ್ಲಿ ಒಂದು ದಿವಸ ಉಪವಾಸಮಾಡಿದರೆ ಬ್ರಹ್ಮಹತ್ಯಾದಿದೋಷವು ಪರಿಹಾರವಾಗುವದು. ಅಲ್ಲಿಂದ ಹೊರಟು ತೀರ್ಥಯಾತ್ರಾಪರನಾದವನು, ಲೋಕಪ್ರಸಿದ್ಧವಾದ ಗೌರೀಶಿಖರಕ್ಕೆ ಹೋಗಿ, ಅದನ್ನು ಏರಿ, ಅಲ್ಲಿರುವ ಸ್ತನಕುಂಡತೀರ್ಥದಲ್ಲಿ ಸ್ನಾನಮಾಡಿ, ಪಿತೃಗಳಿಗೂ ದೇವತೆಗಳಿಗೂ ಪೂಜೆಮಾಡಿದರೆ, ಅಶ್ವಮೇಧಗಳ ಫಲವನ್ನು ಪಡೆದು ಇಂದ್ರಲೋಕವನ್ನು ಹೊಂದುವನು. ಅಲ್ಲಿಂದ ಬ್ರಹ್ಮಚರ್ಯವ್ರತನಿಷ್ಠನಾಗಿ ಹೊರಟು ತಾಮ್ರಾರುಣವೆಂಬ ತೀರ್ಥಕ್ಕೆ ಹೋಗಿ ಸ್ನಾನಮಾಡಿದವನು ಅಶ್ವಮೇಧಫಲವನ್ನು ಪಡೆದು ಬ್ರಹ್ಮಲೋಕವನ್ನು ಹೊಂದುವನು. ಅಲ್ಲಿಂದ ನಂದಿನೀಕ್ಷೇತ್ರಕ್ಕೆ ಹೋಗಿ ದೇವತೆಗಳಿಂದ ಸೇವಿತವಾದ ಅಲ್ಲಿರುವ ಕೂಪತೀರ್ಥದಲ್ಲಿ ಸ್ನಾನಮಾಡಿದವನು ನರಮೇಧಯಜ್ಞದ ಫಲವನ್ನು ಪಡೆಯುವನು. ಅಲ್ಲಿಂದ ಕೌಶಿಕಾರುಣಸಂಗಮಕ್ಕೆ ಹೋಗಿ ಸ್ನಾನಮಾಡಿ ಅಲ್ಲಿ ಮೂರುರಾತ್ರಿ ಉಪವಾಸಮಾಡಿದವನು ಸಕಲಪಾಪಗಳನ್ನೂ ಪರಿಹಾರಮಾಡಿಕೊಳ್ಳುವನು. ಅಲ್ಲಿಂದ ಹೊರಟು, ಊರ್ವಶೀತೀರ್ಥ ಸೋಮಾಶ್ರಮ ಕುಂಭಕರ್ಣಾಶ್ರಮಗಳಿಗೆ ಹೋದವನು ಭೂಲೋಕದಲ್ಲಿ ಪೂಜ್ಯನಾಗುವನು. ಅಲ್ಲಿಂದ ಕೋಕಾಮುಖವೆಂಬ ತೀರ್ಥಕ್ಕೆ ಹೋಗಿ ಬ್ರಹ್ಮಚರ್ಯವ್ರತನಿಷ್ಠನಾಗಿ ಅಲ್ಲಿ ಸ್ನಾನಮಾಡಿದವನು ಜನ್ಮಾಂತರಸ್ಮರಣೆಯನ್ನು ಪಡೆಯುವನು. ಇದನ್ನು ಪೂರ್ವಿಕರು ಕಂಡಿರುವರು. ಅಲ್ಲಿಂದ ಶಕ್ರನಂದಾತೀರ್ಥಕ್ಕೆ ಹೋಗಿ ಸ್ನಾನಮಾಡಿದ ಬ್ರಾಹ್ಮಣನು ಸಕಲ ಪಾಪಗಳನ್ನೂ ಕಳೆದುಕೊಂಡು ಕೃತಾರ್ಥನಾಗಿ ಇಂದ್ರಲೋಕವನ್ನು ಹೊಂದುವನು. ಅಲ್ಲಿಂದ ಹೊರಟು ಕ್ರೌಂಚನಿಷೂದಕವೆಂಬ ಋಷಭದ್ವೀಪಕ್ಕೆ ಹೋಗಿ ಅಲ್ಲಿರುವ ಸರಸ್ವತೀನದಿಯಲ್ಲಿ ಸ್ನಾನಮಾಡಿದವನು ದೇವ ವಿಮಾನವನ್ನೇರುವನು. ಅಲ್ಲಿಂದ ಹೊರಟು ಸಕಲಋಷಿಗಳಿಂದಲೂ ಸೇವಿತವಾದ ಔದ್ಧಾರಕತೀರ್ಥಕ್ಕೆ ಹೋಗಿ ಸ್ನಾನಮಾಡಿದವನು ಸಕಲಪಾಪಗಳನ್ನೂ ಕಳೆದುಕೊಳ್ಳುವನು. ಅಲ್ಲಿಂದ ಸಕಲ ಬ್ರಹ್ಮರ್ಷಿಗಳಿಂದ ಸೇವಿತವಾದ ಪುಣ್ಯತಮವಾದ ಧರ್ಮತೀರ್ಥಕ್ಕೆ ಹೋಗಿ ಸ್ನಾನಮಾಡಿದವನು ವಾಜಪೇಯಫಲವನ್ನು ಪಡೆದು ದೇವವಿಮಾನವನ್ನೇರುವನು. ಅಲ್ಲಿಂದ ಹೊರಟು ಚಂಪಾನಗರಕ್ಕೆ ಹೋಗಿ ಗಂಗಾನದಿಯಲ್ಲಿ ಸ್ನಾನಮಾಡಿ ದಂಡಾರ್ತವೆಂಬ ಪುಣ್ಯಸ್ಥಳಕ್ಕೆ ಹೋದವನು ಸಹಸ್ರಗೋದಾನದ ಫಲವನ್ನು ಪಡೆಯುವನು. ಅಲ್ಲಿಂದ ಹೊರಟು ಪುಣ್ಯತಮವಾದ ಲಲೀತಿಕಾತೀರ್ಥಕ್ಕೆ ಹೋಗಿ ಸ್ನಾನಮಾಡಿದವನು ರಾಜಸೂಯಯಾಗದ ಫಲವನ್ನು ಪಡೆದು ದೇವ ವಿಮಾನವನ್ನೇರಿ ಪೂಜ್ಯನಾಗುವನು’ ಎಂದು ಪುಲಸ್ತ್ಯನು ಭೀಷ್ಮಾಚಾರ್ಯನಿಗೆ ಹೇಳಿದನು.”

## ೮೫ನೇ ಅಧ್ಯಾಯ.—ತೀರ್ಥಯಾತ್ರಾಪ್ರಶಂಸೆ—(ನಾರದಯುಧಿಷ್ಠಿರ ಸಂವಾದ

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ನಾರದನು ಯುಧಿಷ್ಠಿರನೊಡನೆ ಹೇಳಿದ್ದೇನೆಂದರೆ “ಪುಲಸ್ತ್ಯಮಹರ್ಷಿಯು ಭೀಷ್ಮನನ್ನು ಕುರಿತು ‘ಎಲೈ ಭೀಷ್ಮನೆ, ಅನಂತರದಲ್ಲಿ ತೀರ್ಥಯಾತ್ರಾಪರನಾದವನು ಉತ್ತಮವಾದ ಸಂವೇದ್ಯವೆಂಬ ತೀರ್ಥಕ್ಕೆ ಹೋಗಿ ಸಂಧ್ಯಾಕಾಲದಲ್ಲಿ ಸ್ನಾನಮಾಡಿದವನಿಗೆ ಬಹು ಸುವರ್ಣಲಾಭವಾಗುವದು. ಅಲ್ಲಿಂದ ಕರತೋಯಾನದಿಗೆ ಹೋಗಿ ಸ್ನಾನಮಾಡಿ ಮೂರು ರಾತ್ರಿ ಉಪವಾಸಮಾಡಿದವನು ಬ್ರಹ್ಮದೇವನ ಅನುಗ್ರಹದಿಂದ ಅಶ್ವಮೇಧದ ಫಲವನ್ನು ಪಡೆಯುವನು. ಅಲ್ಲಿಂದ ಗಂಗಾಸಾಗರಸಂಗಮಕ್ಕೆ ಹೋಗಿ ಸ್ನಾನಮಾಡಿದವನು ಅಶ್ವಮೇಧದ ಫಲವನ್ನು ಪಡೆಯುವನೆಂದು ದೊಡ್ಡವರು ಹೇಳುವರು. ಆ ಗಂಗಾನದಿಯ ಆಚೇತಡಿಗೆ ಹೋಗಿ ಸ್ನಾನಮಾಡಿ ಮೂರುರಾತ್ರಿ ಅಲ್ಲಿ ವಾಸಮಾಡಿದವನಿಗೆ ಸಕಲಪಾಪವೂ ಪರಿಹಾರವಾಗುವದು. ಅಲ್ಲಿಂದ ಹೊರಟು ಸಕಲ ಪಾಪಪರಿಹಾರಕವಾದ ವೈತರಣೀನದಿಗೆ ಹೋಗಿ

ಅಲ್ಲಿರುವ ವಿರಜವೆಂಬ ತೀರ್ಥದಲ್ಲಿ ಸ್ನಾನಮಾಡಿದವನು ಸಕಲ ಪಾಪಗಳನ್ನೂ ಕಳೆದುಕೊಂಡು, ಚಂದ್ರನಂತೆ ಪ್ರಕಾಶಿಸುತ್ತ, ಸಹಸ್ರಗೋದಾನದ ಫಲವನ್ನು ಪಡೆದು, ತನ್ನ ಕುಲವನ್ನು ಉದ್ಧಾರಮಾಡುವನು. ಅಲ್ಲಿಂದ ಹೊರಟು ಶೋಣನದೀ ಜ್ಯೋತಿರಥೀ ಸಂಗಮಕ್ಕೆ ಹೋಗಿ ಅಲ್ಲಿ ನೇಮದಿಂದ ಸ್ನಾನಮಾಡಿ ಶುಚಿರ್ಭೂತನಾಗಿ ದೇವತೆಗಳಿಗೂ ಪಿತೃಗಳಿಗೂ ತರ್ಪಣಮಾಡಿದವನು ಅಗ್ನಿಷ್ಟೋಮದ ಫಲವನ್ನು ಪಡೆಯುವನು. ಅಲ್ಲಿಂದ ಹೊರಟು ಶೋಣನದೀ ನರ್ಮದಾನದಿಗಳ ಉತ್ಪತ್ತಿಸ್ಥಾನದಲ್ಲಿ ವಂಶಗುಲ್ಮವೆಂಬ ತೀರ್ಥಕ್ಕೆ ಹೋಗಿ ಅಲ್ಲಿ ಸ್ನಾನಮಾಡಿದವನು ಅಶ್ವಮೇಧ ಫಲವನ್ನು ಪಡೆಯುವನು. ಅಲ್ಲಿಂದ ಹೊರಟು ಕೋಸಲದೇಶದಲ್ಲಿರುವ ಋಷಭತೀರ್ಥಕ್ಕೆ ಹೋಗಿ ಸ್ನಾನಮಾಡಿ ಅಲ್ಲಿ ಮೂರುರಾತ್ರಿ ಉಪವಾಸಮಾಡಿದವನು ವಾಜಪೇಯದ ಫಲವನ್ನು ಪಡೆಯುವನು. ಅಲ್ಲಿರುವ ಕಾಲತೀರ್ಥದಲ್ಲಿ ಸ್ನಾನಮಾಡಿದವನು ಸಹಸ್ರಗೋದಾನದ ಫಲವನ್ನೂ, ಏಕಾದಶ ವೃಷಭದಾನದ ಫಲವನ್ನೂ ಪಡೆದು, ತನ್ನ ಕುಲವನ್ನು ಉದ್ಧಾರಮಾಡುವನು. ಅಲ್ಲಿಂದ ಹೊರಟು ಪುಷ್ಪವತೀರ್ಥಕ್ಕೆ ಹೋಗಿ ಸ್ನಾನಮಾಡಿದವನು ಸಹಸ್ರಗೋದಾನದ ಫಲವನ್ನು ಪಡೆದು ತನ್ನ ಕುಲವನ್ನೇ ಪವಿತ್ರಮಾಡುವನು.

ಅಲ್ಲಿಂದ ಬದರಿಕಾತೀರ್ಥಕ್ಕೆ ಹೋಗಿ ಸ್ನಾನಮಾಡಿದವನು ಆಯುರ್ವೃದ್ಧಿಯನ್ನು ಪಡೆದು ಸ್ವರ್ಗಲೋಕವನ್ನು ಹೊಂದುವನು. ಅಲ್ಲಿಂದ ಹೊರಟು ಚಂಪಾನಗರಕ್ಕೆ ಹೋಗಿ ಗಂಗಾನದಿಯಲ್ಲಿ ಸ್ನಾನಮಾಡಿ ದಂಡಾರ್ಕವೆಂಬ ಪುಣ್ಯಸ್ಥಳಕ್ಕೆ ಹೋದವನು ಸಹಸ್ರ ಗೋದಾನದ ಫಲವನ್ನು ಪಡೆಯುವನು. ಅಲ್ಲಿಂದ ಹೊರಟು ಪುಣ್ಯವಂತರಿಂದ ಶೋಭಿತವಾದ ಲಪೇಟಿಕಾ ಪಟ್ಟಣಕ್ಕೆ ಹೋದವನು ವಾಜಪೇಯದ ಫಲವನ್ನು ಪಡೆದು ದೇವಲೋಕದಲ್ಲಿ ಪೂಜ್ಯನಾಗುವನು. ಅಲ್ಲಿಂದ ಹೊರಟು ಪರಶುರಾಮನು ವಾಸಮಾಡತಕ್ಕ ಮಹೇಂದ್ರಪರ್ವತಕ್ಕೆ ಹೋಗಿ ಪರಶುರಾಮತೀರ್ಥದಲ್ಲಿ ಸ್ನಾನಮಾಡಿದವನು ಅಶ್ವಮೇಧದ ಫಲವನ್ನು ಪಡೆಯುವನು. ಅಲ್ಲಿಯೇ ಮತಂಗಕೇದಾರವೆಂಬ ತೀರ್ಥವಿರುವದು. ಅಲ್ಲಿ ಸ್ನಾನಮಾಡಿದವನು ಸಹಸ್ರಗೋದಾನದ ಫಲವನ್ನು ಪಡೆಯುವನು. ಅಲ್ಲಿಂದ ಶ್ರೀಪರ್ವತಕ್ಕೆ ಹೋಗಬೇಕು. ಅಲ್ಲಿ, ಮಹಾತ್ಮನಾದ ಮಹಾದೇವನು ಪಾರ್ವತಿಯೊಡನೆಯೂ, ಬ್ರಹ್ಮದೇವನು ಸಕಲ ದೇವತೆಗಳೊಡನೆಯೂ ವಾಸಮಾಡುತ್ತಿರುವರು. ಅಲ್ಲಿರುವ ನದೀತೀರವೆಂಬ ತೀರ್ಥದಲ್ಲಿ ಸ್ನಾನಮಾಡಿ ಮಹಾದೇವನನ್ನು ಪೂಜಿಸಿದವನೂ, ಅಲ್ಲಿರುವ ದೇವಹ್ರದದಲ್ಲಿ ಸ್ನಾನಮಾಡಿದವನೂ, ಪರಿಶುದ್ಧಾತ್ಮರಾಗಿ ಅಶ್ವಮೇಧಫಲವನ್ನು ಪಡೆದು ಉತ್ತಮವಾದ ಸಿದ್ಧಿಯನ್ನು ಪಡೆಯುವರು. ಅಲ್ಲಿಂದ ಹೊರಟು ವೃಷಭಪರ್ವತಕ್ಕೆ ಹೋಗಿ ವೃಷಭದೇವನನ್ನು ಪೂಜೆಮಾಡಿದವನು ವಾಜಪೇಯದ ಫಲವನ್ನು ಪಡೆದು ಸ್ವರ್ಗಲೋಕದಲ್ಲಿ ಸಂತೋಷಪಡುವನು. ಅಲ್ಲಿಂದ ಹೊರಟು ಅಪ್ಸರಸ್ತ್ರೀಯರಿಂದ ಸೇವಿತವಾದ ಕಾವೇರೀನದಿಗೆ ಬಂದು ಅಲ್ಲಿ ಸ್ನಾನಮಾಡಿದವನು ಸಹಸ್ರಗೋದಾನದ ಫಲವನ್ನು ಪಡೆಯುವನು. ಅಲ್ಲಿಂದ ಹೊರಟು ಸಮುದ್ರತೀರದಲ್ಲಿರುವ ಕನ್ಯಾತೀರ್ಥಕ್ಕೆ ಹೋಗಿ ಸ್ನಾನಮಾಡಿದವನಿಗೆ ಸಕಲಪಾಪವೂ ಪರಿಹಾರವಾಗುವದು. ಅಲ್ಲಿಂದ ಹೊರಟರೆ ಸಮುದ್ರಮಧ್ಯದಲ್ಲಿ ಸಮಸ್ತ ಜನಗಳಿಂದಲೂ ನಮಸ್ಕಾರಮಾಡಲ್ಪಟ್ಟ ಗೋಕರ್ಣವೆಂಬ ಕ್ಷೇತ್ರಸಿಕ್ಕುವದು. ಅಲ್ಲಿ ಬ್ರಹ್ಮಾದಿ ದೇವತೆಗಳೂ, ಸಕಲ ಮಹರ್ಷಿಗಳೂ, ಭೂತಯಕ್ಷಪಿಶಾಚಗಳೂ, ಕಿನ್ನರಮಹೋರಗರೂ, ಸಿದ್ಧಚಾರಣಗಂಧರ್ವರೂ, ಮನುಷ್ಯರೂ, ಅನೇಕ ನದೀಪರ್ವತಸಮುದ್ರಗಳ ಅಭಿಮಾನದೇವತೆಗಳೂ, ಪಾರ್ವತೀಪತಿಯಾದ ಮಹೇಶ್ವರನನ್ನು ಸೇವಿಸುತ್ತಿರುವರು. ಆ ಈಶ್ವರನ ಪೂಜೆಯನ್ನು ಮಾಡಿ ಮೂರು ರಾತ್ರಿ ಉಪವಾಸಮಾಡಿದವನು ಅಶ್ವಮೇಧದ ಫಲವನ್ನು ಪಡೆದು ಪ್ರಮಥಗಣಕ್ಕೆ ಅಧಿಪತಿಯಾಗುವನು. ಅಲ್ಲಿ ಹನ್ನೆರಡು ದಿವಸ ವಾಸಮಾಡಿದವನು ವಿಶೇಷವಾಗಿ ಪರಿಶುದ್ಧಾತ್ಮನಾಗುವನು. ಅನಂತರದಲ್ಲಿ ಲೋಕಪೂಜಿತವಾದ ಗಾಯತ್ರೀ ಸ್ಥಾನಕ್ಕೆ ಹೋಗಬೇಕು. ಆ ಸ್ಥಳದಲ್ಲಿ ಈಗಲೂ ಬ್ರಾಹ್ಮಣರಿಗೆ ಒಂದು ನಿದರ್ಶನವು ಪ್ರತ್ಯಕ್ಷವಾಗಿರುವದು. ಅದೇನೆಂದರೆ, ಸಂಕರಜಾತಿಯಲ್ಲಿ ಹುಟ್ಟಿದ ಬ್ರಾಹ್ಮಣನು ಆ ಪುಣ್ಯಸ್ಥಳದಲ್ಲಿ ಗಾಯತ್ರಿಯನ್ನು ಪಠನಮಾಡಿದ್ದೇ ಆದರೆ, ಆ ಗಾಯತ್ರಿಯು ಸ್ವರವರ್ಣಹೀನವಾಗಿ ಲೌಕಿಕಕಥೆಯು ಹಾಗೂ ಸಂಗೀತದ ಹಾಗೂ ತೋರುವದೇ ಹೊರತು ಸುಸ್ವರಯುಕ್ತವಾಗಿ ಸರಿಯಾಗಿ ತೋರುವದಿಲ್ಲ. ಶೂದ್ರನಾದವನು ಅಲ್ಲಿಗೆ ಹೋಗಿ ತಾನಾಗಿ ಗಟ್ಟಿಮಾಡಿಕೊಂಡಿದ್ದ ಗಾಯತ್ರಿಯನ್ನು ಪಠಿಸುವದಕ್ಕೆ ಹೋದರೆ, ಅದು

ಬಾಯಲ್ಲಿ ಹೊರಡದೆ ಹೋಗುವದು. ಅಲ್ಲಿ ಮೂರುರಾತ್ರಿ ಉಪವಾಸಮಾಡಿದವನು ಸಹಸ್ರ ಗೋದಾನದ ಫಲವನ್ನು ಪಡೆಯುವನು. ಅಲ್ಲಿಂದ ಸಂವರ್ತಮಹರ್ಷಿಯ ಸರೋವರಕ್ಕೆ ಹೋಗಿ ಅಲ್ಲಿ ಸ್ನಾನಮಾಡಿದವನು ರೂಪವಂತನಾಗಿ ಭಾಗ್ಯವಂತನಾಗುವನು. ಅಲ್ಲಿಂದ ವೇಣಾನದಿಗೆ ಹೋಗಿ ಅಲ್ಲಿ ಸ್ನಾನಮಾಡಿ ಮೂರುರಾತ್ರಿ ಉಪವಾಸಮಾಡಿದವನು ಹಂಸಗಳನ್ನೂ ನವಿಲುಗಳನ್ನೂ ಕಟ್ಟಿರುವ ವಿಮಾನವನ್ನೇರಿ ಸಂಚರಿಸುವನು. ಅಲ್ಲಿಂದ ಹೊರಟು ಸಕಲಸಿದ್ಧರಿಂದಲೂ ಸೇವಿತವಾದ ಗೋದಾವರೀನದಿಗೆ ಹೋಗಿ ಅಲ್ಲಿ ಸ್ನಾನಮಾಡಿದವನು ಗೋಮೇಧಯಜ್ಞದ ಫಲವನ್ನು ಪಡೆದು ವಾಸುಕಿಯ ಲೋಕವನ್ನು ಹೊಂದುವನು. ಬಳಿಕ ವೇಣಾಸಂಗಮದಲ್ಲಿ ಸ್ನಾನಮಾಡಿದವನು ಅಶ್ವಮೇಧಫಲವನ್ನು ಪಡೆಯುವನು. ವರದಾಸಂಗಮದಲ್ಲಿ ಸ್ನಾನಮಾಡಿದವನು ಸಹಸ್ರ ಗೋದಾನದ ಫಲವನ್ನು ಪಡೆಯುವನು.

ಅಲ್ಲಿಂದ ಬ್ರಹ್ಮಸ್ಥಾನಕ್ಕೆ ಹೋಗಿ ಅಲ್ಲಿ ಮೂರುರಾತ್ರಿ ಉಪವಾಸಮಾಡಿದವನು ಸಹಸ್ರ ಗೋದಾನದ ಫಲವನ್ನು ಪಡೆದು ಸ್ವರ್ಗಲೋಕವನ್ನು ಹೊಂದುವನು. ಅಲ್ಲಿಂದ ಕುಶಪ್ಲವನತೀರ್ಥಕ್ಕೆ ಹೋಗಿ ಬ್ರಹ್ಮಚರ್ಯ ವ್ರತನಿಷ್ಠನಾಗಿ ಅಲ್ಲಿ ಸ್ನಾನಮಾಡಿ ಮೂರುರಾತ್ರಿ ವಾಸಮಾಡಿದವನು ಅಶ್ವಮೇಧದ ಫಲವನ್ನು ಪಡೆಯುವನು. ಅಲ್ಲಿಂದ ದೇವಹ್ರದಾರಣ್ಯಕ್ಕೆ ಹೋಗಿ ಅಲ್ಲಿರುವ ಕೃಷ್ಣವೇಣಾಜಲದಲ್ಲಿರುವ ಜಾತಿಸ್ಮರಹ್ರದದಲ್ಲಿ ಸ್ನಾನಮಾಡಿದವನಿಗೆ ಜನ್ಮಾಂತರಸ್ಮರಣೆಯುಂಟಾಗುವದು. ಅದೇ ಸ್ಥಳದಲ್ಲಿ ಇಂದ್ರನು ನೂರು ಅಶ್ವಮೇಧ ಯಾಗಗಳನ್ನು ಮಾಡಿ ಸ್ವರ್ಗಪದವಿಯನ್ನು ಪಡೆದನು. ಅಲ್ಲಿಗೆ ಹೋದಮಾತ್ರಕ್ಕೆ ಮನುಷ್ಯನಿಗೆ ಅಗ್ನಿಷ್ಟೋಮಯಜ್ಞದ ಫಲವು ಲಭಿಸುವದು. ಅಲ್ಲಿಂದ ಸರ್ವಹ್ರದಕ್ಕೆ ಹೋಗಿ ಸ್ನಾನಮಾಡಿದವನು ಸಹಸ್ರಗೋದಾನದ ಫಲವನ್ನು ಪಡೆಯುವನು. ಅಲ್ಲಿಂದ ಪುಣ್ಯತಮವಾದ ಪಯೋಷ್ಣೀನದಿಗೆ ಹೋಗಿ ಸ್ನಾನಮಾಡಿ ಪಿತೃಗಳಿಗೂ ದೇವತೆಗಳಿಗೂ ತರ್ಪಣವನ್ನು ಮಾಡಿದವನಿಗೆ ಸಹಸ್ರಗೋದಾನದ ಫಲವುಂಟಾಗುವದು. ಅಲ್ಲಿಂದ ದಂಡಕಾರಣ್ಯಕ್ಕೆ ಬಂದು ಅಲ್ಲಿರುವ ಪುಣ್ಯತೀರ್ಥಗಳಲ್ಲಿ ಸ್ನಾನಮಾಡಿದವನು ಸಹಸ್ರ ಗೋದಾನದ ಫಲವನ್ನು ಪಡೆಯುವನು. ಅಲ್ಲಿರುವ ಶರಭಂಗಾಶ್ರಮಕ್ಕೂ ಶುಕಾಚಾರ್ಯರ ಆಶ್ರಮಕ್ಕೂ ಹೋದವನು ಉತ್ತಮವಾದ ಗತಿಯನ್ನು ಹೊಂದಿ ತನ್ನ ಕುಲವನ್ನು ಉದ್ಧಾರಮಾಡುವನು. ಅಲ್ಲಿಂದ ಹೊರಟು ಪರಶುರಾಮನಿಂದ ಸೇವಿತವಾದ ಶೂರ್ಪಾರಕಕ್ಷೇತ್ರಕ್ಕೆ ಹೋಗಿ ರಾಮತೀರ್ಥದಲ್ಲಿ ಸ್ನಾನಮಾಡಿದವನು ಐಶ್ವರ್ಯವಂತನಾಗುವನು; ಮತ್ತು ಅಲ್ಲಿರುವ ಸಪ್ತಗೋದಾವರಿಯಲ್ಲಿ ಸ್ನಾನಮಾಡಿ ಆಹಾರನಿಯಮವನ್ನು ಮಾಡಿಕೊಂಡಿದ್ದವನು ಉತ್ತಮವಾದ ಪುಣ್ಯವನ್ನು ಪಡೆದು ಸ್ವರ್ಗಲೋಕವನ್ನು ಹೊಂದುವನು. ಅಲ್ಲಿಂದ ಹೊರಟು ನಿಯಮದಿಂದ ದೇವಪಥತೀರ್ಥಕ್ಕೆ ಹೋಗಿ ಸ್ನಾನಮಾಡಿದವನು ಸತ್ರಯಾಗದ ಫಲವನ್ನು ಪಡೆಯುವನು. ಅಲ್ಲಿಂದ ಹೊರಟು ಬ್ರಹ್ಮಚರ್ಯವ್ರತನಿಷ್ಠನಾಗಿ ಶುಂಗಕಾರಣ್ಯಕ್ಕೆ ಹೋಗಬೇಕು. ಪೂರ್ವದಲ್ಲಿ ವೇದವು ಖಿಲವಾಗಿ ಹೋಗಲು, ಆಗ ಅಂಗಿರಸ್ಸೆಂಬ ಮಹರ್ಷಿಗೆ ಪುತ್ರನಾದ ಸಾರಸ್ವತಮಹರ್ಷಿಯು ಅಲ್ಲಿ ಋಷಿಗಳ ಉತ್ತರೀಯಗಳ ಮೇಲೆ ಸುಖವಾಗಿ ಕುಳಿತುಕೊಂಡು, ಶಾಸ್ತ್ರೋಕ್ತವಾಗಿ ಓಂಕಾರವನ್ನು ಉಚ್ಚಾರಣೆಮಾಡಿ, ಋಷಿಗಳಿಗೆ ವೇದಾಧ್ಯಯನವನ್ನು ಮಾಡಿಸಿದನು. ಆಗ ಓಂಕಾರವನ್ನು ಉಚ್ಚಾರಣೆಮಾಡಿದ ಮಾತ್ರಕ್ಕೆ ಋಷಿಗಳಿಗೆಲ್ಲಾ ಪೂರ್ವದಲ್ಲಿ ಅಭ್ಯಾಸಮಾಡಿದ್ದ ವೇದವು ಸ್ಮರಣೆಗೆ ಬಂತು. ಆ ಸಮಯದಲ್ಲಿ ಸಕಲರಾದ ಋಷಿಗಳೂ ಅಗ್ನಿ ವರುಣ ದಕ್ಷಪ್ರಜಾಪತಿ ಬ್ರಹ್ಮ ವಿಷ್ಣು ಮಹೇಶ್ವರರೂ ಇನ್ನೂ ಸಕಲರಾದ ದೇವತೆಗಳೂ ತೇಜೋವಂತನಾದ ಭೃಗುಋಷಿಗೆ ಯಜ್ಞವನ್ನು ಮಾಡುವಂತೆ ಪ್ರೇರಣೆಮಾಡಿದರು. ಆಗ ಆ ಭೃಗುಋಷಿಯು ಸಕಲಋಷಿಗಳೊಡನೆಯೂ ಸೇರಿ ಶಾಸ್ತ್ರೋಕ್ತಕ್ರಮದಿಂದ ಅಗ್ನ್ಯಾಧಾನವನ್ನು ಮಾಡಿ ಆಜ್ಯಭಾಗದಿಂದ ಅಗ್ನಿಯನ್ನು ತೃಪ್ತಿಪಡಿಸಿ ದೇವತೆಗಳಿಗೆ ಹವಿರ್ಭಾಗಗಳನ್ನು ಯಥಾಕ್ರಮವಾಗಿ ಕೊಟ್ಟನು. ಬಳಿಕ ಆ ಎಲ್ಲಾ ಋಷಿಗಳೂ ದೇವತೆಗಳೂ ಸಹ ತಮ್ಮತಮ್ಮ ಸ್ಥಾನಗಳಿಗೆ ಹೊರಟು ಹೋದರು. ಅಂಥ ಆ ಅರಣ್ಯವನ್ನು ಪ್ರವೇಶಮಾಡಿದ ಮನುಷ್ಯನೇ ಆಗಲಿ, ಸ್ತ್ರೀಯೇ ಆಗಲಿ, ಸಕಲ ಪಾಪಗಳನ್ನೂ ಕಳೆದುಕೊಳ್ಳುವರು. ಅಲ್ಲಿ ಒಂದುಮಾಸ ಆಹಾರನಿಯಮವನ್ನು ಮಾಡಿಕೊಂಡು ವಾಸಮಾಡಿದವನು ಬ್ರಹ್ಮಲೋಕವನ್ನು ಹೊಂದಿ ತನ್ನ ಕುಲವನ್ನು ಉದ್ಧಾರಮಾಡುವನು.

ಅಲ್ಲಿಂದ ಹೊರಟು ಮೇಧಾವಿಕವೆಂಬ ತೀರ್ಥಕ್ಕೆ ಹೋಗಿ ಸ್ನಾನಮಾಡಿ ಪಿತೃಗಳಿಗೂ ದೇವತೆಗಳಿಗೂ ತರ್ಪಣಮಾಡಿದವನು ಅಗ್ನಿಷ್ಟೋಮದ ಫಲವನ್ನು ಪಡೆದು, ಉತ್ತಮವಾದ ಮೇಧೆಯನ್ನೂ ಜ್ಞಾನವನ್ನೂ ಪಡೆಯುವನು. ಅಲ್ಲಿಯೇ ಲೋಕಪ್ರಸಿದ್ಧವಾದ ಕಾಲಂಜರವೆಂಬ ಪರ್ವತವಿರುವದು. ಅಲ್ಲಿರುವ ದೇವಹ್ರದವೆಂಬ ತೀರ್ಥದಲ್ಲಿ ಸ್ನಾನಮಾಡಿದವನು ಸಹಸ್ರ ಗೋದಾನದ ಫಲವನ್ನು ಪಡೆಯುವನು. ಆ ತೀರ್ಥದಲ್ಲಿ ಸ್ನಾನಮಾಡಿ ಅದೇ ಪರ್ವತದಲ್ಲಿ ಅಗ್ನಿಪ್ರವೇಶಮಾಡಿದವನು ಸ್ವರ್ಗಲೋಕದಲ್ಲಿ ಪೂಜ್ಯನಾಗುವನು.

ಅಲ್ಲಿಂದ ಹೊರಟು ಪರ್ವತಶ್ರೇಷ್ಠವಾದ ಚಿತ್ರಕೂಟಪರ್ವತಕ್ಕೆ ಹೋಗಿ ಅಲ್ಲಿರುವ ಪಾಪಪರಿಹಾರಕವಾದ ಗೋದಾವರೀನದಿಯಲ್ಲಿ ಸ್ನಾನಮಾಡಿ ಪಿತೃಗಳಿಗೂ ದೇವತೆಗಳಿಗೂ ತರ್ಪಣ ಮಾಡಿದವನು ಅಶ್ವಮೇಧದ ಫಲವನ್ನು ಪಡೆದು ಉತ್ತಮವಾದ ಗತಿಯನ್ನು ಹೊಂದುವನು. ಅಲ್ಲಿಂದ ಭರ್ತೃಸ್ಥಾನವೆಂಬ ಕ್ಷೇತ್ರಕ್ಕೆ ಹೋಗಬೇಕು. ಅಲ್ಲಿ ಯಾವಾಗಲೂ ದೇವಸೇನಾಧಿಪತಿಯಾದ ಕುಮಾರಸ್ವಾಮಿಯು ಸನ್ನಿಹಿತನಾಗಿರುವನು. ಅಲ್ಲಿಗೆ ಹೋದಮಾತ್ರಕ್ಕೆ ಪುರುಷನು ಸಿದ್ಧನಾಗುವನು. ಅಲ್ಲಿರುವ ಕೋಟಿತೀರ್ಥದಲ್ಲಿ ಸ್ನಾನಮಾಡಿದ್ದೇ ಆದರೆ, ಸಹಸ್ರ ಗೋದಾನದ ಫಲವು ಲಭಿಸುವದು. ಅಲ್ಲಿಂದ ಪ್ರದಕ್ಷಿಣೆಯಾಗಿ ಹೊರಟು ಜ್ಯೇಷ್ಠಸ್ಥಾನಕ್ಕೆ ಬಂದು ಅಲ್ಲಿರುವ ಮಹಾದೇವನ ದರ್ಶನ ಮಾಡಿದವನು ಚಂದ್ರನಂತೆ ಪ್ರಕಾಶಿಸುವನು. ಅಲ್ಲಿರುವ ಕೂಪದಲ್ಲಿ ನಾಲ್ಕು ಸಮುದ್ರದ ತೀರ್ಥಗಳೂ ಇರುವವು. ಅಲ್ಲಿ ಸ್ನಾನಮಾಡಿ ಪಿತೃಗಳಿಗೂ ದೇವತೆಗಳಿಗೂ ಪೂಜೆಮಾಡಿದವನು ಶುದ್ಧಾತ್ಮನಾಗಿ ಉತ್ತಮವಾದ ಗತಿಯನ್ನು ಪಡೆಯುವನು. ಅಲ್ಲಿಂದ ಶೃಂಗಿಬೇರಪುರಕ್ಕೆ ಹೋಗಬೇಕು. ದಶರಥರಾಮನು ಗಂಗೆಯನ್ನು ದಾಟ್ಟಿದ್ದು ಅಲ್ಲೇ. ಆ ತೀರ್ಥದಲ್ಲಿ ಸ್ನಾನಮಾಡಿದವನು ಸಕಲಪಾಪಗಳನ್ನೂ ಕಳೆದುಕೊಳ್ಳುವನು. ಆ ಗಂಗಾನದಿಯಲ್ಲಿ ವ್ರತನಿಷ್ಠನಾಗಿ ಸ್ನಾನಮಾಡಿದವನು ಪರಿಶುದ್ಧಾತ್ಮನಾಗಿ ವಾಜಪೇಯಯಜ್ಞದ ಫಲವನ್ನು ಪಡೆಯುವನು. ಅಲ್ಲಿಂದ ಹೊರಟು ಮುಂಜವಟವೆಂಬ ಶಿವಸ್ಥಾನಕ್ಕೆ ಹೋಗಿ ಅಲ್ಲಿರುವ ಮಹಾದೇವನಿಗೆ ನಮಸ್ಕಾರಮಾಡಿದವನು ಪ್ರಮಥಗಣಾಧಿಪತ್ಯವನ್ನು ಪಡೆಯುವನು. ಅಲ್ಲಿರುವ ಗಂಗಾನದೀತೀರ್ಥದಲ್ಲಿ ಸ್ನಾನಮಾಡಿದವನಿಗೆ ಸಕಲಪಾಪಗಳೂ ಪರಿಹಾರವಾಗುವವು. ಅಲ್ಲಿಂದ ಹೊರಟು ಸಕಲ ಋಷಿಗಳಿಂದಲೂ ಶ್ಲಾಘ್ಯವಾಗಿರುವ ಪ್ರಯಾಗಕ್ಷೇತ್ರಕ್ಕೆ ಹೋಗಬೇಕು. ಅಲ್ಲಿ ಬ್ರಹ್ಮಾದಿ ದೇವತೆಗಳೂ, ಇಂದ್ರಾದಿ ಲೋಕಪಾಲಕರೂ, ಪಿತೃಗಳೂ, ಸಾಧ್ಯರೂ, ಸನತ್ಕುಮಾರ ಮೊದಲಾದ ಬ್ರಹ್ಮಮಾನಸಪುತ್ರರೂ, ಅಂಗಿರಸ್ಸು ಮೊದಲಾದ ಬ್ರಹ್ಮರ್ಷಿಗಳೂ, ಸರ್ಪಗಳೂ, ಪಕ್ಷಿಶ್ರೇಷ್ಠರೂ, ಸಿದ್ಧರೂ, ಸಮುದ್ರಾಭಿಮಾನದೇವತೆಗಳೂ, ನದ್ಯಭಿಮಾನದೇವತೆಗಳೂ, ಗಂಧರ್ವರೂ, ಅಪ್ಸರಸ್ತ್ರೀಯರೂ, ಚತುರ್ಮುಖಬ್ರಹ್ಮನೊಡನೆ ಷಡ್ಗುಣೈಶ್ವರ್ಯಸಂಪನ್ನನಾದ ನಾರಾಯಣನೂ ಸಹ ವಾಸಮಾಡುತ್ತಿರುವರು. ಅಲ್ಲಿ ಮೂರು ಅಗ್ನಿಕುಂಡಗಳಿರುವವು. ಅವುಗಳ ಮಧ್ಯಪ್ರದೇಶದದೆಸೆಯಿಂದ ಗಂಗೆಯು ಪ್ರವಹಿಸುತ್ತಿರುವಳು. ಲೋಕಪ್ರಸಿದ್ಧಳಾಗಿಯೂ ಸೂರ್ಯನ ಮಗಳಾಗಿಯೂ ಇರುವ ಯಮುನೆಯು ಸಕಲ ತೀರ್ಥಗಳನ್ನೂ ಸಂಗ್ರಹಿಸಿಕೊಂಡು ಅಧಿಕವಾದ ವೇಗದಿಂದ ಆ ಗಂಗೆಯೊಡನೆ ಪ್ರವಹಿಸುತ್ತಿರುವಳು. ಲೋಕಪಾವನವಾದ ಆ ಗಂಗಾಯಮುನಾನದಿಗಳ ಮಧ್ಯ ದೇಶವಾಗಿರುವ ಪ್ರಯಾಗಕ್ಷೇತ್ರವೇ ಭೂಮಿಯ ಜಘನಸ್ಥಾನವಾಗಿರುವದೆಂದು ಋಷಿಗಳು ಹೇಳುವರು. ಅಂಥ ಪ್ರಯಾಗಕ್ಷೇತ್ರವೂ ಪ್ರತಿಷ್ಠಾನತೀರ್ಥವೂ ಕಂಬಳಾಶ್ವತರತೀರ್ಥಗಳೂ ಭೋಗವತೀತೀರ್ಥವೂ ಸಹ ಬ್ರಹ್ಮದೇವರು ಮಾಡಿದ ಯಜ್ಞಕ್ಕೆ ವೇದಿಕೆಗಳಾಗಿರುವವು. ಅವುಗಳಲ್ಲಿ ವೇದಗಳೂ ಯಜ್ಞಗಳೂ ಸಹ ಮೂರ್ತಿಮತ್ತಾಗಿರುವವು. ಆ ಪುಣ್ಯಸ್ಥಳಗಳಲ್ಲಿ ತಪೋಧನರಾದ ಋಷಿಗಳು ಯಾವಾಗಲೂ ಬ್ರಹ್ಮದೇವನನ್ನು ಉಪಾಸನೆ ಮಾಡುತ್ತಿರುವರು. ಅದೇ ಸ್ಥಳದಲ್ಲೇ ಮಹಾತ್ಮರಾದ ಋಷಿಗಳೂ ದೇವತೆಗಳೂ ಚಕ್ರವರ್ತಿಗಳಾದ ರಾಜರೂ ಸಹ ಯಜ್ಞಗಳನ್ನು ಮಾಡುವರು. ಅವುಗಳಲ್ಲಿ ಮೂರುಲೋಕದಲ್ಲೂ ಪ್ರಸಿದ್ಧವಾದ ಪ್ರಯಾಗಕ್ಷೇತ್ರವು ಎಲ್ಲಾ ಕ್ಷೇತ್ರಗಳಿಗಿಂತಲೂ ಉತ್ತಮವಾದದ್ದೆಂದು ದೊಡ್ಡವರು ಹೇಳುವರು. ಅಂಥ ಪ್ರಯಾಗಕ್ಷೇತ್ರಕ್ಕೆ ಹೋದಮಾತ್ರದಿಂದಲೂ, ಅದರ ನಾಮಸಂಕೀರ್ತನದಿಂದಲೂ, ಅಲ್ಲಿನ ಮೃತ್ತಿಕೆಯನ್ನು ಮೈಗೆ ಸೋಕಿಸಿದ ಮಾತ್ರದಿಂದಲೂ, ಸಕಲಪಾಪವೂ ಪರಿಹಾರವಾಗುವದು. ಪುಣ್ಯತಮವಾದ ಆ ಗಂಗಾಯಮುನಾ ಸಂಗಮದಲ್ಲಿ ಸ್ನಾನಮಾಡಿದವನು ಸಕಲ ಪುಣ್ಯಗಳನ್ನೂ ಪಡೆದು ರಾಜಸೂಯಾಶ್ವಮೇಧಯಜ್ಞಗಳ ಫಲವನ್ನು ಪಡೆ

ಯುವನು. ಆ ಪ್ರಯಾಗಕ್ಷೇತ್ರವು ದೇವತೆಗಳಿಗೆ ಪುಣ್ಯತಮವಾದ ಯಜ್ಞಭೂಮಿಯಾದ್ದರಿಂದ, ಅಲ್ಲಿ ಸ್ವಲ್ಪ ದಾನ ಮಾಡಿದಾಗ್ಯೂ ಮಹತ್ತಾದ ಫಲವುಂಟಾಗುವದು. ಎಲೈ ಭೀಷ್ಮನೆ, ಆ ಕ್ಷೇತ್ರದಲ್ಲಿ ಹ್ಯಾಗೆ ಮರಣವನ್ನು ಹೊಂದಿದರೂ ಮೋಕ್ಷವುಂಟಾಗುವದು. ಅದನ್ನು ಲೋಕಕ್ಕೂ ವೇದಕ್ಕೂ ವಿರುದ್ಧವಾದದ್ದೆಂದು ನೀನು ಮತ್ತೊಂದು ವಿಧವಾಗಿ ಭಾವಿಸಬೇಡ. ಅಲ್ಲಿರುವ ಗಂಗಾಯಮುನಾಸಂಗಮದಲ್ಲಿ, ಹತ್ತುಸಾವಿರ ತೀರ್ಥಗಳೂ ಅರವತ್ತು ಕೋಟಿ ನದಿಗಳೂ ಯಾವಾಗಲೂ ಸನ್ನಿಹಿತವಾಗಿರುವವು. ಅಲ್ಲಿ ಸ್ನಾನಮಾಡಿದವನು, ಮೂರು ವೇದವನ್ನೂ ವೇದಾಂತವನ್ನೂ ಅಭ್ಯಾಸಮಾಡಿ ಯಾವಾಗಲೂ ಸತ್ಯವಾದಿಯಾದವನು ಎಂಥ ಪುಣ್ಯವನ್ನು ಪಡೆಯುವನೋ ಅಂಥ ಪುಣ್ಯವನ್ನು ಪಡೆಯುವನು. ಅಲ್ಲೇ ಭೋಗವತಿಯೆಂಬ ಸರ್ಪರಾಜನಾದ ವಾಸುಕಿಯ ತೀರ್ಥವಿರುವದು. ಅಲ್ಲಿ ಸ್ನಾನಮಾಡಿದವನಿಗೆ ಅಶ್ವಮೇಧಫಲವು ಪ್ರಾಪ್ತಿಯಾಗುವದು. ಆ ಗಂಗೆಯಲ್ಲಿ ಲೋಕಪ್ರಸಿದ್ಧವಾದ ಹಂಸಪ್ರತಪನ, ದಶಾಶ್ವಮೇಧಿಕ, ಎಂಬ ಎರಡು ತೀರ್ಥಗಳಿರುವವು. ಅಲ್ಲಿ ಸ್ನಾನಮಾಡಿದವನು ಹತ್ತು ಅಶ್ವಮೇಧಯಾಗಗಳ ಫಲವನ್ನು ಪಡೆಯುವನು. ಯಾವ ಸ್ಥಳದಲ್ಲಿ ಗಂಗೆಯು ಪ್ರವಹಿಸುವಳೋ, ಆ ಸ್ಥಳವು ಕುರುಕ್ಷೇತ್ರಕ್ಕೆ ಸಮಾನವಾದದ್ದು. ಅದಕ್ಕಿಂತಲೂ ಕನಖಲ ಕ್ಷೇತ್ರವು ವಿಶೇಷವಾದದ್ದು; ಅದಕ್ಕಿಂತಲೂ ಪ್ರಯಾಗವು ಉತ್ತಮವಾದದ್ದು. ಅನೇಕವಾದ ಪಾಪಕೃತ್ಯಗಳನ್ನು ಮಾಡಿದ ಪುರುಷನೂಕೂಡ ಗಂಗಾಸ್ನಾನಮಾಡಿದರೆ, ಆ ಗಂಗಾನದಿಯ ಉದಕವು ಆತನ ಪಾಪವನ್ನು ಅಗ್ನಿಯು ಕಟ್ಟಿಗೆಯನ್ನು ದಹಿಸುವಂತೆ ದಹಿಸುವದು.

ಎಲೈ ಭೀಷ್ಮನೆ, ಸಕಲ ತೀರ್ಥಗಳೂ ಕೃತಯುಗದಲ್ಲಿ ಪುಣ್ಯತಮವಾದವುಗಳು. ತ್ರೇತಾಯುಗದಲ್ಲಿ ಪುಷ್ಕರತೀರ್ಥವು ಉತ್ತಮವಾದದ್ದು. ದ್ವಾಪರಯುಗದಲ್ಲಿ ಕುರುಕ್ಷೇತ್ರವು ಶ್ರೇಷ್ಠವಾದದ್ದು; ಕಲಿಯುಗದಲ್ಲಿ ಗಂಗಾನದಿಯು ಉತ್ತಮೋತ್ತಮವಾದದ್ದು. ಪುಷ್ಕರದಲ್ಲಿ ತಪಸ್ಸನ್ನೂ, ಮಹಾಲಯದಲ್ಲಿ ದಾನವನ್ನೂ, ಮಲಯ ಪರ್ವತದಲ್ಲಿ ಅಗ್ನಿಪ್ರವೇಶವನ್ನೂ, ಭೃಗುತುಂಗದಲ್ಲಿ ಉಪವಾಸವನ್ನೂ ಮಾಡಬೇಕು. ಪುಷ್ಕರದಲ್ಲೂ, ಕುರುಕ್ಷೇತ್ರದಲ್ಲಿರುವ ತೀರ್ಥಗಳಲ್ಲೂ, ಗಂಗಾನದಿಯಲ್ಲೂ, ಮಗಧದೇಶದಲ್ಲಿರುವ ತೀರ್ಥಗಳಲ್ಲೂ, ಸ್ನಾನಮಾಡಿದವನು ತನ್ನ ಸಪ್ತಕುಲವನ್ನೂ ಉದ್ಧಾರಮಾಡುವನು. ಗಂಗಾನದಿಯನ್ನು ಕೀರ್ತನೆಮಾಡಿದ ಮಾತ್ರಕ್ಕೆ ಪಾಪಪರಿಹಾರವಾಗುವದು; ಆ ನದಿಯ ದರ್ಶನದಿಂದ ಶುಭವಾದ ಫಲಪ್ರಾಪ್ತಿಯಾಗುವದು; ಅದರಲ್ಲಿ ಸ್ನಾನಮಾಡಿ ಆ ಉದಕವನ್ನು ಪಾನಮಾಡಿದವನು ತಾನೂ ಪರಿಶುದ್ಧನಾಗಿ ತನ್ನ ಸಪ್ತಕುಲವನ್ನೂ ಉದ್ಧಾರಮಾಡುವನು. ಮೃತನಾದ ಮನುಷ್ಯನ ಅಸ್ಥಿಯು ಎಷ್ಟು ವರುಷ ಗಂಗಾನದಿಯಲ್ಲಿ ಬಿದ್ದಿರುವದೋ, ಅಷ್ಟು ವರ್ಷವೂ ಆ ಪುರುಷನು ಸ್ವರ್ಗಲೋಕದಲ್ಲಿ ಪೂಜಿತನಾಗುವನು. ಪುಣ್ಯತಮವಾದ ನದಿಗಳನ್ನೂ ಕ್ಷೇತ್ರಗಳನ್ನೂ ಯಾವ ಪುರುಷನು ಪ್ರವೇಶಿಸುವನೋ ಆತನು ಪುಣ್ಯವಂತನಾಗಿ ಸ್ವರ್ಗಸುಖವನ್ನನುಭವಿಸುವನು. ಗಂಗಾನದಿಗೆ ಸಮಾನವಾದ ತೀರ್ಥವೂ, ಮಹಾವಿಷ್ಣುವಿಗೆ ಸಮಾನವಾದ ದೇವತೆಯೂ, ಬ್ರಾಹ್ಮಣನಿಗಿಂತಲೂ ಶ್ರೇಷ್ಠನಾದ ಮನುಷ್ಯನೂ, ಲೋಕದಲ್ಲಿ ಇಲ್ಲವೆಂದು ಬ್ರಹ್ಮದೇವನು ಹೇಳಿರುವನು. ಎಲ್ಲಿ ಗಂಗಾನದಿಯು ಪ್ರವಹಿಸುತ್ತಿರುವದೋ, ಆ ಪ್ರದೇಶವು ಸಿದ್ಧಕ್ಷೇತ್ರವೆಂತಲೂ ಮಹರ್ಷಿಗಳ ತಪೋವನವೆಂತಲೂ ತಿಳಿಯಬೇಕು. ಈ ಮಾತು ಸತ್ಯವಾದದ್ದು. ಈ ವೃತ್ತಾಂತವನ್ನು ದೊಡ್ಡವರು ಸಾಧುಗಳಾದ ಬ್ರಾಹ್ಮಣರಿಗೂ, ತಮ್ಮ ಮಕ್ಕಳಿಗೂ, ಮಿತ್ರರಿಗೂ, ತಮ್ಮನ್ನೇ ಅನುಸರಿಸಿರುವ ಶಿಷ್ಯನಿಗೂ, ಕಿವಿಯಲ್ಲಿ ಉಪದೇಶಮಾಡಬೇಕು. ಈ ರೀತಿಯಾಗಿ ತೀರ್ಥಯಾತ್ರೆಯನ್ನು ಮಾಡುವದು ಪುಣ್ಯತಮವಾಗಿಯೂ, ಧರ್ಮಸಂಪಾದಕವಾಗಿಯೂ, ಸಕಲ ಪಾಪಪರಿಹಾರಕವಾಗಿಯೂ ಇರುವದು. ಈ ವೃತ್ತಾಂತವು ಋಷಿಗಳಲ್ಲಿ ಗೋಪ್ಯವಾಗಿರುವದು. ಈ ತೀರ್ಥಯಾತ್ರಾಪ್ರಶಂಸೆಯನ್ನು ಯಾವ ಬ್ರಾಹ್ಮಣನು ಬ್ರಾಹ್ಮಣರ ಮಧ್ಯದಲ್ಲಿ ಪಠನಮಾಡುವನೋ, ಆತನು ವೇದವೇದಾಂಗಪಾರಂಗತನಾಗಿ ಸ್ವರ್ಗಫಲವನ್ನು ಪಡೆಯುವನು. ಈ ತೀರ್ಥಯಾತ್ರಾಕ್ರಮವನ್ನು ಕೀರ್ತನೆ ಮಾಡೋಣದರಿಂದ ಪುಣ್ಯವೂ, ಶತ್ರುಜಯವೂ, ಉತ್ತಮವಾದ ಬುದ್ಧಿಯೂ, ಶುಭವೂ ಉಂಟಾಗುವವು. ಈ ತೀರ್ಥಯಾತ್ರಾಕ್ರಮವನ್ನು ಪಠನಮಾಡಿದರೆ ಅಪುತ್ರನಾದವನು ಪುತ್ರರನ್ನೂ, ದರಿದ್ರನಾದವನು ಐಶ್ವರ್ಯವನ್ನೂ, ಕ್ಷತ್ರಿಯನಾದವನು ರಾಜ್ಯವನ್ನೂ, ವೈಶ್ಯನಾದವನು ಧನವನ್ನೂ, ಶೂದ್ರನಾದವನು ತನಗೆ ಬೇಕಾದ ಇಷ್ಟಾರ್ಥವನ್ನೂ ಪಡೆಯುವರು. ಯಾವ ಪುರುಷನು ಶುಚಿ

ಭೂರ್ತನಾಗಿ ಪುಣ್ಯತಮವಾದ ಈ ತೀರ್ಥಯಾತ್ರಾಕ್ರಮವನ್ನು ಶ್ರವಣಮಾಡುವನೋ, ಆತನು ಅನೇಕ ಜನ್ಮಾಂತರಗಳ ಸ್ಮೃತಿಯನ್ನು ಹೊಂದಿ ಸ್ವರ್ಗಸುಖವನ್ನು ಅನುಭವಿಸುವನು.

ಎಲೈ ಭೀಷ್ಮನೆ, ಈ ತೀರ್ಥಗಳಲ್ಲಿ ಕೆಲವು ತೀರ್ಥಗಳು ಹೋಗುವದಕ್ಕೆ ಶಕ್ಯವಾಗಿಯೂ ಕೆಲವು ಅಶಕ್ಯವಾಗಿಯೂ ಇರುವವು. ಅವುಗಳಲ್ಲಿ ಅಶಕ್ಯವಾಗಿರುವ ತೀರ್ಥಗಳನ್ನು ನೋಡಬೇಕೆಂದು ಮನಸ್ಸಿನಲ್ಲಾದರೂ ಎಣಿಸಬೇಕು. ಅಂಥ ದುರ್ಘಟವಾದ ತೀರ್ಥಗಳಲ್ಲಿ ಪುಣ್ಯಶಾಲಿಗಳಾದ ಅಷ್ಟವಸುಗಳೂ, ದ್ವಾದಶಾದಿತ್ಯರೂ, ಏಕೋನಪಂಚಾಶನ್ಮರುತ್ತುಗಳೂ, ಸಾಧ್ಯರೂ, ದೇವತೆಗಳಿಗೆ ಸಮಾನರಾದ ಋಷಿಗಳೂ ಸ್ನಾನಮಾಡಿರುವರು. ಆದ್ದರಿಂದ ನೀನು ಶಾಸ್ತ್ರೋಕ್ತಕ್ರಮದಿಂದ ಶುದ್ಧಾಂತಃಕರಣನಾಗಿ ಆಸ್ತಿಕ್ಯಬುದ್ಧಿಯಿಂದ ಆ ತೀರ್ಥಗಳಿಗೆ ಹೋಗಿ, ನಿಯಮದಿಂದ ಸ್ನಾನಮಾಡಿ, ಇದುವರೆಗೆ ಸಂಪಾದಿಸಿರುವ ಪುಣ್ಯವನ್ನು ಮತ್ತಷ್ಟು ಅಭಿವೃದ್ಧಿಪಡಿಸಿಕೊ. ಈ ತೀರ್ಥಗಳು ಶಾಸ್ತ್ರಜ್ಞರಾದ ಸಜ್ಜನರಿಗೇ ಹೊರತು ಮತ್ತೊಬ್ಬರಿಗೆ ಲಭಿಸತಕ್ಕವುಗಳಲ್ಲ. ವ್ರತನಿಷ್ಠನಾಗದಿರುವವನೂ, ಪಾಪಾತ್ಮನಾದವನೂ, ಅಶುಚಿಯಾದವನೂ, ಕಳ್ಳನೂ, ವಕ್ರಬುದ್ಧಿಯುಳ್ಳವನೂ ಸಹ ಇಂಥ ಪುಣ್ಯತಮವಾದ ತೀರ್ಥಗಳಲ್ಲಿ ಸ್ನಾನಮಾಡಲಾರರು. ಎಲೈ ಭೀಷ್ಮನೆ, ಧರ್ಮಜ್ಞನಾದ ನೀನು ಸದ್ವೃತ್ತಿಯಲ್ಲಿ ಇರುವದರಿಂದ, ನಿನ್ನ ಸಮಸ್ತ ಪಿತೃಗಳನ್ನೂ ಸಕಲ ದೇವತೆಗಳನ್ನೂ ಸಮಸ್ತ ಋಷಿಗಳನ್ನೂ ನಿತ್ಯವೂ ಧರ್ಮದಿಂದ ತೃಪ್ತಿಪಡಿಸಿರುವೆ. ಅದರಿಂದಲೇ ನಿನಗೆ ಭೂಮಿಯಲ್ಲಿ ಶಾಶ್ವತವಾದ ಕೀರ್ತಿಯುಂಟಾಗಿರುವದು. ಮತ್ತು ನೀನು ವಸುಲೋಕವನ್ನು ಹೊಂದತಕ್ಕವನು' ಎಂದು ಪುಲಸ್ತ್ಯಮಹರ್ಷಿಯು ಭೀಷ್ಮನಿಗೆ ತೀರ್ಥಯಾತ್ರಾಕ್ರಮವನ್ನು ಉಪದೇಶಮಾಡಿ ಸಂತೋಷದಿಂದ ಅಂತರ್ಧಾನವನ್ನು ಹೊಂದಿದನು.

ಬಳಿಕ ಸಕಲಶಾಸ್ತ್ರಜ್ಞನಾದ ಭೀಷ್ಮನು ಪುಲಸ್ತ್ಯಮಹರ್ಷಿಯು ಉಪದೇಶಮಾಡಿರುವಂತೆ ಸಕಲ ಪಾಪಪರಿಹಾರಕವಾದ ಪುಣ್ಯತಮವಾದ ಸಮಸ್ತತೀರ್ಥಗಳಿಗೂ ಹೋಗಿ, ಅಲ್ಲಲ್ಲಿ ಶಾಸ್ತ್ರೋಕ್ತವಾಗಿ ಸ್ನಾನಮಾಡಿ, ಪ್ರತಿಷ್ಠಾನತೀರ್ಥದಲ್ಲಿ ತೀರ್ಥಯಾತ್ರೆಯನ್ನು ಮುಗಿಸಿದನು. ಎಲೈ ಧರ್ಮರಾಯನೆ, ಈ ರೀತಿಯಾಗಿ ಯಾವ ಪುರುಷನು ಭೂಸಂಚಾರವನ್ನು ಮಾಡುತ್ತ ತೀರ್ಥಯಾತ್ರೆಯನ್ನು ಮಾಡುವನೋ, ಆ ಪುರುಷನು ಮರಣಾನಂತರದಲ್ಲಿ ಉತ್ತಮಕಲ್ಪದಿಂದ ಮಾಡಿದ ನೂರು ಅಶ್ವಮೇಧಯಾಗಗಳ ಫಲವನ್ನು ಹೊಂದುವನು. ಎಲೈ ಧರ್ಮರಾಯನೆ, ಪೂರ್ವದಲ್ಲಿ ಕುರುಶ್ರೇಷ್ಠನಾದ ಭೀಷ್ಮನು ಯಾವ ರೀತಿಯಿಂದ ತೀರ್ಥಯಾತ್ರೆಯನ್ನು ಮಾಡಿದನೋ, ಹಾಗೆಯೇ ನೀನು ನಿನ್ನ ಸಮೀಪದಲ್ಲಿರುವ ಈ ಋಷಿಗಳನ್ನು ಕರೆದುಕೊಂಡು ತೀರ್ಥಯಾತ್ರೆಯನ್ನು ಮಾಡಿದ್ದೇ ಆದರೆ, ಅದಕ್ಕಿಂತಲೂ ಎಂಟು ಗುಣ ಅಧಿಕವಾದ ಫಲವನ್ನು ಹೊಂದುವೆ. ಈ ಪುಣ್ಯತಮವಾದ ತೀರ್ಥಗಳನ್ನು ರಾಕ್ಷಸರು ಆಕ್ರಮಿಸಿರುವದರಿಂದ, ಪೂರ್ವಿಕರಾದ ಯಾವರಾಜರೂ ಅಲ್ಲಿಗೆ ಹೋಗದೆಯಿದ್ದರು. ನೀನು ಪುಣ್ಯಶಾಲಿಯಾದ್ದರಿಂದ, ಈ ಮಹಾತ್ಮರಾದ ಋಷಿಗಳೊಡನೆ ಆ ಪ್ರಕಾರ ತೀರ್ಥಯಾತ್ರೆಯನ್ನು ಮಾಡಬಲ್ಲೆ. ಎಲೈ ಧರ್ಮರಾಯನೆ, ದೇವಋಷಿಗಳಿಂದ ಸೇವಿತವಾದ ಈ ತೀರ್ಥಯಾತ್ರಾಕ್ರಮವನ್ನು ಯಾವ ಪುರುಷನು ಪ್ರಾತಃಕಾಲದಲ್ಲಿ ಪಠಿಸುವನೋ, ಆತನಿಗೆ ಸಕಲಪಾಪವೂ ಪರಿಹಾರವಾಗುವದು. ಎಲೈ ಧರ್ಮರಾಯನೆ, ವಾಲ್ಮೀಕಿ, ಕಶ್ಯಪ, ಆತ್ರೇಯ, ಕುಂಡಜಠರ, ವಿಶ್ವಾಮಿತ್ರ, ಗೌತಮ, ಅಸಿತ, ದೇವಲ, ಮಾರ್ಕಂಡೇಯ, ಗಾಲವ, ಭರದ್ವಾಜ, ವಸಿಷ್ಠ, ಉದ್ದಾಲಕ, ಶೌನಕ, ಪುತ್ರಸಹಿತರಾದ ವ್ಯಾಸರು, ದೂರ್ವಾಸ, ಜಾಬಾಲಿ, ಇವರೇ ಮೊದಲಾದ ತಪೋಧನರಾದ ಋಷಿಶ್ರೇಷ್ಠರು ನೀನು ತೀರ್ಥಯಾತ್ರೆಗೆ ಹೊರಡುವದನ್ನೇ ನಿರೀಕ್ಷಿಸುತ್ತಿರುವರು. ಅವರೊಡನೆ ನೀನು ತೀರ್ಥಯಾತ್ರೆಗೋಸ್ಕರ ಹೊರಡು. ಮಹಾತೇಜಸ್ವಿಯಾದ ಈ ಲೋಮಶಮಹರ್ಷಿಯೂ ಹೊರಡುವನು. ಆತನ ಸಂಗಡ ನೀನು ತೀರ್ಥಯಾತ್ರೆಗೆ ಹೊರಡು. ನಾನು ಯಾವ ರೀತಿಯಿಂದ ತೀರ್ಥಯಾತ್ರಾಕ್ರಮವನ್ನು ಹೇಳಿರುವೆನೋ ಅದೇ ರೀತಿಯಾಗಿ ನೀನು ಮಾಡಿದರೆ, ಶಂತನು ಚಕ್ರವರ್ತಿಯಂತೆ ಮಹತ್ತಾದ ಕೀರ್ತಿಯನ್ನು ಪಡೆದು, ಮಹಾತ್ಮರಾದ ಯಯಾತಿ ಪುರೂರವಸ್ಸು ಭಗೀರಥ ದಶರಥರಾಮ ಇವರುಗಳು ಹ್ಯಾಗೆ ಎಲ್ಲಾ ರಾಜರಿಗಿಂತಲೂ ಅಧಿಕರೆನ್ನಿಸಿಕೊಂಡು ಸೂರ್ಯನಂತೆ ಪ್ರಕಾಶಿಸುತ್ತಿದ್ದರೋ, ಹಾಗೆ ನೀನೂ ಪ್ರಕಾಶಿಸುವೆ ; ವೈವಸ್ವತಮನು,

ಇಕ್ಷ್ವಾಕುಮಹಾರಾಜ, ಪೂರುಮಹಾರಾಜ, ಪೃಥುಮಹಾರಾಜ, ಇವರು ಹ್ಯಾಗೆ ಪ್ರಖ್ಯಾತಿಯನ್ನು ಹೊಂದಿದರೋ ಹಾಗೆ ಪ್ರಖ್ಯಾತಿಯನ್ನು ಹೊಂದುವೆ. ಮತ್ತು ಸಕಲಶತ್ರುಗಳನ್ನೂ ನಿಗ್ರಹಿಸಿ, ದೇವರಾಜನಾದ ಮಹೇಂದ್ರನು ಹ್ಯಾಗೆ ಮೂರುಲೋಕವನ್ನೂ ಪರಿಪಾಲಿಸುವನೋ, ಹಾಗೆ ನೀನೂ ತೀರ್ಥಯಾತ್ರೆಯ ಮಹಿಮೆಯಿಂದ ಸಕಲ ಶತ್ರುಗಳನ್ನೂ ನಾಶಮಾಡಿ, ಸ್ವಧರ್ಮದಿಂದ ಸಂಪಾದಿಸಿದ ಭೂಮಂಡಲವನ್ನು ಹೊಂದಿ, ಪ್ರಜೆಗಳನ್ನು ಪರಿಪಾಲಿಸುತ್ತ, ಕಾರ್ತವೀರ್ಯಾರ್ಜುನನಂತೆ ಖ್ಯಾತಿಯನ್ನು ಹೊಂದುವೆ' ಎಂದು ದೇವಋಷಿಯಾದ ನಾರದನು ಧರ್ಮರಾಯನನ್ನು ಸಮಾಧಾನಪಡಿಸಿ, ಆತನ ಅಪ್ಪಣೆಯನ್ನು ತೆಗೆದುಕೊಂಡು ಅಂತರ್ಧಾನವನ್ನು ಹೊಂದಿದನು. ಬಳಿಕ ಧರ್ಮಾತ್ಮನಾದ ಧರ್ಮರಾಜನು ನಾರದನು ಹೇಳಿದ ತೀರ್ಥಯಾತ್ರಾಕ್ರಮವನ್ನೇ ಚಿಂತಿಸುತ್ತ, ಅದರಿಂದುಂಟಾಗುವ ಪುಣ್ಯವನ್ನು ಅಲ್ಲಿರುವ ಋಷಿಗಳಿಗೆ ವಿಜ್ಞಾಪನೆ ಮಾಡಿದನು."

## ೮೯ನೇ ಅಧ್ಯಾಯ.—ತೀರ್ಥಯಾತ್ರಾಪ್ರಶಂಸೆ—(ಯುಧಿಷ್ಠಿರ ಧೌಮ್ಯ ಸಂವಾದ).

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಬಳಿಕ ಧರ್ಮರಾಯನು ನಾರದರ ಅಭಿಪ್ರಾಯವನ್ನೂ ತನ್ನ ತಮ್ಮಂದಿರ ಅಭಿಪ್ರಾಯವನ್ನೂ ತಿಳಿದು, ಬ್ರಹ್ಮದೇವನಿಗೆ ಸಮಾನನಾದ ಧೌಮ್ಯಾಚಾರ್ಯನನ್ನು ಕುರಿತು "ಎಲೈ ಧೌಮ್ಯನೆ, ಪುರುಷಶ್ರೇಷ್ಠನಾಗಿಯೂ, ಶೂರನಾಗಿಯೂ, ನನ್ನಲ್ಲಿ ಪ್ರೀತಿಯುಳ್ಳವನಾಗಿಯೂ, ಕಾರ್ಯಸಮರ್ಥನಾಗಿಯೂ, ಅಸ್ತ್ರವಿದ್ಯೆಯಲ್ಲಿ ವಾಸುದೇವನಿಗೆ ಸಮಾನನಾಗಿಯೂ, ಮಹಾತ್ಮನಾಗಿಯೂ ಇರುವ ಅರ್ಜುನನನ್ನು ದಿವ್ಯಾಸ್ತ್ರಗಳನ್ನು ಸಂಪಾದಿಸುವದಕ್ಕೋಸ್ಕರ ದೇವಲೋಕಕ್ಕೆ ಕಳುಹಿಸಿದೆನು. ಪರಾಕ್ರಮಶಾಲಿಗಳಾಗಿಯೂ, ಶತ್ರುಸಂಹಾರಕರಾಗಿಯೂ, ಪುಂಡರೀಕಾಕ್ಷರಾಗಿಯೂ, ಕೃತತ್ರೇತಾದ್ವಾಪರಯುಗಗಳಲ್ಲಿ ಅವತಾರಮಾಡತಕ್ಕವರಾಗಿಯೂ ಇರುವ ಪುರಾತನರಾದ ನರನಾರಾಯಣ ಋಷಿಗಳೇ ಕೃಷ್ಣಾರ್ಜುನರೆಂದು ಮಹಾನುಭಾವರಾದ ವ್ಯಾಸರು ತಿಳಿದಿರುವರು, ಮತ್ತು ಇದನ್ನು ನಾನೂ ಬಲ್ಲೆನು; ಹಾಗೆಯೇ ನಾರದರೂ ಹೇಳಿರುವರು. ಇಂದ್ರನಿಗೆ ಸಮಾನನಾದ ಈ ಅರ್ಜುನನು ಸಮರ್ಥನಾದವನೆಂದು ತಿಳಿದಿದ್ದರೂ, ನಾನು ದೇವಲೋಕಕ್ಕೆ ಹೋಗಿ ಮಹೇಂದ್ರನನ್ನು ಕಂಡು ದಿವ್ಯಾಸ್ತ್ರಗಳನ್ನು ಆತನಿಂದ ಸಂಪಾದಿಸಿಕೊಂಡುಬಾ ಎಂದು ಹೇಳಿ ಅಲ್ಲಿಗೆ ಕಳುಹಿಸಿಕೊಟ್ಟೆನು. ಯುದ್ಧದಲ್ಲಿ ಜಯಸಲಶಕ್ಯರಾದ ಮಹಾರಥಿಕರಾದ ಭೀಷ್ಮ ದ್ರೋಣ ಕೃಪಾಶ್ವತ್ಥಾಮರನ್ನು ದುರ್ಯೋಧನನು ಅನುವರ್ತಿಸಿಕೊಂಡಿರುವನು. ವೇದವೇದಾಂಗತತ್ವಜ್ಞರಾಗಿಯೂ, ಶೂರರಾಗಿಯೂ, ಧನುರ್ವೇದಪಾರಂಗತರಾಗಿಯೂ ಇರುವ ಅವರೆಲ್ಲರೂ ಈಗ ಅರ್ಜುನನ ಸಂಗಡ ಯುದ್ಧಮಾಡುವದಕ್ಕೆ ಬಯಸುತ್ತಿರುವರು. ಹಾಗೆಯೇ ಸೂತಪುತ್ರನಾದ ದಿವ್ಯಾಸ್ತ್ರಸಂಪನ್ನನಾದ ಕರ್ಣನೂ ಯಾವಾಗಲೂ ಅರ್ಜುನನ ಸಂಗಡ ಯುದ್ಧಮಾಡಬೇಕೆಂದು ಅಪೇಕ್ಷಿಸುತ್ತಿರುವನು. ಅನೇಕ ದಿವ್ಯಾಸ್ತ್ರಗಳನ್ನು ಪ್ರಯೋಗಿಸತಕ್ಕ ಆ ಕರ್ಣನೆಂಬ ಪ್ರಳಯಾಗ್ನಿಯು ದುರ್ಯೋಧನನೆಂಬ ವಾಯುವಿನಿಂದ ಪ್ರೇರಿತವಾಗಿ, ಅಸ್ತ್ರವೇಗವೆಂಬ ವಾಯುಶಕ್ತಿಯುಕ್ತವಾಗಿ, ಬಾಣಗಳೆಂಬ ಜ್ವಾಲೆಗಳುಳ್ಳದ್ದಾಗಿ, ಧನುಷ್ಟಂಕಾರವೆಂಬ ಧ್ವನಿಯೊಡನೆ ಕೂಡಿ, ರಣಧೂಳಿಯೆಂಬ ಹೊಗೆಯುಳ್ಳದ್ದಾಗಿ, ನಮ್ಮ ಸೈನ್ಯವೆಂಬ ಒಣಗಿದ ಹುಲ್ಲುಗಾವಲನ್ನು ದಹಿಸಿಬಿಡುವದು. ಈ ವಿಷಯದಲ್ಲಿ ಸಂಶಯವಿಲ್ಲ. ಅಂಥ ಕರ್ಣನೆಂಬ ಪ್ರಳಯಾಗ್ನಿಯನ್ನು ಶ್ರೀಕೃಷ್ಣನೆಂಬ ವಾಯುವಿನಿಂದ ಪ್ರೇರಿತವಾಗಿಯೂ, ದಿವ್ಯಾಸ್ತ್ರಗಳೆಂಬ ಮಿಂಚುಗಳಿಂದಲೂ, ಬಿಳೀಕುದುರೆಗಳೆಂಬ ಬೆಳ್ಳಕ್ಕಿಗಳಿಂದಲೂ, ಗಾಂಡೀವವೆಂಬ ಇಂದ್ರಚಾಪದಿಂದಲೂ ಕೂಡಿರುವ ಮಹತ್ತಾದ ಅರ್ಜುನನೆಂಬ ಕಾಲಮೇಘವು ಬಾಣಪರಂಪರೆಗಳೆಂಬ ಉದಕಧಾರೆಗಳಿಂದ ಆರಿಸಿಬಿಡುವದು. ಅಂಥ ಶತ್ರುಸಂಹಾರಕನಾದ ಅರ್ಜುನನು ಸಕಲ ದಿವ್ಯಾಸ್ತ್ರಗಳನ್ನೂ ಇಂದ್ರನ ದೆಸೆಯಿಂದ ಪಡೆದುಕೊಂಡು ಬಂದು, ಭೀಷ್ಮ ದ್ರೋಣ ಮೊದಲಾದ ವೀರರನ್ನು ಯುದ್ಧರಂಗದಲ್ಲಿ ಜಯಿಸುವದಕ್ಕೆ ಸಮರ್ಥನಾದವನೆಂದು ನಾನು ತಿಳಿದಿರುವೆನು. ಈಗ ಕೃತಾರ್ಥರಾಗಿರುವ ಶತ್ರುಗಳನ್ನು ಜಯಿಸುವ ವಿಷಯದಲ್ಲಿ ಅರ್ಜುನನಿಲ್ಲದೆ ಯಾವ ಉಪಾಯವೂ ತೋರುವದಿಲ್ಲ. ಅಂಥ ಶತ್ರುಗಳನ್ನು ಜಯಿಸತಕ್ಕ ಭಾರವನ್ನು ತಾಳಿ

ಕ್ಲೇಶಪಡುತ್ತಿರುವ ಅರ್ಜುನನು ಸಕಲದಿವ್ಯಾಸ್ತ್ರಗಳನ್ನೂ ಸಂಪಾದಿಸಿಕೊಂಡು ಇಲ್ಲಿಗೆ ಬಂದದ್ದನ್ನು ನಾವು ನೋಡೇವೇ? ಎಲೈ ಧೌಮ್ಯನೆ, ಪುರುಷಶ್ರೇಷ್ಠನಾದ ಆ ಅರ್ಜುನನು ಈಗ ಇಲ್ಲಿಲ್ಲದಿರುವದರಿಂದ ದ್ರೌಪದಿಯೊಡನೆ ಈ ಕಾಮ್ಯಕವನದಲ್ಲಿ ವಾಸಮಾಡುವದಕ್ಕೆ ನಮಗೆ ಮನಸ್ಸಮಾಧಾನವಿಲ್ಲ. ಈಗ ನಾವು ಮತ್ತಾವದಾದರೂ ಒಂದು ವನಕ್ಕೆ ಹೋಗಿ ಕೆಲವುಕಾಲ ಅಲ್ಲಿ ವಾಸಮಾಡುತ್ತ, ಮಳೆಯನ್ನು ಅಪೇಕ್ಷಿಸತಕ್ಕವರು ಮೇಘದ ಆಗಮನವನ್ನು ಹ್ಯಾಗೆ ನಿರೀಕ್ಷಿಸುವರೋ ಹಾಗೆ, ಶೂರನಾದ ಅರ್ಜುನನ ಆಗಮನವನ್ನು ತಿರೀಕ್ಷಿಸುತ್ತಾ ಇರೋಣ. ಆದ್ದರಿಂದ ಪುಣ್ಯವಂತರಾದ ಬ್ರಾಹ್ಮಣರಿಂದ ಸೇವಿತವಾಗಿಯೂ, ರಮಣೀಯವಾಗಿಯೂ, ಪರಿಶುದ್ಧವಾಗಿಯೂ, ಕಂದಮೂಲಫಲಗಳುಳ್ಳದ್ದಾಗಿಯೂ, ಇರುವ ಯಾವದಾದರೂ ಒಂದು ವನವನ್ನೇ ಆಗಲಿ, ಋಷ್ಯಾಶ್ರಮವನ್ನೇ ಆಗಲಿ, ಸರೋವರಪ್ರದೇಶವನ್ನೇ ಆಗಲಿ, ನದೀಪ್ರದೇಶವನ್ನೇ ಆಗಲಿ, ಪುಣ್ಯತಮವಾದ ಪರ್ವತಪ್ರದೇಶವನ್ನೇ ಆಗಲಿ, ನೀನು ನನಗೆ ತಿಳಿಸು. ಅರ್ಜುನನಿಲ್ಲದೆ ಈ ಕಾಮ್ಯಕವನದಲ್ಲಿ ವಾಸಮಾಡುವದಕ್ಕೆ ಆಗುವದಿಲ್ಲವಾದ್ದರಿಂದ, ಅಂಥ ಪ್ರದೇಶಕ್ಕೆ ಹೋಗಬೇಕೆಂದು ನನಗೆ ಮನಸ್ಸುಂಟಾಗಿರುವದು."

## ೮೭ನೇ ಅಧ್ಯಾಯ.—ತೀರ್ಥಯಾತ್ರಾಪ್ರಶಂಸೆ—(ಧೌಮ್ಯಯುಧಿಷ್ಠಿರ ಸಂವಾದ.)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಬಳಿಕ ಬೃಹಸ್ಪತಿಗೆ ಸಮಾನನಾದ ಧೌಮ್ಯನು ತೀರ್ಥಯಾತ್ರೆಯಲ್ಲಿ ಕುತೂಹಲಪಡುತ್ತಿದ್ದ ದೀನರಾದ ಧರ್ಮರಾಯಾದಿಗಳನ್ನು ನೋಡಿ, ಅವರ ಮನಸ್ಸನ್ನು ಸಮಾಧಾನಮಾಡಿ ಧರ್ಮರಾಯನನ್ನು ಕುರಿತು "ಎಲೈ ಧರ್ಮರಾಯನೆ, ಬ್ರಾಹ್ಮಣರಿಗೆ ಸಮ್ಮತವಾಗಿಯೂ ಪುಣ್ಯತಮವಾಗಿಯೂ ಇರುವ ಆಶ್ರಮಗಳನ್ನೂ, ತೀರ್ಥಗಳನ್ನೂ, ಪರ್ವತಗಳನ್ನೂ, ವಾಸಮಾಡುವದಕ್ಕೆ ಯೋಗ್ಯವಾದ ಪುಣ್ಯಸ್ಥಳಗಳನ್ನೂ ನಾನು ತಿಳಿಸುವೆನು. ಅವುಗಳನ್ನು ನೀನು ತಮ್ಮಂದಿರೊಡನೆಯೂ ದ್ರೌಪದಿಯೊಡನೆಯೂ ಕೂಡಿ ಕೇಳಿದಮಾತ್ರಕ್ಕೆ, ನಿನ್ನ ಸಕಲ ದುಃಖಗಳೂ ಪರಿಹಾರವಾಗುವವು; ಅಧಿಕವಾದ ಪುಣ್ಯವೂ ಲಭಿಸುವದು. ಈ ಋಷಿಗಳೊಡಗೂಡಿ ನೀನು ಆ ಪುಣ್ಯತೀರ್ಥಗಳಿಗೆ ಹೋದರೆ, ಅದಕ್ಕಿಂತಲೂ ಶತಗುಣ ಅಧಿಕವಾದ ಪುಣ್ಯವು ಲಭಿಸುವದು. ಎಲೈ ಯುಧಿಷ್ಠಿರನೆ, ಮೊದಲು ಪೂರ್ವದಿಕ್ಕಿನಲ್ಲಿ ರಾಜರ್ಷಿಗಳಿಂದ ಸೇವಿತವಾಗಿರುವ ಪುಣ್ಯತೀರ್ಥಗಳನ್ನು ನಾನು ತಿಳಿದಿರುವ ಮಟ್ಟಿಗೆ ನಿನಗೆ ತಿಳುಹಿಸುವೆನು ಕೇಳು. ಪೂರ್ವದಿಕ್ಕಿನಲ್ಲಿ ನೈಮಿಷಾರಣ್ಯವಿರುವದು. ಅಲ್ಲಿ ಪ್ರತ್ಯೇಕಪ್ರತ್ಯೇಕವಾಗಿ ಪುಣ್ಯತಮಗಳಾವ ದೇವತಾತೀರ್ಥಗಳು ಅನೇಕವಾಗಿರುವವು. ಅಲ್ಲಿ ದೇವರ್ಷಿಗಳಿಂದ ಸೇವಿತವಾಗಿಯೂ ರಮಣೀಯವಾಗಿಯೂ ಇರುವ ಗೋಮತೀ ನದಿಯಿರುವದು. ಅದು ದೇವತೆಗಳಿಗೆ ಯಜ್ಞಭೂಮಿಯಾಗಿಯೂ, ಯಮನಿಗೆ ಯಜ್ಞಪಶುಮಾರಣಭೂಮಿಯಾಗಿಯೂ ಇರುವದು. ಅಲ್ಲಿ ಒಂದು ಪುಣ್ಯತಮವಾದ ಪರ್ವತವಿರುವದು; ಮತ್ತು ಗಯನೆಂಬ ರಾಜರ್ಷಿಯಿರುವನು; ದೇವತೆಗಳಿಂದ ಸೇವಿತವಾದ ಬ್ರಹ್ಮಸರಸ್ಸಿರುವದು. ಆ ಪುಣ್ಯತಮವಾದ ಪ್ರದೇಶವನ್ನೇ ಗಯಾಕ್ಷೇತ್ರವೆಂದು ಹೇಳುವರು. ಇದರ ಮಹಿಮೆಯು ಅತಿಶಯವಾದ್ದರಿಂದ, ಪೂರ್ವಿಕರಾದವರು ಅನೇಕ ಪುತ್ರರಾದಲ್ಲಿ ಅವರಲ್ಲಿ ಒಬ್ಬನಾದರೂ ಗಯಾಕ್ಷೇತ್ರಕ್ಕೆ ಹೋಗಿ ಪಿತೃಗಳಿಗೆ ಪಿಂಡಪ್ರದಾನವನ್ನು ಮಾಡಿಯಾನೆಂದು ಅನೇಕ ಪುತ್ರರಾಗಬೇಕೆಂದು ಬಯಸುತ್ತಿದ್ದರು. ಹೀಗಾಗದ ಪಕ್ಷದಲ್ಲಿ ಅಶ್ವಮೇಧಯಾಗವನ್ನಾಗಲಿ ನೀಲವೃಷೋತ್ಸರ್ಜನವನ್ನಾಗಲಿ ಮಾಡಿದವನು ತನ್ನ ವಂಶದಲ್ಲಿ ತನಗಿಂತಲೂ ಹಿಂದೆ ಹತ್ತುತಲೆಯವರೆಗೂ ಮುಂದೆ ಹತ್ತುತಲೆಯವರೆಗೂ ತಮ್ಮ ಪಿತೃಗಳನ್ನೆಲ್ಲಾ ಉದ್ಧಾರಮಾಡುವನು. ಆ ಗಯಾಕ್ಷೇತ್ರದಲ್ಲಿ ಫಲ್ಗುನಿಯೆಂಬ ಮಹಾನದಿಯೂ, ಗಯಶಿರಸ್ಸೂ, ಅಕ್ಷಯವಟವೃಕ್ಷವೂ ಇರುವವು. ಅಲ್ಲಿ ಪಿತೃಗಳಿಗೆ ಪಿಂಡಪ್ರದಾನವನ್ನು ಮಾಡಿದ್ದೇ ಆದರೆ, ಅದು ಅಕ್ಷಯವಾಗುವದು. ಮತ್ತು ಅತ್ತಲಾಗಿ ಕೌಶಿಕೀ ನದಿಯಿರುವದು. ವಿಶ್ವಾಮಿತ್ರನು ತಪಸ್ಸಿದ್ಧನಾಗಿ ಬ್ರಾಹ್ಮಣ್ಯವನ್ನು ಪಡೆದದ್ದು ಅಲ್ಲಿಯೇ. ಅದೇ ದಿಕ್ಕಿನಲ್ಲಿ ಪುಣ್ಯತಮವಾದ ಗಂಗಾನದಿಯು ಹರಿಯುತ್ತಿರುವದು. ಆ ಗಂಗಾತೀರದಲ್ಲಿ ಭಗೀರಥಮಹಾರಾಜನು ಬಹಳವಾಗಿ ದಕ್ಷಿಣೆಗಳನ್ನು ಕೊಟ್ಟು ಅನೇಕ ಯಜ್ಞಗಳನ್ನು ಮಾಡಿರುವನು.

ಪಾಂಚಾಲದೇಶದಲ್ಲಿ ಉತ್ಪಲಾವನವೆಂಬ ಆರಣ್ಯವಿರುವದು. ಅಲ್ಲಿ ವಿಶ್ವಾಮಿತ್ರಋಷಿಯು ತನ್ನ ಪುತ್ರನೊಡಗೂಡಿ ಯಜ್ಞವನ್ನು ಮಾಡಿರುವನು. ಅಲ್ಲೇ ಪೂಜ್ಯನಾದ ಭಾರ್ಗವರಾಮನು ವಿಶ್ವಾಮಿತ್ರನ ಅಪರಿಮಿತವಾದ ತೇಜಸ್ಸನ್ನು ನೋಡಿ ಆತನ ವಂಶಕೀರ್ತನೆಯನ್ನು ಮಾಡಿರುವನು. ಕನ್ಯಕುಬ್ಜದೇಶದಲ್ಲಿ ಇಂದ್ರನೊಡಗೂಡಿ ವಿಶ್ವಾಮಿತ್ರಋಷಿಯು ಸೋಮಪಾನವನ್ನು ಮಾಡಿ, ಬಳಿಕ ಕ್ಷಾತ್ರವನ್ನು ಬಿಟ್ಟು ಬ್ರಾಹ್ಮಣ್ಯವನ್ನು ಪಡೆದನು. ಅತ್ತಲಾಗಿ ಗಂಗಾಯಮುನಾಸಂಗಮವು ಋಷಿಗಳಿಂದ ಸೇವಿತವಾಗಿಯೂ, ಪುಣ್ಯತಮವಾಗಿಯೂ, ಪಾಪನಾಶಕವಾಗಿಯೂ, ಲೋಕಪ್ರಸಿದ್ಧವಾಗಿಯೂ, ಸರ್ವೋತ್ತಮವಾಗಿಯೂ ಇರುವದು. ಆ ಪ್ರದೇಶದಲ್ಲೇ ಪೂರ್ವದಲ್ಲಿ ಬ್ರಹ್ಮದೇವನು ಯಜ್ಞವನ್ನು ಮಾಡಿರುವನು. ಆದ್ದರಿಂದಲೇ ಆ ಪ್ರದೇಶಕ್ಕೆ ಪ್ರಯಾಗವೆಂಬ ಹೆಸರುಂಟಾಗಿರುವದು. ಅತ್ತಲಾಗಿಯೇ ಮಹಾನುಭಾವನಾದ ಅಗಸ್ತ್ಯಮಹರ್ಷಿಯ ಆಶ್ರಮವೂ ಇನ್ನೂ ಅನೇಕ ಮಹರ್ಷಿಗಳಿಂದ ಸೇವಿತವಾಗಿರುವ ಅನೇಕ ಪುಣ್ಯಾಶ್ರಮಗಳೂ ಇರುವವು. ಅಲ್ಲಿಯೇ ಕಾಲಂಜರವೆಂಬ ಪರ್ವತವಿರುವದು. ಆ ಪರ್ವತದಲ್ಲಿ ಹಿರಣ್ಯಬಿಂದುವೆಂಬ ಪುಣ್ಯತೀರ್ಥವಿರುವದು. ಅಲ್ಲಿಯೇ ಪರಮಮಂಗಳಕರವಾಗಿಯೂ ರಮ್ಯವಾಗಿಯೂ ಇರುವ ಪುಣ್ಯತಮವಾದ ಅಗಸ್ತ್ಯಪರ್ವತವೂ, ಪರಶುರಾಮನಿಗೆ ವಾಸಸ್ಥಾನವಾಗಿರುವ ಮಹೇಂದ್ರಪರ್ವತವೂ ಇರುವವು. ಅಲ್ಲಿ ಪೂರ್ವದಲ್ಲಿ ಬ್ರಹ್ಮದೇವನು ಯಜ್ಞಮಾಡಿದನು. ಆ ಕಡೆ ಇರುವ ಮಣಿಕರ್ಣಿಕಾಸರೋವರದಲ್ಲಿ ಗಂಗಾದೇವಿಯು ವಾಸಮಾಡುತ್ತಿರುವಳು. ಅಲ್ಲಿಯೇ ಪುಣ್ಯತಮವಾದ ಕಾಶೀಕ್ಷೇತ್ರವಿರುವದು. ಆ ಕ್ಷೇತ್ರವು ಪುಣ್ಯವಂತರಿಗೆ ಆಶ್ರಯವಾಗಿಯೂ, ನೋಡಿದವರಿಗೂಕೂಡ ಪುಣ್ಯವನ್ನುಂಟುಮಾಡತಕ್ಕದ್ದಾಗಿಯೂ, ಪರಮಮಂಗಳಕರವಾಗಿಯೂ, ಲೋಕದಲ್ಲಿ ಪ್ರಸಿದ್ಧವಾಗಿಯೂ ಇರುವದು. ಅತ್ತಲಾಗಿ ಕೇದಾರಕ್ಷೇತ್ರವೂ ಮತಂಗಾಶ್ರಮವೂ ಬಹಳವಾದ ಕಂದಮೂಲಗಳಿಂದಲೂ ನಿರ್ಮಲೋದಕದಿಂದಲೂ ರಮ್ಯವಾದ ಕುಂಡೋದವೆಂಬ ಪರ್ವತವೂ ಇರುವವು. ಅಲ್ಲಿರುವ ಆ ಉದಕವನ್ನು ಪಾನಮಾಡಿಯೇ ನಳಮಹಾರಾಜನು ಸಂತುಷ್ಟನಾದನು. ಅತ್ತಲಾಗಿ ಅನೇಕಮಂದಿ ಮಹರ್ಷಿಗಳಿಂದ ಸೇವಿತವಾದ ಪುಣ್ಯತಮವಾದ ದೇವವನವೂ ಬಾಹುದಾನದಿಯೂ ಇರುವವು. ಅಲ್ಲಿರುವ ಬಂದು ಪರ್ವತದ ಮೇಲೆ ನಂದೆಯೆಂಬ ನದಿಯಿರುವದು. ಇನ್ನೂ ಆ ದಿಕ್ಕಿನಲ್ಲಿ ಪುಣ್ಯತಮವಾದ ನದಿಗಳೂ ತೀರ್ಥಗಳೂ ಪರ್ವತಗಳೂ ಆಶ್ರಮಗಳೂ ಇರುವವು. ಉಳಿದ ಮೂರುದಿಕ್ಕುಗಳಲ್ಲಿರತಕ್ಕ ಪುಣ್ಯತಮವಾದ ತೀರ್ಥಗಳನ್ನೂ ನದಿಗಳನ್ನೂ ಪರ್ವತಗಳನ್ನೂ ಆಶ್ರಮಗಳನ್ನೂ ತಿಳುಹಿಸುವೆನು ಕೇಳು."

### ೮೮ನೇ ಅಧ್ಯಾಯ.—ತೀರ್ಥಯಾತ್ರಾಪ್ರಶಂಸೆ—(ಧೌಮ್ಯ ಯುಧಿಷ್ಠಿರ ಸಂವಾದ.)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಧೌಮ್ಯಾಚಾರ್ಯನು ಧರ್ಮರಾಯನನ್ನು ಕುರಿತು "ಎಲೈ ಧರ್ಮರಾಯನೆ, ದಕ್ಷಿಣದಿಕ್ಕಿನಲ್ಲಿರುವ ಪುಣ್ಯತೀರ್ಥಗಳನ್ನು ನನಗೆ ತಿಳಿದಮಟ್ಟಿಗೆ ತಿಳುಹಿಸುವೆನು ಕೇಳು. ಆ ದಿಕ್ಕಿನಲ್ಲಿ ಪುಣ್ಯತಮವಾಗಿಯೂ, ಅನೇಕ ಉಪವನಗಳಿಂದ ಕೂಡಿರುವದಾಗಿಯೂ, ಹೆಚ್ಚಾದ ನೀರುಳ್ಳದ್ದಾಗಿಯೂ, ಋಷಿಗಳಿಂದ ಸೇವಿತವಾಗಿಯೂ, ಮಂಗಳಕರವಾಗಿಯೂ ಇರುವ ಗೋದಾವರೀ ನದಿಯಿರುವದು. ಅಲ್ಲಿ ಅನೇಕ ಮೃಗಪಕ್ಷಿಗಳಿಗೆ ಆಶ್ರಯವಾಗಿಯೂ, ಋಷಿಗಳ ಪರ್ಣಶಾಲೆಗಳಿಂದ ಪರಿಶೋಭಿಸುತ್ತಾ ಪಾಪಪರಿಹಾರಕವಾಗಿಯೂ ಇರುವ ವೇಣಾ ಭೀಮರಥೀ ಎಂಬ ಎರಡು ನದಿಗಳಿರುವವು. ಅತ್ತಲಾಗಿ ರಾಜರ್ಷಿಯಾದ ನೃಗಮಹಾರಾಜನಿಂದ ಸೇವಿತವಾಗಿಯೂ, ಬಹುಮಂದಿ ಬ್ರಾಹ್ಮಣರಿಗೆ ಆಶ್ರಯವಾಗಿಯೂ, ಬಹು ಜಲವುಳ್ಳದ್ದಾಗಿಯೂ ಇರುವ ಪಯೋಷ್ಣೀನದಿಯಿರುವದು. ಆ ಪ್ರದೇಶದಲ್ಲಿ ಮಹಾಯೋಗಿಯೂ, ಮಹಾತ್ಮನೂ, ಯಶೋವಂತನೂ ಆದ ಮಾರ್ಕಂಡೇಯಮಹರ್ಷಿಯು ಅಲ್ಲಿ ಯಜಮಾನನಾದ ನೃಗಮಹಾರಾಜನು ಮಾಡಿದ ಯಜ್ಞದಲ್ಲಿ ಸೋಮಪಾನಮಾಡಿ ಇಂದ್ರನೂ, ದಕ್ಷಿಣೆಗಳನ್ನು ಸ್ವೀಕರಿಸಿ ಬ್ರಾಹ್ಮಣರೂ ಸಹ ದಣಿದರೆಂದು ಆ ನೃಗಮಹಾರಾಜನ ವಂಶಕ್ಕೆ ಅನುಗುಣವಾಗಿರುವಂತೆ ಆತನ ವಿಷಯವಾಗಿ ಕೆಲವು ಯೋಗ್ಯವಾದ ಗೀತಗಳನ್ನು ಕೀರ್ತನೆ ಮಾಡಿರುವನು. ಪಯೋಷ್ಣೀನದಿಯಲ್ಲಿರುವ ಉತ್ತಮವಾದ ವರಾಹ

ತೀರ್ಥದ ಉದಕವು ಗಾಳಿಯಿಂದ ತೂರಿಕೊಂಡು ಬಂದು ಭೂಮಿಯ ಮೇಲೆ ಬಿದ್ದು, ಅಲ್ಲಿದ್ದ ನೃಗಮಹಾರಾಜನು ಜನ್ಮಪ್ರಭೃತಿ ಮರಣಾಂತವಾಗಿ ಮಾಡಿದ ಪಾಪವನ್ನೆಲ್ಲಾ ಪರಿಹಾರಮಾಡಿರುವದು. ಅಲ್ಲಿ ಈಶ್ವರನು ತಾನು ವಾಸ ಮಾಡುವದಕ್ಕೋಸ್ಕರ ಶಿವಪುರವೆಂಬ ಪುಣ್ಯಸ್ಥಳವನ್ನು ಮಾಡಿಕೊಂಡಿರುವನು. ಅದರ ಗೋಪುರವು ಸ್ವರ್ಗಕ್ಕಿಂತಲೂ ಎತ್ತರವಾಗಿಯೂ ನಿರ್ಮಲವಾಗಿಯೂ ಕಾಣಿಸುತ್ತಿರುವದು. ಆ ಗುರುತನ್ನು ನೋಡಿಕೊಂಡು ಅಲ್ಲಿಗೆ ಹೋಗಬೇಕು. ಪುಣ್ಯತಮವಾದ ಗಂಗೆ ಮೊದಲಾದ ಸಕಲಪುಣ್ಯನದಿಗಳೂ ಬಂದುತೂಕ, ಪಯೋಷ್ಣೀನದಿಯೇ ಬಂದುತೂಕ. ಆದ್ದರಿಂದ ಆ ಪಯೋಷ್ಣೀನದಿಯು ಎಲ್ಲಾ ತೀರ್ಥಗಳಿಗಿಂತಲೂ ಪುಣ್ಯತಮವಾದದ್ದೆಂದು ನಾನು ತಿಳಿದಿರುವೆನು. ಅದೇ ದಿಕ್ಕಿನಲ್ಲಿ ವಿಶೇಷವಾಗಿ ಕಂದಮೂಲಫಲಗಳುಳ್ಳದ್ದಾಗಿಯೂ ಪುಣ್ಯತಮವಾಗಿಯೂ ಮಂಗಳಕರವಾಗಿಯೂ ಇರುವ ಮಾಠರ ವನವಿರುವದು. ಅತ್ತಲಾಗಿ ವರುಣಸ್ರೋತವೆಂಬ ಪರ್ವತದಲ್ಲಿ ಒಂದು ಪುಣ್ಯತಮವಾದ ಯೂಪಸ್ತಂಭವಿರುವದು. ಪ್ರವೇಣೀನದಿಯ ಉತ್ತರಮಾರ್ಗದಲ್ಲಿರುವ ಕಣ್ವಾಶ್ರಮದಲ್ಲಿ ಅನೇಕ ಋಷ್ಯಾಶ್ರಮಗಳಿರುವವು. ಶೂರ್ಪಾರಕ್ಷೇತ್ರದಲ್ಲಿ ಮಹಾತ್ಮರಾದ ಜಮದಗ್ನಿಋಷಿಗಳ ಗದ್ದಿಗೆಯಿರುವದು, ಮತ್ತು ಅತ್ತಲಾಗಿ ರಮಣೀಯವಾದ ವಿಷಾಣತೀರ್ಥವೂ ಚಂದ್ರತೀರ್ಥವೂ ಅಶೋಕತೀರ್ಥವೂ ಅನೇಕ ಆಶ್ರಮಗಳಿಂದ ಕೂಡಿದ ಅಗಸ್ತ್ಯತೀರ್ಥವೂ ಇರುವವು. ಪಾಂಡ್ಯದೇಶದಲ್ಲಿ ವರುಣತೀರ್ಥವೂ ಕುಮಾರತೀರ್ಥವೂ ಇರುವವು. ಆ ಪಾಂಡ್ಯದೇಶದಲ್ಲಿ ರಾಗದ್ವೇಷರಹಿತರಾದ ಕುಮಾರಿಯರಿರುವರು. ಅವರು ತಮಗಿಂತಲೂ ಉತ್ತಮನಾದವನೇ ಪತಿಯಾಗಬೇಕೆಂದು ಬಯಸುತ್ತ ಭಗವದ್ಭಕ್ತರಾಗಿರುವರು. ಅತ್ತಲಾಗಿಯೇ ತಾಮ್ರಪರ್ಣೀನದಿಯಿರುವದು. ಆ ತಾಮ್ರಪರ್ಣೀತೀರದಲ್ಲಿರುವ ಆಶ್ರಮದಲ್ಲಿ ಬಹುಮಂದಿ ದೇವತೆಗಳು ಮೋಕ್ಷಾರ್ಥಿಗಳಾಗಿ ತಪಸ್ಸನ್ನು ಮಾಡಿರುವರು. ಅತ್ತಲಾಗಿಯೇ ಲೋಕಪ್ರಸಿದ್ಧವಾದ ಗೋಕರ್ಣಕ್ಷೇತ್ರವಿರುವದು. ಅಲ್ಲಿಯೇ ಶೀತಳವಾದ ನೀರುಳ್ಳದ್ದಾಗಿಯೂ ಪುಣ್ಯತಮವಾಗಿಯೂ ಮಂಗಳಕರವಾಗಿಯೂ ಪಾಪಾತ್ಮರು ಪ್ರವೇಶಿಸುವದಕ್ಕೆ ಅಶಕ್ಯವಾಗಿಯೂ ಇರುವ ಒಂದು ಮಡುವು ಇರುವದು. ಆ ದಿಕ್ಕಿನಲ್ಲಿ ವೃಕ್ಷಗಳಿಂದಲೂ ತೃಣಗಳಿಂದಲೂ ಫಲಮೂಲಗಳಿಂದಲೂ ರಮ್ಯವಾದ ಅಗಸ್ತ್ಯಶಿಷ್ಯನಾದ ತೃಣಧೂಮಾಗ್ನಿಋಷಿಗೆ ಆವಾಸಸ್ಥಾನವಾದ ದೇವಸಮಪರ್ವತವೂ, ರತ್ನಗಳು ಹುಟ್ಟತಕ್ಕ ವೈಡೂರ್ಯಪರ್ವತವೂ, ವಿಶೇಷವಾಗಿ ಕಂದಮೂಲಫಲೋದಕಗಳಿಂದ ಕೂಡಿದ ಅಗಸ್ತ್ಯಾಶ್ರಮವೂ ಇರುವವು.

ಎಲೈ ಧರ್ಮರಾಯನೆ, ಸುರಾಷ್ಟ್ರದೇಶದಲ್ಲಿರುವ ಪುಣ್ಯತಮವಾದ ಕ್ಷೇತ್ರಗಳನ್ನೂ ನದಿಗಳನ್ನೂ ಸರೋವರಗಳನ್ನೂ ಸಹ ತಿಳಿಸುವೆನು ಕೇಳು. ಅಲ್ಲಿ ಚಮಸೋದ್ಭೇದ, ಪ್ರಭಾಸ, ತಪಸ್ವಿಗಳಿಂದ ಸೇವಿತವಾದ ಪಿಂಡಾರಕ ಎಂಬ ಪುಣ್ಯತೀರ್ಥಗಳಿರುವವು. ಅತ್ತಲಾಗಿರುವ ಸಮುದ್ರದಲ್ಲಿ ಅನೇಕ ದೇವತೀರ್ಥಗಳು ಸೇರಿರುವವು. ಅಲ್ಲಿಯೇ ಉಜ್ಜಯಂತವೆಂಬ ಪರ್ವತವಿರುವದು. ಅಲ್ಲಿ ತಪಸ್ಸುಮಾಡಿದವರಿಗೆ ಶೀಘ್ರವಾಗಿ ಸಿದ್ಧಿಯುಂಟಾಗುವದೆಂದು ದೇವರ್ಷಿಗಳಾದ ನಾರದರು ಹೇಳಿರುವರು. ಸುರಾಷ್ಟ್ರದೇಶದಲ್ಲಿ ಅನೇಕ ಮೃಗಪಕ್ಷಿಗಳಿಂದ ಆಶ್ರಿತವಾದ ಪುಣ್ಯತಮವಾದ ಉಜ್ಜಯಂತವೆಂಬ ಪರ್ವತದಲ್ಲಿ ತಪಸ್ಸುಮಾಡಿದವನು ಸ್ವರ್ಗಲೋಕದಲ್ಲಿ ಪೂಜ್ಯನಾಗುವನು ಎಂದು ಒಂದು ಇತಿಹಾಸವಿರುವದು. ಅಲ್ಲೇ ಸಾಕ್ಷಾತ್ಪುರಾಣಪುರುಷನಾದ ಧರ್ಮಸ್ವರೂಪನಾದ ದೇವದೇವನಾದ ಮಧುಸೂದನನು ವಾಸಮಾಡುತ್ತಿರುವನು. ಆ ಮಹಾನುಭಾವನಾದ ವಾಸುದೇವನನ್ನು ವೇದವೇದಾಂತಗಳನ್ನು ಅಭ್ಯಾಸಮಾಡಿ ಬ್ರಹ್ಮಜ್ಞಾನಿಗಳಾದ ಬ್ರಾಹ್ಮಣರು ತಿಳಿಯುವರು. ಆ ಪುಂಡರೀಕಾಕ್ಷನಾದ ವಾಸುದೇವನು ಪರಿಶುದ್ಧರಾದವರಲ್ಲಿ ಅತ್ಯಂತ ಪರಿಶುದ್ಧನಾಗಿಯೂ, ಪುಣ್ಯಶಾಲಿಗಳಲ್ಲಿ ಅತ್ಯಂತ ಪುಣ್ಯಶಾಲಿಯಾಗಿಯೂ, ಮಂಗಳಕರರಾದವರಲ್ಲಿ ಅತ್ಯಂತ ಮಂಗಳಕರನಾಗಿಯೂ ಇರುವನೆಂದು ಮೂರುಲೋಕದಲ್ಲೂ ಹೊಗಳಿಸಿಕೊಳ್ಳುತ್ತಿರುವನು. ಆತನು ಅಕ್ಷರಸ್ವರೂಪನಾಗಿಯೂ, ಮಹಾತ್ಮನಾಗಿಯೂ, ಅಚಿಂತ್ಯವಾದ ಮಹಿಮೆಯುಳ್ಳವನಾಗಿಯೂ, ಸರ್ವಾಂತರ್ಯಾಮಿಯಾಗಿಯೂ, ಸರ್ವೋತ್ತಮನಾಗಿಯೂ ಇರುವನು. ಇಂಥ ಶ್ರೀಹರಿಗೆ ಆ ದ್ವಾರವತಿಯು ವಾಸಸ್ಥಾನವಾಗಿರುವದು."

## ೮೯ನೇ ಅಧ್ಯಾಯ.—ತೀರ್ಥಯಾತ್ರಾಪ್ರಶಂಸೆ—(ಧೌಮ್ಯ ಯುಧಿಷ್ಠಿರ ಸಂವಾದ.)

ಅನಂತರದಲ್ಲಿ ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಧೌಮ್ಯನು ಧರ್ಮರಾಯನನ್ನು ಕುರಿತು "ಎಲೈ ಧರ್ಮರಾಯನೆ, ಪಶ್ಚಿಮದಿಕ್ಕಿನಲ್ಲಿರುವ ಅವಂತೀದೇಶದಲ್ಲಿರತಕ್ಕ ಪುಣ್ಯತಮವಾದ ಪ್ರದೇಶಗಳನ್ನು ತಿಳುಹಿಸುವೆನು ಕೇಳು. ಫಲವತ್ತಾದ ಪ್ರೇಂಕಣವೃಕ್ಷಗಳಿಂದಲೂ ಮಾವಿನ ಮರಗಳಿಂದಲೂ ಹಜ್ಜೆಗಿಡಗಳಿಂದಲೂ ಮನೋಹರವಾದ ಉಪವನಗಳಿಂದ ಕೂಡಿದ ಪುಣ್ಯತಮವಾದ ನರ್ಮದಾನದಿಯು ಆ ದಿಕ್ಕಿನಲ್ಲಿ ಪಶ್ಚಿಮಮುಖವಾಗಿ ಹರಿಯುತ್ತಿರುವದು. ಆ ನರ್ಮದಾನದಿಯಲ್ಲಿ ಮೂರು ಲೋಕದಲ್ಲಿರುವ ಸಕಲ ತೀರ್ಥಗಳೂ ನದಿಗಳೂ ಪುಣ್ಯಕ್ಷೇತ್ರಗಳೂ ಸಹ ಸನ್ನಿಹಿತವಾಗಿರುವವು. ಆ ವುದಕದಲ್ಲಿ ವನದೇವತೆಗಳೂ ಪರ್ವತಾಭಿಮಾನದೇವತೆಗಳೂ ಬ್ರಹ್ಮಾದಿ ಸಕಲ ದೇವತೆಗಳೂ ಸಿದ್ಧರೂ ಚಾರಣರೂ ಋಷಿಗಳೂ ಸಹ ಸ್ನಾನಮಾಡುವದಕ್ಕೆ ನಿರಂತರದಲ್ಲೂ ಬರುವರು. ಆ ಪ್ರದೇಶದಲ್ಲೇ ಮಹಾಮುನಿಯಾದ ವಿಶ್ರವಸ್ಸಿನ ಆಶ್ರಮವಿರುವದು. ಅಲ್ಲಿಯೇ ನರವಾಹನನಾದ ಧನಾಧಿಪತಿಯಾದ ಕುಬೇರನು ಹುಟ್ಟಿದನು. ಅಲ್ಲಿ ವೈಡೂರ್ಯಶಿಖರವೆಂಬ ಪುಣ್ಯತಮವಾದ ಪರ್ವತವಿರುವದು. ಆ ಪರ್ವತದಲ್ಲಿ ಯಾವಾಗಲೂ ಫಲಗಳಿಂದಲೂ ಪುಷ್ಪಗಳಿಂದಲೂ ಭರಿತವಾಗಿ ಹಸುರೆಲೆಗಳಿಂದ ಕೂಡಿದ ಅನೇಕ ವೃಕ್ಷಗಳಿರುವವು. ಆ ಪರ್ವತದ ಶಿಖರದಲ್ಲಿ ದೇವತೆಗಳಿಂದಲೂ ಗಂಧರ್ವರಿಂದಲೂ ಸೇವಿತವಾದ ಒಂದು ಪದ್ಮಸರೋವರವಿರುವದು. ದೇವರ್ಷಿಗಳಿಂದ ಸೇವಿತವಾದ ಸ್ವರ್ಗಲೋಕಕ್ಕೆ ಸಮಾನವಾದ ಪುಣ್ಯತಮವಾದ ಆ ಪರ್ವತದಲ್ಲಿ ಆಶ್ಚರ್ಯಕರವಾಗಿ ವೇದಘೋಷವು ಕೇಳಬರುವದು. ಅತ್ತಲಾಗಿಯೇ ಅನೇಕ ಮಡುವುಗಳುಳ್ಳ ಪುಣ್ಯತಮವಾದ ವಿಶ್ವಾಮಿತ್ರನದಿಯಿರುವದು. ಅದರ ತೀರದಲ್ಲೇ, ನಹುಷಮಹಾರಾಜನ ಮಗನಾದ ಯಯಾತಿಮಹಾರಾಜನು ತನ್ನ ಮೊಮ್ಮಕ್ಕಳು ಯಜ್ಞಮಾಡುತ್ತಿರುವ ಪ್ರದೇಶದಲ್ಲಿ ಸ್ವರ್ಗದ ದೆಸೆಯಿಂದ ಬಿದ್ದು, ಅವರ ಪ್ರಭಾವದಿಂದ ಉತ್ತಮವಾದ ಗತಿಯನ್ನು ಹೊಂದಿದನು. ಅದೇ ದಿಕ್ಕಿನಲ್ಲಿ ಪುಣ್ಯತಮವಾದ ಒಂದು ಮಡುವೂ, ಮೈನಾಕವೆಂಬ ಒಂದು ಪರ್ವತವೂ ಸಹ ಇರುವವು. ವಿಶೇಷವಾಗಿ ಕಂದಮೂಲಫಲಗಳಿಂದ ಕೂಡಿದ ಅಸಿತವೆಂಬ ಪರ್ವತವೂ, ಕಕ್ಷಸೇನನ ಪುಣ್ಯತಮವಾದ ಆಶ್ರಮವೂ, ಪ್ರಸಿದ್ಧವಾದ ಚ್ಯವನಮಹರ್ಷಿಗಳ ಆಶ್ರಮವೂ ಸಹ ಅಲ್ಲಿ ಇರುವವು. ಆ ಚ್ಯವನಾಶ್ರಮದಲ್ಲಿ ಸ್ವಲ್ಪ ತಪಸ್ಸುಮಾಡಿದವರಿಗೂ ಸಿದ್ಧಿಯಾಗುವದು. ಅತ್ತಲಾಗಿ ಶಾಂತರಾದ ಮಹಾತ್ಮರಾದ ಋಷಿಗಳಿಗೆ ಆಶ್ರಯವಾಗಿರುವ ಜಂಬೂಮಾರ್ಗವೆಂಬ ಪುಣ್ಯತಮವಾದ ಆಶ್ರಮವಿರುವದು. ಆಯಾಶ್ರಮದಲ್ಲಿರುವ ಮೃಗಪಕ್ಷಿಗಳೂ ಕೂಡ ಶ್ರೇಷ್ಠವಾಗಿರುವವು. ಅತ್ತಲಾಗಿ ಪುಣ್ಯತಮವಾಗಿಯೂ ಅನೇಕ ಋಷಿಗಳಿಂದ ಸೇವಿತವಾಗಿಯೂ ಇರುವ ಕೇತುಮಾಲೆಯೆಂಬ ನದಿಯೂ ಗಂಗಾದ್ವಾರವೂ ಸಹ ಇರುವವು. ಅಲ್ಲಿ ಲೋಕಪ್ರಸಿದ್ಧವಾಗಿಯೂ ಪುಣ್ಯಶಾಲಿಗಳಾದ ಬ್ರಾಹ್ಮಣರಿಂದ ಸೇವಿತವಾಗಿಯೂ ಇರುವ ಸೈಂಧವಾರಣ್ಯವೂ, ಪುಷ್ಕರವೆಂಬ ಹೆಸರುಳ್ಳ ಬ್ರಹ್ಮಸರಸ್ಸೂ ಇರುವವು. ಅಲ್ಲಿಯೇ ತಪಸ್ಸಿದ್ಧರಾದ ಮಹರ್ಷಿಗಳಾದ ವೈಖಾನಸರ ಆಶ್ರಮವಿರುವದು. ಪುಣ್ಯತಮವಾದ ಆ ಪುಷ್ಕರದಲ್ಲಿ ವಾಸಮಾಡುವದಕ್ಕೋಸ್ಕರ ಅಲ್ಲಿಗೆ ಬ್ರಹ್ಮದೇವನು ಬಂದಿರುವನೆಂದು ಪುಣ್ಯಶಾಲಿಗಳಾದ ದೊಡ್ಡವರು ಹೇಳುತ್ತಿರುವರು. ಆ ಪುರಕ್ಕೆ ಹೋಗಬೇಕೆಂದು ಮನಸ್ಸಿನಲ್ಲಿ ಅಪೇಕ್ಷಿಸಿದವನೂ ಕೂಡ ಸಕಲ ಪಾಪಗಳನ್ನೂ ಕಳೆದುಕೊಂಡು ಸ್ವರ್ಗಲೋಕದಲ್ಲಿ ಪೂಜ್ಯನಾಗುವನು."

## ೯೦ನೇ ಅಧ್ಯಾಯ.—ತೀರ್ಥಯಾತ್ರಾಪ್ರಶಂಸೆ—(ಧೌಮ್ಯ ಯುಧಿಷ್ಠಿರ ಸಂವಾದ)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಧೌಮ್ಯನು ಧರ್ಮರಾಯನನ್ನು ಕುರಿತು "ಎಲೈ ಧರ್ಮರಾಯನೆ, ಇನ್ನು ಉತ್ತರದಿಕ್ಕಿನಲ್ಲಿರುವ ಪುಣ್ಯತಮವಾದ ಕ್ಷೇತ್ರಗಳನ್ನು ತಿಳುಹಿಸುವೆನು. ನೀನು ಚೆನ್ನಾಗಿ ಮನಸ್ಸಿಟ್ಟು ಕೇಳಿದರೆ ನಿನಗೆ ಅವುಗಳಲ್ಲಿ ತುಂಬಾ

ವಿಶ್ವಾಸವುಂಟಾಗುವದು. ಆ ದಿಕ್ಕಿನಲ್ಲಿ ಅನೇಕ ತೀರ್ಥಗಳಿಂದ ಕೂಡಿದ ಪುಣ್ಯತಮವಾದ ಸರಸ್ವತೀನದಿಯೂ, ಸಮುದ್ರಗಾಮಿನಿಯಾದ ಮಹಾವೇಗವುಳ್ಳ ಯಮುನಾನದಿಯೂ ಇರುವವು. ಅಲ್ಲಿಯೇ ಪ್ಲಕ್ಷಾವತರಣವೆಂಬ ಪುಣ್ಯತಮವಾದ ತೀರ್ಥವಿರುವದು. ಅಲ್ಲಿಗೆ ಯಜ್ಞಮಾಡಿದ ಬ್ರಾಹ್ಮಣರು ಅವಭೃಥಸ್ನಾನಾರ್ಥವಾಗಿ ಹೋಗುವರು. ಅಲ್ಲಿ ಪುಣ್ಯತಮವಾದ ಅಗ್ನಿಶಿರಸ್ಸೆಂಬ ಕ್ಷೇತ್ರವಿರುವದು. ಆ ಕ್ಷೇತ್ರದಲ್ಲಿ ಯಜ್ಞಸಾಧನವಾದ ಶಮ್ಯಾ ಎಂಬ ದೊಣ್ಣೆಯನ್ನು ಬಲಿಷ್ಠನಾದ ಮನುಷ್ಯನು ಎಷ್ಟುದೂರ ಎಸೆಯುವನೋ ಅಷ್ಟುದೂರ ಯಜ್ಞಶಾಲೆಯನ್ನು ರಚಿಸಿ ಸೃಂಜಯನ ಮಗನಾದ ಸಹದೇವನು ಯಜ್ಞವನ್ನು ಮಾಡಿರುವನು. ಸಹದೇವನು ಯಮುನಾನದಿಯ ದಡದಲ್ಲಿ ಅನೇಕ ಸಹಸ್ರ ದಕ್ಷಿಣೆಗಳನ್ನು ಕೊಟ್ಟು ಆಜ್ಯಧಾರೆಗಳಿಂದ ಅಗ್ನಿಗಳನ್ನು ತೃಪ್ತಿಪಡಿಸಿರುವನೆಂದು ಇಂದ್ರನು ಹೊಗಳಿರುವದನ್ನು ಕೇಳಿ ಈ ಲೋಕದಲ್ಲಿರುವ ಬ್ರಾಹ್ಮಣರೆಲ್ಲರೂ ಶ್ಲಾಘಿಸುತ್ತಿರುವರು. ಆ ಪ್ರದೇಶದಲ್ಲೇ ಭರತಚಕ್ರವರ್ತಿಯು ನೂರುನಾಲ್ವತ್ತೆಂಟು ಅಶ್ವಮೇಧಯಾಗಗಳನ್ನು ಮಾಡಿ ಬ್ರಾಹ್ಮಣರನ್ನು ದಣಿಸಿರುವನೆಂದು ಪೂರ್ವದಿಂದಲೂ ಪ್ರಸಿದ್ಧವಾಗಿರುವದು. ಅಲ್ಲಿಯೇ ಪುಣ್ಯತಮವಾದ ಶರಭಂಗಋಷಿಗಳ ಆಶ್ರಮವಿರುವದು. ಯಾವಾಗಲೂ ಸಜ್ಜನರಿಂದ ಸೇವಿತವಾದ ಆ ಸರಸ್ವತೀನದಿಯ ತೀರದಲ್ಲಿ ಮಹಾನುಭಾವರಾದ ವಾಲಖಿಲ್ಯಮಹರ್ಷಿಗಳು ಪೂರ್ವದಲ್ಲಿ ಯಜ್ಞಮಾಡಿರುವರು. ಅಲ್ಲಿಯೇ ಪುಣ್ಯತಮವಾದ ದೃಷದ್ವತೀನದಿ ಯಿರುವದು. ಅತ್ತಲಾಗಿಯೇ ಪುರುಷಶ್ರೇಷ್ಠನಾದ ನ್ಯಗ್ರೋಧ, ಪುಣ್ಯ, ಪಾಂಚಾಲ್ಯ, ದಾಲ್ಭ್ಯಘೋಷ, ದಾಲ್ಭ್ಯ, ಧರಣೀಸ್ಥರೆಂಬ ಮಹರ್ಷಿಗಳಿರುವರು. ವಿಶೇಷವಾಗಿ ವ್ರತನಿಷ್ಠನಾಗಿಯೂ ತೇಜಶ್ಶಾಲಿಯಾಗಿಯೂ ಇರುವ ಅನಂತಯಶಸ್ಸೆಂಬ ಮಹರ್ಷಿಯ ಪುಣ್ಯತಮವಾದ ಲೋಕಪ್ರಸಿದ್ಧವಾದ ಆಶ್ರಮವೂ ಅಲ್ಲಿಯೇ ಇರುವದು. ಅತ್ತಲಾಗಿಯೇ ವೇದವೇದ್ಯರಾಗಿಯೂ ವೇದವೇದಾಂತಜ್ಞರಾಗಿಯೂ ಇರುವ ನರನಾರಾಯಣರು ಪುಣ್ಯತಮವಾಗಿಯೂ ಮುಖ್ಯವಾಗಿಯೂ ಇರುವ ಯಜ್ಞಗಳನ್ನುಮಾಡಿರುವರು. ಮತ್ತು ಆ ದಿಕ್ಕಿನಲ್ಲಿರುವ ವಿಶಾಖಯೂಪವೆಂಬ ಕ್ಷೇತ್ರದಲ್ಲಿ ಸಕಲರಾದ ಇಂದ್ರಾದಿ ದೇವತೆಗಳೂ ಸಹ ತಪಸ್ಸುಮಾಡಿರುವರು. ಅದರಿಂದ ಆ ಕ್ಷೇತ್ರವು ಬಹು ಪುಣ್ಯತಮವಾದದ್ದು. ಅಲ್ಲಿ ರಮಣೀಯವಾಗಿಯೂ ಪುಣ್ಯತಮವಾಗಿಯೂ ಇರುವ ಬಂದು ಪಲಾಶವನವಿರುವದು. ಅದರಲ್ಲಿ ಪಲಾಶಾತ್ಮನಾದ ಜಮದಗ್ನಿಮಹರ್ಷಿಯು ಯಜ್ಞವನ್ನು ಮಾಡಿರುವನು. ಆ ಯಜ್ಞದಲ್ಲಿ ಸಕಲ ನದಿಗಳೂ ತಮ್ಮತಮ್ಮ ಉದಕಗಳನ್ನು ತುಂಬಿದ ಪೂರ್ಣಕುಂಭಗಳನ್ನು ಧರಿಸಿಕೊಂಡು ಪ್ರತ್ಯಕ್ಷವಾಗಿ ಸ್ತ್ರೀರೂಪದಿಂದ ಬಂದು ಯಜಮಾನನಾದ ಆ ಮಹರ್ಷಿಯ ಸುತ್ತಲೂ ನಿಂತಿದ್ದವು. ಅದನ್ನು ನೋಡಿ ವಿಶ್ವಾವಸುವೆಂಬ ಗಂಧರ್ವನು ಯಜ್ಞದೀಕ್ಷೆಯನ್ನು ತಾಳಿದ್ದ ಮಹಾತ್ಮನಾದ ಜಮದಗ್ನಿಮಹರ್ಷಿಯ ಯಜ್ಞದಲ್ಲಿ ನಿಜರೂಪದಿಂದ ಬಂದಿದ್ದ ನದಿಗಳು ಸಕಲವಾದ ದೇವತೆಗಳನ್ನೂ ಬ್ರಾಹ್ಮಣರನ್ನೂ ತಮ್ಮತಮ್ಮ ಸ್ವಾದೂದಕಗಳಿಂದ ತೃಪ್ತಿಪಡಿಸಿದವು ಎಂದು ಬಹಳವಾಗಿ ಹೊಗಳಿರುವನು.

ಬಳಿಕ ಅಲ್ಲಿಂದ ಹೊರಟರೆ ಅದೇ ದಿಕ್ಕಿನಲ್ಲಿ ಗಂಧರ್ವರಿಂದಲೂ ಯಕ್ಷರಿಂದಲೂ ರಾಕ್ಷಸರಿಂದಲೂ ಅಪ್ಸರಸ್ತ್ರೀಯರಿಂದಲೂ ಸೇವಿತವಾಗಿಯೂ, ಕಿರಾತರಿಗೂ ಕಿನ್ನರರಿಗೂ ಆವಾಸವಾಗಿಯೂ, ಇರುವ ಪರ್ವತಶ್ರೇಷ್ಠವಾದ ಹಿಮವತ್ಪರ್ವತವು ಇರುವದು. ಆ ಪರ್ವತವನ್ನು ಭೇದಿಸಿಕೊಂಡು ಗಂಗಾನದಿಯು ಹರಿದುಬಂದಿರುವದು. ಅದ್ದರಿಂದ ಆ ಪ್ರದೇಶಕ್ಕೆ ಗಂಗಾದ್ವಾರವೆಂಬ ಹೆಸರುಂಟಾಗಿರುವದು. ಆ ಪ್ರದೇಶವು ಅನೇಕ ಬ್ರಹ್ಮರ್ಷಿಗಳಿಂದ ಸೇವಿತವಾಗಿರುವದರಿಂದ, ಅದು ಪುಣ್ಯತಮವಾದದ್ದು. ಅದೇ ಪ್ರದೇಶದಲ್ಲಿ ಪುಣ್ಯತಮವಾದ ಕನಖಲಕ್ಷೇತ್ರವಿರುವದು. ಅಲ್ಲಿ ಮಹಾತ್ಮರಾದ ಸನತ್ಕುಮಾರರು ಇರುವರು. ಮತ್ತು ಅತ್ತಲಾಗಿ ಪುರುವೆಂಬ ಬಂದು ಪರ್ವತವಿರುವದು. ಅಲ್ಲೇ ಮಹಾರಾಜನಾದ ಪುರೂರವನು ಹುಟ್ಟಿದ್ದು. ಮಹಾತ್ಮರಾದ ಋಷಿಗಳಿಂದ ಸೇವಿತವಾದ ಆ ಪರ್ವತದಲ್ಲಿ ಭೃಗುಋಷಿಗಳು ಆಶ್ರಮವನ್ನು ಮಾಡಿಕೊಂಡು ತಪಸ್ಸು ಮಾಡಿದ್ದರಿಂದ, ಆ ಪರ್ವತಕ್ಕೆ ಭೃಗುತುಂಗವೆಂಬ ಹೆಸರುಂಟಾಯಿತು. ಅತ್ತಲಾಗಿಯೇ ವಿಶಾಲಾ ಎಂಬ ಬದರಿಯನ್ನಾಶ್ರಯಿಸಿ ಬಂದು ಪುಣ್ಯತಮವಾದ ಆಶ್ರಮವಿರುವದು. ಅಲ್ಲಿಯೇ ಕಾಲತ್ರಯದಲ್ಲೂ ವ್ಯಾಪ್ತನಾಗಿಯೂ ಸಮರ್ಥನಾಗಿಯೂ ಶಾಶ್ವತನಾಗಿಯೂ ಪುರುಷೋತ್ತಮನಾಗಿಯೂ ಇರುವ ನಾರಾಯಣನು ಸನ್ನಿಹಿತನಾಗಿರುವನು. ಅದೇ ಬದರಿಕಾಶ್ರಮವೆಂದು ಮೂರು ಲೋಕದಲ್ಲೂ

ಪ್ರಸಿದ್ಧವಾಗಿರುವದು. ಅಲ್ಲಿಯೇ ಗಂಗೆಯು ಉಷ್ಣೋದಕವಾಗಿಯೂ ಶೀತೋದಕವಾಗಿಯೂ ಎರಡು ಪ್ರಕಾರ ಪ್ರವಹಿಸುತ್ತಿರುವಳು. ಅಲ್ಲಿ ಚಿನ್ನದ ಮರಳಿರುವದು. ಮಹಾನುಭಾವರಾಗಿಯೂ ತೇಜಸ್ವಿಗಳಾಗಿಯೂ ಇರುವ ದೇವತೆಗಳೂ ಋಷಿಗಳೂ ಸಹ ನಿರಂತರವಲ್ಲೂ ಆ ಬದರಿಕಾಶ್ರಮಕ್ಕೆ ಹೋಗಿ ನಾರಾಯಣನಿಗೆ ನಮಸ್ಕಾರಮಾಡುತ್ತಿರುವರು. ಎಲೈ ಧರ್ಮರಾಯನೆ, ಯಾವ ಪ್ರದೇಶದಲ್ಲಿ ಸನಾತನನಾದ ಪರಮಾತ್ಮನಾದ ನಾರಾಯಣನಿರುವನೋ, ಅಲ್ಲೇ ಸಕಲ ಜಗತ್ತೂ ಸಕಲ ತೀರ್ಥಗಳೂ ಸಕಲ ಕ್ಷೇತ್ರಗಳೂ ಸನ್ನಿಹಿತವಾಗಿರುವವು; ಅದೇ ಪುಣ್ಯಸ್ಥಳವು; ಅದೇ ಪುಣ್ಯತೀರ್ಥವು; ಅದೇ ಪುಣ್ಯಾಶ್ರಮವು; ಅದೇ ಬ್ರಹ್ಮಜ್ಞಾನವುಂಟಾಗತಕ್ಕ ಕ್ಷೇತ್ರವು; ಅದೇ ಸರ್ವೋತ್ತಮವಾದದ್ದು; ಮತ್ತು ವೇದಶಾಸ್ತ್ರಜ್ಞರಾದ ವಿದ್ವಾಂಸರೂ ದೇವರ್ಷಿಗಳೂ ತಪಸ್ಸಿದ್ಧರೂ ಸಹ ಸಕಲ ಪ್ರಾಣಿಗಳಿಗೂ ಈಶ್ವರನಾಗಿಯೂ, ರಕ್ಷಕನಾಗಿಯೂ, ಶಾಶ್ವತನಾಗಿಯೂ, ಸಕಲರಿಗೂ ಗತಿಪ್ರದನಾಗಿಯೂ ಇರುವ ಯಾವನನ್ನು ಸಾಕ್ಷಾತ್ಕರಿಸಿ ಆತ್ಯಂತಿಕದುಃಖನಿವೃತ್ತಿಯನ್ನು ಮಾಡಿಕೊಳ್ಳುವರೋ, ಅಂಥ ಮಹಾನುಭಾವನಾದ ಆದಿದೇವನಾದ ನಾರಾಯಣನು ಆ ಬದರಿಕಾಶ್ರಮದಲ್ಲಿ ವಾಸಮಾಡುತ್ತಿರುವನು. ಆ ಕ್ಷೇತ್ರವು ಪುಣ್ಯಕ್ಷೇತ್ರಗಳಲ್ಲೆಲ್ಲಾ ಪುಣ್ಯತಮವಾದದ್ದು. ಈ ವಿಷಯದಲ್ಲಿ ನೀನು ಸಂಶಯಪಡಬೇಡ. ಎಲೈ ಧರ್ಮರಾಯನೆ, ಭೂಮಿಯಲ್ಲಿರುವ ಪುಣ್ಯತಮವಾದ ತೀರ್ಥಗಳನ್ನೂ ನದಿಗಳನ್ನೂ ಆಶ್ರಮಗಳನ್ನೂ ಪರ್ವತಗಳನ್ನೂ ಕ್ಷೇತ್ರಗಳನ್ನೂ ಸಹ ನಾನು ತಿಳಿದಮಟ್ಟಿಗೆ ನಿನಗೆ ತಿಳುಹಿಸಿದೆನು. ಇವುಗಳನ್ನು ಅಷ್ಟವಸುಗಳೂ ಸಾಧ್ಯರೂ ದ್ವಾದಶಾದಿತ್ಯರೂ ಏಕೋನಪಂಚಾಶನ್ಮರುತ್ತುಗಳೂ ಅಶ್ವಿನೀದೇವತೆಗಳೂ ದೇವತೆಗಳಿಗೆ ಸಮಾನರಾದ ಮಹಾತ್ಮರಾದ ಋಷಿಗಳೂ ಸಹ ಸೇವಿಸುತ್ತಿರುವರು. ಎಲೈ ಧರ್ಮರಾಯನೆ, ನೀನು ಮಹಾನುಭಾವರಾದ ಈ ಬ್ರಾಹ್ಮಣರೊಡನೆಯೂ ಮಹಾಭಾಗ್ಯಶಾಲಿಗಳಾದ ತಮ್ಮಂದಿರೊಡನೆಯೂ ಕೂಡಿ ತೀರ್ಥಯಾತ್ರೆಗೆ ಹೊರಟು, ಮೇಲೆ ಹೇಳಿದ ಪುಣ್ಯಸ್ಥಳಗಳಿಗೆಲ್ಲಾ ಹೋಗಿ ಬಂದರೆ, ಅರ್ಜುನನ ಅಗಲಿಕೆಯಿಂದುಂಟಾಗಿರುವ ನಿನ್ನ ಕಳವಳವು ಪರಿಹಾರವಾಗುವದು."

## ೯೧ನೇ ಅಧ್ಯಾಯ.—ಲೋಮಶಮಹರ್ಷಿಯ ಆಗಮನ.

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಈ ಪ್ರಕಾರ ಧೌಮ್ಯಾಚಾರ್ಯನು ಧರ್ಮರಾಯನಿಗೆ ತೀರ್ಥಯಾತ್ರಾಮಹಿಮೆಯನ್ನು ಹೇಳುತ್ತಿರಲು, ಅಲ್ಲಿಗೆ ಮಹಾತೇಜಸ್ವಿಯಾದ ಲೋಮಶಮಹರ್ಷಿಯು ಬಂದನು. ಆಗ ದೇವೇಂದ್ರನನ್ನು ನೋಡಿ ಸಕಲರಾದ ದೇವತೆಗಳೂ ಹ್ಯಾಗ ಪ್ರತ್ಯುತ್ಥಾನವನ್ನು ಮಾಡುವರೋ ಹಾಗೆ, ಆ ಮಹರ್ಷಿಯನ್ನು ನೋಡಿ ತಮ್ಮಂದಿರೊಡಗೂಡಿ ಧರ್ಮರಾಯನೂ ಅಲ್ಲಿದ್ದ ಬ್ರಾಹ್ಮಣರೂ ಸಹ ಪ್ರತ್ಯುತ್ಥಾನವನ್ನು ಮಾಡಿದರು. ಆಗ ಧರ್ಮರಾಯನು ಶಾಸ್ತ್ರೋಕ್ತವಾಗಿ ಆ ಲೋಮಶಮಹರ್ಷಿಗೆ ಅರ್ಘ್ಯಪಾದ್ಯಾಚಮನೀಯಗಳಿಂದ ಸತ್ಕಾರವನ್ನು ಮಾಡಿ, "ಎಲೈ ಮಹರ್ಷಿಯೆ, ಯಾವ ನಿಮಿತ್ತದಿಂದ ಇಲ್ಲಿಗೆ ದಯಮಾಡಿಸಿರುವೆ? ಮತ್ತು ಈಪ್ರಕಾರ ಲೋಕಸಂಚಾರವನ್ನು ಮಾಡುವದರಿಂದ, ನಿನಗೇನು ಪ್ರಯೋಜನವಾಗುವದು?" ಎಂದು ಪ್ರಶ್ನೆಮಾಡಲು, ಆ ಮಹರ್ಷಿಯು ಸಂತುಷ್ಟಹೃದಯನಾಗಿ ಧರ್ಮರಾಯನನ್ನು ಕುರಿತು ಆತನಿಗೆ ಸಂತೋಷವಾಗುವಂತೆ ಮಾತನಾಡಲುಪಕ್ರಮಿಸಿ "ಎಲೈ ಧರ್ಮರಾಯನೆ, ನಾನು ಯಾವಾಗಲೂ ಸ್ವೇಚ್ಛೆಯಿಂದಲೇ ಎಲ್ಲಾ ಲೋಕಗಳನ್ನೂ ಸುತ್ತುತ್ತಿರುವೆನು. ಹಾಗೆಯೇ ಬಂದಾನೊಂದು ದಿವಸ ಇಂದ್ರಭವನಕ್ಕೆ ಹೋಗಿ, ಅಲ್ಲಿ ದೇವೇಂದ್ರನನ್ನು ಕಂಡು, ಆತನ ಅರ್ಧಾಸನದಲ್ಲಿ ಕೂತಿದ್ದ ಸವ್ಯಸಾಚಿಯಾದ ನಿನ್ನ ತಮ್ಮನನ್ನು ನೋಡಿ ಬಹಳ ಆಶ್ಚರ್ಯಪಟ್ಟೆನು. ಆ ಸಮಯದಲ್ಲಿ ದೇವೇಂದ್ರನೂ ನಿನ್ನ ತಮ್ಮನೂ ಸಹ ಪಾಂಡವರ ಬಳಿಗೆ ಹೋಗೆಂದು ನನ್ನನ್ನು ಕಳುಹಿಸಿಕೊಟ್ಟರು. ಆದ್ದರಿಂದ ನಾನು ನಿಮ್ಮನ್ನೆಲ್ಲಾ ನೋಡಬೇಕೆಂದು ಇಲ್ಲಿಗೆ ಬಂದೆನು. ನಿನ್ನ ತಮ್ಮನಾದ ಆ ಅರ್ಜುನನೂ ಮಹಾತ್ಮನಾದ ಇಂದ್ರನೂ ಸಹ ನಿನಗೆ ಹೇಳಿಕಳುಹಿಸಿರುವ ಪ್ರಿಯವಾದ ಮಾತುಗಳನ್ನು ಹೇಳುತ್ತೇನೆ; ನೀನು ನಿನ್ನ ತಮ್ಮಂದಿರೊಡನೆ ದ್ರೌಪದೀಸಹಿತನಾಗಿ ಕೇಳು.

ಎಲೈ ಧರ್ಮರಾಯನೆ, ನಿನ್ನ ತಮ್ಮನಾದ ಅರ್ಜುನನು ಈಶ್ವರನಿಗೆ ತಪಸ್ಸಿಂದ ಪ್ರಾಪ್ತವಾದ ಅಸದೃಶವಾದ ಬ್ರಹ್ಮ ಶಿರೋನಾಮಕವಾದ ಪಾಶುಪತಾಸ್ತ್ರವನ್ನು ಮಹೇಶ್ವರನ ದೆಸೆಯಿಂದ ಪಡೆದು, ಅದರ ಪ್ರಯೋಗೋಪಸಂಹಾರ ಮಂತ್ರಗಳನ್ನೂ, ಅವರಿಂದ ನಿರಪರಾಧಿಗಳಿಗೇನಾದರೂ ಹಾನಿಬಂದದ್ದೇ ಆದರೆ ಅದಕ್ಕೆ ತಕ್ಕ ಪ್ರಾಯಶ್ಚಿತ್ತಕಲ್ಪವನ್ನೂ, ಆ ಅಸ್ತ್ರದಿಂದ ಉದ್ಯಾನವನ ಮೊದಲಾದವುಗಳು ದಹಿಸಿ ಹೋದರೆ ಪುನಃ ಅವುಗಳನ್ನು ಮೊದಲಿದ್ದಂತೆ ಮಾಡತಕ್ಕ ಕ್ರಮವನ್ನೂ ಸಹ ಆತನಿಂದ ತಿಳಿದುಕೊಂಡಿರುವನು. ಭೀಮನ ತಮ್ಮನಾದ ಆ ಅರ್ಜುನನು ಯಮ ವರುಣ ಕುಬೇರ ಇಂದ್ರ ಇವರಿಂದ ವಜ್ರಾಯುಧದಂತೆ ಪ್ರತೀಕಾರವಿಲ್ಲದಿರತಕ್ಕ ದಂಡ ಮೊದಲಾದ ದಿವ್ಯಾಸ್ತ್ರಗಳನ್ನು ಪಡೆ ದಿರುವನು. ವಿಶ್ವಾವಸುವಿನ ಮಗನ ದೆಸೆಯಿಂದ ಗಾನವಿದ್ಯೆಯನ್ನೂ ನಾಟ್ಯವಿದ್ಯೆಯನ್ನೂ ಸಾಮಗಾನವನ್ನೂ ವೀಣೆ ಮೊದಲಾದ ವಾದ್ಯಗಳನ್ನು ನುಡಿಸತಕ್ಕ ಚಾತುರ್ಯವನ್ನೂ ಸಹ ಕಲಿತುಕೊಂಡು ಅಲ್ಲಿ ಸುಖವಾಗಿರುವನು. ದೇವೇಂದ್ರನು ನನ್ನ ಸಂಗಡ ನಿನಗೆ ಹೇಳುವಂತೆ ಇನ್ನೊಂದು ಮಾತನ್ನು ಹೇಳಿ ಕಳುಹಿಸಿ ಕೊಟ್ಟಿರುವನು. ಅದನ್ನು ಕೇಳು. 'ಈಗ ಅರ್ಜುನನು ಅಸ್ತ್ರವಿದ್ಯಾಪಾರಂಗತನಾಗಿರುವನು. ದೇವತೆಗಳಿಗೆ ಸಾಧಿಸುವದಕ್ಕೆ ಅಶಕ್ಯವಾದ ಒಂದು ದೇವಕಾರ್ಯವಿರುವದು. ಆ ಕಾರ್ಯವನ್ನು ಸಾಧಿಸಿಕೊಂಡು ಆತನು ಪುನಃ ನಿನ್ನ ಬಳಿಗೆ ಬಂದುಸೇರುವನು. ನೀನು ತಮ್ಮಂದಿರೊಡಗೂಡಿ ತಪಸ್ಸನ್ನು ಮಾಡುತ್ತಿರು. ತಪಸ್ಸಿಗಿಂತಲೂ ಉತ್ತಮವಾದದ್ದು ಮತ್ತೊಂದಿಲ್ಲ. ಅದರಿಂದಲೇ ಸಕಲ ಸಿದ್ಧಿಗಳೂ ಉಂಟಾಗುವವು. ಸೂರ್ಯಪುತ್ರನಾದ ಕರ್ಣನನ್ನು ನಾನು ಚೆನ್ನಾಗಿ ತಿಳಿ ದಿರುವೆನು. ಆತನು ಸತ್ಯಸಂಧನಾಗಿಯೂ, ಮಹೋತ್ಸಾಹನಾಗಿಯೂ, ಮಹಾ ಪರಾಕ್ರಮಶಾಲಿಯಾಗಿಯೂ, ದಿವ್ಯಾಸ್ತ್ರಸಂಪನ್ನನಾಗಿಯೂ, ಧನುರ್ಧಾರಿಗಳಲ್ಲಿ ಅಗ್ರೇಸರನಾಗಿಯೂ, ಯುದ್ಧದಲ್ಲಿ ಷಣ್ಮುಖನಂತೆ ಅಸದೃಶವಾದ ಸಾಹಸವುಳ್ಳವನಾಗಿಯೂ ಇರುವನು. ಹಾಗೆಯೇ ಅರ್ಜುನನೂ ಸ್ವಭಾವಸಿದ್ಧವಾಗಿ ಅಧಿಕವಾದ ಪರಾಕ್ರಮವುಳ್ಳ ವನಾಗಿಯೂ, ಮಹಾಬಾಹುವಾಗಿಯೂ ಇರುವನು. ಆದರೆ ಯುದ್ಧದಲ್ಲಿ ಕರ್ಣನ ಪರಾಕ್ರಮವು ಅರ್ಜುನನ ಪರಾಕ್ರಮದಲ್ಲಿ ಹದಿನಾರನೆಯ ಒಂದು ಭಾಗವನ್ನೂ ಹೋಲಲಾರದು. ಎಲೈ ಧರ್ಮರಾಯನೆ, ಕರ್ಣನು ಸಹಜ ವಾದ ಕರ್ಣಕುಂಡಲಗಳುಳ್ಳವನೆಂದು ಆತನ ದೆಸೆಯಿಂದ ನಿನಗೊಂದು ಭಯವುಂಟಾಗಿರುವದು. ಆ ಭಯವನ್ನೂ ಕೂಡ ಅರ್ಜುನನು ಇಲ್ಲಿಂದ ಭೂಲೋಕಕ್ಕೆ ತೆರಳಿದ ಬಳಿಕ ನಾನು ಪರಿಹರಿಸುವೆನು. ತೀರ್ಥಯಾತ್ರೆ ಮಾಡ ಬೇಕೆಂದು ನಿನಗೆ ಮನಸ್ಸುಂಟಾಗಿರುವದರಿಂದ, ಅದರ ಕ್ರಮವನ್ನು ಈ ಋಷಿಯು ನಿನಗೆ ತಿಳಿಸುವನು. ಈತನು ಹೇಳುವ ತೀರ್ಥಯಾತ್ರೆಯ ಫಲಗಳಲ್ಲಿ ನೀನು ವಿಶ್ವಾಸವನ್ನು ಮಾಡು' ಎಂದು ನನ್ನ ಸಂಗಡ ಹೇಳಿಕಳು ಹಿಸಿಕೊಟ್ಟಿರುವನು."

## ೯೨ನೇ ಅಧ್ಯಾಯ.—ತೀರ್ಥಯಾತ್ರಾಪ್ರಶಂಸೆ.—(ಯುಧಿಷ್ಠಿರ ತೀರ್ಥಯಾತ್ರೆ).

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಲೋಮಶಮಹರ್ಷಿಯು ಧರ್ಮರಾಯನೊಡನೆ, "ಎಲೈ ಧರ್ಮರಾಯನೆ, ಅರ್ಜುನನು ನನ್ನ ಸಂಗಡ ಹೇಳಿರುವ ಮಾತನ್ನು ತಿಳುಹಿಸುವೆನು ಕೇಳು: 'ಎಲೈ ಮಹರ್ಷಿಯೆ, ನೀನು ಸಕಲ ಧರ್ಮಗಳನ್ನೂ, ಅನೇಕ ಪ್ರಕಾರ ವಾದ ತಪಸ್ಸನ್ನೂ, ಶ್ರೀಮಂತರಾದ ಮಹಾರಾಜರ ಧರ್ಮಗಳನ್ನೂ, ಲೋಕದಲ್ಲಿ ಪುರುಷನು ಪರಿಶುದ್ಧಾತ್ಮನಾಗ ತಕ್ಕದನ್ನೂ, ಅನೇಕ ತೀರ್ಥಯಾತ್ರೆಯಿಂದುಂಟಾಗತಕ್ಕ ಪುಣ್ಯವನ್ನೂ ಸಹ ಬಲ್ಲವನಾದಕಾರಣ, ನಮ್ಮಣ್ಣನಾದ ಧರ್ಮರಾಯನಿಗೆ ಹ್ಯಾಗೆ ಧರ್ಮಸಂಪತ್ತುಂಟಾಗುವದೋ ಹಾಗೆ ಮಾಡು. ಆತನು ತೀರ್ಥಯಾತ್ರೆಯನ್ನೂ ಗೋ ದಾನ ಮೊದಲಾದವುಗಳನ್ನೂ ಸಹ ಮಾಡುವಂತೆಯೂ ನೀನು ಆತನನ್ನು ಪ್ರೇರಿಸು. ನಮ್ಮಣ್ಣನು ತಮ್ಮಂದಿ ರೊಡನೆ ತೀರ್ಥಯಾತ್ರೆಯನ್ನು ಮಾಡುವ ಕಾಲದಲ್ಲಿ, ದುರ್ಗಮಸ್ಥಾನಗಳಲ್ಲಿಯೂ ವಿಷಮಸ್ಥಾನಗಳಲ್ಲಿಯೂ ಇರುವ ರಾಕ್ಷಸರಿಂದ ಬಾಧೆಯುಂಟಾಗದಂತೆ ಆತನನ್ನು, ದಧೀಚಿಋಷಿಯು ದೇವೇಂದ್ರನನ್ನೂ ಅಂಗಿರಸ್ಸು ಸೂರ್ಯನನ್ನೂ ಸಂರಕ್ಷಿಸಿದಂತೆ ನೀನು ಸಂರಕ್ಷಿಸಬೇಕು. ಧರ್ಮರಾಯನನ್ನು ನೀನು ಸಂರಕ್ಷಿಸುತ್ತಿದ್ದರೆ ಆತನ ಸಮೀಪಕ್ಕೆ

ಕ್ರೂರರಾದ ರಾಕ್ಷಸರು ಯಾರೂ ಬರಲಾರರು' ಎಂದು ನಿನ್ನ ತಮ್ಮನು ಹೇಳಿರುವನು. ಆದ್ದರಿಂದ ನೀನು ತೀರ್ಥ ಯಾತ್ರೆಗೆ ಹೊರಡುವಾಗ ನಾನೂ ನಿನ್ನ ಸಂಗಡಲೇ ಬಂದು, ಮಾರ್ಗದಲ್ಲಿ ಯಾವ ಭಾಧೆಯೂ ಇಲ್ಲದಂತೆ ನಿನ್ನನ್ನು ಸಂರಕ್ಷಿಸಿಕೊಂಡಿರುವೆನು. ಎಲೈ ಧರ್ಮರಾಯನೆ, ಪೂರ್ವದಲ್ಲಿ ನಾನು ಎರಡಾವರ್ತಿ ತೀರ್ಥಯಾತ್ರೆಗೆ ಹೊರಟು ಅನೇಕ ತೀರ್ಥಗಳನ್ನು ನೋಡಿರುವೆನು. ಈಗ ಮೂರನೇಆವರ್ತಿ ನಿನ್ನ ಸಂಗಡ ಹೊರಟು ಆ ತೀರ್ಥ ಗಳನ್ನು ಪುನಃ ನೋಡುವೆನು. ಸಕಲ ಭಯಗಳನ್ನೂ ಪರಿಹರಿಸತಕ್ಕ ಈ ತೀರ್ಥಯಾತ್ರೆಗೆ ಪೂರ್ವದಲ್ಲಿ ಪುಣ್ಯ ಶಾಲಿಗಳಾದ ಅನೇಕಮಂದಿ ಮನ್ವಾದಿ ರಾಜರ್ಷಿಗಳು ಹೋಗಿರುವರು. ಲೋಕದಲ್ಲಿ ಕುಟಿಲಮಾರ್ಗದಲ್ಲಿ ನಡೆಯ ತಕ್ಕವನಿಗೂ, ಅಶಿಕ್ಷಿತನಾದವನಿಗೂ, ವೇದಶಾಸ್ತ್ರಗಳನ್ನು ಓದದಿರುವ ಅಜ್ಞಾನಿಗೂ ಸಹ ತೀರ್ಥಯಾತ್ರೆಯು ಲಭಿ ಸತಕ್ಕದ್ದಲ್ಲ. ಎಲೈ ಧರ್ಮರಾಯನೆ, ನೀನು ಧರ್ಮಜ್ಞನಾದವನು, ಯಾವಾಗಲೂ ಧರ್ಮಾಚರಣೆಯನ್ನು ಮಾಡಬೇಕೆಂಬ ಬುದ್ಧಿಯುಳ್ಳವನು, ಯಾವಾಗಲೂ ಯಜ್ಞಾದಿ ಕರ್ಮಗಳನ್ನು ಮಾಡತಕ್ಕವನು, ವಿಷಯಾಭಿ ಲಾಷೆಯನ್ನು ಬಿಟ್ಟಿರತಕ್ಕವನು. ಆದ್ದರಿಂದ ನೀನು ಭಗೀರಥ ಗಯ ಯಯಾತಿ ಮೊದಲಾದ ಮಹಾರಾಜರಿಗೆ ಸಮಾನನಾದವನು" ಎಂದು ನುಡಿಯಲು, ಧರ್ಮರಾಯನು ಆ ಲೋಮಶಮಹರ್ಷಿಯನ್ನು ನೋಡಿ "ಎಲೈ ಮಹಾ ತ್ಮನೆ, ನಾನು ಅಹಂಕಾರದಿಂದ ಈ ಮಾತಿಗೆ ಉತ್ತರವನ್ನು ಹೇಳತಕ್ಕವನೆಂದು ನೀನು ತಿಳಿಯಬೇಡ. ಆದರೆ ದೇವೇಂದ್ರನೂ ಕೂಡ ಯಾವನನ್ನು ಬಂದು ಪದಾರ್ಥವೆಂದೆಣಿಸುವನೋ, ಅದಕ್ಕಿಂತಲೂ ದೊಡ್ಡದು ಯಾವದು? ಯಾವ ನನ್ನ ತಮ್ಮನಿಗೆ ನಿನ್ನಂಥ ಮಹಾನುಭಾವನ ಸಮಾಗಮವುಂಟಾಯಿತೋ ಅದಕ್ಕಿಂತಲೂ ದೊಡ್ಡದು ಯಾ ವದು? ಪೂಜ್ಯನಾದ ನೀನು ತೀರ್ಥಯಾತ್ರೆಯನ್ನು ಮಾಡಬೇಕೆಂದು ನನಗೆ ಈಗ ಉಪದೇಶವನ್ನು ಮಾಡಿದೆ. ಆದರೆ ನಾನು ಮೊದಲೇ ಧೌಮ್ಯಾಚಾರ್ಯರ ವಚನದಿಂದ ತೀರ್ಥಯಾತ್ರೆಯನ್ನು ಮಾಡಬೇಕೆಂದೆಣಿಸಿಕೊಂಡಿದ್ದೆನು. ಆದಕ್ಕೆ ನೀನು ಯಾವಾಗ ಹೊರಡಬಹುದೆಂದು ಹೇಳುವೆಯೋ ಆಗಲೇ ನಾನು ಹೊರಡತಕ್ಕವನು. ಇದೇ ನನ್ನ ನಿಶ್ಚಯವು" ಎಂದು ನುಡಿದನು. ಬಳಿಕ ಲೋಮಶಮಹರ್ಷಿಯು ಧರ್ಮರಾಯನಿಗೆ ತೀರ್ಥಯಾತ್ರೆಯಲ್ಲಿ ಬುದ್ಧಿ ಯುಂಟಾದದ್ದನ್ನು ತಿಳಿದು, ಆತನನ್ನು ಕುರಿತು "ಎಲೈ ಧರ್ಮರಾಯನೆ, ಹಾಗಾದಪಕ್ಷದಲ್ಲಿ ನೀನು ಸ್ವಲ್ಪ ಪರಿವಾರವನ್ನು ಕಟ್ಟಿಕೊಂಡು ಹೊರಟದ್ದೇ ಆದರೆ, ಸುಖವಾಗಿ ತೀರ್ಥಯಾತ್ರೆಯನ್ನು ಮಾಡಿಕೊಂಡು ಬರಬಹುದು" ಎಂದು ಹೇಳಿದನು.

ಆ ಬಳಿಕ ಧರ್ಮರಾಯನು ತನ್ನ ಸಂಗಡ ಬಂದಿರತಕ್ಕ ಸಮಸ್ತರನ್ನೂ ನೋಡಿ, "ಇಲ್ಲಿ ಭಿಕ್ಷಾಶನವನ್ನು ಮಾಡಿ ಜೀವಿಸತಕ್ಕವರೂ, ಹಸಿವು ಬಾಯಾರಿಕೆ ಮಾರ್ಗಾಯಾಸ ಚಳಿ ಗಾಳಿ ಬಿಸಲುಗಳನ್ನು ಸಹಿಸದೆ ಇರತಕ್ಕ ಬ್ರಾಹ್ಮಣರೂ, ಯತಿಗಳೂ, ಪಕ್ವಾನ್ನವನ್ನೂ ಬಹುವಿಧ ಮಾಂಸಗಳನ್ನೂ ರುಚಿರುಚಿಯಾಗಿ ಭೋಜನ ಮಾಡ ಬೇಕೆಂದಪೇಕ್ಷಿಸತಕ್ಕವರೂ, ಬಗೆಬಗೆಯಾದ ಭೋಜ್ಯಪದಾರ್ಥಗಳನ್ನು ಮಾಡತಕ್ಕ ಅಡಿಗೆಯವರೂ ಸಹ ಇಲ್ಲಿಂದ ಹಿಂತಿರುಗಿ ಹಸ್ತಿನಾವತಿಗೆ ಹೊರಟುಹೋಗಿರಿ. ನಮ್ಮ ಹಿಂದೆ ರಾಜಭಕ್ತಿಯಿಂದ ಬಂದು ನಮ್ಮಿಂದ ಯಥೋ ಚಿತವಾಗಿ ಸಂಬಳಗಳನ್ನು ತೆಗೆದುಕೊಳ್ಳುತ್ತಿದ್ದ ಭೃತ್ಯರೆಲ್ಲರೂ ಧೃತರಾಷ್ಟ್ರನ ಬಳಿಗೆ ಹೋಗತಕ್ಕದ್ದು. ಆತನು ನಿಮಗೆ ಯೋಗ್ಯತಾನುಸಾರವಾಗಿ ಕಾಲಕಾಲಕ್ಕೆ ಸಂಬಳಗಳನ್ನು ಕೊಡುವನು. ಹಾಗೆ ಆತನು ಸಂಬಳವನ್ನು ಕೊಡದೆ ಹೋದಪಕ್ಷದಲ್ಲಿ ನೀವೆಲ್ಲರೂ ಪಾಂಚಾಲರಾಜನಾದ ದ್ರುಪದರಾಯನ ಬಳಿಗೆ ಹೋಗಿರಿ. ಆತನು ನಮ್ಮಲ್ಲಿ ವಿಶ್ವಾಸದಿಂದ ಸಂಬಳಗಳನ್ನು ಕೊಟ್ಟು ನಿಮ್ಮನ್ನು ಪೋಷಿಸುವನು" ಎನಲು, ಆ ಮಾತನ್ನು ಕೇಳಿ ಅಲ್ಲಿದ್ದ ಭೃತ್ಯರೂ ಬ್ರಾಹ್ಮಣರೂ ಯತಿಗಳೂ ಇತರರೂ ಸಹ ತಮ್ಮಿಂದ ಧರ್ಮರಾಯನಿಗೆ ಹೆಚ್ಚಾದ ಭಾರವುಂಟಾಗಬಾರ ದೆಂದು ಯೋಚಿಸಿ, ಅನೇಕಮಂದಿ ಹಸ್ತಿನಾವತಿಗೆ ಹೊರಟುಹೋದರು. ಅವರೆಲ್ಲರನ್ನೂ ನೋಡಿ ಧೃತರಾ ಷ್ಟ್ರನು ಧರ್ಮರಾಯನಲ್ಲಿನ ಪ್ರೀತಿಯಿಂದ ಬೇಕಾದಷ್ಟು ಧನವನ್ನು ಕೊಟ್ಟು ಅವರನ್ನು ತನ್ನ ಬಳಿಯಲ್ಲಿ ಇರಿಸಿ ಕೊಂಡನು. ಬಳಿಕ ಧರ್ಮರಾಯನು ಸ್ವಲ್ಪ ಪರಿವಾರದೊಡನೆಯೂ ಕೆಲವುಮಂದಿ ಬ್ರಾಹ್ಮಣರೊಡನೆಯೂ ಕೂಡಿ ಲೋಮಶಮಹರ್ಷಿಯೊಡನೆ, ಸಂತೋಷದಿಂದ ಮೂರುರಾತ್ರಿ ಆ ಕಾಮ್ಯಕವನದಲ್ಲಿ ವಾಸಮಾಡಿದನು."

೯೩ನೇ ಅಧ್ಯಾಯ.—ತೀರ್ಥಯಾತ್ರಾಪ್ರಶಂಸೆ.—(ಯುಧಿಷ್ಠಿರ ತೀರ್ಥಗಮನ).

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಬಳಿಕ ಧರ್ಮರಾಯನು ತೀರ್ಥಯಾತ್ರೆಗೆ ಹೊರಡಲು, ಆ ವನದಲ್ಲಿರತಕ್ಕ ಬ್ರಾಹ್ಮಣರೆಲ್ಲರೂ ಬಂದು "ಎಲೈ ಧರ್ಮರಾಯನೆ, ಈಗ ಮಹಾತ್ಮನಾದ ಲೋಮಶಮಹರ್ಷಿಯೊಡನೆಯೂ ತಮ್ಮಂದಿರೊಡನೆಯೂ ಕೂಡಿ, ನೀನು ಪುಣ್ಯಸಂಪಾದಕವಾದ ತೀರ್ಥಯಾತ್ರೆಗೆ ಹೊರಟಿರುವೆ. ನಿನ್ನ ಜೊತೆಯನ್ನು ಬಿಟ್ಟರೆ ಈ ತೀರ್ಥಯಾತ್ರೆಯನ್ನು ಮಾಡುವದು ನಮಗೆ ಅಶಕ್ಯವಾದದ್ದು. ಪುಣ್ಯತಮವಾದ ಆ ತೀರ್ಥಗಳಿಗೆ ಹೋಗತಕ್ಕ ಮಾರ್ಗಗಳು ವ್ಯಾಘ್ರ ಮೊದಲಾದ ಕ್ರೂರಜಂತುಗಳಿಂದ ಕೂಡಿ ಭಯಂಕರವಾಗಿಯೂ, ವಿಷಮವಾಗಿಯೂ, ಅಲ್ಪರಾದ ಮನುಷ್ಯರಿಗೆ ಅಗಮ್ಯವಾಗಿಯೂ ಇರುವದರಿಂದ, ನಮ್ಮನ್ನೂ ನಿನ್ನ ಜೊತೆಯಲ್ಲೇ ಕರೆದುಕೊಂಡು ಹೋಗು. ನೀವಣ್ಣತಮ್ಮಂದಿರೆಲ್ಲರೂ ಧನುರ್ಧಾರಿಗಳಾಗಿ ಶೂರರಾದಕಾರಣ ನಿಮ್ಮಿಂದ ಪಾಲಿತರಾಗಿ, ನಾವು ಭೂಮಂಡಲದಲ್ಲಿರುವ ಸಕಲ ತೀರ್ಥಗಳಲ್ಲಿಯೂ ಸ್ನಾನಮಾಡಿ, ಸಕಲ ತಪೋವನಗಳನ್ನೂ ನೋಡಿ, ಪಾಪವನ್ನು ಕಳೆದುಕೊಂಡು ಪರಿಶುದ್ಧಾತ್ಮರಾಗಿ, ನಿಮ್ಮ ಸಹಾಯದಿಂದ ಸುಲಭವಾಗಿ ತೀರ್ಥಯಾತ್ರಾಫಲವನ್ನು ಪಡೆಯುವೆವು. ಮಹಾನುಭಾವನಾದ ನೀನು ಕಾರ್ತವೀರ್ಯಾರ್ಜುನ, ಅಷ್ಟಕ, ರಾಜರ್ಷಿಯಾದ ರೋಮಪಾದ, ಭರತಚಕ್ರವರ್ತಿ, ಈ ಮಹಾರಾಜರಂತೆ ಪುಣ್ಯತೀರ್ಥಗಳಲ್ಲಿ ಸ್ನಾನಮಾಡಿ ಉತ್ತಮವಾದ ಲೋಕಗಳನ್ನು ಹೊಂದುವೆ. ನಾವೂ ಕೂಡ ಪ್ರಭಾಸ ಮೊದಲಾದ ತೀರ್ಥಗಳನ್ನೂ, ಮಹೇಂದ್ರ ಮೊದಲಾದ ಪರ್ವತಗಳನ್ನೂ, ಗಂಗೆ ಮೊದಲಾದ ನದಿಗಳನ್ನೂ, ಪ್ಲಕ್ಷ ಮೊದಲಾದ ವನಸ್ಪತಿಗಳನ್ನೂ, ನಿನ್ನ ಸಹಾಯದಿಂದ ನೋಡಬೇಕೆಂದು ಬಯಸುತ್ತೇವೆ. ಎಲೈ ಧರ್ಮರಾಯನೆ, ಬ್ರಾಹ್ಮಣರಲ್ಲಿ ನಿನಗೆ ವಿಶ್ವಾಸವಿದ್ದದ್ದೇ ಆದರೆ, ಶೀಘ್ರವಾಗಿ ನಮ್ಮ ಕೋರಿಕೆಯನ್ನು ನಡಿಸು. ಇದರಿಂದ ನಿನಗೆ ಉತ್ತಮವಾದ ಶ್ರೇಯಸ್ಸುಂಟಾಗುವದು. ತಪಸ್ಸಿಗೆ ವಿಘ್ನಕರವಾದ ಕ್ರೂರರಾದ ರಾಕ್ಷಸರಿಂದ ಆಕ್ರಮಿಸಲ್ಪಟ್ಟಿರುವ ತೀರ್ಥಗಳಲ್ಲಿ ನಾವು ನಿರ್ಭಯವಾಗಿ ಸ್ನಾನಮಾಡಿಕೊಂಡು ಬರುವಂತೆ ನಮ್ಮನ್ನು ನೀನು ಸಂರಕ್ಷಿಸು. ಎಲೈ ರಾಯನೆ, ಜ್ಞಾನಿಗಳಾದ ನಾರದರಿಂದಲೂ, ಧೌಮ್ಯಾಚಾರ್ಯರಿಂದಲೂ, ದೇವರ್ಷಿಗಳಾಗಿಯೂ ತಪಸ್ವಿಗಳಾಗಿಯೂ ಇರುವ ಲೋಮಶಮಹರ್ಷಿಗಳಿಂದಲೂ, ನಿನಗೆ ಉಪದೇಶ ಮಾಡಲ್ಪಟ್ಟ ತೀರ್ಥಯಾತ್ರೆಗೆ, ಲೋಮಶರಿಂದ ರಕ್ಷಿತನಾಗಿ ನೀನು ನಮ್ಮನ್ನೂ ಜೊತೆಯಲ್ಲಿ ಕರೆದುಕೊಂಡು ಶಾಸ್ತ್ರೋಕ್ತಕ್ರಮದಿಂದ ಪ್ರಯಾಣ ಮಾಡು" ಎಂದು ಕೇಳಿಕೊಂಡರು.

ಆಗ ಧರ್ಮರಾಯನು ಆ ಋಷಿಗಳ ಪ್ರಾರ್ಥನೆಗೆ ಸಂತೋಷಪಟ್ಟು ಆನಂದಬಾಷ್ಪವನ್ನು ಸುರಿಸುತ್ತ, ತಮ್ಮಂದಿರೊಡಗೂಡಿ ಆ ಋಷಿಗಳೊಡನೆ ಹಾಗೇ ಆಗಲೆಂದು ಹೇಳಿ, ಪುರೋಹಿತರಾದ ಧೌಮ್ಯರನ್ನೂ ಲೋಮಶರನ್ನೂ ಕುರಿತು ತೀರ್ಥಯಾತ್ರೆಗೆ ಹೊರಡಿರೆಂದು ನುಡಿದು, ತಮ್ಮಂದಿರೊಡನೆಯೂ ದ್ರೌಪದಿಯೊಡನೆಯೂ ಕೂಡಿ ತಾನೂ ಪ್ರಯಾಣಸನ್ನಾಹವನ್ನು ಮಾಡಿದನು. ಆ ಸಮಯದಲ್ಲಿ ಧರ್ಮರಾಯನನ್ನು ನೋಡುವದಕ್ಕೋಸ್ಕರ ಮಹಾನುಭಾವರಾದ ವ್ಯಾಸರೂ ನಾರದರೂ ಪರ್ವತರೂ ಸಹ ಕಾಮ್ಯಕವನಕ್ಕೆ ಬಂದರು. ಅವರನ್ನು ನೋಡಿ ಧರ್ಮರಾಯನು ಎದ್ದು, ವಿಧಿವತ್ತಾಗಿ ಅರ್ಘ್ಯಪಾದ್ಯಾದಿಗಳಿಂದ ಪೂಜೆಯನ್ನು ಮಾಡಲು, ಆ ಮೂವರೂ ಪಾಂಡವರನ್ನು ಕುರಿತು "ಎಲೈ ಪಾಂಡವರೆ, ನೀವೆಲ್ಲರೂ ಮೊದಲು ಮನಶ್ಶುದ್ಧಿಯನ್ನು ಮಾಡಿಕೊಂಡು ತೀರ್ಥಯಾತ್ರೆಗೆ ಹೊರಡಿರಿ. ದೊಡ್ಡವರಾದ ಬ್ರಾಹ್ಮಣರು ಶರೀರನಿಯಮವನ್ನೇ ಮಾನುಷವ್ರತವೆಂದು ಹೇಳುವರು. ಮನಸ್ಸಿನಿಂದ ಪರಿಶುದ್ಧವಾದ ಬುದ್ಧಿಯನ್ನೇ ದೈವವ್ರತವೆಂದು ಹೇಳುವರು. ಆದ್ದರಿಂದ ಮನಸ್ಸು ಪರಿಶುದ್ಧವಾದದ್ದೇ ಆದರೆ, ಶರೀರವೂ ಪರಿಶುದ್ಧವಾಗುವದು. ಮೈತ್ರಿಯೆಂಬ ಚಿತ್ತಶುದ್ಧಿಯನ್ನು ಪಡೆದು ಪರಿಶುದ್ಧಾತ್ಮರಾಗಿ ಪುಣ್ಯತೀರ್ಥಗಳ ದರ್ಶನವನ್ನು ಮಾಡಿರಿ. ನೀವು ಚಿತ್ತಶುದ್ಧಿಯಿಂದಲೂ ಶರೀರನಿಯಮಗಳಿಂದಲೂ ದೈವವ್ರತವನ್ನು ಆಶ್ರಯಿಸಿದ್ದೇ ಆದರೆ, ಶಾಸ್ತ್ರೋಕ್ತವಾದ ತೀರ್ಥಯಾತ್ರಾಫಲವನ್ನು ಪಡೆಯುವಿರಿ" ಎಂದು ನುಡಿದರು. ಅದನ್ನು ಕೇಳಿ ಪಾಂಡವರು ದ್ರೌಪದಿಯೊಡನೆ ಪ್ರಯಾಣಕಾಲದಲ್ಲಿ ಮಾಡತಕ್ಕ ಮಂಗಳಸ್ನಾನಾದಿಗಳನ್ನು ಮಾಡಿಕೊಂಡು,

ಪೂಜ್ಯರಾದ ದೇವರ್ಷಿಗಳೊಡನೆಯೂ ಮಹರ್ಷಿಗಳೊಡನೆಯೂ ಕೂಡಿ ಲೋಮಶರಿಗೂ ವ್ಯಾಸರಿಗೂ ಪರ್ವತನಾರದಮಹರ್ಷಿಗಳಿಗೂ ನಮಸ್ಕಾರಮಾಡಿ, ಧೌಮ್ಯಾಚಾರ್ಯರಿಂದಲೂ ಆ ಕಾಮ್ಯಕವನದಲ್ಲಿದ್ದ ಋಷಿಗಳೊಡನೆಯೂ ಕೂಡಿ ಕೈಗಳಲ್ಲಿ ದೃಢವಾದ ಕೋಲುಗಳನ್ನು ಹಿಡಿದುಕೊಂಡು, ನಾರುಮಡಿಗಳನ್ನುಟ್ಟು, ಜಟೆಯನ್ನು ಧರಿಸಿ, ದೃಢವಾದ ಕವಚಗಳನ್ನು ತೊಟ್ಟು, ಖಡ್ಗ ಮೊದಲಾದ ಆಯುಧಗಳನ್ನೂ ಧನುರ್ಬಾಣಗಳನ್ನೂ ಬತ್ತಳಿಕೆಗಳನ್ನೂ ತೆಗೆದುಕೊಂಡು, ಇಂದ್ರಸೇನ ಮೊದಲಾದ ಕೆಲವುಮಂದಿ ಭೃತ್ಯರಿಂದಲೂ ಕೆಲವುಮಂದಿ ಅಡಿಗೆಯವರಿಂದಲೂ ಪರಿಚಾರಕರಿಂದಲೂ ಕೂಡಿ, ಹದಿನೈದು ರಥಗಳನ್ನು ಜೊತೆಯಲ್ಲಿ ಹೊರಡಿಸಿಕೊಂಡು, ಮಾರ್ಗಶೀರ್ಷಮಾಸವು ಕಳೆಯಲು, ಪುಷ್ಯಮಾಸದಲ್ಲಿ ತೀರ್ಥಯಾತ್ರೆಗೋಸ್ಕರ ಪೂರ್ವಾಭಿಮುಖವಾಗಿ ಹೊರಟರು.

## ೯೪ನೇ ಅಧ್ಯಾಯ.—ತೀರ್ಥಯಾತ್ರಾಪ್ರಶಂಸೆ.—(ಯುಧಿಷ್ಠಿರ ತೀರ್ಥಗಮನ).

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಬಳಿಕ ಧರ್ಮರಾಯನು ಲೋಮಶಮಹರ್ಷಿಯನ್ನು ನೋಡಿ "ಎಲೈ ಮಹರ್ಷಿಯೆ, ಲೋಕದಲ್ಲಿ ನನ್ನಹಾಗೆ ದುಃಖಪಡತಕ್ಕ ರಾಜನು ಯಾವನೂ ಇಲ್ಲವಾದ್ದರಿಂದ, ಈ ಜೀವವನ್ನು ಉತ್ತಮಗುಣಶೂನ್ಯವಾದದ್ದೆಂದು ಭಾವಿಸುತ್ತೇನೆ. ನಮಗೆ ಶತ್ರುಗಳಾದ ದುರ್ಯೋಧನಾದಿಗಳು ಗುಣಶೂನ್ಯರಾಗಿದ್ದರೂ, ಅಧರ್ಮಿಷ್ಠರಾಗಿದ್ದರೂ, ಅವರು ವೃದ್ಧಿಯನ್ನು ಹೊಂದಿರುವದಕ್ಕೆ ಕಾರಣವೇನೋ ತಿಳಿಯಲಿಲ್ಲ" ಎನಲು, ಲೋಮಶನು "ಎಲೈ ಧರ್ಮರಾಯನೆ, ಈ ವಿಷಯದಲ್ಲಿ ನೀನು ಸ್ವಲ್ಪವೂ ವ್ಯಸನಪಡಬೇಡ. ಅಧರ್ಮಿಷ್ಠರಾದವರು ಅಧರ್ಮದಿಂದಲೇ ವೃದ್ಧಿಯನ್ನು ಹೊಂದಿ, ಶತ್ರುಗಳನ್ನೂ ಜಯಿಸಿ, ಸುಖವನ್ನೂ ಪಡೆದು, ಕೊನೆಗೆ ಪುತ್ರಮಿತ್ರಾಮಾತ್ಯ ಸಹಿತರಾಗಿ ವಿನಾಶವನ್ನು ಹೊಂದುವರು. ಪೂರ್ವದಲ್ಲಿ ಸಕಲರಾದ ದೈತ್ಯರೂ ದಾನವರೂ ಅಧರ್ಮದಿಂದ ವೃದ್ಧಿಯನ್ನು ಹೊಂದಿ ಕೊನೆಗೆ ನಾಶವಾಗಿ ಹೋದದ್ದನ್ನು ನಾನೇ ನೋಡಿರುವೆನು. ಕೃತಯುಗದಲ್ಲಿ ದೇವತೆಗಳೆಲ್ಲರೂ ಧರ್ಮವನ್ನು ಆಶ್ರಯಿಸಿ ತೀರ್ಥಯಾತ್ರೆಯನ್ನು ಮಾಡಿದರು; ದೈತ್ಯರು ಅಧರ್ಮವನ್ನು ಆಶ್ರಯಿಸಿ ತೀರ್ಥಯಾತ್ರೆಯನ್ನು ಪರಿತ್ಯಜಿಸಿದರು. ಅಂಥ ಅಧರ್ಮಿಷ್ಠರಾದ ದೈತ್ಯರಿಗೆ ದರ್ಪವುಂಟಾಯಿತು. ಅದರಿಂದವರು ತಮಗೆತಾವೇ ಪೂಜ್ಯರೆಂದು ತಿಳಿದುಕೊಂಡಿದ್ದರು. ಬಳಿಕ ತಮ್ಮ ಪೂಜ್ಯತೆಗೆ ಹಾನಿಯುಂಟಾಗಲು, ಕ್ರೋಧದಿಂದ ಅಕಾರ್ಯದಲ್ಲಿ ಪ್ರವರ್ತಿಸಿ ಲಜ್ಜೆಯನ್ನು ಬಿಟ್ಟದ್ದರಿಂದ ಸದ್ವೃತ್ತಿಯು ನಷ್ಟವಾಗಿ ಹೋಯಿತು. ಈ ಪ್ರಕಾರ ಅಕಾರ್ಯಪ್ರವರ್ತಕರಾಗಿಯೂ ಲಜ್ಜಾಹೀನರಾಗಿಯೂ ಸದ್ವೃತ್ತಿರಹಿತರಾಗಿಯೂ ಇರುವ ಅವರನ್ನು ಭೂಮಿಯೂ ಲಕ್ಷ್ಮಿಯೂ ಧರ್ಮವೂ ಸಹ ಬಿಟ್ಟು ದೇವತೆಗಳನ್ನು ಸೇರಿದವು. ಬಳಿಕ ಅಲಕ್ಷ್ಮಿಯು ದೈತ್ಯರನ್ನು ಸೇರಿತು. ಹೀಗೆ ಭಾಗ್ಯಶೂನ್ಯರಾಗಿಯೂ ಬರೀ ದರ್ಪಯುಕ್ತರಾಗಿಯೂ ಇರುವ ದೈತ್ಯರನ್ನೂ ದಾನವರನ್ನೂ ಕಲಿಯು ಆಕ್ರಮಿಸಿದನು. ಹೀಗೆ ಕಲಿಯಿಂದ ಆಕ್ರಾಂತರಾಗಿ ಕ್ರಿಯಾಶೂನ್ಯರಾಗಿ ದುರಭಿಮಾನಿಗಳಾದ ದೈತ್ಯರು ನಾಶವನ್ನು ಹೊಂದಿ, ಲೋಕದಲ್ಲಿ ಅವರ ಯಶಸ್ಸೇ ಇಲ್ಲದಂತೆ ನಿರ್ನಾಮವಾಗಿ ಹೋದರು. ಮಹಾನುಭಾವರಾದ ಪುಣ್ಯಶೀಲರಾದ ದೇವತೆಗಳು ಸಮುದ್ರ, ನದಿ ಸರಸ್ಸು ಮೊದಲಾದ ಉತ್ತಮಸ್ಥಳಗಳಿಗೆ ಹೋಗಿ ತಪಸ್ಸುಮಾಡಿ, ತಮಗೆ ಯಶಸ್ಕರವಾದ ಯಜ್ಞಗಳನ್ನೂ ದಾನಗಳನ್ನೂ ಮಾಡಿ, ಸಕಲ ಪಾಪಗಳನ್ನೂ ಕಳೆದುಕೊಂಡು ಮುಕ್ತಿಯನ್ನು ಪಡೆದರು. ಈ ಪ್ರಕಾರ ದೇವತೆಗಳು ಋಜುಸ್ವಭಾವವನ್ನು ಹೊಂದಿ ಎಲ್ಲಿಯೂ ತಮಗೆ ತಡೆಯಿಲ್ಲದೆ ಪುಣ್ಯತಮವಾದ ತೀರ್ಥಗಳಲ್ಲಿ ಸ್ನಾನವನ್ನು ಮಾಡಿ ಅದರಿಂದ ಉತ್ತಮವಾದ ಸಂಪತ್ತನ್ನು ಪಡೆದರು. ಎಲೈ ರಾಜೇಂದ್ರನಾದ ಧರ್ಮರಾಯನೆ, ಹಾಗೆಯೇ ನೀನೂ ತೀರ್ಥಯಾತ್ರೆಯನ್ನು ಮಾಡಿದರೆ, ಪುನಃ ನಿನ್ನ ಐಶ್ವರ್ಯವನ್ನು ನೀನು ಪಡೆಯುವೆ. ಹೀಗೆ ಪೂರ್ವಿಕರಾದ ನೃಗ, ನಳ, ಶಿಬಿ, ಭಗೀರಥ, ವಸುಮನ, ಗಯ, ಪುರು, ಪುರೂರವ, ಪುತ್ರಮಿತ್ರಾಮಾತ್ಯಸಹಿತನಾದ ಇಕ್ಷ್ವಾಕು, ಮುಚುಕುಂದ, ಮಾಂಧಾತ, ಮರುತ್ತ ಮೊದಲಾದ ರಾಜರುಗಳೂ ದೇವತೆಗಳೂ ಋಷಿಗಳೂ ಸಹ ತೀರ್ಥಯಾತ್ರೆಗೆ ಹೊರಟು, ಪುಣ್ಯತೀರ್ಥಗಳಲ್ಲಿ ಸ್ನಾನವನ್ನು ಮಾಡಿ, ಮಹಾತ್ಮರ ದರ್ಶನವನ್ನುಮಾಡಿ, ಆಯಾ ಪುಣ್ಯಸ್ಥಳಗಳಲ್ಲಿ

ತಪಸ್ಸನ್ನು ಮಾಡಿ, ಪುಣ್ಯವನ್ನೂ ಯಶಸ್ಸನ್ನೂ ಐಶ್ವರ್ಯವನ್ನೂ ಪಡೆದು, ಉತ್ತಮವಾದ ಗತಿಯನ್ನು ಹೊಂದಿದರು. ಹಾಗೆಯೇ ನೀನೂ ತೀರ್ಥಯಾತ್ರಾಮಹಿಮೆಯಿಂದಲೂ ತಪೋಬಲದಿಂದಲೂ ಪುಣ್ಯವನ್ನೂ ಕೀರ್ತಿಯನ್ನೂ ಪಡೆದು ಪುನಃ ನಿನ್ನ ಅಖಂಡವಾದ ಐಶ್ವರ್ಯವನ್ನು ಪಡೆಯುವೆ. ಅಧರ್ಮಿಷ್ಠರಾಗಿಯೂ ಅಜ್ಞಾನಿಗಳಾಗಿಯೂ ಇರುವ ಧೃತರಾಷ್ಟ್ರನ ಮಕ್ಕಳು ದೈತ್ಯರಂತೆ ಜಾಗ್ರತೆಯಾಗಿ ನಷ್ಟರಾಗಿ ಹೋಗುವರು. ಈ ವಿಷಯದಲ್ಲಿ ಸಂದೇಹವಿಲ್ಲ'' ಎಂದು ಹೇಳಿದನು.

## ೯೫ನೇ ಅಧ್ಯಾಯ.—ತೀರ್ಥಯಾತ್ರಾ ಪ್ರಶಂಸೆ.—(ಗಯ ಯಜ್ಞ ಕಥನ)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಆ ಬಳಿಕ ಮಹಾವೀರರಾದ ಪಾಂಡವರು ಕಾಮ್ಯಕವನದಿಂದ ಹೊರಟು, ಅಲ್ಲಲ್ಲಿ ಪುಣ್ಯಕ್ಷೇತ್ರಗಳಲ್ಲಿ ವಾಸಮಾಡುತ್ತಾ, ನೈಮಿಶಾರಣ್ಯಕ್ಕೆ ಬಂದು, ಅಲ್ಲಿರುವ ಪುಣ್ಯತೀರ್ಥಗಳಲ್ಲಿಯೂ ಗೋಮತೀನದಿಯಲ್ಲಿಯೂ ಸ್ನಾನಮಾಡಿ, ಬ್ರಾಹ್ಮಣರಿಗೆ ಗೋವುಗಳನ್ನೂ ದ್ರವ್ಯಗಳನ್ನೂ ಕೊಟ್ಟು, ದೇವತೆಗಳಿಗೂ ಪಿತೃಗಳಿಗೂ ತರ್ಪಣವನ್ನು ಮಾಡಿ, ಅಲ್ಲಿಂದ ಹೊರಟು ಕನ್ಯಾತೀರ್ಥ ಅಶ್ವತೀರ್ಥ ಗೋತೀರ್ಥಗಳಲ್ಲಿ ಸ್ನಾನಮಾಡಿ, ಕಾಲಕೋಟಿ ವಿಷಪ್ರಸ್ಥಗಳೆಂಬ ಪರ್ವತಗಳಲ್ಲಿ ವಾಸಮಾಡಿ, ಬಳಿಕ ಬಾಹುದಾನದಿಗೆ ಬಂದು, ಅಲ್ಲಿ ಸ್ನಾನವನ್ನೂ ದಾನವನ್ನೂ ಮಾಡಿ, ಅಲ್ಲಿಂದ ಹೊರಟು, ಸಕಲದೇವತೆಗಳಿಗೂ ಯಜ್ಞಭೂಮಿಯಾದ ಪ್ರಯಾಗಕ್ಕೆ ಬಂದು ಅಲ್ಲಿ ಸ್ನಾನಮಾಡಿ, ಕೆಲವುದಿವಸ ಉತ್ತಮವಾದ ತಪಸ್ಸನ್ನು ಮಾಡಿ, ಗಂಗಾಯಮುನಾ ಸಂಗಮದಲ್ಲಿ ಸ್ನಾನಮಾಡಿ ಸಕಲಪಾಪಗಳನ್ನೂ ಕಳೆದುಕೊಂಡು, ಬ್ರಾಹ್ಮಣರಿಗೆ ಬೇಕಾದ ದ್ರವ್ಯಗಳನ್ನು ದಾನಮಾಡಿ, ಅನೇಕ ಋಷಿಗಳಿಂದ ಸೇವಿತವಾಗಿಯೂ ಬ್ರಹ್ಮದೇವರ ಯಜ್ಞಕ್ಕೆ ವೇದಿಯಾಗಿಯೂ ಇರುವ ಆ ಪ್ರದೇಶದಲ್ಲಿ ತಪಸ್ಸನ್ನು ಮಾಡುತ್ತ ಸ್ವಲ್ಪಕಾಲ ವಾಸಮಾಡಿ, ಕಂದಮೂಲಾದಿಗಳಿಂದ ಬ್ರಾಹ್ಮಣರನ್ನು ತೃಪ್ತಿಪಡಿಸಿ, ರಾಜರ್ಷಿಯಾಗಿಯೂ ಧರ್ಮಜ್ಞನಾಗಿಯೂ ಪುಣ್ಯಶಾಲಿಯಾಗಿಯೂ ಇರುವ ಗಯಮಹಾರಾಜನಿಂದ ನಿರ್ಮಿತವಾದ ಗಯಶಿರಸ್ಸೆಂಬ ಪರ್ವತಕ್ಕೆ ಹೋಗಿ, ಮರಳುಗುಡ್ಡೆಗಳಿಂದಲೂ ಬೆತ್ತಗಳಿಂದಲೂ ರಮ್ಯವಾದ ಅಲ್ಲಿರುವ ಪುಣ್ಯತಮವಾದ ಫಲ್ಗುನದಿಯಲ್ಲಿ ಸ್ನಾನಮಾಡಿ, ಅಲ್ಲಿಂದ ಹೊರಟು ಪವಿತ್ರಕೂಟ ಪವಿತ್ರಧರಣೀಧರ ಎಂಬ ಪರ್ವತಗಳಿಗೆ ಹೋದರು. ಆಸ್ಥಳದಲ್ಲಿ ಬ್ರಹ್ಮಶಿರಸ್ಸೆಂಬ ಪುಣ್ಯತೀರ್ಥವು ಅನೇಕ ಋಷಿಗಳಿಂದ ಸೇವಿತವಾಗಿರುವದು. ಅಲ್ಲಿಯೇ ಅಗಸ್ತ್ಯನಿಗೂ ಯಮನಿಗೂ ಸಮಾಗಮವಾದದ್ದು. ಅಲ್ಲಿಯೇ ಸನಾತನನಾದ ಯಮಧರ್ಮರಾಯನು ಸ್ವಯಂವ್ಯಕ್ತನಾಗಿರುವನು. ಅಲ್ಲಿಯೇ ಸಕಲನದಿಗಳೂ ಉತ್ಪನ್ನವಾಗಿರುವವು. ಅಲ್ಲೇ ಪಿನಾಕಪಾಣಿಯಾದ ಮಹಾದೇವನು ವಾಸಮಾಡುತ್ತಿರುವನು. ಅದೇಸ್ಥಳದಲ್ಲೇ ಅಕ್ಷಯವಟವೃಕ್ಷವಿರುವದು. ಅಲ್ಲಿ ಪಿತೃಗಳಿಗೋಸ್ಕರ ಸ್ವಲ್ಪ ಕೊಟ್ಟಾಗ್ಯೂ ಅದೇ ಅಕ್ಷಯವಾಗುವದು. ಅಂಥ ತೀರ್ಥಗಳಲ್ಲಿ ಸ್ನಾನಮಾಡಿ ಶೂರರಾದ ಪಾಂಡವರು ಚಾತುರ್ಮಾಸ್ಯದಲ್ಲಿ ಮಾಡತಕ್ಕ ಯಜ್ಞಗಳನ್ನು ಮಾಡುತ್ತ ನಿಶ್ಚಿಂತರಾಗಿ ವಾಸಮಾಡುತ್ತಿರಲು, ಆ ಯಾಗವನ್ನು ನೋಡುವದಕ್ಕೋಸ್ಕರ ಜ್ಞಾನವೃದ್ಧರೂ ತಪೋವೃದ್ಧರೂ ವೇದವೇದಾಂಗಪಾರಂಗತರೂ ಆದ ಬ್ರಾಹ್ಮಣರು ನಾನಾದಿಕ್ಕುಗಳಿಂದಲೂ ಬಂದು ಸಭಾಸ್ತಾರರಾಗಿ ನಾನಾವಿಧವಾದ ಪುಣ್ಯಕಥೆಗಳನ್ನು ಹೇಳುತ್ತಿದ್ದರು. ಆ ಸಮಯದಲ್ಲಿ ವೇದಾಧ್ಯಯನವನ್ನೂ ವ್ರತಸ್ನಾನವನ್ನೂ ಮಾಡಿ ಬಾಲ್ಯದಿಂದಲೂ ವ್ರತನಿಯಮ ಪರಾಯಣನಾದ ಶಮಠನೆಂಬ ಋಷಿಯು ಧರ್ಮರಾಯನನ್ನು ಕುರಿತು ಹೇಳಿದ್ದೇನೆಂದರೆ: "ಎಲೈ ಮಹಾರಾಜನೆ, ಅಮೂರ್ತರಜನೆಂಬ ರಾಜರ್ಷಿಗೆ ಮಗನಾದ ಗಯಮಹಾರಾಜನ ಪುಣ್ಯತಮವಾದ ಚರಿತ್ರೆಯನ್ನು ಹೇಳುವೆನು ಕೇಳು. ಈ ಸ್ಥಳದಲ್ಲಿ ಆತನು ಯಜ್ಞವನ್ನು ಮಾಡಿ ಅನ್ನವನ್ನು ಪರ್ವತಾಕಾರವಾಗಿಯೂ, ತುಪ್ಪವನ್ನು ಕಾಲುವೆಯಾಗಿಯೂ, ಮೊಸರನ್ನು ನದಿಯಾಗಿಯೂ, ಉತ್ತಮವಾದ ನಾನಾವಿಧವಾದ ವ್ಯಂಜನಗಳನ್ನು ರಾಶಿರಾಶಿಯಾಗಿಯೂ ಪ್ರತಿದಿನದಲ್ಲೂ ಮಾಡಿಸಿ, ಬ್ರಾಹ್ಮಣರಿಗೆ ಭೋಜನವನ್ನು ಮಾಡಿಸು

ತ್ತಲೂ, ಅನೇಕವಾಗಿ ದಕ್ಷಿಣೆಗಳನ್ನು ಕೊಡುತ್ತಲೂ, ಇತರ ಜನಗಳಿಗೂ ಷಡ್ರಸೋಪೇತವಾದ ಅನ್ನವನ್ನು ಭೋಜನ ಮಾಡಿಸಿದನು. ಆ ಕಾಲದಲ್ಲಿ ಬ್ರಾಹ್ಮಣರ ವೇದಘೋಷವು ಭೂಮಿಯನ್ನೂ ಆಕಾಶವನ್ನೂ ದಿಕ್ಕುಗಳನ್ನೂ ವ್ಯಾಪಿಸಿ ಆತ್ಯಾಶ್ಚರ್ಯಕರವಾಗಿ ತೋರಿದ್ದಲ್ಲದೆ, ಆ ಘೋಷದಿಂದ ಮತ್ತಾವ ಶಬ್ದವೂ ಕೇಳಿಸುತ್ತಿರಲಿಲ್ಲ. ಆ ಯಜ್ಞದಲ್ಲಿ ಬ್ರಾಹ್ಮಣರು ಷಡ್ರಸೋಪೇತವಾದ ಅನ್ನವನ್ನು ಭೋಜನಮಾಡಿ ಸಂತುಷ್ಟರಾಗಿ, ಗಯಮಹಾರಾಜನ ಯಜ್ಞವನ್ನೂ ಆತನನ್ನೂ ಸಹ ಕೊಂಡಾಡುತ್ತಾ, ಇಂಥ ಯಜ್ಞವನ್ನು ಪೂರ್ವದಲ್ಲಿ ಯಾವ ಮಹಾರಾಜನೂ ಮಾಡಲಿಲ್ಲವೆಂದೂ, ಈ ಯಜ್ಞದಲ್ಲಿ ಬ್ರಾಹ್ಮಣರು ಭೋಜನಮಾಡಿ ಉಳಿದ ಪದಾರ್ಥಗಳು ಪರ್ವತಾಕಾರವಾಗಿ ಬಿದ್ದಿರುವವೆಂದೂ, ಗಯಮಹಾರಾಜನ ಯಜ್ಞದಲ್ಲಿ ಹವಿರ್ಭಾಗಗಳನ್ನು ಸ್ವೀಕರಿಸಿ ತೃಪ್ತರಾದ ದೇವತೆಗಳು ಇನ್ನಾರು ಮಾಡಿದ ಯಜ್ಞದಲ್ಲಿತಾನೆ ಪುನಃ ಹವಿರ್ಭಾಗಗಳನ್ನು ಸ್ವೀಕರಿಸುವದಕ್ಕೆ ಅಪೇಕ್ಷಿಸುವರೇ ಎಂದೂ, ಆತನ ಯಜ್ಞದಲ್ಲಿ ಬ್ರಾಹ್ಮಣರಿಗೆ ಕೊಟ್ಟ ದಕ್ಷಿಣೆಗಳು ಭೂಮಿಯಲ್ಲಿರತಕ್ಕ ಮರಳುಗಳಂತೆಯೂ, ಆಕಾಶದಲ್ಲಿರುವ ನಕ್ಷತ್ರಗಳಂತೆಯೂ, ಮೇಘಗಳ ವೃಷ್ಟಿಧಾರೆಗಳಂತೆಯೂ, ಅಸಂಖ್ಯಾತವಾಗಿರುವವೆಂದೂ ಶ್ಲಾಘಿಸುತ್ತಿದ್ದರು. ಎಲೈ ಧರ್ಮರಾಯನೆ, ಈ ಪ್ರಕಾರ ಈ ಬ್ರಹ್ಮಸರಸ್ಸಿನ ಸಮೀಪದಲ್ಲಿ ಗಯಮಹಾರಾಜನು ಅನೇಕ ಯಜ್ಞಗಳನ್ನು ಮಾಡಿರುವನು " ಎಂದು ಲೋಮಶನು ಧರ್ಮರಾಯನಿಗೆ ಹೇಳಿದನು.

## ೯೬ನೇ ಅಧ್ಯಾಯ.—ತೀರ್ಥಯಾತ್ರಾಪ್ರಶಂಸೆ.—(ಅಗಸ್ತ್ಯೋಪಾಖ್ಯಾನ.)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಬಳಿಕ ಧರ್ಮರಾಯನು ಆ ಬ್ರಹ್ಮಸರಸ್ಸಿನಿಂದ ಹೊರಟು ಅಗಸ್ತ್ಯಾಶ್ರಮಕ್ಕೆ ಬಂದು ಅದರ ಸಮೀಪದಲ್ಲಿರುವ ವಾತಾಪಿಯ ಪಟ್ಟಣದಲ್ಲಿ ನಿಂತು, ಲೋಮಶಮಹರ್ಷಿಯನ್ನು ಕುರಿತು " ಎಲೈ ಮಹಾತ್ಮನೆ, ಮಹಾನುಭಾವರಾದ ಅಗಸ್ತ್ಯರು ಈ ಸ್ಥಳದಲ್ಲಿ ಕ್ರೂರನಾದ ವಾತಾಪಿಯೆಂಬ ದೈತ್ಯನನ್ನು ನಾಶಮಾಡಿದರೆಂದು ಕೇಳಿರುವೆನು. ಅದಕ್ಕೆ ಕಾರಣವೇನು ? ಮನುಷ್ಯರನ್ನು ಭಕ್ಷಿಸುತ್ತಿದ್ದ ಆ ವಾತಾಪಿಯ ಸಾಮರ್ಥ್ಯವು ಎಂಥಾದ್ದು ? ಅವನು ಮಹಾತ್ಮರಾದ ಅಗಸ್ತ್ಯರಿಗೆ ಕೋಪವುಂಟಾಗುವಹಾಗೆ ಯಾತಕ್ಕೆ ಮಾಡಿದನು ? ಅದನ್ನು ತಿಳಿಹಿಸು " ಎನಲು, ಲೋಮಶಮಹರ್ಷಿಯು ಧರ್ಮರಾಯನನ್ನು ಕುರಿತು " ಎಲೈ ಧರ್ಮರಾಯನೆ, ಪೂರ್ವದಲ್ಲಿ ಮಣಿಮತಿಯೆಂಬ ಪಟ್ಟಣದಲ್ಲಿ ಇಲ್ವಲನೆಂಬ ಒಬ್ಬ ದೈತ್ಯನಿದ್ದನು. ಅವನಿಗೆ ವಾತಾಪಿಯೆಂಬ ತಮ್ಮನಿದ್ದನು. ಅವನು ಒಬ್ಬಾನೊಬ್ಬ ತಪಸ್ವಿಯಾದ ಬ್ರಾಹ್ಮಣನನ್ನು ಕಂಡು, ಆತನನ್ನು ಪೂಜಿಸಿ ' ಎಲೈ ಮಹಾತ್ಮನೆ, ಇಂದ್ರನಿಗೆ ಸಮಾನನಾದ ಮಗನನ್ನು ನಾನು ಪಡೆಯುವಂತೆ ನೀನು ನನ್ನಲ್ಲಿ ಅನುಗ್ರಹಮಾಡು ' ಎನಲು, ಆಬ್ರಾಹ್ಮಣನು ಆ ಪ್ರಕಾರ ಅವನಲ್ಲಿ ಅನುಗ್ರಹ ಮಾಡದೆ ಹೋದದ್ದರಿಂದ, ಆ ಇಲ್ವಲನು ಆತನಮೇಲೆ ಕೋಪಿಸಿಕೊಂಡು, ತದಾರಭ್ಯ ಬ್ರಾಹ್ಮಣರಲ್ಲಿ ದ್ವೇಷಮಾಡುತ್ತ, ಮಾಯಾವಿಯಾಗಿಯೂ ಕಾಮರೂಪಿಯಾಗಿಯೂ ಇರುವ ತನ್ನ ತಮ್ಮನಾದ ವಾತಾಪಿಗೆ ಹೋತನಾಗೆಂದು ಹೇಳಲು, ವಾತಾಪಿಯು ತತ್ಕ್ಷಣದಲ್ಲಿ ಹೋತನ ರೂಪವನ್ನು ಹೊಂದಿದನು. ಬಳಿಕ ಇಲ್ವಲನು ಆ ಹೋತದ ಮಾಂಸವನ್ನು ತೆಗೆದು ಪಕ್ವಮಾಡಿ ಅದನ್ನು ಬ್ರಾಹ್ಮಣನಿಗೆ ಭೋಜನ ಮಾಡಿಸಿ, ಆಬಳಿಕ ' ಓ ವಾತಾಪಿಯೆ ಬಾ ' ಎಂದು ಕೂಗಲು, ಕಾಮರೂಪಿಯಾದ ವಾತಾಪಿಯು ಆ ಬ್ರಾಹ್ಮಣನ ಹೊಟ್ಟೆಯನ್ನು ಸೀಳಿಕೊಂಡು ಈಚೆಗೆ ಬರುತ್ತಿದ್ದನು. ಇದೇ ಪ್ರಕಾರ ಆ ಇಲ್ವಲನು ತನ್ನಲ್ಲಿ ಅನುಗ್ರಹವನ್ನು ಮಾಡದೆ ತನ್ನನ್ನು ತಿರಸ್ಕರಿಸಿದ್ದ ಆ ಬ್ರಾಹ್ಮಣನಿಗೂ ಭೋಜನ ಮಾಡಿಸಿ ಆತನನ್ನು ಕೊಂದುಬಿಟ್ಟನು. ಬ್ರಾಹ್ಮಣಕಂಟಕರಾದ ಆ ಇಲ್ವಲವಾತಾಪಿಗಳಿಬ್ಬರೂ ಸೇರಿ ಅನೇಕ ಮಂದಿ ಬ್ರಾಹ್ಮಣರನ್ನು ಕೊಲ್ಲುತ್ತಿರಲು, ಒಂದಾನೊಂದು ದಿವಸ ಮಹಾತ್ಮನಾದ ಅಗಸ್ತ್ಯಮಹರ್ಷಿಯು ಒಂದು ಹಳ್ಳದಲ್ಲಿ ಬಿದ್ದು ನೇತಾಡುತ್ತಿದ್ದ ತನ್ನ ಪಿತೃಗಳನ್ನು ನೋಡಿ ಅವರನ್ನು ಕುರಿತು ' ಎಲೈ ಪೂಜ್ಯರಾದ ಪಿತೃಗಳೆ, ಯಾತಕ್ಕೋಸ್ಕರ ನೀವು ಹೀಗೆ ಕ್ಲೇಶಪಡುತ್ತ ನೇತಾಡುತ್ತಿರುವಿರಿ ? ' ಎಂದು ಪ್ರಶ್ನೆಮಾಡಲು, ಆ ಪಿತೃಗಳು

ಅಗಸ್ತ್ಯಮಹರ್ಷಿಯನ್ನು ನೋಡಿ 'ಎಲೈ ಮಹಾತ್ಮನೆ, ನಾವು ನಿನಗೆ ಪಿತೃಗಳಾದವರು. ನಿನಗೆ ಪುತ್ರಸಂತಾನವಿಲ್ಲದ್ದರಿಂದ ನಮಗೆ ಇಂಥ ದುರ್ಗತಿಯು ಪ್ರಾಪ್ತವಾಗಿರುವದು. ಈಗ ನೀನು ಪುತ್ರವಂತನಾದರೆ, ನಮಗೆ ಈ ನರಕದಿಂದ ಮೋಕ್ಷವೂ ನಿನಗೆ ಉತ್ತಮವಾದ ಗತಿಯೂ ಉಂಟಾಗುವವು' ಎಂದು ನುಡಿದರು. ಅದನ್ನು ಕೇಳಿ ಧರ್ಮಾತ್ಮನಾದ ಅಗಸ್ತ್ಯಮಹರ್ಷಿಯು ಆ ಪಿತೃಗಳನ್ನು ಕುರಿತು 'ಎಲೈ ಪಿತೃಗಳೆ, ನಿಮ್ಮ ಮನೋರಥವನ್ನು ನಾನು ನೆರವೇರಿಸುವೆನು. ಇದಕ್ಕಾಗಿ ನೀವು ಚಿಂತಿಸಕೇಳಸವಿಲ್ಲ' ಎಂದು ಸಮಾಧಾನಮಾಡಿ, ಬಳಿಕ ಪುತ್ರಸಂತಾನವನ್ನು ಪಡೆಯಬೇಕೆಂದು ಚಿಂತಿಸಿ, ತನಗೆ ಸರಿಯಾದ ಉತ್ತಮಸ್ತ್ರೀಯನ್ನು ಎಲ್ಲಿಯೂ ಕಾಣದೆ, ಆ ಅರಣ್ಯದಲ್ಲಿದ್ದ ಸಿಂಹ ಮೊದಲಾದ ಮೃಗಗಳ ಕಟಿನೇತ್ರಮೊದಲಾದ ಅವಯವಗಳ ಸೌಂದರ್ಯವನ್ನು ನೋಡಿ, ಆ ಮೃಗಗಳ ಅವಯವಗಳಂತೆ ಸುಂದರವಾದ ಅವಯವಗಳಿಂದ ಉತ್ತಮಳಾದ ಒಬ್ಬ ಸ್ತ್ರೀಯನ್ನು ನಿರ್ಮಾಣಮಾಡಿ, ಸ್ವಪ್ರಯೋಜನಕ್ಕೋಸ್ಕರ ನಿರ್ಮಾಣಮಾಡಿದ ಆ ಸ್ತ್ರೀರತ್ನವನ್ನು ಸಂತಾನಾಪೇಕ್ಷೆಯಿಂದ ತಪಸ್ಸುಮಾಡುತ್ತಿದ್ದ ವಿದರ್ಭರಾಜನಿಗೋಸ್ಕರ ಕೊಟ್ಟುಬಿಟ್ಟನು. ಬಳಿಕ ಆಕೆಯಲ್ಲಿ ಬಹುಸುಂದರಾಂಗಿಯಾಗಿ ತನ್ನ ಶರೀರಕಾಂತಿಯಿಂದ ಮಿಂಚಿನಂತೆ ಹೊಳೆಯುವ ಒಬ್ಬ ಕನ್ಯಕೆಯು ಹುಟ್ಟಲು, ಅದನ್ನು ವಿದರ್ಭರಾಜನು ಸಂತೋಷದಿಂದ ಬ್ರಾಹ್ಮಣರಿಗೆ ತಿಳಿಸಿದನು. ಅದನ್ನು ಕೇಳಿ ಬ್ರಾಹ್ಮಣರೆಲ್ಲರೂ ಸಂತೋಷಭರಿತರಾಗಿ ಆ ಕನ್ಯಕೆಗೆ ಲೋಪಾಮುದ್ರೆಯೆಂದು ನಾಮಕರಣವನ್ನು ಮಾಡಿದರು. ಬಳಿಕ ಆಕೆಯು ನೀರಿನಲ್ಲಿದ್ದ ನೈದಿಲೇಬಳ್ಳಿಯಂತೆಯೂ, ವೇದಿಯಲ್ಲಿದ್ದ ಅಗ್ನಿಶಿಖೆಯಂತೆಯೂ, ಉತ್ತಮವಾದ ರೂಪವನ್ನು ಧರಿಸಿ ಆ ವಿದರ್ಭರಾಜನ ಅರಮನೆಯಲ್ಲಿ ದಿನೇದಿನೇ ಅಭಿವೃದ್ಧಿಯನ್ನು ಹೊಂದಿ ಯೌವನಸ್ಥೆಯಾಗಲು, ಆಗ ಸರ್ವಾಲಂಕಾರ ಭೂಷಿತರಾದ ಅನೇಕಮಂದಿ ಕನ್ಯಕಾಜನರೂ ಅನೇಕಮಂದಿ ದಾಸೀಜನರೂ ಸಹ ಆ ಕನ್ಯಕೆಯನ್ನು ಸೇವೆ ಮಾಡುತ್ತಿರಲು, ಅವರ ಮಧ್ಯದಲ್ಲಿ ಲೋಪಾಮುದ್ರೆಯು ನಕ್ಷತ್ರಗಳ ಮಧ್ಯದಲ್ಲಿ ರೋಹಿಣೀನಕ್ಷತ್ರವು ಪ್ರಕಾಶಿಸುವಂತೆ ಪ್ರಕಾಶಿಸುತ್ತ, ಯೌವನಸ್ಥಳಾಗಿದ್ದರೂ ಶೀಲವತಿಯಾಗಿಯೂ ಆಚಾರವತಿಯಾಗಿಯೂ ಇರುವದನ್ನು ನೋಡಿ, ಯಾವ ಪುರುಷನೂ ಕೂಡ ಮಹಾತ್ಮನಾದ ಅಗಸ್ತ್ಯನ ಭಯದಿಂದ ಆಕೆಯನ್ನು ವರಿಸದೆ ಇದ್ದನು. ಆಗ ಸತ್ಯಶೀಲೆಯಾದ ಲೋಪಾಮುದ್ರೆಯು ತನ್ನ ರೂಪದಿಂದ ಅಪ್ಸರಸ್ತ್ರೀಯರನ್ನು ತಿರಸ್ಕರಿಸುತ್ತ, ತಮ್ಮ ಮಾತಾಪಿತೃಗಳನ್ನೂ ಬಂಧುಜನಗಳನ್ನೂ ತನ್ನ ಒಳ್ಳೇನಡತೆಗಳಿಂದ ಸಂತೋಷಪಡಿಸುತ್ತಿರಲು, ವಿದರ್ಭರಾಜನು ಯೌವನಸ್ಥೆಯಾದ ತನ್ನ ಮಗಳನ್ನು ನೋಡಿ ಈ ಮಗಳನ್ನು ಯಾರಿಗೆ ಕೊಟ್ಟು ವಿವಾಹ ಮಾಡಲಿ ಎಂದು ಮನಸ್ಸಿನಲ್ಲಿ ಚಿಂತಿಸುತ್ತಿದ್ದನು."

## ೯೭ನೇ ಅಧ್ಯಾಯ.—ತೀರ್ಥಯಾತ್ರಾಪ್ರಶಂಸೆ—(ಅಗಸ್ತ್ಯೋಪಾಖ್ಯಾನ)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು "ಕೇಳು ಜನಮೇಜಯನೆ, ಲೋಮಶನು ಪುನಃ ಧರ್ಮರಾಯನನ್ನು ಕುರಿತು "ಎಲೈ ಧರ್ಮರಾಯನೆ, ಆಸಮಯದಲ್ಲಿ ಅಗಸ್ತ್ಯಮಹರ್ಷಿಯು ತಾನು ಗೃಹಸ್ಥಾಶ್ರಮವನ್ನು ವಹಿಸುವದಕ್ಕೆ ಲೋಪಾಮುದ್ರೆಯು ಅನುಕೂಲೆಯಾಗಿರುವದನ್ನು ತಿಳಿದು, ವಿದರ್ಭರಾಯನ ಬಳಿಗೆ ಬಂದು, 'ಎಲೈ ರಾಯನೆ, ಸಂತಾನಾರ್ಥವಾಗಿ ವಿವಾಹವನ್ನು ಮಾಡಿಕೊಳ್ಳಬೇಕೆಂದು ನನಗೆ ಬುದ್ಧಿಯುಂಟಾಗಿರುವದರಿಂದ, ನಿನ್ನ ಮಗಳಾದ ಲೋಪಾಮುದ್ರೆಯನ್ನು ನಾನು ಅಪೇಕ್ಷಿಸುವೆನು' ಎನಲು, ವಿದರ್ಭರಾಜನು ತನ್ನಮಗಳನ್ನು ಅಗಸ್ತ್ಯನಿಗೆ ಕೊಡಲಾರದೆಯೂ ಆತನನ್ನು ತಿರಸ್ಕರಿಸುವದಕ್ಕೆ ಶಕ್ತಿಯಿಲ್ಲದೆಯೂ ಚಿಂತೆಪಡುತ್ತ, ತನ್ನ ಪತ್ನಿಯ ಬಳಿಗೆ ಹೋಗಿ 'ಎಲೆ ದೇವಿಯೆ, ಮಹಾತ್ಮನಾದ ಅಗಸ್ತ್ಯಮಹರ್ಷಿಯು ನಮ್ಮ ಲೋಪಾಮುದ್ರೆಯನ್ನು ವಿವಾಹ ಮಾಡಿಕೊಳ್ಳಬೇಕೆಂದು ಅಪೇಕ್ಷಿಸುವನು. ನಾವು ಆತನ ಇಷ್ಟಾನುಸಾರವಾಗಿ ನಡೆಯದೆ ಹೋದ ಪಕ್ಷದಲ್ಲಿ ಆತನು ಕೋಪಗೊಂಡು ಶಾಪವನ್ನು ಕೊಟ್ಟು ನಮ್ಮನ್ನು ನಾಶಮಾಡಿ ಬಿಡುವನು. ಈಗ ಏನು ಮಾಡಬೇಕು?' ಎಂದು ವ್ಯಸನಪಡುತ್ತಿರಲು, ಆ ಕಾಲದಲ್ಲಿ ಲೋಪಾಮುದ್ರೆಯು ತಂದೆಯನ್ನು ನೋಡಿ 'ಎಲೈ

ತಂದೆಯೆ, ನನ್ನ ನಿಮಿತ್ತವಾಗಿ ನೀನು ವ್ಯಥೆಪಡತಕ್ಕ ಕೆಲಸವಿಲ್ಲ. ನನ್ನನ್ನು ಮಹಾತ್ಮನಾದ ಆ ಋಷಿಗೆ ಕೊಟ್ಟು ನಿನ್ನನ್ನು ನೀನು ಸಂರಕ್ಷಣೆಮಾಡಿಕೊ' ಎಂದು ನುಡಿದಳು. ಆ ಮಾತನ್ನು ಕೇಳಿ ವಿದರ್ಭರಾಜನು ತನ್ನ ಮಗಳಾದ ಲೋಪಾಮುದ್ರೆಯನ್ನು ಮಹಾತ್ಮನಾದ ಅಗಸ್ತ್ಯನಿಗೆ ಯಥಾಶಾಸ್ತ್ರವಾಗಿ ಕೊಟ್ಟು ವಿವಾಹವನ್ನು ಬೆಳಸಿದನು. ಬಳಿಕ ಅಗಸ್ತ್ಯಮಹರ್ಷಿಯು ತನ್ನ ಪತ್ನಿಯಾದ ಲೋಪಾಮುದ್ರೆಯನ್ನು ಕುರಿತು 'ಎಲೆ ಸತಿಯೆ, ಈ ಉತ್ತಮವಾದ ಆಭರಣಗಳನ್ನೂ ವಸ್ತ್ರಗಳನ್ನೂ ತೆಗೆದುಬಿಡು' ಎನಲು, ವಿಶಾಲವಾದ ನೇತ್ರಗಳುಳ್ಳವಳಾಗಿಯೂ ರಂಭೋರುವಾಗಿಯೂ ಇರುವ ಲೋಪಾಮುದ್ರೆಯು ಅನರ್ಘ್ಯವಾದ ಆಭರಣಗಳನ್ನೂ ಸೂಕ್ಷ್ಮವಾದ ವಸ್ತ್ರಗಳನ್ನೂ ತ್ಯಜಿಸಿ, ನಾರುಸೀರೆಯನ್ನುಟ್ಟು, ಕೃಷ್ಣಾಜಿನವನ್ನು ಧರಿಸಿ, ಪತಿಗೆ ಸಮಾನವಾದ ವ್ರತವನ್ನು ಧರಿಸಿ ನೇಮದಿಂ ದಿರಲು, ಅಗಸ್ತ್ಯನು ತನಗೆ ಅನುಕೂಲೆಯಾದ ಆಕೆಯೊಡನೆ ಗಂಗಾದ್ವಾರಕ್ಕೆ ಹೋಗಿ ತಪಸ್ಸುಮಾಡಲುಪಕ್ರಮಿಸಿ ದನು. ಆಗ ಪತಿವ್ರತಾಶಿರೋಮಣಿಯಾದ ಲೋಪಾಮುದ್ರೆಯು ಬಹುಸಂತೋಷದಿಂದ ತನ್ನ ಶುಶ್ರೂಷೆಯನ್ನು ಮಾಡುವದನ್ನು ನೋಡಿ ಬಹಳವಾಗಿ ಸಂತೋಷಪಟ್ಟು, ಹಾಗೆಯೇ ಕೆಲವು ಕಾಲ ಕಳೆಯಲು, ಆ ಲೋಪಾಮುದ್ರೆಯು ತನ್ನನ್ನು ಸರಿಯಾಗಿ ಸೇವಿಸುವದರಿಂದಲೂ, ಶುಚಿರ್ಭೂತಳಾಗಿರುವದರಿಂದಲೂ, ಶಮದಮಾದಿ ಗುಣಯುಕ್ತಳಾಗಿರುವದರಿಂದಲೂ ಸಂತುಷ್ಟನಾಗಿ, ಋತುಸ್ನಾತಳಾಗಿದ್ದ ಆಕೆಯ ರೂಪಸಂಪತ್ತಿನಿಂದ ಮೋಹಿತನಾಗಿ, ಆಕೆಯೊಡನೆ ವಿಹರಿಸಬೇಕೆಂದು ಬಯಸಲು, ಆಗ ಲೋಪಾಮುದ್ರೆಯು ಲಜ್ಜಾಯುಕ್ತಳಾಗಿ ಕೈಮುಗಿದುಕೊಂಡು ಪ್ರೀತಿಯಿಂದ ಪತಿಯನ್ನುಕುರಿತು 'ಮಹಾತ್ಮನೆ, ಸಂತಾನಾರ್ಥವಾಗಿಯೇ ಲೋಕದಲ್ಲಿ ಪತ್ನಿಯೊಡಗೂಡತಕ್ಕದ್ದು. ಆದರೆ ಈಗ ಕುತೂಹಲದಿಂದ ನಾನು ನಿನ್ನನ್ನು ಒಂದು ಮಾತನ್ನು ಕೇಳಿಕೊಳ್ಳುವೆನು. ಅದನ್ನು ನೀನು ನಡಿಸಿ ಕೊಡಬೇಕೆಂದು ಪ್ರಾರ್ಥಿಸುವೆನು. ಮೊದಲು ನಾನು ನಮ್ಮ ತಂದೆಯ ಅರಮನೆಯಲ್ಲಿ ಎಂಥ ಹಾಸಿಗೆಯಮೇಲೆ ಮಲಗುತ್ತಿದ್ದೆನೋ ಅಂಥ ಹಾಸಿಗೆಯಮೇಲೆ ನೀನು ನನ್ನಸಂಗಡ ವಿಹರಿಸು. ಆ ಕಾಲದಲ್ಲಿ ನಾವಿಬ್ಬರೂ ದಿವ್ಯವಾದ ವಸ್ತ್ರಾಭರಣಮಾಲ್ಯಗಳನ್ನು ಧರಿಸಿಕೊಂಡಿರಬೇಕು. ಹಿಗಾಗದೆಹೋದಪಕ್ಷದಲ್ಲಿ, ಋಷಿಗಳಿಗೆ ಯೋಗ್ಯವಾಗಿಯೂ ಪರಿಶುದ್ಧವಾಗಿಯೂ ಇರುವ ನಾರುಮಡಿ ಕೃಷ್ಣಾಜಿನಗಳನ್ನು ಧರಿಸಿಕೊಂಡು ನಾವಿಬ್ಬರೂ ವಿಹರಸಿದ್ದೇ ಆದರೆ ಅವುಗಳು ಅಪರಿಶುದ್ಧಗಳಾಗುವದರಿಂದ, ನಾನು ನಾರುಸೀರೆಯನ್ನುಟ್ಟು ನಿನ್ನಸಂಗಡ ವಿಹರಿಸುವದಕ್ಕೆ ಹ್ಯಾಗಾದೀತು ?' ಎಂದು ನುಡಿದಳು. ಅದನ್ನು ಕೇಳಿ ಅಗಸ್ತ್ಯಮಹರ್ಷಿಯು 'ಎಲೆ ಮಂಗಳಾಂಗಿಯಾದ ಲೋಪಾಮುದ್ರೆಯೆ, ನಿಮ್ಮ ತಂದೆಗೆ ಇರುವ ಐಶ್ವರ್ಯವು ನನಗೆ ಇಲ್ಲವಾದ್ದರಿಂದ ಅವೆಲ್ಲವೂ ನಮಗೆ ಹ್ಯಾಗೆ ಉಂಟಾದಾವು ? ಎನಲು, ಲೋಪಾಮುದ್ರೆಯು 'ಮಹಾತ್ಮನೆ, ಭೂಮಂಡಲದಲ್ಲಿರುವ ಸಕಲೈಶ್ವರ್ಯವನ್ನು ಬೇಕಾದರೂ ನೀನು ತಪೋಬಲದಿಂದ ತರಿಸುವದಕ್ಕೆ ಸಮರ್ಥನಾಗಿರುವೆ' ಎಂದು ನುಡಿದಳು. ಅದನ್ನು ಕೇಳಿ ಅಗಸ್ತ್ಯನು 'ಎಲೆ ಮಂಗಳಾಂಗಿಯೆ, ನೀನು ಹೇಳಿದ್ದು ಯಥಾರ್ಥವೇ ಸರಿ. ನಾವು ಹಾಗೆ ಮಾಡಿದ್ದೇ ಆದರೆ, ನಮ್ಮ ತಪಸ್ಸು ಕಡಮೆಯಾಗಿ ಹೋಗುವದು. ಈ ವಿಷಯದಲ್ಲಿ ನಮ್ಮ ತಪಸ್ಸು ನಷ್ಟವಾಗದೆ ನಮಗೆ ಐಶ್ವರ್ಯವುಂಟಾಗುವದಕ್ಕೆ ಮತ್ತೊಂದು ಉಪಾಯವೇನಾದರೂ ಇದ್ದರೆ ತಿಳುಹಿಸು' ಎನಲು, ಲೋಪಾಮುದ್ರೆಯು 'ಮಹಾತ್ಮನೆ ಷೋಡಶದಿನಾತ್ಮಕವಾದ ಋತುಕಾಲವು ಎಲ್ಲಾ ಕಳೆದುಹೋಗಿ ಸ್ವಲ್ಪವೇ ಉಳಿದಿರುವದು. ಶ್ಲಾಘ್ಯವಾದ ವಸ್ತ್ರಾಭರಣಮಾಲ್ಯಗಳಿಲ್ಲದೆ ನಾನು ನಿನ್ನಸಂಗಡ ವಿಹರಿಸುವದಕ್ಕೂ ಐಶ್ವರ್ಯವನ್ನು ಪಡೆಯುವದಕ್ಕಾಗಿ ನಿನ್ನ ತಪಸ್ಸನ್ನು ಕಡಮೆಮಾಡಿಸುವದಕ್ಕೂ ಅಪೇಕ್ಷೆಯಿಲ್ಲದಿರುವೆನು. ಅಂತು ಹ್ಯಾಗಾದರೂ ನನ್ನ ಇಚ್ಛೆಯನ್ನು ನೀನು ನೆರವೇರಿಸಬೇಕು' ಎಂದು ನುಡಿದಳು. ಅದನ್ನು ಕೇಳಿ ಅಗಸ್ತ್ಯನು 'ಎಲೆ ಸುಂದರಾಂಗಿಯೆ, ನಿನ್ನ ಅಪೇಕ್ಷೆಯು ಈಪ್ರಕಾರವಾಗಿಯೇ ನಿಶ್ಚಯವಾಗಿದ್ದ ಪಕ್ಷದಲ್ಲಿ ಐಶ್ವರ್ಯವನ್ನು ಪಡೆದುಕೊಂಡು ಬರುವದಕ್ಕೆ ನಾನು ಹೋಗಿಬರುವೆನು. ಆ ವರೆಗೂ ನೀನು ಇದೇ ಆಶ್ರಮದಲ್ಲಿ ವಾಸಮಾಡಿಕೊಂಡಿರು' ಎಂದು ಹೇಳಿದನು."

## ೯೮ನೇ ಅಧ್ಯಾಯ.—ತೀರ್ಥಯಾತ್ರಾಪ್ರಶಂಸೆ—(ಅಗಸ್ತ್ಯೋಪಾಖ್ಯಾನ.)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಲೋಮಶಮಹರ್ಷಿಯು ಧರ್ಮರಾಯನನ್ನು ಕುರಿತು “ಎಲೈ ಧರ್ಮರಾಯನೆ, ಬಳಿಕ ಅಗಸ್ತ್ಯಮಹರ್ಷಿಯು ದ್ರವ್ಯವನ್ನು ಯಾಚಿಸುವದಕ್ಕೆ ಹೊರಟು ರಾಜಶ್ರೇಷ್ಠನಾದ ಶ್ರುತರ್ವರಾಯನ ಪಟ್ಟಣಕ್ಕೆ ಹೋಗಲು, ಆ ಮಹಾರಾಜನು ಅಗಸ್ತ್ಯರು ಬರುತ್ತಿರುವದನ್ನು ಕೇಳಿ, ಮಂತ್ರಿಗಳೊಡಗೂಡಿ ಪಟ್ಟಣದ ಬಾಗಿಲವರೆಗೂ ಹೋಗಿ, ಆ ಮಹಾತ್ಮರನ್ನು ಕಂಡು ಮರ್ಯಾದೆಯಿಂದ ತನ್ನ ಅರಮನೆಗೆ ಕರೆದುಕೊಂಡು ಬಂದು, ಅರ್ಘ್ಯಪಾದ್ಯಾಚಮನೀಯಗಳಿಂದ ಸತ್ಕರಿಸಿ, ಕೈಮುಗಿದುಕೊಂಡು ‘ಎಲೈ ಮಹಾತ್ಮನೆ, ನೀನು ಏನನ್ನು ಅಪೇಕ್ಷಿಸಿ ಇಲ್ಲಿಗೆ ಬಂದೆ?’ ಎನಲು, ಅಗಸ್ತ್ಯಮಹರ್ಷಿಯು ಆ ರಾಜನನ್ನು ನೋಡಿ ‘ಎಲೈ ಮಹಾರಾಜನೆ, ನಾನು ದ್ರವ್ಯವನ್ನು ಅಪೇಕ್ಷಿಸಿ ನಿನ್ನ ಬಳಿಗೆ ಬಂದಿರುವೆನು. ಪ್ರಜೆಗಳನ್ನು ಬಾಧೆಪಡಿಸದೆ ನಿನ್ನ ಶಕ್ತ್ಯನುಸಾರವಾಗಿ ನನಗೆ ದ್ರವ್ಯವನ್ನು ಕೊಡು’ ಎಂದು ಬೇಡಿದನು. ಆಗ ಶ್ರುತರ್ವರಾಯನು ತನ್ನ ದೇಶದ ಆಯವ್ಯಯಗಳನ್ನು ಅಗಸ್ತ್ಯರಿಗೆ ತಿಳುಹಿಸಿ, ‘ಎಲೈ ಮಹಾತ್ಮನೆ, ನನಗಿರತಕ್ಕ ದ್ರವ್ಯದಲ್ಲಿ ನಿನಗೆ ತೋರಿದಷ್ಟು ತೆಗೆದುಕೊಳ್ಳಬಹುದು’ ಎನಲು, ಸಮಬುದ್ಧಿಯಾದ ಅಗಸ್ತ್ಯನು ಆ ರಾಜನ ದೇಶದಲ್ಲಿ ಆಯವ್ಯಯಗಳು ಸಮವಾಗಿರುವದನ್ನು ತಿಳಿದು, ನಾನು ಈತನ ದ್ರವ್ಯವನ್ನು ತೆಗೆದುಕೊಂಡಪಕ್ಷದಲ್ಲಿ ಪ್ರಜೆಗಳಿಗೆ ತುಂಬಾ ಹಿಂಸೆಯಾಗುವದೆಂದು ಯೋಚಿಸಿ, ಆ ಮಹಾರಾಜನನ್ನೂ ಜೊತೆಯಲ್ಲಿ ಕರೆದುಕೊಂಡು, ಬ್ರಧ್ನಶ್ವಮಹಾರಾಜನ ಸಮೀಪಕ್ಕೆ ಹೊರಟನು. ಆತನು ಇವರು ಬರುವದನ್ನು ಕೇಳಿ ಇವರನ್ನು ಎದುರುಗೊಂಡು ಕರೆದುಕೊಂಡು ಬಂದು ಅರ್ಘ್ಯಪಾದ್ಯಾಚಮನೀಯಗಳಿಂದ ಸತ್ಕರಿಸಿ, ‘ಎಲೈ ಮಹಾತ್ಮರೆ ತಾವು ದಯಮಾಡಿಸಿದ ಕಾರ್ಯವೇನು’ ಎಂದು ಕೇಳಲು, ಅಗಸ್ತ್ಯಮಹರ್ಷಿಯು ‘ಎಲೈ ರಾಯನೆ, ನಾವು ದ್ರವ್ಯಾಪೇಕ್ಷೆಯಿಂದ ಇಲ್ಲಿಗೆ ಬಂದಿರುವೆವು. ಮತ್ತೊಬ್ಬರಿಗೆ ಬಾಧೆಯಿಲ್ಲದಂತೆ ನಿನ್ನ ಶಕ್ತ್ಯನುಸಾರವಾಗಿ ನಮಗೆ ದ್ರವ್ಯವನ್ನುಕೊಡು’ ಎನಲು, ಬ್ರಧ್ನಶ್ವನು ಅವರಿಬ್ಬರಿಗೂ ತನ್ನ ದೇಶದಲ್ಲಿ ಆಯವ್ಯಯಗಳು ಸಮವಾಗಿರುವದನ್ನು ತಿಳುಹಿಸಿ, ‘ಎಲೈ ಮಹಾತ್ಮರೆ, ಇದರಲ್ಲಿ ಉಳಿದದ್ದನ್ನು ನೀವು ತೆಗೆದುಕೊಳ್ಳಬಹುದು’ ಎಂದು ನುಡಿಯಲು, ಆ ಮಾತನ್ನು ಕೇಳಿ ಅಗಸ್ತ್ಯನು ‘ಈತನ ದೇಶದಲ್ಲಿ ಆಯವ್ಯಯಗಳು ಸಮವಾಗಿರುವವು. ನಾವು ಇಲ್ಲಿ ದ್ರವ್ಯವನ್ನು ತೆಗೆದುಕೊಂಡದ್ದೇ ಆದರೆ ಪ್ರಜೆಗಳಿಗೆ ಬಹಳವಾಗಿ ಬಾಧೆಯುಂಟಾಗುವದು’ ಎಂದುಯೋಚಿಸಿ, ಆತನನ್ನೂ ಜೊತೆಯಲ್ಲಿಯೇ ಕರೆದುಕೊಂಡು ಹೊರಟು, ಇಕ್ಷ್ವಾಕುವಂಶದಲ್ಲಿ ಉತ್ಪನ್ನನಾದ ಪುರುಕುತ್ಸರಾಯನ ಮಗನಾದ ತ್ರಸದಸ್ಯುರಾಯನು ಧನಿಕನೆಂದು ತಿಳಿದು, ಆತನ ರಾಜಧಾನಿಗೆ ಹೋಗಲು, ಆತನು ಪಾದ್ಯಾಚಮನೀಯಗಳಿಂದ ಸತ್ಕಾರವನ್ನು ಮಾಡಿ ಅವರನ್ನು ಕುರಿತು ‘ಎಲೈ ಮಹಾತ್ಮರೆ, ಯಾವಕಾರ್ಯವನ್ನು ಉದ್ದೇಶಿಸಿ ಇಲ್ಲಿಗೆ ಬಂದಿರಿ?’ ಎನಲು, ಅಗಸ್ತ್ಯಮಹರ್ಷಿಯು ‘ಎಲೈ ರಾಯನೆ ನಾವು ದ್ರವ್ಯಾಪೇಕ್ಷೆಯಿಂದ ಇಲ್ಲಿಗೆ ಬಂದಿರುವೆವು. ಮತ್ತೊಬ್ಬರಿಗೆ ಬಾಧೆಯಿಲ್ಲದಂತೆ ನಮ್ಮ ಮನೋರಥವನ್ನು ಪೂರಣೆಮಾಡು’ ಎಂದು ನುಡಿದನು. ಅದನ್ನು ಕೇಳಿ ತ್ರಸದಸ್ಯುರಾಯನು ತನ್ನ ರಾಜ್ಯದ ಆಯವ್ಯಯಗಳು ಸಮವಾಗಿರುವದನ್ನು ಅವರಿಗೆ ತಿಳುಹಿಸಿ, ‘ಇದರಲ್ಲಿ ಉಳಿದದ್ದನ್ನು ನೀವು ತೆಗೆದುಕೊಳ್ಳಬಹುದು’ ಎನಲು, ಆ ಮಾತನ್ನು ಕೇಳಿ ಅಗಸ್ತ್ಯನು ‘ಈತನ ರಾಜ್ಯದಲ್ಲಿ ನಾವು ದ್ರವ್ಯವನ್ನು ತೆಗೆದುಕೊಂಡದ್ದೇ ಆದರೆ, ಸರ್ವಥಾ ಪ್ರಜೆಗಳಿಗೆ ಬಾಧೆಯುಂಟಾಗುವದು’ ಎಂದು ತಿಳಿದನು. ಆ ಸಮಯದಲ್ಲಿ ಆ ಮೂರುಮಂದಿ ಅರಸರೂ ಪರಸ್ಪರವಾಗಿ ಆಲೋಚಿಸಿ ಮಹಾತ್ಮನಾದ ಅಗಸ್ತ್ಯನನ್ನು ಕುರಿತು ‘ಎಲೈ ಮಹಾತ್ಮನೆ, ಇಲ್ವಲನೆಂಬ ದಾನವನು ಭೂಮಂಡಲದಲ್ಲಿ ಬಹುಧನಿಕನಾಗಿರುವನು. ಅವನ ಬಳಿಗೆ ಹೋಗಿ ನಾವು ದ್ರವ್ಯವನ್ನು ಬೇಡೋಣ’ ಎಂದು ನುಡಿಯಲು, ಆ ಮಾತು ಅಗಸ್ತ್ಯಮಹರ್ಷಿಗೆ ಸಮ್ಮತವಾದ್ದರಿಂದ ಆ ನಾಲ್ಕುಮಂದಿಯೂ ಕೂಡಿ ಇಲ್ವಲನ ಬಳಿಗೆ ಹೊರಟರು.”

೯೯ನೇ ಅಧ್ಯಾಯ.—ತೀರ್ಥಯಾತ್ರಾಪ್ರಶಂಸೆ—(ಜಾಮದಗ್ನ್ಯತೇಜೋಹಾನಿಕಥನ.)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಲೋಮಶಮಹರ್ಷಿಯು ಧರ್ಮರಾಯನನ್ನು ಕುರಿತು "ಎಲೈ ಧರ್ಮರಾಯನೆ, ಆಗ ಇಲ್ವಲನೆಂಬ ದಾನವನು ಆ ಮೂರುಮಂದಿ ರಾಜರ್ಷಿಗಳೊಡನೆ ಅಗಸ್ತ್ಯರು ತನ್ನ ಪಟ್ಟಣಕ್ಕೆ ಬರುವದನ್ನು ಕೇಳಿ, ತಾನು ಮಂತ್ರಿ ಪುರೋಹಿತರೊಡನೆ ಕೂಡಿ ಪಟ್ಟಣದ ಬಾಗಲಿಗೆ ಹೋಗಿ ಅವರನ್ನು ಎದುರುಗೊಂಡು ತನ್ನ ಅರಮನೆಗೆ ಕರೆದು ಕೊಂಡು ಬಂದು ಅರ್ಘ್ಯಪಾದ್ಯಾದಿಗಳಿಂದ ಸತ್ಕರಿಸಿ, ತನ್ನ ತಮ್ಮನಾದ ವಾತಾಪಿಯನ್ನು ಹೋತನಾಗು ಎಂದು ಹೇಳಿ ಅವನು ಹೋತನಾಗಲು, ಅದರ ಮಾಂಸವನ್ನು ಪಕ್ವಮಾಡಿ ಆ ನಾಲ್ಕುಮಂದಿಯನ್ನೂ ಭೋಜನಕ್ಕೆ ಏಳಿರಿ ಎಂದು ಪ್ರಾರ್ಥಿಸಿದನು. ಆ ಮೂರುಮಂದಿ ರಾಜರ್ಷಿಗಳೂ 'ಹೋತನಾದ ವಾತಾಪಿಯನ್ನು ಪಕ್ವಮಾಡಿ ಅದನ್ನ ನಮಗೆ ಭೋಜನಮಾಡಿಸಿ ನಮ್ಮನ್ನು ಕೊಲ್ಲುವನಲ್ಲಾ!' ಎಂದು ಚಿಂತಾಕ್ರಾಂತರಾಗಿರಲು, ಅದನ್ನು ತಿಳಿದು ಅಗಸ್ತ್ಯಮಹರ್ಷಿಯು ಆ ರಾಜರ್ಷಿಗಳನ್ನು ನೋಡಿ 'ಇದಕ್ಕಾಗಿ ನೀವು ಯಾತಕ್ಕೋಸ್ಕರ ಭಯಪಡುವಿರಿ? ಆ ಮಾಂಸವನ್ನೆಲ್ಲಾ ನಾನೇ ಭಕ್ಷಿಸುವೆನು' ಎಂದು ಹೇಳಿ, ಪೀಠದ ಮೇಲೆ ಕೂತುಕೊಳ್ಳಲು, ಇಲ್ವಲನು ನಸು ನಗುತ ಪಕ್ವಮಾಡಿದ ವಾತಾಪಿಯ ಮಾಂಸವನ್ನೆಲ್ಲಾ ಆತನಿಗೇ ಬಡಿಸಿದನು. ಆಗ ಮಹರ್ಷಿಯಾದ ಅಗಸ್ತ್ಯನು ಆ ಮಾಂಸವನ್ನೆಲ್ಲಾ ಭಕ್ಷಿಸಿದ ಬಳಿಕ ಇಲ್ವಲನು ತನ್ನ ತಮ್ಮನಾದ ವಾತಾಪಿಯನ್ನು 'ಎಲೈ ವಾತಾಪಿಯೇ ಈತನ ಉದರವನ್ನು ಭೇದಿಸಿಕೊಂಡು ಬಾ' ಎಂದು ಕೂಗುತ್ತಿದ್ದನು. ಆಗ ಅಗಸ್ತ್ಯಮಹರ್ಷಿಯ ಹೊಟ್ಟೆಯಿಂದ ಮೇಘದಂತೆ ಗರ್ಜಿಸುತ್ತ ಮಹತ್ತಾದ ಶಬ್ದವುಳ್ಳ ಬಂದು ತೇಗು ಬಂತು. ಇಲ್ವಲನು ಪುನಃಪುನಃ ತನ್ನ ತಮ್ಮನನ್ನು ಹೊರಕ್ಕೆ ಬಾ ಎಂದು ಕರೆಯುತ್ತಿರುವದನ್ನು ನೋಡಿ, ಮಹಾನುಭಾವನಾದ ಅಗಸ್ತ್ಯನು 'ಎಲೈ ಇಲ್ವಲನೆ, ನಿನ್ನ ತಮ್ಮನಾದ ವಾತಾಪಿಯು ನನ್ನ ಜಠರಾಗ್ನಿಯಿಂದ ಜೀರ್ಣಿಸಿ ಹೋದನು. ಇನ್ನು ಅವನಿಗೆ ಹೊರಕ್ಕೆ ಬರ ತಕ್ಕ ಶಕ್ತಿ ಎಲ್ಲಿ ಬಂತು?' ಎಂದು ನುಡಿದನು. ಆಗ ಇಲ್ವಲನು ತನ್ನ ತಮ್ಮನಾದ ವಾತಾಪಿಯು ಆ ಮಹ ರ್ಷಿಯ ಜಠರಾಗ್ನಿಯಿಂದ ಜೀರ್ಣಿಸಿ ಹೋದನೆಂದು ತಿಳಿದು, ಮನಸ್ಸಿನಲ್ಲಿ ಖೇದಪಡುತ್ತ ಕೈಮುಗಿದುಕೊಂಡು 'ಎಲೈ ಮಹಾತ್ಮರೆ, ನೀವು ಯಾವಕಾರ್ಯಕ್ಕೋಸ್ಕರ ಇಲ್ಲಿಗೆ ಬಂದಿರಿ?' ಎಂದು ಕೇಳಲು, ಅಗಸ್ತ್ಯನು ಆ ದಾನವ ನನ್ನು ಕುರಿತು ನಸುನಗುತ 'ಎಲೈ ದಾನವಶ್ರೇಷ್ಠನೆ, ಈ ಲೋಕದಲ್ಲಿ ನೀನೇ ತುಂಬಾ ಧನವುಳ್ಳವನೆಂದು ತಿಳಿದು ದ್ರವ್ಯಾಪೇಕ್ಷೆಯಿಂದ ನಾವು ಬಂದಿರುವೆವು. ನೀನು ನಿನ್ನನ್ನು ಆಶ್ರಯಿಸಿಕೊಂಡಿರುವ ಜನಗಳನ್ನು ಹಿಂಸೆಮಾಡದೆ, ನಿನ್ನ ಶಕ್ತ್ಯನುಸಾರವಾಗಿ ನಮಗೆ ಧನವನ್ನು ಕೊಡು' ಎನಲು, ಅದನ್ನು ಕೇಳಿ ಇಲ್ವಲನು 'ಎಲೈ ಮಹಾತ್ಮನೆ, ನೀನು ಎಷ್ಟು ದ್ರವ್ಯಬೇಕೆಂದು ಅಪೇಕ್ಷಿಸುವೆಯೋ ಅಷ್ಟು ದ್ರವ್ಯವನ್ನೂ ನಾನು ಕೊಡುವೆನು' ಎಂದನು. ಬಳಿಕ ಅಗಸ್ತ್ಯಮಹರ್ಷಿಯು 'ಎಲೈ ದಾನವೇಂದ್ರನೆ, ನನ್ನ ಸಂಗಡ ಬಂದಿರುವ ಈ ಮೂರುಜನ ರಾಜರ್ಷಿಗಳಿಗೂ ಬಂದೊಂದು ಲಕ್ಷ ಗೋವುಗಳನ್ನೂ, ಬಂದೊಂದು ಲಕ್ಷ ಹೊನ್ನುಗಳನ್ನೂ, ನನಗೆ ಅದಕ್ಕೆ ಇಮ್ಮಡಿಯಾಗಿ ಧನ ವನ್ನೂ, ಗೋವುಗಳನ್ನೂ, ಮನೋವೇಗವುಳ್ಳ ಎರಡು ಕುದುರೆಗಳನ್ನು ಕಟ್ಟಿದ ಬಂದು ಸುವರ್ಣರಥವನ್ನೂ ಕೊಡಬೇಕು' ಎನಲು, ಅದಕ್ಕೆ ಆ ದಾನವನು 'ನನ್ನಲ್ಲಿ ಸುವರ್ಣರಥವಿದ್ದಪಕ್ಷದಲ್ಲಿ ಹುಡುಕುತ್ತೇನೆ; ಸಿಕ್ಕಿದರೆ ಅದನ್ನೂ ನೀವು ಕೇಳಿರುವಷ್ಟು ಧನವನ್ನೂ ಗೋವುಗಳನ್ನೂ ಸಹ ನಿಮಗೆ ಕೊಡುವೆನು' ಎಂದು ಹೇಳಿ ತನ್ನ ರಥಶಾಲೆಯಲ್ಲಿ ಹುಡುಕಿಸಲು, ಬಂದು ಸುವರ್ಣರಥವು ಸಿಕ್ಕಿತು. ಅವನ್ನು ತರಿಸಿ ಮನೋವೇಗವುಳ್ಳ ವಿರಾವ ಸುರಾವ ಎಂದು ಹೆಸರುಳ್ಳ ಎರಡು ಕುದರೆಗಳನ್ನು ಕಟ್ಟಿ ಆ ರಥವನ್ನೂ, ಅವರು ಕೇಳಿದಷ್ಟು ಗೋವುಗಳನ್ನೂ, ಧನವನ್ನೂ ಸಹ ದುಃಖಪಡುತ್ತ ಕೊಟ್ಟನು. ಅವುಗಳನ್ನೆಲ್ಲಾ ತೆಗೆದುಕೊಂಡು ಅಗಸ್ತ್ಯನು ಆ ಸುವರ್ಣರಥ ದಮೇಲೆ ಆ ಮೂರುಮಂದಿ ರಾಜರ್ಷಿಗಳನ್ನೂ ಕೂರಿಸಿಕೊಂಡು, ಆ ದ್ರವ್ಯಗಳನ್ನೂ ಇಟ್ಟುಕೊಂಡು ನಿಮಿಷಮಾ ತ್ರದಲ್ಲಿ ತನ್ನ ಆಶ್ರಮಕ್ಕೆ ಬಂದು, ಆ ಮೂರುಜನ ರಾಜರ್ಷಿಗಳಿಗೂ ಅವರವರ ಪಟ್ಟಣಗಳಿಗೆ ಹೋಗುವಂತೆ ಅಪ್ಪಣೆಯನ್ನು ಕೊಟ್ಟು ಕಳುಹಿಸಿ, ತನ್ನ ಭಾರ್ಯೆಯಾದ ಲೋಪಾಮುದ್ರೆಯ ಮನೋರಥವನ್ನು ನೆರವೇರಿಸಿದನು.

ಆಗ ಲೋಪಾಮುದ್ರೆಯು ತನ್ನ ಪತಿಯನ್ನು ನೋಡಿ 'ಮಹಾತ್ಮನೆ, ನನ್ನ ಮನೋರಥವನ್ನು ನೆರವೇರಿ ಸಿದೆ. ಇನ್ನು ನನ್ನಲ್ಲಿ ಬಂದಾವರ್ತಿ ಪರಾಕ್ರಮಶಾಲಿಯಾದ ಪುತ್ರನನ್ನು ಪಡೆ' ಎನಲು, ಅದನ್ನು ಕೇಳಿ ಸಂತು ಷ್ಟನಾದ ಅಗಸ್ತ್ಯನು 'ಎಲೆ ಮಂಗಳಾಂಗಿಯೆ, ನಿನಗೆ ಸಂತಾನವಾಗುವ ವಿಷಯದಲ್ಲಿ ನಾನೊಂದು ಮಾತನ್ನು ಕೇಳುವೆನು ಕೇಳು. ನಿನಗೆ ಬಂದೇಆವರ್ತಿ ಸಾವಿರ ಮಕ್ಕಳನ್ನು ಪಡೆಯಬೇಕೆಂದು ಅಪೇಕ್ಷೆಯಿರುವದೋ, ಅಥವಾ ಸಾವಿರಮಕ್ಕಳ ಪರಾಕ್ರಮವುಳ್ಳ ನೂರುಮಕ್ಕಳನ್ನು ಪಡೆಯಬೇಕೆಂನು ಅಭಿಲಾಷೆಯಿರುವದೋ, ಹಾಗಲ್ಲ ದಿದ್ದರೆ ಅಂಥಾ ನೂರುಜನದ ಬಲವುಳ್ಳ ಹತ್ತುಮಕ್ಕಳನ್ನು ಪಡೆಯಬೇಕೆಂದು ಇಚ್ಛೆಯಿರುವದೋ, ಇಲ್ಲದಿದ್ದರೆ ಸಹಸ್ರಜನಗಳನ್ನು ಜಯಿಸತಕ್ಕ ಒಬ್ಬ ಮಗನನ್ನು ಪಡೆಯಬೇಕೆಂಬ ಅಪೇಕ್ಷೆಯಿರುವದೋ ತಿಳುಹಿಸು' ಎಂದನು. ಆಗ ಲೋಪಾಮುದ್ರೆಯು 'ತಪೋಧನನೆ, ದುಷ್ಟರಾದ ಅನೇಕಜನ ಮಕ್ಕಳಾಗುವದಕ್ಕಿಂತಲೂ ವಿದ್ವಾಂಸನಾ ಗಿಯೂ ಸಾವಿರಜನಗಳ ಶಕ್ತಿಯುಳ್ಳವನಾಗಿಯೂ ಇರುವ ಒಬ್ಬ ಮಗನಾಗುವದೇ ಶ್ರೇಯಸ್ಕರವಾದ್ದರಿಂದ, ಅಂಥ ಒಬ್ಬ ಪುತ್ರನನ್ನೇ ನಾನು ಅಪೇಕ್ಷಿಸುವೆನು' ಎನಲು, ಆ ಮಾತನ್ನು ಕೇಳಿ ಆ ಋಷಿಯು ಹಾಗೇ ಆಗಲೆಂದು, ಒಳ್ಳೇ ಮುಹೂರ್ತದಲ್ಲಿ ಪರಿಶುದ್ಧಳಾದ ತನ್ನ ಭಾರ್ಯೆಯಾದ ಲೋಪಾಮುದ್ರೆಯಲ್ಲಿ ತಾನೂ ಶುದ್ಧಾತ್ಮನಾಗಿ ಗರ್ಭಾ ಧಾನವನ್ನು ಮಾಡಿ, ತಪಸ್ಸುಮಾಡುವದಕ್ಕೋಸ್ಕರ ಅರಣ್ಯಕ್ಕೆ ಹೊರಟುಹೋದನು. ಬಳಿಕ ಆ ಗರ್ಭವು ಏಳು ವರ್ಷದ ವರೆಗೂ ಆಕೆಯ ಉದರದಲ್ಲೇ ಅಭಿವೃದ್ಧಿಯನ್ನು ಹೊಂದಿ, ಎಂಟನೇ ವರ್ಷದಲ್ಲಿ ತನ್ನ ಮಹಾತ್ಮ್ಯ ದಿಂದ ಪ್ರಕಾಶಿಸುತ್ತ ಉತ್ಪನ್ನವಾಯಿತು. ಗರ್ಭದಲ್ಲಿರುವಾಗಲೇ ಆ ಕುಮಾರಕನು ವೇದವೇದಾಂಗಗಳನ್ನೂ ಉಪನಿಷತ್ತುಗಳನ್ನೂ ಅಭ್ಯಾಸಮಾಡಿ ಮಹಾತೇಜಸ್ವಿಯಾಗಿ ಹುಟ್ಟಿದ್ದರಿಂದ, ಆತನಿಗೆ ದೃಢದಸ್ಯು ಎಂಬ ಹೆಸರು ಪ್ರಸಿದ್ಧವಾಯಿತು. ಆತನಿಗೆ ತೇಜಸ್ವಿಯೆಂಬ ಒಬ್ಬ ಮಗನು ಹುಟ್ಟಿದನು. ಆತನು ಬಾಲ್ಯದಲ್ಲೇ ಅಗ್ನಿಹೋತ್ರ ಕ್ಕಾಗಿ ಸಮಿತ್ತುಗಳ ಹೊರೆಯನ್ನು ಹೊತ್ತುಕೊಂಡು ಬರುತ್ತಿದ್ದದ್ದರಿಂದ ಆತನಿಗೆ ಇಧ್ಮವಾಹನೆಂದು ಮತ್ತೊಂದು ಹೆಸರುಂಟಾಯಿತು. ಈಪ್ರಕಾರ ತನ್ನ ಸಂಗತಿಯು ಅಭಿವೃದ್ಧಿಯಾದದ್ದನ್ನು ನೋಡಿ ಅಗಸ್ತ್ಯಮಹರ್ಷಿಯು ಸಂತೋಷಪಡಲು, ಆಗ ಮಹತ್ತಾದ ಹಳ್ಳದಲ್ಲಿ ಜೋಲಾಡುತ್ತಿದ್ದ ಆತನ ಪಿತೃಗಳೆಲ್ಲಾ ಉತ್ತಮವಾದ ಗತಿಯನ್ನು ಪಡೆದರು. ಅದು ಮೊದಲುಗೊಂಡು ಈ ಆಶ್ರಮವು ಅಗಸ್ತ್ಯಾಶ್ರಮವೆಂದು ಪ್ರಸಿದ್ಧಿಯನ್ನು ಹೊಂದಿತು.

ಎಲೈ ಧರ್ಮರಾಯನೆ, ಈರೀತಿಯಾಗಿ ಪ್ರಹ್ಲಾದನ ವಂಶದಲ್ಲಿ ಉತ್ಪನ್ನನಾದ ವಾತಾಪಿಯನ್ನು ಅಗಸ್ತ್ಯಮಹ ರ್ಷಿಯು ನಾಶಮಾಡಿದನು, ಈ ಆಶ್ರಮವು ರಮಣೀಯವಾದದ್ದು. ಇಲ್ಲಿಯೇ ದೇವತೆಗಳಿಂದಲೂ ಗಂಧರ್ವರಿಂದಲೂ ಸೇವಿತಳಾದ ಪುಣ್ಯತಮಳಾದ ಭಾಗೀರಥಿಯು ಗಾಳಿಯಿಂದ ಚಲಿಸುವ ಧ್ವಜಪಟದಂತೆ ಆಕಾಶಮಾರ್ಗದಲ್ಲಿ ಪ್ರಕಾಶಿ ಸುತ್ತ, ಪರ್ವತದ ಶಿಖರದಿಂದ ಬೀಳುತ್ತಿರುವಳು. ಇಲ್ಲಿಂದ ಹಳ್ಳವಾದ ಸ್ಥಳಗಳಲ್ಲಿ ಪ್ರವಹಿಸುತ್ತ, ಅಲ್ಲಲ್ಲೇ ಕಲ್ಲುಗಳ ಕೆಳಗಡೆಯಲ್ಲಿ ನಾಗರಾಜನಾದ ವಾಸುಕಿಯ ಪತ್ನಿಯಂತೆ ಮರೆಯಾಗುತ್ತ, ದಕ್ಷಿಣದಿಕ್ಕಿಗೆ ಹೊರಟು ಆ ದೇಶಗಳನ್ನು ತಾಯಿಯಂತೆ ತನ್ನ ಉದಕದಿಂದ ರಕ್ಷಿಸುತ್ತಿರುವಳು. ಈರೀತಿಯಾಗಿ ಮಹಾದೇವನ ಜಟಾಜೂಟದಿಂದ ಹೊರಟ ಸಮುದ್ರಪತ್ನಿಯಾದ ಭಾಗೀರಥಿಯು ಇಲ್ಲಿ ಪ್ರವಹಿಸುತ್ತಿರುವಳು. ನೀವು ಪುಣ್ಯತಮವಾದ ಈ ನದಿಯಲ್ಲಿ ಸ್ನಾನಮಾಡಿರಿ" ಎಂದನು. ಆಗ ಧರ್ಮರಾಯಾದಿಗಳೆಲ್ಲರೂ ಅದೇಪ್ರಕಾರ ಸ್ನಾನಮಾಡಲು, ಲೋಮಶಮಹರ್ಷಿಯು ಪುನಃ ಧರ್ಮರಾಯನನ್ನು ಕುರಿತು "ಎಲೈ ರಾಯನೆ, ಇಲ್ಲಿರುವ ಭೃಗುತೀರ್ಥವು ಮಹರ್ಷಿಗಳಿಂದ ಸೇವಿತವಾಗಿ, ಮೂರು ಲೋಕದಲ್ಲೂ ಪುಣ್ಯತಮವೆಂದು ಪ್ರಸಿದ್ಧಿಯನ್ನು ಹೊಂದಿರುವದು. ಈ ತೀರ್ಥದಲ್ಲಿ ಸ್ನಾನಮಾಡಿಯೇ ಪರಶುರಾಮನು ಮೊದಲು ದಶರಥರಾಮನು ಅಪಹರಿಸಿದ್ದ ತನ್ನ ತೇಜಸ್ಸನ್ನು ಪುನಃ ಪಡೆದನು. ಹಾಗೆಯೇ ನೀನು ತಮ್ಮಂದಿರಿಂದಲೂ ದ್ರೌಪದಿಯಿಂದಲೂ ಕೂಡಿ ಈ ತೀರ್ಥದಲ್ಲಿ ಸ್ನಾನಮಾಡಿದರೆ, ದುರ್ಯೋಧನನು ಅಪಹರಿಸಿ ರುವ ನಿನ್ನ ತೇಜಸ್ಸನ್ನು ಪುನಃ ಪಡೆಯುವೆ" ಎನಲು, ಆಗ ಧರ್ಮರಾಯನು ತಮ್ಮಂದಿರೊಡನೆಯೂ ದ್ರೌಪದಿಯೊಡನೆಯೂ ಆ ತೀರ್ಥದಲ್ಲಿ ಸ್ನಾನಮಾಡಿ, ಪಿತೃಗಳಿಗೂ ದೇವತೆಗಳಿಗೂ ತರ್ಪಣವನ್ನು ಮಾಡಿದನು. ಆಗ ಆತನ ತೇಜಸ್ಸು ಅಧಿಕವಾಗಿ ಪ್ರಕಾಶಿಸುತ್ತ ಶತ್ರುಗಳಿಗೆ ನೋಡಲಶಕ್ಯವಾಗಿತ್ತು. ಆ ಕಾಲದಲ್ಲಿ ಧರ್ಮರಾ ಯನು ಲೋಮಶನನ್ನು ನೋಡಿ "ಎಲೈ ಮಹಾತ್ಮನೆ, ಪೂರ್ವದಲ್ಲಿ ದಶರಥರಾಮನು ಪರಶುರಾಮನ ತೇಜ

ಸ್ಸನ್ನು ಯಾತಕ್ಕೋಸ್ಕರ ಅಪಹರಿಸಿದನು? ಪರಶುರಾಮನು ಆ ತೇಜಸ್ಸನ್ನು ಪುನಃ ಹ್ಯಾಗೆ ಸಂಪಾದಿಸಿದನು? ಅವನ್ನು ತಿಳುಹಿಸು" ಎಂದು ನುಡಿದನು.

ಬಳಿಕ ಲೋಮಶಮಹರ್ಷಿಯು ಧರ್ಮರಾಯನನ್ನು ಕುರಿತು "ಎಲೈ ರಾಯನೆ, ಮಹಾನುಭಾವನಾದ ಪರಶುರಾಮನ ಕಥೆಯನ್ನು ಹೇಳುವೆನು ಕೇಳು. ಪೂರ್ವದಲ್ಲಿ ಮಹಾವಿಷ್ಣುವು ರಾವಣನನ್ನು ಸಂಹಾರಮಾಡುವದಕ್ಕೋಸ್ಕರ, ಮಹಾತ್ಮನಾದ ದಶರಥರಾಯನಲ್ಲಿ ರಾಮನಾಗಿ ಅವತಾರಮಾಡಿದನು. ಆಗ ಋಚೀಕಮಹರ್ಷಿಯಿಂದ ರೇಣುಕಾಗರ್ಭದಲ್ಲಿ ಹುಟ್ಟಿದ ಭಾರ್ಗವರಾಮನು ಶಿವಧನುರ್ಭಂಗವನ್ನು ಮಾಡಿದ ದಶರಥರಾಮನ ಪರಾಕ್ರಮವನ್ನು ಕೇಳಿ, ಆತನ ಪರಾಕ್ರಮವನ್ನು ಪರೀಕ್ಷಿಸಬೇಕೆಂದು ಕುತೂಹಲಪಡುತ್ತ ಅಯೋಧ್ಯಾನಗರಕ್ಕೆ ಬರಲು, ಅವನ್ನು ಕೇಳಿ ದಶರಥರಾಯನು ಆತನನ್ನು ಎದುರುಗೊಂಡು ಕರೆದುಕೊಂಡುಬರುವದಕ್ಕೋಸ್ಕರ ತನ್ನ ಮಗನಾದ ರಾಮನನ್ನು ಕಳುಹಿಸಲು, ರಾಮನು ಶಸ್ತ್ರಪಾಣಿಯಾಗಿ ಪಟ್ಟಣದಿಂದ ಹೊರಕ್ಕೆ ಬಂದು ನಿಂತನು. ಆತನನ್ನು ಕಂಡು ಭಾರ್ಗವರಾಮನು 'ಎಲೈರಾಜೇಂದ್ರನೆ, ಈ ನನ್ನ ಕೈಯ್ಯಲ್ಲಿರತಕ್ಕ ಧನುಸ್ಸು ಸಕಲ ಕ್ಷತ್ರಿಯರನ್ನೂ ನಾಶಮಾಡಿದ್ದು. ನಿನಗೆ ಸಾಮರ್ಥ್ಯವಿದ್ದರೆ ಈ ಧನುಸ್ಸಿಗೆ ಹೆದೆಯನ್ನೇರಿಸು' ಎನಲು, ಆ ಶ್ರೀರಾಮನು ಆತನನ್ನು ಕುರಿತು 'ಎಲೈ ಭಾರ್ಗವನೆ, ಹೀಗೆ ನೀನು ಪರರಸಂಗಡ ಉದಾಸೀನವಾಗಿ ಮಾತನಾಡಬೇಡ. ನೀನು ನನ್ನನ್ನು ಕೆಲಸಕ್ಕೆಬಾರದ ಕ್ಷತ್ರಿಯನೆಂದು ತಿಳಿಯಬೇಡ. ನಾನು ಬ್ರಾಹ್ಮಣರ ವಿಷಯದಲ್ಲಿ ನಡೆದುಕೊಳ್ಳತಕ್ಕ ಧರ್ಮವನ್ನು ಬಿಡತಕ್ಕವನಲ್ಲ. ಇದರಮೇಲೆ ವಿಶೇಷವಾಗಿ ಇಕ್ಷ್ವಾಕುವಂಶದಲ್ಲಿ ಹುಟ್ಟಿ ಪರಾಕ್ರಮಶಾಲಿಗಳಾದ ನಮ್ಮಂಥವರು ಎಂದಿಗೂ ತಮ್ಮ ಪರಾಕ್ರಮವನ್ನು ಹೇಳಿಕೊಳ್ಳತಕ್ಕವರಲ್ಲ' ಎನಲು, ಅದನ್ನು ಕೇಳಿ ಪರಶುರಾಮನು 'ಎಲೈ ರಾಮನೆ, ಬರೀಮಾತುಗಳಿಂದ ಪ್ರಯೋಜನವೇನು? ಈ ಧನುಸ್ಸನ್ನು ತೆಗೆದುಕೊಂಡು ಹೆದೆಯನ್ನೇರಿಸು' ಎಂದನು. ಆಗ ಶ್ರೀರಾಮನು ರೋಷಾವೇಶದಿಂದ ಭಾರ್ಗವರಾಮನ ಹಸ್ತದಲ್ಲಿದ್ದ ಆ ಘೋರವಾದ ಧನುಸ್ಸನ್ನು ತೆಗೆದುಕೊಂಡು ಲೀಲೆಯಿಂದ ಹೆದೆಯನ್ನೇರಿಸಿ, ನಸುನಗುತ ಧನುಷ್ಟಂಕಾರವನ್ನು ಮಾಡಿದನು. ಆಗ ಸಿಡಿಲಿನ ಶಬ್ದದಂತೆ ಕೇಳಿಸುತ್ತಿರುವ ಆ ಶಬ್ದವನ್ನು ಕೇಳಿ ಸಕಲ ಪ್ರಾಣಿಗಳೂ ಭಯಪಟ್ಟವು. ಬಳಿಕ ರಾಮನು 'ಎಲೈ ಭಾರ್ಗವರಾಮನೆ, ಈ ಧನುಸ್ಸಿಗೆ ಹೆದೆಯನ್ನೇರಿಸಿರುವೆನು. ಮುಂದೆ ಮಾಡತಕ್ಕದ್ದೇನು" ಎನಲು, ಭಾರ್ಗವರಾಮನು 'ಎಲೈ ರಾಮನೆ ಈ ದಿವ್ಯವಾದ ಬಾಣವನ್ನು ಈ ಧನುಸ್ಸಿನಲ್ಲಾರೋಪಿಸಿ ಆಕರ್ಣಾಂತವಾಗಿ ಸೆಳೆ' ಎಂದನು. ಶ್ರೀರಾಮನು 'ಎಲೈ ಭಾರ್ಗವನೆ, ನಿನ್ನನ್ನು ನೋಡಿದರೆ ಬಹಳ ಅಹಂಕಾರಯುಕ್ತನಾಗಿರುವಹಾಗೆ ತೋರುವದು. ನೀನು ಅಹಂಕಾರಿಯಾದವನೆಂದು ನಾನು ಕೇಳಿಯೂ ಇರುವೆನು. ಆದರೂ ಈಗ ಕ್ಷಮಿಸಿರುವೆನು. ನೀನು ಕ್ಷತ್ರಿಯರನ್ನು ವಿಶೇಷವಾಗಿ ಜಯಿಸಿರತಕ್ಕವನೆಂದು ತಿಳಿದುಕೊಂಡಿರುವೆ. ಆದರೆ ಅದೆಲ್ಲವೂ ಬ್ರಹ್ಮದೇವನ ಅನುಗ್ರಹಬಲದಿಂದ ನಡದದ್ದೇಹೊರತು ನಿನ್ನ ಸಾಮರ್ಥ್ಯದಿಂದೇನೂ ಅಲ್ಲ. ಇಷ್ಟುಮಾತ್ರಕ್ಕೆ ನಿನಗೆ ಬಹಳ ಅಹಂಕಾರವುಂಟಾಗಿರುವದು. ಈಗ ನಿನಗೆ ನಾನು ದಿವ್ಯಚಕ್ಷುಸ್ಸನ್ನು ಕೊಡುತ್ತೇನೆ. ಅದರಿಂದ ನೀನು ನನ್ನ ನಿಜಸ್ವರೂಪವನ್ನು ನೋಡಿಕೊ' ಎಂದು ಆತನಿಗೆ ದಿವ್ಯಚಕ್ಷುಸ್ಸನ್ನು ಕೊಟ್ಟನು. ಆಗ ಶ್ರೀರಾಮನ ಶರೀರದಲ್ಲಿ ದ್ವಾದಶಾದಿತ್ಯರೂ, ಅಷ್ಟವಸುಗಳೂ, ಏಕಾದಶರುದ್ರರೂ, ಸಾಧ್ಯರೂ, ಏಕೋನಪಂಚಾಶನ್ಮರುತ್ತುಗಳೂ, ಪಿತೃದೇವತೆಗಳೂ, ಯಜ್ಞಪುರುಷನೂ, ನಕ್ಷತ್ರಗಳೂ, ನವಗ್ರಹಗಳೂ, ಗಂಧರ್ವರೂ, ಯಕ್ಷರೂ, ರಾಕ್ಷಸರೂ; ಪುಣ್ಯತಮ್ಮವಾದ ನದಿಗಳೂ, ತೀರ್ಥಗಳೂ, ಬ್ರಹ್ಮಜ್ಞಾನಿಗಳಾದ ಸನಾತನರಾದ ವಾಲಿಖಿಲ್ಯ ಮೊದಲಾದ ಋಷಿಗಳೂ, ನಾರದ ಮೊದಲಾದ ದೇವಋಷಿಗಳೂ, ಸಮುದ್ರಗಳೂ, ಪರ್ವತಗಳೂ, ವೇದಗಳೂ, ಉಪನಿಷತ್ತುಗಳೂ, ವಷಟ್ಕಾರಸಹಿತವಾದ ಯಜ್ಞಗಳೂ, ಸಚೇತನವಾದ ಸಾಮಗಳೂ, ಸಾಂಗೋಪಾಂಗವಾದ ಧನುರ್ವೇದವೂ, ಮೇಘಗಳೂ, ವೃಷ್ಟಿಯೂ, ಮಿಂಚುಗಳೂ, ಸಹ ಇರುವಂತೆ ಭಾರ್ಗವರಾಮನ ಕಣ್ಣಿಗೆ ಕಾಣಿಸಿದವು. ಆ ಸಮಯದಲ್ಲಿ ಷಡ್ಗುಣೈಶ್ವರ್ಯಸಂಪನ್ನನಾದ ಮಹಾವಿಷ್ಣುವಾದ ಶ್ರೀರಾಮನು ಆ ಧನುಸ್ಸಿನಲ್ಲಿ ಸಂಧಾನ ಮಾಡಿದ್ದ ಆ ಬಾಣವನ್ನು ಭಾರ್ಗವರಾಮನಮೇಲೆ ಪ್ರಯೋಗಿಸಲು, ಬರಸಿಡಿಲುಗಳೂ ಕೊಳ್ಳೀಮಳೆಯೂ

ಧೂಳಿನ ಮಳೆಯೂ ಮಹತ್ತಾದ ನೀರಿನ ಮಳೆಯೂ ಉಂಟಾಗಿ, ಘೋರವಾದ ಸಿಡಿಲಿನ ಶಬ್ದದೊಡನೆ ಭೂಮಿಯು ಕಂಪಿಸಲು, ಆ ಬಾಣವು ಭಾರ್ಗವರಾಮನನ್ನು ಮೂರ್ಛೆಗೆಡಹಿ ಆತನ ತೇಜಸ್ಸನ್ನೆಲ್ಲಾ ಆಕರ್ಷಣೆಮಾಡಿಬಿಟ್ಟಿತು. ಬಳಿಕ ಭಾರ್ಗವರಾಮನು ಸ್ವಲ್ಪಹೊತ್ತಿನಮೇಲೆ ಮೂರ್ಛೆತಿಳಿದು ಚೇತನವನ್ನು ಹೊಂದಿ, ವಿಷ್ಣುಸ್ವರೂಪನಾದ ಶ್ರೀರಾಮನಿಗೆ ನಮಸ್ಕಾರಮಾಡಿ, ಲಜ್ಜೆಯಿಂದಲೂ ಭಯದಿಂದಲೂ ಕೂಡಿ ಶ್ರೀರಾಮನ ಅಜ್ಞೆಯನ್ನು ಪಡೆದುಕೊಂಡು ಮಹೇಂದ್ರಪರ್ವತಕ್ಕೆ ಹೋಗಿ ತಪಸ್ಸುಮಾಡುತ್ತಿದ್ದನು. ಹೀಗೆ ಒಂದು ವರ್ಷ ಕಳೆಯಲು, ತೇಜಸ್ಸು ನಷ್ಟವಾಗಿ ಮದವೆಲ್ಲಾ ಅಡಗಿ ದುಃಖಪಡುತ್ತಿರುವ ಆ ಭಾರ್ಗವರಾಮನನ್ನು ನೋಡಿ ಆತನ ಪಿತೃಗಳೆಲ್ಲರೂ 'ಎಲೈ ಭಾರ್ಗವನೆ, ಮಹಾವಿಷ್ಣುವಾದ ರಾಮನು ಮೂರು ಲೋಕದಲ್ಲೂ ಪೂಜ್ಯನಾದವನು. ಅಂಥವನ ಸಂಗಡ ನೀನು ಹೋರಾಡಿದ್ದು ಅನುಚಿತ. ಈಗ ನೀನು ವಧೂಸರವೆಂಬ ಪುಣ್ಯನದಿಗೆ ಹೋಗಿ ಅಲ್ಲಿ ಸ್ನಾನಮಾಡಿದ್ದೇ ಆದರೆ ಪುನಃ ನಿನ್ನ ತೇಜಸ್ಸು ನಿನಗೆ ಬರುವದು. ಆ ಪ್ರದೇಶದಲ್ಲಿ ದೀಪ್ತೋದವೆಂಬ ತೀರ್ಥವಿರುವದು. ಆ ತೀರ್ಥದಲ್ಲಿ ನಿಮ್ಮ ಪ್ರಪಿತಾಮಹನಾದ ಭೃಗುಋಷಿಯು ಕೃತಯುಗದಲ್ಲಿ ಉತ್ತಮವಾದ ತಪಸ್ಸನ್ನು ಮಾಡಿರುವನು' ಎನಲು, ಭಾರ್ಗವನು ಅದೇಪ್ರಕಾರ ಈ ಪ್ರದೇಶದಲ್ಲಿರುವ ವಧೂಸರಸ್ಸೆಂಬ ನದಿಗೆ ಬಂದು ಸ್ನಾನಮಾಡಿ ಪುನಃ ತನ್ನ ತೇಜಸ್ಸನ್ನು ಪಡೆದನು. ಎಲೈ ಧರ್ಮರಾಯನೆ, ಈಪ್ರಕಾರ ಭಾರ್ಗವರಾಮನು ಶ್ರೀರಾಮನ ಸಂಗಡ ಕಲಹವನ್ನು ಮಾಡಿ ತನ್ನ ತೇಜಸ್ಸನ್ನು ಕಳೆದುಕೊಂಡು, ಈ ತೀರ್ಥದ ಮಹಿಮೆಯಿಂದ ಅದನ್ನು ಪುನಃ ಸಂಪಾದಿಸಿದನು." ಎಂದು ಲೋಮಶಮಹರ್ಷಿಯು ಧರ್ಮರಾಯನಿಗೆ ಹೇಳಿದನು.

---

## ೧೦೧ನೇ ಅಧ್ಯಾಯ.—ತೀರ್ಥಯಾತ್ರಾಪ್ರಶಂಸೆ—(ವಜ್ರಾಯುಧನಿರ್ಮಾಣಕಥನ.)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಬಳಿಕ ಧರ್ಮರಾಯನು ಲೋಮಶಮಹರ್ಷಿಯನ್ನು ನೋಡಿ "ಎಲೈ ಮಹಾತ್ಮನೆ, ಮಹಾನುಭಾವನಾದ ಆ ಅಗಸ್ತ್ಯಮಹರ್ಷಿಯ ಚರಿತ್ರೆಯನ್ನು ಇನ್ನೂ ವಿಸ್ತಾರವಾಗಿ ಕೇಳಲಿಚ್ಛಯಿಸುವೆನು. ಅದನ್ನು ತಿಳುಹಿಸು" ಎನಲು, ಲೋಮಶನು "ಎಲೈ ರಾಯನೆ, ಮಹಾತೇಜಸ್ವಿಯಾದ ಅಗಸ್ತ್ಯಮಹರ್ಷಿಯ ಅದ್ಭುತವಾದ ಚರಿತ್ರೆಯನ್ನು ವಿವರಿಸುವೆನು ಕೇಳು. ಕೃತಯುಗದಲ್ಲಿ ಘೋರರಾಗಿಯೂ ಯುದ್ಧದಲ್ಲಿ ಸಮರ್ಥರಾಗಿಯೂ ಇದ್ದ ಕಾಲೇಯರೆಂಬ ದಾನವರು ಅನೇಕಪ್ರಕಾರವಾದ ಆಯುಧಗಳನ್ನು ಹಿಡಿದುಕೊಂಡು, ವೃತ್ರಾಸುರನನ್ನು ಆಶ್ರಯಿಸಿಕೊಂಡು, ಇಂದ್ರಾದಿದೇವತೆಗಳಮೇಲೆ ದಂಡೆತ್ತಿಬಂದರು. ಆಗ ಸಕಲರಾದ ದೇವತೆಗಳೂ ಇಂದ್ರನನ್ನು ಮುಂದಿಟ್ಟುಕೊಂಡು, ವೃತ್ರಾಸುರನ ಸಂಹಾರಾರ್ಥವಾಗಿ ಪ್ರಯತ್ನವನ್ನು ಪಡುತ್ತ ಬ್ರಹ್ಮದೇವನ ಸನ್ನಿಧಿಗೆ ಹೋಗಿ ಕೈಮುಗಿದುಕೊಂಡು ನಿಲ್ಲಲು, ಅದನ್ನು ನೋಡಿ ಚತುರ್ಮುಖಬ್ರಹ್ಮನು 'ಎಲೈ ದೇವತೆಗಳಿರಾ, ನೀವು ಯೋಚಿಸಿಕೊಂಡು ಬಂದ ಕಾರ್ಯವು ನನಗೆ ಗೊತ್ತಾಯಿತು. ವೃತ್ರಾಸುರನನ್ನು ಸಂಹಾರಮಾಡುವದಕ್ಕೆ ಒಂದು ಉಪಾಯವನ್ನು ಹೇಳುತ್ತೇನೆ ಕೇಳಿರಿ. ಭೂಲೋಕದಲ್ಲಿ ಮಹಾತ್ಮನಾಗಿಯೂ ಲೋಕಪ್ರಸಿದ್ಧವಾದ ದಾತೃತ್ವವುಳ್ಳವನಾಗಿಯೂ ಇರುವ ದಧೀಚನೆಂಬ ಋಷಿಯಿರುವನು. ಆತನ ಬಳಿಗೆ ನೀವೆಲ್ಲರೂ ಹೋಗಿ ಮೂರು ಲೋಕಕ್ಕೂ ಹಿತವಾಗುವದಕ್ಕೋಸ್ಕರ ಆತನ ಶರೀರದ ಮೂಳೆಗಳನ್ನು ಯಾಚಿಸಿರಿ. ಆ ಧರ್ಮಾತ್ಮನು ನಿಮ್ಮ ಪ್ರಾರ್ಥನೆಗೆ ಸಂತೋಷಪಟ್ಟು ತನ್ನ ಶರೀರವನ್ನು ಬಿಟ್ಟು, ಅದರಲ್ಲಿರುವ ಮೂಳೆಗಳನ್ನೆಲ್ಲಾ ನಿಮಗೆ ಕೊಡುವನು. ಆ ಮೂಳೆಗಳಿಂದ ನೀವು ಘೋರವಾಗಿಯೂ, ಮಹತ್ತಾಗಿಯೂ, ಶತ್ರುನಾಶಕವಾಗಿಯೂ, ಆರು ಮೂಲೆಗಳುಳ್ಳದ್ದಾಗಿಯೂ, ಭಯಂಕರವಾದ ಧ್ವನಿಯುಳ್ಳದ್ದಾಗಿಯೂ, ದೃಢವಾಗಿಯೂ ಇರತಕ್ಕ ವಜ್ರಾಯುಧವನ್ನು ನಿರ್ಮಾಣಮಾಡಿಕೊಳ್ಳಿರಿ. ಅದರಿಂದ ಇಂದ್ರನು ವೃತ್ರಾಸುರನನ್ನು ಸಂಹರಿಸಲು ಶಕ್ತನಾಗುವನು. ಈ ಉಪಾಯದಿಂದಲೆ ವೃತ್ರಾಸುರನನ್ನು ಸಂಹರಿಸತಕ್ಕದ್ದು. ಇನ್ನು ಜಾಗ್ರತೆಯಾಗಿ ದಧೀಚಋಷಿಯನ್ನು ಕಾಣಿರಿ' ಎನಲು, ದೇವತೆಗಳೆಲ್ಲರೂ ವಿಷ್ಣುವನ್ನು ಮುಂದೆಮಾಡಿಕೊಂಡು ಸರಸ್ವತೀನದಿಯ ಆಚೇದಡದಲ್ಲಿರುವ ದಧೀಚ

ಋಷಿಯ ಆಶ್ರಮಕ್ಕೆ ತೆರಳಿದರು. ಆ ಆಶ್ರಮವು ಅನೇಕವಿಧವಾದ ವೃಕ್ಷಗಳಿಂದಲೂ ಲತೆಗಳಿಂದಲೂ ಶೋಭಿತವಾಗಿಯೂ, ಭ್ರಮರಗಳ ಝುಂಕಾರದಿಂದಲೂ ಬಗೆಬಗೆಯಾದ ಪಕ್ಷಿಗಳ ಧ್ವನಿಗಳಿಂದಲೂ ಗಂಡುಕೋಗಿಲೆಗಳ ಪಂಚಮಸ್ವರಗಾನದಿಂದಲೂ ಚಕೋರಪಕ್ಷಿಗಳ ಮೃದುಮಧುರವಾದ ಶಬ್ದದಿಂದಲೂ ಪೂರ್ಣವಾಗಿಯೂ, ಇತ್ತು ; ಅದು ಹುಲಿಯ ಭಯವಿಲ್ಲದೆ ಇರತಕ್ಕ ಕಾಡುಕೋಣಗಳಿಂದಲೂ, ಕಾಡುಹಸುಗಳಿಂದಲೂ, ಚಮರೀಮೃಗಗಳಿಂದಲೂ, ಕಾಡುಹಂದಿಗಳಿಂದಲೂ, ಮದಿಸಿ ಸರೋವರಗಳಲ್ಲಿ ವಿಹರಿಸುತ್ತಿರುವ ಗಂಡಾನೆಗಳಿಂದಲೂ, ಮತ್ತು ಸಿಂಹ ವ್ಯಾಘ್ರ ಮೊದಲಾದ ಮಹಾಮೃಗಗಳ ಮಹತ್ತಾದ ಧ್ವನಿಗಳುಳ್ಳ ಪರ್ವತದ ಗುಹೆಗಳಲ್ಲಿ ವಾಸಮಾಡುವ ಅನೇಕ ವಿಧವಾದ ಇತರ ಮೃಗಗಳಿಂದಲೂ, ಕಂಗೊಳಿಸುತ್ತ ಸ್ವರ್ಗಲೋಕಕ್ಕೆ ಸಮಾನವಾಗಿ ಪ್ರಕಾಶಿಸುತ್ತಿತ್ತು. ಆ ಆಶ್ರಮದಲ್ಲಿ ಬ್ರಹ್ಮತೇಜಸ್ಸಿನಿಂದ ಪ್ರಕಾಶಮಾನನಾದ ಬ್ರಹ್ಮದೇವನಂತೆ ಶರೀರಕಾಂತಿಯಿಂದ ಪ್ರಕಾಶಿಸುತ್ತ, ಸೂರ್ಯನೋಪಾದಿಯಲ್ಲಿರುವ ಮಹಾನುಭಾವನಾದ ದಧೀಚಮಹರ್ಷಿಯನ್ನು ಕಂಡು, ದೇವತೆಗಳೆಲ್ಲರೂ ಆತನಿಗೆ ಸಾಷ್ಟಾಂಗನಮಸ್ಕಾರವನ್ನು ಮಾಡಿ, ಬ್ರಹ್ಮನು ಹೇಳಿದಂತೆ ಆತನ ಶರೀರದ ಮೂಳೆಗಳನ್ನು ಬೇಡಿದರು. ಆಗ ದಧೀಚಮಹರ್ಷಿಯು ಸಂತೋಷಪಟ್ಟು ದೇವತೆಗಳನ್ನು ಕುರಿತು 'ಎಲೈ ದೇವತೆಗಳಿರಾ, ನಿಮಗೆ ಹಿತವಾಗುವದಕೋಸ್ಕರ ನಾನು ನನ್ನ ಶರೀರವನ್ನು ತ್ಯಜಿಸುವೆನು' ಎಂದು ಹೇಳಿ, ಸ್ವೇಚ್ಛೆಯಿಂದ ಪ್ರಾಣವನ್ನು ಬಿಟ್ಟನು. ಬಳಿಕ ಸಕಲದೇವತೆಗಳೂ ಮೃತನಾದ ಆ ಮಹರ್ಷಿಯ ಶರೀರದಲ್ಲಿದ್ದ ಎಲ್ಲಾ ಮೂಳೆಗಳನ್ನೂ ಬ್ರಹ್ಮದೇವನು ಹೇಳಿದಂತೆ ತೆಗೆದುಕೊಂಡು ತಮಗೆ ಶತ್ರುಜಯವಾಗುವದೆಂದು ಸಂತೋಷಪಡುತ್ತ, ದೇವತೆಗಳಿಗೆ ಬಡಗಿಯಾದ ತ್ವಷ್ಟೃವಿನ ಬಳಿಗೆ ಬಂದು, ಈ ಮೂಳೆಗಳಿಂದ ನಮಗೆ ವಜ್ರಾಯುಧವನ್ನು ಮಾಡಿಕೊಡೆಂದು ಕೇಳಿದರು. ಆಗ ಕಾರ್ಯದಲ್ಲಿ ನಿಪುಣನಾದ ತ್ವಷ್ಟೃವು ಸಂತೋಷಪಟ್ಟು, ಆ ಮೂಳೆಗಳಿಂದ ತೀಕ್ಷ್ಣವಾದ ವಜ್ರಾಯುಧವನ್ನು ನಿರ್ಮಾಣಮಾಡಿ ಇಂದ್ರನನ್ನು ಕುರಿತು 'ಎಲೈ ದೇವೇಂದ್ರನೆ, ಶ್ರೇಷ್ಠವಾದ ಈ ವಜ್ರಾಯುಧದಿಂದ ಕ್ರೂರನೂ ದೇವಶತ್ರುವೂ ಆದ ವೃತ್ರಾಸುರನನ್ನು ಸಂಹರಿಸಿ ನಿಷ್ಕಂಟಕವಾಗಿ ದೇವಲೋಕವನ್ನು ಸುಖವಾಗಿ ಆಳು' ಎಂದು ನುಡಿದು ಆ ವಜ್ರಾಯುಧವನ್ನು ಇಂದ್ರನಿಗೆ ಕೊಡಲು, ಇಂದ್ರನು ಅದನ್ನು ನೇಮದಿಂದ ಸ್ವೀಕರಿಸಿದನು."

## ೧೦೧ನೇ ಅಧ್ಯಾಯ.—ತೀರ್ಥಯಾತ್ರಾಪ್ರಶಂಸೆ—(ವೃತ್ರಾಸುರವಧೋಪಾಖ್ಯಾನ.)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಆ ಬಳಿಕ ಲೋಮಶಮಹರ್ಷಿಯು ಧರ್ಮರಾಯನನ್ನು ಕುರಿತು "ಎಲೈ ರಾಯನೆ, ಅನಂತರ ಬಲಿಷ್ಠರಾದ ದೇವತೆಗಳಿಂದ ರಕ್ಷಿತನೂ ವಜ್ರಪಾಣಿಯೂ ಆದ ಇಂದ್ರನು, ಆಯುಧಗಳನ್ನು ಎತ್ತಿ ಹಿಡಿದುಕೊಂಡು ಶಿಖರಗಳೊಡಗೂಡಿದ ಪರ್ವತಗಳಂತೆ ತೋರುವ ಮಹತ್ತಾದ ಶರೀರವುಳ್ಳ ಕಾಲೇಯರೆಂಬ ದೈತ್ಯರಿಂದ ಸುತ್ತಲೂ ರಕ್ಷಿಸಲ್ಪಟ್ಟು ಭೂಮ್ಯಾಕಾಶಗಳನ್ನು ಆವರಿಸಿಕೊಂಡು ನಿಂತಿದ್ದ ವೃತ್ರಾಸುರನ ಬಳಿಗೆ ಹೋಗಲು, ದೈತ್ಯರಿಗೂ ದೇವತೆಗಳಿಗೂ ಬಂದು ಮುಹೂರ್ತಕಾಲ ಘೋರವಾದ ಯುದ್ಧವು ಆಯಿತು. ಆ ಯುದ್ಧದಲ್ಲಿ ವೀರಭಟರು ಪರಸ್ಪರವಾಗಿ ಖಡ್ಗಗಳಿಂದ ಹೊಡೆದಾಡುವಾಗ, ಒಂದಕ್ಕೊಂದು ತಗಲಿ ಪುಡಿಪುಡಿಯಾದ ಆ ಖಡ್ಗಗಳ ಶಬ್ದವು ಮಹಾಘೋರವಾಗಿತ್ತು. ಆ ಕಾಲದಲ್ಲಿ ಕತ್ತಿಗಳಿಂದ ಕತ್ತರಿಸಲ್ಪಟ್ಟ ವೀರಭಟರ ತಲೆಗಳು ತೊಟ್ಟು ಕಳಚಿ ಬೀಳುವ ತಿಲೀಮರದ ಹಣ್ಣುಗಳಂತೆ ಕೆಳಕ್ಕೆ ಬೀಳುತ್ತಿದ್ದವು. ಸುವರ್ಣಕವಚಗಳನ್ನು ತೊಟ್ಟು ಕಾಡುಕಿಚ್ಚು ಹತ್ತಿದ ಪರ್ವತದಂತೆ ಕಾಣಿಸುತ್ತಿದ್ದ ಕಾಲೇಯರು ಗದಾಯುಧಗಳಿಂದ ದೇವತೆಗಳನ್ನು ಬಹಳವಾಗಿ ಹೊಡೆಯಲು, ಆ ಪೆಟ್ಟುಗಳನ್ನೂ, ಅಹಂಕಾರದಿಂದ ಯುದ್ಧರಂಗದಲ್ಲಿ ಮೇಲೆ ಬಂದು ಬೀಳುವ ದೈತ್ಯರ ವೇಗವನ್ನೂ, ಸೈಸಲಾರದೆ ದೇವತೆಗಳು ಭಯಪಟ್ಟು ಪಲಾಯನವನ್ನು ಮಾಡಿದರು. ಅದನ್ನು ನೋಡಿ ಇಂದ್ರನು ಭಯಪಟ್ಟು ವೃತ್ರಾಸುರನ ಪರಾಕ್ರಮವು ಹೆಚ್ಚುವದನ್ನು ಕಂಡು, ಮನಸ್ಸಿನಲ್ಲಿ ಬಹಳ ಚಿಂತೆಯನ್ನು ಹೊಂದಿ, ಜಗನ್ನಾಥನಾದ ನಾರಾಯಣನಿಗೆ ಶರಣಾಗತನಾದನು. ಆ ಸಮಯದಲ್ಲಿ ಪುರಾಣಪುರುಷನಾದ ಮಹಾವಿಷ್ಣುವು

ಕಾಲೇಯರಿಂದ ಭಯಪಟ್ಟು ಚಿಂತಾಕ್ರಾಂತನಾದ ಇಂದ್ರನನ್ನು ನೋಡಿ, ಆತನಲ್ಲಿ ತನ್ನ ತೇಜಸ್ಸನ್ನಿಟ್ಟು, ಆತನಿಗೆ ಪರಾಕ್ರಮವು ಹೆಚ್ಚುವಂತೆ ಮಾಡಿದನು. ಅದನ್ನು ತಿಳಿದು ಸಮಸ್ತರಾದ ದೇವತೆಗಳೂ ಮಹಾತ್ಮರಾದ ಬ್ರಹ್ಮರ್ಷಿಗಳೂ ಸಹ ತಮ್ಮತಮ್ಮ ತೇಜಸ್ಸನ್ನೂ ಸಹ ಇಂದ್ರನಲ್ಲಿಟ್ಟರು. ಆಗ ಮಹೇಂದ್ರನು ಮಹಾವಿಷ್ಣುವಿನ ತೇಜಸ್ಸಿನಿಂದಲೂ ದೇವತೆಗಳ ತೇಜಸ್ಸಿನಿಂದಲೂ ಬ್ರಹ್ಮರ್ಷಿಗಳ ತೇಜಸ್ಸಿನಿಂದಲೂ ಸಹ ಅಧಿಕವಾದ ಪ್ರತಾಪವನ್ನು ಪಡೆದನು. ಅದನ್ನು ತಿಳಿದು ವೃತ್ರಾಸುರನು ಮಹತ್ತಾದ ಸಿಂಹನಾದವನ್ನು ಮಾಡಿದನು. ಆ ಶಬ್ದದಿಂದ ಭೂಮಿಯೂ ಸ್ವರ್ಗವೂ ದಿಕ್ಕುಗಳೂ ಆಕಾಶವೂ ಪರ್ವತಗಳೂ ಸಹ ನಡುಗಿಹೋದವು. ಭಯಂಕರವಾದ ಆ ಮಹಾಶಬ್ದವನ್ನು ಕೇಳಿ, ದೇವೇಂದ್ರನು ಭಯಪಟ್ಟು ತನ್ನ ಕೈಯಲ್ಲಿದ್ದ ವಜ್ರಾಯುಧವನ್ನು ಜಾಗ್ರತೆಯಾಗಿ ವೃತ್ರಾಸುರನ ಸಂಹಾರಾರ್ಥವಾಗಿ ಅವನ ಮೇಲೆ ಪ್ರಯೋಗಿಸಲು, ಸುವರ್ಣಮಾಲಿಕೆಯನ್ನು ಧರಿಸಿದ್ದ ಮಹಾಬಲಶಾಲಿಯಾದ ವೃತ್ರಾಸುರನು ಆ ವಜ್ರಾಯುಧದ ಪೆಟ್ಟುತಿಂದು, ಪೂರ್ವದಲ್ಲಿ ಮಹಾವಿಷ್ಣುವಿನ ಕೈಯಿಂದ ಕೆಳಕ್ಕೆ ಬಿಡಲ್ಪಟ್ಟ ಮಂದರಪರ್ವತದಂತೆ ಕೆಳಕ್ಕೆ ಬಿದ್ದು ಹತನಾಗಿಹೋದನು. ಬಳಿಕ ಹತನಾಗಿ ಬಿದ್ದಿದ್ದರೂ, ಆ ವೃತ್ರಾಸುರನನ್ನು ನೋಡಿ ಭಯಪಟ್ಟು, ಇಂದ್ರನು ಭ್ರಾಂತನಾಗಿ ಅವನು ಇನ್ನೂ ಬದುಕಿರುವನೆಂದೇ ತಿಳಿದುಕೊಂಡು, ತನ್ನ ಕೈಯಲ್ಲಿದ್ದ ವಜ್ರಾಯುಧವು ಕೆಳಕ್ಕೆ ಬಿದ್ದದ್ದನ್ನೂ ತಿಳಿಯದೆ, ಒಂದು ಸರೋವರದಲ್ಲಿ ಅಡಗಿಕೊಳ್ಳುವದಕ್ಕೋಸ್ಕರ ಓಡಿಹೋದನು. ಆಗ ವೃತ್ರಾಸುರನು ಇಂದ್ರನಿಂದ ಹತನಾದದ್ದನ್ನು ನೋಡಿ ಸಕಲರಾದ ದೇವತೆಗಳೂ ಮಹರ್ಷಿಗಳೂ ಸಹ ಸಂತುಷ್ಟರಾಗಿ ಇಂದ್ರನನ್ನು ಬಹಳವಾಗಿ ಹೊಗಳಿದರು. ಬಳಿಕ ದೇವತೆಗಳು ಹತಶೇಷರಾಗಿ ಭಯಪಟ್ಟು ಓಡಿಹೋಗತಕ್ಕ ದೈತ್ಯರೆಲ್ಲರನ್ನೂ ಸಂಹಾರಮಾಡುತ್ತಿರಲು, ಅವರೆಲ್ಲರೂ ಭಯಗ್ರಸ್ತರಾಗಿ ಅನೇಕ ಜಲಚರಪ್ರಾಣಿಗಳಿಂದ ಭಯಂಕರವಾದ ಸಮುದ್ರವನ್ನು ಹೊಕ್ಕು, ಮೂರು ಲೋಕವನ್ನೂ ನಾಶಮಾಡಬೇಕೆಂದು ಯೋಚಿಸಿ ಮಂತ್ರಾಲೋಚನೆಯನ್ನು ಮಾಡುತ್ತಿರಲು, ಅವರಲ್ಲಿ ಕೆಲವರು ಕೆಲಕೆಲವು ಉಪಾಯಗಳನ್ನು ಹೇಳುತ್ತಿರುವಾಗ, ಕಾಲಯೋಗದಿಂದ ಅವರೆಲ್ಲರೂ ಕ್ರೂರಬುದ್ಧಿಗಳಾಗಿ 'ಋಷಿಗಳ ತಪೋಮಹಿಮೆಯಿಂದಲೂ ಅವರ ವಿದ್ಯಾಬಲದಿಂದಲೂ ಜಗತ್ತು ಕ್ಷೇಮವಾಗಿರುವದರಿಂದ, ಈ ಭೂಮಿಯಲ್ಲಿ ಧರ್ಮಜ್ಞರಾಗಿಯೂ ವೇದವೇದಾಂಗಪಾರಂಗತರಾಗಿಯೂ ತಪಸ್ವಿಗಳಾಗಿಯೂ ಇರುವ ಅವರೆಲ್ಲರ ತಪಸ್ಸಿಗೂ ಭಂಗವನ್ನುಂಟುಮಾಡಿ ಅವರನ್ನು ಸಂಹರಿಸಿದ್ದೇ ಆದರೆ, ಜಗತ್ತೆಲ್ಲಾ ನಾಶವಾಗಿ ಹೋಗುವದು' ಎಂದು ನಿಶ್ಚಯಿಸಿಕೊಂಡು, ರತ್ನಾಕರವಾಗಿಯೂ ವರುಣನಿಗೆ ವಾಸಸ್ಥಾನವಾಗಿಯೂ ಮತ್ತೊಬ್ಬರಿಗೆ ಪ್ರವೇಶಿಸುವದಕ್ಕೆ ಅಶಕ್ಯವಾಗಿಯೂ ಇರುವ ಸಮುದ್ರದಲ್ಲಿದ್ದುಕೊಂಡಿದ್ದರು."

## ೧೦೩ನೇ ಅಧ್ಯಾಯ.–ತೀರ್ಥಯಾತ್ರಾಪ್ರಶಂಸೆ–(ವಿಷ್ಣುಸ್ತೋತ್ರ).

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು–ಕೇಳು ಜನಮೇಜಯರಾಯನೆ, ಲೋಮಶಮಹರ್ಷಿಯು ಧರ್ಮರಾಯನನ್ನು ಕುರಿತು "ಎಲೈ ಧರ್ಮರಾಯನೆ, ಈ ಪ್ರಕಾರ ಸಮುದ್ರದಲ್ಲಿ ವಾಸಮಾಡಿಕೊಂಡಿದ್ದ ಕಾಲೇಯರು ಮೂರುಲೋಕವನ್ನೂ ನಾಶಮಾಡಬೇಕೆಂದು ಎಣಿಸಿ, ಋಷ್ಯಾಶ್ರಮಗಳಲ್ಲಿಯೂ ಪುಣ್ಯಕ್ಷೇತ್ರಗಳಲ್ಲಿಯೂ ವಾಸಮಾಡಿಕೊಂಡಿರುವ ಮಹಾತ್ಮರಾದ ಋಷಿಗಳನ್ನು ಕ್ರೋಧಾವೇಶದಿಂದ ರಾತ್ರಿಕಾಲದಲ್ಲಿ ಭಕ್ಷಿಸುವದಕ್ಕೆ ಹೊರಟು, ವಸಿಷ್ಠರ ಆಶ್ರಮಕ್ಕೆ ಬಂದು, ಅಲ್ಲಿದ್ದ ಶಮದಮಾದಿ ಗುಣಸಂಪನ್ನರಾದ ನೂರೆಂಭತ್ತೆಂಟುಮಂದಿ ಋಷಿಗಳನ್ನೂ ಇನ್ನೂ ಒಂಭತ್ತುಮಂದಿ ಋಷಿಗಳನ್ನೂ ಸಹ ಭಕ್ಷಿಸಿ, ಅನೇಕಮಂದಿ ಬ್ರಾಹ್ಮಣರಿಂದ ಸೇವಿತವಾಗಿಯೂ ಪುಣ್ಯತಮವಾಗಿಯೂ ಇರುವ ಚ್ಯವನಮಹರ್ಷಿಗಳ ಆಶ್ರಮಕ್ಕೆ ಬಂದು, ಅಲ್ಲಿ ಕಂದಮೂಲಫಲಗಳನ್ನು ಭಕ್ಷಿಸಿಕೊಂಡು ತಪಸ್ಸುಮಾಡುತ್ತಿದ್ದ ನೂರುಮಂದಿ ಋಷಿಗಳನ್ನು ಭಕ್ಷಣೆಮಾಡಿದರು. ಬಳಿಕ ಭರದ್ವಾಜಾಶ್ರಮಕ್ಕೆ ಹೋಗಿ ಅಲ್ಲಿ ನೇಮದಿಂದ ಬ್ರಹ್ಮಚರ್ಯವ್ರತವನ್ನು ಧರಿಸಿ ಉದಕವನ್ನೂ ವಾಯುವನ್ನೂ ಆಹಾರಮಾಡಿಕೊಂಡು ತಪಸ್ಸುಮಾಡುತ್ತಿದ್ದ ಇಪ್ಪತ್ತುಮಂದಿ ಮಹರ್ಷಿಗಳನ್ನು ಭಕ್ಷಣೆಮಾಡಿದರು. ಈ ಪ್ರಕಾರ ಆ ದಾನವರು ಆಯಾ ಆಶ್ರಮಗಳಲ್ಲಿರುವ ಋಷಿಗಳನ್ನೂ ತಮ್ಮ ಕಣ್ಣಿಗೆ ಬಿದ್ದ ಬ್ರಾಹ್ಮಣರನ್ನೂ ರಾತ್ರಿ

ಕಾಲದಲ್ಲಿ ನಾಶಮಾಡುತ್ತ, ಹಗಲೆಲ್ಲಾ ಸಮುದ್ರದಲ್ಲಿ ವಾಸಮಾಡುತ್ತಿದ್ದರು. ಕಾಲೇಯರು ಹೀಗೆ ಋಷ್ಯಾಶ್ರಮಗಳಲ್ಲಿ ಹಾವಳಿಮಾಡುತ್ತಿದ್ದರೂ, ಅದನ್ನು ಯಾರೂ ತಿಳಿಯದೆ ಹೋದರು. ಆಗ ಆಯಾ ಆಶ್ರಮಗಳಲ್ಲಿ ಸಿದುಮಾಹಾರದಿಂದ ಕೃಶರಾದ ಋಷಿಗಳು ಆ ಕಾಲೇಯರಿಂದ ಪೀಡಿತರಾಗಿ, ರಕ್ತ ಮಾಂಸ ನರ ಕೀಲು ಮೊದಲಾದವುಗಳು ನಷ್ಟವಾಗಿ ಪ್ರಾಣವನ್ನು ಬಿಟ್ಟು ನೆಲದಮೇಲೆ ಛಿನ್ನಭಿನ್ನರಾಗಿ ಬಿದ್ದು ಶಂಖದ ರಾಶಿಗಳಂತೆ ಕಾಣಿಸುತ್ತಿದ್ದರು. ಮತ್ತು ಆ ಪ್ರದೇಶಗಳಲ್ಲಿ ಒಡೆದುಹೋದ ಕಮಂಡಲುಗಳೂ ಮುರಿದುಹೋದ ಸ್ರುಕ್ಸ್ರುವಗಳೂ ಬಿದ್ದಿದ್ದವು; ಮತ್ತು ಅಲ್ಲಲ್ಲಿದ್ದ ಅಗ್ನಿಹೋತ್ರಗಳೆಲ್ಲಾ ಚದುರಿಹೋಗಿದ್ದವು. ಹೀಗೆ ಕಾಲೇಯರ ಬಾಧೆಯಿಂದ ಜಗತ್ತೆಲ್ಲವೂ ವೇದಾಧ್ಯಯನದಿಂದಲೂ ಯಾಗಕ್ರಿಯೆಗಳಿಂದಲೂ ಶೂನ್ಯವಾಗಿ ಉತ್ಸಾಹವಿಲ್ಲದೆ ಇತ್ತು. ಎಲೈ ಧರ್ಮರಾಯನೆ, ಆಗ ಭಯಗ್ರಸ್ತರಾಗಿ ಕ್ಷೀಣದಶೆಯನ್ನು ಹೊಂದಿದ ಮನುಷ್ಯರು ತಮ್ಮತಮ್ಮನ್ನು ರಕ್ಷಿಸಿಕೊಳ್ಳುವದಕ್ಕೋಸ್ಕರ ದಿಕ್ಕುದಿಕ್ಕಿಗೆ ಓಡಿಹೋಗಿ, ಕೆಲವರು ಪರ್ವತದ ಗುಹೆಗಳಲ್ಲಿ ಅಡಗಿಕೊಂಡರು; ಮತ್ತೆ ಕೆಲವರು ಮರಣಭೀತಿಯಿಂದಲೇ ಪ್ರಾಣವನ್ನು ಬಿಟ್ಟುಬಿಟ್ಟರು; ಶೂರರಾದ ಇನ್ನು ಕೆಲವರು ಆಯುಧಧಾರಿಗಳಾಗಿ ಆ ದಾನವರನ್ನು ಹುಡುಕುತ್ತ, ಅವರನ್ನು ಸಂಹರಿಸುವದರಲ್ಲಿ ಅಧಿಕವಾದ ಪ್ರಯತ್ನವನ್ನು ಮಾಡಿಕೊಂಡು, ಸಮುದ್ರದಲ್ಲಿ ವಾಸಮಾಡತಕ್ಕ ಆ ರಾಕ್ಷಸರನ್ನು ಕಾಣದೆ ಬಹಳವಾಗಿ ಶ್ರಮಪಟ್ಟು, ಅದರಿಂದಲೇ ಕ್ಷೀಣವಾಗಿ ಹೋದರು. ಈ ಪ್ರಕಾರ ಯಜ್ಞಾದಿಕ್ರಿಯೆಗಳಿಲ್ಲದೆ ಜಗತ್ತು ಕ್ಷೀಣದಶೆಯನ್ನು ಹೊಂದಿದ್ದನ್ನು ನೋಡಿ, ದೇವತೆಗಳು ಅಧಿಕವಾಗಿ ವ್ಯಥೆಪಟ್ಟು ಭಯಗ್ರಸ್ತರಾಗಿ, ಇಂದ್ರನೊಡಗೂಡಿ ಮಂತ್ರಾಲೋಚನೆಯನ್ನು ಮಾಡಿ, ಲೋಕಕ್ಕೆಲ್ಲಾ ರಕ್ಷಕನಾಗಿಯೂ ಉತ್ಪತ್ತಿರಹಿತನಾಗಿಯೂ ಸರ್ವವ್ಯಾಪಿಯಾಗಿಯೂ ಮತ್ತೊಬ್ಬನಿಂದ ಜಯಿಸಲಶಕ್ಯನಾಗಿಯೂ ಷಡ್ಗುಣೈಶ್ವರ್ಯಸಂಪನ್ನನಾಗಿಯೂ ವೈಕುಂಠಪತಿಯಾಗಿಯೂ ಇರುವ ನಾರಾಯಣನ ಸನ್ನಿಧಿಗೆ ಹೋಗಿ, ಸಾಷ್ಟಾಂಗಪ್ರಣಾಮಗಳನ್ನು ಮಾಡಿ ಆತನನ್ನು ಕುರಿತು ‘ ಎಲೈ ಪರಮಾತ್ಮನೆ, ಸಮರ್ಥನಾದ ನೀನೇ ನಮ್ಮೆಲ್ಲರಿಗೂ ಸೃಷ್ಟಿ ಸ್ಥಿತಿ ಲಯಕರ್ತೃವಾಗಿರುವೆ. ನೀನೇ ಸ್ಥಾವರಜಂಗಮಾತ್ಮಕವಾದ ಈ ಜಗತ್ತನ್ನು ನಿರ್ಮಾಣಮಾಡಿರುವೆ. ಎಲೈ ಪುಂಡರೀಕಾಕ್ಷನೆ, ಪೂರ್ವದಲ್ಲಿ ಮಹಾಜಲದಲ್ಲಿ ಮುಳುಗಿಹೋಗಿದ್ದ ಭೂಮಿಯನ್ನು ನೀನು ವರಾಹಾವತಾರವನ್ನು ತಾಳಿ ಉದ್ಧಾರಮಾಡಿದೆ. ಆ ದೈತ್ಯನಾದ ಮಹಾ ಪರಾಕ್ರಮವಂತನಾದ ಹಿರಣ್ಯಕಶಿಪುವನ್ನು ನರಸಿಂಹಾವತಾರವನ್ನು ಮಾಡಿ ಸಂಹರಿಸಿದೆ. ಸಕಲಪ್ರಾಣಿಗಳಿಗೂ ಅವಧ್ಯನಾದ ಮಹಾಸುರನಾದ ಬಲಿಚಕ್ರವರ್ತಿಯನ್ನು ವಾಮನಾವತಾರವನ್ನು ಮಾಡಿ ಪಾತಾಳಕ್ಕೆ ತುಳಿದುಬಿಟ್ಟೆ. ಯಜ್ಞಗಳನ್ನೆಲ್ಲಾ ನಾಶಮಾಡತಕ್ಕವನಾಗಿಯೂ ಮಹತ್ತಾದ ಧನುಸ್ಸನ್ನು ಧರಿಸಿರುವನಾಗಿಯೂ ಕ್ರೂರನಾಗಿಯೂ ಇದ್ದ ಜಂಭಾಸುರನನ್ನು ನೀನೇ ಸಂಹಾರಮಾಡಿದೆ. ಹೀಗೆ ಅನೇಕವಾಗಿ ಅದ್ಭುತವಾದ ಕಾರ್ಯಗಳನ್ನು ಮಾಡಿ ದೇವತೆಗಳನ್ನು ರಕ್ಷಿಸಿದೆ. ಈಗಲೂ ಕಾಲೇಯರಿಂದ ಭಯಪಟ್ಟಿರುವ ನಮಗೆ ನೀನೇ ರಕ್ಷಕನಾದವನು. ಆದ್ದರಿಂದ, ಎಲೈ ಮಧುಸೂದನನೆ, ನಾವು ವಿಜ್ಞಾಪಿಸಿಕೊಳ್ಳುವದೇನೆಂದರೆ, ದೇವದೇವೇಶನಾದ ನೀನು ನಮ್ಮನ್ನೂ ಇಂದ್ರನನ್ನೂ ಸಮಸ್ತಲೋಕಗಳನ್ನೂ ಸಹ ದುಷ್ಟರಾದ ಆ ರಾಕ್ಷಸರ ಭಯದಿಂದ ತಪ್ಪಿಸಿ ಸಂರಕ್ಷಿಸು ’ ಎಂದು ದೇವತೆಗಳು ನಾರಾಯಣನಿಗೆ ವಿಜ್ಞಾಪನೆ ಮಾಡಿದರು.”

## ೧೦೩ನೇ ಅಧ್ಯಾಯ.—ತೀರ್ಥಯಾತ್ರಾಪ್ರಶಂಸೆ—(ಅಗಸ್ತ್ಯಮಾಹಾತ್ಮ್ಯಕಥನ).

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಬಳಿಕ ಲೋಮಶರು ಧರ್ಮರಾಯನನ್ನು ಕುರಿತು “ ಎಲೈ ಧರ್ಮರಾಯನೆ, ಆ ಬಳಿಕ ದೇವತೆಗಳು ಶ್ರೀನಾರಾಯಣನೊಡನೆ ‘ ಎಲೈ ಜಗತ್ಪತಿಯಾದ ನಾರಾಯಣನೆ, ಪ್ರಪಂಚದಲ್ಲಿರುವ ಸಕಲರಾದ ಸುರನರ ತಿರ್ಯಕ್ಸ್ಥಾವರಗಳೆಂಬ ನಾಲ್ಕುತೆರದ ಪ್ರಾಣಿಗಳೂ ನಿನ್ನನುಗ್ರಹದಿಂದ ವೃದ್ಧಿಯನ್ನು ಪಡೆದು, ಹವ್ಯಕವ್ಯಗಳಿಂದ ದೇವತೆಗಳನ್ನು ಸಂತೋಷಪಡಿಸುವರು. ಹೀಗೆ ಒಬ್ಬರನ್ನೊಬ್ಬರು ಆಶ್ರಯಿಸಿಕೊಂಡಿರುವದರಿಂದ ಸಕಲರೂ ನಿನ್ನನುಗ್ರಹದಿಂದ ನಿರ್ಭಯವಾಗಿ ರಕ್ಷಿತರಾಗಿ ಅಭಿವೃದ್ಧಿಯನ್ನು ಹೊಂದುತ್ತಿರುವರು. ಈಗಲಾದರೋ ರಾತ್ರಿಕಾಲದಲ್ಲಿ ಬ್ರಾಹ್ಮಣ

ನ್ನು ಯಾರೋ ನಾಶಮಾಡುತ್ತಿರುವರು. ಅವರು ಯಾರೋ ನಮಗೆ ತಿಳಿಯದು. ಈ ಪ್ರಕಾರ ಬ್ರಾಹ್ಮಣ ಲ್ಲರೂ ನಾಶವನ್ನು ಹೊಂದಿದರೆ, ಭೂಲೋಕವು ನಾಶವನ್ನು ಹೊಂದುವದು. ಭೂಲೋಕವು ನಷ್ಟವಾಗಲು, ್ವರ್ಗಲೋಕವೂ ನಷ್ಟವಾಗುವದು. ಇಂಥ ಮಹತ್ತಾದ ಭಯವು ಲೋಕಕ್ಕೆಲ್ಲಾ ಉಂಟಾಗಿರುವದು. ಆದ ಾರಣ ನಿನ್ನಿಂದ ಸಂರಕ್ಷಿತವಾಗಿರುವ ಸಕಲ ಲೋಕಗಳೂ ನಾಶವಾಗಿ ಹೋಗದಂತೆ ನೀನು ಸಂರಕ್ಷಿಸಬೇಕು' ಂದು ಪ್ರಾರ್ಥಿಸಿದರು. ಆಗ ಮಹಾವಿಷ್ಣುವು ದೇವತೆಗಳನ್ನು ಕುರಿತು 'ಎಲೈ ದೇವತೆಗಳಿರಾ, ಈಗ ಪ್ರಜೆಗಳ ಲ್ಲಾ ನಾಶವುಂಟಾಗಿರುವದಕ್ಕೆ ಕಾರಣವನ್ನು ನಾನು ತಿಳಿದಿರುವೆನು. ಅದನ್ನು ನಿಮಗೆ ನಾನು ಹೇಳುವೆನು ಕೇ ರಿ. ಕಾಲೇಯರೆಂಬ ಕ್ರೂರರಾದ ದೈತ್ಯರಿರುವರು. ಅವರು ವೃತ್ರಾಸುರನನ್ನು ಆಶ್ರಯಿಸಿಕೊಂಡು ಪ್ರಪಂ ಕವನ್ನು ನಾಶಮಾಡುವದಕ್ಕೆ ಪ್ರಾರಂಭಿಸಲು, ಅದನ್ನು ಸಹಿಸದೆ ಇಂದ್ರನು ವೃತ್ರಾಸುರನನ್ನು ಸಂಹಾರಮಾಡಿ ನು. ಬಳಿಕ ಕಾಲೇಯರೆಲ್ಲರೂ ಆತ್ಮರಕ್ಷಣಾರ್ಥವಾಗಿ ಸಮುದ್ರವನ್ನು ಹೊಕ್ಕು ಅಲ್ಲಿ ವಾಸಮಾಡುತ್ತ, ಲೋ ಗಳನ್ನೆಲ್ಲಾ ನಾಶಮಾಡಬೇಕೆಂದು ಆಲೋಚಿಸಿ, ರಾತ್ರಿಕಾಲದಲ್ಲಿ ಹೋಗಿ ಋಷಿಗಳನ್ನೆಲ್ಲಾ ಮೊದಲು ನಾಶಮಾ ುವದಕ್ಕೆ ಉಪಕ್ರಮಿಸಿರುವರು. ಅವರು ಸಮುದ್ರದಲ್ಲಿ ಹೊಕ್ಕಿಕೊಂಡಿರುವದರಿಂದ ಅವರನ್ನು ಜಯಿಸುವದು ಮಗೆ ಅಶಕ್ಯವಾದದ್ದು. ಅವರನ್ನು ನೀವು ಜಯಿಸಬೇಕಾದರೆ, ಅದಕ್ಕೊಂದು ಉಪಾಯವನ್ನು ಹೇಳುತ್ತೇನೆ ೇಳಿರಿ. ಆ ರಾಕ್ಷಸರು ಆಶ್ರಯಿಸಿಕೊಂಡಿರುವ ಸಮುದ್ರವನ್ನು ಶೋಷಿಸುವ ಹಾಗೆ ಮಾಡುವದಕ್ಕೆ ನೀವು ್ರಯತ್ನವನ್ನು ಮಾಡಿರಿ. ಹಾಗೆ ಸಮುದ್ರವನ್ನು ಶೋಷಿಸಬೇಕಾದರೆ, ಅಗಸ್ತ್ಯಮಹರ್ಷಿ ಹೊರತಾಗಿ ಲೋಕ ಲ್ಲಿ ಮತ್ತ್ಯಾರೂ ಸಮರ್ಥರಾಗಿಲ್ಲ. ಆ ಪ್ರಕಾರ ಮಾಡಿದ ಹೊರತು ಆ ದುಷ್ಟರುಬೇರೆ ನಾಶವನ್ನು ಹೊಂದಲಾ ರು' ಎಂದು ನುಡಿದನು. ಅದನ್ನು ಕೇಳಿ ದೇವತೆಗಳು ಬ್ರಹ್ಮದೇವನನ್ನು ಜೊತೆಯಲ್ಲಿ ಕರೆದುಕೊಂಡು ಅಗ ್ತ್ಯಾಶ್ರಮಕ್ಕೆ ಹೋಗಿ, ದೇವತೆಗಳಿಂದ ಸೇವಿತನಾದ ಬ್ರಹ್ಮದೇವನಂತೆ ಅನೇಕಮಂದಿ ಋಷಿಗಳಿಂದ ಸೇವಿತನಾದ ತಪೋನಿಧಿಯಾದ ತೇಜಸ್ವಿಯಾದ ಮಿತ್ರಾವರುಣಪುತ್ರನಾದ ಅಗಸ್ತ್ಯಮಹರ್ಷಿಯನ್ನು ಕಂಡು ಸ್ತೋತ್ರಮಾಡುವ ಕ್ಕೆ ಉಪಕ್ರಮಿಸಿ 'ಎಲೈ ಮಹಾತ್ಮನೆ, ಪೂರ್ವದಲ್ಲಿ ನಹುಷಮಹಾರಾಜನಿಂದ ಬಾಧೆಯನ್ನು ಹೊಂದಿದ ದೇವತೆ ಗಳನ್ನು ರಕ್ಷಿಸುವದಕ್ಕೋಸ್ಕರ ಲೋಕಕಂಟಕನಾದ ಅವನನ್ನು ಸ್ವರ್ಗದಿಂದ ಕೆಳಕ್ಕೆ ಕೆಡಹಿದೆ. ಸೂರ್ಯನ ಮೇಲೆ ಕೋಪಿಸಿಕೊಂಡು ಮೇಲಕ್ಕೆ ಬೆಳೆದು ಹೋಗುತ್ತಿದ್ದ ವಿಂಧ್ಯಪರ್ವತವು ನಿನ್ನ ಮಾತನ್ನು ಉಲ್ಲಂಘಿಸದೆ ಈಗಲೂ ಮೇಲಕ್ಕೇಳದೆ ಬಿದ್ದಿರುವದು. ಆ ವಿಂಧ್ಯಪರ್ವತವು ಬೆಳೆಯುತ್ತಿದ್ದ ಕಾಲದಲ್ಲಿ ಜಗತ್ತೆಲ್ಲವೂ ಅಂಧಕಾರ ಿಂದ ವ್ಯಾಪ್ತವಾಗಲು, ನಾಶವನ್ನು ಹೊಂದುತ್ತಿದ್ದ ಪ್ರಜೆಗಳೆಲ್ಲರೂ ನಿನ್ನಿಂದಲೇ ಸುಖವನ್ನು ಪಡೆದರು. ಈಗಲೂ ಕಾಲೇಯರಿಂದ ಭಯಪಟ್ಟಿರುವ ನಮಗೆ ನೀನೇ ರಕ್ಷಕನಾಗಬೇಕಾದ್ದರಿಂದ, ನಾವೆಲ್ಲರೂ ಸಮರ್ಥನಾದ ನಿನ್ನನ್ನು ಒಂದು ವರವನ್ನು ಬೇಡಿಕೊಳ್ಳುವೆವು' ಎಂದು ಪ್ರಾರ್ಥಿಸಿದರು."

### ೧೦೫ನೇ ಅಧ್ಯಾಯ.—ತೀರ್ಥಯಾತ್ರಾಪ್ರಶಂಸೆ—(ಅಗಸ್ತ್ಯಮಹಾತ್ಮ್ಯ ಕಥನ.)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಬಳಿಕ ಧರ್ಮರಾಯನು ಲೋಮಶನೊಡನೆ "ಎಲೈ ಮಹರ್ಷಿಯೆ, ವಿಂಧ್ಯಪರ್ವತವು ಯಾತಕ್ಕೋಸ್ಕರ ಕೋಪ ಗೊಂಡು ಜಾಗ್ರತೆಯಾಗಿ ಬೆಳೆದನು? ಇದನ್ನು ಕೇಳಬೇಕೆಂದು ನನಗೆ ಕುತೂಹಲವುಂಟಾಗಿರುವದು. ಅದನ್ನು ವಿವರಿಸು" ಎನಲು, ಲೋಮಶನು "ಎಲೈ ರಾಯನೆ, ಸೂರ್ಯನು ಪರ್ವತಶ್ರೇಷ್ಠವಾದ ಸುವರ್ಣಮಯವಾದ ಮೇರುಪರ್ವತವನ್ನು ಉದಯಕಾಲದಲ್ಲೂ ಅಸ್ತಕಾಲದಲ್ಲೂ ಪ್ರದಕ್ಷಿಣೆ ಮಾಡುತ್ತಿದ್ದನು. ಅದನ್ನು ನೋಡಿ ವಿಂಧ್ಯಪರ್ವತವು ಸೂರ್ಯನನ್ನು ಕುರಿತು 'ಎಲೈ ಸೂರ್ಯನೆ, ನೀನು ನಿರಂತರದಲ್ಲೂ ಮೇರುಪರ್ವತಕ್ಕೆ ಹ್ಯಾಗೆ ಪ್ರದಕ್ಷಿಣೆಯನ್ನು ಮಾಡುವೆಯೋ ಹಾಗೆ ನನಗೂ ಪ್ರದಕ್ಷಿಣೆಯನ್ನು ಮಾಡು' ಎನಲು, ಸೂರ್ಯನು 'ಎಲೈ ವಿಂಧ್ಯನೆ, ನನ್ನ ಸ್ವೇಚ್ಛೆಯಿಂದ ನಾನು ಮೇರುಪರ್ವತಕ್ಕೆ ಪ್ರದಕ್ಷಿಣೆಯನ್ನು ಮಾಡತಕ್ಕವನಲ್ಲ. ಈ ಜಗತ್ತನ್ನು ನಿರ್ಮಿಸಿದ

ಬ್ರಹ್ಮನು ನನ್ನ ಸಂಚಾರಕ್ಕೆ ಈ ಮಾರ್ಗವನ್ನು ನೇಮಿಸಿರುವನು' ಎಂದು ನುಡಿದನು. ಆ ಮಾತನ್ನು ಕೇಳಿ, ವಿಂಧ್ಯಪರ್ವತವು ಬಹಳವಾಗಿ ಕೋಪಗೊಂಡು, ಸೂರ್ಯಚಂದ್ರರಿಗೆ ಸಂಚಾರವೇ ತಪ್ಪುವಹಾಗೆ ಅವರ ಮಾರ್ಗವನ್ನು ತಡೆಯಬೇಕೆಂದು ಯೋಚಿಸಿ, ಮೇಲಕ್ಕೆ ಬೆಳೆಯುವದಕ್ಕೆ ಉಪಕ್ರಮಿಸಿದನು. ಆಗ ಸಕಲರಾದ ದೇವತೆಗಳೂ ವಿಂಧ್ಯನ ಬಳಿಗೆ ಹೋಗಿ, ಹಾಗೆ ಬೆಳೆಯಕೂಡದೆಂದು ಉಪಾಯದಿಂದ ಎಷ್ಟುಹೇಳಿದರೂ, ವಿಂಧ್ಯನು ಆ ಮಾತನ್ನು ಕೇಳದೆ ಹೋದನು. ದೇವತೆಗಳೆಲ್ಲರೂ ಅಲ್ಲಿಂದ ಹೊರಟು, ತಪಸ್ವಿಯೂ ಧರ್ಮಾತ್ಮನೂ ಆಶ್ಚರ್ಯಕರವಾದ ಸಾಮರ್ಥ್ಯವುಳ್ಳವನೂ ಆದ ಅಗಸ್ತ್ಯಮಹರ್ಷಿಯ ಸಮೀಪಕ್ಕೆ ಬಂದು, ಆತನನ್ನು ಕುರಿತು 'ಎಲೈ ಮಹಾತ್ಮನೆ, ನಿನ್ನ ಶಿಷ್ಯನಾದ ವಿಂಧ್ಯನು ಕ್ರೋಧಾವೇಶದಿಂದ ಬಹಳವಾಗಿ ಬೆಳೆದು, ಸೂರ್ಯಚಂದ್ರರ ಗತಿಯನ್ನೂ ನಕ್ಷತ್ರಗಳ ಗತಿಯನ್ನೂ ತಡೆದಿರುವನು. ಅದನ್ನು ನಿವಾರಿಸುವದಕ್ಕೆ ನಿನ್ನ ಹೊರತು ಮತ್ತಾರಿಗೂ ಶಕ್ತಿಯಿಲ್ಲ. ಆದ್ದರಿಂದ ನೀನೇ ಆತನನ್ನು ನಿವಾರಿಸು' ಎಂದು ಪ್ರಾರ್ಥಿಸಿದರು. ಅದನ್ನು ಕೇಳಿ ಅಗಸ್ತ್ಯಮಹರ್ಷಿಯು ಪತ್ನೀಸಮೇತನಾಗಿ ವಿಂಧ್ಯಪರ್ವತದ ಸಮೀಪಕ್ಕೆ ಹೋಗಿ 'ಎಲೈ ವಿಂಧ್ಯನೆ, ನಾನು ಬಂದು ಕಾರ್ಯಾರ್ಥವಾಗಿ ದಕ್ಷಿಣದಿಕ್ಕಿಗೆ ಹೋಗಿ ಬರುವೆನು. ನೀನು ನನಗೆ ಮಾರ್ಗವನ್ನು ಬಿಟ್ಟುಕೊಡು. ನಾನು ಬರುವ ವರೆಗೂ ನೀನು ಈ ಮಾರ್ಗವನ್ನು ತಡೆಯಬೇಡ. ನಾನು ಬಂದ ಬಳಿಕ ನಿನ್ನ ಇಚ್ಛಾನುಸಾರವಾಗಿ ನೀನು ಬೆಳೆಯಬಹುದು' ಎಂದು ಸಮಯನಿಬಂಧನೆಯನ್ನು ಮಾಡಿಕೊಂಡು, ವಿಂಧ್ಯನಿಂದ ದಾರಿಯನ್ನು ಬಿಡಿಸಿಕೊಂಡು ದಕ್ಷಿಣದಿಕ್ಕಿಗೆ ಹೋಗಿ, ಈಗಲೂ ಅಲ್ಲೇ ವಾಸಮಾಡುತ್ತಿರುವನು.

ಎಲೈ ಧರ್ಮರಾಯನೆ, ಈ ಪ್ರಕಾರದಿಂದ ವಿಂಧ್ಯಪರ್ವತವು ಬೆಳೆಯದಂತೆ ಮಾಡಿ ಅಗಸ್ತ್ಯರು ತಮ್ಮ ಪ್ರಭಾವದಿಂದ ಲೋಕಬಾಧಾನಿವಾರಣೆಮಾಡಿದರು. ಇನ್ನು ಆ ಮಹಾತ್ಮರಿಂದ ವರವನ್ನು ಪಡೆದುಕೊಂಡು ದೇವತೆಗಳು ಕಾಲೇಯರನ್ನು ಸಂಹರಿಸಿದ್ದನ್ನು ಹೇಳುವೆನು ಕೇಳು. ಕಾಲೇಯರ ಬಾಧೆಯನ್ನು ಸಹಿಸದೆ ದೇವತೆಗಳು ಅಗಸ್ತ್ಯಮಹರ್ಷಿಯ ಬಳಿಗೆ ಬರಲು, ಅಗಸ್ತ್ಯನು ಅವರನ್ನುನೋಡಿ 'ಎಲೈ ದೇವತೆಗಳಿರಾ, ಇಲ್ಲಿಗೆ ಯಾತಕ್ಕೋಸ್ಕರ ಬಂದಿರಿ? ನನ್ನಿಂದ ನಿಮಗೇನಾಗತಕ್ಕದ್ದು?' ಎಂದು ಪ್ರಶ್ನೆಮಾಡಲು, ದೇವತೆಗಳು 'ಎಲೈ ಮಹಾತ್ಮನೆ, ನೀನು ಈ ಮಹಾಸಮುದ್ರವನ್ನು ಪಾನಮಾಡಿದ್ದೇ ಆದರೆ, ದೇವಶತ್ರುಗಳಾದ ಸಕಲರಾದ ಕಾಲೇಯರನ್ನೂ ನಾವು ನಿಗ್ರಹಿಸುವೆವು' ಎಂದು ಪ್ರಾರ್ಥಿಸಿದರು. ಆಗ ಅಗಸ್ತ್ಯಮಹರ್ಷಿಯು ಲೋಕಹಿತಾರ್ಥವಾಗಿ ತಾನು ಈ ಕಾರ್ಯವನ್ನು ಮಾಡುವೆನೆಂದು ಅವರೊಡನೆ ಹೇಳಿ, ಆ ದೇವತೆಗಳೊಡನೆಯೂ ತಪಸ್ಸಿದ್ಧರಾದ ಋಷಿಗಳೊಡನೆಯೂ ಕೂಡಿ ಸಮುದ್ರದ ಬಳಿಗೆ ಹೊರಟನು. ಅದನ್ನು ನೋಡಬೇಕೆಂಬ ಕುತೂಹಲದಿಂದ, ಮನುಷ್ಯರೂ ಗಂಧರ್ವರೂ ಉರಗರೂ ಯಕ್ಷರೂ ಕಿಂಪುರುಷರೂ ಸಹ ಆ ಮಹಾತ್ಮರ ಸಂಗಡ ಹೊರಟರು. ಬಳಿಕ ಅವರೆಲ್ಲರೂ ಭಯಂಕರವಾದ ಧ್ವನಿಯುಳ್ಳದ್ದಾಗಿ ತೆರೆಗಳಿಂದ ಕುಣಿಯುತ್ತಿರುವಂತೆಯೂ, ಗಾಳಿಯಿಂದ ತೂಗಾಡುತ್ತಿರುವಂತೆಯೂ, ಗುಂಪುಗುಂಪಾದ ನೊರೆಗಳಿಂದ ನಗುತ್ತಿರುವಂತೆಯೂ ತೋರುತ್ತಾ, ಪರ್ವತಗಳ ಗುಹೆಗಳಲ್ಲಿ ಓಡಾಡುತ್ತಾ, ನಾನಾವಿಧವಾದ ದೊಡ್ಡದೊಡ್ಡ ಜಲಜಂತುಗಳಿಂದಲೂ ಅನೇಕ ಪಕ್ಷಿಗಳ ಗುಂಪುಗಳಿಂದಲೂ ಕೂಡಿರುವ ಮಹಾ ಸಮುದ್ರದ ದಡವನ್ನು ಸೇರಿದರು."

೧೦೫ನೇ ಅಧ್ಯಾಯು.—ತೀರ್ಥಯಾತ್ರಾಪ್ರಶಂಸೆ—(ಸಮುದ್ರವನ್ನು ಪೂರಣ ಮಾಡಬೇಕೆಂದು ಯೋಚಿಸುವಿಕೆ.)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಲೋಮಶನು ಧರ್ಮರಾಯನನ್ನು ಕುರಿತು "ಎಲೈ ಧರ್ಮರಾಯನೆ, ಪೂಜ್ಯನೂ ಮಹಾತ್ಮನೂ ಆದ ಅಗಸ್ತ್ಯಮಹರ್ಷಿಯು ಸಮುದ್ರವನ್ನು ಸೇರಿ, ತನ್ನ ಜೊತೆಯಲ್ಲಿ ಬಂದಿರುವ ಸಕಲರಾದ ದೇವತೆಗಳನ್ನೂ ಋಷಿಗಳನ್ನೂ ಕುರಿತು 'ಲೋಕಹಿತಾರ್ಥವಾಗಿ ಈ ಮಹಾಸಮುದ್ರವನ್ನು ನಾನು ಪಾನಮಾಡಿಬಿಡುತ್ತೇನೆ. ಮುಂದೆ

ನೀವು ಮಾಡತಕ್ಕ ಕಾರ್ಯಕ್ಕೆ ಸನ್ನಾಹವನ್ನು ಶೀಘ್ರವಾಗಿ ಮಾಡಿಕೊಳ್ಳಿರಿ' ಎಂದು ನುಡಿದು, ಕೂಡಲೆ ಮಹತ್ತಾದ ಕ್ರೋಧಾವೇಶವನ್ನು ತಾಳಿ, ಎಲ್ಲರೂ ನೋಡುತ್ತಿರಲು ಆ ಮಹಾಸಮುದ್ರವನ್ನು ಪಾನಮಾಡಿದನು. ಅದನ್ನು ನೋಡಿ ಸಕಲರಾದ ದೇವತೆಗಳೂ ಆಶ್ಚರ್ಯಪಡುತ್ತ, ಆ ಮಹಾತ್ಮನನ್ನು ಬಹಳವಾಗಿ ಸ್ತುತಿಸುತ್ತ, ಆತನನ್ನು ಕುರಿತು 'ಎಲೈ ಮಹಾನುಭಾವನೆ, ಲೋಕಪೂಜ್ಯನಾದ ನೀನೇ ನಮಗೆ ಸಂರಕ್ಷಕನಾಗಿಯೂ ವಿಧಾಯಕನಾಗಿಯೂ ಇರುವೆ. ಆದ್ದರಿಂದ ಇಂದ್ರಾದಿದೇವತೆಗಳಿಂದ ಕೂಡಿದ ಈ ಪ್ರಪಂಚವು ನಷ್ಟವಾಗದಂತೆ ಅನುಗ್ರಹಮಾಡು' ಎಂದು ಪ್ರಾರ್ಥಿಸುತ್ತಿರಲು, ಗಂಧರ್ವರು ದೇವದುಂದುಭಿಧ್ವನಿಯನ್ನು ಮಾಡುತ್ತ ಪುಷ್ಪವೃಷ್ಟಿಯನ್ನು ಮಾಡಿದರು. ಈ ಪ್ರಕಾರ ದೇವತೆಗಳಿಂದ ಪೂಜಿಸಲ್ಪಟ್ಟ ಅಗಸ್ತ್ಯನು ಸಮುದ್ರವನ್ನೆಲ್ಲಾ ಒಂದು ತೊಟ್ಟು ನೀರೂ ಇಲ್ಲದ ಹಾಗೆ ಮಾಡಿಬಿಟ್ಟನು. ಆಗ ಸಮಸ್ತ ದೇವತೆಗಳೂ ಸಂತೋಷಪಟ್ಟು ಮಹೋತ್ಸಾಹದಿಂದ ನಾನಾವಿಧವಾದ ಆಯುಧಗಳನ್ನು ಧರಿಸಿ, ಆ ಸಮುದ್ರಪ್ರದೇಶದಲ್ಲಿದ್ದ ಕಾಲೇಯದೈತ್ಯರೆಲ್ಲರನ್ನೂ ಸಂಹರಿಸುವದಕ್ಕೆ ಪ್ರಾರಂಭಿಸಲು, ಮಹಾಬಲಶಾಲಿಗಳಾಗಿ ಅತಿವೇಗವುಳ್ಳ ಘೋರವಾದ ಧ್ವನಿಯನ್ನು ಮಾಡುತ್ತಿರುವ ದೇವತೆಗಳಿಂದ ಪೀಡಿತರಾದ ಕಾಲೇಯರು ದೇವತೆಗಳ ಪ್ರತಾಪವನ್ನು ಸಹಿಸಲಾರದೆ, ತಾವೂ ಬಹಳವಾಗಿ ಪರಾಕ್ರಮವನ್ನು ತೋರಿಸಿ, ಒಂದು ಮುಹೂರ್ತಕಾಲ ಘೋರವಾದ ಯುದ್ಧವನ್ನು ಮಾಡಿದರು. ಹೀಗೆ ಯುದ್ಧವಾಗಲು, ಮಹರ್ಷಿಗಳ ತಪೋಜ್ವಾಲೆಗಳಿಂದ ಬಹಳವಾಗಿ ಸಂತಾಪವನ್ನು ಹೊಂದಿ, ಕಾಲೇಯರು ತಮ್ಮ ಶಕ್ತಿಯಿರುವಮಟ್ಟಿಗೂ ಹೋರಾಡಿ, ಕೊನೆಗೆ ದೇವತೆಗಳಿಂದ ಸಂಹರಿಸಲ್ಪಟ್ಟರು. ಆಗ ದೇವತೆಗಳಿಂದ ಹತರಾದ, ಸುವರ್ಣಮಯವಾದ ಕಿರೀಟ ಮೊದಲಾದ ಆಭರಣಗಳನ್ನೂ ರತ್ನಖಚಿತವಾದ ಕರ್ಣಕುಂಡಲಗಳನ್ನೂ ಬಾಹುಪುರಿಗಳನ್ನೂ ಧರಿಸಿಕೊಂಡಿದ್ದ ಆ ಕಾಲೇಯರು ಹೂಬಿಟ್ಟಿರುವ ಮುತ್ತುಗದ ಮರಗಳಂತೆ ಕಾಣಿಸುತ್ತಿದ್ದರು. ಬಳಿಕ ಹತಶೇಷರಾದ ಕೆಲವುಮಂದಿ ದೈತ್ಯರು ಭೂಮಿಯನ್ನು ಭೇದಿಸಿಕೊಂಡು ಪಾತಾಳವನ್ನು ಪ್ರವೇಶಿಸಿದರು. ಈ ಪ್ರಕಾರದಿಂದ ಕಾಲೇಯದೈತ್ಯರೆಲ್ಲರೂ ಹತರಾಗಿ ಹೋಗಲು, ದೇವತೆಗಳು ಸಂತುಷ್ಟರಾಗಿ ಅಗಸ್ತ್ಯಮಹರ್ಷಿಯನ್ನು 'ಎಲೈ ಮಹಾನುಭಾವನೆ, ನಿನ್ನ ಅನುಗ್ರಹದಿಂದ ಕ್ರೂರರಾದ ಕಾಲೇಯರು ಹತರಾಗಿ ಹೋಗಲು, ಸಕಲಲೋಕಗಳಿಗೂ ವಿಶೇಷವಾದ ಸುಖವುಂಟಾಯಿತು' ಎಂದು ಸ್ತುತಿಸಿ, 'ಎಲೈ ಲೋಕಪೂಜ್ಯನಾದ ಅಗಸ್ತ್ಯನೆ, ನೀನು ಪಾನಮಾಡಿದ ಉದಕವನ್ನು ಪುನಃ ಬಿಟ್ಟು ಸಮುದ್ರವನ್ನು ಪೂರ್ಣಮಾಡು' ಎಂದು ಪ್ರಾರ್ಥಿಸಲು, ಅದನ್ನು ಕೇಳಿ ಅಗಸ್ತ್ಯನು 'ಎಲೈ ದೇವತೆಗಳಿರಾ, ನಾನು ಪಾನಮಾಡಿದ ಸಮುದ್ರೋದಕವು ನನ್ನ ಉದರದಲ್ಲಿ ಜೀರ್ಣವಾಯಿತು. ಪುನಃ ಸಮುದ್ರವನ್ನು ಪೂರ್ಣಮಾಡಬೇಕಾದರೆ ಅದಕ್ಕೆ ತಕ್ಕ ಪ್ರಯತ್ನವನ್ನು ನೀವೇ ಮಾಡಿಕೊಳ್ಳಬೇಕು' ಎಂದು ನುಡಿದನು. ಆ ಮಾತನ್ನು ಕೇಳಿ ದೇವದೇವತೆಗಳು ಆಶ್ಚರ್ಯವನ್ನೂ ವಿಷಾದವನ್ನೂ ಹೊಂದಿ, ಆ ಮಹರ್ಷಿಗೆ ನಮಸ್ಕಾರಮಾಡಿ, ಆತನ ಅನುಜ್ಞೆಯನ್ನು ಪಡೆದುಕೊಂಡು ಸಮುದ್ರವನ್ನು ಪೂರ್ಣಮಾಡುವದಕ್ಕಾಗಿ ಆಲೋಚಿಸುತ್ತ ಮಹಾವಿಷ್ಣುವಿನೊಡನೆ ಹೊರಟು, ಬ್ರಹ್ಮದೇವನ ಸಮೀಪಕ್ಕೆ ಹೋಗಿ ಕೈಮುಗಿದುಕೊಂಡು 'ಎಲೈ ಬ್ರಹ್ಮದೇವನೆ, ಸಮುದ್ರವನ್ನು ಪೂರ್ಣಮಾಡಬೇಕು' ಎಂದು ಪ್ರಾರ್ಥಿಸಿದರು.

## ೧೦೭ನೇ ಅಧ್ಯಾಯ.—ತೀರ್ಥಯಾತ್ರಾಪ್ರಶಂಸೆ—(ಸಗರ ಸಂತತಿ ಕಥನ.)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಲೋಮಶನು ಧರ್ಮರಾಯನನ್ನು ಕುರಿತು "ಎಲೈ ಧರ್ಮರಾಯನೆ, ಆಗ ಲೋಕಕ್ಕೆಲ್ಲಾ ಪಿತಾಮಹನಾದ ಬ್ರಹ್ಮದೇವನು ದೇವತೆಗಳೊಡನೆ 'ಇನ್ನು ಬಹಳಕಾಲದ ಮೇಲೆ ಭಗೀರಥರಾಯನು ಜ್ಞಾತಿಗಳ ನಿಮಿತ್ತವಾಗಿ ಸಮುದ್ರವು ಪೂರ್ಣವಾಗುವಹಾಗೆ ಮಾಡುವನು. ನೀವೆಲ್ಲರೂ ನಿಮ್ಮನಿಮ್ಮ ಸ್ಥಾನಗಳಿಗೆ ಹೊರಟುಹೋಗಿರಿ' ಎನಲು, ದೇವತೆಗಳು ಹಾಗೇ ಆಗಲೆಂದು ಬ್ರಹ್ಮದೇವನ ಆಜ್ಞೆಗೆ ಅನುಸಾರವಾಗಿ ಸಮುದ್ರವು ಪೂರ್ಣವಾಗುವ ಕಾಲವನ್ನು ಪ್ರತೀಕ್ಷಿಸುತ್ತಿದ್ದರು" ಎಂದು ಲೋಮಶನು ಹೇಳಿದನು. ಅದನ್ನು ಕೇಳಿ ಧರ್ಮರಾಯನು ಲೋಮಶಮಹರ್ಷಿಯನ್ನು

ಕುರಿತು “ಎಲೈ ಮಹಾತ್ಮನೆ, ಭಗೀರಥಮಹಾರಾಜನ ಜ್ಞಾತಿಗಳು ಯಾರು? ಅವರ ನಿಮಿತ್ತವಾಗಿ ಭಗೀರಥರಾಯನ ಪ್ರಯತ್ನದಿಂದ ಸಮುದ್ರವು ಹ್ಯಾಗೆ ಪೂರ್ಣವಾಯಿತು? ಅಂಥ ಮಹಾತ್ಮನಾದ ಆ ರಾಯನ ಚರಿತ್ರೆಯನ್ನು ಕೇಳಬೇಕೆಂದು ನನಗೆ ತುಂಬಾ ಕುತೂಹಲವುಂಟಾಗಿರುವದು. ಅದನ್ನು ವಿವರಿಸು” ಎನಲು, ಲೋಮಶಮಹರ್ಷಿಯು ‘ಎಲೈ ರಾಯನೆ, ಇಕ್ಷ್ವಾಕುಮಹಾರಾಜನ ವಂಶದಲ್ಲಿ ಹುಟ್ಟಿದ ಮತ್ತು ರೂಪವಂತನೂ ಬಲವಂತನೂ ಆದ ಸಗರನೆಂಬ ಮಹಾರಾಜನು ಇದ್ದನು. ಆತನು ಹೈಹಯ, ತಾಲಜಂಘ, ಮೊದಲಾದ ಅನೇಕ ದೇಶಾಧಿಪತಿಗಳನ್ನು ಸ್ವಾಧೀನಮಾಡಿಕೊಂಡು ರಾಜ್ಯಭಾರವನ್ನು ಮಾಡುತ್ತ ಬಹುಕಾಲ ಸಂತಾನವಿಲ್ಲದೆಯಿದ್ದನು. ಹೀಗಿರಲು, ಆತನಿಗೆ ರೂಪಯೌವ್ವನಸಂಪನ್ನರಾದ ವೈದರ್ಭಿ, ಶೈಬ್ಯೆ ಎಂಬ ಇಬ್ಬರು ಪತ್ನಿಯರು ಅನುಕೂಲೆಯರಾಗಿದ್ದರು. ಆಗ ಸಗರನು ಅವರಿಬ್ಬರೊಡನೆಯೂ ಸಂತಾನಾಪೇಕ್ಷೆಯಿಂದ ಕೈಲಾಸಪರ್ವತಕ್ಕೆ ಹೋಗಿ ಮಹತ್ತಾದ ತಪಸ್ಸನ್ನು ಮಾಡುತ್ತಿದ್ದು, ಒಂದಾನೊಂದು ದಿವಸ ಪಿನಾಕಪಾಣಿಯೂ ಶೂಲಪಾಣಿಯೂ ತ್ರಿಪುರಸಂಹಾರಕನೂ ತ್ರಿಲೋಚನನೂ ಪಾರ್ವತೀವಲ್ಲಭನೂ ಆದ ಶಂಕರನನ್ನು ಕಂಡು, ಪತ್ನಿಯರೊಡನೆ ಆತನಿಗೆ ಸಾಷ್ಟಾಂಗಪ್ರಣಾಮವನ್ನು ಮಾಡಿ, ಸಂತಾನಾರ್ಥವಾಗಿ ಪ್ರಾರ್ಥನೆಯನ್ನು ಮಾಡಿದನು. ಅದಕ್ಕೆ ಸಂತುಷ್ಟನಾಗಿ ಮಹಾದೇವನು ಪತ್ನೀಸಹಿತನಾದ ಆ ರಾಜನನ್ನು ಕುರಿತು ‘ಎಲೈ ರಾಯನೆ, ನೀನು ವರವನ್ನು ಬೇಡಿದ ಮುಹೂರ್ತಕ್ಕೆ ಅನುಗುಣವಾಗಿ ನಿನ್ನ ಒಬ್ಬ ಪತ್ನಿಯಲ್ಲಿ ಶೂರರಾಗಿಯೂ ಮಹತ್ತಾದ ದರ್ಪವುಳ್ಳವರಾಗಿಯೂ ಇರುವ ಅರವತ್ತು ಸಾವಿರಮಂದಿ ಮಕ್ಕಳು ಹುಟ್ಟುವರು. ಆ ಅರವತ್ತು ಸಾವಿರಮಂದಿ ಮಕ್ಕಳೂ ಒಟ್ಟಾಗಿ ಒಂದೇ ಆವರ್ತಿ ನಾಶವನ್ನು ಹೊಂದುವರು. ಮತ್ತೊಬ್ಬ ಪತ್ನಿಯಲ್ಲಿ ಶೂರನಾಗಿಯೂ, ನಿನ್ನ ವಂಶವನ್ನು ಉದ್ಧಾರ ಮಾಡತಕ್ಕವನಾಗಿಯೂ ಇರುವ ಒಬ್ಬ ಮಗನು ಹುಟ್ಟುವನು’ ಎಂದು ನುಡಿದು ಅಂತರ್ಧಾನವನ್ನು ಪಡೆದನು. ಬಳಿಕ ಸಗರರಾಯನು ಪತ್ನೀಸಹಿತನಾಗಿ ಅತ್ಯಂತ ಸಂತುಷ್ಟನಾಗಿ, ತನ್ನ ಅರಮನೆಗೆ ಬಂದು ಸೇರಿದನು. ಬಳಿಕ ಕೆಲವು ದಿವಸಗಳಾಗಲು, ಕಮಲಾಕ್ಷಿಯರಾದ ಆತನ ಪತ್ನಿಯರಿಬ್ಬರೂ ಗರ್ಭಿಣಿಯರಾಗಿ ನವಮಾಸಗಳು ತುಂಬಲು, ಅವರಿಬ್ಬರಲ್ಲಿ ವೈದರ್ಭಿಯು ದೀರ್ಘವಾದ ಸೋರೇಕಾಯಿನ ಆಕಾರವುಳ್ಳ ಒಂದು ಗರ್ಭದ ಚೀಲವನ್ನು ಪ್ರಸವಿಸಿದಳು. ಶೈಬ್ಯೆಯು ದೇವಕುಮಾರನಂತೆ ಸುಂದರನಾದ ಒಬ್ಬ ಮಗನನ್ನು ಪಡೆದಳು. ಆಗ ಸಗರರಾಜನು ವೈದರ್ಭಿಯ ಗರ್ಭವನ್ನು ಆಚೆಗೆ ಬಿಸಾಡಬೇಕೆಂದು ಯೋಚಿಸುತ್ತಿರಲು, “ಎಲೈ ಸಗರರಾಯನೆ, ಈ ಚೀಲವನ್ನು ಬಿಸಾಡಲು ಯತ್ನಿಸಬೇಡ. ಇದರಲ್ಲಿ ಶಿಶುಗಳಿರುವವು. ಈ ಚೀಲವನ್ನು ಮೆಲ್ಲಗೆ ಬಿಚ್ಚಿ, ಮಧ್ಯದಲ್ಲಿ ಬೀಜಗಳಂತಿರುವವುಗಳನ್ನು ಸ್ವೀಕರಿಸಿ, ಅವುಗಳನ್ನು ಪ್ರತ್ಯೇಕಪ್ರತ್ಯೇಕವಾಗಿ ತುಪ್ಪದ ಗಡಿಗೆಗಳಲ್ಲಿ ಇಟ್ಟು ಪ್ರಯತ್ನಪೂರ್ವಕವಾಗಿ ಸಂರಕ್ಷಿಸು. ಮಹಾದೇವನ ಆಜ್ಞಾನುಸಾರವಾಗಿ ಕ್ರಮವಾಗಿ ನಿನಗೆ ಅರವತ್ತು ಸಾವಿರಮಂದಿ ಮಕ್ಕಳು ಆಗುವರು. ಈ ವಿಷಯದಲ್ಲಿ ನೀನು ಮತ್ತೊಂದು ಆಲೋಚನೆಯನ್ನು ಮಾಡಬೇಡ’ ಎಂದು ಆಕಾಶವಾಣಿಯಾಯಿತು.

## ೧೦೭ನೇ ಅಧ್ಯಾಯ.—ತೀರ್ಥಯಾತ್ರಾಪ್ರಶಂಸೆ—(ಗಂಗಾವತರಣ.)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಲೋಮಶನು ಧರ್ಮರಾಯನನ್ನು ಕುರಿತು “ಎಲೈ ರಾಯನೆ, ಸಗರರಾಯನು ಆ ಅಶರೀರವಾಕ್ಯವನ್ನು ಕೇಳಿ, ಅದರಲ್ಲಿ ನಂಬಿಕೆಯನ್ನಿಟ್ಟು, ತುಪ್ಪದ ಗಡಿಗೆಗಳಲ್ಲಿ ಆ ಗರ್ಭದ ಬೀಜಗಳನ್ನು ಪ್ರತ್ಯೇಕಪ್ರತ್ಯೇಕವಾಗಿ ಇಟ್ಟು, ಅವುಗಳ ಸಂರಕ್ಷಣೆಗೋಸ್ಕರ ಅಷ್ಟುಮಂದಿ ದಾದಿಯರನ್ನು ನೇಮಿಸಿದನು. ಬಳಿಕ ಕೆಲವು ದಿವಸಗಳು ಕಳೆಯಲು, ಮಹಾದೇವನ ಅನುಗ್ರಹದಿಂದ ಅಧಿಕವಾದ ತೇಜಸ್ಸುಳ್ಳ ಅರವತ್ತುಸಾವಿರಮಂದಿ ರಾಜಕುಮಾರರು ಆ ಗಡಿಗೆಗಳ ದೆಸೆಯಿಂದ ಉತ್ಪನ್ನರಾದರು. ಕ್ರೂರರಾದ ಆ ಕುಮಾರರು ಗುಂಪುಕೂಡಿ, ಆಕಾಶದಲ್ಲಿಯೂ ಭೂಮಿಯಲ್ಲಿಯೂ ಸಂಚರಿಸುತ್ತ, ಸಕಲ ದೇವತೆಗಳನ್ನೂ ಗಂಧರ್ವರನ್ನೂ ರಾಕ್ಷಸರನ್ನೂ ಇತರರಾದ ಪ್ರಾಣಿಗಳನ್ನೂ ಬಾಧೆಪಡಿಸುತ್ತಿರಲು, ಅದನ್ನು ಸಹಿಸಲಾರದೆ ಸಕಲರಾದ ದೇವತೆಗಳೂ ಗುಂಪಾಗಿ ಹೋಗಿ

ಬ್ರಹ್ಮದೇವನಿಗೆ ಶರಣಾಗತರಾದರು. ಆಗ ಸರ್ವಲೋಕಪಿತಾಮಹನಾದ ಬ್ರಹ್ಮನು ಆ ದೇವತೆಗಳನ್ನು ಕುರಿತು 'ಎಲೈ ದೇವತೆಗಳಿರಾ, ಸಗರರಾಯನ ಕುಮಾರರು ತಮ್ಮ ದುಷ್ಕೃತ್ಯದಿಂದಲೇ ಜಾಗ್ರತೆಯಾಗಿ ನಷ್ಟರಾಗಿ ಹೋಗುವರು. ನೀವು ಚಿಂತಿಸತಕ್ಕ ಕೆಲಸವಿಲ್ಲ. ನಿಮ್ಮನಿಮ್ಮ ಸ್ಥಾನಗಳಿಗೆ ಹೊರಟು ಹೋಗಿರಿ' ಎನಲು, ದೇವತೆಗಳೆಲ್ಲರೂ ಬ್ರಹ್ಮದೇವನ ಆಜ್ಞೆಯಿಂದ ತಮ್ಮತಮ್ಮ ಸ್ಥಾನಗಳಿಗೆ ಹೊರಟು ಹೋದರು. ಬಳಿಕ ಕೆಲವುಕಾಲ ಕಳೆದಮೇಲೆ, ಸಗರಚಕ್ರವರ್ತಿಯು ಅಶ್ವಮೇಧಯಾಗಕ್ಕೆ ದೀಕ್ಷಿತನಾಗಿ, ಆ ಯಾಗದ ಕುದುರೆಯನ್ನು ಭೂಮಂಡಲ ಸಂಚಾರಾರ್ಥವಾಗಿ ಬಿಟ್ಟು, ತನ್ನ ಮಕ್ಕಳನ್ನು ಅವರ ಸಂರಕ್ಷಣಾರ್ಥವಾಗಿ ಕಳುಹಿಸಿಕೊಟ್ಟನು. ಆ ಕುದುರೆಯು ಅನೇಕದೇಶಗಳನ್ನು ಸುತ್ತಿಕೊಂಡು ಹೋಗಿ, ಬಣಗಿಹೋಗಿ ಭಯಂಕರವಾಗಿರುವ ಸಮುದ್ರಪ್ರದೇಶವನ್ನು ಹೊಕ್ಕು, ಅಲ್ಲಿ ಸಗರರಾಯನ ಮಕ್ಕಳು ಬಹುಪ್ರಯತ್ನದಿಂದ ರಕ್ಷಿಸುತ್ತಿದ್ದರೂ, ಅವರ ಕಣ್ಣಿಗೆ ಕಾಣಿಸದೆ ಹೋಯಿತು. ಆಗ ಸಗರಕುಮಾರರು ಯಾರೋ ಕುದುರೆಯನ್ನು ಅಪಹರಿಸಿದರೆಂದು ತಿಳಿದು, ತಮ್ಮ ತಂದೆಯ ಸಮೀಪಕ್ಕೆ ಬಂದು ಆ ವೃತ್ತಾಂತವನ್ನು ತಿಳುಹಿಸಲು, ಸಗರನು ಮಕ್ಕಳನ್ನು ಕುರಿತು 'ಎಲ್ಲಾ ದಿಕ್ಕುಗಳಿಗೂ ನೀವು ಹೋಗಿ ಆ ಕುದುರೆಯನ್ನು ಹುಡುಕಿ ಗೊತ್ತುಮಾಡಬೇಕು' ಎಂದು ಆಜ್ಞಾಪಿಸಿದನು. ಆತನ ಆಜ್ಞೆಯನ್ನು ತೆಗೆದುಕೊಂಡು ಅರವತ್ತುಸಾವಿರ ರಾಜಕುಮಾರರು ಸಕಲಭೂಮಂಡಲವನ್ನೂ ಹುಡುಕಿ, ಕುದುರೆಯನ್ನೂ ಅದನ್ನು ಅಪಹಾರಮಾಡಿದವನನ್ನೂ ಸಹ ಕಾಣದೆ, ಪುನಃ ತಂದೆಯ ಸಮೀಪಕ್ಕೆ ಬಂದು, ಕೈಮುಗಿದುಕೊಂಡು 'ಎಲೈ ತಂದೆಯೆ, ಈ ಭೂಮಂಡಲವನ್ನೆಲ್ಲಾ ನಾವು ಸುತ್ತಿ ಅನೇಕ ನದೀ ನದ ಪರ್ವತ ಗುಹಾವನಾದಿ ಸಕಲ ಪ್ರದೇಶಗಳಲ್ಲೂ ಕುದುರೆಯನ್ನು ಹುಡುಕಿದ್ದಾಯಿತು. ಎಲ್ಲಿಯೂ ಆ ಕುದುರೆಯನ್ನೂ ಅದನ್ನು ಅಪಹಾರಮಾಡಿದವನನ್ನೂ ಸಹ ಕಾಣಲಿಲ್ಲ' ಎಂದರು. ಆ ಮಾತನ್ನು ಕೇಳಿ ಸಗರರಾಯನು ಕೋಪೋದ್ದೀಪಿತನಾಗಿ 'ಎಲೈ ಮಕ್ಕಳಿರಾ, ನೀವು ಪುನಃ ಇಲ್ಲಿಗೆ ಬರದೆ ಕುದುರೆಯನ್ನು ಹುಡುಕಿಕೊಂಡು ಹೋಗಿರಿ. ಆ ಕುದುರೆಯನ್ನು ತರದೆ ನೀವು ಬರಕೂಡದು' ಎಂದು ದೈವಯೋಗದಿಂದ ಇಂಥ ಮಾತುಗಳನ್ನಾಡಲು, ಅದೇಪ್ರಕಾರ ಆ ಅರವತ್ತು ಸಾವಿರಮಂದಿ ಕುಮಾರರೂ ಗುಂಪುಕೂಡಿ ಹೊರಟು, ಪುನಃ ಭೂಮಂಡಲಗಳೆಲ್ಲಾ ಹುಡುಕಿ, ಬಂದುಕಡೆ ಭೂಮಿಯು ಸೀಳಿರುವದನ್ನು ಕಂಡು, ಆ ಬಿಲವನ್ನು ಅನೇಕವಾದ ಗುದ್ದಲಿಗಳಿಂದ ವಿಸ್ತಾರವಾಗಿ ತೋಡಲುಪಕ್ರಮಿಸಲು, ವರುಣಲೋಕದಲ್ಲಿರುವ ಪ್ರಾಣಿಗಳಿಗೆ ಅಧಿಕವಾದ ಬಾಧೆಯುಂಟಾಗಿ, ಅದರಿಂದ ಅಲ್ಲಿದ್ದ ಅಸುರರೂ ರಾಕ್ಷಸರೂ ನಾಗರೂ ಇನ್ನೂ ಅನೇಕ ಪ್ರಕಾರವಾದ ಪ್ರಾಣಿಗಳೂ ದೀನಧ್ವನಿಯನ್ನು ಮಾಡುತ್ತಾ, ಶಿರಸ್ಸು ದೇಹ ಅಸ್ಥಿ ಸಂಧಿಬಂಧಗಳೆಲ್ಲವೂ ಭಿನ್ನಭಿನ್ನವಾಗಿ ಗುಂಪುಗುಂಪಾಗಿ ಹತರಾಗಿ ಹೋದರು. ಈ ಪ್ರಕಾರ ಸಗರರಾಯನ ಮಕ್ಕಳು ಭೂಮಿಯನ್ನು ತೋಡಿ, ಎಲ್ಲಿಯೂ ಕುದುರೆಯನ್ನು ಕಾಣದೆ ಕ್ಲೇಶಪಡುತ್ತಾ, ಬಹುಕಾಲವಾಗಲು ಅಧಿಕವಾದ ಕ್ರೋಧಾವೇಶವುಳ್ಳವರಾಗಿ, ಸಮುದ್ರದ ಈಶಾನದಿಕ್ಕಿನಲ್ಲಿ ಭೂಮಿಯನ್ನು ಬಹಳವಾಗಿ ತೋಡಿ ಪಾತಾಳವನ್ನು ಹೊಕ್ಕು, ಅಲ್ಲಿ ಸಂಚಾರಮಾಡುತ್ತಿದ್ದ ಆ ಕುದುರೆಯನ್ನೂ ಜ್ವಾಲೆಗಳಿಂದ ದೇದೀಪ್ಯಮಾನನಾದ ಯಜ್ಞೇಶ್ವರನಂತೆ ತೇಜೋರಾಶಿಯಾದ ಮಹಾತ್ಮನಾದ ಕಪಿಲಮಹರ್ಷಿಯನ್ನೂ ನೋಡಿ ಸಂತೋಷಭರಿತರಾಗಿ, ಕುದುರೆಯನ್ನು ಮರಳಿಸುವದಕ್ಕೆ ಕುತೂಹಲಪಡುತ್ತ, ಕಾಲಗತಿಯಿಂದ ಮಹಾತ್ಮನಾದ ಕಪಿಲಮಹರ್ಷಿಯನ್ನು ನಿರಾಕರಿಸಿ, ಆತನೇ ತಮ್ಮ ಕುದುರೆಯನ್ನು ಅಪಹರಿಸಿದವನೆಂದು ಕ್ರೋಧಾವೇಶವುಳ್ಳವರಾಗಿ ಆತನ ಮೇಲೆ ಬೀಳಲು, ಸಾಕ್ಷಾದ್ವಾಸುದೇವಸ್ವರೂಪನೆಂದು ಸಕಲರಿಂದಲೂ ಹೊಗಳಿಸಿಕೊಳ್ಳುತ್ತಿರುವ ಆ ಕಪಿಲಮಹರ್ಷಿಯು ಕೋಪದಿಂದ ಕಣ್ಣುಗಳನ್ನು ಕೆಂಪುಮಾಡಿಕೊಂಡು ಅವರೆಲ್ಲರನ್ನೂ ನೋಡಿದನು. ಅಷ್ಟುಮಾತ್ರಕ್ಕೇ ಆ ತೇಜಸ್ಸಿನಿಂದ ಮಂದಬುದ್ಧಿಗಳಾದ ಆ ಅರವತ್ತು ಸಾವಿರಮಂದಿ ಸಗರಕುಮಾರರೂ ಭಸ್ಮವಾಗಿ ಹೋದರು.

ಅದನ್ನು ನೋಡಿ ಮಹಾನುಭಾವನಾದ ನಾರದನು ಕೂಡಲೆ ಸಗರರಾಯನ ಬಳಿಗೆ ಬಂದು, ಆತನಿಗೆ ಆ ವೃತ್ತಾಂತವನ್ನು ತಿಳುಹಿಸಲು, ಆ ರಾಯನು ದುಃಖಕರವಾದ ಆ ಮಾತನ್ನು ಕೇಳಿ, ಒಂದು ಮುಹೂರ್ತಕಾಲ ವ್ಯಸನಪಟ್ಟು, ಮಹಾದೇವನ ವಾಕ್ಯವನ್ನು ಸ್ಮರಿಸಿ, ತನ್ನ ಮಗನಾದ ಅಸಮಂಜಸನ ಪುತ್ರನಾದ ಅಂಶುಮಂತನನ್ನು

ಕರೆನು, 'ಎಲೆ ಕುಮಾರನೆ, ನನ್ನ ನಿಮಿತ್ತವಾಗಿ ಮಹಾಪರಾಕ್ರಮಶಾಲಿಗಳಾದ ಅರವತ್ತುಸಾವಿರಮಂದಿ ನನ್ನ ಮಕ್ಕಳು ಕಪಿಲಮಹರ್ಷಿಯ ತೇಜಸ್ಸಿನಿಂದ ನಷ್ಟರಾಗಿ ಹೋದರು. ನಿನ್ನ ತಂದೆಯಾದ ಕ್ರೂರಚರ್ಯನಾದ ಅಸಮಂಜಸನನ್ನೂ ಕೂಡ ಧರ್ಮರಕ್ಷಣೆಗಾಗಿಯೂ ಪ್ರಜೆಗಳ ಹಿತಾರ್ಥವಾಗಿಯೂ ಪರಿತ್ಯಾಗಮಾಡಿರುವೆನು. ಈ ಪುತ್ರಶೋಕದಿಂದಲೂ ಯಾಗಕ್ಕೆ ಉಂಟಾದ ವಿಘ್ನದಿಂದಲೂ ನಾನು ದುಃಖಸಮುದ್ರದಲ್ಲಿ ಮುಳುಗಿ ಹೋಗಿರುವೆನು. ನೀನು ಆ ಕುದುರೆಯನ್ನು ತಂದುಕೊಟ್ಟು, ನನಗೆ ಈ ದುಃಖವು ನಿವೃತ್ತಿಯಾಗುವಂತೆ ಮಾಡು' ಎಂದು ನುಡಿದನು" ಎಂಬದಾಗಿ ಲೋಮಶನು ಹೇಳಿದನು.

ಬಳಿಕ ಧರ್ಮರಾಯನು ಲೋಮಶನನ್ನು ನೋಡಿ "ಎಲೈ ಮಹಾನುಭಾವನೆ, ಲೋಕದಲ್ಲಿ ಮಕ್ಕಳನ್ನು ತ್ಯಜಿಸುವದು ಬಹಳ ಅಶಕ್ಯವಾದದ್ದು. ಹೀಗಿದ್ದರೂ, ಮಹಾರಾಜನಾದ ಸಗರರಾಯನು ತನ್ನ ಮಗನಾದ ಅಸಮಂಜಸನನ್ನು ಯಾತಕ್ಕೋಸ್ಕರ ಪರಿತ್ಯಜಿಸಿದನು?" ಎನಲು, ಲೋಮಶನು "ಎಲೈ ಧರ್ಮರಾಯನೆ, ಸಗರರಾಯನಿಂದ ಶೈಬ್ಯಾದೇವಿಯಲ್ಲಿ ಜನಿಸಿದ ಅಸಮಂಜಸನೆಂಬ ರಾಜಕುಮಾರನು ಪಟ್ಟಣವಾಸಿಗಳಾದ ಜನಗಳ ಮಕ್ಕಳನ್ನು ಬಲಾತ್ಕಾರವಾಗಿ ಹಿಡಿದು, ಅವರು ರೋದನಮಾಡುತ್ತಿದ್ದರೂ ಲಕ್ಷ್ಯಮಾಡದೆ ಅವರ ಕತ್ತನ್ನು ಕಿವಿಚಿ ಅವರನ್ನು ನದಿಯಲ್ಲಿ ಬಿಸಾಡುತ್ತಿದ್ದನು. ಅದನ್ನು ನೋಡಿ ಭಯಪಟ್ಟು ಶೋಕದಿಂದ ಪಟ್ಟಣವಾಸಿಗಳೆಲ್ಲರೂ ಸಗರರಾಜನ ಸಮೀಪಕ್ಕೆ ಬಂದು, ಕೈಮುಗಿದುಕೊಂಡು 'ಎಲೈ ಮಹಾರಾಜನೆ, ಪರರಾಷ್ಟ್ರದಿಂದ ಬರುವ ಶತ್ರುಗಳ ಭಯವನ್ನು ಪರಿಹರಿಸಿ ನಮ್ಮನ್ನು ಸಂರಕ್ಷಣೆಮಾಡುತ್ತಿರುವ ನೀನು ಈಗ ನಿನ್ನ ಮಗನಾದ ಕ್ರೂರನಾದ ಅಸಮಂಜಸನ ದೆಸೆಯಿಂದ ಉಂಟಾಗಿರುವ ಭಯವನ್ನು ಪರಿಹರಿಸಿ ನಮ್ಮನ್ನು ಸಂರಕ್ಷಿಸು' ಎಂದು ಬೇಡಿಕೊಂಡರು. ಆಗ ಸಗರರಾಯನು ಪಟ್ಟಣವಾಸಿಗಳ ಕ್ರೂರವಾದ ಆ ಮಾತನ್ನು ಕೇಳಿ, ಒಂದುಮುಹೂರ್ತ ಚಿಂತಾಕ್ರಾಂತನಾಗಿ, ತನ್ನ ಮಂತ್ರಿಗಳನ್ನು ಕುರಿತು 'ಎಲೈ ಮಂತ್ರಿಗಳಿರಾ, ನನ್ನ ಮಗನಾದ ಈ ಅಸಮಂಜಸನನ್ನು ಪಟ್ಟಣದಿಂದ ಹೊರಕ್ಕೆ ಕಳುಹಿಸಿಬಿಡತಕ್ಕದ್ದು. ನನಗೆ ಪ್ರಿಯವನ್ನೇ ನೀವು ಅಪೇಕ್ಷಿಸುವರಾದರೆ, ಈ ಕಾರ್ಯವನ್ನು ಜಾಗ್ರತೆಯಾಗಿ ನೆರವೇರಿಸಿ' ಎಂದು ನುಡಿದನು. ಆದನ್ನು ಕೇಳಿ ಮಂತ್ರಿಗಳು ರಾಜಾಜ್ಞೆಯಾದಂತೆ ಜಾಗ್ರತೆಯಾಗಿ ಅಸಮಂಜಸನನ್ನು ಅರಣ್ಯಕ್ಕೆ ಕಳುಹಿಸಿ ಬಿಟ್ಟರು. ಎಲೈ ಧರ್ಮರಾಯನೆ, ಈ ಪ್ರಕಾರ ಸಗರರಾಯನು ತನ್ನ ಮಗನ ದುಷ್ಕೃತ್ಯವನ್ನು ಸಹಿಸಲಾರದೆ ಪುರಜನರ ಹಿತಾರ್ಥವಾಗಿ ಅಸಮಂಜಸನನ್ನು ಅರಣ್ಯಕ್ಕೆ ಕಳುಹಿಸಿಬಿಟ್ಟನು. ಮುಂದೆ ಆ ಅಸಮಂಜಸನ ಮಗನಾದ ಅಂಶುಮಂತನ ಚರಿತ್ರೆಯನ್ನು ಹೇಳುವೆನು ಕೇಳು. ಆಗ ಅಂಶುಮಂತನು ಸಗರರಾಯನು ಹೇಳಿದ ಮಾತನ್ನು ಕೇಳಿ, ಅವನ ಆಜ್ಞಾನುಸಾರವಾಗಿ ಅರುವತ್ತುಸಾವಿರಮಂದಿ ಸಗರಪುತ್ರರು ಯಾವ ಭೂಮಿಯ ಬಿಲದಿಂದ ಪಾತಾಳಲೋಕಕ್ಕೆ ಪ್ರವೇಶಿಸಿದರೋ ಅದೇ ಮಾರ್ಗದಿಂದಲೇ ತಾನೂ ದುಃಖಪಡುತ್ತ ಪಾತಾಳಕ್ಕೆ ಹೋಗಿ, ಅಲ್ಲಿ ತೇಜೋರಾಶಿಯಾಗಿಯೂ ಪುರಾಣಋಷಿಯಾಗಿಯೂ ಮಹಾತ್ಮನಾಗಿಯೂ ಇರುವ ಕಪಿಲನನ್ನೂ ತಮ್ಮ ಯಜ್ಞದ ಕುದುರೆಯನ್ನೂ ಸಹ ನೋಡಿ, ಆ ಮಹಾತ್ಮನಿಗೆ ಸಾಷ್ಟಾಂಗನಮಸ್ಕಾರಮಾಡಿ, ತಾನು ಬಂದ ಕಾರ್ಯವನ್ನು ಆತನಿಗೆ ವಿಜ್ಞಾಪಿಸಿದನು. ಅದನ್ನು ಕೇಳಿ ಕಪಿಲಮಹರ್ಷಿಯು ಸಂತೋಷಪಟ್ಟು 'ಎಲೈ ರಾಜಕುಮಾರನೆ, ನಾನು ವರವನ್ನು ಕೊಡುವದಕ್ಕೆ ಸಿದ್ಧನಾಗಿರುವೆನು. ನೀನು ಬೇಕಾದ ವರವನ್ನು ಬೇಡು' ಎನಲು, ಆಗ ಅಂಶುಮಂತನು ಯಜ್ಞಸಾಂಗವಾಗಬೇಕೆಂದು ಯೋಚಿಸಿ, ಮೊದಲು ಕುದುರೆಯನ್ನು ಕೊಡಬೇಕೆಂದು ಒಂದು ವರವನ್ನೂ, ಬಳಿಕ ಭಸ್ಮರಾಶಿಯಾಗಿರುವ ತಮ್ಮ ಪಿತೃಗಳಿಗೆಲ್ಲ ಉತ್ತಮವಾದ ಗತಿಯುಂಟಾಗಬೇಕೆಂದು ಎರಡನೇ ವರವನ್ನೂ ಬೇಡಿದನು. ಅದನ್ನು ಕೇಳಿ ಮಹಾತೇಜಸ್ವಿಯಾದ ಕಪಿಲಮಹರ್ಷಿಯು 'ಎಲೈ ರಾಜಕುಮಾರನೆ, ನೀನು ಪ್ರಾರ್ಥಿಸಿದ ಈ ಎರಡು ವರಗಳನ್ನೂ ನಾನು ಕೊಟ್ಟಿರುವೆನು. ನಿನ್ನಿಂದಲೇ ಆ ಸಗರಮಹಾರಾಜನು ಕೃತಾರ್ಥನಾಗಿ ಪುತ್ರವಂತನೆಂದೆನ್ನಿಸಿಕೊಂಡಿರುವನು. ನಿನ್ನಲ್ಲಿಯೇ ಸತ್ಯವೂ ಧರ್ಮವೂ ಕ್ಷಮೆಯೂ ನೆಲೆಗೊಂಡಿರುವವು. ನಿನ್ನ ಪ್ರಭಾವದಿಂದಲೇ ಭಸ್ಮರಾಶಿಯಾಗಿರುವ ನಿಮ್ಮ ಪಿತೃಗಳೆಲ್ಲರೂ ಸ್ವರ್ಗವನ್ನು ಪಡೆಯುವರು. ನಿನ್ನ ಮೊಮ್ಮಗನಾದ ಭಗೀರಥನು ತಪಸ್ಸಿನಿಂದ ಮಹಾದೇವನನ್ನು ಸಂತೋಷಪಡಿಸಿ, ಭಸ್ಮರಾಶಿಯಾಗಿ ಬಿದ್ದಿರುವ

ನಿಮ್ಮ ಈ ಪಿತೃಗಳಿಗೆ ಉತ್ತಮವಾದ ಗತಿಯುಂಟಾಗುವದಕ್ಕೋಸ್ಕರ, ದೇವಲೋಕದಿಂದ ಗಂಗೆಯನ್ನು ತರುವನು. ಎಲೈ ರಾಜಕುಮಾರನೆ, ಮಹಾತ್ಮನಾದ ಸಗರಮಹಾರಾಜನ ಯಜ್ಞವು ನೆರವೇರಲಿ. ಜಾಗ್ರತೆಯಾಗಿ ನೀನು ಈ ಕುದುರೆಯನ್ನು ತೆಗೆದುಕೊಂಡು ಹೋಗು. ನಿನಗೆ ಮಂಗಳವಾಗಲಿ ' ಎಂದು ನುಡಿದನು.

ಬಳಿಕ ಅಂಶುಮಂತನು ಮಹಾತ್ಮನಾದ ಕಪಿಲಮಹರ್ಷಿಯ ಆಜ್ಞೆಯಿಂದ ಕುದುರೆಯನ್ನು ತೆಗೆದುಕೊಂಡು ಸಗರರಾಯನ ಯಜ್ಞಶಾಲೆಗೆ ಬಂದು, ಆತನ ಪಾದಗಳಿಗೆ ವಂದನೆಯನ್ನು ಮಾಡಲು, ಆಗ ಸಗರರಾಯನು ಆ ಅಂಶುಮಂತನನ್ನು ಆಲಿಂಗನೆಮಾಡಿಕೊಂಡು, ಶಿರಸ್ಸಿನಲ್ಲಿ ಆಘ್ರಾಣಮಾಡಲು, ಅಂಶುಮಂತನು ಆತನಿಗೆ ಅಲ್ಲಿ ನಡೆದ ಎಲ್ಲಾ ವೃತ್ತಾಂತವನ್ನೂ ತಿಳುಹಿಸಿ, ಯಜ್ಞಶಾಲೆಗೆ ಕುದುರೆಯು ಬಂದಿರುವದೆಂದು ವಿಜ್ಞಾಪಿಸಿದನು. ಅದನ್ನು ಕೇಳಿ ಸಗರರಾಯನು ಪುತ್ರಶೋಕವನ್ನು ಬಿಟ್ಟು, ಅಂಶುಮಂತನನ್ನು ಶ್ಲಾಘಿಸುತ್ತ, ಆ ಅಶ್ವಮೇಧಯಾಗವನ್ನು ನೆರವೇರಿಸಿ, ತಾನೂ ಸಕಲದೇವತೆಗಳಿಂದಲೂ ಬಹುಮಾನಿತನಾಗಿ, ತನ್ನ ಮಕ್ಕಳು ಸಮುದ್ರವನ್ನು ವಿಸ್ತಾರವಾಗಿ ತೋಡಿದ್ದರಿಂದ ಅವರಲ್ಲಿ ಪುತ್ರಭಾವವನ್ನಿರಿಸಿದನು. ಆ ಮೊದಲು ಸಮುದ್ರಕ್ಕೆ ಸಾಗರವೆಂದು ಹೆಸರುಂಟಾಯಿತು. ಹೀಗೆ ಸಗರರಾಯನು ಬಹುಕಾಲ ರಾಜ್ಯವನ್ನು ಪರಿಪಾಲಿಸುತ್ತ, ತನ್ನ ಮೊಮ್ಮಗನಾದ ಅಂಶುಮಂತನಿಗೆ ರಾಜ್ಯದಲ್ಲಿ ಪಟ್ಟಾಭಿಷೇಕ ಮಾಡಿ ಸ್ವರ್ಗವನ್ನು ಪಡೆದನು. ಬಳಿಕ ಮಹಾತ್ಮನಾದ ಅಂಶುಮಂತನು ಸಮುದ್ರಗಳಿಂದ ಸುತ್ತುವರಿಯಲ್ಪಟ್ಟ ಭೂಮಂಡಲವನ್ನು ತನ್ನ ಪಿತಾಮಹನಾದ ಸಗರರಾಯನ ಹಾಗೇ ಆಳುತ್ತಿರಲು, ಆತನಿಗೆ ಮಹಾಧರ್ಮಿಷ್ಠನಾದ ದಿಲೀಪನೆಂಬ ಕುಮಾರನು ಹುಟ್ಟಿದನು. ಬಳಿಕ ಅಂಶುಮಂತನು ದಿಲೀಪರಾಯನಿಗೆ ರಾಜ್ಯವನ್ನು ಕೊಟ್ಟು ತಾನು ಸ್ವರ್ಗವನ್ನು ಪಡೆದನು. ಬಳಿಕ ದಿಲೀಪಮಹಾರಾಜನು ತನ್ನ ಅರವತ್ತುಸಹಸ್ರಮಂದಿ ಪಿತೃಗಳೂ ಕಪಿಲಮಹರ್ಷಿಯ ತೇಜಸ್ಸಿನಿಂದ ಭಸ್ಮರಾಶಿಯಾಗಿ ಹೋದದ್ದನ್ನು ಕೇಳಿ ದುಃಖದಿಂದ ಸಂತಾಪಪಡುತ್ತ, ಅವರಿಗೆ ಉತ್ತಮವಾದ ಗತಿಯಾಗಬೇಕೆಂದು ಚಿಂತಿಸಿ, ಗಂಗೆಯನ್ನು ಭೂತಲಕ್ಕೆ ತರುವದಕ್ಕೋಸ್ಕರ, ತನ್ನ ಶಕ್ತಿಯಿರುವವರೆಗೂ ಮಹತ್ತಾದ ಪ್ರಯತ್ನವನ್ನು ಮಾಡಿದನು. ಆದರೂ ಆತನ ಮನೋರಥವು ನೆರವೇರದೆ ಹೋಯಿತು. ಆತನಿಗೆ ಅಸೂಯಾರಹಿತನೂ ಸತ್ಯಸಂಧನೂ ಧರ್ಮಾತ್ಮನೂ ಆದ ಭಗೀರಥನೆಂದು ಪ್ರಸಿದ್ಧನಾದ ಒಬ್ಬ ಮಗನು ಹುಟ್ಟಿದನು. ಆಗ ದಿಲೀಪನು ಆತನಿಗೆ ರಾಜ್ಯಾಭಿಷೇಕವನ್ನು ಮಾಡಿ, ತಾನು ತಪೋವನಕ್ಕೆ ಹೋಗಿ ಮಹತ್ತಾದ ತಪಸ್ಸನ್ನು ಮಾಡುತ್ತ, ಯೋಗನಿಷ್ಠನಾಗಿದ್ದುಕೊಂಡು ಕಾಲಗತಿಯಿಂದ ಸ್ವರ್ಗವನ್ನು ಪಡೆದನು. ”

## ೧೦೯ನೇ ಅಧ್ಯಾಯ.—ತೀರ್ಥಯಾತ್ರಾಪ್ರಶಂಸೆ.—(ಗಂಗಾವತರಣ ಕಥನ).

ಅನಂತರದಲ್ಲಿ ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯ ರಾಯನೆ, ಬಳಿಕ ಲೋಮಶನು ಧರ್ಮರಾಯನನ್ನು ಕುರಿತು “ ಎಲೈ ಧರ್ಮರಾಯನೆ, ಮಹಾರಥಿಕನೂ ಚಕ್ರವರ್ತಿಯೂ ಆದ ಆ ಭಗೀರಥನು ಸಕಲಜನಗಳ ನೇತ್ರಗಳಿಗೂ ಮನಸ್ಸಿಗೂ ಆನಂದಕರನಾಗಿ ಧರ್ಮದಿಂದ ಪ್ರಜಾಪರಿಪಾಲನೆಯನ್ನು ಮಾಡುತ್ತ, ಕಪಿಲಮಹರ್ಷಿಯ ತೇಜಸ್ಸಿನಿಂದ ತಮ್ಮ ಪಿತೃಗಳು ಭಸ್ಮರಾಸಿಯಾಗಿ ಹೋದದ್ದನ್ನು ಕೇಳಿ ಚಿಂತಾಕ್ರಾಂತವಾದ ಮನಸ್ಸುಳ್ಳವನಾಗಿ, ತಮ್ಮ ಪಿತೃಗಳಿಗೆ ಸ್ವರ್ಗಪ್ರಾಪ್ತಿಯಾಗಬೇಕೆಂದು ನಿಶ್ಚಯಿಸಿ, ತನ್ನರಾಜ್ಯಭಾರವನ್ನು ಮಂತ್ರಿಗಳಿಗೆ ವಹಿಸಿಕೊಟ್ಟು, ಗಂಗೆಯನ್ನು ಭೂತಲಕ್ಕೆ ತರಬೇಕೆಂಬ ಮನೋರಥವುಳ್ಳವನಾಗಿ, ತಪಸ್ಸನ್ನುಮಾಡುವದಕ್ಕೋಸ್ಕರ ಹಿಮವತ್ಪರ್ವತದ ಪ್ರಾಂತ್ಯಕ್ಕೆ ಹೋದನು. ಆ ಪರ್ವತವು ಅನೇಕ ವಿಧವಾದ ಗೈರಿಕಾದಿಧಾತುಗಳಿಂದ ಕೂಡಿದ ಕೋಡುಗಲ್ಲುಗಳಿಂದಲೂ, ಜೋಲಾಡುತ್ತಿರುವ ಮೇಘಗಳಿಂದ ಕೂಡಿದ ಕೋಡುಗಲ್ಲುಗಳಿಂದಲೂ, ಜೋಲಾಡುತ್ತಿರುವ ಮೇಘಗಳಿಂದ ಕೂಡಿದ ಶಿಖರಭಾಗಗಳಿಂದಲೂ, ಗಿರಿನದಿಗಳಿಂದಲೂ, ಲತಾಗೃಹಗಳಿಂದಲೂ, ಶೋಭಿತವಾದ ಅರತಪ್ಪಲುಗಳಿಂದಲೂ, ದೇವತೆಗಳಿಗೆ ವಾಸಸ್ಥಾನವಾದ ಮನೋಹರವಾದ ಪ್ರದೇಶಗಳಿಂದಲೂ ಕಂಗೊಳಿಸುತ್ತಿತ್ತು. ಮತ್ತು ಆ ಪರ್ವತವು ಗುಹೆಗಳಲ್ಲಿಯೂ ದರಿಗಳಲ್ಲಿಯೂ ವಾಸಮಾಡುವ

ಸಿಂಹ ಹುಲಿ ಮೊದಲಾದ ಮೃಗಗಳಿಂದ ಸೇವಿತವಾಗಿಯೂ, ತುಂಬಿಗಳ ಝೇಂಕಾರದಿಂದಲೂ, ವಿಚಿತ್ರವಿಚಿತ್ರವಾದ ಹಂಸ ಚಾತಕ ನವಿಲು ಮರಕುಟಿಗ ಚಕೋರ ಕೋಗಿಲೆ ಪುತ್ರಪ್ರಿಯ ಮೊದಲಾದ ಪಕ್ಷಿಗಳ ಬಗೆಬಗೆಯಾದ ಧ್ವನಿಗಳಿಂದಲೂ, ಅಲ್ಲಲ್ಲಿ ಮನೋಹರವಾಗಿರುವ ಸರೋವರಗಳಲ್ಲಿ ಬೆಳೆದಿರುವ ತಾವರೇಬಳ್ಳಿಗಳಿಂದಲೂ ರಂಜಿಸುತ್ತಿತ್ತು. ಮತ್ತು ಆಪರ್ವತವು ಅಲ್ಲಲ್ಲಿ ಕುಲ್ಲುಗಳ ಮೇಲೆ ಕುಳಿತು ವಿಹರಿಸುತ್ತಿರುವ ಕಿನ್ನರರಿಂದಲೂ, ಅಪ್ಸರಸ್ತ್ರೀಯರಿಂದಲೂ, ವಿದ್ಯಾಧರರಿಂದಲೂ ಪ್ರಕಾಶಿಸುತ್ತ, ತಟಪ್ರದೇಶಗಳಲ್ಲಿ ದಿಗ್ಗಜಗಳ ಕೊಂಬುಗಳಿಂದ ತಿವಿಯಲ್ಪಟ್ಟು ಮುರಿದು ಹೋಗಿರುವ ದೊಡ್ಡದೊಡ್ಡ ಮರಗಳಿಂದಲೂ, ಕ್ರೂರವಾದ ವಿಷಜ್ವಾಲೆಗಳೊಡನೆ ಭಯಂಕರವಾದ ನಾಲಿಗೆಗಳನ್ನು ಚಾಚುತ್ತಿರುವ ಹಾವುಗಳಿಂದಲೂ ಭಯಂಕರವಾಗಿತ್ತು. ಕೆಲವುಕಡೆ ಚಿನ್ನದ ಬಣ್ಣವುಳ್ಳದ್ದಾಗಿಯೂ, ಕೆಲವುಕಡೆ ಬೆಳ್ಳೀ ಬಣ್ಣವುಳ್ಳದ್ದಾಗಿಯೂ, ಕೆಲವುಕಡೆ ಕಾಡಿಗೇಬಣ್ಣವುಳ್ಳದ್ದಾಗಿಯೂ ತೋರುತ್ತಿತ್ತು. ಇಂಥಾ ಹಿಮವತ್ಪರ್ವತವನ್ನು ಸೇರಿ, ಭಗೀರಥರಾಯನು ಕಂದಮೂಲಫಲಗಳನ್ನೂ ನೀರನ್ನೂ ಆಹಾರಮಾಡಿಕೊಂಡು ಒಂದು ದಿವ್ಯಸಹಸ್ರವರ್ಷಪರ್ಯಂತವೂ ಅಲ್ಲಿ ತಪಸ್ಸು ಮಾಡಿಕೊಂಡಿದ್ದನು. ಬಳಿಕ ಗಂಗೆಯು ಆತನ ತಪಸ್ಸಿಗೆ ಮೆಚ್ಚಿ ಸ್ತ್ರೀರೂಪವನ್ನು ತಾಳಿಕೊಂಡು ಆತನಿಗೆ ಪ್ರತ್ಯಕ್ಷಳಾಗಿ ‘ ಎಲೈ ರಾಯನೆ, ನನ್ನಿಂದ ಏನಾಗಬೇಕೆಂದು ತಪಸ್ಸನ್ನು ಮಾಡುತ್ತಿರುವೆ ! ನಾನು ನಿನಗೇನು ವರವನ್ನು ಕೊಡಲಿ ? ಹೇಳು. ಅದನ್ನು ನಾನು ನಡೆಯಿಸಿಕೊಡುವೆನು ’ ಎನಲು, ಭಗೀರಥರಾಯನು ‘ ಎಲೈ ಗಂಗೆಯೆ, ಅರವತ್ತು ಸಾವಿರಮಂದಿಯಾದ ನಮ್ಮ ಪಿತಾಮಹರು ಯಜ್ಞದ ಕುದುರೆಯನ್ನು ಹುಡುಕುವದಕ್ಕೋಸ್ಕರ ಪಾತಾಳವನ್ನು ಭೇದಿಸಿಕೊಂಡು ಹೋಗಿ, ಅಲ್ಲಿ ಕಪಿಲಮಹರ್ಷಿಯ ತೇಜಸ್ಸಿನಿಂದ ಭಸ್ಮೀಭೂತರಾಗಿರುವರು. ಅವರಿಗೆ ಸ್ವರ್ಗಗತಿಯಿಲ್ಲದೆ ಇರುವದು. ಆದ್ದರಿಂದ ನೀನು ಪ್ರವಹಿಸುತ್ತ ಭೂಲೋಕಕ್ಕೆ ಬಂದು, ಭಸ್ಮೀಭೂತರಾಗಿರುವ ಆವರನ್ನು ನಿನ್ನ ದಿವ್ಯವಾದ ಉದಕದಿಂದ ನೆನೆಯಿಸಿ, ಅವರೆಲ್ಲರಿಗೂ ಸ್ವರ್ಗಪ್ರಾಪ್ತಿಯಾಗುವಹಾಗೆ ಮಾಡು. ಆ ನಿಮಿತ್ತವಾಗಿಯೇ ಈ ಕಾರ್ಯವನ್ನು ನೀನು ಮಾಡಬೇಕೆಂದು ನಾನು ಬೇಡಿಕೊಳ್ಳುವೆನು ’ ಎಂದು ಪ್ರಾರ್ಥಿಸಿದನು. ಆಗ ಲೋಕವಂದ್ಯಳಾದ ಗಂಗೆಯು ಸಂತುಷ್ಟಳಾಗಿ ‘ ಎಲೈ ಭಗೀರಥನೆ, ನಿನ್ನ ಮಾತನ್ನು ನಾನು ನಡೆಯಿಸುವೆನು. ಈ ವಿಷಯದಲ್ಲಿ ಸಂದೇಹಕೆಲಸವಿಲ್ಲ. ಆದರೆ ನಾನು ಆಕಾಶಮಾರ್ಗದಿಂದ ಪ್ರವಾಹರೂಪವಾಗಿ ಬರುವ ಕಾಲದಲ್ಲಿ, ನನ್ನ ಮಹತ್ತಾದ ವೇಗವನ್ನು ಮೂರುಲೋಕದಲ್ಲಿ ಯಾರೂ ತಾಳತಕ್ಕವರಿಲ್ಲ. ಆ ವೇಗವನ್ನು ತಾಳಬೇಕಾದರೆ ಮಹಾದೇವನು ಹೊರತು ಇನ್ನ್ಯಾರಿಂದಲೂ ಆಗತಕ್ಕದ್ದಲ್ಲ. ಆದ್ದರಿಂದ ನೀನು ತಪಸ್ಸನ್ನು ಮಾಡಿ ಮಹಾದೇವನನ್ನು ಮೆಚ್ಚಿಸಿದ್ದೇ ಆದರೆ, ಆತನು ನಿನ್ನಲ್ಲಿ ಅನುಗ್ರಹಮಾಡಿ ನನ್ನ ಪ್ರವಾಹದ ವೇಗವನ್ನು ತನ್ನ ಶಿರಸ್ಸಿನಿಂದ ನಿರ್ವಹಿಸಿ, ನಿನ್ನ ಅರವತ್ತು ಸಾವಿರಮಂದಿ ಪಿತೃಗಳಿಗೂ ಉತ್ತಮವಾದ ಗತಿಯುಂಟಾಗುವಹಾಗೆ ಮಾಡುವನು ’ ಎಂದಳು. ಅನಂತರ ಭಗೀರಥರಾಯನು ಅಲ್ಲಿಂದ ಕೈಲಾಸಪರ್ವತಕ್ಕೆ ಹೋಗಿ, ಅಲ್ಲಿ ಘೋರವಾದ ತಪಸ್ಸನ್ನು ಮಾಡುತ್ತ ಕೆಲವು ದಿವಸದ ಮೇಲೆ ಮಹಾದೇವನನ್ನು ಸಂತೋಷಪಡಿಸಿ, ತನ್ನ ಪಿತೃಗಳಿಗೆ ಸ್ವರ್ಗಗತಿಯಾಗುವದಕ್ಕೋಸ್ಕರ ಗಂಗಾನದಿಯ ವೇಗವನ್ನು ಆ ಈಶ್ವರನು ತಾಳುವದಕ್ಕಾಗಿ ಆತನಿಂದ ವರವನ್ನು ಪಡೆದು ಕೊಂಡನು.”

### ೧೦೯ನೇ ಅಧ್ಯಾಯ.—ತೀರ್ಥಯಾತ್ರಾಪ್ರಶಂಸೆ.—(ಗಂಗಾವತರಣ ಕಥನ).

ಬಳಿಕ ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಲೋಮಶನು ಧರ್ಮರಾಯನನ್ನು ಕುರಿತು “ಎಲೈ ಧರ್ಮರಾಯನೆ, ಆಗ ಮಹಾದೇವನು ಭಗೀರಥನ ಮಾತನ್ನು ಕೇಳಿ ‘ ಎಲೈ ರಾಯನೆ, ಆಕಾಶಮಾರ್ಗದಿಂದ ಪ್ರವಹಿಸುವ ಪುಣ್ಯತಮವಾದ ಗಂಗಾನದಿಯನ್ನು ನಿನಗೋಸ್ಕರ ನಾನು ಶಿರಸ್ಸಿನಲ್ಲಿ ತಾಳುವೆನು ’ ಎಂದು ಹೇಳಿ, ನಾನಾವಿಧವಾದ ಆಯುಧಗಳನ್ನು ಧರಿಸಿರುವ ಪ್ರಮಥಗಣಗಳೊಡಗೂಡಿದ ಹಿಮವತ್ಪರ್ವತದ ಬಳಿಗೆ ಬಂದು, ಅಲ್ಲಿ ನಿಂತು ಭಗೀರಥನನ್ನು ಕುರಿತು ‘ ಎಲೈ ರಾಯನೆ, ಇನ್ನು ಗಂಗಾನದಿಯನ್ನು

ಭೂಲೋಕಕ್ಕೆ ಬರುವಂತೆ ಮಾಡು. ಆಕಾಶಮಾರ್ಗದಿಂದ ಧುಮುಕುವ ಆ ನದಿಯನ್ನು ನಾನು ಶಿರಸ್ಸಿನಿಂದ ತಾಳುವೆನು ' ಎಂದು ನುಡಿದನು. ಆ ಮಾತನ್ನು ಕೇಳಿ ಭಗೀರಥನು ಭಕ್ತಿಯಿಂದ ಮಹಾದೇವನಿಗೆ ನಮಸ್ಕಾರ ಮಾಡಿ, ನೇಮದಿಂದ ಗಂಗೆಯನ್ನು ಸ್ಮರಿಸಿದನು. ಬಳಿಕ ಪುಣ್ಯತಮವಾದ ಉದಕವುಳ್ಳ ಗಂಗೆಯು ಭಗೀರಥನು ತನ್ನನ್ನು ಸ್ಮರಿಸಿದ್ದನ್ನೂ ತನ್ನ ಪ್ರವಾಹದ ವೇಗವನ್ನು ತಾಳುವದಕ್ಕೆ ಮಹಾದೇವನು ಸಿದ್ಧನಾಗಿರುವದನ್ನೂ ತಿಳಿದು ಆಕಾಶದಿಂದ ಹೊರಟು, ದೊಡ್ಡದೊಡ್ಡದಾದ ಸುಳಿಗಳಿಂದಲೂ ಅನೇಕ ಜಲಚರಪ್ರಾಣಿಗಳಿಂದಲೂ ಕೂಡಿ ಹಿಮವತ್ಪರ್ವತದ ದೆಸೆಯಿಂದ ಪ್ರವಹಿಸಿದಳು. ಅದನ್ನು ನೋಡುವದಕ್ಕೋಸ್ಕರ ಅನೇಕಮಂದಿ ದೇವತೆಗಳೂ ಸಿದ್ಧರೂ ಮಹರ್ಷಿಗಳೂ ಗಂಧರ್ವರೂ ನಾಗರೂ ಯಕ್ಷರೂ ಸಹ ಬಂದಿದ್ದರು. ಆಗ ಈಶ್ವರನು ತನ್ನ ಲಲಾಟಪ್ರದೇಶದಲ್ಲಿ ಬಿದ್ದು ಮುತ್ತಿನ ಹಾರದಂತೆ ತೋರುತ್ತಿದ್ದ ಗಂಗಾನದಿಯನ್ನು ಶಿರಸ್ಸಿನಲ್ಲಿ ಧರಿಸಿದನು. ಬಳಿಕ ಆ ನದಿಯು ಈಶ್ವರನ ಶಿರಸ್ಸಿನ ದೆಸೆಯಿಂದ ಹೊರಟು, ಮೂರುಭಾಗವಾಗಿ ಪ್ರವಹಿಸುತ್ತ, ಹಂಸಪಕ್ಷಿಗಳ ಪಙ್ತಿಯಂತೆ ಪ್ರಕಾಶಿಸುವ ಮಹತ್ತಾದ ನೊರೆಯಿಂದ ಕೂಡಿ, ಕೆಲವುಸ್ಥಳದಲ್ಲಿ ಹಾವಿನಂತೆ ವಕ್ರಗತಿಯಿಂದ ಪ್ರವಹಿಸುತ್ತ, ಕೆಲವುಕಡೆ ನೆಟ್ಟಗೆ ಪ್ರವಹಿಸುತ್ತ, ನೊರೆಯೆಂಬ ಬಿಳೀಸೀರೆಯನ್ನುಟ್ಟ ಜಗನ್ಮಾತೆಯಂತೆ ತೋರುತ್ತ, ಕೆಲವು ಸ್ಥಳದಲ್ಲಿ ನೀರುಬೀಳುವ ವೇಗದಿಂದ ಮಹತ್ತಾದ ಶಬ್ದವನ್ನು ಮಾಡುತ್ತ, ವಿಚಿತ್ರವಿಚಿತ್ರವಾಗಿ ಭೂಮಿಯಮೇಲೆ ಪ್ರವಹಿಸುವದಕ್ಕೆ ಆರಂಭಿಸಿ, ಭಗೀರಥರಾಯನನ್ನು ನೋಡಿ ' ಎಲೈ ಮಹಾರಾಜನೆ, ನಿನ್ನ ನಿಮಿತ್ತವಾಗಿ ನಾನು ಭೂಲೋಕಕ್ಕೆ ಬಂದಿರುವೆನು. ಈಗ ನಾನು ಎತ್ತ ಪ್ರವಹಿಸಬೇಕು. ಹೇಳು ' ಎನಲು, ಆ ಮಾತನ್ನುಕೇಳಿ ಭಗೀರಥನು ರಥಾರೂಢನಾಗಿ, ತನ್ನ ಪಿತೃಗಳು ಎಲ್ಲಿ ಭಸ್ಮೀಭೂತರಾಗಿ ಬಿದ್ದಿದ್ದರೋ ಅತ್ತ ಹೊರಡಲು, ಗಂಗೆಯು ತಾನೂ ಆತನ ರಥವನ್ನೇ ಅನುಸರಿಸಿಕೊಂಡು ಹೊರಟಳು. ಇತ್ತ ಮಹಾದೇವನು ಸಕಲದೇವತೆಗಳಿಂದಲೂ ನಮಸ್ಕೃತನಾಗಿ ಆ ದೇವತೆಗಳೊಡನೆ ಕೈಲಾಸಪರ್ವತಕ್ಕೆ ತೆರಳಿದನು. ಬಳಿಕ ಭಗೀರಥರಾಯನು ಆ ಗಂಗೆಯನ್ನು ಜೊತೆಯಲ್ಲಿ ಕರೆದುಕೊಂಡು ಸಮುದ್ರದ ಬಳಿಗೆ ಹೋಗಿ, ಪುಣ್ಯತಮವಾದ ಆ ಗಂಗೋದಕದಿಂದ ಪೂರಣಮಾಡಿ, ಆ ನದಿಯನ್ನು ತನ್ನ ಮಗಳಂತೆ ಭಾವಿಸಿ, ಬಳಿಕ ಭಸ್ಮೀಭೂತರಾಗಿ ಬಿದ್ದಿದ್ದ ತನ್ನ ಪಿತೃಗಳಿಗೆಲ್ಲ ಆ ಗಂಗೋದಕದಿಂದಲೇ ತರ್ಪಣವನ್ನು ಮಾಡಿ ಪೂರ್ಣಮನೋರಥನಾದನು. ಎಲೈ ಧರ್ಮರಾಯನೆ, ಮಹಾತ್ಮನಾದ ಅಗಸ್ತ್ಯಮಹರ್ಷಿಯು ವಾತಾಪಿಯನ್ನು ಹ್ಯಾಗೆ ಕ್ಷಯವನ್ನು ಹೊಂದಿಸಿದನೋ ಹಾಗೆ, ಕಾಲೇಯರ ಸಂಹಾರಾರ್ಥವಾಗಿ ಸಮುದ್ರವನ್ನು ಪಾನಮಾಡಿ, ಕ್ಷಯವನ್ನು ಹೊಂದಿಸಿದನು. ಭಗೀರಥರಾಯನು ತನ್ನ ಪಿತೃಗಳಿಗೆಲ್ಲ ಉತ್ತಮವಾದ ಗತಿಯನ್ನುಂಟುಮಾಡುವದಕ್ಕೋಸ್ಕರ ಸ್ವರ್ಗಲೋಕದಿಂದ ಗಂಗಾನದಿಯನ್ನು ಭೂಲೋಕಕ್ಕೆ ತಂದು, ಪುಣ್ಯತಮವಾದ ಆ ಉದಕದಿಂದ ಸಮುದ್ರವನ್ನು ಪೂರಣಮಾಡಿದನು " ಎಂದು ಲೋಮಶನು ಧರ್ಮರಾಯನಿಗೆ ಹೇಳಿದನು.

---

### ೧೧೧ನೇ ಅಧ್ಯಾಯ.—ತೀರ್ಥಯಾತ್ರಾಪ್ರಶಂಸೆ—(ಋಶ್ಯಶೃಂಗೋಪಾಖ್ಯಾನ.)

ವೈಶಂಪಾಯನಮಹರ್ಷಿಯು ಜನಮೇಜಯರಾಯನನ್ನುಕುರಿತು—ಎಲೈ ಜನಮೇಜಯರಾಯನೇ ಕೇಳು, ಬಳಿಕ ಧರ್ಮರಾಯನು ಕ್ರಮವಾಗಿ ಹೊರಟು, ಪಾಪಭೀತಿಯನ್ನು ಪರಿಹಾರಮಾಡತಕ್ಕ ನಂದಾ ಪರಮನಂದಾ ಎಂಬ ನದಿಗಳನ್ನು ಕಂಡು, ಬಳಿಕ ಆರೋಗ್ಯಕರವಾದ ಹೇಮಕೂಟಪರ್ವತಕ್ಕೆ ಹೋಗಿ ಅಲ್ಲಿ ಹೇಳುವದಕ್ಕೆ ಅಶಕ್ಯವಾಗಿಯೂ ಆಶ್ಚರ್ಯಕರವಾಗಿಯೂ ಇರುವ ಅನೇಕಪದಾರ್ಥಗಳನ್ನು ಕಂಡನು. ಆ ಪರ್ವತವನ್ನು ನೋಡಿದ ಜನಗಳೆಲ್ಲರೂ ಗಾಳಿಯಿಂದ ಸೇರಿಸಿ ಬಿಗಿದಿರುವ ಮೇಘಗಳನ್ನೂ ಮಹತ್ತಾದ ಅನೇಕ ಶಿಲೆಗಳನ್ನೂನೋಡಿ, ಹತ್ತುವದಕ್ಕೆ ಸಾಮರ್ಥ್ಯವಿಲ್ಲದೆ ವ್ಯಸನಾಕ್ರಾಂತರಾಗುವರು. ಆ ಪರ್ವತದಲ್ಲಿ ಯಾವಾಗಲೂ ಗಾಳಿಯು ಬೀಸುತ್ತಿರುವದು ; ಯಾವಾಗಲೂ ಅಲ್ಲಿ ದೇವೇಂದ್ರನು ವರ್ಷಿಸುತ್ತಿರುವನು. ಮತ್ತು ಅಲ್ಲಿ ಯಾವಾಗಲೂ ವೇದಘೋಷವು ಕೇಳಬರುವದು ; ವೇದಾಧ್ಯಯನವನ್ನು ಮಾಡತಕ್ಕವರುಮಾತ್ರ ಕಣ್ಣಿಗೆ ಕಾಣಿಸದೆ ಇರುವರು. ಸಾಯಂಕಾಲದಲ್ಲೂ

ಪ್ರಾತಃಕಾಲದಲ್ಲೂ ಅಗ್ನಿ ಯಜ್ಞೇಶ್ವರನು ಕಾಣಬರುವನು; ಮತ್ತು ಅಲ್ಲಿ ತಪಸ್ವಿಗಳಾದವರ ತಪಸ್ಸಿಗೆ ವಿಘ್ನವನ್ನು ಮಾಡತಕ್ಕ ಕಾಡುನೊಣಗಳು ಗುಂಪುಗುಂಪಾಗಿ ಬಂದು ಅಲ್ಲಿಗೆ ಹೋದ ಜನಗಳನ್ನು ಕಚ್ಚುವವು. ಅಲ್ಲಿಗೆ ಹೋದ ಜನರು ಆ ಪರ್ವತವನ್ನು ನೋಡುವದಕ್ಕಾಗದೆ, ವೈರಾಗ್ಯದಿಂದ ತಮ್ಮತಮ್ಮ ಮನೆಗೆ ಹೋಗಬೇಕೆಂದು ಮನಸ್ಸಿನಲ್ಲಿ ಯೋಚಿಸುವರು. ಈ ರೀತಿಯಾದ ಅನೇಕ ಆಶ್ಚರ್ಯಗಳನ್ನು ಕಂಡು, ಧರ್ಮರಾಯನು ಲೋಮಶನನ್ನು ನೋಡಿ "ಎಲೈ ಮಹಾತ್ಮನೆ, ಇದೇನು ಈ ಪರ್ವತದಲ್ಲಿ ಇಂಥಾ ಆಶ್ಚರ್ಯಗಳು ಇರುವವು ?" ಎಂದು ಪ್ರಶ್ನೆಮಾಡಲು, ಲೋಮಶಮಹರ್ಷಿಯು "ಎಲೈ ರಾಯನೆ, ಪೂರ್ವದಲ್ಲಿ ನಾನು ಹ್ಯಾಗೆ ಕೇಳಿದ್ದೆನೋ ಅದೇಪ್ರಕಾರ, ಅಲ್ಲಿನ ವೃತ್ತಾಂತವನ್ನು ಹೇಳುವೆನು: ನೀನು ಏಕಾಗ್ರಚಿತ್ತನಾಗಿ ಕೇಳು. ಈ ಪರ್ವತದ ಋಷಭಕೂಟವೆಂಬ ಒಂದು ಶಿಖರಪ್ರದೇಶದಲ್ಲಿ ಅನೇಕಸಹಸ್ರವರ್ಷಾಯುಸ್ಸುಳ್ಳ ಋಷಭನೆಂಬ ಒಬ್ಬ ತಪಸ್ವಿಯು ವಾಸಮಾಡುತ್ತಿರುವನು. ಆತನು ಬಹುಕೋಪಿಷ್ಠನಾದವನು. ಈ ಪರ್ವತಕ್ಕೆ ಬಂದವರು ತನ್ನನ್ನು ಮಾತನಾಡಿಸುತ್ತಿರಲು, ಆತನು ಕೋಪಗೊಂಡು ಆ ಪರ್ವತವನ್ನು ಕುರಿತು 'ಎಲೈ ಪರ್ವತನೆ, ಈ ಪರ್ವತಕ್ಕೆ ಬಂದು ಯಾವನಾದರೂ ಮಾತನಾಡಿದ್ದೇ ಆದರೆ, ಅವನಮೇಲೆ ನೀನು ದೊಡ್ಡದೊಡ್ಡ ಕಲ್ಲುಬಂಡೆಗಳನ್ನು ಕೆಡಹಿಬಿಡು' ಎಂದು ಹೇಳಿ ವಾಯುವನ್ನು ಕುರಿತು 'ಎಲೈ ವಾಯುವೆ, ನೀನು ಇಲ್ಲಿ ಶಬ್ದವನ್ನು ಮಾಡಕೂಡದು' ಎಂದು ನುಡಿದು, ಮೇಘವನ್ನು ಕುರಿತು 'ಎಲೈ ಮೇಘವೆ, ಇಲ್ಲಿ ಯಾವನಾದರೂ ಶಬ್ದವನ್ನು ಮಾಡಿದರೆ, ಅಂಥವನನ್ನು ನಿನ್ನ ಗರ್ಜನೆಯಿಂದ ಓಡಿಸಿಬಿಡು' ಎಂದು ಆಜ್ಞಾಪಿಸಿ, ಅಧಿಕವಾದ ಕ್ರೋಧದಿಂದ ಅಲ್ಲಿಗೆ ಯಾರೂ ಬರದಹಾಗೆ ಮಾಡಿದನು. ಆಗ ಅಲ್ಲಿದ್ದ ದೇವತೆಗಳೆಲ್ಲರೂ ಆ ಪರ್ವತವನ್ನು ಯಾರೂ ನೋಡದಹಾಗೆ ದುರ್ಗಮಸ್ಥಾನವನ್ನಾಗಿ ಮಾಡಿ ನಂದಾನದಿಗೆ ಬಂದುಬಿಟ್ಟರು. ಅದುಮೊದಲುಗೊಂಡು ದೇವತೆಗಳ ದರ್ಶನಾರ್ಥ ಹೋಗತಕ್ಕವರೆಲ್ಲರೂ ನಂದಾನದಿಗೆ ಹೋಗಲುಪಕ್ರಮಿಸಿದರು. ಅದ್ದರಿಂದ ಈ ಪರ್ವತವು ಯಾರು ನೋಡುವದಕ್ಕೂ ಅಶಕ್ಯವಾಗಿರುವದು. ಹೀಗಿರುವಲ್ಲಿ ಹತ್ತುವದಕ್ಕೆ ಹ್ಯಾಗಾದೀತು? ತಪಸ್ಸನ್ನು ಮಾಡದೆ ಇರತಕ್ಕ ಮೂಢಾತ್ಮನು ಈ ಪರ್ವತವನ್ನು ನೋಡುವದಕ್ಕೂ ಹತ್ತುವದಕ್ಕೂ ಸಮರ್ಥನಾಗಲಾರನು. ಆದಕಾರಣ ನೀನು ಮಾತನಾಡದೆ ಮೌನದಿಂದಿರು. ಈ ನಂದಾನದಿಯ ತೀರದಲ್ಲಿ ದೇವತೆಗಳು ಉತ್ತಮವಾದ ಅನೇಕಯಜ್ಞಗಳನ್ನು ಮಾಡಿರುವರು. ಆ ಯಜ್ಞಮಾಡಿದ ಗುರುತುಗಳೆಲ್ಲಾ ಈಗಲೂ ಇಲ್ಲಿ ಕಾಣಿಸುತ್ತಿರುವವು. ಈ ಪ್ರದೇಶದಲ್ಲಿ ಬೆಳೆದಿರುವ ಗರಿಕೆಗಳೆಲ್ಲಾ ದರ್ಭೆಯನ್ನು ಹಾಸಿದಹಾಗೆ ತೋರುತ್ತಿರುವವು. ಇಲ್ಲಿರುವ ವೃಕ್ಷಗಳೆಲ್ಲಾ ಯೂಪಸ್ತಂಭಗಳಹಾಗೆ ಕಾಣಿಸುತ್ತಿರುವವು. ಈಗಲೂ ಇಲ್ಲಿ ದೇವತೆಗಳೂ ಋಷಿಗಳೂ ವಾಸಮಾಡುತ್ತಿರುವರು. ಅವರು ಸಾಯಂಕಾಲದಲ್ಲೂ ಪ್ರಾತಃಕಾಲದಲ್ಲೂ ಮಾಡತಕ್ಕ ಅಗ್ನಿಹೋತ್ರದ ಯಜ್ಞೇಶ್ವರನು ಕಾಣಿಸಿಕೊಳ್ಳುತ್ತಿರುವನು. ಇಲ್ಲಿ ಸ್ನಾನಮಾಡಿದವರ ಪಾಪವು ತತ್ಕ್ಷಣದಲ್ಲಿ ನಿವೃತ್ತಿಯಾಗುವದರಿಂದ, ಎಲೈ ರಾಯನೆ, ನೀನು ತಮ್ಮಂದಿರೊಡಗೂಡಿ ಈ ಪುಣ್ಯತೀರ್ಥದಲ್ಲಿ ಸ್ನಾನವನ್ನು ಮಾಡು" ಎಂದನು. ಆಗ ಧರ್ಮರಾಯನು ಅಲ್ಲಿ ಸ್ನಾನವನ್ನು ಮಾಡಿ, ಬಳಿಕ ಪೂರ್ವದಲ್ಲಿ ವಿಶ್ವಾಮಿತ್ರಮಹರ್ಷಿಯು ಘೋರವಾದ ತಪಸ್ಸನ್ನು ಮಾಡಿದ ಕೌಶಿಕೀನದಿಗೆ ಹೋಗಿ, ಪುಣ್ಯತಮವಾಗಿಯೂ ಶೀತಳವಾಗಿಯೂ ಮಂಗಳಕರವಾಗಿಯೂ ಇರುವ ಆ ತೀರ್ಥದಲ್ಲಿ ಪರಿವಾರಸಹಿತನಾಗಿ ಸ್ನಾನವನ್ನು ಮಾಡಿ ನಿರ್ಮಲಚಿತ್ತನಾದನು.

ಬಳಿಕ ಲೋಮಶಮಹರ್ಷಿಯು "ಎಲೈ ರಾಯನೆ, ಪುಣ್ಯತಮವಾದ ಈ ಕೌಶಿಕೀನದಿಯು ದೇವತಾನದಿಯಾಗಿರುವದು. ಇದೋ ಅಲ್ಲಿಯೇ ರಮ್ಯವಾದ ವಿಶ್ವಾಮಿತ್ರಾಶ್ರಮವು ಪ್ರಕಾಶಿಸುತ್ತಿರುವದು. ಇದೋ ಇತ್ತಲಾಗಿಯೇ ಮಹಾತ್ಮನಾದ ವಿಭಾಂಡಕಮಹರ್ಷಿಯ ಪುಣ್ಯಾಶ್ರಮವು ಕಾಣಿಸುತ್ತಿರುವದು. ಆ ವಿಭಾಂಡಕಋಷಿಗೆ ಒಂದು ಹೆಣ್ಣುಜಿಂಕೆಯಲ್ಲಿ ತಪಸ್ವಿಯಾಗಿಯೂ ಜಿತೇಂದ್ರಿಯನಾಗಿಯೂ ಇರುವ ಋಷ್ಯಶೃಂಗನೆಂಬ ಒಬ್ಬ ಮಗನು ಜನಿಸಿದನು. ಕೆಲವುಕಾಲದಮೇಲೆ, ರೋಮಪಾದರಾಜನ ರಾಜ್ಯದಲ್ಲಿ ಮಹತ್ತಾದ ಅನಾವೃಷ್ಟಿಯುಂಟಾಗಿರಲು, ಆಗ ಮಹಾತ್ಮನಾದ ಋಷ್ಯಶೃಂಗನ ತಪಃಪ್ರಭಾವಕ್ಕೆ ಹೆದರಿ ದೇವೇಂದ್ರನು ಮಹತ್ತಾದ ವೃಷ್ಟಿಯನ್ನು ಕರೆದನು. ಬಳಿಕ ಆ ವೃಷ್ಟಿಯಿಂದ ಸಕಲಧಾನ್ಯಗಳೂ ಬೆಳೆಯಲು, ರೋಮಪಾದರಾಯನು ಸಂತುಷ್ಟನಾಗಿ ಸೂರ್ಯನು ಸಾವಿತ್ರಿಯನ್ನು ಕೊಟ್ಟಂತೆ ತನ್ನ ಮಗಳಾದ ಶಾಂತಾದೇವಿಯನ್ನು ಋಷ್ಯಶೃಂಗನಿಗೆ ಕೊಟ್ಟು ವಿವಾಹಮಾಡಿದನು" ಎಂದು ನುಡಿದನು.

ಬಳಿಕ ಧರ್ಮರಾಯನು ಲೋಮಶನನ್ನು ಕುರಿತು "ಎಲೈ ಮಹರ್ಷಿಯೆ, ಋಶ್ಯಶೃಂಗನು ವಿರುದ್ಧಜಾತಿಯಾದ ಹೆಣ್ಣುಜಿಂಕೆಯಲ್ಲಿ ಹುಟ್ಟಿದ್ದು ಹ್ಯಾಗೆ? ಮತ್ತು ಆತನ ತಪಸ್ಸು ಎಂಥಾದ್ದು? ರೋಮಪಾದನ ದೇಶದಲ್ಲಿ ಅನಾವೃಷ್ಟಿಪ್ರಾಪ್ತವಾಗಲು, ಬಾಲಕನಾದ ಋಶ್ಯಶೃಂಗನಿಗೆ ಭಯಪಟ್ಟುಕೊಂಡು ದೇವೇಂದ್ರನು ಮಳೆಯನ್ನು ಕರೆಯುವದಕ್ಕೆ ಕಾರಣವೇನು? ರೋಮಪಾದನ ಪುತ್ರಿಯಾದ ಶಾಂತಾದೇವಿಯು ಮೃಗಭೂತನಾದ ಋಶ್ಯಶೃಂಗನ ಮನಸ್ಸನ್ನು ಮೋಹಗೊಳಿಸಬೇಕಾದರೆ ಆಕೆಯ ರೂಪು ಎಂಥಾದ್ದು? ರೋಮಪಾದರಾಯನು ಧರ್ಮಾತ್ಮನೆಂದು ನಾವು ಕೇಳಿದ್ದೆವಲ್ಲಾ! ಅಂಥವನ ದೇಶದಲ್ಲಿ ದೇವೇಂದ್ರನು ವರ್ಷಿಸದಿರುವದಕ್ಕೆ ಕಾರಣವೇನು? ಇದನ್ನೆಲ್ಲಾ ಕೇಳಬೇಕೆಂದು ನನಗೆ ಕುತೂಹಲವುಂಟಾಗಿರುವದು ತಿಳುಹಿಸು" ಎಂದನು. ಅದಕ್ಕೆ ಲೋಮಶನು "ಎಲೈ ಧರ್ಮರಾಯನೆ, ತಪಸ್ಸಿನಿಂದ ಶುದ್ಧಾತ್ಮನೂ, ಅಮೋಘವಾದ ತೇಜಸ್ಸುಳ್ಳವನೂ, ಬ್ರಹ್ಮದೇವನಿಗೆ ಸಮಾನನೂ ಆದ ವಿಭಾಂಡಕನೆಂಬ ಬ್ರಹ್ಮರ್ಷಿಗೆ ಮಹಾನುಭಾವನಾದ ಋಶ್ಯಶೃಂಗನು ಹ್ಯಾಗೆ ಉತ್ಪನ್ನನಾದನೋ ಅದನ್ನು ವಿವರಿಸುವೆನು ಕೇಳು. ಮಹಾತ್ಮನಾದ ಆ ಋಶ್ಯಶೃಂಗನು ಬಾಲನಾದರೂ, ವೃದ್ಧರಿಗೆ ಸಮ್ಮತನಾದವನು. ಎಲೈ ಧರ್ಮರಾಯನೆ, ಒಂದಾನೊಂದು ದಿವಸ ದೇವತೆಗಳಿಗೆ ಸಮ್ಮತನಾದ ವಿಭಾಂಡಕಮಹರ್ಷಿಯು ಒಂದು ದೊಡ್ಡ ಮಡುವಿಗೆ ಹೋಗಿ, ಅಲ್ಲಿ ಬಹುಕಾಲ ತಪಸ್ಸುಮಾಡುತ್ತ ಬಹಳವಾಗಿ ಬಳಲಿರಲು, ಆ ಸಮಯದಲ್ಲಿ ಊರ್ವಶಿಯು ಆ ಮಡುವಿನ ಬಳಿಗೆ ಬಂದಳು. ಆ ಊರ್ವಶಿಯ ರೂಪಾತಿಶಯವನ್ನು ನೋಡಿ ವಿಭಾಂಡಕಋಷಿಯ ರೇತಸ್ಸು ಜಾರಿ ನೀರಿನಲ್ಲಿ ಬಿತ್ತು. ಅಲ್ಲಿ ನೀರನ್ನು ಕುಡಿಯುವದಕ್ಕೋಸ್ಕರ ಬಂದಿದ್ದ ಒಂದು ಹೆಣ್ಣುಜಿಂಕೆಯು ಉದಕದಲ್ಲಿ ಮಿಶ್ರವಾಗಿದ್ದ ಆ ರೇತಸ್ಸನ್ನು ಪಾನಮಾಡಿ ಗರ್ಭವನ್ನು ಧರಿಸಿತು. ಪೂರ್ವದಲ್ಲಿ ಲೋಕಕರ್ತನಾದ ಬ್ರಹ್ಮನು ಒಬ್ಬ ದೇವಕನ್ಯಕೆಗೆ ಏನೋ ಕಾರಣದಿಂದ ಹೆಣ್ಣುಜಿಂಕೆಯಾಗುವಂತೆ ಶಾಪವನ್ನು ಕೊಟ್ಟು, ಬಳಿಕ ಆಕೆಯು ಒಬ್ಬ ಋಷಿಕುಮಾರನನ್ನು ಪ್ರಸವಿಸಿದನಂತರ ಈ ಶಾಪವು ಕಳೆಯುವಂತೆ ಆಕೆಗೆ ಶಾಪಾವಸಾನವನ್ನೂ ಹೇಳಿದ್ದನು. ಹೀಗೆ ಬ್ರಹ್ಮದೇವನ ವಾಕ್ಯವು ಸತ್ಯವಾದ್ದರಿಂದಲೂ, ಇಂಥಾ ಸೃಷ್ಟಿಯು ಮುಂದಾಗಬೇಕಾಗಿದ್ದದ್ದರಿಂದಲೂ, ವಿಭಾಂಡಕಋಷಿಗೆ ಹೆಣ್ಣುಜಿಂಕೆಯಲ್ಲಿ ಋಶ್ಯಶೃಂಗನು ಉತ್ಪನ್ನನಾದನು. ಆತನು ನಿತ್ಯವೂ ಅರಣ್ಯದಲ್ಲೇ ವಾಸಮಾಡುತ್ತ ತಪಸ್ಸುಮಾಡಿಕೊಂಡಿದ್ದನು. ಆತನ ತಲೆಯಮೇಲೆ ಒಂದು ಕೊಂಬು ಇದ್ದದ್ದರಿಂದ ಋಶ್ಯಶೃಂಗನೆಂದು ಪ್ರಸಿದ್ಧಿಯುಂಟಾಯಿತು. ಆತನು ತಮ್ಮ ತಂದೆಯಾದ ವಿಭಾಂಡಕ ಹೊರತು ಮತ್ತೊಬ್ಬಮನುಷ್ಯನನ್ನು ನೋಡಿದವನೇ ಅಲ್ಲವಾದ್ದರಿಂದ, ಯಾವಾಗಲೂ ಆತನ ಮನಸ್ಸು ನಿಯತವಾಗಿ ಬ್ರಹ್ಮಚರ್ಯದಲ್ಲೇ ನೆಲೆಗೊಂಡಿತ್ತು. ಹೀಗಿರುವಲ್ಲಿ ದಶರಥರಾಯನಿಗೆ ಮಿತ್ರನಾದ ರೋಮಪಾದರಾಯನು ಅಂಗದೇಶಕ್ಕೆ ಅಧಿಪತಿಯಾಗಿದ್ದನು. ಆತನು ಒಬ್ಬ ಬ್ರಾಹ್ಮಣನಿಗೆ ಒಂದು ಪದಾರ್ಥವನ್ನು ಕೊಡುತ್ತೇನೆಂದು ಮಾತುಕೊಟ್ಟು, ಬಳಿಕ ನಾನು ಹಾಗೆ ಮಾತುಕೊಟ್ಟವನಲ್ಲವೆಂದು ಸುಳ್ಳಾಡಿದನು. ಆದ್ದರಿಂದ ಬ್ರಾಹ್ಮಣರೆಲ್ಲರೂ ಕೈಬಿಟ್ಟರು. ಹೀಗೆ ಆ ರಾಯನು ಬ್ರಾಹ್ಮಣದ್ರೋಹಮಾಡಿದ್ದರಿಂದಲೂ, ಪುರೋಹಿತನು ಯಾವದಕ್ಕೂ ಮಾತನಾಡದೆ ಸುಮ್ಮನೆ ಇದ್ದ ದೋಷದಿಂದಲೂ, ಪ್ರಜೆಗಳು ಎಷ್ಟು ಕಷ್ಟಪಡುತ್ತಿದ್ದರೂ ಇಂದ್ರನು ಮಳೆಯನ್ನು ಕರೆಯದೆಹೋದನು. ಆಗ ರೋಮಪಾದರಾಯನು ತಪಸ್ವಿಗಳಾಗಿಯೂ, ವಿದ್ವಾಂಸರಾಗಿಯೂ, ಮಳೆಯನ್ನು ಕರೆಯಿಸುವದರಲ್ಲಿ ಸಮರ್ಥರಾಗಿಯೂ ಇರುವ ಬ್ರಾಹ್ಮಣರನ್ನು ಕರೆಯಿಸಿ, ಅವರನ್ನು ಕುರಿತು 'ಎಲೈ ಮಹಾತ್ಮರೆ, ಪರ್ಜನ್ಯನು ವರ್ಷಿಸುವದಕ್ಕೆ ತಕ್ಕ ಉಪಾಯವನ್ನು ಹೇಳಿರಿ' ಎನಲು, ಆ ಬ್ರಾಹ್ಮಣರು ತಮ್ಮತಮ್ಮ ಅಭಿಪ್ರಾಯಗಳನ್ನು ನಾನಾಪ್ರಕಾರವಾಗಿ ಹೇಳಿದರು. ಆಗ ಅವರಲ್ಲಿ ಒಬ್ಬ ಋಷಿಯು ಅರಸನನ್ನು ಕುರಿತು 'ಎಲೈ ಅರಸೆ, ಬ್ರಾಹ್ಮಣರೆಲ್ಲರೂ ನಿನ್ನಮೇಲೆ ಕೋಪಗೊಂಡಿರುವರು. ಅದಕ್ಕೆ ನೀನು ಪರಿಹಾರೋಪಾಯವನ್ನು ಮಾಡಿಕೊ; ಮತ್ತು ಯಾವಾಗಲೂ ವನದಲ್ಲೇ ವಾಸಮಾಡುತ್ತ ಸುಂದರಸ್ತ್ರೀಯರನ್ನು ಕಂಡರೂ ಋಜುಭಾವವನ್ನು ತಪ್ಪದಿರುವ ಋಶ್ಯಶೃಂಗಮಹರ್ಷಿಯನ್ನು ಇಲ್ಲಿಗೆ ಕರೆತರಿಸುವ ಯತ್ನವನ್ನು ಮಾಡು. ದೈವಯೋಗದಿಂದ ಮಹಾತಪಸ್ವಿಯಾದ ಆತನು ನಿನ್ನ ದೇಶಕ್ಕೆ ಬಂದದ್ದೇಆದರೆ, ತತ್ಕಾಲದಲ್ಲೇ ವೃಷ್ಟಿಯಾಗುವದರಲ್ಲಿ ಸಂದೇಹವಿಲ್ಲ' ಎಂದು ನುಡಿದನು. ಆ ಮಾತನ್ನು ಕೇಳಿ ರೋಮಪಾದನು ಬ್ರಾಹ್ಮಣರಿಗೆ ತಾನು ಮಾಡಿದ

ಅಪರಾಧವನ್ನು ಹೋಗಲಾಡಿಸಿಕೊಳ್ಳಬೇಕೆಂದು ಯೋಚಿಸಿ, ಪ್ರಸನ್ನಚಿತ್ತರಾದ ಬ್ರಾಹ್ಮಣರ ಬಳಿಗೆ ಹೋಗಿ ಅವರನ್ನು ಪ್ರಸನ್ನೀಕರಿಸಿಕೊಂಡನು. ಅದನ್ನು ತಿಳಿದು ಸಕಲರಾದ ಪ್ರಜೆಗಳೂ ಸಂತೋಷಪಟ್ಟರು. ಬಳಿಕ ರೋಮಪಾದನು ಬುದ್ಧಿಶಾಲಿಗಳಾದ ಮಂತ್ರಿಗಳನ್ನು ಕರೆಯಿಸಿ, ಆ ಋಷ್ಯಶೃಂಗಮಹರ್ಷಿಯನ್ನು ತನ್ನ ದೇಶಕ್ಕೆ ಕರೆಯಿಸಬೇಕೆಂದು ಅವರೊಡನೆ ಮಂತ್ರಾಲೋಚನೆಯನ್ನು ಮಾಡಿ, ಅದಕ್ಕೆ ತಕ್ಕ ಉಪಾಯವನ್ನು ನಿಶ್ಚಯಿಸಿ, ಶಾಸ್ತ್ರಜ್ಞರಾಗಿಯೂ ನೀತಿಜ್ಞರಾಗಿಯೂ ಕಾರ್ಯಸ್ವರೂಪವನ್ನು ಬಲ್ಲವರಾಗಿಯೂ ಇರುವ ಬುದ್ಧಿಶಾಲಿಗಳಾದ ಜನಗಳನ್ನೂ ವೇಶ್ಯಾಸ್ತ್ರೀಯರನ್ನೂ ಸಹ ತನ್ನ ಬಳಿಗೆ ಕರೆತರಿಸಿ, ಅವರನ್ನು ಕುರಿತು 'ನೀವು ಋಷ್ಯಶೃಂಗಮಹರ್ಷಿಯ ಆಶ್ರಮಕ್ಕೆ ಹೋಗಿ ನಾನಾವಿಧವಾದ ಉಪಾಯಗಳಿಂದ ಆತನನ್ನು ಸ್ವಾಧೀನಪಡಿಸಿಕೊಂಡು, ನಮ್ಮ ದೇಶಕ್ಕೆ ಕರೆದುಕೊಂಡು ಬನ್ನಿರಿ' ಎಂದು ಹೇಳಿದನು. ಅದನ್ನು ಕೇಳಿ ವೇಶ್ಯಾಸ್ತ್ರೀಯರು ರಾಜಾಜ್ಞೆಗೆ ಭಯಪಟ್ಟು, ಹಾಗೆಯೇ ಋಷಿಶಾಪಕ್ಕೂ ಭೀತರಾಗಿ, ಏನೂ ತೋರದೆ ಮುಖಕೆಟ್ಟು, 'ಈ ಕಾರ್ಯವು ಅಸಾಧ್ಯವಾದದ್ದು' ಎಂದು ಹೇಳಿದರು. ಅವರಲ್ಲಿ ಒಬ್ಬ ವೃದ್ಧವೇಶ್ಯಾಸ್ತ್ರೀಯು 'ಎಲೈ ರಾಯನೆ, ತಪಸ್ವಿಯಾದ ಆ ಋಷ್ಯಶೃಂಗನನ್ನು ಈ ದೇಶಕ್ಕೆ ಕರೆತರುವದಕ್ಕೆ ನಾನು ತಕ್ಕ ಉಪಾಯವನ್ನು ಮಾಡುವೆನು. ನನ್ನ ಇಷ್ಟಾರ್ಥವನ್ನು ಪೂರಣಮಾಡುವಂತೆ ನೀನು ವಚನವನ್ನು ಕೊಟ್ಟದ್ದೇಆದರೆ, ಆ ಋಷಿಯನ್ನು ಇಲ್ಲಿಗೆ ಕರೆತರುವೆನು' ಎಂದು ನುಡಿದಳು. ಅದನ್ನು ಕೇಳಿ ರೋಮಪಾದನು ಹಾಗೇ ಆಗಲೆಂದು ಆಕೆಗೆ ಭಾಷೆಕೊಟ್ಟು, ಅನೇಕವಿಧವಾದ ರತ್ನವನ್ನೂ ಧನವನ್ನೂ ಸಹ ಆಕೆಗೆ ಕೊಟ್ಟನು. ಬಳಿಕ ಆ ವೃದ್ಧಸ್ತ್ರೀಯು ರೂಪವತಿಯರಾಗಿಯೂ, ಯೌವನವತಿಯರಾಗಿಯೂ, ಇರುವ ಕೆಲವುಮಂದಿ ವೇಶ್ಯಾಸ್ತ್ರೀಯರನ್ನು ತನ್ನ ಜೊತೆಯಲ್ಲಿ ಕರೆದುಕೊಂಡು ಋಷ್ಯಶೃಂಗಾಶ್ರಮಕ್ಕೆ ಹೊರಟಳು."

## ೧೧೧ನೇ ಅಧ್ಯಾಯ.—ತೀರ್ಥಯಾತ್ರಾಪ್ರಶಂಸೆ—(ವೇಶ್ಯಾಪ್ರೇರಣ).

ವೈಶಂಪಾಯನ ಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಲೋಮಶನು ಧರ್ಮರಾಯನನ್ನು ಕುರಿತು "ಎಲೈ ಧರ್ಮರಾಯನೆ, ಆ ವೃದ್ಧವೇಶ್ಯಾಸ್ತ್ರೀಯು ಅರಣ್ಯವನ್ನು ಹೊಕ್ಕು, ಆ ಋಷ್ಯಶೃಂಗಋಷಿಯ ಆಶ್ರಮದ ಸಮೀಪಕ್ಕೆ ಹೋಗಿ, ರಾಜಕಾರ್ಯಾರ್ಥವಾಗಿ ರಾಜಾಜ್ಞೆಯನ್ನು ಮೀರದೆ, ತನ್ನ ಬುದ್ಧಿಕೌಶಲ್ಯದಿಂದ ಅಲ್ಲಿ ಬಗೆಬಗೆಯಾದ ಪುಷ್ಪಫಲಗಳುಳ್ಳ ಕೃತ್ರಿಮವಾದ ವೃಕ್ಷಗಳಿಂದಲೂ ವಿಚಿತ್ರವಿಚಿತ್ರವಾದ ಬಳ್ಳಿಗಳಿಂದಲೂ ಲತಾಗೃಹಗಳಿಂದಲೂ ಕೂಡಿ ನೋಡುವವರ ಮನಸ್ಸಿಗೆ ರಮಣೀಯವಾಗಿಯೂ ಆಶ್ಚರ್ಯಕರವಾಗಿಯೂ ಇರತಕ್ಕ ಮತ್ತು ನಾವೆಯಿಂದ ದಾಟಿ ಹೋಗತಕ್ಕ ಸ್ಥಳದಲ್ಲಿ ಒಂದು ಆಶ್ರಮವನ್ನು ಕಲ್ಪಿಸಿ, ತನ್ನ ಸಂಗಡ ಕರೆದುಕೊಂಡು ಬಂದಿದ್ದ ಬುದ್ಧಿಶಾಲಿಗಳಾದ ಪುರುಷರನ್ನು ಕಳುಹಿಸಿಕೊಟ್ಟು, ಅವರಿಂದ ವಿಭಾಂಡಕಮಹರ್ಷಿಯು ಆಶ್ರಮದಿಂದ ಹೊರಕ್ಕೆ ಹೋದದ್ದನ್ನು ತಿಳಿದು, ಆ ಸಮಯದಲ್ಲಿ ತನ್ನ ಮಗಳಿಗೆ ಅಲಂಕಾರಮಾಡಿ, ಅವಳಿಗೆ ಋಷ್ಯಶೃಂಗಾಶ್ರಮಕ್ಕೆ ಹೋಗಿ ಮಾಡತಕ್ಕ ಕಾರ್ಯವನ್ನು ಬೋಧಿಸಿ, ಅಲ್ಲಿಗೆ ಕಳುಹಿಸಿ ಕೊಟ್ಟಳು. ಬುದ್ಧಿವತಿಯಾದ ಆ ವೇಶ್ಯಾಸ್ತ್ರೀಯು ಋಷ್ಯಶೃಂಗಮಹರ್ಷಿಯ ಆಶ್ರಮಕ್ಕೆ ಹೋಗಿ, ಆತನನ್ನು ಕಂಡು 'ಎಲೈ ಮುನಿಕುಮಾರನೆ, ನಿಮ್ಮಾಶ್ರಮದಲ್ಲಿರುವ ತಪಸ್ವಿಗಳೆಲ್ಲರೂ ಕುಶಲರೆ? ನಿಮ್ಮಾಶ್ರಮದಲ್ಲಿ ಕಂದಮೂಲ ಫಲಗಳು ಸಮೃದ್ಧಿಯಾಗಿರುವವೆ? ಈ ಆಶ್ರಮದಲ್ಲಿ ನೀನೂ ಕ್ಷೇಮದಿಂದ ವಾಸಮಾಡಿಕೊಂಡಿರುವೆಯಾ? ನಿನ್ನನ್ನು ನೋಡಬೇಕೆಂದು ನಾನು ಇಲ್ಲಿಗೆ ಬಂದಿರುವೆನು. ನಿಮ್ಮ ತಂದೆಯಾದ ತೇಜಸ್ವಿಯಾದ ವಿಭಾಂಡಕಮಹರ್ಷಿಯ ತಪಸ್ಸು ನಿತ್ಯವೂ ವೃದ್ಧಿಯನ್ನು ಹೊಂದುತ್ತಿರುವದೆ? ನೀನು ಪ್ರತಿದಿವಸದಲ್ಲೂ ವೇದಾಧ್ಯಯನವನ್ನು ಮಾಡಿಕೊಂಡು, ನಿಮ್ಮ ತಂದೆಯನ್ನು ಶುಶ್ರೂಷೆಯಿಂದ ಸಂತೋಷಪಡಿಸುತ್ತಿರುವೆಯಾ?' ಎಂದು ಪ್ರಶ್ನೆಮಾಡಲು, ಋಷ್ಯಶೃಂಗನು ಆ ವೇಶ್ಯಾಸ್ತ್ರೀಯನ್ನು ನೋಡಿ 'ಎಲೈ ಪೂಜ್ಯನೇ, ನೀನು ತೇಜಸ್ಸಿನಿಂದ ಸೂರ್ಯನಂತೆ ಪ್ರಕಾಶಿಸುತ್ತಿರುವೆ. ನಿನ್ನನ್ನು ನೋಡಿದರೆ, ನೀನು ನನಗೆ ನಮಸ್ಕಾರಯೋಗ್ಯನಾಗಿ ತೋರುವೆ. ಇದೋ ನಿನಗೆ ಪಾದ್ಯ

ವನ್ನೂ ಕಂದಮೂಲಫಲಗಳನ್ನೂ ಋಷಿಧರ್ಮಕ್ಕೆ ಅನುಸಾರವಾಗಿ ಸಮರ್ಪಣೆ ಮಾಡುವೆನು. ಇದನ್ನು ಸ್ವೀಕರಿಸಿ, ಮೇಲೆ ಕೃಷ್ಣಾಜಿನವನ್ನು ಹಾಸಿ ಮೆತ್ತಗಿರುವ ಈ ದರ್ಭಾಸನದಲ್ಲಿ ಸುಖವಾಗಿ ಕೂತುಕೊ. ನಿನ್ನ ಆಶ್ರಮವು ಎಲ್ಲಿರುವದು? ದೇವತೆಗಳಂತೆ ವ್ರತಾಚರಣೆಯನ್ನು ಮಾಡುತ್ತಿರುವ ನಿನ್ನ ನಾಮಧೇಯವೇನು?' ಎಂದು ಪ್ರಶ್ನೆಮಾಡಿದನು. ಅದನ್ನು ಕೇಳಿ ವೇಶ್ಯಾಸ್ತ್ರೀಯು 'ಎಲೈ ಋಷಿಕುಮಾರನೆ, ನಮ್ಮಾಶ್ರಮವು ಈ ಪರ್ವತಕ್ಕೆ ಮೂರು ಗಾವುದದಲ್ಲಿರುವದು. ನಿಮ್ಮಂಥವರಿಂದ ನಾವು ನಮಸ್ಕಾರ ಮಾಡಿಸಿಕೊಳ್ಳತಕ್ಕವರೂ ಅಲ್ಲ, ನಿಮ್ಮಿಂದ ಪಾದ್ಯವನ್ನು ಸ್ವೀಕರಿಸತಕ್ಕವರೂ ಅಲ್ಲ. ಇದು ನಮ್ಮ ಸ್ವಧರ್ಮವಾಗಿರುವದು. ಆದರೆ ನಿಮ್ಮಂಥವರಿಗೆ ನಮಸ್ಕಾರ ಮಾಡತಕ್ಕದ್ದೂ, ನಿನ್ನನ್ನು ಆಲಿಂಗನೆ ಮಾಡಿಕೊಳ್ಳತಕ್ಕದ್ದೂ, ಇವೆರಡೂ ನಮಗೆ ವ್ರತಾಚರಣೆಗಳಾಗಿರುವವು' ಎಂದು ನುಡಿದಳು. ಅದನ್ನು ಕೇಳಿ ಋಶ್ಯಶೃಂಗನು 'ಎಲೈ ಋಷಿಶ್ರೇಷ್ಠನೆ, ನಮ್ಮಾಶ್ರಮದಲ್ಲಿರುವ ಪಕ್ವವಾದ ಈ ನೆಲ್ಲೀಕಾಯಿಗಳನ್ನೂ, ಗೇರುಹಣ್ಣುಗಳನ್ನೂ, ಕಾರೇಹಣ್ಣುಗಳನ್ನೂ, ತೂಬರೇಹಣ್ಣುಗಳನ್ನೂ, ಪ್ರೇಂಖಣದ ಹಣ್ಣುಗಳನ್ನೂ, ಕುಡಗಲೇಹಣ್ಣುಗಳನ್ನೂ, ನಿನಗೆ ಕೊಡುವೆನು. ಇವುಗಳನ್ನು ನಿನ್ನ ಇಷ್ಟಾನುಸಾರವಾಗಿ ಸ್ವೀಕರಿಸು' ಎಂದು ನುಡಿದನು. ಬಳಿಕ ಆ ವೇಶ್ಯಾಸ್ತ್ರೀಯು ಆ ಹಣ್ಣುಗಳನ್ನೆಲ್ಲಾ ತೆಗೆದುಕೊಳ್ಳದೆ, ಎಂದಿಗೂ ಋಶ್ಯಶೃಂಗನು ತಿನ್ನದೆಯಿರತಕ್ಕ ರುಚಿಕರವಾದ ತಾನು ತಂದಿದ್ದ ಭಕ್ಷ್ಯಗಳನ್ನು ಆತನಿಗೆ ಕೊಟ್ಟು, ಬಳಿಕ ಪರಿಮಳಯುಕ್ತವಾದ ಪುಷ್ಪಹಾರಗಳನ್ನೂ ಪ್ರಕಾಶಮಾನವಾದ ಪೀತಾಂಬರಗಳನ್ನೂ ಕೊಟ್ಟು, ಬಳಿಕ ಉತ್ತಮೋತ್ತಮವಾದ ಪರಿಮಳೋದಕವನ್ನು ಕೊಟ್ಟು, ಆತನ ಸಂಗಡ ಸಂತೋಷದಿಂದ ಪರಿಹಾಸಮಾಡುತ್ತ ಸ್ವಲ್ಪಕಾಲ ಆಟವಾಡಿ, ಆತನ ಸಮೀಪದಲ್ಲಿ ಚಂಡಿನಾಟವನ್ನು ಆಡುತ್ತ ತನ್ನ ಹಾವಭಾವವಿಲಾಸಗಳನ್ನು ತೋರಿಸುತ್ತ, ಫಲವನ್ನು ತಾಳಿರುವ ಲತೆಯಂತೆ ಬಳುಕುತ್ತ, ಪುನಃಪುನಃ ಆತನನ್ನು ಗಾಢವಾಗಿ ಆಲಿಂಗನೆಯನ್ನು ಮಾಡಿಕೊಂಡು, ಆ ಆಶ್ರಮದಲ್ಲಿರುವ ಹೂವಿನ ಮರಗಳ ಕೊಂಬೆಗಳನ್ನು ಮೆಲ್ಲಗೆ ಬಗ್ಗಿಸಿಕೊಂಡು ಲಜ್ಜೆಪಡುವಳಂತೆ ಕಾಣಿಸುತ್ತ, ಮದಾತಿಶಯದಿಂದ ಆ ಋಷಿಕುಮಾರನನ್ನು ಮೋಹಪಡಿಸಿ, ಆತನ ಮನಸ್ಸು ವಿಕಾರವಾದದ್ದನ್ನು ತಿಳಿದು, ಪುನಃ ಆತನನ್ನು ಆಲಿಂಗಿಸಿಕೊಂಡು 'ಎಲೈ ಮುನಿಕುಮಾರನೆ, ನನಗೆ ಅಗ್ನಿಹೋತ್ರಕಾಲವು ಪ್ರಾಪ್ತವಾಗಿರುವದು. ಆದ್ದರಿಂದ ನಾನು ನಮ್ಮಾಶ್ರಮಕ್ಕೆ ಹೋಗಿ ಬರುವೆನು' ಎಂದು ಇಂಥ ನೆಪವನ್ನು ಮಾಡಿಕೊಂಡು, ಮೆಲ್ಲಗೆ ತಪ್ಪಿಸಿಕೊಂಡು ಹೊರಟುಹೋದಳು. ಬಳಿಕ ಋಶ್ಯಶೃಂಗನು ಕಾಮಮೋಹಿತನಾಗಿ, ಚಿತ್ತಸ್ಥೈರ್ಯವಿಲ್ಲದೆ, ರಹಸ್ಯವಾದ ಸ್ಥಳದಲ್ಲಿದ್ದುಕೊಂಡು ಆ ವೇಶ್ಯಾಸ್ತ್ರೀಯಲ್ಲೇ ಮನೋವೃತ್ತಿಯುಳ್ಳವನಾಗಿ, ಬಾರಿಬಾರಿಗೂ ನಿಟ್ಟುಸುರುಬಿಡುತ್ತ ವ್ಯಥೆಪಡುತ್ತಿದ್ದನು. ಒಂದು ಮುಹೂರ್ತದ ಮೇಲೆ ಸಿಂಹದಂತೆ ಹೊಂಬಣ್ಣವಾದ ನೇತ್ರಗಳುಳ್ಳವನಾಗಿಯೂ, ಕೈಕಾಲುಗಳಲ್ಲಿರುವ ಉಗುರುಗಳ ಕೊನೆವರೆಗೂ ಕೂದಲು ಬೆಳೆದಿರುವನಾಗಿಯೂ, ವೇದಾಧ್ಯಯನಪರನಾಗಿಯೂ, ಇರುವ ಯೋಗೀಂದ್ರನಾದ ವಿಭಾಂಡಕನು ತನ್ನ ಆಶ್ರಮಕ್ಕೆ ಬಂದು, ಚಿಂತಾಕ್ರಾಂತನಾಗಿಯೂ ವಿಪರೀತವಾದ ಬುದ್ಧಿಯುಳ್ಳವನಾಗಿಯೂ ಊರ್ಧ್ವದೃಷ್ಟಿಯಾಗಿ ಆಡಿಗಡಿಗೆ ನಿಟ್ಟುಸುರುಗಳನ್ನು ಬಿಡುತ್ತ ಏಕಾಕಿಯಾಗಿ ದೀನನಾಗಿ ಕೂತುಕೊಂಡಿರುವ ಪುತ್ರನಾದ ಋಶ್ಯಶೃಂಗನನ್ನು ನೋಡಿ 'ಪುತ್ರನೆ, ಅಗ್ನಿಹೋತ್ರಾರ್ಥವಾಗಿ ಸಮಿತ್ತುಗಳನ್ನು ಇನ್ನೂ ಯಾತಕ್ಕೋಸ್ಕರ ಸಿದ್ಧಪಡಿಸಲಿಲ್ಲ? ನೀನು ಅಗ್ನಿಹೋತ್ರವನ್ನು ಮಾಡಿದೆಯಾ? ಸ್ರುಕ್ಸ್ರುವಗಳನ್ನು ತೊಳೆದಿಟ್ಟೆಯಾ? ಹೋಮಧೇನುವನ್ನು ಕರೆಯುವದಕ್ಕೆ ಕರುವನ್ನು ಬಿಟ್ಟಾಯಿತೆ? ಇದೇನು, ನಿನ್ನನ್ನು ನೋಡಿದರೆ ಯಾವಾಗಲೂ ಇದ್ದಂತಿಲ್ಲ? ಈಗ ನೀನು ಬುದ್ಧಿವಿಕಾರವನ್ನು ಹೊಂದಿ ಚಿಂತಾಪರನಾಗಿ ಅಧಿಕವಾದ ದೀನದಶೆಯನ್ನು ಹೊಂದಿರುವಂತೆ ತೋರುತ್ತಿರುವದು. ನಮ್ಮಾಶ್ರಮಕ್ಕೆ ಯಾರಾದರೂ ಹೊಸಬರು ಬಂದಿದ್ದರೆ? ಹೇಳು' ಎಂದು ಕೇಳಿದನು."

---

## ೧೧೧ನೇ ಅಧ್ಯಾಯ.—ತೀರ್ಥಯಾತ್ರಾಪ್ರಶಂಸೆ—(ಋಶ್ಯಶೃಂಗನ ಪರಿತಾಪ.)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಲೋಮಶನು ಧರ್ಮರಾಯನನ್ನು ಕುರಿತು "ಎಲೈ ರಾಯನೆ, ಬಳಿಕ ಋಶ್ಯಶೃಂಗನು ವಿಭಾಂಡಕನನ್ನು

ಕುರಿತು 'ಎಲೈ ತಂದೆಯೆ, ಜಟಾಧಾರಿಯಾಗಿಯೂ, ಬ್ರಹ್ಮಚಾರಿಯಾಗಿಯೂ, ಅಷ್ಟೊಂದುಕುಳ್ಳೂ ಅಷ್ಟೊಂದು ಉದ್ದವೂ ಅಲ್ಲದೆ, ಸುವರ್ಣದಂತೆ ಶರೀರಕಾಂತಿಯುಳ್ಳವನಾಗಿಯೂ, ಕನ್ನೈದಿಲೆಯ ಎಸಳಿನಂತೆ ಕಣ್ಣುಗಳುಳ್ಳವನಾಗಿಯೂ, ದೇವತೆಗಳಂತೆ ಸ್ವಭಾವಸಿದ್ಧವಾದ ಸರ್ವಾವಯವಸೌಂದರ್ಯವುಳ್ಳವನಾಗಿಯೂ, ಸೂರ್ಯನಂತೆ ತೇಜೋವಂತನಾಗಿಯೂ, ಇದ್ದ ಒಬ್ಬ ಋಷಿಕುಮಾರನು ಇಲ್ಲಿಗೆ ಬಂದಿದ್ದನು. ಆತನ ಜಟೆಯು ನೀಲವರ್ಣವಾಗಿಯೂ, ನಿರ್ಮಲವಾಗಿಯೂ, ಸುಗಂಧಯುಕ್ತವಾಗಿಯೂ, ದೀರ್ಘವಾಗಿಯೂ, ಚಿನ್ನದ ದಾರದಿಂದ ಕಟ್ಟಲ್ಪಟ್ಟದ್ದಾಗಿಯೂ ಇತ್ತು. ಆತನ ಕತ್ತಿನಲ್ಲಿ ಗಿಡದ ಪಾತಿಯಂತೆ ಗುಂಡಾದ ಒಂದು ಪದಾರ್ಥವು ಆಕಾಶಮಾರ್ಗದಲ್ಲಿ ಹೊಳೆಯುವ ಮಿಂಚಿನಂತೆ ಪ್ರಕಾಶಿಸುತ್ತಿತ್ತು. ಆತನ ಕತ್ತಿನ ಕೆಳಗೆ ರೋಮಗಳು ಹುಟ್ಟದೆ ನುಣುಪಾಗಿಯೂ ಮನೋಹರವಾಗಿಯೂ ಇರುವ ಎರಡು ಗಂಟುಗಳು ಬೆಳೆದಿದ್ದವು. ಆತನ ನಡುವು ನಾಭಿಪ್ರದೇಶದಲ್ಲಿ ಮುಳುಗಿ ಹೋಗಿದ್ದಂತೆ ಅತ್ಯಂತ ಕೃಶವಾಗಿತ್ತು. ಆತನು ಉಟ್ಟಿದ್ದ ಅಂಗವಸ್ತ್ರದಮೇಲೆ ನನ್ನ ಮೌಂಜಿಯಂತೆ ಒಂದು ಸುವರ್ಣದ ಮೌಂಜಿಯು ಪ್ರಕಾಶಿಸುತ್ತಿತ್ತು. ಇನ್ನೊಂದು ಆಶ್ಚರ್ಯವನ್ನು ಕಂಡೆನು: ಆತನ ಕಾಲುಗಳಲ್ಲಿಯೂ ಕೈಗಳಲ್ಲಿಯೂ ನಮ್ಮ ಅಕ್ಷಮಾಲೆಯಂತಿದ್ದ ಆಭರಣವಿಶೇಷಗಳು ಆತನು ತಿರುಗಾಡುವ ಸಮಯದಲ್ಲಿ ಸರೋವರದಲ್ಲಿ ಮದಿಸಿದ ಹಂಸದಂತೆ ಮನೋಹರವಾಗಿ ಧ್ವನಿಯನ್ನು ಮಾಡುತ್ತಾ ಇದ್ದವು. ಆತನ ನಾರುಮಡಿಯು ಮೃದುವಾಗಿ ಆಶ್ಚರ್ಯಕರವಾಗಿ ತೋರುತ್ತಿತ್ತು. ನಮ್ಮ ನಾರುಮಡಿಗಳು ಅಷ್ಟೊಂದು ಶ್ಲಾಘ್ಯವಾಗಿಲ್ಲ. ಆತನ ಮುಖವು ನೋಡುವದಕ್ಕೆ ಬಹಳ ರಮ್ಯವಾಗಿತ್ತು. ಆತನ ಮಾತುಗಳು ಗಂಡುಕೋಗಿಲೆಯ ಧ್ವನಿಗೆ ಸಮಾನವಾಗಿ ಕೇಳತಕ್ಕವರ ಮನಸ್ಸಿಗೆ ಆಹ್ಲಾದಕರವಾಗಿತ್ತು. ಆ ಮಾತುಗಳನ್ನು ಕೇಳಿ ನನ್ನ ಮನಸ್ಸಿಗೆ ಏನೋ ಬಹಳ ಕಳವಳವುಂಟಾಗಿರುವದು. ವಸಂತಋತುವಿನಲ್ಲಿ ಮಂದಮಾರುತದಿಂದ ಕೂಡಿ ಪರಿಮಳಭರಿತವಾಗಿ ಶೋಭಿಸುವ ಉಪವನದಂತೆ ಆತನು, ಮಂದಮಾರುತವು ಬೀಸಲು, ಶ್ಲಾಘ್ಯವಾದ ಪರಿಮಳವನ್ನು ಬೀರುತ್ತ ಶೋಭಿಸುತ್ತಿದ್ದನು. ಎರಡು ಭಾಗವಾಗಿ ವಿಂಗಡಿಸಿದ್ದ ಆತನ ಜಟೆಗಳು ಗೋಜಿಲ್ಲದೆ ಮೃದುವಾಗಿ ಹಣೆಯ ಮೇಲ್ಭಾಗದಲ್ಲಿ ಹೊಳೆಯುತ್ತಿದ್ದವು. ಆತನ ಎರಡು ಕಿವಿಗಳು ಚಕ್ರವಾಕಪಕ್ಷಿಗಳಂತೆ ವಿಚಿತ್ರವಿಚಿತ್ರವಾದ ರೂಪವುಳ್ಳ ವಸ್ತುಗಳನ್ನು ತಳೆದಿದ್ದವು. ಆತನು ಬಲದಕೈಯಲ್ಲಿ ಗುಂಡಾಗಿಯೂ ವಿಚಿತ್ರವಾಗಿಯೂ ಇರುವ ಒಂದು ಹಣ್ಣನ್ನು ಹಿಡಿದುಕೊಂಡಿದ್ದನು. ಅದು ಭೂಮಿಯಮೇಲೆ ಬಿದ್ದದ್ದೇ ಆದರೆ ಪುನಃ ಮೇಲಕ್ಕೆ ಹಾರಿ ಆತನ ಕೈಗೇ ಬರುತ್ತಾ ನೋಡತಕ್ಕವರಿಗೆ ಅತ್ಯಾಶ್ಚರ್ಯಕರವಾಗಿತ್ತು. ಅದನ್ನು ನೆಲದಮೇಲೆ ತಿರುಗಿತಿರುಗಿ ಬಡಿಯುತ್ತ, ಆತನು ಗಾಳಿಯಿಂದ ಅಲುಗಾಡುವ ವೃಕ್ಷದಂತೆ ತಾನೂ ಅಲುಗಾಡುತ್ತಿದ್ದನು. ಇಂಥಾ ಆತನನ್ನು ನೋಡಿ ನನಗೆ ದೇವಕುಮಾರನನ್ನು ನೋಡಿದಂತೆ ಆತನಲ್ಲಿ ಅಧಿಕವಾದ ಪ್ರೀತಿಯೂ ಕುತೂಹಲವೂ ಉಂಟಾದವು. ಇದಲ್ಲದೆ ಆತನು ಆಡಿಗಡಿಗೆ ನನ್ನನ್ನು ಅಪ್ಪಿಕೊಂಡು, ನನ್ನ ಜಟೆಯನ್ನು ಹಿಡಿದು, ನನ್ನ ಮುಖವನ್ನು ಬಗ್ಗಿಸಿ, ನನ್ನ ಮುಖದಮೇಲೆ ತನ್ನ ಮುಖವನ್ನಿಟ್ಟು, ಮನೋಹರವಾಗಿ ಏನೋ ಒಂದು ಕಿರುದನಿಯನ್ನು ಮಾಡಿದನು. ಅದರಿಂದ ನನಗೆ ತುಂಬಾ ಸಂತೋಷವುಂಟಾಯಿತು. ಆತನು ನಾನು ಕೊಟ್ಟ ಅರ್ಘ್ಯಪಾದ್ಯಗಳನ್ನೂ ಫಲಗಳನ್ನೂ ಅಂಗೀಕರಿಸದೆ, ಇವೆಲ್ಲವನ್ನೂ ನಿಮ್ಮಿಂದ ತಾನು ತೆಗೆದುಕೊಳ್ಳಬಾರದೆಂಬ ನೇಮವನ್ನು ಮಾಡಿಕೊಂಡಿರುವದಾಗಿ ಹೇಳಿ, ತಾನು ತಂದಿದ್ದ ಅಪೂರ್ವವಾದ ಫಲಗಳನ್ನು ನನಗೆ ಕೊಟ್ಟನು. ಆಫಲಗಳನ್ನು ನಾನು ತೆಗೆದುಕೊಂಡು ಭುಂಜಿಸಲು, ಅವು ನಮ್ಮ ಆಶ್ರಮದಲ್ಲಿರುವ ಫಲಗಳಿಗಿಂತಲೂ ಅತಿ ರುಚಿಯಾಗಿದ್ದವು. ಮತ್ತು ಆ ಫಲಗಳಿಗೆ ನಮ್ಮಲ್ಲಿರುವ ಫಲಗಳ ಸಿಪ್ಪೆಯಹಾಗೆ ಸಿಪ್ಪೆಯಿರಲಿಲ್ಲವು. ಆ ಫಲಗಳಲ್ಲಿ ಬೀಜವೇ ಇಲ್ಲದೆ ಎಲ್ಲಾ ತಿರುಳೇ ಇತ್ತು. ಆ ಸುಂದರಾಂಗನು ಅತ್ಯಂತ ರುಚಿಕರವಾದ ಪರಿಮಳೋದಕವನ್ನು ಕೊಡಲು, ಅದನ್ನು ಕುಡಿದು ನನಗೆ ಅಧಿಕವಾದ ಸಂತೋಷವುಂಟಾಗಿ ಭೂಮಿಯು ಅಲುಗಾಡುವಹಾಗೆ ತೋರಿತು. ಈ ಪುಷ್ಪಮಾಲಿಕೆಗಳು ಪರಿಮಳಯುಕ್ತವಾದ ವಿಚಿತ್ರವಾದ ಆತನ ನಾರುಮಡಿಯಲ್ಲಿ ಕಟ್ಟಿದ್ದವು. ಇವುಗಳನ್ನೆಲ್ಲಾ ಇಲ್ಲಿ ಚೆಲ್ಲಾಡಿ ತಪಸ್ವಿಯಾದ ಆತನು ತನ್ನ ಆಶ್ರಮಕ್ಕೆ ಹೊರಟುಹೋದನು. ಆಗಲಿಂದಲೂ ನನ್ನ ಮನಸ್ಸು ವಿಕಾರವನ್ನು ಹೊಂದಿ, ಶರೀರವೆಲ್ಲಾ ಸಂತಾಪವನ್ನು ಹೊಂದಿರುವಹಾಗೆ ತೋರುತ್ತಿರುವದು. ಈಗ ನನಗೆ ಆತನ ಬಳಿಗೆ ಹೋಗಬೇಕೆಂದು ಬಹಳ ಕುತೂಹಲವುಂಟಾಗಿರುವದು.

ರಿದ್ದರಿಂದ ಈಗಲೇ ಅಲ್ಲಿಗೆ ಹೊರಟು ಹೋಗುತ್ತೇನೆ. ಎಲೈ ತಂದೆಯೆ, ಆತನ ಬ್ರಹ್ಮಚರ್ಯವ್ರತವು ಎಂಥಾದ್ದಾ ಗಿರುವದೋ ತಿಳಿಯದು. ಆ ಮಹಾತ್ಮನು ಎಂಥಾ ತಪಸ್ಸನ್ನು ಮಾಡುತ್ತಿರುವನೋ ಅಂಥಾತಪಸ್ಸನ್ನು ಮಾಡಬೇ ಕೆಂದು ನನಗೂ ಕುತೂಹಲವುಂಟಾಗಿರುವದು. ಅತನನ್ನು ಕಾಣದಿದ್ದರೆ ನನ್ನ ಮನಸ್ಸಿಗೆ ಬಹಳವಾಗಿ ಪರಿತಾಪ ಉಂಟಾಗುವದು ' ಎಂದು ನುಡಿದನು."

೧೧೩ನೇ ಅಧ್ಯಾಯ.—ತೀರ್ಥಯಾತ್ರಾಪ್ರಶಂಸೆ—(ಋಶ್ಯಶೃಂಗನನ್ನು ಅಂಗದೇಶಕ್ಕೆ ಒಯ್ಯುವಿಕೆ).

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಲೋಮಶನು ಧರ್ಮರಾಯನನ್ನು ಕುರಿತು "ಎಲೈ ಧರ್ಮರಾಯನೆ, ಬಳಿಕ ವಿಭಾಂಡಕನು ಮಗನ ಮಾತನ್ನು ಕೇಳಿ, ಆತನನ್ನು ಕುರಿತು 'ಎಲೈ ಪುತ್ರನೆ, ಇಲ್ಲಿಗೆ ಬಂದಿದ್ದವನು ರಾಕ್ಷಸನು. ಹೀಗೆ ಅದ್ಭುತವಾದ ರೂಪವನ್ನೂ ಅಸದೃಶವಾದ ಪರಾಕ್ರಮವನ್ನೂ ಧರಿಸಿ, ರಾಕ್ಷಸರು ತಪಸ್ವಿಗಳ ತಪಸ್ಸಿಗೆ ವಿಘ್ನವನ್ನು ಮಾಡುವದಕ್ಕೋಸ್ಕರ ಋಷ್ಯಾಶ್ರಮಗಳಲ್ಲಿ ಸಂಚರಿಸುತ್ತ, ವಿಚಿತ್ರವಾದ ರೂಪವನ್ನು ತಾಳಿ, ನಾನಾವಿಧವಾದ ಉಪಾಯಗಳಿಂದ ತಪಸ್ವಿಗಳನ್ನು ಮೋಹಪಡಿಸುತ್ತ, ಅವರಿಗೆ ಸುಖವನ್ನು ತೋರಿಸಿ, ಅವರಿಗೆ ಉಂಟಾಗತಕ್ಕ ಉತ್ತಮಗತಿಯನ್ನು ತಪ್ಪಿಸುವರು. ಸತ್ಪುರುಷರಿಗೆ ಆಗತಕ್ಕ ಉತ್ತಮಗತಿಯನ್ನು ಅಪೇಕ್ಷಿಸತಕ್ಕ ಜಿತೇಂದ್ರಿಯನಾದ ಋಷಿಯು ಅವರ ಸಹವಾಸವನ್ನು ಮಾಡಬಾರದು. ಪಾಪಿಷ್ಠರಾದ ಆ ರಾಕ್ಷಸರು ಯಾವಾಗಲೂ ತಪಸ್ವಿಗಳ ತಪಸ್ಸಿಗೆ ವಿಘ್ನವನ್ನುಂಟು ಮಾಡತಕ್ಕವರಾದ್ದರಿಂದ, ಋಷಿಗಳು ಅವರನ್ನು ಕಣ್ಣಿಂದಲೂ ನೋಡಕೂಡದು. ಎಲೈ ಪುತ್ರನೆ, ಅಸಜ್ಜನರು ಸೇವಿಸತಕ್ಕ ಮಧುರವಾದ ಅವರು ಕೊಟ್ಟ ಪಾನೀಯವನ್ನು ತೆಗೆದುಕೊಂಡದ್ದೇ ಆದರೆ ಅದರಿಂದ ಪಾಪವುಂಟಾಗುವದು. ಅವರು ಕೊಡತಕ್ಕ ಪರಿಮಳಯುಕ್ತವಾದ ವಿಚಿತ್ರವಾದ ಮನೋಹರವಾದ ಪುಷ್ಪಮಾಲಿಕೆಗಳು ಋಷಿಗಳಿಗೆ ಯೋಗ್ಯವಾದವುಗಳಲ್ಲ. ಇದೆಲ್ಲಾ ರಾಕ್ಷಸರ ಕೃತ್ಯವೆಂದು ತಿಳಿದುಕೊ' ಎಂದು ಋಶ್ಯಶೃಂಗನಿಗೆ ಬುದ್ಧಿವಾದವನ್ನು ಹೇಳಿ, ಬಳಿಕ ಆ ವಿಭಾಂಡಕನು ಮೂರುದಿವಸಗಳ ವರೆಗೂ ಆ ವೇಶ್ಯಾಸ್ತ್ರೀಯನ್ನು ಅಲ್ಲಲ್ಲಿ ಹುಡುಕಿ, ಆಕೆಯನ್ನು ಎಲ್ಲಿಯೂ ಕಾಣದೆ, ತನ್ನ ಆಶ್ರಮಕ್ಕೆ ಬಂದು, ವೇದೋಕ್ತಕ್ರಮದಿಂದ ಫಲಗಳನ್ನು ತೆಗೆದುಕೊಂಡು ಬರುವದಕ್ಕೋಸ್ಕರ ಅರಣ್ಯಕ್ಕೆ ಹೋದನು.

ಆ ಸಮಯದಲ್ಲಿ ಪುನಃ ಆ ವೇಶ್ಯಾಸ್ತ್ರೀಯು ಋಶ್ಯಶೃಂಗನನ್ನು ವಂಚಿಸುವದಕ್ಕೋಸ್ಕರ ಅಲ್ಲಿಗೆ ಬರಲು, ಆಗ ಋಶ್ಯಶೃಂಗನು ಅವಳನ್ನು ನೋಡಿದಮಾತ್ರಕ್ಕೆ ಮೋಹಪರವಶನಾಗಿ, ಅವಳಬಳಿಗೆ ಹೋಗಿ ಅವಳನ್ನು ಕುರಿತು 'ಎಲೈ ಋಷಿಕುಮಾರನೆ, ನಮ್ಮತಂದೆಯು ಇಲ್ಲಿಗೆ ಬರುವದರೊಳಗಾಗಿ ನಾವಿಬ್ಬರೂ ನಿಮ್ಮಾಶ್ರಮಕ್ಕೆ ಹೊರಟು ಹೋಗೋಣ' ಎಂದು ನುಡಿಯಲು, ಆ ವೇಶ್ಯಾಸ್ತ್ರೀಯು ಹಾಗೇ ಆಗಲೆಂದು ಒಪ್ಪಿ, ವಿಭಾಂಡಕನಿಗೆ ಏಕಪುತ್ರನಾದ ಆ ಋಶ್ಯಶೃಂಗನನ್ನು ತನ್ನ ಜೊತೆಯಲ್ಲಿ ಕರೆದುಕೊಂಡು, ನಾನಾವಿಧವಾದ ಉಪಾಯಗಳಿಂದ ಆತನ ಮನಸ್ಸನ್ನು ಸಂತೋಷಪಡಿಸುತ್ತ ಸ್ವಲ್ಪದೂರ ಹೋಗಿ, ಆತನನ್ನು ಶುಭ್ರವಾದ ನಾವೆಯಮೇಲೆ ಕೂರಿಸಿಕೊಂಡು ಅಲ್ಲಿದ್ದ ಒಂದು ತೊರೆಯನ್ನು ದಾಟಿ, ತಮ್ಮ ಆಶ್ರಮವು ಕಣ್ಣಿಗೆ ಕಾಣಿಸುವಷ್ಟು ದೂರದಲ್ಲೇ ಆ ನಾವೆಯನ್ನು ನೀರಿನಲ್ಲೇ ಬಿಟ್ಟು, ಋಶ್ಯಶೃಂಗನನ್ನು ಆ ತೊರೆಯ ಹಾಯ್ನೀರಿನಿಂದ ಆಚೆಗೆ ಕರೆದುಕೊಂಡು ಹೋಗಿ, ವಿಚಿತ್ರವಾದ ಉಪವನದಿಂದ ರಮಣೀಯವಾದ ತಮ್ಮ ನಾವ್ಯಾಶ್ರಮವನ್ನು ತೋರಿಸಿ, ಬಳಿಕ ತನ್ನ ಸಖಿಯರೊಡಗೂಡಿ ಆತನನ್ನು ಮೋಹಪಡಿಸುತ್ತ ಉಪಾಯದಿಂದ ಅಂಗದೇಶಕ್ಕೆ ಕರೆದುಕೊಂಡು ಹೋದಳು. ಬಳಿಕ ರೋಮಪಾದನು ಆ ಋಷಿಯನ್ನು ಎದುರುಗೊಂಡು ಹೋಗಿ ಕರೆದುಕೊಂಡು ಬಂದು, ತನ್ನ ಅಂತಃಪುರದಲ್ಲಿ ಇರಿಸಿಕೊಂಡನು. ಆಗ ದೇವೇಂದ್ರನು ಮಹತ್ತಾದ ಮಳೆಯನ್ನು ಕರೆದು, ಅದರಿಂದ ಜಗತ್ತೆಲ್ಲಾ ಜಲಪೂರ್ಣವಾಗುವಹಾಗೆ ಮಾಡಿದನು. ಅದನ್ನು ನೋಡಿ ರೋಮಪಾದನು ಪೂರ್ಣಮನೋರಥನಾಗಿ ಋಶ್ಯಶೃಂಗಮಹರ್ಷಿಗೆ ಕೋಪವುಂಟಾಗದಂತೆ ಆತನಿಗೆ ತನ್ನ ಮಗಳಾದ ಶಾಂತಾದೇವಿಯನ್ನು ಕೊಟ್ಟ

ವಿವಾಹಮಾಡಿ, ಅನೇಕಗೋವುಗಳನ್ನೂ ಭೂಮಿಯನ್ನೂ ದಾನಮಾಡಿ, ಆತನ ಮನಸ್ಸನ್ನು ಸಂತೋಷಪಡಿಸಿ, ತರುವಾಯ ಗೋಪಾಲಕರನ್ನು ಕರೆಯಿಸಿ, ಅವರನ್ನು ಕುರಿತು 'ಎಲೈ ಗೋಪಾಲಕರೆ, ಪುತ್ರನಲ್ಲಿ ಪ್ರೀತಿಯುಳ್ಳ ವಿಭಾಂಡಕಮಹರ್ಷಿಯು ಮಗನಾದ ಋಶ್ಯಶೃಂಗನನ್ನು ಹುಡುಕಿಕೊಂಡು ನಮ್ಮ ದೇಶದ ಮಾರ್ಗದಲ್ಲಿ ಬರ ಬಹುದು. ನೀವು ಆ ಮಾರ್ಗದಲ್ಲಿ ಅನೇಕಗೋವುಗಳನ್ನು ಗುಂಪುಗುಂಪಾಗಿ ನಿಲ್ಲಿಸಿಕೊಂಡಿದ್ದು ಆ ಮಹರ್ಷಿಯು ಇದೆಲ್ಲಾ ಯಾರದೆಂದು ನಿಮ್ಮನ್ನು ಕೇಳಿದ ಪಕ್ಷದಲ್ಲಿ, ನೀವು ಕೈಮುಗಿದುಕೊಂಡು ಆತನನ್ನು ಕುರಿತು—ಎಲೈ ಮಹಾತ್ಮರೆ, ಈ ಗೋವುಗಳೂ ಈ ಭೂಮಿಯೂ ನಿಮ್ಮ ಪುತ್ರನಾದ ಋಶ್ಯಶೃಂಗನವು. ನಾವೆಲ್ಲರೂ ಆತನ ಸೇವಕರಾಗಿರುವೆವು. ನಮ್ಮಿಂದ ತಮಗೆ ಯಾವ ಪ್ರಿಯವಾದ ಕಾರ್ಯವಾಗಬೇಕೋ ಅದನ್ನು ಅಜ್ಞಾಪಿಸಬೇಕು—ಎಂದು ಅರಿಕೇಮಾಡಿಕೊಳ್ಳಿರಿ' ಎಂದು ಕಟ್ಟುಮಾಡಿ, ಅವರನ್ನು ಅನೇಕಗೋವುಗಳೊಡನೆ ಅವರ ಆಶ್ರಮದ ಮಾರ್ಗಕ್ಕೆ ಕಳುಹಿಸಿಕೊಟ್ಟನು.

ಅತ್ತಲಾ ಮಹರ್ಷಿಯಾದ ವಿಭಾಂಡಕನು ಕಂದಮೂಲಫಲಗಳನ್ನು ತೆಗೆದುಕೊಂಡು ತನ್ನ ಆಶ್ರಮಕ್ಕೆ ಬಂದು, ಅಲ್ಲೆಲ್ಲಾ ತನ್ನ ಪುತ್ರನಾದ ಋಶ್ಯಶೃಂಗನನ್ನು ಹುಡುಕಿ, ಆತನನ್ನು ಕಾಣದೆ ಅಧಿಕವಾದ ಕ್ರೋಧಾವೇಶ ವ್ಯಾಪ್ತನಾಗಿ, ಇದೆಲ್ಲಾ ರೋಮಪಾದರಾಯನ ಸಂಧಾನವೆಂದು ತನ್ನ ದಿವ್ಯದೃಷ್ಟಿಯಿಂದ ತಿಳಿದು, ಪುತ್ರಮಿತ್ರಾಮಾತ್ಯಸಹಿತನಾದ ಆತನನ್ನೂ ಆತನ ರಾಜ್ಯವನ್ನೂ ಸಹ ನಾಶಮಾಡಿಬಿಡಬೇಕೆಂದು ಆತನ ರಾಜಧಾನಿಯಾದ ಚಂಪಾ ನಗರಕ್ಕೆ ಅಭಿಮುಖವಾಗಿ ಹೊರಟು, ಅಲ್ಲಲ್ಲಿ ಮಾರ್ಗದಲ್ಲಿ ಹಸಿವಿನಿಂದಲೂ ಬಾಯಾರಿಕೆಯಿಂದಲೂ ಬಳಲುತ್ತಾ, ಪೈರುಗಳ ಸಮೃದ್ಧಿಯಿಂದಲೂ ಗೋವುಗಳಿಂದಲೂ ಮನೋಹರವಾದ ಗೊಲ್ಲರ ಹಳ್ಳಿಗಳಿಗೆ ಹೋಗಿ ಅಲ್ಲಿದ್ದ ಗೋಪಾಲಕರಿಂದ ರಾಜಾರ್ಹವಾದ ಪೂಜೆಯನ್ನು ಪಡೆದು, ಆ ರಾತ್ರಿ ಅಲ್ಲೇ ವಾಸವಾಗಿದ್ದು, ಆ ಗೋಪಾಲಕರನ್ನು ನೋಡಿ ಇವೆಲ್ಲಾ ಯಾರವೆಂದು ಪ್ರಶ್ನೆಮಾಡಲು, ಗೋಪಾಲಕರೆಲ್ಲರೂ ಕೈಮುಗಿದುಕೊಂಡು 'ಎಲೈ ಮಹಾತ್ಮರೆ, ಇವೆಲ್ಲಾ ತಮ್ಮ ಪುತ್ರನಾದ ಋಶ್ಯಶೃಂಗನವು. ನಾವೆಲ್ಲರೂ ಆತನ ಸೇವಕರಾದವರು. ನಮ್ಮಿಂದ ತಮಗೆ ಪ್ರಿಯವಾದ ಯಾವ ಕಾರ್ಯವು ಆಗಬೇಕೋ ಅದನ್ನು ತಾವು ಕಟ್ಟುಮಾಡಬೇಕು' ಎಂದು ಅರಿಕೇಮಾಡಿಕೊಂಡರು. ವಿಭಾಂಡಕನು ಇದೇಪ್ರಕಾರ ತಾನು ಬರುವ ಮಾರ್ಗದಲ್ಲೆಲ್ಲಾ ಅಲ್ಲಲ್ಲಿದ್ದ ಜನಗಳಿಂದ ಸತ್ಕಾರವನ್ನು ಪಡೆಯುತ್ತ, ಅವರ ಸವಿನುಡಿಗಳನ್ನು ಕೇಳಿ ತನ್ನ ಕೋಪವನ್ನು ಸಮಾಧಾನಮಾಡಿಕೊಂಡು, ಅಂಗದೇಶಾಧಿಪತಿಯಾದ ರೋಮಪಾದರಾಯನ ಸಮೀಪಕ್ಕೆ ಬಂದನು. ಆಗ ರೋಮಪಾದರಾಯನು ಪುರೋಹಿತರೊಡನೆಯೂ ಮಂತ್ರಿಗಳೊಡನೆಯೂ ಕೂಡಿ ಆ ಮಹರ್ಷಿಗೆ ಅರ್ಘ್ಯಪಾದ್ಯಾದಿಗಳಿಂದ ಸತ್ಕಾರವನ್ನು ಮಾಡಲು, ಅದನ್ನು ಸ್ವೀಕರಿಸಿ ವಿಭಾಂಡಕನು ಆ ಅರಮನೆಯಲ್ಲಿ ಸ್ವರ್ಗದಲ್ಲಿರುವ ಇಂದ್ರನಂತೆ ಐಶ್ವರ್ಯವಂತನಾಗಿರುವ ತನ್ನ ಮಗನನ್ನೂ ಮಿಂಚಿನಂತೆ ಹೊಳೆಯುತ್ತಿರುವ ತನ್ನ ಸೊಸೆಯಾದ ಶಾಂತಾದೇವಿಯನ್ನೂ ಸಹ ನೋಡಿ, ತನ್ನ ಮಗನಿಗೆ ರೋಮಪಾದರಾಯನು ಅನೇಕಗ್ರಾಮಗಳನ್ನೂ ಗೋವುಗಳನ್ನೂ ಕೊಟ್ಟಿರುವದನ್ನು ತಿಳಿದು ಬಹುಸಂತೋಷಪಟ್ಟು, ಆ ರಾಯನಲ್ಲಿ ವಿಶೇಷವಾಗಿ ಅನುಗ್ರಹವನ್ನು ಮಾಡಿ, ಬಳಿಕ ತನ್ನ ಪುತ್ರನಾದ ಋಶ್ಯಶೃಂಗನನ್ನು ಕುರಿತು 'ಎಲೈ ಪುತ್ರನೆ, ನೀನು ಇಲ್ಲೇ ಸುಖವಾಗಿ ಇದ್ದುಕೊಂಡು, ನಿನಗೆ ಪುತ್ರಸಂತತಿಯಾದ ಬಳಿಕ ನಿಮ್ಮ ಮಾವನಾದ ರೋಮಪಾದ ರಾಯನ ಮನೋರಥವನ್ನೆಲ್ಲಾ ಪೂರಣಮಾಡಿ, ಪುನಃ ನೀನು ಯಥಾಪ್ರಕಾರವಾಗಿ ನಮ್ಮ ಆಶ್ರಮಕ್ಕೆ ಹೊರಟು ಬಾ' ಎಂದು ಹೇಳಿ, ತಾನು ಆಶ್ರಮಕ್ಕೆ ಹೊರಟುಹೋದನು. ತದನಂತರ ಋಶ್ಯಶೃಂಗನು ಕೆಲವು ಕಾಲದಮೇಲೆ ತನಗೆ ಪುತ್ರಸಂತಾನವಾಗಲು, ತಮ್ಮ ತಂದೆಯ ಆಜ್ಞೆಯಾಗಿದ್ದಂತೆ ಆಶ್ರಮಕ್ಕೆ ಹೊರಟುಹೋದನು. ಆಗ ಚಂದ್ರನಿಗೆ ರೋಹಿಣಿಯಂತೆಯೂ, ವಸಿಷ್ಠನಿಗೆ ಅರುಂಧತಿಯಂತೆಯೂ, ಅಗಸ್ತ್ಯನಿಗೆ ಲೋಪಾಮುದ್ರೆಯಂತೆಯೂ, ನಳನಿಗೆ ದಮಯಂತಿಯಂತೆಯೂ, ಇಂದ್ರನಿಗೆ ಶಚೀದೇವಿಯಂತೆಯೂ, ಮುದ್ಗಲನಿಗೆ ನಾಳಾಯನಿಯಂತೆಯೂ, ಋಶ್ಯಶೃಂಗನಿಗೆ ಶಾಂತಾದೇವಿಯು ಅನುಕೂಲಳಾಗಿ ಆತನ ಜೊತೆಯಲ್ಲೇ ತಾನೂ ಆಶ್ರಮಕ್ಕೆ ಹೋಗಿ, ಆತನು ತಪಸ್ಸು ಮಾಡುತ್ತಿರಲು ತಾನು ಆತನಿಗೆ ನಿರಂತರವಲ್ಲೂ ಭಕ್ತಿಯಿಂದ ಶುಶ್ರೂಷೆಯನ್ನು ಮಾಡಿಕೊಂಡಿದ್ದಳು. ಎಲೈ ಧರ್ಮರಾಯನೆ, ಇದು ಅಂಥಾ ಮಹಾತ್ಮನಾದ ಋಶ್ಯಶೃಂಗಮಹರ್ಷಿಯ ಆಶ್ರಮವು. ಇಲ್ಲೊಂದು ಮಹತ್ತಾದ ಮಡುವು

ಇರುವದು. ಇದರಲ್ಲಿ ಸ್ನಾನಮಾಡಿ ನೀನು ಕೃತಾರ್ಥನಾಗು. ಇದರಿಂದ ನೀನು ಪರಿಶುದ್ಧನಾಗಿ ಪುಣ್ಯವನ್ನೂ ಕೀರ್ತಿಯನ್ನೂ ಪಡೆಯುವೆ. ಬಳಿಕ ಇತರವಾದ ಪುಣ್ಯತೀರ್ಥಗಳಿಗೆ ಹೋಗಬಹುದು " ಎಂದು ಲೋಮಶನು ಧರ್ಮರಾಯನಿಗೆ ವಿವರಿಸಿದನು.

## ೧೧೪ನೇ ಅಧ್ಯಾಯ.—ತೀರ್ಥಯಾತ್ರಾಪ್ರಶಂಸೆ—(ಮಹೇಂದ್ರಾಚಲಗಮನ).

ವೈಶಂಪಾಯನಮುನೀಂದ್ರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಬಳಿಕ ಧರ್ಮರಾಯನು ಕೌಶಿಕೀತೀರದಿಂದ ಕ್ರಮವಾಗಿ ಹೊರಟು, ಅಲ್ಲಲ್ಲಿರುವ ಪುಣ್ಯತೀರ್ಥಗಳಲ್ಲಿ ಸ್ನಾನಮಾಡಿ, ಗಂಗಾಸಾಗರಸಂಗಮಕ್ಕೆ ಬಂದು ಅಲ್ಲಿ ಐನೂರುನದಿಗಳು ಸೇರಿರುವ ಸ್ಥಾನದಲ್ಲಿ ಸ್ನಾನಮಾಡಿ, ಸಮುದ್ರತೀರದ ಮಾರ್ಗವಾಗಿಯೇ ಹೊರಟು, ತಮ್ಮಂದಿರೊಡಗೂಡಿ ಕಳಿಂಗದೇಶಕ್ಕೆ ಬಂದನು. ಆಗ ಲೋಮಶನು ಧರ್ಮರಾಯನನ್ನು ಕುರಿತು "ಎಲೈ ಧರ್ಮರಾಯನೆ, ಇದು ಕಳಿಂಗದೇಶವು. ಇದೋ ಇಲ್ಲೇ ವೈತರಣೀನದಿಯಿರುವದು. ಈ ನದೀತೀರದಲ್ಲೇ ಪೂರ್ವದಲ್ಲಿ ಧರ್ಮಪುರುಷನಾದ ಯಮನು ದೇವತೆಗಳಿಂದಲೂ ಋಷಿಗಳಿಂದಲೂ ಕೂಡಿ ಯಜ್ಞವನ್ನು ಮಾಡಿದನು. ಇದೋ ಈ ಪರ್ವತದ ತಪ್ಪಲೇ ಆ ಯಜ್ಞಭೂಮಿಯು. ನಿರಂತರದಲ್ಲೂ ಅನೇಕ ಮಂದಿ ಬ್ರಾಹ್ಮಣರಿಂದ ಸೇವಿತವಾಗಿ ಈ ನದಿಯ ಉತ್ತರತೀರವು ದೇವತೆಗಳ ವಿಮಾನಕ್ಕೆ ಸಮಾನವಾಗಿರುವದು. ಯಜ್ಞಮಾಡಿದವರೆಲ್ಲರೂ ಇದೇ ಮಾರ್ಗದಿಂದಲೇ ಸ್ವರ್ಗಕ್ಕೆ ಹೋಗುವರು. ಇದೇ ಪ್ರದೇಶದಲ್ಲೇ ಇನ್ನೂ ಕೆಲವರು ಋಷಿಗಳು ಯಾಗವನ್ನು ಮಾಡಿರುವರು. ಆ ಯಾಗದಲ್ಲಿ ಮಹಾದೇವನು ತನ್ನ ಭಾಗವನ್ನು ಪಡೆಯದೆ, ಯಜ್ಞದ ಪಶುವನ್ನು ತನ್ನ ಭಾಗಕ್ಕೆ ಬರತಕ್ಕದ್ದೆಂದು ತೆಗೆದುಕೊಂಡುಹೋದನು. ಅದನ್ನು ನೋಡಿ ದೇವತೆಗಳು 'ಎಲೈ ಮಹಾದೇವನೆ, ಪರರ ಭಾಗವನ್ನು ನೀನು ತೆಗೆದುಕೊಳ್ಳಕೂಡದು. ಧರ್ಮಸಾಧನವಾದ ಯಜ್ಞಭಾಗಗಳನ್ನು ನೀನೊಬ್ಬನೇ ಬಯಸಬೇಡ' ಎಂದು ಬಳ್ಳೇ ಮಾತುಗಳನ್ನು ಹೇಳಿ, ಎಲ್ಲರೂ ಆತನನ್ನು ಸ್ತುತಿಸಿ ಯಜ್ಞದಲ್ಲಿ ಆತನಿಗೆ ಕೊಡತಕ್ಕ ಹವಿರ್ಭಾಗವನ್ನು ಕೊಟ್ಟು ಪೂಜಿಸಲು, ಆತನು ತಾನು ತೆಗೆದುಕೊಂಡಿದ್ದ ಪಶುವನ್ನು ಬಿಟ್ಟು ವಿಮಾನವನ್ನೇರಿ ಹೊರಟುಹೋದನು. ಆ ಸಮಯದಲ್ಲಿ ದೇವತೆಗಳೆಲ್ಲರೂ ಆತನದೆಸೆಯಿಂದ ಭಯಪಟ್ಟು, ಎಲ್ಲರ ಭಾಗಕ್ಕಿಂತಲೂ ಉತ್ತಮವಾದ ಶಾಶ್ವತವಾದ ಬಂದು ಭಾಗವನ್ನು ಆತನಿಗೆ ಕಲ್ಪಿಸಿದರು. ಈ ಇತಿಹಾಸವನ್ನು ಹೇಳಿಕೊಂಡು ಯಾರು ಈ ವೈತರಣೀನದಿಯಲ್ಲಿ ಸ್ನಾನವನ್ನು ಮಾಡುವರೋ ಅವರಿಗೆ, ಸ್ವರ್ಗಕ್ಕೆ ಹೋಗತಕ್ಕ ಮಾರ್ಗವು ಕಣ್ಣಿಗೆ ಕಾಣಿಸುವದು " ಎಂದು ನುಡಿದನು.

ಬಳಿಕ ಧರ್ಮರಾಯನು ತಮ್ಮಂದಿರೊಡನೆಯೂ ದ್ರೌಪದಿಯೊಡನೆಯೂ ಪುಣ್ಯತಮವಾದ ಆ ವೈತರಣೀನದಿಯಲ್ಲಿ ಸ್ನಾನಮಾಡಿ ಪಿತೃಗಳಿಗೆ ತರ್ಪಣವನ್ನು ಮಾಡಿ, ಲೋಮಶನನ್ನು ಕುರಿತು "ಎಲೈ ಮಹಾತ್ಮನೆ, ಈ ನದಿಯಲ್ಲಿ ವಿಧಿವತ್ತಾಗಿ ಸ್ನಾನಮಾಡಿದ ನಾನು ಆ ಪುಣ್ಯವಿಶೇಷದಿಂದ ಮನುಷ್ಯರು ಬಯಸತಕ್ಕ ವಿಷಯಗಳಲ್ಲಿ ಅಪೇಕ್ಷೆಯಿಲ್ಲದೆ ನಿಮ್ಮನುಗ್ರಹಬಲದಿಂದ ಸಕಲ ಪುಣ್ಯಲೋಕಗಳನ್ನೂ ಕಣ್ಣಿನಿಂದ ನೋಡುತ್ತಿರುವೆನು. ಈಗ ಇಲ್ಲಿ ಕೇಳಬರುತ್ತಿರುವ ಶಬ್ದವು ಜಪವನ್ನು ಮಾಡುತ್ತಿರುವ ಮಹಾತ್ಮರಾದ ವೈಖಾನಸರದು " ಎನಲು, ಲೋಮಶನು "ಎಲೈ ಧರ್ಮರಾಯನೆ, ನಿನಗೆ ಕೇಳಬರುತ್ತಿರುವ ಈ ಜಪಶಬ್ದವು ಮೂರುಸಾವಿರ ಗಾವುದಗಳಿಗಿಂತಲೂ ದೂರವಾಗಿ ಕೇಳಬರುತ್ತಿರುವದು. ಈಗ ಮೌನವನ್ನು ತಾಳಿ ಸುಮ್ಮನಿರು. ಇದೋ ನೋಡು, ಬ್ರಹ್ಮದೇವನ ದಿವ್ಯವಾದ ವನವು ಕಾಣಿಸುತ್ತಿರುವದು. ಪ್ರತಾಪಶಾಲಿಯಾದ ಬ್ರಹ್ಮನು ಇಲ್ಲಿ ಯಾಗವನ್ನು ಮಾಡಿರುವನು. ಆ ಯಜ್ಞದಲ್ಲಿ ಬ್ರಹ್ಮನು ಕುಲಪರ್ವತಗಳಿಂದಲೂ ವನಗಳಿಂದಲೂ ಕೂಡಿರುವ ಭೂಮಂಡಲವನ್ನು ಅಧ್ವರ್ಯುವಾದ ಮಹಾತ್ಮನಾದ ಕಶ್ಯಪನಿಗೋಸ್ಕರ ದಕ್ಷಿಣಾರ್ಥವಾಗಿ ಕೊಟ್ಟನು. ಆಗ ತನ್ನನ್ನುದಾನಮಾಡಿದ ಮಾತ್ರಕ್ಕೆ ಭೂದೇವಿಯು ವ್ಯಸನಪಡುತ್ತಾ, ಕೋಪಗೊಂಡು ಬ್ರಹ್ಮನನ್ನು ಕುರಿತು 'ಎಲೈ ಬ್ರಹ್ಮನೆ, ನನ್ನನ್ನು ನೀನು ಯಾರಿಗೂ ದಾನಮಾಡಕೂಡದು. ಹಾಗೆ ಮಾಡಿದರೆ ಆ ದಾನವು ವ್ಯರ್ಥವಾಗುವದು.

ನಾನು ರಸಾತಲಕ್ಕೆ ಹೊರಟುಹೋಗಿಬಿಡುತ್ತೇನೆ' ಎಂದು ನುಡಿದಳು. ಹೀಗೆ ವಿಷಾದಪಡುತ್ತಿರುವ ಭೂದೇವಿಯನ್ನು ನೋಡಿ ಕಶ್ಯಪಋಷಿಯು ಬಹು ಪ್ರಕಾರವಾಗಿ ಪ್ರಾರ್ಥಿಸಿ, ಆ ಭೂದೇವಿಯನ್ನು ಸಮಾಧಾನಪಡಿಸಿದನು. ಬಳಿಕ ಭೂದೇವಿಯು ಪ್ರಸನ್ನಳಾಗಿ ಉದಕದಿಂದ ಮೇಲಕ್ಕೆದ್ದು, ಯಜ್ಞವೇದಿಯ ರೂಪದಿಂದ ನಿಂತು ಪ್ರಕಾಶಿಸಿದಳು. ಎಲೈ ಧರ್ಮರಾಯನೆ, ಆ ವೇದಿಯು ಇದೋ ಇಲ್ಲಿರುವದು. ಇದರಮೇಲೆ ಹತ್ತಿದರೆ, ನೀನು ಮಹಾಪರಾಕ್ರಮಶಾಲಿಯಾಗುವೆ. ಈ ವೇದಿಯು ಸಮುದ್ರವನ್ನು ಆಶ್ರಯಿಸಿಕೊಂಡಿರುವದು. ನೀನೊಬ್ಬನೇ ಇದರಮೇಲೆ ಹತ್ತಿ ಸಮುದ್ರವನ್ನು ದಾಟು. ಈ ವೇದಿಯನ್ನು ಯಾರಾದರೂ ಮುಟ್ಟಿದರೆ ಅದು ಸಮುದ್ರದಲ್ಲಿ ಪ್ರವೇಶಮಾಡಿಬಿಡುವದು. ಇದು ಹಾಗಾಗದಂತೆ ನಿನಗೆ ನಾನು ಅನುಗ್ರಹವನ್ನು ಮಾಡುತ್ತೇನೆ. 'ಎಲೈ ದೇವದೇವನೆ, ಪ್ರಳಯಕಾಲದಲ್ಲಿ ಸಮಸ್ತಪ್ರಪಂಚವನ್ನೂ ಪಾಲಿಸತಕ್ಕವನಾಗಿಯೂ, ಸರ್ವೋತ್ತಮನಾಗಿಯೂ ಇರುವ ಮಹಾವಿಷ್ಣುವಾದ ನಿನಗೋಸ್ಕರ ನಮಸ್ಕಾರವು. ನೀನು ಈ ಲವಣಸಮುದ್ರದಲ್ಲಿ ಸನ್ನಿಹಿತನಾಗು. ಎಲೈ ಸಮುದ್ರನೆ, ತೇಜೋರೂಪನಾದ ನೀನೇ ಅಗ್ನಿಯು; ನೀನೇ ಸೂರ್ಯನು; ನೀನೇ ಜಲಾಭಿಮಾನದೇವತೆಯು; ಮಹಾವಿಷ್ಣುವಿನ ರೇತಸ್ಸಿನ ಪರಿಣಾಮವೇ ನೀನಾಗಿರುವೆ' ಎಂದು ಈ ಪ್ರಕಾರದಿಂದ ಸತ್ಯವಾಕ್ಯನಾಗಿ ಜಪಿಸುತ್ತಾ, ನೀನು ಈ ವೇದಿಯನ್ನು ಆರೋಹಣಮಾಡಿ 'ಎಲೈ ಸಮುದ್ರನೆ, ಅಗ್ನಿಯೇ ನಿನಗೆ ಕಾರಣನಾಗಿರುವನು; ಭೂದೇವಿಯೇ ನಿನಗೆ ಶರೀರವಾಗಿರುವಳು. ನೀನು ವಿಷ್ಣುವಿನ ರೇತೋರೂಪನಾಗಿರುವೆ. ನೀನೇ ಮೋಕ್ಷಕ್ಕೆ ಕಾರಣಭೂತನಾದವನು' ಎಂದು ಸತ್ಯವಾಗಿ ಜಪಿಸುತ್ತಾ, ಸಮುದ್ರದಲ್ಲಿ ಸ್ನಾನವನ್ನು ಮಾಡು. ಹೀಗೆ ಮಾಡದೆ, ಯಾವ ಮನುಷ್ಯನೂ ದೇವತೆಗಳಿಗೆ ಸ್ಥಾನವಾದ ಸಮುದ್ರವನ್ನು ದರ್ಭೆಯ ಕೊನೆಯಿಂದಲೂ ಸ್ಪರ್ಶಮಾಡಕೂಡದು" ಎಂದು ಧರ್ಮರಾಯನಿಗೆ ಉಪದೇಶಮಾಡಿ ಆಶೀರ್ವಾದವನ್ನು ಮಾಡಿದನು. ಧರ್ಮರಾಯನು ಲೋಮಶಮಹರ್ಷಿಯ ಉಪದೇಶವನ್ನೂ ಆಶೀರ್ವಾದವನ್ನೂ ಪರಿಗ್ರಹಿಸಿ, ಅವರ ಆಜ್ಞೆಯಾದಂತೆ ಆ ವೇದಿಯ ಮೇಲೆ ಹತ್ತಿ, ಅವರು ಹೇಳಿದ ಮಂತ್ರವನ್ನು ಜಪಿಸುತ್ತಾ ಸಮುದ್ರದಲ್ಲಿ ಸ್ನಾನಮಾಡಿ, ಆ ರಾತ್ರಿ ಮಹೇಂದ್ರಪರ್ವತಕ್ಕೆ ಹೋಗಿ ಅಲ್ಲಿ ವಾಸಮಾಡಿದನು.

## ೧೧೫ನೇ ಅಧ್ಯಾಯ.—ತೀರ್ಥಯಾತ್ರಾಪ್ರಶಂಸೆ.—(ಜಮದಗ್ನ್ಯುತ್ಪತ್ತಿ).

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಆಬಳಿಕ ಧರ್ಮರಾಯನು ರಾತ್ರಿ ಮಹೇಂದ್ರಪರ್ವತದಲ್ಲಿ ವಾಸಮಾಡಿ, ತಮ್ಮಂದಿರೊಡಗೂಡಿ ಅಲ್ಲಿದ್ದ ಋಷಿಗಳಿಗೆ ಸತ್ಕಾರವನ್ನು ಮಾಡಿದನು. ಆಗ ಲೋಮಶಮಹರ್ಷಿಯು ಅಲ್ಲಿದ್ದ ಋಷಿಗಳನ್ನೆಲ್ಲ ಧರ್ಮರಾಯನಿಗೆ ತಿಳುಹಿಸಲು, ರಾಜರ್ಷಿಯಾದ ಧರ್ಮರಾಯನು ಭೃಗು, ಅಂಗಿರಸ್ಸು, ವಸಿಷ್ಠ, ಕಶ್ಯಪ, ಇವರ ವಂಶದಲ್ಲಿ ಹುಟ್ಟಿದ ಅನೇಕರಾದ ಋಷಿಗಳನ್ನು ಕಂಡು ಕೈಮುಗಿದುಕೊಂಡು ಅವರಿಗೆ ನಮಸ್ಕಾರಮಾಡಿ, ಪರಶುರಾಮನಿಗೆ ಸ್ನೇಹಿತನಾದ ಅಕೃತವ್ರಣಋಷಿಯನ್ನು ಅಲ್ಲಿ ನೋಡಿ "ಎಲೈ ಮಹಾತ್ಮನೆ, ಷಡ್ಗುಣೈಶ್ವರ್ಯ ಸಂಪನ್ನನಾದ ಪರಶುರಾಮನು ಈ ಋಷಿಗಳಿಗೆ ದರ್ಶನವನ್ನು ಕೊಡುವದಕ್ಕೆ ಯಾವಾಗ ಇಲ್ಲಿಗೆ ಬರುವನು? ಆ ಸಮಯದಲ್ಲಿ ನಾನು ಆ ಮಹಾತ್ಮನ ದರ್ಶನವನ್ನು ಮಾಡಬೇಕೆಂದು ಕುತೂಹಲಪಡುತ್ತಿರುವೆನು. ಅದನ್ನು ತಿಳುಹಿಸು" ಎನಲು, ಅಕೃತವ್ರಣನು "ಎಲೈ ಧರ್ಮರಾಯನೆ, ಪರಶುರಾಮನಿಗೆ ನಿನ್ನಲ್ಲಿ ವಿಶೇಷವಾದ ಪ್ರೀತಿಯಿರುವದು. ಆ ಮಹಾನುಭಾವನು ಈಗ ಇಲ್ಲಿಗೆ ಬರತಕ್ಕವನಾಗಿರುವನು. ಇಲ್ಲಿರುವ ತಪಸ್ವಿಗಳೆಲ್ಲರೂ ಅಷ್ಟಮೀದಿವಸವೂ ಚತುರ್ದಶೀದಿವಸವೂ ಆತನ ದರ್ಶನವನ್ನು ಮಾಡುವರು. ಈ ರಾತ್ರಿ ಕಳೆಯಲು, ನಾಳೆಯೇ ಚತುರ್ದಶಿಯು ಪ್ರಾಪ್ತವಾಗುವದು. ಆದ್ದರಿಂದ ನಿನಗೂ ಆ ಮಹಾನುಭಾವನ ದರ್ಶನವು ಕ್ಷಿಪ್ರದಲ್ಲೇ ಆಗುವದು" ಎಂದು ನುಡಿದನು. ಆ ಮಾತನ್ನು ಕೇಳಿ ಧರ್ಮರಾಯನು "ಎಲೈ ಅಕೃತವ್ರಣನೆ, ನೀನು ಯಾವಾಗಲೂ ಮಹಾನುಭಾವನಾದ ಪರಶುರಾಮನನ್ನು

ಅನುವರ್ತಿಸಿಕೊಂಡು ಆತನ ಜೊತೆಯಲ್ಲೇ ಸಂಚರಿಸುತ್ತಾ, ಪೂರ್ವದಲ್ಲಿ ಆತನು ಕ್ಷತ್ರಿಯರನ್ನು ಇಪ್ಪತ್ತೊಂದಾವರ್ತಿ ನಾಶಮಾಡಿದ್ದನ್ನು ಪ್ರತ್ಯಕ್ಷವಾಗಿ ನೋಡಿರುವೆ. ಆತನು ಯಾತಕ್ಕೋಸ್ಕರ ಕ್ಷತ್ರಿಯರನ್ನು ಯುದ್ಧದಲ್ಲಿ ನಿಗ್ರಹಿಸಿದನು ? ಅದನ್ನು ವಿವರಿಸು" ಎನಲು, ಅಕೃತವ್ರಣನು "ಎಲೈ ಧರ್ಮರಾಯನೆ, ಭೃಗುವಂಶೋತ್ಪನ್ನನಾದ ಮಹಾತ್ಮನಾದ ಪರಶುರಾಮನ ಚರಿತ್ರೆಯು ದೇವತೆಗಳ ಚರಿತ್ರೆಗೆ ಸಮಾನವಾದದ್ದು. ಅಂಥ ಉತ್ತಮವಾದ ಚರಿತ್ರೆಯನ್ನು ನಿನಗೆ ತಿಳುಹಿಸುವೆನು, ಕೇಳು. ಪೂರ್ವದಲ್ಲಿ ಹೈಹಯದೇಶಕ್ಕೆ ಅಧಿಪತಿಯಾದ ಕಾರ್ತವೀರ್ಯಾರ್ಜುನನೆಂಬ ರಾಜನೊಬ್ಬನಿದ್ದನು. ಆತನಿಗೆ ಸಾವಿರತೋಳುಗಳಿದ್ದವು. ಆತನಿಗೆ ದತ್ತಾತ್ರೇಯರ ಅನುಗ್ರಹದಿಂದ ಒಂದು ಚಿನ್ನದ ವಿಮಾನವೂ ಮಹತ್ತಾದ ಐಶ್ವರ್ಯವೂ ಪ್ರಾಪ್ತಿಸಿದವು. ಇದಲ್ಲದೆ ಆತನ ಬಳಿ ಮೂರುಲೋಕಗಳಲ್ಲಿಯೂ ತಡೆಯಿಲ್ಲದೆ ಸಂಚಾರಮಾಡತಕ್ಕ ಒಂದು ರಥವಿತ್ತು. ಆ ರಥವನ್ನೇರಿ ಆತನು ದತ್ತಾತ್ರೇಯರ ವರಪ್ರಸಾದದಿಂದ ಮಹಾಪರಾಕ್ರಮಶಾಲಿಯಾಗಿ, ಸಮಸ್ತರಾದ ದೇವತೆಗಳನ್ನೂ ಯಕ್ಷರನ್ನೂ ಋಷಿಗಳನ್ನೂ ಸಕಲಪ್ರಾಣಿಗಳನ್ನೂ ಸಹ ಎಲ್ಲಾ ಕಡೆಯಲ್ಲಿಯೂ ಬಾಧೆಪಡಿಸುತ್ತಿದ್ದನು. ಆಗ ಸಕಲದೇವತೆಗಳೂ ತಪಸ್ವಿಗಳಾದ ಋಷಿಗಳೂ ಸಹ ದೇವದೇವನಾದ ಸತ್ಯಪರಾಕ್ರಮನಾದ ದಾನವಾರಿಯಾದ ಮಹಾವಿಷ್ಣುವಿನ ಸನ್ನಿಧಿಗೆ ಹೋಗಿ ಕೈಮುಗಿದುಕೊಂಡು, 'ಎಲೈ ಷಡ್ಗುಣೈಶ್ವರ್ಯಸಂಪನ್ನನಾದ ಸ್ವಾಮಿಯೆ, ಪ್ರಾಣಿಗಳ ರಕ್ಷಣಾರ್ಥವಾಗಿ ನೀನು ಕಾರ್ತವೀರ್ಯಾರ್ಜುನನನ್ನು ನಿಗ್ರಹಿಸಬೇಕು. ದಿವ್ಯವಾದ ಒಂದು ವಿಮಾನದಮೇಲೆ ಕೂತುಕೊಂಡು, ಹೈಹಯಾಧಿಪತಿಯಾದ ಆ ಕಾರ್ತವೀರ್ಯಾರ್ಜುನನು ಶಚೀದೇವಿಯೊಡನೆ ವಿಹರಿಸಿಕೊಂಡಿರುವ ಇಂದ್ರನನ್ನು ಬಾಧೆ ಪಡಿಸುತ್ತಿರುವನು' ಎಂದು ಪ್ರಾರ್ಥಿಸಿದರು. ಆಗ ಭಗವಂತನಾದ ಮಹಾವಿಷ್ಣುವು ದೇವೇಂದ್ರನೊಡನೆ ಕಾರ್ತವೀರ್ಯಾರ್ಜುನನನ್ನು ನಿಗ್ರಹಿಸುವದಕ್ಕೋಸ್ಕರ ಆಲೋಚನೆಯನ್ನು ಮಾಡುತ್ತಿರಲು, ಇಂದ್ರನು 'ಎಲೈ ಸ್ವಾಮಿಯೆ, ಸಕಲಪ್ರಾಣಿಗಳಿಗೂ ಹಿತವಾದ ಕಾರ್ಯವನ್ನು ನೀನು ಮಾಡಬೇಕು' ಎಂದು ವಿಷ್ಣುವನ್ನು ಪ್ರಾರ್ಥಿಸಿದನು. ಅದನ್ನು ಕೇಳಿ ಲೋಕಪೂಜ್ಯನಾದ ಮಹಾವಿಷ್ಣುವು ಹಾಗೇ ಆಗಲೆಂದು ಹೇಳಿ, ತನಗೆ ವಾಸಸ್ಥಾನವಾಗಿಯೂ ಮನೋಹರವಾಗಿಯೂ ಇರುವ ಬದರಿಕಾಶ್ರಮಕ್ಕೆ ತೆರಳಿದನು. ಆಗ ಕಾನ್ಯಕುಬ್ಜದೇಶಕ್ಕೆ ಅರಸಾದ ಮಹಾಬಲಶಾಲಿಯಾದ ಗಾಧಿಯೆಂಬ ಮಹಾರಾಜನು ತಪೋವನಕ್ಕೆ ಹೋಗಿ ವಾಸಮಾಡುತ್ತಿದ್ದನು. ಅಲ್ಲಿ ಆತನಿಗೆ ಅಪ್ಸರಸ್ತ್ರೀಯಂತಿರುವ ಒಬ್ಬ ಕನ್ಯೆಯು ಹುಟ್ಟಿದಳು. ಆಕೆಯನ್ನು ಭೃಗುವಂಶದಲ್ಲಿ ಹುಟ್ಟಿದ ಋಚೀಕನೆಂಬ ಋಷಿಯು ವರಿಸಲು, ಗಾಧಿಮಹಾರಾಜನು ಬ್ರಾಹ್ಮಣಶ್ರೇಷ್ಠನಾದ ಆ ಋಚೀಕಮಹರ್ಷಿಯನ್ನು ಕುರಿತು 'ಎಲೈ ಋಷಿಯೇ, ನಮ್ಮ ಕುಲದಲ್ಲಿ ಪೂರ್ವಿಕರಾದವರು ಒಂದು ಕಿವಿಯು ಕಪ್ಪಾಗಿಯೂ, ಉಳಿದ ಶರೀರವೆಲ್ಲಾ ಶುಭ್ರವಾಗಿಯೂ, ಅತಿವೇಗಶಾಲಿಗಳಾಗಿಯೂ, ಇರತಕ್ಕ ಒಂದು ಸಾವಿರ ಕುದುರೆಗಳನ್ನು ಕೊಟ್ಟವರಿಗೇ ಕನ್ಯೆಯನ್ನು ಕೊಡತಕ್ಕದ್ದೆಂದು ನಿಬಂಧನೆಯನ್ನು ಮಾಡಿರುವರು. ಆದರೆ ಈ ಮಾತನ್ನು ನಿನ್ನಂಥವರಿಗೆ ಹೇಳತಕ್ಕದ್ದಲ್ಲ. ಈ ಕನ್ಯೆಯನ್ನಾದರೋ ನಿನ್ನಂಥವನಿಗೆ ಕೊಡಬೇಕಾಗಿದೆ' ಎನಲು, ಋಚೀಕನು 'ಎಲೈ ಗಾಧಿಮಹಾರಾಜನೆ, ಒಂದು ಕಿವಿಯು ಕಪ್ಪಾಗಿಯೂ, ಉಳಿದ ಶರೀರವೆಲ್ಲಾ ಶುಭ್ರವಾಗಿಯೂ, ಮಹಾ ವೇಗಶಾಲಿಗಳಾಗಿಯೂ, ಇರತಕ್ಕ ಒಂದು ಸಾವಿರ ಕುದುರೆಗಳನ್ನು ನಾನು ಸಂಪಾದಿಸಿಕೊಂಡು ಬಂದು ನಿನಗೆ ಕೊಡುತ್ತೇನೆ. ನಿನ್ನ ಮಗಳು ನನ್ನ ಪತ್ನಿಯಾಗಲಿ' ಎಂದು ವಚನವನ್ನು ಕೊಟ್ಟು, ವರುಣನ ಬಳಿಗೆ ಹೋಗಿ ಆತನನ್ನು ಕುರಿತು 'ಎಲೈ ವರುಣನೆ, ಗಾಧಿರಾಯನ ಮಗಳಿಗೆ ತೆರವನ್ನಾಗಿ ಕೊಡುವದಕ್ಕೋಸ್ಕರ, ಒಂದು ಕಿವಿಯು ಕಪ್ಪಾಗಿ ಉಳಿದ ಶರೀರವೆಲ್ಲಾ ಶುಭ್ರವಾಗಿ ವೇಗಶಾಲಿಗಳಾಗಿರತಕ್ಕ ಒಂದು ಸಾವಿರ ಕುದುರೆಗಳನ್ನು ನೀನು ನನಗೆ ಕೊಡಬೇಕು' ಎಂದು ಕೇಳಿದನು. ಅದಕ್ಕೆ ವರುಣನು ಆ ಋಚೀಕನಿಗೆ ಹಾಗಿರತಕ್ಕ ಅಷ್ಟು ಕುದುರೆಗಳನ್ನು ಕೊಟ್ಟನು. ಆ ಕುದುರೆಗಳು ವರುಣಲೋಕದಿಂದ ಹೊರಟು ಗಂಗಾನದಿಯ ದೆಸೆಯಿಂದ ಭೂಲೋಕಕ್ಕೆ ಬಂದವು. ಆ ಮೊದಲು ಆ ತೀರ್ಥಕ್ಕೆ ಅಶ್ವತೀರ್ಥವೆಂದು ಪ್ರಸಿದ್ಧಿಯುಂಟಾಯಿತು. ಬಳಿಕ ಋಚೀಕನು ಕಾನ್ಯಕುಬ್ಜದೇಶಕ್ಕೆ ಬಂದು ಗಾಧಿರಾಯನಿಗೆ ಆ ಸಾವಿರ ಕುದುರೆಗಳನ್ನು ಕೊಡಲು, ಗಾಧಿರಾಯನು ಆ ಸಾವಿರ ಕುದುರೆಗಳನ್ನು ತೆಗೆದುಕೊಂಡು ತನ್ನ ಮಗಳಾದ ಸತ್ಯವತೀದೇವಿಯನ್ನು ಋಚೀಕನಿಗೆ ಕೊಟ್ಟು ಮದುವೆ ಮಾಡಿದನು. ಆಗ ದೇವತೆಗಳೆಲ್ಲರೂ ವರನ ಕಡೆಯವರಾಗಿದ್ದು, ಆ ವಿವಾಹೋತ್ಸವವನ್ನು ಬೆಳೆಯಿಸಿದರು.

ಬಳಿಕ ಋಚೀಕನು ಪತ್ನಿಯಾದ ಸತ್ಯವತಿಯೊಡನೆ ಸುಖವಾಗಿ ವಿಹಾರವಮಾಡಿಕೊಂಡಿರಲು, ಭೃಗುಋಷಿಯು ಪತ್ನೀಸಮೇತನಾದ ಪುತ್ರನಾದ ಋಚೀಕನನ್ನು ನೋಡುವದಕ್ಕೋಸ್ಕರ ಕಾನ್ಯಕುಬ್ಜದೇಶಕ್ಕೆ ಬಂದು, ಆ ದಂಪತಿಗಳನ್ನು ನೋಡಿ ಬಹಳವಾಗಿ ಸಂತೋಷಪಟ್ಟನು. ಆಗ ಆ ದಂಪತಿಗಳು ತ್ರಿಲೋಕಪೂಜ್ಯನಾದ ಭೃಗುಮಹರ್ಷಿಗೆ ವಿಧಿವತ್ತಾಗಿ ಪೂಜೆಯನ್ನು ಮಾಡಿ, ಆತನ ಬಳಿಯಲ್ಲಿ ಕೈಮುಗಿದುಕೊಂಡು ನಿಂತರು. ಆಗ ಭೃಗುಮಹರ್ಷಿಯು ತನ್ನ ಸೊಸೆಯನ್ನು ನೋಡಿ 'ಎಲೆ ಮಗಳೆ, ನಿನಗೆ ಬೇಕಾದ ವರವನ್ನು ಕೇಳು. ಅದನ್ನು ನಾನು ಕೊಡುವೆನು' ಎನಲು, ಸತ್ಯವತಿಯು 'ಎಲೈ ಪೂಜ್ಯನೆ, ನನಗೂ ನಮ್ಮ ತಾಯಿಗೂ ಪುತ್ರಸಂತಾನವಾಗುವಂತೆ ನೀನು ವರವನ್ನು ಕೊಡಬೇಕು' ಎಂದು ಬೇಡಿದಳು. ಅದನ್ನು ಕೇಳಿ ಭೃಗುಮಹರ್ಷಿಯು ಹಾಗೇ ಆಗಲೆಂದು ವರವನ್ನು ಕೊಟ್ಟು 'ಎಲೆ ಸತ್ಯವತಿಯೆ ನೀನು ಋತುಸ್ನಾನವಮಾಡಿದ ದಿವಸ ಗರ್ಭಾಧಾನಾರ್ಥವಾಗಿ ಅತ್ತೀಮರವನ್ನೂ, ಅಂಥ ದಿವಸ ನಿಮ್ಮ ತಾಯಿಯು ಅರಳೀಮರವನ್ನೂ ಆಲಿಂಗನೆ ಮಾಡಿಕೊಳ್ಳತಕ್ಕದ್ದು. ನಾನು ವಿರಾಟ್ಪುರುಷನನ್ನು ಬಹುಪ್ರಕಾರವಾಗಿ ಅನುಸಂಧಾನವಮಾಡಿ, ಅಧಿಕವಾದ ಪ್ರಯತ್ನದಿಂದ ಈ ಎರಡು ಚರುಗಳನ್ನೂ ಸಾಧಿಸಿರುವೆನು. ನೀನೂ ನಿಮ್ಮ ತಾಯಿಯೂ ಸಹ ನಿಯಮದಿಂದ ಈ ಚರುಗಳನ್ನು ಭಕ್ಷಿಸತಕ್ಕದ್ದು' ಎಂದು ನುಡಿದು, ಅಂತರ್ಧಾನವನ್ನು ಹೊಂದಿದನು. ಆ ಬಳಿಕ ಸತ್ಯವತಿಯೂ ಆಕೆಯ ತಾಯಿಯೂ ಸಹ ವೃಕ್ಷಾಲಿಂಗನೆಯಲ್ಲಿಯೂ ಚರುಭಕ್ಷಣೆಯಲ್ಲಿಯೂ ವ್ಯತ್ಯಾಸವನ್ನು ಮಾಡಿದರು. ಬಳಿಕ ಸ್ವಲ್ಪಕಾಲವಾಗಲು, ಮಹಾತ್ಮನಾದ ಭೃಗುಮಹರ್ಷಿಯು ದಿವ್ಯಜ್ಞಾನದಿಂದ ಆ ವ್ಯತ್ಯಾಸವನ್ನು ತಿಳಿದು ಸತ್ಯವತಿಯ ಸಮೀಪಕ್ಕೆ ಬಂದು, 'ಎಲೆ ಮಗಳೆ, ನೀನು ವೃಕ್ಷಾಲಿಂಗನೆಯನ್ನೂ ಚರುಭಕ್ಷಣೆಯನ್ನೂ ಮಾಡಿದೆ; ಆದರೆ ನಿಮ್ಮ ತಾಯಿಯ ವಂಚನೆಯಿಂದ ಅದು ವ್ಯತ್ಯಾಸವಾಯಿತು. ಆದ್ದರಿಂದ ನಿನ್ನಲ್ಲಿ ಹುಟ್ಟಿದವನು ಬ್ರಾಹ್ಮಣನಾಗಿದ್ದರೂ ಕ್ಷತ್ರಿಯವೃತ್ತಿಯನ್ನು ಆಶ್ರಯಿಸುವನು. ನಿಮ್ಮ ತಾಯಿಯಲ್ಲಿ ಹುಟ್ಟಿದವನು ಕ್ಷತ್ರಿಯನಾಗಿದ್ದರೂ ಬ್ರಾಹ್ಮಣವೃತ್ತಿಯನ್ನು ಆಶ್ರಯಿಸಿ, ಮಹಾಪರಾಕ್ರಮಶಾಲಿಯಾಗಿ ಸನ್ಮಾರ್ಗದಲ್ಲಿ ನಡೆದುಕೊಂಡಿರುವನು' ಎಂದನು. ಅದನ್ನು ಕೇಳಿ ಸತ್ಯವತಿಯು 'ಎಲೈ ಮಹಾತ್ಮನೆ ನನ್ನ ಮಗನು ಇಂಥ ಕ್ರೂರನಾಗತಕ್ಕ ಕೆಲಸವಿಲ್ಲ. ಹಾಗಾಗತಕ್ಕದ್ದು ನಿನ್ನ ಸಂಕಲ್ಪವಾಗಿದ್ದರೆ ನನ್ನ ಮೊಮ್ಮಗನು ಹಾಗೆ ಕ್ಷತ್ರಿಯವೃತ್ತಿಯುಳ್ಳವನಾಗಲಿ' ಎಂದು ಬೇಡಿಕೊಂಡಳು. ಅಲ್ಲಿ ಭೃಗುಮಹರ್ಷಿಯು ಹಾಗೇ ಆಗಲೆಂದು ನುಡಿದು ಅಂತರ್ಧಾನವನ್ನು ಹೊಂದಿದನು. ಆಬಳಿಕ ಕೆಲವು ದಿವಸಗಳಾಗಲು, ಸತ್ಯವತಿಯು ಜಮದಗ್ನಿಮಹರ್ಷಿಯನ್ನು ಪ್ರಸವಿಸಿದಳು. ಮಹಾತೇಜೋವಂತನೂ ವರ್ಚಸ್ವಿಯೂ ಭೃಗುವಂಶಕ್ಕೆ ಅಭಿವರ್ಧಕನೂ ಆದ ಆ ಜಮದಗ್ನಿಯು ದಿನದಿನವೂ ಅಭಿವೃದ್ಧಿಯನ್ನು ಹೊಂದಿ, ವೇದಾಧ್ಯಯನಸಂಪನ್ನನಾಗಿ, ನಾಲ್ಕುವಿಧವಾದ ಅಸ್ತ್ರಗಳಿಂದ ಕೂಡಿರುವ ಧನುರ್ವೇದದಲ್ಲಿ ಪಾರಂಗತನಾಗಿ, ಎಲ್ಲಾ ಋಷಿಗಳಿಗಿಂತಲೂ ಶ್ರೇಷ್ಠನಾಗಿ, ಸೂರ್ಯನಂತೆ ಪ್ರಕಾಶಿಸುತ್ತಿದ್ದನು" ಎಂದು ಅಕೃತವ್ರಣನು ಧರ್ಮರಾಯನಿಗೆ ಹೇಳಿದನು.

## ೧೧೬ನೇ ಅಧ್ಯಾಯ.—ತೀರ್ಥಯಾತ್ರಾಪ್ರಶಂಸೆ.—(ಜಮದಗ್ನಿ ವಧೆ).

ಅನಂತರದಲ್ಲಿ ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಆಗ ಅಕೃತವ್ರಣನು ಧರ್ಮರಾಯನನ್ನು ಕುರಿತು "ಎಲೈ ರಾಯನೆ, ಬಳಿಕ ಜಮದಗ್ನಿಮಹರ್ಷಿಯು ವೇದಾಧ್ಯಯನದಲ್ಲಿ ನಿರತನಾಗಿ, ಮಹತ್ತಾದ ತಪಸ್ಸನ್ನು ಮಾಡಿ ಸಕಲ ವೇದಗಳನ್ನೂ ಸ್ವಾಧೀನಪಡಿಸಿಕೊಂಡು, ಮಹಾರಾಜನಾದ ಪ್ರಸೇನಜಿತ್ತಿನ ಮಗಳಾದ ರೇಣುಕಾದೇವಿಯನ್ನು ಮದುವೆಮಾಡಿಕೊಂಡು, ತನಗೆ ಅನುಕೂಲಳಾದ ಆಕೆಯೊಡನೆ ಆಶ್ರಮದಲ್ಲಿ ತಪಸ್ಸುಮಾಡುತ್ತಿರಲು, ಆಕೆಯ ಗರ್ಭದಲ್ಲಿ ರುಮಣ್ವಂತ, ಸುಷೇಣ, ವಸು, ವಿಶ್ವಾವಸು, ರಾಮ ಎಂದು ಐದುಮಂದಿ ಮಕ್ಕಳು ಹುಟ್ಟಿದರು. ಆ ಐದುಮಂದಿಯಲ್ಲಿ ರಾಮನು ಚಿಕ್ಕವನಾಗಿದ್ದರೂ ಗುಣದಲ್ಲಿಯೂ ಪರಾಕ್ರಮದಲ್ಲಿಯೂ ಅವರೆಲ್ಲರಿಗಿಂತಲೂ ಹೆಚ್ಚಾಗಿದ್ದನು. ಈ ಐದುಮಂದಿ ಕುಮಾ

ರರೂ ಒಂದು ದಿವಸ ಫಲಗಳನ್ನು ತೆಗೆದುಕೊಂಡು ಬರುವದಕ್ಕೋಸ್ಕರ ಅರಣ್ಯಕ್ಕೆ ಹೋಗಿರಲು, ರೇಣುಕಾದೇವಿಯು ನೇಮದಿಂದ ಸ್ನಾನಕ್ಕೆ ಹೋಗಿ ಸ್ನಾನಮಾಡಿಕೊಂಡು ಬರುವಾಗ, ತನ್ನ ಪತ್ನಿಯೊಡನೆ ತಾವರೇ ಹೂವಿನ ಮಾಲಿಕೆಯನ್ನು ಧರಿಸಿ ಜಲಕ್ರೀಡೆಯನ್ನು ಮಾಡುತ್ತಿದ್ದ ಮಾರ್ತಿಕಾವತಕಪಟ್ಟಣಕ್ಕೆ ಅರಸಾದ ಐಶ್ವರ್ಯವಂತನಾದ ಚಿತ್ರರಥರಾಯನನ್ನು ನೋಡಿ, ಆತನಲ್ಲಿ ಅಪೇಕ್ಷೆಪಟ್ಟು, ಆ ವ್ಯಭಿಚಾರದೋಷದಿಂದ ಮನೋವಿಕಾರವುಳ್ಳವಳಾಗಿ, ಪುನಃ ಸ್ನಾನಮಾಡಿಕೊಂಡು ಆಶ್ರಮಕ್ಕೆ ಬಂದಳು. ಅದನ್ನು ತಿಳಿದು ಜಮದಗ್ನಿಮಹರ್ಷಿಯು ಮಾನಸಿಕವ್ಯಭಿಚಾರದೋಷದಿಂದ ಬ್ರಹ್ಮತೇಜಸ್ಸಿಲ್ಲದವಳಾಗಿಯೂ, ಧೈರ್ಯಹೀನೆಯಾಗಿಯೂ, ಇರುವ ಪತ್ನಿಯಾದ ರೇಣುಕೆಯನ್ನು ನೋಡಿ, ಆಕೆಯನ್ನು 'ಛೀ! ಛೀ!' ಎಂದು ನಿಂದಿಸಿದನು. ಅಷ್ಟರಲ್ಲೇ ರುಮಣ್ವಂತ, ಸುಷೇಣ, ವಸು, ವಿಶ್ವಾವಸುಗಳೆಂಬ ನಾಲ್ಕುಮಂದಿ ಕುಮಾರರೂ ಅಲ್ಲಿಗೆ ಬರಲು, ಅವರನ್ನು ಒಬ್ಬೊಬ್ಬರನ್ನಾಗಿ ಕರೆದು ಜಮದಗ್ನಿಮಹರ್ಷಿಯು 'ನಿಮ್ಮ ತಾಯಿಯನ್ನು ಸಂಹಾರಮಾಡಿರಿ' ಎಂದು ಆಜ್ಞಾಪಿಸಿದನು. ಆ ಮಾತನ್ನು ಕೇಳಿ ಆ ನಾಲ್ಕುಮಂದಿ ಕುಮಾರರೂ ಮಾತೃಭಕ್ತಿಯಿಂದ ಅಂಥ ಕ್ರೂರಕೃತ್ಯಕ್ಕೆ ಒಡಂಬಡದೆ ಸುಮ್ಮನಿರಲು, ಜಮದಗ್ನಿಯು ಕ್ರೋಧಾವೇಶವುಳ್ಳವನಾಗಿ ಅವರಿಗೆ ಶಾಪವನ್ನು ಕೊಟ್ಟನು. ಒಡನೆಯೇ ಆ ನಾಲ್ಕುಮಂದಿಯೂ ಮೃಗಪಕ್ಷಿಗಳಂತೆ ಜಡರಾಗಿ ಹೋದರು. ಬಳಿಕ ಮಹಾಪರಾಕ್ರಮಶಾಲಿಯಾದ ರಾಮನು ಆಶ್ರಮಕ್ಕೆ ಬರಲು, ಆತನನ್ನು ನೋಡಿ ಜಮದಗ್ನಿಯು 'ಎಲೈ ರಾಮನೆ, ಪಾಪಾತ್ಮಳಾದ ನಿಮ್ಮ ತಾಯಿಯಾದ ಇವಳನ್ನು ಸಂಹಾರಮಾಡು. ಇದಕ್ಕೆ ನೀನು ಚಿಂತಿಸಬೇಡ' ಎನಲು, ರಾಮನು ತನ್ನ ಕೈಯಲ್ಲಿದ್ದ ಗಂಡುಕೊಡಲಿಯಿಂದ ರೇಣುಕಾದೇವಿಯ ಶಿರಸ್ಸನ್ನು ಛೇದಿಸಿದನು. ಬಳಿಕ ಜಮದಗ್ನಿಮಹರ್ಷಿಯು ತನ್ನ ಕೋಪವನ್ನು ಸಮಾಧಾನಮಾಡಿಕೊಂಡು ಪ್ರಸನ್ನನಾಗಿ ರಾಮನನ್ನು ಕುರಿತು 'ಎಲೈ ರಾಮನೆ, ನಾನು ಹೇಳಿದ ಕಾರ್ಯವು ದುಷ್ಕರವಾದದ್ದಾದಾಗ್ಯೂ, ನನ್ನ ವಚನದಿಂದ ನೀನು ಅದನ್ನು ನೆರವೇರಿಸಿದ್ದಕ್ಕಾಗಿ ನಿನಗೆ ಬೇಕಾದ ಇಷ್ಟಾರ್ಥಗಳನ್ನು ಕೊಡುವೆನು ಕೇಳು' ಎನಲು, ಪರಶುರಾಮನು ತಂದೆಯನ್ನು ಕುರಿತು 'ಎಲೈ ತಂದೆಯೆ, ನಮ್ಮ ತಾಯಿಯು ಬದುಕುವ ಹಾಗೂ, ಆಕೆಯನ್ನು ಕೊಂದ ಪಾಪವೂ ಆಕೆಯನ್ನು ನಾನು ಸಂಹಾರಮಾಡಿದ ಸ್ಮರಣೆಯೂ ಸಹ ನನಗೆ ಉಂಟಾಗದ ಹಾಗೂ, ನಮ್ಮ ಅಣ್ಣಂದಿರು ನಾಲ್ಕುಮಂದಿಯೂ ಮೊದಲಿನಂತೆ ಇರುವಹಾಗೂ, ನಾನು ದೀರ್ಘಾಯುಷ್ಮಂತನಾಗಿ ಯುದ್ಧದಲ್ಲಿ ಅಪ್ರತಿಭಟನಾಗಿರುವಹಾಗೂ, ನೀನು ಅನುಗ್ರಹವನ್ನು ಮಾಡಬೇಕು' ಎಂದು ನುಡಿದನು. ಅದನ್ನು ಕೇಳಿ ಮಹಾತಪಸ್ವಿಯಾದ ಜಮದಗ್ನಿಮಹರ್ಷಿಯು ಹಾಗೇ ಆಗಲೆಂದು ಆ ವರಗಳನ್ನೆಲ್ಲಾ ಕೊಟ್ಟನು.

ಹೀಗಿರುವಾಗ, ಒಂದಾನೊಂದು ಕಾಲದಲ್ಲಿ ಜಮದಗ್ನಿಋಷಿಯ ಐದುಮಂದಿ ಕುಮಾರರೂ ಆಶ್ರಮದಿಂದ ಹೊರಕ್ಕೆ ಹೋಗಿರಲು, ಅನೂಪದೇಶಾಧಿಪತಿಯಾದ ಮಹಾವೀರನಾದ ಕಾರ್ತವೀರ್ಯಾರ್ಜುನನು ಆ ಆಶ್ರಮಕ್ಕೆ ಬಂದನು. ಆಗ ಜಮದಗ್ನಿಪತ್ನಿಯಾದ ರೇಣುಕಾದೇವಿಯು ಆತನಿಗೆ ಅತಿಥಿಸತ್ಕಾರವನ್ನು ಮಾಡಲು, ಯಾವಾಗಲೂ ಯುದ್ಧದಲ್ಲಿ ಕುತೂಹಲವುಳ್ಳ ಕಾರ್ತವೀರ್ಯಾರ್ಜುನನು ಅದಕ್ಕೆ ತೃಪ್ತಿಪಡದೆ, ಆ ಆಶ್ರಮದಲ್ಲಿದ್ದ ಹೋಮಧೇನುವಿನ ಕರುವನ್ನು ಅದರ ತಾಯಿಯು ಅರಚಿಕೊಳ್ಳುತ್ತಿದ್ದರೂ ಬಲಾತ್ಕಾರದಿಂದ ಅಪಹರಿಸಿಕೊಂಡು, ಆಶ್ರಮದ ವೃಕ್ಷಗಳನ್ನೆಲ್ಲಾ ಮುರಿದುಹಾಕಿ ಹೊರಟು ಹೋದನು. ಬಳಿಕ ಪರಶುರಾಮನು ಆಶ್ರಮಕ್ಕೆ ಬರಲು, ಜಮದಗ್ನಿಯು ಆ ವೃತ್ತಾಂತವನ್ನೆಲ್ಲಾ ಆತನಿಗೆ ತಿಳುಹಿಸಿದನು. ಆಗ ಪರಶುರಾಮನು ಕರುವನ್ನಗಲಿ ಅರಚಿಕೊಳ್ಳುತ್ತಿರುವ ಹೋಮಧೇನುವನ್ನು ನೋಡಿ ಅಧಿಕವಾದ ಕ್ರೋಧಾವೇಶವುಳ್ಳವನಾಗಿ, ಒಡನೆಯೇ ಮೃತ್ಯುವಿಗೆ ಅಧೀನನಾದ ಕಾರ್ತವೀರ್ಯಾರ್ಜುನನನ್ನು ಅಟ್ಟಿಕೊಂಡು ಹೋಗಿ, ಧನುಸ್ಸನ್ನು ಹಿಡಿದು ತೀಕ್ಷ್ಣವಾದ ಬಾಣಗಳನ್ನು ಪ್ರಯೋಗಿಸಿ, ಕೋಟೆಬಾಗಿಲಿನ ಲಾಳಮುಂಡಿಗೆಯನ್ನು ಹೋಲುತ್ತಿದ್ದ ಆತನ ಸಾವಿರತೋಳುಗಳನ್ನೂ ಕತ್ತರಿಸಿ, ಆತನಿಗೆ ವಿನಾಶವನ್ನುಂಟುಮಾಡಿದನು. ಬಳಿಕ ಕಾರ್ತವೀರ್ಯಾರ್ಜುನನ ಮಕ್ಕಳು ಪರಶುರಾಮನು ಮಾಡಿದ ಕೆಲಸಕ್ಕೆ ಕೋಪಗೊಂಡು, ಪರಶುರಾಮನು ಇಲ್ಲದ ಕಾಲದಲ್ಲಿ ಆಶ್ರಮಕ್ಕೆ ಬಂದು, ಯುದ್ಧಮಾಡತಕ್ಕವನಲ್ಲದೆ ತಪಸ್ಸು ಮಾಡುತ್ತಿದ್ದ ಜಮದಗ್ನಿಮಹರ್ಷಿಯನ್ನು, ಅನಾಥನಾಗಿ 'ರಾಮ, ರಾಮ' ಎಂದು ಕೂಗಿಕೊಳ್ಳುತ್ತಿದ್ದರೂ, ಬಾಣಗಳಿಂದ ಪೆಟ್ಟಿಕ್ಕಿ ಸಂಹಾರಮಾಡಿ ಹೊರಟುಹೋದರು. ಬಳಿಕ ಪರಶುರಾಮನು ಅರಣ್ಯದಿಂದ ಸಮಿತ್ತು

ಗಳನ್ನು ತೆಗೆದುಕೊಂಡು ಆಶ್ರಮಕ್ಕೆ ಬಂದು, ಅಂಥ ಮರಣಕ್ಕೆ ತಕ್ಕವನಲ್ಲದಿದ್ದರೂ ಪಾಪಾತ್ಮರಿಂದ ಹತನಾಗಿದ್ದ ತಂದೆಯನ್ನು ನೋಡಿ ಬಹುದುಃಖದಿಂದ ಪ್ರಲಾಪಿಸಿದನು" ಎಂದು ಅಕೃತವ್ರಣನು ಧರ್ಮರಾಯನಿಗೆ ಹೇಳಿದನು.

---

೧೧೭ನೇ ಅಧ್ಯಾಯ.—ತೀರ್ಥಯಾತ್ರಾಪ್ರಶಂಸೆ—(ಯುಧಿಷ್ಠಿರನಿಗೆ ಪರಶುರಾಮನ ದರ್ಶನ).

ಅನಂತರದಲ್ಲಿ, ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯ ರಾಯನೆ, ಅಕೃತವ್ರಣನು ಧರ್ಮರಾಯನನ್ನು ಕುರಿತು "ಎಲೈ ಧರ್ಮರಾಯನೆ, ಆಗ ಪರಶುರಾಮನು ಮೃತನಾದ ತಂದೆಯನ್ನು ನೋಡಿ 'ಎಲೈ ತಂದೆಯೆ, ನನ್ನ ಅಪರಾಧದಿಂದಲೇ ಪಾಪಿಗಳಾದ ಕಾರ್ತವೀರ್ಯಾರ್ಜುನನ ಮಕ್ಕಳು ಬಾಣಗಳಿಂದ ಮೃಗವನ್ನು ಸಂಹಾರಮಾಡುವಂತೆ ನಿನ್ನನ್ನು ಸಂಹಾರಮಾಡಿದರು. ಹಾ! ಹಾ! ತಂದೆಯೆ, ಸನ್ಮಾರ್ಗದಲ್ಲಿದ್ದುಕೊಂಡು ಧರ್ಮಜ್ಞನಾಗಿ ಯಾವ ಪ್ರಾಣಿಗೂ ಸ್ವಲ್ಪವಾದರೂ ಕೇಡನ್ನು ಬಯಸದೆ ಇದ್ದ ನಿನ್ನಂಥವನಿಗೆ ಇಂಥ ಮರಣವು ಪ್ರಾಪ್ತವಾಗಬಹುದೆ? ಅಯ್ಯೋ, ತಂದೆಯೆ! ಯುದ್ಧಮಾಡದೆ ತಪಸ್ಸುಮಾಡಿಕೊಂಡಿದ್ದ ವೃದ್ಧನಾದ ನಿನ್ನನ್ನು ಆ ಪಾಪಾತ್ಮರು ತೀಕ್ಷ್ಣವಾದ ಬಾಣಗಳಿಂದ ಸಂಹಾರಮಾಡಿದರಲ್ಲಾ! ಇಂಥ ಅಕಾರ್ಯವನ್ನು ಮಾಡಿದ ಆ ದುರಾತ್ಮರು ತಮ್ಮ ಮಂತ್ರಿಗಳು ಕೇಳಿದ್ದಲ್ಲಿ, ಲಜ್ಜೆಯಿಲ್ಲದೆ ಏನುತ್ತರವನ್ನು ಕೊಡುವರು?' ಎಂದು ಬಹುವಿಧವಾಗಿ ದುಃಖದಿಂದ ಪ್ರಲಾಪಿಸಿ, ತನ್ನ ತಂದೆಯಾದ ಆತನಿಗೆ ಅಗ್ನಿಸಂಸ್ಕಾರ ಮೊದಲಾದ ಉತ್ತರಕ್ರಿಯೆಗಳನ್ನೆಲ್ಲಾ ವಿಧಿವತ್ತಾಗಿ ಮಾಡಿ, ಅತ್ಯಂತಕ್ರೋಧದಿಂದ ಸಕಲರಾದ ಕ್ಷತ್ರಿಯರನ್ನೂ ಸಂಹರಿಸುವದಕ್ಕೋಸ್ಕರ ಪ್ರತಿಜ್ಞೆಯನ್ನುಮಾಡಿ, ಕೈಯಲ್ಲಿ ಆಯುಧವನ್ನುಹಿಡಿದು ತಾನೊಬ್ಬನೇ ಕಾಲಯಮನಂತೆ ಹೊರಟು ಕಾರ್ತವೀರ್ಯಾರ್ಜುನನ ಕುಮಾರರನ್ನೂ ಅವರನ್ನು ಸೇರಿರತಕ್ಕ ಕ್ಷತ್ರಿಯರನ್ನೂ ಸಹ ಸಂಹಾರಮಾಡಿ, ಬಳಿಕ ಭೂಮಿಯಲ್ಲಿದ್ದ ಕ್ಷತ್ರಿಯರನ್ನೆಲ್ಲಾ ಇಪ್ಪತ್ತೊಂದಾವರ್ತಿ ಸಂಹಾರಮಾಡಿ, ಸ್ಯಮಂತಪಂಚಕಕ್ಷೇತ್ರದಲ್ಲಿ ಆ ಕ್ಷತ್ರಿಯರ ರಕ್ತದಿಂದ ಐದು ಮಡುಗಳನ್ನು ನಿರ್ಮಾಣಮಾಡಿ, ಆ ರಕ್ತದಿಂದ ಋಚೀಕ ಮೊದಲಾದ ತನ್ನ ಪಿತೃಗಳಿಗೆಲ್ಲಾ ತರ್ಪಣವನ್ನು ಮಾಡಿ, ಋಚೀಕನನ್ನುಸಾಕ್ಷಾತ್ತಾಗಿ ದರ್ಶನಮಾಡಿದನು.

ಆಗ ಋಚೀಕನು 'ಎಲೈ ರಾಮನೆ, ಈ ಕೆಲಸವನ್ನು ಇಲ್ಲಿಗೆ ಸಾಕುಮಾಡು' ಎನಲು, ಆಮಾತನ್ನು ಕೇಳಿ ಪ್ರತಾಪಶಾಲಿಯಾದ ಪರಶುರಾಮನು ಮಹತ್ತಾದ ಯಜ್ಞವನ್ನು ಮಾಡಿ, ಅದರಿಂದ ಇಂದ್ರನನ್ನು ಸಂತೋಷಪಡಿಸಿ, ಋತ್ವಿಕ್ಕುಗಳಿಗೆ ಭೂಮಿಯನ್ನು ದಕ್ಷಿಣೆಗಾಗಿ ಕೊಟ್ಟು, ಹತ್ತುಮಾರು ಅಗಲವೂ ಒಂಭತ್ತುಮಾರು ಎತ್ತರವೂ ಇರತಕ್ಕ ಒಂದು ಸುವರ್ಣವೇದಿಯನ್ನು ಮಾಡಿ ಅದನ್ನು ಮಹಾತ್ಮನಾದ ಕಶ್ಯಪನಿಗೋಸ್ಕರ ಕೊಟ್ಟನು. ಆಗ ಅಲ್ಲಿದ್ದ ಬ್ರಾಹ್ಮಣರು ಕಶ್ಯಪನ ಅನುಮತಿಯಿಂದ ಆ ವೇದಿಯನ್ನು ಖಂಡಿಸಿ ಭಾಗಮಾಡಿಕೊಂಡರು. ಆ ಮೊದಲು ಬ್ರಾಹ್ಮಣರಿಗೆ ಖಾಂಡವಾಯನರೆಂಬ ಪ್ರಸಿದ್ಧಿಯುಂಟಾಯಿತು. ಈ ಪ್ರಕಾರ ಯಜ್ಞವನ್ನು ಮಾಡಿದ ಪರಶುರಾಮನು ಉಳಿದ ಭೂಮಿಯನ್ನೆಲ್ಲಾ ಕಶ್ಯಪನಿಗೆ ದಾನಮಾಡಿ, ಆಗಲಿಂದಲೂ ಈ ಮಹೇಂದ್ರಪರ್ವತದಲ್ಲಿ ವಾಸಮಾಡುತ್ತಿರುವನು. ಎಲೈ ಧರ್ಮರಾಯನೆ, ಮಹಾಪರಾಕ್ರಮಶಾಲಿಯಾದ ಪರಶುರಾಮನಿಗೂ ಕ್ಷತ್ರಿಯರಿಗೂ ಈ ಪ್ರಕಾರ ವೈರವುಂಟಾಗಿ, ಆತನು ತನ್ನ ಪರಾಕ್ರಮದಿಂದ ಭೂಮಿಯನ್ನೆಲ್ಲಾ ಜಯಿಸಿದನು" ಎಂದು ಅಕೃತವ್ರಣನು ಧರ್ಮರಾಯನಿಗೆ ತಿಳುಹಿಸಿದನು.

ಬಳಿಕ ಮಾರನೇದಿವಸ ಚತುರ್ದಶಿಯು ಬರಲು, ಪರಶುರಾಮನು ಆ ಋಷಿಗಳ ಆಶ್ರಮಕ್ಕೆ ಬಂದು ಅಲ್ಲಿದ್ದ ಋಷಿಗಳಿಗೂ ತಮ್ಮಂದಿರೊಡಗೂಡಿರುವ ಧರ್ಮರಾಯನಿಗೂ ದರ್ಶನವನ್ನು ಕೊಟ್ಟನು. ಆಗ ಧರ್ಮರಾಯನು ಆ ಪರಶುರಾಮನಿಗೂ ಅಲ್ಲಿರತಕ್ಕ ಋಷಿಗಳಿಗೂ ಪೂಜೆಯನ್ನು ಮಾಡಿ, ಪರಶುರಾಮನಿಂದ ತಾನೂ ಸನ್ಮಾನಿತನಾಗಿ, ಆರಾತ್ರಿ ಆ ಪರ್ವತದಲ್ಲೇ ವಾಸಮಾಡಿ, ಪ್ರಾತಃಕಾಲವಾಗಲು ದಕ್ಷಿಣದಿಕ್ಕಿಗೆ ಅಭಿಮುಖವಾಗಿ ಪ್ರಯಾಣ ಮಾಡಿದನು.

---

೧೧೮ನೇ ಅಧ್ಯಾಯ.—ತೀರ್ಥಯಾತ್ರಾಪ್ರಶಂಸೆ—(ಯುಧಿಷ್ಠಿರನನ್ನು ಕಾಣುವದಕ್ಕೆ ಕೃಷ್ಣಾದಿಗಳು ಬಂದದ್ದು).

ಅನಂತರದಲ್ಲಿ ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯ ರಾಯನೆ, ಬಳಿಕ ಮಹಾನುಭಾವನೂ ಸದ್ವೃತ್ತಿಯುಳ್ಳವನೂ ಕಶ್ಯಪಪುತ್ರನೂ ಸೂರ್ಯನಿಗೆ ಮೊಮ್ಮಗನೂ ಆದ ಪಾಂಡುಪುತ್ರನಾದ ಧರ್ಮರಾಯನು ತಮ್ಮಂದಿರೊಡಗೂಡಿ, ಅನೇಕಮಂದಿ ಬ್ರಾಹ್ಮಣರಿಂದ ಶೋಭಿಸುತ್ತಾ, ಪುಣ್ಯಾ ತ್ಮರುಗಳಾದ ಸಮುದ್ರತೀರದಲ್ಲಿರುವ ಅನೇಕತೀರ್ಥಗಳನ್ನು ನೋಡಿ, ಅಲ್ಲಲ್ಲಿ ಸ್ನಾನಮಾಡಿ, ಬಳಿಕ ಸಮುದ್ರಗಾ ಮಿನಿಯಾದ ಪುಣ್ಯಾತಮವಾದ ಪ್ರಶಸ್ತಾನದಿಗೆ ಹೋಗಿ ಸ್ನಾನಮಾಡಿ, ದೇವತೆಗಳಿಗೂ ಪಿತೃಗಳಿಗೂ ತರ್ಪಣ ವನ್ನು ಮಾಡಿ, ಶ್ರೇಷ್ಠರಾದ ಬ್ರಾಹ್ಮಣರಿಗೆ ಬೇಕಾದಷ್ಟು ಧನವನ್ನು ಕೊಟ್ಟು; ಅಲ್ಲಿಂದ ಹೊರಟು ಸಮುದ್ರ ಗಾಮಿನಿಯಾದ ಗೋದಾವರೀನದಿಗೆ ಹೋಗಿ ಅಲ್ಲಿಯೂ ಸ್ನಾನಮಾಡಿ ಸಕಲಪಾಪಗಳನ್ನೂ ಕಳೆದುಕೊಂಡು; ಅಲ್ಲಿಂದ ಹೊರಟು ದ್ರವಿಡದೇಶಕ್ಕೆ ಹೋಗಿ, ಅತ್ತಲಾಗಿರುವ ಪುಣ್ಯಾತಮವಾದ ಸಮುದ್ರವನ್ನು ದರ್ಶನಮಾಡಿ, ಅಲ್ಲಿರುವ ಪಾವನವಾದ ಅಗಸ್ತ್ಯತೀರ್ಥಕ್ಕೂ ಪಂಚನಾರೀತೀರ್ಥಗಳಿಗೂ ಹೋಗಿ, ಅಲ್ಲಿ ಮಹಾಪರಾಕ್ರಮಶಾಲಿ ಯಾದ ಅರ್ಜುನನು ಮತ್ತೊಬ್ಬರಿಗೆ ಅಶಕ್ಯವಾದ ಐದುಮಂದಿ ಅಪ್ಸರಸ್ತ್ರೀಯರಿಗೆ ಶಾಪವಿಮೋಚನೆಯನ್ನು ಮಾಡಿದ ವೃತ್ತಾಂತವನ್ನು ಋಷಿಗಳ ಮುಖದಿಂದ ಕೇಳಿ ಬಹುಸಂತೋಷಪಟ್ಟು; ತಮ್ಮಂದಿರೊಡನೆಯೂ ದ್ರೌಪದಿ ಯೊಡನೆಯೂ ಆ ತೀರ್ಥಗಳಲ್ಲಿ ಸ್ನಾನಮಾಡಿ, ಸಹಸ್ರಗೋದಾನವನ್ನು ಮಾಡಿ, ಅರ್ಜುನನ ಪರಾಕ್ರಮವನ್ನು ವಿಶೇಷವಾಗಿ ಶ್ಲಾಘಿಸುತ್ತಾ, ಕ್ರಮವಾಗಿ ಹೊರಟು ಸಮುದ್ರತೀರದಲ್ಲಿರುವ ಅನೇಕಪುಣ್ಯಾತೀರ್ಥಗಳಲ್ಲಿ ಸ್ನಾನಮಾಡಿ ಪೂರ್ಣಮನೋರಥನಾಗಿ, ಶೂರ್ಪಾರಕ್ಷೇತ್ರವನ್ನು ಸೇರಿ, ಅಲ್ಲಿ ಸಮುದ್ರತೀರದಿಂದ ಸ್ವಲ್ಪ ಮುಂದಕ್ಕೆ ಹೋಗಿ, ಲೋಕಪ್ರಸಿದ್ಧವಾದ ಒಂದು ವನವನ್ನು ಸೇರಿದನು. ಅಲ್ಲಿ ದೇವತೆಗಳು ತಪಸ್ಸನ್ನು ಮಾಡಿರುವರು. ಮತ್ತು ಪುಣ್ಯವಂತರಾದ ರಾಜರು ಅನೇಕ ಯಜ್ಞಗಳನ್ನು ಮಾಡಿರುವ ಅಂಥ ಪುಣ್ಯಾತಮವಾದ ವನದಲ್ಲಿ ಋಚೀಕ ಪುತ್ರನಾದ ಜಮದಗ್ನಿಮಹರ್ಷಿಯು ಮಾಡಿರುವ ಒಂದು ಯಜ್ಞವೇದಿಯು ಅನೇಕರಾದ ಮಹರ್ಷಿಗಳಿಂದ ಪೂಜಿತವಾಗಿರುವದು. ಅಂಥ ವೇದಿಯನ್ನು ನೋಡಿ ಬಳಿಕ ಧರ್ಮರಾಯನು ಅಷ್ಟವಸುಗಳೂ, ಏಕೋನ ಪಂಚಾಶನ್ಮರುತ್ತುಗಳೂ, ಅಶ್ವಿನೀದೇವತೆಗಳೂ, ದ್ವಾದಶಾದಿತ್ಯರೂ, ಸಾಧ್ಯರೂ, ಪಿತೃದೇವತೆಗಳೂ, ಗರುಡನೂ, ಚಂದ್ರನೂ, ಸರಸ್ವತಿಯೂ, ಸಿದ್ಧರೂ, ಅಷ್ಟದಿಕ್ಪಾಲಕರೂ, ಬ್ರಹ್ಮವಿಷ್ಣುಮಹೇಶ್ವರರೂ, ಇನ್ನೂ ಇತರರಾದ ದೇವತೆಗಳೂ ವಾಸಮಾಡತಕ್ಕ ಆಯಾ ಪುಣ್ಯಕ್ಷೇತ್ರಗಳಿಗೆ ಹೋಗಿ, ಅಲ್ಲಲ್ಲಿರುವ ತೀರ್ಥಗಳಲ್ಲಿ ಸ್ನಾನಮಾಡಿ, ಅಲ್ಲಲ್ಲಿ ಉಪವಾಸಗಳನ್ನು ಮಾಡಿ, ಬ್ರಾಹ್ಮಣರಿಗೆ ಅನೇಕ ರತ್ನಗಳನ್ನು ದಾನಮಾಡಿ, ಪುನಃ ಶೂರ್ಪಾರಕ್ಷೇ ತ್ರಕ್ಕೆ ಬಂದು, ತಮ್ಮಂದಿರೊಡನೆಯೂ ಬ್ರಾಹ್ಮಣರೊಡನೆಯೂ ಕೂಡಿ ಲೋಕಪ್ರಸಿದ್ಧವಾಗಿ ಮಹಾತ್ಮರಿಂದ ಸೇವಿತವಾಗಿರುವ ಪ್ರಭಾಸಕ್ಷೇತ್ರಕ್ಕೆ ಬಂದು, ಅಲ್ಲಿರುವ ತೀರ್ಥದಲ್ಲಿ ಸ್ನಾನಮಾಡಿ, ದೇವತೆಗಳಿಗೂ ಪಿತೃಗ ಳಿಗೂ ತರ್ಪಣವನ್ನು ಮಾಡಿ, ಅಲ್ಲಿ ತಮ್ಮಂದಿರೊಡನೆಯೂ ದ್ರೌಪದಿಯೊಡನೆಯೂ ಬ್ರಾಹ್ಮಣರೊಡನೆಯೂ ಲೋಮಶಮಹರ್ಷಿಯೊಡನೆಯೂ ಆ ತೀರ್ಥದಲ್ಲಿ ಹಗಲು ರಾತ್ರಿ ಎರಡುವೇಳೆಯಲ್ಲೂ ಸ್ನಾನಮಾಡುತ್ತಾ, ಪಂಚಾಗ್ನಿ ಮಧ್ಯದಲ್ಲಿದ್ದುಕೊಂಡು ಹನ್ನೆರಡುದಿವಸ ಜಲವನ್ನೂ ವಾಯುವನ್ನೂ ಆಹಾರಮಾಡಿಕೊಂಡು ತಪಸ್ಸನ್ನು ಮಾಡುತ್ತಿದ್ದನು. ಅದನ್ನು ಕೇಳಿ ವೃಷ್ಣಿಕುಲಶ್ರೇಷ್ಠರಾದ ಬಲರಾಮಕೃಷ್ಣರು ಪಾಂಡವರನ್ನು ನೋಡುವ ತಕ್ಕೋಸ್ಕರ ಸೈನ್ಯಸಮೇತರಾಗಿ ಅಲ್ಲಿಗೆಬಂದು, ಭೂಮಿಯ ಮೇಲೆ ಶಯನಮಾಡಿ ಧೂಳುಕವಿದಿರುವ ಪಾಂಡವ ರನ್ನೂ ಅಂಥ ಕ್ಲೇಶಕ್ಕೆ ಅನರ್ಹಳಾದ ದ್ರೌಪದಿಯನ್ನೂ ನೋಡಿ ದೀನರಾಗಿ ದುಃಖಿಸಿದರು. ಆಗ ಧರ್ಮರಾಯನು ಬಲರಾಮನನ್ನೂ, ಕೃಷ್ಣನನ್ನೂ, ಪ್ರದ್ಯುಮ್ನನನ್ನೂ, ಸಾಂಬನನ್ನೂ, ಸಾತ್ಯಕಿಯನ್ನೂ, ಇನ್ನೂ ಅನೇಕ ರಾದ ವೃಷ್ಣಿವೀರರನ್ನೂ, ಯಥಾರ್ಹವಾಗಿ ಸತ್ಕರಿಸಿದನು. ಬಳಿಕ ಸಕಲರಾದ ಯಾದವರೂ ಧರ್ಮರಾಯಾದಿ ಗಳಿಗೆ ಸತ್ಕಾರವನ್ನು ಮಾಡಿ, ದೇವತೆಗಳು ಮಹೇಂದ್ರನನ್ನು ಸುತ್ತುವರಿಯುವಂತೆ ಧರ್ಮರಾಯನನ್ನು ಸುತ್ತು ವರಿದು ಕೂತುಕೊಂಡರು. ಬಳಿಕ ಧರ್ಮರಾಯನು ದುರ್ಯೋಧನಾದಿಗಳ ದುಶ್ಚರಿತ್ರೆಯನ್ನೂ, ತಾವು ವನವಾಸ ಮಾಡುತ್ತಿರುವದನ್ನೂ, ಅಸ್ತ್ರನಿಮಿತ್ತವಾಗಿ ಅರ್ಜುನನು ಇಂದ್ರನ ಬಳಿಗೆ ಹೋಗಿರುವದನ್ನೂ ಸಹ, ಸಂತೋ

ಷದಿಂದ ಅವರಿಗೆ ತಿಳುಹಿಸಿದನು. ಆ ಮಾತನ್ನು ಕೇಳಿ ಮಹಾನುಭಾವರಾದ ಕೃಷ್ಣಾದಿಗಳು ವನವಾಸದಿಂದ ಅತ್ಯಂತ ಕೃಶರಾಗಿರುವ ಪಾಂಡವರನ್ನು ನೋಡಿ ದುಃಖದಿಂದ ಕಣ್ಣೀರನ್ನು ಸುರಿಸಿದರು—ಎಂದು ಜನಮೇಜಯರಾಯನಿಗೆ ವೈಶಂಪಾಯನಮುನೀಶ್ವರನು ವಿವರಿಸಿದನು.

## ೧೧೯ನೇ ಅಧ್ಯಾಯ.—ತೀರ್ಥಯಾತ್ರಾಪ್ರಶಂಸೆ—(ಬಲರಾಮ ಕೃಷ್ಣರ ಸಂವಾದ).

ಅನಂತರದಲ್ಲಿ ಜನಮೇಜಯರಾಯನು ವೈಶಂಪಾಯನಮುನೀಶ್ವರನನ್ನು ಕುರಿತು—ಎಲೈ ಮುನೀಂದ್ರನೆ, ಮಹಾತ್ಮರೂ ಸಕಲ ಶಾಸ್ತ್ರಗಳನ್ನೂ ಬಲ್ಲವರೂ ಪರಸ್ಪರ ಸ್ನೇಹವುಳ್ಳವರೂ ಆದ ಯಾದವರಿಗೂ ಪಾಂಡವರಿಗೂ ಆ ಪ್ರಭಾಸತೀರ್ಥದಲ್ಲಿ ಏನುಮಾತು ನಡೆಯಿತೋ ಅದನ್ನು ತಿಳುಹಿಸು—ಎನಲು, ವೈಶಂಪಾಯನನು ಜನಮೇಜಯನನ್ನು ಕುರಿತು—ಕೇಳು ಜನಮೇಜಯರಾಯನೆ, ಪ್ರಭಾಸಕ್ಷೇತ್ರದಲ್ಲಿ ಯಾದವರು ಪಾಂಡವರನ್ನು ಸುತ್ತುವರಿದು ಕುಳಿತುಕೊಂಡಿರಲು, ಗೋಕ್ಷೀರದಂತೆಯೂ, ಮಲ್ಲೇ ಹೂವಿನಂತೆಯೂ, ಚಂದ್ರನಂತೆಯೂ, ತಾವರೇ ಕಾವಿನ ಎಳೆಗಳಂತೆಯೂ, ಶುದ್ಧವಾದ ಬೆಳ್ಳಿಯಂತೆಯೂ ಶುಭ್ರವಾದ, ದೇಹಕಾಂತಿಯುಳ್ಳವನೂ ವನಮಾಲಾವಿಭೂಷಣನೂ ಹಲಧರನೂ ಆದ ಬಲರಾಮನು ಪುಂಡರೀಕಾಕ್ಷನಾದ ಶ್ರೀಕೃಷ್ಣನ ಸಂಗಡ ಮಾತನಾಡಲುಪಕ್ರಮಿಸಿ “ಎಲೈ ಕೃಷ್ಣನೆ, ಲೋಕದಲ್ಲಿ ಧರ್ಮವನ್ನು ಆಚರಿಸಿದರೆ ಅಭ್ಯುದಯವೂ, ಅಧರ್ಮವನ್ನು ಆಚರಿಸಿದರೆ ತಿರಸ್ಕಾರವೂ, ಉಂಟಾಗುವದೆಂದು ಹೇಳುವದು ಹ್ಯಾಗೆ? ಮಹಾತ್ಮನಾದ ಧರ್ಮರಾಯನು ನಾರುಬಟ್ಟೆಯನ್ನುಟ್ಟು, ಜಟೆಯನ್ನು ಧರಿಸಿ, ಅರಣ್ಯದಲ್ಲಿ ಕ್ಲೇಶಪಡುತ್ತಿರುವನು. ಪಾಪಾತ್ಮನಾದ ದುರ್ಯೋಧನನು ಸುಖವಾಗಿ ಭೂಮಿಯನ್ನು ಆಳುತ್ತಿರುವನು. ಅವನು ನಾಶವಾಗುವದಕ್ಕೆ ಭೂಮಿದೇವಿಯಾದರೂ ಬಿರಿದು ದಾರಿಯನ್ನು ಕೊಡದಿರುವಳು. ಹಾಗೆ ದುರ್ಯೋಧನನು ವೃದ್ಧಿಹೊಂದುತ್ತಿರುವದನ್ನೂ, ಧರ್ಮರಾಯನು ಹೀನದಶೆಯಲ್ಲಿರುವದನ್ನೂ ನೋಡಿದರೆ, ಅಲ್ಪಬುದ್ಧಿಯಾದ ಮನುಷ್ಯನು ಧರ್ಮಕ್ಕಿಂತಲೂ ಅಧರ್ಮವೇ ಉತ್ತಮವೆಂದು ತಿಳಿದುಕೊಳ್ಳುತ್ತಾನೆ. ಹೀಗಿರುವದರಿಂದ, ಜನಗಳಿಗೆ ಧರ್ಮಾಧರ್ಮಗಳಲ್ಲಿ ಯಾವದು ದೊಡ್ಡದೋ ಎಂದು ಸಂಶಯವುಂಟಾಗಿರುವದು. ಯಮಧರ್ಮರಾಯನಿಗೆ ಪುತ್ರನಾಗಿ, ಧರ್ಮವೇ ದೊಡ್ಡದೆಂದು ನಂಬಿಕೊಂಡು, ದಾನಶೀಲನೂ ಸತ್ಯವಂತನೂ ಆಗಿರುವ ಈ ಧರ್ಮರಾಯನು ರಾಜ್ಯವನ್ನಾದರೂ ಸುಖವನ್ನಾದರೂ ತ್ಯಜಿಸುವನೇ ಹೊರತು, ಧರ್ಮವನ್ನು ಬಿಟ್ಟು ಅಧರ್ಮದಿಂದ ವೃದ್ಧಿಯನ್ನು ಹೊಂದುವದಕ್ಕೆ ಎಂದಿಗೂ ಅಪೇಕ್ಷಿಸತಕ್ಕವನಲ್ಲ. ಎಲೈ ಕೃಷ್ಣನೆ, ಭೀಷ್ಮ, ದ್ರೋಣ, ಕೃಪ, ಧೃತರಾಷ್ಟ್ರ ಮೊದಲಾದ ಭರತಕುಲಪ್ರಧಾನರಾದವರು ಧರ್ಮಾತ್ಮರಾದ ಪಾಂಡವರನ್ನು ಅರಣ್ಯಕ್ಕೆ ಕಳುಹಿಸಿ, ತಾವು ಸುಖವಾಗಿ ರಾಜ್ಯವನ್ನು ಅನುಭವಿಸುತ್ತಿರುವರಲ್ಲ! ಇವರಿಗಿಂತಲೂ ಪಾಪಾತ್ಮರುಂಟೆ? ಧರ್ಮಾತ್ಮರಾದ ಪಾಂಡವರ ರಾಜ್ಯವನ್ನು ಅಪಹರಿಸಿರುವ ಪಾಪಾತ್ಮನಾದ ವೃದ್ಧನಾದ ಧೃತರಾಷ್ಟ್ರನು ಲೋಕಾಂತರಕ್ಕೆ ಹೋದಬಳಿಕ, ಅಲ್ಲಿ ತಮ್ಮ ಪಿತೃಗಳು ‘ನೀನು ಪುತ್ರರ ವಿಷಯದಲ್ಲಿ ನಿಷ್ಪಕ್ಷಪಾತವಾಗಿ ನಡೆದುಕೊಂಡಿರುವೆಯಾ?’ ಎಂದು ಕೇಳಿದರೆ, ಅದಕ್ಕೇನು ಹೇಳುವನು? ಆ ವೃದ್ಧನಾದ ಧೃತರಾಷ್ಟ್ರನು ‘ಯಾವ ಪಾಪವನ್ನು ಮಾಡಿ ಭೂಮಿಯಲ್ಲಿ ಅನೇಕಮಂದಿ ಅರಸುಗಳ ಮಧ್ಯದಲ್ಲಿ ಕುರುಡನಾಗಿ ಹುಟ್ಟಿದೆನೋ! ಈಗ ಅರಸುಗಳೆಲ್ಲರೂ ನೋಡುತ್ತಿರಲು, ಧರ್ಮರಾಯನ ರಾಜ್ಯವನ್ನು ಅಪಹರಿಸಿ ಅವನನ್ನು ಅರಣ್ಯಕ್ಕೆ ಕಳುಹಿಸಿದೆನು. ಈ ಪಾಪದಿಂದ ಮುಂದಕ್ಕೆ ನಾನು ಅನ್ನಿಂಥವನಾಗುವೆನೋ!’ ಎಂದು ತಾನು ಬುದ್ಧಿಯುಳ್ಳವನಾದರೂ ಯೋಚಿಸುವನೆ? ವಿಚಿತ್ರವೀರ್ಯನ ಪುತ್ರನಾದ ಆ ಧೃತರಾಷ್ಟ್ರನು ಪುತ್ರಸಮೇತನಾಗಿ ಇಂಥ ದುಷ್ಕಾರ್ಯವನ್ನು ಮಾಡಿದ್ದರಿಂದ, ಅವನು ಶೀಘ್ರವಾಗಿ ಪಿತೃಲೋಕದ ಪ್ರದೇಶದಲ್ಲಿ ಚಿಗುರಿರುವ ಅನೇಕ ಸುವರ್ಣವೃಕ್ಷಗಳನ್ನು ಕಾಣುವದೇ ಸರಿ. ಇದು ಯಥಾರ್ಥವು. ಧನುರ್ಧಾರಿಯಾಗಿ ತಮ್ಮಂದಿರೊಡಗೂಡಿದ ಧರ್ಮರಾಯನನ್ನು ಅರಣ್ಯಕ್ಕೆ ಕಳುಹಿಸಿ, ಮನಸ್ಸಿನಲ್ಲಿ ಅವನ ದೆಸೆಯಿಂದ ಕ್ಷೋಭಿಸುತ್ತಿರುವ ಧೃತರಾಷ್ಟ್ರನು ದಪ್ಪವಾದ ಭುಜಶಿರಸ್ಸುಗಳುಳ್ಳವರಾಗಿಯೂ ವಿಸ್ತಾರವಾದ

ಕೆಂಪಾದ ನೇತ್ರಗಳುಳ್ಳವರಾಗಿಯೂ ಇರುವ ಭೀಷ್ಮಾದಿಗಳ ಸಂಗಡ ಆಲೋಚನೆಮಾಡಿ ಅವರ ಮಾತನ್ನು ಅಂಗೀಕರಿಸದೆ, ಅವರೂ ನಾಶವಾಗುವಹಾಗೆ ಮಾಡುವನು. ಇದು ಯಥಾರ್ಥವು. ಯಾವನು ಆಯುಧವಿಲ್ಲದಿದ್ದರೂ ಅಧಿಕವಾದ ಶತ್ರುಸೈನ್ಯಕ್ಕೆ ನುಗ್ಗಿ ಆ ಸೈನ್ಯವನ್ನು ತನ್ನ ಬಾಹುಬಲದಿಂದಲೇ ನಾಶಮಾಡುವನೋ, ಅಂಥಾ ಭೀಮಸೇನನ ಸಿಂಹನಾದವನ್ನು ಒಂದಾವರ್ತಿ ಕೇಳಿದಮಾತ್ರಕ್ಕೆ ಕೌರವರ ಸೈನಿಕರೆಲ್ಲರೂ ಮಲಮೂತ್ರಗಳನ್ನು ಬಿಡುವರು. ಭೀಮಸೇನನು ಅರಣ್ಯದಲ್ಲಿ ತಾನು ಅನುಭವಿಸಿದ ಹಸಿವು, ಬಾಯಾರಿಕೆ, ಮಾರ್ಗಾಯಾಸ, ಮೊದಲಾದ ಕ್ಲೇಶಗಳನ್ನು ಸ್ಮರಿಸಿಕೊಂಡು, ಕೋಪದಿಂದ ಆಯುಧಪಾಣಿಯಾಗಿ ಹೋಗಿ ಕೌರವರ ಸೈನ್ಯದಲ್ಲಿ ಒಬ್ಬನನ್ನೂ ಉಳಿಸದೆ ಎಲ್ಲರನ್ನೂ ನಾಶಮಾಡಿಬಿಡುವನೆಂದು ನನ್ನ ಮನಸ್ಸಿಗೆ ನಿಜವಾಗಿ ತೋರುತ್ತಿರುವದು. ಬಲದಲ್ಲೂ ಪರಾಕ್ರಮದಲ್ಲೂ ಆತನಿಗೆ ಸಮಾನನಾದವನು ಭೂಮಿಯಲ್ಲಿ ಮತ್ತೊಬ್ಬನೂ ಇಲ್ಲ. ಅಂಥ ಭೀಮಸೇನನು, ಧರ್ಮರಾಯನು ರಾಜಸೂಯಯಾಗವನ್ನು ಮಾಡುವ ಕಾಲದಲ್ಲಿ, ತಾನೊಬ್ಬನೇ ರಥಾರೂಢನಾಗಿ ಹೋಗಿ ಪೂರ್ವದಿಕ್ಕಿನಲ್ಲಿರತಕ್ಕ ಎಲ್ಲಾ ಅರಸುಗಳನ್ನೂ ಜಯಿಸಿಕೊಂಡು ಸುಖವಾಗಿ ಬಂದನು. ಅಂಥ ಅತಿರಥನಾದ ಭೀಮಸೇನನು ಈಗ ಅರಣ್ಯದಲ್ಲಿ ನಾರುಮಡಿಯನ್ನುಟ್ಟುಕೊಂಡು ಕ್ಲೇಶಪಡುತ್ತಿರುವನು. ಎಲೈ ಕೃಷ್ಣನೆ, ಯಾವ ಸಹದೇವನು ರಾಜಸೂಯಯಾಗದಲ್ಲಿ ದಕ್ಷಿಣ ಸಮುದ್ರತೀರದಲ್ಲಿರುವ ಅನೇಕರಾದ ಅರಸುಗಳನ್ನು ಜಯಿಸಿ, ಅವರೆಲ್ಲರಿಂದಲೂ ಕಪ್ಪವನ್ನು ತಂದನೋ, ಅಂಥವನು ಈಗ ಅರಣ್ಯದಲ್ಲಿ ಋಷಿಚರ್ಯದಿಂದಿರುವನಲ್ಲಾ ! ನೋಡಿದೆಯಾ ! ಯಾವ ಯುದ್ಧಸಮರ್ಥನಾದ ನಕುಲನು ಆ ಯಾಗದಲ್ಲಿ ತಾನೊಬ್ಬನೇ ರಥಿಕನಾಗಿ ಪಶ್ಚಿಮದಿಕ್ಕಿಗೆ ಹೋಗಿ ಅಲ್ಲಿರುವ ಅನೇಕಮಂದಿ ಅರಸುಗಳನ್ನು ಜಯಿಸಿದನೋ, ಅಂಥವನು, ಈ ಅರಣ್ಯದಲ್ಲಿ ಜಟಾಧಾರಿಯಾಗಿ ಕಂದಮೂಲಗಳನ್ನು ಆಹಾರಮಾಡಿಕೊಂಡು ಮೈಯೆಲ್ಲಾ ಧೂಳುಕವಿದು ಸಂಚರಿಸುತ್ತಿರುವನಲ್ಲಾ ! ಮತ್ತು ಅತಿರಥನಾದ ದ್ರುಪದರಾಯನ ಯಜ್ಞದಲ್ಲಿ ಅಗ್ನಿಕುಂಡದ ದೆಸೆಯಿಂದ ಉತ್ಪನ್ನಳಾದ ದ್ರೌಪದಿಯು ಸುಖಪಡುವದಕ್ಕೆ ಯೋಗ್ಯಳಾಗಿದ್ದರೂ, ಈಗ ಈ ವನವಾಸದ ಕ್ಲೇಶವನ್ನು ಹ್ಯಾಗೆ ಸೈರಿಸಿಕೊಂಡಿದ್ದಾಳು ? ಯಮ, ವಾಯು, ಇಂದ್ರ, ಅಶ್ವಿನೀದೇವತೆಗಳಿಗೆ ಪುತ್ರರಾದ ಪಾಂಡವರು ಸುಖಪಡುವದಕ್ಕೆ ಯೋಗ್ಯರಾಗಿದ್ದರೂ, ಹ್ಯಾಗೆತಾನೇ ಈ ವನವಾಸಕ್ಲೇಶವನ್ನು ಅನುಭವಿಸಿಕೊಂಡಿದ್ದಾರು ? ಪತ್ನಿಯೊಡನೆಯೂ ತಮ್ಮಂದಿರೊಡನೆಯೂ ಸಹಿತನಾಗಿರುವ ಧರ್ಮರಾಯನನ್ನು ಜಯಿಸಿ, ದುರ್ಯೋಧನನು ರಾಜ್ಯಸುಖವನ್ನು ಅನುಭವಿಸುತ್ತಿದ್ದರೆ, ಈ ಸಕಲ ಭೂಮಂಡಲವೂ ಹ್ಯಾಗೆತಾನೇ ದುಃಖಪಡದೆ ಇದ್ದೀತು ?" ಎಂದು ಬಲರಾಮನು ಕೃಷ್ಣನಿಗೆ ಹೇಳಿದನು.

## ೧೨೦ನೇ ಅಧ್ಯಾಯ.—ತೀರ್ಥಯಾತ್ರಾಪ್ರಶಂಸೆ.—(ಸಾತ್ಯಕಿ ಬಲರಾಮರ ಸಂವಾದ.)

ಅನಂತರದಲ್ಲಿ ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಬಳಿಕ ಸಾತ್ಯಕಿಯು ಬಲರಾಮನನ್ನು ಕುರಿತು "ಎಲೈ ರಾಮನೆ, ನಾವು ವ್ಯಸನಪಡುವದಕ್ಕೆ ಇದು ಕಾಲವಲ್ಲ. ಧರ್ಮರಾಯನಾದರೋ, ಯಾವ ಮಾತನ್ನೂ ಆಡದೆ ಸುಮ್ಮನಿರುವನು. ಆದರೂ, ಕಾಲಹರಣವನ್ನು ಮಾಡದೆ ನಾವು ಮುಂದೆ ಮಾಡತಕ್ಕ ಕಾರ್ಯವನ್ನು ಶೀಘ್ರವಾಗಿ ಮಾಡೋಣ. ಲೋಕದಲ್ಲಿ ಐಶ್ವರ್ಯವಂತರಾದವರು ತಮ್ಮ ಕಾರ್ಯವನ್ನು ತಾವೇ ಆರಂಭಿಸರು. ಶಿಬಿ ಮೊದಲಾದವರು ಯಯಾತಿಮಹಾರಾಜನ ಕಾರ್ಯವನ್ನು ಸಾಧಿಸಿಕೊಟ್ಟಂತೆ, ಮತ್ತೊಬ್ಬರು ಅವರಿಗೆ ಕಾರ್ಯಸಾಧಕರಾಗಿ ಅವರ ಅಭಿಪ್ರಾಯಕ್ಕೆ ಅನುಸಾರವಾಗಿ ಕಾರ್ಯವನ್ನು ಆರಂಭಿಸುವರು. ಅಂಥವರ ಸಹಾಯವಿದ್ದದ್ದೇ ಆದರೆ, ಲೋಕದಲ್ಲಿ ಐಶ್ವರ್ಯವಂತರು ಅನಾಥರಂತೆ ಕ್ಲೇಶಪಡದೆ ನಾಥವಂತರೆನಿಸಿಕೊಳ್ಳುವರು. ಆದ್ದರಿಂದ, ಎಲೈ ರಾಮನೆ, ಮೂರುಲೋಕಕ್ಕೂ ಒಡೆಯರಾಗಿರುವ ನಿನ್ನನ್ನೂ ಕೃಷ್ಣನನ್ನೂ ಪ್ರದ್ಯುಮ್ನನನ್ನೂ ಸಾಂಬನನ್ನೂ ನನ್ನನ್ನೂ ನಮ್ಮ ಬಂಧುಗಳಾದವರನ್ನೂ ಸಹ ಹೊಂದಿಕೊಂಡಿದ್ದರೂ, ಈ ಪಾಂಡವರು ಅರಣ್ಯದಲ್ಲಿ ವಾಸಮಾಡುವದೆಂದರೇನು ? ಈಗಲೇ ಸಕಲ ಯಾದವಸೈನ್ಯವೂ ನಾನಾ

ವಿಧವಾದ ಕವಚಗಳನ್ನೂ ಆಯುಧಗಳನ್ನೂ ಧರಿಸಿ ಯುದ್ಧಸನ್ನಾಹದಿಂದ ಹೊರಡಲಿ. ಆ ಯಾದವಸೈನ್ಯದಿಂದ ದುರ್ಯೋಧನನು ಬಂಧುಗಳೊಡನೆ ಪರಾಜಿತನಾಗಿ, ನಾಶವನ್ನು ಹೊಂದಿ, ಯಮಲೋಕಕ್ಕೆ ಹೋಗಲಿ. ಎಲೈ ರಾಮನೆ, ಈ ಕೃಷ್ಣನು ಹಾಗಿರಲಿ. ನೀನೊಬ್ಬನೇ ಕೋಪಗೊಂಡರೆ, ಈ ಪ್ರಪಂಚವನ್ನೆಲ್ಲಾ ಆಕ್ರಮಿಸಬಲ್ಲೆ. ಆದ್ದರಿಂದ, ನೀನು ವೃತ್ರಾಸುರನನ್ನು ಇಂದ್ರನು ಸಂಹರಿಸಿದಂತೆ, ಪುತ್ರಮಿತ್ರಾಮಾತ್ಯಸಹಿತನಾದ ದುರ್ಯೋಧನನನ್ನು ಸಂಹಾರಮಾಡು. ಅರ್ಜುನನು ನನಗೆ ಭ್ರಾತೃಸಮಾನನಾಗಿಯೂ ಮಿತ್ರನಾಗಿಯೂ ಕೃಷ್ಣನಿಗೆ ಸಮಾನನಾಗಿಯೂ ಗುರುವಾಗಿಯೂ ಲೋಕದಲ್ಲಿ ಯಾವ ಪ್ರಯೋಜನಕ್ಕೋಸ್ಕರ ಜನರು ಸುಪುತ್ರನಾಗಬೇಕೆಂತಲೂ ಗುರುವು ಅನುಕೂಲನಾದ ಶಿಷ್ಯನಾಗಬೇಕೆಂತಲೂ ಅಪೇಕ್ಷಿಸುವರೋ, ಎಲ್ಲರೂ ಯಾವ ಪ್ರಯೋಜನಕ್ಕೋಸ್ಕರ ಅಪಾರವಾಗಿಯೂ ಉತ್ತಮವಾಗಿಯೂ ಇರುವ ಪ್ರಯತ್ನವನ್ನು ಮಾಡುವರೋ, ಅಂಥ ಪ್ರಯೋಜನವನ್ನು ಸಂಪಾದಿಸುವದಕ್ಕೆ ಇದು ಉತ್ತಮವಾದ ಕಾಲವಾಗಿರುವದು. ಅರ್ಜುನನಲ್ಲಿ ಧನುರ್ವೇದವನ್ನೋದಿ ಆತನಿಗೆ ಶಿಷ್ಯನಾದ್ದರಿಂದ, ನಾನು ಈಗ ಆತನಿಗೆ ಪ್ರತಿಭಟನಾದ ಕರ್ಣನು ಯುದ್ಧದಲ್ಲಿ ಪ್ರಯೋಗಿಸಿದ ಅಸ್ತ್ರಗಳನ್ನೆಲ್ಲಾ ನನ್ನ ದಿವ್ಯಾಸ್ತ್ರಗಳಿಂದ ತಿರಸ್ಕರಿಸಿ, ಸರ್ಪವಿಷಜ್ವಾಲೆಗೆ ಸಮಾನವಾದ ಬಾಣಗಳಿಂದಲೂ ತೀಕ್ಷ್ಣವಾದ ಖಡ್ಗದಿಂದಲೂ ಅವನ ಶಿರಸ್ಸನ್ನು ಕೆಳಕ್ಕೆ ಕೆಡಹಿ, ಅವನಿಗೆ ಸಹಾಯರಾಗಿ ಬಂದ ಕೌರವರನ್ನೂ ದುರ್ಯೋಧನನನ್ನೂ ಸಹ ಸಂಹಾರಮಾಡಿಬಿಡುವೆನು. ಹೀಗೆ ಯುದ್ಧದಲ್ಲಿ ಆಯುಧಪಾಣಿಯಾಗಿ, ಪ್ರಳಯಕಾಲದ ಅಗ್ನಿಯು ಅರಣ್ಯವನ್ನು ಸುಡುವಂತೆ ಕೌರವ ಯೋಧರನ್ನೆಲ್ಲಾ ಸಂಹರಿಸುವ ನನ್ನನ್ನು ಶೂರರಾದ ನಮ್ಮ ಸೈನಿಕರೆಲ್ಲರೂ ಸಂತೋಷದಿಂದ ನೋಡಲಿ. ಮಹಾರಥಿಕನಾದ ಪ್ರದ್ಯುಮ್ನನ ಪರಾಕ್ರಮವನ್ನು ನಾನು ಬಲ್ಲೆನು. ಆತನು ಪ್ರಯೋಗಿಸಿದ ತೀಕ್ಷ್ಣವಾದ ಬಾಣಗಳ ವೇಗವನ್ನು ಕೃಪ, ದ್ರೋಣ, ವಿಕರ್ಣ, ಕರ್ಣಮೊದಲಾದವರು ಯಾರೂ ಸಹಿಸಲಾರರು. ಅಭಿಮನ್ಯುವಿನ ಪರಾಕ್ರಮವು ಪ್ರಸಿದ್ಧವಾಗಿಯೇ ಇರುವದು. ಜಾಂಬವತೀಪುತ್ರನಾದ ಸಾಂಬನು ಬಾಲ್ಯದಲ್ಲೇ ಶಂಬರಾಸುರನ ಸೈನ್ಯವನ್ನೆಲ್ಲಾ ನಾಶಮಾಡಿದನು. ದುಂಡಾಗಿ ಹೊಮ್ಮಿದ ತೊಡೆಗಳುಳ್ಳವನಾಗಿಯೂ ಆಜಾನುಬಾಹುವಾಗಿಯೂ ಇರುವ ಈತನು ಯುದ್ಧದಲ್ಲಿ ನಿಂತದ್ದೇ ಆದರೆ, ಈತನ ಪರಾಕ್ರಮವನ್ನು ಯಾರುತಾನೆ ಸಹಿಸಬಲ್ಲರು? ಈತನು ದುಶ್ಶಾಸನನನ್ನು ಆತನ ಸಾರಥಿಸಹಿತವಾಗಿ ಯುದ್ಧದಲ್ಲಿ ನಿಗ್ರಹಿಸಲಿ. ಯಮನ ಕೈಗೆ ಸಿಕ್ಕಿದ ಮನುಷ್ಯನು ಯಾವನುತಾನೇ ತಪ್ಪಿಸಿಕೊಂಡು ಬರುವದಕ್ಕಾದೀತು? ಹಾಗೆಯೇ ಯುದ್ಧದಲ್ಲಿ ಈ ಸಾಂಬನ ಕೈಗೆ ಸಿಕ್ಕಿದ ಮನುಷ್ಯನು ಯಾವನುತಾನೇ ತಪ್ಪಿಸಿಕೊಂಡು ಬದುಕಿ ಬಂದಾನು? ಮಹಾರಥಿಕರಾದ ದ್ರೋಣ ಭೀಷ್ಮರನ್ನೂ, ಪುತ್ರಸಮೇತನಾದ ಸೋಮದತ್ತನನ್ನೂ, ಉಳಿದ ಸೈನ್ಯವನ್ನೂ ಸಹ, ಈ ವಾಸುದೇವನು ತನ್ನ ಬಾಣಾಗ್ನಿಯಿಂದ ಸುಟ್ಟುಬಿಡುವನು. ಯುದ್ಧದಲ್ಲಿ ಅಪ್ರತಿಭಟನಾದ ಚಕ್ರಾಯುಧನಾದ ಶ್ರೀಕೃಷ್ಣನು ಧನುರ್ಧಾರಿಯಾಗಿ ಬಾಣಗಳನ್ನು ಪ್ರಯೋಗಿಸಿದ್ದೇ ಆದರೆ, ದೇವತೆಗಳೊಡಗೂಡಿರುವ ಲೋಕದಲ್ಲಿ ಯಾರುತಾನೇ ಆ ವೇಗವನ್ನು ಸಹಿಸಬಲ್ಲರು? ಈ ಅನಿರುದ್ಧನು ಕತ್ತಿ ಗುರಾಣಿಗಳನ್ನು ಹಿಡಿದು ಧೃತರಾಷ್ಟ್ರನ ಮಕ್ಕಳ ಶಿರಸ್ಸುಗಳನ್ನು ಕತ್ತರಿಸಿ, ಯಜ್ಞವೇದಿಯಮೇಲೆ ದರ್ಭೆಗಳನ್ನು ಹರಡುವಂತೆ ಅವರನ್ನು ಭೂಮಿಯಮೇಲೆ ಹರಡಲಿ. ಮತ್ತು ಗದ, ಉಲ್ಮುಕ, ಬಾಹುಕ, ಭಾನುನೀಥ, ಶೂರ, ನಿಶಠ, ಕುಮಾರ, ಚಾರುದೇಷ್ಣ, ಸಾರಣ ಮೊದಲಾದ ವೃಷ್ಣಿಕುಮಾರರು ತಮ್ಮಕುಲಕ್ಕೆ ತಕ್ಕ ಪರಾಕ್ರಮವನ್ನು ತೋರಿಸಲಿ. ವೃಷ್ಣಿಶ್ರೇಷ್ಠರಿಂದಲೂ ಭೋಜವೀರರಿಂದಲೂ ಅಂಧಕಮುಖ್ಯರಿಂದಲೂ ಕೂಡಿದ ಸಾತ್ವತಕುಲಶ್ರೇಷ್ಠರ ಸೇನೆಯು ಇಲ್ಲಿಗೆ ಸಿದ್ಧವಾಗಿ ಬಂದಿರುವದು. ಆ ವೀರರೆಲ್ಲರೂ ಕೌರವರನ್ನು ಸಂಹಾರಮಾಡಿ ತಮ್ಮ ಯಶಸ್ಸನ್ನು ಲೋಕದಲ್ಲಿ ಪ್ರಖ್ಯಾತಿಪಡಿಸಿಕೊಳ್ಳಲಿ. ಧರ್ಮಾತ್ಮನಾದ ಧರ್ಮರಾಯನು ದ್ಯೂತಕಾಲದಲ್ಲಿ ಮಾಡಿಕೊಂಡ ನಿಬಂಧನೆಯನ್ನು ಪೂರೈಸಿಕೊಂಡು ಬರುವ ವರೆಗೂ ಅಭಿಮನ್ಯುವೇ ರಾಜ್ಯಪರಿಪಾಲನೆಯನ್ನು ಮಾಡುತ್ತಿರಲಿ. ಧರ್ಮರಾಯನು ತನ್ನ ಪ್ರತಿಜ್ಞೆಯನ್ನು ಮುಗಿಸಿಕೊಂಡು ಬಂದ ಬಳಿಕ ಈತನು, ಕೌರವರನ್ನೂ ಕರ್ಣನನ್ನೂ ಜಯಿಸಿ ನಿಷ್ಕಂಟಕವಾದ ಭೂಮಿಯನ್ನು ಅನುಭವಿಸುವನು. ಇಂಥ ಯಶಸ್ಕರವಾದ ಕಾರ್ಯವು ಈಗ ನಾವು ಮಾಡತಕ್ಕದ್ದಾಗಿರುವದು" ಎಂದು ನುಡಿದನು.

ಬಳಿಕ ಸಾತ್ಯಕಿಯ ಮಾತನ್ನು ಕೇಳಿ, ಶ್ರೀಕೃಷ್ಣನು "ಎಲೈ ಶೂರನೆ, ನೀನು ಹೇಳಿದ ಮಾತು ಯಥಾರ್ಥ ವವದ್ದು. ಅದು ಕೇಳತಕ್ಕದ್ದೇಸರಿ. ಆದರೂ ಕುರುಕುಲಶ್ರೇಷ್ಠನಾದ ಧರ್ಮರಾಯನು ತನ್ನ ಭುಜಬಲದಿಂದ ಪಾದಿಸದಿರುವ ಭೂಮಿಯನ್ನು ಹ್ಯಾಗೆತಾನೇ ಪರಿಗ್ರಹಿಸುವನು? ಧೀರನಾದ ಈತನು ಕಾಮದಿಂದಲೇ ಆಗಲಿ, ೋಭದಿಂದಲೇ ಆಗಲಿ, ಭಯದಿಂದಲೇ ಆಗಲಿ, ತನ್ನ ಧರ್ಮವನ್ನು ಎಂದಿಗೂ ಬಿಡತಕ್ಕವನಲ್ಲ. ಇಂಥ ರಾಜ್ಯ ಾರವನ್ನು ಭೀಮಾರ್ಜುನರೂ ನಕುಲ ಸಹದೇವರೂ ದ್ರೌಪದಿಯೂ ಸಹ ಬಿಡಂಬಡಲಾರರು. ಎಲೈ ಸಾತ್ಯ ಯೆ, ಯುದ್ಧದಲ್ಲಿ ಅಪ್ರತಿಭಟರಾದ ಭೀಮಾರ್ಜುನರಿಂದಲೂ ನಕುಲ ಸಹದೇವರಿಂದಲೂ ಪುರಸ್ಕೃತನಾದ ಧರ್ಮ ಾಯನೂ, ನಾವೂ, ಮಹಾತ್ಮನಾದ ದ್ರುಪದರಾಯನೂ, ಕೇಕಯ ದೇಶಾಧಿಪತಿಗಳೂ, ಚೇದಿ ದೇಶಾಧಿಪತಿಗಳೂ ಹ, ಒಟ್ಟಾಗಿ ನಮ್ಮನಮ್ಮ ಪರಾಕ್ರಮವನ್ನು ಯಾವಾಗ ತೋರಿಸುವೆವೋ ಆಗ, ಶತ್ರುಗಳೆಲ್ಲಾ ನಷ್ಟರಾಗಿ ೂಮಿಯು ನಿಷ್ಕಂಟಕವಾಗುವದು. ಆಗ ಧರ್ಮರಾಯನು ಯಾತಕ್ಕೋಸ್ಕರ ರಾಜ್ಯವನ್ನು ಆಳದೆ ಇದ್ದಾನು?" ನಲು, ಧರ್ಮರಾಯನು ಸಾತ್ಯಕಿಯನ್ನು ನೋಡಿ "ಎಲೈ ಸಾತ್ಯಕಿಯೆ, ನೀನು ಹೇಳಿದ್ದೆಲ್ಲಾ ನಿಜ. ಇದೇನೂ ಶ್ಚರ್ಯವಾದದ್ದಲ್ಲ. ಆದರೆ ನಾನು ರಾಜ್ಯಕ್ಕಿಂತಲೂ ಸತ್ಯವನ್ನೇ ಅಧಿಕವಾಗಿ ರಕ್ಷಿಸತಕ್ಕದ್ದೆಂದು ತಿಳಿದಿರುವೆನು. ಈ ನನ್ನ ಮನೋಭಾವವನ್ನು ಕೃಷ್ಣನೊಬ್ಬನೇ ತಿಳಿದಿರುವನು. ಆತನ ಅಂತರಂಗವನ್ನೂ ನಾನು ಚೆನ್ನಾಗಿ ಳಿದಿರುವೆನು. ಪರಾಕ್ರಮವನ್ನು ತೋರಿಸುವದಕ್ಕೆ ತಕ್ಕ ಕಾಲವನ್ನು ಪುರುಷಶ್ರೇಷ್ಠನಾದ ಈ ಕೃಷ್ಣನು ಲ್ಲನು. ಆಗ ನೀನು ದುರ್ಯೋಧನನನ್ನು ಜಯಿಸುವೆ. ಶ್ರೀಕೃಷ್ಣನನ್ನೂ ನಿಮ್ಮೆಲ್ಲರನ್ನೂ ಸಹ ನಾನು ೋಡಿದ್ದಾಯಿತು. ಇನ್ನು ನೀವೆಲ್ಲರೂ ಹೋಗಿ ಬನ್ನಿರಿ. ಧರ್ಮಮಾರ್ಗವನ್ನು ಎಂದಿಗೂ ಬಿಡಬೇಡಿರಿ. ಸುಖ ಂದಿರುವ ನಿಮ್ಮನ್ನು ಪುನಃ ನಾನು ನೋಡುವೆನು" ಎಂದು ನುಡಿದನು. ಬಳಿಕ ಯಾದವರೆಲ್ಲರೂ ಪಾಂಡ ರ ಸಂಗಡ ಹೋಗಿ ಬರುತ್ತೇವೆಂದು ಹೇಳಿ, ದೊಡ್ಡವರಿಗೆ ನಮಸ್ಕಾರಮಾಡಿ, ಚಿಕ್ಕವರನ್ನು ಆಲಿಂಗನೆ ಮಾಡಿ ೊಂಡು, ತಮ್ಮ ಸ್ಥಳಗಳಿಗೆ ಹೊರಟು ಹೋದರು. ಆಗ ಧರ್ಮರಾಯನು ಕೃಷ್ಣನನ್ನು ಸಾಗಕಳುಹಿಸಿ ಕೊಟ್ಟು, ದರ್ಭದೇಶಾಧಿಪತಿಯಿಂದ ಅಭಿವೃದ್ಧಿಹೊಂದಿಸಲ್ಪಟ್ಟ ಪುಣ್ಯತಮವಾದ ಪಯೋಷ್ಣೀನದಿಗೆ ಲೋಮಶರೊಡ ಯೂ ತಮ್ಮಂದಿರೊಡನೆಯೂ ಸೇವಕರೊಡನೆಯೂ ಹೋಗಿ, ಆ ಉದಕಪಾನವನ್ನು ಸೋಮಪಾನಕ್ಕೆ ಸಮಾ ವನ್ನಾಗಿ ತಿಳಿದು ಅದನ್ನು ಆಹಾರಮಾಡಿಕೊಂಡು, ಬ್ರಾಹ್ಮಣಶ್ರೇಷ್ಠರಿಂದ ವಿಶೇಷವಾಗಿ ಹೊಗಳಿಸಿಕೊಳ್ಳುತ್ತಾ ಆ ನದೀತೀರದಲ್ಲಿ ವಾಸಮಾಡಿದನು.

---

೧೨೧ನೇ ಅಧ್ಯಾಯ.—ತೀರ್ಥಯಾತ್ರಾಪ್ರಶಂಸೆ—(ಚ್ಯವನಮಹರ್ಷಿಯು ಶರ್ಯಾತಿಮಹಾರಾಯನಿಂದ ಯಜ್ಞವನ್ನು ಮಾಡಿಸಿದ್ದು).

ಅನಂತರದಲ್ಲಿ ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯ ಾಯನೆ, ಬಳಿಕ ಲೋಮಶಮಹರ್ಷಿಯು ಧರ್ಮರಾಯನನ್ನು ಕುರಿತು "ಎಲೈ ಧರ್ಮರಾಯನೆ, ಈ ಪಯೋ ಷ್ಣೀ ತೀರದಲ್ಲಿ ನೃಗಮಹಾರಾಯನು ಪೂರ್ವದಲ್ಲಿ ಯಾಗವನ್ನು ಮಾಡಿ ಸೋಮದಿಂದ ಇಂದ್ರನನ್ನು ತೃಪ್ತಿಪಡಿಸಿ ುವನೆಂದು ಕೇಳಿರುವೆವು. ಇಲ್ಲಿ ಇಂದ್ರಾದಿ ದೇವತೆಗಳೂ, ದಕ್ಷಪ್ರಜಾಪತಿ ಮೊದಲಾದವರೂ ಕೂಡ, ವಿಶೇಷ ಾಗಿ ದಕ್ಷಿಣೆಗಳನ್ನು ಕೊಟ್ಟು ಅನೇಕ ಯಾಗಗಳನ್ನು ಮಾಡಿರುವರು. ಇಲ್ಲಿ ಗಯಮಹಾರಾಯನು ಏಳು ಅಶ್ವ ಮೇಧಯಾಗಗಳನ್ನು ಮಾಡಿ, ಸೋಮದಿಂದ ಇಂದ್ರನನ್ನು ತೃಪ್ತಿಪಡಿಸಿರುವನು. ಆ ಏಳು ಯಜ್ಞಗಳಲ್ಲಿಯೂ ುರದಿಂದಲೂ ಮಣ್ಣಿನಿಂದಲೂ ಮಾಡತಕ್ಕ ಯೂಪಸ್ತಂಭ, ಸೋಮಪಾಪಾತ್ರೆ, ಸ್ಥಾಲಿ, ಹವಿಸ್ಸಿನಪಾತ್ರೆ, ಸ್ರುಕ್ಕು, ್ರುವ, ಚಮಸ, ಎಂಬ ಈ ಏಳೂ ಯಜ್ಞದಲ್ಲಿ ಪ್ರಸಿದ್ಧವಾದವುಗಳು. ಈ ಉಪಕರಣಗಳೆಲ್ಲಾ ಆ ಯಜ್ಞ ಳಲ್ಲಿ ಸುವರ್ಣಮಯವಾಗಿಯೇ ಇದ್ದವು. ಆ ಅಶ್ವಮೇಧಯಾಗಗಳಲ್ಲಿ ಇಂದ್ರಾದಿ ದೇವತೆಗಳು ತಾವೇ ಸುವರ್ಣ ುಯವಾದ ಯೂಪಸ್ತಂಭಗಳನ್ನು ನಿಲ್ಲಿಸಿದರು. ಅಂಥಾ ಈ ಯಜ್ಞಗಳಲ್ಲಿ ಇಂದ್ರಾದಿ ದೇವತೆಗಳು ಸೋಮಪಾ ದಿಂದಲೂ, ಬ್ರಾಹ್ಮಣರು ಕೊಳಗಗಳಿಂದ ಅಳೆಯಲ್ಪಟ್ಟ ಅಸಂಖ್ಯಾತವಾದ ದಕ್ಷಿಣೆಗಳಿಂದಲೂ, ಸಂತೋಷವನ್ನು

ಹೊಂದಿದರು. ಭೂಮಿಯಲ್ಲಿ ಮರಳುಗಳೂ, ಆಕಾಶದಲ್ಲಿರುವ ನಕ್ಷತ್ರಗಳೂ, ಮಳೆಯ ಉದಕಧಾರೆಗಳೂ ಹ್ಯಾಗೆ ಅಸಂಖ್ಯಾತವಾಗಿರುವವೋ ಹಾಗೆ, ಆ ಗಯಮಹಾರಾಯನು ಕೊಟ್ಟ ದಕ್ಷಿಣೆಗಳು ಅಸಂಖ್ಯಾತವಾಗಿದ್ದವು. ಆ ಏಳು ಯಜ್ಞಗಳಲ್ಲಿಯೂ ಗಯಮಹಾರಾಯನು ಸಭಾಸ್ತಾರರಿಗೆ ಕೊಟ್ಟ ದಕ್ಷಿಣೆಗಳೂ ಅಸಂಖ್ಯಾತವಾಗಿದ್ದವು. ಎಲೈ ಧರ್ಮರಾಯನೆ, ಆ ಗಯಮಹಾರಾಯನು ಮಾಡಿದ ಯಜ್ಞಗಳನ್ನು ಎಣಿಸಬಹುದೇ ಹೊರತು, ಆ ಯಜ್ಞಗಳಲ್ಲಿ ಆತನು ಕೊಟ್ಟ ದಕ್ಷಿಣೆಗಳನ್ನು ಎಣಿಸುವದಕ್ಕೆ ಯಾರಿಂದಲೂ ಶಕ್ಯವಾದದ್ದಲ್ಲ. ಆ ರಾಯನು ವಿಶ್ವಕರ್ಮನಿಂದ ನಿರ್ಮಿತವಾದ ಸುವರ್ಣಮಯವಾದ ಗೋವುಗಳನ್ನು ನಾನಾದಿಕ್ಕುಗಳಿಂದ ಬಂದ ಬ್ರಾಹ್ಮಣರಿಗೆ ಕೊಟ್ಟು ತೃಪ್ತಿಪಡಿಸಿದನು. ಆ ಗಯಮಹಾರಾಯನು ಅಲ್ಲಲ್ಲಿ ಯಜ್ಞವೇದಿಯನ್ನು ಹಾಕಿರಲು, ಅವುಗಳಿಂದ ಪೂರ್ಣವಾಗಿ ಭೂಮಿಯು ಸ್ವಲ್ಪವಾಗಿಯೇ ಉಳಿದಿತ್ತು. ಆತನು ಇಂಥ ಮಹತ್ತಾದ ಯಜ್ಞಗಳಿಂದ ಇಂದ್ರಸಾಲೋಕ್ಯವನ್ನು ಹೊಂದಿದನು. ಎಲೈ ಧರ್ಮರಾಯನೆ, ಈ ಪಯೋಷ್ಣೀ ನದಿಯಲ್ಲಿ ಯಾರು ಸ್ನಾನಮಾಡುವರೋ ಅವರಿಗೂ, ಅಂಥ ಸಾಲೋಕ್ಯವುಂಟಾಗುವದು. ಆದ್ದರಿಂದ ನೀನು ತಮ್ಮಂದಿರೊಡನೆ ಇಲ್ಲಿ ಸ್ನಾನಮಾಡಿದರೆ, ಸಕಲ ಪಾಪಗಳೂ ಪರಿಹಾರವಾಗುವವು" ಎಂದು ನುಡಿದನು. ಆಗ ಧರ್ಮರಾಯನು ತಮ್ಮಂದಿರೊಡನೆ ಅಲ್ಲಿ ಸ್ನಾನಮಾಡಿ, ವೈಡೂರ್ಯಪರ್ವತಕ್ಕೂ ನರ್ಮದಾನದಿಗೂ ಅಭಿಮುಖನಾಗಿ ಹೊರಟು, ಆ ಮಾರ್ಗದಲ್ಲಿರುವ ಅನೇಕ ಪುಣ್ಯತೀರ್ಥ ಕ್ಷೇತ್ರಗಳ ಮಹಾತ್ಮ್ಯವನ್ನು ಲೋಮಶರಿಂದ ಕೇಳುತ್ತಾ, ಅಲ್ಲಲ್ಲಿ ಬ್ರಾಹ್ಮಣರಿಗೆ ಬೇಕಾದಷ್ಟು ಧನವನ್ನು ಕೊಡುತ್ತಾ, ಆ ವೈಡೂರ್ಯಪರ್ವತವನ್ನೂ ನರ್ಮದಾನದಿಯನ್ನೂ ಕಂಡನು. ಆಗ ಲೋಮಶಮಹರ್ಷಿಯು "ಎಲೈ ಧರ್ಮರಾಯನೆ, ಈ ವೈಡೂರ್ಯಪರ್ವತವನ್ನು ನೋಡಿ ನರ್ಮದಾನದಿಯಲ್ಲಿ ಸ್ನಾನಮಾಡಿದವನಿಗೆ ದೇವಲೋಕ ಪ್ರಾಪ್ತಿಯಾಗುವದು. ಈ ಪ್ರದೇಶವು ತ್ರೇತಾಯುಗ ದ್ವಾಪರಯುಗಗಳ ಸಂಧಿಸ್ಥಾನವಾಗಿರುವದು. ಈ ಪ್ರದೇಶಕ್ಕೆ ಬಂದ ಮನುಷ್ಯನಿಗೆ ಸಕಲಪಾಪವೂ ಪರಿಹಾರವಾಗುವದು. ಶರ್ಯಾತಿಮಹಾರಾಯನು ಯಜ್ಞವನ್ನು ಮಾಡಿದ್ದು ಇಲ್ಲೇ. ಆ ಯಜ್ಞದಲ್ಲಿ ಚ್ಯವನಮಹರ್ಷಿಯು ಅಶ್ವಿನೀದೇವತೆಗಳೊಡಗೂಡಿ ಸೋಮಪಾನವನ್ನು ಮಾಡಿದನು. ಅದನ್ನು ಕಂಡು ಮಹೇಂದ್ರನು ಕೋಪಗೊಂಡು, ಚ್ಯವನಮಹರ್ಷಿಯನ್ನು ಹೊಡೆಯುವದಕ್ಕೆ ಕೈಯನ್ನು ಎತ್ತಲು, ಆ ಕೈಯ್ಯು ಹಾಗೆಯೇ ಅಲ್ಲಾಡದಿರುವಂತೆ ಚ್ಯವನಮಹರ್ಷಿಯು ಸ್ತಂಭಿಸಿಬಿಟ್ಟನು" ಎಂದು ನುಡಿದನು. ಅದನ್ನು ಕೇಳಿ ಧರ್ಮರಾಯನು "ಎಲೈ ಲೋಮಶನೆ, ಆ ಮಹರ್ಷಿಯು ಇಂದ್ರನ ಕೈಯ್ಯನ್ನು ಹ್ಯಾಗೆ ಸ್ತಂಭಿಸಿದನು? ಮತ್ತು ಆತನಿಗೆ ಇಂದ್ರನ ಮೇಲೆ ಕೋಪಬರುವದಕ್ಕೆ ಕಾರಣವೇನು? ಆತನು ಅಶ್ವಿನೀ ದೇವತೆಗಳಿಗೆ ಹ್ಯಾಗೆ ಸೋಮಪಾನವನ್ನು ಮಾಡಿಸಿದನು? ಇದನ್ನೆಲ್ಲಾ ವಿಸ್ತಾರವಾಗಿ ತಿಳುಹಿಸು" ಎಂದು ಪ್ರಶ್ನೆಮಾಡಿದನು.

---

### ೧೨೨ನೇ ಅಧ್ಯಾಯ.—ತೀರ್ಥಯಾತ್ರಾಪ್ರಶಂಸೆ.—(ಚ್ಯವನಮಹರ್ಷಿಗೆ ಸುಕನ್ಯೆಯನ್ನು ಕೊಟ್ಟು ವಿವಾಹ).

ಅನಂತರದಲ್ಲಿ ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯ ರಾಯನೆ, ಬಳಿಕ ಲೋಮಶಮಹರ್ಷಿಯು ಧರ್ಮರಾಯನನ್ನು ಕುರಿತು "ಎಲೈ ಧರ್ಮರಾಯನೆ, ಭೃಗುಮಹರ್ಷಿಗೆ ಪುತ್ರನಾದ ಚ್ಯವನಮಹರ್ಷಿಯು ಒಂದು ತಪೋವನದಲ್ಲಿರುವ ಸರೋವರದ ಬಳಿಯಲ್ಲಿರುವ ನಿರ್ಜನವಾದ ಪ್ರದೇಶದಲ್ಲಿ ವೀರಾಸನದಿಂದ ಕೂತುಕೊಂಡು, ಮಹಾತೇಜಸ್ವಿಯಾಗಿ ಮೋಟುಮರದಂತೆ ಅಲ್ಲಾಡದೆ ಬಹುಕಾಲ ತಪಸ್ಸುಮಾಡುತ್ತಿದ್ದನು. ಆಗ ಆತನ ಮೇಲೆ ಒಂದು ಹುತ್ತವು ಬೆಳೆದು ಸುತ್ತಲೂ ಬಳ್ಳಿಗಳು ಬೆಳೆದುಕೊಂಡು, ಅಲ್ಲೆಲ್ಲಾ ಕಟ್ಟಿರುವೆಗಳು ಮುತ್ತಿಕೊಂಡಿದ್ದವು. ಹಾಗೆ ಹುತ್ತವು ತನ್ನ ಮೇಲೆ ಬೆಳೆದಿದ್ದರೂ ಆ ಮಹಾತ್ಮನು ಮಣ್ಣಿನ ಮುದ್ದೆಯಂತೆ ಅಲ್ಲಾಡದೆ ಬಹುಕಾಲ ಘೋರವಾದ ತಪಸ್ಸನ್ನು ಮಾಡುತ್ತಿದ್ದನು. ಆಗ ಒಂದಾನೊಂದು ದಿವಸ ಶರ್ಯಾತಿಮಹಾರಾಜನು ನಾಲ್ಕು ಸಾವಿರಮಂದಿ ಸ್ತ್ರೀಯರೊಡಗೂಡಿ, ಜಲಕ್ರೀಡಾರ್ಥವಾಗಿ ಆ ಸರೋವರಕ್ಕೆ

ಎಂದನು. ಆ ಮಹಾರಾಜನಿಗೆ ಸುಕನ್ಯೆಯೆಂಬ ಒಬ್ಬ ಮಗಳಿದ್ದಳು. ಆಕೆಯು ದಿವ್ಯಾಭರಣಭೂಷಿತಳಾಗಿ ಸಖಿಯರೊಡಗೂಡಿ ಚ್ಯವನಮಹರ್ಷಿಯು ತಪಸ್ಸುಮಾಡುತ್ತಿದ್ದ ಆ ಹುತ್ತದ ಬಳಿಗೆ ಬಂದು, ಮನೋಹರವಾದ ಆ ಪ್ರದೇಶವನ್ನು ನೋಡುತ್ತಾ, ಆ ತಪೋವನದಲ್ಲಿ ಹೂವು ಬಿಟ್ಟಿರುವ ಗಿಡಗಳ ಕೊನೆಗಳನ್ನು ಮುರಿಯುತ್ತಾ ವಿಹಾರ ಮಾಡುತ್ತಿದ್ದಳು. ಆಗ ಮಹಾತಪಸ್ವಿಯಾದ ಚ್ಯವನಮಹರ್ಷಿಯು ಏಕವಸ್ತ್ರವನ್ನು ಧರಿಸಿ ಮನೋಹರವಾದ ಯೌವನದಿಂದಲೂ ರೂಪಿನಿಂದಲೂ ಮನ್ಮಥವಿಕಾರಗಳಿಂದಲೂ ಕೂಡಿ ಭೂಮಿಗೆ ಬಂದ ಮಿಂಚಿನಂತೆ ಸಮೀಪದಲ್ಲಿ ಸಂಚರಿಸುತ್ತಿರುವ ಸುಕನ್ಯೆಯನ್ನು ನಿರ್ಜನವಾದ ಆ ಪ್ರದೇಶದಲ್ಲಿ ಕಂಡು, ಆಕೆಯಲ್ಲಿ ಅನುರಾಗವುಂಟಾಗಿ, ಅನಶನಾದಿ ವ್ರತಗಳಿಂದ ಕ್ಷೀಣವಾದ ಕಂಠಧ್ವನಿಯುಳ್ಳವನಾಗಿ ಆ ಸುಕನ್ಯೆಯನ್ನು ಮಾತನಾಡಿಸಲು, ಆ ಮಾತು ತನ್ನ ಕಿವಿಗೇ ಕೇಳದೆ ಆಕೆಯು ಆ ಹುತ್ತದಲ್ಲಿ ಮಿಣಮಿಣನೆ ಹೊಳೆಯುತ್ತಿದ್ದ ಚ್ಯವನಮಹರ್ಷಿಯ ಕಣ್ಣುಗಳನ್ನು ನೋಡಿ, ಇದು ಏನೆಂದು ಕುತೂಹಲದಿಂದ ತಿಳಿಯದೆ, ಒಂದು ಮುಳ್ಳಿನಿಂದ ಗಟ್ಟಿಯಾಗಿ ಚುಚ್ಚಿದಳು. ಆಗ ಆ ಮಹಾಮುನಿಯು ತನ್ನ ಎರಡು ಕಣ್ಣುಗಳನ್ನೂ ಸುಕನ್ಯೆಯು ಚುಚ್ಚಿದ ವ್ಯಥೆಯಿಂದ ಬಹಳವಾಗಿ ಕೋಪಗೊಂಡನು. ಅಷ್ಟುಮಾತ್ರಕ್ಕೆ ಶರ್ಯಾತಿರಾಯನ ಸೈನಿಕರೆಲ್ಲರೂ ಮಲಮೂತ್ರಗಳು ಬಂಧಿಸಿ ಬಹುದುಃಖಿತರಾದರು. ಅದನ್ನು ನೋಡಿ ಶರ್ಯಾತಿರಾಯನು ಸೈನಿಕರನ್ನು ಕುರಿತು 'ಮಹಾತ್ಮನೂ ತಪೋವೃದ್ಧನೂ ಆದ ಚ್ಯವನಮಹರ್ಷಿಗೆ ಯಾರಾದರೂ ಜ್ಞಾನದಿಂದಲೇ ಆಗಲಿ ಅಜ್ಞಾನದಿಂದಲೇ ಆಗಲಿ ಅಪರಾಧವನ್ನು ಮಾಡಿರುವಿರಾ? ಅದನ್ನು ಬೇಗ ನನಗೆ ತಿಳುಹಿಸಿರಿ; ಇಲ್ಲದಿದ್ದರೆ ಹೀಗೆ ಆಗುವದಕ್ಕೆ ಕಾರಣವೇನು?' ಎಂದು ಕೇಳಲು, ಆ ಸೈನಿಕರು 'ಮಹಾರಾಜನೆ, ಆ ಮಹರ್ಷಿಗೆ ನಾವೇನೂ ಅಪರಾಧವನ್ನು ಮಾಡಿಲ್ಲ. ನೀನೇ ಇದನ್ನು ಸರ್ವೋಪಾಯಗಳಿಂದಲೂ ತಿಳಿದುಕೊ' ಎಂದು ಬಿನ್ನವಿಸಿದರು. ಆಗ ಶರ್ಯಾತಿರಾಯನು ಸಾಮೋಪಾಯದಿಂದಲೂ ದಂಡೋಪಾಯದಿಂದಲೂ ತಾನೇ ತನ್ನ ಪರಿಜನವನ್ನೆಲ್ಲಾ ವಿಚಾರಿಸಲು, ಅವರು ತಾವು ಯಾವ ಅಪರಾಧವನ್ನೂ ಮಾಡಿದವರಲ್ಲವೆಂದು ಅಡಿಗಡಿಗೆ ಬಿನ್ನವಿಸಿಕೊಳ್ಳಲು, ಶರ್ಯಾತಿರಾಯನು ತನ್ನ ಸೈನಿಕರೆಲ್ಲರೂ ದುಃಖಿತರಾಗಿರುವದನ್ನು ನೋಡಿ, ತಾನೂ ಬಹಳವಾಗಿ ದುಃಖಾಕ್ರಾಂತನಾಗಿದ್ದನು. ಅದನ್ನು ನೋಡಿ ಸುಕನ್ಯೆಯು 'ಎಲೈ ತಂದೆಯೆ, ಈ ವನದಲ್ಲಿ ನಾನು ಸಂಚರಿಸುತ್ತಿರಲು, ಒಂದು ಹುತ್ತದಲ್ಲಿ ಮಿಂಚಿನ ಹುಳುವಿನಂತೆ ಮಿಣುಕುತ್ತಿದ್ದ ಒಂದು ಪ್ರಾಣಿಯನ್ನು ನೋಡಿ, ಒಂದು ಮುಳ್ಳಿನಿಂದ ಅದನ್ನು ಚುಚ್ಚಿದೆನು' ಎಂದು ನುಡಿದಳು. ಆ ಮಾತನ್ನು ಕೇಳಿ ಶರ್ಯಾತಿರಾಯನು ಒಡನೆಯೇ ಆ ಹುತ್ತದ ಬಳಿಗೆ ಹೋಗಿ, ಅಲ್ಲಿ ತಪೋವೃದ್ಧನೂ ವಯೋವೃದ್ಧನೂ ಆದ ಚ್ಯವನಮಹರ್ಷಿಯು ತಪಸ್ಸುಮಾಡುತ್ತಿರುವದನ್ನು ನೋಡಿ, ಕೈಮುಗಿದುಕೊಂಡು 'ಎಲೈ ಮಹಾತ್ಮನೆ, ಬಾಲೆಯಾದ ನನ್ನ ಮಗಳು ಅಜ್ಞಾನದಿಂದ ಮಾಡಿದ ಅಪರಾಧವನ್ನು ನೀನು ಕ್ಷಮಿಸಿ, ನನ್ನ ಸೈನ್ಯವನ್ನು ಕಾಪಾಡಬೇಕು' ಎಂದು ಬೇಡಿಕೊಳ್ಳಲು, ಚ್ಯವನಮಹರ್ಷಿಯು ಶರ್ಯಾತಿರಾಯನನ್ನು ಕುರಿತು 'ಎಲೈ ರಾಯನೆ, ನಿನ್ನ ಮಗಳು ಅಹಂಕಾರದಿಂದ ನನ್ನ ಕಣ್ಣುಗಳನ್ನು ಚುಚ್ಚಿರುವಳು. ರೂಪವತಿಯಾಗಿಯೂ ಪರರಿಗೆ ಆಶೆಯನ್ನೂ ಮೋಹವನ್ನೂ ಉಂಟುಮಾಡತಕ್ಕವಳಾಗಿಯೂ ಇರುವ ಆ ನಿನ್ನ ಮಗಳನ್ನೇ ನಾನು ಪರಿಗ್ರಹಿಸಿ ಈ ಕೋಪವನ್ನು ಸಮಾಧಾನಮಾಡಿಕೊಳ್ಳತಕ್ಕವನು. ಇದು ಯಥಾರ್ಥವಾದದ್ದು' ಎಂದು ನುಡಿದನು. ಈ ಪ್ರಕಾರವಾದ ಚ್ಯವನಮಹರ್ಷಿಯ ಅಭಿಪ್ರಾಯವನ್ನು ತಿಳಿದು ಶರ್ಯಾತಿರಾಯನು ಯಾವ ವಿಚಾರವನ್ನೂ ಮಾಡದೆ, ತನ್ನ ಮಗಳಾದ ಸುಕನ್ಯೆಯನ್ನು ಆ ಮಹರ್ಷಿಗೆ ಕೊಟ್ಟು ಮದುವೆಮಾಡಿದನು. ಬಳಿಕ ಚ್ಯವನಮಹರ್ಷಿಯು ಕೋಪವನ್ನು ಬಿಟ್ಟು ಶರ್ಯಾತಿರಾಯನಿಗೂ ಆತನ ಸೈನಿಕರಿಗೂ ಸುಖವಾಗಿರುವಂತೆ ಅನುಗ್ರಹವನ್ನು ಮಾಡಲು, ಶರ್ಯಾತಿರಾಯನು ಸೈನ್ಯಸಮೇತನಾಗಿ ತನ್ನ ಪಟ್ಟಣಕ್ಕೆ ಹೊರಟುಹೋದನು. ಅನಂತರದಲ್ಲಿ ಪತಿವ್ರತಾಶಿರೋಮಣಿಯಾದ ಸುಕನ್ಯೆಯು ತಾನೂ ತಪೋನಿಷ್ಠಳಾಗಿ, ನೇಮದಿಂದ ತನ್ನ ಪತಿಯನ್ನೂ ಆತನ ಅಗ್ನಿಗಳನ್ನೂ ಅತಿಥಿಗಳನ್ನೂ ಅಸೂಯೆಯಿಲ್ಲದೆ ಶುಶ್ರೂಷೆ ಮಾಡಿಕೊಂಡಿದ್ದಳು."

## ೧೨೩ನೇ ಅಧ್ಯಾಯ.—ತೀರ್ಥಯಾತ್ರಾಪ್ರಶಂಸೆ.—(ಸುಕನ್ಯೋಪಾಖ್ಯಾನ.)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಲೋಮಶನು ಧರ್ಮರಾಯನನ್ನು ಕುರಿತು "ಎಲೈ ಧರ್ಮರಾಯನೆ, ಬಳಿಕ ಇಂದ್ರಕುಮಾರಿಯಂತೆ ಸರ್ವಾವಯವಸೌಂದರ್ಯಶಾಲಿನಿಯಾದ ಆ ಸುಕನ್ಯೆಯು ಒಂದಾನೊಂದು ದಿವಸ ಸ್ನಾನಮಾಡಿ ಮೈತುಂಬ ವಸ್ತ್ರವನ್ನುಡದೆ ಇರಲು, ಆಗ ಅಶ್ವಿನೀದೇವತೆಗಳು ಆಕೆಯನ್ನು ನೋಡಿ ಅಲ್ಲಿಗೆ ಬಂದು ಆಕೆಯನ್ನು ಕುರಿತು 'ಎಲೆ ಸುಂದರಾಂಗಿಯೆ, ನೀನು ಯಾರು ? ಈ ವನದಲ್ಲಿ ಏನುಮಾಡುತ್ತಿರುವೆ ? ಇದನ್ನು ತಿಳಿಯಬೇಕೆಂದು ನಮಗೆ ಕುತೂಹಲವುಂಟಾಗಿರುವದು ; ನೀನು ಯಥಾರ್ಥವಾಗಿ ಇದನ್ನು ಹೇಳು' ಎನಲು, ಸುಕನ್ಯೆಯು ನಾಚಿಕೊಂಡು 'ಎಲೈ ಮಹಾತ್ಮರೆ, ನಾನು ಶರ್ಯಾತಿರಾಯನ ಮಗಳು ಮತ್ತು ಚ್ಯವನಮಹರ್ಷಿಗಳ ಪತ್ನಿ' ಎಂದಳು. ಅದನ್ನು ಕೇಳಿ ಅಶ್ವಿನೀದೇವತೆಗಳು ಪರಿಹಾಸಮಾಡಿ 'ಎಲೆ ಮಂಗಳಾಂಗಿಯೆ, ನಿಮ್ಮ ತಂದೆಯು ಮುದುಕನಾದ ಈ ಚ್ಯವನಮಹರ್ಷಿಗೆ ನಿನ್ನನ್ನು ಯಾತಕ್ಕೋಸ್ಕರ ಕೊಟ್ಟನು ? ಈ ವಿಜನವಾದ ಅರಣ್ಯದಲ್ಲಿ ನೀನು ಮಿಂಚಿನ ಬಳ್ಳಿಯಂತೆ ಹೊಳೆಯುತ್ತಿರುವೆ. ದೇವತಾಸ್ತ್ರೀಯರಲ್ಲಿಯೂ ನಿನ್ನಂಥ ರೂಪವತಿಯನ್ನು ನಾವು ನೋಡಿಲ್ಲ. ನೀನು ಆಭರಣಗಳೂ ಉತ್ತಮವಾದ ವಸ್ತ್ರವೂ ಇಲ್ಲದಿದ್ದರೂ, ಈ ಅರಣ್ಯವನ್ನೆಲ್ಲಾ ಶರೀರಕಾಂತಿಯಿಂದ ಶೋಭಿಸುವಹಾಗೆ ಮಾಡುತ್ತಿರುವೆ. ನೀನು ಆಭರಣಗಳನ್ನೂ ಉತ್ತಮವಾದ ವಸ್ತ್ರವನ್ನೂ ಧರಿಸಿದ್ದೇಆದರೆ, ಇನ್ನೂ ಅಧಿಕವಾಗಿ ಶೋಭಿಸುವೆ. ಹೀಗೆ ನೀನು ಮಲಿನಳಾಗಿದ್ದುಕೊಂಡು ಬೇಕಾದ ಭೋಗಗಳನ್ನು ಅನುಭವಿಸದಿರುವ ಮುದುಕನಾದ ಈ ಚ್ಯವನನನ್ನು ಯಾತಕ್ಕೋಸ್ಕರ ಶುಶ್ರೂಷೆಮಾಡುತ್ತಿರುವೆ ? ಈ ಚ್ಯವನನು ನಿನ್ನನ್ನು ಸಂರಕ್ಷಿಸುವ ವಿಷಯದಲ್ಲಿಯೂ, ಪೋಷಿಸತಕ್ಕ ವಿಷಯದಲ್ಲಿಯೂ ಸಹ, ಅಸಮರ್ಥನಾಗಿರುವನು ; ನೀನು ಇವನನ್ನು ಬಿಟ್ಟು ನಮ್ಮಿಬ್ಬರಲ್ಲಿ ಯಾರನ್ನಾದರೂ ಒಬ್ಬನನ್ನು ಪತಿಯನ್ನಾಗಿ ವರಿಸು. ದೇವಕನ್ಯೆಯಂತೆ ಪ್ರಕಾಶಿಸುತ್ತಿರುವ ನೀನು ಈ ಯೌವನವನ್ನು ವ್ಯರ್ಥವಾಗಿ ಕಳೆದುಕೊಳ್ಳಬೇಡ' ಎಂದು ಬೋಧಿಸಲು, ಸುಕನ್ಯೆಯು ಅವರನ್ನು ಕುರಿತು 'ಎಲೈ ಮಹಾತ್ಮರೆ, ನಾನು ಯಾವಾಗಲೂ ನನ್ನ ಪತಿಯಾದ ಚ್ಯವನಮಹರ್ಷಿಯು ಹ್ಯಾಗೆಯಿದ್ದರೂ ಆತನಲ್ಲೇ ಆಸಕ್ತಳಾಗಿರತಕ್ಕವಳು. ನನ್ನ ವಿಷಯದಲ್ಲಿ ನೀವು ಇಂಥ ಮಾತುಗಳನ್ನು ಆಡಬೇಡಿರಿ' ಎಂದಳು. ಆಗ ಅಶ್ವಿನೀದೇವತೆಗಳು 'ಎಲೆ ಸುಕನ್ಯೆಯೆ, ನಾವಿಬ್ಬರೂ ದೇವತೆಗಳಿಗೆ ವೈದ್ಯರಾದ ಅಶ್ವಿನೀದೇವತೆಗಳು. ನೀನು ನಮ್ಮಿಬ್ಬರಲ್ಲಿ ಯಾರನ್ನಾದರೂ ಒಬ್ಬನನ್ನು ವರಿಸುವದಾದರೆ, ಮುದುಕನಾದ ನಿನ್ನ ಪತಿಯಾದ ಈ ಮಹರ್ಷಿಯನ್ನು ನಾವು ಯೌವನಸ್ಥನನ್ನಾಗಿ ಮಾಡಿಕೊಡುತ್ತೇವೆ. ಈ ಸಮಯನಿಬಂಧನೆಯನ್ನು ನಿನ್ನ ಪತಿಯ ಸಂಗಡ ಆಲೋಚಿಸು' ಎನಲು, ಆ ಮಾತನ್ನು ಕೇಳಿ ಸುಕನ್ಯೆಯು ಚ್ಯವನಮಹರ್ಷಿಯ ಸಮೀಪಕ್ಕೆ ಹೋಗಿ, ಆತನ ಸಂಗಡ ಅಶ್ವಿನೀದೇವತೆಗಳು ಹೇಳಿದ ಮಾತನ್ನು ಹೇಳಲು, ಚ್ಯವನಮಹರ್ಷಿಯು ಸುಕನ್ಯೆಯನ್ನು ನೋಡಿ ಹಾಗೆಯೇ ಮಾಡಬಹುದೆಂದು ಒಪ್ಪಿದನು. ಅದನ್ನು ಕೇಳಿ ಸುಕನ್ಯೆಯು ಅಶ್ವಿನೀದೇವತೆಗಳನ್ನು ನೋಡಿ 'ಎಲೈ ಮಹಾತ್ಮರೆ, ನೀವು ಹಾಗೆ ಮಾಡಬಹುದು. ನನ್ನ ಪತಿಯೂ ಒಡಂಬಟ್ಟನು' ಎಂದು ನುಡಿದಳು. ಅದನ್ನು ಕೇಳಿ ಅಶ್ವಿನೀದೇವತೆಗಳು ಸುಕನ್ಯೆಯನ್ನು ಕುರಿತು 'ಎಲೆ ರಾಜಕುಮಾರಿಯೆ, ಹಾಗಾದರೆ ನಿನ್ನ ಪತಿಯಾದ ಚ್ಯವನಮಹರ್ಷಿಯು ಈ ಸರೋವರದ ನೀರಿನಲ್ಲಿ ಪ್ರವೇಶಮಾಡಲಿ' ಎಂದರು. ಆಗ ಯೌವನಸ್ಥನಾಗಬೇಕೆಂದು ಬಯಸುತ್ತಿದ್ದ ಚ್ಯವನಮಹರ್ಷಿಯು ಆ ನೀರಿನಲ್ಲಿ ಪ್ರವೇಶಮಾಡಿದನು. ಕೂಡಲೆ, ಅಶ್ವಿನೀದೇವತೆಗಳೂ ಆ ಸರೋವರದ ನೀರಿನಲ್ಲಿ ಪ್ರವೇಶಮಾಡಿದರು. ಒಂದು ಮುಹೂರ್ತವಾದ ಬಳಿಕ, ಆ ಮೂರುಮಂದಿಯೂ ಸಮಾನವಾದ ವಯೋರೂಪಸಂಪತ್ತಿಯುಳ್ಳವರಾಗಿ, ದಿವ್ಯಾಭರಣಭೂಷಿತರಾಗಿ, ದರ್ಶನೀಯರಾಗಿ, ಆ ಸರೋವರದಿಂದ ಮೇಲಕ್ಕೆದ್ದು ಸುಕನ್ಯೆಯನ್ನು ನೋಡಿ 'ಎಲೆ ಮಂಗಳಾಂಗಿಯೆ, ನಮ್ಮ ಮೂರುಮಂದಿಯಲ್ಲಿ ನೀನು ಯಾರನ್ನು ಬಯಸುವೆಯೋ ಅಂಥ ಒಬ್ಬನನ್ನು ಪತಿಯನ್ನಾಗಿ ವರಿಸು' ಎಂದು ನುಡಿದರು. ಆ ಮಾತನ್ನು ಕೇಳಿ ಸುಕನ್ಯೆಯು ಸಮಾನವಾದ ವಯೋರೂಪುಳ್ಳ ಅವರನ್ನು ನೋಡಿ, ಆ ಮೂರುಮಂದಿಯಲ್ಲಿ ಈತನೇ ತನ್ನ ಪತಿಯೆಂದು

ನ್ನ ಜ್ಞಾನದಿಂದ ನಿಶ್ಚಯಿಸಿ ಚ್ಯವನಮಹರ್ಷಿಯನ್ನೇ ವರಿಸಿದಳು. ಈ ಪ್ರಕಾರ ಚ್ಯವನಮಹರ್ಷಿಯು ತನಗೆ ಬೇಕಾದ ಯೌವನವನ್ನೂ ರೂಪವನ್ನೂ ಪಡೆದು, ತನ್ನ ಭಾರ್ಯೆಯಾದ ಸುಕನ್ಯೆಯೊಡಗೂಡಿ, ಅಶ್ವಿನೀದೇವತೆಗಳನ್ನು ಕುರಿತು 'ಎಲೈ ದೇವತೆಗಳಿರಾ, ವೃದ್ಧನಾಗಿದ್ದ ನಾನು ನಿಮ್ಮ ಅನುಗ್ರಹದಿಂದ ಯೌವನಸ್ಥನೂ ರೂಪವಂತನೂ ಆಗಿ ನನ್ನ ಪತ್ನಿಯೊಡಗೂಡಿದೆನು. ಈ ಸಂತೋಷಕ್ಕಾಗಿ ನಾನು ಯಜ್ಞದಲ್ಲಿ ನಿಮಗೆ ಇಂದ್ರನೆದುರಿಗೇ ಸೋಮಪಾನವನ್ನು ಮಾಡಿಸುತ್ತೇನೆ. ಇದು ಯಥಾರ್ಥ' ಎನಲು, ಆ ಮಾತನ್ನು ಕೇಳಿ ಅಶ್ವಿನೀದೇವತೆಗಳು ಸಂತುಷ್ಟರಾಗಿ ಸ್ವರ್ಗಲೋಕಕ್ಕೆ ಹೊರಟುಹೋದರು. ಬಳಿಕ ಚ್ಯವನಮಹರ್ಷಿಯೂ ಸುಕನ್ಯೆಯೂ ಸಹ ದೇವತೆಗಳಂತೆ ಆಶ್ರಮದಲ್ಲಿ ಸುಖವಾಗಿ ವಿಹರಿಸಿಕೊಂಡಿದ್ದರು" ಎಂದು ಲೋಮಶನು ಧರ್ಮರಾಯನಿಗೆ ಹೇಳಿದನು.

## ೧೨೪ನೇ ಅಧ್ಯಾಯ.—ತೀರ್ಥಯಾತ್ರಾಪ್ರಶಂಸೆ—(ಸುಕನ್ಯೋಪಾಖ್ಯಾನ.)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯನೆ, ಲೋಮಶನು ಧರ್ಮರಾಯನನ್ನು ಕುರಿತು "ಎಲೈ ಧರ್ಮರಾಯನೆ, ಆಬಳಿಕ ಶರ್ಯಾತಿರಾಯನು ತನ್ನ ಅಳಿಯನಾದ ಚ್ಯವನಮಹರ್ಷಿಯು ಯೌವನವಯಸ್ಸನ್ನು ಸಂಪಾದಿಸಿದ ವೃತ್ತಾಂತವನ್ನು ಕೇಳಿ, ಆತನ ಆಶ್ರಮಕ್ಕೆ ಸೈನ್ಯಸಮೇತನಾಗಿ ಬಂದು, ಆ ಮಹರ್ಷಿಯನ್ನೂ ತನ್ನ ಮಗಳಾದ ಸುಕನ್ಯೆಯನ್ನೂ ನೋಡಿ ಮಹತ್ತಾದ ರಾಜ್ಯಲಾಭವಾದಂತೆ ಸಂತೋಷಪಟ್ಟು, ಆ ಮಹರ್ಷಿಯಿಂದ ಸತ್ಕಾರವನ್ನು ಪಡೆದು ಪತ್ನೀಸಮೇತನಾಗಿ ಸುಖವಾಗಿ ಕೂತುಕೊಂಡು, ಪ್ರಿಯವಾಗಿಯೂ ಮಂಗಳಕರವಾಗಿಯೂ ಇರುವ ಕಥೆಗಳನ್ನು ಪ್ರಸ್ತಾಪಿಸುತ್ತಿರಲು, ಚ್ಯವನಮಹರ್ಷಿಯು ಶರ್ಯಾತಿರಾಯನನ್ನು ನೋಡಿ 'ಎಲೈ ರಾಯನೆ, ನಿನಗೆ ನಾನು ಯಾಗವನ್ನು ಮಾಡಿಸುವೆನು. ಅದಕ್ಕೆ ಬೇಕಾದ ಸಾಮಗ್ರಿಗಳನ್ನು ಸಿದ್ಧಪಡಿಸು. ಇದರಿಂದ ನಿನಗೆ ಶ್ರೇಯಸ್ಸಾಗುವದು' ಎಂದು ನುಡಿದನು. ಆ ಮಾತನ್ನು ಶರ್ಯಾತಿರಾಯನು ವಿಶ್ವಾಸದಿಂದ ಕೇಳಿ, ಅಧಿಕವಾಗಿ ಸಂತೋಷಪಟ್ಟು, ಪ್ರಶಸ್ತವಾದ ಮುಹೂರ್ತದಲ್ಲಿ ಯಜ್ಞಸಾಮಗ್ರಿಗಳನ್ನೆಲ್ಲಾ ಸಿದ್ಧಪಡಿಸಿ, ದೊಡ್ಡದಾದ ಯಜ್ಞಶಾಲೆಯನ್ನು ಕಟ್ಟಿಸಿದನು. ಆ ಯಜ್ಞಶಾಲೆಯಲ್ಲಿ ಚ್ಯವನಮಹರ್ಷಿಯು ಆ ರಾಯನಿಂದ ಯಜ್ಞವನ್ನು ಮಾಡಿಸಿದನು. ಎಲೈ ಧರ್ಮರಾಯನೆ, ಆ ಯಜ್ಞದಲ್ಲಿ ನಡೆದ ಆಶ್ಚರ್ಯಗಳನ್ನು ಹೇಳುವೆನು ಕೇಳು. ಚ್ಯವನಮಹರ್ಷಿಯು ಅಶ್ವಿನೀದೇವತೆಗಳಿಗೆ ಸೋಮಪಾನವನ್ನು ಮಾಡಿಸುವದಕ್ಕೆ ಉಪಕ್ರಮಿಸಲು, ಅದಕ್ಕೆ ಇಂದ್ರನು ಅಡ್ಡಿಮಾಡಿ ಚ್ಯವನಮಹರ್ಷಿಯನ್ನು ಕುರಿತು 'ಎಲೈ ಚ್ಯವನಮಹರ್ಷಿಯೆ, ಈ ಅಶ್ವಿನೀ ದೇವತೆಗಳು ದೇವತೆಗಳಿಗೆ ವೈದ್ಯರಾಗಬೇಕು. ಇವರು ಯಜ್ಞದಲ್ಲಿ ಸೋಮಪಾನ ಮಾಡುವದಕ್ಕೆ ಅರ್ಹರಲ್ಲ. ಆದ್ದರಿಂದ ನೀನು ಇಂಥಾ ಕಾರ್ಯವನ್ನು ಮಾಡಬೇಡ' ಎಂದನು. ಆಗ ಚ್ಯವನಮಹರ್ಷಿಯು 'ಎಲೈ ಇಂದ್ರನೆ, ಉತ್ಸಾಹಶಾಲಿಗಳೂ ಮಹಾತ್ಮರೂ ರೂಪವಂತರೂ ಆಗಿರುವ ಇವರಿಬ್ಬರೂ ದೇವತೆಗಳಂತೆ ನನಗೆ ಮುಪ್ಪಿಲ್ಲದಂತೆ ಮಾಡಿರುವರು. ನೀವೆಲ್ಲರೂ ಸೋಮಪಾನಕ್ಕೆ ಅರ್ಹರಾಗುವದಕ್ಕೂ, ಇವರು ಅರ್ಹರಾಗದೆ ಇರುವದಕ್ಕೂ ಕಾರಣವೇನು? ಇವರೇನು ದೇವತೆಗಳಲ್ಲವೆ?' ಎಂದು ಪ್ರಶ್ನೆಮಾಡಿದನು. ಅದಕ್ಕೆ ಇಂದ್ರನು 'ಎಲೈ ಚ್ಯವನಮಹರ್ಷಿಯೆ, ಈ ಅಶ್ವಿನೀದೇವತೆಗಳು ದೇವತೆಗಳಿಗೆ ಚಿಕಿತ್ಸಕರಾಗಿ ಅವರ ಸೇವೆಯನ್ನು ಮಾಡತಕ್ಕವರು. ಮತ್ತು ಇವರು ಕಾಮಚಾರಿಗಳಾಗಿ ಮನುಷ್ಯಲೋಕದಲ್ಲಿ ಸಹ ಸಂಚಾರಮಾಡುತ್ತಿರುವರು. ಆದಕಾರಣ ಇವರು ಸೋಮಪಾನಮಾಡುವದಕ್ಕೆ ಹ್ಯಾಗೆ ಅರ್ಹರಾದಾರು?' ಎಂದು ಪದೇಪದೇ ಇದೇಮಾತನ್ನು ಆಡುತ್ತಿರಲು, ಚ್ಯವನಮಹರ್ಷಿಯು ಇಂದ್ರನನ್ನು ನಿರಾಕರಿಸಿ, ಅಶ್ವಿನೀದೇವತೆಗಳಿಗೆ ಸೋಮಪಾನವನ್ನು ಮಾಡಿಸುವದಕ್ಕೆ ಉಪಕ್ರಮಿಸಿದನು. ಅದನ್ನು ನೋಡಿ ಇಂದ್ರನು 'ಎಲೈ ಚ್ಯವನನೆ, ಇವರಿಬ್ಬರಿಗೂ ನೀನು ಸೋಮಪಾನವನ್ನು ಮಾಡಿಸಿದ್ದೇ ಆದರೆ, ನಾನು ಕ್ರೂರವಾದ ಈ ವಜ್ರಾಯುಧವನ್ನು ನಿನ್ನಮೇಲೆ ಪ್ರಯೋಗಿಸುವೆನು' ಎಂದು ನುಡಿದನು. ಆ ಮಾತನ್ನು ಕೇಳಿ ಚ್ಯವನಮಹರ್ಷಿಯು

ಇಂದ್ರನನ್ನು ಪರಿಹಾಸಮಾಡಿ, ವಿಧಿವತ್ತಾಗಿ ಅಶ್ವಿನೀದೇವತೆಗಳಿಗೆ ಸೋಮಪಾನವನ್ನು ಮಾಡಿಸುವದಕ್ಕಾಗಿ ಸೋಮಪಾತ್ರೆಯನ್ನು ಕೈಯಲ್ಲಿ ಹಿಡಿದುಕೊಂಡನು. ಕೂಡಲೆ, ಇಂದ್ರನು ಆ ಋಷಿಯಮೇಲೆ ವಜ್ರಾಯುಧವನ್ನು ಪ್ರಯೋಗಿಸುವದಕ್ಕೆ ಯತ್ನಿಸಲು, ಚ್ಯವನಮಹರ್ಷಿಯು ಕೋಪಗೊಂಡು ತನ್ನ ಹುಂಕಾರದಿಂದ ಇಂದ್ರನ ಬಾಹುಗಳು ಚಲಿಸದಂತೆ ಸ್ತಂಭಿಸಿ, ಇಂದ್ರನ ನಿಗ್ರಹಾರ್ಥವಾಗಿ ಒಂದು ಭೂತವನ್ನು ನಿರ್ಮಾಣಮಾಡಬೇಕೆಂದು ಅಗ್ನಿಕುಂಡದಲ್ಲಿ ಹೋಮವನ್ನು ಮಾಡಿದನು. ಆಗ ಆ ಯಜ್ಞಕುಂಡದಲ್ಲಿ ಚ್ಯವನಮಹರ್ಷಿಯ ತಪೋಬಲದಿಂದ ಮಹಾ ಪರಾಕ್ರಮಶಾಲಿಯಾಗಿ ದೊಡ್ಡದಾದ ಶರೀರವುಳ್ಳ ಮದ ಎಂಬ ಒಬ್ಬ ಅಸುರನು ಉತ್ಪನ್ನನಾದನು. ಎಲೈ ಧರ್ಮರಾಯನೆ, ಆ ಅಸುರನ ಶರೀರವು ಇಂಥಾದ್ದೆಂದು ಹೇಳುವದು ದೇವಾಸುರರಿಗೂ ಸಹ ಅಶಕ್ಯವಾದದ್ದು. ತೀಕ್ಷ್ಣವಾದ ಮೊನೆಯುಳ್ಳ ಹಲ್ಲುಗಳಿಂದ ಕೂಡಿದ ಆ ದೈತ್ಯನ ಮುಖವು ಬಹು ಘೋರವಾಗಿತ್ತು. ಅವನ ಒಂದು ದವಡೆಯು ಆಕಾಶದಲ್ಲೂ, ಮತ್ತೊಂದು ದವಡೆಯು ಭೂಮಿಯಲ್ಲೂ ತೋರುತ್ತಿದ್ದವು. ಅವನ ನಾಲ್ಕು ಕೋರೇಹಲ್ಲುಗಳು ನೂರುನೂರುಗಾವುದ ಉದ್ದವಿದ್ದವು. ಉಳಿದ ಹಲ್ಲುಗಳೆಲ್ಲವೂ ಹತ್ತುಹತ್ತುಗಾವುದ ಉದ್ದವಾಗಿದ್ದವು. ಆ ಹಲ್ಲುಗಳು ಉಪ್ಪರಿಗೆಯ ಶಿಖರದಂತೆಯೂ ಶೂಲಾಯುಧದ ಅಗ್ರಭಾಗದಂತೆಯೂ ಇದ್ದವು. ಅವನ ಎರಡು ಬಾಹುಗಳೂ ಪರ್ವತಾಕಾರವಾಗಿಯೂ ಹತ್ತುಸಾವಿರಗಾವುದ ಉದ್ದವೂ ಇದ್ದವು. ಅವನ ಎರಡು ಕಣ್ಣುಗಳೂ ಚಂದ್ರಸೂರ್ಯರಂತೆ ಹೊಳೆಯುತ್ತಿದ್ದವು. ಅವನು ಮಿಂಚಿನಂತೆ ಚಂಚಲವಾದ ನಾಲಿಗೆಯಿಂದ ಕೂಡಿ, ಕಾಲಾಗ್ನಿಗೆ ಸಮಾನವಾದ ಬಾಯನ್ನು ತೆರೆದುಕೊಂಡು, ಘೋರವಾದ ದೃಷ್ಟಿಯುಳ್ಳವನಾಗಿ, ಜಗತ್ತನ್ನೆಲ್ಲಾ ಭಕ್ಷಿಸುವನಂತೆ ಕ್ರೋಧಾವೇಶವುಳ್ಳವನಾಗಿ, ಮಹತ್ತಾದ ಗರ್ಜನೆಯನ್ನು ಮಾಡುತ್ತ ಇಂದ್ರನನ್ನು ಭಕ್ಷಿಸುವದಕ್ಕೋಸ್ಕರ ಆತನನ್ನು ಅಟ್ಟಿಕೊಂಡು ಬಂದನು."

## ೧೨೫ನೇ ಅಧ್ಯಾಯ.—ತೀರ್ಥಯಾತ್ರಾಪ್ರಶಂಸೆ.—(ಸುಕನ್ಯೋಪಾಖ್ಯಾನ).

ಅನಂತರದಲ್ಲಿ ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಲೋಮಶನು ಧರ್ಮರಾಯನನ್ನು ಕುರಿತು "ಎಲೈ ಧರ್ಮರಾಯನೆ, ಆಗ ಚ್ಯವನಮಹರ್ಷಿಯಿಂದ ಸ್ತಂಭಿಸಲ್ಪಟ್ಟ ಬಾಹುಗಳುಳ್ಳ ಇಂದ್ರನು ತನ್ನನ್ನು ನುಂಗುವದಕ್ಕೋಸ್ಕರ ಬಾಯಿತೆರೆದುಕೊಂಡು ಯಮನಂತೆ ಬರುತ್ತಿರುವ ಆ ಮದಾಸುರನನ್ನು ನೋಡಿ, ಭಯದಿಂದ ಕಟವಾಯಿಗಳನ್ನು ಬಾರಿಬಾರಿಗೂ ನಾಲಿಗೆಯಿಂದ ಸವರಿಕೊಳ್ಳುತ್ತ, ಚ್ಯವನಮಹರ್ಷಿಯನ್ನು ಕುರಿತು 'ಎಲೈ ಮಹರ್ಷಿಯೆ, ಈ ಹೊತ್ತು ಮೊದಲುಗೊಂಡು ಅಶ್ವಿನೀದೇವತೆಗಳು ಸೋಮಪಾನಕ್ಕೆ ಅರ್ಹರಾಗಲಿ. ಈ ಮಾತು ನಿಜವಾದದ್ದು. ನೀನು ನನ್ನ ವಿಷಯದಲ್ಲಿ ಪ್ರಸನ್ನನಾಗು. ನಿನ್ನ ಪ್ರಯತ್ನವೆಂದಿಗೂ ವ್ಯರ್ಥವಾಗತಕ್ಕದ್ದಲ್ಲ. ಈ ಕ್ರತುವು ನಡೆಯಲಿ. ನೀನಾಡಿದ ಮಾತು ಸುಳ್ಳಾಗುವದಿಲ್ಲವೆಂದು ನಾನು ಚನ್ನಾಗಿ ಬಲ್ಲೆನು. ಈಗ ನೀನು ಅಶ್ವಿನೀದೇವತೆಗಳಿಗೆ ಸೋಮಪಾನವನ್ನು ಮಾಡಿಸಿದ್ದರಿಂದ, ನಿನ್ನ ತಪಶ್ಶಕ್ತಿಯು ಅಧಿಕವಾಗಿ ಮೆರೆಯಲಿ. ಈ ಯಾಗದಿಂದ ಸುಕನ್ಯೆಗೆ ತಂದೆಯಾದ ಶರ್ಯಾತಿರಾಯನ ಯಶಸ್ಸೂ ಜಗತ್ಪ್ರಖ್ಯಾತವಾಗಲಿ. ನಿನ್ನ ಮಹಿಮೆಯು ಪ್ರಕಾಶವಾಗಬೇಕೆಂತಲೇ ನಾನು ಹೀಗೆ ಮಾಡಿದೆನು. ನಿನ್ನ ಇಷ್ಟವಿದ್ದಂತೆ ಆಗಲಿ. ನನ್ನವಿಷಯದಲ್ಲಿ ಅನುಗ್ರಹವನ್ನು ಮಾಡು' ಎನಲು, ಚ್ಯವನಮಹರ್ಷಿಯು ತನ್ನ ಕೋಪವನ್ನು ಸಮಾಧಾನಮಾಡಿಕೊಂಡು, ಇಂದ್ರನಲ್ಲಿ ಅನುಗ್ರಹವನ್ನು ಮಾಡಿ, ತಾನು ನಿರ್ಮಿಸಿದ್ದ ಮದಾಸುರನನ್ನು ಸ್ತ್ರೀಯರಲ್ಲಿಯೂ ಮದ್ಯದಲ್ಲಿಯೂ ಜೂಜಿನಲ್ಲಿಯೂ ಬೇಟೆಯಲ್ಲಿಯೂ ವಾಸಮಾಡಿಕೊಂಡಿರುವಂತೆ ಆಜ್ಞಾಪಿಸಿ, ಇಂದ್ರನನ್ನೂ ಅಶ್ವಿನೀದೇವತೆಗಳೊಡಗೂಡಿದ ಇತರದೇವತೆಗಳನ್ನೂ ಸೋಮದಿಂದ ತೃಪ್ತಿಪಡಿಸಿ, ಶರ್ಯಾತಿರಾಯನ ಯಜ್ಞವನ್ನು ಪೂರೈಸಿ, ತನ್ನ ಸಾಮರ್ಥ್ಯವನ್ನು ಸ್ವರ್ಗಲೋಕದಲ್ಲಿಯೂ ಭೂಲೋಕದಲ್ಲಿಯೂ ಪ್ರಖ್ಯಾತಿಪಡಿಸಿ, ಅನುಕೂಲೆಯಾದ ಸುಕನ್ಯೆಯೊಡನೆ ತನ್ನ ಆಶ್ರಮದಲ್ಲಿ ಸುಖವಾಗಿ ವಿಹರಿ

ಪುತ್ರಿ ದ್ದನು. ಎಲೈ ಧರ್ಮರಾಯನೆ, ಈ ಸರೋವರವು ಆ ಮಹಾತ್ಮನಾದ ಚ್ಯವನಮಹರ್ಷಿಯದು. ಇಲ್ಲಿ ನೀನು ತಮ್ಮಂದಿರೊಡನೆ ಸ್ನಾನಮಾಡಿ, ದೇವತೆಗಳಿಗೂ ಪಿತೃಗಳಿಗೂ ತರ್ಪಣವನ್ನು ಮಾಡು. ಇದೊ, ಈ ಸುರರು ಭೂಮಿಯನ್ನು ನೋಡು. ಈ ಮಾರ್ಗವಾಗಿ ಸೈಂಧವಾರಣ್ಯಕ್ಕೆ ಹೋಗಿ, ಅಲ್ಲಿರುವ ಚಿಕ್ಕಚಿಕ್ಕ ತೊರೆಗಳನ್ನು ನೋಡಿಕೊಂಡು, ಅಲ್ಲಿರುವ ಸಕಲ ಪುಷ್ಕರತೀರ್ಥಗಳಲ್ಲಿಯೂ ಸ್ನಾನಮಾಡಿ ಶಿವಮಂತ್ರಗಳನ್ನು ಜಪಮಾಡಿದರೆ, ನಿನಗೆ ಇಷ್ಟಸಿದ್ಧಿಯಾಗುವದು. ಇದೋ, ಈ ಪ್ರದೇಶವೇ ತ್ರೇತಾಯುಗ ದ್ವಾಪರಯುಗಗಳ ಸಂಧಿಸ್ಥಾನವು. ಇಲ್ಲಿರುವ ಸರ್ವಪಾಪ ಪ್ರಕ್ಷಾಳನವೆಂಬ ತೀರ್ಥದಲ್ಲಿ ಸ್ನಾನಮಾಡಿದವರಿಗೆ ಸಕಲ ಪಾಪಗಳೂ ಪರಿಹಾರವಾಗಿ, ಕಲಿಪುರುಷನ ಬಾಧೆಯುಂಟಾಗದೆ ಇರುವದು. ಇಲ್ಲಿ ಮಹಾತ್ಮರಿಗೆ ಆಶ್ರಯವಾದ ಆರ್ಚೀಕಪರ್ವತವಿರುವದು. ಈ ಪರ್ವತದಲ್ಲಿ ಯಾವಾಗಲೂ ಫಲಗಳೂ ಗಿರಿನದಿಗಳೂ ಸಮೃದ್ಧಿಯಾಗಿರುವವು. ಇಲ್ಲಿ ಅನೇಕ ದೇವಾಲಯಗಳಿರುವವು. ಇದೋ, ಇಲ್ಲೇ ಚಂದ್ರತೀರ್ಥವಿರುವದು. ವಾಯುಭಕ್ಷಕರಾಗಿ ಅಗ್ನಿಯಂತೆ ತೇಜೋವಂತರಾದ ವೈಖಾನಸರೂ ವಾಲಿಖಿಲ್ಯಋಷಿಗಳೂ ಈ ತೀರ್ಥವನ್ನು ಆಶ್ರಯಿಸಿಕೊಂಡಿರುವರು. ಇತ್ತಲಾಗಿ ಪ್ರಯಾಗಕ್ಷೇತ್ರವೂ ವಾರಾಣಸೀಕ್ಷೇತ್ರವೂ ಇರುವವು. ಅವುಗಳನ್ನು ಪ್ರದಕ್ಷಿಣೆಮಾಡಿ, ಅಲ್ಲಿರುವ ಪುಣ್ಯತೀರ್ಥಗಳಲ್ಲಿ ನಿನ್ನ ಇಷ್ಟಾನುಸಾರವಾಗಿ ಸ್ನಾನವನ್ನು ಮಾಡು. ಈ ಪ್ರದೇಶದಲ್ಲೇ ಶಂತನುಮಹಾರಾಜನೂ, ಶುನಕಮಹಾರಾಜನೂ, ನರನಾರಾಯಣರೂ ಸಹ, ಬಹುಕಾಲ ವಾಸಮಾಡಿಕೊಂಡಿದ್ದರು. ಈ ಆರ್ಚೀಕಪರ್ವತದಲ್ಲಿ ದೇವತೆಗಳೂ, ಪಿತೃದೇವತೆಗಳೂ, ಮಹರ್ಷಿಗಳೂ ಸಹ, ಬಹುಕಾಲ ತಪಸ್ಸನ್ನು ಮಾಡಿ ಇಲ್ಲೇ ಸನ್ನಿಹಿತರಾಗಿರುವರು. ನೀನು ಅವರನ್ನು ಪೂಜಿಸು. ಇಲ್ಲೇ ಆ ಮಹರ್ಷಿಗಳು ಚರುಪ್ರಾಶನವನ್ನು ಮಾಡಿರುವರು. ಇದೋ, ಈ ಯಮುನಾನದಿಯು ಯಾವಾಗಲೂ ಪ್ರವಾಹದೊಡನೆ ಕೂಡಿರುವದು. ಈ ನದೀತೀರದಲ್ಲಿ ಶ್ರೀಕೃಷ್ಣನು ತಪಸ್ಸನ್ನು ಮಾಡಿರುವನು. ನೀನೂ, ನಕುಲ ಸಹದೇವರೂ, ಭೀಮಸೇನನೂ, ದ್ರೌಪದಿಯೂ, ನಾನೂ ಸಹ ಎಲ್ಲರೂ ಅಲ್ಲಿಗೆ ಹೋಗೋಣ. ಇದೋ, ಇಲ್ಲಿ ಪುಣ್ಯತಮವಾದ ಇಂದ್ರಪ್ರಸ್ರವಣ ಪರ್ವತವಿರುವದು. ಧಾತನೂ, ವಿಧಾತನೂ, ವರುಣನೂ ಸಹ, ಇದರ ಮೇಲೆ ಬಂದು ನಿಂತು ಕ್ಷಮಾಗುಣವನ್ನು ತಾಳಿ ವಾಸಮಾಡುತ್ತಿರುವರು. ಈ ಪರ್ವತವು ಋಜುಬುದ್ಧಿಗಳಾಗಿಯೂ, ಸರ್ವಪ್ರಾಣಿಗಳಿಗೂ ಹಿತಚಿಂತಕರಾಗಿಯೂ, ಇರತಕ್ಕವರಿಗೆ ಶ್ರೇಯಸ್ಸನ್ನು ಕೊಡುವದು. ಈ ಯಮುನಾನದಿಯು ಅನೇಕ ಋಷಿಗಳಿಂದ ಸೇವಿತವಾಗಿಯೂ ಪಾಪಪರಿಹಾರಕವಾಗಿಯೂ ಪುಣ್ಯತಮವಾಗಿಯೂ ಇರುವದು. ಈ ನದೀತೀರದಲ್ಲಿ ಅನೇಕಮಂದಿ ಮಹಾತ್ಮರು ಯಜ್ಞಗಳನ್ನು ಮಾಡಿರುವರು. ಇಲ್ಲಿಯೇ ಮಹಾಪರಾಕ್ರಮಶಾಲಿಯಾದ ಮಾಂಧಾತಮಹಾರಾಜನೂ, ಸಹದೇವಪುತ್ರನಾದ ಸೋಮಕರಾಜನೂ, ಯಜ್ಞವನ್ನು ಮಾಡಿರುವರು ” ಎಂದು ಲೋಮಶನು ಧರ್ಮರಾಯನಿಗೆ ಹೇಳಿದನು.

## ೧೨೬ನೇ ಅಧ್ಯಾಯ.—ತೀರ್ಥಯಾತ್ರಾಪ್ರಶಂಸೆ.—(ಮಾಂಧಾತೃವಿನ ಚರಿತ್ರೆ.)

ಅನಂತರದಲ್ಲಿ ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಬಳಿಕ ಧರ್ಮರಾಯನು ಲೋಮಶಮಹರ್ಷಿಯನ್ನು ಕುರಿತು “ಎಲೈ ಲೋಮಶಮಹರ್ಷಿಯೆ, ಮೂರು ಲೋಕದಲ್ಲಿಯೂ ಪ್ರಸಿದ್ಧನಾದ ಯುವನಾಶ್ವರಾಜನ ಮಗನಾದ ಮಾಂಧಾತೃಮಹಾರಾಜನು ಹ್ಯಾಗೆ ಉತ್ಪನ್ನನಾದನು? ಮೂರುಲೋಕಗಳೂ ಮಹಾತ್ಮನಾದ ವಿಷ್ಣುವಿಗೆ ಸ್ವಾಧೀನವಾಗಿರುವಂತೆ ಆತನಿಗೆ ಹ್ಯಾಗೆ ಸ್ವಾಧೀನವಾಗಿದ್ದವು? ಇಂದ್ರನಿಗೆ ಸಮಾನವಾದ ತೇಜಸ್ಸುಳ್ಳ ಆತನಿಗೆ ಮಾಂಧಾತೃವೆಂಬ ಹೆಸರುಂಟಾಗುವದಕ್ಕೆ ಕಾರಣವೇನು? ಮತ್ತು ಮಹಾತೇಜಸ್ವಿಯಾದ ಆತನು ಸ್ವರ್ಗದಲ್ಲಿ ಉತ್ತಮವಾದ ಸ್ಥಾನವನ್ನು ಹ್ಯಾಗೆ ಪಡೆದನು? ಅಂಥಾ ಮಹಾತ್ಮನ ಚರಿತ್ರೆಯನ್ನು ಕೇಳಬೇಕೆಂದು ನನಗೆ ಕುತೂಹಲವಿರುವದು. ಅದನ್ನೆಲ್ಲಾ ನೀನು ವಿವರಿಸು” ಎನಲು, ಲೋಮಶನು “ಎಲೈ ಧರ್ಮರಾಯನೆ, ಆ ಮಹಾತ್ಮನಾದ ಅರಸಿಗೆ ಮಾಂಧಾತೃವೆಂಬ ಹೆಸರುಂಟಾದದ್ದಕ್ಕೆ ನಿಮಿತ್ತವನ್ನು ನಾನು ಹೇಳುತ್ತೇನೆ. ಸಾವಧಾನವಾಗಿ ಕೇಳು. ಇಕ್ಷ್ವಾಕುವಂಶದಲ್ಲಿ ಯುವನಾಶ್ವ

ನೆಂಬ ಮಹಾರಾಜನು ಇದ್ದನು. ಧರ್ಮಾತ್ಮನಾದ ಆತನು ಬಹುದಕ್ಷಿಣೆಗಳನ್ನು ಕೊಟ್ಟು ಸಹಸ್ರ ಅಶ್ವಮೇಧ ಯಾಗಗಳನ್ನೂ, ಇನ್ನೂ ಇತರ ಯಾಗಗಳನ್ನೂ ಮಾಡಿ, ತನಗೆ ಸಂತಾನವಿಲ್ಲದಿದ್ದುದರಿಂದ ಮಂತ್ರಿಗಳಲ್ಲಿ ರಾಜ್ಯವನ್ನಿಟ್ಟು, ತಪೋವನಕ್ಕೆ ಹೋಗಿ, ಶಾಸ್ತ್ರೋಕ್ತಕ್ರಮದಿಂದ ಮನಸ್ಸನ್ನು ನಿಗ್ರಹಿಸಿ, ಆ ಮನಸ್ಸನ್ನು ಪರಮಾತ್ಮನಲ್ಲಿಟ್ಟು, ಧ್ಯಾನಪರನಾಗಿದ್ದನು. ಹೀಗಿರಲು, ಒಂದಾನೊಂದು ದಿವಸ ಉಪವಾಸದಿಂದ ಬಳಲಿ ಬಾಯಾರಿಕೆಯಿಂದ ಎದೆಯಾರಲು, ಭೃಗುಋುಷಿಗಳ ಆಶ್ರಮಕ್ಕೆ ಹೊರಟನು. ಅದೇ ದಿವಸ ರಾತ್ರಿ, ಮಹಾತ್ಮನಾದ ಭೃಗುಋುಷಿಯು ಸುದ್ಯುಮ್ನನಿಗೆ ಪುತ್ರನಾದ ಆಯುವನಾಶ್ವರಾಯನಿಗೆ ಸಂತಾನವಾಗುವದಕ್ಕೋಸ್ಕರ ಇಷ್ಟಿಯನ್ನು ಉಪಕ್ರಮ ಮಾಡಿ, ಒಂದು ಕಲಶದಲ್ಲಿ ಮಂತ್ರೋದಕವನ್ನು ತುಂಬಿ, 'ಈ ಉದಕವನ್ನು ಪಾನಮಾಡಿ ಯುವನಾಶ್ವನ ಪತ್ನಿಯು ಇಂದ್ರನಿಗೆ ಸಮಾನನಾದ ಪುತ್ರನನ್ನು ಪಡೆಯಲಿ' ಎಂದು ಆ ಕಲಶವನ್ನು ಮೊದಲೇ ವೇದಿಯಲ್ಲಿಟ್ಟು, ಆ ರಾತ್ರಿ ಜಾಗರಣೆಮಾಡಿದ್ದರಿಂದ ಶ್ರಾಂತನಾಗಿ ಅಲ್ಲಿದ್ದ ಋುಷಿಗಳೊಡನೆ ನಿದ್ರೆಮಾಡುತ್ತಿದ್ದನು. ಆ ಸಮಯದಲ್ಲಿ ಯುವನಾಶ್ವನು ಆ ಆಶ್ರಮವನ್ನು ಹೊಕ್ಕು, ಬಾಯಾರಿಕೆಯಿಂದ ಗಂಟಲಾರಿ, ಉದಕವನ್ನು ಕೊಡಬೇಕು ಎಂದು ಎಷ್ಟು ಕೂಗಿದರೂ, ಪಕ್ಷಿಧ್ವನಿಯಂತಿದ್ದ ಆತನ ಕಿರುದನಿಯು ನಿದ್ರೆಮಾಡುತ್ತಿದ್ದ ಆ ಋುಷಿಗಳಿಗೆ ಯಾರಿಗೂ ಕೇಳಿಸದೆ ಅವರು ನಿದ್ರೆಮಾಡುತ್ತಿರಲು ; ಯುವನಾಶ್ವನು ವೇದಿಯಲ್ಲಿಟ್ಟಿದ್ದ ಮಂತ್ರೋದಕದಿಂದ ಪೂರ್ಣವಾದ ಆ ಕಲಶವನ್ನು ಕಂಡು, ಬಾಯಾರಿಕೆಯನ್ನು ಸಹಿಸಲಾರದೆ ಆ ಶೀತೋದಕವನ್ನು ಪಾನಮಾಡಿ, ಕಲಶವನ್ನು ಅಲ್ಲೇ ಇರಿಸಿ, ಹೃದಯಾನಂದವನ್ನೂ ತಾನು ಮಾಡಿದ ತಪಸ್ಸಿಗೆ ಫಲವನ್ನೂ ಹೊಂದಿ, ಆಯಾಸವನ್ನು ಪರಿಹರಿಸಿಕೊಂಡನು. ಬಳಿಕ ಅಲ್ಲಿದ್ದ ಋುಷಿಗಳೆಲ್ಲರೂ ಎಚ್ಚತ್ತು, ಉದಕವಿಲ್ಲದೆ ಅಲ್ಲಿ ಬಿದ್ದಿದ್ದ ಕಲಶವನ್ನು ನೋಡಿ, ಅದರಲ್ಲಿದ್ದ ಉದಕವನ್ನು ಪಾನಮಾಡಿದವರು ಯಾರೆಂದು ಪರಸ್ಪರವಾಗಿ ಮಾತನಾಡಿಕೊಳ್ಳುತ್ತಿರಲು, ಯುವನಾಶ್ವನು 'ಎಲೈ ಋುಷಿಗಳಿರಾ, ನಾನು ಬಾಯಾರಿಕೆಯನ್ನು ಸಹಿಸಲಾರದೆ ಈ ಕಲಶೋದಕವನ್ನು ಪಾನಮಾಡಿದೆನು' ಎಂದು ನುಡಿದನು. ಯಥಾರ್ಥವಾಗಿ ನುಡಿದ ಆತನ ಮಾತನ್ನು ಕೇಳಿ, ಭೃಗುಮಹರ್ಷಿಯು 'ಎಲೈ ಮಹಾರಾಜನೆ, ನೀನು ಮಾಡಿದ ಕೆಲಸವು ಸರಿಯಾದದ್ದಲ್ಲ. ನಿನಗೆ ಮಹಾಪರಾಕ್ರಮಶಾಲಿಯಾಗಿಯೂ, ತಪೋಬಲಯುಕ್ತನಾಗಿಯೂ, ಇಂದ್ರನನ್ನಾದರೂ ಜಯಿಸತಕ್ಕವನಾಗಿಯೂ, ಇರತಕ್ಕ ಪುತ್ರನಾಗಬೇಕೆಂದು ವಿಶೇಷವಾಗಿ ಗಾಯತ್ರೀಜಪವನ್ನು ಮಾಡಿ, ಆ ಮಂತ್ರದಿಂದ ನನ್ನ ತಪೋಬಲದಿಂದ ಉದಕವನ್ನು ಅಭಿಮಂತ್ರಿಸಿ, ಅದನ್ನು ಕಲಶದಲ್ಲಿ ಪೂರಣಮಾಡಿದ್ದೆನು. ಆ ಉದಕವನ್ನು ನಿನ್ನ ಪತ್ನಿಯು ಪಾನಮಾಡಿದ್ದರೆ, ಅಂಥಾ ಪುತ್ರನನ್ನು ಪಡೆಯುತ್ತಿದ್ದಳು. ಆದರೂ ಚಿಂತೆಯಿಲ್ಲ. ಈಗ ನೀನು ನಡಿಸಿದ್ದನ್ನು ಅನ್ಯಥಾಮಾಡುವದಕ್ಕೆ ಆಗುವದಿಲ್ಲ. ಬಾಯಾರಿಕೆಯಿಂದ ಪೀಡಿತನಾದ ನೀನು ನನ್ನ ತಪಸ್ಸಿನಿಂದ ವೀರ್ಯವತ್ತಾದ ಆ ಮಂತ್ರೋದಕವನ್ನು ದೈವಪ್ರೇರಣೆಯಿಂದಲೇ ಪಾನಮಾಡಿರುವೆ. ಆ ಉದಕದ ಮಹಿಮೆಯಿಂದ ನಿನ್ನ ಹೊಟ್ಟೆಯಲ್ಲೇ ಅಂಥಾ ಪುತ್ರನು ಹುಟ್ಟುವನು. ಅದಕ್ಕಾಗಿಯೂ, ನೀನು ಗರ್ಭಧಾರಣೆಯಿಂದ ಉಂಟಾಗತಕ್ಕ ಖೇದವನ್ನು ಹೊಂದದೆ ಇರುವದಕ್ಕಾಗಿಯೂ, ನಿನ್ನ ನಿಮಿತ್ತವಾಗಿ ಅದ್ಭುತವಾದ ಇಷ್ಟಿಯನ್ನು ನಾವು ಮಾಡುವೆವು' ಎಂದು ಆ ಇಷ್ಟಿಯನ್ನು ಪೂರ್ಣವಾಗಿ ನೆರವೇರಿಸಿದನು. ಬಳಿಕ ನೂರು ವರುಷವಾದಮೇಲೆ ಯುವನಾಶ್ವನ ಎಡದ ಪಾರ್ಶ್ವವನ್ನು ಭೇದಿಸಿಕೊಂಡು, ಸೂರ್ಯನಂತೆ ಪ್ರಕಾಶಮಾನವಾದ ಒಂದು ಗಂಡುಮಗುವು ಜನಿಯಿಸಿತು. ಅದರಿಂದ ಯುವನಾಶ್ವನಿಗೆ ಏನೂ ಬಾಧೆಯುಂಟಾಗದೆ, ಎಲ್ಲರಿಗೂ ಆಶ್ಚರ್ಯವಾಗಿ ತೋರಿತು. ಬಳಿಕ ಮಹಾತೇಜೋವಂತನಾದ ಮಹೇಂದ್ರನು ಆ ಮಗುವನ್ನು ನೋಡುವದಕ್ಕೋಸ್ಕರ ದೇವತೆಗಳೊಡನೆ ಅಲ್ಲಿಗೆ ಬಂದನು. ಆಗ ದೇವತೆಗಳು ಇಂದ್ರನನ್ನು ಕುರಿತು 'ಎಲೈ ಮಹೇಂದ್ರನೆ, ಈ ಮಗುವಿಗೆ ಸ್ತನ್ಯವನ್ನು ಕೊಡತಕ್ಕವರು ಇಲ್ಲವಾದ್ದರಿಂದ, ಇದು ಏನನ್ನು ಆಹಾರಮಾಡಿ ಜೀವಿಸುವದು ?' ಎನಲು, ಇಂದ್ರನು ತನ್ನ ಅಮೃತಮಯವಾದ ತರ್ಜನೀ ಬೆಟ್ಟನ್ನು ಆ ಮಗುವಿನ ಬಾಯಲ್ಲಿಟ್ಟು 'ಮಾಂ ಧಾಸ್ಯತಿ' ಎಂದು ಹೇಳಿದ್ದರಿಂದ, ದೇವತೆಗಳೆಲ್ಲರೂ ಆ ಶಿಶುವಿಗೆ ಮಾಂಧಾತನೆಂದು ನಾಮಕರಣವನ್ನು ಮಾಡಿದರು. ಹೀಗೆ ಆಶಿಶುವು ಅಮೃತಮಯವಾದ ಇಂದ್ರನ ಬೆಟ್ಟನ್ನು ಚೀಪಿ, ಅದರಿಂದ ಮಹಾತೇಜಸ್ವಿಯಾಗಿ, ಹದಿಮೂರು ಮೊಳದ ಉದ್ದ ಬೆಳೆಯಿತು. ಆಗ ಇಂದ್ರನು 'ನಾಲ್ಕುವೇದಗಳಲ್ಲಿಯೂ, ಧನುರ್ವೇದದಲ್ಲಿಯೂ, ದಿವ್ಯಾಸ್ತ್ರ

ಗಳಲ್ಲಿಯೂ, ಪಾರಂಗತನಾಗಲಿ’ ಎಂದು ಧ್ಯಾನಮಾಡಿದ ಮಾತ್ರಕ್ಕೆ, ಆಜಗವವೆಂಬ ಧನುಸ್ಸೂ ಸ್ವರ್ಗಲೋಕದಲ್ಲಿದ್ದ ಬಾಣಗಳೂ ಅಭೇದ್ಯವಾದ ಕವಚವೂ ಸಕಲದಿವ್ಯಾಸ್ತ್ರಗಳೂ ಆ ಮಾಂಧಾತನಿಗೆ ಸನ್ನಿಹಿತಗಳಾದವು. ಅನಂತರದಲ್ಲಿ ಇಂದ್ರನು ಆತನಿಗೆ ರಾಜ್ಯಾಭಿಷೇಕವನ್ನು ಮಾಡಿ, ದೇವತೆಗಳೊಡನೆ ಸ್ವರ್ಗಕ್ಕೆ ತೆರಳಿದನು.

ತರುವಾಯ ಮಾಂಧಾತನು ತ್ರಿವಿಕ್ರಮಾವತಾರವನ್ನು ಮಾಡಿದ ವಿಷ್ಣುವಿನಂತೆ ತ್ರಿಲೋಕಗಳನ್ನೂ ಜಯಿಸಿ ಸ್ವಾಧೀನಪಡಿಸಿಕೊಂಡು, ತನ್ನ ಆಜ್ಞೆಗೆ ಎಲ್ಲಿಯೂ ತಡೆಯಿಲ್ಲದಂತೆ ರಾಜ್ಯಭಾರವನ್ನು ಮಾಡುತ್ತಿರಲು, ಲೋಕದಲ್ಲಿರತಕ್ಕ ಉತ್ತಮವಾದ ವಸ್ತುಗಳೆಲ್ಲಾ ತಮಗೆ ತಾವೇ ಆತನ ಸನ್ನಿಧಿಗೆ ಬಂದು ಸೇರುತ್ತಿದ್ದವು. ಆ ಮಹಾರಾಜನು ಬಹು ದಕ್ಷಿಣೆಗಳನ್ನು ಕೊಟ್ಟು ಅನೇಕ ಯಜ್ಞಗಳನ್ನು ಮಾಡಿ, ವಿಶೇಷವಾಗಿ ಧರ್ಮವನ್ನು ಸಂಪಾದಿಸಿ, ಒಂದೇ ದಿವಸದಲ್ಲಿ ಸಕಲವಾದ ಭೂಮಂಡಲವನ್ನೂ ಜಯಿಸಿ, ಇಂದ್ರನ ಅರ್ಧಾಸನವನ್ನು ಪಡೆದನು. ಆತನು ಮಾಡಿದ ಯಜ್ಞವೇದಿಗಳಿಂದ ಈ ಭೂಮಂಡಲವೆಲ್ಲಾ ತುಂಬಿಹೋಯಿತು. ಆ ಮಹಾರಾಜನು ಬ್ರಾಹ್ಮಣರಿಗೆ ದಶಪದ್ಮಸಹಸ್ರ ಗೋವುಗಳನ್ನು ದಾನಮಾಡಿರುವನು. ಆತನು ರಾಜ್ಯಭಾರಮಾಡುತ್ತಿರುವಾಗ ಹನ್ನೆರಡು ವರುಷ ಅನಾವೃಷ್ಟಿಯು ಪ್ರಾಪ್ತವಾಗಲು, ಇಂದ್ರನೆದುರಿಗೇ ತನ್ನ ಸಾಮರ್ಥ್ಯದಿಂದ ಮಳೆಯನ್ನು ಕರೆಯಿಸಿ, ಭೂಮಿಯಲ್ಲಿ ಪೈರುಗಳಾಗುವ ಹಾಗೆ ಮಾಡಿದನು. ಆ ಮಾಂಧಾತನು, ಚಂದ್ರಕುಲದಲ್ಲಿ ಹುಟ್ಟಿದ ಗಾಂಧಾರದೇಶಾಧಿಪತಿಯು ಘೋರವಾಗಿ ಮೇಘದಂತೆ ಗರ್ಜಿಸುತ್ತ ತನ್ನಮೇಲೆ ಯುದ್ಧಕ್ಕೆ ಬರಲು, ತೀಕ್ಷ್ಣವಾದ ಬಾಣಗಳಿಂದ ಅವನನ್ನು ಸಂಹರಿಸಿದನು. ಆತನು ದೇವತೆಗಳನ್ನೂ ಮನುಷ್ಯರನ್ನೂ ತಿರ್ಯಗ್ಜಂತುಗಳನ್ನೂ ಸ್ಥಾವರಪ್ರಾಣಿಗಳನ್ನೂ ಸಂರಕ್ಷಿಸುತ್ತ, ತನ್ನ ತಪೋಜ್ವಾಲೆಗಳಿಂದ ಸಕಲಲೋಕಗಳನ್ನೂ ಸಂತಾಪಪಡಿಸಿದನು. ಸೂರ್ಯನಂತೆ ತೇಜೋವಂತನಾದ ಆ ಮಹಾತ್ಮನಾದ ಮಾಂಧಾತರಾಯನಿಗೆ ಪುಣ್ಯತಮವಾದ ಕುರುಕ್ಷೇತ್ರದ ಮಧ್ಯಭಾಗವು ಯಾಗಭೂಮಿಯಾಗಿತ್ತು. ಎಲೈ ಧರ್ಮರಾಯನೆ, ಈ ಪ್ರಕಾರ ಮಾಂಧಾತಮಹಾರಾಜನ ಉತ್ಪತ್ತಿಯನ್ನೂ, ಆತನಿಗೆ ಮಾಂಧಾತನೆಂದು ಹೆಸರು ಬರುವದಕ್ಕೆ ಕಾರಣವನ್ನೂ, ತಿಳುಹಿಸಿದೆನು” ಎಂದು ಲೋಮಶನು ಹೇಳಿದನು.

ಬಳಿಕ ಧರ್ಮರಾಯನು “ಎಲೈ ಮಹರ್ಷಿಯೆ, ಸೋಮಕನೆಂಬ ಮಹಾರಾಜನು ಯಾರು? ಆತನ ಪರಾಕ್ರಮವು ಎಂಥಾದ್ದು? ಆತನ ಮಹಿಮೆ ಎಂಥಾದ್ದು? ಆತನು ಯಾವ ಮಹತ್ತಾದ ಕಾರ್ಯವನ್ನು ಮಾಡಿರುವನು? ಅದನ್ನು ವಿವರಿಸು” ಎಂದು ಪ್ರಶ್ನೆಮಾಡಿದನು.

---

## ೧೦೪ನೇ ಅಧ್ಯಾಯ.—ತೀರ್ಥಯಾತ್ರಾಪ್ರಶಂಸೆ—(ಜಂತೂಪಾಖ್ಯಾನ.)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಬಳಿಕ ಲೋಮಶನು ಧರ್ಮರಾಯನನ್ನು ಕುರಿತು “ಎಲೈ ಧರ್ಮರಾಯನೆ, ಸೋಮಕನೆಂಬ ಒಬ್ಬ ಧರ್ಮಾತ್ಮನಾದ ಮಹಾರಾಜನು ಇದ್ದನು. ಆತನಿಗೆ ಸಮಾನವಯೋರೂಪಸಂಪನ್ನರಾದ ನೂರುಮಂದಿ ಪತ್ನಿಯರಿದ್ದರು. ಅವರಲ್ಲಿ ಬಹುಕಾಲವಾದರೂ ಒಬ್ಬಮಗನೂ ಆಗದಿರಲು, ವೃದ್ಧನಾದ ಸೋಮಕರಾಯನು ಸಂತಾನಾರ್ಥವಾಗಿ ಬಹುಪ್ರಯತ್ನಗಳನ್ನು ಮಾಡುತ್ತಿದ್ದನು. ಹೀಗೆ ಕೆಲವುಕಾಲ ಕಳೆಯಲು, ಆತನಿಗೆ ಜ್ಯೇಷ್ಠಪತ್ನಿಯಲ್ಲಿ ಜಂತುವೆಂಬ ಒಬ್ಬ ಮಗನು ಹುಟ್ಟಿದನು. ಆ ನೂರುಮಂದಿ ತಾಯಿಯರೂ ತಮ್ಮ ತಮ್ಮ ಸೌಖ್ಯಗಳನ್ನೂ ಅಪೇಕ್ಷಿಸದೆ, ಆ ಮಗುವನ್ನು ಪೋಷಿಸುವದರಲ್ಲೇ ಆಸಕ್ತರಾಗಿದ್ದರು. ಒಂದಾನೊಂದು ದಿವಸ ಒಂದು ಕಟ್ಟಿರುವು ಜಂತುಕುಮಾರನ ನಡುವಿನಮೇಲೆ ಕಡಿಯಲು, ಆ ಕುಮಾರನು ಆ ವ್ಯಥೆಯನ್ನು ಸಹಿಸಲಾರದೆ ದುಃಖಪಡುತ್ತಾ ಗಟ್ಟಿಯಾಗಿ ಅಳುತ್ತಿದ್ದನು. ಅದನ್ನು ನೋಡಿ ಸುತ್ತಲೂ ಕೂತುಕೊಂಡಿದ್ದ ಆ ರಾಜಪತ್ನಿಯರೆಲ್ಲರೂ ತಾವೂ ದುಃಖಪಡುತ್ತ ಗಟ್ಟಿಯಾಗಿ ಅತ್ತರು. ಆ ರೋದನಧ್ವನಿಯು ಗದ್ದಲವನ್ನು ಋತ್ವಿಕ್ಪುರೋಹಿತ ಮಂತ್ರಿಗಳ

ಮಧ್ಯದಲ್ಲಿ ಕುಳಿತಿದ್ದ ಸೋಮಕನು ಕೇಳಿ, 'ಇದೇನು ರಾಣಿವಾಸದಲ್ಲಿ ಗದ್ದಲವಾಗುವದು! ತಿಳಿದುಕೊಂಡು ಬಾ' ಎಂದು ಒಬ್ಬ ದ್ವಾರಪಾಲಕನನ್ನು ಕಳುಹಿಸಿಕೊಟ್ಟನು. ಆ ದ್ವಾರಪಾಲಕನು ರಾಣಿವಾಸಕ್ಕೆ ಹೋಗಿ, ಅಲ್ಲಿ ನಡೆದ ವೃತ್ತಾಂತವನ್ನು ತಿಳಿದುಕೊಂಡು ಬಂದು ಅರಿಕೆಮಾಡಲು, ಸೋಮಕನು ಮಂತ್ರಿಯೊಡನೆ ಜಾಗ್ರತೆಯಾಗಿ ಆಸ್ಥಾನದಿಂದೆದ್ದು ರಾಣಿವಾಸಕ್ಕೆ ಹೋಗಿ, ಆ ಕುಮಾರನನ್ನು ಸಂತೈಸಿ, ಅಲ್ಲಿಂದ ಪುನಃ ಆಸ್ಥಾನಕ್ಕೆ ಬಂದು ಕುಳಿತುಕೊಂಡು, ಮಂತ್ರಿಗಳನ್ನೂ ಸಭಿಕರನ್ನೂ ನೋಡಿ, 'ಪ್ರಾಣಿಗಳಿಗೆ ಯಾವಾಗಲೂ ಏನಾದರೂ ಒಂದು ಬಾಧೆ ಇದ್ದೇ ಇರುವದರಿಂದ, ಏಕಪುತ್ರತ್ವವು ದುಃಖಕ್ಕೆ ಕಾರಣವಾದದ್ದು. ಇದಕ್ಕಿಂತಲೂ ಅಂಥಾ ಏಕಪುತ್ರನಾಗದೆ ಇರುವದೇ ಉತ್ತಮವಾದದ್ದು. ಸಂತಾನಾಪೇಕ್ಷಿಯಾದ ನಾನು ಪರೀಕ್ಷಿಸಿ ಅನುರೂಪರಾದ ನೂರುಮಂದಿ ಸ್ತ್ರೀಯರನ್ನು ವಿವಾಹಮಾಡಿಕೊಂಡೆನು. ಎಷ್ಟು ಯತ್ನಮಾಡಿದಾಗ್ಯೂ ಅವರಲ್ಲಿ ಸಂತಾನವಾಗದೆ, ಬಹು ಕಾಲಕ್ಕೆ ದೈವಯೋಗದಿಂದ ಒಬ್ಬ ಮಗನು ಹುಟ್ಟಿದನು. ಇದಕ್ಕಿಂತಲೂ ಮತ್ತೊಂದು ದುಃಖವು ಯಾವದು? ಇನ್ನುಮೇಲೆ ಸಂತಾನವಾಗುವದಕ್ಕೆ ನನಗೂ ನನ್ನ ಪತ್ನಿಯರಿಗೂ ವಯಸ್ಸು ಅತಿಕ್ರಮಿಸಿತು. ಈ ನೂರುಮಂದಿ ರಾಣಿಯರ ಪ್ರಾಣಗಳೂ ನನ್ನಪ್ರಾಣವೂ ಸಹ ಆ ಒಬ್ಬ ಕುಮಾರನಲ್ಲೇ ಇರುವವು. ಎಲೈ ಋತ್ವಿಕ್ಕುಗಳಿರಾ, ಈ ನೂರುಮಂದಿ ಪತ್ನಿಯರಲ್ಲಿಯೂ ನೂರುಮಂದಿ ಪುತ್ರರು ಹುಟ್ಟುವದಕ್ಕೆ ಮಹತ್ತಾಗಿಯೇ ಆಗಲಿ, ಲಘುವಾಗಿಯೇ ಆಗಲಿ, ಸುಕರವೇ ಆಗಲಿ, ದುಷ್ಕರವೇ ಆಗಲಿ, ಅಂಥಾ ಕ್ರಿಯೆಯೇನಾದರೂ ಉಂಟೆ?' ಎಂದು ಪ್ರಶ್ನೆಮಾಡಿದನು. ಆ ಕಾಲದಲ್ಲಿ ಒಬ್ಬ ಋತ್ವಿಜನು 'ಎಲೈ ರಾಯನೆ, ಅಂಥಾ ಕ್ರಿಯೆಯೊಂದುಂಟು. ಅದನ್ನು ಮಾಡುವದಕ್ಕೆ ನಿನಗೆ ಶಕ್ತಿಯಿದ್ದಪಕ್ಷದಲ್ಲಿ, ಅದನ್ನು ನಾನು ಹೇಳುವೆನು' ಎಂದನು. ಆ ಮಾತನ್ನು ಕೇಳಿ ಸೋಮಕಮಹಾರಾಜನು 'ಎಲೈ ಪೂಜ್ಯನೆ, ನನಗೆ ನೂರುಮಂದಿ ಪುತ್ರರಾಗತಕ್ಕ ಕ್ರಿಯೆಯು ಎಷ್ಟು ಕಷ್ಟವಾಗಿದ್ದರೂ, ಅದನ್ನು ನಾನು ಮಾಡಿದೆನೆಂದು ತಿಳಿ. ಅದು ಯಾವದು ತಿಳುಹಿಸು' ಎನಲು, ಋತ್ವಿಜನು 'ಎಲೈ ಮಹಾರಾಜನೆ, ನಾನು ಮಾಡಿಸತಕ್ಕ ಯಜ್ಞಕ್ರಿಯೆಯಲ್ಲಿ ನೀನು ನಿನ್ನ ಕುಮಾರನನ್ನು ಪಶುವನ್ನಾಗಿ ಮಾಡಿದರೆ, ಆತನ ವಪಾಹೋಮವನ್ನು ಮಾಡತಕ್ಕ ಕಾಲದಲ್ಲಿ ನಿನ್ನ ನೂರುಮಂದಿ ಪತ್ನಿಯರೂ ಆ ವಪಾಹೋಮಧೂಮವನ್ನು ಆಘ್ರಾಣ ಮಾಡಿದರೆ, ಅವರೆಲ್ಲರೂ ಸಂತಾನವನ್ನು ಪಡೆಯುವರು. ಈ ಜಂತುಕುಮಾರನೂ ಪುನಃ ಆ ನೂರುಮಂದಿ ದೇವಿಯರಲ್ಲಿ ಒಬ್ಬಳ ಗರ್ಭದಲ್ಲಿ ಜನಿಸುವನು. ಆ ಕುಮಾರನ ಎಡಪಾರ್ಶ್ವದಲ್ಲಿ ಸುವರ್ಣರೂಪವಾದ ಒಂದು ಮಚ್ಚೆಯು ಇರುವದು' ಎಂದು ನುಡಿದನು." ಎಂಬದಾಗಿ ಲೋಮಶನು ಧರ್ಮರಾಯನಿಗೆ ಹೇಳಿದನು.

## ೧೨೮ನೇ ಅಧ್ಯಾಯ.—ತೀರ್ಥಯಾತ್ರಾಪ್ರಶಂಸೆ.—(ಜಂತೂಪಾಖ್ಯಾನ.)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಲೋಮಶನು ಧರ್ಮರಾಯನನ್ನು ಕುರಿತು "ಎಲೈ ಧರ್ಮರಾಯನೆ, ಬಳಿಕ ಸೋಮಕನು ಆ ಋತ್ವಿಜನೊಡನೆ 'ಎಲೈ ಪೂಜ್ಯನೆ, ಯಾವಯಾವ ಕರ್ಮಗಳನ್ನು ಹ್ಯಾಗೆಹ್ಯಾಗೆ ನಡಿಸಬೇಕೋ, ಆಯಾ ಕರ್ಮಗಳನ್ನು ಹಾಗೆಹಾಗೆ ನಡೆಯಿಸು. ಪುತ್ರಾಪೇಕ್ಷೆಯುಳ್ಳ ನಾನು ನಿನ್ನ ಮಾತಿನಂತೆ ನಡೆದುಕೊಳ್ಳುತ್ತೇನೆ' ಎನಲು, ಆ ಋತ್ವಿಜನು ಆಭಿಚಾರಿಕಪ್ರಯೋಗದಿಂದ ಇಷ್ಟಿಯನ್ನು ಉಪಕ್ರಮಮಾಡಿ, ಆ ಜಂತುಕುಮಾರನನ್ನೇ ಪಶುವನ್ನಾಗಿ ಮಾಡಿ, ಪಶುವಿಶಸನಾರ್ಥವಾಗಿ ಆತನನ್ನು ಎಡದ ಕೈಹಿಡಿದು ಎಳೆಯಲು, ಅದನ್ನು ನೋಡಿ ಆತನ ತಾಯಿಯರು ಪುತ್ರವಾತ್ಸಲ್ಯದಿಂದ ಆತನನ್ನು ಹಿಂದಕ್ಕೆ ಬಲದ ಕೈಹಿಡಿದು ಸೆಳೆಯುತ್ತ, 'ಹಾಹಾ! ನಾವು ಕೆಟ್ಟುಹೋದೆವು' ಎಂದು ಗಟ್ಟಿಯಾಗಿ ಕೂಗಿಕೊಳ್ಳುತ್ತ, ಕುರವಪಕ್ಷಿಗಳಂತೆ ದೀನವಾಗಿ ಪ್ರಲಾಪಿಸಿದರು. ಆದರೂ ಅದನ್ನು ಲಕ್ಷ್ಯಮಾಡದೆ, ನಿಷ್ಕರುಣನಾದ ಆ ಋತ್ವಿಜನು ಆ ಜಂತುಕುಮಾರನನ್ನು ಹಿಂಸಿಸಿ, ವಪವನ್ನು ತೆಗೆದು ಅಗ್ನಿಯಲ್ಲಿ ಹೋಮಮಾಡಿದನು. ಆಗ ಆ ವಪಾಗಂಧವನ್ನು ಆಘ್ರಾಣಮಾಡಿ, ಆ ನೂರುಮಂದಿ ರಾಣಿಯರೂ ಬಹು ಸಂಕ

ದಿಂದ ಭೂಮಿಯಮೇಲೆ ಬಿದ್ದು, ಹಾಗೇ ಎಲ್ಲರೂ ಗರ್ಭಧಾರಣೆಯನ್ನು ಮಾಡಿದರು. ಬಳಿಕ ಹತ್ತುತಿಂಗ ಳಗಲು, ಆ ನೂರುಮಂದಿಯಲ್ಲೂ ನೂರುಮಂದಿ ಕುಮಾರರು ಹುಟ್ಟಿದರು. ಅವರಲ್ಲಿ ಜ್ಯೇಷ್ಠನಾದವನೇ ಜಂತುಕುಮಾರನಾಗಿದ್ದನು. ಆ ರಾಣಿಯರೆಲ್ಲರೂ ತನ್ಮ ಎಲ್ಲಾ ಮಕ್ಕಳಿಗಿಂತಲೂ ಆ ಜಂತುಕುಮಾರನಲ್ಲೇ ಅಧಿ ಕವಾದ ಪ್ರೀತಿಯನ್ನು ಮಾಡುತ್ತಿದ್ದರು. ಆ ಜ್ಯೇಷ್ಠನಾದ ಜಂತುಕುಮಾರನ ಎಡದ ಪಾರ್ಶ್ವದಲ್ಲಿ ಸುವರ್ಣ ರೇಖೆಯು ಪ್ರಕಾಶಿಸುತ್ತಿತ್ತು. ಈ ಪ್ರಕಾರ ನೂರುಮಂದಿ ಮಕ್ಕಳನ್ನು ಪಡೆದು ಸೋಮಕನು ಸುಖವಾಗಿ ರಾಜ್ಯಭಾರಮಾಡುತ್ತಿದ್ದನು. ಆಗ ಆತನಿಗೆ ಆಭಿಚಾರಕಪ್ರಯೋಗದಿಂದ ಇಷ್ಟಿಮಾಡಿಸಿದ ಋತ್ವಿಜನು ಮೃತ ನಾಗಿ ಲೋಕಾಂತರವನ್ನು ಹೊಂದಿ, ಘೋರವಾದ ನರಕದಲ್ಲಿ ಯಾತನೆಪಡುತ್ತಿದ್ದನು. ಹೀಗೆ ಸ್ವಲ್ಪಕಾಲ ಕಳೆ ಯಲು, ಸೋಮಕನೂ ಮೃತನಾಗಿ ಲೋಕಾಂತರಕ್ಕೆ ಹೋಗಿ, ಘೋರವಾದ ನರಕದಲ್ಲಿ ಯಾತನೆಪಡುತ್ತಿದ್ದ ಆ ಋತ್ವಿಜನನ್ನು ನೋಡಿ 'ಎಲೈ ಬ್ರಾಹ್ಮಣನೆ, ನಿನಗೆ ಯಾತಕ್ಕೋಸ್ಕರ ಇಂಥಾ ದುರ್ಗತಿ ಪ್ರಾಪ್ತವಾಯಿತು?' ಎಂದು ಕೇಳಲು, ಆ ಬ್ರಾಹ್ಮಣನು 'ಎಲೈ ರಾಯನೆ, ನಿನಗೆ ನಾನು ಆಭಿಚಾರಕಪ್ರಯೋಗದಿಂದ ಇಷ್ಟಿಮಾ ಡಿಸಿದ್ದಕ್ಕೋಸ್ಕರ, ಆ ಕರ್ಮಕ್ಕೆ ಫಲರೂಪವಾಗಿ ಇಂಥಾ ಘೋರವಾದ ದುರ್ಗತಿಯನ್ನು ಅನುಭವಿಸುತ್ತಿರುವೆನು' ಎಂದು ನುಡಿದನು. ಆಮಾತನ್ನು ಕೇಳಿ ರಾಜರ್ಷಿಯಾದ ಸೋಮಕನು ಯಮಧರ್ಮರಾಯನನ್ನು ಕುರಿತು, 'ಎಲೈ ಯಮಧರ್ಮರಾಯನೆ, ನನಗೆ ಯಾಜಕನಾದ ಈ ಬ್ರಾಹ್ಮಣನು ನನ್ನನಿಮಿತ್ತವಾಗಿ ಈ ನರಕದಲ್ಲಿ ದುಃಖ ವನ್ನು ಅನುಭವಿಸುತ್ತಿರುವನು. ಈತನಿಗೆ ಈ ದುಃಖವನ್ನು ತಪ್ಪಿಸು. ಇದನ್ನು ನಾನು ಅನುಭವಿಸುತ್ತೇನೆ' ಎನಲು, ಅದನ್ನುಕೇಳಿ ಯಮನು 'ಎಲೈ ರಾಯನೆ, ಪಾಪಕೃತ್ಯವನ್ನು ಮಾಡಿದವನು ಅನುಭವಿಸತಕ್ಕ ದುಃಖ ವನ್ನು ಮತ್ತೊಬ್ಬನು ಅನುಭವಿಸುವದಕ್ಕಾದೀತೆ? ಇದೊ ಪುಣ್ಯಶಾಲಿಯಾದ ನೀನು ಸುಖವನ್ನು ಅನುಭವಿಸು ವದಕ್ಕೋಸ್ಕರ ಪುಣ್ಯಲೋಕಗಳು ಕಾಣಿಸುತ್ತಿರುವವು ನೋಡು' ಎಂದು ನುಡಿದನು. ಆ ಮಾತನ್ನು ಕೇಳಿ ಸೋಮ ಕನು 'ಎಲೈ ಯಮಧರ್ಮರಾಯನೆ, ನಾನು ಈ ಬ್ರಾಹ್ಮಣನನ್ನು ಬಿಟ್ಟು ಪುಣ್ಯಲೋಕವನ್ನು ಅಪೇಕ್ಷಿಸತಕ್ಕವ ನಲ್ಲ. ಈತನ ಕರ್ಮಕ್ಕೆ ನಾನೂ ಸಮಭಾಗಿಯಾದ್ದರಿಂದ, ಈತನು ನರಕದಲ್ಲೇ ಆಗಲಿ ಸ್ವರ್ಗದಲ್ಲೇ ಆಗಲಿ ಎಲ್ಲಿ ವಾಸಮಾಡುವನೋ ಅಲ್ಲೇ ನಾನೂ ವಾಸಮಾಡತಕ್ಕವನು. ನಮ್ಮ ನಮ್ಮ ಪುಣ್ಯಪಾಪಕರ್ಮಗಳೆರಡೂ ನಮ್ಮಿಬ್ಬರಿಗೂ ಸಮವಾಗಿರಬೇಕು' ಎನಲು, ಯಮನು 'ಎಲೈ ರಾಯನೆ, ನೀನು ಹಾಗೆ ಅಪೇಕ್ಷಿಸಿದ ಪಕ್ಷ ದಲ್ಲಿ ನಿನ್ನ ಗುರುವಾದ ಈತನೊಡನೆ ಸಮವಾಗಿ ಈ ದುರ್ಗತಿಯನ್ನು ಅನುಭವಿಸಿ, ಬಳಿಕ, ನೀವಿಬ್ಬರೂ ಸಮವಾಗಿ ಪುಣ್ಯಫಲವನ್ನು ಪಡೆಯಿರಿ' ಎಂದು ನುಡಿದನು. ಆಗ ಸೋಮಕನು ಆ ಋತ್ವಿಜನೊಡನೆ ಕೆಲವುಕಾಲ ದುರ್ಗತಿಯನ್ನು ಅನುಭವಿಸಿ, ಬಳಿಕ ಪಾಪರಹಿತನಾಗಿ, ತನ್ನ ಪುಣ್ಯದಿಂದ ಉತ್ತಮಲೋಕದ ಸುಖವನ್ನು ಆ ಋತ್ವಿಜನೊಡನೆ ಅನುಭವಿಸಿದನು. 'ಎಲೈ ಧರ್ಮರಾಯನೆ, ಅಂಥಾ ಪುಣ್ಯಶಾಲಿಯಾದ ಸೋ ಮಕರಾಯನ ಆಶ್ರಮವು ಇದೋ ಎದುರಿಗೇ ಕಾಣಿಸುತ್ತಿರುವದು. ಯಾವ ಪುರುಷನು ಕ್ಷಮಾಗುಣವನ್ನು ತಾಳಿ ಆರು ರಾತ್ರಿ ಈ ಆಶ್ರಮದಲ್ಲಿ ವಾಸಮಾಡುವನೋ, ಆತನು ಉತ್ತಮವಾದ ಗತಿಯನ್ನು ಪಡೆಯುವನು. ಆದ್ದರಿಂದ ನಾವೆಲ್ಲರೂ ನೇಮದಿಂದ ಆರು ರಾತ್ರಿ ಈ ಆಶ್ರಮದಲ್ಲಿ ವಾಸಮಾಡೋಣ, ನಡೆ" ಎಂದು ಲೋಮ ಶನು ಧರ್ಮರಾಯನಿಗೆ ಹೇಳಿದನು.

---

೧೩೦ನೇ ಅಧ್ಯಾಯ.—ತೀರ್ಥಯಾತ್ರಾಪ್ರಶಂಸೆ.—(ಯುಧಿಷ್ಠಿರಾದಿಗಳಿಗೆ ಸರಸ್ವತೀ ತೀರ್ಥದರ್ಶನ).

ವೈಶಂಪಾಯನಮುನೀಂದ್ರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಬಳಿಕ ಲೋಮಶನು ಧರ್ಮರಾಯನನ್ನು ಕುರಿತು "ಎಲೈ ಧರ್ಮರಾಯನೆ, ಪೂರ್ವದಲ್ಲಿ ಚತುರ್ಮುಖಬ್ರಹ್ಮನು ಈ ಆಶ್ರಮದಲ್ಲಿ ಸಹಸ್ರವರ್ಷ ಮಾಡತಕ್ಕ ಇಷ್ಟೀಕೃತವೆಂಬ ಸತ್ರಯಾಗವನ್ನು ಮಾಡಿರುವನು. ನಾಭಾಗನ

ಮಗನಾದ ಅಂಬರೀಷರಾಯನು ಇಲ್ಲಿ ಯಜ್ಞವನ್ನು ಮಾಡಿ, ಬ್ರಾಹ್ಮಣರಿಗೆ ಹತ್ತು ಸಾವಿರ ಪದ್ಮಸಂಖ್ಯೆಯುಳ್ಳ ಗೋದಾನವನ್ನು ಮಾಡಿ ತಪಸ್ಸಿದ್ಧಿಯನ್ನು ಪಡೆದಿರುವನು. ಪುಣ್ಯಶಾಲಿಯಾದ ನಹುಷಪುತ್ರನಾದ ಯಯಾತಿಮಹಾರಾಜನು ಇಂದ್ರನೊಡನೆ ಸ್ಪರ್ಧೆಯಿಂದ ಇದೇ ಸ್ಥಳದಲ್ಲಿ ಯಜ್ಞವನ್ನು ಮಾಡಿರುವನು. ಈ ಪ್ರದೇಶದಲ್ಲಿ ಯಯಾತಿಮಹಾರಾಜನು ಮಾಡಿದ ಯಜ್ಞದಲ್ಲಿ ಋತ್ವಿಜರಿಂದ ನಿರ್ಮಿತವಾದ ಯಜ್ಞವೇದಿಗಳು ಅಲ್ಲಲ್ಲಿ ಭೂಮಿಯನ್ನೆಲ್ಲಾ ಆಕ್ರಮಿಸಿಕೊಂಡು, ಭೂಮಿಯು ಮುಳುಗಿರುವಂತೆ ಕಾಣಿಸುತ್ತಿರುವದು ನೋಡು. ಇದೋ ಈ ಪ್ರದೇಶದಲ್ಲಿ ಆ ಯಜ್ಞವು ನಡೆದಾಗ ಅವಿಕ್ಷಾನಾಮಕವಾದ ದಧಿಯನ್ನು ಮಾಡುವದಕ್ಕೋಸ್ಕರ ತಂದಿದ್ದ ಶಮೀಶಾಖೆಯು ಇನ್ನೂ ಕಾಣಿಸುತ್ತಿರುವದು. ಇದೋ, ಇಲ್ಲೇ ಸೋಮಪಾತ್ರೆಯೂ ಬಿದ್ದಿರುವದು, ನೋಡು. ಎಲೈ ಧರ್ಮರಾಯನೆ, ಇದೋ ಇತ್ತಲಾಗಿಯೇ ಪರಶುರಾಮನಿಂದ ನಿರ್ಮಿತವಾದ ಶಮಂತಪಂಚಕವೆಂಬ ಐದು ಮಡುಗಳಿರುವವು, ನೋಡು. ಇಲ್ಲೇ ನಾರಾಯಣಾಶ್ರಮನ್ನೂ ಇರುವದು. ಈ ಶುಭ್ರವಾದ ಪ್ರದೇಶದಲ್ಲಿ ಯೋಗಶಕ್ತಿಯಿಂದ ಭೂಮಂಡಲವನ್ನೆಲ್ಲಾ ಸುತ್ತುತ್ತಿರುವ ಋಚೀಕಪುತ್ರನ ಪ್ರಸರ್ಪಣವೆಂಬ ತೀರ್ಥವು ಇರುವದು. ಎಲೈ ಧರ್ಮರಾಯನೆ, ಇಲ್ಲಿ ಒಂದು ಇತಿಹಾಸವುಂಟು. ಅದನ್ನು ಹೇಳುವೆನು, ಕೇಳು : ಒರಳುಗಳಂತಿರುವ ಕರ್ಣಾಭರಣಗಳುಳ್ಳ ಒಂದು ಪಿಶಾಚವು ಇಲ್ಲಿ ಪುತ್ರನೊಡನೆ ಸ್ನಾನಾರ್ಥವಾಗಿ ಬಂದ ಒಬ್ಬ ಬ್ರಾಹ್ಮಣಸ್ತ್ರೀಯನ್ನು ನೋಡಿ 'ಎಲೆ ಬ್ರಾಹ್ಮಣಸ್ತ್ರೀಯೆ, ನೀನು ಯುಗಂಧರದೇಶದಲ್ಲಿ ಒಂಟೇಮೊಸರನ್ನೂ ಕತ್ತೇಮೊಸರನ್ನೂ ಪಾನಮಾಡಿರುವೆ. ಮತ್ತು ಸಂಕರಜಾತಿಯವರಿಗೆ ವಾಸಸ್ಥಾನವಾದ ಅಚ್ಯುತಸ್ಥಳವೆಂಬ ಗ್ರಾಮದಲ್ಲಿ ನೀನು ವಾಸಮಾಡಿರುವೆ. ಕಳ್ಳರು ವಾಸಮಾಡತಕ್ಕ ಭೂತಿಲಯಗ್ರಾಮದ ಸಮೀಪದಲ್ಲಿ ಒಂದು ನದಿ ಇರುವದು. ಅಲ್ಲಿನ ಜನಗಳು ಮೃತರಾದರೆ, ಅವರನ್ನು ದಹನಮಾಡದೆ ಆ ನದಿಯಲ್ಲಿ ಎಳೆದುಹಾಕಿ ಬಿಡುವರು. ಅಂಥ ನದೀಯಲ್ಲಿ ನೀನು ಸ್ನಾನಮಾಡಿರುವೆ. ಇಂಥ ನೀನು ಆ ಪಾಪಗಳಿಗೆಲ್ಲಾ ಧರ್ಮಶಾಸ್ತ್ರೋಕ್ತವಾದ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳದಿರುವೆಯಾದ್ದರಿಂದ, ಈ ಪುಣ್ಯಸ್ಥಳದಲ್ಲಿ ವಾಸಮಾಡುವದಕ್ಕೆ ನೀನು ಯೋಗ್ಯಳಲ್ಲ' ಎನಲು, ಆ ಮಾತನ್ನು ಕೇಳಿಯೂ, ಆ ಬ್ರಾಹ್ಮಣಸ್ತ್ರೀಯು ಆ ಪ್ರಸರ್ಪಣತೀರ್ಥದಲ್ಲಿ ಸ್ನಾನಮಾಡಿದಳು. ಆಗ ಆ ಪಿಶಾಚವು ಆ ಬ್ರಾಹ್ಮಣಸ್ತ್ರೀಯ ತಂಬಿಗೆ, ಥಾಲಿ, ಸೀರೆ, ಮುಂತಾದ ಪದಾರ್ಥಗಳನ್ನು ನಾಶಮಾಡಿ, ಆಕೆಯನ್ನು ಕುರಿತು 'ಎಲೆ ಬ್ರಾಹ್ಮಣಸ್ತ್ರೀಯೆ, ಒಂದು ರಾತ್ರಿ ನೀನು ಇಲ್ಲಿ ವಾಸಮಾಡಿದ್ದಕ್ಕೆ ಅದರಿಂದ ನಿನಗೆ ಆದ ಹಾನಿ ಗೊತ್ತಿರುವದಷ್ಟೆ. ಇನ್ನೊಂದು ರಾತ್ರಿ ಇಲ್ಲಿ ವಾಸಮಾಡಿದ್ದೇ ಆದರೆ, ಇನ್ನೂ ನಿನಗೆ ತುಂಬಾ ಹಾನಿಯಾಗುವದು' ಎಂದು ಹೇಳಿತು. ಆದ್ದರಿಂದ, ಎಲೈ ಧರ್ಮರಾಯನೆ, ಈ ಪ್ರದೇಶದಲ್ಲಿ ನಾವು ಒಂದು ರಾತ್ರಿ ವಾಸಮಾಡೋಣ. ಇದೇ ಕುರುಕ್ಷೇತ್ರಕ್ಕೆ ಬಾಗಿಲಾಗಿರುವದು. ಇದೋ ಇಲ್ಲಿ ಪ್ಲಕ್ಷಾವತರಣವೆಂಬ ಪಾವನವಾದ ಯಮುನಾತೀರ್ಥವಿರುವದು. ಇದೇ ಸ್ವರ್ಗಲೋಕಕ್ಕೆ ದಾರಿಯಾಗಿರುವದೆಂದು ದೊಡ್ಡವರು ಹೇಳುವರು. ಇಲ್ಲಿ ಅನೇಕಮಂದಿ ಋಷಿಗಳು ಸಾರಸ್ವತಬ್ರಾಹ್ಮಣರನ್ನು ಋತ್ವಿಜರನ್ನಾಗಿ ಮಾಡಿಕೊಂಡು, ಅನೇಕ ಯಜ್ಞಗಳನ್ನು ಮಾಡಿ, ಯಜ್ಞಸಾಧನಗಳಾದ ಯೂಪ, ಉಲೂಖಲ, ಮೊದಲಾದವುಗಳೊಡನೆ ಈ ತೀರ್ಥದಲ್ಲಿ ಅವಭೃಥಸ್ನಾನವನ್ನು ಮಾಡುವರು. ಇಲ್ಲಿಯೇ ಭರತಚಕ್ರವರ್ತಿಯು ಅಶ್ವಮೇಧಯಾಗವನ್ನು ಉಪಕ್ರಮಮಾಡಿ, ಕುದುರೆಯನ್ನು ಭೂಮಂಡಲದಲ್ಲಿ ಸಂಚಾರಾರ್ಥವಾಗಿ ಬಿಟ್ಟು ಯಜ್ಞವನ್ನು ಪೂರೈಸಿರುವನು. ಇಂಥಾ ಅನೇಕ ಯಾಗಗಳನ್ನು ಆತನು ಇಲ್ಲಿ ಮಾಡಿರುವನು. ಇಲ್ಲಿಯೇ ಮರುತ್ತರಾಯನು ಸಂವರ್ತಮಹರ್ಷಿಯ ಸಹಾಯದಿಂದ ಸತ್ರಯಾಗವನ್ನು ಮಾಡಿದನು. ಇಲ್ಲಿರುವ ಪುಣ್ಯತೀರ್ಥದಲ್ಲಿ ಸ್ನಾನಮಾಡಿದವನು ಉತ್ತಮಲೋಕವನ್ನು ಪಡೆಯುವನು. ಆದ್ದರಿಂದ, ಎಲೈ ಧರ್ಮರಾಯನೆ, ಈ ತೀರ್ಥಗಳಲ್ಲಿ ನೀನು ಸ್ನಾನಮಾಡಿದ್ದೇ ಆದರೆ, ಸಕಲಪಾಪವೂ ಪರಿಹಾರವಾಗುವದು" ಎಂದನು.

ಬಳಿಕ ಧರ್ಮರಾಯನು ತಮ್ಮಂದಿರೊಡನೆ ಆ ತೀರ್ಥಗಳಲ್ಲಿ ಸ್ನಾನಮಾಡಿ, ಅಲ್ಲಿದ್ದ ಋಷಿಗಳೆಲ್ಲರೂ ತನ್ನನ್ನು ಶ್ಲಾಘಿಸಲು, ಲೋಮಶನನ್ನು ಕುರಿತು "ಎಲೈ ಮಹಾತ್ಮನೆ, ನಿನ್ನನುಗ್ರಹದಿಂದ ನಾನು ಈ ಪ್ಲಕ್ಷಾವತರಣತೀರ್ಥದ ಸಮೀಪದಲ್ಲಿದ್ದುಕೊಂಡು, ಆ ತೀರ್ಥಸ್ನಾನದ ಮಹಿಮೆಯಿಂದ ಸಕಲ ಲೋಕಗಳನ್ನೂ ನೋಡುತ್ತ, ಇಂದ್ರ

ಲೋಕದಲ್ಲಿರುವ ಅರ್ಜುನನನ್ನು ಸಹನೋಡಿದೆನು" ಎಂದು ನುಡಿದನು. ಅದನ್ನು ಕೇಳಿ ಲೋಮಶನು "ಎಲೈ ಮಹಾರಾಜನೆ, ಇದೇರೀತಿಯಾಗಿ ಸಕಲರಾದ ಋಷಿಗಳೂ ಈ ತೀರ್ಥದ ಮಹಿಮೆಯಿಂದ ಸಕಲ ಲೋಕಗಳನ್ನೂ ನೋಡುವರು. ಇದೋ ಇತ್ತಲಾಗಿರುವ ಪುಣ್ಯತಮವಾದ ಸರಸ್ವತೀನದಿಯನ್ನು ನೋಡು. ಇಲ್ಲಿ ಅನೇಕಮಂದಿ ಪುಣ್ಯಶಾಲಿಗಳು ವಾಸಮಾಡುತ್ತಿರುವರು. ದೇವರ್ಷಿಗಳೂ ಬ್ರಹ್ಮರ್ಷಿಗಳೂ ರಾಜರ್ಷಿಗಳೂ ಸಹ ಇಲ್ಲಿ ಅನೇಕ ಯಜ್ಞಗಳನ್ನು ಮಾಡಿರುವರು. ಇದೋ ಇಲ್ಲಿ ಬ್ರಹ್ಮದೇವನು ಮಾಡಿದ ಯಾಗದಲ್ಲಿ ಹಾಕಿದ ವೇದಿಯು ಸುತ್ತಲೂ ಐದು ಗಾವುದ ವಿಸ್ತಾರವುಳ್ಳದ್ದಾಗಿರುವದು. ಇದು ಮಹಾತ್ಮನಾದ ಕುರುರಾಯನ ಕ್ಷೇತ್ರವಾಗಿರುವದು. ಈಸರಸ್ವತೀ ನದಿಯಲ್ಲಿ ನೀನು ಸ್ನಾನಮಾಡಿದರೆ, ಸಕಲಪಾಪವೂ ಪರಿಹಾರವಾಗುವದು" ಎಂದು ನುಡಿದನು.

---

## ೧೩೦ನೇ ಅಧ್ಯಾಯ.—ತೀರ್ಥಯಾತ್ರಾಪ್ರಶಂಸೆ.—(ಶ್ಯೇನ ಕಪೋತೀಯಾಖ್ಯಾನ).

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಲೋಮಶನು ಧರ್ಮರಾಯನನ್ನು ಕುರಿತು "ಎಲೈ ಧರ್ಮರಾಯನೆ, ಇದು ಪುಣ್ಯತಮವಾಗಿಯೂ ವೇಗವುಳ್ಳದ್ದಾಗಿಯೂ ಇರುವ ಸರಸ್ವತೀನದಿಗೆ ಸೇರಿದ ವಿಶಸನವೆಂಬ ಕ್ಷೇತ್ರವು. ಇಲ್ಲಿ ಶರೀರತ್ಯಾಗಮಾಡಿದವರು ಸ್ವರ್ಗಲೋಕವನ್ನು ಹೊಂದುವರು. ಇದಕ್ಕಾಗಿ ಇಲ್ಲಿಗೆ ಬಹುಮಂದಿ ಬರುವರು. ಪೂರ್ವದಲ್ಲಿ ದಕ್ಷಬ್ರಹ್ಮನು ಇಲ್ಲಿ ಯಾಗವನ್ನು ಮಾಡಿ, ಈ ಕ್ಷೇತ್ರದಲ್ಲಿ ಶರೀರತ್ಯಾಗವನ್ನು ಮಾಡಿದವರಿಗೆ ಸ್ವರ್ಗಪ್ರಾಪ್ತಿಯಾಗಲಿ ಎಂದು ಅನುಗ್ರಹಮಾಡಿರುವನು. ಇದೋ ಈ ಪ್ರದೇಶವು ನಿಷಾದದೇಶಕ್ಕೆ ಬಾಗಿಲಾಗಿರುವದು. ಈ ನಿಷಾದದೇಶದಲ್ಲಿರುವ ದುಷ್ಟರಾದ ಬೇಡರು ತನ್ನನ್ನು ಮುಟ್ಟಕೂಡದೆಂದು ಇಲ್ಲಿ ಸರಸ್ವತೀ ನದಿಯು ಭೂಮಿಯಲ್ಲಿ ಅಂತರ್ಧಾನವನ್ನು ಹೊಂದಿರುವಳು. ಇದೋ ಇತ್ತಲಾಗಿ ಆ ಸರಸ್ವತೀ ನದಿಯು ಭೂಮಿಯನ್ನು ಭೇದಿಸಿಕೊಂಡು ಮೇಲಕ್ಕೆ ಬಂದು ಪ್ರವಹಿಸುತ್ತಿರುವಳು. ಈ ಕ್ಷೇತ್ರಕ್ಕೆ ಚಮಸೋದ್ಭೇದವೆಂದು ಹೆಸರು. ಇದೋ ಇತ್ತಲಾಗಿ ಈ ಸರಸ್ವತೀನದಿಗೆ ಸಮುದ್ರಗಾಮಿಗಳಾದ ಅನೇಕ ನದಿಗಳು ಸಂಗಮವಾಗಿರುವವು. ಇದೇ ಮಹನೀಯವಾದ ಸಿಂಧುನದತೀರ್ಥವು. ಇಲ್ಲಿಯೇ ಲೋಪಾಮುದ್ರೆಯು ಅಗಸ್ತ್ಯಮಹರ್ಷಿಯನ್ನು ಪತಿಯನ್ನಾಗಿ ವರಿಸಿದ್ದು. ಎಲೈ ತೇಜಶ್ಶಾಲಿಯೆ, ಇತ್ತನೋಡು. ಇಂದ್ರನಿಗೆ ಬಹು ಪ್ರಿಯವಾಗಿಯೂ ಪುಣ್ಯತಮವಾಗಿಯೂ ಪಾವನವಾಗಿಯೂ ಪಾಪನಾಶಕವಾಗಿಯೂ ಇರುವ ಪ್ರಭಾಸತೀರ್ಥವು ಪ್ರಕಾಶಿಸುತ್ತಿರುವದು. ಇದೋ ಇಲ್ಲಿ ಕಾಣಿಸುವದೇ ಉತ್ತಮವಾದ ವಿಷ್ಣುಪದತೀರ್ಥವು. ಇದು ಪಾಪಹರವಾದ ಮನೋಹರವಾದ ವಿಪಾಶಾನದಿಯು. ಪೂಜ್ಯನಾದ ವಸಿಷ್ಠಮಹರ್ಷಿಯು ಪುತ್ರಶೋಕವನ್ನು ಸಹಿಸಲಾರದೆ ಶರೀರವನ್ನು ಪಾಶಗಳಿಂದ ಬಂಧಿಸಿಕೊಂಡು ಈ ನದಿಯಲ್ಲಿ ಬಿದ್ದನು. ಉತ್ತರಕ್ಷಣದಲ್ಲೇ ಆ ಪಾಶಗಳು ಬಿಚ್ಚಿಹೋಗಿ ಆತನು ಮೇಲಕ್ಕೆದ್ದು ಬಂದದ್ದರಿಂದ, ಈ ನದಿಗೆ ವಿಪಾಶಾ ಎಂದು ಹೆಸರುಂಟಾಯಿತು. ಎಲೈ ಧರ್ಮರಾಯನೆ, ಇದು ಕಾಶ್ಮೀರಮಂಡಲವು. ಇದು ಪುಣ್ಯಕ್ಷೇತ್ರವೆಂದು ಅನೇಕಮಂದಿ ಮಹರ್ಷಿಗಳು ಇಲ್ಲಿ ವಾಸಮಾಡುತ್ತಿರುವರು. ನೀನು ತಮ್ಮಂದಿರೊಡಗೂಡಿ ಇದನ್ನು ನೋಡು. ಇಲ್ಲಿಯೇ ಉತ್ತರದಿಕ್ಕಿನಲ್ಲಿರುವ ಋಷಿಗಳಿಗೂ ಯಯಾತಿರಾಯನಿಗೂ ಯಜ್ಞೇಶ್ವರನಿಗೂ ಕಾಶ್ಯಪನಿಗೂ ಸಂವಾದವು ನಡೆದಿರುವದು. ಈ ಪ್ರದೇಶವು ಮಾನಸಸರೋವರಕ್ಕೆ ಹೋಗತಕ್ಕ ದಾರಿಯು. ಈ ಪರ್ವತದ ಮಧ್ಯದಲ್ಲಿರುವ ಪ್ರದೇಶವು ಪರಶುರಾಮನಿಗೆ ವಾಸಸ್ಥಾನವಾಗಿರುವದು. ಸತ್ಯಪರಾಕ್ರಮನಾದ ಆ ರಾಮನ ಪ್ರಭಾವದಿಂದ ವಿದೇಹದೇಶಕ್ಕೆ ಉತ್ತರಭಾಗದಲ್ಲಿರುವ ರಾಮನು ವಾಸಮಾಡತಕ್ಕ ಈ ಪ್ರದೇಶದ ಬಾಗಿಲಿಗೆ ವಾಯುವೂ ಕೂಡ ಪ್ರವೇಶಮಾಡದಿರುವದು. ಇಲ್ಲಿ ಇದೊಂದು ಮಹದಾಶ್ಚರ್ಯವು. ಎಲೈ ಧರ್ಮರಾಯನೆ, ಸಾರ, ಸಾವನ, ಬಾರ್ಹಸ್ಪತ್ಯ, ನಾಕ್ಷತ್ರ, ಚಾಂದ್ರ, ಈ ಐದು ಸಂವತ್ಸರಗಳೂ ಏಕಕಾಲದಲ್ಲಿ ಮುಗಿದರೆ ಅದಕ್ಕೆ ಯುಗಕ್ಷಯಕಾಲವೆಂದು ಹೇಳುವರು. ಅಂಥಾ ಕಾಲ

ದಲ್ಲಿ ಕಾಮರೂಪಿಯೂ ಪಾರ್ವತೀಸಮೇತನೂ ಆಗಿ ಪ್ರಮಥಗಣಗಳಿಂದ ಪರಿವೃತನಾದ ಪರಮೇಶ್ವರನು ಇಲ್ಲಿ ಎಲ್ಲರಿಗೂ ದರ್ಶನವನ್ನು ಕೊಡುವನು. ತಮ್ಮ ಕುಟುಂಬಕ್ಕೆಲ್ಲಾ ಕ್ಷೇಮವನ್ನು ಬಯಸಿ ಯಾಗಮಾಡತಕ್ಕವರು ಚೈತ್ರಮಾಸ ಒಂದು ತಿಂಗಳು ಈ ಸರೋವರದ ಸಮೀಪದಲ್ಲಿ ಪಿನಾಕಪಾಣಿಯಾದ ಮಹೇಶ್ವರನನ್ನು ಉದ್ದೇಶಿಸಿ ಯಾಗವನ್ನು ಮಾಡುವರು. ಈ ಸರೋವರದಲ್ಲಿ ಯಾವ ಪುರುಷನು ಜಿತೇಂದ್ರಿಯನಾಗಿ ವಿಶ್ವಾಸದಿಂದ ಸ್ನಾನಮಾಡುವನೋ, ಆತನು ಸಕಲ ಪಾಪಗಳನ್ನೂ ಕಳೆದುಕೊಂಡು ಉತ್ತಮವಾದ ಲೋಕವನ್ನು ಪಡೆಯುವನು. ಇಲ್ಲೇ ಉಜ್ಜಾನಕವೆಂಬ ಕ್ಷೇತ್ರವಿರುವದು. ಆ ಕ್ಷೇತ್ರದಲ್ಲಿ ಕುಮಾರಸ್ವಾಮಿಯೂ, ಅರುಂಧತೀಸಹಿತನಾದ ವಸಿಷ್ಠನೂ ಸಹ, ಶಾಂತಿಗುಣವನ್ನು ತಾಳಿರುವರು. ಅಲ್ಲಿರುವ ಈ ಮಡುವಿನಲ್ಲಿ ನೂರುನೂರು ದಳಗಳುಳ್ಳ ಕಮಲಗಳೂ, ನಿರ್ಮಲವಾದ ಉದಕವೂ ಇರುವವು. ಇದೇ ರುಕ್ಮಿಣೀಆಶ್ರಮವು. ಇಲ್ಲಿ ರುಕ್ಮಿಣೀದೇವಿಯು ಕೋಪವನ್ನು ನಿಗ್ರಹಿಸಿ ಶಾಂತಿಗುಣವನ್ನು ತಾಳಿರುವಳು. ಎಲೈ ಧರ್ಮರಾಯನೆ, ಈ ಭೃಗುತುಂದವೆಂಬ ಪರ್ವತವು ಪ್ರಸಿದ್ಧವಾದದ್ದು. ಇದನ್ನು ನೋಡಿದವರು ಸಂಕ್ಷೇಪವಾಗಿ ಸಮಾಧಿಫಲವನ್ನು ಪಡೆಯುವರು. ಇತ್ತಲಾಗಿ ನೋಡು. ಅನೇಕ ಋಷಿಗಳಿಂದ ಸೇವಿತವಾಗಿಯೂ, ನಿರ್ಮಲವಾದ ಶಿತೋದಕವುಳ್ಳದ್ದಾಗಿಯೂ, ಪಾಪನಾಶಕವಾಗಿಯೂ, ಇರುವ ವಿತಸ್ತಾನದಿಯು ಕಾಣಿಸುತ್ತಿರುವದು. ಇಲ್ಲಿಯೇ ಜಲ, ಉಪಜಲ, ಎಂಬ ಎರಡು ನದಿಗಳು ಯಮುನಾನದಿಗೆ ಅಭಿಮುಖಗಳಾಗಿರುವವು. ಇಲ್ಲಿ ಶಿಬಿಮಹಾರಾಜನು ಯಾಗಮಾಡಿ, ಇಂದ್ರನಿಗಿಂತಲೂ ಹೆಚ್ಚಾದ ಪ್ರಸಿದ್ಧಿಯನ್ನು ಪಡೆದಿರುವನು. ಆ ರಾಜನನ್ನು ಪರೀಕ್ಷಿಸಬೇಕೆಂದು ಇಂದ್ರನು ಗಿಡುಗನಾಗಿಯೂ ಅಗ್ನಿಯು ಪಾರಿವಾಳದ ಹಕ್ಕಿಯಾಗಿಯೂ ಆತನ ಸಭೆಗೆ ಬಂದರು. ಆಗ ಆ ಪಾರವಾಳದ ಹಕ್ಕಿಯು ಆ ಗಿಡುಗಕ್ಕೆ ಭಯಪಟ್ಟು ಆತ್ಮರಕ್ಷಣಾರ್ಥವಾಗಿ ಆ ಶಿಬಿರಾಯನ ತೊಡೆಯ ಸಂದಿಯಲ್ಲಿ ಅಡಗಿಕೊಂಡಿತು” ಎಂದು ಲೋಮಶನು ಧರ್ಮರಾಯನಿಗೆ ಹೇಳಿದನು.

## ೧೩೦ನೇ ಅಧ್ಯಾಯ.—ತೀರ್ಥಯಾತ್ರಾಪ್ರಶಂಸೆ—(ಶ್ಯೇನಕಪೋತೀಯಾಖ್ಯಾನ.)

ಅನಂತರದಲ್ಲಿ ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಲೋಮಶನು ಧರ್ಮರಾಯನನ್ನು ಕುರಿತು “ಎಲೈ ಧರ್ಮರಾಯನೆ, ಆಗ ಆ ಗಿಡಗವು ಬಂದು ಶಿಬಿರಾಯನನ್ನು ನೋಡಿ ‘ಎಲೈ ಮಹಾರಾಜನೆ, ನಿನ್ನನ್ನು ಸಕಲರಾಜರೂ ಧರ್ಮಾತ್ಮನೆಂದು ಹೇಳುತ್ತಿರುವರು. ಇಂಥಾ ನೀನು ಯಾತಕ್ಕೋಸ್ಕರ ಧರ್ಮವಿರುದ್ಧವಾದ ಕಾರ್ಯವನ್ನು ಮಾಡುತ್ತೀಯೆ? ಹಸಿವಿನಿಂದ ಪೀಡಿತನಾದ ನನಗೆ ಈ ಪಾರವಾಳದ ಹಕ್ಕಿಯು ಆಹಾರಭೂತವಾಗಿರುವದು. ಧರ್ಮಬುದ್ಧಿಯಿಂದ ನೀನು ಇದನ್ನು ರಕ್ಷಿಸಬೇಡ. ಇದನ್ನು ರಕ್ಷಿಸುವದಕ್ಕೆ ಯತ್ನಿಸಿದ ನೀನು ಧರ್ಮವನ್ನು ರಕ್ಷಿಸದೆ ಬಿಟ್ಟೆ’ ಎನಲು, ಶಿಬಿರಾಯನು ಆ ಗಿಡುಗವನ್ನು ಕುರಿತು ‘ಎಲೈ ಪಕ್ಷಿಯೆ, ಈ ಪಾರವಾಳದ ಹಕ್ಕಿಯು ನಿನ್ನಿಂದ ಭಯಪಟ್ಟು, ತನ್ನ ಪ್ರಾಣವನ್ನು ಉಳಿಯಿಸಿಕೊಳ್ಳುವದಕೋಸ್ಕರ ನನ್ನ ದೆಸೆಯಿಂದ ಅಭಯವನ್ನು ಬಯಸಿ, ನನ್ನ ಮರೆಹೊಕ್ಕಿರುವದು. ಇದಕ್ಕೆ ಪ್ರಾಣದಾನವನ್ನು ಮಾಡುವದು ಉತ್ತಮವಾದ ಧರ್ಮವಲ್ಲವೆ? ಇದನ್ನು ನೀನು ಯಾತಕ್ಕೆ ತಿಳಿಯದಿರುವೆ? ಈ ಪಾರವಾಳದ ಹಕ್ಕಿಯು ಭಯದಿಂದ ಮಯ್ಯೆಲ್ಲಾ ಬೆವತು ಗಡಗಡನೆ ನಡುಗುತ್ತಿರುವದು. ಇದು ಬದುಕಬೇಕೆಂದು ಬಂದು ನನ್ನ ಮರೆ ಹೊಕ್ಕಮೇಲೆ ನಾನು ಇದನ್ನು ಪರಿತ್ಯಾಗಮಾಡತಕ್ಕದ್ದು ಯುಕ್ತವಲ್ಲ. ಲೋಕದಲ್ಲಿ ಬ್ರಾಹ್ಮಣರನ್ನು ಪೀಡಿಸಿದವನಿಗೂ, ಲೋಕಕ್ಕೆಲ್ಲಾ ಮಾತೃಭೂತವಾಗಿರುವ ಗೋವನ್ನು ಹಿಂಸಿಸಿದವನಿಗೂ, ಶರಣಾಗತನನ್ನು ಪರಿತ್ಯಜಿಸಿದವನಿಗೂ, ಪಾಪವು ಸಮಾನವಾಗಿರುವದು. ಆದ್ದರಿಂದ ನಾನು ಇದನ್ನು ಬಿಡುವದಿಲ್ಲವು’ ಎಂದನು. ಅದನ್ನು ಕೇಳಿ ಗಿಡಗವು ‘ಎಲೈ ರಾಯನೆ, ಆಹಾರದಿಂದಲೇ ಸಕಲ ಪ್ರಾಣಿಗಳೂ ಹುಟ್ಟುವವು; ಆಹಾರದಿಂದಲೇ ಅಭಿವೃದ್ಧಿಯನ್ನು ಹೊಂದುವವು; ಆಹಾರದಿಂದಲೇ ಬದುಕುವವು. ತ್ಯಜಿಸುವದಕ್ಕೆ ಅಶಕ್ಯವಾದ ಧನವನ್ನಾದರೂ ಬಿಟ್ಟು ಬದುಕಬಹುದು; ಆಹಾರವನ್ನು ಬಿಟ್ಟು ಸ್ವಲ್ಪಕಾಲವಾದರೂ ಬದು

ಕುವದು ಅಶಕ್ಯವಾದದ್ದು. ಎಲೈ ರಾಯನೆ, ಈಗ ನೀನು ನನಗೆ ಆಹಾರವನ್ನು ತಪ್ಪಿಸುವನಾದೆ. ಇದರಿಂದ ನನ್ನ ಪ್ರಾಣಗಳು ಶರೀರವನ್ನು ಬಿಟ್ಟುಹೋಗುವವು. ನಾನು ಮೃತನಾದ ಪಕ್ಷದಲ್ಲಿ, ನನ್ನ ಮಕ್ಕಳೂ ನನ್ನ ಹೆಂಡತಿಯೂ ನಷ್ಟರಾಗಿ ಹೋಗುವರು. ನೀನು ಈ ಒಂದು ಪಾರಿವಾಳದ ಹಕ್ಕಿಯನ್ನು ರಕ್ಷಿಸಿದ್ದೇ ಆದರೆ, ನಿನಗೆ ನಮ್ಮೆಲ್ಲರನ್ನೂ ಸಂಹಾರಮಾಡಿದ ದೋಷವು ಬಾರದಿರಲಾರದು. ಎಲೈ ಸತ್ಯಸಂಧನೆ, ಯಾವ ಧರ್ಮವು ಮತ್ತೊಂದು ಧರ್ಮಕ್ಕೆ ಬಾಧಕವಾಗುವದೋ ಅಂಥಾ ಧರ್ಮವು ಕುತ್ಸಿತವಾದದ್ದು. ಧರ್ಮಗಳಿಗೆ ಪರಸ್ಪರವಾಗಿ ವಿರೋಧವಿಲ್ಲದಂತೆ ಆಚರಿಸಿದ ಧರ್ಮವೇ ಸದ್ಧರ್ಮವೆನ್ನಿಸಿಕೊಳ್ಳುವದು. ನೀನು ಪ್ರಾಣಿಗಳಿಗಿರತಕ್ಕ ಪರಸ್ಪರ ವಿರೋಧವನ್ನು ತಿಳಿದು, ಧರ್ಮಾಧರ್ಮಗಳಲ್ಲಿ ಗುರುಲಾಘವಗಳನ್ನು ವಿಚಾರಮಾಡಿ, ಅವುಗಳಲ್ಲಿ ಯಾವದು ಉತ್ತಮವಾದದ್ದೋ ಅದನ್ನು ಆಚರಿಸು. ಅದರಿಂದ ಯಾವ ದೋಷವೂ ಉಂಟಾಗಲಾರದು' ಎನಲು, ಶಿಬಿರಾಯನು 'ಎಲೈ ಪಕ್ಷಿಶ್ರೇಷ್ಠನೆ, ನೀನು ಬಹು ಮಂಗಳಕರವಾದ ಮಾತುಗಳನ್ನು ಆಡುತ್ತಿರುವೆ. ಇದನ್ನು ನೋಡಿದರೆ ನೀನೇನಾದರೂ ಪಕ್ಷಿರಾಜನಾದ ಗರುಡನೇ ಎಂದು ಚಿತ್ತಕ್ಕೆ ಸಂಶಯ ತೋರುತ್ತಿರುವದು. ನೀನು ನನಗೆ ಧರ್ಮಜ್ಞನಾಗಿ ತೋರುತ್ತಿರುವೆ. ಆದ್ದರಿಂದ ನಿನಗೆ ತಿಳಿಯುವ ವಿಷಯವು ಯಾವದೂ ಇಲ್ಲವೆಂದು ನಾನು ಭಾವಿಸುತ್ತೇನೆ. ಆದರೆ ಮರೆಹೊಕ್ಕವನನ್ನು ಪರಿತ್ಯಾಗಮಾಡುವದು ಯುಕ್ತವಾದದ್ದೆಂದು ಧರ್ಮಜ್ಞನಾದ ನೀನು ಹ್ಯಾಗೆ ಹೇಳುತ್ತೀಯೆ ? ಎಲೈ ಪಕ್ಷಿಯೆ, ನೀನು ಧರ್ಮಸೂಕ್ಷ್ಮವನ್ನು ಬಲ್ಲವನಾದಾಗ್ಯೂ, ಆಹಾರವೇ ದೊಡ್ಡದೆಂದು ತಿಳಿದುಕೊಂಡು ಅದಕ್ಕಾಗಿ ಹೀಗೆ ಆತುರಪಡುತ್ತಿರುವೆ. ಈಗ ನಿನಗೆ ಆಹಾರವೇ ಮುಖ್ಯವಾಗಿದ್ದಪಕ್ಷದಲ್ಲಿ, ಯಾವದಾದರೂ ಒಂದು ಎತ್ತನ್ನಾಗಲಿ ಕೋಣವನ್ನಾಗಲಿ ಜಿಂಕೆಯನ್ನಾಗಲಿ ಹಂದಿಯನ್ನಾಗಲಿ ಅಥವಾ ಮತ್ತಾವದನ್ನಾಗಲಿ ನೀನು ಆಹಾರಮಾಡಬಹುದು' ಎಂದನು. ಬಳಿಕ ಗಿಡುಗವು 'ಎಲೈ ಮಹಾರಾಜನೆ, ಜಿಂಕೆ ಮೊದಲಾದವುಗಳನ್ನು ನಾನು ಭಕ್ಷಿಸತಕ್ಕವನಲ್ಲ. ಮತ್ತಾವದರಿಂದಲಾನೇ ನನಗೇನು ಪ್ರಯೋಜನ ? ನನಗೆ ದೇವರಿಂದ ಕ್ಲುಪ್ತವಾದ ಈ ಪಾರಿವಾಳದ ಹಕ್ಕಿಯೇ ನನ್ನ ಆಹಾರಕ್ಕೆ ಸಾಕು. ಗಿಡುಗವು ಪಾರಿವಾಳದ ಹಕ್ಕಿಗಳನ್ನು ತಿನ್ನತಕ್ಕದ್ದೆಂಬ ಪ್ರವಾದವು ಲೋಕದಲ್ಲಿ ಬಹುಕಾಲದಿಂದ ನೆಲೆಗೊಂಡಿರುವದಾದಕಾರಣ, ಈ ಪಾರಿವಾಳದ ಹಕ್ಕಿಯನ್ನೇ ನನಗೆ ಬಿಟ್ಟುಕೊಡು. ಎಲೈ ರಾಯನೆ, ಮರೆಹೊಕ್ಕ ಈ ಪಕ್ಷಿಯನ್ನು ರಕ್ಷಿಸಬೇಕೆಂಬ ಈ ನಿನ್ನ ಧರ್ಮಬುದ್ಧಿಯು ನಿಸ್ಸಾರವಾದದ್ದು' ಎಂದು ನುಡಿಯಿತು. ಅದನ್ನು ಕೇಳಿ ಶಿಬಿರಾಯನು 'ಎಲೈ ಪಕ್ಷಿಯೆ, ನನಗೆ ಶರಣಾಗತವಾದ ಈ ಪಕ್ಷಿಯನ್ನು ಹೊರತಾಗಿ, ನೀನು ಏನನ್ನು ಅಪೇಕ್ಷಿಸಿದರೂ ಅದನ್ನು ನಾನು ಕೊಡುವೆನು. ಈ ನನ್ನ ರಾಜ್ಯವು ಅಧಿಕವಾದ ಐಶ್ವರ್ಯವುಳ್ಳದ್ದು. ಇದನ್ನು ಬೇಕಾದರೂ ನಿನಗೆ ನಾನು ಕೊಡುವೆನು. ಈ ಪಕ್ಷಿಯನ್ನು ಮಾತ್ರ ಕೊಡತಕ್ಕವನಲ್ಲ' ಎನಲು, ಅದನ್ನು ಕೇಳಿ ಗಿಡುಗವು 'ಎಲೈ ಮಹಾರಾಜನೆ, ನಿನಗೆ ಈ ಪಕ್ಷಿಯಲ್ಲಿ ಅಷ್ಟು ಪ್ರೀತಿಯಿದ್ದರೆ, ಇದರ ತೂಕಕ್ಕೆ ಸರಿಯಾದ ಮಾಂಸವನ್ನು ನಿನ್ನ ಶರೀರದಲ್ಲಿ ಕುಯಿದುಕೊಟ್ಟದ್ದೇ ಆದರೆ ನನಗೆ ತೃಪ್ತಿಯಾಗುವದು' ಎಂದು ಹೇಳಿತು. ಅದನ್ನು ಕೇಳಿ ಶಿಬಿಯು 'ಎಲೈ ಗಿಡುಗನೆ, ನೀನು ನನ್ನ ಶರೀರದ ಮಾಂಸವನ್ನು ಬೇಡಿದ್ದರಿಂದ ನನ್ನಲ್ಲಿ ನೀನು ಅನುಗ್ರಹಮಾಡಿದೆ ಯೆಂದು ನಾನು ತಿಳಿಯುವೆನು. ಪಾರಿವಾಳದ ಹಕ್ಕಿಯ ತೂಕಕ್ಕೆ ಸರಿಯಾದ ಮಾಂಸವನ್ನು ನನ್ನ ಶರೀರದಲ್ಲಿ ಕುಯಿದುಕೊಡುತ್ತೇನೆ' ಎಂದು ನುಡಿದು, ತನ್ನ ಶರೀರದ ಮಾಂಸವನ್ನು ಕುಯಿದು, ತ್ರಾಸಿನ ಒಂದು ಭಾಗದಲ್ಲಿ ಪಾರಿವಾಳದ ಹಕ್ಕಿಯನ್ನಿರಿಸಿ, ಮತ್ತೊಂದು ಭಾಗದಲ್ಲಿ ತನ್ನ ಶರೀರದ ಮಾಂಸವನ್ನಿಟ್ಟು ತೂಗಿದನು. ಆಗ ಪಾರಿವಾಳದ ಹಕ್ಕಿಯ ತೂಕವೇ ಹೆಚ್ಚಾಗಲು, ಅದರ ತೂಕಕ್ಕೆ ಸರಿಯಾಗುವ ವರೆಗೂ ಮತ್ತುಮತ್ತು ತನ್ನ ಶರೀರದಲ್ಲಿರತಕ್ಕ ಮಾಂಸವನ್ನೆಲ್ಲಾ ಕುಯಿದು ತ್ರಾಸಿನಲ್ಲಿರಿಸುತ್ತಾ ಬಂದನು. ಅದೂ ಸಾಕಾಗದೆ ಹೋದದ್ದರಿಂದ, ತಾನೇ ತ್ರಾಸಿನಲ್ಲಿ ಕೂತುಕೊಂಡನು. ಅದನ್ನು ನೋಡಿ ಗಿಡುಗನು ಆ ರಾಯನನ್ನು ಕುರಿತು 'ಎಲೈ ಮಹಾರಾಜನೆ, ನಾನು ಇಂದ್ರನು; ಈ ಪಾರಿವಾಳದ ಹಕ್ಕಿಯು ಯಜ್ಞೇಶ್ವರನು. ನಾವಿಬ್ಬರೂ ನಿನ್ನ ಧರ್ಮವನ್ನು ಪರೀಕ್ಷಿಸಬೇಕೆಂದು ನಿನ್ನ ಸಭೆಗೆ ಬಂದಿರುವೆವು. ಈಗ ನೀನು ಶರಣಾಗತರನ್ನು ರಕ್ಷಿಸುವದಕ್ಕಾಗಿ ಶರೀರದಲ್ಲೂ ಅಭಿಮಾನವನ್ನಿಡದೆ ಶರೀರದ ಮಾಂಸವನ್ನೆಲ್ಲಾ ಕುಯಿದುಕೊಟ್ಟೆ. ಆದ್ದರಿಂದ ನಿನ್ನ ಕೀರ್ತಿಯು ಸಕಲ ಲೋಕಗಳಲ್ಲೂ

ಪ್ರಖ್ಯಾತವಾಯಿತು. ಈ ಭೂಲೋಕದಲ್ಲಿ ಮನುಷ್ಯರು ನಿನ್ನ ಕೀರ್ತಿಯನ್ನು ಎಷ್ಟುಕಾಲಪರ್ಯಂತವೂ ಕೊಂಡಾಡುವರೋ, ಆ ವರೆಗೂ ಶಾಶ್ವತವಾದ ಉತ್ತಮಲೋಕಗಳಲ್ಲಿ ನೀನು ವಾಸಮಾಡುವೆ' ಎಂದು ಹೇಳಿ, ಇಂದ್ರನೂ ಯಜ್ಞೇಶ್ವರನೂ ಸ್ವರ್ಗಲೋಕಕ್ಕೆ ಹೊರಟುಹೋದರು.

ಬಳಿಕ ಧರ್ಮಾತ್ಮನಾದ ಶಿಬಿಚಕ್ರವರ್ತಿಯು ತನ್ನ ಧರ್ಮದಿಂದ ಸರ್ವತ್ರ ಪ್ರಕಾಶಿಸುತ್ತ, ದಿವ್ಯವಾದ ರೂಪವನ್ನು ಪಡೆದು ತಾನೂ ಸ್ವರ್ಗವನ್ನು ಹೊಂದಿದನು. ಎಲೈ ಧರ್ಮರಾಯನೆ, ಇದು ಅಂಥಾ ಮಹಾತ್ಮನಾದ ಶಿಬಿಚಕ್ರವರ್ತಿಯು ವಾಸಮಾಡಿದ ಪುಣ್ಯಸ್ಥಳವು. ಇಲ್ಲಿ ದೇವತೆಗಳೂ ಋಷಿಗಳೂ ವಾಸಮಾಡುತ್ತಿರುವರು. ಅವರನ್ನು ಪುಣ್ಯವಂತರಾದ ಬ್ರಾಹ್ಮಣರು ನೋಡುವರು. ನೀನೂ ಸಹ ನನ್ನೊಡನೆ ಕೂಡಿ ದೇವತೆಗಳನ್ನೂ ಋಷಿಗಳನ್ನೂ ನೋಡಬಹುದು. ಇದರಿಂದ ಸಕಲಪಾಪವೂ ನಿವೃತ್ತಿಯಾಗುವದು" ಎಂದು ಲೋಮಶನು ಧರ್ಮರಾಯನಿಗೆ ಹೇಳಿದನು.

## ೧೩೨ನೇ ಅಧ್ಯಾಯ.—ತೀರ್ಥಯಾತ್ರಾಪ್ರಶಂಸೆ—(ಅಷ್ಟಾವಕ್ರೋಪಾಖ್ಯಾನ).

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಲೋಮಶನು ಧರ್ಮರಾಯನನ್ನು ಕುರಿತು "ಎಲೈ ಧರ್ಮರಾಯನೆ, ಇದು ಉದ್ದಾಲಕನಿಗೆ ಮಗನಾದ ಶ್ವೇತಕೇತುವಿನ ಪುಣ್ಯತಮವಾದ ಆಶ್ರಮವು. ಯಾವಾಗಲೂ ಈ ಆಶ್ರಮದಲ್ಲಿ ವೃಕ್ಷಗಳೆಲ್ಲಾ ಫಲಭರಿತಗಳಾಗಿಯೇ ಇರುವವು. ಈ ಆಶ್ರಮವನ್ನು ತಮ್ಮಂದಿರೊಡನೆ ನೀನು ಪ್ರವೇಶಮಾಡು. ಮಂತ್ರಶಾಸ್ತ್ರದಲ್ಲಿ ಸಮರ್ಥನಾದ ಆ ಶ್ವೇತಕೇತುವು ಮನುಷ್ಯರೂಪವನ್ನು ತಾಳಿದ ಸರಸ್ವತೀದೇವಿಯನ್ನು ಪ್ರತ್ಯಕ್ಷವಾಗಿ ಕಂಡು, ಆಕೆಯನ್ನು ಕುರಿತು 'ಎಲೌ ವಾಗ್ದೇವಿಯೆ, ನಿನ್ನನುಗ್ರಹದಿಂದ ನಾನು ಪ್ರಸಂಗಮಾಡತಕ್ಕ ವಾಕ್ಪ್ರೌಢಿಮೆಯನ್ನು ಪಡೆಯುವೆನು' ಎಂದು ಮಾತನಾಡಿದನು. ಎಲೈ ಧರ್ಮರಾಯನೆ, ಉದ್ದಾಲಕನ ಮಗನಾದ ಆ ಶ್ವೇತಕೇತುವೂ, ಕಹೋಳಕನ ಮಗನಾದ ಅಷ್ಟಾವಕ್ರನೂ ಸಹ, ಆ ಕಾಲದಲ್ಲಿ ಬ್ರಹ್ಮವಿದ್ಯಾಪಾರಂಗತರೊಳಗೆ ಶ್ರೇಷ್ಠರಾಗಿದ್ದರು. ಅಷ್ಟಾವಕ್ರನಿಗೆ ಸೋದರಮಾವನಾದ ಶ್ವೇತಕೇತುವೂ, ಅಷ್ಟಾವಕ್ರನೂ ಸಹ, ಒಂದಾನೊಂದು ದಿವಸ ಜನಕಮಹಾರಾಜನ ಯಜ್ಞಶಾಲೆಗೆ ಹೋದರು. ಆಗ ಅಷ್ಟಾವಕ್ರನು ಬಾಲ್ಯವಯಸ್ಸಿನಲ್ಲೇ ಪ್ರಸಂಗ ಸಾಮರ್ಥ್ಯವನ್ನು ಪಡೆದವನಾದ್ದರಿಂದ, ಆ ಯಜ್ಞಶಾಲೆಯಲ್ಲಿದ್ದ ಬಂದಿಯೆಂಬ ವಿದ್ವಾಂಸನನ್ನು ಪ್ರಸಂಗಮಾಡಿ ಜಯಿಸಿ, ಆತನನ್ನು ನದಿಯಲ್ಲಿ ಮುಳುಗಿಸಿಬಿಟ್ಟನು" ಎಂದನು.

ಅನಂತರ ಧರ್ಮರಾಯನು "ಎಲೈ ಲೋಮಶನೆ ಪ್ರಸಿದ್ಧನಾದ ಬಂದಿಯೆಂಬ ವಿದ್ವಾಂಸನನ್ನು ವಾದದಲ್ಲಿ ಜಯಿಸಿದ ಅಷ್ಟಾವಕ್ರನ ಪ್ರಭಾವವು ಎಂಥಾದ್ದು? ಆತನ ತಂದೆ ಯಾರು? ಅದನ್ನು ನನಗೆ ತಿಳುಹಿಸು" ಎನಲು, ಲೋಮಶನು "ಎಲೈ ರಾಯನೆ, ಉದ್ದಾಲಕನೆಂಬ ಮಹರ್ಷಿಗೆ ಕಹೋಳಕನೆಂಬ ಪ್ರಸಿದ್ಧನಾದ ಒಬ್ಬ ಶಿಷ್ಯನು ಇದ್ದನು. ಆತನು ಗುರುಚಿತ್ತಾನುಸಾರವಾಗಿ ಬಹುಕಾಲ ಗುರುಶುಶ್ರೂಷೆಯನ್ನು ಮಾಡುತ್ತ, ಆ ಮಹರ್ಷಿಯಲ್ಲಿ ವೇದಾಧ್ಯಯನವನ್ನು ಮಾಡಿಕೊಂಡಿದ್ದನು. ಆಗ ಉದ್ದಾಲಕನು ಕಹೋಳಕನ ಶುಶ್ರೂಷೆಗೆ ಮೆಚ್ಚಿ, ಸುಜಾತೆಯೆಂಬ ತನ್ನ ಮಗಳನ್ನು ಆತನಿಗೆ ಕೊಟ್ಟು ವಿವಾಹಮಾಡಿದನು. ಬಳಿಕ ಆ ಸುಜಾತೆಯು ಪತಿಯೊಡನೆ ಸುಖವಾಗಿದ್ದುಕೊಂಡು, ಸ್ವಲ್ಪಕಾಲದಮೇಲೆ ಅಗ್ನಿಯಂತೆ ತೇಜಶ್ಶಾಲಿಯಾದ ಗರ್ಭವನ್ನು ಧರಿಸಿದಳು. ಆ ಗರ್ಭವು ಅಧ್ಯಯನಮಾಡುತ್ತಿದ್ದ ತಂದೆಯಾದ ಕಹೋಳಕನನ್ನು ಕುರಿತು 'ಎಲೈ ತಂದೆಯೆ, ರಾತ್ರಿಯೆಲ್ಲಾ ನೀನು ಅಧ್ಯಯನವನ್ನು ಮಾಡುತ್ತೀಯೆ. ಇದು ಅನುಚಿತವಾದದ್ದು. ನಾನು ನಿನ್ನನುಗ್ರಹದಿಂದ ಈ ಗರ್ಭದಲ್ಲೇ ವಾಸಮಾಡುತ್ತ ವೇದವೇದಾಂಗ ಶಾಸ್ತ್ರಗಳನ್ನೆಲ್ಲಾ ಅಧ್ಯಯನಮಾಡಿರುವೆನು. ಅರ್ಧರಾತ್ರಿಯು ಅಧ್ಯಯನ ಕಾಲವಲ್ಲವಾದ್ದರಿಂದ, ಈ ಕಾಲದಲ್ಲಿ ನೀನು ಅಧ್ಯಯನಮಾಡುವದು ಅನುಚಿತವಾದದ್ದು' ಎಂದನು. ಆ ಮಾತನ್ನು

ಕೇಳಿ, ಕಹೋಳಕಮಹರ್ಷಿಯು ಶಿಷ್ಯರ ಮಧ್ಯದಲ್ಲಿ ಆ ಗರ್ಭವು ತನಗೆ ಅವಮಾನಮಾಡಿದ್ದನ್ನ ಸಹಿಸದೆ ಕೋಪಗೊಂಡು, ಆ ಗರ್ಭಸ್ಥಶಿಶುವನ್ನು ಕುರಿತು—'ಎಲೈ ಶಿಶುವೆ, ನೀನು ಹೊಟ್ಟೆಯಲ್ಲಿದ್ದುಕೊಂಡೇ ನನಗೆ ವಿರೋಧವಾಗಿ ಮಾತನಾಡಿದ್ದರಿಂದ, ನೀನು ಶರೀರದಲ್ಲಿ ಎಂಟುಕಡೆ ವಕ್ರನಾಗಿ ಹುಟ್ಟು' ಎಂದು ಶಾಪವನ್ನು ಕೊಟ್ಟನು. ಸುಜಾತೆಯು ತನ್ನ ಹೊಟ್ಟೆಯಲ್ಲಿ ದಿನೆದಿನೆ ಬೆಳೆಯುತ್ತಿರುವ ಶಿಶುವಿನಿಂದ ಪೀಡಿತೆಯಾಗಿ, ಏಕಾಂತದಲ್ಲಿ ತನ್ನ ಪತಿಯನ್ನು ನೋಡಿ, ಧನಾಪೇಕ್ಷೆಯಿಂದ ಆತನನ್ನು ಕುರಿತು 'ಋಷಿಶ್ರೇಷ್ಠನೆ, ಈಗ ನನಗೆ ನವಮಾಸಗಳು ತುಂಬಿ ಹತ್ತನೇ ತಿಂಗಳು ನಡೆಯುತ್ತಿರುವದು. ಮನೆಯಲ್ಲಾದರೋ ಒಂದು ಪದಾರ್ಥವೂ ಇಲ್ಲ. ಪ್ರಸವಕಾಲವಾದರೋ ಸಮೀಪವಾಗಿರುವದು. ಮುಂದೆ ಬಾಣಂತಿತನವನ್ನು ಹ್ಯಾಗೆ ಮಾಡಿಕೊಳ್ಳತಕ್ಕದ್ದು? ದ್ರವ್ಯಸಹಾಯವಿಲ್ಲದೆ ಇದು ಹ್ಯಾಗೆ ನಡೆದೀತು? ಈ ವಿಪತ್ತನ್ನು ನಾನು ದಾಟುವಬಗೆ ಹ್ಯಾಗೆ? ದರಿದ್ರಳಾದ ನಾನು ಈಗ ಏನಮಾಡಬಲ್ಲೆನು?' ಎಂದು ನುಡಿದಳು. ಈ ಪ್ರಕಾರ ತನ್ನ ಪತ್ನಿಯು ವ್ಯಥೆಪಡತಕ್ಕದ್ದನ್ನು ನೋಡಿ, ಕಹೋಳಕನು ದ್ರವ್ಯಾಪೇಕ್ಷೆಯಿಂದ ಜನಕರಾಯನ ಬಳಿಗೆ ಹೋಗಿ, ಅಲ್ಲಿ ಬಂದಿಯೆಂಬ ವಿದ್ವಾಂಸನ ಸಂಗಡ ಪ್ರಸಂಗಮಾಡಿ ಸೋತುಹೋಗಲು, ಆ ಬಂದಿಯು ತನ್ನಿಂದ ಸೋತ ಕಹೋಳಕನನ್ನು ಕೈಕಾಲುಕಟ್ಟಿ ನೀರಿನಲ್ಲಿ ಮುಳುಗಿಸಿಬಿಟ್ಟನು. ಅಷ್ಟರಲ್ಲಿ ಇತ್ತಲಾ ಸುಜಾತೆಯು ಪ್ರಸವಿಸಿದಳು. ಆ ಶಿಶುವು ತಂದೆಯ ಶಾಪದಿಂದ ಅಷ್ಟಾವಕ್ರನೆಂದು ಪ್ರಸಿದ್ಧಿಯನ್ನು ಪಡೆದನು. ಅದೇಕಾಲದಲ್ಲಿ ಉದ್ದಾಲಕನಿಗೆ ಶ್ವೇತಕೇತುವೆಂಬ ಪುತ್ರನೂ ಹುಟ್ಟಿದನು. ಆತನೂ ಅಷ್ಟಾವಕ್ರನೂ ಸಮಾನವಯಸ್ಕರಾಗಿದ್ದರು. ಬಳಿಕ ಉದ್ದಾಲಕನು ತನ್ನ ಅಳಿಯನಾದ ಕಹೋಳಕನ ವೃತ್ತಾಂತವನ್ನು ಕೇಳಿ, ತನ್ನ ಮಗಳಾದ ಸುಜಾತೆಯನ್ನು ಕುರಿತು 'ಎಲೆ ಮಗಳೆ, ನಿನ್ನ ಗಂಡನು ದೈವಯೋಗದಿಂದ ಇಂಥ ಮರಣವನ್ನು ಪಡೆದನು. ಈ ವೃತ್ತಾಂತವನ್ನು ನಿನ್ನ ಮಗನಾದ ಅಷ್ಟಾವಕ್ರನಿಗೆ ತಿಳುಹಿಸದೆ ಗೋಪ್ಯಮಾಡಿಕೊಂಡಿರು' ಎಂದು ನುಡಿಯಲು, ಸುಜಾತೆಯು ಪತಿವಿಯೋಗದಿಂದ ದುಃಖಸಮುದ್ರದಲ್ಲಿ ಮುಳುಗಿಯಿದ್ದಾಗ್ಯೂ, ಆ ವೃತ್ತಾಂತವನ್ನು ತನ್ನ ಮಗನಿಗೆ ತಿಳುಹಿಸದೆ ಗೋಪ್ಯಮಾಡಿಕೊಂಡಿದ್ದಳು. ಬಳಿಕ ಅಷ್ಟಾವಕ್ರನು ಉದ್ದಾಲಕನೇ ತಂದೆಯೆಂದೂ, ಶ್ವೇತಕೇತುವೇ ಒಡಹುಟ್ಟಿದವನೆಂದೂ, ಬಹುಕಾಲ ತಿಳಿದುಕೊಂಡಿದ್ದನು. ಈ ರೀತಿಯಲ್ಲಿ ಹನ್ನೆರಡು ವರುಷಗಳಾಗಲು, ಅಷ್ಟಾವಕ್ರನು ಒಂದಾನೊಂದುದಿವಸ ಉದ್ದಾಲಕನ ತೊಡೆಯಮೇಲೆ ಕುಳಿತುಕೊಂಡಿದ್ದನು. ಅದನ್ನು ನೋಡಿ ಶ್ವೇತಕೇತುವು 'ಎಲೈ ಅಷ್ಟಾವಕ್ರನೆ, ಇದು ನಿನ್ನ ತಂದೆಯ ತೊಡೆಯಲ್ಲ. ಈಚೆಗೆದ್ದು ಬಾ' ಎಂದು ಆ ಅಷ್ಟಾವಕ್ರನನ್ನು, ಅಳುತ್ತಿದ್ದರೂ, ಬಲಾತ್ಕಾರದಿಂದ ಕೈಹಿಡಿದು ಎಳೆದನು. ಆಗ ಅಷ್ಟಾವಕ್ರನು ಇದೇನಿವನು ಇಂಥ ದುರ್ಭಾಷೆಯನ್ನಾಡುವನು?' ಎಂದು ಚಿಂತಿಸಿ, ಆ ಮಾತನ್ನು ಮನಸ್ಸಿನಲ್ಲಿಟ್ಟುಕೊಂಡು ದುಃಖಿಸುತ್ತ, ಮನೆಗೆ ಬಂದು, ತಾಯಿಯನ್ನು ಕುರಿತು 'ಎಲೌ ತಾಯೆ, ನನ್ನ ತಂದೆ ಎಲ್ಲಿರುವನು?' ಎಂದು ಕೇಳಲು, ಸುಜಾತೆಯು ದುಃಖಪಡುತ್ತ, ನಿಜವಾದ ಸಂಗತಿಯನ್ನು ಹೇಳದೆ ಹೋದರೆ ಅವನು ಶಾಪವನ್ನು ಕೊಟ್ಟಾನೆಂದು ಭಯಪಟ್ಟು, ತನ್ನ ಗಂಡನಾದ ಕಹೋಳಕನು ಮರಣವನ್ನು ಹೊಂದಿದ ವೃತ್ತಾಂತವನ್ನು ಯಥಾಸ್ಥಿತವಾಗಿ ಮಗನಿಗೆ ತಿಳುಹಿಸಿದಳು. ಆ ವೃತ್ತಾಂತವನ್ನು ತಿಳಿದುಕೊಂಡು, ಅಷ್ಟಾವಕ್ರನು ಆ ಮರುದಿವಸ ಪ್ರಾತಃಕಾಲದಲ್ಲಿ ಶ್ವೇತಕೇತುವನ್ನು ನೋಡಿ 'ಎಲೈ ಶ್ವೇತಕೇತುವೆ, ಈಗ ಜನಕಮಹಾರಾಯನು ಬಹಳ ಆಶ್ಚರ್ಯಕರವಾದ ಯಜ್ಞವನ್ನು ಮಾಡುತ್ತಿರುವನೆಂದು ಕೇಳಿರುವೆನು. ನಾವು ಆ ಯಜ್ಞಶಾಲೆಗೆ ಹೋಗೋಣ. ಅಲ್ಲಿ ಅನೇಕಮಂದಿ ವಿದ್ವಾಂಸರಿಗೆ ವಾಕ್ಯಾರ್ಥಪ್ರಸಂಗಗಳು ನಡೆಯುವವು. ಅವುಗಳನ್ನು ನಾವು ಕೇಳಿದ್ದೇ ಆದರೆ, ನಮಗೆ ಬುದ್ಧಿಕೌಶಲ್ಯವುಂಟಾಗುವದು. ಅಲ್ಲಿ ಆಗತಕ್ಕ ವೇದಘೋಷವು ಬಹು ಮಂಗಳಕರವಾಗಿಯೂ, ಶ್ರಾವ್ಯವಾಗಿಯೂ ಇರುವದು. ಮತ್ತು ಅಲ್ಲಿ ದಿವ್ಯವಾದ ಭೋಜನವೂ ನಮಗೆ ದೊರೆಯುವದು' ಎಂದು ಮಾತನಾಡಿಕೊಂಡು, ಇಬ್ಬರೂ ಜನಕರಾಯನ ಯಜ್ಞಶಾಲೆಗೆ ಪ್ರಯಾಣಮಾಡಿದರು. ಬಳಿಕ ಮಾರ್ಗವಶದಿಂದ ಬರುತ್ತಿದ್ದ ಜನಕರಾಯನ ಪರಿಜನಗಳು ಎದುರಿಗೆ ಬರುತ್ತಿದ್ದ ಅಷ್ಟಾವಕ್ರನನ್ನು ನೋಡಿ, ದಾರಿಬಿಡು ಎಂದು ಆತನನ್ನು ಹಿಂದಕ್ಕೆ ತಳ್ಳಲು, ಅಷ್ಟಾವಕ್ರನು ಜನಕರಾಯನನ್ನು ಕಂಡು ಮಾತನಾಡಲುಪಕ್ರಮಿಸಿದನು" ಎಂದು ಲೋಮಶನು ಧರ್ಮರಾಯನಿಗೆ ಹೇಳಿದನು.

## ೧೩೩ನೇ ಅಧ್ಯಾಯ.—ತೀರ್ಥಯಾತ್ರಾ ಪ್ರಶಂಸೆ.—(ಅಷ್ಟಾವಕ್ರೋಪಾಖ್ಯಾನ.)

ವೈಶಂಪಾಯನ ಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಲೋಮಶನು ಧರ್ಮರಾಯನನ್ನು ಕುರಿತು "ಎಲೈ ಧರ್ಮರಾಯನೆ, ಅಷ್ಟಾವಕ್ರನು ಜನಕರಾಯನೊಡನೆ 'ಎಲೈ ಮಹಾರಾಜನೆ, ಎದುರಿಗೆ ಬಂದ ಕುರುಡನಿಗೂ, ಮುದುಕನಿಗೂ, ಹೆಂಗಸಿಗೂ, ಹೊರೆಯನ್ನು ಹೊತ್ತಿರುವವನಿಗೂ, ಸರ್ವರೂ ದಾರಿಯನ್ನು ಬಿಡಬೇಕು; ಅರಸಾದವನು ದೂರದಲ್ಲಿ ಬರುತ್ತಿದ್ದರೆ, ಬ್ರಾಹ್ಮಣನು ಆತನಿಗೆ ದಾರಿಯನ್ನು ಬಿಡಬೇಕು; ಬ್ರಾಹ್ಮಣನು ಸಮೀಪದಲ್ಲಿ ಬರುತ್ತಿದ್ದರೆ, ಅರಸು ಆತನಿಗೆ ದಾರಿಯನ್ನು ಬಿಡುವದು ಯುಕ್ತವಾದದ್ದಲ್ಲವೆ?' ಎನಲು, ಜನಕರಾಯನು 'ಎಲೈ ಬ್ರಾಹ್ಮಣನೆ, ಇದೋ ನಿನಗೆ ನಾನು ದಾರಿಯನ್ನು ಬಿಟ್ಟೇ ಇರುವೆನು. ನಿನ್ನ ಇಚ್ಛಾನುಸಾರವಾಗಿ ಎಲ್ಲಿಗೆ ಬೇಕಾದರೂ ಹೋಗಬಹುದು. ಇಂದ್ರನೂಕೂಡ ಬ್ರಾಹ್ಮಣನಿಗೆ ನಮ್ರನಾಗುವನು. ಬೆಂಕಿಯು ಚಿಕ್ಕದಾದದ್ದೆಂದು ಅದನ್ನು ಅಸಡ್ಡೆಮಾಡುವದುಂಟೆ?' ಎಂದನು. ಆ ಮಾತನ್ನು ಕೇಳಿ ಅಷ್ಟಾವಕ್ರನು 'ಎಲೈ ರಾಯನೆ, ನೀನು ಮಾಡತಕ್ಕ ಯಜ್ಞವನ್ನು ನೋಡಬೇಕೆಂದು ನಾವಿಬ್ಬರೂ ತುಂಬಾ ಕುತೂಹಲದಿಂದ ಬಂದಿರುವೆವು. ಕ್ರೋಧವೆಂಬ ರೋಗದಿಂದ ಪೀಡಿತರಾಗಿ ನಿನ್ನನ್ನು ನೋಡಬೇಕೆಂದು ಅತಿಥಿಗಳಾಗಿ ಬಂದಿರುವ ನಮ್ಮಿಬ್ಬರನ್ನೂ ಈ ದ್ವಾರಪಾಲಕನು ಯಜ್ಞಶಾಲೆಯ ಒಳಗೆ ಬಿಡದೆ ತಡೆಯುತ್ತಿರುವನು. ಅವನು ನಮ್ಮನ್ನು ಒಳಕ್ಕೆ ಬಿಡುವಂತೆ ನೀನು ಆಜ್ಞೆಯನ್ನು ಮಾಡು' ಎನಲು, ಆ ಮಾತನ್ನು ಕೇಳಿ ಆ ರಾಯನು ಅವರಿಬ್ಬರಿಗೂ ದಾರಿಯನ್ನು ಬಿಟ್ಟು, ತಾನು ಯಜ್ಞಶಾಲೆಗೆ ಹೊರಟುಹೋದನು.

ಬಳಿಕ ಅಷ್ಟಾವಕ್ರನೂ ಶ್ವೇತಕೇತುವೂ ಸಹ ಯಜ್ಞಶಾಲೆಗೆ ಪ್ರವೇಶಮಾಡಲು, ದ್ವಾರಪಾಲಕನು ಅವರಿಬ್ಬರನ್ನೂ ತಡೆದು 'ಎಲೈ ಬ್ರಾಹ್ಮಣರೆ, ನಾವು ಬಂದಿಯ ಆಜ್ಞಾನುಸಾರವಾಗಿ ನಡೆಯತಕ್ಕವರು. ನನ್ನ ಮಾತನ್ನು ಕೇಳಿರಿ. ಈ ಯಜ್ಞಶಾಲೆಗೆ ಬಾಲಕರು ಪ್ರವೇಶಮಾಡಕೂಡದು. ವೃದ್ಧರಾಗಿಯೂ ವಿದ್ವಾಂಸರಾಗಿಯೂ ಇರುವ ಬ್ರಾಹ್ಮಣರು ಇಲ್ಲಿ ಪ್ರವೇಶಮಾಡಬಹುದು' ಎನಲು, ಅದನ್ನು ಕೇಳಿ ಅಷ್ಟಾವಕ್ರನು 'ಎಲೈ ದ್ವಾರಪಾಲಕನೆ, ಇಲ್ಲಿ ವೃದ್ಧರಾದವರು ಪ್ರವೇಶಮಾಡಬಹುದಾದರೆ, ನಾವೂ ಪ್ರವೇಶಮಾಡುವದಕ್ಕೆ ಅಡ್ಡಿಯೇನು? ನಾವು ವ್ರತಾಚರಣೆಯನ್ನು ಮಾಡುತ್ತ ಗುರುಶುಶ್ರೂಷೆಯನ್ನು ಮಾಡಿಕೊಂಡು ವೇದವೇದಾಂಗಗಳನ್ನು ಅಧ್ಯಯನಮಾಡಿದವರಾಗಿಯೂ, ಜಿತೇಂದ್ರಿಯರಾಗಿಯೂ, ವೇದಾಂತಶಾಸ್ತ್ರದಲ್ಲಿ ಪಾರಂಗತರಾಗಿಯೂ ಇರುವವರಿಂದ, ನಾವೂ ವೃದ್ಧರಾಗಿಯೇ ಇರುವೆವು. ನಮ್ಮನ್ನು ಬಾಲಕರೆಂದು ನೀನು ಅವಮಾನಮಾಡಬೇಡ. ಚಿಕ್ಕದಾದ ಬೆಂಕಿಯ ಕೆಂಡವನ್ನು ಮುಟ್ಟಿದರೆ, ಅದು ಸುಡದೆ ಬಿಡುವದೆ?' ಎಂದನು. ದ್ವಾರಪಾಲಕನು 'ಎಲೈ ಬ್ರಾಹ್ಮಣನೆ, ನೀನು ವೇದಾರ್ಥವನ್ನು ಬಲ್ಲವನಾಗಿದ್ದರೆ ಬ್ರಹ್ಮಪ್ರತಿಪಾದಕವಾಗಿಯೂ, ಅನೇಕ ಮಂತ್ರಾರ್ಥಗಳನ್ನು ಪ್ರಕಾಶಗೊಳಿಸತಕ್ಕದ್ದಾಗಿಯೂ, ಇರುವ ಜ್ಞಾನಿಗಳಾಡತಕ್ಕಂಥ ಮಾತುಗಳನ್ನಾಡು. ನೀನು ಬಾಲಕನು ಹೌದೋ ಅಲ್ಲವೋ ನೀನೇ ನೋಡು. ಯಾತಕ್ಕೋಸ್ಕರ ನಿನ್ನನ್ನು ನೀನೇ ಹೊಗಳಿಕೊಳ್ಳುವೆ? ಲೋಕದಲ್ಲಿ ಜ್ಞಾನಿಗಳಾದವರು ದುರ್ಲಭರು' ಎನಲು, ಅದನ್ನು ಕೇಳಿ ಅಷ್ಟಾವಕ್ರನು 'ಎಲೈ ದ್ವಾರಪಾಲಕನೆ, ದೂದೀಮರದಲ್ಲಿ ಬಿಟ್ಟ ಕಾಯಿಯಂತೆ ಶರೀರವು ದಪ್ಪವಾಗಿದ್ದಮಾತ್ರವೇ ಅಂಥವನನ್ನು ವೃದ್ಧನೆಂದು ಹೇಳುವದುಂಟೆ? ಕೃಶವಾಗಿದ್ದರೂ, ಚಿಕ್ಕದಾದ ಶರೀರವುಳ್ಳದ್ದಾಗಿದ್ದರೂ, ರಸವತ್ತಾದ ಫಲವೇ ಶ್ಲಾಘ್ಯವಾದದ್ದು. ನಿಸ್ಸಾರವಾದ ಫಲವು ಎಷ್ಟು ದೊಡ್ಡದಾಗಿದ್ದರೆ ತಾನೆ ಪ್ರಯೋಜನವೇನು?' ಎಂದನು. ದ್ವಾರಪಾಲಕನು 'ಎಲೈ ಬ್ರಾಹ್ಮಣನೆ, ಬಾಲಕರಾದವರು ವೃದ್ಧರಾದವರಿಂದ ಜ್ಞಾನವನ್ನು ಪಡೆದು, ತಾವು ಕಾಲಾಂತರದಲ್ಲಿ ವೃದ್ಧರೆನ್ನಿಸಿಕೊಳ್ಳುವರು. ಅಂಥ ಜ್ಞಾನವು ಸ್ವಲ್ಪಕಾಲಕ್ಕೆ ಲಭಿಸಲಾರದು. ಬಾಲಕನಾದ ನೀನು ಯಾತಕ್ಕೋಸ್ಕರ ಸುಮ್ಮನೆ ವೃದ್ಧನಂತೆ ಮಾತನಾಡುವೆ?' ಎನಲು, ಅಷ್ಟಾವಕ್ರನು 'ಎಲೈ ದ್ವಾರಪಾಲಕನೆ, ಮನುಷ್ಯನು ತಲೆ ನರತಮಾತ್ರದಿಂದಲೇ ವೃದ್ಧನೆನ್ನಿಸಿಕೊಳ್ಳಲಾರನು. ಬಾಲಕನಾದವನು ಪ್ರಜ್ಞಾವಂತನಾಗಿದ್ದರೆ, ಅವನನ್ನು ದೇವತೆಗಳಾದರೂ ವೃದ್ಧನೆಂದು ಹೇಳುವರು. ವಯಸ್ಸಾಗಿ ನರೆ ಬಂದಿರತಕ್ಕವನೂ, ದ್ರವ್ಯವಂತನೂ, ಬಂಧುಬಳಗವುಳ್ಳವನೂ ಸಹ, ದೊಡ್ಡವನಾಗಲಾರನೆಂದು ದೊಡ್ಡವರು

ಹೇಳುವರು. ಯಾವನು ಗುರುಕುಲವಾಸವನ್ನು ಮಾಡಿ ಸಾಂಗವಾಗಿ ವೇದವನ್ನು ಅಧ್ಯಯನಮಾಡಿರುವನೋ, ಆತನೇ ನಮಗೆ ದೊಡ್ಡವನಾದವನು. ಎಲೈ ದ್ವಾರಪಾಲಕನೆ, ನಾನು ರಾಜಸಭೆಯಲ್ಲಿ ಬಂದಿಯನ್ನು ನೋಡಬೇಕೆಂದು ಬಂದಿರುವೆನು. ಸ್ವರ್ಣಮಾಲಿಕೆಯನ್ನು ಧರಿಸಿಕೊಂಡಿರುವ ನಿಮ್ಮ ಮಹಾರಾಜನಿಗೆ ಇದನ್ನು ತಿಳುಹಿಸು. ಆ ರಾಜಸಭೆಯಲ್ಲಿರುವ ವಿದ್ವಾಂಸರೊಡನೆ ವಿಶೇಷವಾಗಿ ಪ್ರಸಂಗವನ್ನು ಮಾಡಿ ಬಂದಿಯನ್ನು ನಾನು ಜಯಿಸಿಬಿಡುವೆನು. ಅದನ್ನು ನೀನೂ ನೋಡಬಹುದು ; ಮತ್ತು ಅದನ್ನು ಅಲ್ಲಿರತಕ್ಕ ಮಹಾರಾಜನೂ ರಾಜಪುರೋಹಿತನೂ ಸಕಲ ವಿದ್ಯಾಪಾರಂಗತರಾದ ಬ್ರಾಹ್ಮಣರೂ ಸಹ ನೋಡಲಿ. ಆ ಸಮಯದಲ್ಲಿ ಅಲ್ಲಿರತಕ್ಕ ವಿದ್ವಾಂಸರೆಲ್ಲರೂ ವಾಕ್ಯಾರ್ಥವನ್ನು ಹೇಳುವದಕ್ಕೆ ತೋರದೆ ಮೌನದಿಂದ ಕೂತಿರಲು, ಆಗ ಯಾರು ದೊಡ್ಡವರೋ ಯಾರು ಚಿಕ್ಕವರೋ ಅದನ್ನು ನೀವೆಲ್ಲರೂ ತಿಳಿದುಕೊಳ್ಳಿರಿ' ಎಂದನು. ದ್ವಾರಪಾಲಕನು 'ಎಲೈ ಬ್ರಾಹ್ಮಣನೆ, ವಿನಯಸಂಪನ್ನರಾದ ವಿದ್ವಾಂಸರ ಪ್ರವೇಶಕ್ಕೆ ಅರ್ಹವಾದ ಈ ಯಾಗಶಾಲೆಯನ್ನು ಹತ್ತುವರ್ಷ ವಯಸ್ಸುಳ್ಳ ನೀನು ಹ್ಯಾಗೆ ಪ್ರವೇಶಮಾಡುವದಕ್ಕಾದೀತು ? ಆದರೂ, ಇದಕ್ಕೊಂದುಪಾಯದಿಂದ ಯತ್ನವನ್ನು ಮಾಡುತ್ತೇನೆ' ಎಂದು ಹೇಳಿ, ಅಷ್ಟಾವಕ್ರನನ್ನು ಜೊತೆಯಲ್ಲಿ ಕರೆದುಕೊಂಡು ಹೋಗಿ, ಯಜ್ಞಶಾಲೆಯ ಹೊರಗೆ ನಿಂತಿದ್ದ ಮಹಾರಾಜನಿಗೆ ದರ್ಶನವನ್ನು ಮಾಡಿಸಿ, ಅಷ್ಟಾವಕ್ರನನ್ನು ಕುರಿತು 'ಎಲೈ ಬ್ರಾಹ್ಮಣನೆ, ಇದೋ ನೀನು ಯಜ್ಞಶಾಲೆಯನ್ನು ಪ್ರವೇಶಿಸುವದಕ್ಕಾಗಿ ಮಹಾರಾಜನ ಎದುರಿಗೆ ನಿನ್ನ ಯೋಗ್ಯತೆಯನ್ನು ಪ್ರಕಾಶ ನಡಿಸಿಕೊ' ಎಂದನು.

ಬಳಿಕ ಅಷ್ಟಾವಕ್ರನು ಜನಕರಾಯನನ್ನು ನೋಡಿ 'ಎಲೈ ಜನಕಮಹಾರಾಜನೆ, ಸಕಲೈಶ್ವರ್ಯಸಂಪನ್ನನಾದ ನೀನು ಭೂಮಂಡಲಕ್ಕೆ ಅಧಿಪತಿಯಾದವನು. ಪೂರ್ವದಲ್ಲಿ ಯಯಾತಿರಾಯನೊಬ್ಬನೇ ಸಕಲ ಯಾಗಗಳನ್ನೂ ಮಾಡಿದವನು. ಈಗ ನೀನೊಬ್ಬನೇ ಸಕಲ ಯಾಗಗಳನ್ನೂ ಮಾಡಿರತಕ್ಕವನು. ನಿಮ್ಮ ಆಸ್ಥಾನದಲ್ಲಿರತಕ್ಕ ವಿದ್ವಾಂಸನಾದ ಬಂದಿಯು ಇಲ್ಲಿಗೆ ಬಂದ ವಿದ್ವಾಂಸರನ್ನು ಪ್ರಸಂಗಮಾಡಿ ಗೆದ್ದು, ಅವರನ್ನು ನಿರ್ಭಯನಾಗಿ ನಿನ್ನ ಆಪ್ತದೂತರಿಂದ ನೀರಿನಲ್ಲಿ ಮುಳುಗಿಸಿಬಿಡುವನು ; ಈ ವೃತ್ತಾಂತವನ್ನು ಬ್ರಾಹ್ಮಣರ ಮುಖದಿಂದ ನಾನು ಕೇಳಿ, ವೇದಾಂತಶಾಸ್ತ್ರದಲ್ಲಿ ಆತನೊಡನೆ ಪ್ರಸಂಗಮಾಡಬೇಕೆಂದು ಇಲ್ಲಿಗೆ ಬಂದಿರುವೆನು. ಆ ಬಂದಿಯು ಎಲ್ಲಿರುವನು ? ಸೂರ್ಯನು ನಕ್ಷತ್ರಮಂಡಲದ ತೇಜಸ್ಸನ್ನು ಅಡಗಿಸುವಂತೆ, ನಾನು ಆತನ ತೇಜಸ್ಸನ್ನು ಅಡಗಿಸಿಬಿಡುತ್ತೇನೆ' ಎನಲು, ಜನಕರಾಯನು 'ಎಲೈ ಬಾಲಕನೆ, ನೀನು ಸಕಲ ಶಾಸ್ತ್ರಪಾರಂಗತನಾದ ಬಂದಿಯ ಪಾಂಡಿತ್ಯವನ್ನು ತಿಳಿಯದೆ, ಆತನನ್ನು ಪ್ರಸಂಗದಲ್ಲಿ ಜಯಿಸುತ್ತೇನೆಂದು ಹೇಳುತ್ತಿರುವೆ. ಆತನ ಪಾಂಡಿತ್ಯವನ್ನು ತಿಳಿದವರು ಬೇರೆ ಇಂಥ ಮಾತನ್ನು ಆಡಲಾರರು. ಬಹುಮಂದಿ ವೇದಶಾಸ್ತ್ರಜ್ಞರಾದ ಬ್ರಾಹ್ಮಣರು ಆತನ ಸಾಮರ್ಥ್ಯವನ್ನು ತಿಳಿದಿರುವರು. ನಿನ್ನಂತೆ ಹೀಗೆ ಆತನ ಪ್ರಭಾವವನ್ನು ತಿಳಿಯದೆ ಬಂದ ಬಹುಮಂದಿ ವಿದ್ವಾಂಸರು ಪ್ರಸಂಗದಲ್ಲಿ ಆತನಿಂದ ಪರಾಜಿತರಾಗಿ, ಸೂರ್ಯತೇಜಸ್ಸಿನಿಂದ ನಕ್ಷತ್ರಗಳ ತೇಜಸ್ಸು ಕುಂದುವಂತೆ, ತೇಜೋವಿಹೀನರಾಗಿ ಹೋದರು. ಇನ್ನೂ ಕೆಲವುಮಂದಿ ವಿದ್ವಾಂಸರು ತಾವು ಜ್ಞಾನಾಧಿಕರೆಂದು ಗರ್ವಿತರಾಗಿ, ಬಂದಿಯನ್ನು ಜಯಿಸಬೇಕೆಂದು ಬಂದು, ಆತನ ಸಂಗಡ ಪ್ರಸಂಗಮಾಡಲಾರದೆ ಸೋತು ಸಭೆಯಿಂದೆದ್ದು ಓಡಿಹೋಗಿರುವರು. ಯಾರುತಾನೇ ನಮ್ಮ ಆಸ್ಥಾನದ ವಿದ್ವಾಂಸರೊಡನೆ ಪ್ರಸಂಗಮಾಡಿ ಗೆಲ್ಲಬಲ್ಲರು' ಎಂದನು. ಅದನ್ನು ಕೇಳಿ ಅಷ್ಟಾವಕ್ರನು 'ಎಲೈ ರಾಯನೆ, ನಮ್ಮಂಥವರೊಡನೆ ಪ್ರಸಂಗಮಾಡದಿರುವದರಿಂದ, ಬಂದಿಯು ನಿರ್ಭಯವಾಗಿ ಸಿಂಹದಂತೆ ಗರ್ಜಿಸಿಕೊಂಡಿರುವನು. ನನ್ನ ಸಂಗಡ ಪ್ರಸಂಗಕ್ಕೆ ತೊಡಗಿದರೆ, ಮಾರ್ಗದಲ್ಲಿ ಅಚ್ಚು ಮುರಿದು ಬಿದ್ದ ಬಂಡಿಯಂತೆ ಆತನು ಪರಾಜಿತನಾಗಿ ಬಿದ್ದುಹೋಗುವನು' ಎನಲು, ಜನಕರಾಯನು 'ಎಲೈ ಬ್ರಾಹ್ಮಣನೆ, ನೀನು ಅಷ್ಟು ಸಮರ್ಥನಾಗಿದ್ದ ಪಕ್ಷದಲ್ಲಿ, ಈ ಪ್ರಶ್ನೆಗೆ ಉತ್ತರವನ್ನು ಹೇಳು. ಆರು ಗುಂಬಗಳುಳ್ಳದ್ದಾಗಿಯೂ, ಕೊನೆಯಲ್ಲಿ ಮೂವತ್ತುಮೂವತ್ತು ಭಾಗಗಳುಳ್ಳ ಹನ್ನೆರಡು ಆರೇಕಾಲುಗಳುಳ್ಳದ್ದಾಗಿಯೂ, ಇಪ್ಪತ್ತುನಾಲ್ಕು ಗಿಣ್ಣುಗಳುಳ್ಳದ್ದಾಗಿಯೂ, ಮುನ್ನೂರರವತ್ತು ಅಗ್ರಭಾಗಗಳುಳ್ಳದ್ದಾಗಿಯೂ, ಇರುವ ಒಂದು ಚಕ್ರವುಂಟು. ಅದನ್ನು ಬಲ್ಲವನೇ ದೊಡ್ಡವಿದ್ವಾಂಸನು. ನೀನದನ್ನು ತಿಳಿದಿದ್ದರೆ ಹೇಳು' ಎಂದು ಪ್ರಶ್ನೆಮಾಡಿದನು.

ಅದನ್ನು ಕೇಳಿ ಅಷ್ಟಾವಕ್ರನು 'ಎಲೈ ರಾಯನೆ, ಆ ಚಕ್ರಕ್ಕೆ ವಸಂತಾದಿಯಾದ ಆರು ಋತುಗಳೂ ಆರು ಗುಂಬಗಳಾಗಿರುವವು; ಮೂವತ್ತುಮೂವತ್ತು ದಿವಸಗಳಿಂದ ಕೂಡಿದ ಚೈತ್ರಾದಿಯಾದ ಹನ್ನೆರಡು ತಿಂಗಳುಗಳು ಅದಕ್ಕೆ ಕೊನೆಯಲ್ಲಿ ಮೂವತ್ತುಮೂವತ್ತು ಭಾಗಗಳುಳ್ಳ ಹನ್ನೆರಡು ಆರೇಕಾಲುಗಳಾಗಿರುವವು; ಹನ್ನೆರಡು ಪೂರ್ಣಿಮೆಗಳೂ ಹನ್ನೆರಡು ಅಮಾವಾಸ್ಯೆಗಳೂ ಅದಕ್ಕೆ ಇಪ್ಪತ್ತುನಾಲ್ಕು ಗಿಣ್ಣುಗಳಾಗಿರುವವು; ಮುನ್ನೂರು ಅರುವತ್ತು ದಿವಸಗಳೆಂಬ ಮುನ್ನೂರು ಅರುವತ್ತು ಅಗ್ರಭಾಗಗಳುಳ್ಳ ಸಂವತ್ಸರಾತ್ಮಕವಾದ ಕಾಲಚಕ್ರವು ಯಾವಾಗಲೂ ತಿರುಗುತ್ತಿರುವದು. ಅದು ನಿನ್ನನ್ನು ರಕ್ಷಿಸಲಿ' ಎಂದು ಉತ್ತರವನ್ನು ಹೇಳಿದನು. ಬಳಿಕ ಜನಕರಾಯನು 'ಎಲೈ ಬ್ರಾಹ್ಮಣನೆ, ರಥಕ್ಕೆ ಕಟ್ಟಿದ ಎರಡು ಕುದುರೆಗಳಂತೆ ಜೊತೆಯಾಗಿರತಕ್ಕವುಗಳಾಗಿಯೂ, ಗಿಡುಗನಂತೆ ಅಕಸ್ಮಾತ್ತಾಗಿ ವೇಗದಿಂದ ಬರತಕ್ಕವುಗಳಾಗಿಯೂ, ಇರತಕ್ಕವುಗಳು ಯಾವವು? ಆ ಎರಡನ್ನು ದೇವತೆಗಳೊಳಗೆ ಯಾವನು ಗರ್ಭದಲ್ಲಿ ಧರಿಸತಕ್ಕವನು? ಅವೆರಡೂ ಏನನ್ನು ಹುಟ್ಟಿಸುವವು?' ಎಂದು ಪುನಃ ಪ್ರಶ್ನೆಮಾಡಿದನು. ಅದಕ್ಕೆ ಅಷ್ಟಾವಕ್ರನು 'ಎಲೈ ರಾಯನೆ, ರಥಕ್ಕೆ ಕಟ್ಟಿದ ಕುದುರೆಗಳಂತೆ ಜೊತೆಯಾಗಿ ಗಿಡುಗನಂತೆ ಅಕಸ್ಮಾತ್ತಾಗಿ ಬರತಕ್ಕವುಗಳು ದುಃಖಮೃತ್ಯುಗಳು. ಅವೆರಡನ್ನೂ ಮನೋಭಿಮಾನ ದೇವತೆಯು ತನ್ನಲ್ಲಿ ಧರಿಸುವದು. ಜೀವನು ಕರ್ಮಫಲವನ್ನು ಅನುಭವಿಸುವದಕ್ಕೋಸ್ಕರ, ಅವೆರಡೂ ಮನಸ್ಸನ್ನು ಹುಟ್ಟಿಸುವವು. ಎಲೈ ರಾಯನೆ, ಇಂಥ ಅಮಂಗಳಕರವಾದ ದುಃಖಮೃತ್ಯುಗಳು ನಿನ್ನ ಮನೆಯಲ್ಲೂ, ನಿನ್ನ ಶತ್ರುಗಳ ಮನೆಯಲ್ಲೂ ಸಹ, ಎಂದಿಗೂ ಉಂಟಾಗ ಕೂಡದು' ಎಂದು ಉತ್ತರವನ್ನು ಹೇಳಿದನು. ಬಳಿಕ ಜನಕರಾಯನು ಪುನಃ 'ಎಲೈ ಬ್ರಾಹ್ಮಣನೆ, ಯಾವದಕ್ಕೆ ಸ್ವಪ್ನಾವಸ್ಥೆಯಲ್ಲೂ ದೃಷ್ಟಿಯು ನಷ್ಟವಾಗದಿರುವದು? ಯಾವದು ಹುಟ್ಟಿ ಚಲಿಸದೆ ಇರುವದು? ಯಾವದಕ್ಕೆ ದುಃಖಾಶ್ರಯವಾದ ಹೃದಯವಿಲ್ಲ? ಯಾವದು ಜಾಗ್ರತೆಯಾಗಿ ವೃದ್ಧಿಯನ್ನು ಹೊಂದುವದು?' ಎಂದು ಪ್ರಶ್ನೆಮಾಡಲು, ಅಷ್ಟಾವಕ್ರನು 'ಎಲೈ ರಾಯನೆ, ನದಿಯ ಎರಡು ದಡದಲ್ಲೂ ಸಂಚಾರಮಾಡತಕ್ಕ ಮತ್ಸ್ಯದಂತೆ, ಇಹ ಪರಗಳೆರಡರಲ್ಲೂ ಸಂಚಾರಮಾಡತಕ್ಕ ಚಿದ್ರೂಪನಾದ ಪುರುಷನಿಗೆ ಸ್ವಪ್ನಾವಸ್ಥೆಯಲ್ಲಿಯೂ ದೃಷ್ಟಿಯು ನಷ್ಟವಾಗದಿರುವದು. ಭೂತಾತ್ಮಕವಾದ ಬ್ರಹ್ಮಾಂಡವು ಹುಟ್ಟಿ ಚಲಿಸದೆ ಇರುವದು. ಶರೀರಾಭಿಮಾನವನ್ನು ಬಿಟ್ಟಿರತಕ್ಕ ಯೋಗಿಗೆ ದುಃಖಾಶ್ರಯವಾದ ಹೃದಯವಿಲ್ಲ. ಸಂಸಾರವೆಂಬ ನದಿಯು ಜಾಗ್ರತೆಯಾಗಿ ವೃದ್ಧಿಯನ್ನು ಹೊಂದುವದು' ಎಂದು ಉತ್ತರವನ್ನು ಹೇಳಿದನು. ಬಳಿಕ ಜನಕರಾಯನು ಅಷ್ಟಾವಕ್ರನನ್ನು ಕುರಿತು 'ಎಲೈ ಬ್ರಾಹ್ಮಣನೆ, ನೀನು ದೇವಶಕ್ತಿಯುಳ್ಳವನು. ನಿನ್ನನ್ನು ಮನುಷ್ಯನನ್ನಾಗಿಯೂ ಬಾಲಕನನ್ನಾಗಿಯೂ ನಾನು ಭಾವಿಸಲಾರೆನು. ನೀನು ನನಗೆ ಸಮ್ಮತನಾದವನು, ಮತ್ತು ವೃದ್ಧನಾದವನೂ ಅಹುದು. ಶ್ಲಾಘ್ಯವಾಗಿ ಮಾತನಾಡುವದರಲ್ಲಿ ನಿನಗೆ ಸಮಾನನಾದವನು ಯಾವನೂ ಇಲ್ಲ. ಅದ್ದರಿಂದ ನೀನು ಯಜ್ಞಶಾಲೆಗೆ ಪ್ರವೇಶಮಾಡಬಹುದು. ಅಲ್ಲಿ ಬಂದಿಯನ್ನೂ ಕಾಣಬಹುದು' ಎಂದು ನುಡಿದನು" ಎಂದು ಲೋಮಶನು ಧರ್ಮರಾಯನಿಗೆ ಹೇಳಿದನು.

---

೧೩೪ನೇ ಅಧ್ಯಾಯ.—ತೀರ್ಥಯಾತ್ರಾಪ್ರಶಂಸೆ.—(ಅಷ್ಟಾವಕ್ರೋಪಾಖ್ಯಾನ.)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಲೋಮಶನು ಧರ್ಮರಾಯನನ್ನು ಕುರಿತು "ಎಲೈ ಧರ್ಮರಾಯನೆ ಕೇಳು, ಬಳಿಕ ಅಷ್ಟಾವಕ್ರನು ಯಜ್ಞಶಾಲೆಯನ್ನು ಪ್ರವೇಶಿಸಿ, ಜನಕರಾಯನನ್ನು ನೋಡಿ 'ಎಲೈ ರಾಯನೆ, ಈ ಸಭೆಯಲ್ಲಿ ವೀರಾಗ್ರೇಸರರಾದ ಅಸದೃಶಪ್ರಭಾವರಾದ ಅನೇಕಮಂದಿ ಅರಸುಗಳು ಸೇರಿರುವರು. ಪ್ರಸಂಗ ಮಾಡುವದರಲ್ಲಿ ಸಮರ್ಥನಾದ ಬಂದಿಯನ್ನು ಮಾತ್ರ ಇಲ್ಲಿ ಕಾಣೆನಲ್ಲಾ! ಮಹಾಜಲದಲ್ಲಿ ಹಂಸವನ್ನು ಹುಡುಕುವಂತೆ, ಆತನನ್ನು ಹುಡುಕುತ್ತಿರುವೆನಲ್ಲಾ!

ಲ್ಯೈ ಬಂದಿಯೆ, ಪ್ರಸಂಗಮಾಡುವದರಲ್ಲಿ ನನಗೆ ಸಮಾನರಾದವರು ಯಾರೂ ಇಲ್ಲವೆಂದು ಗರ್ವಪಡುತ್ತ, ಪರಾಜಿತ ದವರನ್ನು ನೀರಿನಲ್ಲಿ ಮುಳುಗಿಸಿಬಿಡುತ್ತೇನೆಂದು ಪಂತಮಾಡಿಕೊಂಡಿರುವ ನೀನು ಈಗ ಯಾತಕ್ಕೋಸ್ಕರ ನ್ನ ಸಂಗಡ ಮಾತನಾಡದಿರುವೆ ? ಈಗ ನನ್ನೆದುರಿಗೆ ನೀನು ಬಂದದ್ದೇ ಆದರೆ, ಪ್ರಳಯಕಾಲದ ಅಗ್ನಿಯ ದುರಿಗೆ ಬಂದ ನದೀಪ್ರವಾಹದಂತೆ ಕ್ಷೀಣವಾಗಿ ಹೋಗುವೆ. ಈಗ ನೀನೆಲ್ಲೂ ಓಡಿಹೋಗದೆ ನನ್ನ ಮುಂದೆ ನಿಲ್ಲು. ನು ನನ್ನನ್ನು ಮಲಗಿರತಕ್ಕ ಹುಲಿಯಂತೆಯೂ, ನಾಲಿಗೆಯಿಂದ ಕಟವಾಯನ್ನು ಸವರಿಕೊಳ್ಳುತ್ತ ವಿಷಜ್ವಾಲೆ ಳಿಂದ ಕೂಡಿರುವ ಘಟಸರ್ಪದಂತೆಯೂ ತಿಳಿ. ನೀನು ನಮ್ಮ ತಂದೆಯನ್ನು ನಿಗ್ರಹಿಸಿರುವದರಿಂದ, ತನ್ನ ಲೆಯಮೇಲೆ ಕಾಲಿಂದ ಒದ್ದಿರುವೆ. ಈಗ ನೀನು ನನ್ನ ಕಣ್ಣಿಗೆ ಕಾಣಿಸಿಕೊಳ್ಳದೆ ಎಲ್ಲಿ ಹೋದರೆ ತಾನೇ ತಪ್ಪಿಸಿ ೊಳ್ಳುವದಕ್ಕಾದೀತು ? ಯಾವ ಪುರುಷನು ದುರ್ಬಲನಾಗಿದ್ದರೂ, ಕಾಯಪುಷ್ಟಿಯಿಂದ ಅಹಂಕಾರಪಡುತ್ತ ಯಿಂದ ಪರ್ವತವನ್ನು ಗುದ್ದುವನೋ, ಅವನ ಕೈಯೂ ಉಗುರುಗಳೂ ಸಹ ಸೀಳಿ ಹೋಗುವವೇ ಹೊರತು ರ್ವತಕ್ಕೇನಾದರೂ ನೋವಾಗುವದೆ ? ಎಲೈ ಜನಕರಾಯನೆ, ಪರ್ವತಗಳಲ್ಲಿ ಮೈನಾಕಪರ್ವತವು ಹ್ಯಾಗೆ ೇಷ್ಠವಾದದ್ದೋ, ಹಸುಗಳಲ್ಲಿ ಗೂಳಿಯು ಹ್ಯಾಗೆ ಶ್ರೇಷ್ಠವಾದದ್ದೋ, ಹಾಗೆ ಅರಸುಗಳಲ್ಲಿ ನೀನು ಶ್ರೇಷ್ಠನಾದ ನು. ಆ ಬಂದಿ ಎಲ್ಲಿರುವನು ? ಅವನನ್ನು ನನ್ನೆದುರಿಗೆ ಕರೆದುಕೊಂಡು ಬಾ ' ಎಂದು ಕೋಪದಿಂದ ಆರ್ಭಟ ತ್ತ, ಬಂದಿಯ ಹೆಸರನ್ನು ಹಿಡಿದು ' ಎಲೈ ಬಂದಿಯೆ, ನನ್ನ ಮಾತಿಗೆ ಉತ್ತರವನ್ನು ಕೊಡು. ನಿನ್ನ ಮಾತಿಗೆ ುತ್ತರವನ್ನು ಹೇಳುವೆನು ' ಎಂದು ನುಡಿದನು.

ಅಷ್ಟುಹೊತ್ತಿಗೆ ಬಂದಿಯು ಅಷ್ಟಾವಕ್ರನನ್ನು ಕುರಿತು ' ಎಲೈ ಬ್ರಾಹ್ಮಣನೆ, ಒಬ್ಬನೇ ಅಗ್ನಿಯು ಹ್ಯಾಗೆ ನೇಕಪ್ರಕಾರವಾಗಿ ಪ್ರಕಾಶಿಸುವನೋ, ಮತ್ತು ಸೂರ್ಯನು ತಾನೊಬ್ಬನಾಗಿಯೇ ಇದ್ದು ಈ ಪ್ರಪಂಚವನ್ನೆಲ್ಲಾ ಹ್ಯಾಗೆ ಪ್ರಕಾಶಗೊಳಿಸುವನೋ, ಹಾಗೆ ಬುದ್ಧಿಯೆಂಬ ಪದಾರ್ಥವು ವಿಷಯೋಪಭೋಗದಿಂದ ಶರೀರಕ್ಕೆ ರಕ್ಷಕ ಾದ ಇಂದ್ರಿಯಗಳಿಗೆ ಪ್ರೇರಕವಾಗಿಯೂ, ಅಧಿಪತಿಯಾಗಿಯೂ ಇರುವದು. ಈ ಬುದ್ಧಿಯಲ್ಲೇ ಇತರ ದಾರ್ಥಗಳೆಲ್ಲಾ ಸೇರಿಹೋಗುವದರಿಂದ, ಇದೊಂದೇ ಹೊರತು ಮತ್ತೊಂದಿಲ್ಲವೆಂದು ನಾನು ಹೇಳುವೆನು. ದರಮೇಲೆ ನಿನಗೇನಾದರೂ ತೋರಿದರೆ, ಹೇಳಬಹುದು ' ಎನಲು, ಅಷ್ಟಾವಕ್ರನು ' ಎಲೈ ಬಂದಿಯೆ, ಬ್ರಹ್ಮಕ್ಲಪ್ತಿ ಿಂದ ಭಾರ್ಯಾಪತಿಗಳೂ, ಅಶ್ವಿನೀದೇವತೆಗಳೂ, ಪರ್ವತನಾರದರೆಂಬ ದೇವರ್ಷಿಗಳೂ, ಇಂದ್ರಾಗ್ನಿಗಳೂ, ಹ್ಯಾಗೆ ಜೊತೆಯಾಗಿರುವರೋ ಹಾಗೆ, ಈ ಶರೀರವೆಂಬ ರಥವು ಸಂಚರಿಸುವದಕ್ಕೆ ಎರಡು ಚಕ್ರಗಳಂತಿರುವ ಬುದ್ಧಿ ಚೈತನ್ಯಗಳೆಂಬ ಎರಡು ಪದಾರ್ಥಗಳು ಯಾವಾಗಲೂ ಜೊತೆಯಾಗಿಯೇ ಇರುವವು ; ದೃಶ್ಯವಾದ ಬುದ್ಧಿಗೆ ್ರಷ್ಟೃತ್ವವು ಸಂಭವಿಸುವದಿಲ್ಲವಾದ್ದರಿಂದ, ದ್ರಷ್ಟೃವಾದ ಚೈತನ್ಯವು ಮತ್ತೊಂದುಂಟೆಂದು ಅಂಗೀಕರಿಸಬೇಕು. ಆ ಬುದ್ಧಿಚೈತನ್ಯಗಳೆಂಬ ಎರಡು ಪದಾರ್ಥಗಳು ಶ್ರುತಿಪ್ರಸಿದ್ಧಗಳಾಗಿರುವದರಿಂದ, ಒಂದೇ ಪದಾರ್ಥವೆಂದು ಹೇಳು ದು ಸಂಗತವಾದದ್ದಲ್ಲ ' ಎಂದು ನುಡಿದನು. ಅವನ್ನು ಕೇಳಿ ಬಂದಿಯು ' ಎಲೈ ಬ್ರಾಹ್ಮಣನೆ, ಮೂರು ವೇದ ಳೂ ಕರ್ಮವನ್ನು ಹೇಳುತ್ತಿರುವವು. ಬ್ರಹ್ಮಕ್ಷತ್ರಿಯವೈಶ್ಯರೆಂಬ ಮೂರು ವರ್ಣದವರೂ, ಪ್ರಾತಸ್ಸವನಾದಿ ಮೂರು ಕರ್ಮಗಳನ್ನು ಮಾಡುವರು ; ಕರ್ಮಫಲಕ್ಕೆ ಭೋಗಸ್ಥಾನವಾದ ಸ್ವರ್ಗ, ಭೂಮಿ, ನರಕಗಳೆಂಬ ಮೂರು ಸ್ಥಾನಗಳಿರುವವು. ಜಾಗ್ರತ್ತು, ಸ್ವಪ್ನ, ಸುಷುಪ್ತಿ ಎಂಬ ಮೂರು ಅವಸ್ಥೆಗಳೂ ಇರುವವು. ಪುಣ್ಯಕರ್ಮದಿಂದ ೇವ, ಸ್ಥಾವರ, ಮಾನುಷ ಎಂಬ ಮೂರು ಜನ್ಮಗಳೂ, ಪಾಪಕರ್ಮದಿಂದ ನಾರಕ, ಸ್ಥಾವರ, ತಿರ್ಯಕ್ಕು ಎಂಬ ಮೂರು ಜನ್ಮಗಳೂ ಉಂಟಾಗುವವು. ಹೀಗೆ ಶ್ರುತಿಪ್ರಸಿದ್ಧವಾದ ಕರ್ಮವೊಂದನ್ನು ಹೆಚ್ಚಾಗಿ ಅಂಗೀಕರಿಸಬೇಕಾ ರುವದರಿಂದ, ಪದಾರ್ಥಗಳು ಮೂರೆಂದು ನಾನು ಹೇಳುತ್ತೇನೆ ' ಎನಲು, ಅಷ್ಟಾವಕ್ರನು ' ಎಲೈ ಬಂದಿಯೆ, ಬ್ರಹ್ಮ ಜ್ಞಾನಿಗಳಿಗೆ ಜ್ಞಾನದಿಂದ ಉಂಟಾಗತಕ್ಕ ಸ್ಥಾನಗಳು ನಾಲ್ಕಾಗಿರುವವು. ಶೂದ್ರವರ್ಣದವರೂ ಜ್ಞಾನಯಜ್ಞಕ್ಕೆ ಅಧಿಕಾರಿಗಳಾದ್ದರಿಂದ, ನಾಲ್ಕುವರ್ಣದವರೂ ಯಜ್ಞಾಧಿಕಾರಿಗಳಾಗಿರುವರು. ವಿರಾಟ್, ಸೂತ್ರಾಂ, ತರ್ಯಾಮಿ, ುರ್ಯಸಾಕ್ಷಾತ್ಕಾರ ಎಂಬ ನಾಲ್ಕು ಅವಸ್ಥೆಗಳಿರುವವು. ಆ ನಾಲ್ಕು ಅವಸ್ಥೆಗಳಿಗೂ ವಾಚಕವಾಗಿಯೂ, ಪರಾ ಪಶ್ಯಂತೀ

ಮಧ್ಯಮಾ ವೈಖರೀ ಎಂಬ ನಾಲ್ಕು ಸ್ಥಾನಗಳುಳ್ಳವುಗಳಾಗಿಯೂ, ಇರುವ ಅಕಾರ ಉಕಾರ ಮಕಾರ ಅರ್ಧಮಾತ್ರಾರೂಪವಾದ ವರ್ಣಗಳೂ ನಾಲ್ಕಾಗಿರುವವು. ಮತ್ತು ಬ್ರಹ್ಮಚರ್ಯ, ಗಾರ್ಹಸ್ಥ್ಯ, ವಾನಪ್ರಸ್ಥ, ಸನ್ಯಾಸ ಎಂಬ ಆಶ್ರಮಗಳೂ ನಾಲ್ಕಾಗಿರುವವು. ಸ್ವರ್ಗಾದಿ ಮೂರು ಲೋಕಗಳಿಗಿಂತಲೂ, ಜ್ಞಾನಿಗಳು ಹೊಂದತಕ್ಕ ಮೋಕ್ಷವೆಂಬ ನಾಲ್ಕನೇ ಸ್ಥಾನವೊಂದಿರುವದರಿಂದ ಮೋಕ್ಷವೂ ಸೇರಿ ಪದಾರ್ಥಗಳು ನಾಲ್ಕೆಂದು ಶ್ರುತಿಪ್ರಸಿದ್ಧವಾಗಿರುವದು' ಎಂದು ನುಡಿದನು. ಅನಂತರ ಬಂದಿಯು 'ಎಲೈ ಅಷ್ಟಾವಕ್ರನೆ, ಯಜ್ಞಾದಿಕರ್ಮಗಳಲ್ಲಿ ಗಾರ್ಹಪತ್ಯ, ಆಹವನೀಯ, ದಕ್ಷಿಣಾಗ್ನಿ, ಸಭ್ಯ, ಆವಸಥ್ಯ, ಎಂಬ ಅಗ್ನಿಗಳು ಹ್ಯಾಗೆ ಐದು ಸಂಖ್ಯೆಯುಳ್ಳವುಗಳಾಗಿರುವವೋ; ಪಙ್ಕ್ತಿ ಛಂದಸ್ಸಿನ ಪಾದಗಳು ಹ್ಯಾಗೆ ಐದು ಸಂಖ್ಯೆಯುಳ್ಳವುಗಳಾಗಿರುವವೋ; ದರ್ಶ, ಪೂರ್ಣಮಾಸ, ಚಾತುರ್ಮಾಸ್ಯ, ಪಶು, ಸೋಮ ಎಂಬ ಶ್ರುತಿಪ್ರಸಿದ್ಧವಾದ ಯಜ್ಞಗಳು ಹ್ಯಾಗೆ ಐದು ಸಂಖ್ಯೆಯುಳ್ಳವುಗಳಾಗಿರುವವೋ; ಹಾಗೆ ಶಬ್ದಾದಿವಿಷಯಗಳನ್ನು ಗ್ರಹಿಸತಕ್ಕ ಶ್ರೋತ್ರಾದಿ ಇಂದ್ರಿಯಗಳು ಐದು ಸಂಖ್ಯೆಯುಳ್ಳವುಗಳಾಗಿರುವವು. ಜ್ಞಾನಕ್ಕೆ ಪ್ರಮಾಣ, ವಿಪರ್ಯಯ, ವಿಕಲ್ಪ, ನಿದ್ರಾ, ಸ್ಮೃತಿಯೆಂಬ ಶಿಖಾಸ್ಥಾನಾಪನ್ನವಾದ ಐದು ವೃತ್ತಿಗಳು ಶ್ರುತಿಪ್ರಸಿದ್ಧಗಳಾಗಿರುವವು. ಲೋಕದಲ್ಲಿ ಪ್ರವಾಹರೂಪಗಳಾಗಿರುವ ವಿಷಯಗಳೂ ಐದು ಸಂಖ್ಯೆಯುಳ್ಳವುಗಳಾಗಿರುವವು. ಆದ್ದರಿಂದ ನಾಲ್ಕೇ ಪದಾರ್ಥಗಳೆಂದು ಹೇಳುವದಕ್ಕಾಗುವದಿಲ್ಲ' ಎನಲು, ಅಷ್ಟಾವಕ್ರನು 'ಎಲೈ ಬಂದಿಯೆ, ಅಧಾನವೆಂಬ ಕರ್ಮದಲ್ಲಿ ದಕ್ಷಿಣಾರ್ಥವಾದ ಗೋವುಗಳು ಹ್ಯಾಗೆ ಆರು ಸಂಖ್ಯೆಯುಳ್ಳವುಗಳಾಗಿರುವವೋ, ಕಾಲಚಕ್ರಕ್ಕೆ ಸೇರಿದ ವಸಂತಾದಿಋತುಗಳು ಹ್ಯಾಗೆ ಆರು ಸಂಖ್ಯೆಯುಳ್ಳವುಗಳಾಗಿರುವವೋ, ಕೃತ್ತಿಕಾನಕ್ಷತ್ರಗಳು ಹ್ಯಾಗೆ ಆರು ಸಂಖ್ಯೆಯುಳ್ಳವುಗಳಾಗಿರುವವೋ, ಸದ್ಯಸ್ಕಾ ಎಂಬ ಯಜ್ಞಗಳು ಹ್ಯಾಗೆ ಆರು ಸಂಖ್ಯೆಯುಳ್ಳವುಗಳಾಗಿ ವೇದದಲ್ಲಿ ಪ್ರಸಿದ್ಧಗಳಾಗಿರುವವೋ, ಹಾಗೆ ಕರ್ತೃತ್ವಾದಿಧರ್ಮಗಳುಳ್ಳ ಮನಸ್ಸಿನೊಡಗೂಡಿರುವ ಶಬ್ದಾದಿವಿಷಯಗಳನ್ನು ಗ್ರಹಿಸತಕ್ಕ ಶ್ರೋತ್ರಾದಿ ಇಂದ್ರಿಯಗಳು ಆರು ಸಂಖ್ಯೆಯುಳ್ಳವುಗಳಾಗಿರುವವು' ಎಂದು ನುಡಿದನು. ಬಳಿಕ ಬಂದಿಯು 'ಎಲೈ ಬ್ರಾಹ್ಮಣನೆ, ಮನಸ್ಸಿನೊಡಗೂಡಿದ ಶ್ರೋತ್ರಾದಿ ಇಂದ್ರಿಯಗಳು ಬೋಧ್ಯವೆಂಬ ವಿಷಯವನ್ನು ಗ್ರಹಿಸತಕ್ಕ ಬುದ್ಧಿಯೊಡಗೂಡಿ, ಏಳು ಸಂಖ್ಯೆಯುಳ್ಳವುಗಳಾಗಿರುವವು. ಇಂದ್ರಿಯಗಳು ಐಹಿಕಾಮುಷ್ಮಿಕವಿಷಯಗಳಲ್ಲಿ ಆಸಕ್ತಗಳಾಗಿ, ಪ್ರತ್ಯೇಕಪ್ರತ್ಯೇಕ ಪಶುರೂಪಗಳಾಗಿ, ಚೇತನವನ್ನು ಏಳು ವಿಷಯಗಳಲ್ಲಿ ಪ್ರವರ್ತಿಸುವಹಾಗೆ ಮಾಡಿ, ಏಳು ತಂತಿಗಳುಳ್ಳ ವೀಣೆಯು ಶಬ್ದವನ್ನುಂಟುಮಾಡುವಂತೆ, ಆತ್ಮನಿಗೆ ವಿಷಯಸುಖವನ್ನುಂಟುಮಾಡುವವು' ಎನಲು, ಅಷ್ಟಾವಕ್ರನು 'ಎಲೈ ಬಂದಿಯೆ, ಅಹಂಕಾರದೊಡನೆ ಕೂಡಿ ವಿಷಯಗಳಲ್ಲಿ ಪ್ರವರ್ತಿಸತಕ್ಕ ಇಂದ್ರಿಯಗಳು ಎಂಟು ಸಂಖ್ಯೆಯುಳ್ಳವುಗಳಾಗಿರುವವು. ಅಂಥ ವಿಷಯಗಳು ಸಂಕ್ಷೇಪವಾಗಿ ಎಂಟು ಸಂಖ್ಯೆಯುಳ್ಳವುಗಳಾಗಿದ್ದರೂ, ಅನಂತ ಸಂಖ್ಯೆಯುಳ್ಳವುಗಳಾಗಿರುವವು. ಅಂಥ ಇಂದ್ರಿಯುಗಳುಳ್ಳ ಆತ್ಮನನ್ನು ತಿಳಿದದ್ದೇಆದರೆ, ದ್ವೈತಜ್ಞಾನವು ನಿವೃತ್ತವಾಗುವದು. ಮತ್ತು ಲಿಂಗಶರೀರವುಳ್ಳ ಇಂದ್ರಿಯಾಭಿಮಾನದೇವತೆಗಳಲ್ಲಿ ವಿಷಯವಾಸನೆಗಳು ಎಂಟು ಸಂಖ್ಯೆಯುಳ್ಳವುಗಳಾಗಿರುವವು. ಬಂಧನಸ್ಥಾನಭೂತವಾದ ಅಜ್ಞಾನವು ಎಂಟು ಪ್ರಕಾರವಾಗಿ, ವಿಷಯೇಂದ್ರಿಯಸಂಯೋಗಗಳಲ್ಲಿ ಪ್ರವರ್ತಿಸುವದು. ಆದ್ದರಿಂದ ಇಂದ್ರಿಯಗಳೂಸಹ ಎಂಟಾಗಿರುವವು' ಎಂದು ನುಡಿದನು. ಅದನ್ನು ಕೇಳಿ ಬಂದಿಯು 'ಎಲೈ ಬ್ರಾಹ್ಮಣನೆ, ಪಿತೃಯಜ್ಞದಲ್ಲಿ ಸಾಮಿಧೇನಿಯೆಂಬ ಋಕ್ಕು ಮೂರಾವೃತ್ತಿಗಳಿಂದ ಹ್ಯಾಗೆ ಒಂಭತ್ತು ಸಂಖ್ಯೆಯುಳ್ಳದ್ದೋ, ಬೃಹತೀಛಂದಸ್ಸು ಹ್ಯಾಗೆ ಒಂಭತ್ತಕ್ಷರಗಳುಳ್ಳದ್ದೋ, ಲೋಕವ್ಯವಹಾರದಲ್ಲಿ ಸಂಖ್ಯೆಯು ಹ್ಯಾಗೆ ಒಂಭತ್ತೇ ಆಗಿರುವದೋ, ಹಾಗೆ ಪ್ರಕೃತಿಯೆಂಬ ಪದಾರ್ಥವು ಸತ್ವರಜಸ್ತಮೋಗುಣಗಳ ವ್ಯತ್ಯಾಸದಿಂದ ಒಂಭತ್ತುಪ್ರಕಾರವಾಗಿ ಈ ಪ್ರಪಂಚವನ್ನು ನಿರ್ಮಾಣಮಾಡುವದಾದಕಾರಣ, ಪ್ರಕೃತಿಯೆಂಬ ಎರಡನೇ ಪದಾರ್ಥವನ್ನು ನಿತ್ಯವೆಂದು ಅಂಗೀಕರಿಸಬೇಕು. ಆದಕಾರಣ, ಆತ್ಮಜ್ಞಾನವಾಗುವದರಿಂದ ದ್ವೈತಕ್ಕೆ ನಾಶವೆಂಬುವದು ಸಂಗತವಾಗುವದಿಲ್ಲವಾದಕಾರಣ, ಪ್ರಕೃತಿಯೊಡನೆ ಪದಾರ್ಥಗಳು ಒಂಭತ್ತು ಸಂಖ್ಯೆಯುಳ್ಳವುಗಳಾಗಿರುವವೆಂದು ಹೇಳಬೇಕು' ಎನಲು, ಅಷ್ಟಾವಕ್ರನು 'ಎಲೈ ಬಂದಿಯೆ, ತತ್ವೋಪದೇಶಕರೂ, ತತ್ವವಿದ್ಯಾಧಿಕಾರಿಗಳೂ, ತತ್ವವನ್ನು ನಿಂದಿಸತಕ್ಕವರೂ ಸಹ ಹತ್ತು ಸಂಖ್ಯೆಯುಳ್ಳವರು; ಮತ್ತು ಲೋಕದಲ್ಲಿ ಸ್ತ್ರೀಯರು

ರ್ಭವತಿಯರಾಗಿರತಕ್ಕ ಮಾಸಗಳು ಹ್ಯಾಗೆ ಹತ್ತಾಗಿರುವವೋ, ಹಾಗೆ ಐದು ಜ್ಞಾನೇಂದ್ರಿಯಗಳೂ ಐದು ಕರ್ಮೇಂ
ಯಗಳೂ ಸೇರಿ ಇಂದ್ರಿಯಗಳು ಹತ್ತಾಗಿರುವವು. ಈ ಶರೀರದಲ್ಲಿರತಕ್ಕ ಪರಮಾತ್ಮನೂ ತನ್ನ ಮಾಯಾ
ಭೂತಿಯಿಂದ ಬಹುರೂಪನಾಗಿರುವನೆಂದು ವೇದಗಳು ಹೇಳುವವು. ಆದಕಾರಣ ಬುಭತ್ತೇ ಪದಾರ್ಥಗಳೆಂದು
ೇಳುವದಕ್ಕಾಗುವದಿಲ್ಲ' ಎಂದು ನುಡಿದನು. ಅದನ್ನು ಕೇಳಿ ಬಂದಿಯು 'ಎಲೈ ಬ್ರಾಹ್ಮಣನೆ, ಪ್ರಾಣಧಾರಿಗಳಾದ ಈ
ೀವಪಶುಗಳಿಗೆ ಮನಸ್ಸಿನೊಡಗೂಡಿ ಇಂದ್ರಿಯಗಳು ಹನ್ನೊಂದಾಗಿರುವವು. ಬಂಧಕವಾದ ರಾಗಾದಿಗಳೂ,
ವುಗಳಿಂದುಂಟಾಗತಕ್ಕ ಹರ್ಷವಿಷಾದಾದಿಗಳೂ, ಹನ್ನೊಂದಾಗಿಯೇ ಇರುವವು. ಇವು ಸ್ವರ್ಗದಲ್ಲಿರುವ ದೇವತೆ
ಳಿಗೂ ಸಹ ಉಂಟು. ಆದಕಾರಣ ಪದಾರ್ಥಗಳು ಹನ್ನೊಂದೆಂದು ಹೇಳಬೇಕು' ಎನಲು, ಅಷ್ಟಾವಕ್ರನು
ಎಲೈ ಬಂದೀಯೆ, ಸಂವತ್ಸರಕ್ಕೆ ಹ್ಯಾಗೆ ಹನ್ನೆರಡು ಮಾಸಗಳಿರುವವೋ, ಜಗತೀಛಂದಸ್ಸಿಗೆ ಹ್ಯಾಗೆ ಹನ್ನೆರಡು
ಕ್ಷರಗಳಿರುವವೋ, ಅಹರ್ಗಣಸಾಧ್ಯವಾದ ಯಜ್ಞಗಳಿಗೆ ದ್ವಾದಶಾಹಸ್ಸು ಹ್ಯಾಗೆ ಪ್ರಕೃತಿಭೂತವಾಗಿರುವದೋ,
ಾಗೆ ಹನ್ನೊಂದು ಪದಾರ್ಥಗಳಿಗೂ ಮುಖ್ಯವಾದ ಶುದ್ಧವಾದ ಬ್ರಹ್ಮವೊಂದಿರುವದು; ಆ ಬ್ರಹ್ಮಪದಾರ್ಥವು
ತ್ತಶುದ್ಧಿಯಿಂದಲೇ ತಿಳಿಯುವದಕ್ಕೆ ಯೋಗ್ಯವೇ ಹೊರತು, ಶುಷ್ಕವಾದ ತರ್ಕದಿಂದ ತಿಳಿಯತಕ್ಕದ್ದಲ್ಲವೆಂತಲೂ,
ರ್ಮ, ಸತ್ಯ, ದಮ, ತಪಸ್ಸು, ಅಮಾತ್ಸರ್ಯ, ಹ್ರೀ, ತಿತಿಕ್ಷಾ, ಅನಸೂಯಾ, ಯಜ್ಞ, ದಾನ, ಧೃತಿ, ಯಮ, ಈ
ನ್ನೆರಡು ವ್ರತಗಳೂ ಬ್ರಹ್ಮಜ್ಞಾನವನ್ನು ಉಂಟುಮಾಡತಕ್ಕವುಗಳೆಂತಲೂ; ಜ್ಞಾನಿಗಳಾದ ಯೋಗಿಗಳು ಹೇಳುವರು.
ದಕಾರಣ ಪದಾರ್ಥಗಳು ಹನ್ನೆರಡೆಂದು ಹೇಳಬೇಕು' ಎಂದು ನುಡಿದನು. ಅದನ್ನು ಕೇಳಿ ಬಂದಿಯು 'ಎಲೈ
್ರಾಹ್ಮಣನೆ, ನೀನು ಹೇಳಿದ ಪ್ರಕಾರ ಬ್ರಹ್ಮಜ್ಞಾನವಾಗ ಬೇಕಾದರೆ, ಚಿತ್ತಶುದ್ಧಿಯನ್ನೂ ದೇಶಕಾಲಗಳನ್ನೂ
ಪೇಕ್ಷಿಸತಕ್ಕದ್ದೇನೂ ಇಲ್ಲ. ಮೇಲಿರುವ ಆರು ಲೋಕಗಳಲ್ಲಿಯೂ, ಕೆಳಗಿರುವ ಏಳು ಲೋಕಗಳಲ್ಲಿಯೂ,
ತ್ಯಲೋಕದಲ್ಲಿಯೂ, ಸರ್ವಸಿದ್ಧಿಪ್ರದವಾದ ಈ ತ್ರಯೋದಶೀತಿಥಿಯಲ್ಲಿಯೂ ಸಹ, ಅಂಥ ಬ್ರಹ್ಮಜ್ಞಾನವನ್ನು ಪಡೆಯ
ಬಹುದು' ಎಂದು ಸುಮ್ಮನಾದನು. ಆಗ ಅಷ್ಟಾವಕ್ರನು 'ಎಲೈ ಬಂದಿಯೆ, ವಾಯುಸೂರ್ಯಾಗ್ನಿಗಳಂತೆ ಸಂಗ
ಹಿತನಾದ ಆತ್ಮನು ಪಂಚಜ್ಞಾನೇಂದ್ರಿಯಗಳು, ಪಂಚಕರ್ಮೇಂದ್ರಿಯಗಳು, ಮನೋಬುದ್ಧಿಅಹಂಕಾರಗಳು, ಎಂಬ
ಹದಿಮೂರು ಇಂದ್ರಿಯಗಳ ವಿಷಯಗಳಿಂದುಂಟಾಗತಕ್ಕ ಭೋಗಗಳಲ್ಲಿ ಪ್ರವರ್ತಿಸುವನಾದ್ದರಿಂದ, ಆತನಿಗೆ
ಗವಿದ್ದಂತೆ ಕಾಣಿಸುವದು. ಆದ್ದರಿಂದ, ಈ ವಿಷಯಪ್ರವೃತ್ತಿಯನ್ನು ಪರಿಹರಿಸುವದಕ್ಕೋಸ್ಕರ, ಧರ್ಮ ಮೊದ
ದ ಹನ್ನೆರಡು ನಿಯಮಗಳನ್ನು ದೊಡ್ಡವರು ಹೇಳಿರುವರು. ಅವುಗಳಿಂದ ವಿಷಯಪ್ರವೃತ್ತಿಯು ನಿವೃತ್ತವಾಗಲು,
ತಮವ ಬ್ರಹ್ಮಾದ್ವೈತವು ಪ್ರಕಾಶಿಸುವದು. ಅದನ್ನು ಹೇಳುವದಕ್ಕೋಸ್ಕರಲೇ, ನಾನು ಇಲ್ಲಿಗೆ ಬಂದಿರುವೆನು.
ದರಮೇಲೆ ನಿನಗೇನಾದರೂ ತೋರಿದರೆ, ಉತ್ತರವನ್ನು ಕೊಡು' ಎಂದು ನುಡಿದನು. ಆ ಮಾತನ್ನು ಕೇಳಿ
ದಿಯು ತಲೆಯನ್ನು ಬಗ್ಗಿಸಿಕೊಂಡು ಆಲೋಚನೆ ಮಾಡುತ್ತ ಏನೂ ತೋರದೆ ಸುಮ್ಮನೆ ಕೂತುಕೊಂಡನು.

ಅನಂತರ ಆ ಸಭೆಯಲ್ಲಿರತಕ್ಕವರೆಲ್ಲರೂ ಮಹತ್ತಾದ ಕೋಲಾಹಲವನ್ನು ಮಾಡಿದರು. ಆಗ ಆ ಯಜ್ಞ
ಶಿಯಲ್ಲಿದ್ದ ವಿದ್ವಾಂಸರಾದ ಪ್ರಸಿದ್ಧರಾದ ಬ್ರಾಹ್ಮಣರು ಕೈಮುಗಿದುಕೊಂಡು, ಅಷ್ಟಾವಕ್ರನಿಗೆ ವಂದನೆಯನ್ನು
ಾಡಿದರು. ಬಳಿಕ ಅಷ್ಟಾವಕ್ರನು ಜನಕರಾಯನನ್ನು ಕುರಿತು 'ಎಲೈ ರಾಯನೆ, ಇಲ್ಲಿ ಬಂದಿಯು ವಿದ್ವಾಂಸ
ರ ಅನೇಕಮಂದಿ ಬ್ರಾಹ್ಮಣರ ಸಂಗಡ ಈ ಪ್ರಕಾರವೇ ವಾದವನ್ನು ಮಾಡಿ ಗೆದ್ದು, ಅವರೆಲ್ಲರನ್ನೂ ನೀರಿನಲ್ಲಿ
ಳುಗಿಸಿರುವನು. ಈಗ ವಾದದಲ್ಲಿ ನನ್ನಿಂದ ಪರಾಜಿತನಾದ ಆತನೂ ಅದೇ ಗತಿಯನ್ನು ಹೊಂದಲಿ.
ಗ್ರತೆಯಾಗಿ ಇವನನ್ನು ಹಿಡಿದುಕೊಂಡು ಹೋಗಿ ನೀರಿನಲ್ಲಿ ಮುಳುಗಿಸಿಬಿಡು' ಎನಲು, ಆ ಮಾತನ್ನು ಕೇಳಿ
ದಿಯು 'ಎಲೈ ಜನಕರಾಯನೆ, ನಾನು ವರುಣನಿಗೆ ಪುತ್ರನಾದವನು. ನೀನು ಈ ಯಜ್ಞವನ್ನು ಮಾಡು
ಕ್ಕೆ ಉಪಕ್ರಮಿಸಿದಾಗಲೇ, ವರಣನೂ ಹನ್ನೆರಡು ವರುಷ ಮಾಡತಕ್ಕ ಸತ್ರಯಾಗವನ್ನು ಮಾಡುವದಕ್ಕೆ
ಪಕ್ರಮಿಸಿ, ಋತ್ವಿಕ್ಕುಗಳು ಇಲ್ಲದೆ ಅದಕ್ಕಾಗಿ ನನ್ನನ್ನು ಇಲ್ಲಿಗೆ ಕಳುಹಿಸಿಕೊಟ್ಟನು. ನಾನು ಉಪಾಯ
ದ ಅನೇಕಮಂದಿ ಬ್ರಾಹ್ಮಣರನ್ನು ವಾದದಲ್ಲಿ ಗೆದ್ದು, ಅವರನ್ನು ನೀರಿನಲ್ಲಿ ಮುಳುಗಿಸಿ, ಆ ಯಜ್ಞಕ್ಕಾಗಿ ಕಳು
ಕೊಟ್ಟಿರುವೆನು. ಆ ಯಜ್ಞವನ್ನು ನೋಡಿಕೊಂಡು ಆ ಬ್ರಾಹ್ಮಣರೆಲ್ಲರೂ ಈಗಲೇ ಇಲ್ಲಿಗೆ ಬರುವರು.

ಪೂಜಾಯೋಗ್ಯನಾದ ಈ ಅಷ್ಟಾವಕ್ರನನ್ನು ನಾನೂ ಪೂಜಿಸಿ, ಈ ನಿಮಿತ್ತದಿಂದ ನಾನೂ ನಮ್ಮ ತಂದೆಯಾದ
ವರುಣನ ಬಳಿಗೆ ಹೊರಟುಹೋಗುವದಕ್ಕೆ ಸಿದ್ಧವಾಗಿಯೇ ಇರುವೆನು' ಎಂದು ನುಡಿದನು. ಬಳಿಕ ಅಷ್ಟಾವ
ಕ್ರನು ಜನಕರಾಯನನ್ನು ಕುರಿತು 'ಎಲೈ ರಾಯನೆ, ಈ ಬಂದಿಯು ಪೂರ್ವದಲ್ಲಿ ಅನೇಕಮಂದಿ ಬ್ರಾಹ್ಮಣರನ್ನು
ವಾಕ್ಕೋಲಾಹಲದಿಂದಲೇ ಜಯಿಸಿ ನೀರಿನಲ್ಲಿ ಮುಳುಗಿಸಿದನೋ, ಅಥವಾ ಊಹಾಪೋಹವುಳ್ಳ ವೇದ್ಪ್ರತಿಪಾದಿ
ಜಯಿಸಿ ನೀರಿನಲ್ಲಿ ಮುಳುಗಿಸಿದನೋ, ಅದನ್ನೂ ಮತ್ತು ಈತನನ್ನು ನಾನು ಜಯಿಸಿದ್ದ ವಾಕ್ಕೋಲಾಹಲದಿಂ
ದಲೋ ಅಥವಾ ಶಾಸ್ತ್ರಾರ್ಥವಿಚಾರದಿಂದಲೋ ಇದನ್ನೂ ಸಹ, ಇಲ್ಲಿರತಕ್ಕ ವಿದ್ವಾಂಸರಾದ ಸಜ್ಜನರು ಪರೀಕ್ಷಿ
ಸಲಿ. ದಹಿಸತಕ್ಕ ಸ್ವಭಾವವುಳ್ಳ ಅಗ್ನಿಯು ಇವರು ಸಜ್ಜನರೆಂದೂ ಇವರು ಅಸಜ್ಜನರೆಂದೂ ತಿಳಿದು ಸತ್ಪುರುಷ
ರಿಗೆ ತಾಪವನ್ನು ಕೊಡದೆ ಅಸತ್ಪುರುಷರಿಗೆ ಹ್ಯಾಗೆ ತಾಪವನ್ನುಂಟುಮಾಡುವನೋ, ಹಾಗೆ ಮಹಾತ್ಮರಾದ ಈ
ವಿದ್ವಾಂಸರು ಬಾಲಕರಾದ ನಾವು ದೈನ್ಯದಿಂದ ಮಾತನಾಡಿದ್ದನ್ನು ಇದು ಬಾಲಭಾಷಿತವೆಂದು ನಿರಾಕರಿಸದೆ ಗುಣ
ದೋಷಗಳನ್ನು ವಿಚಾರಮಾಡಿ ಚೆನ್ನಾಗಿ ಪರೀಕ್ಷಿಸಲಿ. ಎಲೈ ಜನಕರಾಯನೆ, ಚಳ್ಳೇಗಿಡದ ಎಲೆಯಲ್ಲಿ ಊಟ
ಮಾಡುವವರಿಗೂ ಆ ಹಣ್ಣನ್ನು ತಿನ್ನುವವರಿಗೂ ಬುದ್ಧಿಯು ಹ್ಯಾಗೆ ಮಂದವಾಗುವದೋ, ಹಾಗೆ ಇಲ್ಲಿರತಕ್ಕ
ವಿದ್ವಾಂಸರ ಸ್ತೋತ್ರದಿಂದ ಬುದ್ಧಿಯು ಮಂದವಾಗಿ ನೀನು ಮದ್ದಾನೆಯಂತೆ ಮತ್ತನಾಗಿ ಕಾಣಿಸುತ್ತಿರುವೆ. ನಾನು
ಇಷ್ಟು ಹೇಳುತ್ತಿದ್ದಾಗ್ಯೂ, ಯಾತಕ್ಕೋಸ್ಕರ ನನ್ನ ಮಾತನ್ನು ಬಂದನ್ನಾದರೂ ಕಿವಿಯಮೇಲೆ ಹಾಕಿಕೊಳ್ಳ
ದಿರುವೆ?' ಎನಲು, ಜನಕರಾಯನು 'ಎಲೈ ಅಷ್ಟಾವಕ್ರನೆ, ನಿನ್ನ ಮಾತುಗಳು ವೇದಸಮ್ಮತವಾಗಿಯೂ, ಅಮಾ
ನುಷವಾಗಿಯೂ ಇರುವವು. ನೀನು ಸಾಕ್ಷಾದ್ದೇವತಾಪುರುಷನಂತೆ ಕಾಣಿಸುತ್ತಿರುವೆ. ನಿನ್ನ ವಾಕ್ಯಗಳನ್ನೆಲ್ಲಾ
ನಾನು ಚೆನ್ನಾಗಿ ಕೇಳಿದೆನು. ನೀನು ಪ್ರಸಂಗದಲ್ಲಿ ಬಂದಿಯನ್ನು ಜಯಿಸಿದೆ. ನಿನ್ನ ಇಷ್ಟಾನುಸಾರವಾಗಿ ಬಂದಿ
ಯನ್ನು ನಿನ್ನ ವಶಮಾಡಿರುವೆನು. ನೀನು ಬೇಕಾದದ್ದು ಮಾಡಬಹುದು' ಎಂದು ಹೇಳಿದನು. ಅದನ್ನು ಕೇಳಿ
ಅಷ್ಟಾವಕ್ರನು 'ಎಲೈ ರಾಯನೆ, ಈ ಬಂದಿಯು ಜೀವವಂತನಾಗಿ ಇಲ್ಲಿರುವದರಿಂದ, ನನಗೇನೂ ಪ್ರಯೋಜನವು
ತೋರುವದಿಲ್ಲ. ಇವನ ತಂದೆಯು ವರುಣನಾಗಿದ್ದ ಪಕ್ಷದಲ್ಲಿ, ಈಗಲೇ ಇವನನ್ನು ಸಮುದ್ರದಲ್ಲಿ ಮುಳುಗಿಸಿ
ಬಿಡತಕ್ಕದ್ದು ಯುಕ್ತವಾದದ್ದು' ಎಂದು ಹೇಳಿದನು. ಆ ಮಾತನ್ನು ಕೇಳಿ ಬಂದಿಯು 'ನಾನು ವರುಣನಿಗೆ ಪುತ್ರ
ನಾದವನು. ನನ್ನನ್ನು ನೀರಿನಲ್ಲಿ ಮುಳುಗಿಸಿದರೆ, ಅದರಿಂದ ನನಗೇನೂ ಭಯವಿಲ್ಲ. ಅಷ್ಟಾವಕ್ರನು ಬಹುಕಾಲ
ದಿಂದ ತನ್ನನ್ನು ಅಗಲಿಹೋಗಿದ್ದ ತಂದೆಯಾದ ಕಹೋಳನನ್ನು ಇದೇ ಮುಹೂರ್ತದಲ್ಲೇ ನೋಡುವನು' ಎಂದು
ನುಡಿಯುತ್ತಿರುವಾಗಲೇ, ಮೊದಲು ಸಮುದ್ರೋದಕದಲ್ಲಿ ಬಂದಿಯಿಂದ ಮುಳುಗಿಸಲ್ಪಟ್ಟಿದ್ದ ಬ್ರಾಹ್ಮಣರೆಲ್ಲರೂ
ಮಹಾತ್ಮನಾದ ವರುಣನಿಂದ ಪೂಜೆಯನ್ನು ಪಡೆದು, ಆ ಮುಹೂರ್ತದಲ್ಲೇ ಸಮುದ್ರೋದಕದಿಂದ ಮೇಲಕ್ಕೆದ್ದು
ಬಂದು, ಜನಕರಾಯನ ಮುಂದೆ ನಿಂತರು.

ಆಬಳಿಕ ಕಹೋಳನು ತನ್ನ ಮಗನಾದ ಅಷ್ಟಾವಕ್ರನನ್ನು ನೋಡಿ 'ಎಲೈ ಮಗನೆ, ನನ್ನಿಂದ ಮಾಡುವ
ವಕ್ಕೆ ಅಶಕ್ಯವಾದ ಕಾರ್ಯವನ್ನು ನೀನು ನಿರ್ವಹಿಸಿದೆ. ಈ ಕಾರಣದಿಂದಲೇ ಲೋಕದಲ್ಲಿ ಜನರು ಬುದ್ಧಿವಂತನಾದ
ಮಗನು ಹುಟ್ಟಬೇಕೆಂದು ಅಪೇಕ್ಷಿಸುವರು. ದುರ್ಬಲನಾದವನಿಗೆ ಬಲವಂತನಾದ ಮಗನೂ, ಅಪಂಡಿತನಾದವನಿ
ವಿದ್ವಾಂಸನಾದ ಮಗನೂ, ದೈವಯೋಗದಿಂದಲೇ ಜನಿಸುವರು' ಎಂದು ನುಡಿದು, ಜನಕರಾಯನನ್ನು ನೋ
'ಎಲೈ ರಾಯನೆ, ಯಮನು ತನ್ನ ತೀಕ್ಷ್ಣವಾದ ಪರಶ್ವಥಾಯುಧದಿಂದ ನಿನ್ನ ಶತ್ರುಗಳ ತಲೆಗಳನ್ನು ಛೇದಿಸಲಿ
ನಿನಗೆ ಮಂಗಳವಾಗಲಿ. ನಿನ್ನ ಸತ್ರಯಾಗದಲ್ಲಿ ಸಾಮಗರು ಉಚ್ಚಸ್ವರದಿಂದ ಸಾಮಗಾನವನ್ನು ಮಾಡಿ ಸೋಮ
ಪಾನವನ್ನು ಮಾಡುತ್ತಿರುವರು. ಇದೋ, ದೇವತೆಗಳು ಪ್ರತ್ಯಕ್ಷವಾಗಿ ಬಂದು ಪರಿಶುದ್ಧವಾದ ಹವಿರ್ಭಾಗ
ಳನ್ನು ಸ್ವೀಕರಿಸುತ್ತಿರುವರು. ನೀನೇ ಧನ್ಯನಾದವನು' ಎಂದು ಶ್ಲಾಘಿಸುತ್ತಿರಲು, ಆ ಯಾಗಶಾಲೆಯಲ್ಲಿ ಅಧಿ
ವಾಗಿ ಪ್ರಕಾಶಿಸುತ್ತಿದ್ದ ಬ್ರಾಹ್ಮಣರೆಲ್ಲರೂ ಎದ್ದು ನಿಂತುಕೊಂಡರು. ಆ ಸಮಯದಲ್ಲಿ ಬಂದಿಯು ಜನಕರಾಯ
ಆಜ್ಞೆಯಿಂದ ಸಮುದ್ರದಲ್ಲಿ ಮುಳುಗಿ ಹೋದನು. ಬಳಿಕ ಅಷ್ಟಾವಕ್ರನು ತನ್ನ ತಂದೆಯಾದ ಕಹೋಳನನ
ಪೂಜಿಸಿ, ತಾನೂ ಆ ಯಜ್ಞಶಾಲೆಯಲ್ಲಿದ್ದ ವಿದ್ವಾಂಸರಿಂದಲೂ ಜನಕರಾಯನಿಂದಲೂ ಸನ್ಮಾನವನ್ನು ಪಡೆದ

ತಂದೆಯಿಂದಲೂ ಸೋದರಮಾವನಾದ ಶ್ವೇತಕೇತುವಿನಿಂದಲೂ ಕೂಡಿ ತನ್ನಾಶ್ರಮಕ್ಕೆ ಬಂದನು. ಬಳಿಕ ಳಿಳನು ತನ್ನ ಪತ್ನಿಯು ನೋಡುತ್ತಿರಲು, ಅಷ್ಟಾವಕ್ರನನ್ನು ಕುರಿತು 'ಎಲೈ ಮಗನೆ, ಈ ಮಧುವಿಲಾ ನದಿಯನ್ನು ಪ್ರವೇಶಿಸು' ಎಂದನು. ಅಷ್ಟಾವಕ್ರನು ತಂದೆಯ ಆಜ್ಞಾನುಸಾರವಾಗಿ ನದಿಯಲ್ಲಿ ಪ್ರವೇ ', ಅದೇ ಕ್ಷಣದಲ್ಲೇ ಆತನ ಶರೀರದಲ್ಲಿದ್ದ ವಕ್ರತೆಯೆಲ್ಲಾ ನಷ್ಟವಾಗಿ, ಕೈಕಾಲುಗಳು ಸಮವಾಗಿ ಆದವು. ದಲು ಲೋಕದಲ್ಲಿ ಈ ನದಿಗೆ ಸಮಂಗಾ ಎಂದು ಖ್ಯಾತಿಯುಂಟಾಯಿತು. ಎಲೈ ಧರ್ಮರಾಯನೆ, ಈ ನದಿ ಸ್ನಾನಮಾಡಿದವನಿಗೆ ಸಕಲ ಪಾಪಗಳೂ ವಿಮೋಚನೆಯಾಗುವದರಿಂದ, ನೀನು ನಿನ್ನ ತಮ್ಮಂದಿರಿಂದಲೂ ನದಿಯಿಂದಲೂ ಸಹಿತನಾಗಿ ವಿಶ್ವಾಸದಿಂದ ಸ್ನಾನಮಾಡಿ, ಸುಖವಾಗಿ ಇಲ್ಲಿ ವಾಸಮಾಡುತ್ತ, ನನ್ನೊಡನೆ ಕೂಡಿ ಯಿಂದ ಪುಣ್ಯಕಾರ್ಯಗಳನ್ನು ಮಾಡು" ಎಂದು ಲೋಮಶನು ಧರ್ಮರಾಯನಿಗೆ ಹೇಳಿದನು.

---

೧೩೫ನೇ ಅಧ್ಯಾಯ.—ತೀರ್ಥಯಾತ್ರಾಪ್ರಶಂಸೆ.—(ಯವಕ್ರೀತೋಪಾಖ್ಯಾನ).

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಕ ಲೋಮಶನು ಧರ್ಮರಾಯನನ್ನು ಕುರಿತು "ಎಲೈ ಧರ್ಮರಾಯನೆ, ಸಮಂಗಾ ಎಂದು ಪ್ರಸಿದ್ಧಿಯನ್ನು ದಿದ ಮಧುವಿಲಾ ಎಂಬ ನದಿಯು ಪ್ರಕಾಶಿಸುತ್ತಿರುವದು, ಇದೋ ನೋಡು. ಇತ್ತಲಾ ಕರ್ದಮಿಲವೆಂಬ ್ರವು ಕಾಣಿಸುತ್ತಿರುವದು ನೋಡು. ಇದೇ ನಿಮ್ಮ ವಂಶೋದ್ಧಾರಕನಾದ ಭರತರಾಯನಿಗೆ ಪಟ್ಟಾಭಿಷೇಕವಾದ ವು. ಪೂರ್ವದಲ್ಲಿ ಇಂದ್ರನು ವೃತ್ರಾಸುರನನ್ನು ಸಂಹರಿಸಿ, ಬ್ರಹ್ಮಹತ್ಯದಿಂದ ಪೀಡಿತನಾಗಿ, ಈ ಸಮಂಗಾನದಿ ್ಲಿ ಸ್ನಾನಮಾಡಿ ಆ ಪಾಪವನ್ನು ಕಳೆದುಕೊಂಡನು. ಇದೋ ಮೈನಾಕಪರ್ವತದ ಅರತೊಪ್ಪಲಲ್ಲಿ ವಿನಶನ ಕ್ಷೇತ್ರವಿರುವದು. ಇಲ್ಲಿ ಪೂರ್ವದಲ್ಲಿ ಅದಿತಿಯು ಸಂತಾನಾಪೇಕ್ಷೆಯಿಂದ ಸಾಧ್ಯರೆಂಬ ದೇವತೆಗಳಿಗೋಸ್ಕರ ್ಮಾನ್ನವನ್ನು ಪಕ್ವಮಾಡಿದಳು. ನೀನು ತಮ್ಮಂದಿರೊಡನೆ ಈ ಪರ್ವತವನ್ನು ಹತ್ತು. ಆದರಿಂದ ಅಪಕೀ ಯೂ ಅಲಕ್ಷ್ಮಿಯೂ ನಷ್ಟವಾಗುವವು. ಇಲ್ಲಿಯೇ ಕನಖಲಗಳೆಂಬ ಪರ್ವತಗಳಿರುವವು. ಇಲ್ಲಿ ಅನೇಕ ದಿ ಮಹರ್ಷಿಗಳಿರುವರು. ಇಲ್ಲೇ ಗಂಗಾನದಿಯು ಪ್ರವಹಿಸುತ್ತಿರುವದು. ಇಲ್ಲೇ ಮಹಾತ್ಮನಾದ ಸನತ್ಕು ರನು ಪೂರ್ವದಲ್ಲಿ ತಪಸ್ಸಿದ್ಧಿಯನ್ನು ಹೊಂದಿರುವನು. ಎಲೈ ಧರ್ಮರಾಯನೆ, ಈ ಗಂಗಾನದಿಯಲ್ಲಿ ಸ್ನಾನ ಡು. ಸಕಲಪಾಪವೂ ಪರಿಹಾರವಾಗುವದು. ಈ ಅಪಾಂಹ್ರದವೆಂಬ ಮಡುವನ್ನೂ, ಪುಣ್ಯತಮವಾದ ಭೃಗು ಗನೆಂಬ ಪರ್ವತವನ್ನೂ, ಈ ಉಷ್ಣೋದಕವುಳ್ಳ ಗಂಗೆಯನ್ನೂ ಸಹ, ನೀನು ತಮ್ಮಂದಿರೊಡನೆ ಸ್ಪರ್ಶಮಾಡು. ೋ, ಇಲ್ಲೇ ಸ್ಥೂಲಶಿರಸ್ಸೆಂಬ ಮಹರ್ಷಿಯ ಆಶ್ರಮವು ರಮಣೀಯವಾಗಿ ಪ್ರಕಾಶಿಸುತ್ತಿರುವದು. ಎಲೈ ಧರ್ಮ ುನೆ, ಇಲ್ಲಿ ಅಭಿಮಾನವನ್ನೂ ಕೋಪವನ್ನೂ ಬಿಟ್ಟುಬಿಡು. ಇದೋ ಇತ್ತಲಾಗಿಯೇ ಸಂಪದ್ಯುಕ್ತವಾದ ್ಯಾಶ್ರಮವು ಪ್ರಕಾಶಿಸುತ್ತಿರುವದು. ಇಲ್ಲಿ ಭರದ್ವಾಜಮಹರ್ಷಿಪುತ್ರನಾದ ಯವಕ್ರೀತನು ದೇಹತ್ಯಾಗವನ್ನು ಡಿರುವನು" ಎಂದನು. ಅದನ್ನು ಕೇಳಿ ಧರ್ಮರಾಯನು "ಎಲೈ ಲೋಮಶನೆ, ಪರಾಕ್ರಮಶಾಲಿಯಾದ ಭರದ್ವಾ ುಹರ್ಷಿಯು ಯಾವ ರೀತಿಯಿಂದಿದ್ದನು? ಆತನ ಮಗನು ಇಲ್ಲಿ ದೇಹತ್ಯಾಗವನ್ನು ಮಾಡುವದಕ್ಕೆ ಕಾರಣವೇನು? ನ್ನು ನನಗೆ ತಿಳುಹಿಸು. ದೇವತೆಗಳಿಗೆ ಸಮಾನರಾದ ಋಷಿಗಳ ಶ್ಲಾಘ್ಯವಾದ ಮಹಿಮೆಯನ್ನು ಕೇಳಿ, ಅದ ನಾನು ಸಂತುಷ್ಟನಾಗುವೆನು" ಎಂದು ಪ್ರಶ್ನೆ ಮಾಡಿದನು.

ಬಳಿಕ ಲೋಮಶನು "ಎಲೈ ಧರ್ಮರಾಯನೆ, ಈ ಪ್ರದೇಶದಲ್ಲಿ ಭರದ್ವಾಜಮಹರ್ಷಿಯೂ ರೈಭ್ಯಮಹರ್ಷಿ ೂ ಸಹ, ಮಿತ್ರಭಾವದಿಂದಿದ್ದುಕೊಂಡಿದ್ದರು. ರೈಭ್ಯಮಹರ್ಷಿಗೆ ಅರ್ವಾವಸು ಪರಾವಸುಗಳೆಂಬ ಇಬ್ಬರು ್ರರಿದ್ದರು. ಭರದ್ವಾಜನಿಗೆ ಯವಕ್ರೀತನೆಂಬ ಒಬ್ಬ ಮಗನಿದ್ದನು. ಪುತ್ರಸಹಿತನಾದ ಆ ರೈಭ್ಯಮಹರ್ಷಿಯು ಹಾತಪಸ್ವಿಯಾಗಿಯೂ, ವಿದ್ವಾಂಸನಾಗಿಯೂ, ಬಹು ಶಿಷ್ಯಸಂಪತ್ತಿಯುಳ್ಳವನಾಗಿಯೂ ಇದ್ದನು. ಆತನ

ಮಕ್ಕಳಾದ ಅರ್ವಾವಸು ಪರಾವಸುಗಳೂ ಸಹ ಬಾಲ್ಯವೊದಲುಗೊಂಡು ಕೀರ್ತಿಸಂಪನ್ನರಾಗಿಯೇ ಇದ್ದರು. ಆ ಕಾಲದಲ್ಲಿ ಆ ಆಶ್ರಮಕ್ಕೆ ಯಾರು ಬಂದರೂ, ಪುತ್ರಸಹಿತನಾದ ರೈಭ್ಯಮಹರ್ಷಿಗೇ ಸತ್ಕಾರವನ್ನು ಮಾಡುತ್ತಿದ್ದರು. ಅದನ್ನೂ ಆ ಪ್ರಕಾರ ತಮ್ಮ ತಂದೆಗೆ ಯಾರೂ ಸತ್ಕಾರವನ್ನು ಮಾಡದೆ ಇರುವದನ್ನೂ ಸಹ ನೋಡಿ, ಯವಕ್ರೀತನು ಕೋಪದಿಂದ ಜಾಜ್ವಲ್ಯಮಾನನಾಗಿ ಸಂತಾಪಪಡುತ್ತ, ತಾನೂ ರೈಭ್ಯಮಹರ್ಷಿಯಂತೆ ವೇದಶಾಸ್ತ್ರಜ್ಞಾನದಿಂದ ಕೀರ್ತಿಯನ್ನು ಪಡೆಯಬೇಕೆಂದು, ಪಂಚಾಗ್ನಿ ಮಧ್ಯನಲ್ಲಿ ಕುಳಿತುಕೊಂಡು ಘೋರವಾದ ತಪಸ್ಸನ್ನು ಮಾಡಿ, ತನ್ನ ತಪೋಜ್ವಾಲೆಗಳಿಂದ ದೇವೇಂದ್ರನಿಗೆ ಸಂತಾಪವುಂಟಾಗುವಹಾಗೆ ಮಾಡಿದನು. ಅದನ್ನು ಸಹಿಸಲಾರದೆ ಇಂದ್ರನು ಯವಕ್ರೀತನ ಬಳಿಗೆ ಬಂದು 'ಎಲೈ ಋಷಿಕುಮಾರನೆ, ಯಾತಕ್ಕೋಸ್ಕರ ನೀನು ಇಂಥಾ ಘೋರವಾದ ತಪಸ್ಸನ್ನು ಮಾಡುತ್ತಿರುವೆ?' ಎಂದು ಕೇಳಲು, ಯವಕ್ರೀತನು 'ಎಲೈ ಮಹೇಂದ್ರನೆ, ನನಗೆ ಸಕಲವೇದಶಾಸ್ತ್ರಗಳೂ ಗುರುಮುಖದಿಂದ ಅಧ್ಯಯನ ಮಾಡದೆ ಬರಬೇಕೆಂದು ಇಂಥ ಘೋರವಾದ ತಪಸ್ಸನ್ನು ಮಾಡುತ್ತಿರುವೆನು. ಗುರುಮುಖದಿಂದ ವೇದಶಾಸ್ತ್ರಾಧ್ಯಯನ ಮಾಡುವದಕ್ಕೆ ಬಹುಕಾಲವಾಗಬೇಕಾದ್ದರಿಂದ, ಶಾಸ್ತ್ರಜ್ಞಾನವನ್ನು ಸಂಪಾದಿಸಬೇಕೆಂದು ಇಂಥ ಪ್ರಯತ್ನವನ್ನು ಮಾಡುತ್ತಿರುವೆನು' ಎಂದು ನುಡಿದನು. ಅದನ್ನು ಕೇಳಿ ಇಂದ್ರನು 'ಎಲೈ ಯವಕ್ರೀತನೆ, ನೀನು ಅಮಾರ್ಗದಲ್ಲಿ ಹೋಗಬೇಕೆಂದು ಬಯಸುವೆ. ಇದೆಂದಿಗೂ ನಿನಗೆ ಸಿದ್ಧಿಸತಕ್ಕದ್ದಲ್ಲ, ಮತ್ತು ಇದರಿಂದ ನಿನಗೆ ಆತ್ಮನಾಶವೇ ಸಂಭವಿಸುವದು. ಹೀಗೆ ಮಾಡದೆ ನೀನು ಗುರುಸನ್ನಿಧಿಗೆ ಹೋಗಿ ಕ್ರಮವಾಗಿ ವೇದಶಾಸ್ತ್ರಾಭ್ಯಾಸವನ್ನು ಮಾಡು' ಎನಲು, ಯವಕ್ರೀತನು ತಪಸ್ಸಿನಿಂದಲೇ ವೇದಶಾಸ್ತ್ರಜ್ಞಾನವನ್ನು ಸಂಪಾದಿಸಬೇಕೆಂದು ಮತ್ತಷ್ಟು ಘೋರವಾದ ತಪಸ್ಸನ್ನೇ ಮಾಡಲುಪಕ್ರಮಿಸಿದನು. ಆಗ ದೇವೇಂದ್ರನು ಪುನಃ ಅಲ್ಲಿಗೆ ಬಂದು 'ಎಲೈ ಯವಕ್ರೀತನೆ, ನೀನು ಮಾಡತಕ್ಕ ಈ ಪ್ರಯತ್ನದಿಂದ ವೇದಶಾಸ್ತ್ರಜ್ಞಾನವು ಪಡೆಯಲಶಕ್ಯವಾದದ್ದು. ಇದರಿಂದ ನಿನಗೂ, ನಿಮ್ಮ ತಂದೆಯಾದ ಭರದ್ವಾಜನಿಗೂ ಸಹ ವೇದಶಾಸ್ತ್ರಜ್ಞಾನವು ಲಭಿಸಲಾರದು' ಎನಲು, ಯವಕ್ರೀತನು 'ಎಲೈ ದೇವೇಂದ್ರನೆ, ನನ್ನ ಮನೋರಥವನ್ನು ನೀನು ಪೂರಣಮಾಡದೆ ಹೋದ ಪಕ್ಷದಲ್ಲಿ ಇನ್ನೂ ಮಹತ್ತಾದ ನಿಯಮದಿಂದ ಘೋರವಾದ ತಪಸ್ಸನ್ನುಮಾಡಿ ಪ್ರಜ್ವಲಿತವಾದ ಯಜ್ಞೇಶ್ವರನಲ್ಲಿ ನನ್ನ ಅವಯವಗಳನ್ನೆಲ್ಲಾ ಛೇದಿಸಿ ಹೋಮಮಾಡಿಬಿಡುವೆನು' ಎಂದು ನುಡಿದನು. ಆ ಮಾತನ್ನು ಕೇಳಿ ಇಂದ್ರನು ಮಹಾತ್ಮನಾದ ಆ ಯವಕ್ರೀತನ ಮನೋನಿಶ್ಚಯವನ್ನು ತಿಳಿದು, ಈತನ ತಪಸ್ಸನ್ನು ಹ್ಯಾಗಾದರೂ ನಿಲ್ಲಿಸಬೇಕೆಂದು ಯೋಚಿಸಿ, ವೃದ್ಧನಾಗಿಯೂ ದುರ್ಬಲನಾಗಿಯೂ ಕ್ಷಯರೋಗವುಳ್ಳವನಾಗಿಯೂ ಇರುವ ಒಬ್ಬ ಬ್ರಾಹ್ಮಣನ ರೂಪವನ್ನು ತಾಳಿ, ನಿತ್ಯವೂ ಯವಕ್ರೀತನು ಸ್ನಾನಮಾಡುವದಕ್ಕೆ ಹೋಗುವ ಗಂಗಾನದಿಯಲ್ಲಿ ಮರಳಿನಿಂದ ಬಂದು ಸೇತುವೆಯನ್ನು ಕಟ್ಟಲುಪಕ್ರಮಿಸಿ, ಬಂದೊಂದು ಹಿಡಿಯಾಗಿ ಮರಳನ್ನು ಆ ಗಂಗಾನದಿಯಲ್ಲಿ ಹಾಕುತ್ತಿದ್ದನು. ಆಗ ಅಲ್ಲಿಗೆ ಸ್ನಾನಾರ್ಥವಾಗಿ ಬಂದ ಯವಕ್ರೀತನು ಅದನ್ನು ನೋಡಿ ನಸುನಗುತ್ತ, ಆ ವೃದ್ಧಬ್ರಾಹ್ಮಣನನ್ನು ಕುರಿತು 'ಎಲೈ ಬ್ರಾಹ್ಮಣನೆ, ನೀನು ಯಾತಕ್ಕೋಸ್ಕರ ಸುಮ್ಮನೆ ಬಂದೊಂದು ಹಿಡಿ ಮರಳನ್ನು ಗಂಗೆಯಲ್ಲಿ ಹಾಕುತ್ತಿರುವೆ? ಈ ನಿರರ್ಥಕಕಾರ್ಯದಿಂದೇನು ಪ್ರಯೋಜನ?' ಎನಲು, ಇಂದ್ರನು 'ಎಲೈ ಋಷಿಯೆ, ಜನಗಳು ಈ ಗಂಗಾನದಿಯನ್ನು ದಾಟ ಸುಖವಾಗಿ ಆಚೆಗೆ ಹೋಗುವದಕ್ಕೋಸ್ಕರ, ಮರಳಿನಿಂಡ ನಾನು ಸೇತುವೆಯನ್ನು ಕಟ್ಟ ಮಾರ್ಗವನ್ನು ಮಾಡುತ್ತಿರುವೆನು' ಎಂದು ನುಡಿದನು. ಆ ಮಾತನ್ನು ಕೇಳಿ ಯವಕ್ರೀತನು 'ಎಲೈ ಬ್ರಾಹ್ಮಣನೆ, ಮಹತ್ತಾದ ಈ ಗಂಗಾನದಿಯಲ್ಲಿ ಮರಳಿನಿಂದ ಸೇತುವೆಯನ್ನು ಕಟ್ಟಬೇಕೆಂದು ನೀನು ಮಾಡುವ ಪ್ರಯತ್ನವು ವ್ಯರ್ಥವಾದದ್ದು. ನೀನು ಸುಮ್ಮನೆ ಹೊರಟು ಹೋಗು. ಇಂಥ ಅಶಕ್ಯವಾದ ಕಾರ್ಯದಲ್ಲಿ ಪ್ರವರ್ತಿಸ ಬೇಡ' ಎನಲು, ಇಂದ್ರನು 'ಎಲೈ ಋಷಿಶ್ರೇಷ್ಠನೆ, ನೀನು ಹ್ಯಾಗೆ ತಪಸ್ಸಿನಿಂದ ಅಶಕ್ಯವಾದ ವೇದಶಾಸ್ತ್ರಜ್ಞಾನವನ್ನು ಸಂಪಾದಿಸಬೇಕೆಂದು ಯತ್ನಿಸುವೆಯೋ, ಹಾಗೆ ನಾನೂ ಈ ಕಾರ್ಯವನ್ನು ಉಪಕ್ರಮಿಸಿರುವೆನು' ಎಂದನು. ಬಳಿಕ ಯವಕ್ರೀತನು ಈತನೇ ದೇವೇಂದ್ರನೆಂದು ತಿಳಿದು 'ಎಲೈ ದೇವೇಂದ್ರನೆ, ನೀನು ಈಗ ಮಾಡತಕ್ಕ ಸಾಹಸವು ಹ್ಯಾಗೆ ನಿಷ್ಫಲವಾದದ್ದೋ ಹಾಗೆ ನನ್ನ ಪ್ರಯತ್ನವೂ ನಿಷ್ಫಲವಾದದ್ದೆಂದು ನೀನು ತಿಳಿದಿದ್ದಪಕ್ಷದಲ್ಲಿ, ನಿನಗೆ ಯುಕ್ತವಾಗಿ ತೋರಿದಂತೆ ನಡಿಸಬಹುದು. ಆದರೆ ಎಲ್ಲಾ ಋಷಿಗಳಿಗಿಂತಲೂ ನಾನು

ಶ್ರೇಷ್ಠನಾದವನೆಂದು ಎನ್ನಿಸಿಕೊಳ್ಳುವಹಾಗೆ ನನಗೆ ಏನಾದರೂ ವರಗಳನ್ನು ಕೊಡು ' ಎಂದು ಪ್ರಾರ್ಥಿಸಿದನು. ಆಗ ಇಂದ್ರನು ' ಎಲೈ ಯವಕ್ರೀತನೆ, ನಿಮ್ಮ ತಂದೆಯೊಡನೆ ನಿನಗೆ ಸಕಲವೇದಶಾಸ್ತ್ರಜ್ಞಾನವೂ ಉಂಟಾಗಲಿ, ಮತ್ತು ನೀನು ಏನೇನನ್ನು ಅಪೇಕ್ಷಿಸುವೆಯೋ ಆ ಕೋರಿಕೆಗಳೆಲ್ಲಾ ಸಿದ್ಧಿಸಲಿ ' ಎಂದು ವರವನ್ನು ಕೊಟ್ಟು ಇನ್ನು ನೀನು ನಿಮ್ಮ ಆಶ್ರಮಕ್ಕೆ ಹೋಗು ' ಎಂದು ನುಡಿದು, ತಾನೂ ಅಂತರ್ಧಾನವನ್ನು ಹೊಂದಿದನು.

ಬಳಿಕ ಯವಕ್ರೀತನು ತನ್ನ ಇಷ್ಟಾಪೂರ್ತಿಯಾಗಲು, ತಮ್ಮ ತಂದೆಯಾದ ಭರದ್ವಾಜಮಹರ್ಷಿಯ ಬಳಿಗೆ ಬಂದು ಆತನನ್ನು ಕುರಿತು ' ಎಲೈ ತಂದೆಯೆ, ನಾನು ತಪಸ್ಸನ್ನು ಮಾಡಿ, ನನಗೂ ನಿನಗೂ ಸಹ ವೇದಶಾಸ್ತ್ರಜ್ಞಾನವು ತನಗೆತಾನೇ ಉಂಟಾಗುವಂತೆ ಇಂದ್ರನಿಂದ ವರವನ್ನು ಪಡೆದಿರುವೆನು. ಇನ್ನುಮೇಲೆ ನಾವಿಬ್ಬರೂ ಲೋಕದಲ್ಲಿ ಎಲ್ಲರಿಗಿಂತಲೂ ಅಧಿಕರೆಂದೆನ್ನಿಸಿಕೊಳ್ಳುವೆವು ' ಎಂದು ಸಂತೋಷದಿಂದ ನುಡಿದನು. ಅದನ್ನು ಕೇಳಿ ಭರದ್ವಾಜನು ' ಎಲೈ ಪುತ್ರನೆ, ನೀನು ಇಂದ್ರನಿಂದ ಬೇಕಾದ ವರವನ್ನು ಪಡೆದೆನೆಂದು ಸಂತೋಷಪಡುತ್ತಿರುವೆ. ಇದರಿಂದ ನಿನಗೆ ಒಳ್ಳೇದಾಗಲಾರದು. ಲೋಕದಲ್ಲಿ ವರವನ್ನು ಪಡೆದವನಿಗೆ ಅಧಿಕವಾದ ಅಹಂಕಾರವುಂಟಾಗಿ ಅದರಿಂದ ಅವನು ನಷ್ಟನಾಗಿ ಹೋಗುವನು. ಈ ವಿಷಯದಲ್ಲಿ ದೇವತೆಗಳು ಹೇಳಿರುವ ಒಂದು ಇತಿಹಾಸವನ್ನು ಹೇಳುವೆನು ಕೇಳು : ಪೂರ್ವದಲ್ಲಿ ಬಾಲಧೀ ಎಂಬ ಸಮರ್ಥನಾದ ಒಬ್ಬ ಋಷಿಯಿದ್ದನು. ಆತನು ಪುತ್ರಶೋಕವನ್ನು ಸಹಿಸಲಾರದೆ, ತನಗೆ ಮರಣವನ್ನೇ ಹೊಂದದಿರತಕ್ಕ ಮಗನಾಗಬೇಕೆಂದು ಘೋರವಾದ ತಪಸ್ಸನ್ನು ಮಾಡಿದನು. ಆ ತಪಸ್ಸಿಗೆ ಮೆಚ್ಚಿ, ದೇವತೆಗಳು ಮರ್ತ್ಯನಾದವನು ಎಂದಿಗಾದರೂ ಒಂದು ದಿವಸ ಮರಣವನ್ನು ಹೊಂದತಕ್ಕವನೇ ಹೊರತು ಅಮರ್ತ್ಯನಾಗಿ ಬೇರೇ ಇರತಕ್ಕವನಲ್ಲವಾದ್ದರಿಂದ, ಏನಾದರೂ ಒಂದು ನಿಮಿತ್ತವನ್ನು ಮಾಡಿಕೊಂಡು ತಾವತ್ಪರ್ಯಂತವೂ ಆಯುಷ್ಮಂತನಾಗಿರತಕ್ಕ ಪುತ್ರನಾಗುವಂತೆ ಆತನಿಗೆ ವರವನ್ನು ಕೊಡಲು, ಆ ಬಾಲಧೀ ಎಂಬ ಋಷಿಯು ದೇವತೆಗಳನ್ನು ಕುರಿತು—ಎಲೈ ದೇವತೆಗಳಿರಾ, ಈ ಪರ್ವತಗಳು ಕ್ಷಯವನ್ನು ಹೊಂದದೆ ಬಹುಕಾಲ ಇರತಕ್ಕವುಗಳಾದ್ದರಿಂದ, ಈ ಪರ್ವತಗಳಿರುವವರೆಗೂ ನನ್ನ ಮಗನು ಆಯುಷ್ಮಂತನಾಗಿರಲಿ—ಎಂದು ಬೇಡಿಕೊಂಡನು. ಅದಕ್ಕೆ ದೇವತೆಗಳು ಹಾಗೇ ಆಗಲೆಂದು ಅನುಗ್ರಹವನ್ನು ಮಾಡಿದರು. ಬಳಿಕ ಆ ಮಹರ್ಷಿಗೆ ಜ್ಞಾನವಂತನಾಗಿಯೂ ಕೋಪಸ್ವಭಾವನಾಗಿಯೂ ಇರುವ ಮೇಧಾವಿಯೆಂಬ ಒಬ್ಬ ಮಗನು ಹುಟ್ಟಿದನು. ಆ ಋಷಿಪುತ್ರನು ಅಹಂಕಾರದಿಂದ ಸಮಸ್ತ ಋಷಿಗಳನ್ನೂ ಅವಮಾನಪಡಿಸುತ್ತ, ಭೂಮಂಡಲವನ್ನೆಲ್ಲಾ ಸುತ್ತುತ್ತ, ಧನುಷಾಕ್ಷನೆಂಬ ಮಹರ್ಷಿಯ ಬಳಿಗೆ ಬಂದು ಆತನಿಗೆ ಅವಮಾನಮಾಡಲು, ಮಹಾತಪಸ್ವಿಯಾದ ಆ ಧನುಷಾಕ್ಷನು ಅದನ್ನು ಸಹಿಸದೆ, ಆ ಮೇಧಾವಿಗೆ ಭಸ್ಮವಾಗಿಹೋಗೆಂದು ಶಾಪವನ್ನು ಕೊಟ್ಟನು. ಆ ಶಾಪದಿಂದ ಆತನು ಭಸ್ಮವಾಗದೆ ದೃಢಾಂಗನಾಗಿ ಇರಲು, ಅದನ್ನು ನೋಡಿ ಧನುಷಾಕ್ಷನು—ನನ್ನ ಶಾಪವು ಈತನಿಗೆ ತಗಲದಿರುವದಕ್ಕೆ ಕಾರಣವೇನು ?—ಎಂದು ಚಿಂತಿಸಿ, ತನ್ನ ತಪೋಬಲದಿಂದ ಅನೇಕ ಕೋಣಗಳನ್ನು ನಿರ್ಮಾಣಮಾಡಿ, ಅವುಗಳಿಂದ ಮೇಧಾವಿಯ ಆಯುಸ್ಸಿಗೆ ನಿಮಿತ್ತವಾದ ಆ ಪರ್ವತಗಳನ್ನು ತಿವಿಸಿ ಪುಡಿಪುಡಿಮಾಡಿಸಿಬಿಟ್ಟನು. ಆ ಪರ್ವತಗಳು ನಾಶವನ್ನು ಹೊಂದಲು, ಮೇಧಾವಿಯು ಕ್ಷೀಣವಾದ ಆಯುಸ್ಸುಳ್ಳವನಾಗಿ ನಾಶವನ್ನು ಹೊಂದಿದನು. ಆಗ ಬಾಲಧಿಯು ಮೃತನಾದ ತನ್ನ ಪುತ್ರನನ್ನು ಕಟ್ಟಿಕೊಂಡು ಬಹಳವಾಗಿ ರೋದನಮಾಡುತ್ತಿರಲು, ಅದನ್ನು ನೋಡಿ ಅಲ್ಲಿದ್ದ ಋಷಿಗಳೆಲ್ಲರೂ ವ್ಯಸನಪಡುತ್ತ—ಎಲೈ ಬಾಲಧಿಯೆ, ಯಾತಕ್ಕೆ ವ್ಯಸನಪಡುವೆ ? ನಿನ್ನ ಮಗನ ಆಯುಸ್ಸಿಗೆ ನಿಮಿತ್ತವಾದ ಪರ್ವತಗಳನ್ನು ಧನುಷಾಕ್ಷನು ಕೋಣಗಳಿಂದ ಚೂರ್ಣಮಾಡಿಸಿಬಿಟ್ಟನಲ್ಲಾ ! ದೈವವನ್ನು ಅತಿಕ್ರಮಿಸುವದಕ್ಕೆ ಯಾರಿಂದಾದೀತು ?—ಎಂದು ನುಡಿದರು. ಎಲೈ ಯವಕ್ರೀತನೆ, ತಪಸ್ವಿಗಳಾದವರು ಹೀಗೆ ವರಗಳನ್ನು ಪಡೆದು ಅದರಿಂದ ಅಹಂಕಾರಿಗಳಾಗಿ ನಾಶವನ್ನು ಹೊಂದುವರು. ನೀನೆಂದಿಗೂ ಹಾಗಾಗದಂತೆ ಜಾಗರೂಕನಾಗಿರು. ಈ ರೈಭ್ಯಮಹರ್ಷಿಯು ಮಹಾತಪಸ್ವಿಯಾದವನು. ಆತನ ಮಕ್ಕಳಾದ ಅರ್ವಾವಸು, ಪರಾವಸುಗಳೂ, ಅಂಥವರೇ. ಅವರ ಗೋಜಿಗೆ ನೀನು ಹೋಗದಿರು. ತಪಸ್ವಿಯಾದ ರೈಭ್ಯಮಹರ್ಷಿಯು ಕೋಪಿಷ್ಠನು ; ಆತನಿಗೆ ಕೋಪವುಂಟಾದದ್ದೇ ಆದರೆ, ನಿನ್ನನ್ನು ನಾಶಮಾಡಿಬಿಡು

ವನು' ಎನಲು, ಯವಕ್ರೀತನು 'ಎಲೈ ತಂದೆಯೆ, ನಿನ್ನ ಆಜ್ಞೆಯಾದಂತೆಯೇ ನಡೆದುಕೊಳ್ಳುವೆನು. ನೀನು ಮನಸ್ಸಿನಲ್ಲಿ ಸಂತಾಪಪಡಬೇಡ. ನನಗೆ ನೀನು ಹ್ಯಾಗೆ ಮಾನ್ಯನೋ, ಹಾಗೆ ರೈಭ್ಯಮಹರ್ಷಿಯೂ ಮಾನ್ಯನಾದವನು' ಎಂದು ನುಡಿದು, ಇತರರಾದ ಋಷಿಗಳಿಗೆ ಅಪಕಾರಮಾಡುತ್ತ ಅಧಿಕವಾಗಿ ಸಂತೋಷಪಡುತ್ತಿದ್ದನು" ಎಂದು ಲೋಮಶನು ಧರ್ಮರಾಯನಿಗೆ ಹೇಳಿದನು.

## ೧೩೬ನೇ ಅಧ್ಯಾಯ.—ತೀರ್ಥಯಾತ್ರಾಪ್ರಶಂಸೆ.—(ಯವಕ್ರೀತೋಪಾಖ್ಯಾನ.)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಲೋಮಶನು ಧರ್ಮರಾಯನನ್ನು ಕುರಿತು "ಎಲೈ ಧರ್ಮರಾಯನೆ, ಯವಕ್ರೀತನು ಆಯಾ ಋಷ್ಯಾಶ್ರಮಗಳಲ್ಲಿ ನಿರ್ಭಯದಿಂದ ಸಂಚರಿಸುತ್ತ, ವೈಶಾಖಮಾಸದಲ್ಲಿ ರೈಭ್ಯಾಶ್ರಮಕ್ಕೆ ಬಂದು, ಮನೋಹರವಾದ ಪುಷ್ಪಗಳಿಂದ ಶೋಭಾಯಮಾನವಾದ ವೃಕ್ಷಗಳಿಂದ ಅಲಂಕೃತವಾದ ಆ ಆಶ್ರಮದಲ್ಲಿ ಕಿನ್ನರಸ್ತ್ರೀಯಂತೆ ಸಂಚರಿಸುತ್ತಿರುವ ರೈಭ್ಯನ ಸೊಸೆಯನ್ನು ನೋಡಿ, ಕಾಮಾತುರನಾಗಿ ಲಜ್ಜೆಯನ್ನು ಬಿಟ್ಟು, ಲಜ್ಜೆಪಡುತ್ತಿರುವ ಆಕೆಯನ್ನು ಕುರಿತು 'ಎಲೌ ಮಂಗಳಾಂಗಿಯೆ, ನೀನು ನನ್ನ ಸಮೀಪಕ್ಕೆ ಬಾ' ಎಂದು ಪ್ರಾರ್ಥಿಸಿದನು. ಆಗ ಆಕೆಯು ಯವಕ್ರೀತನ ಕ್ರೂರದುಸ್ಸ್ವಭಾವವನ್ನು ತಿಳಿದು ಆತನನ್ನು ನಿರಾಕರಿಸಿದಳು. ಬಳಿಕ ಆತನು ನಿರ್ಬಂಧಪಡಿಸಲು, ಆಕೆಯು ಈತನ ಇಚ್ಛಾನುಸಾರ ನಡೆಯದೆ ಹೋದರೆ ಶಾಪವನ್ನು ಕೊಟ್ಟಾನೆಂದು ಭಯಪಟ್ಟು, ತನ್ನ ತಂದೆಯಾದ ರೈಭ್ಯಮಹರ್ಷಿಯ ತೇಜಸ್ಸನ್ನೂ ವಿಚಾರಮಾಡಿ, ಯವಕ್ರೀತನನ್ನು ಕುರಿತು ಹಾಗೇ ಆಗಲೆಂದು ಅಂಗೀಕರಿಸಿದಳು. ಬಳಿಕ ಯವಕ್ರೀತನು ಆಕೆಯನ್ನು ಏಕಾಂತಪ್ರದೇಶಕ್ಕೆ ಕರೆದುಕೊಂಡುಹೋಗಿ, ತನ್ನ ಕಾಮವನ್ನು ತೀರಿಸಿಕೊಂಡು, ಆಕೆಯನ್ನು ದುಃಖಸಮುದ್ರದಲ್ಲಿ ಮುಳುಗಿಸಿಬಿಟ್ಟನು. ಅಷ್ಟರಲ್ಲೇ ರೈಭ್ಯಮಹರ್ಷಿಯು ತನ್ನ ಆಶ್ರಮಕ್ಕೆ ಬಂದು, ಪರಾವಸುವಿಗೆ ಪತ್ನಿಯಾದ ತನ್ನ ಸೊಸೆಯು ರೋದನಮಾಡುತ್ತ ನಿಂತಿರುವದನ್ನು ನೋಡಿ, ಆಕೆಯನ್ನು ಸಮಾಧಾನಪಡಿಸಿ 'ಎಲೆ ಮಗಳೆ, ಯಾತಕ್ಕೆ ರೋದನಮಾಡುತ್ತಿರುವೆ? ಹೇಳು' ಎನಲು, ಆಕೆಯು ತನ್ನ ಸಂಗಡ ಯವಕ್ರೀತನು ಆಡಿದ ಮಾತನ್ನೂ, ಅದಕ್ಕೆ ತಾನು ಕೊಟ್ಟ ಉತ್ತರವನ್ನೂ, ಆತನು ತನ್ನನ್ನು ಬಲಾತ್ಕಾರಮಾಡಿದ್ದನ್ನೂ ಸಹ ಹೇಳಿದಳು. ಅದನ್ನು ಕೇಳಿ ರೈಭ್ಯಮಹರ್ಷಿಯು ಜಾಜ್ವಲ್ಯಮಾನವಾದ ಕೋಪವುಳ್ಳವನಾಗಿ, ಯವಕ್ರೀತನನ್ನು ನಾಶಮಾಡಬೇಕೆಂದು ಯೋಚಿಸಿ, ತನ್ನ ಒಂದು ಜಡೆಯನ್ನು ಕಿತ್ತು, ವೇದಮಂತ್ರಗಳಿಂದ ಅಗ್ನಿಯಲ್ಲಿ ಹೋಮಮಾಡಿದನು. ಅದರಿಂದ ಆ ಅಗ್ನಿಕುಂಡದಲ್ಲಿ ರೂಪವತಿಯಾದ ಸ್ತ್ರೀಯು ಉತ್ಪನ್ನಳಾದಳು. ಬಳಿಕ ಮತ್ತೊಂದು ಜಡೆಯನ್ನು ಕಿತ್ತು ಅದನ್ನೂ ಹೋಮಮಾಡಲು, ಭಯಂಕರನಾಗಿಯೂ ಘೋರವಾದ ನೇತ್ರಗಳುಳ್ಳವನಾಗಿಯೂ ಇರುವ ಒಬ್ಬ ರಾಕ್ಷಸನು ಹುಟ್ಟಿದನು. ಅವರಿಬ್ಬರೂ ರೈಭ್ಯಮಹರ್ಷಿಯನ್ನು ನೋಡಿ 'ಎಲೈ ಮಹಾತ್ಮನೆ, ನಮ್ಮಿಂದ ಯಾವ ಕೆಲಸವಾಗಬೇಕು' ಎಂದು ಕೇಳಿಕೊಂಡರು. ಆಗ ಮಹಾಕೋಪಿಷ್ಠನಾದ ರೈಭ್ಯಮಹರ್ಷಿಯು 'ನೀವಿಬ್ಬರೂ ಹೋಗಿ ಯವಕ್ರೀತನನ್ನು ಸಂಹರಿಸಿರಿ' ಎನಲು, ಆ ಸ್ತ್ರೀಭೂತವೂ ರಾಕ್ಷಸನೂ ಸಹ ಯವಕ್ರೀತನನ್ನು ಸಂಹರಿಸಬೇಕೆಂದು ಆತನ ಬಳಿಗೆ ಬಂದರು. ಆಗ ಆ ಸ್ತ್ರೀಭೂತವು ಯವಕ್ರೀತನನ್ನು ಮೋಹಗೊಳಿಸಿ, ಆತನ ಕಮಂಡಲವನ್ನು ಅಪಹರಿಸಿತು. ಬಳಿಕ ಆ ರಾಕ್ಷಸನು ಶೂಲಾಯುಧವನ್ನು ಧರಿಸಿಕೊಂಡು, ಕಮಂಡಲವಿಲ್ಲದೆ ಅಪರಿಶುದ್ಧನಾಗಿರುವ ಆ ಯವಕ್ರೀತನಿಗೆ ಎದುರುಬಿದ್ದು ಬಂದನು. ಆಗ ಯವಕ್ರೀತನು ತನ್ನನ್ನು ಸಂಹರಿಸಬೇಕೆಂದು ಶೂಲವನ್ನು ಹಿಡಿದು ಮೇಲೆಬಿದ್ದು ಬರುವ ಆ ರಾಕ್ಷಸನನ್ನು ನೋಡಿ, ಎದ್ದು ಶುದ್ಧಾಚಮನವನ್ನು ಮಾಡಬೇಕೆಂದು ಬಂದು ಸರೋವರದ ಸಮೀಪಕ್ಕೆ ಹೋಗಿ ನೋಡಿ, ಅದರಲ್ಲಿ ನೀರಿಲ್ಲದಿರಲು, ಅಲ್ಲಿಂದ ಜಾಗ್ರತೆಯಾಗಿ ನದಿಗಳನ್ನು ಹುಡುಕಿಕೊಂಡು ಹೋದನು. ಆ ಸಮಯದಲ್ಲಿ ಎಲ್ಲಿಯೂ ನೀರೇ ಕಾಣಿಸದೆ ಹೋಯಿತು. ಆಗ ಆ ರಾಕ್ಷಸನ ಬಾಧೆ

ಮನ್ನು ಸಹಿಸಲಾರದೆ ತಮ್ಮ ತಂದೆಯ ಹೋಮಶಾಲೆಯನ್ನು ಪ್ರವೇಶಮಾಡಿದನು. ಆ ಹೋಮಶಾಲೆಯ ಬಾಗಿಲು ಕಾಯುತ್ತಿದ್ದ ಒಬ್ಬ ಕುರುಡನಾದ ಶೂದ್ರನು ಒಳಕ್ಕೆ ಬಿಡದೆ, ಬಾಗಿಲಿನಲ್ಲೇ ಬಲಾತ್ಕಾರದಿಂದ ಯವಕ್ರೀತನನ್ನು ಹಿಡಿದುಕೊಂಡನು. ಆ ಸಮಯದಲ್ಲಿ ಆ ರಾಕ್ಷಸನು ತನ್ನ ಶೂಲಾಯುಧದಿಂದ ಯವಕ್ರೀತನನ್ನು ಪೆಟ್ಟಕ್ಕಲು, ಆ ಪೆಟ್ಟಿನಿಂದ ಎದೆಯೊಡೆದು ಯವಕ್ರೀತನು ನೆಲದಮೇಲೆ ಬಿದ್ದು ಮೃತನಾದನು. ಬಳಿಕ ಆ ರಾಕ್ಷಸನು ರೈಭ್ಯನ ಸಮೀಪಕ್ಕೆ ಬಂದು, ಯವಕ್ರೀತನು ಸಂಹೃತನಾದ ಸಂಗತಿಯನ್ನು ಬಿನ್ನವಿಸಿ, ಆ ಮಹರ್ಷಿಯ ಆಜ್ಞೆಯನ್ನು ಪಡೆದುಕೊಂಡು ಆ ಮಾಯಾಸ್ತ್ರೀಯೊಡನೆ ವಾಸಮಾಡಿಕೊಂಡಿದ್ದನು" ಎಂದು ಲೋಮಶನು ಧರ್ಮರಾಯನಿಗೆ ಹೇಳಿದನು.

## ೧೩೭ನೇ ಅಧ್ಯಾಯ.—ತೀರ್ಥಯಾತ್ರಾಪ್ರಶಂಸೆ.—(ಯವಕ್ರೀತೋಪಾಖ್ಯಾನ).

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಲೋಮಶನು ಧರ್ಮರಾಯನನ್ನು ಕುರಿತು "ಎಲೈ ಧರ್ಮರಾಯನೆ, ಆಗ ನದೀತೀರಕ್ಕೆ ಹೋಗಿದ್ದ ಭರದ್ವಾಜಮಹರ್ಷಿಯು ಸ್ನಾನಮಾಡಿ, ನಿತ್ಯವೂ ಮಾಡತಕ್ಕ ಬ್ರಹ್ಮಯಜ್ಞವನ್ನು ಮಾಡಿಕೊಂಡು, ಸಮಿತ್ತುಗಳನ್ನು ತೆಗೆದುಕೊಂಡು ತನ್ನ ಆಶ್ರಮಕ್ಕೆ ಬಂದನು. ಪೂರ್ವದಲ್ಲಿ ಆತನು ಆಶ್ರಮಕ್ಕೆ ಬಂದದ್ದನ್ನು ನೋಡಿ, ಪ್ರತ್ಯುತ್ಥಾನ ಮಾಡುತ್ತಿದ್ದ ಅಗ್ನಿಗಳು, ಆ ದಿವಸ ಪುತ್ರನು ಮೃತನಾದ್ದರಿಂದ ಆಶೌಚವನ್ನು ಪಡೆದಿದ್ದ ಆತನನ್ನು ನೋಡಿ ಪ್ರತ್ಯುತ್ಥಾನಮಾಡದಿರಲು, ಭರದ್ವಾಜನು ಕಾವಲುಗಾರನಾದ ಆ ಕುರುಡಶೂದ್ರನನ್ನು ಕುರಿತು 'ಎಲೈ ಶೂದ್ರನೆ, ಆಶ್ರಮಕ್ಕೆ ಬಂದ ನನ್ನನ್ನು ನೋಡಿ ಅಗ್ನಿಗಳು ಎಂದಿನಂತೆ ಪ್ರಜ್ವಲಿಸದಿರುವದಕ್ಕೆ ಕಾರಣವೇನು? ನನ್ನನ್ನು ನೋಡಿದರೂ ಯಾವಾಗಲೂ ಇದ್ದಂತೆ ಕಾಣಿಸುವದಿಲ್ಲ. ನಮ್ಮ ಆಶ್ರಮದಲ್ಲಿ ಕ್ಷೇಮವೆ? ನನ್ನ ಮಗನಾದ ಅಲ್ಪಬುದ್ಧಿಯಾದ ಯವಕ್ರೀತನು ರೈಭ್ಯಮಹರ್ಷಿಯ ಆಶ್ರಮಕ್ಕೇನಾದರೂ ಹೋಗಿದ್ದನೆ? ಶೀಘ್ರವಾಗಿ ಹೇಳು. ನನ್ನ ಮನಸ್ಸಿಗೆ ಬಹಳ ಸಂಶಯವಾಗಿರುವದು' ಎನಲು, ಆ ಕಾವಲುಗಾರನು 'ಎಲೈ ಮಹರ್ಷಿಯೆ, ಮಂದಬುದ್ಧಿಯಾದ ನಿನ್ನ ಪುತ್ರನಾದ ಯವಕ್ರೀತನು ರೈಭ್ಯಮಹರ್ಷಿಯ ಆಶ್ರಮಕ್ಕೆ ಹೋಗಿ ಆತನ ಸೊಸೆಯನ್ನು ಅವಮಾನಪಡಿಸಿದ್ದರಿಂದ, ಆತನು ಬಹಳವಾಗಿ ಕೋಪಗೊಂಡು, ಈತನ ಸಂಹಾರಾರ್ಥವಾಗಿ ಒಬ್ಬ ರಾಕ್ಷಸನನ್ನು ನಿರ್ಮಾಣಮಾಡಿ ಕಳುಹಿಸಿಕೊಟ್ಟನು. ಆ ರಾಕ್ಷಸನು ಶೂಲವನ್ನು ಧರಿಸಿಕೊಂಡು, ನಿನ್ನ ಮಗನನ್ನು ಎಲ್ಲಿ ಹೋದರೂ ಬಿಡದೆ ಅಟ್ಟಿಕೊಂಡು ಬರಲು, ಕಮಂಡಲವನ್ನು ಕಳೆದುಕೊಂಡು ಅಶುಚಿಯಾಗಿದ್ದ ಯವಕ್ರೀತನು ಶುದ್ಧಾಚಮನಕ್ಕೋಸ್ಕರ ಉದಕಾರ್ಥವಾಗಿ ಹೋಮಶಾಲೆಯನ್ನು ಪ್ರವೇಶಿಸಿದನು. ಆಗ ನಾನು ಈತನು ಅಶುಚಿಯಾಗಿ ಹೋಮಶಾಲೆಗೆ ನುಗ್ಗುವನಲ್ಲಾ ಎಂದು ಬಾಗಿಲಿನಲ್ಲಿ ತಡೆದೆನು. ಆ ಸಮಯದಲ್ಲಿ ಬೆನ್ನಟ್ಟಿ ಬಂದ ಆ ರಾಕ್ಷಸನು ತನ್ನ ಶೂಲಾಯುಧದಿಂದ ಆತನನ್ನು ಸಂಹಾರಮಾಡಿಬಿಟ್ಟನು. ಇದೋ ಇಲ್ಲಿ ಬಿದ್ದಿರುವನು' ಎಂದು ತಿಳುಹಿಸಿದನು. ಅಂಥ ಕರ್ಣಕಠೋರವಾದ ಮಾತನ್ನು ಕೇಳಿ ಭರದ್ವಾಜಮಹರ್ಷಿಯು ಮೃತನಾದ ಮಗನನ್ನು ತಟ್ಟಿಕೊಂಡು ಬಹು ದುಃಖದಿಂದ ಪ್ರಲಾಪಿಸುತ್ತ 'ಎಲೈ ಪುತ್ರನೆ, ಗುರುಮುಖದಿಂದ ಅಧ್ಯಯನ ಮಾಡದೆ ತನಗೆ ತಾನೇ ವೇದಗಳೆಲ್ಲಾ ಮುಖಸ್ಥವಾಗಿ ಬರಬೇಕೆಂದು ನೀನು ಘೋರವಾದ ತಪಸ್ಸನ್ನು ಮಾಡಿ, ಮಹಾತ್ಮರಾದ ಬ್ರಾಹ್ಮಣರಲ್ಲಿ ಒಳ್ಳೇ ನಡತೆಯುಳ್ಳವನಾಗಿದ್ದುಕೊಂಡು, ಯಾವ ಪ್ರಾಣಿಗಳಲ್ಲಿಯೂ ಅಪರಾಧವನ್ನೂ ಮಾಡದೆ ಇದ್ದು, ಈಗ ಕ್ರೂರಸ್ವಭಾವನಾಗ ಬಹುದೆ? ರೈಭ್ಯಾಶ್ರಮಕ್ಕೆ ಹೋಗಬೇಡವೆಂದು ನಾನೆಷ್ಟು ಹೇಳಿದರೂ ಅದನ್ನು ಕೇಳದೆ, ಇಂಥಾ ಮರಣವನ್ನು ಹೊಂದುವದಕ್ಕೆ ಅಲ್ಲಿಗೆ ಹೋದೆಯಾ! ಆ ರೈಭ್ಯಮಹರ್ಷಿಯು ವೃದ್ಧನಾದ ನನಗೆ ಒಬ್ಬನೇ ಮಗನಿರುವನೆಂದು ತಿಳಿದಿದ್ದರೂ, ದುಷ್ಟವಾದ ಬುದ್ಧಿಯಿಂದ ಕ್ರೋಧಾವೇಶವನ್ನು ತಾಳಿ, ನನಗೆ ಇಂಥಾ ಪುತ್ರಶೋಕವನ್ನುಂಟುಮಾಡಿದನು. ನಿನ್ನನ್ನಗಲಿ ನಾನಿರಲಾರೆನು. ನಾನೂ ಇಲ್ಲಿ ನನ್ನ ಪ್ರಾಣವನ್ನು ಕಳೆದುಕೊಂಡುಬಿಡುವೆನು. ನಾನು ಹ್ಯಾಗೆ ಪುತ್ರಶೋಕದಿಂದ ದುಃಖಪಡುತ್ತ ಮರಣವನ್ನು ಹೊಂದುತ್ತೇನೆಯೋ,

ಹಾಗೇ ರೈಭ್ಯನೂ ತನ್ನ ಜ್ಯೇಷ್ಠಪುತ್ರನಿಂದ ಹಿಂಸೆಯನ್ನು ಪಡೆದು ಮರಣವನ್ನು ಹೊಂದಲಿ' ಎಂದು ಶಪಿಸಿ, 'ಲೋಕದಲ್ಲಿ ಮಕ್ಕಳು ಹುಟ್ಟದೆ ಇರತಕ್ಕವರಿಗೆ ಎಂದಿಗೂ ಪುತ್ರಶೋಕವೇ ಇಲ್ಲದಿರುವದರಿಂದ ಅವರೇ ಸುಖಿಗಳಾದವರು. ಯಾರು ಮಕ್ಕಳನ್ನು ಕಳೆದುಕೊಂಡು ದುಃಖದಿಂದ ಕಳವಳಪಡುತ್ತ ಮತ್ತೊಬ್ಬರಿಗೆ ಕೇಡನ್ನು ಕೋರುವರೋ, ಅವರಿಗಿಂತಲೂ ಪಾಪಿಷ್ಠರಾದವರು ಲೋಕದಲ್ಲಿ ಯಾರಾದರೂ ಉಂಟೆ! ನಾನು ಮಗನನ್ನು ಕಳೆದುಕೊಂಡದ್ದಲ್ಲದೆ, ನನಗೆ ಇಷ್ಟನಾದ ರೈಭ್ಯನಿಗೂ ಶಾಪವನ್ನು ಕೊಟ್ಟೆ. ಇಂಥ ಅವಸ್ಥೆಯನ್ನು ಅನುಭವಿಸ ತಕ್ಕವನು ನನಗಿಂತಲೂ ಮತ್ತೊಬ್ಬನು ಯಾವನಾದರೂ ಇರುವನೆ?' ಎಂದು ನಾನಾಪ್ರಕಾರವಾಗಿ ಪ್ರಲಾಪಿಸುತ್ತ, ತನ್ನ ಮಗನಿಗೆ ಅಗ್ನಿಸಂಸ್ಕಾರವನ್ನು ಮಾಡಿ, ಬಳಿಕ ಅರಣ್ಯದಿಂದ ಕಾಷ್ಠಗಳನ್ನು ತೆಗೆದುಕೊಂಡು ಬಂದು ರಾಶಿಮಾಡಿ, ಅದಕ್ಕೆ ಅಗ್ನಿಯನ್ನು ಹತ್ತಿಸಿ, ಆ ಉರಿಯುವ ಅಗ್ನಿಯಲ್ಲಿ ತಾನು ಬಿದ್ದನು" ಎಂದು ಲೋಮಶನು ಧರ್ಮರಾಯನಿಗೆ ಹೇಳಿದನು.

## ೧೩೮ನೇ ಅಧ್ಯಾಯ.—ತೀರ್ಥಯಾತ್ರಾಪ್ರಶಂಸೆ—(ಯವಕ್ರೀತೋಪಾಖ್ಯಾನ).

ವೈಶಂಪಾಯನಮುನೀಶ್ವರು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಬಳಿಕ ಲೋಮಶನು ಧರ್ಮರಾಯನನ್ನು ಕುರಿತು "ಎಲೈ ಧರ್ಮರಾಯನೆ, ಇಷ್ಟರಲ್ಲಿ ಬೃಹದ್ಯುಮ್ನನೆಂಬ ಮಹಾರಾಜನು ಸತ್ರಯಾಗವನ್ನು ಮಾಡುವದಕ್ಕೆ ಉಪಕ್ರಮಿಸಿ, ತನಗೆ ಯಾಜಕನಾದ ರೈಭ್ಯಮಹರ್ಷಿಯ ಪುತ್ರರಾದ ಅರ್ವಾವಸು ಪರಾವಸುಗಳನ್ನು ಋತ್ವಿಕ್ಕುಗಳನ್ನಾಗಿ ವರಿಸಲು, ಅವರಿಬ್ಬರೂ ತಂದೆಯ ಆಜ್ಞೆಯನ್ನು ತೆಗೆದುಕೊಂಡು ಆ ಯಾಗಾರ್ಥವಾಗಿ ಹೊರಟು ಹೋದರು. ಆಗ ರೈಭ್ಯಮಹರ್ಷಿಯೂ ಪರಾವಸುವಿನ ಪತ್ನಿಯೂ ಸಹ ಆಶ್ರಮದಲ್ಲೇ ಇದ್ದರು. ಹೀಗಿರುವಲ್ಲಿ, ಒಂದಾನೊಂದುದಿವಸ ಪರಾವಸುವು ತನ್ನ ಪತ್ನಿಯನ್ನು ನೋಡಬೇಕೆಂದು ಬೆಳಗಿನ ಜಾವದಲ್ಲಿ ಸ್ವಲ್ಪ ಕತ್ತಲೆಯಾಗಿರುವಾಗಲೇ, ನಿದ್ರಾಂಧನಾಗಿ ಆಶ್ರಮಕ್ಕೆ ಬರುತ್ತಿದ್ದನು. ಆ ಆಶ್ರಮದ ಸಮೀಪದಲ್ಲಿದ್ದ ಅರಣ್ಯದಲ್ಲಿ ರೈಭ್ಯಮಹರ್ಷಿಯು ಕೃಷ್ಣಾಜಿನವನ್ನು ಮೈತುಂಬಾ ಸುತ್ತಿಕೊಂಡು ಸಂಚರಿಸುತ್ತಿರಲು, ಆತನನ್ನು ನೋಡಿ, ಪರಾವಸುವು ಅದೇನೋ ಒಂದು ಮೃಗವೆಂದೆಣಿಸಿ ಭಯಪಟ್ಟು, ತನ್ನ ತಂದೆಯೆಂದು ತಿಳಿಯದೆ, ಆತ್ಮಸಂರಕ್ಷಣಾರ್ಥವಾಗಿ ಆತನನ್ನು ಸಂಹಾರವನ್ನು ಮಾಡಿ, ಬಳಿಕ ಅದರ ಸಮೀಪಕ್ಕೆ ಹೋಗಿ ತನ್ನಿಂದ ಮೃತನಾದ ಆ ಮಹರ್ಷಿಯನ್ನು ನೋಡಿ ಬಹಳವಾಗಿ ವ್ಯಸನಪಟ್ಟು, ತಂದೆಗೆ ಮಾಡತಕ್ಕ ಪ್ರೇತಕಾರ್ಯಗಳನ್ನೆಲ್ಲಾ ಮಾಡಿ, ಪುನಃ ಅಲ್ಲಿಂದ ಹೊರಟು ಸತ್ರಯಾಗಕ್ಕೆ ಬಂದು, ತನ್ನೊಡಹುಟ್ಟಿದ ಅರ್ವಾವಸುವನ್ನು ನೋಡಿ 'ಎಲೈ ಅರ್ವಾವಸುವೆ, ಈ ಯಾಗವನ್ನು ಮಾಡಿಸುವದಕ್ಕೆ ನಿನ್ನೊಬ್ಬನಿಂದಾಗಲಾರದು. ನಾನು ತಂದೆಯಾದ ರೈಭ್ಯಮಹರ್ಷಿಯನ್ನು ಅಜ್ಞಾನದಿಂದ ಮೃಗವೆಂದು ತಿಳಿದು ಸಂಹಾರಮಾಡಿರುವೆನು. ಆ ದೋಷ ನಿವೃತ್ತಿಯಾಗುವದಕ್ಕೋಸ್ಕರ, ನೀನು ನನ್ನ ನಿಮಿತ್ತವಾಗಿ ವ್ರತವನ್ನಾಚರಿಸು ನಡೆ. ನಾನೊಬ್ಬನೇ ಈ ಯಾಗವನ್ನು ಮಾಡಿಸುತ್ತೇನೆ' ಎನಲು, ಅರ್ವಾವಸುವು 'ಎಲೈ ಅಣ್ಣನೆ, ನಿನ್ನ ಬ್ರಹ್ಮಹತ್ಯಾದೋಷವು ನಿವೃತ್ತಿಯಾಗುವದಕ್ಕೋಸ್ಕರ ನಾನು ಜಿತೇಂದ್ರಿಯನಾಗಿ ವ್ರತವನ್ನಾಚರಿಸುವದಕ್ಕೋಸ್ಕರ ಹೋಗುತ್ತೇನೆ; ನೀನು ಈ ಬೃಹದ್ಯುಮ್ನನಿಗೆ ಯಾಗವನ್ನು ಮಾಡಿಸು' ಎಂದು ಹೇಳಿ, ಒಡನೆಯೇ ಅರಣ್ಯಪ್ರವೇಶವನ್ನು ಮಾಡಿ, ತನ್ನ ಅಣ್ಣನ ಬ್ರಹ್ಮಹತ್ಯಾದೋಷವು ನಿವೃತ್ತಿಯಾಗುವಂತೆ ವ್ರತವನ್ನಾಚರಿಸಿ, ಪುನಃ ಆ ಸತ್ರಯಾಗಕ್ಕೆ ಬಂದನು. ಅದನ್ನು ನೋಡಿ ಪರಾವಸುವು ಬಹು ಹರ್ಷದಿಂದ ಬೃಹದ್ಯುಮ್ನನನ್ನು ಕುರಿತು 'ಎಲೈ ರಾಯನೆ, ಈ ಅರ್ವಾವಸುವು ಬ್ರಹ್ಮಹತ್ಯವನ್ನು ಮಾಡಿರುವನು. ಈತನು ಈ ಯಜ್ಞವನ್ನು ನೋಡಕೂಡದು. ಒಂದುವೇಳೆ ನೋಡಿದ್ದೇ ಆದರೆ ನಿನಗೆ ಹಾನಿ ಸಂಭವಿಸುವದು' ಎಂದು ನುಡಿದನು. ಆ ಮಾತನ್ನು ಕೇಳಿ ಬೃಹದ್ಯುಮ್ನನು ತನ್ನ ಭೃತ್ಯರಿಂದ ಅರ್ವಾವಸುವನ್ನು ಯಜ್ಞಶಾಲೆಯಿಂದ ಆಚೆಗೆ ತಳ್ಳಿಸಿಬಿಟ್ಟನು. ಆ ಕಾಲದಲ್ಲಿ ಅರ್ವಾವಸುವು

ಎಲೈ ರಾಯನೆ, ನಾನು ಬ್ರಹ್ಮಹತ್ಯವನ್ನು ಮಾಡಿದವನಲ್ಲ; ನಮ್ಮಣ್ಣನೇ ಬಹ್ಮಹತ್ಯವನ್ನು ಮಾಡಿದವನು. ವರಿಂದುಂಟಾದ ಆತನ ದೋಷವನ್ನು ನಾನು ವ್ರತಾಚರಣೆಯನ್ನು ಮಾಡಿ ನಿವೃತ್ತಿಮಾಡಿರುವೆನು' ಎಂದು ನಃಪುನಃ ಗಟ್ಟಿಯಾಗಿ ಕೂಗಿಕೊಂಡರೂ, ಅವನ್ನು ಕೇಳದೆ ಆ ಭೃತ್ಯರು ಗದರಿಸಿಕೊಂಡು, ಆತನನ್ನು ಚೆಗೆ ತಳ್ಳಿಬಿಟ್ಟರು. ಬಳಿಕ ಬ್ರಹ್ಮರ್ಷಿಯಾದ ಅರ್ವಾವಸುವು ಯಾವ ಮಾತನ್ನೂ ಆಡದೆ, ಅರಣ್ಯಕ್ಕೆ ೋಗಿ, ಸೂರ್ಯನನ್ನು ಕುರಿತು ಉಗ್ರವಾದ ತಪಸ್ಸನ್ನು ಮಾಡುತ್ತ, ಸೂರ್ಯದೇವತಾಕವಾದ ಅಷ್ಟಾಕ್ಷರಮಂತ್ರ ನ್ನು ಮಾಡಿ ಜಪಿಸಿದನು. ಅದರಿಂದ ಸೂರ್ಯನು ಪ್ರಸನ್ನನಾಗಿ ಮೂರ್ತಿಮತ್ತಾಗಿ ಪ್ರತ್ಯಕ್ಷನಾಗಲು, ಅಗ ಗ್ನಿಮೊದಲಾದ ಸಕಲ ದೇವತೆಗಳೂ ಆತನ ತಪಸ್ಸಿಗೆ ಮೆಚ್ಚಿ, ಅರ್ವಾವಸುವಿನ ಪಕ್ಷವನ್ನು ವಹಿಸಿ, ಪರಾ ಸುವನ್ನು ನಿರಾಕರಿಸಿ ಯಜ್ಞಶಾಲೆಯಿಂದ ಆಚೆಗೆ ಓಡಿಸಿಬಿಟ್ಟು, ಆ ಅರ್ವಾವಸುವನ್ನು ಕುರಿತು 'ಎಲೈ ಅರ್ವಾ ಸುವೆ, ನಿನಗೆ ಬೇಕಾದ ವರಗಳನ್ನು ಬೇಡು' ಎನಲು, ಅರ್ವಾವಸುವು 'ಎಲೈ ದೇವತೆಗಳಿರಾ, ನಮ್ಮ ತಂದೆಯು ದುಕುವಂತೆಯೂ, ನಮ್ಮಣ್ಣನಿಗೆ ಬ್ರಹ್ಮಹತ್ಯಾದೋಷವು ಇಲ್ಲದಂತೆಯೂ, ಆತನು ತಂದೆಯನ್ನು ಸಂಹಾರಮಾ ದ್ದು ಆತನ ಜ್ಞಾಪಕಕ್ಕೆ ಬಾರದಂತೆಯೂ, ಮತ್ತು ಭರದ್ವಾಜನೂ ಯವಕ್ರಿತನೂ ಸಹ ಬದುಕುವಂತೆಯೂ, ನಾನು ಚಿಸಿದ ಸೂರ್ಯದೇವತಾಕವಾದ ಈ ಕಾಠಕಬ್ರಾಹ್ಮಣವು ಲೋಕದಲ್ಲಿ ಪ್ರಚಾರಕ್ಕೆ ಬರುವಹಾಗೂ, ನನಗೆ ನುಗ್ರಹವನ್ನು ಮಾಡಿರಿ' ಎಂದು ಬೇಡಿಕೊಂಡನು. ಆಗ ದೇವತೆಗಳು ಹಾಗೆಯೇ ಆಗಲೆಂದು ಆ ವರಗಳ ಲ್ಲಾ ಕೊಡಲು, ರೈಭ್ಯಮಹರ್ಷಿ ಮೊದಲಾದವರೆಲ್ಲರೂ ಜೀವವಂತರಾಗಿ ಬಂದರು. ಆಗ ಯವಕ್ರೀತನು ೀವತೆಗಳನ್ನು ಕುರಿತು 'ಎಲೈ ದೇವತೆಗಳಿರಾ, ನಾನು ವೇದಾಧ್ಯಯನವನ್ನು ಮಾಡಿ ವ್ರತಾಚರಣೆಯನ್ನೂ ಾಡಿರುವೆನು. ಇಂಥ ನನ್ನನ್ನು ಮಾಟಮಾಡಿ ಕೊಲ್ಲುವಂತೆ ಈ ರೈಭ್ಯಮಹರ್ಷಿಗೆ ಸಾಮರ್ಥ್ಯವುಂಟಾದದ್ದು ಾಗೆ?' ಎಂದು ಪ್ರಶ್ನೆಮಾಡಲು, ದೇವತೆಗಳು 'ಎಲೈ ಯವಕ್ರೀತನೆ, ಯಾತಕ್ಕೋಸ್ಕರ ಇಂಥಾ ಮಾತು ಳನ್ನಾಡುವೆ? ನೀನು ಪೂರ್ವದಲ್ಲಿ ಗುರುಶುಶ್ರೂಷೆಯನ್ನು ಮಾಡಿ ವೇದಶಾಸ್ತ್ರಗಳನ್ನು ಅಧ್ಯಯನ ಮಾಡ ಲ್ಲ; ತಪೋಬಲದಿಂದ ಅವುಗಳನ್ನು ಸಂಪಾದಿಸಿವೆ. ರೈಭ್ಯಮಹರ್ಷಿಯು ಬಹುಕಾಲ ಗುರುಶುಶ್ರೂಷೆಮಾಡಿ ುಮಪಟ್ಟು ಅನೇಕಕ್ಲೇಶಗಳನ್ನು ಸಹಿಸಿಕೊಂಡು ವೇದಾಧ್ಯಯನವನ್ನು ಮಾಡಿರುವನು. ಆದ್ದರಿಂದ ಆತನಿಗೆ ಂಥ ಸಾಮರ್ಥ್ಯವುಂಟಾಯಿತು' ಎಂದು ನುಡಿದು, ದೇವತೆಗಳೆಲ್ಲರೂ ಸ್ವರ್ಗಲೋಕಕ್ಕೆ ಹೊರಟು ಹೋದರು. ಲೈ ಧರ್ಮರಾಯನೆ, ಅಂಥ ಮಹರ್ಷಿಯ ಆಶ್ರಮವೇ ಇದು. ಇಲ್ಲಿರುವ ವೃಕ್ಷಗಳು ಯಾವಾಗಲೂ ಪುಷ್ಪ ಲ ಭರಿತಗಳಾಗಿಯೇ ಇರುವವು. ಇಲ್ಲಿ ನೀನು ಸ್ವಲ್ಪಕಾಲ ವಾಸಮಾಡಿದರೂ, ನಿನ್ನ ಪಾಪವೆಲ್ಲಾ ನಿವೃತ್ತಿ ಾಗುವದು" ಎಂದು ಲೋಮಶನು ಧರ್ಮರಾಯನಿಗೆ ಹೇಳಿದನು.

೧೩೯ನೇ ಅಧ್ಯಾಯ.—ತೀರ್ಥಯಾತ್ರಾಪ್ರಶಂಸೆ.—(ಗಂಧಮಾದನ ಪರ್ವತಾರೋಹಣ)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಳಿಕ ಲೋಮಶನು ಧರ್ಮರಾಯನನ್ನು ಕುರಿತು "ಎಲೈ ಧರ್ಮರಾಯನೆ, ನಾವು ಉಶೀರಬೀಜ, ಮೈನಾಕ, ರಿಶ್ವೇತ, ಕಾಲಶೈಲಗಳೆಂಬ ಪರ್ವತಗಳನ್ನು ಅತಿಕ್ರಮಿಸಿ ಬಂದೆವು. ಈ ಪ್ರದೇಶದಲ್ಲೇ ಗಂಗೆಯು ಏಳು ಾಗವಾಗಿ ಪ್ರವಹಿಸುತ್ತಿರುವಳು. ವಿರಾಜಸವೆಂಬ ಈ ಸ್ಥಾನವು ಬಹು ಪುಣ್ಯತಮವಾದದ್ದು. ಇಲ್ಲಿ ನಿರಂ ರದಲ್ಲೂ ಯಜ್ಞೇಶ್ವರನು ಪ್ರಕಾಶಿಸುತ್ತಿರುವನು. ಅದ್ಭುತವಾದ ಈ ಸ್ಥಳವು ಮನುಷ್ಯರು ನೋಡುವದಕ್ಕೆ ಸಾಧ್ಯವಾದದ್ದು. ಆದ್ದರಿಂದ ನೀವು ಜಾಗರೂಕರಾಗಿದ್ದುಕೊಂಡು, ಚಿತ್ತಶುದ್ಧಿಯನ್ನು ಪಡೆದು, ಇಲ್ಲಿರುವ ುಣ್ಯತಮವಾದ ತೀರ್ಥಗಳನ್ನು ದರ್ಶನಮಾಡಿರಿ. ಇದೋ, ಈ ಸ್ಥಳದಲ್ಲಿ ದೇವತೆಗಳ ಹೆಜ್ಜೆಗಳು ಕಾಣಿಸು ರುವವು. ಇದು ದೇವತೆಗಳಿಗೆ ವಿಹಾರಸ್ಥಾನವಾದದ್ದು. ಇದೇ ಮಂದರಪರ್ವತಕ್ಕೆ ಹೋಗುವ ಮಾರ್ಗವು.

ನಾವೆಲ್ಲರೂ ಆ ಪರ್ವತಕ್ಕೆ ಹೋಗೋಣ. ಇದೋ, ಈ ಪ್ರದೇಶದಲ್ಲಿ ಮಣಿವರನೆಂಬ ಯಕ್ಷನೂ ಯಕ್ಷಾಧಿಪತಿಯಾದ ಕುಬೇರನೂ ಸಹ ಇರುವರು. ಇಲ್ಲಿ ಶೀಘ್ರಗಾಮಿಗಳಾದ ಎಂಭಂತ್ತೆಂಟುಸಾವಿರಮಂದಿ ಗಂಧರ್ವರೂ, ಅಷ್ಟುಮಂದಿ ಕಿನ್ನರರೂ, ಮೂರುಲಕ್ಷದ ಐವತ್ತೆರಡುಸಾವಿರಮಂದಿ ಯಕ್ಷರೂ ಸಹ, ಅನೇಕಪ್ರಕಾರವಾದ ರೂಪುಗಳನ್ನು ತಾಳಿ, ಬಗೆಬಗೆಯಾದ ಆಯುಧಗಳನ್ನು ಹಿಡಿದುಕೊಂಡು, ಯಕ್ಷಶ್ರೇಷ್ಠನಾದ ಮಣಿಭದ್ರನನ್ನು ಸೇವಿಸುತ್ತಿರುವರು. ಅವರ ಐಶ್ವರ್ಯವು ಅಪರಿಮಿತವಾಗಿರುವದು. ವಾಯುವೇಗಕ್ಕಿಂತಲೂ ಅಧಿಕವಾದ ವೇಗವುಳ್ಳ ಅವರು ದೇವೇಂದ್ರನ ಪದವಿಯನ್ನಾದರೂ ತೆಗೆದುಕೊಳ್ಳಬಲ್ಲರು. ಅಂಥವರು ಈ ದುರ್ಗಮವಾದ ಮಹಾಪರ್ವತಗಳನ್ನು ರಕ್ಷಿಸಿಕೊಂಡಿರುವರು. ಎಲೈ ಧರ್ಮರಾಯನೆ, ಇಲ್ಲಿ ಕ್ರೂರರಾದ ಕೆಲವುಮಂದಿ ರಾಕ್ಷಸರು ಕುಬೇರನಿಗೆ ಮಿತ್ರರಾಗಿಯೂ ಮಂತ್ರಿಗಳಾಗಿಯೂ ಇರುವರು. ಅವರನ್ನು ನಾವು ನೋಡಬೇಕಾಗುವದು. ಆದ್ದರಿಂದ ನೀನು ಪರಾಕ್ರಮಶಾಲಿಯಾಗಿರು. ಈ ದಿಕ್ಕಿನಲ್ಲೇ ಕೈಲಾಸ ಪರ್ವತವಿರುವದು. ಆ ಪರ್ವತವು ಆರು ಗಾವುದ ಎತ್ತರವುಳ್ಳದ್ದಾಗಿರುವದು. ಅಲ್ಲಿಗೆ ಸಕಲದೇವತೆಗಳೂ ಬರುವರು. ಇತ್ತಲಾಗಿಯೇ ಬದರಿಕಾಶ್ರಮವಿರುವದು. ಎಲೈ ಯುಧಿಷ್ಠಿರನೆ, ಅನೇಕರಾದ ಯಕ್ಷ ರಾಕ್ಷಸ ಕಿನ್ನರ ಕಿಂಪುರುಷ ಗಂಧರ್ವ ನಾಗ ಸುಪರ್ಣರು ಕುಬೇರನ ಓಲಗಕ್ಕೆ ಹೋಗುವದಕ್ಕೋಸ್ಕರ ಈ ಮಾರ್ಗವಾಗಿ ಬರುವರು. ನನ್ನ ಮಂತ್ರಬಲದಿಂದಲೂ, ಭೀಮಸೇನನ ಬಾಹುಬಲದಿಂದಲೂ, ನಿನ್ನ ತಪೋಬಲದಿಂದಲೂ, ನೀನು ರಕ್ಷಿತನಾಗಿ ಇತ್ತಲಾಗಿ ಹೊರಡು. ಸಕಲ ದೇವತೆಗಳೂ, ಗಂಗೆ ಮೊದಲಾದ ನದಿಗಳೂ, ಇಲ್ಲಿರುವ ಮಹಾಪರ್ವತಗಳೂ ಸಹ ನಿನಗೆ ಮಂಗಳವನ್ನು ಮಾಡಲಿ" ಎಂದು ನುಡಿದು, ಲೋಮಶನು ಗಂಗಾನದಿಯನ್ನು ಕುರಿತು "ಎಲೆ ಗಂಗೆಯೆ, ಇಂದ್ರನು ವಾಸಮಾಡತಕ್ಕ ಸುವರ್ಣಮಯವಾದ ಮೇರುಪರ್ವತದ ದೆಸೆಯಿಂದ ಪ್ರವಹಿಸುತ್ತಿರುವ ನಿನ್ನ ಶಬ್ದವು ಇಲ್ಲಿನ ವರೆಗೂ ಕೇಳಬರುತ್ತಿರುವದು. ಆಜಮೀಢವಂಶದಲ್ಲಿ ಶ್ರೇಷ್ಠನಾದ ಈ ಧರ್ಮರಾಯನನ್ನು ಈ ಪರ್ವತದುರ್ಗಗಳಲ್ಲಿ ನೀನು ಸಂರಕ್ಷಿಸಿ, ಆತನಿಗೆ ಕ್ಷೇಮವನ್ನುಂಟುಮಾಡು" ಎಂದು ಪ್ರಾರ್ಥಿಸಿ, ಧರ್ಮರಾಯನನ್ನು ನೋಡಿ "ಎಲೈ ಧರ್ಮರಾಯನೆ, ನೀನು ಇಲ್ಲಿ ಬಹು ಜಾಗರೂಕನಾಗಿರಬೇಕು" ಎಂದು ನುಡಿಯಲು, ಧರ್ಮರಾಯನು ತಮ್ಮಂದಿರನ್ನು ನೋಡಿ 'ಇದೇನು! ಈಹೊತ್ತು ಲೋಮಶಮಹರ್ಷಿಯು ಬಹಳವಾಗಿ ಸಂಭ್ರಮಪಡುತ್ತಿರುವನು! ನೀವೆಲ್ಲರೂ ಜಾಗರೂಕರಾಗಿ ಪ್ರಮಾದ ಬಾರದಂತೆ ದ್ರೌಪದಿಯನ್ನು ರಕ್ಷಿಸಿರಿ. ಈ ಪ್ರದೇಶವು ಬಹು ದುರ್ಗಮವಾದದ್ದು. ನೀವೆಲ್ಲರೂ ವಾಙ್ಮನಃಕಾಯಗಳಿಂದ ಪರಿಶುದ್ಧರಾಗಿರಬೇಕು. ಎಲೈ ಭೀಮಸೇನನೆ, ಈಗ ಅರ್ಜುನನು ಇಲ್ಲಿಲ್ಲದೆ ಹೋದದ್ದರಿಂದ ದ್ರೌಪದಿಯು ಭಯವುಂಟಾದ ಕಾಲದಲ್ಲಿ ಪರಾಕ್ರಮಶಾಲಿಯಾದ ನಿನ್ನನ್ನೇ ಆಶ್ರಯಿಸುವಳು. ಆದ್ದರಿಂದ ಈಕೆಯನ್ನು ನೀನು ಜಾಗರೂಕನಾಗಿ ಸಂರಕ್ಷಿಸಿಕೊಂಡಿರು" ಎಂದು ಹೇಳಿ, ನಕುಲಸಹದೇವರನ್ನು ಶಿರಸ್ಸಿನಲ್ಲಿ ಆಘ್ರಾಣಮಾಡಿ, ಕೈಯಿಂದ ಅವರ ಮೈದಡವಿ, ಕಂಬನಿಗಳನ್ನು ತುಂಬಿ "ಎಲೈ ತಮ್ಮಂದಿರಾ, ನೀವೇನೂ ಭಯಪಡಬೇಡಿರಿ; ಪ್ರಮಾದವಿಲ್ಲದೆ ಜಾಗರೂಕರಾಗಿರಿ" ಎಂದು ನುಡಿದನು.

## ೧೪೦ನೇ ಅಧ್ಯಾಯ.—ತೀರ್ಥಯಾತ್ರಾಪ್ರಶಂಸೆ.—(ಗಂಧಮಾದನ ಪರ್ವತಾರೋಹಣ.)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಬಳಿಕ ಯುಧಿಷ್ಠಿರನು ಭೀಮಸೇನನನ್ನು ಕುರಿತು "ಎಲೈ ಭೀಮಸೇನನೆ, ಇಲ್ಲಿ ದೊಡ್ಡದೊಡ್ಡವಾಗಿಯೂ ಬಲಿಷ್ಠವಾಗಿಯೂ ಇರುವ ಅನೇಕ ಪ್ರಾಣಿಗಳು ನಮಗೆ ಗೋಚರವಾಗದಂತೆ ಅಡಗಿಕೊಂಡಿರುವವು. ಇಲ್ಲಿ ಪ್ರವೇಶಮಾಡತಕದ್ದು ಆಹಿತಾಗ್ನಿಯಾದವನಿಗೂ ತಪಸ್ವಿಯಾದವನಿಗೂ ಸಾಧ್ಯವೇ ಹೊರತು, ಇತರರಿಗೆ ಸಾಧ್ಯವಾದದ್ದಲ್ಲ. ಈಗ ನೀನು ನಿನ್ನ ಶಕ್ತಿಯಿಂದ ಹಸಿವು ಬಾಯಾರಿಕೆಗಳನ್ನು ಸಹಿಸಿಕೊಂಡು, ಸಾಮರ್ಥ್ಯವನ್ನು ಮಾತ್ರ ಬಿಡದೆ ಇರು. ಈ ಕೈಲಾಸಪರ್ವತವನ್ನು ಕುರಿತು ಲೋಮಶನು ಹೇಳಿದ ಮಾತನ್ನು ನೀನು ಕೇಳಿದೆಯಷ್ಟೆ? ಇಲ್ಲಿ

ದ್ರೌಪದಿಯು ಹ್ಯಾಗೆ ನಡೆದುಕೊಂಡು ಬಂದಾಳು ? ಅದನ್ನು ನಿನ್ನ ಬುದ್ಧಿಯಿಂದ ಯೋಚಿಸು. ಅಥವಾ ನೀನು ಸಹದೇವನನ್ನೂ, ಧೌಮ್ಯಾಚಾರ್ಯರನ್ನೂ, ಅಡಿಗೆಯವರನ್ನೂ, ಪರಿಚಾರಕರನ್ನೂ, ರಥಗಳನ್ನೂ, ಕುದುರೆಗಳನ್ನೂ, ಈ ಮಾರ್ಗದಲ್ಲಿ ಕ್ಲೇಶವನ್ನು ಸಹಿಸಲಾರದ ಬ್ರಾಹ್ಮಣರನ್ನೂ, ಹಿಂದಕ್ಕೆ ಕರೆದುಕೊಂಡು ಹೋಗಿ, ನಾವು ಬರುವ ವರೆಗೂ ಗಂಗಾದ್ವಾರದಲ್ಲಿ ವಾಸಮಾಡುತ್ತ, ದ್ರೌಪದಿಯನ್ನು ಸಂರಕ್ಷಿಸಿಕೊಂಡಿರು. ನಾನೂ, ನಕುಲನೂ, ಮಹಾತ್ಮನಾದ ಲೋಮಶಮಹರ್ಷಿಯೂ ಸಹ, ಲಘುವಾದ ಆಹಾರವನ್ನು ಮಾಡಿಕೊಂಡು ವ್ರತಾನುಷ್ಠಾನಪರರಾಗಿ ಮುಂದೆ ಹೋಗಿ ಬರುವೆವು" ಎನಲು, ಭೀಮಸೇನನು "ಎಲೈ ಅಗ್ರಜನೆ, ರಾಜಪುತ್ರಿಯಾದ ಮಂಗಳಾಂಗಿಯಾದ ದ್ರೌಪದಿಯು ಮಾರ್ಗಾಯಾಸದಿಂದ ಬಳಲಿರುವಳಾದಾಗ್ಯೂ, ಅರ್ಜುನನನ್ನು ನೋಡಬೇಕೆಂದು ಬಯಸುತ್ತಿರುವಳಾದ್ದರಿಂದ, ಮುಂದೆ ಬರುವದಕ್ಕೆ ಸಿದ್ಧವಾಗಿಯೇ ಇರುವಳು. ಯುದ್ಧದಲ್ಲಿ ಸಮರ್ಥನಾದ ಅರ್ಜುನನನ್ನು ಕಾಣದೆ, ನಿನಗೂ ಬಹಳವಾಗಿ ಮನಃಖೇದವುಂಟಾಗಿರುವದು. ಇದೇ ಪ್ರಕಾರ ನಾನೂ ದ್ರೌಪದಿಯೂ ಸಹದೇವನೂ ಸಹ ಅರ್ಜುನನನ್ನು ಕಾಣದೆ ಮನಃಖೇದವನ್ನು ಹೊಂದಿರುವೆವು. ಈ ಬ್ರಾಹ್ಮಣರನ್ನೂ, ಅಡಿಗೆಯವರನ್ನೂ, ಪರಿಚಾರಕರನ್ನೂ, ಇನ್ನೂ ನೀನು ಯಾರುಯಾರನ್ನು ಕಳುಹಿಸಿಕೊಡಬೇಕೆಂದು ಅಪೇಕ್ಷಿಸುವೆಯೋ ಅವರನ್ನೂ ಸಹ ಹಿಂದಕ್ಕೆ ಕಳುಹಿಸಿಕೊಡಬಹುದು. ಕ್ರೂರರಾದ ರಾಕ್ಷಸರಿಗೆ ಆ ವಾಸವಾಗಿರುವ ಈ ಪರ್ವತಗಳಲ್ಲಿಯೂ, ಇನ್ನೂ ದುರ್ಗಮವಾದ ಪ್ರದೇಶಗಳಲ್ಲಿಯೂ ಸಹ, ನಿನ್ನನ್ನು ಬಿಟ್ಟು ನಾನು ಹೋಗತಕ್ಕವನಲ್ಲ. ಭಾಗ್ಯಶಾಲಿನಿಯೂ ಪತಿವ್ರತಾಶಿರೋಮಣಿಯೂ ಆದ ಈ ದ್ರೌಪದಿಯೂ ನಿನ್ನನ್ನು ಬಿಟ್ಟು ಹೋಗುವದಕ್ಕೆ ಅಪೇಕ್ಷಿಸುವದಿಲ್ಲ. ಯಾವಾಗಲೂ ನಿನ್ನನ್ನೇ ಅನುವರ್ತಿಸಿಕೊಂಡಿರತಕ್ಕ ಸಹದೇವನೂ ಕೂಡ ಹ್ಯಾಗೆ ನಿನ್ನನ್ನು ಬಿಟ್ಟು ಹೋದಾನು ? ನಾವೆಲ್ಲರೂ ಅರ್ಜುನನನ್ನು ನೋಡಬೇಕೆಂಬ ಅಪೇಕ್ಷೆಯುಳ್ಳವರಾದ್ದರಿಂದ, ಎಲ್ಲರೂ ನಿನ್ನ ಸಂಗಡಲೇ ಬರುತ್ತೇವೆ. ಈ ಪರ್ವತದ ದುರ್ಗಮಪ್ರದೇಶದಲ್ಲಿ ರಥವನ್ನೇರಿ ಹೋಗುವದು ಅಶಕ್ಯವಾದ ಪಕ್ಷದಲ್ಲಿ ನಾವೆಲ್ಲರೂ ಪಾದಚಾರಿಗಳಾಗಿಯೇ ಬರುವೆವು. ನೀನು ಮನಸ್ಸನ್ನು ಚಿಕ್ಕದು ಮಾಡಿಕೊಳ್ಳಬೇಡ. ಇಲ್ಲಿ ದ್ರೌಪದಿಯು ನಡೆಯುವದಕ್ಕೆ ಅಶಕ್ಯವಾದ ಪ್ರದೇಶಗಳಲ್ಲೆಲ್ಲಾ ನಾನು ಆಕೆಯನ್ನು ಎತ್ತಿಕೊಂಡು ಬರುತ್ತೇನೆ. ಸುಕುಮಾರರಾದ ಈ ನಕುಲ ಸಹದೇವರನ್ನೂ ಎತ್ತಿಕೊಂಡು ಈ ದುರ್ಗಮಪ್ರದೇಶದಲ್ಲಿ ನಡೆದು ಬರುವೆನು" ಎಂದು ನುಡಿದನು. ಆ ಮಾತನ್ನು ಕೇಳಿ ಧರ್ಮರಾಯನು "ಎಲೈ ಭೀಮಸೇನನೆ, ದ್ರೌಪದಿಯನ್ನೂ ನಕುಲ ಸಹದೇವರನ್ನೂ ಸಹ ಇಂಥ ದುರ್ಗಮಪ್ರದೇಶದಲ್ಲಿ ಎತ್ತಿಕೊಂಡು ಬರುವದಕ್ಕೆ ನೀನು ಉತ್ಸಾಹಪಡುತ್ತಿರುವೆ. ಇಂಥ ಸಾಮರ್ಥ್ಯವು ಯಾರಲ್ಲಿಯೂ ಇಲ್ಲ. ಆದ್ದರಿಂದ ನಿನಗೆ ಬಲವೂ ಪರಾಕ್ರಮವೂ ಧರ್ಮವೂ ಯಶಸ್ಸೂ ಸಹ ಅಭಿವೃದ್ಧಿಯಾಗಲಿ. ನಿನಗೆ ಶರೀರಾಯಾಸವೂ, ಅಪಜಯವೂ ಸಹ ಎಂದಿಗೂ ಆಗ ಕೂಡದು" ಎಂದನು. ಆಗ ದ್ರೌಪದಿಯು ಹಸನ್ಮುಖಿಯಾಗಿ "ಧರ್ಮರಾಯನೇ, ನಾನೂ ನಿಮ್ಮ ಜೊತೆಯಲ್ಲಿ ನಡೆದುಕೊಂಡೇ ಬರುತ್ತೇನೆ. ನನ್ನ ನಿಮಿತ್ತವಾಗಿ ನೀನು ಬೇಸರಪಡತಕ್ಕ ಕೆಲಸವಿಲ್ಲ" ಎಂದು ನುಡಿದಳು.

ಬಳಿಕ ಲೋಮಶಮಹರ್ಷಿಯು "ಎಲೈ ಧರ್ಮರಾಯನೆ, ಈ ಗಂಧಮಾದನಪರ್ವತವು ತಪಸ್ವಿಗಳು ಹತ್ತುವದಕ್ಕೆ ಯೋಗ್ಯವಾದದ್ದು. ಆದ್ದರಿಂದ, ನಾವೆಲ್ಲರೂ ತಪೋಯೋಗದಿಂದ ಈ ಪರ್ವತವನ್ನೇರಿ ಅರ್ಜುನನನ್ನು ಕಾಣೋಣ" ಎಂದು ನುಡಿಯಲು, ಅದನ್ನು ಕೇಳಿ ಅವರೆಲ್ಲರೂ ವಿನೋದದಿಂದ ಮುಂದಕ್ಕೆ ಹೊರಟು, ಅಲ್ಲಿ ಅನೇಕ ಆನೆಗಳಿಂದಲೂ ಕುದುರೆಗಳಿಂದಲೂ ಕಿರಾತರಿಂದಲೂ ತಂಗಣರಿಂದಲೂ ಪುಳಿಂದರಿಂದಲೂ ನಿಬಿಡವಾಗಿಯೂ, ದೇವತೆಗಳು ಸಂಚರಿಸುವದಕ್ಕೆ ಅರ್ಹವಾಗಿಯೂ, ಆಶ್ಚರ್ಯಕರವಾಗಿಯೂ, ಹಿಮವತ್ಪರ್ವತದ ಪ್ರಾಂತ್ಯದಲ್ಲಿರುವ ಸುಬಾಹುವಿನ ದೇಶವನ್ನು ಕಂಡರು. ಆಗ ಆ ದೇಶದಲ್ಲಿದ್ದ ಬೇಡರಿಗೆ ದೊರೆಯಾದ ಸುಬಾಹುವು ತನ್ನ ದೇಶದ ಸಮೀಪದಲ್ಲಿ ಪಾಂಡವರು ಬರುವದನ್ನು ಕೇಳಿ, ಪ್ರೀತಿಯಿಂದ ಅವರನ್ನು ಎದುರುಗೊಂಡು, ತನ್ನ ದೇಶಕ್ಕೆ ಕರೆದುಕೊಂಡು ಹೋಗಿ ಮರ್ಯಾದೆಯಿಂದ ಸತ್ಕರಿಸಿದನು. ಆ ರಾತ್ರಿ ಪಾಂಡವರು ಅಲ್ಲಿ ಸುಖವಾಗಿದ್ದು, ಪ್ರಾತಃಕಾಲದಲ್ಲಿ ಸೂರ್ಯೋದಯವಾಗಲು, ಇಂದ್ರಸೇನ ಮೊದಲಾದ ಭೃತ್ಯರನ್ನೂ ಅಡಿಗೆಯವರನ್ನೂ ಪರಿಚಾರಕರನ್ನೂ ರಥಾಶ್ವ

ಗಳನ್ನೂ ದ್ರೌಪದಿಯ ಗೌಡಿಯರನ್ನೂ ಸಹ ಆ ಸುಬಾಹುವಿನ ಪಟ್ಟಣದಲ್ಲಿಟ್ಟು, ದ್ರೌಪದಿಯೊಡನೆ ತಾವೆಲ್ಲರೂ ಅರ್ಜುನನನ್ನು ನೋಡಬೇಕೆಂಬ ಕುತೂಹಲದಿಂದ ಪಾದಚಾರಿಗಳಾಗಿ ಅಲ್ಲಿಂದ ಮುಂದಕ್ಕೆ ಹೊರಟರು.

## ೧೪೧ನೇ ಅಧ್ಯಾಯ.—ತೀರ್ಥಯಾತ್ರಾಪ್ರಶಂಸೆ.—(ಗಂಧಮಾದನ ಪರ್ವತಾರೋಹಣ)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಬಳಿಕ ಧರ್ಮರಾಯನು ಭೀಮಸೇನನನ್ನೂ ನಕುಲನನ್ನೂ ಸಹದೇವನನ್ನೂ ದ್ರೌಪದಿಯನ್ನೂ ಸಹ ಕುರಿತು, "ಎಲೈ ಭೀಮಾದಿಗಳಿರಾ, ಜನ್ಮಾಂತರದಲ್ಲಿ ಮಾಡಿದ ಕರ್ಮವು ಅನುಭವಿಸದೆ ತಪ್ಪದು. ಶೂರರಾದ ನಾವುಕೂಡ ಜನ್ಮಾಂತರದಲ್ಲಿ ಮಾಡಿದ ಕರ್ಮದಿಂದ ಈ ಪ್ರಕಾರ ಕ್ಲೇಶಪಡುತ್ತ, ದುರ್ಬಲರಾಗಿ, ಅರ್ಜುನನನ್ನು ನೋಡಬೇಕೆಂದು ದುರ್ಗಮವಾದ ಈ ಅಡವಿಯಲ್ಲಿ ಸುತ್ತುತ್ತಿರುವೆವು. ಯಾರಿಗೂ ಜನ್ಮಾಂತರದಲ್ಲಿ ಮಾಡಿದ ಕರ್ಮವು ಅನುಭವಿಸದೆ ತಪ್ಪದು. ಹೀಗೆ ನೀವು ಕ್ಲೇಶಪಡುತ್ತಿರುವದನ್ನು ನೋಡಿ, ಬೆಂಕಿಯಿಂದ ಹತ್ತೀರಾಶಿಯು ಸುಟ್ಟು ಹೋಗುವಂತೆ ನನ್ನ ಶರೀರವು ಸುಟ್ಟು ಹೋಗುತ್ತಿರುವದು. ವೀರನಾದ ಅರ್ಜುನನು ಸಮೀಪದಲ್ಲಿಲ್ಲದ್ದರಿಂದ ಆತನನ್ನು ನೋಡಬೇಕೆಂಬ ಕಳವಳದಿಂದಲೂ, ಪಾಪಾತ್ಮನಾದ ದುಃಶ್ಯಾಸನನು ದ್ರೌಪದಿಯನ್ನು ಸಭೆಗೆ ಎಳೆದು ಕೊಂಡು ಬಂದದ್ದು ಪದೇಪದೇ ಜ್ಞಾಪಕಕ್ಕೆ ಬರುವದರಿಂದಲೂ, ನನಗೆ ಸಂತಾಪವು ಹೆಚ್ಚಾಗುತ್ತಿರುವದು. ಅಂಥ ಶೂರನಾದ ಅರ್ಜುನನನ್ನು ಕಾಣದೆ ಕಳವಳಪಡುತ್ತ, ಆತನ ದರ್ಶನಾರ್ಥವಾಗಿ ನಿಮ್ಮೊಡನೆ ನಾನು ದುರ್ಗಮವಾದ ಈ ವನಗಳಲ್ಲಿಯೂ, ಪುಣ್ಯತಮವಾದ ತೀರ್ಥಗಳಲ್ಲಿಯೂ, ರಮ್ಯವಾದ ಸರೋವರಗಳ ಪ್ರಾಂತ್ಯಗಳಲ್ಲಿಯೂ ಸಂಚರಿಸುತ್ತಿರುವೆನು. ನಾವು ಅರ್ಜುನನನ್ನು ಅಗಲಿ ಐದು ವರ್ಷಗಳಾದವು. ಅದರಿಂದ ನನಗೆ ಬಹಳವಾದ ಸಂತಾಪವುಂಟಾಗಿರುವದು. ನೀಲಮೇಘಶ್ಯಾಮನಾಗಿಯೂ, ಸಿಂಹದಂತೆ ಗಮನವುಳ್ಳವನಾಗಿಯೂ, ಮಹಾಬಾಹುವಾಗಿಯೂ, ಯುದ್ಧದಲ್ಲಿ ತನಗೆ ಮತ್ತೊಬ್ಬನು ಈಡಿಲ್ಲದಹಾಗೆ ದಿವ್ಯಾಸ್ತ್ರಗಳನ್ನು ಪ್ರಯೋಗಿಸುತ್ತ ಪ್ರಳಯಕಾಲದ ರುದ್ರನಂತೆ ಯುದ್ಧರಂಗದಲ್ಲಿ ಸಂಚರಿಸತಕ್ಕವನಾಗಿಯೂ ಇರುವ ಅರ್ಜುನನನ್ನು ಕಾಣದೆ ನಾನು ಸೈರಿಸುವದು ಹ್ಯಾಗೆ? ಸಿಂಹದಂತೆ ಭುಜ ಶಿರಸ್ಸುಗಳುಳ್ಳವನಾಗಿಯೂ, ಪರಾಕ್ರಮದಲ್ಲಿ ಇಂದ್ರನಿಗೆ ಸಮಾನನಾಗಿಯೂ, ಶ್ವೇತವಾಹನನಾಗಿಯೂ, ಮತ್ತೊಬ್ಬರಿಂದ ಜಯಿಸಲಶಕ್ಯನಾಗಿಯೂ, ದ್ರೌಪದಿಗುಂಟಾದ ಮಾನಹಾನಿಯಿಂದ ದುಃಖಾಕ್ರಾಂತನಾಗಿಯೂ, ಇರುವ ಅರ್ಜುನನನ್ನು ನೋಡದೆ ನನ್ನ ಮನಸ್ಸಿಗೆ ಬಹು ಸಂತಾಪವುಂಟಾಗಿರುವದು. ಯಾವಾಗಲೂ ಕ್ಷಮಾಗುಣವುಳ್ಳವನಾಗಿಯೂ, ದುರ್ಜನರು ಸುಮ್ಮನೆ ನಿಂದಿಸಿದರೂ ಋಜುಮಾರ್ಗವನ್ನು ತಪ್ಪದಿರತಕ್ಕವನಾಗಿಯೂ, ಕುಟಿಲನಾದ ಮನುಷ್ಯನು ಕಪಟೋಪಾಯದಿಂದ ತನ್ನ ಸಂಗಡ ಯುದ್ಧಕ್ಕೆ ಬಂದು ಪರಾಜಿತನಾಗಿ ಬಳಿಕ ಶರಣಾಗತನಾದರೆ ಅಂಥವನಿಗೂ ಅಭಯಪ್ರದಾನಮಾಡಿ ಆತನನ್ನು ಬದುಕಿಸತಕ್ಕವನಾಗಿಯೂ, ತನ್ನೆದುರಿಗೆ ಇಂದ್ರನು ಯುದ್ಧಕ್ಕೆ ಬಂದರೂ ಕಾಲಯಮನಂತೆ ನಿಂತು ಹಿಮ್ಮೆಟ್ಟದೆ ಆತನ ಸಂಗಡ ಯುದ್ಧಮಾಡತಕ್ಕವನಾಗಿಯೂ, ನಮಗೆಲ್ಲ ಆಶ್ರಯಭೂತನಾಗಿಯೂ, ಸುಖವನ್ನುಂಟುಮಾಡತಕ್ಕವನಾಗಿಯೂ, ಇರುವ ಅರ್ಜುನನನ್ನು ನೋಡದೆ ನನ್ನ ಮನಸ್ಸಿಗೆ ಹ್ಯಾಗೆ ಸಮಾಧಾನವುಂಟಾದೀತು! ಯಾವ ಅರ್ಜುನನು ತನ್ನ ಬಾಹುಬಲದಿಂದ ದಿವ್ಯ ರತ್ನಮಯವಾದ ಸಭೆಯನ್ನು ಮಯನಿಂದ ನಿರ್ಮಾಣಮಾಡಿಸಿ, ರಾಜಸೂಯಯಾಗದಲ್ಲಿ ದಿಗ್ವಿಜಯಾರ್ಥವಾಗಿ ಹೊರಟು, ಅನೇಕ ರಾಜರನ್ನು ಗೆದ್ದು, ಅವರವರಿಂದ ಅಪೂರ್ವವಾದ ರತ್ನಗಳನ್ನು ಸಂಪಾದಿಸಿಕೊಂಡು ಬಂದನೋ, ಅಂಥ ಅರ್ಜುನನನ್ನು ನೋಡುವ ವರೆಗೂ ನನ್ನ ಮನಸ್ಸಿಗೆ ಸಂತೋಷವುಂಟಾಗಲಾರದು. ಅರ್ಜುನನು ಸಂಪಾದಿಸಿದ ಅಪೂರ್ವವಾದ ಆ ರತ್ನಗಳೂ ಸಹ ಪಾಪಾತ್ಮನಾದ ದುರ್ಯೋಧನನ ಪಾಲೇ ಆದವು. ಎಲೈ ಭೀಮಸೇನನೆ, ಪರಾಕ್ರಮದಲ್ಲಿ ಕೃಷ್ಣನಿಗೆ ಸಮಾನನಾಗಿಯೂ, ಯುದ್ಧದಲ್ಲಿ ಕಾರ್ತವೀರ್ಯಾರ್ಜುನನಿಗೆ ಸಮಾನನಾಗಿಯೂ, ಮಹಿಮೆಯಲ್ಲಿ ಇಂದ್ರನಿಗೆ ಸಮಾನನಾಗಿಯೂ, ವೇಗದಲ್ಲಿ ವಾಯುವಿಗೆ ಸಮಾನನಾಗಿಯೂ, ಕ್ರೋಧದಲ್ಲಿ ಮೃತ್ಯುವಿಗೆ ಸಮಾನನಾಗಿಯೂ, ಬಲರಾಮನೊಡನೆಯೂ

ನ್ನೊಡನೆಯೂ ವಾಸುದೇವನೊಡನೆಯೂ ಸಹ ಪರಾಕ್ರಮದಿಂದ ಹೋರಾಡುವ ಸಾಮರ್ಥ್ಯವುಳ್ಳವನಾಗಿಯೂ,
ರುವ ಆ ಅರ್ಜುನನನ್ನು ಕಾಣದೆ ನನ್ನ ಮನಸ್ಸು ವಿಕಾರವಾಗಿರುವದು. ಆದ್ದರಿಂದ ನಾವೆಲ್ಲರೂ ಆತನನ್ನು ನೋಡು
ದಕ್ಕೋಸ್ಕರ ಈ ಗಂಧಮಾದನಪರ್ವತಕ್ಕೆ ಹೋಗೋಣ. ಅಲ್ಲಿಯೇ ನರನಾರಾಯಣರು ವಾಸಮಾಡತಕ್ಕ ಬದ
ಕಾಶ್ರಮವಿರುವದು. ನಿರಂತರದಲ್ಲೂ ಯಕ್ಷರಿಂದ ಆಶ್ರಯಿಸಲ್ಪಡುತ್ತಿರುವ ಈ ಗಂಧಮಾದನಪರ್ವತನ್ನೇರಿ,
ನೇಕ ರಾಕ್ಷಸರಿಂದ ರಕ್ಷಿಸಲ್ಪಟ್ಟ ಕುಬೇರನ ಮನೋಹರವಾದ ಪುಷ್ಕರಿಣಿಯನ್ನು ನೋಡುವದಕ್ಕೆ ನಾವೆಲ್ಲರೂ
ಪೋನಿಷ್ಠರಾಗಿ ಪಾದಚಾರಿಗಳಾಗಿಯೇ ಹೋಗೋಣ. ಈ ಪ್ರದೇಶವು ರಥದಮೇಲೆ ಕುಳಿತುಕೊಂಡು ಹೋಗು
ದಕ್ಕೆ ಅಶಕ್ಯವಾದದ್ದು. ಮತ್ತು ಘಾತುಕಸ್ವಭಾವನಾಗಿಯೂ, ಲುಬ್ಧನಾಗಿಯೂ, ಶಮದಮಾದಿಗುಣಶೂನ್ಯ
ಾಗಿಯೂ, ಇರುವವನಿಗೆ ಈ ಪರ್ವತವು ಪ್ರವೇಶಿಸಲಶಕ್ಯವಾದದ್ದು. ಅಶುಚಿಯಾದ ಮನುಷ್ಯನು ಈ ಪ್ರದೇ
ಕ್ಕೆ ಹೋದದ್ದೇ ಆದರೆ, ಕಾಡುಕೋಣಗಳೂ ಜೇನುಹುಳುಗಳೂ, ವ್ಯಾಘ್ರ, ಸರ್ಪ ವೊದಲಾದ ಕ್ರೂರಜಂತು
ಳೂ ಸಹ ಆ ಮನುಷ್ಯನನ್ನು ಬಾಧಿಸುವವು. ಅವುಗಳು ಶುಚಿಯಾದವನ ಕಣ್ಣಿಗೆ ಬೀಳದೆ ಇರುವವು.
ದ್ದರಿಂದ ನಾವು ನಿಯಮದಿಂದ ಮನಶ್ಶುದ್ಧಿಯುಳ್ಳವರಾಗಿ, ಈ ಬ್ರಾಹ್ಮಣರೊಡನೆ ಮಿತವಾದ ಆಹಾರವನ್ನು ಮಾಡಿ
ಂಡು, ನಮ್ಮನಮ್ಮ ಆಯುಧಗಳನ್ನು ಹಿಡಿದುಕೊಂಡು, ಅರ್ಜುನನನ್ನು ನೋಡುವದಕ್ಕೋಸ್ಕರ ಈ ಗಂಧ
ಾದನಪರ್ವತಕ್ಕೆ ಹೋಗೋಣ" ಎಂದು ನುಡಿದನು.

## ೧೪೨ನೇ ಅಧ್ಯಾಯ.—ತೀರ್ಥಯಾತ್ರಾಪ್ರಶಂಸೆ.—(ಗಂಧಮಾದನ ಪರ್ವತಾರೋಹಣ.)

ವೈಶಂಪಾಯನಮುನೀದ್ರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಬಳಿಕ
ೋಮಶನು ಪಾಂಡವರನ್ನು ಕುರಿತು "ಎಲೈ ಪಾಂಡವರೆ, ಇದೇ ಮಂದರಪರ್ವತಕ್ಕೆ ಹೋಗುವ ಮಾರ್ಗವು.
ೀವು ಮನಸ್ಸನ್ನು ಸಮಾಧಾನ ಪಡಿಸಿಕೊಳ್ಳಿರಿ. ಇಲ್ಲಿರತಕ್ಕ ಇನ್ನೂ ಅನೇಕ ಪರ್ವತಗಳನ್ನೂ, ದಿವ್ಯವಾದ
ೀರ್ಥಗಳನ್ನೂ, ಐಶ್ವರ್ಯಭರಿತವಾದ ಪಟ್ಟಣಗಳನ್ನೂ ನೋಡಿರಿ. ಈಗ ನಾವು ಮುಂದೆ ಹೋಗತಕ್ಕ ಪ್ರದೇ
ವು ಪುಣ್ಯಶಾಲಿಗಳಾದ ಋಷಿಗಳಿಗೂ ದೇವತೆಗಳಿಗೂ ಆವಾಸಸ್ಥಾನವಾದದ್ದು. ಇಲ್ಲಿಯೇ ಪುಣ್ಯತಮವಾದ ಉದ
ವುಳ್ಳ ಅಳಕನಂದಾ ಎಂಬ ಹೆಸರುಳ್ಳ ಗಂಗೆಯು ಪ್ರವಹಿಸುತ್ತಿರುವಳು. ಈ ನದಿಯ ತಟದಲ್ಲಿ ಮರೀಚಿ,
ುಲಹ, ಭೃಗು, ಅಂಗಿರಸ್ಸು ವೊದಲಾದ ಸಾಮಗರು ಪುಣ್ಯತಮವಾದ ಸ್ವರದಿಂದ ಸಾಮಗಾನಮಾಡುತ್ತಿರುವರು.
ಈ ಅಳಕನಂದೆಯ ಸಮೀಪದಲ್ಲೇ ದೇವೇಂದ್ರನು ದೇವತೆಗಳೊಡಗೂಡಿ, ನಿರಂತರದಲ್ಲಿಯೂ ಮಾಡತಕ್ಕ ಆಹ್ನಿಕ
ನ್ನು ನೆರವೇರಿಸಿಕೊಂಡು, ಜಪವನ್ನು ಮಾಡುವನು. ಆ ಸಮಯದಲ್ಲಿ ಆತನನ್ನು ಸಾಧ್ಯರೂ ಅಶ್ವಿನೀದೇ
ತೆಗಳೂ ಶುಶ್ರೂಷೆಮಾಡುವರು. ಚಂದ್ರಸೂರ್ಯರು ಗ್ರಹನಕ್ಷತ್ರಗಳಿಂದ ಸಹಿತರಾಗಿರಲು ರಾತ್ರಿಗಳನ್ನು
ಭಾಗಮಾಡಿ, ಈ ನದಿಯನ್ನೇ ಅನುಸರಿಸಿ ಸಂಚರಿಸುತ್ತಿರುವರು. ಈ ಅಳಕನಂದೆಯ ಉದಕವನ್ನು ಮಹಾ
ೇವನು ತನ್ನ ಶಿರಸ್ಸಿನಲ್ಲಿ ಧರಿಸುವನು. ಈ ಪ್ರದೇಶವನ್ನೇ ಗಂಗಾದ್ವಾರವೆಂದು ಹೇಳುವರು. ಈಗ ನೀವೆ
ರೂ ಶುದ್ಧಾಂತಃಕರಣರಾಗಿ ಈ ಗಂಗಾನದಿಗೆ ನಮಸ್ಕಾರವನ್ನು ಮಾಡಿರಿ" ಎಂದನು. ಆ ಮಾತನ್ನು ಕೇಳಿ
ಾಂಡವರು ಸಂತೋಷಭರಿತರಾಗಿ ಗಂಗಾನದಿಗೆ ನಮಸ್ಕಾರಮಾಡಿ, ತಮ್ಮ ಸಂಗಡ ಬಂದ ಋಷಿಗಳೊಡನೆ
ುಂದಕ್ಕೆ ಹೊರಟು, ದೂರದಲ್ಲಿ ಶುಭ್ರವಾದ ಮೇಘದಂತೆ ಕಾಣಿಸುತ್ತಿರುವ ಮೂಳೆಗಳ ರಾಶಿಯನ್ನು ನೋಡಿ,
ದೇನು ಎಂದು ಯೋಚಿಸಿತ್ತಿರಲು, ಅಪನ್ನು ತಿಳಿದು ಲೋಮಶನು "ಎಲೈ ಪಾಂಡವರೆ, ಈ ಪರ್ವತದ ಅರೆದ
ಲಿನಲ್ಲಿ ಶ್ವೇತಪರ್ವತದಂತೆ ಕಾಣಿಸುತ್ತಿರುವ ಅಸ್ಥಿಗಳ ರಾಶಿಯು ದೈತ್ಯಶ್ರೇಷ್ಠನಾದ ನರಕಾಸುರನದು. ಪೂರ್ವ
ಲ್ಲಿ ಆ ದೈತ್ಯಶ್ರೇಷ್ಠನಾದ ನರಕಾಸುರನು ಇಂದ್ರಪದವಿಯನ್ನಪೇಕ್ಷಿಸಿ, ಹತ್ತು ಸಹಸ್ರ ವರ್ಷ ಘೋರವಾದ
ಪಸ್ಸನ್ನು ಮಾಡಿ, ಆ ತಪೋಬಲದಿಂದಲೂ ವೇದಾಧ್ಯಯನದ ಸಾಮರ್ಥ್ಯದಿಂದಲೂ ತನ್ನ ಬಾಹುಪರಾಕ್ರಮ

ದಿಂದಲೂ ಯಾರಿಂದಲೂ ಜಯಿಸಲಶಕ್ಯನಾಗಿ, ದೇವೇಂದ್ರನನ್ನು ಬಾಧಿಸಲುಪಕ್ರಮಿಸಿದನು. ಆಗ ಇಂದ್ರನು ಆತನ ತಪೋಬಲದಿಂದಲೂ, ಆತನ ಬಾಹುಪರಾಕ್ರಮದಿಂದಲೂ, ಆತನ ವ್ರತನಿಯಮಾದಿಗಳಿಂದಲೂ ತಿರಸ್ಕೃತನಾಗಿ ಭಯಪಟ್ಟು, ನಾಶರಹಿತನಾದ ಮಹಾವಿಷ್ಣುವನ್ನು ತನ್ನ ಮನಸ್ಸಿನಲ್ಲೇ ಧ್ಯಾನಮಾಡಿದನು. ಆಗ ಸರ್ವವ್ಯಾಪಕನಾದ ಮಹಾವಿಷ್ಣುವು ಅದನ್ನು ತಿಳಿದು, ಆತನಿಗೆ ಪ್ರತ್ಯಕ್ಷನಾಗಿ ಎದುರಿಗೆ ಬಂದನು. ಆಗ ಸಕಲ ದೇವತೆಗಳೂ ಋಷಿಗಳೂ ಸಹ ಮಹಾವಿಷ್ಣುವನ್ನು ನೋಡಿ ಅನೇಕ ಪ್ರಕಾರವಾಗಿ ಸ್ತುತಿಸಿದರು. ದೇವತೆಗಳಿಗೆ ಹವಿರ್ಭಾಗವನ್ನು ತೆಗೆದುಕೊಂಡು ಹೋಗತಕ್ಕ ಯಜ್ಞೇಶ್ವರನು ಆ ವೇಳೆಯಲ್ಲಿ ವಿಷ್ಣುವನ್ನು ನೋಡಿ, ಆತನ ತೇಜಸ್ಸಿನಿಂದ ತಿರಸ್ಕೃತನಾಗಿ ತೇಜೋವಿಹೀನನಾದನು. ಆಗ ದೇವೇಂದ್ರನು ವಿಷ್ಣುವನ್ನು ನೋಡಿ ವಿನಯದಿಂದ ವಂದನೆಯನ್ನು ಮಾಡಿ, ದೈತ್ಯನಾದ ನರಕಾಸುರನಿಂದ ತನಗೆ ಉಂಟಾದ ಭಯವನ್ನು ವಿಜ್ಞಾಪನೆಮಾಡಿಕೊಂಡನು. ಅದನ್ನು ಕೇಳಿ ವಿಷ್ಣುವು ‘ ಎಲೈ ಇಂದ್ರನೆ, ನಿನಗೆ ನರಕಾಸುರನಿಂದ ಉಂಟಾಗಿರತಕ್ಕ ಭಯವನ್ನು ನಾನು ಬಲ್ಲೆನು. ಆತನು ತಪಸ್ಸಿದ್ಧಿಯಿಂದ ನಿನ್ನ ಪದವಿಯನ್ನು ಅಪೇಕ್ಷಿಸುತ್ತಿರುವನು. ಆ ನರಕಾಸುರನು ತಪಸ್ಸಿದ್ಧಿಯನ್ನು ಹೊಂದಿದ್ದರೂ, ನಿನ್ನ ಪ್ರೀತಿಗಾಗಿ ಆತನನ್ನು ನಾನು ಸಂಹರಿಸಿಬಿಡುವೆನು. ಒಂದು ಮುಹೂರ್ತದ ವರೆಗೂ ಕಾಲನಿರೀಕ್ಷಣೆಯನ್ನು ಮಾಡು ’ ಎಂದು ನುಡಿದು, ಬಳಿಕ ಆ ಮಹಾವಿಷ್ಣುವು ತನ್ನ ಕೈಯಿಂದ ಪೆಟ್ಟುಕೊಟ್ಟು ನರಕಾಸುರನನ್ನು ಸಂಹಾರಮಾಡಿದನು. ಎಲೈ ಪಾಂಡವರೆ, ವಜ್ರಾಯುಧದ ಪೆಟ್ಟಿನಿಂದ ನಷ್ಟನಾದ ಆ ನರಕಾಸುರನು, ಪರ್ವತದಂತೆ ಹತನಾಗಿ ಇಲ್ಲಿಯೇ ಮೃತನಾದನು. ಆತನದೇ ಈ ಅಸ್ಥಿರಾಶಿಯು. ಮಹಾವಿಷ್ಣುವು ಪಾತಾಳದಲ್ಲಿ ಮುಳುಗಿಹೋಗಿದ್ದ ಭೂಮಿಯನ್ನು ಈ ಪ್ರದೇಶದಲ್ಲಿಯೇ ವರಾಹಾವತಾರವನ್ನು ಮಾಡಿ ತನ್ನ ಕೋಡಿನಿಂದ ಎತ್ತಿಕೊಂಡು ಮೇಲಕ್ಕೆ ಬಂದು ತನ್ನ ಮಹಿಮೆಯನ್ನು ತೋರಿಸಿದನು ” ಎಂದನು. ಅದನ್ನು ಕೇಳಿ ಧರ್ಮರಾಯನು “ ಎಲೈ ಮಹಾತ್ಮನೆ, ಈ ಜಗತ್ತಿನಲ್ಲಿ ಎಲ್ಲಾ ಪ್ರಾಣಿಗಳಿಗೂ ಜೀವನೋಪಾಯವಾದ ಪೈರುಗಳು ಬೆಳೆಯತಕ್ಕ ಭೂಮಿಯು ಯಾವ ಮಹಾತ್ಮನ ಪರಾಕ್ರಮದಿಂದ ಹ್ಯಾಗೆ ಪಾತಾಳಲೋಕಕ್ಕೆ ಬಿದ್ದುಹೋಯಿತು ? ಅನೇಕ ಯೋಜನ ಕೆಳಕ್ಕೆ ಬಿದ್ದುಹೋದ ಭೂಮಿಯನ್ನು ಮಹಾವಿಷ್ಣುವು ಹ್ಯಾಗೆ ಮೇಲಕ್ಕೆತ್ತಿದನು ? ಅಂಥ ಪರಮಾತ್ಮನ ಮಹಿಮೆಯನ್ನು ಆಗ ಯಾರು ನೋಡಿದರು ? ಈ ಅದ್ಭುತವಾದ ಕಥೆಯನ್ನು ಕೇಳಬೇಕೆಂದು ನನಗೆ ಕುತೂಹಲವುಂಟಾಗಿರುವದು. ಇದನ್ನು ನೀನು ನನಗೆ ವಿಸ್ತಾರವಾಗಿ ಹೇಳು ” ಎಂದನು.

ಬಳಿಕ ಲೋಮಶನು “ ಎಲೈ ಧರ್ಮರಾಯನೆ, ಮಹಾನುಭಾವನಾದ ಮಹಾವಿಷ್ಣುವು ವರಾಹಾವತಾರ ಮಾಡಿ ಭೂಮಿಯನ್ನು ಮೇಲಕ್ಕೆ ತಂದ ವೃತ್ತಾಂತವನ್ನೆಲ್ಲಾ ವಿಸ್ತಾರವಾಗಿ ಹೇಳುವೆನು. ಸಾವಧಾನದಿಂದ ಕೇಳು. ಮೊದಲು ಕೃತಯುಗದಲ್ಲಿ ಅತಿಭಯಂಕರವಾದ ಕಾಲವು ಪ್ರಾಪ್ತವಾಗಲು, ಆಗ ಆದಿದೇವನೂ ಪುರಾಣಪುರುಷನೂ ಆದ ಮಹಾವಿಷ್ಣುವು ಯಮಧರ್ಮರಾಯನ ಪ್ರಭುತ್ವವನ್ನು ತಾನೇ ವಹಿಸಿದನು. ಆ ಕಾಲದಲ್ಲಿ ಯಾವ ಪ್ರಾಣಿಗಳ ಉತ್ಪತ್ತಿಯೂ ಲಯವೂ ಸಹ ಇಲ್ಲದೆ, ಅದುವರೆಗೆ ಸೃಷ್ಟಿಯಾಗಿದ್ದ ಪಶುಪಕ್ಷಿಮೃಗ ಮನುಷ್ಯರು ಅನೇಕ ಸಹಸ್ರಸಂಖ್ಯಾಕರಾಗಿ, ಮಾಂಸಾಹಾರದಿಂದ ಉದಕದಂತೆ ಅಭಿವೃದ್ಧಿಯನ್ನು ಪಡೆದು, ಅತಿಭಯಂಕರರಾಗಿ ಭೂಮಿಗೆ ಭಾರಭೂತರಾಗಿದ್ದರು. ಆ ಭಾರವನ್ನು ತಡೆಯಲಾರದೆ ಭೂದೇವಿಯು ಚಿಂತಾಕ್ರಾಂತಳಾಗಿ ನೂರುಯೋಜನ ಕೆಳಕ್ಕೆ ಹೋಗಿ, ಶರಣಾಗತರಕ್ಷಕನಾದ ಶ್ರೀನಾರಾಯಣನಿಗೆ ಶರಣಾಗತಳಾಗಿ ‘ ಎಲೈ ಭಗವಂತನೆ, ಈ ಪ್ರಾಣಿಸಮೂಹಗಳ ಭಾರವನ್ನು ಸಹಿಸಲಾರದೆ, ನಾನು ಪಾತಾಳಕ್ಕೆ ಬಿದ್ದುಹೋಗಿರುವೆನು. ಪುನಃ ನಾನು ಪೂರ್ವದಂತೆ ಯಥಾಸ್ಥಾನದಲ್ಲಿ ನಿಲ್ಲುವಹಾಗೆ ನೀನು ಅನುಗ್ರಹಮಾಡಬೇಕು. ಶರಣಾಗತಳಾದ ನನ್ನ ಭಾರವನ್ನು ನೀನೇ ಪರಿಹರಿಸಬೇಕು’ ಎಂದು ಬೇಡಿಕೊಳ್ಳಲು, ಆ ಭೂದೇವಿಯ ಪ್ರಾರ್ಥನೆಯನ್ನು ಕೇಳಿ ನಾಶರಹಿತನಾದ ಸಮರ್ಥನಾದ ಶ್ರೀನಾರಾಯಣನು ಭೂಮಿಯನ್ನು ಕುರಿತು ‘ ಎಲೆ ದೇವಿಯೇ, ಈ ಭಾರಕ್ಕೆ ನೀನು ಭಯಪಡಬೇಡ. ನೀನು ಲಘುವಾಗಿರುವಂತೆ ನಾನು ಮಾಡುವೆನು ’ ಎಂದು ಮಧುರವಾದ ಮಾತುಗಳನ್ನು ಹೇಳಿ, ಅಂತರ್ಧಾನವನ್ನು ಹೊಂದಿ, ಒಂದು ಕೋಡಿನಿಂದ ಅಧಿಕವಾಗಿ ಪ್ರಕಾಶಮಾನವಾದ ವರಾಹಾವತಾರವನ್ನು ತಾಳಿ, ಕೆಂಪಾದ ತನ್ನ ಕಣ್ಣುಗಳಿಂದ

ನೋಡುವವರಿಗೆ ಭಯಂಕರನಾಗಿ, ಮಹತ್ತಾದ ಶರೀರಕಾಂತಿಯಿಂದ ಪ್ರಕಾಶಿಸುತ್ತ, ಇಲ್ಲಿಯೇ ಅಭಿವೃದ್ಧಿಯನ್ನು ಪಡೆದು ತನ್ನ ಕೋಡಿನಿಂದ ಪಾತಾಳದಲ್ಲಿ ಬಿದ್ದಿರುವ ಭೂಮಿಯನ್ನು ನೂರುಯೋಜನಮೇಲಕ್ಕೆ ಎತ್ತಿದನು. ಆ ಸಮಯದಲ್ಲಿ ತಪೋಧನರಾದ ಋಷಿಗಳೂ, ದೇವತೆಗಳೂ, ಸ್ವರ್ಗಲೋಕವೂ, ಪಾತಾಳಲೋಕವೂ ಸಹ, ತಮ್ಮ ತಮ್ಮ ಸ್ಥಾನಗಳಿಂದ ಚಲಿಸಿದವು. ಆಗ ಯಾರೂ ನಿಜವಾದದ್ದನ್ನು ತಿಳಿಯದೆ ಹೋದರು. ಅಷ್ಟರೊಳಗೆ ದೇವತೆಗಳೂ ಋಷಿಗಳೂ ಸಹ ಲೋಕಸಾಕ್ಷಿಯಾದ ಬ್ರಹ್ಮದೇವನ ಸಮೀಪಕ್ಕೆ ಹೋಗಿ, ಕೈಮುಗಿದುಕೊಂಡು 'ಎಲೈ ಬ್ರಹ್ಮನೆ, ಚರಾಚರಾತ್ಮಕವಾದ ಈ ಸಕಲಲೋಕವೂ ಕ್ಷೋಭೆಯನ್ನು ಹೊಂದಿ ಕಳವಳಪಡುತ್ತಿರುವದು. ಸಮುದ್ರಗಳೆಲ್ಲಾ ಕ್ಷೋಭಿಸಿ ಹೋಗಿರುವವು. ಭೂಮಿಯು ನೂರುಯೋಜನ ಕೆಳಕ್ಕೆ ಮುಳುಗಿಹೋಗಿರುವದು. ಯಾತರಿಂದ ಹೀಗಾಗಿರುವದೋ ತಿಳಿಯದು. ನಾವೆಲ್ಲರೂ ಜ್ಞಾನಶೂನ್ಯರಾಗಿರುವೆವು. ಇದಕ್ಕೆ ಕಾರಣವೇನೋ ಅದನ್ನು ನಮಗೆ ಅಪ್ಪಣೆಕೊಡಿಸು' ಎಂದು ವಿಜ್ಞಾಪನೆ ಮಾಡಿಕೊಳ್ಳಲು, ಬ್ರಹ್ಮನು 'ಎಲೈ ದೇವತೆಗಳಿರಾ, ಯಾತಕ್ಕೆ ಕಾತರಿಸುವಿರಿ? ನಿಮಗೆ ದೈತ್ಯರಿಂದೇನೂ ಭಯವುಂಟಾಗಿಲ್ಲ. ಈಗ ಇಷ್ಟು ಕ್ಷೋಭೆಯುಂಟಾಗಿರುವದಕ್ಕೆ ಕಾರಣವನ್ನು ಕೇಳಿರಿ. ಭೂಮಿಯು ಪ್ರಾಣಿಗಳ ಭಾರವನ್ನು ತಾಳಲಾರದೆ ನೂರುಯೋಜನ ಪಾತಾಳಕ್ಕೆ ಬಿದ್ದುಹೋಗಿದ್ದಳು. ಆ ಭೂಮಿಯನ್ನು ಯಥಾಸ್ಥಾನದಲ್ಲಿ ತಂದಿಡಬೇಕೆಂದು ಯೋಚಿಸಿ, ಶರಣಾಗತವತ್ಸಲನಾದ ನಾರಾಯಣನು ವರಾಹಾವತಾರಮಾಡಿ, ಆ ಭೂಮಿಯನ್ನು ತನ್ನ ಕೋಡಿನಿಂದ ಎತ್ತಿ ಪಾತಾಳದಿಂದ ಮೇಲಕ್ಕೆ ತರುತ್ತಿರುವನು. ಆದ್ದರಿಂದ ಜಗತ್ತಿಗೆ ಕ್ಷೋಭೆಯುಂಟಾಗಿರುವದು. ಇದನ್ನು ನೀವು ತಿಳಿದು ಸಂಶಯವನ್ನು ಬಿಡುವರಾಗಿ' ಎಂದನು. ಅದನ್ನು ಕೇಳಿ ದೇವತೆಗಳು 'ಎಲೈ ಬ್ರಹ್ಮನೆ, ಆ ನಾರಾಯಣನು ಯಾವಸ್ಥಳದಲ್ಲಿ ಸಂತೋಷದಿಂದ ಭೂಮಿಯನ್ನು ಉದ್ಧರಿಸುತ್ತಿರುವನೋ, ಆ ಸ್ಥಳವನ್ನು ನಮಗೆ ಹೇಳು. ಅಲ್ಲಿಗೆ ನಾವು ಹೋಗುವೆವು' ಎಂದರು. ಬ್ರಹ್ಮನು 'ಎಲೈ ದೇವತೆಗಳಿರಾ, ಲೋಕಪೂಜ್ಯನಾದ ನಾರಾಯಣನು ವರಾಹಾವತಾರವನ್ನು ತಾಳಿ ಇಂದ್ರನ ನಂದನವನದ ಸಮೀಪದಲ್ಲಿ ನಿಂತು, ಪ್ರಳಯಕಾಲದ ಯಜ್ಞೇಶ್ವರನಂತೆ ಪ್ರಕಾಶಿಸುತ್ತ ಭೂಮಿಯನ್ನು ಮೇಲಕ್ಕೆ ಎತ್ತುತ್ತಿರುವನು. ಆತನ ಎದೆಯಮೇಲೆ ಶ್ರೀವತ್ಸವೆಂಬ ಗುರುತು ಪ್ರಕಾಶಮಾನವಾಗಿ ಕಾಣಿಸುತ್ತಿರುವದು. ನೀವು ಆ ಸ್ಥಳಕ್ಕೆ ಹೋಗಿ ಸಾಶರಹಿತನಾದ ದೇವದೇವನಾದ ಆ ನಾರಾಯಣನನ್ನು ನೋಡಿರಿ. ನಿಮಗೆ ಮಂಗಳವಾಗಲಿ' ಎಂದನು. ಆಗ ದೇವತೆಗಳು ಆ ಸ್ಥಳಕ್ಕೆ ಹೋಗಿ ಮಹಾನುಭಾವನಾದ ವರಾಹರೂಪಿಯಾದ ನಾರಾಯಣನನ್ನು ದರ್ಶನಮಾಡಿ, ಆತನ ಆಜ್ಞೆಯನ್ನು ತೆಗೆದುಕೊಂಡು ತಮ್ಮತಮ್ಮ ಸ್ಥಾನಗಳಿಗೆ ಹೋದರು" ಎನಲು, ಆ ಕಥೆಯನ್ನು ಕೇಳಿ ಪಾಂಡವರು ಸಂತೋಷಪಟ್ಟು ಮುಂದೆ ಲೋಮಶನು ತೋರಿಸಿದ ಮಾರ್ಗದಲ್ಲಿ ಪಯಣವನ್ನು ಮಾಡಿದರು.

---

### ೧೪೪ನೇ ಅಧ್ಯಾಯ.—ತೀರ್ಥಯಾತ್ರಾಪ್ರಶಂಸೆ—(ಗಂಧಮಾದನ ಪರ್ವತಾರೋಹಣ.)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು— ಕೇಳು ಜನಮೇಜಯರಾಯನೆ, ಧನುರ್ಧಾರಿಗಳಲ್ಲಿ ಶ್ರೇಷ್ಠರಾದ ಪಾಂಡವರು ಧನುಸ್ಸನ್ನು ಧರಿಸಿ, ಬತ್ತಳಿಕೆಗಳನ್ನು ಕಟ್ಟಿಕೊಂಡು, ಉಡುವಿನ ಚರ್ಮದಿಂದ ಮಾಡಿದ ಚೀಲಗಳನ್ನು ಬೆರಳುಗಳಿಗೆ ಇಟ್ಟುಕೊಂಡು, ಖಡ್ಗಪಾಣಿಗಳಾಗಿ, ದ್ರೌಪದಿಯನ್ನೂ ಬ್ರಾಹ್ಮಣರನ್ನೂ ಸಹ ಕರೆದುಕೊಂಡು, ಪಾದಚಾರಿಗಳಾಗಿ ಗಂಧಮಾದನಪರ್ವತಕ್ಕೆ ಹೊರಟು, ಅಲ್ಲಲ್ಲೇ ಸರೋವರಗಳನ್ನೂ ನದಿಗಳನ್ನೂ ವನಗಳನ್ನೂ ಚಿಕ್ಕಚಿಕ್ಕ ಪರ್ವತಗಳನ್ನೂ ನೋಡುತ್ತ, ಯಾವಾಗಲೂ ಪುಷ್ಪಗಳಿಂದಲೂ ಫಲಗಳಿಂದಲೂ ರಮಣೀಯವಾಗಿ ದೇವರ್ಷಿಗಳಿಂದ ಸೇವಿತವಾಗಿ ಶೀತಳಚ್ಛಾಯೆಯುಳ್ಳ ವೃಕ್ಷಗಳನ್ನು ಆ ಗಂಧಮಾದನ ಪರ್ವತದ ಶಿಖರದಲ್ಲಿ ನೋಡಿ ಸಂತೋಷಪಟ್ಟರು. ಬಳಿಕ ಧೀರರಾದ ಆ ಪಾಂಡವರು ದೇವರಲ್ಲೇ ತಮ್ಮ ಮನಸ್ಸನ್ನಿಟ್ಟು, ಕಂದಮೂಲಫಲಗಳನ್ನು ಆಹಾರಮಾಡಿಕೊಂಡು, ವಿಷಮವಾಗಿಯೂ ಕಠಿನವಾಗಿಯೂ

ಇರತಕ್ಕ ಹೃತ್ತಿಟ್ಟುಗಳುಳ್ಳ ಮಾರ್ಗಗಳಲ್ಲಿ ನಡೆಯುತ್ತ, ಅಲ್ಲಲ್ಲಿ ನಾನಾಪ್ರಕಾರವಾದ ಮೃಗಗಳನ್ನು ನೋಡುತ್ತ, ಋಷಿಗಳಿಂದಲೂ ಸಿದ್ಧರಿಂದಲೂ ದೇವತೆಗಳಿಂದಲೂ ಗಂಧರ್ವರಿಂದಲೂ ಕಿನ್ನರರಿಂದಲೂ ಅಪ್ಸರಸ್ತ್ರೀಯರಿಂದಲೂ ಸೇವಿತವಾದ ಗಂಧಮಾದನಪರ್ವತವನ್ನು ಪ್ರವೇಶಮಾಡಿದರು. ಆ ಸಮಯದಲ್ಲಿ ಪ್ರಚಂಡವಾದ ಗಾಳಿಯು ಹುಟ್ಟಿ, ವೃಕ್ಷಗಳ ಎಲೆಗಳನ್ನು ಉದುರಿಸುತ್ತ, ಎಲ್ಲಾ ಕಡೆಯೂ ಕೆಂಧೂಳನ್ನು ಎಬ್ಬಿಸಿತು. ಕೂಡಲೆ ದೊಡ್ಡಮಳೆಯು ಸುರಿಯುವದಕ್ಕೆ ಉಪಕ್ರಮವಾಗಿ, ಆಕಾಶವನ್ನೂ ಭೂಮಿಯನ್ನೂ ವ್ಯಾಪಿಸಿಕೊಂಡಿತು. ಆಗ ದಿಕ್ಕುಗಳೇ ತೋರದೆಹೋಗಲು, ಪಾಂಡವರು ಒಬ್ಬರನ್ನೊಬ್ಬರು ಕಾಣದೆ ಅಂಧಕಾರದಿಂದ ಕಣ್ಣುಮುಚ್ಚಿಕೊಂಡು, ಒಬ್ಬರ ಸಂಗಡ ಒಬ್ಬರು ಮಾತನಾಡುವದಕ್ಕೆ ಸಹ ಸಮರ್ಥರಾಗದೆ ಇದ್ದರು. ಆ ಪ್ರಚಂಡವಾದ ಗಾಳಿಯಿಂದ ದೊಡ್ಡದೊಡ್ಡ ಮರಗಳು ಮುರಿದು ನೆಲದಮೇಲೆ ಬಿದ್ದು ಮಹತ್ತಾದ ಶಬ್ದವುಂಟಾಯಿತು. ಆಗ ಪಾಂಡವರು ಆಕಾಶವೇ ಕೆಳಕ್ಕೆ ಬೀಳುವದೋ, ಭೂಮಿಯೇನಾದರೂ ಸೀಳಿಹೋಗುವದೋ, ಅಲ್ಲದಿದ್ದರೆ ಈ ಪರ್ವತವು ಒಡೆದು ಹೋಗುವದೋ ಎಂದು ತಿಳಿದು, ಆ ಪ್ರಚಂಡವಾದ ಗಾಳಿಯಿಂದ ಮೋಹಿತರಾಗಿ, ಭಯಪಟ್ಟು ಸಮೀಪದಲ್ಲಿರತಕ್ಕ ವೃಕ್ಷಗಳನ್ನೂ ವಿಷಮವಾದ ಹುತ್ತಗಳನ್ನೂ ತಮ್ಮ ಕೈಗಳಿಂದ ತಡವರಿಸುತ್ತ, ಅಲ್ಲಲ್ಲೇ ಅಡಗಿಕೊಂಡರು. ಆ ವೇಳೆಯಲ್ಲಿ ಮಹಾಬಲಶಾಲಿಯಾದ ಭೀಮಸೇನನು ಧನುರ್ಧಾರಿಯಾಗಿ ದ್ರೌಪದಿಯನ್ನು ಹಿಡಿದುಕೊಂಡು ಒಂದು ವೃಕ್ಷವನ್ನು ಆಶ್ರಯಿಸಿ ನಿಂತುಕೊಂಡನು. ಧರ್ಮರಾಯನೂ ಧೌಮ್ಯಾಚಾರ್ಯರೂ ಸಹ ತಮ್ಮ ಅಗ್ನಿಹೋತ್ರವನ್ನು ರಕ್ಷಿಸಿಕೊಂಡು ಒಂದು ದೊಡ್ಡದಾದ ಕಲ್ಲಿನ ಮರೆಯಲ್ಲಿ ಅಡಗಿಕೊಂಡರು. ನಕುಲಸಹದೇವರೂ ಲೋಮಶರೂ ಉಳಿದ ಬ್ರಾಹ್ಮಣರೂ ಸಹ ಅಲ್ಲಲ್ಲೇ ಒಂದೊಂದು ವೃಕ್ಷವನ್ನು ಆಶ್ರಯಿಸಿಕೊಂಡು ನಿಂತುಕೊಂಡರು. ಬಳಿಕ ಗಾಳಿಯ ವೇಗವು ಸ್ವಲ್ಪ ಕಡಮೆಯಾಗಿ ಧೂಳು ಅಡಗಲು, ಮೇಘವು ಇನ್ನೂ ಹೆಚ್ಚಾಗಿ ಮಳೆಯನ್ನು ಕರೆಯುವದಕ್ಕೆ ಉಪಕ್ರಮಿಸಿತು. ಆಗ ಆಕಾಶದಲ್ಲಿ ಮಿಂಚೂ ಗುಡುಗೂ ಸಿಡಿಲೂ ಸಹ ಹೆಚ್ಚಾಗಿ, ಕಲ್ಲುಮಳೆ ಹುಯ್ಯುವದಕ್ಕೆ ಆರಂಭವಾಗಿ, ಸಮುದ್ರಗಾಮಿಗಳಾದ ನದಿಗಳೆಲ್ಲಾ ತುಂಬಿ ನೊರೆಗಳನ್ನು ಹೆಚ್ಚಿಸುವ ಮಹತ್ತಾದ ತೆರೆಗಳಿಂದ ಘೋರವಾದ ಶಬ್ದವನ್ನು ಮಾಡುತ್ತ, ದಡದಲ್ಲಿ ಬೆಳೆದಿದ್ದ ಮರಗಳನ್ನು ಕೆಡಹಿ, ವಿಸ್ತಾರವಾಗಿ ಸ್ವಲ್ಪ ಕಾಲ ಪ್ರವಹಿಸುವದಕ್ಕೆ ಉಪಕ್ರಮವಾಗಿ, ಬಳಿಕ ಆ ಗಾಳಿಯೂ ಆ ಶಬ್ದವೂ ಆ ಮಳೆಯೂ ಆ ಪ್ರವಾಹವೂ ಸಹ ಕಡಮೆಯಾದವು. ಕೂಡಲೆ ಸೂರ್ಯಮಂಡಲವು ಕಣ್ಣಿಗೆ ಕಾಣಬಂತು. ಆಗ ಧೀರರಾದ ಪಾಂಡವರೆಲ್ಲರೂ ಒಂದುಕಡೆ ಸೇರಿ, ಆ ಗಂಧಮಾದನ ಪರ್ವತವನ್ನು ಹತ್ತುವದಕ್ಕೆ ಪುನಃ ಉಪಕ್ರಮಿಸಿದರು.

### ೧೪೪ನೇ ಅಧ್ಯಾಯ.—ತೀರ್ಥಯಾತ್ರಾಪ್ರಶಂಸೆ—(ಗಂಧಮಾದನಪರ್ವತಾರೋಹಣ.)

ವೈಶಂಪಾಯನಮುನೀಂದ್ರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಈ ಪ್ರಕಾರ ಪಾಂಡವರು ಒಂದು ಹರದಾರಿಯ ವರೆಗೂ ಪಾದಚಾರಿಗಳಾಗಿ ನಡೆದು ಹೋಗುತ್ತಿರಲು, ಸುಕುಮಾರಿಯಾದ ದ್ರೌಪದಿಯು ಆ ಮಳೆಯನ್ನೂ ಗಾಳಿಯನ್ನೂ ಸೈರಿಸಲಾರದೆ, ಶ್ರಾಂತಳಾಗಿ ದುಃಖಪಡುತ್ತ, ದುಂಡಾಗಿ ಆನೆಯ ಸೊಂಡಲಿನಂತಿರುವ ತನ್ನ ಊರುಗಳು ಸೋತುಹೋಗಿ ಬಾಳೇಕಂಬದಂತೆ ನಡುಗುತ್ತ, ಅಲ್ಲೇ ಬಿದ್ದು ಮೂರ್ಛೆಯನ್ನು ಹೊಂದಿದಳು. ಆಗ ನಕುಲನು ಕಿತ್ತುಬಿಸಾಡಿದ ಬಳ್ಳಿಯಂತೆ ನೆಲದಮೇಲೆ ಬಿದ್ದು ಮೂರ್ಛಿತಳಾದ ದ್ರೌಪದಿಯನ್ನು ನೋಡಿ, ಜಾಗ್ರತೆಯಾಗಿ ಓಡಿಬಂದು “ಎಲೈ ಅಗ್ರಜನೆ, ಪಾಂಚಾಲರಾಯನ ಮಗಳಾದ ದ್ರೌಪದಿಯು ಆಯಾಸದಿಂದ ಮೂರ್ಛಿತಳಾಗಿ ನೆಲದಮೇಲೆ ಬಿದ್ದಿರುವಳು. ಅದೋ ನೋಡು. ಯಾವಾಗಲೂ ದುಃಖವನ್ನರಿಯದೆ ಮೃದುವಾದ ಪ್ರದೇಶದಲ್ಲಿ ಸಂಚಾರಮಾಡುತ್ತಿದ್ದ ದ್ರೌಪದಿಯು ಈಗ ಮಾರ್ಗದಲ್ಲಿ ನಡೆದು, ಬಳಲಿ, ಬಹಳವಾದ ಸಂಕಟವನ್ನು ಹೊಂದಿರುವಳು. ಬೇಗ ಆಕೆಯನ್ನುಸಂತೈಸು” ಎಂದು ನುಡಿದನು. ಆ ಮಾತನ್ನು ಕೇಳಿ ಧರ್ಮರಾಯನು ತಾನೂ ಬಹಳವಾಗಿ ವ್ಯಥೆಪಟ್ಟು, ಭೀಮಸೇನ ಸಹದೇವರೊಡಗೂಡಿ ಮೂರ್ಛಿ

ತಳಾಗಿ ಮುಖಕಾಂತಿಗುಂದಿರುವ ಆ ದ್ರೌಪದಿಯನ್ನು ನೋಡಿ, ಆಕೆಯನ್ನು ತನ್ನ ತೊಡೆಯಮೇಲೆ ಮಲಗಿಸಿ ಕೊಂಡು, ಕಾತರಪಟ್ಟು ಬಹಳವಾಗಿ ಹಂಬಲಿಸುತ್ತ, "ಅಕಟಕಟಾ! ಈ ಕೋಮಲಾಂಗಿಯು ಅಂತಃಪುರದಲ್ಲಿ ಮೃದುವಾದ ಹಂಸತೂಲಿಕಾತಲ್ಪದಮೇಲೆ ಸುಖವಾಗಿ ಪವಡಿಸುವದಕ್ಕೆ ಅರ್ಹಳಾಗಿದ್ದರೂ, ಈ ಕಲ್ಲಿನ ಭೂಮಿಯ ಮೇಲೆ ಹ್ಯಾಗೆ ಮಲಗಿರುವಳು! ರಾಜಕುಮಾರಿಯಾದ ಈಕೆಯ ಕೆಂದಳಿರಂತೆ ಸುಕುಮಾರವಾಗಿದ್ದ ಪಾದಗಳೂ, ಕಮಲದಂತೆ ಕಂಗೊಳಿಸುತ್ತಿದ್ದ ಮುಖವೂ ಸಹ, ನನ್ನ ನಿಮಿತ್ತವಾಗಿ ಬಳಲಿ ಕಪ್ಪಿಡಿದು ಹೋದವು. ಬುದ್ಧಿ ಶೂನ್ಯನಾದ ನಾನು ದ್ಯೂತಲಂಪಟನಾಗಿ ರಾಜ್ಯವನ್ನು ಕಳೆದುಕೊಂಡು, ಘೋರವಾದ ಮೃಗಗಳಿಂದ ಭಯಂಕರ ವಾದ ಈ ಅರಣ್ಯಕ್ಕೆ ಈಕೆಯನ್ನು ಕರೆದುಕೊಂಡು ಬಂದದ್ದರಿಂದ, ಈಕೆಗೆ ಇಂಥಾ ದುರವಸ್ಥೆಯುಂಟಾಯಿತು! ದ್ರುಪದರಾಯನು ವಿವಾಹಕಾಲದಲ್ಲಿ ಈಕೆಯನ್ನು ನೋಡಿ 'ಎಲೌ ಮಂಗಳಾಂಗಿಯೆ, ನೀನು ಪಾಂಡವರ ಕೈಹಿ ಡಿದು ಸುಖಪಡುವೆ' ಎಂದು ಹೇಳಿ, ಈಕೆಯನ್ನು ನಮಗೆ ಕೊಟ್ಟನು. ಆತನು ಹೇಳಿದಂತೆ ಈಕೆಯು ನಮ್ಮಿಂದ ಯಾವ ಸುಖವನ್ನೂ ಪಡೆಯದೆ, ಮಾರ್ಗಾಯಾಸದಿಂದ ಕಂಗೆಟ್ಟು ದುಃಖಪಡುತ್ತ, ಈ ವಿಷಮಪ್ರದೇಶದಲ್ಲಿ ಹೀಗೆ ಬಿದ್ದಿರುವಳು. ಇದಿಷ್ಟೂ ಪಾಪಾತ್ಮನಾದ ನನ್ನ ತಪ್ಪಿನಿಂದಲೇ ಉಂಟಾಯಿತು!" ಎಂದು ದುಃಖಿಸುತ್ತಿರಲು, ಧೌಮ್ಯನೇ ಮೊದಲಾದ ಬ್ರಾಹ್ಮಣರು ಧರ್ಮರಾಯನನ್ನು ಸಂತೈಸಿ, ಆಶೀರ್ವಾದ ಪೂರ್ವಕವಾಗಿ ರಕ್ಷೋಘ್ನಮಂತ್ರಗ ಳನ್ನು ಜಪಿಸುತ್ತ ಅನೇಕ ವಿಧವಾದ ಶಾಂತಿಕರ್ಮಗಳನ್ನು ಮಾಡಿದರು. ಆಗ ಪಾಂಡವರು ಶೀತೋಪಚಾರ ವನ್ನು ಮಾಡುತ್ತ, ಗಾಳಿಯನ್ನು ಬೀಸುತ್ತ, ತಮ್ಮ ಕೈಗಳಿಂದ ಆ ದ್ರೌಪದಿಯನ್ನು ಮತ್ತುಮತ್ತು ಸವರಲು, ಆಕೆಯು ಮೆಲ್ಲಮೆಲ್ಲಗೆ ಮೂರ್ಛೆತಿಳಿದು ಚೈತನ್ಯವನ್ನು ಪಡೆದಳು. ಬಳಿಕ ಆಕೆಯನ್ನು ಎತ್ತಿ ಮೃದು ವಾದ ಕೃಷ್ಣಾಜಿನದಮೇಲೆ ಮಲಗಿಸಿ, ಉತ್ತಮಲಕ್ಷಣಗಳಿಂದ ಕೂಡಿದ ಆಕೆಯ ಮೆಲ್ಲಡಿಗಳನ್ನು ಹೆದೆಯನ್ನು ಸೆಳೆದು ಜಡ್ಡುಗಟ್ಟಿರುವ ತಮ್ಮ ಕೈಗಳಿಂದ ಮೆಲ್ಲಗೆ ಒತ್ತಿ ಉಪಚರಿಸಿದರು. ಆ ಸಮಯದಲ್ಲಿ ಧರ್ಮರಾ ಯನು ಭೀಮಸೇನನನ್ನು ನೋಡಿ "ಎಲೈ ಭೀಮಸೇನನೆ, ಈ ದೇಶದಲ್ಲಿ ಅನೇಕ ಪರ್ವತಗಳಿರುವವು. ಅವುಗಳು ಮಂಜಿನಗಡ್ಡೆಗಳು ಕವಿದಿರುವದರಿಂದ ಹತ್ತುವದಕ್ಕೆ ಅಸಾಧ್ಯವಾಗಿರುವವು. ಆ ಸ್ಥಳಗಳಲ್ಲಿ ದ್ರೌಪದಿಯು ಹ್ಯಾಗೆ ನಡೆದು ಬಂದಾಳು?" ಎನಲು, ಭೀಮಸೇನನು "ಎಲೈ ಅಗ್ರಜನೆ, ನಿನ್ನನ್ನೂ ದ್ರೌಪ ದಿಯನ್ನೂ ನಕುಲಸಹದೇವರನ್ನೂ ಸಹ ನಾನು ಎತ್ತಿಕೊಂಡು ನಡೆಯುವೆನು. ನೀನು ಮನಸ್ಸಿನಲ್ಲಿ ವಿಷಾದ ಪಡಬೇಡ. ಹಿಡಿಂಬಿಯ ಮಗನಾದ ಘಟೋತ್ಕಚನು ಪಕ್ಷಿಯಂತೆ ಆಕಾಶದಲ್ಲಿ ಸಂಚಾರ ಮಾಡಬಲ್ಲನು ಮತ್ತು ನನಗೆ ಸಮಾನನಾದ ಬಲವುಳ್ಳವನು. ಆತನು ನಿಮ್ಮೆಲ್ಲರನ್ನೂ ಎತ್ತಿಕೊಂಡು ಹೋಗುವನು" ಎಂದನು. ಅದನ್ನು ಕೇಳಿ ಧರ್ಮರಾಯನು "ಹಾಗಾದರೆ ಘಟೋತ್ಕಚನನ್ನು ಸ್ಮರಿಸು" ಎನಲು, ಕೂಡಲೆ ಭೀಮಸೇನನು ತನ್ನ ಮಗನಾದ ಘಟೋತ್ಕಚನನ್ನು ಸ್ಮರಿಸಿದನು. ಆಗ ಘಟೋತ್ಕಚನು ಜಾಗ್ರತೆಯಾಗಿ ಅಲ್ಲಿಗೆ ಬಂದು, ಪಾಂಡವರಿಗೂ ಅವರ ಸಮೀಪದಲ್ಲಿದ್ದ ಬ್ರಾಹ್ಮಣರಿಗೂ ನಮಸ್ಕಾರಮಾಡಿ, ಕೈಮುಗಿದುಕೊಂಡು, ಅವರಿಂದ ಸತ್ಕೃತನಾಗಿ, ಭೀಮಪರಾಕ್ರಮನಾದ ಭೀಮಸೇನನನ್ನು ಕುರಿತು "ಎಲೈ ಮಹಾನುಭಾವನೆ, ನನ್ನನ್ನು ನೀನು ಏತಕ್ಕೆ ಸ್ಮರಿಸಿದೆ? ನಾನು ಯಾವಕಾರ್ಯ ಮಾಡಬೇಕೆಂದು ನೀನು ಆಜ್ಞಾಪಿಸಿದರೆ ಆ ಕಾರ್ಯವನ್ನು ಮಾಡು ವದಕ್ಕೆ ನಾನು ಸಿದ್ಧನಾಗಿರುವೆನು. ಇದಕ್ಕೆ ಸಂಶಯವಿಲ್ಲ" ಎನಲು, ಅದನ್ನು ಕೇಳಿ ಭೀಮಸೇನನು ಸಂತೋ ಷದಿಂದ ಆತನನ್ನು ಆಲಿಂಗನೆ ಮಾಡಿಕೊಂಡನು.

## ೧೪೬ನೇ ಅಧ್ಯಾಯ.—ತೀರ್ಥಯಾತ್ರಾಪ್ರಶಂಸೆ—(ಗಂಧಮಾದನ ಪರ್ವತಾರೋಹಣ.)

ವೈಶಂಪಾಯನಮುನೀಂದ್ರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಆಗ ಧರ್ಮರಾಯನು ಭೀಮಸೇನನನ್ನು ನೋಡಿ "ಎಲೈ ಭೀಮನೆ, ನಿನ್ನ ಮಗನಾದ ರಾಕ್ಷಸಶ್ರೇಷ್ಠನಾದ ಈ ಘಟೋತ್ಕಚನು ಧರ್ಮಜ್ಞನು, ಸತ್ಯಶೀಲನು, ಮತ್ತು ನಮ್ಮಲ್ಲಿ ಅಧಿಕವಾದ ವಿಶ್ವಾಸವುಳ್ಳವನು. ಈತನು

ಜಾಗ್ರತೆಯಾಗಿ ನಮ್ಮನ್ನು ಎತ್ತಿಕೊಂಡು ಮುಂದಕ್ಕೆ ನಡೆಯಲಿ. ಬಾಹುಬಲದಿಂದ ನಾವು ದ್ರೌಪದೀಸಮೇತರಾಗಿ ಈ ಗಂಧಮಾದನಪರ್ವತದ ಯಾತ್ರೆಯನ್ನು ಮಾಡುವೆವು" ಎನಲು, ಭೀಮಸೇನನು "ಎಲೈ ಘಟೋತ್ಕಚನೆ, ನಿನ್ನ ತಾಯಿಯಾದ ಈಕೆಯು ಮಾರ್ಗದಲ್ಲಿ ನಡೆಯಲಾರದೆ ಅಧಿಕವಾಗಿ ಆಯಾಸಪಡುತ್ತಿರುವಳು. ಈಕೆಯನ್ನು ನಿನ್ನ ಕುತ್ತಿಗೆಯಮೇಲೆ ಕೂರಿಸಿಕೊಂಡು, ಆಯಾಸವಾಗದಂತೆ ನಿಧಾನವಾಗಿ ಆಕಾಶಮಾರ್ಗದಲ್ಲಿ ನಡೆ" ಎಂದನು. ಅದನ್ನು ಕೇಳಿ ಘಟೋತ್ಕಚನು "ಎಲೈ ಭೀಮಸೇನನೆ, ಧರ್ಮರಾಯನನ್ನೂ ದ್ರೌಪದಿಯನ್ನೂ ನಕುಲಸಹದೇವರನ್ನೂ ಸಹ ಎತ್ತಿಕೊಂಡು ಹೋಗುವದಕ್ಕೆ ನಾನೊಬ್ಬನೇ ಸಾಕು. ಇದಲ್ಲದೆ ನನಗೆ ಶೂರರಾಗಿಯೂ, ಕಾಮರೂಪಿಗಳಾಗಿಯೂ, ಆಕಾಶಮಾರ್ಗದಲ್ಲಿ ಸಂಚರಿಸತಕ್ಕವರಾಗಿಯೂ ಇರುವ ಅನೇಕ ರಾಕ್ಷಸರ ಸಹಾಯವೂ ಇರುವದು. ಈ ಸಮಯದಲ್ಲಿ ಯಾವ ಕಾರ್ಯವನ್ನು ತಾನೇ ಮಾಡುವದು ನನಗೆ ಅಸಾಧ್ಯವಾದದ್ದು? ಈ ಬ್ರಾಹ್ಮಣರೊಡನೆ ನಿಮ್ಮೆಲ್ಲರನ್ನೂ ಈ ರಾಕ್ಷಸರು ತಮ್ಮಮೇಲೆ ಕೂರಿಸಿಕೊಳ್ಳುವರು" ಎಂದು ನುಡಿದು, ತಾನು ದ್ರೌಪದಿಯನ್ನು ಕುತ್ತಿಗೆಯಮೇಲೆ ಕೂರಿಸಿಕೊಂಡು, ಆಕಾಶಮಾರ್ಗದಲ್ಲಿ ಹೊರಟನು. ಮಿಕ್ಕ ರಾಕ್ಷಸರೆಲ್ಲರೂ ಘಟೋತ್ಕಚನ ಅಪ್ಪಣೆಯಿಂದ ಪಾಂಡವರನ್ನೂ ಆ ಬ್ರಾಹ್ಮಣರನ್ನೂ ತಮ್ಮ ಬೆನ್ನಿನಮೇಲೆ ಎತ್ತಿಕೊಂಡು, ಘಟೋತ್ಕಚನ ಸುತ್ತಲೂ ಗುಂಪಾಗಿ ಆಕಾಶದಲ್ಲಿ ಹೊರಟರು; ಲೋಮಶಮಹರ್ಷಿಯು ತನ್ನ ತೇಜಸ್ಸಿನಿಂದ ಸೂರ್ಯನಂತೆ ಪ್ರಕಾಶಿಸುತ್ತ ಸಿದ್ಧಮಾರ್ಗದಲ್ಲಿ ಹೊರಟನು.

ಆಗ ಆ ರಾಕ್ಷಸರಮೇಲೆ ಕೂತುಕೊಂಡಿರುವ ಪಾಂಡವರು ಅಲ್ಲಲ್ಲಿ ಅನೇಕವಾದ ಅರಣ್ಯಗಳನ್ನೂ, ಉದ್ಯಾನವನಗಳನ್ನೂ, ರತ್ನಗಳು ಉತ್ಪತ್ತಿಯಾಗತಕ್ಕ ಪ್ರದೇಶಗಳುಳ್ಳ ಮ್ಲೇಚ್ಛದೇಶಗಳನ್ನೂ, ನಾನಾವಿಧವಾದ ಗೈರಿಕಾದಿಧಾತುಗಳುಳ್ಳ ಪರ್ವತಪ್ರದೇಶಗಳನ್ನೂ, ಅಲ್ಲಲ್ಲಿ ವಿಹರಿಸುತ್ತಿರುವ ವಿದ್ಯಾಧರ ಕಿನ್ನರ ಕಿಂಪುರುಷ ವಾನರರನ್ನೂ, ಚಮರ ವರಾಹ ಮಹಿಷ ರುರು ಗವಯ ಮೊದಲಾದ ಅನೇಕ ಮೃಗಗಳಿಂದಲೂ, ಚಿತ್ರವಿಚಿತ್ರವಾದ ರೆಕ್ಕೆಗಳುಳ್ಳ ನವಿಲು ಮೊದಲಾದ ಪಕ್ಷಿಗಳಿಂದಲೂ, ಮನೋಹರವಾದ ಪರ್ವತದ ಅರೆತೊಪ್ಪಲುಗಳನ್ನೂ ನೋಡುತ್ತ, ಅನೇಕ ನದಿಗಳುಳ್ಳ ದೇಶಗಳನ್ನು ಅತಿಕ್ರಮಿಸಿ, ಅತ್ಯಾಶ್ಚರ್ಯಕರವಾಗಿ ಯಾವಾಗಲೂ ಪುಷ್ಪಗಳಿಂದ ಭರಿತವಾದ ಅನೇಕ ವೃಕ್ಷಗಳಿಂದ ರಮಣೀಯವಾಗಿ ಕೈಲಾಸಪರ್ವತದ ಸಮೀಪದಲ್ಲಿರುವ ಬದರಿಕಾಶ್ರಮವನ್ನು ನೋಡಿದರು. ನೋಡತಕ್ಕವರಿಗೆ ರಮಣೀಯವಾಗಿಯೂ, ಅನೇಕ ಛಾಯಾವೃಕ್ಷಗಳಿಂದ ಕೂಡಿರುವದಾಗಿಯೂ, ತಪಸ್ಸಂಪತ್ತಿನಿಂದ ಪ್ರಕಾಶಮಾನವಾಗಿಯೂ, ಮೃದುವಾದ ಎಲೆಗಳಿಂದ ನಿಬಿಡವಾದ ವೃಕ್ಷಗಳುಳ್ಳದ್ದಾಗಿಯೂ, ಮಧುರವಾದ ರಸದಿಂದ ಭರಿತವಾಗಿ ದೇವತಾಯೋಗ್ಯವಾದ ಬಗೆಬಗೆಯಾದ ಹಣ್ಣುಗಳು ತಮಗೆತಾವೇ ಮರಗಳಿಂದ ಕೆಳಕ್ಕೆ ಬಿದ್ದು ಅವುಗಳ ಸುವಾಸನೆಯಿಂದ ವ್ಯಾಪ್ತವಾಗಿಯೂ, ಕಾಡುನೊಣಗಳೂ ಸೊಳ್ಳೆಗಳೂ ಮುಳ್ಳುಗಳೂ ಇಲ್ಲದೆ ಬಹು ಉದಕದಿಂದಲೂ ಹಸುರಾದ ಗರಿಕೆಗಳಿಂದಲೂ ಶೋಭಿತವಾಗಿಯೂ, ಸಮವಾದ ಸ್ವಭಾವದಿಂದ ಪರಿಶುದ್ಧವಾದ ಮೆತ್ತಗಿರುವ ಮಣ್ಣುಳ್ಳ ಸ್ಥಳದಲ್ಲಿ ಅನೇಕ ಋಷಿಗಳಿಂದಲೂ ಗಂಧರ್ವರಿಂದಲೂ ಸೇವಿತವಾಗಿಯೂ, ವಿಸ್ತಾರವಾಗಿಯೂ, ಇರುವದರಿಂದ ವಿಶಾಲವೆಂಬ ಹೆಸರುಳ್ಳ ಬದರಿಕಾಶ್ರಮವನ್ನು ಹೊಕ್ಕು, ಆ ಪಾಂಡವರು ಬ್ರಾಹ್ಮಣರೊಡನೆ ಆ ರಾಕ್ಷಸರ ಹೆಗಲಿನಿಂದ ಕೆಳಕ್ಕಿಳಿದು, ಅಲ್ಲಿರುವ ನರನಾರಾಯಣಾಶ್ರಮವನ್ನು ಪ್ರವೇಶಮಾಡಿದರು. ಆ ಆಶ್ರಮವು ಸೂರ್ಯರಶ್ಮಿಯೇ ಬೀಳದಿದ್ದರೂ ಅಂಧಕಾರವಿಲ್ಲದ್ದಾಗಿಯೂ, ಹಸಿವು ಬಾಯಾರಿಕೆ ಶೀತ ಉಷ್ಣ ಮೊದಲಾದ ಯಾವ ದೋಷವೂ ಇಲ್ಲದೆ ಅಲ್ಲಿಗೆ ಬಂದವರ ದುಃಖವನ್ನೆಲ್ಲಾ ನಿವಾರಣೆ ಮಾಡತಕ್ಕದ್ದಾಗಿಯೂ, ಅನೇಕ ಮಹರ್ಷಿಗಳಿಂದ ನಿಬಿಡವಾಗಿ ಋಗ್ಯಜುಸ್ಸಾಮರೂಪವಾದ ವೇದಸಮೃದ್ಧಿಯುಳ್ಳದ್ದಾಗಿಯೂ, ಪಾಪಿಗಳು ಪ್ರವೇಶಮಾಡುವದಕ್ಕೆ ಅಶಕ್ಯವಾಗಿಯೂ, ಅಲ್ಲಲ್ಲಿ ಭೂಮಿಯನ್ನು ಸಾರಿಸಿ ಇಟ್ಟರತಕ್ಕ ಬಲಿಗಳಿಂದಲೂ, ಪುಷ್ಪೋಪಹಾರಗಳಿಂದಲೂ, ಕಂಗೊಳಿಸುವ ಅನೇಕ ಹೋಮಶಾಲೆಗಳಿಂದಲೂ, ಮಂಗಳಕರವಾದ ಸ್ರುಕ್ಕು ಸ್ರುವ ಮೊದಲಾದ ಅನೇಕ ಹೋಮಸಾಧನದ್ರವ್ಯಗಳಿಂದಲೂ, ಉದಕಪೂರ್ಣವಾದ ಕಲಶಗಳಿಂದಲೂ, ಪುಷ್ಪ ಫಲಾದಿಗಳಿಂದ ಭರಿತವಾದ ಪುಟಿಕೆಗಳಿಂದಲೂ, ಕಲ್ಲಿಗಳಿಂದಲೂ ಶೋಭಿಸುತ್ತಿರುವದಾಗಿಯೂ, ಸಕಲ ಪ್ರಾಣಿಗಳಿಗೂ ಆಶ್ರಯವಾಗಿಯೂ, ವೇದಘೋಷದಿಂದ ಪಾವನವಾಗಿಯೂ, ಮಹಾತ್ಮರು ಆಶ್ರಯಿಸುವದಕ್ಕೆ ತಕ್ಕ

ದ್ದಾಗಿಯೂ, ಇಂಥಾದ್ದೆಂದು ಹೇಳುವದಕ್ಕೆ ಅಶಕ್ಯವಾದ ದೇವಚರ್ಯದಿಂದ ಶ್ಲಾಘ್ಯವಾಗಿಯೂ, ಕಂದಮೂಲಗಳನ್ನು ಆಹಾರಮಾಡಿಕೊಂಡು ಜಿತೇಂದ್ರಿಯರಾಗಿ ಕೃಷ್ಣಾಜಿನವನ್ನು ಹೊದ್ದುಕೊಂಡು ಸೂರ್ಯಾಗ್ನಿಗಳಿಗೆ ಸಮಾನವಾದ ತೇಜಸ್ಸುಳ್ಳವರಾಗಿ ತಪಸ್ಸಿನಿಂದ ಜ್ಞಾನವನ್ನು ಪಡೆದ ಮಹರ್ಷಿಗಳಿಂದಲೂ, ಮೋಕ್ಷಧರ್ಮವನ್ನು ಅವಲಂಬಿಸಿಕೊಂಡಿರುವ ಮಹಾತ್ಮರಾದ ಯತಿಗಳಿಂದಲೂ, ಇನ್ನೂ ಅನೇಕಮಂದಿ ಬ್ರಹ್ಮಜ್ಞಾನಿಗಳಿಂದಲೂ ಕೂಡಿ ಬ್ರಹ್ಮಲೋಕದಂತೆ ಪ್ರಕಾಶಿಸುತ್ತಿತ್ತು.

ಧರ್ಮರಾಯನು ತಮ್ಮಂದಿರೊಡಗೂಡಿ ಶುಚಿರ್ಭೂತನಾಗಿ ನಿಯಮದಿಂದ ಆ ಮಹಾತ್ಮರಾದ ಋಷಿಗಳ ಸಂದರ್ಶನವನ್ನು ಮಾಡಬೇಕೆಂದು ಆಶ್ರಮದ ಒಳಕ್ಕೆ ಪ್ರವೇಶಮಾಡಲು, ಅಲ್ಲಿದ್ದ ದಿವ್ಯಜ್ಞಾನಸಂಪನ್ನರಾದ ಋಷಿಗಳು ತಮ್ಮ ಜ್ಞಾನದಿಂದ ಧರ್ಮರಾಯನು ತಮ್ಮ ಆಶ್ರಮಕ್ಕೆ ಬರುವದನ್ನು ತಿಳಿದು, ಎದುರಿಗೆ ಬಂದು, ಪ್ರೀತಿಪುರಸ್ಸರವಾಗಿ ವೇದಮಂತ್ರಗಳನ್ನು ಉಚ್ಚರಿಸುತ್ತ ಆತನಿಗೆ ಆಶೀರ್ವಾದವನ್ನು ಮಾಡಿ, ಶಾಸ್ತ್ರೋಕ್ತಕ್ರಮದಿಂದ ಸತ್ಕರಿಸಿ, ಶುಚಿಯಾದ ಕಂದಮೂಲಫಲಗಳನ್ನೂ ನಿರ್ಮಲವಾದ ಉದಕವನ್ನೂ ಕೊಟ್ಟರು. ಪ್ರೀತಿಪೂರ್ವಕವಾಗಿ ಆ ಮಹರ್ಷಿಗಳು ಮಾಡಿದ ಸತ್ಕಾರವನ್ನು ಧರ್ಮರಾಯನು ತಮ್ಮಂದಿರೊಡನೆ ಕೈಕೊಂಡು, ಸ್ವರ್ಗಲೋಕಕ್ಕೆ ಸಮಾನವಾಗಿ ದಿವ್ಯವಾದ ಪುಷ್ಪಗಳ ವಾಸನೆಯಿಂದ ಮನೋಹರವಾದ ಪುಣ್ಯತಮವಾದ ಆ ಆಶ್ರಮದ ಒಳಕ್ಕೆ ಹೋಗಿ, ವೇದವೇದಾಂಗಪಾರಂಗತರಾದ ಅನೇಕ ಸಹಸ್ರ ಬ್ರಾಹ್ಮಣರಿಂದಲೂ ದೇವರ್ಷಿಗಳಿಂದಲೂ ಪೂಜಿತನಾಗಿ, ಭಾಗೀರಥಿಯಿಂದ ಶೋಭಿತವಾದ ನರನಾರಾಯಣರ ಸ್ಥಾನವನ್ನು ನೋಡಿ, ಸಂತೋಷದಿಂದ ಅಲ್ಲಿ ಬ್ರಾಹ್ಮಣರೊಡನೆಯೂ ತಮ್ಮಂದಿರೊಡನೆಯೂ ಕೂಡಿ ವಾಸಮಾಡುತ್ತ, ನಾನಾವಿಧವಾದ ಪಕ್ಷಿಗಳಿಂದ ಸೇವಿತವಾಗಿ ಸುವರ್ಣಮಯವಾದ ಶಿಖರಗಳುಳ್ಳ ಮೈನಾಕಪರ್ವತವನ್ನೂ ಬಿಂದುಸರೋವರವನ್ನೂ ನೋಡಿ, ಅಲ್ಲಲ್ಲಿ ಮನೋಹರವಾಗಿ ಎಲ್ಲಾ ಋತುಗಳಲ್ಲಿಯೂ ಬಿಡತಕ್ಕ ಪುಷ್ಪಫಲಗಳಿಂದ ಶೋಭಿತವಾದ ವೃಕ್ಷಗಳಿಂದ ರಮ್ಯವಾದ ಪ್ರದೇಶಗಳಲ್ಲೂ, ಕಮಲ ಕಲ್ಹಾರ ಮೊದಲಾದ ಪುಷ್ಪಗಳಿಂದ ಶೋಭಿಸುತ್ತಾ ನಿರ್ಮಲವಾದ ಉದಕವುಳ್ಳ ಸರೋವರಗಳ ಪ್ರದೇಶಗಳಲ್ಲಿಯೂ ವಿಹರಿಸುತ್ತಿದ್ದನು. ಅಲ್ಲಿ ಪುಣ್ಯತಮವಾದ ಗಂಧವುಳ್ಳ ಮಂದಮಾರುತವು ಬೀಸಿ ಪಾಂಡವರಿಗೂ ದ್ರೌಪದಿಗೂ ಆನಂದವನ್ನುಂಟುಮಾಡಿತು. ಅಲ್ಲಿಯೇ ಬದರಿಕಾಶ್ರಮವನ್ನನುಸರಿಸಿ ಸೀತಾ ಎಂಬ ಹೆಸರುಳ್ಳ ಗಂಗಾನದೀಭಾಗವು ಪ್ರವಹಿಸುತ್ತಿರುವುದು. ಆ ನದಿಯು ಹವಳಗಳಿಂದಲೂ ರತ್ನಗಳಿಂದಲೂ ಕಟ್ಟಿದ ಸೋಪಾನವುಳ್ಳದ್ದಾಗಿಯೂ, ದಡದಲ್ಲಿರುವ ವೃಕ್ಷಗಳಿಂದುದುರಿದ ಪುಷ್ಪಗಳಿಂದ ವ್ಯಾಪ್ತವಾಗಿಯೂ, ಕಮಲ ಕಲ್ಹಾರಾದಿ ಪುಷ್ಪಗಳಿಂದ ರಮ್ಯವಾಗಿಯೂ, ನಿರ್ಮಲವಾದ ಉದಕವುಳ್ಳದ್ದಾಗಿಯೂ, ಇರುವುದು. ಪಾಂಡವರು ಆ ಸೀತಾ ಎಂಬ ನದಿಯ ಉದಕದಲ್ಲಿ ಸ್ನಾನಮಾಡಿ ಶುದ್ಧಾತ್ಮರಾಗಿ, ದೇವರ್ಷಿ ಪಿತೃತರ್ಪಣವನ್ನೂ ಜಪವನ್ನೂ ಮಾಡಿ, ದೇವರ್ಷಿಗಳಿಂದ ಸೇವಿತವಾದ ಆ ಪ್ರದೇಶದಲ್ಲಿ ದ್ರೌಪದಿಯು ವಿನೋದದಿಂದ ವಿಚಿತ್ರವಾಗಿ ವಿಹರಿಸುವದನ್ನು ನೋಡುತ್ತ, ಬ್ರಾಹ್ಮಣರೊಡನೆ ಸಂತೋಷದಿಂದ ವಾಸಮಾಡುತ್ತಿದ್ದರು.

## ೧೪೬ನೇ ಅಧ್ಯಾಯ.—ತೀರ್ಥಯಾತ್ರಾಪ್ರಶಂಸೆ—(ಭೀಮನ ಕದಳೀಖಂಡಪ್ರವೇಶ.)

ವೈಶಂಪಾಯನಮುನೀಂದ್ರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಪಾಂಡವರು ಅರ್ಜುನನನ್ನು ನೋಡಬೇಕೆಂಬ ಅಪೇಕ್ಷೆಯುಳ್ಳವರಾಗಿ, ಬದರಿಕಾಶ್ರಮದಲ್ಲಿ ಆರುರಾತ್ರಿ, ವಾಸಮಾಡಿದರು. ಆ ಸಮಯದಲ್ಲಿ ಈಶಾನದಿಕ್ಕಿನಲ್ಲಿ ದೈವಯೋಗದಿಂದ ಗಾಳಿಯು ಎದ್ದು ಸಾವಿರದಳಗಳುಳ್ಳದ್ದಾಗಿಯೂ, ಸೂರ್ಯನಂತೆ ಪ್ರಕಾಶಮಾನವಾಗಿಯೂ, ಇರುವ ಒಂದು ದಿವ್ಯಕಮಲವನ್ನು ತೆಗೆದುಕೊಂಡು ಬಂದು ಭೂಮಿಯ ಮೇಲೆ ಹಾಕಿತು. ಅತಿಶಯವಾದ ಪರಿಮಳವುಳ್ಳ ಆ ಮನೋಹರವಾದ ಕಮಲವನ್ನು ನೋಡಿ, ದ್ರೌಪದಿಯು ಬಹಳವಾಗಿ ಸಂತೋಷಪಟ್ಟು, ಭೀಮಸೇನನನ್ನು ಕುರಿತು "ಭೀಮಸೇನನೆ, ಈ ದಿವ್ಯಪುಷ್ಪವನ್ನು ನೋಡು. ಇದು ತನ್ನ

ಪರಿಮಳದಿಂದ ನನಗೆ ಆನಂದವನ್ನುಂಟುಮಾಡುತ್ತಿರುವದು. ಈ ದಿವ್ಯವಾದ ಪುಷ್ಪವನ್ನು ನಾನು ಧರ್ಮರಾಯನಿಗೆ ಕೊಡುವೆನು. ನಿನಗೆ ನಾನು ಪ್ರೀತಿಪಾತ್ರಳಾಗಿದ್ದರೆ, ಇನ್ನೂ ಇಂಥಾ ಅನೇಕ ಪುಷ್ಪಗಳನ್ನು ತೆಗೆದುಕೊಂಡುಬಾ. ಅವುಗಳನ್ನು ನಾನು ಕಾಮ್ಯಕವನಕ್ಕೆ ತೆಗೆದುಕೊಂಡು ಹೋಗುವೆನು" ಎಂದು ಹೇಳಿ, ಆ ಪುಷ್ಪವನ್ನು ತೆಗೆದುಕೊಂಡು ಧರ್ಮರಾಯನ ಸಮೀಪಕ್ಕೆ ಹೋದಳು. ಆಗ ಭೀಮಸೇನನು ದ್ರೌಪದಿಯ ಅಭಿಪ್ರಾಯವನ್ನು ತಿಳಿದು, ಇನ್ನೂ ಅಂಥಾ ಅನೇಕ ಪುಷ್ಪಗಳನ್ನು ತಂದುಕೊಟ್ಟು ಆಕೆಯನ್ನು ಸಂತೋಷಪಡಿಸಬೇಕೆಂದು ಯೋಚಿಸಿ, ಧನುಸ್ಸನ್ನೂ ಸರ್ಪಗಳಿಗೆ ಸಮಾನವಾದ ಬಾಣಗಳನ್ನೂ ಧರಿಸಿ, ಆ ಗಾಳಿಯು ಯಾವದಿಕ್ಕಿನಿಂದ ಆ ಪುಷ್ಪವನ್ನು ತೆಗೆದುಕೊಂಡು ಬಂತೋ ಆ ದಿಕ್ಕಿಗೆ ಮದಿಸಿದ ಆನೆಯಂತೆಯೂ ಕ್ರೂರವಾದ ಸಿಂಹದಂತೆಯೂ ಹೊರಟನು. ಈ ರೀತಿಯಾಗಿ ಬಿಲ್ಲಂಬುಗಳನ್ನು ಧರಿಸಿಕೊಂಡು ಬರತಕ್ಕ ವಾಯುಪುತ್ರನಾದ ಭೀಮಸೇನನನ್ನು ನೋಡಿ, ಆ ಪರ್ವತದಲ್ಲಿ ಸಂಚರಿಸುವ ಪ್ರಾಣಿಗಳು ಮನೋವ್ಯಥೆಯನ್ನೂ, ದೇಹಾಯಾಸವನ್ನೂ, ಭಯಸಂಭ್ರಮಗಳನ್ನೂ ಹೊಂದದೆ, ಸಂಚರಿಸುತ್ತಿದ್ದವು. ಭೀಮಸೇನನು ತನ್ನ ಬಾಹುಪರಾಕ್ರಮವನ್ನಾಶ್ರಯಿಸಿ, ದ್ರೌಪದಿಗೆ ಪ್ರಿಯವಾಗಬೇಕೆಂದು, ಭಯಪ್ರಮಾದಗಳಿಲ್ಲದೆ ಅನೇಕ ಲತೆಗಳಿಂದಲೂ ಹೊದರುಗಳಿಂದಲೂ ವ್ಯಾಪ್ತವಾಗಿಯೂ, ನಾನಾವಿಧವಾದ ಗೈರಿಕಾದಿಧಾತುಗಳಿಂದಲೂ ವೃಕ್ಷಗಳಿಂದಲೂ ಮೃಗಗಳಿಂದಲೂ ಪಕ್ಷಿಗಳಿಂದಲೂ ದುರ್ಗಮವಾಗಿಯೂ, ಕಿನ್ನರರಿಂದ ಸೇವಿತವಾದ ನೀಲವಾದ ಶಿಲಾತಲಗಳುಳ್ಳದ್ದಾಗಿಯೂ, ಭೂಮಿಗೆ ಸಕಲಾಭರಣಭೂಷಿತವಾದ ಭುಜವೋ ಎಂಬಂತೆ ಎತ್ತರವಾಗಿಯೂ ಇರುವ ಆ ಗಂಧಮಾದನಪರ್ವತವನ್ನು ಏರಿ, ಆ ಪರ್ವತದ ಅರೆತೊಪ್ಪಲ ಪ್ರದೇಶಗಳಲ್ಲಿ ಗಂಡುಕೋಗಿಲೆಗಳ ಧ್ವನಿಗಳಿಂದಲೂ ಭ್ರಮರಝೇಂಕಾರಗಳಿಂದಲೂ ರಮಣೀಯವಾದ ವೃಕ್ಷಗಳಲ್ಲಿ ಬಿಟ್ಟಿರುವ ದಿವ್ಯವಾದ ಪುಷ್ಪಗಳ ಸುಗಂಧವನ್ನು ಮದಿಸಿದ ವನಗಜದಂತೆ ಆಘ್ರಾಣಿಸುತ್ತ, ದ್ರೌಪದಿಯ ವಾಕ್ಯವನ್ನು ಸ್ಮರಿಸಿಕೊಂಡು, ಅಲ್ಲಲ್ಲೇ ದೇವರ್ಷಿಗಂಧರ್ವರು ಕ್ರೀಡಿಸುವ ಸ್ಥಾನಗಳನ್ನೂ ಅಲ್ಲಲ್ಲಿರುವ ಪುಷ್ಪಗಳ ಪರಿಮಳವನ್ನೂ ಸ್ವೀಕರಿಸಿ, ಶೀತವಾಗಿಯೂ ಪುಣ್ಯತಮವಾಗಿಯೂ ಸುಖಕರವಾಗಿಯೂ ಬೀಸುತ್ತಿದ್ದ ಗಾಳಿಯಿಂದ ಮಾರ್ಗಾಯಾಸವನ್ನು ಪರಿಹರಿಸಿಕೊಳ್ಳುತ್ತ, ಯಕ್ಷರಿಂದಲೂ ಗಂಧರ್ವರಿಂದಲೂ ದೇವತೆಗಳಿಂದಲೂ ಬ್ರಹ್ಮರ್ಷಿಗಳಿಂದಲೂ ಸೇವಿತವಾದ ಆ ಪರ್ವತದಲ್ಲಿ ಆ ಪುಷ್ಪವನ್ನು ಹುಡುಕುತ್ತ ಬಂದನು.

ಆಗ ಆ ಪರ್ವತವು ಕಪ್ಪು ಕೆಂಪು ಬಿಳಿದಾದ ಧಾತುಗಳಿಂದ ಕೂಡಿ, ಏಳಲೇಬಾಳೆಯೆಲೆಗಳೆಂಬ ಬೆರಳುಗಳಿಂದ ತ್ರಿಪುಂಡವನ್ನು ಧರಿಸಿರುವಂತೆ ಕಾಣಿಸುತ್ತ, ಗಿರಿನದಿಗಳೆಂಬ ಮುತ್ತಿನಹಾರವನ್ನು ಧರಿಸಿ, ತನ್ನ ಪಾರ್ಶ್ವಗಳಲ್ಲಿರುವ ಮೇಘಗಳೆಂಬ ರೆಕ್ಕೆಗಳುಳ್ಳದ್ದಾಗಿ, ಅಲ್ಲಿರುವ ಅಪ್ಸರಸ್ತ್ರೀಯರ ನೂಪುರಧ್ವನಿಯುಳ್ಳದ್ದಾಗಿ ಕುಣಿಯುತ್ತಿರುವಂತೆ ಪ್ರಕಾಶಿಸುತ್ತಿತ್ತು. ಭೀಮಸೇನನು ಮನೋಹರವಾದ ಆ ಪರ್ವತದ ದರೀಪ್ರದೇಶಗಳಲ್ಲಿಯೂ, ಲತಾಮಂಟಪಗಳಲ್ಲಿಯೂ, ಗಿರಿನದೀಪ್ರವಾಹವುಳ್ಳ ಗುಹೆಗಳಲ್ಲಿಯೂ, ನವಿಲುಗಳು ನಾಟ್ಯವಾಡತಕ್ಕ ಉನ್ನತವಾದ ಪ್ರದೇಶಗಳಲ್ಲಿಯೂ, ದಿಗ್ಗಜಗಳು ಕೊಂಬುಗಳಿಂದ ತಿವಿದಿರತಕ್ಕ ಶಿಲಾತಲಗಳಲ್ಲಿಯೂ, ಉಟ್ಟ ಬಟ್ಟೆ ಜಾರಿಹೋದಂತೆ ಗಿರಿನದಿಗಳಿಂದ ಹರಿದುಬರತಕ್ಕ ಜಲಪ್ರಾಂತಗಳಲ್ಲಿಯೂ, ಸಂಚಾರಮಾಡುತ್ತಿದ್ದನು. ಅಲ್ಲಿದ್ದ ಜಿಂಕೆಗಳು ಎಳಗರಿಕೆಯನ್ನು ಬಾಯಲ್ಲಿ ಕಚ್ಚಿಕೊಂಡು, ಹಾಗೆಯೇ ದೂರದಲ್ಲಿ ನಿಂತು, ಭಯಸ್ವರೂಪವೇ ತಿಳಿಯದೆ ಕುತೂಹಲದಿಂದ ಆತನನ್ನು ನೋಡುತ್ತಿದ್ದವು. ಆ ಪರ್ವತಪ್ರದೇಶದಲ್ಲಿ ಭೀಮಸೇನನು ತನ್ನೆದುರಿಗೆ ದಾರಿಯಲ್ಲಿ ಸಿಕ್ಕಿದ ಬಳ್ಳಿಗಳನ್ನು ತನ್ನ ವೇಗಾತಿಶಯದಿಂದ ಧ್ವಂಸಮಾಡಿ ಅತ್ತಿತ್ತ ಸರಗಿಸಿ, ವಿನೋದದಿಂದ ಕ್ರೀಡಿಸುತ್ತ ಮುಂದಕ್ಕೆ ಹೊರಟು, ಪ್ರಿಯೆಯಾದ ದ್ರೌಪದಿಯ ಮನೋರಥವನ್ನು ನೆರವೇರಿಸುವದಕ್ಕೋಸ್ಕರ ಸಿಂಹದಂತೆ ಪರಾಕ್ರಮಶಾಲಿಯಾಗಿ ಮದಿಸಿದ ಆನೆಯಂತೆ ವೇಗದಿಂದ ನಡೆಯುತ್ತ, ಮದ್ದಾನೆಯಂತೆ ಕೆಂಪಾದ ಕಣ್ಣುಗಳುಳ್ಳವನಾಗಿ ತನ್ನ ಎದುರಿಗೆ ಬಂದ ಮದ್ದಾನೆಗಳನ್ನು ಅಟ್ಟಿ ಓಡಿಸುತ್ತ, ಅಲ್ಲಲ್ಲಿ ತಮ್ಮತಮ್ಮ ಗಂಡಂದಿರ ಸಮೀಪದಲ್ಲಿ ನಿಂತು ಏಕಾಗ್ರಚಿತ್ತರಾದ ಅದೃಶ್ಯರಾದ ಗಂಧರ್ವಸ್ತ್ರೀಯರು ತನ್ನನ್ನು ನೋಡುತ್ತಿರಲು, ತನ್ನ ಸೌಂದರ್ಯದ ಅತಿಶಯವನ್ನು ನೋಡತಕ್ಕವರಿಗೆ ಮಾರುತ್ತಿರುವನೋ ಎಂಬಂತೆ ತೋರುತ್ತ, ಗಂಧಮಾಧನಪರ್ವತದ ಅರೆತೊಪ್ಪಲುಗಳಲ್ಲಿ ನಡೆದುಹೋದನು. ಸುವರ್ಣಚ್ಛಾಯೆಯುಳ್ಳ ಉನ್ನತನಾದ ಆ ಭೀಮಸೇನನು ದುರ್ಯೋಧನನಿಂದುಂಟಾದ ಅನೇಕ ವಿಧ

ವಾದ ಕ್ಲೇಶಗಳನ್ನು ನೆನೆದುಕೊಂಡು, "ಅರ್ಜುನನೂ ಅಸ್ತ್ರನಿಮಿತ್ತವಾಗಿ ಸ್ವರ್ಗಲೋಕಕ್ಕೆ ಹೋಗಿರುವನು. ನಾನೂ ಪುಷ್ಪನಿಮಿತ್ತವಾಗಿ ಇತ್ತಲಾಗಿ ಹೊರಟುಬಂದಿರುವೆನು. ಅಲ್ಲಿ ಧರ್ಮರಾಯನು ನನ್ನ ಸಾಮರ್ಥ್ಯದಲ್ಲಿ ನಂಬಿಕೆಯಿಲ್ಲದೆಯೂ ನಕುಲಸಹದೇವರನ್ನು ಅತ್ತಿತ್ತ ಬಿಡದೆಯೂ ಮನಸ್ಸಿನಲ್ಲಿ ಎಷ್ಟು ಕಳವಳಪಡುತ್ತಿರುವನೋ! ಈಗ ನನಗೆ ಆ ಪುಷ್ಪಲಾಭವು ಶೀಘ್ರವಾಗಿ ಆಗುವ ಬಗೆ ಹ್ಯಾಗೆ?" ಎಂದು ಚಿಂತಿಸುತ್ತ, ಪ್ರಾಣಕಾಂತೆಯಾದ ದ್ರೌಪದಿಯ ಮಾತೆಂಬ ಬುತ್ತಿಯನ್ನು ಕಟ್ಟಿಕೊಂಡು, ಬಗೆಬಗೆಯಾದ ಹೂವಿನಗಿಡಗಳುಳ್ಳ ಆ ಪರ್ವತದ ಎಲ್ಲಾ ಕಡೆಯಲ್ಲೂ ಆ ಪುಷ್ಪವನ್ನು ಹುಡುಕುತ್ತ, ಪರ್ವಕಾಲದಲ್ಲಿನ ಉತ್ಪಾತದಂತೆ ತನ್ನ ಪಾದಘಾತದಿಂದ ಪರ್ವತಭೂಮಿಗಳನ್ನು ನಡುಗಿಸುತ್ತ, ವಾಯುವೇಗವುಳ್ಳವನಾಗಿ ಆನೆಗಳ ಗುಂಪುಗಳನ್ನು ಭಯಪಡಿಸುತ್ತ, ಸಿಂಹ ವ್ಯಾಘ್ರ ಮೊದಲಾದ ಮೃಗಗಳನ್ನು ಸಂಹಾರಮಾಡುತ್ತ, ಬೆಟ್ಟದ ಮೇಲಕ್ಕೆ ಹತ್ತಿ ಹೋಗತಕ್ಕ ಆನೆಯಂತೆ ದೊಡ್ಡದೊಡ್ಡದಾದ ಮರಗಳನ್ನು ಕಿತ್ತು, ದಾರಿಯಲ್ಲಿ ತನ್ನ ಕಾಲಿಗೆ ತೊಡರಿದ ಮರಗಳ ಮೇಲೂ ಭೂಮಿಯಮೇಲೂ ಹಬ್ಬಿರುವ ಬಳ್ಳಿಗಳನ್ನು ವೇಗದಿಂದ ಅತ್ತಿತ್ತ ಎಳೆದುಹಾಕಿ, ಮಿಂಚುಗಳಿಂದ ಕೂಡಿದ ಮೇಘದಂತೆ ಗರ್ಜನೆಯನ್ನು ಮಾಡಿದನು. ಆ ಮಹತ್ತಾದ ಗರ್ಜನೆಯಿಂದ ಗುಹೆಗಳಲ್ಲಿ ಮಲಗಿದ್ದ ಸಿಂಹ ವ್ಯಾಘ್ರ ಮೊದಲಾದ ಮೃಗಗಳು ಎಚ್ಚತ್ತು ಅಲ್ಲಿಂದ ಓಡಿಹೋದವು. ಅಲ್ಲಲ್ಲಿ ವೃಕ್ಷಗಳಲ್ಲಿದ್ದ ಪಕ್ಷಿಗಳು ಮೇಲಕ್ಕೆ ಹಾರಿಹೋದವು. ಹೆಣ್ಣಾನೆಗಳೊಡನೆ ಗುಂಪುಕೂಡಿದ್ದ ಸಲಗಗಳು ಭಯಪಟ್ಟು ಆ ಅರಣ್ಯವನ್ನು ಬಿಟ್ಟು ಓಡಿಹೋದವು. ಕಾಡೆಮ್ಮೆ, ಕರಡಿ, ಕಾಡುಹಂದಿ ಮೊದಲಾದ ಮೃಗಗಳು ದಿಕ್ಕುದಿಕ್ಕಿಗೆ ಓಡಿದವು. ಮತ್ತು ಕಾಡೆತ್ತು, ನರಿ, ಹುಲಿ ಮೊದಲಾದವುಗಳು ಗಟ್ಟಿಯಾಗಿ ಅರಚಿಕೊಂಡವು. ಆಗ ಚಕ್ರವಾಕ, ಹಂಸ, ಕಾರಂಡವ, ಕೋಗಿಲೆ, ಗಿಣಿ, ಕ್ರೌಂಚ ಮೊದಲಾದ ಪಕ್ಷಿಗಳು ತಮ್ಮತಮ್ಮ ಗೂಡುಗಳನ್ನು ಬಿಟ್ಟು ದಿಕ್ಕುದಿಕ್ಕಿಗೆ ಹಾರಿಹೋದವು. ಹೆಣ್ಣಾನೆಯ ಜೊತೆಯಲ್ಲಿದ್ದ ಕೆಲವು ಗಂಡಾನೆಗಳೂ, ಕೆಲವು ಸಿಂಹ ವ್ಯಾಘ್ರಗಳೂ, ಕೋಪದಿಂದ ಭೀಮಸೇನನನ್ನು ನೋಡಿ ಏನೂ ತೋರದೆ ಭ್ರಾಂತಗಳಾಗಿ, ಭಯಪಟ್ಟು ಮಲಮೂತ್ರಗಳನ್ನು ಬಿಡುತ್ತ, ಬಹಳವಾಗಿ ಅರಚಿಕೊಂಡವು. ಆ ಸಮಯದಲ್ಲಿ ವಾಯುಪುತ್ರನಾದ ಭೀಮಸೇನನು ತನ್ನ ಬಾಹುಪರಾಕ್ರಮವನ್ನು ಸ್ಮರಿಸಿ, ಕೋಪದಿಂದ ಆನೆಗಳಿಂದ ಆನೆಗಳನ್ನೂ ಸಿಂಹಗಳಿಂದ ಸಿಂಹಗಳನ್ನೂ ಸಂಹಾರಮಾಡುತ್ತ, ಅಂಗೈಯೇಟುಗಳಿಂದ ಇತರ ಮೃಗಗಳನ್ನೂ ಸಂಹರಿಸಲುಪಕ್ರಮಿಸಿದನು. ಆ ಪೆಟ್ಟುಗಳನ್ನು ತಡೆಯಲಾರದೆ ಆ ಮೃಗಗಳು ಭಯಪಟ್ಟು ಮಲಮೂತ್ರಗಳನ್ನು ಬಿಟ್ಟು ಜಾಗ್ರತೆಯಾಗಿ ಓಡಿಹೋದವು.

ಬಳಿಕ ಮಹಾಬಲಸಂಪನ್ನನಾದ ಭೀಮಸೇನನು ತನ್ನ ಗರ್ಜನೆಯನ್ನು ದಿಕ್ಕುಗಳಲ್ಲಿ ತುಂಬುತ್ತ ಮುಂದಕ್ಕೆ ಹೊರಟು, ಆ ಗಂಧಮಾದನಪರ್ವತದ ಆರೆತೊಪ್ಪಲಿನಲ್ಲಿ ರಮ್ಯವಾಗಿ ಬಹುಯೋಜನ ವಿಸ್ತಾರವುಳ್ಳ ಕದಳೀಖಂಡವನ್ನು ನೋಡಿ, ವೇಗದಿಂದ ಅಲ್ಲಿಗೆ ಹೋಗಿ, ಮದಿಸಿದ ಆನೆಯಂತೆ ಅಲ್ಲಿದ್ದ ಅನೇಕ ತಾಳವೃಕ್ಷಪ್ರಮಾಣವುಳ್ಳ ಕದಳೀಸ್ತಂಭಗಳನ್ನೂ, ಇನ್ನೂ ನಾನಾವಿಧವಾದ ವೃಕ್ಷಗಳನ್ನೂ ಕಿತ್ತುಹಾಕಿ, ಸಿಂಹದಂತೆ ಗರ್ಜನೆಮಾಡಿದನು. ಅದನ್ನು ಕೇಳಿ ಅಲ್ಲಿದ್ದ ದೊಡ್ಡದೊಡ್ಡ ಮೃಗಗಳೂ ಪಕ್ಷಿಗಳೂ ಜಲಚರಪ್ರಾಣಿಗಳೂ ಸಹ ಕೂಗಿಕೊಂಡವು. ಈ ಎರಡು ಶಬ್ದದಿಂದಲೂ ವನಾಂತರದಲ್ಲಿದ್ದ ಪ್ರಾಣಿಗಳೆಲ್ಲಾ ಭಯಪಟ್ಟವು. ಮತ್ತು ಆ ಶಬ್ದವನ್ನು ಕೇಳಿ ಬಕಮೊದಲಾದ ಜಲಚರಪಕ್ಷಿಗಳು ಉದಕದಿಂದ ಎದ್ದು, ಒದ್ದೆಯಾದ ರೆಕ್ಕೆಗಳುಳ್ಳವುಗಳಾಗಿ ಗುಂಪುಗುಂಪಾಗಿ ಆಕಾಶಮಾರ್ಗಕ್ಕೆ ಹಾರಿದವು. ಅದನ್ನು ನೋಡಿ ಭೀಮಸೇನನು ಆ ಜಲಚರಪಕ್ಷಿಗಳು ಯಾವದಿಕ್ಕಿನಿಂದ ಬಂದವೋ ಅದೇ ದಿಕ್ಕನ್ನು ಕುರಿತು ಮುಂದಕ್ಕೆ ಹೋಗಿ, ಅಲ್ಲಿ ರಮಣೀಯವಾದ ಮಹತ್ತಾದ ಒಂದು ಸರೋವರವನ್ನು ನೋಡಿದನು. ಆ ಸರೋವರವು ಮಂದಮಾರುತದಿಂದ ಕಂಪಿತವಾಗಿ, ಈಚೆಯ ತಡಿಯಿಂದ ಆಚೆಯ ತಡಿಗೆ ಅಲೆದಾಡುತ್ತಿರುವ ಸುವರ್ಣಮಯವಾದ ಬಾಳೇಗಿಡಗಳಿಂದ ಬೀಸಿಸಿಕೊಳ್ಳುತ್ತಿರುವದೋ ಎಂಬಂತೆ ಕಾಣಿಸುತ್ತಿತ್ತು. ಭೀಮಸೇನನು ಅನೇಕ ಕಮಲಗಳಿಂದ ಪ್ರಕಾಶಮಾನವಾದ ಅಗಾಧವಾದ ನೀರುಳ್ಳ ಆ ಸರೋವರದಲ್ಲಿಳಿದು, ಮದಿಸಿದ ಆನೆಯಂತೆ ಅಲ್ಲಿ ವಿಹಾರಮಾಡಿ, ಮೇಲಕ್ಕೆದ್ದು, ಅತಿವೇಗದಿಂದ ಪರ್ವತದ ಮೇಲುಭಾಗದಲ್ಲಿರತಕ್ಕ ಅನೇಕ ವೃಕ್ಷಗಳಿಂದ ರಮ್ಯವಾದ ಒಂದು ವನವನ್ನು ಹೊಕ್ಕು, ತನ್ನ ಬಳಿಯಲ್ಲಿದ್ದ ಶಂಖವನ್ನು ಗಟ್ಟಿಯಾಗಿ ಊದಿ ಸಿಂಹ

ನಾದವನ್ನು ಮಾಡಿ, ಭುಜಗಳನ್ನು ತಟ್ಟಿದನು. ಆ ಶಬ್ದವು ದಿಕ್ಕುಗಳಲ್ಲೆಲ್ಲಾ ತುಂಬಿಕೊಂಡಿತು. ಸಿಡಿಲಿನ ಧ್ವನಿಗೆ ಸಮಾನವಾದ ಆ ಮಹತ್ತಾದ ಶಬ್ದದಿಂದ ಪರ್ವತದ ಗುಹೆಗಳಲ್ಲೆಲ್ಲಾ ಪ್ರತಿಧ್ವನಿಗಳು ಹುಟ್ಟಿದವು. ಆ ಗುಹೆಗಳಲ್ಲಿ ಮಲಗಿದ್ದ ಸಿಂಹಗಳು ಆ ಶಬ್ದವನ್ನು ಕೇಳಿ ತಾವೂ ಮಹತ್ತಾದ ಗರ್ಜನೆಯನ್ನು ಮಾಡಿದವು. ಆ ಶಬ್ದಕ್ಕೆ ಭಯಪಟ್ಟು ವನಗಜಗಳು ಬೃಂಹಿತಗಳನ್ನು ಮಾಡಿದವು. ಈ ಎಲ್ಲಾ ಶಬ್ದಗಳೂ ಒಟ್ಟಾಗಿ ಆ ಪರ್ವತವನ್ನೆಲ್ಲಾ ವ್ಯಾಪಿಸಿಕೊಂಡವು.

ಈ ಪ್ರಕಾರವಾದ ಮಹತ್ತಾದ ಶಬ್ದವನ್ನು ಕೇಳಿ ವಾಯುಪುತ್ರನಾದ ಆಂಜನೇಯನು "ನನ್ನ ತಮ್ಮನಾದ ಭೀಮಸೇನನು ಈ ಮಾರ್ಗವಾಗಿ ಬರುವನು. ಇದು ಸ್ವರ್ಗಕ್ಕೆ ಹೋಗತಕ್ಕ ಮಾರ್ಗವಾದ್ದರಿಂದ, ಈಗ ಈ ಮಾರ್ಗದಲ್ಲಿ ಆತನು ಮುಂದಕ್ಕೆ ಹೋದದ್ದೇ ಆದರೆ ದೇವತೆಗಳು ಶಾಪವನ್ನು ಕೊಟ್ಟಾರು? ಆದ್ದರಿಂದ ಆತನು ಈ ಮಾರ್ಗದಲ್ಲಿ ಹೋಗದಂತೆ ಆತನ ರಕ್ಷಣಾರ್ಥವಾಗಿ ನಾನು ಈ ಮಾರ್ಗವನ್ನು ತಡೆಯಬೇಕು" ಎಂದು ಆಲೋಚಿಸಿಕೊಂಡು, ಕದಳೀವೃಕ್ಷಗಳಿಂದ ರಮ್ಯವಾದ ಆ ಕಾಲುದಾರಿಗೆ ಅಡ್ಡಲಾಗಿ ಇಂದ್ರಧ್ವಜದಂತೆ ಉದ್ದವಾಗಿ ಬೆಳೆದು ಕೂತುಕೊಂಡು, ತನ್ನ ದೊಡ್ಡದಾದ ಬಾಲವನ್ನು ಒಂದಾವರ್ತಿ ಭೂಮಿಯಲ್ಲಿ ಬಡಿದು, ಅದರಿಂದ ಸಿಡಿಲಿನ ಧ್ವನಿಗೆ ಸಮಾನವಾದ ಧ್ವನಿಯನ್ನುಂಟುಮಾಡಿದನು. ಆ ಬಾಲದೇಟಿನಿಂದ ಆ ಪರ್ವತವು ಚಲಿಸಿ, ಕೋಡುಗಲ್ಲುಗಳೆಲ್ಲಾ ಸಡಲಿ ಕೆಳಕ್ಕೆ ಬಿದ್ದು, ಆ ಪರ್ವತವೂ ಒಡೆದುಹೋಯಿತು. ಆ ಬಾಲದ ಮಹತ್ತಾದ ಶಬ್ದವು ಅಲ್ಲಿದ್ದ ಗುಹೆಗಳ ಬಾಯಿಗಳಲ್ಲಿ ಹಸುಗಳ ಕೂಗಿನಂತೆ ಪ್ರತಿಧ್ವನಿಗಳನ್ನು ಹುಟ್ಟಿಸಿತು. ಅದನ್ನು ಕೇಳಿ ಭೀಮಸೇನನು ರೋಮಾಂಚಿತವಾದ ಶರೀರವುಳ್ಳವನಾಗಿ, ಎತ್ತಲಿಂದ ಆ ಶಬ್ದವು ಬಂತೋ ಅತ್ತಕಡೆಗೇ ಹೋಗಿ, ಅಲ್ಲಿರುವ ಕದಳೀವನದ ಮಧ್ಯದಲ್ಲಿ ಒಂದು ದೊಡ್ಡಕಲ್ಲಿನಮೇಲೆ ಮಹೋನ್ನತನಾಗಿಯೂ ನಿದ್ದೆಯ ಮಬ್ಬುಳ್ಳವನಾಗಿಯೂ ಕೂತಿದ್ದ ವಾನರಾಧಿಪತಿಯಾದ ಹನುಮಂತನನ್ನು ನೋಡಿದನು. ಆ ಹನುಮಂತನು ಮಿಂಚುಗಳ ಗುಂಪಿನಂತೆ ನೋಡುವದಕ್ಕೆ ಅಶಕ್ಯನಾಗಿಯೂ, ಅದರಂತೆ ಹೊಂಬಣ್ಣವುಳ್ಳವನಾಗಿಯೂ, ಅದರಂತೆ ಚಂಚಲನಾಗಿಯೂ, ಸಿಡಿಲಿನಂತೆ ಗರ್ಜನೆ ಮಾಡತಕ್ಕವನಾಗಿಯೂ, ಕೈಕಟ್ಟಿಕೊಂಡು ಅದರಮೇಲೆ ತಲೆಯನ್ನಿಟ್ಟುಕೊಂಡು ಕೂತು ಭುಜಶಿರಸ್ಸುಗಳು ಎತ್ತರವಾಗಿ ಕಾಣಿಸುವದರಿಂದ ಸೂಕ್ಷ್ಮವಾದ ನಡುವುಳ್ಳವನಾಗಿಯೂ, ಮೇಲುಭಾಗವು ಸ್ವಲ್ಪಬಗ್ಗಿ ಉದ್ದವಾದ ಕೂದಲುಗಳಿಂದಕೂಡಿ ಮೇಲಕ್ಕೆದ್ದು ಇಂದ್ರಧ್ವಜದಂತೆ ಕಾಣಿಸುತ್ತಿರುವ ಬಾಲದಿಂದ ಪ್ರಕಾಶಮಾನನಾಗಿಯೂ, ಚಿಕ್ಕದಾದ ತುಟಿಯುಳ್ಳವನಾಗಿಯೂ, ಕೆಂಪಾದ ನಾಲಿಗೆಯುಳ್ಳವನಾಗಿಯೂ, ಕೆಂಪಾದ ಶರೀರಕಾಂತಿಯುಳ್ಳವನಾಗಿಯೂ, ಚಂಚಲವಾದ ಹುಬ್ಬುಗಳುಳ್ಳವನಾಗಿಯೂ, ಹೊರಗೆ ಕಾಣಿಸಿಕೊಳ್ಳುತ್ತಿರುವ ತೀಕ್ಷ್ಣವಾದ ಅಗ್ರಭಾಗಗಳುಳ್ಳ ಕೋರೆಗಳೂ ಹಲ್ಲುಗಳೂ ಉಳ್ಳವನಾಗಿಯೂ ಶೋಭಿಸುತ್ತಿದ್ದನು. ಆತನು ಸುವರ್ಣಕದಳೀಮಧ್ಯದಲ್ಲಿ ಕೂತುಕೊಂಡು, ಹೊಂಬಣ್ಣವಾದ ಕುಸುರಿಗಳಿಂದ ಕೂಡಿದ ಮುತ್ತುಗದ ಹೂವಿನರಾಶಿಯಂತೆ ಕಾಣಿಸುತ್ತಾ, ಬಿಳುಪಾದ ಹಲ್ಲುಗಳಿಂದ ಕೂಡಿ ಕಿರಣಗಳಿಂದ ಕೂಡಿದ ಚಂದ್ರನಂತೆ ಪ್ರಕಾಶಿಸುವ ಮುಖವುಳ್ಳವನಾಗಿ, ಪ್ರಕಾಶಮಾನವಾದ ಶರೀರದಿಂದ ಜಾಜ್ವಲ್ಯಮಾನನಾದ ಯಜ್ಞೇಶ್ವರನಂತೆ ತೋರುತ್ತಾ, ಜೇನಿನಂತೆ ಹೊಂಬಣ್ಣವಾದ ಕಣ್ಣುಗಳನ್ನು ಬಿಟ್ಟುಕೊಂಡು ನೋಡುತ್ತಾ, ಹಿಮವತ್ಪರ್ವತದಂತೆ ಮಹತ್ತಾದ ಶರೀರವುಳ್ಳವನಾಗಿ ಸ್ವರ್ಗಕ್ಕೆ ಹೋಗತಕ್ಕ ಮಾರ್ಗವನ್ನು ತಡೆದುಕೊಂಡು ಕೂತಿದ್ದನು.

ಅಂಥಾ ಮಹಾತ್ಮನಾದ ಆಂಜನೇಯನನ್ನು ಆ ಮಹಾರಣ್ಯದಲ್ಲಿ ಭೀಮಸೇನನು ನೋಡಿ, ವೇಗದಿಂದ ಆತನ ಸಮೀಪಕ್ಕೆ ಹೋಗಿ, ಸಿಡಿಲಿನ ಧ್ವನಿಯಂತೆ ಸಿಂಹನಾದವನ್ನು ಮಾಡಿದನು. ಆ ಶಬ್ದವನ್ನು ಕೇಳಿ ಅಲ್ಲಿದ್ದ ಮೃಗಪಕ್ಷಿಗಳೆಲ್ಲಾ ಭಯಪಟ್ಟವು. ಆಗ ಮಹಾಪರಾಕ್ರಮಶಾಲಿಯಾದ ಆಂಜನೇಯನೂಕೂಡ ಸ್ವಲ್ಪ ಕಣ್ಣನ್ನು ತೆರೆದು, ಅಲಕ್ಷ್ಯವಾಗಿ ಭೀಮಸೇನನನ್ನು ನೋಡಿ ನಸುನಗುತ "ಅಯ್ಯಾ, ನೀನು ಯಾರು? ವೃದ್ಧನಾದ ನನಗೆ ಆಯಾಸವುಂಟಾಗುವಹಾಗೆ ಅರಚಿಕೊಂಡು ನನ್ನನ್ನು ಯಾತಕ್ಕೆಬ್ಬಿಸಿದೆ? ನಿನ್ನಂಥವನು ಸಕಲ ಪ್ರಾಣಿಗಳಲ್ಲಿಯೂ ದಯಾಪರನಾಗಿರಬೇಕು. ತಿರ್ಯಗ್ಜಂತುಗಳಾದ ನಾವು ಧರ್ಮವನ್ನು ತಿಳಿದವರಲ್ಲ; ಮನುಷ್ಯಜನ್ಮ

ನನ್ನೆತ್ತಿರತಕ್ಕವರು ಜ್ಞಾನಸಂಪನ್ನರಾದವರು. ಅಂಥವರು ಎಲ್ಲಾ ಪ್ರಾಣಿಗಳಲ್ಲಿಯೂ ದಯಾಪರರಾಗಿರಬೇಕು. ರೀರಕ್ಕೂ ವಾಕ್ಕಿಗೂ ಮನಸ್ಸಿಗೂ ದೋಷವನ್ನುಂಟುಮಾಡತಕ್ಕದ್ದಾಗಿಯೂ ಧರ್ಮವಿರುದ್ಧವಾಗಿಯೂ ಇರತಕ್ಕ ಕ್ರೂರವಾದ ಕಾರ್ಯಗಳಲ್ಲಿ ನಿಮ್ಮಂಥ ಬುದ್ಧಿಶಾಲಿಗಳು ಪ್ರವೇಶಿಸತಕ್ಕವರಲ್ಲವಲ್ಲಾ! ನಿನ್ನನ್ನು ನೋಡಿದರೆ ಧರ್ಮ ಜ್ಞನಾಗಿ ತೋರುವದಿಲ್ಲ. ನೀನು ದೊಡ್ಡವರ ಶುಶ್ರೂಷೆಯನ್ನು ಮಾಡಿದವನಂತೆಯೂ ತೋರುವದಿಲ್ಲ. ಬಾಲ ಭಾವದಿಂದ ಅಲ್ಪಬುದ್ಧಿಯಾಗಿ ಈ ಪರ್ವತದಲ್ಲಿದ್ದ ಮೃಗಗಳನ್ನು ಸುಮ್ಮನೆ ಹೊಡೆದು ಅಟ್ಟಿಬಿಟ್ಟೆಯಲ್ಲಾ! ನೀನು ಯಾರು? ಮನುಷ್ಯಸಂಚಾರವೇ ಇಲ್ಲದೆ ಇರತಕ್ಕ ಈ ವನಕ್ಕೆ ಯಾತಕ್ಕೋಸ್ಕರ ಬಂದೆ? ಇಲ್ಲಿಂದ ಮುಂದಕ್ಕೆ ನೀನು ಎಲ್ಲಿಗೆ ಹೊರಟಿರುವೆ?" ಹೇಳು. ಇಲ್ಲಿಂದ ಮುಂದಕ್ಕೆ ಹೋಗತಕ್ಕ ಪ್ರದೇಶವು ಅಗಮ್ಯವಾದದ್ದು. ಸಿದ್ಧರು ಹೊರತು ಕೇವಲ ಪರಾಕ್ರಮಶಾಲಿಗಳು ಇದರ ಮೇಲೆ ಹೋಗಲಶಕ್ಯವು. ಇದು ದೇವಲೋಕದ ಮಾರ್ಗವು. ಮನುಷ್ಯರ ಮಾರ್ಗವಲ್ಲ. ನಿನ್ನಲ್ಲಿ ದಯವಿಟ್ಟು ನಾನು ಇದ್ದ ಸಂಗತಿಗಳನ್ನು ತಿಳಿಸಿರುವೆನು. ಇಲ್ಲಿಂದ ಮುಂದಕ್ಕೆ ನೀನು ಹೋಗಬೇಡ. ನನ್ನ ಮಾತಿನಲ್ಲಿ ವಿಶ್ವಾಸವನ್ನಿಡು. ಎಲೈ ಪುರುಷಶ್ರೇಷ್ಠನೆ, ನನ್ನ ಮಾತು ಹಿತವೆಂದು ಎಣಿಸಿ, ನೀನು ಇಲ್ಲಿರತಕ್ಕ ಅಮೃತಕ್ಕೆ ಸಮಾನವಾದ ಕಂದಮೂಲಫಲಗಳನ್ನು ಭಕ್ಷಿಸಿಕೊಂಡು ಹಿಂದಕ್ಕೆ ಹೊರಟುಹೋಗು. ಮುಂದಕ್ಕೆ ಹೋಗಿ ವ್ಯರ್ಥವಾಗಿ ಹಾನಿಯನ್ನು ಪಡೆಯಬೇಡ" ಎಂದು ಆಂಜ ನೇಯನು ಭೀಮಸೇನನಿಗೆ ಹೇಳಿದನು.

೧೪೭ನೇ ಅಧ್ಯಾಯ.—ತೀರ್ಥಯಾತ್ರಾಪ್ರಶಂಸೆ—(ಹನುಮದ್ಭೀಮ ಸಂವಾದ.)

ವೈಶಂಪಾಯನಮುನೀಂದ್ರನು ಜನಮೇಜಯರಾಯನನ್ನು ಕುರಿತು—ಎಲೈ ರಾಯನೇ ಕೇಳು. ಆ ಕಪಿ ಶ್ರೇಷ್ಠನಾದ ಆಂಜನೇಯನ ಮಾತನ್ನು ಕೇಳಿ, ಭೀಮಸೇನನು "ಎಲೈ ಪೂಜ್ಯನೆ, ನೀನು ಯಾರು? ಏನು ಕಾರಣ ಕಪಿರೂಪವನ್ನು ತಾಳಿರುವೆ? ನಾನು ಬ್ರಾಹ್ಮಣವರ್ಣಕ್ಕೆ ಎರಡನೇದಾದ ಕ್ಷತ್ರಿಯವರ್ಣದವನು; ಚಂದ್ರವಂಶಸ್ಥನಾದ ಕುರುರಾಯನ ವಂಶಕ್ಕೆ ಸೇರಿದವನು; ವಾಯುವಿನ ದೆಸೆಯಿಂದ ಕುಂತೀದೇವಿಯ ಗರ್ಭದಲ್ಲಿ ಜನಿಸಿ ಪಾಂಡುರಾಯನಿಗೆ ಮಗನಾದವನು. ನನ್ನನ್ನು ಭೀಮಸೇನನೆಂದು ಹೇಳುವರು" ಎನಲು, ಅದನ್ನು ಕೇಳಿ ಆಂಜನೇಯನು ನಸುನಕ್ಕು "ಎಲೈ ಭೀಮಸೇನನೆ, ನಿನ್ನ ಇಷ್ಟಾನುಸಾರವಾಗಿ ನಾನು ದಾರಿಯನ್ನು ಬಿಡತಕ್ಕವ ನಲ್ಲ. ನೀನು ಇಲ್ಲಿಂದ ಮುಂದಕ್ಕೆ ಹೋಗಿ ಹಾನಿಯನ್ನು ಪಡೆಯಬೇಡ. ಸುಮ್ಮನೆ ಹಿಂತಿರುಗಿ ಹೋಗು" ಎಂದು ನುಡಿದನು. ಬಳಿಕ ಭೀಮಸೇನನು "ಎಲೈ ವಾನರನೆ, ನನಗೆ ಹಾನಿಯಾದರೂ ಆಗಲಿ, ಏನಾದರೂ ಆಗಲಿ. ಇದನ್ನು ನಾನು ಕೇಳುವದಕ್ಕೆ ಬಂದವನಲ್ಲ. ಎದ್ದು ನನಗೆ ದಾರಿಯನ್ನು ಬಿಡು. ಸುಮ್ಮನೆ ನನ್ನ ದೆಸೆಯಿಂದ ಕೇಡನ್ನು ಹೊಂದಬೇಡ" ಎನಲು, ಆಂಜನೇಯನು "ಎಲೈ ಭೀಮನೆ, ನಾನು ವ್ಯಾಧಿಯಿಂದ ಪೀಡಿತ ನಾಗಿರುವೆನು. ನನಗೆ ಏಳುವದಕ್ಕೆ ಶಕ್ತಿಯಿಲ್ಲ. ನೀನು ಅವಶ್ಯವಾಗಿ ಈ ದಾರಿಯಲ್ಲೇ ಹೋಗಬೇಕಾದ ಪಕ್ಷ ದಲ್ಲಿ, ನನ್ನನ್ನು ದಾಟಿಕೊಂಡು ಹೋಗು" ಎಂದನು. ಅದಕ್ಕೆ ಭೀಮಸೇನನು "ಎಲೈ ಕಪಿಶ್ರೇಷ್ಠನೆ, ಸತ್ವ ರಜಸ್ತಮೋಗುಣಗಳಿಂದ ರಹಿತನಾದ ಪರಮಾತ್ಮನು ಸಕಲಪ್ರಾಣಿಗಳಲ್ಲೂ ವ್ಯಾಪಿಸಿಕೊಂಡಿರುವನು. ಇದನ್ನು ಜ್ಞಾನದಿಂದ ತಿಳಿದು ನಾನು ಹ್ಯಾಗೆತಾನೇ ನಿನ್ನನ್ನು ದಾಟಿಕೊಂಡು ಹೋಗಲಿ? ಇದರಿಂದ ಆ ಪರಮಾತ್ಮನನ್ನು ಅವಮಾನಪಡಿಸಿದ ಹಾಗಾಗುವದಿಲ್ಲವೆ? ಸಕಲ ಪ್ರಾಣಿಗಳಿಂದಲೂ ಭಾವಿಸುವದಕ್ಕೆ ಯೋಗ್ಯನಾದ ಆ ಪರಮಾತ್ಮ ನನ್ನು ವೇದಾಂತಶಾಸ್ತ್ರಗಳಿಂದ ನಾನು ತಿಳಿಯದವನಾಗಿದ್ದರೆ, ನಿನ್ನನ್ನೂ ಈ ಪರ್ವತವನ್ನೂ ಸಹ ಸಮುದ್ರ ವನ್ನುಲಂಘಿಸಿದ ಆಂಜನೇಯನಂತೆ ಹಾರಿಕೊಂಡು ಹೋಗುತ್ತಿದ್ದೆನು" ಎನಲು, ಆಂಜನೇಯನು "ಎಲೈ ಭೀಮಸೇ ನನೆ, ಸಮುದ್ರವನ್ನುಲಂಘಿಸಿದ ಆ ಹನುಮಂತನು ಯಾರು? ನಿನಗೆ ತಿಳಿದಿದ್ದರೆ ಹೇಳು" ಎಂದು ಪ್ರಶ್ನೆಮಾಡಿ ದನು. ಬಳಿಕ ಭೀಮಸೇನನು "ಎಲೈ ಕಪಿಶ್ರೇಷ್ಠನೆ, ಶ್ರೀರಾಮನ ಪತ್ನಿಯಾದ ಸೀತಾದೇವಿಯ ನಿಮಿತ್ತವಾಗಿ ಶತಯೋಜನವಿಸ್ತೀರ್ಣವಾದ ಸಮುದ್ರವನ್ನು ದಾಟಿದ ಆ ಹನುಮಂತನು ನನಗೆ ಅಣ್ಣನಾಗಬೇಕು. ಅತನು

ಅತಿಶಯವಾದ ಬುದ್ಧಿಯಿಂದಲೂ ಪರಾಕ್ರಮದಿಂದಲೂ ಗುಣಗಳಿಂದಲೂ ಪ್ರಖ್ಯಾತನಾದವನು. ಆತನ ಮಹಿಮೆಯು ರಾಮಾಯಣದಲ್ಲಿ ವಿಸ್ತಾರವಾಗಿರುವದು. ನಾನೂ ಪರಾಕ್ರಮದಲ್ಲಿಯೂ ಯುದ್ಧಮಾಡುವದರಲ್ಲಿಯೂ ತೇಜಸ್ಸಿನಲ್ಲಿಯೂ ಆತನಿಗೆ ಸಮಾನನಾದವನು. ಬೇಗ ಏಳು. ನನಗೆ ದಾರಿಯನ್ನು ಬಿಡು. ನೀನು ಬಿಡದೆ ಹೋದರೆ ನನ್ನ ಸಾಮರ್ಥ್ಯವನ್ನು ತೋರಿಸಿ, ನನ್ನ ಆಜ್ಞೆಯನ್ನು ಉಲ್ಲಂಘಿಸಿದ ನಿನ್ನನ್ನು ನಿಗ್ರಹಿಸಿ, ಯಮನ ಪಟ್ಟಣಕ್ಕೆ ಕಳುಹಿಸಿಬಿಡುತ್ತೇನೆ" ಎಂದನು. ಆ ಮಾತನ್ನು ಕೇಳಿ ಹನುಮಂತನು, ಭೀಮಸೇನನು ಬಾಹುಪರಾಕ್ರಮದಿಂದ ಗರ್ವಿತನಾಗಿರುವದನ್ನು ತಿಳಿದು ಮನಸ್ಸಿನಲ್ಲೇ ನಗುತ, ಆತನನ್ನು ನೋಡಿ "ಎಲೈ ಭೀಮಸೇನನೆ, ನಾನು ವೃದ್ಧನಾದ್ದರಿಂದ ಮೇಲಕ್ಕೇಳುವದಕ್ಕೂ ಕೂಡ ನನಗೆ ಶಕ್ತಿಯಿಲ್ಲ. ನನ್ನಲ್ಲಿ ನೀನು ಕೃಪೆಯನ್ನಿಟ್ಟು ಈ ನನ್ನ ಬಾಲವನ್ನು ಸ್ವಲ್ಪ ಓರೆಮಾಡಿಕೊಂಡು ಮುಂದಕ್ಕೆ ಹೊರಟುಹೋಗು" ಎನಲು, ಭೀಮಸೇನನು ಬಾಹುಬಲದಿಂದ ಗರ್ವಿತನಾಗಿ, ಈತನು ದುರ್ಬಲನೆಂದು ಮನಸ್ಸಿನಲ್ಲಿ ಯೋಚಿಸಿ, ಕಪಿಯನ್ನು ಹಿಡಿದು ಜಾಗ್ರತೆಯಾಗಿ ಯಮಲೋಕಕ್ಕೆ ಕಳುಹಿಸಿಬಿಡಬೇಕೆಂದು ಅಲಕ್ಷ್ಯವಾಗಿ ನಸುನಗುತ, ಎಡಗೈಯಿಂದ ಆತನ ಬಾಲವನ್ನು ಎತ್ತುವದಕ್ಕೆ ಯತ್ನಿಸಿ, ಅದನ್ನು ಅಲ್ಲಾಡಿಸುವದಕ್ಕೂ ಶಕ್ತಿಯಿಲ್ಲದೆ, ಎರಡು ಕೈಗಳಿಂದಲೂ ಎತ್ತಲುಪಕ್ರಮಿಸಿ, ಅದಕ್ಕೂ ಸಾಧ್ಯವಾಗದೆ, ಮೈಯೆಲ್ಲಾ ಬೆವರಲು, ಕೋಪದಿಂದ ಹುಬ್ಬನ್ನು ಗಂಟಿಕ್ಕಿ, ಕೆಂಪಾದ ಕಣ್ಣುಗಳುಳ್ಳವನಾಗಿ, ತನ್ನ ಶಕ್ತಿಯಿದ್ದಷ್ಟು ಆ ಬಾಲವನ್ನು ಎತ್ತುವದಕ್ಕೆ ಯತ್ನಮಾಡಿದನು. ಆ ಬಾಲವು ಸ್ವಲ್ಪವಾದರೂ ಅಲ್ಲಾಡದೆ ಇರಲು, ನಾಚಿಕೆಯಿಂದ ತಲೆಯನ್ನು ತಗ್ಗಿಸಿಕೊಂಡು ಆಂಜನೇಯನ ಪಾರ್ಶ್ವದಲ್ಲಿ ಬಂದು ನಿಂತುಕೊಂಡು, ಆತನಿಗೆ ನಮಸ್ಕಾರಮಾಡಿ, ಕೈಮುಗಿದುಕೊಂಡು "ಎಲೈ ಕಪಿಶ್ರೇಷ್ಠನೆ, ನೀನು ನನ್ನ ವಿಷಯದಲ್ಲಿ ಪ್ರಸನ್ನನಾಗಿ ನಾನಾಡಿದ ದುರ್ಭಾಷೆಗಳನ್ನು ದಯವಿಟ್ಟು ಕ್ಷಮಿಸು. ಕಪಿರೂಪಧಾರಿಯಾಗಿರುವ ನೀನು ಸಿದ್ಧಪುರುಷನೋ? ದೇವತೆಯೋ? ಗಂಧರ್ವನೋ? ಗುಹ್ಯಕನೋ? ಯಾರು? ಇದು ಗೋಪ್ಯವಲ್ಲದೆ ನಾನು ಕೇಳತಕ್ಕದ್ದಾಗಿದ್ದರೆ ಹೇಳು. ನಾನು ನಿನಗೆ ಶಿಷ್ಯನಾಗಿ ಕೇಳುವೆನು" ಎಂದು ಪ್ರಾರ್ಥಿಸಿದನು.

ಬಳಿಕ ಆಂಜನೇಯನು "ಎಲೈ ಪಾಂಡುನಂದನನೆ, ನನ್ನ ವೃತ್ತಾಂತವನ್ನು ಕೇಳಬೇಕೆಂದು ನಿನಗೆ ಕುತೂಹಲವಿದ್ದರೆ ವಿಸ್ತಾರವಾಗಿ ಹೇಳುತ್ತೇನೆ ಕೇಳು. ನಾನು ಕೇಸರಿಯೆಂಬ ಕಪಿನಾಯಕನ ಪತ್ನಿಯಾದ ಅಂಜನಾದೇವಿಯಲ್ಲಿ ಜಗತ್ಪ್ರಾಣನಾದ ವಾಯುವಿನಿಂದ ಜನಿಸಿದವನು. ನನ್ನನ್ನು ಹನುಮಂತನೆಂದು ಕರೆಯುವರು. ಪೂರ್ವದಲ್ಲಿ ಸೂರ್ಯಪುತ್ರನಾದ ಸುಗ್ರೀವನನ್ನೂ ಇಂದ್ರಪುತ್ರನಾದ ವಾಲಿಯನ್ನೂ ಸಹ ಅನೇಕರಾದ ಕಪಿನಾಯಕರು ಆಶ್ರಯಿಸಿಕೊಂಡಿದ್ದರು. ಯಜ್ಞೇಶ್ವರನಿಗೆ ವಾಯುವಿನಲ್ಲಿ ಪ್ರೀತಿಯುಂಟಾದಂತೆ, ನನ್ನಲ್ಲಿ ಸುಗ್ರೀವನಿಗೆ ಪ್ರೀತಿಯುಂಟಾಯಿತು. ಬಂದಾನೊಂದು ನಿಮಿತ್ತದಿಂದ ಸುಗ್ರೀವನಿಗೂ ವಾಲಿಗೂ ದ್ವೇಷವುಂಟಾಗಿ, ವಾಲಿಯಿಂದ ತಿರಸ್ಕೃತನಾದ ಸುಗ್ರೀವನು ನನ್ನೊಡನೆ ಋಶ್ಯಮೂಕಪರ್ವತದಲ್ಲಿ ವಾಸಮಾಡುತ್ತಿದ್ದನು. ಆಗ ಮಹಾವಿಷ್ಣುವು ಒಂದು ಕಾರಣದಿಂದ ದಶರಥಮಹಾರಾಜನಲ್ಲಿ ಅವತಾರಮಾಡಿ, ರಾಮನೆಂದು ಪ್ರಸಿದ್ಧಿಯನ್ನು ಪಡೆದು, ಧನುರ್ಧರಾಗ್ರೇಸರನಾಗಿದ್ದನು. ಆತನು ತಂದೆಯ ಆಜ್ಞೆಯನ್ನು ಪರಿಪಾಲಿಸುವದಕ್ಕಾಗಿ ಪತ್ನಿಯಾದ ಸೀತೆಯಿಂದಲೂ ತಮ್ಮನಾದ ಲಕ್ಷ್ಮಣನಿಂದಲೂ ಕೂಡಿ ದಂಡಕಾರಣ್ಯವನ್ನು ಪ್ರವೇಶಮಾಡಿದನು. ಆಗ ದುರಾತ್ಮನಾದ ರಾಕ್ಷಸೇಂದ್ರನಾದ ರಾವಣನು ರತ್ನಖಚಿತವಾದ ಮಾಯಾಮೃಗರೂಪವನ್ನು ತಾಳಿದ ಮಾರೀಚನೆಂಬ ರಾಕ್ಷಸನಿಂದ ರಾಮನನ್ನು ವಂಚಿಸಿ, ಛಲದಿಂದ ಜನಸ್ಥಾನವೆಂಬ ಪ್ರದೇಶದಲ್ಲಿ ರಾಮಪತ್ನಿಯಾದ ಸೀತೆಯನ್ನು ಬಲಾತ್ಕಾರದಿಂದ ಅಪಹರಿಸಿದನು" ಎಂದು ಭೀಮಸೇನನಿಗೆ ಹೇಳಿದನು.

## ೧೪೮ನೇ ಅಧ್ಯಾಯ.—ತೀರ್ಥಯಾತ್ರಾಪ್ರಶಂಸೆ.—(ಹನುಮದ್ಭೀಮಸಂವಾದ.)

ವೈಶಂಪಾಯನಮುನೀಂದ್ರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಹನುಮಂತನು ಭೀಮಸೇನನನ್ನು ಕುರಿತು "ಎಲೈ ಭೀಮಸೇನನೆ, ಆಗ ಶ್ರೀರಾಮನು ತಮ್ಮನಾದ ಲಕ್ಷ್ಮಣನಿಂದ ಸಹಿ

ತನಾಗಿ ತನ್ನ ಪತ್ನಿಯಾದ ಸೀತೆಯನ್ನು ಅಲ್ಲಲ್ಲಿ ಹುಡುಕುತ್ತ ಋಶ್ಯಮೂಕಪರ್ವತದ ಸಮೀಪಕ್ಕೆ ಬಂದು, ಆ ಪರ್ವತದ ಶಿಖರದಲ್ಲಿ ವಾಸಮಾಡಿಕೊಂಡಿದ್ದ ಸುಗ್ರೀವನನ್ನು ಕಂಡನು. ಬಳಿಕ ಆ ಮಹಾತ್ಮನಾದ ರಾಮನಿಗೂ ಸುಗ್ರೀವನಿಗೂ ಸ್ನೇಹವುಂಟಾಯಿತು. ಆಗ ರಾಮನು ಸುಗ್ರೀವನ ಸಂಗಡ ದ್ವೇಷಮಾಡುತ್ತಿದ್ದ ವಾಲಿಯನ್ನು ಸಂಹಾರ ಮಾಡಿ, ಕಪಿರಾಜ್ಯದಲ್ಲಿ ಆತನಿಗೆ ಪಟ್ಟಾಭಿಷೇಕವನ್ನು ಮಾಡಿದನು. ಬಳಿಕ ಸುಗ್ರೀವನು ಸೀತಾದೇವಿಯನ್ನು ಹುಡುಕುವದಕ್ಕಾಗಿ ಅನೇಕ ಕಪಿನಾಯಕರನ್ನು ಕಳುಹಿಸಿದನು. ನಾನೂ ಅನೇಕ ಕಪಿವೀರರೊಡನೆ ಆಕೆಯನ್ನು ಹುಡುಕುವದಕ್ಕೋಸ್ಕರ ದಕ್ಷಿಣದಿಕ್ಕಿಗೆ ಹೊರಟು, ಅಲ್ಲಲ್ಲಿ ಹುಡುಕುತ್ತ, ವಿಂಧ್ಯಪರ್ವತದಲ್ಲಿದ್ದ ಗೃಧ್ರರಾಜನಾದ ಸಂಪಾತಿಯುದೆಸೆಯಿಂದ ರಾವಣನ ಮನೆಯಲ್ಲಿ ಆಕೆಯು ಇರುವದನ್ನು ತಿಳಿದು, ಬಳಿಕ ಮಹಾನುಭಾವನಾದ ರಾಮನ ಕಾರ್ಯವನ್ನು ಸಾಧಿಸುವದಕ್ಕಾಗಿ ನೂರುಯೋಜನವುಳ್ಳ ಸಮುದ್ರವನ್ನು ನನ್ನ ಸಾಮರ್ಥ್ಯದಿಂದ ಲಂಘನೆಮಾಡಿ, ರಾವಣನ ಮನೆಯಲ್ಲಿದ್ದ ಆ ಸೀತಾದೇವಿಯನ್ನು ಕಂಡು, ರಾಮನ ವೃತ್ತಾಂತವನ್ನು ಆಕೆಗೆ ತಿಳುಹಿಸಿ, ಅನೇಕ ಉಪ್ಪರಿಗೆಗಳಿಂದಲೂ ಪ್ರಾಕಾರಗಳಿಂದಲೂ ಅಲಂಕೃತವಾದ ಲಂಕಾಪಟ್ಟಣವನ್ನು ಸುಟ್ಟು, ನನ್ನ ಪ್ರತಾಪವನ್ನು ಮೆರೆಯಿಸಿ, ಪುನಃ ಸಮುದ್ರವನ್ನು ದಾಟಿ, ಸೀತಾವೃತ್ತಾಂತವನ್ನು ರಾಮನಿಗೆ ತಿಳುಹಿಸಿದೆನು. ಬಳಿಕ ರಾಮನು ಅನೇಕ ಕಪಿಸೈನ್ಯದೊಡನೆ ಹೊರಟು, ಸಮುದ್ರಕ್ಕೆ ಸೇತುವೆಯನ್ನು ಕಟ್ಟಿಸಿ ಆ ಮಾರ್ಗದಿಂದ ಲಂಕಾಪಟ್ಟಣಕ್ಕೆ ಹೋಗಿ, ಪುತ್ರಮಿತ್ರಾಮಾತ್ಯಸಹಿತನಾದ ಲೋಕಕಂಟಕನಾದ ರಾವಣನನ್ನೂ ಇನ್ನೂ ಅಲ್ಲಿದ್ದ ಅನೇಕ ರಾಕ್ಷಸರನ್ನೂ ಸಹ ಸಂಹಾರಮಾಡಿ, ಧರ್ಮಿಷ್ಠನೂ ಭಕ್ತನೂ ಆದ ವಿಭೀಷಣನಿಗೆ ಆ ಲಂಕಾಪಟ್ಟಣದಲ್ಲಿ ರಾಜ್ಯಾಭಿಷೇಕವನ್ನು ಮಾಡಿ, ಮಹಾವಿಷ್ಣುವು ದೈತ್ಯನಿಂದ ಅಪಹೃತವಾಗಿದ್ದ ಶ್ರುತಿಯನ್ನು ಉದ್ಧಾರಮಾಡಿ ತೆಗೆದುಕೊಂಡು ಬಂದಂತೆ, ರಾವಣನಿಂದ ಅಪಹೃತಳಾಗಿದ್ದ ಸೀತಾದೇವಿಯನ್ನು ಕರೆದುಕೊಂಡು ಅಲ್ಲಿಂದ ಅಯೋಧ್ಯಾನಗರಕ್ಕೆ ಬಂದು, ಅಲ್ಲಿ ರಾಜ್ಯಭಾರವನ್ನು ಮಾಡುತ್ತಿದ್ದನು. ಬಳಿಕ ನಾನು ಪುಂಡರೀಕಾಕ್ಷನಾದ ಶ್ರೀರಾಮನನ್ನು ಕುರಿತು 'ಎಲೈ ರಾಮಚಂದ್ರನೆ, ನಿನ್ನ ಕೀರ್ತಿಯು ಯಾವ ವರೆಗೂ ಲೋಕಗಳಲ್ಲಿ ಹರಡಿಕೊಂಡಿರುವದೋ ಅವರೆಗೂ ನಾನು ಜೀವವಂತನಾಗಿರಬೇಕು' ಎಂದು ವರವನ್ನು ಬೇಡಿಕೊಳ್ಳಲು, ಹಾಗೇ ಆಗಲೆಂದು ಆ ಮಹಾನುಭಾವನು ನನಗೆ ವರವನ್ನು ಕೊಟ್ಟು, ಹನ್ನೊಂದು ಸಾವಿರ ವರುಷ ರಾಜ್ಯಭಾರವನ್ನು ಮಾಡಿ, ಬಳಿಕ ವೈಕುಂಠಕ್ಕೆ ಹೊರಟುಹೋದನು. ಆ ವರಪ್ರಸಾದದಿಂದಲೂ, ಸೀತಾದೇವಿಯ ಅನುಗ್ರಹದಿಂದಲೂ, ನಾನು ಈ ಗಂಧಮಾದನ ಪರ್ವತದಲ್ಲಿದ್ದರೂ ನನಗೆ ಬೇಕಾದ ದಿವ್ಯಭೋಗಗಳು ಉಂಟಾಗುತ್ತಿರುವವು. ಈ ಪ್ರದೇಶದಲ್ಲಿ ಅನೇಕಮಂದಿ ಅಪ್ಸರಸ್ತ್ರೀಯರೂ, ಗಂಧರ್ವರೂ ಸಹ, ಯಾವಾಗಲೂ ಮಹಾನುಭಾವನಾದ ರಾಮನ ಚರಿತ್ರೆಯನ್ನೇ ಗಾನ ಮಾಡುತ್ತ ನನಗೆ ಸಂತೋಷವನ್ನುಂಟುಮಾಡುತ್ತಿರುವರು. ಎಲೈ ಕುರುಕುಲಶ್ರೇಷ್ಠನಾದ ಭೀಮಸೇನನೆ, ಈ ಮಾರ್ಗವು ಮನುಷ್ಯರು ಸಂಚಾರಮಾಡತಕ್ಕದ್ದಲ್ಲ; ದೇವತೆಗಳ ಸಂಚಾರಕ್ಕೆ ಯೋಗ್ಯವಾದದ್ದು. ಇಲ್ಲಿ ನೀನು ಹೋದದ್ದೇ ಆದರೆ ಯಾವ ದೇವತೆಗಳಾದರೂ ನಿನ್ನನ್ನು ನಿಗ್ರಹಿಸಿಯಾರು? ಅಥವಾ ಶಾಪವನ್ನಾದರೂ ಕೊಟ್ಟಾರು? ಹಾಗಾಗಬಾರದು ಎಂದು ನಿನ್ನನ್ನು ನಾನು ಇಲ್ಲೇ ತಡೆದುಬಿಟ್ಟೆನು. ನೀನು ಎಲ್ಲಿಗೆ ಹೋಗಬೇಕೆಂದು ಬಂದಿರುವೆಯೋ ಆ ಸರೋವರವು ಇಲ್ಲಿಯೇ ಇರುವದು" ಎಂದು ಆಂಜನೇಯನು ಭೀಮಸೇನನಿಗೆ ಹೇಳಿದನು.

### ೧೫೦ನೇ ಅಧ್ಯಾಯ.—ತೀರ್ಥಯಾತ್ರಾಪ್ರಶಂಸೆ.—(ಹನುಮದ್ಭೀಮ ಸಂವಾದ.)

ವೈಶಂಪಾಯನಮುನೀಂದ್ರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಆಂಜನೇಯನು ಹೇಳಿದ ಮಾತನ್ನು ಕೇಳಿ ಪ್ರತಾಪಶಾಲಿಯಾದ ಭೀಮಸೇನನು ಸಂತುಷ್ಟನಾಗಿ, ಭಕ್ತಿಯಿಂದ ಹನುಮಂತನಿಗೆ ನಮಸ್ಕಾರವನ್ನು ಮಾಡಿ, ಆತನನ್ನು ಕುರಿತು "ಎಲೈ ಕಪೀಶ್ವರನೆ, ಈ ದಿವಸ ಆರ್ಯನಾದ ನಿನ್ನನ್ನು ನೋಡಿದ್ದರಿಂದ ನಾನು ಧನ್ಯನಾದೆನು. ನನ್ನಲ್ಲಿ ನೀನು ಪರಿಪೂರ್ಣವಾಗಿ ಅನುಗ್ರಹವನ್ನು ಮಾಡಿದೆ. ನಿನ್ನ

ದರ್ಶನದಿಂದ ನನಗೆ ಅಧಿಕವಾದ ತೃಪ್ತಿಯುಂಟಾಯಿತು. ಎಲೈ ಮಹಾನುಭಾವನೆ, ಸಮುದ್ರಲಂಘನಮಾಡುವ ಕಾಲದಲ್ಲಿ ನೀನು ಯಾವ ರೂಪವನ್ನು ಧರಿಸಿದ್ದೆಯೋ ಆ ರೂಪವನ್ನು ನೋಡಬೇಕೆಂದು ನನಗೆ ಕುತೂಹಲವುಂಟಾಗಿರುವದು. ಆ ದಿವ್ಯವಾದ ರೂಪವನ್ನು ತೋರಿಸಿ ನನಗೆ ಸಂತೋಷವನ್ನುಂಟುಮಾಡು. ಇದರಿಂದ ನಿನ್ನ ಮಾತಿನಲ್ಲಿ ನನಗೆ ಅಧಿಕವಾಗಿ ವಿಶ್ವಾಸವುಂಟಾಗುವದು" ಎನಲು, ಆ ಹನುಮಂತನು ನಸುನಕ್ಕು "ಎಲೈ ಭೀಮಸೇನನೆ, ನಾನು ಸಮುದ್ರಲಂಘನ ಮಾಡುವ ಕಾಲದಲ್ಲಿ ಧರಿಸಿದ್ದ ರೂಪವನ್ನು ನೋಡುವದು ಈಗ ಸರ್ವರಿಗೂ ಅಶಕ್ಯವಾದದ್ದು. ನೀನು ನೋಡಲಾರೆ. ಆ ಕಾಲವೂ ಆ ಅವಸ್ಥೆಯೂ ಸಹ ಈಗ ಇಲ್ಲದೆ ಸರ್ವವೂ ಬೇರೇವಿಧವಾಗಿರುವದು. ಕೃತಯುಗದ ಕಾಲಸ್ಥಿತಿಯು ತ್ರೇತಾಯುಗದಲ್ಲಿ ಉಂಟಾಗಲಾರದು; ತ್ರೇತಾಯುಗದ ಕಾಲಸ್ಥಿತಿಯು ದ್ವಾಪರಯುಗದಲ್ಲಿ ಉಂಟಾಗಲಾರದು; ದ್ವಾಪರಯುಗದ ಕಾಲಸ್ಥಿತಿಯು ಪಾಪಿಷ್ಠವಾದ ಕಲಿಯುಗದಲ್ಲಿ ಉಂಟಾಗಲಾರದು. ಆದ್ದರಿಂದ ಈ ಕಾಲವು ನಾನಾವಿಕಾರವನ್ನು ಹೊಂದಿರುವದು. ಭೂಮಿಯೂ, ಪರ್ವತಗಳೂ, ನಕ್ಷತ್ರಗಳೂ, ನದಿಗಳೂ, ಸಿದ್ಧರೂ, ದೇವತೆಗಳೂ, ಮಹರ್ಷಿಗಳೂ ಸಹ, ಕಾಲವನ್ನೇ ಅನುಸರಿಸಿ ನಡೆಯುವರು. ಯುಗಯುಗದಲ್ಲೂ ಪ್ರಾಣಿಗಳ ಬಲವೂ ಶರೀರವೂ ಪ್ರಭಾವವೂ ಸಹ ಬರುತಬರುತ ಕ್ಷೀಣಗತಿಯನ್ನು ಹೊಂದುವವು. ತದನುಸಾರವಾಗಿಯೇ ಪ್ರಾಣಿಗಳು ಹುಟ್ಟುತ್ತಾ ಬರುವವು. ಕಾಲವನ್ನು ಮೀರುವದು ಎಲ್ಲರಿಗೂ ಅಶಕ್ಯವಾದದ್ದರಿಂದ, ನಾನೂ ಕಾಲಾನುಸಾರವಾಗಿಯೇ ಇರುವೆನು. ಇಂಥ ಕಾಲದಲ್ಲಿ ನನ್ನ ರೂಪವನ್ನು ನೋಡಬೇಕೆಂದು ನೀನೇತಕ್ಕೆ ಅಪೇಕ್ಷೆಪಡುವೆ?" ಎಂದನು. ಆ ಮಾತನ್ನು ಕೇಳಿ ಭೀಮಸೇನನು "ಎಲೈ ಮಹಾನುಭಾವನೆ, ಯುಗಸಂಖ್ಯೆಯನ್ನೂ ಆಯಾ ಯುಗಗಳಲ್ಲಿ ನಡೆಯತಕ್ಕ ಆಚಾರಗಳನ್ನೂ, ಶುಭಾಶುಭಕರ್ಮಗಳನ್ನೂ, ಪ್ರಾಣಿಗಳ ಶಕ್ತಿಯನ್ನೂ, ಉತ್ಪತ್ತಿವಿನಾಶಗಳನ್ನೂ, ಧರ್ಮಕಾಮಾರ್ಥಗಳ ರೀತಿಯನ್ನೂ ಸಹ ನನಗೆ ತಿಳುಹಿಸು" ಎನಲು, ಆಂಜನೇಯನು "ಎಲೈ ವತ್ಸನೇ ಕೇಳು. ಯಾವ ಯುಗದಲ್ಲಿ ಸರ್ವರೂ ಸನಾತನವಾದ ಧರ್ಮವನ್ನೇ ಆಶ್ರಯಿಸಿ ಕೃತಾರ್ಥರಾಗುವರೋ, ಅದನ್ನು ಕೃತಯುಗವೆಂದು ಹೇಳುವರು. ಆ ಉತ್ತಮವಾದ ಯುಗದಲ್ಲಿ ಆಚರಿಸಲ್ಪಡತಕ್ಕದ್ದಾಗಿ ಯಾವ ಧರ್ಮವೂ ಇರಲಿಲ್ಲವು. ಸಕಲ ಧರ್ಮಗಳೂ ಸರ್ವರಿಂದಲೂ ಆಚರಿಸಲ್ಪಟ್ಟೇ ನಷ್ಟವಾಗದೆ ಇದ್ದವು. ಆ ಯುಗದಲ್ಲಿ ಯಾರೂ ಕ್ಷೀಣದಶೆಯನ್ನು ಹೊಂದದೆ ಇದ್ದದ್ದರಿಂದ, ಆ ಕೃತಯುಗದ ಕಾಲಸ್ಥಿತಿಯು ಈ ಕಾಲದಲ್ಲಿ ಗೌಣವಾಗಿರುವದು. ಆ ಕೃತಯುಗದಲ್ಲಿ ದೇವತೆಗಳೂ, ದಾನವರೂ, ಗಂಧರ್ವರೂ, ಯಕ್ಷರೂ, ರಾಕ್ಷಸರೂ, ಪನ್ನಗರೂ, ಕ್ರಯವಿಕ್ರಯಗಳೂ, ಋಗ್ಯಜುಸ್ಸಾಮಗಳೆಂಬ ವೇದಗಳ ವಿಭಾಗವೂ, ಕೃಷ್ಯಾದಿವೃತ್ತಿಗಳೂ, ಸನ್ಯಾಸಧರ್ಮವೂ ಸಹ ಇರಲಿಲ್ಲವು. ಸಕಲ ಇಷ್ಟಾರ್ಥಗಳೂ ಸಂಕಲ್ಪಮಾತ್ರದಿಂದಲೇ ಸಿದ್ಧಿಸುತ್ತಾ ಇದ್ದವು. ಮತ್ತು ಆ ಯುಗದಲ್ಲಿ ರೋಗಗಳೂ, ರೋದನವೂ, ಚಕ್ಷುರಾದಿ ಇಂದ್ರಿಯಗಳಿಗೆ ನಾಶವೂ, ಅಸೂಯೆಯೂ, ಅಹಂಕಾರವೂ, ಕಪಟವೂ, ವೈರವೂ, ಆಲಸ್ಯವೂ, ಮತ್ತೊಬ್ಬರಿಗೆ ಕೇಡನ್ನು ಬಯಸುವದೂ, ಚಾಡಿಯೂ, ಭಯವೂ, ಸಂತಾಪವೂ, ಅಸಹನವೂ, ಮತ್ಸರವೂ ಸಹ ಇರಲಿಲ್ಲವು. ಹೀಗಿದ್ದದ್ದರಿಂದ ಆ ಯುಗದಲ್ಲಿ ಯೋಗಿಗಳಾದವರಿಗೆ ಪ್ರಾಪ್ಯಸ್ಥಸಭೂತನಾದ ಪರಬ್ರಹ್ಮಸ್ವರೂಪನೂ ಆನಂದಮಯನೂ ಸಕಲಾಂತರ್ಯಾಮಿಯೂ ಆದ ನಾರಾಯಣನು ಶುಭ್ರವರ್ಣನಾಗಿ ಪ್ರಕಾಶವಾಗಿದ್ದನು. ಮತ್ತು ಆ ಯುಗದಲ್ಲಿ ಬ್ರಹ್ಮ, ಕ್ಷತ್ರಿಯ, ವೈಶ್ಯ, ಶೂದ್ರರೆಂಬ ನಾಲ್ಕು ವರ್ಣದವರೂ ಸ್ವತಸ್ಸಿದ್ಧವಾದ ಶಮದಮಾದಿಗುಣಗಣಗಳುಳ್ಳವರಾಗಿ, ತಮ್ಮತಮ್ಮ ವರ್ಣಾಶ್ರಮಧರ್ಮಗಳನ್ನು ಬಿಡದೆ ಅವಲಂಬಿಸಿಕೊಂಡಿದ್ದರು. ಸಕಲರೂ ಪರಬ್ರಹ್ಮನನ್ನೇ ಅವಲಂಬಿಸಿ ಸದಾಚಾರಸಂಪನ್ನರಾಗಿಯೂ ಜ್ಞಾನಿಗಳಾಗಿಯೂ ಇದ್ದುಕೊಂಡು ಬ್ರಹ್ಮಾರ್ಪಣಬುದ್ಧಿಯಿಂದ ಸಕಲಕರ್ಮಗಳನ್ನೂ ಮಾಡುತ್ತಿದ್ದರು; ನಾರಾಯಣನೊಬ್ಬನನ್ನೇ ನಂಬಿಕೊಂಡು ಪ್ರಣವವೆಂಬ ಒಂದು ಮಂತ್ರವನ್ನೇ ಜಪಿಸುತ್ತ, ವೇದಾಂತವೊಂದರಲ್ಲೇ ವಿಚಾರಪರರಾಗಿ, ಸಕಲರೂ ಯೋಗನಿಷ್ಠರಾಗಿ ವೇದೋಕ್ತಧರ್ಮಗಳನ್ನು ಬಿಡದೆ ಆಚರಿಸುತ್ತಿದ್ದರು; ಮತ್ತು ಬ್ರಹ್ಮಚರ್ಯ, ಗಾರ್ಹಸ್ಥ್ಯ, ವಾನಪ್ರಸ್ಥ, ಸನ್ಯಾಸ, ಗಳೆಂಬ ನಾಲ್ಕು ಆಶ್ರಮಗಳಲ್ಲೂ ಮಾಡತಕ್ಕ ಕರ್ಮಗಳನ್ನು ಮಾಡಿ ಸ್ವರ್ಗಾದಿಫಲಗಳನ್ನು ಅಪೇಕ್ಷಿಸದೆ ಸಕಲಕರ್ಮಗಳನ್ನೂ ಆತ್ಮನಿಗೆ ಸಮರ್ಪಣೆಮಾಡಿ, ಶಾಶ್ವತವಾದ ಗತಿಯನ್ನು ಹೊಂದುತ್ತಿದ್ದರು.

ಪರಮಾತ್ಮನ ಧ್ಯಾನದಿಂದೊಡಗೂಡಿದ ಧರ್ಮವೇ ಕೃತಯುಗಕ್ಕೆ ಲಕ್ಷಣವಾದದ್ದೆಂದು ತಿಳಿಯಬೇಕು. ಆ ಕೃತಯುಗದಲ್ಲಿ, ನಾಲ್ಕು ವರ್ಣಗಳ ಧರ್ಮಗಳೂ ಸ್ವಲ್ಪವೂ ಕಡಮೆಯಾಗದೆ ಶಾಶ್ವತವಾಗಿ ನಡೆಯುತ್ತಿದ್ದವು; ಸತ್ವರಜಸ್ತಮೋಗುಣಮಿಶ್ರವಾದ ಕರ್ಮಗಳು ಇರಲಿಲ್ಲವಾದ್ದರಿಂದ, ಆ ಯುಗಕ್ಕೆ ಕೃತಯುಗವೆಂಬ ಹೆಸರುಂಟಾಯಿತು. ಎಲೈ ಭೀಮಸೇನನೆ, ಇನ್ನು ತ್ರೇತಾಯುಗದ ಧರ್ಮವನ್ನು ತಿಳುಹಿಸುತ್ತೇನೆ ಕೇಳು. ತ್ರೇತಾಯುಗದಲ್ಲಿ ಸತ್ರಯಾಗವು ನಡೆಯುತ್ತಿತ್ತು. ಧರ್ಮವು ಒಂದು ಪಾದ ಕಡಮೆಯಾಗಿತ್ತು. ಯುಗನಿಯಾಮಕನಾದ ನಾರಾಯಣನೂ ರಕ್ತವರ್ಣವುಳ್ಳವನಾದನು. ಆ ಯುಗದಲ್ಲಿದ್ದ ಮನುಷ್ಯರು ಧರ್ಮಕ್ರಿಯಾಪರರಾಗಿಯೂ, ಸತ್ಯಪರರಾಗಿಯೂ ಇದ್ದದ್ದಲ್ಲದೆ, ನಾನು ಇಂಥಾಯಾಗವನ್ನು ಮಾಡಿ ಇಂಥಾ ಫಲವನ್ನು ಹೊಂದುತ್ತೇನೆಂಬ ಸಂಕಲ್ಪದಿಂದ ಅನೇಕ ಯಜ್ಞಗಳನ್ನು ಮಾಡುತ್ತ, ತಮ್ಮತಮ್ಮ ವರ್ಣಾಶ್ರಮಧರ್ಮಗಳನ್ನು ಬಿಡದೆ ತಪಸ್ಸನ್ನೂ ದಾನವನ್ನೂ ಮಾಡುತ್ತ, ಸ್ವಲ್ಪವಾದರೂ ಧರ್ಮವನ್ನು ತಪ್ಪದೆ ಇದ್ದರು. ಬಳಿಕ ದ್ವಾಪರಯುಗಪ್ರಾಪ್ತವಾಗಲು, ಧರ್ಮವು ಎರಡು ಪಾದಗಳು ಕಡಮೆಯಾಗಿತ್ತು. ಯುಗಾಭಿಮಾನಿಯಾದ ನಾರಾಯಣನು ಹೊಂಬಣ್ಣನಾಗಿದ್ದನು. ವೇದಕ್ಕೆ ಋಗ್ಯಜುಸ್ಸಾಮಾಥರ್ವಣಗಳೆಂಬ ನಾಲ್ಕು ಭೇದಗಳುಂಟಾದವು. ಆಗ ಕೆಲವರು ನಾಲ್ಕು ವೇದಗಳಲ್ಲಿಯೂ ಉಕ್ತವಾದ ಕರ್ಮಗಳನ್ನು ಆಚರಿಸುತ್ತಿದ್ದರು; ಕೆಲವರು ಋಗ್ಯಜುರ್ವೇದಗಳಲ್ಲಿ ಉಕ್ತವಾದ ಕರ್ಮಗಳನ್ನು ಆಚರಿಸುತ್ತಿದ್ದರು; ಕೆಲವರು ಋಗ್ವೇದದಲ್ಲಿ ಉಕ್ತವಾದ ಕರ್ಮವನ್ನು ಮಾತ್ರವೇ ಆಚರಿಸುತ್ತಿದ್ದರು. ಇನ್ನೂ ಕೃತಕೃತ್ಯರೂ ಯೋಗಿಗಳೂ ಆದ ವಿರಕ್ತರು ಅದನ್ನು ಬಿಟ್ಟಿದ್ದರು. ಹೀಗೆ ಶಾಸ್ತ್ರಗಳು ಭಿನ್ನಭಿನ್ನವಾಗಿ ಆಚರಣೆಯಲ್ಲಿ ಬಂದದ್ದರಿಂದ, ಸಕಲರೂ ನಾನಾವಿಧವಾದ ಕರ್ಮಗಳನ್ನು ಮಾಡುತ್ತ, ತಪೋದಾನಪರಾಯಣರಾಗಿ ರಾಜಸ್ವಭಾವವನ್ನು ಹೊಂದಿದ್ದರು. ಆಗ ಇದ್ದವರು ಒಂದೇ ಆಗಿದ್ದ ವೇದವನ್ನು ತಿಳಿದುಕೊಳ್ಳಲಾರದೆ ಇದ್ದದ್ದರಿಂದ, ವೇದಗಳು ಅನೇಕವಾದವು. ಆಗ ಇದ್ದವರಿಗೆ ಬುದ್ಧಿಯು ಕಡಮೆಯಾದ್ದರಿಂದ, ಅವರಲ್ಲಿ ಯಾವನಾದರೂ ಒಬ್ಬನು ಪರಬ್ರಹ್ಮನಿಷ್ಠನಾಗುತ್ತಿದ್ದನು. ಆ ಯುಗದಲ್ಲಿ ಆ ಪ್ರಕಾರ ಬುದ್ಧಿಶಕ್ತಿಯು ಕಡಮೆಯಾಗಲು, ಸಕಲರಿಗೂ ಅನೇಕ ಪ್ರಕಾರವಾದ ವ್ಯಾಧಿಗಳು ಸಂಭವಿಸಿ, ದೈವಪ್ರೇರಣೆಯಿಂದ ಅಧಿಕವಾದ ಕಾಮವೂ ನಾನಾವಿಧವಾದ ಬಾಧೆಗಳೂ ಉಂಟಾಗಿ, ಅವುಗಳಿಂದ ಎಲ್ಲರೂ ದುಃಖಪಡುತ್ತ, ತಪೋನಿಷ್ಠರಾಗಿ ಸ್ವರ್ಗಸುಖವನ್ನು ಬಯಸಿ ಯಜ್ಞಗಳನ್ನು ಮಾಡುತ್ತಿದ್ದರು. ಈ ಪ್ರಕಾರ ದ್ವಾಪರಯುಗದಲ್ಲಿ ಧರ್ಮವು ಎರಡುಪಾಲು ಕ್ಷೀಣದಶೆಯನ್ನು ಹೊಂದಿತ್ತು. ಬಳಿಕ ಕಲಿಯುಗವು ಪ್ರಾಪ್ತವಾಗಲು, ಧರ್ಮವು ಮೂರುಪಾಲು ನಷ್ಟವಾಗಿ, ಒಂದೇ ಪಾಲು ಉಳಿದಿರುವದು. ತಾಮಸವಾದ ಈ ಯುಗಕ್ಕೆ ಅಭಿಮಾನಿಯಾದ ನಾರಾಯಣನು ಕೃಷ್ಣವರ್ಣನಾಗಿರುವನು. ಇಂಥಾ ಕಲಿಯುಗದಲ್ಲಿ ವೇದೋಕ್ತವಾದ ಆಚಾರಗಳು ನಷ್ಟವಾಗಿ ಸಕಲ ಧರ್ಮಗಳೂ ಯಜ್ಞಾದಿಕರ್ಮಗಳೂ ಕ್ಷೀಣದಶೆಯನ್ನು ಹೊಂದುವವು. ಈ ಯುಗದಲ್ಲಿ ಅನೇಕ ಈತಿಬಾಧೆಗಳೂ, ರೋಗಗಳೂ, ಆಲಸ್ಯವೂ, ಕ್ರೋಧವೊದಲಾದ ದೋಷಗಳೂ, ಮನೋವ್ಯಥೆಯೂ, ಕ್ಷುದ್ಬಾಧೆಯೂ, ದಿನದಿನವೂ ಹೆಚ್ಚಾಗುತ್ತಾ ಬರುವವು. ಎಲೈ ಪಾಂಡುಕುಮಾರನೆ, ಯುಗವ್ಯತ್ಯಾಸದಿಂದ ಧರ್ಮವ್ಯತ್ಯಾಸವೂ, ಧರ್ಮವ್ಯತ್ಯಾಸದಿಂದ ಲೋಕವ್ಯತ್ಯಾಸವೂ ಸಹ ಉಂಟಾಗುವವು. ಲೋಕವ್ಯತ್ಯಾಸವುಂಟಾಗಲು, ಲೋಕಪ್ರವರ್ತಕವಾದ ಧರ್ಮಜ್ಞಾನಾದಿಗಳೆಲ್ಲವೂ ನಷ್ಟವಾಗಿ ಹೋಗುವವು. ಯುಗವ್ಯತ್ಯಾಸದಿಂದ ಕ್ಷೀಣದಶೆಯನ್ನು ಹೊಂದಿದ ಧರ್ಮಗಳು ವ್ಯತ್ಯಾಸವಾದ ಫಲಗಳನ್ನೇ ಕೊಡುವವು. ಹೀಗೆಲ್ಲಾ ನಡೆಯತಕ್ಕ ಯುಗವನ್ನೇ ಕಲಿಯುಗವೆಂದು ಹೇಳುವರು. ಇಂಥಾ ಕಲಿಯುಗವು ಇನ್ನು ಜಾಗ್ರತೆಯಾಗಿಯೇ ಬರುವದು. ನಮ್ಮಂಥ ಚಿರಂಜೀವಿಗಳೂ ಸಹ ಯುಗಧರ್ಮವನ್ನೇ ಅನುವರ್ತಿಸಿಕೊಂಡು ನಡೆಯುತ್ತಿರುವೆವು. ಎಲೈ ಭೀಮಸೇನನೆ, ನನ್ನ ಮಹತ್ತಾದ ರೂಪವನ್ನು ನೋಡಬೇಕೆಂಬ ಕುತೂಹಲವು ನಿನಗೆ ಉಂಟಾಗಿರುವದು. ಆದರೆ ಅಭಿಜ್ಞನಾದ ನೀನು ಇಂಥಾ ಕಾರ್ಯದಲ್ಲಿ ಯಾತಕ್ಕೆ ಸುಮ್ಮನೆ ಅಭಿನಿವೇಶವುಳ್ಳವನಾಗಿರುವೆ? ನಿನಗೆ ಮಂಗಳವಾಗಲಿ. ಹೊರಟು ಹೋಗು," ಎಂದು ಹನುಮಂತನು ಭೀಮಸೇನನಿಗೆ ಹೇಳಿದನು.

## ೧೫೧ನೇ ಅಧ್ಯಾಯ.—ತೀರ್ಥಯಾತ್ರಾಪ್ರಶಂಸೆ—(ಭೀಮನಿಗೆ ಹನುಮಂತನ ವಿಶ್ವರೂಪ ದರ್ಶನವು).

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಆ ಮಾತನ್ನು ಕೇಳಿ ಭೀಮಸೇನನು ಆಂಜನೇಯನನ್ನು ನೋಡಿ "ಎಲೈ ಆಂಜನೇಯನೆ, ನೀನು ಪೂರ್ವದಲ್ಲಿ ತಾಳಿದ್ದ ಅದ್ಭುತವಾದ ರೂಪವನ್ನು ನೋಡಿದ ಹೊರತು, ನಾನು ಹಿಂತಿರುಗಿ ಹೋಗತಕ್ಕವನಲ್ಲ. ನಾನು ನಿನ್ನ ಅನುಗ್ರಹಕ್ಕೆ ಪಾತ್ರನಾಗಬೇಕೆಂದು ನಿನಗೆ ತೋರಿದರೆ, ನೀನಾಗಿ ನಿನ್ನ ಮಹತ್ತಾದ ರೂಪವನ್ನು ನನಗೆ ತೋರಿಸು" ಎಂದನು. ಆ ಮಾತನ್ನು ಕೇಳಿ ಆಂಜನೇಯನು ನಸುನಕ್ಕು, ಸಹೋದರನಾದ ಭೀಮಸೇನನಿಗೆ ಪ್ರಿಯವನ್ನು ಮಾಡಬೇಕೆಂದೆಣಿಸಿ, ತಾನು ಪೂರ್ವದಲ್ಲಿ ಸಮುದ್ರವನ್ನು ದಾಟುವಾಗ ತಾಳಿದ್ದ ಆ ಮಹತ್ತಾದ ರೂಪವನ್ನು ತೋರಿಸುವದಕ್ಕೆ ಮನಸ್ಸುಮಾಡಲು, ಆತನ ಶರೀರವು ಬಹು ದೀರ್ಘವಾಗಿಯೂ ಅದಕ್ಕೆ ತಕ್ಕ ವಿಸ್ತಾರವುಳ್ಳದ್ದಾಗಿಯೂ ಬೆಳೆಯುತ್ತ, ತೇಜೋವಿಶೇಷದಿಂದ ದೇದೀಪ್ಯಮಾನವಾಗಿ, ಅನೇಕ ವೃಕ್ಷಗಳಿಂದಲೂ ಕದಳೀವನಗಳಿಂದಲೂ ಕೂಡಿ ಆತ್ಯುನ್ನತವಾದ ಆ ಮಹಾಪರ್ವತವನ್ನು ಮುಚ್ಚಿಕೊಂಡು ಮೆರೆಯುತ್ತಿತ್ತು. ಆಗ ಇದೊಂದು ಬೇರೆ ಪರ್ವತವೋ ಎಂಬಹಾಗೆ ಮಹತ್ತಾದ ಶರೀರವುಳ್ಳವನಾಗಿಯೂ, ಕೆಂಪಾದ ಕಣ್ಣುಗಳುಳ್ಳವನಾಗಿಯೂ, ಭಯಂಕರವಾದ ಕೋರೆಗಳುಳ್ಳವನಾಗಿಯೂ, ಹುಬ್ಬುಕುಣಿಸುತ್ತಿರುವ ಘೋರವಾದ ಮುಖವುಳ್ಳವನಾಗಿಯೂ, ತೋರುತ್ತಿದ್ದ ಹನುಮಂತನು ದೀರ್ಘವಾದ ಬಾಲವನ್ನು ಭೂಮಿಯಮೇಲೆ ಬಡಿದು ಎಲ್ಲಾ ದಿಕ್ಕುಗಳನ್ನೂ ವ್ಯಾಪಿಸಿಕೊಂಡು ನಿಂತನು. ಅಣ್ಣನಾದ ಹನುಮಂತನ ಆ ಮಹತ್ತಾದ ರೂಪವನ್ನು ನೋಡಿ ಭೀಮಸೇನನು ಬಹಳವಾಗಿ ಆಶ್ಚರ್ಯಪಟ್ಟು, ಅಪರಿಮಿತವಾದ ಹರ್ಷದಿಂದ ಮೆರೆದನು. ಆ ಸಮಯದಲ್ಲಿ ಪೊಂಬೆಟ್ಟದಂತೆಯೂ ಸೂರ್ಯನಂತೆಯೂ ತನ್ನ ತೇಜಸ್ಸಿನಿಂದ ಆಕಾಶವನ್ನೆಲ್ಲಾ ಬೆಳಗುತ್ತಿರುವ ಆತನ ಮಹತ್ತಾದ ರೂಪವನ್ನು ನೋಡಿ, ಆ ತೇಜಸ್ಸನ್ನು ಸಹಿಸಲಾರದೆ ಭೀಮಸೇನನ ಕಣ್ಣುಗಳೆರಡೂ ಕೊಕ್ಕರಿಸಿಕೊಳ್ಳಲು, ಆಂಜನೇಯನು ಗರ್ವಾತಿಶಯದಿಂದ ಭೀಮಸೇನನನ್ನು ನೋಡಿ "ಎಲೈ ಪರಿಶುದ್ಧಾತ್ಮನಾದ ಭೀಮಸೇನನೆ, ಇಷ್ಟುಮಟ್ಟಿನ ನನ್ನ ರೂಪವನ್ನು ನೋಡುವದಕ್ಕೆ ನೀನು ಶಕ್ತನಾದವನು. ಇದಕ್ಕಿಂತಲೂ ಅಧಿಕವಾಗಿ ನನ್ನ ಮನಸ್ಸಿಗೆ ತೋರಿದ ಮಟ್ಟಿಗೂ ಬೆಳೆಯತಕ್ಕ ಹುರುಡು ನನಗುಂಟು. ಆದರೆ ಶತ್ರುಗಳ ಮುಂದೆ ನನ್ನ ಶರೀರವು ಇನ್ನೂ ಅಧಿಕವಾದ ತೇಜಸ್ಸಿನಿಂದ ಮೆರೆಯುತ್ತ ಇದಕ್ಕಿಂತಲೂ ಮಹತ್ತಾಗಿ ಬೆಳೆಯುವದು" ಎಂದನು. ಆ ಮಾತನ್ನು ಕೇಳಿ ಭೀಮಸೇನನು ಮೆಲ್ಲಗೆ ಕಣ್ಣು ತೆರೆದು, ಅದ್ಭುತವಾಗಿಯೂ ಘೋರವಾಗಿಯೂ ವಿಂಧ್ಯಪರ್ವತಕ್ಕೆ ಸಮಾನವಾಗಿಯೂ ಇರುವ ಹನುಮಂತನ ಆಕಾರವನ್ನು ನೋಡಿ, ಮೈಯೆಲ್ಲಾ ರೋಮಾಂಚಿತವಾಗಲು ಭಯಭ್ರಾಂತನಾಗಿ ದೈನ್ಯದಿಂದ ಕಯ್ಮುಗಿದುಕೊಂಡು, ಹನುಮಂತನನ್ನು ನೋಡಿ "ಎಲೈ ಮಹಾನುಭಾವನೆ, ನಿನ್ನ ಮಹತ್ತಾದ ರೂಪವನ್ನು ನಾನು ನೋಡಿದ್ದಾಯಿತು. ಇನ್ನು ಈ ರೂಪವನ್ನು ಉಪಸಂಹರಿಸಿಕೊಳ್ಳುವದಕ್ಕೆ ಮನಸ್ಸುಮಾಡು. ಉದಯಪರ್ವತವನ್ನೇರಿದ ಸೂರ್ಯನಂತೆ ತೇಜೋಮಯನಾಗಿಯೂ, ಮೈನಾಕಪರ್ವತದಂತೆ ಅಧಿಕಪ್ರಮಾಣವುಳ್ಳವನಾಗಿಯೂ, ಯಾರಿಂದಲೂ ತಿರಸ್ಕರಿಸಲಶಕ್ಯನಾಗಿಯೂ, ಇರುವ ನಿನ್ನನ್ನು ನೋಡುವದಕ್ಕೆ ನನಗೆ ಶಕ್ತಿ ಸಾಲದು. ಇದನ್ನು ನೋಡಿ ನನಗೆ ಬಹಳ ಆಶ್ಚರ್ಯವುಂಟಾಗಿರುವದು. ಇಂಥಾ ಅದ್ಭುತಸಾಮರ್ಥ್ಯವುಳ್ಳ ನೀನು ಸಮೀಪದಲ್ಲಿದ್ದದ್ದರಿಂದಲೇ, ರಾಮನು ರಾವಣನಮೇಲೆ ಕಾಣಿಸಿಕೊಂಡನು. ಅನೇಕ ಯೋಧಶ್ರೇಷ್ಠರಿಂದಲೂ ಅನೇಕ ರಥಿಕಾಗ್ರೇಸರರಿಂದಲೂ ಕೂಡಿದ ಅಂಥಾ ಲಂಕಾಪಟ್ಟಣವನ್ನೂ ಸ್ವಕೀಯವಾದ ಭುಜಬಲದಿಂದ ನಾಶಮಾಡುವದಕ್ಕೆ ಸಮರ್ಥನಾದವನು ನೀನೇಸರಿ. ಎಲೈ ವಾಯುಪುತ್ರನೆ, ನಿನಗೆ ಅಸಾಧ್ಯವಾದದ್ದು ಯಾವದೂ ಇಲ್ಲ. ಪರಿವಾರಸಹಿತನಾದ ರಾವಣನು ನಿನ್ನೊಬ್ಬನ ಭುಜಬಲಕ್ಕೆ ಈಡಾಗತಕ್ಕವನಲ್ಲವೆಂದು ಎಣಿಸುತ್ತೇನೆ" ಎನಲು, ಆಂಜನೇಯನು "ಎಲೈ ಶೂರನಾದ ಭೀಮಸೇನನೆ, ನೀನು ಹೇಳಿದ್ದೆಲ್ಲಾ ಯಥಾರ್ಥವಾದದ್ದು. ರಾವಣನು ನನ್ನೊಬ್ಬನ ಭುಜಬಲಕ್ಕೆ ಈಡಾಗತಕ್ಕವನಲ್ಲವೆಂಬುವದು ನಿಜವೇಸರಿ. ಆದರೆ ಲೋಕಕಂಟಕನಾದ ರಾವಣನನ್ನು ನಾನೇ ಸಂಹರಿಸಿದ ಪಕ್ಷದಲ್ಲಿ ಶ್ರೀರಾಮನಿಗೆ ಬರತಕ್ಕ ಯಶಸ್ಸು ನಷ್ಟವಾಗುವದೆಂದೆಣಿಸಿ, ನಾನು ಆ ದುರಾತ್ಮನನ್ನು ಉಪೇಕ್ಷಿಸಿಬಿಟ್ಟೆನು. ಆ ಮಹಾನುಭಾವನಾದ ರಾಮನೇ ರಾಕ್ಷಸಾಧಮನಾದ ರಾವಣನನ್ನು ಪರಿವಾರದೊಡನೆ

ಸಂಹರಿಸಿ, ಸೀತಾದೇವಿಯನ್ನು ಬಿಡಿಸಿಕೊಂಡು ಅಯೋಧ್ಯಾನಗರಕ್ಕೆ ಕರೆದುಕೊಂಡು ಬಂದನು. ರಾಮನು ರಾವಣನನ್ನು ಸಂಹರಿಸಿದನೆಂದು ಜಗತ್ತಿನಲ್ಲಿ ರಾಮನ ಕೀರ್ತಿಯು ಪ್ರಖ್ಯಾತವಾಯಿತು. ಎಲೈ ಪ್ರಜ್ಞಾವಂತನೆ, ಇನ್ನು ನೀನು ಭ್ರಾತೃಕಾರ್ಯಾರ್ಥವಾಗಿ ಹೋಗಿಬರಬಹುದು. ಇದೋ, ಈ ಮಾರ್ಗವು ಸೌಗಂಧಿಕವನಕ್ಕೆ ಹೋಗುವದು. ಈ ಮಾರ್ಗದಲ್ಲೇ ನೀನು ಪೂಜ್ಯನಾದ ವಾಯುವಿನಿಂದ ರಕ್ಷಿತನಾಗಿ ಕ್ಷೇಮದಿಂದ ಹೋಗಿ ಬಾ. ಮುಂದೆ ಯಕ್ಷರಿಂದಲೂ ರಾಕ್ಷಸರಿಂದಲೂ ರಕ್ಷಿಸಲ್ಪಡುತ್ತಿರುವ ಕುಬೇರನ ಉದ್ಯಾನವು ಕಾಣಿಸುವದು. ಅಲ್ಲಿ ನೀನು ದುಡುಕಿ ಹೂವನ್ನು ಕೊಯ್ಯುವದಕ್ಕೆ ಪ್ರವರ್ತಿಸಬೇಡ. ಲೋಕದಲ್ಲಿ ಮನುಷ್ಯರಿಗೆ ದೇವತೆಗಳು ಪೂಜ್ಯರಾದ ವರಾದ್ದರಿಂದ, ಅವರಿಗೆ ನಾವು ಪೂಜೆಯಿಂದಲೂ ಹೋಮದಿಂದಲೂ ನಮಸ್ಕಾರಗಳಿಂದಲೂ ವಿಶೇಷವಾಗಿ ಮರ್ಯಾದೆ ಯನ್ನು ಮಾಡಬೇಕು. ಹಾಗೆ ಮಾಡಿದ್ದೇ ಆದರೆ, ದೇವತೆಗಳು ಆ ಮನುಷ್ಯರ ಭಕ್ತಿಗೆ ಮೆಚ್ಚಿ ಪ್ರಸನ್ನ ರಾಗುವರು. ಯಾರಿಗಾದರೂ ಸ್ವಧರ್ಮವು ಉತ್ತಮವಾದದ್ದು. ಆ ಧರ್ಮವನ್ನು ನೀನೂ ಪರಿಪಾಲಿಸಿಕೋ; ಸಾಹಸವನ್ನು ಮಾಡಬೇಡ. ಧರ್ಮಮಾರ್ಗವನ್ನು ತಿಳಿಯದೆ ವೃದ್ಧರಾದವರನ್ನು ಶುಶ್ರೂಷೆಮಾಡದೆ ಇರತಕ್ಕ ವನು, ಬುದ್ಧಿಯಲ್ಲಿ ಬೃಹಸ್ಪತಿಗೆ ಸಮಾನನಾದವನಾದರೂ, ಎಂದಿಗೂ ಧರ್ಮಾರ್ಥಗಳನ್ನು ತಿಳಿದುಕೊಳ್ಳಲಾರನು. ಯಾವನು ಧರ್ಮವನ್ನು ಅಧರ್ಮವನ್ನಾಗಿಯೂ ಅಧರ್ಮವನ್ನು ಧರ್ಮವನ್ನಾಗಿಯೂ ತಿಳಿದು ಕೊಳ್ಳುವನೋ, ಅಂಥಾ ಮೂಢನು ಧರ್ಮವಿಭಾಗವನ್ನು ತಿಳಿಯದೆ ವಿವೇಕಶೂನ್ಯನಾಗುವನು. ಧರ್ಮವೆಂಬುವದು ಆಚಾರ ದಿಂದಲೇ ಉಂಟಾಗುವದು. ಅಂಥಾ ಧರ್ಮದಿಂದಲೇ ವೇದಜ್ಞಾನವುಂಟಾಗುವದು. ಆ ವೇದಜ್ಞಾನದಿಂದ ಯಜ್ಞಾದಿ ಕರ್ಮಗಳು ನಡೆಯುವವು. ವೇದೋಕ್ತವಾದ ಆ ಕರ್ಮಗಳಿಂದ ದೇವತೆಗಳು ಪೋಷಿತರಾಗುವರು. ಬೃಹ ಸ್ಪತ್ಯಾಚಾರ್ಯರಿಂದಲೂ ಶುಕ್ರಾಚಾರ್ಯರಿಂದಲೂ ಉಕ್ತವಾಗಿರುವ ನೀತಿಶಾಸ್ತ್ರಗಳನ್ನು ತಿಳಿದು ನಡೆಯುವದರಿಂದ ಮನುಷ್ಯರು ಲೋಕಸ್ಥಿತಿಯನ್ನು ಹೊಂದುವರು. ಸೇವೆ, ಸುವರ್ಣರತ್ನಾದಿಗಳು ಹುಟ್ಟತಕ್ಕ ಗಣಿಗಳ ವ್ಯಾಪಾರ, ವಾಣಿಜ್ಯ, ಕೃಷಿ, ಗೋವು ಆಡು ಕುರಿಗಳ ಪೋಷಣೆ, ಇವುಗಳಿಂದ ವೈಶ್ಯರೂ ಶೂದ್ರರೂ ಲೋಕಸ್ಥಿತಿ ಯನ್ನು ಕಾಪಾಡುವರು. ಬ್ರಾಹ್ಮಣನಿಗೆ ವೇದಾಧ್ಯಯನವೂ, ವೈಶ್ಯನಿಗೆ ವ್ಯಾಪಾರವೂ, ಕ್ಷತ್ರಿಯನಿಗೆ ದಂಡ ನೀತಿಯೂ, ಸ್ವಧರ್ಮಗಳು. ಈ ಮೂರು ಧರ್ಮಗಳೂ ಸರಿಯಾಗಿ ನಡೆದದ್ದೇ ಆದರೆ, ಅದರಿಂದ ಲೋಕಸ್ಥಿತಿ ಯು ಸರಿಯಾಗಿರುವದು. ಇವುಗಳಲ್ಲಿ ಬ್ರಾಹ್ಮಣವೃತ್ತಿಯಾದ ವೇದಾಧ್ಯಯನವೂ, ಕ್ಷತ್ರಿಯವೃತ್ತಿಯಾದ ದಂಡ ನೀತಿಯೂ, ವೈಶ್ಯವೃತ್ತಿಯಾದ ವಾಣಿಜ್ಯವೂ ಧರ್ಮದಿಂದ ನಡೆಯದೆ ಹೋದರೆ, ಪ್ರಪಂಚಸ್ಥಿತಿಯು ಕೆಟ್ಟಿಲ್ಲದೆ ಪ್ರಜೆಗಳೆಲ್ಲರೂ ನಷ್ಟರಾಗಿ ಹೋಗುವರು. ಈ ಮೂರು ಧರ್ಮಗಳೂ ಸರಿಯಾಗಿ ನಡೆದದ್ದೇ ಆದರೆ, ಸಕಲ ಪ್ರಜೆಗಳೂ ತಮ್ಮತಮ್ಮ ಧರ್ಮಗಳನ್ನು ಬಿಡದೆ ಸರಿಯಾಗಿ ನಡೆಯುವರು. ಬ್ರಾಹ್ಮಣರಿಗೆ ಶುದ್ಧಸಾತ್ವಿಕವಾದ ಸತ್ಯಸ್ವರೂಪವಾದ ಬ್ರಹ್ಮಜ್ಞಾನವೇ ಮುಖ್ಯವಾದ ಧರ್ಮವು. ಯಜ್ಞ, ಅಧ್ಯಯನ, ದಾನಗಳು ಬ್ರಾಹ್ಮಣರಿಗೆ ಸಾಧಾರಣವಾದ ಧರ್ಮಗಳು. ಯಜ್ಞವನ್ನು ಮಾಡಿಸುವದೂ, ವೇದವನ್ನು ಪಾಠಹೇಳುವದೂ, ದಾನವನ್ನು ಸ್ವೀಕರಿಸುವದೂ, ಬ್ರಾಹ್ಮಣರಿಗೆ ಧರ್ಮವಿರುದ್ಧವಾದ ಕಾರ್ಯಗಳಲ್ಲವು. ಕ್ಷತ್ರಿಯರಿಗೆ ಪ್ರಜೆಗಳನ್ನು ರಕ್ಷಿಸು ವದೂ, ಶೂದ್ರರಿಗೆ ಬ್ರಾಹ್ಮಣಶುಶ್ರೂಷೆಯನ್ನು ಮಾಡುವದೂ, ಅವರವರಿಗೆ ಸ್ವಧರ್ಮಗಳೆಂದು ತಿಳಿಯಬೇಕು. ಶೂದ್ರರಾದವರು ಭಿಕ್ಷೆಯನ್ನೂ, ಹೋಮವ್ರತಗಳನ್ನೂ, ವಿದ್ಯಾಭ್ಯಾಸದ ನಿಮಿತ್ತವಾಗಿ ಗುರುಕುಲವಾಸವನ್ನೂ ಸಹ ಮಾಡಕೂಡದು. ಎಲೈ ಭೀಮನೆ, ನೀನು ಕ್ಷತ್ರಿಯನಾದ್ದರಿಂದ ನಿನ್ನ ಧರ್ಮವು ಪ್ರಜೆಗಳನ್ನು ರಕ್ಷಿಸ ತಕ್ಕದ್ದಾಗಿರುವದು. ನೀನು ಜಿತೇಂದ್ರಿಯನಾಗಿ ನೀತಿಯಿಂದ ನಿನ್ನ ಧರ್ಮವನ್ನು ಪಾಲಿಸಿಕೊ. ಕ್ಷತ್ರಿಯನಾದ ವನು ವಿದ್ಯಾವಂತರಾಗಿಯೂ ಬುದ್ಧಿಸಂಪನ್ನರಾಗಿಯೂ ವೃದ್ಧರಾಗಿಯೂ ಇರುವ ಸತ್ಪುರುಷರ ಸಂಗಡ ಆಲೋ ಚಿಸಿ, ಅವರ ಅನುಗ್ರಹಕ್ಕೆ ಪಾತ್ರನಾಗಿದ್ದರೆ, ದಂಡನೀತಿಯಿಂದ ರಾಜ್ಯವನ್ನಾಳುವನು; ಹಾಗಲ್ಲದೆ ಯಾವಾಗಲೂ ದ್ಯೂತದಲ್ಲಿಯೂ ಪಾನದಲ್ಲಿಯೂ ಬೇಟೆಯಲ್ಲಿಯೂ ಲಂಪಟನಾದರೆ, ಶತ್ರುಗಳಿಂದ ತಿರಸ್ಕಾರವನ್ನು ಪಡೆಯುವನು. ರಾಜನಾದವನು ದುಷ್ಟನಿಗ್ರಹ ಶಿಷ್ಟಪರಿಪಾಲನೆಗಳನ್ನು ಸರಿಯಾಗಿಟ್ಟುಕೊಂಡಿದ್ದರೆ, ಲೋಕಮರ್ಯಾದೆಯು ಸರಿ ಯಾಗಿ ನಡೆದುಕೊಂಡು ಹೋಗುವದು. ಆದ್ದರಿಂದ ರಾಜನಾದವನು ರಾಷ್ಟ್ರದ ಕ್ಷಯವೃದ್ಧಿಗಳನ್ನೂ, ಶತ್ರು

ರಾಷ್ಟ್ರದ ವೃದ್ಧಿಕ್ಷಯಗಳನ್ನೂ, ತನ್ನ ದುರ್ಗದ ಬಲಾಬಲಗಳನ್ನೂ, ಶತ್ರುದುರ್ಗದ ಬಲಾಬಲಗಳನ್ನೂ, ತನ್ನ ಸೈನ್ಯದ ಸ್ಥಿತಿಯನ್ನೂ, ಶತ್ರುಸೈನ್ಯದ ಸ್ಥಿತಿಯನ್ನೂ, ಉಭಯರ ಸಮಸ್ಥಿತಿಯನ್ನೂ ಸಹ ಸಿತ್ಯದಲ್ಲೂ ಚಾರರ ಮುಖದಿಂದ ತಿಳಿಯುತ್ತಿರಬೇಕು. ರಾಜನಾದವನಿಗೆ ಚತುರುಪಾಯಗಳೂ, ಗೂಢಚಾರರೂ, ಸಮನಾದ ಬುದ್ಧಿಯೂ, ಮಂತ್ರಾಲೋಚನೆಯೂ, ಪರಾಕ್ರಮವೂ, ಶಿಕ್ಷೆಯೂ, ರಕ್ಷೆಯೂ, ಸಾಮರ್ಥ್ಯವೂ ಸಹ ಕಾರ್ಯ ಸಾಧಕಗಳೆನ್ನಿಸಿಕೊಳ್ಳುವವು. ಇಂಥಾ ಸಾಧನಗಳುಳ್ಳ ರಾಜನು ಸಾಮದಿಂದಲೂ, ದಾನದಿಂದಲೂ, ಭೇದದಿಂದಲೂ, ದಂಡದಿಂದಲೂ, ಉಪೇಕ್ಷೆಯಿಂದಲೂ, ಕೆಲವು ಕಾರ್ಯಗಳನ್ನು ಸಂಕ್ಷೇಪವಾಗಿಯೂ, ಕೆಲವು ಕಾರ್ಯಗಳನ್ನು ವಿಸ್ತಾರವಾಗಿಯೂ, ಸಾಧಿಸಿಕೊಳ್ಳಬೇಕು. ನೀತಿಗಳಿಗೂ ಗೂಢಚಾರರಿಗೂ ಮಂತ್ರಾಲೋಚನೆಯು ಮೂಲಭೂತವಾದವು. ಎಲೈ ಭರತಶ್ರೇಷ್ಠನೆ, ಚೆನ್ನಾಗಿ ಆಲೋಚನೆಮಾಡುವದರಿಂದ ಯಾವಕಾರ್ಯವು ಸಿದ್ಧಿಸುವದೋ, ಅಂಥಾದ್ದನ್ನು ಬ್ರಾಹ್ಮಣರೊಡನೆ ಸೇರಿ ಆಲೋಚಿಸಬೇಕು. ಸ್ತ್ರೀಯರೊಡನೆಯೂ, ಮೂಢರೊಡನೆಯೂ, ಹುಡುಗರೊಡನೆಯೂ, ಲೋಭಿಗಳೊಡನೆಯೂ, ಅಲ್ಪರಾದವರೊಡನೆಯೂ, ಹುಚ್ಚಿನ ಲಕ್ಷಣವು ಯಾರಲ್ಲಿ ತೋರುವದೋ ಅಂಥವರೊಡನೆಯೂ, ಮಂತ್ರಾಲೋಚನೆಯನ್ನು ಮಾಡಬಾರದು. ಯಾವಾಗಲೂ ಬುದ್ಧಿಶಾಲಿಗಳೊಡನೆಯೇ ಮಂತ್ರಾಲೋಚನೆಯನ್ನು ಮಾಡಬೇಕು. ನೀತಿಪ್ರದಾನಗಳಾದ ಕಾರ್ಯಗಳನ್ನು ಕಾರ್ಯದಕ್ಷರಾದವರಿಂದಲೂ ಮಿತ್ರರಾದವರಿಂದಲೂ ಮಾಡಿಸಬೇಕು. ಮತ್ತು ಯಾವಯಾವ ಕಾರ್ಯದಲ್ಲಿ ಯಾರುಯಾರು ಸರಿಯಾದವರೋ, ಆಯಾ ಕಾರ್ಯಗಳಲ್ಲಿ ಅಂಥಂಥವರನ್ನೇ ನೇಮಿಸಬೇಕು. ಮೂರ್ಖರಾದವರನ್ನು ಯಾವ ಕಾರ್ಯದಲ್ಲೂ ನೇಮಿಸಕೂಡದು. ಅರಸಾದವನು ತಮ್ಮವರಿಂದಲೂ, ಪರಕೀಯರಿಂದಲೂ, ಅಧಿಕಾರ ಮಾಡತಕ್ಕವರ ಬುದ್ಧಿಯು ಒಳ್ಳೇದೋ ಕೆಟ್ಟದ್ದೋ ಎಂಬುವದನ್ನೂ, ಶತ್ರುಗಳ ಬಲಾಬಲಗಳನ್ನೂ, ವಿಚಾರಿಸಿ ತಿಳಿದುಕೊಳ್ಳುತ್ತಿರಬೇಕು. ಬುದ್ಧಿಪೂರ್ವಕವಾಗಿ ಜೀವನಾರ್ಥವಾಗಿ ಶರಣಾಗತರಾದ ಸಾಧುಜನಗಳಲ್ಲಿ ಅನುಗ್ರಹವನ್ನು ಮಾಡಬೇಕು. ಲೋಕಮರ್ಯಾದೆಯನ್ನು ಮೀರಿ ನಡೆಯತಕ್ಕ ದುಷ್ಟರಲ್ಲಿ ನಿಗ್ರಹವನ್ನು ಮಾಡಬೇಕು. ಈ ರೀತಿಯಾಗಿ ಅರಸಾದವನು ನಡೆದುಕೊಂಡದ್ದೇ ಆದರೆ, ಲೋಕಮರ್ಯಾದೆಯು ಸರಿಯಾಗಿ ನಡೆಯುವದು. ಎಲೈ ಭೀಮಸೇನನೆ, ರಾಜಧರ್ಮವು ತಿಳಿಯುವವಕ್ಕೆ ಅಶಕ್ಯವಾದದ್ದು. ನಿನಗೆ ಸ್ವಧರ್ಮವಾದ ಆ ಧರ್ಮವನ್ನು ವಿನೀತನಾಗಿ ನೀನು ವಿವೇಕದಿಂದ ಪರಿಪಾಲಿಸಿಕೊ. ತಪಸ್ಸಿನಿಂದಲೂ, ಧರ್ಮದಿಂದಲೂ, ಇಂದ್ರಿಯನಿಗ್ರಹದಿಂದಲೂ, ಯಾಗದಿಂದಲೂ, ಬ್ರಾಹ್ಮಣರು ಹ್ಯಾಗೆ ಸ್ವರ್ಗವನ್ನು ಸಾಧಿಸುವರೋ, ಹಾಗೆ ವೈಶ್ಯರು ದಾನದಿಂದಲೂ ಅತಿಥಿಸತ್ಕಾರದಿಂದಲೂ ಸ್ವಧರ್ಮಪರತೆಯಿಂದಲೂ ಸದ್ಗತಿಯನ್ನು ಪಡೆಯುವರು. ಅಪರಾಧಕ್ಕೆ ಅನುಗುಣವಾಗಿ ಅಪರಾಧಿಗಳನ್ನು ಶಿಕ್ಷಿಸುತ್ತಾ ಕಾಮವೂ ಕ್ರೋಧವೂ ದ್ವೇಷವೂ ಲೋಭವೂ ಇಲ್ಲದಿರತಕ್ಕ ಕ್ಷತ್ರಿಯರು ತಾವು ಮಾಡತಕ್ಕ ಶಿಕ್ಷಾರಕ್ಷೆಗಳಿಂದಲೇ ಸತ್ಪುರುಷರು ಹೊಂದತಕ್ಕ ಲೋಕಗಳನ್ನು ಹೊಂದುವರು" ಎಂದು ಆಂಜನೇಯನು ಭೀಮಸೇನನಿಗೆ ನಿರೂಪಿಸಿದನು.

## ೧೫೧ನೇ ಅಧ್ಯಾಯ.—ತೀರ್ಥಯಾತ್ರಾಪ್ರಶಂಸೆ.—(ಹನುಮಂತನು ಭೀಮನಿಗೆ ಮುಂದೆ ಮಾರ್ಗವನ್ನು ತೋರಿಸಿದ್ದು).

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಬಳಿಕ ಆಂಜನೇಯನು ತನ್ನ ಇಚ್ಛಾಮಾತ್ರದಿಂದುಂಟಾಗಿದ್ದ ಆ ಮಹತ್ತಾದ ರೂಪವನ್ನು ಉಪಸಂಹರಿಸಿಕೊಂಡು, ಭೀಮಸೇನನನ್ನು ಪುನಶ್ಚ ಗಾಢವಾಗಿ ಆಲಿಂಗಿಸಿಕೊಳ್ಳಲು, ಭೀಮಸೇನನಿಗೆ ಮಾರ್ಗಾಯಾಸವೆಲ್ಲಾ ಪರಿಹಾರವಾಗಿ ಭೂಮಂಡಲವನ್ನೆಲ್ಲಾ ಪ್ರದಕ್ಷಿಣೆಮಾಡಿದಹಾಗಾಯಿತು. ಬಲಶಾಲಿಯಾದ ಭೀಮಸೇನನು ಅತಿಬಲಿಷ್ಠನಾದ ಆಂಜನೇಯನ ಆಲಿಂಗನವನ್ನು ಸಹಿಸಿಕೊಂಡ ತನ್ನ ಬಲವು ಅಸದೃಶವಾದದ್ದೆಂದು ತಿಳಿದನು. ಆಗ ಎರಡು ಕಣ್ಣುಗಳಲ್ಲೂ ಆನಂದಬಾಷ್ಪವನ್ನು ತುಂಬಿದ ಆಂಜನೇಯನು ಪುನಃ ಭೀಮಸೇನನನ್ನು ಕುರಿತು "ಎಲೈ ವೀರನೆ, ನೀನು ನಿನ್ನ ವಾಸಸ್ಥಾನವನ್ನು ಸೇರಿದಮೇಲೆ ಯಾವಾಗಲಾದರೂ ಕಥಾಪ್ರಸಕ್ತಿ ಬಂದಾಗ ನನ್ನನ್ನು ನೆನೆದುಕೊ, ಮರೆಯ

ಬೇಡ. ಕುಬೇರಭವನದಿಂದ ಇಲ್ಲಿಗೆ ಬಹುಜನ ದೇವತೆಗಳೂ ಗಂಧರ್ವರೂ ದೇವತಾಸ್ತ್ರೀಯರೂ ಸಹ ಆಗಾಗ್ಯೆ ಈ ಮಾರ್ಗವಾಗಿ ಬರುತ್ತಿರುವರಾದ್ದರಿಂದ, ನೀನು ಯಾರಿಗೂ ನಾನು ಇಲ್ಲಿರತಕ್ಕದ್ದನ್ನು ಹೇಳಕೂಡದು. ಕುರುಶ್ರೇಷ್ಠನಾದ ನಿನ್ನನ್ನು ನೋಡಿದ್ದರಿಂದ, ನನ್ನ ಕಣ್ಣುಗಳು ಸಫಲಗಳಾದವು. ರಾಮನೆಂಬ ನಾಮಧೇಯವನ್ನು ತಳೆದುಕೊಂಡು ಸಾಕ್ಷಾದ್ವಿಷ್ಣುಸ್ವರೂಪನಾಗಿಯೂ, ಜಗತ್ತಿಗೆಲ್ಲಾ ಆನಂದವನ್ನುಂಟುಮಾಡತಕ್ಕವನಾಗಿಯೂ, ಸೀತಾದೇವಿಯ ಮುಖವೆಂಬ ಕಮಲಕ್ಕೂ ರಾವಣನೆಂಬ ಅಂಧಕಾರಕ್ಕೂ ಸೂರ್ಯಪ್ರಾಯನಾಗಿಯೂ, ರಘುವಂಶೋದ್ಧಾರಕನಾಗಿಯೂ, ಇರುವ ಮಹಾತ್ಮನಾದ ರಾಮಚಂದ್ರನ ಸ್ಮರಣೆಯನ್ನು ನೀನು ನನಗೆ ಉಂಟುಮಾಡಿದೆ. ಮನುಷ್ಯನಾದ ನಿನ್ನ ಶರೀರವನ್ನು ನಾನು ಸ್ಪರ್ಶಮಾಡಿದ್ದರಿಂದ, ನನ್ನ ದರ್ಶನವು ನಿನಗೆ ವ್ಯರ್ಥವಾಗತಕ್ಕ ಕೆಲಸವಿಲ್ಲ. ನೀನು ಭ್ರಾತೃಗೌರವದಿಂದ ಏನನ್ನಾದರೂ ವರವನ್ನು ಬೇಡಿಕೊ. ಅದನ್ನು ನಾನು ಕರುಣಿಸುತ್ತೇನೆ. ನಾನು ಹಸ್ತಿನಾನಗರಕ್ಕೆ ಹೋಗಿ ಕ್ಷುದ್ರರಾದ ಕೌರವರನ್ನು ಧ್ವಂಸಮಾಡಬೇಕೆಂದು ನಿನ್ನ ಮನಸ್ಸಿನಲ್ಲಿದ್ದರೆ, ನಾನು ಹಾಗೆ ಮಾಡುವದಕ್ಕೆ ಸಿದ್ಧನಾಗಿರುವೆನು. ಅಥವಾ ದೊಡ್ಡದಾದ ಶಿಲೆಯನ್ನು ತೆಗೆದುಕೊಂಡು ಹೋಗಿ ಕೆಡವಿ ನಿಮ್ಮ ಶತ್ರುಗಳ ಪಟ್ಟಣವನ್ನು ನಾಶಮಾಡಬೇಕಾದರೂ, ನಾಶಮಾಡುತ್ತೇನೆ. ಹಾಗಲ್ಲದಿದ್ದರೆ ಈಗಲೇ ದುರ್ಯೋಧನನನ್ನು ಹಿಂಗಟ್ಟುಮುರಿಕಟ್ಟಿ ನಿನ್ನ ಬಳಿಗೆ ಬೇಕಾದರೂ ತಂದು ಹಾಕುತ್ತೇನೆ. ಇಷ್ಟರಲ್ಲಿ ನಿನಗೆ ಯಾವದು ಇಷ್ಟವೋ, ಆ ಕಾರ್ಯವನ್ನು ಮಾಡುತ್ತೇನೆ ಹೇಳು" ಎಂದು ಗದ್ಗದ ಸ್ವರದಿಂದಲೂ ಭ್ರಾತೃಸ್ನೇಹದಿಂದಲೂ ನುಡಿದನು. ಆ ಮಾತನ್ನು ಕೇಳಿ ಭೀಮಸೇನನು ಸಂತುಷ್ಟನಾಗಿ "ಎಲೈ ಹನುಮಂತನೆ, ನಿನ್ನಿಂದ ನನಗೆ ಸಕಲ ಇಷ್ಟಾರ್ಥಗಳೂ ಆದಂತೆ ಭಾವಿಸುತ್ತೇನೆ. ನಿನಗೆ ಮಂಗಳವಾಗಲಿ. ನನ್ನ ವಿಷಯದಲ್ಲಿ ನೀನು ಪ್ರಸನ್ನನಾಗಿರಬೇಕೆಂದು ಪ್ರಾರ್ಥಿಸುತ್ತೇನೆ. ನೀನು ನಾಥನಾಗಿರುವದರಿಂದ ಪಾಂಡವರು ಸನಾಥರಾಗಿರುವರು. ನಿನ್ನ ಪ್ರಭಾವದಿಂದಲೇ ನಾವು ಸಮಸ್ತಶತ್ರುಗಳನ್ನೂ ಜಯಿಸುವೆವು" ಎಂದು ನುಡಿದನು. ಈ ಮಾತನ್ನು ಕೇಳಿ ಮಹಾತ್ಮನಾದ ಆಂಜನೇಯನು "ಎಲೈ ಭೀಮಸೇನನೆ, ನಿನ್ನಲ್ಲಿ ನಾನು ಭ್ರಾತೃತ್ವದಿಂದಲೂ ಮಿತ್ರಭಾವದಿಂದಲೂ ನಿನಗೆ ಪ್ರಿಯವನ್ನು ಮಾಡಬೇಕೆಂದು ಕುತೂಹಲಪಡುತ್ತಿರುವೆನಾದ್ದರಿಂದ, ನೀನು ಮಹತ್ತಾದ ಶತ್ರುಸೈನ್ಯವನ್ನು ಹೊಕ್ಕು ಯಾವಾಗ ಸಿಂಹನಾದವನ್ನು ಮಾಡುವೆಯೋ, ಆಗ ನಾನು ನನ್ನ ಧ್ವನಿಯಿಂದ ನಿನ್ನ ಧ್ವನಿಯನ್ನು ವೃದ್ಧಿಪಡಿಸುತ್ತೇನೆ. ಮತ್ತು ಅರ್ಜುನನ ಧ್ವಜದಮೇಲಿದ್ದುಕೊಂಡು, ನೀವು ನಿರಾಯಾಸವಾಗಿ ಶತ್ರುಗಳನ್ನು ಸಂಹರಿಸುವದಕ್ಕೆ ಅನುಕೂಲವಾಗಿ ನಾನು ಶತ್ರುಗಳ ಪ್ರಾಣಗಳನ್ನು ಅಪಹರಿಸತಕ್ಕ ಮಹಾಘೋರವಾದ ಧ್ವನಿಗಳನ್ನು ಮಾಡುತ್ತೇನೆ" ಎಂದು ಪ್ರೀತಿಯಿಂದ ಮಾತನಾಡಿ, ಭೀಮಸೇನನಿಗೆ ಸೌಗಂಧಿಕವನದ ಮಾರ್ಗವನ್ನು ತೋರಿಸಿ, ಅಲ್ಲೇ ಅಂತರ್ಧಾನವನ್ನು ಹೊಂದಿದನು.

## ೧೪೨ನೇ ಅಧ್ಯಾಯ.—ತೀರ್ಥಯಾತ್ರಾಪ್ರಶಂಸೆ—(ಸೌಗಂಧಿಕವನ ದರ್ಶನ.)

ವೈಶಂಪಾಯನನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯನೆ, ಅನಂತರದಲ್ಲಿ ಮಹಾಬಲಶಾಲಿಯಾದ ಭೀಮಸೇನನು ಆ ಆಂಜನೇಯನ ಮಹತ್ತಾದ ಶರೀರವನ್ನೂ, ಶ್ರೀರಾಮನ ಅಸದೃಶವಾದ ಸಂಪತ್ತನ್ನೂ, ಪರಾಕ್ರಮವನ್ನೂ, ಮಾಹಾತ್ಮ್ಯವನ್ನೂ, ನೆನೆದುಕೊಳ್ಳುತ್ತಾ, ವಿಸ್ತಾರವಾದ ಗಂಧಮಾದನಪರ್ವತದಲ್ಲಿ ಸೌಗಂಧಿಕವನಕ್ಕೆ ಹೋಗತಕ್ಕ ಮಾರ್ಗವನ್ನು ಹಿಡಿದುಕೊಂಡು ತೆರಳಿದನು. ಆಗ ಆತನು ಅಲ್ಲಲ್ಲಿ ರಮಣೀಯವಾದ ತೋಪುಗಳನ್ನೂ, ಅರಳಿದ ಹೂವುಗಳಿಂದ ಕೂಡಿ ವಿಚಿತ್ರವಾದ ವೃಕ್ಷಗಳಿಂದ ಶೋಭಿಸುತ್ತಿರುವ ಕೆರೆಗಳನ್ನೂ, ನದಿಗಳನ್ನೂ, ನಾನಾಪ್ರಕಾರಗಳಾದ ಹೂವುಗಳಿಂದ ಕಂಗೊಳಿಸುತ್ತಿರುವ ಲತೆಗಳಿಂದಲೂ ವೃಕ್ಷಗಳಿಂದಲೂ ಮನೋಹರವಾದ ಉದ್ಯಾನಗಳನ್ನೂ ಕೆಸರಾದ ನೀರಿನಿಂದ ಆಗತಾನೆ ಎದ್ದುಬರುತ್ತ ಮಳಗರೆಯುತ್ತಿರುವ ಮೇಘಗಳಂತೆ ಕಾಣಿಸುವ ಮದ್ದಾನೆಗಳ ಗುಂಪುಗಳನ್ನೂ, ಚಂಚಲವಾದ ಕಡೆಗಣ್ಣಿನ ನೋಟವುಳ್ಳವುಗಳಾಗಿ ಹೆಣ್ಣುಹುಲ್ಲೆಗಳೊಡನೆ ಕೂಡಿಕೊಂಡು ಬಾಯಲ್ಲಿ ಗರಿಕೆಯನ್ನು ಕಚ್ಚಿಕೊಂಡು ಇರುವ ಹುಲ್ಲೆಗಳ

ಗುಂಪುಗಳನ್ನೂ, ಅಲ್ಲಲ್ಲಿ ಸ್ವಚ್ಛಂದವಾಗಿ ಸಂಚಾರವಮಾಡುತ್ತಿರುವ ಕಾಡೆಮ್ಮೆಗಳನ್ನೂ, ಕಾಡುಹಂದಿಗಳನ್ನೂ, ಹುಲಿಗಳನ್ನೂ, ನಿರ್ಭಯವಾಗಿ ನೋಡುತ್ತ; ವಿಕಸಿತವಾದ ಪುಷ್ಪಗಳ ಪರಿಮಳದಿಂದ ಕೂಡಿ ಕೆಂಪಾಗಿಯೂ ಕೋಮಲವಾಗಿಯೂ ಇರುವ ಚಿಗುರುಗಳಿಂದ ಶೋಭಿಸುತ್ತ ಗಾಳಿಯಿಂದ ಕಂಪಿತಗಳಾಗಿ ತನ್ನನ್ನು ಬೇಡುಕೊಳ್ಳುತ್ತಿರುವವೋ ಎಂಬಂತೆ ತೋರುತ್ತಿರುವ ಅನೇಕ ವೃಕ್ಷಗಳನ್ನೂ, ಜೋಗಸೆಗಟ್ಟಿದ ಹಸ್ತಗಳಂತೆ ಮನೋಹರವಾದ ಅರಳಿದ ತಾವರೆ ಹೂವುಗಳಿಂದ ಪರಿಶೋಭಿಸುತ್ತಲೂ ಮಕರಂದಪಾನದಿಂದ ಮತ್ತಗಳಾದ ಭ್ರಮರಗಳಿಂದ ರಂಜಿಸುತ್ತಲೂ ನಿರ್ಮಲವಾದ ಜಲದಿಂದ ನೇತ್ರಗಳಿಗೆ ಆನಂದವನ್ನುಂಟುಮಾಡುತ್ತಲೂ ಇರುವ ಕಮಲಸರೋವರಗಳನ್ನೂ, ವಿಚಿತ್ರವಿಚಿತ್ರವಾದ ಪುಷ್ಪಗಳು ಉದುರಿರತಕ್ಕ ಸಾನುಪ್ರದೇಶಗಳನ್ನೂ ಕಂಡು ಆನಂದಿಸುತ್ತ, ದ್ರೌಪದೀ ವಾಕ್ಯವೆಂಬ ಪಾಥೇಯವನ್ನಿಟ್ಟುಕೊಂಡು ಹಸಿವುಬಾಯಾರಿಕೆಗಳಿಲ್ಲದವನಾಗಿ, ಮುಂದುಮುಂದಕ್ಕೆ ಶೀಘ್ರವಾಗಿ ನಡೆದನು. ಈ ಪ್ರಕಾರ ಪ್ರಯಾಣಮಾಡಿದ ಆ ಭೀಮಸೇನನು ಆ ಹಗಲು ಕಳೆಯುತ್ತಾ ಬರಲು, ಅಲ್ಲಲ್ಲಿ ಗುಂಪುಕೂಡದೆ ಸಂಚಾರಮಾಡುತ್ತಿರುವ ಹುಲ್ಲೆಗಳಿಂದೊಪ್ಪುತ್ತಿರುವ ತೀರವನಗಳಿಂದ ನಿಬಿಡವಾಗಿಯೂ, ನಿರ್ಮಲವಾದ ಸುವರ್ಣಕಮಲಗಳಿಂದ ಶೋಭಾಯಮಾನಗಳಾಗಿ ಹಂಸಗಳಿಂದಲೂ ಕಾರಂಡವಗಳಿಂದಲೂ ಚಕ್ರವಾಕಗಳಿಂದಲೂ ಕಂಗೊಳಿಸುತ್ತಾ ಆ ಪರ್ವತಕ್ಕೆ ಧರಿಸಿರತಕ್ಕ ಪೊಂದಾವರೆಯ ಮಾಲಿಕೆಯೋ ಎಂಬಂತೆ ತೋರುತ್ತಲೂ, ಇರುವ ಒಂದು ವಿಸ್ತಾರವಾದ ನದಿಯನ್ನು ಕಂಡು, ಆ ನದಿಯ ತೀರದಲ್ಲೇ ಬಾಲಸೂರ್ಯನಿಗೆ ಸಮಾನವಾದ ಕಾಂತಿಯು ಹರಡಿಕೊಂಡು ತನ್ನ ಮನಸ್ಸಿಗೆ ಅತ್ಯಂತ ಪ್ರೀತಿಯನ್ನುಂಟುಮಾಡತಕ್ಕ ಮಹತ್ತಾದ ಸಾಗಂಧಿಕವನವನ್ನು ನೋಡಿ, ಇನ್ನೇನು ಇಷ್ಟಾರ್ಥವು ಲಭಿಸಿತೆಂದು ಭಾವಿಸಿಕೊಂಡು, ವನವಾಸದಿಂದ ಬಹಳ ಕ್ಲೇಶವನ್ನು ಅನುಭವಿಸುತ್ತಿರುವ ಪ್ರಿಯೆಯಾದ ದ್ರೌಪದಿಯನ್ನು ಮನಸ್ಸಿನಲ್ಲಿ ನೆನೆದುಕೊಂಡನು.

---

## ೧೫೩ನೇ ಅಧ್ಯಾಯ.—ತೀರ್ಥಯಾತ್ರಾಪ್ರಶಂಸೆ—(ಸಾಗಂಧಿಕಹರಣ.)

ವೈಶಂಪಾಯನನು ಜನಮೇಜಯನನ್ನು ಕುರಿತು—ಎಲೈ ಜನಮೇಜಯನೆ, ಬಳಿಕ ಭೀಮಸೇನನು ಕೈಲಾಸ ಶಿಖರದ ಸಮೀಪದಲ್ಲಿ ಕುಬೇರನ ಅರಮನೆಗೆ ಸನ್ನಿಹಿತವಾಗಿ, ಗಿರಿನದಿಗಳಿಂದ ಹುಟ್ಟಿ, ವಿಸ್ತಾರವಾದ ನೆರಳುಳ್ಳ ಅನೇಕವೃಕ್ಷಗಳಿಂದ ಕೂಡಿಕೊಂಡು, ಮನೋಹರವಾದ ಅನೇಕ ಲತೆಗಳಿಂದ ಶೋಭಿಸುತ್ತಾ, ಹಸರುಬಣ್ಣದ ಕಮಲಗಳಿಂದಲೂ ಹೊಂಬಣ್ಣದ ಕಮಲಗಳಿಂದಲೂ ವಿಚಿತ್ರವಿಚಿತ್ರವಾದ ಪಕ್ಷಿಗಳಿಂದಲೂ ಪ್ರಕಾಶಮಾನವಾಗಿ, ನಿರ್ಮಲವಾದ ಜಲಸಮೃದ್ಧಿಯುಳ್ಳದ್ದಾಗಿಯೂ, ಸರಿಯಾದ ತಟಪ್ರದೇಶವುಳ್ಳದ್ದಾಗಿಯೂ, ಲೋಕಕ್ಕೆ ಆಶ್ಚರ್ಯಕರವಾಗಿಯೂ, ರಾಕ್ಷಸರಿಂದ ರಕ್ಷಿತವಾಗಿಯೂ, ಇರುವ ಒಂದು ಪುಷ್ಕರಿಣಿಯನ್ನು ಗಂಧಮಾದನಪರ್ವತದ ಅರೆ ತಪ್ಪಲಿನಲ್ಲಿ ನೋಡಿದನು. ಭೀಮಸೇನನು ಅಮೃತದಂತೆ ಮಧುರವಾಗಿಯೂ ಲಘುವಾಗಿಯೂ ಶೀತಳವಾಗಿಯೂ ಪುಣ್ಯತಮವಾಗಿಯೂ ಇರುವ ಆ ಉದಕವನ್ನು ಪಾನಮಾಡಿ, ಬಳಿಕ, ವೈಡೂರ್ಯದ ಕಾವುಗಳಿಂದ ಕೂಡಿದ್ದಾಗಿಯೂ, ಹಂಸ ಕಾರಂಡವ ಮೊದಲಾದ ಪಕ್ಷಿಗಳಿಂದ ಮೇಲಕ್ಕೆ ಹಾರಿಸಲ್ಪಟ್ಟ ನಿರ್ಮಲವಾದ ಪರಾಗವುಳ್ಳ ಸುವರ್ಣ ಕಮಲಗಳಿಂದ ಮನೋಹರವಾಗಿಯೂ, ದಿವ್ಯವಾದ ಸಾಗಂಧಿಕಪುಷ್ಪಗಳುಳ್ಳದ್ದಾಗಿಯೂ, ಮಹಾತ್ಮನಾದ ಕುಬೇರನಿಗೆ ಕ್ರೀಡಾಸ್ಥಾನವಾಗಿಯೂ, ಗಂಧರ್ವರಿಂದಲೂ ಅಪ್ಸರಸ್ತ್ರೀಯರಿಂದಲೂ ದೇವತೆಗಳಿಂದಲೂ ಸನ್ಮಾನಿತವಾಗಿಯೂ, ದೇವರ್ಷಿಗಳಿಂದಲೂ ಯಕ್ಷರಿಂದಲೂ ಕಿಂಪುರುಷರಿಂದಲೂ ಸೇವಿತವಾಗಿಯೂ, ರಾಕ್ಷಸರಿಂದಲೂ ಕಿನ್ನರರಿಂದಲೂ ಕುಬೇರನಿಂದಲೂ ಸಹ ರಕ್ಷಿತವಾಗಿಯೂ, ಇರುವ ಆ ಸಾಗಂಧಿಕಸರೋವರವನ್ನು ನೋಡಿ ಅಧಿಕವಾಗಿ ಸಂತೋಷಪಟ್ಟನು. ಆಗ ಅನೇಕ ಪ್ರಕಾರಗಳಾದ ಆಯುಧಗಳನ್ನು ಧರಿಸಿ ರಾಜಾಜ್ಞೆಯಿಂದ ಆ ಸರೋವರವನ್ನು ಕಾದುಕೊಂಡಿದ್ದ ಕ್ರೋಧವಶರೆಂಬ ಹೆಸರುಳ್ಳ ಅನೇಕ ಸಹಸ್ರ ರಾಕ್ಷಸರು ಸಾಗಂಧಿಕಪುಷ್ಪಾರ್ಥವಾಗಿ ಬಂದಿರುವ ಭೀಮಸೇನನನ್ನು ಕಂಡು, ಪುರುಷಶ್ರೇಷ್ಠನಾದ ಈತನು ಕೃಷ್ಣಾಜಿನವನ್ನುಟ್ಟು ಆಯುಧಪಾಣಿಯಾಗಿ

ಇಲ್ಲಿಗೆ ಯಾತಕ್ಕೆ ಬಂದನೋ ವಿಚಾರಿಸಿರಿ ಎಂದು ಪರಸ್ಪರವಾಗಿ ಮಾತನಾಡಿಕೊಂಡು, ಬಳಿಕ ಅವರೆಲ್ಲರೂ ಮಹಾಪರಾಕ್ರಮಶಾಲಿಯಾಗಿ ಸುವರ್ಣದ ಭುಜಕೀರ್ತಿಗಳನ್ನು ಧರಿಸಿಕೊಂಡಿರುವ ಭೀಮಸೇನನನ್ನು ಕುರಿತು “ ಎಲೈ ಭಾಗ್ಯಶಾಲಿಯೆ, ನಿನ್ನನ್ನು ನೋಡಿದರೆ ಮುನಿವೇಷವನ್ನು ತಾಳಿರುವೆ ; ಆಯುಧಪಾಣಿಯಾಗಿಯೂ ಇರುವೆ. ನೀನು ಯಾರು ? ಮತ್ತು ಯಾತಕ್ಕೋಸ್ಕರ ಇಲ್ಲಿಗೆ ಬಂದಿರುವೆ ? ನಿಜವಾಗಿ ಹೇಳು ” ಎಂದು ಕೇಳಿದರು.

---

## ೧೫೪ನೇ ಅಧ್ಯಾಯ.—ತೀರ್ಥಯಾತ್ರಾಪ್ರಶಂಸೆ—(ಸೌಗಂಧಿಕ ಹರಣ).

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯನೆ, ಅನಂತರ ಆ ಮಾತನ್ನು ಕೇಳಿ ಭೀಮಸೇನನು ಆ ರಾಕ್ಷಸರನ್ನು ಕುರಿತು “ ಎಲೈ ರಾಕ್ಷಸರೆ, ನಾನು ಪಾಂಡವನು. ನನ್ನ ಹೆಸರು ಭೀಮಸೇನನೆಂದು ಹೇಳುವರು. ಧರ್ಮರಾಯನಿಗೆ ನಾನು ಎರಡನೆಯವನು. ಒಡಹುಟ್ಟಿದವರೊಡಗೂಡಿ ನಾನು ಬದರೀವನಕ್ಕೆ ಬಂದಿರುವೆನು. ಆ ವನದಲ್ಲಿ ದ್ರೌಪದಿಯು ಗಾಳಿಯಿಂದ ತೂರಿಕೊಂಡುಬಂದ ಸರ್ವೋತ್ತಮವಾದ ಒಂದು ಸೌಗಂಧಿಕಪುಷ್ಪವನ್ನು ಕಂಡು, ಅಂಥ ಪುಷ್ಪಗಳನ್ನು ಬಹಳವಾಗಿ ಅಪೇಕ್ಷಿಸುತ್ತಿರುವಳು. ನನಗೆ ಧರ್ಮಪತ್ನಿಯೂ ಪ್ರಿಯೆಯೂ ಆದ ಆಕೆಗೆ ಪ್ರಿಯವನ್ನು ಮಾಡುವದಕ್ಕಾಗಿ ಆ ಪುಷ್ಪಗಳನ್ನು ತೆಗೆದುಕೊಂಡು ಹೋಗುವದಕ್ಕೋಸ್ಕರ ನಾನು ಇಲ್ಲಿಗೆ ಬಂದಿರುವೆನು ” ಎನಲು, ಆ ರಾಕ್ಷಸರು “ ಎಲೈ ಪುರುಷಶ್ರೇಷ್ಠನೆ, ಇದು ಕುಬೇರನಿಗೆ ಪ್ರಿಯವಾದ ಕ್ರೀಡಾವನವು. ಇಲ್ಲಿ ಮನುಷ್ಯಮಾತ್ರದವನು ಬಂದು ತಿರುಗಾಡುವದು ಶಕ್ಯವಾದದ್ದಲ್ಲ. ದೇವತೆಗಳೂ ದೇವರ್ಷಿಗಳೂ ಯಕ್ಷರೂ ಗಂಧರ್ವರೂ ಅಪ್ಸರಸ್ಸುಗಳೂ ಸಹ ಕುಬೇರನ ಅಪ್ಪಣೆಯನ್ನು ಪಡೆದು ಇಲ್ಲಿ ಯಥೇಚ್ಛವಾಗಿ ಮಧುಪಾನಮಾಡಿ ವಿಹರಿಸುವರು. ಯಾವನು ಕುಬೇರನನ್ನು ಲಕ್ಷ್ಯಮಾಡದೆ ಕಟ್ಟುಮೀರಿ ಇಲ್ಲಿ ವಿಹರಿಸುವದಕ್ಕೆ ಅಪೇಕ್ಷಿಸುವನೋ, ಅಂಥಾ ದುಷ್ಟನು ಬದುಕಲಾರನು. ಈ ವಿಷಯದಲ್ಲಿ ಸಂಶಯವಿಲ್ಲ. ನಿನ್ನನ್ನು ನೋಡಿದರೆ ಕುಬೇರನ ಅಪ್ಪಣೆಯನ್ನು ಪಡೆಯದೆ ಬಲಾತ್ಕಾರವಾಗಿ ಇಲ್ಲಿರತಕ್ಕ ಸೌಗಂಧಿಕಪದ್ಮಗಳನ್ನು ಅಪಹರಿಸಿಕೊಂಡು ಹೋಗುವದಕ್ಕೆ ಅಪೇಕ್ಷಿಸುವಹಾಗೆ ತೋರುತ್ತದೆ. ಆದರೆ ನೀನು ಮಹಾತ್ಮನಾದ ಧರ್ಮರಾಯನಿಗೆ ತಮ್ಮನೆಂದು ಹೇಳಿಕೊಳ್ಳುತ್ತಿರುವೆ. ಆದ್ದರಿಂದ ನಮ್ಮ ಸ್ವಾಮಿಯಾದ ಕುಬೇರನ ಅಪ್ಪಣೆಯನ್ನು ಪಡೆದುಕೊಂಡು ಬಂದರೆ, ನೀನು ಇಲ್ಲಿ ಯಥೇಚ್ಛವಾಗಿ ಅಮೃತಕಲ್ಪವಾದ ಜಲವನ್ನೂ ಪಾನಮಾಡಬಹುದು ; ಸೌಗಂಧಿಕಪುಷ್ಪಗಳನ್ನೂ ತೆಗೆದುಕೊಂಡು ಹೋಗಬಹುದು. ಹಾಗಲ್ಲದಿದ್ದರೆ ಈ ಪುಷ್ಕರಣಿಯನ್ನು ನೋಡುವದೂ ಸಹ ನಿನಗೆ ಅಶಕ್ಯವಾದದ್ದು ” ಎಂದು ನುಡಿದರು. ಆ ಮಾತನ್ನು ಕೇಳಿ ಭೀಮಸೇನನು “ ಎಲೈ ರಾಕ್ಷಸರೆ, ಸಮೀಪದಲ್ಲಿ ಕುಬೇರನು ಕಾಣಿಸುವದಿಲ್ಲ. ಅಥವಾ ಆ ಮಹಾರಾಜನಾದ ಕುಬೇರನನ್ನು ನಾನು ನೋಡಿದರೂ, ಯಾಚನೆಯನ್ನು ಮಾಡತಕ್ಕವನಲ್ಲ. ಕ್ಷತ್ರಿಯನಾದವನಿಗೆ ಯಾಚನೆಮಾಡದಿರುವದೇ ಸನಾತನವಾದ ಧರ್ಮವು. ಅಂಥಾ ಕ್ಷಾತ್ರಧರ್ಮವನ್ನು ನಾನು ಎಂದಿಗೂ ಉಲ್ಲಂಘಿಸತಕ್ಕವನಲ್ಲ. ಈ ಸರೋವರವು ಗಿರಿನದಿಗಳಿಂದುಂಟಾಗಿ ರಮಣೀಯವಾಗಿರುವದು. ಇದು ಕುಬೇರನ ಅರಮನೆಯಲ್ಲಿಬೇರೆ ಇಲ್ಲ. ಆದ್ದರಿಂದ ಇದು ಕುಬೇರನಿಗೂ ಸಕಲಪ್ರಾಣಿಗಳಿಗೂ ಸಹ ಅನುಭವಿಸುವದಕ್ಕೆ ಸಮಾನವಾಗಿರುವದು. ಹೀಗಿರುವಲ್ಲಿ ಯಾರನ್ನು ಯಾರುತಾನೇ ಯಾಚಿಸಬೇಕು ? ” ಎಂದು ಆ ರಾಕ್ಷಸರನ್ನು ತೃಣೀಕರಿಸಿ ಆ ಸರೋವರವನ್ನು ಹೊಕ್ಕನು. ಬಳಿಕ ಆ ರಾಕ್ಷಸರು ಸುತ್ತಲೂ ನಿಂತು, ಕೋಪೋದ್ದೀಪಿತರಾಗಿ “ ಎಲೈ ಭೀಮಸೇನನೆ, ನೀನು ಇಂಥಾ ಕಾರ್ಯವನ್ನು ಮಾಡತಕದ್ದಲ್ಲ ” ಎಂದು ಜಬರಿಸಿ ಬಹಳವಾಗಿ ತಿರಸ್ಕರಿಸಿದರೂ, ಅದನ್ನೂ ಲಕ್ಷ್ಯಮಾಡದೆ ಮಹಾಪರಾಕ್ರಮಶಾಲಿಯಾದ ಭೀಮಸೇನನು ಆ ವನವನ್ನು ಪ್ರವೇಶಮಾಡಲು, ಅವರೆಲ್ಲರೂ ಆತನನ್ನು ಸುತ್ತಿಕೊಂಡು, “ ಇವನನ್ನು ಹಿಡಿದುಕೊಳ್ಳಿ ; ಹಿಂಗಟ್ಟುಮುರಿಕಟ್ಟಿ ; ಮತ್ತು ತುಂಡುತುಂಡಾಗಿ ಕತ್ತರಿಸಿಬಿಡಿ. ಇವನನ್ನು ಬೇಯಿಸಿ ತಿಂದುಬಿಡೋಣ ” ಎಂದು ಕೂಗುತ್ತ ರೋಷದಿಂದ ಆಯುಧ

ಗಳನ್ನು ತೆಗೆದು ಮೇಲೆಬಿದ್ದು ಬಂದರು. ಆಗ ಭೀಮಸೇನನು ಮಹತ್ತಾಗಿಯೂ ಯಮದಂಡಕ್ಕೆ ಸಮಾನವಾಗಿಯೂ, ಸುವರ್ಣದ ಪಟ್ಟೆಯನ್ನು ಬಿಗಿದಿರುವದಾಗಿಯೂ, ಇರುವ ಗದೆಯನ್ನು ಹಿಡಿದುಕೊಂಡು ಆ ರಾಕ್ಷಸರ ಮೇಲೆ ಕಾಣಿಸಿಕೊಂಡು, ' ಎಲ್ಲರೂ ನಿಲ್ಲಿನಿಲ್ಲಿ ' ಎಂದು ಕೂಗಿದನು. ಆ ಸಮಯದಲ್ಲಿ ರಾಕ್ಷಸರು ತೋಮರ, ಪಟ್ಟಸಮೊದಲಾದ ಆಯುಧಗಳಿಂದ ಭೀಮಸೇನನನ್ನು ಸಂಹರಿಸುವದಕ್ಕೆ ಉದ್ಯುಕ್ತರಾಗಿ, ಆತನನ್ನು ಮುತ್ತಿಕೊಂಡರು. ಅದನ್ನು ನೋಡಿ ಕುಂತೀದೇವಿಯಲ್ಲಿ ವಾಯುವಿನಿಂದ ಉತ್ಪನ್ನನಾಗಿಯೂ ಶೂರನಾಗಿಯೂ ಪ್ರತಾಪಶಾಲಿಯಾಗಿಯೂ ಶತ್ರುಸಂಹಾರಕನಾಗಿಯೂ ಇರುವ ಭೀಮಸೇನನು ಕೋಪಗೊಂಡು, ಆ ಪುಷ್ಕರಣಿಯ ಬಳಿಯಲ್ಲಿ ನೂರಾರುಮಂದಿ ರಾಕ್ಷಸರನ್ನು ಸಂಹರಿಸಿದನು. ಉಳಿದ ರಾಕ್ಷಸರು ಆತನ ಜ್ಞಾನಬಲವನ್ನೂ ಭುಜಬಲವನ್ನೂ ನೋಡಿ, ಆತನ ಪರಾಕ್ರಮವನ್ನು ಸಹಿಸಲಾರದೆ, ಆಕಾಶದಲ್ಲಿ ನಿಂತು ಆತನಮೇಲೆ ಕಾಣಿಸಿಕೊಂಡು ಎಷ್ಟು ಹೋರಾಡಿದರೂ ಆತನನ್ನು ಸಂಹರಿಸುವದಕ್ಕೆ ಕೈಲಾಗದೆ, ಮೂಢರಾಗಿ ದಿಗ್ಭ್ರಮೆಯುಂಟಾಗಿ ಭೀಮಸೇನನ ಏಟನ್ನು ತಡೆಯಲಾರದೆ ಕೈಲಾಸಪರ್ವತದ ಶಿಖರಕ್ಕೆ ಓಡಿಹೋದರು. ಈ ಪ್ರಕಾರ ಭೀಮಸೇನನು, ದೇವೇಂದ್ರನು ದೈತ್ಯರನ್ನು ಜಯಿಸಿದಂತೆ ಆ ರಾಕ್ಷಸರನ್ನು ಯುದ್ಧದಲ್ಲಿ ಜಯಿಸಿ, ಆ ಪುಷ್ಕರಿಣಿಯನ್ನು ಹೊಕ್ಕು, ಅಲ್ಲಿ ಪರಿಮಳಭರಿತಗಳಾದ ಅನೇಕ ಸೌಗಂಧಿಕಪುಷ್ಪಗಳನ್ನು ಕೊಯ್ದುಕೊಂಡು, ಅಮೃತಕ್ಕೆ ಸಮಾನವಾದ ಆವುದಕವನ್ನು ಪಾನಮಾಡಿ ಮತ್ತಷ್ಟು ಅಧಿಕವಾದ ತೇಜಸ್ಸೂ ಬಲವೂ ಉಳ್ಳವನಾಗಿ ಮೆರೆದನು. ಅನಂತರ ಆ ಕ್ರೋಧವಶರೆಂಬ ರಾಕ್ಷಸರು ಭೀಮಸೇನನಿಂದ ಹತರಾಗಿ, ಜಿತರಾಗಿ ಕುಬೇರನ ಸನ್ನಿಧಿಗೆ ಹೋಗಿ, ಭೀತರಾಗಿ ಭೀಮಸೇನನ ಪರಾಕ್ರಮವನ್ನೂ ಅಲ್ಲಿ ನಡೆದ ವೃತ್ತಾಂತವನ್ನೂ ಆತನಿಗೆ ತಿಳುಹಿಸಿದರು. ಆ ಮಾತನ್ನು ಕೇಳಿ ಕುಬೇರನು ನಸುನಕ್ಕು "ಎಲೈ ರಾಕ್ಷಸರೆ, ದ್ರೌಪದೀನಿಮಿತ್ತವಾಗಿ ಭೀಮಸೇನನು ಸೌಗಂಧಿಕಪುಷ್ಪವನ್ನು ತೆಗೆದುಕೊಂಡು ಹೋಗುವದಕ್ಕೆ ಬಂದಿರುವನು. ಇದನ್ನು ನಾನು ಬಲ್ಲೆನು. ಆತನಿಗೆ ಬೇಕಾದಷ್ಟು ಸೌಗಂಧಿಕಪುಷ್ಪಗಳನ್ನು ಆತನು ತೆಗೆದುಕೊಂಡು ಹೋಗಲಿ" ಎಂದನು. ಅದನ್ನು ಕೇಳಿ ಆ ರಾಕ್ಷಸರು ಕೋಪವನ್ನು ಬಿಟ್ಟು, ಆ ಸರೋವರದ ಬಳಿಗೆ ಬಂದು, ಅಲ್ಲಿ ಯಥೇಚ್ಛವಾಗಿ ಸುತ್ತಾಡುತ್ತಿದ್ದ ಭೀಮಸೇನನನ್ನು ನೋಡಿದರು.

### ೧೫೫ನೇ ಅಧ್ಯಾಯ.—ತೀರ್ಥಯಾತ್ರಾಪ್ರಶಂಸೆ.—(ಸೌಗಂಧಿಕವನಕ್ಕೆ ಧರ್ಮಾದಿಗಳ ಪ್ರವೇಶ).

ಬಳಿಕ ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯನೆ, ಈ ಪ್ರಕಾರ ಭೀಮಸೇನನು ಆ ಪುಷ್ಕರಣಿಯಲ್ಲಿ ದಿವ್ಯವಾಗಿಯೂ ವಿಚಿತ್ರವಾಗಿಯೂ ನಾನಾವರ್ಣವಾಗಿಯೂ ಪರಿಮಳಭರಿತವಾಗಿಯೂ ಮನೋಹರವಾಗಿಯೂ ಇರುವ ಅನೇಕ ಸೌಗಂಧಿಕಪುಷ್ಪಗಳನ್ನು ಕೊಯ್ದುಕೊಂಡನು. ಅತ್ತ ಧರ್ಮರಾಯನಿದ್ದ ಸ್ಥಳದಲ್ಲಿ ಗಾಳಿಯು ನೊರಜುಕಲ್ಲುಗಳನ್ನು ತೂರಿಕೊಂಡು ಬಂದು, ಮಹಾವೇಗದಿಂದ ಘೋರವಾಗಿ ಯುದ್ಧವನ್ನು ಸೂಚಿಸುವಹಾಗೆ ಬೀಸಿತು. ಆಕಾಶದಿಂದ ಮಹತ್ತಾದ ಉಲ್ಕಾಪಾತವು ಉಂಟಾಯಿತು. ಸೂರ್ಯನು ಕಾಂತಿಹೀನನಾಗಿ ಅಂಧಕಾರ ಕವಿದುಕೊಂಡಂತಾದನು. ಭೂಕಂಪವುಂಟಾಯಿತು. ಭೂಮಿಯಿಂದ ಕೆಂಧೂಳೆದ್ದಿತು. ದಿಕ್ಕುಗಳೆಲ್ಲಾ ಕೆಂಪಾದ ಕಾಂತಿಯುಳ್ಳವುಗಳಾಗಿ ಕಾಣಿಸಿಕೊಂಡವು. ಮೃಗಗಳೂ ಪಕ್ಷಿಗಳೂ ಘೋರಘೋರವಾಗಿ ಧ್ವನಿಮಾಡಿದವು. ಆ ಅರಣ್ಯವೆಲ್ಲಾ ಕತ್ತಲೆಗವಿದಂತಾಗಿ ಯಾವದೂ ಕಣ್ಣಿಗೆ ಕಾಣಿಸದಹಾಗಾಯಿತು. ಹೀಗೆ ಇನ್ನೂ ಅನೇಕ ದುರ್ನಿಮಿತ್ತಗಳು ತೋರಿದವು. ಇಂಥಾ ಅದ್ಭುತವಾದ ದುರ್ನಿಮಿತ್ತಗಳನ್ನು ನೋಡಿ ಧರ್ಮಪುತ್ರನಾದ ಯುಧಿಷ್ಠಿರನು ತಮ್ಮಂದಿರನ್ನು ಕುರಿತು "ಎಲೈ ಅನುಜರೆ, ನಮ್ಮನ್ನು ತಿರಸ್ಕಾರಮಾಡತಕ್ಕವನು ಯಾವನಿರುವನು! ಹ್ಯಾಗಾದರೂ ಆಗಲಿ; ನೀವೆಲ್ಲರೂ ಯುದ್ಧಸನ್ನದ್ಧರಾಗಿರತಕ್ಕದ್ದು. ಇನ್ನು ಜಾಗ್ರತೆಯಾಗಿಯೇ ನಾವು ಪರಾಕ್ರಮಿಸತಕ್ಕ ಸಮಯವು ಪ್ರಾಪ್ತವಾಗುವಂತಿದೆ" ಎಂದು ನುಡಿದು,

ಸುತ್ತಲೂ ನೋಡಿ ಭೀಮಸೇನನನ್ನು ಕಾಣದೆ, ಸಮೀಪದಲ್ಲಿ ನಕುಲಸಹದೇವರನ್ನೂ ದ್ರೌಪದಿಯನ್ನೂ ನೋಡಿ "ಪ್ರಿಯೆ, ಭೀಮಸೇನನು ಯಾವದಾದರೂ ಕಾರ್ಯವನ್ನು ಮಾಡಲುದ್ದೇಶಿಸಿರುವನೆ? ಅಕಸ್ಮಾತ್ತಾಗಿ ತೋರುತ್ತಿರುವ ಈ ದುರ್ನಿಮಿತ್ತಗಳು ಬಹಳವಾಗಿ ಭಯವನ್ನುಂಟುಮಾಡುತ್ತಿರುವವು. ಇದನ್ನು ನೋಡಿದರೆ ಆತನೇನಾದರೂ ಸಾಹಸವನ್ನು ಮಾಡೇಮಾಡಿದನೊ?" ಎಂದು ಕೇಳಲು, ಆಮಾತನ್ನು ಕೇಳಿ ಧೀರವಾದ ಮನಸ್ಸುಳ್ಳ ದ್ರೌಪದಿಯು ಧರ್ಮರಾಯನನ್ನು ಕುರಿತು "ಮಹಾರಾಜನೆ, ಇಲ್ಲಿಗೆ ಗಾಳಿಯಿಂದ ತೂರಿಕೊಂಡು ಬಂದಿತ್ತಲ್ಲಾ! ಅಂಥಾ ದಿವ್ಯವಾದ ಸೌಗಂಧಿಕಪುಷ್ಪಗಳನ್ನು ನೀನು ಕಂಡರೆ ಈಗಲೇ ಅವುಗಳನ್ನು ತುಂಬಾ ನನಗೆ ತಂದುಕೊಡಬೇಕೆಂದು, ಆಪುಷ್ಪದಲ್ಲಿ ಅಧಿಕವಾದ ಆಸಕ್ತಿಯಿಂದ, ನಾನು ಭೀಮಸೇನನನ್ನು ಕೇಳಿಕೊಂಡೆನು. ಆ ಮಹಾಬಾಹುವು ನನಗೆ ಪ್ರಿಯವನ್ನು ಮಾಡಬೇಕೆಂದೆಣಿಸಿ, ಆ ಪುಷ್ಪಗಳನ್ನು ತೆಗೆದುಕೊಂಡು ಬರುವದಕ್ಕಾಗಿ ಇಲ್ಲಿಂದ ಉತ್ತರದಿಕ್ಕಿಗೆ ತೆರಳಿದನು" ಎಂದು ಮಂದಹಾಸಪೂರ್ವಕವಾಗಿ ನುಡಿದಳು. ಆ ಮಾತನ್ನು ಕೇಳಿದಕೂಡಲೆ ಧರ್ಮರಾಯನು ನಕುಲಸಹದೇವರನ್ನು ನೋಡಿ "ಎಲೈ ಅನುಜರೆ, ನಾವು ಈಗಲೇ ಭೀಮಸೇನನನ್ನು ಹುಡುಕಿಕೊಂಡು ಹೋಗೋಣ ನಡೆಯಿರಿ; ಶ್ರಮಪಡದಹಾಗೆ ಈ ಬ್ರಾಹ್ಮಣರನ್ನು ಈ ರಾಕ್ಷಸರು ಎತ್ತಿಕೊಳ್ಳಲಿ" ಎಂದು ನುಡಿದು ಘಟೋತ್ಕಚನನ್ನು ನೋಡಿ "ಎಲೈ ಘಟೋತ್ಕಚನೆ, ನೀನು ಈ ದ್ರೌಪದಿಯನ್ನು ಎತ್ತಿಕೊ. ಬಹುಶಃ ಭೀಮಸೇನನು ವೇಗದಲ್ಲಿ ವಾಯುವಿಗೆ ಸಮಾನನಾಗಿಯೂ ಲಂಘನೆಯಲ್ಲಿ ಗರುಡನಿಗೆ ಸಮಾನನಾಗಿಯೂ ಇರುವನಾದ್ದರಿಂದಲೂ, ಇಲ್ಲಿಂದ ಹೋಗಿ ಬಹುಕಾಲವಾಗಿರುವದರಿಂದಲೂ, ಬಹುದೂರ ಹೋಗಿರುವಂತೆ ತೋರುವದು. ಅವನು ಆಕಾಶಕ್ಕೆ ಬೇಕಾದರೂ ಹಾರಬಲ್ಲನು; ಪಾತಾಳಕ್ಕೆ ಬೇಕಾದರೂ ಧುಮುಕಬಲ್ಲನು. ಪ್ರಾಯಶಃ ಅವನು ಬ್ರಹ್ಮಜ್ಞಾನಿಗಳಾದ ಬ್ರಾಹ್ಮಣರಿಗೆ ಅಪರಾಧವನ್ನೇನೂ ಮಾಡಿರಲಾರನು. ಎಲೈ ರಾಕ್ಷಸರುಗಳಿರಾ, ಈಗಲೇ ನಾವೆಲ್ಲರೂ ಜಾಗ್ರತೆಯಾಗಿ ನಿಮ್ಮಪ್ರಭಾವದಿಂದ ಆತನಿರುವ ಸ್ಥಾನಕ್ಕೆ ಹೋಗಬೇಕು" ಎಂದನು. ಆಗ ಹಿಡಿಂಬಮೊದಲಾದ ರಾಕ್ಷಸರು ಹಾಗೇ ಆಗಲೆಂದು ಧರ್ಮರಾಯನ ಸಂಗಡ ಹೇಳಿ, ಭೀಮಸೇನನು ಪುಷ್ಪನಿಮಿತ್ತವಾಗಿ ಕುಬೇರನ ಸರೋವರಕ್ಕೆ ಹೋಗಿರಬಹುದೆಂದು ಯೋಚಿಸಿ, ಎಲ್ಲರನ್ನೂ ತಮ್ಮಮೇಲೆ ಕುಳ್ಳಿರಿಸಿಕೊಂಡು, ಲೋಮಶನೊಡಗೂಡಿ ಸಂತೋಷದಿಂದ ಜಾಗ್ರತೆಯಾಗಿ ಮಾರ್ಗದಲ್ಲಿ ನಾನಾಪ್ರಕಾರವಾದ ಆ ಕುಬೇರನ ಸರೋವರವನ್ನೂ ಅದರ ತಟದಲ್ಲಿ ಸ್ವೇಚ್ಛೆಯಿದ ಕೂತುಕೊಂಡಿರುವ ಭೀಮಸೇನನನ್ನೂ ಸಹ ದೂರದಿಂದ ನೋಡಿದರು. ಆಗ ಎಲ್ಲರೂ ಆ ರಾಕ್ಷಸರ ಹೆಗಲಿನಿಂದಿ ಕೆಳಕ್ಕೆ ಇಳಿದು, ಆ ಸರೋವರದ ಸಮೀಪಕ್ಕೆ ಬಂದು, ಅಲ್ಲಿ ಹತರಾಗಿ ತುಂಡುತುಂಡಾಗಿ ಬಿದ್ದಿದ್ದ ರಾಕ್ಷಸರನ್ನು ನೋಡಿದರು. ಬಳಿಕ ಕೋಪದಿಂದ ನಿಶ್ಚಲವಾದ ನೇತ್ರಗಳುಳ್ಳವನಾಗಿ, ಹಲ್ಲುಮುಡಿಯನ್ನು ಕಚ್ಚಿ, ಪ್ರಳಯಕಾಲದಲ್ಲಿ ದಂಡಧಾರಿಯಾದ ಯಮನಂತೆ ಗದೆಯನ್ನು ಕೈಯಲ್ಲಿ ಹಿಡಿದು, ಆ ಸರೋವರದ ಬಳಿಯಲ್ಲಿ ಕೂತಿದ್ದ ಭೀಮಸೇನನನ್ನು ನೋಡಿ, ಧರ್ಮರಾಯನು ಬಾರಿಬಾರಿಗೂ ಆತನನ್ನು ಆಲಿಂಗನೆ ಮಾಡಿಕೊಂಡು, "ಎಲೈ ಭೀಮಸೇನನೆ ಇದೇನು ನೀನು ಮಾಡಿದಕೆಲಸ! ನಿನ್ನ ಸಾಹಸವನ್ನು ನೋಡಿದರೆ ಆಶ್ಚರ್ಯವಾಗಿರುವದು. ನಿನಗೆ ಮಂಗಳವಾಗಲಿ. ನೀನು ನನಗೆ ಪ್ರಿಯವನ್ನು ಮಾಡಬೇಕೆಂದಿದ್ದರೆ ದೇವತೆಗಳಿಗೆ ಅಪ್ರಿಯವಾದ ಇಂಥಾ ಕಾರ್ಯವನ್ನು ಪುನಃ ಮಾಡಬೇಡ" ಎಂದು ಕಟ್ಟುಮಾಡಿದನು. ಬಳಿಕ ಅವರೆಲ್ಲರೂ ಆ ಸೌಗಂಧಿಕಪುಷ್ಪಗಳನ್ನು ತೆಗೆದುಕೊಂಡು ಮನೋಹರವಾದ ಆ ಸರೋವರದಲ್ಲಿ ದೇವತೆಗಳಿಗೆ ಸಮಾನರಾಗಿ ವಿಹರಿಸುತ್ತಿದ್ದರು. ಆದನ್ನು ಕಂಡು ಅಲ್ಲಿದ್ದ ಕಾವಲುಗಾರರಾದ ರಾಕ್ಷಸರು ಮಹತ್ತಾದ ಭಯಂಕರವಾದ ಆಕಾರವುಳ್ಳವರಾಗಿ, ದೊಡ್ಡದೊಡ್ಡದಾದ ಶಿಲಾಯುಧಗಳನ್ನು ಧರಿಸಿಕೊಂಡು ಬಂದು, ಧರ್ಮರಾಯನನ್ನೂ ಲೋಮಶಮಹರ್ಷಿಯನ್ನೂ ನಕುಲಸಹದೇವರನ್ನೂ ಇತರ ಬ್ರಾಹ್ಮಣರನ್ನೂ ನೋಡಿ, ವಿನಯದಿಂದ ಎಲ್ಲರಿಗೂ ನಮಸ್ಕಾರವನ್ನು ಮಾಡಿದರು. ಆಗ ಧರ್ಮರಾಯನು ಅವರೆಲ್ಲರಿಗೂ ಸಮಾಧಾನವನ್ನು ಹೇಳಿ, ಎಲ್ಲರನ್ನೂ ಪ್ರಸನ್ನರನ್ನು ಮಾಡಿದನು. ಬಳಿಕ ಕುರುಶ್ರೇಷ್ಠರಾದ ಧರ್ಮಾದಿಗಳು ತಾವು ಅಲ್ಲಿಗೆ ಬಂದಿರುವದು ಕುಬೇರನಿಗೆ ವಿದಿತವಾಗಲು, ಅಲ್ಲಿ ಬಹಳಕಾಲನಿಲ್ಲದೆ ಅರ್ಜುನನ ಆಗಮನವನ್ನೇ ಹಾರೈಸುತ್ತ ಆ ಗಂಧಮಾದನ ಪರ್ವತದ ಅರೆತಪ್ಪಲಿನಲ್ಲಿ ವಿಹರಿಸುತ್ತಿದ್ದರು.

### ೧೫೬ನೇ ಅಧ್ಯಾಯ.—ತೀರ್ಥಯಾತ್ರಾಪ್ರಶಂಸೆ—(ಧರ್ಮಾದಿಗಳು ನರನಾರಾಯಣಾಶ್ರಮಕ್ಕೆ ಬಂದದ್ದು).

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯನೆ, ಈ ಪ್ರಕಾರ ಗಂಧಮಾದನ ಪರ್ವತದ ಅರೆತಪ್ಪಲನ್ನು ಸೇರಿದ ಧರ್ಮರಾಯನು ದ್ರೌಪದಿಯಿಂದಲೂ ಬ್ರಾಹ್ಮಣರಿಂದಲೂ ಸಹಿತರಾದ ತಮ್ಮಂದಿರನ್ನು ನೋಡಿ “ ಈಗ ನಾವು ಪುಣ್ಯತಮವಾಗಿಯೂ, ದೇವತೆಗಳಿಂದಲೂ ಮಹತ್ಮರಾದ ಋಷಿಗಳಿಂದಲೂ ಮೊದಲು ವಾಸಮಾಡಲ್ಪಟ್ಟದ್ದಾಗಿಯೂ, ಅನೇಕ ಬ್ರಾಹ್ಮಣರಿಂದ ಸೇವಿತವಾಗಿಯೂ, ಮನಸ್ಸಿಗೆ ಪ್ರಶಸ್ತವಾಗಿಯೂ, ಮಂಗಳಕರವಾಗಿಯೂ, ಇರುವ ಅನೇಕ ಪುಣ್ಯಕ್ಷೇತ್ರಗಳನ್ನೂ ವನಪ್ರದೇಶಗಳನ್ನೂ ಸಹ ನೋಡಿದೆವು. ಅಲ್ಲಲ್ಲಿ ಪೂರ್ವಿಕರಾದ ಮಹರ್ಷಿಗಳ ಮತ್ತು ರಾಜರ್ಷಿಗಳ ಚರಿತ್ರೆಗಳನ್ನೂ ಇನ್ನೂ ಅನೇಕವಾದ ಮಂಗಳಕರವಾದ ಕಥೆಗಳನ್ನೂ ಕೇಳಿದೆವು. ಆಯಾ ಪುಣ್ಯಕ್ಷೇತ್ರಗಳಲ್ಲಿ ಬ್ರಾಹ್ಮಣರೊಡನೆ ಅವಗಾಹನಸ್ನಾನವನ್ನು ಮಾಡಿ, ಅನೇಕವಾದ ಪುಷ್ಪಗಳಿಂದಲೂ ಫಲಗಳಿಂದಲೂ ದೇವತೆಗಳನ್ನು ಪೂಜಿಸಿದೆವು. ಅಲ್ಲಲ್ಲಿ ದೊರೆದ ಕಂದಮೂಲಗಳಿಂದಲೂ, ಪವಿತ್ರವಾದ ಉದಕದಿಂದಲೂ, ಪಿತೃಗಳನ್ನು ಆರಾಧಿಸಿದೆವು. ಮತ್ತು ಮನೋಹರವಾದ ಸರೋವರಗಳಲ್ಲೂ, ಮಹತ್ತಾದ ಪುಣ್ಯತಮವಾದ ಸಮುದ್ರದಲ್ಲೂ, ಇಲೆ ಸರಸ್ವತಿ ಸಿಂಧು ಯಮುನೆ ನರ್ಮದೆ ಗಂಗೆ ಮೊದಲಾದ ಪುಣ್ಯನದಿಗಳಲ್ಲೂ ಅವಗಾಹನಸ್ನಾನ ಮೊದಲಾದ ಸತ್ಕರ್ಮಗಳನ್ನು ಬ್ರಾಹ್ಮಣರೊಡನೆ ಆಚರಿಸಿದೆವು. ಮತ್ತು ಗಂಗಾದ್ವಾರದಿಂದ ಆಚೆ ಇರತಕ್ಕ ಅನೇಕ ಪರ್ವತಗಳನ್ನೂ, ಅನೇಕ ಮೃಗಪಕ್ಷಿಗಳಿಗೆ ವಾಸಸ್ಥಾನವಾದ ಮಹತ್ತಾದ ಹಿಮವತ್ಪರ್ವತವನ್ನೂ ನೋಡಿದೆವು; ಮತ್ತು ವಿಸ್ತಾರವಾದ ಬದರೀಕ್ಷೇತ್ರವನ್ನೂ ನರನಾರಾಯಣಾಶ್ರಮವನ್ನೂ, ಸಿದ್ಧರಿಂದಲೂ ದೇವತೆಗಳಿಂದಲೂ ಸೇವಿತವಾದ ದಿವ್ಯಪುಷ್ಕರಿಣಿಯನ್ನೂ, ಅನೇಕ ದೇವಾಲಯಗಳನ್ನೂ ಸಹ ಯಥಾಕ್ರಮವಾಗಿ ನೋಡಿದೆವು. ಈ ಅನೇಕ ಪುಣ್ಯಕ್ಷೇತ್ರಗಳನ್ನು ಮಹಾತ್ಮನಾದ ಈ ಲೋಮಶಮಹರ್ಷಿಯು ನಮಗೆ ತೋರಿಸಿದನು. ಎಲೈ ಭೀಮಸೇನನೆ, ಈಗ ನಾವು ಸಿದ್ಧರಿಂದ ಸೇವಿಸಲ್ಪಡುತ್ತಿರುವ ಪುಣ್ಯತಮವಾದ ಕುಬೇರನ ವಾಸಸ್ಥಾನವನ್ನು ನೋಡತಕ್ಕದ್ದು ಹ್ಯಾಗೆ? ಈ ವಿಷಯದಲ್ಲಿ ನೀನು ಆಲೋಚನೆಯನ್ನು ಮಾಡು ” ಎಂದು ನುಡಿಯಲು, “ ಎಲೈ ರಾಜೇಂದ್ರನಾದ ಯುಧಿಷ್ಠಿರನೆ, ಇಲ್ಲಿಂದ ನೀವು ಕುಬೇರನ ಸಂಸ್ಥಾನಕ್ಕೆ ಹೋಗುವದು ಅಶಕ್ಯವಾದದ್ದು. ಆದ್ದರಿಂದ ಇದೇ ಮಾರ್ಗವಾಗಿ ನೀವು ಬಂದಹಾಗೆ ಹಿಂದಕ್ಕೆ ಹೊರಟು ಸಿದ್ಧಚಾರಣರಿಂದ ಸೇವಿತವಾಗಿಯೂ, ಬದರಿಯೆಂದು ಪ್ರಖ್ಯಾತವಾಗಿಯೂ ಇರುವ ನರನಾರಾಯಣಾಶ್ರಮಕ್ಕೆ ಹೋಗತಕ್ಕದ್ದು. ಬಳಿಕ ಅಲ್ಲಿಂದ ಅನೇಕ ವಿಧ ಪುಷ್ಪಫಲಗಳಿಂದ ಸಮೃದ್ಧವಾಗಿರುವ ವೃಷಪರ್ವಾಶ್ರಮಕ್ಕೆ ಹೋಗತಕ್ಕದ್ದು. ಅಲ್ಲಿಂದ ಮುಂದಕ್ಕೆ ಆರ್ಷ್ಟಿಷೇಣಾಶ್ರಮಕ್ಕೆ ಹೋಗಿ ಅಲ್ಲೇ ಕೆಲವುದಿವಸ ಇದ್ದರೆ, ಕುಬೇರನ ವಾಸಸ್ಥಾನವನ್ನು ಕಾಣುವಿರಿ ” ಎಂದು ಅಶರೀರವಾಕ್ಕು ಕೇಳಬಂತು. ಕೂಡಲೆ ದಿವ್ಯಪರಿಮಳ ಯುಕ್ತವಾಗಿಯೂ ಸುಖಸ್ಪರ್ಶವಾಗಿಯೂ ಶೀತಳವಾಗಿಯೂ ಇರುವ ಮಂದಮಾರುತವು ಬೀಸಿ, ಪುಷ್ಪವರ್ಷವನ್ನು ಕರೆಯಿತು. ಆ ಅಶರೀರವಾಕ್ಕನ್ನು ಕೇಳಿ, ಅಲ್ಲಿದ್ದವರೆಲ್ಲರೂ ಆಶ್ಚರ್ಯಪಟ್ಟರು. ಆಗ ಧೌಮ್ಯನು ಪರಿವಾರಸಹಿತನಾದ ಧರ್ಮರಾಯನನ್ನು ನೋಡಿ “ ಎಲೈ ಧರ್ಮರಾಯನೆ, ಇಲ್ಲಿಂದ ಮುಂದಕ್ಕೆ ಹೋಗುವದು ಅಶಕ್ಯವಾದದ್ದು. ಆದ್ದರಿಂದ ಹೀಗೆಯೇ ಮಾಡೋಣ ” ಎಂದು ನುಡಿಯಲು, ಆ ಮಾತನ್ನು ಪರಿಗ್ರಹಿಸಿ ಧರ್ಮರಾಯನು ಭೀಮಸೇನ ಮೊದಲಾದ ತಮ್ಮಂದಿರಿಂದಲೂ ದ್ರೌಪದಿಯಿಂದಲೂ ಬ್ರಾಹ್ಮಣರಿಂದಲೂ ಸಹಿತನಾಗಿ ಅಲ್ಲಿಂದ ಹೊರಟು ನರನಾರಾಯಣಾಶ್ರಮಕ್ಕೆ ಬಂದು, ಅಲ್ಲಿ ಸುಖವಾಗಿ ವಾಸಮಾಡಿಕೊಂಡಿದ್ದನು.

### ೧೫೭ನೇ ಅಧ್ಯಾಯ.—ಜಟಾಸುರನ ಸಂಹಾರ.

ಬಳಿಕ ವೈಶಂಪಾಯನನು ಜನಮೇಜಯನನ್ನು ಕುರಿತು—ಕೇಳು ಜನಮೇಜಯನೆ, ಧರ್ಮಾದಿಗಳು ಬ್ರಾಹ್ಮಣರಿಂದ ಸಹಿತರಾಗಿ ಗಂಧಮಾದನಪರ್ವತದ ಅರೆತಪ್ಪಲಲ್ಲಿ ಅರ್ಜುನನ ಆಗಮನವನ್ನು ನಿರೀಕ್ಷಿಸುತ್ತಾ

ವಾಸಮಾಡಿಕೊಂಡಿರಲು, ಆಗ ದುಷ್ಟಾತ್ಮನೂ ಪಾಪಬುದ್ಧಿಯುಳ್ಳವನೂ ಆದ ಜಟಾಸುರನೆಂಬ ರಾಕ್ಷಸನು ಬ್ರಾಹ್ಮಣವೇಷವನ್ನು ಧರಿಸಿಕೊಂಡು ಬಂದು, "ನಾನು ಮಂತ್ರಶಾಸ್ತ್ರವನ್ನೂ ಇನ್ನೂ ಅನೇಕ ಶಾಸ್ತ್ರಗಳನ್ನೂ ಬಲ್ಲವನು" ಎಂದು ತನ್ನಲ್ಲಿ ಅವರಿಗೆ ವಿಶ್ವಾಸವುಂಟಾಗುವಂತೆ ಹೇಳಿಕೊಳ್ಳುತ್ತ, ಅವರ ಸಮೀಪದಲ್ಲೇ ವಾಸವಾಗಿದ್ದುಕೊಂಡು, ಅವರ ಧನುಸ್ಸುಗಳನ್ನೂ ಬತ್ತಳಿಕೆಗಳನ್ನೂ ದ್ರೌಪದಿಯನ್ನೂ ಕೂಡ ಅಪಹರಿಸಬೇಕೆಂದು ಸಮಯವನ್ನು ನಿರೀಕ್ಷಿಸುತ್ತಿದ್ದನು. ಬೂದಿಮುಚ್ಚಿದ ಕೆಂಡದಂತೆ ತನ್ನ ಸ್ವರೂಪವನ್ನು ಮರೆಯಿಸಿಕೊಂಡಿರುವ ಆ ದುರಾತ್ಮನ ಕಪಟವನ್ನು ತಿಳಿಯದೆ ಪಾಂಡವರು ಅವನನ್ನು ತಮ್ಮ ಸಮೀಪದಲ್ಲಿಟ್ಟುಕೊಂಡು ಪೋಷಿಸುತ್ತಿದ್ದರು.

ಹೀಗಿರಲು, ಒಂದಾನೊಂದು ದಿವಸ ಭೀಮಸೇನನು ಬೇಟೆಯಾಡುವಕ್ಕೆ ಹೋಗಿರುವದನ್ನೂ, ಘಟೋತ್ಕಚ ಮೊದಲಾದವರು ಅಲ್ಲಿಲ್ಲದೆ ಇರುವದನ್ನೂ, ಮಹರ್ಷಿಗಳಾದ ಲೋಮಶ ಮೊದಲಾದ ಬ್ರಾಹ್ಮಣರು ಸ್ನಾನಾರ್ಥವಾಗಿ ಹೋಗಿರುವದನ್ನೂ, ಇನ್ನೂ ಅಲ್ಲಿದ್ದ ತಪಸ್ವಿಗಳು ಪುಷ್ಪಗಳನ್ನು ತರುವದಕ್ಕಾಗಿ ಹೋಗಿರುವದನ್ನೂ ತಿಳಿದು, ಜಟಾಸುರನು ಆ ಸಮಯದಲ್ಲಿ ವಿಕಾರವಾಗಿಯೂ ಭಯಂಕರವಾಗಿಯೂ ಇರುವ ರಾಕ್ಷಸರೂಪವನ್ನು ತಾಳಿಕೊಂಡು, ಅಲ್ಲಿದ್ದ ಪಾಂಡವರ ಆಯುಧಗಳನ್ನೂ ದ್ರೌಪದಿಯನ್ನೂ ಧರ್ಮರಾಯನನ್ನೂ ನಕುಲಸಹದೇವರನ್ನೂ ಹೊತ್ತುಕೊಂಡು ಹೊರಟನು. ಆಗ ಸಹದೇವನು ಬಲಾತ್ಕಾರವಾಗಿ ಆ ರಾಕ್ಷಸನಿಂದ ಬಿಡಿಸಿಕೊಂಡು, ತನ್ನ ಪರಾಕ್ರಮದಿಂದ ಆ ದುಷ್ಟನು ಹಿಡಿದಿದ್ದ ಕತ್ತಿಯನ್ನು ಅವನ ಕಯ್ಯಿಂದ ತಪ್ಪಿಸಿ, ಭೀಮಸೇನನು ಹೋಗಿದ್ದ ಕಡೆಯಲ್ಲಿ ಆತನನ್ನು ಗಟ್ಟಿಯಾಗಿ ಕೂಗಿಕೊಂಡನು. ಆಗ ಆ ರಾಕ್ಷಸನಿಂದ ಅಪಹರಿಸಲ್ಪಡುತ್ತಿದ್ದ ಧರ್ಮರಾಯನು ಆ ದುರಾತ್ಮನನ್ನು ನೋಡಿ "ಎಲೈ ಮೂಢನೆ, ನಿನ್ನ ಧರ್ಮವು ನಷ್ಟವಾಗುವದನ್ನು ನೀನು ನೋಡದೆ ಇರುವೆಯಲ್ಲಾ! ಮನುಷ್ಯರಲ್ಲೂ ಮೃಗಪಕ್ಷಿಗಳಲ್ಲೂ ಸಹ ಕೆಲವರು ಮಾತ್ರ ಧರ್ಮಪದ್ಧತಿಗಳನ್ನು ನೋಡಿರುವರು. ರಾಕ್ಷಸರಲ್ಲಿ ಅನೇಕರು ಅಂಥಾ ಧರ್ಮಪದ್ಧತಿಗಳನ್ನು ವಿಶೇಷವಾಗಿ ನೋಡಿರುವರು. ಧರ್ಮಕ್ಕೆಲ್ಲಾ ರಾಕ್ಷಸರೇ ಮೂಲಭೂತರಾದವರೆಂದು ದೊಡ್ಡವರು ಹೇಳುವರು. ಇದನ್ನೆಲ್ಲಾ ನೀನು ಚೆನ್ನಾಗಿ ವಿಚಾರಮಾಡಿ ಇಲ್ಲೇ ನಿಂತುಕೊ. ಎಲೈ ರಾಕ್ಷಸನೆ, ದೇವತೆಗಳೂ ಋಷಿಗಳೂ ಸಿದ್ಧರೂ ಪಿತೃದೇವತೆಗಳೂ ಗಂಧರ್ವರೂ ಪನ್ನಗರೂ ರಾಕ್ಷಸರೂ ಪಶುಗಳೂ ಪಕ್ಷಿಗಳೂ ತಿರ್ಯಗ್ಜಾತಿಯಲ್ಲಿ ಹುಟ್ಟಿದ ಇರುವೆ ಮೊದಲಾದ ಪ್ರಾಣಿಗಳೂ ಸಹ ಮನುಷ್ಯರ ಅವಲಂಬನೆಯಿಂದ ಜೀವಿಸುವವು. ನೀನೂ ಅದೇಪ್ರಕಾರ ಜೀವಿಸತಕ್ಕವನು. ಈ ಲೋಕದ ಐಶ್ವರ್ಯದಿಂದ ನಿಮ್ಮವರೆಲ್ಲರೂ ಜೀವಿಸಿಕೊಂಡಿರುವರು. ಈ ಲೋಕವು ದುಃಖಪಡುವದನ್ನು ನೋಡಿದರೆ, ದೇವತೆಗಳೂ ದುಃಖಪಡುವರು. ಇವರು ಸಂತುಷ್ಟರಾಗಿದ್ದರೆ ಅವರೂ ಹವ್ಯಕವ್ಯಗಳಿಂದ ಶಾಸ್ತ್ರೋಕ್ತಪ್ರಕಾರವಾಗಿ ಸತ್ಕೃತರಾಗಿ ಸಂತೋಷಪಡುವರು. ಎಲೈ ರಾಕ್ಷಸನೆ, ನಾವು ರಾಜ್ಯಪರಿಪಾಲನೆಯನ್ನು ಮಾಡತಕ್ಕವರು ; ಮತ್ತು ಸಮಸ್ತರ ಭಯವನ್ನೂ ಪರಿಹಾರ ಮಾಡತಕ್ಕವರು. ಲೋಕಕ್ಕೆ ಐಶ್ವರ್ಯವೂ ಸುಖವೂ ಯಾರಿಂದುಂಟಾಗುವವೋ, ಅಂಥಾ ರಾಜನನ್ನು ಅಪರಾಧವಿಲ್ಲದೆ ಯಾರೂ ಅವಮಾನ ಪಡಿಸಕೂಡದು. ಎಲೈ ನರಾಶನನೆ, ಅಣುಮಾತ್ರವಾದರೂ ನಾವು ನಿನ್ನ ವಿಷಯದಲ್ಲಿ ಅಪರಾಧವನ್ನು ಮಾಡಿದವರಲ್ಲ. ನಾವು ಯಥಾಶಕ್ತಿಯಾಗಿ ಯಾಗಾದಿ ಸತ್ಕರ್ಮಗಳನ್ನು ಆಚರಿಸಿ, ಹವಿಸ್ಸುಗಳಿಂದ ದೇವತೆಗಳನ್ನು ತೃಪ್ತಿಪಡಿಸುವೆವು. ಯಾವಾಗಲೂ ಗುರುಗಳಿಗೂ ಬ್ರಾಹ್ಮಣರಿಗೂ ನಮಸ್ಕಾರವನ್ನು ಮಾಡುತ್ತ, ಅವರಿಗೆ ವಿಧೇಯರಾಗಿರುವೆವು. ಇಂಥಾ ನಾವು ಬ್ರಾಹ್ಮಣನೆಂದು ತಿಳಿದು ನಿನ್ನನ್ನು ನಂಬಿ ನಿನಗೆ ಮಿತ್ರರಾಗಿರಲು, ಈ ಪ್ರಕಾರ ನೀನು ಮಿತ್ರದ್ರೋಹವನ್ನು ಮಾಡಬಹುದೆ? ಎಲೈ ಪ್ರಜ್ಞಾಹೀನನಾದ ರಾಕ್ಷಸನೆ, ನೀನು ನಮ್ಮ ಅನ್ನವನ್ನು ಊಟಮಾಡಿ, ನಮ್ಮ ಆಶ್ರಮದಲ್ಲಿ ಸುಖವಾಗಿದ್ದುಕೊಂಡು, ನಮ್ಮಿಂದ ಸನ್ಮಾನಿತನಾಗಿ, ಈಗ ನಮ್ಮನ್ನೇ ಅಪಹರಿಸಿಕೊಂಡು ಹೋಗುತ್ತಿರುವೆ. ನೀನು ಈ ರೀತಿಯಾಗಿ ವ್ಯರ್ಥವಾದ ದುರಾಚಾರವುಳ್ಳವನಾದ್ದರಿಂದ, ನಿನ್ನ ವಯಸ್ಸೂ ನಿನ್ನ ಬುದ್ಧಿಯೂ ಸಹ ವ್ಯರ್ಥ. ಈ ಕಾರ್ಯದಿಂದ ನೀನು ವ್ಯರ್ಥವಾಗಿ ಮರಣವನ್ನು ಹೊಂದುವೆ. ಎಲೈ ದುರ್ಬುದ್ಧಿಯೆ, ನೀನು ಸಕಲ ಧರ್ಮಗಳನ್ನೂ ಬಿಟ್ಟವನಾಗಿದ್ದರೆ, ನಮ್ಮನಮ್ಮ ಆಯುಧಗಳನ್ನು ನಮಗೆ ಕೊಟ್ಟು, ನಮ್ಮ ಸಂಗಡ ಯುದ್ಧಮಾಡಿ ಗೆದ್ದು, ದ್ರೌಪದಿಯನ್ನು ಅಪಹರಿಸಿಕೊಂಡು ಹೋಗು. ಅಜ್ಞಾನದಿಂದ ನೀನು ಇಂಥಾಕಾರ್ಯ

ವನ್ನು ಮಾಡಿದರೆ, ಲೋಕದಲ್ಲಿ ಅಧರ್ಮವನ್ನೂ ಅಪಕೀರ್ತಿಯನ್ನೂ ಹೊಂದುವೆ. ಮನುಷ್ಯಳಾದ ದ್ರೌಪದಿಯನ್ನು ರಾಕ್ಷಸನಾದ ನೀನು ಸ್ಪರ್ಶಮಾಡಿದ್ದರಿಂದ, ಗಡಿಗೆಯಲ್ಲಿ ವಿಷವನ್ನು ಕದರಿಕೊಂಡು ಕುಡಿದವನಂತಾದೆ" ಎಂದು ನುಡಿದು, ಬಳಿಕ ಧರ್ಮರಾಯನು ಆ ರಾಕ್ಷಸನಿಗೆ ಬಹು ಭಾರವುಂಟಾಗುವಹಾಗೆ ಮೇಲೆ ಕುಳಿತುಕೊಳ್ಳಲು, ಆ ರಾಕ್ಷಸನು ಆ ಭಾರವನ್ನು ತಾಳಲಾರದೆ ಮೆಲ್ಲಗೆ ನಡೆಯುವದಕ್ಕೆ ಉಪಕ್ರಮಿಸಿದನು.

ಆಗ ಧರ್ಮರಾಯನು ದ್ರೌಪದಿಯನ್ನೂ ನಕುಲನನ್ನೂ ಕುರಿತು "ಈ ಮೂಢನಾದ ರಾಕ್ಷಸನ ವೇಗವನ್ನು ನಾನು ನಿಲ್ಲಿಸಿರುವೆನು. ನೀವು ಭಯಪಡಬೇಡಿರಿ. ಸ್ವಲ್ಪ ದೂರದಲ್ಲೇ ಭೀಮಸೇನನು ಇರುವನು. ಇದೇಮುಹೂರ್ತದಲ್ಲಿ ಈ ರಾಕ್ಷಸನು ನಾಶವಾಗಿ ಹೋಗುವನು" ಎಂದನು. ಬಳಿಕ ಸಮೀಪದಲ್ಲಿದ್ದ ಸಹದೇವನು ಆ ರಾಕ್ಷಸನು ಮೂಢನಾಗಿರುವದನ್ನು ನೋಡಿ, ಧರ್ಮರಾಯನನ್ನು ಕುರಿತು "ಎಲೈ ರಾಯನೆ, ಕ್ಷತ್ರಿಯನು ಯುದ್ಧವನ್ನು ಮಾಡಿ ಶತ್ರುಗಳನ್ನು ಜಯಿಸಬೇಕು; ಹಾಗಲ್ಲದಿದ್ದರೆ ಯುದ್ಧರಂಗದಲ್ಲಿ ತನ್ನ ಪ್ರಾಣಗಳನ್ನಾದರೂ ಬಿಡಬೇಕು. ಇದಕ್ಕಿಂತಲೂ ಕ್ಷತ್ರಿಯನಿಗೆ ಉತ್ತಮವಾದ ಕಾರ್ಯವು ಯಾವದೂ ಇಲ್ಲವು. ಎಲೈ ಧರ್ಮರಾಯನೆ, ಈ ರಾಕ್ಷಸನ ಸಂಗಡ ಯುದ್ಧವನ್ನು ಮಾಡೋಣ. ಕ್ಷಾತ್ರವನ್ನು ತೋರಿಸುವದಕ್ಕೆ ಇದು ಕಾಲವಾಗಿರುವದು. ಇವನ ಸಂಗಡ ನಾವು ಯುದ್ಧಮಾಡಿ ನಾವೇ ಈತನನ್ನು ಜಯಿಸಿದರೂ, ಅಥವಾ ಈತನಿಂದ ನಾವು ಹತರಾದರೂ, ನಮಗೆ ಉತ್ತಮವಾದ ಗತಿಯುಂಟಾಗುವದು. ಈ ಹೊತ್ತು ಸೂರ್ಯನು ಅಸ್ತನಾಗುವಷ್ಟರಲ್ಲಿ ಈ ರಾಕ್ಷಸನು ಜೀವಸಹಿತನಾಗಿ ಇದ್ದದ್ದೇ ಆದರೆ, ಇನ್ನೆಂದಿಗೂ ನಾನು ಕ್ಷತ್ರಿಯನೆಂದು ಹೇಳಿಕೊಳ್ಳತಕ್ಕವನಲ್ಲ" ಎಂದು ನುಡಿದು, "ಎಲೈ ರಾಕ್ಷಸನೆ, ನಾನು ಸಹದೇವನು. ನಿನ್ನ ಸಂಗಡ ಯುದ್ಧಕ್ಕೆಬಂದಿರುವೆನು. ನಿಲ್ಲು ನಿಲ್ಲು. ನೀನು ನನ್ನನ್ನು ಸಂಹರಿಸಿ ದ್ರೌಪದಿಯನ್ನು ತೆಗೆದುಕೊಂಡು ಹೋಗು; ಹಾಗಲ್ಲದಿದ್ದರೆ ನನ್ನಿಂದ ಮರಣವನ್ನು ಹೊಂದಿ ಈಗಲೇ ನೀನು ನೆಲದಲ್ಲಿ ಬೀಳುವನಾಗು" ಎಂದು ನುಡಿಯುತ್ತಿರುವ ಸಮಯದಲ್ಲಿ, ದೈವಯೋಗದಿಂದ ಭೀಮಸೇನನು ಗದೆಯನ್ನು ಕೈಯಲ್ಲಿ ಹಿಡಿದು, ವಜ್ರಪಾಣಿಯಾದ ಇಂದ್ರನಂತೆ ಕಾಣಿಸಿಕೊಂಡು, ನೆಲದಮೇಲೆ ನಿಂತಿದ್ದ ಸಹದೇವನನ್ನೂ ಧರ್ಮರಾಯನನ್ನೂ ನಕುಲನನ್ನೂ ದ್ರೌಪದಿಯನ್ನೂ ಸಹ ಹೊತ್ತುಕೊಂಡು ಮರಣವು ಸಮೀಪಿಸಲು ಮೂಢನಾಗಿ ಭ್ರಾಂತಿಯಿಂದ ಮಾರ್ಗದಲ್ಲಿ ಸುತ್ತಾಡುತ್ತಿರುವ ಆ ರಾಕ್ಷಸನನ್ನು ನೋಡಿ, ಬಹಳವಾಗಿ ಕೋಪಗೊಂಡು ಅವನನ್ನು ಕುರಿತು "ಎಲೈ ಪಾಪಾತ್ಮನೆ, ಪೂರ್ವದಲ್ಲೇ ನಾನು ಶಸ್ತ್ರವಿದ್ಯಾಪರೀಕ್ಷೆ ಮಾಡತಕ್ಕ ಕಾಲದಲ್ಲಿ ನಿನ್ನನ್ನು ತಿಳಿದಿದ್ದೆನು. ಆದರೆ ನೀನು ಬ್ರಾಹ್ಮಣರೂಪದಿಂದ ಅತಿಥಿಯಾಗಿ ಬಂದು ನಮ್ಮಲ್ಲಿದ್ದುಕೊಂಡು, ನಮ್ಮ ವಿಷಯದಲ್ಲಿ ಯಾವ ಅಪಕಾರವನ್ನೂ ಮಾಡದೆ, ನಮಗೆ ಅಪ್ರಿಯವಾದ ಯಾವ ಮಾತನ್ನೂ ಆಡದೆ, ನಮ್ಮೆಲ್ಲರೊಡನೆಯೂ ಋಜುಮಾರ್ಗದಿಂದ ಇದ್ದುಕೊಂಡಿದ್ದೆ. ಆದ್ದರಿಂದ ನಿರಪರಾಧಿಯಾದ ನಿನ್ನನ್ನು ಸಂಹರಿಸತಕ್ಕದ್ದು ಯುಕ್ತವಾದದ್ದಲ್ಲವೆಂದು ಆಗ ಸುಮ್ಮನೇ ಬಿಟ್ಟುಬಿಟ್ಟೆನು. ಆಗ ನಿನ್ನನ್ನು ರಾಕ್ಷಸನೆಂದು ತಿಳಿದು ಕಾಲವು ಪರಿಪಕ್ವವಾಗದಿರುವಾಗ ನಿನ್ನನ್ನು ಸಂಹಾರಮಾಡಿದ್ದರೂ, ಅದರಿಂದ ನಮಗೆ ದುರ್ಗತಿಯಾಗುತ್ತಿತ್ತು. ಈಗ ನಿನಗೆ ಇಂಥಾ ದುರ್ಬುದ್ಧಿಯುಂಟಾಗಿ ದ್ರೌಪದಿಯನ್ನು ಅಪಹರಿಸಿದ್ದರಿಂದ, ನಿನಗೆ ಕಾಲವು ಪರಿಪಕ್ವವಾಗಿರುವದು. ನೀರಿನಲ್ಲಿರುವ ಮೀನು ಗಾಣದಲ್ಲಿ ಸಿಕ್ಕಿಬಿದ್ದಂತೆ ನೀನು ಮೃತ್ಯುವಿಗೆ ಸಿಕ್ಕಿಬಿದ್ದಿರುವೆ. ಮುಂದೆ ನೀನು ಹ್ಯಾಗೆ ಬದುಕುವೆ? ಇವರನ್ನು ಅಪಹರಿಸಿಕೊಂಡು ನೀನು ಯಾವ ಮಾರ್ಗಕ್ಕೆ ಹೋಗಬೇಕೆಂದು ಅಪೇಕ್ಷಿಸಿರುವೆಯೋ, ಆ ಮಾರ್ಗವು ತಪ್ಪಿ ಬಕಹಿಡಿಂಬರು ಹೋದ ಮಾರ್ಗದಲ್ಲಿ ಈಗ ಹೋಗುವನಾಗುತ್ತೀಯೆ" ಎನಲು, ಆ ರಾಕ್ಷಸನು ಭಯಪಟ್ಟು ಧರ್ಮಾದಿಗಳನ್ನು ಕೆಳಕ್ಕೆ ಇಳುಹಿಸಿ, ಯುದ್ಧಸನ್ನದ್ಧನಾಗಿ ನಿಂತು ರೋಷಾವೇಶದಿಂದ ನುಡುಗುತ್ತಿರಲು, ಭೀಮಸೇನನನ್ನು ಕುರಿತು "ಎಲೈ ಭೀಮಸೇನನೆ, ನೀನು ಬರಲಿ ಎಂದು ನಾನು ಸಾವಕಾಶಮಾಡಿದೆನೇ ಹೊರತು ದಿಗ್ಭ್ರಾಂತನಾಗಿ ಬೇರೆ ನಾನು ನಿಂತವನಲ್ಲ. ಮೊದಲು ನೀನು ಯಾವಯಾವ ರಾಕ್ಷಸರನ್ನು ಸಂಹಾರಮಾಡಿರುವೆಯೆಂದು ನಾನು ಕೇಳಿರುವೆನೋ, ಅವರೆಲ್ಲರಿಗೂ ನಿನ್ನ ರಕ್ತದಿಂದಲೇ ತರ್ಪಣವನ್ನು ಮಾಡುತ್ತೇನೆ. ನನ್ನೆದುರಿಗೆ ಯುದ್ಧಕ್ಕೆ ನಿಲ್ಲು" ಎನಲು, ಭೀಮಸೇನನು ಪ್ರಳಯಕಾಲದ ಯಮನಂತೆ ಕ್ರೋಧಾವೇಶವುಳ್ಳವನಾಗಿ, ತುಟಿಗಳನ್ನು ನಾಲಿಗೆಯಿಂದ ಸವರಿಕೊಳ್ಳುತ್ತ,

ನಸುನಕ್ಕು ಭುಜಗಳನ್ನು ತಟ್ಟಿ ಆ ರಾಕ್ಷಸನನ್ನು ಅಟ್ಟಿಕೊಂಡು ಹೋದನು. ಬಳಿಕ ಆ ರಾಕ್ಷಸನು ಯುದ್ಧಸನ್ನದ್ಧನಾದ ಭೀಮಸೇನನನ್ನು ನೋಡಿ, ತಾನೂ ಕೋಪದಿಂದ ತುಟಿಗಳನ್ನು ಸವರಿಕೊಂಡು, ವಜ್ರಪಾಣಿಯಾದ ಇಂದ್ರನನ್ನು ಬಲಿಚಕ್ರವರ್ತಿಯು ಅಟ್ಟಿಕೊಂಡು ಹೋದಂತೆ ಭೀಮಸೇನನನ್ನು ಅಟ್ಟಿದನು. ಆಗ ಅವರಿಬ್ಬರಿಗೂ ದ್ವಂದ್ವಯುದ್ಧವು ಪ್ರಸಕ್ತವಾಗಲು, ಆ ರಾಕ್ಷಸನ ಸಂಗಡ ಯುದ್ಧಮಾಡುವದಕ್ಕೆ ನಕುಲಸಹದೇವರೂ ಸನ್ನದ್ಧರಾದರು. ಆಗ ಭೀಮಸೇನನು ನಕುಲಸಹದೇವರನ್ನು ತಡೆದು, ಆ ರಾಕ್ಷಸನನ್ನು ನಾನೊಬ್ಬನೇ ಸಂಹರಿಸುತ್ತೇನೆಂದು ನುಡಿದು, "ಎಲೈ ಧರ್ಮರಾಯನೆ, ನನ್ನಾಣೆಗೂ ನಿಮ್ಮೆಲ್ಲರ ಆಣೆಗೂ ನಾನು ಮಾಡಿದ ಧರ್ಮದ ಆಣೆಗೂ ಈಗಲೇ ನಾನು ಈ ರಾಕ್ಷಸನನ್ನು ಸಂಹರಿಸುತ್ತೇನೆ. ನೀವೆಲ್ಲರೂ ನೋಡುತ್ತಿರಿ" ಎಂದು ಹೇಳಿ, ಆ ರಾಕ್ಷಸನ ಸಂಗಡ ಹೋರಾಡುವದಕ್ಕೆ ತೊಡಗಿದನು.

ಆಗ ಸಮರ್ಥರಾದ ಅವರಿಬ್ಬರೂ ಬಾಹುಯುದ್ಧಕ್ಕೆ ಉಪಕ್ರಮಮಾಡಿ, ದೇವದಾನವರಂತೆ ಒಬ್ಬರನ್ನೊಬ್ಬರು ಮುಷ್ಟಿಗಳಿಂದ ಪ್ರಹರಿಸುತ್ತ, ವರ್ಷಾಕಾಲದ ಮೇಘಗಳಂತೆ ಗರ್ಜಿಸಿದರು. ಬಳಿಕ ಅವರಿಬ್ಬರೂ ಪರಸ್ಪರವಾಗಿ ಜಯಿಸಬೇಕೆಂದು ತ್ವರೆಪಡುತ್ತ ಸಮೀಪದಲ್ಲಿದ್ದ ವೃಕ್ಷಗಳನ್ನು ಕಿತ್ತುಕೊಂಡು, ಒಬ್ಬ ಸ್ತ್ರೀನಿಮಿತ್ತವಾಗಿ ಪೂರ್ವದಲ್ಲಿ ವಾಲಿಸುಗ್ರೀವರು ಯುದ್ಧಮಾಡಿದಂತೆ ಯುದ್ಧಕ್ಕೆ ಉಪಕ್ರಮಿಸಿ, ಪರಸ್ಪರವಾಗಿ ವೃಕ್ಷಗಳಿಂದ ಹೊಡೆದಾಡುತ್ತ, ಸಮೀಪದಲ್ಲಿದ್ದ ವೃಕ್ಷಗಳನ್ನೆಲ್ಲಾ ತೀರಿಸಿಬಿಟ್ಟರು. ಅವರು ಹೊಡೆದಾಡಿದ ಆ ವೃಕ್ಷಗಳು ಅವರವರ ಮೈಗಳಿಗೆ ತಗಲಿ ಸಣಬಿನ ನಾರಿನಂತಾದವು. ಬಳಿಕ ಅವರಿಬ್ಬರೂ ದೊಡ್ಡದೊಡ್ಡದಾದ ಕಲ್ಲುಬಂಡೆಗಳನ್ನು ತೆಗೆದುಕೊಂಡು, ಎರಡು ಕುಲಪರ್ವತಗಳು ಮೇಘಗಳನ್ನು ತೆಗೆದುಕೊಂಡು ಹೋರಾಡುವಂತೆ ಒಂದು ಮುಹೂರ್ತ ಪರ್ಯಂತರ ಹೋರಾಡಿದರು. ಸಿಡಿಲಿನ ಪೆಟ್ಟಿನಂತೆ ಅತಿವೇಗವುಳ್ಳ ಆ ಕಲ್ಲುಪೆಟ್ಟುಗಳಿಂದ ಒಬ್ಬರನ್ನೊಬ್ಬರು ಓಡಾಡಿಸಿಕೊಂಡು ಹೊಡೆದಾಡುತ್ತ, ಆನೆಗಳಂತೆ ಒಬ್ಬರನ್ನೊಬ್ಬರು ಎಳೆದಾಡುತ್ತ, ಒಬ್ಬರಮೇಲೊಬ್ಬರು ಮುಷ್ಟಿಗಳಿಂದ ಬಲವಾಗಿ ಪೆಟ್ಟಿಕ್ಕಿದರು. ಅದರಿಂದ ಅವರ ಶರೀರಗಳಲ್ಲಿ ಕಟಕಟಾ ಎಂದು ಶಬ್ದವುಂಟಾಯಿತು. ಆಗ ಭೀಮಸೇನನು ಐದು ಶಿರಸ್ಸುಗಳಿಂದ ಕೂಡಿದ ಸರ್ಪದಂತಿರುವ ತನ್ನ ಕಯ್ಯನ್ನು ದೃಢವಾಗಿ ಹಿಡಿಕಟ್ಟಿಕೊಂಡು, ವೇಗದಿಂದ ಆ ರಾಕ್ಷಸನ ತಲೆಯಮೇಲೆ ಪೆಟ್ಟಿಕ್ಕಿದನು. ಆ ಪೆಟ್ಟಿನಿಂದ ಆ ರಾಕ್ಷಸನು ಬಹಳವಾಗಿ ಬಳಲಿದನು. ಆ ಸಮಯದಲ್ಲಿ ಭೀಮಸೇನನು ತನ್ನ ಎರಡು ಬಾಹುಗಳಿಂದಲೂ ಆ ರಾಕ್ಷಸನನ್ನು ಮೇಲಕ್ಕೆತ್ತಿ ನೆಲದಮೇಲೆ ಕುಕ್ಕಿ, ಅವನ ಶರೀರವೆಲ್ಲಾ ಜಜ್ಜುಜಜ್ಜಾಗುವಂತೆ ಹೊಸಗಿ, ಮೊಳಕೈಯಿಂದ ಗುದ್ದಿಗುದ್ದಿ ಕತ್ತನ್ನು ಮುರಿದಿಕ್ಕಿದನು. ಆಗ ಭೀಮಸೇನನು ಮುರಿದು ಬಿಸಾಡಿದ ಆ ರಾಕ್ಷಸನ ತಲೆಯು, ಹಲ್ಲುಮುಡಿಯನ್ನು ಕಚ್ಚಿಕೊಂಡು ಮುಂದಕ್ಕೆ ಹೊರಟಿರುವ ಕಣ್ಣುಗುಡ್ಡೆಗಳುಳ್ಳದ್ದಾಗಿ, ಕೆಳಕ್ಕೆ ಕಳಚಿಬಿದ್ದ ತಾಳೇಹಣ್ಣಿನಂತೆ ಕಾಣಿಸಿಕೊಂಡು ರಕ್ತವನ್ನು ಸ್ರವಿಸುತ್ತ ಭಯಂಕರವಾಗಿತ್ತು. ಈ ರೀತಿಯಾಗಿ ಭೀಮಸೇನನು ಜಟಾಸುರನನ್ನು ಸಂಹಾರಮಾಡಿ, ಧರ್ಮರಾಯನ ಸಮೀಪದಲ್ಲಿ ಬಂದು ನಿಂತನು. ಆಗ ಅಲ್ಲಿದ್ದ ಬ್ರಾಹ್ಮಣರು ಇಂದ್ರನನ್ನು ಸ್ತೋತ್ರಮಾಡಿದಂತೆ ಭೀಮಸೇನನನ್ನು ಸ್ತೋತ್ರಮಾಡಿದರು.

## ೧೫೯ನೇ ಅಧ್ಯಾಯ.—(ಗಂಧಮಾದನ ದರ್ಶನ).

ಅನಂತದಲ್ಲಿ ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಜಟಾಸುರನ ವಧೆಯಾಗಲು, ಧರ್ಮರಾಯನು ನರನಾರಾಯಣಾಶ್ರಮಕ್ಕೆ ಬಂದು ವಾಸಮಾಡುತ್ತ, ಅರ್ಜುನನನ್ನು ಸ್ಮರಿಸಿಕೊಂಡು ಭೀಮನನ್ನೂ ನಕುಲನನ್ನೂ ಸಹದೇವನನ್ನೂ ದ್ರೌಪದಿಯನ್ನೂ ಕುರಿತು "ನಾವು ಸುಖವಾಗಿ ಈ ಅರಣ್ಯದಲ್ಲಿ ಸಂಚರಿಸುತ್ತ ನಾಲ್ಕು ವರ್ಷಗಳನ್ನು ಕಳೆದೆವು. ಅಸ್ತ್ರವಿದ್ಯಾಭ್ಯಾಸಕ್ಕಾಗಿ ಸ್ವರ್ಗಕ್ಕೆ ಹೋದ ಅರ್ಜುನನ ಸಂಗಡ, ಐದನೆಯ ವರ್ಷದಲ್ಲಿ ನೀನು ಮರಳಿ ಇಲ್ಲಿಗೆ ಬಂದುಬಿಡಬೇಕೆಂದು ಸಂಕೇತಮಾಡಿ

ದ್ದೆನು. ಪುಷ್ಪಿತವಾದ ವೃಕ್ಷಗಳಿಂದ ಮನೋಹರವಾಗಿಯೂ ಕೋಗಿಲೆಮೊದಲಾದ ಪಕ್ಷಿಗಳ ಧ್ವನಿಗಳಿಂದ ರಮಣೀಯವಾಗಿಯೂ, ಸಿಂಹವ್ಯಾಘ್ರಾದಿ ಘೋರಮೃಗಗಳಿಂದ ಭಯಂಕರವಾಗಿಯೂ, ವಿಕಸಿತವಾದ ಕಮಲೋತ್ಪಲ ಮೊದಲಾದ ಪುಷ್ಪಗಳಿಂದ ಅಲಂಕೃತವಾಗಿಯೂ, ಸುರಾಸುರರಿಂದ ಪೂಜಿತವಾಗಿಯೂ, ಪುಣ್ಯತಮವಾಗಿಯೂ, ಪರಿಶುದ್ಧವಾಗಿಯೂ, ಇರುವ ಕೈಲಾಸಪರ್ವತದಲ್ಲಿ ಅರ್ಜುನನನ್ನು ನೋಡಬೇಕೆಂಬ ಅಪೇಕ್ಷೆಯುಳ್ಳವರಾಗಿ ಸಂಕೇತಮಾಡಿಕೊಂಡು ನಾವು ಇಲ್ಲಿಗೆ ಬಂದೆವು. ಅರ್ಜುನನೂ ಐದು ವರುಷ ವಿದ್ಯಾಭ್ಯಾಸದ ನಿಮಿತ್ತವಾಗಿ ಸ್ವರ್ಗದಲ್ಲಿ ಇದ್ದು ಬಳಿಕ ಇಲ್ಲಿಗೆ ಬರುವೆನೆಂದು ಸಮಯ ನಿಬಂಧನೆಯನ್ನು ಮಾಡಿಕೊಂಡು ಹೋಗಿರುವನು. ಆ ಅರ್ಜುನನು ಅಸ್ತ್ರವಿದ್ಯಾಪಾರಂಗತನಾಗಿ ದೇವಲೋಕದಿಂದ ಇಲ್ಲಿಗೆ ಬಂದದ್ದನ್ನು ನಾವು ನೋಡುವೆವು" ಎಂದು ನುಡಿದು, ಬಳಿಕ ಆ ಆಶ್ರಮದಲ್ಲಿದ್ದ ತಪಸ್ವಿಗಳಿಗೆ ಅರ್ಜುನನು ಸ್ವರ್ಗಕ್ಕೆ ಹೋದ ವೃತ್ತಾಂತವನ್ನೆಲ್ಲಾ ತಿಳುಹಿಸಿ, ಅವರಿಗೆ ಪ್ರದಕ್ಷಿಣನಮಸ್ಕಾರವನ್ನು ಮಾಡಿದನು. ಆಗ ಆ ಬ್ರಾಹ್ಮಣರು ಸಂತುಷ್ಟರಾಗಿ ಧರ್ಮರಾಯನಿಗೆ ಕುಶಲಪ್ರಶ್ನಪೂರ್ವಕವಾಗಿ ಆಶೀರ್ವಾದವನ್ನು ಮಾಡಿ "ಎಲೈ ಧರ್ಮರಾಯನೆ, ನಿನಗೆ ಈಗ ಬಂದಿರುವ ಕಷ್ಟವು ನಿವೃತ್ತಿಯಾಗಿ ಮುಂದೆ ಸುಖವುಂಟಾಗುವದು. ಧರ್ಮಜ್ಞನಾದ ನೀನು ಕ್ಷತ್ರಿಯಧರ್ಮದಿಂದ ಈ ಕಷ್ಟವನ್ನು ಪರಿಹರಿಸಿಕೊಂಡು ಪುನಃ ರಾಜ್ಯವನ್ನು ಪಡೆಯುವೆ" ಎಂದು ಹೇಳಿ ಸಂತೋಷಪಟ್ಟರು.

ಬಳಿಕ ಧರ್ಮರಾಯನು ಕೆಲವು ದಿವಸ ಅಲ್ಲಿ ವಾಸಮಾಡಿ, ತಮ್ಮಂದಿರಿಂದಲೂ ಬ್ರಾಹ್ಮಣರಿಂದಲೂ ಕೂಡಿ ಲೋಮಶನಿಂದ ರಕ್ಷಿತನಾಗಿ ಮುಂದಕ್ಕೆ ಪಯಣಮಾಡಿ, ಸ್ವಲ್ಪದೂರ ಪಾದಚಾರಿಯಾಗಿಯೂ ಸ್ವಲ್ಪದೂರ ಘಟೋತ್ಕಚ ಮೊದಲಾದ ರಾಕ್ಷಸರ ಹೆಗಲಮೇಲೆಯೂ ತನಗೆ ಸಂಭವಿಸಿದ ಅನೇಕ ಕಷ್ಟಗಳನ್ನು ಚಿಂತಿಸುತ್ತ, ಸಿಂಹವ್ಯಾಘ್ರ ಮೊದಲಾದವುಗಳಿಂದ ವ್ಯಾಪ್ತವಾದ ಉತ್ತರದಿಕ್ಕಿಗೆ ಹೊರಟು, ಮಾರ್ಗದಲ್ಲಿ ಕೈಲಾಸಪರ್ವತವನ್ನೂ ಮೈನಾಕಪರ್ವತವನ್ನೂ ಗಂಧಮಾದನಪರ್ವತದ ಸಮೀಪದಲ್ಲಿರುವ ಇನ್ನೂ ಅನೇಕ ಪರ್ವತಗಳನ್ನೂ ಹಿಮಾಲಯವನ್ನೂ ಆ ಪರ್ವತಗಳಿಂದ ಪ್ರವಹಿಸುತ್ತಿರುವ ಅನೇಕ ನದಿಗಳನ್ನೂ ನೋಡುತ್ತ, ಹದಿನೇಳು ದಿನದಲ್ಲಿ ಹಿಮವತ್ಪರ್ವತದ ಹಿಂಭಾಗಕ್ಕೆ ಹೋಗಿ ಸೇರಿದನು. ಈ ರೀತಿಯಾಗಿ ಪಾಂಡವರು ಪ್ರಯಾಣಮಾಡಿ ಗಂಧಮಾದನಪರ್ವತಕ್ಕೆ ಸಮೀಪದಲ್ಲಿ ಪುಣ್ಯತಮವಾದ ಹಿಮಾಲಯದ ಹಿಂಭಾಗದಲ್ಲಿ ನಾನಾವಿಧವಾದ ವೃಕ್ಷಗಳಿಂದಲೂ ಲತೆಗಳಿಂದಲೂ ನೀರಿನ ಸುಳಿಯಲ್ಲಿ ಹುಟ್ಟಿ ಪುಷ್ಪಿತವಾದ ವೃಕ್ಷಗಳಿಂದಲೂ ಪರಿವೃತವಾಗಿರುವ ವೃಷಪರ್ವರಾಯನ ಆಶ್ರಮವನ್ನು ನೋಡಿದರು. ಬಳಿಕ ಪಾಂಡವರು ಆ ಆಶ್ರಮವನ್ನು ಪ್ರವೇಶಿಸಿ, ರಾಜರ್ಷಿಯಾದ ವೃಷಪರ್ವರಾಯನನ್ನು ನೋಡಿ ಆತನಿಗೆ ನಮಸ್ಕಾರವನ್ನು ಮಾಡಿ, ಮಾರ್ಗಾಯಾಸವನ್ನು ಪರಿಹರಿಸಿಕೊಂಡರು. ಆಗ ರಾಜರ್ಷಿಯಾದ ವೃಷಪರ್ವರಾಯನು ಪುತ್ರರಂತೆ ಪಾಂಡವರನ್ನು ನೋಡಿ ಆನಂದವನ್ನು ಹೊಂದಿದನು. ಪಾಂಡವರೂ ಆತನಿಂದ ಸನ್ಮಾನಿತರಾಗಿ, ಏಳುರಾತ್ರಿ ಅಲ್ಲಿ ವಾಸಮಾಡಿ, ಎಂಟನೇದಿನ ಆ ಲೋಕಪ್ರಸಿದ್ಧನಾದ ರಾಜನ ಅಪ್ಪಣೆಯನ್ನು ತೆಗೆದುಕೊಂಡು, ತಮ್ಮ ಹಿಂದೆ ಬಂದಿದ್ದ ಬ್ರಾಹ್ಮಣರನ್ನು ಒಬ್ಬೊಬ್ಬರನ್ನಾಗಿ ಆತನಿಗೆ ತೋರಿಸಿ, ಬಂಧುಗಳಲ್ಲಿ ತಮ್ಮ ದ್ರವ್ಯವನ್ನು ಇಡುವಂತೆ ಅವರನ್ನು ಆತನಲ್ಲಿ ಇಟ್ಟು, ತಮ್ಮಲ್ಲಿದ್ದ ಆಭರಣಗಳನ್ನೂ ಯಜ್ಞೋಪಕರಣವಾದ ಪಾತ್ರೆಗಳನ್ನೂ ಗೃಹೋಪಕರಣಸಾಮಗ್ರಿಗಳನ್ನೂ ರತ್ನಗಳನ್ನೂ ಆತನ ಆಶ್ರಮದಲ್ಲಿ ಬಿಟ್ಟು, ಮುಂದಕ್ಕೆ ಪ್ರಯಾಣಮಾಡಲುಜ್ಜುಗಿಸಿದರು. ಆಗ ವೃಷಪರ್ವರಾಯನು ಭೂತಭವಿಷ್ಯತ್ಕಾಲಗತಿಯನ್ನು ಬಲ್ಲವನೂ ಸರ್ವಧರ್ಮಗಳನ್ನೂ ತಿಳಿದವನೂ ಆದ್ದರಿಂದ, ಪಾಂಡವರಿಗೆ ಮಕ್ಕಳಿಗೆ ಬುದ್ಧಿಯನ್ನು ಹೇಳುವಂತೆ ಬುದ್ಧಿಯನ್ನು ಹೇಳಿ, ಮುಂದಕ್ಕೆ ಹೋಗತಕ್ಕ ಮಾರ್ಗವನ್ನು ತೋರಿಸಿದನು. ಆ ಬಳಿಕ ಪಾಂಡವರು ಬ್ರಾಹ್ಮಣರ ಆಶೀರ್ವಾದವನ್ನೂ ವೃಷಪರ್ವರಾಯನ ಅನುಜ್ಞೆಯನ್ನೂ ಪಡೆದು, ಸಂತೋಷದಿಂದ ಪಾದಚಾರಿಗಳಾಗಿ ಉತ್ತರದಿಕ್ಕಿಗೆ ಹೊರಟು, ನಾನಾವಿಧವಾದ ಮೃಗಗಳಿಂದಲೂ ನಾನಾಪ್ರಕಾರವಾದ ವೃಕ್ಷಗಳಿಂದಲೂ ಕೂಡಿರುವ ದುರ್ಗಮವಾದ ಪರ್ವತದ ಅರೆತಪ್ಪಲ ಪ್ರದೇಶಗಳಲ್ಲಿ ನಡೆದು ನಾಲ್ಕನೇದಿನ ಶ್ವೇತಪರ್ವತವನ್ನು ನೋಡಿದರು. ಬಳಿಕ ಅವರೆಲ್ಲರೂ ವೃಷಪರ್ವರಾಯನು ತೋರಿಸಿದ ಮಾರ್ಗದಲ್ಲೇ ಹೊರಟು, ಮಹತ್ತಾದ ಮೇಘದಂತೆ ಉದಕದಿಂದ ಪೂರ್ಣವಾಗಿ ರತ್ನಮಯವಾದ ಶಿಲೆಗಳಿಂದಲೂ ಸುವರ್ಣದ ಶಿಲೆಗಳಿಂದಲೂ ಬೆಳ್ಳಿಯ ಶಿಲೆಗಳಿಂದಲೂ ಪ್ರಕಾ

ಶಿಸುವ ಆ ಪರ್ವತದ ಸಮೀಪಕ್ಕೆ ಹೋಗಿ, ನಾನಾವಿಧವಾದ ವೃಕ್ಷಗಳನ್ನೂ ಆ ಪರ್ವತದ ಉಪರಿಭಾಗದಲ್ಲಿರುವ ದುರ್ಗಮವಾದ ಗುಹೆಗಳನ್ನೂ ನೋಡುತ್ತ; ಅಗಮ್ಯವಾದ ಆ ಮಾರ್ಗದಲ್ಲಿ ದ್ರೌಪದಿ ಮೊದಲಾದವರಿಗೆ ಯಾರಿಗೂ ಆಯಾಸವಿಲ್ಲದೆ ಮುಂದಕ್ಕೆ ನಡೆದು ; ಅನೇಕ ಮೃಗಪಕ್ಷಿಗಳಿಂದಲೂ ಕಪಿಗಳಿಂದಲೂ ಸೇವಿತವಾಗಿಯೂ, ನಾನಾ ಪ್ರಕಾರವಾದ ವೃಕ್ಷಗಳಿಂದಲೂ ಲತೆಗಳಿಂದಲೂ ಮನೋಹರವಾಗಿಯೂ, ಪದ್ಮಸರೋವರಗಳಿಂದಲೂ ತಟಾಕಗಳಿಂದಲೂ ಮಹತ್ತಾದ ವನದಿಂದಲೂ ಪುಣ್ಯತಮವಾಗಿಯೂ, ಇರುವ ಮಾಲ್ಯವಂತವೆಂಬ ಪರ್ವತಕ್ಕೆ ಹೋದರು. ಬಳಿಕ ಕಿಂಪುರುಷರಿಂದಲೂ ಸಿದ್ಧಚಾರಣರಿಂದಲೂ ವಿದ್ಯಾಧರರಿಂದಲೂ ಕಿನ್ನರಸ್ತ್ರೀಯರಿಂದಲೂ ಸೇವಿತವಾಗಿಯೂ ಆನೆಗಳಿಂದಲೂ ಸಿಂಹಗಳಿಂದಲೂ ವ್ಯಾಘ್ರಗಳಿಂದಲೂ ವ್ಯಾಪ್ತವಾಗಿಯೂ, ಶರಭಮೃಗದ ಧ್ವನಿಯಿಂದ ಪ್ರತಿಧ್ವನಿಯುಳ್ಳದ್ದಾಗಿಯೂ, ಅನೇಕ ಮೃಗಗಳಿಂದ ಸೇವಿತವಾಗಿಯೂ, ಆ ಪ್ರಸಿದ್ಧವಾದ ನಂದನವನಕ್ಕೆ ಸಮಾನವಾಗಿಯೂ, ಇರುವ ಗಂಧಮಾದನವನ್ನು ನೋಡಿ ಸಂತೋಷಪಟ್ಟರು. ಅವರೆಲ್ಲರೂ ದ್ರೌಪದಿಯಿಂದಲೂ ಬ್ರಾಹ್ಮಣರಿಂದಲೂ ಕೂಡಿ, ಹೃದಯಾನಂದಕರವಾದ ಶುಭವಾದ ಆ ವನವನ್ನು ಪ್ರವೇಶಮಾಡಿ ; ಪ್ರಿಯವಾಗಿಯೂ ಇಂಪಾಗಿಯೂ ಮನೋಹರವಾಗಿಯೂ ಇರುವ ಪಕ್ಷಿಗಳ ಧ್ವನಿಗಳನ್ನು ಕೇಳುತ್ತ; ಎಲ್ಲಾ ಋತುಗಳ ಪುಷ್ಪಫಲಗಳಿಂದ ಭರಿತಗಳಾಗಿ ಫಲಭಾರದಿಂದ ಬಾಗಿರುವ ವೃಕ್ಷಗಳನ್ನು ನೋಡುತ್ತ ಮುಂದಕ್ಕೆ ಹೊರಟು ; ಆ ಪರ್ವತದ ಅರೆತಪ್ಪಲಲ್ಲಿ ಮಾವು, ಹಿಪ್ಪೆ, ತೆಂಗು, ಅಂಜೂರ, ದಾಳಿಂಬೆ, ಸೀಬಿ, ಹಲಸು, ಕಾಡುಹೆರಳೆ, ಖರ್ಜೂರ, ಬಾಳೆ, ವೇತಸ, ಬೇಲ, ಕ್ಷೌದ್ರ, ನೀಪ, ಬಿಲ್ವ, ನಿಂಬೆ, ಬೇವು, ಅತ್ತಿ, ಆಲ, ಅರಳಿ, ಗೋಣಿ, ಗೇರು, ಎಲಚಿ, ನೆಲ್ಲಿ, ತಾರೆ, ಹಿಂಗುಳ, ಕರಮರ್ದ, ಹುಣಸೆ, ಮೊದಲಾದ ವೃಕ್ಷಗಳನ್ನೂ ; ಅಮೃತಕ್ಕೆ ಸಮಾನವಾಗಿ ರುಚಿಕರಗಳಾದ ಫಲಗಳುಳ್ಳ ಇನ್ನೂ ಅನೇಕ ವೃಕ್ಷಗಳನ್ನೂ ; ಸಂಪಿಗೆ, ಕೇತಕಿ, ಕೋವಿದಾರ, ದೇವದಾರು, ಗೋರಂಟೆ, ಸುರಗಿ, ಏಳಿಲೇಬಾಳೆ, ಕಂಚುವಾಳ, ಪಾದರಿ, ಗಿರಿಮಲ್ಲಿಗೆ, ಪಾರಿಜಾತ, ಮಂದಾರ, ಶಾಲೆ, ತಾಳೆ, ಹೊಂಗೆ, ಬೂರುಗ, ಮುತ್ತಗ, ಶಿಂಶುಪ, ಸರಳ, ದೇವದಾರು ಮೊದಲಾದ ವೃಕ್ಷಗಳನ್ನೂ; ಹಂಸೆ, ನೀರುಕೋಳಿ, ಚಕೋರ, ಕೋಗಿಲೆ, ಕಲವಿಂಕ, ಚಾತಕ, ಚೀರುದುಂಬಿ, ಮೊದಲಾದ ಪಕ್ಷಿಗಳ ಧ್ವನಿಗಳಿಂದ ರಮಣೀಯವಾಗಿಯೂ, ಅನೇಕ ಜಲಚರಪ್ರಾಣಿಗಳಿಂದ ರಮ್ಯವಾಗಿಯೂ, ಶತಪತ್ರ, ಕಮಲ, ಕಲ್ಹಾರ, ಕನ್ನೈದಿಲೆ, ರಕ್ತೋತ್ಪಲ, ಮೊದಲಾದ ಪುಷ್ಪಗಳಿಂದ ಕಂಗೊಳಿಸುತ್ತಿರುವದಾಗಿಯೂ, ತಾವರೇಹೂವಿನಲ್ಲಿದ್ದ ಧೂಳುಗಳನ್ನು ಮಯ್ಯಲ್ಲಿ ತುಂಬಿಕೊಂಡು ಮನೋಹರವಾಗಿ ಝುಂಕಾರವನ್ನು ಮಾಡುತ್ತಿರುವ ತುಂಬಿಗಳಿಂದ ಶ್ಲಾಘ್ಯವಾಗಿಯೂ, ಇರುವ ಸರೋವರಗಳನ್ನೂ ತಟಾಕಗಳನ್ನೂ ನೋಡಿದರು. ಆ ಪ್ರದೇಶದಲ್ಲಿ ಹಲವು ನವಿಲುಗಳು ಬಳ್ಳಿಗಳ ಹೊದರುಗಳಮೇಲೆ ಹೆಣ್ಣುನವಿಲುಗಳೊಡನೆ ಕುಳಿತುಕೊಂಡು, ಮೇಘಗಳೆಂಬ ವಾದ್ಯಗಳ ಧ್ವನಿಯನ್ನು ಕೇಳಿ ಅಧಿಕವಾದ ಮನ್ಮಥವಿಕಾರವನ್ನು ಹೊಂದಿ, ಸಂಗೀತದಂತೆ ಮಧುರವಾದ ಕೇಕಾಧ್ವನಿಯನ್ನು ಮಾಡುತ್ತ, ವಿಚಿತ್ರವಾದ ಗರಿಗಳನ್ನು ಕೆದರಿಕೊಂಡು ಮದೋನ್ಮತ್ತಗಳಾಗಿ ಕುಣಿಯುತ್ತಿದ್ದವು. ಮತ್ತು ಕೆಲವು ನವಿಲುಗಳು ಅಲ್ಲಲ್ಲಿ ಬೆಟ್ಟಮಲ್ಲಿಗೇ ಗಿಡಗಳ ಮೇಲೆ ಕುಳಿತು, ತಮ್ಮ ಗರಿಗಳನ್ನು ಕೆದರಿಕೊಂಡು ಆ ಗಿಡಗಳಿಗೆ ಕಿರೀಟಗಳಂತೆ ಕಾಣಿಸುತ್ತಿದ್ದವು. ಒಂದೆಡೆಯಲ್ಲಿ ಸಿಂಧುವಾರವೃಕ್ಷಗಳು ಅಲ್ಲಲ್ಲಿರುವ ಪರ್ವತಗಳ ಶಿಖರಗಳಲ್ಲಿ ಹೊಂಬಣ್ಣವಾದ ಪುಷ್ಪಗಳಿಂದ ಕೂಡಿ ಪ್ರಕಾಶಿಸುತ್ತ ಮನ್ಮಥನ ತೋಮರಾಯುಧವೋ ಎಂಬಂತೆ ಕಂಗೊಳಿಸುತ್ತಿದ್ದವು. ಮತ್ತೊಂದೆಡೆಯಲ್ಲಿ ಕರ್ಣಪೂರದಂತೆ ಶೋಭಿಸುವ ವಿಕಸಿತವಾದ ಪುಷ್ಪಗಳನ್ನು ತಾಳಿರುವ ಕರ್ಣಿಕಾರವೃಕ್ಷಗಳೂ, ಅಲ್ಲಲ್ಲಿ ಹೂವುಬಿಟ್ಟು ರಮಣೀಯವಾಗಿ ಮನ್ಮಥನ ಬಾಣಗಳನ್ನು ತುಂಬಿಕೊಂಡಿರುವಂತೆ ಕಾಣಿಸುತ್ತ ಕಾಮುಕರಿಗೆ ಸಂತೋಷವನ್ನುಂಟುಮಾಡುತ್ತಿರುವ ಗೋರಂಟೇಮರಗಳೂ, ಅಲ್ಲಲ್ಲೇ ನೂತನನೂತನವಾಗಿ ರಚಿತವಾಗಿರುವಂತೆ ಮನೋಹರವಾಗಿ ತೋರುತ್ತಿರುವ ತಿಲಕವೃಕ್ಷಗಳೂ, ತುಂಬಿಗಳು ಝುಂಕಾರಮಾಡುತ್ತಿರಲು ಮನ್ಮಥನ ಬಾಣಗಳೋ ಎಂಬಂತೆ ತೋರುತ್ತಿರುವ ಸೀಮಾವಿನ ಹೂಗೊಂಚಲುಗಳೂ ಶೋಭಿಸುತ್ತಿದ್ದವು. ಇನ್ನೊಂದೆಡೆಯಲ್ಲಿ ನಾನಾವಿಧವೃಕ್ಷಗಳು ಸುವರ್ಣಚ್ಛಾಯೆಯುಳ್ಳವುಗಳಾದ್ದರಿಂದಲೇ ಕಾಡುಗಿಚ್ಚಿಗೆ ಸಮಾನವಾಗಿಯೂ, ಕೆಂಪಾಗಿಯೂ, ಕಪ್ಪಾಗಿಯೂ, ವೈಡೂರ್ಯವರ್ಣವಾಗಿಯೂ, ಬಿಳುಪಾಗಿಯೂ, ಇರುವ ಅನೇಕವಿಧವಾದ ಪುಷ್ಪಗಳನ್ನು ತಾಳಿ ಕಂಗೊಳಿಸುತ್ತಿದ್ದವು. ಅಲ್ಲಲ್ಲಿರುವ

ಉಪಪರ್ವತಗಳ ಶಿಖರಭಾಗಗಳಲ್ಲಿ ಶಾಲ, ತಾಳ, ತಮಾಲ, ವಕುಳ, ಪಾಟಲ ಮೊದಲಾದ ವೃಕ್ಷಗಳು ಆ ಗಂಧಮಾದನಪರ್ವತಕ್ಕೆ ಹಾರವನ್ನು ಹಾಕಿದಂತೆ ಕಾಣುತ್ತಿದ್ದವು. ಅಲ್ಲಲ್ಲಿ ಅನೇಕ ಸರೋವರಗಳು ಬಿಳೀ ರಕ್ಕೆಗಳುಳ್ಳ ಕಲಹಂಸಪಕ್ಷಿಗಳಿಂದ ಕೂಡಿಕೊಂಡು, ಸಾರಸಪಕ್ಷಿಗಳ ಧ್ವನಿಯಿಂದ ಮನೋಹರವಾಗಿ, ತಾವರೆ ಕನ್ನೈದಿಲೆ ಮೊದಲಾದ ಪುಷ್ಪಗಳಿಂದ ಶೋಭಿಸುತ್ತಾ, ಸುಖಕರವೂ ಶೀತಳವೂ ಮಧುರವೂ ಆದ ಉದಕದಿಂದ ಪೂರಿತವಾಗಿ ಸ್ಫಟಿಕದಂತೆ ನಿರ್ಮಲವಾಗಿ ಪ್ರಕಾಶಿಸುತ್ತಿದ್ದವು. ಪಾಂಡವರು ಇವುಗಳನ್ನೆಲ್ಲ ಕ್ರಮವಾಗಿ ನೋಡುತ್ತ, ವಿಕಸಿತವಾದ ಪುಷ್ಪಗಳ ಪರಿಮಳವನ್ನು ಆಘ್ರಾಣಿಸುತ್ತ, ರಸವತ್ತಾದ ಫಲಗಳನ್ನು ಸ್ವೀಕರಿಸುತ್ತ, ಆಶ್ಚರ್ಯಪಟ್ಟು ಆ ವನವನ್ನು ಒಳಹೊಕ್ಕರು. ಆ ಸಮಯದಲ್ಲಿ ಕಮಲ, ಉತ್ಪಲ, ಕಲ್ಹಾರ, ಪುಂಡರೀಕ ಮೊದಲಾದ ಪುಷ್ಪಗಳ ಸುಗಂಧವನ್ನು ತಳೆದು ಸುಖವಾಗಿ ಮಂದಮಾರುತವು ಬೀಸಲು, ಅದರಿಂದ ಸಕಲರೂ ತಮ್ಮ ಮಾರ್ಗಾಯಾಸವನ್ನು ಪರಿಹರಿಸಿಕೊಂಡರು.

ಬಳಿಕ ಧರ್ಮರಾಯನು ಸಂತುಷ್ಟಚಿತ್ತನಾಗಿ ಭೀಮಸೇನನನ್ನು ಕುರಿತು “ಎಲೈ ಭೀಮಸೇನನೆ, ಈ ಗಂಧಮಾದನಪರ್ವತದಲ್ಲಿ ಬಗೆಬಗೆಯಾದ ಪತ್ರಗಳನ್ನೂ ಪುಷ್ಪಗಳನ್ನೂ ಫಲಗಳನ್ನೂ ತಾಳಿರುವ ವೃಕ್ಷಗಳೂ, ಹೂಬಿಟ್ಟಿರುವ ಬಳ್ಳಿಗಳೂ, ಕೋಗಿಲೆಗಳ ಧ್ವನಿಗಳಿಂದ ರಮ್ಯವಾಗಿರುವವು ನೋಡು. ಇಲ್ಲಿರುವ ವೃಕ್ಷಗಳೊಳಗೆ ಯಾವುದರೂ ಮುಳ್ಳಿಲ್ಲದೆ, ಎಲ್ಲವೂ ಮನೋಹರವಾದ ಎಲೆಗಳಿಂದಲೂ ಹಣ್ಣುಗಳಿಂದಲೂ ಕೂಡಿರುವವು ನೋಡಿದೆಯಾ ! ತುಂಬಿಗಳ ಝುಂಕಾರದಿಂದೊಪ್ಪುತ್ತಿರುವ ತಾವರೆಗಳುಳ್ಳ ಸರೋವರಗಳಲ್ಲಿ ಹೆಣ್ಣಾನೆಗಳೊಡಗೂಡಿ ಗಂಡಾನೆಗಳು ಸ್ವೇಚ್ಛೆಯಿಂದ ವಿಹರಿಸುತ್ತಿರುವವು ನೋಡು. ಅರಳಿದ ಕಮಲಗಳನ್ನು ತಾಳಿರುವ ಈ ಲತೆಯು ಪುಷ್ಪಹಾರವನ್ನು ಧರಿಸಿ ದಿವ್ಯರೂಪವನ್ನು ತಾಳಿದ ಲಕ್ಷ್ಮೀದೇವಿಯಂತೆ ಕಾಣಿಸುತ್ತಿರುವದು ಎಲೈ ವೃಕೋದರನೆ, ದೇವತೆಗಳ ವಿಹಾರಕ್ಕೆ ಯೋಗ್ಯವಾದ ಈ ಮಂಗಳಕರವಾದ ಪ್ರದೇಶಗಳನ್ನು ನೋಡು. ಮನುಷ್ಯರು ಸಂಚರಿಸತಕ್ಕ ಮಾರ್ಗಗಳನ್ನು ಅತಿಕ್ರಮಿಸಿ ಈ ದೇವಮಾರ್ಗಕ್ಕೆ ಬಂದು ಸೇರಿದ್ದರಿಂದ ನಾವೂ ಸಿದ್ಧರಾದೆವು. ಈ ಗಂಧಮಾದನಪರ್ವತದ ಅರೆತಪ್ಪಲುಗಳಲ್ಲಿರುವ ಈ ಶ್ರೇಷ್ಠವಾದ ವೃಕ್ಷಗಳು ಹೂವು ಬಿಟ್ಟಿರತಕ್ಕ ಲತೆಗಳಿಂದ ಆಲಿಂಗಿತಗಳಾಗಿ ಶೋಭಿಸುತ್ತಿರುವವು. ಈ ಪರ್ವತದ ತಪ್ಪಲುಗಳಲ್ಲಿ ಹೆಣ್ಣುನವಿಲುಗಳೊಡಗೂಡಿ, ಮದೋನ್ಮತ್ತಗಳಾಗಿರುವ ನವಿಲುಗಳು ಮನೋಹರವಾಗಿ ಕೇಕಾಧ್ವನಿಗಳನ್ನು ಮಾಡುತ್ತಿರುವವು ಕೇಳು. ಚಕೋರ, ಶತಪತ್ರ, ಕೋಗಿಲೆ, ಸಾರಿಕೆ ಮೊದಲಾದ ಪಕ್ಷಿಗಳು ಪಲ್ಲವಿಸಿ ಪುಷ್ಪಿತವಾಗಿರುವ ಈ ಮರಗಳ ಮೇಲೆ ಬಂದು ಸೇರುತ್ತಿರುವವು ನೋಡು. ಕೆಂಪಾಗಿಯೂ, ಹೊಂಬಣ್ಣವಾಗಿಯೂ, ಎಳೆಗೆಂಪಾಗಿಯೂ, ಇರುವ ಕೆಲವು ಚಕೋರಪಕ್ಷಿಗಳು ಈ ಮರಗಳ ಕೊನೆಗಳಲ್ಲಿ ಕುಳಿತುಕೊಂಡು ಪರಸ್ಪರವಾಗಿ ನೋಡುತ್ತಿರುವವು. ಹಸುರು ಬಣ್ಣವಾಗಿಯೂ ಸ್ವಲ್ಪಸ್ವಲ್ಪ ಕೆಂಪುಬಣ್ಣವಾಗಿಯೂ ಇರುವ ಗರಿಕೆ ಬೆಳೆದಿರುವ ಈ ಪ್ರದೇಶದಲ್ಲಿ ಸಾರಸಪಕ್ಷಿಗಳು ವಿಹರಿಸುತ್ತಿರುವವು ನೋಡು. ಈ ಬೆಟ್ಟದ ಜೋಗುಗಳಲ್ಲಿ ಸೇರಿಕೊಂಡಿರುವ ಭೃಂಗರಾಜ, ಉಪಚಕ್ರ, ಲೋಹಪೃಷ್ಟಗಳೆಂಬ ಪಕ್ಷಿವಿಶೇಷಗಳು ಸಕಲಪ್ರಾಣಿಗಳಿಗೂ ಕರ್ಣಾನಂದವುಂಟಾಗುವಹಾಗೆ ಮಧುರವಾಗಿ ಧ್ವನಿಮಾಡುತ್ತಿರುವವು. ನಾಲ್ಕುನಾಲ್ಕು ಕೊಂಬುಗಳುಳ್ಳವುಗಳಾಗಿಯೂ ಶುಭ್ರವಾಗಿಯೂ ಇರುವ ಮದಗಜಗಳು ಹೆಣ್ಣಾನೆಗಳೊಡಗೂಡಿ, ವೈಡೂರ್ಯಮಣಿಯಂತೆ ಹೊಳೆಯುತ್ತಿರುವ ಈ ಸರೋವರವನ್ನು ಕಲಕುತ್ತಿರುವವು. ಈ ಪರ್ವತದ ಒಂದು ತಾಳವೃಕ್ಷದಷ್ಟು ಮೇಲುಭಾಗದಲ್ಲಿರುವ ಜೋಗುಗಳ ದೆಸೆಯಿಂದ ನಿರ್ಮಲವಾದ ಜಲಧಾರೆಗಳು ಬೀಳುತ್ತಿರುವವು. ಸೂರ್ಯಪ್ರಭೆಗೆ ಸಮಾನವಾದ ಕಾಂತಿಯುಳ್ಳವುಗಳಾಗಿ, ಶರತ್ಕಾಲದ ಮೇಘಗಳಂತಿರುವ ಈ ಬೆಳ್ಳೀಗಣಿಗಳು ಈ ಪರ್ವತವನ್ನು ಪ್ರಕಾಶಗೊಳಿಸುತ್ತಿರುವವು. ಈ ಪರ್ವತದಲ್ಲಿ ಒಂದುಕಡೆ ಕಪ್ಪುಬಣ್ಣವಾಗಿಯೂ, ಇನ್ನೊಂದುಕಡೆ ಸಂಧ್ಯಾಕಾಲದ ಮೇಘದ ಬಣ್ಣವಾಗಿಯೂ, ಇರುವ ಅರಿದಾಳ, ಇಂಗಲಿಕ, ಮನಶ್ಶಿಲೆ ಮೊದಲಾದ ಅನೇಕ ಧಾತುಗಳು ಎತ್ತೆತ್ತಲೂ ಕಾಣಿಸುತ್ತಿರುವವು. ಎಲೈ ಭೀಮಸೇನನೆ, ಪೂರ್ವದಲ್ಲಿ ಮಯಾಸುರನು ನಮಗೆ ಸಭೆಯನ್ನು ನಿರ್ಮಾಣಮಾಡಿಕೊಟ್ಟ ಕಾಲದಲ್ಲಿ ಆತನು ವೃಷಪರ್ವರಾಯನ ಕಥಾಪ್ರಸಕ್ತಿಯಲ್ಲಿ ಗಂಧಮಾದನಪರ್ವತದಲ್ಲಿ ಗಂಧರ್ವರು ಸಾಮಗಾನವನ್ನು ಮಾಡುತ್ತಾರೆಂದು ಹೇಳಿದಪ್ರಕಾರ, ಇದೋ

ಇಲ್ಲಿ ಗಂಧರ್ವರು ತಮ್ಮತಮ್ಮ ಸ್ತ್ರೀಯರೊಡಗೂಡಿ ಕಿನ್ನರರೊಡನೆ ಲಯಬದ್ಧವಾಗಿ ಸಾಮಗಾನವನ್ನು ಮಾಡು ತ್ತಿರುವರು. ಇಲ್ಲಿ ಕಲಹಂಸಪಕ್ಷಿಗಳಿಂದ ಆಶ್ರಿತವಾಗಿಯೂ, ಋಷಿಗಳಿಂದಲೂ ಕಿನ್ನರರಿಂದಲೂ ಸೇವಿತವಾ ಗಿಯೂ, ಇರುವ ಅಳಕನಂದೆಯು ಪ್ರವಹಿಸುತ್ತಿರುವದು ನೋಡು. ಎಲೈ ಭೀಮನೆ, ಈ ಪ್ರಕಾರ ಅನೇಕ ವಿಧವಾದ ಗೈರಿಕಾದಿಧಾತುಗಳಿಂದಲೂ, ನದಿಗಳಿಂದಲೂ, ಕಿನ್ನರರಿಂದಲೂ, ಗಂಧರ್ವರಿಂದಲೂ, ಅಪ್ಸರಸ್ತ್ರೀಯರಿಂ ದಲೂ, ನೂರುನೂರು ಹೆಡೆಗಳುಳ್ಳ ನಾನಾವಿಧವಾದ ಸರ್ಪಗಳಿಂದಲೂ, ಮನೋಹರವಾದ ಅನೇಕ ವನಗಳಿಂದಲೂ ಕೂಡಿ, ಈ ಪರ್ವತವು ಎಷ್ಟು ಪ್ರಕಾಶಿಸುತ್ತಿರುವದು ನೋಡು" ಎಂದು ಧರ್ಮರಾಯನು ಭೀಮಸೇನನ ಸಂಗಡ ಹೇಳುತ್ತ, ತಮ್ಮಂದಿರೊಡಗೂಡಿ ರಾಜರ್ಷಿಯಾದ ಆರ್ಷ್ಟಿಷೇಣನ ಆಶ್ರಮವನ್ನು ಕಂಡು, ಅವನ್ನು ಪ್ರವೇಶಿಸಿ, ಅಲ್ಲಿ ಘೋರವಾದ ತಪಸ್ಸನ್ನು ಆಚರಿಸಿ ಕೃಶನಾಗಿ ಮಯ್ಯಲ್ಲಿ ನರಗಳು ಕಾಣಿಸುತ್ತಾ ಅಸ್ಥಿಚರ್ಮಗಳು ಮಾತ್ರ ಉಳಿದಿರುವ ಸಕಲ ಧರ್ಮಜ್ಞನಾದ ಆ ಋಷಿಯ ಸಮೀಪಕ್ಕೆ ಹೋದನು.

## ೧೬೦ನೇ ಅಧ್ಯಾಯ.—ಆರ್ಷ್ಟಿಷೇಣ ಯುಧಿಷ್ಠಿರ ಸಂವಾದ.

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಆಗ ಧರ್ಮರಾಯನು ತಪಸ್ಸಿದ್ಧನೂ ಪಾಪರಹಿತನೂ ರಾಜರ್ಷಿಯೂ ಆದ ಆರ್ಷ್ಟಿಷೇಣನಿಗೆ ತನ್ನನಾಮ ಸಂಕೀರ್ತನೆಯನ್ನು ಮಾಡಿ, ಸಾಷ್ಟಾಂಗವಾಗಿ ಅಭಿವಾದನವನ್ನು ಮಾಡಿದನು. ಬಳಿಕ ದ್ರೌಪದಿಯೂ ಭೀಮ ಸೇನನೂ ನಕುಲಸಹದೇವರೂ ಸಹ ಆತನಿಗೆ ನಮಸ್ಕಾರಮಾಡಿ, ಅತನ ಸುತ್ತಲೂ ನಿಂತುಕೊಂಡರು. ಬಳಿಕ ಪಾಂಡವರಿಗೆ ಪುರೋಹಿತನಾದ ಧರ್ಮಜ್ಞನಾದ ಧೌಮ್ಯಾಚಾರ್ಯನು ಮಹಾನುಭಾವನಾದ ಆ ರಾಜರ್ಷಿಯ ವಿಷಯದಲ್ಲಿ ಮರ್ಯಾದೆಯನ್ನು ಮೀರದೆ ನಡೆದುಕೊಂಡನು. ಆ ಬಳಿಕ ಆ ರಾಜರ್ಷಿಯು ತನ್ನ ದಿವ್ಯಚಕ್ಷುಸ್ಸಿನಿಂದ ಪಾಂಡವರ ವೃತ್ತಾಂತವನ್ನು ತಿಳಿದು, ಎಲ್ಲರನ್ನೂ ಕೂತುಕೊಳ್ಳಿರಿ" ಎಂದು ನುಡಿದು, ತಮ್ಮಂದಿರೊಡನೆ ಕೂಡಿದ ಕುರುಶ್ರೇಷ್ಠನಾದ ಧರ್ಮರಾಯನಿಗೆ ಸತ್ಕಾರವನ್ನು ಮಾಡಿ, ಕುಶಲಪ್ರಶ್ನೆಯನ್ನು ಮಾಡಿದಬಳಿಕ "ಎಲೈ ಧರ್ಮ ರಾಯನೆ, ನೀನು ಅಸತ್ಯದಲ್ಲಿ ಪ್ರವರ್ತಿಸದೆ ಧರ್ಮಪರನಾಗಿರುವೆಯಾ? ತಾಯಿತಂದೆಗಳ ನಡತೆಯನ್ನೇ ಅನು ವರ್ತಿಸಿರುವೆಯಾ? ವೃದ್ಧರಾಗಿಯೂ ವಿದ್ವಾಂಸರಾಗಿಯೂ ಇರುವ ಗುರುಜನಗಳನ್ನು ಮರ್ಯಾದೆಯಿಂದ ಕಾಣು ತ್ತಿರುವೆಯಾ? ಪಾಪಕರ್ಮಗಳಲ್ಲಿ ಮನಸ್ಸನ್ನು ಕೊಡದೆ ಇರುವೆಯಾ? ದುಷ್ಕಾರ್ಯಗಳಲ್ಲಿ ಪ್ರವರ್ತಿಸದೆ ಸತ್ಕಾರ್ಯಗಳನ್ನೇ ಮಾಡುತ್ತಿರುವೆಯಾ? ನ್ಯಾಯವನ್ನು ತಿಳಿದು ನಡೆದುಕೊಳ್ಳುತ್ತಿರುವೆಯಾ? ಮತ್ತು ನೀನು ಮಾಡಿದ್ದನ್ನು ಶ್ಲಾಘಿಸಿಕೊಳ್ಳದೆ ಇರುವೆಯಾ? ನಿನ್ನಿಂದ ಮಾನಿತರಾದ ಸಜ್ಜನರು ಸಂತೋಷಪಡುತ್ತಿರುವರೆ? ವನವಾಸದಲ್ಲೂ ಧರ್ಮಕಾರ್ಯಗಳನ್ನೇ ಮಾಡುತ್ತಿರುವೆಯಾ? ನಿನ್ನ ಆಚಾರವನ್ನು ನೋಡಿ ಧೌಮ್ಯಾಚಾರ್ಯರು ಜುಗುಪ್ಸೆಪಡದಿರುವರೆ? ದಾನ, ಧರ್ಮ, ತಪಸ್ಸು, ಶೌಚ, ಋಜುಭಾವ, ಕ್ಷಮೆ, ಇವುಗಳಿಂದ ನಿಮ್ಮ ಕುಲಕ್ರಮಾ ಗತವಾದ ವೃತ್ತಿಯನ್ನು ಅನುವರ್ತಿಸಿಕೊಂಡಿರುವೆಯಾ? ರಾಜರ್ಷಿಗಳ ಮಾರ್ಗವನ್ನು ಅನುವರ್ತಿಸಿಕೊಂಡಿರು ವೆಯಾ? ಪಿತೃಲೋಕದಲ್ಲಿರುವ ಪಿತೃಗಳು ತಮ್ಮ ಮಕ್ಕಳೂ ಮೊಮ್ಮಕ್ಕಳೂ ಮರಿಮಕ್ಕಳೂ ಹುಟ್ಟಿದರೆ, 'ಇವರ ದುಷ್ಕೃತ್ಯದಿಂದ ನಮಗೆ ಎಂಥಾ ದುರ್ಗತಿ ಪ್ರಾಪ್ತವಾಗುವದೋ' ಎಂದು ದುಃಖಪಡುವರು; ಮತ್ತು ಹಾಗೆಯೇ 'ಇವರ ಸುಕೃತದಿಂದ ನಾವು ಎಂಥಾ ಉತ್ತಮವಾದ ಗತಿಯನ್ನು ಹೊಂದುವೆವೋ' ಎಂದು ಸಂತೋಷ ವನ್ನೂ ಪಡುವರು. ಆದ್ದರಿಂದ ಸದ್ವೃತ್ತಿಯನ್ನು ಅವಲಂಬಿಸಿಕೊಂಡಿರಬೇಕು. ತಂದೆ, ತಾಯಿ, ಅಗ್ನಿ, ಗುರು, ಆತ್ಮ, ಈ ಐವರ ವಿಷಯದಲ್ಲಿ ಯಾರು ಸತ್ಕಾರವನ್ನು ಮಾಡುವರೋ, ಅವರು ಈ ಲೋಕದಲ್ಲೂ ಪರಲೋಕ ದಲ್ಲೂ ಸುಖವನ್ನು ಪಡೆಯುವರು" ಎಂದು ಪ್ರಶ್ನೆಮಾಡಲು, ಧರ್ಮರಾಯನು "ಎಲೈ ಮಹಾನುಭಾವನೆ, ನೀನು ನನ್ನನ್ನು ಕುರಿತು ಧರ್ಮದ ಸಾರಾಂಶವನ್ನು ಹಿಡಿದು ಪ್ರಶ್ನೆಮಾಡಿದೆ. ಆದರೆ ನನ್ನ ಶಕ್ತಿ ಎಷ್ಟುಮಟ್ಟಿಗಿರುವದೋ, ಅಷ್ಟುಮಟ್ಟಿಗೆ ನಾನು ನ್ಯಾಯವನ್ನು ತಪ್ಪದೆ ನಡೆದುಕೊಂಡಿರುವೆನು" ಎಂದು ನುಡಿದನು.

ಅದನ್ನು ಕೇಳಿ ಅಷ್ಟಿರ್ಷೇಣನು "ಎಲೈ ಪಾಂಡವರೆ, ಈ ಪರ್ವತದಲ್ಲಿ ಉದಕವನ್ನೂ ವಾಯುವನ್ನೂ ಆಹಾರಮಾಡಿಕೊಂಡು, ಪರ್ವಕಾಲಗಳಲ್ಲಿ ಮಹರ್ಷಿಗಳು ಆಕಾಶಮಾರ್ಗದಲ್ಲಿ ಸಂಚರಿಸುವರು ; ಕಾಮಿಗಳಾದ ಕಿಂಪ್ರರುಷರೂ, ಗಂಧರ್ವರೂ ತಮ್ಮತಮ್ಮ ಸ್ತ್ರೀಯರೊಡಗೂಡಿ ನಿರ್ಮಲವಾದ ಪೀತಾಂಬರಗಳನ್ನು ಧರಿಸಿ ಈ ಪರ್ವತದಲ್ಲಿ ವಿಹಾರಮಾಡುವರು. ಇನ್ನೂಕೆಲವುಮಂದಿ ಗಂಧರ್ವರೂ, ವಿದ್ಯಾಧರರೂ, ಅಪ್ಸರಸ್ತ್ರೀಯರೂ, ಪನ್ನಗರೂ ಸುಪರ್ಣರೂಸಹ ದಿವ್ಯವಾದ ಪುಷ್ಪಮಾಲಿಕೆಗಳನ್ನು ಧರಿಸಿಕೊಂಡು ನೋಡುವವರಿಗೆ ಪ್ರೀತಿಯನ್ನುಂಟುಮಾಡುತ್ತ ಇಲ್ಲಿ ವಿಹಾರಮಾಡುವರು. ಈ ಪರ್ವತದ ಶಿಖರಭಾಗದಲ್ಲಿ ಭೇರಿ, ಪಣವ, ಶಂಖ, ಮೃದಂಗ ಮೊದಲಾದ ದಿವ್ಯವಾದ ವಾದ್ಯಗಳ ಧ್ವನಿಯು ಪರ್ವಕಾಲಗಳಲ್ಲಿ ವಿಶೇಷವಾಗಿ ಆಗುವದು. ಆ ಧ್ವನಿಯನ್ನು ನೀವು ಇಲ್ಲೇ ಇದ್ದುಕೊಂಡು ಕೇಳಿರಿ. ಇಲ್ಲಿಂದ ಮುಂದಕ್ಕೆ ಹೋಗಬೇಕೆಂದು ಬಯಸಬೇಡಿರಿ. ಇಲ್ಲಿಂದ ಮುಂದೆ ಹೋಗುವದು ನಿಮಗೆ ಅಶಕ್ಯವಾದದ್ದು. ಆ ಪ್ರದೇಶಗಳೆಲ್ಲಾ ದೇವತೆಗಳ ವಿಹಾರಸ್ಥಾನಗಳಾಗಿರುವವು. ಅಲ್ಲಿ ಮನುಷ್ಯರ ಸಂಚಾರವಿಲ್ಲವು. ಚಪಲಚಿತ್ತರಾದ ಮನುಷ್ಯರನ್ನು ಆ ದೇವತಾಸ್ಥಾನಗಳಲ್ಲಿರತಕ್ಕ ರಾಕ್ಷಸರು ನೋಡಿದ್ದೇ ಆದರೆ, ಅವರು ಆ ಮನುಷ್ಯರನ್ನು ಪೀಡಿಸುವರು. ಈ ಕೈಲಾಸಪರ್ವತದ ಶಿಖರವನ್ನು ಅತಿಕ್ರಮಿಸಿದರೆ, ಮುಂದೆ ಸಿದ್ಧರಾದ ದೇವರ್ಷಿಗಳು ಸಂಚಾರ ಮಾಡುತ್ತಿರುವರು. ಅಲ್ಲಿಗೆ ಯಾವನಾದರೂ ಚಾಪಲ್ಯದಿಂದ ಹೋದದ್ದೇ ಆದರೆ, ಅಲ್ಲಿರತಕ್ಕ ಕಾವಲುಗಾರರಾದ ರಾಕ್ಷಸರು ಅಂಥವನನ್ನು ಶೂಲಾಯುಧದಿಂದ ಹಿಂಸಿಸುವರು. ಕುಬೇರನು ಅನೇಕ ಮಂದಿ ಅಪ್ಸರಸ್ತ್ರೀಯರಿಂದ ಸೇವಿತನಾಗಿ ತನ್ನ ಐಶ್ವರ್ಯದೊಡನೆ ನರವಾಹನನಾಗಿ ಬಂದು ಪರ್ವಕಾಲಗಳಲ್ಲಿ ಇಲ್ಲಿ ಕಾಣಿಸಿಕೊಳ್ಳುವನು. ಈ ಪರ್ವತದ ಮೇಲೆ ಸೂರ್ಯನಂತೆ ಪ್ರಕಾಶಿಸುವ ಆತನನ್ನು ಸಕಲಪ್ರಾಣಿಗಳೂ ಆ ಕಾಲದಲ್ಲಿ ನೋಡುವರು. ದೇವತೆಗಳಿಗೂ ದಾನವರಿಗೂ ಸಿದ್ಧರಿಗೂ ಕುಬೇರನಿಗೂ ವಿಹಾರಯೋಗ್ಯವಾದ ಮಹತ್ತಾದ ಕ್ರೀಡಾವನವು ಈ ಪರ್ವತದ ಶಿಖರದಲ್ಲಿರುವದು. ಆ ಶಿಖರಭಾಗದಲ್ಲಿ ಕುಬೇರನು ಬಂದು ಕೂತುಕೊಳ್ಳಲು, ತುಂಬುರರು ಸಾಮಗಾನವನ್ನು ಮಾಡುವರು. ಆ ಮನೋಹರವಾದ ಗಾನವನ್ನು ಸಕಲ ಪ್ರಾಣಿಗಳೂ ಪರ್ವಕಾಲದಲ್ಲಿ ಕೇಳಿ ಸಂತೋಷಪಡುವರು. ಅರ್ಜುನನು ಬರುವ ವರೆಗೂ ನೀವೆಲ್ಲರೂ ಋಷಿಯೋಗ್ಯವಾದ ರಸವತ್ತಾದ ಫಲಗಳನ್ನು ಆಹಾರಮಾಡಿಕೊಂಡು ಇಲ್ಲಿಯೇ ಇರಿ. ನೀವು ಚಾಪಲ್ಯಪಡಬೇಡಿರಿ. ನಿಮ್ಮ ಇಷ್ಟಾನುಸಾರವಾಗಿ ಇಲ್ಲಿ ವಿಹಾರಮಾಡಿಕೊಂಡಿದ್ದು, ಬಳಿಕ ನಿಮ್ಮ ಶಸ್ತ್ರಪ್ರಭಾವದಿಂದ ಸ್ವಾಧೀನವಾಗುವ ರಾಜ್ಯವನ್ನು ಸುಖವಾಗಿ ಪರಿಪಾಲಿಸಿರಿ." ಎಂದು ಅಷ್ಟಿರ್ಷೇಣನು ಪಾಂಡವರಿಗೆ ಹೇಳಿದ ಅರ್ಥವನ್ನು ವೈಶಂಪಾಯನಮುನೀಶ್ವರನು ಜನಮೇಜಯರಾಯನಿಗೆ ಹೇಳಿದನು.

## ೧೬೦ನೇ ಅಧ್ಯಾಯ.—ಮಣಿಮಂತನ ವಧೆ.

ಬಳಿಕ ಜನಮೇಜಯರಾಯನು ವೈಶಂಪಾಯನಮುನೀಶ್ವರನನ್ನು ಕುರಿತು—ಎಲೈ ಮುನೀಂದ್ರನೆ, ನಮ್ಮ ಪಿತಾಮಹರಾದ ದಿವ್ಯಪರಾಕ್ರಮಶಾಲಿಗಳಾದ ಪಾಂಡವರು ಅಷ್ಟಿರ್ಷೇಣನೆಂಬ ರಾಜರ್ಷಿಯ ಆಶ್ರಮದಲ್ಲಿ ಎಷ್ಟು ದಿವಸ ವಾಸಮಾಡಿದರು ? ಆ ಗಂಧಮಾದನಪರ್ವತದಲ್ಲಿ ಅವರೆಲ್ಲರೂ ಏನು ಆಹಾರಮಾಡಿಕೊಂಡಿದ್ದರು ? ಮತ್ತು ಏನು ಮಾಡುತ್ತಿದ್ದರು ? ಆ ಹಿಮವತ್ಪರ್ವತದ ಪ್ರದೇಶದಲ್ಲಿ ವೀರಾಗ್ರೇಸರನಾದ ಭೀಮಸೇನನು ಇನ್ನೂ ಏನು ಮಾಡಿದನು ? ಆತನ ಪರಾಕ್ರಮವನ್ನು ವಿವರಿಸು. ಭೀಮಸೇನನಿಗೂ ಯಕ್ಷರಿಗೂ ಪುನಃ ಯುದ್ಧವೇನಾದರೂ ನಡಿಯಿತೆ ? ಅಷ್ಟಿರ್ಷೇಣನು ಹೇಳಿದ ಪ್ರಕಾರ ಪರ್ವಸಮಯದಲ್ಲಿ ಕುಬೇರನು ಅಲ್ಲಿಗೆ ಬಂದಿದ್ದನೆ ? ಪಾಂಡವರಿಗೂ ಕುಬೇರನಿಗೂ ಸಮಾಗಮವಾಯಿತೇ? ಇದನ್ನೆಲ್ಲಾ ವಿಸ್ತಾರವಾಗಿ ನನಗೆ ತಿಳುಹಿಸು. ಮಹಾತ್ಮರಾದ ಪಾಂಡವರ ಚರಿತ್ರೆಯನ್ನು ಎಷ್ಟು ಕೇಳಿದರೂ ನನಗೆ ತೃಪ್ತಿಯಾಗದಿರುವದು—ಎಂದು ಪ್ರಶ್ನೆಮಾಡಿದನು. ಅದನ್ನು ಕೇಳಿ ವೈಶಂಪಾಯನಮುನೀಂದ್ರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯನೆ, ಆಗ ಪಾಂಡವರು

ಆ ರಾಜರ್ಷಿಯಾದ ಆರ್ಷ್ಟಿಷೇಣನು ಹೇಳಿದ ಮಾತುಗಳು ತಮಗೆ ಹಿತಕರವಾದವುಗಳೆಂದು ಗ್ರಹಿಸಿ, ಅಲ್ಲಿರತಕ್ಕ ಋಷಿಗಳಿಗೆ ಯೋಗ್ಯವಾದ ರಸವತ್ತಾದ ಫಲಗಳನ್ನೂ, ಪರಿಶುದ್ಧವಾದ ಬಾಣಗಳಿಂದ ಮೃಗಗಳನ್ನು ಬೇಟೆಯಾಡಿ ಅವುಗಳ ಮಾಂಸವನ್ನೂ, ನಾನಾವಿಧವಾದ ಉತ್ತಮವಾದ ಜೇನನ್ನೂ, ಆಹಾರಮಾಡಿಕೊಂಡು ಆ ಆಶ್ರಮದಲ್ಲಿ ವಾಸಮಾಡುತ್ತಿದ್ದರು. ಆಗ ಲೋಮಶಮಹರ್ಷಿಯು ಅಲ್ಲಿ ವಾಸಮಾಡುವ ಪಾಂಡವರಿಗೆ ಪುಣ್ಯತಮವಾದ ಇತಿಹಾಸಗಳನ್ನು ಶ್ರವಣಮಾಡಿಸುತ್ತಿದ್ದನು. ಅಲ್ಲಿ ನಾಲ್ಕುವರ್ಷಗಳು ಕಳೆದು ಐದನೇವರ್ಷವು ಪ್ರಾಪ್ತವಾಯಿತು. ಘಟೋತ್ಕಚನು ತನ್ನ ಪರಿವಾರದೊಡನೆ ಹೊರಟು ಹೋದಬಳಿಕ, ಪಾಂಡವರು ಆ ಆಶ್ರಮದಲ್ಲಿ ವಾಸಮಾಡುತ್ತ ಬಹುದಿವಸಗಳನ್ನು ಕಳೆದರು. ಆಗ ಪಾಂಡವರು ಅಲ್ಲಿಗೆ ಬಂದ ವೃತ್ತಾಂತವನ್ನು ತಿಳಿದು, ಮಹಾನುಭಾವರಾದ ಋಷಿಗಳೂ ಚಾರಣರೂ ಸಹ ಅವರನ್ನು ನೋಡಬೇಕೆಂದು ಅಲ್ಲಿಗೆ ಬಂದು, ನೋಡಿ, ಅವರ ಸಂಗಡ ದಿವ್ಯವಾದ ಕಥಾಪ್ರಸಂಗವನ್ನು ಮಾಡುತ್ತ ಸಂತೋಷಭರಿತರಾಗಿದ್ದರು. ಆ ಸಮಯದಲ್ಲಿ ಅಲ್ಲಿದ್ದ ಒಂದು ಮಡುವಿನಲ್ಲಿ ವಾಸಮಾಡುತ್ತಿದ್ದ ಋದ್ಧಿಮಂತನೆಂಬ ಒಂದು ಮಹಾಸರ್ಪವನ್ನು ಗರುಡನು ರಭಸದಿಂದ ಅಪಹರಿಸಿಕೊಂಡು ಹೋದನು. ಆಗ ಆ ಗರುಡನ ವೇಗಕ್ಕೆ ಆ ಪರ್ವತವು ಅಲ್ಲಾಡಿ ವೃಕ್ಷಗಳು ಮುರಿದು ಕೆಳಕ್ಕೆ ಬಿದ್ದವು. ಅದನ್ನು ನೋಡಿ ಪಾಂಡವರೂ ಅಲ್ಲಿದ್ದ ಸಕಲರೂ ಸಹ ಆಶ್ಚರ್ಯಪಟ್ಟರು. ಬಳಿಕ ವಾಯುವು ಪುಣ್ಯತಮವಾಗಿಯೂ ಪರಿಮಳಯುಕ್ತವಾಗಿಯೂ ದಿವ್ಯವಾಗಿಯೂ ಇರುವ ಪುಷ್ಪಗಳನ್ನು ಪಾಂಡವರ ಬಳಿಗೆ ತಂದು ಹಾಕಿತು. ಆಗ ಪಾಂಡವರು ಆ ಋಷಿಗಳೊಡನೆಯೂ ದ್ರೌಪದಿಯೊಡನೆಯೂ ಕೂಡಿ ಐದು ವಿಧವಾದ ವರ್ಣಗಳುಳ್ಳ ಆ ಹೂಗಳನ್ನು ನೋಡಿದರು.

ಬಳಿಕ ದ್ರೌಪದಿಯು ವಿಜನವಾದ ಪ್ರದೇಶದಲ್ಲಿ ಸುಖವಾಗಿ ವಿಶ್ರಮಿಸಿಕೊಳ್ಳುತ್ತಿದ್ದ ಭೀಮಸೇನನನ್ನು ನೋಡಿ "ಪ್ರಿಯನೆ, ಗರುಡನ ರಕ್ಕೆಗಳ ವೇಗದಿಂದ ಹುಟ್ಟಿದ ಗಾಳಿಯು ಈ ವಿಚಿತ್ರವಾದ ಪುಷ್ಪಗಳನ್ನು ತೂರಿಕೊಂಡು ಬಂದು ಅಶ್ವರಥೆಯೆಂಬ ಈ ನದಿಯಲ್ಲಿ ಎಲ್ಲರೂ ನೋಡುತ್ತಿರಲು ಕೆಡಹಿತು. ಮೊದಲು ಖಾಂಡವವನವನ್ನು ದಹನಮಾಡುವಾಗ ಮಹಾತ್ಮನಾದ ನಿನ್ನ ತಮ್ಮನಾದ ಅರ್ಜುನನು ಮಾಯಾವಿಗಳಾದ ರಾಕ್ಷಸರನ್ನು ಸಂಹರಿಸಿ, ಗಂಧರ್ವರನ್ನೂ ಇಂದ್ರನನ್ನೂ ಜಯಿಸಿ, ಗಾಂಡೀವಧನುಸ್ಸನ್ನು ಸಂಪಾದಿಸಿದನು. ನಿನ್ನ ತೇಜಸ್ಸು ಆತನ ತೇಜಸ್ಸಿಗಿಂತಲೂ ಅಧಿಕವಾದದ್ದು. ಇಂದ್ರನಿಗೆ ಸಮಾನವಾದ ಪರಾಕ್ರಮವುಳ್ಳ ನಿನ್ನ ಬಾಹುಬಲವನ್ನು ಯಾರುತಾನೆ ಸಹಿಸಬಲ್ಲರು? ಈಗ ನೀನು ನಿನ್ನ ಬಾಹುಬಲದಿಂದ ಇಲ್ಲಿರತಕ್ಕ ರಾಕ್ಷಸರನ್ನೆಲ್ಲಾ ಹೆದರಿಸಿದ್ದೇ ಆದರೆ, ಅವರೆಲ್ಲರೂ ಈ ಪರ್ವತವನ್ನು ಬಿಟ್ಟು ದಿಕ್ಕುದಿಕ್ಕುಗಳಿಗೆ ಓಡಿ ಹೋಗುವರು. ಬಳಿಕ ಧರ್ಮರಾಯನೇ ಮೊದಲಾದವರೂ ಇನ್ನೂ ನಿನ್ನ ಮಿತ್ರರಾದವರೆಲ್ಲರೂ ಸಹ ನಿರ್ಭಯವಾಗಿ ವಿಚಿತ್ರವಿಚಿತ್ರವಾದ ಪುಷ್ಪಗಳಿಂದ ರಮಣೀಯವಾದ ಈ ಪರ್ವತದ ಶಿಖರಭಾಗವನ್ನು ನೋಡಲಿ. ಈ ಮಾತನ್ನು ನಿನ್ನ ಸಂಗಡ ಹೇಳಬೇಕೆಂದು ಬಹುಕಾಲದಿಂದ ಮನಸ್ಸಿನಲ್ಲಿಟ್ಟುಕೊಂಡಿದ್ದೆನು. ನೀನು ಹಾಗೆ ಮನಸ್ಸುಮಾಡಿದ್ದೇ ಆದರೆ, ನಾನೂ ಸಂತೋಷದಿಂದ ಈ ಪರ್ವತದ ಮೇಲಿನ ಭಾಗವನ್ನು ನೋಡುವೆನು" ಎನಲು, ಅದನ್ನು ಕೇಳಿ ಅತಿಮಾನಿಯಾದ ಭೀಮಸೇನನು ದ್ರೌಪದಿಯು ತನ್ನನ್ನು ಎತ್ತಿಹಾಕಿ ಆಡಿದಂತೆ ತಿಳಿದುಕೊಂಡು, ಪೆಟ್ಟುತಿಂದ ಎತ್ತಿನಂತೆ ಆ ಮಾತನ್ನು ಸೈರಿಸದೆ ಹೋದನು. ಅನಂತರ ಸಿಂಹದಂತೆ ಗಮನವುಳ್ಳವನಾಗಿಯೂ, ಕುಂದಣದಂತೆ ಶರೀರಕಾಂತಿಯುಳ್ಳವನಾಗಿಯೂ, ಮಹಾಬಲಶಾಲಿಯಾಗಿಯೂ, ಕೆಂಪಾದ ಕಣ್ಣುಗಳುಳ್ಳವನಾಗಿಯೂ, ದಪ್ಪವಾದ ಭುಜಶಿರಸ್ಸಂಧಿಯುಳ್ಳವನಾಗಿಯೂ, ಸಿಂಹದಂತೆ ಕೋರೇ ಹಲ್ಲುಗಳುಳ್ಳವನಾಗಿಯೂ, ಎತ್ತರವಾದ ಭುಜಶಿರಸ್ಸುಗಳುಳ್ಳವನಾಗಿಯೂ, ಚಿಕ್ಕದಾದ ತಾಳವೃಕ್ಷದಂತೆ ಉನ್ನತನಾಗಿಯೂ, ಸರ್ವಾಂಗಸುಂದರನಾಗಿಯೂ, ಆಜಾನುಬಾಹುವಾಗಿಯೂ, ಕೊರಳಿನಲ್ಲಿ ಮೂರು ರೇಖೆಗಳುಳ್ಳವನಾಗಿಯೂ, ಇರುವ ಭೀಮಸೇನನು ದರ್ಪದಿಂದ ಮದಿಸಿದ ಆನೆಯಂತೆಯೂ ಪೆಟ್ಟಿನಿಂದ ಎಬ್ಬಿಸಿದ ಸಿಂಹದಂತೆಯೂ ಎದ್ದು ಹೊರಟು, ಚಿನ್ನದ ಹಿಡಿಯುಳ್ಳ ಕತ್ತಿಯನ್ನೂ ಧನುಸ್ಸನ್ನೂ ಬತ್ತಳಿಕೆಗಳನ್ನೂ ಗದೆಯನ್ನೂ ತೆಗೆದುಕೊಂಡು, ನಿರ್ಭಯನಾಗಿ ಆ ಪರ್ವತವನ್ನೇರಿದನು. ಆಗ ಅಲ್ಲಿದ್ದ ಸಕಲಪ್ರಾಣಿಗಳೂ ಮದಿಸಿದ ಆನೆಯಂ

ತೆಯೂ ಸಿಂಹನಂತೆಯೂ ಕಾಣಿಸುತ್ತಾ ಧನುರ್ಬಾಣಗಳನ್ನು ಧರಿಸಿ ಬರುತ್ತಿರುವ ಭೀಮಸೇನನನ್ನು ನೋಡಿದವು. ಆಗ ಭೀಮಸೇನನು ದ್ರೌಪದಿಗೆ ಸಂತೋಷವನ್ನುಂಟುಮಾಡುವದಕ್ಕೋಸ್ಕರ ಗದಾಪಾಣಿಯಾಗಿ ಆ ಪರ್ವತವನ್ನೇರುತ್ತ, ಸ್ವಲ್ಪವಾದರೂ ಮಾರ್ಗಾಯಾಸವನ್ನೂ ಭಯವನ್ನೂ ಅನುತ್ಸಾಹವನ್ನೂ ಮಾತ್ಸರ್ಯವನ್ನೂ ತಾಳದೆ ಮುಂದೆಮುಂದೆ ತೆರಳುತ್ತಿರಲು, ಅಲ್ಲಿ ಸುಖಸ್ಪರ್ಶವಾಗಿಯೂ ಶೀತಳವಾಗಿಯೂ ಪರಿಮಳಭರಿತವಾಗಿಯೂ ಇರುವ ಮಂದಮಾರುತವು ಆತನ ಮೈಮೇಲೆ ಬೀಸಿ ಸಂತೋಷವನ್ನುಂಟುಮಾಡಿತು. ಭೀಮಸೇನನು ಸಕಲರಾದ ಗಂಧರ್ವರಿಗೂ ಕಿನ್ನರರಿಗೂ ಮುನಿಗಳಿಗೂ ಯಕ್ಷರಿಗೂ ರಾಕ್ಷಸರಿಗೂ ಸಂತೋಷವನ್ನುಂಟುಮಾಡುತ್ತ, ಅನೇಕ ತಾಳವೃಕ್ಷಪ್ರಮಾಣವುಳ್ಳ ಆ ಪರ್ವತದ ದೊಡ್ಡದಾದ ಒಂದು ಶಿಖರಭಾಗವನ್ನೇರಿದನು. ಬಳಿಕ ಚಿನ್ನದಿಂದಲೂ ಸ್ಫಟಿಕದಿಂದಲೂ ಕಟ್ಟಿದ ಮನೆಗಳಿಂದ ಕೂಡಿರುವದಾಗಿಯೂ; ಸುವರ್ಣಮಯವಾದ ಪ್ರಾಕಾರವುಳ್ಳದ್ದಾಗಿ ಅನೇಕ ಶ್ರೇಷ್ಠವಸ್ತುಗಳಿಂದಲೂ, ಮನೋಹರವಾದ ಕ್ರೀಡಾವನಗಳಿಂದಲೂ ರಮಣೀಯವಾಗಿಯೂ; ಬೆಟ್ಟಗಳಂತೆ ಎತ್ತರವಾಗಿರುವ ಉಪ್ಪರಿಗೆಗಳಿಂದಲೂ, ಗಜದಂತದಿಂದ ಮಾಡಿದ ಚೌಕಟ್ಟುಗಳುಳ್ಳ ಪುರದ್ವಾರಗಳಿಂದಲೂ, ಮಹೋನ್ನತವಾದ ಧ್ವಜಗಳಿಂದಲೂ, ಗಾಳಿಯಿಂದ ಚಲಿಸುತ್ತಿರುವ ಪತಾಕೆಗಳಿಂದಲೂ ಶೋಭಿತವಾಗಿಯೂ; ಅಲ್ಲಲ್ಲಿ ನರ್ತನ ಮಾಡುತ್ತಿರುವ ವಿಲಾಸವತಿಯರಾದ ವೇಶ್ಯಾಸ್ತ್ರೀಯರಿಂದ ಕಂಗೊಳಿಸುತ್ತಲೂ ಇರುವ ಕುಬೇರನ ವಾಸಸ್ಥಾನವನ್ನು ನೋಡಿ, ತಾವು ಪೂರ್ವದಲ್ಲಿ ಅನುಭವಿಸುತ್ತಿದ್ದ ಐಶ್ವರ್ಯವನ್ನು ಸ್ಮರಿಸಿಕೊಂಡು ಅಲ್ಲೇ ನಿಂತನು. ಆ ಸಮಯದಲ್ಲಿ ಸಕಲಪ್ರಾಣಿಗಳಿಗೂ ಸಂತೋಷವನ್ನುಂಟುಮಾಡುತ್ತ ಮಂದಮಾರುತವು ಸುಗಂಧಭರಿತವಾಗಿ ಸುಖವಾಗಿ ಬೀಸಿತು.

ಬಳಿಕ ಭೀಮಸೇನನು ವಿಚಿತ್ರವಾಗಿಯೂ ಬಗೆಬಗೆಯ ಬಣ್ಣಗಳುಳ್ಳವುಗಳಾಗಿಯೂ ಇರುವ ಪುಷ್ಪಗಳಿಂದ ಮನೋಹರವಾದ ನಾನಾವಿಧ ವೃಕ್ಷಗಳಿಂದ ಅಲಂಕೃತವಾಗಿಯೂ, ಬಹುವಿಧವಾದ ರತ್ನಗಳಿಂದ ಪರಿಪೂರ್ಣವಾಗಿಯೂ, ಇರುವ ಕುಬೇರನ ವಾಸಸ್ಥಾನವನ್ನು ನೋಡಿ ತನ್ನ ಬಲವು ಇಮ್ಮಡಿಯಾಗಲು; ಗದೆಯನ್ನೂ ಧನುಸ್ಸನ್ನೂ ಖಡ್ಗವನ್ನೂ ಧರಿಸಿಕೊಂಡು, ಪರ್ವತದಂತೆ ಸ್ಥಿರವಾಗಿ ನಿಂತು, ಶತ್ರುಗಳಿಗೆ ಭಯವು ತೋರುವಂತೆ ತನ್ನ ಶಂಖವನ್ನು ಊದಿ, ಧನುಷ್ಟಂಕಾರವನ್ನು ಮಾಡಿ, ಭುಜಗಳನ್ನು ತಟ್ಟಿಕೊಂಡು, ಅಲ್ಲಿರತಕ್ಕ ಪ್ರಾಣಿಗಳಿಗೆಲ್ಲಾ ಮಂಕು ಕವಿಯುವಹಾಗೆ ಮಾಡಿದನು. ಬಳಿಕ ಅಲ್ಲಿದ್ದ ಯಕ್ಷರಾಕ್ಷಸಗಂಧರ್ವರು ಆ ಶಬ್ದವನ್ನು ಕೇಳಿ ಮಯ್ಯಲ್ಲಿ ರೋಮಾಂಚವುಂಟಾಗಿ, ಗದೆ ಪರಿಘ ಖಡ್ಗ ಶೂಲ ಶಕ್ತಿ ಗಂಡುಕೊಡಲಿ ಮೊದಲಾದ ಆಯುಧಗಳನ್ನು ಧರಿಸಿ ಅಲ್ಲಿಗೆ ಬಂದು ಭೀಮಸೇನನಿಗೆ ಎದುರಾದರು. ಆಗ ಆಕಾಶಚಾರಿಗಳಾದ ಅವರಿಗೂ ಭೀಮಸೇನನಿಗೂ ಯುದ್ಧವು ಉಪಕ್ರಮವಾಗಿ, ಮಾಯಾವಿಗಳಾದ ಆ ಯಕ್ಷರಾಕ್ಷಸಗಂಧರ್ವರು ಶೂಲಶಕ್ತಿ ಮೊದಲಾದ ಆಯುಧಗಳನ್ನು ಭೀಮಸೇನನ ಮೇಲೆ ಪ್ರಯೋಗಿಸಿದರು. ಭೀಮಸೇನನು ತೀಕ್ಷ್ಣವಾದ ಭಲ್ಲಾಯುಧಗಳಿಂದ ಅವರ ಆಯುಧಗಳನ್ನೆಲ್ಲಾ ಖಂಡಿಸಿ, ಅನೇಕ ಬಾಣಗಳಿಂದ ಅವರ ಶರೀರವನ್ನು ಭೇದಿಸಲು; ಅವರ ಶರೀರದಿಂದ ಧಾರಾಕಾರವಾಗಿ ರಕ್ತವು ಸುರಿಯುತ್ತ, ಅವರ ಅಂಗಗಳು ಛಿನ್ನಭಿನ್ನವಾಗಿ ಭೀಮಸೇನನ ಮೇಲೆ ಬಿದ್ದವು. ಆಗ ಭೀಮಸೇನನು ಮೇಘಗಳಿಂದ ಮರೆಯಾದ ಸೂರ್ಯನಂತೆ ಕಾಣಿಸಿಕೊಂಡನು. ಬಳಿಕ ಸೂರ್ಯನು ತನ್ನ ಕಿರಣಗಳಿಂದ ಮಂಜನ್ನು ಪರಿಹರಿಸುವಂತೆ ಭೀಮಸೇನನು ತನ್ನ ಬಾಣಗಳಿಂದ ಆ ರಾಕ್ಷಸರ ಶರೀರವನ್ನು ತುಂಡುತುಂಡಾಗಿ ಕತ್ತರಿಸಿ, ಮಹತ್ತಾದ ತೇಜಸ್ಸಿನಿಂದ ಮೆರೆಯುತ್ತಿದ್ದನು. ಆಗ ಹತಶೇಷರಾದ ಯಕ್ಷರಾಕ್ಷಸರು ಭೀಮಸೇನನ ಧೈರ್ಯವನ್ನು ನೋಡಿ ಭಯಪಟ್ಟು, ಘೋರವಾದ ಧ್ವನಿಯನ್ನು ಮಾಡುತ್ತ ಚಲ್ಲಾಪಿಲ್ಲಿಯಾಗಿ ತಮ್ಮತಮ್ಮ ಕಯ್ಯಲ್ಲಿದ್ದ ಗದೆ ಶಕ್ತಿ ಮೊದಲಾದ ಆಯುಧಗಳನ್ನು ಬಿಸಟು ದಕ್ಷಿಣದಿಕ್ಕಿಗೆ ಓಡಿಹೋದರು. ಆ ವೇಳೆಯಲ್ಲಿ ಕುಬೇರನಿಗೆ ಮಿತ್ರನಾದ ಮಹಾಪರಾಕ್ರಮಶಾಲಿಯಾದ ಮಣಿಮಂತನೆಂಬ ರಾಕ್ಷಸನು ಶೂಲವನ್ನೂ ಗದೆಯನ್ನೂ ಧರಿಸಿ, ಅಧಿಕವಾದ ಪೌರುಷದಿಂದ ಮೆರೆಯುತ್ತ ಹತಶೇಷರಾಗಿ ಓಡಿಹೋಗತಕ್ಕ ಆ ಯಕ್ಷರಾಕ್ಷಸರನ್ನು ನೋಡಿ ನಸುನಗುತ್ತ, "ಎಲೈ ವೀರಭಟರೆ, ಒಬ್ಬ ಮನುಷ್ಯನಿಗೆ ಭಯಪಟ್ಟುಕೊಂಡು ನೀವು ಓಡಿಹೋಗಿ ಕುಬೇರನ ಸಂಗಡ ಏನು ಹೇಳುವಿರಿ ? ಇದು ಸರಿಯಲ್ಲ. ಮರಳಿ ಯುದ್ಧಕ್ಕೆ ಬನ್ನಿ" ಎಂದು ಹೇಳಿ ಅವರನ್ನೂ ಜೊತೆಗೂಡಿಸಿಕೊಂಡು ಭೀಮಸೇನನ ಮೇಲೆ

ಕಾಣಿಸಿಕೊಂಡನು. ಬಳಿಕ ಭೀಮಸೇನನು ಪರ್ವತದ ಮೇಲೆ ಬಂದು ಬೀಳತಕ್ಕ ಮದ್ದಾನೆಯಂತೆ ತನ್ನ ಮೇಲೆ ಕಾಣಿಸಿಕೊಂಡ ಆ ಮಣಿಮಂತನನ್ನು ನೋಡಿ, ವತ್ಸದಂತಗಳೆಂಬ ಮೂರು ಬಾಣಗಳನ್ನು ಬಿಲ್ಲಿನಲ್ಲಿ ಹೂಡಿ ಅವುಗಳಿಂದ ಆ ರಾಕ್ಷಸನನ್ನು ಹೊಡೆದನು. ಆ ಪೆಟ್ಟಿನಿಂದ ಕೋಪೋದ್ದೀಪಿತನಾದ ಮಣಿಮಂತನು ಮಿಂಚಿನಂತೆ ಹೊಳೆಯುತ್ತ, ಘೋರವಾದ ಗದೆಯನ್ನು ತಿರುಗಿಸಿ ಭೀಮಸೇನನ ಮೇಲೆ ಪ್ರಯೋಗಿಸಿದನು. ಆಗ ಭೀಮಸೇನನು ತನ್ನ ಮೇಲೆ ಬೀಳುವ ಆ ಗದೆಯನ್ನು ನೋಡಿ, ಸಾಣೆಹಿಡಿದ ಅನೇಕ ಬಾಣಗಳನ್ನು ಧನುಸ್ಸಿನಲ್ಲಿ ತೊಟ್ಟು, ಅವುಗಳಿಂದ ಆ ಗದೆಯನ್ನು ಹೊಡೆದು, ಅದರ ವೇಗದಲ್ಲಿ ತನ್ನ ಬಾಣಗಳ ವೇಗವು ವ್ಯರ್ಥವಾಗಿಹೋಗಲು ಬಳಿಕ ಶ್ರೀಘ್ರವಾಗಿ ತನ್ನ ಗದೆಯಿಂದಲೇ ಅದನ್ನು ತಾಡಿಸಿ ಖಂಡಿಸಿ ಬಿಟ್ಟನು. ಕೂಡಲೆ ಆ ರಾಕ್ಷಸನು ಚಿನ್ನದ ಕಟ್ಟುಗಳನ್ನು ಬಿಗಿದಿರುವ ಉಕ್ಕಿನ ಘೋರವಾದ ಶಕ್ತ್ಯಾಯುಧವನ್ನು ಭೀಮಸೇನನ ಮೇಲೆ ಪ್ರಯೋಗಿಸಿದನು. ಅಗ್ನಿಜ್ವಾಲೆಗಳಿಂದ ಕೂಡಿ ರೌದ್ರಾಕಾರವಾದ ಆ ಶಕ್ತಿಯು ಅತಿವೇಗದಿಂದ ಬಂದು ಭೀಮಸೇನನ ಬಲದಭುಜವನ್ನು ಸೀಳಿಕೊಂಡು ಭೂಮಿಯಲ್ಲಿ ಬಿತ್ತು. ಆ ಶಕ್ತ್ಯಾಯುಧದ ಪೆಟ್ಟಿನಿಂದ ಪೀಡಿತನಾದ ಭೀಮಸೇನನು ಕೋಪದಿಂದ ಕಣ್ಣುಗಳನ್ನು ಕೆಂಪುಮಾಡಿಕೊಂಡು, ಶತ್ರುಸಂಹಾರಕವಾಗಿಯೂ ಉಕ್ಕಿನಿಂದ ಮಾಡಿದ್ದಾಗಿಯೂ ಚಿನ್ನದಕಟ್ಟುಗಳಿಂದ ಕೂಡಿರುವದಾಗಿಯೂ ಇರುವ ಗದಾಯುಧವನ್ನು ಕಯ್ಯಲ್ಲಿ ಹಿಡಿದು, ರಭಸದಿಂದ ಮಣಿಮಂತನಮೇಲೆ ಬಿದ್ದನು. ಆಗ ಮಣಿಮಂತನೂ ಮಹತ್ತಾದ ಶೂಲಾಯುಧವನ್ನು ವೇಗದಿಂದ ಭೀಮಸೇನನ ಮೇಲೆ ಪ್ರಯೋಗಿಸಿ, ಗಟ್ಟಿಯಾಗಿ ಸಿಂಹನಾದವನ್ನು ಮಾಡಿದನು. ಬಳಿಕ ಭೀಮಸೇನನು ಗರುಡನು ಸರ್ಪವನ್ನು ಅಟ್ಟಿಕೊಂಡು ಹೋಗುವಂತೆ ಆ ರಾಕ್ಷಸನನ್ನು ಅಟ್ಟಿಕೊಂಡುಹೋಗಿ, ಆಕಾಶಮಾರ್ಗಕ್ಕೆ ಹಾರಿ ಗದೆಯನ್ನು ಬಿರಬಿರನೆ ತಿರುಗಿಸಿ ಆ ರಾಕ್ಷಸನ ಮೇಲೆ ಪ್ರಯೋಗಿಸಿದನು. ಆಗ ಆ ಗಧಾಯುಧವು ಇಂದ್ರನಿಂದ ಬಿಡಲ್ಪಟ್ಟ ವಜ್ರಾಯುಧದಂತೆ ಆ ರಾಕ್ಷಸನ ತಲೆಯಮೇಲೆ ಬಿದ್ದು ಆತನನ್ನು ಸಂಹರಿಸಿ, ಮಾಟದ ಗೊಂಬೆಯಂತೆ ಭೂಮಿಯಲ್ಲಿ ಬಿತ್ತು. ಆಗ ಸಿಂಹದಿಂದ ಹತವಾದ ಗೂಳಿಯಂತೆ ಭೀಮಸೇನನಿಂದ ಹತನಾಗಿ ನೆಲದಮೇಲೆ ಬಿದ್ದಿದ್ದ ಆ ರಾಕ್ಷಸನನ್ನು ನೋಡಿ, ಅಲ್ಲಿದ್ದ ರಾಕ್ಷಸರು ಭಯಪಟ್ಟು ಘೋರವಾಗಿ ಕೂಗಿಕೊಂಡು ಪೂರ್ವದಿಕ್ಕಿಗೆ ಓಡಿಹೋದರು.

## ೧೬೧ನೇ ಅಧ್ಯಾಯ.—ಕುಬೇರನ ದರ್ಶನ.

ವೈಶಂಪಾಯನಮುನೀಂದ್ರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಬಳಿಕ ಹತಶೇಷರಾದ ರಾಕ್ಷಸರ ಬಹುವಿಧವಾದ ಆ ಶಬ್ದಗಳಿಂದ ಗಂಧಮಾದನಪರ್ವತದ ಗುಹೆಗಳು ಮೊಳಗುವದನ್ನು ಕೇಳಿ ಅಜಾತಶತ್ರುವಾದ ಧರ್ಮರಾಯನೂ ನಕುಲಸಹದೇವರೂ ದ್ರೌಪದಿಯೂ ಧೌಮ್ಯಾಚಾರ್ಯರೂ ಇನ್ನೂ ಬ್ರಾಹ್ಮಣರೂ ಪಾಂಡವರಿಗೆ ಮಿತ್ರರಾದವರೂ ಸಹ ತಮ್ಮ ಸಮೀಪದಲ್ಲಿ ಭೀಮಸೇನನನ್ನು ಕಾಣದೆ ಕಳವಳಪಟ್ಟರು. ಆಗ ಧರ್ಮರಾಯನೂ ನಕುಲಸಹದೇವರೂ ಸಹ ದ್ರೌಪದಿಯನ್ನು ಆರ್ಷ್ಟಿಷೇಣಮಹರ್ಷಿಯ ವಶದಲ್ಲಿ ಬಿಟ್ಟು, ತಮ್ಮತಮ್ಮ ಆಯುಧಗಳನ್ನು ತೆಗೆದುಕೊಂಡು, ಎಲ್ಲರೂ ಒಟ್ಟಾಗಿ ಆ ಪರ್ವತದ ಶಿಖರಭಾಗವನ್ನೇರಿದರು. ಬಳಿಕ ಶೂರರೂ ಮಹಾರಥರೂ ಧನುರ್ಧರಾಗ್ರೇಸರರೂ ಶತ್ರುಸಂಹಾರಕರೂ ಆದ ಆ ನಾಲ್ವರುಮಂದಿಯೂ ಆ ಪರ್ವತದ ಅಗ್ರಭಾಗವನ್ನು ಹೊಂದಿ, ಅಲ್ಲಿ ಭೀಮಸೇನನನ್ನೂ ಆತನಿಂದ ಹತರಾಗಿ ಕೆಳಗೆ ಬಿದ್ದಿದ್ದ ಮಹಾಬಲಶಾಲಿಗಳೂ ಮಹಾಕಾಯರೂ ಪ್ರಕಾಶಮಾನರೂ ಆದ ಆ ರಾಕ್ಷಸರನ್ನೂ ನೋಡಿದರು. ಆಗ ಅಲ್ಲಿದ್ದ ಮಹಾಬಾಹುವಾದ ಆ ಭೀಮಸೇನನು ಆ ದಾನವರನ್ನೆಲ್ಲಾ ಸಂಹಾರಮಾಡಿ, ಗದಾಖಡ್ಗಧನುರ್ಧಾರಿಯಾಗಿ ಶತ್ರುಜಯದಿಂದ ದೇವೇಂದ್ರನಂತೆ ಪ್ರಕಾಶಿಸುತ್ತಿದ್ದನು. ಆ ಸಮಯದಲ್ಲಿ ಯುಧಿಷ್ಠಿರ ನಕುಲಸಹದೇವರು ತಮ್ಮ ಒಡಹುಟ್ಟಿದ ಭೀಮಸೇನನನ್ನು ನೋಡಿ, ಎಲ್ಲರೂ ಆತನನ್ನು ಆಲಿಂಗನೆಮಾಡಿಕೊಂಡು, ಅಧಿಕವಾದ ಸಂತೋಷದಿಂದ ಅಲ್ಲಿ ಕೂತುಕೊಂಡರು. ಧನುರ್ಧರಾಗ್ರೇಸರರಾದ ಆ ನಾಲ್ಕುಮಂದಿ ಪಾಂಡವರಿಂದಲೂ ಕೂಡಿ ಆ ಪರ್ವತದ ಶಿಖರಭಾಗವು ಮಹಾನುಭಾವರಾದ ದೇವೋತ್ತಮರಾದ ನಾಲ್ಕುಮಂದಿ ದಿಕ್ಪಾಲಕರಿಂದ

ಕೂಡಿರುವಂತೆ ಅಧಿಕವಾಗಿ ಪ್ರಕಾಶಿಸಿತು. ಬಳಿಕ ಧರ್ಮರಾಯನು ಅಲ್ಲಿರುವ ಕುಬೇರನ ವಾಸಸ್ಥಾನವನ್ನೂ ಹತರಾದ ಆ ಯಕ್ಷರಾಕ್ಷಸರನ್ನೂ ನೋಡಿ ಭೀಮಸೇನನನ್ನು ಕುರಿತು "ಎಲೈ ಭೀಮಸೇನನೆ, ನೀನು ಈ ಕಾರ್ಯವನ್ನು ಸಾಹಸದಿಂದ ಮಾಡಿದ್ದರೂ, ಅಜ್ಞಾನದಿಂದ ಮಾಡಿದ್ದರೂ, ಪಾಪಾವಹವಾದದ್ದೇ ಸರಿ. ಈ ಕೃತ್ಯವು ಋಷಿಯಂತೆ ವನವಾಸಮಾಡಿಕೊಂಡಿರುವ ನಿನಗೆ ತಕ್ಕದ್ದಲ್ಲ. ಈ ರಾಕ್ಷಸರನ್ನು ನೀನು ನಿರ್ನಿಮಿತ್ತವಾಗಿ ಸಂಹಾರ ಮಾಡಿದೆ. ರಾಜರಿಗೆ ಅಸಮ್ಮತವಾದ ಕಾರ್ಯವನ್ನೇ ಮಾಡಕೂಡದೆಂದು ಧರ್ಮಜ್ಞರಾದವರು ಹೇಳುವರು. ಹೀಗಿರುವಲ್ಲಿ ದೇವತೆಗಳಿಗೆ ಅಸಮ್ಮತವಾದ ಕಾರ್ಯವನ್ನು ನೀನು ಮಾಡಿರುವೆ. ಧರ್ಮಾಧರ್ಮಾರ್ಥಗಳನ್ನು ವಿಚಾರಮಾಡದೆ ಯಾವ ಪುರುಷನು ಪಾಪಕೃತ್ಯದಲ್ಲಿ ಮನಸ್ಸುಮಾಡುವನೋ, ಅವನು ಆ ಪಾಪಫಲವನ್ನು ಅನುಭವಿಸುವನು. ಎಲೈ ಭೀಮಸೇನನೆ, ನಿನಗೆ ನನ್ನಲ್ಲಿ ಪ್ರೀತಿಯಿದ್ದರೆ ಇನ್ನು ಇಂಥಾ ಕಾರ್ಯದಲ್ಲಿ ಪ್ರವರ್ತಿಸಬೇಡ" ಎಂದು ಹೇಳಿ, ಭೀಮಸೇನನು ಮಾಡಿದ ಕೆಲಸವನ್ನೇ ಚಿಂತಿಸುತ್ತ ಸುಮ್ಮನಾದನು.

ಈ ಕಡೆಯಲ್ಲಿ ಭೀಮಸೇನನಿಂದ ಹತರಾಗಿ ಉಳಿದಿದ್ದ ಕೆಲವುಮಂದಿ ರಾಕ್ಷಸರು ಭೀಮಸೇನನ ಭಯದಿಂದ ತಮ್ಮ ತಮ್ಮ ಆಯುಧಗಳನ್ನು ಬಿಟ್ಟು, ರಕ್ತದಿಂದ ನೆನೆದಿರುವ ಕವಚಗಳುಳ್ಳವರಾಗಿ, ತಲೆಯನ್ನು ಕೆದರಿಕೊಂಡು, ಭಯಸಂಭ್ರಮದಿಂದ ಜಾಗ್ರತೆಯಾಗಿ ಕುಬೇರನ ಮನೆಗೆ ಹೋಗಿ ಗಟ್ಟಿಯಾಗಿ ಆರ್ತಸ್ವರವನ್ನು ಮಾಡಿ, ಬಳಲಿಕೆಯಿಂದ ನಿಟ್ಟುಸುರುಬಿಡುತ್ತ, ಯಕ್ಷಾಧಿಪತಿಯಾದ ಕುಬೇರನನ್ನು ನೋಡಿ "ಎಲೈ ಸ್ವಾಮಿಯೆ, ಗದೆ ಪರಿಘ ಖಡ್ಗ ತೋಮರ ಪ್ರಾಸ ಮೊದಲಾದ ಆಯುಧಗಳನ್ನು ಹಿಡಿದು ಯುದ್ಧಮಾಡತಕ್ಕ ಸಮರ್ಥರಾದ ನಿನ್ನ ಭಟರಾದ ರಾಕ್ಷಸರು ಒಬ್ಬ ಮನುಷ್ಯನಿಂದ ಹತರಾಗಿ ಹೋದರು. ಆ ಮನುಷ್ಯಮಾತ್ರದವನು ತನ್ನ ಬಲದ ಕೊಬ್ಬಿನಿಂದ ಈ ಪರ್ವತದ ಶಿಖರಭಾಗವನ್ನು ಪುಡಿಪುಡಿಮಾಡಿ ಯಕ್ಷರಾಕ್ಷಸಶ್ರೇಷ್ಠರನ್ನು ಸಂಹರಿಸಿ ಕೆಳಗೆ ಕೆಡಹಿರುವನು. ನಿನ್ನ ಸ್ನೇಹಿತನಾದ ಮಣಿಮಂತನು ಆತನೊಡನೆ ಯುದ್ಧಮಾಡಿ ಮೃತನಾದನು. ಹತಶೇಷರಾದ ನಾವು ಇಲ್ಲಿಗೆ ಬಂದೆವು. ಆ ಮಾನವನು ಮಾಡಿದ ಅಪರಾಧಕ್ಕೆ ಮುಂದೇನು ಮಾಡಬೇಕೋ ಅದನ್ನು ಯೋಚಿಸು" ಎಂದು ವಿಜ್ಞಾಪಿಸಿದರು. ಈ ಪ್ರಕಾರ ಭೀಮಸೇನನು ಎರಡನೇ ಆವರ್ತಿ ಅಪರಾಧ ಮಾಡಿದ್ದನ್ನು ಕೇಳಿ, ಯಕ್ಷಾಧಿಪನಾದ ಕುಬೇರನು ಕೋಪದಿಂದ ಕೆಂಪಾದ ಕಣ್ಣುಗಳುಳ್ಳವನಾಗಿ, ಸ್ವಲ್ಪಹೊತ್ತು ಆಲೋಚಿಸಿ, ರಥವನ್ನು ಸಿದ್ಧಪಡಿಸುವಂತೆ ಗಂಧರ್ವರಿಗೆ ಆಜ್ಞಾಪಿಸಿದನು. ಆಗ ಗಂಧರ್ವರು ನೀರುತುಂಬಿದ ಮೇಘದಂತೆ ಪ್ರಕಾಶಿಸುವದಾಗಿಯೂ ಪರ್ವತದ ಶಿಖರದಂತೆ ಉನ್ನತವಾಗಿಯೂ ಇರುವ ದಿವ್ಯವಾದ ರಥಕ್ಕೆ ಸಕಲಗುಣಗಳಿಂದಲೂ ಕೂಡಿ ತೇಜೋಬಲದಿಂದ ಮೆರೆಯುತ್ತ ರತ್ನಾಭರಣಗಳಿಂದ ಭೂಷಿತಗಳಾಗಿ ವಾಯುವೇಗಕ್ಕೆ ಸಮವಾದ ವೇಗವುಳ್ಳ ಕುದುರೆಗಳನ್ನು ಕಟ್ಟಿ, ಅದನ್ನು ಕುಬೇರನ ಮುಂದೆ ತಂದು ನಿಲ್ಲಿಸಿದರು. ಆ ಕುದುರೆಗಳು ಪರಸ್ಪರವಾಗಿ ಜಯಸೂಚಕವಾದ ಹೇಷಾರವವನ್ನು ಮಾಡುತ್ತಿರಲು, ರಾಜರಾಜನಾದ ಕುಬೇರನು ಆ ರಥವನ್ನೇರಿ ಅನೇಕಮಂದಿ ರಾಕ್ಷಸರೊಡನೆ ದೇವತೆಗಳಿಂದಲೂ ಗಂಧರ್ವರಿಂದಲೂ ಹೊಗಳಿಸಿಕೊಳ್ಳುತ್ತ ಹೊರಟನು. ಆತನ ಸಂಗಡ ಮಹತ್ತಾದ ಶರೀರವುಳ್ಳ ಒಂದು ಸಾವಿರಮಂದಿ ಗಂಧರ್ವರು ಕೆಂಪಾದ ನೇತ್ರವುಳ್ಳವರಾಗಿ ಖಡ್ಗವನ್ನು ಧರಿಸಿ, ಅತಿವೇಗದಿಂದ ಆಕಾಶವನ್ನು ಆಕರ್ಷಣಮಾಡುವಂತೆ ಆಕಾಶಮಾರ್ಗದಲ್ಲಿ ಅನೇಕ ಕುದುರೆಗಳಿಂದ ಪರಿವೃತನಾದ ಕುಬೇರನನ್ನು ಸುತ್ತುವರಿದು ಗಂಧಮಾದನಪರ್ವತಕ್ಕೆ ಬಂದು ಸೇರಿದರು. ಈ ಪ್ರಕಾರ ಯಕ್ಷರಾಕ್ಷಸಗಂಧರ್ವರಿಂದ ಪರಿವೃತನಾಗಿ ಬರುವ ಕುಬೇರನನ್ನು ನೋಡಿ ಪಾಂಡವರು ರೋಮಾಂಚಿತಗಾತ್ರರಾದರು. ಆಗ ಕುಬೇರನೂ ಸಹ ಧನುಸ್ಸನ್ನೂ ಖಡ್ಗವನ್ನೂ ಧರಿಸಿರುವ ಮಹಾಪರಾಕ್ರಮಶಾಲಿಗಳಾದ ಪಾಂಡವರನ್ನು ನೋಡಿ, ಪ್ರೀತಿಯಿಂದ ದೇವಕಾರ್ಯವನ್ನು ಮಾಡುವವರಲ್ಲಿ ಇಚ್ಛೆಯುಳ್ಳವನಾಗಿ, ಮನಸ್ಸಿನಲ್ಲೇ ಸಂತೋಷಪಟ್ಟನು. ಬಳಿಕ ಕುಬೇರನೂ ತನ್ನ ಸೈನಿಕರಾದ ಯಕ್ಷರಾಕ್ಷಸಗಂಧರ್ವರೊಡನೆ ಅಧಿಕವಾದ ವೇಗದಿಂದ ಪಕ್ಷಿಗಳಂತೆ ಆ ಪರ್ವತದ ಶೃಂಗದಮೇಲೆ ಇಳಿದು, ಪಾಂಡವರ ಸಮೀಪದಲ್ಲಿ ನಿಂತು, ಅವರನ್ನು ನೋಡಿ ಸಂತೋಷಯುಕ್ತನಾಗಿರುವದನ್ನು ತಿಳಿದು, ಪಾಂಡವರು ತಮ್ಮ ಕ್ರೋಧವನ್ನು ಪರಿಹರಿಸಿಕೊಂಡು, ಬಳಿಕ ಕುಬೇರನಿಗೆ ವಂದನೆಯನ್ನು ಮಾಡಿ, ತಮ್ಮನ್ನು ಅಪರಾಧಿಗಳಂತೆ ಭಾವಿಸಿಕೊಂಡು ಕೈಮುಗಿದುಕೊಂಡು ಆತನ

ಸುತ್ತಲೂ ನಿಂತುಕೊಂಡರು. ಬಳಿಕ ಕುಬೇರನು ವಿಶ್ವಕರ್ಮನಿಂದ ನಿರ್ಮಿತವಾದ ಪುಷ್ಪಕವಿಮಾನದಲ್ಲಿ ವಿಚಿತ್ರ ಾದ ಹಾಸಿಗೆಯಮೇಲೆ ಕೂತಿರಲು, ಗೂಟಗಳಂತೆ ಕಿವಿಗಳುಳ್ಳವರಾಗಿಯೂ ಮಹತ್ತಾದ ಶರೀರವುಳ್ಳವರಾಗಿಯೂ ೀಗಸಂಪನ್ನರಾಗಿಯೂ ಇರುವ ಅನೇಕಮಂದಿ ಯಕ್ಷರೂ ರಾಕ್ಷಸರೂ ಗಂಧರ್ವರೂ ಅಪ್ಸರಸ್ತ್ರೀಯರೂ ಸಹ ುಹೇಂದ್ರನನ್ನು ಸುತ್ತುವರಿಯುವ ದೇವತೆಗಳಂತೆ ಕುಬೇರನನ್ನು ಸುತ್ತುವರಿದು ನಿಂತರು. ಭೀಮಸೇನನು ಕತ್ತಿ ಲ್ಲಿ ಸುವರ್ಣದ ಮಾಲಿಕೆಯನ್ನೂ ಕಯ್ಯಲ್ಲಿ ಪಾಶಖಡ್ಗಧನುಸ್ಸುಗಳನ್ನೂ ಧರಿಸಿಕೊಂಡು ಆ ರಾಕ್ಷಸರೆಲ್ಲರೂ ನ್ನನ್ನು ನೋಡುತ್ತಿದ್ದರೂ, ತನ್ನನ್ನು ಕುಬೇರನು ನೋಡುತ್ತಿದ್ದರೂ, ಸ್ವಲ್ಪವೂ ಭಯವಿಲ್ಲದೆ ತೀಕ್ಷ್ಣವಾದ ಬಾಣಗ ನ್ನು ಬತ್ತಳಿಕೆಗಳಿಂದ ತೆಗೆದುಕೊಂಡು ಯುದ್ಧಸನ್ನದ್ಧನಾಗಿಯೇ ಇದ್ದನು. ಅಂಥ ಭೀಮಸೇನನನ್ನು ನೋಡಿ ಕುಬೇರನು ಧರ್ಮರಾಯನನ್ನು ಕುರಿತು "ಎಲೈ ಧರ್ಮರಾಯನೆ, ನೀನು ಸಕಲಪ್ರಾಣಿಗಳಿಗೂ ಹಿತವನ್ನೇ ಎಣಿಸ ಕ್ಕವನೆಂದು ಸರ್ವರೂ ಹೇಳುವರು. ನೀನು ನಿರ್ಭಯವಾಗಿ ತಮ್ಮಂದಿರೊಡಗೂಡಿ ಈ ಪರ್ವತಾಗ್ರದಲ್ಲಿ ವಾಸ ಾಡು. ಇಂಥ ಕಾರ್ಯವನ್ನು ಮಾಡಿದನೆಂದು ಭೀಮಸೇನನಮೇಲೆ ನೀನು ಆಗ್ರಹಮಾಡಬೇಡ. ಈಗ ಇಲ್ಲಿ ುಕ್ಷರಾಕ್ಷಸರು ಮೊದಲೇ ದೈವಯೋಗದಿಂದ ಹತರಾಗಿದ್ದರು. ಅದಕ್ಕೆ ನಿನ್ನ ತಮ್ಮನು ನಿಮಿತ್ತನಾದನು. ಆತನು ಾಡಿದ ಸಾಹಸಕ್ಕಾಗಿ ನೀನು ಲಜ್ಜೆಪಡಬೇಡ. ಪೂರ್ವದಲ್ಲಿ ಹೀಗೆ ಯಕ್ಷರಾಕ್ಷಸರು ಅನೇಕಾವರ್ತಿ ಹತರಾಗಿರುವ ನ್ನು ದೇವತೆಗಳೆಲ್ಲರೂ ನೋಡಿರುವರು. ನನಗೆ ಭೀಮಸೇನನ ಮೇಲೆ ಕ್ರೋಧವಿಲ್ಲ. ಆತನು ಮಾಡಿದ ಕಾರ್ಯ ಂದ ನನಗೆ ತುಂಬಾ ಸಂತೋಷವುಂಟಾಗಿರುವದು" ಎಂದು ನುಡಿದು, ಬಳಿಕ ಭೀಮಸೇನನನ್ನು ಕುರಿತು ಎಲೈ ಕುರುಕುಲಶ್ರೇಷ್ಠನೆ, ದ್ರೌಪದೀನಿಮಿತ್ತವಾಗಿ ನೀನು ಸಾಹಸವನ್ನು ಮಾಡಿ ನನ್ನನ್ನು ಲಕ್ಷ್ಯಮಾಡದೆ, ್ವಬಾಹುಬಲದಿಂದ ಯಕ್ಷರಾಕ್ಷಸರನ್ನು ಸಂಹರಿಸಿದೆ. ಇದನ್ನು ನಾನು ಮನಸ್ಸಿನಲ್ಲಿ ಇಡತಕ್ಕವನಲ್ಲ. ಇದ ಂದ ನಿನ್ನಲ್ಲಿ ನನಗೆ ಅಧಿಕವಾದ ಪ್ರೀತಿಯೇ ಉಂಟಾಗಿರುವದು. ಎಲೈ ಭೀಮಸೇನನೆ, ಪೂರ್ವದಲ್ಲಿ ಅಗಸ್ತ್ಯಮ ರ್ಷಿಯು ಯಾವದೋ ಒಂದು ಅಪರಾಧಕ್ಕಾಗಿ ನನ್ನಮೇಲೆ ಕೋಪಿಸಿಕೊಂಡು, ನನಗೆ ಪರಾಜಯವಾಗುವಂತೆ ಾಪವನ್ನು ಕೊಟ್ಟಿದ್ದನು. ಅದರಿಂದ ನಾನು ಮುಂದೆ ಬಹಳವಾಗಿ ಕ್ಲೇಶಪಡಬೇಕಾಗಿತ್ತು. ಈ ಅಘೋರವಾದ ಾಪವು ನಿನ್ನಿಂದ ನಿವೃತ್ತವಾಯಿತು. ಇದರಿಂದ ನಿನ್ನಲ್ಲಿ ಏನೂ ಅಪರಾಧವಿಲ್ಲವು" ಎಂದನು.

ಅದನ್ನು ಕೇಳಿ, ಧರ್ಮರಾಯನು ಕುಬೇರನನ್ನು ಕುರಿತು "ಎಲೈ ಕುಬೇರನೆ, ಅಗಸ್ತ್ಯಮಹರ್ಷಿಯು ಯಾತ ್ಕೋಸ್ಕರ ನಿನಗೆ ಶಾಪವನ್ನು ಕೊಟ್ಟನು? ಆ ಕಾರಣವನ್ನು ಕೇಳಬೇಕೆಂದು ನನಗೆ ಕುತೂಹಲವುಂಟಾಗಿರು ದು. ಮತ್ತು ಆ ಮಹರ್ಷಿಯ ಕ್ರೋಧದಿಂದ ಆಗಲೇ ಸಪರಿವಾರನಾಗಿ ನೀನು ಸುಟ್ಟುಹೋಗದೆ ಇದ್ದದ್ದು ಶ್ಚರ್ಯಕರವು" ಎನಲು, ಕುಬೇರನು "ಎಲೈ ಧರ್ಮನಂದನನೆ, ಪೂರ್ವದಲ್ಲಿ ಕುಶಸ್ಥಲಿಯೆಂಬ ದೇಶದಲ್ಲಿ ಸಕಲದೇವ ಗಳೂ ಮಂತ್ರಾಲೋಚನೆಯನ್ನು ಮಾಡುವದಕ್ಕಾಗಿ ನನ್ನನ್ನೂ ಅಪೇಕ್ಷಿಸಿದರು. ಆಗ ನಾನು ಮುನ್ನೂರು ುಹಾಪದ್ಮಸಂಖ್ಯೆಯುಳ್ಳವರಾಗಿ ನಾನಾವಿಧವಾದ ಆಯುಧಗಳನ್ನು ಧರಿಸಿದ್ದ ಯಕ್ಷರೊಡನೆ ದೇವತೆಗಳ ಸದಸ್ಸಿಗೆ ೊರಟು, ಮಾರ್ಗದಲ್ಲಿ ನಾನಾವಿಧವಾದ ಪಕ್ಷಿಗಳಿಂದಲೂ ಪುಷ್ಪಿತವಾದ ಅನೇಕ ವೃಕ್ಷಗಳಿಂದಲೂ ಶೋಭಿತವಾದ ುಮುನಾನದೀತೀರದಲ್ಲಿ ಇರುವ ಒಂದು ಆಶ್ರಮದಲ್ಲಿ ಘೋರವಾಗಿ ತಪಸ್ಸನ್ನು ಮಾಡುತ್ತ, ಸೂರ್ಯಮುಖವಾಗಿ ರಡು ಕೈಗಳನ್ನೂ ಮೇಲಕ್ಕೆತ್ತಿಕೊಂಡು, ಯಜ್ಞೇಶ್ವರನಂತೆ ತೇಜೋರಾಶಿಯಾಗಿದ್ದ ಅಗಸ್ತ್ಯಮಹರ್ಷಿಯನ್ನು ೋಡಿದೆನು. ಆಗ ನನ್ನ ಮಿತ್ರನಾದ ರಾಕ್ಷಸಶ್ರೇಷ್ಠನಾದ ಮಣಿಮಂತನು ಮೂರ್ಖಭಾವದಿಂದಲೂ, ಅಜ್ಞಾನದಿಂ ಲೂ, ಅಹಂಕಾರದಿಂದಲೂ, ದರ್ಪದಿಂದಲೂ, ಆಕಾಶಮಾರ್ಗದಲ್ಲಿ ಹೋಗುತ್ತ ಆ ಅಗಸ್ತ್ಯಮಹರ್ಷಿಯ ಶಿರಸ್ಸಿನ ೀಲೆ 'ಥೂ' ಎಂದು ಉಗುಳಿದನು. ಆಗ ಆ ಮಹರ್ಷಿಯು ಕೆಂಪಾದ ಕಣ್ಣುಗಳುಳ್ಳವನಾಗಿ, ದಿಕ್ಕುಗಳನ್ನೆಲ್ಲಾ ುಟ್ಟುಬಿಡುವನಂತೆ ಕೋಪಗೊಂಡು ನನ್ನನ್ನು ಕುರಿತು 'ಎಲೈ ಕುಬೇರನೆ, ನಿನ್ನ ಮಿತ್ರನಾದ ದುರಾತ್ಮನಾದ ಈ ಾಕ್ಷಸನು ನೀನು ನೋಡುತ್ತಿರುವಾಗಲೇ ನನ್ನನ್ನು ನಿರಾಕರಿಸಿ ನನ್ನಮೇಲೆ ಉಗುಳಿದನು. ಆದ್ದರಿಂದ ಈ ರಾಕ್ಷ ನು ಸೈನ್ಯಸಹಿತನಾಗಿ ಒಬ್ಬ ಮನುಷ್ಯನಿಂದ ಹತನಾಗಲಿ. ಅದರಿಂದ ನೀನು ಮಹತ್ತಾದ ಕ್ಲೇಶವನ್ನನುಭವಿ

ಸುವೆ ' ಎಂದು ಶಾಪವನ್ನುಕೊಟ್ಟು, ಬಳಿಕ ಆ ಪುರುಷನನ್ನು ನೋಡಿ ' ನೀನು ಈ ದೋಷವನ್ನು ಪರಿಹಾರಮಾಡಿಕೊಳ್ಳುವೆ. ಮತ್ತು ನಿನ್ನ ಸೈನಿಕರಲ್ಲಿ ಯಾರು ನಿನ್ನ ಆಜ್ಞೆಯನ್ನು ನಡಿಸುವರೋ ಅವರಿಗೆ ಆ ಮನುಷ್ಯನಿಂದ ಮರಣ ಕೆಲಸವಿಲ್ಲ ' ಎಂದು ನುಡಿದಿದ್ದನು. ಎಲೈ ಧರ್ಮರಾಯನೆ ಈ ರೀತಿಯಾಗಿ ನನಗೆ ಶಾಪ ಬಂತು. ಅದು ಈ ದಿನ ನಿನ್ನ ತಮ್ಮನಾದ ಭೀಮಸೇನನಿಂದ ಪರಿಹಾರವಾಯಿತು " ಎಂದು ಕುಬೇರನು ಧರ್ಮರಾಯನಿಗೆ ಹೇಳಿದನು.

## ೧೬೨ನೇ ಅಧ್ಯಾಯ.—ಕುಬೇರ ವಾಕ್ಯ.

ವೈಶಂಪಾಯನಮುನೀಂದ್ರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಬಳಿಕ ಕುಬೇರನು ಧರ್ಮರಾಯನನ್ನು ಕುರಿತು " ಎಲೈ ಧರ್ಮರಾಯನೆ, ದೇಶಕಾಲಗಳನ್ನು ತಿಳಿಯದೆ ಸಾಹಸಮಾಡುವದು ತಿರಸ್ಕಾರಕ್ಕೆ ಕಾರಣವಾದ್ದರಿಂದ, ಲೋಕತಂತ್ರವನ್ನುನಡೆಯಿಸತಕ್ಕ ಕಾರ್ಯಗಳಿಗೆ ಧೈರ್ಯವೂ ಯತ್ನವೂ ಪರಾಕ್ರಮವೂ ದೇಶಕಾಲಪರಿಜ್ಞಾನವೂ ಮುಖ್ಯವಾದಂಥವುಗಳು. ಕೃತಯುಗದಲ್ಲಿ ಧೈರ್ಯವಂತರಾಗಿಯೂ ಕಾರ್ಯಸಮರ್ಥರಾಗಿಯೂ ಪರಾಕ್ರಮಶಾಲಿಗಳಾಗಿಯೂ ಇದ್ದ ಮನುಷ್ಯರು ದೇಶಕಾಲಗಳನ್ನು ನಿರೀಕ್ಷಿಸುತ್ತಿರಲಿಲ್ಲ. ಕ್ಷತ್ರಿಯರಾದವರು ಯಾವಾಗಲೂ ದೇಶಕಾಲಗಳನ್ನು ತಿಳಿದು ಸಕಲ ಧರ್ಮಗಳನ್ನೂ ಆಚರಿಸುತ್ತ ಧೈರ್ಯಶಾಲಿಗಳಾಗಿದ್ದರೆ, ಅವರು ಬಹುಕಾಲ ರಾಜ್ಯಪರಿಪಾಲನೆಯನ್ನು ಮಾಡುವರು. ಯಾವ ಪುರುಷನು ಸಕಲ ಕಾರ್ಯಗಳಲ್ಲಿಯೂ ಈ ಪ್ರಕಾರ ನಡೆದುಕೊಳ್ಳುವನೋ, ಆ ಪುರುಷನು ಈ ಲೋಕದಲ್ಲಿ ಯಶಸ್ಸನ್ನೂ ಪರಲೋಕದಲ್ಲಿ ಉತ್ತಮವಾದ ಗತಿಯನ್ನೂ ಪಡೆಯುವನು. ವೃತ್ರಾಸುರನನ್ನು ಸಂಹಾರಮಾಡಿದ ಇಂದ್ರನೂ ಸಹ ದೇಶಕಾಲಗಳನ್ನು ತಿಳಿದು ತನ್ನ ಪರಾಕ್ರಮವನ್ನು ತೋರಿಸಿ, ಅಷ್ಟವಸುಗಳೊಡಗೂಡಿ ಮೊದಲು ಕಳೆದುಕೊಂಡಿದ್ದ ತನ್ನ ರಾಜ್ಯವನ್ನು ಪುನಃ ಪಡೆದನು. ಪಾಪಾತ್ಮನಾದ ಯಾವ ಪುರುಷನು ದೇಶಕಾಲಗಳನ್ನೆಣಿಸದೆ, ತನ್ನ ಹಾನಿಯನ್ನೂ ನೋಡದೆ, ಇದು ಪಾಪವೆಂದೂ ಇದು ಪುಣ್ಯವೆಂದೂ ವಿಚಾರಮಾಡದೆ, ಕೇವಲ ಕ್ರೋಧಾವೇಶದಿಂದ ವ್ಯರ್ಥವಾಗಿ ಪಾಪಕಾರ್ಯಗಳನ್ನು ಮಾಡುವನೋ; ಆತನು ಈ ಲೋಕದಲ್ಲಿ ಅಪಕೀರ್ತಿಯನ್ನೂ ಪರಲೋಕದಲ್ಲಿ ದುರ್ಗತಿಯನ್ನೂ ಪಡೆಯುವನು. ಯಾವಾಗಲೂ ಪಾಪಕೃತ್ಯದಲ್ಲೇ ಪ್ರವರ್ತಿಸುತ್ತ ದುರಾತ್ಮರಾಗಿ ಎಲ್ಲರ ಸಂಗಡಲೂ ಹೋರಾಡಬೇಕೆಂಬ ಅಪೇಕ್ಷೆಯುಳ್ಳ ದುರ್ಬುದ್ಧಿಗಳಾದ ದುರ್ಜನರಿಗೆ ಪಾಪವೇ ಸಂಭವಿಸುವದು. ಇದು ನಿಜವಾದದ್ದು. ಎಲೈ ಧರ್ಮರಾಯನೆ, ಈ ಭೀಮಸೇನನು ಧರ್ಮವನ್ನು ತಿಳಿದವನಲ್ಲ; ಗರ್ವಿಷ್ಠನಾಗಿಯೂ ಬಾಲಬುದ್ಧಿಯಾಗಿಯೂ ಸರ್ವದಾ ಕೋಪಸ್ವಭಾವನಾಗಿಯೂ, ಯಾರ ಭಯವೂ ಇಲ್ಲದವನಾಗಿಯೂ ಇರುವನು. ಆದ್ದರಿಂದ ನೀನು ಆರ್ಷ್ಟಿಷೇಣ ಮಹರ್ಷಿಯ ಆಶ್ರಮಕ್ಕೆ ಹೋದಮೇಲೆ ಆತನಿಗೆ ಬುದ್ಧಿವಾದವನ್ನು ಹೇಳು. ಈ ಕೃಷ್ಣಪಕ್ಷವೆಲ್ಲಾ ನೀನು ಆ ರಾಜರ್ಷಿಯ ಆಶ್ರಮದಲ್ಲೇ ನಿರ್ಭಯವಾಗಿ ವಾಸಮಾಡುತ್ತಿರು. ಅಳಕಾಪಟ್ಟಣದಲ್ಲಿರುವ ಗಂಧರ್ವರೂ, ಯಕ್ಷರೂ, ಕಿನ್ನರರೂ, ನನ್ನ ಆಜ್ಞೆಯಿಂದ ಈ ಪರ್ವತದಲ್ಲಿ ವಾಸಮಾಡಿಕೊಂಡು ಬ್ರಾಹ್ಮಣರೊಡಗೂಡಿದ ನಿಮ್ಮೆಲ್ಲರನ್ನೂ ರಕ್ಷಿಸುವರು. ಭೀಮಸೇನನು ಪದೇಪದೇ ಇಂಥಾ ಸಾಹಸಕಾರ್ಯಗಳನ್ನು ಮಾಡದಂತೆ ನೀನು ಈತನನ್ನು ತಡೆಮಾಡು. ನನ್ನ ಆಜ್ಞೆಯಿಂದ ಈ ಗಂಧರ್ವರು ದಿವ್ಯವಾಗಿಯೂ ಸ್ವಾದುವಾಗಿಯೂ ಇರುವ ಅನ್ನಪಾನೀಯಗಳನ್ನು ನಿಮಗೆ ಸಿದ್ಧಪಡಿಸಿಕೊಟ್ಟು ನಿಮ್ಮ ಶುಶ್ರೂಷೆಯನ್ನು ಮಾಡುವರು. ಇಂದ್ರನಿಗೆ ಅರ್ಜುನನೂ, ವಾಯುವಿಗೆ ಭೀಮಸೇನನೂ, ಯಮನಿಗೆ ನೀನೂ, ಅಶ್ವಿನೀದೇವತೆಗಳಿಗೆ ರೂಪವಂತರಾದ ನಕುಲಸಹದೇವರೂ ಸಹ ಹ್ಯಾಗೆ ರಕ್ಷಣೀಯರೋ, ಹಾಗೆ ನೀವೆಲ್ಲರೂ ನನ್ನಿಂದ ರಕ್ಷಣೀಯರಾಗಿರುವಿರಿ. ಸಕಲ ಧರ್ಮಾರ್ಥಗಳನ್ನೂ ತಿಳಿದಿರುವ ಭೀಮಸೇನನ ತಮ್ಮನಾದ ಅರ್ಜುನನು ಸ್ವರ್ಗದಲ್ಲಿ ಕ್ಷೇಮವಾಗಿರುವನು. ಸ್ವರ್ಗದಲ್ಲಿ ಯಾವಯಾವ ಸಂಪತ್ತುಗಳು ದೇವತೆಗಳಿಗೆ ಜನ್ಮಪ್ರಭೃತಿ ಅನುಕೂಲವಾಗಿರುವವೋ, ಆ ಸಂಪತ್ತುಗಳೆಲ್ಲಾ ಅರ್ಜುನನಿಗೆ ಅನುಕೂಲವಾಗಿರುವವು. ಇಂದ್ರಿಯನಿಗ್ರಹವೂ, ದಾನವೂ, ಬಲವೂ, ಬುದ್ಧಿಯೂ, ಅಕಾರ್ಯದಲ್ಲಿ

ಲಜ್ಜೆಯೂ, ಧೈರ್ಯವೂ, ಉತ್ತಮವಾದ ತೇಜಸ್ಸೂ ಸಹ, ಮಹಾಪರಾಕ್ರಮಶಾಲಿಯಾಗಿಯೂ ಮಹಾಬಲಶಾಲಿಯಾಗಿಯೂ ಇರುವ ಅರ್ಜುನನಲ್ಲಿ ಸ್ವತಸ್ಸಿದ್ಧವಾಗಿರುವವು. ಅರ್ಜುನನು ಅಜ್ಞಾನದಿಂದಲಾಗಲಿ ನಿಂದಿತವಾದ ಕಾರ್ಯವನ್ನು ಮಾಡತಕ್ಕವನಲ್ಲ. ಆತನು ಸುಳ್ಳಾಡತಕ್ಕವನಲ್ಲವೆಂದು ಸರ್ವರೂ ಹೇಳುವರು. ಅಂಥಾ ಅರ್ಜುನನು ದೇವತೆಗಳಿಂದಲೂ ಗಂಧರ್ವರಿಂದಲೂ ಪಿತೃಗಳಿಂದಲೂ ಮಾನಿತನಾಗಿ, ಸ್ವರ್ಗದಲ್ಲಿ ಇಂದ್ರಭವನದಲ್ಲಿ ಅಸ್ತ್ರವಿದ್ಯವನ್ನು ಅಭ್ಯಾಸಮಾಡುತ್ತಿರುವನು. ಮಹಾತೇಜಸ್ವಿಯಾದ ನಿಮ್ಮ ಪಿತಾಮಹನಾದ ಯಾವ ಶಂತನುಚಕ್ರವರ್ತಿಯು ಪೂರ್ವದಲ್ಲಿ ಸಕಲರಾದ ರಾಜರನ್ನೂ ಕ್ಷತ್ರಿಯಧರ್ಮದಿಂದ ಗೆದ್ದು ಸ್ವಾಧೀನಪಡಿಸಿಕೊಂಡನೋ, ಅಂಥಾ ಆತನು ಗಾಂಡೀವಧನುರ್ಧಾರಿಯಾದ ಕುಲಧುರಂಧರನಾದ ಅರ್ಜುನನ ಸಾಮರ್ಥ್ಯವನ್ನು ನೋಡಿ ಸ್ವರ್ಗದಲ್ಲಿ ಬಹಳವಾಗಿ ಆಶ್ಚರ್ಯಪಡುತ್ತಿರುವನು. ಮತ್ತು ದೇವತೆಗಳನ್ನೂ ಪಿತೃದೇವತೆಗಳನ್ನೂ ಋಷಿಗಳನ್ನೂ ಬ್ರಾಹ್ಮಣರನ್ನೂ ಯಥೋಕ್ತವಾಗಿ ಪೂಜಿಸಿ, ಯಮುನಾನದಿಯ ತೀರದಲ್ಲಿ ಮುಖ್ಯವಾದ ಏಳು ಅಶ್ವಮೇಧಯಾಗಗಳನ್ನು ಮಾಡಿ, ಅದರಿಂದ ಸ್ವರ್ಗವನ್ನು ಪಡೆದು ಇಂದ್ರಲೋಕದಲ್ಲಿ ವಾಸಮಾಡಿಕೊಂಡಿರುವ ಆ ಶಂತನುಮಹಾರಾಜನು ವಿಶೇಷವಾಗಿ ನಿಮ್ಮ ಕುಶಲವನ್ನು ಕೇಳುತ್ತಿರುವನು" ಎನಲು, ಅದನ್ನು ಕೇಳಿ ಪಾಂಡವರು ಬಹಳವಾಗಿ ಸಂತೋಷಪಟ್ಟರು. ಬಳಿಕ ಭೀಮಸೇನನು ತಾನು ಹಿಡಿದಿದ್ದ ಧನುಸ್ಸು, ಗದೆ, ಶಕ್ತಿ, ಖಡ್ಗಗಳನ್ನು ಕೆಳಕ್ಕಿಟ್ಟು ಕುಬೇರನಿಗೆ ನಮಸ್ಕಾರಮಾಡಿದನು. ಬಳಿಕ ಕುಬೇರನು ತನಗೆ ನಮಸ್ಕಾರಮಾಡಿದ ಭೀಮಸೇನನನ್ನು ನೋಡಿ "ಎಲೈ ಭೀಮಸೇನನೆ, ನಿನ್ನ ಶತ್ರುಗಳೆಲ್ಲಾ ನಾಶವನ್ನು ಹೊಂದಲಿ. ನಿನ್ನ ಮಿತ್ರರೆಲ್ಲಾ ವೃದ್ಧಿಯನ್ನು ಪಡೆಯಲಿ" ಎಂದು ಹರಿಸಿ "ನೀವೆಲ್ಲರೂ ನಮ್ಮ ಮನೆಯಲ್ಲಿ ಸುಖವಾಗಿ ವಾಸಮಾಡಿಕೊಂಡಿರಿ. ನಿಮಗೆ ಬೇಕಾದ ಇಷ್ಟಾರ್ಥಗಳೆಲ್ಲಾ ನಡೆಯುವವು. ನಿಮ್ಮನ್ನು ಉಪಚರಿಸುವದಕ್ಕೆ ಯಕ್ಷರು ಸಿದ್ಧರಾಗಿರುವರು. ಅರ್ಜುನನು ಇಂದ್ರನಾಜ್ಞೆಯನ್ನು ತೆಗೆದುಕೊಂಡು ಜಾಗ್ರತೆಯಾಗಿ ಬರುವನು" ಎಂದು ಹೇಳಿ ತನ್ನ ವಾಸಸ್ಥಾನಕ್ಕೆ ಹೊರಟು ಹೋದನು. ಬಳಿಕ ಆತನ ಸಂಗಡ ಬಂದಿದ್ದ ಯಕ್ಷರಾಕ್ಷಸರೆಲ್ಲರೂ ನಾನಾವಿಧವಾದ ರತ್ನಗಳಿಂದ ಅಲಂಕೃತರಾಗಿ, ದಿವ್ಯವಾದ ಮೆತ್ತೆಗಳಿಂದ ಯುಕ್ತವಾಗಿರುವ ವಾಹನಗಳನ್ನೇರಿ ಕುಬೇರನನ್ನು ಅನುಸರಿಸಿ ಹೊರಟುಹೋದರು. ಬಳಿಕ ಕುಬೇರನ ಮನೆಯನ್ನು ಕುರಿತು ಹೋಗತಕ್ಕ ಆತನ ರಥಾಶ್ವಗಳು ಆಕಾಶಮಾರ್ಗದಲ್ಲಿ ಹೊರಟು, ಪಕ್ಷಿಗಳಂತೆ ಧ್ವನಿಮಾಡುತ್ತ, ಮೇಘಗಳನ್ನು ಆಕರ್ಷಣೆ ಮಾಡುವವೋ ಎಂಬಂತೆಯೂ ವಾಯುವನ್ನು ಕುಡಿದುಬಿಡುವವೋ ಎಂಬಂತೆಯೂ ವೇಗದಿಂದ ನಡೆದವು. ಬಳಿಕ ಕುಬೇರನ ಭೃತ್ಯರಾದ ಕೆಲವುಮಂದಿ ಯಕ್ಷರಾಕ್ಷಸರು ಭೀಮಸೇನನಿಂದ ಹತರಾದ ಯಕ್ಷರಾಕ್ಷಸರ ಶರೀರಗಳನ್ನು ಕುಬೇರನ ಆಜ್ಞೆಯಿಂದ ಆ ಪರ್ವತದ ಶಿಖರಭಾಗದ ದೆಸೆಯಿಂದ ಕೆಳಕ್ಕೆ ಸೆಳೆದು ಹಾಕಿದರು. ಈ ಪ್ರಕಾರ ಯಕ್ಷರಾಕ್ಷಸರು ಹತರಾಗಲು, ಪೂರ್ವದಲ್ಲಿ ಅಗಸ್ತ್ಯಮಹರ್ಷಿಯು ಕೊಟ್ಟಿದ್ದ ಶಾಪವು ಪೂರೈಸಿತು. ಬಳಿಕ ಮಹಾತ್ಮರಾದ ಪಾಂಡವರು ಸಕಲ ಯಕ್ಷರಾಕ್ಷಸರಿಂದಲೂ ಪೂಜಿತರಾಗಿ ನಿರ್ಭಯವಾಗಿ ಸುಖದಿಂದ ಆ ರಾತ್ರಿ, ಕುಬೇರನ ಮನೆಯಲ್ಲಿ ವಾಸಮಾಡಿದರು.

## ೧೬೪ನೇ ಅಧ್ಯಾಯ.—ಮೇರು ದರ್ಶನ.

ವೈಶಂಪಾಯನ ಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಆ ಬಳಿಕ ಸೂರ್ಯೋದಯವಾಗಲು, ಪೂಜ್ಯನಾದ ಧೌಮ್ಯಾಚಾರ್ಯನು ತನ್ನ ಆಹ್ನಿಕವನ್ನು ನೇರವೇರಿಸಿಕೊಂಡು, ಆರ್ಷ್ಟಿಷೇಣಮಹರ್ಷಿಯೊಡನೆಯೂ ಸಕಲಬ್ರಾಹ್ಮಣರೊಡನೆಯೂ ಪಾಂಡವರ ಬಳಿಗೆ ಬಂದನು. ಬಳಿಕ ಪಾಂಡವರು ತಮ್ಮತಮ್ಮ ನಿತ್ಯಕರ್ಮಗಳನ್ನು ನೆರವೇರಿಸಿಕೊಂಡು, ರಾಜರ್ಷಿಯಾದ ಆರ್ಷ್ಟಿಷೇಣನಿಗೂ ಧೌಮ್ಯಾಚಾರ್ಯರಿಗೂ ಸಕಲರಾದ ಬ್ರಾಹ್ಮಣರಿಗೂ ಸಹ ವಂದನೆಯನ್ನು ಮಾಡಿದರು. ಆಗ ಧೌಮ್ಯಾಚಾರ್ಯರು ಧರ್ಮರಾಯನ ಬಲಗೈಯನ್ನು ಹಿಡಿದು "ಎಲೈ ಧರ್ಮರಾಯನೆ, ಈ ಮಂದರಪರ್ವತವು ಸಮುದ್ರದ

ವರೆಗೂ ಇರುವ ಭೂಮಿಯನ್ನೆಲ್ಲಾ ಆಕ್ರಮಿಸಿಕೊಂಡಿರುವವು. ಅನೇಕ ಪರ್ವತಗಳಿಂದಲೂ ವನಗಳಿಂದಲೂ ಶೋಭಿತವಾದ ಈ ಪೂರ್ವದಿಕ್ಕನ್ನು ಇಂದ್ರಕುಬೇರರಿಬ್ಬರೂ ರಕ್ಷಿಸುತ್ತಿರುವರು. ಸಕಲ ಧರ್ಮಗಳನ್ನೂ ತಿಳಿದಿರುವ ಮಹರ್ಷಿಗಳು ಈ ದಿಕ್ಕು ಇಂದ್ರನಿಗೂ ಕುಬೇರನಿಗೂ ಸಹ ಆಶ್ರಯವಾಗಿರುವದೆಂದು ಹೇಳುವರು. ಆದ್ದರಿಂದ ಈ ದಿಕ್ಕಿನಲ್ಲಿ ಬ್ರಾಹ್ಮಣರೂ, ಧರ್ಮಜ್ಞರಾದ ಋಷಿಗಳೂ, ಸಿದ್ಧರೂ, ಸಾಧ್ಯರೂ, ದೇವತೆಗಳೂ ಸಹ, ಪ್ರತಿದಿನವೂ ಉದಿಸತಕ್ಕ ಸೂರ್ಯನನ್ನು ಉಪಾಸನೆಮಾಡುವರು. ಸಕಲಪ್ರಾಣಿಗಳಿಗೂ ಪ್ರಭುವಾದ ಯಮನು ಮೃತರಾದವರು ಹೊಂದುವದಕ್ಕೆ ಯೋಗ್ಯವಾದ ಈ ದಕ್ಷಿಣದಿಕ್ಕಿನಲ್ಲಿ ವಾಸಮಾಡುತ್ತಿರುವನು. ಈ ದಕ್ಷಿಣದಿಕ್ಕಿನಲ್ಲೇ ಅಧಿಕವಾದ ಐಶ್ವರ್ಯದಿಂದ ಮೆರೆಯುತ್ತ ಆಶ್ಚರ್ಯಕರವಾಗಿಯೂ ಪುಣ್ಯತಮವಾಗಿಯೂ ಇರುವ ಸಂಯಮಿನಿಯೆಂಬ ಪಟ್ಟಣವಿರುವದು. ಅದೇ ಯಮನ ರಾಜಧಾನಿಯೆಂದು ಹೇಳುವರು. ಆ ಪ್ರದೇಶವನ್ನು ಹೊಂದಿ ಸೂರ್ಯನು ಯಾವಾಗಲೂ ತನ್ನ ಸತ್ಯದಿಂದ ನಡೆಯುತ್ತಿರುವನು. ಇದೋ ಈ ಪರ್ವತವನ್ನು ಅಸ್ತಪರ್ವತವೆಂದು ಹೇಳುವರು. ಈ ಪರ್ವತವನ್ನೂ ಮಹೋದಧಿಯನ್ನೂ ಆಶ್ರಯಿಸಿ ವರುಣನು ಅತ್ತಲಾಗಿರುವ ಪ್ರಾಣಿಗಳನ್ನು ರಕ್ಷಿಸುತ್ತಿರುವನು. ಸರ್ವಮಂಗಳಕರವಾಗಿಯೂ ಬ್ರಹ್ಮಜ್ಞಾನಿಗಳಿಗೆ ಗಮ್ಯಸ್ಥಾನವಾಗಿಯೂ ಇರುವ ಮಹಾಮೇರುವು ಇದೋ ಈ ಉತ್ತರದಿಕ್ಕಿನಲ್ಲಿದ್ದುಕೊಂಡು ದಿಕ್ಕುಗಳನ್ನೆಲ್ಲಾ ತನ್ನ ತೇಜಸ್ಸಿನಿಂದ ಬೆಳಗುತ್ತಿರುವದು. ಇಲ್ಲಿಯೇ ಸಕಲ ಪ್ರಾಣಿಗಳನ್ನೂ ಸೃಷ್ಟಿಸತಕ್ಕ ಚತುರ್ಮುಖಬ್ರಹ್ಮನು ಸದಸ್ಸುಮಾಡಿಕೊಂಡಿರುವನು. ಇದೇ ಪ್ರದೇಶವೇ ಬ್ರಹ್ಮನ ಮಾನಸಪುತ್ರರಾದ ದಕ್ಷಪ್ರಜಾಪತಿ ಮೊದಲಾದವರಿಗೆ ಆಶ್ರಯವಾಗಿರುವದು. ದೇವರ್ಷಿಗಳೂ ವಸಿಷ್ಠಮೊದಲಾದ ಸಪ್ತರ್ಷಿಗಳೂ ಸಹ ಇತ್ತಲಾಗಿಯೇ ಇದ್ದುಕೊಂಡು, ಇಲ್ಲೇ ಉದಯಿಸುತ್ತಿರುವರು. ಎಲೈ ಧರ್ಮರಾಯನೆ, ನೋಡು : ಈ ಮೇರುಪರ್ವತದ ಶಿಖರವು ಎಷ್ಟು ನಿರ್ಮಲವಾಗಿರುವದು ! ಇಲ್ಲಿಯೇ ಬ್ರಹ್ಮಜ್ಞಾನದಿಂದ ತೃಪ್ತರಾದ ದೇವತೆಗಳೊಡನೆ ಬ್ರಹ್ಮನು ವಾಸಮಾಡುತ್ತಿರುವನು. ಅಪ್ರಾಕೃತನೂ, ಆದಿಮಧ್ಯಾಂತರಹಿತನೂ, ಸರ್ವಪ್ರಾಣಿಗಳಿಗೂ ಅಂತರ್ಯಾಮಿಯೂ, ಸಮರ್ಥನೂ, ದೇವದೇವನೂ, ಆದ ನಾರಾಯಣನ ವಾಸಸ್ಥಾನವು ಈ ಬ್ರಹ್ಮಲೋಕದ ದೆಸೆಯಿಂದ ಆಚೆ ಪ್ರಕಾಶಿಸುತ್ತಿರುವದು. ಸೂರ್ಯಾಗ್ನಿಗಳ ತೇಜಸ್ಸುಗಳನ್ನು ಅತಿಕ್ರಮಿಸಿ ತನ್ನ ಪ್ರಭೆಯಿಂದ ಯಾರಿಂದಲೂ ನೋಡುವದಕ್ಕೆ ಅಶಕ್ಯವಾಗಿ ತೇಜೋಮಯವಾಗಿರುವ ಮಂಗಳಕರವಾದ ಆ ವೈಕುಂಠಸ್ಥಾನವನ್ನು ದೇವತೆಗಳುಕೂಡ ನೋಡಲಾರರು. ಆ ಸ್ಥಾನವು ಈ ಮೇರುಪರ್ವತದ ಪೂರ್ವಭಾಗದಲ್ಲಿ ಪ್ರಕಾಶಿಸುತ್ತಿರುವದು. ಅಲ್ಲಿ ಸಕಲಪ್ರಾಣಿಗಳಿಗೂ ಅಂತರ್ಯಾಮಿಯಾಗಿರತಕ್ಕ ಮಹಾವಿಷ್ಣುವು ತನ್ನ ತೇಜಸ್ಸಿನಿಂದ ಪ್ರಕಾಶಮಾನನಾಗಿದ್ದುಕೊಂಡಿರುವನು. ಯತಿಗಳಿಗೆ ಗಮ್ಯವಾದ ಆ ಸ್ಥಾನಕ್ಕೆ ಬ್ರಹ್ಮರ್ಷಿಗಳುಕೂಡ ಹೋಗಲಾರರು ಎಂಬಲ್ಲಿ, ಮಹರ್ಷಿಗಳು ಹ್ಯಾಗೆತಾನೇ ಅಲ್ಲಿಗೆ ಹೋದಾರು ? ಸೂರ್ಯಚಂದ್ರರ ಕಾಂತಿಯೂ ಸಹ ಆ ಪ್ರದೇಶದಲ್ಲಿ ಪ್ರಕಾಶಿಸದೆ ಇರುವದು. ಅಂಥಾ ಸ್ಥಳದಲ್ಲಿ ಅಚಿಂತ್ಯಮಹಿಮನಾದ ಸಮರ್ಥನಾದ ನಾರಾಯಣನು ತಾನೇ ಪ್ರಕಾಶಿಸುತ್ತಿರುವನು. ಉತ್ತಮವಾದ ತಪಸ್ಸಿನಿಂದಲೂ ಶುಭವಾದ ಕರ್ಮಗಳಿಂದಲೂ ಪರಿಶುದ್ಧಾಂತಃಕರಣರಾಗಿ ಅಜ್ಞಾನವೂ ಮೋಹವೂ ಇಲ್ಲದಿರತಕ್ಕ ಮಹಾತ್ಮರಾದ ಯತಿಗಳು, ಭಕ್ತಿಯಿಂದ ಸನಾತನನೂ ದೇವದೇವನೂ ಮಹಾತ್ಮನೂ ಆದ ನಾರಾಯಣನನ್ನು ಹೊಂದಿ, ಪುನಃ ಈ ಲೋಕಕ್ಕೆ ಬರದೆ ಅಲ್ಲೇ ಆನಂದವನ್ನನುಭವಿಸುತ್ತಿರುವರು. ನಾರಾಯಣನಿಗೆ ಆವಾಸಸ್ಥಾನವಾದ ಆ ವೈಕುಂಠವು ಅಕ್ಷಯವಾಗಿಯೂ ನಿತ್ಯವಾಗಿಯೂ ಶಾಶ್ವತವಾಗಿಯೂ ಇರುವದು. ಎಲೈ ಧರ್ಮರಾಯನೆ, ಆ ದಿಕ್ಕಿಗೆ ನಮಸ್ಕಾರವನ್ನು ಮಾಡು. ಈ ಮೇರುಪರ್ವತವನ್ನು ಸೂರ್ಯನೂ ಚಂದ್ರನೂ ನಕ್ಷತ್ರಗಳೂ ಸಹ ಪ್ರತಿದಿವಸದಲ್ಲೂ ಪ್ರದಕ್ಷಿಣೆಯನ್ನು ಮಾಡುತ್ತಿರುವರು. ಸೂರ್ಯನು ಪೂರ್ವದಿಕ್ಕಿನಿಂದ ಪಶ್ಚಿಮದಿಕ್ಕಿಗೆ ಹೋಗಿ, ಅಲ್ಲಿ ಯಾರಿಗೂ ಕಾಣಿಸಿಕೊಳ್ಳದೆ ಸಂಧ್ಯಾಕಾಲವನ್ನತಿಕ್ರಮಿಸಿ, ಅಲ್ಲಿಂದ ಉತ್ತರದಿಕ್ಕಿಗೆ ಹೋಗಿ ಮೇರುವನ್ನು ಸುತ್ತಿಕೊಂಡು ಪುನಃ ಪೂರ್ವದಿಕ್ಕಿನಲ್ಲಿ ಉದಯಿಸುವನು. ಹಾಗೆಯೇ ಚಂದ್ರನು ನಕ್ಷತ್ರಗಳೊಡಗೂಡಿ ಪರ್ವಸಂಧಿಗಳಲ್ಲಿ ಮಾಸಗಳ ವಿಭಾಗವನ್ನು ಮಾಡುತ್ತ, ನಿರಂತರದಲ್ಲೂ ಮೇರುವನ್ನು ಸುತ್ತಿಕೊಂಡುಬಂದು ಮಂದರಪರ್ವತವನ್ನು ಸೇರುವನು. ಸೂರ್ಯನು ಸಕಲ ಪ್ರಾಣಿಗಳಿಗೂ ಶೀತವನ್ನುಂಟುಮಾಡಬೇಕೆಂದು ದಕ್ಷಿಣದಿಕ್ಕಿನಲ್ಲಿ ಸಂಚಾರಮಾಡು

ವನು. ಆಗ ಎಲ್ಲಾಪ್ರಾಣಿಗಳಿಗೂ ಶೀತವು ಅಧಿಕವಾಗುವದು. ಆತನು ಉತ್ತರದಿಕ್ಕಿಗೆ ಹೊರಟು ಗ್ರೀಷ್ಮಕಾಲದಲ್ಲಿ ಸಕಲ ಪ್ರಾಣಿಗಳ ತೇಜಸ್ಸನ್ನೂ ತನ್ನ ತೇಜಸ್ಸಿನಿಂದ ಸ್ವೀಕರಿಸುವನು. ಆಗ ಮನುಷ್ಯರಿಗೆ ದಗೆಯೂ ಬೆವರೂ ಆಯಾಸವೂ ಆಕಳಿಕೆಯೂ ನಿದ್ರೆಯೂ ಬಳಲಿಕೆಯೂ ಸಹ ಉಂಟಾಗುವವು. ಈ ಪ್ರಕಾರ ಸೂರ್ಯನು ಆಕಾಶಮಾರ್ಗದಲ್ಲಿ ಸಂಚಾರಮಾಡುತ್ತ, ಸಕಲ ಪ್ರಾಣಿಗಳ ಹಿತಾರ್ಥವಾಗಿ ವೃಷ್ಟಿಯನ್ನು ಕರೆಯುವನು. ಈ ರೀತಿಯಾಗಿ ಸೂರ್ಯನು ಮಳೆ ಗಾಳಿ ಸೆಕೆಗಳಿಂದ ಸಕಲಪ್ರಾಣಿಗಳನ್ನೂ ಅಭಿವೃದ್ಧಿಪಡಿಸಿ, ಕಾಲಚಕ್ರವನ್ನು ತಿರುಗಿಸುತ್ತ, ಯಾವಾಗಲೂ ಬಂದು ಕಡೆಯಲ್ಲಿಯೂ ನಿಲ್ಲದೆ, ಸಕಲಪದಾರ್ಥಗಳ ತೇಜಸ್ಸನ್ನೂ ಸೆಳೆದುಕೊಳ್ಳುತ್ತ, ಪುನಃ ಕೊಡುತ್ತ, ಸಕಲಪ್ರಾಣಿಗಳ ಆಯುಸ್ಸನ್ನೂ ಕರ್ಮಗಳನ್ನೂ ವಿಭಾಗಮಾಡುತ್ತ, ಅಹಸ್ಸನ್ನೂ ರಾತ್ರಿಯನ್ನೂ ಕಲಾಕಾಷ್ಠಗಳನ್ನೂ ಸರ್ವದಾ ಉಂಟುಮಾಡುತ್ತಿರುವನು" ಎಂದು ಧೌಮ್ಯರು ಧರ್ಮರಾಯನಿಗೆಹೇಳಿದರು.

## ೧೬೪ನೇ ಅಧ್ಯಾಯ.—ಮಹರ್ಷಿದರ್ಶನ.

ವೈಶಂಪಾಯನಮುನೀಂದ್ರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಈ ಪ್ರಕಾರ ವ್ರತನಿಷ್ಠರೂ ಪರಿಶುದ್ಧವಾದ ಮನೋರಥವುಳ್ಳವರೂ ಸತ್ಯವಂತರೂ ಧೈರ್ಯಶಾಲಿಗಳೂ ತೇಜೋವಂತರೂ ಆದ ಪಾಂಡವರು ಆ ಪರ್ವತಾಗ್ರದಲ್ಲಿ ಅರ್ಜುನನ ಆಗಮನವನ್ನು ನಿರೀಕ್ಷಿಸುತ್ತ ಸಂತೋಷಭರಿತರಾಗಿದ್ದರು. ಆಗ ಅನೇಕಮಂದಿ ಗಂಧರ್ವರೂ ಋಷಿಗಳೂ ಪುಷ್ಪಿತವಾದ ವೃಕ್ಷಗಳಿಂದ ಅಲಂಕೃತವಾದ ಆ ಗಂಧಮಾದನ ಪರ್ವತಕ್ಕೆ ಮಹಾರಥಿಕರಾದ ಪಾಂಡವರನ್ನು ಕಾಣುವದಕ್ಕಾಗಿ ಬಂದು, ಮಯೂರ ಹಂಸಗಳ ಧ್ವನಿಯಿಂದ ಮನೋಹರವಾಗಿ ಎಲ್ಲೆಲ್ಲಿಯೂ ಹೂವು ಚೆಲ್ಲಿರತಕ್ಕ ಆ ಪರ್ವತದ ಶಿಖರಭಾಗವನ್ನೂ, ಅಲ್ಲಿ ಸಾಕ್ಷಾತ್ಕುಬೇರನೇ ಏರಿಯನ್ನು ಹಾಕಿಸಿ ತಡೆದಿರುವ ನಿರ್ಮಲವಾದ ಉದಕದಿಂದ ಭರಿತವಾದ ಗಿರಿನದಿಗಳಿಂದ ಅಲಂಕೃತವಾದ ಕಮಲಸರೋವರಗಳನ್ನೂ, ಕುಬೇರನ ಮನಸ್ಸಿಗೆ ಸಂತೋಷಕರಗಳಾಗಿಯೂ ರತ್ನಖಚಿತವಾದ ಭೂಪ್ರದೇಶವುಳ್ಳವುಗಳಾಗಿಯೂ ವಿಚಿತ್ರವಿಚಿತ್ರವಾದ ಸುವಾಸನೆಯುಳ್ಳ ಹೂವುಗಳು ಬಿಡತಕ್ಕ ವೃಕ್ಷಗಳಿಂದ ಅಲಂಕೃತಗಳಾಗಿಯೂ ನೋಡುವದಕ್ಕೆ ಬಹು ರಮಣೀಯಗಳಾಗಿಯೂ ಇರುವ ಕ್ರೀಡಾಪ್ರದೇಶಗಳನ್ನೂ ನೋಡುತ್ತ; ಸ್ವರ್ಗಲೋಕವನ್ನು ಹೊಂದಿದ ದೇವತೆಗಳಂತೆ ಅಧಿಕವಾದ ಮನಸ್ಸಂತೋಷವನ್ನು ಹೊಂದಿದರು. ಬಳಿಕ ಆ ಋಷಿಗಳು ಆ ಪರ್ವತಾಗ್ರದಲ್ಲಿ ಸಂಚರಿಸುತ್ತ ಅನೇಕಮಹೌಷಧಿಗಳ ಪ್ರಭಾವವುಳ್ಳ ಆ ಪರ್ವತದ ತೇಜಸ್ಸಿನಿಂದ ಅಹೋರಾತ್ರಿಗಳ ವಿಭಾಗವನ್ನು ಸಹ ತಿಳಿಯದೆ ಹೋದರು. ಆಗ ಆ ಪರ್ವತಾಗ್ರದಲ್ಲಿದ್ದ ಪಾಂಡವರು ಪ್ರತಿದಿವಸದಲ್ಲಿಯೂ ಸೂರ್ಯನು ಸಕಲಪ್ರಾಣಿಗಳನ್ನೂ ರಕ್ಷಿಸುತ್ತ ಉದಯಾಸ್ತಮಯಗಳನ್ನು ಪಡೆಯತಕ್ಕ ರೀತಿಯನ್ನು ನೋಡಿದರು. ಅದು ಹ್ಯಾಗೆಂದರೆ, ಮೇರುಪರ್ವತವನ್ನು ಪ್ರದಕ್ಷಿಣೆಮಾಡತಕ್ಕ ಸೂರ್ಯನು ಪೂರ್ವದಿಕ್ಕಿಗೆ ಬರಲು, ದಕ್ಷಿಣದಿಕ್ಕಿನಲ್ಲಿರತಕ್ಕವರಿಗೆ ಉದಯಿಸಿದವನಂತೆ ಕಾಣಿಸಿಕೊಂಡು, ಉತ್ತರದಿಕ್ಕಿನಲ್ಲಿರತಕ್ಕವರಿಗೆ ಅಸ್ತನಾದಂತೆ ತೋರುವನು. ಆಗ ಪಶ್ಚಿಮದಿಕ್ಕಿನಲ್ಲಿರತಕ್ಕವರಿಗೆ ಅರ್ಧರಾತ್ರಿಯೂ ಪೂರ್ವದಿಕ್ಕಿನಲ್ಲಿರತಕ್ಕವರಿಗೆ ಮಧ್ಯಾಹ್ನವೂ ಆಗುವವು. ಈ ರೀತಿಯಾಗಿ ಸೂರ್ಯನು ಸಂಚಾರಮಾಡುತ್ತ ತನ್ನ ಕಿರಣಗಳಿಂದ ದಿಕ್ಕುಗಳನ್ನೆಲ್ಲಾ ಬೆಳಗುವನು. ಈ ಕ್ರಮವನ್ನು ನೋಡಿ, ಪಾಂಡವರು ಧರ್ಮಾಚರಣೆಯಲ್ಲಿ ಆಸಕ್ತಿಯನ್ನು ಪಡೆದು, ವೇದಾಧ್ಯಯನಪರರೂ ವ್ರತನಿಷ್ಠರೂ ಸತ್ಯಶೀಲರೂ ಆಗಿ ಅರ್ಜುನನ ಆಗಮನವನ್ನೇ ನಿರೀಕ್ಷಿಸುತ್ತ, ಅಲ್ಲಿಯೇ ತಮಗೆ ಅರ್ಜುನನ ಸಮಾಗಮವಾದರೆ ಅಧಿಕವಾದ ಸಂತೋಷ ಉಂಟಾಗುವದೆಂದು ಪರಸ್ಪರವಾಗಿ ಶ್ರೇಯಸ್ಕರವಾದ ಮಾತುಗಳನ್ನಾಡುತ್ತ, ಅಲ್ಲೇ ನೇಮದಿಂದಿದ್ದುಕೊಂಡಿದ್ದರು. ಈ ಪ್ರಕಾರ ಅರ್ಜುನನ ಆಗಮನವನ್ನು ನಿರೀಕ್ಷಿಸುತ್ತಿದ್ದ ಪಾಂಡವರಿಗೆ ಬಂದೊಂದು ದಿವಸವು ಬಂದೊಂದು ಸಂವತ್ಸರಕ್ಕೆ ಸಮನಾಗಿ ಕಾಣಬಂತು. ಯಾವಾಗ ಧೌಮ್ಯಾಚಾರ್ಯರ ಅನುಮತಿಯಿಂದ ಅರ್ಜುನನು ಜಟೆಯನ್ನು ಧರಿಸಿ ಧರ್ಮರಾಯನ ಆಜ್ಞೆಯನ್ನು ತೆಗೆದುಕೊಂಡು ಅಸ್ತ್ರನಿಮಿತ್ತವಾಗಿ ಕಾಮ್ಯಕವನದಿಂದ ಇಂದ್ರಕೀಲಕ್ಕೆ ಹೊರಟು

ಹೋದನೋ, ಆ ಮೊದಲು ಪಾಂಡವರಿಗೆ ವಿಷಾದವೇ ಹೊರತು ಲೇಶವೂ ಮನಸ್ಸಿಗೆ ಸಂತೋಷವುಂಟಾಗಲಿಲ್ಲ. ಈ ಪ್ರಕಾರ ಪಾಂಡವರು ವ್ಯಸನಪಡುತ್ತಲೇ ಆ ಪರ್ವತಾಗ್ರದಲ್ಲಿ ಒಂದು ತಿಂಗಳನ್ನು ಕಳೆದರು. ಅತ್ತಲಾ ಅರ್ಜುನನು ಐದುವರ್ಷ ಸ್ವರ್ಗದಲ್ಲಿದ್ದು, ಇಂದ್ರನಲ್ಲಿ ಅಸ್ತ್ರವಿದ್ಯಾಭ್ಯಾಸವನ್ನು ಮಾಡಿ, ಆತನ ದೆಸೆಯಿಂದ ದಿವ್ಯವಾದ ಆಗ್ನೇಯ ವಾರುಣ ಸಾಮ್ಯ ವಾಯುವ್ಯ ವೈಷ್ಣವ ಯಾಮ್ಯ ಐಂದ್ರ ಪಾಶುಪತ ಬ್ರಾಹ್ಮ್ಯ ಪ್ರಾಜಾಪತ್ಯ ಕೌಬೇರ ಮೊದಲಾದ ಅಸ್ತ್ರಗಳನ್ನು ಪಡೆದು, ಆತನಿಗೆ ಪ್ರದಕ್ಷಿಣ ನಮಸ್ಕಾರಗಳನ್ನು ಮಾಡಿ, ಸಂತೋಷದಿಂದ ಆತನ ಅನುಜ್ಞೆಯನ್ನು ತೆಗೆದುಕೊಂಡು ಅಲ್ಲಿಂದ ಗಂಧಮಾದನ ಪರ್ವತಕ್ಕೆ ಹೊರಟನು.

## ೧೬೫ನೇ ಅಧ್ಯಾಯ.—ಅರ್ಜುನಾಗಮನ.

ವೈಶಂಪಾಯನ ಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಅರ್ಜುನನ ಆಗಮನವನ್ನು ನಿರೀಕ್ಷಿಸುತ್ತ ಆ ಪರ್ವತದ ಅಗ್ರಭಾಗದಲ್ಲಿದ್ದ ಪಾಂಡವರು ಮಿಂಚಿನಂತೆ ಹೊಳೆಯುತ್ತಿರುವದಾಗಿಯೂ, ವೇಗಶಾಲಿಗಳಾದ ಕುದುರೆಗಳನ್ನು ಕಟ್ಟಿರುವದಾಗಿಯೂ, ತನ್ನ ತೇಜಸ್ಸಿನಿಂದ ಆಕಾಶವನ್ನೆಲ್ಲಾ ಬೆಳಗುತ್ತಿರುವದಾಗಿಯೂ, ಇರುವ ಮಹೇಂದ್ರನ ರಥವನ್ನು ಮಾತಲಿಯು ನಡೆಯಿಸಿಕೊಂಡು ಬರುತ್ತಿರುವದನ್ನು ನೋಡಿ ಬಹಳವಾಗಿ ಸಂತೋಷಪಟ್ಟರು. ಮೇಘಮಂಡಲದ ಸಮೀಪದಲ್ಲಿ ಬರುತ್ತಿದ್ದ ಆ ರಥವು ಹೊಗೆಯಾಡದಿರುವ ಅಗ್ನಿಜ್ವಾಲೆಯಂತೆ ಪ್ರಕಾಶಿಸುತ್ತಿತ್ತು. ಅಂಥಾ ರಥವನ್ನೇರಿ, ಅರ್ಜುನನು ಕಿರೀಟಧಾರಿಯಾಗಿ, ಮುಕ್ತಾಹಾರಗಳನ್ನೂ ನೂತನವಾದ ಕುಂಡಲಾದ್ಯಾಭರಣಗಳನ್ನೂ ಧರಿಸಿಕೊಂಡು, ಅಧಿಕವಾದ ಐಶ್ವರ್ಯದಿಂದ ಪ್ರಕಾಶಿಸುತ್ತ, ಗಂಧಮಾದನಪರ್ವತಕ್ಕೆ ಬಂದು, ಆ ರಥದಿಂದ ಕೆಳಕ್ಕಿಳಿದು, ಮೊದಲು ಧೌಮ್ಯಾಚಾರ್ಯರಿಗೂ ಬಳಿಕ ಧರ್ಮರಾಯನಿಗೂ ಭೀಮಸೇನನಿಗೂ ನಮಸ್ಕಾರಮಾಡಿ, ನಕುಲ ಸಹದೇವರಿಂದ ನಮಸ್ಕಾರಮಾಡಿಸಿಕೊಂಡು, ದ್ರೌಪದಿಯನ್ನು ಕಂಡು ಆಕೆಯ ಮನಸ್ಸನ್ನು ಸಂತೋಷಪಡಿಸಿ, ಧರ್ಮರಾಯನ ಸನ್ನಿಧಿಯಲ್ಲಿ ಬಂದು ನಿಂತುಕೊಂಡನು. ಆಗ ಅರ್ಜುನನನ್ನು ನೋಡಿ ಪಾಂಡವರು ಬಹಳವಾಗಿ ಸಂತೋಷಪಟ್ಟರು. ಬಳಿಕ ಅರ್ಜುನನು ಧರ್ಮರಾಯ ಮೊದಲಾದವರನ್ನು ನೋಡಿ, ಮಹಾತ್ಮನಾದ ಧರ್ಮರಾಯನನ್ನು ಪ್ರಶಂಸೆಮಾಡುತ್ತ ಅಧಿಕವಾಗಿ ಸಂತೋಷಿಸಿದನು. ಮಹಾತ್ಮನಾದ ಇಂದ್ರನು ಯಾವ ರಥವನ್ನೇರಿ ಕ್ರೂರರಾದ ದೈತ್ಯರ ಏಳು ಗುಂಪುಗಳನ್ನೂ ನಮುಚಿಯೆಂಬ ದಾನವೇಶ್ವರನನ್ನೂ ಸಂಹಾರಮಾಡಿದನೋ, ಅಂಥಾ ಆ ರಥಕ್ಕೆ ಪಾಂಡವರು ಪ್ರದಕ್ಷಿಣೆಯನ್ನು ಮಾಡಿ, ಇಂದ್ರಸಾರಥಿಯಾದ ಮಾತಲಿಗೆ ಸತ್ಕಾರವನ್ನು ಮಾಡಿ, ಆತನೊಡನೆ ಸಕಲದೇವತೆಗಳ ವೃತ್ತಾಂತವನ್ನೂ ಪ್ರಶ್ನೆಮಾಡಿದರು. ಅದನ್ನು ಕೇಳಿ ಮಾತಲಿಯು ಸಂತೋಷಪಟ್ಟು, ತಂದೆಯು ಮಕ್ಕಳಿಗೆ ಹಿತೋಪದೇಶವನ್ನು ಮಾಡುವ ತೆರದಿಂದ ಪಾಂಡವರಿಗೆ ಹಿತೋಪದೇಶವನ್ನು ಮಾಡಿ, ಆ ಇಂದ್ರರಥವನ್ನು ತೆಗೆದುಕೊಂಡು ಸ್ವರ್ಗಕ್ಕೆ ಹೊರಟು ಹೋದನು. ಬಳಿಕ ದೇವಶತ್ರುಗಳನ್ನು ನಾಶಮಾಡತಕ್ಕ ಶಕ್ತಿಯುಳ್ಳ ಅರ್ಜುನನು ಉತ್ತಮವಾಗಿ ಸೂರ್ಯನಂತೆ ಪ್ರಕಾಶಮಾನವಾಗಿ ಬೆಲೆಯೇ ಇಲ್ಲದ ಇಂದ್ರದತ್ತವಾದ ರತ್ನಾಭರಣಗಳನ್ನು ಸುತಸೋಮನಿಗೆ ತಾಯಿಯಾಗಿಯೂ ತನಗೆ ಪ್ರಿಯಳಾಗಿಯೂ ಇರುವ ದ್ರೌಪದಿಗೆ ಕೊಟ್ಟನು. ಬಳಿಕ ಸೂರ್ಯಾಗ್ನಿಗಳಿಗೆ ಸಮಾನರಾಗಿ ಬ್ರಾಹ್ಮಣರೂ ಧರ್ಮರಾಯ ಮೊದಲಾದವರೂ ಸಹ ಸಭೆಯನ್ನು ಮಾಡಿಕೊಂಡು ಕುಳ್ಳಿರಲು; ಅರ್ಜುನನು ಆ ಮಧ್ಯದಲ್ಲಿ ಕುಳಿತು, ಇಂದ್ರನಿಂದಲೂ ವಾಯುವಿನಿಂದಲೂ ಪರಮೇಶ್ವರನಿಂದಲೂ ಸಹ ತಾನು ದಿವ್ಯಾಸ್ತ್ರಗಳನ್ನು ಪಡೆದ ವೃತ್ತಾಂತವನ್ನೂ, ತನ್ನ ಗುಣಾತಿಶಯದಿಂದ ಇಂದ್ರಾದಿದೇವತೆಗಳು ತನ್ನಲ್ಲಿ ವಿಶ್ವಾಸಮಾಡಿದ್ದನ್ನೂ, ಸ್ವರ್ಗದಲ್ಲಿ ವಾಸಮಾಡಿದ್ದನ್ನೂ ಸಂಕ್ಷೇಪವಾಗಿ ಹೇಳಿ, ನಕುಲ ಸಹದೇವರೊಡಗೂಡಿ ಆರಾತ್ರಿ ಸುಖವಾಗಿ ನಿದ್ರೆ ಮಾಡಿದನು.

## ೧೬೬ನೇ ಅಧ್ಯಾಯ.—ಇಂದ್ರಾಗಮನ.

ವೈಶಂಪಾಯನ ಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯನೆ, ಆರಾತ್ರಿ ಕಳೆದು ಪ್ರಾತಃಕಾಲವಾಗಲು, ಅಣ್ಣತಮ್ಮಂದಿರೊಡಗೂಡಿದ ಅರ್ಜುನನು ನಿತ್ಯಕರ್ಮಗಳನ್ನು ನೆರವೇರಿಸಿಕೊಂಡು ಧರ್ಮರಾಯನಿಗೆ ವಂದನೆಯನ್ನು ಮಾಡಿದನು. ಆ ಸಮಯದಲ್ಲಿ ಆಕಾಶಮಾರ್ಗದಲ್ಲಿ ದೇವತಾವಾದ್ಯಧ್ವನಿಯೂ, ಮಹಾರಥಧ್ವನಿಯೂ, ಘಂಟಾಧ್ವನಿಯೂ, ಪ್ರತ್ಯೇಕಪ್ರತ್ಯೇಕವಾಗಿ ಗಜಮೃಗಪಕ್ಷಿಗಳ ಧ್ವನಿಯಂತೆ ಎಲ್ಲಾದಿಕ್ಕುಗಳನ್ನೂ ತುಂಬಿಕೊಂಡು ಕೇಳಬಂದವು. ಆಗ ವೇಗಶಾಲಿಗಳಾದ ಕುದುರೆಗಳನ್ನು ಕಟ್ಟಿರತಕ್ಕದ್ದಾಗಿಯೂ, ಮೇಘದಂತೆ ಧ್ವನಿಯನ್ನು ಮಾಡತಕ್ಕದ್ದಾಗಿಯೂ, ಮಹಾತೇಜೋಮಯವಾಗಿಯೂ ಇರುವ ದಿವ್ಯವಾದ ರಥವನ್ನು ಏರಿ ಇಂದ್ರನು ಪಾಂಡವರನ್ನು ನೋಡುವದಕ್ಕೆ ಹೊರಡಲು; ಸೂರ್ಯನಂತೆ ದೇದೀಪ್ಯಮಾನವಾದ ವಿಮಾನಗಳನ್ನೇರಿ ಬಹು ಮಂದಿ ಗಂಧರ್ವರೂ ಅಪ್ಸರಸ್ಸುಗಳೂ ಸಹ ಆತನನ್ನು ಸುತ್ತುವರಿದು ಬಂದರು. ಈ ಪ್ರಕಾರ ಹೊರಟು ದೇವೇಂದ್ರನು ಗಂಧಮಾದನಪರ್ವತವನ್ನು ಸೇರಿ ರಥದಿಂದ ಕೆಳಕ್ಕಿಳಿಯಲು; ಮಹಾತ್ಮನಾದ ಆತನನ್ನು ಕಂಡು ಅಭಿಜ್ಞನಾದ ಧರ್ಮರಾಯನು ತಮ್ಮಂದಿರೊಡಗೂಡಿ ಎದುರುಗೊಂಡು, ಆತನಿಗೆ ಶಾಸ್ತ್ರೋಕ್ತಕ್ರಮದಿಂದ ಪೂಜೆಯನ್ನು ಮಾಡಿದನು. ಆ ಬಳಿಕ ಮಹಾತೇಜಶ್ಶಾಲಿಯಾದ ಅರ್ಜುನನು ಆ ಮಹೇಂದ್ರನಿಗೆ ಕಿಂಕರನಂತೆ ನಮಸ್ಕಾರಮಾಡಿ, ವಿನಯದಿಂದ ಆತನ ಸಮೀಪದಲ್ಲಿ ನಿಂತುಕೊಂಡನು. ಈ ಪ್ರಕಾರ ವಿನಯಶಾಲಿಯಾಗಿ ಇಂದ್ರನ ಬಳಿಯಲ್ಲಿ ನಿಂತು ಜಟಾಧಾರಿಯಾಗಿಯೂ ತಪಸ್ವಿಯಾಗಿಯೂ ಪಾಪರಹಿತನಾಗಿಯೂ ಇರುವ ಅರ್ಜುನನನ್ನು ನೋಡಿ, ಧರ್ಮರಾಯನು ಅಧಿಕವಾಗಿ ಸಂತೋಷಪಟ್ಟು, ಆತನನ್ನು ಶಿರಸ್ಸಿನಲ್ಲಿ ಆಘ್ರಾಣಮಾಡಿ, ತಾನೂ ಆ ಮಹೇಂದ್ರನ ಸಮೀಪದಲ್ಲಿ ಮರ್ಯಾದೆಯನ್ನು ಮೀರದೆ ನಿಂತಿರಲು; ಆಗ ಮಹೇಂದ್ರನು ಸಂತೋಷಭರಿತನಾಗಿಯೂ ದುಃಖಾಕ್ರಾಂತನಾಗಿಯೂ ಇರುವ ಧರ್ಮರಾಯನನ್ನು ನೋಡಿ "ಎಲೈ ಧರ್ಮರಾಯನೆ, ಈ ಅರ್ಜುನನು ಅಧಿಕವಾದ ಸಾಹಸವನ್ನು ಮಾಡಿ ನನ್ನದೆಸೆಯಿಂದ ಅನೇಕ ದಿವ್ಯಾಸ್ತ್ರಗಳನ್ನು ಪಡೆದು ನನ್ನ ಪ್ರೀತಿಗೆ ಪಾತ್ರನಾಗಿರುವನು. ಮೂರುಲೋಕಗಳಲ್ಲಿ ಯಾರೂ ಈತನನ್ನು ಜಯಿಸಲಾರರು. ಇನ್ನು ಮುಂದೆ ನೀನು ಈ ಭೂಮಂಡಲವನ್ನು ಸುಖವಾಗಿ ಪರಿಪಾಲಿಸುವೆ. ನಿನಗೆ ಮಂಗಳವಾಗಲಿ. ಇವರೆಲ್ಲರೊಡನೆಯೂ ನೀನು ಇಲ್ಲಿಂದ ಹೊರಟು ಕಾಮ್ಯಕವನವನ್ನು ಸೇರು" ಎಂದು ಹೇಳಿ, ಋಷಿಗಳಿಂದ ಸ್ತೋತ್ರಮಾಡಿಸಿಕೊಳ್ಳುತ್ತ, ಮರಳಿ ಸ್ವರ್ಗಕ್ಕೆ ಹೊರಟು ಹೋದನು.—ಎಲೈ ಜನಮೇಜಯರಾಯನೆ, ಕುಬೇರನ ಮನೆಯಲ್ಲಿದ್ದ ಪಾಂಡವರಿಗೂ ಇಂದ್ರನಿಗೂ ಸಮಾಗಮವಾದ ಈ ಇತಿಹಾಸವನ್ನು ಯಾವ ಪುರುಷನು ಒಂದು ವರ್ಷಪರ್ಯಂತವೂ ಬ್ರಹ್ಮಚರ್ಯವ್ರತವನ್ನು ಧರಿಸಿ ಪಠನಮಾಡುವನೋ, ಆತನು ಯಾವ ಬಾಧೆಯೂ ಇಲ್ಲದೆ ನೂರು ವರ್ಷಪರ್ಯಂತ ಸುಖವಾಗಿ ಜೀವಿಸುವನು—ಎಂದು ವೈಶಂಪಾಯನಮುನೀಶ್ವರನು ಜನಮೇಜಯರಾಯನಿಗೆ ವಿವರಿಸಿದನು.

## ೧೬೭ನೇ ಅಧ್ಯಾಯ.—ನಿವಾತಕವಚಯುದ್ಧ (ಅರ್ಜುನಯುಧಿಷ್ಠಿರ ಸಂವಾದ).

ವೈಶಂಪಾಯನಮುನೀಂದ್ರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯನೆ, ಇಂದ್ರನು ದೇವಲೋಕಕ್ಕೆ ತೆರಳಲು, ಅಣ್ಣತಮ್ಮಂದಿರಿಂದಲೂ ದ್ರೌಪದಿಯಿಂದಲೂ ಸಹಿತನಾದ ಅರ್ಜುನನು ಧರ್ಮರಾಯನಿಗೆ ವಂದನೆಯನ್ನು ಮಾಡಿ, ಆತನ ಸಮೀಪದಲ್ಲಿ ನಿಲ್ಲಲು; ಧರ್ಮರಾಯನು ಆತನನ್ನು ಪ್ರೀತಿಯಿಂದ ಆಲಿಂಗಿಸಿಕೊಂಡು, ಶಿರಸ್ಸನ್ನು ಆಘ್ರಾಣಿಸಿ, ಸಂತೋಷದಿಂದ ಗದ್ಗದಸ್ವರವುಳ್ಳವನಾಗಿ "ಎಲೈ ಅರ್ಜುನನೆ, ಇದುವರೆಗೂ ನೀನು ಸ್ವರ್ಗದಲ್ಲಿ ಕಾಲವನ್ನು ಕಳೆಯುತ್ತಿದ್ದದ್ದು ಹ್ಯಾಗೆ? ಹ್ಯಾಗೆ ನೀನು ಅಸ್ತ್ರಗಳನ್ನು ಸಂಪಾದಿಸಿದೆ? ನಿನ್ನಲ್ಲಿ ಇಂದ್ರನಿಗೆ ಯಾತರಿಂದ ಪ್ರೀತಿಯುಂಟಾಯಿತು? ಅಸ್ತ್ರವಿದ್ಯೆಯನ್ನು ಚೆನ್ನಾಗಿ ಅಭ್ಯಾಸಮಾಡಿದೆಯಾ? ಪಿನಾಕಪಾಣಿಯಾದ ಮಹಾದೇವನನ್ನೂ ಇಂದ್ರನನ್ನೂ ನೀನು ನೋಡಿದ್ದು ಹ್ಯಾಗೆ? ಮತ್ತು ಅವರನ್ನು ಹ್ಯಾಗೆ ಆರಾಧನೆ

ಮಾಡಿ ಅವರ ದೆಸೆಯಿಂದ ಅಸ್ತ್ರಗಳನ್ನು ಪಡೆದೆ? ಮಹಾದೇವನಿಗೂ ಇಂದ್ರನಿಗೂ ಪ್ರೀತಿಯುಂಟಾಗುವಂತೆ ಅವರಿಗೆ ಪ್ರಿಯವಾದ ಯಾವ ಕಾರ್ಯವನ್ನು ಮಾಡಿದೆ? ಇವುಗಳನ್ನು ವಿಸ್ತಾರವಾಗಿ ಕೇಳಬೇಕೆಂದು ನನಗೆ ಕುತೂಹಲವಿರುವದು. ನೀನು ಈ ವೃತ್ತಾಂತವನ್ನು ವಿವರಿಸು" ಎಂದನು.

ಅರ್ಜುನನು "ಎಲೈ ಅಗ್ರಜನೆ, ನಾನು ಅಸ್ತ್ರವಿದ್ಯಾಭ್ಯಾಸಕ್ಕಾಗಿ ಇಂದ್ರನನ್ನೂ ಮಹಾದೇವನನ್ನೂ ಆರಾಧಿಸುವದಕ್ಕೋಸ್ಕರ ನಿನ್ನ ಅಜ್ಞೆಯನ್ನು ತೆಗೆದುಕೊಂಡು ಕಾಮ್ಯಕವನದಿಂದ ಹೊರಟು, ತಪಸ್ಸು ಮಾಡಬೇಕೆಂದು ಭೃಗುತುಂಗಪರ್ವತದ ಮಾರ್ಗದಲ್ಲಿ ಒಂದು ರಾತ್ರಿ ವಾಸಮಾಡಿ, ಒಬ್ಬ ಬ್ರಾಹ್ಮಣನನ್ನು ನೋಡಿದೆನು. ಆ ಬ್ರಾಹ್ಮಣನು 'ಎಲ್ಲಿಗೆ ಹೋಗುತ್ತೀಯೆ' ಎಂದು ನನ್ನನ್ನು ಪ್ರಶ್ನೆಮಾಡಲು, ನಾನು ಹೋಗತಕ್ಕ ಕಾರ್ಯವನ್ನು ಆತನಿಗೆ ನಿಜವಾಗಿ ತಿಳುಹಿಸಿದೆನು. ಬಳಿಕ ಆ ಬ್ರಾಹ್ಮಣನು ಯಥಾರ್ಥವಾಗಿ ಹೇಳಿದ ನನ್ನ ಮಾತನ್ನು ಕೇಳಿ, ನನ್ನಲ್ಲಿ ಪ್ರೀತಿಯನ್ನು ಮಾಡಿ, ನನಗೆ ಸನ್ಮಾನವನ್ನು ಮಾಡಿ, 'ನೀನು ತಪಸ್ಸನ್ನು ಮಾಡು. ಅದರಿಂದ ಜಾಗ್ರತೆಯಾಗಿ ಇಂದ್ರನನ್ನು ನೋಡುವೆ' ಎಂದು ಹೇಳಿದನು. ಬಳಿಕ ನಾನು ಹಿಮಮಯವಾದ ಆ ಭೃಗುತುಂಗಪರ್ವತದ ಶಿಖರವನ್ನು ಏರಿ, ಕಂದಮೂಲಫಲಗಳನ್ನೂ ಮೃಗಮಾಂಸವನ್ನೂ ಆಹಾರ ಮಾಡಿಕೊಂಡು ಒಂದು ತಿಂಗಳು ತಪಸ್ಸನ್ನು ಮಾಡಿ, ಎರಡನೇ ತಿಂಗಳಲ್ಲಿ ಉದಕಾಹಾರವನ್ನು ಮಾಡಿಕೊಂಡು ತಪಸ್ಸುಮಾಡುತ್ತ, ಮೂರನೇ ತಿಂಗಳು ಆಹಾರವನ್ನೂ ಬಿಟ್ಟು ಘೋರವಾದ ತಪಸ್ಸನ್ನುಮಾಡಿ, ನಾಲ್ಕನೇ ತಿಂಗಳು ಎರಡು ಕೈಗಳನ್ನೂ ಮೇಲಕ್ಕೆತ್ತಿಕೊಂಡು ನಿಂತು ತಪಸ್ಸುಮಾಡಿದೆನು. ಹೀಗಿದ್ದರೂ ನನಗೆ ಬಲವು ಕಡಮೆಯಾಗದಿರಲು, ಅದು ಆಶ್ಚರ್ಯಕರವಾಗಿತ್ತು. ಐದನೇ ತಿಂಗಳು ಪ್ರಾಪ್ತವಾಗಲು, ಮೊದಲನೇದಿನ ಹಂದಿಯ ರೂಪವನ್ನು ತಾಳಿ, ಒಂದು ಪ್ರಾಣಿಯು ತನ್ನ ಮುಖಾಗ್ರದಿಂದ ಭೂಮಿಯನ್ನು ಭೇದಿಸುತ್ತಲೂ, ಕಾಲುಗಳಿಂದ ಕೆರೆಯುತ್ತಲೂ, ಹೊಟ್ಟೆಯಿಂದ ಭೂಮಿಯನ್ನು ಸವರುತ್ತಲೂ, ಅಲ್ಲಲ್ಲಿ ಸಂಚರಿಸುತ್ತ ನನ್ನ ಸಮೀಪಕ್ಕೆ ಬಂತು. ಆ ಹಂದಿಯನ್ನೇ ಅನುಸರಿಸಿ ಒಬ್ಬ ಕಿರಾತನು ಧನುರ್ಬಾಣ ಖಡ್ಗಗಳನ್ನುಧರಿಸಿ ಸ್ತ್ರೀಸಮೂಹದೊಡನೆ ಕೂಡಿ ಬಂದನು. ಆಗ ನಾನು ಅಕ್ಷಯವಾದ ನನ್ನ ಬತ್ತಳಿಕೆಯಿಂದ ಬಾಣವನ್ನು ತೆಗೆದು ಧನುಸ್ಸಿನಲ್ಲಿ ಹೂಡಿ, ಆ ಹಂದಿಯನ್ನು ಹೊಡೆದೆನು. ಅದೇ ಸಮಯದಲ್ಲೇ ಆ ಕಿರಾತನೂ ನನ್ನ ಮನಸ್ಸು ನಡುಗುವಂತೆ ಒಂದು ಬಾಣದಿಂದ ಆ ಹಂದಿಯನ್ನು ಹೊಡೆದನು. ಹೀಗೆ ಸಮಕಾಲದಲ್ಲಿ ನಮ್ಮಿಬ್ಬರ ಬಾಣಗಳೂ ಆ ಹಂದಿಗೆ ತಗಲಿದವು. ಆಗ ಆ ಕಿರಾತನು ನನ್ನನ್ನು ಕುರಿತು 'ನಾನು ಮೊದಲೇ ಈ ಮೃಗವನ್ನಟ್ಟಿಕೊಂಡು ಬಂದಿದ್ದೆನು. ಬೇಟೆಯಾಡತಕ್ಕವರು ಒಬ್ಬರು ಅಟ್ಟಿಕೊಂಡು ಬಂದ ಮೃಗವನ್ನು ಇನ್ನೊಬ್ಬರು ಹೊಡೆಯಕೂಡದೆಂದು ನಿರ್ಣಯಿಸಿರುವರು. ಈ ಮರ್ಯಾದೆಯನ್ನು ಅತಿಕ್ರಮಿಸಿ ನೀನು ಹ್ಯಾಗೆ ಈ ಮೃಗವನ್ನು ಹೊಡೆದೆ? ನಿಲ್ಲು ನಿಲ್ಲು. ಈ ತೀಕ್ಷ್ಣವಾದ ಬಾಣಗಳಿಂದ ನಿನ್ನ ದರ್ಪವನ್ನು ಪರಿಹರಿಸುವೆನು' ಎಂದು ಧನುಸ್ಸಿನಲ್ಲಿ ಅನೇಕ ಬಾಣಗಳನ್ನು ಸಂಧಾನಮಾಡಿ, ಮೇಘವು ಪರ್ವತದ ಮೇಲೆ ವರ್ಷಿಸುವಂತೆ ನನ್ನ ಮೇಲೆ ಆ ಬಾಣವೃಷ್ಟಿಯನ್ನು ಕರೆದನು. ಆಗ ನಾನು ಪ್ರಕಾಶಮಾನವಾದ ಅನೇಕ ಬಾಣಗಳನ್ನು ಧನುಸ್ಸಿನಲ್ಲಿ ಮಂತ್ರವತ್ತಾಗಿ ಸಂಧಾನಮಾಡಿ, ವಜ್ರಾಯುಧಗಳಿಂದ ಪರ್ವತವನ್ನು ಹೊಡೆಯುವಂತೆ ಆ ಕಿರಾತನನ್ನು ಹೊಡೆದೆನು. ಆಗ ಆ ಕಿರಾತನ ರೂಪು ಅನೇಕ ಸಹಸ್ರಪ್ರಕಾರವಾಗಿ ನನಗೆ ಕಾಣಬಂತು. ಆ ಎಲ್ಲಾ ಶರೀರಕ್ಕೂ ನಾನು ಬಾಣವನ್ನು ಪ್ರಯೋಗಿಸಲು, ಪುನಃ ಆ ಶರೀರಗಳೆಲ್ಲಾ ಸೇರಿ ಒಂದೇ ರೂಪವಾಗಿ ನನಗೆ ಕಾಣಿಸಿತು. ಬಳಿಕ ಆ ಕಿರಾತನು ಒಂದಾವರ್ತಿ ಚಿಕ್ಕದಾದ ಶರೀರವನ್ನು ಧರಿಸಿ ದೊಡ್ಡದಾದ ಶಿರಸ್ಸುಳ್ಳವನಾಗಿಯೂ, ಮತ್ತೊಂದಾವರ್ತಿ ದೊಡ್ಡದಾದ ಶರೀರವುಳ್ಳವನಾಗಿ ಚಿಕ್ಕದಾದ ಶಿರಸ್ಸನ್ನು ಧರಿಸಿದವನಾಗಿಯೂ ಕಾಣಿಸುತ್ತ ತಿರುಗಿ ನನ್ನ ಸಂಗಡ ಯುದ್ಧಕ್ಕೆ ತೊಡಗಿದನು. ಆಗ ನಾನು ಯುದ್ಧರಂಗದಲ್ಲಿ ತೀಕ್ಷ್ಣವಾದ ಬಾಣದಿಂದ ಆ ಕಿರಾತನನ್ನು ನಿಗ್ರಹಿಸುವದಕ್ಕೆ ಸಾಮರ್ಥ್ಯವಿಲ್ಲದೆ, ವಾಯುವ್ಯಾಸ್ತ್ರವನ್ನು ಪ್ರಯೋಗಿಸಿದೆನು. ಆ ಅಸ್ತ್ರಕ್ಕೂ ಆತನು ನಿಗ್ರಹವಾಗದೆ ಇರುವದನ್ನು ನೋಡಿ ನಾನೇ ಆಶ್ಚರ್ಯಪಟ್ಟು, ಹಾಗೆಯೇ ಅನೇಕಬಾಣಗಳನ್ನು ಆತನ ಮೇಲೆ ಪ್ರಯೋಗಿಸಿ, ಸ್ಥೂಣಾಕರ್ಣವೆಂಬ ಅಸ್ತ್ರವನ್ನೂ ವಾರುಣಾಸ್ತ್ರವನ್ನೂ ಪ್ರಯೋಗಿಸಿದೆನು. ಆ ಅಸ್ತ್ರಗಳನ್ನೆಲ್ಲಾ ಆ ಕಿರಾತನು ಗ್ರಾಸಮಾಡಿಬಿಟ್ಟನು. ಬಳಿಕ ನಾನು ಬ್ರಹ್ಮಾಸ್ತ್ರವನ್ನು ಅಭಿಮಂತ್ರಿಸಲು, ಅದರಿಂದ ಅನೇಕಬಾಣಗಳು ವೃದ್ಧಿಯಾಗಿ ಅವುಗಳ ತೇಜಸ್ಸಿ

ನಿಂದ ಸಕಲಪ್ರಾಣಿಗಳೂ ಸಂತಾಪವನ್ನು ಹೊಂದಿದರು. ಆ ಅಸ್ತ್ರಜ್ವಾಲೆಯು ದಿಕ್ಕುಗಳನ್ನೂ ಆಕಾಶವನ್ನೂ ವ್ಯಾಪಿಸಿತು. ಆ ಕಿರಾತನು ಆ ಅಸ್ತ್ರವನ್ನೂ ಗ್ರಾಸಮಾಡಿಬಿಡಲು, ನನಗೆ ಅಧಿಕವಾಗಿ ಭೀತಿಯುಂಟಾಯಿತು. ಆಗ ನಾನು ಧನುಸ್ಸಿನಿಂದಲೂ ಬತ್ತಳಿಕೆಗಳಿಂದಲೂ ಖಡ್ಗದಿಂದಲೂ ಆತನನ್ನು ತಾಡನೆಮಾಡಿದೆನು. ಆ ಧನುಸ್ಸನ್ನೂ ಬತ್ತಳಿಕೆಗಳನ್ನೂ ಖಡ್ಗವನ್ನೂ ಸಹ ಆತನು ಗ್ರಾಸಮಾಡಿಬಿಟ್ಟನು. ಹೀಗೆ ಆಯುಧಗಳು ನಷ್ಟವಾಗಲು, ಆತನ ಸಂಗಡ ನಾನು ಬಾಹುಯುದ್ಧವನ್ನು ಮಾಡುವದಕ್ಕೆ ಉಪಕ್ರಮಿಸಿ, ಮುಷ್ಟಿಪ್ರಹಾರದಿಂದಲೂ ಅಂಗೈಪೆಟ್ಟುಗಳಿಂದಲೂ ಆತನ ಸಂಗಡ ಎಷ್ಟು ಹೋರಾಡಿದರೂ, ಆ ಕಿರಾತನನ್ನು ಗೆಲ್ಲುವದಕ್ಕೆ ನನ್ನಿಂದ ಆಗದೆ ಹೋಯಿತು. ಆಗ ನಾನು ಏನೂ ತೋರದೆ ಸುಮ್ಮನೆ ಭೂಮಿಯಮೇಲೆ ನಿಲ್ಲಲು, ಆ ಕಿರಾತನು ನನ್ನನ್ನು ನೋಡಿ ನಸುನಕ್ಕು, ನಾನು ನೋಡುತ್ತಿರುವಂತೆಯೇ, ಆ ಸ್ತ್ರೀಯರೊಡನೆ ಅಲ್ಲಿಯೇ ಅಂತರ್ಧಾನವನ್ನು ಪಡೆದು, ಸ್ವಲ್ಪಹೊತ್ತು ಹೋದಮೇಲೆ ಕಿರಾತರೂಪವನ್ನು ಬಿಟ್ಟು ಮತ್ತೊಂದು ಅದ್ಭುತವಾದ ದಿವ್ಯರೂಪವನ್ನು ತಾಳಿ, ದಿವ್ಯವಸ್ತ್ರವನ್ನು ಧರಿಸಿ, ಸರ್ಪಾಭರಣಭೂಷಿತನಾಗಿ, ಪಿನಾಕವನ್ನು ಧರಿಸಿ ಕಾಣಿಸಿಕೊಂಡನು. ಆಗ ವೃಷಧ್ವಜನಾದ ಶೂಲಪಾಣಿಯಾದ ಆ ಮಹಾದೇವನು ನನಗೆ ಅಭಿಮುಖವಾಗಿ ನಿಂತು ನನ್ನನ್ನು ಕುರಿತು 'ಎಲೈ ಅರ್ಜುನನೆ, ನಿನ್ನ ಸಾಹಸಕ್ಕೆ ನಾನು ಸಂತುಷ್ಟನಾಗಿರುವೆನು' ಎಂದು ನುಡಿದು, ನನ್ನ ಧನುಸ್ಸನ್ನೂ ಅಕ್ಷಯವಾದ ಬತ್ತಳಿಕೆಗಳನ್ನೂ ಸಹ ನನಗೆ ಕೊಟ್ಟು, 'ನಿನ್ನ ಮನಸ್ಸಿನಲ್ಲಿ ಏನು ಇರುವದೋ ಅದನ್ನು ಹೇಳು. ಅಮರತ್ವ ಹೊರತು ಬೇಕಾದ ವರವನ್ನು ನಿನಗೆ ಕೊಡುವೆನು' ಎಂದು ನುಡಿದನು. ಬಳಿಕ ನಾನು ಅಸ್ತ್ರಗಳನ್ನು ಕಲಿಯಬೇಕೆಂದು ಮನಸ್ಸಿನಲ್ಲೆಣಿಸಿ, ನಮಸ್ಕಾರಮಾಡಿ, ಕೈಮುಗಿದುಕೊಂಡು ಆ ಮಹಾದೇವನನ್ನು ಕುರಿತು 'ಎಲೈ ಮಹಾನುಭಾವನೆ, ನನ್ನ ವಿಷಯದಲ್ಲಿ ನೀನು ಪ್ರಸನ್ನನಾಗಿ ವರವನ್ನು ಕೊಡುವ ಪಕ್ಷದಲ್ಲಿ, ದೇವತೆಗಳಲ್ಲಿ ಇರುವ ದಿವ್ಯಾಸ್ತ್ರಗಳನ್ನು ನಾನು ಅಪೇಕ್ಷಿಸುವೆನು. ನೀನು ಅನುಗ್ರಹಮಾಡು' ಎಂದೆನು. ಬಳಿಕ ಮಹಾದೇವನು ಪ್ರಸನ್ನನಾಗಿ ನನ್ನನ್ನು ಕುರಿತು 'ಈ ರುದ್ರದೇವತಾಕವಾದ ಪಾಶುಪತಾಸ್ತ್ರವನ್ನು ಸ್ವೀಕರಿಸು' ಎಂದು ಉಪದೇಶಮಾಡಿ, 'ಸಾಮಾನ್ಯರಾದ ಮನುಷ್ಯರಲ್ಲಿ ಈ ಅಸ್ತ್ರವನ್ನು ಪ್ರಯೋಗಿಸಕೂಡದು. ಇದನ್ನು ಅಲ್ಪತೇಜಸ್ಸುಳ್ಳವರಲ್ಲಿ ಪ್ರಯೋಗಿಸಿದರೆ, ಇದು ಜಗತ್ತನ್ನೇ ನಾಶಮಾಡಿಬಿಡುವದು. ಎಲೈ ಅರ್ಜುನನೆ, ಯುದ್ಧದಲ್ಲಿ ನಿನ್ನನ್ನು ಯಾರು ಅಧಿಕವಾಗಿ ಬಾಧಿಸುವರೋ ಅವರಮೇಲೆ ಈ ಅಸ್ತ್ರವನ್ನು ಪ್ರಯೋಗಿಸು. ಮತ್ತು ಇದನ್ನು ಪ್ರಬಲವಾದ ಅಸ್ತ್ರಗಳಿಗೆ ಪ್ರತ್ಯಸ್ತ್ರವಾಗಿ ಪ್ರಯೋಗಿಸಬಹುದು' ಎಂದು ಹೇಳಿ, ನಾನು ನೋಡುತ್ತಿರಲು ಆಗಲೇ ಅಂತರ್ಧಾನವನ್ನು ಪಡೆದನು. ಆಗ ದೇವತೆಗಳಿಗೂ ದಾನವರಿಗೂ ರಾಕ್ಷಸರಿಗೂ ದುಸ್ಸಹವಾಗಿಯೂ, ಸಕಲಾಸ್ತ್ರಗಳಿಗೆ ಪ್ರತ್ಯಸ್ತ್ರವಾಗಿಯೂ, ಶತ್ರುನಾಶಕವಾಗಿಯೂ, ದಿವ್ಯವಾಗಿಯೂ, ಇರುವ ಆ ಪಾಶುಪತಾಸ್ತ್ರವು ಮೂರ್ತಿಮತ್ತಾಗಿ ನನ್ನ ಪಾರ್ಶ್ವದಲ್ಲಿ ಬಂದು ನಿಂತಿತು" ಎಂದು ಅರ್ಜುನನು ಧರ್ಮರಾಯನಿಗೆ ಹೇಳಿದನು.

## ೧೬೮ನೇ ಅಧ್ಯಾಯ.—ನಿವಾತಕವಚರ ಯುದ್ಧಪ್ರಶಂಸೆ.

ವೈಶಂಪಾಯನಮುನೀಂದ್ರನು ಜನಮೇಜಯರಾಯನನ್ನು ಕುರಿತು—ಎಲೈ ಜನಮೇಜಯರಾಯನೆ, ಅರ್ಜುನನು ಧರ್ಮರಾಯನನ್ನು ಕುರಿತು "ಎಲೈ ಅಗ್ರಜನೆ, ಆ ಪರ್ವತದ ಶಿಖರದಲ್ಲಿ ನಾನು ಈಶ್ವರನ ಅನುಗ್ರಹಕ್ಕೆ ಪಾತ್ರನಾಗಿ ಆ ರಾತ್ರಿಯನ್ನು ಕಳೆದು, ಪ್ರಾತಃಕಾಲವಾಗಲು ಆಗ ಮಾಡತಕ್ಕ ನಿತ್ಯಕರ್ಮಗಳನ್ನು ನೆರವೇರಿಸಿಕೊಂಡು, ಪೂರ್ವದಲ್ಲಿ ನೋಡಿದ ಬ್ರಾಹ್ಮಣನನ್ನು ಅಲ್ಲಿ ಪುನಃ ನೋಡಿ, ಮಹಾದೇವನನ್ನು ಕಂಡದ್ದು ಮೊದಲುಗೊಂಡು ನಡೆದ ಎಲ್ಲಾ ವೃತ್ತಾಂತವನ್ನೂ ಆತನಿಗೆ ತಿಳಿಸಿದೆನು. ಬಳಿಕ ಸೂರ್ಯನಂತೆ ತೇಜೋವಂತನಾದ ಆ ಬ್ರಾಹ್ಮಣೋತ್ತಮನು ಸಂತೋಷದಿಂದ ನನ್ನನ್ನು ಕುರಿತು 'ಎಲೈ ಅರ್ಜುನನೆ, ನಿನಗೆ ಮಹಾದೇವನ ದರ್ಶನವು ಲಭಿಸಿತು. ನಿನ್ನಂತೆ ಮತ್ತಾರಿಗೂ ಲಭಿಸಲಿಲ್ಲ. ಯಮನೇ ಮೊದಲಾದ ಲೋಕಪಾಲಕರೊಡಗೂಡಿದ ಮಹೇಂದ್ರನನ್ನೂ ನೀನು

ನೋಡುವೆ. ಆತನು ನಿನಗೆ ಬೇಕಾದ ದಿವ್ಯಾಸ್ತ್ರಗಳನ್ನು ಕೊಡುವನು ' ಎಂದು ಹೇಳಿ, ನನ್ನನ್ನು ಪದೇಪದೇ ಆಲಿಂಗನೆ ಮಾಡಿಕೊಂಡು, ತಾನು ಬಂದಂತೆ ಹೊರಟು ಹೋದನು. ಆ ದಿವಸ ಅಪರಾಹ್ಣಸಮಯದಲ್ಲಿ ಪುಣ್ಯತಮವಾದ ಮಂದಮಾರುತವು ಬೀಸಲು, ದಿವ್ಯವಾದ ಪರಿಮಳಯುಕ್ತವಾದ ನೂತನವಾದ ಪುಷ್ಪಗಳನ್ನುಧರಿಸಿದ ವೃಕ್ಷಗಳಿಂದ ಆ ಪರ್ವತಪ್ರದೇಶವು ಹೊಸದಾಗಿ ನಿರ್ಮಿತವಾದ ಮತ್ತೊಂದು ಲೋಕದಂತೆ ಕಂಗೊಳಿಸಿತು. ಆಗ ಆ ಪರ್ವತದ ಶಿಖರ ಭಾಗದಲ್ಲಿ ದಿವ್ಯವಾದ ವಾದ್ಯಧ್ವನಿಯೂ, ದೇವೇಂದ್ರನನ್ನು ಹೊಗಳತಕ್ಕ ಮನೋಹರವಾದ ಸ್ತೋತ್ರಪಾಠವೂ ಕೇಳಬಂದವು. ಆಗ ಮೇಲೆ ನೋಡುವಲ್ಲಿ, ಇಂದ್ರನು ಅಲಂಕೃತವಾದ ಕುದುರೆಗಳನ್ನು ಕಟ್ಟಿದ ದಿವ್ಯವಾದ ರಥದ ಮೇಲೆ ಶಚೀದೇವಿಯೊಡನೆ ಕೂತುಕೊಂಡು ಬರುತ್ತಿದ್ದನು. ಆ ಮಹೇಂದ್ರನ ಮುಂಭಾಗದಲ್ಲಿ ಅನೇಕಮಂದಿ ಗಂಧರ್ವರು ಗಾನಮಾಡುತ್ತಿದ್ದರು ; ಅಪ್ಸರಸ್ತ್ರೀಯರು ನರ್ತನಮಾಡುತ್ತಿದ್ದರು ; ಜಯಂತ ಮೊದಲಾದ ದೇವತೆಗಳೆಲ್ಲರೂ ತಮ್ಮತಮ್ಮ ವಾಹನಗಳನ್ನೇರಿ, ಆತನನ್ನು ಅನುಸರಿಸಿಕೊಂಡು ಬಂದರು. ಅಷ್ಟರೊಳಗೆ ಕುಬೇರನು ನರವಾಹನನಾಗಿ ಅಧಿಕವಾದ ಐಶ್ವರ್ಯದಿಂದ ಮೆರೆಯುತ್ತ ಅಲ್ಲಿ ಕಾಣಿಸಿಕೊಂಡನು. ಆ ವೇಳೆಯಲ್ಲೇ ದಕ್ಷಿಣದಿಕ್ಕಿನಿಂದ ಯಮನೂ ಪಶ್ಚಿಮದಿಕ್ಕಿನಿಂದ ವರುಣನೂ ಸಹ ತಮ್ಮತಮ್ಮ ವಾಹನಗಳನ್ನೇರಿ ಅಲ್ಲಿಗೆ ಬಂದು ಸೇರಿ, ಅವರೆಲ್ಲರೂ ನನ್ನನ್ನು ಕುರಿತು ಕುಶಲಪ್ರಶ್ನೆಯನ್ನು ಮಾಡಿ, ' ಎಲೈ ಅರ್ಜುನನೆ, ಲೋಕಪಾಲಕರಾದ ನಾವು ಬಂದಿರುವೆವು ನೋಡು. ದೇವತೆಗಳ ಕಾರ್ಯಸಿದ್ಧಿಗೋಸ್ಕರ ನೀನು ಮುಂದಾಗಿ ಮಹಾದೇವನ ದರ್ಶನವನ್ನು ಮಾಡಿದೆ. ಈಗ ನಮ್ಮಿಂದ ನೀನು ಬೇಕಾದ ದಿವ್ಯಾಸ್ತ್ರಗಳನ್ನು ಪಡೆದುಕೊಳ್ಳಬಹುದು ' ಎನಲು, ಬಳಿಕ ನಾನು ವಾಂಛೆಯುಮದಿಂದ ಅವರೆಲ್ಲರಿಗೂ ನಮಸ್ಕಾರಮಾಡಿ, ವಿಧಿಪೂರ್ವಕವಾಗಿ ಅವರು ಅನುಗ್ರಹಿಸಿಕೊಟ್ಟ ದಿವ್ಯಾಸ್ತ್ರಗಳನ್ನು ಭಕ್ತಿಯಿಂದ ಸ್ವೀಕರಿಸಿದೆನು. ಬಳಿಕ ಅವರೆಲ್ಲರೂ ನನ್ನಲ್ಲಿ ವಿಶೇಷವಾದ ಅನುಗ್ರಹವನ್ನು ಮಾಡಿ, ತಮ್ಮತಮ್ಮ ಲೋಕಗಳಿಗೆ ಹೊರಟುಹೋದರು. ಆ ಸಮಯದಲ್ಲಿ ಮಹೇಂದ್ರನು ದಿವ್ಯವಾದ ರಥದಮೇಲೆ ಕುಳಿತಿದ್ದಹಾಗೆ ನನ್ನನ್ನು ಕುರಿತು ' ಎಲೈ ಅರ್ಜುನನೆ, ನೀನು ಸ್ವರ್ಗಕ್ಕೆ ಬರಬೇಕು. ಇಲ್ಲಿಗೆ ನೀನು ಬರುವದಕ್ಕಿಂತಲೂ ಮೊದಲೇ ನಿನ್ನ ಉದ್ದೇಶವನ್ನು ನಾನು ತಿಳಿದಿದ್ದೆನು. ನಾನು ಇಲ್ಲಿಗೆ ಬಂದ ಬಳಿಕ ನಿನಗೆ ದರ್ಶನವನ್ನು ಕೊಡಬೇಕೆಂದು ಯೋಚಿಸಿದ್ದಂತೆ, ಈಗ ನಿನಗೆ ದರ್ಶನವನ್ನು ಕೊಟ್ಟೆನು. ಮೊದಲು ನೀನು ಅನೇಕ ಪುಣ್ಯತಮವಾದ ತೀರ್ಥಗಳನ್ನು ಸೇವಿಸಿರುವೆ. ಇದರಿಂದ ನೀನು ಸ್ವರ್ಗಕ್ಕೆ ಬರಬಹುದು. ಮುಂದೆ ಇನ್ನೂ ಅಧಿಕವಾದ ತಪಸ್ಸನ್ನು ಮಾಡು. ಈಗ ಅವಶ್ಯವಾಗಿ ನೀನು ಸ್ವರ್ಗಕ್ಕೆ ಬರಬೇಕು. ಮಾತಲಿಯು ನನ್ನಾಜ್ಞೆಯಿಂದ ನಿನ್ನನ್ನು ಸ್ವರ್ಗಕ್ಕೆ ಕರೆದುಕೊಂಡು ಬರುವನು. ದೇವತೆಗಳಲ್ಲಿಯೂ ಋಷಿಗಳಲ್ಲಿಯೂ ನೀನು ವಿಶೇಷವಾದ ಖ್ಯಾತಿಯನ್ನು ಪಡೆದಿರುವೆ ' ಎಂದು ನುಡಿದನು. ಅದನ್ನು ಕೇಳಿ ' ಎಲೈ ಪೂಜ್ಯನಾದ ದೇವೇಂದ್ರನೆ, ನಾನು ಅಸ್ತ್ರವಿದ್ಯೆಯನ್ನು ಸಾಂಗವಾಗಿ ಅಧ್ಯಯನಮಾಡುವದಕ್ಕೆ ನೀನು ಆಚಾರ್ಯನಾಗಬೇಕೆಂದು ಬಯಸುವೆನು. ನೀನು ನನ್ನಲ್ಲಿ ಅನುಗ್ರಹವನ್ನು ಮಾಡಬೇಕು ' ಎನಲು, ಇಂದ್ರನು ' ಎಲೈ ಅರ್ಜುನನೆ, ಯಾವ ನಿಮಿತ್ತದಿಂದ ನೀನು ಅಸ್ತ್ರವಿದ್ಯಾಭ್ಯಾಸವನ್ನು ಮಾಡಬೇಕೆಂದು ಬಯಸುವೆಯೋ ಆ ನಿನ್ನ ಮನೋರಥವು ನೆರವೇರಿ, ಮುಂದೆ ಯುದ್ಧದಲ್ಲಿ ಮಹತ್ತಾದ ಕ್ರೂರಕೃತ್ಯವನ್ನು ಮಾಡುವೆ ' ಎಂದು ನುಡಿದನು. ಬಳಿಕ ನಾನು ' ಎಲೈ ಮಹೇಂದ್ರನೆ, ನಾನು ಆ ದಿವ್ಯಾಸ್ತ್ರಗಳನ್ನು ಅಸ್ತ್ರಗಳಿಗೆ ಪ್ರತ್ಯಸ್ತ್ರನಾಗಿ ಪ್ರಯೋಗಿಸುವೆನೇ ಹೊರತಾಗಿ ಸಾಮಾನ್ಯರಾದ ಮನುಷ್ಯರಲ್ಲಿ ಪ್ರಯೋಗಿಸತಕ್ಕವನಲ್ಲ. ಅಸ್ತ್ರಜಿತವಾದ ಲೋಕವನ್ನು ಪಡೆಯಬೇಕೆಂದು ನನಗೆ ಅಪೇಕ್ಷೆಯಿರುವದರಿಂದ, ನೀನು ನನಗೆ ಅಸ್ತ್ರವಿದ್ಯಾಭ್ಯಾಸವನ್ನು ಮಾಡಿಸಬೇಕೆಂದು ಅಪೇಕ್ಷಿಸುವೆನು ' ಎನಲು, ಇಂದ್ರನು ' ಎಲೈ ಧನಂಜಯನೆ, ನಿನ್ನನ್ನು ಪರೀಕ್ಷಿಸಬೇಕೆಂದು ನಾನು ಆ ಮಾತನ್ನಾಡಿದೆನು. ನೀನು ನನ್ನ ಮಗನಾದದ್ದಕ್ಕೆ ತಕ್ಕ ಮಾತನ್ನು ಆಡಿದೆ. ನೀನು ಸ್ವರ್ಗಲೋಕಕ್ಕೆ ಬಂದು, ವಾಯುವ್ಯ, ಆಗ್ನೇಯ, ವಾರುಣ, ಸಾಧ್ಯ, ಪೈತಾಮಹ, ಗಾಂಧರ್ವ, ಉರಗ, ದೈತೇಯ, ವೈಷ್ಣವ, ನೈಋತ ಮೊದಲಾದ ನನ್ನಲ್ಲಿರತಕ್ಕ ಎಲ್ಲಾ ಅಸ್ತ್ರಗಳನ್ನೂ ಕಲಿತುಕೊ ' ಎಂದು ಹೇಳಿ ಅಲ್ಲೇ ಅಂತರ್ಧಾನವನ್ನು ಹೊಂದಿದನು.

ಬಳಿಕ ಮಾತಲಿಯು ದಿವ್ಯವಾಗಿಯೂ ಮಾಯಾಮಯವಾಗಿಯೂ ಪುಣ್ಯತಮವಾಗಿಯೂ ಅತಿವೇಗಶಾಲಿಗಳಾದ ಕುದುರೆಗಳನ್ನು ಕಟ್ಟಿರತಕ್ಕದ್ದಾಗಿಯೂ ಇರುವ ಇಂದ್ರನ ರಥವನ್ನು ತೆಗೆದುಕೊಂಡು ನನ್ನ ಬಳಿಗೆ ಬಂದು 'ಎಲೈ ಅರ್ಜುನನೆ, ದೇವೇಂದ್ರನು ನಿನ್ನನ್ನು ನೋಡಬೇಕೆಂದು ಬಯಸುವನು. ಸ್ವರ್ಗಲೋಕಕ್ಕೆ ನೀನು ಬಂದು ನಿನ್ನ ಉದ್ದೇಶವನ್ನು ಸಾಧಿಸಿಕೊಂಡು, ಮುಂದೆ ನಡಿಸತಕ್ಕ ಕಾರ್ಯಗಳನ್ನು ನಡಿಸು. ಈ ಶರೀರದಿಂದಲೇ ಪುಣ್ಯವಂತರು ಪಡೆಯತಕ್ಕ ಲೋಕಗಳನ್ನು ನೋಡುವೆ. ಇನ್ನು ಸ್ವರ್ಗಕ್ಕೆ ಹೊರಡು' ಎನಲು, ಆಗ ನಾನು ಹಿಮಮಯವಾದ ಆ ಭೃಗುತುಂಗಪರ್ವತದ ಆಜ್ಞೆಯನ್ನು ತೆಗೆದುಕೊಂಡು, ಇಂದ್ರನ ರಥಕ್ಕೆ ಪ್ರದಕ್ಷಿಣೆಯನ್ನು ಮಾಡಿ, ಅದನ್ನೇರಿದೆನು. ಬಳಿಕ ಅಶ್ವಹೃದಯವನ್ನು ಬಲ್ಲ ಮಾತಲಿಯು ಮನೋವೇಗಕ್ಕೂ ವಾಯುವೇಗಕ್ಕೂ ಸಮಾನವಾದ ವೇಗವುಳ್ಳ ಆ ರಥಾಶ್ವಗಳನ್ನು ನಡಿಸಲು, ಆ ರಥವು ಅಧಿಕವಾದ ವೇಗದಿಂದ ಆಕಾಶಮಾರ್ಗದಲ್ಲಿ ಹೊರಟಿತು. ಆಗ ನಾನು ಆ ರಥದಮೇಲೆ ಚಲಿಸದೆ ಸ್ಥಿರವಾಗಿ ಕೂತಿದ್ದೆನು. ಆ ಸಮಯದಲ್ಲಿ ಮಾತಲಿಯು ನನ್ನನ್ನು ನೋಡಿ ಆಶ್ಚರ್ಯಪಟ್ಟು 'ಎಲೈ ಅರ್ಜುನನೆ, ನಾನು ರಥಾಶ್ವಗಳನ್ನು ಮೊದಲುಮೊದಲು ಬಹುವೇಗದಿಂದ ನಡಿಸಲುಪಕ್ರಮಿಸಲು, ಇಂದ್ರನೂಕೂಡ ಚಲಿಸುತ್ತಿದ್ದನು; ನೀನು ಸ್ವಲ್ಪವೂ ಚಲಿಸದೆ ಸ್ಥಿರವಾಗಿರುವೆ. ಇದರಿಂದ ನಿನ್ನ ಪರಾಕ್ರಮವು ಇಂದ್ರನ ಪರಾಕ್ರಮಕ್ಕಿಂತಲೂ ಅಧಿಕವಾಗಿರುವದೆಂದು ನನಗೆ ತೋರುತ್ತಿರುವದು' ಎಂದು ಮಾತನಾಡುತ್ತ, ದೇವತೆಗಳು ವಾಸಮಾಡುವ ಸ್ಥಳಗಳನ್ನೂ ವಿಮಾನಗಳನ್ನೂ ನನಗೆ ತೋರಿಸುತ್ತ, ಇನ್ನೂ ಮೇಲಕ್ಕೆ ರಥವನ್ನು ನಡಿಸಿದನು. ಆಗ ಮಾರ್ಗದಲ್ಲಿ ಋಷಿಗಳೂ ದೇವತೆಗಳೂ ಗಂಧರ್ವರೂ ಅಪ್ಸರಸ್ತ್ರೀಯರೂ ಸ್ವೇಚ್ಛೆಯಿಂದ ಸಂಚರಿಸುವ ಲೋಕಗಳನ್ನೂ, ಮಹಾತ್ಮರಾದ ಅವರವರ ಪ್ರಭಾವವನ್ನೂ, ದೇವತೆಗಳು ವಿಹರಿಸತಕ್ಕ ನಂದನವನ ಮೊದಲಾದ ಉದ್ಯಾನವನಗಳನ್ನೂ ತೋರಿಸಿದನು. ರಥವು ಸ್ವಲ್ಪ ಮುಂದಕ್ಕೆ ನಡೆಯಲು, ಇಂದ್ರನಿಗೆ ಆವಾಸಸ್ಥಾನವಾದ ಅಮರಾವತೀಪಟ್ಟಣವು ಅನೇಕ ಕಲ್ಪವೃಕ್ಷಗಳಿಂದ ಅಲಂಕೃತವಾಗಿ ಕಾಣಿಸಿತು. ಎಲೈ ಧರ್ಮರಾಯನೆ, ಆ ಅಮರಾವತೀಪಟ್ಟಣದಲ್ಲಿ ವಾಸಮಾಡತಕ್ಕವರೊಳಗೆ ಸೂರ್ಯತಾಪ, ಶೀತ, ಉಷ್ಣ, ಧೂಳು, ಮುಪ್ಪು, ದುಃಖ, ದೈನ್ಯ, ಬಲಹಾನಿ, ಗ್ಲಾನಿ, ಕ್ರೋಧ, ಲೋಭ, ಭಯ, ಇವುಗಳೊಂದೂ ಕಾಣಬರಲಿಲ್ಲ; ಇಂದ್ರಲೋಕದಲ್ಲಿ ವಾಸಮಾಡತಕ್ಕ ಪ್ರಾಣಿಗಳು ಯಾವಾಗಲೂ ಸಂತೋಷಭರಿತರಾಗಿಯೇ ಇರುವರು. ಅಲ್ಲಿರತಕ್ಕ ವೃಕ್ಷಗಳು ಯಾವಾಗಲೂ ಹಸುರಾದ ಎಲೆಗಳಿಂದ ಕೂಡಿ ಫಲಪುಷ್ಪಭರಿತಗಳಾಗಿಯೇ ಇರುವವು; ಅಲ್ಲಿರತಕ್ಕ ಸರೋವರಗಳು ಯಾವಾಗಲೂ ಕಮಲಗಳಿಂದಲೂ, ಸೌಗಂಧಿಕಪುಷ್ಪಗಳಿಂದಲೂ ಶೋಭಿಸುತ್ತಿರುವವು; ಮತ್ತು ಅಲ್ಲಿ ಯಾವಾಗಲೂ ಸಕಲಪ್ರಾಣಿಗಳಿಗೂ ಆನಂದಕರವಾಗಿಯೂ ಶೀತಳವಾಗಿಯೂ ಮಂದಮಾರುತವು ಬೀಸುತ್ತಲೇ ಇರುವದು. ಆ ಸ್ವರ್ಗದ ಎಲ್ಲಾ ಭೂಪ್ರದೇಶವೂ ರತ್ನಖಚಿತವಾಗಿಯೂ ಯಾವಾಗಲೂ ಪುಷ್ಪಗಳಿಂದ ಅಲಂಕೃತವಾಗಿಯೂ ಮನೋಹರವಾಗಿಯೂ ಇರುವದು. ಅಲ್ಲಿರತಕ್ಕ ವಿಚಿತ್ರವಿಚಿತ್ರವಾದ ಮೃಗಗಳೂ ಪಕ್ಷಿಗಳೂಸಹ ಯಾವಾಗಲೂ ರಮಣೀಯವಾದ ಧ್ವನಿಯನ್ನೇ ಮಾಡುತ್ತಿರುವವು. ಮತ್ತು ಅಲ್ಲಿ ಯಾವಾಗಲೂ ಆಕಾಶಮಾರ್ಗದಲ್ಲಿ ಅನೇಕಮಂದಿ ದೇವತೆಗಳು ವಿಮಾನಗಳಲ್ಲಿ ಸಂಚಾರಮಾಡುತ್ತಲೇ ಇರುವರು. ಆಕಾಶದಲ್ಲಿ ನಾನು ಅಷ್ಟವಸುಗಳನ್ನೂ, ಏಕಾದಶರುದ್ರರನ್ನೂ, ಸಾಧ್ಯರನ್ನೂ, ಏಕೋನಪಂಚಾಶನ್ಮರುತ್ತುಗಳನ್ನೂ, ದ್ವಾದಶಾದಿತ್ಯರನ್ನೂ, ಅಶ್ವಿನೀದೇವತೆಗಳನ್ನೂ ಕಂಡು, ಅವರಿಗೆಲ್ಲಾ ಪೂಜೆಯನ್ನು ಮಾಡಿದೆನು. ಬಳಿಕ ಅವರು ನನ್ನನ್ನು ಕುರಿತು 'ಎಲೈ ಅರ್ಜುನನೆ, ನೀನು ಸಕಲ ಅಸ್ತ್ರವಿದ್ಯೆಯನ್ನು ಕಲಿತು ಯಶಸ್ಸಿನಿಂದಲೂ ತೇಜಸ್ಸಿನಿಂದಲೂ ಪರಾಕ್ರಮದಿಂದಲೂ ಮೆರೆಯುತ್ತ ಯುದ್ಧರಂಗದಲ್ಲಿ ಶತ್ರುಗಳನ್ನು ಜಯಿಸು' ಎಂದು ಆಶೀರ್ವಾದವನ್ನು ಮಾಡಿದರು. ಆಬಳಿಕ ನಾನು ಅನೇಕ ದೇವತೆಗಳಿಂದಲೂ ಗಂಧರ್ವರಿಂದಲೂ ಸೇವಿತವಾದ ಆ ಅಮರಾವತಿಯನ್ನು ಹೊಕ್ಕು ಇಂದ್ರನನ್ನು ಕಂಡು ಆತನಿಗೆ ನಮಸ್ಕಾರವನ್ನು ಮಾಡಿ ಆತನ ಸನ್ನಿಧಿಯಲ್ಲಿ ವಿನಯದಿಂದ ನಿಂತುಕೊಂಡೆನು. ಆಗ ಇಂದ್ರನು ಪ್ರೀತಿಯಿಂದ ನನಗೆ ಅರ್ಧಾಸನವನ್ನು ಕೊಟ್ಟು, ಬಹುಮಾನದಿಂದ ನನ್ನ ಮೈಯನ್ನು ಸವರಿದನು. ಅಲ್ಲಿ ನಾನು ಪುಣ್ಯವಂತರಾದ ಗಂಧರ್ವರೊಡಗೂಡಿ ಅಸ್ತ್ರನಿಮಿತ್ತವಾಗಿ ವಾಸಮಾಡುತ್ತ, ಇಂದ್ರನಲ್ಲಿ ಅಸ್ತ್ರವಿದ್ಯೆಯನ್ನು ಅಭ್ಯಾಸಮಾಡಿದೆನು. ಆ ಸಮಯದಲ್ಲಿ ಗಂಧರ್ವಶ್ರೇಷ್ಠನಾದ

ವಿಶ್ವಾವಸುವಿಗೆ ಪುತ್ರನಾದ ಚಿತ್ರಸೇನನು ನನಗೆ ಮಿತ್ರನಾಗಿ ಗಂಧರ್ವವಿದ್ಯವನ್ನೆಲ್ಲಾ ನನಗೆ ಕಲಿಸಿದನು. ಬಳಿಕ ನಾನು ಅಸ್ತ್ರವಿದ್ಯಾಪಾರಂಗತನಾಗಿ ದೇವತೆಗಳಿಂದ ಸನ್ಮಾನವನ್ನು ಪಡೆದು ಇಂದ್ರಭವನದಲ್ಲಿ ಸುಖವಾಗಿ ವಾಸ ಮಾಡುತ್ತ, ಅಲ್ಲಿ ದಿವ್ಯವಾದ ಗಂಧರ್ವರ ಗಾನವನ್ನೂ ವೀಣಾವೇಣುಮೊದಲಾದ ವಾದ್ಯಗಳ ಧ್ವನಿಯನ್ನೂ ಕೇಳುತ್ತ, ಅಪ್ಸರಸ್ತ್ರೀಯರ ಮನೋಹರವಾದ ನಾಟ್ಯವನ್ನು ನೋಡುತ್ತ, ಅವುಗಳಲ್ಲೇ ಆದರವುಳ್ಳವನಾಗಿದ್ದರೂ ವಿಶೇಷವಾಗಿ ಅಸ್ತ್ರವಿದ್ಯಾಭ್ಯಾಸದಲ್ಲೇ ನಿರತನಾಗಿದ್ದೆನು. ಅದರಿಂದ ಇಂದ್ರನು ನನ್ನ ವಿಷಯದಲ್ಲಿ ಬಹುವಿಶ್ವಾಸವುಳ್ಳವನಾಗಿದ್ದನು. ಎಲೈ ಧರ್ಮರಾಯನೆ, ಹೀಗೆ ನಾನು ಆ ಸ್ವರ್ಗದಲ್ಲಿ ಕಾಲವನ್ನು ಕಳೆದೆನು. ಆಗ ಇಂದ್ರನು ಅಸ್ತ್ರವಿದ್ಯಾಪಾರಂಗತನಾಗಿಯೂ ತನ್ನ ಪ್ರೀತಿಗೆ ಪಾತ್ರನಾಗಿಯೂ ಇರುವ ನನ್ನನ್ನು ನೋಡಿ, ತನ್ನ ಎರಡು ಕೈಗಳನ್ನೂ ನನ್ನ ತಲೆಯಮೇಲಿಟ್ಟು, 'ಎಲೈ ಅರ್ಜುನನೆ, ಇನ್ನುಮೇಲೆ ದೇವತೆಗಳೂ ಸಹ ಯುದ್ಧದಲ್ಲಿ ನಿನ್ನನ್ನು ಜಯಿಸಲಾರರು ಎಂಬಲ್ಲಿ, ಅಲ್ಪರಾದ ಮನುಷ್ಯರೇನು ಜಯಿಸಬಲ್ಲರು? ನೀನು ಯುದ್ಧದಲ್ಲಿ ಅಸದೃಶವಾದ ಪರಾಕ್ರಮವುಳ್ಳವನೂ ಶತ್ರುಗಳಿಂದ ಜಯಿಸಲಶಕ್ಯನೂ ಆಗುವೆ' ಎಂದು ನುಡಿದು, ರೋಮಾಂಚಿತಶರೀರನಾಗಿ ಪುನಃ ನನ್ನನ್ನು ಕುರಿತು 'ಎಲೈ ವೀರನೆ, ಅಸ್ತ್ರವಿದ್ಯದಲ್ಲಿ ನಿನಗೆ ಸಮಾನನಾದವನು ಲೋಕದಲ್ಲಿ ಯಾವನೂ ಇಲ್ಲ. ನೀನು ಜಾಗರೂಕನೂ ಸತ್ಯವಾದಿಯೂ ಜಿತೇಂದ್ರಿಯನೂ ಬ್ರಾಹ್ಮಣರಲ್ಲಿ ವಿಶ್ವಾಸವುಳ್ಳವನೂ ಶೂರನೂ ಆದ್ದರಿಂದ, ಹದಿನೈದು ದಿವ್ಯಾಸ್ತ್ರಗಳನ್ನು ನೀನು ಕಲಿತೆ. ಮತ್ತು ಅಸ್ತ್ರಗಳ ಪ್ರಯೋಗದಲ್ಲಿಯೂ, ಉಪಸಂಹಾರದಲ್ಲಿಯೂ, ಪುನಃಪುನಃ ಪ್ರಯೋಗೋಪಸಂಹಾರಗಳನ್ನು ಮಾಡುವದರಲ್ಲಿಯೂ, ನಿರಪರಾಧಿಗಳು ಅಸ್ತ್ರಾಗ್ನಿಯಿಂದ ದಗ್ಧರಾದರೆ ಅವರನ್ನು ಉಜ್ಜೀವಿಸುವದರಲ್ಲಿಯೂ, ಪರರ ಅಸ್ತ್ರಗಳಿಂದ ತಿರಸ್ಕೃತವಾದ ಅಸ್ತ್ರಗಳನ್ನು ಮತ್ತಷ್ಟು ಬಲಪಡಿಸುವದರಲ್ಲಿಯೂ ನಿನಗೆ ಸಮಾನನಾದವನು ಯಾವನೂ ಇಲ್ಲ. ಇನ್ನುಮೇಲೆ ನೀನು ಅಸ್ತ್ರವಿದ್ಯೋಪದೇಶವನ್ನು ಮಾಡಿದ ಗುರುವಿಗೆ ದಕ್ಷಿಣೆಯನ್ನು ಕೊಡತಕ್ಕ ಕಾಲವು ಪ್ರಾಪ್ತವಾಗಿರುವದು. ಅದನ್ನು ನೀನು ಪ್ರತಿಜ್ಞೆಮಾಡಿದ್ದೇಆದರೆ ಮುಂದಾಗತಕ್ಕದ್ದನ್ನು ನಿನಗೆ ಆಜ್ಞಾಪಿಸುವೆನು' ಎಂದನು. ಆ ಮಾತನ್ನು ಕೇಳಿ ನಾನು 'ಎಲೈ ದೇವೇಂದ್ರನೆ, ನಿನ್ನಿಂದ ಸಾಧ್ಯವಾದ ಕಾರ್ಯವು ನನ್ನಿಂದ ಆದಂತೆ ಭಾವಿಸು' ಎನಲು, ಇಂದ್ರನು ಹಸನ್ಮುಖನಾಗಿ 'ಎಲೈ ಸವ್ಯಸಾಚಿಯೆ, ಮೂರುಲೋಕದಲ್ಲೂ ನಿನಗೆ ಅಸಾಧ್ಯವಾದ ಕಾರ್ಯವು ಯಾವದೂ ಇಲ್ಲ. ನನಗೆ ಶತ್ರುಗಳಾದ ನಿವಾತಕವಚರೆಂಬ ಮೂರುಕೋಟಿಮಂದಿ ದಾನವರು ದುರ್ಗಮವಾದ ಸಮುದ್ರದೊಳಗೆ ವಾಸಮಾಡುತ್ತಿರುವರು. ಅವರೆಲ್ಲರೂ ಸಮಾನವಾದ ಬಲವೂ ಪರಾಕ್ರಮವೂ ರೂಪೂ ಉಳ್ಳವರು. ಅವರನ್ನು ನೀನು ಜಯಿಸಿದ್ದೇ ಆದರೆ, ನನಗೆ ಗುರುದಕ್ಷಿಣೆಯು ಸಲ್ಲುವದು' ಎಂದು ನುಡಿದನು. ಆಬಳಿಕ ನಾನು ನವಿಲುಗರಿಯಂತೆ ಮನೋಹರವಾದ ಮಯ್ಯೂಗ್ಗದಲುಗಳುಳ್ಳ ಕುದುರೆಗಳನ್ನು ಕಟ್ಟಿ ಸಾರಥಿಯಾದ ಮಾತಲಿಯಿಂದ ಕೂಡಿದ ತನ್ನ ದಿವ್ಯವಾದ ರಥವನ್ನು ನನಗೆ ಕೊಟ್ಟು, ನನ್ನ ಶಿರಸ್ಸಿನಲ್ಲಿ ದಿವ್ಯವಾದ ಕಿರೀಟವನ್ನಿಟ್ಟು, ನನಗೆ ಯೋಗ್ಯವಾದ ಕುಂಡಲಾದ್ಯಾಭರಣಗಳನ್ನು ಕೊಟ್ಟು, ಮಯ್ಯಲ್ಲಿಕ್ಕಿದರೆ ಮಯ್ಯಿದ್ದಂತೆಯೇ ತೋರುತ್ತ ಅದನ್ನು ಸ್ಪರ್ಶಮಾಡಿದರೆ ಆಗ ಅದರ ಸ್ವರೂಪವು ತಿಳಿಯತಕ್ಕದ್ದಾದ ಅಭೇದ್ಯವಾದ ಕವಚವನ್ನು ನನಗೆ ಕರುಣಿಸಿ, ನನ್ನ ಗಾಂಡೀವ ಧನುಸ್ಸಿಗೆ ಎಂದಿಗೂ ಕಿತ್ತುಹೋಗದ ದೃಢವಾದ ಹೆದೆಯನ್ನು ತಾನೇ ಕಟ್ಟಿಕೊಟ್ಟನು.

ಅನಂತರದಲ್ಲಿ ನಾನು ಯುದ್ಧಸನ್ನಾಹದಿಂದ ಮೆರೆಯುತ್ತ, ಪೂರ್ವದಲ್ಲಿ ಇಂದ್ರನು ಬಲಿಚಕ್ರವರ್ತಿಯನ್ನು ಯಾವ ರಥವನ್ನೇರಿ ನಿಗ್ರಹಿಸಿದನೋ ಅಂಥಾ ಆ ರಥವನ್ನೇರಿ ಹೊರಟೆನು. ಆಗ ಸಕಲರಾದ ದೇವತೆಗಳೂ ಆ ರಥಘೋಷವನ್ನು ಕೇಳಿ, ಇಂದ್ರನು ಎಲ್ಲಿಗೋ ಹೊರಟನೆಂದು ತಿಳಿದು, ನನ್ನ ರಥದ ಬಳಿಗೆ ಬಂದು ನನ್ನನ್ನು ನೋಡಿ 'ಎಲೈ ಫಲ್ಗುನನೆ, ಇದೇನು ಹೀಗೆ ಹೊರಟಿರುವೆ?' ಎಂದು ಪ್ರಶ್ನೆಮಾಡಲು, ಅವರನ್ನು ಕುರಿತು 'ಎಲೈ ದೇವತೆಗಳಿರಾ, ನಾನು ನಿವಾತಕವಚರನ್ನು ಜಯಿಸುವದಕ್ಕೋಸ್ಕರ ಹೊರಟಿರುವೆನು. ನೀವು ನನಗೆ ಜಯವಾಗುವಂತೆ ಆಶೀರ್ವಾದವನ್ನು ಮಾಡಿರಿ' ಎಂದು ಪ್ರಾರ್ಥಿಸಿದೆನು. ಆ ದೇವತೆಗಳೆಲ್ಲರೂ ಇಂದ್ರನನ್ನು ಸ್ತುತಿಸುವಂತೆ ನನ್ನನ್ನು ಸ್ತುತಿಸಿ 'ಎಲೈ ಪಾರ್ಥನೆ, ಇದೇ ರಥವನ್ನೇರಿ ಇಂದ್ರನು ಯುದ್ಧದಲ್ಲಿ ಶಂಬರಾಸುರನನ್ನೂ ನಮುಚಿಯನ್ನೂ

ಬಲಾಸುರನನ್ನೂ ವೃತ್ರಾಸುರನನ್ನೂ ಪ್ರಹ್ಲಾದಾಸುರನನ್ನೂ ಇನ್ನೂ ಅನೇಕಸಹಸ್ರಸಂಖ್ಯರಾದ ದೈತ್ಯರನ್ನೂ ಯುದ್ಧದಲ್ಲಿ ಜಯಿಸಿದನು. ಅದೇ ಪ್ರಕಾರ ನೀನು ನಿವಾತಕವಚರನ್ನು ನಿನ್ನ ಪರಾಕ್ರಮಾತಿಶಯದಿಂದ ಜಯಿಸುವೆ. ದೇವದತ್ತವೆಂಬ ಈ ದಿವ್ಯಶಂಖವನ್ನು ನೀನು ಸ್ವೀಕರಿಸು. ಮಹಾತ್ಮನಾದ ಇಂದ್ರನು ಈ ಶಂಖದ ಪ್ರಭಾವದಿಂದ ಅನೇಕ ದಾನವರನ್ನು ಜಯಿಸಿದನು. ಹಾಗೆಯೇ ಇದರ ಮಹಿಮೆಯಿಂದ ನೀನೂ ನಿವಾತಕವಚರನ್ನು ಜಯಿಸುವೆ' ಎಂದು ಆ ಶಂಖವನ್ನು ಅನುಗ್ರಹಿಸಿಕೊಟ್ಟರು. ನಾನು ಜಯಾರ್ಥವಾಗಿ ಅದನ್ನು ಪರಿಗ್ರಹಿಸಿ, ದೇವತೆಗಳು ಸ್ತೋತ್ರಮಾಡುತ್ತಿರಲು ಆ ಧನುರ್ಬಾಣಗಳನ್ನು ಕಯ್ಯಲ್ಲಿ ಹಿಡಿದು, ಯುದ್ಧಾಪೇಕ್ಷೆಯಿಂದ ಕ್ರೂರರಾದ ಆ ದಾನವರಿರತಕ್ಕ ಸ್ಥಳಕ್ಕೆ ಪ್ರಯಾಣಮಾಡಿದೆನು.' ಎಂದು ಅರ್ಜುನನು ಧರ್ಮರಾಯನಿಗೆ ಹೇಳಿದನು.

## ೧೬೯ನೇ ಅಧ್ಯಾಯ.—ನಿವಾತಕವಚರ ಯುದ್ಧ.

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಅರ್ಜುನನು ಧರ್ಮರಾಯನನ್ನು ಕುರಿತು "ಎಲೈ ಅಗ್ರಜನೆ, ಆ ಬಳಿಕ ನಾನು ಅಲ್ಲಲ್ಲಿ ಮಾರ್ಗದಲ್ಲಿ ಮಹರ್ಷಿಗಳಿಂದ ಸ್ತೋತ್ರಮಾಡಿಸಿಕೊಳ್ಳುತ್ತ ಹೊರಟು, ಅಪಾರವಾಗಿಯೂ ಗಂಭೀರವಾಗಿಯೂ ಇರುವ ಸಮುದ್ರವನ್ನು ನೋಡಿದೆನು. ಆ ಘೋರವಾದ ಸಮುದ್ರದಲ್ಲಿ ನೊರೆಗಳೊಡನೆ ಮೇಲೆಮೇಲೆ ಗುಂಪುಗುಂಪಾಗಿ ಬರುತ್ತಿದ್ದ ಚಪಲವಾದ ತೆರೆಗಳು ಪರ್ವತಗಳಂತೆ ಕಾಣಿಸುತ್ತಿದ್ದವು. ಅಲ್ಲಲ್ಲೇ ಉತ್ತಮವಾದ ವಸ್ತುಗಳಿಂದ ಪೂರ್ಣವಾದ ನಾವೆಗಳು ಸಂಚರಿಸುತ್ತಿದ್ದವು. ಮೀನು, ಮೊಸಳೆ, ತಿಮಿ, ತಿಮಿಂಗಿಲ ಮೊದಲಾದ ದೊಡ್ಡದೊಡ್ಡ ಜಲಚರಪ್ರಾಣಿಗಳು ನೀರಿನಲ್ಲಿ ಮುಳುಗಿರುವ ಪರ್ವತಗಳಂತೆ ಪ್ರಕಾಶಮಾನವಾಗಿದ್ದವು. ಆ ಸಮುದ್ರದ ತಡಿಯ ನೀರಿನಲ್ಲಿ ಮುಳುಗಿದ ಅನೇಕ ಸಹಸ್ರ ಶಂಖಗಳು ರಾತ್ರಿಕಾಲದಲ್ಲಿ ಸೂಕ್ಷ್ಮವಾದ ಮೇಘದಿಂದ ಆವರಿಸಲ್ಪಟ್ಟ ನಕ್ಷತ್ರಗಳಂತೆ ಕಾಣಿಸುತ್ತಿದ್ದವು. ಹಾಗೆಯೇ ಅನೇಕ ರತ್ನರಾಶಿಗಳೂ ಶೋಭಿಸುತ್ತಿದ್ದವು. ಆ ಸಮುದ್ರದಲ್ಲಿ ಬೀಸುವ ವಾಯುವು ಅತಿ ಭಯಂಕರವಾಗಿತ್ತು. ಹೀಗೆ ನಾನು ಸಮುದ್ರವನ್ನು ನೋಡಿ ಅಲ್ಲೇ ಸಮೀಪದಲ್ಲಿದ್ದ ನಿವಾತಕವಚರ ಪಟ್ಟಣವನ್ನು ಕಂಡೆನು. ಆಗ ಮಾತಲಿಯು ಚಕ್ರದ ಧ್ವನಿಯಿಂದ ಆ ದಾನವರು ಭಯಪಟ್ಟು ನಡುಗುವಂತೆ ರಥವನ್ನು ತೀವ್ರವಾಗಿ ನಡಿಸಿದನು. ಆ ಬಳಿಕ ಅಲ್ಲಿದ್ದ ದಾನವರು ಆಕಾಶದಲ್ಲಿ ಮೇಘಗರ್ಜನೆಗೆ ಸಮಾನವಾದ ನನ್ನ ರಥಧ್ವನಿಯನ್ನು ಕೇಳಿ, ಇಂದ್ರನು ಬಂದನೆಂದು ಸಂಭ್ರಾಂತರಾಗಿ ಭಯಪಟ್ಟು, ಧನುರ್ಬಾಣಗಳನ್ನೂ ಖಡ್ಗ, ಶೂಲ, ಗದೆ, ಪರಶು, ಮೊದಲಾದ ಆಯುಧಗಳನ್ನೂ ಧರಿಸಿ, ತಮ್ಮ ಪಟ್ಟಣದ ಬಾಗಿಲುಗಳನ್ನು ಮುಚ್ಚಿ, ಅಲ್ಲಲ್ಲೇ ಪುರಸಂರಕ್ಷಣೆಯನ್ನು ಮಾಡುತ್ತಾ ಬಂದರು. ಆ ಸಮಯದಲ್ಲಿ ಯಾವ ದಾನವನೂ ನನಗೆ ಕಾಣಿಸದೆ ಹೋಗಲು, ದೇವದತ್ತವೆಂಬ ಶಂಖವನ್ನು ತೆಗೆದುಕೊಂಡು ಅಧಿಕವಾದ ಸಂತೋಷದಿಂದ ಊದಿದೆನು. ಆ ಧ್ವನಿಯು ಆಕಾಶವನ್ನು ವ್ಯಾಪಿಸಿಕೊಂಡು ಪ್ರತಿಧ್ವನಿಯನ್ನುಂಟುಮಾಡಿತು. ಅದನ್ನು ಕೇಳಿ ಅಲ್ಲಿದ್ದ ಪ್ರಾಣಿಗಳೆಲ್ಲಾ ಭಯಪಟ್ಟು ಅಲ್ಲಲ್ಲೇ ಅಡಗಿಕೊಂಡವು. ಬಳಿಕ ಅನೇಕ ಸಹಸ್ರಮಂದಿ ದಾನವರು ಕವಚ ಕುಂಡಲಾದಿಗಳನ್ನು ಧರಿಸಿ, ನಾನಾವಿಧವಾದ ಅಸ್ತ್ರಗಳನ್ನೂ, ಉಕ್ಕಿನಿಂದ ಮಾಡಿದ ಶೂಲಾಯುಧಗಳನ್ನೂ, ಗದೆ ಮುಸಲ ಪಟ್ಟಿಶ ಖಡ್ಗ ಚಕ್ರ ಕೋವಿ ಶತಘ್ನಿ ಮೊದಲಾದ ಆಯುಧಗಳನ್ನು ಧರಿಸಿ, ಯುದ್ಧಸನ್ನಾಹಗಳಿಂದ ಮೆರೆಯುತ್ತ ಬಂದರು. ಆಗ ಮಾತಲಿಯು ರಥ ನಡೆಯುವ ಮಾರ್ಗವನ್ನು ಚೆನ್ನಾಗಿ ನೋಡುತ್ತ ಸಮವಾದ ಪ್ರದೇಶದಲ್ಲಿ ರಥಾಶ್ವಗಳನ್ನು ನಡಿಸಿದನು. ಆ ಮಾತಲಿಯ ಸಾರಥ್ಯದ ಚಾತುರ್ಯದಿಂದ ಕುದುರೆಗಳು ಅತಿವೇಗದಿಂದ ಓಡುತ್ತಿರಲು, ಕಣ್ಣಿಗೆ ಯಾವದೂ ಕಾಣಿಸದೆ ನನಗೆ ಅಧಿಕವಾದ ಆಶ್ಚರ್ಯವುಂಟಾಯಿತು. ಆಗ ಆ ದಾನವರು ವಿಕಾರವಾದ ಸ್ವರದಿಂದ ವಾದ್ಯಗಳನ್ನು ಬಾರಿಸಿದರು. ಆ ಶಬ್ದವನ್ನು ಸಹಿಸಲಾರದೆ ಸಮುದ್ರದಲ್ಲಿ ವಾಸಮಾಡುವ ದೊಡ್ಡದೊಡ್ಡ ಪರ್ವತಕ್ಕೆ ಸಮಾನವಾದ ಮೀನುಗಳು ಮೇಲಕ್ಕೆ ತೇಲಿಬಂದವು. ಬಳಿಕ ಆ ದಾನವರು ನನ್ನ

ಮೇಲೆ ಅನೇಕ ಸಹಸ್ರ ಸಂಖ್ಯಾಕವಾದ ಬಾಣಗಳನ್ನು ಪ್ರಯೋಗಿಸುತ್ತ ಯುದ್ಧವನ್ನು ಉಪಕ್ರಮಿಸಿದರು. ನನಗೂ ನಿವಾತಕವಚರಿಗೂ ಯುದ್ಧವು ಬಹುಘೋರವಾಗಿ ನಡೆಯಿತು. ಆಗ ದೇವರ್ಷಿಗಳೂ ಬ್ರಹ್ಮರ್ಷಿಗಳೂ ಇನ್ನೂ ಅನೇಕ ಋಷಿಗಳೂ ಸಿದ್ಧರೂ ಆ ಯುದ್ಧವನ್ನು ನೋಡಿ, ನನಗೆ ಜಯವಾಗಬೇಕೆಂಬ ಕೋರಿಕೆಯುಳ್ಳವರಾಗಿ, ಯೋಗ್ಯವಾಗಿಯೂ ಮಧುರವಾಗಿಯೂ ಇರುವ ವಚನಗಳುಳ್ಳ ತಾರಕಾಮಯದಿಂದ ಯುದ್ಧದಲ್ಲಿ ಇಂದ್ರನನ್ನು ಶ್ಲಾಘಿಸಿವಂತೆ ನನ್ನನ್ನೂ ಶ್ಲಾಘಿಸಿದರು" ಎಂದು ಅರ್ಜುನನು ಧರ್ಮರಾಯನಿಗೆ ಹೇಳಿದನು.

## ೧೭೦ನೇ ಅಧ್ಯಾಯ.—ನಿವಾತಕವಚರ ಯುದ್ಧ.

ವೈಶಂಪಾಯನಮುನೀಂದ್ರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ ಅರ್ಜುನನು ಧರ್ಮರಾಯನನ್ನು ಕುರಿತು "ಎಲೈ ಅಗ್ರಜನೆ, ಬಳಿಕ ನಿವಾತಕವಚರು ನನ್ನ ರಥವು ಮುಂದಕ್ಕೆ ನಡೆಯದಂತೆ ಗುಂಪುಕೂಡಿ ಸುತ್ತಲೂ ನಿಂತು, ಘೋರವಾಗಿ ಅರಚಿಕೊಳ್ಳುತ್ತ, ಬಾಣ ಶೂಲ ಪಟ್ಟಿಶ ಮುಸಲ ಗದೆ ಪರಿಘ ಶಕ್ತಿ ಮೊದಲಾದ ಆಯುಧಗಳನ್ನು ನನ್ನ ರಥದಮೇಲೂ ನನ್ನಮೇಲೂ ಮಾತಲಿಯಮೇಲೂ ಕುದುರೆಗಳ ಮೇಲೂ ವರ್ಷಿಸಿದರು. ಬಳಿಕ ನಾನು ಆ ಕ್ರೂರರಾದ ದಾನವರ ಆಯುಧಗಳನ್ನು ಗಾಂಡೀವದಿಂದ ಬಿಡಲ್ಪಟ್ಟ ವೇಗವಾದ ಬಾಣಗಳಿಂದ ಚೂರುಚೂರುಮಾಡಿ, ಒಬ್ಬೊಬ್ಬನಿಗೆ ಹತ್ತುಹತ್ತು ಬಾಣಗಳನ್ನು ಪ್ರಯೋಗಿಸಿದೆನು. ಇದರಿಂದ ಆ ದಾನವರು ಪರಾಙ್ಮುಖರಾಗಿ ಓಡಿಹೋಗಲು, ಮಾತಲಿಯು ಕುದುರೆಗಳನ್ನು ವೇಗವಾಗಿ ನಡಿಸಿದನು. ಆಗ ವಾಯುವೇಗವುಳ್ಳ ಆ ರಥಾಶ್ವಗಳು ಸಾರಥಿಯ ಚಾತುರ್ಯದಿಂದ ನಾನಾ ವಿಧವಾದ ಗತಿಗಳನ್ನು ತೋರಿಸಿದವು. ಆ ಕುದುರೆಗಳ ಪಾದಘಾತದಿಂದಲೂ, ರಥಚಕ್ರಗಳ ಧ್ವನಿಯ ಆರ್ಭಟದಿಂದಲೂ, ನನ್ನ ಬಾಣಗಳಿಂದಲೂ, ಅನೇಕಮಂದಿ ದಾನವರು ಹತರಾದರು. ಕೆಲವರು ದಾನವರು ರಥದಮೇಲೆ ಇದ್ದಹಾಗೇ ಮೃತರಾಗಲು, ಆ ರಥಾಶ್ವಗಳು ರಥವನ್ನು ಎಳೆದುಕೊಂಡು ಹಿಂದಕ್ಕೆ ಹೋದವು. ಆಗ ಹತಾವಶಿಷ್ಟರಾದ ಕೆಲವರು ದಾನವರು ನನ್ನ ಮೇಲೆ ಪುನಃ ಅನೇಕಾಸ್ತ್ರಗಳನ್ನು ಪ್ರಯೋಗಿಸಿ ನನ್ನ ಮನಸ್ಸಿಗೆ ವ್ಯಥೆಯನ್ನುಂಟುಮಾಡಿದರು. ಆ ಸಮಯದಲ್ಲಿ ಮಾತಲಿಯು ಅಧಿಕವಾದ ಪ್ರಯತ್ನದಿಂದ ಕುದುರೆಗಳನ್ನು ಹಿಡಿದು ಬಹುವೇಗದಿಂದ ರಥವನ್ನು ನಡಿಸಿದನು. ಅದು ಬಹಳ ಆಶ್ಚರ್ಯಕರವಾಗಿತ್ತು. ಬಳಿಕ ನಾನು ಲಘುವಾದ ಅಸ್ತ್ರಗಳಿಂದ ಆಯುಧಪಾಣಿಗಳಾಗಿ ನನ್ನ ಸಂಗಡ ಯುದ್ಧಮಾಡುವ ಆ ಅನೇಕಸಹಸ್ರ ದಾನವರನ್ನು ತುಂಡುತುಂಡಾಗಿ ಕತ್ತರಿಸಿದೆನು. ಈ ಪ್ರಕಾರ ಅಧಿಕವಾದ ಪ್ರಯತ್ನದಿಂದ ಯುದ್ಧಮಾಡತಕ್ಕ ನನ್ನನ್ನು ನೋಡಿ ಶೂರನಾದ ಮಾತಲಿಯು ಬಹಳವಾಗಿ ಸಂತೋಷಪಟ್ಟನು. ಈ ರೀತಿಯಾಗಿ ಯುದ್ಧಮಾಡತಕ್ಕ ನನ್ನ ಬಾಣಗಳಿಂದಲೂ, ಕುದುರೆಗಳ ಪಾದಘಾತದಿಂದಲೂ, ರಥದ ವೇಗದಿಂದಲೂ, ಇನ್ನೂ ಅನೇಕದಾನವರು ಹತರಾದರು. ಅವರಲ್ಲಿ ಕೆಲವರು ಪರಾಙ್ಮುಖರಾಗಿ ಓಡಿಹೋದರು; ಮತ್ತು ಕೆಲವರು ನನ್ನ ಬಾಣಗಳ ಪೆಟ್ಟಿನಿಂದ ಪೀಡಿತರಾಗಿದ್ದರೂ, ಸ್ಪರ್ಧೆಯಿಂದ ಪ್ರತಿಯಾಗಿ ನನ್ನ ಮೇಲೆ ಬಾಣಗಳನ್ನು ಪ್ರಯೋಗಿಸುತ್ತ ಯುದ್ಧಕ್ಕೆ ಬಂದರು. ಆಗ ನಾನು ಬ್ರಹ್ಮಾಸ್ತ್ರವನ್ನಭಿಮಂತ್ರಿಸಿ ಅನೇಕ ಬಾಣಗಳನ್ನು ಪ್ರಯೋಗಿಸಿ, ಅನೇಕ ಸಹಸ್ರ ದೈತ್ಯರನ್ನು ಸಂಹರಿಸಿದೆನು. ಆ ದೈತ್ಯರೆಲ್ಲರೂ ಕ್ರೋಧಾವೇಶದಿಂದ ಒಟ್ಟಾಗಿ ನನ್ನಮೇಲೆ ಶೂಲ ಖಡ್ಗ ಗದೆ ಮೊದಲಾದ ಆಯುಧಗಳ ವೃಷ್ಟಿಯನ್ನು ಕರೆದರು. ಬಳಿಕ ನಾನು ತೀಕ್ಷ್ಣವಾದ ತೇಜಸ್ಸುಳ್ಳದ್ದಾಗಿಯೂ ಇಂದ್ರನಿಗೆ ಪ್ರಿಯವಾಗಿಯೂ ಇರುವ ಮಾಧವ ಎಂಬ ಹೆಸರುಳ್ಳ ಒಂದು ದಿವ್ಯಾಸ್ತ್ರವನ್ನಭಿಮಂತ್ರಿಸಿ ಪ್ರಯೋಗಿಸಿ, ಆ ದೈತ್ಯರ ಆಯುಧಗಳನ್ನೆಲ್ಲಾ ನಾಶಮಾಡಿ, ರೋಷದಿಂದ ಒಬ್ಬೊಬ್ಬ ದೈತ್ಯನನ್ನು ಹತ್ತುಹತ್ತು ಬಾಣಗಳಿಂದ ಹೊಡೆದೆನು. ಆಗ ನನ್ನ ಗಾಂಡೀವಧನುಸ್ಸಿನಿಂದ ಬಾಣಗಳು ತುಂಬಿಗಳ ಸಾಲಿನಂತೆ ಅವಿಚ್ಛಿನ್ನವಾಗಿ ಹೊರಡುತ್ತಿರಲು, ಅದನ್ನು ನೋಡಿ ಮಾತಲಿಯು ನನ್ನನ್ನು ಶ್ಲಾಘಿಸುತ್ತ, ಆ ದೈತ್ಯರ ಕರಲಾಘವಶರಲಾಘವಗಳನ್ನೂ ಕೊಂಡಾಡುತ್ತಿದ್ದನು. ಆ ದಾನವರೂ ನನ್ನಮೇಲೆ ಅನೇಕ ಬಾಣ

ಗಳನ್ನು ಪ್ರಯೋಗಿಸಿದರು; ನಾನೂ ಅವರಮೇಲೆ ಹಾಗೆಯೇ ಬಾಣಗಳನ್ನು ಪ್ರಯೋಗಿಸಿದೆನು. ಆ ಬಾಣಗಳಿಂದ ಪೀಡಿತರಾದ ದಾನವರು, ಕ್ರೋಧಾವೇಶವು ಹೆಚ್ಚಿ, ಎಲ್ಲಾ ಕಡೆಯಲ್ಲಿಯೂ ಸುತ್ತಿಕೊಂಡು ಮಹತ್ತಾದ ಬಾಣವೃಷ್ಟಿಯನ್ನು ಕರೆದರು. ನಾನು ಅವರ ಶರಗಳ ವೇಗವನ್ನು ಮುರಿದು, ಅಸ್ತ್ರಗಳಿಗೆ ಪ್ರತ್ಯಸ್ತ್ರವನ್ನು ಪ್ರಯೋಗಿಸಿ, ತೀಕ್ಷ್ಣವಾದ ಬಾಣಗಳಿಂದ ಅನೇಕಮಂದಿ ದಾನವರನ್ನು ಸಂಹರಿಸಿದೆನು. ಆಗ ಆ ಅಸುರರ ಶರೀರಗಳು ಛಿನ್ನಭಿನ್ನಗಳಾಗಿ, ಅವುಗಳಿಂದ ವರ್ಷಾಕಾಲದಲ್ಲಿ ಪರ್ವತಶಿಖರಗಳಿಂದ ಗಿರಿನದಿಗಳು ಪ್ರವಹಿಸುವಂತೆ ರಕ್ತವು ಪ್ರವಾಹರೂಪವಾಗಿ ಪ್ರವಹಿಸಿತು. ಇಂದ್ರನ ವಜ್ರಾಯುಧಕ್ಕೆ ಸಮಾನವಾದ ನನ್ನ ಬಾಣಗಳಿಂದ ಪೀಡಿತರಾದ ಆ ದಾನವರು ಭಯಪಟ್ಟು, ಅನೇಕಪ್ರಕಾರ ಛಿನ್ನಭಿನ್ನವಾದ ಶರೀರವುಳ್ಳವರಾಗಿ, ತಮ್ಮ ಬಲವೂ ಆಯುಧಗಳೂ ಸಹ ವ್ಯರ್ಥವಾಗಿ ಹೋಗಿ, ನನ್ನ ಸಂಗಡ ಮಾಯಾಯುದ್ಧವನ್ನು ಮಾಡುವದಕ್ಕೆ ಉಪಕ್ರಮಿಸಿದರು" ಎಂದು ಅರ್ಜುನನು ಧರ್ಮರಾಯನಿಗೆ ಹೇಳಿದನು.

## ೧೭೨ನೇ ಅಧ್ಯಾಯ.—ನಿವಾತಕವಚರ ಯುದ್ಧ.

ವೈಶಂಪಾಯನಮುನೀಂದ್ರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಅರ್ಜುನನು ಧರ್ಮರಾಯನನ್ನು ಕುರಿತು "ಕೇಳು ಅಗ್ರಜನೆ, ಬಳಿಕ ಆ ನಿವಾತಕವಚರು ಪರ್ವತಗಳಂತೆ ದೊಡ್ಡದೊಡ್ಡವಾದ ಶಿಲೆಗಳನ್ನು ನನ್ನ ಮೇಲೆ ವರ್ಷಿಸಿದರು. ಅದರಿಂದ ಪೀಡಿತನಾದ ನಾನು ವಜ್ರಾಯುಧಕ್ಕೆ ಸಮಾನವಾದ ಐಂದ್ರಾಸ್ತ್ರವನ್ನಭಿಮಂತ್ರಿಸಿ, ವೇಗವಾದ ಬಾಣಗಳಿಂದ ಆ ದಾನವರ ಶಿಲಾವರ್ಷವನ್ನು ನಾಶಮಾಡಿದೆನು. ಬಳಿಕ ಆ ದಾನವರು ಮಾಯೆಯಿಂದ ಬೆಂಕಿಯ ಮಳೆಯನ್ನು ಕರೆದರು. ಆಗ ಬೆಂಕಿಯ ಕೆಂಡಗಳಂತೆ ಕೆಂಪಾಗಿ ಕಾದ ಕಲ್ಲಿನ ಚೂರುಗಳು ನನ್ನ ಮೇಲೆ ಬಿದ್ದವು. ಅಷ್ಟರಲ್ಲೇ ದಿಕ್ಕುವಿದಿಕ್ಕುಗಳನ್ನು ವ್ಯಾಪಿಸಿಕೊಂಡು ರಥದ ದೂರಿಯಂತೆ ದಪ್ಪವಾದ ಉದಕಧಾರೆಗಳು ಆಕಾಶದಿಂದ ಬಿದ್ದವು. ಆ ವುದಕವೃಷ್ಟಿಯ ಆರ್ಭಟದಿಂದಲೂ ಮಹತ್ತಾದ ಗಾಳಿಯ ವೇಗದಿಂದಲೂ ಆ ದೈತ್ಯರ ಗರ್ಜನೆಯಿಂದಲೂ ನನಗೆ ಯಾವಕಾರ್ಯ ಮಾಡುವದಕ್ಕೂ ಹಿಂದು ಮುಂದು ತೋರದಿರಲು, ಆಕಾಶವನ್ನೂ ಭೂಮಿಯನ್ನೂ ವ್ಯಾಪಿಸಿಕೊಂಡು ಸ್ವಲ್ಪವೂ ಅವಕಾಶವಿಲ್ಲದೆ ಸುರಿಯತಕ್ಕ ಆ ವುದಕವೃಷ್ಟಿಯು ನನಗೆ ಅಧಿಕವಾಗಿ ಅಜ್ಞಾನವನ್ನುಂಟುಮಾಡಿತು. ಆ ಸಮಯದಲ್ಲಿ ನಾನು ಜಾಗರೂಕನಾಗಿ ಇಂದ್ರನು ನನಗೆ ಉಪದೇಶಮಾಡಿದ್ದ ದಿವ್ಯವಾದ ದೀಪ್ತಾಸ್ತ್ರವನ್ನು ಅಭಿಮಂತ್ರಿಸಿ ಪ್ರಯೋಗಿಸಿದೆನು. ಅದರಿಂದ ಆ ಘೋರವಾದ ಜಲವೃಷ್ಟಿಯು ನಷ್ಟವಾಯಿತು. ಬಳಿಕ ಆ ದಾನವರು ಮಾಯೆಯಿಂದ ಅಗ್ನಿಯನ್ನೂ ಬಿರುಗಾಳಿಯನ್ನೂ ಕಲ್ಪಿಸಿದರು. ನಾನು ವಾರುಣಾಸ್ತ್ರದಿಂದ ಆ ಅಗ್ನಿಯನ್ನೂ ಪರ್ವತಾಸ್ತ್ರದಿಂದ ಆ ಬಿರುಗಾಳಿಯನ್ನೂ ಪರಿಹರಿಸಲು, ದಾನವರೆಲ್ಲರೂ ಗುಂಪಾಗಿ ನಾನಾವಿಧವಾದ ಮಾಯೆಯನ್ನು ಮಾಡುತ್ತ, ಭಯಂಕರವಾಗಿಯೂ ಘೋರವಾಗಿಯೂ ಇರುವ ಅಸ್ತ್ರವೃಷ್ಟಿಯನ್ನೂ ಅಗ್ನಿವೃಷ್ಟಿಯನ್ನೂ ಶಿಲಾವೃಷ್ಟಿಯನ್ನೂ ಪ್ರಚಂಡವಾಯುವನ್ನೂ ನಿರ್ಮಾಣಮಾಡಿದರು. ಅದರಿಂದ ನನಗೆ ತುಂಬಾ ವ್ಯಥೆಯುಂಟಾಯಿತು. ಆಗ ಘೋರವಾದ ಎಲ್ಲಾ ದಿಕ್ಕುಗಳಲ್ಲಿಯೂ ಅಂಧಕಾರವು ವ್ಯಾಪಿಸಿತು. ರಥಾಶ್ವಗಳು ಮುಂದಕ್ಕೆ ನಡೆಯದೆ ಹಿಂತಿರುಗಿದವು. ಮಾತಲಿಯೂ ರಥದಮೇಲೆ ನಿಲ್ಲಲಾರದೆ ಚಲಿಸಲು, ಆತನ ಕೈಲಿದ್ದ ಸುವರ್ಣಮಯವಾದ ಚಾವಟಿಯು ನೆಲದಮೇಲೆ ಬಿದ್ದಿತು. ಅಡಿಗಡಿಗೆ ಆತನು ಭೀತಿಹೆಚ್ಚಿ 'ಎಲ್ಲಿದ್ದೀಯೆ' ಎಂದು ನನ್ನನ್ನು ಕೂಗುತ್ತಿದ್ದನು. ಆ ಮಾತಲಿಯನ್ನು ನೋಡಿ ನನಗೂ ಕೂಡ ಅಧಿಕವಾಗಿ ಭಯವುಂಟಾಯಿತು. ಆಗ ಮಾತಲಿಯು ಭೀತನಾದ ನನ್ನನ್ನು ನೋಡಿ 'ಎಲೈ ಅರ್ಜುನನೆ, ಪೂರ್ವದಲ್ಲಿ ದೇವತೆಗಳಿಗೂ ದೈತ್ಯರಿಗೂ ಅಮೃತನಿಮಿತ್ತವಾಗಿ ಮಹತ್ತಾದ ಯುದ್ಧವಾಯಿತು. ಅದನ್ನು ನಾನು ನೋಡಿದೆನು. ಶಂಬರಾಸುರನ ಸಂಗಡ ಯುದ್ಧಮಾಡುವ ಕಾಲದಲ್ಲಿಯೂ, ವೃತ್ರಾಸುರನ ಸಂಗಡ ಯುದ್ಧಮಾಡುವ ಕಾಲದಲ್ಲಿಯೂ, ಬಲಿಚಕ್ರವರ್ತಿಯ ಸಂಗಡ ಯುದ್ಧಮಾಡುವ ಕಾಲದಲ್ಲಿಯೂ, ಇಂದ್ರನಿಗೆ ಸಾರಥ್ಯವನ್ನು ಮಾಡಿರುವೆನು. ಇದಲ್ಲದೆ ಇನ್ನೂ ಅನೇಕ ಯುದ್ಧಗಳನ್ನು ನೋಡಿರುವೆನು. ಯಾವಾಗಲೂ

ನನಗೆ ಹೀಗೆ ಅಜ್ಞಾನವುಂಟಾಗಲಿಲ್ಲ. ಇದನ್ನು ನೋಡಿದ್ದೇ ಆದರೆ ಸೃಷ್ಟಿಮಾಡಿದ ಬ್ರಹ್ಮನೇ ಸಕಲ ಪ್ರಾಣಿಗಳ ನಾಶಕ್ಕಾಗಿ ಯತ್ನಿಸಿದ ಹಾಗೆ ಕಾಣಬರುವದು. ಈ ಯುದ್ಧವು ಪ್ರಪಂಚ ನಾಶವಾಗತಕ್ಕ ಕಾಲದಲ್ಲಿ ಆಗತಕ್ಕದ್ದೇ ಹೊರತು ಈಗ ಯುಕ್ತವಾಗಿ ತೋರುವದಿಲ್ಲ' ಎಂದು ನುಡಿದನು. ಆ ಮಾತನ್ನು ಕೇಳಿ ನಾನು ಧೈರ್ಯವನ್ನು ತಂದುಕೊಂಡು, ಆ ದಾನವರ ಮಾಯೆಯನ್ನು ನಾಶಮಾಡಬೇಕೆಂದು ಯೋಚಿಸಿ, ಭೀತನಾದ ಮಾತಲಿಯನ್ನು ಕುರಿತು 'ಎಲೈ ಸಾರಥಿಯೆ, ನನ್ನ ಭುಜಪರಾಕ್ರಮವನ್ನೂ ಅಸ್ತ್ರಪ್ರಭಾವವನ್ನೂ ಗಾಂಡೀವಧನುಸ್ಸಿನ ಮಹಿಮೆಯನ್ನೂ ಸಹ ನೋಡು. ಈಗಲೇ ನಾನು ನನ್ನ ಅಸ್ತ್ರಶಕ್ತಿಯಿಂದ ಆ ದಾನವರ ಮಾಯೆಯನ್ನು ನಾಶಮಾಡಿ ಈ ಘೋರವಾದ ಅಂಧಕಾರವನ್ನು ಪರಿಹರಿಸಿಬಿಡುವೆನು. ನೀನು ಹೆದರಬೇಡ, ಚಲಿಸದೆ ರಥದಮೇಲೆ ಕೂತಿರು' ಎಂದು ಹೇಳಿ, ಸಕಲ ದೇವತೆಗಳಿಗೂ ಪ್ರಿಯವಾಗುವದಕ್ಕಾಗಿ, ಆ ದಾನವರ ಮೇಲೆ ಸಮ್ಮೋಹನಾಸ್ತ್ರವನ್ನು ಪ್ರಯೋಗಿಸಿದೆನು. ಅದರಿಂದ ಆ ಮಾಯೆಯು ನಷ್ಟವಾಯಿತು. ಬಳಿಕ ಆ ದಾನವರು ಒಡನೊಡನೆ ಮಾಯೆಯನ್ನು ನಿರ್ಮಿಸಲು, ಆಗ ಪ್ರಪಂಚವು ಕಾಣಿಸದೆ ನೀರಿನಲ್ಲಿ ಮುಳುಗಿಹೋದಂತೆ ಕಾಣಿಸಿತು. ಅಂಥಾ ಘೋರವಾದ ಮಾಯೆಯೂ ನನ್ನ ಅಸ್ತ್ರಪ್ರಭಾವದಿಂದ ನಷ್ಟವಾಗಿ ಜಗತ್ತು ಪ್ರಕಾಶವಾಗಲು, ಮಾತಲಿಯು ಆ ಭಯಂಕರವಾದ ಯುದ್ಧರಂಗದಲ್ಲಿ ರಥವನ್ನು ವೇಗದಿಂದ ನಡಿಸಿದನು. ಆಗ ನಿವಾತಕವಚರು ಪುನಃ ಎದುರಿಗೆ ಬಂದು ಯುದ್ಧಸನ್ನದ್ಧರಾದರು. ನಾನು ಅನೇಕಮಂದಿ ದಾನವರನ್ನು ಸಂಹರಿಸಿ ಯಮನ ಪಟ್ಟಣಕ್ಕೆ ಕಳುಹಿಸಿದೆನು. ಅನಂತರ ಆ ದಾನವರು ತಮಗೆ ಪರಾಜಯವಾಗುವದನ್ನು ತಿಳಿದು, ಕ್ಷಣಮಾತ್ರದಲ್ಲಿ ಮಾಯೆಯಿಂದ ಕಣ್ಣಿಗೆ ಕಾಣಿಸದಂತಾದರು" ಎಂದು ಅರ್ಜುನನು ಧರ್ಮರಾಯನಿಗೆ ಹೇಳಿದನು.

## ೧೭೨ನೇ ಅಧ್ಯಾಯ—ನಿವಾತಕವಚರ ಯುದ್ಧ.

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ ಮತ್ತು ಅರ್ಜುನನು ಧರ್ಮರಾಯನನ್ನು ಕುರಿತು "ಎಲೈ ಅಗ್ರಜನೆ, ಆ ದಾನವರು ಆಗ ಕಣ್ಣಿಗೆ ಕಾಣಿಸಿಕೊಳ್ಳದೆ ನನ್ನ ಸಂಗಡ ಯುದ್ಧಮಾಡಲುಪಕ್ರಮಿಸಲು, ನಾನೂ ಅದೃಶ್ಯಾಸ್ತ್ರದಿಂದಲೇ ಅವರೊಡನೆ ಯುದ್ಧ ಮಾಡಿದೆನು. ಆಗ ಅನೇಕ ಅಸ್ತ್ರಗಳನ್ನು ಅಭಿಮಂತ್ರಿಸಿ ನಾನು ಗಾಂಡೀವಧನುಸ್ಸಿನಿಂದ ಬಿಟ್ಟ ಬಾಣಗಳಿಂದ ಛಿನ್ನವಾದ ಶಿರಸ್ಸುಗಳುಳ್ಳ ಆ ದಾನವರು ಅಲ್ಲಲ್ಲೇ ಬಿದ್ದರು. ಬಳಿಕ ಹತಾವಶಿಷ್ಟರಾದ ಆ ದಾನವರು ತಮ್ಮತಮ್ಮ ಮಾಯೆಯನ್ನು ಬಿಟ್ಟು ತಮ್ಮ ಪಟ್ಟಣವನ್ನು ಪ್ರವೇಶಮಾಡಲು, ಅಲ್ಲಿ ಸತ್ತು ಬಿದ್ದಿದ್ದವರೆಲ್ಲರೂ ಅನೇಕ ಸಹಸ್ರಪ್ರಕಾರವಾಗಿ ನನ್ನ ಕಣ್ಣಿಗೆ ಕಾಣಿಸಿದರು. ಆಗ ಅವರ ಛಿನ್ನಭಿನ್ನವಾದ ಅಂಗಗಳೂ ಆಭರಣಗಳೂ ಕವಚಗಳೂ ಆ ಯುದ್ಧರಂಗದಲ್ಲಿ ರಾಶಿರಾಶಿಯಾಗಿ ಬಿದ್ದು, ನನ್ನ ರಥಾಶ್ವಗಳಿಗೆ ಮುಂದೆ ಹೆಜ್ಜೆಯನ್ನಿಡುವದಕ್ಕೂ ಅವಕಾಶವಿಲ್ಲದೆ ಇತ್ತು. ಆ ಕುದುರೆಗಳು ವೇಗದಿಂದ ರಥವನ್ನೆತ್ತಿಕೊಂಡು ಆಕಾಶಮಾರ್ಗದಲ್ಲಿ ನಡೆದವು. ಆಗ ಹತಶೇಷರಾದ ಕೆಲವುಮಂದಿ ನಿವಾತಕವಚರು ಆಕಾಶದಲ್ಲಿ ವ್ಯಾಪಿಸಿಕೊಂಡು, ನನ್ನ ಮೇಲೆ ಪರ್ವತಗಳ ವೃಷ್ಟಿಯನ್ನು ಕರೆದರು; ಅವರಲ್ಲಿ ಕೆಲವುಮಂದಿ ಭೂಮಿಯನ್ನು ಹೊಕ್ಕು, ನನ್ನ ರಥಾಶ್ವಗಳು ನೆಲದಮೇಲೆ ಕಾಲಿಟ್ಟದ್ದನ್ನು ನೋಡಿಕೊಂಡು, ಅವುಗಳ ಕಾಲುಗಳನ್ನೂ ರಥದ ಚಕ್ರಗಳನ್ನೂ ಹಿಡಿದು ಬಳಕ್ಕೆ ಎಳೆದುಕೊಳ್ಳುತ್ತ, ನನ್ನ ಸಂಗಡ ಯುದ್ಧ ಮಾಡುತ್ತಿದ್ದರು. ಆಗ ನಾನು ಯಾವ ಪ್ರದೇಶದಲ್ಲಿದ್ದೆನೋ ಆ ಪ್ರದೇಶವು ಸುತ್ತಲೂ ಪರ್ವತಗಳು ತುಂಬಿಕೊಂಡು ಬಂದು ಗುಹೆಯಂತೆ ತೋರಿತು. ಆ ವೈಪರೀತ್ಯವನ್ನು ಕಂಡು ಮಾತಲಿಯು ಬಹು ವ್ಯಥೆಪಟ್ಟು, ದಿಗ್ಭ್ರಾಂತನಾದ ನನ್ನನ್ನು ನೋಡಿ 'ಎಲೈ ಪಾರ್ಥನೆ, ಹೆದರಬೇಡ. ಈಗ ವಜ್ರಾಸ್ತ್ರವನ್ನು ಪ್ರಯೋಗಿಸು' ಎಂದು ನುಡಿದನು. ಅದನ್ನು ಕೇಳಿ ನಾನು ಇಂದ್ರನಿಗೆ ಪ್ರಿಯವಾದ ವಜ್ರಾಸ್ತ್ರವನ್ನಭಿಮಂತ್ರಿಸಿ, ಗಾಂಡೀವದಲ್ಲಿ ಅನೇಕ ಬಾಣಗಳನ್ನು ಹೂಡಿ, ಅವುಗಳನ್ನು ಪ್ರಯೋಗಿಸಿದೆನು. ಆ ವಜ್ರಾಯುಧಕ್ಕೆ ಸಮಾ

ನವಾದ ಆ ಬಾಣಗಳು ಆ ಪರ್ವತಗಳನ್ನೆಲ್ಲಾ ಪುಡಿಪುಡಿಮಾಡಿ, ಬಹು ವೇಗದಿಂದ ನಿವಾತಕವಚರಮೇಲೆ ಹೋಗಿ ಬಿದ್ದವು. ಅವುಗಳಿಂದ ಪೆಟ್ಟುಬಿದ್ದ ಆ ನಿವಾತಕವಚರು ಒಬ್ಬರನ್ನೊಬ್ಬರು ಅಪ್ಪಿಕೊಂಡು ಹತರಾಗಿ ನೆಲದ ಮೇಲೆ ಬಿದ್ದರು. ಅವರಲ್ಲಿ ಯಾರು ಭೂಮಿಯನ್ನು ಹೊಕ್ಕು ರಥಾಶ್ವಗಳನ್ನು ಸೆಳೆಯುತ್ತಿದ್ದರೋ, ಅವರೂ ಸಹ ಆ ವಜ್ರಾಸ್ತ್ರದಿಂದ ಹತರಾಗಿ ಯಮಲೋಕವನ್ನು ಸೇರಿದರು. ಆಗ ಹತರಾದ ಆ ದಾನವರಿಂದ ಪೂರ್ಣವಾದ ಆ ಯುದ್ಧರಂಗವು ಪರ್ವತಗಳಿಂದ ಪೂರ್ಣವಾಗಿದ್ದಂತೆ ಕಾಣಿಸಿಕೊಂಡಿತು. ಆ ವೇಳೆಯಲ್ಲಿ ಆ ಶತ್ರುಗಳ ಮಾಯೆಯಿಂದ ನನ್ನ ರಥಾಶ್ವಗಳಿಗೂ ಮಾತಲಿಗೂ ಸಹ ಸ್ವಲ್ಪವೂ ವ್ಯಥೆಯುಂಟಾಗದಿರಲು, ಆ ಆಶ್ಚರ್ಯವನ್ನು ನೋಡಿ ಮಾತಲಿಯು ಸಂತೋಷದಿಂದ ನಸುನಗುತ ನನ್ನನ್ನು ಕುರಿತು 'ಎಲೈ ಫಲ್ಗುನನೆ, ಇಂಥಾ ಅದ್ಭುತವಾದ ಪರಾಕ್ರಮವನ್ನು ನಿನ್ನೊಬ್ಬನಲ್ಲೇ ಹೊರತು ದೇವತೆಗಳಲ್ಲೂಕೂಡ ನಾನು ನೋಡಲಿಲ್ಲ' ಎಂದನು. ಆ ಸಮಯದಲ್ಲಿ ನಿವಾತಕವಚರ ಪತ್ನಿಯರು ತಮ್ಮತಮ್ಮ ಗಂಡಂದಿರು ಮೃತರಾಗಲು, ಶರತ್ಕಾಲದಲ್ಲಿ ಹೆಣ್ಣುಹಂಸೆಗಳು ರೋದನಮಾಡುವಂತೆ ದೀನವಾಗಿ ರೋದನಮಾಡಿದರು. ಅದನ್ನು ಕೇಳಿ ನಾನು ಆ ಸ್ತ್ರೀಯರಿಗೆ ಭಯ ಹುಟ್ಟುವ ಹಾಗೆ ರಥಘೋಷವನ್ನು ಮಾಡುತ್ತಾ, ಆ ಪಟ್ಟಣವನ್ನು ಪ್ರವೇಶಿಸಿದೆನು. ಆಗ ನನ್ನನ್ನೂ, ನವಿಲುಬಣ್ಣವುಳ್ಳ ಸಹಸ್ರಸಂಖ್ಯಾಕವಾದ ನನ್ನ ರಥಾಶ್ವಗಳನ್ನೂ, ಸೂರ್ಯನಂತೆ ಪ್ರಕಾಶಮಾನವಾದ ಆ ರಥವನ್ನೂ ಸಹ ನೋಡಿ, ಆ ಪಟ್ಟಣದಲ್ಲಿದ್ದ ಸ್ತ್ರೀಯರು ಭಯಭ್ರಾಂತರಾಗಿ ಓಡುವದಕ್ಕೆ ಉಪಕ್ರಮಿಸಿದರು. ಅವರವರ ಆಭರಣಗಳ ಧ್ವನಿಯು ಪರ್ವತದಿಂದ ಕೆಳಕ್ಕೆ ಬೀಳುವ ಶಿಲೆಗಳ ಧ್ವನಿಯಂತೆ ಕೇಳಬಂತು. ಈ ಪ್ರಕಾರ ಆ ಸ್ತ್ರೀಯರು ಅನೇಕ ರತ್ನಖಚಿತವಾಗಿ ಸುವರ್ಣಮಯವಾದ ತಮ್ಮತಮ್ಮ ಮನೆಗಳನ್ನು ಬೇಗಬೇಗ ಹೋಗಿ ಸೇರಿಕೊಂಡರು. ಇಂಥಾ ಆಶ್ಚರ್ಯಕರವಾದ ಆ ಪಟ್ಟಣವನ್ನು ನಾನು ನೋಡಿ ಮಾತಲಿಯನ್ನು ಕುರಿತು 'ಎಲೈ ಮಾತಲಿಯೆ, ಈ ಪಟ್ಟಣವು ಸ್ವರ್ಗಕ್ಕಿಂತಲೂ ಹೆಚ್ಚಾಗಿರುವದಲ್ಲಾ! ದೇವತೆಗಳು ಇದರಲ್ಲಿ ವಾಸಮಾಡದೆ ಯಾತಕ್ಕೆ ಬಿಟ್ಟಿರುವರು?' ಎಂದು ಪ್ರಶ್ನೆಮಾಡಿದೆನು. ಅದಕ್ಕೆ ಮಾತಲಿಯು 'ಎಲೈ ಅರ್ಜುನನೆ, ಪೂರ್ವದಲ್ಲಿ ಇಂದ್ರನು ಇಲ್ಲಿ ವಾಸಮಾಡುತ್ತಿದ್ದನು. ಆಗ ನಿವಾತಕವಚರು ಘೋರವಾದ ತಪಸ್ಸನ್ನು ಮಾಡಿ, ದೇವತೆಗಳ ದೆಸೆಯಿಂದ ತಮಗೆ ಭಯವಿಲ್ಲದಂತೆ ಬ್ರಹ್ಮನಿಂದ ವರವನ್ನು ಪಡೆದು, ಈ ಪಟ್ಟಣದಲ್ಲಿದ್ದ ದೇವತೆಗಳನ್ನೆಲ್ಲ ಓಡಿಸಿಬಿಟ್ಟರು. ಬಳಿಕ ಇಂದ್ರನು ಬ್ರಹ್ಮನ ಸನ್ನಿಧಿಗೆ ಹೋಗಿ—ಎಲೈ ಬ್ರಹ್ಮನೆ, ದೇವತೆಗಳ ಹಿತಾರ್ಥವಾಗಿ ನಿವಾತಕವಚರನ್ನು ನಾಶಮಾಡತಕ್ಕ ಆಲೋಚನೆಯನ್ನು ಮಾಡು—ಎಂದು ಪ್ರಾರ್ಥಿಸಿದನು. ಆಗ ಬ್ರಹ್ಮನು—ಎಲೈ ಇಂದ್ರನೆ, ನೀನೇ ದೇಹಾಂತರವನ್ನು ಪಡೆದು ಆ ನಿವಾತಕವಚರನ್ನು ನಾಶಮಾಡುವೆ—ಎಂದು ನುಡಿದನು. ಆದಕಾರಣವೇ 'ಎಲೈ ಕಿರೀಟಿಯೆ, ಆ ದಾನವರ ಸಂಹಾರಾರ್ಥವಾಗಿ ಇಂದ್ರನು ನಿನಗೆ ಅನೇಕ ಅಸ್ತ್ರಗಳನ್ನು ಉಪದೇಶಮಾಡಿದನು. ದೇವತೆಗಳಿಗೂ ಅಶಕ್ಯವಾದ ಈ ಕಾರ್ಯವನ್ನು ಈಗ ನೀನು ಮಾಡಿದೆ. ಕಾಲಯೋಗದಿಂದ ನೀನು ಬಂದು ಆ ದಾನವರನ್ನು ನಾಶಮಾಡಿದೆ' ಎಂದನು. ಬಳಿಕ ನಾನು ಆ ಪಟ್ಟಣವನ್ನು ಸಮಾಧಾನಸ್ಥಿತಿಗೆ ತಂದು, ಮಾತಲಿಯೊಡನೆ ಸಂತೋಷದಿಂದ ಇಂದ್ರಲೋಕಕ್ಕೆ ಹೊರಟೆನು" ಎಂದು ಅರ್ಜುನನು ಧರ್ಮರಾಯನಿಗೆ ಹೇಳಿದನು.

## ೧೭೩ನೇ ಅಧ್ಯಾಯ.—ಹಿರಣ್ಯಪುರದ ದೈತ್ಯರ ವಧೆ.

ವೈಶಂಪಾಯನಮುನೀಶ್ವರನು ಜನಮೇಜಯನನ್ನು ಕುರಿತು—ಕೇಳು ಜನಮೇಜಯನೆ, ಅರ್ಜುನನು ಧರ್ಮರಾಯನನ್ನು ಕುರಿತು "ಎಲೈ ಅಗ್ರಜನೆ, ನಾನು ಇಂದ್ರಲೋಕಕ್ಕೆ ಹೋಗುವ ಸಮಯದಲ್ಲಿ ದಿವ್ಯವಾಗಿಯೂ, ಸೂರ್ಯಾಗ್ನಿಗಳಂತೆ ಪ್ರಕಾಶಮಾನವಾಗಿಯೂ, ಸ್ವೇಚ್ಛೆಯಿಂದ ಎಲ್ಲೆಲ್ಲಿಯೂ ಸಂಚರಿಸತಕ್ಕದ್ದಾಗಿಯೂ, ಇರತಕ್ಕ ಒಂದು ಪಟ್ಟಣವನ್ನು ನೋಡಿದೆನು. ಆ ಪಟ್ಟಣವು ಸುಸ್ವರವುಳ್ಳ ಚಿತ್ರವಾದ ಪಕ್ಷಿಗಳಿಂದ ಶೋಭಿತವಾದ ರತ್ನಮಯವಾದ ವೃಕ್ಷಗಳಿಂದ ಪ್ರಕಾಶಿಸುತ್ತಾ; ನಾಲ್ಕು ವಿಸ್ತಾರವಾದ ಬಾಗಿಲುಗಳಿಂದಲೂ, ಉನ್ನತವಾದ

ಗೋಪುರಗಳಿಂದಲೂ, ಉಪ್ಪರಿಗೆಗಳಿಂದಲೂ, ಯಾವಾಗಲೂ ಫಲಪುಷ್ಪಭರಿತಗಳಾದ ವೃಕ್ಷಗಳಿಂದಲೂ ಮನೋಹರವಾಗಿತ್ತು. ಆ ಪಟ್ಟಣದಲ್ಲಿ ಪೌಲೋಮರು, ಕಾಲಕಂಜರು, ಎಂಬ ದೈತ್ಯರು ನಿತ್ಯವೂ ಸಂತೋಷಭರಿತರಾಗಿ ಶೂಲ ಪಟ್ಟಿಶ ಧನುಸ್ಸು ಮೊದಲಾದ ಆಯುಧಗಳನ್ನು ಧರಿಸಿಕೊಂಡು ವಾಸಮಾಡುತ್ತಿದ್ದರು. ಅದನ್ನು ನೋಡಿ ನಾನು ಮಾತಲಿಯನ್ನು ಕುರಿತು 'ಎಲೈ ಸಾರಥಿಯೆ, ಇದೇನು? ಇಲ್ಲಿ ಒಂದು ಆಶ್ಚರ್ಯಕರವಾದ ಪಟ್ಟಣವು ಕಾಣಬರುವದು' ಎಂದು ಪ್ರಶ್ನೆಮಾಡಿದೆನು. ಅದಕ್ಕೆ ಮಾತಲಿಯು 'ಎಲೈ ಅರ್ಜುನನೆ, ಪೂರ್ವದಲ್ಲಿ ಪುಲೋಮಾ ಎಂಬ ದೈತ್ಯಸ್ತ್ರೀಯೂ ಕಾಲಕಾ ಎಂಬ ಅಸುರಸ್ತ್ರೀಯೂ ದಿವ್ಯಸಹಸ್ರವರ್ಷಪರ್ಯಂತವಾಗಿ ಘೋರವಾದ ತಪಸ್ಸನ್ನು ಮಾಡಿದರು. ಆ ತಪಸ್ಸಿಗೆ ಮೆಚ್ಚಿ ಚತುರ್ಮುಖಬ್ರಹ್ಮನು ಆ ಉರ್ವರನ್ನೂ ಕುರಿತು—ನೀವು ಬೇಕಾದ ವರವನ್ನು ಬೇಡಿರಿ—ಎನಲು, ಆ ಸ್ತ್ರೀಯರು ಬ್ರಹ್ಮನನ್ನು ಕುರಿತು—ಎಲೈ ಬ್ರಹ್ಮನೆ, ನಮ್ಮ ಮಕ್ಕಳು ವಿಶೇಷ ದುಃಖವಿಲ್ಲದವರಾಗಿಯೂ, ದೇವತೆಗಳಿಂದಲೂ ರಾಕ್ಷಸರಿಂದಲೂ ಸರ್ಪಗಳಿಂದಲೂ ಅವಧ್ಯರಾಗಿಯೂ ಇರುವಂತೆ ವರವನ್ನು ಕೊಡು. ಅವರು ವಾಸಮಾಡುವದಕ್ಕಾಗಿ ರಮಣೀಯವಾಗಿಯೂ, ಉತ್ತಮವಾದ ವಸ್ತುಗಳಿಂದ ಭರಿತವಾಗಿಯೂ, ಯಾವಾಗಲೂ ಬೇಕಾದ ಸುಖವನ್ನು ಕೊಡತಕ್ಕದ್ದಾಗಿಯೂ, ಸುರಾಸುರರಿಗೂ ಗಂಧರ್ವ ಯಕ್ಷರಿಗೂ ಸರ್ಪಗಳಿಗೂ ಮಹರ್ಷಿಗಳಿಗೂ ಸಹ ಪ್ರವೇಶಮಾಡುವದಕ್ಕೆ ಅಶಕ್ಯವಾಗಿಯೂ, ಇರುವ ಆಕಾಶದಲ್ಲಿ ಸಂಚರಿಸತಕ್ಕ ಒಂದು ಪಟ್ಟಣವನ್ನೂ ನಿರ್ಮಿಸಿಕೊಡು—ಎಂದು ಬೇಡಿಕೊಂಡರು. ಬ್ರಹ್ಮನು ಅದೇ ರೀತಿಯಲ್ಲಿ ಅವರಿಗೆ ಅಂಥಾ ವರವನ್ನು ಕೊಟ್ಟು, ಅಂಥಾ ಅದ್ಭುತವಾದ ಪಟ್ಟಣವನ್ನೂ ನಿರ್ಮಾಣಮಾಡಿಕೊಟ್ಟನು. ಆ ಪಟ್ಟಣವೇ ಇದು. ಇದಕ್ಕೆ ಹಿರಣ್ಯಪುರವೆಂದು ಹೆಸರು. ಇಲ್ಲಿ ದೇವತೆಗಳು ಯಾರೂ ಸಂಚರಿಸುವದಿಲ್ಲ. ದೈತ್ಯರಾದ ಪೌಲೋಮರೂ ಕಾಲಕಂಜರೂ ದೇವತೆಗಳಿಗೆ ಅವಧ್ಯರಾದ್ದರಿಂದ ನಿರ್ಭಯದಿಂದಲೂ ಮದಾಂಧತೆಯಿಂದಲೂ ಸ್ವೇಚ್ಛೆಯಿಂದಲೂ ಈ ಪಟ್ಟಣದಲ್ಲಿ ವಾಸಮಾಡುತ್ತಿರುವರು. ಎಲೈ ಅರ್ಜುನನೆ, ಬ್ರಹ್ಮನು ಆ ಸ್ತ್ರೀಯರಿಗೆ ವರವನ್ನು ಕೊಡುವ ಸಮಯದಲ್ಲಿ ಮನುಷ್ಯನಿಂದ ಈ ಅಸುರರಿಗೆ ಮರಣವುಂಟಾಗುವದೆಂದು ಹೇಳಿರುವನು. ಆದ್ದರಿಂದ ಮಹಾಬಲಸಂಪನ್ನರಾದ ಈ ಅಸುರರನ್ನು ವಜ್ರಾಸ್ತ್ರದಿಂದ ನೀನು ಸಂಹಾರಮಾಡು' ಎಂದನು. ಆಗ ನಾನು ಆ ದೈತ್ಯರನ್ನು ದೇವತೆಗಳಿಗೆ ಅವಧ್ಯರನ್ನಾಗೆಣಿಸಿ, ಸಂತೋಷದಿಂದ ಮಾತಲಿಯನ್ನು ನೋಡಿ 'ಎಲೈ ಸಾರಥಿಯೆ, ದೇವತೆಗಳಿಗೆ ಶತ್ರುಗಳಾದ ಈ ಪಾಪಾತ್ಮರಾದ ದಾನವರನ್ನು ಹ್ಯಾಗಾದರೂ ಸಂಹಾರಮಾಡತಕ್ಕದ್ದೇ ಯುಕ್ತವಾದದ್ದು. ನಮ್ಮ ರಥವನ್ನು ಆ ಹಿರಣ್ಯಪುರದ ಸಮೀಪಕ್ಕೆ ನಡಿಸು' ಎಂದೆನು. ಬಳಿಕ ಮಾತಲಿಯು ಶೀಘ್ರವಾಗಿ ರಥವನ್ನು ಪಟ್ಟಣದ ಸಮೀಪಕ್ಕೆ ತೆಗೆದುಕೊಂಡು ಹೋದನು. ಆಗ ಆ ದೈತ್ಯರು ರಥಗಳ ಮೇಲೆ ಕೂತುಕೊಂಡು ಆಯುಧಪಾಣಿಯಾಗಿ ಬಂದಿರತಕ್ಕ ನನ್ನನ್ನು ನೋಡಿ, ತಾವೂ ಯುದ್ಧಸನ್ನಾಹದೊಡನೆ ರಥಗಳನ್ನೇರಿ, ಕ್ರೋಧಾವೇಶದಿಂದ ನನ್ನನ್ನು ಎದುರಿಸಿ ಬಂದು, ನಾಳೀಕ ನಾರಾಚ ಭಲ್ಲ ಶಕ್ತಿ ಋಷ್ಟಿ ತೋಮರ ಮೊದಲಾದ ಆಯುಧಗಳಿಂದ ನನ್ನನ್ನು ಹೊಡೆದರು. ನಾನು ನನ್ನ ಅಸ್ತ್ರಶಕ್ತಿಯಿಂದ ಅನೇಕ ಬಾಣಗಳನ್ನು ಪ್ರಯೋಗಿಸಿ ಅವರ ಆಯುಧಗಳನ್ನೆಲ್ಲಾ ತುಂಡುತುಂಡು ಮಾಡಿ, ವಿಚಿತ್ರವಾದ ರಥಗತಿಯಿಂದ ಅವರೆಲ್ಲರನ್ನೂ ಮಂಕುಮಾಡಿ, ಅವರೆಲ್ಲರ ಮೇಲೂ ಏಕಕಾಲದಲ್ಲಿ ಅನೇಕ ಅಸ್ತ್ರಗಳ ಮಳೆಯನ್ನು ಕರೆದೆನು. ಆ ಅಸ್ತ್ರಗಳಿಂದ ಅವರ ಶಿರಸ್ಸುಗಳು ಕತ್ತರಿಸಿ ಹೋದವು. ಅವರಲ್ಲಿ ಹತಾವಶಿಷ್ಟರಾದ ದಾನವರು ಯಾವ ದಿಕ್ಕೂ ತೋರದೆ ಭ್ರಾಂತರಾಗಿ, ನನ್ನ ಬಾಣಗಳ ವೇಗವನ್ನು ತಾಳಲಾರದೆ, ಆ ಹಿರಣ್ಯಪುರವನ್ನೊಳಹೊಕ್ಕು ಮಾಯೆಯಿಂದ ಆಕಾಶಕ್ಕೆ ಲಂಘಿಸಿದರು. ಆ ಸಮಯದಲ್ಲಿ ನಾನು ಬಾಣವರ್ಷದಿಂದ ಅವರು ಹೋಗತಕ್ಕ ಮಾರ್ಗವನ್ನು ನಿರೋಧಮಾಡಲು, ಸೂರ್ಯನಂತೆ ತೇಜೋಮಯವಾದ ಆಕಾಶದಲ್ಲಿ ಸಂಚರಿಸುತ್ತಿದ್ದ ಆ ಹಿರಣ್ಯಪುರವು ಆ ದಾನವರ ಶಕ್ತಿಯಿಂದ ಕೆಲವುಹೊತ್ತು ಮೇಲೆ ಸಂಚರಿಸುತ್ತಲೂ, ಕೆಲವು ಹೊತ್ತು ಭೂಮಿಯಲ್ಲಿ ಕಾಣಿಸುತ್ತಲೂ, ಮತ್ತೆ ಕೆಲವುಹೊತ್ತು ಬಹಳಮೇಲೆ ಹೋಗುತ್ತಲೂ, ಮತ್ತು ಕೆಲವುಹೊತ್ತು ಆಕಾಶದಲ್ಲೇ ಅಡ್ಡಡ್ಡಲಾಗಿ ಓಡಾಡುತ್ತಲೂ, ಇನ್ನೂ ಕೆಲವುಹೊತ್ತು ಸಮುದ್ರದಲ್ಲಿ ಮುಳುಗಿಕೊಳ್ಳುತ್ತಲೂ ಅದ್ಭುತವಾಗಿತ್ತು. ಅದನ್ನು ನೋಡಿ ದಿವ್ಯಾಸ್ತ್ರಗಳನ್ನು ಅಭಿಮಂತ್ರಿಸಿ ಅನೇಕ ಬಾಣಗಳನ್ನು ಪ್ರಯೋಗಿಸಿ, ಆ ದೈತ್ಯರಿಗೆ ಆಶ್ರಯ

ವಾಗಿಯೂ ಅಮರಾವತೀ ಪಟ್ಟಣಕ್ಕೆ ಸಮಾನವಾಗಿಯೂ ಇದ್ದ ಆ ಹಿರಣ್ಯಪುರವನ್ನು ಚೂರುಚೂರಾಗಿ ಒಡಿಸಿ ನೆಲದಮೇಲೆ ಕೆಡಹಿ, ಆ ದಾನವರ ಮೇಲೆ ವಜ್ರಾಯುಧಕ್ಕೆ ಸಮಾನವಾದ ಅನೇಕ ಬಾಣಗಳನ್ನು ಪ್ರಯೋಗಿಸಿದೆನು. ಅವುಗಳಿಂದ ಪೀಡಿತರಾಗಿ ಕಾಲಪ್ರೇರಿತರಾದ ಆ ದೈತ್ಯರು ದಿಗ್ಭ್ರಾಂತರಾಗಿ ಓಡಾಡುವದಕ್ಕೆ ಉಪಕ್ರಮಿಸಿದರು. ಆಗ ಮಾತಲಿಯು ಸೂರ್ಯನಂತೆ ಪ್ರಕಾಶಮಾನವಾದ ನನ್ನ ರಥವನ್ನು ಆಕಾಶಮಾರ್ಗದಿಂದ ಭೂಮಿಗೆ ಇಳಿಸಿದನು. ಆ ಪ್ರದೇಶದಲ್ಲಿ ಯುದ್ಧಸನ್ನದ್ಧರಾದ ಅರುವತ್ತು ಸಹಸ್ರಮಂದಿ ರಥಿಕರಾದ ದಾನವರು ನನ್ನ ಸಂಗಡ ಯುದ್ಧಕ್ಕೆ ತೊಡಗಿದರು. ಅವರೆಲ್ಲರನ್ನೂ ನಾನು ತೀಕ್ಷ್ಣವಾದ ಬಾಣಗಳಿಂದ ಹೊಡೆಯಲು, ಅವರೆಲ್ಲರೂ ಬಹಳವಾದ ರೋಷಾವೇಶದಿಂದ ಸಮುದ್ರದ ತೆರೆಗಳು ಪರಂಪರೆಯಾಗಿ ಬರುವಂತೆ ನನ್ನಮೇಲೆ ಕಾಣಿಸಿಕೊಂಡರು. ಆ ಸಮಯದಲ್ಲಿ ನಾನು ಈ ದೈತ್ಯರು ಯುದ್ಧದಲ್ಲಿ ಮನುಷ್ಯರಿಂದ ಜಯಿಸುವದಕ್ಕೆ ಅಶಕ್ಯರಾದವರು ಎಂದು ಯೋಚಿಸಿ, ಅನೇಕ ದಿವ್ಯಾಸ್ತ್ರಗಳನ್ನು ಕ್ರಮವಾಗಿ ಧನುಸ್ಸಿನಲ್ಲಿ ಸಂಧಾನಮಾಡಿ ಪ್ರಯೋಗಿಸಿ, ವಿಚಿತ್ರವಾಗಿ ಯುದ್ಧಮಾಡತಕ್ಕ ಆ ಅರವತ್ತುಸಹಸ್ರಮಂದಿ ದಾನವರನ್ನೂ ನೋಯಿಸಿ, ಅವರು ಪ್ರಯೋಗಿಸಿದ ಅಸ್ತ್ರಗಳನ್ನೆಲ್ಲಾ ನಿವಾರಣೆಮಾಡಿದೆನು. ಹಾಗಾದರೂ ಆ ಕ್ರೂರರಾದ ದಾನವರು ವಿಚಿತ್ರವಾದ ಕಿರೀಟ ಕವಚ ಮುಂತಾದವುಗಳಿಂದ ಅಲಂಕೃತರಾಗಿ, ನಾನಾವಿಧವಾದ ಧ್ವಜಗಳನ್ನು ಕಟ್ಟಿರತಕ್ಕ ರಥಗಳನ್ನೇರಿ, ನಾನಾವಿಧವಾದ ರಥಗತಿಗಳಿಂದ ಸಂಚರಿಸುತ್ತ, ಪುನಃ ನನ್ನಮೇಲೆ ಕಾಣಿಸಿಕೊಂಡರು. ಅದರಿಂದ ನನಗೆ ಯುದ್ಧಕುತೂಹಲವು ಮತ್ತಷ್ಟು ಹೆಚ್ಚಾಗಲು, ಅವರ ಮೇಲೆ ನಾನು ಅನೇಕ ಬಾಣಗಳನ್ನು ಅಡಿಗಡಿಗೆ ಪ್ರಯೋಗಿಸಿದರೂ ಅವರನ್ನು ಸಂಹಾರಮಾಡುವದಕ್ಕೆ ಆಗದೆ ಹೋಯಿತು. ಆ ಸಮಯದಲ್ಲಿ ರಣಪಂಡಿತರೂ ಅಸ್ತ್ರವಿದ್ಯಾಕುಶಲರೂ ಆದ ಆ ದೈತ್ಯರ ಅಸ್ತ್ರಗಳಿಂದ ಪೀಡಿತನಾಗಿ, ನಾನು ಅಧಿಕವಾಗಿ ಭಯಪಟ್ಟು, ದೇವದೇವನಾದ ಮಹಾದೇವನಿಗೆ ನಮಸ್ಕಾರಮಾಡಿ, ಸಕಲ ಪ್ರಾಣಿಗಳಿಗೂ ಒಳ್ಳೇದಾಗಲಿ ಎಂದು ಕೋರಿ, ದಿವ್ಯವಾದ ಪಾಶುಪತಾಸ್ತ್ರವನ್ನು ಅಭಿಮಂತ್ರಿಸಿ ಧನುಸ್ಸಿನಲ್ಲಿ ಸಂಧಾನಮಾಡಬೇಕೆಂದು ಯೋಚಿಸಿದೆನು. ಅಷ್ಟರಲ್ಲಿ ಮೂರು ಶಿರಸ್ಸುಗಳುಳ್ಳದ್ದಾಗಿಯೂ, ಒಂಭತ್ತು ಕಣ್ಣುಗಳುಳ್ಳದ್ದಾಗಿಯೂ, ಮೂರು ಮುಖಗಳುಳ್ಳದ್ದಾಗಿಯೂ, ಆರು ಭುಜಗಳುಳ್ಳದ್ದಾಗಿಯೂ, ಸೂರ್ಯನ ಕಿರಣಗಳಂತೆ ಹೊಳೆಯುವ ಮುಂಡೇಕೂದಲುಳ್ಳದ್ದಾಗಿಯೂ, ಘೋರವಾದ ಸರ್ಪಗಳನ್ನು ತಾಳಿರತಕ್ಕದ್ದಾಗಿಯೂ, ಇರುವ ಮಹಾದೇವನ ಸಂಬಂಧಿಯಾದ ಭಯಂಕರವಾದ ಒಂದು ಆಕೃತಿಯನ್ನು ನೋಡಿ, ಇದೇ ಪಾಶುಪತಾಸ್ತ್ರವೆಂದು ತಿಳಿದು, ಗಾಂಡೀವಧನುಸ್ಸಿನಲ್ಲಿ ಅದನ್ನು ಸಂಧಾನಮಾಡಿ, ಅಪರಿಮಿತ ತೇಜೋನಿಧಿಯಾದ ಪರಮೇಶ್ವರನಿಗೆ ನಮಸ್ಕಾರಮಾಡಿ, ಆ ದಾನವರ ನಾಶಾರ್ಥವಾಗಿ ಅದನ್ನು ಪ್ರಯೋಗಿಸಿದೆನು. ತತ್ಕ್ಷಣದಲ್ಲೇ ಆ ಅಸ್ತ್ರವು ಜಿಂಕೆ, ಸಿಂಹ, ಹುಲಿ, ಶರಭ, ಕರಡಿ, ಆನೆ, ಕುದುರೆ, ಕಾಡುಕೋಣ, ಕಾಡೆತ್ತು, ಹಾವು, ಕಪಿ, ಹಂದಿ, ಬೆಕ್ಕು, ನರಿ, ಪ್ರೇತ, ಭೇರುಂಡ, ಹದ್ದು, ಗೂಬೆ, ಗರುಡ, ಚಮರೀಮೃಗ, ಇವುಗಳ ರೂಪವನ್ನೂ; ದೇವ, ಋಷಿ, ಗಂಧರ್ವ, ಪಿಶಾಚ, ಯಕ್ಷ, ರಾಕ್ಷಸ, ಗುಹ್ಯಕ, ನೈರುತ, ಇವರ ರೂಪವನ್ನೂ; ಮೀನು, ಮೊಸಳೆ, ಆಮೆ, ಇವು ಮೊದಲಾದವುಗಳ ರೂಪವನ್ನೂ; ಇನ್ನೂ ನಾನಾವಿಧವಾದ ಅಸ್ತ್ರಗಳನ್ನು ಧರಿಸಿರತಕ್ಕ ರಾಕ್ಷಸರ ರೂಪವನ್ನೂ; ನಾಲ್ಕು ಶಿರಸ್ಸು, ನಾಲ್ಕು ಮುಖ, ನಾಲ್ಕು ಭುಜ, ನಾಲ್ಕು ಕೋರೆಗಳುಳ್ಳ ಘೋರವಾದ ಅನೇಕ ರೂಪುಗಳನ್ನೂ; ಸೂರ್ಯಾಗ್ನಿಗಳಂತೆ ತೇಜಸುಳ್ಳದ್ದಾಗಿಯೂ, ವಜ್ರದಂತೆ ಕಠಿನವಾಗಿಯೂ, ಪರ್ವತಗಳಂತೆ ಮಹತ್ತಾಗಿಯೂ ಇರುವ ಅನೇಕ ಬಾಣರೂಪಗಳನ್ನೂ ಧರಿಸಿ, ನನ್ನ ಗಾಂಡೀವಧನುಸ್ಸಿನಿಂದ ಹೊರಟು ಜಗತ್ತನ್ನೆಲ್ಲಾ ವ್ಯಾಪಿಸಿಕೊಂಡು, ಒಂದು ಮುಹೂರ್ತದೊಳಗಾಗಿ ಆ ದಾನವರನ್ನೆಲ್ಲಾ ನಾಶಮಾಡಿತು. ಆಗ ನಾನು ಆ ಆಶ್ಚರ್ಯವನ್ನು ನೋಡಿ ತ್ರಿಪುರಾಂತಕನಾದ ಈಶ್ವರನಿಗೆ ನಮಸ್ಕಾರಮಾಡಿದೆನು. ಮಾತಲಿಯು ಆ ಪಾಶುಪತಾಸ್ತ್ರದಿಂದ ಹತರಾದ ಆ ದಾನವರನ್ನು ನೋಡಿ, ಅಧಿಕವಾದ ಸಂತೋಷದಿಂದ ಕೈಮುಗಿದುಕೊಂಡು ನನ್ನನ್ನು ಕುರಿತು 'ಎಲೈ ಅರ್ಜುನನೆ, ದೇವಾಸುರರಿಂದಲೂ ಸಾಧಿಸಲಶಕ್ಯವಾದ ಕಾರ್ಯವನ್ನು ನೀನು ಮಾಡಿದೆ. ಈ ಕಾರ್ಯವು ಇಂದ್ರನಿಗೂ ಸಾಧಿಸಲಶಕ್ಯವಾಗಿತ್ತು. ಆಕಾಶದಲ್ಲಿ ಸಂಚರಿಸತಕ್ಕ ಇಂಥಾ ಪಟ್ಟಣವು ನಿನ್ನ ಬಾಹುಬಲದಿಂದಲೂ ನಿನ್ನ ತಪೋಬಲದಿಂದಲೂ ಈ ದಿವಸ ನಾಶವನ್ನು ಹೊಂದಿತು' ಎಂದು ಬಹಳವಾಗಿ ಶ್ಲಾಘಿಸಿದನು.

ಈ ಪ್ರಕಾರ ಆ ಹಿರಣ್ಯಪುರವು ನಾಶವನ್ನು ಹೊಂದಿ ಅಲ್ಲಿದ್ದ ದಾನವರೆಲ್ಲರೂ ಹತರಾಗಲು, ಆ ಪಟ್ಟಣದಲ್ಲಿದ್ದ ದಾನವಸ್ತ್ರೀಯರೆಲ್ಲರೂ ಅಧಿಕವಾದ ದುಃಖದಿಂದ ತಲೆಯನ್ನು ಕೆದರಿಕೊಂಡು, ಕುರರಪಕ್ಷಿಗಳಂತೆ ದೀನವಾಗಿ ರೋದನಮಾಡುತ್ತ, ಕೈಗಳಿಂದ ಎದೆಯನ್ನು ಕುಟ್ಟಿಕೊಳ್ಳುತ್ತ, ಪುಷ್ಪಮಾಲ್ಯಾಭರಣಗಳನ್ನು ಕಿತ್ತುಕಿತ್ತು ಬಿಸಾಡುತ್ತ, ಆ ಪಟ್ಟಣದಿಂದ ಹೊರಕ್ಕೆ ಬಂದು ಸತ್ತುಬಿದ್ದಿರತಕ್ಕ ತಮ್ಮತಮ್ಮ ಗಂಡಂದಿರಮೇಲೂ ಮಕ್ಕಳಮೇಲೂ ಒಡಹುಟ್ಟಿದವರ ಮೇಲೂ ತಂದೆಗಳಮೇಲೂ ಬಿದ್ದು ಹೊರಳಾಡುತ್ತ, ಬಹಳವಾಗಿ ಪ್ರಲಾಪಿಸಿದರು. ಈ ಪ್ರಕಾರ ಶೋಕಪಡುತ್ತಿದ್ದ ದಾನವಸ್ತ್ರೀಯರ ಹಾಹಾಕಾರಗಳಿಂದ ತುಂಬಿದ್ದ ಆ ಪಟ್ಟಣವು ಸ್ವಲ್ಪವೂ ಕಳೆಯಿಲ್ಲದೆ, ಎತ್ತನೋಡಿದರೂ ಆನೆಗಳವಾಗಿ, ಸರ್ಪಗಳಿಲ್ಲದ ಹುತ್ತಿನಂತೆಯೂ, ಮರಗಳೊಣಗಿಹೋದ ಅರಣ್ಯದಂತೆಯೂ ತೋರುತ್ತ ಅದೃಶವಾಗಿ ಹೋಯಿತು.

ಆ ಬಳಿಕ ಶತ್ರುಜಯದಿಂದ ಸಂತುಷ್ಟನಾದ ನನ್ನನ್ನು ಮಾತಲಿಯು ದಿವ್ಯವಾದ ಆ ರಥದ ಮೇಲೆ ಕೂರಿಸಿಕೊಂಡು ಅಲ್ಲಿಂದ ಇಂದ್ರಭವನಕ್ಕೆ ಕರೆದುಕೊಂಡು ಹೊರಟು ಹೋದನು. ಅಲ್ಲಿ ನಾನು ದೇವೇಂದ್ರನನ್ನು ಕಾಣಲು, ಮಾತಲಿಯು ಅಲ್ಲಿಗೆ ಬಂದು ನಾನು ಮಹಾಪರಾಕ್ರಮಶಾಲಿಗಳಾದ ನಿವಾತಕವಚರನ್ನು ವಧಿಸಿದ್ದನ್ನೂ, ಅವರ ಮಾಯೆಯನ್ನೆಲ್ಲಾ ನಿವಾರಣೆಮಾಡಿದ್ದನ್ನೂ, ಹಿರಣ್ಯಪುರವನ್ನು ಧ್ವಂಸಮಾಡಿ ಅಲ್ಲಿದ್ದ ದಾನವರನ್ನೆಲ್ಲಾ ನಾಶಮಾಡಿದ್ದನ್ನೂ, ಸಹ ಯಥಾಸ್ಥಿತವಾಗಿ ಮಹೇಂದ್ರನಿಗೆ ತಿಳುಹಿಸಿದನು. ಅದನ್ನು ಕೇಳಿ ಇಂದ್ರನು ದೇವತೆಗಳೊಡಗೂಡಿ ಬಹಳವಾಗಿ ಸಂತೋಷಪಟ್ಟು, ಭಾಪುಭಾಪೆಂದು ನನ್ನನ್ನು ಶ್ಲಾಘಿಸಿ, ಬಹಳವಾದ ಉಪಚಾರೋಕ್ತಿಗಳಿಂದ ನನ್ನನ್ನು ಸಮಾಧಾನಪಡಿಸಿ, ದೇವತೆಗಳ ಮಧ್ಯದಲ್ಲಿ ನನ್ನನ್ನು ಕುರಿತು 'ಎಲೈ ಪಾರ್ಥನೆ, ದೇವಾಸುರರಿಂದಲೂ ಸಾಧಿಸಲಶಕ್ಯವಾದ ಕಾರ್ಯವನ್ನು ನೀನು ಸಾಧಿಸಿದೆ. ನನಗೆ ಶತ್ರುಗಳಾದ ದೈತ್ಯರನ್ನು ನೀನು ಸಂಹಾರಮಾಡಿದ್ದರಿಂದ, ನನಗೆ ನೀನು ಗುರುದಕ್ಷಿಣೆಯನ್ನು ಕೊಟ್ಟಂತಾಯಿತು. ಎಲೈ ಧನಂಜಯನೆ, ಈ ಪ್ರಕಾರವೇ ನೀನು ಯಾವಾಗಲೂ ಯುದ್ಧದಲ್ಲಿ ಸ್ಥಿರನಾಗಿ ನಿಂತು ಆಯಾ ದಿವ್ಯಾಸ್ತ್ರಗಳನ್ನು ಎಚ್ಚರದಿಂದ ಶತ್ರುಗಳ ಮೇಲೆ ಪ್ರಯೋಗಿಸು. ನಿನ್ನನ್ನು ಯುದ್ಧದಲ್ಲಿ ದೇವತೆಗಳೂ ದಾನವರೂ ರಾಕ್ಷಸರೂ ಯಕ್ಷರೂ ಗಂಧರ್ವರೂ ಪಕ್ಷಿಗಳೂ ಪನ್ನಗರೂ ಯಾರೂ ಜಯಿಸಲಸಮರ್ಥರು. ನಿನ್ನ ಬಾಹುಬಲದಿಂದ ಗೆದ್ದ ಭೂಮಿಯನ್ನು ಧರ್ಮಾತ್ಮನಾದ ಧರ್ಮರಾಯನು ಸುಖವಾಗಿ ಪಾಲಿಸುವನು' ಎಂದು ಇಂದ್ರನು ಹೇಳಿದನು" ಎಂಬದಾಗಿ ಅರ್ಜುನನು ಧರ್ಮರಾಯನಿಗೆ ಹೇಳಿದನು.

---

## ೧೭೪ನೇ ಅಧ್ಯಾಯ.—ಅಸ್ತ್ರದರ್ಶನ.

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಅರ್ಜುನನು ಧರ್ಮರಾಯನನ್ನು ಕುರಿತು "ಕೇಳು ಧರ್ಮರಾಯನೆ, ಆ ಬಳಿಕ ಬಾಣಗಳ ಪೆಟ್ಟಿನಿಂದ ಮಯ್ಯೆಲ್ಲಾ ಘಾಯಪಡೆದು ಬಹಳವಾಗಿ ಆಯಾಸಪಟ್ಟು ತನ್ನ ವಿಶ್ವಾಸಕ್ಕೆ ಪಾತ್ರನಾಗಿರುವ ನನ್ನನ್ನು ದೇವೇಂದ್ರನು ತನ್ನ ಕಯ್ಯಿಂದ ಹಿಡಿದುಕೊಂಡು 'ಎಲೈ ಭರತಕುಲಶ್ರೇಷ್ಠನಾದ ಅರ್ಜುನನೆ, ನಿನಗೆ ದಿವ್ಯವಾದ ಎಲ್ಲಾ ಅಸ್ತ್ರಗಳೂ ಸ್ವಾಧೀನವಾಗಿರುವವು. ಭೂಮಂಡಲದಲ್ಲಿ ನಿನ್ನನ್ನು ತಿರಸ್ಕರಿಸತಕ್ಕವನು ಒಬ್ಬನೂ ಇಲ್ಲ. ನೀನು ಯುದ್ಧರಂಗದಲ್ಲಿ ನಿಂತದ್ದೇ ಆದರೆ, ಭೀಷ್ಮ ದ್ರೋಣ ಕರ್ಣ ಶಕುನಿ ಮೊದಲಾದವರು ಎಲ್ಲಾರಾಜರೊಡನೆಯೂ ಕೂಡಿದರೂ, ನಿನ್ನ ಹದಿನಾರನೆಯ ಒಂದುಕಲೆಯನ್ನು ಸಹ ಹೊಂದಲಾರರು' ಎಂದು ನುಡಿದು, ಆ ಮಹೇಂದ್ರನು ದಿವ್ಯವಾದ ಅಭೇದ್ಯವಾದ ಈ ಕವಚವನ್ನೂ, ದೇವದತ್ತವೆಂಬ ಈ ಶಂಖವನ್ನೂ ನನಗೆ ಕೊಟ್ಟು, ಈ ಸುವರ್ಣಮಯವಾದ ಹಾರವನ್ನು ನನ್ನ ಕೊರಳಿಗೆ ಹಾಕಿ, ಶಿರಸ್ಸಿನಮೇಲೆ ಈ ಕಿರೀಟವನ್ನಿಟ್ಟು, ಬಳಿಕ ಈ ದಿವ್ಯವಾದ ವಸ್ತ್ರಗಳನ್ನೂ ದಿವ್ಯವಾಗಿಯೂ ಮಹತ್ತಾಗಿಯೂ ಪ್ರಕಾಶಮಾನವಾಗಿಯೂ ಇರುವ ಈ ಆಭರಣಗಳನ್ನೂ ನನಗೆ

ಕೊಟ್ಟನು. ಎಲೈ ಅಗ್ರಜನೆ, ಈ ರೀತಿಯಾಗಿ ನಾನು ಸ್ವರ್ಗದಲ್ಲಿ ಪೂಜಿತನಾಗಿ ಗಂಧರ್ವಕುಮಾರರ ಸಂಗಡ ವಿನೋದವಾಗಿದ್ದುಕೊಂಡು, ದ್ಯೂತದಿಂದ ನಮಗೆ ಉಂಟಾದ ಪರಾಭವವನ್ನು ಚಿಂತಿಸುತ್ತ, ಆ ಪುಣ್ಯತಮವಾದ ದೇವಲೋಕದಲ್ಲಿ ವಾಸಮಾಡುತ್ತಿದ್ದೆನು. ಒಂದಾನೊಂದು ದಿವಸ ಇಂದ್ರನು ದೇವತೆಗಳಿಂದ ಸಹಿತನಾಗಿ ವಿಶ್ವಾಸ ದಿಂದ ನನ್ನನ್ನು ನೋಡಿ 'ಎಲೈ ಅರ್ಜುನನೆ, ನಿನ್ನ ಅಣ್ಣತಮ್ಮಂದಿರು ನಿನ್ನನ್ನು ಸ್ಮರಿಸುವರು. ಈಗ ನೀನು ಅವರನ್ನು ನೋಡುವದಕ್ಕೆ ತಕ್ಕ ಸಮಯವಾಗಿರುವದು. ಇನ್ನು ಭೂಲೋಕಕ್ಕೆ ಹೋಗು' ಎಂದು ಆಜ್ಞೆ ಯನ್ನು ಕೊಡಲು, ಅಲ್ಲಿಂದ ನಾನು ಹೊರಟು, ಈ ಗಂಧಮಾದನಪರ್ವತದ ಶಿಖರದಲ್ಲಿ ನಿಮ್ಮನ್ನು ನೋ ಡಿದೆನು" ಎಂದನು.

ಬಳಿಕ ಧರ್ಮರಾಯನು ಅರ್ಜುನನನ್ನು ನೋಡಿ "ಎಲೈ ಪಾರ್ಥನೆ, ಸಕಲ ದೇವತೆಗಳಿಗೂ ಅಧಿಪತಿಯಾದ ಇಂದ್ರನನ್ನು ಆರಾಧನೆಮಾಡಿ, ಸಕಲ ದಿವ್ಯಾಸ್ತ್ರಗಳನ್ನೂ ಸಂಪಾದಿಸಿಕೊಂಡು, ನೀನು ಪುನಃ ದೈವಯೋಗದಿಂದ ಇಲ್ಲಿಗೆ ಬಂದೆ. ಈಗ ನಾನು ಸಕಲವಾದ ಭೂಮಂಡಲವನ್ನೂ ಗೆದ್ದು ಧೃತರಾಷ್ಟ್ರನ ಮಕ್ಕಳಾದ ದುರ್ಯೋ ಧನಾದಿಗಳನ್ನೆಲ್ಲ ಸ್ವಾಧೀನಮಾಡಿಕೊಂಡಂತೆ ಭಾವಿಸುತ್ತೇನೆ. ನೀನು ಯಾವ ದಿವ್ಯಾಸ್ತ್ರಗಳಿಂದ ನಿವಾತಕವಚ ರನ್ನೂ ಹಿರಣ್ಯಪುರವಾಸಿಗಳಾದ ದೈತ್ಯರನ್ನೂ ಸಂಹರಿಸಿದೆಯೋ ಅಂಥಾ ದಿವ್ಯಾಸ್ತ್ರಗಳನ್ನು ನೋಡಬೇಕೆಂದು ನನಗೆ ಕುತೂಹಲವುಂಟಾಗಿರುವದು. ಅವುಗಳನ್ನು ತೋರಿಸು" ಎಂದನು. ಅದನ್ನು ಕೇಳಿ ಅರ್ಜುನನು "ಎಲೈ ಅಗ್ರಜನೆ, ನಾಳೆ ಪ್ರಾತಃಕಾಲದಲ್ಲಿ ಆ ದಿವ್ಯಾಸ್ತ್ರಗಳ ಪ್ರಭಾವವನ್ನು ನೀನು ನೋಡುವೆ" ಎಂದು ನುಡಿದು, ಆ ರಾತ್ರಿ ಅಣ್ಣತಮ್ಮಂದಿರೊಡನೆ ಸುಖವಾಗಿದ್ದನು.

## ೧೭೫ನೇ ಅಧ್ಯಾಯು.—ಅಸ್ತ್ರದರ್ಶನ.

ವೈಶಂಪಾಯನಮುನೀಂದ್ರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಆ ರಾತ್ರಿ ಕಳೆದು ಪ್ರಾತಃಕಾಲವಾಗಲು, ಧರ್ಮಾತ್ಮನಾದ ಧರ್ಮರಾಯನು ತಮ್ಮಂದಿರೊಡನೆ ಪ್ರಾತಃಕಾಲದಲ್ಲಿ ಮಾಡ ತಕ್ಕ ಆಹ್ನಿಕವನ್ನು ನೆರವೇರಿಸಿಕೊಂಡು, ಅರ್ಜುನನನ್ನು ನೋಡಿ "ಎಲೈ ಧನಂಜಯನೆ, ನೀನು ಯಾವ ಅಸ್ತ್ರ ದಿಂದ ದಾನವರನ್ನು ಜಯಿಸಿದೆಯೋ ಆ ಅಸ್ತ್ರಗಳನ್ನು ನನಗೆ ತೋರಿಸು" ಎನಲು, ಅರ್ಜುನನು ಶಾಸ್ತ್ರೋ ಕ್ತಪ್ರಕಾರ ಶುಚಿರ್ಭೂತನಾಗಿ, ದೇವತೆಗಳ ಅನುಗ್ರಹದಿಂದ ಪಡೆದ ದಿವ್ಯಾಸ್ತ್ರಗಳನ್ನು ಧರ್ಮರಾಯನಿಗೆ ತೋರಿ ಸುವದಕ್ಕೆ ಉಪಕ್ರಮಮಾಡಿ, ಗಂಧಮಾದನಪರ್ವತವೆಂಬ ಮೂಕಿಯುಳ್ಳದ್ದಾಗಿಯೂ ಅಲ್ಲಿರುವ ಬಿದಿರುಮೆಳೆಗ ಳೆಂಬ ತ್ರಿವೇಣುವುಳ್ಳದ್ದಾಗಿಯೂ ಇರುವ ಭೂಮಿಯೆಂಬ ಮನೋನಿರ್ಮಿತವಾದ ರಥದಮೇಲೆ ಕುಳಿತು, ಇಂದ್ರನು ಕೊಟ್ಟ ದೇದೀಪ್ಯಮಾನವಾದ ದಿವ್ಯವಾದ ಕವಚವನ್ನು ತೊಟ್ಟು, ಗಾಂಡೀವಧನುಸ್ಸನ್ನೂ ದೇವದತ್ತಾ ಖ್ಯವಾದ ಶಂಖವನ್ನೂ ಧರಿಸಿ, ಮಹಾಬಾಹುವಾಗಿ ಅಧಿಕವಾದ ತೇಜಸ್ಸಿನಿಂದ ಮೆರೆಯುತ್ತ, ಅಣ್ಣತಮ್ಮಂದಿರಿಗೆ ದಿವ್ಯಾಸ್ತ್ರಗಳ ಪ್ರಭಾವವನ್ನು ತೋರಿಸುವದಕ್ಕೋಸ್ಕರ ತನ್ನ ಎರಡು ಪಾದಗಳನ್ನೂ ಭೂಮಿಯಮೇಲೂರಿ ದನು. ಆಗ ಅನೇಕ ವೃಕ್ಷಗಳಿಂದ ಕೂಡಿದ ಭೂಮಂಡಲವೇ ನಡುಗಿತು ; ನದಿಗಳೊಡನೆ ಮಹಾಸಮುದ್ರವು ಕ್ಷೋಭೆಯನ್ನೈದಿತು ; ಪರ್ವತಗಳು ಸೀಳಿದವು ; ವಾಯುವು ಬೀಸದೆ ಸ್ತಂಭಿಸಿಹೋಯಿತು ; ಸೂರ್ಯನೂ ಅಗ್ನಿಯೂ ಕೂಡ ಕಾಂತಿಹೀನರಾದರು ; ಬ್ರಾಹ್ಮಣರಿಗೆ ಅಧ್ಯಯನಮಾಡಿದ ವೇದಗಳು ಸ್ಫುರಿಸದೆಹೋದವು ; ಭೂಮಿಯ ಒಳಗಿದ್ದ ಪ್ರಾಣಿಗಳೆಲ್ಲಾ ಅಧಿಕವಾದ ಬಾಧೆಯನ್ನು ಹೊಂದಿ, ಭೂಮಿಯ ಮೇಲಕ್ಕೆ ಬಂದು, ವಿಕಾರ ವಿಕಾರವಾದ ಮುಖಗಳುಳ್ಳವುಗಳಾಗಿ ಭಯದಿಂದ ನಡುಗುತ್ತ, ಕೈಮುಗಿದುಕೊಂಡು ಅರ್ಜುನನ ಸುತ್ತಲೂ ನಿಂತುಕೊಂಡವು ; ಬ್ರಹ್ಮರ್ಷಿಗಳೂ, ದೇವರ್ಷಿಗಳೂ, ಸಿದ್ಧರೂ, ದೇವತೆಗಳೂ, ಯಕ್ಷರೂ, ರಾಕ್ಷಸರೂ, ಗಂಧರ್ವರೂ, ಖೇಚರರೂ, ಭೂಚರರೂ ಸಹ ಅರ್ಜುನನು ತೋರಿಸುತ್ತಲಿದ್ದ ಆ ದಿವ್ಯಾಸ್ತ್ರಗಳ ತೇಜಸ್ಸನ್ನು

ಸಹಿಸಲಾರದೆ ಆತನಿಗೆ ಮೊರೆಯಿಟ್ಟರು. ಆ ಸಮಯದಲ್ಲಿ, ಚತುರ್ಮುಖಬ್ರಹ್ಮನೂ, ಇಂದ್ರಾದಿಲೋಕಪಾಲಕರೂ, ಪ್ರಮಥಗಣಸಹಿತನಾದ ಮಹಾದೇವನೂ ಸಹ ಅಲ್ಲಿಗೆ ಬಂದರು ; ವಾಯುವು ವಿಚಿತ್ರವಾಗಿಯೂ ಪರಿಮಳಯುಕ್ತವಾಗಿಯೂ ಇರುವ ಪುಷ್ಪಗಳನ್ನು ತಂದು ಅರ್ಜುನನ ಸುತ್ತಲೂ ಎರಚುತ್ತ ಸುಖವಾಗಿ ಬೀಸುತ್ತಿದ್ದನು ; ದೇವತೆಗಳಿಂದ ಪ್ರೇರಿತರಾದ ಗಂಧರ್ವರು ಮನೋಹರವಾಗಿ ಗಾನವನ್ನು ಮಾಡಿದರು. ಆಗ ದೇವತೆಗಳು ನಾರದನನ್ನು ಆ ಅರ್ಜುನನ ಬಳಿಗೆ ಕಳುಹಿಸಿಕೊಡಲು, ಆ ಮಹಾತ್ಮನು ಅರ್ಜುನನ ಬಳಿಗೆ ಬಂದು ಸವಿನುಡಿಗಳನ್ನಾಡುತ್ತ 'ಎಲೈ ಅರ್ಜುನನೆ, ಈ ದಿವ್ಯಾಸ್ತ್ರಗಳನ್ನು ಈಗ ನೀನು ಪ್ರಯೋಗಿಸಬೇಡ. ನಿನಗೆ ಯಾವ ಬಾಧೆಯೂ ಇಲ್ಲದೆ ನಿರ್ನಿಮಿತ್ತವಾಗಿ ಈ ಅಸ್ತ್ರಗಳನ್ನು ಪ್ರಯೋಗಿಸಕೂಡದು. ಹಾಗಲ್ಲದೆ ಪ್ರಯೋಗಿಸಿದ್ದೇ ಆದರೆ, ಮೂರುಲೋಕಗಳೂ ನಾಶವನ್ನು ಹೊಂದಿ ಅದರಿಂದ ನಿನಗೆ ಮಹತ್ತಾದ ದೋಷವು ಪ್ರಾಪ್ತವಾಗುವದು. ಇಂಥಾ ಕಾರ್ಯವನ್ನು ನೀನು ಮಾಡಬೇಡ. ಶಾಸ್ತ್ರೋಕ್ತವಾದ ಕ್ರಮದಿಂದ ಈ ಅಸ್ತ್ರಗಳನ್ನು ರಕ್ಷಿಸಿಕೊಂಡಿದ್ದದ್ದೇ ಆದರೆ, ಇವು ಸಮಯದಲ್ಲಿ ವೀರ್ಯವತ್ತಾಗಿಯೂ ಸುಖಕರವಾಗಿಯೂ ಇರುವವು' ಎಂದು ಅರ್ಜುನನಿಗೆ ಹೇಳಿ, ಧರ್ಮರಾಯನನ್ನು ಕುರಿತು, 'ಎಲೈ ಧರ್ಮರಾಯನೆ, ಮುಂದೆ ಮಹತ್ತಾದ ಯುದ್ಧವು ನಡೆಯುವದು. ಆ ಕಾಲದಲ್ಲಿ ಶತ್ರುಗಳ ಮೇಲೆ ಅರ್ಜುನನು ತಾನು ಕಲಿತಿರುವ ದಿವ್ಯಾಸ್ತ್ರಗಳನ್ನು ಪ್ರಯೋಗಿಸುವನು. ಆಗ ನೀನು ಅವುಗಳ ಪ್ರಭಾವವನ್ನು ತಿಳಿಯುವೆ' ಎಂದು ನುಡಿದು, ಎಲ್ಲಾ ದೇವತೆಗಳೊಡನೆಯೂ ದೇವಲೋಕಕ್ಕೆ ಹೊರಟು ಹೋದನು. ಬಳಿಕ ಮಹರ್ಷಿಗಳೂ ಇತರರೂ ಸಹ ತಮ್ಮತಮ್ಮ ಸ್ಥಾನಗಳಿಗೆ ಹೊರಟು ಹೋದರು. ಪಾಂಡವರು ದ್ರೌಪದಿಯೊಡನೆ ಆ ಗಂಧಮಾದನಪ್ರದೇಶದಲ್ಲಿ ಸುಖವಾಗಿ ವಾಸಮಾಡುತ್ತಿದ್ದರು—ಎಂದು ಜನಮೇಜಯರಾಯನಿಗೆ ವೈಶಂಪಾಯನಮುನೀಂದ್ರನು ಹೇಳಿದನು.

## ೧೩೬ನೇ ಅಧ್ಯಾಯ.—ಆಜಗರಪರ್ವದಲ್ಲಿ ಲೋಮಶಗಮನ.

ಬಳಿಕ ಜನಮೇಜಯನು ವೈಶಂಪಾಯನಮುನೀಂದ್ರನನ್ನು ಕುರಿತು—ಎಲೈ ಮುನೀಂದ್ರನೆ, ಅರ್ಜುನನು ಸ್ವರ್ಗಲೋಕದಿಂದ ದಿವ್ಯಾಸ್ತ್ರಗಳನ್ನು ಸಂಪಾದಿಸಿಕೊಂಡು ಬಂದ ಬಳಿಕ ಪಾಂಡವರು ಆ ಗಂಧಮಾದನಪರ್ವತದಲ್ಲಿ ಏನು ಮಾಡುತ್ತಿದ್ದರು ?—ಎಂದು ಪ್ರಶ್ನೆಮಾಡಲು, ವೈಶಂಪಾಯನನು—ಎಲೈ ಜನಮೇಜಯರಾಯನೆ, ಅರ್ಜುನನೊಡಗೂಡಿ ಪಾಂಡವರು ಆ ಗಂಧಮಾದನಪರ್ವತದಲ್ಲಿರತಕ್ಕ ವನಗಳಲ್ಲಿಯೂ ಕುಬೇರನು ವಿಹರಿಸತಕ್ಕ ಮನೋಹರವಾದ ದಿವ್ಯವಾದ ಸ್ಥಳಗಳಲ್ಲಿಯೂ ವಿಹರಿಸುತ್ತಿದ್ದರು. ಆಗ ಕಿರೀಟಿಯು ಧನುರ್ಧಾರಿಯಾಗಿ, ಆ ಪ್ರದೇಶದಲ್ಲಿರತಕ್ಕ ದಿವ್ಯವಾದ ದೇವತಾಮಂದಿರಗಳನ್ನೂ ನಾನಾವಿಧವಾದ ವೃಕ್ಷಗಳಿಂದ ಶೋಭಿಸುತ್ತಿದ್ದ ದೇವತೆಗಳ ವಿಹಾರಸ್ಥಾನಗಳನ್ನೂ ನೋಡುತ್ತಾ ಸಂತೋಷದಿಂದ ಅಲ್ಲಿ ವಿಹರಿಸುತ್ತಿದ್ದನು. ಈ ಪ್ರಕಾರ ಪಾಂಡವರು ಕುಬೇರನ ಅನುಗ್ರಹದಿಂದ ಪ್ರಾಪ್ತವಾದ ಆ ದಿವ್ಯಸ್ಥಾನದಲ್ಲಿದ್ದುಕೊಂಡು, ಭೂಮಿಯಲ್ಲಿ ವಾಸಮಾಡತಕ್ಕವರ ಸಂಪತ್ತನ್ನು ಅಪೇಕ್ಷಿಸದೆಯೇ, ನಾಲ್ಕು ತಿಂಗಳು ಅರ್ಜುನನೊಡನೆಯೂ ಆರುತಿಂಗಳು ಅರ್ಜುನನಿಲ್ಲದೆಯೂ ಅಂತು ಹತ್ತು ತಿಂಗಳು ಸುಖವಾಗಿ ಅಲ್ಲಿ ವಾಸಮಾಡಿದರು. ಆಗ ಬಂದಾನೊಂದು ದಿವಸ ಭೀಮಾರ್ಜುನ ನಕುಲಸಹದೇವರು ಏಕಾಂತವಾಗಿ ಧರ್ಮರಾಯನ ಸಮೀಪದಲ್ಲಿ ಕೂತುಕೊಂಡಿರಲು, ಭೀಮಸೇನನು ಧರ್ಮರಾಯನನ್ನು ಕುರಿತು, "ಎಲೈ ಅಗ್ರಜನೆ, ನೀನು ಮಾಡಿದ ಪ್ರತಿಜ್ಞೆಯನ್ನು ಯಥಾರ್ಥವಾಗಿ ನೆರವೇರಿಸುವ ವರೆಗೂ ನಾವು ಈ ವನದಿಂದ ಸುಯೋಧನನ ಸಂಹಾರಾರ್ಥವಾಗಿ ಹೊರಡತಕ್ಕವರಲ್ಲ. ಸುಖಕ್ಕೆ ಯೋಗ್ಯರಾದ ನಾವು ದುರ್ಯೋಧನನ ಕಪಟದಿಂದ ಅಂಥಾ ಸುಖವನ್ನು ಕಳೆದುಕೊಂಡು ಇದುವರೆಗೂ ವನವಾಸವನ್ನು ಮಾಡಿ, ಹತ್ತು ವರುಷಗಳನ್ನು ಕಳೆದದ್ದಾಯಿತು. ಈ ಹನ್ನೊಂದನೆಯ ವರ್ಷವನ್ನೂ ಹೀಗೆ ಕಳೆಯುವೆವು. ಮುಂದೆ ಮಂದಬುದ್ಧಿಯಾದ ದುರ್ಯೋಧನನನ್ನು ವಂಚಿಸಿ, ಸುಖವಾಗಿ ಅಜ್ಞಾತವಾಸವನ್ನೂ ಮಾಡುವೆವು. ನಾವು ನಮ್ಮ ದೇಶಕ್ಕೆ ಸಮೀಪದಲ್ಲೇ ಅಜ್ಞಾತವಾಸವನ್ನು ಮಾಡಿದ್ದೇ ಆದರೆ, ಆ ದುರಾತ್ಮಕನು ತಿಳಿಯುವನು. ಆದ್ದರಿಂದ ದೂರದೇಶದಲ್ಲಿ ಎಲ್ಲಾದರೂ ಅಜ್ಞಾತವಾಸವನ್ನು

ತೀರಿಸಿಕೊಂಡು, ಆ ರಾಜಾಧಮನಾದ ದುರ್ಯೋಧನನಲ್ಲಿರುವ ವೈರವನ್ನು ಯುದ್ಧಮಾಡಿ ಪರಿಹರಿಸಿಕೊಂಡದ್ದೇ ಆದರೆ ಅಂದಿಗೆ ನಮ್ಮ ಮನೋರಥವೃಕ್ಷವು ಪುಷ್ಪಫಲಭರಿತವಾಗುವದು. ಬಳಿಕ ನಾವು ಸ್ವರ್ಗಕ್ಕೆ ಸಮಾನವಾದ ನಮ್ಮ ರಾಜ್ಯದಲ್ಲಿ ಸುಖವಾಗಿ ರಾಜ್ಯಭಾರಮಾಡುತ್ತಿದ್ದರೆ ಆಗ ಈ ದುಃಖಗಳೆಲ್ಲಾ ಪರಿಹಾರವಾಗುವವು. ಹಾಗೆ ಮಾಡದೆ ಹೋದರೆ, ಪುಣ್ಯತಮವಾದ ನಿನ್ನ ಕೀರ್ತಿಯು ಚರಾಚರಾತ್ಮಕವಾದ ಈ ಪ್ರಪಂಚದಲ್ಲಿ ನಷ್ಟವಾಗಿ ಹೋಗುವದು. ಆದ್ದರಿಂದ ನಮ್ಮ ರಾಜ್ಯವನ್ನು ನಾವು ಪುನಃ ಪಡೆದು ಅನೇಕ ಪುಣ್ಯಕರ್ಮಗಳನ್ನು ಮಾಡಿ ವಿಶೇಷವಾದ ಧರ್ಮವನ್ನು ಸಂಪಾದಿಸೋಣ. ಅದಕ್ಕಾಗಿ ನೀನು ನಮ್ಮ ವಿಷಯದಲ್ಲಿ ಅಪರಾಧವನ್ನು ಮಾಡಿರುವ ಶತ್ರುಗಳ ಸಂಹಾರಾರ್ಥವಾಗಿ ತಕ್ಕ ಪ್ರಯತ್ನವನ್ನು ಮಾಡು. ಪ್ರಯತ್ನವನ್ನು ಮಾಡದೆ ಸುಮ್ಮನಿರುವ ಪಕ್ಷಕ್ಕೆ, ಕುಬೇರನ ಅನುಗ್ರಹದಿಂದ ಪಡೆದಿರುವ ಈ ಸಂಸ್ಥಾನದಲ್ಲಿ ವಾಸಮಾಡಿಕೊಂಡಿರುವದು ನಮಗೆ ಸಿದ್ಧವಾಗಿಯೇ ಇರುವದು. ದೇವೇಂದ್ರನೇ ಎದುರಿಗೆ ಬಂದರೂ ನಿನ್ನ ತೇಜಸ್ಸನ್ನು ಸಹಿಸಲಾರನು. ಎಲೈ ಯುಧಿಷ್ಠಿರನೆ, ದೇವತೆಗಳೊಡನೆ ಯುದ್ಧಮಾಡಿದರೂ ವ್ಯಥೆಪಡದಿರತಕ್ಕ ಗರುಡಧ್ವಜನಾದ ಶ್ರೀಕೃಷ್ಣನೂ ಶಿನಿಗೆ ಮೊಮ್ಮಗನಾದ ಸಾತ್ಯಕಿಯೂ ಅಸದೃಶವಾದ ಪರಾಕ್ರಮವುಳ್ಳ ಅರ್ಜುನನೂ ಸಹ ನಿನಗೆ ಐಶ್ವರ್ಯವುಂಟಾಗಬೇಕೆಂದು ಯಾವಾಗಲೂ ಹಿತಚಿಂತನೆಯನ್ನು ಮಾಡುತ್ತಿರುವರು. ಮತ್ತು ಸಕಲರಾದ ಯಾದವರೂ ನಾನೂ ವೀರರಾದ ನಕುಲಸಹದೇವರೂ ಸಹ ನಿನಗೆ ರಾಜ್ಯಪ್ರಾಪ್ತಿಯಾಗಬೇಕೆಂದು ಯಾವಾಗಲೂ ಬಯಸುತ್ತಿರುವೆವಾದ್ದರಿಂದ ಎಲ್ಲರೂ ಸೇರಿ ಕೌರವರನ್ನು ನಾಶಮಾಡಿಬಿಡುವೆವು” ಎಂದು ನುಡಿದನು.

ಬಳಿಕ ಧರ್ಮಾತ್ಮನೂ ಪರಿಶುದ್ಧಾತ್ಮನೂ ಆದ ಧರ್ಮರಾಯನು ತಮ್ಮಂದಿರ ಮತವನ್ನವಧರಿಸಿ ಕುಬೇರನ ಮನೆಗೆ ಪ್ರದಕ್ಷಿಣೆಯನ್ನು ಮಾಡಿ, ಆ ಗಂಧಮಾದನಪರ್ವತದಲ್ಲಿರತಕ್ಕ ನದಿಗಳಿಗೂ ಸರೋವರಗಳಿಗೂ ರಾಕ್ಷಸರಿಗೂ ‘ನಾನು ತಮ್ಮಂದಿರೊಡನೆ ಹೋಗಿಬರುತ್ತೇನೆ’ ಎಂದು ತಿಳಿಯಿಸಿ, ತಾನು ಬಂದಮಾರ್ಗದಲ್ಲೇ ಹಿಂದಕ್ಕೆ ಹೊರಟು, ತಿರುಗಿ ಆ ಗಂಧಮಾದನಪರ್ವತವನ್ನು ನೋಡಿ—‘ಎಲೈ ಪರ್ವತಶ್ರೇಷ್ಠನೆ, ನಾನು ಮಿತ್ರರೊಡಗೂಡಿ ಶತ್ರುಗಳನ್ನು ಸಂಹರಿಸಿ ರಾಜ್ಯವನ್ನು ಪಡೆದು, ಅಶ್ವಮೇಧಾದಿ ಯಜ್ಞಗಳನ್ನು ಮಾಡಿ, ಮನಸ್ಸನ್ನು ನಿಗ್ರಹಿಸಿಕೊಂಡು ತಪಸ್ಸು ಮಾಡುವದಕ್ಕೋಸ್ಕರ ಪುನಃ ಇಲ್ಲಿಗೆ ಬರುವೆನು’ ಎಂದು ನುಡಿದು, ತಮ್ಮಂದಿರಿಂದಲೂ ಬ್ರಾಹ್ಮಣರಿಂದಲೂ ಕೂಡಿ ಅಲ್ಲಿಂದ ಮರಳಲು, ಆ ಸಮಯದಲ್ಲಿ ಘಟೋತ್ಕಚನು ತನ್ನ ಪರಿವಾರದೊಡನೆ ಅಲ್ಲಿಗೆ ಬಂದು ಅವರೆಲ್ಲರನ್ನೂ ಪೂರ್ವದಂತೆ ಹೊತ್ತುಕೊಂಡು ಹೊರಟನು. ಅವನ್ನು ನೋಡಿ ಲೋಮಶಮಹರ್ಷಿಯು ತಂದೆಯು ಪ್ರೀತಿಯಿಂದ ಮಕ್ಕಳಿಗೆ ಬುದ್ಧಿಯನ್ನು ಹೇಳುವಂತೆ ಪಾಂಡವರಿಗೆ ಬುದ್ಧಿಯನ್ನು ಹೇಳಿ, ಪುಣ್ಯತಮವಾದ ದೇವಲೋಕಕ್ಕೆ ಹೊರಟು ಹೋದನು. ಬಳಿಕ ಪಾಂಡವರು ಆರ್ಷ್ಟಿಷೇಣನ ಅನುಜ್ಞೆಯನ್ನು ತೆಗೆದುಕೊಂಡು, ಮಾರ್ಗದಲ್ಲಿರುವ ಪುಣ್ಯತಮವಾದ ತೀರ್ಥಗಳನ್ನೂ ರಮ್ಯವಾದ ತಪೋವನಗಳನ್ನೂ ಮಹತ್ತಾದ ಸರೋವರಗಳನ್ನೂ ನೋಡುತ್ತ ಸಂತೋಷದಿಂದ ತೆರಳಿದರು.

---

## ೧೩೩ನೇ ಅಧ್ಯಾಯ.—ಆಜಗರಪರ್ವದಲ್ಲಿ ಪುನರ್ದ್ವೈತವನಪ್ರವೇಶ.

ವೈಶಂಪಾಯನಮುನೀಂದ್ರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಪಾಂಡವರು ಧನುಸ್ಸು ಖಡ್ಗ ಮೊದಲಾದ ಆಯುಧಗಳನ್ನು ಧರಿಸಿ, ನಾನಾವಿಧವಾದ ಗಿರಿನದಿಗಳಿಂದಲೂ ದಿಗ್ಗಜಗಳಿಂದಲೂ ಮೃಗಪಕ್ಷಿಗಳಿಂದಲೂ ಕಿನ್ನರರಿಂದಲೂ ರಮಣೀಯವಾದ ಗಂಧಮಾದನಪರ್ವತದಲ್ಲಿ ಸುಖವಾಗಿದ್ದು, ಆ ಸ್ಥಳವನ್ನು ಬಿಟ್ಟು ಬರಲಾರದೆ ದುಃಖದಿಂದ ಅಲ್ಲಿಂದ ಹೊರಟು, ಕುಬೇರನಿಗೆ ಪ್ರೀತಿಕರವಾಗಿ ಮಹಾಮೇಘದಂತಿರುವ ಕೈಲಾಸಪರ್ವತವನ್ನು ಮಾರ್ಗದಲ್ಲಿ ನೋಡಿ ಸಂತೋಷಪಟ್ಟರು. ಎತ್ತರವಾದ ಆ ಪರ್ವತದಲ್ಲಿ ಅಲ್ಲಲ್ಲಿ ಕಾಣಬರುವ ಸಿಂಹಗಳು ವಾಸಮಾಡತಕ್ಕ ಸ್ಥಳಗಳನ್ನೂ, ಅಲ್ಲಿಂದ ನದೀಪ್ರವಾಹಗಳು ಕೆಳಕ್ಕೆ ಬರುವದಕ್ಕಾಗಿ ಅಲ್ಲಲ್ಲಿ ರಚಿಸಿರುವ ಸೇತುವೆಗಳನ್ನೂ, ಗಿರಿನದಿಗಳು ವೇಗದಿಂದ ಹಳ್ಳಬಿದ್ದಿರತಕ್ಕ ಸ್ಥಳಗಳನ್ನೂ, ಕಾಡಾನೆ

ಜಿಂಕೆ ಮೊದಲಾದ ಮೃಗಗಳಿಂದಲೂ ಅನೇಕ ಪಕ್ಷಿಗಳಿಂದಲೂ ಸೇವಿತವಾದ ಮಹತ್ತಾದ ಅರಣ್ಯಗಳನ್ನೂ ನೋಡುತ್ತ; ಸಂತೋಷಭರಿತರಾಗಿ ಪುಣ್ಯತಮವಾದ ವನಗಳಲ್ಲಿಯೂ ನದೀತೀರಗಳಲ್ಲಿಯೂ ಸರೋವರ ಪ್ರದೇಶಗಳಲ್ಲಿಯೂ ಪರ್ವತಗಳ ಗುಹೆಗಳಲ್ಲಿಯೂ ಒಂದೊಂದು ಆಹಸ್ಸೂ ರಾತ್ರಿಯೂ ವಾಸಮಾಡುತ್ತ; ಅತಿದುರ್ಗಮವಾದ ಕೈಲಾಸಪರ್ವತವನ್ನತಿಕ್ರಮಿಸಿ, ರಮ್ಯವಾದ ವೃಷಪರ್ವರಾಯನ ಆಶ್ರಮಕ್ಕೆ ಬಂದು ಸೇರಿದರು. ಬಳಿಕ ಆ ವೃಷಪರ್ವರಾಜರ್ಷಿಯು ತಮ್ಮನ್ನು ಸತ್ಕಾರಪೂರ್ವಕವಾಗಿ ಕಾಣಲು, ಪಾಂಡವರು ತಾವು ಗಂಧಮಾದನಪರ್ವತದಲ್ಲಿ ವಾಸಮಾಡಿದ ವೃತ್ತಾಂತವನ್ನು ವಿಸ್ತಾರವಾಗಿ ಆತನಿಗೆ ತಿಳುಹಿಸಿ, ಆತನ ಆಶ್ರಮದಲ್ಲೇ ಆ ರಾತ್ರಿ ಸುಖವಾಗಿ ವಾಸಮಾಡಿದರು. ಬಳಿಕ ಅಲ್ಲಿಂದ ಮುಂದಕ್ಕೆ ಪ್ರಯಾಣಮಾಡಿ, ಪುನಃ ಬದರಿಕಾಶ್ರಮಕ್ಕೆ ಬಂದು ನಾರಾಯಣಾಶ್ರಮವನ್ನು ಸೇರಿ, ಅಲ್ಲಿ ಕುಬೇರನಿಗೆ ಪ್ರಿಯವಾಗಿಯೂ ದೇವತೆಗಳಿಂದಲೂ ಸಿದ್ಧರಿಂದಲೂ ಸೇವಿತವಾಗಿಯೂ ಇರುವ ದಿವ್ಯವಾದ ಸರೋವರವನ್ನು ನೋಡಿ, ಸುಖವಾಗಿ ಆ ಬ್ರಾಹ್ಮಣರಿಂದ ಸಹಿತರಾಗಿ ಬ್ರಹ್ಮರ್ಷಿಗಳು ನಂದನವನವನ್ನು ಸೇರಿ ವಿಹರಿಸುವಂತೆ ಅಲ್ಲಿ ವಿಹಾರವನ್ನು ಮಾಡುತ್ತ, ಒಂದು ತಿಂಗಳು ಆ ಬದರಿಕಾಶ್ರಮದಲ್ಲಿಯೆ ಸುಖವಾಗಿದ್ದರು. ಬಳಿಕ ಕಿರಾತರಾಜನಾದ ಸುಬಾಹುವಿನ ಪಟ್ಟಣಕ್ಕೆ ಬಂದರು. ಆಗ ಸುಬಾಹುವು ತನ್ನ ಪಟ್ಟಣಕ್ಕೆ ಪಾಂಡವರು ಬಂದದ್ದನ್ನು ತಿಳಿದು, ಪ್ರೀತಿಯಿಂದ ಎದುರುಗೊಂಡು ಮನೆಗೆ ಕರದುಕೊಂಡು ಹೋಗಿ ಅವರಿಗೆ ಸತ್ಕಾರವನ್ನು ಮಾಡಿದನು. ಆಗ ಆತನಿಂದ ಸತ್ಕೃತರಾದ ಪಾಂಡವರು ಅಲ್ಲಿ ವಿಶೋಕನೇ ಮೊದಲಾದ ತಮ್ಮ ಸಾರಥಿಗಳಿಂದಲೂ ಇಂದ್ರಸೇನನೇ ಮೊದಲಾದ ಪರಿಚಾರಕರಿಂದಲೂ ಸಹಿತರಾಗಿ ಆ ರಾತ್ರಿ ಸುಖವಾಗಿದ್ದು, ತಮ್ಮ ಗುಡಾರವೊದಲಾದ ಸಾಮಗ್ರಿಗಳನ್ನು ತೆಗೆದುಕೊಂಡು, ಪರಿವಾರದೊಡನೆ ತಮ್ಮ ರಥಗಳನ್ನೇರಿ, ರಾಕ್ಷಸರಿಂದ ಕೂಡಿದ ಘಟೋತ್ಕಚನನ್ನು ಆತನ ಸ್ಥಳಕ್ಕೆ ಕಳುಹಿಸಿಕೊಟ್ಟು, ಹಿಮಮಯವಾಗಿಯೂ ಶುಭ್ರವಾದ ಅರತಪ್ಪಲುಳ್ಳದ್ದಾಗಿಯೂ ಇರುವ ಯಮುನೋದ್ಗಮವೆಂಬ ಪರ್ವತಕ್ಕೆ ಬಂದು, ವಿಶಾಖಯೂಪವೆಂಬ ಕ್ಷೇತ್ರದಲ್ಲಿ ವಾಸಮಾಡುತ್ತ, ನಾನಾವಿಧವಾದ ಮೃಗಪಕ್ಷಿಗಳಿಂದ ಸೇವಿತವಾಗಿಯೂ ಚೈತ್ರರಥದಂತೆ ಪ್ರಕಾಶಮಾನವಾಗಿಯೂ ಇರುವ ಅಲ್ಲಿದ್ದ ಒಂದು ಮಹತ್ತಾದ ಅರಣ್ಯದಲ್ಲಿ ಸುಖವಾಗಿ ಮೃಗಗಳನ್ನು ಬೇಟೆಯಾಡುತ್ತ, ಒಂದು ಸಂವತ್ಸರದ ವರೆಗೂ ಅಲ್ಲಿ ವಾಸಮಾಡುತ್ತಿದ್ದರು. ಆಗ ಒಂದಾನೊಂದು ದಿವಸ ಭೀಮಸೇನನು ಅಲ್ಲಿದ್ದ ಒಂದು ಪರ್ವತದ ಗುಹಾಪ್ರದೇಶದಲ್ಲಿ ಬೇಟೆಯಾಡುತ್ತಿರಲು, ಅತಿಬಲಿಷ್ಠವಾಗಿಯೂ ಹಸಿದಿರತಕ್ಕದ್ದಾಗಿಯೂ ಮೃತ್ಯುವಿನಂತೆ ಘೋರವಾದ ರೂಪುಳ್ಳದ್ದಾಗಿಯೂ ಇರುವ ಒಂದು ಹೆಬ್ಬಾವು ಆತನಿಗೆ ಸುತ್ತಿಕೊಂಡಿತು. ಆದರಿಂದ ಆತನು ಎಷ್ಟು ಯತ್ನಿಸಿದರೂ ಬಿಡಿಸಿಕೊಳ್ಳುವದಕ್ಕಾಗದೆ ಚಿಂತೆಪಡುತ್ತ ಬಹಳವಾಗಿ ದುಃಖಪಟ್ಟನು. ಆ ಸಮಯದಲ್ಲಿ ಮಹಾಪರಾಕ್ರಮಶಾಲಿಯಾದ ಧರ್ಮರಾಯನು ಆ ಸ್ಥಳಕ್ಕೆ ಹೋಗಿ, ಆ ಹೆಬ್ಬಾವಿನಿಂದ ಪೀಡಿತನಾದ ಭೀಮಸೇನನನ್ನು ನೋಡಿ, ಆತನನ್ನು ಬಿಡಿಸಿಕೊಂಡನು. ಬಳಿಕ ಧನುರ್ವಿದ್ಯಾಪಾರಂಗತರಾದ ಆ ಪಾಂಡವರು ಹನ್ನೆರಡನೆಯ ವರ್ಷವು ತುಂಬುತ್ತಬರಲು, ಆ ವನಪ್ರದೇಶವನ್ನು ಬಿಟ್ಟು, ಮಹತ್ತಾದ ತಪಸ್ಸಿನಿಂದಲೂ ತೇಜಸ್ಸಿನಿಂದಲೂ ಪ್ರಕಾಶಿಸುತ್ತ ಮರುಧನ್ವದೇಶಕ್ಕೆ ಬಂದು, ಅಲ್ಲಿಂದ ಸರಸ್ವತೀನದಿಯ ತೀರಕ್ಕೆ ಹೋಗಿ ಅಲ್ಲಿ ಇಳಿದುಕೊಂಡಿದ್ದು, ಆ ಮಾರ್ಗವಾಗಿಯೇ ದ್ವೈತವನಕ್ಕೆ ಬಂದು ಸೇರಿದರು. ಈ ಪ್ರಕಾರ ದ್ವೈತವನಕ್ಕೆ ಬಂದ ಪಾಂಡವರನ್ನು ನೋಡಿ ತಪಸ್ವಿಗಳಾಗಿಯೂ ಜಿತೇಂದ್ರಿಯರಾಗಿಯೂ ಸದಾಚಾರಶೀಲರಾಗಿಯೂ ಯೋಗನಿಷ್ಠರಾಗಿಯೂ ಇರುವ ಅನೇಕಮಂದಿ ವಾನಪ್ರಸ್ಥಾಶ್ರಮಿಗಳು ಆಸನಾರ್ಥವಾಗಿ ದರ್ಭೆಗಳನ್ನೂ ಪಾದ್ಯಾರ್ಥವಾಗಿ ಉದಕಪಾತ್ರೆಯನ್ನೂ ಧರಿಸಿಕೊಂಡು ಅಲ್ಲಿಗೆ ಬಂದರು. ಸರಸ್ವತೀತೀರವಾದ ಆ ಪ್ರದೇಶವು ಆಲ, ರುದ್ರಾಕ್ಷ, ರೌಹೀತಕ, ಬದರಿ, ಕಗ್ಗಲಿ, ಬಾಗಿ, ಬಿಲ್ವಪತ್ರೆ, ಇಂಗುದ, ಬನ್ನಿ, ಪೀಲು, ಕರೀರ ಮೊದಲಾದ ವೃಕ್ಷಗಳಿಂದಲೂ ಬೆತ್ತದಬಳ್ಳಿಗಳಿಂದಲೂ ಕೂಡಿ ಶೋಭಿಸುತ್ತಿತ್ತು. ಬಳಿಕ ಪಾಂಡವರು ಯಕ್ಷರಿಂದಲೂ ಗಂಧರ್ವರಿಂದಲೂ ಮಹರ್ಷಿಗಳಿಂದಲೂ ಸೇವಿತವಾಗಿ ದೇವತೆಗಳ ವಾಸಸ್ಥಾನದಂತಿರುವ ಆ ಸರಸ್ವತೀನದಿಯ ತೀರದಲ್ಲಿ ಅಧಿಕವಾದ ಸಂತೋಷದಿಂದ ಸುಖವಾಗಿ ವಿಹರಿಸುತ್ತಿದ್ದರು.

## ೧೭೮ನೇ ಅಧ್ಯಾಯ.—ಆಜಗರಪರ್ವ—(ಭೀಮನನ್ನು ಅಜಗರವು ಹಿಡಿದದ್ದು).

ಬಳಿಕ ಜನಮೇಜಯರಾಯನು ವೈಶಂಪಾಯನಮುನೀಶ್ವರನನ್ನು ಕುರಿತು—ಎಲೈ ಮುನೀಂದ್ರನೆ, ಹತ್ತು ಸಾವಿರ ಆನೆಯ ಬಲವೂ ಭಯಂಕರವಾದ ಪರಾಕ್ರಮವೂ ಉಳ್ಳ ಭೀಮಸೇನನು ಆ ಅಜಗರದ ದೆಸೆಯಿಂದ ಅಧಿಕವಾದ ಭಯವನ್ನು ಹ್ಯಾಗೆ ಪಡೆದನು? ಸೌಗಂಧಿಕಪುಷ್ಪವನ್ನು ತರುವದಕ್ಕಾಗಿ ಹೋಗಿ, ಆ ಪದ್ಮಸರೋವರದ ಸಮೀಪದಲ್ಲಿ ಅನೇಕಮಂದಿ ಯಕ್ಷರಾಕ್ಷಸರನ್ನು ಸಂಹರಿಸಿ, ದರ್ಪದಿಂದ ಕುಬೇರನನ್ನು ಯುದ್ಧಕ್ಕೆ ಕರೆದ ಭೀಮಸೇನನು ಒಂದು ಹೆಬ್ಬಾವಿನಿಂದ ಭಯಪಟ್ಟನೆಂದು ನೀನು ಹೇಳುವೆ. ಇದು ಆಶ್ಚರ್ಯವಾದದ್ದು! ಕೇಳಬೇಕೆಂದು ನನಗೆ ಅಪೇಕ್ಷೆಯುಂಟಾಗಿರುವದರಿಂದ ಅದನ್ನು ವಿವರಿಸು—ಎನಲು, ವೈಶಂಪಾಯನಮುನೀಂದ್ರನು ಜನಮೇಜಯನನ್ನು ಕುರಿತು ಹೇಳುತ್ತಾನೆ: ರಾಜರ್ಷಿಯಾದ ವೃಷಪರ್ವನ ಆಶ್ರಮದಲ್ಲಿ ಧನುರ್ಧಾರಿಗಳಾದ ಪಾಂಡವರು ವಾಸಮಾಡುತ್ತಿರಲು, ಸಾವಿರ ಆನೆಯ ಬಲವುಳ್ಳ ಭೀಮಸೇನನು ತಾನೊಬ್ಬನೇ ಧನುಷ್ಪಾಣಿಯಾಗಿ ಖಡ್ಗವನ್ನು ಧರಿಸಿ ಆ ಆಶ್ರಮದಿಂದ ಹೊರಟು, ದೇವತೆಗಳಿಂದಲೂ ಗಂಧರ್ವರಿಂದಲೂ ಸೇವಿತವಾದ ವನಗಳನ್ನೂ, ದೇವರ್ಷಿಗಳಿಂದಲೂ ಸಿದ್ಧರಿಂದಲೂ ಅಪ್ಸರಸ್ತ್ರೀಯರಿಂದಲೂ ಸೇವಿತವಾದ ಮಂಗಳಕರವಾದ ಹಿಮವತ್ಪರ್ವತದ ಪ್ರದೇಶಗಳನ್ನೂ, ಚಕೋರ ಚಕ್ರವಾಕ ಕೋಗಿಲೆ ಮೊದಲಾದ ಪಕ್ಷಿಗಳ ಧ್ವನಿಗಳಿಂದ ಮನೋಹರವಾಗಿಯೂ ಹಿಮದಿಂದ ಕೋಮಲವಾಗಿಯೂ ನಿಬಿಡವಾದ ನೆರಳುಳ್ಳದ್ದಾಗಿಯೂ ಇರುವ ವೃಕ್ಷಗಳನ್ನೂ, ಹಿಮದಂತೆ ಶುಭ್ರವಾದ ಹಂಸೆ ಮೊದಲಾದ ಪಕ್ಷಿಗಳಿಂದ ಸೇವಿತವಾಗಿ ವೈಡೂರ್ಯಮಣಿಯಂತಿರುವ ಉದಕದಿಂದ ಭರಿತವಾದ ಗಿರಿನದಿಗಳನ್ನೂ, ಮೇಘವನ್ನು ಹಿಡಿಯುವದಕ್ಕೆ ಬೀಸಿದ ಬಲೆಯಂತಿರುವ ಕೃಷ್ಣಾಗರು ಶ್ರೀಗಂಧಗಳಿಂದ ಕೂಡಿದ ದೇವದಾರುವನಗಳನ್ನೂ, ಮಾರ್ಗದಲ್ಲಿ ವಿನೋದವಾಗಿ ನೋಡುತ್ತ; ಸಮವಾಗಿರುವ ನಿರ್ಜಲಪ್ರದೇಶವನ್ನು ಹೊಕ್ಕು, ಅಲ್ಲಿದ್ದ ಮೃಗಗಳನ್ನು ಪರಿಶುದ್ಧವಾದ ಬಾಣಗಳಿಂದ ಬೇಟೆಯಾಡಿ, ಹುಲಿಗಳನ್ನೂ ಕಾಡಹಂದಿಗಳನ್ನೂ ಕಾಡಕೋಣಗಳನ್ನೂ ಸಂಹಾರಮಾಡಿ, ಅಲ್ಲಲ್ಲಿ ವಿಹರಿಸುತ್ತ, ದೊಡ್ಡದೊಡ್ಡದಾದ ವೃಕ್ಷಗಳನ್ನು ಕೈಯಿಂದ ಕಿತ್ತು, ಪರ್ವತಪ್ರದೇಶದಲ್ಲಿ ಪ್ರತಿಧ್ವನಿಯಾಗುವಂತೆ ಅವುಗಳನ್ನು ಆ ನೆಲದಮೇಲೆ ಒಗೆದನು. ಆ ವೀರಾಗ್ರೇಸರನು ಅಧಿಕವಾದ ದರ್ಪದಿಂದ ಭುಜವನ್ನು ತಟ್ಟಿಕೊಳ್ಳುತ್ತ ಹಾಗೇ ಚಪ್ಪಾಳೆಯನ್ನು ಹಾಕುತ್ತ ಸಂತೋಷದಿಂದ ಸಿಂಹನಾದವನ್ನು ಮಾಡಿದನು. ಅದನ್ನು ಕೇಳಿ, ಆ ವನದಲ್ಲಿದ್ದ ದೊಡ್ಡದೊಡ್ಡದಾದ ಆನೆಗಳೂ ಮಹಾ ಬಲಶಾಲಿಗಳಾದ ಸಿಂಹಗಳೂ ಸಹ ಭಯಪಟ್ಟು, ಪರ್ವತದ ಗುಹೆಗಳನ್ನು ಬಿಟ್ಟು ಓಡಿಹೋದವು. ಆಗ ಬೇಟೆಯಾಡುವದಕ್ಕಾಗಿ ಭೀಮಸೇನನು ಕೆಲವು ಸ್ಥಳಗಳಲ್ಲಿ ಓಡುತ್ತಲೂ ಕೆಲವು ಸ್ಥಳಗಳಲ್ಲಿ ನಿಲ್ಲುತ್ತಲೂ ಕೆಲವು ಸ್ಥಳಗಳಲ್ಲಿ ಕೂತುಕೊಳ್ಳುತ್ತಲೂ ಆ ಘೋರಾರಣ್ಯದಲ್ಲಿ ನಿರ್ಭಯವಾಗಿ ಸಂಚರಿಸುತ್ತ, ಅಲ್ಲಲ್ಲಿ ಸಿಂಹನಾದವನ್ನು ಮಾಡುತ್ತ, ಮೃಗಗಳನ್ನೂ ಘೋರವಾದ ಸರ್ಪಗಳನ್ನೂ ದಿಕ್ಕುದಿಕ್ಕಿಗೆ ಓಡಿಸುತ್ತ, ಅವುಗಳನ್ನು ಬೆನ್ನಟ್ಟಿ ಸ್ವಲ್ಪದೂರ ಹೋಗಿ, ಅಲ್ಲಿದ್ದ ಒಂದು ಬೆಟ್ಟದ ದುರ್ಗಮವಾದ ಕಮರಿಯಲ್ಲಿ ತನ್ನ ಶರೀರವನ್ನು ಮುದುರಿಕೊಂಡು ಬಿದ್ದಿದ್ದ ಘೋರವಾದ ಒಂದು ಹೆಬ್ಬಾವನ್ನು ನೋಡಿದನು. ಪರ್ವತದಂತೆ ದೊಡ್ಡದಾಗಿ ವಿಚಿತ್ರವಾದ ಶರೀರವುಳ್ಳದ್ದಾಗಿಯೂ, ಅರಿಸಿನದಂತಿರುವ ಮೈಬಣ್ಣವುಳ್ಳದ್ದಾಗಿಯೂ, ಪರ್ವತದ ಗುಹೆಯಂತೆ ದೊಡ್ಡದಾದ ಬಾಯಿಂದಲೂ ನಾಲ್ಕು ಕೋರೆದಾಡೆಗಳಿಂದಲೂ ಪ್ರಕಾಶಮಾನವಾಗಿಯೂ, ಕೆಂಪಾದ ಕಣ್ಣುಗಳಿಂದ ಘೋರವಾಗಿಯೂ, ಯಮನಂತೆ ಸಕಲಪ್ರಾಣಿಗಳಿಗೂ ಭಯಂಕರವಾದ ನಾಲಿಗೆಯಿಂದ ಕಟವಾಯನ್ನು ಸವರಿಕೊಳ್ಳುತ್ತಾ ತನ್ನ ಶ್ವಾಸೋಚ್ಛ್ವಾಸಗಳಿಂದ ಪ್ರಾಣಿಗಳನ್ನು ಜಬರಿಸುವಂತೆ ಕಾಣುತ್ತಿದ್ದ ಆ ಸರ್ಪವು ಭೀಮಸೇನನ ಸಮೀಪಕ್ಕೆ ಬಲಾತ್ಕಾರದಿಂದ ಬಂದು ಕೋಪದಿಂದ ಆತನ ಎರಡು ಕೈಗಳನ್ನೂ ಹಿಡಿದುಕೊಂಡಿತು. ಆಗ ಹತ್ತುಸಾವಿರ ಆನೆಯಬಲವುಳ್ಳ ತೇಜಸ್ವಿಯಾದ ಭೀಮಸೇನನು ವರಪ್ರದಾನದಿಂದ ಬಲಿಷ್ಠವಾದ ಆ ಹೆಬ್ಬಾವಿನಿಂದ ಬಿಗಿಯಲ್ಪಟ್ಟು, ಮಂಕುಹಿಡಿದು, ಆ ಸರ್ಪದಿಂದ ಬಿಡಿಸಿಕೊಳ್ಳುವದಕ್ಕೂ ಅದನ್ನು ನಿಗ್ರಹಿಸುವದಕ್ಕೂ ಎಷ್ಟು ಪ್ರಯತ್ನಮಾಡಿದರೂ ಆಗದೆ ಚಿಂತಿಸುತ್ತಿದ್ದನು.

## ೧೭೯ನೇ ಅಧ್ಯಾಯ.—ಆಜಗರಪರ್ವ—(ಧರ್ಮಜನು ಭೀಮನನ್ನು ಕಾಣಬಂದದ್ದು).

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಆಗ ತೇಜಸ್ವಿಯಾದ ಭೀಮಸೇನನು ಹೆಬ್ಬಾವಿಗೆ ಕಟ್ಟುಬಿದ್ದು, ಆಶ್ಚರ್ಯಕರವಾದ ಆ ಸರ್ಪದ ಪರಾಕ್ರಮವನ್ನು ಚಿಂತಿಸುತ್ತ, ಅದನ್ನು ಕುರಿತು "ಎಲೈ ಸರ್ಪಶ್ರೇಷ್ಠನೆ, ನೀನು ಯಾರು? ನನ್ನನ್ನು ಏನುಮಾಡಬೇಕೆಂದು ಹಿಡಿದೆ? ಸರಿಯಾಗಿ ಹೇಳು. ನಾನು ಧರ್ಮರಾಯನ ತಮ್ಮನಾದ ಭೀಮಸೇನನು; ಹತ್ತುಸಾವಿರ ಆನೆಯ ಬಲವುಳ್ಳವನು. ನಾನು ಬೇಟೆಯಲ್ಲಿ ಸಿಂಹ ವ್ಯಾಘ್ರ ವರಾಹ ಮಹಿಷ ಮೊದಲಾದ ಘೋರಮೃಗಗಳನ್ನು ಸಂಹಾರಮಾಡಿರುವೆನು. ಬಲಿಷ್ಠವಾದ ಸರ್ಪಗಳೂ ಪಿಶಾಚಗಳೂ ರಾಕ್ಷಸರೂ ಸಹ ನನ್ನ ಭುಜಬಲವನ್ನು ಸಹಿಸುವದಕ್ಕೆ ಸಮರ್ಥರಲ್ಲ. ನೀನು ನನ್ನನ್ನು ಯಾವದಾದರೊಂದು ವಿದ್ಯಾಬಲದಿಂದ ಹಿಡಿದೆಯೋ, ಹಾಗಲ್ಲದಿದ್ದರೆ ಯಾವದಾದರೊಂದು ವರಪ್ರಸಾದದಿಂದ ನನ್ನನ್ನು ವಶಮಾಡಿಕೊಂಡೆಯೋ? ನಾನು ನಿನ್ನಿಂದ ಬಿಡಿಸಿಕೊಳ್ಳಬೇಕೆಂದು ಎಷ್ಟು ಪ್ರಯತ್ನಮಾಡಿದರೂ, ನೀನು ನನ್ನ ಪ್ರಯತ್ನವು ನಡೆಯದಂತೆ ಮಾಡಿರುವೆ. ಇದನ್ನು ವಿಚಾರಮಾಡಿದ್ದೇ ಆದರೆ, ನನಗಿದ್ದ ಹತ್ತುಸಾವಿರ ಆನೆಯಬಲವೂ ಈಗ ನಷ್ಟವಾದದ್ದರಿಂದ ಮನುಷ್ಯರ ಪರಾಕ್ರಮವು ನಿಜವಾದದ್ದಲ್ಲವೆಂದು ನನಗೆ ತೋರುತ್ತಿರುವದು" ಎನಲು; ಆ ಸರ್ಪವು ಭೀಮಸೇನನನ್ನು ನೋಡಿ, ಆತನ ಎರಡು ಕೈಗಳನ್ನು ಮಾತ್ರ ಬಿಟ್ಟು ಮಯ್ಯನ್ನೆಲ್ಲಾ ತನ್ನ ಮಯ್ಯಿಂದ ಬಿಗಿದು ಸುತ್ತಿಕೊಂಡು "ಎಲೈ ಭೀಮಸೇನನೆ, ಲೋಕದಲ್ಲಿ ಎಲ್ಲಾ ಪ್ರಾಣಿಗಳಿಗೂ ತಮ್ಮತಮ್ಮ ಪ್ರಾಣವು ಪ್ರಿಯವಾದದ್ದೇ ಸರಿ. ಆದರೆ ಈ ದಿವಸ ದೈವಯೋಗದಿಂದ ನೀನು ಹಸಿದಿದ್ದ ನನಗೆ ಆಹಾರವಾಗಿ ಸಿಕ್ಕಿದೆ. ಇದು ನನಗೆ ಪ್ರಾಪ್ತವಾಗಿರುವ ಶಾಪಕ್ಕೆ ಅವಸಾನಕಾಲವಾಗಿರುವದು. ನಾನು ಯಾತಕ್ಕೋಸ್ಕರ ಈ ಸರ್ಪಜನ್ಮವನ್ನು ಪಡೆದೆನೋ ಅದನ್ನು ಅವಶ್ಯವಾಗಿ ಹೇಳುತ್ತೇನೆ ಕೇಳು. ನಾನು ನಹುಷನೆಂಬ ರಾಜರ್ಷಿಯು. ನನ್ನ ವಿಷಯವನ್ನು ನೀನು ತಿಳಿದೇ ಇರುವೆ. ನಿಮ್ಮ ಪೂರ್ವಿಕನಾದ ಆಯುಮಹಾರಾಜನಿಗೆ ನಾನು ವಂಶಕರನಾದ ಮಗನಾಗಬೇಕು. ಇಂಥ ನಾನು ಬ್ರಾಹ್ಮಣಾವಮಾನವನ್ನು ಮಾಡಿ, ಅಗಸ್ತ್ಯರ ಶಾಪದಿಂದ ಇಂಥ ಜನ್ಮವನ್ನು ಪಡೆದೆನು. ನನ್ನ ದುರದೃಷ್ಟವನ್ನು ನೋಡು. ನೀನು ನನಗೆ ಜ್ಞಾತಿಯಾಗಿಯೂ ಅವಧ್ಯನಾಗಿಯೂ ಪ್ರಿಯನಾಗಿಯೂ ಇದ್ದರೂ, ನಾನು ನರಮಾಂಸವನ್ನು ಭಕ್ಷಿಸಬೇಕೆಂದು ಪ್ರಯತ್ನಮಾಡಿರುವೆನು. ನನಗೆ ಮಧ್ಯಾಹ್ನಕಾಲದಲ್ಲಿ ಸಿಕ್ಕಿದ ಮನುಷ್ಯನೇ ಆಗಲಿ, ಆನೆಯೇ ಆಗಲಿ, ಕಾಡಕೋಣವೇ ಆಗಲಿ, ನನ್ನಿಂದ ಬಿಡಿಸಿಕೊಂಡು ಹೋಗುವದಕ್ಕಾಗುವದಿಲ್ಲ. ನೋಡು, ದೈವಗತಿಯು ಹ್ಯಾಗಿರುವದು. ಎಲೈ ಭೀಮಸೇನನೆ, ಸಾಮಾನ್ಯವಾಗಿ ತಿರ್ಯಗ್ಯೋನಿಯಲ್ಲಿ ಹುಟ್ಟಿದ ಸರ್ಪದ ಕೈಗೆ ನೀನು ಸಿಕ್ಕಿದಹಾಗೆ ಭಾವಿಸಬೇಡ. ಇದು ನಾನು ಪಡೆದಿರತಕ್ಕ ವರದ ಮಹಿಮೆಯೆಂದು ತಿಳಿ. ಮೊದಲು ನಾನು ಇಂದ್ರನ ಸಿಂಹಾಸನದ ದೆಸೆಯಿಂದ ಭೂಮಿಯಮೇಲೆ ಬೀಳುವ ಕಾಲದಲ್ಲಿ ಅಗಸ್ತ್ಯಮಹರ್ಷಿಯನ್ನು ಕುರಿತು 'ನನಗೆ ಶಾಪಾವಸಾನದ ಕಾಲವನ್ನು ಹೇಳಬೇಕು' ಎಂದು ಪ್ರಾರ್ಥಿಸಲು, ಆ ಮಹರ್ಷಿಯು ನನ್ನಲ್ಲಿ ದಯೆಯುಳ್ಳವನಾಗಿ 'ಎಲೈ ರಾಯನೆ, ಕೆಲವುಕಾಲ ಕಳೆಯಲು, ನಿನ್ನ ಪ್ರಶ್ನೆಗಳಿಗೆ ಯಾವನು ಉತ್ತರವನ್ನು ಕೊಡುವನೋ, ಆಗ ನಿನಗೆ ಶಾಪಾವಸಾನವಾಗುವದು. ಮತ್ತು ಹೆಬ್ಬಾವಾದ ನೀನು ಎಂಥ ಬಲಿಷ್ಠವಾದ ಪ್ರಾಣಿಯನ್ನು ಹಿಡಿದರೂ, ಅದರ ಬಲವು ಕ್ಷೀಣವಾಗುವದು' ಎಂದು ಹೇಳಿದನು. ಬಳಿಕ ನಾನು ಸ್ವರ್ಗದಿಂದ ಭೂಮಿಯಮೇಲೆ ಬಿದ್ದೆನು. ಆಗಲಿಂದಲೂ ನನಗೆ ಮೊದಲು ನಡೆದದ್ದೆಲ್ಲಾ ಸ್ಮೃತಿಯಲ್ಲೇ ಇರುವದು. ನಾನು ನನ್ನ ದುಷ್ಕರ್ಮದಿಂದ ಈ ಕೆಟ್ಟ ಜನ್ಮವನ್ನು ಹೊಂದಿ, ನರಕದುಃಖವನ್ನು ಅನುಭವಿಸುತ್ತ, ಶಾಪಾವಸಾನದ ಕಾಲವನ್ನು ನಿರೀಕ್ಷಿಸುತ್ತಿರುವೆನು" ಎಂದನು. ಬಳಿಕ ಭೀಮಸೇನನು "ಎಲೈ ಮಹಾಸರ್ಪವೆ, ನಾನು ನಿನ್ನಮೇಲೆ ಕೋಪವನ್ನು ಮಾಡತಕ್ಕವನಲ್ಲ, ಮತ್ತು ನನ್ನನ್ನೂ ನಾನು ನಿಂದಿಸಿಕೊಳ್ಳತಕ್ಕವನಲ್ಲ. ಸುಖದುಃಖಗಳನ್ನು ಅನುಭವಿಸತಕ್ಕ ಮನುಷ್ಯನು ಸಾಮರ್ಥ್ಯವಿಲ್ಲದವನಾಗಿಯೂ ಕೆಲವುಕಾಲ ಸಾಮರ್ಥ್ಯವುಳ್ಳವನಾಗಿಯೂ ಸುಖವನ್ನು ಅನುಭವಿಸುವನು; ಹಾಗೆಯೇ ದುಃಖವನ್ನೂ ಅನುಭವಿಸುವನು. ಎಂದಿಗಾದರೂ ಬರತಕ್ಕ ಸುಖದುಃಖಗಳು ಬಂದೇ ಬರುವವು. ಹೀಗಿರುವಲ್ಲಿ, ಪೌರುಷದಿಂದ ದೈವವನ್ನು ವಂಚಿಸುವದಕ್ಕೆ ಯಾರುತಾನೆ ಸಮರ್ಥರಾದಾರು? ಆದ್ದರಿಂದ ದೈವಪ್ರಯತ್ನವೇ ಶ್ರೇಷ್ಠವಾದದ್ದು;

ಪುರುಷಪ್ರಯತ್ನವು ನಿರರ್ಥಕವಾದದ್ದು. ಎಲೈ ಸರ್ಪಶ್ರೇಷ್ಠನೆ, ಈಗ ನಾನು ಹತ್ತು ಸಾವಿರ ಆನೆಯಬಲವುಳ್ಳವನಾಗಿದ್ದರೂ ದೈವಬಲವು ಕಡಮೆಯಾಗಿರುವದರಿಂದ, ನಿರ್ನಿಮಿತ್ತವಾಗಿ ಇಂಥ ದುರವಸ್ಥೆಯನ್ನು ಹೊಂದಬೇಕಾಯಿತು ನೋಡು. ರಾಜ್ಯಭ್ರಷ್ಟರಾದ ನಮ್ಮ ಅಣ್ಣತಮ್ಮಂದಿರು ವನವಾಸಮಾಡುವದನ್ನು ನೋಡಿ ನಾನು ಎಷ್ಟು ವ್ಯಸನಪಡುತ್ತಿರುವೆನೋ, ಈ ನನ್ನ ಶರೀರನಾಶದಿಂದ ಅಷ್ಟು ವ್ಯಸನಪಡತಕ್ಕವನಲ್ಲ. ಈ ಹಿಮಾಲಯವು ಅನೇಕರಾದ ಯಕ್ಷರಾಕ್ಷಸರಿಂದ ಕೂಡಿ ದುರ್ಗಮವಾಗಿರುವದು. ಈ ಪ್ರದೇಶದಲ್ಲಿ ನಮ್ಮ ಅಣ್ಣತಮ್ಮಂದಿರು ನನ್ನನ್ನು ಹುಡುಕಿಹುಡುಕಿ ಶ್ರಾಂತರಾಗಿ, ಬಳಿಕ ನಾನು ನಷ್ಟನಾದೆನೆಂದು ತಿಳಿದು, ರಾಜ್ಯವನ್ನು ಸಾಧಿಸುವದರಲ್ಲಿ ಪ್ರಯತ್ನವನ್ನು ಬಿಟ್ಟುಬಿಡುವರು. ಧರ್ಮಿಷ್ಠನಾದ ಧರ್ಮರಾಯನನ್ನು ನಾನು ರಾಜ್ಯಾಪೇಕ್ಷೆಯಿಂದ ಯಾವಾಗಲೂ ಬಾಧಿಸುತ್ತಿದ್ದೆನು. ಬಂದು ಪಕ್ಷದಲ್ಲಿ, ಅಸ್ತ್ರವಿದ್ಯಾಪಾರಂಗತನಾಗಿಯೂ ದೇವಗಂಧರ್ವರಾಕ್ಷಸರಿಂದಲೂ ಯುದ್ಧದಲ್ಲಿ ಜಯಿಸಲಶಕ್ಯನಾಗಿಯೂ ಇರುವ ಅರ್ಜುನನು ದೇವೇಂದ್ರನನ್ನಾದರೂ ಸ್ವರ್ಗದಿಂದ ಕೆಳಕ್ಕೆ ಕೆಡಹತಕ್ಕ ಸಾಮರ್ಥ್ಯವುಳ್ಳವನಾದ್ದರಿಂದ, ತಾನು ವ್ಯಸನವನ್ನು ಹೊಂದದೆ, ಲೋಕಕ್ಕೆ ದ್ವೇಷಿಯಾಗಿಯೂ ಡಾಂಭಿಕನಾಗಿಯೂ ಕಪಟದ್ಯೂತವನ್ನು ಬಲ್ಲವನಾಗಿಯೂ ಇರುವ ದುರ್ಯೋಧನನನ್ನು ನಿಗ್ರಹಿಸದೆ ಬಿಡಲಾರನು. ಆದರೆ ನಾನು ನಮ್ಮ ತಾಯಿಯಾದ ಕುಂತೀದೇವಿಯನ್ನು ಬಹಳವಾಗಿ ನೆನೆಯುತ್ತಲಿದೇನೆ. ಯಾವಾಗಲೂ ಮಕ್ಕಳಲ್ಲಿ ವಿಶೇಷವಾದ ಪ್ರೀತಿಯುಳ್ಳ ಆಕೆಯು ಪರರಿಗಿಂತಲೂ ನಾವು ಹೆಚ್ಚಾಗಿರಬೇಕೆಂದು ಹರಸುತ್ತಿದ್ದಳು. ಈಗ ನಾನು ನಷ್ಟವಾಗಿ ಹೋಗಲು, ಅನಾಥಳಾದ ಆಕೆಯ ಮನೋರಥವು ಹ್ಯಾಗೆ ಪೂರ್ಣವಾಗುವದು? ಮತ್ತು ಹಿರಿಯರಾದವರನ್ನೇ ಅನುವರ್ತಿಸಿಕೊಂಡು ಪೌರುಷಶಾಲಿಗಳಾಗಿರುವ ನಕುಲಸಹದೇವರು ಯಾವಾಗಲೂ ನನ್ನ ಬಾಹುಬಲದಿಂದ ರಕ್ಷಿತರಾಗಿದ್ದರು. ಈ ವಿಪತ್ತಿನಿಂದ ನಾನು ನಷ್ಟನಾದ ಬಳಿಕ ಅವರು ಉತ್ಸಾಹವಿಲ್ಲದೆ ಬಲಹೀನರಾಗಿ ದೀನದಶೆಯನ್ನು ಹೊಂದುವರೆಂದು ನನ್ನ ಮನಸ್ಸಿಗೆ ತೋರುತ್ತಿರುವದು" ಎಂದು ಅನೇಕಪ್ರಕಾರವಾಗಿ ಪ್ರಲಾಪಿಸುತ್ತ, ಆ ಭೀಮಸೇನನು ಆ ಹೆಬ್ಬಾವಿನ ಕಟ್ಟಿಗೆ ಸಿಕ್ಕಿ ಅಲ್ಲಾಡುವದಕ್ಕೂ ಸಹ ಆಸ್ಪದವಿಲ್ಲದೆ ಇದ್ದನು.

ಅತ್ತ ಧರ್ಮರಾಯನು ಅನೇಕವಾಗಿ ಅಪಶಕುನಗಳಾಗಲು, ಅದರಿಂದ ಕಳವಳಪಡುತ್ತಿದ್ದನು. ಆತನ ಬಲಭಾಗದಲ್ಲಿ ನರಿಗಳು ಘೋರವಾಗಿ ಕೂಗಿದವು. ದಿಕ್ಕುಗಳೆಲ್ಲಾ ಹತ್ತಿಕೊಂಡು ಉರಿಯುತ್ತಿದ್ದಂತೆ ಆತನ ಕಣ್ಣಿಗೆ ಕಾಣಿಸಿಕೊಂಡವು. ಬಂದು ರಕ್ಕೆಯೂ ಬಂದು ಕಣ್ಣೂ ಬಂದು ಕಾಲೂ ಉಳ್ಳ ಕೆಲವು ಪಕ್ಷಿವಿಶೇಷಗಳು ಸೂರ್ಯನೆದುರಿಗೆ ರಕ್ತವನ್ನು ಕಾರುತ್ತ ಬಹು ಘೋರವಾಗಿ ಆತನ ಕಣ್ಣಿಗೆ ಕಾಣಿಸಿಕೊಂಡವು. ಬಿರುಗಾಳಿಯು ಮರಳನ್ನು ತಂದು ಎರಚುತ್ತ ಕ್ರೂರವಾಗಿ ಬೀಸಿತು. ಆಗ ಮೃಗಪಕ್ಷಿಗಳ ಧ್ವನಿಗಳು ಆತನಿಗೆ ಎಡಭಾಗದಲ್ಲೇ ಕೇಳಬಂದವು. ಆತನ ಹಿಂಭಾಗದಲ್ಲಿ ಕಾಗೆಗಳು ಬಾ ಬಾ ಎಂದು ಶಬ್ದವನ್ನು ಮಾಡಿದವು. ಆತನ ಬಲಭುಜವು ಹಾರಿತು. ಎದೆಯು ಎಡದಭಾಗವೂ ಎಡಗಾಲೂ ಎಡಗಣ್ಣೂ ಸಹ ಅಪಶಕುನಸೂಚಕವಾಗಿ ಅದುರಿದವು. ಅದನ್ನೆಲ್ಲಾ ನೋಡಿ ಬುದ್ಧಿಶಾಲಿಯಾದ ಧರ್ಮರಾಯನು ಏನೋ ಮಹತ್ತಾದ ಭಯವು ಪ್ರಾಪ್ತವಾಗಿರುವದೆಂದು ಭಾವಿಸಿ, ದ್ರೌಪದಿಯನ್ನು ಕುರಿತು "ಭೀಮಸೇನನು ಎಲ್ಲಿಹೋಗಿರುವನು" ಎಂದು ಪ್ರಶ್ನೆಮಾಡಿದನು. ಬಳಿಕ ಆಕೆಯು "ಭೀಮಸೇನನು ಹೊರಟುಹೋಗಿ ಬಹಳ ಹೊತ್ತಾಯಿತು" ಎಂದು ನುಡಿದಳು. ಆ ಮಾತನ್ನು ಕೇಳಿ ಧರ್ಮರಾಯನು ಧೌಮ್ಯಾಚಾರ್ಯರೊಡಗೂಡಿ ದ್ರೌಪದಿಯನ್ನು ರಕ್ಷಿಸಿಕೊಂಡಿರುವಂತೆ ಅರ್ಜುನನಿಗೂ ನಕುಲಸಹದೇವರಿಗೂ ಅಲ್ಲಿದ್ದ ಬ್ರಾಹ್ಮಣರಿಗೂ ನೇಮಿಸಿ, ಆಶ್ರಮದಿಂದ ಭೀಮಸೇನನು ಹೋದ ಮಾರ್ಗವನ್ನೇ ಅನುಸರಿಸಿಕೊಂಡು ಹೊರಟು, ಆ ಮಹತ್ತಾದ ಅರಣ್ಯದಲ್ಲಿ ಭೀಮಸೇನನನ್ನು ಹುಡುಕುತ್ತ ಪೂರ್ವದಿಕ್ಕಿಗೆ ಹೊರಟು, ಅತ್ತಲಾಗಿ ದೊಡ್ಡದೊಡ್ಡದಾದ ಅನೇಕ ಮದ್ದಾನೆಗಳು ಹತವಾಗಿ ಉರುಳಿಹೋಗಿರುವದನ್ನು ನೋಡಿ, ಅಲ್ಲೆಲ್ಲಾ ಭೀಮಸೇನನು ತಿರುಗಾಡಿದ ಗುರುತನ್ನು ಕಂಡುಹಿಡಿದು, ಅಲ್ಲಿಂದ ಸ್ವಲ್ಪ ಮುಂದಕ್ಕೆ ಹೋಗಿ, ಅಲ್ಲಿ ಮೃತವಾಗಿ ಬಿದ್ದಿದ್ದ ಅನೇಕ ಸಿಂಹಗಳನ್ನೂ ಜಿಂಕೆಗಳನ್ನೂ ನೋಡಿ, ಆ ಮಾರ್ಗವನ್ನೇ ಹಿಡಿದು ಮುಂದಕ್ಕೆ ಹೊರಟು, ಭೀಮಸೇನನು ವೇಗದಿಂದ ಹೋಗುವ ಕಾಲದಲ್ಲಿ ಆತನ ತೊಡೆಯ ಗಾಳಿಯಿಂದ ಮುರಿದುಬಿದ್ದಿದ್ದ ಗಿಡಗಳನ್ನು

ಅಲ್ಲಲ್ಲಿ ಕಂಡು ಆದೇ ಗುರತನ್ನು ಹಿಡಿದುಕೊಂಡು ಹೋಗಿ, ಅತ್ತಲಾಗಿ ಬಂದು ಮಹತ್ತಾದ ಪರ್ವತದ ಕಮರಿಯನ್ನು ಕಂಡನು. ಆ ಕಮರಿಯು ಘೋರವಾದ ಬಿರುಗಾಳಿಯಿಂದಲೂ ಎಲೆಗಳಿಲ್ಲದ ಮರಗಳಿಂದಲೂ ಮತ್ತು ದೊಡ್ಡದೊಡ್ಡದಾದ ಕಲ್ಲುಬಂಡೆಗಳಿಂದಲೂ ಮೋಟುಮರಗಳಿಂದಲೂ ಕುರುಚಲುಗಿಡಗಳಿಂದಲೂ ಮುಳ್ಳುಗಿಡಗಳಿಂದಲೂ ದುರ್ಗಮವಾಗಿ ಕಾಣಿಸಿತು. ಆ ನಿರ್ಜಲಪ್ರದೇಶದಲ್ಲಿ ಹೆಬ್ಬಾವಿನಿಂದ ಹಿಡಿಯಲ್ಪಟ್ಟಿದ್ದ ಭೀಮಸೇನನನ್ನು ಕಂಡನು.

## ೧೮೦ನೇ ಅಧ್ಯಾಯ—ಆಜಗರಪರ್ವ—(ಭೀಮಸೇನನು ಅಜಗರದಿಂದ ಬಿಡಲ್ಪಟ್ಟದ್ದು).

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಸರ್ಪಪೀಡಿತನಾದ ಭೀಮಸೇನನನ್ನು ಕಂಡಬಳಿಕ ಧರ್ಮರಾಯನು ತನಗೆ ಪ್ರಿಯಭ್ರಾತೃವಾದ ಆತನನ್ನು ಕುರಿತು "ಎಲೈ ಕೌಂತೇಯನೆ, ನೀನು ಇಂಥಾ ಆಪತ್ತನ್ನು ಹ್ಯಾಗೆ ಹೊಂದಿದೆ ? ಪರ್ವತಾಕಾರವಾದ ಈ ಘಟಸರ್ಪವು ಯಾವದು ?" ಎನಲು, ಭೀಮಸೇನನು ಧರ್ಮರಾಯನನ್ನು ನೋಡಿ "ಎಲೈ ಅಗ್ರಜನೆ, ನಹುಷಮಹಾರಾಜನು ಈ ಸರ್ಪಜನ್ಮವನ್ನು ಪಡೆದು ನನ್ನನ್ನು ಆಹಾರಾರ್ಥವಾಗಿ ಹಿಡಿದುಕೊಂಡಿರುವನು" ಎಂದು ಹೇಳಿದನು. ಬಳಿಕ ಧರ್ಮರಾಯನು ಆ ಘಟಸರ್ಪವನ್ನು ಕುರಿತು "ಎಲೈ ಆಯುಷ್ಮಂತನಾದ ಸರ್ಪಶ್ರೇಷ್ಠನೆ, ನನ್ನ ತಮ್ಮನಾದ ಅಪರಿಮಿತವಾದ ಪರಾಕ್ರಮವುಳ್ಳ ಈ ಭೀಮಸೇನನನ್ನು ಯಾತಕ್ಕೆ ಹಿಡಿದುಕೊಂಡಿರುವೆ ಬಿಡು. ನಿನ್ನ ಹಸಿವು ತೀರುವಷ್ಟಕ್ಕೆ ನಾವು ನಿನಗೆ ಬೇರೆ ಆಹಾರವನ್ನು ತಂದುಕೊಡುತ್ತೇವೆ" ಎಂದು ನುಡಿಯಲು, ಆ ಮಾತನ್ನು ಕೇಳಿ ಆ ಸರ್ಪವು "ಎಲೈ ರಾಯನೆ ಈ ರಾಜಕುಮಾರನಾದ ಭೀಮಸೇನನು ನನ್ನ ಆಹಾರಕ್ಕೋಸ್ಕರ ನನ್ನ ಬಾಯಿಗೆ ತುತ್ತಾಗಿ ಬಂದಿರುವನು. ನೀನು ಇಲ್ಲಿ ನಿಲ್ಲಬೇಡ, ಹೊರಟುಹೋಗು. ಯಾವನು ನಾಸಿರತಕ್ಕ ಸ್ಥಳಕ್ಕೆ ಬರುವನೋ ಆತನು ನನಗೆ ತುತ್ತಾಗತಕ್ಕವನೆಂದು ನಾನು ನಿಬಂಧನೆಯನ್ನು ಮಾಡಿಕೊಂಡಿರುವೆನು. ನೀನು ಇಲ್ಲೇ ಇದ್ದದ್ದೇ ಆದರೆ, ನಾಳೆ ನೀನೂ ನನಗೆ ಆಹಾರಭೂತನಾಗುವೆ. ಬಹುದಿವಸದಿಂದ ಹಸಿದಿರತಕ್ಕ ನನಗೆ ಆಹಾರಭೂತನಾಗಿ ಬಂದ ನಿನ್ನ ತಮ್ಮನನ್ನು ಬಿಟ್ಟು ನಾನು ಮತ್ತೊಂದು ಆಹಾರವನ್ನು ಅಪೇಕ್ಷಿಸತಕ್ಕವನಲ್ಲ" ಎಂದು ಹೇಳಿದನು. ಆ ಮಾತನ್ನು ಕೇಳಿ ಧರ್ಮರಾಯನು "ಎಲೈ ಸರ್ಪಶ್ರೇಷ್ಠನೆ, ನೀನು ದೇವತೆಯೋ, ದೈತ್ಯನೋ, ಸರ್ಪವೋ, ಯಾರು ? ಯಥಾರ್ಥವಾಗಿ ಹೇಳು. ಯಾತಕ್ಕೋಸ್ಕರ ನೀನು ಭೀಮಸೇನನನ್ನು ಹಿಡಿದುಕೊಂಡಿರುವೆ ? ಏನು ಮಾಡಿದರೆ ಅಥವಾ ಏನು ಹೇಳಿದರೆ ಅಥವಾ ಯಾವ ಆಹಾರವನ್ನು ತಂದೊಪ್ಪಿಸಿದರೆ ನೀನು ತೃಪ್ತನಾಗಿ ಭೀಮಸೇನನನ್ನು ಬಿಡುವೆ ಹೇಳು" ಎನಲು, ಆ ಸರ್ಪವು "ಎಲೈ ರಾಯನೆ, ನಾನು ನಹುಷಮಹಾರಾಜನು ; ನಿನಗೆ ಐದನೆಯ ತಲೆಯವನು ; ಆಯುಮಹಾರಾಜನಿಗೆ ಮಗನು. ಇಂಥ ನಾನು ಅನೇಕ ಯಜ್ಞಗಳಿಂದಲೂ ವೇದಾಧ್ಯಯನದಿಂದಲೂ ತಪಸ್ಸಿನಿಂದಲೂ ಇಂದ್ರಿಯನಿಗ್ರಹದಿಂದಲೂ ಪರಾಕ್ರಮದಿಂದಲೂ ನಿರುಪಾಧಿಕವಾದ ಇಂದ್ರಪದವಿಯನ್ನು ಪಡೆದು ಗರ್ವಿಷ್ಠನಾಗಿದ್ದೆನು. ಆಗ ಸಾವಿರಮಂದಿ ಬ್ರಾಹ್ಮಣರು ನನ್ನ ಅಂದಣವನ್ನು ಹೊತ್ತರು. ಆ ಸಮಯದಲ್ಲಿ ಮದೋನ್ಮತ್ತನಾದ ನಾನು ಆ ಬ್ರಾಹ್ಮಣರಿಗೆ ಅವಮಾನವನ್ನು ಮಾಡಿ, ಅಗಸ್ತ್ಯಮಹರ್ಷಿಯ ಶಾಪದಿಂದ ಇಂಥ ದುರ್ಗತಿಯನ್ನು ಪಡೆದೆನು. ಇಂಥ ದುರವಸ್ಥೆಯಲ್ಲಿ ನಾನಿದ್ದರೂ ಆ ಮಹಾತ್ಮನಾದ ಅಗಸ್ತ್ಯಮಹರ್ಷಿಯ ಅನುಗ್ರಹದಿಂದ ಇದುವರೆಗೂ ನನಗೆ ಪೂರ್ವಸ್ಮೃತಿಯೆಲ್ಲಾ ಇರುವದು. ಆದರೆ ಮಧ್ಯಾಹ್ನಕಾಲದಲ್ಲಿ ನನಗೆ ಆಹಾರವಾಗಿ ಸಿಕ್ಕಿರುವ ನಿನ್ನ ತಮ್ಮನನ್ನು ಬಿಟ್ಟು ನಾನು ಮತ್ತೊಂದನ್ನು ಅಪೇಕ್ಷಿಸತಕ್ಕವನಲ್ಲ. ಎಲೈ ಧರ್ಮರಾಯನೆ, ಮತ್ತೊಂದು ಮಾತನ್ನು ಹೇಳುತ್ತೇನೆ ಕೇಳು. ಈಗ ನಾನು ನಿನ್ನನ್ನು ಕುರಿತು ಕೆಲವು ಪ್ರಶ್ನೆಗಳನ್ನು ಮಾಡುವೆನು. ಅವುಗಳಿಗೆ ನೀನು ಉತ್ತರವನ್ನು ಕೊಟ್ಟ ಬಳಿಕ ನಾನು ನಿನ್ನ ತಮ್ಮನಾದ ಭೀಮಸೇನನನ್ನು ಬಿಡುವೆನು" ಎಂದನು. ಬಳಿಕ ಧರ್ಮರಾಯನು "ಎಲೈ ಸರ್ಪಶ್ರೇಷ್ಠನೆ, ನಿನ್ನ ಇಚ್ಛಾನು

ಸಾರವಾಗಿ ನೀನು ಪ್ರಶ್ನೆಗಳನ್ನು ಮಾಡಬಹುದು. ನಿನಗೆ ಪ್ರೀತಿಯನ್ನುಂಟುಮಾಡುವದಕ್ಕೆ ನನಗೆ ಸಾಮರ್ಥ್ಯವಿದ್ದದ್ದೇ ಆದರೆ ಅವುಗಳಿಗೆ ಉತ್ತರವನ್ನು ಕೊಡುವೆನು. ತಿಳಿಯತಕ್ಕ ವಿಷಯಗಳನ್ನೆಲ್ಲಾ ನೀನು ಬ್ರಾಹ್ಮಣರ ಮುಖದಿಂದ ತಿಳಿದುಕೊಂಡೇ ಇರುವೆ. ಆದರೂ ನನಗೆ ತಿಳಿದ ಮಟ್ಟಿಗೆ ನಾನು ನಿನ್ನ ಪ್ರಶ್ನೆಗಳಿಗೆ ಉತ್ತರವನ್ನು ಹೇಳುತ್ತೇನೆ" ಎನಲು, ಆ ಸರ್ಪವು ಧರ್ಮರಾಯನನ್ನು ಕುರಿತು "ಎಲೈ ರಾಯನೆ, ಯಾವನು ಬ್ರಾಹ್ಮಣನೆನಿಸಿಕೊಳ್ಳುವನು? ಮತ್ತು ತಿಳಿಯತಕ್ಕದ್ದು ಯಾವದು? ನಿನ್ನ ಮಾತುಗಳಿಂದ ನೀನು ಬುದ್ಧಿಶಾಲಿಯೆಂದು ನಾನು ತಿಳಿದಿರುವೆನು. ಈ ಪ್ರಶ್ನೆಗಳಿಗೆ ಪ್ರತ್ಯುತ್ತರವನ್ನು ಕೊಡು" ಎನಲು, ಧರ್ಮರಾಯನು "ಎಲೈ ಸರ್ಪಶ್ರೇಷ್ಠನೆ, ಸತ್ಯ, ದಾನ, ಕ್ಷಮೆ, ಒಳ್ಳೇನಡತೆ, ನಿಷ್ಠುರವಾಗಿ ನುಡಿಯದೆ ಇರೋಣ, ಸ್ವಧರ್ಮದಲ್ಲಿ ಆಸಕ್ತಿ, ಕೃಪೆ, ಈ ಗುಣಗಳು ಯಾವ ಪುರುಷನಲ್ಲಿರುವವೋ ಆತನೇ ಬ್ರಾಹ್ಮಣನೆನಿಸಿಕೊಳ್ಳುವನು. ಜ್ಞಾನಿಗಳಾದವರು ಯಾರನ್ನು ಹೊಂದಿ ದುಃಖವನ್ನು ಪರಿಹರಿಸಿಕೊಳ್ಳುವರೋ ಮತ್ತು ಯಾವನಿಗೆ ಸುಖವೂ ದುಃಖವೂ ಇಲ್ಲವೋ ಅಂಥಾ ಪರಬ್ರಹ್ಮನು ತಿಳಿಯತಕ್ಕವನು ಎಂದು ನನಗೆ ತೋರುವದು. ನೀನು ಏನು ಹೇಳುವೆ?" ಎಂದನು. ಬಳಿಕ ಆ ಸರ್ಪವು ಧರ್ಮರಾಯನು ಹೇಳಿದ ಬ್ರಾಹ್ಮಣಶಬ್ದದಿಂದ ಬ್ರಾಹ್ಮಣಜಾತಿಯೆಂದು ಗ್ರಹಿಸಿ "ಎಲೈ ರಾಯನೆ, ವೇದವು ನಾಲ್ಕು ವರ್ಣಗಳಿಗೂ ಅನುಕೂಲವಾದ ಪ್ರಮಾಣವಾಗಿರುವದು. ಇದು ಸತ್ಯವಾದದ್ದಷ್ಟೆ? ಶೂದ್ರನಲ್ಲಿಯೂ ಸತ್ಯವೂ ದಾನವೂ ಕ್ಷಮೆಯೂ ಅಕ್ರೋಧವೂ ಶಾಂತಿಯೂ ಅಹಿಂಸೆಯೂ ದಯೆಯೂ ಕೂಡ ಇರುವವು. ಗಮ್ಯವಾದ ಸ್ಥಾನಗಳೆಲ್ಲವೂ ಸುಖದುಃಖಮಿಶ್ರವಾಗಿಯೇ ಇರುವವು. ಸುಖದುಃಖವಿಹೀನವಾದ ಮತ್ತೊಂದು ಗಮ್ಯಸ್ಥಾನವೇ ಇಲ್ಲವೆಂದು ನನಗೆ ತೋರುವದು" ಎನಲು, ಧರ್ಮರಾಯನು "ಎಲೈ ಸರ್ಪಶ್ರೇಷ್ಠನೆ, ನಾನು ಹೇಳಿದ್ದು ಜಾತಿನಿಮಿತ್ತವಾದ ಮಾತೆಂದು ತಿಳಿಯಬೇಡ. ಕಾಮಾದಿಗಳು ಶೂದ್ರನ ಲಕ್ಷಣವು; ಶಮಾದಿಗಳು ಬ್ರಾಹ್ಮಣನ ಲಕ್ಷಣವು. ಶೂದ್ರನೆನ್ನುವ ಮಾತ್ರದಿಂದಲೇ ಶೂದ್ರನೂ ಆಗಲಾರನು; ಬ್ರಾಹ್ಮಣನೆಂಬುವ ಮಾತ್ರದಿಂದಲೇ ಬ್ರಾಹ್ಮಣನೂ ಆಗಲಾರನು. ಯಾವನಲ್ಲಿ ಶಮದಮಾದಿಗುಣಗಳಿರುವವೋ ಆತನೇ ಬ್ರಾಹ್ಮಣನೆನಿಸಿಕೊಳ್ಳುವನು. ಆ ಗುಣಗಳಿಲ್ಲದವನೇ ಶೂದ್ರನೆನಿಸಿಕೊಳ್ಳುವನು. ನೀನು ಸುಖದುಃಖರಹಿತವಾದ ಗಮ್ಯಸ್ಥಾನವು ಯಾವದೂ ಇಲ್ಲವೆಂದು ಹೇಳಿರುವದು, ಶೀತೋಷ್ಣಗಳ ಮಧ್ಯದಲ್ಲಿ ಶೀತದಲ್ಲಿ ಉಷ್ಣವೂ ಉಷ್ಣದಲ್ಲಿ ಶೀತವೂ ಇರುವಂತೆ ಸುಖದಲ್ಲಿ ದುಃಖವೂ ದುಃಖದಲ್ಲಿ ಸುಖವೂ ಮಿಶ್ರವಾಗಿಯೇ ಇರುವವೇ ಹೊರತು ಇವೆರಡೂ ಇಲ್ಲದಿರತಕ್ಕ ಗಮ್ಯಸ್ಥಾನವೂ ಯಾವದೂ ಇಲ್ಲವೆಂಬ ಅಭಿಪ್ರಾಯವುಳ್ಳದ್ದಾಗಿ ತೋರುವದು. ಆದರೆ ರಜ್ಜುವಿನಲ್ಲಿ ಸರ್ಪಭ್ರಾಂತಿಯಂತೆ ಈ ವಿಷಯದಲ್ಲಿ ನಿನಗೆ ಭ್ರಮೆಯುಂಟಾಗಿರುವದು. ಬ್ರಹ್ಮಜ್ಞಾನಿಗಳಿಗೆ ಗಮ್ಯವಾದ ಸ್ಥಾನವು ಸುಖದುಃಖರಹಿತವಾಗಿಯೇ ಇರುವದು" ಎನಲು, ಸರ್ಪಶ್ರೇಷ್ಠನು ಧರ್ಮರಾಯನನ್ನು ಕುರಿತು "ಎಲೈ ಧರ್ಮರಾಯನೆ, ಮನುಷ್ಯನು ಶಮದಮಾದಿಗುಣಗಳಿಂದಲೇ ಬ್ರಾಹ್ಮಣನಾಗುವ ಪಕ್ಷದಲ್ಲಿ, ಜಾತಿಯೂ ಕ್ರಿಯೆಯೂ ಯಾವದೂ ಆವಶ್ಯಕವಿಲ್ಲದೆ ಹೋಯಿತು" ಎಂದನು? ಧರ್ಮರಾಯನು "ಎಲೈ ಮಹಾಸರ್ಪನೇ ಕೇಳು, ಮನುಷ್ಯತ್ವವೆಂಬುವದು ಮಾತ್ರ ಜಾತಿಯೇ ಹೊರತು ಮಿಕ್ಕಾದ ಬ್ರಾಹ್ಮಣ ಕ್ಷತ್ರಿಯ ಮೊದಲಾದ ವರ್ಣದವರಲ್ಲಿ ವರ್ಣಸಾಂಕರ್ಯವಿರುವದರಿಂದ ಅವರಲ್ಲಿ ಜಾತಿಯನ್ನು ಪರೀಕ್ಷಿಸುವದು ಅವಶ್ಯಕವಾದದ್ದು. ಎಲ್ಲಾ ಪುರುಷರೂ ಎಲ್ಲಾ ಸ್ತ್ರೀಯರಲ್ಲಿಯೂ ಪುತ್ರರನ್ನು ಪಡೆಯುವರಾದ್ದರಿಂದ ಅವರಲ್ಲಿ ಜಾತಿವ್ಯವಸ್ಥೆಯು ತಿಳಿಯಲಶಕ್ಯವಾದದ್ದು. ಆದರೆ ಎಲ್ಲಾ ಮನುಷ್ಯರ ಮಾತು, ಸಂಭೋಗ, ಜನನ, ಮರಣಮೊದಲಾದವುಗಳೆಲ್ಲವೂ ಸಮಾನವಾಗಿಯೇ ಇರುವವು. ಈ ವಿಷಯದಲ್ಲಿ 'ಏಯಜಾಮಹೆ' ಎಂಬ ಆರ್ಷವಾದ ವಚನವು ಪ್ರಮಾಣವಾಗಿರುವದು. ಆದ್ದರಿಂದ ಈ ವಿಷಯದಲ್ಲಿ ಶೀಲವೇ ಮುಖ್ಯವಾದದ್ದೆಂದು ತತ್ವಜ್ಞಾನಿಗಳು ಹೇಳುವರು. ಎಲೈ ಸರ್ಪಶ್ರೇಷ್ಠನೆ, ಹುಟ್ಟಿದ ಮಗುವಿಗೆ ನಾಳಚ್ಛೇದನಾತ್ಪೂರ್ವದಲ್ಲಿ ಜಾತಕರ್ಮವನ್ನು ಮಾಡುವರು. ಆ ಸಮಯದಲ್ಲಿ ಆ ಮಗುವಿಗೆ ಸಾವಿತ್ರಿಯೇ ತಾಯಿಯೆಂತಲೂ ಆಚಾರ್ಯನೇ ತಂದೆಯೆಂತಲೂ ಹೇಳುವರು. ಜಾತಿಯಲ್ಲಿ ಸಂಶಯವಿರುವದರಿಂದ, ಸ್ವಾಯಂಭುವಮನುವು ಯಾವ ಕಾಲದ ವರೆಗೂ ವೇದೋಕ್ತಜಾತಕರ್ಮಾದಿ ಸಂಸ್ಕಾರವು ಶಿಶುವಿಗೆ ಆಗುವದಿಲ್ಲವೋ ಆ ಕಾಲದವರೆಗೂ ಆ ಶಿಶುವು ಶೂದ್ರನಿಗೆ ಸಮಾನವಾದದ್ದು ಎಂದು ಹೇಳಿರುವರು. ಬ್ರಾಹ್ಮ

ಣನಿಗೂ ಶೂದ್ರನಿಗೂ ಸಹ ನಾನು ಹೇಳಿದ ಗುರುತುಗಳು ಇಲ್ಲದಿದ್ದರೆ ಎಲ್ಲಾ ವರ್ಣದವರೂ ಕೃತಕೃತ್ಯರಾಗಬಹುದು. ಈ ವಿಷಯದಲ್ಲಿ ಪ್ರಬಲವಾದ ಜಾತಿಸಾಂಕರ್ಯವನ್ನು ಯೋಚಿಸಬೇಕಾಗುವದು. ಎಲೈ ಸರ್ಪಶ್ರೇಷ್ಠನೆ, ವೇದೋಕ್ತವಾದ ಸಂಸ್ಕಾರವೇ ಜಾತಿಗೆ ಕಾರಣವೆಂದು ನಿನ್ನ ಅಭಿಪ್ರಾಯವಾಗಿದ್ದ ಪಕ್ಷದಲ್ಲಿ, ಮೊದಲೇ ನಾನು ಅಂಥಾ ಸಂಸ್ಕಾರವನ್ನು ಪಡೆದವನು ಬ್ರಾಹ್ಮಣನೆಂದು ಹೇಳಿರುವೆನು" ಎನಲು, ಆ ಸರ್ಪಶ್ರೇಷ್ಠನು "ಎಲೈ ಧರ್ಮರಾಯನೆ, ತಿಳಿಯತಕ್ಕ ಅಂಶಗಳನ್ನೆಲ್ಲಾ ತಿಳಿದಿರುವ ನಿನ್ನ ಮಾತುಗಳನ್ನು ಕೇಳಿ ನಾನು ನಿನ್ನ ತಮ್ಮನಾದ ಭೀಮಸೇನನನ್ನು ಹ್ಯಾಗೆತಾನೆ ಭಕ್ಷಿಸಲಿ ?" ಎಂದು ಧರ್ಮರಾಯನಿಗೆ ಹೇಳಿದನು.

## ೧೮೧ನೇ ಅಧ್ಯಾಯ.—ಆಜಗರಪರ್ವ (ಭೀಮನು ಅಜಗರದಿಂದ ಬಿಡುಗಡೆಹೊಂದಿದ್ದು.)

ವೈಶಂಪಾಯನಮುನೀಂದ್ರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಧರ್ಮರಾಯನು ಆ ಸರ್ಪವನ್ನು ಕುರಿತು "ಎಲೈ ಸರ್ಪಶ್ರೇಷ್ಠನೆ, ಈ ಲೋಕದಲ್ಲಿ ನೀನು ವೇದವೇದಾಂಗ ಪಾರಂಗತನಾಗಿ ಕಾಣಿಸುವೆ. ಯಾವ ಕರ್ಮವನ್ನು ಮಾಡಿದರೆ ಉತ್ತಮವಾದ ಲೋಕವುಂಟಾಗುವದು ಹೇಳು" ಎಂದು ಪ್ರಶ್ನೆಮಾಡಲು, ಸರ್ಪಶ್ರೇಷ್ಠನು "ಎಲೈ ಧರ್ಮರಾಯನೆ, ಸತ್ಪಾತ್ರದಲ್ಲಿ ದಾನಮಾಡಿ, ಸತ್ಯವಾಗಿಯೂ ಪ್ರಿಯವಾಗಿಯೂ ಇರುವ ವಚನಗಳನ್ನು ನುಡಿಯುತ್ತ, ಪರರಿಗೆ ಹಿಂಸೆಯನ್ನು ಮಾಡದಿರತಕ್ಕವನು ಉತ್ತಮವಾದ ಲೋಕವನ್ನು ಪಡೆಯುವನು" ಎನಲು, ಧರ್ಮರಾಯನು "ಎಲೈ ಸರ್ಪಶ್ರೇಷ್ಠನೆ, ದಾನ, ಸತ್ಯ, ಈ ಎರಡರಲ್ಲಿ ಯಾವದು ಶ್ರೇಷ್ಠವಾದದ್ದು ಹೇಳು" ಎಂದನು. ಅದನ್ನುಕೇಳಿ ಸರ್ಪಶ್ರೇಷ್ಠನು "ಎಲೈ ರಾಯನೆ, ದಾನಾದಿಗಳಲ್ಲಿ ಕಾರ್ಯಗೌರವವನ್ನು ಅನುಸರಿಸಿ ಗುರುಲಾಘವಗಳನ್ನು ಎಣಿಸಬೇಕು. ಅದು ಹ್ಯಾಗೆಂದರೆ, ವಂಚಕರಿಗೆ ಅಭಯದಾನವನ್ನು ಮಾಡುವದಕ್ಕಿಂತಲೂ ಸತ್ಯವಾಗಿ ನಡೆಯುವದೇ ಶ್ರೇಷ್ಠವಾದದ್ದು. ಸಾಧುಗಳಿಗೆ ಮಾಡತಕ್ಕ ಅಭಯದಾನವು ಸತ್ಯಕ್ಕಿಂತಲೂ ಶ್ರೇಷ್ಠವಾದದ್ದು. ಕಳ್ಳರಿಗೆ ಪ್ರಿಯವಚನವನ್ನು ಹೇಳುವದಕ್ಕಿಂತಲೂ ಅವರಿಗೆ ಅಹಿಂಸೆಯು ಶ್ರೇಷ್ಠವಾದದ್ದು. ಹೀಗೆಯೇ ಕಾರ್ಯಗೌರವದಿಂದ ಅಹಿಂಸೆಗಿಂತಲೂ ಪ್ರಿಯವಚನವೂ ಶ್ರೇಷ್ಠವಾಗುವದು. ಇನ್ನೇನು ಕೇಳಬೇಕೆಂದು ನಿನಗೆ ಅಭಿಪ್ರಾಯವಿರುವದೋ ಅದನ್ನು ಕೇಳು. ಅದಕ್ಕೂ ಉತ್ತರವನ್ನು ಹೇಳುವೆನು" ಎನಲು, ಧರ್ಮರಾಯನು "ಎಲೈ ಸರ್ಪಶ್ರೇಷ್ಠನೆ, ಇಲ್ಲಿ ಮೃತನಾಗಿ ಶರೀರವನ್ನು ಕಳೆದುಕೊಂಡ ಜೀವನಿಗೆ ಸ್ವರ್ಗಪ್ರಾಪ್ತಿಯೂ ಅಲ್ಲಿ ವಿಷಯೋಪಭೋಗವೂ ಹ್ಯಾಗಾಗುವವೋ ಹೇಳು" ಎಂದನು. ಬಳಿಕ ಸರ್ಪಶ್ರೇಷ್ಠನು "ಎಲೈ ಧರ್ಮರಾಯನೆ, ಪ್ರಾಣಿಗಳಿಗೆ ತಮ್ಮತಮ್ಮ ಕರ್ಮಗಳಿಗೆ ಅನುಸಾರವಾಗಿ ಮನುಷ್ಯಜನ್ಮವೂ ಮೃಗಪಕ್ಷಿಮೊದಲಾದವುಗಳ ಜನ್ಮವೂ ದೇವಭಾವವೂ ಎಂಬ ಈ ಮೂರು ಗತಿಗಳುಂಟಾಗುವವು. ಇವುಗಳಲ್ಲಿ ಮನುಷ್ಯನಾದವನು ದಾನಮೊದಲಾದ ಕಾರಣಗಳಿಂದಲೂ ಅಹಿಂಸೆಮೊದಲಾದ ಕಾರಣಗಳಿಂದಲೂ ಸ್ವರ್ಗವನ್ನು ಪಡೆಯುವನು. ಇವುಗಳಿಗೆ ವ್ಯತಿರಿಕ್ತವಾದ ಕಾರಣಗಳಿಂದ ಮನುಷ್ಯನಾದವನು ಮೃಗಪಕ್ಷಿಮೊದಲಾದವುಗಳ ಜನ್ಮವನ್ನು ಪಡೆಯುವನು. ಇದರಲ್ಲಿಯೂ ವಿಶೇಷವುಂಟು; ಹೇಳುವೆನು ಕೇಳು. ಯಾವ ಮನುಷ್ಯನು ಕಾಮ ಕ್ರೋಧ ಹಿಂಸಾ ಲೋಭಗಳಿಂದ ತಿರಸ್ಕೃತನಾಗುವನೋ ಆ ಮನುಷ್ಯನು, ಮನುಷ್ಯಜನ್ಮವನ್ನು ಬಿಟ್ಟು ಮೃಗಪಕ್ಷಿಮೊದಲಾದವುಗಳ ಜನ್ಮವನ್ನು ಪಡೆಯುವನು. ಯಜ್ಞದಲ್ಲಿ ಗೋವುಗಳಿಗೂ ಅಶ್ವಗಳಿಗೂ ದೇವತ್ವವುಂಟಾಗುವದರಿಂದ, ಪ್ರಾಣಿಗಳು ತಿರ್ಯಗ್ಜನ್ಮವನ್ನು ತಪ್ಪಿಸಿಕೊಂಡು ಮನುಷ್ಯಜನ್ಮಕ್ಕೆ ಬರುವದಕ್ಕೂ ಕಾರಣವಿರುವದೆಂದು ಶ್ರುತಿಯು ಹೇಳುತ್ತಿರುವದು. ಲೋಕದಲ್ಲಿ ಮನುಷ್ಯನು ಹ್ಯಾಗೆ ಕಾರ್ಯನಿಮಿತ್ತವಾಗಿ ಎಲ್ಲಾ ಕಡೆಯಲ್ಲೂ ಸುತ್ತಾಡುತ್ತಿರುವನೋ ಹಾಗೆ, ಜೀವರಾಶಿಗಳೂ ಎಲ್ಲಾ ಜನ್ಮಗಳಲ್ಲೂ ಸುತ್ತಾಡುತ್ತಿರುವವು. ಹಾಗಿಲ್ಲವೆ ಇರತಕ್ಕ ಜ್ಞಾನಿಯಾದವನು ನಿತ್ಯವಾಗಿಯೂ ಮಹತ್ತಾಗಿಯೂ ಇರುವ ಬ್ರಹ್ಮದಲ್ಲೇ ಜ್ಞಾನವುಳ್ಳವನಾಗಿರುವನು. ದೇಹಾಭಿಮಾನಿಯಾದ ಫಲಾಕಾಂಕ್ಷೆಯುಳ್ಳ ಜೀವನು ಪುಣ್ಯ

ಪಾಪಕರ್ಮಗಳಿಂದ ಬದ್ಧನಾಗಿ ಅಡಿಗಡಿಗೆ ಜನ್ಮವನ್ನು ಎತ್ತಿ, ಆಪುಣ್ಯಪಾಪಫಲಗಳನ್ನು ಅನುಭವಿಸುವನು. ಯಾವ ಜೀವನು ಫಲಾಪೇಕ್ಷೆಯೂ ದೇಹಾಭಿಮಾನವೂ ಇಲ್ಲದೆ ಇರುವನೋ ಆತನು, ಜನನ ಮರಣಗಳು ಸಾಧಾರಣಗಳೆಂದು ಭಾವಿಸುವನು" ಎನಲು, ಧರ್ಮರಾಯನು "ಎಲೈ ಸರ್ಪಶ್ರೇಷ್ಠನೆ, ಶಬ್ದ ಸ್ಪರ್ಶ ರೂಪ ರಸ ಗಂಧಗಳು ವಿಷಯಾಭಿಮುಖವಾಗಲು, ಇವುಗಳಿಗೆ ಪ್ರತ್ಯೇಕಪ್ರತ್ಯೇಕವಾದ ಅಧಿಷ್ಠಾನಗಳು ಯಾವವು ? ಮತ್ತು ಈ ಶಬ್ದಾದಿಗಳು ಏಕಕಾಲದಲ್ಲಿ ಎಲ್ಲಾ ವಿಷಯಗಳನ್ನೂ ಯಾತಕ್ಕೋಸ್ಕರ ಗ್ರಹಿಸುವದಿಲ್ಲವೋ ಹೇಳು" ಎಂದನು. ಬಳಿಕ ಆ ಸರ್ಪನು "ಎಲೈ ಆಯುಷ್ಮಂತನೆ, ದೇಹವನ್ನು ಆಶ್ರಯಿಸಿರತಕ್ಕ ಜೀವನು ಶ್ರೋತ್ರಾದಿ ಇಂದ್ರಿಯಗಳನ್ನು ಆಶ್ರಯಿಸಿದ ಶಬ್ದಾದಿವಿಷಯಗಳನ್ನು ಕರ್ಮಾನುರೂಪವಾಗಿ ಅನುಭವಿಸುವನು. ಆ ಜೀವನಿಗೆ ಜ್ಞಾನ, ಬುದ್ಧಿ, ಮನಸ್ಸು, ಇವುಗಳು ಆ ಜೀವನ ಭೋಗಾಶ್ರಯವಾದ ಶರೀರದಲ್ಲಿ ಕರಣವಾಗಿರುವವು. ಇಂದ್ರಿಯವನ್ನು ಸೇರಿದ ಮನಸ್ಸಿನಿಂದ ಜೀವನು ಮನಸ್ಸಿನೊಡಗೂಡಿ ಶ್ರೋತ್ರಾದಿ ಇಂದ್ರಿಯಗಳನ್ನು ಗ್ರಹಿಸುವನು. ಮನಸ್ಸು ಒಂದೊಂದು ವಿಷಯವನ್ನು ಗ್ರಹಿಸುವ ಕಾಲದಲ್ಲಿಯೂ ಬುದ್ಧಿಯು ಅದನ್ನು ಆಯಾವ್ಯಾಪಾರದಲ್ಲಿ ಬೇರೆಬೇರೆ ಪ್ರವರ್ತಿಸುವಹಾಗೆ ಮಾಡುವದು. ಆದ್ದರಿಂದ ಏಕಕಾಲದಲ್ಲಿ ಮನಸ್ಸು ಎಲ್ಲಾ ವಿಷಯಗಳನ್ನೂ ಗ್ರಹಿಸಲಾರದು. ಆತ್ಮನು ಹುಬ್ಬುಗಳ ಮಧ್ಯದಲ್ಲಿ ವಾಸಮಾಡುತ್ತ ರೂಪಾದಿವಿಷಯಗಳಲ್ಲಿ ಪ್ರವೇಶಿಸುವಂತೆ ನೀಚೋಚ್ಚವಾದ ಬುದ್ಧಿಯನ್ನು ಪ್ರೇರಿಸುವನು. ಬುದ್ಧಿಕಾರ್ಯವು ನಡೆದಮೇಲೆ ತಿಳುವಳಿಕೆಯು ಬುದ್ಧಿವಂತನಿಗೆ ಉಂಟಾಗುವದು. ಇದರಿಂದಲೇ ಆತ್ಮಪ್ರಕಾಶವುಂಟಾಗುವದು" ಎನಲು, ಧರ್ಮರಾಯನು "ಎಲೈ ಸರ್ಪನೆ, ಮನಸ್ಸಿಗೂ ಬುದ್ಧಿಗೂ ಉತ್ತಮವಾದ ಲಕ್ಷಣವು ಯಾವದು ? ಆತ್ಮತತ್ತ್ವವನ್ನು ತಿಳಿದವರಿಗೆ ಇದನ್ನು ತಿಳಿಯತಕ್ಕದ್ದು ಮುಖ್ಯವಾದ್ದರಿಂದ ಇದನ್ನು ಹೇಳು" ಎಂದನು. ಸರ್ಪಶ್ರೇಷ್ಠನು "ಎಲೈ ರಾಯನೇ ಕೇಳು, ಬುದ್ಧಿಯೆಂಬುವದು ಆತ್ಮನು ಹೋದ ಕಡೆಗೇ ಯಾವಾಗಲೂ ಹೋಗುತ್ತ, ಆತ್ಮನನ್ನೇ ಆಶ್ರಯಿಸಿಕೊಂಡು, ತನ್ನ ಸ್ವರೂಪಸಿದ್ಧಿಯಾಗುವದಕ್ಕಾಗಿ ಆತ್ಮನನ್ನೇ ತನಗೆ ಅಧಿಷ್ಠಾನವನ್ನಾಗಿ ಬಯಸುವದು. ಅಂಥಾಬುದ್ಧಿಯು ಆತ್ಮಾಧೀನವಾಗಿರುವದು. ಮತ್ತು ಆ ಬುದ್ಧಿಯು ವಿಷಯೇಂದ್ರಿಯಸಂಯೋಗದಿಂದ ಹುಟ್ಟುವದು. ಆ ಸಂಯೋಗವು ನಷ್ಟವಾಗಲು, ತಾನೂ ನಷ್ಟವಾಗುವದು. ಮನಸ್ಸುಮಾತ್ರ ಇದ್ದಂತೆಯೇ ಇರುವದು. ಬುದ್ಧಿಯು ಉಪಾದಾನಕಾರಣವಾಗಲಾರದು ; ಮನಸ್ಸು ಉಪಾದಾನಕಾರಣವಾಗಿರುವದು. ಇಷ್ಟೇ ಬುದ್ಧಿಗೂ ಮನಸ್ಸಿಗೂ ಇರತಕ್ಕ ಭೇದವು. ಈ ವಿಷಯವನ್ನು ನೀನು ಚೆನ್ನಾಗಿ ಬಲ್ಲವನಾದ್ದರಿಂದ ನಿನಗೆ ಹ್ಯಾಗೆ ತೋರುವದೋ ಹೇಳು ಎನಲು, ಧರ್ಮರಾಯನು "ಎಲೈ ಬುದ್ಧಿಶಾಲಿಯಾದ ಸರ್ಪಶ್ರೇಷ್ಠನೆ, ನಿನ್ನ ಬುದ್ಧಿಯು ಉತ್ತಮವಾದದ್ದು. ನೀನು ತಿಳಿಯತಕ್ಕದ್ದನ್ನೆಲ್ಲಾ ತಿಳಿದು ಸಹ ಯಾತಕ್ಕೋಸ್ಕರ ನನ್ನನ್ನು ಪ್ರಶ್ನೆ ಮಾಡುವೆ ? ಇಂಥಾ ಸರ್ವಜ್ಞನಾದ ನೀನು ಸ್ವರ್ಗದಲ್ಲಿ ವಾಸಮಾಡುತ್ತಿರುವಾಗ ನಿನಗೆ ಅಜ್ಞಾನವುಂಟಾದದ್ದನ್ನು ಕೇಳಿ ನನಗೆ ಸಂಶಯ ವುಂಟಾಗಿರುವದು." ಎಂದನು. ಆಮಾತನ್ನು ಕೇಳಿ ಸರ್ಪನು "ಎಲೈ ಧರ್ಮರಾಯನೆ, ಮನುಷ್ಯನು ಪ್ರಜ್ಞಾವಂತನಾಗಿಯೂ ಶೂರನಾಗಿಯೂ ಇದ್ದರೂ, ಐಶ್ವರ್ಯವು ಎಲ್ಲರಿಗೂ ಅವಿವೇಕವನ್ನುಂಟುಮಾಡುವದು. ಯಾವ ಮನುಷ್ಯನು ಸುಖವನ್ನೇ ಬಯಸುವನೋ ಅವನು, ಮೋಹವನ್ನು ಹೊಂದದೆ ಇರಲಾರನೆಂದು ನನಗೆ ತೋರುವದು. ಅಂಥಾ ನಾನೂ ಐಶ್ವರ್ಯಮದದಿಂದ ಮುಗ್ಧನಾಗಿ ಪತಿತನಾಗಿ ನಿನ್ನನ್ನು ಪ್ರಶ್ನೆಮಾಡಿದೆನು. ನೀನು ಮಾಡತಕ್ಕ ಕಾರ್ಯವನ್ನು ನೀನು ಮಾಡಿದ್ದಾಯಿತು. ಸಾಧುವಾದ ನಿನ್ನಸಂಗಡ ನಾನು ಸಕೃತ್ತು ಸಂಭಾಷಣೆ ಮಾಡಿದ್ದರಿಂದ ನನಗೆ ಪ್ರಾಪ್ತವಾಗಿದ್ದ ಕಠಿನವಾದ ಶಾಪವು ನಿವೃತ್ತವಾಯಿತು. ನಾನು ಸ್ವರ್ಗದಲ್ಲಿ ದಿವ್ಯವಾದ ವಿಮಾನವನ್ನೇರಿ ಸಂಚರಿಸುವ ಕಾಲದಲ್ಲಿ ಅಧಿಕವಾದ ಅಭಿಮಾನವುಳ್ಳವನಾಗಿ ಯಾರನ್ನೂ ಲಕ್ಷ್ಯ ಮಾಡದೆ ಇದ್ದೆನು. ಆಗ ಬ್ರಹ್ಮರ್ಷಿಗಳೂ ದೇವತೆಗಳೂ ಗಂಧರ್ವರೂ ಯಕ್ಷರೂ ರಾಕ್ಷಸರೂ ಪನ್ನಗರೂ ಇನ್ನೂ ಮೂರು ಲೋಕಗಳಲ್ಲೂ ವಾಸಮಾಡತಕ್ಕವರೆಲ್ಲರೂ ನನಗೆ ಕಪ್ಪವನ್ನು ಕೊಡುತ್ತಿದ್ದರು. ಇದಲ್ಲದೆ ನಾನು ಯಾವ ಪ್ರಾಣಿಯನ್ನು ನೋಡುತ್ತಿದ್ದೆನೋ ಅದರ ತೇಜಸ್ಸನ್ನು ಸೆಳೆಯುತ್ತಿದ್ದೆನು. ಇಂಥಾದ್ದೊಂದು ದೈವಸಹಾಯವು ನನಗಿತ್ತು. ನನ್ನ ಅಂದಣವನ್ನು ಅನೇಕಸಹಸ್ರಮಂದಿ ಋಷಿಗಳು ಹೊರುತ್ತಿದ್ದರು.

ಈ ತಪ್ಪೇ ನನ್ನ ಐಶ್ವರ್ಯಹಾಸಿಗೆ ಕಾರಣವಾಯಿತು. ಆ ಕಾಲದಲ್ಲಿ ನಾನು ಅಗಸ್ತ್ಯಮಹರ್ಷಿಯನ್ನು ಕಾಲಿಂದ ಒದೆದೆನು. ಆ ಮಹಾತ್ಮನು ಅದರಿಂದ ಕುಪಿತನಾಗಿ 'ಸರ್ಪ ಸರ್ಪ' ಎಂದು ನನಗೆ ಶಾಪವನ್ನು ಕೊಡಲು, ಕೂಡಲೆ ನಾನು ದಿವ್ಯವಿಮಾನವ ದೆಸೆಯಿಂದ ತಲೆಕೆಳಗಾಗಿ ಬಿದ್ದೆನು. ಬೀಳುವ ಕಾಲದಲ್ಲಿ ನನ್ನ ಶರೀರವು ಸರ್ಪಾಕಾರವಾಗಿದ್ದದ್ದನ್ನು ನೋಡಿ ಆ ಬ್ರಾಹ್ಮಣಶ್ರೇಷ್ಠನನ್ನು ಕುರಿತು ನಾನು ಆ ಶಾಪಕ್ಕೆ ಅವಸಾನವನ್ನು ಬೇಡುತ್ತ 'ಎಲೈ ಮಹಾನುಭಾವನೆ, ಪ್ರಮಾದದಿಂದ ಮೂಢಬುದ್ಧಿಯಾದ ನನ್ನ ವಿಷಯದಲ್ಲಿ ನೀನು ಕ್ಷಮೆಯನ್ನು ತಾಳಬೇಕು' ಎಂದು ಬೇಡಿಕೊಂಡೆನು. ಬಳಿಕ ಆ ಮಹರ್ಷಿಯು ಮೇಲಿಂದ ಬೀಳುತ್ತಿದ್ದ ನನ್ನನ್ನು ನೋಡಿ ನನಲ್ಲಿ ಕೃಪೆಯಿಟ್ಟು, 'ಎಲೈ ರಾಯನೆ, ಧರ್ಮಾತ್ಮನಾದ ಧರ್ಮರಾಯನು ನಿನ್ನ ಶಾಪವನ್ನು ಪರಿಹರಿಸುವನು. ಆ ವರೆಗೂ ನೀನು ತಾಳಿದ್ದ ದುರಭಿಮಾನಕ್ಕೋಸ್ಕರ ಘೋರವಾದ ಫಲವನ್ನು ಅನುಭವಿಸಿ, ಆ ಬಳಿಕ ಪುಣ್ಯಫಲವನ್ನು ಅನುಭವಿಸುವೆ' ಎಂದು ಹೇಳಿದನು. ತರುವಾಯ ನಾನು ಆತನ ತಪೋಬಲವನ್ನು ನೋಡಿ ಆಶ್ಚರ್ಯಪಟ್ಟವನಾದಕಾರಣ, ಬ್ರಹ್ಮಜ್ಞಾನಿಗಳ ವಿಷಯದಲ್ಲಿಯೂ ಬ್ರಾಹ್ಮಣರ ವಿಷಯದಲ್ಲಿಯೂ ನಾನು ನಿನ್ನನ್ನು ಕುರಿತು ಪ್ರಶ್ನೆಮಾಡಿದೆನು. ಉತ್ತಮವಾದ ಗತಿಗೆ ಸತ್ಯ, ದಮ, ದಾನ, ತಪಸ್ಸು, ಅಹಿಂಸೆ, ಧರ್ಮ, ಇವುಗಳೇ ಸಾಧಕವಾದವುಗಳೇ ಹೊರತು ಜಾತಿಯೂ ಕುಲವೂ ಕಾರಣವಲ್ಲ. ಮಹಾಬಲಶಾಲಿಯಾದ ಈ ನಿನ್ನ ತಮ್ಮನಾದ ಭೀಮಸೇನನು ನಿರಾತಂಕನಾಗಿಯೇ ಇರುವನು. ನಿನಗೆ ಮಂಗಳವಾಗಲಿ. ನಾನು ಸ್ವರ್ಗಕ್ಕೆ ಹೋಗುವೆನು" ಎಂದು ನುಡಿದು, ಹೆಬ್ಬಾವಿನ ಆಕಾರವನ್ನು ಬಿಟ್ಟು, ದಿವ್ಯನಾದ ರೂಪವನ್ನು ತಾಳಿ ಸ್ವರ್ಗಲೋಕಕ್ಕೆ ತೆರಳಿದನು. ಬಳಿಕ ಧರ್ಮರಾಯನು ಭೀಮಸೇನನೊಡನೆಯೂ ಧೌಮ್ಯಾಚಾರ್ಯರೊಡನೆಯೂ ಮರಳಿ ತಮ್ಮ ಆಶ್ರಮಕ್ಕೆ ಬಂದು, ಅಲ್ಲಿರತಕ್ಕ ಬ್ರಾಹ್ಮಣರಿಗೆ ಈ ವೃತ್ತಾಂತವನ್ನೆಲ್ಲಾ ತಿಳುಹಿಸಿದನು. ಆಗ ಆ ಬ್ರಾಹ್ಮಣರು ಭೀಮಸೇನನ ಸಾಹಸವನ್ನು ನಿಂದಿಸುತ್ತ ಆತನನ್ನು ಕುರಿತು 'ಮುಂದೆ ಹೀಗೆ ಮಾಡಬೇಡ' ಎಂದು ಹೇಳಿದರು. ಅರ್ಜುನನಕುಲಸಹದೇವರೂ ದ್ರೌಪದಿಯೂ ಸಹ ಆ ವೃತ್ತಾಂತವನ್ನು ಕೇಳಿ ಲಜ್ಜೆಪಟ್ಟರು. ಬಳಿಕ ಅವರೆಲ್ಲರೂ ಅಂಥಾಮಹತ್ತಾದ ಭಯದ ದೆಸೆಯಿಂದ ತಪ್ಪಿಸಿಕೊಂಡು ಬಂದ ಭೀಮಸೇನನನ್ನು ನೋಡಿ ಸಂತೋಷಪಡುತ್ತ ಸುಖವಾಗಿ ವಿಹರಿಸಿಕೊಂಡಿದ್ದರು.

---

### ೧೮೨ನೇ ಅಧ್ಯಾಯ.—ಮಾರ್ಕಂಡೇಯಪರ್ವ (ಕಾಮ್ಯಕವನಕ್ಕೆ ಪುನಃ ಪ್ರವೇಶ.)

ವೈಶಂಪಾಯನಮುನೀಂದ್ರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಪಾಂಡವರು ದ್ವೈತವನದಲ್ಲಿ ವಾಸಮಾಡುತ್ತಿರಲು, ಬೇಸಿಗೆ ಕಳೆದು ವರ್ಷಾಕಾಲವು ಪ್ರಾಪ್ತವಾಯಿತು. ಆಗ ಕಪ್ಪಾದ ಮೇಘಗಳು ಆಕಾಶದಲ್ಲಿ ಚಪ್ಪರಹಾಕಿದಂತೆ ಕಾಣಿಸಿಕೊಂಡು, ಮಹತ್ತಾದ ಗರ್ಜನೆಯನ್ನು ಮಾಡುತ್ತ, ಎಲ್ಲಾದಿಕ್ಕುಗಳನ್ನೂ ವ್ಯಾಪಿಸಿಕೊಂಡು ಅಹೋರಾತ್ರಿಯಲ್ಲಿಯೂ ವರ್ಷಿಸುವದಕ್ಕೆ ಪ್ರಾರಂಭಮಾಡಿದವು. ಆ ಸಮಯದಲ್ಲಿ ಸೂರ್ಯಕಿರಣದ ತಾಪವು ಕಡಮೆಯಾಗಿ ಮೇಘಗಳಲ್ಲಿ ಮಿಂಚಿನ ಕಾಂತಿಯು ಹೆಚ್ಚಿತು. ಭೂಮಿಯು ಉದಕದಿಂದ ನೆನೆದು ಶಾಂತವಾಗಿ ಮನೋಹರವಾದ ಪೈರುಗಳಿಂದ ಶೋಭಿಸಿತು. ಅಲ್ಲಲ್ಲೇ ಕಾಡುನೊಣಗಳೂ ಸಾವಿರಕಾಲು ಜರಿಗಳೂ ವಿಶೇಷವಾಗಿ ಸಂಚರಿಸಿದವು. ವೃಷ್ಟಿಯಿಂದ ಎಲ್ಲಾ ಕಡೆಯಲ್ಲೂ ನೀರು ತುಂಬಿರಲು, ಇದು ಸಮಭೂಮಿಯೋ ವಿಷಮವಾದ ಭೂಮಿಯೋ ನದಿಯೋ ಭೂಪ್ರದೇಶವೋ ಎಂಬ ಗುರುತೇ ಸಿಕ್ಕದೇ ಹೋಯಿತು. ಉದಕದಿಂದ ಪೂರ್ಣವಾದ ನದಿಗಳೂ ನದಗಳೂ ಬಾಣಗಳ ವೇಗದಂತೆ ವೇಗವುಳ್ಳವುಗಳಾಗಿ ಪ್ರವಹಿಸಿದವು. ಅರಣ್ಯವೆಲ್ಲಾ ಶೋಭಿಸಿತು. ಕಾಡುಹಂದಿ ಜಿಂಕೆ ಮೊದಲಾದ ಮೃಗಗಳೂ ಪಕ್ಷಿಗಳೂ ಮಳೆಯನ್ನು ತಡೆಯಲಾರದೆ ಅರಣ್ಯಗಳಲ್ಲಿ ಕೂಗುವ ಧ್ವನಿಯು

ಕೇಳಿಸಿತು. ಚಾತಕ, ನವಿಲು, ಕೋಗಿಲೆ, ಕಪ್ಪೆ, ಇವುಗಳು ಮದಿಸಿ ಹಾರಾಡಿದವು. ಈ ರೀತಿಯಾದ ವರ್ಷಾಕಾಲವನ್ನು ನಿರ್ಜಲಭೂಮಿಯಲ್ಲಿ ಸಂಚರಿಸುತ್ತಲಿದ್ದ ಪಾಂಡವರು ಸುಖವಾಗಿ ಕಳೆದರು. ಬಳಿಕ ಶರತ್ಕಾಲವು ಪ್ರಾಪ್ತವಾಗಲು, ಹಂಸಪಕ್ಷಿಗಳೂ ಕ್ರೌಂಚಪಕ್ಷಿಗಳೂ ಸಂತೋಷಭರಿತಗಳಾದವು. ಅಲ್ಲಲ್ಲೇ ವನಗಳೂ ಪರ್ವತದ ತಪ್ಪಲುಗಳೂ ವಿಶೇಷವಾಗಿ ಹಸುರಾದ ಹುಲ್ಲುಬೆಳೆದು ರಮ್ಯವಾಗಿ ಕಾಣಿಸಿಕೊಂಡವು. ನದೀಜಲವು ನಿರ್ಮಲವಾಯಿತು. ಆಕಾಶವು ನಿರ್ಮಲವಾಗಿ ನಕ್ಷತ್ರಗಳಿಂದ ಪ್ರಕಾಶಿಸಿತು. ಭೂಮಿಯು ಧೂಳಿಲ್ಲದೆಯೂ ಶೀತಳವಾಗಿಯೂ ಇತ್ತು. ಮತ್ತು ಅಲ್ಲಲ್ಲಿ ಮೃಗಪಕ್ಷಿಗಳ ಸಂಚಾರವು ಅಧಿಕವಾಗಿತ್ತು. ಶರತ್ಕಾಲದ ರಾತ್ರಿಗಳು ಗ್ರಹಗಳಿಂದಲೂ ನಕ್ಷತ್ರಗಳಿಂದಲೂ ಚಂದ್ರನಿಂದಲೂ ಕೂಡಿ ವಿಶೇಷವಾಗಿ ಪ್ರಕಾಶಿಸಿದವು. ಶೀತಲವಾದ ಉದಕವುಳ್ಳ ನದಿಗಳೂ ಸರೋವರಗಳೂ ನೈದಿಲೆಗಳಿಂದಲೂ ತಾವರೆಗಳಿಂದಲೂ ಅಲಂಕೃತಗಳಾಗಿದ್ದವು. ಅಂಥ ಶರತ್ಕಾಲದಲ್ಲಿ ಆಕಾಶದಂತೆ ದೂರಕ್ಕೆ ಕಾಣಿಸುವ ದಡಗಳುಳ್ಳದ್ದಾಗಿ, ಆ ದಡಗಳಲ್ಲಿ ನೀರಂಜೀಗಿಡಗಳು ಬೆಳೆದಿರತಕ್ಕ ಪುಣ್ಯತಮವಾದ ಸರಸ್ವತೀನದಿಯನ್ನು ನೋಡಿ ಪಾಂಡವರು ಅಧಿಕವಾಗಿ ಸಂತೋಷಪಡುತ್ತ ಅಲ್ಲಿ ವಾಸಮಾಡುತ್ತಿರಲು, ಪುಣ್ಯತಮವಾದ ಕಾರ್ತಿಕ ಶುದ್ಧ ಪೂರ್ಣಿಮೆಯು ಪ್ರಾಪ್ತವಾಯಿತು. ಆ ದಿವಸ ಕಳೆದು ಪ್ರಾತಃಕಾಲವಾಗಲು, ಪಾಂಡವರು ಮಹಾತ್ಮರಾದ ತಪಸ್ವಿಗಳಿಂದಲೂ ಧೌಮ್ಯಾಚಾರ್ಯರಿಂದಲೂ ತಮ್ಮ ಪರಿವಾರಗಳಿಂದಲೂ ಸಹಿತರಾಗಿ, ತಮ್ಮತಮ್ಮ ವಾಹನಗಳನ್ನೇರಿ ಆ ದ್ವೈತವನದಿಂದ ಹೊರಟು ಕಾಮ್ಯಕ ವನಕ್ಕೆ ಪ್ರಯಾಣವನ್ನು ಮಾಡಿದರು.

## ೧೮೩ನೇ ಅಧ್ಯಾಯ.—ಮಾರ್ಕಂಡೇಯಪರ್ವ—(ಕಾಮ್ಯಕವನಕ್ಕೆ ಶ್ರೀಕೃಷ್ಣನು ಬಂದದ್ದು.)

ವೈಶಂಪಾಯನಮುನೀಂದ್ರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಆ ಬಳಿಕ ಪಾಂಡವರು ಕಾಮ್ಯಕವನವನ್ನು ಸೇರಿ ಅಲ್ಲಿದ್ದ ಮಹಾತ್ಮರಾದ ಋಷಿಗಳು ಮಾಡಿದ ಸತ್ಕಾರಗಳನ್ನು ಕೈಕೊಂಡು ಒಂದು ಸ್ಥಳದಲ್ಲಿ ದ್ರೌಪದಿಯೊಡನೆ ಸುಖವಾಗಿ ಕುಳಿತು ವಿಶ್ರಮಿಸಿಕೊಳ್ಳಲು, ಅನೇಕ ಮಂದಿ ಬ್ರಾಹ್ಮಣರು ಅವರನ್ನು ಸುತ್ತುವರಿದು ಕುಳಿತುಕೊಂಡರು. ಆಗ ಅವರೊಳಗೆ ಅರ್ಜುನನಿಗೆ ಸ್ನೇಹಿತನಾದ ಒಬ್ಬ ಬ್ರಾಹ್ಮಣನು ಪಾಂಡವರನ್ನು ನೋಡಿ "ಉತ್ಕೃಷ್ಟವಾದ ಬುದ್ಧಿಯುಳ್ಳವನಾಗಿ ಸಕಲಲೋಕಗಳನ್ನೂ ಸ್ವಾಧೀನಮಾಡಿಕೊಂಡಿರುವ ಶ್ರೀಕೃಷ್ಣನು ಇಲ್ಲಿಗೆ ನೀವು ಬಂದಿರುವಿರೆಂದು ತಿಳಿದು ನಿಮ್ಮನ್ನು ನೋಡಬೇಕೆಂಬ ಕುತೂಹಲವುಳ್ಳವನಾಗಿ ನಿಮ್ಮ ಶ್ರೇಯಸ್ಸಿಗೋಸ್ಕರ ಇಲ್ಲಿಗೆ ಬರುವನು. ಬಹುವರ್ಷ ಆಯುಸ್ಸುಳ್ಳ ಮಹಾತಪಸ್ವಿಯಾದ ವೇದವೇದಾಂಗ ಪಾರಂಗತನಾದ ಮಾರ್ಕಂಡೇಯಮಹರ್ಷಿಯೂ ನಿಮ್ಮ ಹಿತಾರ್ಥವಾಗಿ ಇಲ್ಲಿಗೆ ಬರುವನು" ಎಂದು ನುಡಿಯುತ್ತಿರಲು, ಶ್ರೀಕೃಷ್ಣನು ಶೈಬ್ಯ, ಸುಗ್ರೀವ, ಮೇಘಪುಷ್ಪ, ವಲಾಹಕಗಳೆಂಬ ನಾಲ್ಕು ಕುದುರೆಗಳನ್ನು ಕಟ್ಟಿರತಕ್ಕ ರಥವನ್ನು ಸತ್ಯಭಾಮಾದೇವಿಯೊಡನೇರಿ, ಶಚೀದೇವಿಯೊಡಗೂಡಿದ ದೇವೇಂದ್ರನಂತೆ ಪ್ರಕಾಶಿಸುತ್ತ, ಪಾಂಡವರ ಬಳಿಗೆ ಬಂದು ರಥದಿಂದಿಳಿದು ಯಥಾವಿಧಿಯಾಗಿ ಧರ್ಮರಾಯನಿಗೆ ನಮಸ್ಕಾರವನ್ನು ಮಾಡಿ, ಭೀಮಸೇನನನ್ನೂ ಅರ್ಜುನನನ್ನೂ ಆಲಿಂಗನೆ ಮಾಡಿಕೊಂಡು, ನಕುಲಸಹದೇವರಿಂದ ನಮಸ್ಕಾರಮಾಡಿಸಿಕೊಂಡು, ಧೌಮ್ಯಾಚಾರ್ಯರಿಗೆ ಮರ್ಯಾದೆಯನ್ನು ಮಾಡಿ, ದ್ರೌಪದಿಯನ್ನು ಸಮಾಧಾನಪಡಿಸಿ, ಅಧಿಕವಾದ ಸಂತೋಷದಿಂದ ಅರ್ಜುನನನ್ನು ಆಲಿಂಗನೆಮಾಡಿಕೊಂಡನು. ಬಳಿಕ ಶ್ರೀಕೃಷ್ಣನಿಗೆ ಪ್ರಿಯಭಾರ್ಯೆಯಾದ ಸತ್ಯಭಾಮೆಯು ಪಾಂಡವರಿಗೆ ಪ್ರಿಯಭಾರ್ಯೆಯಾದ ದ್ರೌಪದಿಯನ್ನು ಆಲಿಂಗನೆಮಾಡಿಕೊಂಡು, ಯೋಗಕ್ಷೇಮಗಳನ್ನು ವಿಚಾರಿಸಿದಳು. ಆ ಬಳಿಕ ಪಾಂಡವರು ದ್ರೌಪದಿಯಿಂದಲೂ ಪುರೋಹಿತರಾದ ಧೌಮ್ಯಾಚಾರ್ಯರಿಂದಲೂ ಕೂಡಿ ಶ್ರೀಕೃಷ್ಣನಿಗೆ ಸತ್ಕಾರವನ್ನು ಮಾಡಿ ಆತನ ಸುತ್ತುವರಿದು ಕುಳಿತುಕೊಂಡರು. ಆಗ ಶ್ರೀಕೃಷ್ಣನು ದೈತ್ಯಮರ್ದನನಾದ ಅರ್ಜುನನೊಡಗೂಡಿ ಷಣ್ಮುಖನೊಡಗೂಡಿದ ಭೂತಪತಿಯಾದ ಮಹಾದೇವನಂತೆ ಪ್ರಕಾಶಿಸಿದನು. ಆ ಬಳಿಕ

ಅರ್ಜುನನು ಶ್ರೀಕೃಷ್ಣನ ಸಂಗಡ ವನದಲ್ಲಿ ನಡೆದ ವೃತ್ತಾಂತಗಳನ್ನೆಲ್ಲಾ ಹೇಳಿ, ಅಭಿಮನ್ಯು ಸುಭದ್ರೆಗಳ ಯೋಗಕ್ಷೇಮವನ್ನು ವಿಚಾರಿಸಿದನು. ಅದನ್ನು ಕೇಳಿ ಶ್ರೀಕೃಷ್ಣನು ಧರ್ಮರಾಯನನ್ನು ವಿಶೇಷವಾಗಿ ಪ್ರಶಂಸೆ ಮಾಡಿ, ಆತನನ್ನು ಕುರಿತು "ಎಲೈ ಧರ್ಮರಾಯನೆ, ರಾಜ್ಯಲಾಭವಾಗುವದಕ್ಕೆ ಧರ್ಮವೇ ಉತ್ತಮವಾದದ್ದು. ಅಂಥ ಧರ್ಮವು ವೃದ್ಧಿಯಾಗಬೇಕಾದರೆ ತಪಸ್ಸುಮಾಡಬೇಕೆಂದು ದೊಡ್ಡವರು ಹೇಳುವರು. ನೀನು ಸತ್ಯ ದಿಂದಲೂ ಋಜುಸ್ವಭಾವದಿಂದಲೂ ಸ್ವಧರ್ಮದಲ್ಲಿದ್ದುಕೊಂಡು, ಈ ಲೋಕವನ್ನೂ ಪರಲೋಕವನ್ನೂ ಸಹ ಜಯಿಸಿದೆ. ಮೊದಲೇ ಬ್ರಹ್ಮಚರ್ಯವ್ರತವನ್ನು ಆಚರಿಸುತ್ತ, ವೇದಾಧ್ಯಯನವನ್ನು ಮಾಡಿ, ಸಾಂಗೋಪಾಂ ಗವಾದ ಧನುರ್ವೇದವನ್ನೂ ಕಲಿತು, ಕ್ಷತ್ರಧರ್ಮದಿಂದ ದ್ರವ್ಯವನ್ನು ಸಂಪಾದಿಸಿ, ಅನೇಕ ಕ್ರತುಗಳನ್ನು ಮಾಡಿದೆ. ನೀನು ಯಾವಾಗಲೂ ಕಾಮದಿಂದ ಗ್ರಾಮ್ಯಧರ್ಮವನ್ನು ಆಚರಿಸತಕ್ಕವನಲ್ಲ; ಮತ್ತು ಅರ್ಥಲೋಭದಿಂದ ಧರ್ಮವನ್ನು ಬಿಡದೆ, ಅದರ ಪ್ರಭಾವದಿಂದ ದಾನದಲ್ಲೂ ಸತ್ಯದಲ್ಲೂ ತಪಸ್ಸಿನಲ್ಲೂ ನಿಷ್ಠನಾಗಿ, ಶುದ್ಧವಾದ ಬುದ್ಧಿ ಯುಳ್ಳವನಾಗಿ ಕ್ಷಮೆಯನ್ನೂ ಧೈರ್ಯವನ್ನೂ ತಾಳಿರುವೆ. ರಾಜ್ಯವನ್ನೂ ದ್ರವ್ಯವನ್ನೂ ಭೋಗಗಳನ್ನೂ ಕಳೆದು ಕೊಂಡರೂ, ಸತ್ಕಾರ್ಯದಲ್ಲೇ ನಿನಗೆ ವಿಶೇಷವಾಗಿ ಅಪೇಕ್ಷೆಯಿರುವದು. ಕೌರವರ ಸಭೆಯಲ್ಲಿ ದ್ರೌಪದಿಗೆ ಉಂಟಾದ ಅವಮಾನವನ್ನು ಸಕಲರೂ ನೋಡುತ್ತಿದ್ದರೂ, ಅದನ್ನೂ ಕೂಡ ಧರ್ಮಾತ್ಮನಾದ ನೀನು ಸಹಿಸಿದೆ. ನಿನ್ನಂತೆ ಮತ್ತೊಬ್ಬರು ಸಹಿಸಬಲ್ಲರೆ ? ಆದ್ದರಿಂದ ನೀನು ಜಾಗ್ರತೆಯಾಗಿ ಸಕಲೈಶ್ವರ್ಯಸಂಪನ್ನನಾಗಿ ಭೂಮಿಯನ್ನಾಳುವ ನಾಗುವೆ. ಇದು ನಿಜ. ನಿನ್ನ ಪ್ರತಿಜ್ಞೆಯು ಮುಗಿದ ಬಳಿಕ ನಾವೆಲ್ಲರೂ ಕೌರವರನ್ನು ನಿಗ್ರಹಿಸುವ ವಿಷಯ ದಲ್ಲಿ ಸಿದ್ಧರಾಗಿರುವೆವು. ಅಸ್ತ್ರನಿಮಿತ್ತವಾಗಿ ಸ್ವರ್ಗಲೋಕಕ್ಕೆ ಹೋಗಿದ್ದ ಅರ್ಜುನನು ನಿಮ್ಮ ಪುಣ್ಯದಿಂದ ಕೃತಕೃತ್ಯನಾಗಿ ಅಲ್ಲಿಂದ ಮರಳಿ ಇಲ್ಲಿಗೆ ಬಂದನು" ಎಂದು ನುಡಿದು, ಬಳಿಕ ದ್ರೌಪದಿಯನ್ನು ನೋಡಿ "ಎಲೌ ಪತಿವ್ರತಾಶಿರೋಮಣಿಯಾದ ದ್ರೌಪದಿಯೆ, ನಿನ್ನ ಪಾತಿವ್ರತ್ಯದ ಮಹಿಮೆಯಿಂದಲೇ ಅರ್ಜುನನು ಸ್ವರ್ಗ ಲೋಕದಿಂದ ಇಲ್ಲಿಗೆ ಮರಳಬಂದನು. ಧನುರ್ವೇದಾಭ್ಯಾಸದಲ್ಲಿ ಪ್ರೀತಿಯುಳ್ಳ ನಿನ್ನ ಮಕ್ಕಳು ಇನ್ನೂ ಬಾಲಕ ರಾಗಿರುವರು. ಸುಶೀಲರಾದ ಅವರು ಮಿತ್ರರೊಡಗೂಡಿ ಸಜ್ಜನರ ಮಾರ್ಗವನ್ನೇ ಅನುಸರಿಸುತ್ತ, ನಿಮ್ಮ ತಂದೆ ಯಾದ ದ್ರುಪದರಾಯನೂ ನಿನ್ನೊಡಹುಟ್ಟಿದ ಧೃಷ್ಟದ್ಯುಮ್ನ ಮೊದಲಾದವರೂ ಪೌರಜನರೂ ದೇಶದ ಜನಗಳೂ ಸಹ ಎಷ್ಟು ಆದರಣೆಮಾಡಿದಾಗ್ಯೂ ಅಲ್ಲಿ ತಾತನವಶದಲ್ಲೂ ಸೋದರಮಾವನವಶದಲ್ಲೂ ಇರುವದಕ್ಕೆ ಅಪೇಕ್ಷಿಸದೆ, ದ್ವಾರಕಾಪಟ್ಟಣಕ್ಕೆ ಬಂದು ಅಲ್ಲಿ ಧನುರ್ವೇದಾಭ್ಯಾಸವನ್ನು ಮಾಡಬೇಕೆಂದು ಬಯಸುತ್ತಿರುವರು. ಆ ಮಕ್ಕ ಳಿಗೆ ಒಳ್ಳೇಗುಣಗಳನ್ನೂ ಒಳ್ಳೇನಡತೆಯನ್ನೂ ನೀನೂ ಪೂಜ್ಯಳಾದ ಕುಂತಿಯೂ ಸಹ ಹ್ಯಾಗೆ ಕಲಿಸತಕ್ಕ ವರೋ ಹಾಗೆ ಸುಭದ್ರೆಯೂ ಕಲಿಸತಕ್ಕವಳು. ರುಕ್ಮಿಣೀಪುತ್ರನಾದ ಪ್ರದ್ಯುಮ್ನನು, ಅನಿರುದ್ಧ ಅಭಿಮನ್ಯು ಸುನೀಥ ಭಾನುಗಳಿಗೆ ಹ್ಯಾಗೆ ವಿದ್ಯವನ್ನು ಕಲಿಸುವನೋ ಹಾಗೆ, ನಿನ್ನ ಮಕ್ಕಳಾದ ಪ್ರತಿವಿಂಧ್ಯಾದಿಗಳಿಗೂ ವಿದ್ಯವನ್ನು ಕಲಿಸುವನು. ಕುಮಾರನಾದ ಅಭಿಮನ್ಯುವು ಗದೆ ಖಡ್ಗ ಗುರಾಣಿಗಳಲ್ಲಿಯೂ ಅಸ್ತ್ರವಿದ್ಯೆಯ ಲ್ಲಿಯೂ ರಥಾರೋಹಣ ಮಾಡುವವರಲ್ಲಿಯೂ ಬಹಳ ಜಾಗರೂಕನಾಗಿರುವನು. ಆ ಅಭಿಮನ್ಯುವೂ ಕೂಡ ಶಾಸ್ತ್ರೋಕ್ತವಾಗಿ ನಿನ್ನ ಮಕ್ಕಳಿಗೆ ಶಿಕ್ಷೆಯನ್ನು ಹೇಳುತ್ತ ಅಸ್ತ್ರಗಳನ್ನು ಉಪದೇಶಮಾಡುವನು. ಅಭಿ ಮನ್ಯುವಿನ ಪರಾಕ್ರಮವನ್ನು ನೋಡಿ ಪ್ರದ್ಯುಮ್ನನು ಯಾವಾಗಲೂ ಸಂತೋಷಪಡುತ್ತಿರುವನು. ಈ ಪ್ರಕಾರ ನಿನ್ನ ಮಕ್ಕಳು ಒಬ್ಬರನ್ನೊಬ್ಬರು ನೋಡಿಕೊಂಡು ವಿದ್ಯಾಭ್ಯಾಸವನ್ನು ಮಾಡುತ್ತ, ಆನೆ ಕುದುರೆ ರಥಗಳ ನ್ನೇರುತ್ತ ಸುಖವಾಗಿ ವಿಹರಿಸುತ್ತಿರುವರು" ಎಂದು ಹೇಳಿ, ಬಳಿಕ ಧರ್ಮರಾಯನನ್ನು ಕುರಿತು "ಎಲೈ ಧರ್ಮ ರಾಯನೆ, ದಶಾರ್ಹ, ಕುಕುರ, ಅಂಧಕ ಮೊದಲಾದ ಯಾದವಯೋಧರು ನಿನ್ನ ಆಜ್ಞಾನುಸಾರಿಗಳಾಗಿ ನೀನು ಎಲ್ಲಿ ಇರಬೇಕೆಂದರೂ ಅಲ್ಲಿ ಸಿದ್ಧವಾಗಿರುವರು. ಬಲರಾಮನಿಂದ ಪಾಲಿತವಾದ ರಥ ಗಜ ತುರಗ ಪದಾತಿ ಗಳಿಂದ ನಿಬಿಡವಾಗಿ ಹರಿತವಾದ ಆಯುಧಗಳನ್ನು ಧರಿಸಿರುವ ನಮ್ಮ ಸೈನ್ಯವು ನಿನಗೆ ಸಹಾಯಮಾಡುವದಕ್ಕಾಗಿ ಸಿದ್ಧವಾಗಿರುವದು. ಇಂಥ ಸೈನ್ಯದಿಂದ ಪಾಪಾತ್ಮನಾದ ದುರ್ಯೋಧನನು ತಮ್ಮಂದಿರಿಂದಲೂ ಮಿತ್ರರಿಂದಲೂ ಸೈನ್ಯದಿಂದಲೂ ಕೂಡಿ, ಸಾಲ್ವ ನರಕಾಸುರರಿಗೆ ಆದ ಗತಿಯನ್ನು ಪಡೆಯಲಿ. ಎಲೈ ಧರ್ಮಾತ್ಮನೆ, ಕೌರ

ವರ ಸಭೆಯಲ್ಲಿ ನೀನು ಯಾವ ಪ್ರತಿಜ್ಞೆಯನ್ನು ಮಾಡಿದೆಯೋ ಅದನ್ನು ನೆರವೇರಿಸುವದಕ್ಕಾಗಿ, ನಿನಗೆ ಬೇಕಾದ ಸ್ಥಳದಲ್ಲಿ ವಾಸಮಾಡುತ್ತ ಕೋಪವನ್ನು ತಡೆದುಕೊಂಡು ವಿಹರಿಸು. ಬಳಿಕ ಯಾದವರ ಸೈನ್ಯದಿಂದ ನಿನ್ನ ಶತ್ರುಗಳು ನಿಶ್ಶೇಷವಾಗಿ ಹತರಾಗಲು, ನೀನು ಸುಖವಾಗಿ ರಾಜ್ಯವನ್ನು ಪಡೆದು ಹಸ್ತಿನಾನಗರವನ್ನು ಪ್ರವೇಶ ಮಾಡುವೆ" ಎಂದನು.

ಆಗ ಧರ್ಮರಾಯನು ಶ್ರೀಕೃಷ್ಣನ ಅಭಿಮತವನ್ನು ತಿಳಿದು ಆತನನ್ನು ಶ್ಲಾಘಿಸಿ, ಕೈಮುಗಿದು ಕೊಂಡು ಆತನನ್ನು ಕುರಿತು "ಎಲೈ ಮಹಾನುಭಾವನೆ, ನೀನು ನುಡಿದ ಮಾತು ಸತ್ಯವಾದದ್ದು. ನಿನ್ನನ್ನೇ ಸೇರಿರತಕ್ಕ ಪಾಂಡವರಿಗೆ ನೀನೇ ಗತಿಯಲ್ಲದೆ ಇನ್ನ್ಯಾರಿರುವರು? ಅಂಥ ಸಮಯಬಂದರೆ ನೀನು ಹೇಳಿದ್ದನ್ನೆಲ್ಲಾ ಮಾಡ ತಕ್ಕವನೇ ಹೌದು. ಈ ವಿಷಯದಲ್ಲಿ ಲೇಶವೂ ಸಂಶಯವಿಲ್ಲ. ಈಗ ನಾವು ಕೌರವರ ಸಭೆಯಲ್ಲಿ ಮಾಡಿದ ಪ್ರತಿಜ್ಞೆಯಂತೆ ಹನ್ನೆರಡು ವರುಷದ ವನವಾಸವು ಕಳೆಯುತ್ತಬಂತು. ಹದಿಮೂರನೆಯ ವರುಷ ಅಜ್ಞಾತ ವಾಸವನ್ನು ನೆರವೇರಿಸಿ ಸತ್ಯಸಂಧರೆನ್ನಿಸಿಕೊಂಡು, ಬಳಿಕ ನಿನ್ನ ಮಾತಿನಂತೆ ನಡೆದುಕೊಳ್ಳಬೇಕೆಂದು ನನಗೆ ತೋರುವದು. ಪರಿವಾರಸಮೇತರಾಗಿಯೂ ಪತ್ನೀಸಮೇತರಾಗಿಯೂ ಬಂಧುಸಮೇತರಾಗಿಯೂ ದಾನಧರ್ಮಪರ ರಾಗಿಯೂ ಇರುವ ನಮಗೆ ನೀನೇ ರಕ್ಷಕನಾದವನು" ಎಂದು ಮಾತನಾಡುತ್ತಿದ್ದ ಸಮಯದಲ್ಲಿ, ಮುಪ್ಪು ಮರಣಗಳಿಲ್ಲದೆ ಶ್ಲಾಘ್ಯವಾದ ರೂಪೂ ಉದಾರಸ್ವಭಾವವೂ ಉಳ್ಳವನಾಗಿ ಇಪ್ಪತ್ತೈದು ವರ್ಷ ಪ್ರಾಯವುಳ್ಳ ಚಿರಂಜೀವಿಯೂ ಮಹಾತಪಸ್ವಿಯೂ ಧರ್ಮಾತ್ಮನೂ ಆದ ಮಾರ್ಕಂಡೇಯಮಹರ್ಷಿಯು ಅಲ್ಲಿಗೆ ಬಂದನು. ಆ ಮಹರ್ಷಿಯು ಬಂದದ್ದನ್ನು ನೋಡಿ, ಸಮಸ್ತಬ್ರಾಹ್ಮಣರೂ ಪಾಂಡವರೊಡಗೂಡಿದ ಶ್ರೀಕೃಷ್ಣನೂ ಸಹ ಪ್ರತ್ಯುತ್ಥಾನಮಾಡಿ, ವಿಧಿವತ್ತಾಗಿ ಅರ್ಘ್ಯಪಾದ್ಯಾದಿಗಳಿಂದ ಸತ್ಕರಿಸಿ, ಆತನಿಗೆ ಉಚಿತವಾದ ಪೀಠವನ್ನು ಕೊಟ್ಟರು. ಬಳಿಕ ಆಮಹಾತ್ಮನು ಸುಖವಾಗಿ ಆಸನದಮೇಲೆ ಕುಳ್ಳಿರಲು, ಶ್ರೀಕೃಷ್ಣನು ಅಲ್ಲಿರತಕ್ಕ ಸಕಲರ ಅಭಿಪ್ರಾಯವನ್ನೂ ತಾನು ತಿಳಿದು, ಮಾರ್ಕಂಡೇಯಮಹರ್ಷಿಯನ್ನು ಕುರಿತು "ಎಲೈ ಮಹಾತ್ಮನೆ, ಪಾಂಡವರೂ ಈ ಬ್ರಾಹ್ಮಣರೂ ದ್ರೌಪದಿಯೂ ಸತ್ಯಭಾಮೆಯೂ ನಾನೂ ಸಹ ಪುರಾತನವಾದ ಪುಣ್ಯಕಥೆಗಳನ್ನೂ ಆಚಾರಪದ್ಧತಿಗಳನ್ನೂ ಪತಿವ್ರತಾಸ್ತ್ರೀಯರ ಮಹಿಮೆಯನ್ನೂ ಮಹರ್ಷಿಗಳ ಪ್ರಭಾವವನ್ನೂ ಸಹ ಕೇಳಬೇಕೆಂಬ ಅಪೇಕ್ಷೆಯುಳ್ಳವರಾಗಿರುವೆವು. ನೀನು ಹೇಳಬೇಕು" ಎಂದು ನುಡಿದು, ಶ್ರೀಕೃಷ್ಣನು ಸಭೆಯನ್ನು ಮಾಡಿಕೊಂಡು ಕೂತಿರಲು, ಪರಿಶುದ್ಧಾತ್ಮನಾದ ದೇವರ್ಷಿಯಾದ ನಾರದನು ಪಾಂಡವರನ್ನು ನೋಡಬೇಕೆಂದು ಅಲ್ಲಿಗೆ ಬಂದನು. ಆ ಮಹಾತ್ಮನು ಬಂದದ್ದನ್ನು ನೋಡಿ ಮಾರ್ಕಂಡೇಯ ಮೊದಲಾದ ಋಷಿಗಳೂ ಶ್ರೀಕೃಷ್ಣನೂ ಪಾಂಡವರೂ ದ್ರೌಪದಿಯೂ ಸತ್ಯಭಾಮೆಯೂ ಸಹ ಎದ್ದು ನಿಂತುಕೊಂಡು ಅರ್ಘ್ಯಪಾದ್ಯಾದಿಗಳಿಂದ ಶಾಸ್ತ್ರೋಕ್ತವಾಗಿ ಆತನನ್ನು ಸತ್ಕರಿಸಿ ಪೀಠದಮೇಲೆ ಕುಳ್ಳಿರಿಸಿದರು. ಬಳಿಕ ನಾರದನು ಮಾರ್ಕಂಡೇಯಮಹರ್ಷಿಯಿಂದ ಸತ್ಕಥಾಶ್ರವಣಮಾಡಬೇಂದು ಶ್ರೀಕೃಷ್ಣಮೊದಲಾದವರು ಸಿದ್ಧವಾಗಿರುವದನ್ನು ತಿಳಿದು, ತಾನೂ ಸಂತೋಷಪಟ್ಟು ಮಾರ್ಕಂಡೇಯಮಹರ್ಷಿಯನ್ನು ಕುರಿತು "ಎಲೈ ಮಹರ್ಷಿಯೆ, ಪಾಂಡವರು ಯಾವ ಕಥೆಯನ್ನು ಕೇಳಬೇಕೆಂದು ಅಪೇಕ್ಷಿಸುವರೋ ಅದನ್ನು ಹೇಳು" ಎಂದು ನಸುನಗುತ್ತ ಮಾತನಾಡಿದನು. ಅದನ್ನು ಕೇಳಿ ಮಾರ್ಕಂಡೇಯಮಹರ್ಷಿಯು ಪಾಂಡವರನ್ನು ಕುರಿತು "ನೀವೆಲ್ಲರೂ ಕಾರ್ಯಾಂತರವನ್ನು ಬಿಟ್ಟು ಅವಕಾಶವನ್ನು ಮಾಡಿಕೊಳ್ಳಿರಿ. ಬಳಿಕ ಯಾವ ಕಥೆಯನ್ನು ಹೇಳಬೇಕೋ ಅದನ್ನು ಹೇಳುವೆನು" ಎಂದನು. ಆಗ ಪಾಂಡವರು ಆ ಬ್ರಾಹ್ಮಣರೊಡಗೂಡಿ ಮಧ್ಯಾಹ್ನಸಮಯದಲ್ಲಿ ಸೂರ್ಯನನ್ನು ನೋಡುವಂತೆ ಆ ಮಹರ್ಷಿಯನ್ನೇ ನೋಡುತ್ತ, ಕಾರ್ಯಾಂತರದಲ್ಲಿ ಆಸಕ್ತರಾಗದೆಯಿದ್ದರು. ಬಳಿಕ ಧರ್ಮರಾಯನು ಪುಣ್ಯಾತಮವಾದ ಕಥೆಗಳನ್ನು ಹೇಳಬೇಕೆಂದು ಚಿಂತಿಸುತ್ತಿರುವ ಆ ಮಹರ್ಷಿಯನ್ನು ನೋಡಿ "ಎಲೈ ಮಹಾತ್ಮನೆ, ದೇವತೆಗಳ ದೈತ್ಯರ ಮಹಾತ್ಮರಾವ ಋಷಿಗಳ ರಾಜರ್ಷಿಗಳ ಮತ್ತು ಮಹಾತ್ಮರಾದವರ ಪುರಾತನವಾದ ಚರಿತ್ರೆಗಳನ್ನು ನೀನು ತಿಳಿದಿರುವೆ. ಈ ಶ್ರೀಕೃಷ್ಣನು ನಮ್ಮನ್ನು ನೋಡುವದಕ್ಕಾಗಿ ಬಂದಿರುವನು. ಈತನೇ ನಮಗೆ ಸೇವ್ಯನಾಗಿಯೂ ನಮಗೆ ಬೇಕಾದವನಾಗಿಯೂ ಆಶ್ರಯನಾಗಿಯೂ ಇರುವನೆಂದು

ನನಗೆ ತೋರುವದು. ಇಂಥ ನನಗೆ ಸುಖವಿಲ್ಲದಿರುವದನ್ನೂ ದುರಾತ್ಮರಾದ ದುರ್ಯೋಧನಾದಿಗಳಿಗೆ ಐಶ್ವರ್ಯವು ಅಧಿಕವಾಗಿರುವದನ್ನೂ ಸಹ ನೋಡಿ ನನ್ನ ಮನಸ್ಸಿನಲ್ಲಿ ಒಂದು ವಿಚಾರವುಂಟಾಗಿರುವದು. ಅದೇನೆಂದರೆ, ಪುರುಷನು ಶುಭಾಶುಭಕರ್ಮಗಳನ್ನು ಮಾಡಿ ಆ ಫಲಗಳನ್ನು ಹ್ಯಾಗೆ ಅನುಭವಿಸುವನು? ಮನುಷ್ಯರು ಅನುಭವಿಸತಕ್ಕ ಸುಖದುಃಖಗಳಿಗೆ ಈಶ್ವರನು ಹ್ಯಾಗೆ ಕರ್ತೃವಾದವನು? ಈ ಶರೀರದಲ್ಲಿ ಮಾಡಿದ ಕರ್ಮಕ್ಕೆ ಮತ್ತೊಂದು ದೇಹವನ್ನು ಹೊಂದುವದೂ ಮತ್ತು ಆ ಕರ್ಮದ ಫಲವನ್ನು ಅನುಭವಿಸತಕ್ಕದ್ದೂ ಹ್ಯಾಗೆ? ಪುರುಷನು ಈ ಶರೀರವನ್ನು ತ್ಯಜಿಸಿ ಶುಭಾಶುಭಕರ್ಮಗಳಿಂದ ದೇಹಾಂತರವನ್ನು ಹ್ಯಾಗೆ ಪಡೆಯುವನು? ಮೃತನಾದ ಪುರುಷನ ಕರ್ಮವು ಆತನಿಗೆ ಮತ್ತೊಂದು ಶರೀರವುಬರುವ ವರೆಗೂ ಆ ಕರ್ಮವು ಈ ಲೋಕದಲ್ಲಿರುವದೋ ಅಥವಾ ಪರಲೋಕದಲ್ಲಿರುವದೋ ತಿಳುಹಿಸು" ಎಂದು ಪ್ರಶ್ನೆಮಾಡಿದನು.

ಬಳಿಕ ಮಾರ್ಕಂಡೇಯನು ಧರ್ಮರಾಯನನ್ನು ಕುರಿತು "ಎಲೈ ರಾಯನೆ, ನೀನು ಮಾಡಿದ ಪ್ರಶ್ನೆಯು ಯುಕ್ತವಾದದ್ದೇ ಸರಿ. ತಿಳಿಯತಕ್ಕ ಅಂಶಗಳನ್ನೆಲ್ಲಾ ನೀನು ತಿಳಿದವನಾಗಿದ್ದರೂ, ಲೋಕಹಿತಾರ್ಥವಾಗಿ ಪ್ರಶ್ನೆಯನ್ನು ಮಾಡಿದೆ. ಪುರುಷನಾದವನು ಸುಖದುಃಖಗಳನ್ನು ಈ ಲೋಕದಲ್ಲೂ ಪರಲೋಕದಲ್ಲೂ ಹ್ಯಾಗೆ ಅನುಭವಿಸುವನೋ ಅದನ್ನು ವಿವರಿಸುವೆನು. ಏಕಾಗ್ರಚಿತ್ತನಾಗಿ ಕೇಳು. ಎಲ್ಲರಿಗಿಂತಲೂ ಮೊದಲು ಹುಟ್ಟಿದ ಚತುರ್ಮುಖಬ್ರಹ್ಮನು ಸಕಲಮನುಷ್ಯರಿಗೂ ನಿರ್ಮಲವಾಗಿಯೂ ಶುಚಿಯಾಗಿಯೂ ಧರ್ಮಸಾಧಕವಾಗಿಯೂ ಇರುವ ಶರೀರವನ್ನು ನಿರ್ಮಾಣಮಾಡಿದನು. ಆಶರೀರದಿಂದ ಅವರು ಅಮೋಘವಾದ ಸಂಕಲ್ಪವುಳ್ಳವರಾಗಿಯೂ ವ್ರತಾಚರಣಪರರಾಗಿಯೂ ಸತ್ಯವಾದಿಗಳಾಗಿಯೂ ಬ್ರಹ್ಮಜ್ಞಾನಿಗಳಾಗಿಯೂ ಪುಣ್ಯಶಾಲಿಗಳಾಗಿಯೂ ದೇವತೆಗಳೊಡನೆ ಆಕಾಶದಲ್ಲಿ ಸಂಚರಿಸುತ್ತ, ಮತ್ತು ಸ್ವೇಚ್ಛೆಯಿಂದ ಭೂಮಿಯಲ್ಲೂ ಸಂಚರಿಸುತ್ತ, ಸ್ವೇಚ್ಛಾಮರಣವುಳ್ಳವರಾಗಿ, ಸ್ವಲ್ಪವೇ ದುಃಖವುಳ್ಳವರಾಗಿ, ಯಾವ ಬಾಧೆಯೂ ಇಲ್ಲದೆ ಬೇಕಾದ ಇಷ್ಟಾರ್ಥಗಳನ್ನು ಪಡೆಯುತ್ತ, ಮಾತ್ಸರ್ಯವನ್ನು ಬಿಟ್ಟು, ಮಹಾತ್ಮರಾದ ದೇವತೆಗಳನ್ನೂ ಮಹರ್ಷಿಗಳನ್ನೂ ಪ್ರತ್ಯಕ್ಷವಾಗಿ ನೋಡುತ್ತ, ಸಕಲಧರ್ಮಗಳನ್ನೂ ಆಚರಿಸುತ್ತ, ಬಹುಮಂದಿಮಕ್ಕಳನ್ನು ಪಡೆದು, ಸಹಸ್ರವರ್ಷ ಆಯುಸ್ಸುಳ್ಳವರಾಗಿದ್ದರು. ಬಳಿಕ ಮತ್ತೊಂದು ಕಾಲವು ಪ್ರಾಪ್ತವಾಗಲು, ಭೂಮಿಯಲ್ಲಿ ಮನುಷ್ಯರು ಕಾಮ ಕ್ರೋಧ ಲೋಭ ಮೋಹಗಳಿಂದ ಪೀಡಿತರಾಗಿ ಪಾಪಕರ್ಮಗಳನ್ನು ಮಾಡುತ್ತ, ಕಪಟೋಪಾಯದಿಂದ ಜೀವಿಸುತ್ತ, ಅಲ್ಪವಾದ ಆಯುಸ್ಸುಳ್ಳವರಾಗಿ, ಶರೀರವನ್ನು ಬಿಟ್ಟು, ಆ ಪಾಪಕ್ಕೆ ಅನುಸಾರವಾಗಿ ವಿಚಿತ್ರವಾದ ಸಂಸಾರವೆಂಬ ನರಕವನ್ನು ಹೊಂದಿ, ಅದರಲ್ಲಿ ತಮ್ಮ ಇಷ್ಟಾನುಸಾರ ಯಾವದೂ ನೆರವೇರದೆ, ವ್ಯರ್ಥವಾದ ಸಂಕಲ್ಪವುಳ್ಳವರಾಗಿ ಅಜ್ಞಾನವನ್ನು ಪಡೆದು, ಎಲಾವಿಷಯದಲ್ಲೂ ಶಂಕೆಪಡುತ್ತ, ಮಹತ್ತಾದ ಕ್ಲೇಶವನ್ನು ಅನುಭವಿಸುತ್ತ, ಪಾಪಕರ್ಮಗಳಿಂದ ತಿರುಗಿತಿರುಗಿ ದುಷ್ಕುಲದಲ್ಲಿ ಹುಟ್ಟಿ ಅನೇಕ ವ್ಯಾಧಿಗಳಿಂದ ವ್ಯಥೆಪಡುತ್ತ, ತಮ್ಮ ಪಾಪಕರ್ಮಗಳಿಗೆ ತಕ್ಕ ಫಲಗಳನ್ನು ಅನುಭವಿಸುತ್ತ, ನಾಸ್ತಿಕರಾಗಿ ಬೇಕುಬೇಕಾದ ಕಾಮಗಳನ್ನು ಅಪೇಕ್ಷಿಸುತ್ತ, ಭಿನ್ನಭಿನ್ನವಾದ ಅಭಿಪ್ರಾಯವುಳ್ಳವರಾಗಿರುವರು. ಈ ಲೋಕದಲ್ಲಿ ಕರ್ಮವನ್ನು ಮಾಡಿ ಶರೀರವನ್ನು ಬಿಟ್ಟು ಪ್ರೇತನಾದ ಪ್ರಾಜ್ಞನ ಮತ್ತು ಅಜ್ಞನ ಕರ್ಮವು ಎಲ್ಲಿರುವದೆಂದು ನೀನು ಕೇಳಿದ್ದಕ್ಕೆ ಉತ್ತರವನ್ನು ಹೇಳುವೆನು ಕೇಳು. ಯಾವನು ಎಲ್ಲಿರುತ್ತಾನೋ ಅವನ ಸತ್ಕರ್ಮವೇ ಆಗಲಿ ದುಷ್ಕರ್ಮವೇ ಆಗಲಿ ಅವನನ್ನೇ ಅನುಸರಿಸಿರುವವು. ಈ ವಿಷಯದಲ್ಲಿ ನಿದರ್ಶನಭೂತವಾದ ಸಿದ್ಧಾಂತವನ್ನು ಹೇಳುವೆನು ಕೇಳು. ಮನುಷ್ಯನು ದೇವನಿರ್ಮಿತವಾದ ಲಿಂಗಶರೀರದಿಂದ ಯುಕ್ತನಾಗಿ ಅನೇಕ ಶುಭಾಶುಭಕರ್ಮಗಳನ್ನು ಮಾಡುವನು. ಆ ಲಿಂಗಶರೀರವು ಮೋಕ್ಷಪರ್ಯಂತವಾಗಿಯೂ ಇರತಕ್ಕದ್ದು. ಆ ಮನುಷ್ಯನಿಗೆ ಆಯುಸ್ಸು ಕ್ಷೀಣವಾಗಲು, ಈ ಸ್ಥೂಲಶರೀರವು ನಷ್ಟವಾಗಿ, ಮಧ್ಯದಲ್ಲಿ ಅವಕಾಶವಿಲ್ಲದೆ, ತೃಣಜಲೂಕನ್ಯಾಯದಿಂದ ಅವನು ಮತ್ತೊಂದು ಶರೀರವನ್ನು ಹೊಂದುವನು. ಆಗ ಅವನು ಮಾಡಿದ ಶುಭಾಶುಭಕರ್ಮಗಳೂ ನೆರಳಿನಂತೆ ಆತನನ್ನೇ ಅನುಸರಿಸಿಕೊಂಡು, ಆ ಶರೀರದಲ್ಲಿ ಸುಖದುಃಖರೂಪವಾದ ಫಲಗಳನ್ನು ಕೊಡುವವು. ಪ್ರಾಣಿಯು ಸುಖದುಃಖಗಳನ್ನು ಅನುಭವಿಸುವದಕ್ಕೋಸ್ಕರ ಯಮಧರ್ಮರಾಯನಿಂದ ಪ್ರೇರಿತವಾಗುವದು. ಆ ಪ್ರಾಣಿಯು ಆ ಸುಖದುಃಖಾ

ನುಭವವನ್ನು ತಪ್ಪಿಸಿಕೊಳ್ಳಲಾರದು ಎಂಬುವದನ್ನು ಜ್ಞಾನಿಗಳಾದವರು ಬಲ್ಲರು. ಇದು ತತ್ವಜ್ಞಾನವಿಲ್ಲದವರಿಗೆ ಆಗತಕ್ಕ ಗತಿಯು. ಇಲ್ಲಿಂದ ಮುಂದಕ್ಕೆ ಜ್ಞಾನಿಗಳಿಗೆ ಆಗತಕ್ಕ ಗತಿಯನ್ನು ತಿಳುಹಿಸುವೆನು ಕೇಳು. ಮನುಷ್ಯನಾದವನು ಅನೇಕವ್ರತಗಳನ್ನು ಆಚರಿಸುತ್ತ, ತಪೋನಿಷ್ಠನಾಗಿ, ಗುರುಶುಶ್ರೂಷೆಯನ್ನು ಮಾಡುತ್ತ, ಸತ್ಯಾತ್ಮನಾಗಿ, ಸಕಲ ಶಾಸ್ತ್ರಗಳನ್ನೂ ಅಭ್ಯಾಸಮಾಡಿ, ಒಳ್ಳೇನಡತೆಯುಳ್ಳವನಾಗಿ, ಯೋಗಮಾರ್ಗವನ್ನು ಅನುಸರಿಸಿ, ಕ್ಷಮಾಯುಕ್ತನಾಗಿ, ಇಂದ್ರಿಯಗಳನ್ನು ನಿಗ್ರಹಿಸಿ, ತೇಜೋವಂತನಾಗಿ, ಪರಿಶುದ್ಧವಾದ ಜನ್ಮವನ್ನು ಪಡೆದು, ಪ್ರಾಯಶಃ ಶುಭಲಕ್ಷಣವುಳ್ಳವನಾಗಿ, ಜಿತೇಂದ್ರಿಯನಾದ್ದರಿಂದ ಸಮರ್ಥನಾಗಿ, ಯೋಗಪರಾಯಣನಾದ್ದರಿಂದ ಅಲ್ಪವಾದ ರೋಗಬಾಧೆಯುಳ್ಳವನಾಗಿ, ಅಲ್ಪವಾದ ವ್ಯಥೆಯೂ ಭಯವೂ ಇದ್ದರೂ ವ್ಯಸನಿಯಾಗದೆ, ಮತ್ತೊಂದು ಶರೀರವನ್ನು ತಾನು ಪಡೆದಿರತಕ್ಕದ್ದನ್ನೂ ತಾನು ಗರ್ಭದಲ್ಲಿ ವಾಸಮಾಡುತ್ತಿದ್ದದ್ದನ್ನೂ ಆ ಗರ್ಭದಿಂದ ಈಚೆಗೆ ಬಂದದ್ದನ್ನೂ ಜ್ಞಾನದೃಷ್ಟಿಯಿಂದ ತಿಳಿದುಕೊಳ್ಳುವನು. ಮಹಾತ್ಮರಾದ ಋಷಿಗಳು ಸಕಲ ವೇದಶಾಸ್ತ್ರಗಳನ್ನೂ ಬಲ್ಲವರಾದ್ದರಿಂದ, ಈ ಕರ್ಮಭೂಮಿಯಲ್ಲಿ ಹುಟ್ಟಿದರೂ ಇಲ್ಲಿಂದ ಸ್ವರ್ಗಲೋಕಕ್ಕೆ ಹೋಗುವರು. ಲೋಕದಲ್ಲಿ ಮನುಷ್ಯರು, ಕೆಲವರು ತಮ್ಮತಮ್ಮ ಕರ್ಮಗಳಿಂದಲೂ, ಕೆಲವರು ದೈವಾನುಗ್ರಹದಿಂದಲೂ, ಕೆಲವರು ಹಟದಿಂದಲೂ, ಲೋಕಾಂತರಗಳನ್ನು ಹೊಂದುವರು. ಈ ವಿಷಯದಲ್ಲಿ ನೀನು ಸಂಶಯಪಡಬೇಡ. ಈ ವಿಷಯದಲ್ಲಿ ಇದೊಂದು ದೃಷ್ಟಾಂತವನ್ನು ಹೇಳುವೆನು ಕೇಳು: ಮನುಷ್ಯಲೋಕದಲ್ಲಿ ಆಗತಕ್ಕ ಶ್ರೇಯಸ್ಸೇ ಉತ್ತಮವಾದದ್ದೆಂದು ನಾನು ಭಾವಿಸುತ್ತೇನೆ. ಎಲೈ ರಾಯನೆ, ಕೆಲವರಿಗೆ ಈ ಲೋಕವೇ ಸುಖಕರವಾಗಿರುವದು. ಕೆಲವರಿಗೆ ಪರಲೋಕವೇ ಸುಖಕರವಾಗಿರುವದು. ಕೆಲವರಿಗೆ ಈ ಲೋಕವೂ ಪರಲೋಕವೂ ಎರಡೂ ಸುಖಕರಗಳಾಗಿರುವವು. ಕೆಲವರಿಗೆ ಈ ಲೋಕದಲ್ಲಿಯೂ ಪರಲೋಕದಲ್ಲಿಯೂ ಸುಖವಿಲ್ಲದೆ ಇರುವದು. ಯಾರು ಧನವಂತರಾಗಿ ಬೇಕಾದ ಆಭರಣಗಳನ್ನು ಧರಿಸಿಕೊಂಡು ದೇಹಸೌಖ್ಯದಲ್ಲೇ ಆಸಕ್ತಿಯುಳ್ಳವರೋ ಅವರಿಗೆ ಈ ಲೋಕವೇ ಸುಖಕರವಾದದ್ದು. ಯಾರು ವೇದಾಧ್ಯಯನ ಮಾಡುತ್ತ ಯೋಗನಿಷ್ಠರಾಗಿ ಕೃಛ್ರ ಚಾಂದ್ರಾಯಣಾದಿ ವ್ರತಗಳಿಂದ ಜಿತೇಂದ್ರಿಯರಾಗಿ ದೇಹವನ್ನು ಶೋಷಿಸಿ ಪ್ರಾಣಿಹಿಂಸೆಯನ್ನು ಮಾಡದೆ ಇರುವರೋ ಅವರಿಗೆ ಪರಲೋಕವು ಸುಖಕರವಾದದ್ದು. ಯಾರು ಧರ್ಮಾಚರಣೆಯಲ್ಲಿ ಆಸಕ್ತರಾಗಿ ಧರ್ಮದಿಂದ ದ್ರವ್ಯವನ್ನು ಸಂಪಾದಿಸಿ ಗೃಹಸ್ಥಾಶ್ರಮವನ್ನು ಸ್ವೀಕರಿಸಿ ಯಜ್ಞಾದಿ ಸತ್ಕರ್ಮಗಳನ್ನು ಮಾಡುವರೋ ಅವರಿಗೆ ಈ ಲೋಕವೂ ಪರಲೋಕವೂ ಸಹ ಸುಖಕರವಾಗಲಾರವು. ಎಲೈ ಧರ್ಮರಾಯನೆ, ಅಧಿಕವಾದ ಪರಾಕ್ರಮದಿಂದಲೂ ತೇಜಸ್ಸಿನಿಂದಲೂ ಶರೀರಬಲದಿಂದಲೂ ಸಂಪನ್ನರಾದ ನೀವೆಲ್ಲರೂ ದೇವಲೋಕದಿಂದ ಬಂದು, ಈ ಲೋಕದಲ್ಲಿ ದೇವತೆಗಳ ಕಾರ್ಯಕ್ಕೋಸ್ಕರ ಅವತರಿಸಿ ಸಕಲ ವಿದ್ಯಾಭ್ಯಾಸವನ್ನೂ ಮಾಡಿ, ಶಮದಮಾದಿಗಳಿಂದಲೂ ಸದಾಚಾರದಿಂದಲೂ ಸಂಪನ್ನರಾಗಿ, ಮಹತ್ತಾದ ಕಾರ್ಯವನ್ನು ಮಾಡಿ, ದೇವಋಷಿಪಿತೃಗಳನ್ನು ತೃಪ್ತಿಪಡಿಸಿರುವಿರಿ. ನೀವು ಮಾಡಿದ ಪುಣ್ಯಕರ್ಮದಿಂದಲೇ ಪುಣ್ಯವಂತರಿಗೆ ಆವಾಸಭೂತವಾದ ಸ್ವರ್ಗಲೋಕವನ್ನು ಪಡೆಯುವರಾಗುತ್ತೀರಿ. ಎಲೈ ಧರ್ಮರಾಯನೆ, ಸುಖಕ್ಕೆ ಯೋಗ್ಯವಾದ ನಿನ್ನ ಶರೀರಕ್ಕೆ ಕ್ಲೇಶವುಂಟಾಗಿರುವದನ್ನು ನೋಡಿ ನೀನು ವ್ಯಸನಪಡಬೇಡ" ಎಂದು ಮಾರ್ಕಂಡೇಯನು ಧರ್ಮರಾಯನಿಗೆ ಹೇಳಿದನು.

## ೧೮೪ನೇ ಅಧ್ಯಾಯ.—ಮಾರ್ಕಂಡೇಯ ಪರ್ವ—(ಬ್ರಾಹ್ಮಣ ಮಹಿಮೆ).

ವೈಶಂಪಾಯನಮುನೀಂದ್ರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಪಾಂಡವರು ಆ ಮಾರ್ಕಂಡೇಯಮಹರ್ಷಿಯನ್ನು ಕುರಿತು "ಎಲೈ ಮಹಾತ್ಮನೆ, ಲೋಕದಲ್ಲಿ ಬ್ರಾಹ್ಮಣರು ಎಲ್ಲರಿಗೂ ಪೂಜ್ಯರಾದವರು. ಆದ್ದರಿಂದ ಅವರ ಮಹಿಮೆಯನ್ನು ಕೇಳಬೇಕೆಂದು ಕುತೂಹಲವುಂಟಾಗಿರುವದು. ನೀನು ಅದನ್ನು ವಿವರಿಸು" ಎನಲು, ಸಕಲ ಶಾಸ್ತ್ರಸಂಪನ್ನನಾದ ಮಾರ್ಕಂಢೇಯಮಹರ್ಷಿಯು ಪಾಂಡವರನ್ನು

ಕುರಿತು “ಎಲೈ ಪಾಂಡವರೆ ಕೇಳಿರಿ. ಶೂರನೂ ರೂಪವಂತನೂ ಆದ ಹೈಹಯದೇಶಾಧಿಪತಿಯಾದ ರಾಜಕುಮಾರನು ಅನೇಕವಾದ ಸಣ್ಣಸಣ್ಣ ಗಿಡಗಳಿಂದಲೂ ಬಳ್ಳಿಗಳಿಂದಲೂ ಹುಲ್ಲುಗಳಿಂದಲೂ ದಟ್ಟವಾದ ಅರಣ್ಯವನ್ನು ಹೊಕ್ಕು ಮೃಗಗಳನ್ನು ಬೇಟೆಯಾಡುತ್ತ, ಆ ಅರಣ್ಯದಲ್ಲಿ ಕೃಷ್ಣಾಜಿನವನ್ನು ಹೊದ್ದು ತಪಸ್ಸುಮಾಡುತ್ತಿದ್ದ ಒಬ್ಬ ಋಷಿಯನ್ನು ಮೃಗವೆಂದು ತಿಳಿದು, ಬಾಣವನ್ನು ಪ್ರಯೋಗಿಸಿ ಆತನನ್ನು ಸಂಹರಿಸಿ, ಕೂಡಲೆ ಆತನು ಋಷಿಯೆಂದು ತಿಳಿದು ಅಧಿಕವಾಗಿ ವ್ಯಥೆಪಟ್ಟು, ತಮ್ಮ ದೇಶದ ರಾಜರ ಬಳಿಗೆ ಹೋಗಿ ತಾನು ಋಷಿಯನ್ನು ಸಂಹರಿಸಿದ ವೃತ್ತಾಂತವನ್ನು ಅವರ ಸಂಗಡ ಹೇಳಿದನು. ಆಗ ಆ ಅರಸುಗಳು ಅರಣ್ಯದಲ್ಲಿ ಕಂದಮೂಲಫಲಗಳನ್ನು ಭಕ್ಷಿಸಿಕೊಂಡು ತಪಸ್ಸನ್ನು ಮಾಡುತ್ತಿದ್ದ ಋಷಿಯನ್ನು ರಾಜಕುಮಾರನು ಸಂಹರಿಸಿದ ವೃತ್ತಾಂತವನ್ನು ಕೇಳಿ, ದೀನವಾದ ಮನಸ್ಸುಳ್ಳವರಾಗಿ ಋಷಿಯನ್ನು ಹುಡುಕಿಕೊಂಡು ಅರಣ್ಯಕ್ಕೆ ಬಂದು ಅಲ್ಲಲ್ಲೇ ಹುಡುಕುತ್ತ, ಕಶ್ಯಪನಮಗನಾದ ಅರಿಷ್ಟನೇಮಿಯ ಆಶ್ರಮಕ್ಕೆ ಬಂದು, ವ್ರತನಿಷ್ಠನಾದ ಆ ಮಹರ್ಷಿಗೆ ವಂದನೆಯನ್ನು ಮಾಡಿ ಅಲ್ಲಿ ನಿಂತರು. ಆಗ ಆ ಮಹರ್ಷಿಯು ಆ ರಾಜರಿಗೆ ಸತ್ಕಾರಮಾಡಬೇಕೆಂದು ಸಿದ್ಧನಾಗಲು, ಅದನ್ನು ನೋಡಿ ಆ ಅರಸುಗಳು, ‘ಎಲೈ ಮಹಾತ್ಮನೆ, ಬ್ರಾಹ್ಮಣನನ್ನು ಹಿಂಸಿಸಿದ ಪಾಪಾತ್ಮರಾದ ನಾವು ನಿನ್ನಿಂದ ಸತ್ಕಾರವನ್ನು ಪಡೆಯುವದಕ್ಕೆ ಯೋಗ್ಯರಲ್ಲ’ ಎಂದರು. ಆ ಮಾತನ್ನು ಕೇಳಿ ಆ ಮಹರ್ಷಿಯು ‘ಎಲೈ ರಾಜರೆ, ನೀವು ಹ್ಯಾಗೆ ಬ್ರಾಹ್ಮಣನನ್ನು ಸಂಹಾರಮಾಡಿದಿರಿ ? ಆ ಬ್ರಾಹ್ಮಣನು ಎಲ್ಲಿರುವನು ? ನೀವು ನನ್ನ ತಪೋಬಲವನ್ನು ನೋಡಿರಿ’ ಎನಲು, ಆಗ ಆ ರಾಜರು ‘ಎಲೈ ಮಹರ್ಷಿಯೆ, ನಮ್ಮ ರಾಜಕುಮಾರನು ಆ ಬ್ರಾಹ್ಮಣನನ್ನು ಸಂಹರಿಸಿದನು. ಬಳಿಕ ನಾವೆಲ್ಲರೂ ಅಲ್ಲಿಗೆ ಹೋಗಿ ಮೃತನಾದ ಆತನನ್ನು ಆ ಅರಣ್ಯದಲ್ಲಿ ಕಾಣದೆ, ಆ ವೃತ್ತಾಂತವೆಲ್ಲಾ ಸ್ವಪ್ನಪ್ರಾಯವಾಗಲು ಲಜ್ಜಾಯುಕ್ತರಾಗಿ, ಬುದ್ಧಿಯೇ ಸ್ವಾಧೀನವಿಲ್ಲದೆ ಎಲ್ಲರೂ ಇಲ್ಲಿಗೆ ಬಂದಿರುವೆವು’ ಎಂದರು. ಆಗ ಅವರನ್ನು ನೋಡಿ ಅರಿಷ್ಟನೇಮಿಯು ‘ಎಲೈ ರಾಜರೆ, ನಿಮ್ಮಿಂದ ಸಂಹರಿಸಲ್ಪಟ್ಟ ಆ ಬ್ರಾಹ್ಮಣನು ತಪೋಬಲಸಮನ್ವಿತನಾದ ಈ ನನ್ನ ಮಗನಾಗಿಯೇ ಇರಬಹುದು’ ಎನಲು, ಆ ರಾಜರು ಅಲ್ಲಿ ಋಷಿಕುಮಾರನನ್ನು ನೋಡಿ ಆಶ್ಚರ್ಯಪಟ್ಟು ಮೃತನಾದ ಈತನು ಬದುಕಿ ಇಲ್ಲಿಗೆ ಬಂದದ್ದು ಹ್ಯಾಗೆ ? ಈ ಮಹರ್ಷಿಯು ಮೃತನಾದ ಪುತ್ರನನ್ನು ಪುನಃ ಹ್ಯಾಗೆ ಬದುಕಿಸಿದನು ? ಈತನ ತಪೋಬಲವು ಆಶ್ಚರ್ಯಕರವಾದದ್ದು’ ಎಂದು ಚಿಂತಿಸಿ ‘ಎಲೈ ಮಹಾತ್ಮನೆ, ಈ ರಹಸ್ಯವನ್ನು ನಾವು ಕೇಳಬಹುದಾಗಿದ್ದರೆ ನೀನು ನಮಗೆ ತಿಳುಹಿಸು’ ಎಂದರು. ಅರಿಷ್ಟನೇಮಿಯು ‘ಎಲೈ ರಾಜರೆ, ನಮ್ಮನ್ನು ಸಂಹರಿಸುವದಕ್ಕೆ ಮೃತ್ಯುವು ಸಮರ್ಥನಾಗಲಾರನು. ನಮಗೆ ಮುಕ್ತಿಸಂಬಂಧವಿರುವದರಿಂದ ಇದಕ್ಕೆ ಕಾರಣವನ್ನು ಸೂಕ್ಷ್ಮವಾಗಿ ಹೇಳುವೆನು ಕೇಳಿರಿ. ನಾವು ಸತ್ಯವನ್ನೇ ಯಾವಾಗಲೂ ನುಡಿಯುತ್ತಲಿರುವೆವು; ಅನೃತದಲ್ಲಿ ಮನಸ್ಸನ್ನು ಇಡತಕ್ಕವರಲ್ಲ; ಯಾವಾಗಲೂ ಸ್ವಧರ್ಮಪರರಾಗಿಯೇ ಇರುವೆವು. ಆದ್ದರಿಂದ ನಮಗೆ ಮೃತ್ಯುವಿನ ಭಯವಿಲ್ಲವು. ಇದಲ್ಲದೆ ನಾವು ಬ್ರಾಹ್ಮಣರ ಕ್ಷೇಮವನ್ನೇ ಕೋರುತ್ತಿರುವೆವು; ಅವರ ದುರ್ನಡತೆಯನ್ನು ಹೇಳತಕ್ಕವರಲ್ಲ. ಆದ್ದರಿಂದ ನಮಗೆ ಮೃತ್ಯುವಿನ ಭಯವಿಲ್ಲವು. ಅತಿಥಿಗಳನ್ನು ಅನ್ನೋದಕಗಳಿಂದಲೂ ಪತ್ನೀಭೃತ್ಯ ಮೊದಲಾದವರನ್ನು ಅಶನಾಚ್ಛಾದನಾದಿಗಳಿಂದಲೂ ತೃಪ್ತಿಪಡಿಸಿ, ಉಳಿದದ್ದನ್ನು ನಾವು ಸ್ವೀಕರಿಸುವೆವು. ಆದ್ದರಿಂದ ನಮಗೆ ಮೃತ್ಯುವಿನ ಭಯವಿಲ್ಲವು. ಶಮದಮಾದಿ ಗುಣಗಳುಳ್ಳವರಾಗಿ ತೀರ್ಥಯಾತ್ರೆಗಳನ್ನು ಮಾಡುತ್ತ ಪುಣ್ಯಸ್ಥಳದಲ್ಲಿ ವಾಸಮಾಡುವೆವಾದ್ದರಿಂದ, ನಮಗೆ ಮೃತ್ಯುವಿನ ಭಯವಿಲ್ಲವು. ಯೋಗಿಗಳ ಸಂಗವು ಯಾವಾಗಲೂ ನಮಗೆ ಇರುವದರಿಂದ, ನಮಗೆ ಮೃತ್ಯುವಿನ ಭಯವಿಲ್ಲವು. ಎಲೈ ರಾಜರೆ, ಸೂಕ್ಷ್ಮವಾಗಿ ಈ ರಹಸ್ಯವನ್ನು ನಿಮಗೆ ಹೇಳಿರುವೆನು. ನೀವು ಮಾತ್ಸರ್ಯವನ್ನು ಬಿಟ್ಟು ಹೊರಟುಹೋಗಿರಿ. ನಿಮಗೆ ಪಾಪಭೀತಿಯು ಕೆಲಸವಿಲ್ಲ’ ಎನಲು, ಆಗ ಆ ರಾಜರು ಹಾಗೆಯೇ ಆಗಲೆಂದು ಆ ಮಹರ್ಷಿಗೆ ವಂದನೆಯನ್ನು ಮಾಡಿ ತಮ್ಮ ದೇಶಕ್ಕೆ ಹೊರಟು ಹೋದರು” ಎಂದು ಮಾರ್ಕಂಡೇಯಮಹರ್ಷಿಯು ಧರ್ಮರಾಯನಿಗೆ ಹೇಳಿದನು.

## ೧೮೫ನೇ ಅಧ್ಯಾಯ.—ಮಾರ್ಕಂಡೇಯ ಪರ್ವ—(ಬ್ರಾಹ್ಮಣರ ಮಹಿಮೆ).

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಮಾರ್ಕಂಡೇಯನು ಧರ್ಮರಾಯನನ್ನು ಕುರಿತು "ಕೇಳು ಧರ್ಮರಾಯನೆ, ಬ್ರಾಹ್ಮಣರ ಮಹಾತ್ಮ್ಯವನ್ನು ಇನ್ನೂ ಹೇಳುತ್ತೇನೆ. ಪೂರ್ವದಲ್ಲಿ ವೈನ್ಯನೆಂಬ ರಾಜರ್ಷಿಯು ಅಶ್ವಮೇಧಯಾಗವನ್ನು ಮಾಡುವದಕ್ಕೆ ದೀಕ್ಷಿತನಾಗಿದ್ದನು. ಆಗ ಅತ್ರಿಮಹರ್ಷಿಯು ತಾನು ಆಚರಿಸಿದ ಧರ್ಮವನ್ನು ಪ್ರಕಾಶಮಾಡಿದರೆ ಅದು ನಷ್ಟವಾಗಿಹೋಗುವದೆಂದೂ, ಧರ್ಮಾಚರಣೆಗೋಸ್ಕರಲೂ ಅಧಿಕವಾದ ಧನವನ್ನು ಮತ್ತೊಬ್ಬರನ್ನು ಯಾಚಿಸಬಾರದೆಂದೂ ಯೋಚಿಸಿ, ವನದಲ್ಲೇ ವಾಸಮಾಡಬೇಕೆಂದು ಬಯಸಿ ಮಕ್ಕಳನ್ನೂ ಹೆಂಡತಿಯನ್ನೂ ಕುರಿತು 'ನಾವೆಲ್ಲರೂ ನಿರುಪಾಧಿಕವಾಗಿರುವ ಅರಣ್ಯಕ್ಕೆ ಹೋಗಿ ಅಲ್ಲಿದ್ದುಕೊಂಡು ವಿಶೇಷವಾಗಿ ಧರ್ಮವನ್ನು ಸಂಪಾದಿಸೋಣ. ನೀವೆಲ್ಲರೂ ಅರಣ್ಯಕ್ಕೆ ಹೊರಡುವದಕ್ಕೋಸ್ಕರ ಸಿದ್ಧರಾಗಿ. ಇದರಿಂದ ನಮಗೆ ಶ್ರೇಯಸ್ಸುಂಟು' ಎಂದು ಹೇಳಲು, ಆತನ ಭಾರ್ಯೆಯು ವಿಶೇಷವಾಗಿ ಯಜ್ಞಗಳನ್ನು ಮಾಡಬೇಕೆಂಬ ತಾತ್ಪರ್ಯವುಳ್ಳವಳಾಗಿ, ಪತಿಯನ್ನು ಕುರಿತು 'ಮಹಾತ್ಮನೆ ಅಶ್ವಮೇಧವನ್ನು ಮಾಡುವದಕ್ಕೆ ದೀಕ್ಷಿತನಾಗಿರುವ ರಾಜರ್ಷಿಯಾದ ವೈನ್ಯಮಹಾರಾಜನ ಬಳಿಗೆ ಹೋಗಿ ಬೇಕಾದಷ್ಟು ಧನವನ್ನು ಯಾಚಿಸು. ಆತನು ನಿನಗೆ ಬೇಕಾದಷ್ಟು ಧನವನ್ನು ಕೊಡುವನು. ಆ ದ್ರವ್ಯವನ್ನು ಪತ್ನೀಪುತ್ರಭೃತ್ಯರಿಗೆ ವಿಭಾಗಮಾಡಿಕೊಟ್ಟು, ಬಳಿಕ ನೀನು ಬೇಕಾದ ಕಡೆಗೆ ಹೋಗಬಹುದು. ಹಾಗೆ ನಡೆದುಕೊಳ್ಳುವದು ಉತ್ತಮವಾದ ಧರ್ಮವೆಂದು ಮನ್ವಾದಿ ಮಹರ್ಷಿಗಳು ನಿರೂಪಿಸಿರುವರು' ಎಂದಳು. ಅದನ್ನು ಕೇಳಿ ಅತ್ರಿಮಹರ್ಷಿಯು 'ಎಲೆ ಸತಿಯೆ, ವೈನ್ಯಮಹಾರಾಜನು ಧರ್ಮಾರ್ಥಗಳನ್ನು ಬಲ್ಲವನು. ಆತನು ಸತ್ಯಾತ್ಮನೆಂದು ಗೌತಮಮಹರ್ಷಿಗಳು ನನಗೆ ಹೇಳಿರುವರು. ಅಲ್ಲಿಗೆ ನಾನು ಹೋದದ್ದೇ ಆದರೆ, ಅಲ್ಲಿ ನನಗೆ ದ್ವೇಷಿಗಳಾದ ಅನೇಕಬ್ರಾಹ್ಮಣರಿರುವರು. ಅವರು ನಾನೇನಾದರೂ ಹೇಳಿದರೆ ಅದನ್ನು ನಡೆಯಗೊಡಿಸುವದಿಲ್ಲ. ಆದ್ದರಿಂದ ನಾನು ಅಲ್ಲಿಗೆ ಹೋಗದೆ ಇರುವೆನು. ಆತನು ನಮಗೆ ವಿಶೇಷವಾಗಿ ಗೋವುಗಳನ್ನೂ ಧನವನ್ನೂ ಕೊಡುವನೆಂದು ನೀನು ಹೇಳುವದರಿಂದ, ನಿನ್ನ ಮಾತಿನಪ್ರಕಾರ ಈಗ ನಾನು ಅಲ್ಲಿಗೆ ಹೋಗುತ್ತೇನೆ' ಎಂದು ಪತ್ನಿಯಸಂಗಡ ಹೇಳಿ, ಆ ವೈನ್ಯಮಹಾರಾಜನ ಯಜ್ಞಶಾಲೆಗೆ ಹೋಗಿ, ಮಂಗಳಕರವಾದ ವಚನಗಳಿಂದ ಆತನನ್ನು ಸ್ತುತಿಸುತ್ತ 'ಎಲೈ ಮಹಾರಾಜನೆ, ನೀನೇ ಧನ್ಯನು; ನೀನೇ ಐಶ್ವರ್ಯಸಂಪನ್ನನಾದವನು. ಭೂಮಿಯಲ್ಲಿ ಧರ್ಮಜ್ಞರಾದವರಲ್ಲಿ ನೀನೇ ಮೊದಲನೆಯವನೆಂದು ಧರ್ಮಜ್ಞರಾದ ಋಷಿಗಳೆಲ್ಲರೂ ಶ್ಲಾಘಿಸುತ್ತಿರುವರು' ಎನಲು, ಅಲ್ಲಿದ್ದ ಗೌತಮಮಹರ್ಷಿಯು ಅತ್ರಿಮಹರ್ಷಿಯನ್ನು ಕುರಿತು 'ಎಲೈ ಅತ್ರಿಯೆ, ನಿನಗೆ ಬುದ್ಧಿಯು ಸ್ವಾಧೀನದಲ್ಲಿಲ್ಲ; ಪುನಃ ಇಂಥ ಮಾತುಗಳನ್ನು ಆಡಬೇಡ. ಸಕಲ ಪ್ರಜೆಗಳಿಗೂ ಅಧಿಪತಿಯಾದ ಇಂದ್ರನು ಧರ್ಮಿಷ್ಠರಲ್ಲಿ ಮೊದಲನೆಯವನಾದವನು' ಎಂದು ನುಡಿದನು. ಬಳಿಕ ಅತ್ರಿಯು 'ಎಲೈ ಗೌತಮನೆ, ಇಂದ್ರನು ಹ್ಯಾಗೆ ಲೋಕವನ್ನು ರಕ್ಷಿಸತಕ್ಕವನೋ ಹಾಗೆ ಈತನೂ ಲೋಕವನ್ನು ರಕ್ಷಿಸತಕ್ಕವನು. ಬುದ್ಧಿಯು ಸ್ವಾಧೀನದಲ್ಲಿಲ್ಲದೆ ನೀನೇ ಅಜ್ಞಾನಿಯಾಗಿರುವೆ' ಎನಲು, ಗೌತಮನು 'ಎಲೈ ಅತ್ರಿಮಹರ್ಷಿಯೆ, ನಾನಲ್ಲ ಅಜ್ಞಾನಿಯು, ನೀನೇ ಅಜ್ಞಾನಿಯಾಗಿರುವೆ; ನಾನು ಜ್ಞಾನಿಯಾಗಿಯೇ ಇರುವೆನು. ಈ ಸಭೆಯಲ್ಲಿ ರಾಜನನ್ನು ಕಾಣಬೇಕೆಂದು ಬಂದು ನೀನು ರಾಜನನ್ನು ಸ್ತುತಿಸುತ್ತಿರುವೆ. ನಿನಗೆ ಉತ್ತಮವಾದ ಧರ್ಮಜ್ಞಾನವಿಲ್ಲ. ಈ ಪ್ರಕಾರ ನೀನು ರಾಜನನ್ನು ಸ್ತುತಿಸಿದ್ದರಿಂದ ಯಾವ ಪ್ರಯೋಜನವನ್ನೂ ಪಡೆಯಲಾರೆ. ಯಾವದೋ ಬಂದು ಕಾರಣದಿಂದ ನಿನ್ನನ್ನು ವೃದ್ಧನೆಂದು ಹೇಳಬೇಕೇ ಹೊರತು ಮತ್ತೆ ಬೇರೆ ಇಲ್ಲ. ನೀನು ಶುದ್ಧಮೂಢನಾದ ಬಾಲಕನು' ಎಂದನು. ಹೀಗೆ ಅವರಿಬ್ಬರೂ ವಿವಾದಮಾಡುತ್ತಿರಲು, ಆ ಸದಸ್ಸಿನಲ್ಲಿರತಕ್ಕ ಬ್ರಾಹ್ಮಣರು ವಿವಾದಮಾಡತಕ್ಕ ಇವರಿಬ್ಬರನ್ನೂ ನೋಡಿ 'ಇವರನ್ನು ಯಾಗಶಾಲೆಗೆ ಬಿಟ್ಟವರು ಯಾರು? ಯಾತಕ್ಕೋಸ್ಕರ ಇವರು ಕೂಗಾಡುತ್ತಿರುವರು?' ಎಂದು ಒಬ್ಬರಸಂಗಡ ಒಬ್ಬರು ಮಾತನಾಡಿಕೊಳ್ಳುತ್ತಿರಲು, ಆಗ ಧರ್ಮಾತ್ಮನಾದ ಕಾಶ್ಯಪನು ಪರಸ್ಪರವಾಗಿ ವಿವಾದಮಾಡುತ್ತಿರುವ ಅತ್ರಿಗೌತಮರು ಯಾಗಶಾಲೆಗೆ ಬಂದಿರತಕ್ಕ ಸಂಗತಿಯನ್ನು ಆ ಸಭೆಯಲ್ಲಿರುವವರಿಗೆ ತಿಳುಹಿಸಿದನು. ಬಳಿಕ ಗೌತಮನು ಆ ಸಭೆಯಲ್ಲಿರುವ ಋಷಿಗಳನ್ನು ಕುರಿತು 'ಎಲೈ ಋಷಿ

ಗಳಿರಾ, ನಮ್ಮಿಬ್ಬರ ವಿವಾದಕ್ಕೆ ಕಾರಣವಾದ ಮಾತನ್ನು ನೀವು ಕೇಳಿರಿ. ಈ ಅತ್ರಿಋಷಿಯು ವೈನ್ಯನನ್ನು ಸಕಲರಿಗೂ ವಿಧಾಯಕನೆಂದು ಹೇಳಿದನು. ಅದು ಸರಿಯಾದದ್ದಲ್ಲವೆಂದು ನಾನು ಹೇಳಿದೆನು. ಹೀಗೆ ನನಗೂ ಅತ್ರಿಗೂ ಈ ವಿಷಯದಲ್ಲಿ ಸಂಶಯಹುಟ್ಟಿ ವಿವಾದವುಂಟಾಗಿರುವದು' ಎನಲು, ಆ ಮಾತನ್ನು ಕೇಳಿ ಆ ಸಭಿಕರೆಲ್ಲರೂ ಈ ಸಂಶಯವನ್ನು ನಿವೃತ್ತಿಮಾಡಿಕೊಳ್ಳಬೇಕೆಂದು ಸನತ್ಕುಮಾರನನ್ನು ಕುರಿತು 'ಎಲೈ ಮಹಾತ್ಮನೆ, ಇವರಿಬ್ಬರ ಮಾತುಗಳಲ್ಲಿ ಯಾರ ಮಾತು ನಿಜವಾದದ್ದು?' ಎಂದು ಕೇಳಿದರು. ಆಗ ಸಕಲಧರ್ಮಜ್ಞನಾದ ಸನತ್ಕುಮಾರನು 'ಎಲೈ ಋಷಿಗಳೇ ಕೇಳಿ. ಬ್ರಾಹ್ಮಣನ ಸಹಾಯದಿಂದ ಕ್ಷತ್ರಿಯನಿಗೆ ಬಲವುಂಟಾಗುವದು. ಕ್ಷತ್ರಿಯನ ಸಹಾಯದಿಂದ ಬ್ರಾಹ್ಮಣನಿಗೂ ಬಲವುಂಟಾಗುವದು. ಇವೆರಡೂ ಕೂಡಿದ್ದೇ ಆದರೆ ಗಾಳಿಬೆಂಕಿಗಳು ಕೂಡಿ ಅರಣ್ಯವನ್ನು ನಾಶಮಾಡುವಹಾಗೆ ಶತ್ರುಗಳನ್ನು ನಾಶಮಾಡಬಹುದು. ಆದಕಾರಣ ರಾಜನು ಧರ್ಮಸ್ಥಾಪಕನಾದವನು. ಆತನೇ ನೀತಿಜ್ಞನು, ಪ್ರಜಾಪಾಲಕನು; ಆತನೇ ಧಾತನು, ಬೃಹಸ್ಪತಿಯು, ಪ್ರಜಾಪತಿಯು ಮತ್ತು ಸಮ್ರಾಟ್, ವಿರಾಟ್ ಮೊದಲಾದ ಶಬ್ದಗಳಿಂದ ಸ್ತುತಿಸಲ್ಪಡತಕ್ಕವನು. ಹೀಗಿರುವಲ್ಲಿ ಯಾರುತಾನೆ ರಾಜನನ್ನು ಸ್ತುತಿಸದೆ ಇರುವರು? ರಾಜನು ಧರ್ಮಪ್ರವರ್ತಕನಾದದ್ದರಿಂದ ಆತನೇ ಮೊದಲು ಕಾರಣಭೂತನಾದವನು. ಆತನೇ ಶತ್ರುಗಳನ್ನು ಸಂಹರಿಸಿ ಎಲ್ಲಾ ಉಪದ್ರವಗಳನ್ನೂ ನಾಶಮಾಡತಕ್ಕವನು. ಆತನು ಎಲ್ಲಾ ಸ್ಥಳಗಳಲ್ಲಿಯೂ ಸಂಚರಿಸುತ್ತ ಜನರನ್ನು ರಕ್ಷಿಸುವನಾದ್ದರಿಂದ ಆತನು ಈಶ್ವರನೆಂದು ಹೇಳಿಸಿಕೊಳ್ಳುವನು. ವರ್ಣಾಶ್ರಮಧರ್ಮಗಳನ್ನು ರಕ್ಷಿಸುವದರಿಂದ ರಾಜನೇ ಉತ್ತಮವಾದ ಗತಿಯನ್ನು ಕೊಡತಕ್ಕವನು. ಆತನು ಜಯಶೀಲನಾದ್ದರಿಂದ ವಿಷ್ಣುವೆಂದು ಹೊಗಳಿಸಿಕೊಳ್ಳುವನು. ಪೂರ್ವದಲ್ಲಿ ಅಧರ್ಮದ ದೆಸೆಯಿಂದ ಭೀತರಾದ ಬ್ರಾಹ್ಮಣರು ತಮ್ಮ ಬಲವನ್ನು ಕ್ಷತ್ರಿಯರಲ್ಲಿಟ್ಟರು. ಆಕಾಶಮಾರ್ಗದಲ್ಲಿ ಸಂಚರಿಸುತ್ತ ಸೂರ್ಯನು ತನ್ನ ತೇಜಸ್ಸಿನಿಂದ ಅಂಧಕಾರವನ್ನು ಹೋಗಲಾಡಿಸುವಹಾಗೆ, ರಾಜನು ತನ್ನ ಬಲದಿಂದ ಅಧರ್ಮವನ್ನು ಹೋಗಲಾಡಿಸುವನು. ಆದ್ದರಿಂದಲೂ ಶಾಸ್ತ್ರಪ್ರಮಾಣದಿಂದಲೂ ರಾಜನೇ ಸರ್ವಕ್ಕೂ ಮುಖ್ಯನಾದವನು. ಎಲೈ ಋಷಿಗಳಿರಾ, ಯಾರು ರಾಜನ ಪಕ್ಷವನ್ನವಲಂಬಿಸಿ ವಾದಿಸುವರೋ ಅವರ ಪಕ್ಷದಲ್ಲೇ ಸಾಧಕವು ಅಧಿಕವಾಗಿರುವದರಿಂದ ಅವರ ಮತವೇ ಗೆಲ್ಲುವದು' ಎಂದನು. ಆಗ ವೈನ್ಯಮಹಾರಾಜನು ತನ್ನನ್ನು ಸ್ತುತಿಸಿದ ಅತ್ರಿಮಹರ್ಷಿಯನ್ನು ನೋಡಿ 'ಎಲೈ ಮಹರ್ಷಿಯೆ, ಧರ್ಮಜ್ಞನಾದ ನೀನು ನನ್ನನ್ನು ಮನುಷ್ಯರಲ್ಲಿ ಶ್ರೇಷ್ಠನನ್ನಾಗಿಯೂ ದೇವತೆಗಳಿಗೆ ಸಮಾನನನ್ನಾಗಿಯೂ ಸ್ತುತಿಸಿದ್ದರಿಂದ, ನಿನಗೆ ಬೇಕಾದಷ್ಟು ದ್ರವ್ಯವನ್ನೂ ಆಭರಣಗಳನ್ನೂ ದಿವ್ಯಾಲಂಕಾರಭೂಷಿತರಾದ ಯೌವನವತಿಯರಾದ ಸಾವಿರ ದಾಸೀಜನರನ್ನೂ ಹತ್ತುಕೋಟಿ ಚಿನ್ನದ ನಾಣ್ಯವನ್ನೂ ಹತ್ತುಭಾರತೂಕ ಬೆಳ್ಳಿಯನ್ನೂ ಕೊಟ್ಟಿರುವೆನು' ಎಂದನು. ಬಳಿಕ ಅತ್ರಿಮಹರ್ಷಿಯು ನ್ಯಾಯಪ್ರಾಪ್ತವಾದ ಆ ದ್ರವ್ಯವನ್ನು ಸ್ವೀಕರಿಸಿ ತನ್ನ ಮನೆಗೆ ಬಂದು ಅದನ್ನು ತನ್ನ ಮಕ್ಕಳಿಗೂ ಪತ್ನಿಗೂ ಭೃತ್ಯರಿಗೂ ಹಂಚಿಕೊಟ್ಟು ಜಿತೇಂದ್ರಿಯನಾಗಿ ತಪಸ್ಸುಮಾಡಬೇಕೆಂದು ತಪೋವನಕ್ಕೆ ಹೋದನು" ಎಂದು ಮಾರ್ಕಂಡೇಯಮಹರ್ಷಿಯು ಧರ್ಮರಾಯನಿಗೆ ಹೇಳಿದನು.

## ೧೮೬ನೇ ಅಧ್ಯಾಯ.—ಮಾರ್ಕಂಡೇಯ ಪರ್ವ—(ಸರಸ್ವತೀ ತಾರ್ಕ್ಷ್ಯ ಸಂವಾದ).

ವೈಶಂಪಾಯನಮುನೀಂದ್ರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಮಾರ್ಕಂಡೇಯಮಹರ್ಷಿಯು ಪಾಂಡವರನ್ನು ಕುರಿತು "ಎಲೈ ಪಾಂಡವರೆ, ಪೂರ್ವದಲ್ಲಿ ವಿದ್ವಾಂಸನಾದ ತಾರ್ಕ್ಷ್ಯನೆಂಬ ಬ್ರಾಹ್ಮಣನಿಗೂ ಸರಸ್ವತಿಗೂ ಧರ್ಮವಿಷಯಕವಾದ ವಿಚಾರವು ನಡೆದಿರುವದು. ಅದನ್ನು ಹೇಳುವೆನು. ಸಾವಧಾನದಿಂದ ಕೇಳತಕ್ಕದ್ದು. ತಾರ್ಕ್ಷ್ಯನೆಂಬ ಬ್ರಾಹ್ಮಣನು ಬಂದಾನೊಂದು ಕಾಲದಲ್ಲಿ ಸರಸ್ವತಿಯನ್ನು ನೋಡಿ 'ಎಲೌ ಪೂಜ್ಯಳೆ, ಪುರುಷನಿಗೆ ಶ್ರೇಯಸ್ಕರವಾದದ್ದು ಯಾವದು? ಯಾವ ಕಾರ್ಯವನ್ನು ಮಾಡಿದರೆ

ಸ್ವಧರ್ಮವು ನಷ್ಟವಾಗದೆ ಇರುವದು ? ಹ್ಯಾಗೆ ಯಜ್ಞೇಶ್ವರನಲ್ಲಿ ಹೋಮವನ್ನು ಮಾಡಬೇಕು ? ಯಾವ ಕಾಲದಲ್ಲಿ ಯಜ್ಞೇಶ್ವರನನ್ನು ಪೂಜಿಸಿದರೆ ಸ್ವಧರ್ಮವು ನಷ್ಟವಾಗದೆ ಇದ್ದೀತು ? ಯಾವ ಕಾರ್ಯವನ್ನು ಮಾಡಿ ನಾನು ಉತ್ತಮವಾದ ಲೋಕದಲ್ಲಿ ಸಂಚರಿಸುವೆನು ? ಇವುಗಳನ್ನು ನೀನು ತಿಳುಹಿಸಿದರೆ ಹಾಗೆಯೇ ನಾನು ನಡೆದುಕೊಳ್ಳುವೆನು ' ಎನಲು, ಸರಸ್ವತಿಯು ವಿಶ್ವಾಸದಿಂದ ಧರ್ಮವನ್ನು ತಿಳದುಕೊಳ್ಳಬೇಕೆಂದು ಉತ್ತಮವಾಗಿಯೂ ಸಮಂಜಸವಾಗಿಯೂ ಪ್ರಶ್ನೆಮಾಡಿದ ಬುದ್ಧಿಶಾಲಿಯಾದ ಆ ಬ್ರಾಹ್ಮಣನನ್ನು ನೋಡಿ ' ಎಲೈ ಬ್ರಾಹ್ಮಣನೆ, ಯಾವ ಪುರುಷನು ದೇಶಕಾಲಗಳನ್ನು ಅತಿಕ್ರಮಿಸದೆ ಶುಚಿರ್ಭೂತನಾಗಿ ಜಾಗರೂಕತೆಯಿಂದ ನಿತ್ಯವೂ ವೇದಾಧ್ಯಯನಮಾಡುತ್ತ ಬ್ರಹ್ಮಜ್ಞಾನವನ್ನು ಸಂಪಾದಿಸುವನೋ ಆತನು, ಸ್ವರ್ಗಲೋಕವನ್ನತಿಕ್ರಮಿಸಿ ಬ್ರಹ್ಮಲೋಕವನ್ನು ಪಡೆದು ದೇವತೆಗಳೊಡನೆ ಸಂತೋಷವನ್ನು ಹೊಂದುವನು. ಆ ಬ್ರಹ್ಮಲೋಕದಲ್ಲಿ ರಮಣೀಯವಾಗಿಯೂ, ಸುವರ್ಣಮಯವಾದ ತಾವರೆಹೂವುಗಳಿಂದ ಪ್ರಕಾಶಮಾನವಾಗಿಯೂ, ನಿರ್ಮಲೋದಕದಿಂದ ಪೂರ್ಣವಾಗಿಯೂ, ನಿರ್ಮಲವಾದ ಜಲಚರಪ್ರಾಣಿಗಳಿಂದ ಶ್ಲಾಘ್ಯವಾಗಿಯೂ, ದುಃಖನಾಶಕವಾಗಿಯೂ, ಇರುವ ಸರೋವರಗಳು ಇರುವವು. ಅವುಗಳ ದಡಗಳಲ್ಲಿ ಪುಣ್ಯವಂತರಾದವರು ದೇವತೆಗಳಿಂದ ಪೂಜಿತರಾಗಿ ಪುಣ್ಯವಾದ ಗಂಧಪುಷ್ಪಾದಿಗಳಿಂದ ಅಲಂಕೃತರಾದ ಕುಂದಣದಂತೆ ಮೈಬಣ್ಣವುಳ್ಳ ಅಪ್ಸರಸ್ತ್ರೀಯರೊಡನೆ ವಿಹರಿಸುವರು. ಸಾಮಾನ್ಯವಾಗಿ ಗೋದಾನಮಾಡಿದವನಿಗೆ ಉತ್ತಮವಾದ ಲೋಕವು ಪ್ರಾಪ್ತವಾಗುವದು. ಸಾಮಾನ್ಯವಾಗಿ ವೃಷಭವನ್ನು ದಾನಮಾಡಿದವನಿಗೆ ಸೂರ್ಯಲೋಕಪ್ರಾಪ್ತಿಯಾಗುವದು. ವಸ್ತ್ರದಾನಮಾಡಿದವನಿಗೆ ಚಂದ್ರಲೋಕಪ್ರಾಪ್ತಿಯಾಗುವದು. ಸುವರ್ಣದಾನಮಾಡಿದವನಿಗೆ ಇಂದ್ರಲೋಕಪ್ರಾಪ್ತಿಯಾಗುವದು. ಬಳ್ಳೇ ಕಾಂತಿಯುಳ್ಳದ್ದಾಗಿಯೂ ಹಾಲು ಕರೆಯತಕ್ಕದ್ದಾಗಿಯೂ ಸಾಧುವಾಗಿಯೂ ಕರುವಿನೊಡಗೂಡಿಯೂ ಇರತಕ್ಕ ಗೋವನ್ನು ದಾನಮಾಡಿದವನು, ಅದರ ರೋಮಗಳು ಎಷ್ಟು ಇರುವವೋ ಅಷ್ಟುವರ್ಷಗಳ ಪರ್ಯಂತವೂ ದೇವಲೋಕದಲ್ಲಿ ವಾಸಮಾಡುವನು. ಸಾಧುವಾಗಿಯೂ ನೇಗಿಲಿಗೆ ಕಟ್ಟುವದಕ್ಕೆ ಯೋಗ್ಯವಾಗಿಯೂ ಭಾರವನ್ನು ಹೊರತಕ್ಕದ್ದಾಗಿಯೂ ಬಲಶಾಲಿಯಾಗಿಯೂ ಪ್ರಾಯವುಳ್ಳದ್ದಾಗಿಯೂ ಇರುವ ವೃಷಭವನ್ನು ದಾನಮಾಡಿದವನಿಗೆ, ಹತ್ತು ಗೋದಾನಗಳನ್ನು ಮಾಡಿದವನಿಗೆ ಉಂಟಾಗತಕ್ಕ ಲೋಕವು ಲಭಿಸುವದು. ಹಾಲುಕರೆಯತಕ್ಕ ಕಂಚಿನ ಪಾತ್ರೆಯೊಡನೆಯೂ ಉತ್ತಮವಾದ ವಸ್ತ್ರದೊಡನೆಯೂ ಸಹ ಕಪಿಲಾಗೋವನ್ನು ಯಾವನು ದಾನಮಾಡುವನೋ ಆತನಿಗೆ, ಪರಲೋಕದಲ್ಲಿ ಕಾಮಧೇನುವು ಬೇಕಾದ ಇಷ್ಟಾರ್ಥಗಳನ್ನು ಕೊಡುವದು. ಗೋದಾನ ಮಾಡಿದವರ ಪುತ್ರರೂ ಪಾತ್ರರೂ ಏಳುತಲೆಯವರೆಗೂ ಉತ್ತಮವಾದ ಗತಿಯನ್ನು ಪಡೆಯುವರು. ಚಿನ್ನದ ಕೊಂಬಿನೊಡನೆಯೂ ಹಾಲುಕರೆಯತಕ್ಕ ಕಂಚಿನ ಪಾತ್ರೆಯೊಡನೆಯೂ ಉತ್ತಮವಾದ ವಸ್ತ್ರದೊಡನೆಯೂ ಉತ್ತಮವಾದ ದಕ್ಷಿಣೆಯೊಡನೆಯೂ ತಿಲಧೇನುವನ್ನು ಬ್ರಾಹ್ಮಣನಿಗೆ ದಾನಮಾಡಿದವನು ವಸುಲೋಕವನ್ನು ಪಡೆಯುವನು. ತಾನು ಮಾಡಿದ ದುಷ್ಕರ್ಮಗಳಿಂದ ಕ್ರೂರರಾದ ದಾನವರಿರತಕ್ಕ ಘೋರವಾದ ನರಕದಲ್ಲಿ ಬೀಳತಕ್ಕವನನ್ನು ಈ ಲೋಕದಲ್ಲಿ ಮಾಡಿದ ಗೋದಾನವು ಸಮುದ್ರದಲ್ಲಿ ಹಡಗಿನಂತೆ ತಾರಣಮಾಡಿಸುವದು. ಯಾವನು ಶಾಸ್ತ್ರೋಕ್ತಪ್ರಕಾರವಾಗಿ ಬ್ರಾಹ್ಮಣನಿಗೆ ಕನ್ಯಾದಾನವನ್ನೂ ಭೂದಾನವನ್ನೂ ಮಾಡುವನೋ ಅವನು ಇಂದ್ರಲೋಕವನ್ನು ಪಡೆಯುವನು. ಎಲೈ ತಾರ್ಕ್ಷ್ಯನೆ, ಏಳುವರ್ಷ ನಿಯಮದಿಂದ ಸಾಧುಸ್ವಭಾವವುಳ್ಳವನಾಗಿ ಯಾವನು ಯಜ್ಞೇಶ್ವರನಲ್ಲಿ ಹೋಮವನ್ನು ಮಾಡುವನೋ ಅವನು, ಹಿಂದೆ ಏಳು ತಲೆಯವರೆಗೂ ಮುಂದೆ ಏಳು ತಲೆಯವರೆಗೂ ತನ್ನ ಪಿತೃಗಳನ್ನು ಉದ್ಧಾರಮಾಡುವನು ' ಎಂದಳು.

ಅದನ್ನು ಕೇಳಿ, ತಾರ್ಕ್ಷ್ಯನು ' ಎಲೌ ಮಹಾತ್ಮಳೆ, ಅಗ್ನಿಹೋತ್ರವನ್ನು ಆಚರಿಸತಕ್ಕದ್ದು ಹ್ಯಾಗೆ ? ಅದನ್ನು ನೀನು ತಿಳುಹಿಸಿದ್ದೇಆದರೆ ಆ ಪ್ರಕಾರ ನಾನು ನಡೆದುಕೊಳ್ಳುವೆನು ' ಎನಲು, ಸರಸ್ವತಿಯು ' ಎಲೈ ತಾರ್ಕ್ಷ್ಯನೆ, ಅಶುಚಿಯಾದವನೂ, ಕೈಕಾಲುಗಳನ್ನು ತೊಳೆದುಕೊಂಡು ಶುದ್ಧಾಚಮನವನ್ನು ಮಾಡದೆ ಇರತಕ್ಕವನೂ, ವೇದಾರ್ಥಗಳನ್ನು ತಿಳದುಕೊಳ್ಳದೆ ಇರತಕ್ಕವನೂ, ಹೋಮವನ್ನು ಮಾಡಕೂಡದು. ಶುಚಿಯನ್ನೇ ಬಯಸತಕ್ಕ ದೇವತೆಗಳು ಪರಹೃದಯವನ್ನು ತಿಳಿಯತಕ್ಕವರಾದ್ದರಿಂದ, ಶ್ರದ್ಧೆಯೂ ಶುಚಿಯೂ ಇಲ್ಲದೆ

ಹೋಮಮಾಡತಕ್ಕವನು ಕೊಟ್ಟ ಹವಿಸ್ಸನ್ನು ಅವರು ಸ್ವೀಕರಿಸಲಾರರು. ಯಜ್ಞಾದಿಕರ್ಮಗಳಲ್ಲಿ ಶ್ರೋತ್ರಿಯನಲ್ಲದೆ ಇರತಕ್ಕವನು ಋತ್ವಿಜನಾದದ್ದೇ ಆದರೆ, ಆ ಯಜ್ಞವು ನಿಷ್ಫಲವಾಗುವದು. ಕುಲಶೀಲಗಳು ಗೊತ್ತಾಗದೆ ಇರತಕ್ಕವನೂ ಶ್ರೋತ್ರಿಯನಲ್ಲದವನೂ ಹೋಮಮಾಡಕೂಡದೆಂದು ಶ್ರುತಿಯು ಹೇಳುವದು. ಶ್ರದ್ಧಾಳುವಾಗಿ ದರ್ಪವಿಲ್ಲದೆ ಸತ್ಯಶೀಲನಾಗಿ ಅಗ್ನಿಯಲ್ಲಿ ಹೋಮಮಾಡಿ ಆ ಶೇಷವನ್ನು ಯಾವನು ಭೋಜನಮಾಡುವನೋ ಅವನು, ಪುಣ್ಯತಮವಾದ ಬ್ರಹ್ಮಲೋಕವನ್ನು ಹೊಂದಿ ಕ್ರಮವಾಗಿ ಪರಬ್ರಹ್ಮನನ್ನೂ ಕಾಣುವನು ' ಎಂದಳು. ಬಳಿಕ ತಾರ್ಕ್ಷ್ಯನು ' ಎಲೌ ದೇವಿಯೆ, ನಿನ್ನನ್ನು ನೋಡಿದರೆ ಪರಮಾರ್ಥತತ್ವವನ್ನು ತಿಳಿದವಳಾಗಿಯೂ ಕರ್ಮದಿಂದ ಪಡೆಯತಕ್ಕ ಪರಲೋಕದ ವಿಷಯದಲ್ಲಿ ಅಧಿಕವಾದ ಬುದ್ಧಿಯುಳ್ಳವಳಾಗಿಯೂ ಪ್ರಜ್ಞಾವತಿಯಾಗಿಯೂ ಕಾಣಿಸುವೆ. ನೀನು ಯಾರು ? ಹೇಳು ' ಎನಲು, ಸರಸ್ವತಿಯು ' ಎಲೈ ತಾರ್ಕ್ಷ್ಯನೆ, ಅಗ್ನಿಹೋತ್ರದಿಂದ ನಾನು ಹುಟ್ಟಿ ಬಂದಿರತಕ್ಕವಳು. ನಾನು ನಿನ್ನ ಬಳಿಗೆ ಬಂದು ಬ್ರಾಹ್ಮಣರ ಸಂಶಯವನ್ನು ಪರಿಹರಿಸುವದಕ್ಕೋಸ್ಕರ ಬ್ರಹ್ಮನಿಷ್ಠಳಾಗಿ ಯಥಾರ್ಥವಾದದ್ದನ್ನು ತಿಳಿಸುತ್ತಿರುವೆನು ' ಎಂದಳು. ಅದನ್ನು ಕೇಳಿ ತಾರ್ಕ್ಷ್ಯನು ' ಎಲೌ ಮಹಾನುಭಾವಳೆ, ನಿನಗೆ ಸದೃಶರಾದವರು ಯಾರೂ ಇಲ್ಲ. ನೀನು ದಿವ್ಯವಾದ ರೂಪವನ್ನು ಧರಿಸಿ, ಅಧಿಕವಾದ ಲಾವಣ್ಯದಿಂದ ಮೆರೆಯುತ್ತ, ಲಕ್ಷ್ಮಿಯಂತೆ ಕಂಗೊಳಿಸುತ್ತ, ಪ್ರಜ್ಞಾವತಿಯಾಗಿರುವೆ ' ಎನಲು, ಸರಸ್ವತಿಯು ' ಎಲೈ ಬ್ರಾಹ್ಮಣಶ್ರೇಷ್ಠನೆ, ಯಜ್ಞಗಳಲ್ಲಿ ಕರ್ಮಾಂಗವಾಗಿರುವ ಉಪಾಸನೆಗಳು ಯಾವವು ಶ್ರೇಷ್ಠವಾಗಿರುವವು ಎಂದು ವಿದ್ವಾಂಸರು ಹೇಳುವರೋ ಅವುಗಳಿಂದ, ನಾನು ಅಭಿವೃದ್ಧಿಯನ್ನು ಹೊಂದಿ ತೃಪ್ತಳಾಗಿ ಈ ರೂಪವನ್ನು ಪಡೆದಿರುವೆನು. ಎಲೈ ಬ್ರಾಹ್ಮಣನೆ, ಯಜ್ಞಾಂಗವಾದ ಸಮಿತ್ತು, ಸುವರ್ಣ, ಧಾನ್ಯ ಮೊದಲಾದ ದ್ರವ್ಯಗಳಿಂದಲೂ ದೇವತೆಗಳಿಗೆ ಇಷ್ಟವಾದ ರೂಪದಿಂದಲೂ ಪ್ರಜ್ಞೆಯಿಂದಲೂ ನಿನಗೆ ಸಿದ್ಧಿಯಾಗತಕ್ಕದ್ದೆಂದು ತಿಳಿದುಕೊ ' ಎಂದಳು. ಅದನ್ನು ಕೇಳಿ ತಾರ್ಕ್ಷ್ಯನು ' ಎಲೌ ಮಹನೀಯಳೆ, ನೀನು ಹೇಳಿದ್ದೇ ಶ್ರೇಯಸ್ಕರವಾದದ್ದೆಂದು ತಿಳಿದು ಕರ್ಮಠರಾದ ಮಹಾತ್ಮರಾದ ಋಷಿಗಳು ಜಿತೇಂದ್ರಿಯರಾಗಿರುವರು. ಸಾಂಖ್ಯಶಾಸ್ತ್ರವನ್ನೂ ಯೋಗಶಾಸ್ತ್ರವನ್ನೂ ಬಲ್ಲ ವಿದ್ವಾಂಸರು ಯಾವ ವಸ್ತುವನ್ನು ಪರಬ್ರಹ್ಮವೆಂದು ಹೇಳುವರೋ ಅದನ್ನೂ, ಜ್ಞಾನಿಗಳಾದವರು ದುಃಖನಾಶಕವಾಗಿಯೂ ಉತ್ತಮವಾಗಿಯೂ ಇರುವ ಮೋಕ್ಷವೆಂಬ ಯಾವ ಉತ್ತಮಗತಿಯನ್ನು ಪಡೆಯುವರೋ ಅದನ್ನೂ ನಾನು ತಿಳಿಯೆನು. ಅವುಗಳನ್ನು ನೀನು ನನಗೆ ತಿಳುಹಿಸು ' ಎನಲು, ಸರಸ್ವತಿಯು ' ಎಲೈ ತಾರ್ಕ್ಷ್ಯನೆ, ಸದ್ವ್ರತಾಚರಣೆಯಿಂದಲೂ ಜಪಾದಿಗಳಿಂದಲೂ ಚಿತ್ತವೃತ್ತಿನಿರೋಧದಿಂದಲೂ ದುಃಖವನ್ನು ನಿವರ್ತಿಸಿಕೊಂಡು ವೇದವೇತ್ತರಾಗಿ ಸ್ವಧರ್ಮಾಚರಣೆಯಲ್ಲಿ ನಿರತರಾದ ಜ್ಞಾನಿಗಳು ಸಚ್ಚಿದಾನಂದಾತ್ಮಕನಾಗಿಯೂ ನಿತ್ಯನಾಗಿಯೂ ಇರುವ ಪರಬ್ರಹ್ಮನನ್ನು ಸೇರುವರು. ಈ ಜೀವನ ಹೃದಯಾಕಾಶಮಧ್ಯದಲ್ಲಿ ಬ್ರಹ್ಮವೆಂಬ ವೃಕ್ಷವು ಧರ್ಮ, ಜ್ಞಾನ, ವೈರಾಗ್ಯ, ಐಶ್ವರ್ಯಗಳೆಂಬ ಪುಣ್ಯತಮವಾದ ಪರಿಮಳಗಳಿಂದ ಮನೋಹರವಾಗಿ, ಭೋಗಸ್ಥಾನಗಳೆಂಬ ಅನೇಕ ಶಾಖೋಪಶಾಖೆಗಳಿಂದ ಕೂಡಿ, ಅಪರಿಚ್ಛಿನ್ನವಾಗಿ ಪ್ರಕಾಶಿಸುತ್ತಿರುವದು. ಈ ಶರೀರದ ಮೂಲಭಾಗದಲ್ಲಿ ಅವಿದ್ಯಾರೂಪವಾದ ನದಿಯು ಜೇನಿನಂತೆ ರುಚಿಯಾಗಿಯೂ ಉದಕದಂತೆ ದಾಹಶಾಂತಿಕರವಾಗಿಯೂ ಇರುವ ಭೋಗದಿಂದುಂಟಾಗತಕ್ಕ ಸುಖವನ್ನು ಸ್ರವಿಸುತ್ತ ಭೋಗವಾಸನಾರೂಪವಾದ ಪ್ರವಾಹದೊಡಗೂಡಿ ಹರಿಯುತ್ತಿರುವದು. ಎಲೈ ತಾರ್ಕ್ಷ್ಯನೆ, ಈ ಸಂಸಾರವೆಂಬ ವೃಕ್ಷಕ್ಕೆ ಭೋಗಸ್ಥಾನಗಳೆಂಬ ಅನೇಕ ಶಾಖೆಗಳಿರುವವು. ಅವಿದ್ಯಾರೂಪವಾದ ಪ್ರವಾಹದಲ್ಲಿ ಬಿದ್ದ ಪ್ರಾಣಿಗಳು ಪತ್ನೀಪುತ್ರಾದಿ ವಿಷಯಗಳಲ್ಲಿ ಸಿಕ್ಕಿಕೊಂಡು ಪರಸ್ಪರವಾಗಿ ಸೇರಿಕೊಂಡಿರುವ ಮರಳುಗಳಂತೆ ಆ ಪ್ರವಾಹದಲ್ಲಿ ಹರಿದುಹೋಗುತ್ತ, ಪೈರಿಗೆ ಹುರಿದು ಕುಟ್ಟಿದ ಬತ್ತದಂತೆ ಅಯೋಗ್ಯವಾಗಿಯೂ, ಚಕ್ಕುಲಿಯಂತೆ ಅನೇಕ ಛಿದ್ರವುಳ್ಳದ್ದಾಗಿಯೂ, ಮಾಂಸದಂತೆ ಹಿಂಸೆಯಿಂದ ಲಭಿಸತಕ್ಕದ್ದಾಗಿಯೂ, ಶಾಕದಂತೆ ಸಾರವಿಲ್ಲದ್ದಾಗಿಯೂ, ಪಾಯಸದಂತೆ ಮಧುರವಾಗಿಯೂ, ಪಾಕ ಹೆಚ್ಚಾದಷ್ಟು ದೃಢವಾಗುವದಾಗಿಯೂ, ಕೆಸರಿನಂತೆ ಚಿತ್ತಕ್ಕೆ ಮಾಲಿನ್ಯವನ್ನುಂಟುಮಾಡುವದಾಗಿಯೂ ಇರುವ ವಿಷಯಸುಖವನ್ನು ಹೊಂದುವದಕ್ಕೆ ಸಂಸಾರವೆಂಬ ವೃಕ್ಷವನ್ನು ಆಶ್ರಯಿಸುವರು. ಎಲೈ ಬ್ರಾಹ್ಮಣನೆ, ಮೋಕ್ಷವೆಂಬ ಸ್ಥಾನವನ್ನು ಪಡೆಯುವದಕ್ಕಾಗಿ ಇಂದ್ರಾದಿ ದೇವತೆಗಳೂ ಉತ್ತಮವಾದ ಜ್ಞಾನಯಜ್ಞದಿಂದ ಈಶ್ವರಾರಾ

ಧನೆಯನ್ನು ಮಾಡಿ, ಜ್ಞಾನದಿಂದ ಹೊಂದತಕ್ಕ ಶ್ರೇಷ್ಠವಾದ ಮೋಕ್ಷವನ್ನು ಪಡೆಯುವರು’ ಎಂದು ಸರಸ್ವತಿಯು ತಾರ್ಕ್ಷ್ಯನೆಂಬ ಬ್ರಾಹ್ಮಣನಿಗೆ ಹೇಳಿದಳು” ಎಂದು ಮಾರ್ಕಂಡೇಯನು ಧರ್ಮರಾಯನಿಗೆ ಹೇಳಿದನು.

---

### ೧೮೭ನೇ ಅಧ್ಯಾಯ.—ಮಾರ್ಕಂಡೇಯಪರ್ವ—(ವೈವಸ್ವತಮನುವಿನ ಚರಿತ್ರೆ.)

ವೈಶಂಪಾಯನಮುನೀಂದ್ರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಆ ಬಳಿಕ ಧರ್ಮರಾಯನು ಮಾರ್ಕಂಡೇಯಮಹರ್ಷಿಯನ್ನು ಕುರಿತು “ಎಲೈ ಮಹರ್ಷಿಯೆ, ವೈವಸ್ವತ ಮನುವಿನ ಚರಿತ್ರೆಯನ್ನು ಹೇಳು” ಎನಲು, ಮಾರ್ಕಂಡೇಯಮಹರ್ಷಿಯು “ಎಲೈ ಮಹಾರಾಜನೆ, ಸೂರ್ಯ ಪುತ್ರನಾದ ಮನುವು ಬಲದಿಂದಲೂ ತೇಜಸ್ಸಿನಿಂದಲೂ ಐಶ್ವರ್ಯದಿಂದಲೂ ತಪಸ್ಸಿನಿಂದಲೂ ತಮ್ಮ ತಂದೆಯಾದ ಸೂರ್ಯನನ್ನೂ ಪಿತಾಮಹನಾದ ಬ್ರಹ್ಮನನ್ನೂ ಮೀರಿ, ಅಧಿಕವಾದ ಪ್ರತಾಪದಿಂದ ಮೆರೆಯುತ್ತ, ಬದರಿಕಾಶ್ರಮ ದಲ್ಲಿರುವ ಚಾರಿಣಿಯೆಂಬ ನದಿಯ ದಡದಲ್ಲಿ ನಾರುಮಡಿಯನ್ನುಟ್ಟು, ಜಡೆಯನ್ನು ತಾಳಿ, ಊರ್ಧ್ವಬಾಹುವಾಗಿ, ಒಂದೇ ಕಾಲಿನಿಂದ ತಲೆಯನ್ನು ಬಗ್ಗಿಸಿಕೊಂಡು, ಕಣ್ಣುಗಳನ್ನು ಮುಚ್ಚದೆ, ಹತ್ತುಸಾವಿರವರುಷ ಘೋರವಾದ ತಪಸ್ಸನ್ನು ಮಾಡಿದನು. ಆಗ ಒಂದು ಮೀನು ಆತನನ್ನು ನೋಡಿ ‘ಎಲೈ ಮಹಾತ್ಮನೆ, ನಾನು ಕ್ಷುದ್ರವಾದ ಮೀನು. ದೊಡ್ಡಮೀನುಗಳಿಂದ ನನಗೆ ತುಂಬಾ ಭಯವುಂಟಾಗಿರುವದು. ಆ ಭಯವಿಲ್ಲದಂತೆ ನೀನು ನನ್ನನ್ನು ಸಂರಕ್ಷಿಸು. ನಮ್ಮ ಜಾತಿಯಲ್ಲಿ ದೊಡ್ಡಮೀನು ಸಣ್ಣಮೀನುಗಳನ್ನು ತಿಂದುಕೊಂಡು ಜೀವಿಸತಕ್ಕದ್ದು ಸ್ವಭಾ ವವಾಗಿರುವದು. ಇಂಥಾ ಭಯವನ್ನು ತಪ್ಪಿಸಿ ನನ್ನನ್ನು ನೀನು ರಕ್ಷಿಸಿದ್ದೇಆದರೆ, ನಿನಗೆ ನಾನು ಪ್ರತ್ಯುಪಕಾರ ವನ್ನು ಮಾಡುವೆನು’ ಎನಲು, ಆ ಮಾತನ್ನು ಕೇಳಿ ದಯಾಶಾಲಿಯಾದ ವೈವಸ್ವತಮನುವು ಆ ಮೀನನ್ನು ತನ್ನ ಕೈಯಲ್ಲಿ ಹಿಡಿದುಕೊಂಡು ಆ ನೀರಿನಿಂದ ಮೇಲಕ್ಕೆ ತೆಗೆದು, ಚಂದ್ರನೋಪಾದಿಯಲ್ಲಿ ಶುಭ್ರನಾಗಿರುವ ತನ್ನ ಉದಕ ಪಾತ್ರೆಯಲ್ಲಿಟ್ಟನು. ಅದು ಅಲ್ಲೇ ಕ್ಷಣೇಕ್ಷಣೇ ಬೆಳೆಯುತ್ತಬಂದು, ಆ ಪಾತ್ರೆಯು ಸಾಲದೆಹೋಗಲು ಆ ರಾಜನನ್ನು ಕುರಿತು ‘ಎಲೈ ಮಹಾರಾಜನೆ, ನಾನಿರುವದಕ್ಕೆ ಈ ಪಾತ್ರೆಯು ಸಾಲದಾದ್ದರಿಂದ ನನಗೆ ಇನ್ನೊಂದು ಸ್ಥಳವನ್ನು ಕಲ್ಪಿಸಿಕೊಡಬೇಕು’ ಎನಲು, ಮನುವು ಆ ಮತ್ಸ್ಯವನ್ನು ಒಂದು ವಿಸ್ತಾರವಾಗಿರತಕ್ಕ ಭಾವಿ ಯಲ್ಲಿ ತೆಗೆದುಕೊಂಡುಹೋಗಿ ಬಿಟ್ಟನು. ಎರಡು ಯೋಜನದ ಉದ್ದವೂ ಒಂದು ಯೋಜನದ ಅಗಲವೂ ಉಳ್ಳ ಆ ಭಾವಿಯಲ್ಲಿ ಆ ಮತ್ಸ್ಯವು ದಿನದಿನವೂ ವೃದ್ಧಿಯನ್ನು ಹೊಂದಿ ತಾನು ಸಂಚರಿಸುವದಕ್ಕೆ ಆ ಭಾವಿಯೂ ಸಾಲದೆ ಮನುವನ್ನು ಕುರಿತು ‘ಎಲೈ ಮನುಮಹಾರಾಜನೆ, ಇಲ್ಲಿ ನನಗೆ ಸ್ಥಳವು ಸಾಲದಾದ್ದರಿಂದ ಸಮುದ್ರ ಪತ್ನಿಯಾದ ಗಂಗೆಯಲ್ಲಿ ನನ್ನನ್ನು ತೆಗೆದುಕೊಂಡು ಹೋಗಿ ಬಿಡು. ಅಲ್ಲಿದ್ದುಕೊಂಡು ನಾನು ನಿನ್ನಿಂದ ವೃದ್ಧಿ ಯನ್ನು ಪಡೆದವನಾದ್ದರಿಂದ ನಿನ್ನ ಆಜ್ಞಾನುಸಾರವಾಗಿರುತ್ತೇನೆ’ ಎನಲು, ಮನುವು ಆ ಮತ್ಸ್ಯವನ್ನು ತೆಗೆದು ಕೊಂಡುಹೋಗಿ ಗಂಗೆಯಲ್ಲಿ ಬಿಟ್ಟನು. ಅಲ್ಲಿಯೂ ಆ ಮೀನು ಸ್ವಲ್ಪಕಾಲದಲ್ಲೇ ಬಹಳ ದೊಡ್ಡದಾಗಿ ಬೆಳೆದು ಮನುವನ್ನು ಕುರಿತು ‘ಎಲೈ ಮಹಾನುಭಾವನೆ, ನನ್ನ ಶರೀರವು ದೊಡ್ಡದಾಗಿ ಬೆಳೆದಿರುವದರಿಂದ ಗಂಗಾನದಿ ಯಲ್ಲಿ ಸಂಚರಿಸುವದಕ್ಕೂ ನನಗೆ ಅವಕಾಶವಿಲ್ಲದೆ ಇರುವದು. ಆದ್ದರಿಂದ ನನ್ನನ್ನು ಸಮುದ್ರದಲ್ಲಿ ತೆಗೆದು ಕೊಂಡಹೋಗಿ ಬಿಡು’ ಎನಲು, ಮನುವು ಆ ಮತ್ಸ್ಯವನ್ನು ಸಮುದ್ರಕ್ಕೆ ತೆಗದುಕೊಂಡುಹೋಗಿ ಬಿಟ್ಟನು. ಆ ಸಮಯದಲ್ಲಿ ಆ ಮತ್ಸ್ಯವನ್ನು ಸ್ಪರ್ಶಮಾಡಲು, ಅದರಿಂದ ಮನುವಿನ ಮನಸ್ಸಿಗೆ ಅಧಿಕವಾದ ಆನಂದವುಂ ಟಾಯಿತು. ಆಗ ಆ ಮತ್ಸ್ಯವು ಮನುವನ್ನು ಕುರಿತು ನಸುನಗುತ್ತ ‘ಎಲೈ ಮಹಾರಾಜನೆ, ನಿನ್ನಿಂದ ನಾನು ವಿಶೇಷವಾಗಿ ರಕ್ಷಿತನಾದೆನು. ಈ ಕಾಲದಲ್ಲಿ ನೀನು ಮಾಡತಕ್ಕದ್ದನ್ನು ಹೇಳುವೆನು ಕೇಳು: ಸ್ಥಾವರಜಂ ಗಮಾತ್ಮಕವಾದ ಪ್ರಪಂಚಕ್ಕೆ ಈಗ ಪ್ರಳಯಕಾಲವು ಪ್ರಾಪ್ತವಾಗಿರುವದು. ಈ ಲಯದಿಂದ ಸ್ಥಾವರಜಂಗ ಮಪ್ರಾಣಿಗಳೆಲ್ಲವೂ ನಷ್ಟವಾಗಿ ಹೋಗುವವು. ಈ ಸಮಯದಲ್ಲಿ ನೀನು ದೊಡ್ಡದಾದ ನಾವೆಯನ್ನು ಕಲ್ಪಿಸಿ,

ಅದಕ್ಕೆ ದೃಢವಾದ ಹಗ್ಗವನ್ನು ಕಟ್ಟಿಕೊಂಡು, ಬ್ರಾಹ್ಮಣರು ತೋರಿಸಿದ ಎಲ್ಲಾ ಬೀಜಗಳನ್ನೂ ಸಂಗ್ರಹಿಸಿಕೊಂಡು, ಅವನ್ನು ರಕ್ಷಿಸುತ್ತ ಸಪ್ತರ್ಷಿಗಳೊಡನೆ ಆ ನಾವೆಯಮೇಲೆ ಕುಳಿತು ನನ್ನನ್ನು ನಿರೀಕ್ಷಣೆಮಾಡುತ್ತಿರು. ಬಳಿಕ ನಾನು ಬಂದು ಕೋಡನ್ನು ಧರಿಸಿಕೊಂಡು ಬರುವೆನು. ನಾನು ಹೇಳಿದ ಕಾರ್ಯವನ್ನು ನೀನು ಅವಶ್ಯವಾಗಿ ಮಾಡತಕ್ಕದ್ದು. ನಾನು ಹೋಗಿ ಬರುವೆನು. ಅಂಥಾ ಪ್ರಳಯೋದಕವನ್ನು ದಾಟಬೇಕಾದರೆ ನನ್ನ ಸಹಾಯ ಹೊರತು ಆಗತಕ್ಕದ್ದಲ್ಲ. ನಾನು ಹೇಳಿದ ಮಾತನ್ನು ಮತ್ತೊಂದು ವಿಧವಾಗಿ ಶಂಕಿಸಬೇಡ' ಎಂದು ನುಡಿಯಲು, ಮನುವು ಹಾಗೇ ಆಗಲೆಂದು ಅಂಗೀಕಾರಪಟ್ಟನು. ಈ ಪ್ರಕಾರ ಪರಸ್ಪರವಾಗಿ ಮಾತನಾಡಿಕೊಂಡು ಅವರಿಬ್ಬರೂ ಹೊರಟುಹೋದರು.

ಬಳಿಕ ಮನುವು ಆ ಮಹಾಮತ್ಸ್ಯವು ಹೇಳಿದಂತೆ ಸಕಲಬೀಜಗಳನ್ನೂ ಸಂಗ್ರಹಿಸಿಕೊಂಡು ಸಪ್ತಋಷಿಗಳೊಡನೆ ಸಮುದ್ರದಲ್ಲಿ ದೊಡ್ಡದಾದ ನಾವೆಯಮೇಲೆ ಕುಳಿತು ಆ ಮತ್ಸ್ಯವನ್ನೇ ಧ್ಯಾನಮಾಡುತ್ತಿದ್ದನು. ಆಗ ಆ ಮತ್ಸ್ಯವು ತನ್ನನ್ನು ಮನುವು ಧ್ಯಾನಿಸುವದನ್ನು ತಿಳಿದು ಬಂದು ಕೋಡನ್ನು ಧರಿಸಿಕೊಂಡು ಅಲ್ಲಿಗೆ ಬಂತು. ಆಗ ಮನುವು ದೊಡ್ಡದಾದ ಪರ್ವತದಂತೆ ತೋರುವ ಕೋಡನ್ನು ತಾಳಿ ಬರುವ ಆ ಮಹಾಮತ್ಸ್ಯವನ್ನು ನೋಡಿ ತನ್ನ ನಾವೆಯ ಹಗ್ಗವನ್ನು ಅದರ ಕೋಡಿಗೆ ತಗಲಿಸಿದನು. ಬಳಿಕ ಆ ಮತ್ಸ್ಯವು ಅಧಿಕವಾದ ವೇಗವುಳ್ಳದ್ದಾಗಿ ಆ ಲವಣಸಮುದ್ರದಲ್ಲಿ ಆ ನಾವೆಯನ್ನು ಎಳೆದುಕೊಂಡು ಹೋಗುತ್ತಿರಲು, ನರ್ತನಮಾಡುವಂತೆ ಕಾಣುತ್ತಿರುವ ದೊಡ್ಡದೊಡ್ಡದಾದ ತೆರೆಗಳಿಂದಲೂ ಮಹತ್ತಾದವಾಯುವಿನಿಂದಲೂ ಗರ್ಜನೆಮಾಡುವಂತೆ ತೋರುವ ಆ ಸಮುದ್ರದಲ್ಲಿ ಆ ನಾವೆಯು ಮತ್ತಳಾಗಿ ಚಪಲಪಡುವ ಸ್ತ್ರೀಯಂತೆ ಸಂಚರಿಸುತ್ತಿತ್ತು. ಆ ಸಮಯದಲ್ಲಿ ಭೂಮಿಯೂ ಆಕಾಶವೂ ದಿಕ್ಕುವಿದಿಕ್ಕುಗಳೂ ಸಹ ಕಾಣದೆ ಸಕಲವೂ ಉದಕಮಯವಾಗಿಯೇ ತೋರುತ್ತಿದ್ದವು. ಆಗ ಸಪ್ತರ್ಷಿಗಳೂ ವೈವಸ್ವತಮನುವೂ ಆ ಮತ್ಸ್ಯವೂ ಮಾತ್ರ ಕಾಣಿಸುತ್ತ, ಹೀಗೆ ಅನೇಕ ವರ್ಷಗಳು ಅತಿಕ್ರಮಿಸಿಹೋದವು. ಬಳಿಕ ಆ ಮತ್ಸ್ಯವು ಆ ಪ್ರಳಯೋದಕದಲ್ಲಿ ಆ ನಾವೆಯನ್ನು ಸೆಳೆದುಕೊಂಡು ಹಿಮವತ್ಪರ್ವತದ ಶಿಖರದ ಹತ್ತಿರಕ್ಕೆ ತೆಗೆದುಕೊಂಡುಹೋಗಿ; ಅದರಲ್ಲಿದ್ದ ಆ ಋಷಿಗಳನ್ನು ನೋಡಿ ನಸುನಗುತ್ತ 'ಎಲೈ ಮುನಿಗಳಿರ, ಈ ನಾವೆಯನ್ನು ಹಿಮವತ್ಪರ್ವತದ ಶಿಖರಕ್ಕೆಜಾಗ್ರತೆಯಾಗಿ ಕಟ್ಟಿಹಾಕಿರಿ' ಎನಲು, ಆ ಋಷಿಗಳು ನಾವೆಯನ್ನು ಆ ಪರ್ವತದ ಶಿಖರಕ್ಕೆ ಕಟ್ಟಿದರು. ಆ ಮೊದಲುಗೊಂಡು ಹಿಮವತ್ಪರ್ವತದ ಶಿಖರಕ್ಕೆ ನೌಕಾಬಂಧನವೆಂದು ಖ್ಯಾತಿಯುಂಟಾಯಿತು. ಬಳಿಕ ಆ ಮತ್ಸ್ಯವು ವೈವಸ್ವತಮನುವನ್ನೂ ಸಪ್ತರ್ಷಿಗಳನ್ನೂ ಕುರಿತು 'ಈ ಮತ್ಸ್ಯರೂಪದಿಂದ ನಾನು ನಿಮಗೆ ಈ ಕ್ರೂರವಾದ ಭಯವನ್ನು ಪರಿಹರಿಸಿದೆನು. ಪರಬ್ರಹ್ಮನೆಂತಲೂ ಪ್ರಜಾಪತಿಯೆಂತಲೂ ನನ್ನನ್ನೇ ಶ್ರುತಿಗಳು ಹೇಳುವವು. ನನಗಿಂತಲೂ ಮತ್ತೊಂದು ಉತ್ತಮವಾದ ಪದಾರ್ಥವು ಇಲ್ಲವೆಂದು ನೀವು ತಿಳಿದುಕೊಳ್ಳಿರಿ. ಈ ವೈವಸ್ವತಮನುವು ತನ್ನ ತಪೋಬಲದಿಂದ ಸೃಷ್ಟಿಮಾಡತಕ್ಕ ಸಾಮರ್ಥ್ಯವುಳ್ಳವನಾಗಿ, ದೇವತೆಗಳನ್ನೂ ಅಸುರರನ್ನೂ ಮನುಷ್ಯರನ್ನೂ ವೃಕ್ಷ ಪಾಷಾಣ ಮೊದಲಾದ ವನಗಳನ್ನೂ ಸೃಷ್ಟಿಸುವನು. ನನ್ನನುಗ್ರಹದಿಂದ ಸೃಷ್ಟಿಮಾಡುವದರಲ್ಲಿ ಈತನು ಅಜ್ಞಾನವನ್ನು ಪಡೆಯದೆ ಇರುವನು' ಎಂದು, ನುಡಿದು ಆ ಮತ್ಸ್ಯರೂಪವನ್ನು ಧರಿಸಿದ ಮಹಾವಿಷ್ಣುವು ಅಂತರ್ಧಾನವನ್ನು ಹೊಂದಿದನು. ಬಳಿಕ ವೈವಸ್ವತಮನುವು ಸೃಷ್ಟಿಮಾಡುವದಕ್ಕಾಗಿ ಮಹತ್ತಾದ ತಪಸ್ಸನ್ನು ಮಾಡಿ, ಪೂರ್ವದಲ್ಲಿ ಯಾವ ರೀತಿಯಾಗಿ ಸೃಷ್ಟಿಯಾಗಿತ್ತೋ ಅದೇ ಪ್ರಕಾರವಾಗಿ ಸೃಷ್ಟಿಮಾಡಲುಪಕ್ರಮಿಸಿದನು. ಎಲೈ ಧರ್ಮರಾಯನೆ, ಮಾತ್ಸ್ಯವೆಂಬ ಹೆಸರುಳ್ಳ ಈ ಪುರಾತನವಾದ ಆಖ್ಯಾನವು ಸಕಲ ಪಾಪಪರಿಹಾರಕವಾದದ್ದು. ಈ ಚರಿತ್ರೆಯನ್ನು ಯಾರು ನಿತ್ಯವೂ ಶ್ರವಣಮಾಡುವರೋ ಅವರು ಈ ಲೋಕದಲ್ಲಿ ಐಶ್ವರ್ಯವಂತರಾಗಿ ಸುಖವನ್ನನುಭವಿಸಿ ಬಳಿಕ ಪುಣ್ಯಲೋಕವನ್ನು ಹೊಂದುವರು" ಎಂದು ಮಾರ್ಕಂಡೇಯನು ಧರ್ಮರಾಯನಿಗೆ ಹೇಳಿದನು.

೧೮೮ನೇ ಅಧ್ಯಾಯ.—ಮಾರ್ಕಂಡೇಯ ಪರ್ವ—(ಪ್ರಳಯ ವಿವರಣ)

ವೈಶಂಪಾಯನಮುನೀಂದ್ರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಬಳಿಕ ಧರ್ಮರಾಯನು ಮಹಾನುಭಾವನಾದ ಮಾರ್ಕಂಡೇಯಮಹರ್ಷಿಯನ್ನು ಕುರಿತು "ಎಲೈ ಮಹಾತ್ಮನೆ, ನೀನು ಅನೇಕ ಯುಗಗಳನ್ನು ನೋಡಿದವನಾದ್ದರಿಂದ, ನಿನಗೆ ಸಮಾನನಾದ ಆಯುಷ್ಮಂತನು ಯಾವನೂ ಇಲ್ಲ. ಪರಮೇಷ್ಠಿಯಾಗಿಯೂ ಮಹಾತ್ಮನಾಗಿಯೂ ಇರುವ ಚತುರ್ಮುಖಬ್ರಹ್ಮನು ಹೊರತಾಗಿ ನಿನ್ನಂತೆ ದಿರ್ಘಾಯು ವಾದವನು ಯಾವನೂ ಇಲ್ಲ. ದೇವದಾನವರಿಂದ ರಹಿತವಾಗಿ ಸ್ಥೂಲಾಕಾಶವಿಲ್ಲದ ಪ್ರಳಯಕಾಲದಲ್ಲಿ, ನೀನು ಮಾತ್ರ ಬ್ರಹ್ಮನ ಉದರವನ್ನು ಸೇರಿ, ಪುನಃ ಸೃಷ್ಟಿಕಾಲವು ಪ್ರಾಪ್ತವಾಗಲು ಬ್ರಹ್ಮನು ಮಾಡತಕ್ಕ ಸೃಷ್ಟಿಯನ್ನು ನೋಡುವೆ. ಬ್ರಹ್ಮನು ಜರಾಯುಜ, ಅಂಡಜ, ಸ್ವೇದಜ, ಉದ್ಭಿಜಗಳೆಂಬ ನಾಲ್ಕು ವಿಧವಾದ ಪ್ರಾಣಿಗಳೂ ವಾಯುಭೂತಗಳಾಗಿರಲು, ಅವುಗಳನ್ನು ಆಯಾ ಉಪಾಯಗಳಿಂದ ದೇಹಾಕಾರವಾದಉದಕದಲ್ಲಿ ಪ್ರವೇಶಮಾಡಿಸು ವನು. ಅಂಥ ಲೋಕಗುರುವಾದ ಬ್ರಹ್ಮನನ್ನು ಉತ್ತಮವಾದ ಯೋಗದಿಂದ ನೀನು ಆರಾಧನೆಮಾಡಿರುವೆ. ಆ ಬ್ರಹ್ಮನಿಂದ ನಿರ್ಮಿತವಾದ ಬ್ರಹ್ಮಾಂಡವನ್ನು ಅನೇಕಾವರ್ತಿ ಪ್ರತ್ಯಕ್ಷವಾಗಿ ನೋಡಿ, ಮಹತ್ತಾದ ತಪಸ್ಸಿ ನಿಂದ ಆತನನ್ನು ಸ್ವಾಧೀನಮಾಡಿಕೊಂಡಿರುವೆ. ಈ ಶರೀರತ್ಯಾಗಾನಂತರದಲ್ಲಿ ನಾರಾಯಣನ ಸಮೀಪದಲ್ಲಿರತಕ್ಕ ವನು ಎಂದು ಎಲ್ಲರಿಂದಲೂ ನೀನು ಸ್ತುತಿಮಾಡಿಸಿಕೊಳ್ಳುವೆ. ನೀನು ವೈರಾಗ್ಯಾಭ್ಯಾಸದಿಂದ ಹೃದಯಕಮಲ ವನ್ನು ವಿಕಾಸಮಾಡಿ, ಅಲ್ಲಿ ಪ್ರಕಾಶಮಾನನಾದ ನಾರಾಯಣನನ್ನು ಯೋಗದೃಷ್ಟಿಯಿಂದ ಅನೇಕಾವರ್ತಿ ನೋಡಿರುವೆ. ಆ ನಾರಾಯಣನ ಅನುಗ್ರಹದಿಂದ ನಿನಗೆ ಮೃತ್ಯುವೂ ಮುಪ್ಪೂ ಸಹ ಉಂಟಾಗದೆ ಇರುವವು. ಯಾವ ಕಾಲದಲ್ಲಿ ವಾಯು ಚಂದ್ರಸೂರ್ಯಾಗ್ನಿಗಳೂ, ಪಂಚಮಹಾಭೂತಗಳೂ, ದೇವತೆಗಳೂ, ಅಸುರರುಗಳೂ, ಮಹಾಸರ್ಪಗಳೂ, ಸ್ಥಾವರಜಂಗಮಪ್ರಾಣಿಗಳೂ ಸಹ ನಷ್ಟವಾಗಿ ಪ್ರಪಂಚವು ಏಕಾರ್ಣವವಾಗುವದೋ ಆ ಪ್ರಳಯೋದಕದಲ್ಲಿ, ವಟಪತ್ರಶಾಯಿಯಾದ ನಾರಾಯಣನ ಸಮೀಪದಲ್ಲಿ ನೀನೊಬ್ಬನೇ ಇದ್ದುಕೊಂಡು ಪ್ರಳಯ ವಾದದ್ದನ್ನು ನೀನು ಪ್ರತ್ಯಕ್ಷವಾಗಿ ನೋಡಿದವನಾದ್ದರಿಂದಲೂ, ಈ ವಿಷಯದಲ್ಲಿ ನಿನಗೆ ತಿಳಿಯದೆ ಇರತಕ್ಕದ್ದು ಯಾವದೂ ಇಲ್ಲವಾದ್ದರಿಂದಲೂ, ಈ ವೃತ್ತಾಂತವನ್ನು ನಿನ್ನಿಂದ ತಿಳಿಯಬೇಕೆಂದು ನನಗೆ ಇಚ್ಛೆಯುಂಟಾ ಗಿರುವದು. ಅದನ್ನು ನೀನು ವಿಸ್ತಾರವಾಗಿ ತಿಳುಹಿಸು" ಎಂದು ಪ್ರಶ್ನೆಮಾಡಿದನು.

ಬಳಿಕ ಮಾರ್ಕಂಡೇಯನು ಧರ್ಮರಾಯನನ್ನು ಕುರಿತು "ಎಲೈ ಧರ್ಮರಾಯನೆ, ಅವ್ಯಕ್ತನೂ ಪ್ರಾಕೃತ ಗುಣಶೂನ್ಯನೂ ಜ್ಞಾನಾನಂದಾದಿಗುಣಪೂರ್ಣನೂ ಪುರಾಣಪುರುಷನೂ ನಾಶರಹಿತನೂ ಶಾಶ್ವತನೂ ಆದ ಪರ ಮಾತ್ಮನಿಗೆ ವಂದನೆಯನ್ನು ಮಾಡಿ ಜಗತ್ತಿನ ಪ್ರಳಯವನ್ನು ವಿವರಿಸುವೆನು ಕೇಳು. ಸಕಲ ಪ್ರಾಣಿಗಳಿಗೂ ಆಶ್ರಯನಾಗಿಯೂ ಪ್ರಪಂಚವನ್ನು ನಿರ್ಮಿಸಿ ನಾನಾಪ್ರಕಾರವಾದ ಕರ್ತೃತ್ವವುಳ್ಳವನಾಗಿಯೂ ಇರುವ ನಾರಾ ಯಣನ ಕಾರ್ಯವು ಅಚಿಂತ್ಯವಾಗಿಯೂ ಪರಿಶುದ್ಧವಾಗಿಯೂ ಆಶ್ಚರ್ಯಕರವಾಗಿಯೂ ಇರುವದು. ಆದಿಮಧ್ಯಾಂತ ರಹಿತನೂ ವಿಶ್ವರೂಪಿಯೂ ಆದ ನಾರಾಯಣನು ಈ ಪ್ರಪಂಚಕ್ಕೆ ತಾನೇ ಕರ್ತೃವಾಗಿದ್ದರೂ ಕರ್ತೃವಲ್ಲದಂತಿರು ವನು. ಪುರುಷಪ್ರಯತ್ನದಲ್ಲಿಯೂ ಆತನೇ ಕಾರಣನೆಂದು ಆತನನ್ನು ಪ್ರಾರ್ಥಿಸಬೇಕು. ಆ ನಾರಾಯಣನ ಮಹಿಮೆಯನ್ನು ಆತನೇ ಬಲ್ಲನೇ ಹೊರತು ವೇದಗಳು ಸಹ ತಿಳಿಯವು. ಆತನ ಚರಿತ್ರೆಯು ಆಶ್ಚರ್ಯಕರ ವಾಗಿರುವದು. ಎಲೈ ಧರ್ಮರಾಯನೆ, ಕೃತಯುಗವು ನಾಲ್ಕು ಸಹಸ್ರ ವರ್ಷವುಳ್ಳದ್ದು. ತ್ರೇತಾಯುಗವು ಮೂರುಸಾವಿರ ವರ್ಷವುಳ್ಳದ್ದು. ದ್ವಾಪರಯುಗವು ಎರಡುಸಾವಿರ ವರ್ಷವುಳ್ಳದ್ದು. ಕಲಿಯುಗವು ಒಂದು ಸಾವಿರವರ್ಷವುಳ್ಳದ್ದು. ಕಲ್ಪಾದಿಯಲ್ಲಿ ಕೃತಯುಗದ ಸಂಧಿಕಾಲವು ನಾನೂರು ವರ್ಷವುಳ್ಳದ್ದು. ಕೃತತ್ರೇತಾ ಯುಗಗಳ ಸಂಧಿಕಾಲವು ಏಳುನೂರು ವರ್ಷವುಳ್ಳದ್ದಾಗಿರುವದು. ತ್ರೇತಾದ್ವಾಪರಯುಗಗಳ ಸಂಧಿಕಾಲವು ಐನೂರು ವರ್ಷವುಳ್ಳದ್ದಾಗಿರುವದು. ದ್ವಾಪರಕಲಿಯುಗಗಳ ಸಂಧಿಕಾಲವು ಮುನ್ನೂರು ವರ್ಷವುಳ್ಳದ್ದಾಗಿರುವದು. ಈ ನಾಲ್ಕು ಯುಗಗಳೂ ಸೇರಿ ಹನ್ನೆರಡು ಸಾವಿರ ವರ್ಷವುಳ್ಳದ್ದಾಗಿರುವವು. ಈ ನಾಲ್ಕುಯುಗ

ಗಳೂ ಸಹಸ್ರಾವರ್ತಿ ತಿರುಗಿದರೆ ಚತುರ್ಮುಖಬ್ರಹ್ಮನಿಗೆ ಒಂದು ಹಗಲು ಆಗುವದು. ಬ್ರಹ್ಮದೇವನ ರಾತ್ರಿಯ ಕಾಲದಲ್ಲಿ ಪ್ರಳಯವಾಗುವದು ಎಂದು ದೊಡ್ಡವರು ಹೇಳುವರು. ಆ ಪ್ರಳಯಕಾಲವು ಸಮೀಪವಾಗಲು, ಕಲಿಯುಗದ ಅಂತ್ಯಪಾದದಲ್ಲಿ ಸಕಲರೂ ಪ್ರಾಯಶಃ ಅನೃತವಾದಿಗಳಾಗುವರು ; ಯಜ್ಞಕ್ಕೂ ದಾನಕ್ಕೂ ವ್ರತಗಳಿಗೂ ಪ್ರತಿನಿಧಿಯನ್ನು ಕಲ್ಪಿಸುವರು ; ಬ್ರಾಹ್ಮಣರು ಶೂದ್ರವೃತ್ತಿಯನ್ನು ಅನುಸರಿಸುವರು ; ಶೂದ್ರರು ಧನಾರ್ಜನೆಯಲ್ಲಿ ಆಸಕ್ತರಾಗುವರು ; ಎಲ್ಲರೂ ಕ್ಷತ್ರಧರ್ಮವನ್ನು ಅನುಸರಿಸುವರು. ಕಲಿಯುಗದಲ್ಲಿ ಬ್ರಾಹ್ಮಣರು ಯಜ್ಞಾದಿ ಸತ್ಕರ್ಮಗಳನ್ನು ಬಿಟ್ಟು, ಬ್ರಹ್ಮಚರ್ಯ ಸನ್ಯಾಸ ಮೊದಲಾದ ಆಶ್ರಮಧರ್ಮಗಳನ್ನು ತ್ಯಜಿಸಿ, ನೀಚೋಚ್ಚಜ್ಞಾನವಿಲ್ಲದೆ ದುಷ್ಟವಾದ ಆಹಾರಗಳನ್ನು ಮಾಡುವರು ; ಬ್ರಾಹ್ಮಣರು ಆಡುಕುರಿಗಳನ್ನು ಸಂರಕ್ಷಿಸುವರು ; ಶೂದ್ರರು ಜಪಪರಾಯಣರಾಗುವರು. ಆಗ ಆ ಕಾಲವು ಪೂರ್ವಸ್ಥಿತಿಯನ್ನು ಬಿಟ್ಟು ವಿಪರೀತವಾಗಲು, ಪಾಪಿಷ್ಠರಾಗಿಯೂ ಅನೃತವಾದಿಗಳಾಗಿಯೂ ಇರುವ ಮ್ಲೇಚ್ಛರೂ, ಆಂಧ್ರರೂ, ಶಕರೂ, ಪುಳಿಂದರೂ, ಯವನರೂ, ಕಾಂಭೋಜರೂ, ಬಾಹ್ಲಿಕರೂ, ಶೂರರೂ, ಆಭೀರರೂ, ರಾಜಧರ್ಮವನ್ನು ಬಿಟ್ಟು ಭೂಮಿಯನ್ನಾಕ್ರಮಿಸಿ ಪ್ರಭುತ್ವವನ್ನು ಪಡೆಯುವರು. ಆಗ ಯಾವ ಬ್ರಾಹ್ಮಣನೂ ಸ್ವಧರ್ಮವನ್ನು ಅನುವರ್ತಿಸುವದಿಲ್ಲ. ಕ್ಷತ್ರಿಯರೂ ವೈಶ್ಯರೂ ಸಹ ಸ್ವಧರ್ಮವನ್ನು ಬಿಡುವರು. ಆ ಸಮಯದಲ್ಲಿ ಎಲ್ಲರೂ ಅಲ್ಪಾಯುಸ್ಸುಳ್ಳವರಾಗಿಯೂ ಅಲ್ಪಬಲಪರಾಕ್ರಮಗಳುಳ್ಳವರಾಗಿಯೂ ಅಲ್ಪವಾದ ದೇಹವುಳ್ಳವರಾಗಿಯೂ ಸತ್ಯವಾದ ಮಾತು ಇಲ್ಲದವರಾಗಿಯೂ ಶೂನ್ಯಸ್ವಭಾವರಾಗಿಯೂ ಇರುವರು. ನಗರ ರಾಷ್ಟ್ರ ಗ್ರಾಮಗಳು ಸರ್ಪಗಳಿಂದಲೂ ಮೃಗಗಳಿಂದಲೂ ವ್ಯಾಪ್ತವಾಗುವವು. ಶೂದ್ರರು ಮೃಷಾ ಬ್ರಹ್ಮವಿಚಾರಪರರಾಗಿ ಬ್ರಾಹ್ಮಣರನ್ನು ಏಕವಚನದಿಂದ ಕರೆಯುವರು. ಪ್ರಳಯಕಾಲದಲ್ಲಿ ಪ್ರಜಾವೃದ್ಧಿಯಾಗಿ ಸುಗಂಧದ್ರವ್ಯದಲ್ಲಿ ಪರಿಮಳವು ಕಡಮೆಯಾಗುವದು. ಉದಕದಲ್ಲಿ ರುಚಿಯು ಕಡಮೆಯಾಗುವದು. ಸ್ತ್ರೀಯರಿಗೆ ಆಚಾರಶೂನ್ಯರಾಗಿಯೂ ಹ್ರಸ್ವವಾದ ಶರೀರವುಳ್ಳವರಾಗಿಯೂ ಇರುವ ಅನೇಕ ಮಕ್ಕಳುಗಳಾಗುವವು. ಸ್ತ್ರೀಯರು ಅಧಿಕವಾಗಿ ಕಾಮುರತರಾಗುವರು. ಆ ಯುಗಕ್ಷಯದಲ್ಲಿ ಜನರು ಕ್ಷುತ್ತಿನಿಂದ ಪೀಡಿತರಾಗುವರು. ಬ್ರಾಹ್ಮಣರು ವೇದವನ್ನು ವಿಕ್ರಯಿಸಿ ಜೀವಿಸುವರು. ಸ್ತ್ರೀಯರು ವ್ಯಭಿಚಾರದಿಂದ ಜೀವಿಸುವರು. ಗೋವುಗಳು ಅಲ್ಪವಾಗಿ ಕ್ಷೀರವನ್ನು ಕರೆಯುವವು. ವೃಕ್ಷಗಳಲ್ಲಿ ಪುಷ್ಪವೂ ಫಲವೂ ಸ್ವಲ್ಪವಾಗಿ ಬಿಡುವವು. ಬ್ರಹ್ಮಹತ್ಯವನ್ನು ಮಾಡತಕ್ಕವರೂ ಅನೃತವಾದಿಗಳೂ ಆದ ರಾಜರನ್ನು ಕಪಟವಾದ ಧರ್ಮವುಳ್ಳವರೂ ಲೋಭಿಗಳೂ ಅಜ್ಞಾನಿಗಳೂ ಆದ ಬ್ರಾಹ್ಮಣರು ಭಿಕ್ಷಾರ್ಥವಾಗಿ ಆಶ್ರಯಿಸಿ ದಿಕ್ಕುದಿಕ್ಕುಗಳಲ್ಲಿ ಬಾಧೆಯನ್ನು ಹೊಂದುವರು. ಗೃಹಸ್ಥಧರ್ಮವನ್ನು ಧರಿಸಿ ವಂಚಕರಾದ ವಾಣಿಜ್ಯವೃತ್ತಿಯಿಂದ ಜೀವಿಸತಕ್ಕ ಬ್ರಾಹ್ಮಣರು ರಾಜನಿಗೆ ಕೊಡತಕ್ಕ ಕಪ್ಪಕ್ಕೆ ಭಯಪಟ್ಟು ಕಪಟವಾದ ಋಷಿವೇಷಗಳನ್ನು ಧರಿಸಿ ಉಗುರುಗಳನ್ನೂ ಮಂಡೇಕೂದಲುಗಳನ್ನೂ ವಿಶೇಷವಾಗಿ ಬೆಳಸಿಕೊಂಡು ಸಂಚರಿಸುವರು. ಬ್ರಹ್ಮಚಾರಿಗಳು ದ್ರವ್ಯಲೋಭವುಳ್ಳವರಾಗಿ ತಮ್ಮ ಆಶ್ರಮಧರ್ಮವನ್ನು ನಟಸುತ್ತ, ಮದ್ಯಪಾನ ಗುರುಪತ್ನೀಗಮನ ಮೊದಲಾದ ಅಕೃತ್ಯಗಳನ್ನು ಮಾಡುತ್ತ, ಮಾಂಸವನ್ನು ಶರೀರದಲ್ಲಿ ವೃದ್ಧಿಮಾಡಿಕೊಂಡು ಈ ಲೋಕದ ಸುಖವನ್ನೇ ಬಯಸುವರು. ಎಲ್ಲಾ ಆಶ್ರಮದವರೂ ಪಾಷಂಡಮತಾವಲಂಬಿಗಳಾಗಿ ಪರಾನ್ನವನ್ನೇ ಶ್ಲಾಘಿಸುವರು. ಪ್ರಳಯವು ಪ್ರಾಪ್ತವಾಗಲು, ಕಾಲಕಾಲಕ್ಕೆ ವೃಷ್ಟಿಯಿಲ್ಲದೆ ಹೋಗುವದು. ಭೂಮಿಯಲ್ಲಿ ಬಿತ್ತಿದ ಬೀಜಗಳೆಲ್ಲವೂ ಪೈರಾಗದೆ ಕೆಲವುಮಾತ್ರ ಪೈರಾಗುವವು. ಸಕಲ ಜನರೂ ಅಶುಚಿಗಳಾಗಿ ಪಾಪಕೃತ್ಯದಲ್ಲಿ ಆಸಕ್ತರಾಗಿ ಪರರ ಹಿಂಸೆಯಿಂದ ಸಂತೋಷಪಡುವರು. ಆ ಸಮಯದಲ್ಲಿ ಯಾವನಾದರೂ ಒಬ್ಬನು ಧರ್ಮಿಷ್ಠನಾಗಿದ್ದರೆ ಆತನು ಅಲ್ಪಾಯುವಾಗಿ ಮೃತನಾಗುವನು. ಅಧರ್ಮವೇ ಅಧಿಕವಾಗುವದು. ವ್ಯಾಪಾರಮಾಡತಕ್ಕವರು ಸುಳ್ಳಾದ ಸೇರನ್ನೂ ಸುಳ್ಳಾದ ತಕ್ಕಡಿಯನ್ನೂ ಇಟ್ಟುಕೊಂಡು ಜನಗಳಿಗೆ ಮೋಸಮಾಡುವರು. ವಿಶೇಷವಾಗಿ ಪಾಪಿಷ್ಠರೇ ವೃದ್ಧಿಯಾಗುವರು. ಧರ್ಮವು ನಷ್ಟವಾಗಿ ಅಧರ್ಮವು ಪ್ರಬಲಿಸುವದು. ಧರ್ಮಿಷ್ಠರು ದರಿದ್ರರಾಗಿಯೂ ಅಲ್ಪಾಯುವುಳ್ಳವರಾಗಿಯೂ ಹೋಗುವರು. ಅಧರ್ಮಿಷ್ಠರು ದೀರ್ಘಾಯುಗಳಾಗಿಯೂ ಐಶ್ವರ್ಯವಂತರಾಗಿಯೂ ಇರುವರು. ನಗರವಾಸಿಗಳ ಸಂಗಡ ಅಧರ್ಮಿ

ಷ್ಠರು ಸೇರಿ ಅಧರ್ಮವಾದ ಉಪಾಯಗಳಿಂದ ವಿಹರಿಸುವರು. ಸ್ವಲ್ಪ ಧನವುಳ್ಳವನು, ನಾನೇ ಭಾಗ್ಯವಂತನೆಂದು ತಿಳಿದುಕೊಂಡು ಅಹಂಕಾರಪಡುವನು. ಪಾಪಿಷ್ಠರಾದ ಜನರು, ತಮ್ಮಲ್ಲಿ ವಿಶ್ವಾಸದಿಂದ ಮತ್ತೊಬ್ಬನು ಇಟ್ಟ ಧನವನ್ನು ಅಪಹರಿಸುವದಕ್ಕೆ ಯತ್ನಿಸಿ, ನನ್ನಲ್ಲಿ ನೀನು ಧನವನ್ನು ಇಡಲೇ ಇಲ್ಲವೆಂದು ಹೇಳುವರು. ಪುರಜನರ ವಿಹಾರಸ್ಥಳಗಳಲ್ಲಿ, ಮನುಷ್ಯರನ್ನು ತಿನ್ನತಕ್ಕ ವ್ಯಾಘ್ರ ಮೊದಲಾದ ದುಷ್ಟಮೃಗಗಳೂ ಹದ್ದು ಕಾಗೆ ಮೊದಲಾದ ಪಕ್ಷಿಗಳೂ ವಿಶೇಷವಾಗಿ ಸಂಚರಿಸುವವು. ಸ್ತ್ರೀಯರು ದೇವಾಲಯಗಳಲ್ಲಿ ಏಳು ಎಂಟು ವರ್ಷದ ವಯಸ್ಸಿನಲ್ಲೇ ಕಾಮಾಸಕ್ತರಾಗಿ ಪುರುಷರೊಡಗೂಡಿ ವಿಹರಿಸುವರು. ಪುರುಷರು ಹನ್ನೆರಡುವರುಷ ವಯಸ್ಸಿನಲ್ಲೇ ಪುತ್ರರನ್ನು ಪಡೆಯುವರು. ಹದಿನಾರು ವರುಷ ವಯಸ್ಸಿಗೆ ಮುಂಡೇಕೂದಲು ಬೆಳ್ಳಗಾಗುವದು. ಜಾಗ್ರತೆಯಾಗಿ ಪುರುಷರಿಗೆ ಆಯುಸ್ಸು ಕ್ಷೀಣವಾಗುವದು. ಪ್ರಾಯದವರಿಗೆ ಮುದುಕರ ಸ್ವಭಾವವೂ ಮುದುಕರಿಗೆ ಕಾಮವೂ ಅಧಿಕವಾಗುವದು. ಸ್ತ್ರೀಯರು ತಮ್ಮನ್ನು ವಿವಾಹಮಾಡಿಕೊಂಡ ಪತಿಗಳನ್ನು ವಂಚಿಸಿ ದುಶ್ಶೀಲರಾಗಿ ಪಶುಗಳ ಸಂಗಡಲೂ ಭೃತ್ಯರ ಸಂಗಡಲೂ ಕೂಡಿ ವ್ಯಭಿಚಾರಮಾಡುವರು. ಶೂರರಾದವರ ಪತ್ನಿಯರು ತಮ್ಮ ಪತಿಗಳು ಜೀವವಂತರಾಗಿದ್ದರೂ ಇತರ ಪುರುಷರನ್ನಾಶ್ರಯಿಸಿ ವ್ಯಭಿಚಾರಮಾಡುವರು. ಇಂಥಾ ವಿಪರೀತಕಾಲವು ಪ್ರಾಪ್ತವಾಗಲು ಬಹುವರ್ಷ ಅನಾವೃಷ್ಟಿಯು ಪ್ರಾಪ್ತವಾಗಿ, ಅದರಿಂದ ಆಹಾರವಿಲ್ಲದೆ ಪ್ರಾಣಿಗಳ ಬಲವು ಕ್ಷೀಣವಾಗಿ ಕ್ಷಯವು ಆರಂಭವಾಗುವದು. ಆಗ ಏಕಕಾಲದಲ್ಲಿ ದ್ವಾದಶಾದಿತ್ಯರೂ ತೀಕ್ಷ್ಣವಾಗಿ ಉದಯಿಸಿ, ತಮ್ಮ ಕಿರಣಗಳಿಂದ ನದೀಸಮುದ್ರಗಳಲ್ಲಿರತಕ್ಕ ಸಕಲವಾದ ಉದಕವನ್ನೂ ಶೋಷಿಸಿ, ಹಸಿದಾಗಿಯೂ ಒಣಗಿಯೂ ಇರುವ ವೃಕ್ಷಗಳನ್ನೂ ತೃಣಗಳನ್ನೂ ಭಸ್ಮಮಾಡಿಬಿಡುವರು. ಬಳಿಕ ಪ್ರಳಯಕಾಲದ ಅಗ್ನಿಯು ಮಹಾವಾಯುವಿನಿಂದ ಕೂಡಿ ಮೊದಲು ದ್ವಾದಶಾದಿತ್ಯರಿಂದ ಶೋಷಿಸಲ್ಪಟ್ಟ ಈ ಲೋಕವನ್ನು ವ್ಯಾಪಿಸಿ, ಭೂಮಿಯನ್ನು ಭೇದಿಸಿಕೊಂಡು ರಸಾತಲವನ್ನು ಪ್ರವೇಶಿಸಿ, ದೇವತೆಗಳಿಗೂ ದಾನವರಿಗೂ ಯಕ್ಷರಿಗೂ ಮಹತ್ತಾದ ಭಯವನ್ನು ಹುಟ್ಟಿಸುತ್ತ ನಾಗಲೋಕವನ್ನು ದಹಿಸಿ, ಕ್ಷಣಮಾತ್ರದಲ್ಲಿ ಭೂಮಿಯನ್ನು ಭಸ್ಮಮಾಡುವದು. ಆ ಅಗ್ನಿಯು ಲಕ್ಷಯೋಜನದ ವರೆಗೂ ವ್ಯಾಪಿಸಿ, ಮಹಾವಾಯುವಿನಿಂದ ದೊಡ್ಡದಾಗಿ, ದೇವತೆಗಳನ್ನೂ ಅಸುರರನ್ನೂ ಗಂಧರ್ವರನ್ನೂ ಯಕ್ಷರಾಕ್ಷಸರನ್ನೂ ಸರ್ಪಗಳನ್ನೂ ಸಹ ಸುಟ್ಟು ಸಕಲ ಲೋಕಗಳನ್ನೂ ದಹಿಸಿಬಿಡುವದು. ಬಳಿಕ ಭಯಂಕರಗಳಾಗಿಯೂ ಆನೆಯ ಗುಂಪುಗಳಂತೆ ಕಪ್ಪಾಗಿಯೂ ಅಧಿಕವಾದ ಮಿಂಚುಗಳುಳ್ಳದ್ದಾಗಿಯೂ ಇರುವ ಪ್ರಳಯಕಾಲದ ಮೇಘಗಳು ಆಕಾಶದಲ್ಲಿ ಆವರಿಸಿಕೊಂಡು, ಕೆಲವು ಕನ್ನೈದಿಲೆಯಂತೆ ನೀಲವರ್ಣವಾಗಿಯೂ, ಕೆಲವು ಕೇಸರವರ್ಣಗಳಾಗಿಯೂ, ಕೆಲವು ಕಪ್ಪಾಗಿಯೂ, ಕೆಲವು ಹಳದೀ ಬಣ್ಣವಾಗಿಯೂ, ಕೆಲವು ಕಾಗೇ ಮೊಟ್ಟೆಯ ಬಣ್ಣವಾಗಿಯೂ, ಕೆಲವು ತಾವರೆಯ ಬಣ್ಣವಾಗಿಯೂ, ಕೆಲವು ಇಂಗಳೀಕದಂತೆ ಕೆಂಪಾಗಿಯೂ, ಕೆಲವು ಪಟ್ಟಣದ ಆಕಾರವುಳ್ಳವುಗಳಾಗಿಯೂ, ಕೆಲವು ಆನೆಯ ಗುಂಪಿಗೆ ಸಮಾನವಾಗಿಯೂ, ಕೆಲವು ಮೊಸಳೆಯ ಆಕಾರವುಳ್ಳವುಗಳಾಗಿಯೂ, ಘೋರವಾದ ರೂಪವನ್ನು ತಾಳಿ ಅಧಿಕವಾಗಿ ಗರ್ಜಿಸುತ್ತ ವೃಷ್ಟಿಯನ್ನು ಕರೆಯುವವು. ಆ ವರ್ಷಧಾರೆಗಳಿಂದ ಪರ್ವತಗಳಿಂದಲೂ ಅರಣ್ಯದಿಂದಲೂ ಕೂಡಿದ ಭೂಮಂಡಲವು ವ್ಯಾಪ್ತವಾಗುವದು. ಆ ಸಮಯದಲ್ಲಿ ಬ್ರಹ್ಮನಿಂದ ಪ್ರೇರಿತವಾದ ಆ ಮೇಘಗಳು ಕ್ರೂರವಾಗಿ ಧ್ವನಿಯನ್ನು ಮಾಡುತ್ತ ಮೊದಲು ಲೋಕಗಳನ್ನು ನಾಶಮಾಡಿದ ಪ್ರಳಯಾಗ್ನಿಯನ್ನು ಆರಿಸಿಬಿಟ್ಟು ಹನ್ನೆರಡು ವರ್ಷದ ವರೆಗೂ ಅವಿಚ್ಛಿನ್ನವಾಗಿ ದೊಡ್ಡದಾದ ವರ್ಷಧಾರೆಗಳನ್ನು ಕರೆಯುವವು. ಆಗ ಸಮುದ್ರವು ದಡವನ್ನು ಮೀರಿ ಮೇಲಕ್ಕೆ ಉಕ್ಕಿಬರುವದು. ಅದರಿಂದ ಪರ್ವತಗಳು ಒಡದುಹೋಗಿ ಭೂಮಿಯು ನೀರಿನಲ್ಲಿ ಮುಳುಗಿಹೋಗುವದು. ಆ ಬಳಿಕ ಆಕಾಶಮಾರ್ಗದಲ್ಲಿ ವ್ಯಾಪಿಸಿಕೊಂಡಿದ್ದ ಆ ಮೇಘಗಳು ಪ್ರಳಯಕಾಲದ ವಾಯುವಿನಿಂದ ನಷ್ಟವಾಗಿ ಹೋಗುವವು. ಸ್ವಯಂಭುವಾದ ನಾರಾಯಣನು ಆ ಘೋರವಾದ ಪ್ರಳಯಕಾಲದ ವಾಯುವನ್ನು ಪಾನಮಾಡಿ, ಆ ಪ್ರಳಯೋದಕದಲ್ಲಿ ವಟಪತ್ರದಮೇಲೆ ಮಲಗಿರುವನು.

ಎಲೈ ಧರ್ಮರಾಯನೆ, ಆ ಸಮಯದಲ್ಲಿ ಸ್ಥಾವರಜಂಗಮಾತ್ಮಕವಾದ ಲೋಕವೂ ದೇವಾಸುರ ಯಕ್ಷ ರಾಕ್ಷಸ ಮನುಷ್ಯ ಮೃಗಪಕ್ಷಿ ಮೊದಲಾದ ಸಕಲ ಪ್ರಾಣಿಗಳೂ ಸಹ ನಷ್ಟವಾಗಿಹೋಗಲು, ನಾನೊಬ್ಬನೇ

ತೇಜೋರೂಪನಾಗಿ ತಿರುಗುತ್ತ, ಆ ಪ್ರಳಯೋದಕದಲ್ಲಿ ಸಕಲ ಪ್ರಾಣಿಗಳೂ ನಷ್ಟವಾದದ್ದನ್ನು ನೋಡಿ ಪರವಶನಾಗಿ, ಬಹುದೂರ ಮುಂದಕ್ಕೆ ಆ ನೀರಿನಲ್ಲೇ ತೇಲಿಕೊಂಡು ಹೋಗಿ, ಮೂರ್ಛೆಯನ್ನು ಪಡೆದು ಯಾವ ಆಶ್ರಯವೂ ಇಲ್ಲದೆ ಆಯಾಸಪಟ್ಟು, ಆ ಪ್ರಳಯೋದಕದಲ್ಲಿ ವಿಸ್ತಾರವಾಗಿಯೂ ದೊಡ್ಡದಾಗಿಯೂ ಇರುವ ಒಂದು ವಟವೃಕ್ಷವನ್ನು ನೋಡಿದೆನು. ಬಳಿಕ ಆ ವೃಕ್ಷದ ದೊಡ್ಡದಾದ ಒಂದು ಕೊಂಬೆಯ ಮೇಲೆ ಹಂಸತೂಲಿಕಾತಲ್ಪವನ್ನು ಹಾಕಿರುವ ಒಂದು ಮಂಚವನ್ನು ನೋಡಿದೆನು. ಅದರ ಮೇಲೆ ಕೆಂದಾವರೆಯಂತಿರುವ ಮುಖವೂ ಕಮಲದಳದಂತೆ ವಿಶಾಲವಾದ ನೇತ್ರವೂ ಉಳ್ಳ ಒಬ್ಬ ಬಾಲಕನನ್ನು ಕಂಡೆನು. 'ಸಮಸ್ತಲೋಕವೂ ನಷ್ಟವಾದರೂ ಈ ಶಿಶುಮಾತ್ರ ಇಲ್ಲಿ ಹ್ಯಾಗೆ ಮಲಗಿರುವದು' ಎಂದು ಬಹಳ ಆಶ್ಚರ್ಯಪಟ್ಟು, ಭೂತಭವಿಷ್ಯದ್ವರ್ತಮಾನವನ್ನು ತಿಳಿದ ನಾನು ಹಾಗೇ ಮನಸ್ಸಿನಲ್ಲಿ ಯೋಚಿಸುತ್ತಿರಲು, ಆ ಶಿಶುವೂ ಕಣ್ಣಿಗೆ ಕಾಣಿಸದೆ ಹೋಯಿತು. ಆಗ ನಾನು ಅಧಿಕವಾಗಿ ಚಿಂತಾಕ್ರಾಂತನಾಗಿರಲು, ಅಗಸೇಹೂವಿಗೆ ಸಮಾನವಾದ ಶರೀರಕಾಂತಿಯುಳ್ಳವನಾಗಿಯೂ, ಶ್ರೀವತ್ಸವೆಂಬ ಗುರುತಿನಿಂದ ಪ್ರಕಾಶಮಾನನಾಗಿಯೂ, ಸಾಕ್ಷಾಲ್ಲಕ್ಷ್ಮೀದೇವಿಗೆ ಆವಾಸಸ್ಥಾನನಾಗಿಯೂ, ಇರುವ ಆ ಬಾಲಕನು ಪುನಃ ನನಗೆ ಕಾಣಿಸಿಕೊಂಡು ನನ್ನನ್ನು ಕುರಿತು, 'ಎಲೈ ಮಾರ್ಕಂಡೇಯನೆ, ನೀನು ಆಯಾಸಪಟ್ಟಿರುವದನ್ನು ನಾನು ಬಲ್ಲೆನು. ನೀನು ಇಲ್ಲಿ ಬಾ. ನಿನಗೆ ನಾನು ಅನುಗ್ರಹವನ್ನು ಮಾಡಿರುವೆನು. ನನ್ನ ಶರೀರದಲ್ಲಿ ಪ್ರವೇಶಿಸಿ, ಅಲ್ಲಿದ್ದುಕೊಂಡು ನಿನ್ನ ಶ್ರಮವನ್ನು ಪರಿಹರಿಸಿಕೊ' ಎಂದು ಗಂಭೀರವಾದ ಮಾತನ್ನಾಡಿದನು.

ಎಲೈ ಧರ್ಮರಾಯನೆ, ಈ ಬಾಲಕನು ತನ್ನ ಉದರವನ್ನು ಪ್ರವೇಶಿಸಿ ನಾನು ಆಯಾಸವನ್ನು ಪರಿಹರಿಸಿಕೊಳ್ಳಬೇಕೆಂದು ನುಡಿದನಲ್ಲಾ ಎಂದು ಯೋಚಿಸಿ, ದೀರ್ಘಕಾಲ ಬದುಕಿದ್ದರಿಂದಲೂ ಮನುಷ್ಯಜನ್ಮವನ್ನು ಪಡೆದಿದ್ದರಿಂದಲೂ ಏನು ಪ್ರಯೋಜನವೆಂದು ನನಗೆ ವೈರಾಗ್ಯವುಂಟಾಗಲು, ಅಷ್ಟರಲ್ಲೇ ಆ ಬಾಲಕನು ತನ್ನ ಬಾಯನ್ನು ದೊಡ್ಡದಾಗಿ ತೆರೆದನು. ಆಗ ನಾನು ಪರಾಧೀನನಾಗಿ ಆತನ ಮುಖವನ್ನು ಪ್ರವೇಶಿಸಿ ಉದರಪ್ರದೇಶಕ್ಕೆ ಹೋದೆನು. ಆ ಉದರದಲ್ಲಿ ಅನೇಕ ಪಟ್ಟಣಗಳಿಂದ ರಮಣೀಯವಾದ ಭೂಮಂಡಲವನ್ನೂ; ಗಂಗೆ, ಶತದ್ರು, ಸೀತೆ,ಯಮುನೆ, ಕೌಶಿಕ, ಚರ್ಮಣ್ವತಿ, ಚಂದ್ರಭಾಗೆ, ಸರಸ್ವತಿ, ಸಿಂಧು, ವಿಪಾಶೆ, ಗೋದಾವರಿ, ವಸ್ವೋಕಸಾರೆ, ನಳಿನಿ, ನರ್ಮದೆ, ತಾಮ್ರಪರ್ಣಿ, ವೇಣೆ, ಸುವೇಣೆ, ಕೃಷ್ಣವೇಣಿ, ಇರಾವೆ, ವಿತಸ್ತೆ, ಕಾವೇರಿ, ಶೋಣ, ವಿಶಲ್ಯೆ, ಕಿಂಪುನೆ ಮೊದಲಾದ ಅನೇಕ ನದಿಗಳನ್ನೂ ನೋಡಿದೆನು. ಬಳಿಕ ಅನೇಕ ಜಲಚರಪ್ರಾಣಿಗಳಿಂದಲೂ ಘೋರವಾದ ತರಂಗಗಳಿಂದಲೂ ಪ್ರಕಾಶಿಸುವ ಮಹಾಸಮುದ್ರವೂ ಮಹತ್ತಾದ ಅರಣ್ಯಗಳಿಂದ ಶೋಭಿಸುವ ಭೂಮಿಯೂ ನನಗೆ ಕಾಣಿಸಿದವು. ಅಲ್ಲಲ್ಲೇ ಬ್ರಾಹ್ಮಣರು ಯಜ್ಞಗಳನ್ನು ಮಾಡುವದನ್ನೂ, ಕ್ಷತ್ರಿಯರು ಪ್ರಜಾರಂಜನೆಯನ್ನು ಮಾಡುತ್ತ ರಾಜ್ಯಪರಿಪಾಲನೆಯನ್ನು ಮಾಡುವದನ್ನೂ, ವೈಶ್ಯರು ನ್ಯಾಯವಾಗಿ ಕೃಷಿ ಗೋರಕ್ಷಣೆಗಳನ್ನು ಮಾಡುವದನ್ನೂ, ಶೂದ್ರನು ಬ್ರಾಹ್ಮಣರ ಶುಶ್ರೂಷೆಯನ್ನು ಮಾಡುವದನ್ನೂ ಸಹ ನೋಡಿದೆನು. ಆತನ ಉದರದಲ್ಲಿ ಹಿಮವಂತ, ಹೇಮಕೂಟ, ನಿಷಧ, ಶ್ವೇತ, ಗಂಧಮಾದನ, ಮಂದರ, ನೀಲ, ಮೇರು, ಮಹೇಂದ್ರ, ವಿಂಧ್ಯ,ಮಲಯ, ಪಾರಿಯಾತ್ರ, ಮೊದಲಾದ ಅನೇಕ ಪರ್ವತಗಳನ್ನೂ, ರತ್ನಗಳು ಹುಟ್ಟತಕ್ಕ ಸ್ಥಳಗಳನ್ನೂ ಸಹ ಕಂಡೆನು. ಸಿಂಹ ವ್ಯಾಘ್ರ ವರಾಹ ಮೊದಲಾದ ಎಲ್ಲಾ ಮೃಗಗಳನ್ನೂ ನಾನು ಆತನ ಉದರದಲ್ಲಿ ಸಂಚರಿಸುತ್ತ ನೋಡಿದೆನು. ಇಂದ್ರಾದಿ ದೇವತೆಗಳನ್ನೂ, ಸಾಧ್ಯರನ್ನೂ, ಏಕಾದಶರುದ್ರರನ್ನೂ, ದ್ವಾದಶಾದಿತ್ಯರನ್ನೂ, ಗುಹ್ಯಕರನ್ನೂ, ಪಿತೃದೇವತೆಗಳನ್ನೂ, ಸರ್ಪಗಳನ್ನೂ, ಗರುಡ ಮೊದಲಾದ ಪಕ್ಷಿಗಳನ್ನೂ, ಅಷ್ಟವಸುಗಳನ್ನೂ, ಅಶ್ವಿನೀದೇವತೆಗಳನ್ನೂ, ಗಂಧರ್ವರನ್ನೂ, ಅಪ್ಸರಸ್ತ್ರೀಯರನ್ನೂ, ಯಕ್ಷ ರಾಕ್ಷಸ ದಾನವರನ್ನೂ, ಸಿಂಹಿಕಾಪುತ್ರರಾದ ಕಾಲಕೇಯರನ್ನೂ, ಋಷಿಗಳನ್ನೂ, ದೇವತೆಗಳಿಗೆ ಶತ್ರುಗಳಾದವರನ್ನೂ, ಲೋಕದಲ್ಲಿ ನಾನು ಯಾವ ಯಾವ ಸ್ಥಾವರಜಂಗಮಪ್ರಾಣಿಗಳನ್ನು ನೋಡಿದ್ದೆನೋ ಅವುಗಳೆಲ್ಲವನ್ನೂ ಆ ಮಹಾನುಭಾವನ ಉದರದಲ್ಲಿ ನೋಡಿದೆನು.

ಎಲೈ ಧರ್ಮರಾಯನೆ, ಹೀಗೆ ನಾನು ಎಲ್ಲಾ ಜಗತ್ತನ್ನೂ ಆ ನಾರಾಯಣನ ಉದರದಲ್ಲಿ ನೋಡುತ್ತ ಫಲಗಳನ್ನು ಆಹಾರಮಾಡಿಕೊಂಡು ನೂರುವರುಷ ಸಂಚರಿಸುತ್ತಿದ್ದರೂ, ಆ ಮಹಾಪುರುಷನ ಶರೀರದ ಅಂತ್ಯವನ್ನೇ ಕಾಣದೆ, ಬಳಿಕ ಶ್ರೇಷ್ಠನಾದ ಆತನಿಗೆ ಮನೋವಾಕ್ಕಾಯಕರ್ಮಗಳಿಂದ ಶರಣಾಗತನಾದೆನು. ಆಗ ಆತನ ಅನುಗ್ರಹದಿಂದ ವಾಯುವು ನನ್ನನ್ನು ಆ ಮಹಾತ್ಮನ ತೆರೆದ ಬಾಯಿಂದ ಹೊರಕ್ಕೆ ತಂದುಹಾಕಿತು. ಬಳಿಕ ಸಮಸ್ತ ಜಗತ್ತನ್ನೂ ತನ್ನ ಉದರದಲ್ಲಿ ಧರಿಸಿ, ಬಾಲವೇಷವನ್ನು ತಾಳಿ, ಶ್ರೀವತ್ಸಲಕ್ಷಣವುಳ್ಳವನಾಗಿ, ಆ ಆಲದಗಿಡದ ಕೊಂಬೆಯಮೇಲೆ ಕೂತುಕೊಂಡಿದ್ದ ಆ ಮಹಾಪುರುಷನನ್ನು ನಾನು ನೋಡಿದೆನು. ಬಳಿಕ ತೇಜೋವಂತನೂ ಪೀತಾಂಬರಧರನೂ ಆದ ಆ ಬಾಲಕನು ಪ್ರೀತಿಯಿಂದ ನಸುನಗುತ್ತ ನನ್ನನ್ನು ನೋಡಿ, 'ಎಲೈ ಮುನಿಶ್ರೇಷ್ಠನೆ, ಶ್ರಾಂತನಾದ ನೀನು ನನ್ನುದರವನ್ನು ಪ್ರವೇಶಿಸಿ ಶ್ರಮವನ್ನು ಪರಿಹರಿಸಿಕೊಂಡೆಯಾ?' ಎಂದು ನುಡಿಯಲು, ಕ್ಷಣಮಾತ್ರದಲ್ಲೇ ನನಗೆ ನೂತನವಾಗಿ ಜ್ಞಾನವು ಉದಯಿಸಿತು. ಆ ಜ್ಞಾನದಿಂದ ಸಕಲವಾದ ಶ್ರಮವೂ ಪರಿಹಾರವಾದಹಾಗೆ ನನಗೆ ತೋರಿತು. ಬಳಿಕ ನಾನು ಮೃದುವಾಗಿಯೂ ಸ್ವಲ್ಪ ಕೆಂಪಾಗಿಯೂ ಇರುವ ಬೆರಳುಗಳಿಂದ ಮನೋಹರವಾಗಿಯೂ ನೂತನವಾಗಿಯೂ ಇರುವ ಆತನ ಎರಡು ಪಾದಗಳಿಗೂ ಶಿರಸ್ಸಿನಿಂದ ವಂದನೆಯನ್ನು ಮಾಡಿ, ಆ ಮಹಾನುಭಾವನಾದ ಅಪರಿಮಿತವಾದ ಪ್ರಭಾವವುಳ್ಳ ಕಮಲಲೋಚನನಾದ ಆ ಬಾಲಕನನ್ನು ಕಣ್ಣುತುಂಬ ನೋಡಿ, ಕೈಮುಗಿದುಕೊಂಡು ನಮಸ್ಕರಿಸಿ ಆತನನ್ನು ಕುರಿತು, 'ಎಲೈ ಮಹಾನುಭಾವನೆ, ನಿನ್ನನ್ನೂ ಉತ್ತಮವಾದ ನಿನ್ನ ಈ ಮಾಯೆಯನ್ನೂ ಸಹ ತಿಳಿಯಬೇಕೆಂದು ನನಗೆ ಅಪೇಕ್ಷೆಯಿರುವದು. ನಾನು ನಿನ್ನ ಮುಖದಲ್ಲಿ ಹೊಕ್ಕು ಉದರವನ್ನು ಪ್ರವೇಶಮಾಡಿ, ದೇವತಿರ್ಯಙ್ಮನುಷ್ಯಾದಿಗಳಿಂದ ಕೂಡಿದ ಸ್ಥಾವರಜಂಗಮಾತ್ಮಕವಾದ ಜಗತ್ತನ್ನು ಅಲ್ಲಿ ನೋಡಿದೆನು. ನಿನ್ನ ಶರೀರದಲ್ಲಿ ನಾನು ಓಡಾಡುತ್ತಿದ್ದರೂ ನಿನ್ನ ಅನುಗ್ರಹದಿಂದ ನನಗೆ ಸ್ಮೃತಿಯು ನಷ್ಟವಾಗಲಿಲ್ಲ. ದೈವೇಚ್ಛೆಯಿಂದ ನಾನು ನಿನ್ನ ಮುಖದಿಂದ ತಿರುಗಿ ಹೊರಕ್ಕೆ ಬಂದೆನು. ನೀನು ಸಕಲ ಜಗತ್ತನ್ನೂ ನುಂಗಿ ಬಾಲರೂಪದಿಂದ ಈ ವೃಕ್ಷದ ಕೊಂಬೆಯಲ್ಲಿ ಯಾತಕ್ಕೆ ವಾಸಮಾಡುತ್ತಿರುವೆ? ಈ ಜಗತ್ತು ಯಾತಕ್ಕೆ ನಿನ್ನ ಶರೀರದಲ್ಲಿರುವದು? ನೀನು ಎಷ್ಟು ಕಾಲದವರೆಗೂ ಇಲ್ಲಿರುವೆ? ನನ್ನಮೇಲೆ ನೀನು ಅನುಗ್ರಹವಿಟ್ಟು ಈ ವೃತ್ತಾಂತವನ್ನೆಲ್ಲಾ ತಿಳುಹಿಸು. ಎಲೈ ಪರಮಸಮರ್ಥನೆ, ಅಚಿಂತ್ಯವಾಗಿರತಕ್ಕ ಈ ಮಹತ್ತಾದ ಪ್ರಶ್ನೆಯನ್ನು ನಾನು ಮಾಡಿರುವೆನು. ನೀನು ದಯೆಯಿಂದ ಎಲ್ಲವನ್ನೂ ವಿಸ್ತಾರವಾಗಿ ನನಗೆ ತಿಳುಹಿಸು' ಎಂದು ಬೇಡಿಕೊಂಡನು. ಎಲೈ ಧರ್ಮರಾಯನೆ, ಬಳಿಕ ದೇವದೇವನೂ ಸಂಪದ್ಯುಕ್ತನೂ ಆದ ಆ ಬಾಲಕನು ಮಾತನಾಡುವದರಲ್ಲಿ ಪರಮಸಮರ್ಥನಾದ್ದರಿಂದ ಮೊದಲು ನನ್ನನ್ನು ಸಮಾಧಾನಪಡಿಸಿ, ಮಾತನಾಡಲುಪಕ್ರಮಿಸಿದನು" ಎಂದು ಮಾರ್ಕಂಡೇಯನು ಧರ್ಮರಾಯನಿಗೆ ಹೇಳಿದನು.

## ೧೮೯ನೇ ಅಧ್ಯಾಯ.—ಮಾರ್ಕಂಡೇಯ ಪರ್ವ—(ಜಗನ್ನಿರ್ಮಾಣ.)

ವೈಶಂಪಾಯನಮುನೀಂದ್ರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯನೆ, ಮಾರ್ಕಂಡೇಯ ಋಷಿಯು ಧರ್ಮರಾಯನೊಡನೆ "ಎಲೈ ಧರ್ಮರಾಯನೆ ಕೇಳು. ಆ ಬಾಲರೂಪನಾದ ನಾರಾಯಣನು ನನ್ನನ್ನು ಕುರಿತು 'ಎಲೈ ಬ್ರಾಹ್ಮಣನೆ, ದೇವತೆಗಳೂ ಸಹ ನನ್ನ ವೃತ್ತಾಂತವನ್ನು ಯಥಾರ್ಥವಾಗಿ ತಿಳಿಯರು. ಆದರೂ ನಿನ್ನಲ್ಲಿರುವ ಪ್ರೀತಿಯಿಂದ ನಿನಗೆ ಜಗನ್ನಿರ್ಮಾಣವನ್ನು ತಿಳುಹಿಸುವೆನು. ಪಿತೃಗಳಲ್ಲಿ ಭಕ್ತಿಯುಳ್ಳವನಾಗಿ ಮಹತ್ತಾದ ಬ್ರಹ್ಮಚರ್ಯವ್ರತವನ್ನು ಧರಿಸಿ ನನಗೆ ಶರಣಾಗತನಾದ್ದರಿಂದ, ನೀನು ನನ್ನನ್ನು ನೋಡಿದೆ. ಉದಕಕ್ಕೆ ನಾನು ಪೂರ್ವದಲ್ಲಿ ನಾರ ಎಂದು ಹೆಸರಿಟ್ಟು ಅದರಲ್ಲಿ ಆವಾಸಮಾಡುವೆನಾದ್ದರಿಂದ, ನನ್ನನ್ನು ನಾರಾಯಣನೆಂದು ಹೇಳುವರು. ಇಂಥಾ ನಾನು ಸಕಲಕ್ಕೂ ಕಾರಣನಾಗಿಯೂ ಶಾಶ್ವತನಾಗಿಯೂ ನಾಶರಹಿತನಾಗಿಯೂ ಇದ್ದುಕೊಂಡು, ಸಕಲ ಪ್ರಾಣಿಗಳ ಸೃಷ್ಟಿಸ್ಥಿತಿಲಯಗಳನ್ನೂ ಮಾಡುವದರಿಂದ ವಿಷ್ಣುವೆಂತಲೂ,

ಬ್ರಹ್ಮನೆಂತಲೂ, ಇಂದ್ರನೆಂತಲೂ, ಕುಬೇರನೆಂತಲೂ, ಯಮನೆಂತಲೂ, ಶಿವನೆಂತಲೂ, ಸೋಮನೆಂತಲೂ, ಪ್ರಾಜ್ಞರಾಗಿಯೂ ಮೋಕ್ಷಾಪೇಕ್ಷೆಯುಳ್ಳವರಾಗಿಯೂ ಇರುವ ಮಹಾತ್ಮರು ನನ್ನನ್ನೇ ಯಾವಾಗಲೂ ಧ್ಯಾನಿಸುವರು. ನಾನೇ ಪ್ರಳಯಕಾಲದ ಅಗ್ನಿಯಾಗಿಯೂ ಸೂರ್ಯನಾಗಿಯೂ ವಾಯುವಾಗಿಯೂ ಇರುವೆನು. ಆಕಾಶಮಾರ್ಗದಲ್ಲಿ ಕಾಣಿಸುವ ನಕ್ಷತ್ರ ಮೊದಲಾದ ತೇಜಃಪದಾರ್ಥಗಳು ನನ್ನ ರೋಮಗಳೆಂದು ತಿಳಿ. ರತ್ನಾಕರಗಳೂ ಸಮುದ್ರಗಳೂ ನನಗೆ ಹೊದ್ದಿಕೆಯಾಗಿಯೂ ಹಾಸಿಗೆಯಾಗಿಯೂ ಇರುವವೆಂದು ತಿಳಿ. ದೇವತೆಗಳ ಕಾರ್ಯವನ್ನು ಸಾಧಿಸುವದಕ್ಕೋಸ್ಕರಲೇ ನಾನು ಕಾಮ ಕ್ರೋಧ ಲೋಭ ಮೋಹ ಭಯ ಮೊದಲಾದವುಗಳನ್ನು ಬೇರೆಬೇರೆಯಾಗಿ ನನ್ನ ರೋಮಗಳಿಂದ ನಿರ್ಮಿಸಿರುವೆನು. ಸತ್ಯ, ದಾನ, ತಪಸ್ಸು, ಅಹಿಂಸೆ, ಇವೆಲ್ಲಾ ನನ್ನ ಶರೀರವನ್ನು ಆಶ್ರಯಿಸಿರುವವು. ಇವುಗಳನ್ನು ಆಶ್ರಯಿಸಿಕೊಂಡು ಸತ್ಕರ್ಮಾಚರಣೆಯನ್ನು ಮಾಡಿದವರು ನನ್ನನ್ನು ಸೇರುವರು. ನನ್ನ ಅನುಗ್ರಹಕ್ಕೆ ಪಾತ್ರರಾಗದೆ ಇರತಕ್ಕವರು ಕಾಮಾಸಕ್ತರಾಗಿ ವ್ಯಥೆಪಡುವರು. ದುಷ್ಕರ್ಮವನ್ನು ಮಾಡಿ ಲೋಭಿಗಳಾದ ಪಾಪಾತ್ಮರಾದ ಮನುಷ್ಯರು ನನ್ನನ್ನು ಹೊಂದಲಾರರು. ಸಿದ್ಧರಾದ ಯೋಗಿಗಳು ಹೊಂದತಕ್ಕದ್ದಾಗಿ ಮಹಾಫಲವನ್ನು ಕೊಡತಕ್ಕ ಮೋಕ್ಷವೆಂಬ ಸ್ಥಾನವು ಅಜ್ಞಾನಿಗಳಾದ ಮನುಷ್ಯರಿಗೆ ಹೊಂದಲಶಕ್ಯವಾದದ್ದು. ಹಿಂಸಾಪರರಾಗಿಯೂ ದೇವತೆಗಳಿಂದ ಅವಧ್ಯರಾಗಿಯೂ ಇರುವ ರಾಕ್ಷಸರು ಯಾವಾಗ ಹುಟ್ಟುವರೋ, ಯಾವಾಗ ಧರ್ಮಕ್ಕೆ ಲೋಪಬರುವದೋ, ಆಗ ನಾನು ಮಹಾನುಭಾವರ ಮನೆಯಲ್ಲಿ ಮನುಷ್ಯರೂಪದಿಂದ ರಾಮಕೃಷ್ಣಾದ್ಯವತಾರಗಳನ್ನು ಮಾಡಿ ದುಷ್ಟರಾದ ರಾಕ್ಷಸರನ್ನು ನಿಗ್ರಹಿಸುವೆನು. ನಾನು ನನ್ನ ಮಾಯೆಯಿಂದ ದೇವಾಸುರ ಗಂಧರ್ವ ರಾಕ್ಷಸ ಮೊದಲಾದ ಪ್ರಾಣಿಗಳನ್ನು ನಿರ್ಮಿಸಿ, ಅವರನ್ನು ನಾನೇ ಲಯಮಾಡಿಬಿಡುವೆನು. ಸೃಷ್ಟಿಕಾಲವು ಪ್ರಾಪ್ತವಾಗಲು, ಸಕಲ ಜೀವರಿಗೂ ಶರೀರಗಳನ್ನು ನಿರ್ಮಾಣಮಾಡಿ, ಲೋಕಮರ್ಯಾದೆಯನ್ನು ನಿಲ್ಲಿಸುವದಕ್ಕೋಸ್ಕರ ಅವರಲ್ಲಿ ನಾನು ಹೊಗುವೆನು. ನಾನು ಕೃತಯುಗದಲ್ಲಿ ಶ್ವೇತವರ್ಣನಾಗಿಯೂ, ತ್ರೇತಾಯುಗದಲ್ಲಿ ಹೊಂಬಣ್ಣವುಳ್ಳವನಾಗಿಯೂ, ದ್ವಾಪರಯುಗದಲ್ಲಿ ರಕ್ತವರ್ಣನಾಗಿಯೂ, ಕಲಿಯುಗದಲ್ಲಿ ಕೃಷ್ಣವರ್ಣನಾಗಿಯೂ ಇರುವೆನು. ಕಲಿಯುಗದಲ್ಲಿ ಅಧರ್ಮವು ಮೂರುಪಾಲಾಗಿರುವದು. ಪ್ರಳಯಕಾಲವು ಪ್ರಾಪ್ತವಾಗಲು, ಕಾಲರೂಪನಾದ ನಾನು ಅತಿದಾರುಣಸ್ವಭಾವನಾಗಿ ಸ್ಥಾವರಜಂಗಮಾತ್ಮಕವಾದ ಪ್ರಪಂಚವನ್ನು ನಾಶಮಾಡಿಬಿಡುವೆನು. ಎಲೈ ಮಾರ್ಕಂಡೇಯನೆ, ಪ್ರಾಕೃತರೂಪವಿಲ್ಲದೆ ಇರತಕ್ಕ ನಾನು ಸತ್ವರಜಸ್ತಮೋಗುಣಗಳನ್ನು ತಾಳಿ, ಸರ್ವಾಂತರ್ಯಾಮಿಯಾಗಿ ಸಕಲಲೋಕಗಳಿಗೂ ಸುಖವನ್ನುಂಟುಮಾಡುತ್ತ ಅಭಿಭೂ ಎಂತಲೂ, ಸರ್ವಗನೆಂತಲೂ, ಅನಂತನೆಂತಲೂ, ಹೃಷೀಕೇಶನೆಂತಲೂ, ಉರುಕ್ರಮನೆಂತಲೂ ಎನ್ನಿಸಿಕೊಂಡು ಕಾಲಚಕ್ರವನ್ನು ನಡಸುವೆನು. ಸಕಲ ಲೋಕಗಳಿಗೂ ಲಯವನ್ನುಂಟುಮಾಡತಕ್ಕವನಾಗಿಯೂ ಸೃಷ್ಟಿಕರ್ತನಾಗಿಯೂ ಇರತಕ್ಕ ನನ್ನನ್ನು ಆತ್ಮನೆಂದು ಪ್ರಾಣಿಗಳಲ್ಲಿ ಒಬ್ಬರೂ ತಿಳಿಯದಿರುವರು. ಸಮಸ್ತಲೋಕಗಳಲ್ಲೂ ಭಕ್ತರಾದವರು ನನ್ನನ್ನು ಪೂಜಿಸುವರು. ಎಲೈ ಬ್ರಾಹ್ಮಣನೆ, ಈ ಪ್ರಳಯಕಾಲದಲ್ಲಿ ನೀನು ಎಷ್ಟು ಕ್ಲೇಶವನ್ನು ಅನುಭವಿಸುವನಾದೆಯೋ ಅಷ್ಟು ನಿನಗೆ ಸುಖವೂ ಶ್ರೇಯಸ್ಸೂ ಉಂಟಾಗುವವು. ಯಾವ ಯಾವ ಸ್ಥಾವರಜಂಗಮಗಳನ್ನು ನೀನು ನೋಡಿರುವೆಯೋ ಅವುಗಳಲ್ಲೆಲ್ಲಾ ನಾನಿರುವೆನು. ಚತುರ್ಮುಖಬ್ರಹ್ಮನು ನನ್ನ ಅರ್ಧಶರೀರಭೂತನಾಗಿರುವನು. ಶಂಖಚಕ್ರಗದಾಪಾಣಿಯಾದ ನಾರಾಯಣನಾದ ನಾನು ನಾಲ್ಕು ಯುಗಗಳೂ ಸಹಸ್ರಾವರ್ತಿ ಮರಳುವವರೆಗೂ ಸಕಲ ಪ್ರಾಣಿಗಳಿಗೂ ಮೋಹವುಂಟಾಗುವಹಾಗೆ ಜಲದಲ್ಲಿ ಶಯನಮಾಡುವೆನು. ಯಾವಕಾಲದವರೆಗೂ ಚತುರ್ಮುಖಬ್ರಹ್ಮನು ಬ್ರಹ್ಮಸ್ವರೂಪನಾದ ನನ್ನಿಂದ ವರವನ್ನು ಪಡೆದು ಜ್ಞಾನವನ್ನು ಸಂಪಾದಿಸದೆ ಇರುವನೋ ಆವರೆಗೂ, ನಾನು ಈ ಉದಕದಲ್ಲಿ ಇರುವೆನು. ಎಲೈ ಬ್ರಾಹ್ಮಣನೆ, ಈ ಏಕಾರ್ಣವದಲ್ಲಿ ನಷ್ಟವಾದ ಸ್ಥಾವರಜಂಗಮಾತ್ಮಕವಾದ ಪ್ರಾಣಿಗಳನ್ನು ನೋಡಿ, ನನ್ನನ್ನು ಕಾಣದೆ ಪರವಶನಾಗಿ, ಬಳಿಕ ನನ್ನ ಅನುಗ್ರಹದಿಂದ ನನ್ನ ದೇಹವನ್ನು ಪ್ರವೇಶಿಸಿ, ಅಲ್ಲಿರತಕ್ಕ ಸಕಲ ಪ್ರಪಂಚಗಳನ್ನೂ ನೋಡಿ, ಅಲ್ಲೂ ನನ್ನನ್ನು ಕಾಣದೆ ಆಶ್ಚರ್ಯಪಡುತ್ತಿದ್ದ ನಿನ್ನನ್ನು ಪುನಃ ನಾನು ನನ್ನ ಅನುಗ್ರಹದಿಂದ ಹೊರಕ್ಕೆ ಹೊರಡಿಸಿಕೊಂಡು ಬಂದು, ದೇವಾಸುರರಿಗೂ ಲಭ್ಯವಾಗದೆ ಇರತಕ್ಕ ನನ್ನ ರೂಪವನ್ನು ನಿನಗೆ ತೋರಿಸಿದೆ

ಚತುರ್ಮುಖಬ್ರಹ್ಮನು ತಪಸ್ಸನ್ನುಮಾಡಿ ಸೃಷ್ಟಿಮಾಡತಕ್ಕ ಜ್ಞಾನವನ್ನು ಯಾವಾಗ ಪಡೆಯುವನೋ ಆ ವರೆಗೂ, ನೀನು ಸುಖವಾಗಿ ಇಲ್ಲೇ ಸಂಚರಿಸುತ್ತ ಇದ್ದುಕೊಂಡಿರು. ಚತುರ್ಮುಖಬ್ರಹ್ಮನು ಸೃಷ್ಟಿಜ್ಞಾನವನ್ನು ಪಡೆದು ಕೊಂಡಬಳಿಕ ಅವನೊಡಗೂಡಿ, ನಾನು ಆಕಾಶ, ಭೂಮಿ, ಅಪ್ಪು, ವಾಯು, ಅಗ್ನಿ, ಎಂಬ ಪಂಚಭೂತಗಳನ್ನು ಸೃಷ್ಟಿಮಾಡಿ, ಸ್ಥಾವರಜಂಗಮ ಜೀವಗಳಿಗೆಲ್ಲಾ ಶರೀರಗಳನ್ನು ನಿರ್ಮಿಸತಕ್ಕದ್ದನ್ನು ನೋಡು' ಎಂದು ನುಡಿದು, ಅಂತರ್ಧಾನವನ್ನು ಹೊಂದಿದನು.

ಎಲೈ ಧರ್ಮರಾಯನೆ, ಬಳಿಕ ನಾನು ಆ ಮಹಾನುಭಾವನಿಂದ ನಾನಾವಿಧವಾದ ಪ್ರಜೆಗಳನ್ನು ನೋಡಿ ಆಶ್ಚರ್ಯಪಟ್ಟೆನು. ಈ ಪ್ರಕಾರವಾಗಿ ನಾರಾಯಣನ ಅನುಗ್ರಹದಿಂದ ಪ್ರಳಯವನ್ನು ನೋಡಿದೆನು. ಎಲೈ ರಾಯನೆ, ದೇವದೇವೋತ್ತಮನಾಗಿಯೂ ಪುರುಷಶ್ರೇಷ್ಠನಾಗಿಯೂ ಇರುವ ಯಾವ ನಾರಾಯಣನನ್ನು ನೋಡಿ ದೆನೋ ಆತನೇ ನಿನಗೆ ಸಂಬಂಧಿಯಾಗಿರುವನು. ಆತನ ವರಪ್ರದಾನದಿಂದಲೇ ನನಗೆ ಜ್ಞಾನವು ನಷ್ಟವಾಗದೆ ದೀರ್ಘಾಯುಸ್ಸುಂಟಾಗಿ, ಸ್ವಚ್ಛಂದವಾಗಿ ಮರಣವನ್ನು ಹೊಂದುವ ಸಾಮರ್ಥ್ಯವುಂಟಾಗಿರುವದು. ಆ ನಾರಾ ಯಣನಾದ ನಾನೇ ಕೃಷ್ಣನಾಗಿ ಅವತರಿಸಿ ಪುರಾಣಪುರುಷನೆಂತಲೂ, ಹರಿಯೆಂತಲೂ, ಅಂಚಿಂತ್ಯಾತ್ಮನೆಂತಲೂ, ಸೃಷ್ಟಿಸ್ಥಿತಿಲಯಗಳಿಗೆ ಕಾರಣನೆಂಲೂ, ಶಾಶ್ವತನೆಂತಲೂ, ಶ್ರೀವತ್ಸವಕ್ಷನೆಂತಲೂ, ಗೋವಿಂದನೆಂತಲೂ, ಪ್ರಜಾ ಪತಿಯೆಂತಲೂ ಹೊಗಳಿಸಿಕೊಳ್ಳುವನು. ಇಂಥ ಆದಿದೇವನಾಗಿಯೂ ಪೀತಾಂಬರಧಾರಿಯಾಗಿಯೂ ಇರುವ ವೃಷ್ಣಿ ಶ್ರೇಷ್ಠನಾದ ಕೃಷ್ಣನನ್ನು ನೋಡಿ ಪ್ರಳಯವಾದ ಕ್ರಮವು ನನ್ನ ಸ್ಮರಣೆಗೆ ಬಂತು. ಎಲೈ ಧರ್ಮರಾಯನೆ, ಈ ಶ್ರೀಕೃಷ್ಣನೇ ಸಕಲ ಪ್ರಾಣಿಗಳಿಗೂ ತಾಯಿಯಾಗಿಯೂ ತಂದೆಯಾಗಿಯೂ ಇರುವನು. ಶರಣಾಗತವತ್ಸಲ ನಾದ ಆತನಿಗೆ ನೀನು ಶರಣಾಗತನಾಗು" ಎಂದನು. ಆ ಮಾರ್ಕಂಡೇಯ ಮಹರ್ಷಿಯ ಮಾತನ್ನು ಕೇಳಿ, ಧರ್ಮಭೀಮಾರ್ಜುನನಕುಲಸಹದೇವರೂ ದ್ರೌಪದಿಯೂ ಸಹ ಶ್ರೀಕೃಷ್ಣನಿಗೆ ನಮಸ್ಕಾರವನ್ನು ಮಾಡಿದರು. ಬಳಿಕ ಲೋಕಮಾನ್ಯನಾದ ಶ್ರೀಕೃಷ್ಣನು ಆ ಪಾಂಡವರನ್ನು ಉತ್ತಮವಾದ ವಚನಗಳಿಂದ ಸಮಾಧಾನವನ್ನು ಮಾಡಿದನು.

---

## ೧೮೦ನೇ ಅಧ್ಯಾಯ.—ಮಾರ್ಕಂಡೇಯಪರ್ವ.—(ಕಲಿಯುಗದ ಮಹಿಮೆ).

ವೈಶಂಪಾಯನಮುನೀಂದ್ರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಬಳಿಕ ಧರ್ಮರಾಯನು ಮಹಾನುಭಾವನಾದ ಮಾರ್ಕಂಡೇಯಮಹರ್ಷಿಯನ್ನು ಕುರಿತು "ಎಲೈ ಮಹಾತ್ಮನೆ, ನಿನ್ನ ಮುಖದಿಂದ ಆಶ್ಚರ್ಯಕರವಾದ ಸೃಷ್ಟಿಲಯಗಳ ಕ್ರಮವನ್ನು ಕೇಳಿದ್ದಾಯಿತು. ಈ ಪಾಪಿಷ್ಠವಾದ ಕಲಿಯು ಗದಲ್ಲಿ ಧರ್ಮಕ್ಕೆ ಸಾಂಕರ್ಯವುಂಟಾಗುವದರಿಂದ, ಕೊನೆಗೆ ಉಳಿಯತಕ್ಕದ್ದು ಯಾವದು? ಮನುಷ್ಯರು ಎಷ್ಟುಮಟ್ಟಿನ ಶಕ್ತಿಯುಳ್ಳವರಾಗಿರುವರು? ಮನುಷ್ಯರು ಯಾವ ಆಹಾರಮಾಡಿಕೊಂಡಿರುವರು? ಎಷ್ಟುವರ್ಷ ಆಯುಸ್ಸುಳ್ಳವರಾಗಿರುವರು? ಎಷ್ಟು ಕಾಲದಮೇಲೆ ಕಲಿಯುಗವು ಉತ್ಪನ್ನವಾಗುವದು? ಇವೆಲ್ಲವನ್ನೂ ಕೇಳಲು ನನಗೆ ಕುತೂಹಲವುಂಟಾಗಿರುವದು ವಿವರಿಸು" ಎನಲು, ಮಾರ್ಕಂಡೇಯನು ಸಮೀಪದಲ್ಲಿರುವ ಶ್ರೀ ಕೃಷ್ಣನಿಗೆ ಸಂತೋಷವಾಗುವಹಾಗೆ ನುಡಿಯುತ್ತ, ಧರ್ಮರಾಯನನ್ನು ಕುರಿತು "ಎಲೈ ಕುರುಕುಲಶ್ರೇಷ್ಠನೆ, ದೇವದೇವನಾದ ನಾರಾಯಣನ ಅನುಗ್ರಹದಿಂದ ನಾನು ನೋಡಿದ್ದನ್ನೂ ಕೇಳಿದ್ದನ್ನೂ ಅನುಭವಿಸಿದ್ದನ್ನೂ ಮುಂದಾ ಗತಕ್ಕದ್ದನ್ನೂ ಕಲಿಯುಗದ ಮಹಿಮೆಯನ್ನೂ ಸಹ ವಿವರಿಸುವೆನು ಕೇಳು. ಕೃತಯುಗದಲ್ಲಿ ಸ್ವಭಾವ ಸಿದ್ಧವಾಗಿಯೂ ಉಪಾಧಿಯಿಲ್ಲದ್ದಾಗಿಯೂ ಇರತಕ್ಕ ಧರ್ಮವು ಮನುಷ್ಯರಲ್ಲಿ ನಾಲ್ಕು ಪಾದಗಳಿಂದಲೂ ಪೂರ್ಣವಾಗಿರುವದು. ತ್ರೇತಾಯುಗದಲ್ಲಿ ಅದೇ ಧರ್ಮವು ಮೂರು ಪಾದಗಳಿಂದ ಇದ್ದುಕೊಂಡು, ಒಂದು

ಪಾದ ಅಧರ್ಮದಿಂದ ಕೂಡಿರುವದು. ದ್ವಾಪರಯುಗದಲ್ಲಿ ಅದೇ ಧರ್ಮವು ಎರಡುಪಾದ ಅಧರ್ಮದಿಂದ ಕೂಡಿರುವದು. ಪಾಪಿಯರಾದ ಕಲಿಯುಗದಲ್ಲಿ ಅದೇ ಧರ್ಮವು ಒಂದು ಪಾದದಿಂದಿದ್ದುಕೊಂಡು ಮೂರುಪಾದ ಅಧರ್ಮದಿಂದ ಕೂಡಿರುವದು. ಮನುಷ್ಯರಿಗೆ ಆಯುಸ್ಸೂ ವೀರ್ಯವೂ ಬುದ್ಧಿಯೂ ಬಲವೂ ಪ್ರತಾಪವೂ ಸಹ ಯುಗಾನುಸಾರವಾಗಿ ಕಡಮೆಯಾಗುವವು. ಕಲಿಯುಗದಲ್ಲಿ ಬ್ರಹ್ಮ ಕ್ಷತ್ರಿಯ ವೈಶ್ಯ ಶೂದ್ರರು ಪರರನ್ನು ವಂಚಿಸುವದಕ್ಕೋಸ್ಕರ ಧರ್ಮಾಚರಣೆಯನ್ನು ಮಾಡುವರು. ತಾವು ಪಂಡಿತರೆಂದು ತಿಳಿದಿರತಕ್ಕ ಜನರು ಅನಾದಿಯಾದ ಧರ್ಮದ ಪದ್ಧತಿಯನ್ನು ಕೆಡಿಸಿಬಿಡುವರು. ಸತ್ಯವನ್ನು ತಪ್ಪಿದ್ದರಿಂದ ಅಂಥವರು ಅಲ್ಪಾಯು ಗಳಾಗಿ ಹೋಗುವರು. ಅಲ್ಪಾಯುಗಳಾದ ಅವರು ಹ್ಯಾಗೂ ಜ್ಞಾನವನ್ನು ಸಂಪಾದಿಸಲಾರರು. ಜ್ಞಾನಹೀನರಾದ ಅವರನ್ನು ಲೋಭವು ತಿರಸ್ಕರಿಸುವದು. ಲೋಭದಿಂದಲೂ ಕ್ರೋಧದಿಂದಲೂ ಅಜ್ಞಾನದಿಂದಲೂ ಕಾಮದಿಂದಲೂ ಅಂಥ ಮನುಷ್ಯರು ಒಬ್ಬರನ್ನೊಬ್ಬರು ವಧಿಸುವದಕ್ಕೆ ಯತ್ನಮಾಡುವರು. ಬ್ರಾಹ್ಮಣರೂ ಕ್ಷತ್ರಿಯರೂ ವೈಶ್ಯರೂ ಸಹ ಬೆರದುಹೋಗಿ, ತಪಸ್ಸಿನಿಂದಲೂ ಸತ್ಯದಿಂದಲೂ ಹೀನರಾಗಿ, ಎಲ್ಲರೂ ಶೂದ್ರರಿಗೆ ಸಮಾನರಾಗು ವರು. ಚಂಡಾಲರು ಕ್ಷತ್ರಿಯಧರ್ಮವನ್ನೂ ಕ್ಷತ್ರಿಯರು ಚಂಡಾಲಧರ್ಮವನ್ನೂ ಸಹ ಅನುವರ್ತಿಸುವರು. ಈ ವಿಷಯದಲ್ಲಿ ಸಂದೇಹವಿಲ್ಲ. ಕಲಿಯುಗದ ಅಂತ್ಯವು ಪ್ರಾಪ್ತವಾಗಲು, ಗೋಣೀರಟ್ಟೇ ವಸ್ತ್ರಗಳಲ್ಲಿ ಶ್ರೇಷ್ಠ ವೆನ್ನಿಸಿಕೊಳ್ಳುವದು. ಧಾನ್ಯಗಳಲ್ಲಿ ಹಾರಕವೇ ಉತ್ತಮವೆನ್ನಿಸಿಕೊಳ್ಳುವದು. ಆ ಕಾಲದಲ್ಲಿ ಎಲ್ಲರೂ ಹೆಂಡತಿಯು ಹೇಳಿದಂತೆಯೇ ನಡೆದುಕೊಳ್ಳುವರು. ಎಲ್ಲರೂ ಮತ್ಸ್ಯಗಳನ್ನು ಆಹಾರಮಾಡಿಕೊಂಡು, ಗೋವುಗಳಿಲ್ಲದೆ ಆಡುಗಳಲ್ಲಿಯೂ ಮೇಕೆಗಳಲ್ಲಿಯೂ ಹಾಲನ್ನು ಕರೆದು ಪಾನಮಾಡುವರು. ಅಂಥಕಾಲದಲ್ಲೂ ವ್ರತನಿಷ್ಠರಾದ ಪುರುಷರು ಆಶಾಬದ್ಧರಾಗಿಯೇ ಇರುವರು. ನಾಸ್ತಿಕರಾಗಿಯೂ ಕಳ್ಳರಾಗಿಯೂ ಇರತಕ್ಕ ಜನಗಳು ಮೇಕೆ ಗಳನ್ನು ಸಾಕಿಕೊಂಡು, ಹಿಂಸಾಪರರಾಗಿ, ಒಬ್ಬರ ಸ್ವತ್ತನ್ನು ಮತ್ತೊಬ್ಬರು ಅಪಹರಿಸುವರು. ಆ ಕಾಲದಲ್ಲಿ ನದೀತೀರಗಳಲ್ಲಿರುವ ಭೂಮಿಯನ್ನು ಗುದ್ದಲಿಗಳಿಂದ ಅಗೆದು ಪೈರುಗಳನ್ನು ನೆಡುವರು. ಆ ಪೈರುಗಳೂ ಸ್ವಲ್ಪ ಫಲವನ್ನೇ ಬಿಡುವವು. ವ್ರತನಿಷ್ಠರಾದವರೂಕೂಡ ಲೋಭಯುಕ್ತರಾಗಿ, ದೇವಕಾರ್ಯದಲ್ಲೂ ಪಿತೃಕಾ ರ್ಯದಲ್ಲೂ ಪರಸ್ಪರವಾಗಿ ತಂದೆಯು ಮಗನನ್ನೂ ಮಗನು ತಂದೆಯನ್ನೂ ಭೋಜನ ಮಾಡಿಸುತ್ತ, ವಿಹಿತ ವಾದ ಆಹಾರಗಳನ್ನು ಬಿಟ್ಟು ದೂಷ್ಯವಾದ ಆಹಾರಗಳನ್ನು ತೆಗೆದುಕೊಳ್ಳುವರು. ಬ್ರಾಹ್ಮಣರಾದವರು ವ್ರತ ನಿಯಮಗಳನ್ನು ಬಿಟ್ಟು ವೇದಗಳನ್ನು ನಿಂದಿಸುತ್ತ, ಯಜ್ಞವನ್ನೂ ಹೋಮವನ್ನೂ ಮಾಡದೆ, ಯಾವದನ್ನು ಹೇಳಿದರೂ ಅದನ್ನು ಅತ್ಯುಕ್ತಿಯಿಂದ ನಿರಾಕರಿಸುತ್ತ, ನಿಂದ್ಯವಾದ ಕರ್ಮಗಳನ್ನೇ ಆಚರಿಸುವರು. ಎಲ್ಲರೂ ಹಳ್ಳವಾದ ಪ್ರದೇಶಗಳಲ್ಲಿ ಕೃಷಿಯನ್ನು ಮಾಡುತ್ತಲೂ, ಗೋವುಗಳಮೇಲೂ ಒಂದು ವರುಷದ ಕರುವಿನಮೇಲೂ ಭಾರಗಳನ್ನು ಹೊರಿಸುವರು. ತಂದೆಯು ಮಗನನ್ನೂ ಮಗನು ತಂದೆಯನ್ನೂ ಸಹ ಸಂಹರಿಸಿ, ಲೋಕಾಪ ವಾದವೂ ಭಯವೂ ಇಲ್ಲದೆ ದೇಹಾತ್ಮವಾದಿಗಳಾಗಿರುವರು. ಜಗತ್ತೆಲ್ಲವೂ ಮ್ಲೇಚ್ಛಮಯವಾಗಿಯೂ, ಯಜ್ಞಾದಿ ಕ್ರಿಯೆಗಳಿಲ್ಲದ್ದಾಗಿಯೂ, ಆನಂದರಹಿತವಾಗಿಯೂ, ಉತ್ಸವರಹಿತವಾಗಿಯೂ ಇರುವದು. ಆ ಕಾಲದಲ್ಲಿ ಮನುಷ್ಯ ರೆಲ್ಲರೂ ಪಾಪಿಷ್ಠರ ಕಥೆಯನ್ನೇ ಕೇಳುವದರಲ್ಲಿ ಆಸಕ್ತರಾಗಿ, ಸ್ವಲ್ಪ ಬಲವುಳ್ಳವರಾಗಿ, ಲೋಭದಿಂದ ಯುಕ್ತರಾಗಿ, ದುಷ್ಟಜನರ ದ್ರವ್ಯವನ್ನು ಪರಿಗ್ರಹಿಸುವರು. ಕೃಪಣರ ದ್ರವ್ಯವನ್ನೂ ಬಂಧುಗಳ ದ್ರವ್ಯವನ್ನೂ ವಿಧವೆಯರ ದ್ರವ್ಯವನ್ನೂ ಸಹ ಅಪಹರಿಸುವರು. ಪಾಪಿಷ್ಠರಾದ ರಾಜರು ಲೋಕಕಂಟಕರಾಗಿ, ಅಹಂಕಾರದಿಂದ ಪ್ರಜೆಗ ಳನ್ನು ಸಂರಕ್ಷಿಸದೆ, ನಿಷ್ಕಾರಣವಾಗಿ ಎಲ್ಲರನ್ನೂ ದಂಡಿಸುತ್ತ, ಸಜ್ಜನರ ದ್ರವ್ಯವನ್ನೂ ಅವರ ಪತ್ನಿಯರನ್ನೂ ಆಕ್ರಮಿಸಿಕೊಂಡು, ಅವರು ರೋದನೆಮಾಡುತ್ತಿದ್ದರೂ ದಯಾಶೂನ್ಯರಾಗಿ ಅವರನ್ನು ಅನುಭವಿಸುವರು. ರಾಜರು ತಾವೇ ಸಮರ್ಥರೆಂದು ಹೊಗಳಿಕೊಳ್ಳುತ್ತ ಮೂರ್ಖರಾಗಿ, ಒಬ್ಬರಿಗೊಬ್ಬರು ಹೊಡೆದಾಡಿ ನಾಶವನ್ನು ಹೊಂದುವರು. ಆ ಕಾಲದಲ್ಲಿ ಒಬ್ಬರ ಮನೆಗೆ ಒಬ್ಬರು ಹೋಗಿ ಕನ್ಯೆಯರನ್ನು ಕೇಳುವದೂ ಇಲ್ಲ; ಹಾಗೆ ಕನ್ಯೆಯರನ್ನು ಕೊಡತಕ್ಕವರೂ ಇರುವದಿಲ್ಲ. ಆ ಕನ್ಯೆಯರೇ ತಮ್ಮತಮ್ಮ ಮನಸ್ಸಿಗೆ ಬೇಕಾದವರನ್ನು ವರಿ ಸುವರು. ಮತ್ತು ರಾಜರಾದವರು ತೃಪ್ತಿಯಿಲ್ಲದೆ ಅಸಂತುಷ್ಟರಾಗಿ, ನಾನಾ ವಿಧವಾದ ಉಪಾಯಗಳಿಂದಲೂ ಪರ

ದ್ರವ್ಯವನ್ನು ಅಪಹರಿಸುವರು. ಒಬ್ಬ ತಾಯಿಯ ಹೊಟ್ಟೆಯಲ್ಲಿ ಹುಟ್ಟಿದ ಅಣ್ಣತಮ್ಮಂದಿರು ಒಬ್ಬರನ್ನೊಬ್ಬರು ವಂಚಿಸುವರು. ವೃದ್ಧರಾದವರು ಬಾಲಬುದ್ಧಿಗಳೂ, ಬಾಲಕರಾದವರು ವೃದ್ಧಬುದ್ಧಿಗಳೂ ಆಗುವರು. ಭಯಶಾಲಿಗಳಾದವರು ಶೂರರೆನಿಸಿಕೊಳ್ಳುವರು ; ಶೂರರಾದವರು ಭಯಶಾಲಿಗಳೆನಿಸಿಕೊಳ್ಳುವರು. ಆ ಕಾಲದಲ್ಲಿ ಎಲ್ಲರೂ ಒಬ್ಬರನ್ನೊಬ್ಬರು ನಂಬದೆ ಕೆಟ್ಟು ಹೋಗುವರು. ಲೋಭದಿಂದ ಆಹಾರನಿಯಮವನ್ನು ಬಿಟ್ಟು, ಎಲ್ಲರೂ ಒಂದೇ ವಿಧವಾದ ಆಹಾರವನ್ನು ಮಾಡುವರು. ಆಗ ಧರ್ಮವು ನಷ್ಟವಾಗಿ, ಅಧರ್ಮವು ವೃದ್ಧಿಯಾಗುವದು. ಬ್ರಾಹ್ಮಣರೂ ಕ್ಷತ್ರಿಯರೂ ವೈಶ್ಯರೂ ನಷ್ಟರಾಗಿ, ಲೋಕವೆಲ್ಲಾ ಒಂದೇ ವರ್ಣವಾಗುವದು. ಸ್ತ್ರೀಯರು ಪತಿಸೇವೆಯನ್ನು ಬಿಡುವರು. ಸಕಲರೂ ಗೋದುವೆಯೂ, ಬತ್ತವೂ ಬೆಳೆಯತಕ್ಕ ದೇಶವನ್ನು ಆಶ್ರಯಿಸುವರು. ಪ್ರಳಯಕಾಲವು ಪ್ರಾಪ್ತವಾಗಲು, ಸ್ತ್ರೀಪುರುಷರು ಪರಸ್ಪರ ಸಹನವಿಲ್ಲದೆ ಸ್ವೇಚ್ಛೆಯಾಗಿ ವಿಹರಿಸುವರು. ಮನುಷ್ಯರು ಶ್ರಾದ್ಧಗಳಿಂದ ಪಿತೃಗಳನ್ನೂ ಯಜ್ಞಾದಿಗಳಿಂದ ದೇವತೆಗಳನ್ನೂ ತೃಪ್ತಿಪಡಿಸದಿರುವರು. ಒಬ್ಬರ ಮಾತನ್ನು ಒಬ್ಬರು ಕೇಳರು. ಗುರುಶಿಷ್ಯಭಾವವು ತಪ್ಪಿಹೋಗಿ, ಆಗ ಎಲ್ಲರೂ ಅಜ್ಞಾನಿಗಳಾಗುವರು. ಎಲ್ಲರೂ ಹದಿನಾರುವರುಷವೇ ಪರಮಾಯುಸ್ಸುಳ್ಳವರಾಗಿ, ಬಳಿಕ ಮರಣವನ್ನು ಪಡೆಯುವರು. ಕನ್ಯೆಯರು ಐದುವರ್ಷದ ವಯಸ್ಸಿನಲ್ಲೇ ಮಕ್ಕಳನ್ನು ಹೆರುವರು. ಪುರುಷರು ಏಳು ಎಂಟು ವಯಸ್ಸಿನಲ್ಲೇ ಪುತ್ರೋತ್ಪಾದನವನ್ನು ಮಾಡುವರು. ಯುಗಪ್ರಳಯದಲ್ಲಿ ದಂಪತಿಗಳು ಒಬ್ಬರನ್ನೊಬ್ಬರು ಸಂತೋಷಪಡಿಸದೆ ಇರುವರು. ಜನರು ಸ್ವಲ್ಪ ದ್ರವ್ಯವುಳ್ಳವರಾಗಿಯೂ ವ್ಯರ್ಥವಾದ ಜಾತಿಯ ಗುರುತುಳ್ಳವರಾಗಿಯೂ ಪರಹಿಂಸಾಪರರಾಗಿಯೂ ಇರುವರು. ಒಬ್ಬನಿಗೊಬ್ಬನು ಉಪಕಾರವನ್ನು ಮಾಡುವದಿಲ್ಲವು. ರಾಜರು ತಮ್ಮ ಭೂಮಿಯನ್ನು ಮಾರಿಕೊಂಡು ಜೀವಿಸುವರು. ಬ್ರಾಹ್ಮಣರು ದ್ರವ್ಯವನ್ನು ತೆಗೆದುಕೊಂಡು ವೇದವನ್ನು ಪಾಠಹೇಳುವರು. ಸ್ತ್ರೀಯರು ವ್ಯಭಿಚಾರದಿಂದ ಜೀವಿಸುವರು. ಪ್ರಳಯಸಮಯದಲ್ಲಿ, ಸಕಲರೂ ಕರ್ಮಭ್ರಷ್ಟರಾಗಿ ಮ್ಲೇಚ್ಛರ ಆಚಾರವನ್ನು ಅನುವರ್ತಿಸಿ, ಶಾಸ್ತ್ರನಿಷಿದ್ಧವಾದದ್ದನ್ನು ಭಕ್ಷಿಸುವರು. ಆಗ ವ್ಯಾಪಾರ ಮಾಡತಕ್ಕವರೆಲ್ಲರೂ ಲೋಭದಿಂದ ಕ್ರಯವಿಕ್ರಯಗಳಲ್ಲಿ ವಂಚನೆಯನ್ನು ಮಾಡುವರು. ತಿಳಿಯತಕ್ಕದ್ದನ್ನು ತಿಳಿದು ಕೊಳ್ಳದೆ, ಎಲ್ಲರೂ ಸ್ವಚ್ಛಂದವಾಗಿ ಕರ್ಮಗಳಲ್ಲಿ ಪ್ರವರ್ತಿಸುವರು. ಕ್ರೂರವಾದ ಕರ್ಮಗಳನ್ನೇ ಮಾಡುತ್ತ ಒಬ್ಬರನ್ನೊಬ್ಬರು ಶ್ಲಾಘಿಸುವರು. ಉತ್ತಮವಾದ ವೃಕ್ಷಗಳುಳ್ಳ ಉದ್ಯಾನವನ್ನು ಸ್ವಲ್ಪವೂ ವ್ಯಥೆಯಿಲ್ಲದೆ ನಾಶಮಾಡುವರು. ಕ್ರೂರರಾದ ಜನಗಳು ಲೋಭದಿಂದ ಬ್ರಾಹ್ಮಣರನ್ನು ಸಂಹರಿಸಿ ಅವರ ಸ್ವತ್ತುಗಳನ್ನು ಅಪಹರಿಸಲು, ಆ ಬ್ರಾಹ್ಮಣರು ಅವರಿಂದ ಪೀಡಿತರಾಗಿ ಭಯಪಟ್ಟು ಹಾಹಾಕಾರಪಡುತ್ತ ದಿಕ್ಕುದಿಕ್ಕಿಗೆ ಓಡಿಹೋಗಿ, ನದಿಗಳನ್ನೂ ಪರ್ವತಗಳನ್ನೂ ಇನ್ನೂ ದುರ್ಗಮವಾದ ಪ್ರದೇಶಗಳನ್ನೂ ಆಶ್ರಯಿಸುವರು. ಆ ಬ್ರಾಹ್ಮಣರು ಕಳ್ಳರಿಂದಲೂ ಕುತ್ಸಿತರಾದ ರಾಜರಿಂದಲೂ ಪೀಡಿತರಾಗಿ, ಕಾಗೆಗಳಂತೆ ಸರ್ವತ್ರ ಶಂಕಿಸುತ್ತ ರಾಜನಿಗೆ ಕೊಡತಕ್ಕ ಕಂದಾಯವನ್ನು ಕೊಡಲಾರದೆ, ಧೈರ್ಯವನ್ನು ಬಿಟ್ಟು, ಸ್ವಕರ್ಮವನ್ನು ತ್ಯಜಿಸಿ, ಶೂದ್ರರ ಸೇವೆಯನ್ನು ಮಾಡುವರು. ಶೂದ್ರನಾದವನು ಧರ್ಮೋಪದೇಶವನ್ನು ಮಾಡುವದಕ್ಕೆ ಉಪಕ್ರಮಿಸುವನು. ಬ್ರಾಹ್ಮಣರು ಪ್ರಾಮಾಣ್ಯವಾದ ಮಾರ್ಗವನ್ನು ಬಿಟ್ಟು, ಅಂಥಾ ಶೂದ್ರರನ್ನು ಆಶ್ರಯಿಸಿಕೊಂಡು ಅವರು ಹೇಳತಕ್ಕದ್ದನ್ನೇ ಕೇಳುವರು. ಹೀಗೆ ಯುಗಾಂತ್ಯದಲ್ಲಿ ಕಾಲವು ವಿಪರೀತವಾಗುವದು. ಎಲ್ಲರೂ ದೇವತೆಗಳ ಪೂಜೆಯನ್ನು ಬಿಟ್ಟು ಮೂಳೆಯಿಂದ ಮಾಡಿದ ಗೊಂಬೆಯನ್ನು ಪೂಜಿಸುವರು. ಶೂದ್ರರು ಬ್ರಾಹ್ಮಣರ ಶುಶ್ರೂಷೆಯನ್ನು ಬಿಡುವುರು. ಮಹರ್ಷಿಗಳ ಆಶ್ರಮಗಳಲ್ಲಿಯೂ ಮೂಳೆಗಳಿಂದ ಮಾಡಿದ ಗೊಂಬೆಗಳನ್ನು ಅಲಂಕರಿಸುವರು. ಎಲೈ ಧರ್ಮರಾಯನೆ, ಇದೇ ಪ್ರಳಯಕಾಲಕ್ಕೆ ಲಕ್ಷಣವಾದದ್ದು. ಯಾವಾಗ ಸರ್ವರೂ ಕ್ರೂರಕರ್ಮಪರರಾಗಿ ಧರ್ಮವನ್ನು ಬಿಟ್ಟು ಮದ್ಯಮಾಂಸಗಳನ್ನು ಆಹಾರ ಮಾಡುವರೋ, ಆಗಲೇ ಯುಗಕ್ಷಯವಾಗುವದು. ಆಕಾಲದಲ್ಲಿ ಪರ್ಜನ್ಯನು ವರ್ಷಿಸುವನು. ಶೂದ್ರರು ಬ್ರಾಹ್ಮಣರೊಡನೆ ವಿರೋಧವನ್ನು ಮಾಡುವರು. ಆಗ ಭೂಮಿಯು ಮ್ಲೇಚ್ಛರಿಂದ ವ್ಯಾಪ್ತವಾಗುವದು. ಬಲಿಷ್ಟರಾದ ಜನರು ಒಂದೇ ಆಚಾರವುಳ್ಳವರಾಗಿ ಭೃತ್ಯರಿಗೆ ಸಂಬಳವನ್ನು ಕೊಡದೆ ಸೇವೆಯನ್ನು ಮಾಡಿಸಿಕೊಳ್ಳುವರು. ಸಾಧುಗಳಾದವರು ಫಲಮೂಲಗಳನ್ನು ಆಹಾರ

ಮಾಡಿಕೊಂಡು ಋಷ್ಯಾಶ್ರಮಗಳನ್ನು ಸೇರುವರು. ಅಂದಿಗೆ ಲೋಕಮರ್ಯಾದೆಯು ಕೆಟ್ಟುಹೋಗುವದು. ಶಿಷ್ಯರು ಗುರೂಪದೇಶವನ್ನು ಉಲ್ಲಂಘಿಸುವರು. ದರಿದ್ರರಾದ ತಮ್ಮ ಗುರುಗಳನ್ನು ಶಿಷ್ಯರು ಭಯಪಡಿಸುವರು. ದ್ರವ್ಯಾಂತರಿಗೆ ಮಿತ್ರರೂ ಬಂಧುಗಳೂ ಆಗುವರು. ಆ ಪ್ರಳಯಕಾಲದಲ್ಲಿ ದಿಕ್ಕುಗಳಲ್ಲಿ ಬೆಂಕಿಯು ಬಿದ್ದಹಾಗೆ ಕಾಣಿಸುವದು. ನಕ್ಷತ್ರಗಳು ಕಾಂತಿಹೀನವಾಗುವವು. ಸೂರ್ಯಚಂದ್ರಾದಿಗ್ರಹಗಳು ವ್ಯತ್ಯಾಸವಾಗಿ ನಡೆಯುವವು. ವಿಪರೀತವಾಗಿ ಗಾಳಿಯು ಬೀಸುವದು. ಆಕಾಶದಿಂದ ಭಯಂಕರವಾದ ಕೊಳ್ಳೀಮಳೆಯಾಗುವದು. ಸೂರ್ಯನು ಆರು ಸೂರ್ಯರೊಡಗೂಡಿ ತಪಿಸುವನು. ದಿಕ್ಕುಗಳಲ್ಲಿ ಬೆಂಕಿಬಿದ್ದು ಉರಿಯುತ್ತ ಘೋರವಾದ ಧ್ವನಿಯುಂಟಾಗುವದು. ಉದಯಾಸ್ತಮಯಗಳಲ್ಲಿ ಸೂರ್ಯನ ಸಮೀಪದಲ್ಲಿ ತಲೆಯಿಲ್ಲದ ಶರೀರವು ಕಾಣಿಸುವದು. ವೃಷ್ಟಿಯಿಲ್ಲದೆ ಪೈರುಗಳು ನಷ್ಟವಾಗುವವು. ಸಕಲರೂ ರಾಜಾಜ್ಞೆಯನ್ನುಲ್ಲಂಘಿಸುವರು. ಸ್ತ್ರೀಯರು ಯಾವಾಗಲೂ ರೋದನ ಮಾಡುತ್ತ ಗಂಡಂದಿರ ಮಾತನ್ನು ಕೇಳದೆ ಇರುವರು. ಮಕ್ಕಳು ತಂದೆತಾಯಿಗಳನ್ನು ಸಂಹರಿಸುವರು. ಹೆಂಡತಿಯು ಮಗನನ್ನು ಹೊಂದಿಕೊಂಡು ಗಂಡನನ್ನು ಸಂಹರಿಸುವಳು. ಪರ್ವಕಾಲವಲ್ಲದ ಸಮಯದಲ್ಲಿ ಸೂರ್ಯನನ್ನು ರಾಹುವು ಗ್ರಾಸಮಾಡುವನು. ಮಾರ್ಗಸ್ಥರು ಇಳಿಯುವದಕ್ಕೆ ಸ್ಥಳವೂ ಕುಡಿಯುವದಕ್ಕೆ ಉದಕವೂ ಸಹ ದೊರೆಯದೆ, ಶ್ರಮದಿಂದ ಮಾರ್ಗದಲ್ಲಿ ವಾಸಮಾಡುವರು. ಪದೇಪದೇ ಭೂಕಂಪವಾಗುವದು. ಶಕುನವನ್ನು ತೋರಿಸತಕ್ಕ ಪಕ್ಷಿಗಳೂ ಮೃಗಗಳೂ ಕ್ರೂರವಾಗಿ ಧ್ವನಿಮಾಡುವವು. ಜನರು ಮಿತ್ರರನ್ನೂ ಸಂಬಂಧಿಗಳನ್ನೂ ಪರಿಜನರನ್ನೂ ತ್ಯಜಿಸುವರು. ಪ್ರಳಯಸಮಯದಲ್ಲಿ ಜನರೆಲ್ಲರೂ ಸಣ್ಣಸಣ್ಣ ಗ್ರಾಮಗಳನ್ನು ಬಿಟ್ಟು ರಾಜಧಾನಿಗಳನ್ನು ಆಶ್ರಯಿಸುವರು. ಮತ್ತು ತಮ್ಮತಮ್ಮ ಬಂಧುಗಳನ್ನು ಸ್ಮರಿಸುತ್ತ ದಾರುಣವಾಗಿ ಕೂಗಿಕೊಳ್ಳುತ್ತ ದಿಕ್ಕುದಿಕ್ಕುಗಳಲ್ಲಿ ಸಂಚರಿಸುವರು. ಈ ಪ್ರಕಾರ ಘೋರವಾಗಿ ಯುಗಪ್ರಳಯವು ಪ್ರಾಪ್ತವಾಗಲು, ಕಾಲಾಂತರದಲ್ಲಿ ಲೋಕವೃದ್ಧಿಯಾಗುವದಕ್ಕಾಗಿ ದೈವಾನುಕೂಲ್ಯವುಂಟಾಗಿ, ಕ್ರಮವಾಗಿ ಬ್ರಾಹ್ಮಣರೇ ಮೊದಲಾದವರು ಹುಟ್ಟುವರು. ಯಾವ ಕಾಲದಲ್ಲಿ ಬೃಹಸ್ಪತಿಯೂ ಸೂರ್ಯಚಂದ್ರರೂ ಏಕಕಾಲದಲ್ಲಿ ಪುಷ್ಯನಕ್ಷತ್ರಕ್ಕೆ ಬರುವರೋ, ಆಗ ಕೃತಯುಗವು ಪ್ರಾರಂಭವಾಗುವದು. ನಕ್ಷತ್ರಗಳು ಶುಭ್ರವಾಗಿ ಕಾಣಿಸುವವು. ಗ್ರಹಗಳು ಪ್ರದಕ್ಷಿಣಾಕಾರವಾಗಿ ಸಂಚರಿಸುವವು. ಜನಗಳಿಗೆ ಕ್ಷೇಮವೂ ಸುಭಿಕ್ಷವೂ ಆರೋಗ್ಯವೂ ಉಂಟಾಗುವವು. ಆ ಸಮಯದಲ್ಲಿ ಮಹತ್ತಾದ ಬುದ್ಧಿಯೂ ಪರಾಕ್ರಮವೂ ಉಳ್ಳ ತೇಜೋವಂತನಾದ ಮಹಾವಿಷ್ಣುವು ಕಾಲಪ್ರೇರಿತನಾಗಿ, ಸಂಭಲವೆಂಬ ಗ್ರಾಮದಲ್ಲಿ ಒಬ್ಬ ಬ್ರಾಹ್ಮಣನ ಮನೆಯಲ್ಲಿ ಕಲ್ಕ್ಯವತಾರವನ್ನು ಮಾಡುವನು. ಆತನು ಮನಸ್ಸಿನಲ್ಲಿ ಸ್ಮರಿಸಿದ ಮಾತ್ರದಿಂದಲೇ ಬೇಕುಬೇಕಾದ ವಾಹನಗಳೂ ವಸ್ತ್ರಗಳೂ ಕವಚಗಳೂ 'ಸೈನಿಕರೂ ಸಹ ಸಿದ್ಧರಾಗುವರು. ಬಳಿಕ ಕಲ್ಕ್ಯವತಾರಮಾಡಿದ ಆ ವಿಷ್ಣುವು ಚಕ್ರವರ್ತಿಯಾಗಿ ಲೋಕಮರ್ಯಾದೆಯನ್ನು ಸ್ಥಾಪಿಸುವನು. ಆತನು ಯುಗಪ್ರಳಯದಿಂದುಂಟಾದ ಹಾನಿಯನ್ನು ಪರಿಹರಿಸಿ ಬ್ರಾಹ್ಮಣರಿಂದ ಪರಿವೃತನಾಗಿ, ಕ್ಷುದ್ರರಾಗಿ ಎಲ್ಲಾಕಡೆಯಲ್ಲೂ ವ್ಯಾಪಿಸಿರುವ ಮ್ಲೇಚ್ಛರನ್ನು ನಾಶಮಾಡಿಬಿಡುವನು" ಎಂದು ಮಾರ್ಕಂಡೇಯನು ಧರ್ಮರಾಯನಿಗೆ ಹೇಳಿದನು.

೧೯೧ನೇ ಅಧ್ಯಾಯ.—ಮಾರ್ಕಂಡೇಯಪರ್ವ—(ಕೃತಯುಗಾದಿಗಳ ಮಹಿಮೆ).

ವೈಶಂಪಾಯನ ಮುನೀಂದ್ರನು ಜನಮೇಜಯರಾಯನನ್ನು ಕುರಿತು,—ಕೇಳು ಜನಮೇಜಯನೆ, ಆಗ ಮಾರ್ಕಂಡೇಯನು ಧರ್ಮರಾಯನನ್ನು ಕುರಿತು, "ಎಲೈ ಧರ್ಮರಾಯನೆ, ಈ ಪ್ರಕಾರ ಕಲ್ಕಿರೂಪನಾದ ಮಹಾವಿಷ್ಣುವು ಲೋಕಕಂಟಕರಾದ ದುಷ್ಟರನ್ನು ನಿಗ್ರಹಿಸಿ, ಬಳಿಕ ಮಹತ್ತಾದ ಅಶ್ವಮೇಧಯಾಗವನ್ನು ಮಾಡಿ, ಆ ಯಾಗದಲ್ಲಿ ಬ್ರಾಹ್ಮಣರಿಗೆ ಈ ಭೂಮಿಯನ್ನು ದಾನಮಾಡಿ, ಬ್ರಹ್ಮನಿಂದ ಕ್ಲ್ಪಪ್ತವಾಗಿರುವ ಶುಭವಾದ ಲೋಕಮರ್ಯಾದೆಗಳನ್ನು ಸ್ಥಾಪನೆ ಮಾಡುವನು. ಬಳಿಕ ಶತ್ರುಸಂಹಾರಕನಾದ ಆ ಕಲ್ಕಿಯು ಪುಣ್ಯತಮವಾದ ಯಶ

ಸ್ಸಿನಿಂದ ಪ್ರಕಾಶಿಸುತ್ತ, ತನ್ನಿಂದ ಪೆಟ್ಟುತಿಂದು 'ಅಯ್ಯೋ ತಾಯೆ! ಅಯ್ಯೋ ಅಪ್ಪ! ಅಯ್ಯೋ ಮಗನೆ!' ಎಂದು ಬಹುಪ್ರಕಾರವಾಗಿ ದುಃಖದಿಂದ ರೋದನೆ ಮಾಡತಕ್ಕ ದುಷ್ಟರನ್ನೆಲ್ಲಾ ನಿರ್ಮೂಲಮಾಡಿ, ಬ್ರಾಹ್ಮಣಶ್ರೇಷ್ಠ ರನ್ನು ಸನ್ಮಾನ ಮಾಡುತ್ತ, ಆ ಬ್ರಾಹ್ಮಣರಿಂದ ಹೊಗಳಿಸಿಕೊಳ್ಳುತ್ತ, ಲೋಕದಲ್ಲಿ ಬ್ರಾಹ್ಮಣಧರ್ಮಗಳನ್ನೂ ಕ್ಷತ್ರಧರ್ಮಗಳನ್ನೂ ಸ್ಥಾಪನೆಮಾಡಿ, ನಿರಾತಂಕವಾಗಿ ಭೂಮಿಯಲ್ಲಿ ಸುತ್ತುತ್ತ ಹಾಗೆಯೇ ಪುಣ್ಯತಮವಾದ ಅರಣ್ಯ ವನ್ನು ಪ್ರವೇಶಮಾಡಿಬಿಡುವನು. ಆಗ ಆ ಬ್ರಾಹ್ಮಣಶ್ರೇಷ್ಠನಾದ ಕಲ್ಕಿಯು ಸ್ಥಾಪಿಸಿದ ಮರ್ಯಾದೆಯನ್ನೇ ಅನುಸರಿಸಿ ಸಕಲಜನರೂ ನಡೆಯುವರು. ಅದರಿಂದ ಆ ಕೃತಯುಗದಲ್ಲಿ ಸರ್ವರಿಗೂ ಕ್ಷೇಮವುಂಟಾಗುವದು. ಬಳಿಕ ಅಧರ್ಮವೆಲ್ಲಾ ನಿರ್ಮೂಲವಾಗಿ ದಿನದಿನಕ್ಕೆ ಧರ್ಮವು ವೃದ್ಧಿಯಾಗುತ್ತ ಬರುವದು. ಸಕಲಜನರೂ ಕ್ರಿಯಾ ವಂತರಾಗುವರು. ಆ ಕಾಲದಲ್ಲಿ ಅಲ್ಲಲ್ಲೇ ನೂತನನೂತನವಾದ ಉದ್ಯಾನಗಳೂ, ಮಂಟಪಗಳೂ ದೇವಾಲಯ ಗಳೂ ವಾಪೀಕೂಪತಟಾಕಗಳೂ ನಾನಾವಿಧವಾದ ಕಮಲಸರೋವರಗಳೂ ಅನೇಕ ಯಜ್ಞಕ್ರಿಯೆಗಳೂ ಉಂಟಾಗುವವು. ಬ್ರಾಹ್ಮಣರು ಸಾಧುವೃತ್ತಿಯನ್ನೂ, ಮುನಿಗಳು ತಪೋವೃತ್ತಿಯನ್ನೂ, ಅನುಸರಿಸುವರು. ಪಾಷಂಡರೆಲ್ಲರೂ ನಷ್ಟರಾಗಿ, ಸಕಲಜನರೂ ತಮ್ಮತಮ್ಮ ಆಶ್ರಮಧರ್ಮಗಳನ್ನು ಅನುವರ್ತಿಸಿ ಸತ್ಯಸಂಧರಾಗು ವರು. ಜನಗಳಿಗೆ ದುಷ್ಕರ್ಮದಿಂದ ಉಂಟಾದ ಸಂಸ್ಕಾರಗಳು ಆ ಕೃತಯುಗದಲ್ಲಿ ಜ್ಞಾನಬಲದಿಂದ ನಷ್ಟವಾಗಿ ಹೋಗುವವು. ಕಾಲಕಾಲಕ್ಕೆ ವೃಷ್ಟಿಯಾಗಿ ಬೆಳೆಯು ಚೆನ್ನಾಗಿ ಆಗುವದು. ಜನರು ದಾನವ್ರತನಿಯಮಗ ಳನ್ನು ಅನುವರ್ತಿಸುವರು. ಬ್ರಾಹ್ಮಣರು ಧರ್ಮಪರರಾಗಿ ಸಂತೋಷದಿಂದ ಜಪ ಯಜ್ಞ ಮೊದಲಾದ ಕ್ರಿಯೆ ಗಳನ್ನು ಮಾಡುವರು. ಕ್ಷತ್ರಿಯರು ಧರ್ಮದಿಂದ ಭೂಮಿಯನ್ನು ಪಾಲಿಸುವರು. ವೈಶ್ಯರು ಧರ್ಮದಿಂದ ವ್ಯಾಪಾರವನ್ನು ಮಾಡುವರು. ಬ್ರಾಹ್ಮಣರು ಷಟ್ಕರ್ಮಾಚರಣೆಯಲ್ಲಿ ನಿರತರಾಗುವರು. ಕ್ಷತ್ರಿಯರು ಪರಾ ಕ್ರಮವಂತರಾಗುವರು. ಶೂದ್ರರು ವರ್ಣತ್ರಯದವರನ್ನೂ ಶುಶ್ರೂಷೆಮಾಡುವರು. ಎಲೈ ಧರ್ಮರಾಯನೆ, ಹೀಗೆ ಕೃತಯುಗದಲ್ಲಿಯೂ ತ್ರೇತಾಯುಗದಲ್ಲಿಯೂ ದ್ವಾಪರಯುಗದಲ್ಲಿಯೂ ನಡೆಯುವದು. ಕಲಿಯುಗದ ಧರ್ಮ ವನ್ನು ಮೊದಲೇ ನಿನಗೆ ಹೇಳಿರುವೆನು. ಯುಗಸಂಖ್ಯೆಯು ನಿನಗೆ ತಿಳಿದೇ ಇರುವದು. ಸಕಲಋಷಿಗಳಿಗೂ ಸಮ್ಮತವಾಗಿರುವ ಭೂತಭವಿಷ್ಯದ್ವರ್ತಮಾನ ಕಾಲಗಳಲ್ಲಿ ನಡೆಯತಕ್ಕ ವೃತ್ತಾಂತಗಳನ್ನು ಚಿರಂಜೀವಿ ಯಾದ ನಾನು ವಾಯುವಿನಿಂದ ತಿಳಿದುಕೊಂಡು, ಬಹುವಿಧವಾಗಿ ಅದನ್ನು ಅನುಭವಿಸಿ ಈಗ ನಿನಗೆ ತಿಳುಹಿ ಸಿರುವೆನು. ಎಲೈ ಕುರುಕುಲಶ್ರೇಷ್ಠನೆ, ಸಾರಾಂಶವಾದ ಮತ್ತೊಂದು ಮಾತನ್ನು ತಮ್ಮಂದಿರೊಡಗೂಡಿದ ನಿನಗೆ ಹೇಳುವೆನು ಕೇಳು. ಇದರಿಂದ ಧರ್ಮಸಂಶಯವು ನಿವೃತ್ತಿಯಾಗುವದು. ಯಾವಾಗಲೂ ನೀನು ಧರ್ಮ ಪರನಾಗಿಯೇ ಇರು. ಧರ್ಮಾತ್ಮನಾದವನು ಈಲೋಕದಲ್ಲೂ ಪರಲೋಕದಲ್ಲೂ ಸುಖವನ್ನು ಪಡೆಯುವನು. ಎಲೈ ಧರ್ಮರಾಯನೆ, ಎಂದಿಗೂ ನೀನು ಬ್ರಾಹ್ಮಣರಿಗೆ ಅಪಮಾನ ಮಾಡಬೇಡ. ಬ್ರಾಹ್ಮಣನು ಕುಪಿತನಾ ದದ್ದೇ ಆದರೆ, ಪ್ರತಿಜ್ಞೆಯಿಂದ ಲೋಕವನ್ನೇ ನಾಶಮಾಡುವನು" ಎಂದನು.

ಆಬಳಿಕ ಧರ್ಮರಾಯನು ಆ ಮಹರ್ಷಿಯ ಮಾತನ್ನು ಕೇಳಿ, ಆತನನ್ನು ಕುರಿತು "ಪ್ರಜಾರಕ್ಷಣೆಯನ್ನು ಮಾಡತಕ್ಕ ನಾನು ಯಾವ ಧರ್ಮವನ್ನು ಆಚರಿಸಿದರೆ ಸ್ವಧರ್ಮವು ನಷ್ಟವಾಗದೆ ಇರುವದು? ತಿಳುಹಿಸು" ಎನಲು, ಮಾರ್ಕಂಡೇಯನು "ಎಲೈ ಧರ್ಮರಾಯನೆ, ಯಾವಾಗಲೂ ಅಸೂಯೆಯಿಲ್ಲದೆ ಸಕಲಪ್ರಾಣಿಗಳ ಲ್ಲಿಯೂ ದಯಾವಂತನಾಗಿ, ಅವರಿಗೆ ಯಾವಾಗಲೂ ಹಿತವನ್ನು ಬಯಸುತ್ತ ಸತ್ಯವಾದಿಯಾಗಿ, ಮೃದುಸ್ವಭಾವನಾಗಿ ಇಂದ್ರಿಯನಿಗ್ರಹವನ್ನು ಮಾಡಿಕೊಂಡು, ಅಧರ್ಮವನ್ನು ಬಿಟ್ಟು ಧರ್ಮವನ್ನೇ ಆಚರಿಸುತ್ತ, ರಾಜ್ಯಪರಿಪಾಲನೆ ಯನ್ನು ಮಾಡು. ಪ್ರಮಾದದಿಂದ ಯಾವದಾದರೂ ಒಂದು ಅವಿವೇಕಕಾರ್ಯವು ನಡೆದದ್ದೇ ಆದರೆ, ದಾನದಿಂದ ಅದನ್ನು ಪರಿಹರಿಸಿಕೊಂಡು ಪಿತೃಗಳಾರಾಧನೆಯನ್ನೂ ದೇವತಾರಾಧನೆಯನ್ನೂ ಮಾಡು. ಅಭಿಮಾನವನ್ನು ಬಿಟ್ಟು ಯಾವಾಗಲೂ ಜಾಗರೂಕನಾಗಿದ್ದುಕೊಂಡಿದ್ದರೆ, ನೀನು ಸಕಲಭೂಮಂಡಲವನ್ನೂ ಜಯಿಸಿ ಸುಖವಾ ಗಿರುವೆ. ಎಲೈ ಧರ್ಮರಾಯನೆ, ಭೂಮಿಯಲ್ಲಿ ನಿನಗೆ ತಿಳಿಯದೇ ಇರುವದು ಯಾವದೂ ಇಲ್ಲವಾದ್ದರಿಂದ,

ಈ ವನವಾಸಕ್ಲೇಶವನ್ನು ಮನಸ್ಸಿನಲ್ಲಿ ಇಡಬೇಡ. ಎಷ್ಟುಕಷ್ಟಪ್ರಾಪ್ತವಾದರೂ ಪ್ರಾಜ್ಞರಾದವರು ವ್ಯಥೆ ಪಡುವದಿಲ್ಲ. ಈ ಕಾಲವು ದೇವತೆಗಳಿಗೆ ಸಹ ಅಜ್ಞಾನವನ್ನು ಕಲ್ಪಿಸತಕ್ಕದ್ದು. ಈ ವಿಷಯದಲ್ಲಿ ನೀನು ಶಂಕೆ ಪಡಬೇಡ. ಈ ಕಾಲಮಹಿಮೆಯಿಂದ ಧರ್ಮಕ್ಕೆ ಲೋಪವುಂಟಾಗುವದು. ಎಲೈ ಧರ್ಮರಾಯನೆ, ನೀನು ಪ್ರಸಿದ್ಧವಾದ ಕೌರವವಂಶದಲ್ಲಿ ಹುಟ್ಟಿರುವೆ. ತ್ರಿಕರಣದಿಂದಲೂ ಧರ್ಮವನ್ನೇ ಆಚರಿಸು" ಎಂದನು. ಅದನ್ನು ಕೇಳಿ ಧರ್ಮರಾಯನು "ಎಲೈ ಮಹಾನುಭಾವನೆ, ಯುಕ್ತವಾದ ನಿನ್ನ ಆಜ್ಞೆಯಂತೆಯೇ ಪ್ರಯತ್ನಪೂರ್ವಕವಾಗಿ ನಾನು ನಡೆದುಕೊಳ್ಳತಕ್ಕವನು. ನನಗೆ ಲೋಭವೂ ಭಯವೂ ಸಹ ಇಲ್ಲವು. ನೀನು ಹೇಳಿದಂತೆಯೇ ನಾನು ನಡೆಯುವೆನು" ಎಂದು ನುಡಿದನು. ಆಗಲಲ್ಲಿದ್ದ ಪಾಂಡವರೆಲ್ಲರೂ ಶ್ರೀಕೃಷ್ಣನೊಡಗೂಡಿ, ಆ ಮಾತನ್ನು ಕೇಳಿ ಸಂತೋಷಪಟ್ಟರು. ಅಲ್ಲಿದ್ದ ಬ್ರಾಹ್ಮಣರೆಲ್ಲರೂ ಮಾರ್ಕಂಡೇಯನು ಹೇಳಿದ ಆ ಇತಿಹಾಸವನ್ನು ಶ್ರವಣಮಾಡಿ ಸಂತೋಷಿಸಿದರು—ಎಂದು ವೈಶಂಪಾಯನಮುನೀಶ್ವರನು ಜನಮೇಜಯರಾಯನಿಗೆ ವಿವರಿಸಿದನು.

---

## ೧೯೭ನೇ ಅಧ್ಯಾಯ.—ಮಾರ್ಕಂಡೇಯಪರ್ವ.—(ಬ್ರಾಹ್ಮಣರ ಮಹಿಮೆ).

ಬಳಿಕ ಜನಮೇಜಯರಾಯನು ವೈಶಂಪಾಯನಮುನೀಂದ್ರನನ್ನು ಕುರಿತು—ಎಲೈ ಮಹಾತ್ಮನೆ, ಮಾರ್ಕಂಡೇಯನು ಧರ್ಮರಾಯನಿಗೆ ಹೇಳಿದ ಬ್ರಾಹ್ಮಣರ ಮಹಾತ್ಮ್ಯವನ್ನು ಚೆನ್ನಾಗಿ ನೀನು ವಿವರಿಸು—ಎನಲು, ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಬಳಿಕ ಧರ್ಮರಾಯನು ಮಾರ್ಕಂಡೇಯಮಹರ್ಷಿಯನ್ನು ಕುರಿತು "ಎಲೈ ಮಹಾತ್ಮನೆ, ಇನ್ನೂ ಬ್ರಾಹ್ಮಣರ ಮಹಿಮೆಯನ್ನೆಲ್ಲ ತಿಳಿಸು" ಎನಲು, ಮಾರ್ಕಂಡೇಯನು "ಎಲೈ ಧರ್ಮರಾಯನೆ, ಬ್ರಾಹ್ಮಣರ ಮಹಿಮೆಯನ್ನು ವಿವರಿಸುವೆನು ಕೇಳು. ಇಕ್ಷ್ವಾಕುರಾಯನ ವಂಶದಲ್ಲಿ ಹುಟ್ಟಿದ ಪರೀಕ್ಷಿತ್ತೆಂಬ ರಾಜನು ಅಯೋಧ್ಯಾಪಟ್ಟಣಕ್ಕೆ ಅರಸನಾಗಿದ್ದನು. ಆತನು ಕುದುರೆಯನ್ನೇರಿ ಮೃಗದ ಬೇಟೆಯನ್ನು ಆಡುವದಕ್ಕಾಗಿ ಅರಣ್ಯಕ್ಕೆ ಹೋಗಿ ಮೃಗಗಳನ್ನು ಅನುಸರಿಸಿ ಹೋಗುತ್ತಿರಲು, ಬಂದು ಮೃಗವು ಆತನನ್ನು ಬಹುದೂರ ಎಳೆದುಕೊಂಡುಹೋಯಿತು. ಆಗ ಆ ಅರಸನು ಮಾರ್ಗದಲ್ಲಿ ಶ್ರಾಂತನಾಗಿ ಹಸಿವು ಬಾಯಾರಿಕೆಗಳಿಂದ ಪೀಡಿತನಾಗಿ, ನೀಲವರ್ಣವಾಗಿರತಕ್ಕ ಗಿಡಗಳ ಗುಂಪನ್ನು ನೋಡಿ, ಅದರಲ್ಲಿ ಪ್ರವೇಶಮಾಡಿ, ಆ ವನಮಧ್ಯದಲ್ಲಿ ರಮಣೀಯವಾದ ಬಂದು ಸರೋವರವನ್ನು ಕಂಡು, ಕುದುರೆಯೊಡನೆ ಅದನ್ನು ಪ್ರವೇಶಿಸಿ, ಮಾರ್ಗಾಯಾಸವನ್ನು ಪರಿಹರಿಸಿಕೊಂಡು, ತಾವರೆದಂಟುಗಳನ್ನು ಕಿತ್ತು ಕುದುರೆಗೆ ಆಹಾರಕ್ಕಾಗಿ ಕೊಟ್ಟು, ತಾನು ಆ ಸರೋವರದ ದಡದಲ್ಲಿ ಕೂತುಕೊಂಡು ಹಾಗೆಯೇ ಅಲ್ಲಿ ಸ್ವಲ್ಪ ಮಲಗಿಕೊಂಡನು. ಅಲ್ಲಿ ಮಧುರವಾದ ಗಾನಧ್ವನಿಯೊಂದು ಕೇಳಬಂತು. ಬಳಿಕ ಆ ರಾಜನು 'ಈ ಪ್ರದೇಶದಲ್ಲಿ ಮನುಷ್ಯರ ಸಂಚಾರವೇ ಇಲ್ಲ. ಈ ಗಾನಧ್ವನಿಯು ಯಾರದಾಗಿರಬಹುದು' ಎಂದು ಯೋಚಿಸಿ, ಸಮೀಪದಲ್ಲೇ ಗಾನಮಾಡುತ್ತ ಹೂವನ್ನು ಕೊಯ್ಯುತ್ತಿರುವ ರೂಪಸಂಪನ್ನಳಾದ ಒಬ್ಬ ಕನ್ಯೆಯನ್ನು ನೋಡಿದನು. ಬಳಿಕ ಆ ಕನ್ಯೆಯು ಆ ರಾಜನ ಸಮೀಪಕ್ಕೆ ಬಂದಳು. ಆಗ ಆ ರಾಜನು ಆಕೆಯನ್ನು ಕುರಿತು 'ಎಲೆ ಮಂಗಳಾಂಗಿಯೆ, ನೀನು ಯಾರು? ಯಾತಕ್ಕೆ ಇಲ್ಲಿ ಸಂಚರಿಸುತ್ತಿರುವೆ?' ಎನಲು, 'ಆಕೆಯು ನಾನು ಕನ್ಯೆಯು' ಎಂದಳು. ಬಳಿಕ ರಾಜನು ಆಕೆಯನ್ನು ಕುರಿತು 'ನಾನು ಕನ್ಯಾರ್ಥಿಯಾಗಿರುವೆನು' ಎಂದನು. ಅದನ್ನು ಕೇಳಿ ಆ ಕನ್ಯೆಯು 'ಎಲೈ ರಾಯನೆ, ಸಮಯನಿಬಂಧನೆಯಿಂದ ನಿನಗೆ ನಾನು ಲಭ್ಯಳಾಗುವೆನು' ಎನಲು, ರಾಜನು 'ಆ ಸಮಯನಿಬಂಧನೆಯು ಎಂಥಾದ್ದು' ಎಂದು ಆಕೆಯನ್ನು ಕೇಳಿದನು. ಆ ಕನ್ಯೆಯು 'ನನಗೆ ಉದಕವನ್ನು ತೋರಿಸಕೂಡದು, ಇದೇ ಸಮಯನಿಬಂಧನೆಯು' ಎಂದಳು. ಬಳಿಕ ಆ ರಾಯನು ಹಾಗೇಯೇ ಆಗಲೆಂದು ಒಪ್ಪಿಕೊಂಡು ಆಕೆಯನ್ನು ವಿವಾಹಮಾಡಿಕೊಂಡು, ಸಂತೋಷದಿಂದ ಆಕೆಯೊಡನೆ ವಿಹರಿಸುತ್ತ ಅಲ್ಲೇ

ವಾಸಮಾಡುತ್ತಿದ್ದನು. ಆಗ ಆತನ ಸೈನ್ಯವು ಆ ಬಳಿಗೆ ಬಂದು ಆತನನ್ನು ಸುತ್ತುವರಿದು ನಿಲ್ಲಲು, ಬಳಿಕ ಆ ಪರೀಕ್ಷಿತ್ತು ಸೈನ್ಯಸಮೇತವಾಗಿ ಮನೋಹರವಾಗಿರತಕ್ಕ ಅಂದಲದಮೇಲೆ ಆ ಕನ್ಯೆಯನ್ನು ಕುಳ್ಳಿರಿಸಿಕೊಂಡು, ತನ್ನ ನಗರವನ್ನು ಪ್ರವೇಶಿಸಿ, ಏಕಾಂತಸ್ಥಳದಲ್ಲಿ ಆಕೆಯನ್ನು ಇಟ್ಟುಕೊಂಡು ವಿಹರಿಸುತ್ತಿದ್ದನು. ಆ ರಾಯನ ಸಮೀಪದಲ್ಲಿ ಸಂಚರಿಸತಕ್ಕ ಸ್ತ್ರೀಯರೂ ಮಂತ್ರಿಗಳೂ ಸಹ ಈ ವೃತ್ತಾಂತವನ್ನು ತಿಳಿಯದೆ ಇದ್ದರು. ಆಗ ಅಲ್ಲಿರುವ ಸ್ತ್ರೀಯರು 'ಇಲ್ಲಿ ನಾವು ಯಾವಕಾರ್ಯವನ್ನು ಮಾಡತಕ್ಕದ್ದು? ಇಲ್ಲಿ ನೀರನ್ನೇ ತರಕೂಡದೆಂದು ಅರಸನು ಆಜ್ಞಾಪಿಸಿರುವನು. ಇದನ್ನು ನೋಡಿದರೆ, ಏನೋ ಅಪೂರ್ವವಾಗಿ ಕಾಣಬರುವದು' ಎನಲು, ಆಗ ಮಂತ್ರಿಯು ನೀರಿಲ್ಲದೆ ಇರತಕ್ಕ ಬಂದು ಉದ್ಯಾನವನ್ನು ಮಾಡಿಸಿ, ಅಲ್ಲಿ ಪುಷ್ಪಫಲಗಳಿಂದ ಭರಿತವಾದ ವೃಕ್ಷಗಳನ್ನು ಹಾಕಿಸಿ, ಆ ವನದ ಮಧ್ಯಭಾಗದಲ್ಲಿ ಅಮೃತಕ್ಕೆ ಸಮಾನವಾದ ಉದಕವುಳ್ಳ ಬಂದು ಬಾವಿಯನ್ನು ಗೋಪ್ಯವಾಗಿ ಮಾಡಿಸಿ, ಅದರ ಸುತ್ತಲೂ ಮೇಲೂ ಮುತ್ತಿನ ಗೊಂಚಲುಗಳನ್ನು ಬಿಡಿಸಿ, ರಾಜನ ಸಮೀಪಕ್ಕೆ ಬಂದು ರಹಸ್ಯವಾಗಿ ಆತನನ್ನು ಕುರಿತು 'ಎಲೈ ರಾಯನೆ, ಉದಕವಿಲ್ಲದ ಬಂದು ಉದ್ಯಾನವನವನ್ನು ನಿರ್ಮಾಣ ಮಾಡಿಸಿರುವೆನು. ಅಲ್ಲಿ ನೀನು ವಿಹಾರಮಾಡಬಹುದು' ಎಂದು ವಿಜ್ಞಾಪಿಸಿದನು. ಆ ಮಾತನ್ನು ಕೇಳಿ ಪರೀಕ್ಷಿತ್ತು ಆ ಕನ್ಯೆಯೊಡನೆ ಆ ವನವನ್ನು ಪ್ರವೇಶಿಸಿ ಅಲ್ಲಿ ವಿಹರಿಸುತ್ತ, ಬಂದಾನೊಂದುದಿನ ಹಸಿವು ಬಾಯಾರಿಕೆಯಿಂದ ಶ್ರಾಂತನಾಗಿ, ಅಲ್ಲಿ ಮುತ್ತಿನಿಂದ ನಿರ್ಮಿಸಿರತಕ್ಕ ಮಂಟಪವನ್ನು ನೋಡಿ ಆ ಕನ್ಯೆಯೊಡನೆ ಅಲ್ಲಿ ಪ್ರವೇಶಿಸಿ, ಅಮೃತಕ್ಕೆ ಸಮಾನವಾದ ಉದಕದಿಂದ ಪೂರ್ಣವಾದ ಆ ಬಾವಿಯನ್ನು ನೋಡಿ ಅದರ ದಡದಲ್ಲಿ ಕೂತುಕೊಂಡನು. ಬಳಿಕ ಆ ಕನ್ಯೆಯನ್ನು ಕುರಿತು 'ಎಲೆ ದೇವಿ, ಈ ಉದಕದಲ್ಲಿ ಇಳಿ' ಎಂದು ನುಡಿದನು. ಆಕೆಯು ಆ ಮಾತನ್ನು ಕೇಳಿ ಆ ಬಾವಿಯಲ್ಲಿ ಮುಳುಗಿ ಮೇಲಕ್ಕೆ ಬರದೆ ಹೊರಟುಹೋದಳು. ಆಗ ರಾಜನು ಚಿಂತಾಕ್ರಾಂತನಾಗಿ ಆಕೆಯನ್ನು ಹುಡುಕುತ್ತ, ಆ ಬಾವಿಯ ನೀರನ್ನೆಲ್ಲಾ ಈಚೆಗೆ ತೆಗೆದು ಸುರಿಯಿಸಿ, ಆ ಬಾವಿಯ ಎಲ್ಲಾ ಕಡೆಯಲ್ಲೂ ಆಕೆಯನ್ನು ಹುಡುಕಿ ಕಾಣದೆ, ಪೊಟರೆಯಲ್ಲಿದ್ದ ಬಂದು ಕಪ್ಪೆಯನ್ನು ಕಂಡು ಆ ಕಪ್ಪೆಯೇ ತನಗೆ ಮೋಸಮಾಡಿ ತನ್ನ ಪ್ರಿಯೆಯನ್ನು ನುಂಗಿರಬಹುದೆಂದು ತಿಳಿದುಕೊಂಡು, ತನ್ನ ದೇಶದಲ್ಲಿರುವ ಕಪ್ಪೆಗಳನ್ನೆಲ್ಲಾ ಸಂಹರಿಸಿಬಿಡತಕ್ಕದ್ದೆಂದು ತನ್ನ ಪರಿವಾರಕ್ಕೆ ಆಜ್ಞೆಯನ್ನು ಮಾಡಿ, ಯಾವನು ಕಪ್ಪೆಗಳನ್ನು ಸಂಹರಿಸಿ ಕೊಂಡುಬರುವನೋ ಅವನಿಗೆ ಬೇಕಾದಷ್ಟು ದ್ರವ್ಯವನ್ನು ಕೊಡುವೆನೆಂದು ಹೇಳಿದನು.

ಆಗ ಅನೇಕರು ಕಪ್ಪೆಗಳನ್ನು ಸಂಹರಿಸುವದಕ್ಕೆ ಆರಂಭಿಸಲು, ಕಪ್ಪೆಗಳೆಲ್ಲಾ ಭಯಪಟ್ಟು ಮಂಡೂಕರಾಜನ ಸಮೀಪಕ್ಕೆ ಹೋಗಿ, ತಮ್ಮ ವೃತ್ತಾಂತವನ್ನು ತಿಳುಹಿಸಿದವು. ಬಳಿಕ ಮಂಡೂಕರಾಜನು ಋಷಿವೇಷವನ್ನು ಧರಿಸಿಕೊಂಡು, ಆ ರಾಜನಬಳಿಗೆ ಬಂದು, 'ಎಲೈ ರಾಯನೆ, ಕೋಪವನ್ನು ಮಾಡಬೇಡ. ನಿರಪರಾಧಿಗಳಾದ ಕಪ್ಪೆಗಳನ್ನು ಸಂಹರಿಸಬೇಡ. ಅವುಗಳಲ್ಲಿ ನೀನು ಕೃಪೆಯನ್ನು ಮಾಡು. ಎಲೈ ರಾಯನೆ, ಈ ವಿಷಯದಲ್ಲಿ ತಿಳುವಳಿಕೆಯಿಲ್ಲದೆ ಕಪ್ಪೆಗಳನ್ನು ಸಂಹರಿಸುವದಕ್ಕೆ ಯತ್ನಿಸಿದರೆ ಜನಗಳ ಐಶ್ವರ್ಯವು ನಷ್ಟವಾಗಿ ಹೋಗುವದೆಂದು ಬಂದು ಗಾದೆಯಿರುವದು. ಇದು ನಿಜವಾದದ್ದೆಂದು ತಿಳಿ. ಸ್ತ್ರೀಯು ತಪ್ಪಿಸಿಕೊಂಡು ಹೋದದ್ದರಿಂದ ಉಂಟಾದ ಚಿಂತೆಯನ್ನು ಬಿಡು. ಸುಮ್ಮನೆ ಕಪ್ಪೆಗಳನ್ನು ಸಂಹಾರಮಾಡಿದ್ದರಿಂದ ಆ ಸ್ತ್ರೀಯೇನಾದರೂ ಸಿಕ್ಕುವಳೆ?' ಎಂದು ನುಡಿಯಲು, ಕಾಂತಾವಿರಹದಿಂದ ದುಃಖಿತನಾದ ಆ ರಾಜನು ಋಷಿಯಾಗಿರುವ ಆ ಮಂಡೂಕರಾಜನನ್ನು ನೋಡಿ 'ದುಷ್ಟವಾದ ಈ ಕಪ್ಪೆಗಳು ನನ್ನ ಪ್ರಿಯಭಾರ್ಯೆಯನ್ನು ತಿಂದುಹಾಕಿಬಿಟ್ಟಿರುವವು. ಆದ್ದರಿಂದ ಇವುಗಳನ್ನು ನಾನು ಸಂಹಾರಮಾಡುವದೇಸರಿ. ಈ ವಿಷಯದಲ್ಲಿ ನೀನು ನಿರ್ಬಂಧಮಾಡಬೇಡ' ಎನಲು, ಆ ಮಾತನ್ನು ಕೇಳಿ ಮಂಡೂಕರಾಜನು ಮನಸ್ಸಿನಲ್ಲಿ ಬಹಳವಾಗಿ ವ್ಯಥೆಪಟ್ಟು 'ಎಲೈ ರಾಯನೆ, ನಾನು ಆಯುವೆಂಬ ಮಂಡೂಕರಾಜನು. ಸುಶೋಭನೆಯೆಂಬ ನನ್ನ ಮಗಳಾದ ಆ ಕನ್ಯೆಯು ದುಶ್ಶೀಲೆಯಾಗಿ ಬಹುಕಾಲದಿಂದ ಅನೇಕ ರಾಜರಿಗೆ ವಂಚನೆಮಾಡಿರುವಂತೆ ಈಗ ನಿನಗೂ ವಂಚನೆಮಾಡಿರುವಳು' ಎಂದನು. ಆ ಮಾತನ್ನು ಕೇಳಿ ಪರೀಕ್ಷಿತ್ತು 'ಎಲೈ ಆಯುವೆ, ಹಾಗಾದರೆ ಆ ಕನ್ಯೆಯನ್ನು ನನಗೆ ತಂದುಕೊಟ್ಟರೆ ನಾನು ಕಪ್ಪೆಗಳನ್ನು ಸಂಹರಿಸು

ವದನ್ನು ಬಿಡುವೆನು' ಎಂದು ನುಡಿದನು. ಬಳಿಕ ಮಂಡೂಕರಾಜನು ತನ್ನ ಮಗಳನ್ನು ಆ ರಾಯನಿಗೆ ತಂದು ಕೊಟ್ಟು, ಆತನ ಶುಶ್ರೂಷೆಯನ್ನು ಮಾಡುವಂತೆ ಆಕೆಗೆ ಆಜ್ಞಾಪಿಸಿ, ಕೋಪಗೊಂಡು, 'ರಾಜನಿಗೆ ವಂಚನೆಯನ್ನು ಮಾಡಿದವಳಾದ್ದರಿಂದ ನಿನ್ನ ಗರ್ಭದಲ್ಲಿ ಬ್ರಾಹ್ಮಣರನ್ನು ದ್ವೇಷಿಸತಕ್ಕ ಮಕ್ಕಳು ಹುಟ್ಟಲಿ' ಎಂದು ಶಾಪವನ್ನು ಕೊಟ್ಟನು. ಬಳಿಕ ಆ ರಾಯನು ಆ ಸುಶೋಭನೆಯೆಂಬ ಸ್ತ್ರೀಯನ್ನು ಸೇರಿ ಆಕೆಯೊಡನೆ ಸ್ವೇಚ್ಛೆಯಾಗಿ ವಿಹರಿಸುತ್ತ, ತ್ರೈಲೋಕ್ಯಾಧಿಪತ್ಯವನ್ನು ಪಡದವನಂತೆ ಸಂತೋಷಪಟ್ಟು ಕಣ್ಣುಗಳಲ್ಲಿ ಆನಂದಬಾಷ್ಪವನ್ನು ಸುರಿಸುತ್ತ, ಮಂಡೂಕರಾಜನಿಗೆ ವಂದನೆಯನ್ನು ಮಾಡಿ, 'ಎಲೈ ಮಂಡೂಕರಾಜನೆ, ನನ್ನಲ್ಲಿ ನೀನು ಸಂಪೂರ್ಣವಾಗಿ ಅನುಗ್ರಹವನ್ನು ಮಾಡಿದೆ' ಎಂದು ಬಹಳವಾಗಿ ಶ್ಲಾಘಿಸಿದನು. ಬಳಿಕ ಮಂಡೂಕರಾಜನು ಮಗಳಿಗೆ ಬುದ್ಧಿವಾದವನ್ನು ಹೇಳಿ, ಬಂದಂತೆ ಹೊರಟುಹೋದನು.

ಬಳಿಕ ಕೆಲವುಕಾಲವು ಕಳೆಯಲು, ಅಪರೀಕ್ಷಿತ್ತಿಗೆ ಮಂಡೂಕರಾಜನ ಕುಮಾರಿಯಾದ ಸುಶೋಭನೆಯೆಂಬವಳಲ್ಲಿ 'ಶಲ, ದಲ, ಬಲ' ಎಂಬ ಮೂರುಮಂದಿ ಕುಮಾರರು ಹುಟ್ಟಿದರು. ಅವರಲ್ಲಿ ಜ್ಯೇಷ್ಠನಾದ ಶಲನಿಗೆ ಪರೀಕ್ಷಿತ್ತು ರಾಜ್ಯಾಭಿಷೇಕವನ್ನು ಮಾಡಿ, ತಪಸ್ಸು ಮಾಡಬೇಕೆಂದು ವನಕ್ಕೆ ಹೊರಟು ಹೋದನು. ಆ ಶಲರಾಯನು ಬಂದಾನೊಂದುದಿವಸ ರಥದಮೇಲೆ ಕೂತುಕೊಂಡು ಮೃಗಗಳನ್ನು ಬೇಟೆಯಾಡುವದಕ್ಕಾಗಿ ಅರಣ್ಯಕ್ಕೆ ಹೋಗಿ, ಬಂದು ಮೃಗವನ್ನು ನೋಡಿ ಅದರಹಿಂದೆ ಹೊರಟು, ತನ್ನ ಸಾರಥಿಗೆ ರಥವನ್ನು ಜಾಗ್ರತೆಯಾಗಿ ನಡಸೆಂದು ಆಜ್ಞಾಪಿಸಿದನು. ಆಗ ಸಾರಥಿಯು 'ಎಲೈ ರಾಯನೆ, ಈ ಮೃಗವು ನಿನಗೆ ದೊರೆಯತಕ್ಕದ್ದಲ್ಲವಾದ್ದರಿಂದ ಇದನ್ನು ಅಟ್ಟಿಕೊಂಡು ಹೋಗಬೇಡ. ಈ ರಥಾಶ್ವಗಳು ವಾಮದೇವನ ರಥಕ್ಕೆ ಕಟ್ಟತಕ್ಕ ಅಶ್ವಗಳಿಗೆ ಸಮಾನವಾಗಿದ್ದರೆ ಶೀಘ್ರವಾಗಿ ಓಡುವವು' ಎನಲು, ಆ ರಾಯನು 'ಎಲೈ ಸೂತನೆ, ವಾಮದೇವನ ರಥಕ್ಕೆ ಕಟ್ಟತಕ್ಕ ಅಶ್ವಗಳು ಎಂಥಾವು ಹೇಳು, ನೀನು ಹೇಳದೆ ಹೋದರೆ ನಿನ್ನನ್ನು ಸಂಹರಿಸುವೆನು' ಎನಲು, ಆ ಸೂತನು ವಾಮದೇವನ ಶಾಪಕ್ಕೆ ಅಂಜಿಕೊಂಡು, ಆ ವೃತ್ತಾಂತವನ್ನು ಹೇಳದೆ ಹೋದನು. ಬಳಿಕ ಆ ರಾಯನು 'ಎಲೈ ಸೂತನೆ, ಇನ್ನೊಂದಾವರ್ತಿ ಕೇಳುತ್ತೇನೆ. ನೀನು ವಾಮದೇವನ ಕುದುರೆಗಳ ವೃತ್ತಾಂತವನ್ನು ಹೇಳದೆಹೋದರೆ ಈ ಖಡ್ಗದಿಂದ ನಿನ್ನನ್ನು ಸಂಹಾರ ಮಾಡಿಬಿಡುವೆನು' ಎನಲು, ಸಾರಥಿಯು ಆಮಾತಿಗೆ ಭೀತನಾಗಿ 'ವಾಮದೇವನ ಅಶ್ವಗಳು ಮನೋವೇಗಕ್ಕೆ ಸಮವಾದ ವೇಗವುಳ್ಳವುಗಳು' ಎಂದನು. ಬಳಿಕ ಆರಾಯನು 'ಎಲೈ ಸಾರಥಿಯೆ ಹಾಗಾದರೆ, ತ್ವರ್‍ಯವಾಗಿ ಆ ಋಷಿಯ ಆಶ್ರಮಕ್ಕೆ ಹೋಗೋಣ ನಡೆ' ಎಂದು, ವಾಮದೇವನ ಆಶ್ರಮಕ್ಕೆ ಬಂದು, ಆ ಮಹರ್ಷಿಯನ್ನು ಕಂಡು 'ಎಲೈ ಮಹಾತ್ಮನೆ, ನಾನು ಮೃಗವನ್ನು ಬಾಣದಿಂದ ಹೊಡೆದೆನು. ಆ ಮೃಗವು ತಪ್ಪಿಸಿಕೊಂಡು ಓಡಿಹೋಗಿರುವದು. ಅದನ್ನು ಹುಡುಕುವದಕ್ಕಾಗಿ ನಿನ್ನ ಕುದರೆಗಳನ್ನು ಕೊಡು' ಎನಲು, ವಾಮದೇವನು 'ಎಲೈ ರಾಯನೆ, ನನ್ನ ಕುದುರೆಗಳನ್ನು. ನಿನಗೆ ಕೊಡುವೆನು ನಿನ್ನ ಕಾರ್ಯವಾದಮೇಲೆ ನನ್ನ ಕುದುರೆಗಳನ್ನು ನನಗೆ ತಂದು ಕೊಡು' ಎಂದನು. ಬಳಿಕ ಆ ರಾಯನು ಹಾಗೇ ಆಗಲೆಂದು ಆ ಋಷಿಯ ಕುದುರೆಗಳನ್ನು ತೆಗೆದುಕೊಂಡು ತನ್ನ ರಥಕ್ಕೆ ಕಟ್ಟಿಕೊಂಡು, ಆ ಮೃಗವು ಹೋದ ಮಾರ್ಗವನ್ನನುಸರಿಸಿ ಹೋಗುತ್ತ, ಸಾರಥಿಯನ್ನು ಕುರಿತು 'ಎಲೈ ಸಾರಥಿಯೆ, ಈ ಶ್ರೇಷ್ಠವಾದ ಕುದುರೆಗಳು ಬ್ರಾಹ್ಮಣನಾದ ವಾಮದೇವನಿಗೆ ಯೋಗ್ಯವಾದವುಗಳಲ್ಲವಾದ್ದರಿಂದ ಆತನಿಗೆ ಈ ಕುದುರೆಗಳನ್ನು ನಾನು ಕೊಡತಕ್ಕವನಲ್ಲ' ಎಂದು ಹೇಳಿ, ಅರಣ್ಯದಲ್ಲಿ ಮೃಗಗಳನ್ನು ಬೇಟೆಯಾಡಿಕೊಂಡು ಆ ಅಶ್ವಗಳೊಡನೆ ತನ್ನ ನಗರಕ್ಕೆ ಹೋಗಿ ಆ ವಾಮದೇವ ಮಹರ್ಷಿಯ ಕುದುರೆಗಳನ್ನು ಅಂತಃಪುರದಲ್ಲಿ ಕಟ್ಟಿಹಾಕಿಸಿದನು. ಆಬಳಿಕ ವಾಮದೇವ ಮಹರ್ಷಿಯು 'ರಾಜಪುತ್ರನಾದ ಶಲನು ನನ್ನ ಕುದುರೆಗಳನ್ನು ತೆಗೆದುಕೊಂಡು ಹೋಗಿ ಮರಳಿ ನನಗೆ ಕೊಡದೆ ತಾನೇ ಇಟ್ಟುಕೊಂಡು ಬಿಟ್ಟಿರುವನು. ಮುಂದೇನು ಮಾಡತಕ್ಕದ್ದು' ಎಂದು ಆಲೋಚಿಸಿ, ಬಂದು ತಿಂಗಳು ಸುಮ್ಮನಿದ್ದು, ತನ್ನ ಶಿಷ್ಯನನ್ನು ಕುರಿತು 'ಎಲೈ ಶಿಷ್ಯನೆ, ನೀನು ಶಲರಾಯನ ಬಳಿಗೆ ಹೋಗಿ ಆತನನ್ನು ಕುರಿತು, ನಮ್ಮ

ಗುರುಗಳ ಕುದುರೆಗಳಿಂದ ಆಗತಕ್ಕ ಕೆಲಸವು ಆಗಿದ್ದರೆ ಅವುಗಳನ್ನು ಮರಳಿ ಅವರ ಸನ್ನಿಧಿಗೆ ಕಳುಹಿಸಿಕೊ ಡೆಂದು ಹೇಳಿ, ಆ ಕುದುರೆಗಳನ್ನು ತೆಗೆಯಿಸಿಕೊಂಡು ಬಾ' ಎಂದು ಆಜ್ಞಾಪಿಸಿದನು. ಆಗ ಆ ಶಿಷ್ಯನು ಆ ರಾಯನ ಬಳಿಗೆ ಹೋಗಿ ಆ ಕುದುರೆಗಳನ್ನು ಕೇಳಿದನು. ಆಗ ಶಲರಾಯನು 'ಎಲೈ ಬ್ರಾಹ್ಮಣನೆ, ಇಂಥಾ ಕುದುರೆಗಳು ರಾಜರಿಗೆ ಯೋಗ್ಯವಾದವುಗಳು. ಇವುಗಳಿಂದ ಬ್ರಾಹ್ಮಣರಿಗೇನು ಪ್ರಯೋಜನ ? ನೀನು ಸುಮ್ಮನೆ ಹೊರಟು ಹೋಗು' ಎನಲು, ಆ ಶಿಷ್ಯನು ಅಲ್ಲಿಂದ ತಮ್ಮ ಗುರುಗಳ ಬಳಿಗೆ ಬಂದು ಆಮಾತನ್ನು ತಿಳುಹಿಸಿದನು. ವಾಮದೇವನು ಅಪ್ರಿಯವಾದ ಆ ಮಾತನ್ನು ಕೇಳಿ, ಕ್ರೋಧಾವೇಶದಿಂದ ಕೂಡಲೆ ಆ ರಾಯನ ಬಳಿಗೆ ತಾನೇ ಹೋಗಿ, ಆ ಕುದುರೆಗಳನ್ನು ಕೊಡೆಂದು ಎಷ್ಟು ಕೇಳಿದಾಗ್ಯೂ ರಾಯನು ಕೊಡದಿರಲು 'ಎಲೈ ರಾಯನೆ, ಬ್ರಾಹ್ಮಣರೊಡನೆ ವಿರೋಧವನ್ನು ಬೆಳಸತಕ್ಕ ನಿನ್ನನ್ನು ವರುಣನು ತನ್ನ ಪಾಶಾಯುಧದಿಂದ ಸಂಹಾರ ಮಾಡುವನು. ಆದ್ದರಿಂದ ನೀನು ಮತ್ತೊಂದನ್ನು ಯೋಚಿಸದೆ ನನ್ನ ಕುದುರೆಗಳನ್ನು ನನಗೆ ಕೊಟ್ಟುಬಿಡು' ಎಂದು ನುಡಿದನು. ಬಳಿಕ ಶಲರಾಯನು 'ಎಲೈ ವಾಮದೇವನೆ, ಬ್ರಾಹ್ಮಣರಿಗೆ ಬೇಕಾದದ್ದು ಸಾಧುವಾದ ಎತ್ತುಗಳು. ಅವುಗಳನ್ನು ನಿನಗೆ ಬೇಕಾದಷ್ಟು ಕೊಡುವೆನು. ಆ ಎತ್ತುಗಳನ್ನು ನಿನ್ನ ರಥಕ್ಕೆ ಕಟ್ಟಿಕೊಂಡು ಯಥೇಚ್ಛವಾಗಿ ನೀನು ಸಂಚಾರ ಮಾಡಬಹುದು. ಇದರಮೇಲೆ ನಿನ್ನಂಥಾ ಮಹರ್ಷಿಯನ್ನು ವೇದಗಳೇ ಬೇಕಾದ ಸ್ಥಳಗಳಿಗೆ ಕರೆದುಕೊಂಡು ಹೋಗುವವು. ಈ ಕುದುರೆಗಳಿಂದ ನಿನಗೆ ಪ್ರಯೋಜನ ವೇನು' ಎನಲು, ವಾಮದೇವನು 'ಎಲೈ ರಾಯನೆ ಪರಲೋಕದಲ್ಲಿ ನಮ್ಮನ್ನು ವಹಿಸತಕ್ಕವು ವೇದಗಳೇಸರಿ. ಆದರೂ ಈ ಭೂಲೋಕದಲ್ಲಿ ಸಂಚರಿಸುವದಕ್ಕೆ ನಮಗೆ ಇಂಥಾ ವಾಹನಗಳೇ ಬೇಕಾದವುಗಳು' ಎಂದನು. ಅದಕ್ಕೆ ಆ ರಾಯನು 'ಎಲೈ ಮಹರ್ಷಿಯೆ, ನಿನಗೆ ಬೇಕಾದಕಡೆ ಸಂಚರಿಸುವದಕ್ಕೆ ನಾಲ್ಕು ಹೇಸರಕತ್ತೆಗಳನ್ನೇ ಆಗಲಿ, ವೇಗಶಾಲಿಗಳಾದ ನಾಲ್ಕು ಬೇರೇ ಕುದುರೆಗಳನ್ನೇ ಆಗಲಿ, ನಾನು ಕೊಡುವೆನು. ಈ ಕುದುರೆಗಳುಮಾತ್ರ ಕ್ಷತ್ರಿಯನಾದ ನನ್ನವುಗಳೇ ಹೊರತು ನಿನ್ನದಲ್ಲವೆಂದು ತಿಳಿ' ಎಂದು ಪ್ರತ್ಯುತ್ತರವನ್ನು ಹೇಳಿದನು. ಆ ಮಾತನ್ನು ಕೇಳಿ ವಾಮದೇವನು 'ಎಲೈ ರಾಯನೆ, ಬ್ರಾಹ್ಮಣರ ವ್ರತವು ಬಹಳ ಘೋರವಾದದ್ದೆಂದು ಹೇಳುವರು. ಆದರೆ ಈಗ ನಾನು ಕ್ರೂರರಾಗಿಯೂ ಮಹತ್ತಾದ ಆಕಾರವುಳ್ಳವರಾಗಿಯೂ ಇರುವ ಉಕ್ಕಿನ ರಾಕ್ಷಸರನ್ನು ನನ್ನ ತಪೋಬಲದಿಂದ ನಿರ್ಮಾಣಮಾಡುವೆನು. ಆ ರಾಕ್ಷಸರು ಶೂಲಾಯುಧವನ್ನು ಹಿಡಿದು ನಾಲ್ಕುಭಾಗವಾಗಿ ನಿನ್ನನ್ನು ಸಂಹಾರಮಾಡಿ ದಿಕ್ಕುದಿಕ್ಕುಗಳಿಗೆ ತೆಗೆದುಕೊಂಡು ಹೋಗಲಿ' ಎಂದು ನುಡಿಯಲು, ಶಲರಾಯನು 'ಎಲೈ ವಾಮದೇವನೇ, ತ್ರಿಕರಣದಿಂದಲೂ ನನ್ನನ್ನು ಸಂಹರಿಸುವದಕ್ಕೆ ನೀನು ಉದ್ಯುಕ್ತನಾಗಿರುವೆಯೆಂದು ಯಾರು ಹೇಳುವರೋ ಅವರು ನನ್ನಕಡೆಯವರಾಗಿಯೇ ಶೂಲಾಯುಧವನ್ನು ಧರಿಸಿಕೊಂಡು ಶಿಷ್ಯರಿಂದೊಡನೆ ನಾದ ನಿನ್ನನ್ನು ಸಂಹರಿಸಲಿ' ಎಂದನು. ಆಮಾತನ್ನು ಕೇಳಿ ವಾಮದೇವನು 'ಎಲೈ ರಾಯನೆ, ನೀನು ಹಿಂದಕ್ಕೆ ತಂದುಕೊಡುತ್ತೇನೆಂದು ಹೇಳಿ ನನ್ನ ಕುದುರೆಗಳನ್ನು ತೆಗೆದುಕೊಂಡು ಬಂದು ಈಗ ಹೀಗೆ ಕಲಹವನ್ನು ಮಾಡುತ್ತಿರುವೆ. ಇದು ನಿನಗೆ ತಕ್ಕದ್ದಲ್ಲ. ನಿನಗೆ ಕ್ಷೇಮದಿಂದ ಬದುಕಬೇಕೆಂಬ ಅಪೇಕ್ಷೆಯಿದ್ದರೆ, ನನ್ನ ಕುದರೆಗಳನ್ನು ನನಗೆ ಕೊಟ್ಟುಬಿಡು' ಎನಲು, ಶಲನು 'ಎಲೈ ಬ್ರಾಹ್ಮಣನೆ, ನಿನ್ನನ್ನುಸಂಹರಿಸುವದು ಉಚಿತವಲ್ಲವಾದುದರಿಂದ ನೀನು ಅಸತ್ಯವಾದಿಯಾದರೂ ನಿನ್ನನ್ನು ನಾನು ದಂಡಿಸತಕ್ಕವನಲ್ಲ. ಈಹೊತ್ತು ಮೊದಲುಗೊಂಡು ನಾನು ನಿನ್ನ ಅಪರಾಧವನ್ನುಕ್ಷಮಿಸಿ ಆಜ್ಞೆಯಾದಂತೆ ನಡೆದು ಕೊಂಡು ಪುಣ್ಯಲೋಕವನ್ನುಪಡೆಯುವೆನು' ಎಂದನು. ವಾಮದೇವನು 'ಎಲೈ ರಾಯನೆ, ತ್ರಿಕರಣದಿಂದಲೂ ಬ್ರಾಹ್ಮಣರು ದಂಡನೆಗೆ ಯೋಗ್ಯರಾದವರಲ್ಲ. ಯಾವನು ತಪಸ್ಸಿನಿಂದ ಜ್ಞಾನವನ್ನು ಸಂಪಾದಿಸುವನೋ ಅಂಥಾವನೇ ಶ್ರೇಷ್ಠನೆನಿಸಿಕೊಂಡು ಉತ್ತಮವಾದ ಗತಿಯನ್ನು ಸಂಪಾದಿಸುವನು' ಎಂದನು. ಹೀಗೆ ಅವರು ಮಾತನಾಡುತ್ತಿರಲು, ವಾಮದೇವನ ತಪೋಮಹಿಮೆಯಿಂದ ಉಕ್ಕಿನ ಶರೀರವುಳ್ಳವರಾಗಿ ಹುಟ್ಟಿದ ಘೋರರಾದ ರಾಕ್ಷಸರು ಶೂಲಾಯುಧಗಳನ್ನು ಹಿಡಿದುಕೊಂಡು ಆ ರಾಯನನ್ನು ಹಿಂಸಿಸುವದಕ್ಕೆ ಉಪಕ್ರಮಿಸಿದರು. ಆಗ ಆ ರಾಯನು 'ಇಕ್ಷ್ವಾಕುವಂಶದಲ್ಲಿ ಹುಟ್ಟಿದವರು ಯಾರಾಗಲಿ, ಮತ್ತು ನನ್ನ ತಮ್ಮಂದಿರಾದ ದಲ ಬಲರೇ ಆಗಲಿ, ನನ್ನ ಆಜ್ಞಾನುಸಾರಿಗಳಾಗಿದ್ದ ಪಕ್ಷದಲ್ಲಿ, ನನ್ನಂತೆ ಯಾರೂ ಈ ವಾಮದೇವನಿಗೆ ಈ

ಕುದುರೆಗಳನ್ನು ಕೊಡಕೂಡದು. ಈ ವಾಮದೇವನು ಧರ್ಮಿಷ್ಠನಾದವನಲ್ಲ' ಎಂದು, ಗಟ್ಟಿಯಾಗಿ ಕೂಗಿಕೊಳ್ಳುತ್ತಿರಲು, ಆ ರಾಕ್ಷಸರು ಆತನನ್ನು ಸಂಹರಿಸಿಬಿಟ್ಟರು. ಆತನು ಮೃತನಾದ್ದನ್ನು ಕೇಳಿ, ಇಕ್ಷ್ವಾಕುವಂಶದವರು ಆ ರಾಜ್ಯದಲ್ಲಿ ದಲನಿಗೆ ಪಟ್ಟಾಭಿಷೇಕವನ್ನು ಮಾಡಿದರು. ಬಳಿಕ ವಾಮದೇವನು ಆ ದಲರಾಯನ ಬಳಿಗೆ ಹೋಗಿ, 'ಎಲೈ ರಾಯನೆ, ಬ್ರಾಹ್ಮಣರ ಸ್ವತ್ತನ್ನು ಅವರಿಗೆ ಕೊಟ್ಟುಬಿಡಬೇಕು. ನೀನು ಅಧರ್ಮಕ್ಕೆ ಅಂಜತಕ್ಕವನೇ ಆದರೆ, ಶೀಘ್ರವಾಗಿ ನನ್ನ ಕುದುರೆಗಳನ್ನು ನನಗೆ ಕೊಟ್ಟುಬಿಡು ಎನಲು ; ಆ ದಲನು ಆ ಮಾತನ್ನು ಕೇಳಿ ಕೋಪಗೊಂಡು, ತನ್ನ ಸಾರಥಿಯನ್ನು ನೋಡಿ 'ಎಲೈ ಸಾರಥಿಯೆ, ವಿಷವನ್ನು ಬಳಿದಿರತಕ್ಕ ಘೋರನಾದ ಬಾಣವನ್ನು ತೆಗೆದುಕೊಂಡು ಬಾ. ಅದರಿಂದ ಪೆಟ್ಟುತಿಂದು ಈ ವಾಮದೇವನು ನೆಲದಮೇಲೆ ಬಿದ್ದು ನಾಯಿ ನರಿಗಳ ಪಾಲಾಗಿ ಹೋಗಲಿ' ಎಂದನು. ಆಗ ವಾಮದೇವನು 'ಎಲೈ ದಲನೆ ನಿನ್ನ ಪಟ್ಟಮಹಿಷಿಯ ಹೊಟ್ಟೆಯಲ್ಲಿ ಹುಟ್ಟಿರತಕ್ಕ ಹತ್ತುವರುಷ ವಯಸ್ಸುಳ್ಳ ಶ್ಯೇನಜಿತ್ತೆಂಬ ಕುಮಾರನನ್ನು ಆ ನಿನ್ನಬಾಣವು ನನ್ನ ಆಜ್ಞೆಯಿಂದ ಘೋರನಾದರೂಪವನ್ನು ತಾಳಿ ಸಂಹರಿಸಿಬಿಡಲಿ' ಎಂದನು. ಕೂಡಲೆ ದಲನಿಂದ ವಾಮದೇವನಿಗಾಗಿ ಬಿಡಲ್ಪಟ್ಟ ಆ ವಿಷಬಾಣವು ವಾಮದೇವನ ಆಜ್ಞೆಯಿಂದ ಪ್ರೇರಿತವಾಗಿ ಅಂತಃಪುರದಲ್ಲಿದ್ದ ಶ್ಯೇನಜಿತ್ತನ್ನು ಸಂಹಾರಮಾಡಿಬಿಟ್ಟಿತು. ಬಳಿಕ ಆ ರಾಜನು 'ಎಲೈ ಇಕ್ಷ್ವಾಕುವಂಶದ ರಾಜರೆ ನಿಮ್ಮೆಲ್ಲರಿಗೂ ತೃಪ್ತಿಯಾಗುವದಕ್ಕೋಸ್ಕರ ವಿಷಮಯವಾದ ಮತ್ತೊಂದು ಬಾಣದಿಂದ ಈ ಋಷಿಯನ್ನು ಸಂಹರಿಸಿ ಬಿಡುವೆನು. ನೀವೆಲ್ಲರೂ ನನ್ನ ಪರಾಕ್ರಮವನ್ನು ನೋಡಿರಿ' ಎಂದು ನುಡಿಯಲು, ವಾಮದೇವನು 'ಎಲೈ ರಾಯನೆ, ಅಂಥಾ ವಿಷಮಯವಾದ ಬಾಣವನ್ನು ನನ್ನ ಮೇಲೆ ಪ್ರಯೋಗಿಸಬೇಕೆಂದು ನೀನು ಯೋಚಿಸಿರುವೆಯಷ್ಟೆ? ಆ ಬಾಣವನ್ನು ನೀನು ಧನುಸ್ಸಿನಲ್ಲಿ ಹೂಡುವದಕ್ಕೂ ಪ್ರಯೋಗಿಸುವದಕ್ಕೂ ಸಮರ್ಥನಾಗಕೆಲಸವಿಲ್ಲ' ಎಂದನು. ದಲನು ಆ ಬಾಣವನ್ನು ಸಂಧಾನಮಾಡುವದಕ್ಕೂ ಪ್ರಯೋಗಿಸುವದಕ್ಕೂ ಸಾಮರ್ಥ್ಯವಿಲ್ಲದೆ, ಆ ಮಹರ್ಷಿಯ ಮಹಿಮೆಯಿಂದ ಕೈಗಳನ್ನು ಅಲ್ಲಾಡಿಸುವದಕ್ಕೂಕೂಡ ಆಗದೆ, ತನ್ನ ಪರಿವಾರವನ್ನು ನೋಡಿ, 'ಎಲೈ ಪ್ರಜೆಗಳಿರಾ, ಈ ಮಹರ್ಷಿಯ ಮಹಿಮೆಯಿಂದ ನಾನು ಸ್ತಂಭಿಸಿ ಹೋಗಿರುವೆನು. ಈತನೇ ಸುಖವಾಗಿ ಜೀವಿಸಲಿ' ಎನಲು, ವಾಮದೇವನು 'ಎಲೈ ಪಾಪಾತ್ಮನೆ, ಈ ಬಾಣದಿಂದ ನೀನು ನಿನ್ನ ಪತ್ನಿಯನ್ನು ಸಂಹರಿಸು. ಬಳಿಕ ನೀನು ಬ್ರಹ್ಮಹತ್ಯವನ್ನು ಮಾಡಬೇಕೆಂದು ಪ್ರಯತ್ನಪಟ್ಟದ್ದರಿಂದುಂಟಾದ ಪಾಪವು ನಿನಗೆ ನಿವೃತ್ತಿಯಾಗುವದು' ಎಂದನು. ಆ ಮಾತನ್ನು ಕೇಳಿ, ದಲನು ಆ ಕಾರ್ಯವನ್ನು ಮಾಡುವದಕ್ಕೆ ಉಜ್ಜುಗಿಸಲು, ಆತನ ಪತ್ನಿಯಾದ ರಾಜಕುಮಾರಿಯು ವಾಮದೇವನನ್ನು ಕುರಿತು, 'ಎಲೈ ಮಹಾತ್ಮನೆ, ಪಾಪಿಷ್ಠನಾದ ಈ ನನ್ನ ಪತಿಗೆ ಬ್ರಾಹ್ಮಣರನ್ನು ಸೇವಿಸೆಂದು ಒಳ್ಳೇಮಾತುಗಳನ್ನು ನಾನು ಬೋಧಿಸಿದವಳೇ ಆಗಿದ್ದರೆ, ನನಗೆ ಪುಣ್ಯಲೋಕಪ್ರಾಪ್ತಿಯಾಗಲಿ' ಎನಲು, ವಾಮದೇವನು ಸಂತೋಷಪಟ್ಟು 'ಎಲೌ ರಾಜಪುತ್ರಿಯೆ, ನಿನ್ನಿಂದ ಈ ರಾಜಕುಲವು ಉದ್ಧಾರಮಾಡಲ್ಪಟ್ಟಿತು. ನಿನಗೆ ನಾನು ಬೇಕಾದ ವರವನ್ನು ಕೊಡುವೆನು ಬೇಡು. ಮಹತ್ತಾದ ಈ ರಾಜ್ಯವನ್ನೂ ನಿಮ್ಮ ಸ್ವಜನಗಳನ್ನೂ ನೀನೇ ಆಳು' ಎಂದನು. ಅದನ್ನು ಕೇಳಿ ಅ ರಾಜಪುತ್ರಿಯು, 'ಎಲೈ ಮಹಾನುಭಾವನೆ, ನೀನು ನನ್ನಲ್ಲಿ ಅನುಗ್ರಹಮಾಡುವ ಪಕ್ಷದಲ್ಲಿ, ನನ್ನ ಪತಿಯು ಪಾಪದಿಂದ ಮುಕ್ತನಾಗುವಹಾಗೂ, ಪುತ್ರಮಿತ್ರಾಮಾತ್ಯಸಹಿತನಾಗಿ ಸುಖವಾಗಿರುವಹಾಗೂ, ನನಗೆ ವರಪ್ರದಾನವನ್ನು ಮಾಡು. ಎಂದು ಬೇಡಿಕೊಂಡಳು. ಆ ಮಾತನ್ನು ಕೇಳಿ ವಾಮದೇವನು ಹಾಗೇ ಆಗಲೆಂದು ವರವನ್ನು ಕೊಟ್ಟನು. ಬಳಿಕ ಆ ರಾಜನು ಸಂತೋಷಭರಿತನಾಗಿ ವಾಮದೇವಮಹರ್ಷಿಗೆ ವಂದನೆಯನ್ನು ಮಾಡಿ, ಆತನ ಕುದುರೆಗಳನ್ನು ಆತನಿಗೆ ಕೊಟ್ಟುಬಿಟ್ಟನು" ಎಂದು ಮಾರ್ಕಂಡೇಯನು ಧರ್ಮರಾಯನಿಗೆ ಹೇಳಿದನು.

೧೯೩ನೇ ಅಧ್ಯಾಯ.—ಮಾರ್ಕಂಡೇಯಪರ್ವ—(ಇಂದ್ರನಿಗೂ ಬಕದಾಲ್ಭ್ಯರಿಗೂ ಸಂವಾದ).

ಅನಂತರದಲ್ಲಿ ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯ ರಾಯನೆ, ಬಳಿಕ ಧರ್ಮರಾಯನ ಸಭೆಯಲ್ಲಿದ್ದ ಸಕಲರಾದ ಬ್ರಾಹ್ಮಣರೂ ಋಷಿಗಳೂ ಸಹ ಮಾರ್ಕಂಡೇಯ ಮಹರ್ಷಿಯನ್ನು ಕುರಿತು "ಎಲೈ ಮಹಾತ್ಮನೆ, ಬಕನೆಂಬ ಮಹರ್ಷಿಯು ಯಾತರಿಂದ ದೀರ್ಘಾಯುಸ್ಸನ್ನು ಪಡೆದನು?" ಎಂದು ಪ್ರಶ್ನೆಮಾಡಲು ; ಮಾರ್ಕಂಡೇಯನು ಅವರನ್ನು ಕುರಿತು, "ಬಕನೆಂಬ ರಾಜರ್ಷಿಯು ಮಹಾ ತಪಸ್ವಿಯಾದವನು, ದೀರ್ಘಾಯುಷ್ಮಂತನು. ಈ ವಿಷಯದಲ್ಲಿ ನೀವು ಸಂಶಯಪಡಬೇಡಿ" ಎನಲು, ಧರ್ಮ ರಾಯನು "ಎಲೈ ಮಹಾತ್ಮನೆ, ಬಕದಾಲ್ಭ್ಯರು ಮಹಾತ್ಮರಾಗಿಯೂ ಚಿರಂಜೀವಿಗಳಾಗಿಯೂ ಲೋಕಪೂಜ್ಯ ರಾಗಿಯೂ ಇಂದ್ರನಿಗೆ ಮಿತ್ರರಾಗಿಯೂ ಇರುವರೆಂದು ನಾನು ಕೇಳಿರುವೆನು. ಇಂದ್ರನಿಗೂ ಆ ಬಕಮಹರ್ಷಿಗೂ ಸುಖದುಃಖಗಳೊಡಗೂಡಿದ ಸ್ನೇಹವುಂಟಾದದ್ದು ಹ್ಯಾಗೆ? ಅದನ್ನು ಯಥಾಸ್ಥಿತವಾಗಿ ನನಗೆ ತಿಳುಹಿಸಬೇಕು" ಎಂದು ನುಡಿದನು. ಬಳಿಕ ಮಾರ್ಕಂಡೇಯನು "ಎಲೈ ಧರ್ಮರಾಯನೆ, ಮೊದಲು ದೇವಾಸುರರಿಗೆ ಉಂಟಾದ ಯುದ್ಧವು ಶಾಂತವಾಗಲು, ಇಂದ್ರನು ಮೂರುಲೋಕಕ್ಕೂ ಅಧಿಪತಿಯಾದನು. ಆಗ ಕಾಲಕಾಲಕ್ಕೆ ವೃಷ್ಟಿಯೂ ಪೈರುಗಳ ವೃದ್ಧಿಯೂ ಉಂಟಾಗಿ, ಸಕಲರೂ ಧರ್ಮಿಷ್ಠರೂ ಆರೋಗ್ಯವುಳ್ಳವರೂ ಆಗಿ ಸಂತೋಷದಿಂದ ತಮ್ಮ ತಮ್ಮ ಧರ್ಮಗಳನ್ನು ಅನುವರ್ತಿಸಿಕೊಂಡಿದ್ದರು. ಇಂದ್ರನು, ಅದನ್ನು ತಿಳಿದು ಭೂಲೋಕವನ್ನು ನೋಡ ಬೇಕೆಂದು ಯೋಚಿಸಿ, ಐರಾವತದಮೇಲೆ ಕುಳಿತು ಸ್ವರ್ಗದಿಂದ ಹೊರಟು ಭೂಮಿಗೆ ಬಂದು, ಅಲ್ಲಲ್ಲಿ ಸಂತೋಷ ಭರಿತರಾಗಿದ್ದ ಪ್ರಜೆಗಳನ್ನೂ, ವಿಚಿತ್ರವಿಚಿತ್ರವಾದ ಋಷ್ಯಾಶ್ರಮಗಳನ್ನೂ, ಪುಣ್ಯತಮವಾದ ನದಿಗಳನ್ನೂ, ಐಶ್ವರ್ಯಭರಿತವಾದ ಪಟ್ಟಣಗಳನ್ನೂ, ಗ್ರಾಮಗಳನ್ನೂ, ಧರ್ಮದಿಂದ ಪ್ರಜೆಗಳನ್ನು ಪಾಲಿಸುವ ಅರಸು ಗಳನ್ನೂ, ನಿರ್ಮಲವಾದ ಉದಕದಿಂದ ಪೂರ್ಣವಾದ ದೋಣೆ ಭಾವಿ ಕೆರೆ ಕೊಳ ಮೊದಲಾದವುಗಳನ್ನೂ, ಬ್ರಹ್ಮಚರ್ಯವೇ ಮೊದಲಾದ ಆಶ್ರಮಧರ್ಮಗಳನ್ನು ಅನುವರ್ತಿಸಿಕೊಂಡಿರತಕ್ಕ ಬ್ರಾಹ್ಮಣರ ಅಗ್ರಹಾರಗಳನ್ನೂ ನೋಡಿ; ಐರಾವತದಿಂದ ಕೆಳಕ್ಕೆ ಇಳಿದು, ಪೂರ್ವಸಮುದ್ರದ ಸಮೀಪದಲ್ಲಿ ಅನೇಕ ಮೃಗಪಕ್ಷಿಗಳಿಂದ ಸೇವಿ ತವಾಗಿಯೂ ಅನೇಕ ಪ್ರಕಾರವಾದ ವೃಕ್ಷಗಳಿಂದ ರಮ್ಯವಾಗಿಯೂ ಇರುವ ಬಕನೆಂಬ ಆ ರಾಜರ್ಷಿಯ ಆಶ್ರ ಮವನ್ನು ಪ್ರವೇಶಿಸಿ ಆ ಮಹಾತ್ಮನನ್ನು ನೋಡಿದನು. ಆಗ ಆ ಬಕಮಹರ್ಷಿಯು ಇಂದ್ರನನ್ನು ನೋಡಿ ಸಂತೋಷಪಟ್ಟು, ಆತನಿಗೆ ಅರ್ಘ್ಯಪಾದ್ಯಾಚಮನೀಯಗಳಿಂದ ಪೂಜೆಯನ್ನು ಮಾಡಿ, ಕಂದಮೂಲಫಲಗಳನ್ನು ಸಮರ್ಪಣೆಮಾಡಿದನು. ಬಳಿಕ ಇಂದ್ರನು ಪರಿಶುದ್ಧವಾದ ಆಸನದಮೇಲೆ ಸುಖವಾಗಿ ಕುಳಿತು, ಆ ಋಷಿ ಯನ್ನು ಕುರಿತು, 'ಎಲೈ ರಾಜರ್ಷಿಯೆ, ನೀನು ಹುಟ್ಟಿ ಅನೇಕ ಸಹಸ್ರವರ್ಷಗಳಾದವು. ಬಹುದಿವಸ ಜೀವಿಸತಕ್ಕವರಿಗೆ ಯಾವ ದುಃಖವುಂಟಾಗುವದು? ಇದನ್ನು ನನಗೆ ತಿಳುಹಿಸಬೇಕು' ಎಂದು ಪ್ರಶ್ನೆಮಾಡಿದನು. ಬಳಿಕ ಬಕಮಹರ್ಷಿಯು 'ಎಲೈ ದೇವರಾಜನೆ ಕೇಳು. ಬಹುಕಾಲ ಜೀವಿಸತಕ್ಕವರಿಗೆ ಅಪ್ರಿಯರಾದ ಜನ ಗಳ ಸಂಗವೂ ಪ್ರಿಯರಾದ ಜನಗಳ ವಿಯೋಗವೂ ಉಂಟಾಗಿ ಅದರಿಂದ ಅಧಿಕವಾದ ದುಃಖವುಂಟಾಗುವದು. ಇದೊಂದು ದುಃಖ. ಜ್ಞಾತಿಗಳೂ ಬಂಧುಗಳೂ ಪುತ್ರಮಿತ್ರಾದಿಗಳೂ ನಷ್ಟರಾಗುವರು, ಮತ್ತು ತಾನೂ ಪರಾಧೀನನಾಗುವನು. ಇದೊಂದು ದುಃಖ. ಈ ದುಃಖಗಳಿಗಿಂತಲೂ ಲೋಕದಲ್ಲಿ ಮತ್ತೊಂದು ದುಃಖವು ಯಾವದಿರುವದು! ಬಹುದಿವಸ ಬದುಕತಕ್ಕ ಮನುಷ್ಯನು ಬಡವನಾದರೆ ಪರರಿಂದ ತಿರಸ್ಕಾರವನ್ನು ಪಡೆ ಯುವನು. ತನ್ನ ಕುಲದಲ್ಲಿ ದುಷ್ಪುತ್ರರು ಹುಟ್ಟುವದನ್ನೂ ಸುಪುತ್ರರು ನಷ್ಟರಾಗಿ ಹೋಗುವದನ್ನೂ ಸಹ ಆತನು ನೋಡುವನು. ಎಲೈ ದೇವೇಂದ್ರನೆ ದೇವ ದಾನವ ಗಂಧರ್ವ ಮನುಷ್ಯೋರಗ ರಾಕ್ಷಸರೇ ಮೊದ ಲಾದವರಿಗೆ ಸಹ ವ್ಯತ್ಯಾಸವಾದ ಸ್ಥಿತಿಯುಂಟಾಗುವದನ್ನು ನೀನೇ ಪ್ರತ್ಯಕ್ಷವಾಗಿ ನೋಡಿರುವೆ. ಇದಕ್ಕಿಂತಲೂ ಇನ್ನ್ಯಾವ ದುಃಖವಿರುವದು! ಸತ್ಕುಲದಲ್ಲಿ ಉತ್ಪನ್ನರಾದವರು ದುಷ್ಟರ ಕೈಗೆ ಸಿಕ್ಕಿ ಕ್ಲೇಶಪಡುವರು ; ದರಿದ್ರ ರಾದವರು ಐಶ್ವರ್ಯವಂತರ ಕೈಗೆ ಸಿಕ್ಕಿ ವ್ಯಥೆಪಡುವರು. ಜ್ಞಾನಹೀನರಾದವರು ಸುಖಪಡುವರು ; ಜ್ಞಾನವಂತರು

ಕ್ಲೇಶಪಡುವರು. ಇವೆಲ್ಲಾ ಲೋಕದಲ್ಲಿ ವಿಸ್ತಾರವಾಗಿ ಕಾಣಿಸುತ್ತಿರುವವು. ಇದನ್ನೆಲ್ಲಾ ನೋಡುವದಕ್ಕಿಂತಲೂ ದುಃಖಕರವಾದದ್ದು ಮತ್ತೊಂದು ಯಾವದು! ಮುಖ್ಯವಾಗಿ ಮನುಷ್ಯಜನ್ಮವೇ ಬಹು ದುಃಖಕರವಾದದ್ದಾಗಿ ಕಾಣಿಸುವದು' ಎಂದನು. ಆಬಳಿಕ ಇಂದ್ರನು 'ಎಲೈ ಮಹಾತ್ಮನೆ, ಬಹುದಿವಸ ಜೀವಿಸತಕ್ಕವನಿಗೆ ಸುಖಕರವಾದದ್ದು ಯಾವದು ?' ಎನಲು, ಬಕಋಷಿಯು 'ಎಲೈ ಮಹೇಂದ್ರನೆ, ದಿವಸದ ಎಂಟನೆಯ ಭಾಗದಲ್ಲೇ ಆಗಲಿ, ಯಾವನು ತನ್ನ ಮನೆಯಲ್ಲಿ ಸೊಪ್ಪನ್ನಾದರೂ ಬೇಯಿಸಿಕೊಂಡು ಕುತ್ಸಿತಜನರ ಸಹವಾಸವಿಲ್ಲದೆ ನಿಶ್ಚಿಂತನಾಗಿ ಜೀವಿಸುವನೋ, ಅವನ ಜೀವನಕ್ಕಿಂತಲೂ ಬಹುಕಾಲ ಜೀವಿಸತಕ್ಕವನಿಗೆ ಮತ್ತೊಂದು ಸುಖವು ಯಾವದು ! ಯಾವನು ದಿನಗಳನ್ನು ಎಣಿಸದೆಯೂ ಮತ್ತೊಬ್ಬನನ್ನು ಆಶ್ರಯಿಸದೆಯೂ ಸ್ವಶಕ್ತಿಯಿಂದ ಸಂಪಾದಿಸಿದ ಸೊಪ್ಪನ್ನಾದರೂ ನಿಶ್ಚಿಂತನಾಗಿ ತನ್ನ ಮನೆಯಲ್ಲಿ ಆಹಾರಮಾಡಿಕೊಂಡಿರುವನೋ, ಅತನನ್ನು ಮಹಾಶನನೆಂದು ಹೇಳುವರು. ಯಾವನು ತನ್ನ ಮನೆಯಲ್ಲಿ ಹಣ್ಣನ್ನೇ ಆಗಲಿ ಸೊಪ್ಪನ್ನೇ ಆಗಲಿ ಕಾರ್ಪಣ್ಯವಿಲ್ಲದೆ ಆಹಾರಮಾಡಿಕೊಂಡಿರುವನೋ, ಅವನೇ ಶ್ರೇಯೋವಂತನಾದವನು. ಯಾವನು ಮತ್ತೊಬ್ಬರ ಮನೆಗೆ ಹೋಗಿ ಅವರಿಂದ ತಿರಸ್ಕೃತನಾಗಿ ಅವರ ಮನೆಯಲ್ಲಿ ಷಡ್ರಸೋಪೇತವಾದ ಅನ್ನವನ್ನು ಭುಂಜಿಸುವನೋ, ಅಂಥಾವನು ಶ್ರೇಯೋವಂತನಾಗಲಾರನು. ಯಾವನು ಪರಾನ್ನವನ್ನು ಭುಂಜಿಸಬೇಕೆಂದು ಬಯಸುವನೋ, ಅವನು ಬಚ್ಚಲನೀರನ್ನು ಕುಡಿಯುವ ನಾಯಿಯಂತೆ ಇರುವನೆಂದು ದೊಡ್ಡವರು ಹೇಳುವರು. ಯಾವ ಪುರುಷನು ಲೋಭದಿಂದ ಪಿತೃಗಳಿಗೂ ದೇವತೆಗಳಿಗೂ ಅತಿಥಿಗಳಿಗೂ ಕೊಡದೆ ತಾನೊಬ್ಬನೇ ಭೋಜನ ಮಾಡುವನೋ, ಅವನ ಜನ್ಮವೇ ನಿಂದ್ಯವಾದದ್ದು. ಯಾವನು ತಾನು ಸಂಪಾದಿಸಿದ ಉತ್ತಮವಾದ ಪದಾರ್ಥವನ್ನು ಪಕ್ವಮಾಡಿ ಅತಿಥಿಗಳಿಗೂ ಪಿತೃಗಳಿಗೂ ದೇವತೆಗಳಿಗೂ ಕೊಟ್ಟು ಉಳಿದದ್ದನ್ನು ತಾನು ಆಹಾರ ಮಾಡುವನೋ, ಆತನು ಎಷ್ಟು ತುತ್ತು ತೆಗೆದುಕೊಳ್ಳುವನೋ ಅಷ್ಟು ಗೋಸಹಸ್ರ ದಾನಗಳ ಫಲವನ್ನು ಪಡೆಯುವನು. ಮತ್ತು ಆತನಿಗೆ ಯೌವನದಲ್ಲಿ ಮಾಡಿದ ಸಕಲಪಾಪಗಳೂ ಪರಿಹಾರವಾಗುವವು. ಯಾವನು ದಕ್ಷಿಣಾಸಹಿತನಾಗಿ ಬ್ರಾಹ್ಮಣರಿಗೆ ಭೋಜನವನ್ನು ಮಾಡಿಸಿ ಆ ಬ್ರಾಹ್ಮಣರಿಗೆ ಸಂತೋಷದಿಂದ ಹಸ್ತೋದಕವನ್ನು ಕೊಡುವನೋ ಆ ಹಸ್ತೋದಕವು ತತ್ಕ್ಷಣದಲ್ಲಿಯೇ ಆ ಭೋಜನಮಾಡಿಸಿದವನ ಸಕಲಪಾಪಗಳನ್ನೂ ಪರಿಹಾರಮಾಡುವದು. ಇದೇ ಮೊದಲಾದ ಮಂಗಳಕರವಾದ ಅನೇಕ ಕಥೆಗಳನ್ನು ಬಕರಾಜರ್ಷಿಯು ಹೇಳಲು, ಅವುಗಳನ್ನೆಲ್ಲಾ ಕೇಳಿ ಇಂದ್ರನು ಸಂತೋಷಪಟ್ಟು ಸ್ವರ್ಗಕ್ಕೆ ತೆರಳಿದನು " ಎಂದು ಮಾರ್ಕಂಡೇಯನು ಧರ್ಮರಾಯನಿಗೆ ಹೇಳಿದನು.

## ೧೯೪ನೇ ಅಧ್ಯಾಯ.—ಮಾರ್ಕಂಡೇಯಪರ್ವ—(ರಾಜರ ಮಹಿಮೆ).

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಆ ಬಳಿಕ ಪಾಂಡವರು ಮಾರ್ಕಂಡೇಯಮಹರ್ಷಿಯನ್ನು ಕುರಿತು "ಎಲೈ ಮಾರ್ಕಂಡೇಯನೆ, ಬ್ರಾಹ್ಮಣರ ಮಾಹಾತ್ಮ್ಯವನ್ನು ನಿನ್ನ ಮುಖದಿಂದ ನಾವು ಕೇಳಿದ್ದಾಯಿತು. ಇನ್ನು ರಾಜರ ಮಹಿಮೆಯನ್ನು ಕೇಳಬೇಕೆಂದು ಕುತೂಹಲವುಂಟಾಗಿರುವದು. ಅದನ್ನು ವಿವರಿಸಬೇಕು " ಎನಲು, ಮಾರ್ಕಂಡೇಯನು "ಎಲೈ ಧರ್ಮರಾಯನೆ, ರಾಜರ ಮಹಿಮೆಯನ್ನು ವಿವರಿಸುವೆನು ಕೇಳು. ಪೂರ್ವದಲ್ಲಿ ಕುರುವಂಶದಲ್ಲಿ ಉತ್ಪನ್ನನಾದ ಸುಹೋತ್ರನೆಂಬ ಮಹಾರಾಜನು ಋಷ್ಯಾಶ್ರಮಗಳಿಗೆ ಹೋಗಿ ಋಷಿಗಳನ್ನು ಕಂಡು ಅಲ್ಲಿಂದ ಮರಳಿ ರಥದಮೇಲೆ ಕುಳಿತು ಮಾರ್ಗದಲ್ಲಿ ಬರುತ್ತಿರಲು, ತನ್ನೆದುರಿಗೆ ರಥವನ್ನೇರಿ ಬರುತ್ತಿದ್ದ ಶಿಬಿಚಕ್ರವರ್ತಿಯನ್ನು ಕಂಡನು. ಸಮಾನವಾದ ವಯಸ್ಸುಳ್ಳ ಅವರಿಬ್ಬರೂ ಮಧ್ಯಮಾರ್ಗದಲ್ಲಿ ಪರಸ್ಪರವಾಗಿ ಮರ್ಯಾದೆಯನ್ನು ಪಡೆದು, ಇಬ್ಬರೂ ಗುಣದಲ್ಲೂ ವಯಸ್ಸಿನಲ್ಲೂ ಪರಾಕ್ರಮದಲ್ಲೂ ಧೈರ್ಯದಲ್ಲೂ ಸಮಾನರಾದ್ದರಿಂದ, ಒಬ್ಬರಿಗೊಬ್ಬರು ಮಾರ್ಗವನ್ನು ಕೊಡದೆ ಮಧ್ಯಮಾರ್ಗದಲ್ಲೇ ನಿಂತರು. ಆ ಸಮಯದಲ್ಲಿ ನಾರದಮಹರ್ಷಿಯು ಅಲ್ಲಿಗೆ ಬಂದು ಅವರನ್ನು ಕುರಿತು 'ಎಲೈ ಮಹಾರಾಜರೆ, ಯಾತಕ್ಕೋಸ್ಕರ ನೀವಿಬ್ಬರೂ ಪರಸ್ಪರವಾಗಿ ಮಾರ್ಗ

ವನ್ನು ತಡೆದುಕೊಂಡು ಹೀಗೆ ನಿಂತಿರುವಿರಿ?' ಎಂದು ಪ್ರಶ್ನೆಮಾಡಿದನು. ಬಳಿಕ ಅವರಿಬ್ಬರೂ ನಾರದನನ್ನು ಕುರಿತು 'ಎಲೈ ಮಹಾತ್ಮನೇ ಕೇಳು. ಯಾವನು ಎಲ್ಲರಿಗಿಂತಲೂ ಸಮರ್ಥನಾದವನೋ, ಮತ್ತು ಯಾವನು ಎಲ್ಲರಿಗೂ ಪೂಜ್ಯನಾದವನೋ, ಅಂಥಾವನಿಗೆ ಮಾರ್ಗವನ್ನು ಬಿಟ್ಟುಕೊಡಬೇಕೆಂದು ದೊಡ್ಡವರು ಹೇಳುವರು. ನಾವಿಬ್ಬರೂ ಸ್ನೇಹಿತರು. ವಿಚಾರಮಾಡಿದರೆ ನಮ್ಮಿಬ್ಬರಲ್ಲೂ ವಯಸ್ಸಿನಲ್ಲಿಯೂ ಪರಾಕ್ರಮದಲ್ಲಿಯೂ ಧೈರ್ಯದಲ್ಲಿಯೂ ಹೆಚ್ಚುಕಡಮೆಯೇನೂ ತೋರುವದಿಲ್ಲ' ಎನಲು, ನಾರದನು ಸುಹೋತ್ರನನ್ನು ಕುರಿತು 'ಎಲೈ ಸುಹೋತ್ರಮಹಾರಾಜನೆ, ಕ್ರೂರನಾದವನು ಮೃದುವಾದವನ ವಿಷಯದಲ್ಲಿಯೂ ಕ್ರೂರನಾಗಿಯೇ ಇರುವನು. ಮೃದುವಾದವನು ಕ್ರೂರನಾದವನ ವಿಷಯದಲ್ಲಿಯೂ ಮೃದುವಾಗಿಯೇ ಇರುವನು. ಸಾಧುವಾದವನು ಅಸಾಧುವಿನ ವಿಷಯದಲ್ಲಿಯೂ ಸಾಧುವಾಗಿಯೇ ಇರುವನು. ಹೀಗಿರುವಲ್ಲಿ ಸಾಧುವಾದವನು ಸಾಧುವಿನ ವಿಷಯದಲ್ಲಿ ಸಾಧುವಾಗದೆ ಇರುವನೆ? ಅಂಥಾ ಸಾಧುವು ಮತ್ತೊಬ್ಬನಿಂದ ಬಂದು ಅಪಕಾರವನ್ನು ಹೊಂದಿದರೆ, ತಾನು ಅದಕ್ಕೆ ಶತಗುಣವಾಗಿ ಉಪಕಾರವನ್ನು ಮಾಡುವನು. ದೇವತೆಗಳಲ್ಲಿ ಮಾತ್ರ ಈ ನಿಬಂಧನೆಯಿಲ್ಲವು. ಈ ಶಿಬಿಮಹಾರಾಯನು ನಿನಗಿಂತಲೂ ಸಾಧುವಾಗಿರುವನು. ಲೋಕದಲ್ಲಿ ಕೃಪಣನಾದವನನ್ನು ದಾನದಿಂದಲೂ, ಅನೃತವಾದಿಯನ್ನು ಸತ್ಯದಿಂದಲೂ, ಕ್ರೂರಕರ್ಮವನ್ನು ಮಾಡತಕ್ಕವನನ್ನು ಕ್ಷಮೆಯಿಂದಲೂ, ಅಸಾಧುವಾದವನನ್ನು ಸಾಧುಭಾವದಿಂದಲೂ ಜಯಿಸಬೇಕು. ನೀವಿಬ್ಬರೂ ಉದಾರವಾದ ಸ್ವಭಾವವುಳ್ಳವರು. ನಿಮ್ಮಲ್ಲಿ ಯಾರಾದರೂ ಒಬ್ಬರು ದಾರಿಯನ್ನು ಬಿಟ್ಟದ್ದೇ ಆದರೆ, ನಿಮ್ಮ ಗುಣಾತಿಶಯಕ್ಕೆ ಅದು ನಿದರ್ಶನವಾಗುವದು' ಎಂದು ನುಡಿದು ಸುಮ್ಮನಾದನು. ಆ ಮಾತನ್ನು ಕೇಳಿ ಸುಹೋತ್ರನು, ಶಿಬಿಚಕ್ರವರ್ತಿಗೆ ಪ್ರದಕ್ಷಿಣೆಮಾಡಿ, ಆತನಿಗೆ, ಮಾರ್ಗವನ್ನು ಬಿಟ್ಟುಕೊಟ್ಟು, ಆತನ ಗುಣಾತಿಶಯವನ್ನು ಶ್ಲಾಘನೆ ಮಾಡಿ, ತಾನು ಮುಂದಕ್ಕೆ ಹೊರಟು ಹೋದನು. ಆಗ ನಾರದನು ಇದೇ ರಾಜನಾದವನಿಗೆ ಮಹತ್ತಾದ ಭಾಗ್ಯವೆಂದು ನುಡಿದನು" ಎಂದು ಮಾರ್ಕಂಡೇಯನು ಧರ್ಮರಾಯನಿಗೆ ಹೇಳಿದನು.

## ೧೩೫ನೇ ಅಧ್ಯಾಯ.—ಮಾರ್ಕಂಡೇಯಪರ್ವ—(ರಾಜರ ಮಹಿಮೆ).

ಬಳಿಕ ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯನೆ, ಮಾರ್ಕಂಡೇಯನು ಪುನಃ ಧರ್ಮರಾಯನನ್ನು ಕುರಿತು, "ಎಲೈ ಧರ್ಮರಾಯನೆ, ಮತ್ತೊಂದು ಇತಿಹಾಸವನ್ನು ಹೇಳುವೆನು ಕೇಳು. ನಹುಷರಾಯನ ಮಗನಾದ ಯಯಾತಿಮಹಾರಾಜನು ಪೌರಜನರಿಂದ ಪರಿವೃತನಾಗಿ ರಾಜ್ಯಭಾರವನ್ನು ಮಾಡುತ್ತಿರಲು, ಒಬ್ಬ ಬ್ರಾಹ್ಮಣನು ಗುರುದಕ್ಷಿಣೆಯನ್ನು ಕೊಡಬೇಕೆಂದು ದ್ರವ್ಯಾರ್ಜನಾಸಕ್ತನಾಗಿ ಆ ಯಯಾತಿರಾಯನ ಬಳಿಗೆ ಬಂದು 'ಎಲೈ ರಾಯನೆ, ನಾನು ಗುರುಗಳಲ್ಲಿ ವಿದ್ಯಾಭ್ಯಾಸವನ್ನು ಮಾಡಿ, ಗುರುದಕ್ಷಿಣೆಯನ್ನು ಕೊಡುವದಕ್ಕೆ ನಿಬಂಧನೆಮಾಡಿಕೊಂಡು ಅದನ್ನು ಯಾಚಿಸುವದಕ್ಕಾಗಿ ನಿನ್ನ ಬಳಿಗೆ ಬಂದಿರುವೆನು' ಎನಲು: ಯಯಾತಿಯು 'ಎಲೈ ಬ್ರಾಹ್ಮಣನೆ, ಅದೇನು ಹೇಳು' ಎಂದನು. ಬಳಿಕ ಆ ಬ್ರಾಹ್ಮಣನು 'ಎಲೈ ರಾಯನೆ ಲೋಕದಲ್ಲಿ ಯಾಚನೆಮಾಡತಕ್ಕವನು ಎಲ್ಲರಿಗೂ ದ್ವೇಷಿಯಾಗುವನು. ಹೀಗಿರುವಲ್ಲಿ ನಿನ್ನನ್ನು ನಾನು ಹ್ಯಾಗೆಯಾಚಿಸಲಿ? ಆದರೂ ಚಿಂತೆಯಿಲ್ಲ. ನಾನು ಯಾಚಿಸಿದ್ದನ್ನು ನೀನು ಪ್ರೀತಿಯಿಂದ ಕೊಟ್ಟರೆ ನಾನು ಪರಿಗ್ರಹಿಸುವೆನು' ಎಂದನು. ಯಯಾತಿಯು 'ಎಲೈ ದಾನಾರ್ಹನಾದ ವಿಪ್ರನೆ, ತಾನು ದಾನಮಾಡಿದ್ದನ್ನು ಯಾವನೂ ಹೇಳಬಾರದು. ಮತ್ತು ಯಾಚಿಸತಕ್ಕವರಿಗೆ ನನ್ನಲ್ಲಿರತಕ್ಕ ವಸ್ತುಗಳೆಲ್ಲಾ ಬೇಡತಕ್ಕವುಗಳಾಗಿಯೇ ಇರುವವೆಂದು ತಿಳಿ. ಅರ್ಥಿಗಳಿಗೆ ಕೊಡುತ್ತೇನೆಂದು ಪ್ರತಿಜ್ಞೆಮಾಡಿದವಸ್ತುವನ್ನು ನಾನು ಕೊಟ್ಟಬಳಿಕ, ಆ ವಸ್ತುವನ್ನು ನಾನು ಕೊಟ್ಟೆನೆಂದು ದುಃಖಪಡದೆ ನಾನು ಸುಖವಾಗಿಯೇ ಇರತಕ್ಕವನು. ನೀನು ಯಾಚಕನಾಗಿಯೂ ನನಗೆ ಪ್ರಿಯನಾಗಿಯೂ ಇರುವದರಿಂದ, ನಿನಗೆ ನಾನು ಸಾವಿರ

ಗೋವುಗಳನ್ನು ಕೊಡುವೆನು. ಮತ್ತು ಅರ್ಥಿಗಳು ಬಂದು ಯಾಚನೆ ಮಾಡಿದ್ದೇ ಆದರೆ, ನನ್ನ ಮನಸ್ಸಿಗೆ ಕೋಪವುಂಟಾಗಲಾರದು. ಅಂಥಾವರಿಗೆ ದ್ರವ್ಯವನ್ನು ಕೊಟ್ಟು ನಾನು ದುಃಖಪಡತಕ್ಕವನೂ ಅಲ್ಲ ಎಂದು ಹೇಳಿ ಆ ಬ್ರಾಹ್ಮಣನಿಗೋಸ್ಕರ ಸಾವಿರ ಗೋವುಗಳನ್ನು ಕೊಟ್ಟನು. ಅವುಗಳನ್ನು ಸ್ವೀಕರಿಸಿ ಆ ಬ್ರಾಹ್ಮಣನು ಸಂತೋಷದಿಂದ ಹೋದನು" ಎಂದು ಮಾರ್ಕಂಡೇಯನು ಧರ್ಮರಾಯನಿಗೆ ಹೇಳಿದನು.

೧೯೬ನೇ ಅಧ್ಯಾಯ.—ಮಾರ್ಕಂಡೇಯಪರ್ವ—(ರಾಜರ ಮಹಿಮೆ).

ಬಳಿಕ ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಬಳಿಕ ಧರ್ಮರಾಯನು ಮಾರ್ಕಂಡೇಯಮಹರ್ಷಿಯನ್ನು ಕುರಿತು "ಎಲೈ ಮಹಾತ್ಮನೆ, ಮತ್ತು ಮಹಾನುಭಾವರಾದ ರಾಜರ ಚರಿತ್ರೆಯನ್ನು ವಿವರಿಸು" ಎನಲು, ಮಾರ್ಕಂಡೇಯನು "ಎಲೈ ಧರ್ಮರಾಯನೆ, ವೃಷದರ್ಭ ಸೇದುಕ ಎಂಬ ಅರಸುಗಳು ನೀತಿಮಾರ್ಗಸಂಪನ್ನರೂ ಅಸ್ತ್ರವಿದ್ಯಾಪಾರಂಗತರೂ ಆಗಿ ರಾಜ್ಯವನ್ನಾಳುತ್ತಿದ್ದರು. ಅವರಲ್ಲಿ ಸೇದುಕನೆಂಬ ರಾಜನು, ಬಾಲವಯಸ್ಸುಳ್ಳ ವೃಷದರ್ಭರಾಯನು ಅಂತರಂಗವಾಗಿ ಮಾಡತಕ್ಕ ವ್ರತವನ್ನು ತಿಳಿದು 'ಎಲೈ ವೃಷದರ್ಭನೆ, ಬ್ರಾಹ್ಮಣರಿಗೆ ರಾಜರಾದವರು ಬೆಳ್ಳಿ ಚಿನ್ನವನ್ನೇ ದಾನಮಾಡಬೇಕೇಹೊರತು ಮತ್ತೊಂದು ಲೋಹವನ್ನು ಕೊಡಬಾರದು' ಎಂದನು. ಬಳಿಕ ಸೇದುಕನೆಂಬ ಆ ರಾಯನ ಬಳಿಗೆ ವೇದಾಧ್ಯಯನಸಂಪನ್ನನಾದ ಒಬ್ಬ ಬ್ರಾಹ್ಮಣನು ಬಂದು 'ಎಲೈ ರಾಯನೆ, ಗುರುದಕ್ಷಿಣಾರ್ಥವಾಗಿ ನೀನು ಸಾವಿರ ಕುದುರೆಗಳನ್ನು ನನಗೆ ಕೊಡು' ಎಂದು ಬೇಡಿದನು. ಆಗ ಆ ಸೇದುಕನು 'ಎಲೈ ಬ್ರಾಹ್ಮಣನೆ, ನೀನು ಗುರುದಕ್ಷಿಣಾರ್ಥವಾಗಿ ಕೇಳತಕ್ಕದ್ದು ನನ್ನಲ್ಲಿ ದೊರೆಯಲಾರದು. ವೃಷದರ್ಭರಾಯನ ಬಳಿಗೆ ಹೋಗು. ಆತನು ವಿಶೇಷಧರ್ಮಜ್ಞನಾಗಿರುವನು. ಆತನನ್ನು ನೀನು ಯಾಚಿಸು. ಆತನು ನಿನ್ನ ಇಷ್ಟಾರ್ಥವನ್ನು ಪೂರಣಮಾಡುವನು. ಮತ್ತು ಆತನು ಗೂಢವಾದ ಒಂದು ವ್ರತವನ್ನು ಆಚರಿಸುತ್ತಿರುವನು' ಎಂದು ನುಡಿದನು. ಬಳಿಕ ಆ ಬ್ರಾಹ್ಮಣನು ವೃಷದರ್ಭರಾಯನ ಬಳಿಗೆ ಬಂದು ಸಾವಿರಕುದುರೆಗಳನ್ನು ಯಾಚಿಸಲು, ಆ ರಾಯನು ಆ ಬ್ರಾಹ್ಮಣನನ್ನು ಚಾವಟಿಯಿಂದ ಹೊಡೆದನು. ಆಗ ಆ ಬ್ರಾಹ್ಮಣನು 'ಎಲೈ ರಾಯನೆ, ನಿರಪರಾಧಿಯಾದ ನನ್ನನ್ನು ಯಾತಕ್ಕೆ ಹೊಡದೆ?' ಎಂದು ಆತನಿಗೆ ಶಾಪವನ್ನು ಕೊಡುವದಕ್ಕೆ ಉದ್ಯುಕ್ತನಾಗಲು ವೃಷದರ್ಭನು 'ಎಲೈ ಬ್ರಾಹ್ಮಣನೆ, ನಿನಗೆ ಯಾವನು ದಾನಮಾಡುವದಿಲ್ಲವೋ ಅವನಿಗೆ ನೀನು ಶಾಪವನ್ನು ಕೊಡುವದು ಉಚಿತವೆ? ಇದು ಬ್ರಾಹ್ಮಣನಿಗೆ ಯೋಗ್ಯವಾದದ್ದೆ?' ಎಂದನು. ಅದನ್ನು ಕೇಳಿ, ಬ್ರಾಹ್ಮಣನು 'ಎಲೈ ರಾಜಾಧಿರಾಜನೆ, ಸೇದುಕರಾಯನು ನನ್ನನ್ನು ನಿನ್ನ ಬಳಿಗೆ ಹೋಗಿ ಯಾಚಿಸೆಂದು ಇಲ್ಲಿಗೆ ಕಳುಹಿಸಿಕೊಟ್ಟನು. ಆದ್ದರಿಂದ ನಾನು ನಿನ್ನನ್ನು ಬೇಡಿದೆನು' ಎನಲು, ವೃಷದರ್ಭನು 'ಎಲೈ ಬ್ರಾಹ್ಮಣನೆ, ನಾನು ಬ್ರಾಹ್ಮಣರನ್ನು ಪೂಜೆಮಾಡತಕ್ಕ ಪೂರ್ವಾಹ್ಣಕಾಲದಲ್ಲಿ ನೀನು ಬೇಡಿದ್ದನ್ನು ನಾನು ಕೊಡತಕ್ಕವನು. ನನ್ನಿಂದ ಪೆಟ್ಟುತಿಂದ ನಿನ್ನ ಅನುಗ್ರಹವನ್ನು ನಾನು ಪಡೆದುಕೊಳ್ಳದೆ ನಿನ್ನನ್ನು ಸುಮ್ಮನೆ ಕಳುಹಿಸಿಕೊಡುವದಕ್ಕಾದೀತೆ?' ಎಂದು ನುಡಿದು, ದಾನಕಾಲವು ಪ್ರಾಪ್ತವಾಗಲು, ಸಾವಿರಕುದುರೆಗಳ ಬೆಲೆಗಿಂತಲೂ ಹೆಚ್ಚಾದ ತನ್ನ ದೇಶದ ಒಂದು ದಿವಸದ ಉತ್ಪತ್ತಿಯನ್ನು ಆ ಬ್ರಾಹ್ಮಣನಿಗೆ ಕೊಟ್ಟನು. ಎಲೈ ಧರ್ಮರಾಯನೆ, ಕಾಲವನ್ನು ತಿಳಿಯದೆ ಬಂದ ಅರ್ಥಿಗಳನ್ನು ದಂಡಿಸುವದಕ್ಕೂ ಮತ್ತು ಅವರಿಗೆ ಬೇಕಾದ್ದನ್ನು ಕೊಟ್ಟು ಸಂತೋಷವನ್ನುಂಟುಮಾಡುವದಕ್ಕೂ ಅರಸುಗಳು ಶಕ್ತರಾದವರು.

ಎಲೈ ಧರ್ಮರಾಯನೆ, ಇನ್ನೂ ಅರಸುಗಳ ಮಹಿಮೆಯನ್ನು ಹೇಳುವೆನು ಕೇಳು. ಪೂರ್ವದಲ್ಲಿ ದೇವಸಭೆಯಲ್ಲಿ ದೇವತೆಗಳು ಭೂಲೋಕದಲ್ಲಿರತಕ್ಕ ರಾಜರ ಚರಿತ್ರೆಯನ್ನು ಕೊಂಡಾಡುತ್ತ ಶಿಬಿಚಕ್ರವರ್ತಿಯನ್ನು

ಶರೀಕ್ಷಿಸಬೇಕೆಂದು ನಿಶ್ಚಯಿಸಲು, ಇಂದ್ರನೂ ಅಗ್ನಿಯೂ ಸಹ ಭೂಮಂಡಲಕ್ಕೆ ಬಂದರು. ಅಗ್ನಿಯು ಪಾರಿವಾಳದ ಹಕ್ಕಿಯ ರೂಪವನ್ನು ತಾಳಿ ಓಡಿದನು. ಆ ಪಾರಿವಾಳದ ಹಕ್ಕಿಯನ್ನು ಅಟ್ಟಿಕೊಂಡು ಶ್ಯೇನಪಕ್ಷಿಯ ರೂಪವನ್ನು ತಾಳಿ ಇಂದ್ರನು ಅದರಹಿಂದೇ ಬರುವವನಾದನು. ಆಗ ಆ ಪಾರಿವಾಳವು ಸಿಂಹಾಸನಾರೂಢನಾಗಿದ್ದ ಶಿಬಿರಾಯನ ತೊಡೆಯಮೇಲೆ ಬಂದು ಬೀಳುವದಾಯಿತು. ಬಳಿಕ ಸಮೀಪದಲ್ಲಿದ್ದ ಪುರೋಹಿತನು ಶಿಬಿರಾಯನನ್ನು ಕುರಿತು 'ಎಲೈ ಮಹಾರಾಜನೆ, ಈ ಪಾರಿವಾಳವು ಗಿಡುಗಕ್ಕೆ ಭಯಪಟ್ಟು ಬಂದು ಪ್ರಾಣವನ್ನು ರಕ್ಷಿಸಿಕೊಳ್ಳುವದಕ್ಕೋಸ್ಕರ ನಿನಗೆ ಶರಣಾಗತವಾಗಿರುವದು. ಪಾರಿವಾಳವು ಮೇಲೆ ಬೀಳುವದು ಅರಿಷ್ಟಸೂಚಕವಾದದ್ದು. ಇದರ ಪ್ರಾಯಶ್ಚಿತ್ತಾರ್ಥವಾಗಿ ಮಹಾರಾಜನಾದ ನೀನು ಬಹುದ್ರವ್ಯವನ್ನು ದಾನಮಾಡಬೇಕು' ಎನಲು, ಆ ಕಪೋತಪಕ್ಷಿಯು ರಾಜನನ್ನು ಕುರಿತು 'ಎಲೈ ಮಹಾರಾಜನೆ, ನಾನು ಗಿಡುಗಕ್ಕೆ ಭಯಪಟ್ಟು ಪ್ರಾಣವನ್ನು ರಕ್ಷಿಸಿಕೊಳ್ಳಬೇಕೆಂದು ನಿನ್ನ ಮರೆಹೊಕ್ಕಿರುವೆನು. ಋಷಿಯಾದ ನಾನು ಈ ಪಾರಿವಾಳದ ಶರೀರವನ್ನು ಹೊಕ್ಕಿರುವೆನು. ನಾನು ವೇದಾಧ್ಯಯನದಿಂದ ಕೃಶನಾಗಿಯೂ ತಪಸ್ಸಿನಿಂದಲೂ, ಇಂದ್ರಿಯನಿಗ್ರಹದಿಂದಲೂ ಯುಕ್ತನಾಗಿಯೂ ಗುರುಗಳ ಆಜ್ಞೆಯನ್ನು ಅನುವರ್ತಿಸಿಕೊಂಡು ನಡೆಯತಕ್ಕವನಾಗಿಯೂ ಬ್ರಹ್ಮಚಾರಿಯಾಗಿಯೂ ಪಾಪರಹಿತನಾಗಿಯೂ ಇರುವೆನು. ನಾನು ಯಾವಾಗಲೂ ವೇದಾಧ್ಯಯನವನ್ನೇ ಮಾಡುತ್ತಿರುವೆನು. ಮತ್ತು ಒಂದೊಂದಕ್ಷರವಾಗಿ ವೇದಾರ್ಥವನ್ನು ಚೆನ್ನಾಗಿ ವಿಚಾರಮಾಡಿರುವೆನು. ಶ್ರೋತ್ರಿಯನಾದ ನನ್ನನ್ನು ಗಿಡುಗಕ್ಕೆ ಕೊಟ್ಟು ಬಿಡತಕ್ಕದ್ದು ಸಾಧುವಾದ ದಾನವೆನ್ನಿಸಿಕೊಳ್ಳಲಾರದು. ನಾನು ಕಪೋತ ಪಕ್ಷಿಯಲ್ಲ' ಎಂದು ನುಡಿಯಿತು. ಬಳಿಕ ಆ ಗಿಡುಗವು ಅಲ್ಲಿಗೆ ಬಂದು ಶಿಬಿರಾಯನನ್ನು ಕುರಿತು 'ಎಲೈ ರಾಯನೆ, ಪ್ರಾಣಿಗಳಿಗೆ ಅನೇಕ ಜನ್ಮಗಳು ಉಂಟಾಗುವವು. ಅವುಗಳ ವ್ಯತ್ಯಾಸದಿಂದ ಮಗನು ತಂದೆಯಾಗಿಯೂ ತಂದೆಯು ಮಗನಾಗಿಯೂ ಹೆಂಡತಿಯು ತಾಯಿಯಾಗಿಯೂ ತಾಯಿಯು ಹೆಂಡತಿಯಾಗಿಯೂ ಆಗುವರು. ಆದ್ದರಿಂದ ಪೂರ್ವಜನ್ಮದಲ್ಲಿ ಪಾರಿವಾಳವೇ ತಂದೆಯಾಗಿರತಕ್ಕ ಈ ಪಾರಿವಾಳವನ್ನು ಮಹರ್ಷಿಯೆಂದು ಭಾವಿಸಿ ನನ್ನ ಆಹಾರವನ್ನು ತಪ್ಪಿಸಬೇಡ' ಎನಲು, ಶಿಬಿರಾಯನು ಇದೇನು ! ಈ ಎರಡು ಪಕ್ಷಿಗಳೂ ಉತ್ತಮವಾಗಿಯೂ ಸಂಸ್ಕೃತವಾಗಿಯೂ ಮಾತನಾಡುತ್ತಿರುವವು. ಈವಿಷಯದಲ್ಲಿ ಚೆನ್ನಾಗಿ ವಿಮರ್ಶೆಯನ್ನು ಮಾಡಬೇಕು. ಶತ್ರುವಿನಿಂದ ಭಯಪಟ್ಟು ತನ್ನ ಪ್ರಾಣವನ್ನು ರಕ್ಷಿಸಿಕೊಳ್ಳುವದಕ್ಕೋಸ್ಕರ ಮರೆಹೊಕ್ಕಿದವನನ್ನು ಯಾವನು ಶತ್ರುವಿಗೆ ಬಿಟ್ಟುಕೊಡುವನೋ ಅಂಥಾ ಪಾಪಾತ್ಮನು ಇರತಕ್ಕಸ್ಥಳದಲ್ಲಿ ಪರ್ಜನ್ಯನು ಕಾಲಕಾಲಕ್ಕೆ ವರ್ಷಿಸುವದಿಲ್ಲ. ಅವನು ಹಾಕಿದ ಪೈರೂ ಬೆಳೆಯುವದಿಲ್ಲ. ಅವನು ಕೊಟ್ಟ ಹವ್ಯಕವ್ಯಗಳನ್ನು ದೇವತೆಗಳೂ ಪಿತೃಗಳೂ ಸ್ವೀಕರಿಸುವದಿಲ್ಲ. ಅವನಿಗೆ ಜನಿಸಿದ ಮಕ್ಕಳು ಬಾಲ್ಯವಯಸ್ಸಿನಲ್ಲೇ ಮೃತವಾಗುವವು. ಮತ್ತು ಅವನು ಆಹಾರಮಾಡಿದ ಅನ್ನವು ನಿಷ್ಫಲವಾಗುವದು. ಅಂಥಾವನನ್ನು ನೋಡಿ ಇಂದ್ರಾದಿ ದೇವತೆಗಳು ಅವನಮೇಲೆ ಕೋಪದಿಂದ ವಜ್ರಾಯುಧವನ್ನು ಪ್ರಯೋಗಿಸುವರು ಎಂದು ತನ್ನ ಮನಸ್ಸಿನಲ್ಲಿ ನಿಶ್ಚಯಿಸಿಕೊಂಡು, ಆ ಶ್ಯೇನಪಕ್ಷಿಯನ್ನು ಕುರಿತು 'ಎಲೈ ಶ್ಯೇನಪಕ್ಷಿಯೆ, ನೀನು ಎಲ್ಲಿ ವಾಸಮಾಡುತ್ತಿರುವೆಯೋ ಆಸ್ಥಳಕ್ಕೆ ಈ ಕಪೋತಪಕ್ಷಿಗೆ ಪ್ರತಿಯಾಗಿ ನಿನ್ನ ಆಹಾರಕ್ಕೋಸ್ಕರ ಅನ್ನದೊಡನೆ ಎತ್ತಿನ ಮಾಂಸವನ್ನು ಪಕ್ವಮಾಡಿ ನನ್ನಕಡೆಯವರು ತಂದುಕೊಡುವರು. ಈ ಕಪೋತಪಕ್ಷಿಯ ಗೋಜಿಗೆ ನೀನು ಹೋಗಬೇಡವೆಂದನು. ಬಳಿಕ ಆ ಶ್ಯೇನಪಕ್ಷಿಯು 'ಎಲೈ ರಾಜನೆ, ಎತ್ತಿನ ಮಾಂಸವೇ ಆಗಲಿ ಈ ಕಪೋತಪಕ್ಷಿಯ ಮಾಂಸಕ್ಕಿಂತಲೂ ಅಧಿಕವಾದ ಮತ್ತೊಂದು ಮಾಂಸವೇ ಆಗಲಿ ನನಗೆ ಬೇಕಾಗಿಲ್ಲ. ದೇವರು ನನಗೆ ಕ್ಲಪ್ತಮಾಡಿರುವ ಈ ಪಕ್ಷಿರೂಪವಾದ ಆಹಾರವನ್ನೇ ಕೊಡು' ಎನಲು, ಶಿಬಿಯು 'ಎಲೈ ಗಿಡುಗನೆ, ನಿನಗೆ ಭಯಪಟ್ಟು ನನ್ನ ಮರೆಹೊಕ್ಕಿರುವ ಈ ಪಕ್ಷಿಯ ಮಾಂಸಕ್ಕೆ ಬದಲಾಗಿ ಬಂದು ಎತ್ತನ್ನು ಹಿಂಸಿಸಿ ಅದರ ಎಲ್ಲಾ ಮಾಂಸವನ್ನೂ ನನ್ನ ಕಡೆಯವರು ನಿನಗೆ ಕೊಡುವರು. ಈ ಪಕ್ಷಿಯನ್ನು ನೀನು ಬಿಟ್ಟುಬಿಡು. ಈ ಪಕ್ಷಿಯು ನನ್ನಿಂದ ರಕ್ಷಿಸತಕ್ಕದ್ದಾಗಿರುವದು. ನನ್ನ ಪ್ರಾಣಹೋದರೂ ನಾನು ಬೇರೆ ಇದನ್ನು ಬಿಟ್ಟುಕೊಡತಕ್ಕವನಲ್ಲ. ನೀನು ಈ ವಿಷಯದಲ್ಲಿ ಸುಮ್ಮನೇ ಕ್ಲೇಶಪಡಬೇಡ. ನಮ್ಮ ವಂಶದವರು ನಾನು

ಯಾವ ಕಾರ್ಯವನ್ನು ಮಾಡಿದರೆ ನನ್ನನ್ನು ಶ್ಲಾಘಿಸುವರೋ ಅಂಥಾ ಸತ್ಕಾರ್ಯದಲ್ಲಿ ನನ್ನನ್ನು ಪ್ರೇರಿಸು. ಆ ಕಾರ್ಯವನ್ನು ಮಾಡುವದಕ್ಕೆ ನಾನು ಸಿದ್ಧನಾಗಿರುವೆನು' ಎಂದನು. ಬಳಿಕ ಆ ಶ್ಯೇನಪಕ್ಷಿಯು 'ಎಲೈ ರಾಯನೆ, ನಿನ್ನ ತೊಡೆಯ ದಕ್ಷಿಣಭಾಗವನ್ನು ಕೊಯಿದು ಈ ಕಪೋತಪಕ್ಷಿಯ ತೂಕಕ್ಕೆ ಸರಿಯಾದಷ್ಟು ಮಾಂಸವನ್ನು ನೀನು ನನಗೆ ಕೊಟ್ಟದ್ದೇ ಆದರೆ ನನಗೆ ಪ್ರೀತಿಯಾಗುವದು. ಮತ್ತು ನಿಮ್ಮ ವಂಶದವರೂ ನಿನ್ನನ್ನು ಶ್ಲಾಘಿಸುವರು' ಎನಲು, ಆ ಮಾತನ್ನು ಕೇಳಿ ಶಿಬಿಯು ಕೂಡಲೇ ತನ್ನ ಬಲತೊಡೆಯನ್ನು ಕೊಯ್ದು, ಆ ಮಾಂಸವನ್ನು ತ್ರಾಸಿನ ಒಂದು ಭಾಗದಲ್ಲಿ ಇಟ್ಟು ಮತ್ತೊಂದು ಭಾಗದಲ್ಲಿ ಆ ಕಪೋತಪಕ್ಷಿಯನ್ನಿಟ್ಟು ತೂಗಲು, ಕಪೋತಪಕ್ಷಿಯ ತೂಕವೇ ಏರಿತು, ಅದನ್ನು ನೋಡಿ ಆ ರಾಯನು ತನ್ನ ಶರೀರವನ್ನು ಛೇದಿಸಿ ಆ ಮಾಂಸವನ್ನು ಆ ತ್ರಾಸಿನಲ್ಲಿ ಮತ್ತು ಮತ್ತೂ ಇಡುತ್ತಿದ್ದರೂ ಆ ಕಪೋತಪಕ್ಷಿಯ ತೂಕವೇ ಏರುತ್ತಾ ಬಂತು. ಆಗ ಆತನು ಸ್ವಲ್ಪವೂ ಮನಸ್ಸಿನಲ್ಲಿ ವ್ಯಥೆಪಡದೆ ತಾನೇ ಆ ತ್ರಾಸಿನಲ್ಲಿ ಕೂತುಕೊಳ್ಳುವನಾದನು. ಅದನ್ನು ನೋಡಿ ಆ ಗಿಡುಗವು, 'ಎಲೈ ರಾಯನೆ, ಮರೆಹೊಕ್ಕ ಕಪೋತಪಕ್ಷಿಯನ್ನು ನೀನು ಸಂರಕ್ಷಿಸುವನಾದೆ' ಎಂದು ನುಡಿದು ಅಂತರ್ಧಾನವನ್ನು ಹೊಂದಿತು. ಬಳಿಕ ಶಿಬಿರಾಯನು ಪಾರಿವಾಳದ ಹಕ್ಕಿಯನ್ನು ನೋಡಿ 'ಎಲೈ ಕಪೋತವೆ ನಿನ್ನನ್ನು ನಮ್ಮವರು ಬಲ್ಲರು. ಆ ಶ್ಯೇನಪಕ್ಷಿಯು ಯಾರು ಹೇಳು? ಈಶ್ವರನಾದರೂ ಕದಾಚಿತ್ತು ಹೀಗೆ ಮಾಡತಕ್ಕವನಲ್ಲ. ಇದೇನು ಆಶ್ಚರ್ಯವಾಗಿರುವದಲ್ಲ! ಹೇಳು' ಎಂದನು. ಅನಂತರದಲ್ಲಿ ಕಪೋತಪಕ್ಷಿಯು 'ಎಲೈ ರಾಯನೆ, ನಾನು ಯಜ್ಞೇಶ್ವರನು, ಆ ಗಿಡುಗವು ಶಚೀಪತಿಯಾದ ದೇವೇಂದ್ರನು, ನಾವಿಬ್ಬರೂ ಸಾಧುವಾಗಿಯೂ ಧರ್ಮಾತ್ಮನಾಗಿಯೂ ಇರುವ ನಿನ್ನನ್ನು ಪರೀಕ್ಷಿಸುವದಕ್ಕೋಸ್ಕರ ಹೀಗೆ ಬಂದೆವು. ನೀನು ನಿನ್ನ ತೊಡೆಯ ಮಾಂಸವನ್ನು ಖಡ್ಗದಿಂದ ಕೊಯ್ದು ಕೊಡುವನಾದೆ, ಆ ಮಾಂಸವು ಪುನಃ ನಿನ್ನ ತೊಡೆಯನ್ನು ಸೇರಿ ಸುವರ್ಣಛಾಯವಾಗಿಯೂ ಸುಗಂಧಯುಕ್ತವಾಗಿಯೂ ಮಂಗಳಕರವಾಗಿಯೂ ನಿನಗೊಂದು ಗುರುತಾಗಿರುವಂತೆ ನಾನು ಮಾಡಿರುವೆನು. ನೀನು ಈ ಪ್ರಜೆಗಳನ್ನು ಸುಖದಿಂದ ಪರಿಪಾಲಿಸುತ್ತ ದೇವರ್ಷಿಗಳಿಗೆ ಸಮ್ಮತನಾಗಿ ಇರುತ್ತೀಯೆ. ನಿನ್ನ ಶರೀರದ ಯಾವ ಭಾಗದಲ್ಲಿ ನನಗೋಸ್ಕರ ಮಾಂಸವನ್ನು ಕೊಯ್ದು ಕೊಡುವನಾದೆಯೋ ಆ ಭಾಗದಲ್ಲಿ ಕಪೋತರೋಮನೆಂಬ ಒಬ್ಬ ಪುರುಷನು ಹುಟ್ಟುವನು. ಆತನು ರಾಜಶ್ರೇಷ್ಠನಾಗಿಯೂ ಸುಂದರಾಂಗನಾಗಿಯೂ ಯಶೋವಂತನಾಗಿಯೂ ಶೂರನಾಗಿಯೂ ನಿಮ್ಮ ವಂಶದವರಲ್ಲಿ ಶ್ರೇಷ್ಠನಾಗಿಯೂ ಇರುವನು, ಅಂಥಾ ಸುಪುತ್ರನನ್ನು ನೀನು ಪಡೆಯುವೆ' ಎಂದು ನುಡಿದು ಅಂತರ್ಧಾನವನ್ನು ಹೊಂದಿತು" ಎಂದು ಮಾರ್ಕಂಡೇಯನು ಧರ್ಮರಾಯನಿಗೆ ಹೇಳಿದನು.

## ೧೯೨ನೇ ಅಧ್ಯಾಯ.—ಮಾರ್ಕಂಡೇಯಪರ್ವ.—(ರಾಜರ ಮಹಿಮೆ).

ಅನಂತರದಲ್ಲಿ ವೈಶಂಪಾಯನಮುನೀಂದ್ರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯನೆ, ಧರ್ಮರಾಯನು ಮಾರ್ಕಂಡೇಯನನ್ನು ಕುರಿತು "ಎಲೈ ಮಹಾತ್ಮನೆ, ಇನ್ನೂ ಮಹತ್ತಾದ ರಾಜರ ಚರಿತ್ರೆಯನ್ನು ಹೇಳುವನಾಗು" ಎನಲು, ಮಾರ್ಕಂಡೇಯನು "ಎಲೈ ಧರ್ಮರಾಯನೆ, ವಿಶ್ವಾಮಿತ್ರ ಮಹರ್ಷಿಯ ಮಗನಾದ ಅಷ್ಟಕನು ಪೂರ್ವದಲ್ಲಿ ಅಶ್ವಮೇಧ ಯಾಗವನ್ನು ಮಾಡುತ್ತಿರಲು, ಆತನ ಸಹೋದರನಾದ ಪ್ರತರ್ದನ, ವಸುಮನ, ಶಿಬಿ, ಈ ರಾಜರು ಆ ಯಜ್ಞಮಹೋತ್ಸವಕ್ಕೆ ಬಂದಿದ್ದರು. ಆ ಸಹೋದರರೊಡನೆ ಅಷ್ಟಕನು ಆ ಯಾಗವನ್ನು ನೆರವೇರಿಸಿ ಅವರಸಂಗಡ ರಥದಮೇಲೆ ಕುಳಿತು ಮಾರ್ಗದಲ್ಲಿ ಬರುತ್ತಿದ್ದನು. ಆಗ ಮಾರ್ಗದಲ್ಲಿ ನಾರದರು ಬರುತ್ತಿರಲು, ಅಷ್ಟಕನು ಅವರನ್ನು ರಥದಮೇಲೆ ಕೂರಿಸಿಕೊಂಡು ಅವರ ಸಂಗಡಲೇ ಹೊರಟನು. ಆಗ ಅವರಲ್ಲಿ ಒಬ್ಬ ರಾಜನು ಆ ದೇವರ್ಷಿಯಾದ ನಾರದಮಹರ್ಷಿಯನ್ನು ಕುರಿತು, 'ಎಲೈ ಮಹಾನುಭಾವನೆ, ನಾನು ಒಂದು ಪ್ರಶ್ನೆಯನ್ನು ಮಾಡುತ್ತೇನೆ; ನೀನು ನನ್ನಲ್ಲಿ ಅನುಗ್ರಹಮಾಡಿ ಅದಕ್ಕೆ ಉತ್ತರವನ್ನು

ಹೇಳಬೇಕು' ಎನಲು, ನಾರದನು 'ಎಲೈ ರಾಯನೆ, ನೀನು ಪ್ರಶ್ನೆಮಾಡು' ಎಂದನು. ಆಗ ಆ ರಾಯನು 'ಎಲೈ ಮಹಾನುಭಾವನೆ, ಬಹುಕಾಲ ಸುಖವನ್ನನುಭವಿಸತಕ್ಕ ಸ್ವರ್ಗವನ್ನು ಸದ್ಗುಣವಂತರಾದ ಮಹಾತ್ಮರು ಹೊಂದುವರು. ಈಗ ನಾವು ನಾಲ್ಕುಮಂದಿಯೂ ಸ್ವರ್ಗಕ್ಕೆ ಹೋಗುವರಾಗಿರುವೆವು. ನಮ್ಮಲ್ಲಿ ಯಾರು ಮೊದಲು ಪುನಃ ಭೂಮಿಗೆ ಬರತಕ್ಕವರು' ಎಂದು ಪ್ರಶ್ನೆಮಾಡಿದನು. ಬಳಿಕ ನಾರದನು 'ಎಲೈ ರಾಯನೆ, ಅಷ್ಟಕನೇ ಮೊದಲು ಭೂಮಿಗೆ ಬರತಕ್ಕವನು' ಎನಲು, ಆ ರಾಯನು 'ಅಷ್ಟಕನೇ ಮೊದಲು ಬರುವದಕ್ಕೆ ಕಾರಣವೇನು' ಎಂದನು. ಬಳಿಕ ನಾರದನು 'ಎಲೈ ರಾಯನೆ, ನಾನು ಪೂರ್ವದಲ್ಲಿ ಅಷ್ಟಕನ ಮನೆಯಲ್ಲಿ ವಾಸಮಾಡುತ್ತಿದ್ದೆನು. ಆತನು ಒಂದುದಿವಸ ನನ್ನನ್ನು ರಥದಲ್ಲಿ ಕುಳ್ಳಿರಿಸಿಕೊಂಡು ಹೊರಟನು. ಆಗ ನಾನು ಮಾರ್ಗದಲ್ಲಿ ಬೇರೆಬೇರೆ ಬಣ್ಣವುಳ್ಳವುಗಳಾಗಿ ವಿಂಗಡಿಸಿರುವ ಅನೇಕಸಾವಿರ ಗೋವುಗಳನ್ನು ನೋಡಿ; ಎಲೈ ಅಷ್ಟಕನೆ ಈ ಗೋವುಗಳು ಯಾರವು' ಎಂದು ಕೇಳಿದೆನು. ಅಷ್ಟಕನು ಇವು ನಾನು ದಾನಮಾಡಿದ್ದೆಂದು ಹೇಳಿದನು. ಇಷ್ಟುಮಾತ್ರವೇ ಹೊರತು ಮತ್ತೇನೂ ಇಲ್ಲ. ಆತನು ತಾನು ಮಾಡಿದ ದಾನವನ್ನು ತಾನೇ ಹೇಳಿದವನಾದ್ದರಿಂದ ತಾನು ಮಾಡಿದ ಪುಣ್ಯವು ಕ್ಷೀಣವಾಗಿ ನಿಮ್ಮೆಲ್ಲರಿಗಿಂತಲೂ ಮೊದಲೇ ಸ್ವರ್ಗದಿಂದ ಭೂಮಿಗೆ ಬರುವನು' ಎಂದನು. ಆ ರಾಯನು ನಾರದನನ್ನು ಕುರಿತು 'ಎಲೈ ದೇವರ್ಷಿಯೆ ಮಿಕ್ಕ ಮೂರುಮಂದಿಯಲ್ಲಿ ಯಾರು ಸ್ವರ್ಗದಿಂದ ಮೊದಲು ಭೂಮಿಗೆ ಬರುವರು' ಎನಲು, ನಾರದನು 'ಎಲೈ ರಾಯನೆ ಪ್ರತರ್ದನನು ಮೊದಲು ಭೂಮಿಗೆ ಬರುವನು' ಎಂದನು. ಆ ರಾಯನು ಅದಕ್ಕೆ ಏನುಕಾರಣವೆಂದು ಪ್ರಶ್ನೆಮಾಡಲು, ನಾರದನು 'ಎಲೈ ರಾಯನೆ ಪೂರ್ವದಲ್ಲಿ ಪ್ರತರ್ದನನ ಮನೆಯಲ್ಲಿ ನಾನು ವಾಸಮಾಡುತ್ತಿರಲು, ಒಂದಾನೊಂದುದಿನ ನಾವಿಬ್ಬರೂ ರಥದಮೇಲೆ ಕೂತುಕೊಂಡು ಮಾರ್ಗದಲ್ಲಿ ಹೋಗುತ್ತಿದ್ದೆವು. ಆಗ ಒಬ್ಬ ಬ್ರಾಹ್ಮಣನು 'ಎಲೈ ರಾಯನೆ, ನನಗೆ ಕುದುರೆಯನ್ನು ಕೊಡು' ಎಂದು ಯಾಚಿಸಿದನು. ಆಗ ಪ್ರತರ್ದನನು 'ನಾನು ಮನೆಗೆ ಹೋಗಿ ನಿನಗೆ ಕುದುರೆಯನ್ನು ಕೊಡುವೆನು' ಎಂದು ಆ ಬ್ರಾಹ್ಮಣನಿಗೆ ಹೇಳಿದನು. ಬಳಿಕ 'ಆ ಬ್ರಾಹ್ಮಣನು ಜಾಗ್ರತೆಯಾಗಿ ಕುದುರೆಯನ್ನು ಕೊಡು' ಎಂದು ಕೇಳಲು, ಪ್ರತರ್ದನನು ಆ ಬ್ರಾಹ್ಮಣನನ್ನು ಕುರಿತು, 'ಒಳ್ಳೇದು ಹಾಗಾದರೆ ಈಗಲೇ ಕುದುರೆಯನ್ನು ಕೊಡುವೆನು' ಎಂದು ಹೇಳಿ ರಥಕ್ಕೆ ಬಲದ ಭಾಗದಲ್ಲಿ ಕಟ್ಟಿದ್ದ ಒಂದು ಕುದುರೆಯನ್ನು ಕೊಟ್ಟನು. ಬಳಿಕ ಮತ್ತೊಬ್ಬ ಬ್ರಾಹ್ಮಣನು ಬಂದು ಕುದುರೆಯನ್ನು ಯಾಚಿಸಿದನು. ಆಗ ಈ ರಾಯನು ರಥದ ಎಡದಕಡೇ ಇರುವ ಕುದುರೆಯನ್ನು ಬಿಚ್ಚಿ ಆ ಬ್ರಾಹ್ಮಣನಿಗೆ ಕೊಟ್ಟನು. ಅಷ್ಟರಲ್ಲೇ ಮತ್ತೊಬ್ಬ ಬ್ರಾಹ್ಮಣನು ಬಂದು ಕುದುರೆಯನ್ನು ಯಾಚಿಸಿದನು. ಆಗ ಆ ಪ್ರತರ್ದನನು ಆ ರಥದ ಎಡದಕಡೆ ಕಟ್ಟಿದ್ದ ಮತ್ತೊಂದು ಕುದುರೆಯನ್ನು ಆ ಬ್ರಾಹ್ಮಣನಿಗೆ ಜಾಗ್ರತೆಯಾಗಿ ಕೊಟ್ಟನು. ಬಳಿಕ ಇನ್ನೊಬ್ಬಬ್ರಾಹ್ಮಣನು ಅಶ್ವಾರ್ಥವಾಗಿ ಬಂದು 'ಎಲೈ ರಾಯನೆ ನನಗೂ ಕುದುರೆಯನ್ನು ಕೊಡು' ಎಂದು ಬೇಡಿದನು. ಆಗ ಪ್ರತರ್ದನನು ಆ ಬ್ರಾಹ್ಮಣನನ್ನು ಕುರಿತು, 'ಒಳ್ಳೇದು ಜಾಗ್ರತೆಯಾಗಿ ಕುದುರೆಯನ್ನು ಕೊಡುವೆನು' ಎಂದು ಹೇಳಿದನು. ಆ ಬ್ರಾಹ್ಮಣನು 'ಎಲೈ ರಾಯನೆ, 'ಈಗಲೇ ಕುದುರೆಯನ್ನು ಕೊಡಬೇಕು' ಎಂದನು. ಬಳಿಕ ಪ್ರತರ್ದನನು ಆತನಿಗೆ ಉಳಿದಿದ್ದ ಒಂದು ಕುದುರೆಯನ್ನೂ ಕೊಟ್ಟು ತಾನೇ ನೊಗವನ್ನು ಹಿಡಿದು ರಥವನ್ನು ಎಳದುಕೊಂಡು ಹೋಗುತ್ತ 'ಬ್ರಾಹ್ಮಣರಿಗೆ ಸ್ವಲ್ಪವೂ ಯುಕ್ತಾಯುಕ್ತ ವಿಚಾರವಿಲ್ಲವು' ಎಂದು ನುಡಿದನು. 'ಎಲೈ ರಾಯನೆ, ಆ ಈ ಪ್ರತರ್ದನನು ದಾನವನ್ನು ಮಾಡಿ ಅಸೂಯೆಪಟ್ಟವನಾದ್ದರಿಂದ ನಿಮ್ಮ ಮೂವರಲ್ಲಿ ಈತನೇ ಮೊದಲು ಸ್ವರ್ಗದಿಂದ ಭೂಮಿಗೆ ಬರತಕ್ಕವನು' ಎಂದನು. ಬಳಿಕ ಆ ರಾಯನು 'ಎಲೈ ದೇವರ್ಷಿಯೆ, ನಮ್ಮಿಬ್ಬರಲ್ಲಿ ಸ್ವರ್ಗದಿಂದ ಯಾರು ಮೊದಲು ಭೂಮಿಗೆ ಇಳಿಯುವರು' ಎನಲು, ನಾರದನು 'ವಸುಮನನು ಮೊದಲು ಭೂಮಿಗೆ ಇಳಿಯುವನು' ಎಂದನು. ಬಳಿಕ 'ಆ ರಾಯನು ಅದಕ್ಕೆ ಏನು ಕಾರಣವೆಂದು' ಕೇಳಲು, ನಾರದನು 'ಎಲೈ ರಾಯನೆ, ನಾನು ಭೂಲೋಕದಲ್ಲಿ ಸಂಚರಿಸುತ್ತ ಒಂದು ದಿವಸ ವಸುಮನನ ಮನೆಗೆ ಬಂದೆನು. ಆ ಸಮಯದಲ್ಲಿ ಪರ್ವತಗಳಲ್ಲಿಯೂ ಅರಣ್ಯಗಳಲ್ಲಿಯೂ ಸಮುದ್ರಗಳಲ್ಲಿಯೂ ಶಾಸ್ತ್ರಸಮ್ಮತವಾದ ಮಾರ್ಗಗ

ಳನ್ನು ಮಾಡಿಸುವದಕ್ಕಾಗಿ ಬ್ರಾಹ್ಮಣರು ಸ್ವಸ್ತಿಪುಣ್ಯಾಹವಾಚನೆಯನ್ನು ಮಾಡುತ್ತಿದ್ದರು. ಆಗ ನಾನು ಅಲ್ಲಿದ್ದ ಒಂದು ರಥವನ್ನು ಅಪೇಕ್ಷಿಸಿ ಆ ಬ್ರಾಹ್ಮಣರಿಗೆ ತೋರಿಸಿ ಆ ರಥವನ್ನು ಶ್ಲಾಘಿಸಿದೆನು. ಅದನ್ನು ನೋಡಿ ವಸುಮನನು ಆ ರಥವನ್ನು ನನಗೆ ಕೊಡದೆ ನನ್ನನ್ನು ಕುರಿತು, ಎಲೈ ದೇವರ್ಷಿಯೆ, ಈ ರಥವನ್ನು ನೀನು ಶ್ಲಾಘಿಸುವನಾದೆ, ಇದು ನಿನ್ನದಾಗೇ ಇರುವದು' ಎಂದು ನುಡಿದನು. ಆಗ ನಾನು ಹೊರಟುಹೋಗಿ ಮತ್ತೊಂದು ಸಮಯದಲ್ಲಿ ರಥಬೇಕಾಗಿ ಅಲ್ಲಿಗೆ ಬರಲು, ಆ ವಸುಮನನು ನನ್ನನ್ನು ನೋಡಿ 'ಎಲೈ ಮಹಾನುಭಾವನೆ ರಥವು ಚೆನ್ನಾಗಿರುವದು' ಎಂದು ನುಡಿದನು. ಆಗಲೂ ನಾನು ಹೊರಟುಹೋಗಿ ಮೂರನೇ ಆವರ್ತಿ ಬ್ರಾಹ್ಮಣರು ಸ್ವಸ್ತಿಪುಣ್ಯಾಹವಾಚನ ಮಾಡುವ ಸಮಯದಲ್ಲಿ ಒಂದು ರಥವನ್ನು ಆ ಬ್ರಾಹ್ಮಣರಿಗೆ ತೋರಿಸಿದೆನು ; ಆಗ ವಸುಮನನು ನನ್ನನ್ನು ನೋಡಿ 'ಎಲೈ ಋಷಿಶ್ರೇಷ್ಠನೆ, ಈ ಸ್ವಸ್ತಿಪುಣ್ಯಾಹವು ಚೆನ್ನಾಗಿ ನಡದಿರುವದೆ ? ' ಎಂದು ಬೇರೇ ಮಾತನ್ನಾಡಿದನು. 'ಎಲೈ ರಾಯನೆ ವಸುಮನನು ನಾನು ಅಪೇಕ್ಷಿಸಿದ ರಥವನ್ನು ನನಗೆ ಕೊಡದೆ ಕಪಟದಿಂದ ಸ್ತುತಿಸಿದವನಾದ್ದರಿಂದ ಆ ದ್ರೋಹದಿಂದಲೇ ಆತನು ನಿಮ್ಮಿಬ್ಬರಲ್ಲಿ ಮೊದಲು ಕ್ಷೀಣಪುಣ್ಯನಾಗಿ ಸ್ವರ್ಗದಿಂದ ಭೂಮಿಗೆ ಬೀಳುವನು' ಎಂದನು. ಬಳಿಕ ಆ ರಾಯನು 'ಎಲೈ ನಾರದನೆ, ಅಮೇಲೆ ಯಾರು ಸ್ವರ್ಗದಲ್ಲಿರುವರು ? ಯಾರು ಭೂಮಿಗೆ ಬರುವರು' ಎನಲು, ನಾರದನು 'ಎಲೈ ರಾಜನೆ, ಅಮೇಲೆ ಶಿಬಿರಾಯನು ಸ್ವರ್ಗದಲ್ಲಿರುವನು. ನಾನು ಸ್ವರ್ಗದಿಂದ ಕೆಳಕ್ಕೆ ಬರತಕ್ಕವನು. ಇದಕ್ಕೆ ಕಾರಣವನ್ನು ಹೇಳುವೆನು' ಕೇಳು, ನಾನು ಶಿಬಿರಾಯನಿಗೆ ಸಮಾನನಾದವನಲ್ಲ. ಪೂರ್ವದಲ್ಲಿ ಒಬ್ಬ ಬ್ರಾಹ್ಮಣನು ಅನ್ನಾರ್ಥಿಯಾಗಿ ಶಿಬಿರಾಯನ ಬಳಿಗೆ ಬಂದನು. ಆತನನ್ನು ಕಂಡು ಶಿಬಿರಾಯನು 'ಎಲೈ ಬ್ರಾಹ್ಮಣನೆ, ನಾನು ಏನು ಮಾಡತಕ್ಕದ್ದು ಹೇಳು ಎನಲು, ಆ ಬ್ರಾಹ್ಮಣನು 'ಎಲೈ ರಾಯನೆ ನನಗೆ ಕ್ಷುತ್ತಾಗಿರುವದು. ನಿನ್ನ ಪುತ್ರನಾದ ಬೃಹದ್ಗರ್ಭನನ್ನು ಸಂಹರಿಸಿ ಪಕ್ವಮಾಡಿ ನನಗೆ ಆಹಾರವಾಗಿ ಕೊಡು, ಆತನನ್ನು ಪಕ್ವಮಾಡುವವರಿಗೂ ನಾನು ನಿರೀಕ್ಷಿಸುತ್ತಿರುವೆನು' ಎಂದನು. ಬಳಿಕ ಶಿಬಿರಾಯನು ತನ್ನ ಮಗನನ್ನು ಖಂಡಿಸಿ ವಿಧ್ಯುಕ್ತವಾಗಿ ಪಕ್ವವನ್ನು ಮಾಡಿ ಭೋಜನಪಾತ್ರೆಯಲ್ಲಿರಿಸಿಕೊಂಡು ಆ ಪಾತ್ರೆಯನ್ನು ತನ್ನ ತಲೆಯಮೇಲಿಟ್ಟುಕೊಂಡು ಆ ಬ್ರಾಹ್ಮಣನನ್ನು ಹುಡುಕುತ್ತಿರಲು, ರಾಜಭೃತ್ಯನು ಬಂದು 'ಎಲೈ ರಾಯನೆ, ಆ ಬ್ರಾಹ್ಮಣನು ಕೋಪದಿಂದ ನಿನ್ನ ನಗರವನ್ನು ಪ್ರವೇಶಿಸಿ, ನಿನ್ನ ಅರಮನೆಯನ್ನೂ ಬೊಕ್ಕಸವನ್ನೂ ಅಂತಃಪುರವನ್ನೂ ಆಯುಧಶಾಲೆಯನ್ನೂ ಅಶ್ವಶಾಲೆಯನ್ನೂ ಗಜಶಾಲೆಯನ್ನೂ ಸಹ ಬೆಂಕಿಯಿಂದ ಸುಡುತ್ತಿರುವನು' ಎಂದನು. ಅದನ್ನು ಕೇಳಿ, ಶಿಬಿಯು ಸ್ವಲ್ಪವೂ ಮನಸ್ಸಿನಲ್ಲಿ ವಿಕಾರವನ್ನು ಪಡೆಯದೆ ಆ ಬ್ರಾಹ್ಮಣನ ಸಮೀಪಕ್ಕೆ ಹೋಗಿ, 'ಎಲೈ ಬ್ರಾಹ್ಮಣನೆ ಅನ್ನವು, ಸಿದ್ಧವಾಗಿರುವದು ; ನೀನು ಭೋಜನಮಾಡಬಹುದು' ಎನಲು, ಅದನ್ನು ನೋಡಿ ಆ ಬ್ರಾಹ್ಮಣನು ಅಧಿಕವಾಗಿ ಆಶ್ಚರ್ಯಪಟ್ಟು ಏನೂ ಮಾತನಾಡದೆ ತಲೆಯನ್ನು ಕೆಳಕ್ಕೆ ಬಗ್ಗಿಸಿಕೊಂಡು ಸುಮ್ಮನಿದ್ದನು. ಬಳಿಕ ಶಿಬಿಯು ಆ ಬ್ರಾಹ್ಮಣನನ್ನು ಕುರಿತು, 'ಎಲೈ ಬ್ರಾಹ್ಮಣನೆ ನನ್ನಲ್ಲಿ ಅನುಗ್ರಹಿಸಿ ಈ ಅನ್ನವನ್ನು ಭೋಜನಮಾಡು' ಎಂದನು. ಆಗ ಆ ಬ್ರಾಹ್ಮಣನು ಒಂದು ಮುಹೂರ್ತ ಶಿಬಿಯನ್ನ ನೋಡಿ 'ಎಲೈ ರಾಯನೆ, ನೀನೇ ಇದನ್ನು ಭುಂಜಿಸು' ಎಂದನು. ಶಿಬಿರಾಯನು ಹಾಗೇ ಆಗಲೆಂದು ಸ್ವಲ್ಪವೂ ಮನಸ್ಸಿನಲ್ಲಿ ವಿಷಾದಪಡದೆ ತನ್ನ ತಲೆಯಮೇಲಿದ್ದ ಆ ಪಾತ್ರೆಯನ್ನು ಕೆಳಕ್ಕೆ ಇಳಿಸಿ ಅದನ್ನು ಭುಂಜಿಸುವದಕ್ಕೆ ಯತ್ನಿಸಿದನು. ಅಷ್ಟರಲ್ಲೇ ಆ ಬ್ರಾಹ್ಮಣನು ಶಿಬಿರಾಯನ ಕಯ್ಯನ್ನು ಹಿಡಿದುಕೊಂಡು 'ಎಲೈ ರಾಯನೆ, ನೀನು ಕ್ರೋಧವನ್ನು ಜಯಿಸಿದವನು ; ನೀನು ಬ್ರಾಹ್ಮಣರು ಬೇಡಿದ್ದನ್ನೆಲ್ಲಾ ಕೊಡತಕ್ಕವನು' ಎಂದು ನುಡಿದು ಮತ್ತೂ ಆತನ ಮಗನನ್ನು ಬದುಕಿಸಿಕೊಟ್ಟನು.

ಬಳಿಕ ಶಿಬಿಯು ದೇವಕುಮಾರನಂತೆ ಪುಣ್ಯಗಂಧಭರಿತನಾಗಿಯೂ ದಿವ್ಯಾಲಂಕಾರಭೂಷಿತನಾಗಿಯೂ ಎದುರಿಗೆ ಬಂದು ನಿಂತಿದ್ದ ಮಗನನ್ನು ನೋಡುತ್ತಿರಲು, ಆ ಬ್ರಾಹ್ಮಣನು ಅಂತರ್ಧಾನವನ್ನು ಹೊಂದಿದನು. ಎಲೈ ರಾಯನೆ, ರಾಜರ್ಷಿಯಾದ ಶಿಬಿರಾಯನ ಪರೀಕ್ಷಾರ್ಥವಾಗಿ ಚತುರ್ಮುಖ ಬ್ರಹ್ಮನು ಬ್ರಾಹ್ಮಣನ ರೂಪವನ್ನು

ತಾಳಿ ಹೀಗೆ ಬರುವನಾಗಿದ್ದನು. ಆ ಬ್ರಾಹ್ಮಣನು ಅಂತರ್ಧಾನವನ್ನು ಹೊಂದಲು, ಮಂತ್ರಿಗಳು ಶಿಬಿಯನ್ನು ಕುರಿತು 'ಎಲೈ ರಾಜನೆ, ಸಕಲವನ್ನೂ ತಿಳಿದ ನೀನು ಯಾತಕ್ಕೆ ಇಂಥಾ ಕಾರ್ಯವನ್ನುಮಾಡಿದೆ?' ಎಂದು ಕೇಳಿದರು. ಆಗ ಶಿಬಿರಾಯನು ಅವರನ್ನು ಕುರಿತು 'ಎಲೈ ಮಂತ್ರಿಗಳೆ, ಯಶಸ್ಸಿಗಾಗಿಯೂ ಸುಖಕ್ಕಾಗಿಯೂ ಮತ್ತೊಂದು ಪ್ರಯೋಜನಕ್ಕಾಗಿಯೂ ನಾನು ದಾನವನ್ನು ಮಾಡತಕ್ಕವನಲ್ಲ. ಸತ್ಪುರುಷರು ಯಾವ ಮಾರ್ಗದಲ್ಲಿ ನಡೆಯುವರೋ ಅದನ್ನು ನಾನು ಅನುವರ್ತಿಸತಕ್ಕವನು. ಸತ್ಪುರುಷರ ಮಾರ್ಗವು ಪ್ರಶಸ್ತವಾದ್ದರಿಂದ ಅದರಲ್ಲೇ ನನ್ನ ಬುದ್ಧಿಯು ಪ್ರವರ್ತಿಸುವದು' ಎಂದನು. ಎಲೈ ರಾಯನೆ, ಶಿಬಿರಾಯನ ಮಹಿಮೆಯನ್ನು ನಾನು ಬಲ್ಲವನಾದ್ದರಿಂದ ಆತನೇ ಸ್ವರ್ಗದಲ್ಲಿ ಬಹುಕಾಲ ವಾಸಮಾಡುವನು" ಎಂದು ಮಾರ್ಕಂಡೇಯನು ಧರ್ಮರಾಯನಿಗೆ ಹೇಳಿದನು.

## ೧೯೯ನೇ ಅಧ್ಯಾಯ.—ಮಾರ್ಕಂಡೇಯಪರ್ವ—(ಇಂದ್ರದ್ಯುಮ್ನಚರಿತ್ರೆ).

ಬಳಿಕ ವೈಶಂಪಾಯನಮುನೀಂದ್ರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಬಳಿಕ ಧರ್ಮರಾಯನೂ ಅಲ್ಲಿದ್ದ ಋಷಿಗಳೂ ಸಹ ಮಾರ್ಕಂಡೇಯನನ್ನು ಕುರಿತು, "ಎಲೈ ಮಹಾತ್ಮನೆ, ನಿನಗಿಂತಲೂ ಬಹುಕಾಲದವರು ಯಾರಾದರೂ ಇರುವರೆ?" ಎನಲು, ಮಾರ್ಕಂಡೇಯನು "ಎಲೈ ಧರ್ಮರಾಯನೆ, ಇಂದ್ರದ್ಯುಮ್ನನೆಂಬ ರಾಜರ್ಷಿಯು ಕ್ಷೀಣಪುಣ್ಯನಾಗಿ ಸ್ವರ್ಗದಿಂದ ಕೆಳಕ್ಕೆ ಬಿದ್ದು ತನ್ನ ಕೀರ್ತಿ ನಷ್ಟವಾಯಿತೇನೋ ಎಂದು ನನ್ನಬಳಿಗೆ ಬಂದು 'ನನ್ನನ್ನು ನೀನು ಬಲ್ಲೆಯಾ?' ಎಂದು ಪ್ರಶ್ನೆಮಾಡಿದನು. ಬಳಿಕ ನಾನು ಆತನನ್ನು ಕುರಿತು 'ಎಲೈ ರಾಯನೆ, ನಮ್ಮಂಥಾವರು ಪುಣ್ಯಸಂಪಾದನೆಗಾಗಿ ಜಪಾನುಷ್ಠಾನಪರರಾಗಿ ಒಂದೊಂದುದಿವಸ ಒಂದೊಂದು ಗ್ರಾಮದಲ್ಲಿ ವಾಸಮಾಡುತ್ತ ತೀರ್ಥಯಾತ್ರಾಪರರಾಗಿ ಶರೀರಸುಖಕ್ಕಾಗಿ ಕ್ಲೇಶಪಟ್ಟು ದ್ರವ್ಯಾರ್ಜನೆಯನ್ನು ಮಾಡತಕ್ಕವರಲ್ಲವಾದ್ದರಿಂದ ನಮಗೆ ಅತೀತ ಅನಾಗತಕಾಲಗಳ ವೃತ್ತಾಂತವು ತಿಳಿಯದು' ಎನಲು, ಇಂದ್ರದ್ಯುಮ್ನನು ನನ್ನನ್ನು ಕುರಿತು, 'ನಿನಗಿಂತಲೂ ಪೂರ್ವದಲ್ಲಿ ಹುಟ್ಟಿದವನು ಯಾವನಾದರೂ ಇರುವನೆ' ಎಂದು ಪ್ರಶ್ನೆಮಾಡಿದನು. ಬಳಿಕ ನಾನು ಆತನನ್ನು ಕುರಿತು, 'ಎಲೈ ರಾಯನೆ, ನನಗಿಂತಲೂ ಪೂರ್ವಿಕನಾದವನು ಹಿಮವತ್ಪರ್ವತದಲ್ಲಿ ಪ್ರಾವಾರಕರ್ಣನೆಂಬ ಉಲೂಕನು ವಾಸಮಾಡುತ್ತಿರುವನು" ಎಂದೆನು. ಬಳಿಕ ಇಂದ್ರದ್ಯುಮ್ನನು 'ಎಲೈ ಮುನಿಯೆ, ಆ ಉಲೂಕನು ನಿನಗಿಂತಲೂ ಪೂರ್ವದವನೊ? ಇಲ್ಲಿಗೆ ದೂರವಾಗಿರುವ ಹಿಮವತ್ಪರ್ವತದಲ್ಲಿ ವಾಸಮಾಡತಕ್ಕ ಆತನು ನಿನ್ನನ್ನು ತಿಳಿದವನಾಗಿದ್ದರೆ ಅಲ್ಲಿಗೆ ಹೋಗೋಣ ನಡೆ ಎಂದು ನುಡಿದು, ಆ ಇಂದ್ರದ್ಯುಮ್ನರಾಯನು ತಾನೇ ಕುದುರೆಯಾಗಿ ನನ್ನನ್ನು ತನ್ನಮೇಲೆ ಕೂರಿಸಿಕೊಂಡು ಹಿಮವತ್ಪರ್ವತಕ್ಕೆ ನನ್ನನ್ನು ಕರೆದುಕೊಂಡು ಹೋಗಿ ಆ ಉಲೂಕನನ್ನು ಕಂಡು, 'ಎಲೈ ಉಲೂಕನೆ, ನನ್ನನ್ನು ನೀನು ಬಲ್ಲೆಯಾ?' ಎಂದು ಪ್ರಶ್ನೆಮಾಡಿದನು. ಬಳಿಕ ಆ ಉಲೂಕನು ಒಂದು ಮುಹೂರ್ತ ಯೋಚಿಸಿ 'ಎಲೈ ರಾಯನೆ, ನಿನ್ನನ್ನು ನಾನು ಕಾಣೆನು' ಎಂದನು. ಬಳಿಕ ಇಂದ್ರದ್ಯುಮ್ನನು 'ಎಲೈ ಉಲೂಕನೆ, ನಿನಗಿಂತಲೂ ಪೂರ್ವಿಕರು ಯಾರಾದರೂ ಇರುವರೊ?' ಎನಲು, ಉಲೂಕನು ಇಂದ್ರದ್ಯುಮ್ನನನ್ನು ಕುರಿತು, 'ಎಲೈ ರಾಯನೆ, ಇಂದ್ರದ್ಯುಮ್ನವೆಂಬ ಸರೋವರದಲ್ಲಿ ನಾಡೀಜಂಘನೆಂಬ ಬಕನು ವಾಸಮಾಡುತ್ತಿರುವನು. ಆತನು ನನಗಿಂತಲೂ ಪೂರ್ವಿಕನಾದವನು' ಎಂದನು. ಬಳಿಕ ಇಂದ್ರದ್ಯುಮ್ನನು ನನ್ನನ್ನೂ ಆ ಉಲೂಕನನ್ನೂ ಕರೆದುಕೊಂಡು ಆ ಸರೋವರದ ಬಳಿಗೆ ಹೋದನು. ಬಳಿಕ ನಾವು ಆ ನಾಡೀಜಂಘನೆಂಬ ಬಕನನ್ನು ನೋಡಿ 'ಎಲೈ ಬಕನೆ, ಈ ಇಂದ್ರದ್ಯುಮ್ನರಾಯನನ್ನು ನೀನು ಬಲ್ಲೆಯಾ?' ಎಂದು ಕೇಳಿದೆವು; ಆಗ ಆ ಬಕನು ಒಂದು ಮುಹೂರ್ತ ಯೋಚಿಸಿ ಇಂದ್ರದ್ಯುಮ್ನರಾಯನನ್ನು ನಾನು ಕಾಣೆನೆಂದು ಹೇಳಿದನು. ಬಳಿಕ ನಾವು ಆ ಬಕನನ್ನು ಕುರಿತು, 'ನಿನಗಿಂತಲೂ ಪುರಾತನನಾದವನು ಯಾವನಾ.

ದರೂ ಇರುವನೆ ?' ಎಂದು ಕೇಳಿದೆವು. ಆಗ ಆ ಬಕನು ಇದೇ ಸರೋವರದಲ್ಲಿ ಅಕೂಪಾರನೆಂಬ ಮೊಸಳೆಯು ಇರುವದು. ಅದು ನನಗಿಂತಲೂ ಪುರಾತನವಾದದ್ದು. ಆ ಮೊಸಳೆಯು ಈ ರಾಜನನ್ನು ತಿಳಿದಿದ್ದರೂ ತಿಳಿದಿರಬಹುದು. ಆತನನ್ನು ಕೇಳಿ' ಎಂದನು. ಬಳಿಕ ನಾವು 'ಎಲೈ ಬಕನೆ, ಆ ಅಕೂಪಾರನಿಗೆ ನಾವು ಬಂದದ್ದನ್ನು ತಿಳುಹಿಸು. ಆತನು ನೀರಿನಿಂದ ಮೇಲಕ್ಕೆ ಬಂದರೆ ನಾವು ಆತನಸಂಗಡ ಮಾತನಾಡುವೆವು' ಎನಲು, ಅದೇಪ್ರಕಾರ ಬಕನು ಆ ಅಕೂಪಾರನಿಗೆ ತಿಳುಹಿಸಲು, ಆತನು ಉದಕದಿಂದ ಮೇಲಕ್ಕೆ ಬಂದನು. ಆತನನ್ನು ಕಂಡು ನಾವು 'ಎಲೈ ಮೊಸಳೆಯೆ, ಈ ಇಂದ್ರದ್ಯುಮ್ನನನ್ನು ಬಲ್ಲೆಯಾ ?' ಎನಲು, ಆತನು ಒಂದು ಮುಹೂರ್ತ ಧ್ಯಾನಮಾಡಿ, ಕಂಬನಿಗಳನ್ನು ತುಂಬಿ ದುಃಖಪಡುತ್ತ ಶರೀರವನ್ನು ನಡುಗಿಸಿಕೊಂಡು, ಮೂರ್ಛೆಪಡದವನಂತೆ ಆಗಿ, ಕೈಮುಗಿದುಕೊಂಡು ಈ ಇಂದ್ರದ್ಯುಮ್ನರಾಯನನ್ನು ನಾನು ಕಾಣೆನೆಂದು ಹೇಳಲಾರೆ, ಈ ಸ್ಥಳದಲ್ಲಿ ಈತನು ಅನೇಕ ಯಜ್ಞಗಳನ್ನು ಮಾಡಿ ಯೂಪಸ್ತಂಭಗಳನ್ನು ಸ್ಥಾಪಿಸಿರುವನು. ಈತನು ಯಜ್ಞಗಳನ್ನು ಮಾಡಿ ಬ್ರಾಹ್ಮಣರಿಗೆ ದಕ್ಷಿಣಾರ್ಥವಾಗಿ ಕೊಟ್ಟ ಗೋವುಗಳ ತುಳಿದಾಟದಿಂದ ಈ ಸರಸ್ಸುಂಟಾಗಿರುವದು. ಇಲ್ಲಿ ನಾನು ವಾಸಮಾಡುತ್ತಿರುವೆನು' ಎಂದನು. ಎಲೈ ಧರ್ಮರಾಯನೆ, ಈ ಪ್ರಕಾರ ಇಂದ್ರದ್ಯುಮ್ನನ ವೃತ್ತಾಂತವನ್ನು ಆ ಮೊಸಳೆಯಿಂದ ನಾವು ಕೇಳುತ್ತಿರುವ ಸಮಯದಲ್ಲೇ ದೇವಲೋಕದಿಂದ ದಿವ್ಯವಾದ ರಥವು ಅಲ್ಲಿಗೆ ಬರುವದಾಯಿತು. ಅಷ್ಟರಲ್ಲೇ ಇಂದ್ರದ್ಯುಮ್ನರಾಯನನ್ನು ಕುರಿತು 'ಎಲೈ ರಾಯನೆ, ಲೋಕದಲ್ಲಿ ನಿನ್ನ ಕೀರ್ತಿಯು ವಿಸ್ತಾರವಾಗಿರುವದು. ನೀನು ನಿಶ್ಚಿಂತನಾಗಿ ಸ್ವರ್ಗಕ್ಕೆ ಹೋಗುವನಾಗು' ಎಂದು ಆಕಾಶವಾಣಿಯಾಯಿತು. ಎಲೈ ಧರ್ಮರಾಯನೆ, ಯಾವ ಪುರುಷನ ಪುಣ್ಯತಮವಾದ ಕೀರ್ತಿಯು ಎಷ್ಟು ದಿವಸ ಭೂಮಿಯಲ್ಲಿ ವ್ಯಾಪಿಸಿರುವದೋ ಅಷ್ಟು ದಿವಸವೂ ಆತನು ಸ್ವರ್ಗದಲ್ಲಿ ವಾಸಮಾಡುವನು. ಮತ್ತು ಯಾವ ಪುರುಷನ ಅಪಕೀರ್ತಿಯು ಎಷ್ಟು ದಿವಸ ಭೂಮಿಯಲ್ಲಿರುವದೋ ಅಷ್ಟುದಿವಸವೂ ಆತನು ನರಕದಲ್ಲಿರುವನು. ಆದ್ದರಿಂದ ಮನುಷ್ಯನು ತನಗೆ ಹಾನಿಯಾಗದೇ ಇರುವದಕ್ಕಾಗಿ ಪಾಪಕಾರ್ಯವನ್ನು ಮಾಡದೆ, ಒಳ್ಳೇ ನಡತೆಯುಳ್ಳವನಾಗಿ ಧರ್ಮಕಾರ್ಯವನ್ನೇ ಮಾಡಬೇಕು. ಎಲೈ ಧರ್ಮರಾಯನೆ, ಆ ಇಂದ್ರದ್ಯುಮ್ನರಾಯನು ಆಕಾಶವಾಣಿಯಾದದ್ದನ್ನು ಕೇಳಿ ಸ್ವರ್ಗದಿಂದ ಬಂದ ದಿವ್ಯರಥವನ್ನು ನೋಡಿ, ವೃದ್ಧನಾದ ಬಕನನ್ನೂ ಮೊಸಳೆಯನ್ನೂ ಅವರವರ ಸ್ಥಾನಗಳಿಗೆ ಕಳುಹಿಸಿಕೊಟ್ಟು, ಬಳಿಕ ತಾನು ಸ್ವರ್ಗಕ್ಕೆ ಹೋಗುವದು ಉಚಿತವಾದದ್ದು ಎಂದು ನಿಶ್ಚಯಿಸಿ ಹಾಗೇ ಮಾಡಿ ಆ ದಿವ್ಯರಥದಮೇಲೆ ಕೂತುಕೊಂಡು ಸ್ವರ್ಗಕ್ಕೆ ಹೋದನು. ಇದನ್ನು ನಾನು ಪ್ರತ್ಯಕ್ಷವಾಗಿ ನೋಡಿದೆನು" ಎಂದನು. ಬಳಿಕ ಪಾಂಡವರು "ಎಲೈ ಮಾರ್ಕಂಡೇಯನೆ, ಪುಣ್ಯವು ಕ್ಷೀಣವಾಗಲು, ಸ್ವರ್ಗದಿಂದ ಕೆಳಕ್ಕೆ ಬಿದ್ದ ಇಂದ್ರದ್ಯುಮ್ನರಾಯನನ್ನು ನೀನು ಮತ್ತೂ ಸ್ವರ್ಗಕ್ಕೆ ಕಳುಹಿಸುವನಾದೆ. ಈ ಕಾರ್ಯವು ಶ್ಲಾಘ್ಯವಾದದ್ದು" ಎನಲು, ಮಾರ್ಕಂಡೇಯನು "ಎಲೈ ಪಾಂಡವರೆ, ಈ ಮಹಾನುಭಾವನಾದ ಶ್ರೀಕೃಷ್ಣನು ನರಕದಲ್ಲಿ ಬಿದ್ದಿದ್ದ ರಾಜರ್ಷಿಯಾದ ನೃಗರಾಯನನ್ನು ಉದ್ಧಾರಮಾಡಿ ಹೀಗೆ ಸ್ವರ್ಗಕ್ಕೆ ಕಳುಹಿಸುವನಾದನು" ಎಂದು ಮಾರ್ಕಂಡೇಯನು ಧರ್ಮರಾಯನಿಗೆ ಹೇಳಿದನು.

## ೧೯೯ನೇ ಅಧ್ಯಾಯ.—ಮಾರ್ಕಂಡೇಯಪರ್ವ—(ಯಮಲೋಕದ ಚರಿತ್ರೆ).

ಬಳಿಕ ವೈಶಂಪಾಯನಮುನೀಂದ್ರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಬಳಿಕ ಧರ್ಮರಾಯನು ಮಾರ್ಕಂಡೇಯಮಹರ್ಷಿಯನ್ನು ಕುರಿತು, "ಎಲೈ ಮಹಾತ್ಮನೆ, ಪುರುಷನು ಯಾವ ಅವಸ್ಥೆಯಲ್ಲಿ ದಾನವನ್ನು ಮಾಡಿದರೆ ಇಂದ್ರಲೋಕವನ್ನು ಪಡೆಯುವನು ? ಬಾಲ್ಯ, ಯೌವನ, ವಾರ್ಧಕ ಈ ಮೂರವಸ್ಥೆಗಳಲ್ಲಿ ದಾನಮಾಡಿದರೆ ಯಾವ ಫಲವನ್ನು ಪಡೆಯುವನು ? ಮತ್ತು ಗೃಹಸ್ಥಾಶ್ರಮದಲ್ಲಿದ್ದುಕೊಂಡು ದಾನಮಾಡಿದರೆ ಎಂಥಾ ಫಲವನ್ನು ಪಡೆಯುವನು ?" ಎನಲು ಮಾರ್ಕಂಡೇಯನು "ಎಲೈ ಧರ್ಮರಾಯನೆ, ಯಾವ

ವನಿಗೆ ಪುತ್ರರಿಲ್ಲವೋ ಯಾವವನು ಧರ್ಮವನ್ನು ಬಿಟ್ಟು ಪರರ ಮನೆಯಲ್ಲಿಯೇ ಊಟಮಾಡಿಕೊಂಡಿರುವನೋ ಯಾವವನು ತನ್ನೊಬ್ಬನ ನಿಮಿತ್ತವಾಗಿಯೇ ಪಾಕವನ್ನು ಮಾಡಿಕೊಳ್ಳುವನೋ ಯಾವವನು ಬಾಲವೃದ್ಧಾತಿಥಿಗಳಿಗೆ ಭೋಜನಮಾಡಿಸದೆ ತಾನೇ ಮೊದಲು ಊಟಮಾಡುವನೋ ಈ ನಾಲ್ಕು ಜನರ ಜನ್ಮವೂ ವ್ಯರ್ಥವಾದದ್ದು, ಉತ್ತಮವಾದ ವರ್ಣಾಶ್ರಮಧರ್ಮಗಳಿಂದ ಪತಿತನಾದವನಿಗೆ ಕೊಟ್ಟ ದಾನವೂ ಅನ್ಯಾಯಾರ್ಜಿತವಾದ ದ್ರವ್ಯವನ್ನು ದಾನಮಾಡುವದೂ, ಪತಿತನಾದವನಿಗೆ ಕೊಟ್ಟ ದಾನವೂ, ಕಳ್ಳನಾಗಿರುವ ಬ್ರಾಹ್ಮಣನಿಗೆ ಕೊಟ್ಟ ದಾನವೂ. ಗುರುಗಳಲ್ಲಿ ಸುಳ್ಳಾಡಿದವನಿಗೆ ಕೊಟ್ಟ ದಾನವೂ, ಪಾಪಿಯಾದವನಿಗೆ ಕೊಟ್ಟ ದಾನವೂ, ಕೃತಘ್ನನಿಗೆ ಕೊಟ್ಟ ದಾನವೂ, ಗ್ರಾಮಪುರೋಹಿತನಿಗೆ ಕೊಟ್ಟ ದಾನವೂ, ದೇವರನ್ನು ಕ್ರಯಮಾಡಿದವನಿಗೆ ಕೊಟ್ಟ ದಾನವೂ, ಶೂದ್ರನ ದ್ರವ್ಯವನ್ನು ಯಾಚಿಸತಕ್ಕವನಿಗೆ ಕೊಟ್ಟ ದಾನವೂ, ಬ್ರಾಹ್ಮಣ ಜಾತಿಯಲ್ಲಿ ಹುಟ್ಟಿ ಬ್ರಾಹ್ಮಣಧರ್ಮವನ್ನು ಬಿಟ್ಟವನಿಗೆ ಕೊಟ್ಟ ದಾನವೂ, ಸ್ತ್ರೀಜನರಿಗೆ ಕೊಟ್ಟ ದಾನವೂ, ಶೂದ್ರನಿಗೆ ಕೊಟ್ಟ ದಾನವೂ, ವಿಷವೈದ್ಯನಿಗೆ ಕೊಟ್ಟ ದಾನವೂ, ಶೂದ್ರಸ್ತ್ರೀಯನ್ನು ಪರಿಗ್ರಹಿಸಿದವನಿಗೆ ಕೊಟ್ಟ ದಾನವೂ, ಪರಿಚಾರಕರಿಗೆ ಕೊಟ್ಟ ದಾನವೂ; ಈ ಹದಿನಾರುವಿಧವಾದ ದಾನಗಳೂ ವ್ಯರ್ಥವಾಗಿ ಹೋಗುವವು. ಎಲೈ ಧರ್ಮರಾಯನೆ, ಯಾವವನು ಜ್ಞಾನಶೂನ್ಯನಾಗಿ ಭಯದಿಂದಲೂ ಕ್ರೋಧದಿಂದಲೂ ದಾನವನ್ನು ಮಾಡುವನೋ ಆತನು ಮತ್ತೂ ಜನ್ಮದುಃಖವನ್ನು ಅನುಭವಿಸುವನು. ಆದ್ದರಿಂದ ಜ್ಞಾನಪೂರ್ವಕನಾಗಿ ಎಲ್ಲಾ ಅವಸ್ಥೆಗಳಲ್ಲಿಯೂ ಸ್ವರ್ಗಲೋಕಪ್ರಾಪ್ತಿಗಾಗಿ ಬ್ರಾಹ್ಮಣರಿಗೆ ದಾನವನ್ನು ಮಾಡಬೇಕು" ಎನಲು, ಧರ್ಮರಾಯನು "ಎಲೈ ಮಹಾತ್ಮನೆ, ಬ್ರಾಹ್ಮಣರು ನಾಲ್ಕುವರ್ಣಗಳಲ್ಲಿಯೂ ಪರಿಗ್ರಹವನ್ನು ಮಾಡುವರು. ಅವರು ಯಾತರಿಂದ ತಾವೂ ಪಾಪವನ್ನು ಪಡೆಯದೆ ದಾನಮಾಡಿದವರನ್ನೂ ಪಾಪದಿಂದ ದಾಟಿಸುವರು" ಎಂದನು. ಅದನ್ನು ಕೇಳಿ, ಮಾರ್ಕಂಡೇಯಮಹರ್ಷಿಯು "ಎಲೈ ಧರ್ಮರಾಯನೆ, ಆ ಬ್ರಾಹ್ಮಣರು ಜಪ, ಮಂತ್ರ, ಹೋಮ, ವೇದಾಧ್ಯಯನ ಇವುಗಳಿಂದ ವೇದರೂಪವಾದ ನಾವೆಯನ್ನು ಮಾಡಿಕೊಂಡು ಅದರಿಂದ ತಾವೂ ಪಾಪವೆಂಬ ಸಮುದ್ರವನ್ನು ದಾಟಿ ದಾನಮಾಡಿದವರನ್ನೂ ದಾಟಿಸುವರು. ಯಾರು ಒಳ್ಳೇ ಮಾತುಗಳಿಂದಲಾದರೂ ಬ್ರಾಹ್ಮಣರನ್ನು ಸಂತೋಷಪಡಿಸುವರೋ ಅವರ ವಿಷಯದಲ್ಲಿ ದೇವತೆಗಳೂ ಸಂತೋಷಪಡುವರು. ಅಂಥಾವರಿಗೆ ಸ್ವರ್ಗಲೋಕವು ಸಿದ್ಧವಾಗಿಯೇ ಇರುವದು. ನೀನು ಪಿತೃಗಳನ್ನೂ ದೇವತೆಗಳನ್ನೂ ಬ್ರಾಹ್ಮಣರನ್ನೂ ಅಧಿಕವಾಗಿ ಪೂಜಿಸತಕ್ಕವನಾದ್ದರಿಂದ ಉತ್ತಮವಾದ ಪುಣ್ಯಲೋಕವನ್ನು ಹೊಂದುವನಾಗುವೆ ; ಈವಿಷಯದಲ್ಲಿ ಸಂದೇಹವಿಲ್ಲ. ಶ್ಲೇಷ್ಮಾದಿ ದೋಷಗಳಿಂದ ಪೀಡಿತನಾಗಿ ಜ್ಞಾನವು ತಬ್ಬಿಬ್ಬಾಗಿ ಸಾಯತಕ್ಕವನೂ ಕೂಡ ಬ್ರಾಹ್ಮಣರನ್ನು ಪೂಜಿಸಿದರೆ ಉತ್ತಮವಾದ ಲೋಕವನ್ನು ಹೊಂದುವನು. ಶ್ರಾದ್ಧಕರ್ಮದಲ್ಲಿ ಅತಿಶುಭ್ರವರ್ಣನಾಗಿರತಕ್ಕವನನ್ನೂ, ಅತಿ ಕೃಷ್ಣವರ್ಣನಾಗಿರತಕ್ಕವನನ್ನೂ, ಕುತ್ಸಿತವಾದ ಉಗುರುಗಳುಳ್ಳವನನ್ನೂ, ಕುಷ್ಠರೋಗದವನನ್ನೂ, ಮಾಯಾವಂತನನ್ನೂ, ಕುಂಡನನ್ನೂ, ಗೋಳಕನನ್ನೂ, ಶಸ್ತ್ರಧಾರಿಗಳಾಗಿ ಕ್ಷಾತ್ರವೃತ್ತಿಯಲ್ಲಿರತಕ್ಕವರನ್ನೂ, ಸಹ ಪ್ರಯತ್ನಪೂರ್ವಕವಾಗಿ ಬಿಟ್ಟು ಯೋಗ್ಯರಾದ ಶ್ರೋತ್ರಿಯನನ್ನು ನಿಮಂತ್ರಿಸಬೇಕು. ಹೀಗಲ್ಲದೆ ಪತಿತರಾದವರನ್ನು ಕರೆದು ಮಾಡಿದ ಶ್ರಾದ್ಧವು ಅಗ್ನಿಯು ಕಾಷ್ಠವನ್ನು ದಹಿಸುವಂತೆ ಕರ್ತೃವಾದವನನ್ನು ದಹಿಸುವದು. ಅಂಥಾ ಶ್ರಾದ್ಧಕರ್ಮದಲ್ಲಿ ಮೂಗನನ್ನೂ ಕುರುಡನನ್ನೂ ಕಿವುಡನನ್ನೂ ಸಹ ವೇದಸಂಪನ್ನನಾದವನೊಡನೆ ಸೇರಿಸಿ ನಿಮಂತ್ರಿಸಬಹುದು. ಎಲೈ ಯುಧಿಷ್ಠಿರನೆ, ಯಾವವನು ತನ್ನ ಪಾಪವನ್ನು ಕಳದುಕೊಳ್ಳುವದಕ್ಕೂ ದಾತೃವಿನ ಪಾಪವನ್ನು ಹೋಗಲಾಡಿಸುವದಕ್ಕೂ ಸಮರ್ಥನಾದವನೋ ಅಂಥಾ ಬ್ರಾಹ್ಮಣನಿಗೆ ದಾನಮಾಡುವದು ಶಾಸ್ತ್ರಸಮ್ಮತವಾದದ್ದು. ಮತ್ತೂ ಕೇಳು: ಅತಿಥಿಯಾದವನನ್ನು ಭೋಜನಮಾಡಿಸುವದರಿಂದ ಅಗ್ನಿಯು ತೃಪ್ತಿಯನ್ನು ಪಡೆಯುವಂತೆ ಹವಿಸ್ಸನ್ನು ಹೋಮ ಮಾಡುವದರಿಂದಲೂ ಗಂಧಪುಷ್ಪಗಳಿಂದ ಪೂಜಿಸುವದರಿಂದಲೂ ತೃಪ್ತಿಪಡುವದಿಲ್ಲ. ಆದ್ದರಿಂದ ನೀನೂ ಸರ್ವಪ್ರಯತ್ನದಿಂದಲೂ ಅತಿಥಿಗಳನ್ನು ಭೋಜನಮಾಡಿಸುವದರಲ್ಲೇ ವಿಶೇಷವಾಗಿ ಪ್ರವರ್ತಿಸುವನಾಗು. ಲೋಕದಲ್ಲಿ ಯಾರು ಅತಿಥಿಗಳಿಗೆ ಪಾದೋದಕವನ್ನೂ ಪಾದಘೃತವನ್ನೂ ದೀಪವನ್ನೂ ಅನ್ನವನ್ನೂ ಸ್ಥಳವನ್ನೂ ಕೊಡುವರೋ ಅವರು ಯಮನಬಳಿಗೆ ಹೋಗತಕ್ಕವರಲ್ಲ. ಎಲೈ ಧರ್ಮರಾಯನೆ ದೇವರಮೇಲಿರತಕ್ಕ ನಿರ್ಮಾ

ಲ್ಯವನ್ನು ತೆಗೆಯುವದೂ, ಬ್ರಾಹ್ಮಣರ ಎಂಜಲೆಲೆಯನ್ನು ತೆಗೆಯುವದೂ, ದೇವರಿಗೂ ಬ್ರಾಹ್ಮಣರಿಗೂ ವಸ್ತ್ರಾಭರಣಗಳನ್ನು ಕೊಡುವದೂ, ಅವರ ಸೇವೆಯನ್ನು ಮಾಡುವದೂ, ಬ್ರಾಹ್ಮಣರ ಕೈಕಾಲುಗಳನ್ನು ಮರ್ದನ ಮಾಡಿ ಅವರಿಗೆ ಸುಖವನ್ನುಂಟುಮಾಡುವದೂ, ಸಹ ಒಂದೊಂದು ಗೋದಾನಮಾಡಿದ್ದಕ್ಕೆ ಸಮಾನವಾಗುವದು. ಯಾವವನು ಕಪಿಲಾ ಗೋದಾನವನ್ನು ಮಾಡುವನೋ ಅಂಥಾವನಿಗೆ ಸಂಸಾರಬಂಧವು ತಪ್ಪಿ ಉತ್ತಮೋತ್ತಮವಾದ ಗತಿಯಾಗುವದು. ಆದ್ದರಿಂದ ಸಾಲಂಕಾರವಾದ ಕಪಿಲಾಗೋವನ್ನು ಬ್ರಾಹ್ಮಣನಿಗೆ ದಾನಮಾಡಬೇಕು. ಶ್ರೋತ್ರಿಯನಾಗಿಯೂ ದರಿದ್ರನಾಗಿಯೂ ಗೃಹಸ್ಥನಾಗಿಯೂ ಅಗ್ನಿಹೋತ್ರಿಯಾಗಿಯೂ ಕುಟುಂಬಿಯಾಗಿಯೂ ಮತ್ತೊಬ್ಬರಿಗೆ ಉಪಕಾರ ಮಾಡುವದಕ್ಕೆ ಅಶಕ್ತನಾಗಿಯೂ ಇರತಕ್ಕ ಬ್ರಾಹ್ಮಣನಿಗೆ ದಾನಮಾಡಬೇಕೇ ಹೊರತು, ಐಶ್ವರ್ಯವಂತನಾದವನಿಗೆ ದಾನ ಮಾಡಕೂಡದು. ಐಶ್ವರ್ಯವಂತರಿಗೆ ದಾನಮಾಡಿದ್ದರಿಂದೇನೂ ಫಲವಿಲ್ಲ. ಒಬ್ಬನಿಗೆ ಒಂದು ಗೋವನ್ನು ದಾನ ಮಾಡಬೇಕೇ ಹೊರತು ಅನೇಕರಿಗೆ ಒಂದು ಗೋವನ್ನು ದಾನ ಮಾಡಕೂಡದು. ಹಾಗೆ ದಾನಮಾಡಿದ ಗೋವು ಕ್ರಯಮಾಡಲ್ಪಟ್ಟದ್ದೇ ಆದರೆ ಅದು ದಾನ ಮಾಡಿದವನ ಕುಲವನ್ನೂ ಕ್ರಯಮಾಡಿದವರ ಕುಲವನ್ನೂ ಮೂರುತಲೆಯಪರ್ಯಂತವೂ ನಾಶಮಾಡುವದು. ಅವರನ್ನೆಂದಿಗೂ ತಾರಣಮಾಡಲಾರದು. ಯಾವವನು ಶುದ್ಧವಾದ ಸುವರ್ಣದ ಒಂದು ಹೊನ್ನನ್ನು ಬ್ರಾಹ್ಮಣನಿಗೆ ಕೊಡುವನೊ, ಅವನು ನೂರು ಹೊನ್ನುಗಳನ್ನು ದಾನಮಾಡಿದ್ದರಿಂದುಂಟಾಗುವ ಶಾಶ್ವತವಾದ ಪುಣ್ಯವನ್ನು ಸಂಪಾದಿಸುವನು. ಯಾವವನು ಭಾರವನ್ನು ವಹಿಸತಕ್ಕದ್ದಾಗಿ ಬಲಿಷ್ಠವಾಗಿರುವ ಎತ್ತನ್ನು ಬ್ರಾಹ್ಮಣನಿಗೆ ಕೊಡುವನೋ, ಅವನು ಸಕಲ ಕ್ಲೇಶಗಳನ್ನೂ ಕಳದುಕೊಂಡು ಸ್ವರ್ಗಲೋಕವನ್ನು ಹೊಂದುವನು. ಯಾವವನು ಬ್ರಾಹ್ಮಣನಿಗೆ ಭೂದಾನವನ್ನು ಮಾಡುವನೋ, ಅವನಿಗೆ ಸಕಲವಾದ ಇಷ್ಟಾರ್ಥಗಳೂ ಕೈಗೂಡುವವು. ಎಲೈ ಧರ್ಮರಾಯನೆ, ಮಾರ್ಗದಲ್ಲಿ ನಡೆದು ಕಾಲುಗಳು ಧೂಳುಕವಿದುಕೊಂಡು ಆಯಾಸಪಡತಕ್ಕ ಜನಗಳು ಭೂಲೋಕದಲ್ಲಿ ಅನ್ನದಾನ ಮಾಡತಕ್ಕವನನ್ನೇ ಕೇಳುವರು. ಮತ್ತು ಆತನನ್ನೇ ಶ್ಲಾಘಿಸುವರು. ಆದ್ದರಿಂದ ಬುದ್ಧಿವಂತನಾದವನು ಅಂಥವರಿಗೆ ಅನ್ನದಾನವನ್ನು ಮಾಡಬೇಕು. ಅನ್ನದಾನವನ್ನು ಮಾಡತಕ್ಕವನಿಗೆ ಸಮಾನನಾದವನು ಯಾವನೂ ಇಲ್ಲವೆಂದು ಹೇಳುವರು. ಆದಕಾರಣ ನೀನು ಎಲ್ಲಾದಾನಗಳಗಿಂತಲೂ ಮೊದಲು ಅನ್ನದಾನವನ್ನು ಮಾಡು. ಅನ್ನದಾನದಿಂದುಂಟಾಗತಕ್ಕ ಪುಣ್ಯಫಲವು ಬಹಳ ಆಶ್ಚರ್ಯಕರವಾದದ್ದು; ಯಾವ ಪುರುಷನು ಷಡ್ರಸೋಪೇತವಾದ ಅನ್ನವನ್ನು ಬ್ರಾಹ್ಮಣನಿಗೆ ಕೊಡುವನೋ, ಅವನು ಬ್ರಹ್ಮಲೋಕವನ್ನು ಹೊಂದುವನು. ದೇವರಿಗೆ ಯಜ್ಞವೆಂತಲೂ, ಸಂವತ್ಸರವೆಂತಲೂ, ಪ್ರಜಾಪತಿಯೆಂತಲೂ, ಅನ್ನವೆಂತಲೂ, ಹೆಸರಿರುವದೆಂದು ಶ್ರುತಿಯು ಶ್ಲಾಘಿಸುತ್ತಿರುವದು. ಆದ್ದರಿಂದ ಒಂದು ಅನ್ನದಾನವನ್ನು ಮಾಡಿದರೆ ಸಕಲದಾನಗಳನ್ನೂ ಮಾಡಿದ ಫಲಗಳು ಉಂಟಾಗುವವು. ಅನ್ನದಾನದಿಂದ ಸ್ಥಾವರಜಂಗಮಾತ್ಮಕವಾದ ಪ್ರಾಣಿಗಳನ್ನು ತನ್ನ ಉದರದಲ್ಲಿ ಇಟ್ಟುಕೊಂಡಿರತಕ್ಕ ಅನ್ನರೂಪನಾದ ಪರಮಾತ್ಮನು ತೃಪ್ತನಾದದ್ದೇ ಆದರೆ, ಸಕಲ ಪ್ರಾಣಿಗಳೂ ತೃಪ್ತಿಯನ್ನು ಹೊಂದುವವು. ಲೋಕದಲ್ಲಿ ಯಾರು ಕೆರೆಗಳನ್ನೂ, ಭಾವಿಗಳನ್ನೂ, ಕೊಳಗಳನ್ನೂ, ಅಗ್ರಹಾರಗಳನ್ನೂ, ಅನ್ನದಾನವನ್ನೂ ಮಾಡುವರೋ, ಮತ್ತು ಅತಿಥಿಗಳೊಡನೆ ಒಳ್ಳೇ ಮಾತುಗಳನ್ನು ಆಡುವರೋ, ಅವರು ಯಮಲೋಕದ ವೃತ್ತಾಂತವನ್ನೇ ಕಿವಿಯಲ್ಲಿ ಕೇಳುವದಿಲ್ಲ. ಯಾರು ತಮ್ಮ ಶರೀರಾಯಾಸದಿಂದ ದ್ರವ್ಯಗಳನ್ನೂ ಧಾನ್ಯವನ್ನೂ ಸಂಪಾದಿಸಿ, ಸದ್ವೃತ್ತಿಯಲ್ಲಿರತಕ್ಕ ಬ್ರಾಹ್ಮಣರಿಗೆ ಕೊಡುವರೋ, ಅವರ ವಿಷಯದಲ್ಲಿ ಭೂದೇವಿಯು ಸಂತುಷ್ಟಳಾಗಿ ಕನಕವೃಷ್ಟಿಯನ್ನು ಕರೆಯುವಳು; ಮತ್ತು ಅತಿಥಿಗಳಿಗೆ ಅನ್ನದಾನವನ್ನು ಮಾಡಿದವರು ಮೊದಲು ದಿವ್ಯಲೋಕಗಳಿಗೆ ಹೋಗುವರು. ಅತಿಥಿಗಳ ಸಂಗಡ ಒಳ್ಳೇ ಮಾತುಗಳನ್ನಾಡಿದವರು ಆಮೇಲೆ ದಿವ್ಯಲೋಕಗಳಿಗೆ ಹೋಗುವರು. ಯಾಚನೆಮಾಡದೇ ಇದ್ದರೂ ಯಾರು ಬ್ರಾಹ್ಮಣರಿಗೆ ದಾನವನ್ನು ಮಾಡುವರೋ ಅವರೂ ದಿವ್ಯಲೋಕಗಳಿಗೆ ಹೋಗುವರು" ಎಂದನು.

ಆ ಬಳಿಕ ಧರ್ಮರಾಯನು ತಮ್ಮಂದಿರೊಡನೆ ಆ ಮಾತುಗಳನ್ನು ಕೇಳಿ ಆಶ್ಚರ್ಯಪಟ್ಟು, ಮಾರ್ಕಂಡೇಯ ಮಹರ್ಷಿಯನ್ನು ಕುರಿತು, "ಎಲೈ ಮಹಾತ್ಮನೆ, ನಮ್ಮ ಮನುಷ್ಯಲೋಕಕ್ಕೂ ಯಮಲೋಕಕ್ಕೂ ಇರತಕ್ಕ

ಮಾರ್ಗದ ಪ್ರಮಾಣವು ಎಷ್ಟಿರುವದು ? ಯಾವ ಉಪಾಯದಿಂದ ಪುರುಷರು ಆ ಮಾರ್ಗವನ್ನು ಮೀರುವರು ? ತಿಳುಹಿಸು" ಎನಲು, ಮಾರ್ಕಂಡೇಯನು "ಎಲೈ ಧರ್ಮರಾಯನೆ, ನೀನು ಮಾಡಿದ ಪ್ರಶ್ನೆಯು ಪವಿತ್ರವಾಗಿಯೂ ಋಷಿಸಮ್ಮತವಾಗಿಯೂ ಬಹಳ ಗೋಪ್ಯವಾಗಿಯೂ ಇರುವದು. ಈವಿಷಯದಲ್ಲಿ ಅದನ್ನು ವಿವರಿಸುವೆನು ಕೇಳು : ಮನುಷ್ಯಲೋಕಕ್ಕೂ ಯಮಲೋಕಕ್ಕೂ ಎಂಭತ್ತಾರುಸಾವಿರ ಗಾವುದ ದೂರವಾದ ಮಾರ್ಗವಿರುವದು. ಆ ಮಾರ್ಗದಲ್ಲಿ ನೀರೂ ನೆರಳೂ ಇಲ್ಲದೆ ಇರತಕ್ಕ ಘೋರವಾದ ಅಡವಿಯಿರುವದು. ಆ ಮಾರ್ಗದಲ್ಲಿ ಯಮಲೋಕಕ್ಕೆ ಹೋಗತಕ್ಕ ಪ್ರಾಣಿಯು ಸ್ವಲ್ಪ ವಿಶ್ರಮಿಸಿಕೊಳ್ಳಬೇಕೆಂದರೂ, ಅವಕಾಶ ಕೊಡದೆ ಯಮದೂತರು ಆ ಪ್ರಾಣಿಗಳನ್ನು ಎಳೆದುಕೊಂಡು ಹೋಗುವರು. ಯಾರು ಬ್ರಾಹ್ಮಣರಿಗೆ ಅಶ್ವದಾನವನ್ನು ಮಾಡಿರುತ್ತಾರೆಯೋ, ಅವರು ಆ ಮಾರ್ಗದಲ್ಲಿ ಸುಖವಾಗಿ ಹೋಗುವರು. ಛತ್ರಿಯನ್ನು ದಾನ ಮಾಡಿದವರು ಬಿಸಿಲಿಲ್ಲದೆ ಆ ಮಾರ್ಗದಲ್ಲಿ ಹೋಗುವರು. ಅನ್ನದಾನ ಮಾಡಿದವರು ಹಸಿವಿಲ್ಲದೆ ಅಲ್ಲಿ ಹೋಗುವರು. ವಸ್ತ್ರದಾನವನ್ನು ಮಾಡಿದವರು ಒಳ್ಳೇ ಬಟ್ಟೆಯನ್ನುಟ್ಟುಕೊಂಡು ಹೋಗುವರು. ಸುವರ್ಣದಾನ ಮಾಡಿದವರು ಆಭರಣಗಳನ್ನು ಧರಿಸಿಕೊಂಡು ಹೋಗುವರು. ಭೂದಾನ ಮಾಡಿದವರು ಆ ಮಾರ್ಗದಲ್ಲಿ ಬೇಕಾದ ಸುಖಗಳನ್ನು ಅನುಭವಿಸುತ್ತ ಹೋಗುವರು. ಧಾನ್ಯದಾನ ಮಾಡಿದವರು ಕ್ಲೇಶವಿಲ್ಲದೆ ಅಲ್ಲಿ ಹೋಗುವರು. ಗೃಹದಾನ ಮಾಡಿದವರು ವಿಮಾನದಮೇಲೆ ಕೂತುಕೊಂಡು ಹೋಗುವರು. ಉದಕದಾನ ಮಾಡಿದವರು ಆ ಮಾರ್ಗದಲ್ಲಿ ಬಾಯಾರಿಕೆಯಿಲ್ಲದೆ ಸುಖವಾಗಿ ಹೋಗುವರು. ದೀಪದಾನ ಮಾಡಿದವರು ಆ ಮಾರ್ಗವನ್ನು ಬೆಳಕುಮಾಡಿಕೊಂಡು ಅಲ್ಲಿ ಹೋಗುವರು. ಗೋದಾನ ಮಾಡಿದವರು ಸಕಲ ಪಾಪಗಳನ್ನೂ ಕಳೆದುಕೊಂಡು ಆ ಮಾರ್ಗದಲ್ಲಿ ಹೋಗುವರು. ಮಾಸೋಪವಾಸವನ್ನು ಮಾಡಿದವರು ಹಂಸಗಳನ್ನು ಕಟ್ಟಿರತಕ್ಕ ವಿಮಾನದಮೇಲೆ ಕೂತುಕೊಂಡು ಹೋಗುವರು. ಆರಾರುದಿವಸಕ್ಕೆ ಒಂದೊಂದಾವರ್ತಿ ಉಪವಾಸವ್ರತವನ್ನು ಮಾಡಿದವರು ನವಿಲುಗಳನ್ನು ಕಟ್ಟಿದ ವಿಮಾನದಮೇಲೆ ಕೂತುಕೊಂಡು ಆ ಮಾರ್ಗದಲ್ಲಿ ಹೋಗುವರು. ದಶಮಿದಿವಸ ಏಕಭುಕ್ತವನ್ನು ಮಾಡಿ ಏಕಾದಶೀದಿವಸ ಉಪವಾಸಮಾಡಿ ದ್ವಾದಶೀದಿವಸ ಏಕಭುಕ್ತವನ್ನು ಮಾಡಿದವರು, ದಿವ್ಯವಾದ ಲೋಕಗಳಿಗೆ ಹೋಗುವರು. ಉದಕದಾನವು ಪ್ರೇತಲೋಕದ ಮಾರ್ಗದಲ್ಲಿ ಬಹಳ ಸುಖವನ್ನುಂಟುಮಾಡುವದು. ಅಂಥಾ ಉದಕದಾನಮಾಡಿದವರು ಆ ಯಮಲೋಕದ ಮಾರ್ಗದಲ್ಲಿ ಪುಷ್ಪೋದಕವೆಂಬ ನದಿಯನ್ನು ಕಂಡು ಅಲ್ಲಿ ಶೀತಳವಾಗಿಯೂ ಅಮೃತಕ್ಕೆ ಸಮಾನವಾಗಿಯೂ ಇರುವ ಉದಕವನ್ನು ಪಾನಮಾಡುವರು. ಅದೇ ನದಿಯು ಪಾಪಿಷ್ಠರಾದವರಿಗೆ ದುರ್ವಾಸನೆಯುಳ್ಳದ್ದಾಗಿ ಆಗುವದು. ಆದ್ದರಿಂದ ಎಲೈ ಧರ್ಮರಾಯನೆ, ಮಾರ್ಗದಲ್ಲಿ ಆಯಾಸಪಟ್ಟು ಬಂದ ಅತಿಥಿಗೆ ಸತ್ಕಾರಪೂರ್ವಕವಾಗಿ ಉದಕದಾನವನ್ನೂ ಅನ್ನದಾನವನ್ನೂ ಮಾಡಬೇಕು. ಆ ಅತಿಥಿಯು ಬರತಕ್ಕ ಕಾಲದಲ್ಲಿ ಆತನಸಂಗಡ ಸಕಲ ದೇವತೆಗಳೂ ಬರುವರು. ಅಂಥಾ ಅತಿಥಿಯನ್ನು ಸತ್ಕರಿಸಿದ್ದೇ ಆದರೆ ದೇವತೆಗಳೆಲ್ಲಾ ಸಂತುಷ್ಟರಾಗುವರು. ಅಂಥಾ ಅತಿಥಿಗೆ ಸತ್ಕಾರಮಾಡದೇ ಹೋದರೆ ದೇವತೆಗಳು ನಿರಾಶರಾಗಿ ಹೋಗುವರು. ಆದ್ದರಿಂದ ಅತಿಥಿಗಳಿಗೆ ಸತ್ಕಾರವನ್ನು ಅವಶ್ಯವಾಗಿ ಮಾಡಬೇಕು. ಇನ್ನೇನು ಕೇಳಬೇಕೆಂದು ನಿನಗೆ ಅಪೇಕ್ಷೆಯಿರುವದು ಹೇಳು" ಎಂದು ನುಡಿದನು.

ಆ ಮಾತನ್ನು ಕೇಳಿ ಧರ್ಮರಾಯನು "ಎಲೈ ಮಹರ್ಷಿಯೆ, ಇನ್ನೂ ಪುಣ್ಯತಮವಾದ ಕಥೆಗಳನ್ನು ಕೇಳಬೇಕೆಂದು ನನಗೆ ಕುತೂಹಲವಿರುವದು ತಿಳುಹಿಸು" ಎಂದು ಪ್ರಾರ್ಥಿಸಿದನು. ಬಳಿಕ ಮಾರ್ಕಂಡೇಯನು, "ಎಲೈ ಧರ್ಮರಾಯನೆ, ಸಕಲ ಪಾಪಪರಿಹಾರಕವಾದ ಪುಣ್ಯತಮವಾದ ಕಥೆಯನ್ನು ಹೇಳುವೆನು, ಸಾವಧಾನದಿಂದ ಕೇಳುವನಾಗು. ಪುಷ್ಕರಕ್ಷೇತ್ರದಲ್ಲಿ ಕಪಿಲಾಗೋದಾನವನ್ನು ಮಾಡಿದರೆ ಯಾವ ಫಲವುಂಟಾಗುವದೋ, ಅಂಥಾ ಫಲವು ಬ್ರಾಹ್ಮಣರ ಪಾದಪ್ರಕ್ಷಾಳನೆ ಮಾಡಿದ್ದರಿಂದುಂಟಾಗುವದು. ಆ ಬ್ರಾಹ್ಮಣನ ಪಾದೋದಕದಿಂದ ಭೂಮಿಯು ಎಷ್ಟುಹೊತ್ತಿನವರೆಗೂ ನೆಂದಿರುವದೋ ಅವರಿಗೂ ಪಾದಪ್ರಕ್ಷಾಳನೆ ಮಾಡಿದವನ ಪಿತೃಗಳು ತಾವರೇ ಎಲೆಗಳಿಂದ ದಿವ್ಯವಾದ ಉದಕವನ್ನು ಪಾನಮಾಡುವರು. ಬ್ರಾಹ್ಮಣರನ್ನು ಕುರಿತು ಸ್ವಾಗತಪ್ರಶ್ನೆಯನ್ನು

ಮಾಡುವದ್ದರಿಂದ ತ್ರೇತಾಗ್ನಿಗಳು ತೃಪ್ತಿಯನ್ನು ಪಡೆಯುವವು. ಬ್ರಾಹ್ಮಣರಿಗೆ ಪೀಠವನ್ನು ಕೊಡುವವರಿಂದ ಇಂದ್ರನು ತೃಪ್ತಿಯನ್ನು ಪಡೆಯುವನು. ಬ್ರಾಹ್ಮಣರ ಪಾದಪ್ರಕ್ಷಾಳನೆಯಿಂದಲೂ ಅನ್ನದಾನದಿಂದಲೂ ಪಿತೃಗಳು ಸಂತೋಷಪಡುವರು. ಗೋವು ಕರುವನ್ನು ಈಯುವಕಾಲದಲ್ಲಿ ಆ ಕರುವು ನೆಲದಲ್ಲಿ ಬೀಳುವಷ್ಟರಲ್ಲಿ ಆ ಗೋವನ್ನು ಯಾವನು ಬ್ರಾಹ್ಮಣನಿಗೆ ದಾನಮಾಡುವನೋ, ಆತನು ಆ ಗೋವಿನ ಮಯ್ಯಲ್ಲಿ ಎಷ್ಟು ರೋಮಗಳಿರುವವೋ ಅಷ್ಟು ಸಹಸ್ರಯುಗಗಳೂ ಸ್ವರ್ಗಲೋಕದಲ್ಲಿ ಪೂಜಿತನಾಗುವನು. ಚಿನ್ನದ ಮುಖವನ್ನೂ ಚಿನ್ನದ ಗೊರಸುಗಳನ್ನೂ ಮಾಡಿ ಎಳ್ಳಿನಿಂದ ಗೋವನ್ನು ಮಾಡಿ ಅದನ್ನು ರತ್ನಾಭರಣಗಳಿಂದ ಅಲಂಕರಿಸಿ ಅಂಥಾ ಗೋವನ್ನು ಯಾವನು ಬ್ರಾಹ್ಮಣನಿಗೆ ಕೊಡುವನೋ ಆತನೂ, ಅಂಥಾ ಗೋವನ್ನು ಪ್ರತಿಗ್ರಹ ಮಾಡಿದ ಯಾವವನು ಅದನ್ನು ಮತ್ತೊಬ್ಬ ಸಾಧುವಾದ ಬ್ರಾಹ್ಮಣನಿಗೆ ಕೊಡುವನೋ ಆತನೂ ಸಹ ಚತುಸ್ಸಮುದ್ರಗಳ ಮಧ್ಯದಲ್ಲಿರುವ ಭೂದಾನವನ್ನು ಮಾಡಿದರೆ ಎಂಥಾ ಫಲವೋ ಅಂಥಾ ಉತ್ಕೃಷ್ಟವಾದ ಫಲವನ್ನು ಪಡೆಯುವರು. ಯಾವ ಬ್ರಾಹ್ಮಣನು ತಾನು ಭೋಜನಮಾಡತಕ್ಕ ಎಲೆಯನ್ನು ತನಗೆ ಸೋಕಿಸಿಕೊಂಡು ಎರಡು ಮಂಡಿಗಳ ಮಧ್ಯದಲ್ಲಿ ಕಯ್ಯಿಟ್ಟುಕೊಂಡು ಮೌನದಿಂದ ಭೋಜನವನ್ನು ಮಾಡುವನೋ ಅವನು ಸಕಲ ಪಾಪಗಳಿಂದಲೂ ಮುಕ್ತನಾಗುವನು. ಬ್ರಾಹ್ಮಣನಾದವನು ವೇದಸಂಹಿತೆಯನ್ನು ಪಾಠಮಾಡಿದ್ದೇ ಆದರೆ ಸಕಲ ಪಾಪಗಳಿಂದಲೂ ಮುಕ್ತನಾಗುವನು. ಅಂಥಾ ಶ್ರೋತ್ರಿಯನಾದ ಬ್ರಾಹ್ಮಣನು ಹವ್ಯಕವ್ಯಗಳಿಗೆ ಯೋಗ್ಯನಾದವನು. ಅಂಥಾ ಬ್ರಾಹ್ಮಣನ ಕೈಯ್ಯಲ್ಲಿ ಕೊಟ್ಟದ್ದು ಅಗ್ನಿಯಲ್ಲಿ ಹೋಮಮಾಡಿದ್ದಕ್ಕೆ ಸಮಾನವಾದ ಫಲವನ್ನು ಕೊಡುವದು. ಬ್ರಾಹ್ಮಣರು ಶಸ್ತ್ರಧಾರಿಗಳಲ್ಲದಿದ್ದರೂ ಕೋಪವೆಂಬ ಶಸ್ತ್ರವನ್ನು ಧರಿಸಿಕೊಂಡು ಅದರಿಂದ ವಜ್ರಾಯುಧಧಾರಿಯಾದ ಇಂದ್ರನು ದೈತ್ಯರನ್ನು ಸಂಹರಿಸುವಂತೆ ತಮಗೆ ಪ್ರತಿಕೂಲರಾದವರನ್ನು ಸಂಹರಿಸಿಬಿಡುವರು. ಎಲೈ ಧರ್ಮರಾಯನೆ, ಈ ಪುಣ್ಯತಮವಾದ ಕಥೆಯನ್ನು ಕೇಳಿ ನೈಮಿಶಾರಣ್ಯವಾಸಿಗಳಾದ ಋಷಿಗಳು ಕಾಮಕ್ರೋಧಾದಿಗಳನ್ನು ಬಿಟ್ಟು, ಸಕಲ ಪಾಪಗಳನ್ನೂ ಕಳೆದುಕೊಂಡಿರುವರು. ಈ ಕಥೆಯನ್ನು ಯಾರು ಕೇಳುವರೋ ಅವರು ಮನುಷ್ಯಜನ್ಮದಿಂದ ಮುಕ್ತರಾಗುವರು" ಎಂದು ನುಡಿದನು.

ಬಳಿಕ ಧರ್ಮರಾಯನು, "ಎಲೈ ಮಾರ್ಕಂಡೇಯಮಹರ್ಷಿಯೆ, ಬ್ರಾಹ್ಮಣನಾದವನು ಯಾವ ಶುಚಿಯಾದ ಕಾರ್ಯವನ್ನು ಮಾಡಿದರೆ ಪರಿಶುಧ್ಧಾತ್ಮನೆನಿಸಿಕೊಳ್ಳುವನು? ಇದನ್ನು ಕೇಳಬೇಕೆಂದು ಕುತೂಹಲವಿರುವದು. ಇದನ್ನು ತಿಳುಹಿಸು" ಎನಲು, ಮಾರ್ಕಂಡೇಯನು "ಎಲೈ ಧರ್ಮರಾಯನೆ, ಯಾವನು ಸ್ನಾನಾದಿಗಳಿಂದ ಶುಧ್ಧವಾದ ದೇಹವುಳ್ಳವನಾಗಿ ಸತ್ಕರ್ಮನಿರತನಾಗಿ ಸತ್ಯವಚನನಾಗಿರುವನೋ ಆತನು ಸ್ವರ್ಗದಲ್ಲಿ ವಾಸಮಾಡುವನು. ಈ ವಿಷಯದಲ್ಲಿ ಸಂಶಯವಿಲ್ಲ. ಯಾವ ಬ್ರಾಹ್ಮಣನು ಪ್ರಾತಃಕಾಲದಲ್ಲಿಯೂ ಸಾಯಂಕಾಲದಲ್ಲಿಯೂ ವೇದಮಾತೃವಾದ ಗಾಯತ್ರೀಜಪವನ್ನು ಮಾಡುವನೋ ಆತನು ಸಮಸ್ತ ಭೂಮಂಡಲವನ್ನೂ ದಾನ ತೆಗೆದುಕೊಂಡರೂ ಪ್ರತಿಗ್ರಹ ದೋಷವಿಲ್ಲದೆ ಆ ಗಾಯತ್ರೀ ಮಹಿಮೆಯಿಂದ ಪರಿಶುದ್ಧನಾಗುವನು. ಆತನಿಗೆ ಆಕಾಶದಲ್ಲಿ ಚರಿಸುವ ಸೂರ್ಯಾದಿಗ್ರಹಗಳು ಎಷ್ಟು ಕ್ರೂರವಾಗಿದ್ದರೂ ಆ ಜಪಮಹಿಮೆಯಿಂದ ಆ ಗ್ರಹಗಳು ಸೌಮ್ಯವಾಗಿಯೂ ಶುಭಫಲಗಳನ್ನು ಕೊಡುವವಾಗಿಯೂ ಆಗುವವು. ಅಂಥಾ ಬ್ರಾಹ್ಮಣನನ್ನು ಭೂತ, ಬೇತಾಳ, ಪಿಶಾಚ ಮೊದಲಾದ ಘೋರರೂಪಗಳಾದ ಗ್ರಹಗಳೂ ಬಾಧಿಸದೇ ಇರುವವು. ವೇದವನ್ನು ಪಾಠಹೇಳೋಣವರಿಂದಲೂ, ಯಾಗ ಮಾಡಿಸೋಣವರಿಂದಲೂ ಪ್ರತಿಗ್ರಹ ಮಾಡೋಣದರಿಂದಲೂ, ಬ್ರಾಹ್ಮಣನಿಗೆ ದೋಷವಿಲ್ಲವು. ಬ್ರಾಹ್ಮಣನು ಅಗ್ನಿಗೆ ಸಮಾನನಾದವನು. ಬ್ರಾಹ್ಮಣನು ಬೂದಿಮುಚ್ಚಿದ ಕೆಂಡದಂತಿರುವನಾದಕಾರಣ ಆತನು ವೇದಪಾಠವನ್ನು ಮಾಡಲಿ ಅಥವಾ ಮಾಡದೇ ಹೋಗಲಿ ಸತ್ಕರ್ಮಪರನಾಗಲಿ ಆಗದೇ ಹೋಗಲಿ ಆತನನ್ನು ಅಪಮಾನ ಮಾಡಬಾರದು. ಸ್ಮಶಾನದಲ್ಲಿರುವ ಅಗ್ನಿಯು ಹ್ಯಾಗೆ ದೂಷ್ಯವಲ್ಲವೋ ಹಾಗೆ ಬ್ರಾಹ್ಮಣನು ವಿದ್ವಾಂಸನಾಗಲಿ ವಿದ್ವಾಂಸನಾಗದೇಹೋಗಲಿ ದೂಷ್ಯನಾಗುವದಿಲ್ಲ. ಅನೇಕ ಉಪ್ಪರಿಗೆಗಳಿಂದಲೂ ಕೋಟೆಗಳಿಂದಲೂ ಕೋಟೇಬಾಗಿಲುಗಳಿಂದಲೂ ಅಲಂಕೃತವಾದ ಪಟ್ಟಣಗಳು ಬ್ರಾಹ್ಮಣನು ಇಲ್ಲದೇ ಹೋದರೆ ಶೋಭಿಸುವದಿಲ್ಲ. ವೇದಾಧ್ಯಯ

ನದಲ್ಲಿ ನಿಷ್ಠನಾಗಿಯೂ ಸದ್ವೃತ್ತಿಯುಳ್ಳವನಾಗಿಯೂ ತಪೋನಿಷ್ಠನಾಗಿಯೂ ಜ್ಞಾನಿಯಾಗಿಯೂ ಇರುವ ಬ್ರಾಹ್ಮಣನು ಯಾವ ಸ್ಥಳದಲ್ಲಿ ವಾಸಮಾಡುವನೋ ಆ ಸ್ಥಳವು ಪಟ್ಟಣಕ್ಕೆ ಸಮಾನವಾದದ್ದು. ಗೊಲ್ಲರ ಹಳ್ಳಿಗಳಲ್ಲೇ ಆಗಲಿ ಅರಣ್ಯದಲ್ಲೇ ಆಗಲಿ ಎಲ್ಲಿ ವಿದ್ವಾಂಸರಾದ ಬ್ರಾಹ್ಮಣರು ಇರುವರೋ, ಆ ಪ್ರದೇಶವು ರಾಜಧಾನಿಗೆ ಸಮಾನವಾಗಿಯೂ ಉತ್ತಮತೀರ್ಥವುಳ್ಳ ಕ್ಷೇತ್ರಕ್ಕೆ ಸಮಾನವಾಗಿಯೂ ಇರುವದು. ಪ್ರಜೆಗಳನ್ನು ರಕ್ಷಿಸತಕ್ಕ ರಾಜನನ್ನು ಯಾವವನು ದರ್ಶನಮಾಡುವನೋ, ತಪಸ್ವಿಯಾದ ಬ್ರಾಹ್ಮಣನನ್ನು ಯಾವವನು ಪೂಜಿಸುವನೋ, ತತ್ಕ್ಷಣದಲ್ಲೇ ಆ ಪುರುಷನು ಸಕಲಪಾಪಗಳನ್ನೂ ಕಳೆದುಕೊಳ್ಳುವನು. ಸಜ್ಜನರ ಸಂಗಡ ಮಾತನಾಡೋಣವೂ ಪವಿತ್ರವಾದ ಮಂತ್ರವನ್ನು ಉಚ್ಚಾರಣೆ ಮಾಡೋಣವೂ ಪುಣ್ಯತಮವಾದ ತೀರ್ಥದಲ್ಲಿ ಸ್ನಾನಮಾಡೋಣವೂ ಬಹಳ ಪ್ರಶಸ್ತವಾದವುಗಳೆಂದು ದೊಡ್ಡವರು ಹೇಳುವರು. ಸಜ್ಜನರಾದವರು ಸಾಧುಜನಗಳ ಸಹವಾಸದಿಂದಲೂ ಸತ್ಕಥಾಲಾಪಗಳಿಂದಲೂ ಆತ್ಮನು ಪರಿಶುದ್ಧನಾಗುವನೆಂದು ತಿಳಿಯುವರು. ಮನಸ್ಸು ಶುದ್ಧವಾಗಿಲ್ಲದಪಕ್ಷದಲ್ಲಿ ಸನ್ಯಾಸವೂ ಮೌನವ್ರತವೂ ಜಟಾಧಾರಣೆಯೂ ಮುಂಡನವೂ ನಾರುಮಡಿಯನ್ನೂ ಕೃಷ್ಣಾಜಿನವನ್ನೂ ಉಡೋಣವೂ ಕೃಚ್ಛ್ರಚಾಂದ್ರಾಯಣಾದಿ ವ್ರತಗಳ ಆಚರಣೆಯೂ ಪುಣ್ಯತೀರ್ಥಸ್ನಾನವೂ ಅಗ್ನಿಹೋತ್ರವೂ ವನವಾಸವೂ ಶರೀರಶೋಷಣವೂ ಸಹ ವ್ಯರ್ಥವಾಗುವವು. ಚಕ್ಷುರಾದಿ ಇಂದ್ರಿಯಗಳಿಗೆ ಶುದ್ಧಿಯಿಲ್ಲದಿದ್ದರೆ ವೇಶ್ಯಾಸ್ತ್ರೀಯರಿಂದಲೂ ಭೋಗವು ಲಭಿಸುವದು. ಅಂಥಾ ಭೋಗವನ್ನು ಬಿಡುವದು ಕಷ್ಟವಾದದ್ದು. ವಿಕಾರಕ್ಕೆ ಸ್ಥಾನವಾದ ಮನಸ್ಸನ್ನು ಜಯಿಸುವದು ಬಹಳ ಕಷ್ಟವಾದದ್ದು. ಯಾರು ಮನೋವಾಕ್ಕಾಯಕರ್ಮಗಳಿಂದಲೂ ಪಾಪವನ್ನು ಮಾಡುವದಿಲ್ಲವೋ ಅಂಥಾವರು ಶರೀರಶೋಷಣೆಯನ್ನು ಮಾಡಿಕೊಂಡು ತಪಸ್ಸನ್ನು ಯಾತಕ್ಕೆ ಮಾಡಬೇಕು? ಯಾವವನು ಜ್ಞಾತಿಗಳಲ್ಲಿ ದಯೆಯಿಲ್ಲದೆ ಶುಕ್ಲವೃತ್ತಿಯಿಂದ ಜೀವಿಸುತ್ತ ಕುಟುಂಬವನ್ನು ಪೀಡಿಸುವನೋ ಅಂಥಾವನು ಅನಶನವ್ರತವನ್ನು ಮಾಡಿದರೂ ಅದು ತಪಸ್ಸೆನಿಸಿಕೊಳ್ಳದೆ ಹಿಂಸಾರೂಪವಾಗಿ ದೋಷಕ್ಕೇ ಕಾರಣವಾಗುವದು. ಎಲೈ ಧರ್ಮರಾಯನೆ, ಮನೆಯಲ್ಲೇ ಇದ್ದುಕೊಂಡು ಜ್ಞಾನಿಯಾದವನು ಶುಚಿರ್ಭೂತನಾಗಿ ಯಾವಜ್ಜೀವವೂ ಸಕಲರಲ್ಲಿಯೂ ದಯಾವಂತನಾಗಿದ್ದದ್ದೇ ಆದರೆ ಅವನು ಸಕಲ ಪಾಪಗಳನ್ನೂ ಕಳೆದುಕೊಳ್ಳುವನು. ಜ್ಞಾನಶೂನ್ಯನಾದವನು ಆಚರಿಸಿದ ಅನಶನಾದಿ ವ್ರತಗಳು ಪಾಪವನ್ನು ಪರಿಹಾರ ಮಾಡಲಾರವು. ಪರಂತು ಆ ವ್ರತಗಳಿಂದ ಶರೀರದಲ್ಲಿರುವ ರಕ್ತಮಾಂಸಗಳು ಶೋಷಿಸಿ ಹೋಗುವವೇ ಹೊರತು ಮತ್ತೇನೂ ಪ್ರಯೋಜನವಿಲ್ಲ. ಶಾಸ್ತ್ರಜ್ಞಾನವಿಲ್ಲದೆ ಕರ್ಮಗಳನ್ನು ಮಾಡುತ್ತ ಯಾವವನು ಕ್ಲೇಶಪಡುವನೋ ಆತನಿಗೆ ಬರೀ ಕ್ಲೇಶವೇ ಹೊರತು ಪಾಪಪರಿಹಾರಬೇರೇ ಆಗಲಾರದು. ಮನಶ್ಶುದ್ಧಿಯಿಲ್ಲದೇ ಇರತಕ್ಕವನು ಎಷ್ಟು ಹೋಮಮಾಡಿದಾಗ್ಯೂ ಅದರಿಂದ ಅವನ ಪಾಪಬೇರೆ ಪರಿಹಾರವಾಗಲಾರದು. ಪುಣ್ಯಕರ್ಮದಿಂದಲೇ ಅನಶನಾದಿ ವ್ರತಗಳು ಶುದ್ಧವಾಗಿ ಉತ್ತಮಗತಿಯನ್ನು ಕೊಡುವವೇ ಹೊರತು, ಬರೀ ಕಂದಮೂಲಾದಿಗಳ ಆಹಾರದಿಂದಲೂ, ಮೌನವ್ರತಾಚರಣೆಯಿಂದಲೂ, ವಾಯುಭಕ್ಷಣೆಯಿಂದಲೂ, ಶಿರೋಮುಂಡನದಿಂದಲೂ, ಮನೆಯನ್ನು ಬಿಟ್ಟು ಹೋಗುವದರಿಂದಲೂ, ಜಟೆಯನ್ನು ಧರಿಸೋಣದರಿಂದಲೂ, ನೆಲದಮೇಲೆ ಮಲಗೋಣದರಿಂದಲೂ, ನಿರಾಹಾರದಿಂದಲೂ, ಅಗ್ನಿಶುಶ್ರೂಷೆಯಿಂದಲೂ, ನೀರಲ್ಲಿ ಮುಳುಗುವದರಿಂದಲೂ, ಸ್ಥಂಡಿಲವ್ರತವನ್ನು ಆಚರಿಸುವದರಿಂದಲೂ ಸಹ ಭಾವಶುದ್ಧಿಯಿಲ್ಲದೆ ಉತ್ತಮಗತಿಯಾಗಲಾರದು. ಶಾಸ್ತ್ರವನ್ನು ತಿಳಿದು ಮಾಡತಕ್ಕ ಕರ್ಮದಿಂದ ಮುಪ್ಪೂ ಸಾವೂ ರೋಗವೂ ಇಲ್ಲದೆ ಮೋಕ್ಷವುಂಟಾಗುವದು. ಬೆಂಕಿಯಲ್ಲಿ ಸುಟ್ಟಬೀಜವು ಹ್ಯಾಗೆ ಮೊಳಕೆಯಾಗದೇ ಹೋಗುವದೋ ಹಾಗೆ ಜ್ಞಾನವಿಲ್ಲದೆ ಮಾಡಿದ ಕರ್ಮವು ನಿಷ್ಫಲವಾಗಿ ಹೋಗುವದು. ಆತ್ಮಜ್ಞಾನವಿಲ್ಲದೇ ಇರತಕ್ಕವನ ಶರೀರವು ಕಟ್ಟಿಗೆಗೂ ಗೋಡೆಗೂ ಸಮಾನವಾಗಿ ಸಮುದ್ರದಲ್ಲಿ ಹುಟ್ಟಿದ ನೊರೆಯಂತೆ ನಿಷ್ಫಲವಾಗಿ ನಷ್ಟವಾಗುವದು. ಯಾವವನು ವೇದವಾಕ್ಯಗಳಿಂದ ಪ್ರತಿಪಾದ್ಯಮಾನನಾಗಿ ಸಕಲ ಪ್ರಾಣಿಗಳ ಹೃದಯಾಕಾಶದಲ್ಲಿರತಕ್ಕ ಪರಮಾತ್ಮನನ್ನು ತಿಳಿಯುವನೋ, ಅಂಥಾವನಿಗೆ ಈ ಶರೀರಪ್ರಯುಕ್ತವಾದ ಪ್ರಯೋಜನಗಳು ನಷ್ಟವಾಗಿ ಉತ್ತಮಗತಿಯುಂಟಾಗುವದು. ಅಕ್ಷರದ್ವಯಾತ್ಮಕವಾದ ತತ್ವವನ್ನು ಶ್ರುತಿಯಿಂದ ಪ್ರತಿಪಾದ್ಯಮಾನವಾದದ್ದೆಂದು ತಿಳಿದುಕೊಳ್ಳುವದೇ ಮೋಕ್ಷಕ್ಕೆ ಕಾರಣವಾದದ್ದು. ಸಂಶಯಾತ್ಮನಾದವನಿಗೆ ಇಹಲೋಕದಲ್ಲೂ ಪರಲೋಕದಲ್ಲೂ ಸುಖವು ದೊರೆಯಲಾರದು. ದೊಡ್ಡವರಾದ

ವರು ನಂಬಿಕೆಯೇ ಮೋಕ್ಷಕ್ಕೆ ಲಕ್ಷಣವೆಂದು ಹೇಳುವರು. ಯಾವವನು ತತ್ವವನ್ನು ತಿಳಿಯದೆ ವೇದದ ಪದಗಳಿಗೆ ಮಾತ್ರ ಅರ್ಥವನ್ನು ತಿಳಿದಿರತಕ್ಕವನೋ ಅವನು ಸುಮ್ಮನೇ ವಾಕ್ಯಾರ್ಥದಲ್ಲಿ ಕಲಹಮಾಡುವನಾಗಿ ಆ ವಾಕ್ಯಾರ್ಥಗಳಿಂದ ಕಾಡುಗಿಚ್ಚು ಪ್ರಾಣಿಗಳನ್ನು ಬಾಧಿಸುವಂತೆ ಪರರನ್ನು ಬಾಧಿಸುವನು. ಆದ್ದರಿಂದ ಎಲೈ ಧರ್ಮರಾಯನೆ, ನೀನು ನಿಷ್ಪ್ರಯೋಜನವಾದ ತರ್ಕವನ್ನು ಬಿಟ್ಟು ಶ್ರುತಿಸ್ಮೃತಿಗಳ ತತ್ವವನ್ನು ತಿಳಿದುಕೋ. ಬರೀ ಹೇತುವಾದಗಳಿಂದಲೂ ಯಾವವನು ತತ್ವವನ್ನು ತಿಳಿಯಬೇಕೆಂದು ಅಪೇಕ್ಷಿಸುವನೋ ಆತನಿಗೆ ಸಹಾಯಸಂಪತ್ತು ಕೆಟ್ಟದಾದ್ದರಿಂದ ಜ್ಞಾನಸಿದ್ಧಿಯಾಗಲಾರದು. ಎಲೈ ಧರ್ಮರಾಯನೆ, ಅಕ್ಷರಾತ್ಮಕವಾದ ತತ್ವವು ಪ್ರಣವವೆನ್ನಿಸಿಕೊಳ್ಳುವದು. ತಿಳಿಯಬೇಕಾದ ಆತ್ಮತತ್ವವನ್ನು ಪ್ರಣವಪೂರ್ವಕವಾಗಿ ಪ್ರಯತ್ನದಿಂದ ಪ್ರತಿಮಾರೂಪದಿಂದ ತಿಳಿದುಕೊಳ್ಳಬೇಕು. ವೇದವೇ ತತ್ವಜ್ಞಾನಕ್ಕೆ ಕಾರಣವಾದದ್ದು. ಅಂಥಾ ವೇದದ ಅರ್ಥವು ಸಂಕ್ಷೇಪವಾಗಿ ತಿಳಿಯಲು, ಆತ್ಮನು ತನಗೆ ತಾನೇ ಪ್ರಕಾಶವಾಗುವನು. ಆದಕಾರಣ ತಿಳಿದುಕೊಳ್ಳುವ ಬುದ್ಧಿಗೆ ತಿಳಿಯತಕ್ಕದ್ದು ಆತ್ಮತತ್ವವೇ ಹೊರತು ಮತ್ತೊಂದಿಲ್ಲ. ಮತ್ತು ಕೇಳು, ದೇವತೆಗಳಿಗೆ ವೇದದಲ್ಲಿ ಹೇಳಿರುವಪ್ರಕಾರ ಆಯುಸ್ಸು ಫಲಿಸುವದು. ಕರ್ಮಗಳಿಗೂ ವೇದದಲ್ಲಿ ಹೇಳಿರುವಪ್ರಕಾರ ಫಲಗಳುಂಟಾಗುವವು. ಸಕಲ ಪ್ರಾಣಿಗಳಿಗೂ ಪ್ರತಿಯುಗದಲ್ಲಿಯೂ ವೇದೋಕ್ತಪ್ರಕಾರವಾಗಿಯೇ ಶಕ್ತಿಯುಂಟಾಗುವದು. ಇಂದ್ರಿಯಗಳ ಶುದ್ಧಿಯಿರತಕ್ಕವನಿಗೆ ಅನಶನಾದಿ ವ್ರತಗಳಿಂದೇನೂ ಪ್ರಯೋಜನವಿಲ್ಲ. ಇಂದ್ರಿಯಶುದ್ಧಿಗೋಸ್ಕರಲೇ ಅನಶನಾದಿ ವ್ರತಗಳನ್ನು ಮಾಡತಕ್ಕದ್ದು. ಯಾವ ಮನುಷ್ಯನಾದರೂ ಸ್ವಧರ್ಮಾಚರಣೆಯಿಂದಲೇ ಸ್ವರ್ಗವನ್ನು ಹೊಂದುವನು. ದಾನದಿಂದಲೇ ಸ್ವರ್ಗಸುಖವನ್ನು ಪಡೆಯುವನು. "ಜ್ಞಾನದಿಂದಲೇ ಮೋಕ್ಷಸುಖವೂ ತೀರ್ಥಸ್ನಾನದಿಂದಲೇ ಪಾಪಪರಿಹಾರವೂ ಆಗುವವೆಂದು ತಿಳಿ" ಎಂದು ನುಡಿದನು.

ಬಳಿಕ ಧರ್ಮರಾಯನು "ಎಲೈ ಮಹರ್ಷಿಯೆ, ಸಕಲ ಧರ್ಮಗಳಲ್ಲಿಯೂ ಮುಖ್ಯವಾದ ಧರ್ಮವು ಯಾವದೋ ಅದನ್ನು ತಿಳಿಯಬೇಕೆಂದು ಕುತೂಹಲವುಂಟಾಗಿರುವದು. ಅದನ್ನು ತಿಳುಹಿಸಬೇಕು" ಎಂದು ಪ್ರಶ್ನೆಮಾಡಲು, ಮಾರ್ಕಂಡೇಯನು "ಎಲೈ ಧರ್ಮರಾಯನೆ, ನೀನು ಧರ್ಮಗಳಲ್ಲಿ ಮುಖ್ಯವಾದ ದಾನಧರ್ಮವನ್ನು ಕೇಳಬೇಕೆಂದು ಬಯಸುವದು ಬಹಳ ದೊಡ್ಡದಾದ್ದರಿಂದ ಅದನ್ನು ನಿನಗೆ ತಿಳುಹಿಸುವದಕ್ಕೆ ನನಗೆ ತುಂಬಾ ಪ್ರೀತಿಯುಂಟಾಗಿರುವದು. ಶ್ರುತಿಗಳಿಂದಲೂ ಸ್ಮೃತಿಗಳಿಂದಲೂ ಉಕ್ತವಾಗಿರುವ ದಾನರಹಸ್ಯಗಳನ್ನು ಹೇಳುವೆನು, ಕೇಳು. ಗಜಚ್ಛಾಯೆಯೆಂಬ ಪರ್ವಕಾಲದಲ್ಲಿ ಅಶ್ವತ್ಥದ ನೆರಳು ಬೀಳತಕ್ಕ ನದೀತೀರದಲ್ಲಿ ಶ್ರಾದ್ಧವನ್ನು ಮಾಡಿ ಯಾವವನು ಬ್ರಾಹ್ಮಣನಿಗೆ ಜೀವನಾರ್ಥವಾಗಿ ಬಳ್ಳೀ ಧಾನ್ಯ ಬೆಳೆಯತಕ್ಕ ಭೂಮಿಯನ್ನು ದಾನಮಾಡುವನೋ, ಆತನು ಒಂದುಲಕ್ಷ ಕಲ್ಪಗಳ ಪರ್ಯಂತವಾಗಿಯೂ ಉತ್ತಮಲೋಕದಿಂದ ಕೆಳಕ್ಕೆ ಬೀಳದೇ ಇರುವನು. ಅಂಥಾ ದಿವಸ ಅಂಥಾ ಸ್ಥಳದಲ್ಲಿ ಗೃಹದಾನವನ್ನು ಮಾಡಿದ್ದೇ ಆದರೆ ಸಕಲ ಯಜ್ಞಗಳನ್ನೂ ಮಾಡಿದ ಫಲವುಂಟಾಗುವದು. ಯಾವವನು ಗ್ರಹಣಕಾಲದಲ್ಲಿ ಪಶ್ಚಿಮಾಭಿಮುಖವಾಗಿ ಹರಿಯತಕ್ಕ ಮಹಾನದಿಯ ತೀರದಲ್ಲಿ ಬ್ರಾಹ್ಮಣನಿಗೋಸ್ಕರ ಮೊಸರಿನ ಕೆನೆಯನ್ನು ದಾನ ಮಾಡುವನೋ, ಆ ದಾನವನ್ನು ಅತಿಥಿರೂಪನಾಗಿ ಇಂದ್ರನೇ ಬಂದು ಸ್ವೀಕರಿಸಿ ಆತನಿಗೆ ಅಕ್ಷಯವಾದ ಫಲವನ್ನು ಕೊಡುವನು. ಆ ದಾನವನ್ನು ಮಾಡಿದವನ ಪಾಪಗಳೆಲ್ಲಾ ನಷ್ಟವಾಗಿ ಹೋಗುವವು. ಪರ್ವಕಾಲದಲ್ಲಿ ಮಾಡಿದ ದಾನಗಳೆಲ್ಲವೂ ದ್ವಿಗುಣವಾದ ಫಲಗಳನ್ನು ಕೊಡುವವು. ಸಂಕ್ರಮಣಕಾಲಗಳಲ್ಲಿ ಮಾಡಿದ ದಾನಗಳು ದಶಗುಣವಾದ ಫಲಗಳನ್ನು ಕೊಡುವವು. ಯುಗಾದಿಯಲ್ಲಿ ಕೊಟ್ಟ ದಾನವು ಶತಗುಣವಾದ ಫಲವನ್ನು ಕೊಡುವದು. ಮಕರ, ಕರ್ಕಾಟಕ ಸಂಕ್ರಮಣಗಳಲ್ಲಿ ಮಾಡಿದ ದಾನಗಳು ಅನಂತವಾದ ಫಲಗಳನ್ನು ಕೊಡುವವು. ಷಡಶೀತಿ ಪರ್ವಕಾಲಗಳಲ್ಲಿ ಕೊಟ್ಟ ದಾನಗಳೂ ಅಕ್ಷಯವಾದ ಫಲಗಳನ್ನು ಕೊಡುವವು. ಎಲೈ ಧರ್ಮರಾಯನೆ, ಬ್ರಾಹ್ಮಣರಿಗೆ ಭೂದಾನವನ್ನು ಮಾಡದೆ ಯಾವವನಿಗೂ ಭೂಮಿಯು ಲಭಿಸದು. ಬ್ರಾಹ್ಮಣನಿಗೆ ವಾಹನಗಳನ್ನು ದಾನಮಾಡದೇ ಇರತಕ್ಕವನಿಗೆ ವಾಹನಗಳೂ ಲಭಿಸಲಾರವು. ಬ್ರಾಹ್ಮಣನಿಗೆ ಯಾವಯಾವ ದಾನಗಳನ್ನು ಕೊಡುವರೋ ಅದಾಯ ಸುಖಗಳನ್ನು ಜನ್ಮಾಂತರದಲ್ಲಿ ಎಲ್ಲರೂ

ಅನುಭವಿಸುವರು. ಸುವರ್ಣವು ಅಗ್ನಿಯಿಂದಲೂ ಭೂಮಿಯು ವಿಷ್ಣುವಿನಿಂದಲೂ ಗೋವುಗಳು ಸೂರ್ಯನಿಂದಲೂ ಹುಟ್ಟಿದವಾದ್ದರಿಂದ ಈ ಮೂರನ್ನೂ ದಾನಮಾಡಿದವರಿಗೆ ಅಗ್ನಿಲೋಕ ವಿಷ್ಣುಲೋಕ ಸೂರ್ಯಲೋಕಗಳು ಪ್ರಾಪ್ತಿಯಾಗುವದು. ಲೋಕದಲ್ಲಿ ದಾನಕ್ಕಿಂತಲೂ ಶ್ರೇಯಸ್ಕರವಾದದ್ದು ಮತ್ತೊಂದು ಯಾವದೂ ಇಲ್ಲ. ಆದ್ದರಿಂದ ದೊಡ್ಡವರು ದಾನವೇ ಸಕಲ ಧರ್ಮಗಳಲ್ಲೂ ಮುಖ್ಯವಾದದ್ದೆಂದು ಹೇಳುವರು" ಎಂದು ಮಾರ್ಕಂಡೇಯನು ಧರ್ಮರಾಯನಿಗೆ ಹೇಳಿದನು.

---

೨೦೦ನೇ ಅಧ್ಯಾಯ.—ಮಾರ್ಕಂಡೇಯಪರ್ವ—(ಉತ್ತಂಕನಿಗೆ ಮಹಾವಿಷ್ಣುವಿನ ದರ್ಶನ).

ಅನಂತರದಲ್ಲಿ ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯ ರಾಯನೆ, ಧರ್ಮರಾಯನು ಇಂದ್ರದ್ಯುಮ್ನರಾಯನಿಗೆ ಸ್ವರ್ಗಪ್ರಾಪ್ತಿಯಾದದ್ದನ್ನು ಕೇಳಿ, ತಪೋವೃದ್ಧನಾಗಿಯೂ ದೀರ್ಘಾಯುವಾಗಿಯೂ ಪಾಪರಹಿತನಾಗಿಯೂ ಇರುವ ಮಾರ್ಕಂಡೇಯಮಹರ್ಷಿಯನ್ನು ಕುರಿತು, "ಎಲೈ ಮಹಾತ್ಮನೆ, ನಿನಗೆ ದೇವ ದಾನವ ರಾಕ್ಷಸರ ಚರಿತ್ರೆಯೂ ಮತ್ತು ರಾಜವಂಶಗಳೂ ಮಹಾನುಭಾವರಾದ ಋಷಿಗಳ ಮಹಿಮೆಯೂ ಸಹ ತಿಳಿದಿರುವವು. ಪುಣ್ಯತಮವಾದ ಕಥೆಗಳನ್ನೂ ನೀನು ತಿಳಿದಿರುವೆ. ಅವುಗಳನ್ನೆಲ್ಲಾ ಕೇಳಬೇಕೆಂದು ನನಗೆ ಅಪೇಕ್ಷೆಯಿರುವದು. ಅವುಗಳನ್ನು ವಿವರಿಸು: ಮತ್ತು ಇಕ್ಷ್ವಾಕುವಂಶದಲ್ಲಿ ಉತ್ಪನ್ನನಾದ ಕುವಲಾಶ್ವನು ಹ್ಯಾಗೆ ಧುಂಧುಮಾರನೆಂದು ಹೆಸರನ್ನು ಪಡೆದನು. ಇದನ್ನು ಹೇಳು" ಎಂದನು. ಬಳಿಕ ಮಾರ್ಕಂಡೇಯನು "ಎಲೈ ಧರ್ಮರಾಯನೆ, ಧುಂಧುಮಾರನ ಉಪಾಖ್ಯಾನವು ಕೇಳತಕ್ಕದ್ದಾಗಿರುವದು. ಅದನ್ನು ಹೇಳುವೆನು ಕೇಳು: ರಮ್ಯವಾದ ಮರುಧನ್ವಪ್ರದೇಶದಲ್ಲಿ ಉತ್ತಂಕನೆಂಬ ಮಹರ್ಷಿಯು ಆಶ್ರಮವನ್ನು ಮಾಡಿಕೊಂಡು ಘೋರವಾದ ತಪಸ್ಸನ್ನು ಮಾಡುತ್ತ ಅನೇಕವರುಷ ಮಹಾವಿಷ್ಣುವನ್ನು ಆರಾಧನೆ ಮಾಡುತ್ತಿರಲು, ಆಗ ಮಹಾವಿಷ್ಣುವು ಆತನ ತಪಸ್ಸಿಗೆ ಮೆಚ್ಚಿ ತಾನೇ ಸಾಕ್ಷಾತ್ತಾಗಿ ಆತನಿಗೆ ದರ್ಶನವನ್ನು ಕೊಡುವವನಾದನು. ಆಗ ಆ ಉತ್ತಂಕನು ಮಹಾವಿಷ್ಣುವನ್ನು ನೋಡಿ 'ಎಲೈ ದೇವದೇವನೆ ಸಕಲರಾದ ದೇವತೆಗಳನ್ನೂ ಅಸುರರನ್ನೂ ಮನುಷ್ಯರನ್ನೂ ಸ್ಥಾವರಜಂಗಮಪ್ರಾಣಿಗಳನ್ನೂ ಬ್ರಹ್ಮಾದಿಗಳನ್ನೂ ಸಹ ನೀನೇ ಸೃಷ್ಟಿಸಿದೆ. ಆಕಾಶವೇ ನಿನಗೆ ಶಿರಸ್ಸಾಗಿಯೂ ಸೂರ್ಯಚಂದ್ರರೇ ನೇತ್ರಗಳಾಗಿಯೂ ವಾಯುವೇ ಶ್ವಾಸೋಚ್ಛ್ವಾಸರೂಪವಾಗಿಯೂ ಅಗ್ನಿಯೇ ನಿನ್ನ ತೇಜಸ್ಸಾಗಿಯೂ ದಿಕ್ಕುಗಳೇ ನಿನಗೆ ಬಾಹುಗಳಾಗಿಯೂ ಸಮುದ್ರವೇ ಉದರವಾಗಿಯೂ ಪರ್ವತಗಳೇ ತೊಡೆಗಳಾಗಿಯೂ ಆಕಾಶವೇ ಜಂಘೆಯಾಗಿಯೂ ಭೂಮಿಯೇ ಪಾದವಾಗಿಯೂ ವೃಕ್ಷಗಳೇ ರೋಮಗಳಾಗಿಯೂ ಇರುವವು. ಎಲೈ ದೇವೋತ್ತಮನೆ, ಇಂದ್ರಾದಿ ದೇವತೆಗಳು ನಮ್ರರಾಗಿ ನಿನ್ನನ್ನು ಅನೇಕವಿಧವಾದ ಸ್ತೋತ್ರಗಳಿಂದ ಸ್ತುತಿಸುವರು. ಮಹಾತ್ಮರಾದ ಯೋಗಿಗಳೂ ಋಷಿಗಳೂ ಸಹ ಸಕಲ ಪ್ರಪಂಚದಲ್ಲೂ ನೀನು ವ್ಯಾಪ್ತನಾಗಿರುವೆ ಎಂದು ನಿನ್ನನ್ನು ಶ್ಲಾಘಿಸುವರು. ನೀನು ಸಂತುಷ್ಟನಾಗಿದ್ದರೆ ಜಗತ್ತು ಸುಖವಾಗಿರುವದು. ನೀನು ಕೋಪಗೊಂಡರೆ ಜಗತ್ತಿಗೆ ಮಹತ್ತಾದ ಭಯವುಂಟಾಗುವದು. ನೀನೊಬ್ಬನೇ ಪ್ರಾಣಿಗಳ ಭಯವನ್ನು ಪರಿಹರಿಸಿ ಸುಖವನ್ನುಂಟುಮಾಡತಕ್ಕವನು. ಎಲೈ ಸ್ವಾಮಿಯೆ, ನೀನು ತ್ರಿವಿಕ್ರಮಾವತಾರವನ್ನು ಮಾಡಿ ಮೂರಾವರ್ತಿ ಪಾದವನ್ನು ಇಡೋಣದರಿಂದ ಮೂರು ಲೋಕವನ್ನೂ ವ್ಯಾಪಿಸುವನಾದೆ. ದುಷ್ಟರಾದ ಅಸುರರನ್ನು ನೀನೇ ನಾಶಮಾಡುವನಾದೆ. ನಿನ್ನ ಪರಾಕ್ರಮದಿಂದಲೇ ದೇವತೆಗಳು ಸುಖವಾಗಿ ಸ್ವರ್ಗದಲ್ಲಿ ವಾಸಮಾಡುತ್ತಿರುವರು. ಮತ್ತು ಸಕಲ ಪ್ರಾಣಿಗಳ ಸೃಷ್ಟಿಸ್ಥಿತಿಲಯಗಳಿಗೂ ನೀನೇ ಕಾರಣನಾದವನು. ನಿನ್ನನ್ನು ಆರಾಧಿಸಿಯೇ ದೇವತೆಗಳು ಸುಖವನ್ನು ಪಡೆಯುವರು' ಎಂದು ಸ್ತೋತ್ರಮಾಡಲು, ಆದರಿಂದ ಸಂತುಷ್ಟನಾಗಿ ಮಹಾವಿಷ್ಣುವು ಆ ಉತ್ತಂಕನನ್ನು ಕುರಿತು 'ಎಲೈ ಉತ್ತಂಕನೆ, ನಿನ್ನ ವಿಷಯದಲ್ಲಿ ನಾನು ಸಂತುಷ್ಟನಾಗಿರುವೆನು. ನೀನು ಬೇಕಾದ ವರವನ್ನು ಬೇಡು' ಎನಲು,

ಉತ್ತಂಕನು ‘ ಎಲೈ ಪುರುಷೋತ್ತಮನೆ, ಶಾಸ್ವತನಾಗಿಯೂ ಜಗತ್ಕಾರಣನಾಗಿಯೂ ಸಮರ್ಥನಾಗಿಯೂ ಇರುವ ನೀನು ನನ್ನಲ್ಲಿ ಅನುಗ್ರಹವನ್ನುಮಾಡಿ ದರ್ಶನವನ್ನು ಕೊಡುವನಾದೆ. ಇದೇ ನನಗೆ ಸಾಕಾಗಿರುವದು ’ ಎಂದನು. ಬಳಿಕ ಮಹಾವಿಷ್ಣುವು ‘ ಎಲೈ ಉತ್ತಂಕನೆ, ನಿನ್ನ ಸ್ಥೈರ್ಯಕ್ಕೂ ಭಕ್ತಿಗೂ ನಾನು ಮೆಚ್ಚಿರುವೆನು. ನೀನು ನನ್ನಿಂದ ಅವಶ್ಯವಾಗಿ ವರವನ್ನು ಪಡೆಯಬಹುದು ’ ಎಂದು ಮತ್ತುಮತ್ತೂ ಹೇಳಲು, ಉತ್ತಂಕನು ಕೈಮುಗಿದು ಕೊಂಡು ‘ ಎಲೈ ಪುಂಡರೀಕಾಕ್ಷನೆ, ನನ್ನ ಭಕ್ತಿಯನ್ನು ನೀನು ಮೆಚ್ಚಿದ್ದಪಕ್ಷದಲ್ಲಿ ಧರ್ಮದಲ್ಲಿಯೂ ಸತ್ಯದಲ್ಲಿಯೂ ದಮದಲ್ಲಿಯೂ ಯಾವಾಗಲೂ ನನಗೆ ಬುದ್ಧಿಯು ಪ್ರವರ್ತಿಸುವಂತೆಯೂ ಮತ್ತು ನನಗೆ ಯಾವಾಗಲೂ ನಿನ್ನಲ್ಲಿ ಭಕ್ತಿಯು ವಿಶೇಷವಾಗಿರುವಂತೆಯೂ ನನಗೆ ವರವನ್ನು ಕೊಡು ’ ಎಂದು ಬೇಡಲು, ಮಹಾವಿಷ್ಣುವು ‘ ಎಲೈ ಉತ್ತಂಕನೆ, ನನ್ನನುಗ್ರಹದಿಂದ ನಿನ್ನ ಇಷ್ಟಾರ್ಥಗಳೆಲ್ಲಾ ಕೈಗೂಡಿ ನಿನಗೆ ಯೋಗಸಿದ್ಧಿಯೂ ಉಂಟಾಗಲಿ. ಆದರಿಂದ ನೀನು ದೇವತೆಗಳಿಗೂ ಮೂರು ಲೋಕಗಳಿಗೂ ಸಹ ಹಿತವಾದ ಮಹತ್ತಾದ ಕಾರ್ಯವನ್ನು ಮಾಡುವನಾಗುವೆ. ಧುಂಧುವೆಂಬ ಅಸುರನು ಲೋಕನಾಶಾರ್ಥವಾಗಿ ಘೋರವಾದ ತಪಸ್ಸನ್ನು ಮಾಡುತ್ತಿರುವನು. ಆತನ ಸಂಹಾರಾರ್ಥವಾಗಿ ಇಕ್ಷ್ವಾಕುವಂಶದಲ್ಲಿ ಬೃಹದಶ್ವನಿಗೆ ಕುವಲಾಶ್ವನೆಂಬ ಮಗನು ಹುಟ್ಟುವನು. ಆತನು ಶುಚಿಯಾಗಿಯೂ ಜಿತೇಂದ್ರಿಯನಾಗಿಯೂ ಇದ್ದುಕೊಂಡು ನನ್ನ ಯೋಗಬಲವನ್ನು ಪಡೆದು ನಿನ್ನ ಆಜ್ಞೆಯಿಂದ ಆ ಅಸುರನನ್ನು ಸಂಹರಿಸಿ ಧುಂಧುಮಾರನೆಂಬ ಹೆಸರನ್ನು ಪಡೆಯುವನು ’ ಎಂದು ನುಡಿದು, ಆ ಮಹಾವಿಷ್ಣುವು ಅಂತರ್ಧಾನವನ್ನು ಹೊಂದಿದನು ” ಎಂದು ಮಾರ್ಕಂಡೇಯನು ಧರ್ಮರಾಯನಿಗೆ ಹೇಳಿದನು.

೨೦೧ನೇ ಅಧ್ಯಾಯ.—ಮಾರ್ಕಂಡೇಯಪರ್ವ—(ಉತ್ತಂಕನು ಬೃಹದಶ್ವನಿಗೆ ಧುಂಧುಸಂಹಾರರೀತಿಯನ್ನು ತಿಳಿಸಿದ್ದು).

ಬಳಿಕ ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ ಮತ್ತು ಮಾರ್ಕಂಡೇಯನು ಧರ್ಮರಾಯನನ್ನು ಕುರಿತು “ಎಲೈ ಧರ್ಮರಾಯನೆ, ಇಕ್ಷ್ವಾಕುರಾಯನ ಮಗನಾದ ಶಶಾದನು ಅಯೋಧ್ಯಾನಗರವನ್ನು ಆಳುತ್ತಿರಲು, ಆತನಿಗೆ ಕಕುತ್ಸ್ಥರಾಯನೆಂಬ ಮಗನು ಹುಟ್ಟಿದನು. ಕಕುತ್ಸ್ಥರಾಯನಿಗೆ ಅನೇನಸ್ಸೆಂಬ ರಾಯನೂ, ಅನೇನಸ್ಸಿಗೆ ಪೃಥುರಾಯನೂ, ಪೃಥುರಾಯನಿಗೆ ವಿಷ್ವಗಶ್ವನೂ, ವಿಷ್ವಗಶ್ವನಿಗೆ ಅದ್ರಿಯೂ, ಅದ್ರಿಗೆ ಯುವನಾಶ್ವನೂ, ಯುವನಾಶ್ವನಿಗೆ ಶ್ರಾವಸ್ಸೂ, ಶ್ರಾವಸ್ಸಿಗೆ ಶ್ರಾವಸ್ತಕನೂ ಹುಟ್ಟುವರಾದರು. ಆ ಶ್ರಾವಸ್ತಕನಿಂದ ಶ್ರಾವಸ್ತಿಯೆಂಬ ಪಟ್ಟಣವು ನಿರ್ಮಿತವಾಯಿತು. ಆ ಶ್ರಾವಸ್ತಕನಿಗೆ ಬೃಹದಶ್ವನೂ ಬೃಹದಶ್ವನಿಗೆ ಕುವಲಾಶ್ವನೂ ಹುಟ್ಟಿದರು. ಆ ಕುವಲಾಶ್ವನಿಗೆ ಇಪ್ಪತ್ತೊಂದುಸಾವಿರಮಂದಿ ಮಕಳು ಹುಟ್ಟಿದರು. ಅವರೆಲ್ಲರೂ ಸಕಲ ವಿದ್ಯಾಪಾರಂಗತರಾಗಿಯೂ ಬಲಿಷ್ಠರಾಗಿಯೂ ಶತ್ರುಗಳಿಗೆ ಜಯಿಸಲಶಕ್ಯರಾಗಿಯೂ ಇದ್ದರು. ಈ ಪ್ರಕಾರ ಆ ಕುವಲಾಶ್ವನು ಇಪ್ಪತ್ತೊಂದುಸಾವಿರಮಂದಿ ಮಕ್ಕಳಿಂದ ಕೂಡಿದವನಾಗಿಯೂ ಶೂರನಾಗಿಯೂ ಧರ್ಮಾತ್ಮನಾಗಿಯೂ ಗುಣವಂತನಾಗಿಯೂ ಇರುವದನ್ನು ನೋಡಿ ಬೃಹದಶ್ವನು ಆತನಿಗೆ ರಾಜ್ಯಾಭಿಷೇಕವನ್ನು ಮಾಡಿ ತಪಸ್ಸುಮಾಡುವದಕ್ಕೋಸ್ಕರ ತಪೋವನಕ್ಕೆ ಬಂದದ್ದನ್ನು ಕೇಳಿ ಉತ್ತಂಕನು ಆತನನ್ನು ಕಂಡು ‘ ಎಲೈ ರಾಯನೆ, ಪ್ರಜಾರಕ್ಷಣೆಯನ್ನು ಮಾಡುವದು ನಿನಗೆ ಧರ್ಮವಾದದ್ದು. ನೀನು ಪ್ರಜಾರಕ್ಷಣೆಯಲ್ಲಿ ಜಾಗರೂಕನಾಗಿದ್ದರೆ ನಮ್ಮಂಥಾವರು ಅರಣ್ಯದಲ್ಲಿ ನಿರ್ಭಯವಾಗಿ ತಪಸ್ಸುಮಾಡುವೆವು. ರಾಜರಿಗೆ ಪ್ರಜಾರಕ್ಷಣೆಗಿಂತಲೂ ಅರಣ್ಯದಲ್ಲಿ ತಪಸ್ಸುಮಾಡುವದು ಉತ್ತಮವಾದದ್ದೆಂದು ನೀನು ಎಣಿಸಬೇಡ. ಪೂರ್ವಿಕರಾದ ರಾಜರ್ಷಿಗಳು ಪ್ರಜಾಪರಿಪಾಲನೆಯಲ್ಲೇ ವಿಶೇಷವಾಗಿ ಆಸಕ್ತರಾಗಿ ಅದರಿಂದ ಅನೇಕ ಧರ್ಮಗಳನ್ನು ಸಂಪಾದಿಸುವರಾದರು. ಹಾಗೇ ನೀನೂ ಪ್ರಜೆಗಳನ್ನು ರಕ್ಷಿಸಿಕೊಂಡಿರು ಎಂದು ಆ ರಾಯನನ್ನು ತಡೆದು, ಎಲೈ ರಾಯನೆ, ನನ್ನ ಆಶ್ರಮದ ಸಮೀಪದಲ್ಲಿ ರತಕ್ಕ ಸಮವಾದ ಮರುಧನ್ವಪ್ರದೇಶದಲ್ಲಿ ಸಮುದ್ರಪ್ರಾಂತ್ಯವಾದ ಉಜ್ಜಾಲಕವೆಂಬ ಬಹುಯೋಜನ ವಿಸ್ತಾರವಾದ ಒಂದು ಪ್ರದೇಶವು ಮರಳಿನಿಂದ ತುಂಬಿಕೊಂಡು ಇರುವದು. ಮಹಾ ಪರಾಕ್ರಮಶಾಲಿಯಾಗಿಯೂ ದಾರುಣನಾ

ಗಿಯೂ ಮಧುಕೈಟಭರಿಗೆ ಪುತ್ರನಾಗಿಯೂ ಇರುವ ದಾನವಶ್ರೇಷ್ಠನಾದ ಧುಂಧುವೆಂಬ ದೈತ್ಯನು ಆ ಮರಳ ಭೂಮಿಯಲ್ಲಿ ವಾಸಮಾಡುತ್ತ ಸಕಲ ಲೋಕಗಳನ್ನೂ ನಾಶಮಾಡಬೇಕೆಂದು ಘೋರವಾದ ತಪಸ್ಸುಮಾಡಿ, ಬ್ರಹ್ಮ ದೇವನಿಂದಲೂ ದೇವತೆಗಳಿಂದಲೂ ದೈತ್ಯರಿಂದಲೂ ರಾಕ್ಷಸರಿಂದಲೂ ಸರ್ಪ ಯಕ್ಷ ಗಂಧರ್ವರಿಂದಲೂ ತಾನು ಅವಧ್ಯ ನಾಗಿರುವಂತೆ ವರವನ್ನು ಪಡೆದು ಲೋಕಕಂಟಕನಾಗಿ ಆ ಭೂಮಿಯಲ್ಲೇ ವಾಸಮಾಡುತ್ತಿರುವನು. ಆ ದೈತ್ಯ ನನ್ನು ನೀನು ಸಂಹಾರಮಾಡಬೇಕು. ಇದರಿಂದ ನಿನ್ನ ಕೀರ್ತಿಯು ಲೋಕದಲ್ಲಿ ಶಾಶ್ವತವಾಗಿ ಪ್ರಕಾಶವಾಗು ವದು. ಎಲೈ ರಾಯನೆ, ಈ ವಿಷಯದಲ್ಲಿ ಮತ್ತೊಂದುವಿಧವಾಗಿ ಯೋಚಿಸಬೇಡ. ಆ ಕ್ರೂರನಾದ ದೈತ್ಯನು ಆ ಮರಳುಭೂಮಿಯಲ್ಲಿ ನಿದ್ರೆಮಾಡುತ್ತ ಸಂವತ್ಸರಕ್ಕೆ ಒಂದಾವರ್ತಿ ಯಾವಾಗ ಶ್ವಾಸವನ್ನು ಬಿಡುವನೋ ಆಗ ಅನೇಕ ಪರ್ವತಗಳಿಂದಲೂ ಅರಣ್ಯಗಳಿಂದಲೂ ಕೂಡಿರುವ ಭೂಮಿಯು ಅಲ್ಲಾಡುವದು. ಆ ಶ್ವಾಸದ ಗಾಳಿಯಿಂದ ಎದ್ದ ಮಹತ್ತಾದ ಧೂಳು ಸೂರ್ಯಮಾರ್ಗವನ್ನು ಮುಚ್ಚಿಬಿಡುವದು. ಏಳುದಿವಸ ಭೂಕಂಪನವಾಗುವದು. ಆಗ ಭೂಮಿಯಿಂದ ಬೆಂಕಿಯ ಕಿಡಿಗಳೂ ಜ್ವಾಲೆಗಳೂ ಹೊಗೆಯೂ ಸಹ ಅತಿಘೋರವಾಗಿ ಹೊರಡುವವು. ಅದ ರಿಂದ ನಾನು ಈ ಆಶ್ರಮದಲ್ಲಿ ವಾಸಮಾಡುವದಕ್ಕೆ ಅಸಮರ್ಥನಾಗಿರುವೆನು. ಲೋಕಕ್ಕೆ ಹಿತವನ್ನು ಮಾಡು ವದಕ್ಕೋಸ್ಕರ ನೀನು ಆ ದೈತ್ಯನನ್ನು ಈಗ ಸಂಹರಿಸುವನಾಗು. ಆ ಅಸುರನು ನಿನ್ನಿಂದ ಹತನಾದರೆ ಲೋಕ ಗಳೆಲ್ಲಾ ಸ್ವಸ್ಥವಾಗುವವು. ಅವನನ್ನು ಸಂಹರಿಸುವದಕ್ಕೆ ನೀನು ಸಮರ್ಥನಾದವನೆಂದು ನಾನು ತಿಳಿದಿರುವೆನು. ಅವನನ್ನು ಸಂಹರಿಸುವದಕ್ಕೆ ನೀನು ಯತ್ನಿಸಿದರೆ ಮಹಾವಿಷ್ಣುವು ತನ್ನ ತೇಜಸ್ಸಿನಿಂದ ನಿನ್ನ ತೇಜಸ್ಸನ್ನು ವೃದ್ಧಿಪ ಡಿಸುವಂತೆ ಪೂರ್ವದಲ್ಲೇ ಅನುಗ್ರಹಮಾಡಿರುವನು. ಆ ತೇಜಸ್ಸುಹೊರತು ಸಾಮಾನ್ಯನಾದವನು ಯಾವನೂ ಕೂಡ ನೂರುವರುಷ ಹೊಡದಾಡಿದರೂ ಆ ಅಸುರನನ್ನು ಸಂಹರಿಸುವದು ಅಸಾಧ್ಯವಾದದ್ದು. ಆದ್ದರಿಂದ ನೀನು ವಿಷ್ಣುವಿನ ತೇಜಸ್ಸನ್ನು ಪಡೆದು ಆ ಕ್ರೂರನಾದ ಧುಂಧುದೈತ್ಯನನ್ನು ಸಂಹರಿಸು ' ಎಂದು ಉತ್ತಂಕನು ಬೃಹದಶ್ವ ನಿಗೆ ಹೇಳಿದನು " ಎಂದು ಮಾರ್ಕಂಡೇಯನು ಧರ್ಮರಾಯನಿಗೆ ಹೇಳಿದನು.

## ೨೦೨ನೇ ಅಧ್ಯಾಯ.—ಮಾರ್ಕಂಡೇಯಪರ್ವ—(ಮಧುಕೈಟರ ಸಂಹಾರ).

ಅನಂತರದಲ್ಲಿ ವೈಶಂಪಾಯನಮುನೀಂದ್ರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯನೆ, ಮಾರ್ಕಂಡೇಯನು ಧರ್ಮರಾಯನನ್ನು ಕುರಿತು, " ಎಲೈ ಯುಧಿಷ್ಠಿರನೆ, ಬಳಿಕ ರಾಜರ್ಷಿಯಾದ ಬೃಹದಶ್ವನು ಉತ್ತಂಕನನ್ನು ಕುರಿತು, ಕೈಮುಗಿದುಕೊಂಡು ' ಎಲೈ ಮಹಾನುಭಾವನೆ, ನಿಮ್ಮಂಥಾವರ ದರ್ಶನವು ಎಂದಿಗೂ ನಿಷ್ಫಲವಾಗಲಾರದು. ನನ್ನ ಮಗನಾದ ಕುವಲಾಶ್ವನು ಬುದ್ಧಿಶಾಲಿಯಾಗಿಯೂ ಯುದ್ಧದಲ್ಲಿ ಅಸದೃಶವಾದ ಪರಾ ಕ್ರಮವುಳ್ಳವನಾಗಿಯೂ ಜಾಗರೂಕನಾಗಿಯೂ ಇರುವನು. ಆತನು ಪರಿಘಾಯುಧಕ್ಕೆ ಸಮಾನವಾದ ಬಾಹುಗ ಳುಳ್ಳ ಇಪ್ಪತ್ತೊಂದುಸಾವಿರಮಂದಿ ಶೂರರಾದ ಮಕ್ಕಳೊಡಗೂಡಿ ಧುಂಧುದೈತ್ಯನನ್ನು ಸಂಹಾರಮಾಡಿ ನಿಮಗೆ ಪ್ರೀತಿಯನ್ನುಂಟುಮಾಡುವನು. ಈಗ ನಾನು ಶಸ್ತ್ರಸನ್ಯಾಸವನ್ನು ಮಾಡಿರುವೆನಾದ್ದರಿಂದ ಇನ್ನು ನಾನು ಯುದ್ಧಮಾಡತಕ್ಕವನಲ್ಲ. ನನ್ನನ್ನು ನೀನು ಬಿಟ್ಟುಬಿಡು ' ಎನಲು, ಆ ಮಾತನ್ನು ಉತ್ತಂಕನು ಕೇಳಿ ' ಎಲೈ ಬೃಹದಶ್ವನೆ ಹಾಗೇ ಆಗಲಿ ನಿನ್ನ ಮಗನಿಗೇ ಆ ಕಾರ್ಯವನ್ನು ನೆರವೇರಿಸುವ ಹಾಗೆ ಕಟ್ಟುಮಾಡು ' ಎಂದನು. ಬಳಿಕ ಬೃಹದಶ್ವನು ' ಹಾಗೇ ಆಗಲೆಂದು ನುಡಿದು ಆಬಳಿಕ ತನ್ನ ಮಗನಿಗೆ ಆ ಕಾರ್ಯವನ್ನು ನೇಮಿಸಿ ತಾನು ತಪೋ ವನಕ್ಕೆ ಹೊರಟು ಹೋದನು " ಎಂದು ಮಾರ್ಕಂಡೇಯನು ಹೇಳಿದನು.

ಆಗ ಧರ್ಮರಾಯನು " ಎಲೈ ಮಹರ್ಷಿಯೆ, ಆ ದೈತ್ಯನು ಯಾರು? ಅವನು ಯಾರ ಮಗ? ಯಾರ ವಂಶ ದಲ್ಲಿ ಹುಟ್ಟಿದವನು? ಇಷ್ಟೊಂದು ಪರಾಕ್ರಮವುಳ್ಳ ದೈತ್ಯನ್ಯಾವನನ್ನೂ ನಾನು ಕೇಳಿಲ್ಲ. ಆತನ ವೃತ್ತಾಂ ತವನ್ನು ನೀನು ನನಗೆ ತಿಳುಹಿಸು " ಎಂದು ನುಡಿದನು. ಬಳಿಕ ಮಾರ್ಕಂಡೇಯನು " ಎಲೈ ರಾಯನೆ, ಆ ದೈತ್ಯನ

ವೃತ್ತಾಂತವನ್ನು ವಿಸ್ತಾರವಾಗಿ ಹೇಳುವೆನು ಕೇಳು: ಮೊದಲು ಪ್ರಳಯಕಾಲದಲ್ಲಿ ಸ್ಥಾವರಜಂಗಮಾತ್ಮಕವಾದ ಈ ಪ್ರಪಂಚವು ನಷ್ಟವಾಯಿತು. ಆಗ ಶಾಶ್ವತನಾಗಿಯೂ ನಾಶರಹಿತನಾಗಿಯೂ ಲೋಕನಾಯಕನಾಗಿಯೂ ಲೋಕಕರ್ತನಾಗಿಯೂ ಇರುವ ಮಹಾವಿಷ್ಣುವು, ಆ ಮಹತ್ತಾದ ಪ್ರಳಯೋದಕದಲ್ಲಿ ಆದಿಶೇಷನ ಶರೀರದಮೇಲೆ ಭೂದೇವಿಯನ್ನು ಆಲಿಂಗನೆ ಮಾಡಿಕೊಂಡು ಯೋಗನಿದ್ರೆಯನ್ನು ಮಾಡುತ್ತಿರಲು, ಆತನ ನಾಭೀಪ್ರದೇಶದಲ್ಲಿ ಸೂರ್ಯನಿಗೆ ಸಮಾನವಾದ ಕಾಂತಿಯುಳ್ಳ ಒಂದು ದಿವ್ಯವಾದ ಕಮಲವು ಉತ್ಪನ್ನವಾಯಿತು. ಆ ದಿವ್ಯಕಮಲದಲ್ಲಿ ಲೋಕಗುರುವಾಗಿಯೂ ನಾಲ್ಕು ವೇದಗಳನ್ನೂ ಬಲ್ಲವನಾಗಿಯೂ ನಾಲ್ಕು ಮುಖಗಳುಳ್ಳವನಾಗಿಯೂ ಮಹಾಪರಾಕ್ರಮಶಾಲಿಯಾಗಿಯೂ ಇರುವ ಬ್ರಹ್ಮದೇವನು ಹುಟ್ಟುವನಾದನು. ಆ ಬಳಿಕ ಮಹಾಪರಾಕ್ರಮಶಾಲಿಗಳಾದ ಮಧು ಕೈಟಭ ಎಂಬ ಇಬ್ಬರು ದಾನವರು ಬಹುಯೋಜನವಿಸ್ತಾರವಾದ ನಾಗತಲ್ಪದಲ್ಲಿ ದಿವ್ಯವಾದ ಕಿರೀಟ ಕೌಸ್ತುಭಾದ್ಯಾಭರಣಗಳಿಂದಲೂ ಪೀತಾಂಬರದಿಂದಲೂ ಅಲಂಕೃತನಾಗಿ, ಅನೇಕಕೋಟಿ ಸೂರ್ಯರಿಗೆ ಸಮವಾದ ತೇಜಸ್ಸುಳ್ಳವನಾಗಿ ಶಯನಮಾಡಿರುವ ಮಹಾವಿಷ್ಣುವನ್ನು ನೋಡಿ ಬಹಳವಾಗಿ ಆಶ್ಚರ್ಯಪಟ್ಟು, ಆತನ ಸಮೀಪದಲ್ಲಿದ್ದ ಬ್ರಹ್ಮನನ್ನು ನೋಡಿ ಅವರಿಬ್ಬರೂ ಆತನನ್ನು ಅಟ್ಟಿಕೊಂಡು ಹೋದರು. ಆಗ ಅವರಿಂದ ಭಯಪಟ್ಟ ಬ್ರಹ್ಮನು ತಾನು ಹುಟ್ಟುವದಕ್ಕೆ ಕಾರಣವಾದ ದಿವ್ಯಕಮಲದ ಕಾವನ್ನು ಅಲ್ಲಾಡಿಸುವನಾದನು. ಆದರಿಂದ ಮಹಾವಿಷ್ಣುವು ಎಚ್ಚತ್ತು ತನ್ನ ಸಮೀಪದಲ್ಲಿದ್ದ ಆ ಮಧುಕೈಟಭದಾನವರನ್ನು ಕಂಡು, 'ಎಲೈ ದಾನವರೆ, ಸುಖವಾಗಿ ಬರುವರಾದಿರಾ ? ನಿಮ್ಮನ್ನು ನೋಡಿದ್ದರಿಂದ ನನಗೆ ತುಂಬಾ ಪ್ರೀತಿಯುಂಟಾಗಿರುವದು' ಎಂದು ನುಡಿಯಲು, ಆ ಮಾತನ್ನು ಕೇಳಿ, ಆ ದಾನವರು ನಸುನಕ್ಕು 'ಎಲೈ ವಿಷ್ಣುವೆ ನಾವಿಬ್ಬರೂ ನಿನಗೆ ವರವನ್ನು ಕೊಡುವದಕ್ಕೋಸ್ಕರ ಬಂದಿರುವೆವು. ಈ ವಿಷಯದಲ್ಲಿ ವಿಚಾರಮಾಡದೆ ನಿನಗೆ ಬೇಕಾದ ವರಗಳನ್ನು ಬೇಡು' ಎಂದರು. ಆ ಮಾತನ್ನು ಕೇಳಿ ಮಹಾವಿಷ್ಣುವು 'ಎಲೈ ದೈತ್ಯಶ್ರೇಷ್ಠರೆ ನೀವಿಬ್ಬರೂ ಮಹಾಪರಾಕ್ರಮಶಾಲಿಗಳು. ನಿಮಗೆ ಸಮಾನರಾದವರು ಯಾರೂ ಇಲ್ಲ. ಲೋಕಹಿತಾರ್ಥವಾಗಿ ನೀವು ನನ್ನಿಂದ ವಧ್ಯರಾಗಬೇಕು. ಇಂಥಾ ವರವನ್ನು ನೀವು ನನಗೆ ಕೊಡುವರಾಗಿ' ಎಂದು ನುಡಿದನು. ಆ ಮಧುಕೈಟಭರು 'ಎಲೈ ಪುರುಷೋತ್ತಮನೆ, ನಾವು ಪರಿಹಾಸ್ಯದಲ್ಲೂ ಕೂಡ ಅನೃತವನ್ನು ಆಡಿದವರಲ್ಲ. ಯಾವಾಗಲೂ ನಾವು ಸತ್ಯದಲ್ಲೂ ಧರ್ಮದಲ್ಲೂ ಆಸಕ್ತರಾದವರು. ಲೋಕದಲ್ಲಿ ರೂಪಿನಲ್ಲೂ ಸತ್ವದಲ್ಲೂ ಶೌರ್ಯದಲ್ಲೂ ಶಮದಲ್ಲೂ ಧರ್ಮದಲ್ಲೂ ತಪಸ್ಸಿನಲ್ಲೂ ದಾನದಲ್ಲೂ ಇಂದ್ರಿಯನಿಗ್ರಹದಲ್ಲೂ ನಮಗೆ ಸಮಾನರಾದವರು ಯಾರೂ ಇಲ್ಲ. ಆದರೆ ನಮಗೆ ಈಗ ಇಂಥಾ ಕೇಡು ಪ್ರಾಪ್ತವಾಯಿತು; ಚಿಂತೆಯಿಲ್ಲ. ನೀನು ಹೇಳಿದಂತೆ ನಡಸುವನಾಗು. ಕಾಲವನ್ನು ಮೀರುವದಕ್ಕೆ ಯಾರಿಂದಲೂ ಆಗುವದಿಲ್ಲ. ಆದರೂ ನಾವು ಇದೊಂದನ್ನು ಮಾತ್ರ ನಿನ್ನನ್ನು ಕೇಳಿಕೊಳ್ಳುವೆವು. ನಮ್ಮನ್ನು ಆಕಾಶದಲ್ಲೂ ಭೂಮಿಯಲ್ಲೂ ಸಂಹರಿಸಬೇಡ. ಮತ್ತು ನಿನಗೆ ನಾವು ಮುಂದಕ್ಕೆ ಮಕ್ಕಳಾಗುವಂತೆ ಇದೊಂದು ವರವನ್ನು ನೀನು ನಮಗೆ ಕೊಡುವನಾಗು. ಈಗ ನಾವು ಕೇಳಿಕೊಂಡದ್ದು ಎಂದಿಗೂ ಸುಳ್ಳಾಗದಂತೆ ನಡಸಿಕೊಡು' ಎಂದರು. ಬಳಿಕ ಮಹಾವಿಷ್ಣುವು 'ಎಲೈ ದೈತ್ಯರೆ, ಹಾಗೇ ಆಗಲಿ ನೀವು ಹೇಳಿದಹಾಗೇ ನಡಿಸಿಕೊಡುವೆನು' ಎಂದು ನುಡಿದು ಆಕಾಶವೂ ಭೂಮಿಯೂ ಅಲ್ಲದೇ ಇರತಕ್ಕ ಪ್ರದೇಶವನ್ನು ಯೋಚಿಸಿ ಯಾವದನ್ನೂ ಕಾಣದೆ ಬಳಿಕ ತನ್ನ ತೊಡೆಗಳನ್ನು ನೋಡಿ ಅವುಗಳಮೇಲೆ ಆ ದೈತ್ಯರಿಬ್ಬರನ್ನೂ ಕೆಡಹಿಕೊಂಡು ತೀಕ್ಷ್ಣವಾದ ಹರಿತವುಳ್ಳ ಚಕ್ರಾಯುಧದಿಂದ ಅವರ ಶಿರಸ್ಸುಗಳನ್ನು ಛೇದಿಸಿಬಿಟ್ಟನು" ಎಂದು ಮಾರ್ಕಂಡೇಯನು ಧರ್ಮರಾಯನಿಗೆ ಹೇಳಿದನು.

೨೦೩ನೇ ಅಧ್ಯಾಯ.—ಮಾರ್ಕಂಡೇಯಪರ್ವ—(ಧುಂಧುವಿನ ಸಂಹಾರ).

ಬಳಿಕ ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಎಲೈ ಜನಮೇಜಯರಾಯನೆ ಕೇಳು, ಮಾರ್ಕಂಡೇಯನು ಧರ್ಮರಾಯನನ್ನು ಕುರಿತು "ಎಲೈ ಧರ್ಮರಾಯನೇ, ಆ ಮಧುಕೈಟಭರಿಗೆ ಮಗನಾದ ಧುಂಧುವೆಂಬ ದೈತ್ಯನು ಒಂದು ಕಾಲಿನಿಂದ ನಿಂತು ಕೃಶನಾಗಿ ಮಯ್ಯಲ್ಲಿ ನರಗಳು ಕಾಣಿಸುತ್ತಿರಲು,

ಘೋರವಾಗಿ ತಪಸ್ಸನ್ನು ಮಾಡಿದನು. ಬ್ರಹ್ಮನು ಆತನ ತಪಸ್ಸಿಗೆ ಮೆಚ್ಚಿ, ಅವನ ಇಷ್ಟಾನುಸಾರವಾಗಿ, ದೇವತೆಗಳಿಂದಲೂ ದಾನವರಿಂದಲೂ ಸರ್ಪಗಳಿಂದಲೂ ಯಕ್ಷರಿಂದಲೂ ಗಂಧರ್ವರಿಂದಲೂ ಅವಧ್ಯನಾಗಿರುವಂತೆ ವರವನ್ನು ಕೊಟ್ಟನು. ಬಳಿಕ ಧುಂಧುವು ವರವನ್ನು ಪಡೆದು ಬ್ರಹ್ಮನಿಗೆ ವಂದನೆಯನ್ನು ಮಾಡಿ, ಮಹಾತೇಜಸ್ವಿಯಾಗಿ ತಮ್ಮ ಪಿತೃಗಳನ್ನು ಮಹಾವಿಷ್ಣುವು ಸಂಹರಿಸಿದ್ದನ್ನು ಸ್ಮರಿಸಿಕೊಂಡು ದೇವತೆಗಳನ್ನೂ ಗಂಧರ್ವರನ್ನೂ ವಿಷ್ಣುವನ್ನೂ ಬಾಧಿಸುತ್ತ, ಉತ್ತಂಕಮಹರ್ಷಿಯ ಆಶ್ರಮದ ಸಮೀಪದಲ್ಲಿರುವ ಉಜ್ಜಾಲಕವೆಂಬ ಮರಳಭೂಮಿಯನ್ನಾಕ್ರಮಿಸಿಕೊಂಡು, ಮರಳಿನೊಳಗೆ ಮಲಗಿಕೊಂಡು, ಆ ಉತ್ತಂಕಋಷಿಯನ್ನು ಬಾಧಿಸುತ್ತ ಲೋಕಕಂಟಕನಾಗಿದ್ದನು. ಹೀಗಿರಲು, ಆ ಶೂರರಾದ ಇಪ್ಪತ್ತೊಂದುಸಾವಿರಮಂದಿ ಮಕ್ಕಳಿಂದೊಡಗೂಡಿದ ಕುವಲಾಶ್ವರಾಯನು ಉತ್ತಂಕಮಹರ್ಷಿಯ ಆಶ್ರಮಕ್ಕೆ ಬಂದನು. ಆಗ ಲೋಕಹಿತಾರ್ಥವಾಗಿ ಮಹಾವಿಷ್ಣುವು ತನ್ನ ತೇಜಸ್ಸನ್ನು ಆ ಕುವಲಾಶ್ವರಾಯನಲ್ಲಿ ಇಟ್ಟನು. ಬಳಿಕ ಆ ಉತ್ತಂಕನ ಪ್ರೇರಣೆಯಿಂದ ಕುವಲಾಶ್ವರಾಯನು ಧುಂಧುದೈತ್ಯನನ್ನು ಸಂಹರಿಸುವದಕ್ಕೆ ಸಿದ್ಧನಾಗಲು; ಆಕಾಶಮಾರ್ಗದಲ್ಲಿ ದೇವತೆಗಳು ಪುಷ್ಪವೃಷ್ಟಿಯನ್ನು ಕರೆದು, ದೇವದುಂದುಭಿಯನ್ನು ಹೊಡೆದು 'ಈ ಕುವಲಾಶ್ವರಾಯನು ತಾನು ಅವಧ್ಯನಾಗಿ ಧುಂಧುದೈತ್ಯನನ್ನು ಸಂಹರಿಸಿ ಧುಂಧುಮಾರನೆಂಬ ಹೆಸರನ್ನು ಪಡೆಯುವನು' ಎಂದು ಹೊಗಳಿದರು. ಕೂಡಲೆ ಜಯಸೂಚಕವಾದ ಮಂದಮಾರುತವು ಸುಖವಾಗಿ ಬೀಸಿತು; ಭೂಮಿಯಲ್ಲಿದ್ದ ಧೂಳುಗಳು ಅಡಗುವಹಾಗೆ ಪರ್ಜನ್ಯನು ವರ್ಷಿಸಿದನು. ಆಗ ಸಕಲರಾದ ದೇವತೆಗಳೂ ತಮ್ಮತಮ್ಮ ವಿಮಾನಗಳನ್ನೇರಿ ಇವರಿಬ್ಬರೂ ಯುದ್ಧಮಾಡುವದನ್ನು ನೋಡುವದಕ್ಕಾಗಿ ಅಂತರಿಕ್ಷದಲ್ಲಿ ಬಂದು ನಿಂತರು. ಆ ಸಮಯದಲ್ಲಿ ನಾರಾಯಣನ ತೇಜಸ್ಸಿನಿಂದ ಆವೃತನಾದ ಕುವಲಾಶ್ವರಾಯನು ಸಮುದ್ರಪ್ರಾಂತ್ಯದಲ್ಲಿರುವ ಮರಳು ತುಂಬಿಕೊಂಡಿರುವ ಉಜ್ಜಾಲಕವೆಂಬ ಸ್ಥಳದಲ್ಲಿ ಧುಂಧುವೆಂಬ ದೈತ್ಯನನ್ನು ಹುಡುಕುವದಕ್ಕಾಗಿ, ಆ ಪ್ರದೇಶದ ಮರಳನ್ನು ಬಗೆಯಿರೆಂದು ತನ್ನ ಇಪ್ಪತ್ತೊಂದುಸಾವಿರಮಂದಿ ಮಕ್ಕಳಿಗೂ ಆಜ್ಞೆಯನ್ನು ಕೊಟ್ಟನು. ಆಗ ಅವರು ಬಂದುಗೂಡಿ ಉಜ್ಜಾಲಕವೆಂಬ ಸ್ಥಳವನ್ನು ಏಳುದಿವಸ ತೋಡಿದರು. ಬಳಿಕ ಘೋರವಾಗಿಯೂ ಮಹತ್ತಾಗಿಯೂ ಸೂರ್ಯನಂತೆ ದೇದೀಪ್ಯಮಾನವಾಗಿಯೂ ಇರುವ ಧುಂಧುದೈತ್ಯನ ಶರೀರವು ಅಲ್ಲಿ ಕಾಣಿಸಿತು. ಆ ದೈತ್ಯನು ಪ್ರಳಯಕಾಲದ ಅಗ್ನಿಗೆ ಸಮಾನನಾಗಿ ಪಶ್ಚಿಮದಿಕ್ಕಿಗೆ ಶಿರಸ್ಸುಮಾಡಿಕೊಂಡು ಮಲಗಿದ್ದನು. ಬಳಿಕ ಕುವಲಾಶ್ವನ ಮಕ್ಕಳು ಆತನ ಸುತ್ತಲು ನಿಂತು, ಗದೆಗಳಿಂದಲೂ ಪರಿಘಗಳಿಂದಲೂ ಪಟ್ಟಿಶಗಳಿಂದಲೂ ಮುಸಲಾಯುಧಗಳಿಂದಲೂ ತೀಕ್ಷ್ಣವಾದ ಖಡ್ಗಗಳಿಂದಲೂ ಬಾಣಗಳಿಂದಲೂ ಆತನನ್ನು ಹೊಡೆದರು. ಆಗ ಆ ಕ್ರೂರನಾದ ದೈತ್ಯನು ಎಚ್ಚತ್ತು, ಪ್ರಳಯಾಗ್ನಿಯಂತೆ ಜಾಜ್ವಲ್ಯಮಾನನಾಗಿ, ಆ ರಾಜಕುಮಾರರು ತನ್ನಮೇಲೆ ಪ್ರಯೋಗಿಸಿದ ಆಯುಧಗಳನ್ನು ಭಕ್ಷಿಸಿ, ತನ್ನ ತೇಜಸ್ಸಿನಿಂದ ಪೂರ್ವದಲ್ಲಿ ಕಪಿಲಮಹರ್ಷಿಯು ಸಗರರಾಯನ ಮಕ್ಕಳನ್ನು ನಾಶಮಾಡಿದಂತೆ ಕ್ಷಣಮಾತ್ರದಲ್ಲಿ ಆ ರಾಜಕುಮಾರರನ್ನು ನಾಶಮಾಡಿಬಿಟ್ಟನು. ಅದು ಬಹಳ ಆಶ್ಚರ್ಯಕರವಾಗಿತ್ತು. ಆಗ ಕುವಲಾಶ್ವನು ನಿದ್ರೆಯಿಂದ ಎದ್ದುಬಂದ ಎರಡನೇ ಕುಂಭಕರ್ಣನೋ ಎಂಬಂತೆ ಕಾಣುತ್ತಿದ್ದ ಕ್ರೂರನಾದ ಧುಂಧುದೈತ್ಯನಮೇಲೆ ಯುದ್ಧಕ್ಕೆ ಸನ್ನದ್ಧನಾದನು. ಆ ಸಮಯದಲ್ಲಿ ಆ ದೈತ್ಯನ ಶರೀರದಿಂದ ಉದಕರೂಪವಾಗಿ ಅವನ ತಪಶ್ಶಕ್ತಿಯೆಲ್ಲಾ ಅಧಿಕವಾಗಿ ಸ್ರವಿಸಿತು. ಆ ಉದಕವನ್ನು ಕುವಲಾಶ್ವರಾಯನಲ್ಲಿದ್ದ ನಾರಾಯಣನ ತೇಜಸ್ಸು ಪಾನಮಾಡಿತು. ಬಳಿಕ ಆತನ ತೇಜಸ್ಸನ್ನೂ ಯೋಗಮಯವಾದ ಉದಕದಿಂದ ಶಾಂತಮಾಡಿ, ಆ ಕುವಲಾಶ್ವರಾಯನು ಲೋಕಹಿತಾರ್ಥವಾಗಿ ಬ್ರಹ್ಮಾಸ್ತ್ರದಿಂದ ಆ ದೈತ್ಯನನ್ನು ಸಂಹರಿಸಿ, ತ್ರಿಲೋಕಾಧಿಪತಿಯಾದ ಇಂದ್ರನಂತೆ ಪ್ರಕಾಶಿಸುತ್ತ ಧುಂಧುಮಾರನೆಂಬ ಹೆಸರನ್ನು ಪಡೆದನು. ಬಳಿಕ ಆ ದೈತ್ಯನ ವಧೆಯಿಂದ ಸಂತುಷ್ಟರಾದ ದೇವತೆಗಳೂ ಋಷಿಗಳೂ ಆ ರಾಯನನ್ನು ನೋಡಿ 'ಎಲೈ ಕುವಲಾಶ್ವನೆ, ನಿನಗೆ ಬೇಕಾದ ವರವನ್ನು ನಾವು ಕೊಡುವೆವು ಬೇಡು' ಎಂದರು. ಅದನ್ನು ಕೇಳಿ ಕುವಲಾಶ್ವನು ಸಂತೋಷದಿಂದ ಕೈಮುಗಿದುಕೊಂಡು 'ಎಲೈ ಮಹಾತ್ಮರೆ, ನನ್ನ ವಿಷಯದಲ್ಲಿ ನೀವು ಸಂತುಷ್ಟರಾಗಿ ವರವನ್ನು ಕೊಡುವ ಪಕ್ಷದಲ್ಲಿ ನಾನು ಶತ್ರುಗಳಿಗೆ ಅಜಯ್ಯನಾಗಿಯೂ ವಿಷ್ಣುವಿಗೆ ಪ್ರೀತಿಪಾತ್ರನಾಗಿಯೂ ಪ್ರಾಣಿಗಳಲ್ಲಿ ದ್ರೋಹಬುದ್ಧಿಯಿಲ್ಲದವನಾಗಿಯೂ ಧರ್ಮದಲ್ಲಿ ವಿಶ್ವಾಸವುಳ್ಳವನಾಗಿಯೂ ಇದ್ದುಕೊಂಡು, ಬ್ರಾಹ್ಮಣರಿಗೆ

ಬೇಕಾದಷ್ಟು ದ್ರವ್ಯವನ್ನು ಕೊಟ್ಟು, ಸ್ವರ್ಗದಲ್ಲಿ ಬಹುಕಾಲ ವಾಸಮಾಡಿಕೊಂಡಿರುವಂತೆ ನನಗೆ ವರವನ್ನು ಅನುಗ್ರಹಮಾಡಬೇಕು' ಎಂದನು. ಬಳಿಕ ಹಾಗೇ ಆಗಲೆಂದು ದೇವತೆಗಳೂ ಋಷಿಗಳೂ ಗಂಧರ್ವರೂ ವಿದ್ವಾಂಸನಾದ ಉತ್ತಂಕಮಹರ್ಷಿಯೂ ಸಹ ನುಡಿದು, ಆತನಿಗೆ ಆಶೀರ್ವಾದವನ್ನು ಮಾಡಿ ತಮ್ಮತಮ್ಮ ಸ್ಥಾನಗಳಿಗೆ ಹೊರಟುಹೋದರು. ಎಲೈ ಧರ್ಮರಾಯನೆ, ಆ ಕುವಲಾಶ್ವರಾಯನ ಮಕ್ಕಳಲ್ಲಿ ದೃಢಾಶ್ವ, ಚಂದ್ರಾಶ್ವ, ಕಪಿಲಾಶ್ವ ಎಂಬ ಮೂರುಮಂದಿ ಮಕ್ಕಳು ಯುದ್ಧದಲ್ಲಿ ಹತಾವಶೇಷರಾಗಿದ್ದರು. ಅವರಿಂದ ಇಕ್ಷ್ವಾಕುಕುಲವು ಅಭಿವೃದ್ಧಿಯನ್ನು ಹೊಂದಿತು. ಈ ರೀತಿಯಾಗಿ ಕುವಲಾಶ್ವರಾಯನು ಧುಂಧುದೈತ್ಯನನ್ನು ಸಂಹರಿಸಿ ಅದುಮೊದಲು ಧುಂಧುಮಾರನೆಂಬ ಹೆಸರನ್ನು ಪಡೆದನು. ಈ ಉಪಾಖ್ಯಾನವು ನಾರಾಯಣನ ಮಾಹಾತ್ಮ್ಯದಿಂದ ಕೂಡಿರುವದಾದ್ದರಿಂದ ಪುಣ್ಯತಮವಾದದ್ದು. ಇದನ್ನು ಯಾರು ಧರ್ಮಬುದ್ಧಿಯಿಂದ ಪರ್ವಕಾಲದಲ್ಲಿ ಶ್ರವಣಮಾಡುವರೋ ಅವರು, ಐಶ್ವರ್ಯವನ್ನೂ ಸಂತಾನವನ್ನೂ ಆಯುರ್ವೃದ್ಧಿಯನ್ನೂ ಆರೋಗ್ಯವನ್ನೂ ಪಡೆದು ಸುಖವಾಗಿರುವರು" ಎಂದು ಮಾರ್ಕಂಡೇಯನು ಧರ್ಮರಾಯನಿಗೆ ವಿವರಿಸಿದನು.

## ೨೦೫ನೇ ಅಧ್ಯಾಯ.—ಮಾರ್ಕಂಡೇಯಪರ್ವ—(ಪತಿವ್ರತಾಧರ್ಮವರ್ಣನೆ.)

ವೈಶಂಪಾಯನಮುನೀಂದ್ರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಧರ್ಮರಾಯನು ಮಾರ್ಕಂಡೇಯಮಹರ್ಷಿಯನ್ನು ಕುರಿತು "ಎಲೈ ಮಹಾತ್ಮನೆ, ನಿನ್ನ ಮುಖದಿಂದ ನಾನು ಸೂಕ್ಷ್ಮಧರ್ಮವಾದ ಸ್ತ್ರೀಮಾಹಾತ್ಮ್ಯವನ್ನು ತಿಳಿಯಬೇಕೆಂದು ಕುತೂಹಲಪಡುತ್ತಿರುವೆನು. ಲೋಕದಲ್ಲಿ ಸೂರ್ಯಚಂದ್ರರೂ ವಾಯುವೂ ಭೂಮಿಯೂ ಅಗ್ನಿಯೂ ತಾಯಿಯೂ ತಂದೆಯೂ ಗುರುವೂ ಇನ್ನೂ ಯಾರುಯಾರು ಶ್ರೇಷ್ಠರಾದವರೋ ಅವರೆಲ್ಲರೂ ಸಹ ಪ್ರತ್ಯಕ್ಷರಾದ ದೇವತೆಗಳು ಮತ್ತು ಅವರೇ ಯಾವಾಗಲೂ ಮಾನ್ಯರು. ಹಾಗೆಯೇ ಪತಿವ್ರತಾಸ್ತ್ರೀಯರೂ ಮಾನ್ಯರಾದವರು. ಲೋಕದಲ್ಲಿ ಪತಿವ್ರತಾಸ್ತ್ರೀಯರು ತಮ್ಮ ಇಂದ್ರಿಯಗಳನ್ನು ನಿಗ್ರಹಿಸಿಕೊಂಡು ಮನಸ್ಸಿನಲ್ಲಿ ಚಾಂಚಲ್ಯವಿಲ್ಲದೆ, ಪತಿಯೇ ಪರದೈವವೆಂದು ತಿಳಿದು, ಆತನ ಇಚ್ಛಾನುಸಾರವಾಗಿ ಆತನ ಶುಶ್ರೂಷೆಯನ್ನು ಮಾಡಿಕೊಂಡಿರುವರು. ಆದ್ದರಿಂದ ಮಾತಾಪಿತೃಗಳ ಶುಶ್ರೂಷೆಗಿಂತಲೂ ಪತಿಶುಶ್ರೂಷೆಗಿಂತಲೂ ದೊಡ್ಡದಾದದ್ದು ಮತ್ತೊಂದಿಲ್ಲ. ಸ್ತ್ರೀಯರು ಹತ್ತುತಿಂಗಳು ತಮ್ಮ ಹೊಟ್ಟೆಯಲ್ಲಿ ಗರ್ಭವನ್ನು ಧರಿಸಿಕೊಂಡು, ಬಳಿಕ ಅಧಿಕವಾದ ಯಾತನೆಯನ್ನು ಅನುಭವಿಸಿ ಬಹುಸಂಕಟದಿಂದ ಪ್ರಸವಿಸಿ, ಮಹತ್ತಾದ ಪ್ರೀತಿಯಿಂದ ಆ ಶಿಶುವನ್ನು ಪೋಷಿಸುತ್ತ, ಅದರ ಕ್ರೂರಕೃತ್ಯಗಳಿಗೆಲ್ಲಾ ಕೋಪಿಸಿಕೊಳ್ಳದೆ ಯಾವಾಗಲೂ ಅದರ ಅಭಿವೃದ್ಧಿಯಲ್ಲೇ ದೃಷ್ಟಿಯನ್ನಿಟ್ಟಿರುವರು. ಇದಕ್ಕಿಂತಲೂ ದೊಡ್ಡದಾದದ್ದು ಯಾವದೂ ಇಲ್ಲನು. ಕ್ಷತ್ರಧರ್ಮವು ಅತಿ ಕ್ರೂರವಾಗಿರುವದು. ಕ್ರೂರನಾದವನು ಹ್ಯಾಗೆ ಧರ್ಮವನ್ನು ಸಂಪಾದಿಸುವನು? ಈ ಧರ್ಮಗಳನ್ನೆಲ್ಲಾ ಕೇಳಬೇಕೆಂದು ನನಗೆ ಕುತೂಹಲವಿರುವದರಿಂದ ಅವುಗಳನ್ನು ನೀನು ನನಗೆ ತಿಳಿಸು" ಎಂದು ಪ್ರಶ್ನೆಮಾಡಿದನು. ಅದಕ್ಕೆ ಮಾರ್ಕಂಡೇಯನು "ಎಲೈ ಧರ್ಮರಾಯನೆ, ನೀನು ಮಾಡಿದ ಪ್ರಶ್ನೆಯು ಶ್ಲಾಘ್ಯವಾದದ್ದು. ಆ ಧರ್ಮಗಳನ್ನು ವಿವರಿಸುವೆನು, ಸಾವಧಾನದಿಂದ ಕೇಳಿ ತಿಳಿದುಕೊ. ಲೋಕದಲ್ಲಿ ಕೆಲವರು ತಾಯಿಯನ್ನೇ ಎಲ್ಲರಿಗಿಂತಲೂ ಅಧಿಕವೆಂದು ಭಾವಿಸುವರು; ಕೆಲವರು ತಂದೆಯನ್ನೇ ಅಧಿಕವೆಂದು ಭಾವಿಸುವರು. ತಾಯಿಯು ಮಕ್ಕಳನ್ನು ಹುಟ್ಟಿದಂದಿನಿಂದಲೂ ಪೋಷಿಸಿ ವೃದ್ಧಿಪಡಿಸುವಳು. ತಂದೆಯಾದವನು ತಪಸ್ಸಿನಿಂದಲೂ ದೇವತಾರಾಧನೆಯಿಂದಲೂ ಮಂತ್ರಜಪಗಳಿಂದಲೂ ಇನ್ನೂ ಅನೇಕ ಧರ್ಮಗಳಿಂದಲೂ ಮಕ್ಕಳನ್ನು ಬಯಸುತ್ತ ಬಹುಕಷ್ಟದಿಂದ ಪುತ್ರಸಂತಾನವನ್ನು ಪಡೆಯುವನು. ಸಂತಾನವಾದಬಳಿಕ ತಾಯಿತಂದೆಗಳಿಬ್ಬರೂ ಆ ಪುತ್ರನು ಮುಂದಕ್ಕೆ ಎಂಥವನಾಗುವನೋ ಎಂದು ಬಹಳವಾಗಿ ಚಿಂತಿಸುತ್ತ, ಆ ಪುತ್ರನಲ್ಲಿ ಕೀರ್ತಿಯೂ ಐಶ್ವರ್ಯವೂ ಧರ್ಮವೂ ಪುತ್ರಸಂತಾನವೂ ಉಂಟಾಗಬೇಕೆಂದು ಅಪೇಕ್ಷಿಸುವರು. ಆದ್ದರಿಂದ ಯಾವನು ತಾಯಿತಂದೆಗಳ ಅಪೇಕ್ಷೆಯನ್ನು ಪೂರ್ಣಮಾಡುವನೋ ಆತನೇ, ಧರ್ಮಜ್ಞನೆನಿಸಿಕೊಳ್ಳುವನು. ಯಾವನ ನಡತೆಯಿಂದ ತಾಯಿಯೂ

ತಂದೆಯೂ ಸಹ ಸಂತುಷ್ಟರಾಗುವರೋ ಆತನು, ಮೃತನಾದರೂ ಆತನ ಕೀರ್ತಿಯೂ ಧರ್ಮವೂ ಸಹ ಶಾಶ್ವತವಾಗಿ ನಿಲ್ಲುವವು. ಲೋಕದಲ್ಲಿ ಯಾವ ಸ್ತ್ರೀಯು ಭಕ್ತಿಯಿಂದ ಪತಿಶುಶ್ರೂಷೆಯನ್ನು ಮಾಡಿಕೊಂಡಿರುವಳೋ ಅಂಥಾ ಸ್ತ್ರೀಗೆ ಸ್ವರ್ಗವು ಸ್ವಾಧೀನವಾದದ್ದು. ಲೋಕದಲ್ಲಿ ಪತಿಶುಶ್ರೂಷೆಗಿಂತಲೂ ಯಜ್ಞವೂ ಶ್ರಾದ್ಧವೂ ಉಪವಾಸವೂ ಸಹ ದೊಡ್ಡವಲ್ಲ. ಎಲೈ ಧರ್ಮರಾಯನೆ, ಈ ಪತಿವ್ರತಾಧರ್ಮವನ್ನೇ ಅಧಿಕರಿಸಿಕೊಂಡು ನಾನು ಬೋಧಿಸುವ ಅಂಶಗಳನ್ನು ನೀನು ಚೆನ್ನಾಗಿ ಮನಸ್ಸಿನಲ್ಲಿಟ್ಟು ಕೇಳು” ಎಂದು ಮಾರ್ಕಂಡೇಯನು ಧರ್ಮರಾಯನಿಗೆ ಹೇಳಿದನು.

## ೨೦೫ನೇ ಅಧ್ಯಾಯ.—ಮಾರ್ಕಂಡೇಯಪರ್ವ—(ಪತಿವ್ರತಾಧರ್ಮವರ್ಣನೆ.)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಮಾರ್ಕಂಡೇಯನು ಧರ್ಮರಾಯನನ್ನು ಕುರಿತು, “ಎಲೈ ಧರ್ಮರಾಯನೆ, ಪೂರ್ವದಲ್ಲಿ ವೇದಾಧ್ಯಯನಪರನೂ ತಪಸ್ವಿಯೂ ಧರ್ಮಶೀಲನೂ ಆದ ಕೌಶಿಕನೆಂಬ ಒಬ್ಬಾನೊಬ್ಬ ಬ್ರಾಹ್ಮಣನು ಒಂದು ವೃಕ್ಷದ ಬುಡದಲ್ಲಿ ಕುಳಿತು ವೇದವನ್ನು ಅಧ್ಯಯನಮಾಡುತ್ತಿದ್ದನು. ಆ ವೃಕ್ಷದಮೇಲೆ ಕೂತಿದ್ದ ಒಂದು ಬಕಪಕ್ಷಿಯು ಆ ಬ್ರಾಹ್ಮಣನಮೇಲೆ ಮಲವನ್ನು ವಿಸರ್ಜಿಸಿತು. ಆಗ ಆ ಬ್ರಾಹ್ಮಣನು ಕೋಪಗೊಂಡು ಆ ಪಕ್ಷಿಯನ್ನು ಕ್ರೂರದೃಷ್ಟಿಯಿಂದ ನೋಡಿದನು. ಅಷ್ಟುಮಾತ್ರದಿಂದಲೇ ಆ ಪಕ್ಷಿಯು ಭೂಮಿಯಮೇಲೆ ಬಿದ್ದು ಪ್ರಾಣವನ್ನು ಬಿಟ್ಟಿತು. ಬಳಿಕ ಆ ಬ್ರಾಹ್ಮಣನು ಮೃತವಾಗಿ ಭೂಮಿಯಮೇಲೆ ಬಿದ್ದ ಪಕ್ಷಿಯನ್ನು ನೋಡಿ ಕೃಪೆಯಿಂದ ಪಶ್ಚಾತ್ತಾಪವನ್ನು ಹೊಂದಿ, ಪಾಪಾತ್ಮನಾದ ನಾನು ರೋಷಾವೇಶದಿಂದ ಅಕಾರ್ಯವನ್ನು ಮಾಡಿದೆನಲ್ಲಾ ಎಂದು ವ್ಯಸನಪಟ್ಟು, ಬಳಿಕ ಸಮೀಪದಲ್ಲಿದ್ದ ಗ್ರಾಮಕ್ಕೆ ಭಿಕ್ಷಾರ್ಥವಾಗಿ ಬಂದು ಅಲ್ಲಿ ಪರಿಶುದ್ಧರಾದವರ ಮನೆಯಲ್ಲಿ ಭಿಕ್ಷಾರ್ಥವಾಗಿ ಸಂಚರಿಸುತ್ತ, ಮೊದಲದಿವಸ ತಾನು ಭಿಕ್ಷಾರ್ಥವಾಗಿ ಬಂದಿದ್ದಮನೆಗೆ ಮರುದಿವಸ ಬಂದು, ಅಲ್ಲಿ ಒಬ್ಬ ಪತಿವ್ರತೆಯು ಉಪಕರಣವನ್ನು ತೊಳೆಯುತ್ತಿರಲು, ಆಕೆಯನ್ನು ನೋಡಿ ‘ಭಿಕ್ಷಾಂ ದೇಹಿ’ ಎಂದು ಯಾಚಿಸಿದನು. ಆಗ ಆ ಪತಿವ್ರತೆಯು ನಿಲ್ಲು ಎಂದು ಆ ಬ್ರಾಹ್ಮಣನಿಗೆ ಹೇಳಿ ಭಿಕ್ಷವನ್ನು ತರುವದಕ್ಕೆ ಹೋದಳು. ಅಷ್ಟರಲ್ಲೇ ಆಕೆಯ ಪತಿಯು ಹಸಿವಿನಿಂದ ಪೀಡಿತನಾಗಿ ಮನೆಗೆ ಬರಲು, ತನ್ನ ಪತಿಯು ಕ್ಷುಧಾತುರನಾಗಿ ಬಂದದ್ದನ್ನು ನೋಡಿ, ಆ ಪತಿವ್ರತಾಸ್ತ್ರೀಯು ಭಿಕ್ಷಾರ್ಥವಾಗಿ ಬಂದ ಬ್ರಾಹ್ಮಣನು ನಿಂತಿದ್ದರೂ ನಿಂತಿರಲಿ ಎಂದು ಯೋಚಿಸಿಕೊಂಡು, ತನ್ನ ಪತಿಯ ಕಾಲನ್ನು ತೊಳೆದು ಪೀಠವನ್ನು ಹಾಕಿ ಸಂಧ್ಯಾವಂದನೆಗಾಗಿ ಉದಕವನ್ನು ತಂದುಕೊಟ್ಟು, ಬಳಿಕ ವಿನಯದಿಂದ ಮಧುರವಾಗಿಯೂ ರಸವತ್ತಾಗಿಯೂ ಇರುವ ಭಕ್ಷ್ಯಭೋಜ್ಯಗಳಿಂದ ಪತಿಗೆ ಭೋಜನವನ್ನು ಮಾಡಿಸಿ, ಆತನೇ ಪರದೈವವೆಂದು ಭಾವಿಸಿ ಆತನ ಚಿತ್ತಾನುಸಾರವಾಗಿ ತ್ರಿಕರಣದಿಂದಲೂ ಆತನ ಶುಶ್ರೂಷೆಯನ್ನು ಮಾಡುತ್ತ ಸರ್ವಪ್ರಕಾರದಿಂದಲೂ ಆತನಲ್ಲೇ ಭಕ್ತಿಯುಳ್ಳವಳಾಗಿದ್ದುಕೊಂಡು, ತನ್ನ ಪತಿಯು ಶುಶ್ರೂಷೆಯಾದಬಳಿಕ ಅತಿಥಿಗಳನ್ನೂ ತನ್ನ ಕುಟುಂಬಕ್ಕೆ ಸೇರಿದ ಅತ್ತೆಮಾವಂದಿರನ್ನೂ ಮಕ್ಕಳನ್ನೂ ಭೃತ್ಯರನ್ನೂ ಭೋಜನಮಾಡಿಸಿ, ಆ ಬಳಿಕ ತಾನು ತನ್ನಪತಿಯ ಉಚ್ಛಿಷ್ಟವನ್ನು ಭೋಜನಮಾಡತಕ್ಕವಳಾದ್ದರಿಂದ ಆ ಸಂಪ್ರದಾಯವನ್ನು ಮೀರದೆ ಭಿಕ್ಷಾರ್ಥವಾಗಿ ಬಂದಿದ್ದ ಆ ಬ್ರಾಹ್ಮಣನನ್ನು ಜ್ಞಾಪಿಸಿಕೊಂಡು ಲಜ್ಜಾಯುಕ್ತಳಾಗಿ ಭಿಕ್ಷಾನ್ನವನ್ನು ತೆಗೆದುಕೊಂಡು ಆತನು ನಿಂತಿದ್ದ ಸ್ಥಳಕ್ಕೆ ಬಂದಳು. ಅಲ್ಲಿದ್ದ ಆ ಕೌಶಿಕನು ಬಹಳವಾಗಿ ಕೋಪಗೊಂಡು ‘ಎಲೌ ಮಂಗಳಾಂಗಿಯೆ, ನನ್ನನ್ನು ಮತ್ತೊಂದುಕಡೆಗೂ ಹೋಗು ಎನ್ನದೆ, ಇಲ್ಲೇ ನಿಂತಿರು ಎಂದು ಯಾತಕ್ಕೋಸ್ಕರ ಇಷ್ಟುಹೊತ್ತು ತಡೆದೆ?’ ಎನಲು; ಆ ಪತಿವ್ರತೆಯು ಕ್ರೋಧಾವೇಶದಿಂದ ಅಗ್ನಿಯಂತೆ ಜ್ವಲಿಸುತ್ತಿರುವ ಆ ಬ್ರಾಹ್ಮಣನನ್ನು ನೋಡಿ ಆತನನ್ನು ಸಂತೈಸುತ್ತ, ‘ಎಲೈ ಬ್ರಾಹ್ಮಣನೆ, ನನಗೆ ಪತಿಯೇ ಪರದೈವವು; ಅಂಥ ಪತಿಯು ಹಸಿವಿನಿಂದ ಬಳಲಿ ಬಂದದ್ದರಿಂದ ಆತನ ಶುಶ್ರೂಷೆಯಲ್ಲಿ ನಾನು ನಿರತಳಾಗಿದ್ದೆನು. ಇದನ್ನು ನೀನು ಕ್ಷಮಿಸಬೇಕು’ ಎಂದಳು.

ಆ ಮಾತನ್ನು ಕೇಳಿ ಆ ಬ್ರಾಹ್ಮಣನು 'ಎಲೌ ಸ್ತ್ರೀಯೆ, ನಿನಗೆ ಪತಿಯೇ ದೊಡ್ಡವನೋ? ಬ್ರಾಹ್ಮಣರು ದೊಡ್ಡವರಲ್ಲವೋ? ಗೃಹಸ್ಥಧರ್ಮದಲ್ಲಿರತಕ್ಕ ನೀನು ಬ್ರಾಹ್ಮಣನಿಗೆ ಅವಮಾನವನ್ನು ಮಾಡಿದೆ. ಇಂದ್ರನೂ ಕೂಡ ಬ್ರಾಹ್ಮಣರಿಗೆ ಮರ್ಯಾದೆಯನ್ನು ಮಾಡುವನು ಎಂಬಲ್ಲಿ, ಮನುಷ್ಯರು ಎಷ್ಟುಮಾತ್ರದವರು? ಗರ್ವಿತಳಾದ ನೀನು ವೃದ್ಧರಾದ ನಮ್ಮ ಮಹಿಮೆಯನ್ನು ಕಾಣೆ. ಬ್ರಾಹ್ಮಣರು ಅಗ್ನಿಗೆ ಸಮಾನರಾದವರು. ಅವರು ಕೋಪಿಸಿಕೊಂಡರೆ ಲೋಕವನ್ನೇ ಸುಟ್ಟುಬಿಡುವರು' ಎನಲು, ಆ ಪತಿವ್ರತೆಯು 'ಎಲೈ ತಪೋಧನನೆ, ನಾನು ವೃಕ್ಷದ ಮೇಲಿದ್ದ ಬಕಪಕ್ಷಿಯೆಂದು ನೀನು ತಿಳಿಯಬೇಡ, ಕೋಪವನ್ನು ಬಿಡು. ಕ್ರೂರವಾದ ಈ ದೃಷ್ಟಿಯಿಂದ ನೀನು ನನ್ನನ್ನು ಏನು ಮಾಡಬಲ್ಲೆ? ದೇವತೆಗಳಿಗೆ ಸಮಾನರಾದ ಮಹಾನುಭಾವರಾದ ಬ್ರಾಹ್ಮಣರನ್ನು ನಾನೆಂದಿಗೂ ಅವಮಾನಮಾಡತಕ್ಕವಳಲ್ಲ; ನನ್ನ ಅಪರಾಧವನ್ನು ಕ್ಷಮಿಸು. ಜ್ಞಾನಿಗಳಾದ ಬ್ರಾಹ್ಮಣರ ತೇಜಸ್ಸನ್ನೂ ಪ್ರಭಾವವನ್ನೂ ನಾನು ಬಲ್ಲೆನು. ಅಗಸ್ತ್ಯಮಹರ್ಷಿಯ ಕ್ರೋಧದಿಂದ ಸಮುದ್ರೋದಕವು ಉಪ್ಪಾಗಿ ಪಾನಮಾಡುವದಕ್ಕೆ ಅನರ್ಹವಾಯಿತು. ಜ್ಞಾನಿಗಳಾದ ತಪೋವೃದ್ಧರಾದ ಋಷಿಗಳ ಕ್ರೋಧಾಗ್ನಿಯು ಈಗಲೂ ದಂಡಕಾರಣ್ಯದಲ್ಲಿ ಶಾಂತವಾಗದೆ ಇರುವದು. ಬ್ರಾಹ್ಮಣರಿಗೆ ಅವಮಾನ ಮಾಡಿದ್ದರಿಂದ ದುರಾತ್ಮನಾದ ವಾತಾಪಿಯು ಅಗಸ್ತ್ಯಋಷಿಯ ದೆಸೆಯಿಂದ ನಷ್ಟನಾಗಿ ಹೋದನು. ಬ್ರಾಹ್ಮಣರ ಮಹಿಮೆಯು ಅಧಿಕವಾದದ್ದು ಎಂದು ಎಲ್ಲರೂ ಕೇಳಿರುವರು. ಮತ್ತು ಮಹಾತ್ಮರಾದ ಬ್ರಾಹ್ಮಣರಲ್ಲಿ ಕ್ರೋಧವೂ ಪ್ರಸಾದವೂ ಸಹ ವಿಶೇಷವಾಗಿರುವವು. ಇದನ್ನು ನಾನು ಚೆನ್ನಾಗಿ ಬಲ್ಲೆನು. ಎಲೈ ಬ್ರಾಹ್ಮಣನೆ, ಭಿಕ್ಷಾರ್ಥವಾಗಿ ಬಂದ ನಿನ್ನನ್ನು ಅತಿಕ್ರಮಿಸಿ ಪತಿಶುಶ್ರೂಷೆಯೇ ಸತಿಯರಿಗೆ ಮುಖ್ಯ ಧರ್ಮವಾದದ್ದೆಂದು ತಿಳಿದು ಆ ಕಾರ್ಯದಲ್ಲಿ ಆಸಕ್ತಳಾಗಿದ್ದೆನು. ಇದನ್ನು ನೀನು ಕ್ಷಮಿಸು. ಸಕಲದೇವತೆಗಳಲ್ಲಿಯೂ ಪತಿಯೇ ಪರದೇವತೆಯೆಂದು ತಿಳಿದು ಆತನ ಶುಶ್ರೂಷೆಯಲ್ಲಿ ನಾನು ಆಸಕ್ತಳಾದೆನು. ಪತಿಶುಶ್ರೂಷೆಯಿಂದ ಎಂಥಾ ಫಲವುಂಟಾಗುವದೋ ನೀನೇ ನೋಡು. ನೀನು ಬಕಪಕ್ಷಿಯನ್ನು ಕ್ರೋಧದಿಂದ ಸಂಹರಿಸಿದ್ದು ನನಗೆ ಗೊತ್ತಾಯಿತಲ್ಲವೆ? ಎಲೈ ಬ್ರಾಹ್ಮಣನೆ, ಮನುಷ್ಯರಿಗೆ ಕ್ರೋಧವೆಂಬುವದು ಶರೀರದಲ್ಲಿರತಕ್ಕ ಶತ್ರುವೆಂದು ತಿಳಿ. ಯಾರು ಕ್ರೋಧವನ್ನೂ ಮೋಹವನ್ನೂ ಬಿಟ್ಟಿರುವರೋ ಅವರನ್ನೇ ದೇವತೆಗಳು ಬ್ರಾಹ್ಮಣರೆಂದು ಹೇಳುವರು. ಯಾರು ಸತ್ಯವಾದಿಗಳಾಗಿ ಗುರುಶುಶ್ರೂಷೆಯನ್ನು ಮಾಡುವರೋ ಮತ್ತು ತಮ್ಮನ್ನು ಮತ್ತೊಬ್ಬರು ಹಿಂಸಿಸಿದರೂ ತಾವು ಮತ್ತೊಬ್ಬರನ್ನು ಹಿಂಸಿಸದೆ ಇರುವರೋ ಅವರನ್ನು ಬ್ರಾಹ್ಮಣರೆಂದು ದೇವತೆಗಳು ಹೇಳುವರು. ಯಾರು ಜಿತೇಂದ್ರಿಯರಾಗಿಯೂ ಧರ್ಮಪರರಾಗಿಯೂ ವೇದಾಧ್ಯಯನದಲ್ಲಿ ಆಸಕ್ತರಾಗಿಯೂ ಶುಚಿರ್ಭೂತರಾಗಿಯೂ ಇದ್ದುಕೊಂಡು ಕಾಮಕ್ರೋಧಗಳನ್ನು ಜಯಿಸುವರೋ ಅವರು ಬ್ರಾಹ್ಮಣರೆಂದು ದೇವತೆಗಳು ಹೇಳುವರು. ಯಾರು ಎಲ್ಲರಲ್ಲೂ ಸಮದೃಷ್ಟಿಯುಳ್ಳವರಾಗಿ ಸಕಲಧರ್ಮಗಳನ್ನೂ ಆಚರಿಸುವರೋ ಅವರನ್ನು ದೇವತೆಗಳು ಬ್ರಾಹ್ಮಣರೆಂದು ಹೇಳುವರು. ಯಾರು ಯಜನ, ಯಾಜನ, ಅಧ್ಯಯನ, ಅಧ್ಯಾಪನ, ದಾನ, ಪ್ರತಿಗ್ರಹ ಎಂಬ ಷಟ್ಕರ್ಮಗಳಲ್ಲಿಯೂ ಆಸಕ್ತರಾಗಿರುವರೋ ಅವರನ್ನು ದೇವತೆಗಳು ಬ್ರಾಹ್ಮಣರೆಂದು ಹೇಳುವರು. ಯಾರು ಬ್ರಹ್ಮಚರ್ಯವ್ರತವನ್ನು ಸ್ವೀಕರಿಸಿ ಅಪ್ರಮತ್ತರಾಗಿ ವೇದಾಧ್ಯಯನವನ್ನು ಮಾಡುವರೋ ಅವರನ್ನು ದೇವತೆಗಳು ಬ್ರಾಹ್ಮಣರೆಂದು ಹೇಳುವರು. ಯಾವನು ಸುಳ್ಳಾಡದೆ ಸತ್ಯವಾದಿಯೆನಿಸಿಕೊಂಡು ಬ್ರಾಹ್ಮಣರ ಕುಶಲವನ್ನೇ ಯಾವಾಗಲೂ ಕೇಳುತ್ತಿರುವನೋ ಆತನನ್ನೂ ಬ್ರಾಹ್ಮಣರೆಂದು ಹೇಳುವರು. ಎಲೈ ಬ್ರಾಹ್ಮಣನೆ, ಬ್ರಾಹ್ಮಣರಿಗೆ ವೇದಾಧ್ಯಯನವೂ ಇಂದ್ರಿಯನಿಗ್ರಹವೂ ಋಜುಸ್ವಭಾವವೂ ಸತ್ಯವೂ ಉತ್ತಮವಾದ ಶಾಶ್ವತವಾದ ಧರ್ಮಗಳೆಂದು ಬಲ್ಲವರು ಹೇಳುವರು. ಶಾಶ್ವತವಾದ ಈ ಧರ್ಮಗಳನ್ನು ತಿಳಿಯುವದು ಅಶಕ್ಯವಾದದ್ದು. ಆ ಎಲ್ಲಾ ಧರ್ಮಗಳೂ ಸತ್ಯವೊಂದರಲ್ಲಿ ನಿಂತಿರುವವು. ಧರ್ಮವೆಂಬುವದು ಶ್ರುತಿಪ್ರಮಾಣಸಿದ್ಧವಾಗಿರುವದು ಎಂದು ದೊಡ್ಡವರು ಹೇಳುವರು. ಧರ್ಮಸೂಕ್ಷ್ಮವು ಅನೇಕಪ್ರಕಾರವಾಗಿರುವದು. ಎಲೈ ಬ್ರಾಹ್ಮಣನೆ, ನೀನು ವೇದಾಧ್ಯಯನನಿಷ್ಠನಾಗಿ ಶುಚಿರ್ಭೂತನಾಗಿ ಧರ್ಮಜ್ಞನಾಗಿದ್ದರೂ ಧರ್ಮಸೂಕ್ಷ್ಮವನ್ನೇ ತಿಳಿಯದವನಾಗಿರುವಂತೆ ನನಗೆ ತೋರುವೆ. ಧರ್ಮಸೂಕ್ಷ್ಮವು ನಿನಗೆ ತಿಳಿಯದೆ ಇರುವಪಕ್ಷದಲ್ಲಿ ಮಿಥಿಲಾನಗರದಲ್ಲಿ ಮಾತಾಪಿತೃಗಳ ಶುಶ್ರೂಷೆಯನ್ನು ಮಾಡಿಕೊಂಡು ಸತ್ಯವಾದಿಯಾಗಿ ಜಿತೇಂದ್ರಿಯ

ನಾಗಿರುವ ಧರ್ಮವ್ಯಾಧನೆಂಬ ಒಬ್ಬ ವ್ಯಾಧನು ವಾಸಮಾಡುತ್ತಿರುವನು. ಆತನ ಬಳಿಗೆ ನೀನು ಹೋಗಿ ಆತನ ದೆಸೆಯಿಂದ ಧರ್ಮಸೂಕ್ಷ್ಮಗಳನ್ನು ನೀನು ತಿಳಿದುಕೊ. ಎಲೈ ಬ್ರಾಹ್ಮಣನೆ, ಧರ್ಮಜ್ಞರಾದವರಿಗೆ ಸ್ತ್ರೀಯರು ಅವಧ್ಯರಾದ್ದರಿಂದ, ನಾನು ಅಧಿಕವಾಗಿ ಏನು ಆಡಿದ್ದರೂ ಅದನ್ನೆಲ್ಲಾ ನೀನು ಕ್ಷಮಿಸಬೇಕು' ಎಂದು ನುಡಿದಳು. ಬಳಿಕ ಆ ಬ್ರಾಹ್ಮಣನು 'ಎಲೌ ಪತಿವ್ರತಾಶಿರೋಮಣಿಯೆ, ನಿನ್ನ ಮಾತುಗಳನ್ನು ಕೇಳಿ ನನಗೆ ತುಂಬಾ ಸಂತೋಷವುಂಟಾಯಿತು ಮತ್ತು ನನ್ನ ಕೋಪವೂ ಶಾಂತವಾಯಿತು. ನನಗೆ ಶ್ರೇಯಸ್ಸಾಗುವದಕ್ಕೋಸ್ಕರಲೇ ನೀನು ಇಷ್ಟು ಮಾತುಗಳನ್ನು ಆಡಿದೆಯೆಂದು ನಾನು ತಿಳಿದಿರುವೆನು. ನಿನಗೆ ಮಂಗಳವಾಗಲಿ. ನೀನು ಹೇಳಿದಂತೆ ಧರ್ಮಸೂಕ್ಷ್ಮವನ್ನು ತಿಳಿದುಕೊಳ್ಳುವದಕ್ಕೆ ಪ್ರಯತ್ನವನ್ನು ಮಾಡುವೆನು' ಎಂದು ನುಡಿದು, ಅಲ್ಲಿಂದ ಹೊರಟು ಆ ಕೌಶಿಕನು ತನ್ನನ್ನು ತಾನೇ ನಿಂದಿಸಿಕೊಂಡು ತನ್ನ ವಾಸಸ್ಥಾನಕ್ಕೆ ಹೊರಟುಹೋದನು" ಎಂದು ಮಾರ್ಕಂಡೇಯನು ಧರ್ಮರಾಯನಿಗೆ ಹೇಳಿದನು.

## ೨೦೬ನೇ ಅಧ್ಯಾಯ.—ಮಾರ್ಕಂಡೇಯಪರ್ವ—(ಧರ್ಮವ್ಯಾಧನು ಕೌಶಿಕನಿಗೆ ಧರ್ಮೋಪದೇಶದ ಕಥೆ ಹೇಳಿದ್ದು.)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಮಾರ್ಕಂಡೇಯನು ಧರ್ಮರಾಯನನ್ನು ಕುರಿತು "ಎಲೈ ಧರ್ಮರಾಯನೆ, ಬಳಿಕ ಆ ಕೌಶಿಕನು ಆ ಪತಿವ್ರತೆಯು ಹೇಳಿದ್ದನ್ನು ಆಲೋಚಿಸಿ, ಅಪರಾಧಮಾಡಿದವನಂತೆ ತನ್ನನ್ನು ತಾನೇ ನಿಂದಿಸಿಕೊಂಡು, ಧರ್ಮಸೂಕ್ಷ್ಮವನ್ನು ತಿಳಿಯಬೇಕಾದರೆ ಆಸ್ತಿಕ್ಯಬುದ್ಧಿ ಇರಬೇಕು ಎಂದು ನಿಶ್ಚಯಿಸಿ, ಆ ಪತಿವ್ರತಾಸ್ತ್ರೀಯು ಆಡಿದ ಶುಭವಾದ ಧರ್ಮಿಷ್ಠವಾದ ವಚನದಲ್ಲಿ ವಿಶ್ವಾಸವುಳ್ಳವನಾಗಿ, ಅಧಿಕವಾದ ಕುತೂಹಲದಿಂದ ಪುಣ್ಯವಂತನೂ ಧರ್ಮಜ್ಞನೂ ಆದ ಧರ್ಮವ್ಯಾಧನು ವಾಸಮಾಡತಕ್ಕ ಮಿಥಿಲಾನಗರಕ್ಕೆ ಪ್ರಯಾಣಮಾಡಿ, ಮಾರ್ಗದಲ್ಲಿ ಅನೇಕ ಅರಣ್ಯಗಳನ್ನೂ ಗ್ರಾಮಗಳನ್ನೂ ಅತಿಕ್ರಮಿಸಿ; ಧರ್ಮಿಷ್ಠರಿಂದ ಪರಿಪೂರ್ಣವಾಗಿಯೂ ಯಜ್ಞೋತ್ಸವಗಳಿಂದ ಮಂಗಳಕರವಾಗಿಯೂ ಪುರದ್ವಾರಗಳಿಂದಲೂ ಉನ್ನತವಾದ ಉಪ್ಪರಿಗೆಗಳಿಂದಲೂ ಮಹತ್ತಾದ ಕೋಟೆಯಿಂದಲೂ ಪುಣ್ಯತಮವಾದ ದೇವಾಲಯಗಳಿಂದಲೂ ಅನೇಕವಾದ ಅಂಗಡಿಬೀದಿಗಳಿಂದಲೂ ವಿಶಾಲವಾದ ರಾಜಮಾರ್ಗಗಳಿಂದಲೂ ಆನೆ ಕುದುರೆ ರಥ ಕಾಲಾಳುಗಳಿಂದಲೂ ನಿಬಿಡವಾಗಿ, ಹರ್ಷಭರಿತರಾಗಿಯೂ ಐಶ್ವರ್ಯವಂತರಾಗಿಯೂ ಇರುವ ಜನಗಳ ನಿತ್ಯೋತ್ಸವಗಳಿಂದ ರಮಣೀಯವಾಗಿರುವ ಮಿಥಿಲಾಪಟ್ಟಣವನ್ನು ಸೇರಿ; ಅಲ್ಲಿ ಧರ್ಮವ್ಯಾಧನನ್ನು ವಿಚಾರಿಸುತ್ತ, ಬ್ರಾಹ್ಮಣರ ಮುಖದಿಂದ ಆತನು ಇರುವ ಸ್ಥಳವನ್ನು ತಿಳಿದ ಬಳಿಕ ಅಲ್ಲಿಗೆ ಹೋಗಿ, ಪಶುಗಳನ್ನು ಕೊಲ್ಲತಕ್ಕ ಸ್ಥಳದಲ್ಲಿ ಮೃಗ ಮಹಿಷ ಮೊದಲಾದವುಗಳ ಮಾಂಸವನ್ನು ಕ್ರಯಮಾಡತಕ್ಕ ಆ ಧರ್ಮವ್ಯಾಧನನ್ನು ನೋಡಿ, ಅಲ್ಲಿ ಮಾಂಸವಿಕ್ರಯವನ್ನು ಮಾಡತಕ್ಕ ಜನರ ಗದ್ದಲದಿಂದ ತಾನು ಏಕಾಂತವಾದ ಒಂದು ಸ್ಥಳದಲ್ಲಿ ನಿಂತುಕೊಂಡನು. ಆಗ ಧರ್ಮವ್ಯಾಧನು ತನ್ನ ನಿಮಿತ್ತವಾಗಿ ಆ ಬ್ರಾಹ್ಮಣನು ಬಂದದ್ದನ್ನು ತಿಳಿದು, ತಾನೇ ಜಾಗ್ರತೆಯಾಗಿ ಆ ಬ್ರಾಹ್ಮಣನಿದ್ದ ಸ್ಥಳಕ್ಕೆ ಬಂದು ಆತನನ್ನು ನೋಡಿ, 'ಎಲೈ ಪೂಜ್ಯನೆ, ನಿನಗೆ ನಾನು ವಂದನೆಯನ್ನು ಮಾಡುವೆನು; ನಿನಗೆ ಸುಖಾಗಮನವೆ? ನಾನು ವ್ಯಾಧನು. ನನ್ನಿಂದ ಆಗತಕ್ಕ ಕಾರ್ಯವೇನೋ ಆಜ್ಞಾಪಿಸು. ಆ ಪತಿವ್ರತಾಸ್ತ್ರೀಯು ಮಿಥಿಲಾನಗರಕ್ಕೆ ಹೋಗೆಂದು ನಿನಗೆ ಹೇಳಿದ ವೃತ್ತಾಂತವನ್ನೂ ನೀನು ಯಾವ ಕಾರ್ಯಕ್ಕಾಗಿ ಇಲ್ಲಿಗೆ ಬಂದಿರುವೆಯೋ ಅದನ್ನೂ ಸಹ ನಾನು ಬಲ್ಲೆನು' ಎಂದನು. ಅದನ್ನು ಕೇಳಿ, ಆ ಕೌಶಿಕನು ಈತನಾಡಿದ ಮಾತು ಎಲ್ಲಾದಕ್ಕಿಂತಲೂ ಆಶ್ಚರ್ಯಕರವಾಗಿರುವದು ಎಂದು ಚಿಂತಿಸುತ್ತಿರಲು, ವ್ಯಾಧನು 'ಎಲೈ ಬ್ರಾಹ್ಮಣನೆ, ನಾನು ವಾಸಮಾಡತಕ್ಕ ಮನೆಯು ನಿಮ್ಮಂಥವರು ಬರುವದಕ್ಕೆ ಯೋಗ್ಯವಾದದ್ದಲ್ಲ. ನಿನಗೆ ಅಪೇಕ್ಷೆಯಿದ್ದರೆ ನನ್ನ ಮನೆಗೆ ನೀನು ಬರಬಹುದು' ಎಂದನು. ಆಗ ಆ ಬ್ರಾಹ್ಮಣನು ಹಾಗೆಯೇ ಆಗಲೆಂದು ಸಂತೋಷದಿಂದ ಆತನ ಮನೆಗೆ ಹೊರಡಲು, ಆ ಧರ್ಮವ್ಯಾಧನು ಆ ಬ್ರಾಹ್ಮಣನನ್ನು ಮುಂದೆ ಮಾಡಿಕೊಂಡು ತನ್ನ ಮನೆಗೆ ಬಂದು ಆತನನ್ನು ಪೀಠದಮೇಲೆ ಕುಳ್ಳಿರಿಸಿ ಅರ್ಘ್ಯಪಾದ್ಯಾಚಮನೀಯಗಳಿಂದ ಸತ್ಕರಿ

ಸಿದನು. ಅವನ್ನು ಸ್ವೀಕರಿಸಿ ಕೌಶಿಕನು ಸುಖವಾಗಿ ಕೂತುಕೊಂಡು ಧರ್ಮವ್ಯಾಧನನ್ನು ಕುರಿತು, ‘ಎಲೈ ವ್ಯಾಧನೆ, ನಿನಗೆ ಈ ಕೃತ್ಯವು ಸರಿಯಾದದ್ದಲ್ಲವೆಂದು ನನಗೆ ತೋರುವದು. ನೀನು ಈ ಘೋರಕೃತ್ಯವನ್ನು ಮಾಡುವದನ್ನು ನೋಡಿ ನನಗೆ ಅಧಿಕವಾಗಿ ಸಂತಾಪವುಂಟಾಗಿರುವದು’ ಎನಲು, ಆ ವ್ಯಾಧನು ‘ಎಲೈ ಕೌಶಿಕನೆ, ನಾನು ಮಾಡತಕ್ಕ ಮಾಂಸವಿಕ್ರಯವು ನನ್ನ ವಂಶಪಾರಂಪರ್ಯವಾಗಿ ಬಂದಿರುವದು. ಇದು ನನಗೆ ಸ್ವಧರ್ಮವಾದ್ದರಿಂದ ನನ್ನಲ್ಲಿ ನೀನು ಆಗ್ರಹಮಾಡಬೇಡ. ಬ್ರಹ್ಮನಿಂದ ಕ್ಲೃಪ್ತವಾದ ಸ್ವಧರ್ಮವನ್ನು ಆಚರಿಸುತ್ತ, ನಾನು ವೃದ್ಧರಾದ ಮಾತಾಪಿತೃಗಳನ್ನು ಪ್ರಯತ್ನದಿಂದ ಶುಶ್ರೂಷೆಮಾಡಿಕೊಂಡು, ಸತ್ಯವನ್ನೇ ನುಡಿಯುತ್ತ, ಯಾವ ವಿಷಯದಲ್ಲೂ ಅಸೂಯೆಪಡದೆ, ದೇವತೆಗಳಿಗೂ ಅತಿಥಿಗಳಿಗೂ ಭೃತ್ಯರಿಗೂ ನನ್ನ ಶಕ್ತಿಯಿರುವಷ್ಟು ಕೊಟ್ಟು ಉಳಿವದ್ದರಿಂದ ನಾನು ಜೀವಿಸುವೆನು. ಪರರ ದೋಷವನ್ನು ಆಡದೆ, ಮತ್ತೊಬ್ಬರಲ್ಲಿ ದೋಷಾರೋಪಣೆಯನ್ನೂ ಮಾಡದೆ, ನಾನು ಮಾಡುವ ಕಾರ್ಯವು ಜನ್ಮಾಂತರದ ಕರ್ಮಶೇಷವೆಂದು ತಿಳಿದುಕೊಂಡಿರುವೆನು. ಎಲೈ ಕೌಶಿಕನೆ, ಜನ್ಮಾಂತರದಲ್ಲಿ ಮಾಡಿದ ಕರ್ಮವು ಈ ಜನ್ಮದಲ್ಲಿಯೂ ಪ್ರಾಣಿಯನ್ನು ಅನುಸರಿಸಿರುವದು. ಈ ಲೋಕದಲ್ಲಿ ಜನರಿಗೆ ಕೃಷಿ, ಗೋರಕ್ಷಣೆ, ವಾಣಿಜ್ಯಗಳು ಜೀವನವಾಗಿರುವವು. ದಂಡನೀತಿಯಿಂದಲೂ ವೇದವಿದ್ಯೆಯಿಂದಲೂ ಲೋಕಸ್ಥಿತಿಯು ನಡೆಯುವದು. ಶೂದ್ರರಿಗೆ ಬ್ರಾಹ್ಮಣರ ಶುಶ್ರೂಷೆಯೂ, ವೈಶ್ಯರಿಗೆ ಕೃಷಿಯೂ, ಕ್ಷತ್ರಿಯರಿಗೆ ಯುದ್ಧವೂ, ಬ್ರಾಹ್ಮಣರಿಗೆ ವೇದಾಧ್ಯಯನವೂ ತಪಸ್ಸೂ ಶಾಸ್ತ್ರವಿಹಿತವಾದವುಗಳು. ರಾಜನಾದವನು ಸ್ವಧರ್ಮಪರನಾಗಿ ಪ್ರಜೆಗಳನ್ನು ಪಾಲಿಸುತ್ತ, ಸ್ವಧರ್ಮವನ್ನು ಬಿಟ್ಟವರನ್ನು ನಿಗ್ರಹಿಸಿ ಸ್ವಧರ್ಮನಿರತರನ್ನಾಗಿ ಮಾಡುವನು; ಆದ್ದರಿಂದ ಸಕಲರೂ ರಾಜನಿಗೆ ಭಯಪಡಬೇಕು. ರಾಜರು ಬಾಣಗಳಿಂದ ಮೃಗಗಳನ್ನು ನಿಗ್ರಹಿಸುವಂತೆ ಸ್ವಧರ್ಮವನ್ನು ಬಿಟ್ಟವರನ್ನು ನಿಗ್ರಹಿಸುವರು. ಎಲೈ ಕೌಶಿಕನೆ, ಈ ಜನಕರಾಯನ ರಾಜ್ಯದಲ್ಲಿ ನಾಲ್ಕು ವರ್ಣದವರೂ ತಮ್ಮತಮ್ಮ ವರ್ಣಾಶ್ರಮಧರ್ಮಗಳನ್ನು ಆಚರಿಸುತ್ತಿರುವರು. ಆ ಜನಕರಾಯನು, ತನ್ನ ಮಗನಾದರೂ, ದುರ್ಮಾರ್ಗನಾಗಿದ್ದರೆ ಆತನನ್ನು ಶಿಕ್ಷಿಸಿಬಿಡುವನು. ಮತ್ತು ಧರ್ಮಿಷ್ಠರನ್ನು ಪೋಷಿಸುವನು. ಆತನು ಚಾರರಮುಖದಿಂದ ಸಕಲವನ್ನೂ ತಿಳಿಯುತ್ತ ಧರ್ಮದಿಂದ ರಾಜ್ಯವನ್ನಾಳುತ್ತಿರುವನು. ಕ್ಷತ್ರಿಯರಿಗೆ ಐಶ್ವರ್ಯವೂ ರಾಜ್ಯವೂ ದಂಡನೀತಿಯೂ ಮುಖ್ಯವಾದವುಗಳು. ರಾಜರು ಸ್ವಧರ್ಮದಿಂದ ಅಧಿಕವಾದ ಐಶ್ವರ್ಯವನ್ನು ಅಪೇಕ್ಷಿಸಿ ನಾಲ್ಕು ವರ್ಣದವರನ್ನೂ ಸಂರಕ್ಷಿಸುವರು. ಎಲೈ ಕೌಶಿಕನೆ, ಮತ್ತೊಬ್ಬರು ಸಂಹರಿಸಿದ ಹಂದಿಯನ್ನೂ ಕೋಣವನ್ನೂ ತಂದು ಅದರ ಮಾಂಸವನ್ನು ನಾನು ನಿತ್ಯವೂ ವಿಕ್ರಯಮಾಡುವೆನೇ ಹೊರತು ನಾನು ಅವುಗಳನ್ನು ಸಂಹರಿಸತಕ್ಕವನಲ್ಲ. ಮತ್ತು ನಾನೂ ಮಾಂಸವನ್ನು ಭಕ್ಷಿಸತಕ್ಕವನಲ್ಲ. ಪತ್ನಿಯಲ್ಲಿ ಋತುಕಾಲದಲ್ಲಿ ವಿಹರಿಸುತ್ತ, ಹಗಲು ಉಪವಾಸಪರನಾಗಿ ರಾತ್ರಿಕಾಲದಲ್ಲಿ ಭೋಜನಮಾಡತಕ್ಕವನು. ದುಶ್ಶೀಲನಾದ ಪುರುಷನು ದೈವಯೋಗದಿಂದ ಸುಶೀಲನಾಗುವನು. ಪ್ರಾಣಿಹಿಂಸಾಪರನಾದವನೂ ಸಹ ದೈವಾನುಗ್ರಹದಿಂದ ಧರ್ಮಿಷ್ಠನಾಗುವನು. ರಾಜರು ಸ್ವೇಚ್ಛಾನುಸಾರವಾಗಿ ನಡೆದದ್ದೇ ಆದರೆ, ಅವರಿಗೆ ಧರ್ಮವು ತಪ್ಪಿ ಅಧರ್ಮವು ಪ್ರಾಪ್ತವಾಗುವದು. ಅದರಿಂದ ಪ್ರಜೆಗಳು ದಿಕ್ಕುಕೆಟ್ಟುಹೋಗುವರು. ರಾಜರು ಅಧರ್ಮಪರರಾದರೆ ಆ ರಾಜ್ಯದಲ್ಲಿ ಯಾವಾಗಲೂ ಭಯಪಡತಕ್ಕ ಕುಳ್ಳರೂ ಕಾಲಿಲ್ಲದವರೂ ದಪ್ಪವಾದ ತಲೆಯುಳ್ಳವರೂ ನಪುಂಸಕರೂ ಕಿವುಡರೂ ಕುರುಡರೂ ಇರುಳುಗಣ್ಣರೂ ಸಹ ಹುಟ್ಟುವರು. ಮತ್ತು ಆ ರಾಜ್ಯದಲ್ಲಿ ಪ್ರಜೆಗಳಿಗೆ ಸಂತಾನವೂ ಕಡಮೆಯಾಗುವದು. ಈ ಜನಕರಾಯನು ಸ್ವಧರ್ಮನಿರತನಾಗಿ ಪ್ರಜೆಗಳಲ್ಲಿ ಅನುಗ್ರಹವನ್ನಿಟ್ಟು ಧರ್ಮದಿಂದ ರಾಜ್ಯವನ್ನು ಪಾಲಿಸುವನು. ಎಲೈ ಕೌಶಿಕನೆ, ನನ್ನನ್ನು ಯಾರು ಸ್ತುತಿಸುವರೋ ಯಾರು ನಿಂದಿಸುವರೋ ಅವರೆಲ್ಲರನ್ನೂ ನಾನು ಸಮಾನವಾಗಿ ಕಂಡುಕೊಂಡು ಸತ್ಕಾರ್ಯಗಳಿಂದ ಸಂತೋಷಪಡಿಸತಕ್ಕವನು. ಸ್ವಧರ್ಮದಿಂದ ಸೈನ್ಯಗಳನ್ನು ಇಟ್ಟುಕೊಂಡು ರಾಜ್ಯವನ್ನು ಪರಿಪಾಲಿಸತಕ್ಕ ರಾಜರು ಜೀವಿಸುವರೇ ಹೊರತು, ಅಧರ್ಮದಿಂದ ನಾಡೆಬ್ಬಿಸಿಕೊಂಡು ಪರರಿಗೆ ಬಾಧೆಯನ್ನುಂಟುಮಾಡತಕ್ಕವರು ಜೀವಿಸಬಲ್ಲರೆ? ಲೋಕದಲ್ಲಿ ಪುರುಷನಿಗೆ ಶಕ್ತ್ಯನುಸಾರವಾಗಿ ಅನ್ನದಾನಮಾಡುವದೂ, ಕ್ಷಮೆಯನ್ನು ತಾಳುವದೂ, ಯಾವಾಗಲೂ ಧರ್ಮಪರನಾಗಿರುವದೂ, ಪ್ರಾಣಿಸಾಮಾನ್ಯಕ್ಕೆ ತಕ್ಕಮಟ್ಟಿಗೆ ಸತ್ಕಾರಮಾಡುವದೂ, ಗುಣಗಳಾಗಿರುವವು. ಯಾರೂ ಸುಳ್ಳನ್ನು ಆಡಬಾ

ದು; ಮತ್ತೊಬ್ಬನ ಪ್ರೇರಣೆಯಿಲ್ಲದೆ ಎಲ್ಲರಿಗೂ ಪ್ರಿಯವಾದ ಕಾರ್ಯಗಳನ್ನು ಯಾವಾಗಲೂ ಮಾಡುತ್ತಿರ ಬೇಕು. ಕಾಮದಿಂದಲೇ ಆಗಲಿ ದ್ವೇಷದಿಂದಲೇ ಆಗಲಿ ಧರ್ಮವನ್ನು ಬಿಡಬಾರದು. ತನಗೆ ಪ್ರಿಯವಾದರೆ ಅಧಿಕವಾಗಿ ಸಂತೋಷಪಡುತ್ತ ಮೆರೆಯಬಾರದು. ಅಪ್ರಿಯವಾದಾಗ ಅಧಿಕವಾಗಿ ವ್ಯಸನಪಡಲೂ ಬಾರದು. ಇದ್ದ ದ್ರವ್ಯವು ನಷ್ಟವಾಗಲು, ಅಜ್ಞಾನವನ್ನು ಹೊಂದಿ ಧರ್ಮವನ್ನು ಬಿಡಬಾರದು. ತನಗೆ ಕೆಟ್ಟದ್ದಾದರೂ ಮತ್ತೊಬ್ಬರಿಗೆ ತಾನು ಕೆಟ್ಟದ್ದನ್ನು ಮಾಡಬಾರದು. ಯಾವಾಗಲೂ ತನಗೆ ಒಳ್ಳೇದಾಗತಕ್ಕ ಕಾರ್ಯವನ್ನೇ ಮಾಡುತ್ತಿರಬೇಕು. ಯಾವನು ಮತ್ತೊಬ್ಬರಿಗೆ ಕೇಡನ್ನು ಬಯಸುವನೋ ಅವನು ತನ್ನ ಪಾಪದಿಂದಲೇ ನಷ್ಟನಾಗಿ ಹೋಗುವನು. ಅಂಥ ದುರಾತ್ಮನು ಅಧಮಾಧಮನಾದವನು. ಧರ್ಮವೇ ಇಲ್ಲವೆಂದು ಯಾರು ಸಜ್ಜನರನ್ನು ಅಪಹಾಸಮಾಡುವರೋ ಅವರು ನಾಸ್ತಿಕರಾಗಿ ನಾಶವನ್ನು ಹೊಂದುವರು. ಈ ವಿಷಯದಲ್ಲಿ ಸಂಶಯವಿಲ್ಲವು. ಲೋಕದಲ್ಲಿ ಪಾಪಿಷ್ಠನಾದವನು ಗಾಳಿತುಂಬಿದ ತಿದಿಯಂತೆ ಬಹುಜಾಗ್ರತೆಯಾಗಿ ಪುಷ್ಟನಾಗಿ ಸಂತೋಷಪಡುವನು. ಮೂಢರಾಗಿ ಅಹಂಕಾರಿಗಳಾಗಿರತಕ್ಕವರು ತಾವು ಏನುಮಾಡಿದರೂ ಅದೆಲ್ಲವೂ ನಿಷ್ಫಲವಾಗಿ ಹೋಗುವದು. ಅಂಥವರು ಯಾವಾಗಲೂ ತಮ್ಮ ಮೂಢಸ್ವರೂಪವನ್ನೇ ಪ್ರಕಟಮಾಡಿಕೊಳ್ಳುವರು. ಅಂಥ ಮೂರ್ಖರು ಆತ್ಮಪ್ರಶಂಸೆಯಿಂದ ಲೋಕದಲ್ಲಿ ಪ್ರಕಾಶಿಸದಿರುವರು. ವಿದ್ವಾಂಸರಾದವರು ಮಲಿನದೇಹರಾಗಿದ್ದರೂ ಲೋಕದಲ್ಲಿ ಪ್ರಕಾಶಿಸುವರು. ಪುರುಷನಾದವನು ಪರನಿಂದೆಯನ್ನು ಮಾಡದೆಯೂ ಆತ್ಮಪ್ರಶಂಸೆಯನ್ನೂ ಮಾಡಿಕೊಳ್ಳದೆಯೂ ಸುಗುಣವಂತನಾಗಿದ್ದರೆ, ಅಂಥವನು ಲೋಕದಲ್ಲಿ ವಿಶೇಷವಾಗಿ ಪ್ರಕಾಶಕ್ಕೆ ಬರುವದಿಲ್ಲ. ಯಾವನು ತಿಳಿಯದೆ ಪಾಪಕರ್ಮವನ್ನು ಮಾಡಿ ಬಳಿಕ ಬಹಳವಾಗಿ ಸಂತಾಪಪಟ್ಟು ಆ ಪಾಪವನ್ನು ಪರಿಹರಿಸಿಕೊಂಡು ಪುನಃ ಇಂಥಾ ಪಾಪವನ್ನು ಮಾಡಬಾರದೆಂದು ನಿಶ್ಚಯಿಸಿಕೊಳ್ಳುವನೋ ಅಂಥವನಿಗೆ ಪಾಪಸಂಘಟನೆಯಾಗಲಾರದು. ಮನುಷ್ಯನು ಯಾವ ಸತ್ಕರ್ಮದಿಂದ ಪಾಪವನ್ನು ಪರಿಹರಿಸಿಕೊಳ್ಳುವನೋ ಆ ಸತ್ಕರ್ಮದಿಂದಲೇ ಧರ್ಮವನ್ನೂ ಪಡೆಯುವನೆಂದು ಶ್ರುತಿಯು ಹೇಳುವದು. ಎಲೈ ಕೌಶಿಕನೆ, ಜನ್ಮಾಂತರದಲ್ಲಿ ತಾನು ಮಾಡಿದ ಪಾಪಗಳನ್ನು ತಿಳಿಯದೆ ಹೋದರೂ, ಧರ್ಮಶೀಲನಾದವನು ಆ ಪಾಪಗಳನ್ನು ಈ ಜನ್ಮದಲ್ಲಿ ಪರಿಹರಿಸಿಕೊಳ್ಳುವನು. ಧರ್ಮವೆಂಬುವದು ಪುರುಷರು ಪ್ರಮಾದದಿಂದ ಮಾಡಿದ ಪಾಪವನ್ನು ಪರಿಹರಿಸುವದು. ಪುರುಷನಾದವನು ಪಾಪಕೃತ್ಯವನ್ನು ಮಾಡಿ ನಾನು ಮಾಡಿದವನಲ್ಲವೆಂದು ತಿಳಿದುಕೊಂಡರೆ ಅದನ್ನು ಆತ್ಮನೂ ದೇವತೆಗಳೂ ಸಹ ನೋಡದಿರುವರೆ? ಪುರುಷನು ಅಸೂಯೆಯನ್ನು ಬಿಟ್ಟು, ಛಿದ್ರವಾದ ಬಟ್ಟೆಯನ್ನು ಮುಚ್ಚುವಂತೆ ಸಜ್ಜನರ ಸಂಕಟವನ್ನು ಧನಾದಿಗಳಿಂದ ಪರಿಹರಿಸಿ ಶುಭವಾದ ಕಾರ್ಯವನ್ನೇ ಮಾಡುತ್ತಿರಬೇಕು. ಯಾವ ಪುರುಷನು ಪಾಪವನ್ನು ಮಾಡಿ ಶ್ರೇಯಸ್ಸನ್ನು ಅಪೇಕ್ಷಿಸುವನೋ ಆತನು ಮೇಘದಿಂದ ಚಂದ್ರನು ಆವರಿಸಲ್ಪಡುವಂತೆ ಪಾಪದಿಂದ ಆವರಿಸಲ್ಪಡುವನು. ಯಾವನು ಪುಣ್ಯಕಾರ್ಯವನ್ನು ಮಾಡಿ ಶ್ರೇಯಸ್ಸನ್ನು ಅಪೇಕ್ಷಿಸುವನೋ ಆತನು ಸೂರ್ಯನು ಅಂಧಕಾರವನ್ನು ಪರಿಹರಿಸುವಂತೆ ಪಾಪವನ್ನು ಪರಿಹರಿಸುವನು. ಎಲೈ ಬ್ರಾಹ್ಮಣನೆ, ಪಾಪಕ್ಕೆ ಮೂಲವು ಲೋಭವೆಂದು ತಿಳಿ. ಲುಬ್ಧರಾದ ಜನರು ಯಾವಾಗಲೂ ಪಾಪವನ್ನೇ ಮಾಡುವರು. ಅಂಥವರು ಎಂದಿಗೂ ವಿದ್ವಾಂಸರೆನಿಸಿಕೊಳ್ಳಲಾರರು. ಧರ್ಮಹೀನರಾದವರು ಹುಲ್ಲಿನಿಂದ ಬಾವಿಯು ಮುಚ್ಚಲ್ಪಟ್ಟಿರುವಂತೆ ತಮ್ಮ ಅಧರ್ಮವನ್ನು ಡಂಭದಿಂದ ಮುಚ್ಚಿಕೊಂಡು ತಾವು ಧರ್ಮಮಾರ್ಗವನ್ನೇ ಆಶ್ರಯಿಸಿರುವಂತೆ ಮಾತನಾಡುವರು. ಸಾಧುಗಳಾದವರು ಇಂದ್ರಿಯನಿಗ್ರಹವನ್ನು ಮಾಡಿಕೊಂಡು ಯಾವಾಗಲೂ ಜಾಗರೂಕರಾಗಿ ಧರ್ಮಮಾರ್ಗವನ್ನು ಬಿಡದೆ ಮಾತನಾಡುವರು. ಅಸಾಧುಗಳೂ ಮೇಲೆ ಸಾಧುಗಳಂತೆ ತೋರುತ್ತಿರುವದರಿಂದ ಶಿಷ್ಟಾಚಾರವನ್ನು ತಿಳಿಯುವದು ಕಷ್ಟವು' ಎನಲು, ಕೌಶಿಕನು ಅದನ್ನು ಕೇಳಿ 'ಎಲೈ ಧರ್ಮವ್ಯಾಧನೆ, ಶಿಷ್ಟಾಚಾರವನ್ನು ತಿಳಿಯಬೇಕೆಂದು ನನಗೆ ಅಪೇಕ್ಷೆಯಿರುವದು. ಅದನ್ನು ನೀನು ನನಗೆ ತಿಳುಹಿಸಬೇಕು' ಎಂದು ಪ್ರಾರ್ಥಿಸಿದನು.

ಬಳಿಕ ಧರ್ಮವ್ಯಾಧನು 'ಎಲೈ ಕೌಶಿಕನೆ, ಯಜ್ಞವೂ ದಾನವೂ ತಪಸ್ಸೂ ವೇದಾಧ್ಯಯನವೂ ಸತ್ಯವೂ ಸಹ ಶಿಷ್ಟಾಚಾರದಲ್ಲಿ ಪರಿಶುದ್ಧವಾದ ಧರ್ಮಗಳು. ಕಾಮಕ್ರೋಧಗಳನ್ನು ಜಯಿಸಿ ಡಂಭವನ್ನೂ ಲೋಭವನ್ನೂ

ಬಿಟ್ಟು ಯಾವನು ಧರ್ಮವನ್ನು ಆಚರಿಸುವನೋ, ಆತನೇ ಶಿಷ್ಟನಾದವನೆಂದು ದೊಡ್ಡವರು ಹೇಳುವರು. ಯಜ್ಞವೇದಾಧ್ಯಯನಗಳಲ್ಲಿ ನಿರತರಾಗಿರತಕ್ಕ ಶಿಷ್ಟರು ಎಂದಿಗೂ ಸ್ವೇಚ್ಛೆಯಿಂದ ನಡೆಯದೆ ಸದಾಚಾರಸಂಪನ್ನರಾಗಿರುವರು. ಗುರುಶುಶ್ರೂಷೆ, ಸತ್ಯ, ಕ್ಷಮೆ, ದಾನ, ಈ ನಾಲ್ಕು ಶಿಷ್ಟಾಚಾರಗಳಲ್ಲಿಯೂ ಮನಸ್ಸಿಟ್ಟು ಯಾವನು ಯಾವ ವೃತ್ತಿಯನ್ನು ಆಶ್ರಯಿಸುವನೋ ಆ ವೃತ್ತಿಯು ಗುರುಶುಶ್ರೂಷೆ ಮೊದಲಾದ ನಾಲ್ಕು ಗುಣಗಳೂ ಇಲ್ಲದಿದ್ದರೆ ಉಂಟಾಗಲಾರದು. ವೇದದಲ್ಲಿ ರಹಸ್ಯವಾಗಿರತಕ್ಕದ್ದು ಬ್ರಹ್ಮಪದಾರ್ಥವು. ಆ ಬ್ರಹ್ಮಪದಾರ್ಥವನ್ನು ತಿಳಿಯಬೇಕಾದರೆ ರಹಸ್ಯವಾಗಿರತಕ್ಕ ದಮವು ಹೊರತು ಆಗುವದಿಲ್ಲ. ಅಂಥ ದಮವುಂಟಾಗಬೇಕಾದರೆ ಸರ್ವಸಂಗಪರಿತ್ಯಾಗವು ಹೊರತು ಆಗುವದಿಲ್ಲ. ಈ ಧರ್ಮಗಳು ಶಿಷ್ಟಾಚಾರದಲ್ಲಿರುವವು. ಯಾರು ಧರ್ಮದಲ್ಲಿ ದ್ವೇಷವನ್ನು ಮಾಡುತ್ತ ಅಜ್ಞಾನಿಗಳಾಗಿರುವರೋ ಆ ಮಾರ್ಗದಲ್ಲಿ ನಡೆಯತಕ್ಕ ಅವರೂ, ಅವರನ್ನು ಅನುಸರಿಸಿಕೊಂಡು ನಡೆಯತಕ್ಕವರೂ ಸಹ ದುರ್ಗತಿಯನ್ನು ಪಡೆಯುವರು. ಯಾರು ಶಿಷ್ಟಾಚಾರವನ್ನು ಅನುಸರಿಸಿ, ನಿಯಮದಿಂದ ವೇದವೂ ವಿರಕ್ತಿಯೂ ಮುಖ್ಯವಾದವುಗಳೆಂದು ತಿಳಿದು ಸತ್ಯವನ್ನೂ ಧರ್ಮವನ್ನೂ ಬಿಡದೆ ನಡೆಯುವರೋ, ಅಂಥ ಮಹಾತ್ಮರು ಗುರುವು ಹೇಳಿದ ಮಾತಿನಲ್ಲಿ ವಿಶ್ವಾಸವುಳ್ಳವರಾಗಿ ಶಿಷ್ಟಾಚಾರಸಂಪನ್ನರಾದ ವಿದ್ವಾಂಸರೆನಿಸಿಕೊಂಡು ತಮ್ಮ ನಡತೆಯಿಂದಲೇ ಧರ್ಮಾರ್ಥಗಳನ್ನು ಬಲ್ಲವರೆಂದು ತೋರುವರು. ಲೋಕಮರ್ಯಾದೆಯನ್ನು ಬಿಟ್ಟು ಕ್ರೂರಸ್ವಭಾವರಾಗಿ ಪಾಪಕೃತ್ಯದಲ್ಲೇ ಆಸಕ್ತರಾಗಿರತಕ್ಕವರು ನಾಸ್ತಿಕರೆನಿಸಿಕೊಳ್ಳುವರು. ಅವರ ಪ್ರಸ್ತಾಪವು ನಿಷ್ಪ್ರಯೋಜಕವಾದದ್ದು. ಎಲೈ ಕೌಶಿಕನೆ, ನೀನು ಜ್ಞಾನಮಾರ್ಗವನ್ನು ಹಿಡಿದು ಧರ್ಮಜ್ಞರಾದವರನ್ನು ಸೇವಿಸುತ್ತ, ಕಾಮಲೋಭಗಳೆಂಬ ಮೊಸಳೆಗಳಿಂದ ಕೂಡಿರುವ ಪಂಚೇಂದ್ರಿಯಗಳೆಂಬ ಜಲವುಳ್ಳ ನದಿಯಲ್ಲಿರುವ ಜನ್ಮವೆಂಬ ದುರ್ಗಮಸ್ಥಾನವನ್ನು ಧೈರ್ಯವೆಂಬ ನಾವೆಯಿಂದ ದಾಟು. ಕ್ರಮವಾಗಿ ಸಂಚಿತವಾದ ಮಹತ್ತಾದ ಧರ್ಮವು ಜ್ಞಾನಪೂರ್ವಕವಾದದ್ದೇ ಆದರೆ, ಬಿಳೀ ಬಟ್ಟೆಯಮೇಲೆ ಕೆಂಪು ಬಣ್ಣವು ತೋರುವಹಾಗೆ ಶಿಷ್ಟಾಚಾರದಲ್ಲಿ ಕಾಣಿಸಿಕೊಳ್ಳುವದು. ಅಹಿಂಸೆಯೂ ಸತ್ಯವೂ ಸಹ ಸಕಲ ಪ್ರಾಣಿಗಳಿಗೂ ಶ್ರೇಯಸ್ಕರವಾದವುಗಳು. ಅಹಿಂಸೆಯು ಸತ್ಯದಲ್ಲಿರುವದು. ಆ ಸತ್ಯವನ್ನು ಅವಲಂಬಿಸಿಕೊಂಡೇ ಸಕಲ ಧರ್ಮಗಳೂ ನಡೆಯುವವು. ಶಿಷ್ಟಾಚಾರದಲ್ಲಿರತಕ್ಕ ಸತ್ಯವೇ ದೊಡ್ಡದಾದದ್ದು. ಸಜ್ಜನರಿಗೆ ಆಚಾರವೇ ಮೊದಲನೇ ಧರ್ಮವಾಗಿರುವದು. ಅಂಥ ಆಚಾರವೇ ಸಜ್ಜನರಿಗೆ ಲಕ್ಷಣವಾಗಿರುವದು. ಯಾವ ಪ್ರಾಣಿಯ ಪ್ರಕೃತಿಯು ಎಂಥಾದ್ದೋ ಆ ಪ್ರಾಣಿಯು ಹಾಗೆಯೇ ನಡೆದುಕೊಳ್ಳುವದು. ಜ್ಞಾನಶೂನ್ಯನಾದ ಪಾಪಾತ್ಮನು ಕಾಮಕ್ರೋಧ ಮೊದಲಾದ ದೋಷಗಳನ್ನೇ ಪಡೆಯುವನು. ನ್ಯಾಯವಾಗಿ ಮಾಡತಕ್ಕ ಕಾರ್ಯವೇ ಧರ್ಮವೆಂತಲೂ ಅನಾಚಾರವೇ ಅಧರ್ಮವೆಂತಲೂ ದೊಡ್ಡವರು ಹೇಳುವರು. ಕೋಪವನ್ನೂ ಅಸೂಯೆಯನ್ನೂ ಅಹಂಕಾರವನ್ನೂ ಮತ್ಸರವನ್ನೂ ಬಿಟ್ಟು ಋಜುಭಾವದಿಂದ ಶಮದಮಾದಿ ಗುಣಗಳನ್ನು ಆಶ್ರಯಿಸುವದೇ ಶಿಷ್ಟಾಚಾರವೆನಿಸಿಕೊಳ್ಳುವದು. ಋಗ್ಯಜುಸ್ಸಾಮಗಳೆಂಬ ವೇದಗಳನ್ನು ಅಧ್ಯಯನಮಾಡಿ, ಮನಸ್ಸನ್ನು ನಿಗ್ರಹಿಸಿ ಶುಚಿರ್ಭೂತರಾಗಿ, ಸದ್ವೃತ್ತಿಯುಳ್ಳವರಾಗಿ ಗುರುಶುಶ್ರೂಷೆಯಲ್ಲಿ ಆಸಕ್ತರಾಗಿ, ಜಿತೇಂದ್ರಿಯರಾಗಿರತಕ್ಕವರೇ ಶಿಷ್ಟರೆನಿಸಿಕೊಳ್ಳುವರು. ನಷ್ಟವಾಗದಿರತಕ್ಕ ಜ್ಞಾನಶಕ್ತಿಯುಳ್ಳವರಾಗಿಯೂ ಮತ್ತೊಬ್ಬರಿಂದ ಮಾಡಲಶಕ್ಯವಾದ ಕರ್ಮಗಳನ್ನು ಮಾಡತಕ್ಕವರಾಗಿಯೂ ಇರುವ ವಿದ್ವಾಂಸರು ತಮ್ಮತಮ್ಮ ಕರ್ಮಗಳಿಂದ ಹಿಂಸಾದಿ ದೋಷಗಳನ್ನು ಪರಿಹರಿಸಿಕೊಳ್ಳುವರು. ಇಂಥ ಸದಾಚಾರವು ಪುರಾತನವಾಗಿಯೂ ಶಾಶ್ವತವಾಗಿಯೂ ನಿತ್ಯವಾಗಿಯೂ ಇರುವದೆಂದು ತಿಳಿಯಬೇಕು. ವಿದ್ವಾಂಸರಾದವರು ವೇದದಿಂದ ಧರ್ಮವನ್ನು ತಿಳಿದು ಸದಾಚಾರಸಂಪನ್ನರಾಗಿ ಸ್ವರ್ಗವನ್ನು ಪಡೆಯುವರು. ಆಸ್ತಿಕರಾಗಿಯೂ ದುರಭಿಮಾನರಹಿತರಾಗಿಯೂ ಬ್ರಾಹ್ಮಣರನ್ನು ಪೂಜಿಸತಕ್ಕವರಾಗಿಯೂ ಸದ್ವೃತ್ತಿಯುಳ್ಳವರಾಗಿಯೂ ಇರತಕ್ಕ ಸಜ್ಜನರು ಸ್ವರ್ಗದಲ್ಲಿ ವಾಸಮಾಡುವರು. ವೇದೋಕ್ತವಾದ ಧರ್ಮವೂ ಧರ್ಮಶಾಸ್ತ್ರೋಕ್ತವಾದ ಧರ್ಮವೂ ಶಿಷ್ಟಾಚಾರವೂ ಸಹ ಉತ್ತಮವಾದ ಧರ್ಮಗಳೆನ್ನಿಸಿಕೊಳ್ಳುವವು. ವೇದವನ್ನು ಸಂಪೂರ್ಣವಾಗಿ ಓದುವದು, ತೀರ್ಥಸ್ನಾನಮಾಡುವದು, ಕ್ಷಮೆ, ಸತ್ಯ, ಋಜುಭಾವ, ಶೌಚ, ಇವು ಸಜ್ಜನರಿಗೆ ಆಚಾರವಾಗಿರುವವು. ಅಂಥಾ ಸಜ್ಜನರು ಸರ್ವಪ್ರಾಣಿಗಳಲ್ಲಿಯೂ ದಯೆಯುಳ್ಳವರಾಗಿ ಅಹಿಂಸಾಪರರಾಗಿ ಕ್ರೂರ

ವಚನಗಳನ್ನಾಡದೆ, ಬ್ರಾಹ್ಮಣಪ್ರಿಯರಾಗಿ, ಪುಣ್ಯಪಾಪಕರ್ಮಗಳ ಫಲಪರಿಪಾಕವನ್ನು ತಿಳಿದು, ತಾವು ಶಿಷ್ಟಸಮ್ಮತರಾಗಿ ಯುಕ್ತಿಯಿಂದಲೂ ಶಮದಮಾದಿಗಳಿಂದಲೂ ಯುಕ್ತರಾಗಿ ಲೋಕಕ್ಕೆ ಹಿತವನ್ನು ಆಚರಣೆ ಮಾಡುವರು. ಮತ್ತು ಸಜ್ಜನರು ಹಿಂಸಾದಿ ದೋಷಗಳಿಲ್ಲದೆ ಸನ್ಮಾರ್ಗದಲ್ಲಿ ನಡೆಯುತ್ತ, ದೀನರಾದವರಲ್ಲಿ ಅನುಗ್ರಹವನ್ನು ಮಾಡುತ್ತ, ತಮ್ಮ ದ್ರವ್ಯವನ್ನು ಅತಿಥಿ ಮೊದಲಾದವರಿಗೆ ವಿಭಾಗಮಾಡಿಕೊಟ್ಟು, ಸರ್ವರಿಗೂ ಪೂಜ್ಯರಾಗಿ ಶಿಷ್ಟಸಮ್ಮತರಾಗಿರುವರು. ಯಾವಾಗಲೂ ದಾನಮಾಡತಕ್ಕವರು ಈ ಲೋಕದಲ್ಲಿ ಐಶ್ವರ್ಯವನ್ನು ಪಡೆದು, ಬಳಿಕ ಸುಖವನ್ನು ಅನುಭವಿಸತಕ್ಕ ಲೋಕವನ್ನು ಪಡೆಯುವರು. ಸಜ್ಜನರು ತಮ್ಮ ಹೆಂಡಿರೂ ಮಕ್ಕಳೂ ಭೃತ್ಯರೂ ಸಹ ತಮ್ಮನ್ನು ಪೀಡಿಸಿದರೂ, ತಾವು ಸಮಾಧಾನವನ್ನೇ ಹೊಂದಿ ತಮ್ಮ ಶಕ್ತಿಯನ್ನತಿಕ್ರಮಿಸಿ ಪರೋಪಕಾರವನ್ನು ಮಾಡಿ, ಪರಲೋಕದಲ್ಲಿ ದೃಷ್ಟಿಯುಳ್ಳವರಾಗಿ ಧರ್ಮಮಾಡತಕ್ಕದ್ದು ತಮಗೆ ಹಿತವೆಂದು ತಿಳಿದು ಧರ್ಮವನ್ನಾಚರಿಸುತ್ತ, ಬಹುಕಾಲ ವೃದ್ಧಿಯನ್ನು ಪಡೆಯುವರು. ಈ ರೀತಿಯಾಗಿರುವ ಸಜ್ಜನರೇ ಲೋಕಕ್ಕೆ ಸಾಕ್ಷಿಗಳಾಗಿರುವರು. ಪರರಿಗೆ ದ್ರೋಹಮಾಡದಿರುವದು, ದಾನಮಾಡುವದು, ಸತ್ಯವಾಗಿ ನಡೆಯುವದು, ಈ ಮೂರೂ ಸತ್ಪುರುಷರಿಗೆ ಬೇಕಾಗಿರುವವು. ಅಂಥ ಸಜ್ಜನರು ಯಾವಾಗಲೂ ಶಿಷ್ಟಾಚಾರವನ್ನು ತಪ್ಪದೆ ಧರ್ಮಮಾರ್ಗವನ್ನು ಅವಲಂಬಿಸಿ, ಅದರಿಂದ ಸಂತುಷ್ಟರಾಗಿ, ಅಸೂಯೆಯನ್ನು ಬಿಟ್ಟು, ಕ್ಷಮೆಯನ್ನು ತಾಳಿ, ಶಾಂತಿಯನ್ನು ಪಡೆದು, ಎಲ್ಲರ ಸಂಗಡಲೂ ಪ್ರಿಯವಾಗಿ ಮಾತಾಡುತ್ತ, ಕಾಮಕ್ರೋಧಗಳನ್ನು ತ್ಯಜಿಸಿ, ಜ್ಞಾನವೆಂಬ ಉಪ್ಪರಿಗೆಯನ್ನೇರಿ ಭಯವನ್ನು ಪರಿಹರಿಸಿಕೊಂಡು, ನಾನಾವಿಧವಾದ ಲೋಕಗಳ ಭೂತಭವಿಷ್ಯದ್ವರ್ತಮಾನಗಳನ್ನು ನೋಡುವರು. ಎಲೈ ಕೌಶಿಕನೆ, ನನಗೆಷ್ಟು ಪ್ರಜ್ಞೆಯಿರುವದೋ, ನಾನೆಷ್ಟು ಕೇಳಿರುವೆನೋ, ಅಷ್ಟುಮಟ್ಟಿಗೆ ಶಿಷ್ಟಾಚಾರವನ್ನು ಪುರಸ್ಕರಿಸಿಕೊಂಡು ಪುಣ್ಯಪಾಪಗಳನ್ನು ವಿವರಿಸಿರುವೆನು ’ ಎಂದು ಧರ್ಮವ್ಯಾಧನು ಕೌಶಿಕನಿಗೆ ಹೇಳಿದನು ” ಎಂದು ಮಾರ್ಕಂಡೇಯನು ಧರ್ಮರಾಯನಿಗೆ ಹೇಳಿದನು.

## ೨೧೩ನೇ ಅಧ್ಯಾಯ.—ಮಾರ್ಕಂಡೇಯಪರ್ವ—(ಧರ್ಮವ್ಯಾಧನು ಕೌಶಿಕನಿಗೆ ಧರ್ಮೋಪದೇಶಮಾಡಿದ್ದು.)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಮಾರ್ಕಂಡೇಯನು ಧರ್ಮರಾಯನನ್ನು ಕುರಿತು, “ ಎಲೈ ಧರ್ಮರಾಯನೆ, ಧರ್ಮವ್ಯಾಧನು ಕೌಶಿಕನೊಡನೆ, ‘ ಎಲೈ ಕೌಶಿಕನೆ, ನಾನು ಆಚರಿಸುತ್ತಿರುವ ಕರ್ಮವು ಘೋರವಾದದ್ದು, ಈ ವಿಷಯದಲ್ಲಿ ಸಂದೇಹವಿಲ್ಲ. ವಿಧಿಯು ಬಲವಾದ್ದರಿಂದ ಜನ್ಮಾಂತರದಲ್ಲಿ ಮಾಡಿದ್ದನ್ನು ಅತಿಕ್ರಮಿಸುವದು ಅಶಕ್ಯವಾದದ್ದು. ಇದು ಜನ್ಮಾಂತರದಲ್ಲಿ ಮಾಡಿದ ಕರ್ಮದೋಷದಿಂದುಂಟಾಗಿರುವದು. ಈ ದೋಷವು ಪರಿಹಾರವಾಗುವದಕ್ಕೆ ನಾನು ಯತ್ನಮಾಡುತ್ತಿರುವೆನು. ವಿಧಿವಿಹಿತವಾದ ಪ್ರಾಣಸಂಹಾರದಲ್ಲಿ ಘಾತುಕನಾದವನು ನಿಮಿತ್ತನಾಗುವನು. ಅಂಥ ಘಾತುಕನಿಂದ ಸಂಹರಿಸಲ್ಪಟ್ಟ ಪಶುಮಾಂಸವನ್ನು ನಾನು ವಿಕ್ರಯಮಾಡುವೆನು. ಆ ಮಾಂಸವು ಅತಿಥಿ ದೇವತಾ ಪಿತೃಗಳ ಪೂಜಾರ್ಥವಾಗಿಯೂ ಆಹಾರಾರ್ಥವಾಗಿಯೂ ಉಪಯೋಗಿಸುವದಾದ್ದರಿಂದ, ಈ ಕಾರ್ಯವು ಧರ್ಮವಾದದ್ದೆಂದು ನಾನು ತಿಳಿದಿರುವೆನು. ಮೂಲಿಕೆಗಳೂ ಬಳ್ಳಿಗಳೂ ಪಶುಗಳೂ ಪಕ್ಷಿಗಳೂ ಮೃಗಗಳೂ ಸಹ ಲೋಕದಲ್ಲಿ ಆಹಾರವಸ್ತುಗಳಾಗಿರುವವೆಂದು ಶ್ರುತಿಯು ಹೇಳುವದು. ಉಶೀನರದೇಶಾಧಿಪತಿಯಾದ ಶಿಬಿಚಕ್ರವರ್ತಿಯು ಕ್ಷಮಾವಂತನಾಗಿ ತನ್ನ ಮಾಂಸವನ್ನು ದಾನಮಾಡಿ ಉತ್ತಮವಾದ ಸ್ವರ್ಗಗತಿಯನ್ನು ಪಡೆದನು. ಪೂರ್ವದಲ್ಲಿ ರಂತಿದೇವನೆಂಬ ಮಹಾರಾಜನು ತನ್ನ ಅಡಿಗೆಮನೆಯಲ್ಲಿ ಎರಡುಸಹಸ್ರ ಪಶುಗಳನ್ನೂ ಎರಡುಸಹಸ್ರ ಗೋವುಗಳನ್ನೂ ಸಂಹರಿಸಿ ಅತಿಥಿಗಳನ್ನು ಆರಾಧಿಸಿದ್ದರಿಂದ, ಅಪರಿಮಿತವಾದ ಯಶಸ್ಸನ್ನು ಪಡೆದನು. ಚಾತುರ್ಮಾಸ್ಯವೆಂಬ ಕರ್ಮದಲ್ಲಿ ಅಗ್ನಿಗಳೂ ಮಾಂಸಪ್ರಿಯರೆಂದು ಶ್ರುತಿಯಲ್ಲಿ ಹೇಳಿರುವದು. ಯಜ್ಞಗಳಲ್ಲಿ ಬ್ರಾಹ್ಮಣರು ಪಶುಗಳನ್ನು ಸಂಹರಿಸಿ ಅವುಗಳ ಮಾಂಸವನ್ನು ಸಂಸ್ಕರಿಸಿ ಅಗ್ನಿಯಲ್ಲಿ ಹೋಮಮಾಡುವರು.

ಮಂತ್ರಗಳಿಂದ ಶುದ್ಧವಾದ ಆ ಪಶುಗಳೂ ಕೂಡ ಸ್ವರ್ಗವನ್ನು ಹೊಂದುವವು. ಎಲೈ ಕೌಶಿಕನೆ, ತ್ರೇತಾಗ್ನಿಗಳು ಮಾಂಸಪ್ರಿಯಗಳಲ್ಲವೆ ಹೋಗಿದ್ದಪಕ್ಷದಲ್ಲಿ ಮಾಂಸವು ಸರ್ವರಿಗೂ ಭಕ್ಷಣಾರ್ಹವಾಗುತ್ತಿರಲಿಲ್ಲ. ವಿಧ್ಯುಕ್ತವಾಗಿ ದೇವತೆಗಳನ್ನೂ ಪಿತೃಗಳನ್ನೂ ಉದ್ದೇಶಿಸಿ ಮಾಂಸದಿಂದ ಹವ್ಯಕವ್ಯಗಳನ್ನು ಮಾಡಿ, ಶೇಷವಾದ ಮಾಂಸವನ್ನು ಭಕ್ಷಿಸಿದರೆ ದೋಷವಿಲ್ಲವೆಂದು ಮಾಂಸ ಭಕ್ಷಣೆಯ ವಿಷಯದಲ್ಲಿ ಮಹಾನುಭಾವರಾದ ಋಷಿಗಳು ಹೇಳಿರುವರು. ಅಂಥವನಿಗೆ ಮಾಂಸಭಕ್ಷಣದೋಷವಿಲ್ಲವೆಂದು ಶ್ರುತಿಯೂ ಹೇಳುವದು. ಬ್ರಾಹ್ಮಣನಾದವನು ಋತುಕಾಲದಲ್ಲಿ ತನ್ನ ಪತ್ನಿಯಲ್ಲಿ ವಿಹರಿಸಿದ್ದೇ ಆದರೆ ಅಂಥವನಿಗೆ ಬ್ರಹ್ಮಚರ್ಯವ್ರತವು ತಪ್ಪಿ ಹೋಗಲಾರದೆಂದೂ ಶ್ರುತಿಯು ಹೇಳುವದು. ಜ್ಞಾನಮಾರ್ಗವನ್ನೂ ಕರ್ಮಮಾರ್ಗವನ್ನೂ ವಿಚಾರಮಾಡಿ ನೋಡಿದ್ದೇ ಆದರೆ, ಯಜ್ಞಕರ್ಮದಲ್ಲಿ ಮಾಂಸಭಕ್ಷಣೆಮಾಡುವದು ವಿಶೇಷವಿಧಿಯಾಗಿರುವದು. ಜ್ಞಾನಮಾರ್ಗದಲ್ಲಿ ಅದು ಯೋಗ್ಯವೆನಿಸಿಕೊಳ್ಳಲಾರದು. ಪೂರ್ವದಲ್ಲಿ ಶಾಪಗ್ರಸ್ತನಾದ ಸೌದಾಸನೆಂಬ ರಾಯನು ಮನುಷ್ಯರ ಮಾಂಸವನ್ನು ಭಕ್ಷಣೆಮಾಡುತ್ತಿದ್ದನು. ಅದು ಬಹಳ ಅನುಚಿತವಾದದ್ದು. ಎಲೈ ಕೌಶಿಕನೆ, ನಾನು ಮಾಂಸವಿಕ್ರಯವನ್ನು ಮಾಡುವದು ಸ್ವಧರ್ಮವೆಂದು ತಿಳಿದು ಅದನ್ನು ಬಿಡದಿರುವೆನು. ಇದು ಜನ್ಮಾಂತರದಲ್ಲಿ ಮಾಡಿದ ಕರ್ಮದ ಫಲವೆಂದು ತಿಳಿದು ಇದರಿಂದ ನಾನು ಜೀವಿಸುತ್ತಿರುವೆನು. ಯಾರಿಗಾದರೂ ಸ್ವಧರ್ಮವನ್ನು ಬಿಡುವದು ಅಯುಕ್ತವು. ಸ್ವಕರ್ಮದಲ್ಲಿರತಕ್ಕವನಿಗೆ ಆ ಧರ್ಮವೂ ಉತ್ತಮವಾಗಿಯೇ ಇರುವದು. ಕರ್ಮವನ್ನು ವಿಚಾರಮಾಡಿದರೆ, ಪೂರ್ವದಲ್ಲಿ ತಾನು ಮಾಡಿದ ಕರ್ಮವು ತನ್ನನ್ನೇ ಅನುಸರಿಸಿಕೊಂಡು ಬಿಡದೆ ಇರುವದೆಂದು ಬ್ರಹ್ಮನಿಂದ ಕ್ಲುಪ್ತವಾಗಿರುವದು. ನಾನು ಕ್ರೂರವಾದ ವ್ಯಾಪಾರದಲ್ಲಿದ್ದರೂ ಜ್ಞಾನದಲ್ಲಿ ದೃಷ್ಟಿಯುಳ್ಳವನಾಗಿ ಶುಭಕರ್ಮವನ್ನು ಮಾಡಿ, ದುಷ್ಕರ್ಮವನ್ನು ಹ್ಯಾಗೆ ಪರಿಹರಿಸಿಕೊಂಡೇನೆಂದು ಕರ್ಮವಿಚಾರವನ್ನು ವಿಶೇಷವಾಗಿ ಮಾಡುತ್ತಿರುವೆನು. ನಾನು ಅಭಿಮಾನವನ್ನೂ ಅತಿವಾದವನ್ನೂ ಬಿಟ್ಟು ಯಾವಾಗಲೂ ದಾನದಲ್ಲೂ ಸತ್ಯದಲ್ಲೂ ಗುರುಶುಶ್ರೂಷೆಯಲ್ಲೂ ಬ್ರಾಹ್ಮಣಸೇವೆಯಲ್ಲೂ ಧರ್ಮಾಚರಣೆಯಲ್ಲೂ ನಿರತನಾಗಿರುವೆನು. ಲೋಕದಲ್ಲಿ ಕೆಲವರು ಕೃಷಿಜೀವನವೇ ಉತ್ತಮವಾದದ್ದೆಂದು ತಿಳಿದಿರುವರು. ಆ ವಿಷಯದಲ್ಲೂ ನೇಗಲಿನಿಂದ ಭೂಮಿಯನ್ನು ಉಳುವ ಕಾಲದಲ್ಲಿ ಅನೇಕಪ್ರಾಣಿಗಳಿಗೆ ಹಿಂಸೆಯಾಗುವದು. ಆದ್ದರಿಂದ ಅದೂ ಉತ್ತಮಜೀವನವಲ್ಲವೆಂದು ನನಗೆ ತೋರುವದು. ಮತ್ತು ಬತ್ತ ಮೊದಲಾದ ಧಾನ್ಯಬೀಜಗಳೂ ಜೀವಗಳಾದ್ದರಿಂದ, ಅವುಗಳಿಂದ ಜೀವಿಸುವದೂ ಹಿಂಸೆಯಾಗಿಯೇ ನನಗೆ ತೋರುವದು. ಬಲಾತ್ಕಾರವಾಗಿ ಪಶುವನ್ನು ಹಿಂಸಿಸಿ ಭಕ್ಷಣೆಮಾಡುವದೂ ಅನುಚಿತವಾದದ್ದು. ವೃಕ್ಷಗಳನ್ನೂ ಮೂಲಿಕೆಗಳನ್ನೂ ಛೇದಿಸುವದೂ ಸಹ ಹಿಂಸಾಕರ್ಮಗಳಾಗಿಯೇ ಇರುವವು. ಫಲಗಳಲ್ಲಿಯೂ ಉದಕದಲ್ಲಿಯೂ ಸಹ ಅನೇಕ ಪ್ರಾಣಿಗಳಿರುವವಾದ್ದರಿಂದ, ಅವುಗಳನ್ನು ಆಹಾರಮಾಡುವದೂ ಹಿಂಸಾಕರ್ಮವೆಂದೇ ನನಗೆ ತೋರುವದು. ಈ ಪ್ರಪಂಚವೆಲ್ಲಾ ಅನೇಕಕೋಟಿ ಪ್ರಾಣಿಗಳಿಂದ ವ್ಯಾಪ್ತವಾಗಿರುವದು. ಇಂಥ ಪ್ರಪಂಚದಲ್ಲಿ ಮೀನುಗಳು ಮೀನುಗಳಿಂದಲೇ ಜೀವಿಸುವವು. ಎಲ್ಲಾ ಪ್ರಾಣಿಗಳಿಗೂ ಪ್ರಾಣಿಗಳೇ ಆಹಾರವಾಗಿರುವವು. ನಡೆಯತಕ್ಕವನು ಭೂಮಿಯನ್ನು ಆಶ್ರಯಿಸಿರತಕ್ಕ ಸಣ್ಣಸಣ್ಣ ಪ್ರಾಣಿಗಳನ್ನು ತನ್ನ ಕಾಲುಗಳಿಂದ ತುಳಿದು ಸಂಹರಿಸುವನು. ಮನುಷ್ಯನು ಕೂತುಕೊಳ್ಳುವಾಗಲೂ ಮಲಗಿಕೊಳ್ಳುವಾಗಲೂ ಸಹ ಪ್ರಾಣಿಹಿಂಸೆಯಾಗದೆ ಇರಲಾರದು. ಇವುಗಳನ್ನೆಲ್ಲಾ ತಿಳಿದಿರತಕ್ಕವರೂ ತಿಳಿಯದಿರತಕ್ಕವರೂ ಸಹ ಲೋಕದಲ್ಲಿ ಹ್ಯಾಗಾದರೂ ಪ್ರಾಣಿಹಿಂಸೆಯನ್ನು ಮಾಡದೆ ಇರಲಾರರು. ಆದರೆ ಅಜ್ಞಾನಕೃತವಾದ ಪ್ರಾಣಿಹಿಂಸೆಯನ್ನು ಅಹಿಂಸೆಯೆಂದೇ ಹೇಳುವರು. ಲೋಕದಲ್ಲಿ ಎಲ್ಲರೂ ಪ್ರಾಣಿಹಿಂಸಕರೇ ಆದ್ದರಿಂದ, ದೊಡ್ಡವರು ಹೇಳತಕ್ಕ ಅಹಿಂಸೆಯೆಂಬುವದು ಎಲ್ಲಿಯೂ ಕಾಣಿಸುವದೇ ಇಲ್ಲ. ಅಹಿಂಸಾಕರರಾದ ಯತಿಗಳೂ ಸಹ ಹಿಂಸೆಯನ್ನು ಮಾಡೇಮಾಡುವರು. ಅಹಿಂಸಾದೋಷವನ್ನು ಪ್ರಾಯಶ್ಚಿತ್ತಾದಿ ಪ್ರಯತ್ನದಿಂದ ಪರಿಹರಿಸಿಕೊಳ್ಳುವರು. ಸತ್ಕುಲಪ್ರಸೂತರಾಗಿಯೂ ಗುಣವಂತರಾಗಿಯೂ ಪ್ರಸಿದ್ಧರಾಗಿಯೂ ಇರುವ ಪುರುಷರು ಲೋಕದಲ್ಲಿ ಘೋರವಾದ ಹಿಂಸಾಕರ್ಮವನ್ನು ಮಾಡಿಯೂ ಲಜ್ಜೆಪಡದೆ ಇರುವರು. ಲೋಕದಲ್ಲಿ ಒಳ್ಳೇ ಸ್ವಭಾವವುಳ್ಳವರು ಮತ್ತೊಬ್ಬರು ಒಳ್ಳೇ ಸ್ವಭಾವವುಳ್ಳವರಾಗಿದ್ದರೂ ಅವರನ್ನು ಸರಿಯಾಗಿ ಭಾವಿಸುವದಿಲ್ಲ. ದುಷ್ಟರಾದವರು ದುಷ್ಟರಾದ ಇತರ

ರನ್ನೂ ಸರಿಯಾಗಿ ಭಾವಿಸುವದಿಲ್ಲ. ಬಂಧುಗಳಾದವರು ತಮ್ಮ ಐಶ್ವರ್ಯದಿಂದ ಬಂಧುಗಳೊಡನೆ ಸಂತೋಷಪಡುವದಿಲ್ಲ. ದುರಭಿಮಾನಿಗಳಾದ ಮೂಢರು ಗುರುಜನರನ್ನು ನಿಂದಿಸುವರು. ಈ ಪ್ರಕಾರ ಲೋಕದಲ್ಲಿ ವ್ಯತ್ಯಾಸವು ಕಾಣಬರುವದು. ಲೋಕದಲ್ಲಿ ಧರ್ಮಯುಕ್ತವಾದದ್ದೂ ಅಧರ್ಮವಾಗಿ ತೋರುವದು. ಧರ್ಮಾಧರ್ಮಗಳ ವಿಷಯದಲ್ಲಿ ತಮತಮಗೆ ತೋರಿದಹಾಗೆ ಬೇಕಾದಷ್ಟು ಮಾತುಗಳನ್ನು ಆಡಬಹುದು. ಆದರೆ ಯಾವನು ಸ್ವಧರ್ಮದಲ್ಲಿ ನಿರತನಾಗಿರುವನೋ ಅವನು ಮಹತ್ತಾದ ಕೀರ್ತಿಯನ್ನು ಪಡೆಯುವನು ' ಎಂದು ಧರ್ಮವ್ಯಾಧನು ಕೌಶಿಕನಿಗೆ ಹೇಳಿದನು " ಎಂದು ಮಾರ್ಕಂಡೇಯನು ಧರ್ಮರಾಯನಿಗೆ ಹೇಳಿದನು.

೨೦೮ನೇ ಅಧ್ಯಾಯ.—ಮಾರ್ಕಂಡೇಯಪರ್ವ—(ಧರ್ಮವ್ಯಾಧನು ಕೌಶಿಕನಿಗೆ ಧರ್ಮೋಪದೇಶಮಾಡಿದ್ದು.)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಮಾರ್ಕಂಡೇಯನು ಧರ್ಮರಾಯನನ್ನು ಕುರಿತು, " ಎಲೈ ಧರ್ಮರಾಯನೆ, ಧರ್ಮವ್ಯಾಧನು ಕೌಶಿಕನೊಡನೆ 'ಎಲೈ ಬ್ರಾಹ್ಮಣನೆ, ಧರ್ಮವು ಶ್ರುತಿಪ್ರಮಾಣವಾದದ್ದೆಂದು ವೃದ್ಧರು ಹೇಳುವರು. ಅನೇಕ ಕವಲುಗಳುಳ್ಳ ಧರ್ಮಮಾರ್ಗವು ಅನಂತವಾದದ್ದರಿಂದ ಅದು ಬಹುಸೂಕ್ಷ್ಮವಾಗಿರುವದು. ಪ್ರಾಣನಾಶಕಾಲದಲ್ಲಿಯೂ ವಿವಾಹಕಾಲದಲ್ಲಿಯೂ ಅನೃತವಾಡಿದರೂ ಅದು ಸತ್ಯವೆಂದೆನ್ನಿಸಿಕೊಳ್ಳುವದು. ಕೆಲವು ಕಾಲದಲ್ಲಿ ಸತ್ಯವೂ ಅನೃತವೆಂದೆನ್ನಿಸಿಕೊಳ್ಳುವದು. ಎಲ್ಲಾ ಪ್ರಾಣಿಗಳಿಗೂ ಅಧಿಕವಾಗಿ ಹಿತವಾದದ್ದು ಯಾವದೋ ಅದು ಸತ್ಯವೆಂದು ನಿಶ್ಚಯವಿರುವದು. ಪ್ರಾಣಿಗಳಿಗೆ ಅಹಿತವಾದದ್ದು ಅಧರ್ಮವೆನ್ನಿಸಿಕೊಳ್ಳುವದು. ಎಲೈ ಬ್ರಾಹ್ಮಣನೆ, ಧರ್ಮಸೂಕ್ಷ್ಮವು ಯಾವರೀತಿಯಾಗಿರುವದೋ ನೋಡು. ಪುರುಷನಾದವನು ಶುಭಕರ್ಮವನ್ನೇ ಆಗಲಿ ಅಶುಭಕರ್ಮವನ್ನೇ ಆಗಲಿ ಮಾಡಿದರೆ ಅದರ ಫಲವನ್ನು ಅವಶ್ಯವಾಗಿ ಅನುಭವಿಸುವನು. ದುರ್ದಶೆಯನ್ನು ಹೊಂದಿದವನು ತನ್ನ ಕರ್ಮದೋಷದಿಂದ ಈ ದುರ್ದಶೆಯುಂಟಾಗಿರುವದೆಂದು ತಿಳಿಯದೆ ದೇವತೆಗಳನ್ನು ನಿಂದಿಸುವನು. ಮೂಢನಾಗಿಯೂ ವಂಚಕನಾಗಿಯೂ ಚಪಲಚಿತ್ತನಾಗಿಯೂ ಇರುವ ಮನುಷ್ಯನು ಸುಖದುಃಖಗಳ ವ್ಯತ್ಯಾಸವನ್ನು ಹೊಂದುವನು. ಇಂಥ ಪುರುಷನಿಗೆ ಗುರುಶಿಕ್ಷೆಯಿಂದ ಜ್ಞಾನವುಂಟಾಗಲಾರದು. ಪುರುಷನುಮಾಡಿದ ಕರ್ಮದಿಂದುಂಟಾಗುವ ಫಲವು ದೇವರ ಅಧೀನವಾಗದೆ ಇದ್ದಪಕ್ಷದಲ್ಲಿ, ಪುರುಷನು ತಾನು ಅಪೇಕ್ಷಿಸಿದ ಫಲಗಳನ್ನೆಲ್ಲಾ ಪಡೆಯಬಹುದು. ಎಲೈ ಕೌಶಿಕನೆ, ಲೋಕದಲ್ಲಿ ಜಿತೇಂದ್ರಿಯರಾಗಿಯೂ ಸಮರ್ಥರಾಗಿಯೂ ಬುದ್ಧಿಶಾಲಿಗಳಾಗಿಯೂ ಇರುವ ಅನೇಕ ಮನುಷ್ಯರು ವಿಧವಿಧವಾದ ಕರ್ಮಗಳನ್ನುಮಾಡಿ ಅವುಗಳ ಫಲಗಳನ್ನು ಪಡೆಯದೆ ಶ್ರಾಂತರಾಗಿರುವರು ; ಮತ್ತು ಯಾವಾಗಲೂ ಪ್ರಾಣಿಹಿಂಸಾಪರನಾಗಿಯೂ ವಂಚಕನಾಗಿಯೂ ಇರುವ ಮನುಷ್ಯನು ಸುಖವಾಗಿ ಜೀವಿಸುವನು. ಯಾವ ಕರ್ಮವನ್ನೂ ಮಾಡದೆ ಕೂತಿರತಕ್ಕವನಿಗೆ ಐಶ್ವರ್ಯವು ಪ್ರಾಪ್ತವಾಗುವದು. ಕರ್ಮವನ್ನು ಮಾಡಿ ಅದಕ್ಕೆ ತಕ್ಕ ಫಲವನ್ನು ಹೊಂದದೆ ಕೆಲವರು ಸುಮ್ಮನಿರುವರು. ಪುತ್ರಾಪೇಕ್ಷೆಯಿಂದ ತಪಸ್ಸುಮಾಡಿ ದೇವತಾರಾಧನೆಯನ್ನು ಮಾಡಿ ಹತ್ತು ತಿಂಗಳು ಗರ್ಭವನ್ನು ಧರಿಸಿದ ಸ್ತ್ರೀಯ ಗರ್ಭದಲ್ಲಿ ನೀಚನಾದ ಪುತ್ರನು ಜನಿಸುವನು. ಕೆಲವರು ತಮ್ಮ ಪಿತೃಗಳು ಸಂಪಾದಿಸಿದ ಧನಧಾನ್ಯಗಳನ್ನು ಪಡೆದು ಅದರಿಂದ ತಾವು ಸತ್ಕುಲದವರೆನ್ನಿಸಿಕೊಂಡು ಸುಖವಾಗಿ ಜೀವಿಸುವರು. ಮನುಷ್ಯರಿಗೆ ಉಂಟಾಗತಕ್ಕ ರೋಗಗಳೂ ಸಹ ಅವರವರ ಕರ್ಮಗಳಿಂದಲೇ ಉಂಟಾಗುವವು. ಇದು ನಿಶ್ಚಯವಾದದ್ದು. ವ್ಯಾಧನಿಂದ ಕ್ಷುದ್ರಮೃಗವು ಬಾಧೆಪಡುವಂತೆ ರೋಗದಿಂದ ಮನುಷ್ಯನು ಬಾಧೆಪಡುವನು. ವ್ಯಾಧನು ಬಾಣದಿಂದ ಮೃಗವನ್ನು ನಾಶಮಾಡುವಂತೆ ಅಂಥ ರೋಗವನ್ನು ತಿಳಿದು ತಕ್ಕ ಔಷಧದಿಂದ ಬುದ್ಧಿಶಾಲಿಗಳಾದ ವೈದ್ಯರು ನಾಶಮಾಡಿಬಿಡುವರು. ಯಾರಿಗೆ ರೋಗವು ಅನುಭವಿಸತಕ್ಕದ್ದಾಗಿರುವದೋ ಅವರು, ಅದನ್ನು ಅನುಭವಿಸುವದಕ್ಕೂ ಸಾಮರ್ಥ್ಯವಿಲ್ಲದೆ ದುಃಖಪಡುತ್ತಿರುವರು. ಕೆಲವರು ಬಾಹುಬಲಸಂಪನ್ನರಾಗಿದ್ದರೂ ಕ್ಲೇಶಪಡುತ್ತ ದುಃಖದಿಂದ ತಾವು ತಮ್ಮ ಆಹಾರವನ್ನು ಸಂಪಾದಿಸಿಕೊಳ್ಳುವರು.

ಈ ರೀತಿಯಾಗಿ ಎಲ್ಲರೂ ಸಹಾಯವಿಲ್ಲದೆ ಅಜ್ಞಾನದಲ್ಲಿಯೂ ದುಃಖದಲ್ಲಿಯೂ ಮುಳುಗಿ, ಪ್ರಬಲವಾದ ಕರ್ಮವೆಂಬ ನದೀಪ್ರವಾಹದಲ್ಲಿ ಸಿಕ್ಕಿಕೊಂಡು, ಆಧಿವ್ಯಾಧಿಗಳಿಂದ ಪೀಡಿತರಾಗಿ, ಆಶೆಯನ್ನು ಹೊಂದಿ ಜಾಗ್ರತೆಯಾಗಿ ಮರಣವನ್ನು ಪಡೆಯದೆಯೂ ಚೆನ್ನಾಗಿ ಬದುಕದೆಯೂ ಕ್ಲೇಶಪಡುತ್ತಿರುವರು. ಎಲೈ ಕೌಶಿಕನೆ, ಎಲ್ಲರೂ ದೇವರ ಅಧೀನರಾಗಿರದೆ ತಾವೇ ಸ್ವತಂತ್ರರಾಗಿದ್ದದ್ದೇ ಆದರೆ, ತಮಗೆ ಅಪ್ರಿಯವಾದದ್ದನ್ನು ಹೊಂದದೆ ಎಲ್ಲರೂ ಮೇಲಿರತಕ್ಕ ಉತ್ತಮವಾದ ಲೋಕಗಳಿಗೆ ಹೋಗುವದಕ್ಕೆ ಯಥಾಶಕ್ತಿಯಾಗಿ ಪ್ರಯತ್ನಮಾಡುತ್ತಿದ್ದರು. ದೇವರೊಬ್ಬನು ಬೇರೇ ಇರುವದರಿಂದ ಯಾರ ಪ್ರಯತ್ನವೂ ನಡೆಯದೆ ಇರುವದು. ಒಂದೇ ನಕ್ಷತ್ರದಲ್ಲಿ ಹುಟ್ಟಿದ ಅನೇಕ ಜನರು ಕರ್ಮವೈಷಮ್ಯದಿಂದ ಫಲವೈಷಮ್ಯವನ್ನು ಪಡೆಯುತ್ತ ಕಾಣಿಸುತ್ತಿರುವರು. ತನ್ನ ವಸ್ತುವೂ ಕೂಡ ಸ್ವಾಧೀನವಾಗಬೇಕಾದರೆ ಜನ್ಮಾಂತರಕರ್ಮದಿಂದಲೇ ಆಗಬೇಕೇ ಹೊರತು ಆ ವಿಷಯದಲ್ಲಿ ಯಾರೂ ಸ್ವತಂತ್ರರಾದವರಲ್ಲ. ದೇಹಾತ್ಮವಾದಿಗಳಿಗೂ ಕೂಡ ಸಿದ್ಧಿಯು ಕರ್ಮದಿಂದಲೇ ಉಂಟಾಗುವದು. ಎಲೈ ಬ್ರಾಹ್ಮಣನೆ, ಜೀವನು ಸನಾತನನಾದವನೆಂದು ಶ್ರುತಿಯು ಹೇಳುವದು. ಸಕಲ ಪ್ರಾಣಿಗಳ ಶರೀರವೂ ಅನಿತ್ಯವಾದದ್ದು. ಶರೀರಕ್ಕೆ ಉಪಹತಿಯೇನಾದರೂ ಉಂಟಾದರೆ ಅದು ನಷ್ಟವಾಗಿ ಹೋಗುವದು. ಜೀವನು ಮಾತ್ರ ತನ್ನ ಕರ್ಮದಿಂದ ಬದ್ಧನಾಗಿ ಮತ್ತೊಂದು ಶರೀರವನ್ನು ಆಶ್ರಯಿಸುವನು' ಎಂದನು. ಬಳಿಕ ಕೌಶಿಕನು 'ಎಲೈ ಧರ್ಮಜ್ಞನಾದ ವ್ಯಾಧನೆ, ಜೀವನು ಹ್ಯಾಗೆ ಶಾಶ್ವತನೆನಿಸಿಕೊಳ್ಳುವನು? ಅದನ್ನು ನನಗೆ ತಿಳುಹಿಸು' ಎನಲು; ಧರ್ಮವ್ಯಾಧನು 'ಎಲೈ ಕೌಶಿಕನೆ, ಜೀವನಿಗೆ ನಾಶವಿಲ್ಲವು. ಜೀವನು ಮೃತನಾದನೆಂದು ಮೂಢರು ಹೇಳುವರು. ಜೀವನು ಮತ್ತೊಂದು ಶರೀರವನ್ನು ಹೊಂದಿದ್ದರಿಂದ ಆತನು ಮೃತನಾದನೆಂದು ಪ್ರವಾದವು ಹುಟ್ಟುವದು. ಇದರಿಂದ ಜೀವನಿಗೆ ಶರೀರಭೇದವುಂಟಾಗುವದೇ ಹೊರತು ಆತನು ಮರಣವನ್ನು ಬೇರೆ ಹೊಂದುವದಿಲ್ಲ. ಮನುಷ್ಯಲೋಕದಲ್ಲಿ ಒಬ್ಬನು ಮಾಡಿದ ಕರ್ಮದ ಫಲವನ್ನು ಮತ್ತೊಬ್ಬನು ಅನುಭವಿಸುವದಿಲ್ಲವಾದ್ದರಿಂದ, ತಾನುಮಾಡಿದ ಕರ್ಮಫಲವನ್ನು ತಾನೇ ಅನುಭವಿಸಬೇಕೇ ಹೊರತು ಸುಮ್ಮನೆ ಅದು ನಷ್ಟವಾಗುವದಿಲ್ಲ. ಲೋಕದಲ್ಲಿ ಪುಣ್ಯಕರ್ಮವನ್ನು ಮಾಡಿದವರು ಪುಣ್ಯವಂತರಾಗಿರುವರು. ಮನುಷ್ಯನಾದವನು ತಾನು ಮಾಡಿದ ಪೂರ್ವಕರ್ಮಾನುಸಾರವಾಗಿಯೇ ಜನ್ಮವನ್ನು ಪಡೆಯುವನು' ಎಂದನು. ಬಳಿಕ ಕೌಶಿಕನು 'ಎಲೈ ಧರ್ಮಜ್ಞನಾದ ವ್ಯಾಧನೆ, ಜೀವನು ಹ್ಯಾಗೆ ಪರರ ಗರ್ಭದಲ್ಲಿ ಹುಟ್ಟುವನು? ಆತನಿಗೆ ಪುಣ್ಯಪಾಪಗಳ ಸಂಬಂಧವು ಹ್ಯಾಗುಂಟಾಗುವದು? ಪುಣ್ಯತಮವಾದ ಜಾತಿಯನ್ನೂ ಪಾಪಿಷ್ಠವಾದ ಜಾತಿಯನ್ನೂ ಹ್ಯಾಗೆ ಹೊಂದುವನು? ಇವುಗಳನ್ನು ವಿವರಿಸು' ಎನಲು, ಧರ್ಮವ್ಯಾಧನು 'ಎಲೈ ಕೌಶಿಕನೆ, ನೀನು ಕೇಳಿದ ಪ್ರಶ್ನೆಗಳಿಗೆ ಉತ್ತರವು ಪಿಂಡೋತ್ಪತ್ತಿಪ್ರಕಾಶಕ ಗ್ರಂಥದಲ್ಲಿ ವಿಸ್ತಾರವಾಗಿರುವದು. ಅದನ್ನು ನಾನು ನಿನಗೆ ಸೂಕ್ಷ್ಮವಾಗಿ ಹೇಳುವೆನು ಕೇಳು: ಜೀವನು ಕರ್ಮಬೀಜನ್ಯಾಯದಿಂದ ಕರ್ಮಸಾಮಗ್ರಿಯುಳ್ಳವನಾಗಿ ತನ್ನ ಶುಭಕರ್ಮದಿಂದ ಶುಭವಾದ ಯೋನಿಯಲ್ಲಿಯೂ ಪಾಪಕರ್ಮದಿಂದ ಪಾಪಯೋನಿಯಲ್ಲಿಯೂ ಜನಿಸುವನು. ಸಾತ್ವಿಕವಾದ ಕರ್ಮದಿಂದ ದೇವತ್ವವನ್ನೂ ರಾಜಸವಾದ ಕರ್ಮದಿಂದ ಮನುಷ್ಯತ್ವವನ್ನೂ ತಾಮಸವಾದ ಕರ್ಮದಿಂದ ನೀಚತ್ವವನ್ನೂ ಪಡೆಯುವನು; ಜನ್ಮ, ಮರಣ, ವೃದ್ಧಾಪ್ಯ ದುಃಖಗಳಿಂದ ಪೀಡಿತನಾಗಿ ಸಂಸಾರವೆಂಬ ನರಕದಲ್ಲಿ ಬಿದ್ದು ವ್ಯಥೆಪಡುವನು. ಹೀಗೆ ಜೀವರು ತಮ್ಮತಮ್ಮ ಪಾಪಕರ್ಮಗಳಿಂದ ಅನೇಕ ತಿರ್ಯಗ್ಯೋನಿಗಳಲ್ಲಿ ಹುಟ್ಟಿ ನರಕಯಾತನೆಯನ್ನು ಅನುಭವಿಸುವರು; ಆ ಕರ್ಮಶೇಷದಿಂದ ಪುನಃಪುನಃ ದುಷ್ಕರ್ಮಗಳನ್ನು ಮಾಡಿ, ರೋಗಿಗಳು ಅಪಥ್ಯದಿಂದ ಹ್ಯಾಗೆ ದುಃಖಪಡುವರೋ ಹಾಗೆ ದುಃಖಪಡುತ್ತ ಯಾವಾಗಲೂ ದುಃಖಿಗಳೆನ್ನಿಸಿಕೊಂಡೇ ಇರುವರು; ಮತ್ತು ಆ ಕರ್ಮವು ನಿವೃತ್ತವಾಗದೆ ಹೋಗಲು, ಬಹು ವೇದನೆಯನ್ನು ಹೊಂದಿ ಸಂಸಾರಚಕ್ರದಲ್ಲಿ ತಿರುಗುತ್ತಿರುವರು. ಇಂಥ ಸಂಸಾರದಲ್ಲಿ ವಿರಕ್ತನಾದ ಪುರುಷನು ಕರ್ಮದಿಂದ ಶುದ್ಧನಾಗಿ ತಪೋನಿಷ್ಠನಾಗಿ, ತಾನು ಮಾಡಿದ ಅನೇಕವಾದ ಸತ್ಕರ್ಮಗಳಿಂದ ಉತ್ತಮವಾದ ಲೋಕಗಳನ್ನು ಹೊಂದಿ ಅಲ್ಲಿ ಸುಖಪಡುವನು. ಯಾವಾಗಲೂ ಪಾಪಕೃತ್ಯವನ್ನು ಮಾಡತಕ್ಕವನಿಗೆ ಎಂದಿಗೂ ಪಾಪವು ನಷ್ಟವಾಗದೆ ಇರುವದು. ಅದ್ದರಿಂದ ಪಾಪಕರ್ಮವನ್ನು ಬಿಟ್ಟು ಪುಣ್ಯಕರ್ಮವನ್ನು ಮಾಡುವದಕ್ಕೇ ಪ್ರಯತ್ನವನ್ನು ಮಾಡುತ್ತಿರಬೇಕು. ಅಸೂಯೆಯಿಲ್ಲದವನೂ ಕೃತಜ್ಞನಾದವನೂ

ಉತ್ತಮವಾದ ಸುಖವನ್ನೂ ಧರ್ಮವನ್ನೂ ಅರ್ಥವನ್ನೂ ಸ್ವರ್ಗವನ್ನೂ ಪಡೆಯುವನು. ಜಾತಕರ್ಮಾದಿ ಸಂಸ್ಕಾರಗಳುಳ್ಳವನಾಗಿಯೂ ಜಿತೇಂದ್ರಿಯನಾಗಿಯೂ ವ್ರತನಿಷ್ಠನಾಗಿಯೂ ಮನೋನಿಗ್ರಹವನ್ನು ಮಾಡಿದವನಾಗಿಯೂ ಪ್ರಾಜ್ಞನಾಗಿಯೂ ಇರುವ ಪುರುಷನು ಈ ಲೋಕದಲ್ಲೂ ಪರಲೋಕದಲ್ಲೂ ಸಹ ಸುಖವನ್ನು ಪಡೆಯುವನು. ಎಲೈ ಕೌಶಿಕನೆ, ಸಜ್ಜನರು ಮಾಡತಕ್ಕ ಧರ್ಮಾಚರಣೆಯನ್ನೂ ಶಿಷ್ಟಾಚಾರವನ್ನೂ ಆಶ್ರಯಿಸಿ, ಎಲ್ಲರೂ ಕ್ಲೇಶವಿಲ್ಲದಂತೆ ಜೀವನವನ್ನು ಮಾಡಬೇಕು. ಲೋಕದಲ್ಲಿ ವೇದಶಾಸ್ತ್ರಜ್ಞರಾಗಿ ಸ್ವಧರ್ಮದಲ್ಲಿ ನಿರತರಾದ ಶಿಷ್ಟರು ಲೋಕಹಿತಾರ್ಥವಾಗಿ ಧರ್ಮೋಪದೇಶವನ್ನು ಮಾಡುವದಕ್ಕೆ ಸಿದ್ಧರಾಗಿರುವರು. ಅವರು ಉಪದೇಶಮಾಡತಕ್ಕ ಧರ್ಮದಲ್ಲಿ ಸಾಂಕರ್ಯದೋಷವು ತೋರುವದಿಲ್ಲ. ಪ್ರಾಜ್ಞನಾದವನು ಧರ್ಮದಿಂದಲೇ ಸಂತೋಷಪಡುವನು ; ಯಾವಾಗಲೂ ಧರ್ಮವನ್ನೇ ಮಾಡುವನು ; ಧರ್ಮದಿಂದ ಪ್ರಾಪ್ತವಾದ ಧನದಿಂದಲೇ ಜೀವಿಸುವನು ; ಯಾವ ಧರ್ಮದಲ್ಲಿ ಗುಣವನ್ನು ತಿಳಿಯುವನೋ ಆ ಧರ್ಮವನ್ನೇ ವೃದ್ಧಿಪಡಿಸಿ, ಅದರಿಂದಲೇ ಧರ್ಮಾತ್ಮನೆನಿಸಿಕೊಳ್ಳುವನು. ಅದರಿಂದ ಆತನು ಚಿತ್ತಶುದ್ಧಿಯನ್ನುಹೊಂದಿ ಮಿತ್ರರೊಡನೆ ಸಂತೋಷಪಡುತ್ತ, ಶರೀರವನ್ನುಬಿಟ್ಟ ಅನಂತರದಲ್ಲಿ ಉತ್ತಮಲೋಕವನ್ನು ಹೊಂದಿ ಅಲ್ಲಿ ಸುಖಿಯಾಗಿರುವನು. ಲೋಕದಲ್ಲಿ ಎಲ್ಲರೂ ಧರ್ಮದಿಂದಲೇ ಶಬ್ದಸುಖವನ್ನೂ ಸ್ಪರ್ಶಸುಖವನ್ನೂ ರೂಪಸುಖವನ್ನೂ ಗಂಧಸುಖವನ್ನೂ ಇನ್ನೂ ಇಷ್ಟವಾದ ಸುಖಗಳನ್ನೂ ಪ್ರಭುತ್ವವನ್ನೂ ಸಹ ಪಡೆಯುವರು. ಜ್ಞಾನಿಯಾದವನು ಜ್ಞಾನದೃಷ್ಟಿಯಿಂದ ಈ ಲೋಕದ ಸುಖದಲ್ಲಿ ವೈರಾಗ್ಯವನ್ನು ಪಡೆದು, ದೋಷಕ್ಕೆ ಅಧೀನನಾಗದೆಯೂ ಧರ್ಮವನ್ನು ಬಿಡದೆಯೂ ಇದ್ದುಕೊಂಡು, ಲೋಕವು ಅಶಾಶ್ವತವಾದದ್ದೆಂದು ತಿಳಿದು ಸರ್ವಸಂಗವನ್ನೂ ಬಿಡುವದಕ್ಕೆ ಪ್ರಯತ್ನವನ್ನು ಮಾಡಿ, ಬಳಿಕ ಇತರಸಹಾಯವಿಲ್ಲದೆ ದೈವಸಹಾಯದಿಂದಲೇ ಮೋಕ್ಷವನ್ನು ಪಡೆಯುವದಕ್ಕೆ ಉಜ್ಜುಗಿಸುವನು. ಅಂಥ ವಿರಕ್ತನಾದವನು ಪಾಪವನ್ನು ಹೊಂದದೆ ಧಾರ್ಮಿಕನೆನಿಸಿಕೊಂಡು ಉತ್ತಮವಾದ ಮೋಕ್ಷಗತಿಯನ್ನು ಪಡೆಯುವನು. ಎಲೈ ಕೌಶಿಕನೆ, ಜ್ಞಾನವೇ ಮೋಕ್ಷಕ್ಕೆ ಸಾಧನವಾದದ್ದು. ಅಂಥ ಜ್ಞಾನಕ್ಕೆ ಶಮದಮಾದಿಗಳು ಸಾಧನವಾದವುಗಳು. ಆ ಶಮದಮಾದಿಗಳಿಂದ ಪುರುಷನು ಯಾವಯಾವ ಸುಖವನ್ನು ಅಪೇಕ್ಷಿಸುವನೋ ಆ ಸುಖಗಳನ್ನೆಲ್ಲಾ ಅನುಭವಿಸುವನು. ಇಂದ್ರಿಯನಿಗ್ರಹದಿಂದಲೂ ಸತ್ಯದಿಂದಲೂ ದಮದಿಂದಲೂ ಬ್ರಾಹ್ಮಣನಾದವನು ಉತ್ತಮಗತಿಯನ್ನು ಪಡೆಯುವನು,' ಎಂದನು. ಬಳಿಕ ಕೌಶಿಕನು 'ಎಲೈ ಧರ್ಮವ್ಯಾಧನೆ, ಇಂದ್ರಿಯಗಳು ಯಾವವು ? ಅವುಗಳನ್ನು ನಿಗ್ರಹಿಸುವದು ಹ್ಯಾಗೆ ? ಅವುಗಳನ್ನು ನಿಗ್ರಹಿಸುವದರಿಂದ ಏನುಫಲ ? ಆ ಫಲವುಂಟಾಗತಕ್ಕ ಬಗೆ ಹ್ಯಾಗೆ ? ಇವುಗಳನ್ನು ಯಥಾರ್ಥವಾಗಿ ತಿಳಿಯಬೇಕೆಂದು ನನಗೆ ಕುತೂಹಲವಿರುವದು. ಅವುಗಳನ್ನು ನನಗೆ ತಿಳುಹಿಸು,' ಎಂದು ಧರ್ಮವ್ಯಾಧನನ್ನು ಕೇಳಿದನು" ಎಂದು ಮಾರ್ಕಂಡೇಯನು ಧರ್ಮರಾಯನಿಗೆ ಹೇಳಿದನು.

### ೨೧೯ನೇ ಅಧ್ಯಾಯ.—ಮಾರ್ಕಂಡೇಯಪರ್ವ—(ಧರ್ಮವ್ಯಾಧನು ಕೌಶಿಕನಿಗೆ ಧರ್ಮೋಪದೇಶಮಾಡಿದ್ದು.)

ವೈಶಂಪಾಯನಮುನೀಂದ್ರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಮಾರ್ಕಂಡೇಯನು ಧರ್ಮರಾಯನೊಡನೆ "ಎಲೈ ಧರ್ಮರಾಯನೆ, ಬಳಿಕ ಧರ್ಮವ್ಯಾಧನು 'ಎಲೈ ಕೌಶಿಕನೆ ಕೇಳು, ಮನುಷ್ಯರಿಗೆ ಪದಾರ್ಥಜ್ಞಾನವನ್ನು ಉಂಟುಮಾಡಿಕೊಡುವದಕ್ಕೋಸ್ಕರ ಮೊದಲು ಮನಸ್ಸು ಪ್ರವರ್ತಿಸುವದು. ವಸ್ತುಜ್ಞಾನವಾಗಲು ಮನಸ್ಸಿನಲ್ಲಿ ಕಾಮವುಂಟಾಗಿ, ಆ ವಸ್ತುಪ್ರಾಪ್ತಿಗಾಗಿ ಮಹತ್ತಾದ ಪ್ರಯತ್ನವನ್ನು ಮಾಡುತ್ತ, ಇಷ್ಟವಾದ ರೂಪರಸಾದಿಗಳಲ್ಲಿ ಪರಿಚಯವನ್ನು ಮಾಡುವನು. ಅದರಿಂದ ಆ ವಸ್ತುವಿನಲ್ಲಿ ಅನುರಾಗವುಂಟಾಗಿ ಬಳಿಕ ದ್ವೇಷವು ಹುಟ್ಟುವದು. ಅನಂತರದಲ್ಲಿ ಆಶೆಯು ಹುಟ್ಟಿ ಅದರಲ್ಲಿ ವ್ಯಾಮೋಹವುಂಟಾಗುವದು. ಈ ರೀತಿಯಾಗಿ ರಾಗದ್ವೇಷಗಳಿಂದಲೂ ಲೋಭದಿಂದಲೂ ಯುಕ್ತನಾದವನಿಗೆ ಧರ್ಮದಲ್ಲಿ ಬುದ್ಧಿಯು ಪ್ರವರ್ತಿಸದೆ ಡಂಭದಿಂದ ಧರ್ಮವನ್ನು ಮಾಡುವನು. ಕಪಟದಿಂದ ಧರ್ಮವನ್ನುಮಾಡುತ್ತ ಕಪಟದಿಂದ ಧನವನ್ನು ಸಂಪಾದಿಸುವದಕ್ಕೆ ಯತ್ನಿಸಲು, ಅದರಲ್ಲೇ ವಿಶೇಷವಾಗಿ ಬುದ್ಧಿಯುಂಟಾಗಿ ಬಳಿಕ ವಿದ್ವಾಂಸರು ವಿವೇಕವನ್ನು ಎಷ್ಟು ಹೇಳಿದರೂ

ಅವನ್ನು ಕೇಳದೆ ಪಾಪಕಾರ್ಯವನ್ನು ಮಾಡುತ್ತ, ತಾನು ನೀಚಕೃತ್ಯಮಾಡುತ್ತಿದ್ದರೂ ಕೇಳಿದವರಿಗೆ ಮಾತುಗಳಿಂದಮಾತ್ರ ಶ್ರುತಿಸಂಬಂಧವಾದ ಉತ್ತರವನ್ನು ಕೊಡುವನು. ಆ ಪಾಪಕೃತ್ಯವನ್ನು ಪುರುಷನು ಮನೋವಾಕ್ಕಾಯಗಳಿಂದ ಮಾಡುವನಾದ್ದರಿಂದ ಅದು ಮೂರು ವಿಧವಾಗಿರುವದು. ಅದು ಹ್ಯಾಗೆಂದರೆ, ನೀಚನಾದವನು ಯಾವಾಗಲೂ ಪಾಪವನ್ನೇ ಆಲೋಚಿಸುವನು; ಪಾಪವನ್ನೇ ನುಡಿಯುವನು; ಪಾಪವನ್ನೇ ಮಾಡುವನು. ಈ ರೀತಿಯಾಗಿರುವ ಪಾಪಾತ್ಮನಿಗೆ ಶಮದಮಾದಿಗುಣಗಳು ಉಂಟಾಗಲಾರವು. ಪಾಪಾತ್ಮನು ತನ್ನಹಾಗಿರತಕ್ಕವರ ಸಂಗಡಲೇ ಸ್ನೇಹವನ್ನುಮಾಡಿ, ಅದರಿಂದ ಇಹಪರಗಳಲ್ಲಿ ದುಃಖಪಡುವನು. ಎಲೈ ಕೌಶಿಕನೆ, ಧರ್ಮಪ್ರಾಪ್ತಿಯಾಗುವದನ್ನು ವಿವರಿಸುವೆನು ಕೇಳು. ಯಾವ ಪುರುಷನು ತನ್ನ ಪ್ರಜ್ಞೆಯಿಂದ ಮೊದಲೇ ದೋಷಗಳನ್ನು ತಿಳಿದು, ಸುಖದುಃಖಗಳ ಸ್ವರೂಪವನ್ನು ತಿಳಿಯುವದಕ್ಕಾಗಿ ಸಜ್ಜನರ ಸಂಗವನ್ನು ಮಾಡುವನೋ, ಆತನ ಬುದ್ಧಿಯು ಧರ್ಮದಲ್ಲಿ ಪ್ರವರ್ತಿಸುವದು' ಎಂದನು. ಬಳಿಕ ಕೌಶಿಕನು 'ಎಲೈ ಧರ್ಮವ್ಯಾಧನೆ, ಯಾರೂ ಹೇಳದಿರುವ ಪ್ರಿಯವಾದ ಧರ್ಮವನ್ನು ನೀನು ಹೇಳುವೆಯಾದ್ದರಿಂದ ನಿನ್ನ ಪ್ರಭಾವವನ್ನು ನೋಡಿದರೆ ನೀನೇ ಮಹರ್ಷಿಯೆಂದು ನನಗೆ ತೋರುವದು' ಎನಲು, ಧರ್ಮವ್ಯಾಧನು 'ಎಲೈ ಕೌಶಿಕನೆ, ಮಹಾಭಾಗ್ಯಶಾಲಿಗಳಾದ ಬ್ರಾಹ್ಮಣರೂ ಪಿತೃಗಳೂ ಸಹ ಯಾವಾಗಲೂ ಮೊದಲ ಪೂಜೆಯನ್ನು ಸ್ವೀಕರಿಸುವದಕ್ಕೆ ಅರ್ಹರಾದವರು. ಆದ್ದರಿಂದ ಲೋಕದಲ್ಲಿ ಬುದ್ಧಿಶಾಲಿಯಾದವನು ಅವರಿಗೆ ಪ್ರಿಯವಾದ ಕಾರ್ಯವನ್ನು ಮಾಡಬೇಕು. ಅಂಥ ಬ್ರಾಹ್ಮಣರಿಗೆ ಪ್ರಿಯವಾದ ಬ್ರಹ್ಮವಿದ್ಯವನ್ನು ಬ್ರಾಹ್ಮಣರಿಗೆ ನಮಸ್ಕಾರಮಾಡಿ ನಾನು ನಿನಗೆ ತಿಳುಹಿಸುವೆನು ಕೇಳು. ಈ ಪ್ರಪಂಚವೆಲ್ಲ ಪಂಚಭೂತಾತ್ಮಕವಾದದ್ದು. ಇದನ್ನು ಕರ್ಮದಿಂದ ಜಯಿಸುವದು ಸರ್ವಪ್ರಕಾರದಿಂದಲೂ ಅಶಕ್ಯವು. ಪರಬ್ರಹ್ಮನಿಗಿಂತಲೂ ಪ್ರಾಪ್ಯವಾದ ಮತ್ತೊಂದು ಶ್ರೇಷ್ಠವಾದ ವಸ್ತುವಿಲ್ಲವು. ಆಕಾಶ, ವಾಯು, ಅಗ್ನಿ, ಉದಕ, ಭೂಮಿ, ಈ ಐದೂ ಪಂಚಮಹಾಭೂತಗಳು; ಶಬ್ದ, ಸ್ಪರ್ಶ, ರೂಪ, ರಸ, ಗಂಧ, ಈ ಐದೂ ಕ್ರಮವಾಗಿ ಆ ಭೂತಗಳ ಗುಣಗಳು. ಈ ಮಹಾಭೂತಗಳ ಶಬ್ದಾದಿಗುಣಗಳು ಕ್ರಮವಾಗಿ ಪೂರ್ವಪೂರ್ವಗುಣಗಳನ್ನು ಪರಸ್ಪರವಾಗಿ ಅನುವರ್ತಿಸಿರುವವು. ಈಶ, ಸೂತ್ರ, ವಿರಾಟ್, ಎಂಬ ಮೂರು ರೂಪಗಳಲ್ಲಿಯೂ ಪೂರ್ವಪೂರ್ವಗುಣಗಳು ಕ್ರಮವಾಗಿ ಅನುವರ್ತಿಸಿಕೊಂಡಿರುವವು. ಆರನೇ ಪದಾರ್ಥವು ಮನಸ್ಸಾಗಿರುವದು; ಏಳನೇ ಪದಾರ್ಥವು ಅಹಂಕಾರವಾಗಿರುವದು. ಈ ಎಂಟೂ, ಐದು ಇಂದ್ರಿಯಗಳೂ, ಆತ್ಮನೂ, ಸತ್ವರಜಸ್ತಮೋಗುಣಗಳೂ ಸಹ ಸೇರಿ, ಈ ಹದಿನೇಳೂ ರಾಶೀಭೂತವಾಗಿ ಅವ್ಯಕ್ತವೆಂಬ ಹೆಸರನ್ನು ಪಡೆಯುವವು. ಆ ರಾಶಿಯು ಶಬ್ದಾದಿ ಐದು ಇಂದ್ರಿಯಾರ್ಥಗಳಿಂದಲೂ ವ್ಯಕ್ತಾವ್ಯಕ್ತಗಳೆಂಬ ಎರಡು ಗುಣಗಳಿಂದಲೂ ಕೂಡಿ ಇಪ್ಪತ್ತು ನಾಲ್ಕು ತತ್ವಗಳಾಗುವವು. ಎಲೈ ಕೌಶಿಕನೆ, ಇನ್ನೇನನ್ನು ಕೇಳಬೇಕೆಂದು ನಿನಗೆ ಕುತೂಹಲ ವಿರುವದೋಹೇಳು' ಎಂದು ಧರ್ಮವ್ಯಾಧನು ಕೌಶಿಕನಿಗೆ ವಿವರಿಸಿದನು" ಎಂದು ಮಾರ್ಕಂಡೇಯನು ಧರ್ಮರಾಯನಿಗೆ ಹೇಳಿದನು.

೨೧೧ನೇ ಅಧ್ಯಾಯ.—ಮಾರ್ಕಂಡೇಯಪರ್ವ—(ಧರ್ಮವ್ಯಾಧನು ಕೌಶಿಕನಿಗೆ ಧರ್ಮೋಪದೇಶಮಾಡಿದ್ದು.)

ವೈಶಂಪಾಯನಮುನೀಂದ್ರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಮಾರ್ಕಂಡೇಯನು ಧರ್ಮರಾಯನನ್ನು ಕುರಿತು, "ಎಲೈ ಧರ್ಮರಾಯನೆ, ಬಳಿಕ ಕೌಶಿಕನು ಧರ್ಮವ್ಯಾಧನೊಡನೆ 'ಎಲೈ ವ್ಯಾಧನೆ, ಮಹಾಭೂತಗಳು ಯಾವವು? ಆ ಪಂಚಭೂತಗಳ ಒಂದೊಂದು ಗುಣವನ್ನು ಪ್ರತ್ಯೇಕಪ್ರತ್ಯೇಕವಾಗಿ ನನಗೆ ತಿಳುಹಿಸು' ಎನಲು, ಆ ಧರ್ಮವ್ಯಾಧನು 'ಎಲೈ ಕೌಶಿಕನೇ ಕೇಳು. ಭೂಮಿ, ಉದಕ, ಅಗ್ನಿ, ವಾಯು, ಆಕಾಶವೆಂಬ ಐದು ಮಹಾಭೂತಗಳೂ ಕ್ರಮವಾಗಿ ಮುಂದೆಮುಂದೆ ಇರುವ ಭೂತಗಳೊಡನೆ ಪರಸ್ಪರವಾಗಿ ಕೂಡಿರುವವು. ಕ್ರಮವಾಗಿ ಅವುಗಳಲ್ಲಿರುವ ಗುಣಗಳನ್ನು ವಿವರಿಸುವೆನು ಕೇಳು. ಭೂಮಿಯು ಐದು ಗುಣಗಳುಳ್ಳದ್ದು. ಉದಕವು ನಾಲ್ಕು ಗುಣಗಳುಳ್ಳದ್ದು. ಅಗ್ನಿಯು ಮೂರು ಗುಣಗಳುಳ್ಳದ್ದು. ವಾಯುವು ಎರಡು ಗುಣಗಳುಳ್ಳದ್ದು. ಆಕಾಶವು ಒಂದು ಗುಣವುಳ್ಳದ್ದು. ಭೂಮಿಯು

ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳೆಂಬ ಐದು ಗುಣಗಳುಳ್ಳದ್ದರಿಂದ ಎಲ್ಲಾ ಭೂತಗಳಿಗಿಂತಲೂ ಅಧಿಕವಾದ ಗುಣಗಳುಳ್ಳದ್ದು. ಉದಕವು ಶಬ್ದ, ಸ್ಪರ್ಶ, ರೂಪ, ರಸಗಳೆಂಬ ನಾಲ್ಕು ಗುಣಗಳುಳ್ಳದ್ದು. ಅಗ್ನಿಯು ಶಬ್ದ, ಸ್ಪರ್ಶ, ರೂಪವೆಂಬ ಮೂರು ಗುಣಗಳುಳ್ಳದ್ದು. ವಾಯು ಶಬ್ದ, ಸ್ಪರ್ಶಗಳೆಂಬ ಎರಡು ಗುಣಗಳುಳ್ಳದ್ದು. ಆಕಾಶವು ಶಬ್ದವೆಂಬ ಒಂದು ಗುಣವುಳ್ಳದ್ದು. ಅಂತು ಭೂಮಿ ಮೊದಲಾದ ಐದು ಭೂತಗಳಲ್ಲಿಯೂ ಹದಿನೈದು ಗುಣಗಳು ಇರುವವು. ಈ ಭೂತಗಳಲ್ಲಿಯೇ ಲೋಕವು ಪ್ರತಿಷ್ಠಿತವಾಗಿರುವದು. ಈ ಪಂಚಭೂತಗಳು ಅನ್ಯೋನ್ಯವಾಗಿ ಕೂಡಿರುವವು. ಯಾವಾಗ ಭೂತಗಳು ತಮ್ಮತಮ್ಮ ಕಾರಣಗಳಲ್ಲಿ ಲೀನವಾಗುವವೋ ಆಗ ಜೀವನು ಮೊದಲಿದ್ದ ದೇಹವನ್ನು ಬಿಟ್ಟು ಕಾಲವಶದಿಂದ ದೇಹಾಂತರವನ್ನು ಪಡೆಯುವನು. ಇದರಿಂದಲೇ ಆ ಜೀವನು ಮೃತನಾದನೆಂದೂ ಹುಟ್ಟಿದನೆಂದೂ ಆತನನ್ನು ವ್ಯವಹರಿಸುವರು. ಎಲ್ಲಾ ಶರೀರದಲ್ಲಿಯೂ ಪಾಂಚಭೌತಿಕಧಾತುಗಳು ಕಾಣಿಸುತ್ತಿರುವವು. ಇಂಥ ಪಂಚಭೂತಗಳಿಂದ ಚರಾಚರಾತ್ಮಕಪ್ರಪಂಚವು ವ್ಯಾಪ್ತವಾಗಿರುವದು. ಇಂದ್ರಿಯಗಳಿಂದ ನಿರ್ಮಿತವಾದದ್ದು ವ್ಯಕ್ತವೆನಿಸಿಕೊಳ್ಳುವದು. ಲಿಂಗರೂಪಾದಿಪ್ರಕಾಶದಿಂದ ಗ್ರಾಹ್ಯವಾಗಿ ಅತೀಂದ್ರಿಯವಾಗಿರುವದು ಅವ್ಯಕ್ತವೆನಿಸಿಕೊಳ್ಳುವದು. ಯಾವಾಗ ಇಂದ್ರಿಯಗಳು ಶಬ್ದಾದಿವಿಷಯಗಳನ್ನು ಗ್ರಹಿಸುವವೋ ಆಗ, ಪ್ರಾಣಿಯು ತಾನು ಅವುಗಳನ್ನು ಗ್ರಹಿಸಿದಂತೆ ವೇದನೆಯನ್ನು ಹೊಂದುವನು. ಜ್ಞಾನಿಯಾದವನು ಆತ್ಮನಿಷ್ಠನಾಗಿ ಆತ್ಮನಲ್ಲಿ ಸಕಲಪ್ರಪಂಚವನ್ನೂ ಸಕಲಪ್ರಪಂಚದಲ್ಲೂ ಆತ್ಮನನ್ನೂ ಸಹ ನೋಡುವನು. ಅಂಥ ಬ್ರಹ್ಮಜ್ಞಾನಿಯ ಸಹವಾಸದಿಂದ ಸಕಲವಾದ ಪಾಪವೂ ನಿವೃತ್ತಿಯಾಗುವದು. ಯೋಗಿಯಾದವನಿಗೂ ಕ್ಲೇಶವೆಂಬುವದು ಜ್ಞಾನಮೂಲವಾಗಿಯೇ ಇರುವದು. ಲೋಕಸಂಬಂಧಿಯಾದ ವರ್ತನವನ್ನು ಪ್ರಕಾಶಮಾಡತಕ್ಕ ಜ್ಞಾನಮಾರ್ಗದಿಂದಲೇ ಮೋಕ್ಷವೆಂಬ ಪುರುಷಾರ್ಥವೂ ಲಭಿಸುವದು. ಎಲೈ ಕೌಶಿಕನೆ, ಜೀವವು ಅನಾದಿಯಾದದ್ದು, ನಾಶರಹಿತವಾದದ್ದು. ಈ ಜೀವನ ಸೃಷ್ಟಿಗೆ ಆತ್ಮನು ಕಾರಣನಾದವನು. ಮತ್ತು ಜೀವನನ್ನು ಆಕಾರರಹಿತನಾದವನೆಂತಲೂ ವಿಚಾರದಿಂದ ತಿಳಿಯಲಶಕ್ಯನಾದವನೆಂತಲೂ ಜ್ಞಾನಪ್ರದವಾದ ವೇದವು ಹೇಳಿರುವದು. ಈ ವಿಚಾರವನ್ನು ಜ್ಞಾನದಿಂದ ತಿಳಿಯತಕ್ಕದ್ದು. ಅಂಥ ಜ್ಞಾನವು ಇಂದ್ರಿಯನಿಗ್ರಹದ ಹೊರತು ಉಂಟಾಗುವದಿಲ್ಲ. ಇಂದ್ರಿಯಗಳನ್ನು ನಿಗ್ರಹಿಸಿದವರಿಗೆ ಸ್ವರ್ಗಪ್ರಾಪ್ತಿಯಾಗುವದು. ಇಂದ್ರಿಯವ್ಯಾಪಾರದಲ್ಲಿ ಸ್ವೇಚ್ಛೆಯಾಗಿ ಪ್ರವರ್ತಿಸಿದವರಿಗೆ ನರಕವಾಗುವದು. ಎಷ್ಟುಕಾಲ ಇಂದ್ರಿಯನಿಗ್ರಹವನ್ನು ಮಾಡುವನೋ ಅಷ್ಟುಕಾಲದ ವರೆಗೂ ಯೋಗಸಿದ್ಧಿಯು ಉಂಟಾಗುವದು. ಇಂದ್ರಿಯಗಳ ಸ್ವೇಚ್ಛಾಪ್ರವೃತ್ತಿಯಿಂದ ಪುರುಷನು ರಾಗದ್ವೇಷಾದಿಗಳನ್ನು ಪಡೆಯುವನು. ಆ ಇಂದ್ರಿಯಗಳ ನಿಗ್ರಹದಿಂದಲೇ ಸಿದ್ಧಿಯನ್ನು ಪಡೆಯುವನು. ಮನಸ್ಸು ಮೊದಲಾದ ಆರು ಇಂದ್ರಿಯಗಳನ್ನೂ ನಿಗ್ರಹಿಸಿದವನು ಹಾನಿಕರವಾದ ಪಾಪದ ಲೇಪವಿಲ್ಲದೆ ಮೋಕ್ಷವನ್ನು ಪಡೆಯುವನು. ಎಲೈ ಕೌಶಿಕನೆ, ಈ ಜೀವನಿಗೆ ಶರೀರವೇ ರಥವಾಗಿಯೂ ಆತ್ಮನೇ ಸಾರಥಿಯಾಗಿಯೂ ಇಂದ್ರಿಯಗಳೇ ಕುದುರೆಗಳಾಗಿಯೂ ಇರುವವು. ಕುದುರೆಗಳು ಸ್ವಾಧೀನಗಳಾಗಿದ್ದರೆ ರಥಿಕನು ಹ್ಯಾಗೆ ಸುಖವಾಗಿ ಹೋಗುವನೋ ಹಾಗೆ, ಇಂದ್ರಿಯಗಳೆಂಬ ಕುದುರೆಗಳು ಸ್ವಾಧೀನಗಳಾಗಿದ್ದರೆ ಶರೀರವೆಂಬ ರಥವನ್ನೇರಿದ ಜೀವನು ಸುಖವಾಗಿ ಹೋಗುವನು. ಸಾರಥಿಯು ಮಾರ್ಗದಲ್ಲಿ ಹಗ್ಗದಿಂದ ಕುದುರೆಗಳನ್ನು ಸ್ವಾಧೀನಮಾಡಿಕೊಂಡಿರುವಂತೆ, ಯಾವನು ಧೈರ್ಯದಿಂದ ಇಂದ್ರಿಯಗಳನ್ನು ಸ್ವಾಧೀನಮಾಡಿಕೊಂಡಿರುವನೋ ಆತನೇ ಇಂದ್ರಿಯಗಳನ್ನು ಜಯಿಸಿದವನು. ಯಾವನ ಮನಸ್ಸು ಇಂದ್ರಿಯಾಧೀನವಾಗಿರುವದೋ ಆತನ ಬುದ್ಧಿಯನ್ನು ಮನಸ್ಸು, ಸಮುದ್ರದಲ್ಲಿ ವಾಯುವು ನಾವೆಯನ್ನು ನಾಶಮಾಡುವಂತೆ ನಾಶಮಾಡಿಬಿಡುವದು. ಯಾವನು ಮನಸ್ಸು ಮೊದಲಾದ ಆರು ಇಂದ್ರಿಯಗಳಿಗೆ ವಿಷಯಗಳಾದ ಶಬ್ದಾದಿಗಳಲ್ಲಿ ಮೋಹದಿಂದ ಸುಖವನ್ನು ಅಪೇಕ್ಷಿಸದೆ ವಿರಕ್ತನಾಗುವನೋ ಆತನು ಧ್ಯಾನದಿಂದುಂಟಾಗತಕ್ಕ ಮಹಾಫಲವನ್ನು ಪಡೆಯುವನು' ಎಂದು ಧರ್ಮವ್ಯಾಧನು ಕೌಶಿಕನಿಗೆ ಹೇಳಿದನು" ಎಂದು ಮಾರ್ಕಂಡೇಯನು ಧರ್ಮರಾಯನಿಗೆ ವಿವರಿಸಿದನು.

## ೨೧೧ನೇ ಅಧ್ಯಾಯ.—ಮಾರ್ಕಂಡೇಯಪರ್ವ—(ಧರ್ಮವ್ಯಾಧನು ಕೌಶಿಕನಿಗೆ ಧರ್ಮೋಪದೇಶಮಾಡಿದ್ದು.)

ವೈಶಂಪಾಯನಮುನೀಂದ್ರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಮಾರ್ಕಂಡೇಯನು ಧರ್ಮರಾಯನನ್ನು ಕುರಿತು "ಎಲೈ ಧರ್ಮರಾಯನೆ, ಆ ಕೌಶಿಕನು ಧರ್ಮವ್ಯಾಧನೊಡನೆ, 'ಎಲೈ ಪ್ರಾಜ್ಞನೆ, ನೀನು ಸೂಕ್ಷ್ಮವಾದ ತತ್ವಗಳನ್ನು ತಿಳುಹಿಸಿದೆ. ಈಗ ಸತ್ವರಜಸ್ತಮೋಗುಣಗಳನ್ನು ಪ್ರತ್ಯೇಕಪ್ರತ್ಯೇಕವಾಗಿ ವಿಸ್ತರಿಸು' ಎನಲು, ಧರ್ಮವ್ಯಾಧನು 'ಎಲೈ ಬ್ರಾಹ್ಮಣನೆ, ಆ ಸತ್ವರಜಸ್ತಮೋಗುಣಗಳನ್ನು ಪ್ರತ್ಯೇಕಪ್ರತ್ಯೇಕವಾಗಿ ಹೇಳುವೆನು ಕೇಳು. ಈ ಮೂರುಗುಣಗಳ ಮಧ್ಯದಲ್ಲಿ ತಮೋಗುಣವು ಅಜ್ಞಾನಾತ್ಮಕವಾದದ್ದು. ರಜೋಗುಣವು ಕಾರ್ಯದಲ್ಲಿ ಸಮಸ್ತರಿಗೂ ಪ್ರವೃತ್ತಿಯನ್ನುಂಟುಮಾಡತಕ್ಕದ್ದು. ಸತ್ವಗುಣವು ಸಕಲಕ್ಕೂ ಪ್ರಕಾಶಕವಾದ್ದರಿಂದ ಅದೇ ಉತ್ತಮವಾದದ್ದು. ತಮೋಗುಣವುಳ್ಳವನು ಆಲಸನಾಗಿಯೂ, ದುಷ್ಟವಾದ ಇಂದ್ರಿಯವ್ಯಾಪಾರವುಳ್ಳವನಾಗಿಯೂ, ಕೋಪಸ್ವಭಾವನಾಗಿಯೂ, ಅಧಿಕವಾಗಿ ನಿದ್ರೆಮಾಡತಕ್ಕವನಾಗಿಯೂ, ಮೂಢನಾಗಿಯೂ, ಅಧಿಕವಾಗಿ ಅಜ್ಞಾನಿಯಾಗಿಯೂ ಇರುವನು. ರಜೋಗುಣವುಳ್ಳವನು ಪುರುಷಶ್ರೇಷ್ಠನಾಗಿಯೂ, ವಾಕ್ಚಾತುರ್ಯವುಳ್ಳವನಾಗಿಯೂ, ಮಂತ್ರಿಯಾಗಿಯೂ, ಪರದೋಷಗಳನ್ನು ತಿಳಿಯದವನಾಗಿಯೂ, ಯಾವದನ್ನೂ ಮನಸ್ಕರಿಸದವನಾಗಿಯೂ, ದುರಭಿಮಾನವುಳ್ಳವನಾಗಿಯೂ ಇರುವನು. ಸತ್ವಗುಣವುಳ್ಳವನು ಜ್ಞಾನಿಯಾಗಿಯೂ, ಧೀರನಾಗಿಯೂ, ವಿಚಾರಪರನಾಗಿಯೂ, ಅಸೂಯೆಯಿಲ್ಲದವನಾಗಿಯೂ, ಕೋಪರಹಿತನಾಗಿಯೂ, ಇಂದ್ರಿಯನಿಗ್ರಹವುಳ್ಳವನಾಗಿಯೂ, ಬುದ್ಧಿಶಾಲಿಯಾಗಿಯೂ ಇರುವನು. ಸಾತ್ವಿಕನಾದವನು ರಜಸ್ತಮಸ್ಸುಗಳ ಕಾರ್ಯದಲ್ಲಿ ಕ್ಲೇಶಪಡದೆ, ಯಾವಾಗ ತಿಳಿಯತಕ್ಕದ್ದನ್ನು ತಿಳಿಯುವನೋ ಆಗ ಲೋಕವೃತ್ತಾಂತವನ್ನು ನೋಡಿ ಜುಗುಪ್ಸೆಪಡುವನು. ಮೊದಲು ಅಹಂಕಾರವು ಕಡಮೆಯಾಗಿ ಋಜುಭಾವವು ಪ್ರಕಾಶವಾಗಿ ತೋರುವದೇ ವಿರಕ್ತನಾದವನಿಗೆ ಲಕ್ಷಣವು. ಅಂಥ ವಿರಕ್ತನಿಗೆ ಮಾನಾವಮಾನಾದಿಗಳು ಪರಸ್ಪರವಾಗಿ ಶಾಂತವಾಗಿ, ಸ್ವಲ್ಪವಾದರೂ ಸಂದೇಹಬುದ್ಧಿಯಿಲ್ಲದೆ ಇರುವದು. ಎಲೈ ಕೌಶಿಕನೆ, ಶೂದ್ರಜಾತಿಯಲ್ಲಿ ಹುಟ್ಟಿದವನು ಗುಣವಂತನಾಗಿದ್ದರೆ ಅವನಿಗೆ ವೈಶ್ಯತ್ವವೂ ಕ್ಷತ್ರಿಯತ್ವವೂ ಉಂಟಾಗಬಹುದು. ಆತನು ಋಜುಭಾವದಿಂದಿದ್ದರೆ ಬ್ರಹ್ಮಜ್ಞಾನವನ್ನೂ ಪಡೆಯುವನು. ಎಲೈ ಬ್ರಾಹ್ಮಣನೆ, ಸತ್ವರಜಸ್ತಮಸ್ಸುಗಳ ಗುಣಗಳನ್ನು ಹೇಳಿದ್ದಾಯಿತು. ಇನ್ನೇನನ್ನು ಕೇಳಬೇಕೆಂದು ಬಯಸುವೆಯೋ ಹೇಳು' ಎಂದು ಧರ್ಮವ್ಯಾಧನು ಕೌಶಿಕನಿಗೆ ಹೇಳಿದನು" ಎಂದು ಮಾರ್ಕಂಡೇಯನು ಧರ್ಮರಾಯನಿಗೆ ಹೇಳಿದನು.

## ೨೧೨ನೇ ಅಧ್ಯಾಯ.—ಮಾರ್ಕಂಡೇಯಪರ್ವ—(ಧರ್ಮವ್ಯಾಧನು ಕೌಶಿಕನಿಗೆ ಧರ್ಮೋಪದೇಶಮಾಡಿದ್ದು.)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಮಾರ್ಕಂಡೇಯನು ಧರ್ಮರಾಯನನ್ನು ಕುರಿತು "ಎಲೈ ಧರ್ಮರಾಯನೆ, ಬಳಿಕ ಕೌಶಿಕನು ಧರ್ಮವ್ಯಾಧನನ್ನು ಕುರಿತು 'ಎಲೈ ಧರ್ಮವ್ಯಾಧನೆ, ಈ ವಿಕಾರವಾದ ಚರ್ಮ ಮೊದಲಾದ ಧಾತುಮಯವಾದ ಶರೀರವನ್ನು ಹೊಂದಿ ಅಗ್ನಿಯು ಹ್ಯಾಗೆ ಈ ಶರೀರಕ್ಕೆ ಅಭಿಮಾನಿಯಾಗಿರುವದು? ಮತ್ತು ವಾಯುವು ನಾಡೀಮಾರ್ಗದಲ್ಲಿ ಸಂಚರಿಸುತ್ತ ಈ ಶರೀರವನ್ನು ಹ್ಯಾಗೆ ಕೆಲಸ ಮಾಡುವಹಾಗೆ ಮಾಡುವದು? ಇದನ್ನು ಹೇಳು' ಎನಲು, ಧರ್ಮವ್ಯಾಧನು 'ಎಲೈ ಕೌಶಿಕನೆ, ಅಗ್ನಿಯು ಶಿರಸ್ಸಿನಲ್ಲಿದ್ದುಕೊಂಡು ಶರೀರವನ್ನು ರಕ್ಷಿಸುವದು. ಪ್ರಾಣವೆಂಬ ವಾಯುವು ಭೂತಭವಿಷ್ಯದ್ವರ್ತಮಾನ ಕಾಲಗಳಲ್ಲಿರತಕ್ಕ ಸಕಲವಸ್ತುಗಳೂ ಪ್ರಾಣವೇ ಆಧಾರವಾಗಿರುವವು. ಆ ಪ್ರಾಣಕ್ಕೆ ಪರಬ್ರಹ್ಮನೇ ಕಾರಣನಾದವನಾದ್ದರಿಂದ ಆತನು ಸರ್ವವಸ್ತುಗಳಿಗೂ ಶ್ರೇಷ್ಠನಾದವನು. ಮತ್ತು ಆ ಜೀವನು ಮಹತ್ತತ್ವ, ಅಹಂಕಾರತತ್ವ, ಬುದ್ಧಿತತ್ವ, ಪಂಚಭೂತಗಳು ಇವುಗಳಿಗೆ ವಿಷಯನಾಗಿರುವನು. ಇಂಥ ಜೀವನ ಶರೀರದ ಮುಂದಲಭಾಗದಲ್ಲಿ ಪ್ರಾಣನಾಮಕವಾದ ವಾಯುವೂ ಹಿಂದಲಭಾಗದಲ್ಲಿ ಸಮಾನನಾಮಕವಾದ ವಾಯುವೂ

ಇದ್ದುಕೊಂಡು, ತಮ್ಮತಮ್ಮ ಗತಿಗಳಿಂದ ಈ ಶರೀರವನ್ನು ರಕ್ಷಿಸುವವು. ಆ ಸಮಾನವಾಯುವು ಜಠರಾಗ್ನಿಯನ್ನಾಶ್ರಯಿಸಿ, ಮಲಮೂತ್ರಾಶಯಗಳಲ್ಲಿರುವ ಶೀತಪಿತ್ತಾದಿದೋಷಗಳನ್ನು ಪಕ್ವಮಾಡಿ, ಮಲಮೂತ್ರಗಳನ್ನು ಆಯಾ ಮಾರ್ಗದಲ್ಲಿ ಹೋಗುವಹಾಗೆ ಮಾಡುವದು. ಉದಾನವೆಂಬ ವಾಯುವು ಈ ಶರೀರಕ್ಕೆ ಕೆಲಸ ಮಾಡುವಂತೆ ಪ್ರಯತ್ನವನ್ನೂ ಭಾರವಾದದ್ದನ್ನು ಹೊರುವಂತೆ ಬಲವನ್ನೂ ಉಂಟುಮಾಡಿ, ತಾನೊಂದಾವರೂ ಮೂರು ಸ್ಥಳಗಳಲ್ಲಿ ಪ್ರವರ್ತಿಸುವದು ಎಂದು ವಿದ್ವಾಂಸರು ಹೇಳುವರು. ವ್ಯಾನವಾಯುವು ಈ ಶರೀರದ ಎಲ್ಲಾ ಸಂಧಿಪ್ರದೇಶಗಳಲ್ಲಿಯೂ ಸಂಚರಿಸುತ್ತಿರುವದು. ಜಠರಾಗ್ನಿಯು ತ್ವಗಾದಿಧಾತುಗಳಲ್ಲಿ ವ್ಯಾಪ್ತವಾಗಿ, ವಾಯುವಿನಿಂದ ಪ್ರೇರಿತವಾಗಿ, ಅನ್ನಾದಿರಸಗಳನ್ನೂ ತ್ವಗಾದಿಧಾತುಗಳನ್ನೂ ವಾತಾದಿದೋಷಗಳನ್ನೂ ಪಕ್ವಮಾಡುತ್ತಿರುವದು. ಪ್ರಾಣವಾಯುಗಳ ಪರಸ್ಪರಸಂಘಟ್ಟನದಿಂದ ಶರೀರದಲ್ಲಿ ಹುಟ್ಟಿದ ಕಾವೇ ಅಗ್ನಿಯೆನಿಸಿಕೊಂಡು ಆಹಾರವನ್ನು ಪಚನಮಾಡುವದು. ಸಮಾನೋದಾನವಾಯುಗಳ ಮಧ್ಯದಲ್ಲಿ ಪ್ರಾಣಾಪಾನವಾಯುಗಳಿರುವವು. ಹೀಗೆ ಬಂದ ಕ್ಕೊಂದು ಸೇರಿ ಅಗ್ನಿಯನ್ನು ಹುಟ್ಟಿಸುವವು. ಆ ಅಗ್ನಿಯು ಅನ್ನಾದಿಗಳನ್ನು ಪಕ್ವಮಾಡುವದು. ಪ್ರಾಣಿಗಳ ದೇಹದಲ್ಲಿರುವ ಪಂಚಪ್ರಾಣಗಳಿಂದ ಹುಟ್ಟಿದ ಅಗ್ನಿಯು ಪಾಯುಪರ್ಯಂತವೂ ವ್ಯಾಪಿಸುವದು. ಅಲ್ಲಿರುವ ಅಪಾನ ವಾಯುವು ಮಲಮೂತ್ರಗಳು ಈಚೆಗೆ ಬರುವಂತೆ ನಾಡಿಯಲ್ಲಿ ಮಾರ್ಗವನ್ನು ಉಂಟುಮಾಡಿಕೊಡುವದು. ಪ್ರಾಣ ವಾಯುವು ಅಗ್ನಿಯ ವೇಗದಿಂದ ಪಾಯುಪರ್ಯಂತವೂ ಕೆಳಕ್ಕೆ ಹೋಗಿ, ಅಲ್ಲಿಂದ ಪುನಃ ಮೇಲಕ್ಕೆ ಎದ್ದು, ಅಗ್ನಿಯನ್ನು ವೃದ್ಧಿಪಡಿಸುವದು. ನಾಭಿಯ ಕೆಳಗಡೆ ಪಕ್ವಾಶಯವೂ ಮೇಲುಗಡೆ ಆಮಾಶಯವೂ ಇರುವವು. ನಾಭಿಯ ಮಧ್ಯದಲ್ಲಿ ಎಲ್ಲಾ ಪ್ರಾಣವಾಯುಗಳೂ ಅಡಗಿಕೊಂಡಿರುವವು. ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನ, ನಾಗ, ಕೂರ್ಮ, ಕೃಕರ, ದೇವದತ್ತ, ಧನಂಜಯ, ಎಂಬ ಈ ಹತ್ತುಪ್ರಕಾರವಾದ ವಾಯುಗಳಿಂದ ಪ್ರೇರಿತಗಳಾಗುವ ನಾಡಿಗಳು ಅನ್ನರಸಗಳನ್ನು ಹೃದಯದಮೇಲೂ ಕೆಳಗೂ ಸುತ್ತಲೂ ಸಹ ವಹಿಸುವವು. ಎಲೈ ಕೌಶಿಕನೆ, ಯೋಗಿಗಳಾದವರು ತಮ್ಮ ಯೋಗದಿಂದ ಆಯಾಸವಿಲ್ಲದೆ ಜೀವಾತ್ಮನನ್ನು ಸುಷುಮ್ನನಾಡೀಮಾರ್ಗದಿಂದ ಶಿರಸ್ಸಿನಲ್ಲಿ ತೆಗೆದುಕೊಂಡು ಹೋಗಿ ಇಟ್ಟು ಬ್ರಹ್ಮಸಾಕ್ಷಾತ್ಕಾರವನ್ನು ಹೊಂದುವರು. ಇದು ಯೋಗಿಗಳ ಮಾರ್ಗವು. ದಶೇಂದ್ರಿಯಗಳು, ಮನಸ್ಸು ಇವುಗಳಿಂದಲೂ; ಪ್ರಾಣ, ಶ್ರದ್ಧೆ, ಆಕಾಶ, ವಾಯು, ಅಗ್ನಿ, ಜಲ, ಪೃಥಿವಿ, ಇಂದ್ರಿಯ, ಮನ, ಅನ, ವೀರ್ಯ, ತಪಸ್ಸು, ಮಂತ್ರ, ಕರ್ಮ, ಲೋಕ, ನಾಮ ಎಂಬ ಈ ಹದಿನಾರು ಕಲೆಗಳಿಂದಲೂ ಕೂಡಿದ ಜೀವನನ್ನು ಮೂರ್ತಿಮಂತನೆಂದು ತಿಳಿ. ಆ ಜೀವನು ನಿತ್ಯನಾಗಿರುವನು. ಅವನು ಯೋಗದಿಂದ ಬುದ್ಧಿಯನ್ನು ಜಯಿಸಿದ್ದೇಆದರೆ ಜ್ಞಾನಿ ಎನಿಸಿಕೊಳ್ಳುವನು. ಈ ಶರೀರದಲ್ಲಿ ಸ್ಥಾಲಿಯಲ್ಲಿ ಅಗ್ನಿಯಿದ್ದಂತೆ ನಿತ್ಯವಾಗಿ ಯಾವನು ಇರುವನೋ ಅವನನ್ನೇ ಜೀವನೆಂದು ತಿಳಿ. ಇದನ್ನು ತಿಳಿದವನೇ ಯೋಗಿ ಎನಿಸಿಕೊಳ್ಳುವನು. ಅಂಥ ಜೀವನಲ್ಲಿ ತಾವರೆಯೆಲೆಯಲ್ಲಿನ ನೀರಿನಹನಿಯಂತೆ ಯಾವನು ಇರುವನೋ ಅವನೇ ಕ್ಷೇತ್ರಜ್ಞನೆನಿಸಿಕೊಳ್ಳುವ ಪರಮಾತ್ಮನೆಂದು ತಿಳಿ. ಸತ್ವರಜಸ್ತಮೋಗುಣಗಳು ಜೀವನ ಗುಣಗಳೆಂದು ತಿಳಿ. ಜೀವನು ಯಾವನನ್ನು ಆಶ್ರಯಿಸಿರುವನೋ ಆತನೇ ಪರಮಾತ್ಮನೆಂದು ತಿಳಿ. ಆ ಜೀವನಿಗೆ ಶರೀರವು ಭೋಗ್ಯವಸ್ತುವೆಂದು ತಿಳಿ. ಸಕಲಲೋಕಗಳಲ್ಲಿಯೂ ಇರತಕ್ಕ ಎಲ್ಲಾ ಪ್ರಾಣಿಗಳೂ ಕಾರ್ಯದಲ್ಲಿ ಪ್ರವರ್ತಿಸುವ ಹಾಗೆ ಯಾವನು ಮಾಡುವನೋ ಆತನನ್ನೇ ಪರಮಾತ್ಮನೆಂದು ಹೇಳುವರು. ಸಕಲಪ್ರಾಣಿಗಳಲ್ಲಿಯೂ ಅಂಥ ಪರಮಾತ್ಮನನ್ನು ಜ್ಞಾನಿಗಳಾದವರು ಶ್ರೇಷ್ಠವಾದ ಸೂಕ್ಷ್ಮದೃಷ್ಟಿಯಿಂದ ನೋಡುವರು. ಅಂಥಾ ಜ್ಞಾನಿಗಳು ಚಿತ್ತಶುದ್ಧಿಯಿಂದ ಶುಭಾಶುಭಕರ್ಮಗಳನ್ನು ಬಿಟ್ಟು ಆತ್ಮನಿಷ್ಠರಾಗಿ ಮೋಕ್ಷವನ್ನು ಪಡೆಯುವರು. ವಿಶೇಷವಾಗಿ ಗಾಳಿಯಿಲ್ಲದ ಸ್ಥಳದಲ್ಲಿ ಚೆನ್ನಾಗಿ ಹಚ್ಚಿಸಿದ ದೀಪವು ಹ್ಯಾಗೆ ಅಲ್ಲಾಡದೆ ಉರಿಯುವದೋ, ಮತ್ತು ತೃಪ್ತನಾದವನು ಹ್ಯಾಗೆ ಸುಖವಾಗಿ ನಿದ್ರೆಯನ್ನು ಮಾಡುವನೋ, ಹಾಗಿರುವದೇ ಚಿತ್ತಶುದ್ಧಿಗೆ ಲಕ್ಷಣವು. ಯಾವನು ಲಘುವಾದ ಆಹಾರವನ್ನು ಮಾಡಿ ರಾತ್ರಿಯ ಪೂರ್ವಾಪರಭಾಗಗಳಲ್ಲಿ ಮನಸ್ಸನ್ನು ನಿಗ್ರಹಿಸಿ ಚಿತ್ತಶುದ್ಧಿಯಿಂದ ಹೃದಯದಲ್ಲಿ ಆತ್ಮನನ್ನು ನೋಡುವನೋ ಅವನು ಜ್ಞಾನಿ ಎನಿಸಿಕೊಳ್ಳುವನು. ಮತ್ತು ಯಾವನು ಪ್ರಕಾಶವಾದ ದೀಪದಿಂದ ಲೌಕಿಕವಸ್ತುವನ್ನು ನೋಡುವಂತೆ ಮನಸ್ಸೆಂಬ ದೀಪದಿಂದ ನಿರ್ಗುಣನಾದ ಪರಮಾತ್ಮನನ್ನು ನೋಡುವನೋ ಅವನು, ಆ ಆತ್ಮ

ನಲ್ಲೇ ಲೀನವಾದ ಚಿತ್ತವೃತ್ತಿಯುಳ್ಳವನಾಗಿ ಮುಕ್ತಿಯನ್ನು ಪಡೆಯುವನು. ಸರ್ವಪ್ರಕಾರದಿಂದಲೂ ಲೋಭವನ್ನೂ ಕ್ರೋಧವನ್ನೂ ನಿಗ್ರಹಿಸುವದು ಉಕ್ತವಾದ ತಪಸ್ಸೆನಿಸಿಕೊಳ್ಳುವದು. ಅದೇ ಪಾಪವೆಂಬ ನದಿಯನ್ನು ದಾಟುವದಕ್ಕೆ ಸೇತುವೆಯಾದದ್ದು. ಕ್ರೋಧವನ್ನು ಬಿಟ್ಟು ತಪಸ್ಸನ್ನು ರಕ್ಷಿಸಿಕೊಳ್ಳಬೇಕು. ಮಾತ್ಸರ್ಯವನ್ನು ಬಿಟ್ಟು ಧರ್ಮವನ್ನು ರಕ್ಷಿಸಿಕೊಳ್ಳಬೇಕು. ಮಾನಾವಮಾನಗಳನ್ನು ಬಿಟ್ಟು ಜ್ಞಾನವನ್ನು ರಕ್ಷಿಸಿಕೊಳ್ಳಬೇಕು. ಪ್ರಮಾದವನ್ನು ಬಿಟ್ಟು ತನ್ನನ್ನು ತಾನು ರಕ್ಷಿಸಿಕೊಳ್ಳಬೇಕು. ಅಹಿಂಸೆಯೇ ಉತ್ತಮವಾದ ಧರ್ಮವು. ಕ್ಷಮೆಯೇ ಉತ್ತಮವಾದ ಬಲವು. ಆತ್ಮಜ್ಞಾನವೇ ಉತ್ತಮವಾದ ಜ್ಞಾನವು. ವ್ರತಗಳಲ್ಲಿ ಸತ್ಯವೇ ಉತ್ತಮವಾದ ವ್ರತವು. ಸತ್ಯವಚನವೇ ಶ್ರೇಯಸ್ಕರವಾದದ್ದು. ಸತ್ಯವಾದ ಜ್ಞಾನವೇ ಹಿತಕರವಾದದ್ದು. ಸಕಲಪ್ರಾಣಿಗಳಿಗೂ ಅತ್ಯಂತವಾಗಿ ಯಾವದು ಹಿತವಾದದ್ದೋ ಅದೇ ಸತ್ಯವೆನಿಸಿಕೊಳ್ಳುವದು. ಯಾವನ ಸಮಸ್ತಕಾರ್ಯಗಳೂ ಫಲೋದ್ದೇಶವಿಲ್ಲದೆ ಇರತಕ್ಕವುಗಳೋ, ಮತ್ತು ಯಾವನು ಮಾಡತಕ್ಕ ಯಜ್ಞಾದಿಕರ್ಮಗಳು ಫಲಾಪೇಕ್ಷೆಯಿಲ್ಲದೆ ಇರತಕ್ಕವುಗಳೋ ಆತನನ್ನೇ ಸರ್ವಸಂಗಪರಿತ್ಯಾಗಮಾಡಿದ ಜ್ಞಾನಿಯೆಂದು ಹೇಳುವರು. ಈ ಮಾರ್ಗವನ್ನು ಗುರುವಾದವನು ಮತ್ತೊಬ್ಬನಿಗೆ ಉಪದೇಶವನ್ನು ಮಾಡುವದಿಲ್ಲ. ಅದರ ಲಕ್ಷಣವನ್ನೂ ಮತ್ತೊಬ್ಬನಿಗೆ ಹೇಳುವದಿಲ್ಲವಾದ್ದರಿಂದ ಅದನ್ನು ಬ್ರಹ್ಮಜ್ಞಾನಿಯಾದವನೇ ತಿಳಿದುಕೊಳ್ಳುವನು. ಇದೇ ದುಃಖಸಂಯೋಗವಿಯೋಗರೂಪವಾದ ಯೋಗವೆನಿಸಿಕೊಳ್ಳುವದು. ಯಾವ ಪ್ರಾಣಿಗಳನ್ನೂ ಹಿಂಸಿಸಕೂಡದು ; ಸಕಲ ಪ್ರಾಣಿಗಳಲ್ಲಿಯೂ ಮಿತ್ರಭಾವದಿಂದಲೇ ಇರಬೇಕು. ಈ ಸ್ವಲ್ಪಕಾಲದ ಬದುಕಿಗಾಗಿ ಯಾರ ಸಂಗಡಲೂ ವೈರವನ್ನು ಮಾಡಬಾರದು. ದಾರಿದ್ರ್ಯವೂ ಸಂತೋಷವೂ ನಿರಾಹಾರವೂ ನಿಷ್ಕಿಂಚಲತ್ವವೂ ಸಹ ಆತ್ಮಜ್ಞಾನಕ್ಕೆ ಸಾಧಕಗಳಾಗಿರುವವು. ಪರಿಗ್ರಹವನ್ನು ಬಿಟ್ಟು ಬುದ್ಧಿಯಿಂದ ವ್ರತನಿಯಮವನ್ನು ಅನುಸರಿಸಿ ವೈರಾಗ್ಯವನ್ನು ಪಡೆದವನು ಈ ಲೋಕದಲ್ಲಿ ದೇಹವನ್ನು ಬಿಟ್ಟು ಸ್ವರ್ಗವನ್ನು ಹೊಂದುವನು. ತಪೋನಿಷ್ಠನಾಗಿಯೂ ಜಿತೇಂದ್ರಿಯನಾಗಿಯೂ ಮನಸ್ಸನ್ನು ನಿಗ್ರಹಿಸಿದವನಾಗಿಯೂ ದುಸ್ಸಂಗವನ್ನು ಬಿಟ್ಟವನಾಗಿಯೂ ಇರತಕ್ಕ ಮೌನಿಯು ಮೋಕ್ಷವನ್ನು ಪಡೆಯುವನು. ಗುಣಾಗುಣವಾಗಿಯೂ ಸಂಗರಹಿತವಾಗಿಯೂ ಜ್ಞಾನದೃಷ್ಟಿಯಿಂದ ತಿಳಿಯತಕ್ಕದ್ದಾಗಿಯೂ ಅಜ್ಞಾನರಹಿತವಾಗಿಯೂ ಸುಖಕ್ಕೆ ಮುಖ್ಯಸ್ಥಾನವಾಗಿಯೂ ಇರುವದೇ ಪರಬ್ರಹ್ಮಸ್ಥಿತಿಯೆಂದು ಹೇಳುವರು. ಯಾವನು ಸುಖದುಃಖಗಳನ್ನು ಬಿಟ್ಟು ಸಂಗದೋಷವಿಲ್ಲದೆ ಇರುವನೋ ಅವನು ಮೋಕ್ಷವನ್ನು ಪಡೆಯುವನು. ಎಲೈ ಕೌಶಿಕನೆ, ಯಥಾಶ್ರುತವಾಗಿ ಬ್ರಹ್ಮವಿದ್ಯವನ್ನು ಸೂಕ್ಷ್ಮವಾಗಿ ನಿನಗೆ ತಿಳಿಸಿರುವೆನು. ಇನ್ನೇನನ್ನು ಕೇಳಬೇಕೆಂದು ನಿನಗೆ ಅಪೇಕ್ಷೆಯಿರುವದು ?' ಎಂದು ಧರ್ಮವ್ಯಾಧನು ಪ್ರಶ್ನೆಮಾಡಿದನು " ಎಂದು ಮಾರ್ಕಂಡೇಯನು ಧರ್ಮರಾಯನಿಗೆ ಹೇಳಿದನು.

---

## ೨೧೩ನೇ ಅಧ್ಯಾಯು.—ಮಾರ್ಕಂಡೇಯಪರ್ವ—(ಧರ್ಮವ್ಯಾಧನು ಕೌಶಿಕನಿಗೆ ಧರ್ಮೋಪದೇಶಮಾಡಿದ್ದು.)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಬಳಿಕ ಮಾರ್ಕಂಡೇಯನು ಧರ್ಮರಾಯನನ್ನು ಕುರಿತು, "ಎಲೈ ಧರ್ಮರಾಯನೆ, ಈ ಪ್ರಕಾರ ಧರ್ಮವ್ಯಾಧನು ಹೇಳಿದ ಮೋಕ್ಷಧರ್ಮವನ್ನು ಕೇಳಿ ಕೌಶಿಕನು ಸಂತುಷ್ಟನಾಗಿ, ಆತನನ್ನು ಕುರಿತು 'ಎಲೈ ಧರ್ಮವ್ಯಾಧನೆ, ನೀನು ಹೇಳಿದ ಧರ್ಮಗಳೆಲ್ಲಾ ಶಾಸ್ತ್ರಸಮ್ಮತವಾಗಿರುವವು. ಧರ್ಮಗಳಲ್ಲಿ ನಿನಗೆ ತಿಳಿಯದ ಧರ್ಮವೇ ಇಲ್ಲ' ಎಂದು ಶ್ಲಾಘಿಸಲು, ಧರ್ಮವ್ಯಾಧನು 'ಎಲೈ ಕೌಶಿಕನೆ, ಯಾವ ಧರ್ಮಾಚರಣೆಯಿಂದ ನಾನು ಇಷ್ಟುಮಟ್ಟಿನ ಜ್ಞಾನವನ್ನು ಪಡೆದಿರುವೆನೋ ಆ ಧರ್ಮವನ್ನು ನಿನಗೆ ಪ್ರತ್ಯಕ್ಷವಾಗಿ ತೋರಿಸುವೆನು. ನಮ್ಮ ಮನೆಯೊಳಕ್ಕೆ ನಡೆ. ಅಲ್ಲಿ ನಮ್ಮ ಮಾತಾಪಿತೃಗಳನ್ನು ನೋಡು' ಎಂದು ನುಡಿದು, ಕೌಶಿಕನನ್ನು ಕರೆದುಕೊಂಡು ತನ್ನ ಮನೆಯನ್ನು ಹೊಕ್ಕು, ನಾಲ್ಕು ಚಿಕ್ಕಮನೆಗಳುಳ್ಳದ್ದಾಗಿಯೂ ದೇವತಾಗೃಹಕ್ಕೆ ಸಮಾನವಾಗಿಯೂ ಅಲ್ಲಲ್ಲಿ ಚಿತ್ರರೂಪವಾದ ದೇವತಾವಿಗ್ರಹಗಳಿಂದ ಅಲಂಕೃತವಾಗಿಯೂ ಮತ್ತು ಹಾಸಿಗೆಗಳಿಂದಲೂ ಪೀಠಗಳಿಂದಲೂ ಉತ್ತಮವಾದ ಗಂಧ

ದ್ರವ್ಯಗಳಿಂದಲೂ ಮನೋಹರವಾಗಿರುವ ಮಾಳಿಗೆಯ ಮೇಲಕ್ಕೆ ಹೋಗಿ, ಷಡ್ರಸೋಪೇತವಾದ ಅನ್ನವನ್ನು ಭುಂಜಿಸಿ ಶುಭ್ರವಾದ ವಸ್ತ್ರವನ್ನುಟ್ಟು ಪೀಠದಮೇಲೆ ಕೂತುಕೊಂಡಿದ್ದ ವೃದ್ಧರಾದ ತಮ್ಮ ಮಾತಾಪಿತೃಗಳನ್ನು ನೋಡಿ, ಅವರ ಪಾದಕ್ಕೆ ವಂದನೆಯನ್ನು ಮಾಡಿದನು. ಆಗ ಆ ವೃದ್ಧರು ಪುತ್ರನಾದ ಧರ್ಮವ್ಯಾಧನನ್ನು ಕುರಿತು 'ಎಲೈ ಧರ್ಮಜ್ಞನೆ, ಏಳು. ಧರ್ಮವು ನಿನ್ನನ್ನು ರಕ್ಷಿಸಲಿ. ನಿನ್ನ ಒಳ್ಳೇನಡತೆಯಿಂದ ನಾವು ಸುಪ್ರೀತರಾದೆವು. ನೀನು ಉತ್ತಮವಾದ ಜ್ಞಾನವನ್ನೂ ಮೇಧೆಯನ್ನೂ ಬೇಕಾದ ಇಷ್ಟಾರ್ಥಗಳನ್ನೂ ಪಡೆದು ದೀರ್ಘಾಯುಷ್ಮಂತನಾಗಿರು. ಮಾತಾಪಿತೃಗಳಿಗಿಂತಲೂ ಹೆಚ್ಚಾದ ಮತ್ತೊಂದು ದೈವವಿಲ್ಲವೆಂದು ತಿಳಿದಿರತಕ್ಕ ಸತ್ಪುತ್ರನಾದ ನಿನ್ನಿಂದ ನಾವು ಕಾಲಕಾಲದಲ್ಲೂ ಪೂಜಿತರಾಗಿರುವೆವು. ನೀನು ಬ್ರಾಹ್ಮಣರಲ್ಲಿ ವಿಶ್ವಾಸವುಳ್ಳವನಾಗಿಯೂ ಜಿತೇಂದ್ರಿಯನಾಗಿಯೂ ಇರುವದರಿಂದ ನಮ್ಮ ವಂಶದ ಎಲ್ಲಾ ಪಿತೃಗಳೂ ಸಂತುಷ್ಟರಾಗಿರುವರು. ಮನಸ್ಸಿನಿಂದಲೂ ಕರ್ಮದಿಂದಲೂ ವಾಕ್ಕಿನಿಂದಲೂ ಸಹ ನೀನು ನಮಗೆ ಮಾಡತಕ್ಕ ಶುಶ್ರೂಷೆಯು ಸ್ವಲ್ಪವೂ ಕಡಮೆಯಾಗದೆ ಇರುವದು. ಯಾವಾಗಲೂ ನಮ್ಮನ್ನು ಸೇವಿಸತಕ್ಕ ವಿಷಯದಲ್ಲಿ ನಿನ್ನ ಬುದ್ಧಿಯು ಒಂದೇ ರೀತಿಯಾಗಿರುವದು. ಪರಶುರಾಮನು ಯಾವ ಪ್ರಕಾರದಲ್ಲಿ ಮಾತಾಪಿತೃಗಳ ಸೇವೆಯನ್ನು ಮಾಡಿರುವನೋ ಹಾಗೆ ನೀನು ನಮ್ಮ ಸೇವೆಯನ್ನು ಮಾಡಿರುವೆ, ಮತ್ತು ಆತನಿಗಿಂತಲೂ ಹೆಚ್ಚಾಗಿಯೂ ನಮ್ಮನ್ನು ಸೇವಿಸಿರುವೆ' ಎನಲು, ಬಳಿಕ ಧರ್ಮವ್ಯಾಧನು ಅಲ್ಲಿಗೆ ಆ ಬ್ರಾಹ್ಮಣನು ಬಂದಿರುವದನ್ನು ಅವರಿಗೆ ತಿಳುಹಿಸಿದನು. ಬಳಿಕ ಆ ವೃದ್ಧರಿಬ್ಬರೂ ಆ ಬ್ರಾಹ್ಮಣನನ್ನು ಕುರಿತು 'ಎಲೈ ಬ್ರಾಹ್ಮಣನೆ, ನಿನಗೆ ಸುಖಾಗಮನವೆ?' ಎಂದು ಪೂಜಿಸಲು, ಕೌಶಿಕನು ಆ ಪೂಜೆಯನ್ನು ಸ್ವೀಕರಿಸಿ, ಆ ವೃದ್ಧರನ್ನು ಕುರಿತು 'ಎಲೈ ವೃದ್ಧರೆ, ನೀವು ಪುತ್ರನೊಡನೆಯೂ ಭೃತ್ಯರೊಡನೆಯೂ ಸುಖವಾಗಿರುವಿರಾ? ನಿಮ್ಮ ಶರೀರಕ್ಕೆ ಆರೋಗ್ಯವೆ' ಎನಲು, ಆ ವೃದ್ಧರು 'ಎಲೈ ಪೂಜ್ಯನೆ, ನಮ್ಮ ಗೃಹದಲ್ಲಿ ಸರ್ವರೂ ಸುಖವಾಗಿರುವರು. ನೀನು ಮಾರ್ಗದಲ್ಲಿ ಏನೂ ಬಾಧೆಯಿಲ್ಲದೆ ಇಲ್ಲಿಗೆ ಬಂದೆಯಷ್ಟೆ' ಎಂದು ಕೇಳಿದರು. ಬಳಿಕ ಕೌಶಿಕನು 'ಅಹುದು, ನಾನು ಮಾರ್ಗದಲ್ಲೇನೂ ಬಾಧೆಯಿಲ್ಲದೆ ಇಲ್ಲಿಗೆ ಬಂದೆನು' ಎನಲು, ಧರ್ಮವ್ಯಾಧನು ಆ ಕೌಶಿಕನನ್ನು ನೋಡಿ 'ಎಲೈ ಪೂಜ್ಯನೆ, ಈ ಮಾತಾಪಿತೃಗಳಿಬ್ಬರೂ ನನಗೆ ಪರದೈವವಾಗಿರುವರು. ಇಂದ್ರನೊದಲಾದ ಮೂವತ್ತುಮೂರುಮಂದಿ ದೇವತೆಗಳಿಗೂ ಮಾಡತಕ್ಕ ಪೂಜೆಯನ್ನೆಲ್ಲಾ ನಾನು ಇವರಿಗೆ ಮಾಡುವೆನು. ಬ್ರಾಹ್ಮಣರು ದೇವತಾರ್ಚನೆಗೋಸ್ಕರ ಹ್ಯಾಗೆ ಪುಷ್ಪಫಲಾದಿಗಳನ್ನು ತೆಗೆದುಕೊಂಡು ಬರುವರೋ ಹಾಗೆ, ನಾನು ಜಾಗರೂಕನಾಗಿ ಮಾತಾಪಿತೃಗಳ ಪೂಜೆಗೋಸ್ಕರ ಫಲಪುಷ್ಪಾದಿಗಳನ್ನು ತೆಗೆದುಕೊಂಡು ಬಂದು, ದೇವರಿಗೆ ಸಮಾನರಾದ ಈ ಮಾತಾಪಿತೃಗಳನ್ನು ಅವುಗಳಿಂದ ಸಂತೋಷಪಡಿಸುವೆನು. ದೊಡ್ಡವರಾದ ಜ್ಞಾನಿಗಳು ವೇದಗಳಿಂತಲೂ ಯಜ್ಞಗಳಿಂತಲೂ ಯಾವ ಯಾವವುಗಳನ್ನು ದೊಡ್ಡವೆಂದು ಹೇಳುವರೋ, ಅವೆಲ್ಲವು ನನಗೆ ಈ ವೃದ್ಧರಾದ ಮಾತಾಪಿತೃಗಳೇ ಎಂದು ತಿಳಿದುಕೊಂಡಿರುವೆನು. ಮತ್ತು ಪ್ರತಿದಿನದಲ್ಲೂ ನಾನೇ ಇವರಿಗೆ ಸ್ನಾನವನ್ನು ಮಾಡಿಸುವೆನು, ಇವರ ಪಾದಪ್ರಕ್ಷಾಳನೆಯನ್ನು ಮಾಡುವೆನು ಮತ್ತು ಇವರಿಗೆ ಅನುಕೂಲವಾದ ಆಹಾರವನ್ನೂ ಕೊಡುವೆನು. ಯಾವಾಗಲೂ ಇವರ ಸಂಗಡ ಅಪ್ರಿಯವಾದ ಮಾತುಗಳನ್ನಾಡದೆ ಪ್ರಿಯವಾದ ಮಾತುಗಳನ್ನೇ ಆಡುತ್ತಿರುವೆನು. ಅಧರ್ಮವಾದದ್ದು ಯಾವದಾದರು ಇವರಿಗೆ ಪ್ರಿಯವಾಗಿದ್ದಲ್ಲಿ, ಅದನ್ನೂ ಇವರ ಹಿತಾರ್ಥವಾಗಿ ನಾನು ಆಚರಿಸುವೆನು. ಇವರೇ ನನಗೆ ಪರಮಗುರುಗಳೆಂದು ಭಾವಿಸಿಕೊಂಡು ಎಚ್ಚರದಿಂದ ಇವರನ್ನು ಸೇವಿಸುತ್ತಿರುವೆನು. ಎಲೈ ಕೌಶಿಕನೆ, ಲೋಕದಲ್ಲಿ ಶ್ರೇಯಸ್ಸನ್ನು ಬಯಸತಕ್ಕ ಪುರುಷನಿಗೆ ತಂದೆ, ತಾಯಿ, ಆತ್ಮ, ಅಗ್ನಿ, ವಿದ್ಯಾಗುರು, ಈ ಐದು ಮಂದಿಯೂ ಗುರುಗಳಾಗಿರುವರು. ಈ ಐದು ಮಂದಿಯಲ್ಲೂ ಯಾವನು ಸರಿಯಾಗಿ ನಡೆಯುವನೋ ಅವನ ವಿಷಯದಲ್ಲಿ ದಕ್ಷಿಣಾಗ್ನಿ, ಗಾರ್ಹಪತ್ಯ, ಆಹವನೀಯಗಳೆಂಬ ಮೂರು ಅಗ್ನಿಗಳೂ ಸಂತುಷ್ಟಗಳಾಗುವವು. ಹೀಗೆ ನಡೆದುಕೊಳ್ಳುವದು ಗೃಹಸ್ಥಾಶ್ರಮದಲ್ಲಿರುವವನಿಗೆ ಅನಾದಿಯಾದ ಧರ್ಮವು' ಎಂದು ಧರ್ಮವ್ಯಾಧನು ಕೌಶಿಕನಿಗೆ ಹೇಳಿದ ಅರ್ಥವನ್ನು ಮಾರ್ಕಂಡೇಯನು ಧರ್ಮರಾಯನಿಗೆ ಹೇಳಿದನು.

## ೨೧೪ನೇ ಅಧ್ಯಾಯ.—ಮಾರ್ಕಂಡೇಯಪರ್ವ—(ಧರ್ಮವ್ಯಾಧನು ಕೌಶಿಕನಿಗೆ ಧರ್ಮೋಪದೇಶಮಾಡಿದ್ದು.)

ವೈಶಂಪಾಯನಮುನೀಂದ್ರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಮಾರ್ಕಂಡೇಯನು ತಿರುಗಿ ಧರ್ಮರಾಯನನ್ನು ಕುರಿತು, "ಎಲೈ ಧರ್ಮರಾಯನೆ, ಈ ಪ್ರಕಾರ ಧರ್ಮವ್ಯಾಧನು ವೃದ್ಧರಾದ ತನ್ನ ಮಾತಾಪಿತೃಗಳನ್ನು ಕೌಶಿಕನಿಗೆ ತೋರಿಸಿ, ಆತನನ್ನು ಕುರಿತು, 'ಎಲೈ ಕೌಶಿಕನೆ, ಮಾತಾಪಿತೃಗಳ ಶುಶ್ರೂಷೆಯಿಂದ ನನಗೆ ದಿವ್ಯದೃಷ್ಟಿಯುಂಟಾಗಿರುವದು ನೋಡು. ಪತಿ ಶುಶ್ರೂಷೆಯಲ್ಲಿ ಆಸಕ್ತಳಾಗಿಯೂ ಜಿತೇಂದ್ರಿಯಳಾಗಿಯೂ ಸತ್ಯಶೀಲಳಾಗಿಯೂ ಇರುವ ಆ ಪತಿವ್ರತೆಯು ಮಿಥಿಲಾಪಟ್ಟಣದಲ್ಲಿ ವಾಸಮಾಡುತ್ತಿರುವ ಧರ್ಮವ್ಯಾಧನು ನಿನಗೆ ಧರ್ಮವನ್ನು ಉಪದೇಶಮಾಡುವನು. ನೀನಲ್ಲಿಗೆ ಹೋಗೆಂದು ಇದಕ್ಕೋಸ್ಕರವೇ ನಿನ್ನನ್ನು ಇಲ್ಲಿಗೆ ಕಳುಹಿಸಿಕೊಟ್ಟಳು' ಎನಲು, ಕೌಶಿಕನು 'ಎಲೈ ಧರ್ಮವ್ಯಾಧನೆ' ಆ ಪತಿವ್ರತೆಯು ವಾಕ್ಯವನ್ನು ನೀನು ದಿವ್ಯದೃಷ್ಟಿಯಿಂದ ತಿಳಿದವನಾದ್ದರಿಂದ ನೀನು ಅತಿಶಯವಾದ ಗುಣದಿಂದ ಸಂಪನ್ನನಾದವನೆಂದು ನಾನು ನಂಬಿರುವೆನು ಎಂದು ಶ್ಲಾಘಿಸಿದನು. ಬಳಿಕ ಧರ್ಮವ್ಯಾಧನು 'ಎಲೈ ಕೌಶಿಕನೆ' ಆ ಪತಿವ್ರತೆಯು ನಿನ್ನನ್ನು ನನ್ನ ಬಳಿಗೆ ಹೋಗೆಂದು ಹೇಳಿದ್ದರಿಂದ ಆ ಪತಿವ್ರತಾಶಿರೋಮಣಿಯು ದಿವ್ಯಜ್ಞಾನ ಸಂಪನ್ನಳಾದವಳೆಂದು ನಾನು ತಿಳಿದುಕೊಂಡಿರುವೆನು. ನಾನು ಆಚರಿಸತಕ್ಕ ಧರ್ಮಗಳನ್ನೆಲ್ಲಾ ನಿನ್ನಲ್ಲಿ ವಿಶ್ವಾಸದಿಂದ ನಿನಗೆ ತೋರಿಸಿದೆನು. ಈಗ ನಿನಗೆ ಹಿತವಾದ ಮಾತನ್ನು ಹೇಳುವೆನು ಕೇಳು. ನೀನು ಮಾತಾಪಿತೃಗಳನ್ನು ವಂಚಿಸಿ ಅವರ ಅನುಜ್ಞೆಯನ್ನು ತೆಗೆದುಕೊಳ್ಳದೆ ವೇದಾಧ್ಯಯನದ ನಿಮಿತ್ತವಾಗಿ ಮನೆಯಿಂದ ಹೊರಕ್ಕೆ ಬಂದಿರುವೆ. ಈ ದುಃಖದಿಂದಲೇ ವೃದ್ಧರಿಬ್ಬರೂ ಅತ್ತುಅತ್ತು ಕಣ್ಣುಗಳನ್ನು ಹಾಳು ಮಾಡಿಕೊಂಡರು. ನೀನು ಜಾಗ್ರತೆಯಾಗಿ ಅವರ ಅನುಗ್ರಹವನ್ನು ಪಡೆಯುವದಕ್ಕೋಸ್ಕರ ಅವರ ಬಳಿಗೆ ಹೋಗು. ಹಾಗೆ ಮಾಡದಿದ್ದರೆ ತಪಸ್ವಿಯಾಗಿಯೂ ಧರ್ಮಶೀಲನಾಗಿಯೂ ಮಹಾತ್ಮನಾಗಿಯೂ ಇರುವ ನಿನ್ನ ಧರ್ಮವು ನಷ್ಟವಾಗಿ ಹೋಗುವದು. ನನ್ನ ಮಾತನ್ನು ಮೀರದೆ ಅವರಲ್ಲಿ ವಿಶ್ವಾಸವನ್ನಿಡು. ಈಗಲೇ ತಡಮಾಡದೆ ವೃದ್ಧರಾದ ಮಾತಾಪಿತೃಗಳ ಸನ್ನಿಧಿಗೆ ಹೋಗು. ನಿನ್ನ ಶ್ರೇಯಸ್ಸಿಗೋಸ್ಕರ ನಾನು ಈ ಮಾತನ್ನು ನಿನಗೆ ಹೇಳಿದೆನು' ಎನಲು, ಕೌಶಿಕನು 'ಎಲೈ ಧರ್ಮಜ್ಞನಾದ ಧರ್ಮವ್ಯಾಧನೆ, ನೀನು ಹೇಳಿದ್ದೆಲ್ಲಾ ಯಥಾರ್ಥವೇಸರಿ. ಈ ವಿಷಯದಲ್ಲಿ ಸಂದೇಹವಿಲ್ಲ. ಇದರಿಂದ ನಾನು ಸಂತುಷ್ಟನಾದೆನು. ನಿನಗೆ ಮಂಗಳವಾಗಲಿ' ಎಂದನು.

ಅದನ್ನು ಕೇಳಿ ಧರ್ಮವ್ಯಾಧನು 'ಎಲೈ ಕೌಶಿಕನೆ, ಆತ್ಮಜ್ಞಾನವಿಲ್ಲದವರಿಗೆ ಹೊಂದುವದಕ್ಕೆ ಅಶಕ್ಯವಾಗಿಯೂ ಪುರಾತನವಾಗಿಯೂ ಶಾಶ್ವತವಾಗಿಯೂ ಇರುವ ಧರ್ಮದಲ್ಲಿ ಆಸಕ್ತನಾಗಿರುವೆಯಾದ್ದರಿಂದ ನೀನು ದೇವತೆಗಳಿಗೆ ಸಮಾನನಾದವನು. ನೀನು ಮಾತಾಪಿತೃಗಳ ಸಮೀಪಕ್ಕೆ ಜಾಗ್ರತೆಯಾಗಿ ಹೋಗಿ ಅವರ ಶುಶ್ರೂಷೆಯನ್ನು ಮಾಡು. ಇದಕ್ಕಿಂತಲೂ ಮತ್ತೊಂದು ಧರ್ಮವು ಶ್ರೇಷ್ಠವಾದದ್ದೆಂದು ನಾನು ಹೇಳಲಾರೆನು' ಎನಲು, ಕೌಶಿಕನು 'ಎಲೈ ಮಹಾತ್ಮನಾದ ವ್ಯಾಧನೆ, ದೈವಯೋಗದಿಂದ ನಾನು ಇಲ್ಲಿಗೆ ಬಂದು ನಿನ್ನನ್ನು ನೋಡಿದೆನು. ಈ ರೀತಿಯಾಗಿ ಧರ್ಮವನ್ನು ತಿಳಿದವರು ಲೋಕದಲ್ಲಿ ದೊರೆಯಲಾರರು. ಸಾವಿರ ಜನದಲ್ಲಿ ಒಬ್ಬನಾದರೂ ಧರ್ಮವನ್ನು ಬಲ್ಲವನು ಇರುವನೋ ಇಲ್ಲವೋ ತಿಳಿಯದು. ನಿನ್ನ ಸತ್ಯಕ್ಕೆ ನಾನು ಮೆಚ್ಚಿ ಸಂತುಷ್ಟನಾದೆನು. ನಿನಗೆ ಮಂಗಳವಾಗಲಿ. ನರಕದಲ್ಲಿ ಬೀಳತಕ್ಕವನಾಗಿದ್ದ ನನ್ನನ್ನು ನೀನು ಉದ್ಧಾರಮಾಡಿದೆ. ಇಂಥ ಸುಕೃತವಿದ್ದದ್ದರಿಂದಲೇ ನಿನ್ನ ದರ್ಶನವು ನನಗೆ ದೊರೆಯಿತು. ಸ್ವರ್ಗದಿಂದ ಬೀಳುತ್ತಿದ್ದ ಯಯಾತಿರಾಯನನ್ನು ಆತನ ಮೊಮ್ಮಕ್ಕಳು ಹ್ಯಾಗೆ ತಾರಣಮಾಡಿದರೋ ಹಾಗೆ ನನ್ನನ್ನು ನೀನು ಉದ್ಧಾರಮಾಡಿದೆ. ಧರ್ಮಾಧರ್ಮಗಳ ನಿಶ್ಚಯವನ್ನು ತಿಳಿಯುವದು ಮೂಢರಿಂದ ಆಗತಕ್ಕದ್ದಲ್ಲ. ಎಲೈ ವ್ಯಾಧನೆ, ನಿನ್ನ ಆಜ್ಞಾನುಸಾರವಾಗಿ ನಾನು ಮಾತಾಪಿತೃಗಳ ಶುಶ್ರೂಷೆಯನ್ನು ಮಾಡುತ್ತೇನೆ. ಶಾಶ್ವತವಾಗಿಯೂ ತಿಳಿಯಲಶಕ್ಯವಾಗಿಯೂ ಇರುವ ಧರ್ಮವು ಶೂದ್ರಜಾತಿಯಲ್ಲಿ ಹುಟ್ಟಿದ ನಿನ್ನಲ್ಲಿರುವದನ್ನು ನೋಡಿದರೆ ನಿನ್ನನ್ನು ಶೂದ್ರನೆಂದು ನಾನು ತಿಳಿಯಲಾರೆನು. ಇದಕ್ಕೆ ಯಾವದೋ ಬಂದು

ಕಾರಣ ವಿರಬಹುದು. ಎಲೈ ವ್ಯಾಧನೆ, ನೀನು ಯಾವ ದುಷ್ಕರ್ಮದಿಂದ ಶೂದ್ರಜಾತಿಯಲ್ಲಿ ಹುಟ್ಟಿದೆಯೋ ಅದನ್ನು ತಿಳಿಯಬೇಕೆಂದು ನನಗೆ ಅಪೇಕ್ಷೆಯಿರುವದು. ನಿನಗೆ ಸಮ್ಮತವಾಗಿದ್ದರೆ ಅದನ್ನು ನನಗೆ ತಿಳುಹಿಸು' ಎಂದು ಕೇಳಿದನು.

ಅನಂತರದಲ್ಲಿ ಧರ್ಮವ್ಯಾಧನು 'ಎಲೈ ಬ್ರಾಹ್ಮಣಶ್ರೇಷ್ಠನೆ, ಬ್ರಾಹ್ಮಣರ ವಚನವನ್ನು ನಾನೆಂದಿಗೂ ಅತಿಕ್ರಮಿಸತಕ್ಕವನಲ್ಲ. ನನ್ನ ಜನ್ಮಾಂತರದ ವೃತ್ತಾಂತವನ್ನು ನಿನಗೆ ತಿಳುಹಿಸುವೆನು ಕೇಳು: ನಾನು ಪೂರ್ವ ಜನ್ಮದಲ್ಲಿ ಬ್ರಾಹ್ಮಣನಾಗಿ ವೇದವೇದಾಂಗಪಾರಂಗತನಾಗಿದ್ದೆನು. ಆಗ ಮಾಡಿದ ಸ್ವಯಂಕೃತವಾದ ಅಪರಾಧದಿಂದ ಈ ಜನ್ಮದಲ್ಲಿ ಈ ಅವಸ್ಥೆಯನ್ನು ಪಡೆದೆನು. ಆ ಜನ್ಮದಲ್ಲಿ ಧನುರ್ವಿದ್ಯಾಪಾರಂಗತನಾದ ಒಬ್ಬರಾಜನು ನನಗೆ ಸ್ನೇಹಿತನಾಗಿದ್ದನು. ಆತನೊಡನೆ ನಾನು ಧನುರ್ವೇದವನ್ನು ಓದಿದೆನು. ಹೀಗಿರುವಲ್ಲಿ ಒಂದಾನೊಂದುದಿನ ಆ ರಾಜನು ಅನೇಕಸೈನಿಕರೊಡನೆಯೂ ಮಂತ್ರಿಗಳೊಡನೆಯೂ ನನ್ನೊಡನೆಯೂ ಕೂಡಿ, ಬೇಟೆಗೋಸ್ಕರ ಅರಣ್ಯವನ್ನು ಹೊಕ್ಕನು. ಅಲ್ಲಿದ್ದ ಒಂದು ಋಷ್ಯಾಶ್ರಮದ ಬಳಿಯಲ್ಲಿ ನಾವೆಲ್ಲರೂ ಅನೇಕ ಮೃಗಗಳನ್ನು ಬೇಟೆಯಾಡಿದೆವು. ಆಗ ನಾನು ಧನುಸ್ಸಿನಲ್ಲಿ ಘೋರವಾದ ಒಂದು ಬಾಣವನ್ನು ಹೂಡಿ, ಅಲ್ಲಿದ್ದ ಒಬ್ಬ ಋಷಿಯನ್ನು ಮೃಗವೆಂದು ತಿಳಿದು, ಬಾಣದಿಂದ ಆತನನ್ನು ಹೊಡೆದೆನು. ಆ ಬಾಣದಿಂದ ಪೆಟ್ಟುಬಿದ್ದ ಆ ಋಷಿಯು—ಯಾರಿಗೂ ಅಪರಾಧವನ್ನು ಮಾಡದೆ ಇರತಕ್ಕ ನನ್ನನ್ನು ಯಾವ ಪಾಪಾತ್ಮನು ಬಾಣದಿಂದ ಹೊಡೆದನು—ಎಂದು ಗಟ್ಟಿಯಾಗಿ ಕೂಗಿಕೊಂಡನು. ಆ ಕೂಗನ್ನು ಕೇಳಿ ನಾನು ಆತನ ಬಳಿಗೆ ಹೋಗಿ, ನನ್ನ ಬಾಣದಿಂದ ಹತನಾಗಿದ್ದ ಆ ಋಷಿಯನ್ನು ನೋಡಿ—ಅಯ್ಯೋ! ಇಂಥ ಅಕಾರ್ಯವನ್ನು ನಾನು ಮಾಡಿದೆನಲ್ಲ!—ಎಂದು ಬಹಳವಾಗಿ ವ್ಯಥೆಪಟ್ಟು, ನನ್ನ ಬಾಣದಪೆಟ್ಟಿನಿಂದ ಸಂಕಟಪಡುತ್ತ ಭೂಮಿಯಮೇಲೆ ಹೊರಳಾಡುತ್ತಿದ್ದ ಆ ಋಷಿಯನ್ನು ಕುರಿತು—ಎಲೈ ಮಹಾತ್ಮನೆ, ನೀನು ಋಷಿಯೆಂದು ತಿಳಿಯದೆ ನಾನು ಅಜ್ಞಾನದಿಂದ ಈ ಕಾರ್ಯವನ್ನು ಮಾಡಿದೆನು; ಮಹಾನುಭಾವನಾದ ನೀನು ಈ ನನ್ನ ಅಪರಾಧವನ್ನು ಕ್ಷಮಿಸಬೇಕು—ಎಂದು ಬೇಡಿಕೊಂಡೆನು. ಆಗ ಆ ಋಷಿಯು ನನ್ನನ್ನು ನೋಡಿ ಕೋಪೋದ್ದೀಪಿತನಾಗಿ—ಎಲೈ ಪಾಪಾತ್ಮನೆ, ನೀನು ಬ್ರಾಹ್ಮಣನಾಗಿ ಇಂಥ ಅಕೃತ್ಯವನ್ನು ಮಾಡಿದ್ದರಿಂದ ನೀನು ಶೂದ್ರಜಾತಿಯಲ್ಲಿ ಹುಟ್ಟಿ ವ್ಯಾಧನಾಗು—ಎಂದು ನನಗೆ ಶಾಪವನ್ನು ಕೊಟ್ಟನು' ಎಂದು ಧರ್ಮವ್ಯಾಧನು ಹೇಳಿದನು" ಎಂದು ಮಾರ್ಕಂಡೇಯನು ಧರ್ಮರಾಯನಿಗೆ ವಿವರಿಸಿದನು.

೨೧೬ನೇ ಅಧ್ಯಾಯ.—ಮಾರ್ಕಂಡೇಯಪರ್ವ—(ಧರ್ಮವ್ಯಾಧನು ಕೌಶಿಕನಿಗೆ ಧರ್ಮೋಪದೇಶಮಾಡಿದ್ದು.)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಆಗ ಮಾರ್ಕಂಡೇಯನು ಧರ್ಮರಾಯನನ್ನು ಕುರಿತು "ಎಲೈ ಧರ್ಮರಾಯನೆ, ಆ ಧರ್ಮವ್ಯಾಧನು ಕೌಶಿಕನೊಡನೆ 'ಎಲೈ ಕೌಶಿಕನೆ ಕೇಳು. ಆಗ ನಾನು ಆ ಋಷಿಯನ್ನು ಕುರಿತು,—ಎಲೈ ಮಹಾತ್ಮನೆ, ನಾನು ಅಜ್ಞಾನದಿಂದ ಮಾಡಿದ ಈ ಅಪರಾಧವನ್ನು ನೀನು ಕ್ಷಮಿಸಬೇಕು—ಎಂದು ಬೇಡಿಕೊಳ್ಳಲು, ಆ ಋಷಿಯು—ಎಲೈ ದುಷ್ಟನೆ, ನಾನು ಕೊಟ್ಟಶಾಪವು ಅನ್ಯಥಾ ಆಗುವದಿಲ್ಲ. ಆದರೂ ನಿನ್ನಲ್ಲಿ ಕೃಪೆಯಿಂದ ನಾನು ಸ್ವಲ್ಪ ಅನುಗ್ರಹವನ್ನು ಮಾಡುತ್ತೇನೆ. ನೀನು ಶೂದ್ರಜಾತಿಯಲ್ಲಿ ಹುಟ್ಟಿದರೂ, ಧರ್ಮಜ್ಞನಾಗಿ, ಮಾತಾಪಿತೃಗಳ ಶುಶ್ರೂಷೆಯನ್ನು ಮಾಡಿ ಅದರಿಂದ ಉತ್ತಮವಾದ ಸಿದ್ಧಿಯನ್ನು ಹೊಂದಿ, ಜನ್ಮಾಂತರದ ಸ್ಮೃತಿಯುಳ್ಳವನಾಗಿ, ಶಾಪಾವಸಾನವಾದ ಮೇಲೆ ಯಥಾಪ್ರಕಾರ ಬ್ರಾಹ್ಮಣಜಾತಿಯಲ್ಲಿ ಹುಟ್ಟಿ ಸ್ವರ್ಗವನ್ನು ಪಡೆಯುವೆ—ಎಂದು ಆ ಮಹರ್ಷಿಯು ನನ್ನಲ್ಲಿ ಅನುಗ್ರಹವನ್ನು ಮಾಡಿದನು. ಬಳಿಕ ನಾನು ಆ ಮಹರ್ಷಿಯ ಎದೆಯಿಂದ ಬಾಣವನ್ನು ಕಿತ್ತು ಆತನನ್ನು ಆಶ್ರಮಕ್ಕೆ ಕರೆದುಕೊಂಡು ಹೋದೆನು. ಅದರಿಂದ ಆ ಮಹರ್ಷಿಯು ಮರಣವನ್ನು ಹೊಂದದೆ ಬದುಕಿದನು. ಇದು ನನ್ನ ಪೂರ್ವಜನ್ಮದ ವೃತ್ತಾಂತವು. ಮುಂದೆ ನಾನು ಬ್ರಾಹ್ಮಣಜನ್ಮವನ್ನೆತ್ತಿ ಸ್ವರ್ಗಕ್ಕೆ ಹೋಗಬೇಕಾ

ಗಿರುವದು' ಎಂದನು. ಬಳಿಕ ಕೌಶಿಕನು 'ಎಲೈ ಧರ್ಮವ್ಯಾಧನೆ, ಹೀಗೆಯೇ ಪುರುಷರಿಗೆ ಸುಖದುಃಖಗಳು ಪ್ರಾಪ್ತವಾಗುವವು. ಈ ವಿಷಯದಲ್ಲಿ ಧರ್ಮಜ್ಞನಾದ ನೀನು ಚಿಂತಿಸಬೇಡ. ನೀನು ನಿನ್ನ ಜಾತಿಯನ್ನು ತಿಳಿದು ನಿರಂತರದಲ್ಲೂ ಧರ್ಮಪರನಾಗಿದ್ದುಕೊಂಡು, ಮತ್ತೊಬ್ಬರಿಂದ ಆಚರಿಸುವದಕ್ಕೆ ಅಶಕ್ಯವಾದ ಕರ್ಮಗಳನ್ನು ಮಾಡುತ್ತಿರುವೆ. ಜನ್ಮಾಂತರದ ಕರ್ಮದೋಷದಿಂದಲೇ ನಿನಗೆ ಇಂಥ ಜನ್ಮವು ಪ್ರಾಪ್ತವಾಗಿರುವದು. ಇನ್ನು ಸ್ವಲ್ಪಕಾಲಕ್ಕೆ ನೀನು ತಿರುಗಿ ಬ್ರಾಹ್ಮಣಜನ್ಮವನ್ನೇ ಪಡೆಯುವೆ. ಈಗಲೂ ನೀನು ಬ್ರಾಹ್ಮಣನೇ ಎಂದು ನನಗೆ ತೋರುವದು. ಬ್ರಾಹ್ಮಣ ಜಾತಿಯಲ್ಲಿ ಹುಟ್ಟಿ ಶಾಸ್ತ್ರಜ್ಞನಾಗಿದ್ದರೂ ನೀಚವಾದ ಕಾರ್ಯದಲ್ಲಿ ಪ್ರವರ್ತಿಸಿ ಡಾಂಭಿಕನಾಗಿದ್ದರೆ, ಅಂಥವನು ಶೂದ್ರನಿಗೆ ಸಮಾನನೆಂದೂ; ಶೂದ್ರಜಾತಿಯಲ್ಲಿ ಹುಟ್ಟಿದವನು ಜಿತೇಂದ್ರಿಯನಾಗಿ ಸತ್ಯಧರ್ಮಗಳಲ್ಲಿ ಆಸಕ್ತನಾಗಿದ್ದ ಪಕ್ಷದಲ್ಲಿ, ಆತನನ್ನು ಬ್ರಾಹ್ಮಣನೆಂದೂ ನಾನು ತಿಳಿಯತಕ್ಕವನು. ಅವರವರ ಚರ್ಯದಿಂದಲೇ ಬ್ರಾಹ್ಮಣನೆಂತಲೂ ಶೂದ್ರನೆಂತಲೂ ಹೇಳಬೇಕು. ಎಲೈ ವ್ಯಾಧನೆ, ಕರ್ಮದೋಷದಿಂದಲೇ ನೀನು ಇಂಥ ದುರವಸ್ಥೆಯನ್ನು ಹೊಂದಿದೆ. ಈಗ ನೀನು ಧರ್ಮಾತ್ಮನಾಗಿರುವವರಿಂದ ನಿನ್ನಲ್ಲಿ ಯಾವ ದೋಷವೂ ಇಲ್ಲವೆಂದು ನಾನು ತಿಳಿಯುತ್ತೇನೆ. ಆದಕಾರಣ ನೀನು ಚಿಂತಿಸಬೇಡ. ನಿನ್ನಂಥಪ್ರಾಜ್ಞರು ಎಂದಿಗೂ ಚಿಂತಿಸತಕ್ಕವರಲ್ಲ' ಎಂದನು. ಆ ಮಾತನ್ನು ಕೇಳಿ ಧರ್ಮವ್ಯಾಧನು 'ಎಲೈ ಕೌಶಿಕನೆ, ಜ್ಞಾನದಿಂದ ಮನೋವ್ಯಥೆಯನ್ನೂ ಔಷಧದಿಂದ ಶರೀರವ್ಯಾಧಿಯನ್ನೂ ಪರಿಹರಿಸಿಕೊಳ್ಳುವದೇ ಜ್ಞಾನದ ಸಾಮರ್ಥ್ಯವೆಂದು ತಿಳಿ. ಈ ಪ್ರಕಾರ ಜ್ಞಾನವಿರತಕ್ಕವನು ಬಾಲನಾದರೂ ವೃದ್ಧನೆನಿಸಿಕೊಳ್ಳುವನು. ಅಲ್ಪಬುದ್ಧಿಯಾದ ಮನುಷ್ಯನು ಇಷ್ಟನಿವೃತ್ತಿಯೂ ಅನಿಷ್ಟಪ್ರಾಪ್ತಿಯೂ ಆಗಲು ದುಃಖಿಸುವನು. ಗುಣದಿಂದ ಉಂಟಾಗತಕ್ಕ ಸುಖದುಃಖಗಳು ಕೆಲವು ಕಾಲದಲ್ಲಿ ಸಂಭವಿಸುವವು; ಕೆಲವು ಕಾಲದಲ್ಲಿ ನಿವೃತ್ತಿಯಾಗುವವು. ಸುಖದುಃಖಗಳಿಗೆ ಸರ್ವರೂ ಆಶ್ರಯವಾಗಿರುವರೆಂದು ತಿಳಿ. ದುಃಖಿಯಾದವನು ಜಾಗ್ರತೆಯಾಗಿ ವಿರಕ್ತಿಯನ್ನು ಪಡೆದು ದುಃಖಪರಿಹಾರಕ್ಕೆ ತಕ್ಕ ಯತ್ನವನ್ನು ಮಾಡಬೇಕು. ಯಾವಾಗಲೂ ದುಃಖಪಡುತ್ತಲೇ ಇರತಕ್ಕವನಿಗೆ ಸಂತಾಪಮಾತ್ರವೇ ಪ್ರಯೋಜನವೇ ಹೊರತು ಮತ್ತಾವ ಪ್ರಯೋಜನವೂ ಇಲ್ಲ. ಬುದ್ಧಿಶಾಲಿಯಾದ ಮನುಷ್ಯನು ಜ್ಞಾನವನ್ನು ಪಡೆದು ಅವರಿಂದ ಸುಖದುಃಖಗಳೆರಡನ್ನೂ ಬಿಟ್ಟದ್ದೇ ಆದರೆ, ಬಳಿಕ ಶಾಶ್ವತವಾದ ಸುಖವನ್ನು ಪಡೆಯುವನು. ಮೂಢರಾದವರು ಯಾವಾಗಲೂ ಅಸಂತುಷ್ಟರಾಗಿರುವರು. ಪಂಡಿತರು ಸಂತುಷ್ಟರಾಗಿರುವರು. ಅಸಂತುಷ್ಟಿಗೆ ಕೊನೆಯೇ ಇಲ್ಲದಿರುವದು. ಸಂತುಷ್ಟಿಯಿಂದ ಉತ್ತಮವಾದ ಸುಖವುಂಟಾಗುವದು. ಜ್ಞಾನಿಗಳಾದವರು ದುಃಖಪಡದೆ ಉತ್ತಮವಾದ ಗತಿಯನ್ನು ಸಂಪಾದಿಸುವರು. ಎಲೈ ಬ್ರಾಹ್ಮಣನೆ, ನೀನು ಯಾವಾಗಲೂ ವಿಷಾದದಲ್ಲಿ ಮನಸ್ಸನ್ನು ಇಡಬೇಡ. ವಿಷಾದವು ವಿಷಕ್ಕೆ ಸಮಾನವಾದದ್ದು. ಬಾಲನಾದವನನ್ನು ಕೋಪವುಳ್ಳ ಸರ್ಪವು ಹ್ಯಾಗೆ ನಾಶಮಾಡಿಬಿಡುವದೋ ಹಾಗೆ, ಅಜ್ಞಾನಿಯಾದವನನ್ನು ವಿಷಾದವು ನಾಶಮಾಡಿಬಿಡುವದು. ಪರಾಕ್ರಮವನ್ನು ಮಾಡತಕ್ಕ ಕಾಲದಲ್ಲಿ ಯಾವನು ವಿಷಾದಪಡುವನೋ ಆತನು, ತೇಜೋಹೀನನಾಗಿ ಯಾವ ಪ್ರಯೋಜನವನ್ನೂ ಹೊಂದದೆ ಇರುವನು. ಮಾಡತಕ್ಕ ಕೆಲಸಕ್ಕೆ ಫಲವು ಅವಶ್ಯವಾಗಿ ತೋರುವದು. ಬೇಸರದಿಂದ ಯಾವ ಕೆಲಸವನ್ನೂ ಮಾಡದಿರತಕ್ಕವನಿಗೆ ಶುಭವೇ ಆಗದಿರುವದು. ದುಃಖನಿವೃತ್ತಿಗೋಸ್ಕರ ಎಲ್ಲರೂ ಉಪಾಯವನ್ನು ಮಾಡಲೇಬೇಕು. ಸುಮ್ಮನೆ ದುಃಖಪಡದೆ ದುಃಖಪರಿಹಾರಕ್ಕೆ ಉಪಾಯವನ್ನು ಮಾಡತಕ್ಕವನು ಆ ದುಃಖವನ್ನು ಪರಿಹರಿಸಿಕೊಳ್ಳುವನು. ತತ್ವಜ್ಞಾನಿಗಳಾದ ಪ್ರಾಜ್ಞರು ಪಂಚಭೂತಗಳೂ ಅಸ್ಥಿರವಾದವುಗಳೆಂದು ತಿಳಿದು, ಯಾವಾಗಲೂ ದುಃಖಪಡದೆ ಉತ್ತಮವಾದ ಗತಿಯನ್ನು ಹೊಂದುವರು. ಎಲೈ ಬ್ರಾಹ್ಮಣನೆ, ಈ ನಿದರ್ಶನಗಳಿಂದ ನಾನು ದುಃಖಪಡದೆ ಕಾಲವನ್ನು ನಿರೀಕ್ಷಿಸುತ್ತ ಚಪಲಪಡದೆ ಇರುವೆನು' ಎಂದು ನುಡಿದನು.

ಬಳಿಕ ಕೌಶಿಕನು 'ಎಲೈ ವ್ಯಾಧನೆ, ನೀನು ಮೇಧಾವಿಯಾದವನು ಮತ್ತು ಪ್ರಾಜ್ಞನಾದವನು. ನಿನ್ನ ಬುದ್ಧಿಯು ದೊಡ್ಡದು. ನೀನು ಧರ್ಮವನ್ನು ತಿಳಿದು ಜ್ಞಾನದಿಂದ ತೃಪ್ತನಾಗಿರುವೆ. ಆದ್ದರಿಂದ ನಿನ್ನನ್ನು ನೋಡಿ ನನಗೆ ಸಂತೋಷವುಂಟಾಗಿರುವದು. ನಿನಗೆ ಶ್ರೇಯಸ್ಸಾಗಲಿ. ನಿನ್ನ ಧರ್ಮವೇ ನಿನ್ನನ್ನು ರಕ್ಷಿಸುವದು.

ನೀನು ಧರ್ಮಕಾರ್ಯದಲ್ಲೇ ಜಾಗರೂಕನಾಗಿರಬೇಕು. ನೀನು ಅನುಜ್ಞೆಯನ್ನು ಕೊಟ್ಟರೆ ನಮ್ಮ ಸ್ಥಳಕ್ಕೆ ನಾನು ಹೋಗಿಬರುವೆನು' ಎನಲು, ಧರ್ಮವ್ಯಾಧನು 'ಕೈಮುಗಿದುಕೊಂಡು ಬಳ್ಳೇದು ಹಾಗೆಯೇ ಆಗಲಿ' ಎಂದು ನುಡಿದನು. ಬಳಿಕ ಆ ಕೌಶಿಕನು ಧರ್ಮವ್ಯಾಧನಿಗೆ ಪ್ರದಕ್ಷಿಣೆಯಾಗಿ ಹೊರಟು ತನ್ನ ಮನೆಗೆ ಬಂದು, ಧರ್ಮವ್ಯಾಧನು ಹೇಳಿದಂತೆ ವೃದ್ಧರಾದ ತನ್ನ ಮಾತಾಪಿತೃಗಳ ಸೇವೆಯನ್ನು ಶಾಸ್ತ್ರೋಕ್ತಪ್ರಕಾರವಾಗಿ ಮಾಡುತ್ತಿದ್ದನು" ಎಂಬದಾಗಿ ಮಾರ್ಕಂಡೇಯಋುಷಿಯು ಧರ್ಮರಾಯನಿಗೆ ವಿವರಿಸಿದನು.

ಈ ಪ್ರಕಾರವಾಗಿ ಮಾರ್ಕಂಡೇಯಮಹರ್ಷಿಯು ಧರ್ಮರಾಯನಿಗೆ ಪತಿವ್ರತಾಮಹಾತ್ಮ್ಯವನ್ನೂ ಧರ್ಮವ್ಯಾಧನು ಕೌಶಿಕನಿಗೆ ಹೇಳಿದ ಮಾತಾಪಿತೃಗಳ ಶುಶ್ರೂಷೆಯನ್ನೂ ತಿಳುಹಿಸಲು, ಬಳಿಕ ಧರ್ಮರಾಯನು "ಎಲೈ ಮಾರ್ಕಂಡೇಯನೆ, ಈ ಧರ್ಮವ್ಯಾಧೋಪಾಖ್ಯಾನವು ಆತ್ಯಾಶ್ಚರ್ಯಕರವಾದದ್ದು. ಈ ಆಖ್ಯಾನವನ್ನು ನೀನು ಹೇಳುತ್ತಿರಲು, ಇದನ್ನು ಕೇಳುತ್ತ ನಾನು ಬಹುಕಾಲವನ್ನು ಬಂದು ಮುಹೂರ್ತದಂತೆ ಕಳೆದೆನು. ಈ ಧರ್ಮವನ್ನು ಎಷ್ಟು ಕೇಳುತ್ತಿದ್ದರೂ ನನಗೆ ತೃಪ್ತಿಯೇ ಆಗದಿರುವದು" ಎಂದು ಹೇಳಿದನು.

## ೨೧೬ನೇ ಅಧ್ಯಾಯು.—ಮಾರ್ಕಂಡೇಯಪರ್ವ—(ಆಂಗೀರಸನ ವಂಶದ ಕಥೆ.)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಈ ಪ್ರಕಾರ ಧರ್ಮರಾಯನು ಮಂಗಳಕರವಾದ ಉಪಾಖ್ಯಾನವನ್ನು ಕೇಳಿದಬಳಿಕ ಮಾರ್ಕಂಡೇಯಮಹರ್ಷಿಯನ್ನು ಕುರಿತು "ಎಲೈ ಮಾರ್ಕಂಡೇಯಮಹರ್ಷಿಯೆ, ಪೂರ್ವದಲ್ಲಿ ಅಗ್ನಿಯು ಉದಕವನ್ನು ಪ್ರವೇಶಿಸಿ ನಷ್ಟನಾಗಲು, ಅಂಗಿರಸ್ಸೆಂಬ ಋಷಿಯು ತಾನು ಅಗ್ನಿಯಾಗಿ ದೇವತೆಗಳಿಗೋಸ್ಕರ ಹವಿಸ್ಸನ್ನು ಸ್ವೀಕರಿಸಿದನಷ್ಟೆ. ಆದರೆ ಲೋಕದಲ್ಲಿ ಯಾಗಾದಿಕರ್ಮಗಳು ಅನೇಕವಾದ್ದರಿಂದ ಒಬ್ಬ ಅಗ್ನಿಯು ಆ ಎಲ್ಲಾ ಕರ್ಮಗಳಲ್ಲಿಯೂ ಹವಿಸ್ಸನ್ನು ಸ್ವೀಕರಿಸತಕ್ಕದ್ದು ಹ್ಯಾಗೆ? ಅಗ್ನಿಗೆ ಪುತ್ರನಾದ ಕುಮಾರಸ್ವಾಮಿಯು ಮಹಾದೇವನದೆಸೆಯಿಂದ ಗಂಗೆಯಲ್ಲಿಯೂ ಆರುಮಂದಿ ಕೃತ್ತಿಕೆಯರಲ್ಲಿಯೂ ಹ್ಯಾಗೆ ಉತ್ಪನ್ನನಾದನು? ಇವುಗಳನ್ನು ಕೇಳಬೇಕೆಂದು ತುಂಬಾ ಕುತೂಹಲವಿರುವದು. ಇವನ್ನು ತಿಳುಹಿಸು" ಎಂದು ಪ್ರಾರ್ಥಿಸಲು, ಮಾರ್ಕಂಡೇಯನು "ಎಲೈ ಧರ್ಮರಾಯನೆ, ಪೂರ್ವದಲ್ಲಿ ಅಗ್ನಿಯು ಕೋಪಗೊಂಡು ತಪಸ್ಸುಮಾಡಬೇಕೆಂದು ಉದಕವನ್ನು ಪ್ರವೇಶಮಾಡಿ ಬಳಿಕ ತಾನೇ ಅಂಗಿರಸ್ಸೆಂಬ ಋಷಿಯಾದ ವಿಷಯದಲ್ಲಿ ಪುರಾತನವಾದ ಬಂದು ಇತಿಹಾಸವನ್ನು ಹೇಳುವೆನು ಕೇಳು: ಪೂರ್ವದಲ್ಲಿ ಅಂಗಿರಸ್ಸೆಂಬ ಋಷಿಯು ಉತ್ತಮವಾದ ತಪಸ್ಸನ್ನು ಮಾಡಿ, ತನ್ನ ತಪಸ್ಸಿನ ಪ್ರಭಾವದಿಂದ ಸೂರ್ಯನಂತೆ ಅಂಧಕಾರವನ್ನು ನಾಶಮಾಡುತ್ತ, ತನ್ನ ಆಶ್ರಮದಲ್ಲೇ ಇದ್ದುಕೊಂಡು ಅಗ್ನಿಗಿಂತಲೂ ಅಧಿಕವಾಗಿ ಪ್ರಕಾಶಿಸುತ್ತ ಜಗತ್ತನ್ನೆಲ್ಲಾ ಪ್ರಕಾಶಮಾಡಿದನು. ಆಗ ತಪಸ್ಸನ್ನು ಮಾಡುತ್ತಿದ್ದ ಅಗ್ನಿಯು ಆ ಋಷಿಯ ತೇಜಸ್ಸಿನಿಂದ ಸಂತಾಪವನ್ನು ಪಡೆದು, ಅಧಿಕವಾಗಿ ಬಳಲಿ, ಯಾವ ದಿಕ್ಕೂ ತೋರದೆ 'ನಾನು ತಪೋನಿಷ್ಠನಾಗಲು, ನನ್ನ ಅಗ್ನಿತ್ವವು ನಷ್ಟವಾಗಿ ಬ್ರಹ್ಮನಿಂದ ಮತ್ತೊಬ್ಬ ಅಗ್ನಿಯು ನೇಮಿಸಲ್ಪಟ್ಟನು. ನಾನು ಪುನಃ ಹ್ಯಾಗೆ ಅಗ್ನಿತ್ವವನ್ನು ಪಡೆದೇನು?' ಎಂದು ಆಲೋಚಿಸಿ, ತನ್ನ ತಪಶ್ಶಕ್ತಿಯಿಂದ ಲೋಕವನ್ನೆಲ್ಲ ತಪಿಸುತ್ತಿದ್ದ ಅಂಗಿರೋಮಹರ್ಷಿಯನ್ನು ನೋಡಿ, ಭಯದಿಂದ ಆತನ ಸಮೀಪಕ್ಕೆ ಹೋದನು. ಆಗ ಅಂಗಿರಸ್ಸು ಅಗ್ನಿಯನ್ನು ಕುರಿತು 'ಎಲೈ ಅಗ್ನಿಯೆ, ಸ್ಥಾವರಜಂಗಮಾತ್ಮಕವಾದ ಈ ಜಗತ್ತಿನಲ್ಲಿ ಒಳಗೂ ಹೊರಗೂ ನೀನೇ ಇರತಕ್ಕವನೆಂದು ಎಲ್ಲರೂ ಭಾವಿಸುವರಾದ್ದರಿಂದಲೂ, ಮೊದಲು ಬ್ರಹ್ಮನು ನಿನ್ನನ್ನೇ ಅಗ್ನಿಯನ್ನಾಗಿ ನಿರ್ಮಾಣಮಾಡಿದ್ದರಿಂದಲೂ, ಜಾಗ್ರತೆಯಾಗಿ ನೀನು ನಿನ್ನ ಅಧಿಪತ್ಯವನ್ನು ವಹಿಸಬಹುದು' ಎಂದು ಹೇಳಲು; ಅಗ್ನಿಯು 'ಎಲೈ ಬ್ರಹ್ಮಪುತ್ರನೆ, ನನ್ನ ಕೀರ್ತಿಯು ಲೋಕದಲ್ಲಿ ನಷ್ಟವಾಯಿತು. ನಿನ್ನ ತಪೋಮಹಿಮೆಯಿಂದ ಎಲ್ಲರೂ ನಿನ್ನನ್ನೇ ಅಗ್ನಿಯೆಂದು ಭಾವಿಸುತ್ತಿರುವರು. ಆದ್ದರಿಂದ ನನ್ನ ಅಗ್ನಿತ್ವವನ್ನು ನಿನ್ನಲ್ಲಿಡುವೆನು. ನೀನು ಮೊದ

ಲನೇ ಅಗ್ನಿಯಾಗು, ನಾನು ಎರಡನೇ ಅಗ್ನಿಯಾಗುವೆನು' ಎಂದನು. ಆ ಮಾತನ್ನು ಕೇಳಿ ಅಂಗಿರಸ್ಸು 'ಎಲೈ ಅಗ್ನಿಯೆ, ಯಜ್ಞಾದಿಕರ್ಮಗಳಲ್ಲಿ ಜನಗಳು ಸ್ವರ್ಗಪ್ರಾಪ್ತಿಗೋಸ್ಕರ ಕೊಡತಕ್ಕ ಪುಣ್ಯತಮವಾದ ಹವಿಸ್ಸನ್ನು ನೀನು ಸ್ವೀಕರಿಸುತ್ತಲೂ ಜಗತ್ತಿನಲ್ಲಿ ಅಂಧಕಾರವನ್ನು ನಾಶಮಾಡುತ್ತಲೂ ಇದ್ದುಕೊಂಡು, ನನ್ನನ್ನು ಮೊದಲನೇ ಪುತ್ರನನ್ನಾಗಿ ಮಾಡಿಕೊ' ಎನಲು, ಆ ಮಾತನ್ನು ಕೇಳಿ ಅಗ್ನಿಯು ಹಾಗೆಯೇ ಆಗಲೆಂದೊಪ್ಪಿಕೊಂಡನು. ಬಳಿಕ ಅಂಗಿರಸ್ಸಿಗೆ ಬೃಹಸ್ಪತಿಯೆಂಬ ಪುತ್ರನು ಹುಟ್ಟಿದನು. ಅದನ್ನು ತಿಳಿದು ದೇವತೆಗಳು ಅಂಗಿರಸ್ಸಿನ ಬಳಿಗೆ ಬಂದು ಬೃಹಸ್ಪತಿಯ ಉತ್ಪತ್ತಿಗೆ ಕಾರಣವನ್ನು ಕೇಳಲು, ಅಂಗಿರಸ್ಸು ಅದಕ್ಕೆ ಕಾರಣವನ್ನು ಅವರಿಗೆ ತಿಳುಹಿಸಲು, ದೇವತೆಗಳು ಆ ಬೃಹಸ್ಪತಿಯನ್ನು ತಮಗೆ ಗುರುವನ್ನಾಗಿ ಮಾಡಿಕೊಂಡರು. ಎಲೈ ಧರ್ಮರಾಯನೆ, ಕರ್ಮಗಳಿಗಾಗಿ ಹುಟ್ಟಿದ ವಿಧಿವಾಕ್ಯಗಳಲ್ಲಿ ಕರ್ಮಗಳು ಅನೇಕವಾಗಿರುವವು ಎಂದು ಹೇಳಿರುವದ್ದರಿಂದಲೂ, ಆಯಾ ಕರ್ಮಗಳಿಗೂ ಫಲಗಳು ನಾನಾಪ್ರಕಾರವಾಗಿರುವದರಿಂದಲೂ, ಅಗ್ನಿಗಳು ಅನೇಕವಾಗಿರುವವು ಎಂದು ತಿಳಿದುಕೊ" ಎಂದು ಮಾರ್ಕಂಡೇಯನು ಧರ್ಮರಾಯನಿಗೆ ಹೇಳಿದನು.

## ೨೧೭ನೇ ಅಧ್ಯಾಯ.—ಮಾರ್ಕಂಡೇಯಪರ್ವ—(ಆಂಗೀರಸನ ವಂಶದ ಕಥೆ.)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಮಾರ್ಕಂಡೇಯನು ಧರ್ಮರಾಯನನ್ನು ಕುರಿತು "ಎಲೈ ಧರ್ಮರಾಯನೆ, ಬ್ರಹ್ಮದೇವನಿಗೆ ಮೂರನೇ ಮಗನಾದ ಅಂಗಿರಸ್ಸಿಗೆ ಸುಭಾ ಎಂಬ ಪತ್ನಿಯು ಇದ್ದಳು. ಆಕೆಯಲ್ಲಿ ಹುಟ್ಟಿದವರನ್ನು ಹೇಳುವೆನು ಕೇಳು. ಬೃಹತ್ಕೀರ್ತಿ, ಬೃಹಜ್ಜ್ಯೋತಿ, ಬೃಹದ್ಬ್ರಹ್ಮ, ಬೃಹನ್ಮನ, ಬೃಹನ್ಮಂತ್ರ, ಬೃಹದ್ಭಾಸ, ಬೃಹಸ್ಪತಿಯೆಂಬ ಎಂಟು ಮಂದಿ ಗಂಡುಮಕ್ಕಳೂ, ಅತಿಸೌಂದರ್ಯವತಿಯಾದ ಭಾನುಮತಿಯೆಂಬ ಒಬ್ಬ ಮಗಳೂ, ಸಕಲ ಪ್ರಾಣಿಗಳಿಗೂ ಅನುರಾಗವನ್ನು ಹುಟ್ಟಿಸುವದರಿಂದ ರಾಗಾ ಎಂಬ ಹೆಸರನ್ನು ಪಡೆದ ಒಬ್ಬ ಮಗಳೂ, ಪಾರ್ವತಿಗೆ ಸಮಾನವಾದ ರೂಪುಳ್ಳ ಸಿನೀವಾಲಿಯೆಂಬ ಒಬ್ಬ ಮಗಳೂ, ಯಾವಳ ಕಾಂತಿಯಿಂದ ರಾತ್ರಿಕಾಲದಲ್ಲೂ ಜನಗಳು ವಸ್ತುಗಳನ್ನು ನೋಡುವರೋ ಅಂಥ ಅರ್ಚಿಷ್ಮತಿಯೆಂಬ ಒಬ್ಬ ಮಗಳೂ, ಯಾವಳಲ್ಲಿ ಹವಿಸ್ಸನ್ನು ಕೊಡುವದರಿಂದ ದೇವತೆಗಳೆಲ್ಲರೂ ಸಂತುಷ್ಟರಾಗುವರೋ ಅಂಥ ಹವಿಷ್ಮತಿಯೆಂಬ ಒಬ್ಬ ಮಗಳೂ, ಪುಣ್ಯವತಿಯಾದ ಮಹಿಷ್ಮತಿಯೆಂಬ ಒಬ್ಬ ಮಗಳೂ, ಸೋಮಯಾಗ ಮೊದಲಾದ ಮಹಾಯಜ್ಞಗಳಲ್ಲಿ ಪ್ರಖ್ಯಾತಳಾದ ಮಹಾಮತಿಯೆಂಬ ಒಬ್ಬ ಮಗಳೂ, ಯಾವಳನ್ನು ನೋಡಿ ಜನಗಳು ಆಶ್ಚರ್ಯಪಡುವರೋ ಅಂಥ ಕುಹೂ ಎಂಬ ಒಬ್ಬ ಮಗಳೂ ಸಹ ಹುಟ್ಟಿದರು" ಎಂದು ಮಾರ್ಕಂಡೇಯನು ಧರ್ಮರಾಯನಿಗೆ ಹೇಳಿದನು.

## ೨೧೮ನೇ ಅಧ್ಯಾಯ.—ಮಾರ್ಕಂಡೇಯಪರ್ವ—(ಆಂಗೀರಸನ ವಂಶದ ಕಥೆ.)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಮಾರ್ಕಂಡೇಯನು ಧರ್ಮರಾಯನನ್ನು ಕುರಿತು "ಎಲೈ ರಾಯನೆ, ಬೃಹಸ್ಪತಿಗೆ ಪತ್ನಿಯಾದ ತಾರೆ ಯೆಂಬವಳು ಆರುಮಂದಿ ಅಗ್ನಿಗಳನ್ನೂ ಒಬ್ಬ ಕನ್ಯೆಯನ್ನೂ ಪ್ರಸವಿಸಿದಳು. ಆ ಆರುಮಂದಿ ಅಗ್ನಿಗಳಲ್ಲಿ ದರ್ಶಪೂರ್ಣಮಾಸಗಳಲ್ಲಿ ಕೊಡತಕ್ಕ ಮೊದಲನೇ ಆಹುತಿಯನ್ನು ಸ್ವೀಕರಿಸತಕ್ಕವನು ಶಂಯುವೆಂಬ ಹೆಸರುಳ್ಳವನು. ಚಾತುರ್ಮಾಸ್ಯದ ಇಷ್ಟಿಯಲ್ಲಿಯೂ ಅಶ್ವಮೇಧಯಾಗದಲ್ಲಿಯೂ ಮೊದಲನೇ ಪಶುವಾಗುವ ಸಮಯದಲ್ಲಿಯೂ ಶಂಯುವೆಂಬ ಅಗ್ನಿಯೇ ಪ್ರಜ್ವಲಿಸುವನು. ಶಂಯುವೆಂಬ ಅಗ್ನಿಗೆ ಧರ್ಮಪುತ್ರಿಯಾಗಿಯೂ ಅತಿ ಸುಂದರಿಯಾಗಿಯೂ ಇರುವ ಸತ್ಯೆಯೆಂಬ ಪತ್ನಿಯು ಇರುವಳು. ಆಕೆಯಲ್ಲಿ ಪ್ರಕಾಶಮಾನನಾದ ಭರದ್ವಾಜ

ನೆಂಬ ಅಗ್ನಿಯೂ ಮೂರುಮಂದಿ ಕನ್ಯೆಯರೂ ಉತ್ಪನ್ನರಾದರು. ಶಂಯುವಿಗೆ ಮೊದಲನೇಮಗನಾದ ಈ ಭರದ್ವಾಜನೆಂಬ ಅಗ್ನಿಯು ಸಕಲಯಜ್ಞಗಳಲ್ಲಿಯೂ ಮೊದಲನೇ ಆಜ್ಯಭಾಗವನ್ನು ಸ್ವೀಕರಿಸುವನು. ಶಂಯುವಿಗೆ ಎರಡನೇಮಗನಾದ ಭರತನೆಂಬ ಅಗ್ನಿಯು ಎಲ್ಲಾ ಪೌರ್ಣಮಾಸ್ಯಕ್ರತುಗಳಲ್ಲಿಯೂ ಆಜ್ಯರೂಪವಾದ ಹವಿಸ್ಸನ್ನು ಸ್ವೀಕರಿಸುವನು. ಭರತನೆಂಬ ಅಗ್ನಿಗೆ ಪಾವಕನೆಂಬ ಒಬ್ಬಮಗನೂ ಭರತಿಯೆಂಬ ಒಬ್ಬಕನ್ಯೆಯೂ ಹುಟ್ಟಿದರು. ಭರದ್ವಾಜನಿಗೆ ಪತ್ನಿಯಾದ ವೀರೆಯೆಂಬಳಲ್ಲಿ ವೀರನೆಂಬ ಅಗ್ನಿಯು ಹುಟ್ಟಿದನು. ಆತನಿಗೆ ಬ್ರಾಹ್ಮಣರು ಮೆಲ್ಲಗೆ ಮಂತ್ರವನ್ನು ಹೇಳಿ ಚಂದ್ರನ ಜೊತೆಯಲ್ಲಿ ಆಜ್ಯಾಹುತಿಯನ್ನು ಕೊಡುವರು. ಆ ವೀರನೆಂಬ ಅಗ್ನಿಗೆ ರಥಪ್ರಭು, ರಥಾಧ್ವಾನ, ಕುಂಭರೇತ ಎಂಬ ಮೂರು ಹೆಸರುಗಳೂ ಉಂಟು. ಆತನ ಪತ್ನಿಯಾದ ಶರವ್ಯೆಯೆಂಬವಳಲ್ಲಿ ಸಿದ್ಧಿಯೆಂಬ ಪುತ್ರನು ಉತ್ಪನ್ನನಾಗಿ ತನ್ನ ತೇಜಸ್ಸಿನಿಂದ ಸೂರ್ಯನನ್ನು ಆವರಿಸಿದನು. ಅಗ್ನಿದೇವತಾಕವಾದ ಯಾಗದಲ್ಲಿ ಈ ಸಿದ್ಧಿಯನ್ನೇ ಹೊಗಳುವರು. ಬೃಹಸ್ಪತಿಯ ಎರಡನೇಮಗನು ಯಶಸ್ಸಿನಿಂದಲೂ ತೇಜಸ್ಸಿನಿಂದಲೂ ವರ್ಚಸ್ಸಿನಿಂದಲೂ ಯಾವಾಗಲೂ ಚ್ಯುತಿಯನ್ನು ಪಡೆಯದೆ ಇರುವನಾದಕಾರಣ, ಆತನನ್ನು ನಿಶ್ಚ್ಯವನನೆಂಬ ಹೆಸರಿನಿಂದ ಎಲ್ಲರೂ ಸ್ತುತಿಸುವರು. ಆ ನಿಶ್ಚ್ಯವನನಿಗೆ ಪಾಪರಹಿತನಾಗಿಯೂ ಪರಿಶುದ್ಧಾತ್ಮನಾಗಿಯೂ ಪ್ರಕಾಶವಂತನಾಗಿಯೂ ಧರ್ಮನಿಬಂಧನೆಯನ್ನು ಬಲ್ಲವನಾಗಿಯೂ ಇರುವ ವಿಪಾಪನೆಂಬ ಮಗನು ಹುಟ್ಟಿದನು. ದುಃಖಪಡತಕ್ಕ ಪ್ರಾಣಿಗಳ ದುಃಖವನ್ನು ಪರಿಹಾರಮಾಡತಕ್ಕವನಾದಕಾರಣ, ಆ ವಿಪಾಪನೆಂಬ ಅಗ್ನಿಗೆ ನಿಷ್ಕೃತಿಯೆಂಬ ಹೆಸರೂ ಉಂಟಾಯಿತು. ಆತನು ಮನೆಗಳನ್ನೂ ಉದ್ಯಾನಾದಿಗಳನ್ನೂ ತನ್ನ ಕಾಂತಿಯಿಂದ ಪ್ರಕಾಶಗೊಳಿಸುವನು. ಆ ನಿಷ್ಕೃತಿಗೆ ಸ್ವನನೆಂಬ ಪೀಡಾಕರನಾದ ಮಗನು ಉತ್ಪನ್ನನಾದನು. ಆತನ ಬಾಧೆಯಿಂದ ಜನಗಳು ಕೂಗಿಕೊಳ್ಳುವರು. ಬೃಹಸ್ಪತಿಯ ಮೂರನೇಮಗನಾದ ಅಗ್ನಿಯನ್ನು ವಿಶ್ವಜಿತ್ತೆಂದು ಜ್ಞಾನಿಗಳು ಹೇಳುವರು. ಆತನು ಪ್ರಪಂಚದಲ್ಲಿರುವ ಸಕಲರ ಬುದ್ಧಿಯನ್ನೂ ಆಕ್ರಮಿಸಿಕೊಂಡಿರುವನು. ಬೃಹಸ್ಪತಿಗೆ ನಾಲ್ಕನೇಮಗನಾದ ಅಗ್ನಿಯು ವಿಶ್ವಭುಕ್ಕೆಂದು ಪ್ರಸಿದ್ಧನಾಗಿರುವನು. ಆತನು ಎಲ್ಲರ ಶರೀರದಲ್ಲೂ ಇದ್ದುಕೊಂಡು ಅವರು ಆಹಾರಮಾಡಿದ್ದನ್ನು ಪಕ್ವಮಾಡುವನು. ಮತ್ತು ಆತನು ಬ್ರಹ್ಮಚಾರಿಯಾಗಿಯೂ ಜಿತೇಂದ್ರಿಯನಾಗಿಯೂ ವ್ರತನಿಷ್ಠನಾಗಿಯೂ ಇರುವನು. ಸಕಲ ಬ್ರಾಹ್ಮಣರೂ ಆತನನ್ನು ಸ್ಮಾರ್ತಕರ್ಮದಲ್ಲಿ ಪೂಜಿಸುವರು. ಆತನಿಗೆ ಸೋಮತಿಯೆಂಬ ಪಾವನಳಾದ ನದಿಯು ಪತ್ನಿಯಾಗಿದ್ದಳು. ಧರ್ಮಾತ್ಮರಾದವರು ಸಕಲಕರ್ಮಗಳನ್ನೂ, ಆ ವಿಶ್ವಭುಕ್ಕೆಂಬ ಅಗ್ನಿಯನ್ನು ನಿಮಿತ್ತಮಾಡಿಕೊಂಡು ಮಾಡುವರು. ಬೃಹಸ್ಪತಿಯ ಐದನೇ ಮಗನನ್ನು ಬಡಬಾಗ್ನಿಯೆಂದು ಹೇಳುವರು. ಆತನು ದಾರುಣನಾಗಿ ಸಮುದ್ರೋದಕವನ್ನು ಪಾನಮಾಡಿ, ಊರ್ಧ್ವಗತಿಯುಳ್ಳವನಾದ್ದರಿಂದ ಊರ್ಧ್ವಭಾಕ್ಕೆಂಬ ಹೆಸರನ್ನು ಪಡೆದು, ಬ್ರಹ್ಮಜ್ಞಾನಿಯಾಗಿ ಪ್ರಾಣವಾಯುವಿಗೆ ಅಭಿಮಾನಿಯಾಗಿರುವನು. ಬೃಹಸ್ಪತಿಯ ಆರನೇ ಮಗನಿಗೆ ಉತ್ತರಮುಖವಾಗಿ ಹವಿಸ್ಸನ್ನು ಕೊಡುವದರಿಂದ ಆ ಹವಿಸ್ಸು ಚೆನ್ನಾಗಿ ದತ್ತವಾಗುವದು. ಆದ್ದರಿಂದ ಆತನಿಗೆ ಸ್ವಿಷ್ಟಕೃತ್ತೆಂಬ ಹೆಸರುಂಟಾಯಿತು. ಲೋಕದಲ್ಲಿ ಪ್ರಾಣಿಗಳು ನಾಶವನ್ನು ಹೊಂದಲು, ಅದರಿಂದ ಕೋಪಗೊಂಡ ಬೃಹಸ್ಪತಿಯ ಶರೀರದಲ್ಲಿ ಬೆವರುಂಟಾಯಿತು. ಆ ಬೆವರಿನಿಂದ ಸ್ವಾಹಾಯೆಂಬ ಕನ್ಯಕೆಯು ಹುಟ್ಟಿ, ದಾರುಣಳಾಗಿಯೂ ಕ್ರೂರಳಾಗಿಯೂ ಸಕಲ ಪ್ರಾಣಿಗಳಲ್ಲಿಯೂ ಇರುವಳು. ರಾಜಸರೂಪಳಾದ ಆ ಸ್ವಾಹಾದೇವಿಯಲ್ಲಿ, ಸ್ವರ್ಗಲೋಕದಲ್ಲೂ ತನಗೆ ಸಮಾನನಾದ ರೂಪವಂತನಿಲ್ಲದ ಕಾಮನೆಂಬ ಅಗ್ನಿಯು ಉತ್ಪನ್ನನಾದನು. ತಾಮಸರೂಪಳಾದ ಆ ಸ್ವಾಹಾದೇವಿಯಲ್ಲಿ ಅತ್ಯುತ್ಸಾಹದಿಂದ ಕ್ರೋಧವನ್ನುತಾಳಿ ಧನುರ್ಧಾರಿಯಾಗಿಯೂ ಪುಷ್ಪಮಾಲೆಯನ್ನು ಧರಿಸಿದವನಾಗಿಯೂ ರಥಾರೂಢನಾಗಿಯೂ ಯುದ್ಧದಲ್ಲಿ ಸಕಲಶತ್ರುಗಳನ್ನೂ ನಾಶಮಾಡತಕ್ಕವನಾಗಿಯೂ ಇರುವ ಅಮೋಘನೆಂಬ ಮಗನು ಉತ್ಪನ್ನನಾದನು. ಸಾತ್ವಿಕರೂಪಳಾದ ಆಕೆಯಲ್ಲಿ ಉಕ್ಥಗಳೆಂಬ ಮೂರು ಸಾಮಗಳಿಂದ ಸ್ತೋತ್ರಮಾಡಿಸಿಕೊಳ್ಳುವ ಉಕ್ಥನೆಂಬ ಅಗ್ನಿಯು ಉತ್ಪನ್ನನಾದನು. ಆತನು ಬ್ರಹ್ಮವಿದ್ಯವನ್ನು ಪ್ರಕಾಶಮಾಡಿದವನಾದ್ದರಿಂದ ಆತನನ್ನು ಮೋಕ್ಷಕ್ಕೆಕಾರಣನಾನೆಂದು ಹೇಳುವರು" ಎಂದು ಮಾರ್ಕಂಡೇಯನು ಧರ್ಮರಾಯನಿಗೆ ಹೇಳಿದನು.

## ೨೧೯ನೇ ಅಧ್ಯಾಯ.—ಮಾರ್ಕಂಡೇಯಪರ್ವ—(ಆಂಗೀರಸನ ವಂಶದ ಕಥೆ.)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಮಾರ್ಕಂಡೇಯನು ಧರ್ಮರಾಯನನ್ನು ಕುರಿತು "ಎಲೈ ಧರ್ಮರಾಯನೆ, ಸಂತಾನಾರ್ಥವಾಗಿ ಬಹುಕಾಲ ತೀವ್ರವಾದ ತಪಸ್ಸನ್ನುಮಾಡಿದಬಳಿಕ ಆ ಉಕ್ಥನೆಂಬ ಅಗ್ನಿಗೆ ಬ್ರಹ್ಮನಿಗೆ ಸಮಾನನಾದ ಧರ್ಮಿಷ್ಠನಾದ ಮಗನು ಹುಟ್ಟಿದನು. ಆತನಿಗೆ ಕಾಶ್ಯಪ, ವಾಸಿಷ್ಠ, ಪ್ರಾಣ, ಅಗ್ನಿ, ಆಂಗಿರಸ, ಚ್ಯವನ, ಸುವರ್ಚ ಎಂಬ ಹೆಸರುಗಳುಂಟಾದವು. ಆತನು ಐದು ಮಹಾವ್ಯಾಹೃತಿಗಳಿಂದ ಹೊಗಳಿಸಿಕೊಂಡು, ತೇಜೋವಂತನಾಗಿ, ಐದು ಬಣ್ಣಗಳುಳ್ಳವನಾಗಿ ಸೃಷ್ಟಿಕರ್ತನಾದನು. ಆತನು ಆಹುತಿಯಿಂದ ಪ್ರಜ್ವಲಿಸತಕ್ಕ ಜ್ವಾಲಾರೂಪವಾದ ಶಿರಸ್ಸೂ ಸೂರ್ಯನಂತೆ ಪ್ರಕಾಶಮಾನವಾದ ಬಾಹುಗಳೂ ಸುವರ್ಣದಂತೆ ಪ್ರಕಾಶಮಾನವಾದ ಚರ್ಮವೂ, ನೇತ್ರಗಳೂ, ಉಳ್ಳವನಾಗಿ ಕಪ್ಪಾದ ಮೊಳಕಾಲುಗಳೂ ಉಳ್ಳವನಾಗಿ, ತಪಸ್ಸಿನಿಂದ ಪಾಂಚಜನ್ಯನೆಂತಲೂ ಪಂಚಶಿವಂಕರನೆಂತಲೂ ಮತ್ತೆರಡು ಹೆಸರುಗಳನ್ನು ಪಡೆದನು. ಆತನು ಹತ್ತುಸಾವಿರವರುಷ ತಪಸ್ಸನ್ನು ಮಾಡಿ ಪಿತೃಗಳಿಗೋಸ್ಕರ ದಕ್ಷಿಣಾಗ್ನಿಯನ್ನು ನಿರ್ಮಾಣಮಾಡಿದನು. ಆತನು ತನ್ನ ಶಿರಸ್ಸಿನ ದೆಸೆಯಿಂದ ಬೃಹದ್ರಥಂತರವೆಂಬ ಸಾಮವನ್ನೂ, ಮುಖದ ದೆಸೆಯಿಂದ ತರಸಾಹರಗಳೆಂಬ ಅಹೋರಾತ್ರಿಗಳ ಅಭಿಮಾನದೇವತೆಗಳನ್ನೂ, ನಾಭಿಯ ದೆಸೆಯಿಂದ ಅಹಂಕಾರಾಭಿಮಾನದೇವತೆಯಾದ ರುದ್ರನನ್ನೂ, ಬಲದ ದೆಸೆಯಿಂದ ಇಂದ್ರನನ್ನೂ, ಪ್ರಾಣದ ದೆಸೆಯಿಂದ ವಾಯುವನ್ನೂ ಅಗ್ನಿಯನ್ನೂ, ಬಾಹುಗಳ ದೆಸೆಯಿಂದ ಉದಾತ್ತಾನುದಾತ್ತಸ್ವರಗಳನ್ನೂ ಮನಸ್ಸನ್ನೂ ಇಂದ್ರಿಯಾಭಿಮಾನದೇವತೆಗಳನ್ನೂ ಪಂಚಭೂತಗಳನ್ನೂ ಸಹ ನಿರ್ಮಾಣಮಾಡಿ, ಬಳಿಕ ಪಿತೃದೇವತೆಗಳಿಗೆ ಐದುಮಂದಿ ಮಕ್ಕಳನ್ನು ನಿರ್ಮಾಣಮಾಡಿಕೊಟ್ಟನು. ಬೃಹದ್ರಥನ ಅಂಶದಿಂದ ಪ್ರಣಿಧಿಯೂ, ಕಶ್ಯಪನ ಅಂಶದಿಂದ ಮಹತ್ತರನೂ, ಚ್ಯವನನ ಅಂಶದಿಂದ ಭಾನುವೂ, ಸುವರ್ಚನ ಅಂಶದಿಂದ ಸೌರಭನೂ, ಪ್ರಾಣನ ಅಂಶದಿಂದ ಅನುದಾತ್ತನೂ ಹುಟ್ಟಿದರು. ತಪನೆಂಬ ಪಾಂಚಜನ್ಯನು ಯಜ್ಞಗಳಿಗೆ ವಿಘ್ನವನ್ನು ಮಾಡತಕ್ಕ ಸುಭೀಮ, ಅತಿಭೀಮ, ಭೀಮ, ಭೀಮಬಲ, ಅಬಲರೆಂಬ ಐದುಮಂದಿ ದಾನವರನ್ನೂ; ಸುಮಿತ್ರ, ಮಿತ್ರವಂತ, ಮಿತ್ರಜ್ಞ, ಮಿತ್ರವರ್ಧನ, ಮಿತ್ರಧರ್ಮ ಎಂಬ ಐದುಮಂದಿ ದಾನವರನ್ನೂ; ದೇವತೆಗಳಿಗೆ ನಾಶಕರಾದ ಸುರ, ಪ್ರವೀರ, ವೀರ, ಸುರೇಶ, ಸುವರ್ಚ ಎಂಬ ಐದುಮಂದಿ ದಾನವರನ್ನೂ; ಈಪ್ರಕಾರ ಹದಿನೈದುಮಂದಿ ದಾನವರನ್ನುಸೃಷ್ಟಿಸಿದನು. ಆ ದಾನವರೆಲ್ಲರೂ ಐದೈದುಮಂದಿ ಒಂದೊಂದು ಗುಂಪಾಗಿ, ಯಾಗಮಾಡತಕ್ಕವರು ದೇವತೆಗಳಿಗೆ ಕೊಡತಕ್ಕ ಹವಿರ್ಭಾಗಗಳನ್ನೂ ಇತರ ಹವ್ಯಕವ್ಯಗಳಲ್ಲಿ ಕೊಡತಕ್ಕ ಹವಿಸ್ಸುಗಳನ್ನೂ ಅಪಹರಿಸುತ್ತಿರುವರು. ಚಿತಾಗ್ನಿಯಲ್ಲಿ ಮಂತ್ರಪೂರ್ವಕವಾಗಿ ಕೊಡತಕ್ಕ ಆಹುತಿಯನ್ನೂ ಅಪಹರಿಸುವರು. ಯಾವಾಗ ಬಹಿರ್ವೇದಿಯಲ್ಲಿ ಅಗ್ನಿಯನ್ನು ಇಟ್ಟು ಋತ್ವಿಕ್ಕುಗಳು ಆದಾನವನ್ನು ಮಾಡುವರೋ ಆಗ ಆ ದಾನವರು ಅಲ್ಲಿಗೆ ಹೋಗದಿರುವರು. ಯಜ್ಞಗಳಲ್ಲಿ ಋತ್ವಿಕ್ಕುಗಳು ರಕ್ಷೋಘ್ನಮಂತ್ರಗಳನ್ನು ಹೇಳಿದೊಡನೆ ಅಲ್ಲಿಗೆ ಸುಳಿಯದಿರುವರು. ಪಾಂಚಜನ್ಯನ ಮಗನಾದ ಬೃಹದುಕ್ಥನು ಭೂಮಿಗೆ ಅಭಿಮಾನಿಯಾಗಿರುವನು. ಆದ್ದರಿಂದಲೇ ಯಜ್ಞಮಾಡತಕ್ಕವರು ಭೂಮಿಯಲ್ಲೇ ಅಗ್ನಿಹೋತ್ರವನ್ನು ಮಾಡುವರು. ರಥಂತರನೆಂದು ಪ್ರಸಿದ್ಧನಾದ ಮಿತ್ರವಿಂದನೆಂಬ ಪಾಂಚಜನ್ಯನ ಮಗನು ಅಧ್ವರ್ಯುಗಳು ಯಜ್ಞದಲ್ಲಿ ಕೊಡತಕ್ಕ ಹವಿಸ್ಸನ್ನು ಸ್ವೀಕರಿಸುತ್ತ, ತನ್ನ ಮಕ್ಕಳೊಡನೆ ಸಂತೋಷಪಡುತ್ತಿರುವನು" ಎಂದು ಮಾರ್ಕಂಡೇಯನು ಧರ್ಮರಾಯನಿಗೆ ಹೇಳಿದನು.

## ೨೨೦ನೇ ಅಧ್ಯಾಯ.—ಮಾರ್ಕಂಡೇಯಪರ್ವ—(ಆಂಗೀರಸನ ವಂಶದ ಕಥೆ)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಮಾರ್ಕಂಡೇಯನು ಧರ್ಮರಾಯನನ್ನು ಕುರಿತು "ಎಲೈ ರಾಯನೆ, ಶಂಯುವೆಂಬ ಅಗ್ನಿಗೆ ಮೊಮ್ಮಗನಾದ

ಭರತನೆಂಬ ಅಗ್ನಿಯು ಶ್ರೇಷ್ಠವಾದ ನಿಯಮದಿಂದ ಜನಿಸಿದವನಾದ್ದರಿಂದ, ಪುಷ್ಟಿಮತಿಯೆಂಬ ಹೆಸರುಳ್ಳವನಾಗಿ ಪ್ರಾಣಿಗಳಿಗೆ ತುಷ್ಟಿಯನ್ನೂ ಪುಷ್ಟಿಯನ್ನೂ ಕೊಡುವನು. ಪ್ರಾಣಿಗಳನ್ನು ಭರಣಮಾಡುವನಾದ್ದರಿಂದ ಈತನು ಭರತನೆಂಬ ಹೆಸರನ್ನು ಪಡೆದನು. ತಪನಿಗೆ ಮೂರನೇ ಮಗನಾದ ಶಿವನೆಂಬ ಅಗ್ನಿಯು ಶಕ್ತಿಪೂಜಾಪರನಾಗಿ, ದುಃಖಿತರಾದ ಪ್ರಾಣಿಗಳಿಗೆ ಶುಭವನ್ನು ಮಾಡುವನಾದ್ದರಿಂದ ಶಿವನೆಂದು ಹೆಸರನ್ನು ಪಡೆದನು. ತಮನೆಂಬ ಅಗ್ನಿಯು ಐಶ್ವರ್ಯವನ್ನು ಪಡೆಯುವದಕ್ಕಾಗಿ, ಆತನಿಗೆ ಪುರಂದರ, ಊಷ್ಮ, ಮನು, ಶಂಭು, ಆವಸಥ್ಯ ಎಂಬ ಐದುಮಂದಿ ಮಕ್ಕಳು ಉತ್ಪನ್ನರಾದರು. ಉಷ್ಮನೆಂಬ ಅಗ್ನಿಯು ಪ್ರಾಣಿಗಳ ಶರೀರದಲ್ಲಿ ಕಾವಿನ ರೂಪದಿಂದ ತೋರುವನು. ಮನುವೆಂಬ ಅಗ್ನಿಯನ್ನೂ ಶಂಭುವೆಂಬ ಅಗ್ನಿಯನ್ನೂಸಹ ವೇದಜ್ಞರಾದ ಬ್ರಾಹ್ಮಣರು ಪ್ರಾಜಾಪತ್ಯಾಗ್ನಿಗಳನ್ನಾಗಿ ಭಾವಿಸಿರುವರು. ಮಹತ್ತಾದ ಪ್ರಭೆಯಿಂದ ಜ್ವಲಿಸುವ ಅಗ್ನಿಯನ್ನು ಆವಸಥ್ಯಾಗ್ನಿಯೆಂದು ಹೇಳುವರು. ತಪನೆಂಬ ಅಗ್ನಿಯು ಸುವರ್ಣಸದೃಶರಾದ ಪ್ರಭೆಯುಳ್ಳವರಾಗಿಯೂ ಯಜ್ಞಗಳಲ್ಲಿ ಸೋಮಭಾಗಿಗಳಾಗಿಯೂ ಇರುವ ಊರ್ಜಸ್ಕರೆಂಬ ಹೆಸರುಳ್ಳ ಐದುಮಂದಿ ಅಗ್ನಿಗಳನ್ನು ಸೃಜಿಸಿದನು. ಈ ಐದುಮಂದಿ ಅಗ್ನಿಗಳೂ ಸೂರ್ಯನು ಅಸ್ತಂಗತನಾಗಲು ಪ್ರಕಾಶಿಸುವರು. ಆ ತಪನೆಂಬ ಅಗ್ನಿಯು ಘೋರರಾದ ಅಸುರರನ್ನೂ ಮನುಷ್ಯರನ್ನೂ ಸಹ ಸೃಷ್ಟಿಮಾಡಿದನು. ಮನು, ಭಾನು, ಅಂಗಿರಸ್ಸು, ಬೃಹದ್ಭಾನು, ಇವರುಗಳನ್ನೂ ಆತನೇ ನಿರ್ಮಿಸಿದನು. ಎಲೈ ಧರ್ಮರಾಯನೆ, ಭಾನುವೆಂಬ ಅಗ್ನಿಗೆ ಸೂರ್ಯಪುತ್ರಿಯರಾದ ಸುಪ್ರಭೆ, ಬೃಹದ್ಭಾನು, ನಿಶೆ ಎಂಬ ಮೂರುಮಂದಿ ಪತ್ನಿಯರು ಇದ್ದರು. ಅವರ ಸಂಗತಿಯನ್ನು ವಿವರಿಸುವೆನು ಕೇಳು. ಭಾನುವೆಂಬ ಅಗ್ನಿಯಿಂದ ಸುಪ್ರಜೆಯೆಂಬುವ ಪತ್ನಿಯಲ್ಲಿ ಬಲದ, ಮನ್ಯುಮಂತ, ವಿಷ್ಣುವೆಂಬ ಮೂರುಮಂದಿ ಅಗ್ನಿಗಳು ಉತ್ಪನ್ನರಾದರು. ಸುಪ್ರಜೆಯ ಜ್ಯೇಷ್ಠಪುತ್ರನು ದುರ್ಬಲರಾದವರಿಗೆ ಬಲವನ್ನು ಕೊಡತಕ್ಕವನಾದ್ದರಿಂದ, ಆತನಿಗೆ ಬಲದನೆಂದು ಹೆಸರುಂಟಾಯಿತು. ಆಕೆಯ ಮಧ್ಯಮಪುತ್ರನು ಪ್ರಾಣಿಗಳೆಲ್ಲರೂ ನಷ್ಟರಾಗಲು ತಾನು ಅಧಿಕವಾದ ಕೋಪವನ್ನು ತಾಳಿದವನಾದ್ದರಿಂದ, ಆತನಿಗೆ ಮನ್ಯುಮಂತನೆಂದು ಹೆಸರುಂಟಾಯಿತು. ಆಕೆಯ ಕನಿಷ್ಠಪುತ್ರನಾದ ಅಗ್ನಿಯಲ್ಲಿ ಯಾಗಮಾಡತಕ್ಕವರು ದರ್ಶಪೂರ್ಣಮಾಸ್ಯಗಳಲ್ಲಿ ಆಹುತಿಯನ್ನು ಕೊಡುವರಾದ್ದರಿಂದ, ಆತನಿಗೆ ವಿಷ್ಣುವೆಂತಲೂ ಧೃತಮಂತನೆಂತಲೂ ನಾಮವುಂಟಾಯಿತು. ಭಾನುವಿನ ಎರಡನೇ ಭಾರ್ಯೆಯಾದ ಬೃಹದ್ಭಾಸೆಯಲ್ಲಿ ಆಗ್ರಾಯಣ, ವಿಶ್ವದೇವ, ಸ್ತುಭ ಎಂಬ ಮೂರುಮಂದಿ ಅಗ್ನಿಗಳು ಹುಟ್ಟಿದರು. ಯಾಜಕರು ಆಗ್ರಾಯಣನಿಗೆ ಇಂದ್ರನ ಸಂಗಡ ಹವಿಸ್ಸನ್ನು ಕೊಡುವರು. ವಿಶ್ವದೇವನೆಂಬ ಅಗ್ನಿಯು ಚಾತುರ್ಮಾಸ್ಯದಲ್ಲಿ ನಿತ್ಯವೂ ಕೊಡತಕ್ಕ ಹವಿಸ್ಸಿಗೆ ಉತ್ಪತ್ತಿಸ್ಥಾನನಾಗಿರುವನು. ಸ್ತುಭನೆಂಬ ಅಗ್ನಿಯು ತನ್ನ ನಾಲ್ಕುಮಂದಿ ಪುತ್ರರಿಂದ ಕೂಡಿ ಯಜ್ಞದಲ್ಲಿ ಯಾಜಕರಿಂದ ಸ್ತೋತ್ರಮಾಡಿಸಿಕೊಳ್ಳುವನು. ಆ ಭಾನುವೆಂಬ ಅಗ್ನಿಗೆ ಪತ್ನಿಯಾದ ನಿಶಾದೇವಿಯಲ್ಲಿ ರೋಹಿಣಿಯೆಂಬ ಒಬ್ಬ ಕನ್ಯೆಯೂ, ಅಗ್ನಿ ಸೋಮ ವೈಶ್ವಾನರ ವಿಶ್ವಪತಿ ಸನ್ನಿಹಿತ ಕಪಿಲ ಅಗ್ರಣಿ ಎಂಬ ಏಳುಮಂದಿ ಅಗ್ನಿಗಳೂ ಹುಟ್ಟಿದರು. ವೈಶ್ವಾನರನೆಂಬ ಅಗ್ನಿಯು ಪರ್ಜನ್ಯನೊಡಗೂಡಿ ಚಾತುರ್ಮಾಸ್ಯೇಷ್ಟಿಯಲ್ಲಿ ಶ್ರೇಷ್ಠವಾದ ಹವಿಸ್ಸಿನಿಂದ ಸತ್ಕೃತನಾಗುವನು. ವಿಶ್ವಪತಿಯೆಂಬ ಅಗ್ನಿಯು ಸಕಲಲೋಕಕ್ಕೂ ಪ್ರಭುವಾಗಿರುವನು. ಆತನಲ್ಲಿ ಹೋಮಮಾಡಲ್ಪಟ್ಟ ಆಜ್ಯವು ಸ್ವಿಷ್ಟಕೃತ್ತೆನ್ನಿಸಿಕೊಳ್ಳುವದು. ಸನ್ನಿಹಿತನೆಂಬ ಅಗ್ನಿಯು ಸಕಲಪ್ರಾಣಿಗಳ ಪ್ರಾಣಗಳನ್ನೂ ಆಶ್ರಯಿಸಿ, ಶಬ್ದರೂಪಗಳಿಗೆ ಸಾಧಕನಾಗಿ, ದೇಹದಲ್ಲಿ ಕಾಂತಿಯನ್ನುಂಟುಮಾಡುವನು. ಕಪಿಲನೆಂಬ ಅಗ್ನಿಯು ಕರ್ಮದಿಂದ ಅರ್ಚಿರಾದಿಧೂಮಾದಿಮಾರ್ಗಗಳಲ್ಲಿದ್ದುಕೊಂಡು ಪಾಪರಹಿತನಾಗಿ ಕಾಮ್ಯಕರ್ಮಗಳನ್ನು ಮಾಡುತ್ತ, ಕ್ರೋಧಕ್ಕೆ ಆಶ್ರಯನಾಗಿ, ಅಧಿಕವಾದ ತೇಜಸ್ಸನ್ನು ಪಡೆದು, ಸಾಂಖ್ಯಶಾಸ್ತ್ರಕ್ಕೂ ಯೋಗಶಾಸ್ತ್ರಕ್ಕೂ ಪ್ರವರ್ತಕನಾಗಿರುವನು. ಅಗ್ರಣಿಯೆಂಬ ಅಗ್ನಿಯು ಸಕಲಪ್ರಾಣಿಗಳಿಗೂ ಅವರವರು ಮಾಡತಕ್ಕ ವಿಚಿತ್ರವಿಚಿತ್ರವಾದ ಕರ್ಮಗಳಿಗೆಲ್ಲಾ ಮೊದಲು ಫಲವನ್ನು ಕೊಡತಕ್ಕವನಾದ್ದರಿಂದ ಅಗ್ರಣಿಯೆಂಬ ಹೆಸರನ್ನು ಪಡೆದಿರುವನು. ರೋಹಿಣಿಯೆಂಬ ಕನ್ಯೆಯು ಸೃಷ್ಟಿನಿಮಿತ್ತವಾಗಿ ತಾನೇ ಸ್ತ್ರೀರೂ[illegible]ನ್ನೂ ಪುರುಷರೂಪವನ್ನೂ ತಾಳಿ ಪ್ರಜಾ ಎಂತಲೂ ಪತಿಯೆಂತಲೂ ಹೆಸರನ್ನು ಪಡೆದಳು. ನಷ್ಟಾಗ್ನಿಗಳ ಪ್ರಾಯಶ್ಚಿತ್ತಾರ್ಥವಾಗಿ ಭಾನುವು ಮೇಲೆ ಹೇಳಿದ ಅಗ್ನಿಗಳು ಮೊದಲಾಗಿ ಅನೇಕ

ಅಗ್ನಿಗಳನ್ನು ನಿರ್ಮಾಣಮಾಡಿರುವನು. ಎಲೈ ಧರ್ಮರಾಯನೆ, ಯಾಗಾದಿಕರ್ಮಗಳಲ್ಲಿ ವಾಯುಸಂಬಂಧದಿಂದಲಾದರೂ ಪರಸ್ಪರವಾಗಿ ಅಗ್ನಿಗಳಿಗೆ ಸಂಪರ್ಕವಾದರೆ ಆ ಅಗ್ನಿಗಳು ಅಶುಚಿಗಳಾಗುವದರಿಂದ, ಅಲ್ಲಿ ಅಗ್ನಿಶುದ್ಧಿಗೋಸ್ಕರ ಅಷ್ಟಾಕಪಾಲಪುರೋಡಾಶದಿಂದ ಇಷ್ಟಿಯನ್ನು ಮಾಡಬೇಕು. ದಕ್ಷಿಣಾಗ್ನಿಯು ಗಾರ್ಹಪತ್ಯ ಆಹವನೀಯಗಳೆಂಬ ಅಗ್ನಿಗಳಿಂದ ಸ್ಪೃಷ್ಟಮಾಡಲ್ಪಟ್ಟದ್ದೇ ಆದರೆ, ಅಲ್ಲಿ ಅಷ್ಟಾಕಪಾಲಪುರೋಡಾಶದಿಂದ ಇಷ್ಟಿಯನ್ನು ಮಾಡಬೇಕು. ಅಗ್ನಿಗೆ ರಜಸ್ವಲಾಸ್ತ್ರೀಸಂಪರ್ಕವಾದರೆ ಅಷ್ಟಾಕಪಾಲಪುರೋಡಾಶದಿಂದ ಇಷ್ಟಿಯನ್ನು ಮಾಡಬೇಕು. ಯಾಗದಲ್ಲಿ ಪಶುವನ್ನು ವಿಶಸನಮಾಡುವ ಕಾಲದಲ್ಲಿ ಪಶುವು ಕೂಗಿದ ಶಬ್ದವು ಕೇಳಿದರೆ ಅಗ್ನಿಯು ಅಶುಚಿಯಾಗುವದು. ಅದರ ಶುದ್ಧಿಗೋಸ್ಕರ ಅಷ್ಟಾಕಪಾಲಪುರೋಡಾಶದಿಂದ ಇಷ್ಟಿಯನ್ನು ಮಾಡಬೇಕು. ದರ್ಶಪೌರ್ಣಮಾಸ್ಯೇಷ್ಟಿಗಳನ್ನು ಮಾರ್ಗದಲ್ಲಿ ಮಾಡಿದ್ದೇಆದರೆ, ಅಗ್ನಿಶುದ್ಧಿಗೋಸ್ಕರ ಅಷ್ಟಾಕಪಾಲಪುರೋಡಾಶದಿಂದ ಇಷ್ಟಿಯನ್ನು ಮಾಡಬೇಕು. ಬಾಣಂತಿಯು ಅಗ್ನಿಸ್ಪರ್ಶವನ್ನು ಮಾಡಿದರೆ ಅಷ್ಟಾಕಪಾಲಪುರೋಡಾಶದಿಂದ ಅಗ್ನಿಶುದ್ಧಿಗೋಸ್ಕರ ಇಷ್ಟಿಯನ್ನು ಮಾಡಬೇಕು. ಆರ್ತನಾದವನು ಮೂರುರಾತ್ರಿ ಅಗ್ನಿಹೋತ್ರವನ್ನು ಬಿಡಬೇಕು. ಬಳಿಕ ಅಗ್ನಿಶುದ್ಧಿಗೋಸ್ಕರ ಅಷ್ಟಾಕಪಾಲಪುರೋಡಾಶದಿಂದ ಇಷ್ಟಿಯನ್ನು ಮಾಡಬೇಕು" ಎಂದು ಮಾರ್ಕಂಡೇಯನು ಧರ್ಮರಾಯನಿಗೆ ಹೇಳಿದನು.

## ೨೨೧ನೇ ಅಧ್ಯಾಯ.—ಮಾರ್ಕಂಡೇಯಪರ್ವ—(ಆಂಗೀರಸನ ವಂಶದ ಕಥೆ.)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಮಾರ್ಕಂಡೇಯನು ಧರ್ಮರಾಯನನ್ನು ಕುರಿತು, "ಎಲೈ ಧರ್ಮರಾಯನೆ, ಭೂಲೋಕಭುವರ್ಲೋಕಗಳಿಗೆ ಸ್ವಾಮಿಯಾಗಿ ನೀರಿನಲ್ಲಿ ಮುಳುಗಿಕೊಂಡಿದ್ದ ಸಹ ಎಂಬ ಅಗ್ನಿಯು ಮುದಿತೆಯೆಂಬ ತನ್ನ ಭಾರ್ಯೆಯಲ್ಲಿ ಅದ್ಭುತನೆಂಬ ಮಗನನ್ನು ಪಡೆದನು. ಆ ಅದ್ಭುತನನ್ನು ಮಹಾತ್ಮರಾದ ಬ್ರಾಹ್ಮಣರು ಸಕಲಪ್ರಾಣಿಗಳಿಗೂ ಸ್ವಾಮಿಯನ್ನಾಗಿಯೂ ಆತ್ಮನನ್ನಾಗಿಯೂ ಹೇಳುವರು. ಆತನು ಮಹಾತೇಜೋವಂತನಾಗಿ ಯಜ್ಞಗಳಲ್ಲಿ ಯಜಮಾನರಿಂದ ನಿರಂತರದಲ್ಲೂ ಪೂಜೆಯನ್ನು ಪಡೆಯುವನು. ಆತನು ಈ ಲೋಕದಲ್ಲಿ ಹೋಮಮಾಡಲ್ಪಟ್ಟ ಹವಿಸ್ಸುಗಳನ್ನು ತೆಗೆದುಕೊಂಡುಹೋಗಿ ದೇವತೆಗಳಿಗೆ ಕೊಡುವನಾದ್ದರಿಂದ ಹವ್ಯವಾಹನನೆಂತಲೂ; ಉದಕಸಂಬಂಧವಿರುವದರಿಂದ ಅಪಾಂಗರ್ಭನೆಂತಲೂ, ಸತ್ವಭುಕ್ಕೆಂತಲೂ, ಅಧಿಭೂತನೆಂತಲೂ, ಹೆಸರುಗಳನ್ನು ಪಡೆದಿರುವನು. ಆತನ ಮಗನಾದ ಭರತನು ಪ್ರಾಣಗಳು ನಷ್ಟವಾದರೂ ಪ್ರಾಣಿಗಳ ಶರೀರವನ್ನು ಕಾಪಾಡುತ್ತ ಚಿತಾಗ್ನಿಯಲ್ಲಿ ನಿಯತವಾಗಿರುವನು. ಅದನ್ನು ನೋಡಿ ಜುಗುಪ್ಸೆಪಟ್ಟು ಲಜ್ಜೆಯಿಂದ ಸಹನೆಂಬ ಅಗ್ನಿಯು ತನ್ನ ವಂಶದಲ್ಲಿ ಹುಟ್ಟಿದ ಭರತನು ತನ್ನ ಸ್ಪರ್ಶಮಾಡಕೂಡದೆಂದು ತಾನು ನೀರಿನಲ್ಲಿ ಮುಳುಗಿಕೊಂಡನು. ಅನಂತರ ದೇವತೆಗಳೂ ಇಂದ್ರಿಯಾಭಿಮಾನದೇವತೆಗಳೂ ಸಹ ತಮ್ಮ ಸುಖಕ್ಕಾಗಿ ಆತನನ್ನು ಹುಡುಕುತ್ತ ದಿಕ್ಕುದಿಕ್ಕುಗಳಿಗೆ ಹೋದರು. ಅದನ್ನು ತಿಳಿದು ಆ ಅಗ್ನಿಯು ಅಂಗಿರೋಮಹರ್ಷಿಯನ್ನು ಕುರಿತು, 'ಎಲೈ ಅಂಗಿರೋಮಹರ್ಷಿಯೆ, ನಾನು ದೇವತೆಗಳಿಗೆ ಗೋಚರನಾಗತಕ್ಕವನಲ್ಲ. ಅವರು ನನ್ನನ್ನು ಹುಡುಕುತ್ತಿರುವರು. ದೇವತೆಗಳ ಹವಿರ್ಭಾಗಗಳನ್ನು ಸ್ವೀಕರಿಸುವದಕ್ಕೋಸ್ಕರ ನೀನು ಅಗ್ನಿತ್ವವನ್ನು ಪಡೆದು ನನಗೆ ಪ್ರಿಯವನ್ನು ಮಾಡು' ಎಂದು ಆತನಿಗೆ ಆಜ್ಞೆಯನ್ನು ಕೊಟ್ಟು, ತಾನು ಮತ್ತೊಂದು ಪ್ರದೇಶಕ್ಕೆ ಹೊರಡಲು, ಆತನು ನೀರಿನಲ್ಲಿ ಪ್ರವೇಶಮಾಡಿರುವದನ್ನು ಮೀನುಗಳು ಪ್ರಕಾಶಮಾಡಿದವು. ಆ ಅಗ್ನಿಯು ಕೋಪಗೊಂಡು 'ನೀವು ಪ್ರಾಣಿಗಳಿಗೆ ಆಹಾರಗಳಾಗಿರಿ' ಎಂದು ಅವುಗಳಿಗೆ ಶಾಪವನ್ನು ಕೊಟ್ಟು, ಅಂಗಿರಸ್ಸು ತನ್ನ ಮಾತನ್ನು ನಡಿಸದಿರಲು, ಪುನಃ ಆತನನ್ನು ನೋಡಿ 'ಎಲೈ ಅಂಗಿರಸ್ಸೆ, ನೀನು ನನಗೋಸ್ಕರ ಅಗ್ನಿತ್ವವನ್ನು ಪಡೆಯಬೇಕು' ಎಂದು ಕೇಳಿಕೊಂಡನು. ಹೀಗೆ ಎಷ್ಟುಸಾರಿ ಎಷ್ಟುಪ್ರಕಾರದಿಂದ ಪ್ರಾರ್ಥಿಸಿದರೂ ಆ ಮಹರ್ಷಿಯು ದೇವತೆಗಳಿಗೆ ಹವಿಸ್ಸನ್ನು ತೆಗೆದುಕೊಂಡು ಹೋಗಿ ಕೊಡತಕ್ಕ ಕೆಲಸವು ತನ್ನಿಂದಾಗಲಾರದೆಂದು ಹೇಳಿ, ಸಮಾಧಿಯಿಂದ ತನ್ನ ಶರೀರವನ್ನು ಬಿಟ್ಟು ಸೂಕ್ಷ್ಮಶರೀರದಿಂದ ಭೂಮಿ

ಮನ್ನುಹೊಕ್ಕು ; ತನ್ನ ಸ್ಥೂಲಶರೀರದ ರಸಧಾತುವಿನಿಂದ ಪರಿಮಳವನ್ನೂ, ಕಾಂತಿಯನ್ನೂ, ಅಸ್ಥಿಗಳಿಂದ ದೇವದಾರುವೃಕ್ಷವನ್ನೂ, ಶ್ಲೇಷ್ಮದಿಂದ ಸ್ಫಟಿಕವನ್ನೂ, ಪಿತ್ತರಸದಿಂದ ಮರಕತಮಣಿಯನ್ನೂ, ಯಕೃತ್ತೆಂಬ ಮಾಂಸವಿಶೇಷದಿಂದ ಕಬ್ಬಿಣ ಮೊದಲಾದ ಕೆಲವು ಲೋಹಗಳನ್ನೂ, ಉಗುರುಗಳಿಂದ ಅಭ್ರಕಗಳನ್ನೂ, ನರಗಳಿಂದ ಹವಳದ ಬಳ್ಳಿಗಳನ್ನೂ, ಮತ್ತು ಶರೀರದಿಂದ ಪಾದರಸ ಮಣಿಶಿಲೆ ಮೊದಲಾದ ಧಾತುಗಳನ್ನೂ ನಿರ್ಮಾಣಮಾಡಿ, ಆ ಸೂಕ್ಷ್ಮಶರೀರದಿಂದಲೇ ತಪಸ್ಸುಮಾಡುತ್ತಿದ್ದನು. ಭೃಗು ಮೊದಲಾದ ಋಷಿಗಳು ತಮ್ಮ ತಪೋಬಲದಿಂದ ಪುನಃ ಆತನಿಗೆ ಶರೀರವನ್ನು ಸೃಷ್ಟಿಮಾಡಿಕೊಟ್ಟರು. ಆಗ ಅಂಗಿರಸ್ಸು ಅವರ ತಪಶ್ಶಕ್ತಿಯಿಂದಲೂ ತನ್ನ ತಪಸ್ಸಿನಿಂದಲೂ ತೇಜೋವಂತನಾಗಿ ಅಗ್ನಿಯಂತೆ ಜ್ವಲಿಸುತ್ತಿದ್ದನು. ಆಗ ಅಗ್ನಿಯು ತೇಜಸ್ಸಿನಿಂದ ಜಾಜ್ವಲ್ಯಮಾನನಾದ ಆ ಅಂಗಿರಸ್ಸನ್ನು ನೋಡಿ ಭಯಗೊಂಡು ಮಹಾಸಮುದ್ರದಲ್ಲಿ ಹೋಗಿ ಅಡಗಿಕೊಂಡುಬಿಟ್ಟನು. ಎಲೈ ಧರ್ಮರಾಯನೆ, ಈ ಪ್ರಕಾರ ಅಗ್ನಿಯು ನಷ್ಟನಾಗಲು ಜಗತ್ತೆಲ್ಲಾ ಭಯಪಟ್ಟು ಅಂಗಿರಸ್ಸನ್ನೇ ಅಗ್ನಿಯನ್ನಾಗಿ ಭಾವಿಸಿಕೊಂಡು ಆತನನ್ನೇ ಆಶ್ರಯಿಸಿತು. ಸಕಲದೇವತೆಗಳೂ ಅಂಗಿರಸ್ಸನ್ನೇ ಪೂಜಿಸಿದರು. ಬಳಿಕ ಅಂಗಿರಸ್ಸು ಸಮುದ್ರವನ್ನು ಮಥನಮಾಡಿ, ಅಗ್ನಿಯಿರುವ ಸ್ಥಳವನ್ನು ತಿಳಿದು, ಆ ಅಗ್ನಿಯ ಸಹಾಯವನ್ನು ಪಡೆದು ಪುನಃ ಅನೇಕಲೋಕಗಳನ್ನು ಸೃಷ್ಟಿಮಾಡಿದನು. ಈ ಪ್ರಕಾರ ಮಹಾನುಭಾವನಾದ ಅಂಗಿರಸ್ಸಿನಿಂದ ಮೊದಲು ನಷ್ಟನಾಗಿದ್ದ ಆ ಅಗ್ನಿಯು ಕರೆಯಿಸಿಕೊಂಡು ಮೊದಲಿನಂತೆ ದೇವತೆಗಳಿಗೆ ಹವಿಸ್ಸನ್ನು ತೆಗೆದುಕೊಂಡುಹೋಗಿ ಕೊಡತಕ್ಕ ಕಾರ್ಯದಲ್ಲಿ ಉದ್ಯುಕ್ತನಾದನು. ಎಲೈ ಧರ್ಮರಾಯನೆ, ಈ ಪ್ರಕಾರ ಅಂಗಿರಸ್ಸು ವೇದೋಕ್ತವಾದ ಅನೇಕಪ್ರಕಾರವಾದ ಲೋಕಗಳನ್ನು ನಿರ್ಮಾಣಮಾಡಿ ಅನೇಕಪ್ರದೇಶಗಳಲ್ಲಿ ಸಂಚಾರಮಾಡುತ್ತಿದ್ದನು. ಈ ಲೋಕಕ್ಕೆ ಸಿಂಧು, ಪಂಚನದ, ದೇವಿಕೆ, ಸರಸ್ವತಿ, ಗಂಗೆ, ಶತಕುಂಭೆ, ಸರಯು, ಗಂಡಸೆ, ಚರ್ಮಣ್ವತಿ, ಮಹಿ, ಮೇಧ್ಯೆ, ಮೇಧಾತಿಥಿ, ತಾಮ್ರವತಿ, ತಕ್ರವತಿ, ಕೌಶಿಕಿ, ತಮಸೆ, ನರ್ಮದೆ, ಗೋದಾವರಿ, ವೇಣೆ, ಉಪವೇಣೆ, ಭೀಮೆ, ಬಡಬೆ, ಭಾರತಿ, ಸುಪ್ರಯೋಗೆ, ಕಾವೇರಿ, ಮುರ್ಮುರೆ, ತುಂಗವೇಣಿ, ಕೃಷ್ಣವೇಣಿ, ಕಪಿಲೆ, ಶೋಣೆ, ಈ ನದಿಗಳೆಲ್ಲಾ ಅಂಗಿರಸ್ಸು ನಿರ್ಮಾಣಮಾಡಿದ ಆ ಲೋಕಗಳಿಗೆ ತಾಯಿಗಳಾಗಿರುವವು. ಅದ್ಭುತನೆಂಬ ಅಗ್ನಿಯ ಪತ್ನಿಯಲ್ಲಿ ವಿಭೂರಸಿಯೆಂಬ ಪುತ್ರನು ಹುಟ್ಟಿದನು. ಎಷ್ಟುಮಂದಿ ಅಗ್ನಿಲೋಕದಲ್ಲಿರುವರೋ ಆ ಅಗ್ನಿಗಳೆಲ್ಲಾ ಸೋಮಯಾಗರೆಂದು ಯಾಜ್ಞಿಕರಲ್ಲಿ ಪ್ರಸಿದ್ಧರಾಗಿರುವರು. ಬ್ರಹ್ಮನ ಮಾನಸಪುತ್ರರಾದ ಅಗ್ನಿಗಳು ಅತ್ರಿಮಹರ್ಷಿಯ ವಂಶದಲ್ಲಿ ಅವತಾರಮಾಡಿದರು. ಅತ್ರಿಯು ಸೃಷ್ಟಿಮಾಡಬೇಕೆಂದು ಅಪೇಕ್ಷೆಯುಳ್ಳ ಆ ಅಗ್ನಿಗಳನ್ನು ತನ್ನ ಚಿತ್ತದಲ್ಲಿ ಧಾರಣೆಮಾಡಿದನು. ಆಗ ಆ ಅಗ್ನಿಗಳು ಆ ಅತ್ರಿಯ ಶರೀರದ ದೆಸೆಯಿಂದ ಈಚೆಗೆ ಬಂದರು. ಎಲೈ ಧರ್ಮರಾಯನೆ, ಈ ಪ್ರಕಾರದಿಂದ ಅಪ್ರಮೇಯರಾಗಿಯೂ ಅಂಧಕಾರವನ್ನು ಪರಿಹಾರಮಾಡತಕ್ಕವರಾಗಿಯೂ ಇರುವ ಅಗ್ನಿಗಳ ಉತ್ಪತ್ತಿಕ್ರಮವನ್ನು ನಿನಗೆ ತಿಳುಹಿಸಿದೆನು. ವೇದದಲ್ಲಿ ಹೇಳಿರುವ ಅದ್ಭುತನೆಂಬ ಅಗ್ನಿಯ ಮಾಹಾತ್ಮ್ಯವನ್ನೂ ನಿನಗೆ ತಿಳುಹಿಸಿದೆನು. ಎಲ್ಲಾ ಅಗ್ನಿಗಳ ಮಾಹಾತ್ಮ್ಯೆಯೂ ಹೀಗೆಯೇ ಇರುವದೆಂದು ತಿಳಿ. ಎಲ್ಲಾ ಅಗ್ನಿಗಳಿಗೂ ಅಂಗಿರಸ್ಸೇ ಆದಿಭೂತನಾದವನೆಂದು ತಿಳಿ. ಜ್ಯೋತಿಷ್ಟೋಮ ಯಜ್ಞದಿಂದ ಎಲ್ಲಾ ಯಜ್ಞಗಳೂ ಹ್ಯಾಗೆ ಉತ್ಪನ್ನಗಳಾದವೋ ಹಾಗೆ, ಅಂಗಿರಸ್ಸಿನ ದೆಸೆಯಿಂದ ಎಲ್ಲಾ ಅಗ್ನಿಗಳೂ ಉತ್ಪನ್ನಗಳಾದವು. ಆ ಅಗ್ನಿಗಳು ಮಂತ್ರಗಳಿಂದ ಪೂಜಿತಗಳಾಗಿ ಯಾಗಾದಿಕರ್ಮಗಳಲ್ಲಿ ಹವಿಸ್ಸುಗಳನ್ನು ಸ್ವೀಕರಿಸುವವು" ಎಂದು ಮಾರ್ಕಂಡೇಯನು ಧರ್ಮರಾಯನಿಗೆ ಹೇಳಿದನು.

## ೨೨೨ನೇ ಅಧ್ಯಾಯ.—ಮಾರ್ಕಂಡೇಯಪರ್ವ—(ಆಂಗೀರಸನ ವಂಶದ ಕಥೆ.)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಮಾರ್ಕಂಡೇಯನು ಧರ್ಮರಾಯನನ್ನು ಕುರಿತು "ಎಲೈ ಧರ್ಮರಾಯನೆ, ಅಗ್ನಿಗಳ ಅನೇಕ ವಂಶಗಳನ್ನು ನಿನಗೆ

ತಿಳುಹಿಸಿದ್ದಾಯಿತು. ಇನ್ನು ಅದ್ಭುತನೆಂಬ ಅಗ್ನಿಗೆ ಪುತ್ರನಾದ ಮಹಾಪರಾಕ್ರಮಶಾಲಿಯೂ ಬುದ್ಧಿಶಾಲಿಯೂ ಆಗಿದ್ದ ಬ್ರಹ್ಮರ್ಷಿಗಳ ಪತ್ನಿಯರಿಂದ ಪೋಷಿತನಾಗಿ ಬ್ರಾಹ್ಮಣಪ್ರಿಯನಾಗಿ ಕೀರ್ತಿವಂತನಾದ ಷಣ್ಮುಖನ ಉತ್ಪತ್ತಿಕ್ರಮವನ್ನು ತಿಳುಹಿಸುವೆನು ಕೇಳು. ಪೂರ್ವದಲ್ಲಿ ದೇವತೆಗಳಿಗೂ ದಾನವರಿಗೂ ಘೋರವಾದ ಕಲಹವು ಪ್ರಾಪ್ತವಾಯಿತು. ಆಗ ದಾನವರು ದೇವತೆಗಳನ್ನು ಜಯಿಸಿ ದೇವಸೇನೆಯನ್ನೆಲ್ಲಾ ಹೊಡೆದೋಡಿಸುತ್ತಿರಲು, ಅವನ್ನು ನೋಡಿ ದೇವೇಂದ್ರನು ದಾನವರ ಪೆಟ್ಟನ್ನು ಸಹಿಸಲಾರದೆ ಭಯಭ್ರಾಂತವಾಗಿರುವ ದೇವಸೇನೆಯನ್ನು ರಕ್ಷಿಸಿಕೊಂಡು, ದಾನವರನ್ನು ಜಯಿಸತಕ್ಕ ಒಬ್ಬ ಸೇನಾಪತಿಯನ್ನು ಪಡೆಯಬೇಕೆಂದು ಮನಸ್ಸಿನಲ್ಲಿ ಎಣಿಸಿಕೊಂಡು, ಮಾನಸ ಪರ್ವತಕ್ಕೆ ಹೋಗಿ ಈ ವಿಷಯವನ್ನೇ ಚಿಂತಿಸುತ್ತಿರುವಾಗ, ಆ ಪ್ರದೇಶದಲ್ಲಿ 'ಅಯ್ಯೋ! ಯಾವನಾದರೂ ಬಂದು ನನ್ನನ್ನು ಬಿಡಿಸಿಕೊಳ್ಳಬಾರದೆ? ನನಗೆ ಯಾವನಾದರೂ ಒಬ್ಬ ಪತಿಯನ್ನು ಕೊಡಬಾರದೆ? ಅಥವಾ ಯಾವನಾವರೂ ನನಗೆ ಪತಿಯಾಗಬಾರದೆ?' ಎಂದು ಮೊರೆಯಿಟ್ಟ ಒಬ್ಬ ಆರ್ತಸ್ತ್ರೀಯ ಕೂಗನ್ನು ಕೇಳಿ, ಕೂಡಲೆ ಹೆದರಬೇಡ ಹೆದರಬೇಡವೆಂದು ಆಕೆಗೆ ಅಭಯವನ್ನು ಕೊಟ್ಟು, ಎದುರಿಗೆ ಕಿರೀಟಧರನಾಗಿ ಗದಾಪಾಣಿಯಾಗಿ ಗೈರಿಕಾದಿಧಾತುಗಳಿಂದಕೂಡಿದ ಪರ್ವತದಂತೆ ತೋರುತ್ತಾ ಒಬ್ಬ ಕನ್ಯೆಯನ್ನು ಕಯ್ಯಲ್ಲಿ ಹಿಡಿದುಕೊಂಡಿರುವ ಕೇಶಿ ಎಂಬ ಕ್ರೂರನಾದ ದಾನವನನ್ನು ಕಂಡು, 'ಎಲವೆಲವೋ ದುರಾತ್ಮನೆ, ಯಾತಕ್ಕೋಸ್ಕರ ನೀನು ಈ ಕನ್ಯೆಯನ್ನು ಅಪಹರಿಸುವೆ? ನನ್ನನ್ನು ಇಂದ್ರನೆಂದು ತಿಳಿ. ಆಕೆಯನ್ನು ಬಾಧಿಸಬೇಡ ಬಿಡು' ಎನಲು, ಕೇಶಿಯು 'ಎಲೈ ಇಂದ್ರನೆ, ಈ ಕನ್ಯೆಯು ಮೊದಲು ನನ್ನನ್ನು ಪ್ರಾರ್ಥಿಸಿರುವಳು. ನೀನು ಈಕೆಯ ಗೋಜಿಗೆ ಬರಬೇಡ. ನಾನು ಜೀವಸಹಿತನಾಗಿರುವಲ್ಲಿ ಈ ಕನ್ಯೆಯನ್ನು ನೀನು ಹೊಂದುವದಕ್ಕಾಗುವದೆ?' ಎಂದು ನುಡಿದು, ದೊಡ್ಡದಾದ ಗದೆಯನ್ನು ತೆಗೆದುಕೊಂಡು ಇಂದ್ರನಮೇಲೆ ಪ್ರಯೋಗಿಸಿದನು. ಆಗ ಇಂದ್ರನು ತನ್ನಮೇಲೆ ಬರತಕ್ಕ ಆ ಗದೆಯನ್ನು ವಜ್ರಾಯುಧದಿಂದ ಛೇದಿಸಿದನು. ಬಳಿಕ ಕೇಶಿಯು ಕೋಪಗೊಂಡು ಪರ್ವತದ ಶಿಖರವನ್ನು ಕಿತ್ತು ಇಂದ್ರನಮೇಲೆ ಎತ್ತಿಹಾಕಿದನು; ಅದನ್ನೂ ಇಂದ್ರನು ವಜ್ರಾಯುಧದಿಂದ ಹೊಡೆದು ಕೆಳಕ್ಕೆ ಕೆಡಹಲು, ಆ ಪರ್ವತದ ಶಿಖರವು ಆ ಕೇಶಿಯ ಮೇಲೆ ಬಿತ್ತು. ಆ ಪರ್ವತದ ಶಿಖರದಿಂದ ಪೆಟ್ಟುಬಿದ್ದ ಕೇಶಿಯು ಆ ಕನ್ಯೆಯನ್ನು ಬಿಟ್ಟು ಓಡಿಹೋದನು. ಬಳಿಕ ಇಂದ್ರನು ಆ ಕನ್ಯೆಯನ್ನು ನೋಡಿ 'ಎಲೌ ಕನ್ಯೆಯೇ ನೀನು ಯಾರು? ಇಲ್ಲಿ ಏನು ಮಾಡುತ್ತಿರುವೆ?' ಎಂದು ಕೇಳಿದನು" ಎಂದು ಮಾರ್ಕಂಡೇಯನು ಧರ್ಮರಾಯನಿಗೆ ಹೇಳಿದನು.

## ೨೨೩ನೇ ಅಧ್ಯಾಯ.—ಮಾರ್ಕಂಡೇಯಪರ್ವ—(ಆಂಗೀರಸನ ವಂಶದ ಕಥೆ.)

ವೈಶಂಪಾಯನಮುನೀಂದ್ರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಮಾರ್ಕಂಡೇಯನು ಧರ್ಮರಾಯನನ್ನು ಕುರಿತು "ಎಲೈ ಧರ್ಮರಾಯನೆ, ಆ ಕನ್ಯೆಯು ಇಂದ್ರನೊಡನೆ 'ಎಲೈ ಮಹೇಂದ್ರನೆ, ನಾನು ದಕ್ಷಬ್ರಹ್ಮನ ಮಗಳು. ನನ್ನ ಹೆಸರನ್ನು ದೇವಸೇನೆಯೆಂದು ಹೇಳುವರು. ಪೂರ್ವದಲ್ಲಿ ನನ್ನ ತಂಗಿಯಾದ ದೈತ್ಯಸೇನೆಯನ್ನು ಕೇಶಿಯು ಅಪಹರಿಸಿಕೊಂಡು ಹೋದನು. ಯಾವಾಗಲೂ ನಾವಿಬ್ಬರೂ ಸಖೀಜನಗಳಿಂದ ಕೂಡಿ, ತಂದೆಯ ಆಜ್ಞೆಯನ್ನು ಪಡೆದು ವಿಹರಿಸುವದಕ್ಕೋಸ್ಕರ ಇಲ್ಲಿಗೆ ಬರುತ್ತಿದ್ದೆವು. ಆಗ ಈ ಕೇಶಿಯು ನಮ್ಮಿಬ್ಬರನ್ನೂ ಪ್ರಾರ್ಥಿಸುತ್ತಿದ್ದನು. ದೈತ್ಯಸೇನೆಯು ಆ ಕೇಶಿಯನ್ನು ಅಪೇಕ್ಷಿಸಿದಳು. ನಾನು ಆತನನ್ನು ಅಪೇಕ್ಷಿಸಲಿಲ್ಲ. ಈ ದಿವಸ ಬಲಾತ್ಕಾರದಿಂದ ಆ ದೈತ್ಯನು ಅಪಹರಿಸಿಕೊಂಡು ಹೋಗುತ್ತಿದ್ದ ನನ್ನನ್ನು ನೀನು ಬಿಡಿಸಿದೆ. ನಿನ್ನ ಅನುಗ್ರಹದಿಂದ ನಾನು ಸಮರ್ಥನಾದ ಒಬ್ಬ ಪತಿಯನ್ನು ಹೊಂದಬೇಕೆಂದು ಅಪೇಕ್ಷಿಸುತ್ತಿರುವೆನು' ಎನಲು, ಇಂದ್ರನು 'ಎಲೌ ದೇವಸೇನೆಯೆ, ನಮ್ಮ ತಾಯಿಗೆ ನೀನು ತಂಗಿಯಾಗಬೇಕು. ದಕ್ಷಬ್ರಹ್ಮನ ಮಗಳು ನನಗೆ ತಾಯಿಯಾಗಬೇಕು. ಆದರೆ ನಿನ್ನ ಬಲವೆಂಥಾದ್ದೋ ಅದನ್ನು ಕೇಳಬೇಕೆಂದು ನನಗೆ ಇಚ್ಛೆಯಿರುವದು ಹೇಳು' ಎಂದನು. ಬಳಿಕ ದೇವಸೇನೆಯು 'ಎಲೈ ಮಹೇಂದ್ರನೆ, ನಾನು ಅಬಲೆಯು. ನಮ್ಮ ತಂದೆಯ ವರ

ಪ್ರದಾನದಿಂದ ನನಗೆ ದೇವಾಸುರರಿಂದ ನಮಸ್ಕೃತನಾಗಿಯೂ ಬಲವಂತನಾಗಿಯೂ ಇರುವ ಪತಿಯು ಮುಂದೆ ಆಗ ಬೇಕಾಗಿರುವನು' ಎನಲು, ಇಂದ್ರನು 'ಎಲೌ ಮಂಗಳಾಂಗಿಯೆ, ಮುಂದೆ ನಿನಗೆ ಆಗತಕ್ಕ ಪತಿಯು ಬಲವು ಎಂಥಾ ದ್ದಾಗಿರುವದೋ ಅದನ್ನು ಕೇಳಬೇಕೆಂದು ಇಚ್ಛೆಯಿರುವದು ಹೇಳು' ಎಂದನು. ಬಳಿಕ ಆ ಕನ್ಯೆಯು 'ಎಲೈ ಪಾಕ ಶಾಸನನೆ, ದೇವದಾನವಯಕ್ಷರನ್ನೂ ಕಿನ್ನರೋರಗರಾಕ್ಷಸರನ್ನೂ ದೈತ್ಯರನ್ನೂ ಸಕಲಪ್ರಾಣಿಗಳನ್ನೂ ಸಹ ನಿನ್ನೊಡಗೂಡಿ ಜಯಿಸತಕ್ಕವನಾಗಿಯೂ, ಬ್ರಾಹ್ಮಣರಿಗೆ ಹಿತಕರನಾಗಿಯೂ, ಕೀರ್ತಿಶಾಲಿಯಾಗಿಯೂ ಇರುವ ವನು ನನಗೆ ಮುಂದೆ ಪತಿಯಾಗುವನು' ಎಂದಳು. ಆ ಮಾತನ್ನು ಕೇಳಿ ಇಂದ್ರನು ಈ ಕನ್ಯೆಗೆ ಅನುಗುಣನಾದ ಪತಿಯು ಇಲ್ಲವಲ್ಲಾ ಎಂದು ಚಿಂತಿಸುತ್ತ, ಅಮಾವಾಸ್ಯೆಯಲ್ಲಿ ಕ್ರೂರವಾದ ಉದಯಮುಹೂರ್ತದಲ್ಲಿ ಚಂದ್ರನಲ್ಲಿ ಪ್ರವೇಶಮಾಡತಕ್ಕ ಸೂರ್ಯನನ್ನೂ, ಉದಯಪರ್ವತದಲ್ಲಿ ದೇವಾಸುರಯುದ್ಧವನ್ನೂ ನೋಡಿದನು. ಪ್ರಾತಸ್ಸಂಧ್ಯಾ ಕಾಲದಲ್ಲಿ ಮೇಘಗಳೂ ಸಮುದ್ರವೂ ಸಹ ಕೆಂಪುಬಣ್ಣವಾಗಿ ಆತನ ದೃಷ್ಟಿಗೆ ಕಾಣಿಸಿದವು. ಇದಲ್ಲದೆ ಆತನು ಭೃಗು ಅಂಗಿರ ಮೊದಲಾದ ಋಷಿಗಳು ಪ್ರತ್ಯೇಕಪ್ರತ್ಯೇಕ ಮಂತ್ರಗಳಿಂದ ಹೋಮಮಾಡಿದ ಹವ್ಯವನ್ನು ಅಗ್ನಿ ಯು ಸ್ವೀಕರಿಸಿ ಸೂರ್ಯನನ್ನು ಪ್ರವೇಶಮಾಡುವದನ್ನೂ, ಇಪ್ಪತ್ತುನಾಲ್ಕು ಪರ್ವಗಳೂ ಸೂರ್ಯನ ಸಮೀಪದಲ್ಲಿರು ವದನ್ನೂ, ಸೂರ್ಯಚಂದ್ರರು ಐಕ್ಯವನ್ನು ಹೊಂದಿದ್ದನ್ನೂ, ಅನೇಕವಾದ ಘೋರವಾದ ಅಪಶಕುನಗಳನ್ನೂ, ಸೂರ್ಯಚಂದ್ರರಿಗೆ ಕಟ್ಟಿಕೊಂಡಿರುವ ಪರಿವೇಷವನ್ನೂ ಸಹ ನೋಡಿ ಚಿಂತಿಸುತ್ತ,—ಇವೆಲ್ಲವೂ ಈ ದಿವಸ ನಡೆಯ ತಕ್ಕ ಘೋರವಾದ ಯುದ್ಧಕ್ಕೆ ಸೂಚಕವಾಗಿರುವವು. ನದಿಗಳು ಹಿಂದಕ್ಕೆ ಪ್ರವಹಿಸುವವು; ನರಿಗಳು ಸೂರ್ಯಾ ಭಿಮುಖವಾಗಿ ಘೋರವಾಗಿ ಕೂಗುವವು; ಚಂದ್ರನಿಗೆ ಸೂರ್ಯಾಗ್ನಿಗಳ ಸಮಾಗಮವು ಘೋರವಾಗಿಯೂ ತೇಜೋ ಯುಕ್ತವಾಗಿಯೂ ಕಾಣಿಸುತ್ತಿರುವದು. ಈ ಸಮಯದಲ್ಲಿ ಚಂದ್ರನೇ ಆಗಲಿ ಅಗ್ನಿಯೇ ಆಗಲಿ ಪುತ್ರನನ್ನು ಪಡೆದರೆ ಈ ಕನ್ಯೆಗೆ ಆತನು ಪತಿಯಾಗಬಹುದು—ಎಂದು ಚಿಂತಿಸಿ, ಇಂದ್ರನು ಆ ಕನ್ಯೆಯನ್ನು ಕರೆದುಕೊಂಡು ಬ್ರಹ್ಮಲೋಕಕ್ಕೆ ಹೋಗಿ, ಬ್ರಹ್ಮನನ್ನು ಕುರಿತು 'ಎಲೈ ಪಿತಾಮಹನೆ, ಈ ದೇವಸೇನೆಗೆ ಅನುಗುಣನಾದ ಪತಿ ಯನ್ನು ತೋರಿಸು' ಎನಲು, ಬ್ರಹ್ಮನು 'ಎಲೈ ದೇವೇಂದ್ರನೆ, ನೀನು ಆಲೋಚಿಸಿದಂತೆ ಈಕೆಗೆ ಪರಾಕ್ರಮಶಾಲಿ ಯಾದ ಪತಿಯು ಹುಟ್ಟುವನು. ಈಕೆಗೆ ಪತಿಯಾದವನೇ ನಿನ್ನ ಸೈನ್ಯಕ್ಕೂ ಅಧಿಪತಿಯಾಗುವನು' ಎಂದನು. ಅದನ್ನು ಕೇಳಿ ಇಂದ್ರನು ಬ್ರಹ್ಮನಿಗೆ ವಂದನೆಯನ್ನು ಮಾಡಿ, ಆ ಕನ್ಯೆಯನ್ನು ಕರೆದುಕೊಂಡು ದೇವರ್ಷಿಗಳು ಇದ್ದ ಸ್ಥಳಕ್ಕೆ ಬಂದನು. ಅಲ್ಲಿ ವಸಿಷ್ಠನೇ ಮೊದಲಾದ ಋಷಿಗಳು ಯಜ್ಞಕರ್ಮವನ್ನು ಮಾಡುತ್ತ, ಸೋಮ ಪಾನವನ್ನು ಮಾಡುವ ಇಚ್ಛೆಯಿಂದ ದೇವತೆಗಳು ಬಂದಿರಲು, ಶಾಸ್ತ್ರೋಕ್ತವಾಗಿ ಇಷ್ಟಿಯನ್ನು ಮಾಡಿ ಅಗ್ನಿ ಯಲ್ಲಿ ಹವನವನ್ನು ಮಾಡಿದರು. ಆ ಮುಹೂರ್ತದಲ್ಲಿ ಅಗ್ನಿಯು ಸೂರ್ಯಮಂಡಲದಿಂದ ಈಚೆಗೆ ಅದ್ಭುತವಾಗಿ ಕಾಣಿಸಿಕೊಂಡು, ವಾಙ್ನಿಯಮದಿಂದ ಆಹವನೀಯಾಗ್ನಿಯಲ್ಲಿ ಬಂದು ನಿಂತು, ವಿಧ್ಯುಕ್ತವಾಗಿ ಹೋಮಮಾಡಿದ ಹವಿಸ್ಸನ್ನು ಸ್ವೀಕರಿಸಿ ದೇವತೆಗಳಿಗೆ ಕೊಟ್ಟು, ತಾನು ಮಾರ್ಗದಲ್ಲಿ ಹೋಗುತ್ತಿದ್ದನು. ಆ ಕಾಲದಲ್ಲಿ ಮಹಾತ್ಮ ರಾದ ಋಷಿಗಳ ಪತ್ನಿಯರು ಸುಖವಾಗಿ ತಮ್ಮತಮ್ಮ ಆಶ್ರಮದಲ್ಲಿ ಮಲಗಿದ್ದರು. ಅಗ್ನಿಯು ಸುವರ್ಣವೇದಿ ಗಳಂತೆ ಹೊಳೆಯುತ್ತಾ ಚಂದ್ರರೇಖೆಯಂತೆ ನಿರ್ಮಲರೂ ಅಗ್ನಿಜ್ವಾಲೆಯಂತೆ ತೇಜಃಪುಂಜರೂ ಆದ ಆ ಋಷಿಪತ್ನಿ ಯರನ್ನು ನೋಡಿ ಚಪಲಪಟ್ಟು ಕಾಮಾತುರನಾಗಿ, ಹಾಗೆಯೇ ಸ್ವಲ್ಪವಿವೇಕವನ್ನು ತಂದುಕೊಂಡು, ನನ್ನಲ್ಲಿ ಅಪೇಕ್ಷೆಯಿಲ್ಲದೆ ಪತಿವ್ರತೆಯರಾಗಿರುವ ಈ ಋಷಿಪತ್ನಿಯರಲ್ಲಿ ನಾನು ಮೋಹಪಡುವದು ಅನುಚಿತವಾದದ್ದು ಎಂದು ತನ್ನಲ್ಲಿತಾನೇ ಚಿಂತಿಸಿ, ಆ ಪತಿವ್ರತೆಯರನ್ನು ನೋಡುವದೂ ನಿರ್ನಿಮಿತ್ತವಾಗಿ ಅವರನ್ನು ಮಾತನಾಡಿಸುವದೂ ಅಶಕ್ಯವಾದ್ದರಿಂದ ಗಾರ್ಹಪತ್ಯವನ್ನು ಪ್ರವೇಶಿಸಿ ಅವರನ್ನು ಬೇಕಾದಷ್ಟು ನೋಡುವೆನು ಎಂದು ನಿಶ್ಚಯಿಸಿ, ಗಾರ್ಹ ಪತ್ಯವನ್ನು ಪ್ರವೇಶಿಸಿ ತನ್ನ ಜ್ವಾಲೆಗಳಿಂದ ಆ ಋಷಿಪತ್ನಿಯರನ್ನು ಸ್ಪರ್ಶಮಾಡುವನೋ ಎಂಬಹಾಗೆ ಕಾಣಿಸುತ್ತ ಪ್ರಕಾಶಿಸಿದನು. ಈ ಪ್ರಕಾರ ಅಗ್ನಿಯು ಆ ಪತಿವ್ರತೆಯರಾದ ಋಷಿಪತ್ನಿಯರಲ್ಲಿ ಮನಸ್ಸಿಟ್ಟು ಕಾಮಾತುರವಾದ ಹೃದಯವುಳ್ಳವನಾಗಿ ಆ ಪತಿವ್ರತೆಯರು ಸ್ವಾಧೀನರಾಗದಿರಲು, ಶರೀರತ್ಯಾಗಮಾಡಬೇಕೆಂದು ನಿಶ್ಚಯಿಸಿಕೊಂಡು ಅರಣ್ಯಕ್ಕೆ ಹೋದನು. ಆಗ ದಕ್ಷಬ್ರಹ್ಮನ ಮಗಳಾದ ಸ್ವಾಹಾದೇವಿಯು ಬಹುಕಾಲದಿಂದ ಅಗ್ನಿಯಲ್ಲಿ ಆಸಕ್ತಳಾಗಿ

ಆ ಅಗ್ನಿಯು ಅರಣ್ಯಕ್ಕೆ ಹೊರಟ ಸಮಯವನ್ನು ನೋಡಿ, ಕಾಮಪೀಡಿತನಾದ ಆತನು ತನ್ನ ರೂಪದಿಂದ ಮೋಹ ಪಡುವಂತೆ ನಾನು ಸಪ್ತರ್ಷಿಗಳ ಪತ್ನಿಯರ ರೂಪವನ್ನು ತಾಳಿ ಆತನ ಇಷ್ಟಾರ್ಥವನ್ನು ಪೂರಣವಮಾಡಬೇಕೆಂದು ಬಗೆದಳು" ಎಂದು ಮಾರ್ಕಂಡೇಯನು ಧರ್ಮರಾಯನಿಗೆ ಹೇಳಿದನು.

---

## ೨೨೪ನೇ ಅಧ್ಯಾಯ.—ಮಾರ್ಕಂಡೇಯಪರ್ವ—(ಅಂಗೀರಸನ ವಂಶದ ಕಥೆ.)

ವೈಶಂಪಾಯನಮುನೀಂದ್ರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಮಾರ್ಕಂಡೇಯನು ಧರ್ಮರಾಯನನ್ನು ಕುರಿತು "ಎಲೈ ಧರ್ಮರಾಯನೆ, ಬಳಿಕ ಸ್ವಾಹಾದೇವಿಯು ಅಂಗಿರಸ್ಸಿನ ಪತ್ನಿಯಾದ ರೂಪಶೀಲಸಂಪನ್ನಳಾದ ಶಿವಾದೇವೀರೂಪವನ್ನು ತಾಳಿ, ಅಗ್ನಿಯ ಸಮೀಪಕ್ಕೆ ಹೋಗಿ ಆತನನ್ನು ಕುರಿತು 'ಯಜ್ಞೇಶ್ವರನೆ, ನಾನು ಕಾಮಪೀಡಿತಳಾಗಿರುವೆನು. ನನ್ನ ಕಾಮವನ್ನು ನೀನು ಪೂರ್ಣಮಾಡು. ಹಾಗೆ ನೀನು ನನ್ನ ಕಾಮವನ್ನು ಪೂರ್ಣಮಾಡದೆ ಹೋದರೆ, ನಾನು ಮರಣವನ್ನು ಹೊಂದುವೆನೆಂದು ತಿಳಿ. ನಾನು ಅಂಗಿರಸ್ಸಿನ ಪತ್ನಿಯಾದ ಶಿವಾದೇವಿಯು. ಉಳಿದ ಋಷಿಪತ್ನಿಯರು ಆಲೋಚಿಸಿ ನಿನ್ನ ಬಳಿಗೆ ನನ್ನನ್ನು ಕಳುಹಿಸಿರುವರು. ಇದು ನಿಶ್ಚಯವಾದದ್ದು' ಎನಲು, ಅಗ್ನಿಯು 'ಎಲೆ ಮಂಗಳಾಂಗಿಯೆ, ನಾನು ಕಾಮಾರ್ತನಾಗಿರುವೆನೆಂದು ನೀನಾಗಲೀ ಇತರ ಋಷಿಪತ್ನಿಯರಾಗಲೀ ಹ್ಯಾಗೆ ತಿಳಿದಿರಿ?' ಎಂದು ಕೇಳಿದನು. ಬಳಿಕ ಶಿವಾದೇವಿಯ ರೂಪವನ್ನು ತಾಳಿದ್ದ ಸ್ವಾಹಾದೇವಿಯು 'ಯಜ್ಞೇಶ್ವರನೆ, ಯಾವಾಗಲೂ ನೀನು ನಮಗೆ ಪ್ರಿಯನಾದವನು. ನಾವು ನಿನ್ನನ್ನು ನೋಡಿ ಭಯಪಡುವೆವು. ನಿನ್ನ ಮನಸ್ಸಿನಲ್ಲಿರತಕ್ಕ ಅಭಿಪ್ರಾಯವನ್ನು ನಿನ್ನ ಆಕಾರದಿಂದ ತಿಳಿದು ಸಪ್ತ ಋಷಿಪತ್ನಿಯರು ನನ್ನನ್ನು ಕಳುಹಿಸಿರುವರು. ನಾನು ನಿನ್ನಲ್ಲಿ ವಿಹರಿಸುವದಕ್ಕಾಗಿ ಬಂದಿರುವೆನು. ಜಾಗ್ರತೆಯಾಗಿ ನನ್ನ ಕಾಮಪೂರ್ತಿಯನ್ನು ಮಾಡು. ನನ್ನ ತಂಗಿಯರು ನನ್ನನ್ನು ನಿರೀಕ್ಷಿಸಿಕೊಂಡು ಬರುವರು' ಎನಲು, ಅಗ್ನಿಯು ಪ್ರೀತಿಯಿಂದ ಆ ಶಿವಾದೇವಿಯನ್ನು ವಿವಾಹಮಾಡಿಕೊಂಡು ಆಕೆಯ ಸಂಗಡ ಕ್ರೀಡಿಸುತ್ತಿರಲು, ಆತನ ರೇತಸ್ಸು ಸ್ಖಲನವಾಯಿತು. ಅದನ್ನು ಶಿವಾದೇವಿಯು ತನ್ನ ಕಯ್ಯಲ್ಲಿ ಧರಿಸಿ 'ಈ ಅರಣ್ಯದಲ್ಲಿ ಯಾರಾದರೂ ನನ್ನ ಈ ರೂಪವನ್ನು ನೋಡಿದರೆ ಅವರು ನನ್ನನ್ನು ಸುಳ್ಳಾಡಿದಳು ಎಂದು ನುಡಿಯುವರು. ಆದ್ದರಿಂದ ಈ ರೇತಸ್ಸನ್ನು ರಕ್ಷಿಸುತ್ತ ನಾನು ಗರುತ್ಮಂತನ ಸ್ತ್ರೀರೂಪವನ್ನು ಧರಿಸಿ ಈ ವನದಿಂದ ಆಚೆಗೆ ಹೋದರೆ ನಾನು ಸುಖವಾಗಿರಬಹುದು' ಎಂದು ತನ್ನಲ್ಲಿತಾನೇ ಎಣಿಸಿ, ಪಕ್ಷಿಸ್ತ್ರೀರೂಪವನ್ನು ತಾಳಿ ಆ ವನದಿಂದ ಹೊರಟು, ದೃಷ್ಟಿಯಲ್ಲಿ ವಿಷಪೂರ್ಣವಾಗಿಯೂ ಏಳು ಹೆಡೆಗಳುಳ್ಳದ್ದಾಗಿಯೂ ಅದ್ಭುತವಾದ ಶರೀರವುಳ್ಳದ್ದಾಗಿಯೂ ಇರುವ ಸರ್ಪಗಳಿಂದಲೂ ರಾಕ್ಷಸರಿಂದಲೂ ಘೋರವಾದ ಪಿಶಾಚಗಳಿಂದಲೂ ಭೂತಗಣಗಳಿಂದಲೂ ಅನೇಕವಾದ ಮೃಗಪಕ್ಷಿಗಳಿಂದಲೂ ಭಯಂಕರವಾದ ಶ್ವೇತಪರ್ವತಕ್ಕೆ ಹೋಗಿ, ಅಲ್ಲಿ ದುರ್ಗಮವಾದ ಪ್ರದೇಶದಲ್ಲಿ ಒಂದು ಚಿನ್ನದ ಕುಂಭದಲ್ಲಿ ಆ ರೇತಸ್ಸನ್ನು ಇಟ್ಟಳು. ಈ ರೀತಿಯಾಗಿಯೇ ಸ್ವಾಹಾದೇವಿಯು ಎಲ್ಲಾ ಋಷಿಪತ್ನಿಯರ ರೂಪವನ್ನೂ ತಾಳಿ ಯಜ್ಞೇಶ್ವರನಲ್ಲಿ ವಿಹರಿಸಿದಳು. ವಸಿಷ್ಠಮಹರ್ಷಿಯ ಪತ್ನಿಯಾದ ಅರುಂಧತಿಯು ಮಹಾಪತಿವ್ರತೆಯಾದ್ದರಿಂದಲೂ ತಪೋನಿಷ್ಠಳಾದ್ದರಿಂದಲೂ ಆಕೆಯ ರೂಪವನ್ನು ಧರಿಸುವದಕ್ಕೆ ಸ್ವಾಹಾದೇವಿಯಿಂದ ಆಗದೆ ಹೋಯಿತು. ಎಲೈ ಧರ್ಮರಾಯನೆ, ಆ ಸ್ವಾಹಾದೇವಿಯು ಅಗ್ನಿಯ ರೇತಸ್ಸನ್ನು ಚಿನ್ನದ ಕುಂಭದಲ್ಲಿ ಪಾಡ್ಯದ ದಿವಸದಲ್ಲಿ ಆರು ಭಾಗವಾಗಿ ಹಾಕಲು; ಆ ರೇತಸ್ಸು ತೇಜಃಪುಂಜವಾಗಿಯೂ ಋಷಿಗಳಿಂದ ಪೂಜಿತವಾಗಿಯೂ ಆ ಕುಂಭದಿಂದ ಈಚೆಗೆ ಜಾರಿ ಬಿದಿಗೆಯ ದಿವಸ ಆಕಾರವನ್ನು ಹೊಂದಿ, ತದಿಗೆಯ ದಿವಸ ಶಿಶುವಾಗಿ, ಚೌತಿಯ ದಿವಸ ಅಂಗ ಪ್ರತ್ಯಂಗಗಳಿಂದ ಕೂಡಿ, ಆರು ಶಿರಸ್ಸುಗಳಿಂದಲೂ ಹನ್ನೆರಡು ಕಣ್ಣುಗಳಿಂದಲೂ ಹನ್ನೆರಡು ಕಿವಿಗಳಿಂದಲೂ ಹನ್ನೆರಡು ಭುಜಗಳಿಂದಲೂ ಒಂದು ಕಂಠದಿಂದಲೂ ಒಂದು ಒಡಲಿಂದಲೂ ಎರಡು ಪಾದಗಳಿಂದಲೂ ಪ್ರಕಾಶಿಸುತ್ತ, ಸಂಧ್ಯಾರಾಗದಿಂದ ಕೆಂಪಾದ ಮೇಘದಲ್ಲಿ ಪ್ರಕಾಶಿಸುವ ಸೂರ್ಯನಂತೆ ಹೊಳೆಯುತ್ತ ಕುಮಾರಸ್ವಾಮಿಯು ಹುಟ್ಟಿದನು.

ಬಳಿಕ ಆತನು ಸಕಲದೈತ್ಯರನ್ನು ನಾಶಮಾಡತಕ್ಕದ್ದಾಗಿಯೂ ಭಯಂಕರವಾಗಿಯೂ ಇರುವ ಈಶ್ವರನ ಧನುಸ್ಸನ್ನು ಧರಿಸಿಕೊಂಡು ಚರಾಚರಾತ್ಮಕವಾದ ಮೂರುಲೋಕಗಳೂ ಭಯಪಡುವಹಾಗೆ ಸಿಂಹನಾದವನ್ನು ಮಾಡಿದನು. ಆ ಶಬ್ದವನ್ನು ಕೇಳಿ ಸಹಿಸಲಾರದೆ, ಚಿತ್ರ ಐರಾವತ ಎಂಬ ಎರಡು ಆನೆಗಳು ಕೆಳಕ್ಕೆ ಬಿದ್ದವು. ಅದನ್ನು ನೋಡಿ ಸೂರ್ಯನಂತೆ ತೇಜೋವಂತನಾದ ಆ ಕುಮಾರಸ್ವಾಮಿಯು ಎರಡು ಕೈಗಳಿಂದಲೂ ಆ ಎರಡು ಆನೆಗಳನ್ನೂ ಆತುಕೊಂಡು, ಒಂದು ಕೈಯಿಂದ ಶಕ್ತ್ಯಾಯುಧವನ್ನು ಹಿಡಿದುಕೊಂಡು, ಮತ್ತೊಂದು ಕೈಯಿಂದ ದೊಡ್ಡದಾದ ತಾಮ್ರಚೂಡಪಕ್ಷಿಯನ್ನು ಆಲಿಂಗನೆ ಮಾಡಿಕೊಂಡು, ಇನ್ನೆರಡು ಕೈಗಳಿಂದ ದೊಡ್ಡದಾದ ಒಂದು ಶಂಖವನ್ನು ಹಿಡಿದು ಸಕಲ ಪ್ರಾಣಿಗಳೂ ಭಯಪಡುವಂತೆ ಊದುತ್ತ, ಮತ್ತೆರಡು ಭುಜಗಳಿಂದ ಆಗ್ರಹಗೊಂಡು ಆಕಾಶವನ್ನು ಪೆಟ್ಟಕ್ಕಿದನು. ಈ ಪ್ರಕಾರ ಆ ಷಣ್ಮುಖನು ಆಟವಾಡುತ್ತ, ತನ್ನ ಆರು ಮುಖಗಳಿಂದಲೂ ಮೂರು ಲೋಕಗಳನ್ನೂ ನುಂಗಿಬಿಡುವನೋ ಎಂಬಹಾಗೆ ಶ್ವೇತಪರ್ವತದ ತುದಿಯಲ್ಲಿ ನಿಂತು, ಉದಯಪರ್ವತದಮೇಲೆ ಕಾಣಿಸುವ ಸೂರ್ಯನಂತೆ ಪ್ರಕಾಶಿಸುತ್ತ, ತನ್ನ ಮುಖಗಳಿಂದ ನಾಲ್ಕು ದಿಕ್ಕುಗಳನ್ನೂ ನೋಡಿ ಅಡಿಗಡಿಗೆ ನಾನಾಪ್ರಕಾರವಾಗಿ ಸಿಂಹನಾದವನ್ನು ಮಾಡಿದನು. ಆ ಧ್ವನಿಯನ್ನು ಕೇಳಿ ಅಲ್ಲಿದ್ದವರೆಲ್ಲರೂ ಭಯಪಟ್ಟು ಆತನಿಗೆ ಶರಣಾಗತರಾಗಲು, ಅವರೆಲ್ಲರನ್ನೂ ಸಮಾಧಾನಮಾಡಿ ಷಣ್ಮುಖನು ಬಿಲ್ಲಿಗೆ ನಾರಿಯನ್ನೇರಿಸಿ, ಅದರಲ್ಲಿ ಕಡುಮೊನೆಗಳಾದ ಸರಳುಗಳನ್ನು ತೊಟ್ಟು ಅವುಗಳಿಂದ ಹಿಮವತ್ಪರ್ವತನಿಗೆ ಮಗನಾದ ಕ್ರೌಂಚಪರ್ವತವನ್ನು ಭೇದಿಸಿ ಮಹತ್ತಾದ ರಂಧ್ರವನ್ನು ಮಾಡಿಬಿಟ್ಟನು. ಆ ರಂಧ್ರಭಾಗದಿಂದಲೇ ಈಗಲೂ ಸಹ ಹಂಸಗಳೂ ಗೃಧ್ರಗಳೂ ಮೇರುಪರ್ವತಕ್ಕೆ ಹೋಗುವವು. ಈ ಪ್ರಕಾರ ಕ್ರೌಂಚಪರ್ವತವು ಆ ಷಣ್ಮುಖನ ಬಾಣಗಳಿಂದ ಪೆಟ್ಟುಬಿದ್ದು ಖಂಡಖಂಡವಾಗಿ ಉಪಪರ್ವತಗಳಮೇಲೆ ಬೀಳಲು, ಆ ಪರ್ವತಗಳೆಲ್ಲವೂ ಪುಡಿಪುಡಿಯಾದವು. ಆಗ ಆ ಪರ್ವತಗಳ ಕ್ಷೋಭೆಯಿಂದ ಕೂಗಿಕೊಳ್ಳುವ ಪ್ರಾಣಿಗಳ ಕೋಲಾಹಲವನ್ನು ಕೇಳಿ ಷಣ್ಮುಖನು ಮಹತ್ತಾಗಿಯೂ ನಿರ್ಮಲವಾಗಿಯೂ ಇರುವ ಶಕ್ತ್ಯಾಯುಧವನ್ನು ಕೈಯಲ್ಲಿ ಹಿಡಿದು ಶ್ವೇತಪರ್ವತದ ಶಿಖರವನ್ನು ಭೇದಿಸಿದನು. ಆ ಶಕ್ತ್ಯಾಯುಧದ ಪೆಟ್ಟಿನಿಂದ ಪುಡಿಪುಡಿಯಾಗಿ ಆ ಶಿಖರವು ಭೂಮಿಯಮೇಲೆ ಬಿತ್ತು. ಆಗ ಭೂಮಿಯು ಸೀಳಿಹೋಗಿ ಬಳಿಕ ಆ ಷಣ್ಮುಖನಿಗೆ ಶರಣಾಗತವಾಗಿ ಮತ್ತು ಆತನಿಂದಲೇ ಮೊದಲಿದ್ದದ್ದಕ್ಕಿಂತಲೂ ಹೆಚ್ಚಾಗಿ ದೃಢವಾಯಿತು. ಪರ್ವತಗಳೆಲ್ಲಾ ಭಯಪಟ್ಟು ಷಣ್ಮುಖನಿಗೆ ನಮಸ್ಕಾರವನ್ನು ಮಾಡಿ ಭೂಮಿಯನ್ನು ಸೇರಿದವು. ಬಳಿಕ ಶುಕ್ಲಪಕ್ಷದ ಆ ಐದನೇದಿವಸದಲ್ಲಿ ಸಕಲಜನರೂ ಆ ಕುಮಾರಸ್ವಾಮಿಯನ್ನು ಸೇವಿಸಿದರು" ಎಂದು ಮಾರ್ಕಂಡೇಯನು ಧರ್ಮರಾಯನಿಗೆ ಹೇಳಿದನು.

### ೨೨೫ನೇ ಅಧ್ಯಾಯ.—ಮಾರ್ಕಂಡೇಯಪರ್ವ—(ಷಣ್ಮುಖಸ್ವಾಮಿಯ ಉತ್ಪತ್ತಿ.)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಮಾರ್ಕಂಡೇಯನು ಧರ್ಮರಾಯನನ್ನು ಕುರಿತು "ಕೇಳು ಧರ್ಮರಾಯನೆ, ಈ ಪ್ರಕಾರ ಮಹಾಬಲಶಾಲಿಯಾದ ಷಣ್ಮುಖನು ಉತ್ಪನ್ನನಾಗಲು, ಆ ಸಮಯದಲ್ಲಿ ನಾನಾಪ್ರಕಾರವಾದ ಘೋರವಾದ ಅಪಶಕುನಗಳು ಕಾಣಬಂದವು; ದಂಪತಿಗಳಿಗೆ ಪರಸ್ಪರವಾಗಿ ವಿರೋಧವೂ ಶೀತೋಷ್ಣಗಳ ಆಧಿಕ್ಯವೂ ಉಂಟಾಯಿತು; ಸೂರ್ಯಾದಿಗ್ರಹಗಳು ಉರಿಯುವಂತೆ ಕಾಣಿಸಿದವು; ದಿಕ್ಕುದಿಕ್ಕುಗಳಲ್ಲಿಯೂ ಆಕಾಶದಲ್ಲಿಯೂ ಮಹತ್ತಾದ ಶಬ್ದವು ಕೇಳಿಸಿತು; ಭೂಕಂಪವುಂಟಾಯಿತು. ಈ ಪ್ರಕಾರ ಘೋರವಾದ ಉತ್ಪಾತಗಳನ್ನು ನೋಡಿ, ಆ ಚೈತ್ರವನದಲ್ಲಿ ವಾಸಮಾಡುತ್ತಿದ್ದ ಋಷಿಗಳು ಲೋಕಹಿತಾರ್ಥವಾಗಿ ಶಾಂತಿಕರ್ಮಗಳನ್ನು ಮಾಡಿ ಈ ಮಹತ್ತಾದ ಅನರ್ಥವು ಅಗ್ನಿಯಿಂದಲೇ ಉಂಟಾಗಿರುವದೆಂದು ಮಾತನಾಡಿಕೊಂಡರು. ಅವರಲ್ಲಿ ಕೆಲವರು 'ಸಪ್ತರ್ಷಿಗಳ ಪತ್ನಿಯರು ಮಾಡಿದ ಕೆಲಸದಿಂದ ಇಷ್ಟು ಭಯವುಂಟಾಗಿರುವದು' ಎಂದರು. ಮತ್ತೆ ಕೆಲವರು 'ಈ ಗರುಡಸ್ತ್ರೀಯೇ ಇಷ್ಟು ಅನ

ರ್ಥಕ್ಕೆ ಕಾರಣಳಾಗಿರುವಳು' ಎಂದು ನುಡಿದರು. ಈ ಪ್ರಕಾರ ಅಲ್ಲಲ್ಲಿ ನಾನಾಪ್ರಕಾರವಾಗಿ ಮಾತನಾಡಿಕೊಳ್ಳುತ್ತಿದ್ದರು. ಆದರೆ ಇದು ಸ್ವಾಹಾದೇವಿಯಿಂದುಂಟಾದದ್ದೆಂದು ಯಾರೂ ತಿಳಿಯದೆ ಹೋದರು. ಆಗ ಆ ಋಷಿಗಳು ಆಡಿಕೊಳ್ಳುವ ಮಾತನ್ನು ಕೇಳಿ ಗರುಡಸ್ತ್ರೀಯು ಮೆಲ್ಲಗೆ ಷಣ್ಮುಖನ ಬಳಿಗೆ ಬಂದು 'ಎಲೈ ಪುತ್ರನೆ, ನನಗೆ ನೀನು ಮಗನು; ನಾನು ನಿಮ್ಮ ತಾಯಿಯು' ಎಂದು ಹೇಳಿದಳು. ಆ ಸಮಯದಲ್ಲಿ ಸಪ್ತರ್ಷಿಗಳು ಕುಮಾರಸ್ವಾಮಿಯ ಉತ್ಪತ್ತಿಕ್ರಮವನ್ನು ಕೇಳಿ ಅರುಂಧತಿಯೊಬ್ಬಳು ಹೊರತು ಉಳಿದ ತಮ್ಮತಮ್ಮ ಪತ್ನಿಯರನ್ನು ತ್ಯಜಿಸಿ, ಆರು ಮಂದಿ ಸ್ತ್ರೀಯರಿಂದ ಈ ಷಣ್ಮುಖನು ಹುಟ್ಟಿದನೆಂದು ಪರಸ್ಪರವಾಗಿ ಮಾತನಾಡಿಕೊಂಡರು. ಆಗ ವಿಶ್ವಾಮಿತ್ರಋಷಿಯು ಗರುಡಸ್ತ್ರೀಯನ್ನು ನೋಡಿ 'ಷಣ್ಮುಖನು ನಿನ್ನ ಮಗನಲ್ಲ. ಇದನ್ನು ನಾನು ಬಲ್ಲೆನು' ಎಂದು ಹೇಳಿ, ಇಷ್ಟಿಯನ್ನು ಮಾಡಿ ಯಾರಿಗೂ ಕಾಣಿಸಿಕೊಳ್ಳದಂತೆ ಕಾಮಾತುರನಾದ ಅಗ್ನಿಯ ಹಿಂದೆ ಹೊರಟು ಯಥಾರ್ಥವಾಗಿ ನಡೆದ ಸಂಗತಿಗಳನ್ನೆಲ್ಲಾ ತಿಳಿದುಕೊಂಡು, ಮಹಾಪರಾಕ್ರಮಶಾಲಿಯಾದ ಕುಮಾರಸ್ವಾಮಿಗೆ ಶರಣಾಗತನಾಗಿ ಆತನನ್ನು ಸ್ತುತಿಸಿ, ಆತನಿಗೆ ಜಾತಕರ್ಮ ಮೊದಲಾದ ತ್ರಯೋದಶ ಮಂಗಳಕರ್ಮಗಳನ್ನು ಮಾಡಿ, ಮತ್ತು ಆ ಷಣ್ಮುಖನಿಗೆ ಕುಕ್ಕುಟಸಾಧನೆಯೂ ಶಕ್ತಿಸಾಧನೆಯೂ ಪರಿಷತ್ಸಾಧನೆಯೂ ಆಗಿ ವಿಶೇಷವಾದ ಮಾಹಾತ್ಮ್ಯೆಯುಂಟಾಗುವದಕ್ಕೋಸ್ಕರ ಲೋಕಹಿತಾರ್ಥವಾಗಿ ಕೆಲವು ಕರ್ಮಗಳನ್ನು ನೆರವೇರಿಸಿದನು. ಇದರಿಂದ ಆ ಕುಮಾರಸ್ವಾಮಿಗೆ ವಿಶ್ವಾಮಿತ್ರನು ಬಹುಪ್ರಿಯನಾಗಿದ್ದು, ಸ್ವಾಹಾದೇವಿಯು ಋಷಿಪತ್ನಿಯರ ರೂಪನ್ನು ತಾಳಿದ್ದನ್ನು ತಿಳಿದು ಸಪ್ತರ್ಷಿಗಳ ಬಳಿಗೆ ಬಂದು ಅವರನ್ನು ಕುರಿತು, 'ಎಲೈ ಮಹರ್ಷಿಗಳಿರಾ, ನಿಮ್ಮ ಪತ್ನಿಯರು ಯಾವ ಅಪರಾಧವನ್ನೂ ಮಾಡಲಿಲ್ಲ. ಇದೆಲ್ಲಾ ಸ್ವಾಹಾದೇವಿಯ ಕೃತ್ಯವಾಗಿರುವದು' ಎಂದನು. ಅದನ್ನು ಕೇಳಿಯೂ, ನಿಜಸ್ಥಿತಿಯನ್ನು ತಿಳಿದಾಗ್ಯೂ, ಸಪ್ತಋಷಿಗಳು ಲೋಕಾಪವಾದಕ್ಕೆ ಭಯಪಟ್ಟು ತಮ್ಮತಮ್ಮ ಪತ್ನಿಯರನ್ನು ಬಿಟ್ಟುಬಿಟ್ಟರು. ಆ ಬಳಿಕ ದೇವತೆಗಳು ಸ್ಕಂದೋತ್ಪತ್ತಿಯನ್ನು ಕೇಳಿ ಇಂದ್ರನಬಳಿಗೆ ಬಂದು 'ಎಲೈ ಮಹೇಂದ್ರನೆ, ಈಗ ಹುಟ್ಟಿರುವ ಷಣ್ಮುಖನಲ್ಲಿ ಯಾರಿಂದಲೂ ಸಹಿಸಲಶಕ್ಯವಾದ ಪರಾಕ್ರಮವಿರುವದು. ಆತನನ್ನು ಶೀಘ್ರವಾಗಿ ನೀನು ಸಂಹರಿಸಿಬಿಡು. ನೀನು ಆತನನ್ನು ಸಂಹರಿಸದೆ ಹೋದರೆ ಆತನು ತನ್ನ ಸಾಮರ್ಥ್ಯದಿಂದ ಮೂರು ಲೋಕಗಳನ್ನೂ ಜಯಿಸಿ ತಾನೇ ಇಂದ್ರಪದವಿಗೆ ಬಂದುಬಿಡುವನು' ಎಂದು ಬಿನ್ನವಿಸಿದರು. ಅದನ್ನು ಕೇಳಿ, ಇಂದ್ರನು ವ್ಯಥೆಪಟ್ಟು 'ಎಲೈ ದೇವತೆಗಳಿರಾ, ಆ ಬಾಲನಾದ ಷಣ್ಮುಖನು ಬ್ರಹ್ಮನನ್ನಾದರೂ ತನ್ನ ಶಕ್ತಿಯಿಂದ ಜಯಿಸಬಲ್ಲನು. ಆದರೆ ಬಾಲಕನಾದ ಅವನನ್ನು ಸಂಹರಿಸುವದಕ್ಕೆ ನಾನು ಉತ್ಸಾಹಪಡಲಾರೆನು' ಎನಲು, ದೇವತೆಗಳು 'ಎಲೈ ಇಂದ್ರನೆ, ಆತನನ್ನು ಸಂಹರಿಸತಕ್ಕ ಸಾಮರ್ಥ್ಯವು ನಿನಗಿಲ್ಲವಾದ್ದರಿಂದ ಈ ಮಾತನ್ನು ಆಡುವೆ. ಲೋಕಮಾತೃಕೆಯರು ಮಾಯಾರೂಪವನ್ನು ಧರಿಸಿಕೊಂಡು ಹೋಗಿ ಆತನನ್ನು ಸಂಹರಿಸಲಿ' ಎಂದರು. ಬಳಿಕ ಲೋಕಮಾತೃಕೆಯರು ಆ ಷಣ್ಮುಖನ ಬಳಿಗೆ ಹೋಗಿ, ಅಸದೃಶವಾದ ಬಲವುಳ್ಳ ಆತನನ್ನು ನೋಡಿ ಈತನನ್ನು ಜಯಿಸುವದು ಅಶಕ್ಯವಾದದ್ದೆಂದು ಭಯಪಟ್ಟು, ಆತನಿಗೆ ಶರಣಾಗತರಾಗಿ 'ಎಲೈ ಮಹಾಬಲಶಾಲಿಯೆ, ನೀನು ನಮಗೆ ಮಗನಾಗಿ ನಿನ್ನಲ್ಲಿ ಪ್ರೀತಿಯನ್ನು ಮಾಡುವ ನಮ್ಮನ್ನು ಸಂತೋಷಪಡಿಸು' ಎಂದರು. ಆಗ ಷಣ್ಮುಖನು ಅವರ ಮಾತನ್ನು ಕೇಳಿ ಅವರ ಸ್ತನ್ಯಪಾನವನ್ನು ಮಾಡಬೇಕೆಂದು ಆ ಆರುಮಂದಿ ಮಾತೃಕೆಯರನ್ನೂ ಪೂಜಿಸಿದನು. ಆಗ ಅವರೆಲ್ಲರೂ ಮಹಾದೇವನೊಡಗೂಡಿ ಆತನನ್ನು ರಕ್ಷಿಸುತ್ತಿದ್ದರು. ಆ ಆರುಮಂದಿ ಮಾತೃಕೆಯರಲ್ಲಿ ಕ್ರೋಧಸಮುದ್ಭವಳಾದ ಒಬ್ಬ ಮಾತೃಕೆಯು ತನ್ನ ಕೈಯಲ್ಲಿ ಶೂಲಾಯುಧವನ್ನು ಹಿಡಿದು ತನ್ನ ಮಗನಂತೆ ಆ ಷಣ್ಮುಖನನ್ನು ರಕ್ಷಿಸುತ್ತಿದ್ದಳು. ಮತ್ತು ಲೋಹಿತೋದಧಿಗೆ ಮಗಳಾದ ರಕ್ತಪಾನದಲ್ಲಿ ಆಸಕ್ತಳಾದ ಕ್ರೂರೆ ಎಂಬ ಮಾತೃಕೆಯು ಆ ಷಣ್ಮುಖನನ್ನು ಅಪ್ಪಿಕೊಂಡು ಪುತ್ರನಂತೆ ರಕ್ಷಿಸಿದಳು. ಯಜ್ಞೇಶ್ವರನು ವೇದಮಯವಾದ ಛಾಗರೂಪನಾಗಿ ಅನೇಕ ಮಕ್ಕಳೊಡಗೂಡಿ ಬಾಲಕನಾದ ಷಣ್ಮುಖನನ್ನು ಆ ಪರ್ವತದ ತುದಿಯಲ್ಲಿ ಆಟವಾಡಿಸುತ್ತಿದ್ದನು" ಎಂದು ಮಾರ್ಕಂಡೇಯನು ಧರ್ಮರಾಯನಿಗೆ ಹೇಳಿದನು.

### ೨೨೬ನೇ ಅಧ್ಯಾಯ.—ಮಾರ್ಕಂಡೇಯಪರ್ವ—(ಇಂದ್ರ ಷಣ್ಮುಖರಿಗೆ ಯುದ್ಧ.)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಎಲೈ ರಾಯನೆ, ಮಾರ್ಕಂಡೇಯನು ಧರ್ಮರಾಯನನ್ನು ಕುರಿತು, "ಎಲೈ ಧರ್ಮರಾಯನೇ ಕೇಳು. ಸೂರ್ಯಾದಿಗ್ರಹಗಳೂ ಉಪಗ್ರಹಗಳೂ ಋಷಿಗಳೂ ಅಗ್ನಿಯೇ ಮೊದಲಾದ ದೇವಪಾರಿಷದರೂ ಇನ್ನೂ ದೇವಲೋಕದಲ್ಲಿ ವಾಸಮಾಡತಕ್ಕ ಕ್ರೂರರಾದವರೆಲ್ಲರೂ ಸಹ ಮಾತೃಕಾಗಣದಿಂದ ಯುಕ್ತರಾಗಿ ಷಣ್ಮುಖನನ್ನು ಸುತ್ತುವರಿದು ನಿಂತಿದ್ದರು. ಆಗ ಇಂದ್ರನು ತನಗೆ ಜಯವಾಗುವದರಲ್ಲಿ ಸಂಶಯಪಟ್ಟು, ಆದರೂ ಆತನನ್ನು ನಿಗ್ರಹಿಸಬೇಕೆಂದು ಐರಾವತದಮೇಲೆ ಕೂತುಕೊಂಡು ವಜ್ರಾಯುಧವನ್ನು ಧರಿಸಿ ದೇವತೆಗಳಿಂದ ಕೂಡಿ ಷಣ್ಮುಖನನ್ನು ಜಯಿಸುವದಕ್ಕೆ ಹೊರಟನು. ಆಗ ದೇವತಾಸೈನ್ಯವು ಘೋರವಾದ ಧ್ವನಿಯನ್ನು ಮಾಡುತ್ತ ವಿಚಿತ್ರವಿಚಿತ್ರವಾದ ಧ್ವಜಗಳಿಂದಲೂ ಪತಾಕೆಗಳಿಂದಲೂ ಅನೇಕ ವಾಹನಗಳಿಂದಲೂ ಆಯುಧಗಳಿಂದಲೂ ಯುದ್ಧಸನ್ನದ್ಧರಾಗಿ, ದಿವ್ಯವಾದ ವಸ್ತ್ರಾಭರಣಗಳನ್ನುಧರಿಸಿ ಪ್ರಕಾಶಿಸುತ್ತ, ಯುದ್ಧಕ್ಕೋಸ್ಕರ ಇಂದ್ರನ ಸಂಗಡ ಹೊರಟರು. ಈ ಪ್ರಕಾರ ತನ್ನಮೇಲೆ ಯುದ್ಧಕ್ಕೋಸ್ಕರ ಬರತಕ್ಕ ದೇವತೆಗಳನ್ನು ನೋಡಿ ಕುಮಾರಸ್ವಾಮಿಯು ಮಹತ್ತಾದ ಸಿಂಹನಾದವನ್ನು ಮಾಡಿದನು. ಅದಕ್ಕೆ ಪ್ರತಿಯಾಗಿ ಇಂದ್ರನು ದೇವತೆಗಳೊಡಗೂಡಿ ಋಷಿಗಳಿಂದ ಸ್ತೋತ್ರಮಾಡಿಸಿಕೊಳ್ಳುತ್ತ ಆ ಷಣ್ಮುಖನ ಬಳಿಗೆ ಬಂದು ಸಿಂಹನಾದವನ್ನು ಮಾಡಿದನು. ಆ ಶಬ್ದವನ್ನು ಕೇಳಿ ಷಣ್ಮುಖನು ಸಮುದ್ರವು ಮೊರೆಯುವಂತೆ ಮೊರೆದನು. ಆ ಶಬ್ದವನ್ನು ಕೇಳಿ ಭಯಪಟ್ಟು ದೇವತೆಗಳ ಸೈನ್ಯವು ದಿಗ್ಭ್ರಾಂತವಾಗಿ ಅಲ್ಲಲ್ಲಿ ಓಡಾಡಲುಪಕ್ರಮಿಸಿತು. ಬಳಿಕ ಷಣ್ಮುಖನು ತನ್ನನ್ನು ಸಂಹರಿಸಬೇಕೆಂದು ಬಂದ ದೇವತೆಗಳನ್ನು ನೋಡಿ ತನ್ನ ಮುಖದಿಂದ ಅಗ್ನಿಯನ್ನು ನಿರ್ಮಾಣಮಾಡಿ ಆ ಅಗ್ನಿಯಿಂದ ಸೈನ್ಯವನ್ನು ಸುಟ್ಟುಬಿಟ್ಟನು. ಆ ಅಗ್ನಿಯಿಂದ ತಪ್ತರಾದ ದೇವತೆಗಳು ತಮ್ಮ ವಾಹನಗಳೆಲ್ಲಾ ಭಸ್ಮವಾಗಲು, ನಕ್ಷತ್ರಗಳು ಬೀಳುವಂತೆ ಆಕಾಶದಿಂದ ಕೆಳಕ್ಕೆ ಬಿದ್ದು ಇಂದ್ರನನ್ನು ಬಿಟ್ಟು ಷಣ್ಮುಖನಿಗೆ ಶರಣಾಗತರಾದರು. ಆಗ ಇಂದ್ರನು ಕೋಪೋದ್ದೀಪಿತನಾಗಿ ತನ್ನ ವಜ್ರಾಯುಧವನ್ನು ಷಣ್ಮುಖನಮೇಲೆ ಪ್ರಯೋಗಿಸಲು, ಆ ವಜ್ರಾಯುಧವು ಷಣ್ಮುಖನ ಬಲಪಾರ್ಶ್ವವನ್ನು ಭೇದಿಸಿತು. ಆ ಸ್ಥಳದಲ್ಲೇ ಯೌವನವಂತನಾಗಿ ಚಿನ್ನದ ಕವಚವನ್ನೂ ದಿವ್ಯವಾದ ರತ್ನಕುಂಡಲಗಳನ್ನೂ ಧರಿಸಿ ಶಕ್ತ್ಯಾಯುಧವನ್ನು ಹಿಡಿದುಕೊಂಡು ಒಬ್ಬ ಪುರುಷನು ಹುಟ್ಟಿದನು. ಆತನನ್ನು ವಿಶಾಖನೆಂದು ಹೇಳುವರು. ಪ್ರಳಯಕಾಲದ ಅಗ್ನಿಯಂತೆ ಉರಿಯುತ್ತಿದ್ದ ಆ ವಿಶಾಖನನ್ನು ನೋಡಿ ಇಂದ್ರನು ಭಯಪಟ್ಟು ಕೈಮುಗಿದುಕೊಂಡು ಷಣ್ಮುಖನಿಗೆ ಶರಣಾಗತನಾದನು. ಬಳಿಕ ಷಣ್ಮುಖನು ಸೈನ್ಯಸಮೇತನಾದ ಇಂದ್ರನಿಗೆ ಅಭಯಪ್ರದಾನವನ್ನು ಮಾಡಿದನು. ಆ ಸಮಯದಲ್ಲಿ ಸಕಲದೇವತೆಗಳೂ ದೇವದುಂದುಭಿ ಮೊದಲಾದ ವಾದ್ಯಧ್ವನಿಗಳನ್ನು ಮಾಡಿದರು" ಎಂದು ಮಾರ್ಕಂಡೇಯನು ಧರ್ಮರಾಯನಿಗೆ ಹೇಳಿದನು.

### ೨೨೭ನೇ ಅಧ್ಯಾಯ.—ಮಾರ್ಕಂಡೇಯಪರ್ವ—(ಷಣ್ಮುಖೋಪಾಖ್ಯಾನ.)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಮಾರ್ಕಂಡೇಯನು ಧರ್ಮರಾಯನನ್ನು ಕುರಿತು "ಎಲೈ ಧರ್ಮರಾಯನೆ, ಇಂದ್ರನ ವಜ್ರಪ್ರಹಾರದಿಂದ ಭಿನ್ನವಾದ ಆ ಕುಮಾರಸ್ವಾಮಿಯ ಪಾರ್ಶ್ವಭಾಗದ ದೆಸೆಯಿಂದ ಉತ್ಪನ್ನರಾದ ಘೋರರೂಪರೂ ಕುಮಾರಸ್ವಾಮಿಗೆ ಪರಿವಾರಭೂತರೂ ಆದ ಅನೇಕಮಂದಿ ಕುಮಾರರ ಮತ್ತು ಕುಮಾರಿಯರ ಮಹಿಮೆಯನ್ನು ಹೇಳುವೆನು ಕೇಳು. ಆ ಕುಮಾರರೂ ಕುಮಾರಿಯರೂ ಸಹ ಪರಸ್ತ್ರೀಯರ ಗರ್ಭದಲ್ಲಿರತಕ್ಕ ಶಿಶುಗಳನ್ನುಕೂಡ ಕೊಲ್ಲತಕ್ಕವರಾಗಿ, ತಮ್ಮಲ್ಲಿ ಜ್ಯೇಷ್ಠನಾದ ವಿಶಾಖನೆಂಬವನನ್ನೇ ತಂದೆಯನ್ನಾಗಿ ತಿಳಿದುಕೊಂಡಿದ್ದರು. ಮೇಕೆಯ ಮುಖವುಳ್ಳ ಆ ವಿಶಾಖನೆಂಬವನನ್ನು ಭದ್ರಶಾಖ ಕೌಶಲ ಮೊದಲಾದ ಕುಮಾರಿಯರೂ ಸಹ ಸುತ್ತುವರಿದುಕೊಂಡೇ ಇದ್ದರು.

ಆ ವಿಶಾಖನೂಕೂಡ ಯಾವಾಗಲೂ ಅವರೆಲ್ಲರನ್ನೂ ರಕ್ಷಿಸಿಕೊಂಡಿದ್ದನು. ಲೋಕದಲ್ಲಿರತಕ್ಕವರೆಲ್ಲರೂ ಆ ಕುಮಾರರಿಗೂ ಕುಮಾರಿಯರಿಗೂ ಸಹ ಷಣ್ಮುಖನೇ ತಂದೆಯೆಂದು ಹೇಳುತ್ತಿದ್ದರು. ಲೋಕದಲ್ಲಿ ಪುತ್ರಾಪೇಕ್ಷೆಯುಳ್ಳವರು ರುದ್ರನನ್ನೂ ಅಗ್ನಿಯನ್ನೂ ಉಮೆಯನ್ನೂ ಸ್ವಾಹಾದೇವಿಯನ್ನೂ ಸಹ ಆರಾಧನೆಮಾಡಿ ಪುತ್ರಸಂತಾನವನ್ನು ಪಡೆಯುವರು. ತಪನೆಂದು ಪ್ರಸಿದ್ಧನಾದ ಅಗ್ನಿಯ ಪುತ್ರಿಯರು ಕುಮಾರಸ್ವಾಮಿಯ ಸಮೀಪಕ್ಕೆ ಬಂದು 'ಎಲೈ ಕುಮಾರಸ್ವಾಮಿಯೆ, ನಾವು ಎಲ್ಲಲೋಕಗಳಿಗೂ ಮಾತೃಗಳಾಗಿ ನಿನ್ನನುಗ್ರಹದಿಂದ ಎಲ್ಲರಿಂದಲೂ ಪೂಜೆಯನ್ನು ಪಡೆಯಬೇಕೆಂದು ಬಯಸುವೆವು. ಇದನ್ನು ನೀನು ನೆರವೇರಿಸಿಕೊಡು' ಎಂದು ಪ್ರಾರ್ಥಿಸಿದರು. ಆಗ ಷಣ್ಮುಖನು ಹಾಗೇ ಆಗಲೆಂದು ಹೇಳಿ 'ಎಲೆ ಕುಮಾರಿಯರಾ, ನೀವು ಶುಭರೂಪರಾಗಿಯೂ ಅಶುಭರೂಪರಾಗಿಯೂ ನಾನಾಪ್ರಕಾರ ಇದ್ದುಕೊಂಡು ಲೋಕದಲ್ಲಿ ಪೂಜೆಯನ್ನು ಪಡೆಯಿರಿ' ಎಂದು ನುಡಿದನು.

ಬಳಿಕ ಕಾಕಿ, ಹಲಿಮೆ, ಮಾಲಿನಿ, ಬೃಂಹಿತೆ, ಆರ್ಯೆ, ಪಲಾಲೆ, ವೈಮಿತ್ರೆ ಎಂಬ ಆ ಏಳುಮಂದಿ ಲೋಕಮಾತೃಕೆಯರೂ ಆ ಷಣ್ಮುಖನನ್ನು ಪುತ್ರನನ್ನಾಗಿ ಮಾಡಿಕೊಂಡರು. ಆ ಏಳುಮಂದಿಗೂ ಷಣ್ಮುಖನ ಅನುಗ್ರಹದಿಂದ ಶಿಶುವೆಂಬ ಪುತ್ರನು ಹುಟ್ಟಿ, ಆತನು ಅತಿದಾರುಣನಾಗಿಯೂ ಕೆಂಪಾದ ಕಣ್ಣುಗಳುಳ್ಳವನಾಗಿಯೂ ಭಯಂಕರನಾಗಿಯೂ ಇದ್ದುಕೊಂಡು ವೀರಾಷ್ಟನೆಂಬದಾಗಿಯೂ, ಮೇಕೆಯ ಮುಖವುಳ್ಳ ಆ ವಿಶಾಖನೊಡಗೂಡಿ ನವಕನೆಂಬದಾಗಿಯೂ ಪ್ರಸಿದ್ಧಿಯನ್ನು ಪಡೆದಿದ್ದನು. ಆ ಷಣ್ಮುಖನ ಆರುತಲೆಗಳ ಮಧ್ಯದಲ್ಲಿ ಶ್ರೇಷ್ಠವಾಗಿಯೂ ಮಾತೃಗಣದಿಂದ ಪೂಜಿತವಾಗಿಯೂ ಇರತಕ್ಕ ಒಂದು ತಲೆಯು ಮೇಕೆಯ ತಲೆಯಾಗಿರುವದೆಂದು ತಿಳಿ. ವಿಶಾನೆಂಬ ಆ ಜ್ಯೇಷ್ಠಕುಮಾರನು ದಿವ್ಯವಾದ ಶಕ್ತ್ಯಾಯುಧವನ್ನು ನಿರ್ಮಾಣಮಾಡಿದವನೆಂದು ತಿಳಿ. ಈ ಪ್ರಕಾರ ಷಣ್ಮುಖನು ಶುಕ್ಲಪಂಚಮೀದಿವಸದಲ್ಲಿ ನಾನಾರೂಪನಾಗಿದ್ದನು. ಬಳಿಕ ಷಷ್ಠೀದಿವಸದಲ್ಲಿ ಒಂದು ಘೋರವಾದ ಯುದ್ಧವು ನಡೆಯಿತು" ಎಂದು ಮಾರ್ಕಂಡೇಯನು ಧರ್ಮರಾಯನಿಗೆ ಹೇಳಿದನು.

## ೨೨೮ನೇ ಅಧ್ಯಾಯ.—ಮಾರ್ಕಂಡೇಯಪರ್ವ—(ಷಣ್ಮುಖೋಪಾಖ್ಯಾನ.)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಮಾರ್ಕಂಡೇಯನು ಧರ್ಮರಾಯನನ್ನು ಕುರಿತು "ಎಲೈ ಧರ್ಮರಾಯನೆ, ಆ ಕುಮಾರಸ್ವಾಮಿಯು ಸುವರ್ಣಮಯವಾದ ಕವಚವನ್ನು ಧರಿಸಿಕೊಂಡು, ಸುವರ್ಣಮಯವಾದ ಹಾರ ಮೊದಲಾದ ಆಭರಣಗಳನ್ನೂ ರತ್ನಕುಂಡಲಗಳನ್ನೂ ತಾಳಿಕೊಂಡು, ರಕ್ತವಸ್ತ್ರವನ್ನುಟ್ಟುಕೊಂಡು, ತೀಕ್ಷ್ಣವಾದ ಕೋರೇಹಲ್ಲುಗಳಿಂದೊಪ್ಪುತ್ತ, ಸರ್ವಲಕ್ಷಣ ಸಂಪನ್ನನೂ ಮೂರುಲೋಕಗಳಿಗೂ ಪ್ರಿಯನೂ ಬೇಕಾದ ವರಗಳನ್ನು ಕೊಡತಕ್ಕವನೂ ಶೂರನೂ ಯೌವನಸ್ಥನೂ ಆಗಿ, ಮನೋಹರವಾದ ರೂಪಸಂಪತ್ತಿನಿಂದ ಮೆರೆಯುವ ಮೂರ್ತಿಮತ್ತಾದ ಕೆಂದಾವರೆಯ ಕಾಂತಿಯೋ ಎಂಬಂತೆಯೂ ಆಗತಾನೇ ಉದಿಸಿದ ಪೂರ್ಣಿಮಾಚಂದ್ರನಂತೆಯೂ ಪ್ರಕಾಶಿಸುತ್ತಿದ್ದನು. ಆ ದಿವಸ ಮಹಾತ್ಮರಾದ ಅನೇಕ ಮಹರ್ಷಿಗಳು ಆತನನ್ನು ಪೂಜಿಸಿ 'ಎಲೈ ಹಿರಣ್ಯಗರ್ಭನೆ, ನಿನಗೆ ಮಂಗಳವಾಗಲಿ. ಸಕಲ ಲೋಕಗಳಿಗೂ ನೀನು ಸುಖವನ್ನುಂಟುಮಾಡು. ನೀನು ಅವತರಿಸಿ ಆರು ದಿವಸಗಳಾದವು. ಇಷ್ಟರಲ್ಲೇ ಸಕಲ ಲೋಕಗಳನ್ನೂ ಸ್ವಾಧೀನಮಾಡಿಕೊಂಡು ಎಲ್ಲರಿಗೂ ಅಭಯಪ್ರದಾನವನ್ನು ಮಾಡಿದೆ. ಆದ್ದರಿಂದ ನೀನು ತ್ರಿಲೋಕೇಶ್ವರನಾದ ಇಂದ್ರನ ಪದವಿಯನ್ನು ಪಡೆ' ಎಂದು ನುಡಿದರು. ಬಳಿಕ ಷಣ್ಮುಖನು ಆ ಮಹರ್ಷಿಗಳನ್ನು ಕುರಿತು 'ಎಲೈ ಮಹರ್ಷಿಗಳಿರಾ, ಈಗ ಇಂದ್ರನು ಲೋಕಗಳಿಗೆಲ್ಲಾ ಮಾಡತಕ್ಕ ಉಪಕಾರವೇನು? ಮತ್ತು ಆತನು ಸಕಲ ದೇವತೆಗಳನ್ನೂ ನಿತ್ಯವೂ ಹ್ಯಾಗೆ ರಕ್ಷಿಸುತ್ತಿರುವನು?' ಎನಲು, ಋಷಿಗಳು 'ಎಲೈ ಕುಮಾರಸ್ವಾಮಿಯೆ, ಇಂದ್ರನು ಸಕಲ ಜನಗಳಿಗೂ ಬಲವನ್ನೂ ತೇಜಸ್ಸನ್ನೂ ಸಂತಾನಸುಖವನ್ನೂ ಉಂಟುಮಾಡುತ್ತಾನೆ. ಆತನು ಸಂತುಷ್ಟನಾದರೆ ಬೇಡಿದ ಇಷ್ಟಾರ್ಥಗಳನ್ನೆಲ್ಲಾ ಕೊಡುತ್ತಾನೆ. ದುಷ್ಟರನ್ನು

ನಿಗ್ರಹಿಸುತ್ತಾನೆ, ಶಿಷ್ಟರನ್ನು ಪೋಷಿಸುತ್ತಾನೆ; ಸಕಲಪ್ರಾಣಿಗಳಿಗೂ ಆಯಾ ಕಾರ್ಯಗಳಲ್ಲಿ ಪ್ರವರ್ತಿಸುವಂತೆ ಮಾಡುತ್ತಾನೆ; ಸೂರ್ಯ, ಚಂದ್ರ, ಅಗ್ನಿ, ವಾಯು, ಭೂಮಿ, ಉದಕ ಇವುಗಳಿಗೆಲ್ಲಾ ತಾನೇ ಕಾರಣನಾಗಿರುವನು. ಇದೆಲ್ಲವೂ ಇಂದ್ರನ ಕಾರ್ಯವಾಗಿರುವದು. ಇಂದ್ರನು ಮಹಾ ಬಲಶಾಲಿಯಾಗಿರುವನು. ನೀನೂ ಬಲಶಾಲಿಗಳಲ್ಲಿ ಶ್ರೇಷ್ಠನಾಗಿರುವೆ. ಆದ್ದರಿಂದ ನೀನೇ ಇಂದ್ರನಾಗು' ಎಂದರು. ಆಗ ದೇವೇಂದ್ರನೂ ಸಹ ಕುಮಾರಸ್ವಾಮಿಯನ್ನು ಕುರಿತು 'ಎಲೈ ಮಹಾನುಭಾವನೆ, ನೀನು ಇಂದ್ರಪದವಿಗೆ ಯೋಗ್ಯನಾಗಿರುವದರಿಂದ ತ್ರೈಲೋಕ್ಯಾಧಿಪತ್ಯವನ್ನೂ ನೀನೇ ಅನುಭವಿಸು' ಎನಲು, ಕುಮಾರಸ್ವಾಮಿಯು 'ಎಲೈ ಇಂದ್ರನೆ, ನೀನೇ ಜಾಗರೂಕನಾಗಿ ಮೂರುಲೋಕಗಳನ್ನೂ ಆಳು. ನಿನಗೆ ಜಯವುಂಟಾಗುವದು. ನಾನು ಇಂದ್ರಪದವಿಯನ್ನು ಅಪೇಕ್ಷಿಸತಕ್ಕವನಲ್ಲ. ನಾನು ನಿನಗೆ ಸೇವಕನಾಗಿರುವೆನು' ಎಂದನು. ಬಳಿಕ ಇಂದ್ರನು 'ಎಲೈ ಷಣ್ಮುಖನೆ, ನಿನ್ನಲ್ಲಿ ಅದ್ಭುತವಾದ ಪರಾಕ್ರಮವಿರುವದು. ನೀನೇ ದೇವಶತ್ರುಗಳನ್ನು ಜಯಿಸಬೇಕು. ಬಲಹೀನನಾದ ನಾನು ಶತ್ರುಗಳಿಂದ ಪರಾಜಿತನಾಗಿ ಇಂದ್ರಪದವಿಯಲ್ಲಿ ಇದ್ದದ್ದೇ ಆದರೆ, ಜನಗಳು ಅಪಹಾಸಮಾಡುತ್ತ ನನ್ನನ್ನು ಅವಮಾನಮಾಡಿ, ಬಲಾಢ್ಯನಾದ ನಿನಗೂ ನನಗೂ ಭೇದವನ್ನು ಕಲ್ಪಿಸುವರು. ನಮ್ಮಿಬ್ಬರಲ್ಲೂ ಭೇದವುಂಟಾದರೆ ಇದನ್ನು ತಿಳಿದು ಕೆಲವರು ನಿನ್ನ ಕಡೆಯಲ್ಲೂ ಕೆಲವರು ನನ್ನ ಕಡೆಯಲ್ಲೂ ಸೇರಿ ಕಲಹಕ್ಕೆ ಉಪಕ್ರಮಿಸುವರು. ಆದ್ದರಿಂದ ನೀನೇ ಇಂದ್ರನಾಗು. ಈ ವಿಷಯದಲ್ಲಿ ವಿಚಾರಮಾಡಬೇಡ' ಎನಲು, ಸ್ಕಂದನು 'ಎಲೈ ಇಂದ್ರನೆ, ನನಗೆ ತ್ರೈಲೋಕ್ಯಾಧಿಪತ್ಯದಲ್ಲಿ ಅಪೇಕ್ಷೆಯಿಲ್ಲ. ನನಗೂ ನೀನೇ ಸ್ವಾಮಿಯಾಗಿರು. ಯಾವ ಕಾರ್ಯವನ್ನು ಮಾಡಬೇಕೆಂದು ನೀನು ನನಗೆ ಆಜ್ಞಾಪಿಸುವೆಯೋ ಆ ಕಾರ್ಯವನ್ನು ನಾನು ಮಾಡುತ್ತಿರುವೆನು' ಎಂದು ನುಡಿದನು. ಆ ಮಾತನ್ನು ಕೇಳಿ ಇಂದ್ರನು 'ಎಲೈ ಷಣ್ಮುಖನೆ, ನೀನು ಆಡಿದ ಮಾತು ಯಥಾರ್ಥವಾದ ಪಕ್ಷದಲ್ಲಿ ನಾನೇ ನಿನ್ನ ಮಾತಿನ ಪ್ರಕಾರ ಇಂದ್ರನಾಗಿರುವೆನು. ನನ್ನ ಆಜ್ಞೆಯನ್ನು ನೀನು ನಡಿಸುವ ಪಕ್ಷದಲ್ಲಿ ದೇವಸೇನಾಧಿಪತ್ಯದಲ್ಲಿ ನೀನು ಪಟ್ಟಾಭಿಷೇಕವನ್ನು ಮಾಡಿಸಿಕೊಳ್ಳಬೇಕು' ಎನಲು, ಅದನ್ನು ಕೇಳಿ ಕುಮಾರಸ್ವಾಮಿಯು 'ಎಲೈ ಇಂದ್ರನೆ, ದಾನವರ ಸಂಹಾರಾರ್ಥವಾಗಿಯೂ ದೇವತೆಗಳ ಕಾರ್ಯಸಿದ್ಧಿಗೋಸ್ಕರಲೂ ಗೋಬ್ರಾಹ್ಮಣರ ಹಿತಾರ್ಥವಾಗಿಯೂ ದೇವಸೇನಾಧಿಪತ್ಯದಲ್ಲಿ ನನಗೆ ಪಟ್ಟಾಭಿಷೇಕವನ್ನು ಮಾಡು' ಎಂದು ನುಡಿದು, ದೇವಸೇನಾಧಿಪತ್ಯದಲ್ಲಿ ದೇವತೆಗಳಿಂದಲೂ ಇಂದ್ರನಿಂದಲೂ ಸಹ ಪಟ್ಟಾಭಿಷೇಕವನ್ನು ಮಾಡಿಸಿಕೊಂಡು, ಋಷಿಗಳಿಂದ ಪೂಜಿಸಿಕೊಳ್ಳುತ್ತ, ಅಧಿಕವಾಗಿ ಪ್ರಕಾಶಿಸಿದನು. ಆಗ ಆತನ ಮಂಡೆಯಮೇಲೆ ಹಿಡಿದ ಸುವರ್ಣಮಯವಾದ ಛತ್ರವು ಅಗ್ನಿಯ ಜ್ವಾಲಾಮಂಡಲದಂತೆ ಪ್ರಕಾಶಿಸಿತು. ಆ ಸಮಯದಲ್ಲಿ ಮಹಾದೇವನು ವಿಶ್ವಕರ್ಮನಿಂದ ನಿರ್ಮಿತವಾದ ಒಂದು ಸುವರ್ಣಮಾಲಿಕೆಯನ್ನು ತಾನೇ ಪಾರ್ವತಿಯೊಡಗೂಡಿ ಸಂತೋಷದಿಂದ ಆತನ ಕೊರಳಿಗೆ ಅಲಂಕರಿಸಿದನು.

ಎಲೈ ಧರ್ಮರಾಯನೆ, ವೇದಜ್ಞರಾದ ಬ್ರಾಹ್ಮಣರು ರುದ್ರನನ್ನೇ ಅಗ್ನಿಯೆಂದು ಹೇಳುವರು. ಅದರಿಂದ ಷಣ್ಮುಖನು ರುದ್ರನ ಮಗನೆಂದು ಪ್ರಸಿದ್ಧಿಯುಂಟಾಯಿತು. ರುದ್ರನು ತನ್ನ ರೇತಸ್ಸನ್ನು ಬಿಡಲು, ಅದೇ ಶ್ವೇತಪರ್ವತವಾಯಿತು. ಆ ಶ್ವೇತಪರ್ವತದಲ್ಲಿ ಅಗ್ನಿರೂಪನಾದ ಮಹಾದೇವನ ರೇತಸ್ಸನ್ನು ಆರುಮಂದಿ ಕೃತ್ತಿಕೆಯರು ಪೋಷಿಸಿದರು. ಇಂದ್ರಾದಿದೇವತೆಗಳು ಮಹಾದೇವನೇ ಷಣ್ಮುಖನಿಗೆ ಅಲಂಕಾರಮಾಡಿದ್ದನ್ನು ನೋಡಿ ಆ ಷಣ್ಮುಖನನ್ನು ರುದ್ರನ ಮಗನೆಂದು ಹೇಳಿದರು. ಎಲೈ ಧರ್ಮರಾಯನೆ, ರುದ್ರನು ಅಗ್ನಿಯನ್ನು ಪ್ರವೇಶಮಾಡಿರತಕ್ಕ ಕಾಲದಲ್ಲಿ ಅಗ್ನಿಯಿಂದ ಈ ಕುಮಾರಸ್ವಾಮಿಯು ಹುಟ್ಟಿದ್ದರಿಂದಲೂ ಈತನನ್ನು ರುದ್ರನ ಮಗನೆಂದು ಹೇಳುವರು. ರುದ್ರ, ಅಗ್ನಿ, ಸ್ವಾಹಾದೇವಿ, ಆರುಮಂದಿ ಸ್ತ್ರೀಯರು, ಇವರಿಷ್ಟುಮಂದಿಯಿಂದಲೂ ಉತ್ಪನ್ನನಾದ್ದರಿಂದ ಷಣ್ಮುಖನು ರುದ್ರನ ಮಗನೆಂದು ಪ್ರಖ್ಯಾತಿಯನ್ನು ಪಡೆದನು. ಆ ಕುಮಾರಸ್ವಾಮಿಯು ನಿರ್ಮಲವಾದ ಎರಡು ರಕ್ತವಸ್ತ್ರಗಳನ್ನು ಧರಿಸಿಕೊಂಡು ಕೆಂಪಾದ ಎರಡು ಮೇಘಗಳಿಂದ ಕೂಡಿದ ಸೂರ್ಯನಂತೆ ಪ್ರಕಾಶಿಸುತ್ತಿದ್ದನು. ಆತನ ರಥದ ಗುರುತಿಗಾಗಿ ಅಗ್ನಿಯು ಆತನಿಗೆ ಒಂದು ದಿವ್ಯವಾದ ಕೋಳಿಯನ್ನು ಕೊಟ್ಟನು. ಆ ಕೋಳಿಯು ಆತನ ರಥದಮೇಲೆ ಅಗ್ನಿಯಂತೆ ಕೆಂಪುಬಣ್ಣದಿಂದ ಪ್ರಕಾಶಿಸುತ್ತಿತ್ತು. ಸಕಲಪ್ರಾಣಿಗಳ ಚೇಷ್ಟೆ

ಯೂ ತೇಜಸ್ಸೂ ಶಾಂತಿಯೂ ಬಲವೂ ಸಹ ಕೂಡಿ ಆತನಿಗೆ ಶಕ್ತ್ಯಾಯುಧವಾಗಿ ಅತನ ಮುಂದಿದ್ದುಕೊಂಡು ದೇವತೆಗಳಿಗೆ ಜಯವನ್ನುಂಟುಮಾಡಿತು. ಯುದ್ಧಕಾಲದಲ್ಲಿ ಆತನ ಶರೀರದಲ್ಲಿ ಸಹಜವಾದ ಕವಚವುಂಟಾಗುತ್ತಿತ್ತು. ಶಕ್ತಿ, ಧರ್ಮ, ಬಲ, ತೇಜಸ್ಸು, ಕಾಂತಿ, ಸತ್ಯ, ಔನ್ನತ್ಯ, ಬ್ರಾಹ್ಮಣಪ್ರಿಯತ್ವ, ಜ್ಞಾನ, ಭಕ್ತರಕ್ಷಣ, ಶತ್ರುನಾಶ, ಈ ಗುಣಗಳೆಲ್ಲಾ ಆತನ ಜೊತೆಯಲ್ಲೇ ಹುಟ್ಟಿದವು. ಇಷ್ಟು ಗುಣಗಳಿಂದ ಕೂಡಿದ ಆತನು ದೇವಸೇನಾಧಿಪತ್ಯದಲ್ಲಿ ಪಟ್ಟಾಭಿಷಿಕ್ತನಾಗಿ ಪೂರ್ಣಿಮಾಚಂದ್ರನಂತೆ ಪ್ರಕಾಶಿಸುತ್ತಿದ್ದನು. ಆ ಸಮಯದಲ್ಲಿ ಬ್ರಾಹ್ಮಣರು ವೇದಘೋಷವನ್ನೂ, ದೇವತೆಗಳು ದೇವದುಂದುಭಿ ಮೊದಲಾದ ವಾದ್ಯಧ್ವನಿಯನ್ನೂ, ಗಂಧರ್ವರು ಗಾನವನ್ನೂ, ಅಪ್ಸರಸ್ತ್ರೀಯರು ನರ್ತನವನ್ನೂ, ಋಷಿಗಳು ಸ್ತೋತ್ರವನ್ನೂ ಸಹ ಮಾಡಿದರು. ಈ ಪ್ರಕಾರ ಸರ್ವರಿಂದಲೂ ಸ್ತೋತ್ರಮಾಡಿಸಿಕೊಳ್ಳುತ್ತ ಮಹಾವಿಭವಶಾಲಿಯಾಗಿದ್ದ ಷಣ್ಮುಖನು ಅಧಿಕವಾಗಿ ಮೆರೆಯುತ್ತಿದ್ದನು. ಆಗ ಅಂಧಕಾರವನ್ನು ಹೋಗಲಾಡಿಸಿ ಸೂರ್ಯನು ಉದಯಿಸಲು, ಋಷಿಗಳು ಆ ಸೂರ್ಯನಿಗೆ ಅಭಿಮುಖವಾಗಿ ಬರುವಂತೆ ಸಕಲರಾದ ದೇವಸೈನಿಕರೂ ಆತನಿಗೆ ಅಭಿಮುಖವಾಗಿ ಬಂದು 'ಎಲೈ ಷಣ್ಮುಖನೆ, ಮಹಾನುಭಾವನಾದ ನೀನು ನಮ್ಮೆಲ್ಲರಿಗೂ ಸ್ವಾಮಿಯು' ಎಂದು ಪೂಜಿಸಿ ಸ್ತೋತ್ರಮಾಡಲು, ಷಣ್ಮುಖನು ಆ ಸೈನಿಕರೆಲ್ಲರನ್ನೂ ಯಥೋಚಿತವಾಗಿ ಕಂಡು ಒಳ್ಳೇಮಾತುಗಳಿಂದ ಸಮಾಧಾನಪಡಿಸಿದನು. ಬಳಿಕ ಇಂದ್ರನು ದಕ್ಷಬ್ರಹ್ಮನ ಮಗಳಾದ ದೇವಸೇನೆಯನ್ನು ಸ್ಮರಿಸಿದಕೂಡಲೆ ಆಕೆಯು ಎದುರಿಗೆ ಬರಲು, ಷಣ್ಮುಖನನ್ನು ಕುರಿತು 'ಎಲೈ ಸ್ಕಂದನೆ, ಈಕೆಗೆ ನೀನು ಪತಿಯಾಗಬೇಕೆಂದು ಬ್ರಹ್ಮನು ನೀನು ಹುಟ್ಟುವದಕ್ಕಿಂತ ಮುಂಚೆಯೇ ಗೊತ್ತುಮಾಡಿರುವನು. ಆದ್ದರಿಂದ ಶಾಸ್ತ್ರೋಕ್ತವಾಗಿ ನೀನು ಈಕೆಯನ್ನು ಮದುವೆಮಾಡಿಕೊ' ಎಂದು ಹೇಳಿದನು. ಅದನ್ನು ಕೇಳಿ ಷಣ್ಮುಖನು ಕೆಂದಾವರೆಯಂತೆ ಕೆಂಪಾದ ತನ್ನ ದಕ್ಷಿಣಹಸ್ತದಿಂದ ಆ ದೇವಸೇನೆಯ ದಕ್ಷಿಣಹಸ್ತವನ್ನು ಶಾಸ್ತ್ರೋಕ್ತವಾಗಿ ಗ್ರಹಣಮಾಡಿದನು. ಆಗ ಬೃಹಸ್ಪತ್ಯಾಚಾರ್ಯರು ಮಂತ್ರಗಳನ್ನು ಉಚ್ಚರಿಸುತ್ತ ಅಗ್ನಿಯಲ್ಲಿ ಹೋಮವನ್ನು ಮಾಡಿದರು. ಬಳಿಕ ದೇವಸೇನೆಯು ಷಣ್ಮುಖನಿಗೆ ಪಟ್ಟದ ರಾಣಿಯಾದಳು. ಆ ದಿವಸವನ್ನೇ ಬ್ರಾಹ್ಮಣರು ಸಕಲರಿಗೂ ಐಶ್ವರ್ಯಪ್ರದವಾಗಿಯೂ ಶುಭಪ್ರದವಾಗಿಯೂ ಇರುವ ಸ್ಕಂದಷಷ್ಠಿಯೆಂದು ಹೇಳುವರು. ದೇವಸೇನೆಯು ಷಣ್ಮುಖನನ್ನು ಮದುವೆಮಾಡಿಕೊಂಡ ಆ ಷಷ್ಠಿಯನ್ನು ಸಿನೀವಾಲಿಯೆಂತಲೂ ಕುಹೂಯೆಂತಲೂ ಸದ್ವೃತ್ತಿಯೆಂತಲೂ ಅಪರಾಜಿತೆಯೆಂತಲೂ ಹೇಳುವರು. ಅದೇ ದಿವಸವೇ ಷಣ್ಮುಖನಿಗೆ ಐಶ್ವರ್ಯವೃದ್ಧಿಯೂ ತೇಜೋವೃದ್ಧಿಯೂ ಉಂಟಾದವು. ಆತನಿಗೆ ಪಟ್ಟಾಭಿಷೇಕವಾದ ದಿವಸವನ್ನು ಶ್ರೀಪಂಚಮಿಯೆಂತಲೂ ಹೇಳುವರು. ಸ್ಕಂದನು ಷಷ್ಠೀದಿವಸ ದೇವಸೇನೆಯನ್ನು ವಿವಾಹಮಾಡಿಕೊಂಡದ್ದರಿಂದ ಆ ಷಷ್ಠಿಯು ಮಹಾತಿಥಿಯೆಂದೆನ್ನಿಸಿಕೊಂಡಿತು" ಎಂದು ಮಾರ್ಕಂಡೇಯನು ಧರ್ಮರಾಯನಿಗೆ ವಿವರಿಸಿದನು.

## ೨೩೦ನೇ ಅಧ್ಯಾಯ.—ಮಾರ್ಕಂಡೇಯಪರ್ವ—(ಮನುಷ್ಯಗ್ರಹಕಥನ.)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಆ ಬಳಿಕ ಮಾರ್ಕಂಡೇಯನು ಧರ್ಮರಾಯನನ್ನು ಕುರಿತು, "ಎಲೈ ಧರ್ಮರಾಯನೆ, ಸಪ್ತರ್ಷಿಗಳಿಂದ ಪರಿತ್ಯಕ್ತರಾದ ಆರುಮಂದಿ ಋಷಿಪತ್ನಿಯರು ದೇವಸೇನಾಧಿಪತಿಯಾಗಿಯೂ ತೇಜೋವಂತನಾಗಿಯೂ ಮೆರೆಯುತ್ತಿದ್ದ ಷಣ್ಮುಖಸ್ವಾಮಿಯ ಬಳಿಗೆ ಬಂದು ಆತನನ್ನು ಕುರಿತು 'ಎಲೈ ಮಹಾನುಭಾವನೆ, ದೇವತೆಗಳಿಗೆ ಸಮಾನರಾದ ನಮ್ಮ ಪತಿಗಳೂ ನಮ್ಮ ಪುತ್ರರೂ ಸಹ ನಮ್ಮಿಂದ ನೀನು ಹುಟ್ಟಿದೆಯೆಂದು ಯಾರೋ ಹೇಳಿದ ಮಾತನ್ನು ಕೇಳಿ, ಅದು ನಿಜವೆಂದು ತಿಳಿದು, ನಿಷ್ಕಾರಣವಾಗಿ ಕೋಪವನ್ನು ತಾಳಿ ನಮ್ಮನ್ನು ಪರಿತ್ಯಾಗಮಾಡಿರುವರು. ಅದರಿಂದ ನಾವು ಪುಣ್ಯಗತಿಯನ್ನು ತಪ್ಪಿಸಿಕೊಂಡಿರುವೆವು. ನಮ್ಮನ್ನು ನೀನು ರಕ್ಷಿಸಬೇಕು. ನಿನ್ನನುಗ್ರಹದಿಂದ ನಮಗೆ ಉತ್ತಮಗತಿಯು ಪ್ರಾಪ್ತವಾಗಬೇಕು. ಈಗ ನಿನ್ನನ್ನೇ ನಾವು ಮಗನನ್ನು ಮಾಡಿಕೊಳ್ಳುವೆವು. ನಮಗೆ

ಉತ್ತಮವಾದ ಗತಿಯುಂಟಾಗುವಹಾಗೆ ಮಾಡಿ, ನೀನು ಮಾತೃಋಣವನ್ನು ಪರಿಹಾರಮಾಡಿಕೊ' ಎಂದು ನುಡಿದರು. ಆ ಮಾತನ್ನು ಕೇಳಿ ಷಣ್ಮುಖನು 'ಎಲೌ ಪೂಜ್ಯರೆ, ನನಗೆ ನೀವು ತಾಯಿಯರು, ನಿಮಗೆ ನಾನು ಮಗನು. ಈ ವಿಷಯದಲ್ಲಿ ಸಂಶಯವಿಲ್ಲ. ನೀವು ಏನನ್ನು ಅಪೇಕ್ಷಿಸುವಿರೋ ಅದು ನಿಮಗೆ ಸಿದ್ಧಿಸಲಿ' ಎಂದು ನುಡಿದನು. ಆ ಸಮಯದಲ್ಲಿ ಇಂದ್ರನು ಋಷಿಪತ್ನಿಯರನ್ನು ನೋಡಿ 'ನಿಮಗೆ ಏನಾಗಬೇಕಾಗಿರುವದು'? ಎಂದು ಕೇಳುತ್ತಿರಲು, ಷಣ್ಮುಖನು 'ಎಲೈ ಇಂದ್ರನೆ, ನನಗೆ ಮಾತೃಭೂತರಾದ ಈ ಋಷಿಪತ್ನಿಯರಿಗೆ ನೀನು ತಕ್ಕ ಸ್ಥಾನವನ್ನು ಕಲ್ಪಿಸು' ಎಂದು ನುಡಿದನು. ಅದನ್ನು ಕೇಳಿ ಇಂದ್ರನು 'ರೋಹಿಣೀನಕ್ಷತ್ರಕ್ಕೆ ತಂಗಿಯಾದ ಅಭಿಜಿತ್ತೆಂಬ ನಕ್ಷತ್ರವು ರೋಹಿಣಿಗಿಂತಲೂ ಹೆಚ್ಚಾಗಬೇಕೆಂದು ಆಕೆಯೊಡನೆ ಸ್ಪರ್ಧೆಮಾಡಿಕೊಂಡು ನಕ್ಷತ್ರಮಂಡಲವನ್ನು ಬಿಟ್ಟು ಅರಣ್ಯಮಾರ್ಗಕ್ಕೆ ಹೋಗಿ ತಪಸ್ಸನ್ನು ಮಾಡುತ್ತಿರುವದು. ಆ ನಕ್ಷತ್ರದ ಸ್ಥಾನವು ಈಗ ಬಿಡತಿಯಾಗಿರುವದು. ಬ್ರಹ್ಮದೇವನೊಡನೆ ಆಲೋಚಿಸಿ ನೀನೇ ಆ ಸ್ಥಾನವನ್ನು ಇವರಿಗೆ ಕಲ್ಪಿಸು. ಧನಿಷ್ಠಾನಕ್ಷತ್ರವೇ ಕೃತಯುಗಕ್ಕೆ ಆದಿಯಾಗಿರಲು, ಬ್ರಹ್ಮನು ಕಾಲಪರಿಮಾಣವನ್ನು ಸರಿಯಾಗಿ ಕಲ್ಪಿಸಿದ್ದನು. ಈಗ ಅಭಿಜಿತ್ತೆಂಬ ನಕ್ಷತ್ರವು ತನ್ನ ಸ್ಥಾನದಲ್ಲಿ ಇಲ್ಲದೆ ಹೋದದ್ದರಿಂದ ಕಾಲಪರಿಮಾಣವು ಹೆಚ್ಚುಕಡಮೆಯಾಗಿರುವದು. ಆ ಸ್ಥಾನದಲ್ಲಿ ಇವರನ್ನು ನೇಮಿಸಿದ್ದೇ ಆದರೆ ಕಾಲಪರಿಮಾಣವು ಸರಿಯಾಗಿ ಆಗುವದು' ಎಂದನು. ಹೀಗೆಂದೊಡನೆ, ಸ್ಕಂದನು ಆ ಋಷಿಪತ್ನಿಯರನ್ನು ಕುರಿತು 'ಎಲೌ ಪೂಜ್ಯರೆ, ನೀವು ಷಟ್ಕೃತ್ತಿಕೆಯರಾಗಿರತಕ್ಕದ್ದು' ಎಂದು ನುಡಿಯಲು, ಅವರು ಅಗ್ನಿದೇವತಾಕವಾದ ಷಟ್ಕೃತ್ತಿಕೆಯರಾಗಿ ಸ್ವರ್ಗವನ್ನು ಹೊಂದಿ ಆಕಾಶದಲ್ಲಿ ಪ್ರಕಾಶಿಸುತ್ತಿರುವರು. ಬಳಿಕ ಮಾತೃಕೂಟಕ್ಕೆ ಸೇರಿದ ವಿನತಾದೇವಿಯು ಸ್ಕಂದನನ್ನು ಕುರಿತು 'ಎಲೈ ಷಣ್ಮುಖನೆ, ನೀನು ನನಗೆ ಗತಿಪ್ರದನಾದ ಮಗನು. ಆದ್ದರಿಂದ ನಿನ್ನ ಬಳಿಯಲ್ಲೇ ನಾನು ವಾಸಮಾಡಿಕೊಂಡಿರಬೇಕೆಂದು ಬಯಸುವೆನು' ಎನಲು, ಸ್ಕಂದನು 'ಎಲೌ ತಾಯೆ, ಹಾಗೇ ಆಗಲಿ, ನಿನಗೆ ವಂದನೆಯನ್ನು ಮಾಡುವೆನು. ನಿನಗೆ ನನ್ನಲ್ಲಿ ಪುತ್ರಪ್ರೇಮವಿರುವದರಿಂದ ನನ್ನಿಂದ ಏನಾಗಬೇಕೋ ಆಜ್ಞಾಪಿಸು. ನಿನ್ನ ಸೊಸೆಯಾದ ದೇವಸೇನೆಯು ನಿನ್ನ ಶುಶ್ರೂಷೆಯನ್ನು ಮಾಡುವಳು. ನೀನು ಇಲ್ಲೇ ವಾಸಮಾಡಿಕೊಂಡಿರಬಹುದು' ಎಂದನು. ಬಳಿಕ ವಿನತೆ ಮೊದಲಾದ ಮಾತೃಗಣವೆಲ್ಲವೂ ಷಣ್ಮುಖನನ್ನು ನೋಡಿ 'ಎಲೈ ಷಣ್ಮುಖನೆ, ನಾವು ಲೋಕಮಾತೆಯರೆಂದು ಹೊಗಳಿಸಿಕೊಳ್ಳತಕ್ಕವರಾದ್ದರಿಂದ ನಿನಗೂ ನಾವು ತಾಯಿಯರಾಗಬೇಕು. ಆದ್ದರಿಂದ ನೀನು ನಮ್ಮನ್ನು ಪೂಜಿಸು' ಎನಲು, ಸ್ಕಂದನು 'ಹಾಗೆಯೇ ಆಗಲಿ. ನನಗೆ ನೀವು ತಾಯಿಯರು, ನಿಮಗೆ ನಾನು ಮಗನು. ನನ್ನಿಂದೇನಾಗಬೇಕು? ಕಟ್ಟುಮಾಡಿರಿ' ಎಂದನು. ಅದನ್ನು ಕೇಳಿ ಮಾತೃಕೆಯರು 'ಎಲೈ ಕುಮಾರನೆ, ನೀನು ಮೊದಲು ಬ್ರಾಹ್ಮಿ ಮೊದಲಾದ ಮಾತೆಯರಿಗೆ ಯಾವ ಉತ್ತಮಸ್ಥಾನವನ್ನು ಕಲ್ಪಿಸಿದೆಯೋ ಆ ಸ್ಥಾನವನ್ನು ನೀನು ಅವರಿಗೆ ತಪ್ಪಿಸಿ ನಮಗೆ ಕಲ್ಪಿಸಿಕೊಡು. ನಿನ್ನ ನಿಮಿತ್ತವಾಗಿ ಅವರು ನಮ್ಮ ಪ್ರಜೆಗಳನ್ನು ಅಪಹರಿಸದವರಾದ್ದರಿಂದ ಅವರು ಲೋಕಪೂಜ್ಯರಾಗಕೂಡದು. ನಾವೇ ಲೋಕಪೂಜ್ಯರಾಗಬೇಕು. ಅವರು ಅಪಹರಿಸಿದ ಆ ಪ್ರಜೆಗಳನ್ನೂ ನಮಗೆ ಕೊಡಿಸಿಕೊಡು' ಎಂದು ನುಡಿದರು. ಬಳಿಕ ಸ್ಕಂದನು 'ಎಲೌ ಲೋಕಮಾತೆಯರೆ, ನಿಮ್ಮ ಪ್ರಜೆಗಳನ್ನು ನಿಮಗೆ ನಾನು ಕೊಡಿಸಿದರೂ ಅವರನ್ನು ನೀವು ಹೊಂದುವದು ಅಶಕ್ಯವು. ಅದು ಹೊರತು ಇನ್ನಾವ ವರವನ್ನಾದರೂ ನೀವು ಬೇಡಿರಿ. ಅದನ್ನು ನಡಿಸಿಕೊಡುವೆನು' ಎನಲು, ಲೋಕಮಾತೆಯರು 'ಎಲೈ ಕುಮಾರನೆ, ಆ ಬ್ರಾಹ್ಮಿ ಮೊದಲಾದ ಮಾತೆಯರ ಪ್ರಜೆಗಳನ್ನು ನಮಗೆ ಕೊಡಿಸು. ನಾವು ಪ್ರತ್ಯೇಕಪ್ರತ್ಯೇಕವಾಗಿ ರೂಪವನ್ನು ಧರಿಸಿ ನಿನ್ನೊಡನೆ ಆ ಪ್ರಜೆಗಳನ್ನು ಭಕ್ಷಿಸಿ ಬಿಡುವೆವು' ಎಂದರು. ಬಳಿಕ ಸ್ಕಂದನು 'ಎಲೌ ಮಾತೆಯರೆ, ನೀವು ಕೇಳಿದ ವರವು ಕ್ರೂರವಾದದ್ದು. ಆದರೂ ನಿಮಗೆ ಪ್ರಜೆಗಳನ್ನು ಕೊಡಿಸುವೆನು. ಆ ಪ್ರಜೆಗಳನ್ನು ರಕ್ಷಿಸಿರಿ. ನಿಮಗೆ ನಾನು ನಮಸ್ಕರಿಸುವೆನು' ಎನಲು, ಆ ಮಾತೆಯರು 'ಎಲೈ ಕುಮಾರನೆ, ನೀನು ಯಾವ ಕಟ್ಟನ್ನು ಮಾಡಿ ಪ್ರಜೆಗಳನ್ನು ರಕ್ಷಿಸಬೇಕೆಂದು ಹೇಳುವೆಯೋ ಹಾಗೆ ನಾವು ನಡೆದುಕೊಳ್ಳುವೆವು. ನಿನ್ನೊಡನೆ ಬಹುಕಾಲ ವಾಸಮಾಡಬೇಕೆಂದು ನಮಗೆ ತೋರಿರುವದು' ಎಂದರು. ಬಳಿಕ ಸ್ಕಂದನು 'ಎಲೌ ಲೋಕಮಾತೆಯರೆ, ಜನಗಳಿಗೆ ಹದಿನಾರುವರುಷ ವಯಸ್ಸಾಗುವ ವರೆಗೂ ನೀವು ಪ್ರತ್ಯೇಕ

ಪ್ರತ್ಯೇಕ ಘೋರವಾದ ರೂಪವನ್ನು ತಾಳಿ ಅವರನ್ನು ಬಾಧಿಸಿರಿ. ನಿಮಗೆ ಅಂಥ ಘೋರರೂಪವನ್ನು ನಾನು ಕೊಡುವೆನು. ಮತ್ತು ನೀವು ಲೋಕಪೂಜಿತರಾಗಿ ಸುಖವಾಗಿ ವಾಸಮಾಡಿಕೊಂಡಿರಿ' ಎಂದು ನುಡಿದನು. ಕೂಡಲೆ ಆ ಸ್ಕಂದನ ಶರೀರದಿಂದ ರೌದ್ರವಾದ ರೂಪುಳ್ಳ ಒಂದು ಗ್ರಹವು ಉತ್ಪನ್ನವಾಯಿತು. ಅವನ್ನು ಬ್ರಾಹ್ಮಣರು ಸ್ಕಂದಾಪಸ್ಮಾರವೆಂದು ಹೇಳುವರು. ಮೊದಲು ಹೇಳಿದ ವಿನತೆಯನ್ನು ರೌದ್ರಾಕಾರವಾದ ಶಕುನಿಗ್ರಹವೆಂದು ದೊಡ್ಡವರು ಹೇಳುವರು. ಪೂತನೆಯೆಂಬ ರಾಕ್ಷಸಿಯನ್ನು ಪೂತನಾಗ್ರಹವೆಂದು ಹೇಳುವರು. ಕಟ್ಟಿಗೆಯಂತೆ ದಾರುಣವಾಗಿಯೂ ಘೋರರೂಪಳಾಗಿಯೂ ಪಿಶಾಚಸ್ವರೂಪಳಾಗಿಯೂ ಇರುವ ಪಿಶಾಚರಿಯನ್ನು ಶೀತಪೂತನಾಗ್ರಹವೆಂದು ಹೇಳುವರು. ಈಕೆಯು ಘೋರರೂಪಳಾಗಿ ಸ್ತ್ರೀಯರ ಗರ್ಭವನ್ನು ಅಪಹರಿಸುವಳು. ಅದಿತಿಯನ್ನು ರೇವತೀಗ್ರಹವೆಂದು ಹೇಳುವರು. ಆಕೆಯ ಮಗನನ್ನು ರೈವತಗ್ರಹವೆಂದು ಹೇಳುವರು. ರೈವತಗ್ರಹವು ಬಾಲಕರನ್ನು ಬಾಧಿಸುವದು. ದೈತ್ಯರಿಗೆ ತಾಯಿಯಾದ ದಿತಿಯನ್ನು ಮುಖಮುಂಡಿಕಾಗ್ರಹವೆಂದು ಹೇಳುವರು. ಯಾವಾಗಲೂ ಈಕೆಯು ಶಿಶುಗಳ ಮಾಂಸದಿಂದ ಸಂತೋಷಪಡುವಳು. ಸ್ಕಂದನಿಂದ ಉತ್ಪನ್ನರಾದ ಕುಮಾರರೂ ಕುಮಾರಿಯರೂ ಸಹ ಮಹಾಗ್ರಹಗಳಾಗಿ ಶಿಶುಗಳನ್ನು ಆಹಾರಮಾಡತಕ್ಕವರು. ಅವರೂ ಅವರ ಪತ್ನಿಯರೂ ಸಹ ರೌದ್ರವಾದ ಸ್ವಭಾವವುಳ್ಳವರಾಗಿ ತಮ್ಮನ್ನು ಯಾರಿಗೂ ತಿಳುಹಿಸಿಕೊಳ್ಳದೆ ಬಾಲಕರನ್ನು ಅಪಹರಿಸುವರು. ಶಕುನೀಯೆಂಬ ಗ್ರಹವು ಗೋವುಗಳಿಗೆ ತಾಯಿಯಾದ ಸುರಭಿಯನ್ನು ಏರಿಕೊಂಡು ಬಂದು ಭೂಲೋಕದಲ್ಲಿ ಶಿಶುಗಳನ್ನು ಭಕ್ಷಿಸಿಬಿಡುವದು. ನಾಯಿಗಳಿಗೆ ತಾಯಿಯಾದ ಸರಮೆಯೆಂಬ ಗ್ರಹವು ಯಾವಾಗಲೂ ಸ್ತ್ರೀಯರ ಗರ್ಭಗಳನ್ನು ಭಕ್ಷಿಸುವದು. ವೃಕ್ಷಗಳಿಗೆಲ್ಲಾ ತಾಯಿಯಾದ ಕರಂಜೆಯೆಂಬ ಗ್ರಹವು ಹೊಂಗೇಗಿಡದಲ್ಲಿ ವಾಸಮಾಡುತ್ತ ಪ್ರಾಣಿಗಳಲ್ಲಿ ದಯೆಯುಳ್ಳದ್ದಾಗಿ ಸೌಮ್ಯವಾಗಿ ವರವನ್ನು ಕೊಡುವದು. ಆದ್ದರಿಂದ ಸಂತಾನಾಪೇಕ್ಷಿಗಳಾದ ಜನರು ಕರಂಜೆಯೆಂಬ ಆ ಗ್ರಹಕ್ಕೆ ನಮಸ್ಕಾರಮಾಡುವರು. ಈ ಗ್ರಹಗಳೂ ಇನ್ನೂ ಕೆಲವು ಗ್ರಹಗಳೂ ಸೇರಿ ಹದಿನೆಂಟು ಗ್ರಹಗಳು ಮದ್ಯಮಾಂಸಗಳಲ್ಲಿ ಪ್ರೀತಿಯುಳ್ಳವುಗಳಾಗಿರುವವು. ಈ ಗ್ರಹಗಳು ಹೊಲೇಮನೆಯಲ್ಲಿ ಹತ್ತು ದಿವಸವೂ ವಾಸಮಾಡಿಕೊಂಡಿರುವವು. ಕದ್ರುಯೆಂಬ ಗ್ರಹವು ಸೂಕ್ಷ್ಮರೂಪದಿಂದ ಸ್ತ್ರೀಯರ ಗರ್ಭವನ್ನು ಪ್ರವೇಶಿಸಿ ಆ ಗರ್ಭವನ್ನು ಭಕ್ಷಿಸಿ ತಾನು ಸರ್ಪಗಳನ್ನು ಹೆರುವದು.

ಎಲೈ ಧರ್ಮರಾಯನೆ, ಗಂಧರ್ವರಿಗೆ ತಾಯಿಯಾದವಳು ಸ್ತ್ರೀಯರ ಗರ್ಭವನ್ನು ಅಪಹರಿಸಿಕೊಂಡು ಹೋಗುವಳು. ಬಳಿಕ ಆ ಸ್ತ್ರೀಯರು ನಷ್ಟಗರ್ಭರಾಗಿ ಕಾಣಿಸಿಕೊಳ್ಳುವರು. ಅಪ್ಸರಸ್ತ್ರೀಯರಿಗೆ ತಾಯಿಯಾದವಳು ಸ್ತ್ರೀಯರ ಗರ್ಭವನ್ನು ತಾನು ಹಿಡಿದುಕೊಂಡು ಬಿಡದಿರುವಳು. ಆಗ ಸ್ತ್ರೀಯರಿಗೆ ಗರ್ಭವು ನಷ್ಟವಾಯಿತೆಂದು ದೊಡ್ಡವರು ಹೇಳುವರು. ಲೋಹಿತಸಮುದ್ರದ ಕನ್ಯೆಯೇ ಸ್ಕಂದನಿಗೆ ಉಪಮಾತೃವಾಗಿರುವಳು. ಆಕೆಯು ಲೋಹಿತಾಯನಿಯೆಂಬ ಹೆಸರಿನಿಂದ ಕದಂಬವೃಕ್ಷದಲ್ಲಿ ವಾಸಮಾಡುತ್ತ ಪೂಜಿಸಿಕೊಳ್ಳುವಳು. ಪುರುಷರಲ್ಲಿ ಶ್ರೇಷ್ಠನಾದ ರುದ್ರನಿಗೆ ಪತ್ನಿಯರಾದ ಸ್ತ್ರೀಯರಲ್ಲಿ ಶ್ರೇಷ್ಠಳಾದ ಆರ್ಯೆಯು ಕುಮಾರಸ್ವಾಮಿಗೆ ತಾಯಿಯಾಗಿ ಸಕಲವಾದ ಇಷ್ಟಾರ್ಥಗಳನ್ನೂ ಕೊಡುತ್ತ ಸರ್ವರಿಂದಲೂ ಪೂಜಿತಳಾಗಿರುವಳು. ಎಲೈ ಧರ್ಮರಾಯನೆ, ಪೂರ್ವದಲ್ಲಿ ಹೇಳಿದ ಗ್ರಹಗಳೆಲ್ಲಾ ಶಿಶುಗಳಿಗೆ ಹದಿನಾರು ವರುಷ ವಯಸ್ಸು ಆಗುವ ವರೆಗೂ ಅಮಂಗಳಕರಗಳಾದವುಗಳು. ಈ ಗ್ರಹಗಳ ಶಾಂತಿಗಾಗಿ ಸ್ನಾನ, ಧೂಪ, ಬಲಿ, ವಿಶೇಷವಾದ ಸ್ಕಂದಪೂಜೆ ಮೊದಲಾದವುಗಳಿಂದ ಆ ಗ್ರಹಗಳನ್ನು ಸತ್ಕರಿಸಿದ್ದೇ ಆದರೆ ಅವು ಮನುಷ್ಯರಿಗೆ ಶುಭವನ್ನುಂಟುಮಾಡಿ ಆಯುಸ್ಸನ್ನೂ ತೇಜಸ್ಸನ್ನೂ ಕೊಡುವವು. ಮನುಷ್ಯರಿಗೆ ಹದಿನಾರು ವರುಷವಾದ ಬಳಿಕ ಯಾವ ಗ್ರಹಗಳು ಬಾಧಿಸುವವೋ ಅವುಗಳನ್ನು ಮಹಾದೇವನಿಗೆ ನಮಸ್ಕರಿಸಿ ಹೇಳುವೆನು ಕೇಳು. ಪುರುಷನಾದವನು ಜಾಗ್ರದವಸ್ಥೆಯಲ್ಲಾಗಲಿ ನಿದ್ರಾವಸ್ಥೆಯಲ್ಲಾಗಲಿ ಯಾವ ದೇವತೆಗಳನ್ನು ನೋಡಿ ಹುಚ್ಚುಹಿಡಿದುಹೋಗುವನೋ, ಅದನ್ನು ದೇವಗ್ರಹವೆಂದು ಹೇಳುವರು. ಮನುಷ್ಯನಾದವನು ಮಲಗೇಆಗಲಿ ಕೂತೇಆಗಲಿ ಯಾವ ಪಿತೃಗಳನ್ನು ನೋಡಿ ಹುಚ್ಚುಹಿಡಿದುಹೋಗುವನೋ ಅದನ್ನು ಪಿತೃಗ್ರಹವೆಂದು ಹೇಳುವರು. ಮನುಷ್ಯನು ಯಾವ ಸಿದ್ಧಪುರುಷನನ್ನು ಅವ

ಮಾನಮಾಡಿ ಅವರಿಂದ ಶಾಪವನ್ನು ಹೊಂದಿ ಹುಚ್ಚು ಹಿಡಿದುಹೋಗುವನೋ ಅದನ್ನು ಸಿದ್ಧಗ್ರಹವೆಂದು ಹೇಳುವರು. ಮನುಷ್ಯನು ಯಾವ ಗಂಧವನ್ನೂ ರಸವನ್ನೂ ಆಘ್ರಾಣಿಸಿ ಹುಚ್ಚು ಹಿಡಿದುಹೋಗುವನೋ ಅದನ್ನು ರಾಕ್ಷಸಗ್ರಹವೆಂದು ಹೇಳುವರು. ಮತ್ತು ಗಂಧರ್ವರು ಮನುಷ್ಯರನ್ನು ಪ್ರವೇಶಿಸಿ ಜಾಗ್ರತೆಯಾಗಿ ಅವರನ್ನು ಹುಚ್ಚು ಹಿಡಿಸಿಬಿಡುವರು. ಅದಕ್ಕೆ ಗಾಂಧರ್ವಗ್ರಹವೆಂದು ಹೆಸರು. ಪಿಶಾಚಾವೇಶದಿಂದ ಪುರುಷನಿಗೆ ಹುಚ್ಚು ಹಿಡಿದರೆ, ಅದನ್ನು ಪಿಶಾಚಗ್ರಹವೆಂದು ಹೇಳುವರು. ಕಾಲವ್ಯತ್ಯಾಸದಿಂದ ಪುರುಷನಿಗೆ ಯಕ್ಷಾವೇಶವುಂಟಾಗಿ ಹುಚ್ಚು ಹಿಡಿದರೆ, ಅದನ್ನು ಯಕ್ಷಗ್ರಹವೆಂದು ಹೇಳುವರು. ಮನುಷ್ಯನಿಗೆ ತಾನು ಮಾಡಿದ ದೋಷದಿಂದ ಚಿತ್ತವಿಕಾರಉಂಟಾಗಿ ಹುಚ್ಚು ಹಿಡಿದರೆ, ಶಾಸ್ತ್ರದಿಂದ ಅದನ್ನು ನಿಶ್ಚಯಿಸಿ ಪರಿಹರಿಸಿಕೊಳ್ಳಬೇಕು. ಪರವಶದಿಂದಲೂ, ಭಯದಿಂದಲೂ, ಘೋರವಾದ ರೂಪವನ್ನು ನೋಡುವದರಿಂದಲೂ, ಮನುಷ್ಯನಿಗೆ ಜಾಗ್ರತೆಯಾಗಿ ಹುಚ್ಚು ಹಿಡಿಯುವದು. ಅದಕ್ಕೆ ಒಳ್ಳೇಮಾತುಗಳೇ ಪರಿಹಾರೋಪಾಯವು. ಕ್ರೀಡಾಕಾಮವೆಂತಲೂ, ಭೋಗಕಾಮವೆಂತಲೂ, ಅಭಿಕಾಮವೆಂತಲೂ, ಗ್ರಹಗಳು ಮೂರುವಿಧಗಳು. ಈ ಗ್ರಹಗಳೆಲ್ಲವೂ ಎಪ್ಪತ್ತುವರುಷಗಳಾಗುವವರೆಗೂ ಪುರುಷರಿಗೆ ಬಾಧೆಯನ್ನುಂಟುಮಾಡುವವು. ಅಲ್ಲಿಂದ ಆಚೆಗೆ ಪ್ರಾಣಿಗಳಿಗೆ ಗ್ರಹಬಾಧೆಗೆ ಸಮಾನವಾದ ಜ್ವರವುಂಟಾಗುವದು. ಇವುಗಳೆಲ್ಲವೂ ಜಿತೇಂದ್ರಿಯನಾಗಿಯೂ ಶುದ್ಧನಾಗಿಯೂ ಯಾವಾಗಲೂ ಜಾಗರೂಕನಾಗಿಯೂ ಆಸ್ತಿಕನಾಗಿಯೂ ದೇವತೆಗಳ ಪೂಜೆಯಲ್ಲಿ ಶ್ರದ್ಧೆಯುಳ್ಳವನಾಗಿಯೂ ಇರುವವನನ್ನು ಬಾಧಿಸಲಾರವು. ಎಲೈ ಧರ್ಮರಾಯನೆ, ಯಾರು ಯಾವಾಗಲೂ ಮಹಾದೇವನನ್ನು ಆರಾಧಿಸುತ್ತ ಆತನಿಗೆ ಭಕ್ತರಾಗಿರುವರೋ ಅವರನ್ನು ಯಾವ ಗ್ರಹವೂ ಬಾಧಿಸಲಾರದು” ಎಂದು ಮಾರ್ಕಂಡೇಯನು ಧರ್ಮರಾಯನಿಗೆ ವಿವರಿಸಿದನು.

## ೨೩೦ನೇ ಅಧ್ಯಾಯ.—ಮಾರ್ಕಂಡೇಯಪರ್ವ—(ಷಣ್ಮುಖಸ್ವಾಮಿಯುದ್ಧ.)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಮಾರ್ಕಂಡೇಯನು ಧರ್ಮರಾಯನನ್ನು ಕುರಿತು “ ಎಲೈ ಧರ್ಮರಾಯನೆ, ಈ ಪ್ರಕಾರ ಕುಮಾರಸ್ವಾಮಿಯು ಮಾತೃಕಾಗಣಗಳಿಗೆ ಪ್ರಿಯವಾದ ಕಾರ್ಯವನ್ನು ಮಾಡಿದ್ದನ್ನು ನೋಡಿ, ಸ್ವಾಹಾದೇವಿಯು ‘ ಎಲೈ ಕುಮಾರಸ್ವಾಮಿಯೆ, ನೀನು ನನಗೆ ಔರಸಪುತ್ರನು. ಆದ್ದರಿಂದ ನನಗೂ ಪ್ರಿಯವಾದದ್ದನ್ನು ಮಾಡು ’ ಎನಲು, ಕುಮಾರಸ್ವಾಮಿಯು ಆಕೆಯನ್ನು ಕುರಿತು ‘ ನಿನಗೆ ಯಾವದು ಪ್ರಿಯವಾದದ್ದೋ ಅದನ್ನು ತಿಳುಹಿಸು ’ ಎನಲು ; ಸ್ವಾಹಾದೇವಿಯು ‘ ಎಲೈ ಪುತ್ರನೆ, ನಾನು ದಕ್ಷಬ್ರಹ್ಮನ ಮಗಳಾದ ಸ್ವಾಹಾದೇವಿಯು. ನಾನು ಬಾಲ್ಯಮೊದಲುಗೊಂಡು ಯಜ್ಞೇಶ್ವರನಲ್ಲಿ ಅಪೇಕ್ಷೆಯುಳ್ಳವಳಾಗಿರುವೆನು. ಆತನು ಇದನ್ನು ಚೆನ್ನಾಗಿ ತಿಳಿಯದಿರುವನು. ಆತನೊಡನೆ ನಾನು ಯಾವಾಗಲೂ ವಾಸಮಾಡಬೇಕೆಂದು ನನಗೆ ಇಚ್ಛೆಯಿರುವದು ’ ಎಂದಳು. ಅದನ್ನು ಕೇಳಿ ಕುಮಾರಸ್ವಾಮಿಯು ‘ ಎಲೌ ಸ್ವಾಹಾದೇವಿಯೆ, ಬ್ರಾಹ್ಮಣರು ಮಂತ್ರವತ್ತಾಗಿ ಹವ್ಯಕವ್ಯಗಳಲ್ಲಿ ಯಾವಾಗಲೂ ಸ್ವಾಹಾ ಎಂದು ನುಡಿಯುತ್ತ ಅಗ್ನಿಯಲ್ಲಿ ಹೋಮಮಾಡುವರು. ಆ ಹವಿಸ್ಸನ್ನು ಈಹೊತ್ತು ಮೊದಲುಮಾಡಿಕೊಂಡು ನೀನು ಅಗ್ನಿಯೊಡನೆ ಸ್ವೀಕರಿಸಿ ಆತನ ಸಂಗಡ ವಾಸಮಾಡಿಕೊಂಡಿರು ’ ಎಂದು ನುಡಿದು, ಆಕೆಯನ್ನು ಸತ್ಕರಿಸಿದನು. ಬಳಿಕ ಸ್ವಾಹಾದೇವಿಯು ಯಜ್ಞೇಶ್ವರನೊಡಗೂಡಿ ಕುಮಾರಸ್ವಾಮಿಯನ್ನು ಪೂಜಿಸಿದಳು. ಆಗ ಬ್ರಹ್ಮದೇವನು ಕುಮಾರಸ್ವಾಮಿಯನ್ನು ಕುರಿತು, ‘ ಎಲೈ ಸ್ಕಂದನೆ, ಲೋಕಹಿತಾರ್ಥವಾಗಿ ತ್ರಿಪುರಾಂತಕನಾದ ಮಹಾದೇವನು ಯಜ್ಞೇಶ್ವರನಲ್ಲಿಯೂ ಪಾರ್ವತಿಯು ಸ್ವಾಹಾದೇವಿಯಲ್ಲಿಯೂ ಪ್ರವೇಶಮಾಡಿ, ಅವರಿಬ್ಬರೂಕೂಡಿ ನಿನ್ನನ್ನು ಸೃಷ್ಟಿಸಿದರು. ಆ ಸಮಯದಲ್ಲಿ ಆ ದೇವದೇವನ ರೇತಸ್ಸು ಐದು ಭಾಗವಾಗಿ, ಈ ಪರ್ವತದಲ್ಲಿ ಒಂದು ಭಾಗವು ಬೀಳಲು ; ಮಿಂಜಿಕೆಯೆಂಬ ಕನ್ಯೆಯೂ ಮಿಂಜಿಕನೆಂಬ ಕುಮಾರನೂ ಹುಟ್ಟಿದರು. ಲೋಹಿತೋದಕದಲ್ಲಿ ಒಂದು ಭಾಗವೂ ಸೂರ್ಯನ ಕಿರಣಗಳಗಲ್ಲಿ ಒಂದು ಭಾಗವೂ ಭೂಮಿಯಲ್ಲಿ ಒಂದು ಭಾಗವೂ ವೃಕ್ಷಗಳಲ್ಲಿ ಒಂದು

ಭಾಗವೂ ಬಿದ್ದು, ಅವುಗಳಿಂದ ಘೋರರೂಪರೂ ಮಾಂಸಭಕ್ಷಕರೂ ಆದ ಈ ನಿನ್ನ ನಾನಾವಿಧಪರಿವಾರಗಳು ಉತ್ಪನ್ನರಾದರು. ಆ ಮಹಾದೇವನು ನಿನಗೆ ತಂದೆಯಾಗಬೇಕು. ಆತನ ಬಳಿಗೆ ಹೋಗೋಣ ನಡೆ' ಎನಲು, ಕುಮಾರಸ್ವಾಮಿಯು ಹಾಗೇ ಆಗಲೆಂದು ನುಡಿದು, ತಮ್ಮ ತಂದೆಯಾದ ಮಹಾದೇವನ ಬಳಿಗೆ ಹೋಗಿ ಆತನನ್ನು ಪೂಜಿಸಿದನು. ಎಲೈ ಧರ್ಮರಾಯನೆ, ಧನಾರ್ಥಿಗಳೂ ಆರೋಗ್ಯವನ್ನಪೇಕ್ಷಿಸುವರೂ ಸಹ ಎಕ್ಕದ ಹೂವಿನಿಂದ ಐದುವಿಧವಾದ ರುದ್ರಪರಿವಾರಗಳನ್ನು ಪೂಜಿಸಬೇಕು. ಬಾಲಕರಿಗೆ ಹಿತವನ್ನು ಅಪೇಕ್ಷಿಸುವರು ಮಿಂಜಿಕಾ ಮಿಂಜಿಕರೆಂಬ ಮಹಾದೇವನ ಅವಳಿಯ ಮಕ್ಕಳಿಗೆ ಯಾವಾಗಲೂ ನಮಸ್ಕಾರಮಾಡಬೇಕು. ಸಂತಾನಾರ್ಥಿಗಳು ರುದ್ರವೀರ್ಯದಿಂದ ವೃಕ್ಷಗಳಲ್ಲಿ ಹುಟ್ಟಿದ ಮಾಂಸಭಕ್ಷಕಳಾದ ವೃದ್ಧಿಕೆಯೆಂದು ಹೆಸರುಳ್ಳ ಸ್ತ್ರೀಗೆ ನಮಸ್ಕಾರ ಮಾಡಬೇಕು. ಎಲೈ ಧರ್ಮರಾಯನೆ, ಇದೇ ಪ್ರಕಾರವಾಗಿ ಅಸಂಖ್ಯೇಯವಾದ ಪಿಶಾಚಗಣವಿರುವದು. ಕುಮಾರಸ್ವಾಮಿಯ ಘಂಟೆಯಿಂದಲೂ ಪತಾಕೆಯಿಂದಲೂ ಉತ್ಪನ್ನರಾದವರನ್ನು ಹೇಳುವೆನು ಕೇಳು : ಇಂದ್ರನ ಐರಾವತವೆಂಬ ಗಜಕ್ಕೆ ವೈಜಯಂತಿಗಳೆಂದು ಪ್ರಸಿದ್ಧವಾದ ಎರಡು ಘಂಟೆಗಳಿದ್ದವು. ಇಂದ್ರನು ಆ ಎರಡು ಘಂಟೆಗಳಲ್ಲಿ ಒಂದನ್ನು ಕುಮಾರಸ್ವಾಮಿಗೂ ಮತ್ತೊಂದನ್ನು ವಿಶಾಖನಿಗೂ ಕೊಟ್ಟನು. ಆ ಘಂಟೆಯನ್ನೂ ಒಂದು ಧ್ವಜವನ್ನೂ ಮತ್ತೊಂದು ಘಂಟೆಯನ್ನೂ ಮತ್ತೊಂದು ಕೆಂಪಾದ ಧ್ವಜವನ್ನೂ ಹಿಡಿದುಕೊಂಡು ವಿಶಾಖನೂ ಮತ್ತು ಅವರಿಬ್ಬರೂ ಇನ್ನೂ ದೇವತೆಗಳು ಕೊಟ್ಟ ಆಟದ ವಸ್ತುಗಳನ್ನೂ ಸ್ವೀಕರಿಸಿ ಆ ಪರ್ವತದಮೇಲೆ ಆಡುತ್ತಿದ್ದರು. ಆ ಪರ್ವತವು ಬಗೆಬಗೆಯಾದ ಹೂವುಗಳುಳ್ಳ ಸಂತಾನ, ಪಾರಿಜಾತ, ಕರವೀರ, ಅಶೋಕ, ಕದಂಬ ಮೊದಲಾದ ವೃಕ್ಷಗಳಿಂದಲೂ ದಿವ್ಯವಾದ ಮೃಗಪಕ್ಷಿಗಳಿಂದಲೂ ಯುಕ್ತವಾಗಿ ಸೂರ್ಯನಿಂದ ಕೂಡಿದ ಮಂದರಪರ್ವತದಂತೆ ಶೋಭಿಸುತ್ತಿತ್ತು. ಆ ಸಮಯದಲ್ಲಿ ದೇವರ್ಷಿಗಳು ಆ ಕುಮಾರಸ್ವಾಮಿಯನ್ನು ಸ್ತುತಿಸಿದರು. ದೇವತೆಗಳು ಸಮುದ್ರದಂತೆ ಗಂಭೀರವಾದ ಧ್ವನಿಯುಳ್ಳ ವಾದ್ಯಗಳ ಧ್ವನಿಯನ್ನು ಮಾಡಿದರು. ಗಂಧರ್ವರು ಗಾನವನ್ನು ಮಾಡಿದರು. ಅಪ್ಸರಸ್ತ್ರೀಯರು ನರ್ತನವನ್ನು ಮಾಡಿದರು. ಆ ಕಾಲದಲ್ಲಿ ಸಮಸ್ತ ಪ್ರಾಣಿಗಳ ಸಂತೋಷದಿಂದುಂಟಾದ ಕೋಲಾಹಲವು ದಿಕ್ಕುಗಳನ್ನೆಲ್ಲ ತುಂಬಿಕೊಂಡಿತು. ಇಂದ್ರಾದಿ ಸಕಲದೇವತೆಗಳೂ ಶ್ವೇತಪರ್ವತದಲ್ಲಿ ಇರತಕ್ಕ ಕುಮಾರಸ್ವಾಮಿಯನ್ನು ನೋಡಿ, ಆದರಿಂದ ತಮ್ಮ ಮನೋವ್ಯಥೆಯನ್ನು ಪರಿಹರಿಸಿಕೊಂಡು ಸಂತೋಷಪಟ್ಟರು.

ಎಲೈ ಧರ್ಮರಾಯನೆ, ಯಾವಾಗ ದೇವತೆಗಳು ಕುಮಾರಸ್ವಾಮಿಗೆ ದೇವಸೇನಾಧಿಪತ್ಯದಲ್ಲಿ ಪಟ್ಟಾಭಿಷೇಕವನ್ನು ಮಾಡಿದರೋ ಆಗ, ಮಹಾದೇವನು ಪಾರ್ವತೀಸಮೇತನಾಗಿ ಭದ್ರವಟವೆಂಬ ಆಸ್ಥಾನಕ್ಕೆ ಬರಬೇಕೆಂದು ಸಿದ್ಧನಾಗಿ ಸಾವಿರ ಸಿಂಹಗಳನ್ನು ಕಟ್ಟಿರುವ ರಥವನ್ನೇರಿ ಹೊರಟನು. ಸೂರ್ಯನಿಗೆ ಸಮಾನವಾದ ಆ ರಥಕ್ಕೆ ಕಟ್ಟಿದ್ದ ಸಿಂಹಗಳು ಮಹತ್ತಾದ ಶಬ್ದವನ್ನುಮಾಡುತ್ತ, ಚರಾಚರಾತ್ಮಕವಾದ ಪ್ರಪಂಚವನ್ನೇ ಭಯಪಡಿಸುವವೋ ಎಂಬಂತೆಯೂ ಆಕಾಶವನ್ನೇ ಪಾನಮಾಡುವವೋ ಎಂಬಂತೆಯೂ ತೋರುತ್ತ, ಆಕಾಶಮಾರ್ಗದಲ್ಲಿ ವೇಗದಿಂದ ಹೊರಟವು. ಆ ರಥದಲ್ಲಿ ಪಾರ್ವತೀಸಹಿತನಾದ ಮಹಾದೇವನು ಇಂದ್ರಚಾಪದೊಡಗೂಡಿದ ಮೇಘದಲ್ಲಿ ಮಿಂಚಿನಿಂದ ಸಹಿತನಾದ ಸೂರ್ಯನಂತೆ ಹೊಳೆಯುತ್ತಿದ್ದನು. ಆ ರಥದ ಮುಂಗಡೆಯಲ್ಲಿ ಕುಬೇರನು ಪುಷ್ಪಕವಿಮಾನಾರೂಢನಾಗಿ ಗುಹ್ಯಕರೊಡಗೂಡಿ ಹೊರಟನು. ಇಂದ್ರನು ಐರಾವತವನ್ನೇರಿ ದೇವತೆಗಳೊಡನೆ ಆ ರಥದ ಹಿಂದೆ ಹೊರಟನು. ಅಮೋಘನೆಂಬ ಮಹಾಯಕ್ಷನು ನಾನಾವಿಧವಾಗಿ ಅಲಂಕಾರಗಳನ್ನು ಮಾಡಿಕೊಂಡಿದ್ದ ಯಕ್ಷರಾಕ್ಷಸರೊಡಗೂಡಿ, ಆ ರಥದ ಬಲಭಾಗವನ್ನು ರಕ್ಷಿಸುತ್ತ ಹೊರಟನು. ಮತ್ತೊಂದು ಭಾಗದಲ್ಲಿ ಅಷ್ಟವಸುಗಳೂ ಏಕಾದಶರುದ್ರರೂ ಮೃತ್ಯುವಿನಿಂದ ಸಹಿತನಾದ ಯಮನೂ ಹೊರಟರು. ಆ ಯಮನ ಹಿಂಗಡೆಯಲ್ಲಿ ಘೋರರೂಪನ್ನು ತಾಳಿದ ರೋಗಗಳೂ ಘೋರವಾದ ಮೂರು ಶಿಖರಗಳುಳ್ಳ ವಿಜಯವೆಂಬ ರುದ್ರನ ತ್ರಿಶೂಲವೂ ಸಹ ಹೊರಟವು. ಸಂಗಡಲೆ ಪಾಶಹಸ್ತನಾದ ವರುಣನೂ ತನ್ನ ಪರಿವಾರದ ಜಲಚರಪ್ರಾಣಿಗಳಿಂದ ಕೂಡಿ ಹೊರಟನು. ರುದ್ರದೇವನ ತ್ರಿಶೂಲದ ಹಿಂಗಡೆಯಲ್ಲಿ ಪಟ್ಟಸ, ಗದೆ, ಮುಸಲ, ಶಕ್ತಿ ಮೊದಲಾದ ಆಯುಧಗಳು ದಿವ್ಯರೂಪವನ್ನು ಧರಿಸಿ

ಹೊರಟವು. ಮತ್ತು ಆ ರಥದ ಬಲಗಡೆಯಲ್ಲಿ ದಂಡಾಯುಧವೂ ಋಷಿಗಣಗಳಿಂದ ಸೇವಿತವಾದ ಕಮಂಡಲುವೂ ಶ್ವೇತಚ್ಛತ್ರವೂ ಪ್ರಕಾಶಿಸಿದವು. ಭೃಗು, ಅಂಗಿರಸ್ಸು, ಮೊದಲಾದ ಮಹರ್ಷಿಗಳು ಆ ಮಹಾದೇವನನ್ನು ಪೂಜಿಸುತ್ತ ಹಿಂದುಗಡೆ ಹೊರಟರು. ಗಂಧರ್ವರೂ ಅಪ್ಸರಸ್ತ್ರೀಯರೂ ನದಿಗಳೂ ಮಡುವುಗಳೂ ಸಮುದ್ರಗಳೂ ನಕ್ಷತ್ರಗಳೂ ಗ್ರಹಗಳೂ ದೇವಕುಮಾರರೂ ಸಹ ಆ ರಥದ ಹಿಂದುಗಡೆ ಹೊರಟರು. ದೇವತಾಸ್ತ್ರೀಯರು ಆ ದೇವದೇವನಮೇಲೆ ಪುಷ್ಪವೃಷ್ಟಿಯನ್ನು ಕರೆಯುತ್ತ ಆತನ ಹಿಂದೆ ಹೊರಟರು. ಮಹಾದೇವನಿಗೆ ನಮಸ್ಕರಿಸುತ್ತ ಪರ್ಜನ್ಯನೂ ಆತನ ಹಿಂದೆ ಹೊರಟನು. ಆ ಸಮಯದಲ್ಲಿ ಚಂದ್ರನು ಮಹಾದೇವನಿಗೆ ಛತ್ರವನ್ನು ಹಿಡಿದನು; ವಾಯುವೂ ಅಗ್ನಿಯೂ ಚಾಮರಗಳನ್ನು ಹಿಡಿದರು; ಗೌರಿ, ವಿದ್ಯೆ, ಗಾಂಧಾರಿ, ಕೇಶಿನಿ, ಮಿತ್ರಸೆ ಇವರು ಸಾವಿತ್ರಿಯ ಸಂಗಡ ಪಾರ್ವತಿಯ ಹಿಂದುಗಡೆ ಹೊರಟರು. ಆ ಮಹಾದೇವನ ಸೈನ್ಯದ ಮುಂಗಡೆಯಲ್ಲಿ ಇಂದ್ರಾದಿದೇವತೆಗಳು ಚತುಷ್ಷಷ್ಟಿಕಲೆಗಳೊಡನೆ ಆತನನ್ನು ಸ್ತುತಿಸುತ್ತ ಹೊರಟರು. ಆ ಸೈನ್ಯದ ಮುಂಗಡೆಯಲ್ಲಿ ರಾಕ್ಷಸನೆಂಬ ಗ್ರಹವು ಧ್ವಜವನ್ನು ಹಿಡಿದುಕೊಂಡು ಹೊರಟಿತು. ಮಹಾದೇವನಿಗೆ ಮಿತ್ರನಾದ ಪಿಂಗಳನೆಂಬ ಯಕ್ಷಶ್ರೇಷ್ಠನು ಆತನನ್ನು ಸಂತೋಷಪಡಿಸುತ್ತ ಆತನ ಸಂಗಡಲೇ ಹೊರಟನು. ಈ ಪ್ರಕಾರ ಮಹಾದೇವನು ಸಕಲಪರಿವಾರಗಳಿಂದಲೂ ಕೂಡಿ ಎಲ್ಲಾ ದಿಕ್ಕುಗಳಲ್ಲಿಯೂ ತಡೆಯಿಲ್ಲದೆ ಸುಖವಾಗಿ ಹೋಗುತ್ತಿರಲು, ಸಕಲರೂ ಬಹುಭಕ್ತಿಯುಳ್ಳವರಾಗಿ ಆತನನ್ನು ಪೂಜಿಸುತ್ತ ಆತನ ಸಂಗಡ ಪ್ರಯಾಣಮಾಡಿದರು. ಈ ಪ್ರಕಾರ ಮಹಾದೇವನು ಕುಮಾರಸ್ವಾಮಿಯ ಬಳಿಗೆ ಬರಲು, ಬ್ರಹ್ಮಣ್ಯನಾದ ಕೃತ್ತಿಕಾಪುತ್ರನಾದ ಕುಮಾರಸ್ವಾಮಿಯು ಮಹಾದೇವನನ್ನು ಅನುಸರಿಸಿಕೊಂಡು ಬಂದನು. ಆಗ ಮಹಾದೇವನು 'ಎಲೈ ಪುತ್ರನೆ, ನೀನು ಜಾಗರೂಕನಾಗಿ ಏಳನೇ ಮಾರುತಸ್ಕಂಧವನ್ನು ಪರಿಪಾಲಿಸಿಕೊಂಡಿರತಕ್ಕದ್ದು' ಎಂದನು. ಅದನ್ನು ಕೇಳಿ ಕುಮಾರಸ್ವಾಮಿಯು 'ಎಲೈ ಸ್ವಾಮಿಯೆ, ನಿನ್ನ ಆಜ್ಞಾನುಸಾರವಾಗಿ ಏಳನೇ ಮಾರುತಸ್ಕಂಧವನ್ನು ಪಾಲಿಸುವೆನು. ನೀನು ನನಗೆ ಯಾವಯಾವದನ್ನು ನೇಮಿಸಬೇಕೋ ಅದನ್ನೆಲ್ಲಾ ಆಜ್ಞಾಪಿಸು' ಎನಲು, ಮಹಾದೇವನು 'ಎಲೈ ಪುತ್ರನೆ, ಯಾವದಾದರೂ ಕಾರ್ಯವು ಪ್ರಾಪ್ತವಾದರೆ, ಆಗ ಭಕ್ತಿಯಿಂದ ನೀನು ನನ್ನ ದರ್ಶನವನ್ನು ಮಾಡು. ಅದರಿಂದ ನಿನಗೆ ಉತ್ತಮವಾದ ಶ್ರೇಯಸ್ಸುಂಟಾಗುವದು' ಎಂದು ನುಡಿದು, ಆತನನ್ನು ಪ್ರೀತಿಯಿಂದ ಆಲಿಂಗನೆ ಮಾಡಿಕೊಂಡನು. ಆ ಸಮಯದಲ್ಲಿ ಸಕಲದೇವತೆಗಳಿಗೂ ಚಿತ್ತವಿಕಾರವುಂಟಾಗುವಹಾಗೆ ಮಹತ್ತಾದ ಉತ್ಪಾತವುಂಟಾಗಿ, ನಕ್ಷತ್ರಗಳೊಡಗೂಡಿದ ಆಕಾಶವು ಉರಿಯುವಂತೆ ಕಾಣಿಸಿತು; ಭೂಮಿಯು ಚಲಿಸಿತು; ಜಗತ್ತೆಲ್ಲಾ ಅಂಧಕಾರದಿಂದ ವ್ಯಾಪ್ತವಾಯಿತು. ಈ ಪ್ರಕಾರವಾದ ದಾರುಣವಾದ ಉತ್ಪಾತವನ್ನು ನೋಡಿ, ಮಹಾದೇವನೂ ಪಾರ್ವತಿಯೂ ಅಲ್ಲಿದ್ದ ಮಹರ್ಷಿಗಳೂ ಸಹ ಮನಸ್ಸಿನಲ್ಲಿ ಚಿಂತಾಕ್ರಾಂತರಾದರು. ಆಗ ದೈತ್ಯರ ಸೇನೆಗಳು ನಾನಾವಿಧವಾದ ಆಯುಧಗಳನ್ನು ಧರಿಸಿ ಪರ್ವತದಂತೆಯೂ ಮೇಘದಂತೆಯೂ ಘೋರರೂಪಗಳಾಗಿ, ಕ್ರೂರವಾಗಿ ಅರಚಿಕೊಳ್ಳುತ್ತ ಆ ಮಹಾದೇವನನ್ನೂ ದೇವತೆಗಳನ್ನೂ ಸಹ ಅಟ್ಟಿಕೊಂಡುಬಂದು, ಅವರ ಮೇಲೆ ಅನೇಕ ಬಾಣಗಳನ್ನೂ ಪರ್ವತಗಳನ್ನೂ ಪಿರಂಗಿಗಳನ್ನೂ ಪ್ರಾಸ, ಪರಿಘ, ತೋಮರ, ಶಕ್ತಿ, ಗದೆ, ಮೊದಲಾದ ಆಯುಧಗಳನ್ನೂ ಪ್ರಯೋಗಿಸಿದರು. ಆಗ ಆ ದೈತ್ಯಸೇನೆಯಿಂದ ಪೀಡಿತವಾದ ದೇವಸೈನ್ಯವು ಕ್ಷಣಮಾತ್ರದಲ್ಲಿ ಪರಾಜಿತವಾಗಿ, ಚತುರಂಗಬಲವೂ ಆಯುಧಗಳೂ ಸಹ ನಷ್ಟವಾಗಿ, ಕಾಡುಕಿಚ್ಚಿನಿಂದ ಸುಟ್ಟುಹೋದ ಅರಣ್ಯದಂತಾಯಿತು. ಆಗ ದೇವತೆಗಳು ಆ ದೈತ್ಯರ ಪೆಟ್ಟಿನಿಂದ ಚೂರುಚೂರಾದ ಶಿರಸ್ಸು ಮೊದಲಾದ ಅವಯವಗಳುಳ್ಳವರಾಗಿ, ಆ ಯುದ್ಧರಂಗದಲ್ಲಿ ತಮ್ಮನ್ನು ರಕ್ಷಿಸತಕ್ಕವರನ್ನು ಕಾಣದೆ, ದಿಕ್ಕುದಿಕ್ಕುಗಳಿಗೆ ಪಲಾಯನಮಾಡಿದರು. ಆ ದಾನವರಿಂದ ಪೀಡಿತರಾಗಿ ಓಡಿಹೋಗತಕ್ಕ ದೇವಸೈನ್ಯವನ್ನು ಮಹೇಂದ್ರನು ನೋಡಿ, 'ಎಲೈ ಸೈನಿಕರೆ, ನೀವು ಯಾತಕ್ಕೆ ಓಡಿಹೋಗುವಿರಿ? ಭಯಪಡದೆ ಶಸ್ತ್ರಪಾಣಿಗಳಾಗಿ ನಿಮ್ಮನಿಮ್ಮ ಪರಾಕ್ರಮವನ್ನು ತೋರಿಸಿ ದುಷ್ಟರಾದ ಈ ದಾನವರನ್ನು ಜಯಿಸಿರಿ. ನನ್ನೊಡಗೂಡಿ ನೀವು ಆ ದೈತ್ಯರ ಸಂಗಡ ಯುದ್ಧಮಾಡಿ ಅವರನ್ನು ಓಡಿಸಿ' ಎಂದು ಸಮಾಧಾನಮಾಡಿ ಎಲ್ಲರನ್ನೂ ನಿಲ್ಲಿಸಿದನು. ಆಗ ದೇವತೆಗಳು ಇಂದ್ರನನ್ನು ಆಶ್ರಯಿಸಿಕೊಂಡು ದಾನವರ ಸಂಗಡ ಯುದ್ಧವನ್ನು ಮಾಡುವದಕ್ಕೆ ತೊಡಗಿದರು. ಬಳಿಕ ಬಲಿಷ್ಠರಾದ ಮರುತ್ತುಗಳೂ ವಸುಗಳೂ ಸಾಧ್ಯರೂ

ಸಹ ಗುಂಪುಗೂಡಿ ಕ್ರೋಧದಿಂದ ಆ ದೈತ್ಯರನ್ನು ಅನೇಕ ಬಾಣಗಳಿಂದಲೂ ನಾನಾವಿಧವಾದ ಆಯುಧಗಳಿಂದಲೂ ಹೊಡೆದರು. ಆಗ ಆ ಬಾಣಗಳು ಆ ದೈತ್ಯರ ಶರೀರವನ್ನು ಭೇದಿಸಿಕೊಂಡು ರಕ್ತವನ್ನು ಪಾನಮಾಡಿ, ಪರ್ವತದಿಂದ ಕೆಳಕ್ಕೆ ಬೀಳುವ ಸರ್ಪಗಳಂತೆ ಕೆಳಕ್ಕೆ ಬಿದ್ದವು. ಆ ಬಾಣಗಳಿಂದ ಛಿನ್ನಭಿನ್ನವಾದ ಶರೀರವುಳ್ಳ ದೈತ್ಯರು ಛಿದ್ರವಾದ ಮೇಘಗಳಂತೆ ಕಾಣಿಸಿದರು. ಈ ಪ್ರಕಾರ ದಾನವರ ಸೈನ್ಯವು ದೇವತೆಗಳಿಂದ ಪರಾಜಿತವಾಗಿ ವಿಮುಖವಾಗಲು, ದೇವತೆಗಳು ದೇವದುಂದುಭಿಯನ್ನು ಹೊಡೆದರು. ಎಲೈ ಧರ್ಮರಾಯನೆ, ದೇವತೆಗಳಿಗೂ ದಾನವರಿಗೂ ತಿರುಗಿ ಭಯಂಕರವಾದ ಯುದ್ಧವುಂಟಾಗಿ ಒಬ್ಬರನ್ನೊಬ್ಬರು ಜಯಿಸಬೇಕೆಂದು ಕ್ರೋಧದಿಂದ ಅವರಿಬ್ಬರೂ ಸಿಂಹನಾದವನ್ನೂ ವಾದ್ಯಧ್ವನಿಯನ್ನೂ ಮಾಡುತ್ತ ಯುದ್ಧವನ್ನು ಮಾಡುತ್ತಿರಲು ; ಮಹಾಬಲಶಾಲಿಯಾದ ಮಹಿಷನೆಂಬ ದಾನವನು ದೊಡ್ಡದಾದ ಪರ್ವತವನ್ನು ಕಯ್ಯಲ್ಲಿ ಹಿಡಿದು ಮೇಘದಿಂದ ಸುತ್ತುವರಿಯಲ್ಪಟ್ಟ ಸೂರ್ಯನಂತೆ ತೋರುತ್ತ, ತಮ್ಮ ಸೈನ್ಯದಿಂದ ಈಚೆಗೆ ಬಂದು ಕಾಣಿಸಿಕೊಂಡನು. ಅದನ್ನು ನೋಡಿ ದೇವತೆಗಳು ಭಯದಿಂದ ಓಡಿಹೋಗುತ್ತಿರಲು, ಆ ದೈತ್ಯನು ಅವರಮೇಲೆ ಆ ಪರ್ವತವನ್ನು ಎತ್ತಿಹಾಕಿದನು. ಆ ಪರ್ವತದ ಪೆಟ್ಟಿನಿಂದ ಹತ್ತುಸಾವಿರಮಂದಿ ದೇವತೆಗಳು ಹತರಾಗಿ ಭೂಮಿಯಮೇಲೆ ಬಿದ್ದರು. ಆ ಮಹಿಷನೆಂಬ ದಾನವನು ದೈತ್ಯರೊಡಗೂಡಿ, ಸಿಂಹವು ಕ್ಷುದ್ರಮೃಗಗಳನ್ನು ಅಟ್ಟುವಂತೆ ದೇವತೆಗಳನ್ನು ಅಟ್ಟಿದನು. ಆ ಸಮಯದಲ್ಲಿ ಇಂದ್ರಾದಿದೇವತೆಗಳೂ ಸಹ ಭೀತರಾಗಿ ಆಯುಧಗಳನ್ನು ಬಿಸುಟು ತಲೆಯನ್ನು ಕೆದರಿಕೊಂಡು ಓಡಿಹೋದರು. ಆಗ ಮಹಿಷನು ಕ್ರೋಧೋದ್ದೀಪಿತನಾಗಿ ಮಹಾದೇವನ ರಥದ ಬಳಿಗೆ ಹೋಗಿ ಆ ರಥದ ಮೂಕಿಯನ್ನು ಆಕ್ರಮಿಸಿದನು. ಆಕಾಶದಲ್ಲಿಯೂ ಭೂಮಿಯಲ್ಲಿಯೂ ಘೋರವಾದ ಕೋಲಾಹಲವುಂಟಾಯಿತು, ಮಹರ್ಷಿಗಳೆಲ್ಲರೂ ಭಯಾಕ್ರಾಂತರಾದರು, ದೈತ್ಯಸೈನ್ಯವೆಲ್ಲವೂ ತಮಗೆ ಜಯವೆಂದು ಉತ್ಸಾಹಪಡುತ್ತಿತ್ತು. ಆಗ ಮಹಾದೇವನು ಮಹಿಷನಿಗೆ ಮೃತ್ಯುರೂಪನಾದ ಕುಮಾರಸ್ವಾಮಿಯನ್ನು ಸ್ಮರಿಸಿ, ಒಂದು ಬಾಣದಿಂದ ಆ ಮಹಿಷನನ್ನು ಹೊಡೆದನು. ಅದನ್ನು ಗಣಿಸದೆ ಮಹಿಷನು ಮಹಾದೇವನ ರಥದ ಮೂಕಿಯನ್ನು ಹಿಡಿದುಕೊಂಡು ದೇವತೆಗಳಿಗೆ ಭಯವನ್ನೂ ದಾನವರಿಗೆ ಸಂತೋಷವನ್ನೂ ಉಂಟುಮಾಡುತ್ತ ಸಿಂಹನಾದವನ್ನು ಮಾಡಿದನು. ಅಂಥ ಘೋರವಾದ ಸಮಯದಲ್ಲಿ ಮಹಾದೇವನು ತನ್ನನ್ನು ಸ್ಮರಿಸಿದ್ದನ್ನು ತಿಳಿದ ಕುಮಾರಸ್ವಾಮಿಯು ಕ್ರೋಧಾವೇಶದಿಂದ ಸೂರ್ಯನಂತೆ ಪ್ರಜ್ವಲಿಸುತ್ತ, ಕೆಂಪಾದ ವಸ್ತ್ರಾಭರಣಗಳಿಂದ ಭೂಷಿತನಾಗಿ, ಸುವರ್ಣಮಯವಾದ ಕವಚವನ್ನು ಧರಿಸಿ, ಕೆಂಪಾದ ಧ್ವಜವನ್ನು ಕಟ್ಟಿರುವ ಚಿನ್ನದ ರಥವನ್ನೇರಿ ಯುದ್ಧಕ್ಕೆ ಬಂದನು. ಆತನನ್ನು ನೋಡಿದ ಮಾತ್ರಕ್ಕೆ ದಾನವರೆಲ್ಲರೂ ಓಡಿಹೋದರು. ಆಗ ಕುಮಾರಸ್ವಾಮಿಯು ಆ ಮಹಿಷದಾನವನ ಮೇಲೆ ಮಹತ್ತಾದ ತನ್ನ ಶಕ್ತ್ಯಾಯುಧವನ್ನು ಪ್ರಯೋಗಿಸಿದನು. ಅದರಿಂದ ಮಹಿಷನೆಂಬ ಆ ದಾನವನು ಸೀಳಿಹೋದ ಶಿರಸ್ಸುಳ್ಳವನಾಗಿ ಮರಣವನ್ನು ಹೊಂದಿ ಭೂಮಿಯಮೇಲೆ ಬಿದ್ದನು. ಆ ದಾನವನ ಶಿರಸ್ಸು ಭೂಮಿಯಮೇಲೆ ಬೀಳುವ ಕಾಲದಲ್ಲಿ, ಅದು ದೊಡ್ಡ ಪರ್ವತದಂತೆ ಹದಿನಾರು ಯೋಜನವುಳ್ಳದ್ದಾಗಿ ಉತ್ತರಕುರುದೇಶಕ್ಕೆ ಹೋಗತಕ್ಕ ದಾರಿಯಲ್ಲಿ ಬಿತ್ತು. ಅದರಿಂದ ಈಗಲೂ ಉತ್ತರಕುರುದೇಶಕ್ಕೆ ಹೋಗುವದು ಅಶಕ್ಯವಾಗಿರುವದು. ಎಲೈ ಧರ್ಮರಾಯನೆ, ಈ ಪ್ರಕಾರ ಕುಮಾರಸ್ವಾಮಿಯು ಅಡಿಗಡಿಗೆ ತನ್ನ ಶಕ್ತ್ಯಾಯುಧದಿಂದ ಘೋರರಾದ ದಾನವರನ್ನು ಸಂಹರಿಸಿ, ತೀಕ್ಷ್ಣವಾದ ಬಾಣಗಳಿಂದಲೂ ಕೆಲವು ದೈತ್ಯರನ್ನು ಸಂಹರಿಸಿದನು. ಆ ಕುಮಾರಸ್ವಾಮಿಯ ಪರಿವಾರಗಳಾದ ಗ್ರಹಗಳು ಯುದ್ಧರಂಗದಲ್ಲಿ ಓಡಿಹೋಗುತ್ತಿದ್ದ ಕೆಲವು ದಾನವರನ್ನು ಸಂಹರಿಸಿ, ಅವರ ಮಾಂಸವನ್ನು ಭಕ್ಷಿಸಿ, ಅವರ ನೆತ್ತರನ್ನು ಪಾನಮಾಡಿ, ಕ್ಷಣಮಾತ್ರದಲ್ಲಿ ಒಬ್ಬ ದಾನವನೂ ಉಳಿಯದಂತೆ ಮಾಡಿಬಿಟ್ಟವು. ಈ ರೀತಿಯಾಗಿ ಕುಮಾರಸ್ವಾಮಿಯು ಸೂರ್ಯನು ಅಂಧಕಾರವನ್ನು ಹ್ಯಾಗೆ ಪರಿಹರಿಸುವನೋ, ಕಾಡುಗಿಚ್ಚು ವೃಕ್ಷಗಳನ್ನು ಹ್ಯಾಗೆ ನಾಶಮಾಡಿಬಿಡುವದೋ, ವಾಯುವು ಮೇಘಗಳನ್ನು ಹ್ಯಾಗೆ ಪರಿಹರಿಸಿಬಿಡುವದೋ ಹಾಗೆ ಶತ್ರುಗಳನ್ನು ನಾಶಮಾಡಿ ದೇವತೆಗಳಿಂದ ಪೂಜಿತನಾಗಿ ಮಹಾದೇವನಿಗೆ ವಂದನೆಯನ್ನು ಮಾಡಿ ಸೂರ್ಯನಂತೆ ಪ್ರಕಾಶಿಸಿದನು. ಆ ಸಮಯದಲ್ಲಿ ಮಹೇಂದ್ರನು ಕುಮಾರಸ್ವಾಮಿಯನ್ನು ಆಲಿಂಗಿಸಿಕೊಂಡು 'ಎಲೈ ಸ್ಕಂದನೆ, ಬ್ರಹ್ಮದೇವನ ವರದಿಂದ ದೇವತೆಗಳನ್ನೂ ಸಹ ಲಕ್ಷ್ಯಮಾಡದೆಯಿದ್ದ ಮಹಿಷನನ್ನೂ ಜೀವ

ಕಂಟಕರಾಗಿಯೂ ಆ ಮಹಿಷನಿಗೆ ಸಮಾನರಾಗಿಯೂ ಇದ್ದ ಅನೇಕಮಂದಿ ದಾನವರನ್ನೂ ಸಂಹರಿಸಿದೆ. ನಿನ್ನ ಪರಿಜನರು ಉಳಿದ ದಾನವರನ್ನು ಸಂಹರಿಸಿ ಭಕ್ಷಿಸಿಬಿಟ್ಟರು. ಎಲೈ ವೀರನೆ, ಮಹಾದೇವನು ಶತ್ರುಗಳನ್ನು ಜಯಿಸಿದಂತೆ ಈ ದಿವಸ ನೀನು ಶತ್ರುಗಳನ್ನು ಜಯಿಸಿದ್ದರಿಂದ, ಮೂರು ಲೋಕದಲ್ಲಿಯೂ ನಿನಗೆ ಮಹತ್ತಾದ ಕೀರ್ತಿಯುಂಟಾಗುವದು. ಸಕಲದೇವತೆಗಳೂ ನಿನ್ನಧೀನರಾಗಿರುವರು' ಎಂದು ನುಡಿದು, ಮಹಾದೇವನ ಆಜ್ಞೆಯನ್ನು ಸ್ವೀಕರಿಸಿ, ದೇವತೆಗಳೊಡಗೂಡಿ ತನ್ನ ಸ್ಥಾನಕ್ಕೆ ಹೊರಟನು. ಆಗ ಮಹಾದೇವನು ಆ ದೇವತೆಗಳನ್ನು ಕುರಿತು 'ಎಲೈ ದೇವತೆಗಳಿರಾ, ನೀವು ನನ್ನನ್ನು ಕಾಣುವಂತೆ ಕುಮಾರಸ್ವಾಮಿಯನ್ನೂ ಕಂಡುಕೊಂಡಿರತಕ್ಕದ್ದು' ಎಂದು ನುಡಿದು ಭದ್ರವಟಗೆ ಹೊರಟನು.

ಎಲೈ ಧರ್ಮರಾಯನೆ, ಈ ರೀತಿಯಲ್ಲಿ ಮಹರ್ಷಿಗಳಿಂದ ಪೂಜಿತನಾದ ಕುಮಾರಸ್ವಾಮಿಯು ಮೂರು ಲೋಕದಲ್ಲಿಯೂ ಇದ್ದ ದಾನವರನ್ನು ಬಂದು ಹಗಲಿನಲ್ಲೇ ಜಯಿಸಿ ಮಹತ್ತಾದ ಕೀರ್ತಿಯನ್ನು ಪಡೆದನು. ಈ ಸ್ಕಂದೋಪಾಖ್ಯಾನವನ್ನು ಯಾವ ಬ್ರಾಹ್ಮಣನು ಭಕ್ತಿಯಿಂದ ಪಠಿಸುವನೋ ಆತನು ಈ ಲೋಕದಲ್ಲಿ ಪುಷ್ಟನಾಗಿ ಬಳಿಕ ಸ್ಕಂದಸಾಲೋಕ್ಯವನ್ನು ಪಡೆಯುವನು" ಎಂದು ಮಾರ್ಕಂಡೇಯನು ಧರ್ಮರಾಯನಿಗೆ ಹೇಳಿದನು.

## ೨೩೧ನೇ ಅಧ್ಯಾಯ.—ಮಾರ್ಕಂಡೇಯಪರ್ವ—(ಷಣ್ಮುಖಸ್ವಾಮಿಯ ಸ್ತೋತ್ರ.)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಧರ್ಮರಾಯನು ಮಾರ್ಕಂಡೇಯನನ್ನು ಕುರಿತು "ಎಲೈ ಮಹಾತ್ಮನೆ, ಮೂರುಲೋಕಗಳಲ್ಲಿಯೂ ಪ್ರಸಿದ್ಧನಾದ ಮಹಾನುಭಾವನಾದ ಕುಮಾರಸ್ವಾಮಿಯ ನಾಮಗಳನ್ನು ಕೇಳಬೇಕೆಂದು ಅಪೇಕ್ಷೆಯಿರುವದು. ಅದನ್ನು ವಿವರಿಸು" ಎನಲು; ಮಾರ್ಕಂಡೇಯನು, "ಎಲೈ ಧರ್ಮರಾಯನೆ, ಸಾವಧಾನದಿಂದ ಕೇಳು, ಕುಮಾರಸ್ವಾಮಿಯ ಹೆಸರುಗಳನ್ನು ವಿವರಿಸುವೆನು: ಆಗ್ನೇಯ, ಸ್ಕಂದ, ದೀಪ್ತಕೀರ್ತಿ, ಅನಾಮಯ, ಮಯೂರಕೇತು, ಧರ್ಮಾತ್ಮ, ಭೂತೇಶ, ಮಹಿಷಾರ್ದನ, ಕಾಮಜಿತ್ತು, ಕಾಮದ, ಕಾಂತ, ಸತ್ಯವಾಕ್ಕು, ಭುವನೇಶ್ವರ, ಶುಚಿ, ಶೀಘ್ರ, ಶಿಶು, ಚಂಡ, ದೀಪ್ತವರ್ಣ, ಶುಭಾನನ, ಅಮೋಘ, ಅನಘ, ರೌದ್ರ, ಪ್ರಿಯ, ಚಂದ್ರಾನನ, ದೀಪ್ತಶಕ್ತಿ, ಪ್ರಶಾಂತಾತ್ಮ, ಭದ್ರಕೃತ್ತು, ಕೂಟಮೋಹನ, ಷಷ್ಠೀಪ್ರಿಯ, ಧರ್ಮಾತ್ಮ, ಪವಿತ್ರ, ಮಾತೃವತ್ಸಲ, ಕನ್ಯಾಭರ್ತೃ, ವಿಭಕ್ತ, ಸ್ವಾಹೇಯ, ರೇವತೀಸುತ, ಪ್ರಭು, ನೇತ, ವಿಶಾಖ, ನೈಗಮೇಯ, ಸುದುಶ್ಚರ, ಸುವ್ರತ, ಲಲಿತ, ಬಾಲಕ್ರೀಡನಕಪ್ರಿಯ, ಖಚರಿ, ಬ್ರಹ್ಮಚಾರಿ, ಶೂರ, ಶರವಣೋದ್ಭವ, ವಿಶ್ವಾಮಿತ್ರಪ್ರಿಯ, ದೇವಸೇನಾಪ್ರಿಯ, ವಾಸುದೇವಪ್ರಿಯ, ಪ್ರಿಯಕೃತ್ತು. ಈ ದಿವ್ಯನಾಮಗಳಿಂದ ಕುಮಾರಸ್ವಾಮಿಯು ಲೋಕದಲ್ಲಿ ಪ್ರಕಾಶಿಸುತ್ತ ಬ್ರಾಹ್ಮಣರಿಗೆ ಹಿತನಾಗಿಯೂ, ಗರ್ಭಾಧಾನಾದಿ ವೇದೋಕ್ತಸಂಸ್ಕಾರವುಳ್ಳವನಾಗಿಯೂ, ವೇದಾರ್ಥವನ್ನು ಬಲ್ಲವನಾಗಿಯೂ, ಬ್ರಹ್ಮಜ್ಞಾನಿಯಾಗಿಯೂ, ಬ್ರಹ್ಮವೇತ್ತರಲ್ಲಿ ಶ್ರೇಷ್ಠನಾಗಿಯೂ, ಬ್ರಾಹ್ಮಣರು ಮಾಡುವ ಕರ್ಮದಲ್ಲಿ ಪ್ರೀತಿಯುಳ್ಳವನಾಗಿಯೂ ಭಕ್ತರಿಗೆ ಬ್ರಹ್ಮಪದವನ್ನು ಕೊಡತಕ್ಕವನಾಗಿಯೂ ಇರುವನು. ಈ ನಾಮಗಳಿಂದ ಕುಮಾರಸ್ವಾಮಿಯನ್ನು ಯಾರು ಸ್ತುತಿಸುವರೋ, ಯಾರು ಈ ನಾಮಗಳನ್ನು ಪಠಿಸುವರೋ, ಯಾರು ಬ್ರಾಹ್ಮಣರ ಮುಖದಿಂದ ಶ್ರವಣ ಮಾಡುವರೋ, ಅವರು ಆಯುಸ್ಸನ್ನೂ ಧನವನ್ನೂ ಕೀರ್ತಿಯನ್ನೂ ಸಂತಾನವನ್ನೂ ಶತ್ರುಜಯವನ್ನೂ ಆರೋಗ್ಯವನ್ನೂ ಪುಷ್ಟಿಯನ್ನೂ ಹೊಂದಿ, ಬಳಿಕ ಸ್ಕಂದಸಾಲೋಕ್ಯವನ್ನು ಪಡೆಯುವರು" ಎಂದು ಮಾರ್ಕಂಡೇಯನು ಧರ್ಮರಾಯನಿಗೆ ಹೇಳಿದನು.

## ೨೩೨ನೇ ಅಧ್ಯಾಯ.—ದ್ರೌಪದೀಸತ್ಯಭಾಮಾಸಂವಾದ—(ದ್ರೌಪದಿಯು ತನ್ನ ಕಾರ್ಯವನ್ನು ಹೇಳುವಿಕೆ.)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಈ ಪ್ರಕಾರ ಮಹಾತ್ಮರಾದ ಪಾಂಡವರೂ ಬ್ರಾಹ್ಮಣರೂ ಸಹ ಸಭೆಯನ್ನು ಮಾಡಿಕೊಂಡು, ನಾನಾವಿಧವಾದ ಪುರಾಣಗಳಕಥೆಗಳನ್ನು ಕೇಳುತ್ತ ಸುಖವಾಗಿ ಕೂತುಕೊಂಡಿರಲು ; ದ್ರೌಪದಿಯೂ ಸತ್ಯಭಾಮೆಯೂ ಸದ ಪರಸ್ಪರವಾಗಿ ಕೌರವಯಾದವರ ಸಂಬಂಧವಾದ ವಿಚಿತ್ರವಾದ ಕಥಾಪ್ರಸಂಗವನ್ನು ಮಾಡುತ್ತ ವಿನೋದವಾಗಿ ಕೂತುಕೊಂಡಿದ್ದರು. ಆ ಸಮಯದಲ್ಲಿ ಸತ್ರಾಜಿದ್ರಾಜನಿಗೆ ಪುತ್ರಿಯೂ ಶ್ರೀಕೃಷ್ಣನ ಪಟ್ಟದರಾಣಿಯೂ ಆದ ಸತ್ಯಭಾಮೆಯು ದ್ರುಪದರಾಯನ ಮಗಳೂ ಪಾಂಡವರಿಗೆ ಪಟ್ಟಮಹಿಷಿಯೂ ಆದ ದ್ರೌಪದಿಯನ್ನು ನೋಡಿ "ಎಲೆ ದ್ರೌಪದಿ, ಲೋಕಪಾಲಕರಿಗೆ ಸಮಾನರಾಗಿಯೂ ಯೌವನಸಂಪನ್ನರಾಗಿಯೂ ಬಲಾಢ್ಯರಾಗಿಯೂ ಇರುವ ಐದುಮಂದಿ ಪಾಂಡವರು ಯಾವಾಗಲೂ ನಿನ್ನಲ್ಲಿ ಪ್ರೀತಿಯುಳ್ಳವರಾಗಿ ಕೋಪಗೊಳ್ಳದೆ ಇರುವರು. ಯಾತರಿಂದ ಅವರನ್ನು ನೀನು ಸ್ವಾಧೀನ ಮಾಡಿಕೊಂಡು ಅವರ ಪ್ರೀತಿಗೆ ಪಾತ್ರಳಾಗಿರುವೆ? ಇದಕ್ಕಾಗಿ ಉಪವಾಸ ಮೊದಲಾದ ವ್ರತ, ತಪಸ್ಸು, ಸ್ನಾನ, ವಶೀಕರಣಮಂತ್ರ, ಔಷಧ, ವಿದ್ಯೆ, ಮೂಲಿಕೆ, ಜಪ, ಹೋಮ ಮೊದಲಾದವುಗಳು ಇರುವವಲ್ಲವೆ? ಐಶ್ವರ್ಯಪ್ರದಗಳಾಗಿಯೂ ಪತಿಯನ್ನು ವಶಮಾಡಿಕೊಡತಕ್ಕವಾಗಿಯೂ ಇರುವ ಅವುಗಳನ್ನು ನನಗೂ ನೀನು ಉಪದೇಶ ಮಾಡು. ಅವುಗಳಿಂದ ಶ್ರೀಕೃಷ್ಣನೂ ನನ್ನ ಸ್ವಾಧೀನನಾಗುವನು " ಎನಲು ; ಪತಿವ್ರತಾಶಿರೋಮಣಿಯಾದ ದ್ರೌಪದಿಯು ಸತ್ಯಭಾಮೆಯ ಮಾತನ್ನು ಕೇಳಿ, " ಎಲೆ ಸತ್ಯಭಾಮೆ, ದುಷ್ಟಸ್ತ್ರೀಯರು ಪತಿವಶ್ಯಾರ್ಥವಾಗಿ ಜಪಹೋಮಾದಿಗಳನ್ನು ಮಾಡುವರು. ಅಂಥ ಸಮಾಚಾರವನ್ನು ನನ್ನನ್ನು ನೀನು ಕೇಳಬಹುದೆ? ನೀಚರಾದ ಸ್ತ್ರೀಯರು ಮಾಡತಕ್ಕ ಕೃತ್ಯವನ್ನು ನಾನು ಹ್ಯಾಗೆ ನಿನಗೆ ಹೇಳಲಿ? ಇಂಥ ಪ್ರಶ್ನೆಯನ್ನು ಮಾಡುವದು ನಿನ್ನಂಥವರಿಗೆ ಯೋಗ್ಯವಾದದ್ದೆ? ನೀನು ಶ್ರೀಕೃಷ್ಣನಿಗೆ ರಾಣಿಯಾಗಿಯೂ ಪ್ರಿಯಳಾಗಿಯೂ ಇರುವೆ. ಇಂಥ ಪ್ರಶ್ನೆಯನ್ನು ಮಾಡಬಹುದೇ ಎಂದು ನಿನ್ನ ಬುದ್ಧಿಯಿಂದ ನೀನೇ ಯೋಚಿಸು. ಸ್ತ್ರೀಯಾದವಳು ಪತಿವಶ್ಯಾರ್ಥವಾಗಿ ಮಂತ್ರಮೂಲಿಕೆಗಳನ್ನು ಸಂಗ್ರಹಿಸುವದನ್ನು ಪತಿಯು ತಿಳಿದದ್ದೇ ಆದರೆ, ಸರ್ಪವು ವಾಸಮಾಡುವ ಮನೆಯನ್ನು ನೋಡಿ ಹ್ಯಾಗೆ ಭಯಪಡುವನೋ ಹಾಗೆ ಆ ಸ್ತ್ರೀಯನ್ನು ನೋಡಿ ಭಯಪಡುವನು. ಹಾಗೆ ಭಯಪಟ್ಟ ಪತಿಯೊಡನೆ ಸ್ತ್ರೀಗೆ ಸುಖವುಂಟಾದೀತೆ? ಆದ್ದರಿಂದ ಮಂತ್ರೌಷಧಾದಿಗಳಿಂದ ಎಂದಿಗೂ ಪತಿಯು ಸ್ವಾಧೀನನಾಗತಕ್ಕವನಲ್ಲ. ದಂಪತಿಗಳಿಗೆ ದ್ವೇಷವನ್ನುಂಟುಮಾಡಬೇಕೆಂಬ ದ್ರೋಹಿಗಳು ಪತಿಯು ವಶ್ಯನಾಗುವನು ಎಂದು ಸ್ತ್ರೀಯರಿಗೆ ದುರ್ಬೋಧನೆಯನ್ನು ಮಾಡಿ ಮೂಲಿಕೆಗಳನ್ನು ಕೊಡುವರು. ತಿಳಿಯದೆ ಇರತಕ್ಕ ಸ್ತ್ರೀಯರು ಆ ಮೂಲಿಕೆಗಳನ್ನು ಪತಿಗೆ ಕೊಟ್ಟದ್ದೇ ಆದರೆ, ಅದರಿಂದ ಆತನಿಗೆ ದಾರುಣವಾದ ರೋಗವುಂಟಾಗುವದು. ಬಳಿಕ ಆತನು ಆ ಮೂಲಿಕೆಯಿಂದಲೇ ನಷ್ಟನಾಗುವನು. ಪತಿಯು ವಶ್ಯನಾಗಬೇಕೆಂದು ಸ್ತ್ರೀಯರು ಕೊಟ್ಟ ಚೂರ್ಣವನ್ನು ಪುರುಷರು ನಾಲಿಗೆಯಮೇಲೆ ಹಾಕಿಕೊಂಡರೂ, ಅಥವಾ ಮೈಗೆ ಸವರಿಕೊಂಡರೂ, ಅದರಿಂದ ಜಾಗ್ರತೆಯಾಗಿ ಅವರು ಮೃತರಾಗುವರು ; ಇದು ನಿಶ್ಚಯವು. ಇಂಥ ಔಷಧಗಳಿಂದ ಜಲೋದರವೂ ಕುಷ್ಠವೂ ಮುಪ್ಪೂ ಉಂಟಾಗುವವು. ಅಜ್ಞಾನದಿಂದ ಸ್ತ್ರೀಯರು ಪತಿಯು ಸ್ವಾಧೀನನಾಗಬೇಕೆಂದು ಆತನಿಗೆ ಔಷಧಗಳನ್ನು ಹಾಕಿ ಆತನ ಕಣ್ಣು ಕಿವಿಗಳನ್ನು ಹಾಳುಮಾಡುವದಲ್ಲದೆ, ಆತನ ಪುಂಸ್ತ್ವವನ್ನೇ ನಾಶಮಾಡಿಬಿಡುವರು. ಎಲೆ ಸತ್ಯಭಾಮೆ, ಪಾಪಿಷ್ಠರಾದ ಸ್ತ್ರೀಯರು ಪಾಪಿಗಳ ಮಾತನ್ನು ಕೇಳಿ ವೃಥಾ ತಮ್ಮತಮ್ಮ ಪತಿಗಳನ್ನು ಕೊಲ್ಲುವರು. ಸ್ತ್ರೀಯಾದವಳು ಪತಿಗೆ ಅಹಿತವಾದ ಇಂಥ ಕಾರ್ಯವನ್ನು ತಾನೆಂದಿಗೂ ಮಾಡಬಾರದು. ಅಂಥವರ ವೃತ್ತಾಂತವನ್ನು ಬಿಡು. ಮಹಾತ್ಮರಾದ ಪಾಂಡವರಲ್ಲಿ ನಾನು ಯಾವ ರೀತಿಯಿಂದಿರುವೆನೋ ಅದನ್ನು ವಿವರಿಸುವೆನು ಕೇಳು. ನಾನು ಮನಸ್ಸಿನಲ್ಲಿ ಅಸಹನವನ್ನೂ ಅಭಿಮಾನವನ್ನೂ ಬಿಟ್ಟು, ನನ್ನ ಸವತಿಯರೊಡಗೂಡಿದ್ದರೂ, ಪಾಂಡವರನ್ನು ಯಾವಾಗಲೂ ಅವರ ಚಿತ್ತಾನುಸಾರವಾಗಿ ಜಾಗರೂಕಳಾಗಿ ಉಪಚಾರಮಾಡಿಕೊಂಡಿರುವೆನು. ಅವರೇನಾದರೂ ಕೆಟ್ಟಮಾತನ್ನು ಆಡುವರಲ್ಲಾ ಎಂಬ ಶಂಕೆಯುಳ್ಳವಳಾಗಿ, ಅವರ ಎಲ್ಲಾ ನಡವಳಿಕೆಗಳಲ್ಲೂ ಅವರ

ಮನೋಭಾವವನ್ನು ತಿಳಿದು, ಸೂರ್ಯಚಂದ್ರಾಗ್ನಿಗಳಿಗೆ ಸಮರಾಗಿಯೂ ದರ್ಶನಮಾತ್ರದಿಂದ ಶತ್ರುಗಳನ್ನು ಸಂಹಾರಮಾಡತಕ್ಕವರಾಗಿಯೂ ಉಗ್ರವಾದ ಪರಾಕ್ರಮವುಳ್ಳವರಾಗಿಯೂ ಮಹಾರಥಿಕರಾಗಿಯೂ ಇರುವ ಅವರನ್ನು ಶುಶ್ರೂಷೆಮಾಡುತ್ತ, ದೇವತೆಯೇ ಆಗಲಿ ಮನುಷ್ಯನೇ ಆಗಲಿ ಗಂಧರ್ವನೇ ಆಗಲಿ ದಿವ್ಯಾಲಂಕಾರ ಭೂಷಿತನಾಗಿಯೂ ಯೌವನಸ್ಥನಾಗಿಯೂ ರೂಪವಂತನಾಗಿಯೂ ಎದುರಿಗೆ ಬಂದರೂ ಆತನನ್ನು ಕಣ್ಣೆತ್ತಿ ನೋಡದೆ ಇರುವೆನು. ನನ್ನ ಪತಿಗಳು ಸ್ನಾನ ಭೋಜನಾದಿಗಳನ್ನು ಮಾಡದಿದ್ದರೆ ನಾನೂ ಸ್ನಾನ ಭೋಜನಾದಿಗಳನ್ನು ಮಾಡತಕ್ಕವಳಲ್ಲ. ಅವರು ಮತ್ತೊಂದು ಗ್ರಾಮಕ್ಕೇ ಆಗಲಿ ವನಕ್ಕೇ ಆಗಲಿ ಹೋಗಿ ಮನೆಗೆ ಬಂದರೆ, ಆಗ ನಾನು ಪ್ರತ್ಯುತ್ಥಾನವನ್ನು ಮಾಡಿ ಅವರಿಗೆ ಪೀಠವನ್ನು ಕೊಟ್ಟು ಪಾದಪ್ರಕ್ಷಾಳನೆಮಾಡಿ ಸಂತೋಷಪಡಿಸುವೆನು. ಮನೆಯನ್ನು ಗೋಮಯದಿಂದ ಸಾರಿಸಿ, ಕಾಲಕಾಲಕ್ಕೆ ಪತಿಗಳಿಗೆ ಭೋಜನವನ್ನು ಮಾಡಿಸುತ್ತ, ಮನೆಯಲ್ಲಿ ಧಾನ್ಯವನ್ನು ಗೋಪ್ಯವಾಗಿ ಸಂರಕ್ಷಿಸುತ್ತ, ಪತಿಗಳ ಆಜ್ಞೆಯನ್ನು ನಡಿಸುತ್ತ, ಆಲಸ್ಯವನ್ನು ಬಿಟ್ಟು ಅವರಿಗೆ ಅನುಕೂಲೆಯಾಗಿ ದುಷ್ಟಸ್ತ್ರೀಯರ ಸಂಗವನ್ನು ಮಾಡದೆ ಇರುವೆನು. ಯಾರ ಸಂಗಡಲೂ ಪರಿಹಾಸದಿಂದ ಹಾಸ್ಯವಚನಗಳನ್ನು ಆಡದೆ, ಪದೇಪದೇ ಮನೆಯ ಬೀದೀಬಾಗಿಲಿನಲ್ಲಿ ನಿಲ್ಲದೆ, ಕಸದ ಮೇಲೂ ಮನೆಯ ಹಿತ್ತಿಲಿನಲ್ಲಿರುವ ತೋಟದಲ್ಲೂ ಸಹ ಬಹಳಹೊತ್ತು ನಿಲ್ಲದೆ, ಗಟ್ಟಿಯಾಗಿ ನಗುವವನ್ನೂ ರೋಷವನ್ನೂ ಕೋಪವನ್ನೂ ಸಹ ಬಿಟ್ಟಿರುವೆನು. ಯಾವಾಗಲೂ ಸತ್ಯವಾಕ್ಯದಲ್ಲಿಯೂ ಪತಿಶುಶ್ರೂಷೆಯಲ್ಲಿಯೂ ಆಸಕ್ತಳಾಗಿಯೇ ಇರುವೆನು. ಯಾವಾಗ ಪತಿಯು ಪರಸ್ಥಳಕ್ಕೆ ಗೃಹಕೃತ್ಯಾರ್ಥವಾಗಿ ಪ್ರಯಾಣಮಾಡುವನೋ, ಆಗ ನಾನು ಗಂಧ ಪುಷ್ಪ ಮೊದಲಾದ ಅಲಂಕಾರಗಳನ್ನು ಬಿಟ್ಟು ವ್ರತನಿಷ್ಠಳಾಗಿ ಪತಿಯ ಆಗಮನವನ್ನೇ ನಿರೀಕ್ಷಿಸುತ್ತಿರುವೆನು. ಪತಿಯು ಯಾವದನ್ನು ಪಾನಮಾಡದೆಯೂ ಯಾವದನ್ನು ಅಹಾರಮಾಡದೆಯೂ ಇರುವನೋ, ಅದನ್ನು ನಾನೂ ತ್ಯಜಿಸಿಬಿಡುವೆನು. ಯಾವಾಗಲೂ ಪತಿಯು ಉಪದೇಶಮಾಡಿದಂತೆ ನಡೆದುಕೊಳ್ಳುತ್ತ, ಆಭರಣಗಳಿಂದ ಅಲಂಕೃತಳಾಗಿ ಆತನಿಗೆ ಪ್ರಿಯವಾದ ಕಾರ್ಯದಲ್ಲೇ ಆಸಕ್ತಳಾಗುವೆನು. ಕುಟುಂಬಿಗಳಾದವರು ಯಾವ ಯಾವ ಧರ್ಮಗಳನ್ನು ಆಚರಿಸಬೇಕೆಂದು ನಮ್ಮ ಅತ್ತೆಯು ಹೇಳಿರುವಳೋ ಅಂಥ ಧರ್ಮಗಳಲ್ಲಿ ಅಹೋರಾತ್ರವೂ ಜಾಗರೂಕಳಾಗಿದ್ದುಕೊಂಡು ಭಿಕ್ಷೆ, ಬಲಿ, ಶ್ರಾದ್ಧ, ಸ್ಥಾಲೀಪಾಕ, ಅತಿಥಿಸತ್ಕಾರ ಮೊದಲಾದ ಇನ್ನೂ ಯಾವ ಯಾವ ಧರ್ಮಗಳಿರುವವೋ ಅವುಗಳನ್ನೆಲ್ಲಾ ವಿನಯದಿಂದಲೂ ನೇಮದಿಂದಲೂ ಶ್ರದ್ಧೆಯಿಂದಲೂ ಸರ್ವಪ್ರಕಾರದಿಂದಲೂ ಆಚರಿಸುತ್ತ, ಸತ್ಯವಂತರೂ ಧರ್ಮಿಷ್ಠರೂ ಆದ ನನ್ನ ಪತಿಗಳು ಮೃದುವಾಗಿದ್ದರೂ ಸರ್ಪದಂತೆ ಕ್ರೂರವಾಗಿದ್ದರೂ ಅವರ ಮನಸ್ಸನ್ನೇ ಅನುವರ್ತಿಸಿಕೊಂಡು ನಡೆಯುವೆನು. ಎಲೆ ಸತ್ಯಭಾಮೆ, ಸ್ತ್ರೀಯರು ಮಾಡತಕ್ಕ ಸಕಲಧರ್ಮವೂ ಸನಾತನವಾದ ಪತಿಶುಶ್ರೂಷೆಯೆಂದು ನಾನು ತಿಳಿದುಕೊಂಡಿರುವೆನು. ಪತಿಯೇ ದೇವತಾಸ್ವರೂಪನಾಗಿಯೂ ಗತಿಪ್ರದನಾಗಿಯೂ ಇರುವನಾದ್ದರಿಂದ, ಆತನಿಗೆ ಯಾವ ಸ್ತ್ರೀಯುತಾನೆ ವಿರೋಧವನ್ನು ಮಾಡಾಳು? ನಾನು ಪತಿಯನ್ನು ಅತಿಕ್ರಮಿಸಿ ಭೋಜನವನ್ನು ಮಾಡತಕ್ಕವಳಲ್ಲ, ಭೂಷಣಗಳಿಂದ ಅಲಂಕಾರ ಮಾಡಿಕೊಳ್ಳತಕ್ಕವಳಲ್ಲ, ಆತನಿಗೆ ಎದುರುತ್ತರವನ್ನು ಕೊಡತಕ್ಕವಳೂ ಅಲ್ಲ, ಮತ್ತು ಅತ್ತೆಯ ಮಾತನ್ನು ಮೀರಿ ನಡೆಯತಕ್ಕವಳೂ ಅಲ್ಲ. ಪ್ರತಿದಿವಸದಲ್ಲೂ ನಾನು ಜಾಗರೂಕಳಾಗಿದ್ದುಕೊಂಡು ಪತಿಶುಶ್ರೂಷೆಯನ್ನು ಮಾಡತಕ್ಕವಳಾದ್ದರಿಂದ, ನನಗೆ ಪತಿಗಳು ಸ್ವಾಧೀನರಾಗಿರುವರು. ವೀರರಾದ ಮಕ್ಕಳನ್ನು ಪಡೆದ ಅತ್ತೆಯಾದ ಕುಂತೀದೇವಿಯನ್ನು ಆಕೆಯ ಇಚ್ಛಾನುಸಾರವಾಗಿ ನಾನು ಸೇವಿಸಿಕೊಂಡಿರುವೆನು. ಧರ್ಮರಾಯನ ಮನೆಯಲ್ಲಿ ವೈಶ್ವದೇವವು ಆದಬಳಿಕ, ಎಂಟುಸಾವಿರಮಂದಿ ಬ್ರಾಹ್ಮಣರು ನಿರಂತರದಲ್ಲಿಯೂ ಚಿನ್ನದ ಪಾತ್ರೆಯಲ್ಲಿ ಭೋಜನಮಾಡುವರು. ಸ್ನಾತಕವ್ರತವನ್ನು ಮಾಡಿ ಮೂವತ್ತುಮೂವತ್ತುಮಂದಿ ಶಿಷ್ಯರೊಡಗೂಡಿದ ಎಂಭತ್ತೆಂಟುಸಾವಿರಮಂದಿ ಗೃಹಸ್ಥಾಶ್ರಮಿಗಳೂ ಹತ್ತುಸಾವಿರಮಂದಿ ಯತಿಗಳೂ ಸಹ ಭೋಜನಮಾಡುವರು. ಇವರೆಲ್ಲರಿಗೂ ನಾನೊಬ್ಬಳೇ ಅವರವರ ಮರ್ಯಾದಾನುಸಾರವಾಗಿ ಭೋಜನಾಚ್ಛಾದನಗಳಿಂದ ಸತ್ಕಾರಮಾಡುತ್ತಿದ್ದೆನು. ದಿವ್ಯವಾದ ಆಭರಣಗಳಿಂದಲೂ ವಸ್ತ್ರಗಳಿಂದಲೂ ಗಂಧಪುಷ್ಪಗಳಿಂದಲೂ ಅಲಂಕೃತರಾಗಿ ನೃತ್ಯಗೀತಗಳಲ್ಲಿ ಸಮರ್ಥರಾಗಿರುವ ಒಂದು ಲಕ್ಷಮಂದಿ ದಾಸೀಜನರು ಮಹಾತ್ಮನಾದ ಧರ್ಮರಾಯನಿಗೆ ಶುಶ್ರೂಷೆಮಾಡುತ್ತ ,ಅತಿಥಿಸತ್ಕಾರಾರ್ಥವಾಗಿ ಪಾತ್ರಹಸ್ತರಾಗಿ ಯಾವಾಗಲೂ

ಸಿದ್ಧರಾಗಿರುವರು. ಅವರೆಲ್ಲರ ಹೆಸರನ್ನೂ ತಿಳಿದಿರುವ ನಾನು ಇವರಿವರು ಇಂಥಿಂಥ ಕಾರ್ಯವನ್ನು ಮಾಡಿರುವರು ಎಂಬುವದನ್ನೂ ಸಹ ತಿಳಿದು, ಅವರವರಿಗೆ ತಕ್ಕಹಾಗೆ ಭೋಜನಾಚ್ಛಾದನಾದಿಗಳಿಂದ ಅವರೆಲ್ಲರನ್ನೂ ಪೋಷಿಸುತ್ತಿದ್ದೆನು. ಧರ್ಮರಾಯನು ಇಂದ್ರಪ್ರಸ್ಥದಲ್ಲಿ ರಾಜ್ಯವನ್ನಾಳುತ್ತ ವಿನೋದಾರ್ಥವಾಗಿ ಹೊರಕ್ಕೆ ಹೊರಡುವ ಸಮಯದಲ್ಲಿ, ಆತನನ್ನನುಸರಿಸಿ ಒಂದುಲಕ್ಷ ಕುದುರೆಗಳೂ ಹತ್ತುಸಾವಿರ ಆನೆಗಳೂ ಹೊರಡುತ್ತಿದ್ದವು. ಅವುಗಳ ಸಂಖ್ಯೆಯನ್ನು ನಾನು ತಿಳಿದು ಆಜ್ಞೆಯನ್ನು ಕೊಡುತ್ತಿದ್ದೆನು. ಅಂತಃಪುರದಲ್ಲಿರುವ ದಾಸದಾಸೀಜನರು ಮಾಡತಕ್ಕ ಕೆಲಸಗಳನ್ನೂ ಸಹ ನಾನು ತಿಳಿಯುತ್ತಿದ್ದೆನು. ಗೋಪಾಲಕರೂ ಕುರಿಕಾಯುವವರೂ ಸಹ ಮಾಡುವ ಕೆಲಸವನ್ನು ನಾನು ತಿಳಿಯುತ್ತಿದ್ದೆನು. ನಮ್ಮ ರಾಜ್ಯದಲ್ಲಿ ಒಂದು ದಿನಕ್ಕೆ ಆಗತಕ್ಕ ವೆಚ್ಚವನ್ನೂ ಆದಾಯವನ್ನೂ ಸಹ ನಾನು ತಿಳಿಯುತ್ತಿದ್ದೆನು. ಮಹಾತ್ಮರಾದ ಪಾಂಡವರು ಸಕಲಗೃಹಕೃತ್ಯಗಳನ್ನೂ ನನಗೆ ಒಪ್ಪಿಸಿ ತಾವು ರಾಜ್ಯಪರಿಪಾಲನೆಯನ್ನು ಮಾಡುತ್ತಿದ್ದರು. ಅಂಥ ಸಕಲಕಾರ್ಯಭಾರವನ್ನೂ ನಾನು ವಹಿಸಿಕೊಂಡು ಅಹೋರಾತ್ರಿಗಳಲ್ಲಿಯೂ ಸುಖದಲ್ಲಿ ಮನಸ್ಸಿಡದೆ ಕುಟುಂಬಭರಣವನ್ನು ಮಾಡುತ್ತಿದ್ದೆನು. ಧರ್ಮಾತ್ಮರಾದ ನನ್ನ ಪತಿಗಳ ಬಂಡಾರವು ಸಮುದ್ರದಂತೆ ಅನೇಕ ದ್ರವ್ಯಗಳಿಂದ ಪೂರ್ಣವಾಗಿದ್ದದ್ದನ್ನೂ ಸಹ ನಾನು ತಿಳಿದಿದ್ದೆನು. ಹಗಲೂ ರಾತ್ರಿಯೂ ಸಹ ಪತಿಗಳ ಹಸಿವು ಬಾಯಾರಿಕೆಗಳನ್ನು ಪರಿಹರಿಸಿ ಅವರ ಶುಶ್ರೂಷೆಯಲ್ಲಿ ಜಾಗರೂಕಳಾಗಿದ್ದ ನನಗೆ ಹಗಲು ರಾತ್ರಿಗಳು ಸಮವಾಗಿಯೇ ಇದ್ದವು. ಪತಿಗಳು ಮಲಗಿದಮೇಲೆ ನಾನು ನಿದ್ರೆಮಾಡುತ್ತ ಅವರು ಏಳುವದಕ್ಕಿಂತಲೂ ಮೊದಲೇ ಏಳುವೆನು. ಹೀಗಿರತಕ್ಕವಳಾದ್ದರಿಂದಲೇ ನನ್ನ ಗಂಡಂದಿರು ನನ್ನಲ್ಲಿ ಪ್ರೀತಿಯನ್ನು ಮಾಡುವರು. ಎಲೆ ಸತ್ಯಭಾಮೆ, ಇದೇ ಪತಿವಶ್ಯಕ್ಕೆ ಮುಖ್ಯವೆಂದು ನಾನು ತಿಳಿದಿರುವೆನು. ದುಷ್ಟಸ್ತ್ರೀಯರ ನಡತೆಯನ್ನು ನಾನು ಅಪೇಕ್ಷಿಸತಕ್ಕವಳೂ ಅಲ್ಲ, ಹಾಗೆ ನಡೆಯತಕ್ಕವಳೂ ಅಲ್ಲ" ಎಂದು ನುಡಿದಳು. ಬಳಿಕ ಸತ್ಯಭಾಮೆಯು ದ್ರೌಪದಿ ಹೇಳಿದ ಮಾತುಗಳನ್ನು ಕೇಳಿ ಪತಿವ್ರತಾಶಿರೋಮಣಿಯಾದ ಆಕೆಯನ್ನು ಕುರಿತು, "ಎಲೆ ದ್ರೌಪದಿ, ನೀನೇ ಯೋಗ್ಯಳು. ಪರಿಹಾಸಕ್ಕಾಗಿ ನಾನು ನಿನ್ನನ್ನು ಹೀಗೆ ಪ್ರಶ್ನೆಮಾಡಿದೆನು. ನೀನು ನನ್ನನ್ನು ಕ್ಷಮಿಸು" ಎಂದು ನುಡಿದಳು.

---

## ೨೩೩ನೇ ಅಧ್ಯಾಯ.—ದ್ರೌಪದೀಸತ್ಯಭಾಮಾಸಂವಾದ.—(ದ್ರೌಪದಿಯು ಕರ್ತವ್ಯವನ್ನು ತಿಳಿಸುವಿಕೆ.)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಬಳಿಕ ದ್ರೌಪದಿಯು ಸತ್ಯಭಾಮೆಯನ್ನು ಕುರಿತು, "ಎಲೆ ಸತ್ಯಭಾಮೆ, ಪತಿಯ ಮನಸ್ಸನ್ನು ಸ್ವಾಧೀನಮಾಡಿಕೊಳ್ಳುವದಕ್ಕಾಗಿ ಅಜ್ಞಾನನಿವರ್ತಕವಾದ ಒಂದು ಮಾರ್ಗವನ್ನು ಹೇಳುವೆನು ಕೇಳು: ಆ ಮಾರ್ಗದಲ್ಲಿ ನೀನು ಹೋದದ್ದೇ ಆದರೆ ನಿನ್ನ ಪತಿಯು ಇತರ ಸ್ತ್ರೀಯರಲ್ಲಿ ಮನಸ್ಸಿಡದೆ ನಿನ್ನಲ್ಲೇ ಆಸಕ್ತನಾಗಿರುವನು. ಮೂರು ಲೋಕದಲ್ಲಿಯೂ ಸ್ತ್ರೀಯರಿಗೆ ಪತಿಗೆ ಸಮಾನವಾದ ದೈವವು ಯಾವದೂ ಇಲ್ಲ. ಪತಿಯು ಸಂತುಷ್ಟನಾಗಿದ್ದರೆ ಸ್ತ್ರೀಯರಿಗೆ ಸಕಲೇಷ್ಟವೂ ಸಿದ್ಧಿಸುವದು. ಆತನು ಕೋಪಗೊಂಡರೆ ಸಂಹಾರವನ್ನೇ ಮಾಡುವನು. ಸ್ತ್ರೀಯರಿಗೆ ಪತಿಯಿಂದಲೇ ಸಂತಾನ, ನಾನಾವಿಧವಾದ ಸುಖ, ಶಯನ, ಆಸನ, ಭೋಜನ, ವಸ್ತ್ರ, ಪುಷ್ಪ, ಗಂಧ, ಉತ್ತಮವಾದ ನೋಟ, ಯಶಸ್ಸು, ಸ್ವರ್ಗ ಇವೆಲ್ಲವೂ ಪ್ರಾಪ್ತಿಸುವವು. ಎಲೆ ಸತ್ಯಭಾಮೆ, ಸುಖದಿಂದ ಸುಖವು ಲಭಿಸಲಾರದು. ಶ್ರಮಪಟ್ಟರೆ ಸುಖವುಂಟಾಗುವದು. ಆದ್ದರಿಂದ ನೀನು ಪತಿಯು ಪ್ರೀತಿಮಾಡಲಿ ಎಂದು ಒಳ್ಳೇ ಮನಸ್ಸಿನಿಂದಲೂ ವಿಶ್ವಾಸದಿಂದಲೂ ಕಾಯಕ್ಲೇಶವನ್ನು ಮಾಡುತ್ತ, ಆತನ ಶುಶ್ರೂಷೆಯಲ್ಲೇ ಆಸಕ್ತಳಾಗಿ, ಆತನಿಗೆ ಭೋಜನ, ಗಂಧ, ಮಾಲಿಕೆ, ಮೊದಲಾದವುಗಳಿಂದ ಉಪಚಾರಗಳನ್ನು ಮಾಡುತ್ತ ದಾಕ್ಷಿಣ್ಯಪರಳಾಗಿರು. ಇದನ್ನು ತಿಳಿದು ಪತಿಯು ನಿನ್ನಧೀನನಾಗುವನು. ಗಂಡನು ಮನೆಯ ಬಾಗಿಲಿಗೆ ಬಂದ ಶಬ್ದವನ್ನು ಕೇಳಿ ಮನೆಯ ಮಧ್ಯದಲ್ಲಿ ನಿಲ್ಲುವಳಾಗು. ಆತನು ಒಳಕ್ಕೆ ಬಂದದ್ದನ್ನು ನೋಡಿ ಪೀಠವನ್ನುಕೊಟ್ಟು ಪಾದವನ್ನುತೊಳೆದು ಸತ್ಕರಿಸು.

ಆತನು ದಾಸಿಯರಿಗೆ ಯಾವದಾದರೂ ಕಾರ್ಯವನ್ನು ಹೇಳಿದರೆ, ನೀನೇ ಎದ್ದುಹೋಗಿ ಆ ಕಾರ್ಯವನ್ನು ಮಾಡು. ಇದನ್ನು ತಿಳಿದು ನಿನ್ನ ಪತಿಯು ನಿನಗೆ ಸ್ವಾಧೀನನಾಗುವನು. ನಿನ್ನ ಸಮೀಪದಲ್ಲಿ ಪತಿಯು ಯಾವದಾದರೂ ಮಾತನಾಡಿದರೆ ಅದನ್ನು ಗೋಪ್ಯಮಾಡಿಕೊಂಡಿರು. ನಿನ್ನ ಸವತಿಯು ಪತಿಯ ಸಂಗಡ ಏನಾದರೂ ಹೇಳಿದರೆ, ಅದಕ್ಕೆ ನೀನು ದ್ವೇಷಮಾಡಬೇಡ. ನಿನ್ನ ಪತಿಗೆ ಪ್ರಿಯರಾದವರನ್ನು ಉಪಚಾರದಿಂದ ಭೋಜನಮಾಡಿಸು. ನಿನ್ನ ಪತಿಯ ಸಂಗಡ ಕುಹಕಮಾಡಿ ದ್ವೇಷಮಾಡತಕ್ಕವರನ್ನು ನೀನು ತ್ಯಜಿಸು. ಮೌನವನ್ನು ಧರಿಸಿ, ಅಹಂಕಾರವನ್ನೂ ಪ್ರಮಾದವನ್ನೂ ಬಿಟ್ಟು, ಪತಿಯಲ್ಲಿ ನಿನ್ನ ಅಭಿಪ್ರಾಯವನ್ನು ತೋರಿಸು. ವಿಜನಸ್ಥಳದಲ್ಲಿ ಪ್ರದ್ಯುಮ್ನ ಸಾಂಬ ಮೊದಲಾದ ರಾಜಕುಮಾರಕರ ಸಂಗಡ ಇರಬೇಡ. ಸತ್ಕುಲಪ್ರಸೂತೆಯರಾಗಿಯೂ ಪತಿವ್ರತೆಯರಾಗಿಯೂ ಇರುವ ಸ್ತ್ರೀಯರ ಸಂಗಡ ಸ್ನೇಹವನ್ನು ಮಾಡು. ಕ್ರೂರರಾಗಿಯೂ ಮತ್ತೊಬ್ಬರನ್ನು ತಿರಸ್ಕರಿಸುವರಾಗಿಯೂ ತಿಂಡಿಪೋತರಾಗಿಯೂ ಚಪಲೆಯರಾಗಿಯೂ ಕಳ್ಳರಾಗಿಯೂ ಇರುವ ಸ್ತ್ರೀಯರ ಸಂಗಡ ಮಾತನಾಡಬೇಡ. ಹೀಗೆ ನಡೆಯುವದು ಭಾಗ್ಯಕ್ಕೂ ಯಶಸ್ಸಿಗೂ ಸ್ವರ್ಗಕ್ಕೂ ಕಾರಣವಾದದ್ದು. ಆದ್ದರಿಂದ ನೀನು ಈ ರೀತಿಯಾಗಿ ನಡೆಯುತ್ತ ದಿವ್ಯವಾದ ಗಂಧ, ಪುಷ್ಪ, ಆಭರಣ, ವಸ್ತ್ರ ಮೊದಲಾದವುಗಳಿಂದ ಅಲಂಕೃತೆಯಾಗಿ ಪತಿಯಾದ ಶ್ರೀಕೃಷ್ಣನನ್ನಾರಾಧಿಸು" ಎಂದು ದ್ರೌಪದಿಯು ಸತ್ಯಭಾಮೆಗೆ ಹೇಳಿದಳು.

## ೨೩೪ನೇ ಅಧ್ಯಾಯ.—ಸತ್ಯಭಾಮಾ ಕೃಷ್ಣಾಗಮನ.

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೇ, ಶ್ರೀಕೃಷ್ಣನು ಮಾರ್ಕಂಡೇಯ ಮೊದಲಾದ ಬ್ರಾಹ್ಮಣರಿಂದಲೂ ಪಾಂಡವರಿಂದಲೂ ಕೂಡಿ ಮಾತನಾಡುತ್ತ ನಾನಾವಿಧವಾದ ಇಷ್ಟವಾದ ಕಥೆಗಳಿಂದ ಕೆಲವು ಕಾಲವನ್ನು ಕಳೆದು, ಪಾಂಡವರ ಅನುಜ್ಞೆಯನ್ನು ತೆಗೆದುಕೊಂಡು, ದ್ವಾರಕಾಪಟ್ಟಣಕ್ಕೆ ಹೋಗುವದಕ್ಕಾಗಿ ತನ್ನ ರಥವನ್ನೇರಲಿಚ್ಛಯಿಸಿ ಸತ್ಯಭಾಮೆಯನ್ನು ಕರೆದನು. ಆಗ ಸತ್ಯಭಾಮೆಯು ದ್ರೌಪದಿಯನ್ನು ಆಲಿಂಗನೆಮಾಡಿಕೊಂಡು "ಎಲೆ ದ್ರೌಪದಿ, ಮನಸ್ಸಿನಲ್ಲಿ ಕಳವಳಪಡದೆ ಇರು, ನಿದ್ರೆಗೆಡಬೇಡ. ದೇವತೆಗಳಿಗೆ ಸಮಾನರಾದ ಪಾಂಡವರು ಜಯಿಸಿದ ಭೂಮಂಡಲಾಧಿಪತ್ಯವನ್ನು ನೀನು ಹೊಂದುವೆ. ಹೀಗೆ ಪೂಜ್ಯವಾದ ಲಕ್ಷಣವೂ ಶೀಲವೂ ಉಳ್ಳ ನಿನ್ನಂಥವರು ಬಹುಕಾಲ ಕ್ಲೇಶಪಡುವದಿಲ್ಲ. ಅವಶ್ಯವಾಗಿ ನೀನು ಪತಿಗಳೊಳಗೂಡಿ ನಿಷ್ಕಂಟಕವಾದ ಈ ಭೂಮಂಡಲವನ್ನು ಅನುಭವಿಸುವೆ. ಇದನ್ನು ನಾನು ನಿಂಶ್ಚಿತವಾಗಿ ತಿಳಿದಿರುವೆನು. ಧೃತರಾಷ್ಟ್ರನ ಮಕ್ಕಳನ್ನು ಸಂಹರಿಸಿ ಶತ್ರುತ್ವವನ್ನು ಪರಿಹರಿಸಿಕೊಂಡು ಧರ್ಮರಾಯನು ಆಳುವ ರಾಜ್ಯವನ್ನು ನೀನು ಜಾಗ್ರತೆಯಾಗಿ ನೋಡುವೆ. ನೀನು ಅರಣ್ಯಕ್ಕೆ ಬರುವ ಕಾಲದಲ್ಲಿ ಯಾವ ಕೌರವಸ್ತ್ರೀಯರು ನಿನ್ನನ್ನು ಹಾಸ್ಯಮಾಡಿದರೋ ಆ ಸ್ತ್ರೀಯರೆಲ್ಲರೂ ತಮ್ಮ ಸಂಕಲ್ಪವು ನಷ್ಟವಾಗಿ ದುಃಖಪಡುವದನ್ನು ನೀನು ನೋಡುವೆ. ನಿನಗೆ ಇಂಥ ವ್ಯಸನ ಉಂಟಾಗುವದಕ್ಕೆ ಯಾರುಯಾರು ಪ್ರಯತ್ನಮಾಡಿದರೋ ಅವರೆಲ್ಲರೂ ಯಮಲೋಕಕ್ಕೆ ಹೋಗುವರು ಎಂದು ತಿಳಿ. ನಿನ್ನ ಮಕ್ಕಳಾದ ಪ್ರತಿವಿಂಧ್ಯ, ಸುತಸೋಮ,ಶ್ರುತಕರ್ಮ, ಶತಾನೀಕ, ಶ್ರುತಸೇನ ಇವರೆಲ್ಲರೂ ಅಸ್ತ್ರವಿದ್ಯಾ ಪಾರಂಗತರಾಗಿ ಸುಖವಾಗಿರುವರು. ದ್ವಾರಕಾಪಟ್ಟಣದಲ್ಲಿ ಸುಭದ್ರೆಯು ನಿಷ್ಪಕ್ಷಪಾತವಾಗಿ ಅಭಿಮನ್ಯುವಿನಲ್ಲಿ ಪ್ರೀತಿಮಾಡುವಂತೆ ನಿನ್ನ ಮಕ್ಕಳಲ್ಲಿಯೂ ಪ್ರೀತಿಮಾಡುವಳು; ಆ ಮಕ್ಕಳು ದುಃಖಪಟ್ಟರೆ ತಾನೂ ದುಃಖಪಡುವಳು; ಅವರು ಸುಖವಾಗಿದ್ದರೆ ತಾನೂ ಸುಖವಾಗಿರುವಳು. ಅದೇ ಪ್ರಕಾರ ರುಕ್ಮಿಣಿಯೂ ಆ ಮಕ್ಕಳಲ್ಲಿ ಪ್ರೀತಿಯನ್ನು ಮಾಡುವಳು. ಶ್ರೀಕೃಷ್ಣನು ಭಾನು ಮೊದಲಾದ ತನ್ನ ಮಕ್ಕಳಿಗಿಂತಲೂ ನಿನ್ನ ಮಕ್ಕಳನ್ನು ವಿಶೇಷವಾಗಿ ನೋಡುವನು. ನಮ್ಮ ಮಾವನು ನಿತ್ಯವೂ ಆ ಮಕ್ಕಳ ಭೋಜನಾಚ್ಛಾದನಾದಿ ವಿಷಯದಲ್ಲಿ ಜಾಗರೂಕನಾಗಿರುವನು. ಬಲರಾಮ ಮೊದಲಾದ ವೃಷ್ಣ್ಯಂಧಕರು ನಿನ್ನ ಮಕ್ಕಳನ್ನು ಪ್ರದ್ಯುಮ್ನನಿಗೆ ಸಮಾನರನ್ನಾಗಿ ಭಾವಿಸಿ ಅವರಲ್ಲಿ ವಿಶ್ವಾಸಮಾಡುತ್ತಿರುವರು" ಎಂದು ಇದೇ ಮೊದಲಾದ ಶುಭವಾದ ಮಾತುಗಳನ್ನಾಡಿ, ಶ್ರೀಕೃಷ್ಣನ ರಥದ ಬಳಿಗೆ ಹೋಗುವದಕ್ಕೆ ಮನಸ್ಸುಮಾಡಿ ದ್ರೌಪದಿಗೆ

ಪ್ರದಕ್ಷಿಣೆಮಾಡಿ ರಥವನ್ನೇರಿದಳು. ಆ ಸಮಯದಲ್ಲಿ ಶ್ರೀಕೃಷ್ಣನು ನಸುನಕ್ಕು ದ್ರೌಪದಿಯನ್ನು ಸಮಾಧಾನ ಮಾಡಿ, ಶೀಘ್ರಗಾಮಿಗಳಾದ ಕುದುರೆಗಳಿಂದ ಶೋಭಿತವಾದ ರಥದಮೇಲೆ ಕೂತುಕೊಂಡು ದ್ವಾರಕಾನಗರಕ್ಕೆ ತೆರಳಿದನು—ಎಂದು ವೈಶಂಪಾಯನಮುನೀಂದ್ರನು ಜನಮೇಜಯರಾಯನಿಗೆ ಹೇಳಿದನು.

## ೨೩೫ನೇ ಅಧ್ಯಾಯ.—ಘೋಷಯಾತ್ರೆಯ ಗಮನೋಪಾಯ.

ಬಳಿಕ ಜನಮೇಜಯರಾಯನು ವೈಶಂಪಾಯನಮುನೀಂದ್ರನನ್ನು ಕುರಿತು—ಎಲೈ ಮಹಾತ್ಮನೆ, ಪುರುಷಶ್ರೇಷ್ಠರಾದ ಪಾಂಡವರು ವನವಾಸದಲ್ಲಿ ಚಳಿ ಗಾಳಿ ಬಿಸಲುಗಳಿಂದ ಕೃಶರಾಗಿ ಪುಣ್ಯತಮವಾದ ದ್ವೈತವನದ ಸರಸ್ಸನ್ನು ಹೊಂದಿ ಏನುಮಾಡಿದರು?—ಎನಲು, ವೈಶಂಪಾಯನಮುನೀಂದ್ರನು—ಎಲೈ ರಾಯನೇ ಕೇಳು, ನಿಮ್ಮ ಪಿತಾಮಹರಾದ ಪಾಂಡವರು ದ್ವೈತವನದ ಸರೋವರವನ್ನು ಹೊಂದಿ, ತಮ್ಮ ಪರಿವಾರಗಳನ್ನು ಬಿಟ್ಟು ಬೇರೇ ವೇಷವನ್ನು ಧರಿಸಿ, ರಮ್ಯವಾದ ವನಗಳನ್ನೂ ಪುಣ್ಯತಮವಾದ ನದಿಗಳನ್ನೂ ಪರ್ವತಪ್ರದೇಶಗಳನ್ನೂ ನೋಡುತ್ತ, ಅಲ್ಲಲ್ಲಿ ವಿಹರಿಸುತ್ತ ವಾಸಮಾಡುತ್ತಿರಲು; ವೇದಾಧ್ಯಯನಸಂಪನ್ನರಾದ ಪುರಾತನರಾದ ತಪೋಧನರಾದ ಋಷಿಗಳು ಅವರ ಬಳಿಗೆ ಬಂದರು. ಆಗ ಪಾಂಡವರು ಆ ಮಹರ್ಷಿಗಳನ್ನು ಅರ್ಘ್ಯಪಾದ್ಯಾದಿಗಳಿಂದ ಸತ್ಕರಿಸಿ ಅವರೊಡನೆ ಸತ್ಕಥಾಲಾಪಗಳನ್ನು ಮಾಡುತ್ತಿದ್ದರು. ಇತ್ತಲು ವಿಚಿತ್ರವಾದ ಕಥಾಪ್ರಸಂಗದಲ್ಲಿ ಚತುರನಾದ ಒಬ್ಬ ಬ್ರಾಹ್ಮಣನು ಪುತ್ರರೊಡಗೂಡಿದ ಧೃತರಾಷ್ಟ್ರರಾಯನ ಬಳಿಗೆ ಹೋಗಿ ಆತನಿಂದ ಸತ್ಕೃತನಾಗಿ ಪೀಠದ ಮೇಲೆ ಕುಳಿತುಕೊಂಡನು. ಬಳಿಕ ಧೃತರಾಷ್ಟ್ರರಾಯನು ಪಾಂಡವರ ವೃತ್ತಾಂತವನ್ನು ಕೇಳಬೇಕೆಂದು ಆತನನ್ನು ಪ್ರಶ್ನೆಮಾಡಲು, ಆ ಬ್ರಾಹ್ಮಣನು "ಎಲೈ ಧೃತರಾಷ್ಟ್ರರಾಯನೆ, ಯಮ, ವಾಯು, ಇಂದ್ರ, ಅಶ್ವಿನೀದೇವತೆಗಳಿಂದ ಜನಿಸಿದ ಪಾಂಡವರು ವನವಾಸದಲ್ಲಿ ಬಿಸಲು, ಗಾಳಿ, ಚಳಿ, ಮಳೆ ಮೊದಲಾದವುಗಳಿಂದ ಪೀಡಿತರಾಗಿ ದುಃಖಪಡುತ್ತ ಕೃಶರಾಗಿರುವರು. ವೀರಪತ್ನಿಯಾದ ದ್ರೌಪದಿಯು ವನದಲ್ಲಿ ಕ್ಲೇಶಪಡುತ್ತ ಅನಾಥರಂತಿರುವಳು" ಎಂದನು. ಅದನ್ನು ಕೇಳಿ ಧೃತರಾಷ್ಟ್ರನು ಕೃಪಾಯುಕ್ತನಾಗಿ ಸಂತಾಪಪಡುತ್ತ, ದುಃಖನದಿಯಲ್ಲಿ ಮುಳುಗಿ ದೀನನಾಗಿ ನಿಟ್ಟುಸುರನ್ನು ಬಿಟ್ಟು, ಹಾಗೆಯೇ ಧೈರ್ಯವನ್ನು ಹೊಂದಿ, ಸರ್ವಪ್ರಕಾರದಿಂದಲೂ ನನ್ನಿಂದಲೇ ಪಾಂಡವರಿಗೆ ಇಂಥಾ ದುರ್ದಶೆಯು ಪ್ರಾಪ್ತವಾಯಿತು ಎಂದು ಚಿಂತಿಸಿ "ಸತ್ಯಸಂಧನಾಗಿಯೂ ಶುಚಿರ್ಭೂತನಾಗಿಯೂ ನಮ್ಮ ಪುತ್ರರಲ್ಲಿ ಜ್ಯೇಷ್ಠನಾಗಿಯೂ ಶ್ರೇಷ್ಠಸ್ವಭಾವವುಳ್ಳವನಾಗಿಯೂ ಇರುವ ಧರ್ಮರಾಯನು ಪೂರ್ವದಲ್ಲಿ ದಿವ್ಯವಾದ ಹಂಸತೂಲಿಕಾ ತಲ್ಪದಮೇಲೆ ಮಲಗಿಕೊಳ್ಳುತ್ತಿದ್ದು, ಈಗ ಹ್ಯಾಗೆ ಅರಣ್ಯದ ಭೂಮಿಯಮೇಲೆ ಮಲಗುವನು? ಮತ್ತು ಆತನು ಇಂದ್ರನಿಗೆ ಸಮನಾಗಿ ರಾಜ್ಯಭಾರವನ್ನು ವಹಿಸಿದ್ದ ಕಾಲದಲ್ಲಿ ಸೂತ, ಮಾಗಧ, ವಂದಿಗಳ ಸ್ತೋತ್ರಪಾಠಗಳಿಂದ ಅಪರರಾತ್ರಿಯಲ್ಲಿ ಎಚ್ಚರವನ್ನು ಪಡೆಯುತ್ತಿದ್ದನು. ಈಗ ಆತನು ಭೂಮಿಯಮೇಲೆ ಮಲಗಿ ಪಕ್ಷಿಗಳ ಧ್ವನಿಯಿಂದ ಹ್ಯಾಗೆ ಎಚ್ಚರವನ್ನು ಪಡೆಯುವನು? ಸುಖಪಡುವದಕ್ಕೆ ಯೋಗ್ಯನಾದ ಭೀಮಸೇನನು ವನವಾಸದಲ್ಲಿ ಬಿಸಲು ಗಾಳಿಗಳಿಂದ ಕೃಶನಾಗಿ ಕೋಪದಿಂದ ಯುಕ್ತನಾಗಿ ದ್ರೌಪದಿಯ ಸಮಕ್ಷದಲ್ಲಿ ಅರಣ್ಯದ ಭೂಮಿಯಲ್ಲಿ ಹ್ಯಾಗೆ ನಿದ್ರೆಮಾಡುವನು? ಆ ಅರ್ಜುನನು ಅರಣ್ಯದಲ್ಲಿ ಕ್ಲೇಶಪಡುವ ಧರ್ಮ ಭೀಮ ನಕುಲಸಹದೇವ ದ್ರೌಪದಿಯರನ್ನು ನೋಡಿ ನಿದ್ರೆಯನ್ನೇ ಮಾಡದೆ ಇರಬಹುದು! ಇದು ನಿಶ್ಚಯ. ಸುಖಾರ್ಹರಾಗಿಯೂ ದೇವತೆಗಳಂತೆ ಸುಂದರರಾಗಿಯೂ ಇರುವ ನಕುಲಸಹದೇವರು ಧರ್ಮಕ್ಕೂ ಸತ್ಯಕ್ಕೂ ಕಟ್ಟುಬಿದ್ದು ಶಾಂತಿಯನ್ನು ಹೊಂದದೆ ಅರಣ್ಯದಲ್ಲಿ ನಿಶ್ಚಯವಾಗಿ ಜಾಗರಣೆಯನ್ನು ಮಾಡುತ್ತಿರುವರು. ವಾಯುದೇವನಿಗೆ ಪುತ್ರನೂ ಆತನಿಗೆ ಸಮವಾದ ಬಲವುಳ್ಳವನೂ ಆದ ಭೀಮಸೇನನು ಧರ್ಮರಾಯನೆಂಬ ಧರ್ಮಪಾಶಕ್ಕೆ ಕಟ್ಟುಬಿದ್ದು ನಿಟ್ಟುಸುರುಗಳನ್ನು ಬಿಡುತ್ತ ನಿಶ್ಚಯವಾಗಿ ಕೋಪವನ್ನು ಸಹಿಸಿಕೊಂಡಿರುವನು. ಆತನು ಭೂಮಿಯ ಮೇಲೆ ಹೊರಳಾಡುತ್ತ ನನ್ನ ಮಕ್ಕಳನ್ನು ಸಂಹರಿಸಬೇಕೆಂದು ಅಪೇಕ್ಷಿಸುವನಾದರೂ, ಈಗ ಸತ್ಯದಿಂದಲೂ ಧರ್ಮದಿಂದಲೂ ತಡೆಯಲ್ಪಟ್ಟು ಕಾಲವನ್ನು ನಿರೀಕ್ಷಿಸುತ್ತಿ

ರುವನು. ಧರ್ಮರಾಯನು ದ್ಯೂತದಲ್ಲಿ ವಂಚನೆಯಿಂದ ಸೋತಕಾಲದಲ್ಲಿ ದುಶ್ಶಾಸನನು ಆಡಿದ ಕ್ರೂರವಾದ ಮಾತು, ಅಗ್ನಿಯು ಕಾಷ್ಠವನ್ನು ಸುಡುವಂತೆ, ಭೀಮಸೇನನ ಶರೀರವನ್ನು ಸುಡುತ್ತಿರುವದು. ನನ್ನ ಪುತ್ರರ ವಿಷಯದಲ್ಲಿ ಧರ್ಮರಾಯನೂ ಅರ್ಜುನನೂ ಕೇಡನ್ನು ಚಿಂತಿಸಲಾರರು. ಗಾಳಿಯಿಂದ ಅಗ್ನಿಯು ವೃದ್ಧಿಯಾಗುವಂತೆ, ಅರಣ್ಯವಾಸದಿಂದ ಭೀಮಸೇನನ ಕೋಪವು ಕೌರವರ ವಿಷಯದಲ್ಲಿ ವೃದ್ಧಿಯಾಗುತ್ತಿರುವದು. ಆ ಕೋಪಾಗ್ನಿಯಿಂದ ಜಾಜ್ವಲ್ಯಮಾನನಾದ ಭೀಮಸೇನನು ಕಯ್ಯಿಂದ ಕಯ್ಯನ್ನು ತೀಡಿಕೊಂಡು, ತೀಕ್ಷ್ಣವಾಗಿ ನಿಟ್ಟುಸುರುಗಳನ್ನು ಬಿಡುತ್ತ, ನನ್ನ ಮಕ್ಕಳನ್ನೂ ಮೊಮ್ಮಕ್ಕಳನ್ನೂ ಸುಡುವನಂತೆ ಕಾಣಿಸುವನು. ಭೀಮಾರ್ಜುನರು ಕಾಲಾಂತಕರಿಗೆ ಸಮಾನರಾಗಿ ಯುದ್ಧದಲ್ಲಿ ತೀಕ್ಷ್ಣವಾದ ಬಾಣಗಳನ್ನು ಪ್ರಯೋಗಿಸಿ, ಶತ್ರುಗಳಾದ ದುರ್ಯೋಧನಾದಿಗಳ ಸೈನ್ಯವನ್ನು ನಿಶ್ಶೇಷವಾಗಿ ನಾಶಮಾಡಿಬಿಡುವರು. ದುರ್ಯೋಧನ, ಶಕುನಿ, ಕರ್ಣ, ಮಂದಬುದ್ಧಿಯಾದ ದುಶ್ಶಾಸನ, ಇವರು ನೊಣಗಳಂತೆ ಜೇನುತುಪ್ಪವನ್ನುಮಾತ್ರ ಸವಿಯುವದಕ್ಕೆ ನೋಡಿದರೇ ಹೊರತು ತಾವು ಬಿದ್ದು ಹೋಗುವದನ್ನು ಕಾಣದೆ ಹೋದರು. ಆದ್ದರಿಂದಲೇ ದ್ಯೂತವನ್ನು ಆಶ್ರಯಿಸಿ ಧರ್ಮರಾಯನ ರಾಜ್ಯವನ್ನು ಅಪಹರಿಸಿದರು. ಲೋಕದಲ್ಲಿ ಶುಭಕರ್ಮವನ್ನಾಗಲಿ ಅಶುಭಕರ್ಮವನ್ನಾಗಲಿ ಮಾಡಿದವನು ಅದರ ಫಲವನ್ನು ಹೊಂದದೆ ಹೋಗಲಾರನು. ಆ ಕರ್ಮಫಲವನ್ನು ಹೊಂದಿ ಅದನ್ನು ತಪ್ಪಿಸಿಕೊಳ್ಳುವದು ಹ್ಯಾಗೆತಾನೆ ಆತನಿಗೆ ಶಕ್ಯವಾಗುವದು? ಉತ್ತಮವಾದ ಭೂಮಿಯನ್ನು ಉತ್ತು ಬೀಜವನ್ನು ಬಿತ್ತಿ ಬಳಿಕ ಕಾಲಕ್ಕೆ ಸರಿಯಾಗಿ ವೃಷ್ಟಿಯಾದರೂ ಆ ಬೀಜವು ಫಲಿಸದೆ ಹೋದರೆ, ಆ ವಿಷಯದಲ್ಲಿ ದೈವವೇ ಪ್ರತಿಕೂಲವೆಂದು ಯೋಚಿಸಬೇಕು. ಹಾಗೆ ನನ್ನ ಹಿತೋಪದೇಶವೆಲ್ಲಾ ದುರ್ಯೋಧನಾದಿಗಳಲ್ಲಿ ದೈವಪ್ರತಿಬಂಧದಿಂದ ವ್ಯರ್ಥವಾಗಿ ಹೋಯಿತೆಂದು ನಾನು ಯೋಚಿಸುತ್ತಿರುವೆನು. ದ್ಯೂತದಲ್ಲಿಯೂ ಧರ್ಮರಾಯನು ನ್ಯಾಯಮಾರ್ಗವನ್ನೇ ಅನುಸರಿಸಿದನು. ಪಾಪಾತ್ಮನಾದ ಶಕುನಿಯು ಅಕ್ಷಹೃದಯವನ್ನು ಬಲ್ಲವನಾದ್ದರಿಂದ ವಂಚನೆಯನ್ನು ಮಾಡಿದನು. ನಾನು ಪುತ್ರಾಧೀನನಾಗಿ ಸುಮ್ಮನಿದ್ದೆನು. ಇದರಿಂದ ಈಗ ಕೌರವರಿಗೆ ನಾಶಕಾಲವು ಪ್ರಾಪ್ತವಾಯಿತು. ಯಾರೂ ಪ್ರೇರಿಸದೆ ಹೋದರೂ ಗಾಳಿಯು ತನ್ನಿಷ್ಟಕ್ಕೆತಾನೆ ಬೀಸುವದು. ಗರ್ಭಿಣೀಸ್ತ್ರೀಯರು ಕಾಲಬಂದಾಗ ಹೆರದೆ ಇರರು. ಪ್ರಾತಃಕಾಲವಾಗಲು ರಾತ್ರಿಯು ನಷ್ಟವಾಗುವದು. ರಾತ್ರಿಬರಲು ಹಗಲು ನಷ್ಟವಾಗುವದು. ಇವುಗಳಂತೆ ಕೌರವರು ತಮ್ಮಿಷ್ಟಕ್ಕೆ ತಾವೇ ನಷ್ಟರಾಗುವರು. ದೈವಗತಿಯನ್ನು ಮೀರುವದು ಅಶಕ್ಯವು. ವಿವೇಕಶಾಲಿಯಾದವನು ಅನ್ಯಾಯದಿಂದ ದ್ರವ್ಯಾರ್ಜನೆಯನ್ನು ಯಾತಕ್ಕೆ ಮಾಡುವನು.? ಆದರೆ ಬುದ್ಧಿಶಾಲಿಯಾದವನು ತನಗೆ ದ್ರವ್ಯಾರ್ಜನೆಯ ಕಾಲವು ಪ್ರಾಪ್ತವಾದಾಗ ತನಗೆ ವ್ಯಾಕುಲತೆಯುಂಟಾಗದಂತೆ ಅರ್ಥಸಿದ್ಧಿಯ ಉಪಾಯವನ್ನು ಚಿಂತಿಸಬೇಕು. ಸಂಪಾದಿಸಿದ ದ್ರವ್ಯವನ್ನು, ಬಿದರಿನ ಪಾತ್ರೆಯು ಭಿನ್ನವಾಗುವಂತೆ ಭಿನ್ನವಾಗದಂತೆಯೂ, ಹಸೀಗಡಿಗೆಯಲ್ಲಿರುವ ನೀರು ಸೋರಿಹೋಗುವಂತೆ ಸೋರಿಹೋಗದಂತೆಯೂ, ಪಾತ್ರೆಯಲ್ಲಿರುವ ನೀರನ್ನು ಧಾರೆಯಾಗಿ ಬಿಡುತ್ತಿದ್ದರೆ ಕಡಮೆಯಾಗುವಂತೆ ಕಡಮೆಯಾಗದಂತೆಯೂ ರಕ್ಷಿಸಬೇಕು. ಹಾಗೆ ರಕ್ಷಿಸದೆ ದ್ರವ್ಯವನ್ನು ಚೆಲ್ಲಿದರೆ ನಿಜವಾಗಿ ನಷ್ಟವಾಗುವದು. ಈಗ ದೈವಪ್ರತಿಕೂಲತೆಯಿಂದಲೇ ನಮ್ಮ ದ್ರವ್ಯಕ್ಕೆ ನಾಶಕಾಲವು ಪ್ರಾಪ್ತವಾಗಿರುವದು. ಎಲೈ ಬ್ರಾಹ್ಮಣನೆ, ಅರ್ಜುನನು ಅರಣ್ಯದಿಂದ ಇಂದ್ರಲೋಕಕ್ಕೆ ಹೋಗಿ ನಾಲ್ಕು ವಿಧವಾದ ದಿವ್ಯಾಸ್ತ್ರಗಳನ್ನು ತಿಳಿದುಕೊಂಡು ಈ ಲೋಕಕ್ಕೆ ಬಂದನು. ಈಗ ನಮ್ಮ ಪುತ್ರರಾದ ದುರ್ಯೋಧನಾದಿಗಳು ಮರಣಾಭಿಮುಖರಾಗಿರುವದನ್ನು ತಿಳಿದಿರುವ ಅರ್ಜುನನ ಹೊರತು ಮತ್ತೊಬ್ಬ ಪುರುಷನು ಯಾವನು ತಾನೇ ಸ್ವಶರೀರನಾಗಿ ಸ್ವರ್ಗಕ್ಕೆ ಹೋಗಿ ಮರಳಿ ಭೂಲೋಕಕ್ಕೆ ಬರಲು ಸಮರ್ಥನಾಗುವನು? ಧನುರ್ಧಾರಿಯಾದ ಅರ್ಜುನನು ಎರಡು ಕಯ್ಯಿಗಳಿಂದಲೂ ಭಯಂಕರವಾದ ಗಾಂಡೀವವನ್ನು ಧರಿಸಿ ದಿವ್ಯಾಸ್ತ್ರಗಳನ್ನು ಪ್ರಯೋಗಿಸುವನು. ಆ ಅರ್ಜುನನ ಪರಾಕ್ರಮವನ್ನೂ ಗಾಂಡೀವಧನುಸ್ಸಿನ ಶಕ್ತಿಯನ್ನೂ ಆತನ ಅಸ್ತ್ರಗಳ ತೇಜಸ್ಸನ್ನೂ ಯಾರು ಸಹಿಸುವರು?" ಎಂದು ನುಡಿದನು. ಹೀಗೆ ಧೃತರಾಷ್ಟ್ರನು ನುಡಿದ ಮಾತನ್ನು ಶಕುನಿಯು ಕೇಳಿ, ಕರ್ಣ ದುರ್ಯೋಧನರ ಬಳಿಗೆ ಬಂದು ಅದೆಲ್ಲವನ್ನೂ ಏಕಾಂತದಲ್ಲಿ ಅವರಿಗೆ ತಿಳುಹಿಸಿದನು. ಮಂದಬುದ್ಧಿಯಾದ ದುರ್ಯೋಧನನು ಅದನ್ನು ಕೇಳಿ ಸ್ವಲ್ಪವೂ ಚಿಂತಿಸದೆ ಹೋದನು.

## ೨೩೮ನೇ ಅಧ್ಯಾಯ.—ಘೋಷಯಾತ್ರೆ—(ದ್ವೈತವನ ಪ್ರವೇಶದ ಕಥೆ.)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಶಕುನಿಯೂ ಕರ್ಣನೂ ಧೃತರಾಷ್ಟ್ರರಾಯನು ಆಡಿದ ಮಾತನ್ನು ಕೇಳಿ ದುರ್ಯೋಧನನನ್ನು ಕುರಿತು, "ಎಲೈ ದುರ್ಯೋಧನನೆ, ನೀನು ನಿನ್ನ ಪರಾಕ್ರಮದಿಂದ ಪಾಂಡವರನ್ನು ವನಕ್ಕೆ ಕಳುಹಿಸಿದೆ. ಈಗ ನೀನು ಸ್ವರ್ಗದಲ್ಲಿ ಇಂದ್ರನು ಹ್ಯಾಗೆ ರಾಜ್ಯವನ್ನು ಆಳುವನೋ ಹಾಗೆ ರಾಜ್ಯವನ್ನನುಭವಿಸು. ಇನ್ನುಮೇಲೆ ನಾಲ್ಕು ದಿಕ್ಕಿನಲ್ಲಿರುವ ರಾಜರೆಲ್ಲರೂ ನಿನಗೆ ಕಪ್ಪವನ್ನು ಕೊಡತಕ್ಕವರಾದರು. ಮೊದಲು ಯಾವ ಸಂಪತ್ತು ಪಾಂಡವರಲ್ಲಿ ಪ್ರಕಾಶಿಸುತ್ತಿತ್ತೋ ಆ ಸಂಪತ್ತು, ತಮ್ಮಂದಿರೊಡಗೂಡಿದ ನಿನ್ನನ್ನು ಈಗ ಹೊಂದಿ ಪ್ರಕಾಶಿಸುತ್ತಿರುವದು. ಇಂದ್ರಪ್ರಸ್ಥದಲ್ಲಿ ಪ್ರಕಾಶಮಾನವಾಗಿದ್ದ ಧರ್ಮರಾಯನ ಐಶ್ವರ್ಯವು ಈಗ ನಿನ್ನಲ್ಲಿ ನೆಲೆಗೊಂಡಿತು. ಎಲೈ ದುರ್ಯೋಧನನೆ, ನಿನ್ನ ಶತ್ರುಗಳಾದ ಪಾಂಡವರು ಬಹುಕಾಲ ದುಃಖಪಡಲಾರದ್ದರಿಂದ ಅವರೂ ನಿನ್ನಧೀನರಾಗಿಬಿಡುವರು. ಸಕಲ ರಾಜರೂ ನಿನ್ನ ಆಜ್ಞಾಧಾರಕರಾಗಿ ನೀನು ಹೇಳಿದ ಕಾರ್ಯವನ್ನು ಮಾಡುವದಕ್ಕೆ ಸಿದ್ಧರಾಗಿರುವರು; ಮತ್ತು ಪರ್ವತ, ನದಿ, ವನ, ಗ್ರಾಮ, ನಗರ ಮೊದಲಾದವುಗಳಿಂದ ಶೋಭಿಸುವ ಭೂಮಂಡಲವೆಲ್ಲವೂ ನಿನ್ನಧೀನವಾಗಿರುವದು. ನೀನು ಬ್ರಾಹ್ಮಣರ ಸ್ತೋತ್ರಕ್ಕೆ ಪಾತ್ರನಾಗಿ, ಸಮಸ್ತ ರಾಜರಿಂದಲೂ ಪೂಜಿತನಾಗಿ, ಸ್ವರ್ಗದಲ್ಲಿ ದೇವತೆಗಳೊಡಗೂಡಿದ ತೇಜೋವಂತನಾದ ಇಂದ್ರನಂತೆ ಶೋಭಿಸುತ್ತಿರುವೆ. ನಕ್ಷತ್ರಗಳಿಂದ ಕೂಡಿದ ಚಂದ್ರನಂತೆ ತಮ್ಮಂದಿರೊಡಗೂಡಿ ಪ್ರಕಾಶಿಸುವ ನಿನ್ನ ಆಜ್ಞೆಯನ್ನು ಮೂಢರಾದ ಪಾಂಡವರು ಅನುವರ್ತಿಸದೆ ಹೋದ್ದರಿಂದ ಐಶ್ವರ್ಯವನ್ನು ಕಳೆದುಕೊಂಡು ಅರಣ್ಯದ ಪಾಲಾದರು. ಎಲೈ ಮಹಾರಾಜನೆ, ಈಗ ಆ ಪಾಂಡವರು ವನವಾಸಿಗಳಾದ ಬ್ರಾಹ್ಮಣರಿಂದ ಕೂಡಿ ದ್ವೈತವನದಲ್ಲಿ ವಾಸಮಾಡುವರೆಂದು ನಾವು ಕೇಳುವೆವು. ಈಗ ರಾಜ್ಯಪದವಿಯಲ್ಲಿರುವ ನೀನು ಸಕಲೈಶ್ವರ್ಯಗಳಿಂದಲೂ ಕೂಡಿ ಸೂರ್ಯನಂತೆ ಮೆರೆಯುತ್ತ, ರಾಜ್ಯಭ್ರಷ್ಟರಾಗಿ ಐಶ್ವರ್ಯವನ್ನು ಕಳೆದುಕೊಂಡು ವನವಾಸವನ್ನು ಮಾಡುತ್ತಿರುವ ಪಾಂಡವರನ್ನು ನೋಡುವದಕ್ಕೆ ಪ್ರಯಾಣಮಾಡು. ಚತುರಂಗಬಲದಿಂದ ಕೂಡಿ ಸಕಲೈಶ್ವರ್ಯಸಂಪನ್ನನಾಗಿ ಯಯಾತಿರಾಯನಂತೆ ನೀನು ಅಲ್ಲಿಗೆ ಬಂದದ್ದನ್ನು ಪಾಂಡವರು ನೋಡಲಿ. ಆ ಸಮಯದಲ್ಲಿ ನಿನ್ನ ಐಶ್ವರ್ಯವನ್ನು ನೋಡಿ ಮಿತ್ರರೆಲ್ಲರೂ ಸಂತೋಷಪಡುವರು; ಶತ್ರುಗಳೆಲ್ಲರೂ ದುಃಖಪಡುವರು. ಹಾಗಾದರೆ ನಿನ್ನ ಐಶ್ವರ್ಯವು ಸಫಲವಾಗುವದು. ಸಮೃದ್ಧಿಯನ್ನು ಪಡೆದವನು ದುರ್ಗತಿಯನ್ನು ಹೊಂದಿದ ಶತ್ರುಗಳನ್ನು ನೋಡಿದರೆ, ಪರ್ವತದ ಮೇಲಿರತಕ್ಕವನು ಭೂಮಿಯ ಮೇಲಿರತಕ್ಕವನನ್ನು ನೋಡಿದ ಹಾಗಾಗುವದು. ಎಲೈ ರಾಯನೆ, ಇದಕ್ಕಿಂತಲೂ ಮತ್ತೊಂದು ಉತ್ತಮವಾದ ಸುಖವುಂಟೆ? ಎಲೈ ದುರ್ಯೋಧನನೆ, ಶತ್ರುಗಳು ದುಃಖಪಡುವದನ್ನು ನೋಡುವದರಿಂದುಂಟಾಗುವ ಸಂತೋಷವು ಪುತ್ರಲಾಭದಿಂದಲೂ ಧನಲಾಭದಿಂದಲೂ ರಾಜ್ಯಲಾಭದಿಂದಲೂ ಸಹ ಆಗಲಾರದು. ಆಶ್ರಮದಲ್ಲಿ ನಾರುಮಡಿಯನ್ನುಟ್ಟಿರುವ ಆ ಅರ್ಜುನನನ್ನು ಐಶ್ವರ್ಯಸಂಪನ್ನನಾದ ನೀನು ನೋಡಿದ್ದೇ ಆದರೆ, ನಿನಗೆ ಅಧಿಕವಾದ ಸಂತೋಷ ಉಂಟಾಗದೆ ಇರಲಾರದು. ನಿನ್ನ ರಾಣಿವಾಸದವರು ದಿವ್ಯವಾದ ವಸ್ತ್ರಾಭರಣಗಳಿಂದ ಅಲಂಕೃತರಾಗಿ ನಾರುಸೀರೆಯನ್ನುಟ್ಟು ದುಃಖಪಡುತ್ತಿರುವ ದ್ರೌಪದಿಯನ್ನು ನೋಡಲಿ. ಅದರಿಂದ ಆಕೆಯು ತನ್ನ ದರಿದ್ರವಾದ ಬಾಳನ್ನು ನಿಂದಿಸಿಕೊಂಡು ಬದುಕುವದರಲ್ಲಿ ವಿರಕ್ತಿಯನ್ನು ಪಡೆಯಲಿ. ಆಕೆಯು ಐಶ್ವರ್ಯಸಂಪನ್ನರಾದ ನಿನ್ನ ರಾಣಿಯರನ್ನು ನೋಡಿ ದ್ಯೂತವಾಡುವಾಗ ಸಭಾಮಧ್ಯದಲ್ಲಿ ಎಷ್ಟು ದುಃಖಪಟ್ಟಳೋ ಅದಕ್ಕಿಂತಲೂ ಅಧಿಕವಾಗಿ ದುಃಖಪಡಲಿ" ಎಂದು ನುಡಿದು ಶಕುನಿಯೂ ಕರ್ಣನೂ ಸುಮ್ಮನಾದರು.

## ೨೩೯ನೇ ಅಧ್ಯಾಯ.—ಘೋಷಯಾತ್ರೆ—(ದ್ವೈತವನ ಸಹಿತ ಪ್ರವೇಶದ ಕಥೆ.)

ವೈಶಂಪಾಯನಮುನೀಂದ್ರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಕರ್ಣನ ಮಾತನ್ನು ಕೇಳಿ ದುರ್ಯೋಧನನು ಸಂತೋಷಪಟ್ಟು ಹಾಗೇ ದೀನನಾಗಿ "ಎಲೈ ಕರ್ಣನೆ, ಇವೆಲ್ಲವೂ

ನನ್ನ ಮನಸ್ಸಿನಲ್ಲೇ ಇತ್ತು. ಅದನ್ನೇ ನೀನು ಹೇಳಿದೆ. ಆದರೆ ಧೃತರಾಷ್ಟ್ರನು ಪಾಂಡವರು ತಪೋಧಿಕರೆಂದೂ ವೀರರೆಂದೂ ನಮಗಿಂತಲೂ ಶ್ರೇಷ್ಠರೆಂದೂ ಅವರನ್ನು ಕುರಿತು ವ್ಯಸನಪಡುತ್ತಿರುವನು. ಆದ್ದರಿಂದ ನಾವು ವೈಭವದಿಂದ ಪಾಂಡವರ ಬಳಿಗೆ ಹೋಗಬೇಕೆಂದರೆ ನಮಗೆ ಅಪ್ಪಣೆಯನ್ನು ಕೊಡಲಾರನು. ನಾವು ಈ ರೀತಿಯಾಗಿ ಆಲೋಚಿಸಿರುವದನ್ನು ಆತನು ತಿಳಿದದ್ದೇ ಆದರೆ ಮುಂದೆ ಆಗತಕ್ಕದ್ದನ್ನು ತಿಳಿದು ಎಂದಿಗೂ ನಮಗೆ ಅಪ್ಪಣೆಯನ್ನು ಕೊಡಲಾರನು. ನಾವು ದ್ವೈತವನಕ್ಕೆ ಹೋಗಬೇಕಾದರೆ ವನವಾಸಮಾಡುತ್ತಿರುವ ಪಾಂಡವರಿಗೆ ಅಪಮಾನವನ್ನು ಮಾಡುವದೊಂದೇ ಹೊರತು ನಮಗೆ ಮತ್ತಾವ ಕಾರ್ಯವೂ ಅಲ್ಲಿಲ್ಲ. ಆದರೆ ದ್ಯೂತಕಾಲದಲ್ಲಿ ನನ್ನನ್ನೂ ನಿನ್ನನ್ನೂ ಶಕುನಿಯನ್ನೂ ಸಹ ಕುರಿತು ವಿದುರನು ಹೇಳಿದ ಮಾತುಗಳನ್ನು ನೀನು ತಿಳಿದೇ ಇರುವೆ. ಆ ಮಾತುಗಳನ್ನೂ ಧೃತರಾಷ್ಟ್ರರಾಯನು ರೋದನಮಾಡುವದನ್ನೂ ಸಹ ಚಿಂತಿಸಿ, ಪಾಂಡವರ ಬಳಿಗೆ ಹೋಗುವ ವಿಷಯದಲ್ಲಿಯೂ ಇಲ್ಲಿಯೇ ಇರುವ ವಿಷಯದಲ್ಲಿಯೂ ಸಹ ನಾನು ನಿಶ್ಚಯವನ್ನು ಹೊಂದದೆ ಇರುವೆನು. ದ್ರೌಪದಿಯೊಡಗೂಡಿ ವನದಲ್ಲಿ ಕ್ಲೇಶಪಡತಕ್ಕ ಭೀಮಾರ್ಜುನರನ್ನು ನೋಡಬೇಕೆಂದು ನನಗೂ ಕುತೂಹಲವಿರುವದು. ಅರಣ್ಯದಲ್ಲಿ ನಾರಸೀರೆಯನ್ನುಟ್ಟು ಕ್ಲೇಶಪಡುತ್ತಿರುವ ಪಾಂಡವರನ್ನು ನೋಡಿದ್ದರಿಂದ ಉಂಟಾಗತಕ್ಕ ಸಂತೋಷವು ರಾಜ್ಯಲಾಭದಿಂದಲೂ ಆಗಲಾರದೆಂದು ನಾನೂ ತಿಳಿದಿರುವೆನು. ದ್ರುಪದರಾಯನ ಮಗಳಾದ ದ್ರೌಪದಿಯು ಅರಣ್ಯದಲ್ಲಿ ಕಾಷಾಯವಸ್ತ್ರವನ್ನುಟ್ಟು ದುಃಖಪಡುವದನ್ನು ನೋಡುವದಕ್ಕಿಂತಲೂ ಮತ್ತೊಂದು ಅಧಿಕವಾದದ್ದಿಲ್ಲವೆಂದು ನನ್ನ ಮನಸ್ಸಿನಲ್ಲಿಯೂ ಇರುವದು. ಅಧಿಕವಾದ ಸಂಪತ್ತಿನಿಂದ ಯುಕ್ತನಾದ ನನ್ನನ್ನು ಅರಣ್ಯದಲ್ಲಿರುವ ಧರ್ಮರಾಯನೂ ಭೀಮಸೇನನೂ ಸಹ ನೋಡಿದ್ದೇ ಆದರೆ ನಾನು ಬದುಕಿದ್ದು ಸಫಲವಾಗುವದು. ನಾನು ದ್ವೈತವನಕ್ಕೆ ಹೋಗುವದಕ್ಕೆ ಧೃತರಾಷ್ಟ್ರರಾಯನು ಅನುಜ್ಞೆಯನ್ನು ಕೊಡುವಹಾಗೆ ಯಾವ ಉಪಾಯವನ್ನು ಮಾಡಬೇಕೋ ಅದನ್ನು ತಿಳಿಯದೆ ಇರುವೆನು. ಅದಕ್ಕೆ ತಕ್ಕ ಉಪಾಯವನ್ನು ಶಕುನಿದುಶ್ಶಾಸನರ ಸಂಗಡ ನೀನು ಆಲೋಚಿಸು. ನಾನು ದ್ವೈತವನಕ್ಕೆ ಪ್ರಯಾಣಮಾಡುವದಕ್ಕೂ ಮಾಡದೆ ಇರುವದಕ್ಕೂ ಸಹ ನಿಶ್ಚಯಿಸಿಕೊಂಡು ನಾಳೆ ಪ್ರಾತಃಕಾಲದಲ್ಲಿ ಧೃತರಾಷ್ಟ್ರರಾಯನ ಸಮೀಪಕ್ಕೆ ಹೋಗುತ್ತೇನೆ. ಆಗ ಧೃತರಾಷ್ಟ್ರರಾಯನ ಬಳಿಯಲ್ಲಿ ಕುರುಶ್ರೇಷ್ಠನಾದ ಭೀಷ್ಮನು ಕೂತುಕೊಂಡಿರಲು, ನಾನೂ ಅಲ್ಲಿ ಕೂತುಕೊಂಡಿರುತ್ತೇನೆ. ಆ ಸಮಯದಲ್ಲಿ ಶಕುನಿ ದುಶ್ಶಾಸನರೊಡನೆ ನೀನು ಆಲೋಚಿಸಿದ ಉಪಾಯವನ್ನು ತಿಳಿಹಿಸು. ಆಗ ಭೀಷ್ಮನೂ ಧೃತರಾಷ್ಟ್ರನೂ ಸಹ ಏನು ಹೇಳುವರೋ ಅದನ್ನು ತಿಳಿದುಕೊಂಡು ಅವರ ಅನುಮತಿಯನ್ನು ಪಡೆದು ದ್ವೈತವನಕ್ಕೆ ಪ್ರಯಾಣಮಾಡುವ ಪ್ರಯತ್ನವನ್ನು ಮಾಡುವೆನು" ಎಂದು ನುಡಿದನು. ಬಳಿಕ ಅವರೆಲ್ಲರೂ ಹಾಗೆಯೇ ಆಗಲೆಂದು ತಮ್ಮತಮ್ಮ ಸ್ಥಾನಗಳಿಗೆ ಹೊರಟುಹೋದರು. ಆ ರಾತ್ರಿಯು ಕಳೆದು ಬೆಳಗಾಗಲು, ಕರ್ಣನೂ ಶಕುನಿಯೂ ಸಹ ನಸುನಗುತ್ತ ದುರ್ಯೋಧನನ ಸಮೀಪಕ್ಕೆ ಬಂದು "ಎಲೈ ದುರ್ಯೋಧನನೆ, ದ್ವೈತವನಕ್ಕೆ ಹೋಗುವದಕ್ಕಾಗಿ ಒಂದು ಉಪಾಯವನ್ನು ಯೋಚಿಸಿರುವೆನು, ಅದನ್ನು ಕೇಳು: ದ್ವೈತವನದಲ್ಲಿ ನಮ್ಮ ಹಸುಗಳನ್ನು ರಕ್ಷಿಸತಕ್ಕವರು ನಮ್ಮಾಗಮನವನ್ನು ನಿರೀಕ್ಷಿಸುತ್ತಿರುವರು. ಆ ಘೋಷಯಾತ್ರೆಯ ನಿಮಿತ್ತದಿಂದ ನಾವೆಲ್ಲರೂ ಅಲ್ಲಿಗೆ ಹೋಗೋಣ. ಪದೇಪದೇ ನಾವು ಘೋಷಯಾತ್ರೆಗಾಗಿ ಹೋಗುವದು ಉಚಿತವಾದದ್ದರಿಂದ ನಿಮ್ಮ ತಂದೆಯಾದ ಧೃತರಾಷ್ಟ್ರರಾಯನು ಅಪ್ಪಣೆಯನ್ನು ಕೊಡುವನು" ಎನಲು, ಆಗ ದುರ್ಯೋಧನನು ಆ ಉಪಾಯವು ಸರಿಯಾದದ್ದೆಂದು ಸಂತೋಷಪಟ್ಟನು. ಬಳಿಕ ಅವರೆಲ್ಲರೂ ಬಬ್ಬರ ಕಯ್ಯನ್ನೊಬ್ಬರು ತಟ್ಟುತ್ತ ಘೋಷಯಾತ್ರೆಗೆ ಹೋಗುವದನ್ನು ನಿಶ್ಚಯಿಸಿಕೊಂಡು ಧೃತರಾಷ್ಟ್ರನ ಬಳಿಗೆ ಹೋದರು.

## ೨೩೮ನೇ ಅಧ್ಯಾಯ.—ಘೋಷಯಾತ್ರೆ—(ದುರ್ಯೋಧನನು ದ್ವೈತವನಕ್ಕೆ ಹೊರಡುವಿಕೆ)

ವೈಶಂಪಾಯನಮುನೀಂದ್ರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಬಳಿಕ ದುರ್ಯೋಧನ, ಕರ್ಣ, ಶಕುನಿ, ಈ ಮೂರುಮಂದಿಯೂ ಧೃತರಾಷ್ಟ್ರನ ಸಮೀಪಕ್ಕೆ ಹೋಗಿ ಆತನನ್ನು

ಕಂಡು ಆತನಿಂದ ಕುಶಲಪ್ರಶ್ನೆಯನ್ನು ಮಾಡಿಸಿಕೊಂಡು ತಮ್ಮತಮ್ಮ ಸ್ಥಾನದಲ್ಲಿ ಕುಳಿತುಕೊಂಡರು. ಆ ಸಮಯದಲ್ಲಿ ಮೊದಲೇ ಕರ್ಣಾದಿಗಳಿಂದ ಪ್ರೇರಿತನಾಗಿದ್ದ ಸಮಂಗನೆಂಬ ಗೋಪಾಲಕನು ಆ ಸಭೆಗೆ ಬಂದು ಧೃತರಾಷ್ಟ್ರರಾಯನನ್ನು ಕುರಿತು "ಎಲೈ ಮಹಾರಾಜನೆ, ನಿಮ್ಮ ಗೋವುಗಳು ಸಮೀಪಕ್ಕೆ ಬಂದಿರುವವು" ಎಂದು ವಿಜ್ಞಾಪಿಸಿದನು. ಆಗ ಕರ್ಣ ಶಕುನಿಗಳು ಧೃತರಾಷ್ಟ್ರನನ್ನು ಕುರಿತು, "ಎಲೈ ಕೌರವಶ್ರೇಷ್ಠನೆ, ರಮಣೀಯವಾದ ಪ್ರದೇಶದಲ್ಲಿ ನಮ್ಮ ಗೋವುಗಳನ್ನು ನಿಲ್ಲಿಸಿ ಅವುಗಳ ವಯೋಜಾತಿವರ್ಣಗಳನ್ನು ಬರೆಯುವದಕ್ಕೂ, ಅವುಗಳನ್ನು ಲೆಕ್ಕಮಾಡುವದಕ್ಕೂ, ಆ ಸಮಯದಲ್ಲಿ ಅವುಗಳ ಕರುಗಳನ್ನು ಗುರುತು ಮಾಡುವದಕ್ಕೂ, ಆ ವನದಲ್ಲಿ ಬೇಟೆಯಾಡುವದಕ್ಕೂ ದುರ್ಯೋಧನನಿಗೆ ಅಪ್ಪಣೆಯನ್ನು ಕೊಡಬೇಕು" ಎಂದು ನುಡಿದರು. ಬಳಿಕ ಧೃತರಾಷ್ಟ್ರರಾಯನು ದುರ್ಯೋಧನನನ್ನು ಕುರಿತು, "ಎಲೈ ದುರ್ಯೋಧನನೆ, ಬೇಟೆಯಾಡುವದೂ ಗೋವುಗಳನ್ನು ನೋಡುವದೂ ಉಚಿತವಾದದ್ದೇ ಸರಿ. ಆದರೂ ಗೋಪಾಲಕರಲ್ಲಿ ವಿಶ್ವಾಸಮಾಡಬಾರದೆಂದು ನನಗೆ ತೋರುವದು. ಪಾಂಡವರು ಸಮೀಪದಲ್ಲೇ ಇರುವರೆಂದು ನಾನು ಕೇಳಿರುವೆನು. ಆದ್ದರಿಂದ ನೀವು ಅಲ್ಲಿಗೆ ಹೋಗುವದಕ್ಕೆ ನಾನು ಆಜ್ಞೆಯನ್ನು ಕೊಡತಕ್ಕವನಲ್ಲ. ಎಲೈ ಕರ್ಣನೆ, ಪಾಂಡವರನ್ನು ನೀವು ವಂಚನೆಯಿಂದ ಜಯಿಸಿದಿರಿ. ಮಹಾರಥಿಕರಾದ ಅವರು ವನದಲ್ಲಿ ತಪಸ್ಸುಮಾಡುತ್ತ ಕ್ಲೇಶಪಡುತ್ತಿದ್ದರೂ ಸಮರ್ಥರಾಗಿಯೇ ಇರುವರು. ಧರ್ಮರಾಯನು ಕೋಪಮಾಡದೆ ಹೋದರೂ, ಭೀಮಸೇನನು ಕ್ರೋಧಾವೇಶವುಳ್ಳವನಾಗಿರುವನು. ಪತಿವ್ರತಾಶಿರೋಮಣಿಯಾದ ದ್ರೌಪದಿಯು ಪ್ರತ್ಯಕ್ಷವಾದ ಅಗ್ನಿಯಾಗಿರುವಳು. ನೀವು ದ್ವೈತವನಕ್ಕೆ ಹೋದರೆ ಅಹಂಕಾರದಿಂದ ಅವರಿಗೆ ಅಪರಾಧವನ್ನು ಮಾಡುತ್ತೀರಿ. ಬಳಿಕ ತಪೋಬಲವುಳ್ಳ ಪಾಂಡವರು ನಿಮ್ಮನ್ನು ಸುಟ್ಟುಬಿಡುವರು. ಅಥವಾ ವೀರರಾದ ಪಾಂಡವರು ಕೋಪೋದ್ದೀಪಿತರಾಗಿ ಖಡ್ಗವೇ ಮೊದಲಾದ ಆಯುಧಗಳನ್ನು ಧರಿಸಿ ಶಸ್ತ್ರತೇಜಸ್ಸಿನಿಂದ ನಿಮ್ಮನ್ನು ನಾಶಮಾಡಿಬಿಡುವರು. ಬಳಿಕ ನೀವು ಗುಂಪಾಗಿ ಅವರಮೇಲೆ ಯುದ್ಧಕ್ಕೆ ಉಪಕ್ರಮಿಸುವಿರಿ. ಅವರನ್ನು ಜಯಿಸುವದು ನಿಮಗೆ ಅಶಕ್ಯವಾಗುವದು. ಆದ್ದರಿಂದ ನಿಮಗೆ ನಾನು ಅಪ್ಪಣೆಯನ್ನು ಕೊಡುವದು ಯುಕ್ತವಾದದ್ದಲ್ಲ. ಇದಲ್ಲದೆ ಅರ್ಜುನನು ದೇವಲೋಕಕ್ಕೆ ಹೋಗಿ ದಿವ್ಯಾಸ್ತ್ರಗಳನ್ನು ಸಂಪಾದಿಸಿಕೊಂಡು ಬಂದಿರುವನು. ದಿವ್ಯಾಸ್ತ್ರಗಳನ್ನು ಸಂಪಾದಿಸುವದಕ್ಕಿಂತಲೂ ಮೊದಲೇ ಸಕಲ ಭೂಮಂಡಲವನ್ನೂ ಜಯಿಸಿದ ಅರ್ಜುನನು ಈಗ ದಿವ್ಯಾಸ್ತ್ರಸಂಪನ್ನನಾಗಿರುವದರಿಂದ ನಿಮ್ಮನ್ನು ಸಂಹಾರಮಾಡದೆ ಬಿಡುವನೆ? ನನ್ನ ಮಾತನ್ನು ಕೇಳಿರಿ. ಅಥವಾ ನೀವು ಆ ದ್ವೈತವನಕ್ಕೆ ಹೋಗಿ ಜಾಗರೂಕರಾಗಿದ್ದರೂ, ನಿಮ್ಮ ಅಪಕಾರವನ್ನು ಸ್ಮರಿಸಿ ಪಾಂಡವರು ನಿಮ್ಮನ್ನು ಬಾಧಿಸದೆ ಇರಲಾರರು. ಆದ್ದರಿಂದ ನೀವು ಅಲ್ಲಿಗೆ ಹೋಗುವದು ದುಃಖಕ್ಕೆ ಕಾರಣವಾಗುವದು. ಅಥವಾ ನಿಮ್ಮ ಸೈನಿಕರಾದರೂ ಪಾಂಡವರಿಗೆ ಏನಾದರೂ ಅಪಕಾರವನ್ನು ಮಾಡುವರು. ಅದರಿಂದಲಾದರೂ ನಿಮಗೆ ಹಾನಿಯುಂಟಾಗುವದು. ಆದ್ದರಿಂದ ನಮ್ಮ ಭೃತ್ಯರು ದ್ವೈತವನಕ್ಕೆ ಹೋಗಿ ಗೋಧನವನ್ನು ವಿಚಾರಿಸಿಕೊಂಡು ಬರಲಿ. ನೀವು ಹೋಗುವದು ನನಗೆ ಸಮಾಧಾನವಾಗಿ ತೋರುವದಿಲ್ಲ" ಎನಲು; ಶಕುನಿಯು "ಎಲೈ ಧೃತರಾಷ್ಟ್ರರಾಯನೆ, ಧರ್ಮಜ್ಞನಾದ ಧರ್ಮರಾಯನು ಸಭೆಯಲ್ಲಿ ಹನ್ನೆರಡುವರುಷ ವನವಾಸಮಾಡುವ ವಿಷಯದಲ್ಲಿ ಪ್ರತಿಜ್ಞೆಯನ್ನು ಮಾಡಿರುವನು. ಭೀಮಾದಿಗಳೂ ಅದಕ್ಕೆ ಒಪ್ಪಿರುವರು. ಹೀಗಿರುವದರಿಂದ ಧರ್ಮರಾಯನು ನಮ್ಮಮೇಲೆ ಯಾತಕ್ಕೆ ಕೋಪಮಾಡುವನು? ನಮಗೆ ಬೇಟೆಯಾಡಬೇಕೆಂದು ಕುತೂಹಲವಿರುವದು. ಆದ್ದರಿಂದ ದ್ವೈತವನಕ್ಕೆ ಹೋಗಿ ಗೋಧನವನ್ನು ವಿಚಾರಿಸಿಕೊಂಡು ಹಾಗೆಯೇ ಅಲ್ಲಿ ಬೇಟೆಯಾಡಿಕೊಂಡು ಬರುತ್ತೇವೆ. ಪಾಂಡವರು ವಾಸಮಾಡುವ ಸ್ಥಳಕ್ಕೆ ಹೋಗದೆಯೇ ಹಿಂದಕ್ಕೆ ಬರುತ್ತೇವೆ. ಇದರಿಂದ ಕೆಟ್ಟದ್ದೇನೂ ಆಗುವದಿಲ್ಲ" ಎಂದನು. ಅದನ್ನು ಕೇಳಿ ಧೃತರಾಷ್ಟ್ರನು ದ್ವೈತವನಕ್ಕೆ ಪರಿವಾರಸಮೇತನಾಗಿ ದುರ್ಯೋಧನನು ಪ್ರಯಾಣಮಾಡುವದಕ್ಕೆ ಅನುಜ್ಞೆಯನ್ನು ಕೊಟ್ಟನು.

ಬಳಿಕ ದುರ್ಯೋಧನನು ಕರ್ಣಾದಿಗಳಿಂದಲೂ ಮಹತ್ತಾದ ಸೈನ್ಯದಿಂದಲೂ ಸುತ್ತುವರಿಯಲ್ಪಟ್ಟು, ರಾಣಿವಾಸದ ಸ್ತ್ರೀಯರೊಡಗೂಡಿ ದ್ವೈತವನಕ್ಕೆ ಪ್ರಯಾಣಮಾಡಿದನು. ಆಗ ಹಸ್ತಿನಾವತಿಯಲ್ಲಿರುವ ಸಾಮಂತ

ರಾಜರೂ ತಮ್ಮತಮ್ಮ ಪತ್ನಿಯರೊಡಗೂಡಿ ಆತನ ಸಂಗಡ ಹೊರಟರು. ಆ ಸಮಯದಲ್ಲಿ ಎಂಟುಸಾವಿರ ರಥಗಳೂ ಮೂವತ್ತುಸಾವಿರ ಆನೆಗಳೂ ತೊಂಭತ್ತುಸಾವಿರ ಕುದುರೆಗಳೂ ಅನೇಕ ಸಹಸ್ರ ಕಾಲಾಳುಗಳೂ ಮತ್ತು ಧನಧಾನ್ಯ ಮುಂತಾದವುಗಳ ಭಂಡಿಗಳೂ ವ್ಯಾಪಾರಮಾಡತಕ್ಕ ವರ್ತಕರೂ ಸ್ತುತಿಪಾಠಕರೂ ಬೇಟೆಗಾರರೂ ಸಹ ಆತನ ಸಂಗಡ ಹೊರಟರು. ಈ ಪ್ರಕಾರ ದುರ್ಯೋಧನನು ಸೈನ್ಯಸಮೇತನಾಗಿ ದ್ವೈತವನಕ್ಕೆ ಹೊರಟು ಮಾರ್ಗದಲ್ಲಿ ಪ್ರಯಾಣಮಾಡುತ್ತಿರಲು, ವರ್ಷಾಕಾಲದಲ್ಲಿ ಮಹತ್ತಾದ ಗಾಳಿಯು ಬೀಸಲು ಎಂಥಾ ಶಬ್ದವಾಗುವದೋ ಅಂಥಾ ಶಬ್ದವಾಯಿತು. ಆ ದಿನ ದುರ್ಯೋಧನನು ಸೈನ್ಯಸಮೇತನಾಗಿ ಎರಡು ಹರಿದಾರಿ ಪ್ರಯಾಣ ಮಾಡಿ ಎರಡನೇ ದಿವಸ ಮುಂದಕ್ಕೆ ಹೊರಟನು.

೨೪೯ನೇ ಅಧ್ಯಾಯ.—ಘೋಷಯಾತ್ರೆ—(ದುರ್ಯೋಧನನ ಸೈನಿಕರಿಗೂ ಗಂಧರ್ವರಿಗೂ ಸಂವಾದ.)

ವೈಶಂಪಾಯನಮುನೀಂದ್ರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಈ ಪ್ರಕಾರ ದುರ್ಯೋಧನನು ಸೈನ್ಯಸಹಿತನಾಗಿ ಅಲ್ಲಲ್ಲಿ ವನಗಳಲ್ಲಿ ಇಳಿದುಕೊಳ್ಳುತ್ತ, ತಮ್ಮ ಗೋವುಗಳಿರುವ ಸ್ಥಾನಕ್ಕೆ ಹೋಗಿ, ಅಲ್ಲಿ ರಮಣೀಯವಾಗಿಯೂ ತೃಣಕಾಷ್ಠಜಲಸಮೃದ್ಧಿಯುಳ್ಳದ್ದಾಗಿಯೂ ಇರುವ ಸ್ಥಳದಲ್ಲಿ ಸೈನ್ಯವನ್ನು ಇಳಿಸಿದನು. ತನ್ನ ಗುಡಾರದ ಸಮೀಪದಲ್ಲಿಯೇ ಕರ್ಣನಿಗೂ ಶಕುನಿಗೂ ದುಶ್ಯಾಸನ ಮೊದಲಾದ ತಮ್ಮಂದಿರಿಗೂ ಸಹ ಪ್ರತ್ಯೇಕಪ್ರತ್ಯೇಕವಾಗಿ ಗುಡಾರಗಳನ್ನು ಹಾಕಿಸಿಕೊಟ್ಟನು. ಬಳಿಕ ಅಲ್ಲಿ ಬಂದಿದ್ದ ತಮ್ಮ ಹಸುಗಳನ್ನೂ ಕರುಗಳನ್ನೂ ಸಹ ನೋಡಿ ಲೆಕ್ಕಮಾಡಿ, ಅವುಗಳಿಗೆ ಮುದ್ರೆಯನ್ನು ಹಾಕಿಸಿ, ಮೂರುವರುಷ ವಯಸ್ಸುಳ್ಳ ಎತ್ತುಗಳನ್ನು ಬೇರೆ ವಿಂಗಡಿಸಿ ಆ ಎತ್ತುಗಳನ್ನು ತೆಗೆದುಕೊಂಡನು. ಆಗ ಆತನ ಸಂಗಡ ಬಂದಿದ್ದ ಸೈನಿಕರೂ ಪೌರಜನರೂ ಸಹ ಆ ವನದಲ್ಲಿ ಯಥೇಚ್ಛವಾಗಿ ದೇವತೆಗಳಂತೆ ವಿಹರಿಸಿದರು. ಆ ಸಮಯದಲ್ಲಿ ನರ್ತನದಲ್ಲಿಯೂ ಗಾನದಲ್ಲಿಯೂ ನಿಪುಣರಾದ ಕೆಲವುಮಂದಿ ಗೋಪಾಲಕರೂ ಅಲಂಕೃತರಾದ ಗೋಪಾಲಸ್ತ್ರೀಯರೂ ಸಹ ದುರ್ಯೋಧನನ ಮುಂದೆ ನಿಂತು ನರ್ತನವನ್ನೂ ಗಾನವನ್ನೂ ಮಾಡಿದರು. ಆಗ ದುರ್ಯೋಧನನು ಸಂತುಷ್ಟನಾಗಿ ಆ ಗೋಪಾಲಕರಿಗೆ ಅವರವರ ಯೋಗ್ಯತಾನುಸಾರವಾಗಿ ಬೇಕಾದಷ್ಟು ದ್ರವ್ಯವನ್ನೂ ಅನ್ನಪಾನಾದಿಗಳನ್ನೂ ಕೊಟ್ಟು ಸಂತೋಷಪಡಿಸಿ, ಬಳಿಕ ಕರ್ಣಾದಿಗಳಿಂದ ಕೂಡಿ ಬೇಟೆಯಾಡುವದಕ್ಕೆ ಹೊರಟು, ಕಾಡುಹಂದಿ ಕಾಡುಕೋಣ ಆನೆ ಶಿವಂಗಿ ಮೊದಲಾದ ಮೃಗಗಳನ್ನು ಬಾಣಗಳಿಂದ ಬೇಟೆಯಾಡಿ, ರಮಣೀಯವಾದ ಸ್ಥಳದಲ್ಲಿ ಮೃಗಗಳನ್ನು ಜೀವಸಹಿತವಾಗಿ ಹಿಡಿದು, ಮನೋಹರವಾದ ವನಗಳನ್ನು ನೋಡುತ್ತ, ಹಸುಗಳ ಮೊಸರು ಹಾಲು ಬೆಣ್ಣೆ ತುಪ್ಪಗಳನ್ನು ತರಿಸಿಕೊಂಡು ಆಹಾರಮಾಡುತ್ತ, ಮದಿಸಿದ ತುಂಬಿಗಳಿಂದ ಸೇವಿತವಾಗಿಯೂ ನವಿಲುಗಳ ಧ್ವನಿಯಿಂದ ರಮಣೀಯವಾಗಿಯೂ ವನಸಂಪಿಗೆ ಪಗಡೆ ಮೊದಲಾದ ವೃಕ್ಷಗಳಿಂದ ಶೋಭಿತವಾಗಿಯೂ ಇರುವ ಪುಣ್ಯತಮವಾದ ದ್ವೈತವನವೆಂಬ ಸರಸ್ಸಿಗೆ ಕ್ರಮವಾಗಿ ಹೋದನು. ದೈವಯೋಗದಿಂದ ಅದೇ ಸಮಯದಲ್ಲಿ ಧರ್ಮರಾಯನು ಮಹತ್ತಾದ ಐಶ್ವರ್ಯದಿಂದ ಯುಕ್ತನಾದ ಇಂದ್ರನಂತೆ ಪ್ರಕಾಶಿಸುತ್ತ, ವನದಲ್ಲಿರತಕ್ಕ ಮುಸ್ತೈದುಗಳಿಂದಲೇ ದಿವ್ಯವಾದ ವಿಧಾನದಿಂದ ಒಂದು ಹಗಲು ಮಾಡತಕ್ಕ ಯಜ್ಞವನ್ನು ಮಾಡಿ, ಆ ದ್ವೈತವನದಲ್ಲಿ ವಾಸಸ್ಥಾನಮಾಡಿಕೊಂಡು ದ್ರೌಪದೀ ಸಮೇತನಾಗಿ ಕುಳಿತಿದ್ದನು. ಅಲ್ಲಿ ತಮ್ಮ ಪರಿವಾರಗಳೂ ಸೈನಿಕರೂ ಇಳಿಯುವದಕ್ಕೆ ಗುಡಾರಗಳನ್ನು ಹಾಕಿರಿ ಎಂದು ದುರ್ಯೋಧನನು ತನ್ನ ಭೃತ್ಯರಿಗೆ ಆಜ್ಞಾಪಿಸಿ, ಅಲ್ಲಿ ತನ್ನ ಸೈನ್ಯವನ್ನು ಇಳಿಸಿದನು. ಆಗ ಹಾಗೆಯೇ ಆಗಲೆಂದು ಅನೇಕ ಸಹಸ್ರ ಭೃತ್ಯರು ದ್ವೈತವನದ ಸಮೀಪಕ್ಕೆ ಹೋದರು. ದುರ್ಯೋಧನನು ಅಲ್ಲಿಗೆ ಬರುವದಕ್ಕಿಂತಲೂ ಪೂರ್ವದಲ್ಲೇ ಗಂಧರ್ವರಾಜನಾದ ಚಿತ್ರಸೇನನು ಗಂಧರ್ವರಿಂದಲೂ ಅಪ್ಸರಸ್ತ್ರೀಯರಿಂದಲೂ ತನ್ನ ಮಕ್ಕಳಿಂದಲೂ ಸಹಿತನಾಗಿ ಕುಬೇರನ ಮನೆಯಿಂದ ಹೊರಟು ವಿಹಾರಾರ್ಥವಾಗಿ ಅಲ್ಲಿಗೆ ಬಂದಿದ್ದನು. ಆ ಗಂಧರ್ವರು ದುರ್ಯೋಧನನ ಭೃತ್ಯರು ಆ ಸರೋವರದ ಸಮೀಪಕ್ಕೆ ಬರುವದನ್ನು ನೋಡಿ, ಅವರನ್ನು ಅಲ್ಲಿಗೆ ಬರದಂತೆ ತಡೆದರು. ಆಗ ದುರ್ಯೋಧನನ ಭೃತ್ಯರು

ತಮ್ಮನ್ನು ಗಂಧರ್ವರು ತಡೆಯಲು, ಹಿಂತಿರುಗಿ ದುರ್ಯೋಧನನ ಬಳಿಗೆ ಹೋಗಿ ಆ ವೃತ್ತಾಂತವನ್ನು ಅರಿಕೆ ಮಾಡಿದರು. ಆ ಮಾತನ್ನು ಕೇಳಿ ದುರ್ಯೋಧನನು ಯುದ್ಧದಲ್ಲಿ ಸಮರ್ಥರಾದ ತಮ್ಮ ಸೈನಿಕರನ್ನು ನೋಡಿ, ಗಂಧರ್ವರನ್ನು ಓಡಿಸಿಬಿಡುವಂತೆ ಅವರಿಗೆ ಆಜ್ಞೆಯನ್ನು ಕೊಟ್ಟನು. ಬಳಿಕ ಆ ವೀರರು ಗಂಧರ್ವರ ಬಳಿಗೆ ಹೋಗಿ "ಎಲೈ ಗಂಧರ್ವರೆ, ಧೃತರಾಷ್ಟ್ರನ ಕುಮಾರನಾದ ದುರ್ಯೋಧನನು ಸೈನ್ಯಸಮೇತನಾಗಿ ಇಲ್ಲಿ ವಿಹಾರಾರ್ಥವಾಗಿ ಬರುವನು. ನೀವು ಇಲ್ಲಿಂದ ಆಚೆಗೆ ಹೊರಟುಹೋಗಿರಿ" ಎನಲು, ಆ ಮಾತನ್ನು ಕೇಳಿ ಗಂಧರ್ವರು ಪರಿಹಾಸಮಾಡಿ "ಎಲೈ ಸೈನಿಕರೆ, ಮಂದಬುದ್ಧಿಯಾದ ನಿಮ್ಮ ರಾಜನಾದ ದುರ್ಯೋಧನನಿಗೆ ಬುದ್ಧಿಯಿದೆಯೋ ಇಲ್ಲವೋ? ಸ್ವರ್ಗದಲ್ಲಿ ವಾಸಮಾಡತಕ್ಕ ನಮಗೆ ವೈಶ್ಯರಿಗೆ ಆಜ್ಞಾಪಿಸುವಂತೆ ಆಜ್ಞಾಪಿಸುವನು! ಬುದ್ಧಿಶೂನ್ಯರಾದ ನೀವು ಮೂಢನಾದ ದುರ್ಯೋಧನನ ಮಾತನ್ನು ಕೇಳಿಕೊಂಡು ಈ ಮಾತನ್ನು ನಮಗೆ ಹೇಳುವದಕ್ಕೆ ಬಂದಿರೋ? ಹಾಗಾದರೆ ನಿಮಗೆ ಮರಣಕಾಲವು ಸಮೀಪವಾಗಿರುವದು. ಇದು ನಿಶ್ಚಯವು. ಜಾಗ್ರತೆಯಾಗಿ ದುರ್ಯೋಧನನ ಬಳಿಗೆ ಹೋಗಿರಿ. ಹಾಗಲ್ಲದಿದ್ದರೆ ಈಗಲೇ ನಿಮ್ಮನ್ನು ಯಮಲೋಕಕ್ಕೆ ಕಳುಹಿಸಿಬಿಡುವೆವು" ಎಂದು ಕ್ರೂರವಾಗಿ ಹೇಳಿದರು. ಅದನ್ನು ಕೇಳಿ ಸೈನಿಕರು ಹೆದರಿಕೊಂಡು ದುರ್ಯೋಧನನ ಬಳಿಗೆ ಓಡಿಹೋದರು.

## ೨೪೦ನೇ ಅಧ್ಯಾಯ.—ಘೋಷಯಾತ್ರೆ—(ಕೌರವರಿಗೂ ಗಂಧರ್ವರಿಗೂ ಯುದ್ಧ.)

ವೈಶಂಪಾಯನಮುನೀಂದ್ರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಬಳಿಕ ಸೈನಿಕರೆಲ್ಲರೂ ಗುಂಪಾಗಿ ದುರ್ಯೋಧನನ ಸಮೀಪಕ್ಕೆ ಹೋಗಿ ಗಂಧರ್ವರು ತಮ್ಮನ್ನು ತಿರಸ್ಕರಿಸಿ ಆಡಿದ ಮಾತುಗಳನ್ನು ಆತನಿಗೆ ತಿಳಿಹಿಸಿದರು. ಆ ಮಾತನ್ನು ಕೇಳಿ ದುರ್ಯೋಧನನು ಕೋಪೋದ್ದೀಪಿತನಾಗಿ "ಎಲೈ ಸೈನಿಕರೆ, ಸಕಲದೇವತೆಗಳಿಂದಲೂ ಸಹಿತನಾಗಿ ಇಂದ್ರನೇ ಇಲ್ಲಿಗೆ ಬಂದು ಕ್ರೀಡಿಸುತ್ತಿದ್ದರೂ, ನೀವು ಆತನನ್ನು ಲಕ್ಷ್ಯಮಾಡದೆ ಅಧರ್ಮಿಷ್ಠರಾಗಿಯೂ ನಮಗೆ ವಿರೋಧಿಗಳಾಗಿಯೂ ಇರತಕ್ಕ ಅವರನ್ನು ನಿಗ್ರಹಿಸಿರಿ" ಎಂದು ಆಜ್ಞೆಯನ್ನು ಕೊಟ್ಟನು. ಅದನ್ನು ಕೇಳಿ ಆ ಸೈನಿಕರೆಲ್ಲರೂ ಗುಂಪಾಗಿ ಯುದ್ಧಸನ್ನಾಹದಿಂದ ಮೆರೆಯುತ್ತ, ಎಲ್ಲಾ ದಿಕ್ಕುಗಳೂ ಮೊಳಗುವಂತೆ ಸಿಂಹನಾದವನ್ನು ಮಾಡಿ, ಆ ಗಂಧರ್ವರನ್ನು ಹೊಡೆದು ಆ ವನಕ್ಕೆ ಪ್ರವೇಶ ಮಾಡಿದರು. ಆಗ ಗಂಧರ್ವರು ಎಷ್ಟುಪ್ರಕಾರವಾಗಿ ಸಾಮೋಪಾಯದಿಂದ ಆ ಸೈನಿಕರನ್ನು ತಡೆದರೂ ಅದನ್ನು ಲಕ್ಷ್ಯಮಾಡದೆ ಅವರೆಲ್ಲರೂ ಆ ಸರೋವರದ ಬಳಿಗೆ ಬಂದರು. ಆಗ ಗಂಧರ್ವರು ತಮ್ಮ ಮಾತನ್ನು ಕೇಳದೆ ಯಾವಾಗ ದುರ್ಯೋಧನನ ಸೈನಿಕರು ಅತಿಕ್ರಮಿಸಿ ಬಂದರೋ ಆಗ ತಮ್ಮ ರಾಜನಾದ ಚಿತ್ರಸೇನನಿಗೆ ಅದನ್ನು ತಿಳಿಹಿಸಿದರು. ಅದನ್ನು ಕೇಳಿ ಚಿತ್ರಸೇನನು ಕೋಪಗೊಂಡು "ನೀಚರಾದ ಆ ಭಟರನ್ನೂ ದುರ್ಯೋಧನನನ್ನೂ ಶಿಕ್ಷಿಸಿರಿ" ಎಂದು ಗಂಧರ್ವರಿಗೆ ಆಜ್ಞೆಯನ್ನು ಕೊಟ್ಟನು. ಬಳಿಕ ಚಿತ್ರಸೇನನ ಆಜ್ಞಾಧಾರಕರಾದ ಗಂಧರ್ವರು ಆಯುಧಪಾಣಿಗಳಾಗಿ ದುರ್ಯೋಧನನ ಸೈನಿಕರನ್ನು ಅಟ್ಟಿಕೊಂಡು ಹೋಗಲು, ಅವರ ಪೆಟ್ಟನ್ನು ತಡೆಯಲಾರದೆ ಆ ಸೈನಿಕರು ದುರ್ಯೋಧನನನ್ನು ನೋಡುತ್ತಿರುವ ಕಾಲದಲ್ಲಿಯೇ ದಿಕ್ಕಾಪಾಲಾಗಿ ಓಡಿಹೋದರು. ಗಂಧರ್ವರಿಂದ ಪೆಟ್ಟುತಿಂದು ಪರಾಙ್ಮುಖರಾಗಿ ಓಡಿಹೋಗತಕ್ಕ ತಮ್ಮ ಸೈನ್ಯವನ್ನು ನೋಡಿ ಶೂರನಾದ ಕರ್ಣನು ಹಿಂತಿರುಗದೆ ತಮ್ಮಮೇಲೆ ಬೀಳತಕ್ಕ ಆ ಗಂಧರ್ವರ ಸೈನ್ಯವನ್ನು ಮಹತ್ತಾದ ಬಾಣವೃಷ್ಟಿಯಿಂದ ನಿವಾರಿಸಿ ಕರಲಾಘವವುಳ್ಳವನಾಗಿ ತೀಕ್ಷ್ಣವಾದ ಕ್ಷುರಪ್ರ, ಬಲ್ಲ, ವತ್ಸದಂತ, ಮೊದಲಾದ ಬಾಣಗಳಿಂದ ಗಂಧರ್ವರ ಶಿರಸ್ಸುಗಳನ್ನು ಛೇದಿಸಿ ಕ್ಷಣಮಾತ್ರದಲ್ಲಿ ಗಂಧರ್ವರ ಸೈನ್ಯವನ್ನು ದಿಕ್ಕುದಿಕ್ಕಿಗೆ ಓಡಿಸಿಬಿಟ್ಟನು. ಆ ಗಂಧರ್ವರು ಕರ್ಣನ ಬಾಣಗಳಿಂದ ಪೆಟ್ಟುತಿಂದರೂ ಅದನ್ನೂ ಲಕ್ಷ್ಯಮಾಡದೆ ತಿರುಗಿ ಗುಂಪಾಗಿ ಕೌರವರ ಸೈನ್ಯವನ್ನು ಎದುರಿಸಿ ಬಂದರು. ಆಗ ಕ್ಷಣಮಾತ್ರದಲ್ಲೇ ಭೂಮಂಡಲವೆಲ್ಲವೂ ಗಂಧರ್ವಮಯವಾಯಿತು. ಆ ಸಮಯದಲ್ಲಿ ದುರ್ಯೋಧನ, ದುಶ್ಶಾಸನ, ಶಕುನಿ, ಮತ್ತು ಧೃತರಾಷ್ಟ್ರರಾಯನ ಕುಮಾರರೆಲ್ಲರೂ ಸಹ ಕರ್ಣನನ್ನು ಮುಂದೆಮಾಡಿಕೊಂಡು ಅನೇಕ ರಥಿಕರೊಡನೆ ಅಧಿಕವಾದ ಸಾಹಸವುಳ್ಳವರಾಗಿ ಕ್ರೂರವಾದ ಬಾಣಗಳನ್ನು ಪ್ರಯೋಗಿಸುತ್ತ ಗಂಧರ್ವರ ಸಂಗಡ

ಯುದ್ಧವನ್ನು ಪಕ್ರಮಿಸಿದರು. ಆಗ ಉಭಯಸೈನ್ಯಕ್ಕೂ ಭಯಂಕರವಾದ ಯುದ್ಧವು ನಡೆಯಿತು. ಬಳಿಕ ಗಂಧರ್ವರು ಯುದ್ಧದಲ್ಲಿ ಪೆಟ್ಟುತಿಂದು ಸ್ವಲ್ಪ ಮೃದುವಾಗಿರುವದನ್ನು ನೋಡಿ, ದುರ್ಯೋಧನನ ಸೈನಿಕರು ಗಟ್ಟಿಯಾಗಿ ಸಿಂಹನಾದವನ್ನು ಮಾಡಿದರು. ಆಗ ಚಿತ್ರಸೇನನು ತಮ್ಮ ಸೈನಿಕರನ್ನು ಕೌರವರು ಭಯಪಡಿಸಿದ್ದನ್ನು ನೋಡಿ ಕ್ರೋಧಾವೇಶವುಳ್ಳವನಾಗಿ, ಅವರನ್ನು ಸಂಹರಿಸಬೇಕೆಂದು ತಾನು ಕೂತಿದ್ದ ಪೀಠದಿಂದ ಮೇಲಕ್ಕೆದ್ದು, ವಿಚಿತ್ರವಾದ ಯುದ್ಧಮಾರ್ಗವನ್ನು ಬಲ್ಲವನಾದ್ದರಿಂದ ಮಾಯಾಸ್ತ್ರವನ್ನು ಪ್ರಯೋಗಿಸಿದನು. ಆ ಅಸ್ತ್ರದ ಮಹಿಮೆಯಿಂದ ಕೌರವರೆಲ್ಲರೂ ಅಜ್ಞಾನವನ್ನು ಪಡೆದರು. ದುರ್ಯೋಧನನ ಸೈನಿಕರಲ್ಲಿ ಒಬ್ಬೊಬ್ಬನಿಗೆ ಹತ್ತುಹತ್ತುಮಂದಿ ಗಂಧರ್ವರು ಸುತ್ತಿಕೊಂಡು ಹೊಡೆಯುವರಾದರು. ಆ ಯೋಧರಲ್ಲಿ ಕೆಲವರು ತಮ್ಮ ಜೀವವನ್ನು ಸಂರಕ್ಷಿಸಿಕೊಳ್ಳಬೇಕೆಂದು ದಿಕ್ಕುದಿಕ್ಕಿಗೆ ಓಡಿಹೋದರು, ಮತ್ತುಕೆಲವರು ಹತರಾಗಿ ಹೋದರು. ಈ ಪ್ರಕಾರ ತಮ್ಮ ಸೈನಿಕರು ಗಂಧರ್ವರಿಂದ ಹತರಾದದ್ದನ್ನು ನೋಡಿ ಕರ್ಣನು ಪರ್ವತದಂತೆ ಚಲಿಸದೆ ಗಂಧರ್ವರನ್ನು ಎದುರಿಸಿ ನಿಂತನು. ದುರ್ಯೋಧನ, ಶಕುನಿ ಮೊದಲಾದವರೂ ಸಹ ಗಂಧರ್ವರ ಸಂಗಡ ಯುದ್ಧವನ್ನುಮಾಡುತ್ತಿದ್ದರು. ಈ ಕಡೆ ಅನೇಕ ಸಾವಿರಮಂದಿ ಗಂಧರ್ವರು ಗುಂಪಾಗಿ ಕರ್ಣನನ್ನು ಸಂಹರಿಸಬೇಕೆಂದು ಖಡ್ಗ, ಪಟ್ಟಿಶ, ಶೂಲ, ಗದೆ ಮೊದಲಾದ ಆಯುಧಗಳನ್ನು ಪ್ರಯೋಗಿಸುತ್ತ ಕರ್ಣನನ್ನು ಸುತ್ತಿಕೊಂಡು, ಅವರಲ್ಲಿ ಕೆಲವರು ಆತನ ರಥದ ಮೂಕಿಯನ್ನು ನಾಶಮಾಡಿಬಿಟ್ಟರು. ಮತ್ತೆಕೆಲವು ಗಂಧರ್ವರು ಕರ್ಣನ ಛತ್ರವನ್ನೂ, ಕೆಲವರು ರಥದ ದೂರಿಯನ್ನೂ, ಕೆಲವರು ರಥವನ್ನೂ ಚೂರುಚೂರು ಮಾಡಿಬಿಟ್ಟರು. ಬಳಿಕ ಕರ್ಣನು ಕತ್ತಿಯನ್ನೂ ಗುರಾಣಿಯನ್ನೂ ಹಿಡಿದು ರಥದಿಂದ ಕೆಳಕ್ಕೆ ಹಾರಿ ವಿಕರ್ಣನ ರಥದಮೇಲೆ ಕೂತುಕೊಂಡು, ತಾನು ತಪ್ಪಿಸಿಕೊಂಡು ಹೋಗಬೇಕೆಂದು ರಥಾಶ್ವಗಳನ್ನು ಚಮುಕುಮಾಡಿದನು.

## ೨೪೧ನೇ ಅಧ್ಯಾಯ.—ಘೋಷಯಾತ್ರೆ—(ದುರ್ಯೋಧನನನ್ನು ಗಂಧರ್ವರು ಕೈಸೆರೆಹಿಡಿದದ್ದು.)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ದುರ್ಯೋಧನನು ನೋಡುತ್ತಿರುವಂತೆಯೇ ಗಂಧರ್ವರಿಂದ ಪರಾಜಿತನಾದ ಕರ್ಣನು ಪರಾಙ್ಮುಖನಾಗಿ ಓಡಿಹೋಗಲು, ಆತನ ಸೈನಿಕರೆಲ್ಲರೂ ದಿಕ್ಕುದಿಕ್ಕಿಗೆ ಪಲಾಯನವನ್ನುಮಾಡಿದರು. ಆಗ ಪರಾಙ್ಮುಖನಾಗಿ ಓಡಿಹೋಗುತ್ತಿದ್ದ ತಮ್ಮ ಸೈನ್ಯವನ್ನು ನೋಡಿ ದುರ್ಯೋಧನನು ಸ್ಥಿರವಾಗಿ ಯುದ್ಧಕ್ಕೆ ನಿಂತು, ಎದುರಿಸಿ ಬರುವ ಗಂಧರ್ವರ ಸೈನ್ಯದಮೇಲೆ ಬಾಣವೃಷ್ಟಿಯನ್ನು ಕರೆದನು. ಗಂಧರ್ವರು ಆತನ ಬಾಣವರ್ಷವನ್ನು ಲಕ್ಷ್ಯಮಾಡದೆ, ಆತನನ್ನು ಸಂಹರಿಸಬೇಕೆಂದು ಆತನ ರಥವನ್ನು ಸುತ್ತಿಕೊಂಡು, ರಥದ ಮೂಕಿಯನ್ನೂ ದೂರಿಯನ್ನೂ ಧ್ವಜವನ್ನೂ ಛತ್ರವನ್ನೂ ರಥಾಶ್ವಗಳನ್ನೂ ತಮ್ಮ ಬಾಣಗಳಿಂದ ಚೂರುಚೂರು ಮಾಡಿದರು. ಬಳಿಕ ರಥವಿಲ್ಲದೆ ಭೂಮಿಯಮೇಲೆ ನಿಂತಿದ್ದ ದುರ್ಯೋಧನನನ್ನು ಚಿತ್ರಸೇನನು ಅಟ್ಟಿಕೊಂಡು ಹೋಗಿ ಕೈಸೆರೆಹಿಡಿದನು. ಬಳಿಕ ಗಂಧರ್ವರು ರಥದಮೇಲಿದ್ದ ದುಶ್ಶಾಸನನನ್ನೂ ಹಿಡಿದು ಕಟ್ಟಿದರು. ಅದನ್ನುನೋಡಿ ಧೃತರಾಷ್ಟ್ರನ ಮಕ್ಕಳಾದ ವಿವಿಂಶತಿ ಚಿತ್ರಸೇನರು ಓಡಿ ಹೋದರು. ಗಂಧರ್ವರು ಅವಂತಿದೇಶಾಧಿಪತಿಗಳಾದ ವಿಂದಾನುವಿಂದರನ್ನೂ ದುರ್ಯೋಧನನ ರಾಣಿವಾಸದವರನ್ನೂ ಹತಾವಶಿಷ್ಟರಾದ ಸೈನಿಕರನ್ನೂ ಸಹ ಅಟ್ಟಿ ಓಡಿಸಿಬಿಟ್ಟರು. ಆ ಸಮಯದಲ್ಲಿ ಮೊದಲು ಓಡಿ ಹೋಗಿದ್ದ ದುರ್ಯೋಧನನ ಸೈನಿಕರು ಪ್ರಯಾಣ ಸಾಮಗ್ರಿಗಳನ್ನೂ ಭಂಡಿಗಳನ್ನೂ ಅಂದಲಗಳನ್ನೂ ಎತ್ತುಗಳನ್ನೂ ಸಹ ತೆಗೆದುಕೊಂಡು, ಅಲ್ಲಿಗೆ ಬಂದಿದ್ದ ವರ್ತಕರೊಡಗೂಡಿ ಧರ್ಮರಾಯನ ಸಮೀಪಕ್ಕೆ ಬಂದು, ಆತನಿಗೆ ಶರಣಾಗತರಾಗಿ, “ ಎಲೈ ಮಹಾರಾಜನೆ, ಬಲಸಂಪನ್ನನಾಗಿಯೂ ನಿನಗೆ ಪ್ರಿಯನಾಗಿಯೂ ಇರುವ ದುರ್ಯೋಧನನನ್ನು ಗಂಧರ್ವರು ಸೆರೆಹಿಡಿದುಕೊಂಡು ಹೋಗುತ್ತಿರುವರು. ದುಶ್ಶಾಸನ, ದುರ್ವಿಷಹ, ದುರ್ಮುಖ, ದುರ್ಜಯ ಮೊದಲಾದವರನ್ನೂ ಪಾಶದಿಂದ ಕಟ್ಟಿ ಗಂಧರ್ವರು ತೆಗೆದುಕೊಂಡು ಹೋಗುತ್ತಿರುವರು. ಅವರನ್ನು ನೀವು ಬಿಡಿಸಬೇಕು ” ಎಂದು ಗಟ್ಟಿಯಾಗಿ ಮೊರೆಯಿಡುತ್ತ

ಧರ್ಮರಾಯನನ್ನು ಬೇಡಿಕೊಳ್ಳಲು ; ಭೀಮಸೇನನು ಗಂಧರ್ವರು ದುರ್ಯೋಧನನನ್ನು ಕಟ್ಟಿಹಾಕಿ ಸೆರೆಹಿಡಿದು ಕೊಂಡು ಹೋಗುವದನ್ನೂ ವೃದ್ಧರಾದ ಅಮಾತ್ಯರು ದೈನ್ಯದಿಂದ ಧರ್ಮರಾಯನನ್ನು ಬೇಡಿಕೊಳ್ಳುವದನ್ನೂ ನೋಡಿ, "ಎಲೈ ಧರ್ಮರಾಯನೆ, ಮಹತ್ತಾದ ಚತುರಂಗಬಲದಿಂದ ಕೂಡಿ ಅಧಿಕವಾದ ಪ್ರಯತ್ನದಿಂದ ದುರ್ಯೋಧನನ ವಿಷಯ ದಲ್ಲಿ ನಾವು ಏನು ಮಾಡಬೇಕೆಂದು ಇದ್ದೆವೋ, ಆ ಕಾರ್ಯವನ್ನು ಗಂಧರ್ವರೇ ಮಾಡಿದರು. ದುರ್ಮಾರ್ಗದಲ್ಲಿ ನಡೆ ಯತಕ್ಕವರಿಗೆ ಹೀಗೆಲ್ಲಾ ಆಗತಕ್ಕದ್ದೇ ನಿಶ್ಚಯ. ಇದೆಲ್ಲಾ ಕಪಟಿಯಾದ ದುರ್ಯೋಧನನ ದುರಾಲೋಚನೆಯಿಂದಲೇ ಉಂಟಾಗಿರುವದು. ಅಶಕ್ತನಾದ ಪುರುಷನು ಬಲವಂತರಲ್ಲಿ ದ್ವೇಷಮಾಡಿದರೆ ಅವರಿಂದ ಹಾನಿಯನ್ನು ಹೊಂದದೆ ಇರಲಾರನು. ಈಗ ಗಂಧರ್ವರು ನಮ್ಮ ಎದುರಿಗೆ ಅಮಾನುಷವಾದ ಕಾರ್ಯವನ್ನು ಮಾಡಿದರು. ನಮಗೆ ದೈವಾ ನುಗ್ರಹವಿರುವದರಿಂದಲೇ ನಮ್ಮಲ್ಲಿ ಪ್ರೀತಿಮಾಡತಕ್ಕವನು ಯಾವನಾದರೂ ಲೋಕದಲ್ಲಿ ಇದ್ದೇ ಇರುವನು. ಅದ್ದರಿಂದಲೇ ವನದಲ್ಲಿ ವಾಸಮಾಡುತ್ತಿರುವ ನಮ್ಮ ಮಹತ್ತಾದ ದುಃಖವನ್ನು ಚಿತ್ರಸೇನನು ಪರಿಪರಿಸಿ ಸುಖವ ನ್ನುಂಟುಮಾಡಿದನು. ನಾವು ಶೀತವಾತಾತಪಗಳನ್ನು ಸಹಿಸಿ ತಪಸ್ಸಿನಿಂದ ಕೃಶರಾಗಿ ವಿಷಮಸ್ಥಿತಿಯಲ್ಲಿರುವೆವು. ಈಗ ಸಮಸ್ಥಿತಿಯಲ್ಲಿದ್ದುಕೊಂಡು ಐಶ್ವರ್ಯಸಂಪನ್ನನಾಗಿರುವ ದುರ್ಯೋಧನನು ದುಷ್ಟವಾದ ಬುದ್ಧಿಯುಳ್ಳವನಾಗಿ ತನ್ನೈಶ್ವರ್ಯವನ್ನು ನಮಗೆ ತೋರಿಸಬೇಕೆಂದು ಇಲ್ಲಿಗೆ ಬಂದನು. ಅಂಥ ದುರಾತ್ಮನಾದ ದುರ್ಯೋಧನನ ಶೀಲವನ್ನು ಅನುವರ್ತಿಸಿರುವ ನೀಚರಾದ ಶಕುನಿ ಮೊದಲಾದವರೇ ಈಗ ಆತನ ಪರಾಭವವನ್ನು ನೋಡುತ್ತಿರುವರು. ಆತನು ಅಧರ್ಮಕಾರ್ಯವನ್ನು ಮಾಡಿದ್ದರಿಂದಲೇ ಗಂಧರ್ವರು ಅವರನ್ನು ಶಿಕ್ಷಿಸಿದರು" ಎಂದು ನುಡಿಯಲು ; ಆಗ ಧರ್ಮರಾ ಯನು ಭೀಮಸೇನನ ಕ್ರೂರವಾದ ವಾಕ್ಯವನ್ನು ಕೇಳಿ "ಎಲೈ ಭೀಮಸೇನನೆ, ಈ ಪ್ರಕಾರ ಕ್ರೂರವಾಗಿ ಮಾತ ನಾಡುವದಕ್ಕೆ ಇದು ಸಮಯವಲ್ಲ" ಎಂದು ಹೇಳಿದನು.

---

## ೨೪೭ನೇ ಅಧ್ಯಾಯ.—ಘೋಷಯಾತ್ರೆ—(ಅರ್ಜುನನ ಪ್ರತಿಜ್ಞೆ.)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಧರ್ಮರಾಯನು ಭೀಮಸೇನನ ಮಾತನ್ನು ಕೇಳಿ "ಎಲೈ ಭೀಮಸೇನನೆ, ಕೌರವರು ಗಂಧರ್ವರ ಕೈಗೆ ಸಿಕ್ಕಿ ವಿಷಮವಾದ ಅವಸ್ಥೆಯನ್ನು ಹೊಂದಿ ಭಯಾರ್ತರಾಗಿ ನಮಗೆ ಶರಣಾಗತರಾಗಿರುವರು. ಈ ಸಮಯದಲ್ಲಿ ನೀನು ಇಂಥ ಮಾತನ್ನಾಡಬಹುದೆ? ಇಂಥ ಮಾತುಗಳನ್ನು ಆಡಿದರೆ ಜ್ಞಾತಿಗಳಲ್ಲಿ ಭೇದವು ಹುಟ್ಟಿ ವೈರವು ಅಧಿಕ ವಾಗಿ ಕಲಹವುಂಟಾಗುವದು. ಅದರಿಂದ ನಮ್ಮ ಕುಲಧರ್ಮವು ನಷ್ಟವಾಗುವದು. ಯಾವನಾದರೂ ಹೊರ ಗಿನವನು ನಮ್ಮ ಜ್ಞಾತಿಗಳ ಕುಲಕ್ಕೆ ಹಾನಿಯನ್ನುಂಟುಮಾಡುತ್ತಿರುವದನ್ನು ನೋಡಿ ನಾವು ಸುಮ್ಮನಿದ್ದರೆ ಅದನ್ನು ಸಜ್ಜನರು ಸಹಿಸಲಾರರು. ದುರ್ಬುದ್ಧಿಯಾದ ದುರ್ಯೋಧನನು ಬಹುಕಾಲದಿಂದ ನಾವು ಇಲ್ಲಿರುವದನ್ನು ತಿಳಿದು ನಮಗೆ ಅಪ್ರಿಯವನ್ನು ಮಾಡಬೇಕೆಂದು ಇಲ್ಲಿಗೆ ಬಂದು, ಗಂಧರ್ವರ ಸಂಗಡ ವಿರೋಧವನ್ನು ಮಾಡಿಕೊಂಡು, ಬಲಾ ತ್ಕಾರದಿಂದ ಅವರ ಕೈಗೆ ಸಿಕ್ಕಿದನು. ಇದು ಹಾಗಿರಲಿ. ಆತನ ರಾಣೀವಾಸದವರನ್ನು ಪರಕೀಯರು ಸ್ಪರ್ಶಮಾಡಿ ಹಿಡಿದುಕೊಂಡು ಹೋಗುವದರಿಂದ, ನಮ್ಮ ಕುಲಕ್ಕೆ ಹಾನಿಯುಂಟಾಗಿರುವದು. ಅದಕಾರಣ ಶರಣಾಗತರಾದ ಕೌರವರನ್ನೂ ನಮ್ಮ ಕುಲವನ್ನೂ ಸಹ ರಕ್ಷಿಸುವದಕ್ಕಾಗಿ ನೀವೆಲ್ಲರೂ ಎದ್ದು ನಾವಕಾಶಮಾಡದೆ ಯುದ್ಧಸನ್ನ ದ್ಧರಾಗಿರಿ. ನೀನೂ ಅರ್ಜುನನೂ ನಕುಲಸಹದೇವರೂ ಸಹ ಗಂಧರ್ವರ ಕೈಗೆ ಸಿಕ್ಕಿರುವ ದುರ್ಯೋಧನನನ್ನು ಬಿಡಿಸಿರಿ. ಧೃತರಾಷ್ಟ್ರನ ಪುತ್ರರಾದ ದುರ್ಯೋಧನಾದಿಗಳ ರಥಗಳು ನಿರ್ಮಲವಾಗಿಯೂ ಸಕಲಶಸ್ತ್ರಾಸ್ತ್ರಗ ಳಿಂದ ಪೂರ್ಣವಾಗಿಯೂ ಸುವರ್ಣಧ್ವಜಗಳಿಂದ ಅಲಂಕೃತವಾಗಿಯೂ ಇರುವವು. ಅಸ್ತ್ರಜ್ಞರಾದ ಇಂದ್ರಸೇನ ಮೊದಲಾದ ನಮ್ಮ ಸಾರಥಿಗಳು ಆ ರಥಗಳನ್ನು ನಡಿಸುವರು. ಆ ರಥಗಳನ್ನೇರಿ ಗಂಧರ್ವರ ಸಂಗಡ ಜಾಗರೂಕ ರಾಗಿ ಯುದ್ಧಮಾಡಿ ಸೆರೆಯಲ್ಲಿರುವ ದುರ್ಯೋಧನನನ್ನು ಬಿಡಿಸಿಬಿಡಿರಿ. ಎಲೈ ಭೀಮಸೇನನೆ, ಯಾರಾಗಲಿ ಶರಣಾ ಗತರಾದರೆ ಅವರನ್ನು ತನ್ನ ಸಾಮರ್ಥ್ಯವಿರುವ ಮಟ್ಟಿಗೂ ರಕ್ಷಿಸಬೇಕು. ಶತ್ರುವಾದರೂ ಶರಣಾಗತನಾಗಿ

ಕೈಮುಗಿದುಕೊಂಡು ರಕ್ಷಿಸಬೇಕೆಂದು ಪ್ರಾರ್ಥಿಸಿದರೆ, ಆತನನ್ನು ತನ್ನ ಸಮೀಪಕ್ಕೆ ಕರೆದು ಯಾವನು ರಕ್ಷಿಸುವನೋ ಆತನೇ ಲೋಕದಲ್ಲಿ ಶ್ರೇಷ್ಠನೆನಿಸಿಕೊಳ್ಳುವನು. ವರವನ್ನು ಕೊಡುವದು, ರಾಜ್ಯವನ್ನು ಕೊಡುವದು, ಸಂತಾನವಾಗುವಹಾಗೆ ಅನುಗ್ರಹಿಸುವದು, ಈ ಮೂರಕ್ಕೂ ಶರಣಾಗತನಾದ ಶತ್ರುವನ್ನು ಸಂರಕ್ಷಿಸುವದೊಂದೇ ಸಮವಾದದ್ದು. ಎಲೈ ಭೀಮಸೇನನೆ, ಈಗ ಆಪತ್ತನ್ನು ಹೊಂದಿರುವ ದುರ್ಯೋಧನನು ನಿನ್ನ ಬಾಹುಬಲವನ್ನಾಶ್ರಯಿಸಿ ಬದುಕುವ ದಾರಿಯನ್ನು ಹುಡುಕುತ್ತಲಿರುವನು. ಇದಕ್ಕಿಂತಲೂ ನಿನಗೆ ದೊಡ್ಡದು ಯಾವದು? ಈಗ ನಾನು ಯಜ್ಞದೀಕ್ಷೆಯನ್ನು ವಹಿಸಿರುವೆನು. ಇಲ್ಲದೆಹೋದರೆ ನಾನೇ ಯುದ್ಧಸನ್ನದ್ಧನಾಗುತ್ತಿದ್ದೆನು. ಈ ವಿಷಯದಲ್ಲಿ ನಾನು ವಿಚಾರಮಾಡತಕ್ಕವನಲ್ಲ. ಎಲೈ ಭೀಮಸೇನನೆ, ಸಾಮೋಪಾಯದಿಂದಲೇ ದುರ್ಯೋಧನನನ್ನು ಬಿಡಿಸುವದಕ್ಕೆ ಪ್ರಯತ್ನಮಾಡು. ಅದಕ್ಕೆ ಸಾಧ್ಯವಾಗದೆ ಹೋದರೆ ಸ್ವಲ್ಪ ಪರಾಕ್ರಮವನ್ನು ತೋರಿಸು. ಅದಕ್ಕೂ ಗಂಧರ್ವರು ದುರ್ಯೋಧನನನ್ನು ಬಿಡದೆಹೋದರೆ, ನಮಗೆ ವೈರಿಗಳಾದ ಆ ಗಂಧರ್ವರನ್ನು ನಿಗ್ರಹಿಸಿ ಕುರುರಾಯನನ್ನು ಬಿಡಿಸಿಬಿಡು. ಈಗ ನಾನು ಯಜ್ಞಕರ್ಮದಲ್ಲಿರುವನಾದ್ದರಿಂದ ನಿನಗೆ ಇಷ್ಟವಾದ್ದಕ್ಕೆ ಆಜ್ಞೆಯನ್ನು ಕೊಡತಕ್ಕವನಾಗಿರುವೆನು" ಎಂದನು. ಆ ಮಾತನ್ನು ಕೇಳಿ ಅರ್ಜುನನು "ಕೌರವರನ್ನು ಬಿಡಿಸತಕ್ಕ ವಿಷಯದಲ್ಲಿ ಸಾಮೋಪಾಯದಿಂದ ಗಂಧರ್ವರು ದುರ್ಯೋಧನನನ್ನು ಬಿಡದೆಹೋದರೆ, ಗಂಧರ್ವರಾಜನಾದ ಚಿತ್ರಸೇನನ ರಕ್ತವನ್ನು ಭೂಮಿಯು ಪಾನಮಾಡುವದು" ಎಂದು ಪ್ರತಿಜ್ಞೆಮಾಡಿದನು. ಈ ಪ್ರಕಾರ ಸತ್ಯಸಂಧನಾದ ಅರ್ಜುನನು ಮಾಡಿದ ಪ್ರತಿಜ್ಞೆಯನ್ನು ಕೇಳಿ, ಕೌರವರ ಸೈನಿಕರು ತಿರುಗಿ ಯುದ್ಧದಲ್ಲಿ ಮನಸ್ಸನ್ನು ಮಾಡಿದರು.

## ೨೪೩ನೇ ಅಧ್ಯಾಯ.—ಘೋಷಯಾತ್ರೆ—(ಪಾಂಡವರಿಗೂ ಗಂಧರ್ವರಿಗೂ ಯುದ್ಧ)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಬಳಿಕ ಭೀಮಸೇನ ಮೊದಲಾದ ಮಹಾರಥಿಕರು ಧರ್ಮರಾಯನ ಆಜ್ಞಾನುಸಾರವಾಗಿ ಸಂತೋಷದಿಂದ ಯುದ್ಧಸನ್ನದ್ಧರಾಗಿ ಅಭೇದ್ಯವಾದ ಚಿನ್ನದ ಕವಚಗಳನ್ನು ತೊಟ್ಟು, ನಾನಾವಿಧವಾದ ದಿವ್ಯಾಯುಧಗಳನ್ನು ಧರಿಸಿ, ಧನುಸ್ಸುಗಳನ್ನು ಹಿಡಿದು, ಧ್ವಜಗಳಿಂದ ಅಲಂಕೃತವಾದ ರಥಗಳಮೇಲೆ ಕೂತುಕೊಂಡು ಜಾಜ್ವಲ್ಯಮಾನವಾದ ಅಗ್ನಿಗಳಂತೆ ಕಾಣಿಸುತ್ತ, ಶಿಕ್ಷಿತವಾದ ಕುದುರೆಗಳನ್ನು ಚುರುಕುಮಾಡಿ ನಡಿಸುತ್ತ, ಶೀಘ್ರವಾಗಿ ಯುದ್ಧಕ್ಕೆ ಹೊರಟರು. ಆಗ ಕೌರವರ ಸೈನ್ಯದಲ್ಲಿ ಮಹತ್ತಾದ ವಾದ್ಯಧ್ವನಿಯನ್ನು ಮಾಡಿದರು. ರಥಾರೂಢರಾಗಿ ತಮ್ಮಮೇಲೆ ಯುದ್ಧಾರ್ಥವಾಗಿ ಬರತಕ್ಕ ಭೀಮಾರ್ಜುನನಕುಲಸಹದೇವರನ್ನು ನೋಡಿ ಮಹಾರಥಿಕರೂ ಜಯಾಪೇಕ್ಷಿಗಳೂ ಆದ ಗಂಧರ್ವರು ನಿರ್ಭಯವಾಗಿ ಕ್ಷಣಮಾತ್ರದಲ್ಲಿ ತಮ್ಮ ಸೈನ್ಯವನ್ನು ಗುಂಪುಕೂಡಿಸಿಕೊಂಡು ಯುದ್ಧಕ್ಕೆ ಸಿದ್ಧರಾದರು. ಆಗ ಭೀಮಾದಿಗಳು ಧರ್ಮರಾಯನ ವಚನಾನುಸಾರವಾಗಿ ಗಂಧರ್ವರ ಸಂಗಡ ಮೃದುವಾಗಿ ಯುದ್ಧವನ್ನುಪಕ್ರಮಿಸಿದರು. ಬಳಿಕ ಶತ್ರುನಾಶಕನಾದ ಅರ್ಜುನನು ಈ ಗಂಧರ್ವರ ಸಂಗಡ ಮೃದುವಾಗಿ ಯುದ್ಧಮಾಡಿದರೆ ನಮಗೆ ಶ್ರೇಯಸ್ಸಾಗಲಾರದೆಂದು ಯೋಚಿಸಿ, ಕ್ರೂರರಾದ ಆ ಗಂಧರ್ವರನ್ನು ಕುರಿತು ಸಾಮೋಪಾಯದಿಂದ "ಎಲೈ ಗಂಧರ್ವರೆ, ನಮ್ಮಣ್ಣನಾದ ದುರ್ಯೋಧನನನ್ನು ನೀವು ಬಿಟ್ಟುಬಿಡಿರಿ" ಎನಲು, ಆ ಮಾತನ್ನು ಕೇಳಿ ಗಂಧರ್ವರು ನಗುತ್ತ ಅರ್ಜುನನನ್ನು ಕುರಿತು "ಎಲೈ ಅರ್ಜುನನೆ, ನಾವು ಚಿತ್ರಸೇನನ ಆಜ್ಞೆಯನ್ನನುಸರಿಸಿ ಲೋಕದಲ್ಲಿ ಸುಖವಾಗಿ ಸಂಚರಿಸುವರಾದ್ದರಿಂದ ಆತನು ಏನು ಆಜ್ಞಾಪಿಸುವನೋ ಅದನ್ನು ನಡಿಸತಕ್ಕವರು. ಆ ಚಿತ್ರಸೇನನು ಹೊರತು ನಮಗೆ ಮತ್ತೊಬ್ಬರು ಆಜ್ಞಾಪಿಸತಕ್ಕವರಲ್ಲ" ಎಂದರು. ಅದನ್ನು ಕೇಳಿ ಅರ್ಜುನನು "ಎಲೈ ಗಂಧರ್ವರೆ, ಗಂಧರ್ವರಾಜನಿಗೆ ಮನುಷ್ಯರ ಸಂಗಡ ಯುದ್ಧಮಾಡಿ ಪರಸ್ತ್ರೀಯರನ್ನು ಸ್ಪರ್ಶಮಾಡತಕ್ಕ ನಿಂದ್ಯವಾದ ಕರ್ಮವು ಯೋಗ್ಯವಾದದ್ದಲ್ಲ. ಆದ್ದರಿಂದ ಧೃತರಾಷ್ಟ್ರನ ಕುಮಾರರನ್ನು ಬಿಟ್ಟುಬಿಡಿರಿ. ಧರ್ಮರಾಯನ ಆಜ್ಞೆಯಾಗಿರುವದು. ಈಗಲೇ ಕೌರವರ ರಾಣಿವಾಸದವರನ್ನು ಬಿಟ್ಟುಬಿಡಿರಿ. ನೀವು ಸಾಮೋಪಾಯದಿಂದ ನನ್ನ ಮಾತನ್ನು ಕೇಳದೆ

ಹೋದರೆ, ನಾನು ಪರಾಕ್ರಮವನ್ನು ತೋರಿಸಿ ದುರ್ಯೋಧನನನ್ನು ಬಿಡಿಸುವೆನು" ಎಂದು ನುಡಿದು, ಧನುಸ್ಸಿನಲ್ಲಿ ಬಾಣಗಳನ್ನು ಸಂಧಾನಮಾಡಿ ಗಂಧರ್ವರಮೇಲೆ ಪ್ರಯೋಗಿಸಿದನು. ಆಗ ಬಲಿಷ್ಠರಾದ ಗಂಧರ್ವರೂ ಸಹ ಗುಂಪಾಗಿ ಅರ್ಜುನಾದಿಗಳ ಸಂಗಡ ಯುದ್ಧಕ್ಕೆ ತೊಡಗಿದರು. ಪಾಂಡವರಿಗೂ ಗಂಧರ್ವರಿಗೂ ಘೋರವಾಗಿ ಯುದ್ಧವು ನಡೆಯಿತು.

## ೨೪೪ನೇ ಅಧ್ಯಾಯ—ಘೋಷಯಾತ್ರೆ—(ಪಾಂಡವರಿಗೂ ಗಂಧರ್ವರಿಗೂ ಯುದ್ಧ.)

ವೈಶಂಪಾಯನಮುನೀಂದ್ರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಬಳಿಕ ದಿವ್ಯಾಸ್ತ್ರಸಂಪನ್ನರಾದ ಗಂಧರ್ವರು ಪಾಂಡವರ ಸುತ್ತಲೂ ಮುತ್ತಿಕೊಂಡು ಅವರಮೇಲೆ ದಿವ್ಯಾಸ್ತ್ರಗಳನ್ನು ಪ್ರಯೋಗಿಸಲು, ಆಗ ಭೀಮಾರ್ಜುನನಕುಲಸಹದೇವರು ಆ ಅಸ್ತ್ರಗಳಿಗೆ ಪ್ರತ್ಯಸ್ತ್ರಗಳನ್ನು ಪ್ರಯೋಗಿಸುತ್ತಿರಲು, ಆ ಯುದ್ಧವು ಅತ್ಯದ್ಭುತವಾಗಿ ತೋರುತ್ತಿತ್ತು. ಆ ಸಮಯದಲ್ಲಿ ಕರ್ಣ ದುರ್ಯೋಧನರ ರಥವನ್ನು ಮೊದಲು ಹ್ಯಾಗೆ ತಮ್ಮ ಅಸ್ತ್ರಗಳಿಂದ ಚೂರುಚೂರು ಮಾಡಿದರೋ ಹಾಗೆ, ಭೀಮಾರ್ಜುನ ನಕುಲಸಹದೇವರ ರಥಗಳನ್ನೂ ಚೂರುಚೂರುಮಾಡಿದರು. ಈ ಪ್ರಕಾರ ಯುದ್ಧಮಾಡುತ್ತ ತಮ್ಮಮೇಲೆ ಕಾಣಿಸಿಕೊಳ್ಳುವ ಗಂಧರ್ವರನ್ನು ಆ ನಾಲ್ಕುಮಂದಿ ಪಾಂಡವರು ಅನೇಕ ಬಾಣವೃಷ್ಟಿಗಳಿಂದ ಹೊಡೆಯಲು, ಅದನ್ನು ಸಹಿಸಲಾರದೆ ಆ ಪಾಂಡವರ ಎದುರಿಗೆ ಹೋಗುವದಕ್ಕೆ ಸಾಮರ್ಥ್ಯವಿಲ್ಲದಿದ್ದರೂ ಅತಿಕ್ರೋಧದಿಂದ ಯುದ್ಧಮಾಡುತ್ತಿದ್ದರು. ಅದನ್ನು ನೋಡಿ ಅರ್ಜುನನು ಕೋಪಗೊಂಡು ಅವರಮೇಲೆ ಅನೇಕ ದಿವ್ಯಾಸ್ತ್ರಗಳನ್ನು ಪ್ರಯೋಗಿಸಿ ಅನೇಕ ಮಂದಿ ಗಂಧರ್ವರನ್ನು ಸಂಹಾರಮಾಡಿ ಆಗ್ನೇಯಾಸ್ತ್ರವನ್ನು ಪ್ರಯೋಗಮಾಡಿದನು. ಆ ಬಲಿಷ್ಠನಾದ ಭೀಮಸೇನನೂ ನಕುಲಸಹದೇವರೂ ಸಹ ದೊಡ್ಡದಾದ ಧನಸ್ಸುಗಳನ್ನು ಹಿಡಿದು, ಅವುಗಳಲ್ಲಿ ತೀಕ್ಷ್ಣವಾದ ಬಾಣಗಳನ್ನು ಸಂಧಾನಮಾಡಿ ಗಂಧರ್ವರನ್ನು ಗಂಪುಗಂಪಾಗಿ ಉರುಳಿಸಿದರು. ಈ ಪ್ರಕಾರ ಮಹಾರಥಿಕರಾದ ಪಾಂಡವರಿಂದ ಪೆಟ್ಟುತಿಂದ ಗಂಧರ್ವರು ಧೃತರಾಷ್ಟ್ರನ ಮಕ್ಕಳಾದ ಕೌರವರನ್ನು ಎತ್ತಿಕೊಂಡು ಆಕಾಶಮಾರ್ಗಕ್ಕೆ ಹಾರಿದರು. ಅದನ್ನು ನೋಡಿ ಅರ್ಜುನನು ಅವರಮೇಲೆ ಮಹತ್ತಾದ ಅನೇಕ ಬಾಣಗಳನ್ನು ಪ್ರಯೋಗಿಸಿ ಶರಪಂಜರವನ್ನು ರಚಿಸಿ, ಪಕ್ಷಿಗಳನ್ನು ಪಂಜರದಲ್ಲಿ ಕೂಡುವಂತೆ ಆ ಶರಪಂಜರದಲ್ಲಿ ಆ ಗಂಧರ್ವರನ್ನು ಸೇರಿಸಿದನು. ಬಳಿಕ ಗಂಧರ್ವರು ಅಧಿಕವಾದ ಕ್ರೋಧಾವೇಶವುಳ್ಳವರಾಗಿ ಗದೆ, ಶಕ್ತಿ ಮೊದಲಾದ ಅನೇಕ ಆಯುಧಗಳನ್ನು ಅರ್ಜುನನಮೇಲೆ ಪ್ರಯೋಗಿಸಿದರು. ದಿವ್ಯಾಸ್ತ್ರಸಂಪನ್ನನಾದ ಅರ್ಜುನನು ಆ ಆಯುಧಗಳನ್ನೆಲ್ಲಾ ತನ್ನ ಬಾಣಗಳಿಂದ ಕತ್ತರಿಸಿ ಅನೇಕ ಭಲ್ಲಾಯುಧಗಳಿಂದ ಗಂಧರ್ವರ ಶರೀರವನ್ನು ಕತ್ತರಿಸಿದನು. ಆಗ ಗಂಧರ್ವರ ಕೈಗಳೂ ಕಾಲುಗಳೂ ಶಿರಸ್ಸುಗಳೂ ಛಿನ್ನಭಿನ್ನವಾಗಿ ಆಕಾಶದಿಂದ ಕೆಳಕ್ಕೆ ಬೀಳುವ ಕಾಲದಲ್ಲಿ ಶಿಲಾವರ್ಷವಾಗುವಂತೆ ತೋರುತ್ತಿತ್ತು. ಈ ಪ್ರಕಾರ ಅರ್ಜುನನಿಂದ ಪೆಟ್ಟುತಿಂದ ಗಂಧರ್ವರು ಆಕಾಶದಲ್ಲಿ ನಿಂತು ಭೂಮಿಯಮೇಲೆ ನಿಂತಿದ್ದ ಅರ್ಜುನನ ಮೇಲೆ ಅಧಿಕವಾದ ಬಾಣವೃಷ್ಟಿಗಳನ್ನು ಕರೆದರು. ಆ ಬಾಣವೃಷ್ಟಿಗಳನ್ನು ಶೂರನಾದ ಅರ್ಜುನನು ತನ್ನ ಬಾಣಗಳಿಂದ ತಡೆದು, ಸ್ಥೂಣಾಕರ್ಣ, ಐಂದ್ರ, ಆಗ್ನೇಯ, ಸೌಮ್ಯ ಮೊದಲಾದ ಅಸ್ತ್ರಗಳನ್ನು ಗಂಧರ್ವರಮೇಲೆ ಪ್ರಯೋಗಿಸಲು, ಅವುಗಳಿಂದ ಪೀಡಿತರಾದ ಗಂಧರ್ವರು ಇಂದ್ರನ ದಿವ್ಯಾಸ್ತ್ರಗಳಿಂದ ಪೀಡಿತರಾದ ದೈತ್ಯರಂತೆ ವಿಷಾದಪಟ್ಟರು. ಅದನ್ನು ನೋಡಿ ಚಿತ್ರಸೇನನು ಗದೆಯನ್ನು ಕಯ್ಯಲ್ಲಿ ಹಿಡಿದು ಅರ್ಜುನನಮೇಲೆ ಕಾಣಿಸಿಕೊಂಡನು. ಆಗ ಅರ್ಜುನನು ಗಂಧರ್ವರಾಜನಾದ ಚಿತ್ರಸೇನನ ಕಯ್ಯಲ್ಲಿದ್ದ ಆ ಗದಾಯುಧವನ್ನು ಏಳು ಬಾಣಗಳಿಂದ ಕತ್ತರಿಸಿದನು. ಬಳಿಕ ಚಿತ್ರಸೇನನು ತನ್ನ ಮಾಯಾಬಲದಿಂದ ಅರ್ಜುನನ ಸಂಗಡ ಯುದ್ಧಮಾಡುವದಕ್ಕೆ ಉಪಕ್ರಮಿಸಿದನು. ಆಗ ಅರ್ಜುನನು ಶಬ್ದವೇದಿಯೆಂಬ ವಿದ್ಯದಿಂದ ಆ ಗಂಧರ್ವನು ಇರತಕ್ಕ ಸ್ಥಳವನ್ನು ಗೊತ್ತುಮಾಡಿಕೊಂಡು, ದಿವ್ಯಾಸ್ತ್ರಗಳಿಂದ ಆತನ ಗಂಧರ್ವ ಮಾಯೆಯನ್ನು ನಾಶಮಾಡಿ, ಅನೇಕ ಬಾಣಗಳಿಂದ ಆತನನ್ನು ಪೆಟ್ಟಿಕ್ಕಿದನು. ಹೀಗೆ ಅರ್ಜುನನ ಬಾಣಗಳಿಂದ ಪೆಟ್ಟುತಿಂದ ಚಿತ್ರಸೇನನು ಅರ್ಜುನನ

ಕಣ್ಣಿಗೆ ಕಾಣಿಸಿಕೊಂಡು “ಎಲೈ ಅರ್ಜುನನೆ, ನಿನಗೆ ನಾನು ಮಿತ್ರನೆಂದು ಭಾವಿಸು” ಎನಲು, ಅರ್ಜುನನು ಯುದ್ಧದಲ್ಲಿ ದುರ್ಬಲನಾಗಿ ತನಗೆ ಸ್ನೇಹಿತನಾಗಿ ಬಂದ ಚಿತ್ರಸೇನನನ್ನು ನೋಡಿ ತನ್ನ ದಿವ್ಯಾಸ್ತ್ರಗಳನ್ನು ಉಪಸಂಹರಿಸಿಕೊಂಡನು. ಆಗ ಭೀಮಾರ್ಜುನ ನಕುಲಸಹದೇವರೂ ಚಿತ್ರಸೇನನೂ ಸಹ ತಮ್ಮ ಧನುಸ್ಸುಗಳ ಹೆದೆಗಳನ್ನು ಬಿಚ್ಚಿ, ರಥಾಶ್ವಗಳ ವೇಗವನ್ನು ನಿಲ್ಲಿಸಿ, ಪರಸ್ಪರವಾಗಿ ಕುಶಲಪ್ರಶ್ನೆಗಳನ್ನು ಮಾಡಿದರು.

## ೨೪೬ನೇ ಅಧ್ಯಾಯ.—ಘೋಷಯಾತ್ರೆ—(ಪಾಂಡವರು ದುರ್ಯೋಧನನನ್ನು ಬಿಡಿಸಿದ್ದು.)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಆಬಳಿಕ ಅರ್ಜುನನು ಗಂಧರ್ವಸೈನ್ಯದ ಮಧ್ಯದಲ್ಲಿ ನಿಂತಿದ್ದ ಚಿತ್ರಸೇನನನ್ನು ನೋಡಿ, “ಎಲೈ ವೀರನೆ, ಕೌರವರನ್ನು ನಿಗ್ರಹಿಸಬೇಕೆಂಬ ಆಗ್ರಹದಿಂದ ನೀನು ಹೀಗೆ ಮಾಡಿದೆ? ಪತ್ನಿಯೊಡಗೂಡಿದ ದುರ್ಯೋಧನನನ್ನು ಯಾತಕ್ಕೆ ಸೆರೆಹಿಡಿದೆ?” ಎಂದು ಕೇಳಲು; ಚಿತ್ರಸೇನನು “ಎಲೈ ಅರ್ಜುನನೆ, ಪಾಪಾತ್ಮರಾದ ಕರ್ಣ ದುರ್ಯೋಧನರ ಅಭಿಪ್ರಾಯವನ್ನು ನಾನು ತಿಳಿದೆನು. ಅನಾಥರಂತೆ ಅರಣ್ಯದಲ್ಲಿದ್ದುಕೊಂಡು ಕ್ಲೇಶಪಡುತ್ತ ವಿಷಮಸ್ಥಿತಿಯನ್ನು ಹೊಂದಿರುವ ನಿಮ್ಮನ್ನು ಸಮಸ್ಥಿತಿಯಲ್ಲಿರುವ ದುರ್ಯೋಧನನು ನೋಡಿ, ತನ್ನ ಐಶ್ವರ್ಯವನ್ನು ನಿಮಗೆ ತೋರಿಸಿ ಪತಿವ್ರತಾಶಿರೋಮಣಿಯಾದ ದ್ರೌಪದಿಯನ್ನು ಪರಿಹಾಸಮಾಡಬೇಕೆಂದು ಈ ವನಕ್ಕೆ ಬಂದನು. ಇದನ್ನು ತಿಳಿದು ಇಂದ್ರನು ದುರ್ಯೋಧನನನ್ನು ಸೆರೆಹಿಡಿದು ತರುವಂತೆ ನನಗೆ ಆಜ್ಞಾಪಿಸಿ ಇಲ್ಲಿಗೆ ಕಳುಹಿಸಿದನು. ಅರ್ಜುನನು ಮಿತ್ರನಾಗಿಯೂ ಶಿಷ್ಯನಾಗಿಯೂ ಇರುವದರಿಂದ ಆತನನ್ನೂ ಆತನ ಅಣ್ಣತಮ್ಮಂದಿರನ್ನೂ ಯುದ್ಧದಲ್ಲಿ ನೀನು ಸಂರಕ್ಷಿಸೆಂದು ನನಗೆ ಆಜ್ಞೆಯನ್ನು ಕೊಟ್ಟದ್ದರಿಂದ, ಇಲ್ಲಿಗೆ ನಾನು ಬಂದೆನು. ಈ ಪಾಪಾತ್ಮನಾದ ದುರ್ಯೋಧನನನ್ನು ಇಂದ್ರನ ಆಜ್ಞೆಯಾಗಿರುವಂತೆ ನಾನು ಹಿಂಗಟ್ಟುಮುರಿಕಟ್ಟಿ ಅಲ್ಲಿಗೆ ತೆಗೆದುಕೊಂಡು ಹೋಗುವೆನು” ಎಂದನು. ಆ ಮಾತನ್ನು ಕೇಳಿ ಅರ್ಜುನನು “ಎಲೈ ಚಿತ್ರಸೇನನೆ, ಈ ದುರ್ಯೋಧನನು ನನಗೆ ಅಣ್ಣನಾಗಬೇಕು. ನನ್ನಲ್ಲಿ ನಿನಗೆ ಪ್ರೀತಿಯಿದ್ದರೆ ಧರ್ಮರಾಯನ ಆಜ್ಞೆಯಾಗಿರುವಂತೆ ಈತನನ್ನು ಬಿಟ್ಟುಬಿಡು” ಎನಲು, ಚಿತ್ರಸೇನನು “ಎಲೈ ಅರ್ಜುನನೆ, ಈ ಪಾಪಾತ್ಮನು ಯಾವಾಗಲೂ ದುರಹಂಕಾರಿಯಾಗಿ ಧರ್ಮರಾಯನಿಗೂ ದ್ರೌಪದಿಗೂ ಯಾವಾಗಲೂ ವಂಚಕನಾಗಿರುವದರಿಂದ, ಇವನನ್ನು ಬಿಡುವದು ಸರಿಯಾದದ್ದಲ್ಲ. ಧರ್ಮರಾಯನು ಪಾಪಾತ್ಮನಾದ ಇವನ ದುರಾಲೋಚನೆಯನ್ನು ತಿಳಿಯದಿರುವನು. ಇವನ ವೃತ್ತಾಂತವನ್ನು ನಾವೆಲ್ಲರೂ ಧರ್ಮರಾಯನಿಗೆ ಅರಿಕೆಮಾಡೋಣ” ಎಂದು ನುಡಿದು, ಎಲ್ಲರೂ ಧರ್ಮರಾಯನ ಸನ್ನಿಧಿಗೆ ಬಂದು ಕಪಟಿಯಾದ ದುರ್ಯೋಧನನ ಸಂಕಲ್ಪವನ್ನು ಆತನಿಗೆ ಬಿನ್ನವಿಸಿದರು. ಆಗ ಧರ್ಮರಾಯನು ಗಂಧರ್ವರ ಮಾತನ್ನು ಕೇಳಿ, ದುರ್ಯೋಧನ ಮೊದಲಾದವರ ಸೆರೆಯನ್ನು ಬಿಡಿಸಿ, ಚಿತ್ರಸೇನನನ್ನು ಶ್ಲಾಘಿಸಿ, “ಮಂತ್ರಿ, ಜ್ಞಾತಿಬಾಂಧವರೊಡಗೂಡಿದ ದುರ್ವೃತ್ತನಾದ ದುರ್ಯೋಧನನನ್ನು ಬಲಿಷ್ಠರಾದ ಗಂಧರ್ವರು ದೈವಾನುಗ್ರಹದಿಂದಲೇ ಸಂಹಾರಮಾಡದೆ ಬಿಟ್ಟು, ನಮ್ಮ ವಿಷಯದಲ್ಲಿ ವಿಶೇಷವಾಗಿ ಉಪಕಾರವನ್ನು ಮಾಡಿದರು. ದುರಾತ್ಮನಾದ ದುರ್ಯೋಧನನನ್ನು ಸೆರೆಯಿಂದ ಬಿಟ್ಟದ್ದರಿಂದ ನಮ್ಮ ಕುಲಕ್ಕೆ ಉಂಟಾಗುತ್ತಿದ್ದ ಅಪಖ್ಯಾತಿಯು ತಪ್ಪಿತು. ಎಲೈ ಚಿತ್ರಸೇನನೆ, ನಿನ್ನ ದರ್ಶನದಿಂದ ನನಗೆ ತುಂಬಾ ಪ್ರೀತಿಯುಂಟಾಗಿರುವದು. ನಿನಗೆ ನನ್ನಿಂದ ಏನಾಗಬೇಕೋ ಅದನ್ನು ಆಜ್ಞಾಪಿಸಿ ಕೈಕೊಂಡು, ನಿಮ್ಮವರೊಡನೆ ನಿನ್ನ ಸ್ಥಾನಕ್ಕೆ ಪ್ರಯಾಣವನ್ನು ಬೆಳಸಬಹುದು” ಎನಲು, ಚಿತ್ರಸೇನನು ಗಂಧರ್ವರೊಡನೆ ಸಂತೋಷಪಟ್ಟು ಬಳ್ಳೇದು ಹಾಗೇ ಆಗಲೆಂದು ನುಡಿದು, ತನ್ನ ಸಂಗಡ ಬಂದಿದ್ದ ಅಪ್ಸರಸ್ತ್ರೀಯರೆಲ್ಲರನ್ನೂ ಕರೆದುಕೊಂಡು ಎಲ್ಲರೊಡನೆ ಗಂಧರ್ವಲೋಕಕ್ಕೆ ಹೊರಟುಹೋದನು. ಬಳಿಕ ಇಂದ್ರನು ಯುದ್ಧದಲ್ಲಿ ಹತರಾಗಿದ್ದ ಗಂಧರ್ವರನ್ನು ಅಮೃತವೃಷ್ಟಿಯಿಂದ ಬದುಕಿಸಿದನು.

ಎಲೈ ಜನಮೇಜಯರಾಯನೆ, ಮಹಾರಥಿಕರಾದ ಪಾಂಡವರು ಈ ಪ್ರಕಾರ ಕೌರವರನ್ನೂ ಅವರ ರಾಣಿವಾಸದವರನ್ನೂ ಗಂಧರ್ವರ ಸೆರೆಯ ದೆಸೆಯಿಂದ ಬಿಡಿಸಿ, ಅವರಿಂದ ಮರ್ಯಾದೆಯನ್ನು ಪಡೆದು, ಸಂತೋಷಯುಕ್ತರಾಗಿ ಯಜ್ಞದಲ್ಲಿ ಅಗ್ನಿಗಳು ಮೆರೆಯುವಂತೆ ಮೆರೆದರು. ಬಳಿಕ ತಮ್ಮಂದಿರೊಡಗೂಡಿದ ದುರ್ಯೋಧನನನ್ನು ನೋಡಿ, ಧರ್ಮರಾಯನು ವಿಶ್ವಾಸದಿಂದ "ಎಲೈ ದುರ್ಯೋಧನನೆ, ಇನ್ನು ಮೇಲೆ ನೀನು ಇಂಥ ಸಾಹಸವನ್ನು ಮಾಡಬೇಡ. ಯಾವಾಗಲೂ ಸಾಹಸಕಾರ್ಯವನ್ನು ಮಾಡತಕ್ಕವನಿಗೆ ಸುಖವುಂಟಾಗಲಾರದು. ಇನ್ನುಮೇಲೆ ನೀನು ನಿನ್ನ ತಮ್ಮಂದಿರೊಡಗೂಡಿ ಸುಖವಾಗಿ ನಿನ್ನ ಅರಮನೆಗೆ ಹೊರಟುಹೋಗು. ಯಾರ ಸಂಗಡಲೂ ದ್ವೇಷವನ್ನು ಮಾಡಬೇಡ" ಎಂದು ಆಜ್ಞೆಯನ್ನು ಕೊಡಲು; ದುರ್ಯೋಧನನು ಧರ್ಮರಾಯನಿಗೆ ವಂದನೆಯನ್ನು ಮಾಡಿ, ರೋಗಿಯಂತೆ ದುರ್ಬಲನಾಗಿಯೂ ಲಜ್ಜಾಯುಕ್ತನಾಗಿಯೂ ಎಲ್ಲರೊಡನೆ ಹಸ್ತಿನಾನಗರಕ್ಕೆ ಪ್ರಯಾಣಮಾಡಿದನು. ಬಳಿಕ ಧರ್ಮರಾಯನು ತಮ್ಮಂದಿರಿಂದಲೂ ತಪಸ್ವಿಗಳಾದ ಬ್ರಾಹ್ಮಣರಿಂದಲೂ ಸತ್ಕೃತನಾಗಿ, ಅವರೊಡಗೂಡಿ ದೇವತೆಗಳೊಡಗೂಡಿದ ಇಂದ್ರನಂತೆ ಪ್ರಕಾಶಿಸುತ್ತ ದ್ವೈತವನದಲ್ಲಿ ಸಂತೋಷದಿಂದ ವಿಹರಿಸುತ್ತಿದ್ದನು—ಎಂದು ವೈಶಂಪಾಯನಮುನೀಶ್ವರನು ಜನಮೇಜಯರಾಯನಿಗೆ ವಿವರಿಸಿದನು.

### ೨೪೬ನೇ ಅಧ್ಯಾಯ.—ಘೋಷಯಾತ್ರೆ—(ಕರ್ಣ ದುರ್ಯೋಧನರ ಸಂವಾದ.)

ಅನಂತರದಲ್ಲಿ ಜನಮೇಜಯರಾಯನು ವೈಶಂಪಾಯನಮುನೀಂದ್ರನನ್ನು ಕುರಿತು— ಎಲೈ ಮುನೀಂದ್ರನೆ, ಯಾವಾಗಲೂ ತನ್ನ ಪ್ರತಾಪವನ್ನೇ ಹೊಗಳಿಕೊಳ್ಳುತ್ತಾ ಅಹಂಕಾರಿಯೂ ಪಾಂಡವರಿಗೆ ಅವಮಾನ ಮಾಡುವದರಲ್ಲಿ ಅಭಿಪ್ರಾಯವುಳ್ಳವನೂ ಪಾಪಾತ್ಮನೂ ದುರಾತ್ಮನೂ ಆದ ದುರ್ಯೋಧನನು ಶತ್ರುಗಳಿಂದ ಯುದ್ಧದಲ್ಲಿ ಪರಾಜಿತನಾಗಿ, ಅವರ ಸೆರೆಗೆ ಸಿಕ್ಕಿ, ಮಹಾತ್ಮರಾದ ಪಾಂಡವರ ಸಹಾಯದಿಂದ ಬಿಡಿಸಿಕೊಂಡು ಲಜ್ಜೆಯಿಂದಲೂ ದುಃಖದಿಂದಲೂ ವ್ಯಾಕುಲವಾದ ಮನಸ್ಸುಳ್ಳವನಾಗಿ ತಿರುಗಿ ಹಸ್ತಿನಾನಗರಕ್ಕೆ ಪ್ರವೇಶಮಾಡಿದ್ದು ಹ್ಯಾಗೆ? ಅದನ್ನು ವಿಸ್ತಾರವಾಗಿ ನನಗೆ ತಿಳುಹಿಸು—ಎನಲು; ವೈಶಂಪಾಯನನು—ಎಲೈ ರಾಯನೇ ಕೇಳು, ಆ ಪ್ರಕಾರ ಯುದ್ಧದಲ್ಲಿ ಪರಾಜಿತನಾದ ಪಾಪಾತ್ಮನಾದ ದುರ್ಯೋಧನನು ಲಜ್ಜೆಯಿಂದ ತಲೆಯನ್ನು ತಗ್ಗಿಸಿಕೊಂಡು, ತನ್ನ ಅಪಜಯವನ್ನು ಬುದ್ಧಿಯಿಂದ ಯೋಚಿಸುತ್ತ ದುಃಖಿತನಾಗಿ ಚತುರಂಗಬಲದೊಡನೆ ಹಸ್ತಿನಾನಗರಕ್ಕೆ ಅಭಿಮುಖವಾಗಿ ಹೊರಟು, ಮಾರ್ಗದಲ್ಲಿ ಹುಲ್ಲೂ ನೀರೂ ಇರತಕ್ಕ ರಮ್ಯವಾದ ಒಂದು ಪ್ರದೇಶದಲ್ಲಿ ತನ್ನ ಚತುರಂಗಬಲವನ್ನು ಇಳುಹಿಸಿ, ವಾಹನದಿಂದ ಕೆಳಕ್ಕಿಳಿದು ಕೆಂಪುಬಣ್ಣದ ಹಾಸಿಗೆಯಮೇಲೆ ಕುಳಿತುಕೊಂಡನು. ಆಗ ಅವನು ಉಷಃಕಾಲದಲ್ಲಿ ರಾಹುಗ್ರಸ್ತನಾದ ಚಂದ್ರನಂತೆ ತೋರುತ್ತಿದ್ದನು. ಆಗ ಕರ್ಣನು ಆತನ ಬಳಿಗೆ ಬಂದು "ಎಲೈ ದುರ್ಯೋಧನನೆ, ಯುದ್ಧದಲ್ಲಿ ಕಾಮರೂಪಿಗಳಾದ ಗಂಧರ್ವರನ್ನು ಜಯಿಸಿ ನೀನು ಮಹಾರಥಿಕರಾದ ತಮ್ಮಂದಿರೊಡಗೂಡಿ ದೈವಯೋಗದಿಂದ ಬದುಕಿ ಬಂದೆಯಾ? ನೀನು ನೋಡುತ್ತಿರುವಾಗಲೇ, ನಾನು ಗಂಧರ್ವರಿಂದ ಪೀಡಿತನಾಗಿ ಓಡಿಹೋಗುತ್ತಿದ್ದ ಸೈನ್ಯವನ್ನು ನಿಲ್ಲಿಸುವದಕ್ಕೆ ಸಾಮರ್ಥ್ಯವಿಲ್ಲದೆ, ಆ ಗಂಧರ್ವರ ಬಾಣಗಳಿಂದ ಗಾಯವಡೆದ ಶರೀರವುಳ್ಳವನಾಗಿ ಓಡಿಹೋದೆನು. ಅಮಾನುಷವಾದ ಆ ಗಂಧರ್ವರ ಯುದ್ಧದಲ್ಲಿ ಸಪರಿವಾರನಾಗಿ ರಾಣಿವಾಸದೊಡಗೂಡಿದ್ದ ನೀನು ಅವರಿಂದ ಸ್ವಲ್ಪವೂ ಪೆಟ್ಟುತಿನ್ನದೆ ಅವರನ್ನು ಜಯಿಸಿ ಕ್ಷೇಮವಾಗಿ ಬಂದದ್ದು ಬಹಳ ಆಶ್ಚರ್ಯವಾಗಿ ತೋರುತ್ತಿರುವದು. ಆ ಗಂಧರ್ವರೊಡನೆ ನೀನು ತಮ್ಮಂದಿರೊಡಗೂಡಿ ಮಾಡಿದ ಸಾಹಸವನ್ನು ಇನ್ಯಾರು ತಾನೆ ಮಾಡ್ಯಾರು?" ಎನಲು, ದುರ್ಯೋಧನನು ಅಂಗದೇಶಾಧಿಪತಿಯಾದ ಕರ್ಣನನ್ನು ನೋಡಿ ದುಃಖದಿಂದ ಗದ್ಗದಸ್ವರವುಳ್ಳವನಾಗಿ ಮಾತನಾಡಿದನು.

## ೨೪೭ನೇ ಅಧ್ಯಾಯ. — ಘೋಷಯಾತ್ರೆ — (ಕರ್ಣ ದುರ್ಯೋಧನರ ಸಂವಾದ.)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೇ, ಆಗ ದುರ್ಯೋಧನನು ಕರ್ಣನನ್ನು ಕುರಿತು "ಎಲೈ ಕರ್ಣನೆ, ನನ್ನ ಪರಾಕ್ರಮದಿಂದ ನಾನು ಗಂಧರ್ವರನ್ನು ಜಯಿಸಿದಂತೆ ನೀನು ತಿಳಿದುಕೊಂಡಿರುವೆಯೇ? ಹೊರತಾಗಿ, ಅಲ್ಲಿ ನಡೆದ ಸಂಗತಿಯು ನಿನಗೆ ತಿಳಿಯದು. ಆದ್ದರಿಂದ ನಿನ್ನ ಮಾತಿನಲ್ಲಿ ನಾನು ದೋಷವನ್ನೆಣಿಸುವದಿಲ್ಲ. ತಮ್ಮಂದಿರೊಡಗೂಡಿ ನಾನು ಬಹುಕಾಲ ಗಂಧರ್ವರ ಸಂಗಡ ಯುದ್ಧವನ್ನು ಮಾಡಿದೆನು. ಆಗ ಉಭಯಸೈನ್ಯಗಳಲ್ಲಿಯೂ ಬಹುಮಂದಿ ಯೋಧರು ನಷ್ಟರಾಗಿ ಹೋದರು. ಬಳಿಕ ಗಂಧರ್ವರು ಮಾಯೆಯಿಂದ ಯಾರಿಗೂ ಕಾಣಿಸಿಕೊಳ್ಳದೆ ಆಕಾಶಮಾರ್ಗದಲ್ಲಿ ಯುದ್ಧ ಮಾಡಲುಪಕ್ರಮಿಸಲು, ಸಮವಾಗಿ ಯುದ್ಧವು ನಡೆಯದೆ ಅವರಿಂದ ನಾವು ಪರಾಜಿತರಾದೆವು. ಆಗ ಅವರು ಪುತ್ರರಿಂದಲೂ ತಮ್ಮಂದಿರಿಂದಲೂ ರಾಣಿವಾಸದವರಿಂದಲೂ ಕೂಡಿದ್ದ ನನ್ನನ್ನು ಸೆರೆಹಿಡಿದು ಆಕಾಶಮಾರ್ಗಕ್ಕೆ ತೆಗೆದುಕೊಂಡು ಹೋದರು. ಆಗ ನಾವು ದುಃಖಪಡುತ್ತಿದ್ದದ್ದನ್ನು ಕಂಡು ಮಹಾರಥಿಕರಾದ ನಮ್ಮ ಅಮಾತ್ಯರು ಧರ್ಮರಾಯನ ಬಳಿಗೆ ಹೋಗಿ ಆತನಿಗೆ ಶರಣಾಗತರಾಗಿ 'ಎಲೈ ಧರ್ಮರಾಯನೆ, ತಮ್ಮಂದಿರಿಂದಲೂ ಪುತ್ರರಿಂದಲೂ ಪತ್ನಿಯರಿಂದಲೂ ಕೂಡಿರುವ ದುರ್ಯೋಧನನು ಗಂಧರ್ವರಿಗೆ ಕೈಸೆರೆಸಿಕ್ಕಿ ದುಃಖಪಡುತ್ತಿರುವನು. ಆತನನ್ನು ನೀನು ಬಿಡಿಸು. ಕೌರವರ ಪತ್ನಿಯರನ್ನು ಶತ್ರುಗಳು ಸ್ಪರ್ಶಮಾಡಿರುವರು. ಇದರಿಂದ ನಿಮ್ಮ ಕುಲಕ್ಕೆ ಅಪಖ್ಯಾತಿಯುಂಟಾಗಿರುವದು' ಎಂದು ಅರಿಕೆ ಮಾಡಿದರು. ಬಳಿಕ ಮಹಾರಥಿಕರಾದ ಭೀಮಾರ್ಜುನ ನಕುಲಸಹದೇವರು ಧರ್ಮರಾಯನ ಅಪ್ಪಣೆಯನ್ನು ತೆಗೆದುಕೊಂಡು ಆಯುಧಪಾಣಿಗಳಾಗಿ ಗಂಧರ್ವರ ಮೇಲೆ ಯುದ್ಧಕ್ಕೆ ಹೊರಟು, ಅವರನ್ನು ಜಯಿಸುವದಕ್ಕೆ ಸಮರ್ಥರಾದರೂ, ಸಾಮೋಪಾಯದಿಂದಲೇ ನಮ್ಮನ್ನು ಬಿಡುವಂತೆ ಅವರನ್ನು ಬೇಡಿಕೊಂಡರು. ಆಗ ಅವರು ನಮ್ಮನ್ನು ಬಿಡದೆಹೋಗಲು, ಭೀಮಾದಿಗಳು ಕೋಪೋದ್ದೀಪಿತರಾಗಿ ಅವರಮೇಲೆ ಬಾಣಗಳ ಮಳೆಯನ್ನು ಕರೆದರು. ಆದರಿಂದ ಪೀಡಿತರಾದ ಗಂಧರ್ವರು ಸಂತೋಷದಿಂದಲೇ ನಮ್ಮನ್ನು ಸೆಳೆದುಕೊಂಡು ಆಕಾಶಮಾರ್ಗಕ್ಕೆ ಹೋದರು. ಬಳಿಕ ಅರ್ಜುನನು ಅನೇಕ ಬಾಣಗಳನ್ನು ಪ್ರಯೋಗಿಸಿ ಶರಪಂಜರದಲ್ಲಿ ಆ ಗಂಧರ್ವರೆಲ್ಲರನ್ನೂ ಸಿಕ್ಕಿಸಿಕೊಂಡು, ಅನೇಕ ಬಾಣಗಳನ್ನು ಅವರಮೇಲೆ ಪ್ರಯೋಗಿಸಲು, ಗಂಧರ್ವರಾಜನಾದ ಚಿತ್ರಸೇನನು ಅರ್ಜುನನನ್ನು ಕಾಣಿಸಿಕೊಂಡು ಆತನಿಗೆ ತಾನು ಮಿತ್ರನೆಂದು ಹೇಳಿಕೊಂಡು, ಪರಸ್ಪರವಾಗಿ ಸಂತೋಷದಿಂದ ಆಲಿಂಗನೆ ಮಾಡಿಕೊಂಡು ಕುಶಲಪ್ರಶ್ನೆಯನ್ನು ಮಾಡಿ, ಇಬ್ಬರೂ ಯುದ್ಧಸನ್ನಾಹವನ್ನು ಬಿಟ್ಟು ಉಭಯ ಪಕ್ಷದವರೂ ಒಂದಾದರು. ಆಗ ಅರ್ಜುನನೂ ಚಿತ್ರಸೇನನೂ ಸಹ ಪರಸ್ಪರವಾಗಿ ಮರ್ಯಾದೆಯನ್ನು ಮಾಡಿದರು" ಎಂದು ದುರ್ಯೋಧನನು ಕರ್ಣನಿಗೆ ಹೇಳಿದನು.

## ೨೪೮ನೇ ಅಧ್ಯಾಯ. — ಘೋಷಯಾತ್ರೆ — (ಕರ್ಣ ದುರ್ಯೋಧನರ ಸಂವಾದ.)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ದುರ್ಯೋಧನನು ಕರ್ಣನನ್ನು ಕುರಿತು "ಕರ್ಣನೆ, ಅರ್ಜುನನು ಚಿತ್ರಸೇನನ ಜೊತೆಯನ್ನು ಸೇರಿ ಆತನನ್ನು ಕುರಿತು 'ಎಲೈ ಗಂಧರ್ವಶ್ರೇಷ್ಠನೆ, ನಮ್ಮ ಕೌರವರನ್ನು ಬಿಟ್ಟುಬಿಡು. ಪಾಂಡವರು ಜೀವಸಹಿತರಾಗಿರುವ ಕಾಲದಲ್ಲಿ ಅವರನ್ನು ನೀನು ಸೆರೆಹಿಡಿಯುವದು ಯೋಗ್ಯವಾದದ್ದಲ್ಲ' ಎಂದು ಧೀರನಾಗಿ ಮಾತನಾಡಲು; ನಾವು ಹಸ್ತಿನಾನಗರದಲ್ಲಿ ಆಲೋಚಿಸಿಕೊಂಡು ಬಂದದ್ದನ್ನು ತಿಳಿದು, ಚಿತ್ರಸೇನನು ಅರ್ಜುನನನ್ನು ಕುರಿತು 'ಎಲೈ ಅರ್ಜುನನೆ, ಐಶ್ವರ್ಯದಿಂದ ಹೀನರಾದ ನಿಮ್ಮನ್ನು ಪರಿಹಾಸ ಮಾಡಬೇಕೆಂದು ಕರ್ಣಾದಿಗಳು ಆಲೋಚನೆ ಮಾಡಿಕೊಂಡು ಇಲ್ಲಿಗೆ ಬಂದರು. ಆದ್ದರಿಂದ ಅವರಿಗೆ ತಕ್ಕ ಶಿಕ್ಷೆಯನ್ನು ನಾನು ಮಾಡಿದೆನು' ಎಂದನು. ಅದನ್ನು ಲಜ್ಜಾಯುಕ್ತನಾದ ನಾನು ಕೇಳಿ ಈ ಭೂಮಿಯು ಬಿರಿದಿದ್ದರೆ ಅದರಲ್ಲಿ ಪ್ರವೇಶ ಮಾಡುತ್ತಿದ್ದೆನು. ಮಾಡತಕ್ಕದ್ದೇನು ?

ಬಳಿಕ ಭೀಮಾದಿಗಳೊಡನೆ ಗಂಧರ್ವರು ಧರ್ಮರಾಯನ ಸಮೀಪಕ್ಕೆ ಹೋಗಿ 'ಎಲೈ ಧರ್ಮರಾಯನೆ, ನಿಮ್ಮ ವಿಷಯದಲ್ಲಿ ದುರ್ಯೋಧನನು ದುರಾಲೋಚನೆಯನ್ನು ಮಾಡಿದ್ದರಿಂದ ನಾವು ಆತನನ್ನು ಸೆರೆ ಹಿಡಿದೆವು' ಎಂದು ಹೇಳಿದರು. ಎಲೈ ಕರ್ಣನೆ, ಸ್ತ್ರೀಯರ ಸಮಕ್ಷಮದಲ್ಲಿ ನಾನು ಶತ್ರುಗಳಿಗೆ ಅಧೀನನಾಗಿ ಅವರ ಸೆರೆಗೆ ಸಿಕ್ಕಿ ದೈನ್ಯಪಡುತ್ತ ಧರ್ಮರಾಯನ ಸಹಾಯದಿಂದ ಬಿಡಿಸಿಕೊಂಡು ಬಂದೆನು. ಇದಕ್ಕಿಂತಲೂ ನನಗೆ ಮತ್ತೊಂದು ದುಃಖವು ಯಾವದು ? ಯಾವಾಗಲೂ ನಾನು ಪಾಂಡವರಲ್ಲಿ ದ್ವೇಷಮಾಡುತ್ತ ಅವರನ್ನು ನಿರಾಕರಿಸುತ್ತಿದ್ದೆನು. ಅಂಥ ನಾನು ಅವರ ಸಹಾಯವನ್ನು ಪಡೆದು ಗಂಧರ್ವರ ಸೆರೆಯಿಂದ ಬಿಡಿಸಿಕೊಂಡೆನು. ಹೀಗೆ ನಾನು ಬದುಕಿರುವದಕ್ಕಿಂತಲೂ ಗಂಧರ್ವರ ಯುದ್ಧದಲ್ಲಿ ಮೃತನಾಗಿದ್ದರೆ ಶ್ರೇಯಸ್ಸುಂಟಾಗಿ, ಗಂಧರ್ವರ ಸಂಗಡ ಹೋಡೆದಾಡಿ ಮೃತನಾದನೆಂಬ ಯಶಸ್ಸುಂಟಾಗಿ ಪುಣ್ಯಲೋಕಪ್ರಾಪ್ತಿಯಾಗುತ್ತಿತ್ತು. ಹಾಗಾಗದೆ ಹೋದದ್ದರಿಂದ ಇಲ್ಲೇ ನಾನು ಪ್ರಾಯೋಪವೇಶವನ್ನು ಮಾಡಬೇಕೆಂದು ನಿಶ್ಚಯಿಸಿಕೊಂಡಿರುವೆನು. ನೀವೆಲ್ಲರೂ ದುಶ್ಶಾಸನನೇ ಮೊದಲಾದ ನನ್ನ ತಮ್ಮಂದಿರನ್ನು ಕರೆದುಕೊಂಡು ಹೋಗಿ ಹಸ್ತಿನಾನಗರವನ್ನು ಪ್ರವೇಶಮಾಡಿರಿ. ಶತ್ರುಗಳಿಂದ ಪರಾಜಿತನಾದ ನಾನು ಬೇರೆ ಪಟ್ಟಣಪ್ರವೇಶವನ್ನು ಮಾಡತಕ್ಕವನಲ್ಲ. ಶತ್ರುಗಳನ್ನೆಲ್ಲಾ ಅವಮಾನ ಪಡಿಸಿ ಮಿತ್ರರಿಗೆ ಮಾನವನ್ನುಂಟುಮಾಡಬೇಕೆಂದು ಇಲ್ಲಿಗೆ ಬಂದ ನಾನು, ಶತ್ರುಗಳಿಗೆಲ್ಲಾ ಮಾನವನ್ನುಂಟುಮಾಡಿ ಮಿತ್ರರಿಗೆಲ್ಲಾ ದುಃಖವನ್ನುಂಟುಮಾಡಿದೆನು. ನಾನು ಇಲ್ಲಿಂದ ಮರಳಿ ಹಸ್ತಿನಾನಗರಕ್ಕೆ ಹೋಗಿ ಧೃತರಾಷ್ಟ್ರರಾಯನಿಗೆ ಏನನ್ನು ಅರಿಕೆಮಾಡಲಿ ? ಮತ್ತು ಭೀಷ್ಮ, ದ್ರೋಣ, ಕೃಪ, ವಿದುರ, ಸಂಜಯ, ಸೋಮದತ್ತ, ಬಾಹ್ಲಿಕ, ಮೊದಲಾದವರೂ ಮುಖ್ಯಮುಖ್ಯರಾದ ಪಟ್ಟಣವಾಸಿಗಳೂ ಸಹ ನನ್ನನ್ನು ಕುರಿತು, ಅಲ್ಲೇನು ನಡೆಯಿತೆಂದು ಕೇಳಿದರೆ ಅದಕ್ಕೆ ನಾನೇನು ಉತ್ತರವನ್ನು ಹೇಳಲಿ ? ಮೊದಲು ನಾನು ನನ್ನ ಪರಾಕ್ರಮದಿಂದ ಶತ್ರುಗಳ ತಲೇಮೇಲಿದ್ದುಕೊಂಡು ಈಗ ನನ್ನ ದೋಷದಿಂದಲೇ ಭ್ರಷ್ಟನಾಗಿ ಹೋದೆನು. ನನ್ನಂತೆ ಮದಾಂಧರಾದ ಅವಿನೀತರು ಐಶ್ವರ್ಯವನ್ನೂ ವಿದ್ಯವನ್ನೂ ಪಡೆದು ಬಹುಕಾಲ ಶ್ರೇಯೋವಂತರಾಗಿರಲಾರರು ? ಅಯೋಗ್ಯವಾದ ಕೆಲಸವನ್ನು ಮಾಡಿ ನಾನು ಬುದ್ಧಿಯಿಲ್ಲದೆ ಇಂಥ ದುರವಸ್ಥೆಗೆ ಗುರಿಯಾದೆನು. ಆದ್ದರಿಂದ ನಾನು ಇಲ್ಲೇ ಪ್ರಾಯೋಪವೇಶವನ್ನು ಮಾಡಿ ಪ್ರಾಣವನ್ನು ಬಿಡುವದು ಉತ್ತಮವಾದದ್ದು. ಯಾವಾಗಲೂ ಬಹುಮಾನಿಯಾದ ನಾನು ಪೌರುಷವನ್ನು ಮೆರೆಯಿಸುವದಕ್ಕಾಗದೆ ಶತ್ರುಗಳ ಪರಿಹಾಸಕ್ಕೆ ಗುರಿಯಾಗಿ, ಪಾಂಡವರು ಉಪೇಕ್ಷೆಯಿಂದ ನನ್ನನ್ನು ನೋಡುವಹಾಗೆ ಮಾಡಿಕೊಂಡೆನು. ಇಂಥ ದುರ್ದಶೆಯಲ್ಲಿಯೂ ನಾನು ಜೊರತು ಮತ್ತ್ಯಾವನು ಬದುಕಿರತಕ್ಕವನು ? " ಎಂದು ನುಡಿದು ; ಬಳಿಕ ದುಶ್ಶಾಸನನನ್ನು ನೋಡಿ "ಎಲೈ ತಮ್ಮನೆ, ನನ್ನ ಮಾತನ್ನು ಕೇಳು. ನಾನು ನಿನಗೆ ಇಲ್ಲೇ ಪಟ್ಟಾಭಿಷೇಕವನ್ನು ಮಾಡುವೆನು. ನೀನು ರಾಜನಾಗಿ ಕರ್ಣಶಕುನಿಗಳ ಸಹಾಯದಿಂದ ವಿಸ್ತಾರವಾದ ಭೂಮಂಡಲವನ್ನು ಪರಿಪಾಲಿಸುತ್ತ ತಮ್ಮಂದಿರನ್ನು ರಕ್ಷಿಸಿಕೊಂಡಿರು. ಇಂದ್ರನನ್ನು ಆಶ್ರಯಿಸಿ ದೇವತೆಗಳು ಹ್ಯಾಗೆ ಜೀವಿಸುವರೋ ಹಾಗೆ ಬಂಧುಗಳೆಲ್ಲರೂ ನಿನ್ನನ್ನು ಆಶ್ರಯಿಸಿಕೊಂಡು ಜೀವಿಸಲಿ. ನೀನು ಜಾಗರೂಕನಾಗಿದ್ದುಕೊಂಡು ಬ್ರಾಹ್ಮಣರಿಗೆ ವೃತ್ತಿಯನ್ನು ಸರಿಯಾಗಿ ನಡಿಸಿಕೊಂಡು ಬಾ. ವಿಷ್ಣುವು ದೇವತೆಗಳನ್ನು ಹ್ಯಾಗೆ ಕಾಣುವನೋ ಹಾಗೆ, ನೀನು ಜ್ಞಾತಿಗಳನ್ನು ಕಾಣುತ್ತಿರು. ಯಾವಾಗಲೂ ಮಿತ್ರರನ್ನು ಸಂತೋಷಪಡಿಸುತ್ತಲೂ ಶತ್ರುಗಳನ್ನು ನಿರಾಕರಿಸುತ್ತಲೂ ಗುರುಜನಗಳನ್ನು ರಕ್ಷಿಸುತ್ತಲೂ ಭೂಮಿಯನ್ನು ಪರಿಪಾಲಿಸು " ಎಂದು ನುಡಿದು, ಆತನನ್ನು ಆಲಿಂಗಿಸಿಕೊಂಡು, ಇನ್ನು ಹಸ್ತಿನಾನಗರಕ್ಕೆ ಪ್ರಯಾಣವನ್ನು ಬೆಳೆಸೆಂದನು. ಆ ಮಾತನ್ನು ಕೇಳಿ ದುಶ್ಶಾಸನನು ದೀನನಾಗಿ ಕಂಬನಿಯನ್ನು ತುಂಬಿ ದುಃಖಪಡುತ್ತ, ಕೈಮುಗಿದುಕೊಂಡು ಅಣ್ಣನಾದ ದುರ್ಯೋಧನನಿಗೆ ನಮಸ್ಕಾರಮಾಡಿ ಗದ್ಗದಸ್ವರದಿಂದ "ಎಲೈ ಅಗ್ರಜನೆ, ನೀನು ಪ್ರಸನ್ನನಾಗಬೇಕು " ಎಂದು ಆತನ ಕಾಲಿನಮೇಲೆ ಬಿದ್ದು ತನ್ನ ಕಣ್ಣೀರನ್ನು ಸುರಿಸಿ, "ಅಣ್ಣನೇ ನೀನು ಹೀಗೆ ಮಾಡಕೂಡದು " ಎಂದು ಬಹುಪ್ರಕಾರದಿಂದ ಬೇಡಿಕೊಳ್ಳುತ್ತ, "ಎಲೈ ಮಹಾರಾಜನೆ, ಭೂಮಿಯು ಸೀಳಿಹೋದರೂ, ಆಕಾಶವು ತಲೆಕೆಳಗಾದರೂ, ಸೂರ್ಯನು ತೇಜೋಹೀನನಾದರೂ, ಚಂದ್ರನು ತನ್ನ ಶೀತವಾದ ಕಿರಣಗಳನ್ನು ಬಿಟ್ಟುಬಿಟ್ಟರೂ, ವಾಯುವು ಶೀಘ್ರಗತಿಯನ್ನು ಬಿಟ್ಟುಬಿಟ್ಟರೂ, ಹಿಮವತ್ಪರ್ವತವು ಚಲಿಸಿದರೂ, ಸಮುದ್ರವು ಶೋಷಿಸಿ ಹೋದರೂ, ಬೆಂಕಿಯು ತಣ್ಣಗಾದರೂ ಆಗಬಹುದು ; ನಾನು ಬೇರೇ

ನಿನ್ನನ್ನು ಬಿಟ್ಟು ರಾಜ್ಯಭಾರವನ್ನು ಮಾಡತಕ್ಕವನಲ್ಲ. ನಮ್ಮ ಕುಲಕ್ಕೆ ನೀನೇ ಬಹುಕಾಲ ಅರಸಾಗಿರಬೇಕಾದವನು. ನೀನು ಪ್ರಸನ್ನನಾಗಿ ನನ್ನ ಮಾತನ್ನು ನಡಿಸಬೇಕು" ಎಂದು ಅಡಿಗಡಿಗೆ ಬೇಡಿಕೊಳ್ಳುತ್ತ ದುಃಖಪಡುತ್ತಿದ್ದನು. ಅದನ್ನು ಕೇಳಿ ದುರ್ಯೋಧನನೂ ಬಹಳವಾಗಿ ದುಃಖಪಟ್ಟನು. ಆಗ ಕರ್ಣನು ಅವರಿಬ್ಬರನ್ನೂ ನೋಡಿ "ಎಲೈ ದುರ್ಯೋಧನ ದುಶ್ಶಾಸನರೆ, ಇದೇನು ನೀವು ಹೀಗೆ ಅಜ್ಞರಾದ ಬಾಲಕರಂತೆ ವ್ಯಸನಪಡುತ್ತಿರುವಿರಿ ? ವ್ಯಸನಪಡುತ್ತ ವ್ಯಸನವನ್ನು ಪರಿಹಾರಮಾಡಿಕೊಳ್ಳುವದಕ್ಕಾದೀತೆ ? ದುಃಖದಿಂದ ದುಃಖವನ್ನು ಪರಿಹರಿಸಿಕೊಳ್ಳಬಹುದಾದರೆ ಸಾಮರ್ಥ್ಯದಿಂದ ಏನು ಪ್ರಯೋಜನವೋ ನೀವೇ ಹೇಳಿ. ಧೈರ್ಯವನ್ನು ತಾಳಿರಿ. ಹೀಗೆ ದುಃಖಪಡುತ್ತ ಶತ್ರುಗಳಿಗೆ ಸಂತೋಷವುಂಟಾಗುವಹಾಗೆ ಮಾಡಬೇಡಿರಿ. ಪಾಂಡವರು ನಿಮ್ಮ ದೇಶದಲ್ಲಿದ್ದುಕೊಂಡು ನಿಮ್ಮಿಂದ ರಕ್ಷಿತರಾಗಿ ಯಾವ ಬಾಧೆಯೂ ಇಲ್ಲದೆ ಇರುವರಾದಕಾರಣ, ಅವರು ರಾಜನಾದವನಿಗೆ ಹಿತವಾದ ಕಾರ್ಯವನ್ನೇ ಬಯಸಬೇಕಾದದ್ದು ಯುಕ್ತವೇಸರಿ. ಶತ್ರುಗಳಿಗೆ ಕೈಸೆರೆಸಿಕ್ಕಿದ್ದ ನಿನ್ನನ್ನು ಬಿಡಿಸತಕ್ಕದ್ದು ಅವರಿಗೆ ಅವಶ್ಯ ಕರ್ತವ್ಯವಾದ್ದರಿಂದ ನಿನ್ನನ್ನು ಬಿಡಿಸಿದರು. ಈ ವಿಷಯದಲ್ಲಿ ಪ್ರಾಕೃತಜನರಂತೆ ನೀನು ವ್ಯಸನಪಡುವದು ಸರಿಯಾದದ್ದಲ್ಲ. ಹೀಗೆ ನೀನು ಪ್ರಾಯೋಪವೇಶವನ್ನು ಮಾಡುವದರಿಂದ ನಿನ್ನ ತಮ್ಮಂದಿರೆಲ್ಲರೂ ದೀನರಾಗಿ ಹೋಗುವರು. ಅವರನ್ನು ನೀನು ಸಮಾಧಾನಪಡಿಸು. ನಿನಗೆ ಶ್ರೇಯಸ್ಸುಂಟಾಗುವದು" ಎಂದು ಕರ್ಣನು ದುರ್ಯೋಧನನಿಗೆ ಹೇಳಿದನು.

## ೨೪೯ನೇ ಅಧ್ಯಾಯ.—ಘೋಷಯಾತ್ರೆ—(ಕರ್ಣ ದುರ್ಯೋಧನರ ಸಂವಾದ.)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಕರ್ಣನು ದುರ್ಯೋಧನನನ್ನು ಕುರಿತು "ಎಲೈ ಮಹಾರಾಜನೆ, ಶತ್ರುಗಳ ಕೈಗೆ ಸಿಕ್ಕಿದ್ದ ನಿನ್ನನ್ನು ಪಾಂಡವರು ಬಿಡಿಸಿದ್ದು ಆಶ್ಚರ್ಯವಲ್ಲ. ಇದರಿಂದ ನೀನು ಪರಾಕ್ರಮಶೂನ್ಯನೆಂದು ನಾನು ತಿಳಿಯತಕ್ಕವನಲ್ಲ. ನಿನ್ನ ದೇಶದಲ್ಲಿ ಸುಖವಾಗಿ ವಾಸಮಾಡುತ್ತಾ ನಿನ್ನ ಸೈನಿಕರಾಗಿರುವ ಪಾಂಡವರು, ನಿನ್ನ ಆಜ್ಞೆಯಾಗಲಿ ಆಗದೆ ಹೋಗಲಿ, ಅವಶ್ಯವಾಗಿ ರಾಜನಾದ ನಿನಗೆ ಪ್ರಿಯವಾದ ಕಾರ್ಯವನ್ನೇ ಮಾಡಬೇಕು. ಪ್ರಾಯಶಃ ಶೂರರಾದ ರಾಜರು ಶತ್ರುಗಳನ್ನು ಕೊಲ್ಲುವರು. ಬಂದೊಂದು ಅಸಂದರ್ಭದಲ್ಲಿ ತಾವು ಶತ್ರುಗಳ ಕೈಗೆ ಸಿಕ್ಕುವದೂ ಉಂಟು. ಆ ರಾಜನ ದೇಶದಲ್ಲಿ ವಾಸಮಾಡುವ ಸೈನಿಕರು ಆತನನ್ನು ಬಿಡಿಸುವರು. ಇದರಿಂದ ನಿನಗೆ ಹಾನಿಯುಂಟಾದದ್ದೇನು ? ಆದರೆ ಪಾಂಡವರು ಶೂರರಾಗಿಯೂ ಬಲವಂತರಾಗಿಯೂ ಯುದ್ಧದಲ್ಲಿ ಹಿಮ್ಮೆಟ್ಟದವರಾಗಿಯೂ ಇರುವರಾದ್ದರಿಂದ, ನೀನು ಹೊರಟ ಕಾಲದಲ್ಲಿ ನಿನ್ನ ಸಂಗಡ ಬರದೆ ನಿನಗೆ ಸಹಾಯಾರ್ಥವಾಗಿ ಮೊದಲೇ ನಿನ್ನ ದೂತರಾಗಿ ದ್ವೈತವನಕ್ಕೆ ಬಂದು ಕಾದುಕೊಂಡಿದ್ದರು. ಇದಕ್ಕೆ ನೀನು ದುಃಖಪಡಬಾರದು. ಶೂರರಾದ ಪಾಂಡವರ ದ್ರವ್ಯವನ್ನು ಈಗ ನೀನು ಅನುಭವಿಸುತ್ತಿರುವೆ. ಆದಕ್ಕೆ ಪಾಂಡವರು ಏನಾದರೂ ಪ್ರಾಯೋಪವೇಶವನ್ನು ಮಾಡಿರುವರೇ ನೋಡು. ಎಲೈ ದುರ್ಯೋಧನನೆ, ಸಾವಕಾಶಮಾಡಬೇಡ ; ಹಸ್ತಿನಾನಗರಕ್ಕೆ ಪ್ರಯಾಣಮಾಡು, ಏಳು. ನೀನು ನನ್ನ ಮಾತನ್ನು ನಡಿಸದೆಹೋದರೆ ನಾನೂ ಇಲ್ಲೇ ನಿನ್ನ ಪಾದಸೇವೆಯನ್ನು ಮಾಡಿಕೊಂಡಿರುತ್ತೇನೆ. ನೀನು ಪ್ರಾಯೋಪವೇಶವನ್ನು ಮಾಡಿದರೆ ಎಲ್ಲಾ ರಾಜರೂ ಹಾಸ್ಯಮಾಡುವರು. ನಿನ್ನನ್ನು ಬಿಟ್ಟು ಕ್ಷಣಮಾತ್ರವೂ ನಾನು ಜೀವಿಸತಕ್ಕವನಲ್ಲ" ಎಂದನು. ಅದನ್ನು ಕೇಳಿ ದುರ್ಯೋಧನನು ಮರಣವನ್ನು ಹೊಂದುವದಕ್ಕೆ ನಿಶ್ಚಯಿಸಿಕೊಂಡು, ಆ ಸ್ಥಾನದಿಂದ ಏಳುವದಕ್ಕೆ ಮನಸ್ಸುಮಾಡದೆ ಇದ್ದನು.

## ೨೫೧ನೇ ಅಧ್ಯಾಯ.—ಘೋಷಯಾತ್ರೆ—(ದುರ್ಯೋಧನನ ಪ್ರಾಯೋಪವೇಶ.)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಬಳಿಕ ಶಕುನಿಯು ಪ್ರಾಯೋಪವೇಶವನ್ನು ಮಾಡಿದ ದುರ್ಯೋಧನನನ್ನು ಕುರಿತು "ಎಲೈ ಮಹಾರಾಜನೆ, ಕರ್ಣನು ಸರಿಯಾಗಿ ಹೇಳಿದನು. ಹಾಗೆ ನೀನು ನಡೆದುಕೊ. ನಿನ್ನ ನಿಮಿತ್ತ ನಾನು ಪಾಂಡವರ ಸಂಗಡ ಪಗಡೆಯನ್ನಾಡಿ ಅವರ ಸಕಲೈಶ್ವರ್ಯವನ್ನೂ ಅಪಹಾರಮಾಡಿದೆನು. ಅಂಥ ಐಶ್ವರ್ಯವನ್ನು ಬಿಟ್ಟು ಬುದ್ಧಿಯಿಲ್ಲದೆ ನೀನು ಯಾತಕ್ಕೆ ಹೀಗೆ ಪ್ರಾಣವನ್ನು ಬಿಡುವದಕ್ಕೆ ಯತ್ನಿಸುವೆ ? ನೀನು ವೃದ್ಧರ ಸೇವೆಯನ್ನು ಮಾಡದಿರುವದರಿಂದ ಹೀಗಾಡುವೆ ಯೆಂದು ನನಗೆ ತೋರುವದು. ಯಾವ ಪುರುಷನು ಅಕಸ್ಮಾತ್ತಾಗಿ ಸಂಭವಿಸಿದ ವ್ಯಸನವನ್ನೂ ಸಂತೋಷವನ್ನೂ ಸೈರಿಸದೆ ಇರುವನೋ, ಆತನ ಐಶ್ವರ್ಯವು ಹಸೀಮಣ್ಣಿನ ಗಡಿಗೆಯಲ್ಲಿ ತುಂಬಿದ ನೀರಿನಂತೆ ನಷ್ಟವಾಗಿ ಹೋಗುವದು. ಭಯವುಳ್ಳವನೂ ದುರ್ಬಲನೂ ಪ್ರಮಾದವುಳ್ಳವನೂ ವ್ಯಸನಪಡುತ್ತ ಪಟ್ಟಣಕ್ಕೆ ಬರುವನೂ ಆದ ರಾಜನನ್ನು ಪ್ರಜೆಗಳು ಒಪ್ಪಲಾರರು. ಪಾಂಡವರಿಂದ ಸತ್ಕೃತನಾದ ನಿನಗೆ ಇಷ್ಟು ವ್ಯಸನವುಂಟಾಗುವದಕ್ಕೆ ಕಾರಣವೇನು? ಪಾಂಡವರು ನಿನಗೆ ಒಳ್ಳೇದನ್ನೇ ಮಾಡಿದರು. ನೀನು ಸುಮ್ಮನೆ ದುಃಖಪಡುತ್ತ ಅದನ್ನು ಕೆಡಿಸಿಕೊಳ್ಳುತ್ತಿರುವೆ. ಈ ವಿಷಯದಲ್ಲಿ ನೀನು ಸಂತೋಷಪಟ್ಟು ಪಾಂಡವರಿಗೆ ಸತ್ಕಾರವನ್ನು ಮಾಡಬೇಕು. ಅವರ ವಿಷಯವಲ್ಲಿ ನೀನು ಹೀಗೆ ವಿಷಾದಪಡುವದು ಸರಿಯಾಗಿಲ್ಲ. ನೀನು ನಿನ್ನ ಪುತ್ರಮಿತ್ರ ಬಂಧು ಮಂತ್ರಿಜನ ರಲ್ಲಿ ಪ್ರಸನ್ನನಾಗಿ, ಸಂತೋಷದಿಂದ ಪಾಂಡವರ ಉಪಕಾರವನ್ನು ನೆನೆದು ಅವರ ರಾಜ್ಯವನ್ನು ಅವರಿಗೆ ಕೊಟ್ಟು ಧರ್ಮಾತ್ಮನೆಂದು ಕೀರ್ತಿಯನ್ನು ಪಡೆ. ಇದರಿಂದ ನಿನ್ನನ್ನು ಎಲ್ಲರೂ ಕೃತಜ್ಞನೆಂದು ಹೇಳುವರು. ಪಾಂಡವ ರಲ್ಲಿ ಸಾಭ್ರಾತ್ರವನ್ನು ಉಳಿಯಿಸಿಕೊಂಡು ಪಿತೃಕ್ರಮಾಗತವಾದ ಅವರ ರಾಜ್ಯದಲ್ಲಿ ಅವರನ್ನು ಇಟ್ಟು ನೀನು ಸುಖವಾಗಿರು" ಎಂದನು. ಆ ಮಾತನ್ನು ಕೇಳಿ, ದುರ್ಯೋಧನನು ತನ್ನ ಕಾಲಿನಮೇಲೆ ಬಿದ್ದಿದ್ದ ದುಶ್ಶಾಸನ ನನ್ನು ಎರಡು ಕೈಗಳಿಂದಲೂ ಮೇಲಕ್ಕೆತ್ತಿ, ಶಿರಸ್ಸಿನಲ್ಲಿ ಆಘ್ರಾಣಮಾಡಿ ಆಲಿಂಗಿಸಿಕೊಂಡು, ಕರ್ಣಶಕುನಿಗಳ ಮಾತನ್ನು ಅಂಗೀಕರಿಸದೆ, ಬದುಕುವದರಲ್ಲಿ ಇಚ್ಛೆಯಿಲ್ಲದೆ, ಲಜ್ಜಾಯುಕ್ತನಾಗಿ ಸರ್ವವಿಷಯದಲ್ಲೂ ಆಶೆಯನ್ನು ತೊರೆದು, ಕೋಪದಿಂದ "ಎಲೈ ಕರ್ಣಾದಿಗಳಿರಾ, ಧರ್ಮದಿಂದಲೂ ದಾನದಿಂದಲೂ ಸುಖದಿಂದಲೂ ಐಶ್ವರ್ಯ ದಿಂದಲೂ ರಾಜ್ಯದಿಂದಲೂ ನನಗೇನು ಪ್ರಯೋಜನ? ನನ್ನನ್ನು ನೀವು ಪೀಡಿಸಬೇಡಿರಿ. ನಾನು ಪ್ರಾಯೋಪ ವೇಶವನ್ನೇ ಮಾಡಿ ಪ್ರಾಣವನ್ನು ಬಿಡಬೇಕೆಂದು ನಿಶ್ಚಯಿಸಿಕೊಂಡಿರುವೆನು. ನೀವೆಲ್ಲರೂ ಪಟ್ಟಣಕ್ಕೆ ಪ್ರಯಾಣ ಮಾಡಿರಿ. ಗುರುಜನರನ್ನು ಸತ್ಕರಿಸಿರಿ" ಎಂದು ನುಡಿದನು. ಆ ಮಾತನ್ನು ಕೇಳಿ ಕರ್ಣಾದಿಗಳು "ಎಲೈ ಮಹಾರಾಜನೆ, ನಿನ್ನನ್ನು ಬಿಟ್ಟು ನಾವು ಹಸ್ತಿನಾನಗರಕ್ಕೆ ಹ್ಯಾಗೆ ಪ್ರಯಾಣಮಾಡೇವು ? ನಿನಗಾವ ಗತಿಯೋ ನಮಗೂ ಆಗಲಿ" ಎಂದು ಹೇಳುತ್ತಿದ್ದರೂ, ದುರ್ಯೋಧನನು ತನ್ನ ನಿಶ್ಚಯವನ್ನು ಬಿಡದೆ, ಆ ಪ್ರದೇಶದಲ್ಲಿ ದರ್ಭೆ ಯನ್ನು ಹರಡಿ, ಸ್ನಾನವನ್ನು ಮಾಡಿ ಶುಚಿರ್ಭೂತನಾಗಿ ನಾರುಮಡಿಯನ್ನುಟ್ಟು, ದರ್ಭೆಯನ್ನು ಕಯ್ಯಲ್ಲಿ ಹಿಡಿದು, ಆ ದರ್ಭೆಯ ಮೇಲೇ ಮಲಗಿಕೊಂಡು, ವಾಙ್ನಿಯಮಾದಿಗಳನ್ನು ತಾಳಿ ಸ್ವರ್ಗಾಪೇಕ್ಷೆಯುಳ್ಳವನಾಗಿ ಮನಸ್ಸಿನಿಂದ ಚಿತಿಯನ್ನು ಕಲ್ಪಿಸಿಕೊಂಡು, ಬಾಹ್ಯವ್ಯಾಪಾರವನ್ನು ಬಿಟ್ಟನು. ಆಗ ಪೂರ್ವದಲ್ಲಿ ದೇವತೆಗಳಿಂದ ಪರಾಜಿತ ರಾಗಿ ಪಾತಾಳದಲ್ಲಿ ವಾಸಮಾಡುತ್ತಿದ್ದ ದೈತ್ಯರು ದುರ್ಯೋಧನನ ನಿಶ್ಚಯವನ್ನು ತಿಳಿದು, ತಮ್ಮಪಕ್ಷಕ್ಕೆ ಸೇರಿದ ಆತನೂ ನಷ್ಟನಾಗಬಾರದೆಂದು ಯೋಚಿಸಿ, ಆತನನ್ನು ತಮ್ಮಬಳಿಗೆ ಕರೆಸಬೇಕೆಂದು ಅಥರ್ವಣಪ್ರೋಕ್ತವಾದ ಮಂತ್ರಗಳಿಂದ ಅಗ್ನಿಯನ್ನು ಕಲ್ಪಿಸಿಕೊಂಡು, ಬೃಹಸ್ಪತ್ಯಾಚಾರ್ಯರೂ ಶುಕ್ರಾಚಾರ್ಯರೂ ಹೇಳಿದ ಮಂತ್ರಗಳಿಂದ ಯಜ್ಞಕರ್ಮವನ್ನು ಉಪಕ್ರಮವನ್ನು ಮಾಡಿ, ವೇದವೇದಾಂಗ ಪಾರಂಗತರಾಗಿಯೂ ವ್ರತನಿಷ್ಠರಾಗಿಯೂ ಇರುವ ಬ್ರಾಹ್ಮಣರಿಂದ ಅಗ್ನಿಯಲ್ಲಿ ಹವಿಸ್ಸನ್ನೂ ಕ್ಷೀರವನ್ನೂ ವಿಧಿವತ್ತಾಗಿ ಹೋಮಮಾಡಿಸಲು; ಆ ಅಗ್ನಿ ಕುಂಡದಿಂದ ಅದ್ಭುತವಾದ ಒಂದು ಮಾಟದ ಭೂತವು ಎದ್ದು, ನಾನೇನುಮಾಡತಕ್ಕದ್ದೆಂದು ಕೇಳಿತು. ಆಗ ಆ ದೈತ್ಯರು ಸಂತೋಷಪಟ್ಟು 'ಎಲೈ ಭೂತವೆ, ಪ್ರಾಯೋಪವೇಶವನ್ನು ಮಾಡಿರುವ ದುರ್ಯೋಧನನನ್ನು ಇಲ್ಲಿಗೆ

ತೆಗೆದುಕೊಂಡು ಬಾ ' ಎಂದು ಆಜ್ಞಾಪಿಸಲು, ಆ ಭೂತವು ಹಾಗೇ ಆಗಲೆಂದು ಹೇಳಿ, ದುರ್ಯೋಧನನು ಪ್ರಾಯೋಪವೇಶಮಾಡಿದ್ದ ಸ್ಥಳಕ್ಕೆ ಹೋಗಿ ಆತನನ್ನು ತೆಗೆದುಕೊಂಡು ಮುಹೂರ್ತಮಾತ್ರದಲ್ಲಿ ಪಾತಾಳಕ್ಕೆ ಬಂದು ಆ ದೈತ್ಯರಿಗೆ ಒಪ್ಪಿಸಿತು. ಆ ರಾತ್ರಿಕಾಲದಲ್ಲಿ ಸಕಲರಾದ ದೈತ್ಯರೂ ಗುಂಪುಕೂಡಿ ಸಂತೋಷದಿಂದ ದುರ್ಯೋಧನನನ್ನು ಕಣ್ಣುತುಂಬಾ ನೋಡಿ ಆತನೊಡನೆ ಪ್ರಿತಿಯಿಂದ ಮಾತನಾಡುವದಕ್ಕೆ ಉಪಕ್ರಮಿಸಿದರು.

## ೨೫೧ನೇ ಅಧ್ಯಾಯ.—ಘೋಷಯಾತ್ರೆ—(ದುರ್ಯೋಧನನು ಪುರಪ್ರವೇಶ ಮಾಡಿದ್ದು.)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಪಾತಾಳಲೋಕವಾಸಿಗಳಾದ ಆ ದೈತ್ಯರು ದುರ್ಯೋಧನನನ್ನು ಕುರಿತು "ಎಲೈ ದುರ್ಯೋಧನನೆ, ನೀನು ಭರತಕುಲದಲ್ಲಿ ಶ್ರೇಷ್ಠನಾದವನು. ಮಹಾತ್ಮರಾದ ಶೂರರೊಡಗೂಡಿದವನು. ಹೀಗಿದ್ದರೂ ಯಾತಕ್ಕೆ ಪ್ರಾಯೋಪವೇಶವನ್ನು ಮಾಡಬೇಕೆಂದು ಸಾಹಸಮಾಡಿದೆ? ಆತ್ಮತ್ಯಾಗಮಾಡಿಕೊಂಡವನು ಅಧೋಗತಿಯನ್ನು ಪಡೆಯುವನು. ಲೋಕದಲ್ಲಿ ಅಂಥವನನ್ನು ಎಲ್ಲರೂ ನಿಂದಿಸುವರು. ಇದರಿಂದ ಅಪಯಶಸ್ಸು ಬರುವದು. ಅಪಾಯಕರವಾಗಿಯೂ ಆತ್ಮಹಾನಿಕರವಾಗಿಯೂ ಇರುವ ಕಾರ್ಯದಲ್ಲಿ ನಿನ್ನಂಥ ವಿವೇಕಿಗಳು ಪ್ರವರ್ತಿಸಬಹುದೆ? ಎಲೈ ರಾಜನೆ, ಧರ್ಮಾರ್ಥಗಳಿಗೆ ನಾಶಕವಾದ ಈ ಬುದ್ಧಿಯನ್ನು ಬಿಡು. ಹೀಗೆ ನೀನು ಪ್ರವರ್ತಿಸಿದರೆ, ನಿನ್ನ ಯಶಸ್ಸೂ ಪ್ರತಾಪವೂ ನಷ್ಟವಾಗುವವು; ಶತ್ರುಗಳಿಗೆ ಸಂತೋಷವಾಗುವದು. ನಿನ್ನಲ್ಲಿರುವ ದೇವತ್ವವನ್ನೂ ನಿನ್ನ ಸೃಷ್ಟಿಕ್ರಮವನ್ನೂ ಹೇಳುವೆವು ಕೇಳು. ಆದರಿಂದ ನೀನು ಧೈರ್ಯವನ್ನು ಅವಲಂಬಿಸು. ಪೂರ್ವದಲ್ಲಿ ನಮ್ಮೊಡಗೂಡಿ ನೀನು ತಪಸ್ಸನ್ನು ಮಾಡಿ ನಿನ್ನ ಶರೀರದ ಮೇಲಣಭಾಗವು ವಜ್ರಾಯುಧಕ್ಕೆ ಸಮಾನವಾಗಿಯೂ ಅಸ್ತ್ರಶಸ್ತ್ರಗಳಿಗೆ ಅಭೇದ್ಯವಾಗಿಯೂ ಇರುವಂತೆ ಮಹೇಶ್ವರನಿಂದ ವರವನ್ನು ಪಡೆದೆ. ನಿನ್ನ ಕೆಳಗಣಭಾಗವು ಸ್ತ್ರೀಯರಿಗೆ ಮನೋಹರವಾಗಿಯೂ ಪುಷ್ಪಮಯವಾಗಿಯೂ ಇರುವಂತೆ ಪಾರ್ವತಿಯು ಅನುಗ್ರಹಮಾಡಿದಳು. ಈ ಪ್ರಕಾರ ಪಾರ್ವತೀಪರಮೇಶ್ವರರು ನಿನ್ನ ಶರೀರವನ್ನು ನಿರ್ಮಾಣಮಾಡಿದ್ದರಿಂದ, ನೀನು ದೇವಾಂಶಭೂತನೆಂದು ತಿಳಿ. ಇನ್ನೂ ಮಹಾಪರಾಕ್ರಮಶಾಲಿಗಳಾಗಿಯೂ ದಿವ್ಯಾಸ್ತ್ರಸಂಪನ್ನರಾಗಿಯೂ ಇರುವ ಭಗದತ್ತ ಮೊದಲಾದ ರಾಜರು ನಿನ್ನ ಶತ್ರುಗಳನ್ನು ಸಂಹಾರಮಾಡಿಬಿಡುವರು. ಯಾತಕ್ಕೆ ಸುಮ್ಮನೆ ವಿಷಾದಪಡುವೆ? ನಿನಗೇನೂ ಭಯವಿಲ್ಲ. ಇನ್ನೂ ನಿನ್ನ ಸಹಾಯಾರ್ಥವಾಗಿ ಅನೇಕ ದಾನವರು ಭೂಮಿಗೆ ಬಂದು ದ್ರೋಣಭೀಷ್ಮ ಕೃಪಾದಿಗಳಲ್ಲಿ ಆವೇಶವನ್ನು ತಾಳುವರು. ಆದರಿಂದ ದ್ರೋಣ ಭೀಷ್ಮಾದಿಗಳು ಕೃಪಾಶೂನ್ಯರಾಗಿ, ಆವರು ಪುತ್ರರು, ಅಣ್ಣತಮ್ಮಂದಿರು, ಪಿತೃಗಳು, ಬಂಧುಗಳು, ಶಿಷ್ಯರು, ಜ್ಞಾತಿಗಳು, ಬಾಲಕರು, ವೃದ್ಧರು ಎಂದು ಸಹ ಎಣಿಸದೆ, ಸ್ನೇಹವನ್ನು ಬಿಟ್ಟು ದಾನವರ ಆವೇಶದಿಂದ ಕಲುಷವಾದ ಮನಸ್ಸುಳ್ಳವರಾಗಿ ಪರಸ್ಪರ ನಿಷ್ಠುರವಾಗಿ ಮಾತನಾಡುತ್ತ, ತಮ್ಮತಮ್ಮ ಪರಾಕ್ರಮವನ್ನು ಶ್ಲಾಘಿಸಿಕೊಳ್ಳುತ್ತ, ತಮ್ಮ ಅಸ್ತ್ರವೀರ್ಯವನ್ನು ತೋರಿಸಿ ಪಾಂಡವರ ಸಂಗಡ ಮಹತ್ತಾದ ಯುದ್ಧವನ್ನು ಮಾಡುವರು. ಈಗ ದೈತ್ಯರೂ ರಾಕ್ಷಸರೂ ಕ್ಷತ್ರಿಯಜಾತಿಯಲ್ಲಿ ಹುಟ್ಟಿರುವರು. ಅವರು ಯುದ್ಧದಲ್ಲಿ ತಮ್ಮ ಪರಾಕ್ರಮವನ್ನು ಮೆರೆಯಿಸಿ, ಗದೆ ಮುಸಲ ಶೂಲ ಮೊದಲಾದ ನಾನಾವಿಧವಾದ ಅಸ್ತ್ರಗಳನ್ನು ಪ್ರಯೋಗಿಸುತ್ತ ಪ್ರಜಾಕ್ಷಯವನ್ನು ಮಾಡುವರು. ಎಲೈ ದುರ್ಯೋಧನನೆ, ಅರ್ಜುನನ ದೆಸೆಯಿಂದ ನೀನು ಮನಸ್ಸಿನಲ್ಲಿ ಭಯಪಡುತ್ತಿರುವೆ. ಆ ಅರ್ಜುನನ ಸಂಹಾರಕ್ಕೂ ನಾವು ಉಪಾಯವನ್ನು ಚಿಂತಿಸಿರುವೆವು. ಹತನಾದ ನರಕಾಸುರನ ಚೇತನವು ಕರ್ಣನ ಶರೀರವನ್ನು ಆಶ್ರಯಿಸಿರುವದು. ಆದರಿಂದ ಕರ್ಣನು ಪೂರ್ವದ ವೈರವನ್ನು ಸ್ಮರಿಸಿ ಕೃಷ್ಣಾರ್ಜುನರ ಸಂಗಡ ಯುದ್ಧವನ್ನು ಮಾಡುವನು. ಮಹಾರಥಿಕಾಗ್ರೇಸರನಾಗಿರುವ ಕರ್ಣನು ಯುದ್ಧದಲ್ಲಿ ಅರ್ಜುನನನ್ನು ಜಯಿಸುವನೆಂದು ತಿಳಿದು, ಇಂದ್ರನು ಅರ್ಜುನನ ಸಂರಕ್ಷಣಾರ್ಥವಾಗಿ ಕರ್ಣನ ಸಹಜವಾದ ಕರ್ಣಕುಂಡಲಗಳನ್ನೂ ಕವಚವನ್ನೂ ಮೊದಲೇ

ವಂಚನೆಯಿಂದ ಅಪಹಾರಮಾಡಿರುವನು. ಅನೇಕಸಹಸ್ರ ದೈತ್ಯರೂ ರಾಕ್ಷಸರೂ ನಮ್ಮಿಂದ ಪ್ರೇರಿತರಾಗಿ ಸಂಶಪ್ತಕರೆಂಬ ಖ್ಯಾತಿಯನ್ನು ಪಡೆದು ಯುದ್ಧದಲ್ಲಿ ಅರ್ಜುನನನ್ನು ಸಂಹರಿಸಿಬಿಡುವರು. ಬಳಿಕ ನೀನು ನಿಷ್ಕಂಟಕವಾದ ಭೂಮಂಡಲವನ್ನು ಆಳುವೆ. ನಮ್ಮ ಪಕ್ಷದಲ್ಲಿರತಕ್ಕ ನೀನು ನಷ್ಟನಾದರೆ ನಮ್ಮ ಪಕ್ಷವೇ ನಷ್ಟವಾದಂತಾಗುವದು. ನೀನು ಮತ್ತೊಂದು ಆಲೋಚನೆಯನ್ನು ಮಾಡಬೇಡ. ವಿಷಾದವನ್ನು ಬಿಡು. ದೇವತೆಗಳಿಗೆ ಗತಿಪ್ರದರಾದವರು ಪಾಂಡವರು; ನಮಗೆಲ್ಲಾ ಗತಿಪ್ರದನಾದವನು ನೀನು" ಎಂದು ಸಂತೈಸಿ, ದುರ್ಯೋಧನನ ಬುದ್ಧಿಯನ್ನು ಸ್ಥಿರಪಡಿಸಿ, ಆತನನ್ನು ಆಲಿಂಗನೆ ಮಾಡಿಕೊಂಡು, ಇನ್ನು ನೀನು ನಡೆ ನಿನಗೆ ಜಯವಾಗಲಿ ಎಂದು ಅಲ್ಲಿಂದ ಕಳುಹಿಸಿಕೊಡಲು; ಬಳಿಕ ಆ ಮಾಟದ ಭೂತವು ದುರ್ಯೋಧನನನ್ನು ಎತ್ತಿಕೊಂಡು ಆತನು ಪ್ರಾಯೋಪವೇಶಮಾಡಿದ್ದ ಸ್ಥಳಕ್ಕೆ ತೆಗೆದುಕೊಂಡುಹೋಗಿ ಬಿಟ್ಟು, ಆತನನ್ನು ಪೂಜಿಸಿ ಆತನ ಅಪ್ಪಣೆಯನ್ನು ತೆಗೆದುಕೊಂಡು ಹಿಂತಿರುಗಿ ಅದೃಶ್ಯವಾಯಿತು. ಬಳಿಕ ದುರ್ಯೋಧನನು ಸ್ವಪ್ನಪ್ರಾಯವಾದ ಈ ಎಲ್ಲಾ ಸಂಗತಿಗಳನ್ನೂ ಪರ್ಯಾಲೋಚಿಸಿ "ಶತ್ರುಸಂಹಾರಕರಾದ ಕರ್ಣ ಸಂಶಪ್ತಕರ ಸಹಾಯದಿಂದ ಯುದ್ಧರಂಗದಲ್ಲಿ ಪಾಂಡವರನ್ನು ಜಯಿಸುವೆನು. ನರಕಾಸುರನ ಚೇತನದಿಂದ ಆವಿಷ್ಟನಾದ ಕರ್ಣನೂ ರಾಕ್ಷಸರಿಂದ ಆವಿಷ್ಟರಾದ ಸಂಶಪ್ತಕರೂ ದಾನವರಿಂದ ಆವಿಷ್ಟರಾದ ಭೀಷ್ಮದ್ರೋಣಾದಿಗಳೂ ಸಹ ಪಾಂಡವರಲ್ಲಿ ಸ್ನೇಹವನ್ನು ಬಿಟ್ಟು, ಅವರನ್ನು ನಿಗ್ರಹಿಸುವರು" ಎಂದು ತನ್ನಲ್ಲಿತಾನೇ ದೃಢವಾಗಿ ನಿಶ್ಚಯಿಸಿಕೊಂಡು, ಈ ವೃತ್ತಾಂತವನ್ನು ಯಾರಿಗೂ ತಿಳಿಸದೆ ಗುಟ್ಟಾಗಿದ್ದನು.

ಆರಾತ್ರಿ ಕಳೆದು ಮರುದಿವಸದ ಪ್ರಾತಃಕಾಲದಲ್ಲಿ ಕರ್ಣನು ದುರ್ಯೋಧನನ ಬಳಿಗೆ ಬಂದು ಆತನಿಗೆ ಕೈಮುಗಿದು ನಸುನಗುತ್ತ "ಎಲೈ ದುರ್ಯೋಧನನೆ, ಹೇತುಯುಕ್ತವಾದ ನನ್ನ ಮಾತನ್ನು ಕೇಳು. ಮೃತನಾದ ಪುರುಷನು ಶತ್ರುಗಳನ್ನು ಜಯಿಸಬಲ್ಲನೆ? ಯಾವನಾದರೂ ಬದುಕಿದ್ದರೆ ಒಳ್ಳೇದನ್ನು ನೋಡುವನು. ಮೃತನಾದವನಿಗೆ ಶುಭವೂ ಜಯವೂ ಯಾವದೂ ಇಲ್ಲ. ಆದ್ದರಿಂದ ನೀನು ವಿಷಾದಪಡುವದಕ್ಕೂ ಭಯಪಡುವದಕ್ಕೂ ಮರಣವನ್ನು ಹೊಂದುವದಕ್ಕೂ ಇದು ಸಮಯವಲ್ಲ" ಎಂದು ನುಡಿದು, ಎರಡು ಕೈಗಳಿಂದಲೂ ಆತನನ್ನು ಆಲಿಂಗಿಸಿಕೊಂಡು, "ಎಲೈ ಮಹಾರಾಜನೆ, ಯಾತಕ್ಕೆ ನೀನು ಹೀಗೆ ಮಲಗಿರುವೆ? ಏಳು ದುಃಖಪಡಬೇಡ. ಪ್ರತಾಪವನ್ನು ತೋರಿಸಿ ಶತ್ರುಗಳನ್ನು ಜಯಿಸದೆ ಮರಣವನ್ನು ಹೊಂದಬೇಕೆಂದು ಯಾತಕ್ಕೆ ಬಯಸುವೆ? ಅರ್ಜುನನ ಪರಾಕ್ರಮವನ್ನು ನೋಡಿ ನಿನಗೆ ಭಯವುಂಟಾಗಿದ್ದ ಪಕ್ಷದಲ್ಲಿ, ಹದಿಮೂರು ವರುಷಗಳಾದಮೇಲೆ ಯುದ್ಧದಲ್ಲಿ ಅರ್ಜುನನನ್ನು ನಾನು ಸಂಹರಿಸುವೆನೆಂದು ಈ ಆಯುಧವನ್ನು ಮುಟ್ಟಿ ಪ್ರಮಾಣವನ್ನು ಮಾಡುವೆನು. ಇದು ಸತ್ಯವಾದದ್ದೆಂದು ನೀನು ನಂಬು" ಎಂದು ನುಡಿದದ್ದರಿಂದಲೂ, ದುಶ್ಶಾಸನಾದಿಗಳು ನಮಸ್ಕಾರಪೂರ್ವಕವಾಗಿ ವಿಜ್ಞಾಪನೆಮಾಡಿಕೊಂಡದ್ದರಿಂದಲೂ, ಈ ದುರ್ಯೋಧನನು ಮೇಲಕ್ಕೆದ್ದು ಪಾತಾಳಲೋಕದಲ್ಲಿ ದೈತ್ಯರು ಆಡಿದ ಮಾತನ್ನು ಮನಸ್ಸಿನಲ್ಲಿಟ್ಟುಕೊಂಡು, ಸ್ಥಿರವಾದ ಬುದ್ಧಿಯಿಂದ ಪಟ್ಟಣಕ್ಕೆ ಅಭಿಮುಖವಾಗಿ ಪ್ರಯಾಣವನ್ನು ಬೆಳಸಿದನು.

ಆ ಸಮಯದಲ್ಲಿ ದುರ್ಯೋಧನನ ಚತುರಂಗಸೈನ್ಯವು ಗಂಗಾಪ್ರವಾಹದಂತೆ ಹೊರಟು, ಆನೆಗಳಿಂದಲೂ, ರಥಗಳಿಂದಲೂ, ಕುದುರೆಗಳಿಂದಲೂ, ಪದಾತಿಗಳಿಂದಲೂ, ಶ್ವೇತಚ್ಛತ್ರಗಳಿಂದಲೂ, ಧ್ವಜಪತಾಕೆಗಳಿಂದಲೂ, ಚಾಮರಗಳಿಂದಲೂ ಕೂಡಿ ಶರತ್ಕಾಲರಾತ್ರಿಯ ಆಕಾಶದಂತೆ ಮನೋಹರವಾಗಿ ಪ್ರಕಾಶಿಸಿತು. ಆಗ ಅನೇಕಬ್ರಾಹ್ಮಣರು ಜಯಾಶೀರ್ವಾದವನ್ನು ಮಾಡುತ್ತಿರಲು, ಸ್ತುತಿಪಾಠಕರಿಂದ ಸ್ತುತಿಮಾಡಿಸಿಕೊಳ್ಳುತ್ತ ದುರ್ಮಂತ್ರಿಗಳಾದ ಕರ್ಣಶಕುನಿಗಳೊಡಗೂಡಿ ಅಧಿಕವಾದ ಐಶ್ವರ್ಯದಿಂದ ಮೆರೆಯುತ್ತ ದುರ್ಯೋಧನನು ಮುಂದಾಗಿ ತೆರಳಿದನು. ದುಶ್ಶಾಸನ ಮೊದಲಾದ ಆತನ ತಮ್ಮಂದಿರೂ, ಭೂರಿಶ್ರವ ಸೋಮದತ್ತ ಬಾಹ್ಲಿಕ ಮೊದಲಾದ ಕುರುಕುಲಶ್ರೇಷ್ಠರೂ, ವಿಧವಿಧವಾದ ವಾಹನಗಳನ್ನೇರಿ ದುರ್ಯೋಧನನ ಹಿಂದೆ ಹೊರಟು, ಎಲ್ಲರೂ ಸ್ವಲ್ಪಕಾಲದಲ್ಲೇ ಹಸ್ತಿನಾನಗರವನ್ನು ಪ್ರವೇಶಮಾಡಿದರು—ಎಂದು ವೈಶಂಪಾಯನಮುನೀಂದ್ರನು ಜನಮೇಜಯರಾಯನಿಗೆ ಹೇಳಿದನು.

## ೨೫೨ನೇ ಅಧ್ಯಾಯ.–ಕರ್ಣನ ದಿಗ್ವಿಜಯ.

ಅನಂತರದಲ್ಲಿ ಜನಮೇಜಯರಾಯನು ವೈಶಂಪಾಯನಮುನೀಂದ್ರನನ್ನು ಕುರಿತು–ಎಲೈ ಮುನೀಂದ್ರನೆ, ಮಹಾತ್ಮರಾದ ಪಾಂಡವರು ವನದಲ್ಲಿ ವಾಸಮಾಡುತ್ತಿರಲು ; ದುರ್ಯೋಧನಾದಿಗಳೂ, ಕರ್ಣ ಶಕುನಿ ಭೀಷ್ಮ ದ್ರೋಣ ಕೃಪ ಮೊದಲಾದವರೂ ಏನುಮಾಡಿದರು ? ಅದನ್ನು ತಿಳುಹಿಸು–ಎನಲು, ವೈಶಂಪಾಯನಮುನೀಂದ್ರನು–ಕೇಳು ಜನಮೇಜಯರಾಯನೆ, ದುರ್ಯೋಧನನು ಗಂಧರ್ವರ ಕೈಗೆ ಸಿಕ್ಕಿ ಪಾಂಡವರಿಂದ ಬಿಡಿಸಿಕೊಂಡು ಹಸ್ತಿನಾನಗರಕ್ಕೆ ಬಂದ ಬಳಿಕ, ಭೀಷ್ಮಾಚಾರ್ಯರು ದುರ್ಯೋಧನನನ್ನು ಕುರಿತು " ಎಲೈ ದುರ್ಯೋಧನನೆ, ನೀನು ದ್ವೈತವನಕ್ಕೆ ಹೊರಟ ಸಮಯದಲ್ಲಿ ನೀನು ಅಲ್ಲಿಗೆ ಹೋಗತಕ್ಕದ್ದು ನಮಗೆ ಅಸಮ್ಮತವಾದದ್ದೆಂದು ನಾವೆಲ್ಲರೂ ಹೇಳಿದೆವು. ಅದನ್ನು ಲಕ್ಷ್ಯಮಾಡದೆ ನೀನು ಬಲಾತ್ಕಾರವಾಗಿ ದ್ವೈತವನಕ್ಕೆ ಹೋಗಿ ಶತ್ರುಗಳ ಕೈಗೆ ಸಿಕ್ಕಿ ಧರ್ಮಾತ್ಮರಾದ ಪಾಂಡವರಿಂದ ಬಿಡಿಸಿಕೊಂಡು ಬಂದೆ. ಆದರೂ ನಿನಗೆ ಲಜ್ಜೆಯಿಲ್ಲದೆ ಇರುವದು. ಸೈನ್ಯಸಹಿತನಾದ ನೀನು ನೋಡುತ್ತಿರುವ ಕಾಲದಲ್ಲೇ ಸೂತಪುತ್ರನಾದ ಕರ್ಣನು ಯುದ್ಧದಲ್ಲಿ ಗಂಧರ್ವರಿಗೆ ಭಯಪಟ್ಟು ಓಡಿಹೋದನು. ಆಗ ನೀನು ಆತನನ್ನು ಎಷ್ಟು ಕೂಗಿದರೂ ಕರ್ಣನು ಕೇಳದೆಯೇ ಯುದ್ಧರಂಗದಿಂದ ಆಚೆಗೆ ಹೋದನು. ಆ ಸಮಯದಲ್ಲಿ ಪಾಂಡವರ ಪರಾಕ್ರಮವನ್ನೂ ನೀನು ಪ್ರತ್ಯಕ್ಷವಾಗಿ ನೋಡಿದೆ. ದುರ್ಬುದ್ಧಿಯಾದ ಕರ್ಣನು ಧನುರ್ವೇದದಲ್ಲಿಯೂ ಧರ್ಮದಲ್ಲಿಯೂ ಶೌರ್ಯದಲ್ಲಿಯೂ ಪಾಂಡವರಿಗೆ ಸ್ವಲ್ಪವಾದರೂ ಸಮನಾದಾನೆ ? ಆದ್ದರಿಂದ ನೀನು ಮಹಾತ್ಮರಾದ ಪಾಂಡವರೊಡನೆ ಸಂಧಿಮಾಡಿಕೊಂಡರೆ ಅದರಿಂದ ನಿನ್ನ ಕುಲವು ವೃದ್ಧಿಯಾಗುವದು " ಎಂದು ಹೇಳಿದರು. ಆದನ್ನು ಕೇಳಿ ದುರ್ಯೋಧನನು ನಗುತ್ತ ಶಕುನಿಯನ್ನು ಕರೆದುಕೊಂಡು ಭೀಷ್ಮರ ಎದುರಿಗೆ ನಿಲ್ಲದೆ ಆಚೆಗೆ ಹೊರಟುಹೋದನು. ಬಳಿಕ ಕರ್ಣದುಶ್ಯಾಸನಾದಿಗಳೂ ಆತನನ್ನೇ ಅನುಸರಿಸಿ ಹೋದರು. ಅದನ್ನು ನೋಡಿ ಕುರುಕುಲಪಿತಾಮಹರಾದ ಭೀಷ್ಮಾಚಾರ್ಯರು ತಾವೂ ಲಜ್ಜೆಪಟ್ಟುಕೊಂಡು ತಮ್ಮ ಮನೆಗೆ ಹೊರಟು ಹೋದರು.

ಆ ಬಳಿಕ ದುರ್ಯೋಧನನು ತನ್ನ ಮಂತ್ರಿಗಳಾದ ಕರ್ಣಾದಿಗಳಿಂದ ಕೂಡಿ " ಈಗ ಯಾವ ಕಾರ್ಯವನ್ನು ಮಾಡತಕ್ಕದ್ದು ? ಯಾವ ಕಾರ್ಯವನ್ನು ಮಾಡಿದರೆ ನಮಗೆ ಹಿತವಾಗುವದು ? ಈಗ ನಮಗೆ ಯಾವದು ಶ್ರೇಯಸ್ಕರವಾದದ್ದು ? ಆಲೋಚನೆ ಮಾಡುವದಕ್ಕೆ ಉಪಕ್ರಮಿಸಿ " ಎಂದನು. ಆಗ ಕರ್ಣನು " ಎಲೈ ದುರ್ಯೋಧನನೆ, ಯಾವಾಗಲೂ ಭೀಷ್ಮನು ನಮ್ಮನ್ನು ನಿಂದಿಸುವನು, ಪಾಂಡವರನ್ನು ಶ್ಲಾಘಿಸುವನು, ಮತ್ತು ನಿನ್ನಲ್ಲಿ ದ್ವೇಷದಿಂದ ನಿನ್ನ ಸಮಕ್ಷದಲ್ಲಿ ನನ್ನನ್ನು ದ್ವೇಷದಿಂದ ನಿಂದಿಸುವನು. ಇದನ್ನು ನಾನು ಸಹಿಸತಕ್ಕವನಲ್ಲ. ನೀನು ನನಗೆ ಈಗಲೇ ಆಜ್ಞೆಯನ್ನು ಕೊಡು. ನಾನೊಬ್ಬನೇ ಸೈನ್ಯಸಮೇತನಾಗಿ ಹೋಗಿ, ಪೂರ್ವದಲ್ಲಿ ಭೀಮಾರ್ಜುನ ನಕುಲಸಹದೇವರು ಹ್ಯಾಗೆ ಸಮಸ್ತ ಭೂಮಂಡಲವನ್ನೂ ಜಯಿಸಿದರೋ ಹಾಗೆ, ನಾನೂ ಸಮಸ್ತ ಭೂಮಂಡಲವನ್ನೂ ಜಯಿಸುವೆನು. ಅನಿಂದ್ಯರಾದವರನ್ನು ನಿಂದಿಸುತ್ತಾ, ಶ್ಲಾಘಿಸುವದಕ್ಕೆ ಅನರ್ಹರಾದವರನ್ನು ಶ್ಲಾಘಿಸುತ್ತಾ, ಕುರುಕುಲಾಧಮನಾಗಿಯೂ ದುರ್ಬುದ್ಧಿಯಾಗಿಯೂ ಇರುವ ಭೀಷ್ಮನು ನನ್ನ ಪರಾಕ್ರಮವನ್ನು ನೋಡಿ ತನ್ನನ್ನು ತಾನೇ ನಿಂದಿಸಿಕೊಳ್ಳಲಿ. ನೀನು ಜಾಗ್ರತೆಯಾಗಿ ನನಗೆ ಅಪ್ಪಣೆಯನ್ನು ಕೊಡು. ನಿನಗೆ ನಿಜವಾಗಿ ಜಯವಾಗುವದು. ಈ ವಿಷಯದಲ್ಲಿ ನಾನು ಆಯುಧವನ್ನು ಮುಟ್ಟಿ ಪ್ರತಿಜ್ಞೆಯನ್ನು ಮಾಡುವೆನು " ಎನಲು ; ದುರ್ಯೋಧನನು ಪ್ರೀತಿಯಿಂದ ಕರ್ಣನನ್ನು ನೋಡಿ " ಎಲೈ ಕರ್ಣನೆ, ನೀನು ಶೂರನು. ನನಗೆ ಹಿತವನ್ನು ಮಾಡಬೇಕೆಂದು ನೀನು ಪ್ರವರ್ತಿಸುವೆಯಾದ್ದರಿಂದ ನಾನು ಧನ್ಯನಾದೆನು. ನನ್ನ ಜನ್ಮವು ಸಫಲವಾಯಿತು. ನನ್ನಲ್ಲಿ ನೀನು ಅನುಗ್ರಹ ಮಾಡಿದೆ. ಯಾವಾಗ ಸಮಸ್ತ ಶತ್ರುಗಳನ್ನೂ ಸಂಹರಿಸಬೇಕೆಂದು ನಿನಗೆ ತೋರುವದೋ ಆಗ, ನನಗೆ ಅಪ್ಪಣೆಯನ್ನು ಕೊಟ್ಟು ದಿಗ್ವಿಜಯಾರ್ಥವಾಗಿ ಪ್ರಯಾಣಮಾಡು " ಎಂದು ನುಡಿದನು. ಆ ಮಾತನ್ನು ಕೇಳಿ ಕರ್ಣನು ಶುಭವಾದ ನಕ್ಷತ್ರದಿಂದಲೂ ಮುಹೂರ್ತದಿಂದಲೂ ಕೂಡಿದ ದಿವಸನಲ್ಲಿ

ಮಂಗಳಸ್ನಾನವನ್ನು ಮಾಡಿ, ಬ್ರಾಹ್ಮಣರಿಗೆ ಸತ್ಕಾರಮಾಡಿ, ಸ್ತುತಿಪಾಠಕರಿಂದ ಹೊಗಳಿಸಿಕೊಳ್ಳುತ್ತ, ತನ್ನ ರಥಘೋಷವನ್ನು ದಿಕ್ಕುದಿಕ್ಕುಗಳಲ್ಲಿ ತುಂಬುತ್ತ, ಸೈನ್ಯಸಮೇತನಾಗಿ ದಿಗ್ವಿಜಯಾರ್ಥವಾಗಿ ಪ್ರಯಾಣಮಾಡಿದನು

## ೨೫೩ನೇ ಅಧ್ಯಾಯ.—ಕರ್ಣನ ದಿಗ್ವಿಜಯ.

ವೈಶಂಪಾಯನಮುನೀಂದ್ರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಕರ್ಣನು ಸೈನ್ಯಸಮೇತನಾಗಿ ಹಸ್ತಿನಾನಗರದಿಂದ ಪ್ರಯಾಣಮಾಡಿ ದ್ರುಪದರಾಯನ ಪಟ್ಟಣಕ್ಕೆ ಮುತ್ತಿಗೆಹಾಕಿ ಆತನ ಸಂಗಡ ಯುದ್ಧಮಾಡಿ ಆತನನ್ನು ಸ್ವಾಧೀನಮಾಡಿಕೊಂಡು, ಆತನಿಂದ ಚಿನ್ನ ಬೆಳ್ಳಿ ರತ್ನ ಮುಂತಾದವುಗಳನ್ನು ಕಪ್ಪವಾಗಿ ತೆಗೆದುಕೊಂಡು, ಆತನ ಕೈಕೆಳಗಿರುವ ಅರಸುಗಳನ್ನು ಗೆದ್ದು ಅವರಿಂದಲೂ ಕಪ್ಪವನ್ನು ತೆಗೆದುಕೊಂಡು, ಅಲ್ಲಿಂದ ಉತ್ತರದಿಕ್ಕಿಗೆ ಪ್ರಯಾಣಮಾಡಿ ಅಲ್ಲಿದ್ದ ರಾಜರನ್ನು ಗೆದ್ದು, ನರಕಾಸುರನ ಮಗನಾದ ಭಗದತ್ತನನ್ನು ಜಯಿಸಿ, ಅಲ್ಲಲ್ಲಿ ಶತ್ರುಗಳಸಂಗಡ ಯುದ್ಧಮಾಡುತ್ತ, ಹಿಮವತ್ಪರ್ವತವನ್ನು ಸೇರಿ ಅಲ್ಲಿದ್ದ ರಾಜರನ್ನೂ ಗೆದ್ದು ಅವರಿಂದಲೂ ಕಪ್ಪವನ್ನು ತೆಗೆದುಕೊಂಡು, ಆ ಪರ್ವತದಿಂದ ಕೆಳಕ್ಕಿಳಿದು ಅಲ್ಲಿಂದಪೂರ್ವದಿಕ್ಕಿಗೆ ಹೊರಟು, ಅಂಗ ವಂಗ ಕಳಿಂಗ ಮುಂಡಿಕ ಮಿಥಿಲ ಮಾಗಧ ಕರ್ಕಖಂಡ ಆವಶೀರ ಯೋಧ್ಯ ಅಹಿಚ್ಛತ್ರ ಮೊದಲಾದ ದೇಶಾಧಿಪತಿಗಳನ್ನು ಜಯಿಸಿ ತನ್ನ ಸ್ವಾಧೀನಮಾಡಿಕೊಂಡು, ವತ್ಸಭೂಮಿಗೆ ಹೊರಟು ಅಲ್ಲಿದ್ದ ರಾಜರನ್ನೆಲ್ಲಾ ಜಯಿಸಿ, ಅಲ್ಲಿಂದ ಮೃತ್ತಿಕಾವತೀಪಟ್ಟಣಕ್ಕೆ ಹೋಗಿ ಅಲ್ಲಿದ್ದ ರಾಜರನ್ನೂ ಗೆದ್ದು, ಮೋಹನ ತ್ರಿಪುರ ಕೋಸಲದೇಶಗಳಿಗೂ ಹೋಗಿ ಆ ರಾಜರಿಂದಲೂ ಕಪ್ಪವನ್ನು ತೆಗೆದುಕೊಂಡು, ದಕ್ಷಿಣದಿಕ್ಕಿಗೆ ಬಂದು ಅತ್ತಲಾಗಿರತಕ್ಕ ರಾಜರನ್ನು ಜಯಿಸಿ ಅವರಿಂದ ಕಪ್ಪವನ್ನು ತೆಗೆದುಕೊಂಡು, ರುಕ್ಮಿಯ ಸಂಗಡ ಘೋರವಾಗಿ ಯುದ್ಧವನ್ನು ಮಾಡಿದನು. ಆ ಸಮಯದಲ್ಲಿ ರುಕ್ಮಿಯು "ಎಲೈ ಕರ್ಣನೆ, ನಿನ್ನ ಸಾಹಸಕ್ಕೂ ಬಲಕ್ಕೂ ನಾನು ಮೆಚ್ಚಿದೆನು. ಆದರೆ ನಾನು ಕ್ಷತ್ರಿಯಧರ್ಮವನ್ನು ಆಶ್ರಯಿಸಿ ನಿನ್ನಸಂಗಡ ಯುದ್ಧಮಾಡಿದೆನೇ ಹೊರತು ನಿನ್ನ ಕಾರ್ಯಕ್ಕೆ ನಾನು ವಿಘ್ನಮಾಡತಕ್ಕವನಲ್ಲ. ಪ್ರೀತಿಪೂರ್ವಕವಾಗಿ ನಿನಗೆ ಬೇಕಾದಷ್ಟು ಸುವರ್ಣವನ್ನೂ ಇನ್ನೂ ಬೇಕಾದ ಶ್ರೇಷ್ಠವಸ್ತುಗಳನ್ನೂ ಕೊಡುತ್ತೇನೆ" ಎಂದನು. ಆಗ ಕರ್ಣನು ಆತನೊಡನೆ ಸ್ನೇಹಮಾಡಿಕೊಂಡು ಅಲ್ಲಿಂದ ಪಾಂಡ್ಯದೇಶಕ್ಕೂ ಶ್ರೀಶೈಲಕ್ಕೂ ಕೇರಳದೇಶಕ್ಕೂ ಹೋಗಿ, ವೇಣುದಾರಿಯ ಮಗನಾದ ನೀಲನೆಂಬ ರಾಜನನ್ನೂ ಇನ್ನೂ ದಕ್ಷಿಣದಿಕ್ಕಿನಲ್ಲಿ ಎಲ್ಲಾ ರಾಜರನ್ನೂ ಗೆದ್ದು ಅವರೆಲ್ಲರಿಂದಲೂ ಕಪ್ಪವನ್ನು ತೆಗೆದುಕೊಂಡು, ಶಿಶುಪಾಲನನ್ನೂ ಆ ಸುತ್ತುಮುತ್ತು ಇರತಕ್ಕ ರಾಜರನ್ನೂ ಗೆದ್ದು, ಅವಂತಿದೇಶಾಧಿಪತಿಯನ್ನೂ ಸ್ವಾಧೀನಮಾಡಿಕೊಂಡು, ಪಶ್ಚಿಮದಿಕ್ಕಿಗೆ ಹೋಗಿ ವೃಷ್ಣಿಗಳನ್ನು ಕಂಡು, ಯವನರನ್ನೂ ಬರ್ವರರನ್ನೂ ಮ್ಲೇಚ್ಛರನ್ನೂ ಪರ್ವತವಾಸಿಗಳನ್ನೂ ಭದ್ರರನ್ನೂ ಲೋಹಿತಕರನ್ನೂ ಆಗ್ನೇಯರನ್ನೂ ಮಾಲವರನ್ನೂ ಜಯಿಸಿ ಅವರೆಲ್ಲರಿಂದಲೂ ಕಪ್ಪವನ್ನು ತೆಗೆದುಕೊಂಡು, ಸಕಲ ಭೂಮಂಡಲವನ್ನೂ ಸ್ವಾಧೀನಮಾಡಿಕೊಂಡು ಮರಳಿ ಹಸ್ತಿನಾನಗರಕ್ಕೆ ಬಂದನು. ಅದನ್ನು ಕೇಳಿ ದುರ್ಯೋಧನನು ತಮ್ಮಂದಿರೊಡನೆಯೂ ಸಾಮಂತರೊಡನೆಯೂ ಎದುರುಗೊಂಡು ಹೋಗಿ, ಆ ಕರ್ಣನನ್ನು ಮರ್ಯಾದಾನುಸಾರವಾಗಿ ಸತ್ಕರಿಸಿ ಕರದುಕೊಂಡುಬಂದು, ಆತನನ್ನು ಕುರಿತು "ಎಲೈ ಮಹಾವೀರನೆ, ಭೀಷ್ಮ ದ್ರೋಣ ಕೃಪ ಬಾಹ್ಲಿಕರಿಂದ ಆಗದಿರತಕ್ಕ ಮಹತ್ತಾದ ಯಶಸ್ಸನ್ನು ನೀನು ನನಗೆ ಉಂಟುಮಾಡಿದೆ. ವಿಶೇಷವಾಗಿ ಹೇಳಿದ್ದರಿಂದೇನು? ನೀನು ನನಗೆ ನಾಥನೆನಿಸಿರುವದರಿಂದ ನಾನು ಸನಾಥನಾದೆನು. ಪಾಂಡವರೇ ಆಗಲಿ ಇತರ ರಾಜರೇ ಆಗಲಿ, ನಿನ್ನ ಪರಾಕ್ರಮದ ಹದಿನಾರು ಭಾಗದಲ್ಲಿ ಒಂದು ಭಾಗವನ್ನೂ ಹೋಲಲಾರರು. ಈಗ ನೀನು ಧೃತರಾಷ್ಟ್ರನನ್ನು ಕಂಡು ಬಳಿಕ ಯಶೋವತಿಯಾದ ಗಾಂಧಾರಿಯನ್ನು ದೇವೇಂದ್ರನು ಅದಿತಿಯನ್ನು ಕಾಣುವಂತೆ ಕಾಣು" ಎಂದನು. ಬಳಿಕ ಆ ಹಸ್ತಿನಾನಗರದಲ್ಲಿ ಮಹತ್ತಾದ ಕೋಲಾಹಲವುಂಟಾಗಿ ಕೆಲವುಜನರು ಕರ್ಣನನ್ನು ಶ್ಲಾಘಿಸಿದರು; ಕೆಲವರು ನಿಂದಿಸಿದರು; ಕೆಲವರು ಯಾವ

ದನ್ನೂ ಆಡದೆ ಸುಮ್ಮನಿದ್ದರು ; ಕೆಲವರು ಸ್ವಲ್ಪಕಾಲದಲ್ಲೇ ಕರ್ಣನು ಆಯಾ ದೇಶಗಳಲ್ಲಿಯೂ ದ್ವೀಪಗಳಲ್ಲಿಯೂ ವಾಸಮಾಡತಕ್ಕ ರಾಜರನ್ನು ಜಯಿಸಿ ಬೇಕಾದಷ್ಟು ದ್ರವ್ಯವನ್ನು ತೆಗೆದುಕೊಂಡು ಬಂದನೆಂದು ಹೇಳಿಕೊಂಡರು. ಆಗ ಕರ್ಣನು ಗಾಂಧಾರಿಯೊಡಗೂಡಿದ ಧೃತರಾಷ್ಟ್ರರಾಯನ ಬಳಿಗೆ ಹೋಗಿ, ಆತನನ್ನು ಕಂಡು, ಮಗನಂತೆ ಆತನ ಪಾದಗಳನ್ನು ಮುಟ್ಟಿ ವಂದನೆಯನ್ನು ಮಾಡಿದನು. ಬಳಿಕ ಧೃತರಾಷ್ಟ್ರನು ಪ್ರೀತಿಯಿಂದ ಆತನನ್ನು ಅಪ್ಪಿಕೊಂಡನು. ಆದಿನ ಮೊದಲುಗೊಂಡು ದುರ್ಯೋಧನನೂ ಶಕುನಿಯೂ ಸಹ ಕರ್ಣನು ಸಕಲರಾಜರನ್ನೂ ಜಯಿಸತಕ್ಕವನೆಂದು ತಿಳಿದುಕೊಂಡರು.

## ೨೫೪ನೇ ಅಧ್ಯಾಯ.--ದುರ್ಯೋಧನಯಜ್ಞಾರಂಭ.

ವೈಶಂಪಾಯನಮುನೀಂದ್ರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಈ ಪ್ರಕಾರ ಕರ್ಣನು ದಿಗ್ವಿಜಯವನ್ನು ಮಾಡಿ ದುರ್ಯೋಧನನನ್ನು ಕುರಿತು “ ಎಲೈ ದುರ್ಯೋಧನನೆ, ನೀನು ನನ್ನ ಮಾತನ್ನು ಕೇಳಿ ಅಪ್ರಕಾರ ನಡಿಸು. ಸಕಲ ಭೂಮಂಡಲವೂ ನಿಶ್ಶತ್ರುವಾಗಿ ಈ ನಿನ್ನಧೀನವಾಯಿತು. ಇನ್ನು ನಿನಗೆ ಶತ್ರುಗಳು ಯಾರೂ ಇಲ್ಲ. ನೀನು ಧೀರನಾಗಿ ಇಂದ್ರನಂತೆ ರಾಜ್ಯವನ್ನಾಳು ” ಎನಲು ; ದುರ್ಯೋಧನನು “ ಎಲೈ ಕರ್ಣನೆ, ನನ್ನಲ್ಲಿ ನೀನು ಅನುರಕ್ತನಾಗಿ ನನ್ನ ಕಾರ್ಯಕ್ಕೋಸ್ಕರ ಸಹಾಯಮಾಡುತ್ತಿರಲು, ನನಗೆ ದುರ್ಲಭವಾದದ್ದು ಯಾವದೂ ಇಲ್ಲ. ಆದರೆ ಬಹುಕಾಲದಿಂದ ನನ್ನ ಮನಸ್ಸಿನಲ್ಲೊಂದಿರುವದು. ಅದನ್ನು ನಿನಗೆ ಹೇಳುವೆನು ಕೇಳು : ಪಾಂಡವರು ರಾಜಸೂಯಯಾಗವನ್ನು ಮಾಡಿದ್ದನ್ನು ನೋಡಿ ನಾನೂ ಅಂಥ ಉತ್ತಮವಾದ ಕ್ರತುವನ್ನು ಮಾಡಬೇಕೆಂದು ಬಯಸುತ್ತಿರುವೆನು. ಈ ನನ್ನ ಬಯಕೆಯನ್ನು ನೀನು ನೆರವೇರಿಸತಕ್ಕದ್ದು ” ಎಂದು ನುಡಿಯಲು ; ಅದನ್ನು ಕರ್ಣನು ಕೇಳಿ, “ ದುರ್ಯೋಧನನೆ, ಸಕಲರಾಜರೂ ಈಗ ನಿನ್ನಧೀನರಾಗಿರುವರು. ವೇದವೇದಾಂತ ಪಾರಂಗತರಾದ ಋತ್ವಿಕ್ಕುಗಳನ್ನೂ ವಿದ್ವಾಂಸರನ್ನೂ ಕರೆತರಿಸಿ ಯಜ್ಞಸಾಮಗ್ರಿಗಳನ್ನು ಸಜ್ಜುಮಾಡಿಸಿ ಮಹತ್ತಾದ ಯಜ್ಞವನ್ನು ಮಾಡು. ಆ ಯಜ್ಞದಲ್ಲಿ ಅನ್ನದಾನಗಳಿಂದಲೂ ದಕ್ಷಿಣೆಗಳಿಂದಲೂ ಸಕಲರನ್ನೂ ತೃಪ್ತಿಪಡಿಸು ” ಎಂದನು. ಬಳಿಕ ದುರ್ಯೋಧನನು ತನ್ನ ಪುರೋಹಿತರನ್ನು ಕರೆತರಿಸಿ ಅವರನ್ನು ಕುರಿತು “ ಎಲೈ ಪುರೋಹಿತರೆ, ಸಂಪೂರ್ಣವಾದ ದಕ್ಷಿಣೆಯುಳ್ಳ ಯಜ್ಞಶ್ರೇಷ್ಠವಾದ ರಾಜಸೂಯಯಾಗವನ್ನು ಶಾಸ್ತ್ರೋಕ್ತಪ್ರಕಾರದಿಂದ ನೀವು ನನಗೆ ಮಾಡಿಸಬೇಕು ” ಎಂದನು. ಅದನ್ನು ಕೇಳಿ ಪುರೋಹಿತರು “ ಎಲೈ ದುರ್ಯೋಧನನೆ, ಧರ್ಮರಾಯನು ಜೀವನಂತನಾಗಿರತಕ್ಕ ಕಾಲದಲ್ಲಿ ನೀನು ರಾಜಸೂಯಯಾಗವನ್ನು ಮಾಡತಕ್ಕದ್ದು ಅಶಕ್ಯವಾದದ್ದು. ಇದಲ್ಲದೆ ನಿಮ್ಮ ಕುಲದಲ್ಲಿ ವೃದ್ಧನಾದ ನಿಮ್ಮ ತಂದೆಯು ದೀರ್ಘಾಯುವಾಗಿ ಬದುಕಿರುವನು. ಆತನಿರುವ ಕಾಲದಲ್ಲಿ ನೀನು ರಾಜಸೂಯಯಾಗವನ್ನು ಮಾಡುವದು ವಿರುದ್ಧವಾದ ಕಾರ್ಯವು. ಇದಲ್ಲದೆ ರಾಜಸೂಯಯಾಗಕ್ಕೆ ಸಮಾನವಾದ ಮತ್ತೊಂದು ವೈಷ್ಣವಯಾಗವಿರುವದು. ಅದನ್ನು ನಿನಗೆ ತಿಳುಹಿಸುವೆನು, ಅದನ್ನು ನೀನು ಮಾಡಬಹುದು. ಸಕಲರಾದ ರಾಜರನ್ನೂ ಗೆದ್ದು ಅವರೆಲ್ಲರಿಂದಲೂ ಕಪ್ಪವನ್ನು ತರಿಸು. ಕೃತಾಕೃತವಾದ ಸುವರ್ಣದಿಂದ ನೇಗಿಲನ್ನು ಮಾಡಿಸಿ ಅದರಿಂದ ಯಜ್ಞಭೂಮಿಯನ್ನು ಶೋಧನೆ ಮಾಡಿಸಿ, ಆ ಪ್ರದೇಶದಲ್ಲಿ ಯಜ್ಞಶಾಲೆಯನ್ನು ನಿರ್ಮಾಣಮಾಡಿಸು. ಆ ಶಾಲೆಯಲ್ಲಿ ಯಥಾನ್ಯಾಯವಾಗಿ ಯಜ್ಞಕ್ಕೆ ಉಪಕ್ರಮಮಾಡಿ, ಷಡ್ರಸೋಪೇತವಾದ ಅನ್ನವನ್ನು ಯಾರಿಗೂ ತಡೆಯಿಲ್ಲದಂತೆ ಹಾಕಿಸುವಂತೆ ಅಧಿಕಾರಿಗಳಿಗೆ ಆಜ್ಞಾಪಿಸು. ಇದು ಸತ್ಪುರುಷರಿಗೆ ಯೋಗ್ಯವಾದ ವೈಷ್ಣವಯಜ್ಞವು. ಈ ಯಜ್ಞವನ್ನು ಸನಾತನನಾದ ವಿಷ್ಣುಹೊರತು ಮತ್ತೊಬ್ಬರು ಯಾರೂ ಮಾಡಲಿಲ್ಲ. ಈ ಯಾಗವು ರಾಜಸೂಯಯಾಗಕ್ಕೆ ಸಮಾನವಾದದ್ದು. ಈ ಯಜ್ಞವನ್ನು ನೀನು ಮಾಡಬಹುದು. ಇದರಿಂದ ನಿನಗೆ ಶ್ರೇಯಸ್ಸುಂಟಾಗುವದು. ಇದು ನಿರ್ವಿಘ್ನವಾಗಿಯೂ ನಡೆಯುವದು. ನಿನ್ನ ಮನೋರಥವೂ ಸಫಲವಾಗುವದು ” ಎನಲು ; ದುರ್ಯೋಧನನು

ಕರ್ಣಶಕುನಿಗಳನ್ನೂ ದುಶ್ಶಾಸನಾದಿ ತಮ್ಮಂದಿರನ್ನೂ ನೋಡಿ "ಈ ಬ್ರಾಹ್ಮಣಶ್ರೇಷ್ಠರು ಹೇಳಿದ ಮಾತು ನನ್ನ ಮನಸ್ಸಿಗೆ ಒಡಂಬಟ್ಟಿರುವದು. ನಿಮಗೆಲ್ಲಾ ಇದು ಸಮ್ಮತವಾಗಿದ್ದ ಪಕ್ಷದಲ್ಲಿ ನಿಮ್ಮನಿಮ್ಮ ಅಭಿಪ್ರಾಯವನ್ನು ಜಾಗ್ರತೆಯಾಗಿ ತಿಳಿಯಪಡಿಸಿರಿ" ಎಂದು ನುಡಿದನು. ಬಳಿಕ ಕರ್ಣಾದಿಗಳು "ಎಲೈ ದುರ್ಯೋಧನನೆ, ದೊಡ್ಡವರಾದ ಪುರೋಹಿತರು ಹೇಳಿದಂತೆಯೇ ಆಗಲಿ" ಎಂದು ಅನುಮೋದಿಸಲು, ದುರ್ಯೋಧನನು ಅನೇಕ ಮಂದಿ ಶಿಲ್ಪಿಗಳನ್ನು ಕರೆತರಿಸಿ, ಯಜ್ಞಭೂಮಿಯನ್ನು ಶೋಧಿಸುವದಕ್ಕೆ ನೇಗಿಲನ್ನು ಮಾಡುವದಕ್ಕೂ ಯಜ್ಞಶಾಲೆಯನ್ನು ಕಟ್ಟುವದಕ್ಕೂ ಇನ್ನೂ ಯಜ್ಞಸಾಮಗ್ರಿಗಳನ್ನೆಲ್ಲಾ ರಚನೆಮಾಡುವದಕ್ಕೂ ಆಜ್ಞಾಪಿಸಿದನು. ಆಗ ಆ ಶಿಲ್ಪಿಗಳೆಲ್ಲರೂ ರಾಜಾಜ್ಞೆಗೆ ಅನುಸಾರವಾಗಿ ಆಯಾ ಕಾರ್ಯಗಳನ್ನು ಉಪಕ್ರಮಿಸಿದರು.

## ೨೫೫ನೇ ಅಧ್ಯಾಯ.—ದುರ್ಯೋಧನನ ಯಜ್ಞಸಮಾಪ್ತಿ.

ವೈಶಂಪಾಯನನು ಜನಮೇಜಯರಾಯನನ್ನು ಕುರಿತು—ಎಲೈ ಜನಮೇಜಯರಾಯನೇ ಕೇಳು. ಆ ಬಳಿಕ ಸಕಲರಾದ ಶಿಲ್ಪಿಗಳೂ ಶ್ರೇಷ್ಠರಾದ ಮಂತ್ರಿಗಳೂ ವಿದುರನೂ ಸಹ ಧೃತರಾಷ್ಟ್ರರಾಯನ ಬಳಿಗೆ ಹೋಗಿ "ಎಲೈ ರಾಯನೆ, ನಿನ್ನ ಮಗನು ಮಾಡತಕ್ಕ ಯಾಗಕ್ಕೋಸ್ಕರ ಹೆಚ್ಚಾದ ಬೆಲೆಯುಳ್ಳ ಚಿನ್ನದ ನೇಗಿಲೂ ಇನ್ನೂ ಇತರಸಾಮಗ್ರಿಗಳೂ ಸಿದ್ಧವಾಗಿರುವವು. ಯಜ್ಞಕಾಲವೂ ಸಮೀಪಿಸಿರುವದು" ಎಂದು ಬಿನ್ನವಿಸಿದರು. ಅದನ್ನು ಕೇಳಿ ಧೃತರಾಷ್ಟ್ರರಾಯನು ಯಾಗಕ್ಕೆ ಉಪಕ್ರಮವಾಗಬಹುದೆಂದು ಆಜ್ಞೆಯನ್ನು ಕೊಡಲು, ಬಳಿಕ ದುರ್ಯೋಧನನು ಶಾಸ್ತ್ರೋಕ್ತವಾಗಿ ದೀಕ್ಷಿತನಾಗಿ ಅನೇಕ ದ್ರವ್ಯಗಳಿಂದ ಸಾಧ್ಯವಾದ ಆ ಮಹತ್ತಾದ ಕ್ರತುವನ್ನು ಉಪಕ್ರಮಿಸಿದನು. ಆಗ ಧೃತರಾಷ್ಟ್ರನೂ, ವಿದುರನೂ, ಭೀಷ್ಮ ದ್ರೋಣ ಕೃಪ ಕರ್ಣ ಗಾಂಧಾರಿ ಇವರೆಲ್ಲರೂ ಸಂತೋಷಯುಕ್ತರಾಗಿ ದೇಶಾಂತರಗಳಿಂದ ಅರಸುಗಳನ್ನೂ ಬ್ರಾಹ್ಮಣರನ್ನೂ ಕರೆತರಿಸುವದಕ್ಕೋಸ್ಕರ ದೂತರಿಗೆ ಆಜ್ಞಾಪಿಸಲು ; ಆ ದೂತರು ವೇಗಶಾಲಿಗಳಾದ ವಾಹನಗಳನ್ನೇರಿ ದಿಕ್ಕುದಿಕ್ಕುಗಳಿಗೆ ಹೊರಟರು. ಆ ಸಮಯದಲ್ಲಿ ದುಶ್ಶಾಸನನು ಆ ದೂತರಲ್ಲಿ ಒಬ್ಬ ದೂತನನ್ನು ಕರೆದು "ಎಲೈ ದೂತನೆ, ನೀನು ದ್ವೈತವನಕ್ಕೆ ಹೋಗಿ ಅಲ್ಲಿರುವ ಪಾಪಿಷ್ಠರಾದ ಪಾಂಡವರನ್ನೂ ಮತ್ತು ಅವರ ಬಳಿಯಲ್ಲಿರುವ ಬ್ರಾಹ್ಮಣರನ್ನೂ ಈ ಯಾಗಕ್ಕೋಸ್ಕರ ಬರುವಂತೆ ಕರೆ" ಎಂದು ಆಜ್ಞಾಪಿಸಿದನು. ಬಳಿಕ ಆ ದೂತನು ದ್ವೈತವನಕ್ಕೆ ಹೋಗಿ ಅಲ್ಲಿ ಪಾಂಡವರನ್ನು ಕಂಡು ಅವರಿಗೆ ವಂದನೆಯನ್ನು ಮಾಡಿ "ಎಲೈ ಮಹಾರಾಜನಾದ ಧರ್ಮರಾಯನೆ, ದುರ್ಯೋಧನನು ತನ್ನ ಬಾಹುಬಲದಿಂದ ಅನೇಕಕೋಟಿ ದ್ರವ್ಯಗಳನ್ನು ಸಂಪಾದಿಸಿ ಮಹತ್ತಾದ ಯಜ್ಞವನ್ನು ಮಾಡುವನು. ಅಲ್ಲಿಗೆ ಅನೇಕ ಬ್ರಾಹ್ಮಣರೂ ರಾಜರೂ ಬರುವರು. ನಿಮ್ಮನ್ನು ಕರೆಯುವದಕ್ಕಾಗಿ ದುರ್ಯೋಧನನು ನನ್ನನ್ನು ಇಲ್ಲಿಗೆ ಕಳುಹಿಸಿರುವನು. ಆ ಯಜ್ಞಸಂಭ್ರಮವನ್ನು ನೋಡುವದಕ್ಕೋಸ್ಕರ ನೀವೂ ಅಲ್ಲಿಗೆ ಬನ್ನಿರಿ" ಎನಲು, ಅದನ್ನು ಕೇಳಿ ಧರ್ಮರಾಯನು, "ನಮ್ಮ ವಂಶಕ್ಕೆ ಕೀರ್ತಿಯನ್ನುಂಟುಮಾಡತಕ್ಕ ದುರ್ಯೋಧನನು ದೈವಯೋಗದಿಂದ ಯಜ್ಞವನ್ನು ಮಾಡುವದಕ್ಕೆ ಯತ್ನಿಸಿರುವನೆ ? ನಾವು ಹದಿಮೂರು ವರುಷ ವನವಾಸ ಮಾಡತಕ್ಕದ್ದೆಂದು ಸಮಯನಿಬಂಧನೆಯಾಗಿರುವದರಿಂದ ಈಗ ನಾವು ಅಲ್ಲಿಗೆ ಬರತಕ್ಕವರಲ್ಲ" ಎಂದು ನುಡಿದನು. ಆ ಮಾತನ್ನು ಕೇಳಿ ಭೀಮಸೇನನು "ಎಲೈ ದೂತನೆ, ಹದಿಮೂರು ವರುಷಗಳು ಕಳೆದ ಬಳಿಕ ಮಹಾರಾಜನಾದ ಧರ್ಮರಾಯನು ರಣವೆಂಬ ಯಜ್ಞದಲ್ಲಿ ಅಸ್ತ್ರಶಸ್ತ್ರಗಳೆಂಬ ಅಗ್ನಿಯನ್ನು ಪ್ರಜ್ವಲನೆಮಾಡಿ, ಅದರಲ್ಲಿ ಕೌರವರ ವಿಷಯದಲ್ಲಿರತಕ್ಕ ತನ್ನ ಕ್ರೋಧವೆಂಬ ಹವಿಸ್ಸನ್ನು ಯಾವಾಗ ಕೆಡಹುವನೋ ಆಗ, ನಾನು ಅಲ್ಲಿಗೆ ಬರುವೆನೆಂದು ದುರ್ಯೋಧನನಿಗೆ ತಿಳುಹಿಸು" ಎನಲು, ಅರ್ಜುನಾದಿಗಳು ಯಾವ ಮಾತನ್ನೂ ಆಡದೆ ಸುಮ್ಮನಿದ್ದರು. ಆ ಮಾತನ್ನು ಕೇಳಿ ದೂತನು ದುರ್ಯೋಧನನ ಬಳಿಗೆ ಹೋಗಿ ಈ ವೃತ್ತಾಂತವನ್ನು ತಿಳುಹಿಸಿದನು. ಬಳಿಕ ನಾನಾದೇಶಗಳಿಂದ ಅನೇಕ ಮಂದಿ ರಾಜರೂ ಬ್ರಾಹ್ಮಣರೂ ಆ ಯಜ್ಞಾರ್ಥವಾಗಿ ಹಸ್ತಿನಾನಗರಕ್ಕೆ ಬಂದು ಅಲ್ಲಿ ತಮ್ಮತಮ್ಮ ಮರ್ಯಾದಾನು

ಸಾರವಾಗಿ ಸತ್ಕಾರವನ್ನು ಪಡೆದು ಸಂತೋಷವನ್ನು ಹೊಂದಿದರು. ಆಗ ಧೃತರಾಷ್ಟ್ರನು ದುರ್ಯೋಧನಾದಿಗಳೊಡಗೂಡಿ ಅಧಿಕವಾದ ಸಂತೋಷದಿಂದ ವಿದುರನನ್ನು ನೋಡಿ "ಎಲೈ ವಿದುರನೆ, ಈ ಯಜ್ಞದಲ್ಲಿ ಸಕಲರೂ ಷಡ್ರಸೋಪೇತವಾದ ಮೃಷ್ಟಾನ್ನವನ್ನು ಭೋಜನಮಾಡಿ ಸುಖವಾಗಿರುವಂತೆ ನಡಿಸು" ಎನಲು, ವಿದುರನು ಬ್ರಾಹ್ಮಣಾದಿ ವರ್ಣಗಳಿಗೆಲ್ಲ ನಾನಾವಿಧವಾದ ಮೃಷ್ಟಾನ್ನದಿಂದಲೂ ಭಕ್ಷ್ಯಭೋಜ್ಯಗಳಿಂದಲೂ ಉಪಚರಿಸಿ, ಪರಿಮಳಯುಕ್ತವಾದ ಗಂಧಪುಷ್ಪಾದಿಗಳನ್ನೂ ಮನೋಹರವಾದ ವಸ್ತ್ರಗಳನ್ನೂ ಕೊಟ್ಟು, ಅವರವರಿಗೆ ತಕ್ಕ ಬಿಡಾರಗಳನ್ನೂ ಸಿದ್ಧಪಡಿಸಿ, ಅವರೆಲ್ಲರನ್ನೂ ಮರ್ಯಾದೆಯಿಂದ ಕಂಡು, ಅವರವರಿಗೆ ಬೇಕುಬೇಕಾದಷ್ಟು ದ್ರವ್ಯಗಳನ್ನು ಕೊಟ್ಟನು. ಆಗ ದುರ್ಯೋಧನನು ಬ್ರಾಹ್ಮಣರಿಗೂ ಅರಸುಗಳಿಗೂ ಸತ್ಕಾರವಾದದ್ದನ್ನು ತಿಳಿದು ಆ ಯಜ್ಞವು ಮುಗಿದಬಳಿಕ ಅವರವರ ಸ್ಥಳಗಳಿಗೆ ಅವರವರನ್ನು ಅವರವರಿಗೆ ಮರ್ಯಾದಾನುಸಾರವಾಗಿ ಕಳುಹಿಸಿ ಕೊಟ್ಟು, ತಮ್ಮಂದಿರಿಂದಲೂ ಕರ್ಣಾದಿಗಳಿಂದಲೂ ಕೂಡಿ ಹಸ್ತಿನಾನಗರವನ್ನು ಪ್ರವೇಶಮಾಡಿದನು.

## ೨೫೬ನೇ ಅಧ್ಯಾಯ.—ಯುಧಿಷ್ಠಿರಚಿಂತೆ.

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಎಲೈ ರಾಯನೆ, ಮಹತ್ತಾದ ವೈಭವದಿಂದ ದುರ್ಯೋಧನನು ಪಟ್ಟಣವನ್ನು ಪ್ರವೇಶಿಸುತ್ತಿರಲು, ಅನೇಕಮಂದಿ ಸ್ತುತಿಪಾಠಕರೂ ಇತರ ಪುರಜನರೂ ಸಹ ಆತನನ್ನು ಶ್ಲಾಘಿಸುತ್ತ ಲಾಜಾಕ್ಷತೆಗಳನ್ನೂ ಗಂಧಚೂರ್ಣಗಳನ್ನೂ ಆತನಮೇಲೆ ಎರಚುತ್ತ "ಎಲೈ ಮಹಾರಾಜನೆ, ನಿನ್ನ ಕ್ರತುವು ದೈವಯೋಗದಿಂದ ಪೂರ್ಣವಾಯಿತು" ಎಂದು ಶ್ಲಾಘಿಸಿದರು. ವೃದ್ಧರಾದವರು ಕೆಲವರು "ಈ ಯಜ್ಞವು ಧರ್ಮರಾಯನು ಮಾಡಿದ ಯಜ್ಞಕ್ಕೆ ಸಮಾನವಾದದ್ದಲ್ಲ. ಆ ಯಜ್ಞದ ಷೋಡಶಾಂಶಗಳಲ್ಲಿ ಒಂದಂಶಕ್ಕೂ ಸಮಾನವಾದದ್ದಲ್ಲ" ಎಂದು ಹೇಳಿಕೊಳ್ಳುತ್ತಿದ್ದರು. ದುರ್ಯೋಧನನಿಗೆ ಬೇಕಾದವರು "ಈ ಯಜ್ಞವು ಎಲ್ಲಾ ಯಜ್ಞಗಳಿಗಿಂತಲೂ ಅತಿಶಯವಾಗಿ ನಡೆಯಿತು. ಇಂಥ ಯಜ್ಞವನ್ನೇ ಮಾಡಿ ಯಯಾತಿ, ಮಾಂಧಾತ, ಭರತ ಮೊದಲಾದ ಮಹಾರಾಜರು ಪರಿಶುದ್ಧವಾದ ಚಿತ್ತವೃತ್ತಿಯುಳ್ಳವರಾಗಿ ಸ್ವರ್ಗವನ್ನು ಪಡೆದರು" ಎಂದು ಹೇಳಿಕೊಳ್ಳುತ್ತಿದ್ದರು. ಈ ಪ್ರಕಾರ ಬಗೆಬಗೆಯಾಗಿ ಜನರು ಆಡುವ ಮಾತುಗಳನ್ನು ಕೇಳುತ್ತ, ದುರ್ಯೋಧನನು ಪಟ್ಟಣವನ್ನು ಪ್ರವೇಶಮಾಡಿ, ಅರಮನೆಯನ್ನು ಹೊಕ್ಕು, ಧೃತರಾಷ್ಟ್ರನಿಗೂ ಗಾಂಧಾರಿಗೂ ಭೀಷ್ಮ ದ್ರೋಣ ಕೃಪಾದಿಗಳಿಗೂ ಬುದ್ಧಿಶಾಲಿಯಾದ ವಿದುರನಿಗೂ ಪಾದವನ್ನು ಮುಟ್ಟಿ ನಮಸ್ಕಾರಮಾಡಿ, ತಮ್ಮಂದಿರಿಂದ ತಾನು ನಮಸ್ಕಾರವನ್ನು ಮಾಡಿಸಿಕೊಂಡು, ಅವರೆಲ್ಲರೂ ಸುತ್ತುವರಿದಿರಲು ಪೀಠದಮೇಲೆ ಕುಳಿತುಕೊಂಡನು. ಆಗ ಕರ್ಣನು ಎದ್ದು "ಎಲೈ ದುರ್ಯೋಧನನೆ, ಮಹತ್ತಾದ ಈ ಕ್ರತುವು ದೈವಯೋಗದಿಂದ ನೆರವೇರಿತು. ಪಾಂಡವರು ಯುದ್ಧದಲ್ಲಿ ಹತರಾದಮೇಲೆ ನೀನು ರಾಜಸೂಯಯಾಗವನ್ನು ಮಾಡು. ಆಗ ನಾನು ನಿನ್ನನ್ನು ವಿಶೇಷವಾಗಿ ಪೂಜಿಸುವೆನು" ಎನಲು, ದುರ್ಯೋಧನನು "ಎಲೈ ಕರ್ಣನೆ, ದುರಾತ್ಮರಾದ ಪಾಂಡವರು ಹತರಾದಬಳಿಕ ಮಹತ್ತಾದ ರಾಜಸೂಯಯಾಗವನ್ನೂ ನಾನು ಮಾಡಿದ ಸಮಯದಲ್ಲಿ ನೀನು ನನ್ನನ್ನು ಪೂಜಿಸಲೇಪೂಜಿಸುವೆ. ನಿನ್ನಮಾತು ಸತ್ಯವಾದದ್ದು" ಎಂದು ಕರ್ಣನನ್ನು ಆಲಿಂಗಿಸಿಕೊಂಡು, ಯಾವಾಗ ನಾನು ರಾಜಸೂಯಯಾಗವನ್ನು ಮಾಡುವೆನೋ ಎಂದು ಯೋಚಿಸುತ್ತ, ಸಮೀಪದಲ್ಲಿದ್ದ ತಮ್ಮಂದಿರನ್ನೂ ರಾಜರನ್ನೂ ನೋಡಿ "ಎಲೈ ಕೌರವರೆ, ಪಾಂಡವರನ್ನು ಸಂಹರಿಸಿ ಯಾವಾಗ ನಾನು ಮಹತ್ತಾದ ರಾಜಸೂಯಯಾಗವನ್ನು ಮಾಡೇನು" ಎಂದನು. ಆಗ ಕರ್ಣನು "ಎಲೈ ದುರ್ಯೋಧನನೆ, ನಾನು ಅರ್ಜುನನನ್ನು ಸಂಹರಿಸುವವರೆಗೂ ಪಾದಪ್ರಕ್ಷಾಳನೆಯನ್ನು ಮಾಡಿಕೊಳ್ಳತಕ್ಕವನಲ್ಲ, ಮಾಂಸವನ್ನು ಆಹಾರಮಾಡತಕ್ಕವನಲ್ಲ, ಮತ್ತು ವೀರಪಾನವನ್ನೂ ಮಾಡತಕ್ಕವನಲ್ಲ. ಯಾವ ಯಾಚಕನು ಏನನ್ನು ಕೇಳಿದರೂ ಅದನ್ನು ಆತನಿಗೆ ಇಲ್ಲವೆಂದು ನಾನು ಹೇಳತಕ್ಕವನಲ್ಲ" ಎಂದು ನುಡಿದನು. ಆ ಮಾತನ್ನು ಕೇಳಿ ಅಲ್ಲಿದ್ದ ದುಶ್ಶಾಸನಾದಿಗಳು ಮಹತ್ತಾದ ಕಲಕಲವನ್ನು ಮಾಡಿ, ಕರ್ಣನು ಅರ್ಜುನನನ್ನು ಸಂಹರಿ

ಸುತ್ತೇನೆಂದು ಪ್ರತಿಜ್ಞೆಮಾಡಿದ್ದರಿಂದ ಪಾಂಡವರೆಲ್ಲರೂ ಜಿತರಾದರೆಂದು ತಿಳಿದುಕೊಂಡನು. ಆಗ ದುರ್ಯೋಧನನು ಸುತ್ತಮುತ್ತಲು ಇದ್ದವರನ್ನೆಲ್ಲಾ ಅವರವರ ಮನೆಗಳಿಗೆ ಕಳುಹಿಸಿಕೊಟ್ಟು, ಐಶ್ವರ್ಯವಂತನಾದ ಇಂದ್ರನು ಚೈತ್ರರಥವನ್ನು ಪ್ರವೇಶಮಾಡುವಂತೆ ತನ್ನ ಅರಮನೆಯನ್ನು ಪ್ರವೇಶಮಾಡಿದನು. ಬಳಿಕ ಎಲ್ಲರೂ ತಮ್ಮತಮ್ಮ ಮನೆಗೆ ಹೊರಟುಹೋದರು.

ಅತ್ತಲಾ ಧರ್ಮರಾಯನು ದುರ್ಯೋಧನನು ಯಜ್ಞಾರ್ಥವಾಗಿ ತಮ್ಮನ್ನು ದೂತಮುಖದಿಂದ ಕರಿಸಿದ್ದನ್ನು ಆಲೋಚಿಸುತ್ತ, ಆ ಯಜ್ಞವಾದಬಳಿಕ ಕರ್ಣನು ಅರ್ಜುನನನ್ನು ಸಂಹರಿಸುತ್ತೇನೆಂದು ಪ್ರತಿಜ್ಞೆಮಾಡಿದ್ದನ್ನು ಗೂಢಚಾರರಿಂದ ತಿಳಿದು ಸ್ವಲ್ಪಭಯವನ್ನು ತಾಳಿ, ಅಭೇದ್ಯವಾದ ಕವಚವನ್ನು ಧರಿಸಿರತಕ್ಕ ಕರ್ಣನ ಪರಾಕ್ರಮವನ್ನು ಸ್ಮರಿಸಿಕೊಂಡು ಸ್ವಲ್ಪವೂ ಮನಸ್ಸಿಗೆ ಸಮಾಧಾನವಿಲ್ಲದೆ, ಅನೇಕ ಮೃಗಗಳಿಂದ ಕೂಡಿದ ಆ ದ್ವೈತವನವನ್ನು ಬಿಟ್ಟು ಮತ್ತೊಂದು ಪ್ರದೇಶಕ್ಕೆ ಹೋಗಬೇಕೆಂದು ಆಲೋಚನೆಮಾಡಿದನು.

ಇತ್ತಲು ದುರ್ಯೋಧನನು ತಮ್ಮಂದಿರಿಂದಲೂ ಶೂರರಾದ ಭೀಷ್ಮ ದ್ರೋಣ ಕೃಪಾದಿಗಳಿಂದಲೂ ಯುದ್ಧದಲ್ಲಿ ಸಮರ್ಥನಾದ ಸೂತಪುತ್ರನಾದ ಕರ್ಣನಿಂದಲೂ ಕೂಡಿ, ಯಜ್ಞಾರ್ಥವಾಗಿ ದೇಶಾಂತರಗಳಿಂದ ಬಂದಿದ್ದ ಇನ್ನೂ ಕೆಲವುಮಂದಿ ಬ್ರಾಹ್ಮಣರಿಗೂ ಅರಸುಗಳಿಗೂ ಬೇಕಾದಷ್ಟು ದಕ್ಷಿಣೆಗಳನ್ನೂ ಬೇಕಾದ ವಸ್ತ್ರಾಭರಣಗಳನ್ನೂ ಕೊಟ್ಟು ಎಲ್ಲರನ್ನೂ ಸತ್ಕರಿಸಿ, ತಮ್ಮಂದಿರಲ್ಲಿ ವಿಶ್ವಾಸವನ್ನು ಮಾಡುತ್ತ, ಸಂಪಾದಿಸಿದ ದ್ರವ್ಯಕ್ಕೆ ದಾನಮಾಡುವದೂ ತಾನು ಅನುಭವಿಸುವದೂ ಮುಖ್ಯವಾದ ಫಲಗಳೆಂದು ಮನಸ್ಸಿನಲ್ಲಿ ನಿಶ್ಚಯಿಸಿಕೊಂಡು, ರಾಜ್ಯಭಾರವನ್ನು ಮಾಡುತ್ತಿದ್ದನು—ಎಂದು ವೈಶಂಪಾಯನಮುನೀಶ್ವರನು ಜನಮೇಜಯರಾಯನಿಗೆ ವಿವರಿಸಿದನು.

## ೨೫೭ನೇ ಅಧ್ಯಾಯ.—ಮೃಗಸ್ವಪ್ನ.

ಅನಂತರದಲ್ಲಿ ಜನಮೇಜಯರಾಯನು ವೈಶಂಪಾಯನಮುನೀಶ್ವರನನ್ನು ಕುರಿತು—ಎಲೈ ಮುನೀಂದ್ರನೆ, ಮಹಾಬಲಶಾಲಿಗಳಾದ ಪಾಂಡವರು ಗಂಧರ್ವರ ಕೈಗೆ ಸಿಕ್ಕಿದ್ದ ದುರ್ಯೋಧನನನ್ನು ಬಿಡಿಸಿ ದ್ವೈತವನದಲ್ಲಿ ಏನು ಮಾಡುತ್ತಿದ್ದರು—ಎಂದು ಕೇಳಲು ; ವೈಶಂಪಾಯನಮುನೀಂದ್ರನು—ಕೇಳು ಜನಮೇಜಯರಾಯನೆ, ಧರ್ಮರಾಯನು ದ್ವೈತವನದಲ್ಲಿ ರಾತ್ರಿವೇಳೆಯಲ್ಲಿ ನಿದ್ರೆಮಾಡಿ ಏಳುವ ಸಮಯದಲ್ಲಿ, ಆ ವನದಲ್ಲಿ ವಾಸಮಾಡಿಕೊಂಡಿದ್ದ ಮೃಗಗಳು ಕಣ್ಣೀರು ಸುರಿಸುತ್ತ ಧರ್ಮರಾಯನ ಎದುರಿಗೆ ಬಂದು ನಿಂತುಕೊಂಡವು. ಆಗ ಧರ್ಮಾತ್ಮನಾದ ಧರ್ಮರಾಯನು ತನ್ನೆದುರಿಗೆ ಭಯದಿಂದ ನಡುಗುತ್ತ ಕೈಮುಗಿದುಕೊಂಡು ನಿಂತಿದ್ದ ಆ ಮೃಗಗಳನ್ನು ನೋಡಿ "ಎಲೈ ಮೃಗಗಳೆ, ಏನನ್ನು ಹೇಳಬೇಕೆಂದು ಇಲ್ಲಿ ಬಂದು ನಿಂತಿರುವಿರಿ" ಎನಲು, ಆಮೃಗಗಳು "ಎಲೈ ಮಹಾರಾಜನೆ, ಈ ವನದಲ್ಲಿ ನಾವು ಹತಶೇಷರಾಗಿರುವೆವು. ನಾವೂ ನಷ್ಟರಾಗಿ ಹೋಗದಂತೆ ನಮ್ಮನ್ನು ಕಾಪಾಡುವದಕ್ಕಾಗಿ ನೀವು ಈ ಸ್ಥಳವನ್ನು ಬಿಟ್ಟು ಮತ್ತೊಂದು ಸ್ಥಳಕ್ಕೆ ಹೋಗಿ ವಾಸಮಾಡಬೇಕು. ನೀವು ಶೂರರು, ಅಸ್ತ್ರವಿದ್ಯಾಪಾರಂಗತರು. ಆದ್ದರಿಂದ ನೀವು ಅರಣ್ಯದಲ್ಲಿ ವಾಸಮಾಡಿಕೊಂಡಿರುವ ನಮ್ಮ ಕುಲವನ್ನೇ ನಾಶಮಾಡಿಬಿಟ್ಟಿರಿ. ನಾವು ಕೆಲವರು ಮಾತ್ರ ಬೀಜಭೂತರಾಗಿ ಉಳಿದಿರುವೆವು. ನೀವು ನಮ್ಮಲ್ಲಿ ಕೃಪೆಯನ್ನುಮಾಡಿ ಈ ಸ್ಥಳವನ್ನುಬಿಟ್ಟು ಮತ್ತೊಂದು ಸ್ಥಳಕ್ಕೆ ಹೋದರೆ ನಾವು ಕ್ರಮವಾಗಿ ವೃದ್ಧಿಯನ್ನು ಪಡೆಯುವೆವು" ಎಂದು ಬೇಡಿಕೊಂಡವು. ದುಃಖಪಡುವ ಆ ಮೃಗಗಳ ಮಾತನ್ನು ಕೇಳಿ ಸಕಲಪ್ರಾಣಿಗಳಿಗೂ ಹಿತಚಿಂತಕನಾದ ಧರ್ಮರಾಯನು "ಎಲೈ ಮೃಗಗಳೆ, ನಿಮ್ಮ ಇಷ್ಟವಿದ್ದಂತೆ ನಾನು ನಡಿಸಿಕೊಡುವೆನು" ಎಂದು ಹೇಳುತ್ತಲೇ ಎಚ್ಚತ್ತು, ಮೃಗಗಳಲ್ಲಿ ಕರುಣೆಯಿಂದ ತಮ್ಮಂದಿರನ್ನು ನೋಡಿ "ಎಲೈ ಅನುಜರೆ, ನಾನು ನಿದ್ರೆಯಿಂದ ಏಳುವ ಸಮಯದಲ್ಲಿ ನಮ್ಮಿಂದ ಹತಶೇಷಗಳಾಗಿ ಈ ವನದಲ್ಲಿರತಕ್ಕ ಕೆಲವು ಮೃಗಗಳು ನನ್ನನ್ನುಕುರಿತು, 'ಇನ್ನುಮೇಲಾದರೂ ನೀವು ನಮ್ಮಲ್ಲಿ ಕೃಪೆಯನ್ನು

ಮಾಡಬೇಕು' ಎಂದು ಬೇಡಿಕೊಂಡವು. ಆದ್ದರಿಂದ ನಾವು ಅವುಗಳ ವಿಷಯದಲ್ಲಿ ಕೃಪೆಯನ್ನು ಮಾಡುವದು ಧರ್ಮವು. ಈ ವನದ ಮೃಗಗಳ ಮಾಂಸವನ್ನೇ ನಾವು ಇಪತ್ತು ತಿಂಗಳಿಂದಲೂ ಆಹಾರ ಮಾಡಿಕೊಂಡಿದ್ದೆವು. ಇನ್ನು ಈ ಸ್ಥಳವನ್ನು ಬಿಟ್ಟು ಅನೇಕ ಮೃಗಗಳಿಂದ ಕೂಡಿರುವದಾಗಿಯೂ ಮರುಭೂಮಿಗೆ ಶಿರಸ್ಥಾನವಾಗಿಯೂ ತೃಣಬಿಂದುಸರಸ್ಸಿಗೆ ಸಮೀಪವಾಗಿಯೂ ತೃಣಕಾಷ್ಠ ಜಲಸಮೃದ್ಧವಾಗಿಯೂ ಇರುವ ಕಾಮ್ಯಕವನದಲ್ಲಿ ಕೆಲವು ದಿವಸ ವಾಸಮಾಡೋಣ" ಎನಲು, ಧರ್ಮಜ್ಞರಾದ ಭೀಮಾದಿಗಳೂ ಬ್ರಾಹ್ಮಣರೂ ಇಂದ್ರಸೇನ ಮೊದಲಾದ ಭೃತ್ಯರೂ ಸಹ ಹಾಗೆಯೇ ಆಗಲಿ ಎಂದು ನುಡಿದರು. ಅನಂತರ ಎಲ್ಲರೂ ಅಲ್ಲಿಂದ ಹೊರಟು ಶುಚಿಯಾಗಿಯೂ ಕಂದಮೂಲ ಜಲಸಮೃದ್ಧಿಯುಳ್ಳದ್ದಾಗಿಯೂ ಇರುವ ಮಾರ್ಗದಲ್ಲಿ ಹೊರಟು ತಪಸ್ವಿಗಳಿಂದ ಕೂಡಿ ಪುಣ್ಯತಮವಾದ ಕಾಮ್ಯಕವನವನ್ನು ಪ್ರವೇಶಿಸಿ, ಪುಣ್ಯವಂತರು ಸ್ವರ್ಗದಲ್ಲಿ ವಾಸಮಾಡುವಂತೆ ಅಲ್ಲಿ ಸುಖವಾಗಿ ವಾಸಮಾಡುತ್ತಿದ್ದರು.

## ೨೫೯ನೇ ಅಧ್ಯಾಯ.—ವ್ರೀಹಿದ್ರೌಣಿಕಾಖ್ಯಾನ—(ದಾನಕಥನವು.)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಎಲೈ ಜನಮೇಜಯರಾಯನೆ ಕೇಳು, ಈ ಪ್ರಕಾರ ಪಾಂಡವರು ವನವಾಸಮಾಡುತ್ತ, ಕಂದಮೂಲಾದಿಗಳನ್ನು ಆಹಾರಮಾಡಿಕೊಂಡು, ಲೇಶವೂ ಸುಖವಿಲ್ಲದೆ ದುಃಖಪಡುತ್ತ, ಕಾಲಗತಿಯಿಂದ ಪ್ರಾಪ್ತವಾದದ್ದನ್ನು ತಪ್ಪಿಸಿಕೊಳ್ಳುವದು ಅಶಕ್ಯವೆಂದು ಚಿಂತಿಸುತ್ತ, ಕಷ್ಟದಿಂದ ಹನ್ನೊಂದು ವರುಷಗಳನ್ನು ಕಳೆದರು. ಆಗ ರಾಜರ್ಷಿಯಾದ ಧರ್ಮರಾಯನು ತನ್ನ ಅಪರಾಧದಿಂದ ತಮ್ಮಂದಿರಿಗೆ ಉಂಟಾದ ದುಃಖವನ್ನು ಸ್ಮರಿಸಿಕೊಂಡು, ಎದೆಯಲ್ಲಿ ಬಾಣ ನೆಟ್ಟುಕೊಂಡಿರುವನಂತೆ ರಾತ್ರಿಕಾಲದಲ್ಲಿ ನಿದ್ರೆಯನ್ನೂ ಸಹ ಮಾಡದೆ, ದ್ಯೂತಕಾಲದಲ್ಲಿ ದುರಾತ್ಮನಾದ ಕರ್ಣನು ಕ್ರೂರವಾಗಿ ಮಾತನಾಡಿದ್ದನ್ನು ಸ್ಮರಿಸಿಕೊಂಡು ಘೋರವಾದ ಕೋಪವುಳ್ಳವನಾಗಿ ನಿಟ್ಟುಸುರನ್ನು ಬಿಡುತ್ತ ದೀನನಾಗಿದ್ದನು. ಹೀಗಿದ್ದ ಧರ್ಮರಾಯನನ್ನು ನೋಡಿ ದ್ರೌಪದಿ, ಭೀಮ, ಅರ್ಜುನ, ನಕುಲಸಹದೇವರೂ ಸಹ ವನವಾಸಕಾಲವು ಇನ್ನು ಸ್ವಲ್ಪವೇ ಉಳಿದಿರುವುದೆಂದು ತಿಳಿದು ಕೊಂಡು, ಆ ಕ್ಲೇಶಗಳನ್ನೆಲ್ಲಾ ಸಹಿಸಿ ಕೊಂಡು, ಉತ್ಸಾಹದಿಂದಲೂ ಕ್ರೋಧದಿಂದಲೂ ಬೇರೆ ಆಕಾರವನ್ನು ಹೊಂದಿರುವರಂತೆ ಕಾಣಿಸುತ್ತಿದ್ದರು.

ಆ ಸಮಯದಲ್ಲಿ ಸತ್ಯವತೀಪುತ್ರನೂ ಮಹಾಯೋಗಿಯೂ ಆದ ವೇದವ್ಯಾಸಮಹರ್ಷಿಯು ಪಾಂಡವರನ್ನು ನೋಡುವದಕ್ಕೋಸ್ಕರ ಕಾಮ್ಯಕವನಕ್ಕೆ ಬಂದನು. ಅವರನ್ನು ನೋಡಿ ಧರ್ಮರಾಯನು ಎದುರುಗೊಂಡು ಕರದುಕೊಂಡು ಬಂದು, ವಿಧ್ಯುಕ್ತವಾಗಿ ಅವರಿಗೆ ಸತ್ಕಾರವನ್ನು ಮಾಡಿ, ನಮಸ್ಕರಿಸಿ ಶ್ರೇಷ್ಠವಾದ ಪೀಠವನ್ನು ಕೊಟ್ಟರು. ಮಹಾತ್ಮರಾದ ವೇದವ್ಯಾಸರು ಆ ಪೀಠವಮೇಲೆ ಕುಳಿತು, ವನದಲ್ಲಿ ಕಂದಮೂಲಾದಿಗಳನ್ನು ಭಕ್ಷಿಸಿಕೊಂಡು ಕೃಶರಾಗಿರುವ ತಮ್ಮ ಮೊಮ್ಮಕ್ಕಳಾದ ಪಾಂಡವರನ್ನು ನೋಡಿ, ಕೃಪೆಯಿಂದಲೂ ದುಃಖದಿಂದಲೂ ಗದ್ಗದಸ್ವರವುಳ್ಳವರಾಗಿ ಧರ್ಮರಾಯನನ್ನು ಕುರಿತು "ಎಲೈ ಧರ್ಮರಾಯನೆ, ನನ್ನ ಮಾತನ್ನು ಕೇಳು: ಲೋಕದಲ್ಲಿ ತಪಸ್ಸನ್ನು ಮಾಡದೆ ಇರುವವನಿಗೆ ಸುಖವುಂಟಾಗಲಾರದು. ಎಲ್ಲರಿಗೂ ಸುಖದುಃಖಗಳು ಪರ್ಯಾಯವಾಗಿ ಬರತಕ್ಕವುಗಳು. ಲೋಕದಲ್ಲಿ ಯಾವನಾದರೂ ಒಬ್ಬೊಬ್ಬನು ಬ್ರಹ್ಮವಿದ್ಯೆಯಿಂದ ಜ್ಞಾನವನ್ನು ಪಡೆದು ದುಃಖವನ್ನು ಕಳೆದುಕೊಂಡು ಅಪರಿಮಿತವಾದ ಸುಖವನ್ನು ಅನುಭವಿಸುವನು. ಯಾವನು ಉತ್ಪತ್ತಿಸ್ಥಿತಿಲಯಗಳಿಗೆ ಕಾರಣಭೂತನಾದವನನ್ನು ತಿಳಿದಿರುವನೋ ಆತನು, ಪ್ರಾರಬ್ಧ ಕರ್ಮಾನುಸಾರವಾಗಿ ಪ್ರಾಪ್ತವಾದ ಸುಖದುಃಖಗಳನ್ನು ಅನುಭವಿಸುತ್ತಿದ್ದರೂ ಸಂತೋಷವನ್ನೂ ವ್ಯಸನವನ್ನೂ ಮನಸ್ಸಿಗೆ ತಂದುಕೊಳ್ಳದೆ ಇರುವನು. ಎಲೈ ಧರ್ಮರಾಯನೆ, ಕೃಷಿಯನ್ನು ಮಾಡತಕ್ಕವನು ಕಾಲಾನುಸಾರವಾಗಿ ಬರತಕ್ಕ ಫಲವನ್ನು ಹ್ಯಾಗೆ ಅನುಭವಿಸುವನೋ ಹಾಗೆ, ಎಲ್ಲರೂ ಕಾಲಪ್ರಾಪ್ತವಾದದ್ದನ್ನು ಅನುಭವಿಸಲೇ ಅನುಭವಿಸಬೇಕು. ತಪಸ್ಸಿಗಿಂತಲೂ ಉತ್ತಮವಾದದ್ದು ಯಾವದೂ ಇಲ್ಲ. ತಪಸ್ಸಿನಿಂದಲೇ ಪುರುಷನು ಮಹತ್ತ್ವವನ್ನು ಪಡೆಯು

ವನು. ತಪಸ್ಸು ಮಾಡಿದವನಿಗೆ ಅಸಾಧ್ಯವಾದದ್ದು ಯಾವದೂ ಇಲ್ಲವೆಂದು ತಿಳಿ. ಸತ್ಯವೂ, ಋಜುಭಾವವೂ, ಕೋಪರಾಹಿತ್ಯವೂ, ಅತಿಥಿಸತ್ಕಾರವೂ, ದಮವೂ, ಶಮವೂ, ಅನಸೂಯೆಯೂ, ಅಹಿಂಸೆಯೂ, ಶುಚಿತ್ವವೂ, ಇಂದ್ರಿಯನಿಗ್ರಹವೂ, ಪುಣ್ಯವಂತರಿಗೆ ಪರಿಶುದ್ಧವಾದ ಧರ್ಮಗಳು. ಯಾವಾಗಲೂ ಅಧರ್ಮದಲ್ಲಿ ಅಪೇಕ್ಷೆಯುಳ್ಳ ಮೂಢರಾದ ಜನರು ನೀಚಜಾತಿಯಲ್ಲಿ ಹುಟ್ಟಿ ಅಧೋಗತಿಯನ್ನು ಹೊಂದತಕ್ಕವರಾದ್ದರಿಂದ, ಅವರಿಗೆ ಎಂದಿಗೂ ಸುಖವು ಲಭಿಸಲಾರದು. ಈ ಲೋಕದಲ್ಲಿ ಮಾಡಿದ ಕರ್ಮಕ್ಕೆ ಎಲ್ಲರೂ ಲೋಕಾಂತರದಲ್ಲಿ ತಕ್ಕ ಫಲಗಳನ್ನು ಅನುಭವಿಸುವರು. ಆದ್ದರಿಂದ ಮನುಷ್ಯರಾದವರು ನೇಮದಿಂದ ತಪಸ್ಸನ್ನೂ ವ್ರತಗಳನ್ನೂ ಆಚರಿಸಬೇಕು; ಮತ್ತು ಯಥಾಶಕ್ತಿಯಾಗಿ ದಾನವನ್ನೂ ಮಾಡಬೇಕು. ಮಾತ್ಸರ್ಯವನ್ನು ಬಿಟ್ಟು ದೊಡ್ಡವರನ್ನು ಭಕ್ತಿಯಿಂದ ಪೂಜಿಸಲೂ ಬೇಕು. ಸತ್ಯವಾದಿಯಾದವನು ಆಯುಸ್ಸನ್ನು ಪಡೆಯುವನು. ಕೋಪವನ್ನು ಬಿಟ್ಟವನು ಕ್ಲೇಶಪಡದೆ ಇರುವನು. ಅಸೂಯಾರಹಿತನಾದವನು ಋಜುಭಾವದಿಂದ ಉತ್ತಮವಾದ ಸುಖವನ್ನು ಪಡೆಯುವನು. ಮನಸ್ಸನ್ನು ನಿಗ್ರಹಿಸಿ ಶಮದಮಾಗುಣವನ್ನು ತಾಳಿದವನು ಎಂದಿಗೂ ಕ್ಲೇಶವನ್ನು ಪಡೆಯದೆಯೂ ಪರರ ಐಶ್ವರ್ಯವನ್ನು ನೋಡಿ ಸಂತಾಪಪಡದೆಯೂ ಇರುವನು. ತನಗೆ ದೇವರು ಕೊಟ್ಟದ್ದನ್ನು ಅತಿಥಿ ಮೊದಲಾದವರಿಗೆ ವಿಭಾಗಮಾಡಿ ಕೊಡತಕ್ಕವನೂ ಜಿತೇಂದ್ರಿಯನೂ ಸುಖಪಡುವರು. ಅಹಿಂಸಾಪರನಾದವನು ಆರೋಗ್ಯಭಾಗ್ಯವನ್ನು ಪಡೆಯುವನು. ಪೂಜ್ಯರಾದವರನ್ನು ಪೂಜಿಸತಕ್ಕವನು ಸತ್ಕುಲದಲ್ಲಿ ಹುಟ್ಟಿ ವ್ಯಸನವನ್ನು ಹೊಂದದೆ ಇರುವನು. ಶುಭವಾದ ಬುದ್ಧಿಯುಳ್ಳವನು ಮರಣವನ್ನು ಹೊಂದಿದರೂ ಮರಳಿ ಒಳ್ಳೇ ಬುದ್ಧಿಯುಳ್ಳವನಾಗಿಯೇ ಹುಟ್ಟುವನು" ಎಂದು ನುಡಿದರು. ಬಳಿಕ ಧರ್ಮರಾಯನು "ಎಲೈ ಮಹಾತ್ಮನೆ, ದಾನ ಧರ್ಮ ತಪಸ್ಸುಗಳನ್ನು ಆಚರಿಸಿ ಮೃತನಾದವನು ಯಾತರ ಫಲವನ್ನು ಅಧಿಕವಾಗಿ ಹೊಂದುವನು?" ಎನಲು, ವ್ಯಾಸರು "ಎಲೈ ಧರ್ಮರಾಯನೆ, ದಾನಕ್ಕಿಂತಲೂ ಹೆಚ್ಚಾದದ್ದು ಭೂಮಿಯಲ್ಲಿ ಯಾವದೂ ಇಲ್ಲ. ಲೋಕದಲ್ಲಿ ಎಲ್ಲರಿಗೂ ದ್ರವ್ಯದಲ್ಲಿ ಅಧಿಕವಾದ ಅಪೇಕ್ಷೆಯಿರುವದು. ಅಂಥ ದ್ರವ್ಯವನ್ನು ಪಡೆಯಬೇಕಾದರೆ ಪ್ರಿಯವಾದ ಪ್ರಾಣವನ್ನಾದರೂ ತ್ಯಜಿಸಿ ಪಡೆಯುವರು. ಕೆಲವರು ದ್ರವ್ಯಾರ್ಥವಾಗಿ ಸಮುದ್ರಕ್ಕೆ ಹೋಗುವರು, ಅರಣ್ಯಪ್ರವೇಶವನ್ನು ಮಾಡುವರು; ಮತ್ತು ಕೆಲವರು ಕೃಷಿಗೋರಕ್ಷಣಾದಿಗಳನ್ನು ಮಾಡುವರು; ಇನ್ನೂ ಕೆಲವರು ಆ ದ್ರವ್ಯದ ನಿಮಿತ್ತವಾಗಿ ಪರರ ಸೇವೆಯನ್ನು ಮಾಡುವರು. ಹೀಗೆ ಸಂಪಾದಿಸಿದ ದ್ರವ್ಯವನ್ನು ಪರರಿಗೆ ಕೊಡುವದು ಕಷ್ಟವು. ಆದ್ದರಿಂದ ದಾನವೆಂಬುದೇ ಶ್ರೇಷ್ಠವಾದದ್ದೆಂದು ನನಗೆ ತೋರುವದು. ಅದರಲ್ಲೂ ಒಂದು ವಿಶೇಷವನ್ನು ಹೇಳುವೆನು ಕೇಳು. ನ್ಯಾಯದಿಂದ ಸಂಪಾದಿಸಿದ ದ್ರವ್ಯವನ್ನು ದೇಶಕಾಲಪಾತ್ರಗಳನ್ನರಿತು ಸಜ್ಜನರಿಗೆ ಕೊಡುವದು ಎಲ್ಲಕ್ಕಿಂತಲೂ ಶ್ರೇಷ್ಠವಾದದ್ದು. ಅನ್ಯಾಯಾರ್ಜಿತವಾದ ದ್ರವ್ಯವನ್ನು ಯಾವನು ದಾನಮಾಡುವನೋ ಆ ದಾನವು ಆತನ ಕಷ್ಟವನ್ನು ನಿವರ್ತಿಸಲಾರದು. ಕಾಲವನ್ನರಿತು ಪರಿಶುದ್ಧವಾದ ಮನಸ್ಸಿನಿಂದ ಸತ್ಪಾತ್ರದಲ್ಲಿ ನ್ಯಾಯಾರ್ಜಿತವಾದ ದ್ರವ್ಯವನ್ನು ಸ್ವಲ್ಪಕೊಟ್ಟರೂ, ಅದು ಪರಲೋಕದಲ್ಲಿ ಮಹತ್ತಾದ ಫಲವನ್ನು ಕೊಡುವದು. ಈ ವಿಷಯದಲ್ಲಿ ಪುರಾತನವಾದ ವ್ರೀಹಿದ್ರೌಣಿಕಾಖ್ಯಾನವೆಂಬ ಇತಿಹಾಸವನ್ನು ಹೇಳುವೆನು ಕೇಳು" ಎಂದು ವ್ಯಾಸರು ಧರ್ಮರಾಯನಿಗೆ ಹೇಳಿದರು.

---

## ೨೬೧ನೇ ಅಧ್ಯಾಯ.—ವ್ರೀಹಿದ್ರೌಣಿಕಾಖ್ಯಾನ—(ಸ್ವರ್ಗಗುಣಪ್ರಶ್ನೆ.)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಬಳಿಕ ಧರ್ಮರಾಯನು ವೇದವ್ಯಾಸರನ್ನು ಕುರಿತು "ಎಲೈ ಮಹಾತ್ಮರೆ, ಯಾವ ಮಹಾತ್ಮನು ಯಾರಿಗೋಸ್ಕರ ಒಂದು ಕೊಳಗ ಧಾನ್ಯವನ್ನು ಕೊಟ್ಟನು? ಅದರಿಂದ ಸಕಲ ಧರ್ಮಗಳನ್ನೂ ತಿಳಿದಿರತಕ್ಕ ಭಗವಂತನು ಹ್ಯಾಗೆ ಸಂತುಷ್ಟನಾದನು? ಅಂಥ ಧರ್ಮಾತ್ಮನ ಜನ್ಮವೇ ಸಫಲವಾದದ್ದೆಂದು ನಾನು ತಿಳಿಯುವೆನು. ಆ ಮಹಾತ್ಮನು ಯಾರು?"

ಎಂದು ಪ್ರಶ್ನೆ ಮಾಡಲು, ವೇದವ್ಯಾಸರು “ ಎಲೈ ಧರ್ಮರಾಯನೆ, ಕುರುಕ್ಷೇತ್ರದಲ್ಲಿ ಸತ್ಯವಾದಿಯೂ ಅಸೂಯಾರಹಿತನೂ ಅತಿಥಿಪೂಜೆಯಲ್ಲಿ ಆಸಕ್ತನೂ ಕ್ರಿಯಾವಂತನೂ ಆದ ಮುದ್ಗಲನೆಂಬ ಬ್ರಾಹ್ಮಣನು ಕಪೋತವೃತ್ತಿಯನ್ನು ಆಶ್ರಯಿಸಿ ಜಿತೇಂದ್ರಿಯನಾಗಿ ಶಿಲೋಂಛವೃತ್ತಿಯಿಂದ ಜೀವಿಸುತ್ತ, ಯಾಗಗಳನ್ನು ಮಾಡುತ್ತ ತಪಸ್ಸುಮಾಡುತ್ತಿದ್ದನು. ಆತನು ಪತ್ನೀಪುತ್ರರಿಂದೊಡಗೂಡಿ ಪಕ್ಷಕ್ಕೆ ಬಂದಾವರ್ತಿ ಆಹಾರಮಾಡುತ್ತ, ಪಾರಿವಾಳದ ಹಕ್ಕಿಯಂತೆ ಕಣಗಳಿಗೆ ಹೋಗಿ ಅಲ್ಲಿ ಬಿದ್ದೊಂದು ಕಾಳಾಗಿ ಧಾನ್ಯವನ್ನು ಆರಿಸಿ ಬಂದು ಕೊಳಗದ ಧಾನ್ಯವನ್ನು ಮಾಡಿಕೊಂಡು, ದರ್ಶ ಪೌರ್ಣಮಾಸ ಕರ್ಮಗಳನ್ನು ನಿಯಮದಿಂದ ನೆರವೇರಿಸುತ್ತ, ವಿಶೇಷವಾಗಿ ದೇವತಾತಿಥಿಗಳ ಪೂಜೆಯನ್ನು ಮಾಡಿಕೊಂಡು ಕಾಲಕ್ಷೇಪವನ್ನು ಮಾಡುತ್ತಿದ್ದನು. ಆತನು ದರ್ಶ ಪೌರ್ಣಮಾಸ ಕರ್ಮಗಳಲ್ಲಿ ಕೊಟ್ಟ ಹವಿರ್ಭಾಗವನ್ನು ತ್ರಿಲೋಕಾಧಿಪತಿಯಾದ ದೇವೇಂದ್ರನು ದೇವತೆಗಳೊಡಗೂಡಿ ತಾನೇ ಪ್ರತ್ಯಕ್ಷವಾಗಿ ಬಂದು ಸ್ವೀಕರಿಸುತ್ತಿದ್ದನು. ಈ ರೀತಿಯಾಗಿದ್ದುಕೊಂಡು ಆ ಮುದ್ಗಲನು ಅತಿಥಿಗಳಿಗೆ ಅನ್ನದಾನವನ್ನು ಮಾಡುತ್ತಿರಲು, ಆ ಬಂದುಕೊಳಗದ ಧಾನ್ಯವೇ ದಿನದಿನಕ್ಕೆ ಆತನ ಪರಿಶುದ್ಧವಾದ ಅನ್ನದಾನದ ಮಹಿಮೆಯಿಂದ ವೃದ್ಧಿಯಾಗುತ್ತಿತ್ತು. ಎಷ್ಟುಮಂದಿ ಅತಿಥಿಗಳು ಬಂದಾಗ್ಯೂ ಆ ಬ್ರಾಹ್ಮಣನು ಆ ಧಾನ್ಯದಿಂದಲೇ ಅವರಿಗೆ ತೃಪ್ತಿಯನ್ನುಂಟುಮಾಡುತ್ತಿದ್ದನು. ಈ ಸಮಾಚಾರವನ್ನು ಕೇಳಿ ದಿಗಂಬರನಾದ ದೂರ್ವಾಸಮಹರ್ಷಿಯು ಹುಚ್ಚುಹಿಡಿದವನಂತೆ ವೇಷವನ್ನು ಧರಿಸಿ, ನಗುತ್ತಲೂ ಕ್ರೂರವಾದ ಮಾತುಗಳನ್ನಾಡುತ್ತಲೂ ಧರ್ಮಿಷ್ಠನಾದ ಮುದ್ಗಲನ ಬಳಿಗೆ ಬಂದು ‘ ಎಲೈ ಮುದ್ಗಲನೆ, ಅನ್ನಾರ್ಥಿಯಾಗಿ ನಾನು ಬಂದಿರುವೆನು ’ ಎನಲು, ಮುದ್ಗಲನು ‘ ತಮಗೆ ಸುಖಾಗಮನವೆ ? ’ ಎಂದು ಕುಶಲಪ್ರಶ್ನೆಯನ್ನು ಮಾಡಿ, ಆ ಉನ್ಮತ್ತನಾದ ಋಷಿಗೆ ಪಾದ್ಯವನ್ನೂ ಅರ್ಘ್ಯವನ್ನೂ ಆಚಮನೀಯವನ್ನೂ ಕೊಟ್ಟು ವಿಶ್ವಾಸದಿಂದ ಅನ್ನದಾನವನ್ನು ಮಾಡಿದನು. ಆಗ ಆ ಹುಚ್ಚನು ರಸವತ್ತಾದ ಆ ಅನ್ನವನ್ನು ಭೋಜನಮಾಡಿ, ಆಯೆಂಜಲನ್ನೆಲ್ಲಾ ತನ್ನ ಮೈಗೆ ಬಳಿದುಕೊಂಡು, ಬಂದಹಾಗೆ ಹೊರಟುಹೋಗಿ, ಯಥಾಪ್ರಕಾರವಾಗಿ ಎರಡನೇ ದಿವಸವೂ ಬಂದು ಉಂಛವೃತ್ತಿಯಿಂದ ಜೀವಿಸತಕ್ಕ ಮುದ್ಗಲನ ಮನೆಯಲ್ಲಿದ್ದ ಎಲ್ಲಾ ಅನ್ನವನ್ನೂ ಭೋಜನಮಾಡಿಕೊಂಡು ಹೊರಟುಹೋದನು. ಆ ದಿವಸ ಮುದ್ಗಲನು ತಾನು ಉಪವಾಸವಿದ್ದು ಧಾನ್ಯವನ್ನು ಆರಿಸಿ ತರುವದಕ್ಕೆ ಕಣಕ್ಕೆ ಹೋದನು. ಆಗ ಆತನಿಗೆ ಸ್ವಲ್ಪವಾದರೂ ಹಸಿವಿನ ಬಾಧೆಯೂ ಕೋಪವೂ ಮಾತ್ಸರ್ಯವೂ ಅವಮಾನವೂ ಆತುರವೂ ಸಹ ಉಂಟಾಗದೆ ಇದ್ದವು. ಹೀಗೆ ಪರಿಶುದ್ಧಾತ್ಮನಾದ ಆತನ ಮನೆಗೆ ಹುಚ್ಚನಾದ ಆ ಋಷಿಯು ಆರಾವರ್ತಿ ಬಂದು, ಆತನಿಗೂ ಆತನ ಹೆಂಡತಿ ಮಕ್ಕಳಿಗೂ ಸಹ ಸ್ವಲ್ಪವೂ ಉಳಿಯದಹಾಗೆ ಇದ್ದ ಅನ್ನವನ್ನೆಲ್ಲಾ ಊಟಮಾಡಿಕೊಂಡು ಹೋಗುತ್ತಿದ್ದನು. ಅಷ್ಟಾದರೂ ಆ ಮುದ್ಗಲನು ಸ್ವಲ್ಪವಾದರೂ ವಿಕಾರವನ್ನು ಹೊಂದದೆ ನಿರ್ಮಲವಾದ ಮನಸ್ಸುಳ್ಳವನಾಗಿರುವದನ್ನು ನೋಡಿ, ಆ ದೂರ್ವಾಸನು ಪರಿಶುದ್ಧಾತ್ಮನಾದ ಆ ಮುದ್ಗಲನನ್ನು ಕುರಿತು ‘ ಎಲೈ ಮುದ್ಗಲನೆ, ನಿನಗೆ ಸಮಾನನಾಗಿ ಮಾತ್ಸರ್ಯವಿಲ್ಲದೆ ದಾನಮಾಡತಕ್ಕವನು ಲೋಕದಲ್ಲಿ ಯಾವನೂ ಇಲ್ಲ. ಹಸಿವೆಂಬ ಪದಾರ್ಥವು ಧೈರ್ಯವನ್ನೂ ಧರ್ಮವನ್ನೂ ನಾಶಮಾಡಿಬಿಡತಕ್ಕದ್ದು. ರಸವತ್ತಾದ ಪದಾರ್ಥಗಳನ್ನು ಅನುಭವಿಸತಕ್ಕ ರಸನೇಂದ್ರಿಯವು ಯಾವಾಗಲೂ ರುಚಿರುಚಿಯಾದ ಪದಾರ್ಥಗಳನ್ನೇ ಬಯಸುವದು. ಆಹಾರದಿಂದಲೇ ಪ್ರಾಣಿಗಳ ಪ್ರಾಣಗಳು ನಿಂತಿರುವವು. ಚಂಚಲವಾದ ಮನಸ್ಸನ್ನು ಜಯಿಸತಕ್ಕದ್ದು ಕಷ್ಟವು. ಇಂದ್ರಿಯ ಮನಸ್ಸುಗಳ ಏಕಾಗ್ರತೆಯೇ ತಪಸ್ಸೆಂದು ಹೇಳುವರು. ಶ್ರಮದಿಂದ ಸಂಪಾದಿಸಿದ ಪದಾರ್ಥವನ್ನು ಕೊಡುವದು ಬಹು ದುಃಖಕರವು. ಹೀಗಿದ್ದರೂ ಶುದ್ಧವಾದ ಮನಸ್ಸಿನಿಂದ ನೀನು ಅತಿಥಿಗಳಿಗೆ ಅನ್ನದಾನವನ್ನು ಮಾಡಿ ಅವರನ್ನು ತೃಪ್ತಿಪಡಿಸುತ್ತಿರುವೆ. ಇದರಿಂದ ನಾನು ತೃಪ್ತನಾಗಿ ನಿನ್ನಿಂದ ಸತ್ಕೃತನಾದೆನು. ಇಂದ್ರಿಯನಿಗ್ರಹವೂ ಧೈರ್ಯವೂ ಸತ್ಪಾತ್ರದಲ್ಲಿ ದಾನವೂ ದಯೆಯೂ ದಮವೂ ಶಮವೂ ಸಹ ನಿನ್ನಲ್ಲೇ ನೆಲೆಗೊಂಡಿರುವವು. ನಿನ್ನ ಸತ್ಕರ್ಮಗಳಿಂದಲೇ ನೀನು ಎಲ್ಲಾ ಲೋಕಗಳನ್ನೂ ಜಯಿಸಿ ಉತ್ತಮವಾದ ಗತಿಯನ್ನು ಪಡೆಯುವೆ. ಸ್ವರ್ಗದಲ್ಲಿ ವಾಸಮಾಡತಕ್ಕವರು ಸಹ ನೀನು ಮಾಡುವ ಆಶ್ಚರ್ಯಕರವಾದ ದಾನವನ್ನು ವಿಶೇಷವಾಗಿ ಶ್ಲಾಘಿಸುವರು. ಆದ್ದರಿಂದ ನೀನು ಈ ಶರೀರದಿಂದಲೇ ಸ್ವರ್ಗವನ್ನು ಹೊಂದತಕ್ಕವನು ’ ಎಂದನು. ಆತನು ಹೀಗೆ ನುಡಿಯುತ್ತಿರುವಷ್ಟರಲ್ಲಿಯೇ, ದಿವ್ಯವಾದ ಹಂಸಗಳನ್ನು

ಕಟ್ಟಿಯೂ ಸಣ್ಣಸಣ್ಣ ಗಂಟೆಗಳಿಂದ ಅಲಂಕೃತವಾಗಿಯೂ ದಿವ್ಯವಾದ ಪರಿಮಳಯುಕ್ತವಾದ ಪುಷ್ಪಮಾಲಿಕೆಗಳಿಂದ ಶೋಭಿಸುತ್ತಿರುವದಾಗಿಯೂ ಇರುವ ವಿಮಾನವನ್ನು ತೆಗೆದುಕೊಂಡು ಒಬ್ಬ ದೇವದೂತನು ಮುದ್ಗಲನ ಸಮೀಪಕ್ಕೆ ಬಂದು 'ಎಲೈ ಮುದ್ಗಲನೆ, ನಿನ್ನ ಅನ್ನದಾನದ ಮಹಿಮೆಯಿಂದ ನೀನು ಉತ್ತಮವಾದ ಸಿದ್ಧಿಯನ್ನು ಹೊಂದಿ ಸ್ವರ್ಗವನ್ನು ಜಯಿಸಿರುವೆ. ಈ ವಿಮಾನವನ್ನು ಆರೋಹಣಮಾಡು' ಎನಲು, ಮುದ್ಗಲನು 'ಎಲೈ ದೇವದೂತನೆ, ಸ್ವರ್ಗದಲ್ಲಿ ವಾಸಮಾಡತಕ್ಕವರ ಗುಣಾತಿಶಯವೇನು ? ಅವರ ತಪಸ್ಸು ಎಂಥಾದ್ದು ? ಅವರ ಮನೋನಿಶ್ಚಯವೇನು ? ಮತ್ತು ಸ್ವರ್ಗದಲ್ಲಿ ಸುಖವು ಯಾವದು ? ದೋಷವು ಯಾವದು ? ಸತ್ಕುಲದಲ್ಲಿ ಹುಟ್ಟಿದ ಸಜ್ಜನರು ತಮ್ಮ ಸಂಗಡ ಏಳುಹೆಜ್ಜೆ ನಡೆದು ಬಂದವನನ್ನು ಮಿತ್ರನೆಂದು ಹೇಳುವರು. ಅಂಥ ಮಿತ್ರತ್ವವನ್ನು ಇಟ್ಟುಕೊಂಡು ನಿನ್ನನ್ನು ನಾನು ಈ ಮಾತನ್ನು ಕೇಳಿದೆನು. ಈ ವಿಷಯದಲ್ಲಿ ನೀನು ಮತ್ತೊಂದನ್ನು ಎಣಿಸದೆ ಉತ್ತರವನ್ನು ಹೇಳು. ಅದನ್ನು ಕೇಳಿ ನಾನು ನಿನ್ನ ಮಾತಿನ ಪ್ರಕಾರ ನಡೆದುಕೊಳ್ಳುವೆನು' ಎಂದು ಮುದ್ಗಲನು ದೇವದೂತನಿಗೆ ಹೇಳಿದನು" ಎಂದು ವ್ಯಾಸರು ಧರ್ಮರಾಯನಿಗೆ ಹೇಳಿದರು.

## ೨೬೦ನೇ ಅಧ್ಯಾಯ.—ವ್ರೀಹಿದ್ರೌಣಿಕಾಖ್ಯಾನ—(ಮುದ್ಗಲನಿಗೆ ಜ್ಞಾನಪ್ರಾಪ್ತಿ.)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಬಳಿಕ ವ್ಯಾಸರು ಧರ್ಮರಾಯನೊಡನೆ "ಎಲೈ ಧರ್ಮರಾಯನೇ ಕೇಳು. ದೇವದೂತನು ಮುದ್ಗಲನನ್ನು ಕುರಿತು—'ಎಲೈ ಮಹರ್ಷಿಯೆ, ಶ್ರೇಷ್ಠವಾದ ಬುದ್ಧಿಯುಳ್ಳ ನೀನು ತಾನಾಗಿ ಪ್ರಾಪ್ತವಾದ ಸ್ವರ್ಗಸುಖವನ್ನು ಬಹುಮಾನಿಸದೆ, ಅಜ್ಞರಂತೆ ಅಲ್ಲೇನು ಸುಖವೋ ದುಃಖವೋ ಎಂದು ವಿಚಾರಮಾಡುತ್ತಿರುವೆಯಲ್ಲಾ ! ಆ ಲೋಕವು ಮೇಲೆ ಇರುವದರಿಂದ ಅದಕ್ಕೆ ಸ್ವರ್ಗವೆಂದು ಹೆಸರುಂಟಾಯಿತು. ಆ ಲೋಕಕ್ಕೆ ಹೋಗತಕ್ಕವರು ಅರ್ಚಿರಾದಿ ಮಾರ್ಗದಿಂದಲೇ ಹೋಗಬೇಕು. ತಪಸ್ಸನ್ನು ಮಾಡದವರೂ ಯಜ್ಞಾದಿಸತ್ಕರ್ಮಗಳನ್ನು ಮಾಡದವರೂ ಅನೃತವಾದಿಗಳೂ ನಾಸ್ತಿಕರೂ ಸಹ ಸ್ವರ್ಗಲೋಕಕ್ಕೆ ಹೋಗಲಾರರು. ಧರ್ಮಾತ್ಮರಾದವರೂ ಮನೋನಿಗ್ರಹವನ್ನು ಮಾಡಿದವರೂ ಮಾತ್ಸರ್ಯವನ್ನು ಬಿಟ್ಟವರೂ ದಾಂತರಾದವರೂ ದಾನವನ್ನು ಮಾಡಿದವರೂ ಯುದ್ಧರಂಗದಲ್ಲಿ ಶೂರರಾದವರೂ ಸಹ ಉತ್ತಮವಾದ ಸ್ವರ್ಗವನ್ನು ಪಡೆಯುವರು. ಅಂಥವರು ಇನ್ನೂ ಅನೇಕ ಪುಣ್ಯಲೋಕಗಳನ್ನು ಹೊಂದುವರು. ದೇವತೆಗಳೂ ಸಾಧ್ಯರೂ ವಿಶ್ವೇದೇವತೆಗಳೂ ಮಹರ್ಷಿಗಳೂ ಯಾಮಧಾಮರೆಂಬ ದೇವಗಣಗಳೂ ಗಂಧರ್ವರೂ ಅಪ್ಸರಸ್ತ್ರೀಯರೂ ಸಹ ವಾಸಮಾಡತಕ್ಕ ತೇಜೋಮಯಗಳೂ ಮಂಗಳಕರಗಳೂ ಆದ ಅನೇಕ ಲೋಕಗಳು ಬೇರೆಬೇರೆ ಪ್ರಕಾಶಿಸುತ್ತಿರುವವು. ಮೂವತ್ತೆರಡುಸಾವಿರ ಯೋಜನದ ವಿಸ್ತಾರವುಳ್ಳ ಮೇರುಪರ್ವತದ ಮೇಲಣಭಾಗದಲ್ಲಿ ಪುಣ್ಯಜನರು ವಿಹರಿಸತಕ್ಕ ನಂದನವನವೇ ಮೊದಲಾದ ಉದ್ಯಾನಗಳು ಇರುವವು. ಆ ಉದ್ಯಾನಗಳು ಮನೋಹರವಾಗಿಯೂ ಪರಿಮಳಭರಿತವಾಗಿಯೂ ಎಲ್ಲೆಲ್ಲೂ ಮೃದುವಾದ ಪ್ರದೇಶವುಳ್ಳವುಗಳಾಗಿಯೂ ರಮಣೀಯವಾದ ಪಕ್ಷಿಧ್ವನಿಯುಳ್ಳವುಗಳಾಗಿಯೂ ಇರುವವು. ಆ ಉದ್ಯಾನಗಳಲ್ಲಿ ಸಂಚಾರಮಾಡತಕ್ಕವರಿಗೆ ಹಸಿವು, ಬಾಯಾರಿಕೆ, ಬಳಲಿಕೆ, ಶೀತ, ಉಷ್ಣ, ಭಯ, ದುಃಖ, ಮುಪ್ಪು, ಇವು ಯಾವವೂ ಉಂಟಾಗುವದಿಲ್ಲ. ಇಂಥ ಲೋಕಗಳು ಪುಣ್ಯಶಾಲಿಗಳಿಗಲ್ಲದೆ ಮತ್ತೊಬ್ಬರಿಗೆ ಲಭಿಸತಕ್ಕವುಗಳಲ್ಲ. ಅಲ್ಲಿ ವಾಸಮಾಡತಕ್ಕವರ ಶರೀರವು ತೇಜೋಮಯವಾಗಿರುವದು. ಅಂಥ ಶರೀರವು ಸತ್ಕರ್ಮದಿಂದಲೇ ಹೊರತು ಮಾತಾಪಿತೃಗಳಿಂದ ಉಂಟಾಗತಕ್ಕದ್ದಲ್ಲ. ಆ ಲೋಕದಲ್ಲಿ ವಾಸಮಾಡತಕ್ಕವರಿಗೆ ಶರೀರದಲ್ಲಿ ಬೆವರೂ ದುರ್ಗಂಧವೂ ಮಲಮೂತ್ರಗಳೂ ಸಹ ಇಲ್ಲದೆ ಎಲ್ಲರೂ ನಿರ್ಮಲರಾಗಿ ನಿರ್ಮಲವಾದ ವಸ್ತ್ರಗಳನ್ನು ಧರಿಸಿರುವರು. ಸ್ವರ್ಗವಾಸಿಗಳು ಧರಿಸಿದ ದಿವ್ಯವಾದ ಪರಿಮಳವುಳ್ಳ ಪುಷ್ಪಹಾರಗಳು ಬಾಡದಿರುವವು. ಸ್ವರ್ಗದಲ್ಲಿ ವಾಸಮಾಡುವ ಪುಣ್ಯಶಾಲಿಗಳು ಯಾವಾಗಲೂ ವಿಮಾನಾರೂಢರಾಗಿ, ಈರ್ಷ್ಯೆಯನ್ನೂ ಶೋಕವನ್ನೂ ಆಯಾಸ ಮೋಹ ಮಾತ್ಸರ್ಯಗಳನ್ನೂ ಬಿಟ್ಟು

ಸುಖವಾಗಿ ಆ ಪುಣ್ಯಲೋಕಗಳಲ್ಲಿ ವಿಹರಿಸುತ್ತಿರುವರು. ಸ್ವರ್ಗಲೋಕದಮೇಲೆ ಇರತಕ್ಕ ಬ್ರಹ್ಮಲೋಕಕ್ಕೆ ಸೇರಿದ ತೇಜೋಮಯವಾದ ಮೇಲಿರುವ ಲೋಕಗಳು ಒಂದಕ್ಕಿಂತ ಒಂದು ಶ್ಲಾಘ್ಯವಾಗಿರುವವು. ಋಷಿಗಳು ಪುಣ್ಯಕರ್ಮಗಳನ್ನು ಮಾಡಿ, ಋಭುಗಳೆಂಬ ದೇವತೆಗಳು ವಾಸಮಾಡತಕ್ಕ ಆ ಪುಣ್ಯಲೋಕಗಳನ್ನು ಹೊಂದುವರು. ಆ ಲೋಕಗಳು ಬೇಕಾದ ಇಷ್ಟಾರ್ಥಗಳನ್ನು ಕೊಡುತ್ತ ಪ್ರಕಾಶಮಾನಗಳಾಗಿರುವವು. ಸ್ವರ್ಗಲೋಕದಲ್ಲಿರುವ ದೇವತೆಗಳು ಆ ಋಭುಗಳೆಂಬ ದೇವತೆಗಳನ್ನು ಪೂಜಿಸುವರು. ಆ ಲೋಕಗಳಲ್ಲಿರತಕ್ಕವರು ಸ್ತ್ರೀನಿಮಿತ್ತವಾದ ಸಂಕಟವನ್ನೂ ಇತರಲೋಕಗಳ ಐಶ್ವರ್ಯವನ್ನೂ ನೋಡಿ ಮಾತ್ಸರ್ಯವನ್ನು ಹೊಂದದೆ, ಯಜ್ಞಾದಿಗಳಲ್ಲಿ ಕೊಡತಕ್ಕ ಹವಿರ್ಭಾಗಗಳನ್ನೂ ಅಪೇಕ್ಷಿಸದೆ, ಅಮೃತಪಾನದಿಂದ ತೃಪ್ತರಾಗಿ, ದಿವ್ಯವಾದ ಶರೀರವೂ ರೂಪೂ ಉಳ್ಳವರಾಗಿ, ಸುಖದಲ್ಲೂಕೂಡ ಅಪೇಕ್ಷೆಯಿಲ್ಲದೆ, ದೇವತೆಗಳಿಗೂ ದೇವತೆಗಳಾಗಿ, ಕಲ್ಪಕಾಲದಲ್ಲೂ ತಾವು ನಷ್ಟರಾಗದೆ, ಮುಪ್ಪೂ ಮರಣವೂ ಸಂತೋಷವೂ ಸುಖವೂ ದುಃಖವೂ ರಾಗದ್ವೇಷಗಳೂ ಸಹ ಇಲ್ಲದಿರುವರು. ಅಂಥ ಲೋಕಗಳನ್ನು ಹೊಂದಬೇಕೆಂದು ದೇವತೆಗಳೂ ಕೂಡ ಬಯಸುತ್ತಿರುವರು. ಈ ಲೋಕಗಳು ಕಾಮ್ಯಕರ್ಮಗಳನ್ನು ಮಾಡಿದವರಿಂದ ಹೊಂದುವದಕ್ಕೆ ಆಗಲಾರವು. ಶ್ರೇಷ್ಠವಾದ ನಿಯಮಗಳಿಂದಲೂ ಈಶ್ವರಾರ್ಪಣಬುದ್ಧಿಯಿಂದ ಮಾಡಿದ ದಾನದಿಂದಲೂ ಸಹ ಜ್ಞಾನಿಗಳಾದವರು ಆ ಲೋಕಗಳನ್ನು ಹೊಂದುವರು. ಎಲೈ ಮುದ್ಗಲನೆ, ಅಂಥ ದಾನವನ್ನು ನೀನು ಮಾಡಿರುವದರಿಂದ ಆ ಉತ್ತಮವಾದ ಲೋಕವು ನಿನಗೆ ಲಭಿಸುವದು. ಅಂಥ ಲೋಕವನ್ನು ಸೇರಿ ನೀನು ತಪೋಮಹಿಮೆಯಿಂದ ಪ್ರಕಾಶಿಸುತ್ತ ಆ ದಿವ್ಯಸುಖವನ್ನು ಅನುಭವಿಸು. ಇದೇ ಸ್ವರ್ಗಲೋಕದ ಗುಣವು. ಇದೇಪ್ರಕಾರ ಇನ್ನೂ ಅನೇಕಲೋಕಗಳಿರುವವು. ಆದರೆ ಆ ಲೋಕಗಳಲ್ಲಿರುವ ದೋಷವನ್ನು ವಿವರಿಸುವೆನು ಕೇಳು : ಭೂಲೋಕದಲ್ಲಿ ಮಾಡಿದ ಪುಣ್ಯಕರ್ಮವು ನಷ್ಟವಾಗುವ ವರೆಗೂ ಆ ಸ್ವರ್ಗಾದಿಲೋಕಗಳಲ್ಲಿ ಅದರ ಫಲವನ್ನು ಅನುಭವಿಸಬೇಕು. ಅಲ್ಲಿ ಮಾಡತಕ್ಕ ಕರ್ಮವು ಯಾವದೂ ಇಲ್ಲ. ಆ ಪುಣ್ಯವು ಮುಗಿದ ಬಳಿಕ ಮರಳಿ ಭೂಲೋಕಕ್ಕೆ ಬೀಳಬೇಕು. ಇದೇ ಅಲ್ಲಿನ ದೋಷವು. ಮಹತ್ತಾದ ಐಶ್ವರ್ಯದಿಂದ ಮೆರೆಯುತ್ತ ಬಹುಕಾಲ ಸುಖವನ್ನು ಅನುಭವಿಸಿದವನು ಆ ಸುಖವು ನಷ್ಟವಾಗಿ ಸ್ಥಾನಭ್ರಷ್ಟನಾಗುವದಕ್ಕಿಂತಲೂ ಮತ್ತೊಂದು ದುಃಖವು ಯಾವದೂ ಇಲ್ಲವೆಂದು ನಾನು ಎಣಿಸುವೆನು. ಈ ದೋಷವು ಬ್ರಹ್ಮಲೋಕದ ವರೆಗೂ ಇರುವದು. ನಾಗಲೋಕದಲ್ಲಿ ಈ ಸ್ವರ್ಗಾದಿಲೋಕಗಳಿಗಿಂತಲೂ ಹೆಚ್ಚಾದ ಗುಣವು ತೋರುತ್ತಿರುವದು. ಸ್ವರ್ಗಲೋಕದ ಸುಖವನ್ನು ಅನುಭವಿಸಿ ಅಲ್ಲಿಂದ ಭೂಮಿಗೆ ಬಿದ್ದ ಮನುಷ್ಯನು ಸತ್ಕುಲದಲ್ಲಿ ಹುಟ್ಟಿ ಮಹಾ ಭಾಗ್ಯಶಾಲಿಯಾಗಿ ಸುಖವನ್ನೇ ಅನುಭವಿಸುವನು. ಇದೊಂದು ವಿಶೇಷವಾದದ್ದು. ಈ ಅಂಶವನ್ನು ತಿಳಿದುಕೊಳ್ಳದೆ ಅಹಂಕಾರದಿಂದ ಮೆರೆಯತಕ್ಕವನು ಅಧಮನೆನಿಸಿಕೊಳ್ಳುವನು. ಈ ಲೋಕದಲ್ಲೇ ಕರ್ಮಗಳನ್ನು ಮಾಡತಕ್ಕದ್ದು. ಇವುಗಳ ಫಲಗಳನ್ನು ಪರಲೋಕಗಳಲ್ಲೇ ಅನುಭವಿಸಬೇಕು. ಆದ್ದರಿಂದ ಇದಕ್ಕೆ ಕರ್ಮಭೂಮಿಯೆಂದೂ ಸ್ವರ್ಗಾದಿ ಲೋಕಕ್ಕೆ ಫಲಭೂಮಿಯೆಂದೂ ಹೆಸರುಂಟಾಗಿರುವದು. ಎಲೈ ಬ್ರಾಹ್ಮಣನೆ, ನಿನ್ನಲ್ಲಿ ಅನುಗ್ರಹದಿಂದ ಈ ವೃತ್ತಾಂತವನ್ನೆಲ್ಲಾ ನಿನಗೆ ನಾನು ತಿಳುಹಿಸಿದೆನು. ಇನ್ನು ಸಾವಕಾಶಮಾಡಬೇಡ. ಸ್ವರ್ಗಕ್ಕೆ ಹೋಗೋಣ ನಡೆ' ಎಂದು ನುಡಿದನು. ಇದನ್ನೆಲ್ಲಾ ಕೇಳಿ ಮುದ್ಗಲನು ತನ್ನಲ್ಲಿ ತಾನೇ ಯೋಚಿಸಿ, ದೇವದೂತನನ್ನು ನೋಡಿ 'ಎಲೈ ದೇವದೂತನೆ, ನಿನಗೆ ನಮಸ್ಕಾರವನ್ನು ಮಾಡುವೆನು. ಇನ್ನು ನೀನು ಹೊರಟು ಹೋಗಬಹುದು. ಮಹಾದೋಷದಿಂದ ಯುಕ್ತವಾದ ಸ್ವರ್ಗಸುಖದಿಂದ ನನಗೇನೂ ಆಗತಕ್ಕದ್ದಿಲ್ಲ. ಸ್ವರ್ಗಸುಖವನ್ನು ಅನುಭವಿಸಿ ಬಳಿಕ ಭೂಲೋಕಕ್ಕೇ ಬಿದ್ದು ಅದರಿಂದ ದಾರುಣವಾದ ಸಂತಾಪವನ್ನು ಪಡೆದವರು ಅನೇಕವಾಗಿ ಈ ಲೋಕದಲ್ಲಿರುವರು. ಅಂಥ ಸ್ವರ್ಗವನ್ನು ನಾನೆಂದಿಗೂ ಅಪೇಕ್ಷಿಸತಕ್ಕವನಲ್ಲ. ಯಾವ ಲೋಕಕ್ಕೆ ಹೋದರೆ ದುಃಖವೂ ಆಯಾಸವೂ ಪುನರಾವೃತ್ತಿಯೂ ಇಲ್ಲದಿರುವದೋ, ಅಂಥ ನಾಶವಿಲ್ಲದಿರತಕ್ಕ ಲೋಕಕ್ಕೆ ಹೋಗಬೇಕೆಂದು ನಾನು ಬಯಸುತ್ತಿರುವೆನು. ಸ್ವರ್ಗದಲ್ಲಿ ಮಹತ್ತಾದ ದೋಷವಿರುವದೆಂದು ನೀನೇ ಹೇಳಿದೆ. ನಿರ್ದೋಷವಾದ ಲೋಕವು ಯಾವದಾದರೂ ಇದ್ದರೆ ಅದನ್ನು ನನಗೆ ತಿಳುಹಿಸು ' ಎನಲು, ದೇವದೂತನು ' ಎಲೈ ಬ್ರಾಹ್ಮಣನೆ, ಬ್ರಹ್ಮಲೋಕದ ಮೇಲ್ಗಡೆಯಲ್ಲಿ ತೇಜೋಮಯವಾಗಿಯೂ ಪರಿಶುದ್ಧವಾ

ಗಿಯೂ ನಾಶರಹಿತವಾಗಿಯೂ ಇರುವ ವಿಷ್ಣುಲೋಕವು ಇರುವದು. ಆ ಲೋಕಕ್ಕೆ ವಿಷಯಾಸಕ್ತರಾದವರೂ ಡಾಂಭಿಕರೂ ಲೋಭಿಗಳೂ ಕೋಪಸ್ವಭಾವವುಳ್ಳವರೂ ದ್ರೋಹಬುದ್ಧಿಯುಳ್ಳವರೂ ಅಜ್ಞಾನಿಗಳೂ ಸಹ ಹೋಗ ತಕ್ಕವರಲ್ಲ; ಮಮತೆಯನ್ನೂ ಅಹಂಕಾರವನ್ನೂ ಬಿಟ್ಟು ಸುಖದುಃಖ ಲಾಭಾಲಾಭ ಜಯಾಪಜಯಗಳಲ್ಲಿ ಸಮರಾಗಿ ಜಿತೇಂದ್ರಿಯರಾಗಿರತಕ್ಕ ಯೋಗಿಗಳು ಆ ಲೋಕವನ್ನು ಹೊಂದುವರು' ಎಂದು ನುಡಿದನು. ಅದನ್ನು ಕೇಳಿ ಉಂಛವೃತ್ತಿಯಾದ ಮುದ್ಗಲನು ದೇವದೂತನನ್ನು ಹಿಂದಕ್ಕೆ ಕಳುಹಿಸಿಕೊಟ್ಟು, ಶಾಂತಾತ್ಮನಾಗಿ ನಿಂದಾ ಸ್ತುತಿಗಳಲ್ಲಿಯೂ ಮಣ್ಣುಚಿನ್ನಗಳಲ್ಲಿಯೂ ಸಮಬುದ್ಧಿಯುಳ್ಳವನಾಗಿ, ಅದರಿಂದ ಬ್ರಹ್ಮಜ್ಞಾನವನ್ನು ಪಡೆದು ಶಾಶ್ವತವಾದ ಮೋಕ್ಷವನ್ನು ಪಡೆದನು. ಎಲೈ ಧರ್ಮರಾಯನೆ, ನೀನು ಸುಮ್ಮನೆ ದುಃಖಪಡಬೇಡ. ತಪೋಯೋ ಗದಿಂದ ನೀನು ಹದಿಮೂರು ವರ್ಷಗಳಾದ ಬಳಿಕ ಪುನಃ ರಾಜ್ಯವನ್ನು ಪಡೆಯುವೆ. ಸುಖವಾದನಂತರ ದುಃಖವೂ ದುಃಖವಾದನಂತರ ಸುಖವೂ ಸಹ ಪರ್ಯಾಯವಾಗಿ ಬಂಡೀಚಕ್ರದ ಅರೇಕಾಲುಗಳಂತೆ ತಿರುಗುತ್ತಿರುವವು. ಮನಸ್ಸಿ ನಲ್ಲಿ ಸಂಕಟಪಡಬೇಡ" ಎಂದು ನುಡಿದು, ವೇದವ್ಯಾಸರು ಮರಳಿ ತಮ್ಮ ಆಶ್ರಮಕ್ಕೆ ತೆರಳಿದರು—ಎಂದು ವೈಶಂ ಪಾಯನಮುನೀಶ್ವರನು ಜನಮೇಜಯರಾಯನಿಗೆ ವಿವರಿಸಿದನು.

## ೨೬೧ನೇ ಅಧ್ಯಾಯ.—ದ್ರೌಪದೀಹರಣದ ಕಥೆ—(ದೂರ್ವಾಸರಿಗೆ ಆತಿಥ್ಯ.)

ಬಳಿಕ ಜನಮೇಜಯರಾಯನು ವೈಶಂಪಾಯನಮುನೀಶ್ವರನನ್ನು ಕುರಿತು—ಎಲೈ ಮುನೀಂದ್ರನೆ, ಮಹಾತ್ಮ ರಾದ ಪಾಂಡವರು ಮಹರ್ಷಿಗಳೊಡನೆ ವಿಚಿತ್ರವಾದ ಕಥೆಗಳನ್ನು ಕೇಳುತ್ತ ವಿನೋದವಾಗಿದ್ದುಕೊಂಡು, ಸೂರ್ಯ ನಿಂದ ಪಡೆದ ಅಕ್ಷಯಪಾತ್ರೆಯಲ್ಲಿ ದ್ರೌಪದಿಯು ಭೋಜನಮಾಡುವ ಪರ್ಯಂತರ ಅಭಿವೃದ್ಧಿಯಾಗತಕ್ಕ ಷಡ್ರಸೋ ಪೇತವಾದ ಅನ್ನದಿಂದಲೂ ನಾನಾವಿಧವಾದ ಮೃಗಗಳ ಮಾಂಸಗಳಿಂದಲೂ ಅನ್ನಾರ್ಥಿಗಳಾಗಿ ಬಂದ ಅತಿಥಿಗಳನ್ನು ತೃಪ್ತಿಪಡಿಸುತ್ತ ಕಾಮ್ಯಕವನದಲ್ಲಿ ವಾಸಮಾಡುತ್ತಿರಲು, ಪಾಪಿಷ್ಠನೂ ದುರಾತ್ಮನೂ ಆದ ದುರ್ಯೋಧನನು ದುಶ್ಶಾ ಸನ ಕರ್ಣ ಶಕುನಿಯರ ದುರಾಲೋಚನೆಯನ್ನು ಕೇಳಿ ಪಾಂಡವರ ವಿಷಯದಲ್ಲಿ ಹ್ಯಾಗಿದ್ದನು? ಇದನ್ನು ಹೇಳ ಬೇಕು—ಎಂದನು. ಅದಕ್ಕೆ ವೈಶಂಪಾಯನಮುನೀಂದ್ರನು—ಕೇಳು ಜನಮೇಜಯರಾಯನೆ, ಪಾಪಾತ್ಮನಾದ ದುರ್ಯೋಧನನು ಪಾಂಡವರು ನಗರವಾಸಿಗಳಂತೆ ಅರಣ್ಯದಲ್ಲಿ ಸುಖವಾಗಿ ವಾಸಮಾಡತಕ್ಕ ವೃತ್ತಾಂತವನ್ನು ಗೂಢ ಚಾರರಿಂದ ತಿಳಿದು, ಪಾಂಡವರ ವಿಷಯದಲ್ಲಿ ಯಾವಾಗಲೂ ದುರಾಲೋಚನೆಯನ್ನು ಮಾಡತಕ್ಕ ವಂಚಕರಾದ ಕರ್ಣ ದುಶ್ಶಾಸನ ಶಕುನಿಗಳಿಂದೊಡಗೂಡಿ ಪಾಂಡವರ ವಿಷಯದಲ್ಲಿ ಕೇಡನ್ನೇ ಚಿಂತಿಸುತ್ತಿದ್ದನು. ಆ ಸಮ ಯದಲ್ಲಿ ಹತ್ತುಸಾವಿರಮಂದಿ ಶಿಷ್ಯರೊಡನೆ ಮಹಾತಪಶ್ಶಾಲಿಯಾದ ದೂರ್ವಾಸಮಹರ್ಷಿಯು ಅಲ್ಲಿಗೆ ಬರಲು; ಆ ಮುನೀಶ್ವರನನ್ನು ನೋಡಿ ದುರ್ಯೋಧನನು ತಮ್ಮಂದಿರೊಡಗೂಡಿ ಅತಿವಿನಯವುಳ್ಳವನಾಗಿ ಅರ್ಘ್ಯಪಾದ್ಯಾಚಮ ನೀಯಗಳನ್ನು ಕೊಟ್ಟು ವಿಧಿವತ್ತಾಗಿ ಅತಿಥಿಸತ್ಕಾರವನ್ನು ಮಾಡಿ, ಭೃತ್ಯನಂತೆ ಆ ಋಷಿಯ ಸಮೀಪದಲ್ಲಿದ್ದುಕೊಂ ಡಿದ್ದನು. ಆ ದೂರ್ವಾಸ ಮಹರ್ಷಿಯು ಕೆಲವು ದಿವಸ ಅಲ್ಲೇ ವಾಸವಾಗಿರಲು, ದುರ್ಯೋಧನನು ಅಹೋರಾ ತ್ರಿಯೂ ಆ ಮುನೀಶ್ವರನನ್ನು ಸೇವಿಸುತ್ತ ಆ ಕೋಪಿಷ್ಠನಾದ ಆ ಮಹರ್ಷಿಯು ಏನಾದರೂ ಶಾಪಕೊಟ್ಟಾನೆಂದು ಜಾಗರೂಕನಾಗಿದ್ದನು. ಎಲೈ ಜನಮೇಜಯರಾಯನೆ, ಆ ದೂರ್ವಾಸ ಮಹರ್ಷಿಯು ಆಗಾಗ್ಯೆ ತನ್ನ ಮನಸ್ಸಿ ಬಂದಾಗ ದುರ್ಯೋಧನನನ್ನು ನೋಡಿ "ಎಲೈ ರಾಯನೆ, ನನಗೆ ಹಸಿವಾಗುವದು, ಜಾಗ್ರತೆಯಾಗಿ ಭೋಜನ ಮಾಡಿಸು" ಎಂದು ಹೇಳಿ, ಸ್ನಾನಕ್ಕೆ ಹೋಗಿ ಸ್ನಾನವಮಾಡಿಕೊಂಡು ಬಂದು "ನಾನು ಈಗ ಭೋಜನ ಮಾಡು ವದಿಲ್ಲ. ನನಗೆ ಕ್ಷುತ್ತಿಲ್ಲ" ಎಂದು ಹೇಳಿ ಹಾಗೆಯೇ ಕಾಣಿಸದೆ ಹೊರಟುಹೋಗಿ, ಮರಳಿ ಅಕಸ್ಮಾತ್ತಾಗಿ ಬಂದು "ತ್ವರೆಯಲ್ಲಿ ನನಗೆ ಊಟ ಮಾಡಿಸು" ಎಂದು ಹೇಳಿ, ಕೂಡಲೆ ಭೋಜನಕ್ಕೆ ಅನ್ನವು ಸಿದ್ಧವಾಗಲು ಆ ಅನ್ನ ವನ್ನು ಬಿಟ್ಟು ಹೋಗಿ ಮಲಗಿಕೊಂಡುಬಿಟ್ಟು, ಪುನಃ ಅರ್ಧರಾತ್ರಿಯಲ್ಲಿ ಎದ್ದು ಹೊಸದಾಗಿ ಅನ್ನವನ್ನು

ಮಾಡಿಸಿ, ಆ ಅನ್ನವನ್ನೂ ಊಟಮಾಡದೆ ತಿರಸ್ಕರಿಸುತ್ತ, ನಾನಾಪ್ರಕಾರವಾಗಿ ಕಪಟದಿಂದ ಬಾಧೆಯನ್ನುಂಟುಮಾಡುತ್ತಿರಲು ; ಅದೆಲ್ಲವನ್ನೂ ಸಹಿಸಿಕೊಂಡು ದುರ್ಯೋಧನನು ಆ ಮಹರ್ಷಿಗೆ ಕೋಪವುಂಟಾಗದಂತೆ ಆತನ ಸೇವೆಯನ್ನು ಮಾಡಿಕೊಂಡಿದ್ದನು. ಆಗ ದೂರ್ವಾಸಮಹರ್ಷಿಯು ದುರ್ಯೋಧನನು ಮಾಡಿದ ಶುಶ್ರೂಷೆಗೆ ಸಂತುಷ್ಟನಾಗಿ "ಎಲೈ ಕೌರವನೆ, ನಾನು ನೀನು ಮಾಡಿದ ಸೇವೆಯಿಂದ ಸಂತುಷ್ಟನಾಗಿರುವೆನು. ನಿನಗೆ ಬೇಕಾದ ವರವನ್ನು ಕೊಡುವೆನು, ಬೇಡು" ಎಂದನು ; ಆ ಮಾತನ್ನು ಕೇಳಿ ದುರ್ಯೋಧನನು ತಾನು ಪುನಃ ಜನ್ಮವನ್ನು ಪಡೆದಂತೆ ತಿಳಿದುಕೊಂಡು ಸಂತೋಷಪಟ್ಟು, ಮೊದಲು ಕರ್ಣ ಶಕುನಿ ದುಶ್ಶಾಸನರ ಸಂಗಡ ಆಲೋಚನೆಯನ್ನು ಮಾಡಿ ನಿಶ್ಚಯಿಸಿಕೊಂಡಿದ್ದಂತೆ ವರವನ್ನು ಬೇಡಬೇಕೆಂದು ಕುತೂಹಲ ಪಡುತ್ತ, ಆ ಮಹರ್ಷಿಯನ್ನು ಕುರಿತು "ಎಲೈ ಮಹಾತ್ಮನೆ, ಶಿಷ್ಯಸಮೇತನಾಗಿ ನೀನು ನನ್ನ ಮನೆಗೆ ಹ್ಯಾಗೆ ಅತಿಥಿಯಾಗಿ ಬಂದೆಯೋ ಹಾಗೆಯೇ, ಧರ್ಮರಾಯನ ಸಮೀಪಕ್ಕೂ ಅತಿಥಿಯಾಗಿ ದಯಮಾಡಿಸು. ತಮ್ಮಂದಿರೊಡಗೂಡಿ ವನದಲ್ಲಿ ವಾಸಮಾಡುತ್ತಿರುವ ಆತನು ನಮಗೆಳಿಗೆಲ್ಲಾ ಜ್ಯೇಷ್ಠನಾಗಿಯೂ ಗುಣಾಢ್ಯನಾಗಿಯೂ ಇರುವನು. ಎಲೈ ಮುನೀಂದ್ರನೆ, ನನ್ನಲ್ಲಿ ನಿನಗೆ ಅನುಗ್ರಹವಿದ್ದಪಕ್ಷದಲ್ಲಿ ಸುಕುಮಾರಿಯಾದ ದ್ರೌಪದಿಯು ಅತಿಥಿಗಳಿಗೂ ತನ್ನ ಪತಿಗಳಿಗೂ ಭೋಜನಮಾಡಿಸಿ ತಾನು ಭೋಜನಮಾಡಿ ಸುಖವಾಗಿ ಕೂತಿರುವ ಸಮಯದಲ್ಲಿ ನೀನು ಅಲ್ಲಿಗೆ ಹೋಗಬೇಕು" ಎಂದನು. ಆ ಮಾತನ್ನು ಕೇಳಿ ದೂರ್ವಾಸಮಹರ್ಷಿಯು "ಎಲೈ ದುರ್ಯೋಧನನೆ, ನಿನ್ನ ಪ್ರೀತಿಗೋಸ್ಕರ ಹಾಗೆಯೇ ನಾನು ಮಾಡುವೆನು" ಎಂದು ಹೇಳಿ ಹೊರಟುಹೋದನು. ಆಗ ದುರ್ಯೋಧನನು ತಾನು ಕೃತಾರ್ಥನೆಂದು ತಿಳಿದುಕೊಂಡು ತನ್ನ ಕಯ್ಯಿಂದ ಕರ್ಣನ ಕಯ್ಯನ್ನು ಹಿಡಿದುಕೊಂಡು ಬಹಳವಾಗಿ ಸಂತೋಷಪಟ್ಟನು. ಆಗ ಕರ್ಣನು "ಎಲೈ ರಾಯನೆ, ನಿನ್ನ ಇಷ್ಟಾರ್ಥವು ದೈವಯೋಗದಿಂದ ನೆರವೇರಿತೆ? ಮತ್ತು ನಿನ್ನ ಶತ್ರುಗಳೆಲ್ಲರೂ ದುಃಖಸಮುದ್ರದಲ್ಲಿ ಮುಳುಗಿಹೋದರೆ? ಪಾಂಡವರು ದೂರ್ವಾಸರ ಕ್ರೋಧಾಗ್ನಿಯಿಂದ ಹತರಾಗಿ ತಮ್ಮ ಪಾಪದಿಂದಲೇ ದುಸ್ತರವಾದ ತಮಸ್ಸಿನಲ್ಲಿ ಬೀಳುವರಾದರು" ಎಂದು ಪರಸ್ಪರವಾಗಿ ಮಾತನಾಡಿಕೊಂಡು, ನಸುನಗುತ ಎಲ್ಲರೂ ತಮ್ಮತಮ್ಮ ಮನೆಗೆ ಹೊರಟು ಹೋದರು.

## ೨೬೨ನೇ ಅಧ್ಯಾಯ.—ದ್ರೌಪದೀಹರಣದ ಕಥೆ.—(ಶ್ರೀಕೃಷ್ಣ ಸಂದರ್ಶನ.)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಬಳಿಕ ಬಂದಾನೊಂದು ದಿವಸ ದೂರ್ವಾಸಮಹರ್ಷಿಯು ಪಾಂಡವರೂ ದ್ರೌಪದಿಯೂ ಸಹ ಭೋಜನಮಾಡಿಕೊಂಡು ವನದಲ್ಲಿ ಸುಖವಾಗಿ ಕೂತಿರುವ ಸಮಯವನ್ನು ತಿಳಿದು, ಹತ್ತುಸಾವಿರಮಂದಿ ಶಿಷ್ಯರಿಂದ ಸಮೇತನಾಗಿ ಅಲ್ಲಿಗೆ ಹೋದನು. ಆಗ ಧರ್ಮರಾಯನು ಅತಿಥಿಯಾಗಿ ಶಿಷ್ಯಸಮೇತನಾಗಿ ಬರತಕ್ಕ ಆ ಮುನೀಶ್ವರನನ್ನು ನೋಡಿ, ತಮ್ಮಂದಿರೊಡಗೂಡಿ ಪ್ರತ್ಯುತ್ಥಾನವನ್ನು ಮಾಡಿ ಎದುರುಗೊಂಡು, ಆತನನ್ನು ಕರೆದುಕೊಂಡುಬಂದು ಪೀಠದಮೇಲೆ ಕುಳ್ಳಿರಿಸಿ, ಕೈಮುಗಿದುಕೊಂಡು ವಿಧಿವತ್ತಾಗಿ ಸತ್ಕಾರಮಾಡಿ "ಎಲೈ ಮಹಾತ್ಮನೆ, ಆಹ್ನಿಕವನ್ನು ನೆರವೇರಿಸಿಕೊಂಡು ಜಾಗ್ರತೆಯಾಗಿ ಭೋಜನಕ್ಕೆ ದಯಮಾಡಬೇಕು" ಎಂದು ಔತಣವನ್ನು ಕೊಟ್ಟನು. ಆಗ ದೂರ್ವಾಸಮಹರ್ಷಿಯು "ಶಿಷ್ಯಸಮೇತನಾದ ನನಗೆ ಈತನು ಹ್ಯಾಗೆ ಭೋಜನಮಾಡಿಸುವನು ?" ಎಂದು ಚಿಂತಿಸುತ್ತ, ಸ್ನಾನಾರ್ಥವಾಗಿ ನದೀತೀರಕ್ಕೆ ಹೋಗಿ ಅಲ್ಲಿ ಶಿಷ್ಯಸಮೇತನಾಗಿ ಸ್ನಾನಕ್ಕೆ ಇಳಿದನು. ಆ ಸಮಯದಲ್ಲಿ ಪತಿವ್ರತಾಶಿರೋಮಣಿಯಾದ ದ್ರೌಪದಿಯು "ಶಿಷ್ಯಸಮೇತರಾದ ದೂರ್ವಾಸರಿಗೆ ಭೋಜನವನ್ನು ಮಾಡಿಸುವದಕ್ಕೆ ಅನ್ನವಿಲ್ಲವಲ್ಲ. ಈಗ ಹ್ಯಾಗೆ ಮಾಡಬೇಕು ?" ಎಂದು ಎಷ್ಟು ಚಿಂತಿಸಿದರೂ ಬಗೆಹರಿಯದೆ, ಕಂಸಮರ್ದನನಾದ ಶ್ರೀಕೃಷ್ಣನನ್ನು ಮನಸ್ಸಿನಲ್ಲಿ ನೆನೆದು "ಸ್ವಾಮೀ, ಕೃಷ್ಣಾ, ಕೃಷ್ಣ, ಮಹಾಬಾಹೂ, ದೇವಕೀನಂದನಾ, ನಾಶರಹಿತಾ, ವಾಸುದೇವಾ, ಜಗನ್ನಾಥಾ, ಜಗತ್ಕಾರಣಾ, ಶರಣಾಗತವತ್ಸಲಾ, ಪುರಾಣಪುರುಷಾ, ಮನೋವೃತ್ತಿನಿಯಾ

ಮುಕಾ, ಶರಣ್ಯಾ, ಅನಂತಾ, ನಿನಗೆ ನಾನು ಶರಣಾಗತಳಾಗಿರುವೆನು. ದೀನರಾದ ನಮಗೆ ಇಂಥ ಸಮಯದಲ್ಲಿ ನೀನೇ ಗತಿಪ್ರದನಾದವನು. ಕನ್ನೈದಿಲೇಹೂವಿನಂತೆ ಶಾಮವರ್ಣನಾಗಿಯೂ, ಕೆಂದಾವರೆಯಂತೆ ನೇತ್ರಗಳುಳ್ಳವನಾಗಿಯೂ, ಪೀತಾಂಬರಧಾರಿಯಾಗಿಯೂ, ಕೌಸ್ತುಭಾಭರಣಭೂಷಿತನಾಗಿಯೂ, ಇರುವ ನೀನು ನನ್ನನ್ನು ರಕ್ಷಿಸು. ಎಲೈ ಸ್ವಾಮಿಯೆ, ನೀನೇ ಸಕಲಜಗತ್ತಿಗೂ ಆಶ್ರಯನಾಗಿಯೂ, ಪರಂಜ್ಯೋತಿಸ್ವರೂಪನಾಗಿಯೂ, ಸರ್ವಾಂತರ್ಯಾಮಿಯಾಗಿಯೂ, ಸಕಲಸಂಪತ್ತಿಗೂ ಕಾರಣನಾಗಿಯೂ ಇರುವೆ. ನೀನು ನಾಥನಾಗಿರಲು, ನಾವು ಯಾವ ಭಯವನ್ನೂ ಹೊಂದದೆ ಇರುವೆವು. ಮೊದಲು ಸಭಾಮಧ್ಯದಲ್ಲಿ ಪಾಪಾತ್ಮನಾದ ದುಶ್ಶಾಸನನಿಂದ ಹ್ಯಾಗೆ ಬಿಡಿಸಿದೆಯೋ ಹಾಗೆಯೇ, ಈಗ ಉಂಟಾಗಿರುವ ಈ ಸಂಕಟದಿಂದಲೂ ನಮ್ಮನ್ನು ಉದ್ಧಾರಮಾಡು " ಎಂದು ಸ್ತುತಿಸಿದಳು. ಆಗ ಭಕ್ತವತ್ಸಲನಾದ ಶ್ರೀಕೃಷ್ಣನು ದ್ರೌಪದಿಗೆ ಉಂಟಾಗಿರುವ ಸಂಕಟವನ್ನು ತಿಳಿದು, ತನ್ನ ಪಾರ್ಶ್ವದಲ್ಲಿ ಮಲಗಿದ್ದ ರುಕ್ಮಿಣಿಯನ್ನು ಅಲ್ಲೇ ಬಿಟ್ಟು ತ್ವರೆಯಿಂದ ದ್ರೌಪದಿಯಿದ್ದ ಸ್ಥಳಕ್ಕೆ ಬಂದನು. ಆಗ ದ್ರೌಪದಿಯು ಅಚಿಂತ್ಯ ಮಹಿಮನಾದ ಶ್ರೀಕೃಷ್ಣನನ್ನು ನೋಡಿ ಸಂತೋಷದಿಂದ ನಮಸ್ಕಾರಮಾಡಿ, ದೂರ್ವಾಸರು ಬಂದ ವೃತ್ತಾಂತವನ್ನು ಅರಿಕೆಮಾಡಿದಳು. ಬಳಿಕ ಶ್ರೀಕೃಷ್ಣನು ದ್ರೌಪದಿಯನ್ನು ಕುರಿತು "ಎಲೌ ದ್ರೌಪದಿಯೆ, ನನಗೆ ಅಧಿಕವಾಗಿ ಕ್ಷುದ್ಬಾಧೆಯಾಗಿರುವದು. ಮೊದಲು ನನಗೆ ಭೋಜನಮಾಡಿಸಿ ಬಳಿಕ ಇತರ ಕಾರ್ಯವನ್ನು ಮಾಡು" ಎಂದನು. ಆ ಮಾತನ್ನು ಕೇಳಿ ದ್ರೌಪದಿಯು ಲಜ್ಜೆಪಟ್ಟು "ಎಲೈ ಶ್ರೀಕೃಷ್ಣನೆ, ಸೂರ್ಯದತ್ತವಾದ ಅಕ್ಷಯಪಾತ್ರೆಯಲ್ಲಿ ನಾನು ಭೋಜನಮಾಡುವ ವರೆಗೂ ಅನ್ನವು ವೃದ್ಧಿಯಾಗುವದು. ಈಗ ನಾನು ಭೋಜನಮಾಡಿರುವೆನಾದ್ದರಿಂದ ಆ ಪಾತ್ರೆಯಲ್ಲಿ ಅನ್ನವು ಮುಗಿದುಹೋಗಿರುವದು" ಎನಲು, ಶ್ರೀಕೃಷ್ಣನು "ಎಲೌ ದ್ರೌಪದಿಯೆ, ನಾನು ಹಸಿದಿರುವೆನು. ಈ ಸಮಯದಲ್ಲಿ ಹಾಸ್ಯಮಾಡಬೇಡ. ಜಾಗ್ರತೆಯಾಗಿ ಆ ಅಕ್ಷಯಪಾತ್ರೆಯನ್ನು ಇಲ್ಲಿಗೆ ತಂದು ನನಗೆ ತೋರಿಸು" ಎಂದು ನಿರ್ಬಂಧಪಡಿಸಿ, ಆ ಅಕ್ಷಯಪಾತ್ರೆಯನ್ನು ತರಿಸಿಕೊಂಡು ನೋಡಿ, ಅದರ ಕಂಠದಲ್ಲಿ ಪಕ್ವವಾದ ಬಂದು ಸೊಪ್ಪು ಇದ್ದದ್ದನ್ನು ಕಂಡು, ಅದನ್ನು ತಾನು ಆಹಾರಮಾಡಿ, "ಸರ್ವಾಂತರ್ಯಾಮಿಯಾದ ಯಜ್ಞಭುಕ್ಕಾದ ಆ ಶ್ರೀಹರಿಯು ಇದರಿಂದ ಸಂತುಷ್ಟನಾಗಲಿ" ಎಂದು ನುಡಿದು, "ಎಲೌ ದ್ರೌಪದಿಯೆ, ಶಿಷ್ಯರೊಡಗೂಡಿದ ಆ ಋಷಿಯನ್ನು ಜಾಗ್ರತೆಯಾಗಿ ಭೋಜನಕ್ಕೆ ಕರಸು" ಎಂದು ಆಜ್ಞಾಪಿಸಿ, ಭೀಮಸೇನನನ್ನು ಕರೆದು, "ಎಲೈ ಭೀಮಸೇನನೆ, ಗಂಗಾನದಿಗೆ ಸ್ನಾನಾರ್ಥವಾಗಿ ಹೋಗಿರುವ ಶಿಷ್ಯಸಮೇತನಾದ ದೂರ್ವಾಸಮಹರ್ಷಿಯನ್ನು ಕರೆದುಕೊಂಡು ಬಾ" ಎಂದನು. ಅತ್ತಲು ಆ ಋಷಿಗಳೆಲ್ಲರೂ ಆ ನದಿಯಲ್ಲಿ ಸ್ನಾನಮಾಡಿ ಅಘಮರ್ಷಣವನ್ನು ಜಪಿಸುತ್ತ ಮೇಲಕ್ಕೇಳುವಷ್ಟರಲ್ಲೇ ಷಡ್ರಸೋಪೇತವಾದ ಅನ್ನವನ್ನು ಭೋಜನಮಾಡಿ ತೃಪ್ತರಾಗಿ, ಸಂತೋಷದಿಂದ ಒಬ್ಬರನ್ನೊಬ್ಬರು ನೋಡುತ್ತ, ಎಲ್ಲರೂ ದೂರ್ವಾಸರನ್ನು ನೋಡಿ "ಎಲೈ ಮಹಾತ್ಮನೆ, ಧರ್ಮರಾಯನು ಅಡಿಗೆಯನ್ನು ಮಾಡಿಸಿರುವನು. ಸ್ನಾನಾರ್ಥವಾಗಿ ಬಂದ ನಾವು ಆಕಂಠಪೂರ್ತಿಯಾಗಿ ಭೋಜನಮಾಡಿ ತೃಪ್ತಿಯನ್ನು ಹೊಂದಿರುವೆವು. ಅಲ್ಲಿಗೆ ಹೋಗಿ ನಾವೇನು ಭೋಜನಮಾಡೇವು? ವ್ಯರ್ಥವಾಗಿ ನಮ್ಮನಿಮಿತ್ತವಾಗಿ ಪಾಕವಾಗಿರುವದಲ್ಲಾ! ಈಗ ನಾವೇನು ಮಾಡತಕ್ಕದ್ದು?" ಎನಲು, ದೂರ್ವಾಸರು "ರಾಜರ್ಷಿಯಾದ ಧರ್ಮರಾಯನು ನಮ್ಮ ನಿಮಿತ್ತವಾಗಿ ಪಾಕಮಾಡಿಸಿರುವನು. ಈಗ ಅದು ವ್ಯರ್ಥವಾದದ್ದರಿಂದ ಆತನಿಗೆ ನಾವು ಅಪರಾಧಮಾಡಿದಹಾಗಾಯಿತು. ಇದನ್ನು ತಿಳಿದು ಧರ್ಮಾತ್ಮರಾದ ಪಾಂಡವರು ತಮ್ಮ ಕ್ರೋಧಾಗ್ನಿಯಿಂದ ನಮ್ಮನ್ನು ನಾಶಮಾಡದಿರಲಾರರು. ಈಗ ನಾನು ಮಹಾನುಭಾವನಾದ ಅಂಬರೀಷರಾಯನ ಮಹಿಮೆಯನ್ನು ಸ್ಮರಿಸಿ ಭಯಪಡುತ್ತಿರುವೆನು. ಪಾಂಡವರು ಭಗವದ್ಭಕ್ತರಾಗಿಯೂ ಧರ್ಮಿಷ್ಠರಾಗಿಯೂ ಶೂರರಾಗಿಯೂ ವಿದ್ಯಾವಂತರಾಗಿಯೂ ತಪಸ್ವಿಗಳಾಗಿಯೂ ವ್ರತನಿಷ್ಠರಾಗಿಯೂ ಸದಾಚಾರಸಂಪನ್ನರಾಗಿಯೂ ಇರುವರು. ಅವರು ಕೋಪಗೊಂಡರೆ, ಅಗ್ನಿಯು ಹತ್ತಿಯ ರಾಶಿಯನ್ನು ಭಸ್ಮಮಾಡುವಂತೆ ನಮ್ಮನ್ನು ಭಸ್ಮಮಾಡಿಬಿಡುವರು. ಆದ್ದರಿಂದ ನಾವು ಪಾಂಡವರಿಗೆ ವರ್ತಮಾನವನ್ನು ಕೊಡದೆ ಹೀಗೆಯೇ ಓಡಿಹೋಗೋಣ" ಎಂದು ಮಾತನಾಡಿಕೊಂಡು ಸರ್ವರೂ ದಿಕ್ಕುದಿಕ್ಕಿಗೆ ಪಲಾಯನವನ್ನು ಮಾಡಿದರು. ಇತ್ತಲು ಭೀಮಸೇನನು ಶ್ರೀಕೃಷ್ಣನ ಆಜ್ಞಾನುಸಾರವಾಗಿ ಗಂಗಾತೀರಕ್ಕೆ ಬಂದು ಆ ಋಷಿಗಳನ್ನು ಹುಡುಕಿ ಎಲ್ಲಿಯೂ ಕಾಣದೆ, ಆ ನದೀತೀರದಲ್ಲಿ ತಪಸ್ಸುಮಾಡುತ್ತಿದ್ದ

ಋಷಿಗಳಿಂದ ಅವರು ದಿಕ್ಕುದಿಕ್ಕಾಗಿ ಓಡಿಹೋದದ್ದನ್ನು ತಿಳಿದು, ಹಿಂತಿರುಗಿ ಬಂದು ಆ ವೃತ್ತಾಂತವನ್ನು ಧರ್ಮರಾಯನಿಗೆ ಹೇಳಿದನು. ಬಳಿಕ ಪಾಂಡವರು ಆ ಋಷಿಗಳ ಆಗಮನವನ್ನು ಕೆಲವುಕಾಲ ನಿರೀಕ್ಷಿಸಿ "ಅರ್ಧರಾತ್ರಿಯ ಕಾಲದಲ್ಲಿ ಶಿಷ್ಯಸಮೇತನಾಗಿ ದೂರ್ವಾಸಮಹರ್ಷಿಯು ಯಾತಕ್ಕೋಸ್ಕರ ಛಲದಿಂದ ನಮ್ಮಬಳಿಗೆ ಬಂದನು? ಹೀಗೆ ದೈವವಶದಿಂದ ಬರತಕ್ಕ ಕಷ್ಟವನ್ನು ನಾವು ಹ್ಯಾಗೆ ದಾಟೇವು" ಎಂದು ನಿಟ್ಟುಸುರನ್ನು ಬಿಡುತ್ತ ಚಿಂತಿಸುತ್ತಿದ್ದರು. ಆಗ ಶ್ರೀಕೃಷ್ಣನು ಅವರನ್ನು ನೋಡಿ "ಎಲೈ ಪಾಂಡವರೆ, ನಿಮಗೆ ಅಧಿಕವಾದ ಕೋಪವುಳ್ಳ ದೂರ್ವಾಸನಿಂದುಂಟಾದ ಆಪತ್ತನ್ನು ತಿಳಿದು ದ್ರೌಪದಿಯು ನನ್ನನ್ನು ನೆನೆದಳು. ಆದ್ದರಿಂದ ನಾನು ತ್ವರೆಯಿಂದ ಇಲ್ಲಿಗೆ ಬಂದೆನು. ನಿಮಗೆ ಆ ಋಷಿಯಿಂದ ಭಯಕೆಲಸವಿಲ್ಲ. ನಿಮ್ಮ ತೇಜಸ್ಸನ್ನು ನೋಡಿ ಆತನೇ ಓಡಿಹೋದನು. ಧರ್ಮಿಷ್ಠರಾದವರಿಗೆ ಎಂದಿಗೂ ಹಾನಿಯುಂಟಾಗಲಾರದು. ನಿಮಗೆ ಮಂಗಳವಾಗಲಿ. ನಾನು ಹೋಗಿಬರುವೆನು" ಎನಲು; ಆ ಮಾತನ್ನು ಕೇಳಿ ಪಾಂಡವರು ದ್ರೌಪದೀಸಹಿತರಾಗಿ ಸ್ವಸ್ಥಚಿತ್ತರಾಗಿ, ಚಿಂತೆಯನ್ನು ಬಿಟ್ಟು, "ಎಲೈ ಶ್ರೀಕೃಷ್ಣನೆ, ಆಪತ್ಸಮುದ್ರವನ್ನು ದಾಟಬೇಕಾದರೆ ನೀನೇ ನಮಗೆ ನಾವೆಯಾಗಿರುವೆ. ನಿನಗೆ ಕಲ್ಯಾಣವಾಗಲಿ" ಎಂದರು. ಬಳಿಕ ಶ್ರೀಕೃಷ್ಣನು ದ್ವಾರಕಾನಗರಕ್ಕೆ ಪ್ರಯಾಣಮಾಡಿದನು. ಪಾಂಡವರು ದ್ರೌಪದೀಸಹಿತರಾಗಿ ಕಾಮ್ಯಕವನದಲ್ಲಿ ಸುಖದಿಂದ ವಿಹರಿಸುತ್ತಿದ್ದರು. ಈ ರೀತಿಯಾಗಿ ಪಾಂಡವರ ವಿಷಯದಲ್ಲಿ ದುರಾತ್ಮರಾದ ದುರ್ಯೋಧನಾದಿಗಳು ದ್ರೋಹಚಿಂತೆಯನ್ನು ಮಾಡಿದರು.

## ೨೬೪ನೇ ಅಧ್ಯಾಯ.—ದ್ರೌಪದೀಹರಣದ ಕಥೆ.—(ಕೋಟಿಕಾಸ್ಯಪ್ರಶ್ನೆ.)

ಬಳಿಕ ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಅನೇಕಮೃಗಗಳಿಂದ ಕೂಡಿರುವ ಕಾಮ್ಯಕವನದಲ್ಲಿ ಪಾಂಡವರು ಆಯಾ ಋತುಗಳಲ್ಲಿ ಉಂಟಾಗತಕ್ಕ ಪುಷ್ಪಫಲಗಳಿಂದ ಶೋಭಿಸುತ್ತಿರುವ ವನಪಙ್ತಿಗಳನ್ನು ನೋಡುತ್ತಲೂ, ಅಲ್ಲಲ್ಲಿ ಬೇಟೆಯಾಡುತ್ತಲೂ, ದೇವತೆಗಳಂತೆ ವಿಹರಿಸುತ್ತಿದ್ದರು. ಆಗ ಬಂದಾನೊಂದು ದಿವಸ ಬ್ರಾಹ್ಮಣರ ನಿಮಿತ್ತವಾಗಿ ಮೃಗಗಳ ಮಾಂಸವನ್ನುತರಬೇಕೆಂದು ಆ ಪಾಂಡವರೆಲ್ಲರೂ ತೃಣಬಿಂದುಋಷಿಗಳ ಆಶ್ರಮದಲ್ಲಿ ದ್ರೌಪದಿಯನ್ನು ಬಿಟ್ಟು, ಪುರೋಹಿತರಾದ ಧೌಮ್ಯರ ಅನುಜ್ಞೆಯನ್ನು ತೆಗೆದುಕೊಂಡು ದಿಕ್ಕುದಿಕ್ಕಿಗೆ ಬೇಟೆಯಾಡುವದಕ್ಕೆ ಹೊರಟುಹೋದರು. ಆ ಸಮಯದಲ್ಲಿ ಸಿಂಧುದೇಶಕ್ಕೆ ಅಧಿಪತಿಯಾಗಿಯೂ ವೃದ್ಧಕ್ಷತ್ರನಿಗೆ ಮಗನಾಗಿಯೂ ಇರುವ ಜಯದ್ರಥನು ವಿವಾಹಾರ್ಥವಾಗಿ ಅನೇಕ ರಾಜಯೋಗ್ಯವಾದ ವಸ್ತುಗಳನ್ನು ತೆಗೆದುಕೊಂಡು, ಅನೇಕಮಂದಿ ಸಾಮಂತರಾಜರೊಡಗೂಡಿ ಸಾಳ್ವದೇಶಕ್ಕೆ ಹೊರಟು ಕಾಮ್ಯಕವನಕ್ಕೆ ಬಂದನು; ಅಲ್ಲಿ ನಿರ್ಜನವಾದ ವನದಲ್ಲಿದ್ದುಕೊಂಡು ನೀಲಮೇಘದ ಮಧ್ಯದಲ್ಲಿ ಹೊಳೆಯುವ ಮಿಂಚಿನಂತೆ ಹೊಳೆಯುತ್ತ ತನ್ನ ಕಾಂತಿಯಿಂದ ಆ ವನವನ್ನೆಲ್ಲಾ ಪ್ರಕಾಶಗೊಳಿಸುತ್ತಿರುವಳಾಗಿಯೂ, ಉತ್ತಮವಾದ ಸೌಂದರ್ಯವುಳ್ಳವಳಾಗಿಯೂ, ಪಾಂಡವರಿಗೆ ಧರ್ಮಪತ್ನಿಯಾಗಿಯೂ, ಇರುವ ದ್ರೌಪದಿಯನ್ನು ಕಂಡನು. ಆಗ ಆತನ ಜೊತೆಯಲ್ಲಿ ಬಂದಿದ್ದವರೆಲ್ಲರೂ ದ್ರೌಪದಿಯನ್ನು ನೋಡಿ "ಈಕೆ ಯಾರು? ಅಪ್ಸರಸ್ತ್ರೀಯೋ, ಅಥವಾ ದೇವತೆಗಳ ಮಾಯೆಯೋ!" ಎಂದು ಮನಸ್ಸಿನಲ್ಲಿ ಆಶ್ಚರ್ಯಪಡುತ್ತ ಕೈಮುಗಿದುಕೊಂಡರು. ಆಗ ಜಯದ್ರಥನು ದುಷ್ಟವಾದ ಮನಸ್ಸುಳ್ಳವನಾಗಿ ಆಕೆಯನ್ನು ನೋಡಿದಮಾತ್ರದಿಂದಲೇ ಕಾಮಮೋಹಿತನಾಗಿ, ತನ್ನ ಸಮೀಪದಲ್ಲಿದ್ದ ಕೋಟಿಕಾಸ್ಯನೆಂಬ ಅರಸನನ್ನು ಕುರಿತು "ಎಲೈ ಕೋಟಿಕಾಸ್ಯನೆ, ಈಕೆ ಯಾರು? ಈಕೆ ಯಾರ ಪತ್ನಿಯಾಗಿರಬಹುದು? ಈಕೆಯನ್ನುನೋಡಿದರೆ ಮನುಷ್ಯಸ್ತ್ರೀಯಂತೆ ತೋರುವದಿಲ್ಲ. ಇಂಥ ರೂಪವತಿಯನ್ನು ನೋಡಿಯೂ ಮತ್ತೊಬ್ಬಸ್ತ್ರೀಯನ್ನು ವರಿಸುವದಕ್ಕೆ ನಾನು ಹೋಗುವದರಿಂದ ಪ್ರಯೋಜನವೇನು? ಈಕೆಯನ್ನೇ ನಾನು ನಮ್ಮ ಅರಮನೆಗೆ ತೆಗೆದುಕೊಂಡು ಹೋಗುತ್ತೇನೆ. ನೀನು ಈಗಲೇ ಹೋಗಿ, ಈಕೆ ಯಾರೋ, ಈ ಘೋರವಾದ ಅರಣ್ಯಕ್ಕೆ ಯಾತಕ್ಕೋಸ್ಕರ ಬಂದಿರುವಳೋ, ವಿಸ್ತಾರವಾದ

ಕಣ್ಣುಗಳೂ ಸುಂದರವಾದ ದಂತಪಙ್ತಿಗಳೂ ಸೂಕ್ಷ್ಮವಾದ ಮಧ್ಯಪ್ರದೇಶವೂ ಉಳ್ಳ ರೂಪವತಿಯಾದ ಈಕೆಯು ನನ್ನನ್ನೇ ಬಯಸಿ ಏನಾದರೂ ಇಲ್ಲಿಗೆ ಬಂದಿರುವಳೋ, ನೀನುಜಾಗ್ರತೆಯಾಗಿ ಹೋಗಿ ಇದನ್ನೆಲ್ಲಾ ವಿಚಾರಿಸಿ, ಈಕೆಗೆ ಯಜಮಾನರು ಯಾರೋ ಅದನ್ನೂ ತಿಳಿದುಕೊಂಡುಬಾ. ಈ ಉತ್ತಮಸ್ತ್ರೀಯನ್ನು ನಾನು ವರಿಸಿದ್ದೇ ಆದರೆ ನನ್ನ ಮನೋರಥವು ಪೂರ್ಣವಾಗುವದು" ಎನಲು, ಅದನ್ನು ಕೇಳಿ ಕೋಟಿಕಾಸ್ಯನು ತನ್ನರಥದಿಂದ ಕೆಳಕ್ಕೆ ಇಳಿದು, ಕೂಡಲೆ ಹೆಣ್ಣುಹುಲಿಯಿರುವ ಸ್ಥಳಕ್ಕೆ ನರಿಯು ಹೋಗುವಂತೆ ದ್ರೌಪದಿಯಿರುವ ಸ್ಥಳಕ್ಕೆ ಹೋದನು.

## ೨೬೪ನೇ ಅಧ್ಯಾಯ.—ದ್ರೌಪದೀಹರಣದ ಕಥೆ.—(ಕೋಟಿಕಾಸ್ಯ ಪ್ರಶ್ನೆ.)

ವೈಶಂಪಾಯನಮುನೀಂದ್ರನು ಜನಮೇಜಯರಾಯನನ್ನು ಕುರಿತು—ಎಲೈ ರಾಯನೆ ಕೇಳು. ಬಳಿಕ ಕೋಟಿಕಾಸ್ಯನು ದ್ರೌಪದಿಯನ್ನು ನೋಡಿ "ಎಲೆ ಮಂಗಳಾಂಗಿಯೆ, ನೀನು ಯಾರು? ಈ ಆಶ್ರಮದಲ್ಲಿ ಯಾತಕ್ಕೋಸ್ಕರ ಈ ಕದಹದ ಮರದ ಕೊನೆಯನ್ನು ಹಿಡಿದುಕೊಂಡು, ರಾತ್ರಿಯಲ್ಲಿ ಗಾಳಿಯಿಂದ ಚಲಿಸುತ್ತಿರುವ ಅಗ್ನಿಜ್ವಾಲೆಯಂತೆ ಪ್ರಕಾಶಿಸುತ್ತ ನಿಂತಿರುವೆ? ಇಷ್ಟು ರೂಪವತಿಯಾದ ನೀನು ಈ ಘೋರವಾದ ಅರಣ್ಯದಲ್ಲಿ ಹ್ಯಾಗೆ ಭಯಪಡದೆ ಇರುವೆ? ನೀನು ದೇವತಾಸ್ತ್ರೀಯೋ? ಯಕ್ಷಸ್ತ್ರೀಯೋ? ದಾನವಸ್ತ್ರೀಯೊ? ದೈತ್ಯಸ್ತ್ರೀಯೊ? ಅಪ್ಸರಸ್ತ್ರೀಯೊ? ನಾಗಕನ್ಯೆಯೊ? ಅಥವಾ ವನದಲ್ಲಿ ಸಂಚರಿಸತಕ್ಕ ರಾಕ್ಷಸಸ್ತ್ರೀಯೋ? ಹಾಗಲ್ಲದಿದ್ದರೆ ವರುಣ ಯಮ, ಚಂದ್ರ, ಕುಬೇರ, ಬ್ರಹ್ಮ, ಕಶ್ಯಪಬ್ರಹ್ಮ, ಸೂರ್ಯ, ರುದ್ರ, ಇಂದ್ರ ಇವರೊಳಗೆ ಯಾರಾದರೂ ಒಬ್ಬರ ಮನೆಯಿಂದೇನಾದರೂ ಇಲ್ಲಿಗೆ ಬಂದಿರುವೆಯೊ? ನೀನು ಯಾರೋ ಹೇಳು. ಯಾತಕ್ಕೋಸ್ಕರ ನನ್ನ ಸಂಗಡ ಮಾತನಾಡದೆ ಇರುವೆ? ಇಲ್ಲಿ ನಿನಗೆ ರಕ್ಷಕರು ಯಾರು? ಯಾವ ಮಹಾನುಭಾವನು ನಿನಗೆ ತಂದೆಯಾಗಬೇಕು. ನಾನು ಮರ್ಯಾದೆಯಿಂದ ನಿನ್ನನ್ನು ಪ್ರಶ್ನೆಮಾಡುತ್ತೇನೆ. ನಿನ್ನ ಬಂಧುಗಳು ಯಾರು? ನಿನ್ನ ಗಂಡನು ಯಾರು? ನಿನ್ನ ಕುಲವು ಯಾವದು? ಇಲ್ಲಿ ನೀನು ಮಾಡತಕ್ಕದ್ದೇನು? ಇವುಗಳನ್ನೆಲ್ಲಾ ನನಗೆ ತಿಳುಹಿಸು. ನನ್ನನ್ನು ಸುರಸಪುತ್ರನಾದ ಕೋಟಿಕಾಸ್ಯನೆಂದು ಹೇಳುವರು. ಇದೋ ಈ ಸುವರ್ಣಮಯವಾದ ರಥದಮೇಲೆ ಕೂತುಕೊಂಡಿರುವವನು ಅನೇಕಯಜ್ಞಗಳನ್ನು ಮಾಡಿದವನು. ಈತನು ತ್ರಿಗರ್ತದೇಶಾಧಿಪತಿಯಾಗಿಯೂ, ತಾವರೆಗೆ ಸಮಾನವಾದ ಕಣ್ಣುಗಳುಳ್ಳವನಾಗಿಯೂ, ಶೂರನಾಗಿಯೂ, ಧನುರ್ವಿದ್ಯಾಪಾರಂಗತನಾಗಿಯೂ, ಕುಳಿಂದಾಧಿಪತಿಗಿಂತಲೂ ಶ್ರೇಷ್ಠನಾಗಿಯೂ, ಇರುವ ಕ್ಷೇಮಂಕರನೆಂಬ ರಾಜನು. ಇದೋ ಈ ಪುಷ್ಕರಣಿಯ ಬಳಿಯಲ್ಲಿ ಶ್ಯಾಮವರ್ಣನಾಗಿಯೂ ಯೌವನಸ್ಥನಾಗಿಯೂ ಸುಂದರಾಂಗನಾಗಿಯೂ ಪರ್ವತಪ್ರದೇಶದಲ್ಲಿ ರಾಜ್ಯಭಾರಮಾಡತಕ್ಕವನಾಗಿಯೂ ಇರುವ ಆ ಅರಸು ನಿನ್ನನ್ನು ನೋಡುತ್ತಿರುವನು. ಇದೋ, ಇತ್ತಲಾಗಿ ಇಕ್ಷ್ವಾಕುರಾಯನಾದ ಸುಬಲನ ಮಗನಾದ ಈ ರಾಜನು ಶೂರನಾದವನು. ಈತನ ಸೈನ್ಯವು ಹೊರಡಲು, ಅದರೊಡನೆ ಅಂಗಾರಕ ಕುಂಜರ ಗುಪ್ತಕ ಶತ್ರುಂಜಯ ಸುಪ್ರವೃದ್ಧ ಭಯಂಕರ ಭ್ರಮರ ರವಿ ಪ್ರತಾಪ ಕುಹನ ಶೂರ ಎಂಬ ಹನ್ನೆರಡುಮಂದಿ ಮಹಾರಥಿಕರು ಕೆಂಪುಬಣ್ಣದ ಕುದುರೆಗಳನ್ನು ಕಟ್ಟಿರತಕ್ಕ ರಥಗಳನ್ನೇರಿ, ಯಜ್ಞದಲ್ಲಿರುವ ಅಗ್ನಿಗಳಂತೆ ಪ್ರಕಾಶಿಸುತ್ತ, ಆರುಸಾವಿರ ರಥಿಕರೊಡನೆಯೂ ಅನೇಕಸಹಸ್ರಸಂಖ್ಯೆಯುಳ್ಳ ಆನೆ, ಕುದುರೆ, ಪದಾತಿಗಳೊಡನೆಯೂ ಕೂಡಿ ಹೊರಡುವರು. ಅದೋ ಅತ್ತಲಾಗಿರುವವನೇ, ಜಯದ್ರಥನು. ಈತನೇ ಸಿಂಧುದೇಶಕ್ಕೆ ಅಧಿಪತಿಯಾದವನು. ಈ ಮಹಾರಾಜನಿಗೆ ಶೂರರಾದ ಬಲಾಹಕ ಮೊದಲಾದ ತಮ್ಮಂದಿರಿರುವರು. ಈ ಜಯದ್ರಥನು ಹೊರಟ ಕಾಲದಲ್ಲಿ, ಇಂದ್ರನು ಹೊರಡಲು ಆತನ ಜೊತೆಯಲ್ಲಿ ದೇವತೆಗಳು ಹ್ಯಾಗೆ ಹೊರಡುವರೋ ಹಾಗೆ, ಶೂರರಾದ ಅನೇಕ ಸಾಮಂತರಾಜರು ಹೊರಡುವರು. ಎಲೆ ಸುಂದರಾಂಗಿಯೆ, ನೀನು ಯಾರೋ ನಿಮ್ಮ ತಾಯಿತಂದೆಗಳು ಯಾರೋ ಇದು ನಮಗೆ ಗೊತ್ತಿಲ್ಲದೆ ಇರುವದರಿಂದ ನೀನು ತಿಳುಹಿಸು" ಎಂದು ಕೇಳಿದನು.

## ೨೬೫ನೇ ಅಧ್ಯಾಯ.–ದ್ರೌಪದೀಹರಣದ ಕಥೆ.–(ದ್ರೌಪದೀವಾಕ್ಯ.)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು–ಎಲೈ ಜನಮೇಜಯರಾಯನೆ ಕೇಳು, ಬಳಿಕ ದ್ರೌಪದಿಯು ಶಿಬಿವಂಶದಲ್ಲಿ ಹುಟ್ಟಿದ ಕೋಟಿಕಾಸ್ಯನ ಮಾತನ್ನು ಕೇಳಿ, ಆತನನ್ನು ನೋಡಿ ತಾನು ಹಿಡಿದಿದ್ದ ಮರದ ಕೊನೆಯನ್ನು ಮೆಲ್ಲಗೆ ಬಿಟ್ಟು, ಸೀರೆಯ ಶರಗನ್ನು ಸರಿಮಾಡಿಕೊಂಡು “ಎಲೈ ರಾಜಕುಮಾರನೆ, ನಮ್ಮಂಥವರು ನಿನ್ನಂಥವರೊಡನೆ ಮಾತನಾಡತಕ್ಕದ್ದು ಯೋಗ್ಯವಾದದ್ದಲ್ಲವೆಂದು ನನ್ನ ಬುದ್ಧಿಯಿಂದ ನಾನು ತಿಳಿದಿರುವೆನು. ನಿನ್ನಂತೆ ಹೀಗೆ ಮಾತನಾಡತಕ್ಕ ಮತ್ತೊಬ್ಬ ಗಂಡಸನ್ನೂ ಹೆಂಗಸನ್ನೂ ಸಹ ನಾನು ನೋಡಿಲ್ಲ. ಸ್ವಧರ್ಮದಲ್ಲಿ ನಡೆದುಕೊಂಡಿರುವ ನಾನು ಈ ಅರಣ್ಯದಲ್ಲಿ ಒಬ್ಬಳೇ ಇದ್ದಾಗ್ಯೂ ನಿನ್ನ ಮಾತಿಗೆ ಉತ್ತರವನ್ನು ಕೊಡುವೆನು ಕೇಳು. ನೀನು ಸುರಸನ ಮಗನಾದ ಕೋಟಿಕಾಸ್ಯನೆಂಬುವದನ್ನು ನಾನು ಬಲ್ಲೆನು. ನನ್ನ ಬಂಧುಗಳನ್ನೂ ಕುಲವನ್ನೂ ನಿನಗೆ ತಿಳುಹಿಸುವೆನು ಕೇಳು. ನಾನು ದ್ರುಪದರಾಯನ ಮಗಳು. ನನ್ನ ಹೆಸರನ್ನು ಕೃಷ್ಣೆಯೆಂದು ಹೇಳುವರು. ಧರ್ಮರಾಯ, ಭೀಮ, ಅರ್ಜುನ, ನಕುಲಸಹದೇವರು ಖಾಂಡವಪ್ರಸ್ಥದಲ್ಲಿ ಇದ್ದದ್ದನ್ನು ನೀನು ಕೇಳಿಬಲ್ಲೆಯಷ್ಟೆ? ಅವರನ್ನು ನಾನು ಪತಿಗಳನ್ನಾಗಿ ವರಿಸಿದ್ದೂ ನಿನಗೆ ತಿಳಿದಿರಬಹುದು. ಅವರು ಇಲ್ಲಿ ನನ್ನನ್ನು ಬಿಟ್ಟು ಬೇಟೆಯಾಡುವದಕ್ಕೋಸ್ಕರ ದಿಕ್ಕುದಿಕ್ಕಿಗೆ ಹೋಗಿರುವರು. ಧರ್ಮರಾಯನು ಪೂರ್ವದಿಕ್ಕಿಗೂ, ನಕುಲಸಹದೇವರು ಉತ್ತರದಿಕ್ಕಿಗೂ ಹೋಗಿರುವರು. ಆ ಮಹಾರಥಿಕರು ಬೇಟೆಗೆ ಹೋಗಿ ಬಹಳ ಹೊತ್ತಾಯಿತು. ‘ಈಗ ಅವರು ಬರತಕ್ಕ ಕಾಲವಾಗಿರುವದು. ನೀವು ಅವರಿಂದ ಸನ್ಮಾನವನ್ನು ಮಾಡಿಸಿಕೊಂಡು ಹೋಗಿರಿ. ನಿಮ್ಮನಿಮ್ಮ ವಾಹನಗಳನ್ನೆಲ್ಲಾ ಅಲ್ಲಲ್ಲಿ ಬಿಡಿರಿ. ಮಹಾರಾಜನಾದ ಧರ್ಮರಾಯನು ಅತಿಥಿಗಳಲ್ಲಿ ಪ್ರೀತಿಯುಳ್ಳವನಾದ್ದರಿಂದ ನಿಮ್ಮನ್ನು ನೋಡಿ ಸಂತೋಷಪಡುವನು” ಎಂದು ನುಡಿದು, ದ್ರೌಪದಿಯು ಪ್ರಶಸ್ತವಾದ ತನ್ನ ಪರ್ಣಶಾಲೆಯನ್ನು ಪ್ರವೇಶಮಾಡಿ, ಅವರೆಲ್ಲರಿಗೂ ಸತ್ಕಾರಮಾಡಬೇಕೆಂದು ಚಿಂತಿಸುತ್ತಿದ್ದಳು.

## ೨೬೬ನೇ ಅಧ್ಯಾಯ.–ದ್ರೌಪದೀಹರಣದ ಕಥೆ.–(ದ್ರೌಪದೀವಾಕ್ಯ.)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು–ಕೇಳು ಜನಮೇಜಯರಾಯನೆ, ಬಳಿಕ ಕೋಟಿಕಾಸ್ಯನು ತಮ್ಮ ಪಾಳ್ಯವಿಳಿದಿರುವ ಸ್ಥಳಕ್ಕೆ ಬಂದು, ಅಲ್ಲಿ ಸಾಮಂತರಾಜರು ಕುಳಿತುಕೊಂಡಿರಲು, ದ್ರೌಪದಿಯು ಹೇಳಿದ ಮಾತನ್ನು ಅವರ ಸಂಗಡ ಹೇಳಿದನು. ಅದನ್ನು ಕೇಳಿ ಜಯದ್ರಥನು ಕೋಟಿಕಾಸ್ಯನನ್ನು ಕುರಿತು “ಎಲೈ ಕೋಟಿಕಾಸ್ಯನೆ, ಆ ಸ್ತ್ರೀಯು ಹೇಳಿದ ಮಾತನ್ನು ಕೇಳಿದ ಮಾತ್ರದಿಂದ ನನ್ನ ಮನಸ್ಸು ಅಲ್ಲೇ ಇರುವದು. ಆಕೆಯನ್ನು ನೋಡಿಯೂ ನೀನು ಆಕೆಯನ್ನು ಬಿಟ್ಟು ಅಲ್ಲಿಂದ ಹ್ಯಾಗೆ ಬಂದೆ? ಆಕೆಯನ್ನು ನೋಡಿದ ನನ್ನ ಕಣ್ಣಿಗೆ ನಮ್ಮ ಅರಮನೆಯಲ್ಲಿರುವ ಸ್ತ್ರೀಯರೆಲ್ಲರೂ ಕಪಿಗಳಂತೆ ಕಾಣಿಸುತ್ತಿರುವರು. ಇದು ಸತ್ಯವು. ದೂರದಲ್ಲೇ ಆಕೆಯನ್ನು ನೋಡಿದ ಮಾತ್ರಕ್ಕೆ ಆಕೆಯಿಂದ ನನ್ನ ಮನಸ್ಸು ಅಪಹೃತವಾಗಿರುವದು. ಆಕೆಯು ಮನುಷ್ಯಸ್ತ್ರೀಯೋ ಅಥವಾ ಇನ್ನಾವಳಾದರೂ ಆಗಿರಬಹುದೋ ಹೇಳು” ಎನಲು; ಕೋಟಿಕಾಸ್ಯನು “ಎಲೈ ಜಯದ್ರಥನೆ, ಆಕೆಯು ದ್ರುಪದರಾಯನ ಮಗಳಾದ ಕೃಷ್ಣೆಯೆಂದು ಪ್ರಸಿದ್ಧಳಾದವಳು. ಆಕೆಯು ಐದುಮಂದಿ ಪಾಂಡವರಿಗೂ ಪತ್ನಿಯಾಗಿಯೂ ಪ್ರಿಯಳಾಗಿಯೂ ಇರುವಳು. ಪತಿವ್ರತೆಯಾದ ಆಕೆಯಿಂದೊಡಗೂಡಿ ನೀನು ಸೈಂಧವದೇಶಕ್ಕೆ ಹೊರಟುಹೋಗು” ಎಂದನು. ಆ ಮಾತನ್ನು ಕೇಳಿ ಜಯದ್ರಥನು ಒಳ್ಳೇದು ಹಾಗಾದರೆ ಆಕೆಯನ್ನು ನೋಡುವೆನು ಎಂದು ನುಡಿದು, ಸಿಂಹವಿರುವ ಸ್ಥಳಕ್ಕೆ ತೋಳವು ಹೋದಂತೆ ದ್ರೌಪದಿಯಿರುವ ಆಶ್ರಮಕ್ಕೆ ಆರುಮಂದಿ ತಮ್ಮಂದಿರೊಡನೆ ಪ್ರವೇಶಿಸಿ, ದ್ರೌಪದಿಯನ್ನು ನೋಡಿ “ಎಲೆ ಮಂಗಳಾಂಗಿಯೆ, ನೀನು ಕ್ಷೇಮವಾಗಿರುವೆಯ? ನಿನ್ನ ಗಂಡಂದಿರು ಕುಶಲರಾಗಿರುವರೆ? ಮತ್ತು ನಿಮ್ಮವರೆಲ್ಲರೂ ಚನ್ನಾಗಿರುವರೆ?” ಎಂದನು. ಬಳಿಕ ದ್ರೌಪದಿಯು “ಎಲೈ ಜಯದ್ರಥನೆ, ನಿನ್ನ ರಾಜ್ಯದಲ್ಲೂ ದೇಶ

ವಲ್ಲೂ ಕೋಶವಲ್ಲೂ ಸೈನ್ಯದಲ್ಲೂ ಕುಶಲವೆ? ನೀನು ಸಿಂಧುದೇಶದಲ್ಲಿರುವ ಸಾಮಂತರಾಜರಿಂದೊಡಗೂಡಿ ಐಶ್ವರ್ಯಸಂಪನ್ನವಾದ ಶಿಬಿದೇಶವನ್ನೂ ಸಾವೀರದೇಶವನ್ನೂ ಧರ್ಮದಿಂದ ಪಾಲಿಸುತ್ತಿರುವೆಯೆಂದು ನಿನ್ನನ್ನು ಎಲ್ಲರೂ ಹೊಗಳುತ್ತಿರುವರೆ? ಮಹಾನುಭಾವನಾದ ಧರ್ಮರಾಯನೂ ಭೀಮಾರ್ಜುನನಕುಲಸಹದೇವರೂ ನನ್ನ ಅಣ್ಣತಮ್ಮಂದಿರೂ ನಾನೂ ಸಹ ಕ್ಷೇಮದಲ್ಲಿರುವೆವು. ಇದೋ, ಈ ಪಾದ್ಯವನ್ನು ಸ್ವೀಕರಿಸು. ಈ ಪೀಠದಲ್ಲಿ ಕುಳಿತುಕೊಳ್ಳಬಹುದು. ಜಿಂಕೆ, ಹಂದಿ, ಕಾಡೆಮ್ಮೆ, ಮೊದಲಾದ ಮೃಗಗಳ ಮಾಂಸವನ್ನು ನಿನ್ನ ಪ್ರಾತಃಕಾಲಭೋಜನಕ್ಕೋಸ್ಕರ ಈಗ ಧರ್ಮರಾಯನು ತಂದುಕೊಡುವನು. ಅವರೆಗೂ ಸ್ವಲ್ಪಹೊತ್ತು ವಿಶ್ರಮಿಸಿಕೊಳ್ಳಬಹುದು" ಎನಲು, ಜಯದ್ರಥನು "ಎಲೆ ಮಂಗಳಾಂಗಿಯೆ, ನಿನ್ನ ಮಾತಿನಿಂದಲೇ ನಾನು ತೃಪ್ತನಾದೆನು. ಇನ್ನು ತಡಮಾಡಬೇಡ; ನನ್ನ ರಥವನ್ನು ಆರೋಹಣಮಾಡು, ಮತ್ತು ನನ್ನೊಡನೆ ಬೇಕಾದ ಸೌಖ್ಯಗಳನ್ನು ಅನುಭವಿಸು. ಐಶ್ವರ್ಯಹೀನರಾಗಿ ರಾಜ್ಯವನ್ನು ಕಳೆದುಕೊಂಡು ದೀನರಾಗಿ ಬುದ್ಧಿಯಿಲ್ಲದೆ ವನವಾಸಮಾಡತಕ್ಕ ಪಾಂಡವರನ್ನು ನಂಬಿಕೊಂಡಿರಬೇಡ. ಐಶ್ವರ್ಯವು ನಷ್ಟವಾದಮೇಲೆ ಪುರುಷರಿಗೆ ಪ್ರಜ್ಞೆಯು ಕಡಮೆಯಾಗಿಹೋಗುವದು. ಐಶ್ವರ್ಯವಿಲ್ಲದವರಲ್ಲಿ ಇರಬಾರದು. ತಾನಾಗಿ ಅಪೇಕ್ಷಿಸುವವನನ್ನು ಸೇರಬೇಕು. ಪಾಂಡವರು ರಾಜ್ಯಭ್ರಷ್ಟರಾಗಿ ಬಹುಕಾಲದಿಂದ ದರಿದ್ರರಾಗಿರುವರು. ಅಂಥವರನ್ನು ಭಕ್ತಿಯಿಂದ ನೀನು ಶುಶ್ರೂಷೆ ಮಾಡುವದು ಇನ್ನು ಸಾಕು. ಅವರನ್ನು ಬಿಟ್ಟು ನನಗೆ ಹೆಂಡತಿಯಾಗಿ ಸಮಗ್ರವಾದ ಸಿಂಧುಸಾವೀರರಾಜ್ಯಗಳ ಸುಖವನ್ನು ನನ್ನೊಡನೆ ಅನುಭವಿಸು" ಎಂದನು. ಈ ಪ್ರಕಾರವಾಗಿ ಎದೆನಡುಗುವಂತೆ ಕ್ರೂರವಾಗಿ ಮಾತನಾಡತಕ್ಕ ಸೈಂಧವನ ಮಾತನ್ನು ಕೇಳಿ ದ್ರೌಪದಿಯು ಹುಬ್ಬುಗಂಟಿಕ್ಕಿ ಆ ಸ್ಥಳದಿಂದ ಆಚೆಗೆ ಹೋಗಿ, ಅವಮಾನಕರವಾದ ಅತನ ಮಾತುಗಳನ್ನು ನಿರಾಕರಿಸಿ, "ಜಯದ್ರಥನೆ, ಇನ್ನು ಇಂಥ ಮಾತುಗಳನ್ನು ಆಡಬೇಡ. ಈ ಮಾತುಗಳಿಂದ ನಿನಗೆ ಲಜ್ಜೆಯುಂಟಾಗುವದಿಲ್ಲವೆ?" ಎಂದು ಅವನ ಮಾತುಗಳಿಗೆ ಪ್ರತ್ಯುತ್ತರವನ್ನು ಕೊಡುತ್ತಲೂ, ಅವನಿಗೆ ಆಶೆಯುಂಟಾಗುವಂತೆ ಮಾಡುತ್ತಲೂ, ತನ್ನ ಪತಿಗಳ ಆಗಮನವನ್ನು ನಿರೀಕ್ಷಿಸುತ್ತ ಕಾಲಹರಣವನ್ನು ಮಾಡುತ್ತಿದ್ದಳು.

## ೨೬೭ನೇ ಅಧ್ಯಾಯ.—ದ್ರೌಪದೀಹರಣದ ಕಥೆ—(ದ್ರೌಪದೀಹರಣ).

ವೈಶಂಪಾಯನಮುನೀಂದ್ರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯನೆ, ಹೀಗಿರುವಲ್ಲಿ ದ್ರೌಪದಿಯು ರೋಷದಿಂದ ಕುಟಿಲವಾದ ಹುಬ್ಬುಗಳೂ ಕೆಂಪಾದ ಕಣ್ಣುಗಳೂ ಉಳ್ಳವಳಾಗಿ, ಮನೋಹರವಾದ ಮುಖವನ್ನು ರೋಷಾವೇಶದಿಂದ ಕೆಂಪುಮಾಡಿಕೊಂಡು, ಫೂತ್ಕಾರವನ್ನು ಮಾಡುತ್ತ ಜಯದ್ರಥನನ್ನು ನೋಡಿ "ಎಲೈ ರಾಜಾಧಮನೆ, ಯಕ್ಷರಾಕ್ಷಸರಲ್ಲಿಯೂ ಮಹಾರಥಿಕರಾಗಿಯೂ ಸ್ವಧರ್ಮದಲ್ಲಿ ಆಸಕ್ತರಾಗಿಯೂ ಇರುವ ಇಂದ್ರನಿಗೆ ಸಮಾನರಾದ ಪಾಂಡವರನ್ನು ಲಕ್ಷ್ಯಮಾಡದೆ ನೀನು ಇಂಥ ಮಾತನಾಡಿದೆ. ಇದರಿಂದ ನಿನಗೆ ನಾಚಿಕೆಯಿಲ್ಲವೆ? ದೊಡ್ಡವರಾದ ಗೃಹಸ್ಥರನ್ನೂ ವಾನಪ್ರಸ್ಥರನ್ನೂ ತಪಸ್ವಿಗಳನ್ನೂ ವಿದ್ಯಾವಂತರನ್ನೂ ಸಜ್ಜನರಾದವರು ಎಂದಿಗೂ ಹೀಗೆನ್ನಲಾರರು. ನಿನ್ನಂಥ ನೀಚರು ಇಂಥಾ ಮಾತುಗಳನ್ನು ಆಡುವರೇ ಹೊರತು ಮತ್ತೊಬ್ಬರು ಹೀಗಾಡುವದಿಲ್ಲ. ಈ ಕ್ಷತ್ರಿಯರ ಸಮೂಹದಲ್ಲಿ ಹೀಗೆ ಅಕಾರ್ಯದಲ್ಲಿ ಪ್ರವರ್ತಿಸಿ ನರಕದಲ್ಲಿ ಬೀಳತಕ್ಕ ನಿನ್ನನ್ನು ಯಾರೂ ಕೈಹಿಡಿದು ಎತ್ತತಕ್ಕವರಿಲ್ಲವೆಂದು ನಾನು ತಿಳಿಯುತ್ತೇನೆ. ಹಿಮವತ್ಪರ್ವತದ ಬಳಿಯಲ್ಲಿ ಸಂಚರಿಸತಕ್ಕ ಮದಿಸಿದಾನೆಗಳ ಗುಂಪನ್ನು ಒಂದು ಕೋಲನ್ನು ಹಿಡಿದಿರತಕ್ಕವನು ನಿಗ್ರಹಿಸುವದಕ್ಕೆ ಹೋಗುವಂತೆ, ನೀನು ಪಾಂಡವರನ್ನು ಜಯಿಸುವದಕ್ಕೆ ಯತ್ನಿಸುತ್ತಿರುವೆ. ಮಲಗಿರುವ ಬಲಿಷ್ಠವಾದ ಸಿಂಹದ ಮುಖದ ಮೇಲಿರತಕ್ಕ ಕೂದಲನ್ನು ಮೂಢನಾದವನು ಕೀಳುವದಕ್ಕೆ ಯತ್ನಿಸುವಂತೆ, ನೀನು ಧರ್ಮರಾಯನನ್ನು ಜಯಿಸುವದಕ್ಕೆ ಅಪೇಕ್ಷಿಸುತ್ತಿರುವೆ. ಆದರೆ ನೀನು ಭೀಮಸೇನನ ಕಾಲಿನಿಂದ ಒದಿಸಿಕೊಂಡು ಆತನನ್ನು ನೋಡುತ್ತ ಓಡಿಹೋಗುವದು ನಿಶ್ಚಯ. ಈಗ ನೀನು ಗುಹೆಯಲ್ಲಿ ಮಲಗಿರತಕ್ಕ ಸಿಂಹವನ್ನು ಕಾಲಿನಿಂದ ಒದ್ದು ಬಾಧಿಸುವ

ಮೂಢನಂತೆ, ಕೋಪೋದ್ದೀಪಿತನಾದ ಅರ್ಜುನನ ಸಂಗಡ ಯುದ್ಧಮಾಡುವದಕ್ಕೆ ಬಯಸುತ್ತಿರುವೆ. ಭಯಂಕರವಾದ ಮುಖವುಳ್ಳ ಕೃಷ್ಣಸರ್ಪದ ಬಾಲವನ್ನು ಕಾಲಿನಿಂದ ತುಳಿಯುವ ಅಜ್ಞಾನಿಯಂತೆ, ನೀನು ಪುರುಷಶ್ರೇಷ್ಠರಾದ ನಕುಲಸಹದೇವರ ಸಂಗಡ ಯುದ್ಧಕ್ಕೆ ತೊಡಗುವವಕ್ಕೆ ಎಣಿಸುತ್ತಿರುವೆ. ಬಿದರುಮೆಳೆಯೂ ಬಾಳೆಯೂ ಜೊಂಡು ಹುಲ್ಲೂ ಸಹ ತಮ್ಮ ನಾಶಕ್ಕೋಸ್ಕರ ಫಲಬಿಡುವ ಹಾಗೂ, ನಳ್ಳಿಯು ತನ್ನ ನಾಶಕ್ಕೋಸ್ಕರ ಗರ್ಭವನ್ನು ಧರಿಸುವ ಹಾಗೂ , ನೀನು ಪಾಂಡವರಿಂದ ರಕ್ಷಿತಳಾದ ನನ್ನನ್ನು ತೆಗೆದುಕೊಂಡು ಹೋಗುವದಕ್ಕೆ ಅಪೇಕ್ಷಿಸುತ್ತಿರುವೆ" ಎಂದಳು. ಜಯದ್ರಥನು "ಎಲೆ ದ್ರೌಪದಿಯೆ, ಪಾಂಡವರ ಶಕ್ತಿಯನ್ನು ನಾನು ಕಾಣದವನಲ್ಲ. ಈ ಮಾತುಗಳಿಂದ ಯಾತಕ್ಕೆ ಸುಮ್ಮನೆ ನನ್ನನ್ನು ಹೆದರಿಸುತ್ತಿರುವೆ? ನಾನೂ ಸತ್ಕುಲದಲ್ಲಿ ಹುಟ್ಟಿದವನು. ರಾಜಾಂಗವಾದ ಕೃಷ್ಯಾದಿ ಅಷ್ಟಕರ್ಮಗಳೂ, ಪ್ರಭುಶಕ್ತಿ ಮೊದಲಾದ ನವಶಕ್ತಿಗಳೂ, ಶೌರ್ಯ ಮೊದಲಾದ ಷಡ್ಗುಣಗಳೂ ಸಹ ನನ್ನಲ್ಲಿರುವವು. ಇವೆಲ್ಲವೂ ನಿನ್ನ ಗಂಡಂದಿರಲ್ಲಿ ಇಲ್ಲವೆಂಬುವದನ್ನೂ ನಾನು ಬಲ್ಲೆನು. ಸುಮ್ಮನೆ ಯಾತಕ್ಕೆ ಬರಿಯ ಮಾತುಗಳನ್ನು ಆಡುವೆ? ಜಾಗ್ರತೆಯಾಗಿ ಆನೆಯ ಮೇಲಾಗಲಿ ರಥದ ಮೇಲಾಗಲಿ ಕೂತುಕೊ. ಇನ್ನು ನೀನು ಮೆಲ್ಲಗೆ ನನ್ನ ದಯವನ್ನು ಸಂಪಾದಿಸಿಕೊ" ಎನಲು, ದ್ರೌಪದಿಯು "ಮಹಾಬಲವುಳ್ಳ ನಾನು ದುರ್ಬಲಳಂತೆ ಎಂದಿಗಾದರೂ ಜಯದ್ರಥನಿಗೆ ಅಧೀನಳಾಗಿ ಅವನ ಬಲಾತ್ಕಾರಕ್ಕೆ ದೀನಳಾಗಿ ನಡೆದುಕೊಳ್ಳತಕ್ಕವಳೆ? ಬಂದೇ ರಥದಮೇಲೆ ಕೂತುಕೊಳ್ಳತಕ್ಕ ಕೃಷ್ಣಾರ್ಜುನರು ಯಾವ ಸ್ತ್ರೀಗೆ ಸಹಾಯರಾಗಿರುವರೋ ಅವಳನ್ನು ಅಪಹರಿಸುವದಕ್ಕೆ ದೇವೇಂದ್ರನಿಗಾದರೂ ಶಕ್ತಿಯುಂಟೆ? ಹೀಗಿರುವಲ್ಲಿ ಮನುಷ್ಯಮಾತ್ರನ ವಿಷಯದಲ್ಲಿ ಹೇಳುವದೇನು? ಅರ್ಜುನನು ರಥಾರೂಢನಾಗಿ ನನ್ನ ನಿಮಿತ್ತವಾಗಿ ನಿನ್ನ ಸೈನ್ಯವನ್ನು ಹೊಕ್ಕು ಬಿಸಿಲ ಕಾಲದಲ್ಲಿ ಅಗ್ನಿಯು ಅರಣ್ಯದಲ್ಲಿ ಹೊದರುಗಳನ್ನು ಸುಟ್ಟುಬಿಡುವಂತೆ ನಿನ್ನ ಸೈನಿಕರನ್ನು ಧ್ವಂಸಮಾಡದೆ ಇರಲಾರನು. ಶ್ರೀಕೃಷ್ಣನೂ ಶೂರರಾದ ವೃಷ್ಣ್ಯಂಧಕರೂ ಧನುರ್ಧಾರಿಗಳಾದ ಕೇಕಯರಾಜಪುತ್ರರೂ ಸಹ ನನ್ನ ನಿಮಿತ್ತವಾಗಿ ನಿನ್ನ ಸೈನ್ಯವನ್ನು ಹೊಕ್ಕು, ಸಿಡಿಲಿನ ಧ್ವನಿಯಂತೆ ಧನುಷ್ಟಂಕಾರವನ್ನು ಮಾಡುತ್ತ, ಅರ್ಜುನನ ಕಯ್ಯನ್ನು ತಟ್ಟುತ್ತ, ಉತ್ಸಾಹದಿಂದ ನಿನ್ನ ಸೈನ್ಯವನ್ನು ಹೊಕ್ಕು ಭಯಂಕರವಾಗಿ ಸಿಂಹನಾದವನ್ನು ಮಾಡಿ, ನಿನ್ನ ಕಡೆಯ ಭಟರೆಲ್ಲರನ್ನೂ ಧ್ವಂಸಮಾಡದೆ ಇರಲಾರರು. ಯಾವಾಗ ಅರ್ಜುನನು ಧನುಷ್ಟಂಕಾರಮಾಡಿ ದೇವದತ್ತವೆಂಬ ಶಂಖವನ್ನು ಊದಿ ಗಾಂಡೀವಧನುಸ್ಸಿನಲ್ಲಿ ಅತಿವೇಗವುಳ್ಳ ಬಾಣಗಳನ್ನು ಹೂಡಿ ನಿನ್ನಮೇಲೆ ಪ್ರಯೋಗಿಸುವನೋ ಆಗ, ನಿನ್ನ ಬುದ್ಧಿಯನ್ನು ನೀನೇ ನಿಂದಿಸಿಕೊಳ್ಳುವೆ. ಗದಾಪಾಣಿಯಾಗಿ ಎದುರುಬಿದ್ದು ಬರತಕ್ಕ ಭೀಮಸೇನನನ್ನೂ, ದಿಕ್ಕುದಿಕ್ಕುಗಳಲ್ಲೆಲ್ಲಾ ಬಾಣಗಳನ್ನು ಪ್ರಯೋಗಿಸುತ್ತಲೂ ಕ್ರೋಧವಿಷವನ್ನು ಕಾರುತ್ತಲೂ ಬರುವ ನಕುಲಸಹದೇವರನ್ನೂ, ನೋಡಿ ನಿನಗೆ ನೀನೇ ತಪ್ತನಾಗುವೆ. ಎಲೈ ಪಾಪಾತ್ಮನೆ, ತ್ರಿಕರಣದಿಂದಲೂ ನಾನು ಪತಿಗಳಾದ ಪಾಂಡವರನ್ನು ಅತಿಕ್ರಮಿಸಿ ನಡೆಯದಿರುವದು ಸತ್ಯವಾಗಿದ್ದಪಕ್ಷದಲ್ಲಿ ಪಾಂಡವರಿಗೆ ಸಿಕ್ಕಿ ದುಃಖಪಡತಕ್ಕ ನಿನ್ನನ್ನು ನಾನು ನೋಡುತ್ತೇನೆ. ಈಗ ನೀನು ನನ್ನನ್ನು ಎಳೆದುಕೊಂಡು ಹೋದಮಾತ್ರಕ್ಕೆ ನಾನು ಭಯಪಡತಕ್ಕವಳಲ್ಲ. ನಾನು ಶೂರರಾದ ನನ್ನ ಗಂಡಂದಿರೊಡನೆ ಕಾಮ್ಯಕವನಕ್ಕೆ ಬರತಕ್ಕವಳೆಂದು ತಿಳಿ" ಎಂದು ನುಡಿದು, ಕ್ರೂರವಾದ ದೃಷ್ಟಿಯಿಂದ ಆ ದುರಾತ್ಮನನ್ನು ನೋಡಿ, ನನ್ನನ್ನು ಮುಟ್ಟಬೇಡ ಮುಟ್ಟಬೇಡವೆಂದು ಜಬರಿಸುತ್ತ, ಪುರೋಹಿತರಾದ ಧೌಮ್ಯಾಚಾರ್ಯರನ್ನು ಕೂಗಿಕೊಂಡಳು. ಅಷ್ಟರಲ್ಲೇ ಪಾಪಾತ್ಮನಾದ ಜಯದ್ರಥನು ಸೆರಗನ್ನು ಹಿಡಿಯಲು, ದ್ರೌಪದಿಯು ತನ್ನ ಸೆರಗನ್ನು ಹಿಡಿದ ಆ ನೀಚನನ್ನು ದೂರವಾಗಿ ತಳ್ಳಿದಳು. ಆಗ ಜಯದ್ರಥನು ಬೇರುಸಡಲಿದ ಮರವು ಬೀಳುವಂತೆ ನೆಲದಮೇಲೆ ಬಿದ್ದು, ಪುನಃ ಮೇಲಕ್ಕೆ ಎದ್ದು, ಬಲಾತ್ಕಾರವಾಗಿ ದ್ರೌಪದಿಯನ್ನು ಹಿಡಿದುಕೊಂಡು ಹೋಗಲು ; ಆ ಸಮಯದಲ್ಲಿ ದ್ರೌಪದಿಯು ಅತ್ತಲಿಂದ ಬಂದ ಧೌಮ್ಯಾಚಾರ್ಯರಿಗೆ ದೂರದಿಂದಲೇ ವಂದನೆಯನ್ನು ಮಾಡಿ, ಜಯದ್ರಥನ ರಥದಮೇಲೆ ಕೂತುಕೊಂಡಳು. ಒಡನೆ ಜಯದ್ರಥನು ಸೈನ್ಯಸಮೇತನಾಗಿ ದ್ರೌಪದಿಯನ್ನು ತೆಗೆದುಕೊಂಡು ಹೋಗುತ್ತಿದ್ದನು. ಆ ವೇಳೆಯಲ್ಲಿ ಧೌಮ್ಯಾಚಾರ್ಯರು "ಎಲೈ ಜಯದ್ರಥನೆ, ಮಹಾತ್ಮರಾದ ಪಾಂಡವರನ್ನು ಜಯಿಸದೆ, ನೀನು ಈಕೆಯನ್ನು ತೆಗೆದುಕೊಂಡು ಹೋಗುವದು ಅನುಚಿತವು. ಪುರಾತನವಾದ ಕ್ಷಾತ್ರಧರ್ಮವನ್ನು ಚನ್ನಾಗಿ ಯೋಚಿಸು. ಇಂಥ ಪಾಪಕೃತ್ಯವನ್ನು ನೀನು

ಮಾಡಿದ್ದಕ್ಕೆ ತಕ್ಕ ಫಲವನ್ನು, ಮುಂದೆ ಮಹಾರಥಿಕರಾದ ಪಾಂಡವರು ನಿನಗೆ ಕೊಡದೆ ಇರಲಾರರು" ಎಂದು ನುಡಿಯುತ್ತ ದ್ರೌಪದಿಯನ್ನು ಅನುಸರಿಸಿ ಆ ಜಯದ್ರಥನ ಸೈನ್ಯದ ಜೊತೆಯಲ್ಲಿ ತಾವೂ ಹೊರಟರು.

---

## ೨೭೮ನೇ ಅಧ್ಯಾಯು.—ದ್ರೌಪದೀಹರಣದ ಕಥೆ.—(ಅರ್ಜುನನ ಆಗಮನ.)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಆ ಬಳಿಕ ನಾಲ್ಕು ದಿಕ್ಕಿಗೂ ಬೇಟೆಯಾಡುವದಕ್ಕೆ ಹೋಗಿದ್ದ ಪಾಂಡವರು ನಾನಾವಿಧವಾದ ಮೃಗಗಳನ್ನು ಸಂಹರಿಸಿ ಅವುಗಳನ್ನು ತೆಗೆದುಕೊಂಡು, ಅನೇಕ ಮೃಗಗಳಿಂದಲೂ ಸರ್ಪಗಳಿಂದಲೂ ಪಕ್ಷಿಗಳಿಂದಲೂ ವ್ಯಾಪ್ತವಾದ ಕಾಮ್ಯಕವನಕ್ಕೆ ಬಂದರು. ಆಗ ಧರ್ಮರಾಯನು ಸೂರ್ಯಾಭಿಮುಖವಾಗಿ ನಿಂತು, ಮೃಗಪಕ್ಷಿಗಳು ಘೋರವಾಗಿ ಕೂಗುವದನ್ನು ಕೇಳಿ, ತಮ್ಮಂದಿರನ್ನು ನೋಡಿ, "ಇದೇನು ಈ ಮೃಗಪಕ್ಷಿಗಳ ಸ್ವರವು ಘೋರವಾಗಿರುವದು! ಇದನ್ನು ಕೇಳಿದರೆ ಶತ್ರುಗಳು ನಮ್ಮ ಆವಾಸಸ್ಥಾನಕ್ಕೆ ಹಾನಿಯನ್ನುಂಟುಮಾಡಿರುವಹಾಗೆ ತೋರುವದು. ಎಲೈ ಭೀಮಾದಿಗಳಿರಾ, ಜಾಗ್ರತೆಯಾಗಿ ನಮ್ಮ ಪರ್ಣಶಾಲೆಯ ಸಮೀಪಕ್ಕೆ ನಡೆಯಿರಿ. ಇನ್ನು ಮೃಗಗಳನ್ನು ಹುಡುಕುವದು ಸಾಕು. ನನ್ನ ಮನಸ್ಸು ಯಾತಕ್ಕೋ ಬಹಳ ಭಯಪಡುತ್ತಿರುವದು. ಇಂದ್ರಿಯಗಳಿಗೆ ಅಧಿಪತಿಯಾದ ಪ್ರಾಣವಾಯುವು ದೈನ್ಯವನ್ನು ಹೊಂದಿ ಬುದ್ಧಿಗೆ ಅಜ್ಞಾನವನ್ನುಂಟುಮಾಡುತ್ತಿರುವದು. ಈ ಕಾಮ್ಯಕವನವು ಗರುಡನಿಂದ ಅಪಹೃತವಾದ ಸರ್ಪವುಳ್ಳ ಸರೋವರದಂತೆಯೂ, ಅರಾಜಕವಾದ ರಾಜ್ಯದಂತೆಯೂ ಕಳೆಗೆಟ್ಟು, ಆನೆಯಿಂದ ಕುಡಿಯಲ್ಪಟ್ಟ ನೀರುಳ್ಳ ಕುಂಭದಂತೆ, ಶೂನ್ಯವಾಗಿ ಕಾಣಿಸುತ್ತಿರುವದು" ಎಂದನು.

ಅತ್ತಲು ಜಯದ್ರಥನ ಸೈನಿಕರು ಸಿಂಧುದೇಶದಲ್ಲಿ ಹುಟ್ಟಿದ ವೇಗಸಂಪನ್ನವಾದ ಕುದುರೆಗಳನ್ನು ಕಟ್ಟಿರುವ ರಥಗಳ ಮೇಲೆ ಕುಳಿತು ಆ ಆಶ್ರಮಕ್ಕೆ ಅಭಿಮುಖವಾಗಿ ಹೋಗುತ್ತಿರಲು, ಅವರ ಬಲಗಡೆಯಲ್ಲಿ ನರಿಗಳು ಗುಂಪುಗುಂಪಾಗಿ ಬಂದು ಘೋರವಾಗಿ ಕೂಗಿದವು. ಆ ಶಬ್ದವು ಕೇಳಬರಲು, ಧರ್ಮರಾಯನು ಹಾಗೆಯೇ ಆಲೋಚಿಸಿ ಭೀಮಾರ್ಜುನರನ್ನು ನೋಡಿ, "ಎಲೈ ಭೀಮಾರ್ಜುನರೆ, ನರಿಗಳು ನಮ್ಮ ಆವಾಸದ ಸಮೀಪದಲ್ಲಿ ಕೂಗುತ್ತಿರುವವು. ಇದನ್ನು ಕೇಳಿದರೆ ಪಾಪಾತ್ಮರಾದ ದುರ್ಯೋಧನಾದಿಗಳು ನಮ್ಮ ಆವಾಸಸ್ಥಳಕ್ಕೆ ಬಂದು ನಮ್ಮನ್ನು ಅಪಮಾನಪಡಿಸಿ ನಮಗೆ ಹಾನಿಯಾಗತಕ್ಕ ಕಾರ್ಯವನ್ನು ಮಾಡಿದಹಾಗೆ ತೋರುತ್ತಿರುವದು" ಎಂದು ಮಾತನಾಡಿಕೊಳ್ಳುತ್ತ, ತಮ್ಮ ಆವಾಸಸ್ಥಾನಕ್ಕೆ ಬಂದರು. ಅಲ್ಲಿ ದ್ರೌಪದಿಗೆ ಪರಿಚಾರಕಳೂ ಆಕೆಯ ದಾದಿಯ ಮಗಳೂ ಆದ ಒಬ್ಬ ಸ್ತ್ರೀಯು ರೋದನಮಾಡುತ್ತಿರುವದನ್ನು ನೋಡಿದರು. ಬಳಿಕ ಸಾರಥಿಯಾದ ಇಂದ್ರಸೇನನು ರಥದಿಂದ ಕೆಳಕ್ಕೆ ಇಳಿದು, ಆಕೆಯ ಬಳಿಗೆ ಹೋಗಿ "ಎಲೆ ಮಗಳೆ, ಯಾತಕ್ಕೆ ನೆಲದಮೇಲೆ ಬಿದ್ದು ರೋದನಮಾಡುತ್ತಿರುವೆ? ಯಾತಕ್ಕೆ ನಿನ್ನ ಮುಖವು ದೀನವಾಗಿ ಬಣಗಿ ಹೋಗಿರುವದು? ಪಾಪಾತ್ಮರಾದ ದುರ್ಯೋಧನಾದಿಗಳಿಂದ ದ್ರೌಪದಿಯೇನಾದರೂ ಹಿಂಸಿಸಲ್ಪಟ್ಟಳೋ? ಮತ್ತು ಪಾಂಡವರಿಗೆ ಶರೀರಪ್ರಾಯಳಾಗಿಯೂ ವಿಶಾಲನೇತ್ರೆಯಾಗಿಯೂ ಸುಂದರಾಂಗಿಯಾಗಿಯೂ ಇರುವ ದ್ರೌಪದಿಯು ಪರರ ಬಾಧೆಯನ್ನು ಸಹಿಸದೆ ಭೂಮಿಯನ್ನು ಪ್ರವೇಶಮಾಡಿದಳೋ? ಅಥವಾ ಸ್ವರ್ಗಕ್ಕೆ ಹೋದಳೊ? ಅಲ್ಲದಿದ್ದರೆ ಸಮುದ್ರವನ್ನು ಪ್ರವೇಶಿಸಿದಳೋ? ಹೇಳು. ಧರ್ಮರಾಯನು ಸಂತಾಪಪಡುತ್ತಿರುವನು. ಪಾಂಡವರು ದ್ರೌಪದಿಯು ಹೋಗಿರುವ ಸ್ಥಳಕ್ಕೆ ಹೋಗುವರು. ಲೋಕೋತ್ತರವಾದ ಪರಾಕ್ರಮವುಳ್ಳ ಪಾಂಡವರಿಗೆ ಪ್ರಾಣಸಮಾನಳಾದ ಉತ್ತಮವಾದ ಸ್ತ್ರೀರತ್ನವನ್ನು ಯಾವ ಮೂಢನಾದರೂ ಅಪಹರಿಸುವನೆ? ಅಂಥ ದ್ರೌಪದಿಯು ಈಗ ಇಲ್ಲಿ ಕಾಣಿಸುವದಿಲ್ಲವಲ್ಲಾ! ಈಗ ಪಾಂಡವರ ತೀಕ್ಷ್ಣವಾದ ಬಾಣಗಳು ಯಾವವನ ಹೃದಯವನ್ನು ಭೇದಿಸಿ ಭೂಮಿಯನ್ನು ಪ್ರವೇಶಿಸುವವೋ ತಿಳಿಯದು. ಎಲೆ ಮಗಳೆ, ಅಳಬೇಡ ಅಳಬೇಡ. ದ್ರೌಪದಿಯು ಇಲ್ಲಿಗೆ ಬರುವಳು. ಪಾಂಡವರು ದ್ರೌಪದಿಗೆ ಕ್ಲೇಶವನ್ನುಂಟುಮಾಡಿದ ಶತ್ರುಗಳನ್ನು ಸಂಹರಿಸಿ, ದ್ರೌಪದಿಯನ್ನು ಕರೆದುಕೊಂಡು ಬರುವರು" ಎನಲು, ಪರಿಚಾರಕಳು ಕಂಬನಿ

ಗಳನ್ನು ಬರಸಿಕೊಂಡು ಸಾರಥಿಯಾದ ಇಂದ್ರಸೇನನನ್ನು ಕುರಿತು "ಎಲೈ ಇಂದ್ರಸೇನನೆ, ದೇವೇಂದ್ರನಿಗೆ ಸಮಾನರಾದ ಪಾಂಡವರನ್ನು ತಿರಸ್ಕರಿಸಿ ಪಾಪಾತ್ಮನಾದ ಜಯದ್ರಥನು ದ್ರೌಪದಿಯನ್ನು ಅಪಹರಿಸಿದನು. ಇದೋ, ಈ ಮಾರ್ಗದಲ್ಲೇ ಹೋಗುತ್ತಿರುವನು. ಆತನ ಸೈನಿಕರು ಮಾರ್ಗವನ್ನು ಮಾಡುವದಕ್ಕಾಗಿ ವೃಕ್ಷಗಳ ಕೊಂಬೆಗಳನ್ನು ಕಡಿದುಹಾಕಿದರು. ಅವುಗಳು ಇನ್ನೂ ಬಾಡದಿರುವವು. ಇನ್ನೂ ಆ ಜಯದ್ರಥನ ಸೈನಿಕರು ಸಮೀಪದಲ್ಲೇ ಹೋಗುತ್ತಿರಬಹುದು. ಜಾಗ್ರತೆಯಾಗಿ ನೀವು ಹೋಗಿ ಅವರನ್ನು ಹಿಂದಕ್ಕೆ ತಿರುಗಿಸಿರಿ. ಪಾಂಡವರು ಮಹತ್ತಾದ ಧನುರ್ಬಾಣಗಳನ್ನು ಸಿದ್ಧಪಡಿಸಿಕೊಂಡು ಜಯದ್ರಥನು ಹೋದ ಮಾರ್ಗವನ್ನು ಅನುಸರಿಸಿ ಹೋಗಲಿ. ಪತಿವ್ರತಾಶಿರೋಮಣಿಯಾದ ದ್ರೌಪದಿಯು ಸೈಂಧವನು ಜಬರಿಸುವದರಿಂದ ಮುಖವನ್ನು ಬಣಗಿಸಿಕೊಂಡು ಭಯಪಟ್ಟು ಆಜ್ಯಪೂರ್ಣವಾದ ಸ್ರುಕ್ಕನ್ನು ಭಸ್ಮದಲ್ಲಿ ಉಪಯೋಗಿಸಿದಂತೆ ಅಯೋಗ್ಯನಲ್ಲಿ ತನ್ನ ಶರೀರವನ್ನು ಆಕೆಯು ಒಪ್ಪಿಸುವದಕ್ಕಿಂತಲೂ ಮೊದಲೇ, ನೀವೆಲ್ಲರೂ ಆ ಪಾಪಾತ್ಮನನ್ನು ಅಟ್ಟಿಕೊಂಡು ಹೋಗಿರಿ. ಪಾಪಾತ್ಮನಾದ ಜಯದ್ರಥನು ಪತಿವ್ರತಾಶಿರೋಮಣಿಯಾದ ದ್ರೌಪದಿಯನ್ನು ಅಪಹರಿಸಿಕೊಂಡು ಹೋಗಿರುವದು, ತುಷಾಗ್ನಿಯಲ್ಲಿ ಹೋಮಮಾಡಿದಂತೆಯೂ, ಶ್ಮಶಾನದಲ್ಲಿ ಪುಷ್ಪಹಾರವನ್ನು ಹಾಕಿದಂತೆಯೂ, ಯಜ್ಞಶಾಲೆಯಲ್ಲಿ ಋತ್ವಿಜರು ನಿದ್ರೆಮಾಡುತ್ತಿರುವ ಸಮಯದಲ್ಲಿ ಸೋಮವನ್ನು ಮಾರ್ಗದಲ್ಲಿ ಹೋಗುತ್ತಿದ್ದ ನಾಯಿಯು ಮುಟ್ಟಿದಂತೆಯೂ ಮಹತ್ತಾದ ಅರಣ್ಯದಲ್ಲಿ ಬೇಟೆಯಾಡಿ ನರಿಯು ಕಮಲಸರೋವರವನ್ನು ಸೇರಿದಂತೆಯೂ ಆಗಿರುವದು. ಎಲೈ ಪಾಂಡವರೆ, ನಿಮ್ಮ ಪ್ರಿಯಭಾರ್ಯೆಯಾದ ದ್ರೌಪದಿಯ ಸುಂದರವಾಗಿಯೂ ಶುಭವಾಗಿಯೂ ಇರುವ ಚಂದ್ರಸಮಾನವಾದ ಮುಖವನ್ನು ಅಕೃತ್ಯವನ್ನು ಮಾಡತಕ್ಕ ಮತ್ತೊಬ್ಬ ಪುರುಷನು ಮುಟ್ಟುವದಕ್ಕಿಂತಲೂ ಮೊದಲೇ, ನೀವು ಈ ಮಾರ್ಗದಲ್ಲಿ ಹೋಗಿ ಆ ನೀಚನನ್ನು ನಿಗ್ರಹಿಸಿರಿ. ಸಾವಕಾಶಮಾಡಬೇಡಿರಿ" ಎಂದಳು. ಆ ಮಾತನ್ನು ಕೇಳಿ ಧರ್ಮರಾಯನು "ಎಲೆ ಭದ್ರೆ, ದೂರಹೋಗು ದೂರಹೋಗು. ನಮ್ಮೆದುರಿಗೆ ಇಂಥ ಮಾತುಗಳನ್ನಾಡಬೇಡ. ರಾಜರೇ ಆಗಲಿ ರಾಜಪುತ್ರರೇ ಆಗಲಿ ಬಲದಿಂದ ಮತ್ತರಾಗಿ ಮೋಸಹೋಗುವರು" ಎಂದು ನುಡಿದನು. ಬಳಿಕ ಪಾಂಡವರೆಲ್ಲರೂ ಸರ್ಪದಂತೆ ನಿಟ್ಟುಸುರನ್ನು ಬಿಡುತ್ತ, ರೋಷಾವೇಶದಿಂದ ಧನುಷ್ಟಂಕಾರಮಾಡುತ್ತ, ಆ ಸೈನಿಕರು ಹೋದ ಮಾರ್ಗದಲ್ಲೇ ಶೀಘ್ರವಾಗಿ ಹೋಗಿ, ಆ ಸೈನಿಕರ ಕುದುರೆಗಳ ಕಾಲುಗಳಿಂದ ಎದ್ದ ಕೆಂದೂಳನ್ನು ನೋಡಿ, ಆ ಪದಾತಿಗಳ ಮಧ್ಯದಲ್ಲಿ 'ಭೀಮಾ' ಎಂದು ಕೂಗುತ್ತಿದ್ದ ಧೌಮ್ಯಾಚಾರ್ಯರನ್ನು ನೋಡಿ, ತಮ್ಮ ಬಳಿಗೆ ಅವರನ್ನು ಕರೆದು 'ನೀವು ಸುಖವಾಗಿರಿ, ಭಯಪಡಬೇಡಿ' ಎಂದು ಸಮಾಧಾನಮಾಡಿ, ಗಿಡುಗವು ಮಾಂಸವನ್ನು ನೋಡಿ ಅದರಮೇಲೆ ಹ್ಯಾಗೆ ಎರಗುವದೋ ಹಾಗೆ ಆ ಸೈನ್ಯವನ್ನು ಅಟ್ಟಿಕೊಂಡುಹೋಗಿ, ರಥದಮೇಲೆ ಕೂತಿದ್ದ ಸೈಂಧವನನ್ನೂ ದ್ರೌಪದಿಯನ್ನೂ ನೋಡಿ, ದ್ರೌಪದೀಹರಣದಿಂದುಂಟಾದ ಕೋಪದಿಂದ ಜಾಜ್ವಲ್ಯಮಾನರಾಗಿ ಯುದ್ಧಾರ್ಥರಾಗಿ ಸೈಂಧವನನ್ನು ಕೂಗಿ ಸಿಂಹನಾದವನ್ನು ಮಾಡಿದರು. ಆಗ ಆ ಸೈನಿಕರೆಲ್ಲರೂ ದಿಗ್ಭ್ರಾಂತರಾದರು.

## ೨೭೦ನೇ ಅಧ್ಯಾಯ.—ದ್ರೌಪದೀಹರಣದ ಕಥೆ—(ಪಾಂಡವರಿಗೂ ಜಯದ್ರಥನಿಗೂ ಯುದ್ಧ.)

ವೈಶಂಪಾಯನಮುನೀಂದ್ರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಆಗ ಜಯದ್ರಥನ ಸೈನಿಕರು ಭೀಮಾರ್ಜುನರನ್ನು ನೋಡಿ ಆ ವನದಲ್ಲಿ ಘೋರವಾದ ಧ್ವನಿಯನ್ನು ಮಾಡುತ್ತಿರಲು, ದುರಾತ್ಮನಾದ ಸೈಂಧವನು ಪಾಂಡವರ ಧ್ವಜಗಳನ್ನು ನೋಡಿ ತನ್ನ ರಥದಮೇಲೆ ಕುಳಿತಿರುವ ದ್ರೌಪದಿಯನ್ನು ಕುರಿತು "ಎಲೆ ಮಂಗಳಾಂಗಿಯೆ, ಮಹಾರಥಿಕರಾದ ನಿನ್ನ ಪತಿಗಳಾದ ಪಾಂಡವರು ಬರುತ್ತಿರುವರು. ಅವರ ರಥಗಳ ಗುರುತನ್ನು ನೀನು ಬಲ್ಲವಳಾದ್ದರಿಂದ, ರಥದಮೇಲೆ ಕೂತಿರುವ ಅವರನ್ನು ಪ್ರತ್ಯೇಕಪ್ರತ್ಯೇಕವಾಗಿ ನನಗೆ ತಿಳುಹಿಸು" ಎನಲು, ದ್ರೌಪದಿಯು "ಎಲೈ ಮೂಢನೆ, ನೀನು ಆಯುಸ್ಸು ನಾಶವಾಗತಕ್ಕ ಘೋರವಾದ ಕೃತ್ಯವನ್ನು ಮಾಡಿರುವೆ. ಈಗ ಅವರನ್ನು ತಿಳಿಯುವದರಿಂದ ನಿನಗೇನು ಪ್ರಯೋಜನ? ಶೂರರಾದ ನನ್ನ ಪತಿ

ಗಳು ಯುದ್ಧದಲ್ಲಿ ನಿಮ್ಮೆಲ್ಲರನ್ನೂ ನಿಶ್ಶೇಷಮಾಡಿಬಿಡುವರು. ಈಗ ನಿನಗೆ ಮರಣಕಾಲವು ಸಮೀಪಿಸಿರುವದರಿಂದ, ನೀನು ಕೇಳಿಕೊಳ್ಳುವದಕ್ಕೆ ಈ ಸಮಯದಲ್ಲಿ ನಾನು ಉತ್ತರವನ್ನು ಕೊಡುವದು ಧರ್ಮವಾದದ್ದು. ತಮ್ಮಂದಿರೊಡಗೂಡಿದ ಧರ್ಮರಾಯನನ್ನು ನೋಡಿದ ನಾನು ನಿನ್ನದೆಸೆಯಿಂದ ಭಯವನ್ನೇ ಆಗಲಿ ವ್ಯಥೆಯನ್ನೇ ಆಗಲಿ ಹೊಂದತಕ್ಕವಳಲ್ಲ. ಕ್ರಮವಾಗಿ ನನ್ನ ಪತಿಗಳ ಗುರುತನ್ನು ವಿವರಿಸುವೆನು ಕೇಳು. ಯಾವ ರಥದ ಧ್ವಜಾಗ್ರದಲ್ಲಿ ರೂಪಯುಕ್ತರಾದ ನಂದೋಪನಂದನರು ಮಧುರಸ್ವರದಿಂದ ಮೃದಂಗವನ್ನು ಬಾರಿಸುತ್ತಿರುವರೋ, ಅದೇ ಧರ್ಮರಾಯನ ರಥವೆಂದು ತಿಳಿ. ಹದಿನಾರು ಬಣ್ಣಗಳುಳ್ಳ ಚಿನ್ನದಂತೆ ಶುದ್ಧವಾದ ಮೈಬಣ್ಣವುಳ್ಳವನಾಗಿಯೂ, ವಿಸ್ತಾರವಾದ ನೇತ್ರಗಳುಳ್ಳವನಾಗಿಯೂ, ದೊಡ್ಡದಾದ ಮೂಗುಳ್ಳವನಾಗಿಯೂ, ಸ್ವಧರ್ಮನಿಶ್ಚಯವನ್ನು ಬಲ್ಲವನಾಗಿಯೂ, ಸಜ್ಜನರಿಗೆ ಆಶ್ರಯನಾಗಿಯೂ, ಇರುವ ಕುರುಶ್ರೇಷ್ಠನಾದ ಧರ್ಮರಾಯನು ಅದೇ ರಥದಮೇಲೆ ಕುಳಿತಿರುವನು. ರಾಜಶ್ರೇಷ್ಠನಾದ ಆ ಧರ್ಮರಾಯನು, ಶತ್ರುವಾದರೂ ತನಗೆ ಶರಣಾಗತನಾದರೆ, ಆತನಿಗೆ ತನ್ನ ಶರೀರವನ್ನಾದರೂ ಕೊಟ್ಟುಬಿಡುವನು. ಎಲೈ ಮೂಢನೆ, ನೀನು ಶಸ್ತ್ರವನ್ನು ಬಿಟ್ಟು ಕೈಮುಗಿದುಕೊಂಡು, ನಿನಗೆ ಶ್ರೇಯಸ್ಸಾಗುವದಕ್ಕಾಗಿ ಜಾಗ್ರತೆಯಾಗಿ ಆತನಿಗೆ ಶರಣಾಗತನಾಗು. ಇದೋ, ಈ ರಥದಮೇಲೆ ಕುಳಿತು ವೃಕ್ಷದಂತೆ ದೊಡ್ಡದಾದ ಭುಜಗಳುಳ್ಳವನಾಗಿ ತುಟಿಯನ್ನು ಸವರುತ್ತ ಹುಬ್ಬುಗಂಟುಹಾಕಿಕೊಂಡು ನೋಡುತ್ತಿರುವನೇ ಭೀಮಸೇನನು. ಈತನು ಯುದ್ಧದಲ್ಲಿ ಅಮಾನುಷವಾದ ಭಯಂಕರವಾದ ಸಾಹಸವನ್ನು ಮಾಡುವನಾದ್ದರಿಂದ, ಈತನನ್ನು ಭೀಮನೆಂದು ಹೇಳುವರು. ಈತನ ರಥಕ್ಕೆ ಸತ್ಕುಲದಲ್ಲಿ ಹುಟ್ಟಿದ ಬಲಾಢ್ಯವಾದ ಕುದುರೆಗಳನ್ನು ಕಟ್ಟಿರುವರು. ಈತನಿಗೆ ಅಪರಾಧಮಾಡಿದವರು ನಿಶ್ಶೇಷವಾಗಿ ನಷ್ಟರಾಗುವರು. ಈತನು ಬಬ್ಬರಲ್ಲಿ ತಾನು ವೈರವನ್ನು ಮಾಡತಕ್ಕವನಲ್ಲ; ಪರರು ತನ್ನಲ್ಲಿ ವೈರವನ್ನು ಮಾಡಿದರೆ, ಅವರನ್ನು ನಾಶಮಾಡಿದರೂ ಬಳಿಕ ತಾನು ಅಷ್ಟರಲ್ಲೇ ಶಾಂತಿಯನ್ನು ಹೊಂದದೆ ಅವರ ವಂಶವನ್ನೇ ನಾಶಮಾಡಿಬಿಡುವನು. ಇದೋ, ಈತನು ಧನುರ್ಧರಾಗ್ರೇಸರನಾಗಿಯೂ ಧೈರ್ಯಶಾಲಿಯಾಗಿಯೂ ಜಿತೇಂದ್ರಿಯನಾಗಿಯೂ ವೃದ್ಧರನ್ನು ಸೇವಿಸಿದವನಾಗಿಯೂ ವೀರನಾಗಿಯೂ ಧರ್ಮರಾಯನಿಗೆ ತಮ್ಮನಾಗಿಯೂ ಶಿಷ್ಯನಾಗಿಯೂ ಇರುವ ಅರ್ಜುನನು. ಈತನು ಕಾಮ ಕ್ರೋಧ ಲೋಭಗಳಿಂದಲಾದರೂ ಸ್ವಧರ್ಮವನ್ನು ಬಿಡದೆ ಕೃಪಾಯುಕ್ತನಾಗಿ, ಯುದ್ಧದಲ್ಲಿ ಎಂಥ ಶತ್ರುಬಂದರೂ ಅವನನ್ನು ನಿಗ್ರಹಿಸಿ ಯಜ್ಞೇಶ್ವರನಂತೆ ತೇಜೋವಂತನಾಗಿ ಕಾಣಿಸುವನು. ಇದೋ ಈತನು ನಕುಲನು. ಈತನು ಸಕಲ ಧರ್ಮವನ್ನೂ ತಿಳಿದವನಾಗಿಯೂ, ಭೀತರಾದವರ ಭಯವನ್ನು ಪರಿಹರಿಸತಕ್ಕವನಾಗಿಯೂ, ಬುದ್ಧಿವಂತನಾಗಿಯೂ, ರೂಪವಂತನಾಗಿಯೂ, ಧರ್ಮರಾಯ ಮೊದಲಾದವರನ್ನು ಅನುವರ್ತಿಸಿರುವನಾಗಿಯೂ, ಅವರಿಗೆ ಪ್ರಾಣಪ್ರಿಯನಾಗಿಯೂ, ಯುದ್ಧರಂಗದಲ್ಲಿ ವಿಚಿತ್ರವಾಗಿ ಯುದ್ಧಮಾಡತಕ್ಕವನಾಗಿಯೂ ಇರುವನು. ಈತನೇ ಸಹದೇವನು. ಇದೋ, ಈತನು ಖಡ್ಗಯುದ್ಧದಲ್ಲಿ ವಿಚಿತ್ರಶಕ್ತಿಯುಳ್ಳವನಾಗಿಯೂ ಬುದ್ಧಿಸಂಪನ್ನನಾಗಿಯೂ ಇರುವನು. ಎಲೈ ಮೂಢನೆ, ಧರ್ಮರಾಯನಿಗೆ ಪ್ರಿಯನಾಗಿಯೂ ಶೂರನಾಗಿಯೂ ಅಸ್ತ್ರವಿದ್ಯಾಪಾರಂಗತನಾಗಿಯೂ ಇರುವ ಸಹದೇವನು ದೈತ್ಯಸೈನ್ಯದಲ್ಲಿ ದೇವೇಂದ್ರನು ಯುದ್ಧಮಾಡುವಂತೆ ಯುದ್ಧಮಾಡುವದನ್ನು ನೀನು ಈಗ ನೋಡುವೆ. ಈತನು ತನ್ನ ಪ್ರಾಣಗಳು ನಷ್ಟವಾದಾಗ್ಯೂ ಧರ್ಮವಿರುದ್ಧವಾದ ಮಾತುಗಳನ್ನು ಆಡತಕ್ಕವನಲ್ಲ. ಈತನು ಕುಂತೀದೇವಿಗೆ ಪ್ರಾಣಕ್ಕೆ ಸಮಾನನಾದವನು. ಈಗ ಈ ನನ್ನ ಪತಿಗಳೆಲ್ಲರೂ ರತ್ನಪೂರ್ಣವಾದ ನಾವೆಯನ್ನು ಮೊಸಳೆಯು ನಾಶಮಾಡುವಂತೆ ನಿನ್ನ ಸೈನ್ಯವನ್ನು ನಾಶಮಾಡತಕ್ಕದ್ದನ್ನು ನೀನೇ ನೋಡುವೆ. ಎಲೈ ಪಾಪಿಯೆ, ಇವರನ್ನು ನೀನು ಅವಮಾನಪಡಿಸಿರುವೆ. ಇವರಿಂದ ನೀನು ತಪ್ಪಿಸಿಕೊಂಡರೆ ನಿನಗೆ ಪುನರ್ಜನ್ಮವೆಂದು ತಿಳಿ" ಎಂದು ನುಡಿಯುತ್ತಿದ್ದಳು. ಅಷ್ಟರಲ್ಲೇ ಐದುಮಂದಿ ಇಂದ್ರರಿಗೆ ಸಮಾನರಾದ ಆ ಪಾಂಡವರು ಆ ಸೈನ್ಯದಲ್ಲಿ ಶರಣಾಗತರಾದ ಪದಾತಿಗಳನ್ನು ಬಿಟ್ಟು, ರಥಿಕರಮೇಲೆ ಆಗ್ರಹದಿಂದ ಬಾಣವೃಷ್ಟಿಯನ್ನು ಕರೆದು, ಮಹತ್ತಾದ ಅಂಧಕಾರವನ್ನುಂಟುಮಾಡಿದರು.

## ೨೭೦ನೇ ಅಧ್ಯಾಯ.—ದ್ರೌಪದೀಹರಣದ ಕಥೆ—(ಜಯದ್ರಥನನ್ನು ಹಿಡಿಯುವಿಕೆ.)

ವೈಶಂಪಾಯನಮುನೀಂದ್ರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಆ ಬಳಿಕ ಸಿಂಧುದೇಶಾಧಿಪತಿಯಾದ ಜಯದ್ರಥನು ತನ್ನ ಸೈನಿಕರನ್ನು ನೋಡಿ "ಎಲೈ ವೀರರೆ, ನೀವೆಲ್ಲರೂ ಜಾಗ್ರತೆಯಾಗಿ ಯುದ್ಧಸನದ್ಧರಾಗಿ ನಿಲ್ಲತಕ್ಕದ್ದು. ಶತ್ರುಗಳನ್ನು ಹೊಡೆದು ಅವರನ್ನು ಓಡಿಸಿಬಿಡತಕ್ಕದ್ದು" ಎಂದು ತನ್ನ ಕಡೆಯಲ್ಲಿದ್ದ ಸಾಮಂತರಾಜರಿಗೆ ಆಜ್ಞೆಯನ್ನು ಕೊಟ್ಟನು. ಬಳಿಕ ಯುದ್ಧಕ್ಕೆ ಉಪಕ್ರಮವಾಗಿ ಆ ಸೈನ್ಯದಲ್ಲಿ ಮಹತ್ತಾದ ಕೋಲಾಹಲವುಂಟಾಯಿತು. ಆಗ ಶಿಬಿ, ಸಾವೀರ, ಸಿಂಧುದೇಶಾಧಿಪತಿಗಳಾದ ಅರಸುಗಳು ಪುರುಷಶ್ರೇಷ್ಠರಾಗಿಯೂ ಹುಲಿಗಳಂತೆ ಬಲಶಾಲಿಗಳಾಗಿಯೂ ಇರುವ ಪಾಂಡವರು ತಮ್ಮ ಸೈನ್ಯಕ್ಕೆ ನುಗ್ಗಿದ್ದನ್ನು ನೋಡಿ ಚಿಂತಾಕ್ರಾಂತರಾದರು. ಆ ಸಮಯದಲ್ಲಿ ಭೀಮಸೇನನು ಕಬ್ಬಿಣದ ಗದೆಯನ್ನು ಕಯ್ಯಲ್ಲಿ ಹಿಡಿದು ಮೃತ್ಯುವಿಗೆ ಅಧೀನನಾಗಿರುವ ಸೈಂಧವನನ್ನು ಅಟ್ಟಿಕೊಂಡು ಹೋಗುತ್ತಿರಲು; ಅದನ್ನು ನೋಡಿ ಕೋಟಿಕಾಸ್ಯನು ಅನೇಕ ರಥಿಕರಿಂದೊಡಗೂಡಿ ಭೀಮಸೇನನನ್ನು ಅಟ್ಟಿಕೊಂಡು, ಶಕ್ತಿ ತೋಮರ ನಾರಾಚ ಮೊದಲಾದ ಆಯುಧಗಳಿಂದ ಆತನನ್ನು ಪೆಟ್ಟಿಕ್ಕಿದನು. ಅದಕ್ಕೆ ಹೆದರದೆ ಭೀಮಸೇನನು ಮಾವುತರಿಂದೊಡಗೂಡಿದ ಹದಿನಾಲ್ಕು ಆನೆಗಳನ್ನೂ ಅನೇಕಮಂದಿ ಪದಾತಿಗಳನ್ನೂ ತನ್ನ ಗದೆಯಿಂದ ಬಡಿದುಹಾಕಿದನು. ಆಗ ಅರ್ಜುನನು ಪರ್ವತದೇಶವಾಸಿಗಳಾದ ಐನೂರುಮಂದಿ ಮಹಾರಥಿಕರನ್ನು ಸೇನಾಗ್ರಭಾಗದಲ್ಲಿ ಸಂಹರಿಸಿ, ಸಾವೀರದೇಶಾಧಿಪತಿಯ ಸಮೀಪಕ್ಕೆ ಹೋಗಿ, ಅಲ್ಲಿ ನೂರುಮಂದಿ ಮಹಾರಥಿಕರನ್ನು ಸಂಹಾರಮಾಡಿದನು. ಆ ವೇಳೆಯಲ್ಲಿ ನಕುಲನು ಒರೆಯಿಂದ ಕತ್ತಿಯನ್ನು ಹಿರಿದುಕೊಂಡು ರಥದಿಂದ ಕೆಳಕ್ಕಿಳಿದು, ಸಾವೀರದೇಶಾಧಿಪತಿಯ ರಥರಕ್ಷಕರ ಶಿರಸ್ಸುಗಳನ್ನು ಕತ್ತರಿಸಿ ಕೆಳಕ್ಕೆ ಕೆಡಹಿದನು. ಸಹದೇವನು ತನ್ನ ಧನುಸ್ಸಿನಲ್ಲಿ ಅನೇಕ ನಾರಾಚಗಳನ್ನು ಸಂಧಾನಮಾಡಿ, ಆನೆಗಳಮೇಲೆ ಕುಳಿತು ಯುದ್ಧಮಾಡತಕ್ಕ ಅನೇಕಮಂದಿ ಶೂರರನ್ನು ಗಿಡಗಳಮೇಲೆ ಇರುವ ನವಿಲುಗಳನ್ನು ಹೊಡೆದು ಕೆಳಕ್ಕೆ ಕೆಡಹುವಂತೆ ಸಂಹರಿಸಿ ಕೆಳಕ್ಕೆ ಕೆಡಹಿದನು. ಬಳಿಕ ತ್ರಿಗರ್ತದೇಶಾಧಿಪತಿಯು ತನ್ನ ರಥದಿಂದ ಕೆಳಕ್ಕಿಳಿದು ಗದಾಯುಧದಿಂದ ಧರ್ಮರಾಯನ ರಥಾಶ್ವಗಳನ್ನು ಸಂಹರಿಸಿದನು. ಆಗ ಧರ್ಮರಾಯನು ತನ್ನ ರಥದ ಸಮೀಪದಲ್ಲಿ ಪದಾತಿಯಾಗಿದ್ದ ಆತನನ್ನು ಅರ್ಧಚಂದ್ರಾಕಾರವಾದ ಬಾಣದಿಂದ ಸಂಹರಿಸಿಬಿಟ್ಟನು. ತ್ರಿಗರ್ತನು ಆ ಬಾಣದಿಂದ ಸೀಳಹೋದ ಎದೆಯುಳ್ಳವನಾಗಿ, ರಕ್ತವನ್ನು ಕಾರಿ, ಬುಡಸಹಿತವಾಗಿ ಮರವು ಉರುಳಿಕೊಳ್ಳುವಂತೆ ಕೆಳಕ್ಕೆ ಬಿದ್ದನು. ಬಳಿಕ ಧರ್ಮರಾಯನು ತನ್ನ ಸಾರಥಿಯಾದ ಇಂದ್ರಸೇನನೊಡನೆ ಸಹದೇವನ ರಥದಮೇಲೆ ಕುಳಿತುಕೊಂಡನು. ಆ ಬಳಿಕ ಕ್ಷೇಮಂಕರ ಮಹಾಮುಖರೆಂಬ ಸಾಮಂತರಾಜರು ನಕುಲನಮೇಲೆ ತೀಕ್ಷ್ಣವಾದ ಬಾಣವೃಷ್ಟಿಯನ್ನು ಕರೆದು, ತಿರುಗಿ ಮೇಘದಂತೆ ತೋಮರಗಳ ಮಳೆಯನ್ನು ಕರೆದರು. ಆಗ ನಕುಲನು ಅವರಿಬ್ಬರನ್ನೂ ಒಂದೊಂದು ಬಾಣದಿಂದ ಪೆಟ್ಟಿಕ್ಕಿದನು. ಆ ಸಮಯದಲ್ಲಿ ತ್ರಿಗರ್ತದೇಶಾಧಿಪತಿಯಾದ ಸುರಥನು ತನ್ನ ಆನೆಯಿಂದ ನಕುಲನ ರಥದ ಮೂಕಿಯನ್ನು ಹಿಡಿಸಿ ಆ ರಥವನ್ನು ಮೇಲಕ್ಕೆ ಹಾರಿಸಲು, ಅಷ್ಟರಲ್ಲೇ ಜಾಗರೂಕನಾದ ನಕುಲನು ಹೆದರದೆ ಕತ್ತಿ ಗುರಾಣಿಗಳನ್ನು ಹಿಡಿದು ರಥದಿಂದ ಕೆಳಕ್ಕೆ ಹಾರಿ, ಪರ್ವತದಂತೆ ಚಲಿಸದೆ ಯುದ್ಧರಂಗದಲ್ಲಿ ನಿಂತನು. ಬಳಿಕ ಸುರಥನು ನಕುಲನನ್ನು ಸಂಹರಿಸಬೇಕೆಂದು ಆತನಮೇಲೆ ತನ್ನ ಆನೆಯನ್ನು ಬಿಟ್ಟನು. ಅದನ್ನು ನೋಡಿ ನಕುಲನು ಕ್ರೋಧಾವೇಶದಿಂದ ಬರತಕ್ಕ ಆ ಆನೆಯ ಕೊಂಬುಗಳ ಮೂಲಭಾಗಗಳನ್ನು ಕತ್ತಿಯಿಂದ ಕತ್ತರಿಸಿದನು. ಆ ಪೆಟ್ಟಿನಿಂದ ವ್ಯಥೆಪಟ್ಟು ಆ ಆನೆಯು ಗಟ್ಟಿಯಾಗಿ ಕೂಗಿಕೊಂಡು, ತಲೆಯನ್ನು ಬಗ್ಗಿಸಿಕೊಂಡು, ತನ್ನಮೇಲೆ ಕೂತಿದ್ದ ಮಾವುತನನ್ನು ಕೆಡಹಿ, ತಾನೂ ನೆಲದಮೇಲೆ ಬಿದ್ದಿತು. ಇಂಥ ಆಶ್ಚರ್ಯಕರವಾದ ಯುದ್ಧವನ್ನು ಮಾಡಿ ನಕುಲನು ಭೀಮಸೇನನ ರಥವನ್ನು ಸೇರಿದನು. ಆಗ ಭೀಮಸೇನನು ತನ್ನಮೇಲೆ ಬಿದ್ದು ಬರತಕ್ಕ ಕೋಟಿಕಾಸ್ಯನ ಸಾರಥಿಯ ಶಿರಸ್ಸನ್ನು ಆ ಕೋಟಿಕಾಸ್ಯನಿಗೆ ತಿಳಿಯದಂತೆ ಬಾಣದಿಂದ ಕತ್ತರಿಸಿಬಿಟ್ಟನು. ಬಳಿಕ ಆತನ ರಥಾಶ್ವಗಳು ಆ ರಥವನ್ನು ದಿಕ್ಕುದಿಕ್ಕಿಗೆ ಎಳೆದುಕೊಂಡು ಹೋದವು. ಆಗ ವಿಮುಖನಾಗಿ ಹೋಗತಕ್ಕ ಆ ಕೋಟಿಕಾಸ್ಯನನ್ನು ಭೀಮಸೇನನು ಅಂಗೈಯಿಂದಲೂ ಪ್ರಾಸಾಯುಧದಿಂದಲೂ ಪೆಟ್ಟಿಕ್ಕಿದನು. ಆಗಲೇ

ಅರ್ಜುನನು ಸಾವಿರದೇಶಾಧಿಪತಿಗಳಾದ ಹನ್ನೆರಡುಮಂದಿ ರಥಿಕರ ಧನುಸ್ಸುಗಳನ್ನು ಭಲ್ಲಾಯುಧದಿಂದ ಕತ್ತರಿಸಿ, ಹಾಗೆಯೇ ಅವರ ಶಿರಸ್ಸುಗಳನ್ನೂ ಕೆಡಹಿ, ಇನ್ನೂ ಶಿಬಿ ಇಕ್ಷ್ವಾಕು ತ್ರಿಗರ್ತ ಮೊದಲಾದ ಅನೇಕಮಂದಿ ಸಾಮಂತ ರಾಜರನ್ನೂ ಇನ್ನೂ ತನ್ನೆದುರಿಗೆ ಬಂದವರೆಲ್ಲರನ್ನೂ ಅನೇಕಬಾಣಗಳಿಂದ ಪೆಟ್ಟಿಕ್ಕಿ, ಅವರ ಧ್ವಜಗಳನ್ನೂ ಪತಾಕೆಗಳನ್ನೂ ಆನೆಗಳನ್ನೂ ರಥಗಳನ್ನೂ ಕುದುರೆಗಳನ್ನೂ ಸಹ ಅನೇಕಬಾಣಗಳಿಂದ ತುಂಡುತುಂಡುಮಾಡಿ ಭೂಮಿಯಮೇಲೆ ಹರಡಿ, ಅವರ ನೆತ್ತರು ನೆಲದಮೇಲೆ ಹರಿಯುವಂತೆ ಮಾಡಿ, ಅವರ ಶರೀರಗಳಿಂದ ನಾಯಿ ನರಿ ಹದ್ದು ಕಾಗೆ ಮೊದಲಾದ ಪ್ರಾಣಿಗಳು ತೃಪ್ತಿಪಡುವಂತೆ ಮಾಡಿದನು. ಅದನ್ನು ನೋಡಿ ಸೈಂಧವನು ಭಯಪಟ್ಟು, ದ್ರೌಪದಿಯನ್ನು ರಥದಿಂದ ಕೆಳಕ್ಕಿಳಿಸಿ, ಜೀವದಮೇಲಣ ಆಶೆಯಿಂದ ಆ ವನದಲ್ಲಿ ಓಡಿಹೋದನು. ಆಗ ಧೌಮ್ಯಾಚಾರ್ಯರು ದ್ರೌಪದಿಯನ್ನು ಕರೆದುಕೊಂಡು ಬರುತ್ತಿರಲು, ಧರ್ಮರಾಯನು ದ್ರೌಪದಿಯನ್ನು ನೋಡಿ ಸಹದೇವನನ್ನು ಕರೆದು ಆಕೆಯನ್ನು ರಥದಮೇಲೆ ಕೂರಿಸೆಂದು ಆಜ್ಞಾಪಿಸಿದನು. ಹಾಗೆಯೇ ಸಹದೇವನು ಆಕೆಯನ್ನು ರಥದಮೇಲೆ ಕೂರಿಸಿದನು. ಬಳಿಕ ಭೀಮಸೇನನು ಜಯದ್ರಥನೂ ಆತನ ಸೈನ್ಯವೂ ಓಡಿಹೋಗುವದನ್ನು ನೋಡಿ, ತನ್ನ ಹೆಸರನ್ನು ಪ್ರಕಟಮಾಡುತ್ತ, ನಾರಾಚಗಳಿಂದ ಆ ಸೈನಿಕರನ್ನು ಧ್ವಂಸಮಾಡುತ್ತಿರಲು, ಅದನ್ನು ಕಂಡು ಅರ್ಜುನನು "ಎಲೈ ಭೀಮಸೇನನೆ, ಯಾವನ ಅಪರಾಧದಿಂದ ನಮಗೆ ಇಂಥ ಕ್ಲೇಶವುಂಟಾಯಿತೋ ಅಂಥಾ ದುರಾತ್ಮನಾದ ಸೈಂಧವನು ಈ ಸೈನ್ಯದಲ್ಲಿ ಕಾಣಬರುವದಿಲ್ಲ. ಈ ಸೈನಿಕರನ್ನು ಯಾತಕ್ಕೆ ಸುಮ್ಮನೆ ಸಂಹಾರ ಮಾಡುವೆ? ಇದರಿಂದ ನಮಗೇನುಪ್ರಯೋಜನ? ಈ ಕೆಲಸವನ್ನು ಬಿಟ್ಟು ಸೈಂಧವನನ್ನು ಹುಡುಕು ನಡೆ" ಎಂದನು. ಆಗ ವಾಗ್ಮಿಯಾದ ಭೀಮಸೇನನು ಧರ್ಮರಾಯನನ್ನು ನೋಡಿ "ಎಲೈ ಅಗ್ರಜನೆ, ಈ ಸೈನ್ಯದಲ್ಲಿ ಶ್ರೇಷ್ಠರಾದ ಅರಸುಗಳೂ ಅನೇಕಜನ ವೀರಭಟರೂ ಹತರಾಗಿ ಉಳಿದವರೆಲ್ಲರೂ ಓಡಿಹೋದರು. ನಕುಲಸಹದೇವರಿಂದಲೂ ಮಹಾತ್ಮರಾದ ಧೌಮ್ಯಾಚಾರ್ಯರಿಂದಲೂ ಕೂಡಿ ದ್ರೌಪದಿಯನ್ನು ಕರೆದುಕೊಂಡು ನೀನು ಆಶ್ರಮಕ್ಕೆ ಹೋಗಿ ಆಕೆಯನ್ನು ಸಂತೈಸು. ಪಾಪಾತ್ಮನಾದ ಸೈಂಧವನು ಪಾತಾಳಲೋಕಕ್ಕೆ ಹೋದರೂ, ಅಥವಾ ಆತನಿಗೆ ಇಂದ್ರನೇ ಸಹಾಯವಾದರೂ, ಆತನನ್ನು ಜೀವಸಹಿತವಾಗಿ ನಾನು ಬಿಡತಕ್ಕವನಲ್ಲ" ಎನಲು, ಧರ್ಮರಾಯನು "ಎಲೈ ಭೀಮಸೇನನೆ, ಆ ಸೈಂಧವನು ದುರಾತ್ಮನಾದರೂ ಆತನನ್ನು ನೀನು ಸಂಹರಿಸಬೇಡ. ಯಶಸ್ವಿಯಾದ ಗಾಂಧಾರಿಯನ್ನೂ ದುಶ್ಯಳೆಯನ್ನೂ ಸ್ಮರಿಸು" ಎಂದು ನುಡಿದನು. ಆ ಮಾತನ್ನು ಕೇಳಿ ಪ್ರಾಜ್ಞಳಾದ ದ್ರೌಪದಿಯೂ ಕೋಪೋದ್ದೀಪಿತಳಾಗಿ, ಭೀಮಾರ್ಜುನರನ್ನು ನೋಡಿ "ನೀವು ನನಗೆ ಪ್ರಿಯವನ್ನು ಮಾಡತಕ್ಕವರಾದರೆ, ಪಾಪಾತ್ಮನೂ ಕುಲಾಧಮನೂ ಆದ ಸೈಂಧವನನ್ನು ಸಂಹಾರಮಾಡದೆ ಬಿಡಬೇಡಿ. ಪತ್ನಿಯನ್ನು ಅಪಹಾರಮಾಡಿದವನೂ ರಾಜ್ಯವನ್ನು ಅಪಹಾರಮಾಡಿದವನೂ ಯುದ್ಧದಲ್ಲಿ ಎಷ್ಟುಬೇಡಿಕೊಂಡರೂ, ಅಂಥವರನ್ನು ಸಂಹರಿಸದೆ ಬಿಡಬಾರದೆಂದು ನೀತಿಯಿರುವದು" ಎಂದನು; ಆ ಮಾತನ್ನು ಕೇಳಿ ಭೀಮಾರ್ಜುನರು ಸೈಂಧವನ ದಿಕ್ಕಿಗೆ ತಿರುಗಿ ಹೊರಡಲು; ಧರ್ಮರಾಯನು ಧೌಮ್ಯಾಚಾರ್ಯರೊಡಗೂಡಿ ದ್ರೌಪದಿಯನ್ನು ಕರೆದುಕೊಂಡು, ಅಲ್ಲಲ್ಲಿ ವ್ಯಾಕುಲಚಿತ್ತರಾಗಿ ದ್ರೌಪದಿಯನ್ನು ಕುರಿತು ವ್ಯಸನಪಡುತ್ತಿದ್ದ ಮಾರ್ಕಂಡೇಯ ಮೊದಲಾದ ಋಷಿಗಳಿಂದ ಕೂಡಿದ ತಮ್ಮ ಆಶ್ರಮಸ್ಥಾನಕ್ಕೆ ಬಂದು ಸೇರಿದನು. ಶತ್ರುಗಳ ಕೈಗೆ ಸಿಕ್ಕಿ ಬದುಕಿಬಂದ ಧರ್ಮರಾಯನನ್ನೂ ಸೈಂಧವನು ಅಪಹರಿಸಿಕೊಂಡು ಹೋಗಿದ್ದ ದ್ರೌಪದಿಯನ್ನೂ ಸಹ ನೋಡಿ ಆ ಋಷಿಗಳು ಸಂತೋಷಪಟ್ಟರು. ಆಗ ಧರ್ಮರಾಯನು ಆ ಋಷಿಗಳೊಡನೆಯೂ ನಕುಲಸಹದೇವರೊಡನೆಯೂ ಅಲ್ಲಿ ಕೂತುಕೊಂಡನು.

ಇತ್ತಲು ಭೀಮಾರ್ಜುನರು ಸೈಂಧವನು ಬಂದು ಹರಿದಾರಿದೂರ ಹೋಗಿರುವದನ್ನು ತಿಳಿದು ಜಾಗ್ರತೆಯಾಗಿ ಆ ಕಡೆಗೆ ಹೊರಟರು. ಬಳಿಕ ದಿವ್ಯಾಸ್ತ್ರಸಂಪನ್ನನಾದ ಅರ್ಜುನನು ಬಂದು ಹರಿದಾರಿಯ ಆಚೆ ಸೈಂಧವನ ರಥಾಶ್ವಗಳ ಮೇಲೆ ಬೀಳುವಂತೆ ತೀಕ್ಷ್ಣವಾದ ಬಾಣಗಳನ್ನು ಪ್ರಯೋಗಿಸಿದನು. ಆ ಬಾಣಗಳಿಂದ ಪೆಟ್ಟುತಿಂದು ಸೈಂಧವನ ರಥಾಶ್ವಗಳು ನಾಶವಾಗಲು, ಆ ಸೈಂಧವನು ಭಯಪಟ್ಟು ದುಃಖಿಸುತ್ತ ಅತ್ಯದ್ಭುತವಾದ ಅರ್ಜುನನ ಪರಾಕ್ರಮವನ್ನು ನೋಡಿ ರಥದಿಂದ ಕೆಳಗಿಳಿದು ಓಡಿಹೋಗುವದಕ್ಕೆ ಯತ್ನಿಸಿದನು. ಅದನ್ನು ನೋಡಿ, ಅರ್ಜುನನು

"ಎಲಾ ಸೈಂಧವನೆ, ಇಂಥ ಪರಾಕ್ರಮದಿಂದ ನೀನು ಪರಸ್ತ್ರೀಯನ್ನು ಅಪೇಕ್ಷಿಸಿದೆಯಾ? ಹೀಗೆ ಓಡಿಹೋಗುವದು ಸರಿಯಾದದ್ದಲ್ಲ. ಹಿಂತಿರುಗು. ನಿನ್ನ ಪರಿವಾರಗಳನ್ನು ಬಿಟ್ಟು ಹೀಗೆ ನೀನು ಶತ್ರುಗಳ ಮಧ್ಯದಲ್ಲಿ ಓಡಿಹೋಗ ಬಹುದೆ" ಎನ್ನುತ್ತಿರಲು, ಆ ಮಾತನ್ನು ಕಿವಿಯಮೇಲೆ ಹಾಕಿಕೊಳ್ಳದೆ ಸೈಂಧವನು ಓಡಿಹೋಗುತ್ತಿದ್ದನು. ಅದನ್ನು ನೋಡಿ ಭೀಮಸೇನನು "ಎಲಾಎಲಾ ಪಾಪಾತ್ಮನೆ, ನಿಲ್ಲುನಿಲ್ಲು" ಎಂದು ವೀರವಾದವನ್ನು ಮಾಡುತ್ತ ಅವನನ್ನು ಸಂಹರಿಸುವದಕ್ಕೆ ಅಟ್ಟಿಕೊಂಡು ಹೋಗಲು, ಅದನ್ನು ನೋಡಿ ದಯಾವಂತನಾದ ಅರ್ಜುನನು ಆತನನ್ನು ಕುರಿತು "ಎಲೈ ಭೀಮಸೇನನೆ, ಜಯದ್ರಥನನ್ನು ಸಂಹರಿಸಬೇಡ ಸಂಹರಿಸಬೇಡ" ಎಂದು ತಡೆದನು.

## ೨೭೧ನೇ ಅಧ್ಯಾಯ.—ಜಯದ್ರಥನು ಮುಕ್ತನಾಗಿ ಮಹಾದೇವನಿಂದ ವರವನ್ನು ಪಡೆಯುವಿಕೆ.

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ನೋಡಿ—ಎಲೈ ಜನಮೇಜಯರಾಯನೇ ಕೇಳು, ಆ ಸಮಯದಲ್ಲಿ ಪಾಪಾತ್ಮನಾದ ಜಯದ್ರಥನು ಅಣ್ಣತಮ್ಮಂದಿರಾದ ಭೀಮಾರ್ಜುನರು ಆಯುಧಪಾಣಿಗಳಾಗಿ ಬರುವದನ್ನು ನೋಡಿ, ತನ್ನ ಪ್ರಾಣವನ್ನು ಉಳಿಸಿಕೊಳ್ಳಬೇಕೆಂದು ಭಯದಿಂದ ದುಃಖಿಸುತ್ತ ಓಡಿಹೋದನು. ಆಗ ಭೀಮಸೇನನು ರಥದಿಂದಿಳಿದು ಓಡಿಹೋಗುತ್ತಿದ್ದ ಜಯದ್ರಥನನ್ನು ಅಟ್ಟಿಕೊಂಡು ಹೋಗಿ, ಅವನ ಜುಟ್ಟನ್ನು ಹಿಡಿದು ಅವನನ್ನು ಭೂಮಿಯಮೇಲೆ ಕೆಡಹಿ ಹೊಸಕುತ್ತ, ಅವನ ಕಪೋಲಗಳಿಗೆ ಪೆಟ್ಟಿಕ್ಕಿದನು. ಆ ಪೆಟ್ಟಿನಿಂದ ಪೀಡಿತನಾದ ಜಯದ್ರಥನು ಪ್ರಲಾಪಿಸುತ್ತ, ಬದುಕಿಕೊಳ್ಳಬೇಕೆಂದು ಮೇಲಕ್ಕೆ ಏಳುವದಕ್ಕೆ ಯತ್ನಿಸುತ್ತಿರಲು; ಭೀಮಸೇನನು ತನ್ನ ಕಾಲಿನಿಂದ ಅವನ ತಲೆಯಮೇಲೆ ಒದ್ದು ಮಂಡಿಗಳದಲೂ ಮೊಳಕೈಗಳಿಂದಲೂ ಅವನನ್ನು ತಿವಿದು ಬಹಳವಾಗಿ ಬಾಧಿಸಿದನು. ಅದನ್ನು ಸೈರಿಸಲಾರದೆ ಜಯದ್ರಥನು ಮೂರ್ಛಿತನಾಗಿ ಬೀಳಲು, ಅದನ್ನು ನೋಡಿ ಅರ್ಜುನನು ಜಯದ್ರಥನ ಸಂಹಾರದಲ್ಲಿ ಉದ್ಯುಕ್ತನಾಗಿದ್ದ ಭೀಮಸೇನನನ್ನು ದುಶ್ಶಲೆಯ ನಿಮಿತ್ತವಾಗಿ ತಡೆದನು. ಆಗ ಭೀಮಸೇನನು "ಎಲೈ ಅರ್ಜುನನೆ, ಈ ಪಾಪಾತ್ಮನು ದ್ರೌಪದಿಗೆ ತುಂಬಾ ಕ್ಲೇಶವನ್ನುಂಟುಮಾಡಿರುವನಾದ್ದರಿಂದ ಇವನನ್ನು ಪ್ರಾಣಸಹಿತವಾಗಿ ಬಿಡಕೂಡದು. ಈಗ ನಾನೇನುಮಾಡಲಿ? ಧರ್ಮರಾಯನು ಯಾವಾಗಲೂ ದಯಾಶಾಲಿಯಾದವನು. ನೀನೂ ಬಾಲಬುದ್ಧಿಯಿಂದ ಅವನನ್ನು ಸಂಹರಿಸದಂತೆ ನನ್ನನ್ನು ತಡೆಯುತ್ತಿರುವೆ" ಎಂದು ಆ ಜಯದ್ರಥನ ಮಂಡೆಯಮೇಲೆ ಅರ್ಧಚಂದ್ರಬಾಣದಿಂದ ಐದು ಪಟ್ಟೆಗಳನ್ನು ತೆಗೆದನು. ಆಗ ಸೈಂಧವನು ಭೀಮಸೇನನಿಗೆ ಹೆದರಿಕೊಂಡು ಸುಮ್ಮನೆ ಇದ್ದನು. ಬಳಿಕ ಭೀಮಸೇನನು ಸೈಂಧವನನ್ನು ನೋಡಿ "ಎಲೈ ನರಾಧಮನೆ, ನೀನು ಬದುಕಬೇಕೆಂದು ಬಯಸಿದರೆ ನಾನು ಹೇಳುವ ಮಾತನ್ನು ಕೇಳು. ಅನೇಕ ಋಷಿಗಳ ಮಧ್ಯದಲ್ಲಿ ಕುಳಿತಿರುವ ಧರ್ಮರಾಯನ ಮುಂದೆ ನೀನು 'ನಾನು ನಿಮಗೆ ದಾಸನಾಗಿದ್ದೇನೆ' ಎಂದು ಹೇಳಬೇಕು. ಹಾಗಾದರೆ ನಿನ್ನನ್ನು ಜೀವಸಹಿತವಾಗಿ ಬಿಡುತ್ತೇನೆ. ಯುದ್ಧದಲ್ಲಿ ಜಿತನಾದವನು ಹೀಗೆ ಹೇಳತಕ್ಕದ್ದು ಸಂಪ್ರದಾಯವಾಗಿರುವದು" ಎಂದನು. ಅದಕ್ಕೆ ಜಯದ್ರಥನು ಹಾಗೆಯೇ ಆಗಲೆಂದು ಒಪ್ಪಿಕೊಂಡನು. ಬಳಿಕ ಭೀಮಸೇನನು ಅವನನ್ನು ಹಗ್ಗದಿಂದ ಕಟ್ಟಿ ರಥದಮೇಲೆ ಹಾಕಿಕೊಂಡು, ಅರ್ಜುನನೊಡನೆ ತಮ್ಮ ಆಶ್ರಮಕ್ಕೆ ಬಂದು, ನೆಲದಮೇಲೆ ಬಿದ್ದು ಧೂಳುಕವಿದುಕೊಂಡಿದ್ದ ಆತನನ್ನು ಧರ್ಮರಾಯನಿಗೆ ತೋರಿಸಿದನು. ಧರ್ಮರಾಯನು ಜಯದ್ರಥನನ್ನು ನೋಡಿ ನಕ್ಕು, "ಎಲೈ ಭೀಮಸೇನನೆ, ಇವನನ್ನು ಬಿಟ್ಟುಬಿಡು" ಎಂದನು. ಆ ಮಾತನ್ನು ಕೇಳಿ ಭೀಮಸೇನನು ಧರ್ಮರಾಯನನ್ನು ಕುರಿತು, "ಎಲೈ ಅಗ್ರಜನೆ, ಈ ಪಾಪಾತ್ಮನಾದ ಜಯದ್ರಥನು ಪಾಂಡವರಿಗೂ ದ್ರೌಪದಿಗೂ ದಾಸನಾಗಿರುವೆನೆಂದು ಹೇಳಿದರೆ ಇವನನ್ನು ಬಿಟ್ಟುಬಿಡುತ್ತೇನೆ" ಎಂದು ನುಡಿಯಲು, ಧರ್ಮರಾಯನು "ಎಲೈ ಭೀಮಸೇನನೆ, ನಾವು ನಿನಗೆ ಮಾನ್ಯರಾಗಿದ್ದ ಪಕ್ಷದಲ್ಲಿ ಅಧಮನಾದ ಈ ಜಯದ್ರಥನನ್ನು ಬಿಟ್ಟುಬಿಡು" ಎಂದನು. ಆಗ ದ್ರೌಪದಿಯು ಧರ್ಮರಾಯನನ್ನು ನೋಡಿ ಭೀಮನನ್ನು ಕುರಿತು "ಎಲೈ ಭೀಮಸೇನನೆ, ಮಹಾರಾಜನಾದ ಧರ್ಮರಾಯನಿಗೆ ಇವನು ದಾಸನಾಗಿರುವನು. ಇವನಿಗೆ ಗುರುತಾಗಿ ಇವನ ತಲೆಯಮೇಲೆ ಐದು ಪಟ್ಟೆಗಳನ್ನು ಕೂಡ ತೆಗೆದಿರುವೆ. ಇನ್ನು ಇವನನ್ನು ಬಿಟ್ಟು ಬಿಡಬಹುದು"

ಎನಲು, ಭೀಮಸೇನನು ಹಾಗೆಯೇ ಆಗಲೆಂದು ಸೈಂಧವನನ್ನು ಬಿಟ್ಟುಬಿಟ್ಟನು. ಭೀಮಸೇನನ ಕಯ್ಯಿಂದ ಬಿಡಿಸಿಕೊಂಡು ಜಯದ್ರಥನು ಧರ್ಮರಾಯನ ಸನ್ನಿಧಿಗೆ ಬಂದು ಆತನಿಗೂ ಅಲ್ಲಿದ್ದ ಋಷಿಗಳಿಗೂ ವಂದನೆಯನ್ನು ಮಾಡಿದನು. ಆಗ ದಯಾಶಾಲಿಯಾದ ಧರ್ಮರಾಯನು ಸೈಂಧವನನ್ನು ನೋಡಿ "ಎಲೈ ಸೈಂಧವನೆ, ನೀನು ಸ್ತ್ರೀಕಾಮುಕನಾಗಿ ಕ್ಷುದ್ರಜನರನ್ನು ಸಹಾಯಮಾಡಿಕೊಂಡು ಇಂಥ ಕಾರ್ಯವನ್ನು ಮಾಡಬಹುದೆ? ಇದು ಬಹಳ ನಿಂದ್ಯವಾದದ್ದು. ಪುರುಷಾಧಮನಾದ ನೀನು ಹೊರತು ಮತ್ತೊಬ್ಬನು ಇಂಥ ಕಾರ್ಯವನ್ನು ಮಾಡಲಾರನು. ಮುಂದೆ ಇಂಥ ಕಾರ್ಯವನ್ನೇನಾದರೂ ಮಾಡೀಯೆ? ನೀನು ನಮಗೆ ದಾಸನಲ್ಲ ಹೋಗು, ಬಿಟ್ಟಿರುವೆನು. ಇಂಥ ಅಕಾರ್ಯವನ್ನು ಮಾಡಿ ನೀನು ಶಕ್ತಿಹೀನನಾಗಿರುವೆಯೆಂದು ತಿಳಿದು ಧರ್ಮರಾಯನು ನಿನ್ನಲ್ಲಿ ಕೃಪೆಯನ್ನು ಮಾಡಿರುವನು. ಇನ್ನುಮೇಲೆ ನಿನಗೆ ಧರ್ಮದಲ್ಲೇ ಬುದ್ಧಿಯಿರಲಿ. ಅಧರ್ಮದಲ್ಲಿ ಮನಸ್ಸನ್ನು ಮಾಡಬೇಡ" ಎನಲು, ಜಯದ್ರಥನು ಲಜ್ಜೆಯಿಂದ ತಲೆಯನ್ನು ತಗ್ಗಿಸಿಕೊಂಡು ಯಾವ ಮಾತನ್ನೂ ಆಡದೆ, ಹತಾವಶಿಷ್ಟವಾದ ಸೈನ್ಯದೊಡನೆ ಗಂಗಾದ್ವಾರಕ್ಕೆ ಹೋಗಿ, ಶರಣಾಗತವತ್ಸಲನಾದ ಉಮಾಪತಿಯಾದ ಮಹಾದೇವನನ್ನು ಕುರಿತು ಬಲಿಕರ್ಮಗಳನ್ನು ಮಾಡುತ್ತ ತಪಸ್ಸನ್ನು ಮಾಡಿದನು. ಅದರಿಂದ ಮಹಾದೇವನು ಸಂತುಷ್ಟನಾಗಿ "ಎಲೈ ಜಯದ್ರಥನೆ, ನಿನ್ನ ತಪಸ್ಸಿನಿಂದ ನಾನು ಸಂತುಷ್ಟನಾಗಿರುವೆ. ನೀನು ವರವನ್ನು ಬೇಡು" ಎಂದನು. ಅದಕ್ಕೆ ಜಯದ್ರಥನು "ಎಲೈ ಮಹಾದೇವನೆ, ನನ್ನ ತಪಸ್ಸಿನಿಂದ ನೀನು ಸಂತುಷ್ಟನಾಗಿದ್ದ ಪಕ್ಷದಲ್ಲಿ, ಯುದ್ಧದಲ್ಲಿ ನಾನು ಪಾಂಡವರನ್ನು ಜಯಿಸುವಂತೆ ನನಗೆ ವರವನ್ನು ಕೊಡಬೇಕು" ಎಂದು ಬೇಡಿದನು. ಆ ಮಾತನ್ನು ಕೇಳಿ ಮಹಾದೇವನು "ಎಲೈ ಸೈಂಧವನೆ, ನಾರಾಯಣನ ಸಹಾಯದಿಂದ ಬದರಿಕಾಶ್ರಮದಲ್ಲಿ ತಪಸ್ಸುಮಾಡುತ್ತಿದ್ದ ನರನೇ ಮಹಾಬಾಹುವಾದ ಅರ್ಜುನನಾಗಿ ಅವತರಿಸಿರುವನು. ಆತನಿಗೋಸ್ಕರ ನಾನು ದೇವತೆಗಳಿಂದಲೂ ಪಡೆಯಲಶಕ್ಯವಾದ ಪಾಶುಪತಾಸ್ತ್ರವನ್ನು ಕೊಟ್ಟಿರುವೆನು. ಇಂದ್ರಾದಿದೇವತೆಗಳು ವಜ್ರಾದಿ ಮಹಾಸ್ತ್ರಗಳನ್ನು ಆತನಿಗೆ ಉಪದೇಶಮಾಡಿ ಕೊಟ್ಟಿರುವರು. ಅಂಥ ಅರ್ಜುನ ಹೊರತು ಉಳಿದ ಅವಧ್ಯರಾದ ಪಾಂಡವರನ್ನು ನೀನು ಯುದ್ಧದಲ್ಲಿ ಬಂದು ದಿವಸ ತಡೆಯುವೆ" ಎಂದು ವರವನ್ನು ಕೊಟ್ಟು, "ಎಲೈ ಜಯದ್ರಥನೆ, ಅರ್ಜುನನಿಗೆ ಸಹಾಯನಾಗಿರುವ ಮಹಾವಿಷ್ಣುವು ದೇವತೆಗಳಿಗೆಲ್ಲಾ ಗುರುವಾಗಿಯೂ ಸಮರ್ಥನಾಗಿಯೂ ಪ್ರಧಾನ ಪುರುಷನಾಗಿಯೂ ಅಪರಿಚ್ಛಿನ್ನನಾಗಿಯೂ ವಿಶ್ವವ್ಯಾಪಕನಾಗಿ ಜಗತ್ಕಾರಣನಾಗಿಯೂ ಇರುವನು. ಆತನು ಪ್ರಳಯಕಾಲವು ಪ್ರಾಪ್ತವಾಗಲು ಕಾಲಾಗ್ನಿರೂಪನಾಗಿ ಪರ್ವತಗಳಿಂದಲೂ ವನಗಳಿಂದಲೂ ದ್ವೀಪಗಳಿಂದಲೂ ಕೂಡಿರುವ ಅನೇಕ ಪ್ರಾಣಿಮಯವಾದ ಈ ಭೂಲೋಕವನ್ನೂ ಪಾತಾಳಲೋಕವನ್ನೂ ಸಹ ನಿಮಿಷಾರ್ಧದಲ್ಲಿ ಭಸ್ಮಮಾಡಿಬಿಡುವನು. ಬಳಿಕ ಅಂತರಿಕ್ಷದಲ್ಲಿ ನಾನಾವಿಧವಾದ ನೀಲಮೇಘಗಳು ಗುಡುಗು, ಸಿಡಿಲು, ಮಿಂಚುಗಳಿಂದ ಕೂಡಿ ಗುಂಪುಗುಂಪಾಗಿ ದಿಕ್ಕುದಿಕ್ಕುಗಳಲ್ಲಿ ತುಂಬಿಕೊಂಡು ರಥದ ಗುಂಬದಗಾತ್ರ ಉದಕಧಾರೆಗಳಿಂದ ಜಗತ್ತನ್ನೆಲ್ಲಾ ತುಂಬಿ ಚರಾಚರಾತ್ಮಕವಾದ ಪ್ರಪಂಚವು ಏಕಾರ್ಣವವಾಗಿ ಚಂದ್ರಸೂರ್ಯಗ್ರಹನಕ್ಷತ್ರಗಳು ನಷ್ಟವಾಗಿ ಹೋಗಲು ; ನಾಲ್ಕು ಯುಗಗಳೂ ಸಾವಿರಆವರ್ತಿ ಮರಳಲು ; ಭೂಮಿಯು ನೀರಿನಲ್ಲಿ ಮುಳುಗಿಹೋಗಲು ; ಬಳಿಕ ಆ ಮಹಾವಿಷ್ಣುವು ಆ ಜಲಾರ್ಣವದಲ್ಲಿ ಸಾವಿರ ಕಣ್ಣುಗಳಿಂದಲೂ ಸಾವಿರಕಾಲುಗಳಿಂದಲೂ ಸಾವಿರ ತಲೆಗಳಿಂದಲೂ ಕೂಡಿ, ಸಕಲರ ಇಂದ್ರಿಯಗಳಿಗೂ ಅಗೋಚರನಾಗಿ, ಸಾವಿರ ಹೆಡೆಯುಳ್ಳ ಆದಿಶೇಷನ ಶರೀರವೆಂಬ ಹಾಸಿಗೆಯು ಏಕಕಾಲದಲ್ಲಿ ಉದಯಿಸಿದ ಬಂದು ಸಾವಿರ ಸೂರ್ಯರಂತೆಯೂ ಗಿರಿಮಲ್ಲಿಗೆ ಹೂವು, ಚಂದ್ರ, ಗೋಕ್ಷೀರ, ತಾವರೆಯೆಳೆ, ಬಿಳಿದಾವರೇ ಹೂವು, ಇವುಗಳಿಗೆ ಸಮಾನವಾಗಿ ಪ್ರಕಾಶಿಸುತ್ತಿರಲು, ಅದರ ಮೇಲೆ ಶಯನಮಾಡಿ ಅಂಧಕಾರದಿಂದ ವ್ಯಾಪ್ತವಾದ ಆ ರಾತ್ರಿಯನ್ನು ಕಳೆದು, ಸತ್ವಗುಣಾಧಿಕ್ಯದಿಂದ ಎಚ್ಚತ್ತು ಶೂನ್ಯವಾದ ಈ ಲೋಕವನ್ನು ನೋಡುವನು. ಎಲೈ ಜಯದ್ರಥನೆ, ಆ ಮಹಾವಿಷ್ಣುವಿನಿಂದ ಉತ್ಪನ್ನವಾದ ಉದಕವು ಆತನಿಗೆ ಶರೀರವಾಗಿ ನಾರ ಎಂಬ ಸಂಜ್ಞೆಯುಳ್ಳದ್ದಾಗಿರುವದರಿಂದ ಆತನಿಗೆ ನಿವಾಸಸ್ಥಾನವಾಗಿರುವದು. ಇದರಿಂದ ಆತನನ್ನು ನಾರಾಯಣನೆಂದು ಹೇಳುವರು. ಆ ನಾರಾಯಣನು ಯಾವಾಗ ಜಗತ್ತನ್ನು ಸೃಷ್ಟಿಸಬೇಕೆಂದು ಅಪೇಕ್ಷಿಸುವನೋ ಅದೇ ಕಾಲದಲ್ಲಿ ಆತನ ನಾಭಿಯಲ್ಲಿ ಬಂದು ಪದ್ಮವು ಉತ್ಪನ್ನವಾಗುವದು. ಅದರಿಂದ ಚತುರ್ಮುಖಬ್ರಹ್ಮನು ಹುಟ್ಟಿ ಆ ಪದ್ಮದಲ್ಲಿದ್ದುಕೊಂಡು, ಪ್ರಪಂಚವು ಶೂನ್ಯವಾ

ಗಿರುವದನ್ನು ನೋಡಿ ಮರೀಚಿ ಅತ್ರಿ ಅಂಗಿರಸ್ಸು ಪುಲಸ್ತ್ಯ ಪುಲಹ ಕ್ರತು ವಸಿಷ್ಟ ನಾರದ ಭೃಗುಗಳೆಂಬ ಒಂಭತ್ತುಮಂದಿ ಮಾನಸಪುತ್ರರನ್ನು ನಿರ್ಮಿಸಿದನು. ಆ ಒಂಭತ್ತು ಮಂದಿಯೂ ಸ್ಥಾವರಜಂಗಮಾತ್ಮಕವಾದ ಪ್ರಾಣಿಗಳನ್ನೂ, ಯಕ್ಷ ರಾಕ್ಷಸ ಭೂತ ಪಿಶಾಚ ಉರಗರನ್ನೂ, ರೌದ್ರಭಾವದಿಂದಲೂ ಶಾಂತಭಾವದಿಂದಲೂ ಮನುಷ್ಯಭಾವದಿಂದಲೂ ಸೃಷ್ಟಿಸಿದರು. ಎಲೈ ಜಯದ್ರಥನೆ, ಅದ್ಭುತವಾದ ಮಹಿಮೆಯುಳ್ಳ ನಾರಾಯಣನ ಸಾಮರ್ಥ್ಯವನ್ನು ವೇದವೇದಾಂಗಪಾರಂಗತರಾದ ಬ್ರಾಹ್ಮಣರು ಹೇಳುವದನ್ನು ನೀನು ಕೇಳಿಲ್ಲವೆ? ಆ ಭಗವಂತನಾದ ಮಹಾನುಭಾವನಾದ ನಾರಾಯಣನು ಏಕಾರ್ಣವವಾದ ಆ ಮಹಾಜಲೌಘದಲ್ಲಿ ಮುಳುಗಿ ಹೋಗಿದ್ದ ಭೂಮಿಯನ್ನು ಮೇಲಕ್ಕೆ ತರಬೇಕೆಂದು ದಿವ್ಯದೃಷ್ಟಿಯಿಂದಾಲೋಕಿಸಿ, ವಾಙ್ಮಯವಾಗಿಯೂ ವೇದಮಯವಾಗಿಯೂ ಹತ್ತು ಯೋಜನ ವಿಸ್ತಾರವೂ ನೂರುಯೋಜನ ಉದ್ದವೂ ಉಳ್ಳದ್ದಾಗಿಯೂ ಮಹಾಪರ್ವತಕ್ಕೆ ಸಮಾನವಾದ ಶರೀರವುಳ್ಳದ್ದಾಗಿಯೂ ಪ್ರಕಾಶಮಾನವಾದ ಕೋರೆದಾಡೆಯುಳ್ಳದ್ದಾಗಿಯೂ ಮಹಾಮೇಘದಂತೆ ಗಂಭೀರವಾದ ಧ್ವನಿಯುಳ್ಳದ್ದಾಗಿಯೂ ಇರುವ ಯಜ್ಞವರಾಹದ ರೂಪವನ್ನು ತಾಳಿ, ದೇವತೆಗಳಿಗೆ ಶತ್ರುವಾಗಿಯೂ ದೈತ್ಯರಲ್ಲಿ ಶ್ರೇಷ್ಠನಾಗಿಯೂ ಇದ್ದ ಹಿರಣ್ಯಕಶಿಪುವಿನ ಸಭೆಯನ್ನು ಪ್ರವೇಶಮಾಡಿ, ಕ್ರೋಧಾಗ್ನಿಯಿಂದ ಜಾಜ್ವಲ್ಯಮಾನನಾಗಿ ಕಯ್ಯಿಂದ ಕಯ್ಯನ್ನು ಸವರುತ್ತಿರಲು; ಅಂಥಾ ಘೋರವಾದ ರೂಪವನ್ನು ನೋಡಿ, ಹಿರಣ್ಯಕಶಿಪುವು ಘೋರವಾದ ಶೂಲಾಯುಧವನ್ನು ಹಿಡಿದು ಮೇಘದಂತೆ ಗರ್ಜಿಸುತ್ತ ಆ ನರಸಿಂಹನನ್ನು ಅಟ್ಟಿಕೊಂಡು ಹೋಗಲು, ಆ ನರಸಿಂಹನು ಸಿಂಹವು ಹಾರುವಂತೆ ಹಾರಿ ಆ ದೈತ್ಯನನ್ನು ಹಿಡಿದುಕೊಂಡು ತೀಕ್ಷ್ಣವಾದ ತನ್ನ ಉಗುರುಗಳಿಂದ ಅವನ ಶರೀರವನ್ನು ಸೀಳಿ ಅವನನ್ನು ಸಂಹರಿಸಿದನು. ಆ ಮಹಾನುಭಾವನು ಲೋಕಹಿತಾರ್ಥವಾಗಿ ಕಶ್ಯಪರಪತ್ನಿಯಾದ ಅದಿತಿದೇವಿಯ ಗರ್ಭದಲ್ಲಿ ಒಂದು ಸಹಸ್ರವರ್ಷವಿದ್ದು ನೀಲಮೇಘಶ್ಯಾಮನಾಗಿ ವಾಮನರೂಪನಾಗಿ ಅವತರಿಸಿ, ದಂಡಕಮಂಡಲುಗಳನ್ನು ಧರಿಸಿ, ಯಜ್ಞೋಪವೀತವನ್ನು ಧಾರಣೆಮಾಡಿ, ಶ್ರೀವತ್ಸವೆಂಬ ಗುರುತಿನಿಂದ ಅಲಂಕೃತನಾಗಿ, ಬಾಲರೂಪದಿಂದ ದೈತ್ಯೇಂದ್ರನಾದ ಬಲಿಚಕ್ರವರ್ತಿಯ ಯಜ್ಞಶಾಲೆಯನ್ನು ಪ್ರವೇಶಿಸಿದನು. ಬೃಹಸ್ಪತ್ಯಾಚಾರ್ಯರ ಸಹಾಯದಿಂದ ಯಜ್ಞಮಾಡುತ್ತಿದ್ದ ಆ ಬಲಿಚಕ್ರವರ್ತಿಯು ವಾಮನಮೂರ್ತಿಯನ್ನು ನೋಡಿ ಅಧಿಕವಾಗಿ ಸಂತೋಷಪಟ್ಟು 'ಎಲೈ ಬ್ರಾಹ್ಮಣನೆ, ನಿನ್ನ ದರ್ಶನದಿಂದ ನಾನು ಕೃತಾರ್ಥನಾದೆನು. ನಿನಗೆ ನಾನು ಏನು ಕೊಡಲಿ ಹೇಳು' ಎನಲು, ಅದನ್ನು ಕೇಳಿ ವಾಮನನು 'ಎಲೈ ಬಲಿಚಕ್ರವರ್ತಿಯೆ, ನಿನಗೆ ಮಂಗಳವಾಗಲಿ. ನೀನು ಸಂತುಷ್ಟನಾಗಿದ್ದರೆ ಮೂರು ಹೆಜ್ಜೆ ಭೂಮಿಯನ್ನು ನನಗೆ ಕೊಡು' ಎಂದು ಕೇಳಿದನು. ಅದಕ್ಕೆ ಬಲಿಯು ಸಂತೋಷಪಟ್ಟು ಒಂದೇ ಮನಸ್ಸಿನಿಂದ ತೇಜೋವಂತನಾದ ಆ ಬ್ರಾಹ್ಮಣನಿಗೆ ಆತನು ಬೇಡಿದಷ್ಟು ಭೂಮಿಯನ್ನು ಕೊಟ್ಟನು. ಬಳಿಕ ಆ ವಾಮನನು ಅದ್ಭುತವಾದ ತ್ರಿವಿಕ್ರಮಾವತಾರವನ್ನು ಮಾಡಿ ಮೂರು ಹೆಜ್ಜೆಗಳನ್ನಿಟ್ಟು ಸಮಸ್ತ ಭೂಮಂಡಲವನ್ನೆಲ್ಲಾ ಆಕ್ರಮಿಸಿ ಆ ಭೂಮಿಯನ್ನೆಲ್ಲಾ ಇಂದ್ರನಿಗೆ ಕೊಟ್ಟುಬಿಟ್ಟನು. "ಎಲೈ ಜಯದ್ರಥನೆ, ಹೀಗೆ ಅನೇಕ ದೇವತೆಗಳು ವಿಷ್ಣುವಿನ ಅಂಶಭೂತರಾಗಿ ಅವತರಿಸಿದ್ದರಿಂದ ಈ ಜಗತ್ತು ವಿಷ್ಣುಸಂಬಂಧಿಯಾದದ್ದೆಂದು ದೊಡ್ಡವರು ಹೇಳುವರು. ಆ ನಾರಾಯಣನು ದುಷ್ಟನಿಗ್ರಹಾರ್ಥವಾಗಿಯೂ ಧರ್ಮಸಂರಕ್ಷಣಾರ್ಥವಾಗಿಯೂ ಯಾದವಕುಲದಲ್ಲಿ ಅವತರಿಸಿ ಶಂಖಚಕ್ರಗದಾಪಾಣಿಯಾಗಿ ಶ್ರೀವತ್ಸವೆಂಬ ಗುರುತಿನಿಂದ ಮೆರೆಯುತ್ತ ಪೀತಾಂಬರವನ್ನು ಧರಿಸಿ ಬ್ರಹ್ಮಾದಿದೇವತೆಗಳಿಗೂ ಪೂಜ್ಯನಾಗಿ ಶ್ರೀಕೃಷ್ಣನೆಂದು ಸಜ್ಜನರಿಂದ ಕೊಂಡಾಡಿಸಿಕೊಳ್ಳುತ್ತ ಅರ್ಜುನನಿಗೆ ಸಹಾಯಮಾಡುವದಕ್ಕಾಗಿ ಆತನ ರಥದಮೇಲೆ ಕುಳಿತು ಸಾರಥ್ಯವನ್ನು ಮಾಡುವನು. ಆದ್ದರಿಂದ ಆ ಅರ್ಜುನನು ಇಂದ್ರಾದಿ ದೇವತೆಗಳಿಗೂ ಅಜಯ್ಯನಾಗಿರುವನು. ಅಂಥವನನ್ನು ಮನುಷ್ಯಮಾತ್ರನಾದ ನೀನು ಯುದ್ಧರಂಗದಲ್ಲಿ ಜಯಿಸುವದಕ್ಕೆ ಹ್ಯಾಗಾದೀತು? ಆದ್ದರಿಂದ ಅರ್ಜುನ ಹೊರತು ಇತರರಾದ ನಾಲ್ಕುಮಂದಿ ಪಾಂಡವರನ್ನೂ ಅವರ ಸೈನ್ಯವನ್ನೂ ಸಹ ಒಂದುದಿನ ನೀನು ತಡೆಯುವೆ" ಎಂದು ನುಡಿದು, ಪಾರ್ವತೀಪತಿಯಾದ ತ್ರಿಪುರಾಂತಕನಾದ ಮಹಾದೇವನು ವಾಮನರಾಗಿಯೂ, ಗೂನುಬೆನ್ನುಳ್ಳವರಾಗಿಯೂ, ಘೋರವಾದ ಕಿವಿಗಳಿಂದ ನೋಡತಕ್ಕವರಾಗಿಯೂ, ನಾನಾವಿಧವಾದ ವಿಕಾರವುಳ್ಳವರಾಗಿಯೂ, ಅನೇಕ ವಿಧವಾದ ಆಯುಧಗಳನ್ನು ಧರಿಸಿರುವರಾಗಿಯೂ ಇರುವ ಪ್ರಮಥಗಣಗಳೊಡಗೂಡಿ ಅಂತರ್ಧಾನವನ್ನು ಹೊಂದಿದನು.

ಬಳಿಕ ಮಂದಬುದ್ಧಿಯಾದ ಜಯದ್ರಥನು ತನ್ನ ಮನೆಗೆ ಹೊರಟು ಹೋದನು. ಅತ್ತಲು ಪಾಂಡವರು ಕಾಮ್ಯಕ ವನದಲ್ಲೇ ವಾಸಮಾಡುತ್ತಿದ್ದರು—ಎಂದು ವೈಶಂಪಾಯನಮುನೀಶ್ವರನು ಜನಮೇಜಯರಾಯನಿಗೆ ವಿವರಿಸಿದನು.

## ೨೭೨ನೇ ಅಧ್ಯಾಯ.—ಧರ್ಮರಾಯನು ಮಾರ್ಕಂಡೇಯನನ್ನು ಪ್ರಶ್ನೆಮಾಡುವಿಕೆ.

ಬಳಿಕ ಜನಮೇಜಯರಾಯನು ವೈಶಂಪಾಯನಮುನೀಂದ್ರನನ್ನು ಕುರಿತು—ಎಲೈ ಮಹಾನುಭಾವನೆ, ಜಯದ್ರಥನು ದ್ರೌಪದಿಯನ್ನು ಅಪಹರಿಸಿದ್ದರಿಂದ ಅಧಿಕವಾಗಿ ಕ್ಲೇಶವನ್ನು ಹೊಂದಿದ ಪಾಂಡವರು ಆ ಬಳಿಕ ಏನು ಮಾಡಿದರು?—ಎಂದು ಪ್ರಶ್ನೆಮಾಡಲು, ವೈಶಂಪಾಯನನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯನೆ, ಸೈಂಧವನಿಂದ ದ್ರೌಪದಿಯನ್ನು ಬಿಡಿಸಿಕೊಂಡು ಅವನನ್ನು ಜಯಿಸಿದ ಬಳಿಕ ಪಾಂಡವರು ಮಾರ್ಕಂಡೇಯ ಮೊದಲಾದ ಋಷಿಗಳ ಮಧ್ಯದಲ್ಲಿ ಚಿಂತಾಕ್ರಾಂತರಾಗಿ ವ್ಯಸನಪಡುತ್ತಿರಲು, ಧರ್ಮರಾಯನು ಮಾರ್ಕಂಡೇಯನನ್ನು ನೋಡಿ "ಎಲೈ ಮಹಾನುಭಾವನೆ, ದೇವರ್ಷಿಗಳಲ್ಲಿ ನೀನು ಶ್ರೇಷ್ಠನಾದವನು. ಭೂತಭವಿಷ್ಯದ್ವರ್ತಮಾನಗಳಲ್ಲಿ ನಡೆಯತಕ್ಕದ್ದನ್ನೆಲ್ಲಾ ಬಲ್ಲವನು. ನನ್ನ ಮನಸ್ಸಿನಲ್ಲೊಂದು ಸಂಶಯವಿರುವದು. ಅದನ್ನು ತಿಳುಹಿಸುವೆನು ಕೇಳು. ಈ ದ್ರೌಪದಿಯು ದ್ರುಪದರಾಯನ ಯಜ್ಞವೇದಿಯಲ್ಲಿ ಹುಟ್ಟಿದವಳಾದ್ದರಿಂದ ಅಯೋನಿಜೆಯಾಗಿಯೂ ಪುಣ್ಯವತಿಯಾಗಿಯೂ ಧರ್ಮಜ್ಞಳಾಗಿಯೂ ಇರುವಳು. ಈಕೆಯು ಎಂದಿಗೂ ಪಾಪಕಾರ್ಯವನ್ನೇ ಆಗಲಿ ನಿಂದಿತವಾದ ಕಾರ್ಯವನ್ನೇ ಆಗಲಿ ಮಾಡತಕ್ಕವಳಲ್ಲ. ಈಕೆಯು ಯಾವಾಗಲೂ ಧರ್ಮಪರಳಾಗಿಯೇ ಇರುವಳು. ಶೂರರಾದ ನಮಗೆ ಪತ್ನಿಯಾದ ಇಂಥವಳನ್ನು ಮೂಢನಾದ ಜಯದ್ರಥನು ಅಪಹರಿಸಿ ನಮ್ಮಿಂದ ತಲೆಯಮೇಲೆ ಐದು ಪಟ್ಟೆಗಳನ್ನು ತೆಗಿಸಿಕೊಂಡು ಪರಾಜಿತನಾಗಿ ಸೈನ್ಯವನ್ನೆಲ್ಲಾ ಕಳೆದುಕೊಂಡು ದುಃಖಪಡುತ್ತ ಹೊರಟು ಹೋದನು. ಆದರೆ ಯಾವ ಪ್ರಾಣಿಗಳಿಗಾಗಲಿ ವಿಧಿವಿಹಿತವಾದದ್ದನ್ನು ತಪ್ಪಿಸಿಕೊಳ್ಳುವದು ಅಶಕ್ಯವಾಗಿರುವದು. ಶುಚಿರ್ಭೂತನಾದವನಿಗೆ ಸುಳ್ಳಾದ ಕಳ್ಳತನವು ಮೇಲೆ ಬಂದಹಾಗೆ ದ್ರೌಪದಿಗೆ ಸೈಂಧವನ ಸ್ಪರ್ಶವುಂಟಾಗಬಹುದೆ? ನಮಗೆ ಈ ವನವಾಸವೂ ಬೇಡರಂತೆ ಮೃಗಗಳನ್ನು ಹಿಂಸಿಸಿ ಜೀವಿಸುವದೂ ಜ್ಞಾತಿಗಳ ದೆಸೆಯಿಂದ ಪ್ರವಾಸವೂ ವ್ಯರ್ಥವಾದ ತಪಸ್ವಿಗಳವೇಷವೂ ಸಹ ಸಂಭವಿಸಿರುವವು. ನನ್ನ ಹಾಗೆ ದುಃಖಪಡತಕ್ಕ ಭಾಗ್ಯಹೀನನಾದ ಪುರುಷನು ಪೂರ್ವದಲ್ಲಿ ಯಾವನಾದರೂ ಇದ್ದದ್ದನ್ನು ನೀನು ಕೇಳಿಯಾದರೂ ನೋಡಿಯಾದರೂ ಉಂಟೆ?" ಎಂದು ಧರ್ಮರಾಯನು ಮಾರ್ಕಂಡೇಯರನ್ನು ಪ್ರಶ್ನೆಮಾಡಿದನು.

## ೨೭೩ನೇ ಅಧ್ಯಾಯ.—ರಾಮೋಪಾಖ್ಯಾನ.

ವೈಶಂಪಾಯನನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಬಳಿಕ ಮಾರ್ಕಂಡೇಯನು ಧರ್ಮರಾಯನನ್ನು ನೋಡಿ "ಎಲೈ ಧರ್ಮರಾಯನೆ, ಪೂರ್ವದಲ್ಲಿ ದಶರಥಪುತ್ರನಾದ ರಾಮನು ನಿನಗಿಂತಲೂ ಹೆಚ್ಚಾಗಿ ಕ್ಲೇಶವನ್ನು ಅನುಭವಿಸಿರುವನು. ಆತನು ವನವಾಸವನ್ನು ಮಾಡುತ್ತಿರಲು, ರಾಕ್ಷಸರಾಜನಾದ ದುರಾತ್ಮನಾದ ರಾವಣನು ಆತನ ಪತ್ನಿಯಾದ ಸೀತಾದೇವಿಯನ್ನು ಮಾಯೆಯಿಂದ ಅಪಹರಿಸಿ ಮಾರ್ಗದಲ್ಲಿ ತನಗೆ ತಡೆಯನ್ನು ಮಾಡಿದ ಜಟಾಯುಪಕ್ಷಿಯನ್ನು ಸಂಹರಿಸಿ ಲಂಕಾಪಟ್ಟಣಕ್ಕೆ ಹೊರಟು ಹೋದನು. ಬಳಿಕ ರಾಮನು ಸುಗ್ರೀವನನ್ನು ಸಹಾಯಮಾಡಿಕೊಂಡು ಸಮುದ್ರಕ್ಕೆ ಸೇತುವೆಯನ್ನು ಕಟ್ಟಿ ತೀಕ್ಷ್ಣವಾದ ಬಾಣಗಳಿಂದ ರಾವಣಾದಿರಾಕ್ಷಸರನ್ನು ಸಂಹರಿಸಿ ಸೀತೆಯನ್ನು ಬಿಡಿಸಿಕೊಂಡು ಬಂದನು" ಎಂದನು.

ಆಗ ಧರ್ಮರಾಯನು "ಎಲೈ ಮಾರ್ಕಂಡೇಯನೆ, ಆ ರಾಮನು ಯಾವ ಕುಲದಲ್ಲಿ ಹುಟ್ಟಿದವನು? ಅವನ ಪರಾಕ್ರಮವು ಎಂಥಾದ್ದು? ರಾಮನೊಡನೆ ವಿರೋಧವನ್ನು ಮಾಡಿಕೊಂಡ ರಾವಣನು ಯಾರ ಮಗನು? ಅವನ

ಪರಾಕ್ರಮವು ಎಂಥಾದ್ದು? ಅಂಥ ರಾವಣನನ್ನು ಸಂಹರಿಸಿದ ರಾಮನ ಅದ್ಭುತವಾದ ಚರಿತ್ರೆಯನ್ನು ಕೇಳಬೇಕೆಂದು ನನಗೆ ಕುತೂಹಲವುಂಟಾಗಿರುವದು. ಅದನ್ನು ವಿವರಿಸು” ಎಂದು ಪ್ರಶ್ನೆಮಾಡಿದನು. ಬಳಿಕ ಮಾರ್ಕಂಡೇಯನು ಧರ್ಮರಾಯನನ್ನು ಕುರಿತು “ ಎಲೈ ರಾಯನೆ, ಸೂರ್ಯವಂಶದಲ್ಲಿ ಹುಟ್ಟಿದ ಇಕ್ಷ್ವಾಕುಮಹಾರಾಜನ ವಂಶದಲ್ಲಿ ಜನಿಸಿದ ಅಜನೆಂಬ ಮಹಾರಾಜನಿದ್ದನು. ಆತನಿಗೆ ದಶರಥನೆಂಬ ಪುತ್ರನಾದನು. ಆ ದಶರಥನು ವೇದಾಧ್ಯಯನಸಂಪನ್ನನಾಗಿಯೂ ಶುಚಿರ್ಭೂತನಾಗಿಯೂ ಇದ್ದನು. ಆತನಿಗೆ ಧರ್ಮಾತ್ಮರೂ ಮಹಾಬಲಿಷ್ಠರೂ ಆದ ರಾಮ, ಲಕ್ಷ್ಮಣ, ಭರತ, ಶತ್ರುಘ್ನರೆಂಬ ನಾಲ್ಕುಮಂದಿ ಮಕ್ಕಳು ಹುಟ್ಟಿದರು. ರಾಮನ ತಾಯಿಯು ಕೌಸಲ್ಯಾದೇವಿಯು, ಭರತನ ತಾಯಿಯು ಕೈಕಾದೇವಿಯು, ಲಕ್ಷ್ಮಣಶತ್ರುಘ್ನರ ತಾಯಿಯು ಸುಮಿತ್ರಾದೇವಿಯು. ಹೀಗಿರಲು ವಿದೇಹದೇಶಕ್ಕೆ ಅಧಿಪತಿಯಾದ ಜನಕಮಹಾರಾಜನಿಗೆ ಸೀತೆಯೆಂಬ ಒಬ್ಬ ಮಗಳಿದ್ದಳು. ಆತನು ಆಕೆಗೆ ಸ್ವಯಂವರಮಹೋತ್ಸವವನ್ನು ಬೆಳಸಲು, ಆ ಸೀತಾದೇವಿಯು ಶ್ರೀರಾಮನಿಗೆ ಪತ್ನಿಯಾದಳು.

ಎಲೈ ಧರ್ಮರಾಯನೆ, ಇನ್ನು ರಾವಣನ ಉತ್ಪತ್ತಿಕ್ರಮವನ್ನು ಹೇಳುವೆನು ಕೇಳು: ಸರ್ವಲೋಕಗಳಿಗೂ ಪಿತಾಮಹನಾದ ಚತುರ್ಮುಖಬ್ರಹ್ಮನಿಗೆ ಪುಲಸ್ತ್ಯನೆಂಬ ಮಾನಸಪುತ್ರನು ಹುಟ್ಟಿದನು. ಆತನಿಗೆ ಗೋ ಎಂಬ ಪತ್ನಿಯಲ್ಲಿ ವೈಶ್ರವಣನೆಂಬ ಮಗನು ಹುಟ್ಟಿದನು. ಆತನು ತಂದೆಯಾದ ಪುಲಸ್ತ್ಯನನ್ನು ಬಿಟ್ಟು ತಾತನಾದ ಬ್ರಹ್ಮದೇವನ ಸನ್ನಿಧಿಗೆ ಹೋದನು. ಅದರಿಂದ ಕೋಪಗೊಂಡು ಪುಲಸ್ತ್ಯನು ವೈಶ್ರವಣನನ್ನು ಬಾಧಿಸಬೇಕೆಂದು ಯೋಗಮಹಿಮೆಯಿಂದಲೂ ತನ್ನ ಅಂಶದಿಂದಲೂ ವಿಶ್ರವಸ್ಸೆಂಬ ಪುತ್ರನನ್ನು ಸೃಷ್ಟಿಸಿದನು. ಆಗ ಬ್ರಹ್ಮನು ಅದನ್ನು ನೋಡಿ ವೈಶ್ರವಣನಲ್ಲಿ ಪ್ರೀತಿಯಿಂದ ಆತನಿಗೆ ಅಮರತ್ವವನ್ನೂ ಧನಾಧಿಪತ್ಯವನ್ನೂ ಲೋಕಪಾಲತ್ವವನ್ನೂ ಈಶ್ವರನಲ್ಲಿ ಮಿತ್ರತ್ವವನ್ನೂ ಉಂಟುಮಾಡಿಕೊಟ್ಟು, ಆತನಿಗೆ ನಲಕೂಬರನೆಂಬ ಪುತ್ರನನ್ನೂ ಅನೇಕರಾಕ್ಷಸರಿಂದ ಕೂಡಿದ ಲಂಕೆಯೆಂಬ ರಾಜಧಾನಿಯನ್ನೂ ಯಥೇಚ್ಛವಾಗಿ ಸಂಚಾರಮಾಡತಕ್ಕ ಪುಷ್ಪಕವೆಂಬ ವಿಮಾನವನ್ನೂ ಕರುಣಿಸಿ, ಆತನಿಗೆ ಯಕ್ಷಾಧಿಪತ್ಯವನ್ನೂ ರಾಜರಾಜನೆಂಬ ಹೆಸರನ್ನೂ ಕೊಟ್ಟನು” ಎಂದು ಮಾರ್ಕಂಡೇಯನು ಧರ್ಮರಾಯನಿಗೆ ಹೇಳಿದನು.

## ೨೭೫ನೇ ಅಧ್ಯಾಯ.—ರಾಮೋಪಾಖ್ಯಾನ—(ರಾವಣಾದಿಗಳಿಗೆ ವರಪ್ರಾಪ್ತಿ.)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಮಾರ್ಕಂಡೇಯನು ಧರ್ಮರಾಯನನ್ನು ಕುರಿತು, “ ಎಲೈ ಧರ್ಮರಾಯನೆ, ಕೋಪಿಷ್ಠನಾದ ಪುಲಸ್ತ್ಯಬ್ರಹ್ಮನ ಅರ್ಧಶರೀರದಿಂದ ಹುಟ್ಟಿದ ವಿಶ್ರವಸ್ಸು ತನ್ನಮೇಲೆ ಕೋಪಿಸಿಕೊಂಡಿರುವದನ್ನು ಯಕ್ಷಾಧಿಪತಿಯಾದ ಕುಬೇರನು ತಿಳಿದು, ತಮ್ಮ ತಂದೆಯಾದ ವಿಶ್ರವಸ್ಸಿನ ಅನುಗ್ರಹವನ್ನು ಸಂಪಾದಿಸಬೇಕೆಂದು ಯೋಚಿಸಿ ಲಂಕಾಪಟ್ಟಣದಲ್ಲೇ ವಾಸಮಾಡುತ್ತ, ಆತನ ಸೇವಾರ್ಥವಾಗಿ ಪುಷ್ಪೋತ್ಕಟೆ ರಾಕೆ ಮಾಲಿನಿಯೆಂಬ ಮೂರುಮಂದಿ ರಾಕ್ಷಸಸ್ತ್ರೀಯರನ್ನು ನೇಮಿಸಿದನು. ಸುಂದರಿಯರಾದ ಆ ಮೂರುಮಂದಿ ಸ್ತ್ರೀಯರೂ ಶ್ರೇಯಸ್ಕಾಮಿನಿಯರಾಗಿ ಅನ್ಯೋನ್ಯವಾಗಿ ಸ್ಪರ್ಧೆಯಿಂದ ನೃತ್ಯಗೀತವಾದ್ಯಗಳಿಂದ ಮಹಾತ್ಮನಾದ ವಿಶ್ರವಸ್ಸನ್ನು ಸೇವಿಸುತ್ತಿದ್ದರು. ಆದ್ದರಿಂದ ವಿಶ್ರವಸ್ಸು ಸಂತುಷ್ಟನಾಗಿ ಪ್ರತ್ಯೇಕವಾಗಿ ಆ ಮೂರುಮಂದಿಗೂ ಅವರವರ ಇಚ್ಛಾನುಸಾರವಾಗಿ ಲೋಕಪಾಲಕರಿಗೆ ಸಮಾನರಾದ ಮಕ್ಕಳು ಹುಟ್ಟುವಂತೆ ವರವನ್ನು ಕೊಟ್ಟನು. ಆಗ ಪುಷ್ಪೋತ್ಕಟೆಯು ಬಲಿಷ್ಠರೂ ರಾಕ್ಷಸಶ್ರೇಷ್ಠರೂ ಆದ ರಾವಣಕುಂಭಕರ್ಣರನ್ನು ಹೆತ್ತಳು. ಮಾಲಿನಿಯು ಧರ್ಮಾತ್ಮನಾದ ವಿಭೀಷಣನನ್ನು ಹೆತ್ತಳು. ರಾಕೆಯು ಖರ ಶೂರ್ಪನಖೆಯೆಂಬ ಅವಳೀ ಮಕ್ಕಳನ್ನು ಹೆತ್ತಳು. ಅವರಲ್ಲಿ ವಿಭೀಷಣನು ಎಲ್ಲರಿಗಿಂತಲೂ ರೂಪವಂತನಾಗಿಯೂ ಪುಣ್ಯಶಾಲಿಯಾಗಿಯೂ ಧರ್ಮದಲ್ಲಿ ಆಸಕ್ತನಾಗಿಯೂ ಇದ್ದನು. ಅವರೆಲ್ಲರಿಗೂ ರಾವಣನು ಜ್ಯೇಷ್ಠ

ನಾಗಿಯೂ ರಾಕ್ಷಸಶ್ರೇಷ್ಠನಾಗಿಯೂ ಅಧಿಕವಾದ ಶಕ್ತಿಯುಳ್ಳವನಾಗಿಯೂ ಉತ್ಸಾಹವಂತನಾಗಿಯೂ ಇದ್ದನು. ಕುಂಭಕರ್ಣನು ಎಲ್ಲರಿಗಿಂತಲೂ ಯುದ್ಧದಲ್ಲಿ ಅತಿ ಬಲಿಷ್ಠನಾಗಿದ್ದನು. ಬ್ರಹ್ಮದ್ವೇಷಿಯಾದ ಖರನು ಮಾಂಸಾಹಾರದಲ್ಲಿ ಆಸೆಯುಳ್ಳವನಾಗಿಯೂ ಮಾಯಾವಿಯಾಗಿಯೂ ಕ್ರೂರನಾಗಿಯೂ ಇದ್ದನು. ಕ್ರೂರಳಾದ ಶೂರ್ಪನಖಿಯು ಸಿದ್ಧರಾದ ಋಷಿಗಳ ತಪಸ್ಸಿಗೆ ವಿಘ್ನವನ್ನು ಮಾಡುತ್ತಿದ್ದಳು. ರಾವಣಾದಿಗಳೆಲ್ಲರೂ ವೇದಾಧ್ಯಯನನಿಷ್ಠರಾಗಿಯೂ ಶೂರರಾಗಿಯೂ ವ್ರತಾಚರಣೆಯಲ್ಲಿ ಆಸಕ್ತರಾಗಿಯೂ ಇದ್ದುಕೊಂಡು, ಗಂಧಮಾಧನಪರ್ವತವಲ್ಲಿ ತಮ್ಮ ತಂದೆಯಾದ ವಿಶ್ರವಸ್ಸಿನೊಡನೆ ವಾಸಮಾಡುತ್ತಿದ್ದರು. ಹೀಗಿರಲು, ಒಂದಾನೊಂದು ದಿವಸ ತಮ್ಮ ತಂದೆಯ ಸಮೀಪದಲ್ಲಿ ಮಹತ್ತಾದ ಐಶ್ವರ್ಯದಿಂದ ಮೆರೆಯುವ ಕುಬೇರನು ಕುಳಿತಿದ್ದದ್ದನ್ನು ರಾವಣಾದಿಗಳು ನೋಡಿ, ಅದನ್ನು ಸೈರಿಸದೆ ಅಧಿಕವಾದ ಕ್ರೋಧಾವೇಶವುಳ್ಳವರಾಗಿ, ಕುಬೇರನಿಗಿಂತಲೂ ಹೆಚ್ಚಾದ ಐಶ್ವರ್ಯವನ್ನು ಪಡೆಯಬೇಕೆಂದು ಬ್ರಹ್ಮದೇವನನ್ನು ಕುರಿತು ತಪಸ್ಸುಮಾಡುವದಕ್ಕೆ ಉದ್ಯುಕ್ತರಾದರು. ಆಗ ರಾವಣನು ಸಾವಿರವರುಷಗಳ ಪರ್ಯಂತರವಾಗಿಯೂ ಪಂಚಾಗ್ನಿಗಳ ಮಧ್ಯದಲ್ಲಿ ವಾಯುವನ್ನು ಆಹಾರಮಾಡಿಕೊಂಡು ಒಂದೇ ಕಾಲಿನಲ್ಲಿ ನಿಂತು ತಪಸ್ಸನ್ನು ಮಾಡಿದನು. ಕುಂಭಕರ್ಣನು ವ್ರತನಿಷ್ಠನಾಗಿ ಆಹಾರನಿಯಮವನ್ನು ಮಾಡಿಕೊಂಡು ಭೂಮಿಯಮೇಲೆ ಮಲಗಿಕೊಂಡು ತಪಸ್ಸನ್ನು ಮಾಡಿದನು. ವಿಭೀಷಣನು ಪ್ರತಿದಿನವೂ ಒಣಗಿದ ಒಂದೊಂದು ಎಲೆಯನ್ನು ಆಹಾರಮಾಡಿಕೊಂಡು ಉಪವಾಸಪರನಾಗಿ ಸಹಸ್ರವರ್ಷಗಳವರೆಗೂ ವ್ರತನಿಷ್ಠನಾಗಿ ಘೋರವಾದ ತಪಸ್ಸನ್ನು ಮಾಡಿನು. ಖರನೂ ಶೂರ್ಪನಖಿಯೂ ಸಹ ತಪಸ್ಸುಮಾಡುತ್ತಿದ್ದ ರಾವಣಾದಿಗಳ ರಕ್ಷಣೆಯನ್ನೂ ಶುಶ್ರೂಷೆಯನ್ನೂ ಸಂತೋಷದಿಂದ ಮಾಡಿಕೊಂಡಿದ್ದರು. ಸಹಸ್ರವರ್ಷಗಳು ಪೂರ್ಣವಾಗಲು, ರಾವಣನು ತನ್ನ ಶಿರಸ್ಸುಗಳನ್ನು ಛೇದಿಸಿ ಅಗ್ನಿಯಲ್ಲಿ ಹೋಮವನ್ನು ಮಾಡಿದನು. ಆಗ ಬ್ರಹ್ಮದೇವನು ತಾನೇ ರಾವಣಾದಿಗಳು ತಪಸ್ಸು ಮಾಡುವ ಸ್ಥಳಕ್ಕೆ ಬಂದು, ಅವರನ್ನು ಕುರಿತು ‘ ಎಲೈ ರಾವಣಾದಿಗಳೆ, ನಿಮ್ಮ ತಪಸ್ಸಿನಿಂದ ನಾನು ಸಂತುಷ್ಟನಾದೆನು. ನಿಮಗೆ ದೇವತ್ವಹೊರತು ಬೇಕಾದ ವರಗಳನ್ನು ಕೊಡುವೆನು. ಇನ್ನು ತಪಸ್ಸುಮಾಡುವದನ್ನು ಸಾಕುಮಾಡಿರಿ ’ ಎಂದು ನುಡಿದು, ರಾವಣನನ್ನು ಕುರಿತು ‘ ಎಲೈ ರಾವಣನೆ, ನೀನು ಮಹತ್ತಾದ ಶ್ರೇಯಸ್ಸಾಗಬೇಕೆಂದು ಶಿರಸ್ಸುಗಳನ್ನು ಅಗ್ನಿಯಲ್ಲಿ ಹೋಮಮಾಡಿದೆ. ಆ ಶಿರಸ್ಸುಗಳು ಪೂರ್ವದಂತೆ ನಿನ್ನ ಶರೀರವನ್ನು ಸೇರಲಿ. ಇದರಿಂದ ನಿನ್ನ ಶರೀರವು ವಿರೂಪವಾಗಕೆಲಸವಿಲ್ಲ. ಮತ್ತು ನೀನು ಯುದ್ಧರಂಗದಲ್ಲಿ ಶತ್ರುಗಳನ್ನು ಜಯಿಸುವನಾಗುವೆ. ಇದು ನಿಶ್ಚಯ ’ ಎಂದನು. ಆಗ ರಾವಣನು “ ಎಲೈ ಪಿತಾಮಹನೆ, ನನ್ನ ತಪಸ್ಸಿನಿಂದ ನೀನು ಸಂತುಷ್ಟನಾಗಿದ್ದರೆ ಗಂಧರ್ವರು, ದೇವತೆಗಳು, ಅಸುರರು, ಯಕ್ಷರು, ರಾಕ್ಷಸರು, ಸರ್ಪಗಳು, ಕಿನ್ನರರು, ಇವರೆಲ್ಲರಿಂದಲೂ ನನಗೆ ಪರಾಜಯವಿಲ್ಲದಂತೆ ನನ್ನಲ್ಲಿ ನೀನು ಅನುಗ್ರಹಮಾಡಬೇಕು ” ಎನಲು, ಬ್ರಹ್ಮದೇವನು ‘ ಎಲೈ ರಾವಣನೆ, ನೀನು ಯಾರ ಯಾರ ಹೆಸರನ್ನು ಈಗ ಹೇಳಿದೆಯೋ ಮನುಷ್ಯರು ಹೊರತು ಅವರೆಲ್ಲರಿಂದಲೂ ನಿನಗೆ ಭಯವಿಲ್ಲದಂತೆ ನಾನು ಅನುಗ್ರಹಮಾಡಿರುವೆನು ’ ಎಂದನು. ಆ ಸಮಯದಲ್ಲಿ ದುರ್ಬುದ್ಧಿಯಾದ ರಾವಣನು ತಾನು ಮನುಷ್ಯರನ್ನು ಆಹಾರಮಾಡತಕ್ಕವನೆಂದು ತಿಳಿದುಕೊಂಡು, ಮನುಷ್ಯರನ್ನು ಉಪೇಕ್ಷಿಸಿ, ಮನುಷ್ಯರಿಂದ ನನಗೆ ಭಯಕೆಲಸವಿಲ್ಲದಂತೆ ಅನುಗ್ರಹಿಸೆಂದು ಬ್ರಹ್ಮದೇವನನ್ನು ಬೇಡಿಕೊಳ್ಳದೆ ಹೋದನು. ಬಳಿಕ ಬ್ರಹ್ಮದೇವನು ಕುಂಭಕರ್ಣನನ್ನು ಕುರಿತು ‘ ಎಲೈ ರಾಕ್ಷಸನೆ, ನಿನಗೂ ಬೇಕಾದ ವರವನ್ನು ಅನುಗ್ರಹಿಸುವೆನು ಕೇಳು ’ ಎನಲು ; ಆಗ ಕುಂಭಕರ್ಣನು ತಮೋಗುಣದಿಂದ ವ್ಯಾಪ್ತನಾಗಿ ಅನಿಷ್ಟವಾದ ನಿದ್ರೆಯನ್ನು ಬೇಡಿದನು. ಅದನ್ನು ಕೇಳಿ ಬ್ರಹ್ಮನು ಹಾಗೆಯೇ ಆಗಲೆಂದು ಆತನಿಗೆ ವರವನ್ನು ಕೊಟ್ಟು ‘ ಎಲೈ ವಿಭೀಷಣನೆ, ನೀನು ಮಾಡಿದ ತಪಸ್ಸಿನಿಂದ ನಾನು ಸಂತುಷ್ಟನಾಗಿರುವೆನು. ನೀನು ಬೇಕಾದ ವರವನ್ನು ಬೇಡು ’ ಎನಲು, ವಿಭೀಷಣನು ‘ ಎಲೈ ಪಿತಾಮಹನೆ, ನನಗೆ ಎಂಥ ಆಪತ್ತು ಬಂದರೂ ಅಧರ್ಮದಲ್ಲಿ ಬುದ್ಧಿಯು ಪ್ರವೇಶಿಸದೆ ಇರಲಿ ಮತ್ತು ನನಗೆ ಶಿಕ್ಷೆಯಿಲ್ಲದೆ ಬ್ರಹ್ಮಾಸ್ತ್ರವು ಪ್ರಾಪ್ತವಾಗಲಿ ’ ಎಂದು ಬೇಡಿದನು. ಆಗ ಬ್ರಹ್ಮನು ಹಾಗೆಯೇ ಆಗಲೆಂದು ನುಡಿದು, ಆತನನ್ನು ಕುರಿತು ‘ ಎಲೈ ವಿಭೀಷಣನೆ, ನೀನು ರಾಕ್ಷಸರ ಜಾತಿಯಲ್ಲಿ ಹುಟ್ಟಿದವನಾದರೂ ಅಧರ್ಮದಲ್ಲಿ ನಿನ್ನ ಬುದ್ಧಿಯು ಪ್ರವರ್ತಿಸದೆ ಇರುವದರಿಂದ ನಾನು ಸಂತುಷ್ಟನಾಗಿ ನಿನಗೆ ಅಮರತ್ವವನ್ನು

ಕೊಟ್ಟಿರುವೆನು' ಎಂದು ಹೇಳಿ ಅಂತರ್ಧಾನವನ್ನು ಪಡೆದನು. ಬಳಿಕ ವರವನ್ನು ಪಡೆದ ರಾಕ್ಷಸಶ್ರೇಷ್ಠನಾದ ರಾವಣನು ಲಂಕಾಪಟ್ಟಣಕ್ಕೆ ಹೋಗಿ ಯುದ್ಧದಲ್ಲಿ ಕುಬೇರನನ್ನು ಜಯಿಸಿ ಆತನ ಪುಷ್ಪಕವಿಮಾನವನ್ನು ಕಿತ್ತುಕೊಂಡನು. ಆಗ ಕುಬೇರನು ರಾವಣನನ್ನು ಕುರಿತು 'ಎಲೈ ರಾವಣನೆ, ನೀನು ಗುರುವಾದ ನನ್ನನ್ನು ಅವಮಾನಪಡಿಸಿ ನನ್ನ ಪುಷ್ಪಕವಿಮಾನವನ್ನು ಕಿತ್ತುಕೊಂಡದ್ದರಿಂದ ಈ ವಿಮಾನವು ನಿನಗೆ ಉಪಯೋಗಿಸದೆ ನಿನ್ನನ್ನು ಯುದ್ಧದಲ್ಲಿ ಯಾವನು ಸಂಹರಿಸುವನೋ ಆತನು ಈ ವಿಮಾನವನ್ನು ಉಪಯೋಗಿಸಿಕೊಳ್ಳಲಿ' ಎಂದು ಶಾಪವನ್ನು ಕೊಟ್ಟು, ಗಂಧರ್ವ ಯಕ್ಷ ಕಿನ್ನರ ಕಿಂಪುರುಷರೊಡಗೂಡಿ ಲಂಕಾಪಟ್ಟಣವನ್ನು ಬಿಟ್ಟು ಗಂಧಮಾದನಪರ್ವತಕ್ಕೆ ಹೊರಟುಬಂದನು. ವಿಭೀಷಣನು ಸನ್ಮಾರ್ಗವನ್ನು ಅವಲಂಬಿಸಿ ಅಧಿಕವಾದ ಐಶ್ವರ್ಯದಿಂದ ಸಂಪನ್ನನಾದ ಕುಬೇರನನ್ನೇ ಅನುಸರಿಸಿಕೊಂಡಿರಲು, ಕುಬೇರನು ಆತನ ವಿಷಯದಲ್ಲಿ ಸಂತುಷ್ಟನಾಗಿ ತನ್ನ ಸೈನ್ಯದ ಆಧಿಪತ್ಯದಲ್ಲಿ ಆತನಿಗೆ ಪಟ್ಟಾಭಿಷೇಕವನ್ನು ಮಾಡಿದನು. ಬಳಿಕ ಮನುಷ್ಯರನ್ನು ತಿನ್ನತಕ್ಕ ರಾಕ್ಷಸರೂ ಬಲಿಷ್ಠರಾದ ಪಿಶಾಚರೂ ಸಹ ಗುಂಪಾಗಿ ಲಂಕಾಪಟ್ಟಣದ ರಾಜ್ಯಾಧಿಕಾರದಲ್ಲಿರುವ ರಾವಣನಿಗೆ ಪಟ್ಟಾಭಿಷೇಕವನ್ನು ಮಾಡಿದರು. ಆಗ ಬಲಿಷ್ಠನಾದ ರಾವಣನು ದೇವತೆಗಳಲ್ಲಿಯೂ ದೈತ್ಯರಲ್ಲಿಯೂ ಇದ್ದ ಉತ್ತಮವಾದ ರತ್ನ ಮೊದಲಾದ ವಸ್ತುಗಳನ್ನು ಬಲಾತ್ಕಾರದಿಂದ ಅಪಹರಿಸಿ, ಕಾಮರೂಪದಿಂದ ಆಕಾಶಮಾರ್ಗದಲ್ಲಿ ಸಂಚರಿಸುತ್ತ ಸಕಲ ದೇವತೆಗಳಿಗೂ ಭಯಂಕರನಾಗಿ, ಲೋಕಗಳಿಗೆ ಹಿಂಸಕನಾದ್ದರಿಂದ ರಾವಣನೆಂಬ ಹೆಸರಿನಿಂದ ಪ್ರಸಿದ್ಧನಾಗಿದ್ದನು" ಎಂದು ಮಾರ್ಕಂಡೇಯನು ಧರ್ಮರಾಯನಿಗೆ ವಿವರಿಸಿದನು.

## ೨೭೫ನೇ ಅಧ್ಯಾಯ.—ರಾಮೋಪಾಖ್ಯಾನ—(ವಾನರಾದಿಗಳ ಸೃಷ್ಟಿ.)

ವೈಶಂಪಾಯನಮುನೀಂದ್ರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಬಳಿಕ ಮಾರ್ಕಂಡೇಯನು ಧರ್ಮರಾಯನನ್ನು ಕುರಿತು "ಎಲೈ ಧರ್ಮರಾಯನೆ, ಆ ಬಳಿಕ ಸಕಲರಾದ ಬ್ರಹ್ಮರ್ಷಿಗಳೂ ದೇವರ್ಷಿಗಳೂ ಸಿದ್ಧರೂ ಸಹ ಯಜ್ಞೇಶ್ವರನನ್ನು ಮುಂದಿಟ್ಟುಕೊಂಡು ಹೊರಟು ಬ್ರಹ್ಮದೇವನನ್ನು ಕಂಡು ಆತನಿಗೆ ಶರಣಾಗತರಾಗಲು, ಯಜ್ಞೇಶ್ವರನು ಬ್ರಹ್ಮನನ್ನು ಕುರಿತು, 'ಎಲೈ ಪಿತಾಮಹನೆ, ವಿಶ್ರವಸ್ಸಿನ ಮಗನಾದ ರಾವಣನು ನಿನ್ನ ವರಪ್ರಭಾವದಿಂದ ಸಕಲರಿಗೂ ಅವಧ್ಯನಾಗಿ ಲೋಕಗಳನ್ನೆಲ್ಲಾ ಮನಸ್ಸುಬಂದಂತೆ ಬಾಧೆಪಡಿಸುತ್ತಿರುವನು. ಆತನ ಭಯವಿಲ್ಲದಂತೆ ನಮ್ಮನ್ನು ನೀನು ಸಂರಕ್ಷಿಸಬೇಕು. ನೀನು ಹೊರತು ನಮಗೆ ಮತ್ತೊಬ್ಬರು ರಕ್ಷಕರು ಇಲ್ಲ' ಎಂದು ಪ್ರಾರ್ಥಿಸಿದನು. ಬ್ರಹ್ಮನು ಯಜ್ಞೇಶ್ವರನನ್ನು ಕುರಿತು, 'ಎಲೈ ಯಜ್ಞೇಶ್ವರನೆ, ರಾವಣನನ್ನು ಜಯಿಸುವದು ದೇವಾಸುರರಿಗೂ ಅಶಕ್ಯವಾದದ್ದು. ಆದ್ದರಿಂದ ಅವನನ್ನು ಸಂಹರಿಸುವದಕ್ಕೆ ತಕ್ಕ ಪ್ರಯತ್ನವು ನಡೆದಿರುವದು. ಅದೇನೆಂದರೆ, ಚತುರ್ಭುಜನಾದ ಮಹಾವಿಷ್ಣುವು ನನ್ನ ಪ್ರಾರ್ಥನೆಯಿಂದ ರಾವಣನ ಸಂಹಾರಾರ್ಥವಾಗಿ ಭೂಮಿಯಲ್ಲಿ ಅವತಾರಮಾಡಿರುವನು. ಎಲೈ ದೇವೇಂದ್ರನೆ, ನೀನೂ ಸಕಲ ದೇವತೆಗಳೂ ಸಹ ಆ ಮಹಾವಿಷ್ಣುವಿನ ಸಹಾಯಾರ್ಥವಾಗಿ ಕಪಿ ಕರಡಿ ಕೊಂಡಮುಸುಗ ಮೊದಲಾದ ವನಮೃಗಗಳಲ್ಲಿ ಕಾಮರೂಪಿಗಳಾಗಿಯೂ ಬಲಶಾಲಿಗಳಾಗಿಯೂ ಇರುವ ಮಕ್ಕಳನ್ನು ಹುಟ್ಟಿಸಿರಿ' ಎಂದು ನುಡಿದು, ಅವರೆದುರಿಗೆ ದುಂದುಭಿಯೆಂಬ ಗಂಧರ್ವಸ್ತ್ರೀಯನ್ನು ಕುರಿತು, 'ಎಲೆ ದುಂದುಭಿಯೆ, ನೀನೂ ಲೋಕಹಿತಾರ್ಥವಾಗಿ ಭೂಮಿಯಲ್ಲಿ ಅವತಾರಮಾಡು' ಎಂದು ಅಂತರ್ಧಾನವನ್ನು ಪಡೆದನು. ಬಳಿಕ ಇಂದ್ರಾದಿದೇವತೆಗಳೂ ಗಂಧರ್ವರೂ ದಾನವರೂ ಸಹ ಭೂಮಿಯಲ್ಲಿ ತಮ್ಮ ಅಂಶಗಳಿಂದ ಮಕ್ಕಳನ್ನು ಸೃಷ್ಟಿಸುವದಕ್ಕೆ ಮಂತ್ರಾಲೋಚನೆಯನ್ನು ಮಾಡಿ, ಕಪಿ ಕರಡಿ ಕೊಂಡಮುಸುಗ ಮೊದಲಾದ ವನಮೃಗಗಳ ಸ್ತ್ರೀಯರಲ್ಲಿ ತಮಗೆ ಸಮಾನವಾದ ಬಲವೂ ತೇಜಸ್ಸೂ ಉಳ್ಳ ಮಕ್ಕಳನ್ನು ಸೃಜಿಸಿದರು. ಆ ಮಕ್ಕಳು ಪರ್ವತಗಳ ಶೃಂಗಗಳನ್ನಾದರೂ ಭೇದಿಸತಕ್ಕವರಾಗಿಯೂ, ಪರ್ವತಶಿಖರಗಳೂ ವೃಕ್ಷಗಳೂ ಸಹ ಆಯುಧಗಳಾಗುಳ್ಳವರಾಗಿಯೂ, ವಜ್ರಾಯುಧದಂತೆ ಅಭೇದ್ಯ

ವಾದ ಶರೀರವುಳ್ಳವರಾಗಿಯೂ, ಕಾಮರೂಪಿಗಳಾಗಿಯೂ, ಮಹತ್ತಾದ ಪರಾಕ್ರಮವೂ ಬಲವೂ ಉಳ್ಳವರಾಗಿಯೂ, ಯುದ್ಧದಲ್ಲಿ ಸಮರ್ಥರಾಗಿಯೂ ಇದ್ದರು. ಅವರಲ್ಲಿ ಕೆಲವರು ನೂರು ಆನೆಯ ಬಲವುಳ್ಳವರಾಗಿಯೂ, ಕೆಲವರು ಸಾವಿರ ಆನೆಯ ಬಲವುಳ್ಳವರಾಗಿಯೂ, ಕೆಲವರು ಹತ್ತುಸಾವಿರ ಆನೆಯ ಬಲವುಳ್ಳವರಾಗಿಯೂ, ವಾಯುವೇಗಕ್ಕೆ ಸಮಾನವಾದ ವೇಗವುಳ್ಳವರಾಗಿಯೂ ಇದ್ದರು. ಬಳಿಕ ದುಂದುಭಿಯೆಂಬ ಆ ಗಂಧರ್ವಸ್ತ್ರೀಯು ಬ್ರಹ್ಮದೇವನ ಆಜ್ಞಾನುಸಾರವಾಗಿ ಮಂಥರೆಯೆಂಬ ಹೆಸರಿನಿಂದ ಭೂಮಿಯಲ್ಲಿ ಹುಟ್ಟಿ, ರಾಮನನ್ನು ವನವಾಸಕ್ಕೆ ಕಳುಹಿಸುವಂತೆ ಕೈಕಾದೇವಿಗೆ ದುರ್ಬೋಧನೆಯನ್ನು ಮಾಡುತ್ತ, ಆಕೆಗೆ ರಾಮನಲ್ಲಿ ವೈರವು ಹೆಚ್ಚುವಹಾಗೆ ಮಾಡಿದಳು" ಎಂದು ಮಾರ್ಕಂಡೇಯನು ಧರ್ಮರಾಯನಿಗೆ ಹೇಳಿದನು.

## ೨೭೬ನೇ ಅಧ್ಯಾಯ.—ರಾಮೋಪಾಖ್ಯಾನ—(ರಾವಣನ ಆಗಮನ.)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಬಳಿಕ ಧರ್ಮರಾಯನು ಮಾರ್ಕಂಡೇಯನನ್ನು ಕುರಿತು, "ಎಲೈ ಪೂಜ್ಯನೆ, ಪ್ರತ್ಯೇಕಪ್ರತ್ಯೇಕವಾಗಿ ರಾವಣಾದಿಗಳ ಉತ್ಪತ್ತಿಯನ್ನು ಹೇಳಿದೆ. ಆದರೆ ಮಹಾನುಭಾವರಾದ ರಾಮಲಕ್ಷ್ಮಣರೂ ಜನಕಪುತ್ರಿಯಾದ ಸೀತಾದೇವಿಯೂ ಸಹ ಅರಣ್ಯವಾಸಮಾಡುವದಕ್ಕೆ ಕಾರಣವೇನೋ ಅದನ್ನು ತಿಳುಹಿಸು" ಎನಲು, ಮಾರ್ಕಂಡೇಯನು "ಎಲೈ ಧರ್ಮರಾಯನೆ, ದಶರಥರಾಯನು ಸಂತಾನವಾದಬಳಿಕ ದೊಡ್ಡವರ ಸೇವೆಯಲ್ಲಿಯೂ ಧರ್ಮದಲ್ಲಿಯೂ ಆಸಕ್ತನಾಗಿ ಸಂತೋಷದಿಂದ ರಾಜ್ಯಭಾರವನ್ನು ಮಾಡುತ್ತಿದ್ದನು. ಆತನ ಮಕ್ಕಳಾದ ರಾಮ ಲಕ್ಷ್ಮಣ ಭರತ ಶತ್ರುಘ್ನರು ದಿನದಿನವೂ ವೃದ್ಧಿಯನ್ನು ಹೊಂದುತ್ತ, ನಾಲ್ಕು ವೇದಗಳ ರಹಸ್ಯಗಳಲ್ಲಿಯೂ ಧನುರ್ವೇದದಲ್ಲೂ ಪಾರಂಗತರಾಗಿ, ಬ್ರಹ್ಮಚರ್ಯವ್ರತನಿಷ್ಠರಾಗಿದ್ದುಕೊಂಡು ಬಳಿಕ ವಿವಾಹವನ್ನು ಮಾಡಿಕೊಂಡರು. ಅವರಲ್ಲಿ ಜ್ಯೇಷ್ಠನಾದ ರಾಮನು ತಂದೆಯ ಹೃದಯಕ್ಕೆ ಆನಂದಕರನಾಗಿಯೂ ಪ್ರಜೆಗಳಿಗೆ ಬಹಳ ಇಷ್ಟನಾಗಿಯೂ ದಶರಥರಾಯನ ಪ್ರೀತಿಗೆ ಪಾತ್ರನಾಗಿಯೂ ಇದ್ದನು. ಆಗ ಬುದ್ಧಿಶಾಲಿಯಾದ ದಶರಥರಾಯನು ತಾನು ವೃದ್ಧನಾದದ್ದನ್ನು ತಿಳಿದು, ಧರ್ಮಜ್ಞರಾದ ಮಂತ್ರಿಗಳಿಂದಲೂ ಪುರೋಹಿತರಾದ ವಸಿಷ್ಠರಿಂದಲೂ ಕೂಡಿ ಶ್ರೀರಾಮನಿಗೆ ಯೌವರಾಜ್ಯಾಭಿಷೇಕವನ್ನು ಮಾಡಬೇಕೆಂದು ಮಂತ್ರಾಲೋಚನೆಯನ್ನು ಮಾಡಲು, ಅವರೆಲ್ಲರೂ ರಾಮನಿಗೆ ಪಟ್ಟಾಭಿಷೇಕವನ್ನು ಮಾಡುವದಕ್ಕೆ ಇದು ಯೋಗ್ಯವಾದ ಕಾಲವೆಂದು ಸಮ್ಮತಿಸಿದರು. ಬಳಿಕ ದಶರಥರಾಯನು ಕೆಂದಾವರೆಯಂತೆ ಕಣ್ಣುಗಳುಳ್ಳವನಾಗಿಯೂ, ಮದ್ದಾನೆಯಂತೆ ಗಮನವುಳ್ಳವನಾಗಿಯೂ, ಆಜಾನುಬಾಹುವಾಗಿಯೂ, ಮಹತ್ತಾದ ವಕ್ಷಸ್ಥಳವುಳ್ಳವನಾಗಿಯೂ, ಕಪ್ಪಾದ ಕುಟಿಲವಾದ ಮುಂಡೆಕೂದಲುಗಳಿಂದ ಶೋಭಿಸುವನಾಗಿಯೂ, ಯುದ್ಧದಲ್ಲಿ ಇಂದ್ರನಿಗಿಂತಲೂ ಅಧಿಕವಾದ ಪರಾಕ್ರಮವುಳ್ಳವನಾಗಿಯೂ, ಸಕಲಧರ್ಮಗಳನ್ನೂ ಬಲ್ಲವನಾಗಿಯೂ, ಬೃಹಸ್ಪತಿಗೆ ಸಮಾನವಾದ ಬುದ್ಧಿಯುಳ್ಳವನಾಗಿಯೂ, ಪ್ರಜಾರಂಜನೆಯಲ್ಲಿ ಸಮರ್ಥನಾಗಿಯೂ, ಸಕಲವಿದ್ಯಾಪಾರಂಗತನಾಗಿಯೂ, ಜಿತೇಂದ್ರಿಯನಾಗಿಯೂ, ಶತ್ರುಗಳ ದೃಷ್ಟಿಗೂ ಮನೋಹರನಾಗಿಯೂ, ಅಸಾಧುಗಳಾದವರನ್ನು ನಿಗ್ರಹಿಸತಕ್ಕವನಾಗಿಯೂ, ಧರ್ಮಾತ್ಮರನ್ನು ರಕ್ಷಿಸತಕ್ಕವನಾಗಿಯೂ, ಧೈರ್ಯಶಾಲಿಯಾಗಿಯೂ, ಮತ್ತೊಬ್ಬರಿಂದ ಜಯಿಸಲಶಕ್ಯನಾಗಿಯೂ, ಕೌಸಲ್ಯಾದೇವಿಗೆ ಸಂತೋಷವನ್ನು ಅಭಿವೃದ್ಧಿಪಡಿಸತಕ್ಕವನಾಗಿಯೂ, ಇರುವ ಪುತ್ರನಾದ ರಾಮನನ್ನು ನೋಡಿ, ಆತನ ಉತ್ತಮವಾದ ಶೌರ್ಯೌದಾರ್ಯಾದಿ ಗುಣಗಳನ್ನು ಯೋಚಿಸಿ, ಆತನಲ್ಲಿ ಅಧಿಕವಾದ ಪ್ರೀತಿಯಿಂದ ವಸಿಷ್ಠರನ್ನು ಕುರಿತು, 'ಎಲೈ ಮಹಾನುಭಾವನೆ, ಈ ರಾತ್ರಿ ಪುಷ್ಯನಕ್ಷತ್ರವು ಪುಣ್ಯತಮವಾದ ಯೋಗದಿಂದ ಕೂಡುವದು. ರಾಮನ ಪಟ್ಟಾಭಿಷೇಕಾರ್ಥವಾಗಿ ಮುಸ್ತೈದುಗಳನ್ನು ಸಿದ್ಧಪಡಿಸಿಕೊಂಡು ಈ ಶುಭಸಮಾಚಾರವನ್ನು ರಾಮನಿಗೆ ತಿಳಿಸಿರಿ' ಎಂದನು. ಆ ಮಾತನ್ನು ಕೇಳಿ ಮಂಥರೆಯು ತನ್ನ ಒಡತಿಯಾದ ಕೈಕಾದೇವಿಯ ಬಳಿಗೆ ಹೋಗಿ 'ಎಲೆ ಮಂದಭಾಗ್ಯಳೆ, ನಿನ್ನ ದೌರ್ಭಾಗ್ಯವು ಈದಿವಸ ಸ್ಪಷ್ಟವಾಯಿತು.

ಘೋರವಾದ ವಿಷವುಳ್ಳ ಸರ್ಪವಾದರೂ ನಿನ್ನನ್ನು ಕಡಿದುಬಿಡಬಾರದೆ? ಕೌಸಲ್ಯೆಯ ಪುಣ್ಯವು ದೊಡ್ಡದು. ಆಕೆಯ ಮಗನಾದ ರಾಮನಿಗೆ ಪಟ್ಟಾಭಿಷೇಕವಾಗುವದು. ನಿನ್ನ ಮಗನಾದ ಭರತನಿಗೆ ರಾಜ್ಯವಿಲ್ಲದೆ ಹೋದರೆ ನಿನಗೆ ಐಶ್ವರ್ಯವೆಲ್ಲಿಂದ ಬಂತು ?' ಎಂದು ಹೇಳಿದಳು. ಆ ಮಾತನ್ನು ಕೇಳಿ ಕೃಶಾಂಗಿಯಾಗಿಯೂ ರೂಪಸಂಪನ್ನೆಯಾಗಿಯೂ ಸರ್ವಾಭರಣಭೂಷಿತೆಯಾಗಿಯೂ ಇದ್ದ ಕೈಕಾದೇವಿಯು ರಹಸ್ಯವಾದ ಸ್ಥಾನದಲ್ಲಿ ತನ್ನ ಪತಿಯಾದ ದಶರಥರಾಯನನ್ನು ನೋಡಿ ನಸುನಗುತ್ತ ಅಧಿಕವಾದ ಪ್ರೀತಿಯನ್ನು ತೋರಿಸಿ 'ಮಹಾರಾಜನೆ, ಸತ್ಯಪ್ರತಿಜ್ಞನಾದ ನೀನು ಪೂರ್ವದಲ್ಲಿ ನನಗೆ ಒಂದು ಇಷ್ಟಾರ್ಥವನ್ನು ಸಲ್ಲಿಸುವಂತೆ ಭಾಷೆ ಕೊಟ್ಟದ್ದೆ. ಈಗ ನನ್ನ ಸಂಕಟವನ್ನು ಪರಿಹರಿಸುವದಕ್ಕೋಸ್ಕರ ಆ ಇಷ್ಟಾರ್ಥವನ್ನು ಸಲ್ಲಿಸು' ಎಂದು ಪ್ರಾರ್ಥಿಸಿದಳು. ಬಳಿಕ ದಶರಥರಾಯನು 'ಎಲೆ ಸತಿಯೆ, ನೀನು ಏನು ವರವನ್ನು ಬೇಡುವೆಯೋ ಅದನ್ನು ನಾನು ಕೊಡುವೆನು. ನೀನು ಅವಧ್ಯರನ್ನು ಸಂಹರಿಸಬೇಕೆಂದರೂ, ವಧ್ಯರನ್ನು ಬಿಡಬೇಕೆಂದರೂ, ನಿನಗೆ ಬೇಕಾದವರಿಗೆ ಧನವನ್ನು ಕೊಡಬೇಕೆಂದರೂ, ಅಥವಾ ಮತ್ತೊಬ್ಬರ ಧನವನ್ನು ಅಪಹರಿಸಬೇಕೆಂದರೂ, ಇವುಗಳನ್ನೆಲ್ಲಾ ನಿನ್ನ ಪ್ರೀತಿಗಾಗಿ ಮಾಡುವೆನು. ಜಾಗ್ರತೆಯಾಗಿ ನಿನ್ನ ಮನೋಗತವನ್ನು ಹೇಳು' ಎನಲು, ಆಗ ಕೈಕೆಯು ಆ ಮಾತನ್ನು ಕೇಳಿ, ತನ್ನ ಬಲಾಬಲಗಳನ್ನು ವಿಚಾರಮಾಡಿಕೊಂಡು, ದಶರಥರಾಯನನ್ನು ಕುರಿತು 'ಮಹಾರಾಜನೆ, ರಾಮನ ಪಟ್ಟಾಭಿಷೇಕಾರ್ಥವಾಗಿ ಸಿದ್ಧಪಡಿಸಿರುವ ಮುಸ್ತೈದುಗಳಿಂದ ಭರತನಿಗೆ ಪಟ್ಟಾಭಿಷೇಕವನ್ನು ಮಾಡು. ರಾಮನನ್ನು ವನವಾಸಕ್ಕೆ ಹೋಗುವಂತೆ ಆಜ್ಞಾಪಿಸು' ಎನಲು, ದಶರಥರಾಯನು ಅಪ್ರಿಯವೂ ಕ್ರೂರವೂ ಆದ ಆ ಕೈಕಾದೇವಿಯ ಮಾತನ್ನು ಕೇಳಿ, ದುಃಖಾಕ್ರಾಂತನಾಗಿ ಏನೂ ಮಾತನಾಡದೆ ಸುಮ್ಮನಿದ್ದನು. ಆಗ ಶೂರನಾದ ರಾಮನು ತಂದೆಯಾದ ದಶರಥರಾಯನಿಗೆ ಕೈಕಾದೇವಿಯು ಹೇಳಿದ ಮಾತನ್ನು ಕೇಳಿ 'ಧರ್ಮಾತ್ಮನಾದ ದಶರಥರಾಯನು ಆಡಿದ ಮಾತನ್ನು ಸತ್ಯವನ್ನಾಗಿ ಮಾಡಿಕೊಳ್ಳಲಿ' ಎಂದು ವನವಾಸಕ್ಕಾಗಿ ಪ್ರಯಾಣಮಾಡಿದನು. ಬಳಿಕ ಧನುಸ್ಸನ್ನು ಧರಿಸಿ ಲಕ್ಷ್ಮಣನೂ ಆತನನ್ನು ಅನುಸರಿಸಿ ಹೊರಟನು. ಪತಿವ್ರತಾಶಿರೋಮಣಿಯಾದ ಜನಕರಾಯನ ಮಗಳಾದ ಸೀತಾದೇವಿಯೂ ಪತಿಯಾದ ರಾಮನನ್ನೇ ಅನುಸರಿಸಿ ವನಕ್ಕೆ ಹೊರಟಳು.

ಬಳಿಕ ದಶರಥರಾಯನು ರಾಮನು ಸೀತಾಲಕ್ಷ್ಮಣರೊಡನೆ ಅರಣ್ಯಕ್ಕೆ ಹೋದದ್ದನ್ನು ನೋಡಿ ಆ ವ್ಯಸನದಿಂದ ಕಾಲಧರ್ಮವನ್ನು ಹೊಂದಿದನು. ಬಳಿಕ ಕೈಕಾದೇವಿಯು ಸೋದರಮಾವನ ಮನೆಗೆ ಹೋಗಿದ್ದ ಭರತನನ್ನು ಕರೆಯಿಸಿ ಆತನನ್ನು ಕುರಿತು 'ಎಲೈ ಮಗನೆ, ನಿಮ್ಮ ತಂದೆಯಾದ ದಶರಥರಾಯನು ಸ್ವರ್ಗಸ್ಥನಾದನು. ರಾಮನು ಸೀತಾಲಕ್ಷ್ಮಣರೊಡನೆ ವನವಾಸಾರ್ಥವಾಗಿ ಹೋದನು. ಈಗ ಈ ರಾಜ್ಯವು ಕ್ಷೇಮವಾಗಿಯೂ ನಿಷ್ಕಂಟಕವಾಗಿಯೂ ಇರುವದು. ಇದನ್ನು ನೀನು ಸುಖವಾಗಿ ರಕ್ಷಿಸು' ಎಂದಳು. ಆಮಾತನ್ನು ಕೇಳಿ ಧರ್ಮಾತ್ಮನಾದ ಭರತನು 'ಆಹಾ! ಈ ದುಷ್ಟಸ್ತ್ರೀಯು ಧನಲೋಭದಿಂದ ಪತಿಯನ್ನು ಸಂಹರಿಸಿ, ನಮ್ಮ ಕುಲಕ್ಕೆ ಹಾನಿಯನ್ನು ತಂದು, ನನ್ನನ್ನು ಅಪಕೀರ್ತಿಗೆ ಗುರಿಮಾಡಿದಳು!' ಎಂದು ಚಿಂತಾಕ್ರಾಂತನಾಗಿ ವ್ಯಸನಪಡುತ್ತ 'ಎಲೆ ತಾಯೆ, ನಿನ್ನ ಮನೋರಥವುಸಫಲವಾಯಿತೆ? ಇನ್ನು ನೀನು ಸುಖವಾಗಿರಬಹುದು' ಎಂದು ನುಡಿದು, ರೋದನಮಾಡಿ, ತನ್ನ ಸಚ್ಚರಿತ್ರೆಯನ್ನು ಸಕಲರಿಗೂ ಪ್ರಕಾಶಮಾಡಬೇಕೆಂದು ನಿಶ್ಚಯಿಸಿ, ವನವಾಸಕ್ಕೆ ಹೋದ ರಾಮನನ್ನು ಹಿಂದಕ್ಕೆ ಕರೆದುಕೊಂಡು ಬರಬೇಕೆಂದು ಕೌಸಲ್ಯಾ, ಕೈಕಾ, ಸುಮಿತ್ರೆಯರನ್ನು ವಾಹನಗಳಲ್ಲಿ ಕುಳ್ಳಿರಿಸಿ ಮುಂದೆಕಳುಹಿಸಿ, ವಸಿಷ್ಠ ವಾಮದೇವ ಮೊದಲಾದ ಋಷಿಗಳಿಂದಲೂ ಪುರಜನರಿಂದಲೂ ಸೈನಿಕರಿಂದಲೂ ಶತ್ರುಘ್ನನಿಂದಲೂ ಸಹ ಕೂಡಿ ತಾನೂ ಅರಣ್ಯಕ್ಕೆ ಹೊರಟು, ಚಿತ್ರಕೂಟ ಪರ್ವತದಲ್ಲಿ ಸೀತಾಲಕ್ಷ್ಮಣರೊಡನೆ ತಪಸ್ವಿಗಳ ವೇಷವನ್ನು ಧರಿಸಿ ಧನುರ್ಧರನಾಗಿರುವ ರಾಮನನ್ನು ಕಂಡು, ಆತನನ್ನು ಹಿಂತಿರುಗಿಸುವದಕ್ಕೆ ಎಷ್ಟು ಪ್ರಯತ್ನ ಮಾಡಿದರೂ ಆಗದೆ ಆತನ ಅನುಜ್ಞೆಯಿಂದ ಆತನ ಪಾದುಕೆಗಳನ್ನು ಸ್ವೀಕರಿಸಿ, ಅಲ್ಲಿಂದ ಮರಳಿ ಬಂದು ನಂದಿಗ್ರಾಮದಲ್ಲಿ ರಾಜ್ಯಭಾರ ಮಾಡುತ್ತಿದ್ದನು. ಅತ್ತ ರಾಮನು ತಾನು ಚಿತ್ರಕೂಟದಲ್ಲಿದ್ದರೆ ಪುರಜನರು ಬಾರಿಬಾರಿಗೂ ಅಲ್ಲಿಗೆ ಬರುತ್ತಲೇ ಇರುವರು ಎಂದು ಯೋಚಿಸಿ ಮಹತ್ತಾದ ಅರಣ್ಯವನ್ನು ಪ್ರವೇಶಿಸಿ, ಶರಭಂಗಮಹರ್ಷಿಗಳ ಆಶ್ರಮಕ್ಕೆ ಹೋಗಿ,

ಅವರು ಮಾಡಿದ ಸತ್ಕಾರವನ್ನು ಸ್ವೀಕರಿಸಿ, ದಂಡಕಾರಣ್ಯವನ್ನು ಪ್ರವೇಶಮಾಡಿ ರಮ್ಯವಾದ ಗೋದಾವರೀನದಿಯ ತೀರದಲ್ಲಿ ವಾಸಮಾಡುತ್ತ, ದುಷ್ಟಳಾದ ಶೂರ್ಪಣಖೆಯ ಕಿವಿ ಮೂಗುಗಳನ್ನು ಛೇದಿಸಿ, ಆ ನಿಮಿತ್ತದಿಂದ ಜನಸ್ಥಾನವಾಸಿಗಳಾದ ಖರದೂಷಣಾದಿಗಳ ಸಂಗಡ ದ್ವೇಷವನ್ನು ಮಾಡಿಕೊಂಡು, ಬಳಿಕ ತಪಸ್ವಿಗಳ ಸಂರಕ್ಷಣಾರ್ಥವಾಗಿ ಹದಿನಾಲ್ಕು ಸಾವಿರ ರಾಕ್ಷಸರೊಡಗೂಡಿದ ಮಹಾಬಲಿಷ್ಠರಾದ ಆ ಖರದೂಷಣರನ್ನು ಸಂಹಾರಮಾಡಿ, ದಂಡಕಾರಣ್ಯವನ್ನು ಧರ್ಮಾರಣ್ಯವನ್ನಾಗಿ ಮಾಡಿದನು. ಆ ಖರದೂಷಣಾದಿಗಳು ಹತರಾಗಲು, ಶೂರ್ಪಣಖೆಯು ದುಃಖಾಕ್ರಾಂತಳಾಗಿ ಲಂಕಾಪಟ್ಟಣಕ್ಕೆ ಹೋಗಿ ರಾವಣನನ್ನು ಕಂಡು ಮುಖದಲ್ಲಿ ನೇತ್ರರನ್ನು ಸುರಿಸುತ್ತ ಆತನ ಪಾದದ ಮೇಲೆ ಬಿದ್ದಳು. ಆಗ ವಿಕಾರವಾದ ಮುಖವುಳ್ಳ ಶೂರ್ಪಣಖೆಯನ್ನು ನೋಡಿ, ರಾವಣನು ಕೋಪಾವೇಶದಿಂದ ಹಲ್ಲುಗಳನ್ನು ಕಡಿಯುತ್ತ ಸಿಂಹಾಸನದಿಂದ ಮೇಲಕ್ಕೆದ್ದು, ಏಕಾಂತಸ್ಥಳದಲ್ಲಿ ಶೂರ್ಪಣಖೆಯನ್ನು ಕುರಿತು “ ಎಲೌ ಭದ್ರೆಯೆ, ನನ್ನನ್ನು ಲಕ್ಷ್ಯಮಾಡದೆ ತಿರಸ್ಕರಿಸಿ ಯಾವನು ನಿನಗೆ ಇಂಥ ವಿಕಾರವನ್ನು ಮಾಡಿದವನು? ಆ ಪುರುಷನು ತೀಕ್ಷ್ಣವಾದ ಶೂಲಾಯುಧದಿಂದ ತನ್ನ ದೇಹವನ್ನೆಲ್ಲಾ ತಿವಿದುಕೊಂಡಹಾಗೆ ಮಾಡಿಕೊಂಡನಲ್ಲಾ? ಆತನು ಶಿರಸ್ಸಿನ ಕೆಳಗೆ ವಿಶ್ವಾಸದಿಂದ ಬೆಂಕಿಯನ್ನು ಇಟ್ಟುಕೊಂಡು ಮಲಗಿದನಲ್ಲಾ! ವಿಷಜ್ವಾಲೆಯುಳ್ಳ ಸರ್ಪವನ್ನು ಕಾಲಿನಿಂದ ತುಳಿದನಲ್ಲಾ! ಆತನು ಹಿಂಸೆಮಾಡತಕ್ಕ ಸಿಂಹದ ಕೋರೆಯ ಹಲ್ಲನ್ನು ಮುಟ್ಟಿ ನಷ್ಟನಾದನಲ್ಲಾ!’ ಎಂದು ನುಡಿಯುತ್ತಿರಲು, ರಾತ್ರಿಕಾಲದಲ್ಲಿ ಕಾಡುಕಿಚ್ಚು ಹತ್ತಿ ಮರದ ಕಂಡಿಗಳಿಂದ ಅಗ್ನಿಜ್ವಾಲೆಯು ಹೊರಡುವಂತೆ ಆತನ ಕಣ್ಣುಗಳ ರಂಧ್ರಗಳಿಂದ ಕೋಪದ ಉರಿಯು ಹೊರಟಿತು. ಬಳಿಕ ಶೂರ್ಪಣಖೆಯು ರಾವಣನಿಗೆ ರಾಮನು ತನ್ನ ಕಿವಿಮೂಗುಗಳನ್ನು ಕತ್ತರಿಸಿದ್ದನ್ನೂ ಖರದೂಷಣರೇ ಮೊದಲಾದ ರಾಕ್ಷಸರನ್ನು ಸಂಹರಿಸಿದ್ದನ್ನೂ ಸಹ ತಿಳುಹಿಸಿದಳು. ಅದನ್ನು ಕೇಳಿ ರಾವಣನು ತನ್ನ ತಂಗಿಯಾದ ಶೂರ್ಪಣಖೆಯನ್ನು ಸಮಾಧಾನಪಡಿಸಿ, ಮುಂದೆ ಮಾಡತಕ್ಕ ಕಾರ್ಯವನ್ನು ನಿಶ್ಚಯಿಸಿಕೊಂಡು, ತನ್ನ ರಾಜಧಾನಿಯ ಸಂರಕ್ಷಣೆಗಾಗಿ ರಾಕ್ಷಸರನ್ನು ಗೊತ್ತುಮಾಡಿ, ಮಾಯೆಯಿಂದ ಆಕಾಶಮಾರ್ಗಕ್ಕೆ ಹಾರಿ, ತ್ರಿಕೂಟಪರ್ವತವನ್ನೂ ಕಾಲಪರ್ವತವನ್ನೂ ಅತಿಕ್ರಮಿಸಿ, ಜಲಚರಪ್ರಾಣಿಗಳಿಗೆ ಆಶ್ರಯವಾದ ಸಮುದ್ರವನ್ನು ದಾಟಿ, ಶೂಲಪಾಣಿಯಾದ ಮಹಾತ್ಮನಾದ ಈಶ್ವರನಿಗೆ ಆವಾಸಸ್ಥಾನವಾದ ಗೋಕರ್ಣಕ್ಕೆ ಹೋಗಿ, ಪೂರ್ವದಲ್ಲಿ ರಾಮನ ಭಯದಿಂದ ತಪಸ್ಸು ಮಾಡಿಕೊಂಡಿರತಕ್ಕ ತನ್ನ ಪೂರ್ವಮಂತ್ರಿಯಾದ ಮಾರೀಚನೆಂಬ ರಾಕ್ಷಸನನ್ನು ನೋಡಿದನು” ಎಂದು ಮಾರ್ಕಂಡೇಯನು ಧರ್ಮರಾಯನಿಗೆ ಹೇಳಿದನು.

## ೨೭೭ನೇ ಅಧ್ಯಾಯ.—ರಾಮೋಪಾಖ್ಯಾನ—(ರಾವಣನು ಸೀತೆಯನ್ನು ಅಪಹರಿಸಿದ್ದು.)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಬಳಿಕ ಮಾರ್ಕಂಡೇಯನು ಧರ್ಮರಾಯನನ್ನು ನೋಡಿ “ ಎಲೈ ಧರ್ಮರಾಯನೆ, ಮಾರೀಚನು ರಾವಣನನ್ನು ನೋಡಿ, ಸಂಭ್ರಾಂತನಾಗಿ ಪ್ರತ್ಯುತ್ಥಾನಮಾಡಿ ಕಂದಮೂಲಾದಿಗಳಿಂದ ಸತ್ಕರಿಸಿ ಪೀಠವನ್ನು ಕೊಟ್ಟನು. ಆ ರಾವಣನು ಪೀಠದಮೇಲೆ ಕೂತಿರಲು, ಮಾರೀಚನು ಸಮಯೋಚಿತವಾದ ಮಾತನ್ನು ಬಲ್ಲವನಾದ್ದರಿಂದ ರಾವಣನನ್ನು ಕುರಿತು ‘ ಎಲೈ ರಾಕ್ಷಸೇಶ್ವರನೆ, ಯಾತಕ್ಕೆ ನಿನ್ನ ಮುಖವು ಬಾಡಿರುವದು? ಪೂರ್ವದಂತೆ ನೀನು ಕ್ಷೇಮವಾಗಿರುವೆಯೂ? ಪೂರ್ವದಂತೆ ರಾಕ್ಷಸರೆಲ್ಲರೂ ನಿನ್ನನ್ನು ಸೇವಿಸಿಕೊಂಡಿರುವರೆ? ಯಾವ ಕಾರ್ಯಕ್ಕಾಗಿ ನೀನು ಇಲ್ಲಿಗೆ ಬಂದಿರುವೆ? ಆ ಕಾರ್ಯವು ಎಷ್ಟು ಕಷ್ಟವಾಗಿದ್ದರೂ ನನ್ನಿಂದ ಆಗತಕ್ಕದ್ದಾಗಿದ್ದರೆ ಆಯಿತೆಂದು ತಿಳಿ ’ ಎಂದನು. ಬಳಿಕ ರಾವಣನು ಕ್ರೋಧಾವೇಶದಿಂದ ಕೂಡಿ ರಾಮನು ತನಗೆ ಮಾಡಿದ ಅಪಕಾರವನ್ನೆಲ್ಲಾ ಸೂಕ್ಷ್ಮವಾಗಿ ಆತನಿಗೆ ಹೇಳಿದನು. ಅದನ್ನುಕೇಳಿ ಮಾರೀಚನು ‘ ಎಲೈ ರಾವಣನೆ, ರಾಮನ ಪರಾಕ್ರಮವನ್ನು ನಾನು ಬಲ್ಲೆ. ಆ ಮಹಾತ್ಮನ ಬಾಣವೇಗವನ್ನು ಲೋಕದಲ್ಲಿ ಯಾರು ಸಹಿಸಬಲ್ಲರು? ನಾನು ಇಲ್ಲಿಗೆ ಓಡಿಬರುವದಕ್ಕೆ ಆತನೇ ಕಾರಣನು. ನೀನು ರಾಮನ ಗೊಡವೆಗೆ ಹೋಗಬೇಡ. ಯಾವ ದುರಾತ್ಮನು ಮೃತ್ಯುಸ್ವರೂಪನಾದ ರಾಮನ ಗೋಜಿಗೆ

ಹೋಗೆಂದು ನಿನಗೆ ಹೇಳಿದನು ?' ಎನಲು, ರಾವಣನು ಆ ಮಾರೀಚನನ್ನು ಜಬರಿಸಿ ಕೋಪಗೊಂಡು 'ಎಲೈ ಮಾರೀಚನೆ, ನನ್ನ ಮಾತನ್ನು ನೀನು ನಡಿಸದೆ ಹೋದರೆ ನಿನಗೆ ಮರಣವು ನಿಶ್ಚಯವಾಗಿ ಉಂಟಾಗುವದು' ಎಂದನು. ಅದನ್ನು ಕೇಳಿ ಮಾರೀಚನು ಈ ನೀಚನಿಂದ ಮರಣವನ್ನು ಹೊಂದುವದಕ್ಕಿಂತಲೂ ಶ್ರೇಷ್ಠನಾದ ರಾಮನಿಂದ ಮರಣವನ್ನು ಹೊಂದುವದು ಉತ್ತಮವಾದದ್ದೆಂದು ಚಿಂತಿಸಿ, ಈಗ ಹ್ಯಾಗಾದರೂ ತನಗೆ ಮರಣವು ಪ್ರಾಪ್ತವಾಗಿರುವದರಿಂದ ರಾವಣನ ಅಭಿಪ್ರಾಯದಂತೆಯೇ ನಡೆಯೋಣವೆಂದು ನಿಶ್ಚಯಿಸಿಕೊಂಡು, ಬಳಿಕ ರಾವಣನನ್ನು ಕುರಿತು 'ಎಲೈ ರಾವಣನೆ, ಈಗ ನಾನು ನಿನ್ನ ಅಧೀನನಾಗಿರುವೆನು. ನನ್ನಿಂದ ನಿನಗೇನು ಸಹಾಯವಾಗಬೇಕೋ ಅದನ್ನು ನಾನು ಮಾಡುತ್ತೇನೆ' ಎಂದನು. ಬಳಿಕ ರಾವಣನು 'ಎಲೈ ಮಾರೀಚನೆ, ನೀನು ದಂಡಕಾರಣ್ಯಕ್ಕೆ ಹೋಗಿ , ರತ್ನಮಯವಾದ ಶೃಂಗವೂ ಶರೀರವೂ ಉಳ್ಳ ಮೃಗರೂಪವನ್ನು ಧರಿಸಿ ಸೀತೆಯು ನಿನ್ನನ್ನು ನೋಡಿ ಬಯಸುವಂತೆ ಮಾಡು. ಬಳಿಕ ಆಕೆಯು ನಿನ್ನನ್ನು ಹಿಡಿದುಕೊಂಡು ಬರುವಂತೆ ರಾಮನಿಗೆ ಪ್ರೇರಿಸುವಳು. ಆಗ ನೀನು ರಾಮನನ್ನು ವಂಚಿಸಿ ಆತನನ್ನು ದೂರವಾಗಿ ಎಳೆದುಕೊಂಡು ಹೋಗು. ಹೀಗೆ ರಾಮನು ದೂರವಾಗಿ ಹೊರಟು ಹೋದಬಳಿಕ ಸೀತೆಯು ನನಗೆ ಸ್ವಾಧೀನಳಾಗುವಳು. ಆಗ ನಾನು ಆಕೆಯನ್ನು ಅಪಹರಿಸಿಕೊಂಡು ಹೊರಟು ಹೋಗುತ್ತೇನೆ. ಆಬಳಿಕ ಆಕೆಯನ್ನಗಲಿ ದುರ್ಬುದ್ಧಿಯಾದ ರಾಮನು ಆ ವ್ಯಸನದಿಂದಲೇ ನಷ್ಟನಾಗಿ ಹೋಗುವನು' ಎಂದನು. ಆ ಮಾತನ್ನುಕೇಳಿ ಮಾರೀಚನು ತನಗೆ ಮರಣವನ್ನು ನಿಶ್ಚಯಮಾಡಿಕೊಂಡು, ದುಃಖಪಡುತ್ತ ರಾವಣನ ಸಂಗಡ ದಂಡಕಾರಣ್ಯಕ್ಕೆ ಹೋದನು. ಆಗ ಅವರಿಬ್ಬರೂ ತಾವು ಮೊದಲು ಯೋಚಿಸಿದಂತೆ ಮಾಡುವದಕ್ಕೆ ಉಪಕ್ರಮಮಾಡಿದರು.

ಅನಂತರದಲ್ಲಿ ಮಾರೀಚನು ರತ್ನಮಯವಾದ ಮೃಗದ ರೂಪವನ್ನು ತಾಳಿ ಸೀತಾದೇವಿಯ ಎದುರಿಗೆ ತಿರುಗಾಡುತ್ತಿರಲು, ಅದನ್ನು ಕಂಡು ಸೀತೆಯು ದೈವಗತಿಯಿಂದ ಆ ಮೃಗವನ್ನು ಹಿಡಿದುಕೊಂಡು ಬರುವಂತೆ ರಾಮನನ್ನು ಪ್ರೇರಿಸಿದಳು. ರಾಮನು ಸೀತೆಯ ಪ್ರೀತಿಗೋಸ್ಕರ ಧನುಸ್ಸನ್ನೂ ಖಡ್ಗವನ್ನೂ ಧರಿಸಿಕೊಂಡು ಆಕೆಯ ಕಾವಲಿಗೆ ಲಕ್ಷ್ಮಣನನ್ನು ನೇಮಿಸಿ, ರುದ್ರನು ತಾರಾಮೃಗವನ್ನು ಅಟ್ಟಿಕೊಂಡು ಹೋದಂತೆ ಆ ವಿಚಿತ್ರವಾದ ಮೃಗವನ್ನು ಅಟ್ಟಿಕೊಂಡು ಹೋದನು. ಆಗ ಆ ಮೃಗವು ಹಾಗೆಯೇ ಮರೆಯಾಗುತ್ತ ಅಲ್ಲಲ್ಲಿ ಸುತ್ತುತ್ತ ಗಟ್ಟಿಯಾಗಿ ಕೂಗಲು ; ಸೂಕ್ಷ್ಮಬುದ್ಧಿಯಾದ ರಾಮನು ಅದು ಮೃಗದ ಧ್ವನಿಯಲ್ಲವೆಂದೂ ರಾಕ್ಷಸನ ಧ್ವನಿಯೇ ಎಂದೂ ನಿಶ್ಚಯಿಸಿ, ಅಮೋಘವಾದ ಬಾಣವನ್ನು ಧನುಸ್ಸಿನಲ್ಲಿ ಸಂಧಾನಮಾಡಿ ಅದರಿಂದ ಆ ಮೃಗವನ್ನು ಹೊಡೆದನು. ಆಗ ಆ ಮೃಗವು 'ಹಾ ಲಕ್ಷ್ಮಣಾ! ಹಾ ಸೀತೆ !' ಎಂದು ರಾಮನ ಧ್ವನಿಗೆ ಸಮಾನವಾಗಿ ದೀನವಾಗಿ ಕೂಗಿಕೊಂಡು ಹಾಗೆಯೇ ಮರಣವನ್ನು ಹೊಂದಿತು. ಆ ದೀನಧ್ವನಿಯನ್ನು ಕೇಳಿ ಪರ್ಣಶಾಲೆಯಲ್ಲಿದ್ದ ಸೀತೆಯು ಭಯಪಟ್ಟು ಯಾವದಿಕ್ಕಿನಲ್ಲಿ ಆ ಧ್ವನಿಯಾಯಿತೋ ಆ ದಿಕ್ಕಿಗೆ ಓಡಿಹೋಗುವದಕ್ಕೆ ಯತ್ನಿಸಿದಳು. ಅದನ್ನು ನೋಡಿ ಲಕ್ಷ್ಮಣನು 'ಎಲೌ ಭೀರುವೆ, ಯಾತಕ್ಕೆ ನೀನು ಹೀಗೆ ಶಂಕೆಪಡುವೆ? ರಾಮನನ್ನು ಹೊಡೆಯತಕ್ಕವರು ಯಾರು ? ಒಂದು ಮುಹೂರ್ತದೊಳಗಾಗಿ ಆತನು ಇಲ್ಲಿಗೆ ಬರುವನು. ನೀನು ಕಳವಳಪಡಬೇಡ' ಎಂದನು. ಆ ಮಾತನ್ನು ಕೇಳಿ ಸೀತೆಯು ರೋದನ ಮಾಡುತ್ತ, ಲಕ್ಷ್ಮಣನನ್ನು ಮತ್ತೊಂದುಪ್ರಕಾರ ಶಂಕಿಸುತ್ತ, ಪತಿವ್ರತೆಯಾಗಿದ್ದರೂ ನಾನು ಸ್ತ್ರೀಸ್ವಭಾವದಿಂದ ಕೆಟ್ಟೆನಲ್ಲಾ ಎಂದು ದುಃಖಪಡುತ್ತ 'ಎಲೈ ಲಕ್ಷ್ಮಣನೆ, ನನ್ನನ್ನು ನೀನು ಅಪೇಕ್ಷಿಸುವದು ಯುಕ್ತವಾದದ್ದಲ್ಲ. ಶಸ್ತ್ರದಿಂದಲಾದರೂ, ಪರ್ವತವನ್ನೇರಿ ಅಲ್ಲಿಂದ ಬಿದ್ದಾದರೂ, ಅಗ್ನಿಪ್ರವೇಶವನ್ನು ಮಾಡಿಯಾದರೂ, ಪ್ರಾಣವನ್ನು ಕಳೆದುಕೊಳ್ಳುವಳೇ ಹೊರತು ಪತಿಯಾದ ರಾಮನನ್ನು ಹೊರತು ಹೆಣ್ಣುಹುಲಿಯು ನರಿಯನ್ನು ಸೇರುವಹಾಗೆ ಹೀನನಾದ ನಿನ್ನನ್ನು ಸೇರತಕ್ಕವಳಲ್ಲ' ಎಂದು ಕಠಿನವಾಗಿ ಮಾತನಾಡಿದಳು. ಅದನ್ನು ಕೇಳಲಾರದೆ ಎರಡು ಕಿವಿಗಳನ್ನೂ ಮುಚ್ಚಿಕೊಂಡು, ಲಕ್ಷ್ಮಣನು ಧನುರ್ಧಾರಿಯಾಗಿ ಸೀತೆಯನ್ನು ನೋಡಲಾರದೆ ರಾಮನ ಹೆಜ್ಜೆಯ ಗುರುತನ್ನು ಹಿಡಿದುಕೊಂಡು ಅತ್ತಲಾಗಿ ತೆರಳಿದನು. ಆ ಸಮಯದಲ್ಲಿ ದುಷ್ಟನಾದ ರಾವಣನು ಬೂದಿಮುಚ್ಚಿದ ಕೆಂಡದಂತೆ ನಿಜರೂಪನ್ನು ಮರೆಮಾಡಿಕೊಂಡು, ತ್ರಿದಂಡಸನ್ಯಾಸಿಯ ವೇಷವನ್ನು

ಧರಿಸಿ ದಂಡಕವುಂಡಲುಗಳನ್ನು ತಾಳಿ ಸೀತೆಯನ್ನು ಅಪಹರಿಸಬೇಕೆಂಬ ಬುದ್ಧಿಯಿಂದ ಆಕೆಯಿದ್ದ ಪರ್ಣಶಾಲೆಗೆ ಬಂದನು. ಆತನನ್ನು ಕಂಡು ಧರ್ಮಜ್ಞಳಾದ ಸೀತೆಯು ಶೀಘ್ರವಾಗಿ ಎದ್ದು ಕಂದಮೂಲಾದಿಗಳಿಂದ ಸತ್ಕಾರವನ್ನು ಮಾಡಲು, ಅದನ್ನು ತಿರಸ್ಕರಿಸಿ ರಾವಣನು ನಿಜರೂಪವನ್ನು ಹೊಂದಿ ಸೀತೆಯನ್ನು ಕುರಿತು 'ಎಲೆ ಸೀತೆ, ನಾನು ರಾಕ್ಷಸೇಶ್ವರನಾದ ರಾವಣನು. ನನ್ನನ್ನು ನೀನು ಕೇಳಬಲ್ಲೆಯಷ್ಟೆ? ಸಮುದ್ರಮಧ್ಯದಲ್ಲಿ ಲಂಕೆಯೆಂಬ ನನ್ನ ಪಟ್ಟಣವಿರುವದು. ತಪಸ್ವಿಯಾಗಿ ದೀನನಾಗಿ ವನವಾಸ ಮಾಡಿಕೊಂಡಿರುವ ರಾಮನನ್ನು ಬಿಟ್ಟು ನೀನು ನನ್ನೊಡನೆ ಲಂಕಾಪಟ್ಟಣಕ್ಕೆ ಬಂದು ನನಗೆ ರಾಣಿಯಾಗಿ ಅನೇಕಸ್ತ್ರೀಯರ ಮಧ್ಯದಲ್ಲಿ ಶೋಭಿಸುವಳಾಗು' ಎಂದು ನಾನಾವಿಧವಾದ ದುರ್ಭಾಷೆಗಳನ್ನು ಆಡಿದನು. ಅದನ್ನು ಕೇಳಲಾರದೆ ಸೀತೆಯು ಕಿವಿಗಳನ್ನು ಮುಚ್ಚಿಕೊಂಡು 'ಎಲೈ ಪಾಪಾತ್ಮನೆ, ಇಂಥ ಮಾತುಗಳನ್ನು ಆಡಬೇಡ. ನಕ್ಷತ್ರಗಳೊಡಗೂಡಿರುವ ಆಕಾಶವಾದರೂ ನೆಲದಮೇಲೆ ಬಿದ್ದೀತು, ಬೆಂಕಿಯಾದರೂ ತಣ್ಣಗಾದೀತು: ರಾಮನನ್ನು ನಾನು ಬಿಡತಕ್ಕವಳೆ? ಹೆಣ್ಣಾನೆಯು ಮದಿಸಿ ವನದಲ್ಲಿ ಸಂಚರಿಸುತ್ತಿರುವ ಸಲಗವನ್ನು ಬಿಟ್ಟು ಹಂದಿಯನ್ನು ಸ್ಪರ್ಶಮಾಡೀತೆ? ಯಾವ ಸ್ತ್ರೀಯಾದರೂ ಪುಷ್ಪಾಸವವನ್ನೂ ಮಧ್ವಾಸವವನ್ನೂ ಪಾನಮಾಡಿ ಗಂಜಿಯನ್ನು ಅಪೇಕ್ಷಿಸುವಳೆ?' ಎಂದು ನುಡಿದು, ಕೋಪದಿಂದ ತುಟಿಗಳನ್ನು ನಡುಗಿಸುತ್ತಲೂ ಕೈಗಳನ್ನು ಅಡಿಗಡಿಗೆ ಒದರುತ್ತಲೂ ಆಶ್ರಮದೊಳಕ್ಕೆ ಪ್ರವೇಶಿಸಿದಳು. ಆಗ ಪಾಪಾತ್ಮನಾದ ರಾವಣನು ಆಕೆಯನ್ನು ಅಟ್ಟಿಕೊಂಡು ಹೋಗಿ, ಘೋರವಾದ ಶಬ್ದದಿಂದ ಜಬರಿಸಿ ಆಕೆಯ ಕೇಶಪಾಶವನ್ನು ಹಿಡಿದು ಎತ್ತಿಕೊಂಡು, ಆಕಾಶಮಾರ್ಗದಲ್ಲಿ ಲಂಕಾಪಟ್ಟಣಕ್ಕೆ ಅಭಿಮುಖವಾಗಿ ಹೊರಟನು. ಆಗ ಮಹಾತ್ಮಳಾದ ಸೀತೆಯು 'ರಾಮಾ! ರಾಮಾ!' ಎಂದು ರೋದನಮಾಡುತ್ತಿರಲು, ಆ ಶಬ್ದವನ್ನು ಕೇಳಿ ಪರ್ವತವಾಸಿಯಾದ ಜಟಾಯುವೆಂಬ ಗೃಧ್ರರಾಜನು ಒಡನೆ ರಾವಣನು ಅಪಹರಿಸಿಕೊಂಡು ಹೋಗುತ್ತಿದ್ದ ಸೀತೆಯನ್ನು ಕಂಡನು" ಎಂದು ಮಾರ್ಕಂಡೇಯನು ಧರ್ಮರಾಯನಿಗೆ ಹೇಳಿದನು.

## ೭೭೮ನೇ ಅಧ್ಯಾಯ.—ರಾಮೋಪಾಖ್ಯಾನ—(ವಿಶ್ವಾವಸು ಶಾಪ ಮೋಕ್ಷಣ.)

ಬಳಿಕ ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಆಗ ದಶರಥರಾಯನಿಗೆ ಸ್ನೇಹಿತನೂ ಅರುಣನಿಗೆ ಮಗನೂ ಸಂಪಾತಿಗೆ ಒಡಹುಟ್ಟಿದವನೂ ಆದ ಜಟಾಯುವು ದಶರಥರಾಯನ ಸೊಸೆಯಾದ ಸೀತಾದೇವಿಯು ರಾವಣನ ತೊಡೆಯಮೇಲೆ ಇದ್ದದ್ದನ್ನು ನೋಡಿ, ಅಧಿಕವಾದ ಕೋಪದಿಂದ ರಾವಣನನ್ನು ಕುರಿತು 'ಎಲೈ ರಾವಣನೆ, ಜನಕರಾಜಪುತ್ರಿಯಾದ ಸೀತಾದೇವಿಯನ್ನು ಬಿಟ್ಟುಬಿಡು. ನಾನು ಬದುಕಿರುವ ಕಾಲದಲ್ಲಿ ಈಕೆಯನ್ನು ನೀನು ಹ್ಯಾಗೆ ಅಪಹರಿಸುವೆ? ಈಕೆಯನ್ನು ನೀನು ಬಿಡದೆಹೋದ ಪಕ್ಷದಲ್ಲಿ, ನಿನ್ನನ್ನು ಜೀವಸಹಿತವಾಗಿ ಬೇರೆ ನಾನು ಬಿಡತಕ್ಕವನಲ್ಲ' ಎಂದು ನುಡಿದು, ತನ್ನ ತೀಕ್ಷ್ಣವಾದ ಉಗುರುಗಳಿಂದಲೂ ಕೊಕ್ಕಿನಿಂದಲೂ ರಾವಣನ ಶರೀರವು ಸೀಳಿಹೋಗುವಂತೆ ಘಾಸಿಮಾಡಿದನು. ಹೀಗೆ ರಾಮನಿಗೆ ಪ್ರಿಯವಾಗಬೇಕೆಂದು ಹೊಡೆದಾಡುತ್ತಿರುವ ಜಟಾಯುವಿನಿಂದ ಪೆಟ್ಟುತಿಂದ ರಾವಣನು ಪರ್ವತದಿಂದ ನದಿಯು ಹರಿಯುವಂತೆ ತನ್ನ ಶರೀರದಿಂದ ರಕ್ತಪ್ರವಾಹವು ಹರಿಯುತ್ತಿರಲು ತೀಕ್ಷ್ಣವಾದ ಖಡ್ಗದಿಂದ ಜಟಾಯುವಿನ ರೆಕ್ಕೆಗಳನ್ನು ಕತ್ತರಿಸಿ, ಪರ್ವತಶಿಖರವನ್ನು ಕೆಳಕ್ಕೆ ಕೆಡವುವಂತೆ ಆತನನ್ನು ನೆಲದಮೇಲೆ ಕೆಡಹಿ, ಪುನಃ ಸೀತೆಯನ್ನು ತೊಡೆಯಮೇಲೆ ಕುಳ್ಳಿರಿಸಿಕೊಂಡು ಆಕಾಶಮಾರ್ಗದಲ್ಲಿ ಹೊರಟನು. ಆ ವೇಳೆಯಲ್ಲಿ ಸೀತೆಯು ಯಾವಯಾವ ಪ್ರದೇಶದಲ್ಲಿ ಋಷ್ಯಾಶ್ರಮಗಳನ್ನೂ ಸರೋವರಗಳನ್ನೂ ನದಿಗಳನ್ನೂ ನೋಡುವಳೋ ಅಲ್ಲಲ್ಲಿ ತನ್ನ ಆಭರಣಗಳನ್ನು ಬಿಸಾಡುತ್ತ ಒಂದು ಪರ್ವತದ ಶಿಖರದಲ್ಲಿ ಕೂತಿದ್ದ ಐದುಮಂದಿ ಕಪಿಶ್ರೇಷ್ಠರನ್ನು ಕಂಡು ತನ್ನ ಮೇಲು ಹೊದ್ದಿಕೆಯಲ್ಲಿ ತನ್ನ ಕೆಲವು ಆಭರಣಗಳನ್ನು ಕಟ್ಟಿ ಆ ಗಂಟನ್ನು ಅವರ ಮಧ್ಯದಲ್ಲಿ ಬಿಸಾಡಿದಳು. ಆ ಆಭರಣದ ಗಂಟು ಆ ಕಪಿಗಳ ಮಧ್ಯದಲ್ಲಿ ಬಿದ್ದು ಮೇಘದಲ್ಲಿ ಹೊಳೆಯುವ ಮಿಂಚಿನಂತೆ ಹೊಳೆಯುತ್ತಿತ್ತು.

ಆಗ ರಾವಣನು ಅತಿವೇಗದಿಂದ ಆಕಾಶದಲ್ಲಿ ಹೊರಟು ಅನೇಕವಾದ ಬಾಗಿಲುಗಳಿಂದಲೂ ಮಹತ್ತಾದ ಕೋಟೆಯಿಂದಲೂ ದುರ್ಗಮವಾದ ವಿಶ್ವಕರ್ಮನಿಂದ ನಿರ್ಮಿತವಾದ ಮನೋಹರವಾದ ಲಂಕಾಪಟ್ಟಣವನ್ನು ಪ್ರವೇಶಮಾಡಿದನು.

ಈ ಪ್ರಕಾರ ರಾವಣನು ಸೀತಾಪಹಾರವನ್ನು ಮಾಡಲು, ಅತ್ತಲು ಶ್ರೀರಾಮನು ಆ ಮಾಯಾಮೃಗವನ್ನು ಸಂಹರಿಸಿ ಅಲ್ಲಿಂದ ಮರಳಿ, ಮಾರ್ಗದಲ್ಲಿ ಲಕ್ಷ್ಮಣನು ಬರುವದನ್ನು ನೋಡಿ 'ಎಲೈ ಲಕ್ಷ್ಮಣನೆ, ಅನೇಕ ರಾಕ್ಷಸರಿಂದ ಕೂಡಿದ ಮಹತ್ತಾದ ಅರಣ್ಯದಲ್ಲಿ ಸೀತೆಯೊಬ್ಬಳನ್ನೇ ಹ್ಯಾಗೆ ಬಿಟ್ಟುಬಂದೆ?' ಎಂದು ನಿಂದಿಸಿ, ಮೃಗರೂಪನಾದ ರಾಕ್ಷಸನು ತನ್ನನ್ನು ಬಹುದೂರ ಎಳೆದುಕೊಂಡು ಹೋದದ್ದನ್ನೂ ಲಕ್ಷ್ಮಣನು ಸೀತೆಯೊಬ್ಬಳನ್ನೇ ಅಡವಿಯಲ್ಲಿ ಬಿಟ್ಟು ಬಂದದ್ದನ್ನೂ ಆಲೋಚಿಸಿ ಸಂತಾಪಪಡುತ್ತ 'ಎಲೈ ಲಕ್ಷ್ಮಣನೆ, ಸೀತೆ ಬದುಕಿದ್ದಾಳೆಯೇ! ಅಯ್ಯೋ! ಹಾಗಿರಲಾರದು! ಏನಾಗಿರುವಳೋ' ಎಂದು ತ್ವರ್ಯವಾಗಿ ನುಡಿಯುತ್ತಿರಲು, ಲಕ್ಷ್ಮಣನು 'ಆರ್ಯನೆ, ಸೀತೆಯು ಆಡಬಾರದ ಕಠಿನವಾದ ಮಾತುಗಳನ್ನು ಆಡಿದಳು. ಅದರಿಂದ ನಾನು ಇಲ್ಲಿಗೆ ಬರಬೇಕಾಯಿತು' ಎಂದನು. ಆ ಮಾತನ್ನು ಕೇಳಿ ಅಧಿಕವಾಗಿ ಸಂತಾಪಪಡುತ್ತ ರಾಮನು ಆಶ್ರಮಾಭಿಮುಖವಾಗಿ ಹೊರಟು, ಮಾರ್ಗದಲ್ಲಿ ಪರ್ವತಾಕಾರನಾಗಿ ಬಿದ್ದಿದ್ದ ಗೃಧ್ರರಾಜನಾದ ಜಟಾಯುವನ್ನು ನೋಡಿ, ಇವನು ಯಾವನೋ ರಾಕ್ಷಸನು ಎಂದು ಶಂಕಿಸುತ್ತ ಧನುಸ್ಸಿಗೆ ಹೆದೆಯನ್ನು ಕಟ್ಟಿ ತಮ್ಮನೊಡನೆ ಆ ಪಕ್ಷಿಯನ್ನು ಎದುರಿಸಿ ಹೋದನು. ಆಗ ಜಟಾಯುವು ರಾಮಲಕ್ಷ್ಮಣರನ್ನು ಕುರಿತು 'ಎಲೈ ರಾಮಲಕ್ಷ್ಮಣರೆ, ನಾನು ನಿಮ್ಮ ತಂದೆಯಾದ ದಶರಥರಾಯನಿಗೆ ಸ್ನೇಹಿತನಾದ ಗೃಧ್ರರಾಜನು' ಎನಲು, ಆ ಮಾತನ್ನು ಕೇಳಿ ರಾಮನು ಧನುಸ್ಸಿನಿಂದ ಹೆದೆಯನ್ನು ಇಳಿಯಿಸಿ, 'ಇದಾರು! ಈ ಸ್ಥಳದಲ್ಲಿ ನಮ್ಮ ತಂದೆಯಾದ ದಶರಥರಾಯನ ಹೆಸರನ್ನು ಹೇಳುವರು!' ಎಂದು ಆ ಪಕ್ಷಿಯ ಬಳಿಗೆ ಹೋಗಿ, ರೆಕ್ಕೆಗಳು ಕತ್ತರಿಸಿ ಹೋಗಿದ್ದ ಜಟಾಯುವನ್ನು ನೋಡಿದನು. ಆಗ ಜಟಾಯುವು ಸೀತಾದೇವಿಯ ನಿಮಿತ್ತವಾಗಿ ರಾವಣನಿಂದ ತನಗೆ ಉಂಟಾದ ಹಾನಿಯನ್ನು ಅವರಿಗೆ ತಿಳುಹಿಸಿದನು. ಆ ಮಾತನ್ನು ಕೇಳಿ 'ಎಲೈ ಗೃಧ್ರರಾಜನೆ, ರಾವಣನು ಯಾರು? ಅವನು ಯಾವ ದಿಕ್ಕಿಗೆ ಹೋದನು?' ಎಂದು ಕೇಳಲು, ಜಟಾಯುವು ರಾಮನನ್ನು ನೋಡಿ ಆ ದಿಕ್ಕಿಗೆ ತಲೆಯನ್ನು ತೂಗುತ್ತ ಹಾಗೆಯೇ ಪ್ರಾಣವನ್ನು ಬಿಟ್ಟುಬಿಟ್ಟಿತು. ಆತನು ತಲೆತೂಗಿದ ಸೂಚನೆಯಿಂದ ರಾಮನು ದಕ್ಷಿಣದಿಕ್ಕಿಗೆ ರಾವಣನು ಸೀತೆಯನ್ನು ತೆಗೆದುಕೊಂಡು ಹೋಗಿರುವನೆಂದು ತಿಳಿದುಕೊಂಡು, ತಮ್ಮ ತಂದೆಗೆ ಸ್ನೇಹಿತನಾದ ಆ ಜಟಾಯುವಿಗೆ ಪುಣ್ಯಲೋಕಪ್ರಾಪ್ತಿಯಾಗಲೆಂದು ಉತ್ತರಕ್ರಿಯೆಯನ್ನು ನೆರವೇರಿಸಿ, ತಮ್ಮನೊಡನೆ ಆ ಆಶ್ರಮದ ಬಳಿಗೆ ಬಂದನು. ಆ ಆಶ್ರಮವು ವ್ಯತ್ಯಾಸವಾಗಿರುವ ದರ್ಭಾಸನಗಳಿಂದಲೂ ಉರುಟಿಹೋಗಿರುವ ಕುಂಭಗಳಿಂದಲೂ ನರಿಗಳ ಗುಂಪಿನಿಂದಲೂ ಕೂಡಿ ಶೂನ್ಯವಾಗಿರುವದನ್ನು ನೋಡಿ, ದುಷ್ಟನಾದ ರಾವಣನು ಸೀತೆಯನ್ನು ಅಪಹಾರಮಾಡಿಕೊಂಡು ಹೋದನೆಂದು ಬಹಳವಾಗಿ ದುಃಖಪಡುತ್ತ, ದಕ್ಷಿಣದಿಕ್ಕಾಗಿ ನಡೆದು ದಂಡಕಾರಣ್ಯಕ್ಕೆ ಹೊರಟು, ಮಹತ್ತಾದ ಆ ಅರಣ್ಯದಲ್ಲಿ ಮೃಗಗಳು ಕಾಡುಕಿಚ್ಚು ಹತ್ತಿದರೆ ಹ್ಯಾಗೆ ಕೂಗಿಕೊಳ್ಳುವವೋ ಹಾಗೆ ಘೋರವಾಗಿ ಕೂಗಿಕೊಳ್ಳುತ್ತ ಓಡಿಹೋಗುತ್ತಿರುವದನ್ನು ನೋಡಿ, ಹಾಗೆಯೇ ಆ ಮಾರ್ಗದಲ್ಲಿ ಮಹತ್ತಾದ ಮೇಘದಂತೆಯೂ ಪರ್ವತದಂತೆಯೂ ಘೋರವಾದ ಆಕಾರವುಳ್ಳವನಾಗಿಯೂ ಸಾಲವೃಕ್ಷದಂತೆ ಭುಜವುಳ್ಳವನಾಗಿಯೂ ಎದೆಯಮೇಲೆ ದೊಡ್ಡದಾದ ಕಣ್ಣುಗಳುಳ್ಳವನಾಗಿಯೂ ಅತಿ ಮಹತ್ತಾದ ಹೊಟ್ಟೆಯಲ್ಲಿಯೇ ಮೋರೆಯುಳ್ಳವನಾಗಿಯೂ ಇರುವ ಕಬಂಧನೆಂಬ ರಾಕ್ಷಸನನ್ನು ಕಂಡನು. ಕೂಡಲೆ ಆ ರಾಕ್ಷಸನು ಹಠಾತ್ತಾಗಿ ಲಕ್ಷ್ಮಣನನ್ನು ತನ್ನ ಕಯ್ಯಿಂದ ಹಿಡಿದುಕೊಂಡನು. ಆಗ ಲಕ್ಷ್ಮಣನು ವಿಷಾದವನ್ನು ಹೊಂದಿ ಆತನ ಮುಖದ ಕಡೆಗೆ ಸೆಳೆಯಲ್ಪಟ್ಟು, ರಾಮನನ್ನು ನೋಡಿ 'ಎಲೈ ಅಗ್ರಜನೆ, ನನ್ನ ಅವಸ್ಥೆಯನ್ನು ನೋಡು. ನಿನಗೆ ರಾಜ್ಯಹಾನಿಯೂ ಸೀತಾವಿಯೋಗವೂ ಈ ರಾಕ್ಷಸನಿಂದ ನನಗೆ ಬಾಧೆಯೂ ಮತ್ತು ತಂದೆಯಾದ ದಶರಥರಾಯನ ಮರಣವೂ ಸಹ ಬಂದೇ ಕಾಲದಲ್ಲಿ ಪ್ರಾಪ್ತವಾದವು. ಆದ್ದರಿಂದ ನೀನು ಅಯೋಧ್ಯಾನಗರದಲ್ಲಿ ಸೀತಾಸಮೇತನಾಗಿ ಪಟ್ಟಾಭಿಷಿಕ್ತನಾಗಿ ನಮ್ಮ ವಂಶಪರಂಪರೆಯಾಗಿ ಬಂದ ರಾಜ್ಯವನ್ನಾಳುವದನ್ನು ನಾನು ನೋಡುವದು ಹ್ಯಾಗೋ ತಿಳಿಯದು. ಪುಣ್ಯವಂತರು ಮಂಗಳದ್ರವ್ಯಗಳಿಂದ ಆರ್ಯನಾದ ನಿನಗೆ ಪಟ್ಟಾಭಿಷೇಕಮಹೋತ್ಸವ

ವನ್ನು ಬೆಳಸಿ ಶರತ್ಕಾಲದ ಚಂದ್ರನಂತೆ ಪ್ರಕಾಶಿಸುವ ನಿನ್ನನ್ನು ನೋಡಿ ಕೃತಾರ್ಥರಾಗುವರು' ಎಂದು ನುಡಿದು, ನಾನಾಪ್ರಕಾರವಾಗಿ ಪ್ರಲಾಪವಮಾಡುತ್ತಿದ್ದನು. ಆಗ ಧೀರನಾದ ರಾಮನು ವಿಷಾದಪಡುತ್ತಿರುವ ಲಕ್ಷ್ಮಣನನ್ನು ನೋಡಿ, 'ಎಲೈ ಲಕ್ಷ್ಮಣನೆ, ನಾನಿರಲು ನೀನು ಇಷ್ಟು ವಿಷಾದಪಡುವದಕ್ಕೆ ಕಾರಣವೇನು? ಈ ರಾಕ್ಷಸನ ಬಲದ ತೋಳನ್ನು ಖಡ್ಗದಿಂದ ಛೇದಿಸು. ಎಡದ ತೋಳನ್ನು ನಾನು ಛೇದಿಸುತ್ತೇನೆ' ಎಂದು ಆ ಕ್ಷಣದಲ್ಲೇ ಆ ಕಬಂಧನ ಎಡದ ತೋಳನ್ನು ಕತ್ತಿಯಿಂದ ಕತ್ತರಿಸಿದನು. ಬಳಿಕ ಲಕ್ಷ್ಮಣನು ತನ್ನ ಕತ್ತಿಯಿಂದ ಆ ರಾಕ್ಷಸನ ಬಲದ ತೋಳನ್ನು ಎಳ್ಳಿನ ಕಡ್ಡಿಯನ್ನು ಕತ್ತರಿಸುವಂತೆ ಕತ್ತರಿಸಿ, ರಾಮನನ್ನು ನೋಡಿ ಪುನಃ ಆ ರಾಕ್ಷಸನ ಪಾರ್ಶ್ವವನ್ನು ಕತ್ತರಿಸಿದನು. ಬಳಿಕ ಆ ರಾಕ್ಷಸನು ಮೃತನಾಗಿ ದೊಡ್ಡದಾದ ಶರೀರವುಳ್ಳವನಾಗಿ ಭೂಮಿಯ ಮೇಲೆ ಬಿದ್ದನು. ಅವನ ಮೃತವಾದ ಶರೀರದಿಂದ ದಿವ್ಯರೂಪವನ್ನು ಧರಿಸಿದ ಒಬ್ಬ ಪುರುಷನು ಹೊರಟು ಸೂರ್ಯನಂತೆ ಪ್ರಕಾಶಿಸುತ್ತ ಆಕಾಶಮಾರ್ಗದಲ್ಲಿ ನಿಂತುಕೊಂಡನು. ಆ ಪುರುಷನನ್ನು ನೋಡಿ ರಾಮನು 'ಎಲೈ ಮಹಾತ್ಮನೆ, ನೀನು ಯಾರು? ನಿನ್ನನ್ನು ನೋಡಿದರೆ ಅಧಿಕವಾಗಿ ಆಶ್ಚರ್ಯವಾಗುವದು' ಎನಲು, ಆ ದಿವ್ಯಪುರುಷನು 'ಎಲೈ ರಾಮನೆ, ನಾನು ವಿಶ್ವಾವಸುವೆಂಬ ಗಂಧರ್ವನು. ಬ್ರಾಹ್ಮಣನ ಶಾಪದಿಂದ ರಾಕ್ಷಸಜನ್ಮವನ್ನು ಹೊಂದಿದ್ದೆನು. ಲಂಕಾಪಟ್ಟಣಕ್ಕೆ ಅರಸಾದ ರಾವಣನು ನಿನ್ನ ಭಾರ್ಯೆಯಾದ ಸೀತೆಯನ್ನು ಅಪಹರಿಸಿಕೊಂಡು ಹೋಗಿರುವನು. ಇತ್ತಲಾಗಿ ಸಮೀಪದಲ್ಲೇ ಋಷ್ಯಮೂಕವೆಂಬ ಪರ್ವತವಿರುವದು. ಮತ್ತು ಅನೇಕ ಪಕ್ಷಿಗಳಿಂದ ಸೇವಿತವಾದ ನಿರ್ಮಲವಾದ ಉದಕವುಳ್ಳ ಪಂಪಾಸರೋವರವು ಸಮೀಪದಲ್ಲೇ ಇರುವದು. ಆ ಋಷ್ಯಮೂಕಪರ್ವತದಲ್ಲಿ ಸುಗ್ರೀವನೆಂಬ ಕಪಿರಾಜನು ನಾಲ್ಕುಮಂದಿ ಮಂತ್ರಿಗಳೊಡನೆ ವಾಸಮಾಡುತ್ತಿರುವನು. ಆತನಿಗೆ ಅಣ್ಣನಾದ ವಾಲಿಯು ಕಪಿರಾಜ್ಯವನ್ನಾಳುತ್ತಿರುವನು. ನೀನು ಆ ಸುಗ್ರೀವನ ಬಳಿಗೆ ಹೋಗಿ ನಿನಗೆ ಉಂಟಾದ ದುಃಖವನ್ನು ಆತನಿಗೆ ತಿಳುಹಿಸಿ, ಆತನೊಡನೆ ಸ್ನೇಹವನ್ನು ಮಾಡಿಕೊ. ನಿನ್ನಂತೆ ಪತ್ನಿಯನ್ನು ಕಳೆದುಕೊಂಡಿರುವ ಸುಗ್ರೀವನು ನಿನಗೆ ಸಹಾಯಮಾಡುವನು. ಆತನು ರಾವಣನಿರುವ ಸ್ಥಳವನ್ನು ಬಲ್ಲನು. ಆತನ ಸಹಾಯದಿಂದ ನೀನು ಸೀತೆಯನ್ನು ಹೊಂದುವೆ. ಇಷ್ಟುಮಟ್ಟಿಗೆ ನಾನು ಹೇಳತಕ್ಕವನು' ಎಂದು ನುಡಿದು ಅಂತರ್ಧಾನವನ್ನು ಪಡೆದನು. ಬಳಿಕ ರಾಮಲಕ್ಷ್ಮಣರು ಅದನ್ನು ನೋಡಿ ಆಶ್ಚರ್ಯಪಟ್ಟರು" ಎಂದು ಮಾರ್ಕಂಡೇಯನು ಧರ್ಮರಾಯನಿಗೆ ಹೇಳಿದನು.

## ೨೭೯ನೇ ಅಧ್ಯಾಯ.—ರಾಮೋಪಾಖ್ಯಾನ—(ರಾಮನು ವಾಲಿಯನ್ನು ಸಂಹರಿಸಿದ್ದು.)

ಬಳಿಕ ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಮಾರ್ಕಂಡೇಯನು ಧರ್ಮರಾಯನನ್ನು ಕುರಿತು "ಎಲೈ ಧರ್ಮರಾಯನೆ, ಬಳಿಕ ರಾಮನು ಸೀತಾವಿಯೋಗದಿಂದ ವ್ಯಸನಪಡುತ್ತ ಕಮಲ ಕಲ್ಹಾರಾದಿ ಪುಷ್ಪಗಳಿಂದ ರಮಣೀಯವಾದ ಪಂಪಾಸರೋವರಕ್ಕೆ ಹೋಗಿ, ಸುಗಂಧವಾಗಿ ಬೀಸುತ್ತ ಸುಖಸ್ಪರ್ಶವಾದ ವಾಯುವು ಸೋಕಲು, ತನಗೆ ಪ್ರಿಯಳಾದ ಸೀತೆಯನ್ನು ಸ್ಮರಿಸಿಕೊಂಡು ಮನ್ಮಥನಿಂದ ಪೀಡಿತನಾಗಿ ಪ್ರಲಾಪವಮಾಡುತ್ತಿದ್ದನು. ಅದನ್ನು ನೋಡಿ ಲಕ್ಷ್ಮಣನು 'ಎಲೈ ರಾಮನೆ, ಜ್ಞಾನಿಗಳಿಗೆ ಮನೋವ್ಯಥೆಯಂತೆ ವೃದ್ಧರಸೇವೆಯನ್ನು ಮಾಡಿರುವ ನಿನಗೆ ಇಂಥ ವಿಕಾರವುಂಟಾಗಬಹುದೆ? ಸೀತಾದೇವಿಯನ್ನು ರಾವಣನು ಅಪಹರಿಸಿಕೊಂಡು ಹೋದನೆಂದು ಗೊತ್ತಾಗಿರುವದಲ್ಲಾ! ಇನ್ನು ಬುದ್ಧಿಶಕ್ತಿಯಿಂದ ತಕ್ಕ ಪುರುಷಪ್ರಯತ್ನವನ್ನು ಮಾಡಿ ಸೀತೆಯನ್ನು ಬಿಡಿಸಿಕೊಂಡು ಬರುವದಕ್ಕೆ ಅಡ್ಡಿಯೇನು? ಪರ್ವತಾಗ್ರದಲ್ಲಿರುವ ಕಪಿಶ್ರೇಷ್ಠನಾದ ಸುಗ್ರೀವನ ಬಳಿಗೆ ಹೋಗೋಣ. ನಿನಗೆ ಶಿಷ್ಯನಾಗಿಯೂ ಭೃತ್ಯನಾಗಿಯೂ ಸಹಾಯನಾಗಿಯೂ ನಾನಿರಲು, ನೀನು ಇಷ್ಟು ವ್ಯಸನ ಪಡುವದಕ್ಕೆ ಕಾರಣವೇನು' ಎಂದು ಬಹುಪ್ರಕಾರದಿಂದ ಸಂತೈಸಿದನು. ಆಗ ರಾಮನು ಧೈರ್ಯವನ್ನು ತಂದುಕೊಂಡು, ಮುಂದಿನ ಕಾರ್ಯದ ಆಲೋಚನೆಯನ್ನು ಮಾಡಿ, ಪಂಪಾಸರೋ

ವರದಲ್ಲಿ ಸ್ನಾನವಮಾಡಿ ಲಕ್ಷ್ಮಣನೊಡನೆ ಪಿತೃಗಳಿಗೆ ತರ್ಪಣವನ್ನು ಮಾಡಿದನು. ಬಳಿಕ ಅಣ್ಣತಮ್ಮಂದಿರಿಬ್ಬರೂ ಹೊರಟು ಅಲ್ಲಿಂದ ಅನೇಕ ಫಲವೃಕ್ಷಗಳಿಂದ ರಮ್ಯವಾದ ಋಷ್ಯಮೂಕಪರ್ವತದ ಸಮೀಪಕ್ಕೆ ಹೋಗಿ, ಆ ಪರ್ವತಾಗ್ರದಲ್ಲಿದ್ದ ಐದುಮಂದಿ ಕಪಿಗಳನ್ನೂ ನೋಡಿದರು. ಆಗ ಸುಗ್ರೀವನು ರಾಮಲಕ್ಷ್ಮಣರನ್ನು ನೋಡಿ ತನಗೆ ಮಂತ್ರಿಯೂ ಬುದ್ಧಿಶಾಲಿಯೂ ಹಿಮವತ್ಪರ್ವತದಂತೆ ಧೈರ್ಯಶಾಲಿಯೂ ಆದ ಆಂಜನೇಯನನ್ನು ಅವರ ಬಳಿಗೆ ಕಳುಹಿಸಲು, ರಾಮಲಕ್ಷ್ಮಣರು ಆತನ ಸಂಗಡ ಮಾತನಾಡಿಕೊಂಡು, ಸುಗ್ರೀವನ ಬಳಿಗೆ ಬಂದು ಆತನೊಡನೆ ಸ್ನೇಹವನ್ನು ಮಾಡಿಕೊಂಡು, ಆತನಸಂಗಡ ತಮ್ಮ ವೃತ್ತಾಂತವನ್ನು ಹೇಳಿಕೊಂಡರು. ಬಳಿಕ ಸುಗ್ರೀವನು ಆಕಾಶಮಾರ್ಗದಲ್ಲಿ ರಾವಣನು ಸೀತೆಯನ್ನು ಅಪಹರಿಸಿಕೊಂಡು ಹೋಗುವಾಗ ಸೀತೆಯು ತಮ್ಮ ಮಧ್ಯದಲ್ಲಿ ಬಿಸಾಡಿದ ಆಭರಣದ ಗಂಟನ್ನು ರಾಮನಿಗೆ ತೋರಿಸಿದನು. ಅದನ್ನು ನೋಡಿ ರಾಮನು ಕಪಿಶ್ರೇಷ್ಠನಾದ ಸುಗ್ರೀವನಲ್ಲಿ ವಿಶ್ವಾಸವನ್ನು ಮಾಡಿ, 'ಸಮಗ್ರವಾದ ಕಪಿರಾಜ್ಯಕ್ಕೆಲ್ಲ ನಿನಗೆ ಪಟ್ಟಾಭಿಷೇಕವನ್ನು ಮಾಡಿ ಯುದ್ಧದಲ್ಲಿ ವಾಲಿಯನ್ನು ನಾನು ಸಂಹಾರವಮಾಡುವೆನು' ಎಂದು ಆತನಿಗೆ ಭಾಷೆಕೊಟ್ಟನು. ಬಳಿಕ ಸುಗ್ರೀವನು 'ಸೀತಾದೇವಿಯು ಎಲ್ಲಿದ್ದರೂ ಆಕೆಯನ್ನು ನಾನು ತಂದು ಕೊಡುವೆನು' ಎಂದು ರಾಮನಿಗೆ ಭಾಷೆಕೊಟ್ಟನು. ಈ ಪ್ರಕಾರ ರಾಮಸುಗ್ರೀವರು ಪರಸ್ಪರವಾಗಿ ವಿಶ್ವಾಸದಿಂದ ಸಮಯನಿಬಂಧನೆಯನ್ನು ಮಾಡಿಕೊಂಡು, ಮಂತ್ರಿಗಳಾದ ನಾಲ್ಕುಮಂದಿ ಕಪಿಗಳೊಡನೆ ಕಿಷ್ಕಿಂಧಾಪಟ್ಟಣದ ಬಳಿಗೆ ಬಂದರು. ಬಳಿಕ ಸುಗ್ರೀವನು ಯುದ್ಧಾಪೇಕ್ಷೆಯಿಂದ ಕಿಷ್ಕಿಂಧಾನಗರವನ್ನು ಪ್ರವೇಶಿಸಿ ಮೇಘಸಮೂಹವು ಗರ್ಜಿಸುವಂತೆ ಗರ್ಜನೆಯನ್ನು ಮಾಡಿದನು. ಆ ಶಬ್ದವನ್ನು ಕೇಳಿ ಸಹಿಸದೆ ವಾಲಿಯು ಸುಗ್ರೀವನೊಡನೆ ಯುದ್ಧಕ್ಕೆ ಸನ್ನದ್ಧನಾಗಲು, ಆಗ ಆತನ ಪತ್ನಿಯಾದ ತಾರೆಯು 'ವಾನರೇಶ್ವರನೆ, ಸುಗ್ರೀವನ ಧ್ವನಿಯನ್ನುಕೇಳಿದರೆ ಆತನು ಯಾರನ್ನೋ ಸಹಾಯಮಾಡಿಕೊಂಡು ಬಂದಿರುವಂತೆ ಕಾಣುವದು. ಆದ್ದರಿಂದ ಆತನ ಸಂಗಡ ನೀನು ಯುದ್ಧಕ್ಕೆ ಹೋಗುವದು ನನಗೆ ಸಮ್ಮತವಾಗಿಲ್ಲ' ಎಂದು ಅಡ್ಡಿಮಾಡಿದಳು. ಆಗ ವಾಲಿಯು 'ಪ್ರಿಯಳೆ, ನೀನು ಸಕಲ ಪ್ರಾಣಿಗಳ ಶಬ್ದವನ್ನೂ ಬಲ್ಲವಳು. ನನಗೆ ತಮ್ಮನೆನಿಸಿಕೊಂಡಿರುವ ನೀಚನಾದ ಆ ಸುಗ್ರೀವನು ಯಾರ ಬಲವನ್ನು ಆಶ್ರಯಿಸಿಕೊಂಡು ಇಲ್ಲಿಗೆ ಬಂದಿರಬಹುದು? ಇದನ್ನು ನಿನ್ನ ಬುದ್ಧಿಯಿಂದ ಯೋಚಿಸು' ಎನಲು, ತಾರೆಯು ಬಂದು ಮುಹೂರ್ತ ಆಲೋಚಿಸಿ ವಾಲಿಯನ್ನು ಕುರಿತು 'ವಾನರೇಶ್ವನೆ, ಸುಗ್ರೀವನಂತೆ ಪತ್ನಿಯನ್ನು ಕಳೆದುಕೊಂಡಿರುವ ದಶರಥಪುತ್ರನಾದ ರಾಮನು ಧನುರ್ಧಾರಿಯಾಗಿ ಸುಗ್ರೀವನೊಡನೆ ಸ್ನೇಹವನ್ನು ಮಾಡಿಕೊಂಡಿರುವನು. ರಾಮನ ಸಹಾಯಾರ್ಥವಾಗಿ ಆತನ ತಮ್ಮನಾದ ಲಕ್ಷ್ಮಣನು ಯಾವಾಗಲೂ ಆತನ ಜೊತೆಯಲ್ಲೇ ಸಿದ್ಧನಾಗಿರುವನು. ಆ ರಾಮಲಕ್ಷ್ಮಣರು ಸುಗ್ರೀವನಿಗೆ ಮಂತ್ರಿಗಳಾದ ಮೈಂದ, ದ್ವಿವಿದ, ಜಾಂಬವಂತ, ಆಂಜನೇಯ ಇವರೆಲ್ಲರೂ ಸಹ ಬುದ್ಧಿಶಾಲಿಗಳಾದವರು. ಮತ್ತು ಮಹಾಬಲಿಷ್ಠರಾದವರು. ರಾಮನನ್ನು ಆಶ್ರಯಿಸಿಕೊಂಡು ಸುಗ್ರೀವನು ಈಗ ಇಲ್ಲಿಗೆ ಬಂದಿರುವನಾದಕಾರಣ, ನೀನು ಆತನೊಡನೆ ಯುದ್ಧಕ್ಕೆ ಹೊರಟದ್ದೇ ಆದರೆ ಹಾನಿಯುಂಟಾಗುವದು. ಆದ್ದರಿಂದ ನೀನು ಯುದ್ಧಪ್ರಯತ್ನವನ್ನು ಸಾಕುಮಾಡು' ಎಂದು ನುಡಿದಳು. ಬಳಿಕ ವಾಲಿಯು ತಾರೆಯಮಾತನ್ನು ನಿರಾಕರಿಸಿ ಕೋಪದಿಂದ ಈಕೆಯು ಸುಗ್ರೀವನಲ್ಲಿ ಅಪೇಕ್ಷೆಯಿಂದ ಈ ಮಾತನ್ನು ಆಡಿರಬಹುದೆಂದು ಆಕೆಯ ಸಂಗಡ ನಿಷ್ಠುರವಾಗಿ ಮಾತನಾಡಿ, ಕಿಷ್ಕಿಂಧಾಗುಹೆಯಿಂದ ಈಚೆಗೆ ಹೊರಟು ಮಾಲ್ಯವಂತಪರ್ವತದ ಸಮೀಪದಲ್ಲಿ ನಿಂತಿರತಕ್ಕ ಸುಗ್ರೀವನನ್ನು ನೋಡಿ 'ಎಲೈ ಸುಗ್ರೀವನೆ, ಅನೇಕವೇಳೆ ನೀನು ನನ್ನಿಂದ ಪರಾಜಿತನಾಗಿ ಓಡಿಹೋಗಿರುವೆ. ಜ್ಞಾತಿಯಾದವನು ಎಲ್ಲಾದರೂ ಬದುಕಿಕೊಂಡಿರಲಿ' ಎಂದು ನಿನ್ನನ್ನು ಜೀವಸಹಿತವಾಗಿ ಬಿಟ್ಟದ್ದೆನು. ಯಾತಕ್ಕೋಸ್ಕರ ಈಗ ಮರಣವನ್ನು ಹೊಂದುವದಕ್ಕೆ ತ್ವರೆಪಡುತ್ತಿರುವೆ?' ಎನಲು, ಶತ್ರುಸಂಹಾರಕನಾದ ಸುಗ್ರೀವನು ರಾಮನಿಗೆ ತಿಳಿಯುವಹಾಗೆ ಕಾಲಪ್ರಾಪ್ತನಾಗಿರುವ ವಾಲಿಯನ್ನು ಕುರಿತು 'ಎಲೈ ರಾಜನೆ, ನಿನ್ನಿಂದ ನನ್ನ ಪತ್ನಿಯೂ ನನ್ನಭಾಗದ ರಾಜ್ಯವೂ ಅಪಹರಿಸಲ್ಪಟ್ಟಬಳಿಕ ನನಗೆ ಜೀವದಮೇಲೆ ಆಸೆಯಿದ್ದು ಉಪಯೋಗವೇನು? ಇದನ್ನು ಯೋಚಿಸಿ ನಾನು ಬಂದಿರುವೆನೆಂದು ತಿಳಿ' ಎಂದು ಪ್ರತ್ಯುತ್ತರವನ್ನು ಕೊಟ್ಟನು. ಬಳಿಕ ಅವರಿಬ್ಬರೂ ದೊಡ್ಡದೊಡ್ಡದಾದ ಸರ್ಜಕವೃಕ್ಷಗಳನ್ನೂ ತಾಳೇಮರಗಳನ್ನೂ ಕಲ್ಲುಬಂಡೆಗಳನ್ನೂ ಹಿಡಿದು

ಕೊಂಡು ಯುದ್ಧಕ್ಕೆ ಮೊದಲುಮಾಡಿ, ಒಬ್ಬರನ್ನೊಬ್ಬರು ಪೆಟ್ಟಿಕ್ಕುತ್ತಲೂ ಒಬ್ಬರನ್ನೊಬ್ಬರು ನೆಲದಮೇಲೆ ಕೆಡಹುತ್ತಲೂ ಬೀಳುತ್ತಲೂ ಏಳುತ್ತಲೂ ಮುಷ್ಟಿಗಳಿಂದ ಪ್ರಹಾರಮಾಡುತ್ತಲೂ ವಿಚಿತ್ರವಿಚಿತ್ರವಾಗಿ ನೆಗೆದಾಡುತ್ತಲೂ ಸುತ್ತಾಡುತ್ತಲೂ ಘೋರವಾಗಿ ದ್ವಂದ್ವಯುದ್ಧವನ್ನು ಮಾಡಿದರು. ಆಗ ಅವರಿಬ್ಬರೂ ಉಗುರುಗಳಿಂದಲೂ ಹಲ್ಲುಗಳಿಂದಲೂ ಒಬ್ಬರನ್ನೊಬ್ಬರು ಘಾಸಿಮಾಡಿ ಮಯ್ಯನ್ನೆಲ್ಲಾ ರಕ್ತಮಯವನ್ನಾಗಿ ಮಾಡಿಕೊಂಡು ಹುವ್ವು ಬಿಟ್ಟಿರುವ ಮುಳ್ಳುಮುತ್ತುಗದ ಮರಗಳಂತೆ ಪ್ರಕಾಶಿಸಿದರು. ಆ ಸಮಯದಲ್ಲಿ ಅವರಿಬ್ಬರಿಗೂ ಭೇದವು ತಿಳಿಯದಿರಲು, ಆಂಜನೇಯನು ಗುರುತಿಗಾಗಿ ಸುಗ್ರೀವನ ಕತ್ತಿನಲ್ಲಿ ಒಂದು ಗಜಪುಷ್ಪಮಾಲಿಕೆಯನ್ನು ಹಾಕಿದನು. ಆ ಮಾಲಿಕೆಯಿಂದ ಸುಗ್ರೀವನು ಮೇಘಪಙ್ತಿಯಿಂದ ಶೋಭಿಸುವ ಮಲಯಪರ್ವತದಂತೆ ಶೋಭಿಸಿದನು. ಈ ಪ್ರಕಾರ ಗಜಪುಷ್ಪಮಾಲಿಕೆಯಿಂದ ಗುರುತುಮಾಡಿರುವ ಸುಗ್ರೀವನನ್ನು ನೋಡಿ ರಾಮನು ಮಹತ್ತಾದ ಧನುಸ್ಸಿಗೆ ಹೆದೆಯನ್ನೇರಿಸಿ ಧನುಷ್ಟಂಕಾರವನ್ನು ಮಾಡಿದನು. ಆ ಶಬ್ದವು ಒಂದು ಫಿರಂಗಿಯ ಶಬ್ದದಂತೆ ಕೇಳಬಂತು. ಬಳಿಕ ರಾಮನು ಆ ಧನುಸ್ಸಿನಲ್ಲಿ ಬಾಣವನ್ನು ಹೂಡಿ ವಾಲಿಯ ಎದೆಯನ್ನು ಗುರಿಯಿಟ್ಟು ಆ ಬಾಣವನ್ನು ಪ್ರಯೋಗಿಸಲು, ಅದರಿಂದ ಎದೆಯು ಸೀಳಿಹೋಗಿ ವಾಲಿಯು ರಕ್ತವನ್ನು ಕಾರಿಕೊಂಡು, ನಡುಗುತ್ತ, ಲಕ್ಷ್ಮಣನೊಡಗೂಡಿರುವ ಧನುರ್ಧಾರಿಯಾದ ರಾಮನನ್ನು ಕಂಡು, ಆತನನ್ನು ಬಹಳವಾಗಿ ನಿಂದಿಸಿ ಮೃತನಾಗಿ ಭೂಮಿಯಮೇಲೆ ಬಿದ್ದನು. ಆಕಾಶವು ಭೂಮಿಯಮೇಲೆ ಬಿದ್ದಂತೆ ಭೂಮಿಯಮೇಲೆ ಬಿದ್ದಿರುವ ಆ ವಾಲಿಯನ್ನು ನೋಡಿ ತಾರಾದೇವಿಯು ಬಹಳವಾಗಿ ಪ್ರಲಾಪಿಸುತ್ತಿರಲು, ಆಕೆಯನ್ನು ಸಂತೈಸಿ ಸುಗ್ರೀವನು ಆಕೆಯೊಡನೆ ಕಿಷ್ಕಿಂಧಾನಗರವನ್ನು ಪ್ರವೇಶಮಾಡಿದನು. ಬಳಿಕ ರಾಮನು ಮಳೆಗಾಲವನ್ನು ಕಳೆಯುವದಕ್ಕೋಸ್ಕರ ನಾಲ್ಕು ತಿಂಗಳವರೆಗೂ ಮಾಲ್ಯವಂತವೆಂಬ ಪರ್ವತದಲ್ಲಿ ವಾಸಮಾಡುತ್ತಿದ್ದನು.

ಅತ್ತಲು ರಾವಣನು ಲಂಕಾಪಟ್ಟಣವನ್ನು ಪ್ರವೇಶಮಾಡಿ, ಮನ್ಮಥಪೀಡಿತನಾಗಿ, ಋಷ್ಯಾಶ್ರಮಕ್ಕೆ ಸಮಾನವಾಗಿರುವ ಅಶೋಕವನದ ಬಳಿಯಲ್ಲಿರುವ ನಂದನವನಕ್ಕೆ ಸಮಾನವಾದ ಪ್ರದೇಶದಲ್ಲಿ ಸೀತಾದೇವಿಯನ್ನು ಇಟ್ಟನು. ಆಗ ಸೀತೆಯು ತಾಪಸಿಯರ ವೇಷವನ್ನು ಧರಿಸಿ, ಉಪವಾಸದಲ್ಲೂ ತಪಸ್ಸಿನಲ್ಲೂ ಆಸಕ್ತಳಾಗಿ, ಕಂದಮೂಲಫಲಗಳನ್ನು ಆಹಾರಮಾಡಿಕೊಂಡು, ಕೃಶಳಾಗಿ ಪತಿಯನ್ನು ನೆನದುನೆನದು ದುಃಖಪಡುತ್ತ, ಅಲ್ಲಿ ವಾಸಮಾಡಿಕೊಂಡಿದ್ದಳು. ಆಕೆಯ ಕಾವಲಿಗಾಗಿ ರಾವಣನು ಒಂದು ಕಣ್ಣುಳ್ಳವರಾಗಿಯೂ ಎರಡು ಕಣ್ಣುಗಳುಳ್ಳವರಾಗಿಯೂ ಮೂರು ಕಣ್ಣುಗಳುಳ್ಳವರಾಗಿಯೂ ಹಣೆಯಮೇಲೆ ಕಣ್ಣುಗಳುಳ್ಳವರಾಗಿಯೂ ಉದ್ದವಾದ ನಾಲಿಗೆಯುಳ್ಳವರಾಗಿಯೂ ನಾಲಿಗೆಯಿಲ್ಲದವರಾಗಿಯೂ ಮೂರು ಸ್ತನಗಳುಳ್ಳವರಾಗಿಯೂ ಒಂದುಕಾಲುಳ್ಳವರಾಗಿಯೂ ಮೂರು ಜಡೆಗಳುಳ್ಳವರಾಗಿಯೂ ಒಂಟೇಬಣ್ಣವುಳ್ಳ ಮಂಡೇಕೂದಲುಳ್ಳವರಾಗಿಯೂ ಘೋರವಾದ ನೇತ್ರಗಳುಳ್ಳವರಾಗಿಯೂ ಇನ್ನೂ ಅನೇಕ ವಿಕಾರಗಳುಳ್ಳವರಾಗಿಯೂ ಇರುವ ಅನೇಕಮಂದಿ ರಾಕ್ಷಸಸ್ತ್ರೀಯರನ್ನು ಅಲ್ಲಿ ನೇಮಿಸಿದ್ದನು. ಆ ರಾಕ್ಷಸಸ್ತ್ರೀಯರು ಪ್ರಾಸ ಖಡ್ಗ ಶೂಲ ಪರಶು ಮುದ್ಗರ ಮೊದಲಾದ ಅನೇಕ ಆಯುಧಗಳನ್ನು ಹಿಡಿದುಕೊಂಡು ಅಹೋರಾತ್ರದಲ್ಲೂ ಜಾಗರೂಕರಾಗಿ ಸೀತೆಯನ್ನು ಕಾಯುತ್ತ, ಘೋರವಾದ ಧ್ವನಿಯುಳ್ಳವರಾಗಿ ಆಕೆಯನ್ನು ಹೆದರಿಸುತ್ತ, "ನಮ್ಮ ರಾಜನಾದ ರಾವಣೇಶ್ವರನನ್ನು ಲಕ್ಷ್ಯಮಾಡದೆ ಇವಳು ಆತನನ್ನು ಸೇರದಿರುವಳು. ಆದ್ದರಿಂದ ಈಕೆಯನ್ನು ತುಂಡುತುಂಡುಮಾಡಿ ನಾವೆಲ್ಲರೂ ಹಂಚಿಕೊಂಡು ತಿಂದುಬಿಡೋಣ" ಎಂದು ಒಬ್ಬರಿಗೊಬ್ಬರು ಮಾತನಾಡಿಕೊಳ್ಳುತ್ತಿರಲು, ಪತಿವಿಯೋಗದಿಂದ ದುಃಖಪಡುತ್ತಿದ್ದ ಸೀತೆಯು ಆ ಮಾತನ್ನು ಕೇಳಿ ಬಿಸಿಯಾಗಿ ನಿಟ್ಟುಸುರನ್ನು ಬಿಟ್ಟು, ಆ ರಾಕ್ಷಸಸ್ತ್ರೀಯರನ್ನು ಕುರಿತು 'ಎಲೆ ರಾಕ್ಷಸಿಯರೆ, ಪುಂಡರೀಕಾಕ್ಷನಾದ ರಾಮನನ್ನು ಬಿಟ್ಟು ನಾನು ಬದುಕಿರುವದಕ್ಕಿಂತಲೂ ನೀವು ನನನ್ನು ಭಕ್ಷಿಸಿಬಿಡುವದು ನನಗೆ ಇಷ್ಟವಾದದ್ದು. ನಾನು ಆಹಾರವನ್ನು ಬಿಟ್ಟು, ಬದುಕುವದರಲ್ಲೂ ಅಪೇಕ್ಷೆಯಿಲ್ಲದೆ, ತಾಳೇಗಿಡದೊಳಗೆ ಸಿಕ್ಕಿಕೊಂಡ ಹಾವಿನಂತೆ ಶರೀರವನ್ನು ಶೋಷಣೆಮಾಡತಕ್ಕವಳೇ ಹೊರತು ರಾಮನನ್ನು ಬಿಟ್ಟು ಮತ್ತೊಬ್ಬ ಪುರುಷನನ್ನು ಬೇರೇ ಸೇರತಕ್ಕವಳಲ್ಲ. ಇದು ನಿಜವಾದದ್ದೆಂದು ತಿಳಿಯಿರಿ. ಇದರಮೇಲೆ ನೀವು

ಬೇಕಾದದ್ದನ್ನು ಮಾಡಬಹುದು' ಎನಲು, ಆ ಘೋರರಾದ ರಾಕ್ಷಸಸ್ತ್ರೀಯರು ಈ ವೃತ್ತಾಂತವನ್ನು ತಿಳಿಸುವದಕ್ಕೋಸ್ಕರ ರಾವಣನ ಬಳಿಗೆ ತೆರಳಿದರು. ಬಳಿಕ ಧರ್ಮಿಷ್ಠೆಯಾದ ತ್ರಿಜಟೆಯೆಂಬ ರಾಕ್ಷಸಸ್ತ್ರೀಯು ಸೀತೆಯನ್ನು ನೋಡಿ, 'ಎಲೌ ಸೀತೆಯೆ, ನೀನು ನನ್ನಲ್ಲಿ ವಿಶ್ವಾಸವನ್ನು ಮಾಡು. ಭಯಪಡಬೇಡ. ನನ್ನ ಮಾತನ್ನು ಕೇಳು. ಅವಿಂಧ್ಯನೆಂಬ ವೃದ್ಧನಾದ ರಾಕ್ಷಸನು ರಾಮನ ಹಿತಾರ್ಥವಾಗಿ ನಿನಗೋಸ್ಕರ ನನ್ನ ಸಂಗಡ ಒಂದು ಮಾತನ್ನು ಹೇಳಿರುವನು. ಅದೇನೆಂದರೆ:—ನಿನ್ನ ಗಂಡನಾದ ರಾಮನೂ ನಿನ್ನ ಮೈದುನನಾದ ಲಕ್ಷ್ಮಣನೂ ಕುಶಲರಾಗಿರುವರು. ಮತ್ತು ಅವರಿಬ್ಬರೂ ಇಂದ್ರನಿಗೆ ಸಮಾನನಾದ ಸುಗ್ರೀವನೊಡನೆ ಸ್ನೇಹವನ್ನು ಮಾಡಿಕೊಂಡು ನಿನ್ನನ್ನು ಬಿಡಿಸಿಕೊಂಡು ಹೋಗುವದಕ್ಕೋಸ್ಕರ ತಕ್ಕ ಪ್ರಯತ್ನವನ್ನು ಮಾಡುತ್ತಿರುವರು. ಇನ್ನು ಕ್ರೂರನಾದ ರಾವಣನ ದೆಸೆಯಿಂದ ನಿನಗೆ ಭಯವು ಕೆಲಸವಿಲ್ಲ. ಪಾಪಾತ್ಮನಾದ ರಾವಣನು ಪೂರ್ವದಲ್ಲಿ ತನಗೆ ಸೊಸೆಯಾದ ರಂಭೆಯನ್ನು ಸ್ಪರ್ಶಮಾಡಿ ನಳಕೂಬರನಿಂದ ಶಾಪವನ್ನು ಪಡೆದನು. ಆ ಶಾಪದಿಂದ ಪರಸ್ತ್ರೀಯರನ್ನು ಬಲಾತ್ಕರಿಸುವದಕ್ಕೆ ಅವನಿಗೆ ಸಾಮರ್ಥ್ಯವಿಲ್ಲದಿರುವದು. ಇನ್ನು ಶೀಘ್ರವಾಗಿ ನಿನ್ನ ಪತಿಯಾದ ರಾಮನು ಸುಗ್ರೀವನಿಂದಲೂ ಲಕ್ಷ್ಮಣನಿಂದಲೂ ರಕ್ಷಿತನಾಗಿ ಇಲ್ಲಿಗೆ ಬಂದು ನಿನ್ನನ್ನು ಬಿಡಿಸಿಕೊಂಡು ಹೋಗುವನು—ಎಂದು ನಿನಗೆ ತಿಳುಹಿಸುವಂತೆ ನನ್ನ ಸಂಗಡ ಹೇಳಿಕಳುಹಿಸಿರುವನು. ಇನ್ನು ನೀನು ಸಂತೈಸಿಕೊ. ದುರ್ಬುದ್ಧಿಯಾಗಿಯೂ ಕುಲಘಾತಕನಾಗಿಯೂ ಇರುವ ರಾವಣನು ಶೀಘ್ರವಾಗಿ ನಾಶವನ್ನು ಹೊಂದುವನು. ಅದಕ್ಕೆ ನಿದರ್ಶನವಾಗಿ ನನಗೊಂದು ಘೋರವಾದ ಸ್ವಪ್ನವಾಗಿರುವದು. ಅದೇನೆಂದರೆ, ಈ ಕ್ಷುದ್ರನಾದ ರಾವಣನು ಸ್ವಭಾವಸಿದ್ಧವಾದ ದುಷ್ಕೃತನದಿಂದ ಎಲ್ಲರಿಗೂ ಭಯಂಕರನಾಗಿ ದೇವತೆಗಳ ಸಂಗಡ ಸ್ಪರ್ಧೆಮಾಡಿಕೊಂಡು ಮೃತ್ಯುವಿಗೆ ಅಧೀನನಾದಂತೆಯೂ, ಆತನು ಮೈಗೆಲ್ಲಾ ಎಣ್ಣೆಯನ್ನು ಹಚ್ಚಿಕೊಂಡು ತಲೆಯನ್ನು ಬೋಳಿಸಿಕೊಂಡು ಕೆಸರಿನಲ್ಲಿ ಮುಳುಗಿ ಕತ್ತೆಯನ್ನು ಕಟ್ಟಿದ ರಥವನ್ನೇರಿ ಕುಣಿದಾಡುತ್ತಿದ್ದಂತೆಯೂ, ಮತ್ತು ಆತನು ಕೆಂಪುಬಣ್ಣವಾದ ಪುಷ್ಪಮಾಲಿಕೆಯನ್ನು ಧರಿಸಿಕೊಂಡು ನಿರ್ವಾಣದಿಂದ ದಕ್ಷಿಣಮುಖವಾಗಿ ಹೋದಂತೆಯೂ ನಾನು ಸ್ವಪ್ನದಲ್ಲಿ ಕಂಡೆನು. ವಿಭೀಷಣನು ಶುಭ್ರವಾದ ಪುಷ್ಪಮಾಲಿಕೆಯನ್ನೂ ಶುಭ್ರವಾದ ಗಂಧವನ್ನೂ ಶುಭ್ರವಾದ ಕಿರೀಟವನ್ನೂ ಧರಿಸಿ, ಶುಭ್ರವಾದ ಛತ್ರವನ್ನು ಹಿಡಿಸಿಕೊಂಡು ಶುಭ್ರವಾದ ವಸ್ತ್ರಮಾಲ್ಯಾಭರಣಗಳುಳ್ಳ ನಾಲ್ಕುಮಂದಿ ಮಂತ್ರಿಗಳೊಡಗೂಡಿ ಶ್ವೇತಪರ್ವತವನ್ನೇರಿದಂತೆಯೂ ನಾನು ಸ್ವಪ್ನದಲ್ಲಿ ನೋಡಿದೆನು. ಇದರಿಂದ ನಿನಗೆ ಉಂಟಾಗಿರುವ ಭಯವೆಲ್ಲಾ ನಿವೃತ್ತಿಯಾಗುವಂತೆ ತೋರುವದು. ರಾಮನ ಅಸ್ತ್ರಗಳಿಂದ ಸಕಲ ಭೂಮಂಡಲವೂ ತುಂಬಿದ್ದಂತೆಯೂ ಸ್ವಪ್ನವನ್ನು ಕಂಡೆನು. ಇದರಿಂದ ರಾಮನು ತನ್ನ ಯಶಸ್ಸಿನಿಂದ ಭೂಮಂಡಲವನ್ನೆಲ್ಲಾ ತುಂಬುವದು ನಿಶ್ಚಯವು. ಲಕ್ಷ್ಮಣನು ಎಲ್ಲಾ ದಿಕ್ಕುಗಳನ್ನೂ ನೋಡುತ್ತ ಅಸ್ಥಿಪರ್ವತವನ್ನು ಆರೋಹಣಮಾಡಿ ಮಧುರವಾದ ಪಾನಮಾಡಿದಂತೆಯೂ ಸ್ವಪ್ನದಲ್ಲಿ ನೋಡಿದೆನು. ನೀನು ರೋದನ ಮಾಡುತ್ತ ಮೈಗೆಲ್ಲಾ ರಕ್ತವನ್ನು ಬಳಿದುಕೊಂಡು ಹುಲಿಯಿಂದ ರಕ್ಷಿತಳಾಗಿ ಉತ್ತರದಿಕ್ಕಿಗೆ ಹೋಗುತ್ತಿರುವಂತೆಯೂ ಸ್ವಪ್ನದಲ್ಲಿ ನೋಡಿದೆನು. ಎಲೆ ಸೀತೆ, ಈ ಸ್ವಪ್ನದಿಂದ ಲಕ್ಷ್ಮಣಸಹಿತನಾದ ನಿನ್ನ ಪತಿಯಾದ ಶ್ರೀರಾಮನೊಡಗೂಡಿ ನೀನು ಕ್ಷಿಪ್ರದಲ್ಲಿ ಮಹತ್ತಾದ ಹರ್ಷವನ್ನು ಪಡೆಯುವೆ' ಎನಲು, ಆ ಮಾತನ್ನು ಕೇಳಿ ಹುಲ್ಲೇಮರಿಯ ಕಣ್ಣಿನಂತೆ ವಿಶಾಲವಾದ ನೇತ್ರಗಳುಳ್ಳ ಸೀತೆಯು ತನ್ನ ಗಂಡನೊಡನೆ ಜಾಗ್ರತೆಯಾಗಿ ಸೇರುವೆನೆಂಬ ಆಶೆಯುಳ್ಳವಳಾದಳು. ಅಷ್ಟರಲ್ಲಿ ರಾವಣನ ಬಳಿಗೆ ಹೋಗಿದ್ದ ಪಿಶಾಚಸ್ವರೂಪರಾದ ಆ ರಾಕ್ಷಸಸ್ತ್ರೀಯರು ತ್ರಿಜಟೆಯ ಸಂಗಡ ಮಾತನಾಡುತ್ತಿದ್ದ ಸೀತೆಯನ್ನು ನೋಡಿದರು" ಎಂದು ಮಾರ್ಕಂಡೇಯನು ಧರ್ಮರಾಯನಿಗೆ ಹೇಳಿದನು.

## ೨೮೦ನೇ ಅಧ್ಯಾಯ.—ರಾಮೋಪಾಖ್ಯಾನ—(ಸೀತಾರಾವಣಸಂವಾದ.)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಮಾರ್ಕಂಡೇಯನು ಧರ್ಮರಾಯನನ್ನು ಕುರಿತು, "ಎಲೈ ಧರ್ಮರಾಯನೆ, ಬಳಿಕ ಪತಿಶೋಕದಿಂದ ಪೀಡಿತ

ಳಾಗಿಯೂ ದೀನಳಾಗಿಯೂ ಮಲಿನವಾದ ವಸ್ತ್ರವನ್ನು ಧರಿಸಿದವಳಾಗಿಯೂ ಮಂಗಳಸೂತ್ರವನ್ನು ಮಾತ್ರ ಧರಿಸಿರುವಳಾಗಿಯೂ ಶಿಲಾತಲದಲ್ಲಿ ಕೂತುಕೊಂಡು ರಾಕ್ಷಸಸ್ತ್ರೀಯರಿಂದ ಸುತ್ತುವರಿಯಲ್ಪಟ್ಟವಳಾಗಿಯೂ ಪತಿವ್ರತೆಯಾಗಿಯೂ ಇರುವ ರೋದನಮಾಡುತ್ತಿರುವ ಸೀತಾದೇವಿಯನ್ನು ಸ್ಮರಿಸಿಕೊಂಡು ದೇವದಾನವ ಯಕ್ಷರಾಕ್ಷಸರಿಗೆ ಅಜಯ್ಯನಾದ ರಾವಣನು ಕಾಮಪೀಡಿತನಾಗಿ ದಿವ್ಯವಾದ ಆಭರಣಗಳನ್ನೂ ವಸ್ತ್ರವನ್ನೂ ಧರಿಸಿಕೊಂಡು, ವಿಚಿತ್ರವಾದ ಹಾರದಿಂದ ಶೋಭಿಸುತ್ತ, ಮೂರ್ತಿಮತ್ತಾದ ವಸಂತನಂತೆಯೂ ಕಲ್ಪವೃಕ್ಷದಂತೆಯೂ ಪ್ರಕಾಶಿಸುತ್ತಿದ್ದರೂ ಶ್ಮಶಾನದಲ್ಲಿರುವ ದೊಡ್ಡದಾದ ವೃಕ್ಷದಂತೆ ಭಯಂಕರನಾಗಿ ಆ ಅಶೋಕವನಕ್ಕೆ ಬಂದು, ಸೂಕ್ಷ್ಮವಾದ ಮಧ್ಯಪ್ರದೇಶವುಳ್ಳ ಸೀತೆಯನ್ನು ನೋಡಿ, ಶನಿಗ್ರಹವು ರೋಹಿಣಿಯ ಸಮೀಪಕ್ಕೆ ಬರುವಂತೆ ಆಕೆಯ ಸಮೀಪಕ್ಕೆ ಬಂದು, ಭಯಪಟ್ಟ ಹುಲ್ಲೆಮರಿಯಂತಿರುವ ಆಕೆಯನ್ನು ಕುರಿತು 'ಎಲೆ ಸೀತೆ, ನೀನು ಪತಿಯಲ್ಲಿ ಭಕ್ತಿಯನ್ನು ತೋರಿಸಿದ್ದು ಸಾಕು. ನನ್ನಲ್ಲಿ ಅನುಗ್ರಹಮಾಡಿ ಈ ಮಲಿನವಾದ ವಸ್ತ್ರವನ್ನು ಬಿಟ್ಟು ದಿವ್ಯವಾದ ವಸ್ತ್ರಾಭರಣಗಳನ್ನು ಧರಿಸಿಕೊಂಡು ನನ್ನನ್ನು ಸೇರಿ ಉತ್ತಮರಾದ ನನ್ನ ಪತ್ನಿಯರಲ್ಲಿ ನೀನು ಉತ್ತಮಳೆನಿಸಿಕೊಂಡು ಶೋಭಿಸು. ದೇವಗಂಧರ್ವಕನ್ಯೆಯರೂ ದೈತ್ಯದಾನವಕನ್ಯೆಯರೂ ಪಿಶಾಚಕನ್ಯೆಯರೂ ಸಹ ಹದಿನಾಲ್ಕು ಕೋಟಿ ಸ್ತ್ರೀಯರು ನನ್ನ ಆಜ್ಞಾನುಸಾರಿಗಳಾಗಿರುವರು. ಇದಕ್ಕೆ ದ್ವಿಗುಣವಾಗಿ ಮನುಷ್ಯಭಕ್ಷಕರಾದ ರಾಕ್ಷಸಕನ್ಯೆಯರು ಇರುವರು. ಗಂಧರ್ವಸ್ತ್ರೀಯರೂ ಅಪ್ಸರಸ್ತ್ರೀಯರೂ ಮಾತ್ರ ಧನಾಧಿಪತಿಯಾದ ಮಹೇಶ್ವರನಿಗೆ ಮಿತ್ರನಾದ ನಮ್ಮಣ್ಣನಾದ ಕುಬೇರನನ್ನು ಆಶ್ರಯಿಸಿರುವರು. ಇದಲ್ಲದೆ ಬ್ರಹ್ಮರ್ಷಿಯಾದ ವಿಶ್ರವಸ್ಸಿಗೆ ನಾನು ಸಾಕ್ಷಾತ್ತಾಗಿ ಮಗನಾದವನು. ನಾನು ಲೋಕಪಾಲಕರಲ್ಲಿ ಐದನೆಯವನೆಂದು ಪ್ರಸಿದ್ಧಿಯನ್ನು ಪಡೆದಿರುವೆನು. ದೇವೇಂದ್ರನಲ್ಲಿ ಯಾವ ಭಕ್ಷ್ಯಭೋಜ್ಯಪಾನಗಳು ಇರುವವೋ ಹಾಗೆ ಅವುಗಳೆಲ್ಲಾ ನನ್ನಲ್ಲಿಯೂ ಇರುವವು. ಮಂಡೋದರಿಯಂತೆ ನೀನೂ ನನಗೆ ಭಾರ್ಯೆಯಾಗಿ ಈ ವನವಾಸದ ಕ್ಲೇಶಗಳನ್ನು ಪರಿಹರಿಸಿಕೊ' ಎನಲು ; ಸೀತೆಯು ತನ್ನ ಮುಖವನ್ನು ತಿರುಗಿಸಿಕೊಂಡು ಬಿಸಿಯಾದ ಕಣ್ಣೀರನ್ನು ಎದೆಯಮೇಲೆ ಸುರಿಸುತ್ತ, ಮಧ್ಯದಲ್ಲಿ ಒಂದು ಹುಲ್ಲುಕಡ್ಡಿಯನ್ನಿಟ್ಟುಕೊಂಡು ಅದನ್ನು ನೋಡುತ್ತ, 'ಎಲೈ ರಾಕ್ಷಸೇಶ್ವರನೆ, ಪದೇಪದೇ ನಮ್ಮಂಥವರನ್ನು ಕುರಿತು ಇಂಥ ಕೆಟ್ಟಮಾತುಗಳನ್ನು ಆಡತಕ್ಕ ನಿನ್ನ ಮಾತನ್ನು ಭಾಗ್ಯಹೀನೆಯಾದ ನಾನು ಕೇಳಬಹುದೆ? ನಿನಗೆ ಸುಖವಾಗಲಿ. ನನ್ನಲ್ಲಿ ಮನಸ್ಸಿಡಬೇಡ ಹೊರಟುಹೋಗು. ನಾನು ಮಹಾನುಭಾವನಾದ ರಾಮನಿಗೆ ಪತ್ನಿಯಾದವಳು. ನಾನು ಪತಿವ್ರತೆ, ನಿನಗೆ ನಾನು ಲಭ್ಯಳಲ್ಲ. ನಾನು ಮನುಷ್ಯಳು, ದೀನಳು, ಮತ್ತು ನಿನ್ನನ್ನು ಸೇರುವದಕ್ಕೆ ತಕ್ಕವಳಲ್ಲ. ಹೀಗೆ ನಿನಗೆ ಸ್ವಾಧೀನವಾಗದೆ ಇರತಕ್ಕ ನನ್ನನ್ನು ಬಲಾತ್ಕರಿಸಿದ್ದರಿಂದ ನಿನಗೇನು ಪ್ರೀತಿಯುಂಟಾಗುವದು? ನಿಮ್ಮ ತಂದೆಯು ಬ್ರಹ್ಮದೇವನಿಗೆ ಸಮಾನನಾಗಿ ಬ್ರಹ್ಮನ ವಂಶದಲ್ಲಿ ಉತ್ಪನ್ನನಾಗಿರುವನು. ಅಂಥವನಲ್ಲಿ ಹುಟ್ಟಿ ಲೋಕಪಾಲಕರಿಗೆ ಸಮಾನನಾದ ನೀನು ಹೀಗೆ ಅಧರ್ಮದಲ್ಲಿ ಪ್ರವರ್ತಿಸಬಹುದೆ? ನಿಮ್ಮ ಅಣ್ಣನಾದ ಕುಬೇರನು ಮಹಾದೇವನಿಗೆ ಮಿತ್ರನಾಗಿಯೂ ಧನಾಧಿಪತಿಯಾಗಿಯೂ ಇರುವನೆಂದು ನೀನೇ ಹೇಳಿಕೊಳ್ಳುವೆ. ಇಂಥ ನೀನು ಅಕಾರ್ಯದಲ್ಲಿ ಪ್ರವರ್ತಿಸಿ ಹ್ಯಾಗೆ ತಾನೆ ಲಜ್ಜೆಪಡದಿರುವೆ?' ಎಂದು ನುಡಿದು, ಕತ್ತನ್ನು ಅಲ್ಲಾಡಿಸುತ್ತ ಸೆರಗಿನಿಂದ ಮುಖವನ್ನು ಮುಚ್ಚಿಕೊಂಡು ರೋದನೆಮಾಡುತ್ತಿರಲು, ಆಕೆಯ ಮಂಡೆಯ ಮೇಲೆ ಜಡೆಯು ಕೃಷ್ಣಸರ್ಪದಂತೆ ಪ್ರಕಾಶಿಸಿತು. ಆಗ ರಾವಣನು ಸೀತೆಯ ನಿಷ್ಠುರವಾದ ವಾಕ್ಯವನ್ನು ಕೇಳಿ ಆಕೆಯು ಎಷ್ಟು ನಿರಾಕರಿಸಿದರೂ ಪುನಃ ಆಕೆಯನ್ನು ಕುರಿತು 'ಎಲೆ ಜಾನಕಿ, ಮನ್ಮಥನು ನನ್ನ ಶರೀರವನ್ನು ತನ್ನ ಬಾಣದಿಂದ ಸುಟ್ಟುಬಿಡುತ್ತಿರುವನು. ನನ್ನಲ್ಲಿ ಅಪೇಕ್ಷೆಯಿಲ್ಲದಿರುವ ನಿನ್ನನ್ನು ನಾನು ಬಲಾತ್ಕರಿಸತಕ್ಕವನಲ್ಲ. ನಮಗೆ ಆಹಾರಭೂತನಾದ ಮನುಷ್ಯನನ್ನೇ ನೀನು ಬಯಸುತ್ತಿರುವೆ. ನಾನು ಮಾಡತಕ್ಕದ್ದೇನು?' ಎಂದು ಹೇಳಿ ಹೊರಟುಹೋದನು. ಬಳಿಕ ಅಶೋಕವನದಲ್ಲಿಯೇ ಸೀತೆಯು ದುಃಖಪಡುತ್ತ ತ್ರಿಜಟೆಯೆಂದ ಮಾತಿನಿಂದ ಆಗಾಗ್ಯೆ ಮನಸ್ಸನ್ನು ಸಮಾಧಾನಮಾಡಿಕೊಳ್ಳುತ್ತಿದ್ದಳು" ಎಂದು ಮಾರ್ಕಂಡೇಯನು ಧರ್ಮರಾಯನಿಗೆ ಹೇಳಿದನು.

೨೮೧ನೇ ಅಧ್ಯಾಯ.—ರಾಮೋಪಾಖ್ಯಾನ—(ಹನುಮಂತನು ಸೀತೆಯನ್ನು ಕಂಡುಬಂದದ್ದು.)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಮಾರ್ಕಂಡೇಯನು ಧರ್ಮರಾಯನನ್ನು ಕುರಿತು "ಕೇಳು ಧರ್ಮರಾಯನೆ, ಇತ್ತ ಸುಗ್ರೀವನಿಂದ ರಕ್ಷಿತನಾದ ರಾಮನು ಲಕ್ಷ್ಮಣನೊಡಗೂಡಿ ಮಾಲ್ಯವತ್ಪರ್ವತದಲ್ಲಿ ವಾಸಮಾಡುತ್ತ, ಮೇಘಗಳಿಲ್ಲದೆ ಗ್ರಹಗಳಿಂದಲೂ ನಕ್ಷತ್ರಗಳಿಂದಲೂ ಕೂಡಿ ನಿರ್ಮಲವಾಗಿರುವ ಆಕಾಶದಲ್ಲಿ ನಿರ್ಮಲನಾಗಿ ಪ್ರಕಾಶಿಸುವ ಚಂದ್ರನನ್ನು ನೋಡಿ, ಕಮಲ ಕಲ್ಹಾರಾದಿ ಪುಷ್ಪಗಳ ಮೇಲೆ ಬೀಸಿ ಅವುಗಳ ಪರಿಮಳವನ್ನು ತೆಗೆದುಕೊಂಡು ಬರುವ ಮಂದಮಾರುತವು ಸೋಂಕಲು ರಾವಣನ ಮನೆಯಲ್ಲಿರತಕ್ಕ ಸೀತಾದೇವಿಯನ್ನು ಸ್ಮರಿಸಿಕೊಂಡು, ಒಂದುದಿವಸ ಪ್ರಾತಃಕಾಲದಲ್ಲಿ ಲಕ್ಷ್ಮಣನನ್ನು ಕುರಿತು 'ಎಲೈ ಲಕ್ಷ್ಮಣನೆ, ಕಿಷ್ಕಿಂಧಾಪಟ್ಟಣಕ್ಕೆ ಹೋಗಿ ಸ್ತ್ರೀವಿಹಾರದಲ್ಲಿ ಲಂಪಟನಾಗಿಯೂ ಕೃತಘ್ನನಾಗಿಯೂ ಸ್ವಾರ್ಥಪರನಾಗಿಯೂ ಇರುವ ಉನ್ಮತ್ತನಾದ ಸುಗ್ರೀವನನ್ನು ನೋಡಿಕೊಂಡು ಬಾ. ಕುಲಾಧಮನಾದ ಮೂಢನಾದ ಆತನಿಗೆ ರಾಜ್ಯದಲ್ಲಿ ಪಟ್ಟಾಭಿಷೇಕವನ್ನು ಮಾಡಿದ್ದರಿಂದ ಸಕಲ ಕಪಿಗಳೂ ಆತನನ್ನು ಆಶ್ರಯಿಸಿರುವರು. ಇದಕ್ಕೋಸ್ಕರವೇ ವಾಲಿಯನ್ನು ಸಂಹಾರಮಾಡಿದ್ದಾಯಿತು. ವಾನರಾಧಮನಾದ ಸುಗ್ರೀವನು ನನ್ನ ಕಾರ್ಯವನ್ನು ಮರೆತುಬಿಟ್ಟಿರುವನು. ಸಮಯನಿಬಂಧನೆಯನ್ನು ಮಾಡಿಕೊಂಡಿದ್ದರೂ ಅಲ್ಪಬುದ್ಧಿಯಾದ ಅವನು ಉಪಕಾರಿಯಾದ ನನ್ನನ್ನು ಲಕ್ಷ್ಯಮಾಡದೆ ಕಾಮಲಂಪಟನಾಗಿ ಬಿದ್ದಿರುವನು. ನೀನು ಈಗಲೇ ಅಲ್ಲಿಗೆ ಹೋಗಿ ಆತನನ್ನು ವಾಲಿಯು ಹೋದಮಾರ್ಗಕ್ಕೆ ಕಳುಹಿಸಿಕೊಡು ; ಅಥವಾ ಅವನು ನಮ್ಮ ಕಾರ್ಯದಲ್ಲಿ ಉದ್ಯುಕ್ತನಾಗಿದ್ದರೆ ಜಾಗ್ರತೆಯಾಗಿ ಅವನನ್ನು ಇಲ್ಲಿಗೆ ಕರೆದುಕೊಂಡು ಬಾ' ಎಂದು ಆಜ್ಞಾಪಿಸಿದನು. ಕೂಡಲೆ ಲಕ್ಷ್ಮಣನು ಸುಗ್ರೀವನಮೇಲೆ ಕೋಪಗೊಂಡು ಧನುರ್ಬಾಣಗಳನ್ನು ತಾಳಿ ಕಿಷ್ಕಿಂಧಾನಗರಕ್ಕೆ ಹೊರಟನು. ಆಗ ಕಪಿರಾಜನಾದ ಸುಗ್ರೀವನು ಪಟ್ಟಣದ ಬಾಗಿಲಿಗೆ ಲಕ್ಷ್ಮಣನು ಬಂದಿರುವದನ್ನು ತಿಳಿದು, ವಿನಯದಿಂದ ಪರಿವಾರಸಮೇತನಾಗಿ ಎದುರ್ಗೊಂಡು ಆತನನ್ನು ಮರ್ಯಾದೆಯಿಂದ ಅರಮನೆಗೆ ಕರೆದುಕೊಂಡು ಹೋಗಿ ಅರ್ಘ್ಯಪಾದ್ಯಾದಿಗಳಿಂದ ಪೂಜಿಸಿದನು. ಲಕ್ಷ್ಮಣನು ಪ್ರೀತಿಯಿಂದ ಆ ಸತ್ಕಾರವನ್ನು ಸ್ವೀಕರಿಸಿ ಶ್ರೀರಾಮನು ಹೇಳಿದ ಮಾತುಗಳನ್ನು ಆತನ ಸಂಗಡ ನಿರ್ಭಯವಾಗಿ ಹೇಳಿದನು. ಆ ಮಾತನ್ನು ಕೇಳಿ ಸಪರಿವಾರನಾದ ಸುಗ್ರೀವನು ನಮ್ರನಾಗಿ ಕೈಮುಗಿದುಕೊಂಡು 'ಎಲೈ ಲಕ್ಷ್ಮಣನೆ, ನಾನು ಬುದ್ಧಿಯಿಲ್ಲದವನೂ ಅಲ್ಲ, ಕೃತಘ್ನನೂ ಅಲ್ಲ, ದಯಾಶೂನ್ಯನೂ ಅಲ್ಲ. ಆದರೆ ಸೀತೆಯನ್ನು ಹುಡುಕುವದಕ್ಕೆ ದಿಕ್ಕುದಿಕ್ಕುಗಳಿಗೂ ಕಪಿನಾಯಕರನ್ನು ಕಳುಹಿಸಿಕೊಟ್ಟಿರುವೆನು. ಪರ್ವತಗಳಲ್ಲಿಯೂ ನದಿಗಳಲ್ಲಿಯೂ ಪಟ್ಟಣಗಳಲ್ಲಿಯೂ ಗ್ರಾಮಗಳಲ್ಲಿಯೂ ಅರಣ್ಯಗಳಲ್ಲಿಯೂ ಪೂಜ್ಯಳಾದ ಸೀತೆಯನ್ನು ಹುಡುಕಿಕೊಂಡು ಬರುವಂತೆ ಅವರಿಗೆ ಕಟ್ಟುಮಾಡಿರುವೆನು. ತಿಂಗಳು ತುಂಬುವದಕ್ಕೆ ಇನ್ನೂ ಐದು ದಿವಸಗಳು ಕಡಮೆಯಾಗಿರುವವು. ತಿಂಗಳು ತುಂಬಿದಬಳಿಕ ದಿಕ್ಕುದಿಕ್ಕುಗಳಿಂದ ಬಂದ ಕಪಿನಾಯಕರ ಮುಖದಿಂದ ಸೀತಾವೃತ್ತಾಂತವನ್ನು ತಿಳಿದು, ಪ್ರಿಯವಾದ ಆ ವೃತ್ತಾಂತವನ್ನು ರಾಮನಿಗೂ ನಿನಗೂ ತಿಳುಹಿಸುವದಕ್ಕೋಸ್ಕರ ರಾಮನ ಸನ್ನಿಧಿಗೆ ನಾನು ಬರತಕ್ಕವನಾಗಿದ್ದೆನು' ಎಂದು ಹೇಳಿಕೊಂಡನು. ಆ ಮಾತನ್ನು ಕೇಳಿ ಲಕ್ಷ್ಮಣನು ಕೋಪವನ್ನು ಬಿಟ್ಟು ಸಂತೋಷದಿಂದ ಸುಗ್ರೀವನನ್ನು ಬಹುಮಾನಿಸಿ, ಆತನೊಡನೆ ಮಾಲ್ಯವತ್ಪರ್ವತದಲ್ಲಿರುವ ರಾಮನ ಸನ್ನಿಧಿಗೆ ಹೋಗಿ ಸುಗ್ರೀವನು ಮಾಡಿರತಕ್ಕ ಪ್ರಯತ್ನವನ್ನೆಲ್ಲಾ ಆತನಿಗೆ ಅರಿಕೆ ಮಾಡಿದನು.

ಬಳಿಕ ಮೂರು ದಿಕ್ಕುಗಳಿಗೆ ಹೋಗಿದ್ದ ಕಪಿನಾಯಕರು ಬಂದು ರಾಮನ ಸನ್ನಿಧಿಯಲ್ಲಿ 'ಸಮುದ್ರದೊಡಗೂಡಿದ ಭೂಮಿಯನ್ನೆಲ್ಲಾ ಹುಡುಕಿದೆವು. ಪೂಜ್ಯಳಾದ ಸೀತಾದೇವಿಯನ್ನೂ ದುಷ್ಟನಾದ ರಾವಣನನ್ನೂ ಎಲ್ಲಿಯೂ ಕಾಣಲಿಲ್ಲ' ಎಂದು ಬಿನ್ನವಿಸಿದರು. ಆ ಮಾತನ್ನು ಕೇಳಿ ರಾಮನು ದಕ್ಷಿಣದಿಕ್ಕಿಗೆ ಹೋಗಿರುವ ಕಪಿನಾಯಕರು ಬಂದು ಏನಹೇಳುವರೋ ಎಂದು ಆಸೆಯನ್ನಿಟ್ಟುಕೊಂಡು ಪ್ರಾಣವನ್ನು ಹಿಡಿದುಕೊಂಡಿದ್ದನು. ಆ ಬಳಿಕ ದಕ್ಷಿಣದಿಕ್ಕಿಗೆ ಹೋಗಿದ್ದ ಅಂಗದ ಮೊದಲಾದ ಕಪಿನಾಯಕರು ಮಾರ್ಗದಲ್ಲಿ ವಾಲಿಯ ಮಧುವನಕ್ಕೆ ನುಗ್ಗಿ,

ಅಲ್ಲಿ ಫಲಗಳನ್ನೂ ಜೇನುತುಪ್ಪವನ್ನೂ ಆಹಾರಮಾಡಿ ಯಥೇಚ್ಛವಾಗಿ ವಿಹರಿಸುತ್ತಿದ್ದರು. ಅದನ್ನು ತಿಳಿದು ಆ ವನಪಾಲಕರು ಸುಗ್ರೀವನ ಬಳಿಗೆ ಬಂದು, 'ಎಲೈ ಮಹಾರಾಜನೆ, ವಾಲಿಪುತ್ರನಾದ ಅಂಗದ, ಹನುಮಂತ, ಜಾಂಬವಂತ, ಮೊದಲಾದ ಕಪಿವೀರರು ನಿನ್ನ ಆಜ್ಞೆಯಿಂದ ಸೀತೆಯನ್ನು ಹುಡುಕುವದಕ್ಕಾಗಿ ದಕ್ಷಿಣದಿಕ್ಕಿಗೆ ಹೋಗಿ ಬಂದು ಮಧುವನವನ್ನು ಲೂಟಮಾಡುತ್ತಿರುವರು. ಅವರು ಇಲ್ಲಿಂದ ಹೋಗಿ ಎರಡು ತಿಂಗಳಾಯಿತು. ಅವರಿಗೆ ನೀನು ತಕ್ಕ ಶಿಕ್ಷೆಯನ್ನು ಮಾಡಬೇಕು' ಎಂದು ಬಿನ್ನವಿಸಲು, ಆ ಮಾತನ್ನು ಕೇಳಿ ಸುಗ್ರೀವನು ರಾಮಕಾರ್ಯವಾಯಿತೆಂದು ಭಾವಿಸಿ, ಕಾರ್ಯವನ್ನು ನೆರವೇರಿಸಿದ ಭೃತ್ಯರು ಸಂತೋಷದಿಂದ ಇಂಥ ಕಾರ್ಯನ್ನು ಮಾಡಬಹುದು ಚಿಂತೆಯಿಲ್ಲವೆಂದು ಬಗೆದು, ಆ ವೃತ್ತಾಂತವನ್ನು ಶ್ರೀರಾಮನಿಗೆ ತಿಳುಹಿಸಿದನು. ಅದನ್ನು ಕೇಳಿ ರಾಮನು ದಕ್ಷಿಣದಿಕ್ಕಿಗೆ ಹೋಗಿದ್ದ ಕಪಿನಾಯಕರು ಸೀತೆಯನ್ನು ನೋಡಿ ಬಂದಿರುವರೆಂದು ಊಹೆಯಿಂದ ತಿಳಿದನು. ಆ ಹನುಮಂತ ಮೊದಲಾದ ಕಪಿನಾಯಕರು ಸ್ವಲ್ಪಕಾಲ ಮಧುವನದಲ್ಲಿ ವಿಶ್ರಮಿಸಿಕೊಂಡು ವೇಗದಿಂದ ರಾಮಲಕ್ಷ್ಮಣರ ಸನ್ನಿಧಿಗೆ ಹಾರಿ ಬರುತ್ತಿರಲು, ರಾಮನು ಆ ಕಪಿನಾಯಕರ ವೇಗವನ್ನೂ ಮುಖಭಾವವನ್ನೂ ನೋಡಿ ಈ ಹನುಮಂತನು ಸೀತೆಯನ್ನು ಕಂಡು ಬಂದಿರುವನು ಎಂದು ನಿಶ್ಚಯಿಸಿದನು. ಆಗ ಹನುಮಂತ ಮೊದಲಾದ ಕಪಿನಾಯಕರು ಬಂದು ರಾಮಲಕ್ಷ್ಮಣ ಸುಗ್ರೀವರಿಗೆ ವಂದನೆಯನ್ನು ಮಾಡಿದರು. ಧನುರ್ಬಾಣಧಾರಿಯಾದ ರಾಮನು ಆ ಕಪಿನಾಯಕರನ್ನು ಕುರಿತು 'ಎಲೈ ಕಪಿನಾಯಕರೆ, ನೀವೆಲ್ಲರೂ ಕಾರ್ಯವನ್ನು ನೆರವೇರಿಸಿಕೊಂಡು ಬಂದಿರಾ? ನನ್ನ ಪ್ರಾಣವನ್ನು ಉಳಿಸುವಿರಾ ? ನಾನು ಯುದ್ಧದಲ್ಲಿ ಶತ್ರುಗಳನ್ನು ಸಂಹರಿಸಿ ಪತ್ನಿಯಾದ ಸೀತೆಯನ್ನು ಬಿಡಿಸಿಕೊಂಡು ಹೋಗಿ ಅಯೋಧ್ಯಾನಗರದಲ್ಲಿ ರಾಜ್ಯಭಾರವನ್ನು ಮಾಡೇನೆ ? ಪತ್ನಿಯನ್ನು ಕಳೆದುಕೊಂಡು ಅವಧೂತನಾಗಿ ಬೇರೇ ನಾನು ಜೀವಿಸತಕ್ಕವನಲ್ಲ' ಎಂದು ನುಡಿದನು. ಅದನ್ನು ಕೇಳಿ ಹನುಮಂತನು 'ಎಲೈ ರಾಮನೆ, ನಿನಗೆ ಪ್ರಿಯವಾದ ಮಾತನ್ನು ನಾನು ಹೇಳುವೆನು ಕೇಳು. ನಾನು ಸೀತೆಯನ್ನು ನೋಡಿದೆನು. ಅಂಗದ ಮೊದಲಾದ ಕಪಿವೀರರಾದ ನಾವೆಲ್ಲರೂ ಇಲ್ಲಿಂದ ದಕ್ಷಿಣದಿಕ್ಕಿಗೆ ಹೊರಟು ಅಲ್ಲಿರುವ ವನಗಳಲ್ಲಿಯೂ ನದಿಗಳಲ್ಲಿಯೂ ಪಟ್ಟಣಗಳಲ್ಲಿಯೂ ಪರ್ವತಗಳಲ್ಲಿಯೂ ಆಯಾ ದೇಶಗಳಲ್ಲಿಯೂ ಪೂಜ್ಯಳಾದ ಸೀತೆಯನ್ನು ಹುಡುಕಿ, ಎಲ್ಲಿಯೂ ಆಕೆಯನ್ನು ಕಾಣದೆ ಶ್ರಾಂತರಾಗಿ, ಸುಗ್ರೀವನು ನಿಬಂಧನೆಮಾಡಿದ್ದ ಒಂದು ತಿಂಗಳು ಅತಿಕ್ರಮಿಸಲು, ಬಹುಯೋಜನವಿಸ್ತಾರವಾದ ಕತ್ತಲೆಕವಿದಿರುವ ಅನೇಕ ಪಕ್ಷಿಕೀಟಗಳಿಂದ ವ್ಯಾಪ್ತವಾದ ವಿಂಧ್ಯಪರ್ವತದ ಗುಹೆಯನ್ನು ಹೊಕ್ಕು, ಬಹುದೂರ ಅದರೊಳಗೆ ನಡೆದು, ಬಳಿಕ ಅದರಲ್ಲಿ ಸೂರ್ಯಪ್ರಭೆಯನ್ನು ಕಂಡು ಅಲ್ಲಿ ಮಯಾಸುರನು ನಿರ್ಮಾಣಮಾಡಿದ್ದ ದಿವ್ಯಮಂದಿರವನ್ನು ನೋಡಿದೆವು. ಆ ಮಂದಿರದಲ್ಲಿ ಪ್ರಭಾವತಿಯೆಂಬ ತಾಪಸಿಯು ತಪಸ್ಸು ಮಾಡುತ್ತಿದ್ದಳು. ಆಕೆಯು ನಮಗೆ ನಾನಾವಿಧವಾದ ಕಂದಮೂಲಫಲಗಳನ್ನೂ ಮಧುರವಾದ ಶೀತಳವಾದ ಪಾನೀಯವನ್ನೂ ಸಹ ಕೊಟ್ಟಳು. ಅದನ್ನು ಸ್ವೀಕರಿಸಿ ನಾವು ಅದರಿಂದ ಅತಿಶಯವಾದ ಬಲವುಳ್ಳವರಾಗಿ ಆಕೆಯು ತೋರಿಸಿದ ಮಾರ್ಗದಿಂದ ಮರಳಿ ಬಂದು ಲವಣಸಮುದ್ರವನ್ನು ಕಂಡು, ಆ ಸಮುದ್ರದ ಸಮೀಪದಲ್ಲಿರುವ ಸಹ್ಯ ಮಲಯಪರ್ವತಗಳನ್ನು ಏರಿ, ಅನೇಕ ಶತಯೋಜನ ವಿಸ್ತಾರವುಳ್ಳದ್ದಾಗಿಯೂ ತಿಮಿ ನಕ್ರ ಮೊದಲಾದ ಘೋರವಾದ ಜಲಚರಪ್ರಾಣಿಗಳಿಗೆ ಆವಾಸಭೂತವಾಗಿಯೂ ಇರುವ ಲವಣಸಮುದ್ರವನ್ನು ಚೆನ್ನಾಗಿ ನೋಡಿ, ಮುಂದೇನು ಮಾಡತಕ್ಕದ್ದೆಂದು ಚಿಂತಾಕ್ರಾಂತರಾಗಿ ದುಃಖಪಡುತ್ತ, ಜೀವದಮೇಲೆ ಆಶೆಯನ್ನು ಬಿಟ್ಟು, ಎಲ್ಲರೂ ಪ್ರಾಯೋಪವೇಶವನ್ನು ಮಾಡಿ ಹಿಂದೆ ನಡೆದ ಕಥೆಯನ್ನು ಒಬ್ಬರಿಗೊಬ್ಬರು ಹೇಳುತ್ತ, ಆ ಕಥಾಪ್ರಸಂಗದಲ್ಲಿ ರಾವಣನಿಂದ ಜಟಾಯುವು ಮರಣವನ್ನು ಹೊಂದಿದ ವೃತ್ತಾಂತವನ್ನು ಹೇಳುತ್ತಿದ್ದೆವು. ಅದನ್ನು ಕೇಳಿ ಪರ್ವತದ ಶೃಂಗದಂತೆ ಭಯಂಕರವಾದ ರೂಪುಳ್ಳವನಾಗಿಯೂ ಗರುಡನಂತೆ ಘೋರವಾದ ರೂಪುಳ್ಳವನಾಗಿಯೂ ಇರುವ ಒಬ್ಬ ಗೃಧ್ರರಾಜನು ನಮ್ಮ ಶಕ್ತಿಯನ್ನು ತಿಳಿಯದೆ ನಮ್ಮನ್ನು ತಿನ್ನಬೇಕೆಂದು ನಮ್ಮ ಬಳಿಗೆ ಬಂದು—ಎಲೈ ಕಪಿಗಳೆ, ನಿಮ್ಮಲ್ಲಿ ಯಾವನು ನನ್ನ ತಮ್ಮನಾದ ಜಟಾಯುವಿನ ಕಥೆಯನ್ನು ಹೇಳುತ್ತಿದ್ದನು ? ನಾನು ಆ ಜಟಾಯುವಿಗೆ ಅಣ್ಣನು, ನನ್ನ ಹೆಸರು ಸಂಪಾತಿಯು. ಪೂರ್ವದಲ್ಲಿ ನಾವಿಬ್ಬರೂ ಸ್ಪರ್ಧೆಯಿಂದ ಸೂರ್ಯಮಂಡಲದ ಸಮೀಪಕ್ಕೆ ಹೋಗಬೇಕೆಂದು ಆಕಾಶದಲ್ಲಿ ಹಾರಿ ಹೊರಟೆವು. ಆಗ ನನ್ನ ತಮ್ಮನು ಸೂರ್ಯನ ಸಂತಾಪವನ್ನು ಸಹಿಸ

ಲಾರದಿರಲು, ಆತನನ್ನು ನಾನು ನನ್ನ ರೆಕ್ಕೆಗಳ ನೆರಳಿನಿಂದ ಮರೆಮಾಡಿಕೊಂಡೆನು. ಆಗ ನನ್ನ ರೆಕ್ಕೆಗಳು ಸೂರ್ಯನ ಕಿರಣಗಳಿಂದ ಸುಟ್ಟುಹೋದವು; ಆತನ ರೆಕ್ಕೆಗಳು ಉಳಿದುಕೊಂಡವು. ಬಳಿಕ ನಾನು ಈ ಪರ್ವತದ ಮೇಲೆ ಬಿದ್ದೆನು. ನನ್ನ ತಮ್ಮನ ಯೋಗಕ್ಷೇಮಗಳನ್ನು ಕೇಳಿ ಬಹುದಿವಸಗಳಾದವು. ಆ ವೃತ್ತಾಂತವನ್ನು ನನಗೆ ಚೆನ್ನಾಗಿ ತಿಳುಹಿಸಿರಿ—ಎಂದು ಪ್ರಶ್ನೆಮಾಡಿದನು. ಅದನ್ನು ಕೇಳಿ ನಾವು ಜಟಾಯುವು ಮರಣಹೊಂದಿದ ವೃತ್ತಾಂತವನ್ನು ಸಂಕ್ಷೇಪವಾಗಿ ಸಂಪಾತಿಗೆ ತಿಳುಹಿಸಿದೆವು. ಅಪ್ರಿಯವಾದ ಆ ವೃತ್ತಾಂತವನ್ನು ಕೇಳಿ ಸಂಪಾತಿಯು ನಮ್ಮನ್ನು ಕುರಿತು—ತಿರುಗಿ ಎಲೈ ಕಪಿವೀರರೆ, ರಾಮನು ಯಾರು? ಸೀತೆಯು ಯಾರು? ಜಟಾಯುವು ಹ್ಯಾಗೆ ಮೃತನಾದನು? ಇದೆಲ್ಲವನ್ನೂ ಕೇಳಬೇಕೆಂದು ನನಗೆ ಅಪೇಕ್ಷೆಯಿರುವದು. ಇದನ್ನೆಲ್ಲಾ ವಿಸ್ತಾರವಾಗಿ ನನಗೆ ತಿಳುಹಿಸಿರಿ—ಎಂದನು. ಆಗ ನಾವು ನೀನು ಅರಣ್ಯವಾಸಕ್ಕೆ ಬಂದದ್ದನ್ನೂ, ರಾವಣನು ಸೀತೆಯನ್ನು ಅಪಹರಿಸಿಕೊಂಡು ಹೋದದ್ದನ್ನೂ, ರಾವಣನಿಂದ ಜಟಾಯುವು ಮರಣಹೊಂದಿದ್ದನ್ನೂ, ನಿನಗೂ ಸುಗ್ರೀವನಿಗೂ ಸ್ನೇಹವಾದದ್ದನ್ನೂ, ಸೀತಾದೇವಿಯನ್ನು ಹುಡುಕುವದಕ್ಕೋಸ್ಕರ ಸುಗ್ರೀವನು ನಮ್ಮನ್ನು ಕಳುಹಿಸಿಕೊಟ್ಟದ್ದನ್ನೂ, ಸುಗ್ರೀವನು ನಮಗೆ ನಿಬಂಧನೆಮಾಡಿದ್ದ ಕಾಲವು ಅತಿಕ್ರಮಿಸಿದ್ದರಿಂದ ನಾವೆಲ್ಲರೂ ಅಲ್ಲಿ ಪ್ರಾಯೋಪವೇಶಮಾಡಿದ್ದನ್ನೂ, ಸಹ ವಿಸ್ತಾರವಾಗಿ ಆತನಿಗೆ ತಿಳುಹಿಸಿದೆವು. ಬಳಿಕ ಪಕ್ಷಿರಾಜನಾದ ಆ ಸಂಪಾತಿಯು ನಮ್ಮನ್ನು ಸಂತೈಸಿ, ರಾವಣನ ವೃತ್ತಾಂತವನ್ನೂ ಸಮುದ್ರಮಧ್ಯದಲ್ಲಿರುವ ತ್ರಿಕೂಟಪರ್ವತದ ಮೇಲೆ ಲಂಕಾಪಟ್ಟಣವಿರುವದನ್ನೂ, ಆ ಲಂಕಾಪಟ್ಟಣದಲ್ಲಿ ಪೂಜ್ಯಳಾದ ಸೀತಾದೇವಿಯಿರುವದನ್ನೂ ಸಹ ನಮಗೆ ತಿಳುಹಿಸಿದನು. ಬಳಿಕ ನಾವೆಲ್ಲರೂ ಅಲ್ಲಿಂದ ಜಾಗ್ರತೆಯಾಗಿ ಎದ್ದು ಸಮುದ್ರವನ್ನು ಹಾರತಕ್ಕ ವಿಷಯದಲ್ಲಿ ಮಂತ್ರಾಲೋಚನೆಯನ್ನು ಮಾಡಿ ಹಾರುವದಕ್ಕೆ ಯಾರಿಂದಲೂ ಆಗದೆ ಹೋಗಲು; ನಾನು ನನ್ನ ತಂದೆಯಾದ ವಾಯುವಿಗೆ ಸಮಾನವಾದ ವೇಗವುಳ್ಳವನಾಗಿ ಶತಯೋಜನವಿಸ್ತಾರವುಳ್ಳ ಲವಣಸಮುದ್ರವನ್ನು ಲಂಘಿಸಿ, ಆ ಸಮುದ್ರದಲ್ಲಿದ್ದ ರಾಕ್ಷಸಿಯನ್ನು ಸಂಹರಿಸಿ, ಲಂಕಾಪಟ್ಟಣವನ್ನು ಸೇರಿ, ರಾವಣನ ರಾಣಿವಾಸಕ್ಕೆ ಸೇರಿದ ಅಶೋಕವನದಲ್ಲಿ ಉಪವಾಸದಿಂದ ಕೃಶಳಾಗಿಯೂ ಪತಿಯನ್ನು ನೋಡಬೇಕೆಂಬ ಅಪೇಕ್ಷೆಯುಳ್ಳವಳಾಗಿಯೂ ದೀನಳಾಗಿಯೂ ಮಲಿನಳಾಗಿಯೂ ಜಡೆಯನ್ನು ಧರಿಸಿರತಕ್ಕವಳಾಗಿಯೂ ಇರುವ ಪೂಜ್ಯಳಾದ ಸೀತೆಯನ್ನು ಆಯಾ ಗುರುತುಗಳಿಂದ ಈಕೆಯೇ ಸೀತಾದೇವಿಯೆಂದು ನಿಶ್ಚಯಿಸಿ, ಯಾರೂ ಇಲ್ಲದ ಸಮಯದಲ್ಲಿ ಆಕೆಯ ಸನ್ನಿಧಿಗೆ ಹೋಗಿ ಆಕೆಯನ್ನು ಕುರಿತು—ಎಲೌ ಸೀತೆಯೆ, ನಾನು ರಾಮದೂತನಾದ ಕಪಿಯು, ವಾಯುಪುತ್ರನು. ನಿನ್ನನ್ನು ನೋಡುವದಕ್ಕೋಸ್ಕರ ಆಕಾಶಮಾರ್ಗದಲ್ಲಿ ಹಾರಿ ಸಮುದ್ರವನ್ನು ದಾಟಿ ಇಲ್ಲಿಗೆ ಬಂದಿರುವೆನು. ರಾಜಪುತ್ರರಾದ ರಾಮಲಕ್ಷ್ಮಣರು ಕಪಿರಾಜನಾದ ಸುಗ್ರೀವನಿಂದ ಪಾಲಿತರಾಗಿ ಕ್ಷೇಮವಾಗಿರುವರು. ಲಕ್ಷ್ಮಣನೊಡಗೂಡಿದ ಶ್ರೀರಾಮನು ನಿನ್ನ ಕುಶಲವನ್ನು ಕೇಳಿದ್ದುಮಾತ್ರವಲ್ಲದೆ ಮಿತ್ರಭಾವದಿಂದ ಸುಗ್ರೀವನೂ ನಿನ್ನ ಕುಶಲವನ್ನು ಪ್ರಶ್ನೆ ಮಾಡಿರುವನು. ಅನೇಕ ಕಪಿನಾಯಕರೊಡಗೂಡಿ ಶ್ರೀರಾಮನು ಜಾಗ್ರತೆಯಾಗಿ ಇಲ್ಲಿಗೆ ಬರುವನು. ನಾನು ಕಪಿಯು, ರಾಕ್ಷಸನಲ್ಲ. ನನ್ನಲ್ಲಿ ನೀನು ನಂಬಿಕೆಯನ್ನಿಡು—ಎಂದು ಬಿನ್ನವಿಸಿದೆನು. ಅದನ್ನು ಕೇಳಿ ಸೀತಾದೇವಿಯು ಒಂದು ಮುಹೂರ್ತಕಾಲ ಆಲೋಚಿಸಿ ನನ್ನನ್ನು ಕುರಿತು—ವೃದ್ಧಸಮ್ಮತನಾದ ಅವಿಂಧ್ಯನೆಂಬ ರಾಕ್ಷಸನು ನಿಮ್ಮಂಥ ಮಂತ್ರಿಗಳೊಡಗೂಡಿ ಸುಗ್ರೀವನೆಂಬ ಕಪಿರಾಜನು ಇರುವನೆಂದು ಹೇಳಿದ್ದನು. ಅದರಿಂದ ನೀನು ಹನುಮಂತನೆಂಬುವದನ್ನು ನಾನು ಬಲ್ಲೆನು. ಎಲೈ ಹನುಮಂತನೆ, ಈ ಚೂಡಾಮಣಿಯನ್ನು ತೆಗೆದುಕೊ. ಚಿತ್ರಕೂಟಪರ್ವತದಲ್ಲಿ ಕಾಕಾಸುರನು ನನ್ನನ್ನು ಬಾಧಿಸಲು, ಅವನ ಸಂಹಾರಾರ್ಥವಾಗಿ ಮಹಾನುಭಾವನಾದ ರಾಮನು ಒಂದು ಊಬಿನ ಮುಳ್ಳಿನಲ್ಲಿ ಬ್ರಹ್ಮಾಸ್ತ್ರವನ್ನು ಅಭಿಮಂತ್ರಿಸಿ ಆ ಕಾಕಾಸುರನ ಮೇಲೆ ಬಿಟ್ಟ ವೃತ್ತಾಂತವನ್ನು ನನ್ನ ಗುರುತಿಗಾಗಿ ಶ್ರೀರಾಮನಿಗೆ ತಿಳುಹಿಸಿ ಈ ಚೂಡಾಮಣಿಯನ್ನು ಆತನಿಗೆ ಕೊಡು—ಎಂದು ನುಡಿದು, ನನ್ನಲ್ಲಿ ನಂಬಿಕೆಯಿಂದ ತನ್ನಲ್ಲಿಟ್ಟುಕೊಂಡಿದ್ದ ಚೂಡಾಮಣಿಯನ್ನು ನನ್ನ ಕೈಗೆ ಕೊಟ್ಟು, ಇನ್ನು ಹೋಗಿ ಬಾ ಎಂದು ಅಜ್ಞೆಯನ್ನು ಕೊಟ್ಟಳು. ಆ ಮಣಿಯನ್ನು ತೆಗೆದುಕೊಂಡು ಬಳಿಕ ನಾನು ಲಂಕಾಪಟ್ಟಣವನ್ನು ಸುಟ್ಟು ಇಲ್ಲಿಗೆ ಬಂದೆನು. ಎಲೈ ರಾಮಚಂದ್ರನೆ, ಈ ರತ್ನವನ್ನು ಸ್ವೀಕರಿಸು' ಎಂದು ಆ ಚೂಡಾಮಣಿ

ಯನ್ನು ಕೊಡಲು, ಅದನ್ನು ಸಂತೋಷದಿಂದ ಸ್ವೀಕರಿಸಿ ಶ್ರೀರಾಮನು ಪ್ರಿಯವಾದ ವೃತ್ತಾಂತವನ್ನು ಹೇಳಿದ ಆಂಜನೇಯನಿಗೆ ಸನ್ಮಾನವನ್ನು ಮಾಡಿದನು" ಎಂದು ಮಾರ್ಕಂಡೇಯನು ಧರ್ಮರಾಯನಿಗೆ ಹೇಳಿದನು.

---

## ೨೮೨ನೇ ಅಧ್ಯಾಯ.—ರಾಮೋಪಾಖ್ಯಾನ—(ಕಪಿಸೈನ್ಯವು ಸಮುದ್ರಕ್ಕೆ ಸೇತುವೆಯನ್ನು ಕಟ್ಟಿದ್ದು.)

ವೈಶಂಪಾಯನಮುನೀಂದ್ರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಮಾರ್ಕಂಡೇಯನು ಧರ್ಮರಾಯನನ್ನು ಕುರಿತು "ಎಲೈ ಯುಧಿಷ್ಠಿರನೆ, ಆ ಬಳಿಕ ಸುಗ್ರೀವಲಕ್ಷ್ಮಣರೊಡನೆಯೂ ಆಂಜನೇಯ ಮೊದಲಾದ ಕಪಿನಾಯಕರೊಡನೆಯೂ ಆ ಮಾಲ್ಯವತ್ಪರ್ವತದಲ್ಲಿ ಶ್ರೀರಾಮನು ಕೂತುಕೊಂಡಿರಲು, ಸುಗ್ರೀವನ ಆಜ್ಞೆಯಿಂದ ವೇಗಶಾಲಿಗಳಾದ ಹತ್ತುಕೋಟಿ ಕಪಿಗಳಿಂದ ಕೂಡಿ ಸುಗ್ರೀವನಿಗೆ ಮಾವನಾದ ಸುಷೇಣನೆಂಬ ಕಪಿವೀರನು ರಾಮನ ಸನ್ನಿಧಿಗೆ ಬಂದನು. ಮಹಾಪರಾಕ್ರಮಶಾಲಿಗಳಾದ ಗಜ, ಗವಯರೆಂಬ ಕಪಿವೀರರು ನೂರುಕೋಟಿ ಕಪಿಗಳಿಂದೊಡಗೂಡಿ ಪ್ರತ್ಯೇಕಪ್ರತ್ಯೇಕವಾಗಿ ಬಂದರು. ಅರವತ್ತುಕೋಟಿ ಕೊಂಡಮುಸುಗಗಳಿಂದೊಡಗೂಡಿ ಭಯಂಕರನಾದ ಗವಾಕ್ಷನೆಂಬ ಕಪಿನಾಯಕನು ಬಂದನು. ಗಂಧಮಾದನಪರ್ವತದಲ್ಲಿ ವಾಸಮಾಡತಕ್ಕ ಗಂಧಮಾದನನೆಂಬ ಕಪಿವೀರನು ಶತಸಹಸ್ರಕೋಟಿ ಕಪಿಗಳಿಂದೊಡಗೂಡಿ ಬಂದನು. ಪನಸನೆಂಬ ಕಪಿಮುಖ್ಯನು ನೂರಿಪ್ಪತ್ತುಕೋಟಿ ಕಪಿಗಳಿಂದೊಡಗೂಡಿ ಬಂದನು. ವೃದ್ಧನಾದ ದಧಿಮುಖನೆಂಬ ಕಪಿನಾಯಕನು ಮುನ್ನೂರು ಕೋಟಿ ಭಯಂಕರರಾದ ಕಪಿಗಳಿಂದೊಡಗೂಡಿ ಬಂದನು. ಮಹಾ ಬಲಶಾಲಿಯಾದ ಜಾಂಬವಂತನು ಮಹಾ ಬಲಶಾಲಿಗಳಾಗಿಯೂ ಕೃಷ್ಣವರ್ಣರಾಗಿಯೂ ಮುಖದಲ್ಲಿ ತಿಲಕದ ಗುರುತುಳ್ಳವರಾಗಿಯೂ ಇರುವ ನೂರುಸಾವಿರಕೋಟಿ ಕರಡಿಗಳೊಡಗೂಡಿ ಬಂದನು. ಮತ್ತು ಅನೇಕ ಕಪಿಸೇನಾಧಿಪತಿಗಳು ಅಸಂಖ್ಯಾತರಾದ ಕಪಿಗಳಿಂದೊಡಗೂಡಿ ರಾಮಕಾರ್ಯಾರ್ಥವಾಗಿ ಸಿದ್ಧರಾಗಿ ಬಂದರು. ಆಗ ಆ ಕಪಿನಾಯಕರು ಓಡಾಡುತ್ತ ಗರ್ಜನೆಮಾಡುತ್ತಿರಲು, ಆ ಗರ್ಜನೆಯು ಸಿಂಹದ ಗರ್ಜನೆಯಂತೆ ಕೇಳಬಂತು. ಅವರಲ್ಲಿ ಕೆಲವು ಕಪಿಗಳು ಪರ್ವತದ ಶಿಖರದಂತೆಯೂ, ಕೆಲವು ಕಪಿಗಳು ಕಾಡುಕೋಣದಂತೆಯೂ, ಕೆಲವು ಕಪಿಗಳು ಶರತ್ಕಾಲದ ಮೇಘದಂತೆಯೂ, ಪ್ರಕಾಶಿಸುತ್ತ ಇಂಗಳೀಕದಂತೆ ಕೆಂಪಾದ ಮುಖವುಳ್ಳವರಾಗಿ ಅಲ್ಲಲ್ಲಿ ಹಾರಾಡುತ್ತಲೂ, ಭೂಮಿಯಿಂದ ಧೂಳನ್ನು ಮೇಲಕ್ಕೆ ಎಬ್ಬಿಸುತ್ತಲೂ, ಶ್ರೀರಾಮನ ಕಾರ್ಯಾರ್ಥವಾಗಿ ಸಿದ್ಧರಾಗಿದ್ದರು. ಆಗ ಆ ಕಪಿಸೈನ್ಯವು ಸಮುದ್ರದಂತೆ ಕಾಣಿಸಿಕೊಂಡು ಸುಗ್ರೀವನ ಆಜ್ಞೆಯಿಂದ ಅಲ್ಲಿ ಪಾಳ್ಯವನ್ನು ಬಿಟ್ಟಿತು. ಬಳಿಕ ಶ್ರೀರಾಮನು ಕಪಿಸೇನೆಯನ್ನು ವ್ಯೂಹರಚನೆಮಾಡಿಕೊಂಡು, ಲಕ್ಷ್ಮಣನಿಂದಲೂ ಸುಗ್ರೀವನಿಂದಲೂ ಕೂಡಿ, ಪ್ರಶಸ್ತವಾದ ನಕ್ಷತ್ರದಿಂದ ಕೂಡಿದ ದಿವಸದಲ್ಲಿಯೂ ಪ್ರಶಸ್ತವಾದ ಮುಹೂರ್ತದಲ್ಲಿಯೂ ದಕ್ಷಿಣಸಮುದ್ರದ ಕಡೆಗೆ ಪ್ರಯಾಣವನ್ನು ಬೆಳೆಸಿದನು. ಆಗ ಆಂಜನೇಯನು ಆ ಸೇನೆಯ ಮುಂದಣಭಾಗವನ್ನು ರಕ್ಷಿಸುತ್ತ ಮುಂದಾಗಿ ಹೊರಟನು. ಲಕ್ಷ್ಮಣನು ನಿರ್ಭಯನಾಗಿ ಆ ಸೈನ್ಯದ ಹಿಂಭಾಗವನ್ನು ರಕ್ಷಿಸುತ್ತ ಹೊರಟನು. ಆಗ ಕೈತೊಡವುಗಳನ್ನು ಧರಿಸಿಕೊಂಡು ರಾಮಲಕ್ಷ್ಮಣರು ಕಪಿಮುಖ್ಯರೊಡಗೂಡಿ ಗ್ರಹಗಳೊಡಗೂಡಿದ ಸೂರ್ಯಚಂದ್ರರಂತೆ ಪ್ರಕಾಶಿಸಿದರು. ಸರ್ಜಕವೃಕ್ಷಗಳೂ ತಾಳವೃಕ್ಷಗಳೂ ದೊಡ್ಡದೊಡ್ಡಕಲ್ಲುಗಳೂ ಆಯುಧವಾಗುಳ್ಳ ಆ ಕಪಿಸೈನ್ಯವು ಸೂರ್ಯೋದಯಕಾಲದಲ್ಲಿ ಮಿಡಚೇದಂಡು ಹೊರಟು ಪ್ರಕಾಶಿಸುವಂತೆ ಪ್ರಕಾಶಿಸಿತು. ನಳನೀಲರೊಡಗೂಡಿ ಮೈಂದ ದ್ವಿವಿದರಿಂದ ರಕ್ಷಿತವಾದ ಮಹತ್ತಾದ ಆ ಕಪಿಸೈನ್ಯವು ರಾಮಕಾರ್ಯವನ್ನು ಸಾಧಿಸುವದಕ್ಕೋಸ್ಕರ ಅಧಿಕವಾದ ಉತ್ಸಾಹದಿಂದ ಹೊರಟಿತು. ಈ ಪ್ರಕಾರ ಹೊರಟ ಆ ಸೈನ್ಯವು ವಿವಿಧವಾದ ಕಂದಮೂಲಫಲಗಳುಳ್ಳವುಗಳಾಗಿಯೂ ಅಧಿಕವಾಗಿ ಜೇನುತುಪ್ಪವೂ ಮೃಗಮಾಂಸವೂ ದೊರೆಯತಕ್ಕವುಗಳಾಗಿಯೂ ನಿರ್ಮಲವಾದ ಉದಕದಿಂದ ಕೂಡಿ ಪ್ರಶಸ್ತಗಳಾಗಿಯೂ ಇರತಕ್ಕ ಆಯಾ ಅರಣ್ಯಗಳಲ್ಲಿಯೂ ಪರ್ವತಗಳ ತಪ್ಪಲುಗಳಲ್ಲಿಯೂ ಅನೇಕ ಧ್ವಜಗಳಿಂದ ಶೋಭಿಸುತ್ತ, ಎರಡನೇ ಸಮುದ್ರದಂತೆ ಕಾಣಿಸುತ್ತ, ಲವಣಸಮುದ್ರದ ದಡಕ್ಕೆ ಹೋಗಿ ಅಲ್ಲಿ ಇಳಿಯಿತು.

ಬಳಿಕ ಶ್ರೀರಾಮನು ಆ ಕಪಿಗಳ ಮಧ್ಯದಲ್ಲಿ ಸುಗ್ರೀವನನ್ನು ಕುರಿತು 'ಎಲೈ ಸುಗ್ರೀವನೆ, ಈ ಸೈನ್ಯವು ಮಹತ್ತಾಗಿರುವದು. ಈ ಸಮುದ್ರವಾದರೋ ದುಸ್ತರವಾಗಿರುವದು. ಎಲ್ಲರೂ ಈ ಸಮುದ್ರವನ್ನು ದಾಟುವದಕ್ಕೆ ಉಪಾಯವೇನು? ಅದನ್ನು ಯೋಚಿಸು' ಎಂದು ನುಡಿದನು. ಆ ಮಾತನ್ನು ಕೇಳಿ ಆ ಕಪಿಗಳಲ್ಲಿ ಶೂರರಾದ ಕೆಲವು ಕಪಿಗಳು 'ಎಲೈ ರಾಮನೆ, ಈ ಸಮುದ್ರವನ್ನು ದಾಟುವದೇನುಕಷ್ಟ?' ಎಂದು ಹೇಳಿದರು. ಮತ್ತೆ ಕೆಲವರು ನಾವೆಲ್ಲರೂ ನಾವೆಗಳಿಂದ ಈ ಸಮುದ್ರವನ್ನು ದಾಟಿ ಹೋಗಬಹುದೆಂದು ಹೇಳಿದರು. ಆ ಮಾತುಗಳನ್ನು ಕೇಳಿ ರಾಮನು ಆ ಕಪಿಗಳನ್ನು ಸಮಾಧಾನಪಡಿಸಿ 'ಎಲೈ ಕಪಿಗಳಿರಾ, ನಿಮ್ಮ ಆಲೋಚನೆಯು ಸರಿಯಾದದ್ದಲ್ಲ. ನೂರುಗಾವುದ ಈ ಸಮುದ್ರವನ್ನು ದಾಟಿ ಹೋಗುವದು ಅಶಕ್ಯವಾದದ್ದು. ಇಷ್ಟು ಸೈನ್ಯವನ್ನು ದಾಟಿಸತಕ್ಕ ನಾವೆಗಳು ದೊರೆಯಲಾರವು. ಅದಕ್ಕೆ ಪ್ರಯತ್ನಮಾಡಿದರೆ ವ್ಯಾಪಾರಸ್ಥರಿಗೆ ತುಂಬಾ ಬಾಧೆಯುಂಟಾಗುವದು. ನಮ್ಮ ಸೈನ್ಯವಾದರೋ ಬಹು ದೊಡ್ಡದಾಗಿರುವದು. ನಾವೆಗಳನ್ನೇರಿ ನಾವು ಸಮುದ್ರವನ್ನು ದಾಟುವದಕ್ಕೆ ಯತ್ನಿಸಲು, ರಂಧ್ರಾನ್ವೇಷಣೆಯನ್ನು ಮಾಡುತ್ತಿರುವ ಶತ್ರುಗಳು ನಮ್ಮ ಸೈನ್ಯಕ್ಕೆ ಹಾನಿಯನ್ನುಂಟುಮಾಡಿಯಾರು. ಆದ್ದರಿಂದ ಇದು ನನಗೆ ಯುಕ್ತವಾಗಿ ತೋರುವದಿಲ್ಲ. ಈ ಸಮುದ್ರವನ್ನು ಉಪಾಯದಿಂದ ದಾಟುವದಕ್ಕೆ ನಾನು ಯತ್ನಮಾಡಿ ಈ ತೀರಪ್ರದೇಶದಲ್ಲಿ ಉಪವಾಸವ್ರತವನ್ನು ಧರಿಸಿ ಶಯನಮಾಡಿ ಸಮುದ್ರನನ್ನು ಪ್ರಾರ್ಥಿಸುತ್ತೇನೆ. ಅದರಿಂದ ಆತನು ಪ್ರಸನ್ನನಾಗಿ ನಮಗೆ ಮಾರ್ಗವನ್ನು ಕೊಡದೆ ಹೋದಪಕ್ಷದಲ್ಲಿ ಅಗ್ನಿಗಿಂತಲೂ ಕ್ರೂರವಾದ ಮಹಾಸ್ತ್ರಗಳಿಂದ ಸಮುದ್ರವನ್ನು ಶೋಷಿಸಿಬಿಡುವೆನು' ಎಂದು ನುಡಿದು ಶುದ್ಧಾಚಮನೀಯವನ್ನು ಮಾಡಿ ದರ್ಭಾಸನದಮೇಲೆ ಮಲಗಿದನು. ಆಗ ನದೀಪತಿಯಾದ ಸಮುದ್ರನು ಜಲಚರಪ್ರಾಣಿಗಳಿಂದೊಡಗೂಡಿ ರಾಮನ ಸ್ವಪ್ನದಲ್ಲಿ ಬಂದು 'ಎಲೈ ಕೌಸಲ್ಯಾಪುತ್ರನಾದ ರಾಮಚಂದ್ರನೆ, ಇಕ್ಷ್ವಾಕುಮಹಾರಾಯನ ವಂಶದವರಿಂದ ಅಭಿವೃದ್ಧಿಯನ್ನು ಹೊಂದಿದ ನಾನು ನಿನಗೆ ಜ್ಞಾತಿಯಾಗಬೇಕು. ನನ್ನಿಂದ ನಿನಗೇನು ಸಹಾಯವಾಗಬೇಕೋ ತಿಳುಹಿಸು' ಎಂದು ಹೇಳಲು; ರಾಮನು 'ಎಲೈ ಸಮುದ್ರನೆ, ನನಗೆ ನೀನು ನಿನ್ನಲ್ಲಿ ಮಾರ್ಗವನ್ನು ಕೊಡು. ಆ ಮಾರ್ಗದಿಂದ ನಾನು ಹೋಗಿ ಪಾಪಾತ್ಮನಾದ ರಾವಣನನ್ನು ಸಂಹರಿಸುವೆನು. ಹೀಗೆ ಪ್ರಾರ್ಥಿಸತಕ್ಕ ನನಗೆ ನೀನು ಮಾರ್ಗವನ್ನು ಕೊಡದೆಹೋದಪಕ್ಷದಲ್ಲಿ ಮಂತ್ರಯುಕ್ತವಾದ ಈ ದಿವ್ಯಾಸ್ತ್ರಗಳಿಂದ ನಿನ್ನನ್ನು ಶೋಷಿಸಿಬಿಡುವೆನು' ಎಂದು ನುಡಿದನು. ಆ ಮಾತನ್ನು ಕೇಳಿ ಸಮುದ್ರನು ವ್ಯಥಾಯುಕ್ತನಾಗಿ ಕೈಮುಗಿದುಕೊಂಡು 'ಎಲೈ ರಾಮನೆ, ನಿನ್ನ ಕಾರ್ಯಕ್ಕೆ ನಾನು ವಿಘ್ನಮಾಡತಕ್ಕವನಲ್ಲ. ನನ್ನ ವಿಷಯದಲ್ಲಿ ನೀನು ಕೋಪವನ್ನು ಮಾಡಬೇಡ. ಆದರೆ ನಾನು ಹೇಳತಕ್ಕ ಮಾತನ್ನು ಕೇಳಿ ಮುಂದಿನ ಆಲೋಚನೆಯನ್ನು ಮಾಡು. ನಿನ್ನ ಆಜ್ಞಾನುಸಾರವಾಗಿ ನಾನು ನಿನಗೆ ಮಾರ್ಗವನ್ನು ಕೊಟ್ಟದ್ದೇ ಆದರೆ ನಿನ್ನಂತೆ ಧನುರ್ಧಾರಿಗಳಾದ ಅರಸುಗಳೆಲ್ಲರೂ ಬಲಾತ್ಕಾರದಿಂದ ಹೀಗೆಯೇ ನನಗೆ ಆಜ್ಞಾಪಿಸುವರು! ಆದ್ದರಿಂದ ಇದಕ್ಕೊಂದು ಉಪಾಯವನ್ನು ಹೇಳುವೆನು ಕೇಳು: ನಿನ್ನ ಸೈನ್ಯದಲ್ಲಿ ವಿಶ್ವಕರ್ಮನಿಂದ ಜನಿಸಿದ ನಳನೆಂಬ ಕಪಿನಾಯಕನು ಶಿಲ್ಪವಿದ್ಯದಲ್ಲಿ ಸಮರ್ಥನಾಗಿರುವನು. ಆತನು ತೃಣವನ್ನೇ ಆಗಲಿ ಕಾಷ್ಠವನ್ನೇ ಆಗಲಿ ಶಿಲೆಯನ್ನೇ ಆಗಲಿ ನನ್ನಲ್ಲಿ ಹಾಕಿದರೆ ಅದೆಲ್ಲವೂ ತೇಲುವವು. ಆ ರೀತಿಯಾಗಿ ನೀನು ನನ್ನಲ್ಲಿ ಸೇತುವೆಯನ್ನು ರಚನೆಮಾಡಿಸಿ ಆ ಮಾರ್ಗದಿಂದ ನನ್ನನ್ನು ದಾಟು' ಎಂದು ಹೇಳಿ ಅಂತರ್ಧಾನವನ್ನು ಹೊಂದಿದನು. ಬಳಿಕ ರಾಮನು ಎದ್ದು ನಳನನ್ನು ಕುರಿತು 'ಎಲೈ ನಳನೆ, ನೀನು ಸಮುದ್ರದಲ್ಲಿ ಸೇತುವೆಯನ್ನು ಕಟ್ಟು. ಅದರಲ್ಲಿ ನೀನು ಸಮರ್ಥನು' ಎಂದು ಆಜ್ಞಾಪಿಸಿ, ಆತನಿಂದ ಹತ್ತುಗಾವುದ ಅಗಲವೂ ನೂರುಗಾವುದ ಉದ್ದವೂ ಉಳ್ಳ ಸೇತುವೆಯನ್ನು ಕಟ್ಟಿಸಿದನು. ಭೂಲೋಕದಲ್ಲಿ ಈಗಲೂ ಆ ಸೇತುವೆಯು ನಳಸೇತುವೆಯೆಂದು ಪ್ರಸಿದ್ಧಿಯನ್ನು ಹೊಂದಿರುವದು. ಈ ಪ್ರಕಾರ ರಾಮನ ಆಜ್ಞೆಯಿಂದ ಆ ಸೇತುವೆಯು ಒಂದು ದೊಡ್ಡ ಪರ್ವತದಂತೆ ಕಾಣಿಸಿತು. ಆಗ ರಾವಣನ ತಮ್ಮನಾದ ಧರ್ಮಾತ್ಮನಾದ ವಿಭೀಷಣನು ನಾಲ್ಕುಮಂದಿ ಮಂತ್ರಿಗಳೊಡಗೂಡಿ ಸೇತುವೆಯ ಬಳಿಯಲ್ಲಿದ್ದ ಶ್ರೀರಾಮನ ಸನ್ನಿಧಿಗೆ ಬರಲು, ಆ ಶ್ರೀರಾಮನು ಆತನನ್ನು ಕುಶಲಪ್ರಶ್ನೆಮಾಡಿ, ಆತನನ್ನು ತನ್ನ ಪಕ್ಷದಲ್ಲಿ ಸೇರಿಸಿಕೊಂಡನು. ಆಗ ಸುಗ್ರೀವನು ಈತನು ಗೂಢಚಾರನಾಗಿ ಬಂದಿರುವನೋ ಹ್ಯಾಗೋ ಎಂದು ಶಂಕಿಸಲು, ರಾಮನು

ಆ ವಿಭೀಷಣನ ನಿಜವಾದ ನಡತೆಗಳಿಂದ ಆತನು ಧರ್ಮಾತ್ಮನೆಂದು ತಿಳಿದು, ಸತ್ಯವಾದ ಆತನ ಗುಣಗಳಿಂದ ಸಂತೋಷಪಟ್ಟು ರಾಕ್ಷಸರ ರಾಜ್ಯದಲ್ಲಿ ಆತನಿಗೆ ಪಟ್ಟಾಭಿಷೇಕವನ್ನು ಮಾಡಿ, ಆತನನ್ನೇ ಲಕ್ಷ್ಮಣನಿಗೆ ಆಪ್ತಮಂತ್ರಿಯನ್ನಾಗಿ ಮಾಡಿ, ಆತನ ಅನುಮತಿಯನ್ನು ಪಡೆದು ಸೇತುಮಾರ್ಗದಿಂದ ಲಂಕಾಪಟ್ಟಣಕ್ಕೆ ಹೋಗಿ, ಅಲ್ಲಿರತಕ್ಕ ದೊಡ್ಡದೊಡ್ಡದಾದ ಉದ್ಯಾನವನಗಳನ್ನು ಕಪಿಗಳಿಗೆ ಲೂಟಿಮಾಡುವಂತೆ ಆಜ್ಞಾಪಿಸಿ, ಸುವೇಲಪರ್ವತದ ಬಳಿಯಲ್ಲಿ ಸೇನಾನಿವೇಶವನ್ನು ಮಾಡಿದನು. ಅದನ್ನು ತಿಳಿದು ರಾವಣನು ಮಂತ್ರಿಗಳಾದ ಶುಕಸಾರಣರಿಗೆ ರಾಮನ ಸೈನ್ಯವನ್ನು ನೋಡಿಕೊಂಡು ಬರುವಂತೆ ಆಜ್ಞಾಪಿಸಲು, ಅವರು ಕಪಿರೂಪವನ್ನು ಧರಿಸಿ ರಾಮನ ಸೈನ್ಯದಲ್ಲಿ ಸಂಚರಿಸುತ್ತಿದ್ದರು. ಅದನ್ನು ಕಂಡು ವಿಭೀಷಣನು ಅವರಿಬ್ಬರನ್ನೂ ಹಿಡಿದು ರಾಮನ ಸಮೀಪಕ್ಕೆ ಕರೆದುಕೊಂಡು ಹೋದನು. ಬಳಿಕ ಆ ಶುಕಸಾರಣರು ರಾಕ್ಷಸರೂಪವನ್ನು ಧರಿಸಿದರು. ಅವರನ್ನು ನೋಡಿ ರಾಮನು ವಿಭೀಷಣನನ್ನು ಕುರಿತು ‘ ಎಲೈ ವಿಭೀಷಣನೆ, ಇವರಿಗೆ ನಮ್ಮ ಸೈನ್ಯವನ್ನೆಲ್ಲಾ ತೋರಿಸಿ ಇವರನ್ನು ಬಿಟ್ಟುಬಿಡು ’ ಎಂದು ಆಜ್ಞಾಪಿಸಿ, ಬಳಿಕ ಬುದ್ಧಿಶಾಲಿಯಾದ ಅಂಗದನನ್ನು ದೂತಕಾರ್ಯಾರ್ಥವಾಗಿ ರಾವಣನಬಳಿಗೆ ಕಳುಹಿಸಿಕೊಟ್ಟನು ” ಎಂದು ಮಾರ್ಕಂಡೇಯನು ಧರ್ಮರಾಯನಿಗೆ ಹೇಳಿದನು.

## ೨೯೩ನೇ ಅಧ್ಯಾಯ.—ರಾಮೋಪಾಖ್ಯಾನ—(ಲಂಕೆಗೆ ಪ್ರವೇಶ.)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಮಾರ್ಕಂಡೇಯನು ಧರ್ಮರಾಯನನ್ನು ಕುರಿತು “ ಎಲೈ ಧರ್ಮರಾಯನೆ, ಆಗ ಶ್ರೀರಾಮನು ಕಂದಮೂಲಫಲಗಳಿಂದ ಸಮೃದ್ಧವಾಗಿಯೂ ನಿರ್ಮಲವಾದ ಉದಕವುಳ್ಳದ್ದಾಗಿಯೂ ಇರುವ ಆ ಪ್ರದೇಶದಲ್ಲಿ ಪಾಳ್ಯವನ್ನು ಯಥಾಕ್ರಮವಾಗಿ ಇಳಿಸಿ ಅದನ್ನು ರಕ್ಷಿಸಿಕೊಂಡಿದ್ದನು. ಅತ್ತಲು ರಾವಣನು ನೀತಿಶಾಸ್ತ್ರೋಕ್ತವಾಗಿ ಯುದ್ಧಸನ್ನಾಹವನ್ನು ಮಾಡಿಕೊಂಡು ಲಂಕಾಪಟ್ಟಣದಲ್ಲಿ ಜಾಗರೂಕನಾಗಿದ್ದನು. ಆ ಲಂಕಾಪಟ್ಟಣವು ಏಳುಕೋಟೆಗಳಿಂದಲೂ, ಆಳವಾದ ನೀರುಳ್ಳದ್ದಾಗಿ ಯಾರಿಂದಲೂ ದಾಟುವದಕ್ಕೆ ಅಶಕ್ಯವಾಗಿಯೂ ದೊಡ್ಡದೊಡ್ಡದಾದ ಜಲಚರಪ್ರಾಣಿಗಳಿಂದ ಭಯಂಕರವಾಗಿಯೂ ಬಳಗೆಲ್ಲಾ ಮೊನೆಯಾದ ಕಗ್ಗಲೀಗೂಟಗಳನ್ನು ನೆಟ್ಟಿರತಕ್ಕದ್ದಾಗಿಯೂ ಇರುವ ಏಳು ಅಗಳುಗಳಿಂದಲೂ, ಮಹತ್ತಾದ ಕೋಟೇಬಾಗಿಲುಗಳಿಂದಲೂ, ಅಲ್ಲಲ್ಲಿ ಇಟ್ಟಿರತಕ್ಕ ದೊಡ್ಡದೊಡ್ಡದಾದ ಗುಂಡುಗಳನ್ನು ಹಾರಿಸತಕ್ಕ ಯಂತ್ರಗಳಿಂದಲೂ, ಸಜ್ಜರಸದ ಪುಡಿಗಳಿಂದಲೂ, ವಿಷಸರ್ಪಗಳನ್ನು ತುಂಬಿರುವ ಗಡಿಗೆಗಳನ್ನು ಹಿಡಿದಿರತಕ್ಕ ಅನೇಕಮಂದಿ ಯೋಧರಿಂದಲೂ ಒನಕೆ ಕೊಳ್ಳಿ ಬಲ್ಲೆ ತೋಮರ ಕತ್ತಿ ಕೊಡಲಿಗಳಿಂದಲೂ ದಲೂ ಜೇನುತುಪ್ಪವನ್ನು ಸವರಿರತಕ್ಕ ಮುದ್ಗರಾಯುಧಗಳಿಂದಲೂ ಫಿರಂಗಿಗಳಿಂದಲೂ ಕೂಡಿರತಕ್ಕ ಅಲಂಗಗಳಿಂ ಆಯಾ ಕೋಟೇಬಾಗಿಲುಗಳಲ್ಲಿ ಜಾಗರೂಕರಾಗಿರತಕ್ಕ ಚತುರಂಗಸೇನೆಗಳಿಂದಲೂ, ಕೂಡಿ ಪರರಿಗೆ ಪ್ರವೇಶಿಸುವದಕ್ಕೆ ಅಶಕ್ಯವಾಗಿತ್ತು.

ಇತ್ತಲು ರಾಮನ ಆಜ್ಞಾನುಸಾರವಾಗಿ ವಾಗ್ಮಿಯಾದ ಅಂಗದನು ದೂತನಾಗಿ ಹೊರಟು ಲಂಕಾಪಟ್ಟಣದ ಬಾಗಿಲಿಗೆ ಹೋಗಿ, ತಾನು ಬಂದ ಸಮಾಚಾರವನ್ನು ರಾವಣನಿಗೆ ತಿಳುಹಿಸಿ, ನಿರ್ಭಯವಾಗಿ ಪಟ್ಟಣದೊಳಕ್ಕೆ ಪ್ರವೇಶಮಾಡಿ ಅನೇಕಕೋಟಿ ರಾಕ್ಷಸರ ಮಧ್ಯದಲ್ಲಿದ್ದುಕೊಂಡು ಸೂರ್ಯನಂತೆ ಪ್ರಕಾಶಿಸುತ್ತಿರುವ ರಾವಣನನ್ನು ಕುರಿತು ‘ ಎಲೈ ರಾಕ್ಷಸೇಶ್ವರನೆ, ಕೋಸಲದೇಶಕ್ಕೆ ಅಧಿಪತಿಯಾದ ರಾಮನು ಈ ಕಾಲಕ್ಕೆ ಉಚಿತವಾದ ಒಂದು ಮಾತನ್ನು ನಿನಗೆ ಹೇಳಿಕಳುಹಿಸಿಕೊಟ್ಟಿರುವನು. ಅದನ್ನು ಕೇಳಿ ನೀನು ಹಾಗೆ ನಡೆದದ್ದೇ ಆದರೆ ನಿನಗೆ ಕ್ಷೇಮವಾಗುವದು. ಯಾವ ರಾಜನು ನೀತಿಯನ್ನು ಬಿಟ್ಟು ನಡೆಯುವನೋ ಅಂಥ ಬುದ್ಧಿಶೂನ್ಯನಾದ ರಾಜನಿಗೆ ಸೇರಿದ ದೇಶಗಳೂ ಪಟ್ಟಣಗಳೂ ನಷ್ಟವಾಗಿಹೋಗುವವು. ಬಲಾತ್ಕಾರದಿಂದ ಸೀತೆಯನ್ನು ಅಪಹರಿಸಿ ನೀನೊಬ್ಬನು ನನಗೆ ಅಪರಾಧ

ವನ್ನು ಮಾಡಿರುವೆ. ಇದರಿಂದ ನಿರಾಪರಾಧಿಗಳಾದ ನಿನ್ನ ಕಡೆಯ ರಾಕ್ಷಸರೆಲ್ಲರಿಗೂ ಹಾನಿಯು ಪ್ರಾಪ್ತವಾಗಿರುವದು. ಗರ್ವದಿಂದಲೂ ಬಲದಿಂದಲೂ ಕೂಡಿರತಕ್ಕ ನೀನು ಅರಣ್ಯದಲ್ಲಿ ಕಂದಮೂಲಗಳನ್ನು ಆಹಾರಮಾಡಿಕೊಂಡು ತಪಸ್ಸು ಮಾಡುತ್ತಿರುವ ಋಷಿಗಳನ್ನು ಹಿಂಸೆಪಡಿಸಿದೆ, ದೇವತೆಗಳಿಗೆಲ್ಲಾ ಅವಮಾನವನ್ನು ಮಾಡಿದೆ, ಮತ್ತು ಅನೇಕಮಂದಿ ರಾಜರ್ಷಿಗಳನ್ನು ಸಂಹರಿಸಿದೆ. ಇಂಥ ಅನೇಕ ಅಕೃತ್ಯಗಳನ್ನು ಮಾಡಿದ್ದಕ್ಕೆ ನಿನಗೆ ಈಗ ತಕ್ಕ ಫಲವು ಪ್ರಾಪ್ತವಾಗಿರುವದು. ಈಗ ನೀನು ಗಂಡಸಾಗಿ ಯುದ್ಧವನ್ನು ಮಾಡು. ಎಲೈ ರಾಕ್ಷಸನೆ, ಮನುಷ್ಯನಾದ ನನ್ನ ಧನುರ್ವಿದ್ಯಾಬಲವನ್ನು ನೀನು ನೋಡು. ಪರಿವಾರಸಮೇತನಾದ ನಿನ್ನನ್ನು ನಾನು ಕೊಲ್ಲದೆ ಬಿಡತಕ್ಕವನಲ್ಲ. ಸೀತೆಯನ್ನು ತಂದು ನನಗೆ ಒಪ್ಪಿಸದೆ ಹೋದ ಪಕ್ಷದಲ್ಲಿ ತೀಕ್ಷ್ಣವಾದ ಬಾಣಗಳಿಂದ ಈ ಲೋಕವನ್ನೇ ರಾಕ್ಷಸಶೂನ್ಯವಾಗಿ ಮಾಡಿಬಿಡುತ್ತೇನೆ—ಎಂದು ನಿನಗೆ ಹೇಳುವಂತೆ ನನ್ನ ಸಂಗಡ ಹೇಳಿಕಳುಹಿಸಿರುವನು' ಎಂದು ತಿಳುಹಿಸಿದನು. ಆ ಕಠಿನವಾದ ಮಾತನ್ನು ಕೇಳಿ ಸಹಿಸದೆ ರಾವಣನು ಕ್ರೋಧಾವೇಶವನ್ನು ತಾಳಲು, ಆತನ ಅಭಿಪ್ರಾಯವನ್ನು ತಿಳಿದ ನಾಲ್ಕುಮಂದಿ ರಾಕ್ಷಸರು ನಾಲ್ಕು ಪಕ್ಷಿಗಳು ಹುಲಿಯನ್ನು ಹಿಡಿಯುವಂತೆ ಅಂಗದನ ಎರಡು ಕೈಗಳನ್ನೂ ಎರಡುಕಾಲುಗಳನ್ನೂ ಹಿಡಿದುಕೊಂಡರು. ತನ್ನ ಕೈಕಾಲುಗಳನ್ನು ಹಿಡಿದುಕೊಂಡ ಆ ರಾಕ್ಷಸರನ್ನು ಅಂಗದನು ಹಾಗೆಯೇ ತೆಗೆದುಕೊಂಡು ಮೇಲಕ್ಕೆ ಹಾರಿ ರಾವಣನ ಉಪ್ಪರಿಗೆಯಮೇಲೆ ಕೂತುಕೊಂಡನು. ಅವನು ಹಾರುವ ವೇಗದಲ್ಲಿ ಆ ನಾಲ್ಕುಮಂದಿ ರಾಕ್ಷಸರೂ ಕೆಳಕ್ಕೆಬಿದ್ದು ಎದೆ ಒಡೆದುಹೋಗಿ ಬಹಳವಾಗಿ ಪೀಡಿತರಾದರು. ಬಳಿಕ ಉಪ್ಪರಿಗೆಯಮೇಲೆ ಕೂತಿದ್ದ ಅಂಗದನು ಅಲ್ಲಿಂದ ಹಾರಿ, ಲಂಕಾಪಟ್ಟಣವನ್ನು ದಾಟಿಕೊಂಡು ತನ್ನ ಸೈನ್ಯಕ್ಕೆ ಬಂದು ಸೇರಿ, ಶ್ರೀರಾಮನ ಸನ್ನಿಧಿಗೆ ಬಂದು ರಾವಣನ ಬಳಿಯಲ್ಲಿ ನಡೆದ ವೃತ್ತಾಂತವನ್ನೆಲ್ಲಾ ಆತನಿಗೆ ಬಿನ್ನವಿಸಿ, ಆತನಿಂದ ಶ್ಲಾಘಿತನಾಗಿ ಮಹತ್ತಾದ ತೇಜಸ್ಸಿನಿಂದ ಮೆರೆಯುತ್ತ ವಿಶ್ರಮಿಸಿಕೊಂಡನು. ಬಳಿಕ ಶ್ರೀರಾಮನು ಸಕಲಸನ್ನಾಹಯುಕ್ತರಾದ ಕಪಿಗಳಿಂದ ಲಂಕಾಪಟ್ಟಣವನ್ನು ಮುತ್ತಿಗೆ ಹಾಕಿಸಿ ಆ ಕೋಟೆಯನ್ನು ಭೇದಿಸಿದನು. ಆಗ ಲಕ್ಷ್ಮಣನು ವಿಭೀಷಣ ಜಾಂಬವಂತರಿಂದೊಡಗೂಡಿ ಆ ಕೋಟೆಯ ತೆಂಕಣ ಬಾಗಿಲನ್ನು ಭೇದಿಸಿದನು. ಆಗ ಎಳೆಗೆಂಪಾದ ಶರೀರವರ್ಣವುಳ್ಳವರಾಗಿಯೂ ಯುದ್ಧದಲ್ಲಿ ಸಮರ್ಥರಾಗಿಯೂ ಇರುವ ನೂರುಕೋಟಿ ಕಪಿನಾಯಕರು ಲಂಕಾಪಟ್ಟಣದ ಕೋಟೆಯನ್ನೇರಿದರು. ದೊಡ್ಡದಾದ ತೋಳು ತೊಡೆ ಮೊಳಕಾಲು ಕೈಗಳಲ್ಲಿ ಒಗ್ಗಿರತಕ್ಕ ಶರೀರವುಳ್ಳ ಧೂಮ್ರವರ್ಣವಾದ ಮೂರುಕೋಟಿ ಕರಡಿಗಳು ಆ ಕೋಟೆಯ ತೆಂಕಣಬಾಗಿಲನ್ನು ಮುತ್ತಿಕೊಂಡವು. ಆ ಸಮಯದಲ್ಲಿ ಅನೇಕ ವಿಧವಾಗಿ ಹಾರಾಡುತ್ತಿರುವ ಕಪಿಗಳಿಂದೆದ್ದ ಧೂಳಿಯು ಆಕಾಶದಲ್ಲಿ ವ್ಯಾಪಿಸಿಕೊಂಡು ಸೂರ್ಯನು ಕಾಣಿಸದೆ ಹೋದನು. ಆಗ ಬತ್ತದ ತೆನೆಗಳಂತೆಯೂ ಬಾಗೇಹೂವಿನಂತೆಯೂ ಬಾಲಸೂರ್ಯನಂತೆಯೂ ಮೈಬಣ್ಣವುಳ್ಳ ಅನೇಕಕೋಟಿ ಕಪಿಗಳು ಲಂಕಾಪಟ್ಟಣದ ಕೋಟೆಯ ಗೋಡೆಯನ್ನು ಎಲ್ಲಾ ಕಡೆಯಲ್ಲೂ ಆಕ್ರಮಿಸಲು, ಆ ಪಟ್ಟಣದಲ್ಲಿದ್ದ ಸ್ತ್ರೀಯರೂ ವೃದ್ಧರೂ ಸಹ ಅದನ್ನು ನೋಡಿ ಬಹಳ ಆಶ್ಚರ್ಯಪಟ್ಟರು. ಕಪಿಗಳೆಲ್ಲರೂ ಪಟ್ಟಣವನ್ನು ಪ್ರವೇಶಿಸಿ ಅಲ್ಲಿದ್ದ ರತ್ನಮಯವಾದ ಕಂಭಗಳನ್ನೂ ಕಲ್ಲಿನಿಂದ ಕಟ್ಟಿದ ದೊಡ್ಡದೊಡ್ಡ ಮನೆಗಳನ್ನೂ ಉಪ್ಪರಿಗೆಗಳ ಶಿಖರಗಳನ್ನೂ ಮುರಿದು, ಅಲ್ಲಲ್ಲಿ ಇಟ್ಟದ್ದ ಫಿರಂಗಿಗಳನ್ನು ತೆಗೆದುಕೊಂಡು ಅವುಗಳನ್ನೂ ಅವುಗಳ ಗುಂಡುಗಳನ್ನೂ ಅತಿವೇಗದಿಂದ ಪಟ್ಟಣದ ಮಧ್ಯದಲ್ಲಿ ಬೀಳುವಂತೆ ಬಿಸುಟು ಕೋಟೆಯಮೇಲೆ ಕಾವಲಿದ್ದ ರಾಕ್ಷಸರನ್ನು ಹೊಡೆದು ಓಡಿಸಿದರು. ಅದನ್ನು ತಿಳಿದು ರಾವಣನು ಕಾಮರೂಪಿಗಳಾದ ಅನೇಕ ರಾಕ್ಷಸರಿಗೆ ಆಜ್ಞೆಯನ್ನು ಕೊಡಲು, ಅವರು ಗುಂಪುಗುಂಪಾಗಿ ಹೊರಟು ಆ ಕಪಿಗಳಮೇಲೆ ಅನೇಕ ಶಸ್ತ್ರಗಳನ್ನು ಪ್ರಯೋಗಿಸುತ್ತ ಅವರೆಲ್ಲರನ್ನೂ ಓಡಿಸಿ ಪರಾಕ್ರಮಶಾಲಿಗಳಾದವರು ಕೋಟೆಯ ಗೋಡೆಗಳನ್ನು ರಕ್ಷಿಸಿಕೊಂಡು ನಿಂತರು. ಆಗ ಉದ್ದಿನ ರಾಶಿಗೆ ಸಮಾನರಾಗಿಯೂ ಘೋರರಾಗಿಯೂ ಇರುವ ರಾಕ್ಷಸರಿಂದ ಪೀಡಿತರಾಗಿ ಆ ಕೋಟೆಯನ್ನೇರಿದ್ದ ಕಪಿಗಳೆಲ್ಲರೂ ಕೆಳಕ್ಕೆ ಇಳಿದು ಓಡಿಬಂದರು. ಕೆಲವು ಕಪಿಗಳು ಆ ಪಟ್ಟಣದಲ್ಲಿದ್ದ ಮನೆಗಳ ಕಂಬಗಳನ್ನು ಕಿತ್ತಿಕೊಂಡು ರಾಕ್ಷಸರ ಸಂಗಡ ಯುದ್ಧಕ್ಕೆ ತೊಡಗಿ ಒಬ್ಬರ ಜುಟ್ಟನ್ನು ಒಬ್ಬರು ಹಿಡಿದುಕೊಂಡು ಉಗುರುಗಳಿಂದ ಪರಚುತ್ತ, ಹಲ್ಲುಗಳಿಂದ ಕಚ್ಚುತ್ತ, ಸಿಂಹನಾದವನ್ನು ಮಾಡುತ್ತ, ಪೆಟ್ಟುಬಿದ್ದು ಭೂಮಿಯಮೇಲೆ ಬಿದ್ದರೂ ಯುದ್ಧವನ್ನು

ಬಿಡದೆ ಅಧಿಕವಾದ ಆಗ್ರಹದಿಂದ ಹೋರಾಡಿದರು. ಆಗ ರಾಮನು ಧನುಸ್ಸಿನಲ್ಲಿ ಬಾಣಗಳನ್ನು ಸಂಧಾನಮಾಡಿ ಲಂಕಾಪಟ್ಟಣದಲ್ಲಿರುವ ರಾಕ್ಷಸರ ಮೇಲೆ ಪ್ರಯೋಗಿಸಲು, ಆ ಬಾಣಗಳ ಪೆಟ್ಟಿನಿಂದ ಅನೇಕಜನ ರಾಕ್ಷಸರು ಹತರಾಗಿ ಹೋದರು. ಬಳಿಕ ಶೂರನಾದ ಲಕ್ಷ್ಮಣನು ದೊಡ್ಡದಾದ ಬಿಲ್ಲಿನಲ್ಲಿ ನಾರಾಚಗಳೆಂಬ ಅಂಬುಗಳನ್ನು ಹೂಡಿ, ಲಂಕಾಪಟ್ಟಣದ ದುರ್ಗಸ್ಥಾನಗಳಲ್ಲಿದ್ದ ರಾಕ್ಷಸಭಟರನ್ನು ಸಂಹಾರಮಾಡಿದನು. ಆ ಘೋರವಾದ ದೊಂಬಿಯುದ್ಧದಲ್ಲಿ ರಾಮನಿಗೆ ಜಯವಾಯಿತು. ಬಳಿಕ ರಾಮನು ಆ ದಿವಸದ ಯುದ್ಧವನ್ನು ಸಾಕುಮಾಡುವಂತೆ ತಮ್ಮ ಸೈನಿಕರಿಗೆ ಆಜ್ಞೆಯನ್ನು ಕೊಡಲು, ಕಪಿನಾಯಕರು ಆ ದಿವಸದ ಯುದ್ಧವನ್ನು ಅಷ್ಟಕ್ಕೆ ನಿಲ್ಲಿಸಿದರು " ಎಂದು ಮಾರ್ಕಂಡೇಯನು ಧರ್ಮರಾಯನಿಗೆ ಹೇಳಿದನು.

## ೨೮೪ನೇ ಅಧ್ಯಾಯ.—ರಾಮೋಪಾಖ್ಯಾನ—(ರಾಮರಾವಣಾದಿಗಳ ಯುದ್ಧ.)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಮಾರ್ಕಂಡೇಯನು ಧರ್ಮರಾಯನನ್ನು ಕುರಿತು " ಎಲೈ ಧರ್ಮರಾಯನೆ ಕೇಳು, ಆ ತರುವಾಯ ರಾವಣನ ಕಡೆಯವರಾದ ಅನೇಕಜನ ರಾಕ್ಷಸಯೋಧರೂ ಪಿಶಾಚರೂ ಸಹ ಪರ್ವತ, ಪತನ, ಭಂಜ, ಖರ, ಕ್ರೋಧವಶ, ಹರಿ, ಪ್ರಮಾಜ, ಅರುಜ, ಪ್ರಘಸ ಮೊದಲಾದ ಸೇನಾನಾಯಕರೊಡಗೂಡಿ ಮಾಯೆಯಿಂದ ಯಾರಿಗೂ ಕಾಣಿಸಿಕೊಳ್ಳದಂತೆ ಕಪಿಗಳಮೇಲೆ ಬಿದ್ದು ಯುದ್ಧಕ್ಕೆ ಉಪಕ್ರಮಿಸಲು ; ವಿಭೀಷಣನು ಅವರ ಮಾಯೆಯನ್ನು ತಿಳಿದು ಆ ಮಾಯೆಯನ್ನು ಪರಿಹರಿಸಿಬಿಟ್ಟನು. ಬಳಿಕ ಬಲಿಷ್ಠರಾಗಿಯೂ ಬಹುದೂರ ಹಾರತಕ್ಕ ಸಾಮರ್ಥ್ಯವುಳ್ಳವರಾಗಿಯೂ ಇರುವ ಕಪಿಗಳಿಂದ ಹತರಾದ ರಾಕ್ಷಸರೂ ಪಿಶಾಚರೂ ಸಹ ಮೃತರಾಗಿ ಭೂಮಿಯಲ್ಲಿ ಬಿದ್ದರು. ಅದನ್ನು ನೋಡಿ ಸಹಿಸಲಾರದೆ ರಾವಣನು ಘೋರರಾದ ಅನೇಕಜನ ರಾಕ್ಷಸರಿಂದಲೂ ಪಿಶಾಚರಿಂದಲೂ ಕೂಡಿ, ಶುಕ್ರಾಚಾರ್ಯರಂತೆ ಯುದ್ಧಮಾಡತಕ್ಕ ವಿಧಾನವನ್ನು ಚೆನ್ನಾಗಿ ಬಲ್ಲವನಾದ್ದರಿಂದ ಶುಕ್ರನೀತಿಗೆ ಅನುಸಾರವಾಗಿ ಸೈನ್ಯರಚನೆಯನ್ನು ಮಾಡಿಕೊಂಡು ಕಪಿಗಳಮೇಲೆ ಯುದ್ಧಕ್ಕೆ ಹೊರಟನು. ಆಗ ರಾಮನು ಸೈನ್ಯರಚನೆಯನ್ನು ಮಾಡಿಕೊಂಡು ಯುದ್ಧಕ್ಕೆ ಬರತಕ್ಕ ರಾವಣನನ್ನು ನೋಡಿ, ಬೃಹಸ್ಪತಿಪ್ರೋಕ್ತವಾದ ನೀತಿಗೆ ಅನುಸಾರವಾಗಿ ಕಪಿಸೈನ್ಯವನ್ನು ವ್ಯೂಹಮಾಡಿಕೊಂಡು ರಾವಣನ ಮೇಲೆ ತಾನೂ ಯುದ್ಧಕ್ಕೆ ಹೊರಟನು. ಆಗ ಲಕ್ಷ್ಮಣನು ಇಂದ್ರಜಿತ್ತಿನಮೇಲೂ, ಸುಗ್ರೀವನು ವಿರೂಪಾಕ್ಷನೆಂಬ ರಾಕ್ಷಸನಮೇಲೂ, ತಾರನು ನಿಖರ್ವನೆಂಬ ರಾಕ್ಷಸನಮೇಲೂ, ನಳನು ತುಂಡನೆಂಬ ರಾಕ್ಷಸನಮೇಲೂ, ಪನಸನು ಪಟುಶನೆಂಬವನಮೇಲೂ, ಯುದ್ಧಕ್ಕೆ ತೊಡಗಿದರು. ಆಗ ಪೂರ್ವದಲ್ಲಿ ದೇವಾಸುರರಿಗೆ ನಡೆದ ದ್ವಂದ್ವಯುದ್ಧದಂತೆ ಉಭಯಸೈನಿಕರಿಗೂ ಭಯಂಕರವಾಗಿ ಯುದ್ಧವು ನಡೆಯಿತು. ಆಗ ರಾವಣನು ಶಕ್ತಿ, ಶೂಲ, ಖಡ್ಗ, ಮುಷ್ಟಿ ಮೊದಲಾದ ಆಯುಧಗಳನ್ನು ರಾಮನ ಮೇಲೆ ಪ್ರಯೋಗಿಸಲು, ರಾಮನು ತೀಕ್ಷ್ಣವಾದ ಬಾಣಗಳಿಂದ ರಾವಣನನ್ನು ಪೆಟ್ಟಿಕ್ಕಿದನು. ಲಕ್ಷ್ಮಣನು ಇಂದ್ರಜಿತ್ತನ್ನೂ ಇಂದ್ರಜಿತ್ತು ಲಕ್ಷ್ಮಣನನ್ನೂ ಸಹ ತೀಕ್ಷ್ಣವಾದ ಬಾಣಗಳಿಂದ ಪೆಟ್ಟಿಕ್ಕಿದರು. ಪ್ರಹಸ್ತವಿಭೀಷಣರು ಕ್ರೂರವಾದ ಬಾಣಗಳಿಂದ ಪರಸ್ಪರವಾಗಿ ಘೋರವಾಗಿ ಹೊಡೆದಾಡಿದರು. ಹೀಗೆ ಉಭಯಪಕ್ಷದವರೂ ಭಯಂಕರವಾಗಿ ಯುದ್ಧಮಾಡುತ್ತಿರಲು, ಆದರಿಂದ ಚರಾಚರಾತ್ಮಕವಾದ ಮೂರುಲೋಕಗಳೂ ಭಯದಿಂದ ಕಂಪಿಸಿದವು " ಎಂದು ಮಾರ್ಕಂಡೇಯನು ಧರ್ಮರಾಯನಿಗೆ ಹೇಳಿದನು.

## ೨೮೫ನೇ ಅಧ್ಯಾಯ.—ರಾಮೋಪಾಖ್ಯಾನ—(ಕುಂಭಕರ್ಣನು ಯುದ್ಧಕ್ಕೆ ಬರುವಿಕೆ.)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಮಾರ್ಕಂಡೇಯನು ಧರ್ಮರಾಯನನ್ನು ಕುರಿತು " ಎಲೈ ಯುಧಿಷ್ಠಿರನೆ, ಆ ಬಳಿಕ ಯುದ್ಧದಲ್ಲಿ ಸಮರ್ಥನಾದ

ಪ್ರಹಸ್ತನು ಸಿಂಹನಾದವನ್ನು ಮಾಡುತ್ತ ವಿಭೀಷಣನಮೇಲೆ ಬಿದ್ದು ಯುದ್ಧಮಾಡುತ್ತ, ಆತನನ್ನು ಅತಿವೇಗವಾಗಿ ಗದೆಯಿಂದ ಪೆಟ್ಟಿಕ್ಕಿದನು. ಬುದ್ಧಿಶಾಲಿಯಾದ ವಿಭೀಷಣನು ಆ ಪೆಟ್ಟನ್ನು ಲಕ್ಷ್ಯಮಾಡದೆ ಹಿಮವತ್ಪರ್ವತದಂತೆ ಸ್ಥಿರವಾಗಿ ನಿಂತು, ಶತಘಂಟವೆಂಬ ಶಕ್ತಿಯನ್ನು ಅಭಿಮಂತ್ರಿಸಿ ಪ್ರಹಸ್ತನ ತಲೆಯಮೇಲೆ ವೇಗದಿಂದ ಪ್ರಯೋಗಿಸಿದನು. ಅದರಿಂದ ಪೀಡಿತನಾದ ಪ್ರಹಸ್ತನು ಹುಚ್ಚುಗಾಳಿಯಿಂದ ಮರವು ನೆಲದಮೇಲೆ ಬೀಳುವಂತೆ ಭೂಮಿಯಮೇಲೆ ಬಿದ್ದು ಮೃತನಾದನು. ಅದನ್ನು ನೋಡಿ ಧೂಮ್ರಾಕ್ಷನು ಅಧಿಕವಾದ ವೇಗದಿಂದ ಅದ್ಭುತವಾದ ಸೇನೆಯೊಡಗೂಡಿ ಕಪಿಗಳಮೇಲೆ ಬಿದ್ದನು. ಆಗ ಕಪಿಸೈನ್ಯವು ಭಯಪಟ್ಟು ಚದರಿ ಓಡಿ ಹೋಗುವದನ್ನು ನೋಡಿ, ವಾಯುಪುತ್ರನಾದ ಆಂಜನೇಯನು ಬಹುವೇಗದಿಂದ ಬಂದು ಆ ಕಪಿಸೈನ್ಯವನ್ನು ತಡೆದು ನಿಲ್ಲಿಸಿದನು. ಆಗ ಉಭಯಸೈನ್ಯಗಳಿಗೂ ಘೋರವಾದ ಯುದ್ಧವು ನಡೆದು ರಕ್ತಪ್ರವಾಹವು ಹರಿಯಿತು. ಆ ಯುದ್ಧದಲ್ಲಿ ಧೂಮ್ರಾಕ್ಷನು ಕಪಿಗಳ ಮೇಲೆ ತೀಕ್ಷ್ಣವಾದ ಬಾಣಗಳನ್ನು ಪ್ರಯೋಗಿಸುತ್ತ ತನ್ನಮೇಲೆ ಬರುವದನ್ನು ನೋಡಿ, ಆಂಜನೇಯನು ಆತನ ಸಂಗಡ ಯುದ್ಧಕ್ಕೆ ತೊಡಗಿದನು. ಆ ಸಮಯದಲ್ಲಿ ಜಯಾಪೇಕ್ಷೆಯುಳ್ಳ ಅವರಿಬ್ಬರಿಗೂ ಇಂದ್ರಪ್ರಹ್ಲಾದರಿಗೆ ನಡೆದ ಯುದ್ಧದಂತೆ ಘೋರವಾದ ಯುದ್ಧವು ನಡೆಯಿತು. ಆ ಯುದ್ಧದಲ್ಲಿ ಧೂಮ್ರಾಕ್ಷನು ಗದೆ ಪರಿಘ ಮೊದಲಾದ ಆಯುಧಗಳಿಂದ ಆಂಜನೇಯನನ್ನು ಹೊಡೆಯುಲು; ಆಂಜನೇಯನು ದೊಡ್ಡದಾದ ಮರವನ್ನು ಕಿತ್ತಿಕೊಂಡು ಬಂದು, ಕೋಪದಿಂದ ರಥದಿಂದಲೂ ರಥಾಶ್ವಗಳಿಂದಲೂ ಕೂಡಿದ ಧೂಮ್ರಾಕ್ಷನನ್ನು ಆ ಮರದಿಂದ ಹೊಡೆದು ಸಂಹರಿಸಿದನು. ಅದನ್ನು ನೋಡಿ ಕಪಿಭಟರು ನಿರ್ಭಯವಾಗಿ ಧೂಮ್ರಾಕ್ಷನ ಸೈನಿಕರನ್ನು ಸಂಹರಿಸಿಬಿಟ್ಟರು. ಅವರಲ್ಲಿ ಹತಶೇಷರಾದವರು ಕಪಿಗಳ ಪೆಟ್ಟನ್ನು ಸಹಿಸಲಾರದೆ ಲಂಕಾಪಟ್ಟಣಕ್ಕೆ ಓಡಿಹೋಗಿ ಈ ಸಮಾಚಾರವನ್ನು ರಾವಣನಿಗೆ ತಿಳುಹಿಸಿದರು. ಇದನ್ನು ಕೇಳಿ ರಾವಣನು ದೀರ್ಘವಾಗಿ ನಿಟ್ಟುಸುರುಬಿಟ್ಟು ಪೀಠದಿಂದೆದ್ದು, ನಿದ್ರಾಳುವಾದ ಕುಂಭಕರ್ಣನನ್ನು ಎಬ್ಬಿಸುವದಕ್ಕೆ ಇದು ತಕ್ಕ ಸಮಯವೆಂದು ಯೋಚಿಸಿ, ನಾನಾವಿಧವಾದ ವಾದ್ಯಗಳ ಧ್ವನಿಯಿಂದಲೂ ಇನ್ನೂ ಮಹತ್ತಾದ ಪ್ರಯತ್ನಗಳಿಂದಲೂ ಆತನನ್ನು ಎಬ್ಬಿಸಿ, ಅರೆನಿದ್ದೆಯಿಂದ ಕೆಂಪಾದ ಕಣ್ಣುಗಳುಳ್ಳವನಾಗಿ ಭಯಂಕರನಾಗಿ ಕೂತಿರತಕ್ಕ ಕುಂಭಕರ್ಣನನ್ನು ಕುರಿತು 'ಎಲೈ ಕುಂಭಕರ್ಣನೆ, ಇಂಥ ಅಗಾಧವಾದ ನಿದ್ರೆ ನಿನಗುಂಟಾಗಬಹುದೆ? ಹೀಗೆ ನಿದ್ರೆಮಾಡತಕ್ಕ ನೀನೇ ಧನ್ಯನಾದವನು. ಈಗ ನಮಗೆ ಉಂಟಾಗಿರುವ ದಾರುಣವಾದ ಭಯವನ್ನು ನೀನು ತಿಳಿಯದೆಯೇ ಇರುವೆ. ರಾಮನೆಂಬ ಮನುಷ್ಯನು ಕಪಿಗಳ ಸೇನೆಯೊಡಗೂಡಿ ಸಮುದ್ರಕ್ಕೆ ಸೇತುವೆಯನ್ನು ಕಟ್ಟಿಕೊಂಡು, ಆ ಮಾರ್ಗದಿಂದ ಲಂಕಾಪಟ್ಟಣಕ್ಕೆ ಬಂದು, ನಮ್ಮನ್ನು ಲಕ್ಷ್ಯಮಾಡದೆ ನಮ್ಮಸಂಗಡ ಯುದ್ಧಮಾಡುತ್ತಿರುವನು. ಮೊದಲು ನಾನು ಆತನ ಪತ್ನಿಯನ್ನು ಅಪಹಾರಮಾಡಿದೆನು. ಆಕೆಯನ್ನು ಬಿಡಿಸಿಕೊಂಡು ಹೋಗಬೇಕೆಂದು ಆ ರಾಮನು ಸೇನೆಯೊಡನೆ ಇಲ್ಲಿಗೆ ಬಂದು ಪ್ರಹಸ್ತ ಮೊದಲಾದ ನಮ್ಮ ರಾಕ್ಷಸಯೋಧರನ್ನು ಸಂಹಾರ ಮಾಡಿಬಿಟ್ಟಿರುವನು. ಆತನನ್ನು ಸಂಹರಿಸಬೇಕಾದರೆ ನೀನು ಹೊರತು ನಮ್ಮಲ್ಲಿ ಮತ್ತೊಬ್ಬನು ಸಮರ್ಥನಾದವನು ಇಲ್ಲ. ಬಲಾಢ್ಯರಲ್ಲಿ ಅಗ್ರಗಣ್ಯನಾದ ನೀನು ಈಗ ಯುದ್ಧಸನ್ನದ್ಧನಾಗಿ ಯುದ್ಧರಂಗಕ್ಕೆ ಹೋಗಿ ಶತ್ರುಗಳಾದ ರಾಮಾದಿಗಳನ್ನು ಸಂಹರಿಸು. ದೂಷಣನ ತಮ್ಮನಾದ ವಜ್ರವೇಗ, ಪ್ರಮಾಥಿ, ಇವರಿಬ್ಬರೂ ಮಹತ್ತಾದ ಸೈನ್ಯದೊಡನೆ ನಿನ್ನ ಸಹಾಯಾರ್ಥವಾಗಿ ಬರುವರು' ಎಂದು ಅವರಿಬ್ಬರಿಗೂ ಆಜ್ಞೆಯನ್ನು ಕೊಟ್ಟು, ಕುಂಭಕರ್ಣನನ್ನು ಯುದ್ಧಕ್ಕೆ ಕಳುಹಿಸಿಕೊಟ್ಟನು. ಬಳಿಕ ಆ ಮೂರುಮಂದಿಯೂ ಬಹು ವೇಗದಿಂದ ಯುದ್ಧಾರ್ಥವಾಗಿ ಪಟ್ಟಣದಿಂದ ಹೊರಟರು" ಎಂದು ಮಾರ್ಕಂಡೇಯನು ಧರ್ಮರಾಯನಿಗೆ ಹೇಳಿದನು.

## ೨೮೭ನೇ ಅಧ್ಯಾಯ.—ರಾಮೋಪಾಖ್ಯಾನ—(ಕುಂಭಕರ್ಣಾದಿಗಳ ವಧೆ.)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಮಾರ್ಕಂಡೇಯನು ಧರ್ಮರಾಯನನ್ನು ಕುರಿತು "ಎಲೈ ಯುಧಿಷ್ಠಿರನೆ, ಆಗ ಕುಂಭಕರ್ಣನು ಸೇನಾಸಮೇತ

ನಾಗಿ ಹೊರಟು, ಯುದ್ಧರಂಗದಲ್ಲಿ ದೃಢಮುಷ್ಟಿಗಳಾಗಿ ಯುದ್ಧಸನ್ನಾಹದಿಂದ ಮೆರೆಯುತ್ತಿರುವ ಕಪಿಸೈನ್ಯವನ್ನು ನೋಡಿ, ರಾಮನನ್ನು ನೋಡಬೇಕೆಂದು ಮುಂದಕ್ಕೆ ಹೋಗುತ್ತ ಧನುರ್ಧಾರಿಯಾಗಿ ನಿಂತಿದ್ದ ಲಕ್ಷ್ಮಣನನ್ನು ಕಂಡನು. ಆಗ ಸಮಸ್ತಕಪಿಗಳೂ ಕುಂಭಕರ್ಣನನ್ನು ಸುತ್ತಿಕೊಂಡು ನಾನಾವಿಧವಾದ ಆಯುಧಗಳಿಂದಲೂ ವೃಕ್ಷಗಳಿಂದಲೂ ಆತನನ್ನು ನಿರ್ಭಯವಾಗಿ ಹೊಡೆದರು. ಆ ಪೆಟ್ಟುಗಳನ್ನು ತಿಂದು ಕುಂಭಕರ್ಣನು ನಗುತ್ತ ಆ ಕಪಿಗಳನ್ನು ಭಕ್ಷಣೆಮಾಡಿ, ಚಂಡ ಪ್ರಚಂಡ ವಜ್ರಬಾಹುಗಳೆಂಬ ಕಪಿನಾಯಕರ ಮೇಲೆ ಕಾಣಿಸಿಕೊಂಡನು. ಅವನ ಘೋರರೂಪವನ್ನು ನೋಡಿ ಅಲ್ಲಿದ್ದ ತಾರನೇ ಮೊದಲಾದ ಕಪಿನಾಯಕರು ಭಯಪಟ್ಟು ಅರಚಿಕೊಳ್ಳುತ್ತ ಓಡಿಹೋಗುತ್ತಿದ್ದರು ; ಅದನ್ನು ನೋಡಿ ಸುಗ್ರೀವನು ನಿರ್ಭಯವಾಗಿ ಅಧಿಕವಾದ ವೇಗದಿಂದ ದೊಡ್ಡದಾದ ಸರ್ಜಕವೃಕ್ಷವನ್ನು ಕಿತ್ತಿಕೊಂಡು ಕುಂಭಕರ್ಣನ ತಲೆಯಮೇಲೆ ಪೆಟ್ಟಿಕ್ಕಿ ಸಿಂಹನಾದವನ್ನು ಮಾಡಿದನು. ಆ ಪೆಟ್ಟಿನಿಂದ ಕುಂಭಕರ್ಣನು ಈತನೇ ಸುಗ್ರೀವನೆಂದು ತಿಳಿದು ಎರಡು ಕೈಗಳಿಂದಲೂ ಅವನನ್ನು ಹಿಡಿದುಕೊಂಡನು. ಆಗ ದೂರದಲ್ಲಿದ್ದ ಲಕ್ಷ್ಮಣನು ಕುಂಭಕರ್ಣನ ಕೈಗೆ ಸಿಕ್ಕಿ ವ್ಯಥೆಪಡುತ್ತಿರುವ ಸುಗ್ರೀವನನ್ನು ನೋಡಿ ಕುಂಭಕರ್ಣನ ಎದುರಿಗೆ ಬಂದು ನಿಂತು ಧನುಸ್ಸಿನಲ್ಲಿ ಮಹಾವೇಗವುಳ್ಳ ಒಂದು ಬಾಣವನ್ನು ಹೂಡಿ ಅದನ್ನು ಅವನ ಮೇಲೆ ಪ್ರಯೋಗಿಸಿದನು. ಆ ಬಾಣವು ಕುಂಭಕರ್ಣನ ಕವಚವನ್ನು ಖಂಡಿಸಿ ಆತನ ಶರೀರವನ್ನು ಭೇದಿಸಿಕೊಂಡು ಅವನ ನೆತ್ತರನ್ನು ಕುಡಿದು ಆ ನೆತ್ತರೊಡನೆ ಭೂಮಿಯನ್ನು ಪ್ರವೇಶಿಸಿತು. ಆ ಏಟಿನಿಂದ ಕುಂಭಕರ್ಣನು ವ್ಯಥೆಪಟ್ಟು ಕಪೀಶ್ವರನಾದ ಸುಗ್ರೀವನನ್ನು ಬಿಟ್ಟು ಮಹತ್ತಾದ ಶಿಲೆಯನ್ನು ಕಯ್ಯಲ್ಲಿ ಹಿಡಿದುಕೊಂಡು ಲಕ್ಷ್ಮಣನನ್ನು ಅಟ್ಟಿಕೊಂಡು ಬರಲು, ಆಗ ಲಕ್ಷ್ಮಣನು ಎರಡು ಬಾಣಗಳಿಂದ ಅವನ ಎರಡು ಕೈಗಳನ್ನೂ ಕತ್ತರಿಸಿದನು. ಬಳಿಕ ಕುಂಭಕರ್ಣನಿಗೆ ಇದ್ದ ಎರಡು ಕೈಗಳು ಹೋಗಿ ನಾಲ್ಕು ಕೈಗಳು ಹುಟ್ಟಿ ಆ ಕೈಗಳಲ್ಲಿ ದೊಡ್ಡದಾದ ಕಲ್ಲು ಬಂಡೆಗಳೂ ಕಾಣಬಂದವು. ಅದನ್ನು ನೋಡಿ ಲಕ್ಷ್ಮಣನು ತನ್ನ ಅಸ್ತ್ರಲಾಘವವನ್ನು ಪ್ರಕಾಶಮಾಡಿ ಅವನ ಶರೀರವೆಲ್ಲಾ ತುಂಡುತುಂಡಾಗುವಂತೆ ಬಾಣಗಳನ್ನು ಪ್ರಯೋಗಿಸಲು ; ಅವುಗಳಿಂದ ಮಯ್ಯೆಲ್ಲಾ ಛಿದ್ರಛಿದ್ರವಾಗಿ ಪೀಡಿತನಾದರೂ, ಕುಂಭಕರ್ಣನು ಪರ್ವತದಂತೆ ಮಹತ್ತಾದ ಶರೀರವೂ ಅನೇಕ ಪಾದಗಳೂ ಅನೇಕ ಭುಜಗಳೂ ಅನೇಕ ಶಿರಸ್ಸುಗಳೂ ಉಳ್ಳವನಾಗಿ ಕಾಣಿಸಿಕೊಂಡನು. ಅವನ್ನು ನೋಡಿ ಲಕ್ಷ್ಮಣನು ಬ್ರಹ್ಮಾಸ್ತ್ರವನ್ನು ಅಭಿಮಂತ್ರಿಸಿ ಆತನ ಮೇಲೆ ಪ್ರಯೋಗಿಸಲು, ಅದರಿಂದ ಹತನಾದ ಕುಂಭಕರ್ಣನು ದೊಡ್ಡ ಸಿಡಿಲಿನಿಂದ ಸುಟ್ಟು ಬೀಳತಕ್ಕ ದೊಡ್ಡ ಮರದಂತೆ ಭೂಮಿಯಮೇಲೆ ಬಿದ್ದನು. ಬಳಿಕ ವೃತ್ರಾಸುರನಂತೆ ಪರಾಕ್ರಮಶಾಲಿಯಾದ ಕುಂಭಕರ್ಣನು ಹತನಾಗಿ ಬಿದ್ದಿರುವದನ್ನು ನೋಡಿ ಅಲ್ಲಿದ್ದ ರಾಕ್ಷಸರು ಭಯಪಟ್ಟು ಓಡಿಹೋದರು. ಅದನ್ನು ನೋಡಿ ವಜ್ರವೇಗ ಪ್ರಮಾಥಿಗಳೆಂಬ ರಾಕ್ಷಸರು ಕ್ರೋಧಾವೇಶದಿಂದ ಓಡಿಹೋಗತಕ್ಕ ತಮ್ಮ ರಾಕ್ಷಸಸೈನ್ಯವನ್ನು ತಡೆದು ನಿಲ್ಲಿಸಿಕೊಂಡು ಲಕ್ಷ್ಮಣನಮೇಲೆ ಕಾಣಿಸಿಕೊಳ್ಳಲು, ಲಕ್ಷ್ಮಣನು ಅವರೆಲ್ಲರನ್ನೂ ಹರಿತವಾದ ಬಾಣಗಳಿಂದ ಹೊಡೆದನು. ಆಗ ಲಕ್ಷ್ಮಣನಿಗೂ ಆ ರಾಕ್ಷಸರಿಗೂ ಘೋರವಾದ ಯುದ್ಧವು ನಡೆಯಿತು. ಆ ಸಮಯದಲ್ಲಿ ವಜ್ರವೇಗ ಪ್ರಮಾಥಿಗಳು ಅಧಿಕವಾದ ರೋಷಾವೇಶದಿಂದ ಲಕ್ಷ್ಮಣನ ಮೇಲೆ ಅನೇಕ ಬಾಣಗಳನ್ನುಪ್ರಯೋಗಿಸುತ್ತ ಒಂದು ಮುಹೂರ್ತಕಾಲ ಭಯಂಕರವಾದ ಯುದ್ಧವನ್ನು ಮಾಡಿದರು. ಆ ಯುದ್ಧದಲ್ಲಿ ಆಂಜನೇಯನು ದೊಡ್ಡದಾದ ಕಲ್ಲುಬಂಡೆಯನ್ನು ತೆಗೆದುಕೊಂಡು ಅದರಿಂದ ವಜ್ರವೇಗನ ಪ್ರಾಣವನ್ನು ಅಪಹರಿಸಿದನು. ಬಳಿಕ ನೀಲನು ತಾನೂ ಒಂದು ದೊಡ್ಡದಾದ ಕಲ್ಲುಬಂಡೆಯನ್ನು ತೆಗೆದುಕೊಂಡು ಅದರಿಂದ ಪ್ರಮಾಥಿಯೆಂಬ ರಾಕ್ಷಸನನ್ನು ಮಥಿಸಿಬಿಟ್ಟನು. ಬಳಿಕ ಒಬ್ಬರಮೇಲೊಬ್ಬರು ಬಿದ್ದು ಹೊಡೆದಾಡುತ್ತಿರುವ ಆ ಕಪಿರಾಕ್ಷಸಸೈನ್ಯಗಳಿಗೆ ಅತಿಘೋರವಾದ ಯುದ್ಧವು ಉಪಕ್ರಮವಾಗಿ, ಕಪಿಗಳನ್ನು ರಾಕ್ಷಸರೂ ರಾಕ್ಷಸರನ್ನು ಕಪಿಗಳೂ ಗೊತ್ತುಗುರಿಯಿಲ್ಲದಹಾಗೆ ಪೆಟ್ಟಿಕ್ಕುತ್ತ ಹೋರಾಡುತ್ತಿದ್ದರು. ಆ ಯುದ್ಧದಲ್ಲಿ ಪ್ರಾಯಶಃ ರಾಕ್ಷಸರೇ ವಿಶೇಷವಾಗಿ ಹತರಾಗುತ್ತಿದ್ದರೇ ಹೊರತು ಕಪಿಗಳು ಹತರಾಗುತ್ತಿರಲಿಲ್ಲ ” ಎಂದು ಮಾರ್ಕಂಡೇಯರು ಧರ್ಮರಾಯನಿಗೆ ಹೇಳಿದರು.

೨೮೭ನೇ ಅಧ್ಯಾಯ.—ರಾಮೋಪಾಖ್ಯಾನ—(ಇಂದ್ರಜಿತ್ತಿಗೂ ಕಪಿಸೈನ್ಯಕ್ಕೂ ಯುದ್ಧ.)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಮಾರ್ಕಂಡೇಯನು ಧರ್ಮರಾಯನನ್ನು ಕುರಿತು “ ಎಲೈ ಯುಧಿಷ್ಠಿರನೆ, ಪರಾಕ್ರಮಶಾಲಿಗಳಾದ ಪ್ರಹಸ್ತ, ಧೂಮ್ರಾಕ್ಷ, ಕುಂಭಕರ್ಣ ಮೊದಲಾದವರು ಪರಿವಾರಸಮೇತರಾಗಿ ಯುದ್ಧದಲ್ಲಿ ಹತರಾದರೆಂದು ಕೇಳಿ ರಾವಣನು ಪುತ್ರನಾದ ವೀರನಾದ ಇಂದ್ರಜಿತ್ತನ್ನು ನೋಡಿ ‘ ಎಲೈ ಶತ್ರುಸಂಹಾರಕನಾದ ಮೇಘನಾದನೆ, ಸುಗ್ರೀವಲಕ್ಷ್ಮಣ ರೊಡನೆ ರಾಮನನ್ನು ನೀನು ಯುದ್ಧದಲ್ಲಿ ಸಂಹರಿಸು. ಶಚೀಪತಿಯಾಗಿಯೂ ಸಹಸ್ರಾಕ್ಷನಾಗಿಯೂ ವಜ್ರಾ ಯುಧಧರನಾಗಿಯೂ ಇರುವ ದೇವೇಂದ್ರನನ್ನು ಪೂರ್ವದಲ್ಲಿ ಜಯಿಸಿ ನೀನು ನನಗೆ ಉತ್ತಮವಾದ ಕೀರ್ತಿ ಯನ್ನು ಉಂಟುಮಾಡಿದೆ. ಅಂಥ ನೀನು ಈಗ ಕಪಿಸೈನ್ಯವನ್ನು ಹೊಕ್ಕು, ಪ್ರತ್ಯಕ್ಷವಾಗಿಯೇ ಆಗಲಿ ಮಾಯೆಯಿಂದ ಅದೃಶ್ಯನಾಗಿಯೇ ಆಗಲಿ ದಿವ್ಯಾಸ್ತ್ರಗಳನ್ನು ಪ್ರಯೋಗಿಸಿ ಶತ್ರುಗಳಾದ ರಾಮಾದಿಗಳನ್ನು ನಿಗ್ರ ಹಿಸು. ನಿನ್ನ ಅಸ್ತ್ರವೇಗವನ್ನು ಅವರೇ ಸಹಿಸಲಾರರು ಎಂಬಲ್ಲಿ ಕಪಿಗಳೇನು ಸಹಿಸಬಲ್ಲರು ? ಪ್ರಹಸ್ತನೂ ಕುಂಭಕರ್ಣನೂ ಸಹ ಶತ್ರುವಾದ ರಾಮನನ್ನು ನಿಗ್ರಹಿಸಿ ಪ್ರತೀಕಾರವನ್ನು ಮಾಡಲಿಲ್ಲ. ನೀನಾದರೂ ದಿವ್ಯಾಸ್ತ್ರ ಗಳಿಂದ ಅವರನ್ನು ನಿಗ್ರಹಿಸಿ ನನ್ನನ್ನು ಸಂತೋಷಪಡಿಸು ’ ಎನಲು, ಆ ಮಾತನ್ನು ಕೇಳಿ ಇಂದ್ರಜಿತ್ತು ರಥವ ನ್ನೇರಿ, ಯುದ್ಧಸನ್ನಾಹದಿಂದ ಮೆರೆಯುತ್ತ, ಯುದ್ಧರಂಗವನ್ನು ಪ್ರವೇಶಿಸಿ ವೀರವಾದವನ್ನು ಮಾಡುತ್ತ, ಶುಭ ಲಕ್ಷಣನಾದ ಲಕ್ಷ್ಮಣನನ್ನು ಯುದ್ಧಕ್ಕೆ ಕರೆದನು. ಅವನ ವೀರವಾದವನ್ನು ಕೇಳಿ ಧನುರ್ಧಾರಿಯಾದ ಲಕ್ಷ್ಮಣನು ಕ್ಷುದ್ರಮೃಗದ ಎದುರಿಗೆ ಸಿಂಹವು ಹೋಗುವಂತೆ ಇಂದ್ರಜಿತ್ತಿನ ಎದುರಿಗೆ ಹೋದನು. ಆಗ ಅವರಿಬ್ಬರೂ ಪರ ಸ್ಪರ ಸ್ಪರ್ಧೆಯಿಂದ ಜಯಾಪೇಕ್ಷಿಗಳಾಗಿ ದಿವ್ಯಾಸ್ತ್ರಗಳನ್ನು ಪ್ರಯೋಗಿಸುತ್ತ ಯುದ್ಧಕ್ಕೆ ಉಪಕ್ರಮಮಾಡಿದರು. ಆ ಯುದ್ಧದಲ್ಲಿ ಇಂದ್ರಜಿತ್ತಿಗೂ ಲಕ್ಷ್ಮಣನಿಗೂ ಸಮಾನವಾಗಿ ಕೆಲವು ಕಾಲ ಯುದ್ಧವು ನಡೆಯಿತು. ಬಳಿಕ ಬಲಿ ಷ್ಠನಾದ ಇಂದ್ರಜಿತ್ತು ಅಧಿಕವಾದ ಪ್ರಯತ್ನದಿಂದ ತೀಕ್ಷ್ಣವಾದ ತೋಮರಾಯುಧಗಳನ್ನು ಲಕ್ಷ್ಮಣನ ಮೇಲೆ ಪ್ರಯೋಗಿಸಲು, ಲಕ್ಷ್ಮಣನು ತನ್ನ ಬಾಣಗಳಿಂದ ಆ ತೋಮರಾಯುಧಗಳನ್ನೆಲ್ಲಾ ಚೂರುಚೂರುಮಾಡಿ ಕೆಳಕ್ಕೆ ಕೆಡಹಿದನು. ಆ ಸಮಯದಲ್ಲಿ ವಾಲಿಪುತ್ರನಾದ ಅಂಗದನು ದೊಡ್ಡದಾದ ಒಂದು ಮರವನ್ನು ಕಿತ್ತುಕೊಂಡು ಓಡಿ ಬಂದು ಇಂದ್ರಜಿತ್ತಿನ ತಲೆಯಮೇಲೆ ಹೊಡೆದನು. ಇಂದ್ರಜಿತ್ತು ಆ ಪೆಟ್ಟಿಗೆ ಚಲಿಸದೆ ಪ್ರಾಸಾಯುಧವನ್ನು ಕಯ್ಯಲ್ಲಿ ಹಿಡಿದು ಅಂಗದನನ್ನು ಸಂಹರಿಸಬೇಕೆಂದು ಯತ್ನಿಸಲು, ಲಕ್ಷ್ಮಣನು ಆ ಪ್ರಾಸಾಯುಧವನ್ನು ಬಾಣಗ ಳಿಂದ ಚೂರುಚೂರಾಗಿ ಕತ್ತರಿಸಿ ಬಿಟ್ಟನು. ಅನಂತರ ಇಂದ್ರಜಿತ್ತು ತನ್ನ ಬಳಿಯಲ್ಲಿದ್ದ ಗದಾಯುಧವನ್ನು ತೆಗೆ ದುಕೊಂಡು ಅದರಿಂದ ಅಂಗದನ ಎಡಗಡೆಯಲ್ಲಿ ಪೆಟ್ಟಿಕ್ಕಲು, ಅದನ್ನು ಲಕ್ಷ್ಯಮಾಡದೆ ಕ್ರೋಧಾವೇಶದಿಂದ ಅಂಗ ದನು ದೊಡ್ಡದಾದ ಮತ್ತೊಂದು ಮರವನ್ನು ಕಿತ್ತುಕೊಂಡು, ಇಂದ್ರಜಿತ್ತನ್ನು ಸಂಹರಿಸಬೇಕೆಂದು ಆ ಮರವನ್ನು ಆತನ ರಥದಮೇಲೆ ವೇಗದಿಂದ ಕೆಡಹಿದನು. ಅದರಿಂದ ಆ ರಥವೂ ಸಾರಥಿಯೂ ಕುದುರೆಗಳೂ ಛಿನ್ನಭಿನ್ನವಾಗಿ ಹೋಗಲು, ಆ ರಥವನ್ನು ಬಿಟ್ಟು ಇಂದ್ರಜಿತ್ತು ಮಾಯೆಯಿಂದ ಯಾರಿಗೂ ಕಾಣಿಸಿಕೊಳ್ಳದೆ ಆಕಾಶಕ್ಕೆ ಹಾರಿದನು. ಆಗ ರಾಮನು ಇಂದ್ರಜಿತ್ತು ಬಹು ಮಾಯಾವಂತನೆಂದು ತಿಳಿದು ಲಕ್ಷ್ಮಣನಿದ್ದ ಸ್ಥಳಕ್ಕೆ ಬಂದು ಸುತ್ತಲೂ ಇದ್ದ ತನ್ನ ಸೈನ್ಯವನ್ನು ರಕ್ಷಿಸುತ್ತಿದ್ದನು. ಬಳಿಕ ಇಂದ್ರಜಿತ್ತು ಅದೃಶ್ಯನಾಗಿ ವರಪ್ರಸಾದದಿಂದ ಪಡೆದ ಬಾಣಗಳಿಂದ ರಾಮ ಲಕ್ಷ್ಮಣರ ಶರೀರವೆಲ್ಲಾ ತುಂಬಿಕೊಳ್ಳುವಂತೆ ಬಾಣಗಳನ್ನು ಪ್ರಯೋಗಿಸಿದನು. ಅದನ್ನು ನೋಡಿ ರಾಮ ಲಕ್ಷ್ಮಣರು ತಾವೂ ಆಕಾಶಮಾರ್ಗಕ್ಕೆ ಅನೇಕ ಬಾಣಗಳನ್ನು ಪ್ರಯೋಗಿಸಿದರು. ಆಗ ಸಮಸ್ತಕಪಿಗಳೂ ದೊಡ್ಡದೊಡ್ಡದಾದ ಕಲ್ಲುಗಳನ್ನು ಹಿಡಿದು ಆಕಾಶಮಾರ್ಗಕ್ಕೆ ಹಾರಿ ಅಲ್ಲಿ ಆ ಕಲ್ಲುಗಳನ್ನು ಎಸೆದರು. ಮಾಯಾ ವಿಯಾದ ಇಂದ್ರಜಿತ್ತು ಆ ಕಪಿಗಳಿಗೂ ರಾಮಲಕ್ಷ್ಮಣರಿಗೂ ಸಹ ಕಾಣಿಸಿಕೊಳ್ಳದೆ ಅವರಮೇಲೆ ಅನೇಕ ಬಾಣ ಗಳನ್ನು ಪ್ರಯೋಗಿಸಿದನು. ಆ ಬಾಣಗಳಿಂದ ಪೆಟ್ಟುಬಿದ್ದ ರಾಮಲಕ್ಷ್ಮಣರು, ಆಕಾಶದಿಂದ ಸೂರ್ಯಚಂದ್ರರು ಕೆಳಕ್ಕೆ ಬೀಳುವಂತೆ ಕೆಳಗೆ ಬಿದ್ದರು ” ಎಂದು ಮಾರ್ಕಂಡೇಯನು ಧರ್ಮರಾಯನಿಗೆ ಹೇಳಿದನು.

## ೨೮೮ನೇ ಅಧ್ಯಾಯ.—ರಾಮೋಪಾಖ್ಯಾನ—(ಇಂದ್ರಜಿತ್ತಿನ ವಧೆ.)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯ[illegible] ಬಳಿಕ ಮಾರ್ಕಂಡೇಯನು ಧರ್ಮರಾಯನನ್ನು ಕುರಿತು “ಎಲೈ ಧರ್ಮರಾಯನೆ, ಆಗ ರಾಮಲಕ್ಷ್ಮ[illegible] ಬಿದ್ದದ್ದನ್ನು ನೋಡಿ ಮಾಯಾವಿಯಾದ ಇಂದ್ರಜಿತ್ತು ತಾನು ದೇವತಾವರದಿಂದ ಸಂಪಾದಿಸಿದ ಬಾಣಗಳ[illegible] ಯುದ್ಧರಂಗದಲ್ಲಿ ಅವರಿಬ್ಬರನ್ನೂ ಕಟ್ಟಿಹಾಕಿಬಿಟ್ಟನು. ಆದರಿಂದ ರಾಮಲಕ್ಷ್ಮಣರು ಅಲ್ಲಾಡುವದಕ್ಕೆ ಆಸ್ಪದವಿಲ್ಲದಂತೆ ಕಟ್ಟಲ್ಪಟ್ಟಿದ್ದು ಅನೇಕಬಾಣಗಳು ನಾಟಿರತಕ್ಕ ಶರೀರವುಳ್ಳವರಾಗಿ ಪಂಜರದಲ್ಲಿ ಸಿಕ್ಕಿಬಿದ್ದ ಪಕ್ಷಿಗಳಂತೆ ಸಿಕ್ಕಿ ಮೂರ್ಛಿತರಾದರು. ಆಗ ಸುಗ್ರೀವ, ಸುಷೇಣ, ಮೈಂದ, ದ್ವಿವಿದ, ಕುಮಾರ, ಅಂಗದ, ಹನುಮಂತ, ತಾರ, ನಳ, ನೀಲ ಮೊದಲಾದ ಕಪಿನಾಯಕರು ರಾಮಲಕ್ಷ್ಮಣರನ್ನು ಸುತ್ತುವರಿದು ಕೂತುಕೊಂಡರು. ಆಗ ವಿಭೀಷಣನು ಅಲ್ಲಿಗೆ ಬಂದು ಪ್ರಜ್ಞಾಸ್ತ್ರದಿಂದ ರಾಮಲಕ್ಷ್ಮಣರಿಗೆ ಪ್ರಜ್ಞೆಯುಂಟಾಗುವಹಾಗೆ ಮಾಡಿದನು. ಆ ಕ್ಷಣದಲ್ಲೇ ಸುಗ್ರೀವನು ದಿವ್ಯಮಂತ್ರದಿಂದ ಯುಕ್ತವಾದ ವಿಶಲ್ಯಕರಣಿಯೆಂಬ ಔಷಧದಿಂದ ಅವರ ಮೈಯ್ಯಲ್ಲಿ ಯಾವ ವ್ಯಥೆಯೂ ಉಂಟಾಗದಂತೆ ಚಿಕಿತ್ಸೆಮಾಡಿಸಿದನು. ಆದರಿಂದ ರಾಮಲಕ್ಷ್ಮಣರು ನಿರಾಯಾಸರಾಗಿಯೂ ಆಲಸ್ಯಶೂನ್ಯರಾಗಿಯೂ ಕ್ಷಣಮಾತ್ರದಲ್ಲಿ ಎದ್ದು ಕೂತುಕೊಂಡರು. ಬಳಿಕ ವಿಭೀಷಣನು ರಾಮನನ್ನು ನೋಡಿ ಕೈಮುಗಿದುಕೊಂಡು ‘ಎಲೈ ರಾಮನೆ, ರಾಜರಾಜನಾದ ಕುಬೇರನ ಆಜ್ಞೆಯಿಂದ ಒಬ್ಬ ಗುಹ್ಯಕನು ದಿವ್ಯವಾದ ಉದಕವನ್ನು ತೆಗೆದುಕೊಂಡು ಶ್ವೇತಪರ್ವತದಿಂದ ಇಲ್ಲಿಗೆ ಬಂದಿರುವನು. ಆ ಉದಕವನ್ನು ನೀನು ಸ್ವೀಕರಿಸು. ಅದನ್ನು ಕಣ್ಣಿಗೆ ಸವರಿಕೊಂಡದ್ದೇ ಆದರೆ ಅದರ ಮಹಿಮೆಯಿಂದ ಅಂತರ್ಧಾನವನ್ನು ಹೊಂದಿದವರು ಕಾಣಿಸಿಕೊಳ್ಳುವರು. ಅದರಲ್ಲಿ ಇಂಥ ಮಹಿಮೆಯಿರುವದು’ ಎನಲು, ಶ್ರೀರಾಮನು ಮಂತ್ರಪೂತವಾದ ಆ ಉದಕವನ್ನು ಸ್ವೀಕರಿಸಿ ತನ್ನ ನೇತ್ರಗಳನ್ನು ತೊಳೆದುಕೊಂಡನು. ಅದೇಪ್ರಕಾರ ಲಕ್ಷ್ಮಣ, ಸುಗ್ರೀವ, ಜಾಂಬವಂತ, ಹನುಮಂತ, ಅಂಗದ, ಮೈಂದ, ದ್ವಿವಿದ, ನಳ, ನೀಲ ಮೊದಲಾದ ಕಪಿನಾಯಕರೂ ಸಹ ಆ ಉದಕದಿಂದ ತಮ್ಮ ನೇತ್ರಗಳನ್ನು ತೊಳೆದುಕೊಂಡರು. ಆದರಿಂದ ವಿಭೀಷಣನು ಹೇಳಿದಪ್ರಕಾರ ಅದೃಶ್ಯವಾದ ಪದಾರ್ಥಗಳೆಲ್ಲವೂ ಕ್ಷಣಮಾತ್ರದಲ್ಲಿ ಕಣ್ಣಿಗೆ ಕಾಣಿಸಿದವು. ಅತ್ತಲು ಇಂದ್ರಜಿತ್ತು ಲಂಕಾಪಟ್ಟಣವನ್ನು ಪ್ರವೇಶಮಾಡಿ ತಮ್ಮ ತಂದೆಯಾದ ರಾವಣನಿಗೆ ಯುದ್ಧರಂಗದಲ್ಲಿ ತಾನು ರಾಮಲಕ್ಷ್ಮಣರನ್ನು ಕಟ್ಟಿಹಾಕಿದ್ದನ್ನು ತಿಳುಹಿಸಿ, ಅತಿವೇಗದಿಂದ ಮರಳಿ ಯುದ್ಧರಂಗಕ್ಕೆ ಹೊರಟು, ಅಧಿಕವಾದ ಕ್ರೋಧಾವೇಶದಿಂದ ರಾಮಲಕ್ಷ್ಮಣರ ಸಂಗಡ ಪುನಃ ಯುದ್ಧಮಾಡಬೇಕೆಂದು ಬಹು ಜಾಗ್ರತೆಯಾಗಿ ಅವರನ್ನು ಎದುರುಬಿದ್ದು ಬಂದನು. ಆಗ ಲಕ್ಷ್ಮಣನು ವಿಭೀಷಣನ ಅಭಿಪ್ರಾಯಾನುಸಾರವಾಗಿ ಆಹ್ನಿಕವನ್ನು ನೆರವೇರಿಸಿಕೊಳ್ಳದೇ ಯುದ್ಧಕ್ಕೆ ಬಂದಿರತಕ್ಕ ಇಂದ್ರಜಿತ್ತನ್ನು ಸಂಹರಿಸಬೇಕೆಂದು ಆತನಮೇಲೆ ಕಾಣಿಸಿಕೊಂಡು ಅನೇಕ ಬಾಣಗಳನ್ನು ಪ್ರಯೋಗಿಸಿದನು. ಆಗ ಅವರಿಬ್ಬರೂ ಅತಿಘೋರವಾಗಿ ಇಂದ್ರಪ್ರಹ್ಲಾದರಂತೆ ಹೋರಾಡಿದರು. ಆ ಸಮಯದಲ್ಲಿ ಲಕ್ಷ್ಮಣನು ಮರ್ಮಭೇದಕಗಳಾದ ತೀಕ್ಷ್ಣವಾದ ಬಾಣಗಳಿಂದ ಇಂದ್ರಜಿತ್ತನ್ನು ಹೊಡೆದನು. ಆದರಿಂದ ಜಾಜ್ವಲ್ಯಮಾನವಾದ ರೋಷಾವೇಶವುಳ್ಳ ಇಂದ್ರಜಿತ್ತು ವಿಷಪೂರ್ಣವಾದ ಸರ್ಪಗಳಿಗೆ ಸಮಾನವಾದ ಎಂಟು ಬಾಣಗಳನ್ನು ಲಕ್ಷ್ಮಣನ ಮೇಲೆ ಪ್ರಯೋಗಿಸಲು; ಲಕ್ಷ್ಮಣನು ಕೋಪೋದ್ದೀಪಿತನಾಗಿ ತನ್ನ ಧನುಸ್ಸಿನಲ್ಲಿ ಮೂರು ಬಾಣಗಳನ್ನು ಸಂಧಾನ ಮಾಡಿ ಒಂದು ಬಾಣದಿಂದ ಧನುರ್ಧಾರಿಯಾದ ಇಂದ್ರಜಿತ್ತಿನ ಒಂದು ಬಾಹುವನ್ನೂ, ಮತ್ತೊಂದು ಬಾಣದಿಂದ ಬಾಣವನ್ನು ಹಿಡಿದಿರತಕ್ಕಮತ್ತೊಂದು ಬಾಹುವನ್ನೂ, ಇನ್ನೊಂದು ಮಹತ್ತಾಗಿಯೂ ಪ್ರಕಾಶಮಾನವಾಗಿಯೂ ಇರುವ ಬಾಣದಿಂದ ಕಿರೀಟ ಕುಂಡಲಾದಿಗಳಿಂದ ಅಲಂಕೃತವಾದ ಆತನ ಶಿರಸ್ಸನ್ನೂ ಕತ್ತರಿಸಿದನು. ಆಗ ಆ ಇಂದ್ರಜಿತ್ತಿನ ಶರೀರವು ಬಾಹುಗಳಿಂದಲೂ ಶಿರಸ್ಸಿನಿಂದಲೂ ರಹಿತವಾಗಿ ಭಯಂಕರವಾಗಿ ಭೂಮಿಯಮೇಲೆ ಬಿದ್ದಿತು. ಆ ಬಳಿಕ ಲಕ್ಷ್ಮಣನು ಇಂದ್ರಜಿತ್ತಿನ ಸಾರಥಿಯನ್ನು ಸಂಹಾರ ಮಾಡಿದನು. ಸಾರಥಿಯಿಂದಲೂ ರಥಿಕನಿಂದಲೂ ಹೀನವಾದ ಆ ರಥವನ್ನು ಎಳೆದು ಕೊಂಡು ಕುದುರೆಗಳು ಲಂಕಾಪಟ್ಟಣವನ್ನು ಪ್ರವೇಶಮಾಡಿದವು. ಅಲ್ಲಿ ರಾವಣನು ತನ್ನ

ಮಗನಾದ ಇಂದ್ರಜಿತ್ತಿಲ್ಲದೆ ಬರೀರಥವನ್ನು ಕುದುರೆಗಳು ಎಳೆದುಕೊಂಡು ಬರುವದನ್ನು ನೋಡಿ, ಇಂದ್ರಜಿತ್ತು ಮೃತನಾದನೆಂದು ತಿಳಿದು ಭಯಭ್ರಾಂತನಾಗಿ, ಶೋಕವೂ ಮೋಹವೂ ಅಧಿಕವಾಗಲು, ಅಶೋಕವನದಲ್ಲಿ ವಾಸ ಮಾಡುತ್ತ ರಾಮದರ್ಶನವನ್ನು ಮಾಡಬೇಕೆಂದು ಕುತೂಹಲಪಡುತ್ತಿರುವ ಸೀತೆಯನ್ನು ಸಂಹರಿಸಬೇಕೆಂದು ಖಡ್ಗ ವನ್ನು ಕಯ್ಯಲ್ಲಿ ಹಿಡಿದು ಅತಿವೇಗದಿಂದ ಅತ್ತಲಾಗಿ ಹೊರಟನು. ಈ ಪ್ರಕಾರ ದುರಾತ್ಮನಾದ ರಾವಣನು ಪಾಪ ಕೃತ್ಯದಲ್ಲಿ ಆಸಕ್ತಿಯುಳ್ಳವನಾಗಿ ಹೊರಟಿರುವದನ್ನು ನೋಡಿ, ಅವಿಂಧ್ಯನೆಂಬ ರಾಕ್ಷಸನು ಸಕಾರಣವಾದ ವಚನ ಗಳಿಂದ ಆತನಿಗೆ ಸಮಾಧಾನವನ್ನು ಮಾಡಿ 'ಎಲೈ ರಾವಣೇಶ್ವರನೆ, ರಾಜ್ಯಾಧಿಪತ್ಯದಲ್ಲಿರತಕ್ಕ ನೀನು ಸ್ತ್ರೀವಧೆ ಯನ್ನು ಮಾಡಬಾರದು. ಯಾವಾಗ ನೀನು ನಿನ್ನ ಮನೆಯಲ್ಲಿ ಆಕೆಯನ್ನು ತಂದಿಟ್ಟುಕೊಂಡೆಯೋ ಆಗಲೇ ಆಕೆ ಯನ್ನು ನೀನು ಸಂಹರಿಸಿದಹಾಗಾಯಿತು. ಬೇರೆ ಆಕೆಯ ಶರೀರವನ್ನು ಸಂಹಾರಮಾಡಿದ್ದರಿಂದ ನಿನಗಾಗತಕ್ಕ ಪ್ರಯೋಜನವೇನು? ಪರಾಕ್ರಮಶಾಲಿಯಾದ ನೀನು ಸೀತಾಪತಿಯಾದ ರಾಮನನ್ನು ಯುದ್ಧದಲ್ಲಿ ಸಂಹರಿಸು. ಆತನು ಹತನಾದರೆ ಈಕೆಯು ಹತಳಾದ ಹಾಗೆಯೇ ಆಯಿತು. ನಿನ್ನ ಪರಾಕ್ರಮವನ್ನು ಇಂದ್ರಾದಿ ದೇವತೆಗಳೂ ಸಹ ಸಹಿಸಲಾರರು. ಅನೇಕಾವರ್ತಿ ನೀನು ಯುದ್ಧದಲ್ಲಿ ಇಂದ್ರಾದಿಗಳನ್ನು ಓಡಿಸಿಬಿಟ್ಟಿರುವೆ' ಎಂದು ಅನೇಕ ವಿಧವಾದ ಮಾತುಗಳಿಂದ ಆತನ ಕೋಪವು ಸಮಾಧಾನವಾಗುವಹಾಗೆ ಮಾಡಲು; ಆ ಮಾತನ್ನು ಪರಿಗ್ರಹಿಸಿ ರಾವಣನು ಯುದ್ಧರಂಗಕ್ಕೆ ಹೊರಡಬೇಕೆಂದು ಯೋಚಿಸಿ ಆ ಖಡ್ಗವನ್ನು ಒರೆಯಲ್ಲಿ ಹಾಕಿ 'ಯುದ್ಧಕ್ಕೋಸ್ಕರ ನನ್ನ ವಿಜಯರಥವು ಸಿದ್ಧವಾಗಲಿ' ಎಂದು ತನ್ನ ಸಾರಥಿಗೆ ಅಜ್ಞೆಯನ್ನು ಕೊಟ್ಟನು" ಎಂದು ಮಾರ್ಕಂಡೇ ಯನು ಧರ್ಮರಾಯನಿಗೆ ಹೇಳಿದನು.

---

### ೨೮೯ನೇ ಅಧ್ಯಾಯ.—ರಾಮೋಪಾಖ್ಯಾನ—(ರಾವಣನ ವಧೆ.)

ವೈಶಂಪಾಯನಮುನೀಂದ್ರನು ಜನಮೇಜಯರಾಯನನ್ನು ಕುರಿತು—ಎಲೈ ಜನಮೇಜಯನೆ ಕೇಳು, ಮಾರ್ಕಂಡೇಯನು ಧರ್ಮರಾಯನನ್ನು ಕುರಿತು "ಎಲೈ ಯುಧಿಷ್ಠಿರನೆ, ಬಳಿಕ ದಶಕಂಠನಾದ ರಾವಣನು ಪುತ್ರ ನಾದ ಇಂದ್ರಜಿತ್ತು ಮೃತನಾದ್ದರಿಂದ ಅಧಿಕವಾದ ಕ್ರೋಧಾವೇಶವುಳ್ಳವನಾಗಿ, ನಾನಾವಿಧವಾದ ಆಯುಧಗಳನ್ನು ಧರಿಸಿದ ಅನೇಕ ಕೋಟಿ ರಾಕ್ಷಸರೊಡಗೂಡಿ, ರತ್ನಖಚಿತವಾದ ಸುವರ್ಣದ ರಥವನ್ನೇರಿ, ಅನೇಕ ವಾದ್ಯಗಳು ದಿಕ್ಕುಗಳೆಲ್ಲಾ ಮೊಳಗುವಂತೆ ಧ್ವನಿಮಾಡುತ್ತಿರಲು ಪಟ್ಟಣದಿಂದ ಹೊರಟು ಯುದ್ಧರಂಗಕ್ಕೆ ಬಂದು, ರಾಮನನ್ನೂ ಕಪಿನಾಯಕರನ್ನೂ ಅನೇಕ ಬಾಣಗಳಿಂದ ಹೊಡೆಯುತ್ತ ಅಟ್ಟಿಕೊಂಡು ಬಂದನು. ಅದನ್ನು ನೋಡಿ ಮೈಂದ, ದ್ವಿವಿದ, ನಳ, ನೀಲ, ಅಂಗದ, ಹನುಮಂತ, ಜಾಂಬವಂತ ಮೊದಲಾದ ಕಪಿನಾಯಕರು ದೊಡ್ಡದೊಡ್ಡ ಗಿಡಗ ಳನ್ನು ಕಿತ್ತುಕೊಂಡು ಆ ರಾಕ್ಷಸರ ಸೈನ್ಯಗಳನ್ನು ನಾಶಮಾಡುತ್ತ ಬಂದರು. ಅದನ್ನು ನೋಡಿ ಮಾಯಾವಿಯಾದ ರಾಕ್ಷಸೇಶ್ವರನಾದ ರಾವಣನು ಮಾಯೆಯಿಂದ ಅನೇಕವಾದ ಆಯುಧಗಳನ್ನು ಹಿಡಿದಿರುವ ರಾಕ್ಷಸರನ್ನು ನಿರ್ಮಾಣ ಮಾಡಿದನು. ಆಗ ರಾಮನು ದಿವ್ಯಾಸ್ತ್ರಗಳಿಂದ ರಾವಣನ ಶರೀರದಿಂದ ಹುಟ್ಟಿದ ರಾಕ್ಷಸರನ್ನೆಲ್ಲಾ ಸಂಹಾರ ಮಾಡಿದನು. ಬಳಿಕ ರಾವಣನು ಪುನಃ ಮಾಯೆಯಿಂದ ರಾಮಲಕ್ಷ್ಮಣರ ರೂಪವನ್ನು ಧರಿಸಿ ರಾಮರೂಪದಿಂದ ಲಕ್ಷ್ಮಣನನ್ನೂ ಲಕ್ಷ್ಮಣರೂಪದಿಂದ ರಾಮನನ್ನೂ ಬಾಣಗಳಿಂದ ಹೊಡೆದನು. ಆ ಮಾಯೆಯನ್ನು ತಿಳಿದು ಲಕ್ಷ್ಮಣನು ರಾಮನನ್ನು ಕುರಿತು 'ಎಲೈ ಅಗ್ರಜನೆ, ಪಾಪಾತ್ಮರಾದ ಮಾಯಾವಿಗಳಾದ ಈ ರಾಕ್ಷಸರನ್ನು ನೀನು ಸಂಹಾರಮಾಡು' ಎನಲು, ರಾಮನು ಮಾಯಾವಿಗಳಾದ ಅನೇಕಮಂದಿ ರಾಕ್ಷಸರನ್ನು ಅನೇಕ ಬಾಣಗಳಿಂದ ಸಂಹಾರ ಮಾಡಿದನು. ಆ ಸಮಯದಲ್ಲಿ ಇಂದ್ರಸಾರಥಿಯಾದ ಮಾತಲಿಯು ಹಸರುಬಣ್ಣವುಳ್ಳ ಕುದುರೆಗಳನ್ನು ಕಟ್ಟಿ ಸೂರ್ಯಮಂಡಲದಂತೆ ಪ್ರಕಾಶಿಸುತ್ತಿರುವ ದೇವೇಂದ್ರನ ರಥವನ್ನು ತೆಗೆದುಕೊಂಡು ಬಂದು ರಾಮನನ್ನು ಕುರಿತು 'ಎಲೈ ರಾಮಚಂದ್ರನೆ, ದೇವೇಂದ್ರನು ಈ ದಿವ್ಯವಾದ ಚೈತ್ರರಥವನ್ನೇರಿ ಯುದ್ಧರಂಗದಲ್ಲಿ ಅನೇಕ ದೈತ್ಯದಾನವರನ್ನು ಸಂಹಾರಮಾಡಿರುವನು. ನೀನೂ ಈ ರಥವನ್ನೇರಿ ರಾವಣನನ್ನು ಸಂಹರಿಸು. ನಾವಕಾಶ

ಮಾಡಬೇಡ. ಈ ಮಾತನ್ನು ಇಂದ್ರನು ಹೇಳಿಕಳುಹಿಸಿರುವನು' ಎನಲು, ಅದನ್ನು ಕೇಳಿ ರಾಮನು 'ಇದೂ ರಾಕ್ಷಸಮಾಯೆಯೋ ಏನೋ!' ಎಂದು ಶಂಕಿಸುತ್ತಿರಲು, ಆಗ ವಿಭೀಷಣನು 'ಎಲೈ ರಾಮನೆ, ಇದು ದುರಾತ್ಮನಾದ ರಾವಣನ ಮಾಯೆಯೆಂದು ತಿಳಿಯಬೇಡ. ಇದು ಇಂದ್ರನ ರಥವೇ ಹೌದು. ಇದನ್ನೇರಿ ನೀನು ರಾವಣನನ್ನು ಸಂಹರಿಸು' ಎಂದು ನುಡಿದನು. ಆ ಮಾತನ್ನು ಕೇಳಿ ಹಾಗೆಯೇ ಆಗಲೆಂದು ಆ ರಥವನ್ನೇರಿ ರಾವಣನ ಮೇಲೆ ಯುದ್ಧಕ್ಕೆ ತೊಡಗಿದನು. ಆಗ ರಾವಣನು ತನ್ನ ಮೇಲೆ ಯುದ್ಧಕ್ಕೆ ಬಂದ ರಾಮನನ್ನು ನೋಡಿ ತಾನೂ ಯುದ್ಧಕ್ಕೆ ಸಿದ್ಧನಾದನು. ಅದನ್ನು ನೋಡಿ ಸಕಲಪ್ರಾಣಿಗಳೂ ಹಾಹಾಕಾರವನ್ನು ಮಾಡಿದವು. ಆಕಾಶಮಾರ್ಗದಲ್ಲಿ ದೇವತೆಗಳು ಸಿಂಹನಾದವನ್ನೂ ವಾದ್ಯಧ್ವನಿಯನ್ನೂ ಮಾಡಿದರು. ಬಳಿಕ ರಾಮರಾವಣರಿಗೆ ಅಸದೃಶವಾದ ಯುದ್ಧವು ನಡೆಯಿತು. ಆಗ ರಾವಣನು ವಜ್ರಾಯುಧಕ್ಕೂ ಯಮದಂಡಕ್ಕೂ ಸಮಾನವಾದ ಒಂದು ಘೋರವಾದ ಶೂಲಾಯುಧವನ್ನು ರಾಮನಮೇಲೆ ಪ್ರಯೋಗಿಸಲು, ರಾಮನು ತೀಕ್ಷ್ಣವಾದ ಬಾಣಗಳಿಂದ ಆ ಆಯುಧವನ್ನು ಚೂರುಚೂರುಮಾಡಿದನು. ಅದನ್ನು ನೋಡಿ ರಾವಣನು ಕೋಪವನ್ನೂ ಭಯವನ್ನೂ ತಾಳಿ, ರಾಮನಮೇಲೆ ಅನೇಕ ಸಹಸ್ರವಾದ ನಾನಾವಿಧವಾದ ಬಾಣಗಳನ್ನು ಪ್ರಯೋಗಿಸಿ, ಭುಸುಂಡಿ,ಶೂಲ, ಮುಸಲ, ಪರಶು, ಶಕ್ತಿ, ಶತಘ್ನಿ, ಖಡ್ಗ ಮೊದಲಾದ ಆಯುಧಗಳನ್ನು ರಾಮನಮೇಲೆ ಪ್ರಯೋಗಿಸಲು, ಆ ಮಾಯಾಯುದ್ಧವನ್ನು ನೋಡಿ ಸಮಸ್ತರಾದ ಕಪಿಗಳೂ ಭಯಪಟ್ಟು ದಿಕ್ಕುದಿಕ್ಕಿಗೆ ಓಡಿಹೋದರು. ಬಳಿಕ ರಾಮನು ಕಡುಮೊನೆಯಾಗಿಯೂ ಹಕ್ಕಿಯ ಗರಿಗಳನ್ನು ಸರಿಯಾಗಿ ಕಟ್ಟಿರತಕ್ಕದ್ದಾಗಿಯೂ ಚಿನ್ನದ ಬುಡವುಳ್ಳದ್ದಾಗಿಯೂ ಇರುವ ಒಂದು ಉತ್ತಮವಾದ ಬಾಣವನ್ನು ಬತ್ತಳಿಕೆಯಿಂದ ತೆಗೆದು ಬಿಲ್ಲಿನಲ್ಲಿ ಹೂಡಿ ಅದರಲ್ಲಿ ಬ್ರಹ್ಮಾಸ್ತ್ರವನ್ನು ಅಭಿಮಂತ್ರಿಸಲು, ಅದನ್ನು ನೋಡಿ ಇಂದ್ರಾದಿ ದೇವತೆಗಳೂ ಗಂಧರ್ವರೂ ಕಿನ್ನರರೂ ದಾನವರೂ ಸಂತೋಷಪಡುತ್ತ ರಾವಣನ ಆಯುಸ್ಸು ಸ್ವಲ್ಪವೇ ಉಳಿದಿರುವದೆಂದು ತಿಳಿದುಕೊಂಡರು. ಆಗ ರಾಮನು ಬ್ರಹ್ಮದಂಡಕ್ಕೆ ಸಮಾನವಾದ ಆ ಘೋರವಾದ ಬಾಣವನ್ನು ಕಿವಿಯವರೆಗೂ ಎಳೆದು, ರಾಕ್ಷಸಾಧಿಪತಿಯಾದ ರಾವಣನ ರಥದಮೇಲೆ ಪ್ರಯೋಗಿಸಲು, ಆ ಬಾಣಾಗ್ನಿಯಿಂದ ರಥಿಕನಾದ ರಾವಣನೂ ಆತನ ಸಾರಥಿಯೂ ರಥಾಶ್ವಗಳೂ ರಥವೂ ಸಹ ಸುಟ್ಟು ಉರಿದುಹೋದವು. ಆಗ ಪಂಚಭೂತಗಳೂ ಮೃತನಾದ ರಾವಣನನ್ನು ಬಿಟ್ಟುಬಿಟ್ಟವು. ಬಳಿಕ ರಾವಣನ ಶರೀರದಲ್ಲಿದ್ದ ರಕ್ತಮಾಂಸ ಮೊದಲಾದ ಧಾತುಗಳು ಬ್ರಹ್ಮಾಸ್ತ್ರದ ತೇಜಸ್ಸಿನಿಂದ ಸುಟ್ಟು ಬೂದಿಯಾಗಿ ಹೋದವು. ಅದನ್ನು ನೋಡಿ ದೇವದಾನವ ಗಂಧರ್ವ ಸಿದ್ಧವಿದ್ಯಾಧರ ಚಾರಣರು ಬಹಳವಾಗಿ ಸಂತೋಷಪಟ್ಟರು" ಎಂದು ಮಾರ್ಕಂಡೇಯನು ಧರ್ಮರಾಯನಿಗೆ ಹೇಳಿದನು.

## ೨೯೧ನೇ ಅಧ್ಯಾಯ.—ರಾಮೋಪಾಖ್ಯಾನ—(ರಾಮರಾಜ್ಯಾಭಿಷೇಕ.)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಮಾರ್ಕಂಡೇಯನು ಧರ್ಮರಾಯನನ್ನು ನೋಡಿ "ಎಲೈ ಪಾಂಡವಾಗ್ರಜನೆ, ಕ್ಷುದ್ರನಾದ ದೇವಶತ್ರುವಾದ ರಾಕ್ಷಸೇಂದ್ರನಾದ ರಾವಣನನ್ನು ಸಂಹರಿಸಿ ರಾಮನು ಲಕ್ಷ್ಮಣನೊಡಗೂಡಿ ಸಂತೋಷಪಟ್ಟನು. ಬಳಿಕ ಸಕಲ ದೇವತೆಗಳೂ ಋಷಿಗಳೂ ಕಮಲದಳಾಯತಾಕ್ಷನಾದ ಶ್ರೀರಾಮನನ್ನು ಸ್ತುತಿಸುತ್ತ ಆತನಿಗೆ ಜಯಾಶೀರ್ವಾದವನ್ನು ಮಾಡಿದರು. ಆಗ ಗಂಧರ್ವರು ಆಕಾಶದಲ್ಲಿ ನಿಂತು ಪುಷ್ಪವೃಷ್ಟಿಯನ್ನು ಕರೆದು ರಾಮನನ್ನು ಶ್ಲಾಘಿಸಿದರು. ಆ ಸಮಯದಲ್ಲಿ ಆಕಾಶವು ಸಂತುಷ್ಟರಾದ ದೇವತೆಗಳ ಮಹೋತ್ಸವದಿಂದ ಶೋಭಿಸುತ್ತಿತ್ತು. ಆ ಬಳಿಕ ಜಯಶಾಲಿಯಾದ ರಾಮನು ವಿಭೀಷಣನಿಗೆ ಲಂಕಾಪಟ್ಟಣವನ್ನು ಕೊಟ್ಟನು. ಆಗ ವಿಭೀಷಣನು ಸೀತಾದೇವಿಯನ್ನು ರಾಮನ ಸನ್ನಿಧಿಗೆ ಕರೆದುಕೊಂಡು ಬಂದನು. ಪ್ರಾಜ್ಞನಾದ ವೃದ್ಧನಾದ ಅವಿಂಧ್ಯನೆಂಬ ಮಂತ್ರಿಯು ಸೀತೆಯ ಸಂಗಡ ಬಂದು ಮಹಾತ್ಮನಾದ ರಾಮನನ್ನು ಕುರಿತು 'ಎಲೈ ಮಹಾನುಭಾವನೆ, ಪತಿವ್ರತಾಶಿರೋಮಣಿಯಾದ ಈಕೆಯನ್ನು ನೀನು ನೋಡು' ಎಂದು ದೈನ್ಯದಿಂದ ಬೇಡಿಕೊಳ್ಳಲು, ಆ ಮಾತನ್ನು

ಕೇಳಿ ರಾಮನು ಇಂದ್ರನ ರಥದಿಂದ ಕೆಳಕ್ಕೆ ಇಳಿದು, ಶೋಕದಿಂದ ಕೃಶಳೂ ಮಲಿನಳೂ ಆಗಿ ಜಡೆಗಟ್ಟಿದ ಮಂಡೆಕೂದಲಿಂದ ಕೂಡಿ ಕರೀಸೀರೆಯನ್ನುಟ್ಟು ಸರ್ವಾಂಗಸುಂದರಿಯಾಗಿ ಕಣ್ಣೀರುಸುರಿಸುತ್ತಿರುವ ಸೀತೆಯನ್ನು ನೋಡಿ, ಆಕೆಯನ್ನು ಸ್ಪರ್ಶಮಾಡುವದರಲ್ಲಿ ಶಂಕೆಪಟ್ಟು 'ಎಲೆ ಸೀತೆ, ನಿನ್ನನ್ನು ನಾನು ಬಿಟ್ಟಿರುವೆನು. ನಾನು ಯಾವ ಕಾರ್ಯಕ್ಕೋಸ್ಕರ ಇಲ್ಲಿಗೆ ಬಂದೆನೋ ಆ ಕಾರ್ಯವನ್ನು ನೆರವೇರಿಸಿದ್ದಾಯಿತು. ನನ್ನ ಪತ್ನಿಯಾದ ನೀನು ರಾಕ್ಷಸಾಧಮನಾದ ರಾವಣನ ಮನೆಯಲ್ಲಿ ಬಹುಕಾಲ ಇದ್ದು ಮುಪ್ಪನ್ನು ಹೊಂದಬಾರದೆಂದು ಯೋಚಿಸಿ, ನಿಶಾಚರನಾದ ರಾವಣನನ್ನು ನಾನು ಸಂಹರಿಸಿದೆನು. ಧರ್ಮನಿಶ್ಚಯವನ್ನು ಬಲ್ಲ ನಮ್ಮಂಥವರು ಪರರ ಕೈಗೆ ಸಿಕ್ಕಿದ್ದ ಸ್ತ್ರೀಯನ್ನು ಒಂದು ಮುಹೂರ್ತವಾದರೂ ಹ್ಯಾಗೆತಾನೆ ಪರಿಗ್ರಹಿಸುವದಕ್ಕಾದೀತು ? ಎಲೆ ಸೀತೆ, ನೀನು ಸದ್ವೃತ್ತಿಯುಳ್ಳವಳೇ ಆಗಲಿ ಅಸದ್ವೃತ್ತಿಯುಳ್ಳವಳೇ ಆಗಲಿ, ನಾಯಿ ಮುಟ್ಟಿದ ಹವಿಸ್ಸನ್ನು ಹ್ಯಾಗೆ ಸ್ವೀಕರಿಸುವದಕ್ಕೆ ಆಗುವದಿಲ್ಲವೋ ಹಾಗೆ, ನಿನ್ನನ್ನು ಸ್ವೀಕರಿಸುವದಕ್ಕೆ ನಾನು ಒಡಂಬಡತಕ್ಕವನಲ್ಲ' ಎನಲು, ಆ ಕ್ರೂರವಾದ ಮಾತನ್ನು ಕೇಳಿ ಸೀತೆಯು ದುಃಖಾಕ್ರಾಂತಳಾಗಿ ಕತ್ತಿಯಿಂದ ಕತ್ತರಿಸಿದ ಬಾಳೆಯಕಂಬದಂತೆ ನೆಲದಮೇಲೆ ಬಿದ್ದಳು ; ಮೊದಲು ಸಂತೋಷದಿಂದ ಗೆಲುವಾಗಿದ್ದ ಆಕೆಯ ಮುಖಕಾಂತಿಯು ತತ್ಕ್ಷಣದಲ್ಲೇ ಉಸುರುತಗಲಿದ ಕನ್ನಡಿಯ ಕಾಂತಿಯಂತೆ ಮಲಿನವಾಯಿತು. ಆ ಸಮಯದಲ್ಲಿ ಅಲ್ಲಿದ್ದ ಕಪಿನಾಯಕರೂ ಲಕ್ಷ್ಮಣನೂ ಸಹ ಆ ಕಠೋರವಾದ ರಾಮನ ಮಾತನ್ನು ಕೇಳಿ ಏನೂ ತೋರದೆ ಮೃತರಾದಂತೆ ಸ್ತಂಭೀಭೂತರಾಗಿದ್ದರು. ಅಂಥ ಸಮಯದಲ್ಲಿ ಶುದ್ಧಾತ್ಮನೂ ನಾಲ್ಕು ಮುಖವುಳ್ಳವನೂ ಪದ್ಮಗರ್ಭನೂ ಆದ ಬ್ರಹ್ಮನು ಹಂಸಗಳನ್ನು ಕಟ್ಟಿರತಕ್ಕ ದಿವ್ಯವಿಮಾನದಮೇಲೆ ಕುಳಿತು ರಾಮನಿಗೆ ದರ್ಶನವನ್ನು ಕೊಟ್ಟನು. ಅಷ್ಟದಿಕ್ಪಾಲಕರೂ ಸಪ್ತರ್ಷಿಗಳೂ ಸಕಲದೇವತೆಗಳೂ ಗಂಧರ್ವರೂ ಸಹ ದಶರಥರಾಯನನ್ನು ಕರೆದುಕೊಂಡು ದಿವ್ಯವಿಮಾನಗಳನ್ನೇರಿ ಶರತ್ಕಾಲದಲ್ಲಿ ಪ್ರಕಾಶಿಸುವ ನಕ್ಷತ್ರಗಳಂತೆ ಆಕಾಶದಲ್ಲಿ ಬಂದು ನಿಂತರು. ಆಗ ಸೀತೆಯು ಆ ದೇವತೆಗಳ ಮಧ್ಯದಲ್ಲಿ ಎದ್ದು ನಿಂತುಕೊಂಡು ವಿಶಾಲವಾದ ವಕ್ಷಸ್ಥಳವುಳ್ಳ ಶ್ರೀರಾಮನನ್ನು ಕುರಿತು 'ಆರ್ಯಪುತ್ರನೆ, ನಾನು ನಿನ್ನ ವಿಷಯದಲ್ಲಿ ದ್ರೋಹವನ್ನು ಎಣಿಸಿದವಳಲ್ಲ. ಸಕಲಸ್ತ್ರೀಪುರುಷರ ವರ್ತನವೂ ನಿನಗೆ ತಿಳಿದೇ ಇರುವದು. ಆದರೆ ನಾನೊಂದು ಮಾತನ್ನು ವಿಜ್ಞಾಪಿಸಿಕೊಳ್ಳುವೆನು. ಅದನ್ನು ಲಾಲಿಸು. ನಾನು ನಿನ್ನ ವಿಷಯದಲ್ಲಿ ಪಾಪಾಚರಣೆಯನ್ನು ಮಾಡಿದ್ದಪಕ್ಷದಲ್ಲಿ ಸಕಲ ಪ್ರಾಣಿಗಳ ಶರೀರದಲ್ಲೂ ಇರತಕ್ಕ ವಾಯುವೂ ಅಗ್ನಿಯೂ ಜಲವೂ ಭೂಮಿಯೂ ಆಕಾಶವೂ ಸಹ ನನ್ನ ಪ್ರಾಣವನ್ನು ಅಪಹರಿಸಿಬಿಡಲಿ. ಸ್ವಪ್ನದಲ್ಲಾದರೂ ನಾನು ಶೂರನಾದ ನೀನು ಹೊರತು ಮತ್ತೊಬ್ಬ ಪುರುಷನನ್ನು ಚಿಂತಿಸಿದ್ದಪಕ್ಷದಲ್ಲಿ ಈಗಲೇ ನನ್ನ ಪ್ರಾಣಗಳು ನಷ್ಟವಾಗಿ ಹೋಗಲಿ' ಎಂದು ಮೊರೆಯಿಟ್ಟಳು. ಆ ವೇಳೆಯಲ್ಲಿ ಸಕಲಕಪಿಗಳಿಗೂ ಸಂತೋಷಕರವಾಗಿಯೂ ಪುಣ್ಯಾತ್ಮವಾಗಿಯೂ ಇರುವ ಒಂದು ಆಕಾಶವಾಣಿಯು ಎಲ್ಲಾ ದಿಕ್ಕುಗಳಿಗೂ ಕೇಳಬಂತು. ಅದೇನೆಂದರೆ 'ಎಲೈ ರಾಮಚಂದ್ರನೆ, ನಾನು ವಾಯುವು. ಸೀತಾದೇವಿಯು ಪಾಪರಹಿತಳು. ಆಕೆಯನ್ನು ನೀನು ಸ್ವೀಕರಿಸು. ಆಕೆಯು ನುಡಿದ ಮಾತು ಸತ್ಯವು' ಎಂದು ಆಕಾಶದಲ್ಲಿ ಶಬ್ದವಾಗಲು ; ಅಗ್ನಿಯು 'ಎಲೈ ರಘುನಂದನನೆ, ನಾನು ಸಕಲಪ್ರಾಣಿಗಳಲ್ಲೂ ಇರತಕ್ಕವನು. ನಿನ್ನ ವಿಷಯದಲ್ಲಿ ಸೀತೆಯು ಸ್ವಲ್ಪವಾದರೂ ಅಪರಾಧವನ್ನು ಮಾಡಿದವಳಲ್ಲ. ಆಕೆಯನ್ನು ನೀನು ಪರಿಗ್ರಹಿಸು' ಎಂದನು ; ವರುಣನು 'ಎಲೈ ರಘುಕುಲೋತ್ತಮನೆ, ನನ್ನ ದೆಸೆಯಿಂದ ಸಕಲ ಪ್ರಾಣಿಗಳ ಶರೀರದಲ್ಲೂ ರಸಗಳು ಉತ್ಪನ್ನವಾಗುವವು. ನಾನು ನಿನಗೆ ಹೇಳುತ್ತೇನೆ. ಸೀತೆಯು ಪರಿಶುದ್ಧಳಾದವಳು. ಈಕೆಯನ್ನು ನೀನು ಪರಿಗ್ರಹಿಸು' ಎಂದನು. ಬಳಿಕ ಬ್ರಹ್ಮನು 'ಎಲೈ ಮಗುವೆ, ಸಾಧುವೂ ರಾಜರ್ಷಿಧರ್ಮವನ್ನು ಬಲ್ಲವನೂ ಆದ ನೀನು ಸೀತೆಯನ್ನು ಕುರಿತು ಈ ಮಾತನ್ನು ಆಡಿದ್ದೇನೂ ಆಶ್ಚರ್ಯವಲ್ಲ. ಆದರೆ ನನ್ನ ಮಾತನ್ನು ಕೇಳು. ನನ್ನ ವರದಿಂದ ಸಕಲರಾದ ದೇವತೆಗಳಿಗೂ ಋಷಿಗಳಿಗೂ ಯಕ್ಷರಿಗೂ ದಾನವರಿಗೂ ಅವಧ್ಯನಾಗಿದ್ದ ರಾವಣನು ಲೋಕಕಂಟಕನಾಗಿದ್ದನು. ಆ ಪಾಪಾತ್ಮನನ್ನು ಸಂಹರಿಸುವದಕ್ಕೆ ಯಾವದೋ ಒಂದು ಕಾರಣದಿಂದ ಕೆಲವುಕಾಲ ಉಪೇಕ್ಷಿಸಿದ್ದಾಯಿತು. ಆ ಪಾಪಾತ್ಮನು ತನ್ನ ನಾಶಕ್ಕೋಸ್ಕರಲೇ ಸೀತೆಯನ್ನು ಅಪಹರಿಸಿದನು. ಪೂರ್ವದಲ್ಲಿ

ನಳಕೂಬರನು—ಬಲಾತ್ಕಾರದಿಂದ ಪರಸ್ತ್ರೀಯರನ್ನು ನೀನು ಅಪೇಕ್ಷಿಸಿದ್ದೇ ಆದರೆ ನಿನ್ನ ಶಿರಸ್ಸು ನೂರುಭಾಗ ವಾಗಿ ಬಿಡೆದುಹೋಗಲಿ—ಎಂದು ದುರಾತ್ಮನಾದ ಆ ರಾವಣನಿಗೆ ಶಾಪವನ್ನು ಕೊಟ್ಟಿದ್ದನು. ಅದರಿಂದ ಸೀತೆಯು ರಕ್ಷಿತಳಾಗಿದ್ದಳು. ಈಕೆಯು ವಿಷಯದಲ್ಲಿ ನೀನು ಯಾವದನ್ನೂ ಶಂಕಿಸಬೇಡ. ನಿಶ್ಶಂಕನಾಗಿ ನೀನು ಈಕೆ ಯನ್ನು ಪರಿಗ್ರಹಿಸು. ನೀನು ಮಹತ್ತಾದ ದೇವತೆಗಳ ಕಾರ್ಯವನ್ನು ನೆರವೇರಿಸಿದೆ' ಎಂದು ನುಡಿದನು. ತರು ವಾಯ ದಶರಥರಾಯನು 'ಎಲೈ ಮಗನೆ, ನಿನ್ನನ್ನು ನೋಡಿ ನನಗೆ ತುಂಬಾ ಸಂತೋಷವುಂಟಾಯಿತು. ನಿನಗೆ ನಾನು ತಂದೆಯಾದ ದಶರಥರಾಯನು. ಸೀತೆಯ ವೃತ್ತಾಂತವನ್ನು ನಾನು ಚೆನ್ನಾಗಿ ಬಲ್ಲೆನು. ಸೀತೆಯೊಡನೆ ನೀನು ಸುಖವಾಗಿ ಅಯೋಧ್ಯಾನಗರಕ್ಕೆ ಹೋಗಿ ರಾಜ್ಯಭಾರವನ್ನು ಮಾಡು' ಎನಲು, ರಾಮನು 'ಎಲೈ ಪೂ ಜ್ಯನೆ, ನೀನು ನನಗೆ ತಂದೆಯಾಗಿದ್ದ ಪಕ್ಷದಲ್ಲಿ ನಿನಗೆ ನಾನು ವಂದನೆಯನ್ನು ಮಾಡುವೆನು. ನಿನ್ನ ಅಪ್ಪಣೆಯಾ ದಂತೆ ಅಯೋಧ್ಯಾನಗರಕ್ಕೂ ಹೋಗುವೆನು' ಎಂದನು. ಆ ಮಾತನ್ನು ಕೇಳಿ ದಶರಥರಾಯನು ಅಧಿಕವಾದ ಸಂತೋಷದಿಂದ ಕಮಲಾಕ್ಷನಾದ ರಾಮನನ್ನು ನೋಡಿ 'ಎಲೈ ರಾಮನೆ, ಇಲ್ಲಿಗೆ ಸಂಪೂರ್ಣವಾಗಿ ಹದಿನಾಲ್ಕು ವರ್ಷಗಳಾದವು. ಇನ್ನು ನೀನು ಅಯೋಧ್ಯಾಪಟ್ಟಣಕ್ಕೆ ಪ್ರಯಾಣವನ್ನು ಬೆಳಸು' ಎನಲು, ಬಳಿಕ ರಾಮನು ಸಕಲ ದೇವತೆಗಳಿಗೂ ನಮಸ್ಕಾರವನ್ನು ಮಾಡಿ, ಶಚೀದೇವಿಯೊಡಗೂಡಿದ ಇಂದ್ರನಂತೆ ಸೀತೆಯಿಂದೊಡಗೂಡಿ, ಸಂತೋಷದಿಂದ ಸುಗ್ರೀವಾದಿಗಳನ್ನು ಜೊತೆಯಲ್ಲಿ ಕರೆದುಕೊಂಡು, ಅವಿಂಧ್ಯನೆಂಬ ರಾಕ್ಷಸನಿಗೆ ವರವನ್ನು ಕೊಟ್ಟು, ತ್ರಿಜಟೆಯೆಂಬ ರಾಕ್ಷಸಸ್ತ್ರೀಗೆ ಸನ್ಮಾನವನ್ನು ಮಾಡಿದನು. ಬಳಿಕ ಇಂದ್ರಾದಿಗಳೊಡಗೂಡಿದ ಬ್ರಹ್ಮನು ರಾಮ ನನ್ನು ಕುರಿತು 'ಎಲೈ ಕೌಸಲ್ಯಾಪುತ್ರನಾದ ರಾಮನೆ, ನಿನಗೆ ಏನುವರಬೇಕೋ ಬೇಡು, ಕೊಡುತ್ತೇನೆ' ಎನಲು, ರಾಮನು ಬ್ರಹ್ಮನನ್ನು ಕುರಿತು 'ಎಲೈ ಮಹಾನುಭಾವನೆ, ಯಾವಾಗಲೂ ನನಗೆ ಧರ್ಮದಲ್ಲಿ ಬುದ್ಧಿಯು ಸ್ಥಿರವಾಗಿರುವಂತೆಯೂ ಶತ್ರುಜಯವಾಗುವಂತೆಯೂ ರಾಕ್ಷಸರಿಂದ ಹತರಾದ ಕಪಿಗಳು ಬದುಕುವಂತೆ ಯೂ ನನಗೆ ನೀನು ವರವನ್ನು ಕೊಡು' ಎಂದು ಪ್ರಾರ್ಥಿಸಿದನು. ಬ್ರಹ್ಮನು ಹಾಗೆಯೇ ಆಗಲೆಂದು ವರ ವನ್ನು ಕೊಡಲು, ಯುದ್ಧದಲ್ಲಿ ಹತರಾಗಿದ್ದ ಕಪಿಗಳೆಲ್ಲರೂ ನಿದ್ರೆಯಿಂದ ಎಚ್ಚತ್ತಂತೆ ಪ್ರಾಣಸಹಿತರಾಗಿ ಎದ್ದ ರು. ಆಗ ಸೀತೆಯು ಮಹಾಸಮರ್ಥನಾದ ಹನುಮಂತನನ್ನು ನೋಡಿ 'ಎಲೈ ಹನುಮಂತನೆ, ರಾಮಕೀರ್ತನ ದಿಂದಲೇ ನೀನು ಜೀವಿಸು. ನನ್ನ ಅನುಗ್ರಹದಿಂದ ನಿನಗೆ ದಿವ್ಯವಾದ ಸಕಲಭೋಗಗಳೂ ಉಂಟಾಗಲಿ' ಎಂದು ವರವನ್ನು ಕೊಟ್ಟಳು. ಇಂಥ ಸಂಭ್ರಮವನ್ನು ಕಪಿನಾಯಕರೆಲ್ಲರೂ ನೋಡುತ್ತಿರಲು, ಬ್ರಹ್ಮಾದಿ ಸಕಲ ದೇವತೆಗಳೂ ಅಂತರ್ಧಾನವನ್ನು ಹೊಂದಿದರು. ಬಳಿಕ ಮಾತಲಿಯು ಸುಗ್ರೀವಾದಿಮಿತ್ರರ ಮಧ್ಯದಲ್ಲಿ ಸೀತಾಸಮೇತನಾಗಿರುವ ಶ್ರೀರಾಮನನ್ನು ನೋಡಿ 'ಎಲೈ ಸತ್ಯಪರಾಕ್ರಮನಾದ ದಾಶರಥಿಯೆ, ದೇವಾಸುರಮನುಷ್ಯ ಗಂಧರ್ವಯಕ್ಷನಾಗಕಿನ್ನರರಿಗೆ ಉಂಟಾಗಿದ್ದ ಮಹತ್ತಾದ ದುಃಖವನ್ನು ನೀನು ಹೋಗಲಾಡಿಸಿದೆ. ದೇವತೆಗಳೂ ದಾನವರೂ ಗಂಧರ್ವರೂ ಯಕ್ಷರೂ ರಾಕ್ಷಸರೂ ಪನ್ನಗರೂ ಮನುಷ್ಯರೂ ಸಹ ಈ ಭೂಮಿ ಇರುವ ವರೆಗೂ ನಿನ್ನನ್ನು ಹೊಗಳುವರು' ಎಂದು ನುಡಿದು, ಪ್ರತಾಪಶಾಲಿಯಾದ ರಾಮನ ಅಪ್ಪಣೆಯನ್ನು ತೆಗೆದುಕೊಂಡು ಆತ ನಿಗೆ ವಂದನೆಯನ್ನು ಮಾಡಿ, ಸೂರ್ಯನಂತೆ ಪ್ರಕಾಶಮಾನವಾದ ಆ ದಿವ್ಯರಥದೊಡನೆ ಹೊರಟುಹೋದನು.

ಬಳಿಕ ಶ್ರೀರಾಮನು ವಿಭೀಷಣನನ್ನು ಮುಂದಿಟ್ಟುಕೊಂಡು ಲಂಕಾಪಟ್ಟಣದ ರಕ್ಷಣೆಗೆ ತಕ್ಕವರನ್ನು ನೇಮಿಸಿ, ಗಗನದಲ್ಲಿ ಸಂಚರಿಸತಕ್ಕದ್ದಾಗಿಯೂ ಕಾಮಚಾರಿಯಾಗಿಯೂ ಪ್ರಕಾಶಮಾನವಾಗಿಯೂ ಇರುವ ಪುಷ್ಪಕ ವಿಮಾನವನ್ನು, ಸೀತೆಯನ್ನು ಮುಂದೆಮಾಡಿಕೊಂಡು ಲಕ್ಷ್ಮಣನೊಡನೆಯೂ ಸುಗ್ರೀವ ಮೊದಲಾದ ಸಮಸ್ತ ಕಪಿ ಗಳೊಡನೆಯೂ ಏರಿ, ಅದರಿಂದ ಸೇತುಮಾರ್ಗವಾಗಿ ಹೊರಟು ಸಮುದ್ರವನ್ನು ದಾಟಿ, ಪೂರ್ವದಲ್ಲಿ ತಾನು ಯಾವ ಸ್ಥಳದಲ್ಲಿ ಸಮುದ್ರನನ್ನು ಪ್ರಾರ್ಥಿಸುವದಕ್ಕಾಗಿ ಶಯನಮಾಡಿದ್ದನೋ ಅದೇ ಸ್ಥಳದಲ್ಲಿ ಇಳಿದುಕೊಂಡು, ಆ ದಿವಸ ಅಲ್ಲಿ ವಾಸಮಾಡಿ, ಬಳಿಕ ಆ ಕಾಲದಲ್ಲಿ ತನಗೆ ಸಹಾಯಾರ್ಥವಾಗಿ ಬಂದಿದ್ದ ಕಪಿಸೇನೆಗಳಿಗೆಲ್ಲಾ ಅವರವರ ಮಾನಾನು ಗುಣವಾಗಿ ಅನೇಕ ರತ್ನಗಳಿಂದ ಸನ್ಮಾನವನ್ನು ಮಾಡಿ ಅವರೆಲ್ಲರನ್ನೂ ಅವರವರ ಸ್ಥಾನಗಳಿಗೆ ಕಳುಹಿಸಿಕೊ

ಟ್ಟನು. ಆ ಕಪಿಸೇನೆಗಳೆಲ್ಲಾ ತಮ್ಮತಮ್ಮ ಸ್ಥಾನಗಳಿಗೆ ಪ್ರಯಾಣಮಾಡಲು, ಆ ಬಳಿಕ ಶ್ರೀರಾಮನು ಲಕ್ಷ್ಮಣ ಸುಗ್ರೀವ ವಿಭೀಷಣರೊಡನೆಯೂ ಪೂಜ್ಯಳಾದ ಸೀತಾದೇವಿಯೊಡನೆಯೂ ಪುನಃ ಆ ವಿಮಾನವನ್ನೇರಿ ಆಯಾ ವನಪ್ರದೇಶಗಳನ್ನು ಸೀತಾದೇವಿಗೆ ತೋರಿಸುತ್ತ ಕಿಷ್ಕಿಂಧಾನಗರಕ್ಕೆ ಹೋಗಿ ಅಲ್ಲಿ ಅಂಗದನಿಗೆ ಯೌವರಾಜ್ಯಾಭಿಷೇಕವನ್ನು ಮಾಡಿ, ಅವರೆಲ್ಲರಿಂದಲೂ ಕೂಡಿ ಮೊದಲು ತಾನು ಬಂದ ಮಾರ್ಗದಿಂದಲೇ ಅಯೋಧ್ಯಾನಗರದ ಸಮೀಪಕ್ಕೆ ಹೋಗಿ, ತಾನು ಬರತಕ್ಕ ಸಮಾಚಾರವನ್ನು ಭರತನಿಗೆ ತಿಳಿಸುವದಕ್ಕಾಗಿ ಆಂಜನೇಯನನ್ನು ಮುಂದೆ ಕಳುಹಿಸಿಕೊಟ್ಟನು. ಆಂಜನೇಯನು ಆಕ್ಷಣ ಹಾರಿಹೋಗಿ ಆ ಸಮಾಚಾರವನ್ನು ಭರತನಿಗೆ ತಿಳುಹಿಸಿ ಪುನಃ ರಾಮನ ಸನ್ನಿಧಿಗೆ ಬರಲು, ಶ್ರೀರಾಮನು ನಂದಿಗ್ರಾಮವನ್ನು ಹೊಕ್ಕು, ಅಲ್ಲಿ ನಾರುಮುಡಿಯನ್ನುಟ್ಟುಕೊಂಡು ಮಲಿನವಾದ ಶರೀರವುಳ್ಳವನಾಗಿ ಪಾದುಕೆಗಳನ್ನು ಮುಂದಿಟ್ಟುಕೊಂಡು ಪೀಠದಲ್ಲಿ ಕುಳಿತಿದ್ದ ಭರತನನ್ನು ಕಂಡನು. ಬಳಿಕ ಭರತನೂ ಶತ್ರುಘ್ನನೂ ಸಹ ಎದುರುಗೊಂಡುಬಂದು ಭಕ್ತಿಯಿಂದ ಕರೆದುಕೊಂಡು ಹೋಗಲು, ರಾಮನು ಲಕ್ಷ್ಮಣನೊಡನೆ ಅಧಿಕವಾಗಿ ಸಂತೋಷಪಟ್ಟನು. ಆಗ ಶ್ರೀರಾಮನೊಡಗೂಡಿ ಭರತಶತ್ರುಘ್ನರು ಪೂಜ್ಯಳಾದ ಸೀತಾದೇವಿಯ ದರ್ಶನವನ್ನು ಮಾಡಿ ಬಹಳವಾಗಿ ಸಂತೋಷಪಟ್ಟರು. ಬಳಿಕ ಭರತನು ಅಧಿಕವಾದ ಸಂತೋಷದಿಂದ ಯುಕ್ತನಾಗಿ ತನ್ನಲ್ಲಿ ನ್ಯಾಸಭೂತವಾಗಿಟ್ಟಿದ್ದ ರಾಜ್ಯವನ್ನು ಸತ್ಕಾರಪೂರ್ವಕವಾಗಿ ಶ್ರೀರಾಮನಿಗೆ ಒಪ್ಪಿಸಿದನು. ಬಳಿಕ ವಸಿಷ್ಠವಾಮದೇವರಿಬ್ಬರೂ ವಿಷ್ಣುದೇವತಾಕವಾದ ಶ್ರವಣನಕ್ಷತ್ರದಿಂದ ಕೂಡಿದ ಶುಭದಿವಸದಲ್ಲಿ ಶ್ರೀರಾಮನಿಗೆ ಪಟ್ಟಾಭಿಷೇಕೋತ್ಸವವನ್ನು ಬೆಳಸಿದರು. ಆ ಬಳಿಕ ಶ್ರೀರಾಮನು ಕಪಿರಾಜನಾದ ಸುಗ್ರೀವನನ್ನೂ ರಾಕ್ಷಸಾಧಿಪನಾದ ವಿಭೀಷಣನನ್ನೂ ತನ್ನ ಮಿತ್ರಜನರನ್ನೂ ಸಹ ನಾನಾಪ್ರಕಾರವಾದ ಭೋ[illegible] ಸತ್ಕರಿಸಿ ಅವರವರ ರಾಜ್ಯಕ್ಕೆ ಹೋಗುವಂತೆ ಅವರಿಗೆ ಅಪ್ಪಣೆಯನ್ನು ಕೊಟ್ಟ[illegible] ಸುಗ್ರೀವವಿಭೀಷಣರು ಶ್ರೀರಾಮನನ್ನು ಬಿಟ್ಟು ಹೋಗಲಾರದೆ ದುಃಖಿಸುತ್ತ ತಮ್ಮತಮ್ಮ ಸ್ಥಳಕ್ಕೆ ಹೋದರು. ಅನಂತರ ಶ್ರೀರಾಮಚಂದ್ರನು ಪುಷ್ಪಕವಿಮಾನವನ್ನು ಪೂಜಿಸಿ ಅದನ್ನು ಕುಬೇರನಿಗೆ ಸಂತೋಷದಿಂದ ಕೊಟ್ಟುಬಿಟ್ಟು, ವಸಿಷ್ಠಾದಿ ಋಷಿಗಳಿಂದಲೂ [illegible] ಕೂಡಿ ಗೋಮತೀನದಿಯ ಸಮೀಪದಲ್ಲಿ ಅತಿಶಯವಾದ ಅನ್ನದಾನದಿಂದ ಸಕಲರಿಗೂ ಶ್ಲಾಘನೀಯವಾದ [illegible] ಅಶ್ವಮೇಧಯಾಗಗಳನ್ನು ಮಾಡಿದನು" ಎಂದು ಮಾರ್ಕಂಡೇಯನು ಧರ್ಮರಾಯನಿಗೆ ಹೇಳಿದನಷ್ಟೆ.

## ೨೯೨ನೇ ಅಧ್ಯಾಯ.—ಮಾರ್ಕಂಡೇಯನಿಂದ ಧರ್ಮರಾಯನ ದುಃಖಶಮನ.

ಅನಂತರದಲ್ಲಿ ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಪುನಃ ಮಾರ್ಕಂಡೇಯನು ಧರ್ಮರಾಯನನ್ನು ಕುರಿತು "ಎಲೈ ಮಹಾರಾಜನೆ, ಅಪರಿಮಿತವಾದ ಪರಾಕ್ರಮವುಳ್ಳ ಶ್ರೀರಾಮನು ಪೂರ್ವದಲ್ಲಿ ವನವಾಸಮಾಡುತ್ತ ಈ ಪ್ರಕಾರ ಮಹತ್ತಾದ ವ್ಯಸನವನ್ನು ಹೊಂದಿದನು. ನೀನು ಕ್ಷತ್ರಿಯನು, ಪ್ರತ್ಯಕ್ಷವಾದ ಫಲವನ್ನು ಸಂಪಾದಿಸತಕ್ಕ ಬಾಹುಪರಾಕ್ರಮವನ್ನು ಆಶ್ರಯಿಸಿರತಕ್ಕವನು. ನಿನ್ನಲ್ಲಿ ಸ್ವಲ್ಪವೂ ದೋಷವು ಕಾಣಿಸುವದಿಲ್ಲ. ದೇವತೆಗಳೂ ಸಹ ಇದೇ ಮಾರ್ಗವನ್ನು ಆಶ್ರಯಿಸಿರುವರು. ವಜ್ರಪಾಣಿಯಾದ ಇಂದ್ರನು ದೇವತೆಗಳೊಡಗೂಡಿ ಸ್ವಬಾಹುಪರಾಕ್ರಮದಿಂದಲೇ ವೃತ್ರನಮುಚಿ ಮೊದಲಾದ ದೈತ್ಯರನ್ನು ಸಂಹಾರಮಾಡಿದನು. ಸಹಾಯವುಳ್ಳವರಿಗೆ ಸಕಲೇಷ್ಟವೂ ಸಿದ್ಧಿಸುವದು. ಎಲೈ ಧರ್ಮರಾಯನೆ, ಧನುರ್ಧರಾಗ್ರೇಸರನಾದ ಅರ್ಜುನನೂ ಬಲಿಷ್ಠರಲ್ಲಿ ಅಗ್ರಗಣ್ಯನಾದ ಭೀಮಸೇನನೂ ಶೂರರಾದ ನಕುಲಸಹದೇವರೂ ನಿನಗೆ ಸಹಾಯರಾಗಿರಲು, ನೀನು ಯಾತಕ್ಕೆ ವಿಷಾದಪಡುವೆ? ಭೀಮಾದಿಗಳು ದೇವೇಂದ್ರನ ಸೈನ್ಯವನ್ನಾದರೂ ಜಯಿಸುವರು. ಇಂಥ ಶೂರರಾದ ತಮ್ಮಂದಿರ ಸಹಾಯದಿಂದ ನೀನು ಯುದ್ಧರಂಗದಲ್ಲಿ ಸಕಲಶತ್ರುಗಳನ್ನು ಸಂಹರಿಸುವೆ. ಇನ್ನು ವ್ಯಸನವನ್ನು ಬಿಡು. ದುರಾತ್ಮನಾದ ಸೈಂಧವನು ದ್ರೌಪದಿಯನ್ನು ಅಪಹರಿಸಲು, ಶೂರರಾದ ಭೀಮಾದಿಗಳು ಯುದ್ಧರಂಗದಲ್ಲಿ ದುಷ್ಕರವಾದ ಕರ್ಮವನ್ನು ಮಾಡಿ ಆ

ಸೈಂಧವನನ್ನು ಜಯಿಸಿ ದ್ರೌಪದಿಯನ್ನು ಬಿಡಿಸಿಕೊಂಡು ಬಂದರು. ಅವರ ಪರಾಕ್ರಮವನ್ನು ನೀನೇ ನೋಡಿ ರುವೆ. ಸಹಾಯವಿಲ್ಲದ ರಾಮನು ಭಯಂಕರನಾದ ರಾವಣನನ್ನು ಸಂಹರಿಸಿ, ಸೀತೆಯನ್ನು ಬಿಡಿಸಿಕೊಂಡು ಬರು ವದಕ್ಕಾಗಿ ಆ ಸಮಯದಲ್ಲಿ ಮೃಗಜಾತಿಯಲ್ಲಿ ಹುಟ್ಟಿದ ಕಪಿಗಳೂ ಕರಡಿಗಳೂ ಕೊಂಡಮುಸಗಗಳೂ ಸಹ ಆತ ನಿಗೆ ಮಿತ್ರರಾಗಿರಲಿಲ್ಲವೆ? ಇದನ್ನು ನೀನು ಯೋಚಿಸು. ದೈವಗತಿಯು ಪ್ರತ್ಯೇಕವಾಗಿರುವದು. ಅದ್ದರಿಂದ ನೀನು ವ್ಯಥೆಪಡಬೇಡ. ನಿನ್ನಂಥ ಜ್ಞಾನಿಗಳಾದವರು ಎಂದಿಗಾದರೂ ದುಃಖಪಡುವರೆ?" ಎಂದು ಸಮಾಧಾನ ಮಾಡಲು, ಧರ್ಮರಾಯನು ದುಃಖವನ್ನು ಬಿಟ್ಟು ಸಮಾಧಾನವನ್ನು ಹೊಂದಿದನು.

---

### ೨೯೧—(..)ನೇ ಅಧ್ಯಾಯ.—ಹರಿಶ್ಚಂದ್ರೋಪಾಖ್ಯಾನ—(ವಸಿಷ್ಠವಿಶ್ವಾಮಿತ್ರರು ಪ್ರತಿಜ್ಞೆ ಮಾಡುವಿಕೆ.)

ಅನಂತರದಲ್ಲಿ ವೈಶಂಪಾಯನಮುನೀಂದ್ರನು ಜನಮೇಜಯರಾಯನನ್ನು ಕುರಿತು ಇಂತೆಂದನು—ಕೇಳು ಜನಮೇಜಯರಾಯನೆ, ಧರ್ಮರಾಯನು ಮಾರ್ಕಂಡೇಯಮುನೀಂದ್ರನಿಂದ ಶ್ರೀರಾಮಭದ್ರನ ಚರಿತ್ರಗಳನ್ನು [illegible] ಋಷೀಶ್ವರನನ್ನು ಕುರಿತು "ಎಲೈ ಮಾರ್ಕಂಡೇಯನೆ, ಇಕ್ಷ್ವಾಕುವಂಶೋತ್ಪನ್ನನಾದ ಹರಿ ಶ್ಚಂದ್ರಮಹಾರಾಜನು [illegible] ಸತ್ಯವಾದಿಯೆಂದೂ ಶ್ರೇಷ್ಠವಾದ ವ್ರತನಿಯಮವುಳ್ಳವನೆಂದೂ, ರಾಜಾಧಿ ರಾಜನೆಂದೂ [illegible] ನಾನು ಬಹುಪ್ರಕಾರವಾಗಿ ಕೇಳಿದೇನೆ. ಧರ್ಮಾತ್ಮನಾದ [illegible] ವಿಶ್ವಾಮಿತ್ರಮುನಿಯಿಂದ ಯಾವ ಪ್ರಕಾರವಾಗಿ [illegible] ಯನ್ನೂ ಪ್ರಿಯನಾದ ಪುತ್ರನನ್ನೂ ಹ್ಯಾಗೆ ಅಗ ಲಿದನು? [illegible] ಯಾವ ಪ್ರಕಾರ [illegible] ಆ ಭಗವಂತನಾದ ವಸಿಷ್ಠನು [illegible] ಯನ್ನು ಮಾಡಿದನು! ಎಲೈ ಮಾರ್ಕಂ ಡೇಯನೆ, [illegible] ಸರ್ವಲೋಕಗಳಿಗೂ [illegible] ಯೂ ಕಿವಿಗಿಂಪಾಗಿಯೂ [illegible] ಈ ಉಪಾಖ್ಯಾನವನ್ನು ನನಗೆ [illegible] ನಿರೂಪಿಸಬೇಕು" [illegible] ಮಾತನ್ನು ಕೇಳಿ ಮಾರ್ಕಂಡೇಯನು "ಎಲೈ ಧರ್ಮರಾಯನೆ, [illegible]ವಾಗಿಯೂ, ಕೀರ್ತಿಕರವಾಗಿಯೂ, ಆಯುಷ್ಯಾಭಿವೃದ್ಧಿಕರವಾಗಿಯೂ, ಸರ್ವಪಾಪಪರಿಹಾರಕವಾಗಿಯೂ, [illegible]ಮವಾಗಿಯೂ ಇರುವ ಈ ಉಪಾಖ್ಯಾನವನ್ನು ಸಮಗ್ರವಾಗಿ ಹೇಳುತ್ತೇನೆ ಕೇಳು. ಈ ಉಪಾಖ್ಯಾನವನ್ನು ಕೇಳುವವರು ಬ್ರಹ್ಮಹತ್ಯಾದಿ ಪಾಪಗಳಿಂದ [illegible]ವರು. ರಾಜಾಧಿರಾಜ ನಾದ ಹರಿಶ್ಚಂದ್ರರಾಯನು ಎರಡನೆಯ ಬ್ರಹ್ಮನಂತೆ ಧರ್ಮದಿಂದ ರಾಜ್ಯಪರಿಪಾಲನವನ್ನು ಮಾಡುತ್ತಿರಲಾಗಿ, ಆತನ ಪ್ರಭಾವದಿಂದ ದೇವಲೋಕವೂ ಕೂಡ ಭಯಪಡುತ್ತಿತ್ತು. [illegible]ದಿನ ಸ್ವರ್ಗಲೋಕದಲ್ಲಿ ಸರ್ವಕಾಮಪ್ರ ದವಾಗಿಯೂ ದಿವ್ಯವಾಗಿಯೂ ಇರತಕ್ಕ ದೇವೇಂದ್ರನ ಸಭೆಯನ್ನು ಷಡೃತುಗಳೂ ಕೂಡ [illegible]ವನ್ನು ಧರಿಸಿ ಉಪಾಸನೆ ಮಾಡುತ್ತಿದ್ದವು; ಆ ಸಭೆಯಲ್ಲಿ ಸುಖಸ್ಪರ್ಶವುಳ್ಳದ್ದಾಗಿಯೂ ಶೀತಳವಾಗಿಯೂ ಇರುವ [illegible]ವುಳ್ಳ ಯುಕ್ತವಾದ ಮಂದಮಾರುತವು ಬೀಸುತ್ತಿತ್ತು. ಆಗ ಅಲ್ಲಿ ಕೂತಿರುವ ಬ್ರಹ್ಮರ್ಷಿಗಳೂ, ದೇವರ್ಷಿಗಳೂ, ಸಮಸ್ತ ದೇವತೆಗಳೂ ಸಹ ಪರಸ್ಪರವಾಗಿ ಪ್ರಸ್ತಾಪಗಳನ್ನು ಮಾಡುವ ಕಾಲದಲ್ಲಿ, ಅನ್ಯೋನ್ಯವಾಗಿ ವಿವಾದವುಂಟಾಯಿತು. ಸಮಸ್ತ ಭೂಪತಿಗಳ ಗುಣವರ್ಣನರೂಪವಾದ ಕಥೆಯು ಸಭಿಕರಿಂದ ವರ್ಣಿಸಲ್ಪಡುತ್ತಿರುವ ಸಮಯದಲ್ಲಿ, ಸಮಸ್ತ ದೇವತೆಗಳೂ ಹರಿಶ್ಚಂದ್ರರಾಯನನ್ನೇ 'ಶೌರ್ಯೌದಾರ್ಯ[illegible]ಧರ್ಮ[illegible] ಮೊ ದಲಾದ ಸರ್ವಗುಣಗಳಿಂದಲೂ ಸರ್ವೋತ್ತಮನೆಂದು ಹೊಗಳಿದರು. ಆ ದೇವತೆಗಳ ಮಾತನ್ನು ಕೇಳಿ ಆ ಸಭೆ ಯಲ್ಲಿದ್ದ ವಿಶ್ವಾಮಿತ್ರಋಷಿಯು ಕೋಪವುಳ್ಳವನಾಗಿ ಆ ಹರಿಶ್ಚಂದ್ರನ ಗುಣಗಳನ್ನು ಸಹಿಸದೆ [illegible] 'ಎಲೈ ದೇವತೆಗಳಿರಾ, ನಾನು ಐದುಕೋಟಿ ಸಂವತ್ಸರಗಳಿಂದಲೂ ಮಹಾತಪಸ್ಸನ್ನು ಮಾಡಿ ಸಮಸ್ತ ಭೂಮಂ ಡಲವನ್ನೂ ಹುಡುಕಿ ನೋಡಿದೇನೆ. ಸತ್ಯವಾದಿಯಾದ ಅರಸು ಎಲ್ಲಿಯೂ ಇಲ್ಲ' ಎಂದು ಹೇಳಿದನು. ಆ

ಮಾತನ್ನು ಕೇಳಿ ವಸಿಷ್ಠಋಷೀಶ್ವರನು ಆ ಇಂದ್ರಸಭೆಯಲ್ಲಿ ನಿಂದು, ಮಹಾತ್ಮನಾದ ಹರಿಶ್ಚಂದ್ರರಾಯನ ಧರ್ಮದಿಂದ ಕೂಡಿದ ಸಕಲಗುಣಗಳನ್ನೂ ವರ್ಣಿಸಲುಪಕ್ರಮಿಸಿ ‘ ಎಲೈ ದೇವತೆಗಳಿರಾ, ಇಂದ್ರಾದಿಲೋಕಪಾಲಕರಿಗೆ ಸಮಾನನೂ, ಸತ್ಯಸಂಧನೂ, ಮಹಾತ್ಮನೂ, ಮಹಾಕೀರ್ತಿಶಾಲಿಯೂ ಆದ ಹರಿಶ್ಚಂದ್ರಮಹಾರಾಯನು ಈ ಸಮಸ್ತ ಭೂಮಂಡಲವನ್ನೂ ರಕ್ಷಿಸುತ್ತಿದಾನೆ. ಸಪ್ತದ್ವೀಪಗಳಿಂದಲೂ ಸಪ್ತಸಮುದ್ರಗಳಿಂದಲೂ ಕೂಡಿರುವ ಈ ಭೂಮಂಡಲವನ್ನೂ, ಬ್ರಹ್ಮ ಕ್ಷತ್ರಿಯ ವೈಶ್ಯ ಶೂದ್ರರೂಪವಾದ ಚತುರ್ವರ್ಣಸಮುದಾಯವನ್ನೂ, ಧರ್ಮವನ್ನೇ ಮುಖ್ಯವಾಗಿ ಮಾಡಿಕೊಂಡು, ರಕ್ಷಿಸುತ್ತಿದಾನೆ. ಆ ಹರಿಶ್ಚಂದ್ರನು ಧರ್ಮಾತ್ಮನೂ, ದೂರದೃಷ್ಟಿಯುಳ್ಳವನೂ, ಸತ್ಯವಾಕ್ಕುಳ್ಳವನೂ, ಜಿತೇಂದ್ರಿಯನೂ ಆಗಿರುವನು. ವಾಯುವಾದಾಗ್ಯೂ ಕದಾಚಿತ್ತು ಸ್ವಸ್ಥಾನದಿಂದ ಚಲಿಸದೆ ಇದ್ದಸ್ಥಳದಲ್ಲಿಯೇ ಇದ್ದರೂ, ಅಗ್ನಿಯೂ ಕೂಡ ತನ್ನ ಔಷ್ಣ್ಯವನ್ನು ಬಿಟ್ಟು ಶೀತಳವಾದ ಸ್ಪರ್ಶವುಳ್ಳವನಾದರೂ, ಹಿಮವತ್ಪರ್ವತವೇ ಸ್ವಸ್ಥಾನವನ್ನು ಬಿಟ್ಟು ಅನ್ಯತ್ರ ಸಂಚರಿಸಿದರೂ, ತ್ರಿಶಂಕುರಾಯನ ಪುತ್ರನಾದ ಹರಿಶ್ಚಂದ್ರರಾಯನು ಸಮಸ್ತ ಧರ್ಮಗಳನ್ನೂ ಬಿಡುವನಲ್ಲ. ಆ ಹರಿಶ್ಚಂದ್ರನು ವೇದೋಕ್ತಸದಾಚಾರಸಂಪನ್ನನು, ಸತ್ಯವಾದಿಯು, ಸರ್ವಗುಣಸಂಪನ್ನನು ; ಯೋಗಗಳಲ್ಲಿ ಆಸಕ್ತವಾದ ಚಿತ್ತವುಳ್ಳವನಾದಾಗ್ಯೂ, ಜಿತೇಂದ್ರಿಯನು ; ಸತ್ಯದಲ್ಲೇ ಮುಖ್ಯವಾದ ದೃಷ್ಟಿಯುಳ್ಳವನು ’ ಎಂದು ಆ ರಾಯನ ಗುಣಗಳನ್ನು ವರ್ಣಿಸಿದನು. ಈ ಪ್ರಕಾರ ವಸಿಷ್ಠಋಷಿ ಹೇಳಿದ ಮಾತನ್ನು ಕೇಳಿ ವಿಶ್ವಾಮಿತ್ರಋಷಿಯು ಅತ್ಯಂತಕೋಪವುಳ್ಳವನಾಗಿ, ನೇತ್ರಗಳನ್ನು ಕೆಂಪಗೆಮಾಡಿಕೊಂಡು, ‘ ಎಲೈ ವಸಿಷ್ಠಋಷಿಯೆ, ಲೋಕದಲ್ಲಿ ರಾಜ್ಯಭೋಗಯುಕ್ತನಾದ ಪುರುಷನು ಯಾವನಾದರೂ ಸತ್ಯವಾಕ್ಯನ್ನು ನುಡಿದಿದ್ದಾನೆಯೆ ? ಯಾವನು ಸತ್ಯವನ್ನು [illegible]ವಿಲ್ಲ ? ಹೀಗಿರುವಲ್ಲಿ ಗುಣಗಳನ್ನೇ ವರ್ಣಿಸುವ ನಿನ್ನ ವಚನದಲ್ಲಿ ನನಗೆ ನಂಬುಗೆ ಹೇಗೆ ಹುಟ್ಟುವದು. ಹರಿಶ್ಚಂದ್ರನು ಮಹಾಸತ್ಯವಂತನೆಂದು ಹೇಳುತ್ತೀಯೆ. ಆತನನ್ನು ಸತ್ಯರಹಿತನನ್ನಾಗಿಯೂ ಧರ್ಮರಹಿತನನ್ನಾಗಿಯೂ ನಾನು ಮಾಡಿದರೆ ಆಗ ನೀನು ಏನು ಮಾಡುತ್ತಿ ? ಇಂದ್ರನ ಸನ್ನಿಧಿಯಲ್ಲಿ ಆ ಅರ್ಥವನ್ನು ಹೇಳು ’ ಎಂದನು. ಆ ಮಾತನ್ನು ಕೇಳಿ ವಸಿಷ್ಠಋಷಿಯು ವಿಶ್ವಾಮಿತ್ರಋಷಿಯನ್ನು ಕುರಿತು ‘ ಎಲೈ ವಿಶ್ವಾಮಿತ್ರನೆ, ಹರಿಶ್ಚಂದ್ರನು ಮಹಾವ್ಯಸನಯುಕ್ತನಾದರೂ, ರಾಜ್ಯಾಧಿಪತ್ಯಸಂಪತ್ತಿನಿಂದ ಕೂಡಿದ್ದರೂ, ಸ್ವಪ್ನದಲ್ಲಿಯೂ ಕೂಡ ಅಸತ್ಯವನ್ನು ಹೇಳುವದಿಲ್ಲ. ಸಮಸ್ತಋಷಿಗಳೂ ಇಂದ್ರಾದಿದೇವತೆಗಳೂ ಎಲ್ಲರೂ ಕೇಳಲಿ. ನನ್ನಿಂದಮಾಡಲ್ಪಡುವ ದುಷ್ಕರವಾದ ಪ್ರತಿಜ್ಞೆಯನ್ನು ಅಶೇಷರು ಕೇಳಲಿ : ನಾನು ಸತ್ಯವಾಗಿ ಹೇಳುತ್ತೇನೆ. ಹರಿಶ್ಚಂದ್ರನು ಅಸತ್ಯವನ್ನು ನುಡಿದರೆ ನಾನು ಶಿಖಾಯಜ್ಞೋಪವೀತಗಳನ್ನು ವಿಸರ್ಜಿಸಿ, ವೇದಮಾರ್ಗವನ್ನು ಪರಿತ್ಯಜಿಸಿ, ದಿಗಂಬರನಾಗಿ ದಕ್ಷಿಣದಿಙ್ಮುಖನಾಗಿ ಕಪಾಲದಲ್ಲಿ ಮದ್ಯವನ್ನು ಪಾನಮಾಡುತ್ತೇನೆ ’ ಎಂದು ಪ್ರತಿಜ್ಞೆಯನ್ನು ಮಾಡಿದನು. ಆ ಪ್ರತಿಜ್ಞೆಯನ್ನು ಕೇಳಿ ಇಂದ್ರಾದಿದೇವತೆಗಳು ಭಯಪಟ್ಟರು. ಆ ಸಭೆಯಲ್ಲಿ ಹಾಹಾಕಾರವು ಮಹತ್ತಾಗಿ ಉಂಟಾಯಿತು. ಅನಂತರದಲ್ಲಿ ಶತ್ರುಸಂಹಾರಕನೂ ಮಹಾತೇಜಸ್ವಿಯೂ ಆದ ದೇವೇಂದ್ರನು ವಿಶ್ವಾಮಿತ್ರಋಷಿಯನ್ನು ಕುರಿತು ‘ ಎಲೈ ವಿಶ್ವಾಮಿತ್ರಋಷಿಯೆ, ವಸಿಷ್ಠರ ವಾಕ್ಯವನ್ನು ಕೇಳಿದೆಯಲ್ಲ. ನೀನು ಏನು ಹೇಳುತ್ತೀಯೆ ? ’ ಎಂದನು. ಅದಕ್ಕೆ ವಿಶ್ವಾಮಿತ್ರಋಷಿಯು ಯಾವ ಪ್ರಕಾರದಿಂದಲಾದರೂ ಕ್ಷುದ್ರೋಪದ್ರವಗಳಿಂದ ಹರಿಶ್ಚಂದ್ರನನ್ನು ಮಹತ್ತಾದ ಶೋಕಸಮುದ್ರದಲ್ಲಿ ಮುಳುಗಿಸುತ್ತೇನೆ. ಸರ್ವಪ್ರಕಾರದಿಂದಲೂ ಅಸತ್ಯವನ್ನು ನುಡಿಯದಿದ್ದರೆ, ನಿರ್ವಾಹವಿಲ್ಲದ ರೀತಿಯಲ್ಲಿ ಮಹತ್ತಾದ ವಿಪತ್ತನ್ನುಂಟುಮಾಡಿ ಬಹಳ ಶ್ರಮೆಗೆ ಪಾತ್ರನನ್ನಾಗಿ ಮಾಡುತ್ತೇನೆ. ಹಾಗಾದರೂ ಹರಿಶ್ಚಂದ್ರನು ಅನೃತವನ್ನಾಡದೆ ನಿರ್ವಹಿಸಿಕೊಂಡರೆ, ಆಗ ನಾನು ನನ್ನಿಂದ ಆಚರಿಸಲ್ಪಟ್ಟ ತಪಸ್ಸನ್ನು ಆತನಿಗೆ ಕೊಟ್ಟು, ಕಲ್ಪಾಂತಪರ್ಯಂತವೂ ಆತನಿಗೆ ಸ್ವರ್ಗವಾಸವುಂಟಾಗುವಂತೆ ಅನುಗ್ರಮಾಡುತ್ತೇನೆ. ಈ ಅರ್ಥದಲ್ಲಿ ಸಂದೇಹವಿಲ್ಲ ’ ಎಂದು ನುಡಿದು, ತನ್ನ ಆಶ್ರಮಕ್ಕೆ ತೆರಳಿದನು ” ಎಂದು ಮಾರ್ಕಂಡೇಯನು ಧರ್ಮರಾಯನಿಗೆ ಹೇಳಿದನು.

೨೯೧-(೨) ನೇ ಅಧ್ಯಾಯು.-ಹರಿಶ್ಚಂದ್ರೋಪಾಖ್ಯಾನ.-(ಹರಿಶ್ಚಂದ್ರನು ವಿಶ್ವಾಮಿತ್ರರ ಆಶ್ರಮಕ್ಕೆ ಪ್ರವೇಶಿಸುವಿಕೆ).

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು-ಕೇಳು ಜನಮೇಜಯರಾಯನೆ, ಮಾರ್ಕಂಡೇಯನು ಧರ್ಮರಾಯನನ್ನು ಕುರಿತು "ಕೇಳು ಧರ್ಮರಾಯನೆ, ಅನಂತರದಲ್ಲಿ ವಸಿಷ್ಠಋಷೀಶ್ವರನು ಸಭೆಯಿಂದ ಹೊರಟುಬಂದು, ಅಯೋಧ್ಯಾಪಟ್ಟಣಕ್ಕೆ ತೆರಳಿಹೋಗಿ, ಹರಿಶ್ಚಂದ್ರಮಹಾರಾಯನನ್ನು ಕಂಡು ಆತನಿಂದ ಮಾಡಲ್ಪಟ್ಟ ಸತ್ಕಾರವನ್ನು ಪರಿಗ್ರಹಿಸಿ, ಅನಂತರದಲ್ಲಿ ದೇವಸಭೆಯಲ್ಲಿ ನಡೆದ ವೃತ್ತಾಂತವನ್ನೆಲ್ಲ ಆತನಿಗೆ ಶೃತಪಡಿಸಿ, ಆತನನ್ನು ಕುರಿತು 'ಎಲೈ ಮಹಾರಾಜನಾದ ಹರಿಶ್ಚಂದ್ರನೆ, ನೀನು ವಿಶ್ವಾಮಿತ್ರಋಷಿಯ ಆಶ್ರಮಕ್ಕೆ ಹೋಗಬೇಡ. ಆ ವಿಶ್ವಾಮಿತ್ರನು ನಿನ್ನಲ್ಲಿ ಅತ್ಯಂತ ಶತ್ರುಭಾವವನ್ನೇ ಮಾಡುತ್ತಾನೆ. ಸರ್ವಪ್ರಕಾರದಿಂದಲೂ ಸತ್ಯವನ್ನು ತಪ್ಪದಿರುವಂತೆ ಜಾಗರೂಕನಾಗಿರು' ಎಂದು ತಿಳಿಸಿದನು. ವಸಿಷ್ಠಋಷಿಯು ನುಡಿದ ಅರ್ಥವನ್ನು ಕೇಳಿ ಮಹಾಬುದ್ಧಿಶಾಲಿಯಾದ ಹರಿಶ್ಚಂದ್ರನು ಆ ಋಷಿಯನ್ನು ಕುರಿತು 'ನನಗೆ ನೀವೇ ಪಿತೃಗಳು, ನೀವೇ ಬಂಧುಗಳು, ನೀವೇ ಮಿತ್ರರು, ನೀವೇ ಧನವು, ನೀವೇ ಮುಖ್ಯಗುರುಗಳು. ನಿಮ್ಮ ಅನುಗ್ರಹದಿಂದಲೇ ನಾನು ಸತ್ಯವೆಂಬ ಕೀರ್ತಿಗೆ ಪಾತ್ರನಾಗಬೇಕು. ನಿಮ್ಮ ಆಜ್ಞೆಯನ್ನು ಉಲ್ಲಂಘಿಸಿದರೆ ನನಗೆ ಇಹಪರಸೌಖ್ಯಗಳು ಹೇಗುಂಟಾಗುವವು? ಸರ್ವಥಾ ತಮ್ಮ ಆಜ್ಞೆಯನ್ನು ಉಲ್ಲಂಘಿಸುವದಿಲ್ಲ' ಎಂದು ಆ ವಸಿಷ್ಠಋಷಿಗೆ ನಮಸ್ಕರಿಸಿ ವಿಜ್ಞಾಪನೆಯನ್ನು ಮಾಡಿಕೊಂಡನು. ಬಳಿಕ ವಸಿಷ್ಠಋಷಿಯು ಆಶ್ರಮಕ್ಕೆ ತೆರಳಿದನು.

ಅನಂತರದಲ್ಲಿ ಆ ಅಯೋಧ್ಯಾಧಿಪತಿಯೂ, ಮಹಾಪರಾಕ್ರಮಶಾಲಿಯೂ, ಸಮಸ್ತ ಭೂಮಂಡಲಾಧಿಪತಿಯೂ, ಶ್ರೀಮಂತನೂ ಆದ ಹರಿಶ್ಚಂದ್ರರಾಯನು ಧರ್ಮದಿಂದ ಪ್ರಜಾಪಾಲನೆಯನ್ನು ಮಾಡುತ್ತಿರಲಾಗಿ; ವ್ಯಾಘ್ರವೇ ಮೊದಲಾದ ದುಷ್ಟಮೃಗಗಳು ಅರಣ್ಯದಲ್ಲಿ ಹೆಚ್ಚಿ, ಪ್ರಜೆಗಳೆಲ್ಲರೂ ಆ ದುಷ್ಟಮೃಗಗಳ ಬಾಧೆಯನ್ನು ಸಹಿಸಲಾರದೆ ಹರಿಶ್ಚಂದ್ರರಾಯನ ಬಳಿಗೆ ಬಂದು 'ಎಲೈ ಮಹಾರಾಜನೆ, ರಾಷ್ಟ್ರದಲ್ಲಿ ದುಷ್ಟಮೃಗಗಳು ಹೆಚ್ಚಿ, ಮಹಾವ್ಯಾಘ್ರಗಳೇ ಮುಂತಾದವುಗಳು ಬಂದು ಸಂಚರಿಸುತ್ತಾ ಜನರನ್ನು ಭಕ್ಷಿಸುತ್ತಲಿವೆ. ವರ್ತಕರ ಸಂಚಾರವು ನಿಂತುಹೋಯಿತು. ಅದರಿಂದ ಅರಮನೆಗೆ ಬರತಕ್ಕ ಸುಂಕಗಳು ಬರುವದಿಲ್ಲ. ಸಿಂಹಗಳ ಭಯದಿಂದ ಕಾಡಾನೆಗಳು ಓಡಿಬಂದು ಗ್ರಾಮಗಳ ಸಮೀಪದಲ್ಲಿರುವ ತೋಟಗಳಲ್ಲಿ ಅಡಿಕೆ, ತೆಂಗು, ಹಲಸು, ಮಾವು, ನೇರಳೆ, ಬಾಳೆ ಮುಂತಾದ ವೃಕ್ಷಗಳನ್ನು ಮುರಿದುಹಾಕಿ ಗದ್ದೆ ಬೆದ್ದಲುಗಳನ್ನು ಸಹ ತುಳಿದು ಪೈರುಗಳನ್ನು ನಿಶ್ಶೇಷಮಾಡುತ್ತಲಿವೆ. ಕಿರುಬಗಳು ಮನೆಗಳಲ್ಲಿ ಬಂದು ರಾತ್ರಿವೇಳೆಗಳಲ್ಲಿ ಕರುವುಗಳನ್ನೂ, ಕಡಸುಗಳನ್ನೂ, ಗೋವುಗಳನ್ನೂ ಸಂಹರಿಸಿ ಹೋಗುತ್ತಲಿವೆ. ತೋಳಗಳು ಕುರಿಗಳ ಹಿಂಡಿಗೆ ಬಂದು ಕುರಿಗಳನ್ನೂ, ಆಡುಗಳನ್ನೂ ಸಂಹರಿಸುತ್ತಲಿವೆ. ಹಂದಿಗಳು, ಕರಡಿಗಳು, ವ್ಯಾಘ್ರಗಳು ಮುಂತಾದ ದುಷ್ಟಮೃಗಗಳು ಪ್ರಜೆಗಳಿಗೆ ಉಪದ್ರವವನ್ನು ಮಾಡುತ್ತಲಿವೆ' ಎಂದು ಮೊರೆಯಿಟ್ಟರು. ಆ ವಾಕ್ಯವನ್ನು ಕೇಳಿ, ಹರಿಶ್ಚಂದ್ರನು ಪ್ರಜಾರಕ್ಷಣೆಗೋಸ್ಕರ ದುಷ್ಟಮೃಗಗಳ ಉಪದ್ರವಶಾಂತ್ಯರ್ಥವಾಗಿ ಅರಣ್ಯಕ್ಕೆ ಬೇಟೆಗೆ ತೆರಳಿದನು. ಸುವರ್ಣಮಯಗಳಾದ ಕಿರುಘಂಟೆಗಳ ಸರಗಳಿಂದ ಅಲಂಕೃತವಾಗಿಯೂ ಸಹಸ್ರಸಂಖ್ಯಾತಗಳಾದ ಉತ್ತಮಾಶ್ವಗಳಿಂದ ಯುಕ್ತವಾಗಿಯೂ, ವ್ಯಾಘ್ರಚರ್ಮದಿಂದ ಅಲಂಕರಿಸಲ್ಪಟ್ಟದ್ದಾಗಿಯೂ, ರತ್ನಗಳಿಂದಲೂ ಸುವರ್ಣಗಳಿಂದಲೂ ವಿಚಿತ್ರವಾದ ಕಾಂತಿಯುಳ್ಳದ್ದಾಗಿಯೂ, ಖಡ್ಗಗಳು ಗುರಾಣಿಗಳು ಪಾಶಗಳು ಶೂಲಗಳು ಧನುಸ್ಸುಗಳು ಬಾಣಗಳು ಗದೆಗಳು ಶಕ್ತಿಗಳು ಭಿಂಡಿವಾಲಗಳು ಕುಂತಗಳು ಮುದ್ಗರಗಳು ಪ್ರಾಸಗಳು ಕಠಾರಿಗಳು ಮೊದಲಾದ ಸಕಲಾಯುಧಗಳಿಂದಲೂ ಪೂರ್ಣವಾಗಿಯೂ ಇರುವ ಉತ್ತಮವಾದ ರಥವನ್ನಾರೋಹಣವನ್ನು ಮಾಡಿ; ಅತಿ ಪ್ರೇಮಾಸ್ಪದೆಯಾಗಿಯೂ ಮಹಾಪತಿವ್ರತೆಯಾಗಿಯೂ ಲೋಕೋತ್ತರ ಸೌಂದರ್ಯವತಿಯಾಗಿಯೂ ಇರುವ ಪತ್ನಿಯಾದ ಚಂದ್ರಮತಿಯನ್ನೂ, ಸರ್ವಲಕ್ಷಣ ಸಂಪನ್ನನಾಗಿಯೂ ಸುಂದರನಾಗಿಯೂ ಅತಿ ಪ್ರೀತಿಕರನಾಗಿಯೂ ಬಾಲಕನಾಗಿಯೂ ಇರುವ ಲೋಕಮಿತ್ರನೆಂಬ ಹೆಸರುಳ್ಳ ಪುತ್ರನನ್ನೂ, ಮಹಾಬುದ್ಧಿಶಾಲಿಯಾಗಿಯೂ ವಿಚಕ್ಷಣನಾಗಿಯೂ ಇರುವ ಸತ್ಯಕೀರ್ತಿಯೆಂಬ ನಾಮಧೇಯವುಳ್ಳ ಮಂತ್ರಿಯನ್ನೂ ಸಹ ರಥದಮೇಲೆ ಕುಳ್ಳಿರಿಸಿಕೊಂಡು; ಮಹತ್ತಾದ ಧನುಸ್ಸನ್ನು

ಧರಿಸಿ ಮೃಗಬಾಧಾಪರಿಹರಾರ್ಥವಾಗಿ ಅರಣ್ಯವನ್ನು ಪ್ರವೇಶಿಸಿದನು. ಆನೆಗಳೂ, ಕುದುರೆಗಳೂ, ರಥಗಳೂ, ಭಟರುಗಳೂ ಸನ್ನಾಹಯುಕ್ತರಾಗಿ ಸಂಗಡಲೆ ಹೊರಟುಬರಲು ; ಅನೇಕ ಪರಿವಾರಜನರು ಭೇರಿಗಳು, ದುಂದುಭಿಗಳು, ಕಹಳೆಗಳು ಮುಂತಾದ ವಾದ್ಯಧ್ವನಿಗಳಿಂದ ಸಮಸ್ತ ದಿಕ್ಕುಗಳನ್ನು ತುಂಬುತ್ತಾ ಹೊರಟರು. ಈ ರೀತಿಯಾಗಿ ಹರಿಶ್ಚಂದ್ರರಾಯನು ಸೇನಾಸಮೇತನಾಗಿ ತೆರಳಿ ಅರಣ್ಯವನ್ನು ಪ್ರವೇಶಿಸಿ ಅಲ್ಲಿರುವ ಸಿಂಹಗಳನ್ನೂ, ವ್ಯಾಘ್ರಗಳನ್ನೂ, ಕಿರಬಗಳನ್ನೂ, ತೋಳಗಳನ್ನೂ, ಕಾಡುಹಂದಿಗಳನ್ನೂ, ಖಡ್ಗಮೃಗಗಳನ್ನೂ, ಇನ್ನೂ ತೀಕ್ಷ್ಣಗಳಾದ ನಖದಂಷ್ಟ್ರಗಳುಳ್ಳ ದುಷ್ಟಮೃಗಗಳನ್ನೂ, ಪ್ರಾಣಿಗಳಿಗೆ ಉಪದ್ರವಕಾರಿಗಳಾದ ಎಲ್ಲಾ ಮೃಗಗಳನ್ನೂ ಸಹಮೂಲವಾಗಿ ಸಂಹರಿಸಿ, ಪತ್ನೀಪುತ್ರಮಂತ್ರಿಗಳೊಡನೆ ಕೂಡಿ ವಿಸ್ತಾರಗಳಾದ ವನಗಳಲ್ಲಿ ಸಂಚರಿಸುತ್ತಲಿದ್ದನು. ಆ ವನದಲ್ಲಿಯೇ ವಿಶ್ವಾಮಿತ್ರಋಷಿಯ ಆಶ್ರಮವು ಇದ್ದಕಾರಣ, ಆ ವಿಶ್ವಾಮಿತ್ರಋಷಿಯು ಈ ಹರಿಶ್ಚಂದ್ರಮಹಾರಾಯನ ರಥಘೋಷವನ್ನೂ ಭೇರಿಗಳ ಧ್ವನಿಯನ್ನೂ ಸಹ ಕೇಳಿ, ಆ ರಾಯನು ಅಲ್ಲಿಗೆ ಬಂದನೆಂದು ತಿಳಿದು ಅಧಿಕವಾದ ಸಂತೋಷವನ್ನು ಹೊಂದಿ, ಆತನನ್ನು ಆಕರ್ಷಣೆಮಾಡುವದಕ್ಕೋಸ್ಕರ ಉಪಾಯವನ್ನಾಲೋಚಿಸಿ, ಸುವರ್ಣಮಯವಾದ ಅತ್ಯಾಶ್ಚರ್ಯಕರವಾದ ರೂಪವುಳ್ಳ ಒಂದು ಮೃಗವನ್ನು ಮಾಯೆಯಿಂದ ನಿರ್ಮಾಣಮಾಡಿ, ಆ ರಾಯನ ದೃಷ್ಟಿಗೆ ಗೋಚರವಾಗಿ ಸಂಚರಿಸುವಂತೆ ಮಾಡಿದನು. ಆಗ ಆ ಮಾಯಾಮೃಗವನ್ನು ನೋಡಿ ಬುದ್ಧಿಶಾಲಿಯಾದ ಸತ್ಕೀರ್ತಿಯೆಂಬ ಮಂತ್ರಿಯು ಅರಸನನ್ನು ಕುರಿತು 'ಎಲೈ ಮಹಾರಾಜನೆ, ಕ್ರೂರವಾದ ಈ ಮೃಗವು ನಿನಗೆ ಎದುರಾಗಿ ಬರುತ್ತಿದೆ. ಇದು ಮಾಯಾಕಲ್ಪಿತವಾದದ್ದು. ಅದರ ಪ್ರಸಕ್ತಿಗೆ ಹೋಗಬೇಡ' ಎಂದು ಹೇಳಿದನು. ಆದರೂ ಹರಿಶ್ಚಂದ್ರನು ಆ ಮೃಗವನ್ನು ಹಿಡಿಯಬೇಕೆಂದು ಧನುಸ್ಸಿನಲ್ಲಿ ಬಾಣವನ್ನು ಸಂಧಾನಮಾಡಿ ಅದನ್ನು ಅಟ್ಟಿಕೊಂಡು ಹೊರಟನು. ಆ ಮೃಗವು ಕಪಟದಿಂದ ಕೈಗೆ ಸಿಕ್ಕುವಂತೆ ನಟಿಸುತ್ತಾ, ಪುನಃ ದೂರಕ್ಕೆ ಹೋಗುತ್ತಾ, ವಿಶ್ವಾಮಿತ್ರಾಶ್ರಮದ ಸಮೀಪಕ್ಕೆ ಅರಸನನ್ನು ಆಕರ್ಷಿಸಿಕೊಂಡು ಬಂತು. ಆ ರಾಜನಾದರೋ ಮೃಗದಮೇಲೆಯೇ ನಟ್ಟ ದೃಷ್ಟಿಯುಳ್ಳವನಾಗಿ ಹೊರಟು ಆ ಮಹರ್ಷಿಯ ಆಶ್ರಮಕ್ಕೆ ಬಂದನು" ಎಂದು ಮಾರ್ಕಂಡೇಯನು ಧರ್ಮರಾಯನಿಗೆ ಹೇಳಿದನು.

---

೨೯೧–(೩)ನೇ ಅಧ್ಯಾಯ.—ಹರಿಶ್ಚಂದ್ರೋಪಾಖ್ಯಾನ—(ಹರಿಶ್ಚಂದ್ರರಾಯನಿಗೆ ದುಸ್ಸ್ವಪ್ನವಾಗುವಿಕೆ.)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಆ ಬಳಿಕ ಮಾರ್ಕಂಡೇಯನು ಧರ್ಮರಾಯನನ್ನು ಕುರಿತು "ಕೇಳು ಧರ್ಮರಾಯನೆ, ಈ ಪ್ರಕಾರ ಹರಿಶ್ಚಂದ್ರನು ಸರ್ವಪ್ರಾಣಿಗಳಿಂದಲೂ ಪೂರ್ಣವಾಗಿಯೂ ಮನೋಹರಗಳಾದ ಲತೆಗಳಿಂದ ಯುಕ್ತವಾಗಿಯೂ ಪುಣ್ಯವೃಕ್ಷಸಮುದಾಯದಿಂದ ಶೋಭಿತವಾಗಿಯೂ ಇರುವ ದಿವ್ಯವಾದ ವಿಶ್ವಾಮಿತ್ರಾಶ್ರಮವನ್ನು ನೋಡಿ ಆಶ್ಚರ್ಯಯುಕ್ತನಾಗಿ, 'ಮನಸ್ಸಿಗೆ ಆಹ್ಲಾದಕರೋತ್ಕೃಷ್ಟವಾದ ಈ ಆಶ್ರಮವು ಯಾವ ಮಹರ್ಷೀಶ್ವರನದೋ ! ಈ ಆಶ್ರಮವನ್ನು ನೋಡಿದ ಮಾತ್ರದಿಂದಲೇ ನನಗೆ ಕ್ಷುತ್ಪಿಪಾಸೆಗಳೂ ಶ್ರಮವೂ ಸಹ ಶಾಂತವಾಗುತ್ತಿವೆ. ಆನೆಗಳ ಮರಿಗಳು ಹೆಣ್ಣುಸಿಂಹಗಳ ಸ್ತನ್ಯವನ್ನು ನಿರ್ಭಯವಾಗಿ ಪಾನಮಾಡುತ್ತಾ ಸೊಂಡಿಲುಗಳನ್ನು ಆ ಸಿಂಹಗಳ ಸ್ತನಗಳ ಮೇಲೆ ಇಟ್ಟುಕೊಂಡು ಮಲಗಿರುತ್ತವೆ. ಬೆಕ್ಕುಗಳೂ ಇಲಿಗಳೂ ಪರಸ್ಪರವಾಗಿ ನೆಕ್ಕುತ್ತಲಿವೆ. ನವಿಲುಗಳ ಸಮೀಪದಲ್ಲಿ ಸರ್ಪಗಳು ಹೆಡೆಗಳನ್ನು ಎತ್ತಿಕೊಂಡು ಸಂತೋಷವಾಗಿ ಆಡುತ್ತಲಿವೆ. ಈ ರೀತಿಯಾಗಿ ಪರಸ್ಪರದ್ವೇಷವನ್ನು ಬಿಟ್ಟು ಮಿತ್ರಭಾವದಿಂದ ಸಕಲಪ್ರಾಣಿಗಳೂ ಸುಖವಾಗಿ ವಾಸಮಾಡುತ್ತಲಿವೆ. ಇದು ಮಹಾಋಷಿಯ ಆಶ್ರಮವೇ ನಿಶ್ಚಯ' ಎಂದು ತಿಳಿದು ನುಡಿಯುತ್ತಾ ಧನುರ್ಬಾಣಗಳನ್ನು ರಥದಲ್ಲಿಯೇ ಇರಿಸಿ, ರಥದಿಂದಿಳಿದು, ಆನೆಗಳನ್ನೂ, ಕುದುರೆಗಳನ್ನೂ, ರಥಗಳನ್ನೂ, ಪದಾತಿಗಳನ್ನೂ ಸಹ ಆಶ್ರಮಕ್ಕೆ ದೂರವಾಗಿ ನಿಲ್ಲಿಸಿ, ವಿನಯಯುಕ್ತವಾದ ವೇಷವನ್ನು ಧರಿಸಿಕೊಂಡು ಭಯಭಕ್ತಿಯುಕ್ತನಾಗಿ, ಅಪೂರ್ವವಾದ ಆಶ್ರಮವನ್ನು ನೋಡ

ಲಿಕ್ಷೈಸಿ ಪ್ರವೇಶಮಾಡಿದನು. ಅಲ್ಲಿ ಸಂಚರಿಸುತ್ತಲಿರುವ ಜನರನ್ನು ಕುರಿತು ಹರಿಶ್ಚಂದ್ರರಾಯನು 'ಈ ಆಶ್ರಮವು ಯಾರದು ?' ಎಂದು ಕೇಳಿದನು. ಅವರು ಆ ಮಾತಿಗೆ 'ಇದು ವಿಶ್ವಾಮಿತ್ರಋಷಿಯ ಆಶ್ರಮವು' ಎಂದು ಹೇಳಿದರು. ಆಗ ಹರಿಶ್ಚಂದ್ರನು ಅತ್ಯಂತಭಯಪಟ್ಟು 'ಹಿತಚಿಂತಕನಾಗಿಯೂ ಮುಖ್ಯಗುರುವಾಗಿಯೂ ಕುಲದೈವವಾಗಿಯೂ ಇರುವ ವಸಿಷ್ಠಋಷೀಶ್ವರನು ವಿಶ್ವಾಮಿತ್ರಋಷಿಯ ಆಶ್ರಮಕ್ಕೆ ಹೋಗಬೇಡವೆಂದು ಬಹುಪ್ರಕಾರವಾಗಿ ನನಗೆ ಎಚ್ಚರಿಸಿದ್ದರೂ ನಾನು ದುರ್ಬುದ್ಧಿಯುಳ್ಳವನಾಗಿ ಗುರುವಾಕ್ಯವನ್ನುಲ್ಲಂಘಿಸಿ ಈ ಆಶ್ರಮವನ್ನು ಪ್ರವೇಶಿಸಿದೆನು. ವಿವೇಕಶೂನ್ಯನಾಗಿ ಗುರುವಾಕ್ಯವನ್ನುಲ್ಲಂಘಿಸಿದ ನಾನು ಇಹಪರಲೋಕಗಳನ್ನು ಕಳೆದುಕೊಂಡೆನು. ಯುಕ್ತಿವಂತರಾಗಿಯೂ ವಿದ್ವಾಂಸರಾಗಿಯೂ ಧರ್ಮಶಾಸ್ತ್ರಜ್ಞರಾಗಿಯೂ ಇರುವ ಮಹಾಪುರುಷರು ಮಹಾತ್ಮರಾದ ಗುರುಗಳ ವಾಕ್ಯವನ್ನು ಅತಿಕ್ರಮಿಸಿ ಮರ್ಯಾದೋಲ್ಲಂಘನವನ್ನು ಮಾಡುವದಿಲ್ಲ. ದೈವಬಲರಹಿತರಾದ ನಮ್ಮಂಥ ನಿರ್ಭಾಗ್ಯರೇ ನಿದ್ರಾಲಸ್ಯಪ್ರಮಾದಗಳಿಂದ ಮೋಹಿತರಾಗಿ, ಮರ್ಯಾದೋಲ್ಲಂಘನವನ್ನು ಮಾಡಿ, ಅಶುಭವಾದ ನರಕದಲ್ಲಿ ಬೀಳುತ್ತಾರೆ' ಎಂದು ನಾನಾಪ್ರಕಾರ ಚಿಂತಿಸುತ್ತಾ, ಮಂಗಳಕರವಾದ ಹಾಸಿಕೆಯಮೇಲೆ ಕುಳಿತುಕೊಂಡು ತನ್ನ ಪತ್ನಿಯಾದ ಚಂದ್ರಮತಿಯನ್ನು ಕುರಿತು 'ಎಲೈ ಶೋಭನಾಂಗಿಯೆ, ನಾನು ರಥವೇಗದಿಂದ ಶ್ರಾಂತನಾಗಿದೇನೆ. ಆದ್ದರಿಂದ ಅತ್ಯಂತಮೃದುವಾಗಿಯೂ ಮನಸ್ಸಿಗೆ ಸಂತೋಷಕರವಾಗಿಯೂ ಇರುವ ನಿನ್ನ ತೊಡೆಯಮೇಲೆ ಶಿರಸ್ಸನ್ನಿರಿಸಿಕೊಂಡು ಶಯನವನ್ನು ಮಾಡುತ್ತೇನೆ' ಎಂದು ಹೇಳಿ, ಅದೇ ರೀತಿಯಲ್ಲಿ ಚಂದ್ರಮತಿಯ ತೊಡೆಯಮೇಲೆ ಶಿರಸ್ಸಿಟ್ಟು, ಆಕೆಯ ಅಂಗಸ್ಪರ್ಶದಿಂದ ಪರವಶನಾಗಿ ನಿದ್ರೆಮಾಡಿದನು. ಆ ನಿದ್ರಾಕಾಲದಲ್ಲಿ ಆತನು ದುಸ್ಸ್ವಪ್ನವನ್ನು ಕಂಡು ಭಯದಿಂದ ಕಳವಳಿಸುತ್ತಾ, ಕನವರಿಸಿಕೊಳ್ಳುತ್ತಾ, ಎಚ್ಚತ್ತು ಏಳುವಾಗ ಶೋಕಬಾಷ್ಪವನ್ನು ಬಿಡುತ್ತಾ, ನಿದ್ರೆಯಿಂದುಂಟಾದ ಮಬ್ಬಿನಿಂದ 'ಎಲೈ ವಿಶ್ವಾಮಿತ್ರಋಷಿಯೆ, ನಾನು ನಿನ್ನ ಶಿಷ್ಯನು. ನನಗೆ ಶಾಪವನ್ನು ಕೊಡಬೇಡ' ಎಂದು ವಿನಯವಚನಗಳನ್ನು ಹೇಳುತ್ತಾಯಿದ್ದನು. ಆಗ ಚಂದ್ರಮತಿಯು ಬಾಷ್ಪಪೂರ್ಣನೇತ್ರಳಾದ ತನ್ನ ಪತಿಯನ್ನು ನೋಡಿ, ಮಹಾವಾಯುವು ಬೀಸಿದರೆ ಕದಳೀಸ್ತಂಭಗಳು ಎಂತು ನಡುಗುವವೋ ಅಂತು ಭಯದಿಂದ ನಡುಗುತ್ತ, ಖಿನ್ನಳಾಗಿ ಪತಿಯನ್ನು ಕುರಿತು 'ಎಲೈ ಪತಿಯೆ, ದೇವತೆಗಳಲ್ಲಿಯೂ ಮನುಷ್ಯರುಗಳಲ್ಲಿಯೂ ಸಹ ಶತ್ರುಬಾಧೆಯಿಂದ ಮಹಾಯುದ್ಧಾದಿವಿಪತ್ತುಗಳು ಬಂದರೂ, ಭೀತರಾಗಿಯೂ ಆರ್ತರಾಗಿಯೂ ಬಂದ ಜನರಿಗೆ ನೀನು ಅಭಯವನ್ನಿತ್ತು ಸಂರಕ್ಷಣೆಯನ್ನು ಮಾಡುವೆ. ಇಂಥವನಿಗೆ ಈ ಭಯ ಏನುಕಾರಣ ಬಂತು' ಎಂದು ನುಡಿದಳು. ಆ ವಾಕ್ಯವನ್ನು ಕೇಳಿ ಹರಿಶ್ಚಂದ್ರನು 'ಎಲೈ ಚಂದ್ರಮತಿಯೆ, ನಾನು ಭಯಂಕರವಾದ ಒಂದು ದುಸ್ಸ್ವಪ್ನವನ್ನು ಕಂಡೆನು. ಅದರಿಂದ ನನ್ನ ಹೃದಯವು ಭಯಪಟ್ಟು ಬಾರಿಬಾರಿಗೂ ನಡುಗುತ್ತಿದೆ. ಆ ಸ್ವಪ್ನದಲ್ಲಿ ನಡೆದ ವೃತ್ತಾಂತವನ್ನು ಕೇಳು. ಮಹಾತಪಸ್ವಿಯಾದ ಬ್ರಾಹ್ಮಣೋತ್ತಮನಾದ ವಿಶ್ವಾಮಿತ್ರಋಷಿಯು ನನ್ನ ಸಮೀಪಕ್ಕೆ ಅತಿಥಿಯಾಗಿ ಬಂದು, ಅಧಿಕವಾಗಿ ನನ್ನಲ್ಲಿ ಸುವರ್ಣದಕ್ಷಿಣೆಯನ್ನು ಯಾಚಿಸಿದನು. ಎಲೆ ಸುಕುಮಾರಾಂಗಿಯಾದ ಚಂದ್ರಮತಿಯೆ, ನಾನು ಆ ಸುವರ್ಣದಕ್ಷಿಣೆಯನ್ನು ಆತನಿಗೆ ಕೊಟ್ಟೆನು. ಆ ಮೇಲೆ ಮಹತ್ತಾದ ಸಿಡಿಲು ಬಂದು ಬಡಿದು ನಮ್ಮ ಅರಮನೆಯು ಮುರಿದು ಚೂರ್ಣವಾಗಿ ಭೂಮಿಯಲ್ಲಿ ಬಿತ್ತು. ನನ್ನ ಛತ್ರವು ಕೂಡ ಮುರಿದು ಬಿತ್ತು. ಕುಳಿತಿದ್ದ ಸಿಂಹಾಸನದ ದೆಸೆಯಿಂದ ನಾನು ಮುಗ್ಗರಿಸಿ ಬಿದ್ದೆನು. ಕಾಗೆಗಳು ನನ್ನ ವಕ್ಷಸ್ಥಲದಮೇಲೆ ಕುಳಿತುಕೊಂಡು ಕಠೋರವಾಗಿ ಕೂಗಿದವು. ಮಧ್ಯಾಹ್ನಕಾಲದ ಸೂರ್ಯನಂತೆ ಪ್ರಜ್ವಲಿಸುತ್ತಲಿರುವ ಕೊಳ್ಳಿಗಳು ಹತ್ತುದಿಕ್ಕುಗಳಲ್ಲಿಯೂ ಬಿದ್ದವು. ಎಲೈ ಕೃಶೋದರಿಯೆ, ಅನಂತರದಲ್ಲಿ ಸುವರ್ಣಮಯವಾಗಿಯೂ ಪ್ರಾಕಾರಕಾಂತಿಸಮೂಹವುಳ್ಳದ್ದಾಗಿಯೂ ಶೋಭಿಸುತ್ತಾ ರತ್ನಮಯವಾದ ನಾಲ್ಕು ಬಾಗಿಲುಗಳಿಂದಲೂ ತೋರಣಗಳಿಂದಲೂ ಮೇಲುಕಟ್ಟುಗಳಿಂದಲೂ ರಮ್ಯವಾದ ನಮ್ಮ ಪಟ್ಟಣದಲ್ಲಿ ವಾಯುವೂ ಸೂರ್ಯಚಂದ್ರರೂ ಇರುವ ಪರ್ಯಂತವು ಕಲ್ಪಾಂತಸ್ಥಾಯಿಗಳಾಗಿ ಸ್ಥಿರವಾಗಿದ್ದೆವು. ನಾನು ಈ ರೀತಿಯಾದ ಸ್ವಪ್ನವನ್ನುಕಂಡೆನು' ಎಂದು ಹೇಳಿದನು. ಪತಿಯ ವಾಕ್ಯವನ್ನು ಕೇಳಿ, ಚಂದ್ರಮತಿಯು 'ಎಲೈ ನಿರ್ದೋಷಿಯಾದಮಹಾರಾಜನೆ, ಈ ರೀತಿಯಲ್ಲಿ ನಿನ್ನಿಂದ ಕಾಣಲ್ಪಟ್ಟ ಸ್ವಪ್ನವು ಅರಿಷ್ಟಪ್ರದವಾದದ್ದೆಂದು ತೋರುತ್ತದೆ. ಮಹಾ ಘೋರವಾದ ವ್ಯಸನವೂ ನಮಗೆ ಬರುವಂತೆ ಕಾಣುತ್ತದೆ. ಎಲೈ ರಾಜೇಂದ್ರನೆ, ನೀನು ನನ್ನ

ತೊಡೆಯಮೇಲೆ ಮಲಗಿರುವ ಸಮಯದಲ್ಲಿ ದಿಕ್ಕುಗಳನ್ನೆಲ್ಲ ಬೆಳಗುತ್ತಾ ಅಂತರಿಕ್ಷದಿಂದ ಮಹತ್ತಾದ ಕೊಳ್ಳಿಗಳೂ ಭಯಂಕರಗಳಾದ ಸಿಡಿಲುಗಳೂ ಭೂಮಿಯಲ್ಲಿ ಬಿದ್ದವು. ಅಧಿಕವಾಗಿ ಭೂಕಂಪ ಉಂಟಾಯಿತು. ನಿನ್ನ ಜನ್ಮನಕ್ಷತ್ರದಲ್ಲಿ ಅಂಗಾರಕನು ವಕ್ರಿಸಿರುತ್ತಾನೆ. ಈ ದೈವಕೃತವಾದ ವಿಪರ್ಯಾಸವು ನಮಗೆ ಪ್ರಾಪ್ತವಾಗುವಂತೆ ತೋರುತ್ತಲಿದೆ. ಈ ದೈವಕೃತವಾದ ವಿಪತ್ತು ಜಪಗಳಿಂದಲೂ ದಾನಗಳಿಂದಲೂ ಹೋಮಗಳಿಂದಲೂ ದೇವತಾರಾಧನೆಗಳಿಂದಲೂ ಅತಿಥಿಸಂತರ್ಪಣೆಗಳಿಂದಲೂ ತಪಸ್ಸಿನಿಂದಲೂ ಶಾಂತವಾಗಬೇಕು. ಆದ್ದರಿಂದ ಈ ದೈವಕೃತಗಳಾದ ವಿಪತ್ತುಗಳನ್ನು ಪುರುಷಪ್ರಯತ್ನಗಳಿಂದ ಪರಿಹರಿಸಿಕೊ. ಅತಿಕ್ರಮಿಸಲಶಕ್ಯವಾದ ಈ ಸಂಸಾರದಲ್ಲಿ ಪ್ರಾಣಿಗಳಿಗೆ ವಿಪತ್ತುಗಳು ಬರುತ್ತಲೇ ಇರುತ್ತವೆ. ಆದಕಾರಣ ಮುಖ್ಯವಾಗಿ ಸತ್ಯವನ್ನೇ ಗುರುವಾಕ್ಯವನ್ನೇ ಣಿಸಿ ಪ್ರಮಾಣದಿಂದ ದಾನಗಳನ್ನೂ ಹೋಮಗಳನ್ನೂ ದೇವತಾತಿಥಿ ಪೂಜೆಗಳನ್ನೂ ಮಾಡು' ಎಂದು ಚಂದ್ರಮತಿಯು ನುಡಿದಳು" ಎಂದು ಮಾರ್ಕಂಡೇಯನು ಧರ್ಮರಾಯನಿಗೆ ಹೇಳಿದನು.

---

೨೯೧—(೪)ನೇ ಅಧ್ಯಾಯ.—ಹರಿಶ್ಚಂದ್ರೋಪಾಖ್ಯಾನ—(ಹರಿಶ್ಚಂದ್ರರಾಯನು ಚಂಡಾಲಸ್ತ್ರೀಯರನ್ನು ಶಿಕ್ಷಿಸುವಿಕೆ.)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯನೆ, ಮಾರ್ಕಂಡೇಯನು ಧರ್ಮರಾಯನನ್ನು ಕುರಿತು "ಎಲೈ ಧರ್ಮರಾಯನೆ, ಆ ಸಮಯದಲ್ಲಿ ಮಹಾತಪಸ್ವಿಯಾದ ವಿಶ್ವಾಮಿತ್ರಋಷಿಯು ತನ್ನ ಮಾಯಾಶಕ್ತಿಯಿಂದ ಈರ್ವರು ಚಂಡಾಲಜಾತಿ ಕನ್ಯೆಯರನ್ನು ನಿರ್ಮಾಣಮಾಡಿ, ಅತಿಸುಂದರಿಯರಾದ ಚಂಡಾಲವೇಷಧಾರಿಣಿಯರಾದ ಆ ಸ್ತ್ರೀಯರನ್ನು ಕುರಿತು 'ಎಲೈ ಸ್ತ್ರೀಯರುಗಳಿರಾ, ನೀವು ಇಲ್ಲಿಂದ ಹರಿಶ್ಚಂದ್ರನ ಸಮೀಪವನ್ನೈದಿ, ಆ ಹರಿಶ್ಚಂದ್ರನಿಗೆ ಹ್ಯಾಗೆ ಕೋಪವು ಬರಬೇಕೋ ಹಾಗೆ ಮಾಡಿ ಬನ್ನಿ' ಎಂದು ಆಜ್ಞಾಪಿಸಿದನು. ಅನಂತರದಲ್ಲಿ ಆ ಕನ್ಯೆಯರು ಹರಿಶ್ಚಂದ್ರನ ಸಮೀಪಕ್ಕೆ ಬಂದು, ಸಂತೋಷಕಾರವಾಗಿಯೂ ಗಂಧರ್ವಸ್ತ್ರೀಯರುಗಳ ಗಾನಕ್ಕಿಂತಲೂ ಅತಿಶಯವಾಗಿಯೂ ಗಾನಮಾಡಿದರು. ಆಮೇಲೆ ರಂಭಾದಿ ಅಪ್ಸರಸ್ತ್ರೀಯರುಗಳ ನಾಟ್ಯಕ್ಕಿಂತಲೂ ಮನೋಹರವಾಗಿ ಅದ್ಭುತವಾದ ನಾಟ್ಯವನ್ನು ಮಾಡಿ, ಹರಿಶ್ಚಂದ್ರನನ್ನು ಸಂತೋಷಪಡಿಸಿದರು. ಆ ಸ್ತ್ರೀಯರುಗಳ ಗಾನದಿಂದಲೂ ನಾಟ್ಯದಿಂದಲೂ ಅಭಿನಯದಿಂದಲೂ ಸಂತುಷ್ಟನಾಗಿ, ಹರಿಶ್ಚಂದ್ರನು ಆ ಸ್ತ್ರೀಯರುಗಳನ್ನು ಕುರಿತು 'ಎಲೈ ಸ್ತ್ರೀಯರುಗಳಿರಾ, ನೀವು ಉತ್ತಮವಾದ ವಿದ್ಯೆಯನ್ನು ಸಂಪಾದಿಸಿರುತ್ತೀರಿ. ವಿದ್ಯೆಯನ್ನು ನೋಡಿ ಸಂತೋಷವಾಯಿತು. ಆದರೆ ನಮ್ಮ ಶ್ವೇತಚ್ಛತ್ರವನ್ನೂ ಎರಡು ಚಾಮರಗಳನ್ನೂ ಈ ಮೂರು ವಸ್ತುಗಳನ್ನು ಹೊರತು ನೀವು ಏನೇನು ಕೇಳಿದಾಗ್ಯೂ ಕೊಡುತ್ತೇನೆ. ಬೇಕಾದದ್ದನ್ನು ಕೇಳಿಕೊಳ್ಳಿ' ಎಂದು ನುಡಿದನು. ಆ ವಾಕ್ಯವನ್ನು ಕೇಳಿ, ಆ ಸ್ತ್ರೀಯರುಗಳು 'ಎಲೈ ಹರಿಶ್ಚಂದ್ರಮಹಾರಾಜನೆ, ನೀನು ಜಗದ್ರಕ್ಷಕನು, ಸರ್ವಪ್ರಾಣಿಗಳಿಗೂ ಸುಖಪ್ರದನಾದವನು. ಸೂರ್ಯನ ಬಿಸಿಲಿನಿಂದ ಶ್ರಮಪಡುತ್ತಲಿರುವ ನಮ್ಮನ್ನು ರಕ್ಷಿಸು. ನವರತ್ನಮಯವಾಗಿಯೂ ಮುತ್ತುಗಳ ಕುಚ್ಚುಗಳಿಂದ ಅಲಂಕೃತವಾಗಿಯೂ ಇರುವ ಸುವರ್ಣಮಯವಾದ ದಂಡದಿಂದ ಪ್ರಕಾಶಿಸುವ ಈ ನಿನ್ನ ಶ್ವೇತಚ್ಛತ್ರವನ್ನು ನಮಗೆ ನೀನು ಕೊಡು. ಇಕ್ಷ್ವಾಕುವಂಶೋದ್ಭವನಾದ ಶ್ರೀಮಂತನಾದ ಹರಿಶ್ಚಂದ್ರರಾಯನೆ, ತೀಕ್ಷ್ಣಗಳಾದ ಸೂರ್ಯಕಿರಣಗಳು ಎಲ್ಲಾ ಕಡೆಯಲ್ಲೂ ವ್ಯಾಪಿಸಿಕೊಂಡು ಗ್ರೀಷ್ಮಕಾಲದಲ್ಲಿ ಕ್ಷುದ್ರನದಿಗಳನ್ನು ಶೋಷಿಸುವಂತೆ ನಮ್ಮ ಶರೀರಗಳನ್ನು ಶೋಷಿಸುತ್ತಿವೆ. ನಮಗೆ ಛತ್ರದಾನಮಾಡಿ ಈ ತಾಪವನ್ನು ಪರಿಹರಿಸು' ಎಂದು ಕೇಳಿಕೊಂಡರು. ಆಗ ಸತ್ಯಕೀರ್ತಿಯೆಂಬ ಮಂತ್ರಿಯು ಅರಸನನ್ನು ಕುರಿತು 'ಎಲೈ ಅರಸೆ, ಈ ಸ್ತ್ರೀಯರು ನಾಲ್ಕು ವರ್ಣಗಳಿಗೂ ಹೆಚ್ಚಾಗಿ ಅಂತ್ಯಜಾತಿಯಲ್ಲಿ ಉತ್ಪನ್ನರಾದವರಂತೆ ತೋರುತ್ತಿದೆ. ಇವರ ಸ್ಪರ್ಶನವೂ ದರ್ಶನವೂ ಸಂಭಾಷಣವೂ ಸಹ ನಿಂದಿತವಾದದ್ದು' ಎಂದು ನುಡಿಯಲು ; ಆ ಮಂತ್ರಿಯವಾಕ್ಯವನ್ನು ಕೇಳಿ, ರಾಜನು 'ಎಲೈ ಮಂತ್ರಿಯೆ, ಇವರು ಯಥಾರ್ಥವಾಗಿ ಚಂಡಾಲಕನ್ಯೆಯರೆ ? ಇವರ ಶರೀರವೂ ಇವರ ಅಲಂಕಾರವೂ ಇವರ ರೂಪೂ ಹ್ಯಾಗಿವೆ !' ಎಂದು ಮಂತ್ರಿಗೆ

ಉತ್ತರವನ್ನು ಕೊಟ್ಟು, ಆ ಸ್ತ್ರೀಯರುಗಳನ್ನು ಕುರಿತು 'ಎಲೈ ಸ್ತ್ರೀಯರುಗಳಿರಾ ಕೇಳಿ. ಈ ಛತ್ರವು ಬ್ರಾಹ್ಮಣ ಕ್ಷತ್ರಿಯ ವೈಶ್ಯ ಶೂದ್ರರು ಮುಂತಾದ ಸರ್ವಪ್ರಾಣಿಗಳಿಂದ ಯುಕ್ತವಾದ ಸಪ್ತದ್ವೀಪಗಳಿಂದಲೂ ಸಪ್ತಸಮುದ್ರಗಳಿಂದಲೂ ಸಮೇತವಾದ ಭೂಮಂಡಲವನ್ನು ಧರ್ಮದಿಂದ ಪರಿಪಾಲನವನ್ನು ಅರಸಿಗೆ ಮಾಡುವ ಧರಿಸುವದಕ್ಕೆ ಯೋಗ್ಯವೇ ಹೊರತು ಮತ್ತೊಬ್ಬರಿಗೆ ಯೋಗ್ಯವಲ್ಲ'ಎಂದನು. ಆ ವಾಕ್ಯವನ್ನು ಕೇಳಿ ಆ ಸ್ತ್ರೀಯರುಗಳು ಪುನಃ, 'ಎಲೈ ಭೂಪತಿಯೆ, ಧರ್ಮಪರಿಪಾಲನವು ದೊರೆಗಳಿಗೆ ಸ್ವಧರ್ಮವು. ಆದಕಾರಣ ಈ ಛತ್ರವನ್ನು ನಮಗೆ ಕೊಟ್ಟು ರಕ್ಷಿಸು' ಎನಲು, ರಾಜನು 'ಎಲೈ ಸ್ತ್ರೀಯರುಗಳಿರಾ, ಅಯುಕ್ತವಾದ ಈ ಮಾತನಾಡದೆ ಸುಮ್ಮನಿರಿ' ಎಂದು ಸಮಾಧಾನವಾಕ್ಯಗಳನ್ನು ಉಪಾಯವಾಗಿ ನುಡಿದನು. ಈ ರೀತಿಯಲ್ಲಿ ಎಷ್ಟು ಪ್ರಕಾರ ಬಡಂಬಡಿಸಿದರೂ ಆ ಸ್ತ್ರೀಯರು ಒಪ್ಪದೆ ತಮ್ಮ ಮೂರ್ಖತ್ವವನ್ನು ಬಿಡದಿರಲು, ಇವರಿಗೆ ಶಿಕ್ಷೆಯನ್ನು ಮಾಡಲೇಬೇಕೆಂದು ಕೋಪಿಷ್ಠನಾಗಿ ಹರಿಶ್ಚಂದ್ರನು, ಕೊರಡೆಯನ್ನು ತೆಗೆದುಕೊಂಡು, ಅವರನ್ನು ಕುರಿತು 'ದುಷ್ಟರಾದ ಜನರಲ್ಲಿ ದಂಡವನ್ನು ಪ್ರಯೋಗಿಸತಕ್ಕದ್ದೇ ನ್ಯಾಯವೆಂದು ಶಾಸ್ತ್ರಜ್ಞರು ಹೇಳುವರು. ನೀವು ಚಂಡಾಲಜಾತಿಯಲ್ಲಿ ಹುಟ್ಟಿದವರಾದರೂ, ನಿರ್ಭಯವಾಗಿ ನನಗೆ ಎದುರಾಗಿ ನಿಂತುಕೊಂಡು ವಿವಾದವನ್ನು ಮಾಡುತ್ತೀರಿ. ನಿಮ್ಮನ್ನು ಶಿಕ್ಷಿಸಬೇಕು. ಆದ್ದರಿಂದ ವಿದ್ವಾಂಸರ ಮತದಿಂದ ನಮಗೆ ಯೋಗ್ಯವಾದ ಕಶಾಪ್ರಹಾರರೂಪವಾದ ಶಿಕ್ಷೆಯನ್ನು ಮಾಡುತ್ತೇನೆ' ಎಂದು ಹೇಳಿ, ಕೊರಡೆಯಿಂದ ಪ್ರಹರಿಸಿದನು.

ಅನಂತರದಲ್ಲಿ ಆ ಹರಿಶ್ಚಂದ್ರರಾಯನಿಂದ ಪ್ರಹಾರಗಳನ್ನು ಪಡೆದು ಆ ಸ್ತ್ರೀಯರು, ದುಃಖಿತರಾಗಿ ಸಂತಾಪವನ್ನೈದಿ, ವಿಶ್ವಾಮಿತ್ರಋಷಿಯ ಸಮೀಪಕ್ಕೆ ಹೋಗಿ ಹಾಹಾಕಾರದಿಂದ ರೋದನಮಾಡಿದರು. ಆಗ ವಿಶ್ವಾಮಿತ್ರನು ಆ ಸ್ತ್ರೀಯರ ದೀನಧ್ವನಿಯನ್ನು ಕೇಳಿ, ಕ್ರೋಧದಿಂದ ಜ್ವಲಿಸುವನಂತೆ ಕೆಂಪಾದ ನೇತ್ರವುಳ್ಳವನಾಗಿ ಬಂದು 'ನನ್ನ ಆಶ್ರಮವು ಕ್ರೋಧಾಹಂಕಾರವರ್ಜಿತವಾದದ್ದು. ಇಂಥ ನನ್ನ ಆಶ್ರಮಕ್ಕೂ ಬಂದು, ನಮ್ಮವರಾದ ಕನ್ಯೆಯರನ್ನು ಧಿಕ್ಕರಿಸಿ, ತಾವರೆಯ ದಂಟಿನಂತೆ ಸುಕುಮಾರವಾದ ಶರೀರವುಳ್ಳ ಆ ಕನ್ಯೆಯರನ್ನು ಪಶುಗಳಂತೆ ಕೊರಡೆಗಳಿಂದ ಪ್ರಹರಿಸಿ, ಈ ಪ್ರಕಾರವಾಗಿ ನನಗೆ ಅಪಕಾರವನ್ನು ಮಾಡಿದವನು ಸಾಕ್ಷಾದಿಂದ್ರನಾದರೂ ಜೀವಿಸಿಕೊಂಡು ಪುನಃ ಆಚೆಗೆ ಹ್ಯಾಗೆಹೋದಾನು ? ಅದನ್ನು ನೋಡುತ್ತೇನೆ' ಎಂದು ಉಗ್ರವಾಗಿ ಗರ್ಜಿಸಿದನು. ವಿಶ್ವಾಮಿತ್ರಋಷಿಯಿಂದ ಹೇಳಲ್ಪಟ್ಟ ಕೋಪಯುಕ್ತವಾದ ಆ ವಾಕ್ಯವನ್ನು ಕೇಳಿ ಹರಿಶ್ಚಂದ್ರನು, ಅತಿ ಭಯಯುಕ್ತನಾಗಿ ಸತ್ಯಕೀರ್ತಿಯನ್ನು ಕುರಿತು 'ಎಲೈ ಮಂತ್ರಿಯೇ ಕೇಳು, ನಮ್ಮ ಗುರುವಾದ ವಸಿಷ್ಠಋಷಿಯು—ಎಲೈ ಅರಸೆ, ವಿಶ್ವಾಮಿತ್ರನು ನಿನಗೆ ದ್ವೇಷಿಯಾಗಿ ನಿನ್ನನ್ನು ಬಹಳವಾಗಿ ದುಃಖಪಡಿಸಬೇಕೆಂದು ನಿಶ್ಚೈಸಿರುವದರಿಂದ ನೀನು ಆತನ ಆಶ್ರಮಕ್ಕೆ ಹೋಗಬೇಡ—ಎಂದು ಬಹುಪ್ರಕಾರವಾಗಿ ನನಗೆ ಹಿತೋಪದೇಶವನ್ನು ಮಾಡಿದ್ದರೂ, ನಾನು ಆತನ ಆಶ್ರಮಕ್ಕೇ ಬಂದೆನು. ಅದಕ್ಕೆ ಅನುಸಾರವಾಗಿ ವಿಶ್ವಾಮಿತ್ರನೇ ಇಲ್ಲಿಗೆ ಬರುವನಾಗಿದಾನೆ. ನಮ್ಮಿಂದ ಇನ್ನೇನು ಮಾಡಲಾದೀತು ? ಜಲಮಧ್ಯದಲ್ಲಿರುವ ಮತ್ಸ್ಯವು ಕೂಡ ಬಲೆಗೆ ಸಿಕ್ಕಿಕೊಳ್ಳುತ್ತದೆ ; ವಾಯುವಿಗೆ ಸಮಾನವಾದ ವೇಗವುಳ್ಳ ಪಕ್ಷಿಯೂ ಕೂಡ ಬಂಧನವನ್ನು ಪಡೆಯುತ್ತದೆ ; ಲೋಕತ್ರಯಕ್ಕೆ ನೇತ್ರಸ್ವರೂಪರಾದ ಭಗವಂತರಾದ ಸೂರ್ಯಚಂದ್ರರು ಕೂಡ ಅಸ್ತವನ್ನು ಪಡೆಯುತ್ತಾರೆ. ಯೋಜನಶತದೂರದಲ್ಲಿ ಇದ್ದರೂ ತನ್ನ ಆಹಾರವಾದ ಮಾಂಸವನ್ನು ಗೃಧ್ರವು ಹುಡುಕಿಕೊಂಡು ಬಂದು ಹ್ಯಾಗೆ ಕಂಡುಕೊಳ್ಳುವದೋ ಹಾಗೆ, ಪ್ರಾಣಿಗಳನ್ನು ಹುಡುಕಿಕೊಂಡು ಬರುವ ದೈವವನ್ನು ತಪ್ಪಿಸಿಕೊಳ್ಳುವದಕ್ಕೆ ಯಾರಿಂದ ಶಕ್ಯವು ? ನಾನು ಪಾಪವಶದಿಂದ ಇಲ್ಲಿಗೆ ಬಂದು ತಗಲಿಕೊಂಡು, ಆಚೆಗೆ ಹೋಗಬೇಕೆಂದು ಪ್ರಯತ್ನವನ್ನು ಮಾಡದೆ, ಗುರುವಿನಿಂದ ತಡೆಯಲ್ಪಟ್ಟವನಾದರೂ ದುರ್ಬುದ್ಧಿಯುಳ್ಳವನಾಗಿ ದೈವದಿಂದ ಕಟ್ಟುಬಿದ್ದು, ಪತಂಗದ ಹುಳುವು ಬಿಂಕಿಯಲ್ಲಿ ಬೀಳುವಂತೆ, ಈ ಆಶ್ರಮಕ್ಕೆ ಬಂದು ತಗಲಿಕೊಂಡೆನು' ಎಂದು ಹೇಳುತ್ತಾ, ಬಹುವಾಗಿ ಚಿಂತಿಸುತ್ತಿದ್ದನು. ಅಷ್ಟುಹೊತ್ತಿಗೆ ವಿಶ್ವಾಮಿತ್ರಋಷಿಯು ಬಂದು ಆ ರಾಜನನ್ನು ಕುರಿತು 'ಎಲೈ ಅರಸೆ, ನನ್ನ ಆಶ್ರಮವು ಕೋಪರಹಿತವಾದದ್ದು, ಸತ್ವಪ್ರಧಾ

ನವಾದದ್ದು, ವಿನಯಸಂಪತ್ತುಳ್ಳದ್ದು, ಪರಿಶುದ್ಧವಾದದ್ದು, ರಾಗದ್ವೇಷರಹಿತವಾದದ್ದು. ಕೋಪವೆಂಬ ಗಂಧವೇ ನನ್ನ ಆಶ್ರಮದಲ್ಲಿ ಇಲ್ಲ. ಈ ಲೋಕಧರ್ಮವರ್ಜಿತವಾದ ಈ ಆಶ್ರಮದಲ್ಲಿಯೂ ಕೂಡ ದಂಡನೆಗೆ ಯೋಗ್ಯರಲ್ಲದ ಜನರಲ್ಲಿ ನೀನು ಶಿಕ್ಷಾಪ್ರಯೋಗವನ್ನು ಹ್ಯಾಗೆ ಮಾಡಿದೆ? ಈ ಸ್ತ್ರೀಯರಿಬ್ಬರೂ ನನ್ನ ಮಂತ್ರಿಗಳು. ನನ್ನನ್ನು ಲಕ್ಷ್ಯಮಾಡದೆ ಇವರಲ್ಲಿ ಕಶಾಪ್ರಹಾರವನ್ನು ಏನುಕಾರಣ ಮಾಡಿದೆ? ಈ ಕಾರ್ಯವನ್ನು ನೀನು ಮಾಡಬಹುದೆ?' ಎಂದು ನುಡಿದನು" ಎಂದು ಮಾರ್ಕಂಡೇಯನು ಧರ್ಮರಾಯನಿಗೆ ಹೇಳಿದನು.

---

೨೯೧—(೫)ನೇ ಅಧ್ಯಾಯ.—ಹರಿಶ್ಚಂದ್ರೋಪಾಖ್ಯಾನ—(ಹರಿಶ್ಚಂದ್ರನು ವಿಶ್ವಾಮಿತ್ರನಿಗೆ ದ್ರವ್ಯದಾನ ಕೊಟ್ಟದ್ದು).

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಮಾರ್ಕಂಡೇಯನು ಧರ್ಮರಾಯನನ್ನು ಕುರಿತು "ಎಲೈ ಧರ್ಮರಾಯನೆ, ಈ ಪ್ರಕಾರವಾದ ವಿಶ್ವಾಮಿತ್ರ ಋಷಿಯ ವಾಕ್ಯವನ್ನು ಕೇಳಿ ಹರಿಶ್ಚಂದ್ರನು 'ಎಲೈ ವಿಶ್ವಾಮಿತ್ರನೆ, ಅಮೂಲ್ಯಗಳಾದ ರತ್ನಗಳಿಂದ ರಚಿತವಾಗಿರುವ ಉತ್ತಮವಾದ ಈ ಛತ್ರವನ್ನು ಆ ಸ್ತ್ರೀಯರು ಯಾಚಿಸಿದರು. ಇದು ಕೊಡತಕ್ಕದ್ದಲ್ಲವೆಂದು ನಾನು ಬಹುಪ್ರಕಾರವಾಗಿ ಹೇಳುತ್ತಲಿದ್ದರೂ, ಬಲಾತ್ಕಾರದಿಂದ ಅಪಹರಿಸುವದಕ್ಕೋಸ್ಕರ ಅವರು ಯತ್ನ ಮಾಡಿದರು. ಈ ಛತ್ರವು ಚತುಸ್ಸಮುದ್ರಮಧ್ಯವರ್ತಿಯಾದ ಭೂಮಂಡಲಕ್ಕೆ ಅಧಿಪತಿಗಳಾದ ಇಕ್ಷ್ವಾಕುವಂಶೋತ್ಪನ್ನರಾದ ಧೊರೆಗಳಿಗೆ ಮುಖ್ಯಲಾಂಛನವಾಗಿರುವದರಿಂದ, ಇದನ್ನು ಮತ್ತೊಬ್ಬರು ಅಪಹರಿಸಿದಮೇಲೆ ನಮ್ಮ ರಾಜ್ಯವನ್ನೇ ಅಪಹರಿಸಿದಹಾಗೆ ಆಯಿತು. ಈ ಅರ್ಥದಲ್ಲಿ ಸಂಶಯವಿಲ್ಲ. ಆದಕಾರಣ ರಾಜ್ಯವನ್ನು ಅಪಹರಿಸುವದಕ್ಕೆ ಬಂದ ಶತ್ರುಜನವನ್ನೂ ಯುದ್ಧದಲ್ಲಿ ಪ್ರಹರಿಸುವದಕ್ಕೆ ಬಂದವರನ್ನೂ ಸಹ ಸಂಹರಿಸಬೇಕು. ಸಂಹರಿಸದೆಯಿದ್ದರೆ ಅವನು ಹ್ಯಾಗೆ ಭೂಪತಿಯಾದಾನು? ಈ ಸ್ತ್ರೀಯರು ಅದೇಪ್ರಕಾರವಾಗಿ ನಮ್ಮ ರಾಜ್ಯವನ್ನು ಅಪಹರಿಸುವದಕ್ಕೆ ಉದ್ಯುಕ್ತರಾದಕಾರಣ ಶತ್ರುಗಳೇಸರಿಯೆಂದು ನಿಶ್ಚೈಸಿ, ಸ್ತ್ರೀಯರಿಗೆ ಯೋಗ್ಯವಾದ ಕಶಾಪ್ರಹಾರಮಾತ್ರ ಶಿಕ್ಷೆಯನ್ನು ಮಾಡಿದೆನು' ಎನಲು; ವಿಶ್ವಾಮಿತ್ರಋಷಿಯು 'ಎಲೈ ರಾಜೇಂದ್ರನೆ, ನೀನು ವಿಚಾರಿಸದೆ, ಕೋಪಕ್ಕೆ ವಿಷಯರಲ್ಲದ ಈ ಬಾಲೆಯರಮೇಲೆ ಕೋಪವನ್ನು ಮಾಡಿದ್ದು ಯುಕ್ತವಲ್ಲವು. ಈ ಸ್ತ್ರೀಯರು ಛತ್ರವನ್ನು ಯಾಚಿಸಿದ್ದು ಯುಕ್ತವೇಸರಿ. ಲೋಕದಲ್ಲಿ ಆತ್ಮವಂತರಾದ ಪ್ರಾಜ್ಞರಿಗೆ ಗುರುವೇ ಶಿಕ್ಷಕನು. ದುಷ್ಟರಾದ ಜನರಿಗೆ ಧೊರೆಯೇ ಶಿಕ್ಷಕನು. ರಹಸ್ಯವಾಗಿ ಪಾಪಗಳನ್ನು ಮಾಡುವ ಪಾಪಿಷ್ಠರಿಗೆ ಯಮನೇ ಶಿಕ್ಷಕನು. ಮಕ್ಕಳಿಗೆ ಮಾತಾಪಿತೃಗಳು ಶಿಕ್ಷಕರು. ಪತ್ನಿಯರಿಗೆ ಪತಿಗಳೇ ಶಿಕ್ಷಕರು. ನೀನು ಈ ಸ್ತ್ರೀಯರಿಗೆ ತಾಯಿಯೂ ಅಲ್ಲ, ತಂದೆಯೂ ಅಲ್ಲ, ಪತಿಯೂ ಅಲ್ಲ; ನೀನು ಶಿಕ್ಷೆಯನ್ನು ಮಾಡುವದಕ್ಕೆ ಕಾರಣವೇನು? ನೀನು ಅಹಂಕಾರಿಯಾಗಿ ಜಗತ್ತಿಗೆಲ್ಲಕ್ಕೂ ನಾನೇ ಗುರುವು ನಾನೇ ಶಿಕ್ಷಕನು ಎಂದು ತಿಳಿದುಕೊಂಡು, ನನ್ನನ್ನು ಲಕ್ಷ್ಯವನ್ನು ಮಾಡದೆ, ಈ ಸ್ತ್ರೀಯರಿಗೆ ಇಂಥ ಶಿಕ್ಷೆಯನ್ನು ಹ್ಯಾಗೆ ಮಾಡಿದೆ? ನೀನು ನನಗೆ ಇಂಥ ಅಪರಾಧವನ್ನು ಮಾಡಿ ಮಹತ್ತಾದ ಪಾತಕವನ್ನು ಮಾಡುವದಕ್ಕೋಸ್ಕರ ಉದ್ಯುಕ್ತನಾಗಿರುವೆ. ಆದರೂ ಈ ಕನ್ಯೆಯರನ್ನು ಪಾಣಿಗ್ರಹಣವನ್ನು ಮಾಡಿ ವಿವಾಹವನ್ನು ಮಾಡಿಕೊ. ಆ ಕೆಲಸವು ನನಗೆ ಪ್ರಿಯವಾದದ್ದು. ಹಾಗಾದರೆ ನಾನು ಪ್ರೀತನಾಗಿ ನಿನ್ನಲ್ಲಿ ಪ್ರಸನ್ನನಾಗುತ್ತೇನೆ' ಎಂದನು. ಆದಕ್ಕೆ ಅರಸು 'ಎಲೈ ಮಹರ್ಷಿಯೆ, ಕ್ಷತ್ರಿಯರು ಹಿರಣ್ಯಗರ್ಭನ ಬಾಹುಗಳ ದೆಸೆಯಿಂದ ಜನಿಸಿದವರು; ಬಹು ಪರಾಕ್ರಮದಿಂದಲೇ ಜೀವಿಸುವಂಥವರು, ಸ್ವಧರ್ಮಪರಿಪಾಲನೆಯಲ್ಲಿ ಆಸಕ್ತರಾದವರು. ಸತ್ಯವೂ ಶುಚಿತ್ವವೂ ಧರ್ಮವೂ ಭೂತದಯೆಯೂ ಮೊದಲಾದ ಗುಣಗಳಿಂದ ಯುಕ್ತರಾದವರು. ಕ್ಷತ್ರಿಯಜಾತಿಯಲ್ಲಿ ಉತ್ಪನ್ನರಾಗಿ ಕುಲಶೀಲರೂ ಸದಾಚಾರಯುಕ್ತರೂ ಆಗಿರುವ ಕ್ಷತ್ರಿಯರು ಸ್ವಜಾತಿಯಲ್ಲಿ ಉತ್ಪನ್ನರಾದ ಅನುರೂಪರಾದ ಕ್ಷತ್ರಿಯಸ್ತ್ರೀಯರನ್ನೇ ವಿವಾಹಮಾಡಿಕೊಳ್ಳಬೇಕು. ಇವರೀರ್ವರೂ ಸರ್ವಜಾತಿಗಳಿಗಿಂತಲೂ ಹೊರಚ್ಚಾದ ಚಂಡಾಲಜಾತಿಯಲ್ಲಿ ಉತ್ಪನ್ನರಾದವರು. ಇವರ ದರ್ಶನವೂ ಸ್ಪರ್ಶನವೂ ಸಂಭಾಷಣವೂ ಬಹು ನಿಂದಿತ

ವಾದದ್ದು. ಲೋಕದಲ್ಲಿ ಚಂಡಾಲನನ್ನೂ ಪತಿತನನ್ನೂ ನೋಡಿದರೆ ಸೂರ್ಯಾವಲೋಕನವನ್ನು ಮಾಡಬೇಕು, ಜ್ವಲಿಸುವ ಅಗ್ನಿಯನ್ನಾದರೂ ನೋಡಬೇಕು. ಹಾಗೆ ಮಾಡಿದಮೇಲೆ ಶುದ್ಧನಾಗುವನು' ಎನಲು, ವಿಶ್ವಾಮಿತ್ರನು 'ಎಲೈ ಅರಸೆ, ಇವರು ಚಾಂಡಾಲಸ್ತ್ರೀಯರಲ್ಲ. ಇವರೀರ್ವರ ಪಾಣಿಗ್ರಹಣವನ್ನು ಮಾಡು, ನಿನಗೆ ದೋಷವಿಲ್ಲ' ಎಂದು ಬಹುಪ್ರಕಾರವಾಗಿ ಹೇಳಿದನು. ಆದರೂ ಹರಿಶ್ಚಂದ್ರನು ಒಡಂಬಡದೆ ಇದ್ದದ್ದರಿಂದ, ವಿಶ್ವಾಮಿತ್ರನು ಕೋಪಯುಕ್ತನಾಗಿ, 'ಎಲೈ ಮೂಢನಾದ ಹರಿಶ್ಚಂದ್ರನೆ, ನೀನು ದುರಭಿಮಾನಿಯು, ಸರ್ವಶಾಸ್ತ್ರಬಹಿಷ್ಕೃತನು. ಬಹುಪ್ರಕಾರವಾಗಿ ಹೇಳಿದರೂ ನನ್ನ ವಾಕ್ಯವನ್ನುಲ್ಲಂಘಿಸಿ ಮೂಢನಾಗಿರುವೆ' ಎಂದು ಗರ್ಜಿಸಿದನು. ಅದಕ್ಕೆ ಹರಿಶ್ಚಂದ್ರನು 'ಎಲೈ ಪೂಜ್ಯರಾದ ಮಹರ್ಷಿಗಳೆ, ನನ್ನ ವಿಷಯದಲ್ಲಿ ಈ ರೀತಿಯಾಗಿ ಅಯುಕ್ತವಾದ ವಾಕ್ಯವನ್ನು ಹೇಳುವದು ಉಚಿತವಲ್ಲ. ತಮ್ಮ ಆಶ್ರಮಕ್ಕೆ ಅತಿಥಿಯಾಗಿ ಬಂದಿರುವ ನನಗೆ ಅನುರೂಪವಾದ ವಾಕ್ಯವನ್ನು ಹೇಳಬೇಕು. ನಿಮ್ಮಂಥ ಮಹಾತ್ಮರು ಸರ್ವಪ್ರಾಣಿಗಳಲ್ಲಿಯೂ ಕ್ಷಮೆಯನ್ನೆ ಮಾಡುತ್ತಾರೆ. ಲೋಕದಲ್ಲಿರುವ ಸಮಸ್ತ ತೀರ್ಥಗಳಲ್ಲಿಯೂ ಜ್ಞಾನವೆಂಬ ತೀರ್ಥದಿಂದ ಮಿಶ್ರವಾದ ಕ್ಷಮಾರೂಪವಾದ ತೀರ್ಥವೇ ಸರ್ವಶ್ರೇಷ್ಠವು. ಕುಠಾರದಿಂದ ಛೇದಿಸಲ್ಪಟ್ಟ ವೃಕ್ಷಗಳೂ, ಔಷಧಗಳೂ, ಗುಣಮಾಡಿದರೆ ಪುನಃ ಚಿಗುರುತ್ತವಲ್ಲವೆ? ಮರ್ಮೋದ್ಘಾಟನರೂಪವಾಗಿ ವಕ್ರವಾಗಿ ನುಡಿದ ವಾಕ್ಕಿನಿಂದ ಹೃದಯದಲ್ಲಿ ಹುಟ್ಟಿದ ವ್ರಣವು ಮಾಯುವದೇ ಇಲ್ಲ. ನೀವು ಪೂರ್ವದಲ್ಲಿ ಕ್ಷತ್ರಿಯಕುಲದಲ್ಲಿ ಉತ್ಪನ್ನರಾದವರು. ಈಗ ಬ್ರಾಹ್ಮಣರಾದರೂ ಪೂರ್ವವಾಸನೆ ಬಿಡಲಿಲ್ಲವೆಂದು ನನಗೆ ತೋರುತದೆ' ಎನಲು ; ವಿಶ್ವಾಮಿತ್ರನು ಜಾತಿಪ್ರಸ್ತಾಪದಿಂದ ಮರ್ಮೋದ್ಘಾಟನೆ ಮಾಡಿದನೆಂದು ಪ್ರಳಯಾಗ್ನಿಯಂತೆ ಕೋಪದಿಂದ ಜ್ವಲಿಸುತ್ತಾ 'ಎಲೈ ಅರಸೆ, ಧನವಂತನಾದರೂ ಅದಾತೃವಾಗಿ ಕ್ರೋಧಲೋಭಯುಕ್ತನಾಗಿ ಮೂಢಮಾರ್ಗವನ್ನು ಅನುಸರಿಸಿರುವ ನಿನ್ನಂಥವನಲ್ಲಿ ದ್ವೇಷವನ್ನು ಮಾಡಬೇಕೇ ಹೊರತು ವಿಶ್ವಾಸವನ್ನು ಮಾಡಬಾರದು' ಎಂದನು. ಬಳಿಕ ಹರಿಶ್ಚಂದ್ರನು 'ಎಲೈ ಮಹರ್ಷಿಗಳೇ, ನನ್ನನ್ನು ಅದಾತೃವೆಂದೂ ಮೂರ್ಖಮಾರ್ಗಾನುಸಾರಿಯೆಂದೂ ನೀವು ಹೇಳಿದ್ದು ಚೆನ್ನಾಯಿತು. ಆದರೂ ಗುರುಗಳಾದ ನಿಮಗೆ ಯಾವ ದಕ್ಷಿಣೆಯನ್ನು ನಾನು ಕೊಡಬೇಕೋ ಆ ಅರ್ಥವನ್ನು ನನಗೆ ಆಜ್ಞಾಪಿಸಬೇಕು. ಬಹುದ್ರವ್ಯಸಾಧ್ಯವಾದ ರಾಜಸೂಯಯಾಗದಲ್ಲಿ ಬ್ರಾಹ್ಮಣರಿಗೆ ಎಷ್ಟು ದ್ರವ್ಯಬೇಕೊ ಅಷ್ಟು ದ್ರವ್ಯವನ್ನು ನಾನು ಅರ್ಪಿಸಿ ಅವರನ್ನು ನಾನು ಸಂತೋಷಪಡಿಸಿದೇನೆ. ಆಗ ನೀವು ದಯಮಾಡಲಿಲ್ಲ. ಬಂದಿದ್ದರೆ ತಮಗೂ ವಿದಿತವಾಗುತ್ತಿತ್ತು' ಎನಲು ; ವಿಶ್ವಾಮಿತ್ರಋಷಿಯು 'ಎಲೈ ಅರಸೆ, ನಿನ್ನಿಂದ ಮಾಡಲ್ಪಟ್ಟ ಬಹು ಸುವರ್ಣಸಾಧ್ಯವಾದ ರಾಜಸೂಯಯಾಗದಲ್ಲಿ ಎಷ್ಟು ದ್ರವ್ಯ ವೆಚ್ಚವಾಯಿತೋ ಅಷ್ಟು ದ್ರವ್ಯವನ್ನು ನನಗೆ ದಕ್ಷಿಣೆಯಾಗಿ ಕೊಡು' ಎಂದನು. ಬಳಿಕ ಹರಿಶ್ಚಂದ್ರನು 'ಎಲೈ ಮಹರ್ಷಿಗಳೆ, ಸತ್ಪಾತ್ರಗಳೊಳಗೆ ಶ್ರೇಷ್ಠರಾದ ನೀವು ನನಗೆ ಎದುರಾಗಿ ಕೈಯನ್ನು ನೀಡಿ ಪ್ರತಿಗ್ರಹವನ್ನು ಮಾಡಿದಮೇಲೆ ನಾನು ಧನ್ಯನಾದೆನು. ನಿಮ್ಮ ಅನುಗ್ರಹಕ್ಕೆ ಪಾತ್ರನಾದೆನು. ನನ್ನ ಜನ್ಮವು ಸಫಲವಾಯಿತು' ಎಂದು, ಸುವರ್ಣಪಾತ್ರೆಯಲ್ಲಿ ಉದಕವನ್ನು ತೆಗೆದುಕೊಂಡು, ಗಂಧಪುಷ್ಪಾಕ್ಷತೆಗಳನ್ನು ತರಿಸಿ, ಯಥಾಶಾಸ್ತ್ರೀಯವಾಗಿ ವೇದೋಕ್ತ ವಿಧಾನದಿಂದ ಉದಕವನ್ನು ತನ್ನ ಹಸ್ತದಲ್ಲಿ ತೆಗೆದುಕೊಂಡು, ದಾನಮಂತ್ರಪೂರ್ವಕವಾಗಿ ದಕ್ಷಿಣೆಯನ್ನು ವಿಶ್ವಾಮಿತ್ರಋಷಿಯ ಹಸ್ತದಲ್ಲಿ ಧಾರೆಯನ್ನೆರೆದನು. ಬಳಿಕ ಪ್ರತಿಗ್ರಹಮಂತ್ರಪೂರ್ವಕವಾಗಿ ಆ ಋಷಿಯು ಪ್ರತಿಗ್ರಹಿಸಿ ಆಶೀರ್ವಚನವನ್ನು ಪ್ರಯೋಗಿಸಿ ಸಂತುಷ್ಟನಾಗಿ ತನ್ನ ಆಶ್ರಮಕ್ಕೆ ತೆರಳಿದನು" ಎಂದು ಮಾರ್ಕಂಡೇಯನು ಧರ್ಮರಾಯನಿಗೆ ಹೇಳಿದನು.

## ೨೯೧—(೬)ನೇ ಅಧ್ಯಾಯ.—ಹರಿಶ್ಚಂದ್ರೋಪಾಖ್ಯಾನ—(ಹರಿಶ್ಚಂದ್ರನು ವಿಶ್ವಾಮಿತ್ರನಿಗೆ ಸರ್ವಸ್ವವನ್ನು ಕೊಟ್ಟದ್ದು).

ವೈಶಂಪಾಯನಮುನೀಶ್ವರನು ಜನಮೇಜಯನನ್ನು ಕುರಿತು—ಕೇಳು ಜನಮೇಜಯನೆ, ಬಳಿಕ ಮಾರ್ಕಂಡೇಯನು ಧರ್ಮರಾಯನನ್ನು ಕುರಿತು "ಎಲೈ ಧರ್ಮರಾಯನೆ, ವಿಶ್ವಾಮಿತ್ರನು ದಾನವನ್ನು ಪರಿಗ್ರಹಿಸಿ ತನ್ನ ಆಶ್ರ

ಮಕ್ಕೆ ಬಂದ ಬಳಿಕ, ಚಂಡಾಲಸ್ತ್ರೀಯರು ಆತನನ್ನು ಕಂಡು 'ಎಲೈ ತಂದೆಯಾದ ವಿಶ್ವಾಮಿತ್ರಋಷಿಯೆ, ಶತ್ರುವಾದ ಆ ಹರಿಶ್ಚಂದ್ರನು ನಮಗೆ ಬಹು ಅಪರಾಧವನ್ನು ಮಾಡಿದಾನೆ. ಇಂತ ಉಪದ್ರವವನ್ನು ಮಾಡಿದ ಅರಸಿಗೆ ಬದಲಾಗಿ ಚೆನ್ನಾಗಿ ಶಿಕ್ಷೆಯನ್ನು ಮಾಡದೆ ನೀನು ಯಾಕೆ ಹೊರಟುಬಂದೆ ? ನಮ್ಮ ಶರೀರಗಳಲ್ಲಿ ಖಡ್ಗಪ್ರಹಾರಗಳಿಗೆ ಸಮಾನಗಳಾದ ಕಶಾಪ್ರಹಾರಗಳನ್ನು ನೋಡು ' ಎಂದು ಬಿದ್ದು ಹೊರಳಿ ರೋದನಮಾಡುತ್ತಿರಲು ; ಆ ಸ್ತ್ರೀಯರ ದುಃಖವನ್ನು ನೋಡಿ ವಿಶ್ವಾಮಿತ್ರಋಷಿಯು, ಪುನಃ ಹರಿಶ್ಚಂದ್ರನಮೇಲೆ ಬಹು ಕೋಪವುಳ್ಳವನಾಗಿ ಬಂದು, ಆತನನ್ನು ಇಲ್ಲಿ ಬಾರೈಯೆಂದು ಬಾರಿಬಾರಿಗೂ ಕರೆದು ' ಎಲೈ ಅರಸೆ, ಈ ಸ್ತ್ರೀಯರ ಪಾಣಿಗ್ರಹಣವನ್ನು ಮಾಡು' ಎಂದು ಬಹಳವಾಗಿ ನಿರ್ಬಂಧಪಡಿಸಿದನು. ಬಳಿಕ ಹರಿಶ್ಚಂದ್ರನು ' ಎಲೈ ಋಷಿವರ್ಯರೆ, ನಾನು ಮೂಢನಲ್ಲ, ಕಿವುಡನಲ್ಲ, ಮೂಕನಲ್ಲ, ಅವಿವೇಕಿಯಲ್ಲ. ಯಾವ ನಿಮಿತ್ತವಾಗಿ ನನ್ನನ್ನು ಈರೀತಿಯಲ್ಲಿ ಹೇಳನವನ್ನು ಮಾಡುತ್ತೀರಿ? ನಾನು ಮೋಹದಿಂದಾಗಲಿ, ಕ್ರೋಧದಿಂದಲಾಗಲಿ, ಯಾಚಕರ ನಿಮಿತ್ತವಾಗಿಯಾಗಲಿ, ಅನ್ಯಾಯದಿಂಲಾಗಲಿ, ಸತ್ಯವನ್ನು ಬಿಡಲಾರೆನು ' ಎನಲು ; ವಿಶ್ವಾಮಿತ್ರಋಷಿಯು ಬಹು ಕೋಪವುಳ್ಳವನಾಗಿ ' ಎಲೈ ದುಷ್ಟನೆ, ನಾನು ಎಷ್ಟು ಹೇಳಿದರೂ ನನ್ನಮಾತನ್ನು ಅತಿಕ್ರಮಿಸುತ್ತಿರುವೆ. ನಮ್ಮ ಸ್ತ್ರೀಯರನ್ನು ಕಶಾಪ್ರಹಾರಗಳಿಂದ ಪೀಡಿಸಿದ್ದೀಯೆ ' ಎಂದು ಹರಿಶ್ಚಂದ್ರರಾಯನನ್ನು ಕಾಲುಗಳಿಂದ ಒದ್ದನು. ಆ ರಾಜನು ಆ ಪಾದಪ್ರಹಾರಗಳನ್ನು ಸಹಿಸಿಕೊಂಡು ' ಎಲೈ ಮಹರ್ಷಿಗಳೆ, ಕಠಿಣವಾದ ನನ್ನ ದೇಹದಮೇಲೆ ಮೃದುಗಳಾದ ನಿಮ್ಮ ಪಾದಗಳು ಬಿದ್ದದ್ದ ರಿಂದ ಆ ಪಾದಗಳಿಗೆ ಬಹು ವೇದನೆಯುಂಟಾಯಿತು ' ಎಂದು, ಆ ಋಷಿಯ ಪಾದಗಳನ್ನು ತನ್ನ ಹಸ್ತಗಳಿಂದ ಮೆಲ್ಲನೆ ಒತ್ತುತ್ತ, 'ನಿರಪರಾಧಿಯಾದ ನನ್ನಮೇಲೆ ನಿಮಿತ್ತವಿಲ್ಲದೆ ಇಷ್ಟು ಕೋಪವನ್ನು ಯಾಕೆ ಮಾಡುತ್ತೀರಿ ? ನನ್ನಲ್ಲಿ ಅನುಗ್ರಹವನ್ನು ಮಾಡಬೇಕು. ರಾಜ್ಯವನ್ನಾದರೂ ಕೊಡುತ್ತೇನೆ. ನನ್ನ ಸರ್ವಸ್ವವನ್ನೂ ಕೊಡುತ್ತೇನೆ. ನೀವು ಪ್ರಸನ್ನರಾದರೆ ನಾನು ಧನ್ಯನಾಗುತ್ತೇನೆ ' ಎಂದು ಬಹುಪ್ರಕಾರವಾಗಿ ಪ್ರಾರ್ಥಿಸಿ ಪ್ರಣಾಮವನ್ನು ಮಾಡಿದನು.

ಅನಂತರದಲ್ಲಿ ವಿಶ್ವಾಮಿತ್ರಋಷಿಯು ಹರಿಶ್ಚಂದ್ರರಾಯನನ್ನು ಕುರಿತು ' ಎಲೈ ಅರಸೆ, ವಾಕ್ಕಿನಿಂದ ಕೊಡುತ್ತೇನೆಂದಮೇಲೆ ತಪ್ಪುವದಕ್ಕಾಗುವದಿಲ್ಲ. ಆದಕಾರಣ ನೀನು ಹೇಳಿದ ಪ್ರಕಾರಕ್ಕೆ ನಿನ್ನ ರಾಜ್ಯವನ್ನು ನನಗೆ ಕೊಡು ' ಎನಲು ; ಆ ಹರಿಶ್ಚಂದ್ರರಾಯನು ' ಹಾಗೆಯೇ ಆಗಲಿ ' ಎಂದು ನುಡಿದು, ಸ್ವಾಮಿ ಅಮಾತ್ಯ ಸುಹೃತ್ತು ಕೋಶ ರಾಷ್ಟ್ರ ದುರ್ಗ ಬಲಗಳೆಂಬ ಸಪ್ತಾಂಗಗಳಿಂದ ಯುಕ್ತವಾದ ರಾಜ್ಯವನ್ನು ಋಷಿಗೆ ಕೊಟ್ಟನು. ಬಳಿಕ ವಿಶ್ವಾಮಿತ್ರನು ರಾಜ್ಯವನ್ನು ಅಪಹರಿಸಿಕೊಂಡು ಸ್ವಲ್ಪ ಸಂತೋಷವುಳ್ಳವನಾಗಿರುವ ಸಮಯದಲ್ಲಿ, ಹರಿಶ್ಚಂದ್ರರಾಯನು ಪ್ರಣಾಮವನ್ನುಮಾಡಿ ' ಎಲೈ ಮಹರ್ಷಿಗಳೆ, ನಿಮಗೆ ರಾಜ್ಯವು ಸಂತಲ್ಲ. ನನಗೆ ಅಪ್ಪಣೆಯಾದರೆ ಹೊರಟು ಹೋಗುತ್ತೇನೆ ' ಎಂದು ಪ್ರಾರ್ಥಿಸಲು ; ವಿಶ್ವಾಮಿತ್ರನು ' ಎಲೈ ಹರಿಶ್ಚಂದ್ರನೆ, ನಿನ್ನ ರಾಜ್ಯಮಾತ್ರವೇ ನನಗೆ ಸಂತು. ನಿನ್ನಿಂದ ಬರತಕ್ಕ ದಕ್ಷಿಣೆಯ ದ್ರವ್ಯವು ನನಗೆ ಸಲ್ಲಲಿಲ್ಲ. ಅದನ್ನು ಕೊಡದೆ ಹ್ಯಾಗೆ ಹೊರಟು ಹೋಗುತ್ತೀಯೆ ? ' ಎಂದನು. ಹರಿಶ್ಚಂದ್ರನು ' ಎಲೈ ಮಹರ್ಷಿಗಳೆ, ಸಪ್ತಾಂಗಯುಕ್ತವಾದ ರಾಜ್ಯವನ್ನೆಲ್ಲ ನಿಮಗೆ ಕೊಟ್ಟೆನಲ್ಲ. ಇನ್ನು ನನಗೆ ಸ್ವಾಧೀನವಾದದ್ದು ಯಾವದಿದೆ. ನಾನೂ ನನ್ನ ಪತ್ನಿಯೂ ಬಾಲಕನಾದ ಈ ಪುತ್ರನೂ ಈ ಮೂವರ ಶರೀರಗಳು ಹೊರತು ನನ್ನ ಸ್ವತ್ತು ಏನೂ ಇಲ್ಲವಲ್ಲ. ನಾನು ಇನ್ನೇನು ಕೊಡುವದಕ್ಕೆ ಸಮರ್ಥನು ' ಎನಲು ; ವಿಶ್ವಾಮಿತ್ರನು ' ಎಲೈ ಸತ್ಯವಂತನಾದ ಹರಿಶ್ಚಂದ್ರನೆ, ಹಾಗಾದಪಕ್ಷದಲ್ಲಿ ದಕ್ಷಿಣದ್ರವ್ಯವನ್ನು ನಾನು ಧಾರೆಯನ್ನೆರೆದು ಕೊಡಲಿಲ್ಲವೆಂದು ನೀನು ಹೇಳಿಬಿಡು. ನಾನು ಬಿಟ್ಟು ಬಿಡುತ್ತೇನೆ. ಮಂತ್ರಪೂರ್ವಕವಾಗಿ ವೇದೋಕ್ತವಿಧಾನದಿಂದ ಧಾರೆಯನ್ನೆರೆದು, ಈಗ ನೀನು ಇಲ್ಲವೆಂದು ಅಸತ್ಯವನ್ನು ಹೇಳುವದಾದರೆ ಹೇಳು ' ಎಂದನು. ಹರಿಶ್ಚಂದ್ರನು ' ಎಲೈ ಮಹರ್ಷಿಗಳೆ, ಅಮೂಲ್ಯಗಳಾದ ರತ್ನಗಳಿಂದ ಖಚಿತವಾದ ಇಕ್ಷ್ವಾಕುರಾಯನ ವಂಶಪರಂಪರೆಯಿಂದ ಬಂದಿರುವ ಕಿರೀಟವನ್ನೂ, ಮಹಾಶುಭಕರವಾದ ಬ್ರಹ್ಮಸೂತ್ರವನ್ನೂ, ರತ್ನಮಯಗಳಾದ ಈ ಕಡಗಗಳನ್ನೂ, ಮಹಾರತ್ನದಿಂದೊಪ್ಪುವ ಮುದ್ರಿತರೂಪವಾದ ಈ ಶಿಖಾವುಂಗುರವನ್ನೂ, ಸುವರ್ಣರತ್ನಗಳಿಂದ ಅಲಂಕೃತವಾದ ದಿವ್ಯಾಶ್ವಗಳಿಂದ ಯುಕ್ತವಾದ ಈ ರಥವನ್ನೂ, ಉಳಿದಿರುವ ಆನೆ ಕುದುರೆ ಮುಂತಾದ ಈ ಸೇನೆಯನ್ನೂ, ಇನ್ನೂ ಉಳಿದದ್ದು ಅಷ್ಟು ಇಷ್ಟು ಏನಿರುವದೋ ಅದೆಲ್ಲವನ್ನೂ ಕೊಡುತ್ತೇನೆ ; ನನಗೆ

ಅನುಗ್ರಹ ಮಾಡಬೇಕು' ಎಂದು ಬೇಡಿಕೊಂಡನು. ಅದಕ್ಕೆ ವಿಶ್ವಾಮಿತ್ರನು 'ಎಲೈ ಹರಿಶ್ಚಂದ್ರನೆ, ಇವೆಲ್ಲವು ಉಪಾಂಗವಾದ ರಾಜ್ಯದಲ್ಲೇ ಸೇರಿದ್ದಾದ್ದರಿಂದ ನನ್ನ ದ್ರವ್ಯವೇ ಆಯಿತು. ನನ್ನ ದ್ರವ್ಯವನ್ನೇ ನನಗೆ ಕೊಟ್ಟು ಹೋಗಬೇಕೆಂದು ಬಹಳ ಉಪಾಯವನ್ನು ಮಾಡುತ್ತಿರುವೆ. ನೀನು ಬಹುಚತುರನು. ನನಗೆ ಬೇರೆ ದಕ್ಷಿಣಾ ದ್ರವ್ಯವನ್ನು ಕೊಡಬೇಕು' ಎಂದು ಪೀಡಿಸಲು, ಅರಸನು ಖಿನ್ನನಾಗಿ 'ಏನುಮಾಡಬೇಕು? ಬಹುದ್ರವ್ಯವನ್ನು ಕೊಡತಕ್ಕದ್ದು ಯುಕ್ತವೇಸರಿ. ಆದರೆ ಅಷ್ಟು ನನಗೆ ಎಲ್ಲಿ ದೊರೆದೀತು? ನಾನು ಎಲ್ಲಿ ಹೋಗಬೇಕು? ಯಾರು ಕೊಟ್ಟಾರು?' ಎಂದು ಚಿಂತಿಸುತ್ತ, ಆಳವಾದ ಕೆಸರಿನಲ್ಲಿ ಇಳಿಯಬಿದ್ದ ಕಾಲುಗಳುಳ್ಳ ಆನೆಯಂತೆ ಏನೂ ತೋರದೆ ಸುಮ್ಮನೆ ನಿಂತುಕೊಂಡನು. ಹೀಗೆ ಹಿಂದೆಮುಂದೆ ತೋರದಿರುವ ಪತಿಯನ್ನು ನೋಡಿ ಮಹಾಪತಿವ್ರತೆಯಾದ ಚಂದ್ರಮತಿಯು, ಆತನನ್ನು ಕುರಿತು 'ಎಲೈ ಪ್ರಾಣಕಾಂತನೆ, ಸತ್ಯದಿಂದ ವರ್ಜಿತವಾದ ರಾಜ್ಯದಿಂದಾಗಲಿ, ಭೋಗಗಳಿಂದಾಗಲಿ, ಸ್ವರ್ಗಲೋಕದಿಂದಲೇ ಆಗಲಿ ಏನು ಪ್ರಯೋಜನ? ಆದಕಾರಣ ಮಹರ್ಷಿಗೆ ಯಾವ ಅರ್ಥವನ್ನು ಹೇಳಿರುವೆಯೋ ಆ ಅರ್ಥವನ್ನು ನೆರವೇರಿಸತಕ್ಕದ್ದು. ಧರ್ಮಗಳಲ್ಲಿ ಅಹಿಂಸೆಯೇ ಶ್ರೇಷ್ಠವಾದದ್ದು. ಸಮಸ್ತ ವಿದ್ಯೆಗಳಲ್ಲಿಯೂ ದಾನವಿದ್ಯೆಯೇ ದೊಡ್ಡದು. ವ್ರತಗಳಲ್ಲಿ ಸತ್ಯವೇ ಉತ್ಕೃಷ್ಟವು. ಆಶ್ರಮಗಳಲ್ಲಿ ಗೃಹಸ್ಥಾಶ್ರಮವೇ ಉತ್ತಮವು. ಆದಕಾರಣ ಗೃಹಸ್ಥಾಶ್ರಮದಲ್ಲಿ ಇದ್ದುಕೊಂಡು ಯಾವ ಪುರುಷನು ಸತ್ಯವಾಕ್ಯವನ್ನೇ ಹೇಳುತ್ತಾನೋ ಆ ಪುರುಷನು, ಅಯತ್ನದಿಂದಲೇ ಇಂದ್ರಲೋಕವನ್ನೈದುವನು. ಭೂಮಿಯೂ ಸತ್ಯದಿಂದ ನಿಂತಿದೆ. ಸತ್ಯದಿಂದಲೇ ಸಮಸ್ತ ಪೈರುಗಳೂ ಫಲಿಸುತ್ತವೆ. ಸತ್ಯದಿಂದಲೇ ವಿಂಧ್ಯಪರ್ವತವೂ ನಿಂತಿರುವದು. ಸತ್ಯದಿಂದಲೇ ಸಮುದ್ರಗಳು ಮರ್ಯಾದೆಯನ್ನು ತಪ್ಪದೆ ಇರುತ್ತವೆ. ಪೂರ್ವದಲ್ಲಿ ಬ್ರಹ್ಮಾದಿದೇವತೆಗಳು ತ್ರಾಸಿನಲ್ಲಿ ಅಶ್ವಮೇಧಸಹಸ್ರವನ್ನು ಒಂದುಕಡೆಯಲ್ಲಿಯೂ ಸತ್ಯವನ್ನೇ ಒಂದುಕಡೆಯಲ್ಲಿಯೂ ಇರಿಸಿ ತೂಗುವ ಕಾಲದಲ್ಲಿ, ಸತ್ಯವೇ ತೂಕಹೆಚ್ಚಿತು; ಅಶ್ವಮೇಧಸಹಸ್ರವು ಹಗುರವಾಗಿ ಮೇಲಕ್ಕೆದ್ದಿತು. ಆದಕಾರಣ ಸರ್ವಪ್ರಯತ್ನದಿಂದಲೂ ಸತ್ಯವನ್ನೇ ದೃಢವಾಗಿ ಅವಲಂಬಿಸಬೇಕು. ವಿಶ್ವೇಶ್ವರನು ನಮ್ಮ ಭಾಗಕ್ಕೆ ಇಲ್ಲದೆ ಹೋದಾನೆ? ಮಹಾಪುರುಷನಾದವನು ವಿಪತ್ತುಗಳಲ್ಲಿ ಧೈರ್ಯವನ್ನು ತಾಳಬೇಕು. ಬ್ರಾಹ್ಮಣರೇ ನಮಗೆ ಕುಲದೇವತೆಗಳು. ಆ ವಿಶ್ವಾಮಿತ್ರಋಷೀಶ್ವರರೇ ನಮ್ಮ ವಿಪತ್ತುಗಳನ್ನು ಪರಿಹರಿಸುತ್ತಾರೆ. ಅವರ ಅನುಗ್ರಹವೇ ನಮಗೆ ಉಂಟಾಗುತ್ತದೆ' ಎಂದು ಸಮಾಧಾನ ಮಾಡಿದಳು. ಬಳಿಕ ಹರಿಶ್ಚಂದ್ರರಾಯನು ಮನಸ್ಸಿಗೆ ಧೈರ್ಯವನ್ನು ತಂದುಕೊಂಡು, ವಿಶ್ವಾಮಿತ್ರಋಷಿಯನ್ನು ಕುರಿತು 'ಎಲೈ ಮಹರ್ಷಿಗಳೆ, ಒಂದುತಿಂಗಳ ಗಡುವನ್ನು ಮಾಡಿಕೊಟ್ಟರೆ, ನಿಮ್ಮ ದ್ರವ್ಯವನ್ನು ಹ್ಯಾಗಾದರೂ ಸಾಧಿಸಿಕೊಡುತ್ತೇನೆ. ನಾನು ನಿಮ್ಮನ್ನು ಕುರಿತು ಅಜ್ಞಾನದಿಂದ ಕಠಿನವಾದ ವಾಕ್ಕುಗಳನ್ನು ಏನುಹೇಳಿದ್ದರೂ ಕ್ಷಮಿಸಬೇಕು. ನನಗೆ ಅಪ್ಪಣೆಯನ್ನು ಕೊಟ್ಟರೆ ನಾನು ಹೋಗುತ್ತೇನೆ' ಎಂದು ಪ್ರಾರ್ಥಿಸಲು; ವಿಶ್ವಾಮಿತ್ರನು 'ಎಲೈ ಅರಸೆ, ರಾಜ್ಯವು ನನ್ನದಾದಮೇಲೆ ನನ್ನ ರಾಜ್ಯದಲ್ಲಿ ನೀನು ಇರಬೇಡ. ಅನ್ಯತ್ರ ಹೋಗು. ನನ್ನ ಶಿಷ್ಯನಾದ ನಕ್ಷತ್ರಕನನ್ನು ನಿನ್ನ ಸಂಗಡಲೇ ಕಳುಹಿಸುತ್ತೇನೆ. ನನ್ನ ದ್ರವ್ಯವನ್ನು ನೀನು ಕೊಡುವ ಪರ್ಯಂತರವು ಅವನನ್ನು ಸಂರಕ್ಷಿಸಿಕೊಂಡು, ಒಂದು ತಿಂಗಳ ಒಳಗಾಗಿ ನನ್ನ ದ್ರವ್ಯವನ್ನು ಸಲ್ಲಿಸುವಂತೆ ಮಾಡು' ಎಂದು ಕಟ್ಟುಮಾಡಿದನು. ಬಳಿಕ ಹರಿಶ್ಚಂದ್ರನು ಆ ಮಹರ್ಷಿಗೆ ನಮಸ್ಕರಿಸಿ, ಅಪ್ಪಣೆಯನ್ನು ತೆಗೆದುಕೊಂಡು ಆಶ್ರಮದಿಂದ ತೆರಳಿದನು" ಎಂದು ಮಾರ್ಕಂಡೇಯನು ಧರ್ಮರಾಯನಿಗೆ ಹೇಳಿದನು.

೨೯೧—(೭)ನೇ ಅಧ್ಯಾಯ.—ಹರಿಶ್ಚಂದ್ರೋಪಾಖ್ಯಾನ—(ಹರಿಶ್ಚಂದ್ರನ ಕಷ್ಟವನ್ನು ನೋಡಿ ಸತ್ಯಕೀರ್ತಿಯು ಪ್ರಲಾಪಿಸಿದ್ದು).

ವೈಶಂಪಾಯನಮುನೀಂದ್ರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯನೆ, ಮಾರ್ಕಂಡೇಯನು ಧರ್ಮರಾಯನನ್ನು ಕುರಿತು "ಎಲೈ ಧರ್ಮರಾಯನೆ, ಅನಂತರದಲ್ಲಿ ಹರಿಶ್ಚಂದ್ರನು ಬಹುದುಃಖದಿಂದ ಸಂಕಟಪಡುತ್ತ ಪತ್ನೀಪುತ್ರರಿಂದ ಯುಕ್ತನಾಗಿ, ಏಕವಸ್ತ್ರಧರನಾಗಿ, ಕ್ಷುತ್ತಿನಿಂದಲೂ ಪಿಪಾಸೆಯಿಂದಲೂ

ತಪಿಸುತ್ತಾ, ಬೇಟೆಯ ಸಂಚಾರದಿಂದ ಉಂಟಾದ ಶ್ರಮದಿಂದ ಬಳಲುತ್ತಾ, ಅಡಿಗಡಿಗೂ ಎಡವುತ್ತ, ಪಾದಚಾರನಾಗಿ ಮೆಲ್ಲಗೆ ತೆರಳಿಹೋದನು. ಈ ರೀತಿಯಲ್ಲಿ ಹೋಗುತ್ತಲಿರುವ ರಾಯನನ್ನು ನೋಡಿ, ಸತ್ಯಕೀರ್ತಿಯು ದುಃಖಶೋಕಗಳಿಂದ ಪೀಡಿಸಲ್ಪಟ್ಟು ವ್ಯಾಕುಲೇಂದ್ರಿಯನಾಗಿ ಪ್ರಲಾಪಿಸಿದನು. ಏನೆಂದರೆ: ‘ ಅಕಟಕಟಾ! ಲಕ್ಷ್ಮಿಯು ಚಂಚಲೆಯು. ಅವಳು ಒಂದು ಸ್ಥಳದಲ್ಲಿಯೂ ಸ್ಥಿರವಾಗಿ ನಿಲ್ಲುವ ಸ್ವಭಾವವಿಲ್ಲದೆ ಯಾವಾಗಲೂ ಆನೆಗಳ ಕಿವಿಗಳಂತೆ ಅತಿ ಚಂಚಲೆಯಾಗಿರುವಳು. ಸಪ್ತದ್ವೀಪಗಳಿಂದಲೂ ಸಪ್ತಸಮುದ್ರಗಳಿಂದಲೂ ಸಮೇತವಾದ ಈ ಭೂಮಂಡಲಕ್ಕೆ ಏಕಪ್ರಭುವಾದ ಈ ಮಹಾರಾಜನು ಕೂಡ ಇಂಥ ದುರ್ದಶೆಯನ್ನು ಅನುಭವಿಸುತ್ತಾನಲ್ಲ! ಲೋಕದಲ್ಲಿ ಪುರುಷರಿಗೆ ದೈವಾನುಕೂಲ್ಯವು ತಪ್ಪಿದರೆ ಆಕಸ್ಮಿಕಗಳಾದ ವಿಪತ್ತುಗಳು ಪ್ರಾಪ್ತವಾಗುತ್ತವೆ. ಈ ಸಮಸ್ತಭೂಮಂಡಲದಲ್ಲಿಯೂ ಶತ್ರುಗಳ ಪ್ರಸಕ್ತಿಯೇ ಇಲ್ಲದೆ ಏಕಚಕ್ರಾಧಿಪತ್ಯವನ್ನು ಮಾಡುತ್ತಿದ್ದ ಈ ಹರಿಶ್ಚಂದ್ರಮಹಾರಾಜನಿಗೆ ಒಬ್ಬ ಬ್ರಾಹ್ಮಣಮಾತ್ರನಿಂದ ಇಂಥ ವಿಪತ್ತು ಬರುವದೆಂದು ಯಾರು ತಿಳಿದಿದ್ದರು? ಯಾವ ರಾಜನ ಬಲದಿಂದ ದೇವೇಂದ್ರನು ಸ್ವರ್ಗಲೋಕದಲ್ಲಿ ನಿರ್ಭಯನಾಗಿ ಇರುವನೋ; ಯಾವಾತನ ಧನುಸ್ಸಿನಿಂದ ಹೊರಟುಬರುವ ಕಾಲಾಗ್ನಿಯಂತೆ ಜ್ವಲಿಸುತ್ತಿರುವ ಬಾಣಗಳಿಗೆ ಎದುರಾಗಿ ನಿಲ್ಲುವದಕ್ಕೆ ದೇವಾಸುರಮನುಷ್ಯರಲ್ಲಿ ಯಾರೂ ಸಮರ್ಥರಾಗಿಲ್ಲವೋ; ಯಾವ ಮಹಾರಾಜನು ಚತುರಂಗಬಲಸಮೇತನಾಗಿ ಜೈತ್ರಯಾತ್ರೆಗಾಗಿ ತೆರಳಿದ ಕಾಲದಲ್ಲಿ, ಅಶ್ವಗಳ ಧ್ವನಿಗಳಿಂದಲೂ ಶಂಖಭೇರ್ಯಾದಿವಾದ್ಯಗಳ ಘೋಷಗಳಿಂದಲೂ ಭಟರುಗಳ ಸಿಂಹನಾದಗಳಿಂದಲೂ ಹತ್ತುದಿಕ್ಕುಗಳೂ ಪೂರಿತಗಳಾಗಲಾಗಿ, ಆ ಧ್ವನಿಯನ್ನು ಕೇಳಿ ಶತ್ರುರಾಜರು ಮಹಾಭಯಪೀಡಿತರಾಗಿ ತಮ್ಮತಮ್ಮ ಪಟ್ಟಣಗಳನ್ನು ಬಿಟ್ಟುಬಿಟ್ಟು ಅರಣ್ಯಗಳಿಗೆ ಫಲಾಯನಗೈದರೋ; ಅವರಲ್ಲಿ ಧೈರ್ಯಶಾಲಿಗಳಾದ ಶೂರರಾದ ಅರಸುಗಳು ಎದುರಾಗಿ ಬಂದು ಯಾರೊಡನೆ ಯುದ್ಧವನ್ನು ಆರಂಭಿಸಿ, ತಮ್ಮ ಶಕ್ತಿಸಾಮರ್ಥ್ಯವುಳ್ಳವರೆಗೂ ಯುದ್ಧವನ್ನು ಮಾಡಿ, ಅನಂತರದಲ್ಲಿ ಆ ರಾಜನಿಂದ ಪ್ರಯೋಗಿಸಲ್ಪಟ್ಟ ಶಸ್ತ್ರಾಸ್ತ್ರಗಳಿಂದ ಛೇದಿಸಲ್ಪಟ್ಟ ಭುಜಗಳೂ ಪಾದಗಳೂ ಊರುಗಳೂ ಕಂಠಗಳೂ ಉಳ್ಳವರಾಗಿ, ಅನೇಕಜನರು ಭೂಮಿಯಲ್ಲಿ ಶಯನಗೈದರೋ; ಮತ್ತೆ ಕೆಲವರು ವಿರಥರಾಗಿ ಛೇದಿಸಲ್ಪಟ್ಟ ಅವಯವಗಳುಳ್ಳವರಾಗಿ ತಮ್ಮತಮ್ಮ ಪ್ರಾಣಗಳನ್ನು ರಕ್ಷಿಸಿಕೊಂಡು ಫಲಾಯನಗೈದರೋ; ಇನ್ನೂ ಬಲಿಷ್ಠರಾದ ಅಸುರರು ಬಂದು ಸ್ವರ್ಗಲೋಕವನ್ನು ಆಕ್ರಮಿಸುವದಕ್ಕೆ ಉದ್ಯುಕ್ತರಾಗಲು, ದೇವೇಂದ್ರನು ತನಗೆ ಸಹಾಯಾರ್ಥವಾಗಿ ಮಾತಲಿಯೆಂಬ ಸಾರಥಿಯಿಂದ ಯುಕ್ತವಾದ ತನ್ನ ರಥವನ್ನು ಕೊಟ್ಟು ಭೂಲೋಕಕ್ಕೆ ಕಳುಹಿಸಿಕೊಡಲು, ಯಾವ ಮಹಾರಾಜನು ಸ್ವರ್ಗವನ್ನೈದಿ ನೀನು ನಿರ್ಭಯನಾಗಿರುವದೆಂದೂ ತಾನು ಅಸುರರಮೇಲೆ ಹೋಗಿ ಅವರನ್ನು ಜೈಸಿಬರುತ್ತೇನೆಂದೂ ದೇವೇಂದ್ರನಿಗೆ ಅಭಯವನ್ನಿತ್ತು, ಆತನಿಂದ ಕಳುಹಿಸಲ್ಪಟ್ಟ ಸೇನೆಯನ್ನು ಸಹಾಯವಾಗಿ ಕರೆದುಕೊಂಡು, ಮಹಾಭೇರಿಗಳು ನಗಾರಿಗಳು ಕಹಳೆಗಳು ತಮಟೆಗಳು ಕೊಂಬುಗಳು ಮುಂತಾದ ಮಹಾಧ್ವನಿಗಳುಳ್ಳ ವಾದ್ಯಗಳಿಂದ ಲೋಕತ್ರಯವನ್ನು ತುಂಬುತ್ತಾ ಆ ಮಹಾಪರಾಕ್ರಮಿಗಳಾದ ದೈತ್ಯದಾನವರ ಸೇನೆಯನ್ನು ಮದಗಜವು ಕದಳೀವನವನ್ನು ಪ್ರವೇಶಿಸುವಂತೆ ಪ್ರವೇಶಮಾಡಿ, ಹದೆಯೇರಿಸಲ್ಪಟ್ಟ ಮಹತ್ತಾದ ಧನುಸ್ಸಿನಲ್ಲಿ ಸಂಧಾನಮಾಡಿದ ಮಹಾ ಸರ್ಪಗಳಂತೆ ಅತಿ ಕ್ರೂರಗಳಾದ ಶತ್ರುಗಳ ಪ್ರಾಣವನ್ನಪಹರಿಸುವ ಬಾಣಗಳಿಂದಲೂ ಖಡ್ಗಗಳಿಂದಲೂ ಗದೆಗಳಿಂದಲೂ ಕುಂತತೋಮರ ಮೊದಲಾದ ಅನೇಕ ಆಯುಧಗಳಿಂದಲೂ ಸಮಸ್ತವಾದ ಅಸುರರ ಸೈನ್ಯವನ್ನೂ ಸಂಹರಿಸಿ, ಅನಂತರದಲ್ಲಿ ಆಗ್ನೇಯಾಸ್ತ್ರ ವಾರುಣಾಸ್ತ್ರ ವಾಯವ್ಯಾಸ್ತ್ರ ಸರ್ಪಾಸ್ತ್ರ ಗಾರುಡಾಸ್ತ್ರ ವೃಷಭಾಸ್ತ್ರ ನಾರಸಿಂಹಾಸ್ತ್ರ ಶರಭಾಸ್ತ್ರ ವೈಷ್ಣವಾಸ್ತ್ರ ಪಾಶುಪತಾಸ್ತ್ರ ಮುಂತಾದ ಅನೇಕಾಸ್ತ್ರಗಳನ್ನು ಪ್ರಯೋಗಿಸಿ ಅಸುರಸೇನಾಧಿಪತಿಗಳಾದ ಮಹಾದೈತ್ಯರನ್ನು ಸಂಹರಿಸಿ, ಹತಶೇಷರಾದ ಅಸುರರನ್ನು ಪಾತಾಳಕ್ಕೆ ಫಲಾಯನಮಾಡಿಸಿ, ಜಯಭೇರಿಯನ್ನು ಹಾಕಿಸಿಕೊಂಡು ಯುದ್ಧರಂಗದಿಂದ ಹಿಂತಿರುಗಿ ಬರುವಾಗ ದೇವೇಂದ್ರನಿಂದ ಎದುರಾಗಿ ಕಳುಹಿಸಲ್ಪಟ್ಟ ಗಂಧರ್ವರಿಂದಲೂ ಅಪ್ಸರಸ್ತ್ರೀಯರಿಂದಲೂ ವಿದ್ಯಾಧರರಿಂದಲೂ ಕಿನ್ನರಕಿಂಪುರುಷರಿಂದಲೂ ಪರಿವೃತನಾಗಿ, ಬರುವ ಸಮಯದಲ್ಲಿ ಗಂಧರ್ವರು ದಿವ್ಯವಾದ ಗಾನವನ್ನು ಮಾಡುತ್ತಿರಲು, ರಂಭೆ ಊರ್ವಸಿ ಮೇನಕೆ ತಿಲೋತ್ತಮೆ ವಿಶಾಚಿ ಘೃತಾಚಿ ಪುಂಜಿಕಸ್ಥಲೆ ಪೂರ್ವಚಿತ್ತಿ ಸಹಜನ್ಯೆ ಮೊದಲಾದ ಅಪ್ಸರಸ್ತ್ರೀಯರು ಸಪ್ತತಾಳಗತಿಗಳನ್ನನುಸರಿಸಿ ನಾಟ್ಯವನ್ನು ಮಾಡುತ್ತಿರಲು, ವಿದ್ಯಾಧರರು ಸ್ತುತಿ

ಗೈಯುತ್ತಿರಲು, ಮಹರ್ಷಿಗಳು ಆಶೀರ್ವಾದವಚನಗಳನ್ನು ಪ್ರಯೋಗಿಸಸುತ್ತಿರಲು, ಆ ಮಹರ್ಷಿಗಳ ಆಶೀರ್ವಾದವಚನಗಳನ್ನು ಪ್ರಮಾಣಪೂರ್ವಕವಾಗಿ ಶಿರಸಾಗ್ರಹಿಸಿ, ಈ ರೀತಿಯಾದ ವಿಭವಸಂಪನ್ನನಾಗಿ ಇಂದ್ರನ ಸಭೆಗೆ ಬಂದು, ಆತನ ಅರ್ಧಾಸನದಲ್ಲಿ ಕುಳ್ಳಿರಿಸಲ್ಪಟ್ಟು ಆತನಿಂದ ಮಾಡಲ್ಪಟ್ಟ ಸತ್ಕಾರಗಳನ್ನು ಪರಿಗ್ರಹಿಸಿ, ಇಂದ್ರನಿಗೆ ಪ್ರಣಾಮವನ್ನು ಮಾಡಿ ಅಪ್ಪಣೆಯನ್ನು ತೆಗೆದುಕೊಂಡು ಅಯೋಧ್ಯಾಪಟ್ಟಣಕ್ಕೆ ಬಂದನೋ; ಅಂಥ ಸಾರ್ವಭೌಮನಾದ ಹರಿಶ್ಚಂದ್ರಮಹಾರಾಜನು ಪಾದಗಳಿಂದ ಸಂಚರಿಸುತ್ತ ತೆರಳಿ ಹೋಗುತ್ತಾನಲ್ಲ! ಮುತ್ತುಗಳ ಸರಗಳಿಂದ ಅಲಂಕೃತಗಳಾಗಿ ಹೊಳೆಯುತ್ತಲಿರುವ ಸುವರ್ಣದಂಡಗಳಿಂದ ಪ್ರಕಾಶಿಸುವ ಅನೇಕಛತ್ರಗಳನ್ನು ಹಿಡಿಸಿಕೊಂಡು ರಾಜವೀಧಿಗಳಲ್ಲಿ ಬರುತ್ತಿದ್ದ ಈ ಹರಿಶ್ಚಂದ್ರರಾಯನನ್ನು ನೋಡುವದಕ್ಕೆ ಸಾವಿರ ಕಣ್ಣುಗಳಾದರೂ ಸಾಲದು! ತ್ರಿಶಂಕುಮಹಾರಾಜನ ಪುತ್ರನಾದ ಹರಿಶ್ಚಂದ್ರನು ಘೋರವಾದ ಸಂಕಟಕ್ಕೆ ಸಿಕ್ಕಿ, ನಾನಾವಿಧವೃಕ್ಷಗಳಿಂದಲೂ ಹೊದರುಗಳಿಂದಲೂ ಭಯಂಕರವಾದ ಅನೇಕಪಕ್ಷಿಗಳ ಘೋಷದಿಂದಲೂ ಪೂರ್ಣವಾಗಿ, ವ್ಯಾಘ್ರಗಳಿಂದಲೂ ಸಿಂಹಗಳಿಂದಲೂ ತೋಳಗಳಿಂದಲೂ ಕಾಡುಹಂದಿಗಳಿಂದಲೂ ಇನ್ನೂ ಅನೇಕಪ್ರಕಾರವಾದ ದುಷ್ಟಜಂತುಗಳಿಂದಲೂ ಅತಿಘೋರವಾಗಿ, ಅಶುಭಗಳಾದ ನರಿಗಳ ಹೀನಸ್ವರಗಳಿಂದ ಪೂರಿತವಾದ ಜನಸಂಚಾರವಿಲ್ಲದ ಮಹಾರಣ್ಯದಲ್ಲಿ, ಅಸಹಾಯನಾಗಿ ಬಾಲಕನಾದ ಪುತ್ರನನ್ನೂ ಬಾಲೆಯಾದ ಪತ್ನಿಯನ್ನೂ ಸಹ ಕಟ್ಟಿಕೊಂಡು ಹ್ಯಾಗೆ ಸಂಚರಿಸುವನು! ವ್ರತಗಳಿಂದಲೂ ನಿಯಮಗಳಿಂದಲೂ ದಾನಗಳಿಂದಲೂ ಯೋಗಗಳಿಂದಲೂ ಮಂತ್ರಗಳಿಂದಲೂ ಧ್ಯಾನಸಮಾಧಿಗಳಿಂದಲೂ ಯಾತರಿಂದಲೂ ಕೂಡ ದೈವವನ್ನು ತಪ್ಪಿಸುವದಕ್ಕೆ ಪುರುಷನು ಶಕ್ತನಲ್ಲ! ಉತ್ತಮಾಶ್ವಗಳಮೇಲೂ, ಮದಗಜಗಳಮೇಲೆ ಅಲಂಕರಿಸಲ್ಪಟ್ಟ ಅಂಬಾರಿಗಳಲ್ಲಿಯೂ, ಸುವರ್ಣಮಯವಾದ ಪಲ್ಲಕ್ಕಿಗಳಲ್ಲಿಯೂ ಕುಳಿತು ಸಂಚರಿಸುತ್ತಿದ್ದ ಈ ರಾಜನು ಈಗ ಘೋರವಾದ ಈ ಅರಣ್ಯದಲ್ಲಿ ಪಾದಚಾರಿಯಾಗಿ ಹೋಗುವದಕ್ಕೆ ಹ್ಯಾಗೆ ಶಕ್ತನಾಗುವನು! ಸರ್ವಲಕ್ಷಣಯುಕ್ತಳಾಗಿ ನಿತ್ಯಸೌಭಾಗ್ಯಸಂಪತ್ತಿನಿಂದ ಶೋಭಿಸುವ ಈ ಚಂದ್ರಮತೀದೇವಿಯು ಮಹಾದುಃಖದಿಂದ ಪೀಡಿತಳಾಗಿ ಅಶೋಕವೃಕ್ಷದ ಚಿಗುರುಗಳಂತೆ ಕೆಂಪಾಗಿಯೂ ಕೋಮಲವಾಗಿಯೂ ಇರುವ ಪಾದಂಗಳಿಂದ ನಡೆಯಲಾರದೆ ಶ್ರಮಪಡುತ್ತಿದ್ದರೆ, ಪ್ರಾಣಕಾಂತೆಯಾದ ಪತಿವ್ರತೆಯಾದ ಈ ಚಂದ್ರಮತಿಯನ್ನು ನೋಡಿ ರಾಜನು ಹ್ಯಾಗೆ ಸಹಿಸುವನು! ಇಕ್ಷ್ವಾಕುವಂಶಕ್ಕೆ ಭೂಷಣನೂ, ಪದ್ಮಗಳಂತೆ ಸುಂದರವಾದ ಹಸ್ತವುಳ್ಳವನೂ, ಸುಖಪಡುವದಕ್ಕೆ ಯೋಗ್ಯನೂ, ಶಿರೀಷಪುಷ್ಪದಂತೆ ಅತಿಕೋಮಲವಾದ ಶರೀರವುಳ್ಳವನೂ ಆಗಿ, ಸರ್ವಾಂಗಸೌಂದರ್ಯದಿಂದ ಬಾಲಸೂರ್ಯನಂತೆ ಹೊಳೆಯುತ್ತಲಿರುವ ಆಗರ್ಭಶ್ರೀಮಂತನಾದ ಅತಿ ಪ್ರೇಮಾಸ್ಪದನಾದ ಲೋಹಿತಾಸ್ಯನೆಂಬ ಪುತ್ರನು ಅರಣ್ಯದಲ್ಲಿ ಪಾದಚಾರಿಯಾಗಿ ನಡೆದು ಬರುವಾಗ, ಅದನ್ನು ನೋಡಿ ರಾಜನು ಹ್ಯಾಗೆ ಶೋಕವನ್ನು ಸಹಿಸುವನು! ಈ ರೀತಿಯಲ್ಲಿ ಪತ್ನೀಪುತ್ರಸಮೇತನಾಗಿ, ಧೂಳಿಗಳಿಂದ ಧೂಸರಿತವಾದ ಶರೀರವುಳ್ಳವನಾಗಿ, ಕ್ಷುತ್ಪಿಪಾಸೆಗಳಿಂದ ಪೀಡಿತನಾಗಿ, ಕಾಲುನಡೆಯಿಂದ ಅರಣ್ಯದಲ್ಲಿ ಹ್ಯಾಗೆ ಸಂಚರಿಸುವನು!' ಎಂದು ಸತ್ಯಕೀರ್ತಿಯು ವಿಲಾಪನಮಾಡಿದನು" ಎಂದು ಮಾರ್ಕಂಡೇಯನು ಧರ್ಮರಾಯನಿಗೆ ಹೇಳಿದನು.

## ೨೯೧–(೮)ನೇ ಅಧ್ಯಾಯ.–ಹರಿಶ್ಚಂದ್ರೋಪಾಖ್ಯಾನ–(ಚಂದ್ರಮತಿಯು ಅಗ್ನಿಯನ್ನುಪ್ರವೇಶಿಸುವಿಕೆ).

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು–ಕೇಳು ಜನಮೇಜಯನೆ, ಮಾರ್ಕಂಡೇಯನು ಧರ್ಮರಾಯನನ್ನು ಕುರಿತು "ಎಲೈ ಧರ್ಮರಾಯನೆ, ಈ ರೀತಿಯಲ್ಲಿ ಹರಿಶ್ಚಂದ್ರನು ತೆರಳಿ ಹೋಗುತ್ತಾ ಮನಸ್ಸಿನಲ್ಲಿ 'ವಿಶ್ವಾಮಿತ್ರಋಷಿಯು ರಾಜ್ಯದಲ್ಲಿರಲು ಆ ಋಷಿಯ ಅಪ್ಪಣೆಯಿಲ್ಲವಾದ್ದರಿಂದ, ನಾನು ಎಲ್ಲಿಗೆ ಹೋಗಬೇಕು? ಸಪ್ತದ್ವೀಪಸಮೇತವಾದ ಈ ಭೂಮಂಡಲವೆಲ್ಲ ವಿಶ್ವಾಮಿತ್ರಋಷಿಯ ಅಧೀನವಾಗಿರುವದು. ಆದರೆ ವಾರಣಾಸಿಯೆಂಬ ನಾಮಧೇಯದಿಂದ ಪ್ರಸಿದ್ಧವಾದ ಕಾಶೀಕ್ಷೇತ್ರವು ದೇವತೆಗಳಿಂದ ಪೂಜಿತವಾದದ್ದು; ಮಹಾದೇವನಾದಪರಮೇಶ್ವರನ ಸ್ಥಾನವು. ಅದು ಮನುಷ್ಯರದಲ್ಲವಾದಕಾರಣ ವಿಶ್ವಾಮಿತ್ರಋಷಿಯ ಆಧಿಪತ್ಯಕ್ಕೆ ಸೇರಲಿಲ್ಲ.

ಆ ಕಾಶೀಕ್ಷೇತ್ರದಲ್ಲಿ ಸಾಕ್ಷಾತ್ ಪರಮೇಶ್ವರನಾದ ಚಂದ್ರಮೌಳೀಶ್ವರಸ್ವಾಮಿಯು ಬ್ರಹ್ಮ ವಿಷ್ಣು ಇಂದ್ರ ಮೊದಲಾದ ದೇವತೆಗಳಿಂದ ಪೂಜಿತವಾದ ಪಾದಪದ್ಮವುಳ್ಳವನಾಗಿ ವಾಸವನ್ನು ಮಾಡುತ್ತಾನೆ. ಅಲ್ಲಿ ಸಾಕ್ಷಾತ್ ವಿಶ್ವೇಶ್ವರನು ಪಾರ್ವತೀಸಮೇತನಾಗಿ ವಾಸಮಾಡುತ್ತಾನೆ. ಆದ್ದರಿಂದ ಆ ಕಾಶೀಕ್ಷೇತ್ರಕ್ಕೆ ಹೋಗಿ ಆತನ ಆಜ್ಞೆಯಿಂದ ವಾಸ ವನ್ನು ಮಾಡೋಣ' ಎಂದು ಆಲೋಚಿಸಿ, ಪತ್ನಿಪುತ್ರಸಮೇತನಾಗಿ ತೆರಳಹೋಗುವಾಗ, ನಡೆಯಲಾರದೆ ಶ್ರಮ ಪಡುವ ಬಾಲಕನನ್ನೂ ಪತ್ನಿಯಾದ ಚಂದ್ರಮತಿಯನ್ನೂ ಸ್ವಲ್ಪದೂರ ಮೆಲ್ಲನೆ ನಡೆಯಿಸಿಕೊಂಡು, ಹಸಿವು ಬಾಯಾರಿಕೆಗಳಿಂದ ಪೀಡಿತನಾಗಿ ಹೋಗುತ್ತಿದ್ದನು. ಈ ಪ್ರಕಾರವಾಗಿ ಶ್ರಮಪಟ್ಟುಕೊಂಡು ಹೋಗುವಾಗ ನಕ್ಷತ್ರಕನು ಸಂಗಡಲೆ ಹೋಗುತ್ತಾ, ಮಧ್ಯಮಾರ್ಗದಲ್ಲಿ 'ಎಲೈ ಅರಸೆ, ನನ್ನ ಕಾಲುಗಳು ಸೆಳೆಯುತ್ತವೆ. ನಾನು ನಡೆಯಲಾರೆನು. ನಿನ್ನ ಮಗನನ್ನು ಇಳಿಸಿಬಿಟ್ಟು ನನ್ನನ್ನು ಹೊತ್ತುಕೊಂಡು ನಡೆ' ಎಂದು ಉಪದ್ರವ ಪಡಿಸಿದನು. ಆಗ ಆ ಋಷಿಕುಮಾರಕನನ್ನು ಎಷ್ಟು ಪ್ರಕಾರವಾಗಿ ಬೇಡಿಕೊಂಡು ಹೇಳಿಕೊಂಡರೂ, ಒಪ್ಪದೆ ಅಲ್ಲಿಯೇ ಮಲಗಿಕೊಂಡನು. 'ನನಗೆ ಹಸಿವಾಗುತ್ತದೆ, ಅನ್ನವನ್ನುಕೊಡು; ಇಲ್ಲದಿದ್ದರೆ ನಮ್ಮ ದ್ರವ್ಯವೆಲ್ಲ ವನ್ನು ಇಲ್ಲೇಕೊಡು, ನಾನು ಹೋಗುತ್ತೇನೆ' ಎಂದು ಪೀಡಿಸುತ್ತಲಿರುವ ಆ ನಕ್ಷತ್ರಕನ ಬಾಧೆಯನ್ನು ಸಹಿಸಲಾರದೆ ರಾಜನು, ತನ್ನ ಕುಮಾರಕನನ್ನು ಇಳಿಸಿ, ಅವನನ್ನು ಹೆಗಲಮೇಲೆ ಕುಳ್ಳಿರಿಸಿಕೊಂಡು ಮುಂದೆ ಗಮಿಸಿದನು.

ಈ ರೀತಿಯಲ್ಲಿ ಬಹುದೂರ ಮಾರ್ಗವನ್ನತಿಕ್ರಮಿಸಿ ಹೋಗುತ್ತಿರುವಾಗ, ಮಧ್ಯಮಾರ್ಗದಲ್ಲಿ ಸಾಯಂ ಕಾಲವಾಯಿತು; ಪಕ್ಷಿಗಳೆಲ್ಲವು ಧ್ವನಿಗೈಯುತ್ತ ಗೂಡುಗಳಿಗೆ ಬಂದು ಸೇರಿದವು; ಅಂಧಕಾರವು ವ್ಯಾಪಿಸಿತು. ಹರಿಶ್ಚಂದ್ರನು ಆ ಭಯಂಕರವಾದ ಅರಣ್ಯದಲ್ಲಿ ಮಾರ್ಗಗಳಲ್ಲಿ ಹಳ್ಳಗಳನ್ನೂ ತಿಟ್ಟುಗಳನ್ನೂ ಕಲ್ಲುಗಳನ್ನೂ ಮುಳ್ಳುಗಳನ್ನೂ ಕಾಣದೆ ಎಡವುತ್ತ ಹೋಗಿ ಒಂದು ಸರಸ್ಸನ್ನು ಕಂಡು, ಆ ಸರಸ್ಸಿನಲ್ಲಿ ಪಾದಪ್ರಕ್ಷಾಳನ ವನ್ನು ಮಾಡಿಕೊಂಡು ಅರ್ಘ್ಯಪ್ರದಾನವನ್ನುಮಾಡಿ, ಪ್ರಾಣಧಾರಣಾರ್ಥವಾಗಿ ಸ್ವಲ್ಪ ಉದಕವನ್ನು ಪಾನಮಾಡಿ 'ಎಲೈ ಬಾಲಕನೆ, ನೀನೂ ಸ್ವಲ್ಪ ಉದಕವನ್ನು ಪಾನಮಾಡು. ಬೇರೆ ಅನ್ನವನ್ನು ಪರಮೇಶ್ವರನು ಕೊಡಲಿಲ್ಲ' ಎಂದು ವ್ಯಸನಪಡುತ್ತ, ಕುಮಾರಕನಿಗೂ ಸ್ವಲ್ಪ ಉದಕವನ್ನು ಕುಡಿಸಿದನು. ಅನಂತರದಲ್ಲಿ ಪತಿವ್ರತೆಯಾದ ಚಂದ್ರಮತೀದೇವಿಯು ಪತಿಯ ಆಜ್ಞೆಯಿಂದ ಪಾದಪ್ರಕ್ಷಾಳನವನ್ನು ಮಾಡಿಕೊಂಡು ಸ್ವಲ್ಪ ಉದಕವನ್ನು ಪಾನ ಮಾಡಿ, ಮಾರ್ಗಶ್ರಮದಿಂದಲೂ ಅನ್ನವಿಲ್ಲದ ಸಂಕಟದಿಂದಲೂ ಬಳಲಿ ಆ ವೃಕ್ಷದ ಮೂಲದಲ್ಲಿ ನೆಲದಮೇಲೆ ಬಾಲಕ ನನ್ನು ಮಲಗಿಸಿಕೊಂಡು ಮಲಗಿದಳು. ಏಕವಸ್ತ್ರಧಾರಿಯಾದ ಹರಿಶ್ಚಂದ್ರರಾಜನು ಹಾಸಿಕೆ ಹೊದ್ದಿಕೆಗಳು ಇಲ್ಲದ್ದರಿಂದ ನೆಲದಮೇಲೆ ಶಯನಮಾಡಿ, ಮಾರ್ಗಶ್ರಮದಿಂದ ಸ್ವಲ್ಪಹೊತ್ತು ವಿಶ್ರಮಿಸಿಕೊಂಡನಂತರ ಎದ್ದು ಕುಳಿತುಕೊಂಡು ಚಿಂತಿಸುತ್ತಲಿದ್ದನು. ಆಗ ನಕ್ಷತ್ರಕನು ಅರಸನನ್ನು ನೋಡಿ 'ಎಲೈ ಅರಸೆ, ನನ್ನ ಕಾಲುಗಳು ಬಹುವಾಗಿ ನೋಯುತ್ತಿವೆ, ಹಿಸುಕು; ಇಲ್ಲದಿದ್ದರೆ ನಾನು ಮುಂದಕ್ಕೆ ನಡೆಯಲಾರೆನು; ದ್ರವ್ಯವನ್ನೆಲ್ಲ ಇಲ್ಲೇ ಕೊಟ್ಟುಬಿಡು. ನಾನು ಋಷೀಶ್ವರನ ಸಮೀಪಕ್ಕೆ ಹೋಗುತ್ತೇನೆ' ಎಂದು ಸರಿಹೊತ್ತಿನಲ್ಲಿ ಪೀಡಿಸಲಾಗಿ, ಹರಿ ಶ್ಚಂದ್ರನು 'ಎಲೈ ಋಷಿಕುಮಾರಕನೆ, ಈಗ ಹಣವನ್ನು ಎಲ್ಲಿಂದ ಕೊಟ್ಟೇನು? ಕಾಶೀಕ್ಷೇತ್ರಕ್ಕೆ ತಲುಪಿದ ಮೇಲೆ ಶೀಘ್ರವಾಗಿ ನಿನ್ನ ದ್ರವ್ಯವನ್ನು ಅನುಕೂಲಮಾಡುತ್ತೇನೆ. ಅಷ್ಟುಪರ್ಯಂತವೂ ನನ್ನಲ್ಲಿ ದಯಮಾಡು' ಎಂದು ಬೇಡಿಕೊಂಡು, ಅವನ ಕಾಲುಗಳನ್ನೊತ್ತಿ ಸಮಾಧಾನಮಾಡಿ, ಬೆಳಗಾದಮೇಲೆ ಪತ್ನೀಪುತ್ರಸಮೇತನಾಗಿ ಮುಂದಕ್ಕೆ ತೆರಳಿದನು. ಈ ಪ್ರಕಾರವಾಗಿ ಅತಿಪ್ರಯಾಸಪಟ್ಟು, ಅನ್ನೋದಕಗಳನ್ನು ಕಾಣದೆ ಜಲಮಾತ್ರದಿಂದಲೇ ಪ್ರಾಣಧಾರಣೆಯನ್ನು ಮಾಡಿಕೊಂಡು, ಮೆಲ್ಲಮೆಲ್ಲನೆ ಬಾಲಕನನ್ನೂ ಪತ್ನಿಯನ್ನೂ ಸಹ ಕರೆದುಕೊಂಡು, ಕಾಶೀ ಪಟ್ಟಣದ ಸಮೀಪಕ್ಕೆ ಹೋಗುತ್ತಿರಲು; ಇನ್ನು ಒಂದು ಮಧ್ಯಾಹ್ನದ ಪ್ರಯಾಣದೂರದಲ್ಲಿ ಕಾಶಿಯಿರುವಲ್ಲಿ, ಮಹ ತ್ತಾದ ಬಿಸಿಲಿನಿಂದ ತಪ್ತನಾಗಿ ಒಂದು ವೃಕ್ಷದ ಛಾಯೆಯಲ್ಲಿ ಕುಳಿತುಕೊಂಡನು. ಆಗ ವಿಶ್ವಾಮಿತ್ರಋಷಿಯು ಅಗ್ನಿಯನ್ನುನಿರ್ಮಾಮಾಡಿ, ಆ ಅರಣ್ಯದಲ್ಲಿ ಕಾಡುಗಿಚ್ಚಾಗಿ ಬರುವಂತೆ ಮಾಡಿದನು. ಆ ಅಗ್ನಿಯು ಮಹತ್ತಾದ ಅರಣ್ಯದಲ್ಲಿ ಕಾಡುಗಿಚ್ಚಿನ ರೂಪದಿಂದ ಎಲ್ಲಾ ಕಡೆಯಲ್ಲೂ ಜ್ವಾಲೆಗಳನ್ನು ವ್ಯಾಪಿಸಿತು. ಬಳಿಕ ಆ ಕಾಡ್ಗಿಚ್ಚು

ಸಾಲ ದೇವದಾರುವೃಕ್ಷಗಳಿಂದ ಸಾಂದ್ರವಾದ ವನದಲ್ಲಿ ಹತ್ತಿಕೊಂಡು, ಮಹಾಜ್ವಾಲೆಗಳಿಂದ ಅರಣ್ಯವನ್ನೆಲ್ಲ ಬಳಸಿಕೊಂಡು, ಹಸೀಮರಗಳನ್ನು ದಹಿಸುವಾಗ ಚಟಚಟಾತ್ಕಾರಗಳೂ ಮಹತ್ತಾದ ಧೂಮಪ್ರಸರವೂ ಉಂಟಾಗಿ, ಸಮೀಪದಲ್ಲಿ ನಿಲ್ಲುವದಕ್ಕೆ ಅಶಕ್ಯವಾದದ್ದಲ್ಲದೆ ಪ್ರಳಯಾಗ್ನಿಯಂತೆ ವನವೆಲ್ಲವನ್ನು ವ್ಯಾಪಿಸಿಕೊಂಡು, ಪತ್ನೀಪುತ್ರಸಮೇತನಾದ ಹರಿಶ್ಚಂದ್ರನು ಯಾವಯಾವ ಕಡೆಯಲ್ಲಿ ಹೋದರೂ ಬಿಡದೆ ಬಳಸಿಕೊಂಡಿತು. ಪಕ್ಷಿಗಳು ಆ ಕಾಡ್ಗಿಚ್ಚು ಯಾವಯಾವ ಕಡೆಗೆ ವ್ಯಾಪಿಸಿತೋ ಆಯಾ ದಿಕ್ಕುಗಳನ್ನು ಬಿಟ್ಟು ಮತ್ತೊಂದು ದಿಕ್ಕಿಗೆ ಹೊರಡಲು ಯತ್ನಿಸಿ, ಧೂಮದಿಂದ ಕಣ್ಣು ಮುಚ್ಚಿಹೋಗಲಾಗಿ ಮಹಾತಾಪದಿಂದ ತಪಿಸಿ, ದಿಕ್ಕುತೋರದೆ ಅಗ್ನಿಯಲ್ಲೇ ಬಿದ್ದವು. ಇದನ್ನೆಲ್ಲವನ್ನು ನೋಡಿ ಹರಿಶ್ಚಂದ್ರನು ಚಿಂತಾಕ್ರಾಂತನಾಗಿ 'ಈ ದವಾಗ್ನಿಯಲ್ಲಿ ಶರೀರವು ಉಳಿಯುವಂತೆ ತೋರುವದಿಲ್ಲ. ಆದರೆ ಬ್ರಾಹ್ಮಣನಿಗೆ ಕೊಡತಕ್ಕ ಧನವನ್ನು ಕೊಡದೆ ನಾನು ಶರೀರವನ್ನು ಬಿಟ್ಟರೆ, ನನಗೆ ಉತ್ತಮಗತಿಯು ಹ್ಯಾಗೆ ಬಂದೀತು. ಅಷ್ಟುಮಾತ್ರವೇ ಅಲ್ಲ, ನನ್ನ ಪ್ರಾಣಕಾಂತೆಯಾದ ಪತಿವ್ರತೆಯಾದ ಈ ಚಂದ್ರಮತಿಯು ಅಗ್ನಿಯಿಂದ ದಹಿಸಲ್ಪಟ್ಟರೆ ನೋಡಿ ನಾನು ಹ್ಯಾಗೆ ಸಹಿಸಲಿ! ಬಾಲಕನಾದ ಈ ಪುತ್ರನು ಅಗ್ನಿಯಲ್ಲಿ ದಹಿಸಲ್ಪಡುತ್ತಿದ್ದರೆ ನಾನು ಹ್ಯಾಗೆ ನೋಡಲಿ! ನನ್ನನ್ನು ಕುರಿತು ನಾನು ವ್ಯಸನಪಡುವದಿಲ್ಲ. ಪತಿವ್ರತೆಯೂ ಪ್ರಾಣವಲ್ಲಭೆಯೂ ಆದ ಚಂದ್ರಮತಿಗೆ ವ್ಯಸನಪಡುತ್ತೇನೆ. ಅದು ಹಾಗಿರಲಿ. ಈ ಸೂರ್ಯವಂಶಕ್ಕೆ ಅಂಕುರರೂಪನಾದ ಬಾಲಕನಾದ ಈ ಪುತ್ರನಿಗೆ ವ್ಯಸನಪಡುತ್ತೇನೆ. ಭಾಗ್ಯರಹಿತನಾದ ನನ್ನ ಪಾಣಿಗ್ರಹಣವನ್ನು ಮಾಡಿದ್ದರಿಂದ ಈ ಚಂದ್ರಮತಿಯು ಇಂಥ ವಿಪತ್ತಿಗೆ ಪಾತ್ರಳಾದಳು! ನನ್ನ ಉದರದಲ್ಲಿ ಜನಿಸಿದ್ದರಿಂದ ಈ ಬಾಲಕನಾದ ಲೋಹಿತಾಸ್ಯನು ಇಂಥ ಕಷ್ಟಕ್ಕೆ ಪಾತ್ರನಾದನು!' ಎಂದು ಚಿಂತಿಸುತ್ತಿದ್ದನು. ಆಗ ಚಂದ್ರಮತೀದೇವಿಯು 'ಎಲೈ ಪತಿಯೆ, ಲೋಕದಲ್ಲಿ ದುಃಖವನ್ನು ಪರಿಹರಿಸುವದಕ್ಕೆ ಯಾವನು ಶಕ್ತನು? ಸರ್ವಪ್ರಾಣಿಗಳ ಸುಖದುಃಖಗಳಿಗೆ ನಿಯಾಮಕನು ಪರಮೇಶ್ವರನೇ ಸರಿ. ಶಾಶ್ವತನಾದ ಪರಮೇಶ್ವರನು ಸರ್ವಪ್ರಾಣಿಗಳ ಹೃದಯದಲ್ಲಿದ್ದುಕೊಂಡು, ಅವರವರ ಕರ್ಮಾನುಸಾರವಾಗಿ ಸುಖದುಃಖಗಳನ್ನು ಅನುಭವಿಸುವಂತೆ ಪ್ರೇರಿಸುತ್ತಾನೆ. ನೀನು ಶೋಕಪಡಬೇಡ, ಧೈರ್ಯವನ್ನು ಅವಲಂಬಿಸು. ದೈವಕೃತಗಳಾದ ವಿಪತ್ತುಗಳಿಗೆ ಪ್ರಾಜ್ಞರಾದವರು ವ್ಯಸನವನ್ನು ಪಡುವದಿಲ್ಲ' ಎಂದು ಸಮಾಧಾನ ಹೇಳುತ್ತಿದ್ದಳು. ಅಷ್ಟುಹೊತ್ತಿಗೆ ಮಹಾಧೂಮದಿಂದಲೂ ಮಹಾಜ್ವಾಲೆಗಳಿಂದಲೂ ಸಮೇತವಾಗಿ ಅಗ್ನಿಯು ಸಮೀಪಕ್ಕೆ ಬರಲಾಗಿ, ಅಲ್ಲಿರುವ ಜನರೆಲ್ಲರೂ ಧೂಮದಿಂದಲೂ ತಾಪದಿಂದಲೂ ಪೀಡಿತರಾಗಿ ಏನೂ ತೋರದೆ ಎಲ್ಲಿಗೆ ಹೋಗೋಣವೆಂದು ಚಿಂತಾಪರವಶರಾದರು. ಅನಂತರದಲ್ಲಿ ಮಹಾಪತಿವ್ರತೆಯಾದ ಚಂದ್ರಮತಿಯು ಹರಿಶ್ಚಂದ್ರರಾಯನಿಗೆ ಪ್ರದಕ್ಷಿಣೆಯನ್ನು ಮಾಡಿ, ಸಾಷ್ಟಾಂಗವಾಗಿ ಪ್ರಣಾಮವನ್ನು ಮಾಡಿ, ಬಾಷ್ಪಪೂರ್ಣಮುಖಿಯಾಗಿ ಪತಿಶೋಕವನ್ನು ನೋಡಿ ಖಿನ್ನಳಾಗಿ, ಅರಸನನ್ನು ಕುರಿತು, 'ಎಲೈ ಪತಿಯೆ, ನಾನು ವಿಜ್ಞಾಪನೆಮಾಡುತ್ತೇನೆ, ಲಾಲಿಸು. ಎಲೈ ಮಹಾರಾಜನೆ, ನಿನ್ನ ಅನುಗ್ರಹದಿಂದ ನನಗೆ ಇಹಪರಲೋಕಗಳಲ್ಲಿ ಸೌಖ್ಯವುಂಟಾಗುತದ್ತೆ. ಸ್ತ್ರೀಗೆ ಪತಿಯೇ ದೈವವು, ಪತಿಯೇ ಪರಮಗುರುವು; ಪತಿಯು ಸಂತುಷ್ಟನಾದರೆ ಆ ಸ್ತ್ರೀವಿಷಯದಲ್ಲಿ ಸರ್ವದೇವತೆಗಳೂ ಸಂತುಷ್ಟರಾಗುವರು. ಸ್ತ್ರೀಯರಿಗೆ ಪತಿಯ ಅನುಗ್ರಹದಿಂದ ಇಹಪರಲೋಕಗಳಲ್ಲಿ ಸೌಖ್ಯವುಂಟಾಗುವದು. ನಿನ್ನ ಅನುಜ್ಞೆಯಿಂದ ನನಗೆ ಎದುರಾಗಿ ಜ್ವಲಿಸುವ ಅಗ್ನಿಯಲ್ಲಿ ನನ್ನ ದೇಹವನ್ನು ಸಮರ್ಪಿಸುವದಕ್ಕೆ ಇಚ್ಛೈಸುತ್ತೇನೆ' ಎನಲು; ಹರಿಶ್ಚಂದ್ರನು 'ಎಲೈ ಕೋಮಲಾಂಗಿಯೆ, ನಾನು ನಿನ್ನ ಮರಣವನ್ನು ನೋಡಿ ಸಹಿಸಲಾರೆನು. ಲೋಕದಲ್ಲಿ ಪುರುಷನಾದವನು ಬ್ರಾಹ್ಮಣರಿಗೂ ಗೋವುಗಳಿಗೂ ಸ್ತ್ರೀಯರಿಗೂ ಪ್ರಾಣಾಪತ್ತು ಬಂದರೆ ತನ್ನ ದೇಹವನ್ನು ಒಪ್ಪಿಸಿ ಅವರನ್ನು ರಕ್ಷಿಸಬೇಕು. ಆದಕಾರಣ ಎಲೈ ಶೋಭನಾಂಗಿಯೆ, ನಾನು ಮಾಡಬೇಕೆಂಬ ಅರ್ಥವನ್ನು ನೀನು ಮಾಡಬೇಕೆಂದು ಆಲೋಚಿಸಿರುವದು ಸರಿಯಲ್ಲ' ಎನಲು; ಕೇಳಿ ಚಂದ್ರಮತಿಯು 'ಎಲೈ ಮಹಾರಾಜನೆ, ನೀನು ಹೀಗೆ ಹೇಳುವದು ಯುಕ್ತವಲ್ಲ. ನಿನ್ನ ಕಣ್ಣುಮುಂದೆ ನನ್ನ ಶರೀರವನ್ನು ಅಗ್ನಿಯಲ್ಲಿ ಸಮರ್ಪಿಸುವದು ಯುಕ್ತವು. ನಿಮ್ಮಂಥ ಶೂರರಿಗೆ ಯುದ್ಧರಂಗವೆಂಬ ಅಗ್ನಿಯಲ್ಲಿ ಶರೀರಾರ್ಪಣವು ಶಾಸ್ತ್ರವಿನೀತವಾದದ್ದು. ಈ ಅಗ್ನಿಯಲ್ಲಿ ಸ್ತ್ರೀಯರುಗಳಿಗೆ ಶರೀರಾರ್ಪಣವು ಯುಕ್ತವು. ಆದ್ದರಿಂದ ನನಗೆ ಅಡ್ಡಿಯನ್ನು ಮಾಡಬೇಡ. ಲೋಕದಲ್ಲಿ

ನಿಂದಿತವಾದ ಸಹಿಸಲಶಕ್ಯವಾದ ವೈಧವ್ಯವನ್ನು ನಾನು ಹ್ಯಾಗೆ ಅನುಭವಿಸೇನು ! ತನ್ನ ಪ್ರಭುವಿನ ಕಣ್ಣುಮುಂದೆ ಭೃತ್ಯರಿಗೆ ಮರಣವು ಶ್ರೇಷ್ಠವಾದದ್ದು. ನಾನು ನಿನಗೆ ಭೃತ್ಯಳಾದಕಾರಣ ನಿನ್ನ ಮುಂದೆ ಶರೀರವನ್ನು ತ್ಯಾಗ ಮಾಡುತ್ತೇನೆ' ಎಂದು ಚಂದ್ರಮತಿಯು ಶ್ಲಾಘ್ಯಗಳಾದ ವಾಕ್ಯಗಳಿಂದ ಪತಿಯನ್ನು ಒಡಂಬಡಿಸಿ, ಶರೀರತ್ಯಾಗವನ್ನು ಮಾಡಲೋಸುಗ ಉದ್ಯುಕ್ತಳಾಗಿ, ಸೀರೆಯ ಸೆರಗನ್ನು ನಡುವಿಗೆ ಚೆನ್ನಾಗಿ ಬಿಗಿದು ಸಿಕ್ಕಿಸಿಕೊಂಡು, ಪತಿಯ ಪಾದಗಳಿಗೆ ನಮಸ್ಕರಿಸಿ, ಯಜ್ಞೇಶ್ವರನ ಸಮೀಪಕ್ಕೆ ಹೋಗಿ ಮೆಲ್ಲನೆ ಬಂದು ವಾಕ್ಯವನ್ನು ಹೇಳಿದಳು" ಎಂದು ಮಾರ್ಕಂಡೇಯನು ಧರ್ಮರಾಯನಿಗೆ ಹೇಳಿದನು.

## ೨೯೧—(೯) ನೇ ಅಧ್ಯಾಯ.—ಹರಿಶ್ಚಂದ್ರೋಪಾಖ್ಯಾನ—(ಹರಿಶ್ಚಂದ್ರನು ಕಾಶೀನಗರಕ್ಕೆ ಬರುವಿಕೆ.)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯನೆ, ಆಬಳಿಕ ಮಾರ್ಕಂಡೇಯನು ಧರ್ಮರಾಯನನ್ನು ಕುರಿತು "ಎಲೈ ಧರ್ಮರಾಯನೆ, ಈ ಪ್ರಕಾರವಾಗಿ ಚಂದ್ರಮತಿಯು ನಿಶ್ಚೈಸಿ, ಪತಿಯನ್ನೂ ಪುತ್ರನನ್ನೂ ಬಿಟ್ಟು ಹೋಗುತ್ತೇನೆಂಬ ಶೋಕದಿಂದ ಕಣ್ಣೀರನ್ನು ತುಂಬಿ ತುಳುಕುತ್ತಲಿರುವ ನೇತ್ರಗಳುಳ್ಳವಳಾಗಿ, ಅಗ್ನಿಯ ಬಳಿಯಲ್ಲಿ ನಿಂತು 'ನನ್ನಿಂದ ಆಚರಿಸಲ್ಪಟ್ಟ ಪುಣ್ಯವೇನಾದರೂ ಇದ್ದರೆ ಅದರಿಂದ ಪ್ರತಿಜನ್ಮದಲ್ಲಿಯು ಈ ಹರಿಶ್ಚಂದ್ರರಾಯನು ನನಗೆ ಪತಿಯಾಗಲಿ. ಮಹೇಶ್ವರನಾದ ವಿಶ್ವೇಶ್ವರಸ್ವಾಮಿಯು ನನ್ನಲ್ಲಿ ಪ್ರಸನ್ನನಾಗಿದ್ದರೆ ನನ್ನ ಇಷ್ಟಾರ್ಥವು ಸಿದ್ಧಿಸಲಿ. ಈ ರಾಜನು ಪ್ರತಿಜನ್ಮದಲ್ಲಿಯು ಆಯುಷ್ಮಂತನಾಗಿಯೂ ಬಲ ಶಾಲಿಯಾಗಿಯೂ ಮಹಾವೀರನಾಗಿಯೂ ಇದ್ದು ಭೂಮಂಡಲವನ್ನು ಸಂರಕ್ಷಿಸಲಿ. ನಾನು ಆತನಿಗೆ ಪಟ್ಟದರಾಣಿಯು' ಎಂದು ಪರಮೇಶ್ವರನಿಗೆ ಪ್ರಾರ್ಥಿಸಿ, ಪತಿಯ ಪಾದಗಳಿಗೆ ನಮಸ್ಕರಿಸಿ, ತನ್ನ ಶರೀರವನ್ನು ಆಜ್ಯಾಹುತಿಯನ್ನಾಗಿ ಭಾವಿಸಿ ಅಗ್ನಿಯಲ್ಲಿ ಬಿದ್ದಳು. ಆಗ ಯಜ್ಞೇಶ್ವರನು ಏಕಕಾಲದಲ್ಲಿ ಉದಯಿಸಿದ ದ್ವಾದಶಾದಿತ್ಯರಿಗೆ ಸಮಾನವಾದ ಪ್ರಭೆಯುಳ್ಳ ಮಹಾಪತಿವ್ರತೆಯಾದ ಚಂದ್ರಮತಿಯನ್ನು ನೋಡಿ, ನಷ್ಟಪ್ರಭೆಯುಳ್ಳವನಾಗಿ ಫಲಾಯನ ಮಾಡಿದನು. ಆಗ ಅಂತರಿಕ್ಷದಿಂದ ಪುಷ್ಪವೃಷ್ಟಿಯು ಆಯಿತು, ಇಂದ್ರಾದಿದೇವತೆಗಳೆಲ್ಲರೂ ಶ್ಲಾಘನೆಮಾಡಿದರು. ಯಜ್ಞೇಶ್ವರನು ಫಲಾಯನಮಾಡಿದ್ದರಿಂದ ಮಾರ್ಗವು ಶೀತಳವಾದದ್ದನ್ನು ನೋಡಿ ಸರ್ವದೇವತೆಗಳೂ ಆಶ್ಚರ್ಯವನ್ನೈದಿದರು. ಆಗ ಹರಿಶ್ಚಂದ್ರನು ಪರಮ ಪತಿವ್ರತೆಯಾದ ತನ್ನ ಪತ್ನಿಯನ್ನು ನೋಡಿ ಬಹು ಸಂತೋಷದಿಂದ 'ಎಲೈ ಚಂದ್ರಮತಿಯೆ, ನಿನ್ನ ಪಾತಿವ್ರತ್ಯಪ್ರಭಾವದಿಂದಲೂ ನಿನ್ನ ಪ್ರಸಾದದಿಂದಲೂ ಈ ಅಗ್ನಿಯಿಂದ ಉಂಟಾದ ವಿಪತ್ತು ತಪ್ಪಿತು' ಎಂದು ನಿಜಪತ್ನೀಪ್ರಭಾವವನ್ನು ಪ್ರಶಂಸಿಸುತ್ತಾ ಆ ವನವನ್ನತಿಕ್ರಮಿಸಿ ಮುಂದಕ್ಕೆ ಹೊರಟು, ಸಾಕ್ಷಾನ್ಮಹೇಶ್ವರನಿಗೆ ಆವಾಸಸ್ಥಾನವಾದ ರಮ್ಯವಾದ ಕಾಶೀನಗರವನ್ನೈದಿದನು. ಆ ಕಾಶೀನಗರವು ಮಹಾಕಾಂತಿಯುಕ್ತವಾಗಿ, ದೇವಲೋಕಕ್ಕಿಂತಲೂ ಅತಿಶಯವಾಗಿ ಸುವರ್ಣಮಯವಾದ ಅನೇಕ ಗೃಹಗಳುಳ್ಳದ್ದಾಗಿ, ಅಪರಿಮಿತಗಳಾದ ಉಪ್ಪರಿಗೆಗಳಿಂದ ಶೋಭಿಸುತ್ತಾ, ವಿಶಾಲಗಳಾದ ರಾಜವೀಧಿಗಳಿಂದ ಪ್ರಕಾಶಿಸುತ್ತಾ, ಸಾಲುಮನೆಗಳಿಂದಲೂ ಹಜಾರಗಳಿಂದಲೂ ರಮ್ಯವಾಗಿ, ಬಹು ಸುವರ್ಣಪೂರಿತವಾಗಿ, ವಜ್ರ ವೈಡೂರ್ಯ ಮುತ್ತು ಹವಳ ಮುಂತಾದ ರತ್ನಗಳ ರಾಶಿಯಿಂದ ಹೊಳೆಯುತ್ತಲಿರುವ ಅಂಗಡಿಗಳಿಂದ ಮನೋಹರವಾಗಿ, ಶುಶ್ರೂಷೆಯಲ್ಲಿ ಆಸಕ್ತರಾದ ವೇದಾಧ್ಯಯನಸಂಪನ್ನರಾದ ಬ್ರಾಹ್ಮಣೋತ್ತಮರ ವೇದಘೋಷಗಳಿಂದ ಪರಿಶುದ್ಧವಾಗಿರುವದು. ಈ ರೀತಿಯಾದ ಕಾಶೀನಗರವನ್ನು ನೋಡಿ ಹರಿಶ್ಚಂದ್ರರಾಯನು ಶ್ರಮವನ್ನು ಪರಿಹರಿಸಿಕೊಂಡು, ಸಂತುಷ್ಟಚಿತ್ತನಾಗಿ, 'ಎಲೈ ಶುಭಕರಳಾದ ಚಂದ್ರಮತಿಯೆ, ನಿನ್ನ ಪ್ರಸಾದದಿಂದ ನಾನು ಘೋರವಾದ ಕಾಡ್ಗಿಚ್ಚಿನಿಂದ ಮುಕ್ತನಾದೆನು, ಕಾಶೀನಗರಕ್ಕೂ ಬಂದು ಸೇರಿದೆನು. ಇನ್ನು ಮೇಲೆ ಆಗತಕ್ಕದ್ದನ್ನು ವಿಶ್ವೇಶ್ವರನೇ ಬಲ್ಲನು ! ಆ ಸ್ವಾಮಿಯ ಮೇಲೆ ಭಾರವನ್ನು ವಹಿಸಿರುವೆನು' ಎಂದು ಹೇಳಿ, ಮಣಿಕರ್ಣಿಕಾತೀರದಲ್ಲಿ ಸ್ನಾನವನ್ನು ಮಾಡಿ, ಸಂಧ್ಯಾವಂದನ ಮಾಧ್ಯಾಹ್ನಿಕ ಬ್ರಹ್ಮಯಜ್ಞಗಳನ್ನೂ ದೇವರ್ಷಿಪಿತೃತರ್ಪಣವನ್ನೂ ದೇವತಾರ್ಚನವನ್ನೂ ಸಹ ಮಾಡಿ, ವಿಶ್ವೇಶ್ವರಸ್ವಾಮಿಯ

ದರ್ಶನವನ್ನು ಮಾಡಿ, ಈಚೆಗೆ ಬಂದು, ವಿಶ್ವಾಮಿತ್ರಮಹರ್ಷಿಯ ದ್ರವ್ಯನಿಮಿತ್ತವಾಗಿ ಚಿಂತಿಸುತ್ತಿದ್ದನು. ಆಗ ನಕ್ಷತ್ರಿಕನು 'ಎಲೈ ಅರಸೆ, ಕಾಶೀನಗರಕ್ಕೂ ಬಂದು ಆಯಿತಲ್ಲ. ಇನ್ನುಮೇಲೆ ನನ್ನ ಹಣವನ್ನು ಕೊಡು, ನಾನು ಹೋಗಬೇಕು. ನನ್ನ ಗುರುವಾದ ವಿಶ್ವಾಮಿತ್ರಋಷಿಯು ನನ್ನ ಮೇಲೆ ಕೋಪವನ್ನು ಮಾಡಾನು. ಈಗಲೇ ಹಣವನ್ನು ಕೊಡು. ಇಲ್ಲದಿದ್ದರೆ ನಾನು ಸುಮ್ಮನೆ ಬಿಡುವದಿಲ್ಲ' ಎನಲು, ಹರಿಶ್ಚಂದ್ರನು 'ಎಲೈ ಋಷಿಕುಮಾರಕನೆ, ಕಾಶಿಗೆ ಈಗತಾನೆ ಬಂದಿರುವೆವು. ಇನ್ನುಮೇಲೆ ಏನಾದರೂ ಪ್ರಯತ್ನಮಾಡುತ್ತೇನೆ. ನನ್ನನ್ನು ಸುಮ್ಮನೆ ಯಾಕೆ ಬಾಧಿಸುತ್ತೀಯೆ? ಎರಡುಮೂರು ದಿವಸಗಳು ಕ್ಷಮಿಸು' ಎಂದು ಬೇಡಿಕೊಂಡನು. ಆದರೂ ಆ ನಕ್ಷತ್ರಿಕನು ಹರಿಶ್ಚಂದ್ರರಾಯನನ್ನು ಹಿಡಿದು ಬಿಸಿಲಿನಲ್ಲಿ ನಿಲ್ಲಿಸಲು; ಪತಿವ್ರತೆಯೂ ಪರಮಪ್ರೇಮಾಸ್ಪದಳೂ ಆದ ಚಂದ್ರಮತಿಯೂ, ಬಾಲಕನಾದ ಲೋಹಿತಾಸ್ಯನು ತನ್ನನ್ನು ಬಿಟ್ಟು ಹೋಗಲಾರದೆ ಅಲ್ಲಿಯೇ ಸಮೀಪದಲ್ಲಿ ನಿಲ್ಲಲು, ಅವನಿಗೆ ತನ್ನ ವಸ್ತ್ರವನ್ನು ಹೊದ್ದಿಸಿಕೊಂಡು ತಾನೂ ಬಿಸಿಲಿನಲ್ಲಿ ನಿಂತಳು. ಈ ರೀತಿಯಲ್ಲಿ ಅನ್ನೋದಕಗಳಿಲ್ಲದ್ದರಿಂದಲೂ ಮಹತ್ತಾದ ಮಾರ್ಗಶ್ರಮದಿಂದಲೂ ಬಳಲಿ ಮಧ್ಯಾನ್ಹದ ಬಿಸಿಲಿನಲ್ಲಿ ನಿಂತಿರಲು, ನಕ್ಷತ್ರಿಕನು ತಿರುಗಿ ಬಾಧಿಸುವದಕ್ಕೆ ಪ್ರಯತ್ನವನ್ನು ಮಾಡಿದನು: 'ಎಲೈ ಹರಿಶ್ಚಂದ್ರನೆ, ನೀನು ಹಣವನ್ನು ಕೊಡುವದಿಲ್ಲ. ನಿನ್ನ ಮೇಲೆ ಕಲ್ಲನ್ನು ಹೇರಿಸುತ್ತೇನೆ, ಹೊತ್ತುಕೊ' ಎಂದು ದೊಡ್ಡದಾದ ಒಂದು ಕಲ್ಲನ್ನು ಹೊರಿಸಿದನು. ಅದನ್ನು ಹೊತ್ತುಕೊಂಡು ಬಿಸಿಲಿನಲ್ಲಿ ನಿಂತಿರುವ ಹರಿಶ್ಚಂದ್ರನನ್ನು ನೋಡಿ ಪ್ರಿಯಳಾದ ಚಂದ್ರಮತಿಯು ಶೋಕದಿಂದ ಕಣ್ಣೀರನ್ನು ಬಿಡುತ್ತಿರಲು, ತಾಯಿಯನ್ನು ನೋಡಿ ಬಾಲಕನಾದ ಲೋಹಿತಾಸ್ಯನು ಅಳುತ್ತ, ನಿಂತುಕೊಂಡನು. ಆಗ ಹರಿಶ್ಚಂದ್ರನು ನಕ್ಷತ್ರಿಕನನ್ನು ಕುರಿತು 'ಎಲೈ ಋಷಿಪುತ್ರನೆ, ಬಾಲಕನಾದ ನನ್ನ ಪುತ್ರನು ಅನ್ನೋದಕಗಳನ್ನು ಕಾಣದೆ ಕ್ಷುತ್ತಿನಿಂದ ಪೀಡಿತನಾಗಿ ಅಳುತ್ತಿದಾನೆ. ದುಃಖವನ್ನರಿಯದ ರಾಜಪುತ್ರಿಯಾದ ನನ್ನ ಪತ್ನಿಯು ನನ್ನನ್ನು ನೋಡಿ ಬಹು ಶೋಕಪಡುತ್ತ ಬಿಸಿಲಿನಲ್ಲಿ ನಿಂತಿರುವಳು. ಇದನ್ನು ನೀನು ನೋಡುವದಿಲ್ಲವೆ? ನಿನ್ನ ಹೃದಯದಲ್ಲಿ ಕರುಣವು ಯಾಕೆ ಹುಟ್ಟಲಿಲ್ಲ. ಆದರೂ ಈ ಸಮಯದಲ್ಲಿ ಹಣವನ್ನು ಎಲ್ಲಿಂದ ಕೊಡಲಿ? ನನ್ನಲ್ಲಿ ದಯಮಾಡಿ ಎರಡು ಮೂರು ದಿವಸಗಳು ಕ್ಷಮಿಸಿಕೊಂಡು ನನ್ನನ್ನು ಸಂರಕ್ಷಣೆಮಾಡಪ್ಪಾ' ಎಂದು ಬೇಡಿಕೊಂಡನು. ನಕ್ಷತ್ರಿಕನು 'ಎಲೈ ಹರಿಶ್ಚಂದ್ರನೆ, ನಿನ್ನ ಪತ್ನಿಯಾದ ಈ ಚಂದ್ರಮತಿಯನ್ನು ಯಾರಿಗಾದರೂ ವಿಕ್ರಯಮಾಡಿ ಹಣವನ್ನು ಕೊಡು' ಎಂದು ನುಡಿಯಲು; ಹರಿಶ್ಚಂದ್ರರಾಯನು ಮಹತ್ತಾದ ಚಿಂತೆಯಿಂದ ಸ್ತಬ್ಧನಾಗಿ ಹೇಳುವದಕ್ಕೆ ಉತ್ತರವನ್ನೂ ತೋರದೆ ಸುಮ್ಮನಿದ್ದನು. ಈ ರೀತಿಯಲ್ಲಿ ಮಹಾಚಿಂತಾಸಮುದ್ರದಲ್ಲಿ ಮುಳುಗಿ ವ್ಯಸನಪಡುತ್ತಲಿರುವ ಹರಿಶ್ಚಂದ್ರನನ್ನು ನೋಡಿ, ಪತಿವ್ರತೆಯಾದ ಚಂದ್ರಮತಿಯು 'ಎಲೈ ಪತಿಯೆ, ನಾನು ನಿನಗೆ ಪತ್ನಿಯು. ಇಂದ್ರದೇವತಾಸಾಕ್ಷಿಕವಾಗಿ ನನ್ನ ಪಾಣಿಗ್ರಹಣವನ್ನು ನೀನು ಮಾಡಿರುವೆ. ನಿನ್ನಿಂದ ಶಿಕ್ಷೆಯನ್ನು ಮಾಡಿಸಿಕೊಳ್ಳುವದಕ್ಕೂ ಪರಿಪಾಲನವನ್ನು ಮಾಡಿಸಿಕೊಳ್ಳುವದಕ್ಕೂ ನಾನು ಯೋಗ್ಯಳು. ಎಲೈ ಅರಸೆ, ನೀನು ದ್ಯೂತವನ್ನಾಡಿ ದ್ರವ್ಯವನ್ನು ಸೋತು, ಆ ದ್ರವ್ಯವನ್ನು ಕೊಡುವದಕ್ಕೋಸ್ಕರ ನನ್ನ ವಿಕ್ರಯವನ್ನು ಮಾಡುವದಿಲ್ಲ; ಮದ್ಯಾದಿಗಳನ್ನು ಸೇವಿಸಲೋಸುಗ ದ್ರವ್ಯವಿಲ್ಲದೆ ನನ್ನ ವಿಕ್ರಯವನ್ನು ಮಾಡುವದಿಲ್ಲ; ಇನ್ನೂ ಹೆಚ್ಚಾಗಿ ರಾಜ್ಯವನ್ನು ಸಂಪಾದಿಸುವ ನಿಮಿತ್ತವಾಗಿ ಆನೆಕುದುರೆಗಳನ್ನು ಕೊಳ್ಳುವದಕ್ಕೋಸ್ಕರ ನನ್ನ ವಿಕ್ರಯವನ್ನು ಮಾಡುವದಿಲ್ಲ; ಕಾಮಾತುರನಾಗಿ ಸ್ತ್ರೀಯರ ಸಂಭೋಗಾರ್ಥವಾಗಿ ಅವರಿಗೆ ಕೊಡಲೋಸುಗ ದ್ರವ್ಯವಿಲ್ಲದ್ದರಿಂದ ನನ್ನ ವಿಕ್ರಯವನ್ನು ಮಾಡುವದಿಲ್ಲ. ಬ್ರಾಹ್ಮಣನಿಗೆ ಕೊಡುತ್ತೇನೆಂದು ಪ್ರತಿಜ್ಞೆಯನ್ನು ಮಾಡಿದ್ದರಿಂದ ಆ ಪ್ರತಿಜ್ಞೆಯನ್ನು ಪರಿಪಾಲಿಸುವ ನಿಮಿತ್ತವಾಗಿ ನನ್ನ ವಿಕ್ರಯವನ್ನು ಮಾಡಿದರೆ, ಇದು ಸತ್ಕಾರ್ಯವೇಹೊರತು ಮತ್ತೊಂದಿಲ್ಲ' ಎಂದಳು. ಹರಿಶ್ಚಂದ್ರನು ಬಹು ಶೋಕದಿಂದ 'ಎಲೈ ಪ್ರಾಣಕಾಂತೆಯೆ, ನಿನ್ನ ಪಾಣಿಗ್ರಹಣವಾದದ್ದು ಮೊದಲುಗೊಂಡು ನೀನು ನನ್ನನ್ನು ಒಂದು ದಿವಸವಾದರೂ ಬಿಟ್ಟಿರಲಿಲ್ಲ. ವೃಕ್ಷವನ್ನು ಛಾಯೆಯು ಎಂತು ಬಿಡದಿರುವದೋ ಅಂತು ನನ್ನನ್ನು ಎಡೆಬಿಡದೆ ಇರುವೆ. ಆ ರೀತಿಯಲ್ಲಿ ಪಂಚಪ್ರಾಣಗಳನ್ನೂ ನನ್ನಲ್ಲಿರಿಸಿಕೊಂಡು, ನನ್ನನ್ನು ಮಹತ್ತಾಗಿ ನೋಡಿಕೊಂಡು, ನನಗೆ ಶುಶ್ರೂಷೆಯನ್ನು ಮಾಡಿಕೊಂಡು ನನ್ನನ್ನೇ ನಂಬಿಕೊಂಡಿರುವೆ. ನನ್ನ ಪ್ರಾಣಗಳಿಗಿಂತಲೂ ಹೆಚ್ಚಾದ ಪತಿವ್ರತೆಯಾದ ನಿನ್ನಂಥ ಪ್ರಿಯಪತ್ನಿಯನ್ನು ಬಿಟ್ಟು ವಿಕ್ರಯಮಾಡಿ ಹೋಗಲಾ

ಡಿಸಿಕೊಂಡಮೇಲೆ ನನಗೆ ದಿಕ್ಕುಯಾರು ? ನಾನು ಅನಾಥನಾಗಿ ಹೋಗುತ್ತೇನೆ. ನಾನು ರಾಜ್ಯಹೋದದ್ದಕ್ಕೂ ವ್ಯಸನಪಡುವದಿಲ್ಲ, ವನವಾಸದಿಂದಲೂ ವ್ಯಸನಪಡುವದಿಲ್ಲ; ನಿನ್ನನ್ನು ನೋಡಿಕೊಂಡು ಸಮಸ್ತದುಃಖಗಳನ್ನೂ ಮರೆತುಕೊಂಡಿದ್ದೆನು; ಈಗ ಅಂಥ ನಿನ್ನನ್ನು ಕೂಡ ಕಳೆದುಕೊಂಡಮೇಲೆ ನನಗೆ ಗತಿಯೇನು ? ನಾನು ಹ್ಯಾಗೆ ಜೀವಿಸೇನು ? ನಾನು ಹುಟ್ಟಿ ಬದುಕಿದ್ದಕ್ಕೆ ಪ್ರಯೋಜನವು ಈ ಹೊತ್ತಿಗೆ ಮುಗಿಯಿತು. ಇನ್ನುಮೇಲೆ ನಾನು ಬದುಕಿದರೆ ವ್ಯರ್ಥವೇಸರಿ. ಇನ್ನು ನಾನು ಜೀವಿಸಬಾರದು. ಆದರೂ ಬ್ರಾಹ್ಮಣನ ಋಣದ್ರವ್ಯವನ್ನು ತೀರಿಸುವ ನಿಮಿತ್ತ ಇನ್ನೂ ಪ್ರಾಣಧಾರಣೆಯನ್ನು ಮಾಡಬೇಕಾಗಿದೆ' ಎಂದು ಬಹು ಶೋಕಪಡುತ್ತಿದ್ದನು. ಆಗ ಚಂದ್ರಮತಿಯು ಪತಿಯನ್ನು ಕುರಿತು 'ಎಲೈ ಪತಿಯೆ, ನಿನ್ನಂಥ ಮಹಾಪುರುಷರು ಧೈರ್ಯವನ್ನು ಬಿಡಬಾರದು. ನಿನ್ನ ಪಾಣಿಗ್ರಹಣವನ್ನುಮಾಡಿ ನಾನು ಸಕಲಭೋಗಭಾಗ್ಯಗಳನ್ನೂ ಅನುಭವಿಸಿದೆನು. ನನಗೇನೂ ಕಡಿಮೆಯಾಗಲಿಲ್ಲ. ಇನ್ನುಮೇಲೆ ವಿಶ್ವೇಶ್ವರನು ಮಾಡಿದ್ದು ಆಗುತ್ತದೆ. ನೀನು ನನ್ನಲ್ಲಿ ಅತಿವ್ಯಾಮೋಹವನ್ನು ಬಿಟ್ಟು ನನ್ನ ವಿಕ್ರಯವನ್ನು ಮಾಡಿ ಬ್ರಾಹ್ಮಣನ ಋಣದ್ರವ್ಯವನ್ನು ತೀರಿಸು' ಎಂದು ಪತಿಯನ್ನು ಒಡಂಬಡಿಸಿದಳು" ಎಂದು ಮಾರ್ಕಂಡೇಯನು ಧರ್ಮರಾಯನಿಗೆ ಹೇಳಿದನು.

---

## ೨೯೧—(೧೦)ನೇ ಅಧ್ಯಾಯ.—ಹರಿಶ್ಚಂದ್ರೋಪಾಖ್ಯಾನ—(ಹರಿಶ್ಚಂದ್ರನು ಪತ್ನೀಪುತ್ರರನ್ನು ವಿಕ್ರಯಿಸುವಿಕೆ).

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನುಕುರಿತು—ಕೇಳು ಜನಮೇಜಯರಾಯನೆ, ಮಾರ್ಕಂಡೇಯನು ಧರ್ಮರಾಯನನ್ನುನೋಡಿ "ಕೇಳು ಧರ್ಮರಾಯನೆ, ಆಗ ಹರಿಶ್ಚಂದ್ರನು ತನ್ನಪತ್ನಿಯು ಹೇಳಿದ ಅರ್ಥವನ್ನು ಅತಿದುಃಖದಿಂದ ಒಡಂಬಟ್ಟು ಪತಿವ್ರತೆಯಾದ ಪತ್ನಿಯನ್ನು ಕರೆದುಕೊಂಡು ಬೀದಿಯಲ್ಲಿ ಹೋಗುತ್ತಾ 'ಎಲೈ ಪತ್ತನವಾಸಿಗಳಿರಾ, ಮಹಾಪಾಪಿಷ್ಠನೂ ಕಠಿಣಹೃದಯನೂ ಭಾಗ್ಯಹೀನನೂ ಆದ ದೈವದಿಂದ ಪೆಟ್ಟುಬಿದ್ದಿರುವ ನಾನು ಪತಿವ್ರತೆಯಾದ ಧರ್ಮಪತ್ನಿಯನ್ನು ಕ್ರಯವನ್ನು ಮಾಡುತ್ತೇನೆ. ಯಾರಾದರೂ ದ್ರವ್ಯವನ್ನು ಕೊಟ್ಟು ಕೊಂಡುಕೊಳ್ಳಿರಿ' ಎಂದು ಗಟ್ಟಿಯಾಗಿ ಕೂಗಿದನು. ಆ ಶಬ್ದವನ್ನು ಕೇಳಿ ಮಹಾಧನಿಕನಾದ ಕಾಲಕೌಶಿಕನೆಂಬ ನಾಮಧೇಯವುಳ್ಳ ಒಬ್ಬ ಬ್ರಾಹ್ಮಣನು 'ಎಲೈ ಪುರುಷನೆ, ನಿನ್ನ ಪತ್ನಿಯನ್ನು ನಾನು ಕೊಂಡುಕೊಳ್ಳುತ್ತೇನೆ, ಮೌಲ್ಯವನ್ನು ಹೇಳು' ಎಂದು ಕೇಳಿದನು. ಹರಿಶ್ಚಂದ್ರನು 'ಎಲೈ ಬ್ರಾಹ್ಮಣೋತ್ತಮನೆ, ಸ್ತ್ರೀಯರಿಗೆ ಮೌಲ್ಯವು ಎಷ್ಟು ಹೇಳಲ್ಪಟ್ಟಿದೆಯೋ ಆ ಅರ್ಥವನ್ನು ನೋಡಿ ನೀನೇ ಕೊಡು' ಎನಲು, ಕಾಲಕೌಶಿಕನು ಶಾಸ್ತ್ರೋಕ್ತವಾದ ಮೌಲ್ಯವನ್ನು ಕೊಟ್ಟು ಆ ಚಂದ್ರಮತಿಯನ್ನು ಕೊಂಡುಕೊಂಡನು. ಅನಂತರದಲ್ಲಿ ಪತಿವ್ರತೆಯಾದ ಚಂದ್ರಮತಿಯು ಪತಿಯನ್ನು ಬಿಟ್ಟು ಹೋಗುತ್ತೇನೆಂಬ ಶೋಕದಿಂದ ಪೀಡಿತಳಾಗಿ, ಹರಿಶ್ಚಂದ್ರರಾಯನಿಗೆ ಪ್ರದಕ್ಷಿಣೆಯನ್ನು ಮಾಡಿ, ನಮಸ್ಕಾರವನ್ನು ಮಾಡಿ ಕಣ್ಣೀರನ್ನು ಬಿಡುತ್ತ ಗದ್ಗದಧ್ವನಿಯಿಂದ ಪತಿಯನ್ನು ಕುರಿತು, 'ನಾನು ಸತ್ಪಾತ್ರರಾದ ಬ್ರಾಹ್ಮಣರಿಗೆ ಸತ್ಕಾರವನ್ನೇನಾದರೂ ಮಾಡಿದ್ದರೆ, ಅಗ್ನಿಹೋತ್ರ ಉಪಾಸನಾದಿ ಸತ್ಕರ್ಮಗಳಲ್ಲಿ ಸಂತೋಷಪಡಿಸಿದ್ದರೆ, ದೇವತೆಗಳನ್ನು ಪೂಜಿಸಿದವಳಾಗಿದ್ದರೆ, ಆ ಧರ್ಮದಿಂದ ನೀನೇ ನನಗೆ ಮುಂದಲಜನ್ಮದಲ್ಲಿಯೂ ಪತಿಯಾಗು' ಎಂದು ಪಾದಗಳಲ್ಲಿ ಬಿದ್ದಿರುವ ಪ್ರಾಣಗಳಿಗಿಂತಲೂ ಹೆಚ್ಚಾದ ಪತಿವ್ರತೆಯಾದ ಚಂದ್ರಮತಿಯನ್ನು ನೋಡಿ ಹರಿಶ್ಚಂದ್ರರಾಯನು 'ಎಲೈ ಪ್ರಿಯಳೆ, ಮಹಾಪಾತಕಿಯೂ ದಯಾರಹಿತನೂ ಆಗಿ ಪರಮಚಾಂಡಾಲಕೃತ್ಯವನ್ನು ಮಾಡುವ ಭಾಗ್ಯಹೀನನಾದ ನನಗೆ ನಮಸ್ಕಾರವನ್ನು ಯಾಕೆ ಮಾಡುತ್ತೀಯೆ ? ನನ್ನ ಮುಖಾವಲೋಕನವನ್ನು ಕೂಡ ಮಾಡಬಾರದು. ನನ್ನನ್ನು ನಂಬಿ ಈ ಜನ್ಮದಲ್ಲಿ ಎಷ್ಟು ಸುಖಪಟ್ಟೆ. ಜನ್ಮಾಂತರಕ್ಕೂ ನನ್ನನ್ನೇ ಪತಿಯಾಗಬೇಕೆಂದು ಯಾಕೆ ಪ್ರಾರ್ಥಿಸುತ್ತೀಯೆ ? ಬಾಲ್ಯದಿಂದಲೂ ಪೋಷಿತಳಾಗಿ, ಕ್ಷಣಮಾತ್ರವೂ ನನ್ನನ್ನು ಬಿಡದೆ ಸುಖದುಃಖಗಳಿಗೆ ಸಮಾನಳಾಗಿ, ಪರಮಪ್ರೇಮದಿಂದ ನಂಬಿಯಿದ್ದ ನಿನ್ನನ್ನು

ವಿಕ್ರಯುವನ್ನುಮಾಡಿ ಭ್ರಷ್ಟನಾಗಿ ಹೋಗುವ ನನ್ನಮೇಲೆ ನೀನು ಯಾಕೆ ವ್ಯಾಮೋಹವನ್ನು ಮಾಡುತ್ತೀಯೆ? ಮಹಾರಾಜಪುತ್ರಿಯೂ ಆಗರ್ಭಶ್ರೀಮಂತಳೂ ಆಗಿ ಸುಖದಿಂದಿದ್ದ ನಿನಗೆ ಮಹತ್ತಾದ ದುಃಖವನ್ನು ಕೊಟ್ಟು ನಾನು ನಿನಗೆ ಶತ್ರುವಾದೆನು. ಇಕ್ಷ್ವಾಕುವಂಶದಲ್ಲಿ ಜನಿಸಿದ ರಾಜ್ಯಲಕ್ಷ್ಮೀಧುರಂಧರನಾದ ಈ ಬಾಲಕನಾದ ಲೋಹಿತಾಸ್ಯನು ನಿನ್ನನ್ನು ಬಿಟ್ಟಿರಲಾರನು. ಇವನು ನಿನ್ನ ಸಂಗಡಲೇ ಬರಬೇಕಾದಕಾರಣ ಇಂಥ ಬಾಲಕನನ್ನು ಕೂಡ ಅನ್ಯರಿಗೆ ದಾಸನನ್ನಾಗಿ ಮಾಡಿದ ನಾನು ತಂದೆಯೆಂಬ ಹೆಸರುಳ್ಳ ಶತ್ರುವಾದೆನು. ಈ ಪ್ರಕಾರದಲ್ಲಿ ಶೋಕಸಮುದ್ರದಲ್ಲಿ ಮುಳುಗಿರುವ ನನಗೆ ಗತಿಯಾರು? ನನ್ನ ಶೋಕವನ್ನು ಪರಿಹರಿಸುವ ಪುಣ್ಯಾತ್ಮನು ಯಾವನಿರುವನೋ! ಪ್ರಾಣಪ್ರಿಯಳಾದ ನಿನ್ನ ಮುಖವನ್ನೂ ವಂಶೋದ್ಧಾರಕನಾದ ಬಾಲಕನ ಮುಖವನ್ನೂ ಕಾಣದೆ ಶೋಕಪಟ್ಟುಕೊಂಡಿರುವ ನನ್ನಮೇಲೆ ವಿಶ್ವೇಶ್ವರನ ದಯವು ಇಲ್ಲದೆ ಹೋಯಿತು' ಎಂದು ಹರಿಶ್ಚಂದ್ರನು ವಿಲಾಪನೆಮಾಡಿದನು. ಹೀಗಿರುವ ಸಮಯದಲ್ಲಿ ಕಾಲಕೌಶಿಕನೆಂಬ ಬ್ರಾಹ್ಮಣನು ಚಂದ್ರಮತಿಯ ಕೈಗೆ ಹಗ್ಗವನ್ನು ಕಟ್ಟಿ ಎಳೆದುಕೊಂಡು ಹೋಗುತ್ತ, ಹರಿಶ್ಚಂದ್ರನು ನೋಡುತ್ತಿರುವಾಗಲೇ ಕಶೆಯಿಂದ ಪ್ರಹರಿಸಿ ಪಶುಗಳನ್ನು ಹಿಡಿದುಕೊಂಡು ಹೋಗುವಂತೆ ಎಳೆದುಕೊಂಡು ಹೋದನು. ಆ ಬಾಲಕನು ರೋದನಮಾಡುತ್ತ ತಾಯಿಹಿಂದೆಯೇ ಹೋದನು. ಈ ಪ್ರಕಾರವಾಗಿ ಚಂದ್ರಮತಿಯು ಕಶಾಪ್ರಹಾರಗಳನ್ನು ಅನುಭವಿಸಿಕೊಂಡು ಭಯದಿಂದ ನಡುಗುತ್ತ ಬಾಲಕನಿಂದ ಸಮೇತಳಾಗಿ ಹೋಗುತ್ತಲಿರಲಾಗಿ, ಕಾಶೀಪುರದ ಕುಲಸ್ತ್ರೀಯರು ಅವರನ್ನುನೋಡಿ ಬಹುದುಃಖದಿಂದ ಕಣ್ಣೀರನ್ನು ಬಿಡುತ್ತ, ಸೆರಗಿನಿಂದ ಬರಸಿಕೊಳ್ಳುತ್ತ ಮಾತನಾಡಿಕೊಳ್ಳುತ್ತಿದ್ದರು: 'ಈ ಸ್ತ್ರೀಬಾಲೆಗೆ ಇಂಥ ಕಷ್ಟವನ್ನು ಪರಮೇಶ್ವರನು ಯಾಕೆ ಕೊಟ್ಟನು? ಈ ಗರತಿಯನ್ನು ನೋಡಿದರೆ ಸರ್ವಲಕ್ಷಣಸಂಪನ್ನೆಯಾಗಿದಾಳೆ. ಈ ಪತಿವ್ರತೆಯ ಮುಖವು ಚಂದ್ರಬಿಂಬಕ್ಕೆ ಸಮಾನವಾಗಿದೆ. ಕಂಠವು ದಕ್ಷಿಣಾವರ್ತಶಂಖದಂತಿದೆ. ಕಣ್ಣುಗಳು ತಾವರೆಯ ದಳಗಳಂತೆ ಹೊಳೆಯುತ್ತಲಿವೆ. ಈ ಸೌಭಾಗ್ಯವತಿಯು ಲಕ್ಷ್ಮೀದೇವಿಗೂ ಪಾರ್ವತಾದೇವಿಗೂ ಸರಸ್ವತೀದೇವಿಗೂ ಸಮಾನಳಾಗಿದಾಳೆ. ಈಕೆಯ ಲಕ್ಷಣಗಳನ್ನು ನೋಡಿದರೆ ಸರ್ವಲಕ್ಷಣಸಂಪನ್ನೆಯಾಗಿ ಸಪ್ತದ್ವೀಪಾಧಿಪತಿಯಾದ ಮಹಾರಾಜನ ಪಟ್ಟದ ರಾಣಿಯೆಂದು ತೋರುತ್ತದೆ. ಇಂಥ ಸ್ತ್ರೀಗೆ ಈ ಕಷ್ಟವು ಬರಬಾರದು. ವಿಶ್ವೇಶ್ವರಸ್ವಾಮಿಗೆ ಯಾಕೆ ಕರುಣವಿಲ್ಲವೋ!' ಎಂದು ಪರಸ್ಪರವಾಗಿ ಮಾತನಾಡಿಕೊಂಡು, ಕಣ್ಣೀರುಗಳನ್ನು ಬರಸಿಕೊಳ್ಳುತ್ತ, ತಮ್ಮ ತಮ್ಮ ಮನೆಗಳಿಗೆ ಹೋದರು. ಅನಂತರದಲ್ಲಿ ಕಾಲಕೌಶಿಕನೆಂಬ ಬ್ರಾಹ್ಮಣನು ಚಂದ್ರಮತಿಯನ್ನು ಮನೆಗೆ ಕರೆದುಕೊಂಡು ಹೋಗಿ ತನ್ನ ಪತ್ನಿಯನ್ನು ಕುರಿತು, 'ಎಲೈ ಪತ್ನಿಯೆ, ನಿನಗೆ ಒಬ್ಬ ದಾಸಿಯನ್ನು ಕೊಂಡುಕೊಂಡುಬಂದೆನು. ಇವಳ ಕೈಯಲ್ಲಿ ಎಲ್ಲಾ ಕೆಲಸಗಳನ್ನೂ ಮಾಡಿಸಿಕೊಂಡು ನೀನುಸ್ವಸ್ಥವಾಗಿರು' ಎಂದು ಚಂದ್ರಮತಿಯನ್ನು ಒಪ್ಪಿಸಿದನು. ಅನಂತರದಲ್ಲಿ ಕಾಲಕೌಶಿಕನಪತ್ನಿಯು ಚಂದ್ರಮತಿಗೆ ಮನೆಯ ಕೆಲಸವನ್ನೆಲ್ಲ ಹೇಳಿ ಮಾಡಿಸುತ್ತಾ ತಾನು ಒಂದು ಮಂಚದಮೇಲೆ ಮಲಗಿದ್ದಳು. ಈ ಚಂದ್ರಮತಿಯು ಭಯದಿಂದ ನಡುಗುತ್ತ ಎಲ್ಲಾ ಕೆಲಸಗಳನ್ನು ಮಾಡಿ, ಅರ್ಧರಾತ್ರಿಪರ್ಯಂತರವು ಶ್ರಮಪಟ್ಟು, ಆಮೇಲೆ ಸೆರಗನ್ನುಹಾಸಿಕೊಂಡು ಬಾಲಕನನ್ನುಮಗ್ಗುಲಲ್ಲಿ ಮಲಗಿಸಿಕೊಂಡು, ಪತಿಯನ್ನುಧ್ಯಾನಿಸುತ್ತ ಒಂದು ಸ್ಥಳದಲ್ಲಿ ಮಲಗಿದಳು. ಪ್ರತಿದಿವಸದಲ್ಲಿಯೂ ಈ ರೀತಿಯಲ್ಲಿ ಶ್ರಮವನ್ನು ಸಹಿಸಿಕೊಂಡು ಚಂದ್ರಮತಿಯು ಇರುತ್ತಿರಲಾಗಿ, ಕಾಲಕೌಶಿಕನೆಂಬ ಬ್ರಾಹ್ಮಣನು ದಯಾರಹಿತನಾಗಿ ಆ ಬಾಲಕನನ್ನುಹೊಡೆದು, ಬೆದರಿಸಿ, 'ಸುಮ್ಮನೆ ತಿಂದುಕೊಂಡಿರುವದಕ್ಕೆ ನಿಮ್ಮಪ್ಪನು ಸಂಪಾದಿಸಿರುವನೆ? ಅರಣ್ಯಕ್ಕೆ ಹೋಗಿ ಸೌದೆಯನ್ನೂ ಪತ್ರಾವಳಿಯನ್ನೂ ಸಮಿತ್ತುಗಳನ್ನೂ ದರ್ಭೆಯನ್ನೂ ತೆಗೆದುಕೊಂಡು ಬಂದರೆ ಅನ್ನವನ್ನು ಹಾಕುತ್ತೇನೆ; ಇಲ್ಲದಿದ್ದರೆ ಮನೆಯನ್ನು ಬಿಟ್ಟು ದಾಟಿಸುತ್ತೇನೆ' ಎಂದು ಬೆದರಿಸಿ ಉಪದ್ರವವನ್ನು ಮಾಡಿದನು. ರಾಜಪುತ್ರನಾದ ಬಾಲಕನು ಆ ಬ್ರಾಹ್ಮಣನ ಭಯದಿಂದ ಅರಣ್ಯಕ್ಕೆ ಹೋಗಿ, ಸೌದೆಯು ಸಿಕ್ಕದಿದ್ದರೆ ಪ್ರಯಾಸಪಟ್ಟು ಅದನ್ನು ಸಂಪಾದಿಸಿ, ತಲೆಯ ಮೇಲೆ ಇರಿಸಿಕೊಂಡು, ನಡೆಯಲಾರದೆ, ಎಡವುತ್ತ ಬೀಳುತ್ತ ಮೆಲ್ಲನೆ ಸಾಯಂಕಾಲಕ್ಕೆ ಮನೆಗೆ ಬರುತಿದ್ದನು. ಬಂದ ಮಗನನ್ನು ನೋಡಿ ಚಂದ್ರಮತಿಯೂ ಸಂಕಟಪಡುತ್ತಿದ್ದಳು. ಒಂದೊಂದು ದಿವಸ ತಾಯಿಯನ್ನು ಕುರಿತು 'ಎಲೈ ತಾಯೆ, ಅರಣ್ಯದಲ್ಲಿ

ಸಾದೆಯು ನನಗೆ ಸಿಕ್ಕುವದಿಲ್ಲ. ಮರವನ್ನು ಹತ್ತಿ ಮುರಿಯುವದಕ್ಕೆ ನನಗೆ ಬಾರದು. ಜೊತೆ ಹುಡುಗರು ದೊಡ್ಡವರಾದ್ದರಿಂದ ಅವರಿಗೆ ಸಿಕ್ಕುತ್ತದೆ. ನನಗೆ ಅವರು ಸಾದೆಯನ್ನು ಮುರಿದು ಕೊಡುವದಿಲ್ಲ. ನಾನು ಕೇಳಿ ದರೆ ಅವರು ಹಿಂಸಿಸುತ್ತಾರೆ. ನನಗೆ ಕೈ ನೋಯುತ್ತದೆ. ಕಾಲುಗಳಿಗೆ ಮುಳ್ಳು ತಗಲುತ್ತದೆ. ಹೊತ್ತುಕೊಂಡು ಬರುವಾಗ ಭಾರದಿಂದ ತಲೆಯು ಉರಿಯುತ್ತದೆ. ಮುಗ್ಗರಿಸಿ ಬೀಳುವಂತೆ ಆಗುತ್ತದೆ. ಹೋಗದಿದ್ದರೆ ಬ್ರಾಹ್ಮಣನು ನನ್ನನ್ನು ಕೊಲ್ಲುತ್ತಾನೆ' ಎಂದು ಭಯಪಡುತ್ತ ಆ ಬ್ರಾಹ್ಮಣನಿಲ್ಲದಿದ್ದಾಗ ಹೇಳಿಕೊಂಡು ಅಳುತ್ತಿದ್ದನು. ಆ ಬಾಲಕನನ್ನು ತಾಯಿಯಾದ ಚಂದ್ರಮತಿಯು ಎತ್ತಿಕೊಂಡು ಕಣ್ಣೀರನ್ನು ಒರಸಿ ಸಂಕಟಪಡುತ್ತಿದ್ದಳು" ಎಂದು ಮಾರ್ಕಂಡೇಯನು ಧರ್ಮರಾಯನಿಗೆ ಹೇಳಿದನು.

---

೨೯೧—(೧೧)ನೇ ಅಧ್ಯಾಯ.—ಹರಿಶ್ಚಂದ್ರೋಪಾಖ್ಯಾನ—(ಹರಿಶ್ಚಂದ್ರನು ಚಂಡಾಲನಿಗೆ ದಾಸನಾದದ್ದು).

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಆ ಬಳಿಕ ಮಾರ್ಕಂಡೇಯನು ಧರ್ಮರಾಯನನ್ನು ಕುರಿತು "ಕೇಳು ಧರ್ಮರಾಯನೆ, ಈ ಪ್ರಕಾರವಾಗಿ ಹರಿಶ್ಚಂದ್ರನು ಪತ್ನಿಯ ವಿಕ್ರಯವನ್ನು ಮಾಡಿ, ಬಂದ ದ್ರವ್ಯವನ್ನು ನಕ್ಷತ್ರಿಕನ ವಶಕ್ಕೆ ಸಲ್ಲಿಸಿಬಿಟ್ಟು, 'ಸಾಲದ ದ್ರವ್ಯಕ್ಕೆ ಏನು ಮಾಡಲಿ? ಅಂಥ ಪತ್ನಿಯನ್ನು ವಿಕ್ರಯಮಾಡಿದರೂ ಬ್ರಾಹ್ಮಣನ ಋಣವು ತೀರಲಿಲ್ಲ. ಇನ್ನು ವಿಶ್ವೇಶ್ವರಸ್ವಾಮಿಯು ಯಾವ ಮಾರ್ಗವನ್ನು ತೋರಿಸುವನೋ'ಎಂದು ಚಿಂತಿಸುತ್ತಿರಲಾಗಿ ಸಾಯಂಕಾಲವಾಯಿತು. ಆಮೇಲೆ ಮಣಿಕರ್ಣಿಕಾತೀರದಲ್ಲಿ ಸಂಧ್ಯಾವಂದನವನ್ನು ಮಾಡಿ ಸ್ವಲ್ಪ ಉದಕವನ್ನು ಪಾನಮಾಡಿ ಆ ರಾತ್ರಿಯನ್ನು ಕಳೆದನು. ಎರಡನೇ ದಿವಸ ಪುನಃ ನಕ್ಷತ್ರಿಕನು ಬಂದು 'ಎಲೈ ಅರಸೆ, ನಿನ್ನಿಂದ ಕೊಡಲ್ಪಟ್ಟ ದ್ರವ್ಯವು ಏಕಾಂಶವಾಯಿತು. ಉಳಿದ ದ್ರವ್ಯವನ್ನು ಬೇಗ ಕೊಡು. ನಾನು ಎಷ್ಟುದಿವಸ ನಿನ್ನ ಕಾದಿರಬೇಕು? ನಿನ್ನ ಗಡುವು ಮೀರಿತು. ಇನ್ನು ಕೊಡದೆಹೋದರೆ ನಾನು ಸುಮ್ಮನಿರುವದಿಲ್ಲ, ಉಪದ್ರವಪಡಿಸುತ್ತೇನೆ' ಎಂದು ಹೇಳಲು; ಹರಿಶ್ಚಂದ್ರನು 'ಎಲೈ ಋಷಿಕುಮಾರಕನೆ, ಯಾಕೆ ನನ್ನನ್ನು ಹಿಂಸೆಪಡಿಸುತ್ತಿ? ನಾನು ಏನಾದರೂ ಪ್ರಯಾಸವನ್ನು ಮಾಡಿ ನಿನ್ನ ದ್ರವ್ಯವನ್ನು ಕೊಡುತ್ತೇನೆ. ಪತ್ನಿಯನ್ನೂ ಪುತ್ರನನ್ನೂ ಸಹ ಪರಿತ್ಯಾಗಮಾಡಿಕೊಂಡೆನು. ಇನ್ನು ಈ ಶರೀರ ಒಂದುಮಾತ್ರ ಉಳಿದಿದೆ. ಇದನ್ನು ವಿಕ್ರಯಮಾಡಿ ನಿನ್ನ ದ್ರವ್ಯವನ್ನು ಕೊಡುತ್ತೇನೆ' ಎಂದು ನುಡಿದನು. ನಕ್ಷತ್ರಿಕನು 'ಹಾಗೆಯೇ ಮಾಡು, ಏಳು' ಎಂದು ಕೈಗೆ ಹಗ್ಗವನ್ನು ಹಾಕಿ ಎಳೆದನು. ಆಗ ಹರಿಶ್ಚಂದ್ರನು ಬಹು ಶೋಕಪಡುತ್ತಾ ವಿಶ್ವನಾಥಸ್ವಾಮಿಯನ್ನು ಕುರಿತು, 'ಎಲೈ ಸ್ವಾಮಿಯೆ, ನನಗೆ ಬಂದಿರುವ ಈ ವಿಪತ್ತನ್ನು ಪರಿಹರಿಸುವದಕ್ಕೆ ಯಾವನು ಸಮರ್ಥನಾದಾನು? ನೀನೇ ಪರಿಹರಿಸಬೇಕಲ್ಲದೆ ಬೇರೆ ಇಲ್ಲ. ನಿನ್ನ ಪಾದಪದ್ಮಗಳನ್ನು ನಾನು ಶರಣುಹೊಂದಿ ನಿನ್ನ ಸ್ಥಾನಕ್ಕೆ ಬಂದಿರುವೆನು. ನನ್ನನ್ನು ರಕ್ಷಿಸು' ಎಂದು ಮೊರೆಯಿಡಲು; ಆಗ ಕರುಣಾಮೂರ್ತಿಯಾದ ವಿಶ್ವನಾಥನು ಸರ್ವಪ್ರಾಣಿಗಳ ಹೃದಯದಲ್ಲೂ ಇರುವನಾದಕಾರಣ, ಮಹಾಧನಿಕನಾದ ವೀರಬಾಹುನಾಮಕನಾದ ಒಬ್ಬ ಚಂಡಾಲನ ಹೃದಯದಲ್ಲಿ ಪ್ರೇರಿಸಿದನು. ಅನಂತರದಲ್ಲಿ ಹರಿಶ್ಚಂದ್ರರಾಯನು ನಕ್ಷತ್ರಿಕನ ಉಪದ್ರವವನ್ನು ತಡೆಯಲಾರದೆ ಎದ್ದು, 'ಎಲೈ ಸಾಧುಗಳಿರಾ, ನಾನು ನನ್ನ ವಿಕ್ರಯವನ್ನು ಮಾಡುತ್ತೇನೆ. ಯಾರಾದರೂ ಮೌಲ್ಯವನ್ನು ಕೊಟ್ಟುಕೊಂಡುಕೊಳ್ಳಿ' ಎಂದು ಬೀದಿಯಲ್ಲಿ ತಾನೇ ಗಟ್ಟಿಯಾಗಿ ಕೂಗುತ್ತ ಹೊರಟನು. ಇಷ್ಟರಲ್ಲಿ ಆ ವೀರಬಾಹುವು ಮದ್ಯಪಾನದಿಂದ ಕೆಂಪಾದ ನೇತ್ರಗಳುಳ್ಳವನಾಗಿ ಬಾರಿಬಾರಿಗೂ ತೂರಿಯಾಡುತ್ತ, ಎಡವುತ್ತ, ದೊಡ್ಡದಾದ ಗುಡುಗುಡಿಯನ್ನು ಒಬ್ಬ ಭೃತ್ಯನಕೈಯಲ್ಲಿ ಹಿಡಿಸಿಕೊಂಡು ಅದರ ಕೊನೆಯನ್ನು ತಾನು ಬಾಯಲ್ಲಿ ಕಚ್ಚಿಕೊಂಡು ಹೊಗೆಯನ್ನು ತೆಗೆಯುತ್ತ, ಅಲ್ಲಿಗೆ ಬಂದು 'ಎಲೈ ಪುರುಷನೆ, ನಾನು ನಿನ್ನನ್ನು ಕೊಳ್ಳುತ್ತೇನೆ. ನನಗೆ ಭೃತ್ಯನು ಅವಶ್ಯವಾಗಿ ಬೇಕಾಗಿದೆ. ಮೌಲ್ಯವನ್ನು ಬೇಗ ಹೇಳು' ಎಂದನು. ಆಗ ಹರಿಶ್ಚಂದ್ರನು ಮನಸ್ಸಿನಲ್ಲಿ 'ಈ ಪುರುಷನ ಕಂಠಧ್ವನಿಯು ಕರ್ಣಕಠೋ

ರವಾಗಿ ವಿಕಾರಯುಕ್ತವಾಗಿದೆ. ಇವನನ್ನು ನೋಡಿದರೆ ಚಂಡಾಲನಂತೆ ತೋರುವದು. ಇವನ ಸಂಗಡ ನನಗೆ ಸಂಭಾಷಣೆಯು ಪ್ರಾಪ್ತವಾಯಿತು' ಎಂದು ಆಲೋಚಿಸಿ, 'ಸ್ವಧರ್ಮಯುಕ್ತರಾದ ಬ್ರಾಹ್ಮಣರು ಕ್ಷತ್ರಿಯ ವೈಶ್ಯ ಶೂದ್ರರಲ್ಲಿ ಯಾರಾದರೂ ಕೊಳ್ಳಲಿ. ಉತ್ತಮರಾದ ಬ್ರಾಹ್ಮಣರಾಗಲಿ ಮಧ್ಯಮರಾದ ಕ್ಷತ್ರಿಯರಾಗಲಿ ಸಾಧಾರಣ ರಾದ ವೈಶ್ಯರಾಗಲಿ ಸ್ವಧರ್ಮರಾದ ಶೂದ್ರರಾಗಲಿ ನನ್ನನ್ನು ಕೊಂಡುಕೊಂಡರೆ ಉತ್ತಮವೆಂದು ನನ್ನ ಅಭಿಪ್ರಾಯ ವಿದೆ' ಎನಲು; ವೀರಬಾಹುವು ಮದ್ಯಮದದಿಂದ ತಿರುಗುತ್ತಲಿರುವ ನೇತ್ರಗಳುಳ್ಳವನಾಗಿ 'ಎಲೈ ಪುರುಷನೆ, ನೀನು ಮುಂಚೆ ಈ ಅರ್ಥವನ್ನು ಹೇಳಲಿಲ್ಲ. ಯಾರಾದರೂ ಕೊಂಡುಕೊಳ್ಳಲೆಂದು ಹೇಳಿದ್ದರಿಂದ ನಾನು ಕೇಳಿದೆನು. ನೀನು ಸತ್ಯವಾಕ್ಯವುಳ್ಳವನಾದರೆ ಅದೇಮೇರೆಗೆ ಬಡಬಹುದು. ಆಗ ಆ ಪ್ರಕಾರವಾಗಿ ಹೇಳಿ ಈಗ ಬಲ್ಲೆನೆಂದರೆ ನಾನು ಹ್ಯಾಗೆ ಬಿಟ್ಟೇನು? ನೀನು ಹಣಕ್ಕೆ ಗೊತ್ತುಗಾರನೇ ಹೊರತು ತಪ್ಪಿಸಿಕೊಂ ಡರೆ ನಾನು ಬಿಡುವದಿಲ್ಲ. ನೀನು ಎಷ್ಟು ದ್ರವ್ಯವನ್ನು ಹೇಳುತ್ತೀಯೋ ಅಷ್ಟು ದ್ರವ್ಯವನ್ನೂ ಕೊಡು ತ್ತೇನೆ, ನನ್ನ ಭೃತ್ಯನಾಗು' ಎಂದನು. ಬಳಿಕ ಹರಿಶ್ಚಂದ್ರನು 'ಎಲೈ ವೀರಬಾಹುವೆ, ವಿಶ್ವಾಮಿತ್ರಋಷಿಗೆ ನಾನು ಬಹುದ್ರವ್ಯವನ್ನು ಕೊಡಬೇಕು. ಆ ದ್ರವ್ಯವನ್ನು ನೀನು ಕೊಟ್ಟರೆ ನಾನು ನಿನ್ನ ದಾಸನಾಗುತ್ತೇನೆ' ಎನಲು; ಆ ವೀರಬಾಹುವು 'ಎಲೈ ಪುರುಷನೆ, ಎಷ್ಟು ದ್ರವ್ಯವನ್ನು ಕೊಡಬೇಕೋ ಅದರ ವಿವರವನ್ನು ಹೇಳು' ಎಂದನು. ಹರಿಶ್ಚಂದ್ರನು 'ಎಲೈ ವೀರಬಾಹುವೆ, ಆನೆಯ ಮೇಲೆ ನಿಂತುಕೊಂಡು ಕವಡೆಯನ್ನು ಮೇಲಕ್ಕೆ ಚಿಮ್ಮಿದರೆ ಎಷ್ಟುಮೇಲಕ್ಕೆ ಹೋಗುವದೋ ಅಷ್ಟುವುದ್ದ ಧನರಾಶಿಯನ್ನು ಕೊಡಬೇಕು' ಎನಲು; ಆ ವೀರಬಾಹುವು ತನ್ನ ಮನೆಯಿಂದ ದ್ರವ್ಯವನ್ನು ತರಿಸಿ, ಹರಿಶ್ಚಂದ್ರನು ಹೇಳಿದಪ್ರಕಾರಕ್ಕೆ ಅಷ್ಟುವುದ್ದ ರಾಶಿಯನ್ನು ಹಾಕಿಸಿ 'ಎಲೈ ಪುರುಷನೆ, ದ್ರವ್ಯವು ಬಂದು ಮುಟ್ಟಿತೆ? ಇನ್ನು ನನ್ನಮೇಲೆ ದೋಷವಿಲ್ಲ ವಲ್ಲ' ಎಂದು ಹೇಳಿದನು. ಆ ಕಾಲದಲ್ಲಿ ಅಂತರಿಕ್ಷದಲ್ಲಿ 'ಎಲೈ ಮಹಾರಾಜನಾದ ಹರಿಶ್ಚಂದ್ರನೆ, ನಮ್ಮ ದ್ರವ್ಯವು ನಮಗೆ ಸಂತು, ನೀನು ಋಣದಿಂದ ಮುಕ್ತನಾದೆ' ಎಂದು ಆಕಾಶವಾಕ್ಕು ನುಡಿಯಲು, ದೇವಲೋಕದಿಂದ ಪುಷ್ಪವೃಷ್ಟಿಯು ಆಯಿತು. ಇಂದ್ರಾದಿ ದೇವತೆಗಳು ಚೆನ್ನಾಯಿತೆಂದು ಪ್ರಶಂಸೆಯನ್ನು ಮಾಡಿದರು" ಎಂದು ಮಾರ್ಕಂಡೇಯನು ಧರ್ಮರಾಯನಿಗೆ ಹೇಳಿದನು.

## ೨೯೧—(೧೨)ನೇ ಅಧ್ಯಾಯ.—ಹರಿಶ್ಚಂದ್ರೋಪಾಖ್ಯಾನ—(ಹರಿಶ್ಚಂದ್ರನು ಚಂಡಾಲನ ಅಜ್ಞೆಯಿಂದ ಶ್ಮಶಾನವನ್ನು ಕಾಯುವಿಕೆ.)

ಅನಂತರದಲ್ಲಿ ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯನೆ, ಮಾರ್ಕಂಡೇಯನು ಧರ್ಮರಾಯನನ್ನು ಕುರಿತು "ಕೇಳು ಧರ್ಮರಾಯನೆ, ಹರಿಶ್ಚಂದ್ರಮಹಾರಾಜನು ಸಂತೋ ಷಯುಕ್ತನಾಗಿ ವೀರಬಾಹುವನ್ನು ಕುರಿತು 'ಎಲೈ ಮಹಾತ್ಮನಾದ ವೀರಬಾಹುವೆ, ಮಹಾಭಯಂಕರವಾದ ಈ ನನ್ನ ಋಣವನ್ನು ಪರಿಹರಿಸಿ ನನ್ನರಕ್ಷಣೆಯನ್ನು ಮಾಡಿದ್ದರಿಂದ, ನೀನೇ ನನಗೆ ತಾಯಿಯು, ನೀನೇ ಬಂಧುವು, ನೀನೇ ನನ್ನ ಕುಲದೈವವು. ನಾನು ನಿನಗೆ ಕಿಂಕರನಾದೆನು. ನೀನು ಏನು ಅಜ್ಞಾಪಿಸುತ್ತೀಯೋ ಆ ಕೆಲಸವ ನ್ನೆಲ್ಲ ಮಾಡುತ್ತೇನೆ. ಎಲೈ ಪ್ರಭುವಾದ ವೀರಬಾಹುವೆ, ನನಗೆ ಅಜ್ಞಾಪಿಸು' ಎಂದನು. ವೀರಬಾಹುವು ಹರಿಶ್ಚಂದ್ರನ ಕೈಯನ್ನು ಹಿಡಿದು ಮನೆಗೆ ಕರೆದುಕೊಂಡು ಹೋಗಿ, ತಾನು ಮಲಗಿಕೊಂಡು 'ಎಲೈ ಭೃತ್ಯನೆ, ನನ್ನ ಪಾದಗಳನ್ನು ಒತ್ತು' ಎನಲು, ಆಗ ವಿಶ್ವೇಶ್ವರನ ಮೇಲೆ ಭಾರವನ್ನಿರಿಸಿ ಚಂಡಾಲನ ಪಾದಗಳನ್ನು ಮುಟ್ಟಿ ಮರ್ದನಮಾಡಿದನು. ಅನಂತರದಲ್ಲಿ ವೀರಬಾಹುವು ಮದ್ಯಘಟಗಳನ್ನು ತರಹೇಳಿ ಅಜ್ಞಾಪಿಸಲು. ಅದೇಪ್ರ ಕಾರ ಹರಿಶ್ಚಂದ್ರನು ಜುಗುಪ್ಸೆಯನ್ನು ಮಾಡಿಕೊಳ್ಳದೆ ಸ್ವಾಮಿಕಾರ್ಯಧುರಂಧರನಾಗಿ ಆ ಕೆಲಸವನ್ನೂ ಮಾಡಿ ದನು. ಬಳಿಕ ವೀರಬಾಹುವು ಈ ಹರಿಶ್ಚಂದ್ರನು ಸತ್ಯವಂತನೆಂದು ತಿಳಿದು, ಮನಸ್ಸಿನಲ್ಲಿ ಮೆಚ್ಚಿ, ಅವನನ್ನು ಕುರಿತು 'ಎಲೈ ಭೃತ್ಯನೆ, ಇಲ್ಲಿಗೆ ಪಶ್ಚಿಮಭಾಗದಲ್ಲಿ ಭಯಂಕರವಾದ ಶ್ಮಶಾನವಿದೆ. ಅಲ್ಲಿಗೆ ಹೋಗಿ ಕಾದುಕೊಂ

ಡಿರು. ಈ ತುಡುಮುನ್ನು ತೆಗೆದುಕೊಂಡು ಈ ಕಾಶೀನಗರದ ಎಲ್ಲಬೀದಿಗಳಲ್ಲಿಯೂ–ನಾನು ವೀರಬಾಹುವಿನ ದಾಸ ನಾದಕಾರಣ ನನ್ನಹೆಸರು ವೀರದಾಸನು–ಎಂದು ತುಡುಮುನ್ನು ಬಾರಿಸಿಕೊಂಡು ಸಾರಿಕೊಂಡು, ಸ್ಮಶಾನದಲ್ಲಿ ಜಾಗ್ರತೆಯಿಂದ ಕಾದುಕೊಂಡು, ಅಲ್ಲಿ ಶವಗಳನ್ನು ದಹನಖನನಾದಿವ್ಯಾಪಾರಗಳನ್ನು ಮಾಡುವದಕ್ಕೆ ಬರುವ ಜನರಿಂದ ಶ್ಮಶಾನದಕಾಣಿಕೆ ಬಂದು ಸುವರ್ಣವನ್ನು ತೆಗೆದುಕೊಂಡು, ಶವಗಳ ಮೇಲೆ ಹೊದ್ದಿಸಿದ್ದ ವಸ್ತ್ರಗ ಳನ್ನು ತೆಗೆದುಕೊಳ್ಳುತ್ತ ಜಾಗರೂಕನಾಗಿರು’ ಎಂದು ಆಜ್ಞಾಪಿಸಿದನು. ಆ ವಾಕ್ಯವನ್ನು ಕೇಳಿ ಹರಿಶ್ಚಂದ್ರನು ಶೀಘ್ರದಿಂದೆದ್ದು; ತುಡುಮುನ್ನು ತೆಗೆದುಕೊಂಡು ಕಾಶೀನಗರದಲ್ಲಿ ಅದೇಪ್ರಕಾರವಾಗಿ ಸಾರಿಕೊಂಡು ‘ಧರ್ಮಾ ರ್ಥಕಾಮಮೋಕ್ಷಗಳೆಂಬ ನಾಲ್ಕು ಪುರುಷಾರ್ಥಗಳಲ್ಲಿ ಧರ್ಮವೇ ಪ್ರಥಮಪುರುಷಾರ್ಥವು; ಆ ಧರ್ಮಫಲವೇ ಶುಭರೂಪವಾದದ್ದು; ಸಕಲಲೋಕಗಳನ್ನೂ ಧರಿಸುವದಾದ್ದರಿಂದ ಧರ್ಮವೆಂದು ಹೇಳಲ್ಪಡುವದು. ಅಧರ್ಮ ದಲ್ಲಿ ಆಸಕ್ತಿಯುಳ್ಳ ಪುರುಷರು ಪಾಪಗಳನ್ನು ಮಾಡಿ, ನರಕದಲ್ಲಿ ಶೂಲಾರೋಹಣವನ್ನು ಮಾಡಿಕೊಂಡು, ಗರಗಸಗಳಿಂದ ಛೇದಿಸಲ್ಪಟ್ಟು, ಪಾಶಗಳಿಂದ ಕಟ್ಟಿಸಿಕೊಂಡು ಯಾತನೆಗಳನ್ನು ಅನುಭವಿಸುವರು. ಈ ಭರತ ವರ್ಷದಲ್ಲಿ ಯಾರು ಧರ್ಮವನ್ನಾಚರಿಸುವದಿಲ್ಲವೋ, ಅಂಥ ಪುರುಷನು ಸರ್ವಕಾರ್ಯಗಳಲ್ಲಿಯೂ ಮೂಢನಾಗಿ ಬೀಳುವನು’ ಎಂದು ನುಡಿಯುತ್ತಾ ಹೊರಟನು. ಆಗ ಸತ್ಯಕೀರ್ತಿ ಎಂಬ ಮಂತ್ರಿಯು ಹರಿಶ್ಚಂದ್ರನ ವೃತ್ತಾಂತ ವನ್ನು ತಿಳಿಯುವದಕ್ಕೋಸ್ಕರ ಅರಣ್ಯಗಳನ್ನು ದಾಟಿಕೊಂಡು, ಆತನನ್ನು ಹುಡಿಕಿಕೊಂಡು ಕಾಶೀನಗರಕ್ಕೆ ಬಂದು, ನಡೆದ ವೃತ್ತಾಂತವನ್ನು ಕೇಳಿ ಅತಿವ್ಯಸನಪಟ್ಟು, ಸ್ಮಶಾನದಲ್ಲಿರುವ ಆ ಹರಿಶ್ಚಂದ್ರನನ್ನು ಕಾಣಬೇಕೆಂದು ಬಂದನು. ಆತನನ್ನುಕಂಡು ಮಹಚ್ಛೋಕದಿಂದ ಬಾಷ್ಪವನ್ನು ಸುರಿಸುತ್ತ ‘ಎಲೈ ಹರಿಶ್ಚಂದ್ರಮಹಾರಾಯನೆ, ಸಪ್ತದ್ವೀಪಾಧಿಪತಿಯಾದ ನಿನಗೆ ಇಂಥ ವಿಪತ್ತು ಸಂಭವಿಸಬಹುದೆ?’ ಎಂದು ನುಡಿಯಲು; ಹರಿಶ್ಚಂದ್ರನು ‘ಎಲೈ ಮಂತ್ರಿಯೆ, ಏನು ವಿಪತ್ತುಬಂದರೂ ಸತ್ಯಧರ್ಮವನ್ನು ಬಿಡದೆ ಇರುವ ಪುರುಷನಲ್ಲಿ ಪರಮೇಶ್ವರನು ಅನುಗ್ರಹವನ್ನುಮಾಡುವನು’ ಎಂದನು. ಮಂತ್ರಿಯು ‘ಎಲೈ ರಾಜನೆ, ಧರ್ಮವೆಂದರೆ ಯಾವದು? ಅದರ ಲಕ್ಷ ಣವೇನು? ಅಧರ್ಮಸ್ವರೂಪವೆಂಥಾದ್ದು? ಅದನ್ನು ನನಗೆ ಹೇಳು’ ಎನಲು; ರಾಜನು ‘ಎಲೈ ಮಂತ್ರಿಯೆ, ಅನಾದಿಯಾದ ಧರ್ಮವನ್ನೇ ನಿನಗೆ ಮುಂಚೆ ಹೇಳುತ್ತೇನೆ. ಯಾವ ಧರ್ಮವನ್ನು ಆಚರಿಸುವದರಿಂದ ಮಹಾಪಾ ತಕಗಳೂ ಕೂಡ ನಾಶವನ್ನೈದುವವೋ ಆ ಧರ್ಮವನ್ನು ಹೇಳುತ್ತೇನೆ, ಏಕಾಗ್ರಚಿತ್ತನಾಗಿ ಕೇಳು’ ಎಂದು ಹರಿಶ್ಚಂದ್ರನು ನುಡಿದನು” ಎಂದು ಮಾರ್ಕಂಡೇಯನು ಧರ್ಮರಾಯನಿಗೆ ಹೇಳಿದನು.

---

೨೯೨–(೧೪)ನೇ ಅಧ್ಯಾಯ.–ಹರಿಶ್ಚಂದ್ರೋಪಾಖ್ಯಾನ–(ಹರಿಶ್ಚಂದ್ರನು ಸತ್ಯಕೀರ್ತಿಗೆ ಧರ್ಮಸೂಕ್ಷ್ಮವನ್ನು ಹೇಳಿದ್ದು.)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು–ಕೇಳು ಜನಮೇಜಯರಾಯನೆ, ಮಾರ್ಕಂಡೇಯನು ಧರ್ಮರಾಯನನ್ನು ಕುರಿತು “ಕೇಳು ಧರ್ಮರಾಯನೆ, ಆಮೇಲೆ ಹರಿಶ್ಚಂದ್ರನು ಸತ್ಯಕೀರ್ತಿ ಯನ್ನುಕುರಿತು ‘ಎಲೈ ಮಂತ್ರಿಯೆ, ಅಹಿಂಸೆಯೂ ಸತ್ಯವೂ ಆಶೆಯುವೂ ಬ್ರಹ್ಮಚರ್ಯವೂ ಅಡಂಭವೂ ಅಕ್ರೋ ಧವೂ ಗುರುಶುಶ್ರೂಷೆಯೂ ಶುಚಿತ್ವವೂ ಸಂತೋಷವೂ ಆರ್ಜವವೂ ಇವು ಹತ್ತು ವೇದೋಕ್ತಗಳಾದ ಧರ್ಮಗ ಳೆಂದು ಬ್ರಹ್ಮನಿಂದ ಹೇಳಲ್ಪಟ್ಟವೆ. ಈ ಧರ್ಮಗಳು ನಾಲ್ಕುವರ್ಣಗಳಿಗೂ ಸಾಧಾರಣವಾದವು. ಈ ಹತ್ತು ಧರ್ಮಗಳ ವಿವರವನ್ನು ಹೇಳುತ್ತೇನೆ, ಕೇಳು: ಸರ್ವಪ್ರಾಣಿಗಳಲ್ಲಿಯೂ ತನ್ನ ದೇಹದಲ್ಲಿ ಯಾವ ಅಭಿಮಾ ನವಿರುವದೋ ಆ ಅಭಿಮಾನವನ್ನು ಇರಿಸಿ, ಪರರ ಕ್ಷೇಮವನ್ನೂ ಹಿತವನ್ನೂ ಸಹ ಚಿಂತಿಸುವದೇ ಅಹಿಂಸೆಯು. ಇಂಥ ಅಹಿಂಸಾರೂಪವಾದ ಧರ್ಮದಲ್ಲಿ ಆಸಕ್ತನಾದ ಮಹಾಪುರುಷನು ಅಶ್ವಮೇಧಾದಿ ಸರ್ವಕ್ರತುಗಳಿಂದಲೂ ಅಧಿಕ ವಾದ ಪುಣ್ಯವನ್ನು ಪಡೆಯುವನು. ಸತ್ಯವೆಂಬುದು ತನ್ನಿಂದ ಕಾಣಲ್ಪಟ್ಟದ್ದು. ತನ್ನ ಮನಸ್ಸಿಗೆ ನಿಸ್ಸಂಶಯವಾಗಿ

ತಿಳಿದದ್ದನ್ನು ವಾಕ್ಕಿನಿಂದ ಹೇಳಬೇಕು. ಅದು ಪರರಿಗೆ ಹಿತವಾಗಿರಬೇಕು. ಪರರಿಗೆ ಉಪದ್ರವಕಾರಿಯಾದ ಮಾತು ಸತ್ಯವಾದರೂ ಅದನ್ನು ಹೇಳಬಾರದು. ಇದೇ ಸತ್ಯವೆನ್ನಿಸುವದು. ಸತ್ಯದಲ್ಲಿ ಸಮಸ್ತಕ್ರತುಗಳೂ ಇರುವವು. ಸರ್ವಾವಸ್ಥೆಗಳನ್ನು ಪಡೆದು ಪುತ್ರದಾರಾದಿಗಳಿಂದ ಪೀಡಿತನಾಗಿ ದಾರಿದ್ರ್ಯವನ್ನನುಭವಿಸುತ್ತಿದ್ದರೂ ಪರದ್ರವ್ಯದಲ್ಲಿ ಆಶೆಯನ್ನು ಮಾಡದಿರುವದೇ ಆಶೆಯೆನ್ನಿಸುವದು. ಸ್ತ್ರೀಭೋಗಪರಿತ್ಯಾಗವನ್ನು ಮಾಡಿ ಸರ್ವೇಂದ್ರಿಯನಿಗ್ರಹವನ್ನು ಮಾಡಿಕೊಂಡಿರುವದೇ ಬ್ರಹ್ಮಚರ್ಯವು. ಗೃಹಸ್ಥಾಶ್ರಮವಾದರೂ ಪರದಾರಾಪರಾಙ್ಮುಖನಾಗಿ ನಿಷಿದ್ಧಕಾಲಗಳನ್ನು ಬಿಟ್ಟು ಶಾಸ್ತ್ರೋಕ್ತಕಾಲಗಳಲ್ಲಿ ಸ್ವಸ್ತ್ರೀಯಲ್ಲೇ ಭೋಗಪಡುವದೂ ಬ್ರಹ್ಮಚರ್ಯವೆನ್ನಿಸುವದು. ಅಡಂಭವೆಂದರೆ ಡಂಭವಿಲ್ಲದೆ ಇರುವದು. ಡಂಭದ ಲಕ್ಷಣವೇನೆಂದರೆ, ಮನಸ್ಸಿನಲ್ಲಿ ಕಪಟವುಳ್ಳವನಾಗಿ, ಭಕ್ತಿಶ್ರದ್ಧಾರಹಿತನಾಗಿ, ಪರಲೋಕಚಿಂತೆಯು ಸ್ವಲ್ಪವಾದರೂ ಇಲ್ಲದಿದ್ದರೂ ಎಲ್ಲರಿಗಿಂತಲೂ ತಾನೇ ದೊಡ್ಡವನೆನ್ನಿಸಿಕೊಳ್ಳಬೇಕೆಂದು ದ್ರವ್ಯಾಪೇಕ್ಷೆಯಿಂದ ಹತ್ತುಮಂದಿ ನೋಡುವಹಾಗೆ, ಪರಮ ಮೂಢನಾದರೂ ವಿದ್ವಾಂಸ ವೇಷವನ್ನು ಧರಿಸಿ ಜನರನ್ನು ವಂಚಿಸುವದೇ ಡಂಭವೆನ್ನಿಸುವದು. ಇದಿಲ್ಲದಿರೋಣವೇ ಅಡಂಭವು. ತನಗಿಂತಲು ದುರ್ಬಲನಾದ ಪುರುಷನಿಂದ ದುರ್ಭಾಷೆಗಳನ್ನಾಡಿಸಿಕೊಂಡರೂ ಅದನ್ನು ಕ್ಷಮಿಸಿಕೊಂಡು ಮನಸ್ಸಿನಲ್ಲಿ ವಿಕೃತಿಯು ಹುಟ್ಟದಿರೋಣವೇ ಅಕ್ರೋಧವೆನ್ನಿಸುವದು. ಇಂಥ ಅಕ್ರೋಧಯುಕ್ತನಾದ ಪುರುಷನು ಉತ್ತಮ ಗತಿಯನ್ನೈದುವನು. ಯಜ್ಞಗಳಿಂದಲೂ ನಿಯಮಗಳಿಂದಲೂ ದಾನಗಳಿಂದಲೂ ಉಗ್ರವಾದ ತಪಸ್ಸಿನಿಂದಲೂ ಯುಕ್ತರಾದರೂ ಕ್ಷಮೆಯೆಂಬ ನಿರ್ಮಲೋದಕದಿಂದ ಸ್ನಾನವನ್ನು ಮಾಡದಿರುವ ಪುರುಷರು ಪರಿಶುದ್ಧರಾಗುವದಿಲ್ಲ. ತಂದೆಯೂ, ಉಪನಯನವನ್ನು ಮಾಡಿ ಗಾಯಿತ್ರಿಯನ್ನು ಉಪದೇಶ ಮಾಡಿದ ಪುರುಷನೂ, ವಿದ್ಯೆಯನ್ನು ಹೇಳಿದ ಪುರುಷನೂ, ಹೆಣ್ಣುಕೊಟ್ಟ ಮಾವನೂ, ಜ್ಯೇಷ್ಠಭ್ರಾತೃವಾದವನೂ, ಇವರೈದು ಮಂದಿಯೂ ಗುರುಗಳೆನ್ನಿಸುವರು. ಇಂಥ ಗುರುಗಳ ಶುಶ್ರೂಷೆಯು ಉತ್ತಮೋತ್ತಮವಾದ ಧರ್ಮವು. ಅವರಿಗೆ ಅಪರಾಧವನ್ನು ಮಾಡದೆ, ಧನಗಳಿಗಿಂತಲೂ ಪ್ರಾಣಗಳಿಗಿಂತಲೂ ಅಧಿಕವೆಂದು ಭಾವಿಸಿ ಗುರುಗಳಿಗೆ ಉಪಕಾರವನ್ನೇ ಮಾಡಬೇಕು. ಮನೋವಾಕ್ಕಾಯಕರ್ಮಗಳಿಂದ ಅವರಿಗೆ ಸಂತೋಷವನ್ನೇ ಉಂಟುಮಾಡಬೇಕು. ಇಂಥಪುರುಷನು ಪರಮಗತಿಯನ್ನು ಪಡೆಯುವನು. ಶುಚಿತ್ವವು ಯಾವದೆಂದರೆ: ಮೃತ್ತಿಕೆಯಿಂದಲೂ ಉದಕಗಳಿಂದಲೂ ಕೂಡ ಮಲಮೂತ್ರಾದಿಗಳ ಗಂಧವನ್ನು ಸಹ ಪರಿಹರಿಸಿಕೊಂಡು, ಮನಃಶುದ್ಧಿ ತೋರುವ ಪರ್ಯಂತರವು ಚೆನ್ನಾಗಿ ಶೋಧನವನ್ನು ಮಾಡಬೇಕು; ತನ್ನ ದೃಷ್ಟಿಯಿಂದ ನೋಡಿ ಶುದ್ಧವಾದ ಪ್ರದೇಶವಿದು ಎಂದು ತಿಳಿದು, ಅಲ್ಲಿ ಪಾದಗಳನ್ನಿರಿಸಿ ಸಂಚರಿಸಬೇಕು; ವಸ್ತ್ರದಿಂದ ಶೋಧಿಸಲ್ಪಟ್ಟ ಜಲವನ್ನು ಪಾನಮಾಡಬೇಕು; ಸತ್ಯದಿಂದ ಪರಿಶುದ್ಧವಾದ ವಾಕ್ಯವನ್ನು ಹೇಳಬೇಕು; ತನ್ನ ಮನಸ್ಸಿಗೆ ಈ ಕೆಲಸವು ಒಳ್ಳೇದೆಂದು ತೋರಿದ ಮೇಲೆ ಆ ಕೆಲಸವನ್ನು ಮಾಡಬೇಕು; ಇದು ಶುಚಿತ್ವವೆನ್ನಿಸುವದು. ತನ್ನ ಸ್ವಧರ್ಮದಿಂದ ನ್ಯಾಯವನ್ನು ತಪ್ಪದೆ ಅದರಿಂದ ಎಷುದ್ರವ್ಯಲಾಭವು ಆದರೆ ಅಷ್ಟರಿಂದಲೇ ತುಷ್ಟನಾಗಿರುವದೇ ಸಂತೋಷವು. ಇಂಥ ಸಂತೋಷವೆಂಬ ಅಮೃತದಿಂದ ತೃಪ್ತರಾಗಿಯೂ, ಶಾಂತರಾಗಿಯೂ ಇರುವ ಪುರುಷರಿಗೆ ಉಂಟಾಗುವ ಸುಖವು ಸ್ವರ್ಗಲೋಕದಲ್ಲಿಯೂ ಇಲ್ಲ. ಶತ್ರುಗಳನ್ನೂ ಮಿತ್ರರನ್ನೂ ಸಾಧಾರಣರನ್ನೂ ಸಹ ಸಮದೃಷ್ಟಿಯಿಂದ ನೋಡುವದೇ ಆರ್ಜವವೆನ್ನಿಸಿಕೊಳ್ಳುವದು. ಈ ಆರ್ಜವವು ಉತ್ತಮವಾದ ಧರ್ಮವು' ಎಂದು ಹರಿಶ್ಚಂದ್ರನು ಸತ್ಯಕೀರ್ತಿಗೆ ನಿರೂಪಿಸಿದನು" ಎಂದು ಮಾರ್ಕಂಡೇಯನು ಧರ್ಮರಾಯನಿಗೆ ಹೇಳಿದನು.

## ೨೯೧—(೧೪)ನೇ ಅಧ್ಯಾಯ.—ಹರಿಶ್ಚಂದ್ರೋಪಾಖ್ಯಾನ—(ಲೋಹಿತಾಸ್ಯನು ಸರ್ಪದಷ್ಟನಾದದ್ದು.)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯನೆ, ಆ ಬಳಿಕ ಮಾರ್ಕಂಡೇಯನು ಧರ್ಮರಾಯನನ್ನು ಕುರಿತು "ಕೇಳು ಧರ್ಮರಾಯನೆ, ಹರಿಶ್ಚಂದ್ರನು ಶ್ಮಶಾನದಲ್ಲಿ ವಾಸ

ಮಾಡುತ್ತ ಹಸಿವುಬಾಯಾರಿಕೆಗಳಿಂದ ತಪಿಸುತ್ತ 'ನಾನು ವಿಶ್ವಾಮಿತ್ರಾಶ್ರಮವನ್ನು ಬಿಟ್ಟು ಅಲ್ಲಿಂದ ಹೊರಟುಬಂದದ್ದು ಮೊದಲುಗೊಂಡು ಜಲಪಾನದಿಂದಲಾದರೂ ಪ್ರಾಣಧಾರಣೆಯನ್ನು ಮಾಡಿಕೊಂಡಿದ್ದೆನು. ಈಗ ಚಂಡಾಲನ ದರ್ಶನ ಸ್ಪರ್ಶನ ಸಂಭಾಷಣಾದಿಗಳು ನನಗೆ ತಪ್ಪದೆ ಇರುವದರಿಂದ, ಆ ಜಲಪಾನಕ್ಕೂ ಯೋಗ್ಯತೆಯಿಲ್ಲ; ಸಂಧ್ಯಾವಂದನಾದಿ ಕ್ರಿಯೆಗಳನ್ನು ಮಾಡುವದಕ್ಕೂ ಮಾರ್ಗವಿಲ್ಲ. ನಾನು ಭ್ರಷ್ಟನಾಗುವ ಕಾಲವು ಬಂತು' ಎಂದು ಆಲೋಚಿಸಿ, ವಿಶ್ವೇಶ್ವರನನ್ನು ಧ್ಯಾನಿಸುತ್ತ ರಾತ್ರಿಯಲ್ಲಿ ಶಯನಮಾಡಿದನು. ಆಗ ದೇವೇಂದ್ರನು ಪ್ರತ್ಯಕ್ಷವಾಗಿ ಬಂದು 'ಎಲೈ ಹರಿಶ್ಚಂದ್ರಮಹಾರಾಜನೆ, ನೀನು ಮಹಾಸತ್ಯಸಂಧನು. ನಿನಗೆ ಈ ಕಷ್ಟವು ಬಹಳ ದಿವಸ ಇರಲಾರದು. ಈ ಕಷ್ಟನಿವೃತ್ತಿಯು ಶೀಘ್ರವಾಗಿಯೇ ಆಗುವದು. ಈ ಚಂಡಾಲನ ಮನೆಯಲ್ಲಿ ನೀನು ಎಷ್ಟು ದಿವಸ ಇರುವೆಯೋ ಅಷ್ಟು ದಿವಸ ಪರ್ಯಂತರವು ನಿನಗೆ ಹಸಿವು ಬಾಯಾರಿಕೆಗಳು ಇಲ್ಲದೆ ದಿವ್ಯಾನ್ನವನ್ನು ಭೋಜನಮಾಡಿದಂತಿರುವದು ಮಾತ್ರವೇ ಅಲ್ಲದೆ, ನಿನಗೆ ನಿತ್ಯಕರ್ಮಲೋಪದೋಷವೂ ಇಲ್ಲ' ಎಂದು ಹೇಳಿ ಅಂತರ್ಧಾನವನ್ನೈದಿದನು.

ಎಲೈ ಧರ್ಮರಾಯನೆ, ಈ ಪ್ರಕಾರ ದೇವೇಂದ್ರನ ವರದಿಂದ ಹರಿಶ್ಚಂದ್ರರಾಯನು ತೃಪ್ತನಾಗಿ ಆ ಶ್ಮಶಾನದಲ್ಲಿ ವೀರಬಾಹುವಿನ ಆಜ್ಞಾನುಸಾರವಾಗಿದ್ದನು. ಇತ್ತ ಒಂದುದಿನ ಕಾಲಕೌಶಿಕನೆಂಬ ಬ್ರಾಹ್ಮಣನು ಚಂದ್ರಮತಿಯ ಬಾಲಕನನ್ನು ಬೆದರಿಸಿ, ಸಾದೆಯನ್ನೂ ಪತ್ರಾವಳಿಯನ್ನೂ ಸಮಿತ್ತುಗಳನ್ನೂ ದರ್ಭೆಯನ್ನೂ ಸಹ ತರಹೇಳಿ ಅರಣ್ಯಕ್ಕೆ ಕಳುಹಿಸಿದನು. ಆ ಬಾಲಕನು ಸಾದೆಗೆ ಹೋಗುವ ಇತರಬಾಲಕರನ್ನು ಜೊತೆಮಾಡಿಕೊಂಡು ಅರಣ್ಯವನ್ನೈದಿ, ಪ್ರಯಾಸದಿಂದ ಸಾದೆಯನ್ನು ಸಂಪಾದಿಸಿ ಕಟ್ಟಿ ತಲೆಯ ಮೇಲೆ ಹೊತ್ತುಕೊಂಡು, ನಡೆಯಲಾರದೆ ದುಃಖಪಡುತ್ತ, ಹೆಜ್ಜೆಹೆಜ್ಜೆಗೂ ಮುಗ್ಗರಿಸಿಬಿದ್ದೇನೆಂಬ ಭಯದಿಂದ, ಒಂದು ಮುತ್ತುಗದ ಕೋಲನ್ನು ಊರಿಕೊಂಡು ಮೆಲ್ಲಮೆಲ್ಲಗೆ ಜಲವಿರುವ ಸ್ಥಳಕ್ಕೆ ಹೋಗಿ ಉದಕವನ್ನು ಕುಡಿದು, ನಿಂತುಕೊಂಡು, ಸಾದೆಯ ಹೊರೆಯನ್ನು ಕೆಳಕ್ಕೆ ಕೆಡಹಿದನು. ಕೂಡಲೆ ಬಳಲಿಕೆಯಿಂದ ತಾನೂ ಬಿದ್ದು ಮೂರ್ಛೆಯನ್ನೈದಿ, ಮೆಲ್ಲಗೆ ಮೂರ್ಛೆಯನ್ನುತಿಳಿದೆದ್ದು, ಪುನಃ ಜಲಪಾನವನ್ನು ಮಾಡಿ ಮಲಗಿಕೊಂಡು, ಮುಹೂರ್ತ ಸಮ್ಮಾಣಿಸಿಕೊಂಡೆದ್ದು, ಮುತ್ತುಗದ ಎಲೆಯನ್ನು ಕೊಯ್ಯಲೋಸುಗ ಪ್ರಯತ್ನವನ್ನು ಮಾಡಿ, ಕೈಗೆ ಸಿಕ್ಕಿದ ಎಲೆಗಳನ್ನು ಕೊಯಿದು, ಮೇಲಿದ್ದ ಎಲೆಗಳು ನಿಲುಕದೆ ಹೋಗಲು ಆ ಮರದ ಕೆಳಗೆ ಒಂದು ಹಾವಿನ ಹುತ್ತವನ್ನು ನೋಡಿ, ಅದರಮೇಲೆ ಹತ್ತಿ ಎಲೆಗಳನ್ನು ನಿಲುಕಿಸಿಕೊಂಡು ಕೊಯ್ಯುತ್ತಿದ್ದನು. ಆ ಸಮಯದಲ್ಲಿ ಒಂದು ಮಹಾಸರ್ಪವು ಹುತ್ತದ ದರಿಯಿಂದ ಹೊರಕ್ಕೆ ಬಂದು ಈ ಬಾಲಕನನ್ನು ಕಚ್ಚಿತು. ಆ ಮಹಾಸರ್ಪದ ವಿಷವು ದೇಹಕ್ಕೆ ವ್ಯಾಪಿಸಿ ಉತ್ತರಕ್ಷಣದಲ್ಲೇ ಆ ಬಾಲಕನು ಪ್ರಾಣವನ್ನು ಬಿಟ್ಟನು. ಬಳಿಕ ಜೊತೆಯಾಗಿ ಹೋಗಿದ್ದ ಹುಡುಗರೆಲ್ಲರೂ ತಮ್ಮತಮ್ಮ ಹೊರೆಗಳನ್ನು ಹೊತ್ತುಕೊಂಡು ಸಾಯಂಕಾಲದ ಸಮಯಕ್ಕೆ ಸರಿಯಾಗಿ ತಮ್ಮತಮ್ಮ ಮನೆಗಳಿಗೆ ಬಂದರು. ಇಷ್ಟುಹೊತ್ತಿಗೆ ಚಂದ್ರಮತಿಯು ತನ್ನ ಬಾಲಕನ ಮೇಲಣ ಜ್ಞಾನದಿಂದ ಬಾರಿಬಾರಿಗೂ ಬೀದಿಯ ಬಾಗಿಲಿಗೆ ಬಂದು ನೋಡುತ್ತ, ಯಾಕೋ ಮಗುವು ಇನ್ನೂ ಬರಲಿಲ್ಲವೆಂದು ಚಿಂತಿಸುತ್ತಿದ್ದು, ಜೊತೆಯಲ್ಲಿ ಹೋದ ಬಾಲಕರೆಲ್ಲರೂ ಹೊರೆಗಳನ್ನು ಹೊತ್ತುಕೊಂಡು ಬರುತ್ತಿರುವದನ್ನು ಕಂಡು, ತನ್ನ ಬಾಲಕನನ್ನು ಮಾತ್ರ ಕಾಣದೆ ಶೋಕಪಡುತ್ತ, ಆ ಹುಡುಗರನ್ನು ಕೇಳಲಾಗಿ; ಅವರು 'ನಿನ್ನ ಮಗನು ಒಂದು ಮುತ್ತುಗದ ಮರದಕೆಳಗೆ ಹಾವು ಕಚ್ಚಿ ಹುತ್ತದ ಮೇಲೆ ಬಿದ್ದಿರುವನು. ನೀನು ಹೋಗಿ ಅವನನ್ನು ನೋಡಿಕೊಂಡು ಬಾ' ಎಂದು ಹೇಳಿದರು. ಆಗ ಚಂದ್ರಮತಿಯು ವಜ್ರಪ್ರಹಾರಕ್ಕಿಂತಲೂ ಕಠೋರವಾದ ಆ ವಾಕ್ಯವನ್ನು ಕೇಳಿ ಬಹು ಶೋಕಪಡುತ್ತ ಬಿದ್ದು ಮೂರ್ಛೆಯನ್ನೈದಿ, ಪುನಃ ಮೂರ್ಛೆಯನ್ನು ತಿಳಿದು ಜ್ಞಾನವನ್ನು ತಂದುಕೊಂಡು, ಹೋಗುವದಕ್ಕಿಲ್ಲದೆ ಆ ಬ್ರಾಹ್ಮಣನ ಮನೆಯಲ್ಲಿ ಕೆಲಸತೀರಿಸಿಕೊಂಡು, ಆ ದಂಪತಿಗಳು ರಾತ್ರಿ ಭೋಜನವನ್ನು ಮಾಡಿ ಶಯನಮಾಡಿದಮೇಲೆ ಅರ್ಧರಾತ್ರಿ ಸಮಯದಲ್ಲಿ ಒಂದು ಗೊರವಿಯ ಕಟ್ಟಿಗೆಯನ್ನು ಹತ್ತಿಸಿಕೊಂಡು ಬೆಳಕುಮಾಡಿಕೊಂಡು, ಕಣ್ಣೀರುಗಳನ್ನುಬಿಡುತ್ತ, ರೋದನಗೈಯುತ್ತ, ಎಡವಿಬೀಳುತ್ತ ಏಳುತ್ತ, ಧೂಳುಗಳಿಂದ ವ್ಯಾಪ್ತವಾದ

ಶರೀರವುಳ್ಳವಳಾಗಿ, ವಿವರ್ಣಮುಖಳಾಗಿ, ಭಯಂಕರವಾದ ಅರಣ್ಯವನ್ನು ಕುರಿತು ತೆರಳಿದಳು. ಈ ರೀತಿಯಲ್ಲಿ ಪುತ್ರವತ್ಸಲೆಯಾದ ಚಂದ್ರಮತಿಯು ತನ್ನ ಬಾಲಕನನ್ನು ಹುಡುಕಿಕೊಂಡು ಹೋಗುತ್ತಾ ಶೋಕದಿಂದ ಪ್ರಜ್ಞೆಯಿಲ್ಲದೆ ಉನ್ಮಾದಭ್ರಮೆಯನ್ನೈದಿ, ಆ ವನದಲ್ಲಿದ್ದ ನಾನಾವಿಧವಾದ ವೃಕ್ಷಗಳನ್ನು ಕಂಡು 'ಎಲೈ ಹಲಸಿನ ವೃಕ್ಷವೆ, ನನ್ನ ಬಾಲಕನನ್ನು ನೀನು ಕಾಣಲಿಲ್ಲವೆ? ಎಲೈ ಮಾವಿನವೃಕ್ಷವೆ, ನನ್ನ ಬಾಲಕನನ್ನು ನೀನಾದರೂ ಕಾಣಲಿಲ್ಲವೆ? ಕಂಡಿದ್ದರೆ ನೀನಾದರೂ ಹೇಳಬಾರದೆ?' ಎಂದು ವೃಕ್ಷಗಳನ್ನೂ ಲತೆಗಳನ್ನೂ ಸಹ ಬೇಡಿಕೊಳ್ಳುತ್ತ ಹೋಗಿ, ಆ ಮರದ ಕೆಳಗೆ ಹುತ್ತದ ಮೇಲೆ ಬಿದ್ದಿದ್ದ ಬಾಲಕನನ್ನುನೋಡಿ, ಮಹಾಶೋಕದಿಂದ ಮೂರ್ಛೆಯನ್ನೈದಿ, ಅವನ ಮೇಲೆ ಬಿದ್ದು, ಬಹು ಮುಹೂರ್ತಪರ್ಯಂತರವು ಜ್ಞಾನವಿಲ್ಲದೆ ಸುಮ್ಮನೆ ಸ್ತಬ್ಧಳಾಗಿದ್ದು, ಆ ಮೇಲೆ ಮೂರ್ಛೆಯನ್ನು ತಿಳಿದು ಸಮಾಶ್ವಾಸಿಸಿಕೊಂಡೆದ್ದು, ಬಾಲಕನನ್ನು ನೋಡಿ ಅತ್ಯಂತವಾಗಿ ವಿಲಾಪನೆಮಾಡಿದಳು" ಎಂದು ಮಾರ್ಕಂಡೇಯನು ಧರ್ಮರಾಯನಿಗೆ ಹೇಳಿದನು.

---

೨೯೧—(೧೫)ನೇ ಅಧ್ಯಾಯ.—ಹರಿಶ್ಚಂದ್ರೋಪಾಖ್ಯಾನ—(ಚಂದ್ರಮತಿಯು ಸತ್ತ ಮಗನನ್ನು ಶ್ಮಶಾನಕ್ಕೆ ತಂದದ್ದು.)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯನೆ, ಮಾರ್ಕಂಡೇಯನು ಧರ್ಮರಾಯನನ್ನು ಕುರಿತು "ಕೇಳು ಧರ್ಮರಾಯನೆ, ಈ ರೀತಿಯಲ್ಲಿ ಚಂದ್ರಮತಿಯು ಅರಣ್ಯದಲ್ಲಿ ಹುತ್ತದ ಮೇಲೆ ಮಲಗಿರುವ ಮಗನನ್ನು ನೋಡಿ 'ಎಲೈ ಕಂದ, ನಿನಗೆ ಈ ಮೇರೆಗೆ ವಿಪತ್ತು ಬರುವದೆಂದು ನಾನು ತಿಳಿಯಲಿಲ್ಲ! ಈ ಹುತ್ತದ ಮೇಲೆ ಮಲಗಿರುವ ನಿನಗೆ ಈ ಕಲ್ಲುಗಳು ಮೈಯ್ಯನ್ನು ಒತ್ತುವದಿಲ್ಲವೆ? ಬರಿನೆಲದಲ್ಲಿ ಮಲಗಿರುವ ನಿನಗೆ ಚಳಿಯಾಗುವದಿಲ್ಲವೆ? ಈ ಸೌದೆಯಹೊರೆಯನ್ನು ತಲೆಯಮೇಲೆ ಹೊತ್ತುಕೊಂಡು ಬರುವ ನಿನ್ನ ತಲೆಯು ಬೋಳೆಯಾಗಿದೆಯಲ್ಲ! ಮುಳ್ಳುಸಾದೆಗಳನ್ನು ಮುರಿದು ನಿನ್ನ ಮೃದುವಾದ ಹಸ್ತಗಳಲ್ಲಿ ಬೊಬ್ಬೆಗಳು ಎದ್ದಿವೆಯಲ್ಲ!' ಎಂದು ಆ ಬಾಲಕನ ಕೈಗಳನ್ನು ತನ್ನ ಕಣ್ಣುಗಳಿಗೆ ಒತ್ತಿಕೊಂಡು, 'ಎಲೈ ಮಗನೆ, ನನ್ನ ಹೊಟ್ಟೆಯಲ್ಲಿ ನೀನು ಹುಟ್ಟಿ, ತಾಯಿಯ ಸೌಖ್ಯವನ್ನೂ ತಂದೆಯ ಸೌಖ್ಯವನ್ನೂ ಕಾಣದೆ, ವೇಳೆವೇಳೆಗೆ ಅನ್ನೋದಕಗಳನ್ನುಕೂಡ ಅರಿಯದೆ, ಕಷ್ಟಪಟ್ಟುಕೊಂಡು ಕಾಲಕೌಶಿಕನ ಮನೆಯಲ್ಲಿ ಭಯದಿಂದ ನಡುಗುತ್ತ, ನಿರ್ಭಾಗ್ಯಳಾದ ನನ್ನೊಡನೆ ಸುತ್ತಿಸುತ್ತಿಕೊಂಡಿದ್ದರೆ ಅದನ್ನುಕೂಡ ದೈವವು ನೋಡಲಾರದೆ ಹೋಯಿತಲ್ಲ! ನಿನ್ನ ತಂದೆಯು ರಾಜ್ಯವನ್ನು ಕಳೆದುಕೊಂಡು, ಮಹತ್ತಾದ ಋಣಬಾಧೆಯನ್ನು ಸಹಿಸಿಕೊಂಡು, ಮಹಾಕಷ್ಟಕ್ಕೂ ಸಿಕ್ಕಿ ಸಂಕಟಪಡುತ್ತಲಿರುವನು. ಪ್ರಾಣಪ್ರಿಯನಾದ ಪತಿಯನ್ನು ಕಾಣದೆ, ಅಂಥ ಪತಿವಾರ್ತೆಯನ್ನು ಸಹ ತಿಳಿಯದೆ, ಸಂಕಟಪಡುತ್ತ ಪರಗೃಹದಲ್ಲಿ ಅವರಿಂದ ಅನೇಕ ಮಾತುಗಳನ್ನು ಕೇಳಿಕೊಂಡು ಅವರ ಚಾಕರಿಯನ್ನು ಮಾಡಿಕೊಂಡು, ಎಷ್ಟು ಸಂಕಟದಲ್ಲಿ ನಾನು ಸಿಕ್ಕಿದ್ದರೂ ನಿನ್ನನ್ನು ನೋಡಿಕೊಂಡು ಎಲ್ಲಾ ದುಃಖಗಳನ್ನೂ ಮರೆತುಕೊಂಡಿದ್ದೆನಲ್ಲ! ಈಗ ನನ್ನನ್ನು ದಿಕ್ಕಿಲ್ಲದ ಪರದೇಶಿಯನ್ನಾಗಿ ಮಾಡಿಬಿಟ್ಟು ಹೋದೆಯಲ್ಲ! ಹಾ ಮಗನೆ, ಕಾಲಕೌಶಿಕನು ನಿನ್ನನ್ನು ಬೈದು ಸೌದೆಯನ್ನೂ ಪತ್ರಾವಳಿಯನ್ನೂ ಸಮಿತ್ತುಗಳನ್ನೂ ದರ್ಭೆಯನ್ನೂ ತೆಗೆದುಕೊಂಡು ಬರಹೇಳಿ ಉಪದ್ರವಪಡಿಸಿದರೆ, ಕಣ್ಣೀರನ್ನು ಬಿಟ್ಟುಕೊಂಡು ಅಳುತ್ತ ನನ್ನನ್ನು ನೋಡುತ್ತಿದ್ದೆಯಲ್ಲ! ಅದನ್ನು ನೆನೆಸಿಕೊಂಡರೆ ನಾನು ಹ್ಯಾಗೆ ಹೊಟ್ಟೆಯನ್ನು ಹಿಡಿಯಲೋ! ಎಲೈ ಕಂದ, ನೀನು ಹುಟ್ಟಿದಾಗ ಜ್ಯೋತಿಷಶಾಸ್ತ್ರಜ್ಞರಾದ ವಿದ್ವಾಂಸರು ನಿನ್ನ ಜಾತಕವನ್ನು ನೋಡಿ, ಬಾಲಕನು ಸರ್ವಲಕ್ಷಣಸಂಪನ್ನನಾದವನೆಂದೂ, ಭೂಮಂಡಲವನ್ನಾಳುವವನೆಂದೂ ದೀರ್ಘಾಯುಷ್ಯವುಳ್ಳವನೆಂದೂ ಹೇಳಿದರು; ನನ್ನ ದುರದೃಷ್ಟದಿಂದಲೇ ಬ್ರಾಹ್ಮಣರ ವಾಕ್ಯಗಳು ಕೂಡ ಅಸತ್ಯಗಳಾದವು. ಎಲೈ ಬಾಲಕನೆ, ನೀನು ಸಿಂಹಾಸನದ ಮೇಲೆ ಕುಳಿತುಕೊಂಡು ಚಾಮರಗಳನ್ನುಹಾಕಿಸಿಕೊಳ್ಳುತ್ತ, ಮಂತ್ರಿಗಳು ಮುಂತಾದ ಸಾಮಾಜಿಕರಿಂದ ಕೈಮುಗಿಸಿಕೊಳ್ಳುತ್ತ, ಒಡ್ಡೋಲಗದಿಂದಿರುವಾಗ ನಿನ್ನನ್ನು ನೋಡಬೇಕೆಂದು ಆಶೆಪಟ್ಟುಕೊಂಡಿದ್ದ ನನ್ನ ಆಶೆಯನ್ನು ಕಾಡುಪಾಲುಮಾಡಿ ನೀನೂ ಕಾಡುಪಾಲಾಗಿ ಹೋದಮೇಲೆ ನನಗೆ ಗತಿಯಾರು? ನಾನು ಎಲ್ಲಿಗೆ

ಹೋಗಲಿ? ಯಾರಿಗೆ ಹೇಳಿಕೊಳ್ಳಲಿ? ಯಾರು ನನ್ನ ದುಃಖವನ್ನು ಪರಿಹರಿಸ್ಯಾರು!' ಎಂದು ರೋದನಮಾಡು ತ್ತಿದ್ದಳು. ಅದನ್ನು ಕಂಡು ಆ ವನದೇವತೆಗಳೂ ಅಲ್ಲಿರುವ ಪಕ್ಷಿಗಳೂ ಮೃಗಗಳೂ ಸಹ ರೋದನಮಾಡಿದವು.

ಈ ರೀತಿಯಲ್ಲಿ ಚಂದ್ರಮತಿಯು ಪ್ರಲಾಪಿಸುತ್ತ, ಆ ಬಾಲಕನನ್ನು ಎತ್ತಿಕೊಂಡು ಶ್ಮಶಾನಕ್ಕೆ ಬಂದು ಅಲ್ಲೊಂದು ಸ್ಥಳದಲ್ಲಿ ಶವವನ್ನಿರಿಸಿ, ದಹಿಸಲೋಸುಗ ಕಾಷ್ಠಗಳನ್ನು ಹುಡುಕುತ್ತ ರೋದನಮಾಡುತ್ತಿದ್ದಳು. ಆ ಶ್ಮಶಾನದಲ್ಲಿ ಈರೀತಿಯಾದ ಸ್ತ್ರೀ ರೋದನಧ್ವನಿಯನ್ನು ಕೇಳಿ ಹರಿಶ್ಚಂದ್ರನು, ಆ ಸ್ಥಳಕ್ಕೆ ಬಂದು, ಮೃತನಾದ ಬಾಲಕನ ವಸ್ತ್ರವನ್ನು ತೆಗೆದುಕೊಂಡು ಹೋಗುವ ನಿಮಿತ್ತವಾಗಿ ಸಮೀಪಕ್ಕೆ ಬಂದನು. ಮಹಾಭಯಂಕರನಾಗಿ ಘೋರನಾಗಿರುವ ಹರಿಶ್ಚಂದ್ರನನ್ನು ನೋಡಿ, ಯಾರೋ ರಾಕ್ಷಸನೆಂದು ತಿಳಿದು ಚಂದ್ರಮತಿಯು 'ಎಲೈ ರಾಕ್ಷಸನೆ, ದೀನಳಾಗಿ ಪತಿಯನ್ನು ಕಾಣದೆ ಮೃತನಾದ ಪುತ್ರನನ್ನು ಕಾದಿರುವ ನನ್ನನ್ನು ಸಂಹರಿಸಿಬಿಡು. ನಾನು ಜೀವಿಸಿ ಏನು ಫಲವು?' ಎಂದು ನುಡಿದಳು. ಆ ವಾಕ್ಯವನ್ನು ಕೇಳಿ ಹರಿಶ್ಚಂದ್ರನು, ಈ ಸ್ತ್ರೀಯು ನನ್ನನ್ನು ಕಂಡು ಎಲೈ ರಾಕ್ಷಸನೇ ಎಂದು ಹೇಳಿದಳು. ಹಾಗಾದರೆ ನಾನು ಚಂಡಾಲನ ಸೇವೆಯನ್ನು ಮಾಡಿದ ಮಾತ್ರದಿಂದಲೇ ನನ್ನ ಮನುಷ್ಯರೂಪವೂ ಮನುಷ್ಯಧ್ವನಿಯೂ ಹೋದವೆ?' ಎಂದು ಚಿಂತಾಕ್ರಾಂತನಾಗಿ 'ಎಲೈ ಸೌಭಾಗ್ಯವತಿಯೆ, ನನ್ನ ಭಯಂಕರವಾದ ಈ ಶರೀರವನ್ನು ನೋಡಿ ಭಯಪಡಬೇಡ. ಎಲೈ ಸುಮಾಂಗಲ್ಯವತಿಯೇ, ನಾನು ಮನುಷ್ಯನೇ ಹೊರತು ರಾಕ್ಷಸನಲ್ಲ. ಇನ್ನೂ ನಿನಗೆ ನಂಬಿಕೆಯಿಲ್ಲದೆ ಹೋದರೆ ನನ್ನ ಮಾತನ್ನು ಕೇಳು: ಹರಿಶ್ಚಂದ್ರನೆಂಬ ಒಬ್ಬ ಅರಸು ಇರುವನೆಂದು ಕೇಳಿರುವೆಯಲ್ಲವೆ? ಆ ಹರಿಶ್ಚಂದ್ರನೇ ನಾನು. ಸಂಶಯಪಡಬೇಡ, ಭಯವನ್ನು ಬಿಡು' ಎಂದು ನುಡಿದನು. ಅದನ್ನು ಕೇಳಿ ಚಂದ್ರಮತಿಯು ಸ್ತಬ್ಧಳಾಗಿ ಚಿಂತಿಸಿ 'ಹರಿಶ್ಚಂದ್ರನ ಶರೀರವು ಹ್ಯಾಗಾದೀತು? ಸಮಸ್ತಲೋಕಗಳಿಗೂ ಪತಿಯಾದ ಹರಿಶ್ಚಂದ್ರನು ಬಂದರೆ ಮಹತ್ತಾದ ಶೋಕಮೋಹಗಳೂ ಶಾಂತವಾಗಬೇಕು. ನನಗೆ ಯಾಕೆ ಶಾಂತವಾಗಲಿಲ್ಲ? ಇದು ಶರತ್ಕಾಲದ ಚಂದ್ರನಂತೆ ಪ್ರಕಾಶಿಸುವ ಹರಿಶ್ಚಂದ್ರನ ಶರೀರವು ಹ್ಯಾಗಾದೀತು? ಚಂಡಾಲಾಕೃತಿಯುಳ್ಳದ್ದಾಗಿ ಮನುಷ್ಯಭಾವದಲ್ಲಿಯೂ ಕೂಡ ಭಯಂಕರವಾಗಿದೆ' ಎಂದು ಮನಸ್ಸಿನಲ್ಲಿ ಚಿಂತಿಸಿ; ಹರಿಶ್ಚಂದ್ರನನ್ನು ಕುರಿತು 'ಎಲೈ ಪುರುಷನೆ, ನೀನು ಹರಿಶ್ಚಂದ್ರನಾದರೆ ನಿನ್ನ ಮಗನು ಯಾರು? ಅವನು ಎಲ್ಲಿರುವನು? ಅವನ ಹೆಸರೇನು? ನಿನ್ನ ಪತ್ನಿ ಯಾರು? ಎಲ್ಲಿದಾಳೆ? ಅವಳ ಹೆಸರೇನು? ಸತ್ಯಕೀರ್ತಿಯೆಂಬ ಮಂತ್ರಿಯು ಎಲ್ಲಿಗೆ ಹೋದನು? ಇದನ್ನು ನನಗೆ ಹೇಳು' ಎಂದು ಕೇಳು. ಅದಕ್ಕೆ ಹರಿಶ್ಚಂದ್ರನು 'ಎಲೈ ಸುಮಾಂಗಲ್ಯವತಿಯೆ, ಅತಿಕಷ್ಟವಾದ ಆ ವೃತ್ತಾಂತವನ್ನು ಯಾಕೆ ಕೇಳುತ್ತೀಯೆ? ಅದನ್ನು ನಾನು ಹೇಳಲಾರೆನು. ಪುತ್ರನನ್ನೂ ಪತ್ನಿಯನ್ನೂ ಸಹ ವಿಕ್ರಯವನ್ನು ಮಾಡಿದ ಪಾಪಿಷ್ಠನಾದ ಪುರುಷನು ಯಾವನಾದರೂ ಉಂಟೆ? ಮದ್ಯಮಾಂಸಗಳ ವಿಕ್ರಯವೇ ಮೊದಲಾದ ಪಾಪದ್ರವ್ಯವನ್ನು ವಿಕ್ರಯಮಾಡುವ ನರಾಧಮನೂ ಕೂಡ ಇಂಥ ನಿಂದಿತವಾದ ಪತ್ನೀಪುತ್ರವಿಕ್ರಯವನ್ನು ಮಾಡುವದಿಲ್ಲ. ಪಾಪಿಷ್ಠನೂ ದುರಾಚಾರನೂ ದುರ್ಜನರಲ್ಲಿ ಪರಮದುರ್ಜನನೂ ಆದ ನಾನು ಅಂಥ ಪುತ್ರವಿಕ್ರಯವನ್ನು ಮಾಡಿದೆನು. ನನ್ನನ್ನು ಯಾಕೆ ಕೇಳುತ್ತೀಯೆ?' ಎನಲು; ಚಂದ್ರಮತಿಯು ಖಿನ್ನಳಾಗಿ, ಈ ಮಾತುಗಳಿಂದ ತನ್ನ ಪತಿಯು ಈತನೇ ಆಹುದೆಂದು ತಿಳಿಯಬಂದರೂ ಘೋರವಾದ ಆಕೃತಿಯಿಂದ ಪತಿಯು ಆಹುದೋ ಅಲ್ಲವೋ ಎಂಬ ಸಂಶಯದಿಂದ 'ಎಲೈ ಮಹಾಪುರುಷನೆ, ನಿನಗೆ ಈ ಪ್ರಕಾರವಾದ ಕಷ್ಟವು ದೈವಗತಿಯಿಂದ ಬಂತು. ಈಗ ಬಾಲಕನನ್ನು ದಹಿಸುವದಕ್ಕೆ ಅಪ್ಪಣೆಯನ್ನು ಕೊಡು' ಎಂದಳು. ಬಳಿಕ ಹರಿಶ್ಚಂದ್ರನು 'ಎಲೈ ಸುಮಂಗಲಿಯೆ, ಇಲ್ಲಿ ಶ್ಮಶಾನದ ಕಾಣಿಕೆಯಾದ ಒಂದು ಸುವರ್ಣವನ್ನು ಕೊಡಬೇಕು. ಅದನ್ನು ಕೊಟ್ಟು ಮುಂದಣ ಕೆಲಸವನ್ನು ಮಾಡು' ಎನಲು; ಚಂದ್ರಮತಿಯು 'ಎಲೈ ಮಹಾಪುರುಷನೆ, ಪರಗೃಹದಲ್ಲಿ ದಾಸಿಯಾಗಿರುವ ನನಗೆ ಸುವರ್ಣವು ಎಲ್ಲಿಂದ ಬಂದೀತು?' ಎಂದು ನುಡಿಯಲು, ಹರಿಶ್ಚಂದ್ರನು 'ಎಲೈ ಸುಮಂಗಲಿಯೆ, ನಿನ್ನ ಕಂಠದಲ್ಲಿ ಪ್ರಕಾಶಿಸುತ್ತಲಿರುವ ಮಾಂಗಲ್ಯಸುವರ್ಣವನ್ನು ಕೊಡು' ಎಂದನು. ಆಗ ಚಂದ್ರಮತಿಯು 'ಈ ನನ್ನ ಮಾಂಗಲ್ಯವು ನನ್ನ ಪತಿಹೊರತು ಮತ್ತೊಬ್ಬರ ಕಣ್ಣಿಗೆ ಕಾಣಿಸಿಕೊಳ್ಳುವದಿಲ್ಲ. ಈತನು ತನ್ನ ಮಾಂಗಲ್ಯವನ್ನು ಕಂಡದ್ದರಿಂದಲೂ, ಈತನ ವಾಕ್ಯಗಳಿಂದಲೂ, ಈತನೇ ನನ್ನ ಪತಿಯೋ ಏನೋ? ಯಾವದೋ ಕರ್ಮದಿಂದ ಈ ವೈರೂಪ್ಯವು ಬಂದಿರಬಹುದು' ಎಂದು ಮನಸ್ಸಿನಲ್ಲಿ

ನಿಟ್ಟುಸಿರುಬಿಟ್ಟು, ಬೇಗ ಎದ್ದು ಬಾಷ್ಪವನ್ನು ಬಿಡುತ್ತ, ಗದ್ಗದಧ್ವನಿಯಿಂದ ಮಾತನಾಡುತ್ತ, ಪತಿಯ ಪಾದಗಳಲ್ಲಿ ಬಿದ್ದು, ಆತನನ್ನು ಕುರಿತು, 'ಎಲೈ ಕಾಂತನೆ, ನಿನ್ನ ಶರೀರಕಾಂತಿಯು ಎಲ್ಲಿ ಹೋಯಿತು? ಅಂಥ ದಿವ್ಯ ಸುಂದರದೇಹವು ಏನಾಯಿತು? ಆ ಮಹಾತೇಜಸ್ಸು ಎಲ್ಲಿ ಹೋಯಿತು? ಈ ಸಮಸ್ತ ಭೂಮಂಡಲವನ್ನೂ ರಕ್ಷಿಸುತ್ತಲಿದ್ದ ಮಹಾರಾಜನಾದ ನಿನಗೆ ಈ ವೈರೂಪ್ಯವು ಯಾಕೆ ಬಂತು? ನಾನು ನನ್ನ ತಂದೆಯಿಂದ ಅಗ್ನಿ ಸಾಕ್ಷಿಕವಾಗಿ ಕೊಡಲ್ಪಟ್ಟು ನಿನ್ನ ಪಾಣಿಗ್ರಹಣವನ್ನು ಮಾಡಿದ ನಿನ್ನ ಪಟ್ಟದ ರಾಣಿಯು. ನನ್ನ ನಾಮಧೇಯವು ಚಂದ್ರಮತಿಯೆಂದು ಹೇಳುವರು. ದೇವತೆಗಳು ಮೊದಲು ನಮ್ಮಿಬ್ಬರಿಗೂ ದಾಂಪತ್ಯವನ್ನುಂಟುಮಾಡಿದರು. ಈಗ ಆ ದೇವತೆಗಳೇ ನಮ್ಮಿಬ್ಬರನ್ನಗಲುವಂತೆ ಮಾಡಿದರು. ಎಲೈ ರಾಜೇಂದ್ರನೆ, ನಾವು ಈ ವಿಪತ್ತನ್ನು ದಾಟುವದಕ್ಕೆ ಉಪಾಯವೇನೂ ಇಲ್ಲವೆ?' ಎಂದು ಪುನಃ ಪತಿಯ ಪಾದಗಳಮೇಲೆ ಬಿದ್ದಳು. ಆ ಚಂದ್ರಮತಿ ಯನ್ನು ನೋಡಿ ಆ ಹರಿಶ್ಚಂದ್ರನು, ಶೋಕದಿಂದ ಗದ್ಗದವಾದ ವಾಕ್ಯದಿಂದ 'ಎಲೈ ಪತ್ನಿಯೆ, ಪತಿವ್ರತೆಯಾಗಿಯೂ ಅತಿಸುಂದರಳಾಗಿಯೂ ಇರುವ ನೀನು ನನ್ನನ್ನು ಮುಟ್ಟಬೇಡ. ನನ್ನಿಂದ ಮಹಾಕಷ್ಟಕ್ಕೆ ಸಿಕ್ಕಿ ಪರಗೃಹದಲ್ಲಿ ದಾಸಿಯಾಗಿ ಶ್ರಮಪಡುತ್ತಲಿರುವ ನಿನ್ನನ್ನು ಈಗ ಕಂಡೆನು. ನನ್ನ ಹೃದಯಕ್ಕೆ ಆನಂದಕರನಾಗಿಯೂ ವಂಶೋ ದ್ಧಾರಕನಾಗಿಯೂ ಬಾಲಕನಾಗಿಯೂ ಇರುವ ನನ್ನ ಕುಮಾರನು ಎಲ್ಲಿರುತ್ತಾನೆ? ಅವನ ಸಮಾಚಾರವನ್ನು ಹೇಳು' ಎನಲು; ಆಕೆಯು ಮಹದ್ದುಃಖದಿಂದ ಕಣ್ಣೀರನ್ನು ಸುರಿಸುತ್ತಲೂ, ಬಿಕ್ಕಿಬಿಕ್ಕಿ ಅಳುತ್ತಲೂ, 'ಎಲೈ ಕಾಂತನೆ, ನಿನಗೆ ಪ್ರೀತಿಪಾತ್ರನಾದ ಪುತ್ರನು ಹಾವಿನಿಂದ ಕಚ್ಚಿಸಿಕೊಂಡು ಮೃತನಾಗಿ ಭೂಮಿಯಲ್ಲಿ ಮಲಗಿರು ವನು, ನೋಡು' ಎಂದಳು. ಆ ವಾಕ್ಯವನ್ನು ಕೇಳಿ, ಆ ಬಾಲಕನನ್ನು ನೋಡುತ್ತಲೆ ಮೂಲಚ್ಛೇದವಾದ ವೃಕ್ಷವು ಬೀಳುವಂತೆ ಅವನ ಮೇಲೆ ಬಿದ್ದು ಮೂರ್ಛಿತನಾಗಿ, ಒಂದು ಮುಹೂರ್ತಪರ್ಯಂತರವು ಪ್ರಜ್ಞೆಯಿಲ್ಲದೆ ಪರವಶ ನಾಗಿದ್ದು ಪುನಃ ಪ್ರಜ್ಞೆಯನ್ನು ತಂದುಕೊಂಡು, ಬಾಷ್ಪವನ್ನು ಸುರಿಸುತ್ತ ನಾನಾವಿಧವಾಗಿ ಪ್ರಲಾಪನೆ ಮಾಡಿದನು" ಎಂದು ಮಾರ್ಕಂಡೇಯನು ಧರ್ಮರಾಯನಿಗೆ ಹೇಳಿದನು.

೨೯೧–(೧೬)ನೇ ಅಧ್ಯಾಯ.–ಹರಿಶ್ಚಂದ್ರೋಪಾಖ್ಯಾನ–(ಚಂದ್ರಮತಿಯ ಶಿರಚ್ಛೇದನವನ್ನು ಮಾಡುವಂತೆ ರಾಜಭಟರು ಆಕೆಯನ್ನು ವೀರಬಾಹುವಶಕ್ಕೆ ಒಪ್ಪಿಸಿದ್ದು).

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು–ಕೇಳು ಜನಮೇಜಯರಾಯನೆ, ಮಾರ್ಕಂ ಡೇಯನು ಧರ್ಮರಾಯನನ್ನು ಕುರಿತು "ಕೇಳು ಧರ್ಮರಾಯನೆ, ಹರಿಶ್ಚಂದ್ರರಾಯನು ಮೃತನಾದ ಪುತ್ರ ನನ್ನು ನೋಡಿ 'ಎಲೈ ಪುತ್ರನೆ, ನಾನು ಮಹತ್ತಾದ ತಪಸ್ಸನ್ನು ಮಾಡಿ, ಮಾತಾಪಿತೃಗಳಿಗೆ ಭಕ್ತನಾಗಿಯೂ ಕ್ಷಮಾನ್ವಿತನಾಗಿಯೂ ಸತ್ಯವಾಕ್ಯುಳ್ಳವನಾಗಿಯೂ ಇರುವ ನಿನ್ನನ್ನು ಒಬ್ಬ ಮಗನನ್ನಾಗಿ ಪಡೆದೆನು. ಪುತ್ರಾ ರ್ಥವಾಗಿ ನಾನು ನಾರದಪರ್ವತರೆಂಬ ಇಬ್ಬರು ಋಷಿಗಳನ್ನು ಪ್ರಾರ್ಥಿಸಿದೆನು. ಋಣತ್ರಯವನ್ನು ಪರಿಹರಿ ಸುವ ಪುತ್ರನು ನನಗೆ ಉಂಟಾಗುವಂತೆ ಕ್ರತುವನ್ನು ಮಾಡಿಸಬೇಕೆಂದು ಆ ಋಷಿಗಳು ಪ್ರಾರ್ಥಿಸಿ ಪುತ್ರಕಾಮೇ ಷ್ಟಿಯನ್ನು ನನ್ನ ಕೈಯಿಂದ ಮಾಡಿಸಲು, ಅವರ ಅನುಗ್ರಹದಿಂದ ನಾನು ನಿನ್ನನ್ನು ಪಡೆದೆನು. ಅಂಥ ನನ್ನನ್ನು ಬಿಟ್ಟು ಯಾಕೆ ಹೋದೆ? ದೇವತೆಗಳ ಋಣವನ್ನೂ ಪಿತೃಗಳ ಋಣವನ್ನೂ ಋಷಿಗಳ ಋಣವನ್ನೂ ಸಹ ನಿನ್ನಿಂದ ಪರಿಹರಿಸಿಕೊಂಡು ಶಾಶ್ವತಗಳಾದ ಲೋಕಗಳನ್ನು ಪಡೆಯಬೇಕೆಂಬ ಆಶೆಯಿಂದ ನಿನ್ನನ್ನು ಪಡೆದದ್ದಕ್ಕೆ ನೀನು ನನಗೆ ಕ್ಲೇಶವನ್ನೇ ಕೊಡುವನಾದೆ. ಇನ್ನು ನಾನು ಎಲ್ಲಿಗೆ ಹೋಗಲಿ? ಯಾವ ದಿಕ್ಕುಗಳನ್ನು ನೋಡಿ, ದರೂ ನನ್ನ ಭಾಗಕ್ಕೆ ಶೂನ್ಯಗಳಾಗಿ ಕಾಣಬರುತ್ತವೆ! ಎಲೈ ಮಗುವೆ, ನಿನ್ನಂಥ ಮಗನನ್ನು ಎಲ್ಲಿ ಕಾಣಲಿ? ನಾನು ನಿನಗೆ ತಂದೆಯೂ ಗುರುವೂ ಆಗಿದ್ದರೂ, ಇಂಥ ನಾನೇ ಬಂದು ಮಾತನಾಡಿಸಿದರೂ, ನನ್ನನ್ನು ಯಾಕೆ ಕಣ್ಣುತೆರೆದು ಮಾತನಾಡಿಸುವದಿಲ್ಲ? ನಾನು ನಿನಗೆ ಏನು ಅಪರಾಧವನ್ನು ಮಾಡಿದೆನು? ಎಲೈ ಮಗನೆ, ಅತಿಭಯಂಕರವಾದ

ಈ ಶ್ಮಶಾನದಲ್ಲಿ ಒಬ್ಬಂಟಿಗನಾಗಿ ಯಾಕೆ ಮಲಗಿದ್ದಿ ? ಪೂರ್ಣಚಂದ್ರನಂತೆ ಹೊಳೆಯುತ್ತಲಿದ್ದ ನಿನ್ನ ಮುಖವು ಯಾಕೆ ಕಪ್ಪಾಯಿತು ? ಎಲೈ ಬಾಲಕನೆ, ನನ್ನಲ್ಲಿ ಕೋಪವನ್ನು ಬಿಟ್ಟು ಪ್ರೀತಿಯನ್ನು ಮಾಡು. ನಾನು ನಿನಗೆ ಮಹತ್ತಾದ ಅಪರಾಧವನ್ನು ಮಾಡಿದೆನು, ಕ್ಷಮಿಸು ' ಎಂದು ಆ ಬಾಲಕನ ಪಾದಗಳನ್ನು ಕಣ್ಣಿಗೆ ಒತ್ತಿಕೊಂಡು, ನಾನಾಪ್ರಕಾರವಾಗಿ ವಿಲಾಪವನ್ನು ಮಾಡಿದನು. ಆಗ ಅವನನ್ನು ನೋಡಿ ಸಮಸ್ತದೇವತೆಗಳೂ ರೋದನವನ್ನು ಮಾಡಿದರು.

ಅನಂತರದಲ್ಲಿ ಹರಿಶ್ಚಂದ್ರನು ವಿವೇಕವನ್ನು ತಂದುಕೊಂಡು ಶೋಕವನ್ನು ಹೃದಯದಲ್ಲಿಯೇ ಅಡಗಿಸಿ, ಸುಖದುಃಖಮಿಶ್ರಗಳಾದ ಸಂಸಾರವ್ಯಾಪಾರಗಳನ್ನು ಮನಸ್ಸಿನಲ್ಲೇ ಆಲೋಚಿಸಿ, ಪ್ರಾಣಿಗಳ ಕ್ಷಯವೃದ್ಧಿಗಳನ್ನೇ ಭಾವಿಸಿ ನೋಡಿ ಚಿತ್ತವನ್ನು ಸ್ಥಿರೀಕರಿಸಿಕೊಂಡು, ಚಂದ್ರಮತಿಯನ್ನು ಕುರಿತು ' ಎಲೈ ಪತ್ನಿಯೆ, ಈ ಶ್ಮಶಾನವು ಮಹಾಭಯಂಕರವಾದದ್ದು ; ಇಲ್ಲಿರಬೇಡ, ನಿನ್ನ ಮನಗೆ ಹೋಗು ; ವಿಶ್ವೇಶ್ವರನು ಮಾಡಿದ್ದು ಆಗುವದು ' ಎಂದು ಹೇಳಿದನು. ಪತಿಯ ವಾಕ್ಯವನ್ನು ಕೇಳಿ ಚಂದ್ರಮತಿಯು ಮಹತ್ತಾದ ಶೋಕದಿಂದ ನಿಟ್ಟುಸಿರು ಬಿಡುತ್ತ, ಆ ಮೃತನಾದ ಬಾಲಕನನ್ನು ಬಿಟ್ಟು ಹೋಗುವದಕ್ಕೆ ಮನಸ್ಸಿಲ್ಲದಿದ್ದರೂ ಪತಿವಾಕ್ಯವನ್ನು ಮೀರಲಾರದೆ ಅಲ್ಲಿಂದಹೊರಟು ಅಡಿಗಡಿಗೂ ಎಡವುತ್ತ, ದೈವವನ್ನು ಕುರಿತು ದುಃಖಪಡುತ್ತ, ತನ್ನ ಮನೆಗೆ ಆ ರಾತ್ರಿಯಲ್ಲಿ ಹಿಂತಿರುಗಿ ಹೊರಟಳು. ಅಷ್ಟುಹೊತ್ತಿಗೆ ಚೋರರು ಒಬ್ಬ ಬಾಲಕನನ್ನು ಹಿಡಿದು ರಹಸ್ಯಸ್ಥಾನದಲ್ಲಿ ನಿಲ್ಲಿಸಿಕೊಂಡು ಅವನ ಭೂಷಣಗಳನ್ನು ಅಪಹರಿಸಿ, ಅವನನ್ನು ಕೊಲ್ಲಬೇಕೆಂಬ ಪ್ರಯತ್ನದಿಂದ ಅವನನ್ನು ಪೀಡಿಸುತ್ತಿದ್ದರು. ಆ ಬಾಲಕನು ಆರ್ತಸ್ವರದಿಂದ ' ಯಾರೂ ನನ್ನನ್ನು ಸಂರಕ್ಷಿಸುವರಿಲ್ಲವೆ ? ' ಎಂದು ಕೂಗುತ್ತಿದ್ದನು. ಆ ಶಬ್ದವನ್ನು ಕೇಳಿ ಚಂದ್ರಮತಿಯು ಚೋರರನ್ನು ಕುರಿತು ' ಎಲೈ ಪಾಪಾತ್ಮರುಗಳಿರಾ, ಈ ಬಾಲಕನನ್ನು ಸಂಹರಿಸಬೇಡಿ ; ಅವನನ್ನು ಸಂಹರಿಸಿದರೆ ನೀವೆಲ್ಲರೂ ಮೃತರಾಗುವಿರಿ ' ಎನಲು ; ಚೋರರು ಭಯಪಟ್ಟು ಬಾಲಕನನ್ನು ಬಿಟ್ಟು ದ್ರವ್ಯವನ್ನು ಮಾತ್ರ ಅಪಹರಿಸಿಕೊಂಡು ಪಲಾಯನವನ್ನು ಮಾಡಿದರು. ಅನಂತರದಲ್ಲಿ ಚಂದ್ರಮತಿಯು ಆ ಬಾಲಕನಸಮೀಪಕ್ಕೆ ಬಂದು ' ಎಲೈ ಬಾಲಕನೆ, ನೀನು ಭಯಪಡಬೇಡ. ಸ್ವಸ್ಥವಾಗಿ ಮನೆಗೆ ಹೋಗಿ ಸೇರು, ನಾನೂ ಹೋಗುತ್ತೇನೆ ' ಎಂದು ಹೇಳುತ್ತಿರಲಾಗಿ ; ರಾಜಭಟರು ಚೋರರನ್ನು ಹುಡುಕುವದಕ್ಕೋಸ್ಕರ ಬರುತ್ತಾ ಚಂದ್ರಮತಿಯನ್ನು ನೋಡಿ, ಅವಳೇ ಚೋರಳೆಂದು ನಂಬಿ ' ಎಲೈ ಚೋರಳಾದ ಸ್ತ್ರೀಯೆ, ಬಾಲಕನ ದ್ರವ್ಯವನ್ನು ಅಪಹರಿಸಿಕೊಂಡು ಎಲ್ಲಿಗೆ ಹೋಗುತ್ತಿ ? ' ಎಂದು ಚಂದ್ರಮತಿಯನ್ನು ಹಿಡಿದುಕೊಂಡರು. ಆಗ ಆಕೆಯು ಮಹಾಭಯದಿಂದ ತೀಕ್ಷ್ಣವಾದ ಗಾಳಿಯಿಂದ ಕದಳೀಸ್ತಂಭವು ನಡುಗುವಂತೆ ನಡುಗುತ್ತಾ ನಿಂತುಕೊಂಡಳು. ಆಕೆಯನ್ನು ಕುರಿತು ರಾಜಭಟರು ' ಎಲೈ ಪಾಪಿಷ್ಠಳೂ ದುರಾಚಾರಳೂ ಲಜ್ಜಾರಹಿತಳೂ ಆದ ಸ್ತ್ರೀಯೆ, ಹೊಟ್ಟೆಯಲ್ಲಿ ಹುಟ್ಟಿದ ಮಗನಿಗೆ ಸಮಾನನಾದ ಈ ಬಾಲಕನನ್ನು ಸಂಹರಿಸುವದಕ್ಕೆ ಹ್ಯಾಗೆ ಪ್ರಯತ್ನಮಾಡಿದೆ ? ನೀನು ಅಪಹರಿಸಿದ ದ್ರವ್ಯವೆಲ್ಲಿ ? ಅದನ್ನು ಬೇಗ ತಂದುಕೊಡು ; ಇಲ್ಲದಿದ್ದರೆ ನಿನ್ನನ್ನು ಸಂಹರಿಸುತ್ತೇವೆ ' ಎಂದು ಹೆದರಿಸಿದರು. ಆದರೂ ಚಂದ್ರಮತಿಯು ಯಥಾರ್ಥವನ್ನು ಹೇಳಲಿಲ್ಲ. ಅವರು ಕಶಾಪ್ರಹಾರಗಳನ್ನು ಮಾಡಿದರೂ ಪತಿವ್ರತೆಯಾದ ಚಂದ್ರಮತಿಯು, ಅವುಗಳನ್ನೆಲ್ಲಾ ಸಹಿಸಿಕೊಂಡು, ರಾಜ್ಯನಾಶದಿಂದುಂಟಾದದುಃಖದಿಂದಲೂ, ವನವಾಸದಿಂದ ಉಂಟಾದಕಷ್ಟದಿಂದಲೂ, ಪತಿವಿಯೋಗದಿಂದುಂಟಾದ ಖೇದದಿಂದಲೂ, ಪುತ್ರನ ಮರಣದಿಂದುಂಟಾದ ಶೋಕದಿಂದಲೂ, ಪ್ರಾಣದಮೇಲಣ ಜುಗುಪ್ಸೆಯಿಂದಲೂ ಇನ್ನು ಜೀವಿಸಿರುವದಕ್ಕಿಂತ ತನಗೆ ಮರಣವೇ ಉತ್ತಮವೆಂದು ಯೋಚಿಸಿ ' ಎಲೈ ಭಟರುಗಳಿರಾ, ಈ ಬಾಲಕನ ಕೈಯಲಿದ್ದ ದ್ರವ್ಯವನ್ನು ಅಪಹರಿಸಿ ನಮ್ಮವರ ಕೈಗೆಕೊಟ್ಟೆನು. ಅವರು ಅದನ್ನು ತೆಗೆದುಕೊಂಡು ಹೋದರು ' ಎಂದು ಹೇಳಿದಳು. ಆಗ ಭಟರು ಆಕೆಯನ್ನು ಹಿಡಿದು ಕಟ್ಟಿ, ಕರೆದುಕೊಂಡು ಹೋಗಿ ತಮ್ಮ ಅಧಿಕಾರಿಯ ಸಮೀಪದಲ್ಲಿ ನಿಲ್ಲಿಸಿದರು. ಅಲ್ಲಿದ್ದ ಸಾಮಾಜಿಕರು ಈ ಚಂದ್ರಮತಿಯನ್ನು ಕೇಳಲು, ಆಕೆಯು ಅಲ್ಲಿ ನಡೆದ ವೃತ್ತಾಂತವನ್ನು ವಿಶದಪಡಿಸಲು, ಅದನ್ನು ಕೇಳಿ ಸಜ್ಜನರಾದವರು ಈ ದುಷ್ಕೃತ್ಯವು ಈಕೆಯಿಂದ ನಡೆದದ್ದಲ್ಲವೆಂತಲೂ, ದುರ್ಜನರಾದವರು ಇವಳಿಂದಲೇ ನಡೆದಿರಬೇಕಾದ್ದರಿಂದ ತಕ್ಕ

ಶಿಕ್ಷೆಯನ್ನು ಮಾಡಬೇಕೆಂತಲೂ, ಪತ್ತನಾಧಿಕಾರಿಯ ಸಂಗಡ ಹೇಳಿದರು. ಬಳಿಕ ಅವನು ಆಕೆಯನ್ನು ವೀರಬಾಹುವಿನ ವಶಕ್ಕೆ ಕೊಟ್ಟು ಅವಳ ಶಿರಚ್ಛೇದನ ಮಾಡುವಂತೆ ಹೇಳಿಯೆಂಬುದಾಗಿ ಭಟರಿಗೆ ಆಜ್ಞಾಪಿಸಿದನು. ಅವರು ಆದೇಶಪ್ರಕಾರವಾಗಿ ಆಕೆಯನ್ನು ಕರೆದುಕೊಂಡು ಬಂದು ವೀರಬಾಹುವಿನ ವಶಕ್ಕೆ ಕೊಟ್ಟು 'ನಿನಗೆ ಈಕೆಯ ಶಿರಚ್ಛೇದನವನ್ನು ಮಾಡುವಂತೆ ಆಜ್ಞೆಯಾಗಿದೆ' ಎಂದು ಹೇಳಿ ಹೊರಟು ಹೋದರು" ಎಂದು ಮಾರ್ಕಂಡೇಯನು ಧರ್ಮರಾಯನಿಗೆ ಹೇಳಿದನು.

---

೨೯೧—(೧೩)ನೇ ಅಧ್ಯಾಯ.—ಹರಿಶ್ಚಂದ್ರೋಪಾಖ್ಯಾನ—(ಹರಿಶ್ಚಂದ್ರನು ಚಂದ್ರಮತಿಯ ಶಿರಚ್ಛೇದನಕ್ಕೆ ಉದ್ಯುಕ್ತನಾದದ್ದು.)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಮಾರ್ಕಂಡೇಯನು ಧರ್ಮರಾಯನನ್ನು ಕುರಿತು "ಕೇಳು ಧರ್ಮರಾಯನೆ, ಆ ಮೇಲೆ ವೀರಬಾಹುವಾದ ಚಂಡಾಲನು ಆ ಚಂದ್ರಮತಿಗೆ ಒಬ್ಬ ಭಟನನ್ನು ಕಾವಲಿಟ್ಟು, ಆಕೆಯನ್ನು ಶ್ಮಶಾನದಲ್ಲಿರುವ ಹರಿಶ್ಚಂದ್ರನ ಬಳಿಗೆ ಕಳುಹಿಸಿದನು. ಬಳಿಕ ಆ ಭಟನು ಆಕೆಯನ್ನು ಹರಿಶ್ಚಂದ್ರನ ವಶಕ್ಕೆ ಕೊಟ್ಟು, ಆಕೆಯ ಶಿರಚ್ಛೇದನಮಾಡಿ ಸಂಹರಿಸುವದೆಂಬ ಒಡೆಯನ ಆಜ್ಞೆಯನ್ನು ತಿಳಿಸಿದನು. ಆಗ ಹಗ್ಗಗಳಿಂದ ಕಟ್ಟಿಸಿಕೊಂಡು ಪರವಶಳಾಗಿ ತನ್ನ ಸಮೀಪಕ್ಕೆ ಬಂದ ಪತ್ನಿಯಾದ ಚಂದ್ರಮತಿಯನ್ನು ನೋಡಿ ಹರಿಶ್ಚಂದ್ರನು, ಬಹುಶೋಕದಿಂದ ಮೂರ್ಛಿತನಾಗಿ, ಅನಂತರ ಜ್ಞಾನವನ್ನು ತಂದುಕೊಂಡೆದ್ದು, ಆಕೆಯ ಕಟ್ಟುಗಳನ್ನು ಬಿಚ್ಚಿ ಕಶಾಪ್ರಹಾರಗಳ ಗಾಯಗಳನ್ನು ನೋಡಿ ಬಹುವಾಗಿ ಅಂಗಲಾಚಿಕೊಂಡು, 'ಲೋಕದಲ್ಲಿ ದೈವವೇ ಬಲಿಷ್ಠವಾದದ್ದು. ಎಲೈ ದೈವವೆ, ನಾನು ನಿನಿಗೆ ಏನು ಅಪರಾಧವನ್ನು ಮಾಡಿದೆನು! ನಾನು ಈ ಭೂಮಂಡಲದಲ್ಲಿ ನನ್ನನ್ನೇ ಹುಡಿಕಿಕೊಂಡು ಬಂದಿರುವೆಯಲ್ಲ! ಬಾಲ್ಯದಿಂದಲೂ ನನ್ನಿಂದ ಪೋಷಿತಳಾಗಿ, ಪತಿವ್ರತೆಯಾಗಿ ನನ್ನನ್ನೇ ನಂಬಿಕೊಂಡು ಪತಿಶುಶ್ರೂಷೆಯನ್ನೇ ಮಾಡುತ್ತಲಿರುವ ಪತ್ನಿಯಾದ ಈ ಸುಂದರಾಂಗಿಯನ್ನು ನಾನೇ ಸಂಹಾರಮಾಡಬೇಕೆಂದು ನಿನ್ನ ಸಂಕಲ್ಪವಿತ್ತೆ!' ಎಂದು ಪ್ರಲಾಪಿಸುತ್ತ, ಪತ್ನಿಯಾದ ಚಂದ್ರಮತಿಯನ್ನು ಕುರಿತು 'ಎಲೈ ಪ್ರಾಣಕಾಂತೆಯೆ, ನಿನ್ನ ಇಷ್ಟದೈವವನ್ನು ಕುರಿತು ಸ್ಮರಿಸು. ಮರಣ ಕಾಲವು ಪ್ರಾಪ್ತವಾದಾಗ ಇಷ್ಟದೈವವನ್ನೇ ಸ್ಮರಿಸಬೇಕು' ಎಂದನು. ಪತಿವ್ರತಾಶಿರೋಮಣಿಯಾದ ಚಂದ್ರಮತಿಯು 'ರೂಪವಂತನಾಗಲಿ, ಕುರೂಪಿಯಾಗಲಿ, ಧನಿಕನಾಗಲಿ, ದರಿದ್ರನಾಗಲಿ, ಸದಾಚಾರನಾಗಲಿ, ದುರಾಚಾರನಾಗಲಿ, ಪತಿಯೇ ಸ್ತ್ರೀಗೆ ದೈವವು. ಆತನೇ ಸಾಕ್ಷಾತ್ಪರಬ್ರಹ್ಮಸ್ವರೂಪನು, ಆತನೇ ಸಾಕ್ಷಾತ್ಪರಮೇಶ್ವರನು, ಆತನೇ ಸಾಕ್ಷಾನ್ನಾರಾಯಣಮೂರ್ತಿಯು. ನಾನು ಪೂರ್ವದಲ್ಲಿ ಧರ್ಮಾಚರಣವನ್ನೇನಾದರೂ ಮಾಡಿ, ಸತ್ಯವಾಕ್ಯಳಾಗಿದ್ದು, ಸತ್ಪಾತ್ರದಲ್ಲಿ ಏನನ್ನಾದರೂ ಕೊಟ್ಟು, ಯಜ್ಞಪುರುಷನನ್ನಾರಾಧಿಸಿ, ಶುಶ್ರೂಷಾದಿಗಳಿಂದ ಗುರುಗಳನ್ನು ಸಂತೋಷಪಡಿಸಿದ್ದರೆ, ಆ ಸತ್ಯದಿಂದ ನನಗೆ ಪ್ರತಿಜನ್ಮದಲ್ಲಿಯೂ ಸಕಲಕಷ್ಟಗಳೂ ಪರಿಹರಿಸಲಿ' ಎಂದು ಪ್ರಾರ್ಥಿಸುತ್ತಿರಲು; ಅದನ್ನು ಕೇಳಿ ಹರಿಶ್ಚಂದ್ರರಾಯನು ಕೇವಲದುಃಖದಿಂದ ಏನೂತೋರದೆ ಒಂದು ಮುಹೂರ್ತಮಾತ್ರ ಸುಮ್ಮನಿದ್ದು 'ಎಲೈ ಪ್ರಾಣಪ್ರಿಯಳಾದ ಚಂದ್ರಮತಿಯೆ, ದೈವವ್ಯಾಪಾರವನ್ನು ನೋಡಿದೆಯ? ನನ್ನನ್ನು ಪರರಿಗೆ ಭೃತ್ಯನನ್ನಾಗಿ ಮಾಡಿ ಪ್ರಾಣಪ್ರಿಯಳಾದ ನಿನ್ನನ್ನು ನನ್ನ ಕೈಯಿಂದಲೇ ಸಂಹರಿಸಬೇಕೆಂದು ಮಾಡಿರುವ ದೈವಸಂಕಲ್ಪಸಿದ್ಧಿಯನ್ನು ಏನೆಂತ ಹೇಳಬೇಕು? ಅನ್ನ ವಸ್ತ್ರಾಭರಣ ತಾಂಬೂಲ ಗಂಧ ಪುಷ್ಪಾದಿಗಳಿಂದ ಪೋಷಿಸುವನು ಭರ್ತೃ ಎನ್ನಿಸಿಕೊಂಬುವನು. ಶತ್ರುವಾಗಿಯೂ, ಮೂಢನಾಗಿಯೂ, ನಿನಗೆ ಲೋಕದಲ್ಲಿ ನೀಚವಾದ ವ್ಯಾಪಾರಗಳನ್ನು ಮಾಡುವದಕ್ಕೆ ಉದ್ಯುಕ್ತನಾಗಿಯೂ ಇರುವ ನನ್ನಂಥ ದ್ರೋಹಿಯು ಹ್ಯಾಗೆ ಭರ್ತೃವಾದಾನು? ನನ್ನಿಂದ ಮಾಡಲ್ಪಡುವ ದುಷ್ಕಾರ್ಯವನ್ನು ನೀನು ನೋಡುತ್ತಿರುವೆ. ಶತ್ರುಸೇನೆಗಳನ್ನು ಭೇದಿಸುವ ಖಡ್ಗವನ್ನು ನಿನ್ನಮೇಲೆ ಪ್ರಯೋಗಿಸಲು ಯತ್ನಿಸಿರುತ್ತೇನಲ್ಲ! ಮಲ್ಲಿಕಾಪುಷ್ಪಗಳ ಹಾರಗಳನ್ನು ನಿನ್ನ ಕಂಠದಲ್ಲಿ ಅರ್ಪಿಸುತ್ತಲಿದ್ದ ನಾನು ಈಗ ನಿನ್ನ ಕಂಠದಲ್ಲಿ ಭಯಂಕರವಾದ ಈ ಖಡ್ಗವನ್ನು ಹ್ಯಾಗೆ ಪ್ರಯೋಗಿಸಲಿ? ಇಂಥ ನನ್ನನ್ನು ಪತಿಯೆಂದು ಕರಿಯುವೆ, ನಾನು ಏನು ಹೇಳಲಿ!' ಎಂದು ಶೋಕಸಮುದ್ರದಲ್ಲಿ ಮುಳುಗಿ,

ಏನೂ ತೋರದೆ ಪುನಃ ಸ್ತಬ್ಧನಾದನು. ಈ ಪತಿಯ ಪ್ರಲಾಪವನ್ನು ಕೇಳಿ ಚಂದ್ರಮತಿಯು 'ಎಲೈ ಪತಿಯೆ ನಾನೇ ಧನ್ಯಳು, ನಾನೇ ಪುಣ್ಯವತಿಯು. ನಿನ್ನ ಅನುಗ್ರಹಕ್ಕೆ ಪಾತ್ರಳಾದೆನು; ನನ್ನ ಮನೋರಥವು ಸಫಲವಾಯಿತು. ನಿನ್ನ ಕಣ್ಣುಮುಂದೆ ನಿನ್ನ ಹಸ್ತದಿಂದಲೇ ನನಗೆ ಮರಣಲಾಭವು ಉಂಟಾದರೆ ಇದೇ ನನಗೆ ಸಾಕು. ನೀನು ದೈವವನ್ನು ನಿಂದಿಸಬೇಡ. ಲೋಕದಲ್ಲಿ ಕಾಲವೇ ಬಲಿಷ್ಠವಾದದ್ದು. ಅದು ಅತಿಕ್ರಮಿಸಲಸಾಧ್ಯವಾದದ್ದು. ಕಾಲವೇ ಪ್ರಾಣಿಗಳನ್ನು ಸೃಷ್ಟಿಸುವದು, ಅದೇ ಸಂಹರಿಸತಕ್ಕದ್ದು. ಸರ್ವಭೂತಗಳೂ ಮಲಗಿರುವಾಗ ಆಕಾಲವು ಜಾಗರೂಕನಾಗಿ ಎಚ್ಚತ್ತಿರುವದು. ಅನೇಕ ಇಂದ್ರರನ್ನೂ ಆದಿತ್ಯರನ್ನೂ ಸೃಷ್ಟಿಸಿಯೂ ಸಂಹಾರವೂ ಮಾಡಿದೆ. ಎಂಥ ಮಹಾತ್ಮರಾದರೂ ಆಯಾಕಾರ್ಯದಲ್ಲಿ ಆಯಾಕಾಲದಲ್ಲಿ ಆಗತಕ್ಕ ಅನುಭವಗಳನ್ನು ಅನುಭವಿಸೇ ತೀರಬೇಕು; ತಪ್ಪಿಸಿಕೊಳ್ಳಲಶಕ್ಯವು. ಸಾಕ್ಷಾಚ್ಚತುರ್ಮುಖನಿಗೂ ಕೂಡ ಒಂದು ಶಿರಸ್ಸು ಛೇದಿಸಲ್ಪಟ್ಟಿತು. ಅಂಥ ನಾರಾಯಣನಿಗೂ ಕೂಡ ಮತ್ಸ್ಯ ಕೂರ್ಮಾದಿ ತಿರ್ಯಗ್ರೂಪವು ಪ್ರಾಪ್ತವಾಯಿತು. ಹುಟ್ಟಿದವನಿಗೆ ಮರಣವು ಧ್ರುವವು, ಮೃತನಾದವನಿಗೆ ಜನ್ಮವು ಧ್ರುವವು. ಆದಕಾರಣ ನಮ್ಮ ಪ್ರಯತ್ನದಿಂದ ಪರಿಹರಿಸಿಕೊಳ್ಳುವದಕ್ಕೆ ಅಶಕ್ಯವಾದ ವ್ಯಾಪಾರದಲ್ಲಿ ನೀನು ವ್ಯಸನಪಡಬೇಡ. ಪ್ರಾಣಿಗಳಿಗೆ ಮರಣವು ಪ್ರಾಪ್ತವಾಗಲೇಬೇಕು. ಮರಣಕಾಲವು ಪ್ರಾಪ್ತವಾದಾಗ ವ್ಯಸನಪಟ್ಟು ಫಲವಿಲ್ಲ. ಆದ್ದರಿಂದ ಧೈರ್ಯವನ್ನವಲಂಬಿಸಿ ಮನಸ್ಸನ್ನು ದೃಢಮಾಡಿಕೊಂಡು ಬೇಗನೆ ಖಡ್ಗಪ್ರಹಾರದಿಂದ ನನ್ನ ಶಿರಚ್ಛೇದನವನ್ನು ಮಾಡು' ಎಂದು ಹೇಳಿ, ಪತಿಗೆ ಪ್ರದಕ್ಷಿಣೆಯನ್ನು ಮಾಡಿ ಆತನ ಪಾದಗಳಿಗೆ ನಮಸ್ಕರಿಸಿ 'ಎಲೈ ಪತಿಯಾದ ಹರಿಶ್ಚಂದ್ರಮಹಾರಾಜನೆ, ನೀನು ಪತಿಯೆಂಬ ಸಲಿಗೆಯಿಂದಲೂ ತಂತ್ರದಿಂದಲೂ ಈವರೆಗೂ ನಾನು ಏನು ಅಪಚಾರವನ್ನು ಮನೋವಾಕ್ಕಾಯಕರ್ಮಗಳಿಂದ ಮಾಡಿದ್ದರೂ, ಅವುಗಳನ್ನು ನೀನು ಕ್ಷಮಿಸು. ನಿನ್ನ ಋಣಾನುಬಂಧವೂ, ಸೇವೆಯೂ ಇಲ್ಲಿಗೆ ತೀರಿತು. ಇನ್ನು ಮೇಲೆ ವಿಶ್ವೇಶ್ವರನೇ ನಿನ್ನನ್ನು ರಕ್ಷಿಸಲಿ' ಎಂದು ಪ್ರಾರ್ಥಿಸಿ, ಅಂಜಲಿಬದ್ಧವನ್ನು ಮಾಡಿಕೊಂಡು ನಿಶ್ಚಲಳಾಗಿ ನಿಂತುಕೊಂಡಳು" ಎಂದು ಮಾರ್ಕಂಡೇಯನು ಧರ್ಮರಾಯನಿಗೆ ಹೇಳಿದನು.

---

೨೯೧—(೧೮)ನೇ ಅಧ್ಯಾಯ.—ಹರಿಶ್ಚಂದ್ರೋಪಾಖ್ಯಾನ—(ಹರಿಶ್ಚಂದ್ರನು ಚಂದ್ರಮತಿಯನ್ನು ಖಡ್ಗಪ್ರಹಾರಮಾಡಿದಾಗ ಪರಮೇಶ್ವರ ನಾರಾಯಣಾದಿಗಳು ಪ್ರತ್ಯಕ್ಷವಾದದ್ದು.)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯನೆ, ಆ ಬಳಿಕ ಮಾರ್ಕಂಡೇಯನು ಧರ್ಮರಾಯನನ್ನು ಕುರಿತು "ಎಲೈ ಧರ್ಮರಾಯನೆ, ಬಳಿಕ ಹರಿಶ್ಚಂದ್ರನು ತನ್ನನ್ನು ತಾನೇ ನಿಂದಿಸಿಕೊಂಡು, ಪರಮಖೇದದಿಂದ ಪರಮೇಶ್ವರನನ್ನು ಸ್ಮರಿಸಿಕೊಳ್ಳುತ್ತ, ಖಡ್ಗವನ್ನೆತ್ತಿ ಚಂದ್ರಮತಿಯ ಕಂಠದ ಮೇಲೆ ಪ್ರಯೋಗಿಸುವದಕ್ಕೆ ಉದ್ಯುಕ್ತನಾಗಲು; ಆ ಸಮಯದಲ್ಲಿ ವಿಶ್ವಾಮಿತ್ರಋಷಿಯು ತನ್ನ ತಪಶ್ಶಕ್ತಿಯಿಂದ ಹರಿಶ್ಚಂದ್ರನ ಭುಜವನ್ನು ಸ್ತಂಭಿಸಿದನು. ಹರಿಶ್ಚಂದ್ರನು ತನ್ನ ಭುಜವು ಸ್ತಂಭಿಸಿದ್ದನ್ನು ನೋಡಿ ಮಹತ್ತಾದ ಚಿಂತೆಯಿಂದ 'ನಾನು ಸ್ವಾಮಿಕಾರ್ಯವನ್ನತಿಕ್ರಮಿಸದೆ ಸತ್ಯದಲ್ಲೇ ಇದ್ದುಕೊಂಡು ಸನ್ಮಾರ್ಗವನ್ನು ಬಿಡದಿದ್ದರೂ ನನ್ನ ಭುಜವು ಸ್ತಂಭಿಸುವಂತೆ ಮಾಡಿದ ಪುರುಷನು ಬ್ರಹ್ಮನಾಗಲಿ, ವಿಷ್ಣುವಾಗಲಿ, ಮಹೇಶ್ವರನಾಗಲಿ, ದೇವತೆಗಳಿಗೆ ಅಧಿಪತಿಯಾದ ಇಂದ್ರನಾಗಲಿ, ನನಗೆ ಎದುರಾಗಿ ಬರಲಿ' ಎಂದು ಪ್ರಾರ್ಥಿಸಿದನು. ಆಗ ಮಹಾತಪಸ್ವಿಯಾದ ವಿಶ್ವಾಮಿತ್ರನು ಆ ಹರಿಶ್ಚಂದ್ರನ ಸಮೀಪಕ್ಕೆ ಬಂದು 'ಎಲೈ ಧರ್ಮಜ್ಞನಾದ ಹರಿಶ್ಚಂದ್ರನೆ, ನಿನಗೆ ಸಂತೋಷಾರ್ಥವಾಗಿ ಜಯವಿಜಯರೆಂಬ ನಾಮಧೇಯವುಳ್ಳ ನನ್ನ ಪುತ್ರಿಯರನ್ನು ಪಾಣಿಗ್ರಹಣಮಾಡುತ್ತೇನೆ. ನೀನು ಅವರನ್ನು ಸ್ವೀಕರಿಸಿದರೆ ನಿನ್ನ ಐಶ್ವರ್ಯವೂ ನಿನಗೆ ಬರುವದು; ಸಪ್ತದ್ವೀಪಗಳಿಂದಲೂ ಸಪ್ತಸಮುದ್ರಗಳಿಂದಲೂ ಯುಕ್ತವಾದ ನಿನ್ನ ರಾಜ್ಯಕ್ಕೆ ನೀನೇ ಅಧಿಪತಿಯಾಗುವೆ. ನಿನ್ನ ಕುಲಕ್ರಮಾಗತವಾದ ರಾಜ್ಯವನ್ನೂ ಛತ್ರವನ್ನೂ ಸಹ ಕೊಡುತ್ತೇನೆ' ಎಂದು ಹೇಳಿದನು. ಆ ವಾಕ್ಯವನ್ನು ಕೇಳಿ ಹರಿಶ್ಚಂದ್ರನು 'ಎಲೈ ಮಹರ್ಷಿಗಳೆ, ಸಪ್ತದ್ವೀಪಗಳಿಂದಲೂ ಸಪ್ತಸಮುದ್ರಗಳಿಂದಲೂ ಯುಕ್ತವಾದ ನಿಮ್ಮ ರಾಜ್ಯವನ್ನು ನಿಮಗೆ ಕೊಟ್ಟಿದ್ದೇನೆ. ಪುನಃ ಆ ರಾಜ್ಯವನ್ನು ಸರ್ವಥಾ

ನಾನು ಆಳುವವನಲ್ಲ. ನನ್ನ ಪ್ರಾಣಗಳಿಗಿಂತಲೂ ಅತಿಶಯಳಾದ ಚಂದ್ರಮತಿಯನ್ನು ಪ್ರತ್ಯಕ್ಷವಾಗಿ ನನ್ನ ಕೈಯಿಂದಲೇ ಸಂಹಾರಮಾಡುವದಕ್ಕೆ ಉದ್ಯುಕ್ತನಾಗಿರುವ ನನಗೆ ರಾಜ್ಯದಿಂದಲಾಗಲಿ, ಪುತ್ರರಿಂದಲಾಗಲಿ, ಭೋಗಗಳಿಂದಲಾಗಲಿ, ಪ್ರಾಣಿಗಳಿಂದಲಾಗಲಿ ಏನು ಫಲವು? ನಿಮ್ಮಿಂದ ಕೇಳಲ್ಪಟ್ಟ ದಕ್ಷಿಣೆಯನ್ನು ಕೊಟ್ಟೆನು. ಇನ್ನೂ ಏನಾದರೂ ನಿಮ್ಮ ಮನಸ್ಸಿನಲ್ಲಿದ್ದು ಹೇಳಿದರೆ ; ಅದನ್ನೂ ಕೊಡುತ್ತೇನೆ ' ಎಂದು ಪ್ರತ್ಯುತ್ತರ ಕೊಟ್ಟನು. ಆ ಮಾತನ್ನು ಕೇಳಿ, ಮಹರ್ಷಿಯು ' ಎಲೈ ರಾಜನೆ, ನಿನಗೆ ನನ್ನಲ್ಲಿ ವಿಶ್ವಾಸವಿದ್ದರೆ ಸತ್ಯವನ್ನು ಬಿಟ್ಟು ನನ್ನ ಪುತ್ರಿಯರನ್ನು ಪಾಣಿಗ್ರಹಣವನ್ನುಮಾಡು ' ಎಂದು ಕೇಳಿಕೊಂಡನು. ಅದನ್ನು ಕೇಳಿ ಹರಿಶ್ಚಂದ್ರನು ' ಎಲೈ ಮಹರ್ಷಿಗಳೆ, ಹುಟ್ಟಿದ್ದುಮೊದಲು ನ್ಯಾಯಸಮ್ಮತವಾಗಿಯೂ ಧರ್ಮಯುಕ್ತವಾಗಿಯೂ ಇರುವೆನಲ್ಲದೆ ಸ್ವಪ್ನದಲ್ಲಿಯೂ ಕೂಡ ನಾನು ಅಸತ್ಯವನ್ನು ನುಡಿದವನಲ್ಲ. ಸತ್ಯವನ್ನು ತ್ಯಜಿಸಲು ನನ್ನಿಂದ ಈಗ ಹ್ಯಾಗಾದೀತು? ನನ್ನ ಭುಜವನ್ನು ಯಾಕೆ ಸ್ತಂಭಿಸಿರುವಿರಿ? ಇದನ್ನು ಬಿಡಿಸಿಬಿಡಿ ; ನನ್ನ ಸ್ವಾಮಿಯಾದ ವೀರಬಾಹುವಿನ ಆಜ್ಞಾನುಸಾರವಾಗಿ ಈ ನನ್ನ ಪತ್ನಿಯನ್ನು ಸಂಹರಿಸುತ್ತೇನೆ. ಸ್ವಾಮಿವಾಕ್ಯವನ್ನನುಸರಿಸಿದರೆ ಭೃತ್ಯರಿಗೆ ದೋಷವಿಲ್ಲ. ಪುರುಷನು ತನ್ನಿಂದ ಸಂಪಾದಿಸಲ್ಪಟ್ಟ ಪುಣ್ಯದಿಂದ ಸ್ವರ್ಗವನ್ನು ಹೊಂದುವನು ' ಎಂದು ನುಡಿದು, ಕ್ಷಮಿಸಬೇಕೆಂದು ಬೇಡಿಕೊಂಡು, ಮಹರ್ಷಿಗೆ ನಮಸ್ಕರಿಸಿ, ಚಂದ್ರಮತಿಯ ಕಂಠದ ಮೇಲೆ ಖಡ್ಗವನ್ನೆತ್ತಿ ಪ್ರಯೋಗಿಸಿದನು. ಭಯಂಕರವಾದ ಆ ಖಡ್ಗವು ಚಂದ್ರಮತಿಯ ಕಂಠದ ಮೇಲೆ ಮಲ್ಲಿಕಾಪುಷ್ಪಗಳ ಮಾಲೆಯಂತೆ ಮೃದುವಾಗಿ ಬಿತ್ತು. ಆಗ ರಾಯನು ತನ್ನ ಖಡ್ಗವು ವ್ಯರ್ಥವಾದದ್ದನ್ನು ನೋಡಿ, ಮಹಾಚಿಂತೆಯಿಂದ ' ನನ್ನ ಖಡ್ಗವು ಮಹಾಶತ್ರುಗಳ ಮೇಲೆ ಪ್ರಯೋಗಿಸಿದರೂ ಎಲ್ಲಿಯೂ ವ್ಯರ್ಥವಾಗಲಿಲ್ಲ. ಈಗ ಒಬ್ಬ ಸ್ತ್ರೀಯಲ್ಲಿ ವ್ಯರ್ಥವಾಯಿತು. ನನ್ನಲ್ಲಿ ಏನು ಅಸತ್ಯ ನಡೆಯಿತೋ, ಅಥವಾ ಇದು ದೈವದ ಮಾಯೆಯೋ ! ' ಎಂದು ಚಿಂತಿಸುತ್ತಿರಲು, ಪಾರ್ವತೀಸಮೇತನಾಗಿ ಸಾಕ್ಷಾದ್ವಿಶ್ವೇಶ್ವರನು ಪರ್ವತದಂತೆ ಉನ್ನತವಾಗಿಯೂ ಶುಭ್ರವಾಗಿಯೂ ಧರ್ಮರೂಪವಾಗಿಯೂ ಇರುವ ಮಹಾವೃಷಭಶ್ರೇಷ್ಠನನ್ನು ಆರೋಹಣಮಾಡಿ, ಪ್ರಮಥಗಣಗಳಿಂದ ಪರಿವೃತನಾಗಿ ಪ್ರತ್ಯಕ್ಷನಾದನು. ಆ ಮಹಾವೃಷಭದ ಉಭಯಪಾರ್ಶ್ವಗಳಲ್ಲಿಯೂ ನಂದೀಶ್ವರನೂ ಭೃಂಗೀಶ್ವರನೂ ಆ ಮಹಾವೃಷಭವನ್ನು ಹಸ್ತಗಳಿಂದ ತಟ್ಟುತ್ತಾ ಬರುತ್ತಿರಲು, ಅದರ ಧ್ವನಿಯಿಂದ ಸಕಲ ದಿಕ್ಕುಗಳೂ ಪೂರಿತವಾದವು. ಆ ಪರಮೇಶ್ವರನ ಸನ್ನಿಧಿಯ ದಕ್ಷಿಣಭಾಗದಲ್ಲಿ ಹಂಸಾರೂಢನಾಗಿ ಸರಸ್ವತೀದೇವಿಸಮೇತ ಚತುರ್ಮುಖಬ್ರಹ್ಮನು ಬಂದನು. ವಾಮಭಾಗದಲ್ಲಿ ಗರುಡಾರೂಢನಾಗಿ ಮಹಾಲಕ್ಷ್ಮೀಸಮೇತನಾಗಿ ಸಾಕ್ಷಾನ್ನಾರಾಯಣಮೂರ್ತಿಯು ಬಂದನು. ಕಾಲಾಗ್ನಿರುದ್ರ ಕೂಷ್ಮಾಂಡೇಶ್ವರ ಮುಂತಾದ ಮಹಾಗಣೇಶ್ವರರು ಸ್ವಾಮಿಯನ್ನು ಸ್ತುತಿಸುತ್ತ ಮುಂದೆ ಬಂದರು. ಇಂದ್ರಾಗ್ನಿ ನಿರುತಿ ವಾಯು ಕುಬೇರೇಶಾನಾದಿಗಳಾದ ಅಷ್ಟದಿಕ್ಪಾಲಕರು ತಮ್ಮತಮ್ಮ ವಾಹನಗಳನ್ನು ಆರೋಹಣಮಾಡಿಕೊಂಡು, ತಮ್ಮತಮ್ಮ ಪತ್ನಿಯರ ಸಮೇತರಾಗಿ ಸಾಕ್ಷಾತ್ಪರಮೇಶ್ವರನ ಸಂಗಡ ಬಂದರು. ಯಕ್ಷರೂ, ರಾಕ್ಷಸರೂ, ಗಂಧರ್ವರೂ, ವಿದ್ಯಾಧರರೂ, ಕಿನ್ನರರೂ, ಕಿಂಪುರುಷರೂ, ದೈತ್ಯರೂ, ದಾನವರೂ, ವಾಸುಕಿಯೂ, ಶೇಷನೂ, ನಕ್ಷತ್ರಕನೂ, ಕಾರ್ಕೋಟಕನೂ, ಶಂಖಚೂಡನೂ, ಕುಳಿಕನೂ, ಐರಾವತನೂ, ಇವರೇ ಮುಂತಾದ ಸರ್ಪಾಧಿಪತಿಗಳೂ ; ಪರ್ವತಋಷಿಯೂ, ನಾರದಋಷಿಯೂ, ದಿವ್ಯವಾದ ವೀಣಾಗಾನವನ್ನು ಮಾಡಿಕೊಂಡು ತುಂಬುರರೂ, ಬಂದರು. ಏಕಾದಶರುದ್ರರೂ, ದ್ವಾದಶಾದಿತ್ಯರೂ, ಅಷ್ಟವಸುಗಳೂ, ಅಶ್ವಿನೀದೇವತೆಗಳೆಂಬ ಮೂವತ್ತುಮೂರು ದೇವತೆಗಳೂ, ಸಂಗಡಲೇ ಹೊರಟರು. ವಸಿಷ್ಠ, ಕಶ್ಯಪ, ಅತ್ರಿ, ಭರದ್ವಾಜ, ವಿಶ್ವಾಮಿತ್ರ, ಗೌತಮ, ಜಮದಗ್ನಿ, ಅಗಸ್ತ್ಯ, ದಧೀಚಿ, ದೂರ್ವಾಸ, ವಾಮದೇವ, ಪರಾಶರ, ವೇದವ್ಯಾಸ, ಅಂಗೀರಸ, ಭೃಗು, ಮುಂತಾದ ಮಹರ್ಷಿಗಳು ವೇದಾಂತವಾಕ್ಯಗಳಿಂದ ಪರಮೇಶ್ವರನನ್ನು ಸ್ತುತಿಸುತ್ತ ಶಿರಸ್ಸುಗಳ ಮೇಲೆ ಕೈಗಳನ್ನು ಜೋಡಿಸಿಕೊಂಡು, ಜಯಶಬ್ದಗಳನ್ನು ನುಡಿಯುತ್ತ ಸಾಕ್ಷಾತ್ಪರಮೇಶ್ವರನ ಜೊತೆಯಲ್ಲಿಯೇ ಬಂದರು. ಈ ರೀತಿಯಲ್ಲಿ ಪರಮೇಶ್ವರಸ್ವಾಮಿಯು ಕೋಟಿಸೂರ್ಯರಿಗೆ ಸಮಾನವಾದ ಮಹಾಪ್ರಭೆಯಿಂದ ಲೋಕತ್ರಯವನ್ನು ಪ್ರಕಾಶಪಡಿಸುತ್ತ ಪ್ರತ್ಯಕ್ಷನಾಗಲು, ಹರಿಶ್ಚಂದ್ರಮಹಾರಾಜನು ಪರಮಾಶ್ಚರ್ಯದಿಂದ ಪರವಶನಾಗಿ, ಅತ್ಯಂತಭಯಭಕ್ತಿಗಳಿಂದ ಭೂಮಿಯಲ್ಲಿ ಸಾಷ್ಟಾಂಗದಿಂದ ಅನೇಕ ಪ್ರಣಾಮಗಳನ್ನು ಮಾಡಿ, ಅಂಜಲಿಬದ್ಧನಾಗಿ ಪರಮಾನಂದಭರಿತನಾಗಿ ಗದ್ಗದ

ಧ್ವನಿಯಿಂದ ಸಕಲ ದೇವತೆಗಳನ್ನೂ ಮಹರ್ಷಿಗಳನ್ನೂ ಸ್ತುತಿಸಿದನು. ಹೀಗೆ ಸಮಸ್ತ ವೇದವೇದಾಂತ ಸಾರ ಭೂತವಾಕ್ಯಗಳಿಂದ ಸ್ತುತಿಮಾಡುವ ಹರಿಶ್ಚಂದ್ರನನ್ನು ನೋಡಿ ಸಾಕ್ಷಾತ್ಪರಮೇಶ್ವರನು ಪ್ರಸನ್ನನಾದನು" ಎಂದು ಮಾರ್ಕಂಡೇಯನು ಧರ್ಮರಾಯನಿಗೆ ಹೇಳಿದನು.

———•••◆•••———

೨೯೧—(೯೯)ನೇ ಅಧ್ಯಾಯ.—ಹರಿಶ್ಚಂದ್ರೋಪಾಖ್ಯಾನ—(ಪಾರ್ವತೀಪರಮೇಶ್ವರರಿಂದ ಲೋಹಿತಾಸ್ಯನು ಬದುಕುವಿಕೆ.)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಮಾರ್ಕಂಡೇಯನು ಧರ್ಮರಾಯನನ್ನು ಕುರಿತು, "ಎಲೈ ಧರ್ಮರಾಯನೆ, ಆಬಳಿಕ ಹರಿಶ್ಚಂದ್ರನು ಅಲ್ಲಿಗೆ ಬಂದಿರುವ ಸಮಸ್ತ ದೇವತಾಸಮೂಹವನ್ನೂ ನೋಡಿ, ಬ್ರಹ್ಮ ನಾರಾಯಣ ದೇವೇಂದ್ರರೇ ಮುಂತಾದ ಮುಖ್ಯದೇವಪತಿಗಳನ್ನು ನಮಸ್ಕರಿಸಿ ಸ್ತುತಿಸುತ್ತಾ 'ಎಲೈ ಸರ್ವಲೋಕೇಶ್ವರರಾದ ದೇವಪತಿಗಳಿರಾ, ಈ ಮಹತ್ತಾದ ಶ್ಮಶಾನವು ಪ್ರೇತಗಳಿಂದಲೂ ಭೂತಗಳಿಂದಲೂ ಅನೇಕ ಶವಗಳಿಂದಲೂ ಅಸ್ಥಿರಾಶಿಗಳಿಂದಲೂ ಹಗ್ಗಗಳಿಂದಲೂ ಕಾಷ್ಠಗಳಿಂದಲೂ ನರಿಗಳ ವಿಕೃತಸ್ವರಗಳಿಂದಲೂ ರಕ್ತ ಮಾಂಸಾಸ್ಥಿಗಳ ಕೆಸರಿನ ದುರ್ಗಂಧದಿಂದಲೂ ಗೃಧ್ರ ಕಾಗೆ ಗೂಬೆಗಳ ಕರ್ಣಕಠೋರವಾದ ಧ್ವನಿಗಳಿಂದಲೂ ಯುಕ್ತವಾದದ್ದು. ಘೋರಾರಣ್ಯಕ್ಕೆ ಸಮಾನವಾದ ಈ ಅಶುಭ ಸ್ಥಾನಕ್ಕೆ ನನ್ನಲ್ಲಿ ದಯವಿಟ್ಟು ಬಂದಿರಿ. ಸರ್ವಲೋಕ ಪಿತಾಮಹನಾಗಿಯೂ ಭಗವಂತನಾಗಿಯೂ ಇರುವ ಚತುರ್ಮುಖ ಬ್ರಹ್ಮನೂ, ಸಮಸ್ತ ಪ್ರಪಂಚಸಂರಕ್ಷಕನಾಗಿಯೂ ಶಾಶ್ವತನಾಗಿಯೂ ಇರುವ ಶ್ರೀಮನ್ನಾರಾಯಣನೂ, ಸಮಸ್ತ ಜಗತ್ತಿಗೂ ಗುರುವಾಗಿಯೂ ದೇವೋತ್ತಮನಾಗಿಯೂ ಇರುವ ಸಾಕ್ಷಾತ್ ಶಿವನೂ, ಇನ್ನು ಇಂದ್ರಾದಿ ಲೋಕಪಾಲಕರೇ ಮೊದಲಾದ ಅಶೇಷ ದೇವತೆಗಳೂ ಅತಿಭಯಂಕರವಾದ ಈ ಶ್ಮಶಾನಕ್ಕೆ ಏನುಕಾರಣ ದಯಮಾಡಿಸಿದಿರಿ?' ಎಂದು ಕೇಳಿದನು. ಆಗ ವಿಶ್ವೇಶ್ವರಸ್ವಾಮಿಯು 'ಎಲೈ ಬ್ರಹ್ಮದೇವನೆ, ಹರಿಶ್ಚಂದ್ರನಿಗೆ ಪ್ರತ್ಯುತ್ತರವನ್ನು ಅನುಗ್ರಹಿಸು' ಎಂದನು. ಆಗ ಬ್ರಹ್ಮನು ಹರಿಶ್ಚಂದ್ರನನ್ನು ಕುರಿತು 'ಎಲೈ ಹರಿಶ್ಚಂದ್ರನೆ, ಇದು ಮಾಂಸಖಂಡಗಳಲ್ಲವು, ಪುರೋಡಾಶಗಳೆಂಬ ಹವಿರ್ದ್ರವ್ಯಗಳು. ಇದು ಶ್ಮಶಾನವಲ್ಲ, ನಿರ್ದೋಷಿಯಾದ ನಿನ್ನ ಯಜ್ಞಶಾಲೆಯು. ಇವು ಶೂಲಗಳಲ್ಲ, ಯೂಪಸ್ತಂಭಗಳು. ಇವು ಹಗ್ಗಗಳಲ್ಲ, ಪುಷ್ಪಮಾಲೆಗಳು. ಇವು ಕೇಶಗಳಲ್ಲ, ವೇದಿಕೆಯಲ್ಲಿ ಹರಡಿರುವ ದರ್ಭೆಗಳು. ಇವು ತಲೆಬುರುಡೆಗಳಲ್ಲ, ಯಜ್ಞಪಾತ್ರೆಗಳು. ಇದು ರಕ್ತವಲ್ಲ, ಸೋಮದ್ರವ್ಯವು. ಇದು ಯಜ್ಞಗಂಧವೇ ಹೊರತು, ದುರ್ಗಂಧವಲ್ಲ. ಇಲ್ಲಿ ಜ್ವಲಿಸುವ ಅಗ್ನಿಗಳು ಶವಗಳಲ್ಲ, ಹೋಮದ್ರವ್ಯಗಳು. ಇವು ನರಿಗಳ ಕೂಗಲ್ಲ, ಉದ್ಗಾತೃ ಸಾಮಗಾನಧ್ವನಿಗಳು. ಇವು ಗೃಧ್ರಕಾಕಸ್ವರಗಳಲ್ಲ, ವ್ಯಾಹೃತಿಗಳು. ಈ ಪ್ರಕಾರವಾದ ನಿನ್ನ ಯಜ್ಞದಿಂದ ಸಂತುಷ್ಟರಾಗಿ ನಾವೇ ಪ್ರಸನ್ನರಾಗಿ ಬಂದಿರುವೆವು. ನಿನಗೆ ಯಾವಯಾವ ವರಗಳು ಬೇಕೋ ಅವುಗಳನ್ನು ಕೇಳು, ಸಮಸ್ತ ವರಗಳನ್ನೂ ನಾವು ನಿನಗೆ ಕೊಡುತ್ತೇವೆ. ನೀನು ಚಿಂತಿಸಬೇಡ' ಎನಲು; ಅದನ್ನು ಕೇಳಿ, ಹರಿಶ್ಚಂದ್ರನು 'ಎಲೈ ಸ್ವಾಮಿಯೆ, ನಾನು ನನ್ನ ಸ್ವಾಧೀನನಲ್ಲ; ಪರಪುರುಷನಿಗೆ ಭೃತ್ಯನಾದವನು; ಚಂಡಾಲನಿಂದ ಕೊಳ್ಳಲ್ಪಟ್ಟವನಾಗಿ ಆ ಪುರುಷನಿಗೆ ದಾಸನಾಗಿದೇನೆ. ನನಗೆ ಯಾವ ವಿಧವಾದ ಸ್ವಾತಂತ್ರ್ಯವೂ ಇಲ್ಲ. ಆ ಚಂಡಾಲನ ಆಜ್ಞೆಯನ್ನು ಅನುವರ್ತಿಸಿಕೊಂಡಿದೇನೆ' ಎಂದು ಹೇಳುತ್ತಿದ್ದನು. ಅಷ್ಟರಲ್ಲಿ ವೀರಬಾಹುವು ಶೀಘ್ರವಾಗಿ ಅಲ್ಲಿಗೆ ಬಂದು, ನಿರ್ದೋಷಿಯೂ ಸತ್ಯವಂತನೂ ಆದ ಹರಿಶ್ಚಂದ್ರನನ್ನು ಕುರಿತು 'ಎಲೈ ಹರಿಶ್ಚಂದ್ರನೆ, ಅಕ್ರೋಧವೂ ಗುರುಶುಶ್ರೂಷೆಯೂ ಶುಚಿತ್ವವೂ ಸಂತೋಷವೂ ಎಂಬ ನಾಲ್ಕುಪಾದಗಳಿಂದ ಯುಕ್ತನಾದ ಸಾಕ್ಷಾತ್ ಧರ್ಮಪುರುಷನೇ ನಾನು. ಸರ್ವಲೋಕಗಳಿಗೂ ನಿಂದಿತವಾದ ಚಡಾಲವೇಷವನ್ನು ಧರಿಸಿ ನಿನ್ನನ್ನು ಪರೀಕ್ಷಿಸುವದಕ್ಕೋಸ್ಕರ ನಿನ್ನ ಸಮೀಪಕ್ಕೆ ಬಂದೆನು. ವಸಿಷ್ಠಋಷಿಗೂ ವಿಶ್ವಾಮಿತ್ರಋಷಿಗೂ ಸಂವಾದವಾದದ್ದರಿಂದ ಇಂದ್ರಾದಿ ಸಮಸ್ತದೇವತೆಗಳೂ ನಿನ್ನನ್ನು ಪರೀಕ್ಷಿಸಿದರು. ಮಹಾತ್ಮನಾದ ನೀನು ಮಹತ್ತಾದ ವಿಪತ್ತಿನಲ್ಲಿಯೂ ಕೂಡ ಸತ್ಯಧರ್ಮಗಳನ್ನು ಬಿಡಲಿಲ್ಲ. ಅದನ್ನು ಚೆನ್ನಾಗಿ ಪರೀಕ್ಷಿಸಿ ಸಕಲದೇವತೆಗಳೂ ಸಂತುಷ್ಟರಾದರು'

ಎಂದು ನುಡಿದನು. ಆಗ ಚಂದ್ರಮತಿಯು ಪಾರ್ವತೀದೇವಿಗೆ ನಮಸ್ಕರಿಸಿ, ಪುತ್ರಶೋಕದಿಂದ ವ್ಯಸನಪಡುತ್ತಿದ್ದರೂ ಪರಮೇಶ್ವರನೇ ಮುಂತಾದ ಸಮಸ್ತದೇವತೆಗಳ ಸಂದರ್ಶನದಿಂದ ಸಂತೋಷವನ್ನು ಹೊಂದಿದಳು. ಆಗ ಹರಿಶ್ಚಂದ್ರನ ಹಿಂದೆ ನಿಂತಿದ್ದ ಚಂದ್ರಮತಿಯನ್ನು ಕುರಿತು, ಪಾರ್ವತಿಯು 'ಎಲೈ ಚಂದ್ರಮತಿಯೆ, ನಿನ್ನ ಮನಸ್ಸಿನಲ್ಲಿ ಏನಿದೆ? ನಿನಗೆ ಏನುಬೇಕು! ಬೇಕಾದವರವನ್ನು ಕೇಳಿಕೊ' ಎನಲು; ಚಂದ್ರಮತಿಯು ಪಾರ್ವತೀದೇವಿಯ ಪಾದಗಳಿಗೆ ನಮಸ್ಕರಿಸಿ 'ಎಲೈ ಲೋಕಮಾತೃವಾದ ಪಾರ್ವತಿಯೆ, ನನ್ನ ಮಗನು ಸರ್ಪದಿಂದ ಕಚ್ಚಿಸಿಕೊಂಡು ಮೃತನಾಗಿ ಬಿದ್ದಿರುವನು. ಅವನನ್ನು ಬದುಕಿಸಿಕೊಡು' ಎಂದು ಕೇಳಿದಳು. ಅದಕ್ಕೆ ಪಾರ್ವತೀದೇವಿಯು 'ಎಲೈ ಪತಿವ್ರತಾಶಿರೋಮಣಿಯೆ, ನೀನೇ ಹೋಗಿ ಆ ಬಾಲಕನನ್ನು ನಿನ್ನ ಹಸ್ತಗಳಿಂದ ಸ್ಪರ್ಶಮಾಡು, ಅವನು ಜೀವಿಸುತ್ತಾನೆ' ಎನಲು; ಚಂದ್ರಮತಿಯು ಆ ಬಾಲಕನನ್ನು ತನ್ನ ಹಸ್ತಗಳಿಂದ ತಡವರಿಸಲು, ಅವನು ಕಣ್ಣುಗಳನ್ನು ಬಿಟ್ಟು ನೋಡಿ 'ಎಲೈ ತಾಯೇ' ಎಂದೆದ್ದನು. ಆಗ ಜೀವಿಸಿ ಎದ್ದುಬಂದ ಪುತ್ರನನ್ನು ನೋಡಿ, ಹರಿಶ್ಚಂದ್ರನೂ ಚಂದ್ರಮತಿಯೂ ಕೇವಲ ಸಂತೋಷಯುಕ್ತರಾಗಿ ಅವನನ್ನು ಆಲಿಂಗನೆಮಾಡಿಕೊಂಡು ಅವನ ಶಿರಸ್ಸಿನಲ್ಲಿ ಆಘ್ರಾಣವನ್ನು ಮಾಡಿ, ಅವನಿಂದ ಪಾರ್ವತೀಪರಮೇಶ್ವರರೇ ಮುಂತಾದ ಸಮಸ್ತ ದೇವತೆಗಳಿಗೂ ನಮಸ್ಕಾರವನ್ನು ಮಾಡಿಸಿ ಸಂತೋಷಭರಿತರಾದರು" ಎಂದು ಮಾರ್ಕಂಡೇಯನು ಧರ್ಮರಾಯನಿಗೆ ಹೇಳಿದನು.

---

೨೯೧—(೨೦)ನೇ ಅಧ್ಯಾಯ.—ಹರಿಶ್ಚಂದ್ರೋಪಾಖ್ಯಾನ—(ಹರಿಶ್ಚಂದ್ರನಿಗೆ ಸಮಸ್ತದೇವತೆಗಳೂ ಪಟ್ಟಾಭಿಷೇಕಮಾಡುವಿಕೆ.)

ವೈಶಂಪಾಯನಮುನೀಶ್ವರನು ಜನಮೇಜಯನನ್ನು ಕುರಿತು—ಕೇಳು ಜನಮೇಜಯನೆ, ಮಾರ್ಕಂಡೇಯನು ಧರ್ಮರಾಯನನ್ನು ಕುರಿತು, "ಕೇಳು ಧರ್ಮರಾಯನೆ, ಬಳಿಕ ವಿಶ್ವಾಮಿತ್ರಋಷಿಯು ಹರಿಶ್ಚಂದ್ರನನ್ನು ಕುರಿತು 'ಎಲೈ ಸತ್ಯಸಂಧನೂ ರಾಜಶ್ರೇಷ್ಠನೂ ಆದ ಹರಿಶ್ಚಂದ್ರನೆ, ನಾನು ನಿನ್ನಮೇಲೆ ಕ್ರೋಧದಿಂದ ಉಪದ್ರವಪಡಿಸಲಿಲ್ಲ. ನಿನ್ನ ಚಿತ್ತವನ್ನು ಪರೀಕ್ಷಿಸಬೇಕೆಂದು ನಿನ್ನನ್ನು ಕೇವಲ ಬಾಧೆಪಡಿಸಿದೆನು. ನನ್ನಿಂದ ಮಾಡಲ್ಪಟ್ಟ ಅಪಚಾರವನ್ನು ಕ್ಷಮಿಸು. ನಿನಗಿಂತಲೂ ಅಧಿಕನಾದ ಪುರುಷನು ಲೋಕತ್ರಯದಲ್ಲಿಯೂ ಇಲ್ಲ. ನಿನ್ನ ಸತ್ಯದ ಸಾಮರ್ಥ್ಯದಿಂದ ಬ್ರಹ್ಮಾದಿದೇವತೆಗಳು ಸಮಸ್ತರೂ ಪ್ರಸನ್ನರಾಗಿ ನಿನ್ನನ್ನು ಅರಸಿಕೊಂಡು ಬಂದರು. ಸಪ್ತದ್ವೀಪಸಮುದ್ರಯುಕ್ತವಾದ ಭೂಮಂಡಲವನ್ನು ಪರಿಪಾಲಿಸು. ನನ್ನಿಂದ ಮಾಡಲ್ಪಟ್ಟ ಪ್ರತಿಜ್ಞಾನುಸಾರವಾಗಿ ನನ್ನ ತಪಸ್ಸನ್ನು ಕೊಡುತ್ತೇನೆ' ಎಂದು ಧರ್ಮಾರ್ಥಯುಕ್ತವಾದ ಮಧುರವಾಕ್ಯಗಳಿಂದ ತನ್ನ ತಪಸ್ಸನ್ನು ಕೊಟ್ಟನು. ಆಗ ಹರಿಶ್ಚಂದ್ರನು 'ಎಲೈ ಮಹರ್ಷಿಯೆ, ನಾನು ಧನ್ಯನಾದೆನು. ನಿನ್ನ ಅನುಗ್ರಹಕ್ಕೆ ಪಾತ್ರನಾದಮೇಲೆ ನಾನೇ ಪುಣ್ಯವಂತನು. ಆದರೆ ಬ್ರಾಹ್ಮಣೋತ್ತಮನಾದ ನಿನಗೆ ಕೊಡಲ್ಪಟ್ಟ ರಾಜ್ಯವನ್ನು ಪುನಃ ಅಪೇಕ್ಷಿಸುವದಿಲ್ಲ' ಎನಲು; ಆಗ ಸಮಸ್ತದೇವತೆಗಳೂ ಋಷಿಗಳೂ ಹರಿಶ್ಚಂದ್ರನನ್ನು ಕುರಿತು 'ಎಲೈ ಹರಿಶ್ಚಂದ್ರನೆ, ಈ ವಿಶ್ವಾಮಿತ್ರಋಷಿಯು ರಾಜ್ಯಾಪೇಕ್ಷೆಯಿಂದ ಬಂದು ನಿನ್ನಲ್ಲಿ ರಾಜ್ಯವನ್ನು ಯಾಚಿಸಿದವನಲ್ಲ. ಇದು ನಿನ್ನನ್ನು ಪರೀಕ್ಷಿಸುವದಕ್ಕೆ ಮಾಡಿದ ವ್ಯಾಪಾರವೇಹೊರತು ಮತ್ತೇನಲ್ಲ' ಎಂದು ಹರಿಶ್ಚಂದ್ರನನ್ನು ನಾನಾನೀತಿಗಳಿಂದ ಒಡಂಬಡಿಸಿದರು. ಆಗ ವಿಶ್ವಾಮಿತ್ರಋಷಿಯು ಆ ಸ್ಥಳಕ್ಕೆ ಸಿಂಹಾಸನವನ್ನು ತರಿಸಲು, ಇಂದ್ರಾದ್ಯಷ್ಟದಿಕ್ಪಾಲಕರೇ ಮುಂತಾದ ಸಮಸ್ತದೇವತೆಗಳೂ ಹರಿಶ್ಚಂದ್ರನನ್ನು ಕೈಹಿಡಿದು ಕರೆದುಕೊಂಡುಹೋಗಿ ಸಿಂಹಾಸನದಮೇಲೆ ಕುಳ್ಳಿರಿಸಿ, ಆತನ ತೊಡೆಯಮೇಲೆ ಲೋಹಿತಾಸ್ಯನೆಂಬ ಪುತ್ರನನ್ನೂ ಸಮೀಪದಲ್ಲಿ ಚಂದ್ರಮತೀದೇವಿಯನ್ನೂ ಕುಳ್ಳಿರಿಸಿ ಪಟ್ಟಾಭಿಷೇಕಮಾಡಿದರು. ಆಗ ವಸಿಷ್ಠಋಷಿಯು ಹರಿಶ್ಚಂದ್ರನನ್ನು ಕುರಿತು 'ಎಲೈ ಸತ್ಯವಂತನಾದ ಮಹಾರಾಜನೆ, ನನ್ನ ವಾಕ್ಯವನ್ನು ಸತ್ಯವನ್ನಾಗಿ ಮಾಡಿದ ನೀನು ಸಮಸ್ತದೇವತೆಗಳ ಅನುಗ್ರಹಕ್ಕೆ ಪಾತ್ರನಾಗಿಯೂ ಇರು. ಇನ್ನು ನೀನು ಕೃತಾರ್ಥನಾದೆ' ಎಂದು ಹೇಳಿ ಬಹುಸಂತೋಷಪಟ್ಟನು. ವೀರಬಾಹುವೆಂಬ ಧರ್ಮಪುರುಷನು ಹರಿಶ್ಚಂದ್ರನನ್ನು ಕುರಿತು 'ಎಲೈ ಹರಿಶ್ಚಂದ್ರನೆ, ಚಂಡಾಲನ ಸೇವೆಯನ್ನು ಮಾಡಿದೆನೆಂದು ನಿನಗೆ ವ್ಯಸನವಿದ್ದೀತು. ನನ್ನನ್ನು

ಸ್ಮರಿಸುವ ಜನರಿಗೂ ಕೂಡ ಚಂಡಾಲಸ್ಪರ್ಶದೋಷವು ಉಂಟಾಗಬೇಡವೆಂದು ನಾನು ವರವನ್ನು ಕೊಟ್ಟಿರುವೆನು' ಎಂದು ವರವನ್ನು ಕೊಟ್ಟು ಅನುಗ್ರಹಮಾಡಿದನು. ಕಾಲಕೌಶಿಕನೆಂಬ ಬ್ರಾಹ್ಮಣನು ಬಂದು ಹರಿಶ್ಚಂದ್ರನನ್ನು ಕುರಿತು 'ಎಲೈ ಹರಿಶ್ಚಂದ್ರನೆ, ನಾನು ಕಲಿಯುಗಕ್ಕೆ ಅಧಿಪತಿಯಾದ ಮಹಾಪುರುಷನು. ವಿಶ್ವಾಮಿತ್ರನ ಆಜ್ಞಾನುಸಾರವಾಗಿ ನಿನ್ನನ್ನು ಪರೀಕ್ಷಿಸುವದಕ್ಕೋಸ್ಕರ ನಿನಗೆ ಸಮಸ್ತಕಷ್ಟಗಳನ್ನೂ ಉಂಟುಮಾಡಿದೆನು. ಈ ಅಪರಾಧವನ್ನು ನೀನು ಕ್ಷಮಿಸು. ನಿನ್ನ ಪತ್ನಿಯಾದ ಚಂದ್ರಮತಿಯು ಪತಿವ್ರತೆಗಳ ಬಳಗಾಗಿ ಮಹಾ ಅಗ್ರಗಣ್ಯಳು. ಅಂಥ ಪತಿವ್ರತೆಯನ್ನು ನಾನು ಎಲ್ಲಿಯೂ ಕಾಣಲಿಲ್ಲ. ಮಹಾತ್ಮನಾದ ನಿನಗೆ ಅನುರೂಪಳಾದ ಪತ್ನಿಯು ಚಂದ್ರಮತೀದೇವಿಯೇ ಸರಿ. ಅಂಥ ಪತಿವ್ರತೆಯನ್ನು ನಾನು ದುರ್ಭಾಷೆಗಳಿಂದ ವ್ಯಸನಪಡಿಸಿದರೂ ನನಗೆ ಶಾಪಕೊಡದೆ ಕ್ಷಮಿಸಿದಳು'ಎಂದು ಹೇಳಿದನು. ಆಗ ಸಮಸ್ತದೇವತೆಗಳೂ ಹರಿಶ್ಚಂದ್ರನಿಗೆ ಪುನಃ ರಾಜ್ಯಾಧಿಪತ್ಯವನ್ನು ಕೊಟ್ಟು 'ಎಲೈ ಹರಿಶ್ಚಂದ್ರನೆ, ನೀನು ಬಹುಕಾಲಪರ್ಯಂತರವು ಪ್ರಭುವಾಗಿಯೂ ಚಕ್ರವರ್ತಿಯಾಗಿಯೂ ಪ್ರಜಾಪರಿಪಾಲನೆವನ್ನು ಮಾಡಿ, ಅನಂತರ ಸ್ವರ್ಗವನ್ನು ಹೊಂದಿ, ಅಲ್ಲಿ ಸಮಸ್ತ ಭೋಗಗಳನ್ನೂ ಅನುಭವಿಸಿ, ಸಾಕ್ಷಾದ್ಬ್ರಹ್ಮಲೋಕದಲ್ಲಿ ಬಹು ಕಲ್ಪಗಳು ವಾಸಮಾಡಿಕೊಂಡಿದ್ದು, ತದನಂತರದಲ್ಲಿ ಪರಮೇಶ್ವರನಾದ ಸಾಕ್ಷಾಚ್ಛಿವನ ಪ್ರಸಾದದಿಂದ ಶಿವಲೋಕದಲ್ಲಿ ಲೋಕಸಾಮ್ರಾಜ್ಯವನ್ನನುಭವಿಸು. ಭೂಲೋಕದಲ್ಲಿ ಹರಿಶ್ಚಂದ್ರನು ಸತ್ಯಸಂಧನೆಂದು ಶಾಶ್ವತವಾದ ಕೀರ್ತಿಯು ನಿನಗುಂಟಾಗಲಿ' ಎಂದು ಅನುಗ್ರಹವನ್ನು ಮಾಡಿ, ಸಾಕ್ಷಾತ್ಪರಮೇಶ್ವರನೇ ಮುಂತಾದ ಸಮಸ್ತದೇವತೆಗಳೂ ಅಂತರ್ಧಾನವಾದರು" ಎಂದು ಮಾರ್ಕಂಡೇಯನು ಧರ್ಮರಾಯನಿಗೆ ಹೇಳಿದನು.

## ೨೯೧–(೨೧)ನೇ ಅಧ್ಯಾಯ.–ಹರಿಶ್ಚಂದ್ರೋಪಾಖ್ಯಾನ–(ಹರಿಶ್ಚಂದ್ರನು ಪುನಃ ರಾಜ್ಯವಾಳುವಿಕೆ).

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು–ಕೇಳು ಜನಮೇಜಯನೆ, ಮಾರ್ಕಂಡೇಯನು ಧರ್ಮರಾಯನನ್ನು ಕುರಿತು "ಕೇಳು ಧರ್ಮರಾಯನೆ, ಆಬಳಿಕ ಹರಿಶ್ಚಂದ್ರನು ಸತ್ಕೀರ್ತಿಯೆಂಬ ಮಂತ್ರಿಯನ್ನು ಅಯೋಧ್ಯಾಪಟ್ಟಣಕ್ಕೆ ಕಳುಹಿಸಿ, ಪುರವನ್ನಲಂಕರಿಸಿ, ಚತುರಂಗಬಲವನ್ನು ತರಿಸಿಕೊಂಡು, ಆ ಚತುರಂಗಬಲಸಮೇತನಾಗಿ ಮಹಾವಿಭವದಿಂದ ತೆರಳಿ ಅಯೋಧ್ಯಾಪುರವನ್ನು ಪ್ರವೇಶಿಸಿದನು. ಆಗ ಎದುರಾಗಿ ಸಾಮಾಜಿಕರೂ ಬ್ರಾಹ್ಮಣೋತ್ತಮರೂ ವರ್ತಕರೂ ವಾರವನಿತೆಯರೂ ಗಾಯಕರೂ ಹೊಗಳುವರೂ ವಾದ್ಯಗಳನ್ನು ಧರಿಸಿರುವರೂ ಮೊದಲಾಗಿ ಅಶೇಷರೂ ಬಂದು ಹರಿಶ್ಚಂದ್ರನನ್ನು ಕಂಡು ಸಂತೋಷದಿಂದ ಸಂಗಡ ಹೊರಟರು. ಆಗ ಶಂಖ ಭೇರಿ ಮೃದಂಗ ಕಹಳೆಗಳೇ ಮುಂತಾದ ವಾದ್ಯಗಳು ಧ್ವನಿಯಗೈಯುತ್ತಿರಲು, ವಾರವನಿತೆಯರು ನಾಟ್ಯವನ್ನು ಮಾಡುತ್ತಿರಲು, ಗಾಯಕರು ಗಾನಮಾಡುತ್ತಿರಲು, ವಂದಿಗಳು ಹೊಗಳುತ್ತಿರಲು, ಆ ಶಬ್ದಗಳು ದಿಗಂತರಗಳನ್ನು ವ್ಯಾಪಿಸುತ್ತಿರಲು ಪುರವನ್ನು ಪ್ರವೇಶಿಸಿ, ರಾಜವೀಧಿಯಲ್ಲಿ ತೆರಳಿ ಹೋಗುವ ಸಮಯದಲ್ಲಿ ಸುಮಂಗಲೆಯರು ಶುಭವಾದ ಅರಳುಗಳನ್ನೂ ಜಾಜಿ ಮಲ್ಲಿಗೆ ಮುಂತಾದ ಪುಷ್ಪಗಳನ್ನೂ ಮಹಾರಾಜನಮೇಲೆ ವರ್ಷಿಸಿದರು. ಈ ರೀತಿಯಲ್ಲಿ ತೋರಣಗಳಿಂದಲೂ ಮೇಲುಕಟ್ಟುಗಳಿಂದಲೂ ಕದಳೀಸ್ತಂಭಗಳಿಂದಲೂ ಅಲಂಕರಿಸಿ ದಿವ್ಯವಾದ ಗಂಧೋದಕಗಳಿಂದ ಅಭಿಷೇಕಮಾಡಲ್ಪಟ್ಟ ಬೀದಿಯಲ್ಲಿ ಹೊರಟು, ಸಮಸ್ತಪ್ರಜೆಗಳಿಂದಲೂ ನೋಡಿಸಿಕೊಳ್ಳುತ್ತ ಬರುವಾಗ, ಪುರದಲ್ಲಿರುವ ಸ್ತ್ರೀಯರು ಮನೆಯಲ್ಲಿ ತಮ್ಮತಮ್ಮ ಕೆಲಸಗಳನ್ನು ಬಿಟ್ಟು ಗವಾಕ್ಷಿಗಳಲ್ಲಿ ನೋಡುತ್ತಲಿದ್ದರು. ಹರಿಶ್ಚಂದ್ರನು ಪತ್ನೀಪುತ್ರರೊಡನೆ ಸಂತೋಷದಿಂದ ಬಂದು ಬ್ರಾಹ್ಮಣ ಋಷಿಗಳನ್ನು ಸ್ವಸ್ತಿವಾಚನೆಪೂರ್ವಕವಾಗಿ ರಾಜಭವನವನ್ನು ಪ್ರವೇಶಿಸಿ, ಬ್ರಾಹ್ಮಣರಿಗೆ ಗೋದಾನ ಭೂದಾನ ಸುವರ್ಣದಾನಗಳೇ ಮುಂತಾದ ದಾನಗಳನ್ನು ಮಾಡಿ, ಸಾಮಾಜಿಕರಿಗೆ ಬಹುಮಾನವನ್ನು ಮಾಡಿ, ಎಲ್ಲರಿಗೂ ಅಪ್ಪಣೆಯನ್ನು ಕೊಟ್ಟು ಅವರವರ ಮನೆಗಳಿಗೆ ಕಳುಹಿಸಿದನು. ಬಳಿಕ ಹರಿಶ್ಚಂದ್ರನು ಧರ್ಮದಿಂದ ಪ್ರಜಾಪರಿಪಾಲನೆಯನ್ನು ಮಾಡುತ್ತಿರಲಾಗಿ, ಬ್ರಾಹ್ಮಣಾದಿಚತುರ್ವರ್ಣಗಳು ಅವರವರ ಸ್ವಧರ್ಮಗಳಲ್ಲಿ ಸರಿಯಾಗಿದ್ದರು; ಸಮಸ್ತಜನರೂ ಕಾಮಕ್ರೋಧರಹಿತರಾಗಿಯೂ ಭೂತದಯವುಳ್ಳವರಾಗಿಯೂ ಇದ್ದರು; ಚೋರರ ಬಾಧೆಯೂ ವ್ಯಾಧಿಗಳಬಾಧೆಯೂ ಇರಲಿಲ್ಲ. ಆತನ

ರಾಜ್ಯದಲ್ಲಿ ಅಲ್ಪಾಯುಸ್ಸಿನಿಂದ ಪ್ರಜೆಗಳಿಗೆ ಮರಣಪ್ರಸಕ್ತಿಯೇ ಇರಲಿಲ್ಲ; ಸ್ತ್ರೀಯರೆಲ್ಲರೂ ಪತಿವ್ರತೆಯರಾಗಿದ್ದರು; ಪ್ರಜೆಗಳೆಲ್ಲರೂ ಚೋರ ರೋಗ ಅಕಾಲಮರಣಾದಿಗಳಿಂದ ಬಿಡಲ್ಪಟ್ಟವರಾಗಿ ಸಂತೋಷಯುಕ್ತರಾಗಿದ್ದರು. ಎಲೈ ಧರ್ಮರಾಯನೆ, ಈ ಪ್ರಕಾರವಾಗಿ ಹರಿಶ್ಚಂದ್ರನು ಮಹತ್ತಾದ ಕಷ್ಟವನ್ನೂ ಅನಂತರದಲ್ಲಿ ಸರ್ವೋತ್ತಮವಾದ ಮಹಾಸೌಖ್ಯವನ್ನೂ ಅನುಭವಿಸಿದನೆಂಬ ಮಹಾಯಶಸ್ಕರವಾದ ಧರ್ಮಬುದ್ಧಿಯನ್ನುಂಟುಮಾಡುವ ಸಕಲ ದೇವತೆಗಳಿಂದಲೂ ಪೂಜಿತವಾದ ಈ ಉಪಾಖ್ಯಾನವನ್ನು ಯಾವನು ಭಕ್ತಿಯಿಂದ ಪಠಿಸುವನೋ ಅವನು ಬ್ರಹ್ಮಹತ್ಯಾದಿ ದೋಷಗಳನ್ನು ಪರಿಹರಿಸಿಕೊಂಡು ವಿಷ್ಣುಲೋಕವನ್ನು ಹೊಂದುವನು. ಇದನ್ನು ಭಕ್ತಿಯಿಂದ ನಿರಂತರವೂ ಪಾರಾಯಣಮಾಡುವನು ಸತ್ಯಧರ್ಮಗಳುಳ್ಳವನಾಗಿ, ಇಹಲೋಕದಲ್ಲಿ ಬಹುಕೀರ್ತಿಯನ್ನು ಪಡೆದು, ಶಿವಲೋಕದಲ್ಲಿ ವಾಸಮಾಡುವನು" ಎಂದು ಮಾರ್ಕಂಡೇಯನು ಧರ್ಮರಾಯನಿಗೆ ಹೇಳಿದನು.

## ೨೯೩ನೇ ಅಧ್ಯಾಯ.—ಸಾವಿತ್ರ್ಯುಪಾಖ್ಯಾನ—(ಕಥಾವೃತ್ತಾಂತ).

ಅನಂತರದಲ್ಲಿ ವೈಶಂಪಾಯನಮುನೀಶ್ವರನು ಜನಮೇಜಯನನ್ನು ಕುರಿತು—ಕೇಳು ಜನಮೇಜಯನೆ, ಬಳಿಕ ಧರ್ಮರಾಯನು ಮಾರ್ಕಂಡೇಯನನ್ನು ಕುರಿತು "ಎಲೈ ಮಹಾತ್ಮನೆ, ನಾನು ನನ್ನನ್ನೂ ನನ್ನ ತಮ್ಮಂದಿರಾದ ಭೀಮಾದಿಗಳನ್ನೂ ಕುರಿತು ವ್ಯಸನಪಡತಕ್ಕವನಲ್ಲ. ದ್ಯೂತಸಮಯದಲ್ಲಿ ದುರಾತ್ಮರಾದ ದುರ್ಯೋಧನಾದಿಗಳಿಂದ ಕ್ಲೇಶಪಡುತ್ತಿದ್ದ ನಮ್ಮನ್ನು ದ್ರೌಪದಿಯು ದುಃಖಸಮುದ್ರದಿಂದ ದಾಟಿಸಿದಳು. ಅಂಥ ದ್ರೌಪದಿಯನ್ನು ಪಾಪಿಯಾದ ಸೈಂಧವನು ಬಲಾತ್ಕಾರದಿಂದ ಅಪಹರಿಸಿ ಆಕೆಗೆ ದುಃಖವನ್ನುಂಟುಮಾಡಿದನು. ದ್ರುಪದರಾಯನಿಗೆ ಮಗಳಾಗಿಯೂ ಪತಿವ್ರತಾಶಿರೋಮಣಿಯಾಗಿಯೂ ಬೇಕಾದ ಐಶ್ವರ್ಯವನ್ನು ಅನುಭವಿಸುತ್ತಿದ್ದವಳಾಗಿಯೂ ಇರುವ ದ್ರೌಪದಿಗೆ ಇಂಥ ದುಃಖವು ಪ್ರಾಪ್ತವಾಗಬಹುದೇ ಎಂದು ನಾನು ವ್ಯಸನಪಡುತ್ತಿರುವೆನು. ಹೀಗೆ ದುಃಖಪಡತಕ್ಕ ಸ್ತ್ರೀಯನ್ನು ನೀನು ಪೂರ್ವದಲ್ಲಿ ಎಲ್ಲಾದರೂ ಕೇಳಿಯಾದರೂ ನೋಡಿಯಾದರೂ ಉಂಟೆ?" ಎಂದನು.

ಆಗ ಮಾರ್ಕಂಡೇಯನು "ಎಲೈ ಧರ್ಮರಾಯನೆ, ಸತ್ಕುಲಪ್ರಸೂತರಾದ ಸ್ತ್ರೀಯರ ಮಹಾಭಾಗ್ಯವನ್ನು ವಿವರಿಸುವೆನು ಕೇಳು: ಪೂರ್ವದಲ್ಲಿ ರಾಜಪುತ್ರಿಯಾದ ಸಾವಿತ್ರಿಯೆಂಬ ಪತಿವ್ರತೆಯು ಹೀಗೆ ದುಃಖವನ್ನು ಅನುಭವಿಸಿರುವಳು. ಅದು ಹ್ಯಾಗೆಂದರೆ, ಪೂರ್ವದಲ್ಲಿ ಧರ್ಮಾತ್ಮನೂ ಬ್ರಾಹ್ಮಣಪ್ರಿಯನೂ ಸತ್ಯಸಂಧನೂ ಜಿತೇಂದ್ರಿಯನೂ ಶಾಸ್ತ್ರೋಕ್ತಕ್ರಮದಿಂದ ಯಾಗಗಳನ್ನು ಮಾಡಿದವನೂ ದಾನಶೀಲನೂ ಸಮರ್ಥನೂ ಸಕಲ ಪ್ರಾಣಿಗಳಿಗೂ ಹಿತಚಿಂತಕನೂ ಆದ ಅಶ್ವಪತಿಯೆಂಬ ರಾಜನು ಮದ್ರದೇಶಕ್ಕೆ ಅರಸನಾಗಿದ್ದನು. ಆತನು ಸಂತಾನವಿಲ್ಲದೆ ಅಪರವಯಸ್ಸಿನಲ್ಲಿ ಅಧಿಕವಾಗಿ ಸಂತಾಪಪಡುತ್ತ, ಆ ಸಂತಾನಾರ್ಥವಾಗಿ ಅನೇಕ ವ್ರತಗಳನ್ನು ಆಚರಿಸುತ್ತ, ಬ್ರಹ್ಮಚಾರಿಯಾಗಿ ನಿಯಮದಿಂದ ಆಹಾರವನ್ನು ಮಾಡಿಕೊಂಡು ಸೂರ್ಯದೇವತಾಕವಾದ ಸಾವಿತ್ರೀಮಂತ್ರದಿಂದ ಲಕ್ಷಹೋಮಗಳನ್ನು ಮಾಡಿ ಪ್ರತಿದಿವಸದಲ್ಲೂ ಅಪರಾಹ್ಣದಲ್ಲಿ ಮಿತವಾಗಿ ಆಹಾರಮಾಡುತ್ತ ಹದಿನೆಂಟುವರುಷ ನೇಮದಿಂದಿದ್ದನು. ಬಳಿಕ ಸಾವಿತ್ರೀದೇವಿಯು ಸಂತುಷ್ಟಳಾಗಿ ದಿವ್ಯರೂಪವನ್ನು ಧರಿಸಿ ಹೋಮಕುಂಡದಿಂದೆದ್ದು ತನ್ನ ರೂಪವನ್ನು ಆ ರಾಜನಿಗೆ ತೋರಿಸಿ, ಆತನನ್ನು ಕುರಿತು 'ಎಲೈ ರಾಯನೆ, ನಿನ್ನ ಶುದ್ಧವಾದ ಬ್ರಹ್ಮಚರ್ಯದಿಂದಲೂ ಶಮದಮಾದಿಗುಣಗಳಿಂದಲೂ ನೇಮದಿಂದಲೂ ನಾನು ಸಂತುಷ್ಟಳಾಗಿರುವೆನು. ನಿನಗೆ ಬೇಕಾದ ವರಗಳನ್ನು ಬೇಡು. ಸ್ವಲ್ಪವಾದರೂ ಧರ್ಮವನ್ನು ಬಿಟ್ಟು ನಡೆಯಬೇಡ' ಎನಲು, ಆ ಮಾತನ್ನು ಕೇಳಿ ಅಶ್ವಪತಿಯು 'ಎಲೌ ದೇವಿಯೆ, ದೊಡ್ಡವರಾದ ಬ್ರಾಹ್ಮಣರು ಸಂತಾನವೆಂಬುವದು ಶ್ರೇಷ್ಠವಾದ ಧರ್ಮಕ್ಕೆ ಸಾಧನವಾದದ್ದೆಂದು ಹೇಳುವರು. ಅದಕ್ಕಾಗಿ ನಾನು ಇಷ್ಟು ಪ್ರಯತ್ನವನ್ನು ಮಾಡಿರುವೆನು. ನೀನು ನನ್ನ ಭಕ್ತಿಗೆ ಮೆಚ್ಚಿದಪಕ್ಷದಲ್ಲಿ ನನ್ನ ಕುಲಕ್ಕೆ ಯೋಗ್ಯರಾದ ಅನೇಕ ಮಂದಿ ಪುತ್ರರಾಗುವಂತೆ ಅನುಗ್ರಹವನ್ನು ಮಾಡು' ಎಂದು ಪ್ರಾರ್ಥಿಸಿದನು. ಅದನ್ನು ಕೇಳಿ ಸಾವಿತ್ರಿಯು 'ಎಲೈ ಮಹಾರಾಜನೆ, ಪೂರ್ವದಲ್ಲೇ ನಾನು ನಿನ್ನ ಅಭಿಪ್ರಾಯವನ್ನು ತಿಳಿದು ನಿನಗೆ ಸಂತಾನವಾಗಬೇಕೆಂದು ಬ್ರಹ್ಮದೇವನಿಗೆ ವಿಜ್ಞಾಪಿಸಿಕೊಂಡೆನು. ಆತನ

ಅನುಗ್ರಹದಿಂದ ನಿನಗೆ ಭೂಲೋಕದಲ್ಲಿ ಅತ್ಯಂತ ತೇಜಸ್ವಿನಿಯಾದ ಒಬ್ಬ ಕನ್ಯೆಯು ಉತ್ಪನ್ನಳಾಗುವಳು. ಇನ್ನು ಪುತ್ರಾರ್ಥವಾಗಿ ನೀನು ನನ್ನನ್ನು ಪುನಃ ಪ್ರಾರ್ಥಿಸಬೇಡ. ಬ್ರಹ್ಮದೇವನ ಆಜ್ಞಾನುಸಾರವಾಗಿ ನಿನಗೆ ಈ ಮಾತನ್ನು ನಾನು ಹೇಳುರುವೆನು' ಎನಲು; ಅಶ್ವಪತಿಯು 'ಎಲೌ ಪೂಜ್ಯಳೆ, ನಿನ್ನ ಅಪ್ಪಣೆಯಾದಂತೆಯೇ ಆಗಲಿ' ಎಂದು ಆ ಮಾತನ್ನು ಅಂಗೀಕರಿಸಿ, ಆ ಸಾವಿತ್ರಿಯು ಮತ್ತಷ್ಟು ಪ್ರಸನ್ನಳಾಗುವಂತೆ ಸ್ತುತಿಸಿದನು. ಆಗ ಸಾವಿತ್ರಿಯು 'ಜಾಗ್ರತೆಯಾಗಿ ನಿನಗೆ ಒಬ್ಬ ಕನ್ಯೆಯು ಹುಟ್ಟುವಳು' ಎಂದು ನುಡಿದು, ಅಂತರ್ಧಾನವನ್ನು ಹೊಂದಿದಳು. ಬಳಿಕ ಅಶ್ವಪತಿಯು ತನ್ನ ರಾಜ್ಯಕ್ಕೆ ಬಂದು ಧರ್ಮದಿಂದ ರಾಜ್ಯವನ್ನು ಪರಿಪಾಲಿಸುತ್ತ ಕೆಲವು ಕಾಲವು ಕಳೆಯಲು, ಮನುಪುತ್ರಿಯಾದ ತನ್ನ ಜ್ಯೇಷ್ಠಪತ್ನಿಯು ಗರ್ಭವನ್ನು ಧರಿಸಿದಳು. ಆ ಗರ್ಭವು ಶುಕ್ಲಪಕ್ಷದ ಚಂದ್ರನಂತೆ ವೃದ್ಧಿಯನ್ನು ಹೊಂದಿ ನವಮಾಸಗಳು ತುಂಬಲು, ಆಕೆಯಲ್ಲಿ ವಿಶಾಲವಾದ ನೇತ್ರಗಳುಳ್ಳ ಒಬ್ಬ ಕನ್ಯೆಯು ಜನಿಸಿದಳು. ಅಶ್ವಪತಿಯು ಆ ಶಿಶುವಿಗೆ ಬ್ರಾಹ್ಮಣರೊಡನೆ ಜಾತಕರ್ಮ ಮೊದಲಾದ ಶುಭಕರ್ಮಗಳನ್ನು ಬೆಳಸಿ, ಸೂರ್ಯದೇವತಾಕಸಾವಿತ್ರೀಮಂತ್ರದ ಹೋಮದಿಂದ ಪ್ರೀತಳಾದ ಸಾವಿತ್ರಿಯ ಅನುಗ್ರಹದಿಂದ ಜನಿಸಿದ್ದರಿಂದ ಆ ಕನ್ಯೆಗೆ ಸಾವಿತ್ರಿಯೆಂದು ನಾಮಕರಣವನ್ನು ಮಾಡಿದನು. ಆ ರಾಜಪುತ್ರಿಯಾದ ಸಾವಿತ್ರಿಯು ದಿವ್ಯವಾದ ರೂಪುಳ್ಳ ಶ್ರೀದೇವಿಯಂತೆ ಪ್ರಕಾಶಿಸುತ್ತ ದಿನದಿನಕ್ಕೆ ವೃದ್ಧಿಯನ್ನು ಹೊಂದಿ ಯೌವನವತಿಯಾದಳು. ಆಗ ಸಮೀಚೀನವಾದ ಹಿಂಭಾಗವೂ ಮಧ್ಯಭಾಗವೂ ಉಳ್ಳ ಚಿನ್ನದ ಪ್ರತಿಮೆಯಂತಿರುವ ಆಕೆಯನ್ನು ನೋಡಿದಜನರು ಈಕೆ ದೇವಕನ್ಯೆಯೇ ಎಂದು ತಿಳಿದು, ಆಕೆಯ ತೇಜಸ್ಸಿನಿಂದ ತಿರಸ್ಕೃತರಾಗಿ ಯಾರೂ ಆಕೆಯನ್ನು ವರಿಸದೆ ಹೋದರು. ಬಳಿಕ ಸಾವಿತ್ರಿಯು ಶಿರಸ್ಸ್ನಾನಮಾಡಿ ಉಪವಾಸದಿಂದ ತನ್ನಿಷ್ಟದೇವತೆಗೆ ನಮಸ್ಕಾರ ಮಾಡಿ, ಪರ್ವಕಾಲದಲ್ಲಿ ವಿಧಿವತ್ತಾಗಿ ಅಗ್ನಿಯಲ್ಲಿ ಬ್ರಾಹ್ಮಣರಿಂದ ಹೋಮ ಮಾಡಿಸಿ, ವೇದಮಂತ್ರಗಳನ್ನು ಪಾರಾಯಣ ಮಾಡಿಸಿದಳು. ಅದರಿಂದ ಸಂತುಷ್ಟವಾದ ಇಷ್ಟದೇವತೆಯು ಅನುಗ್ರಹಪೂರ್ವಕವಾಗಿ ಬಂದು ಮಾಲಿಕೆಯನ್ನು ಕೊಟ್ಟಳು. ಆ ಮಾಲಿಕೆಯನ್ನು ಸ್ವೀಕರಿಸಿ ಸಾವಿತ್ರಿಯು ದಿವ್ಯರೂಪನ್ನು ತಾಳಿದ ಶ್ರೀದೇವಿಯಂತೆ ಪ್ರಕಾಶಿಸುತ್ತ, ತಂದೆಯಾದ ಅಶ್ವಪತಿಯ ಸಮೀಪಕ್ಕೆ ಹೋಗಿ, ಆತನಿಗೆ ವಂದನೆಯನ್ನು ಮಾಡಿ, ತನ್ನ ಇಷ್ಟದೇವತೆಯು ಕೊಟ್ಟ ಮಾಲಿಕೆಯನ್ನು ಆತನಿಗೆ ಕೊಟ್ಟು, ಕೈಮುಗಿದುಕೊಂಡು ಆತನ ಸಮೀಪದಲ್ಲಿ ನಿಂತಳು. ಆಗ ಅಶ್ವಪತಿಯು ದಿವ್ಯವಾದ ರೂಪುಳ್ಳ ಯೌವನಸ್ಥಳಾದ ಮಗಳನ್ನು ನೋಡಿ, ಯಾರೂ ಈಕೆಯನ್ನು ವರಿಸುವದಿಲ್ಲವಲ್ಲಾ! ಎಂದು ಚಿಂತೆಯಿಂದ ದುಃಖಪಡುತ್ತ 'ಎಲೆ ಮಗಳೆ, ನಿನಗೆ ವಿವಾಹಮಾಡತಕ್ಕ ಕಾಲವು ಪ್ರಾಪ್ತವಾಗಿದ್ದರೂ ಯಾರೂ ನಿನ್ನನ್ನು ವರಿಸದೆ ಇರುವರು. ಆದ್ದರಿಂದ ನೀನೇ ನಿನಗೆ ಅನುರೂಪನಾಗಿಯೂ ಗುಣಾಢ್ಯನಾಗಿಯೂ ಇರುವ ಗಂಡನನ್ನು ವರಿಸಿ ಅಂಥ ಪುರುಷನನ್ನು ನನಗೆ ತಿಳುಹಿಸು. ಬಳಿಕ ನಾನು ವಿಮರ್ಶೆಮಾಡಿ ಆತನಿಗೆ ನಿನ್ನನ್ನು ದಾನ ಮಾಡುವೆನು. ಮತ್ತೊಬ್ಬರಿಗೆ ಕನ್ಯಾಪ್ರದಾನವನ್ನು ಮಾಡದಿರುವ ತಂದೆಯೂ ಋತುಕಾಲದಲ್ಲಿ ಪತ್ನಿಯಲ್ಲಿ ವಿಹರಿಸದಿರುವ ಪತಿಯೂಸಹ ಲೋಕದಲ್ಲಿ ನಿಂದ್ಯರಾಗುವರೆಂದು ಧರ್ಮಶಾಸ್ತ್ರವಿರುವದು ಎಂದು ಬ್ರಾಹ್ಮಣರು ಹೇಳುವರು. ಮತ್ತು ತಂದೆಯು ಮೃತನಾದ ಬಳಿಕ ತಾಯಿಯನ್ನು ರಕ್ಷಿಸದಿರುವ ಮಗನೂ ಲೋಕದಲ್ಲಿ ನಿಂದ್ಯನಾಗುವನು. ಆದ್ದರಿಂದ ನೀನು ನನ್ನ ಮಾತನ್ನು ಕೇಳಿ ಜಾಗ್ರತೆಯಾಗಿ ಪತಿಯನ್ನು ಹುಡುಕಿ, ದೇವತೆಗಳು ನನ್ನನ್ನು ನಿಂದಿಸದಹಾಗೆ ಮಾಡು' ಎಂದು ನುಡಿದು, ಆಕೆಯ ಜೊತೆಯಲ್ಲಿ ಸೈನ್ಯಸಮೇತರಾಗಿ ವೃದ್ಧರಾದ ಮಂತ್ರಿಗಳು ಹೊರಡುವಂತೆ ಆಜ್ಞೆಯನ್ನು ಕೊಟ್ಟನು. ಬಳಿಕ ಸಾವಿತ್ರಿಯು ತಂದೆಯ ಮಾತಿಗೆ ಪ್ರತಿಯನ್ನು ಹೇಳದೆ, ಲಜ್ಜೆಯಿಂದ ಆತನ ಪಾದಗಳಿಗೆ ವಂದನೆಯನ್ನು ಮಾಡಿ, ವೃದ್ಧರಾದ ಮಂತ್ರಿಗಳೊಡಗೂಡಿ ಸುವರ್ಣದ ರಥವನ್ನೇರಿ ಕುಳಿತುಕೊಂಡು ಮಹಾತ್ಮರಾದ ರಾಜರ್ಷಿಗಳ ತಪೋವನಗಳಿಗೆ ಹೋಗಿ, ಅಲ್ಲಲ್ಲಿ ಮಾನ್ಯರಾದ ವೃದ್ಧಜನರಿಗೆ ವಂದನೆಯನ್ನು ಮಾಡುತ್ತ, ಸಕಲವಾದ ಆಶ್ರಮಗಳಿಗೂ ಹೋಗಿ ಆಯಾ ದಿವ್ಯಕ್ಷೇತ್ರಗಳಲ್ಲಿ ಮುಖ್ಯರಾದ ಬ್ರಾಹ್ಮಣರಿಗೆ ಬೇಕಾದ ಧನವನ್ನು ಕೊಡುತ್ತ, ಪುಣ್ಯತಮವಾದ ತೀರ್ಥಕ್ಷೇತ್ರಗಳಲ್ಲಿ ಸಂಚರಿಸುತ್ತಿದ್ದಳು" ಎಂದು ಮಾರ್ಕಂಡೇಯನು ಧರ್ಮರಾಯನಿಗೆ ಹೇಳಿದನು.

## ೨೯೩ನೇ ಅಧ್ಯಾಯ.—ಸಾವಿತ್ರ್ಯುಪಾಖ್ಯಾನ—(ಸಾವಿತ್ರಿಯ ವಿವಾಹಕ್ಕೆ ನಾರದರು ಅನುಮತಿಸುವಿಕೆ.)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯನೆ, ಮಾರ್ಕಂಡೇಯನು ಧರ್ಮರಾಯನನ್ನು ಕುರಿತು "ಎಲೈ ಧರ್ಮರಾಯನೆ, ಒಂದಾನೊಂದು ದಿವಸ ಮದ್ರದೇಶಾಧಿಪತಿಯಾದ ಅಶ್ವಪತಿಯ ಸಮೀಪಕ್ಕೆ ದೇವಋಷಿಗಳಾದ ನಾರದರು ಬರಲು, ಅಶ್ವಪತಿಯು ಅವರಿಗೆ ಸತ್ಕಾರಮಾಡಿ ಪೀಠವನ್ನು ಕೊಟ್ಟನು. ನಾರದರು ಪೀಠದಮೇಲೆ ಕುಳಿತು ಸಭಾಮಧ್ಯದಲ್ಲಿ ಸತ್ಕಥಾಲಾಪವನ್ನು ಮಾಡುತ್ತಿದ್ದರು. ಆ ಸಮಯದಲ್ಲಿ ಸಾವಿತ್ರಿಯು ಸಕಲ ತೀರ್ಥಗಳಿಗೂ ಆಶ್ರಮಗಳಿಗೂ ಹೋಗಿ, ವೃದ್ಧರಾದ ಮಂತ್ರಿಗಳೊಡನೆ ಮರಳಿ ತಂದೆಯ ಮನೆಗೆ ಬಂದು, ನಾರದರೊಡನೆ ಸಭೆಯಲ್ಲಿ ಕೂತುಕೊಂಡಿದ್ದ ತಂದೆಗೆ ವಂದನೆಯನ್ನು ಮಾಡಿದಳು. ಆಗ ನಾರದರು ಅಶ್ವಪತಿಯನ್ನು ಕುರಿತು 'ಎಲೈ ಮಹಾರಾಜನೆ, ನಿನ್ನ ಮಗಳು ಎಲ್ಲಿಗೆ ಹೋಗಿದ್ದಳು? ಎಲ್ಲಿಂದ ಬಂದಳು? ನೀನು ಯಾತಕ್ಕೋಸ್ಕರ ಯೌವನವತಿಯಾದ ಈಕೆಗೆ ಇನ್ನೂ ವಿವಾಹವನ್ನು ಮಾಡದಿರುವೆ?' ಎನಲು, ಅಶ್ವಪತಿಯು 'ಎಲೈ ಮಹಾನುಭಾವನೆ, ಈ ನಿಮಿತ್ತದಿಂದಲೇ ಆಕೆಯನ್ನು ನಾನು ರಾಜರ್ಷಿಗಳ ಆಶ್ರಮಗಳಿಗೆ ಕಳುಹಿಸಿಕೊಟ್ಟಿದ್ದೆನು. ಆಕೆಯು ಯಾವನನ್ನು ವರಿಸಿರುವಳೋ ಅದನ್ನು ನೀನೇ ವಿಚಾರಿಸು' ಎಂದು ನುಡಿದು, ಮಗಳನ್ನು ಕುರಿತು 'ಎಲೆ ಮಗಳೆ, ನೀನು ಯಾರನ್ನು ವರಿಸಿರುವೆಯೋ ಅದನ್ನು ದೇವಋಷಿಗಳಾದ ನಾರದರಿಗೆ ತಿಳುಹಿಸು' ಎಂದನು. ಆಕೆಯು ತನ್ನ ಇಷ್ಟದೇವತೆಯ ಮಾತಿನಂತೆ ತಂದೆಯ ಮಾತನ್ನು ಕೇಳಿ ನಾರದರನ್ನು ಕುರಿತು—'ಎಲೈ ಮಹಾನುಭಾವನೆ, ಸಾಲ್ವದೇಶದಲ್ಲಿ ಪ್ರಸಿದ್ಧನಾದ ದ್ಯುಮತ್ಸೇನನೆಂಬ ರಾಜನು ರಾಜ್ಯವನ್ನಾಳುತ್ತಿದ್ದನು. ಆಗ ಆತನಿಗೆ ದೈವಯೋಗದಿಂದ ಕಣ್ಣುಗಳು ನಷ್ಟವಾದವು. ಆ ಸಮಯದಲ್ಲಿ ಆತನ ಮಗನು ಚಿಕ್ಕವನಾಗಿರುವದನ್ನು ತಿಳಿದು ಶತ್ರುಗಳು ಆತನ ರಾಜ್ಯವನ್ನು ಅಪಹರಿಸಿದರು. ರಾಜ್ಯಭ್ರಷ್ಟನಾದ ದ್ಯುಮತ್ಸೇನನು ತನ್ನ ಪತ್ನಿಯಿಂದಲೂ ಕುಮಾರನಿಂದಲೂ ಕೂಡಿ ಅರಣ್ಯಕ್ಕೆ ಹೋಗಿ ವ್ರತನಿಷ್ಠನಾಗಿ ಅಲ್ಲಿ ತಪಸ್ಸು ಮಾಡುತ್ತಿರುವನು. ತೇಜಸ್ವಿಯಾದ ಆತನ ಮಗನು ಪಟ್ಟಣದಲ್ಲಿ ಹುಟ್ಟಿ ಅರಣ್ಯದಲ್ಲೇ ದೊಡ್ಡವನಾಗಿರುವನು. ಆತನನ್ನು ಸತ್ಯವಂತನೆಂದು ಹೇಳುವರು. ಆತನನ್ನು ನಾನು ಮನಸ್ಸಿನಲ್ಲಿ ಗಂಡನನ್ನಾಗಿ ವರಿಸಿರುವೆನು' ಎಂದು ವಿಜ್ಞಾಪಿಸಿದಳು. ಆ ಮಾತನ್ನು ಕೇಳಿ ನಾರದರು 'ಎಲೈ ಅಶ್ವಪತಿಯೆ, ನಿನ್ನ ಮಗಳಾದ ಸಾವಿತ್ರಿಯು ಮಹತ್ತಾದ ಪಾಪವನ್ನು ಮಾಡಿ ಅದನ್ನು ತಿಳಿಯದೆ ಗುಣವಂತನಾದ ಸತ್ಯವಂತನನ್ನು ವರಿಸಿರುವಳು. ಆತನ ತಂದೆತಾಯಿಗಳು ಸತ್ಯವಾದಿಗಳಾದ್ದರಿಂದ ಬ್ರಾಹ್ಮಣರು ಆತನಿಗೆ ಸತ್ಯವಂತನೆಂದು ನಾಮಕರಣವನ್ನು ಮಾಡಿರುವರು. ಮತ್ತು ಆತನು ಬಾಲ್ಯಮೊದಲುಗೊಂಡು ಕುದುರೆಗಳಲ್ಲಿ ವಿಶೇಷಪ್ರೀತಿಯುಳ್ಳವನಾಗಿ, ಯಾವಾಗಲೂ ಕುದುರೆಗಳನ್ನೇ ನೋಡುತ್ತಾ, ಮಣ್ಣಿನಿಂದಲೇ ಕುದುರೆಗಳನ್ನು ಮಾಡುತ್ತಿದ್ದನು; ಚಿತ್ರದಲ್ಲೂ ಕುದುರೆಗಳನ್ನು ಬರೆಯುತ್ತಿದ್ದನು. ಆದ್ದರಿಂದ ಆತನನ್ನು ಚಿತ್ರಾಶ್ವನೆಂಬದಾಗಿಯೂ ಹೇಳುವರು' ಎಂದು ನುಡಿದಳು. ಅದನ್ನು ಕೇಳಿ ಅಶ್ವಪತಿಯು 'ಎಲೈ ನಾರದರೆ, ಈಗ ಆ ಸತ್ಯವಂತನು ತೇಜಸ್ವಿಯಾಗಿಯೂ ಬುದ್ಧಿಶಾಲಿಯಾಗಿಯೂ ಕ್ಷಮಾವಂತನಾಗಿಯೂ ಶೂರನಾಗಿಯೂ ಪಿತೃಭಕ್ತಿಯುಳ್ಳವನಾಗಿಯೂ ಇರುವನೆ?' ಎಂದು ಪ್ರಶ್ನೆಮಾಡಲು, ನಾರದರು 'ಎಲೈ ಮಹಾರಾಜನೆ, ಆತನು ಸೂರ್ಯನಂತೆ ತೇಜಸ್ವಿಯಾಗಿಯೂ ಬೃಹಸ್ಪತಿಯಂತೆ ಬುದ್ಧಿಶಾಲಿಯಾಗಿಯೂ ಇಂದ್ರನಂತೆ ಶೂರನಾಗಿಯೂ ಭೂಮಿಯಂತೆ ಕ್ಷಮಾವಂತನಾಗಿಯೂ ಇರುವನು' ಎಂದನು. ಅಶ್ವಪತಿಯು 'ಎಲೈ ನಾರದರೆ, ರಾಜಪುತ್ರನಾದ ಆತನು ದಾತೃವಾಗಿಯೂ ಬ್ರಾಹ್ಮಣಪ್ರಿಯನಾಗಿಯೂ ರೂಪವಂತನಾಗಿಯೂ ಉದಾರಸ್ವಭಾವನಾಗಿಯೂ ಸರ್ವರಿಗೂ ದರ್ಶನೀಯನಾಗಿಯೂ ಇರುವನೆ?' ಎಂದು ಪ್ರಶ್ನೆಮಾಡಲು; ನಾರದರು 'ಎಲೈ ಮಹಾರಾಜನೆ, ಸಂಕೃತಿಯಮಗನಾದ ರಂತಿದೇವನಂತೆ ಆತನು ತನ್ನ ಶಕ್ತಿಯಿಂದ ದಾನಮಾಡುವವರಲ್ಲಿ ಸಮರ್ಥನಾಗಿರುವನು. ಮತ್ತು ಬ್ರಾಹ್ಮಣ್ಯನಾಗಿಯೂ, ಶಿಬಿಯಂತೆ ಸತ್ಯವಾದಿಯಾಗಿಯೂ, ಯಯಾತಿಯಂತೆ ಉದಾರಸ್ವಭಾವನಾಗಿಯೂ, ಚಂದ್ರನಂತೆ ದರ್ಶನೀಯನಾಗಿಯೂ, ಅಶ್ವಿನೀದೇವತೆಗಳಂತೆ ರೂಪವಂತನಾಗಿಯೂ, ಬಲಿಷ್ಟನಾಗಿಯೂ, ದಾಂತನಾಗಿಯೂ, ಮೃದುಸ್ವಭಾವವುಳ್ಳವನಾಗಿಯೂ, ಜಿತೇಂದ್ರಿಯನಾಗಿಯೂ, ಸ್ನೇಹಪರನಾಗಿಯೂ, ಅಸೂಯೆಯಿಲ್ಲದವ

ನಾಗಿಯೂ, ಅಕಾರ್ಯದಲ್ಲಿ ಲಜ್ಜೆಯುಳ್ಳವನಾಗಿಯೂ, ಧೈರ್ಯಸಂಪನ್ನನಾಗಿಯೂ, ನಿರಂತರವೂ ಋಜುಸ್ವಭಾವವುಳ್ಳವನಾಗಿಯೂ ಇರುವನೆಂದು ವೃದ್ಧರಾದ ತಪಸ್ವಿಗಳು ಸಂಕ್ಷೇಪವಾಗಿ ಹೇಳಿದ್ದನ್ನು ನಾನು ಕೇಳಿರುವೆನು' ಎಂದು ಹೇಳಿದನು. ಬಳಿಕ ಅಶ್ವಪತಿಯು 'ಎಲೈ ಮಹಾತ್ಮನೆ, ಆತನ ಗುಣಗಳನ್ನೆಲ್ಲಾ ಹೇಳಿದೆ. ಆ ರಾಜಕುಮಾರನಲ್ಲಿ ದೋಷವೇನಾದರೂ ಇದ್ದರೆ ಅದನ್ನು ತಿಳುಹಿಸು' ಎನಲು; ನಾರದನು 'ಎಲೈ ರಾಯನೆ, ಆತನಲ್ಲಿರುವ ಅನೇಕಗುಣಗಳನ್ನು ಒಂದು ದೋಷವು ಆಕ್ರಮಿಸಿರುವದು. ಆ ದೋಷವು ಎಷ್ಟುಪ್ರಯತ್ನ ಮಾಡಿದರೂ ನಿವೃತ್ತವಾಗತಕ್ಕದ್ದಲ್ಲ. ಅದೊಂದು ದೋಷವೇ ಹೊರತು ಆತನಲ್ಲಿ ಮತ್ತಾವ ದೋಷವೂ ಕಾಣಿಸುವದಿಲ್ಲ. ಈ ಹೊತ್ತುಮೊದಲು ಒಂದು ವರುಷಕ್ಕೆ ಸರಿಯಾಗಿ ಆತನ ಆಯುಸ್ಸು ಕ್ಷೀಣವಾಗಿ ಆತನು ದೇಹವನ್ನು ಬಿಡುವನು' ಎಂದನು. ಅದನ್ನು ಕೇಳಿ ಅಶ್ವಪತಿಯು 'ಎಲೈ ಮಗಳೆ, ಒಂದು ಸಂವತ್ಸರದಲ್ಲಿ ಆ ಸತ್ಯವಂತನೆಂಬ ರಾಜಕುಮಾರನು ಅಲ್ಪಾಯುಸ್ಸಿನಿಂದ ಹೋಗಿಬಿಡುವನೆಂದು ನಾರದರು ಹೇಳಿರುವರು. ಅಂಥವನಲ್ಲಿ ಎಷ್ಟುಗುಣಗಳುತಾನೆ ಇದ್ದರೆ ಏನು ಪ್ರಯೋಜನ? ಈ ಒಂದುದೋಷವು ಎಲ್ಲಾಗುಣಗಳನ್ನೂ ಆಕ್ರಮಿಸಿಕೊಂಡಿರುವದು. ಆದ್ದರಿಂದ ಆತನನ್ನು ಬಿಟ್ಟು ನಿನಗೆ ಅನುರೂಪನಾದ ಮತ್ತೊಬ್ಬ ಪತಿಯನ್ನು ವರಿಸು ನಡೆ' ಎಂದು ಆಜ್ಞಾಪಿಸಿದನು. ಆ ಮಾತನ್ನು ಕೇಳಿ ಸಾವಿತ್ರಿಯು 'ಎಲೈ ತಂದೆಯೆ, ಕಲ್ಲುಮೊದಲಾದವುಗಳು ಒಂದೇ ಆವರ್ತಿ ಭಾಗವಾಗುವವು. ಕನ್ಯೆಯಾದವಳು ಒಂದೇ ಆವರ್ತಿ ಪತಿಯನ್ನು ವರಿಸುವಳು. ದಾತನು ದಾನವನ್ನು ಕೊಡುತ್ತೇನೆಂದು ಒಂದಾವರ್ತಿಯೇ ಹೇಳುವನು. ಈ ಮೂರೂ ಒಂದೊಂದಾವರ್ತಿಯೇ ಹೊರತು ಎರಡಾವರ್ತಿ ಆಗತಕ್ಕವುಗಳಲ್ಲ. ಆದ್ದರಿಂದ ಸತ್ಯವಂತನು ದೀರ್ಘಾಯುವಾಗಲಿ ಅಲ್ಪಾಯುವಾಗಲಿ, ಗುಣವಂತನೇ ಆಗಲಿ ನಿರ್ಗುಣನೇ ಆಗಲಿ, ಆತನನ್ನು ವರಿಸಿದ ನಾನು ಆತನನ್ನು ಬಿಟ್ಟು ಎರಡನೆಯವನನ್ನು ವರಿಸತಕ್ಕವಳಲ್ಲ. ಯಾವದೂ ಮನಸ್ಸಿನಲ್ಲಿ ನಿಶ್ಚಯಿಸಿಕೊಂಡೇ ಬಾಯಲ್ಲಿ ಹೊರಡುವದು. ಬಳಿಕ ಅದೇ ಕಾರ್ಯತಃ ಮಾಡಲ್ಪಡುವದು. ಆದ್ದರಿಂದ ಸರ್ವಕ್ಕೂ ಮನೋನಿಶ್ಚಯವೇ ಪ್ರಮಾಣವಾದದ್ದು' ಎಂದಳು. ಆ ಮಾತನ್ನು ಕೇಳಿ ನಾರದರು 'ಎಲೈ ರಾಯನೆ, ನಿನ್ನ ಮಗಳ ಬುದ್ಧಿಯು ಸ್ಥಿರವಾದದ್ದು. ಆ ಬುದ್ಧಿಯನ್ನು ಮತ್ತೊಂದುಪ್ರಕಾರ ತಿರುಗಿಸುವದಕ್ಕೆ ಆಗುವದಿಲ್ಲ. ಆದರೆ ಸತ್ಯವಂತನಲ್ಲಿರುವ ಗುಣಗಳು ಇನ್ಯಾರಲ್ಲೂ ಇಲ್ಲವಾದಕಾರಣ, ನಿನ್ನ ಮಗಳಾದ ಸಾವಿತ್ರಿಯನ್ನು ಆತನಿಗೆ ಕೊಡುವದು ಯುಕ್ತವಾದದ್ದೆಂದು ನನ್ನ ಮನಸ್ಸಿಗೆ ತೋರುವದು' ಎನಲು, ಆ ಮಾತನ್ನುಕೇಳಿ ಅಶ್ವಪತಿಯು 'ಎಲೈ ಮಹಾತ್ಮನೆ, ನನ್ನಮಗಳ ಬುದ್ಧಿಯನ್ನು ಮತ್ತೊಂದು ಪ್ರಕಾರ ತಿರುಗಿಸುವದಕ್ಕೆ ಆಗುವದಿಲ್ಲವೆಂದು ನೀನು ಹೇಳಿದ್ದು ಯಥಾರ್ಥವಾದದ್ದು. ನೀನು ನನಗೆ ಗುರುವು. ನಿನ್ನ ಅಪ್ಪಣೆಯಾದಂತೆ ಸಾವಿತ್ರಿಯನ್ನು ಸತ್ಯವಂತನಿಗೆ ಕೊಡುವೆನು' ಎಂದನು. ಬಳಿಕ ನಾರದರು 'ಎಲೈ ರಾಯನೆ, ನಿನ್ನ ಮಗಳವಿವಾಹವು ನಿರ್ವಿಘ್ನವಾಗಿ ಬೆಳೆಯಲಿ, ಇನ್ನು ನಾನು ಹೋಗಿಬರುವೆನು. ನಿಮಗೆಲ್ಲಾ ಮಂಗಳವಾಗಲಿ' ಎಂದು ನುಡಿದು, ಆಕಾಶಮಾರ್ಗದಲ್ಲಿ ತೆರಳಿದನು. ಅನಂತರದಲ್ಲಿ ಅಶ್ವಪತಿಯು ತನ್ನ ಮಗಳ ವಿವಾಹಕ್ಕೋಸ್ಕರ ಮುಸ್ತೈದುಗಳನ್ನು ಸಿದ್ಧಪಡಿಸಿದನು" ಎಂದು ಮಾರ್ಕಂಡೇಯನು ಧರ್ಮರಾಯನಿಗೆ ಹೇಳಿದನು.

---

## ೨೯೫ನೇ ಅಧ್ಯಾಯ.—ಸಾವಿತ್ರ್ಯುಪಾಖ್ಯಾನ—(ಸಾವಿತ್ರಿಗೂ ಸತ್ಯವಂತನಿಗೂ ವಿವಾಹ.)

ವೈಶಂಪಾಯನಮುನೀಂದ್ರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಮಾರ್ಕಂಡೇಯನು ಧರ್ಮರಾಯನನ್ನು ಕುರಿತು "ಕೇಳು ಧರ್ಮರಾಯನೆ, ಅನಂತರದಲ್ಲಿ ಅಶ್ವಪತಿಯು ಸಾವಿತ್ರಿಯ ವಿವಾಹಾರ್ಥವಾಗಿ ಸಕಲ ಸಾಮಗ್ರಿಗಳನ್ನೂ ಸಿದ್ಧಪಡಿಸಿಕೊಂಡು, ವೃದ್ಧರಾದ ಬ್ರಾಹ್ಮಣರನ್ನೂ ಋತ್ವಿಕ್ಪುರೋಹಿತರನ್ನೂ ಕರೆಯಿಸಿ, ಶುಭವಾದ ದಿವಸದಲ್ಲಿ ತನ್ನ ಪುತ್ರಿಯನ್ನು ಕರೆದುಕೊಂಡು ರಾಜರ್ಷಿಯಾದ ದ್ಯುಮತ್ಸೇನನ ಆಶ್ರಮವನ್ನು ಪ್ರವೇಶಿಸಿ, ಅಲ್ಲೊಂದು ಮರದಡಿಯಲ್ಲಿ ದರ್ಭಾಸನವನ್ನು ಹಾಸಿಕೊಂಡು ಕುಳಿತುಕೊಂಡಿರುವ ಮಹಾತಪಸ್ವಿಯಾದ ಅಂಧನಾದ ದ್ಯುಮತ್ಸೇನನನ್ನು ಕಂಡು, ಆತನಿಗೆ ಮರ್ಯಾದಾನುಸಾರವಾಗಿ ಸತ್ಕಾರ

ವನ್ನು ಮಾಡಿ, ವಾಜ್ಞೆಯುಮದಿಂದ ನಾನು ಅಶ್ವಪತಿಯೆಂದು ಆತನಿಗೆ ಹೇಳಿದನು. ಬಳಿಕ ಧರ್ಮಜ್ಞನಾದ ದ್ಯುಮತ್ಸೇನನು ಅಶ್ವಪತಿಗೆ ಆತನ ಮರ್ಯಾದಾನುಸಾರವಾಗಿ ಅರ್ಘ್ಯಪಾದ್ಯಾದಿಗಳಿಂದ ಸತ್ಕಾರಮಾಡಿ 'ಎಲೈ ಅಶ್ವಪತಿಯೆ, ಯಾವ ನಿಮಿತ್ತದಿಂದ ನೀನು ಇಲ್ಲಿಗೆ ಬಂದೆ ?' ಎಂದು ಕೇಳಲು ; ಅಶ್ವಪತಿಯು 'ಎಲೈ ರಾಜರ್ಷಿಯೆ, ನಿನ್ನ ಮಗನಾದ ಸತ್ಯವಂತನಿಗೆ ನನ್ನ ಮಗಳಾದ ಸಾವಿತ್ರಿಯನ್ನು ಕೊಟ್ಟು ವಿವಾಹ ಮಾಡಿಕೊಡಬೇಕೆಂದು ನನ್ನ ಅಭಿಪ್ರಾಯವಿರುವದು. ಆಕೆಯನ್ನು ನೀನು ಸೊಸೆಯನ್ನಾಗಿ ಮಾಡಿಕೊಳ್ಳಬೇಕು' ಎಂದನು. ಆದಕ್ಕೆ ದ್ಯುಮತ್ಸೇನನು 'ಎಲೈರಾಯನೆ, ನಾವು ರಾಜ್ಯಭ್ರಷ್ಟರಾಗಿ ವನಕ್ಕೆ ಬಂದು ವಾನಪ್ರಸ್ಥಧರ್ಮದಲ್ಲಿದ್ದುಕೊಂಡು ತಪಸ್ಸನ್ನು ಮಾಡುತ್ತಿರುವೆವು. ನಿನ್ನ ಮಗಳಾದ ಸಾವಿತ್ರಿಯು ವನವಾಸಕ್ಕೆ ತಕ್ಕವಳಲ್ಲವಾದ್ದರಿಂದ ಈ ಆಶ್ರಮಕ್ಲೇಶಗಳನ್ನು ಹ್ಯಾಗೆ ಸಹಿಸಿಯಾಳು ?' ಎಂದು ನುಡಿದನು. ಬಳಿಕ ಅಶ್ವಪತಿಯು 'ಎಲೈ ರಾಜರ್ಷಿಯೆ, ಯಾವಯಾವ ಕಾಲದಲ್ಲಿ ಸುಖದುಃಖಗಳೂ ಜನನಮರಣಗಳೂ ಆಗಬೇಕೋ ಆಯಾ ಕಾಲದಲ್ಲಿ ಅವುಗಳು ಆಗದೇ ತಪ್ಪುವದಿಲ್ಲ. ಇದನ್ನು ನಾನೂ ನನ್ನ ಮಗಳೂ ಸಹ ತಿಳಿದಿರುವೆವು. ನೀನು ಇಂಥಮಾತುಗಳನ್ನು ಆಡಕೂಡದು. ಅದನ್ನೆಲ್ಲಾ ನಾನು ನಿಶ್ಚಯಿಸಿಕೊಂಡೇ ಇಲ್ಲಿಗೆ ಬಂದಿರುವೆನು. ನನ್ನ ಮನೋರಥವನ್ನು ನೀನು ಪ್ರೀತಿಯಿಂದಲೂ ಸ್ನೇಹದಿಂದಲೂ ಸಫಲಮಾಡುವನೆಂದು ತಿಳಿದು ನಾನು ಇಲ್ಲಿಗೆ ಬಂದಿರುವೆನು. ನನ್ನ ಮಾತನ್ನು ನೀನು ನಿರಾಕರಿಸಬೇಡ. ನಮಗೆ ಸಂಬಂಧವು ಅನುರೂಪವಾಗಿರುವದು. ನನ್ನ ಮಗಳನ್ನು ನಿನ್ನ ಸೊಸೆಯನ್ನಾಗಿ ಮಾಡಿಕೊಳ್ಳಬೇಕು' ಎನಲು, ದ್ಯುಮತ್ಸೇನನು 'ಎಲೈ ಅಶ್ವಪತಿಯೆ, ಪೂರ್ವದಲ್ಲೇ ನಿನ್ನ ಸಂಬಂಧವನ್ನು ಮಾಡಬೇಕೆಂದು ನಾನು ಅಪೇಕ್ಷಿಸಿದ್ದೆನು. ಈಗ ನಾನು ರಾಜ್ಯಭ್ರಷ್ಟನಾಗಿರುವಕಾರಣ ಇಷ್ಟುವಿಚಾರವನ್ನು ಮಾಡಿದೆನು. ನಿನಗೆ ಹೀಗೆಯೇ ಇಷ್ಟವಿದ್ದರೆ, ನನಗೂ ಅದು ಸಮ್ಮತವಾದದ್ದೇ, ಹಾಗೆಯೇ ನೀನು ನಡಿಸಬಹುದು. ನನಗೆ ನೀನು ಇಷ್ಟನಾದ ಅತಿಥಿಯು' ಎಂದು ನುಡಿದು ; ಆ ಆಶ್ರಮದಲ್ಲಿದ್ದ ಬ್ರಾಹ್ಮಣರನ್ನು ಕರೆತರಿಸಿ ವಿಧ್ಯುಕ್ತವಾಗಿ ಸತ್ಯವಂತನಿಗೂ ಸಾವಿತ್ರಿಗೂ ವಿವಾಹಮಹೋತ್ಸವವನ್ನು ಬೆಳಸಿದನು. ಆಗ ಅಶ್ವಪತಿಯು ಕನ್ಯಾದಾನವನ್ನು ಮಾಡಿ, ಕನ್ಯೆಗೆ ಬೇಕಾದ ಬಲುವಳಿಗಳನ್ನು ಕೊಟ್ಟು, ಸಂತೋಷದಿಂದ ತನ್ನರಾಜಧಾನಿಗೆ ಹೊರಟುಹೋದನು. ಬಳಿಕ ಸತ್ಯವಂತನು ಸಕಲಗುಣಪೂರ್ಣಳಾದ ಪತ್ನಿಯನ್ನು ಸೇರಿ ಆಕೆಯೊಡನೆ ಅಧಿಕವಾಗಿ ಸಂತೋಷಪಡುತ್ತಿದ್ದನು. ಸಾವಿತ್ರಿಯೂ ತನ್ನ ಮನಸ್ಸಿನಲ್ಲಿ ನಿಶ್ಚಯಿಸಿಕೊಂಡಿದ್ದ ಗಂಡನನ್ನು ಹೊಂದಿ ಬಹಳವಾಗಿ ಸಂತೋಷಪಡುತ್ತ, ತಮ್ಮ ತಂದೆಯು ರಾಜಧಾನಿಗೆ ಹೊರಟುಹೋದಬಳಿಕ ತಾನು ಧರಿಸಿದ್ದ ಆಭರಣಗಳನ್ನೆಲ್ಲಾ ತೆಗದಿಟ್ಟು, ನಾರುಮಡಿಯನ್ನುಟ್ಟುಕೊಂಡು, ಅತ್ತೆಯನ್ನು ಸ್ನಾನಪಾನಾಚ್ಛಾದನಗಳಿಂದಲೂ, ಮಾವನನ್ನು ವಾಜ್ಞೆಯುಮದಿಂದ ದೇವತೆಗಳನ್ನು ಸತ್ಕರಿಸುವಂತೆ ಸತ್ಕರಿಸುವದರಿಂದಲೂ, ಗಂಡನನ್ನು ಪ್ರಿಯವಾದ ಮಾತುಗಳಿಂದಲೂ, ಶಮದಮಾದಿಗುಣಗಳಿಂದಲೂ, ಏಕಾಂತೋಪಚಾರಗಳಿಂದಲೂ ಮತ್ತು ತಪಸ್ವಿಗಳಾದ ಅವರವರ ಇಷ್ಟಾನುಸಾರವಾಗಿ ನಡೆಯುವದರಿಂದಲೂ, ತನ್ನ ಸುಶೀಲ್ಯಾದಿಗುಣಗಳಿಂದಲೂ ಅವರನ್ನು ಸಂತೋಷಪಡಿಸುತ್ತ, ನಾರದರು ಹೇಳಿದ್ದ ಮಾತನ್ನು ಮನಸ್ಸಿನಲ್ಲೇ ಇಟ್ಟುಕೊಂಡು ಅಹೋರಾತ್ರವೂ ಚಿಂತಿಸುತ್ತ, ಕೆಲವು ಕಾಲವನ್ನು ಕಳೆದಳು" ಎಂದು ಮಾರ್ಕಂಡೇಯನು ಧರ್ಮರಾಯನಿಗೆ ಹೇಳಿದನು.

## ೨೯೫ನೇ ಅಧ್ಯಾಯ.—ಸಾವಿತ್ರ್ಯುಪಾಖ್ಯಾನ—(ಸಾವಿತ್ರಿಯು ಸತ್ಯವಂತನ ಜೊತೆಯಲ್ಲಿ ವನಕ್ಕೆ ಹೋದದ್ದು)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಮಾರ್ಕಂಡೇಯರು ಧರ್ಮರಾಯನನ್ನು ಕುರಿತು "ಎಲೈ ಧರ್ಮರಾಯನೆ ಕೇಳು. ಈ ಪ್ರಕಾರ ಸಾವಿತ್ರಿಯು ತಪಸ್ವಿಗಳಾದ ಅತ್ತೆಮಾವಂದಿರನ್ನೂ ಗಂಡನನ್ನೂ ಸೇವಿಸುತ್ತ ಕೆಲವು ಕಾಲವನ್ನು ಕಳೆಯಲು, ಬಳಿಕ ಸತ್ಯವಂತನಿಗೆ ಮರಣಕಾಲವು ಪ್ರಾಪ್ತವಾಯಿತು. ಸಾವಿತ್ರಿಯು ನಾರದರು ಹೇಳಿದ್ದಪ್ರಕಾರ ದಿವಸಗಳನ್ನು ಎಣಿಸುತ್ತ, ಇನ್ನು ನಾಲ್ಕನೆಯ ದಿವಸದಲ್ಲಿ ತನ್ನ ಪತಿಯು ಮರಣವನ್ನು ಹೊಂದುವನೆಂದು ಆಲೋಚಿಸಿ, ಮೂರು ರಾತ್ರಿ ಮಾಡತಕ್ಕ ಒಂದು ವ್ರತವನ್ನು ಉದ್ದೇಶಿಸಿ, ಅಹೋರಾತ್ರವೂ ನಿದ್ರಾಹಾರಗಳಿಲ್ಲದೆ ನೇಮದಿಂದಿದ್ದಳು.

ನಿರಾಹಾರಳಾಗಿ ತನ್ನ ಸೊಸೆಯು ನಿಯಮದಿಂದಿರುವದನ್ನು ಕೇಳಿ ದ್ಯುಮತ್ಸೇನನು ವ್ಯಸನಪಡುತ್ತ, ಆಕೆಯನ್ನು ಒಳ್ಳೇಮಾತುಗಳಿಂದ ಸಮಾಧಾನಮಾಡುತ್ತ 'ಎಲೌ ರಾಜಪುತ್ರಿಯೆ, ನೀನು ಕಠಿನವಾದ ವ್ರತವನ್ನು ಆಚರಿಸುವದಕ್ಕೆ ಉಪಕ್ರಮ ಮಾಡಿರುವೆಯಲ್ಲಾ! ಮೂರುದಿವಸ ಉಪವಾಸಮಾಡತಕ್ಕದ್ದು ಅಶಕ್ಯವು!' ಎನಲು, ಸಾವಿತ್ರಿಯು 'ಪೂಜ್ಯರೆ ಈ ವಿಷಯದಲ್ಲಿ ತಾವು ಸಂತಾಪಪಡತಕ್ಕ ಕೆಲಸವಿಲ್ಲ. ನಾನು ಒಂದು ನಿಮಿತ್ತದಿಂದ ಈ ವ್ರತಕ್ಕೆ ಯತ್ನಿಸಿರುವೆನು. ನಾನು ಈ ವ್ರತವನ್ನು ಸಮಾಪ್ತಿಮಾಡಿ ಬಿಡತಕ್ಕವಳು' ಎಂದು ನುಡಿದಳು. ಆ ಮಾತನ್ನು ಕೇಳಿ ದ್ಯುಮತ್ಸೇನನು 'ಎಲೆ ಮಗಳೆ, ನೀನು ಆಚರಿಸತಕ್ಕ ವ್ರತವನ್ನು ಬಿಡು ಎಂದು ನಾನು ಹೇಳುವದಕ್ಕೆ ಸಮರ್ಥನಲ್ಲ. ಆಚರಿಸತಕ್ಕ ವ್ರತವನ್ನು ಕೊನೆಗೂ ನೆರವೇರಿಸಬೇಕೆಂತಲೇ ನಮ್ಮಂಥವರು ಹೇಳುವದು ಯುಕ್ತವಾದದ್ದೇ ಹೊರತು ಅದಕ್ಕೆ ವಿಘ್ನವಾಗಿ ನುಡಿಯತಕ್ಕದ್ದು ಧರ್ಮವಲ್ಲ' ಎಂದು ಹೇಳಿ ಸುಮ್ಮನಾದನು. ಬಳಿಕ ಸಾವಿತ್ರಿಯು ಮರುದಿವಸ ಗಂಡನು ಮೃತನಾಗುವನಲ್ಲಾ ಎಂದು ದುಃಖಪಡುತ್ತ ಕಾಷ್ಠಭೂತಳಾಗಿ ನಿಂತಳು. ಹಾಗೆಯೇ ಆ ರಾತ್ರಿ ಕಳೆದು ಪ್ರಾತಃಕಾಲವಾಗಲು, ಸಾವಿತ್ರಿಯು ಆ ದಿವಸ ತನ್ನ ಪತಿಗೆ ಮರಣವು ಸಂಭವಿಸುವದಲ್ಲಾ ಎಂದು ಬಹಳವಾಗಿ ಚಿಂತಿಸುತ್ತ, ಸೂರ್ಯನು ಉದಯಿಸಿ ಒಂದುಮಾರು ಮೇಲಕ್ಕೆ ಬರಲು ಸ್ನಾನಮಾಡಿ, ಪೂರ್ವಾಹ್ಣದಲ್ಲಿ ಮಾಡತಕ್ಕ ಕರ್ಮಗಳನ್ನು ನೆರವೇರಿಸಿ, ಹೋಮಕುಂಡದಲ್ಲಿ ಪ್ರಜ್ವಲಿಸುತ್ತಿದ್ದ ಯಜ್ಞೇಶ್ವರನಲ್ಲಿ ಹೋಮಮಾಡಿ, ಬಳಿಕ ವೃದ್ಧರಾದ ಬ್ರಾಹ್ಮಣರಿಗೂ ಅತ್ತೆಮಾವಂದಿರಿಗೂ ವಂದನೆಯನ್ನು ಮಾಡಿ, ಕೈಮುಗಿದುಕೊಂಡು ಭಕ್ತಿಯಿಂದ ಅವರ ಮುಂದೆ ನಿಂತಳು. ಆಗ ತಪೋವನದಲ್ಲಿದ್ದ ತಪಸ್ವಿಗಳಾದ ಬ್ರಾಹ್ಮಣರೂ ಅತ್ತೆಮಾವಂದಿರೂ ಸಹ ನೀನು ದೀರ್ಘಸುಮಂಗಲಿಯಾಗಿರು ಎಂದು ಆಶೀವಾದವನ್ನು ಮಾಡಲು; ಸಾವಿತ್ರಿಯು ಮಹಾತ್ಮರಾದ ತಪಸ್ವಿಗಳು ಆಶೀರ್ವಾದಮಾಡಿದಂತೆಯೇ ಆಗಬೇಕೆಂದು ಧ್ಯಾನಪರಳಾಗಿ, ಪತಿಯ ಮರಣಕಾಲವನ್ನು ನಿರೀಕ್ಷಿಸುತ್ತಲೂ ನಾರದರು ಹೇಳಿದಮಾತನ್ನು ಚಿಂತಿಸುತ್ತಲೂ ಇದ್ದಳು. ಬಳಿಕ ಯಾರೂ ಇಲ್ಲದ ಸ್ಥಳದಲ್ಲಿ ಚಿಂತಾಕ್ರಾಂತಳಾಗಿ ನಿಂತಿರತಕ್ಕ ರಾಜಪುತ್ರಿಯಾದ ಸಾವಿತ್ರಿಯನ್ನು ನೋಡಿ ದ್ಯುಮತ್ಸೇನನು 'ಎಲೌ ರಾಜಕುಮಾರಿಯೆ, ಗುರೂಪದೇಶಕ್ಕೆ ಅನುಸಾರವಾಗಿ ಉಪಕ್ರಮಿಸಿದ ವ್ರತವನ್ನು ನೆರವೇರಿಸಿದೆ. ಇನ್ನು ಪಾರಣೆಯನ್ನು ಮಾಡತಕ್ಕ ಕಾಲವು ಪ್ರಾಪ್ತವಾಗಿರುವದು. ಅದನ್ನು ನೆರವೇರಿಸು' ಎನಲು, ಸಾವಿತ್ರಿಯು 'ಪೂಜ್ಯರೆ, ಸೂರ್ಯನು ಅಸ್ತಂಗತನಾದಬಳಿಕ ನಾನು ಪಾರಣೆಯನ್ನು ಮಾಡಬೇಕೆಂದು ಮನಸ್ಸಿನಲ್ಲಿ ಸಂಕಲ್ಪವನ್ನು ಮಾಡಿಕೊಂಡಿರುವೆನು' ಎಂದು ಮಾತನಾಡುತ್ತಿರಲು, ಆ ಸಮಯದಲ್ಲಿ ಸತ್ಯವಂತನು ಹೆಗಲಮೇಲೆ ಕೊಡಲಿಯನ್ನು ಇಟ್ಟುಕೊಂಡು ಕಾಷ್ಠವನ್ನು ತರುವದಕ್ಕಾಗಿ ಅರಣ್ಯಕ್ಕೆ ಹೊರಟನು. ಅದನ್ನು ನೋಡಿ ಸಾವಿತ್ರಿಯು ಆತನನ್ನು ಕುರಿತು 'ಆರ್ಯಪುತ್ರನೆ, ನೀನೊಬ್ಬನೇ ಅರಣ್ಯಕ್ಕೆ ಹೋಗಬೇಡ. ನಾನು ನಿನ್ನನ್ನು ಅಗಲಿರಲಾರೆನು. ನಾನು ಜೊತೆಯಲ್ಲೇ ಬರುವೆನು' ಎಂದಳು. ಅದಕ್ಕೆ ಸತ್ಯವಂತನು 'ಎಲೆ ಮಂಗಳಾಂಗಿಯೆ, ನೀನು ಎಂದೂ ಅರಣ್ಯದಲ್ಲಿ ಸಂಚಾರಮಾಡಿದವಳಲ್ಲ. ಅರಣ್ಯಮಾರ್ಗವು ಬಹುದುರ್ಗಮವಾದದ್ದು. ನೀನು ವ್ರತೋಪವಾಸದಿಂದ ದುರ್ಬಲಳಾಗಿರುವೆ. ನೀನು ಕಾಲಿನಿಂದ ನಡೆದು ಹ್ಯಾಗೆ ಬರುವೆ' ಎನಲು; ಸಾವಿತ್ರಿಯು 'ಆರ್ಯಪುತ್ರನೆ, ಉಪವಾಸದಿಂದ ನನಗೆ ಶ್ರಮವೂ ಬಳಲಿಕೆಯೂ ಸಹ ಇಲ್ಲ. ನಿನ್ನ ಸಂಗಡ ಬರಬೇಕೆಂದು ಕುತೂಹಲಪಡುತ್ತಿರುವ ನನ್ನನ್ನು ನೀನು ತಡೆಯಬೇಡ' ಎಂದು ನುಡಿದಳು. ಆ ಮಾತನ್ನು ಕೇಳಿ ಸತ್ಯವಂತನು 'ಎಲೆ ಸತಿಯೆ, ನನ್ನ ಸಂಗಡ ಬರಬೇಕೆಂದು ನಿನಗೆ ಉತ್ಸಾಹವಿದ್ದರೆ ಅತ್ತೆಮಾವಂದಿರಿಗೆ ಹೇಳಿ ಬಾ. ಆ ಮೇಲೆ ನನ್ನ ತಪ್ಪೇನೂ ಇರುವದಿಲ್ಲ. ನಿನ್ನನ್ನು ಪ್ರೀತಿಯಿಂದ ಕರೆದುಕೊಂಡು ಹೋಗುವೆನು' ಎಂದನು. ಬಳಿಕ ಸಾವಿತ್ರಿಯು ಅತ್ತೆಮಾವಂದಿರ ಬಳಿಗೆ ಹೋಗಿ 'ಪೂಜ್ಯರೆ, ನನ್ನ ಪತಿಯು ಫಲಾದಿಗಳನ್ನು ತರುವದಕ್ಕಾಗಿ ಅರಣ್ಯಕ್ಕೆ ಹೋಗುತ್ತಿರುವನು. ತಮ್ಮ ಆಜ್ಞೆಯಾದರೆ ನಾನೂ ಆತನ ಸಂಗಡ ಹೋಗಿಬರುತ್ತೇನೆ. ಆತನನ್ನು ಅಗಲಿ ನಾನಿರಲಾರೆನು. ಅಗ್ನಿಹೋತ್ರದ ಸಾಮಗ್ರಿಯನ್ನು ತರುವದಕ್ಕಾಗಿ ನಿಮ್ಮ ಮಗನು ಹೊರಟಿರುವನು. ಅದಕ್ಕೆ ಹೋಗಬೇಡವೆಂದು ಅಡ್ಡಿಮಾಡತಕ್ಕದ್ದು ಯುಕ್ತವಲ್ಲ. ಇಲ್ಲದಿದ್ದರೆ ಹೋಗಬೇಡವೆಂದು ತಡೆಯಬಹುದು. ನಿಮ್ಮ ಆಶ್ರಮಕ್ಕೆ ಬಂದು ನಾನು ಒಂದು ವರ್ಷಕ್ಕೆ ಸ್ವಲ್ಪ ಕಡಮೆಯಾಗಿರುವದು. ಆ ಮೊದಲುಗೊಂಡು ನಾನೆಂದೂ ಈ ಆಶ್ರಮವನ್ನು ಬಿಟ್ಟು ಆಚೆಗೆ ಹೋದವಳಲ್ಲ. ಈಗ ಅರಣ್ಯದಲ್ಲಿ ಹೂವುಬಿಟ್ಟಿರತಕ್ಕ

ಬಗಬಗೆಯಾದ ಗಿಡಗಳನ್ನು ನೋಡಬೇಕೆಂದು ನನಗೆ ಕುತೂಹಲವುಂಟಾಗಿರುವದು' ಎಂದು ಪ್ರಾರ್ಥಿಸಲು, ಈ ಸಾವಿತ್ರಿಯು ತಂದೆಯ ಮನೆಯಿಂದ ಆಶ್ರಮಕ್ಕೆ ಬಂದದ್ದು ಮೊದಲುಗೊಂಡು ಈವರೆಗೂ ಹೀಗೆ ಪ್ರಾರ್ಥಿಸಿದವಳಲ್ಲವಾದ್ದರಿಂದ ಈಕೆಯ ಅಪೇಕ್ಷೆಯಿದ್ದಂತೆ ಆಗಲೆಂದು ಮನಸ್ಸಿನಲ್ಲಿ ಆಲೋಚಿಸಿ, 'ಎಲೆ ಮಗಳೆ, ನಿನ್ನ ಗಂಡನು ಹೋಗತಕ್ಕ ಮಾರ್ಗದಲ್ಲಿ ನೀನು ಮೈಮರೆಯದೆ ಎಚ್ಚರವಾಗಿರು' ಎಂದು ದ್ಯುಮತ್ಸೇನನೂ ಆತನ ಪತ್ನಿಯೂ ಸಹ ಆಜ್ಞೆಯನ್ನು ಕೊಟ್ಟರು. ಅನಂತರದಲ್ಲಿ ಸಾವಿತ್ರಿಯು ಸಂತಾಪಪಡುತ್ತಿರುವ ಮನಸ್ಸಿನಿಂದ ಕೂಡಿ ಗಂಡನೊಡನೆ ಅರಣ್ಯಕ್ಕೆ ಹೊರಟು, ಅಲ್ಲಲ್ಲಿ ನವಿಲುಗಳಿಂದ ಅಲಂಕೃತವಾಗಿಯೂ ವಿಚಿತ್ರವಾಗಿಯೂ ರಮಣೀಯವಾಗಿಯೂ ಇರುವ ಅರಣ್ಯಗಳನ್ನು ನೋಡುತ್ತಿದ್ದಳು. ಆಗ ಸತ್ಯವಂತನು 'ಎಲೆ ಪ್ರಿಯಳೆ, ಇಲ್ಲಿರತಕ್ಕ ಪುಣ್ಯತಮವಾದ ನದಿಯನ್ನೂ ಪುಷ್ಪಗಳಿಂದ ಮನೋಹರವಾದ ವೃಕ್ಷಗಳನ್ನೂ ನೋಡು' ಎನಲು, ಆ ಮಾತನ್ನು ಕೇಳಿ ಸಾವಿತ್ರಿಯು ತನ್ನ ಗಂಡನು ಯಾವಯಾವ ಕ್ಷಣದಲ್ಲಿ ಹ್ಯಾಗೆಹ್ಯಾಗೆ ಇರುವನೋ ಅದನ್ನೇ ನೋಡುತ್ತ, ಆತನ ಜೊತೆಯಲ್ಲೇ ಮೆಲ್ಲಗೆ ನಡೆಯುತ್ತ, ನಾರದರ ವಚನವನ್ನು ಸ್ಮರಿಸಿಕೊಂಡು ಗಂಡನನ್ನು ಮೃತನನ್ನಾಗಿಯೇ ಭಾವಿಸಿಕೊಂಡು ಮನಸ್ಸು ಒಡೆದುಹೋಗಿ, ಗಂಡನ ಮರಣಸಮಯವನ್ನೇ ಜಾಗರೂಕಳಾಗಿ ನಿರೀಕ್ಷಿಸುತ್ತಿದ್ದಳು" ಎಂದು ಮಾರ್ಕಂಡೇಯನು ಧರ್ಮರಾಯನಿಗೆ ಹೇಳಿದನು.

## ೨೯೬ನೇ ಅಧ್ಯಾಯ.—ಸಾವಿತ್ರ್ಯುಪಾಖ್ಯಾನ—(ಸತ್ಯವಂತನು ಆಶ್ರಮಕ್ಕೆ ಬರುವಿಕೆ.)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಮಾರ್ಕಂಡೇಯನು ಧರ್ಮರಾಯನನ್ನು ಕುರಿತು "ಎಲೈ ಧರ್ಮರಾಯನೆ, ಅನಂತರದಲ್ಲಿ ಸತ್ಯವಂತನು ಪತ್ನೀಸಹಾಯನಾಗಿ ಅಲ್ಲಲ್ಲಿ ಫಲಗಳನ್ನು ತೆಗೆದುಕೊಂಡು ಬುಟ್ಟಿಯಲ್ಲಿ ತುಂಬಿ, ತನ್ನ ಕೈಯಲ್ಲಿದ್ದ ಕೊಡಲಿಯಿಂದ ಒಣಗಿದ ಸೌದೆಯನ್ನು ಕಡಿದನು. ಅದರಿಂದ ಮಯ್ಯಲ್ಲಿ ಬೆವರು ಹುಟ್ಟಿ ತಲೆನೋವುಂಟಾಯಿತು. ಅದರಿಂದ ಆಯಾಸಪಟ್ಟ ಆತನು ಪತ್ನಿಯಾದ ಸಾವಿತ್ರಿಯನ್ನು ನೋಡಿ 'ಎಲೆ ಸತಿಯೆ, ಈ ಆಯಾಸದಿಂದ ನನಗೆ ತಲೆಯ ಶೂಲೆಯುಂಟಾಗಿ ಮಯ್ಯೆಲ್ಲಾ ನೋಯುತ್ತಿರುವದು. ಮತ್ತು ಹೃದಯದಲ್ಲಿ ಬಹಳ ಸಂಕಟವಾಗುತ್ತಿರುವದು. ಇದರಿಂದ ಏನೋ ನನ್ನ ಶರೀರಕ್ಕೆ ಸ್ವಸ್ಥತೆಯಿಲ್ಲದ ಹಾಗಿರುವದು. ನಿಲ್ಲುವದಕ್ಕೆ ಶಕ್ತಿಯಿಲ್ಲ. ಮಲಗಿಕೊಳ್ಳಬೇಕೆಂದು ಅಪೇಕ್ಷೆಯುಂಟಾಗಿರುವದು' ಎನಲು; ಸಾವಿತ್ರಿಯು ಪತಿಯ ಸಮೀಪಕ್ಕೆ ಬಂದು, ತಾನು ಕೂತುಕೊಂಡು ಆತನ ತಲೆಯನ್ನು ತನ್ನ ತೊಡೆಯಮೇಲಿಟ್ಟುಕೊಂಡು ಆತನನ್ನು ಮಲಗಿಸಿಕೊಂಡು, ನಾರದರು ಹೇಳಿದ ವಾಕ್ಯವನ್ನು ವಿಮರ್ಶೆಮಾಡುತ್ತ, ಆ ಕಾಲವನ್ನೂ ಆ ದಿವಸವನ್ನೂ ಆ ಮುಹೂರ್ತವನ್ನೂ ಆ ಕ್ಷಣವನ್ನೂ ಸಹ ಯೋಚಿಸುತ್ತ, ಅಷ್ಟರಲ್ಲೇ ಕೆಂಪುಬಟ್ಟೆಯನ್ನುಟ್ಟು ಪಾಗನ್ನು ಸುತ್ತಿಕೊಂಡು ಸೂರ್ಯನಂತೆ ಪ್ರಕಾಶಿಸುತ್ತ ಕೆಂಪಾದ ಕಣ್ಣುಗಳುಳ್ಳವನಾಗಿಯೂ ಶ್ಯಾಮವರ್ಣನಾಗಿಯೂ ಕಯ್ಯಲ್ಲಿ ಪಾಶವನ್ನು ಹಿಡಿದು ಭಯಂಕರನಾಗಿಯೂ ಇರುವ ಒಬ್ಬ ಪುರುಷನು ಸತ್ಯವಂತನ ಪಾರ್ಶ್ವದಲ್ಲಿದ್ದು ಆತನನ್ನೇ ನೋಡುತ್ತ ನಿಂತಿರುವದನ್ನು ಕಂಡಳು. ಕೂಡಲೆ ಆ ಸಾವಿತ್ರಿಯು ತನ್ನ ಪತಿಯನ್ನು ತೊಡೆಯಮೇಲಿಂದ ಮೆಲ್ಲಗೆ ಇಳಿಸಿ, ಜಾಗ್ರತೆಯಾಗಿ ಎದ್ದು ಕೈಮುಗಿದುಕೊಂಡು, ಮನಸ್ಸಿನಲ್ಲಿ ನಡುಗುತ್ತ, ದುಃಖಾಕ್ರಾಂತಳಾಗಿ ಆ ಪುರುಷನನ್ನು ಕುರಿತು 'ಎಲೈ ಮಹಾತ್ಮನೆ, ನಿನ್ನನ್ನು ನೋಡಿದರೆ ದೇವತಾಪುರುಷನಂತೆ ಕಾಣಿಸುತ್ತಿರುವೆ. ನಿನ್ನ ಶರೀರವು ಅಮಾನುಷವಾಗಿರುವದು. ನೀನು ಯಾರು? ಯಾತಕ್ಕೋಸ್ಕರ ಇಲ್ಲಿಗೆ ಬಂದಿರುವೆ? ಸ್ವೇಚ್ಛೆಯಿಂದ ಹೇಳು' ಎಂದು ಕೇಳಿಕೊಳ್ಳಲು, ಆ ಪುರುಷನು 'ಎಲೌ ಸಾವಿತ್ರಿಯೆ, ನೀನು ಪತಿವ್ರತೆಯು. ಮತ್ತು ತಪೋನಿಷ್ಠಳು. ಆದ್ದರಿಂದ ನಿನ್ನ ಸಂಗಡ ನಾನು ಮಾತನಾಡುತ್ತೇನೆ. ನನ್ನನ್ನು ಯಮನೆಂದು ತಿಳಿ. ನಿನ್ನ ಗಂಡನಾದ ಈ ಸತ್ಯವಂತನಿಗೆ ಆಯುಸ್ಸು ಕ್ಷೀಣವಾಗಿರುವದರಿಂದ, ಈತನನ್ನು ಪಾಶದಿಂದ ಕಟ್ಟಿ ನಾನು ತೆಗೆದುಕೊಂಡು ಹೋಗುತ್ತೇನೆ. ಇದಕ್ಕೋಸ್ಕರ ನಾನು ಬಂದಿರತಕ್ಕವನು' ಎನಲು, ಸಾವಿತ್ರಿಯು 'ಎಲೈ ಯಮಧರ್ಮನೆ, ಎಲ್ಲಾ ಮನುಷ್ಯರನ್ನೂ ತೆಗೆದುಕೊಂಡು ಹೋಗು

ವದಕ್ಕೆ ನಿನ್ನ ದೂತರು ಬರುವರೆಂದು ನಾನು ಕೇಳಿದೇನೆ. ನನ್ನ ಗಂಡನನ್ನು ಮಾತ್ರ ತೆಗೆದುಕೊಂಡು ಹೋಗುವದಕ್ಕೆ ನೀನೇ ಯಾತಕ್ಕೆ ಬಂದಿರುವೆ?' ಎಂದು ಕೇಳಿದಳು. ಆ ಮಾತನ್ನು ಕೇಳಿ ಯಮನು ಪ್ರೀತಿಯಿಂದ ಸಾವಿತ್ರಿಯನ್ನು ಕುರಿತು 'ಎಲೌ ರಾಜಪುತ್ರಿಯೆ, ನಿನ್ನ ಗಂಡನಾದ ಸತ್ಯವಂತನು ಧರ್ಮಿಷ್ಠನಾಗಿಯೂ ರೂಪವಂತನಾಗಿಯೂ ಗುಣವಂತನಾಗಿಯೂ ಇರುವನು. ಆದ್ದರಿಂದ ಈತನನ್ನು ತೆಗೆದುಕೊಂಡು ಹೋಗುವದಕ್ಕೆ ನನ್ನ ದೂತರು ಯೋಗ್ಯರಲ್ಲವಾದ್ದರಿಂದ ನಾನೇ ಬಂದಿರುವೆನು' ಎಂದು ನುಡಿದು, ಬಳಿಕ ಪಾಶವನ್ನು ಬೀಸಿ, ಅದರಿಂದ ಆತನ ಹೃದಯಾಕಾಶದಲ್ಲಿರತಕ್ಕ ಅಂಗುಷ್ಠಪರಿಮಾಣವುಳ್ಳ ಜೀವನನ್ನು ಬಲಾತ್ಕಾರದಿಂದ ಸೆಳೆದನು. ಆಗ ಸತ್ಯವಂತನ ಶರೀರವು ಪ್ರಾಣವು ಆಚೆಗೆ ಹೋದದ್ದರಿಂದ ಶ್ವಾಸೋಚ್ಛ್ವಾಸಗಳಿಲ್ಲದೆ ಚಲಿಸುವದಕ್ಕೂ ಸಹ ಆಗದೆ ಕಾಂತಿಹೀನವಾಗಿ ಜುಗುಪ್ಸಿತವಾಗಿ ಕಾಣಿಸಿತು. ಬಳಿಕ ಯಮನು ಆ ಜೀವವನ್ನು ಒಯ್ದುಕೊಂಡು ದಕ್ಷಿಣಾಭಿಮುಖವಾಗಿ ಹೊರಡಲು, ಪತಿವ್ರತಾಶಿರೋಮಣಿಯೂ ತಪಸ್ಸಿದ್ಧಳೂ ವ್ರತನಿಯಮನಿಷ್ಠಳೂ ಆದ ಸಾವಿತ್ರಿಯು ದುಃಖಪಡುತ್ತ ಆ ಯಮನ ಹಿಂದೆಯೇ ಹೊರಟಳು. ಆಗ ಆಕೆಯನ್ನು ನೋಡಿ ಯಮನು 'ಎಲೌ ಸಾವಿತ್ರಿಯೆ, ನಡೆ, ಹಿಂತಿರುಗು. ನೀನು ಎಲ್ಲಿನ ವರೆಗೂ ಬರಬೇಕೋ ಅಲ್ಲಿನ ವರೆಗೂ ಬಂದದ್ದಾಯಿತು. ಇದರಿಂದ ನೀನು ಭರ್ತೃಋಣವನ್ನು ತೀರಿಸಿದಹಾಗಾಯಿತು. ಮುಂದೆ ನಿನ್ನ ಗಂಡನ ಶರೀರಕ್ಕೆ ಮಾಡತಕ್ಕ ಗತಿಪ್ರದವಾದ ಉತ್ತರಕ್ರಿಯೆಯನ್ನು ಮಾಡು' ಎಂದನು. ಬಳಿಕ ಸಾವಿತ್ರಿಯು 'ಎಲೈ ಯಮಧರ್ಮರಾಯನೆ, ನನ್ನ ಗಂಡನನ್ನು ತೆಗೆದುಕೊಂಡು ನೀನು ಎಲ್ಲಿಗೆ ಹೋಗುವೆಯೋ ಅಲ್ಲಿಗೇ ನಾನೂ ಬರತಕ್ಕದ್ದು ಸನಾತನವಾದ ಧರ್ಮವು. ಗುರುಭಕ್ತಿಯಿಂದಲೂ ತಪಸ್ಸಿನಿಂದಲೂ ಪತಿಸ್ನೇಹದಿಂದಲೂ ವ್ರತನಿಯಮಾದಿಗಳಿಂದಲೂ ನಿನ್ನನುಗ್ರಹದಿಂದಲೂ ಕೂಡ ನಾನು ನಿನ್ನ ಹಿಂದೆ ಬರುವದಕ್ಕೆ ತಡೆಯಿಲ್ಲದೆ ಇರುವದು. ಎಲೈ ಯಮನೆ, ಜೊತೆಯಲ್ಲಿ ಏಳುಹೆಜ್ಜೆ ನಡೆದುಬಂದವನನ್ನು ಮಿತ್ರನೆಂದು ದೊಡ್ಡವರು ಹೇಳುವರು. ಆದ್ದರಿಂದ ಮಿತ್ರತ್ವವನ್ನು ಇಟ್ಟುಕೊಂಡು ನಾನೊಂದು ಮಾತನ್ನು ಹೇಳುವೆನು ಕೇಳು. ಲೋಕದಲ್ಲಿ ಜಿತೇಂದ್ರಿಯನಾಗದೆ ಇರುವವನು ವನದಲ್ಲೇ ಆಗಲಿ ಗ್ರಾಮದಲ್ಲೇ ಆಗಲಿ ಗೃಹಸ್ಥಧರ್ಮವನ್ನೂ ಬ್ರಹ್ಮಚರ್ಯಧರ್ಮವನ್ನೂ ಸನ್ಯಾಸಧರ್ಮವನ್ನೂ ಆಚರಿಸಲಾರನು. ಜಿತೇಂದ್ರಿಯರಾದವರೇ ಇಂಥ ಧರ್ಮಗಳನ್ನು ಆಚರಿಸಬಲ್ಲರು. ಅಂಥ ಧರ್ಮವು ಆತ್ಮಜ್ಞಾನವನ್ನುಂಟುಮಾಡತಕ್ಕದ್ದಾದ್ದರಿಂದ ಆ ಧರ್ಮವೇ ಮುಖ್ಯವಾದದ್ದೆಂದು ದೊಡ್ಡವರು ಹೇಳುವರು. ಮೇಲೆ ಹೇಳಿದ ಧರ್ಮಗಳಲ್ಲಿ ಬ್ರಹ್ಮಚರ್ಯ, ಸನ್ಯಾಸ, ಈ ಎರಡು ಧರ್ಮಗಳನ್ನು ನಾವು ಅಪೇಕ್ಷಿಸದೆ ಸತ್ಪುರುಷರಿಗೆ ಅಭಿಮತವಾದ ಗೃಹಸ್ಥಧರ್ಮವೊಂದನ್ನೇ ಆಶ್ರಯಿಸಿಕೊಂಡು ಜ್ಞಾನವನ್ನು ಸಂಪಾದಿಸತಕ್ಕವರು. ಆದ್ದರಿಂದ ಈ ಆಶ್ರಮಧರ್ಮವು ದೊಡ್ಡದಾದದ್ದೆಂದು ತಿಳಿದವರು ಹೇಳುವರು. ದಂಪತಿಗಳಾದ ನಮ್ಮಿಬ್ಬರಲ್ಲಿ ನನ್ನ ಪತಿಯನ್ನು ನೀನು ಒಯ್ದುಕೊಂಡು ಹೋಗಿ ನಮ್ಮ ಗೃಹಸ್ಥಧರ್ಮವು ನಷ್ಟವಾಗುವಂತೆ ಮಾಡಬೇಡ' ಎನಲು, ಯಮನು 'ಎಲೌ ಸಾವಿತ್ರಿಯೆ, ನೀನು ಹಿಂತಿರುಗು. ಉದಾತ್ತಾದಿ ಸ್ವರಗಳಿಂದಲೂ ಅಕಾರಾದಿ ಅಜ್ವರ್ಣಗಳಿಂದಲೂ ಕಕಾರಾದಿ ವ್ಯಂಜನವರ್ಣಗಳಿಂದಲೂ ಕೂಡಿ ಹೇತುಗರ್ಭಿತವಾದ ನಿನ್ನ ವಾಕ್ಯದಿಂದ ನಾನು ಸಂತೋಷಪಟ್ಟೆನು. ನಿನ್ನ ಗಂಡನು ಬದುಕಬೇಕೆಂಬುವದು ಹೊರತು ನೀನು ಬೇಕಾದ ವರವನ್ನು ಬೇಡು' ಎಂದನು. ಆ ಮಾತನ್ನು ಕೇಳಿ ಸಾವಿತ್ರಿಯು 'ಎಲೈ ಯಮಧರ್ಮರಾಯನೆ, ನಮ್ಮ ಮಾವನಾದ ದ್ಯುಮತ್ಸೇನನು ರಾಜ್ಯಭ್ರಷ್ಟನಾಗಿಯೂ ನೇತ್ರಹೀನನಾಗಿಯೂ ಇರುವನು. ಆತನು ಸೂರ್ಯನಂತೆ ತೇಜೋವಂತನಾಗಿಯೂ ಚೆನ್ನಾಗಿ ಕಾಣಿಸತಕ್ಕ ಕಣ್ಣುಗಳುಳ್ಳವನಾಗಿಯೂ ಆಗುವಂತೆ ನೀನು ವರವನ್ನು ಕೊಡು' ಎನಲು, ಯಮನು 'ಎಲೌ ನಿರ್ದೋಷಿಯಾದ ಸಾವಿತ್ರಿಯೆ, ನೀನು ಬೇಡಿದಂತೆಯೇ ವರವನ್ನು ಕೊಟ್ಟಿರುವೆನು. ನಿನಗೆ ಮಾರ್ಗಾಯಾಸವು ಬಹಳವಾಗಿರಬಹುದೆಂದು ತೋರುವದು. ಇನ್ನು ನೀನು ಶ್ರಮಪಡಬೇಡ, ಹಿಂದಕ್ಕೆ ನಡೆ' ಎಂದನು. ಬಳಿಕ ಸಾವಿತ್ರಿಯು 'ಎಲೈ ಯಮಧರ್ಮರಾಯನೆ, ಗಂಡನ ಸಮೀಪದಲ್ಲಿರುವ ನನಗೆ ಆಯಾಸವೆಂದರೇನು? ನನ್ನ ಗಂಡನನ್ನು ನೀನೆಲ್ಲಿಗೆ ತೆಗೆದುಕೊಂಡು ಹೋಗುತ್ತೀಯೋ ಅಲ್ಲಿಗೆ ನಾನೂ ಬರುವೆನು. ಅತನಿಗಾದ ಗತಿಯೇ ನನಗೂ ಆಗುವದು. ಸಜ್ಜನರ ಸಹವಾಸವನ್ನು ಸಕೃತ್ತಾದರೂ ಮಾಡುವದು ಉತ್ತಮವಾದದ್ದು. ಬಳಿಕ ಅವರೇ ಮಿತ್ರರಾಗುವರು. ಅಂಥ ಸತ್ಪುರುಷರ ಸಹವಾಸವು ಎಂದಿಗೂ ನಿಷ್ಫಲ

ವಾಗತಕ್ಕದ್ದಲ್ಲವಾದ್ದರಿಂದ ಅವರ ಸಹವಾಸವು ದೊರಕಿದಾಗ ಅದನ್ನು ಬಿಡುವದುಂಟೆ?' ಎನಲು, ಯಮನು 'ಎಲೌ ಸಾವಿತ್ರಿಯೆ, ನೀನು ಹೇಳಿದ ಮಾತುಗಳು ಮನಸ್ಸಿಗೆ ಸಂತೋಷಕರವಾಗಿಯೂ ಹಿತಕರವಾಗಿಯೂ ದೊಡ್ಡವರಿಗೂ ಸಹ ಜ್ಞಾನವನ್ನು ವೃದ್ಧಿಪಡಿಸತಕ್ಕದ್ದಾಗಿಯೂ ಇರುವದು. ಆದ್ದರಿಂದ ನಿನ್ನ ಗಂಡನಾದ ಸತ್ಯವಂತನು ಬದುಕುವದು ಹೊರತು ನಿನಗೆ ಬೇಕಾದ ಎರಡನೆಯ ವರವನ್ನು ಬೇಡು' ಎಂದನು. ಆ ಮಾತನ್ನು ಕೇಳಿ ಸಾವಿತ್ರಿಯು 'ಎಲೈ ಯಮಧರ್ಮರಾಯನೆ, ನಮ್ಮ ಮಾವನು ಮೊದಲು ಕಳೆದುಕೊಂಡ ರಾಜ್ಯವನ್ನು ತಿರುಗಿ ಪಡೆದು ಸ್ವಧರ್ಮವನ್ನು ಬಿಡದಿರುವಂತೆ ಎರಡನೆಯ ವರವನ್ನು ಅನುಗ್ರಹಿಸು' ಎನಲು, ಯಮನು 'ಎಲೌ ರಾಜಪುತ್ರಿಯೆ, ನಿಮ್ಮ ಮಾವನು ಪುನಃ ತನ್ನ ರಾಜ್ಯವನ್ನು ಪಡೆದುಕೊಳ್ಳುವನು. ಸ್ವಧರ್ಮದಲ್ಲೇ ಇರುವನು. ನಿನ್ನ ಮನೋರಥವು ಪೂರ್ಣವಾಯಿತಷ್ಟೆ? ಬಹುದೂರ ಬಂದೆ. ಇನ್ನು ಹಿಂತಿರುಗು ನಡೆ' ಎಂದನು. ಬಳಿಕ ಸಾವಿತ್ರಿಯು 'ಎಲೈ ಯಮಧರ್ಮರಾಯನೆ, ಎಲ್ಲಾ ಜನಗಳನ್ನೂ ಕ್ಲಪ್ತವನ್ನು ಮೀರದೆ ತೆಗೆದುಕೊಂಡು ಹೋಗಿ ಅವರು ಮಾಡಿದ ದುಷ್ಕರ್ಮಗಳಿಗೆ ಯಾತನಾರೂಪವಾದ ಫಲವನ್ನೂ ಸತ್ಕರ್ಮಗಳಿಗೆ ತಕ್ಕ ಶುಭಫಲಗಳನ್ನೂ ಕೊಡತಕ್ಕವನಾದ್ದರಿಂದ ನೀನು ಯಮಧರ್ಮರಾಯನೆಂದು ಪ್ರಸಿದ್ಧನಾಗಿರುವೆ. ಆದರೆ ನನ್ನ ವಿಜ್ಞಾಪನೆಯನ್ನು ಲಾಲಿಸು. ಲೋಕದಲ್ಲಿ ಸಕಲಪ್ರಾಣಿಗಳಲ್ಲಿಯೂ ಕರ್ಮದಿಂದಲೂ ಮನಸ್ಸಿನಿಂದಲೂ ವಾಕ್ಕಿನಿಂದಲೂ ಸಹ ದ್ರೋಹವಿಲ್ಲದೆ ದಯೆಯನ್ನೂ ದಾನವನ್ನೂ ಮಾಡುವದು ಸಜ್ಜನರಿಗೆ ಸನಾತನವಾದ ಧರ್ಮವು. ನಮ್ಮಂಥವರು ಅಲ್ಪಾಯುಗಳಾಗಿಯೂ ಶಕ್ತಿಹೀನರಾಗಿಯೂ ಚಾತುರ್ಯವಿಲ್ಲದವರಾಗಿಯೂ ಇರುವೆವು. ಸಜ್ಜನರಾದವರು ಶತ್ರುಗಳಾದರೂ ತಮಗೆ ಶರಣಾಗತರಾದರೆ ಅವರಲ್ಲಿ ದಯೆಯನ್ನು ಮಾಡುವರು. ಅಂಥವರು ನಮ್ಮಂಥ ದೀನರಲ್ಲಿ ದಯೆಯನ್ನು ಮಾಡದಿರುವರೆ?' ಎನಲು, ಯಮನು 'ಎಲೌ ಸಾವಿತ್ರಿಯೆ, ನಿನ್ನ ಮಾತನ್ನು ಕೇಳಿದ್ದೇ ಆದರೆ ಬಾಯಾರಿದ ಮನುಷ್ಯನು ಶೀತೋದಕವನ್ನು ಕುಡಿದರೆ ಹ್ಯಾಗೆ ತೃಪ್ತಿಯಾಗುವದೋ ಹಾಗೆ ಮನಸ್ಸಿಗೆ ತೃಪ್ತಿಯಾಗುವದು. ನಿನ್ನ ಗಂಡನು ಬದುಕುವದು ಹೊರತು ನಿನಗೆ ಬೇಕಾದ ಇನ್ನೊಂದು ವರವನ್ನು ಬೇಡು' ಎನಲು, ಸಾವಿತ್ರಿಯು 'ಎಲೈ ಯಮಧರ್ಮರಾಯನೆ, ನಮ್ಮ ತಂಬೆಯಾದ ಅಶ್ವಪತಿಯು ಪುತ್ರಸಂತಾನವಿಲ್ಲದೆ ಇರುವನು. ಆತನಿಗೆ ವಂಶಾಭಿವೃದ್ಧಿಕರರಾದ ನೂರುಮಂದಿ ಔರಸಪುತ್ರರಾಗುವಂತೆ ವರವನ್ನು ಕೊಡು' ಎನಲು, ಯಮನು 'ಎಲೌ ರಾಜಪುತ್ರಿಯೆ, ನೀನು ಅಪೇಕ್ಷಿಸಿದಂತೆ ವಂಶವನ್ನು ವೃದ್ಧಿಪಡಿಸತಕ್ಕ ನೂರುಮಂದಿ ಪುತ್ರರಾಗುವರು. ನಿನ್ನ ಅಭಿಲಾಷೆಯು ನೆರವೇರಿತಷ್ಟೆ? ಇನ್ನು ಹಿಂತಿರುಗು. ನಿನಗೆ ಬಹಳ ಶ್ರಮವಾಯಿತು' ಎಂದನು. ಬಳಿಕ ಸಾವಿತ್ರಿಯು 'ಎಲೈ ಯಮಧರ್ಮರಾಯನೆ, ಪತಿಯ ಸಂಗಡ ಬರುತ್ತಿರುವ ನನಗೆ ದೂರವೆಂದರೇನು? ನನ್ನ ಮನಸ್ಸಾದರೊ ಬಹುದೂರವಾಗಿ ಓಡುತ್ತಿರುವದು. ನೀನು ನಡೆಯುತ್ತಲೇ ನಾನು ವಿಜ್ಞಾಪಿಸಿಕೊಳ್ಳುವ ಮಾತುಗಳನ್ನು ಲಾಲಿಸು. ನೀನು ಪ್ರತಾಪಶಾಲಿಯಾದ ಸೂರ್ಯನಿಗೆ ಪುತ್ರನಾದ್ದರಿಂದ ನಿನ್ನನ್ನು ವೈವಸ್ವತನೆಂದು ದೊಡ್ಡವರು ಹೇಳುವರು. ನಿನ್ನ ಧರ್ಮಕ್ಕೆ ಅನುಸಾರವಾದ ಆಜ್ಞೆಗೆ ಕಟ್ಟುಬಿದ್ದು ಸಕಲರೂ ನಡೆಯುವರಾದ್ದರಿಂದ ನೀನು ಧರ್ಮರಾಜನೆಂದು ಪ್ರಸಿದ್ಧಿಯನ್ನು ಪಡೆದಿರುವೆ. ನೀನು ಸತ್ಪುರುಷರಲ್ಲಿ ಎಷ್ಟು ವಿಶ್ವಾಸವನ್ನು ಮಾಡುವೆಯೋ ಅಷ್ಟು ವಿಶ್ವಾಸವನ್ನು ನಿನ್ನ ಶರೀರದಲ್ಲಿ ನೀನು ಮಾಡಿಕೊಳ್ಳತಕ್ಕವನಲ್ಲ. ಆದ್ದರಿಂದ ಎಲ್ಲರೂ ನಿನ್ನನ್ನು ವಿಶೇಷವಾಗಿ ಪ್ರಾರ್ಥಿಸುವರು. ಸಾಮಾನ್ಯವಾಗಿ ಜನಗಳಿಗೆ ಸಕಲಪ್ರಾಣಿಗಳಲ್ಲಿಯೂ ಸ್ನೇಹದಿಂದ ವಿಶ್ವಾಸವುಂಟಾಗುವದು. ಸತ್ಪುರುಷರಲ್ಲಿ ವಿಶೇಷವಾಗಿ ವಿಶ್ವಾಸವುಂಟಾಗುವದೆಂದು ಹೇಳತಕ್ಕದ್ದೇನು?' ಎನಲು, ಆ ಮಾತನ್ನು ಕೇಳಿ ಯಮನು 'ಎಲೌ ಮಂಗಳಾಂಗಿಯೆ, ನೀನು ಹೇಳಿದ ಮಾತುಗಳನ್ನು ನಾನು ನಿನ್ನ ಮುಖದಿಂದ ಹೊರತು ಇನ್ನೆಲ್ಲಿಯೂ ಕೇಳಲಿಲ್ಲ. ಈ ನಿನ್ನ ಮಾತುಗಳಿಂದ ನಾನು ಸಂತುಷ್ಟನಾಗಿರುವೆನು. ನಿನ್ನ ಗಂಡನ ಜೀವವನ್ನು ಹೊರತು ಮತ್ತೊಂದು ನಾಲ್ಕನೆಯ ವರವನ್ನು ಕೇಳು, ಅದನ್ನು ನಾನು ಕೊಡುವೆನು' ಎನಲು, ಬಳಿಕ ಸಾವಿತ್ರಿಯು 'ಎಲೈ ಧರ್ಮರಾಯನೆ, ಸತ್ಯವಂತನ ದೆಸೆಯಿಂದ ನನ್ನ ಗರ್ಭದಲ್ಲಿ ನಮ್ಮಿಬ್ಬರ ವಂಶವನ್ನೂ ವೃದ್ಧಿಮಾಡತಕ್ಕ ಪರಾಕ್ರಮಶಾಲಿಗಳಾದ ಸಮರ್ಥರಾದ ನೂರುಮಂದಿ ಮಕ್ಕಳಾಗುವಂತೆ ವರವನ್ನು ಕೊಡು' ಎನಲು, ಯಮನು 'ಎಲೌ ರಾಜಕುಮಾರಿಯೆ, ನಿನಗೆ ಪ್ರೀತಿಯನ್ನುಂಟುಮಾಡತಕ್ಕ ಪರಾಕ್ರಮಶಾಲಿಗಳಾದ

ಸಮರ್ಥರಾದ ನೂರುಮಂದಿ ಪುತ್ರರು ನಿನ್ನಲ್ಲಿ ಹುಟ್ಟುವರು. ನೀನು ಬಹುದೂರ ಬಂದೆ. ಇನ್ನು ಆಯಾಸವಾಗುವದು, ನಡೆ ಹಿಂತಿರುಗು' ಎಂದನು. ಬಳಿಕ ಸಾವಿತ್ರಿಯು 'ಎಲೈ ಧರ್ಮರಾಯನೆ, ನಮ್ಮಂಥವರಿಗೆ ಪತಿಯಿಂದಲೇ ಪುತ್ರರು ಹುಟ್ಟತಕ್ಕದ್ದು ಶಾಶ್ವತವಾದ ಧರ್ಮವು. ನಿಮ್ಮಂಥ ಸಜ್ಜನರು ವರವನ್ನು ಕೊಟ್ಟು ಆ ವಿಷಯದಲ್ಲಿ ಚಿಂತೆಯೂ ದುಃಖವೂ ಸಹ ಪಡುವದಿಲ್ಲ. ಸತ್ಪುರುಷರು ತಾವು ಕೊಟ್ಟ ವರವನ್ನು ಸಾಧಿಸೇಸಾಧಿಸುವರು. ಆದ್ದರಿಂದ ನಿಮ್ಮಂಥ ಸತ್ಪುರುಷರ ಸಹವಾಸವು ನಮ್ಮಂಥವರಿಗೆ ಎಂದಿಗೂ ನಿಷ್ಫಲವಾಗತಕ್ಕದ್ದಲ್ಲ. ನಮ್ಮಂಥವರಿಗೆ ಯಾವ ಭಯವಿದ್ದರೂ ಅದು ಸತ್ಪುರುಷರ ದೆಸೆಯಿಂದ ನಿವೃತ್ತಿಯಾಗುವದು. ಸತ್ಪುರುಷರೇ ತಮ್ಮ ಸತ್ಯದಿಂದ ನಿರಾಧಾರವಾದ ಆಕಾಶದಲ್ಲಿ ಸೂರ್ಯನನ್ನು ನಡೆಯಿಸುವರು. ಸತ್ಪುರುಷರೇ ತಪಸ್ಸಿನಿಂದ ಭೂಮಿಯನ್ನು ಧರಿಸಿಕೊಂಡಿರುವರು. ಸತ್ಪುರುಷರೇ ಭೂತಭವಿಷ್ಯತ್ತುಗಳಿಗೆ ಗತಿಪ್ರದರಾಗಿರುವರು. ಇಂಥ ಸತ್ಪುರುಷರ ಮಧ್ಯದಲ್ಲಿ ಬಿದ್ದವರು ಎಂದಿಗೂ ದುಃಖಪಡಲಾರರು. ಲೋಕದಲ್ಲಿ ಪರೋಪಕಾರವನ್ನು ಮಾಡುವದು ಶಾಶ್ವತವಾದ ದೊಡ್ಡವರ ಮಾರ್ಗವೆಂದು ತಿಳಿದು ಸಜ್ಜನರಾದವರು, ಪರೋಪಕಾರವನ್ನು ಮಾಡುತ್ತ ಅದಕ್ಕೆ ಪ್ರತ್ಯುಪಕಾರವನ್ನು ಅಪೇಕ್ಷಿಸದಿರುವರು. ಸತ್ಪುರುಷರಿಗೆ ಮಾಡತಕ್ಕ ಉಪಕಾರವು ಎಂದಿಗೂ ವ್ಯರ್ಥವಾಗುವದಿಲ್ಲ. ಆದರಿಂದ ಅರ್ಥನಾಶವೂ ಮಾನಹಾನಿಯೂ ಉಂಟಾಗಲಾರವು. ಆದ್ದರಿಂದ ಪರೋಪಕಾರವೆಂಬುವದು ಸಜ್ಜನರಿಗೆ ನಿತ್ಯವಾಗಿರುವದು. ಸಜ್ಜನರೇ ಪರರಿಗೆ ಉಪಕಾರವನ್ನು ಮಾಡಿ ರಕ್ಷಿಸತಕ್ಕವರು' ಎನಲು ; ಯಮನು 'ಎಲೌ ಪತಿವ್ರತಾಶಿರೋಮಣಿಯೆ, ನೀನು ಧರ್ಮಯುಕ್ತವಾಗಿಯೂ ಮನಸ್ಸಿಗೆ ಅನುಕೂಲವಾಗಿಯೂ ಸಮೀಚೀನವಾದ ಪದಗಳಿಂದ ಬದ್ಧವಾಗಿಯೂ ಇರುವ ಮಾತುಗಳನ್ನು ಹ್ಯಾಗೆಹ್ಯಾಗೆ ಆಡುತ್ತಾ ಬರುವೆಯೋ ಹಾಗೆಹಾಗೆಲ್ಲಾ ನಿನ್ನಲ್ಲಿ ನನಗೆ ಪ್ರೀತಿಹೆಚ್ಚುತ್ತಿರುವದು. ಆದ್ದರಿಂದ ನಿನಗೆ ಬೇಕಾದ ವರಗಳನ್ನು ಬೇಡು, ಕೊಡುತ್ತೇನೆ' ಎಂದನು. ಆ ಮಾತನ್ನು ಕೇಳಿ ಸಾವಿತ್ರಿಯು 'ಎಲೈ ಧರ್ಮರಾಯನೆ, ನೀನು ಮೊದಲು ಕೊಟ್ಟ ಇತರ ವರಗಳಂತೆ ಪುತ್ರಪ್ರಾಪ್ತಿಯಾಗತಕ್ಕ ವರವು ಪತಿಸಾಹಚರ್ಯವಿಲ್ಲದೆ ಸಿದ್ಧಿಸತಕ್ಕದ್ದಲ್ಲವಾದ್ದರಿಂದ, ಸತ್ಯವಂತನು ಬದುಕುವಂತೆ ಈಗ ವರವನ್ನು ಕೊಡು. ಪತಿಯನ್ನಗಲಿ ನಾನಿದ್ದರೂ, ಮೃತಳಾದಂತೆಯೇ ಅಲ್ಲವೆ ? ಪತಿಯಿಲ್ಲದಿರತಕ್ಕ ಸುಖವನ್ನೂ ಸ್ವರ್ಗವನ್ನೂ ಐಶ್ವರ್ಯವನ್ನೂ ಬಾಳನ್ನೂ ಸಹ ನಾನು ಅಪೇಕ್ಷಿಸತಕ್ಕವಳಲ್ಲ. ನನಗೆ ನೂರುಮಂದಿ ಮಕ್ಕಳಾಗುವಂತೆ ವರವನ್ನು ಕೊಟ್ಟು ನೀನೇ ನನ್ನ ಪತಿಯನ್ನು ಅಪಹರಿಸುವದುಂಟೆ ? ಆತನು ಬದುಕುವಂತೆ ನನಗೆ ವರವನ್ನು ಕೊಟ್ಟು ನಿನ್ನ ಮಾತನ್ನು ನೀನು ಯಥಾರ್ಥವಾಗಿ ಮಾಡಿಕೊ' ಎಂದನು. ಅದಕ್ಕೆ ಯಮನು 'ಎಲೌ ಪತಿವ್ರತಾಶಿರೋಮಣಿಯೆ, ನೀನು ಬೇಡಿದಂತೆಯೇ ಆಗಲಿ. ಇದೋ ನಿನ್ನ ಪತಿಗೆ ಕಟ್ಟಿದ್ದ ಈ ಪಾಶವನ್ನು ಬಿಚ್ಚಿರುವೆನು. ಈ ನಿನ್ನ ಪತಿಯು ರೋಗರಹಿತನಾಗಿ ತನ್ನ ಇಷ್ಟಸಿದ್ಧಿಯನ್ನು ಹೊಂದಿ, ನಾನೂರು ವರುಷ ಆಯುಸ್ಸುಳ್ಳವನಾಗಿ, ನಿನ್ನೊಡಗೂಡಿ ಅನೇಕ ಯಜ್ಞಗಳನ್ನು ಮಾಡಿ ಲೋಕದಲ್ಲಿ ಪ್ರಖ್ಯಾತಿಯನ್ನು ಪಡೆಯುವನು. ಆತನಿಂದ ನಿನ್ನಲ್ಲಿ ನೂರುಮಂದಿ ಮಕ್ಕಳಾಗುವರು. ಅವರೆಲ್ಲರೂ ಪುತ್ರಪೌತ್ರರಿಂದ ಸಮೇತರಾಗಿ, 'ಸಾವಿತ್ರ, ಸಾವಿತ್ರ' ಎಂದು ನಿನ್ನ ಹೆಸರನ್ನೇ ಪಡೆದು ಲೋಕದಲ್ಲಿ ಪ್ರಸಿದ್ಧರಾಗುವರು. ನಿಮ್ಮ ತಂದೆಯ ದೆಸೆಯಿಂದ ನಿಮ್ಮ ತಾಯಿಯಾದ ಮಾಳವೀದೇವಿಯಲ್ಲಿ ನೂರುಮಂದಿ ಮಕ್ಕಳು ಹುಟ್ಟಿ, ಅವರೆಲ್ಲರೂ ದೇವತೆಗಳಿಗೆ ಸಮಾನರಾಗಿ, ಪುತ್ರಪೌತ್ರಸಮೇತರಾಗಿ, ಮಾಳವರೆಂದು ಪ್ರಸಿದ್ಧಿಯನ್ನು ಪಡೆಯುವರು' ಎಂದು ಸಾವಿತ್ರಿಗೆ ವರವನ್ನು ಕೊಟ್ಟು, ಬಳಿಕ ತನ್ನ ಲೋಕಕ್ಕೆ ತಾನು ಹೊರಟು ಹೋದನು.

ಬಳಿಕ ಸಾವಿತ್ರಿಯು ತನ್ನ ಪತಿಯ ದೇಹವಿದ್ದ ತಾವಿಗೆ ಬಂದು, ಆತನ ತಲೆಯನ್ನು ಮೊದಲಿನಂತೆ ತನ್ನ ತೊಡೆಯಮೇಲಿರಿಸಿಕೊಂಡು, ಭೂಮಿಯಮೇಲೆ ಕೂತುಕೊಂಡಳು. ಆಗ ಸತ್ಯವಂತನು ಎಚ್ಚತ್ತು, ಪರಸ್ಥಳಕ್ಕೆ ಹೋಗಿ ಬಂದವನಂತೆ ಪ್ರೇಮದಿಂದ ಅಡಿಗಡಿಗೆ ಸಾವಿತ್ರಿಯನ್ನು ನೋಡಿ 'ಎಲೆ ಪ್ರಿಯೆ, ನಾನು ಮಲಗಿಕೊಂಡು ಬಹಳ ಹೊತ್ತಾಯಿತು. ಯಾತಕ್ಕೋಸರ ನನ್ನನ್ನು ಎಬ್ಬಿಸದೆ ಹೋದೆ ? ನನ್ನನ್ನು ಪಾಶದಿಂದ ಕಟ್ಟಿ ಎಳೆದುಕೊಂಡು ಹೋಗುವದಕ್ಕೆ ಬಂದಿದ್ದ ಶ್ಯಾಮವರ್ಣನಾದ ಪುರುಷನು ಎಲ್ಲಿ ಹೋದನು ?' ಎನಲು, ಸಾವಿತ್ರಿಯು

‘ಆರ್ಯಪುತ್ರನೆ, ನನ್ನ ತೊಡೆಯಮೇಲೆ ನೀನು ಮಲಗಿಕೊಂಡು ಬಹಳ ಹೊತ್ತಾಯಿತು. ನಿನ್ನನ್ನು ಎಳೆದುಕೊಂಡು ಪೋಗುವದಕ್ಕೋಸ್ಕರ ಯಮನು ಬಂದಿದ್ದನು. ಆತನು ಹೊರಟು ಹೋದನು. ಆ ಸಮಯದಲ್ಲಿ ನೀನು ನಿದ್ರೆಮಾಡುತ್ತ ಶ್ರಮವನ್ನು ಪರಿಹಾರಮಾಡಿಕೊಳ್ಳುತ್ತಿದ್ದೆ. ಇದೋ, ಆಗಲೇ ರಾತ್ರಿಯು ಗಾಢಾಂಧಕಾರದಿಂದ ಕೂಡಿರುವದು. ನಿನ್ನ ಕೈಲಾದರೆ ಏಳು, ಆಶ್ರಮಕ್ಕೆ ಹೋಗೋಣ’ ಎಂದು ನುಡಿದಳು. ಆ ಮಾತನ್ನು ಕೇಳಿ ಸತ್ಯವಂತನು, ಸುಖವಾಗಿ ಮಲಗಿದ್ದವನು ಎದ್ದಂತೆ ಎದ್ದು, ದಿಕ್ಕುಗಳನ್ನೂ ವನಪ್ರದೇಶಗಳನ್ನೂ ನೋಡಿ ‘ಎಲೆ ಮಂಗಳಾಂಗಿಯೆ, ಫಲಾಹಾರಮಾಡಿಕೊಂಡು ನಾನು ನಿನ್ನ ಸಂಗಡ ಇಲ್ಲಿಗೆ ಬಂದು ಸೌದೆಯನ್ನು ಕಡಿಯುವ ಕಾಲದಲ್ಲಿ ಆಯಾಸಪಟ್ಟು, ತಲೆನೋವನ್ನು ಸಹಿಸಲಾರದೆ ನಿನ್ನ ತೊಡೆಯಮೇಲೆ ಮಲಗಿಕೊಂಡು ನಿದ್ರೆಮಾಡುತ್ತಿದ್ದೆನು. ಇಷ್ಟು ನನಗೆ ಜ್ಞಾಪಕವಿರುವದು. ಆ ಸಮಯದಲ್ಲಿ ನಾನು ಘೋರವಾದ ರೂಪವುಳ್ಳ ಒಬ್ಬ ತೇಜೋವಂತನಾದ ಪುರುಷನನ್ನು ನೋಡಿದೆನು. ಆತನನ್ನು ನೀನು ತಿಳಿದಿದ್ದರೆ ಹೇಳು. ಅದೇನು ಸ್ವಪ್ನವೋ ಪ್ರತ್ಯಕ್ಷವಾದದ್ದೋ ತಿಳಿಯದು!’ ಎನಲು; ಆ ಮಾತನ್ನು ಕೇಳಿ ಸಾವಿತ್ರಿಯು ‘ಆರ್ಯಪುತ್ರನೆ, ಆ ವೃತ್ತಾಂತವನ್ನು ನಾನು ವಿಸ್ತಾರವಾಗಿ ಹೇಳುವೆನು. ಸೂರ್ಯನು ಅಸ್ತನಾಗಲು, ಈ ರಾತ್ರಿಯಲ್ಲಿ ಕತ್ತಲೆಯು ಹೆಚ್ಚಾಗಿ ಕವಿಯುತ್ತಿರುವದು. ಈ ಅರಣ್ಯದಲ್ಲಿ ಸಂತೋಷದಿಂದ ಭಯಂಕರವಾಗಿ ಕೂಗತಕ್ಕ ರಾಕ್ಷಸರ ಶಬ್ದವು ಕೇಳಿಸುತ್ತಿರುವದು. ಇಲ್ಲಿ ಘೋರವಾದ ನರಿಗಳು ದಕ್ಷಿಣದಿಕ್ಕಿನಲ್ಲೂ ಪಶ್ಚಿಮದಿಕ್ಕಿನಲ್ಲೂ ನನ್ನ ಮನಸ್ಸು ನಡುಗುವಂತೆ ಕೂಗುತ್ತಿರುವವು. ವೃದ್ಧರಾದ ತಂದೆತಾಯಿಗಳು ಚಿಂತಿಸುತ್ತಿರುವರು. ಅವರನ್ನು ನೋಡುವೆ, ಜಾಗ್ರತೆಯಾಗಿ ಏಳು’ ಎಂದು ನುಡಿದಳು. ಬಳಿಕ ಸತ್ಯವಂತನು ‘ಎಲೆ ಪ್ರಿಯೆ, ಈ ವನವು ದಟ್ಟವಾದ ಕತ್ತಲೆ ಕವಿದು ಭಯಂಕರವಾಗಿರುವದು. ಮಾರ್ಗವು ಕಾಣಿಸದು. ಹೀಗಿರುವಲ್ಲಿ ನೀನು ಹ್ಯಾಗೆ ನಡೆದು ಬರುವೆ?’ ಎನಲು; ಸಾವಿತ್ರಿಯು ‘ಆರ್ಯಪುತ್ರನೆ, ಈ ವನದಲ್ಲಿ ಒಣಗಿದ ಗಿಡಗಳು ಸುಟ್ಟು ಗಾಳಿಯು ಬೀಸಲು, ಅಲ್ಲಲ್ಲೇ ಕಾಡುಕಿಚ್ಚುಗಳು ಕಾಣಬರುವವು. ಅಲ್ಲಿಂದ ನಾನು ಬೆಂಕಿಯನ್ನು ತಂದು ಈ ಸೌದೆಗೆ ಹಚ್ಚಿಸಿ ಬೆಳಕನ್ನು ಮಾಡುತ್ತೇನೆ. ನೀನು ವ್ಯಸನಪಡಬೇಡ. ನಿನಗೆ ನಡೆಯುವದಕ್ಕೆ ಶಕ್ತಿಯಿಲ್ಲದಿರುವದನ್ನು ನೋಡಿದರೆ ನಿನಗೆ ಇನ್ನೂ ಆಯಾಸವಿರುವಹಾಗೆಯೇ ತೋರುವದು. ಗಾಢಾಂಧಕಾರ ಕವಿದಿರುವ ಈ ಅರಣ್ಯದಲ್ಲಿ ದಾರಿಯು ನಿನಗೆ ಗೊತ್ತಾಗಲಾರದು. ಈ ರಾತ್ರಿ ಇಲ್ಲೇ ಇದ್ದು ಬೆಳಗ್ಗೆ ಆಶ್ರಮಕ್ಕೆ ಹೋಗೋಣವೆಂದು ನೀನು ಅಪೇಕ್ಷಿಸಿದ ಪಕ್ಷದಲ್ಲಿ ಹಾಗೇ ಆಗಲಿ, ಇಲ್ಲೇ ವಾಸಮಾಡೋಣ’ ಎಂದು ನುಡಿದಳು. ಆ ಮಾತನ್ನು ಕೇಳಿ ಸತ್ಯವಂತನು ‘ಎಲೆ ಪ್ರಿಯೆ, ಈಗ ನನಗೆ ತಲೆಶೂಲೆಯಿಲ್ಲ, ಸ್ವಸ್ಥನಾಗಿಯೇ ಇರುವೆನು. ನಿನ್ನ ದಯದಿಂದ ನಾನು ಈಗಲೇ ನಮ್ಮ ಮಾತಾಪಿತೃಗಳ ದರ್ಶನವನ್ನು ಮಾಡಬೇಕೆಂದು ಅಪೇಕ್ಷಿಸುತ್ತಿರುವೆನು. ಎಂದಿಗೂ ನಾನು ಸಂಧ್ಯಾಕಾಲವಾದಮೇಲೆ ಆಶ್ರಮವನ್ನು ಬಿಟ್ಟು ಹೊರಕ್ಕೆ ಹೋದವನಲ್ಲ. ಕದಾಚಿತ್ತು ನಾನೇನಾದರೂ ಹೊರಟರೆ, ಆಗ ನಮ್ಮ ತಾಯಿಯು ನನ್ನನ್ನು ತಡೆಯುತ್ತಿದ್ದಳು. ಹಗಲಾಗಲಿ ನಾನು ಯಾವಾಗಲಾದರೂ ಸ್ವಲ್ಪದೂರ ಹೋಗಿಬರುವದು ಸಾವಕಾಶವಾದರೆ, ಅಷ್ಟಕ್ಕೇ ವೃದ್ಧರಾದ ನಮ್ಮ ತಂದೆತಾಯಿಗಳು ಯೋಚನೆ ಮಾಡುತ್ತಿದ್ದರು. ಆಗ ನಮ್ಮ ತಂದೆಯು ಆಶ್ರಮದಲ್ಲಿಪ್ಪವರಿಂದ ನನ್ನನ್ನು ಹುಡುಕಿಸುತ್ತಿದ್ದನು. ಪೂರ್ವದಲ್ಲಿ ನಮ್ಮ ತಾಯಿತಂದೆಗಳು ನನ್ನನ್ನು ಕುರಿತು ನೀನು ಹೊರಗೆ ಹೋದರೆ ಜಾಗ್ರತೆಯಾಗಿ ಬರುವದಿಲ್ಲವೆಂದು ದುಃಖಪಡುತ್ತ ನನ್ನಮೇಲೆ ಆಗ್ರಹ ಮಾಡುತ್ತಿದ್ದರು. ಈಗ ನಾನಿಲ್ಲಿರುವದರಿಂದ ನನ್ನನ್ನು ಕಾಣದೆ ಚಿಂತಿಸುತ್ತಿರುವ ಅವರಿಬ್ಬರ ಅವಸ್ಥೆಯು ಏನಾಗಿರುವದೋ! ಅವರಿಬ್ಬರೂ ಈಗ ಬಹುದುಃಖಪಡುತ್ತಿರಬಹುದು. ಹಿಂದೆ ಬಂದಾನೊಂದುದಿವಸ ರಾತ್ರಿ ವೃದ್ಧರಾದ ಅವರಿಬ್ಬರೂ ನನ್ನಲ್ಲಿ ಪ್ರೀತಿಯುಳ್ಳವರಾಗಿ ದುಃಖದಿಂದ ಕಂಬನಿಗಳನ್ನು ತುಂಬಿಕೊಂಡು—ಎಲೈ ಪುತ್ರನೆ, ನೀನಿಲ್ಲದೆ ಒಂದು ಮುಹೂರ್ತವೂ ನಾವು ಬದುಕಿರಲಾರೆವು. ನಿನ್ನಿಂದಲೇ ನಾವು ಬದುಕಿರುವೆವು. ವೃದ್ಧರಾಗಿಯೂ ಅಂಧರಾಗಿಯೂ ಇರುವ ನಮಗೆ ನೀನೇ ಕಣ್ಣಾಗಿರುವೆ. ನಿನ್ನಿಂದಲೇ ನಮ್ಮ ವಂಶವು ವೃದ್ಧಿಯಾಗಬೇಕು. ನಮಗೆ ನಿನ್ನಿಂದಲೇ ಜೀವನವು. ನಿನ್ನಿಂದಲೇ ಕೀರ್ತಿಯು—ಎಂದು ಹೇಳಿದ್ದರು. ಅಂಥ ತಂದೆತಾಯಿಗಳನ್ನು ಅಗಲಿ ನಾನು ಬದುಕಲಾರೆನು. ಅಂಧನಾಗಿಯೂ ವೃದ್ಧನಾಗಿಯೂ ಇರುವ ನಮ್ಮ ತಂದೆಯು ವ್ಯಾಕುಲವಾದ ಮನಸ್ಸು

ಳ್ಳವನಾಗಿ ಆಶ್ರಮವಾಸಿಗಳನ್ನು ನನ್ನನಿಮಿತ್ತವಾಗಿ ಪ್ರತಿಕ್ಷಣದಲ್ಲೂ ಪ್ರಶ್ನೆಮಾಡುತ್ತಿರುವನು. ಯಾವಾಗಲೂ ನನಗೆ ಹಿತಚಿಂತಕಳೂ ವೃದ್ಧಳೂ ಆದ ನಮ್ಮ ತಾಯಿಯು ಏನಾಗಿರುವಳೋ ತಿಳಿಯದು. ನನಗೆ ಇಂಥ ಕಷ್ಟವು ಪ್ರಾಪ್ತವಾಯಿತಲ್ಲಾ ಎಂದು ನಾನು ವ್ಯಸನಪಡತಕ್ಕವನಲ್ಲ. ನನ್ನ ನಿಮಿತ್ತವಾಗಿ ವ್ಯಸನಪಡತಕ್ಕ ವೃದ್ಧರಾದ ಅವರಿಗೆ ವ್ಯಸನವುಂಟಾಯಿತಲ್ಲಾ ಎಂದು ನಾನು ಬಹಳವಾಗಿ ವ್ಯಥೆಪಡುತ್ತಿರುವೆನು. ಬದುಕಿದ್ದರೆ ಅವರಿಗೆ ನಾನು ಪೋಷಣೆಯನ್ನು ಮಾಡಿ ಅವರಿಗೆ ಪ್ರಿಯವಾದ ಕಾರ್ಯವನ್ನು ಮಾಡಬೇಕೆಂದು ತಿಳಿದಿರುವೆನು' ಎಂದು ನುಡಿದು ; ಧರ್ಮಾತ್ಮನಾದ ಆತನು ಮಾತಾಪಿತೃಗಳಲ್ಲಿ ಭಕ್ತಿಯುಳ್ಳವನಾಗಿ, ಎರಡು ಕೈಗಳನ್ನೂ ಮೇಲಕ್ಕೆತ್ತಿಕೊಂಡು, ದುಃಖವನ್ನು ಸಹಿಸಲಾರದೆ ಗಟ್ಟಿಯಾಗಿ ರೋದನವನ್ನು ಮಾಡುವದಕ್ಕೆ ಉಪಕ್ರಮಮಾಡಿದನು. ಆಗ ಪತಿವ್ರತಾ ಶಿರೋಮಣಿಯಾದ ಸಾವಿತ್ರಿಯು ಆತನ ಕಣ್ಣೀರನ್ನು ಒರಸಿ 'ಆರ್ಯಪುತ್ರನೆ, ನಾನು ಮನಃಪೂರ್ವಕವಾಗಿ ತಪಸ್ಸನ್ನೂ ದಾನವನ್ನೂ ಹೋಮವನ್ನೂ ಮಾಡಿದ್ದೇ ನಿಜವಾದರೆ ಆ ಪುಣ್ಯದಿಂದ ನಮ್ಮ ಅತ್ತೆಮಾವಂದಿರು ಈ ರಾತ್ರಿ ನಿಶ್ಚಿಂತರಾಗಿ ಜೀವವಂತರಾಗಿರಲಿ. ನಾನು ಸ್ವಲ್ಪವಾದರೂ ಅನೃತವನ್ನು ಆಡದಿರುವದು ಸತ್ಯವಾಗಿದ್ದ ಪಕ್ಷದಲ್ಲಿ ನಮ್ಮ ಅತ್ತೆ ಮಾವಂದಿರು ಜೀವವಂತರಾಗಿರಲಿ' ಎದು ನುಡಿದಳು. ಬಳಿಕ ಸತ್ಯವಂತನು 'ಎಲೆ ಪ್ರಿಯೆ, ತಂದೆತಾಯಿಗಳನ್ನು ನಾನು ಜಾಗ್ರತೆಯಾಗಿ ನೋಡಬೇಕೆಂದು ಕುತೂಹಲ ಪಡುತ್ತಿರುವೆನು, ತಡಮಾಡಬೇಡ ನಡೆ. ಮೊದಲೇ ಅವರಿಗೆ ಏನಾದರೂ ಹಾನಿಯಾಗಿದ್ದದ್ದನ್ನು ನಾನು ನೋಡಿದ್ದೇ ಆದರೆ ನಾನುಬೇರೆ ಬದುಕತಕ್ಕವನಲ್ಲ. ಇದು ಸತ್ಯವು. ನಿನಗೆ ಧರ್ಮದಲ್ಲಿ ಬುದ್ಧಿಯಿದ್ದು ನನಗೆ ಪ್ರಿಯವನ್ನು ಮಾಡಬೇಕೆಂದು ಅಪೇಕ್ಷೆಹುಟ್ಟಿ ನಾನು ಬದುಕಬೇಕೆಂದು ಇಚ್ಛೆಯಿದ್ದರೆ, ಜಾಗ್ರತೆಯಾಗಿ ಆಶ್ರಮಕ್ಕೆ ನಡೆ' ಎನಲು, ಸಾವಿತ್ರಿಯು ಶೀಘ್ರವಾಗಿ ಎದ್ದು ತನ್ನ ಮಂಡೆ ಕೂದಲನ್ನು ಸರಿಮಾಡಿಕೊಂಡು, ಎರಡು ಕೈಗಳಿಂದಲೂ ಗಂಡನನ್ನೆಬ್ಬಿಸಿ, ಆತನ ಮಯ್ಯನ್ನು ಸವರಿ, ಎಲ್ಲಾ ದಿಕ್ಕುಗಳನ್ನೂ ನೋಡಿ, ಹಣ್ಣುಗಳನ್ನಿಟ್ಟಿದ್ದ ಬುಟ್ಟಿಯನ್ನು ನೋಡಿ 'ಆರ್ಯಪುತ್ರನೆ, ನಾಳೇದಿವಸ ಇಲ್ಲಿಗೆ ಬಂದು ಈ ಬುಟ್ಟಿಯನ್ನು ತೆಗೆದುಕೊಂಡು ಬರುವಂತೆ. ನಿನ್ನ ರಕ್ಷಣಾರ್ಥವಾಗಿ ಈ ಕೊಡಲಿಯನ್ನು ನಾನು ಹಿಡಿದುಕೊಂಡು ಬರುತ್ತೇನೆ' ಎಂದು ಹೇಳಿ, ಆ ಬುಟ್ಟಿಯನ್ನು ಒಂದು ಗಿಡಕ್ಕೆ ತಗಲಿಹಾಕಿ ಕೊಡಲಿಯನ್ನು ಕಯ್ಯಲ್ಲಿ ಹಿಡಿದುಕೊಂಡು, ತನ್ನ ಎಡದ ಹೆಗಲಿನಮೇಲೆ ಸತ್ಯವಂತನ ಕಯ್ಯನ್ನು ಇರಿಸಿಕೊಂಡು, ತನ್ನ ಬಲಗಯ್ಯಿಂದ ಆತನನ್ನು ಆಲಿಂಗಿಸಿಕೊಂಡು ಮೆಲ್ಲಗೆ ಹೊರಟಳು. ಆಗ ಸತ್ಯವಂತನು 'ಎಲೆ ಭೀರುವೆ, ಈ ಮಾರ್ಗದಲ್ಲಿ ನಿತ್ಯವೂ ತಿರುಗತಕ್ಕ ಅಭ್ಯಾಸದಿಂದ ಇದರ ಗುರುತು ಕಾಣಬರುವದು. ಇದಲ್ಲದೆ ಗಿಡಗಳ ಸಂದುಗಳಲ್ಲಿ ಬಿದ್ದಿರುವ ಬೆಳದಿಂಗಳಿಂದಲೂ ಮಾರ್ಗವು ಸ್ವಲ್ಪವಾಗಿ ತೋರುತ್ತಿರುವದು. ಇದೇ ಮಾರ್ಗದಲ್ಲಿ ಈ ಗಿಡಗಳಲ್ಲೇ ನಾವು ಮೊದಲು ಫಲಗಳನ್ನು ಕಿತ್ತದ್ದು. ನೀನು ಮತ್ತೇನೂ ವಿಚಾರಮಾಡಬೇಡ. ಇದೇ ನಮ್ಮ ಆಶ್ರಮದ ಮಾರ್ಗವು ನಡೆ. ಇದೋ ಮುತ್ತುಗದ ಕೊಂಬೆ ಮುರಿದು ಬಿದ್ದಿರುವ ಈ ಪ್ರದೇಶದಲ್ಲಿ ಎರಡು ದಾರಿ ಒಡೆಯುವದು. ಉತ್ತರದಿಕ್ಕಿಗೆ ಹೋಗುವ ಮಾರ್ಗದಲ್ಲೇ ನೀನು ಜಾಗ್ರತೆಯಾಗಿ ನಡೆ. ಈಗ ನನ್ನ ದೇಹಸ್ಥಿತಿಯೂ ಸರಿಯಾಗಿರುವದು. ಇನ್ನು ಜಾಗ್ರತೆಯಾಗಿ ಹೋಗಿ ತಂದೆತಾಯಿಗಳನ್ನು ನೋಡಬೇಕೆಂದು ಕುತೂಹಲ ಪಡುತ್ತಿರುವೆನು' ಎಂದು ಹೀಗೆ ಮಾತನಾಡುತ್ತ, ಪತ್ನಿಯೊಡನೆ ಶೀಘ್ರವಾಗಿ ಆಶ್ರಮಕ್ಕೆ ಬಂದನು" ಎಂದು ಮಾರ್ಕಂಡೇಯನು ಧರ್ಮರಾಯನಿಗೆ ಹೇಳಿದನು.

---

೨೯೭ನೇ ಅಧ್ಯಾಯ.—ಸಾವಿತ್ರ್ಯುಪಾಖ್ಯಾನ—(ಸತ್ಯವಂತನೂ ಸಾವಿತ್ರಿಯೂ ನಿಜವೃತ್ತಾಂತವನ್ನು ತಿಳಿಸುವಿಕೆ).

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಮಾರ್ಕಂಡೇಯನು ಧರ್ಮರಾಯನನ್ನು ಕುರಿತು "ಎಲೈ ಧರ್ಮರಾಯನೆ, ಅಷ್ಟರಲ್ಲೇ ಮಹಾಬಲಿಷ್ಠನಾದ ದ್ಯುಮತ್ಸೇನರಾಯನು ಅಂಧತ್ವವು ಹೋಗಿ ನಿರ್ಮಲವಾಗಿ ಕಣ್ಣುಗಳು ಕಾಣಿಸಲು ; ಪತ್ನಿಯೊಡನೆ ಅಲ್ಲಲ್ಲಿರುವ ಆಶ್ರಮಗಳಿಗೂ ನದಿಗಳಿಗೂ ವನಗಳಿಗೂ ಸರೋವರಗಳಿಗೂ ಆ ರಾತ್ರಿಕಾಲದಲ್ಲಿ ಹೋಗಿ, ಅಲ್ಲೆಲ್ಲಾ ಮಗನನ್ನು ಹುಡುಕುತ್ತ, ಎತ್ತಲಾದರೂ ಶಬ್ದವಾದರೆ ಆ ದಿಕ್ಕಿಗೆ ತಿರುಗಿ, ಸತ್ಯವಂತನು ಪತ್ನೀಸಮೇತನಾಗಿ

ಬರುತ್ತಾನೆಯೋ ಏನೋ ಎಂದು ಮಾತನಾಡಿಕೊಳ್ಳುತ್ತ, ಮಾರ್ಗದಲ್ಲಿ ಮುರಿದುಬಿದ್ದಿದ್ದ ಮರಗಳ ಕೊಂಬೆಗಳನ್ನು ತುಳಿದು ಅಲ್ಲಲ್ಲೇ ಮುಳ್ಳುಗಳು ಕಾಲಿಗೆ ಹೊಕ್ಕಿಕೊಳ್ಳಲು ಕಾಲಿನಲ್ಲಿ ರಕ್ತವನ್ನು ಸುರಿಸುತ್ತ, ಮಗನನ್ನು ಕಾಣದೆ ದುಃಖಪಡುತ್ತ, ಹುಚ್ಚನಂತೆ ಅಲ್ಲಲ್ಲಿ ಸುತ್ತಾಡುತ್ತಿದ್ದನು. ಅದನ್ನು ನೋಡಿ ಅಲ್ಲಿದ್ದ ಬ್ರಾಹ್ಮಣರು ಪತ್ನೀಸಮೇತನಾದ ಆ ದ್ಯುಮತ್ಸೇನನನ್ನು ಆಶ್ರಮಕ್ಕೆ ಕರೆದುಕೊಂಡು ಬಂದು, ಪೂರ್ವದಲ್ಲಿದ್ದ ಅರಸುಗಳ ವಿಚಿತ್ರವಾದ ಕಥೆಗಳನ್ನು ಹೇಳುತ್ತ, ಅವರಿಬ್ಬರನ್ನೂ ಸಮಾಧಾನಪಡಿಸುತ್ತಿದ್ದರು. ಆಗ ವೃದ್ಧರಾದ ಅವರಿಬ್ಬರೂ ಮಗನನ್ನು ನೋಡಬೇಕೆಂಬ ಕುತೂಹಲವುಳ್ಳವರಾಗಿ, ಬಾಲ್ಯಪ್ರಭೃತಿ ನಡೆದ ಮಗನ ಚರಿತ್ರೆಯನ್ನು ಸ್ಮರಿಸಿಕೊಂಡು ಪದೇಪದೇ ದುಃಖಪಡುತ್ತ, ದಯಾರಸಭರಿತವಾದ ಮಾತುಗಳನ್ನಾಡುತ್ತ 'ಹಾ ಪುತ್ರನೆ! ಹಾ ಪತಿವ್ರತೆಯಾದ ಸಾವಿತ್ರಿಯೆ! ಎಲ್ಲಿರುವಿರಿ?' ಎಂದು ದುಃಖಪಡುತ್ತಿರಲು; ಸುವರ್ಚನೆಂಬ ಬ್ರಾಹ್ಮಣನು 'ಎಲೈ ವೃದ್ಧರೆ, ನಿಮ್ಮ ಸೊಸೆಯಾದ ಸಾವಿತ್ರಿಯು ತಪೋನಿಷ್ಠಳಾಗಿಯೂ ಇಂದ್ರಿಯನಿಗ್ರಹವುಳ್ಳವಳಾಗಿಯೂ ಆಚಾರಶೀಲಳಾಗಿಯೂ ಇರುವಳು. ಆಕೆಯಿಂದ ಸತ್ಯವಂತನು ಜೀವಿಸಿರುವನು. ವ್ಯಸನಪಡಬೇಡಿರಿ' ಎಂದನು. ಗೌತಮನೆಂಬ ಬ್ರಾಹ್ಮಣನು 'ಎಲೈ ವೃದ್ಧರೆ, ನಾನು ಸಾಂಗವಾಗಿ ವೇದಾಧ್ಯಯನವನ್ನು ಮಾಡಿರುವೆನು. ಬ್ರಹ್ಮಚರ್ಯವ್ರತನಿಷ್ಠನಾಗಿ ಗುರುಶುಶ್ರೂಷೆಯನ್ನು ಮಾಡುತ್ತ, ಅಗ್ನಿಯನ್ನು ಆರಾಧಿಸುತ್ತ, ತಪಸ್ವಿಯಾಗಿರುವೆನು. ವಾಯುಭಕ್ಷಣೆಯನ್ನು ಮಾಡಿಕೊಂಡು ಉಪವಾಸಪರನಾಗಿ, ವಿಧಿವತ್ತಾಗಿ ಸಕಲ ವ್ರತಗಳನ್ನೂ ಆಚರಿಸಿರುವೆನು. ಇದರಿಂದ ಪರರು ಮಾಡಿದ ಕಾರ್ಯಗಳೆಲ್ಲಾ ನನಗೆ ಗೊತ್ತಾಗುವವು. ನಾನು ಯಥಾರ್ಥವಾಗಿ ಹೇಳುವೆನು ಕೇಳಿರಿ. ನಿಮ್ಮ ಮಗನು ಬದುಕಿರುವನು' ಎಂದು ಹೇಳಿ ಸಮಾಧಾನಮಾಡಿದನು. ಬಳಿಕ ಆತನ ಶಿಷ್ಯನು 'ನಮ್ಮ ಗುರುಗಳ ಮುಖದಿಂದ ಹೊರಟ ಮಾತು ಎಂದಿಗೂ ಸುಳ್ಳಾಗುವದಿಲ್ಲ. ನಿಮ್ಮ ಮಗನು ಬದುಕಿರುವನು' ಎಂದನು. ಆ ಬಳಿಕ ಅಲ್ಲಿದ್ದ ಋಷಿಗಳೆಲ್ಲರೂ 'ಸಾವಿತ್ರಿಯು ಉತ್ತಮವಾದ ಲಕ್ಷಣದಿಂದ ಶೋಭಿಸುತ್ತಿರುವಳು. ಅಂಥವಳಿಗೆ ವೈಧವ್ಯವೆಂದಿಗೂ ಬರಲಾರದು. ಸತ್ಯವಂತನು ಸತ್ಯವಾಗಿ ಜೀವವಂತನಾಗಿರುವನು' ಎಂದರು. ಬಳಿಕ ಭರದ್ವಾಜರೂ ಸಹ ಸುವರ್ಚನು ಹೇಳಿದಂತೆಯೇ ನುಡಿದು ಸಮಾಧಾನ ಮಾಡಲು, ದಾಲ್ಭ್ಯರು 'ಎಲೈ ದ್ಯುಮತ್ಸೇನನೆ, ನಿನಗೆ ಕಣ್ಣು ಬಂದದ್ದರಿಂದಲೂ ಈ ಸಾವಿತ್ರಿಯು ವ್ರತಾಚರಣೆಯನ್ನು ಮಾಡಿ ಪಾರಣೆಯನ್ನು ಮಾಡದೆ ಸತ್ಯವಂತನ ಜೊತೆಯಲ್ಲಿ ಹೋಗಿರುವದರಿಂದಲೂ, ಆತನು ಜೀವವಂತನಾಗಿರುವದರಲ್ಲಿ ಸಂಶಯವಿಲ್ಲ' ಎಂದರು. ಬಳಿಕ ಆಪಸ್ತಂಭರು 'ಎಲೈ ರಾಜರ್ಷಿಯೆ, ದಿಕ್ಕುಗಳನ್ನು ನೋಡಿದರೆ ಪ್ರಸನ್ನವಾಗಿರುವವು. ಇದರಿಂದ ಸತ್ಯವಂತನು ಜೀವವಂತನಾಗಿಯೇ ಇರುವನು' ಎಂದರು. ತರುವಾಯ ಧೌಮ್ಯರು 'ನಿನ್ನ ಮಗನು ಸರ್ವಗುಣ ಸಂಪನ್ನನಾದವನು. ಆತನಲ್ಲಿ ಜನಾನುರಾಗವೂ ಚೆನ್ನಾಗಿರುವದು. ಇದಲ್ಲದೆ ದೀರ್ಘಾಯುಸ್ಸಿನ ಲಕ್ಷಣವೂ ಇರುವದು. ಆದ್ದರಿಂದ ಆತನು ಜೀವವಂತನಾಗಿಯೇ ಇರುವನು' ಎಂದು ನುಡಿದನು. ಈ ಪ್ರಕಾರ ಸತ್ಯವಚನರಾದ ಆ ಋಷಿಗಳು ಸಾವಿತ್ರೀಸತ್ಯವಂತರ ಗುಣಗಳನ್ನು ಕಥನಮಾಡಿ ಸಮಾಧಾನಪಡಿಸಲು, ದ್ಯುಮತ್ಸೇನನು ಸ್ಥಿರಬುದ್ಧಿಯುಳ್ಳವನಾದನು.

ಈ ರೀತಿಯಲ್ಲಿ ಎಲ್ಲರೂ ವಿಚಾರಮಾಡುತ್ತಿರುವ ವೇಳೆಯಲ್ಲಿ ಸಾವಿತ್ರಿಯು ತನ್ನ ಗಂಡನಾದ ಸತ್ಯವಂತನೊಡಗೂಡಿ ಸಂತೋಷದಿಂದ ಆ ಆಶ್ರಮವನ್ನು ಪ್ರವೇಶಮಾಡಿದಳು. ಆಗ ಅಲ್ಲಿದ್ದ ಬ್ರಾಹ್ಮಣರೆಲ್ಲರೂ ಪುತ್ರನೊಡಗೂಡಿದ ದ್ಯುಮತ್ಸೇನನನ್ನು ನೋಡಿ 'ಎಲೈ ದ್ಯುಮತ್ಸೇನನೆ, ಪುತ್ರನಿಂದಲೂ ಸೊಸೆಯಿಂದಲೂ ಯುಕ್ತನಾಗಿ ಕಣ್ಣುಗಳನ್ನು ಪಡೆದ ನಿನ್ನನ್ನು ಈ ದಿವಸ ನಾವು ನೋಡಿದೆವು. ಮೊದಲು ನಾವು ಹೇಳಿದಂತೆಯೇ ಎಲ್ಲಾ ನಿಜವಾಯಿತಷ್ಟೆ? ಇದರಲ್ಲೇನೂ ಸಂಶಯವಿಲ್ಲವಲ್ಲಾ! ನಿನಗೆ ದೈವಯೋಗದಿಂದ ಜಾಗ್ರತೆಯಾಗಿ ಐಶ್ವರ್ಯಲಾಭವಾಗುವದು' ಎಂದು ಹೇಳಿ ಎಲ್ಲರೂ ಅಲ್ಲಿ ಅಗ್ನಿಯನ್ನು ಪ್ರಜ್ವಲನೆಮಾಡಿಕೊಂಡು ಆ ದ್ಯುಮತ್ಸೇನನ ಸಮೀಪದಲ್ಲಿ ಕೂತುಕೊಂಡರು. ಆಗ ದ್ಯುಮತ್ಸೇನನ ಪತ್ನಿಯಾದ ಶೈಬ್ಯೆಯೂ ಸತ್ಯವಂತನೂ ಸಾವಿತ್ರಿಯೂ ಸಹ ಆ ಋಷಿಗಳ ಅಪ್ಪಣೆಯಿಂದ ಅಲ್ಲಲ್ಲಿ ಸಮೀಪದಲ್ಲಿಕುಳಿತುಕೊಂಡರು. ಆಬಳಿಕ ತಪಸ್ವಿಗಳಾದ ಬ್ರಾಹ್ಮಣರು ಕುತೂಹಲಪಡುತ್ತ ರಾಜಕುಮಾರನಾದ ಸತ್ಯವಂತನನ್ನು ನೋಡಿ 'ಎಲೈ ಸತ್ಯವಂತನೆ, ಪತ್ನೀಸಮೇತನಾಗಿ ವನಕ್ಕೆ

ಹೋದ ನೀನು ಜಾಗ್ರತೆಯಾಗಿ ಬಾರದೆ ಯಾತಕ್ಕೆ ಕತ್ತಲೆಮಾಡಿಕೊಂಡು ಬಂದೆ ? ಅಲ್ಲಿ ಏನು ಅಸಂದರ್ಭ ವುಂಟಾಯಿತು ? ನಮ್ಮನ್ನೂ ನಿಮ್ಮ ತಂದೆತಾಯಿಗಳನ್ನೂ ಸಂತಾಪಪಡಿಸಿದೆ. ಯಾತಕ್ಕೆ ಹೀಗಾಯಿತೋ ತಿಳಿಯದು. ಇದಕ್ಕೆ ಕಾರಣವೇನೋ ಹೇಳು' ಎನಲು; ಸತ್ಯವಂತನು 'ಎಲೈ ಮಹಾತ್ಮರೆ, ತಂದೆಯ ಅಪ್ಪಣೆಯನ್ನು ತೆಗೆದುಕೊಂಡು ಪತ್ನೀಸಮೇತನಾಗಿ ಇಲ್ಲಿಂದ ಹೊರಟು ನಾನು, ಅರಣ್ಯವನ್ನು ಸೇರಿ ಅಲ್ಲಿ ಸೌದೆಯನ್ನು ಕಡಿದು, ಅದರಿಂದ ಶಿರೋವೇದನೆಯುಂಟಾಗಿ, ಆಯಾಸಪಟ್ಟು ಅಲ್ಲಿ ಮಲಗಿಕೊಂಡೆನು. ನೀವೆಲ್ಲರೂ ನನ್ನನ್ನು ಕಾಣದೆ ಸಂತಾಪಪಡುವಿರಿ ಎಂದು, ಅಲ್ಲಿಂದೆದ್ದು ಈ ಅವೇಳೆಯಲ್ಲಿ ಇಲ್ಲಿಗೆ ಬಂದೆನು. ಇದು ಹೊರತು ನಾನು ಇನ್ನಾವಕಾರಣವನ್ನೂ ಕಾಣೆನು' ಎಂದನು. ಬಳಿಕ ಗೌತಮನು 'ಎಲೈ ಸತ್ಯವಂತನೆ, ನಿಮ್ಮ ತಂದೆಯಾದ ದ್ಯುಮತ್ಸೇನನಿಗೆ ಅಕಸ್ಮಾತ್ತಾಗಿ ಕಣ್ಣುಕಾಣಿಸುವ ಹಾಗಾಯಿತು. ಇದಕ್ಕೆ ಕಾರಣವನ್ನು ನೀನು ಕಾಣೆಯೆಂದು ಹೇಳುವೆ. ಇದಕ್ಕೆ ಕಾರಣವನ್ನು ಸಾವಿತ್ರಿಯು ತಿಳಿದಿರಬಹುದು. ಎಲೆ ಮಗಳೆ, ಇದಕ್ಕೇನುಕಾರಣವೋ ಹೇಳು. ತೇಜಸ್ಸಿನಿಂದ ನೀನು ಸಾವಿತ್ರೀದೇವಿಗೆ ಸಮಾನಳಾದವಳು. ಇದಕ್ಕೆ ಕಾರಣವನ್ನು ನೀನು ಬಲ್ಲೆ. ಅದು ರಹಸ್ಯವಲ್ಲದ ಪಕ್ಷದಲ್ಲಿ ಸತ್ಯವಾಗಿ ಹೇಳು' ಎನಲು; ಸಾವಿತ್ರಿಯು 'ಎಲೈ ಗೌತಮರೆ, ನಿಮ್ಮ ಸಂಕಲ್ಪವು ಯಥಾರ್ಥವಾದದ್ದು. ನಿಮ್ಮೆದುರಿಗೆ ರಹಸ್ಯವಾದದ್ದು ಯಾವದೂ ಇಲ್ಲ. ಯಥಾರ್ಥವಾಗಿ ಹೇಳುತ್ತೇನೆ, ಕೇಳಬಹುದು. ನನ್ನ ವಿವಾಹಕ್ಕಿಂತಲೂ ಪೂರ್ವದಲ್ಲಿ, ಮಹಾತ್ಮರಾದ ನಾರದರು ಇಂಥ ದಿವಸ ನಿನ್ನ ಗಂಡನಿಗೆ ಮರಣವು ಸಂಭವಿಸುವದೆಂದು ಹೇಳಿದ್ದರು. ಆದ್ದರಿಂದ ಈ ದಿವಸ ಪತಿಯನ್ನು ಬಿಟ್ಟಿರಬಾರದೆಂದು ಆತನ ಜೊತೆಯಲ್ಲೇ ಹೋದೆನು. ಅರಣ್ಯದಲ್ಲಿ ಮಲಗಿದ್ದ ನನ್ನ ಗಂಡನನ್ನು ಕಿಂಕರಸಮೇತನಾದ ಯಮಧರ್ಮರಾಯನು ಪ್ರತ್ಯಕ್ಷವಾಗಿ ಬಂದು ಪಾಶದಿಂದ ಕಟ್ಟಿ, ಜೀವವನ್ನು ಎಳೆದುಕೊಂಡು ದಕ್ಷಿಣದಿಕ್ಕಿಗೆ ಹೊರಟನು. ಆಗ ನಾನು ಅತನನ್ನು ಸ್ತೋತ್ರಮಾಡಲು, ಅದರಿಂದ ಸಂತುಷ್ಟನಾಗಿ ಆ ಯಮಧರ್ಮರಾಯನು ನಮ್ಮ ಮಾವಂದಿರಿಗೆ ಕಣ್ಣುಕಾಣಿಸುವಂತೆಯೂ ರಾಜ್ಯಪ್ರಾಪ್ತಿಯಾಗುವಂತೆಯೂ, ನಮ್ಮ ತಂದೆಗೂ ನನಗೂ ನೂರುನೂರುಮಂದಿ ಮಕ್ಕಳಾಗುವಂತೆಯೂ, ನನ್ನ ಪತಿಗೆ ನಾನೂರುವರುಷ ಆಯುಸ್ಸುಂಟಾಗುವಂತೆಯೂ, ಈ ಐದು ವರಗಳನ್ನು ಕೊಟ್ಟನು. ನನ್ನ ಪತಿಯು ಬದುಕಬೇಕೆಂಬ ಅಪೇಕ್ಷೆಯಿಂದಲೇ ನಾನು ವ್ರತಾಚರಣೆಯನ್ನು ಮಾಡಿದೆನು. ಈ ಕಾರಣದಿಂದ ನಾವು ಬರುವದಕ್ಕೆ ಸಾವಕಾಶವಾಯಿತು. ಎಲೈ ಮಹಾತ್ಮರೆ, ಉತ್ತರೋತ್ತರಸುಖವನ್ನು ಅನುಭವಿಸುವದಕ್ಕೋಸ್ಕರಲೇ ನನಗೆ ಈಗ ಈ ಮಹತ್ತಾದ ದುಃಖವುಂಟಾಯಿತೆಂದು ಭಾವಿಸುತ್ತೇನೆ. ಈ ಸಕಲ ವೃತ್ತಾಂತವನ್ನೂ ನಡೆದಂತೆ ವಿಜ್ಞಾಪಿಸಿರುವೆನು' ಎಂದಳು. ಬಳಿಕ ಋಷಿಗಳು 'ಎಲೌ ಸಾವಿತ್ರಿಯೆ, ಅಧಿಕವಾಗಿ ದುಃಖಪಡುತ್ತ ತಮೋಮಯವಾದ ಮಡುವಿನಲ್ಲಿ ಮುಳುಗಿಹೋಗಿದ್ದ ದ್ಯುಮತ್ಸೇನನ ಕುಲವನ್ನು, ಸತ್ಕುಲಪ್ರಸೂತಳೂ ಸುಶೀಲಸಂಪನ್ನಳೂ ಪತಿವ್ರತಾಚೂಡಾಮಣಿಯೂ ಆದ ನೀನು ಉದ್ಧರಿಮಾಡಿದೆ' ಎಂದು ಆಕೆಯನ್ನು ಶ್ಲಾಘನೆಮಾಡಿ, ಬಳಿಕ ಅವರೆಲ್ಲರೂ ಆ ದ್ಯುಮತ್ಸೇನನ ಸಂಗಡ ಹೋಗಿಬರುತ್ತೇವೆಂದು ಹೇಳಿ ತಮ್ಮತಮ್ಮ ಆಶ್ರಮಗಳಿಗೆ ಹೊರಟು ಹೋದರು" ಎಂದು ಮಾರ್ಕಂಡೇಯನು ಧರ್ಮರಾಯನಿಗೆ ಹೇಳಿದನು.

---

೨೯೮ನೇ ಅಧ್ಯಾಯ.—ಸಾವಿತ್ರ್ಯುಪಾಖ್ಯಾನ—(ದ್ಯುಮತ್ಸೇನನಿಗೆ ಮರಳಿ ರಾಜ್ಯಲಾಭವಾಗುವಿಕೆ)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಮಾರ್ಕಂಡೇಯನು ಧರ್ಮರಾಯನನ್ನು ಕುರಿತು "ಎಲೈ ಧರ್ಮರಾಯನೆ, ಆ ರಾತ್ರಿ ಕಳೆದು ಸೂರ್ಯೋದಯವಾಗಲು, ಆ ಋಷಿಗಳೆಲ್ಲರೂ ಪೂರ್ವಾಹ್ಣದಲ್ಲಿ ಮಾಡತಕ್ಕ ಕರ್ಮಗಳನ್ನು ನೆರವೇರಿಸಿಕೊಂಡು ಪುನಃ ಆ ದ್ಯುಮತ್ಸೇನರಾಯನ ಬಳಿಗೆ ಬಂದು 'ಎಲೈ ರಾಜರ್ಷಿಯೆ, ಇದೆಲ್ಲವೂ ಸಾವಿತ್ರಿಯ ಮಹಾಭಾಗ್ಯದಿಂದಲೇ ಉಂಟಾಗಿರುವದು' ಎಂದು ಪುನಃಪುನಃ ಎಷ್ಟು ಪ್ರಶಂಸೆಮಾಡಿದರೂ ತೃಪ್ತಿಯಿಲ್ಲದೆ ಕೊಂಡಾಡುತ್ತಿದ್ದರು. ಆ ಸಮಯದಲ್ಲಿ ಸಾಲ್ವ

ದೇಶದಿಂದ ರಾಜಕಾರ್ಯನಿರ್ವಾಹಕರಾದ ಜನರು ಬಂದು, ಮಂತ್ರಿಯಿಂದ ಸಪರಿವಾರರಾದ ಶತ್ರುಗಳು ನಾಶವಾಗಿ ಹೋದದ್ದನ್ನು ದ್ಯುಮತ್ಸೇನನಿಗೆ ತಿಳುಹಿಸಿ, 'ಸಾಲ್ವದೇಶದ ಪ್ರಜೆಗಳೆಲ್ಲರೂ ಐಕಮತ್ಯವನ್ನು ಹೊಂದಿ ನಮ್ಮ ಮಹಾರಾಜನಾದ ದ್ಯುಮತ್ಸೇನನು ಕಣ್ಣಿರತಕ್ಕವನೇ ಆಗಲಿ ಕುರುಡನೇ ಆಗಲಿ ಆತನೇ ನಮಗೆ ರಾಜನಾಗಿರಬೇಕೆಂದು ಅಪೇಕ್ಷಿಸುತ್ತಿರುವರು. ಈ ಕಾರ್ಯಕ್ಕೋಸ್ಕರಲೇ ನಾವು ಚತುರಂಗಬಲಸಮೇತರಾಗಿ ಇಲ್ಲಿಗೆ ಬಂದಿರುವೆವು. ಇನ್ನು ನೀನು ರಾಜಧಾನಿಗೆ ಹೊರಡು. ನಿನಗೆ ಜಯವಾಯಿತೆಂದು ಪಟ್ಟಣದಲ್ಲೆಲ್ಲಾ ಡಂಗುರವನ್ನು ಹಾಕಿಸಿರುವರು. ನಿಮ್ಮ ವಂಶಪಾರಂಪರ್ಯವಾಗಿ ಪ್ರಾಪ್ತವಾಗಿರುವ ರಾಜ್ಯಪದವಿಯನ್ನು ಸುಖವಾಗಿ ಅನುಭವಿಸು' ಎಂದು ಬಿನ್ನವಿಸಿ, ಆತನಿಗೆ ಕಣ್ಣುಗಳು ಚೆನ್ನಾಗಿ ಕಾಣಿಸುತ್ತಿರುವದನ್ನು ನೋಡಿ ಆಶ್ಚರ್ಯಪಡುತ್ತ, ಎವೆಯಿಕ್ಕದೆ ಆತನನ್ನು ನೋಡುತ್ತ, ತಲೆಬಾಗಿ ಆತನಿಗೆ ವಂದನೆಯನ್ನು ಮಾಡಿದರು. ಬಳಿಕ ದ್ಯುಮತ್ಸೇನನು ಆಶ್ರಮದಲ್ಲಿದ್ದ ವೃದ್ಧರಾದ ಬ್ರಾಹ್ಮಣರಿಗೆ ನಮಸ್ಕಾರವನ್ನು ಮಾಡಿ, ಅವರು ಮಾಡಿದ ಸತ್ಕಾರವನ್ನು ಪರಿಗ್ರಹಿಸಿ, ಶೈಬ್ಯೆಯಿಂದೊಡಗೂಡಿ ದಿವ್ಯವಾದ ಪಾಲಕಿಯಮೇಲೆ ಕುಳಿತು ಸೈನ್ಯಸಮೇತನಾಗಿ ವೈಭವದಿಂದ ರಾಜಧಾನಿಗೆ ಪ್ರವೇಶಮಾಡಿದನು. ಆಗ ಆತನ ಪುರೋಹಿತರು ಪ್ರೀತಿಯಿಂದ ಆತನಿಗೆ ರಾಜ್ಯಾಭಿಷೇಕವನ್ನು ಮಾಡಿ, ಯೌವರಾಜ್ಯದಲ್ಲಿ ಮಹಾತ್ಮನಾದ ಸತ್ಯವಂತನಿಗೆ ಪಟ್ಟಾಭಿಷೇಕವನ್ನು ಮಾಡಿದರು. ಬಳಿಕ ದ್ಯುಮತ್ಸೇನನು ಧರ್ಮದಿಂದ ರಾಜ್ಯಭಾರವನ್ನು ಮಾಡುತ್ತಿರಲು, ಕೆಲವು ಕಾಲವು ಕಳೆಯಲು ಸತ್ಯವಂತನು ಸಾವಿತ್ರಿಯಲ್ಲಿ ಶೂರರಾಗಿಯೂ ಕೀರ್ತಿಸಂಪನ್ನರಾಗಿಯೂ ಇರುವ ನೂರುಮಂದಿ ಮಕ್ಕಳನ್ನು ಪಡೆದನು. ಹಾಗೆಯೇ ಮದ್ರದೇಶಾಧಿಪತಿಯಾದ ಅಶ್ವಪತಿಯೂ ಮಾಳವಿಯಲ್ಲಿ ನೂರುಮಂದಿ ಶೂರರಾದ ಮಕ್ಕಳನ್ನು ಪಡೆದನು. ಎಲೈ ಧರ್ಮರಾಯನೆ, ಈ ರೀತಿಯಾಗಿ ಪತಿವ್ರತಾಶಿರೋಮಣಿಯಾದ ಸಾವಿತ್ರಿಯು ತಮ್ಮ ಮಾತಾಪಿತೃಗಳ ಕುಲವನ್ನೂ ಅತ್ತೆಮಾವಂದಿರ ಕುಲವನ್ನೂ ಸಹ ತನ್ನ ಪಾತಿವ್ರತ್ಯದಿಂದ ಉದ್ಧಾರಮಾಡಿದಳು. ಆ ಸಾವಿತ್ರಿಯಂತೆ ಪರಮಮಂಗಳೆಯಾದ ದ್ರೌಪದಿಯೂ ನಿಮಗೆ ಸಂಭವಿಸಿರುವ ಆಪತ್ತುಗಳನ್ನು ತನ್ನ ಪಾತಿವ್ರತ್ಯದಿಂದ ನಿವಾರಣೆಮಾಡುವಳು" ಎಂದು ಮಾರ್ಕಂಡೇಯನು ಧರ್ಮರಾಯನನ್ನು ಸಂತೈಸಿದನು.

ಆಗ ಧರ್ಮರಾಯನು ದುಃಖವನ್ನು ಬಿಟ್ಟು ಕಾಮ್ಯಕವನದಲ್ಲಿ ತಮ್ಮಂದಿರೊಡನೆಯೂ ದ್ರೌಪದಿಯೊಡನೆಯೂ ಸುಖವಾಗಿ ವಾಸಮಾಡುತ್ತಿದ್ದನು. ಎಲೈ ಜನಮೇಜಯರಾಯನೆ, ಪತಿವ್ರತಾಶಿರೋಮಣಿಯಾದ ಸಾವಿತ್ರಿಯ ಉಪಾಖ್ಯಾನವನ್ನು ಯಾರು ಪಠನಮಾಡುವರೋ ಯಾರು ಶ್ರವಣಮಾಡುವರೋ ಅವರು ದುಃಖವನ್ನು ಹೊಂದದೆ ಬೇಕಾದ ಇಷ್ಟಾರ್ಥಗಳನ್ನು ಪಡೆದು ಸುಖವಾಗಿರುವರು—ಎಂದು ವೈಶಂಪಾಯನಮುನೀಶ್ವರನು ಜನಮೇಜಯರಾಯನಿಗೆ ವಿವರಿಸಿದನು.

## ೨೯೯ನೇ ಅಧ್ಯಾಯ.—ಕುಂಡಲಾಹರಣದ ಕಥೆ—(ಸೂರ್ಯಕರ್ಣರ ಸಂವಾದ.)

ತದನಂತರದಲ್ಲಿ ಜನಮೇಜಯರಾಯನು ವೈಶಂಪಾಯನಮುನೀಂದ್ರನನ್ನು ಕುರಿತು—ಎಲೈ ಮಹಾತ್ಮರೆ, ಪೂರ್ವದಲ್ಲಿ ಇಂದ್ರನು "ಕರ್ಣನದೆಸೆಯಿಂದ ಅರ್ಜುನನಿಗೆ ಮಹತ್ತಾದ ಭಯವಿರುವದು. ಅರ್ಜುನನು ಇಲ್ಲಿಂದ ಭೂಲೋಕಕ್ಕೆ ಹೋದಬಳಿಕ ಆ ಭಯವನ್ನು ನಾನು ಪರಿಹರಿಸಿ ಬಿಡುವೆನು" ಎಂದು ಧರ್ಮರಾಯನಿಗೆ ತಿಳುಹಿಸುವಂತೆ ಲೋಮಶರ ಸಂಗಡ ಹೇಳಿ ಕಳುಹಿಸಿಕೊಟ್ಟಿದ್ದನೆಂದು ನೀವು ಹೇಳಿದ್ದೀರಷ್ಟೆ? ಕರ್ಣನ ದೆಸೆಯಿಂದ ಅರ್ಜುನನಿಗೆ ಏನು ಭಯವುಂಟಾಗಿರುವದು? ಅದನ್ನು ಲೋಮಶರು ಯಾತಕ್ಕೆ ವಿವರವಾಗಿ ಹೇಳದೆ ಹೋದರು? ಅದನ್ನು ನೀವು ಹೇಳಬೇಕು—ಎಂದು ಪ್ರಶ್ನೆಮಾಡಲು; ವೈಶಂಪಾಯನಮುನಿಯು—ಎಲೈ ಜನಮೇಜಯರಾಯನೆ, ಆ ಕಥೆಯನ್ನು ನಾನು ಹೇಳುವೆನು ಕೇಳು. ಪಾಂಡವರಿಗೆ ಹನ್ನೆರಡು ವರುಷ ವನವಾಸ ಕಳೆದು ಹದಿಮೂರನೆಯ ವರ್ಷ ಪ್ರಾಪ್ತವಾಗಲು; ದೇವೇಂದ್ರನು ಕರ್ಣನ ಸಹಜವಾದ ಕವಚಕುಂಡಲಗಳನ್ನು ಯಾಚಿಸುವದಕ್ಕೆ ಉದ್ಯು

ಕ್ತನಾದದ್ದನ್ನು ಸೂರ್ಯನು ತಿಳಿದು, ದಿವ್ಯವಾದ ಹಂಸತೂಲಿಕಾತಲ್ಪದಮೇಲೆ ಮಲಗಿಕೊಂಡು ನಿದ್ರೆಮಾಡುತ್ತಿದ್ದ ಸತ್ಯವಾದಿಯಾದ ಕರ್ಣನ ಸ್ವಪ್ನಮಧ್ಯದಲ್ಲಿ, ವೇದವೇತ್ತನಾದ ಬ್ರಾಹ್ಮಣನ ರೂಪವನ್ನು ತಾಳಿ ಪುತ್ರಸ್ನೇಹದಿಂದ ಆತನ ಹಿತಾರ್ಥವಾಗಿ ಆತನನ್ನು ಕುರಿತು "ಎಲೈ ಕರ್ಣನೆ, ಪ್ರೀತಿಯಿಂದ ಹೇಳತಕ್ಕ ನನ್ನ ಮಾತನ್ನು ನೀನು ಕೇಳು. ದೇವೇಂದ್ರನು ಪಾಂಡವರ ಹಿತಾರ್ಥವಾಗಿ ಬ್ರಾಹ್ಮಣರೂಪವನ್ನು ತಾಳಿ ನಿನ್ನ ಕವಚಕುಂಡಲಗಳನ್ನು ಅಪಹರಿಸಬೇಕೆಂದು ಬರುವನು. ಬ್ರಾಹ್ಮಣನಾದವನು ಯಾವ ಪದಾರ್ಥವನ್ನು ಬೇಡಿದಾಗ್ಯೂ ನಿರಾಲೋಚನೆಯಿಂದ ಅದನ್ನು ನೀನು ಕೊಡತಕ್ಕವನೇ ಹೊರತು ಮತ್ತೊಬ್ಬರನ್ನು ಯಾಚಿಸತಕ್ಕವನಲ್ಲವೆಂದು ಜಗತ್ತಿನಲ್ಲಿ ಪ್ರಸಿದ್ಧವಾಗಿರುವದು. ಇದನ್ನು ತಿಳಿದು ಇಂದ್ರನು ನಿನ್ನ ಕುಂಡಲಗಳನ್ನೂ ಕವಚವನ್ನೂ ಯಾಚಿಸುವದಕ್ಕೆ ಬರುವನು. ನೀನು ಅವುಗಳನ್ನು ಆತನಿಗೆ ಕೊಡದೆ ನಿನ್ನ ಬುದ್ಧಿಯಿದ್ದಷ್ಟು ಬಳ್ಳೇ ಮಾತುಗಳನ್ನಾಡಿ ಆತನನ್ನು ಸ್ವಾಧೀನಪಡಿಸಿಕೊ. ಅದರಿಂದ ನಿನಗೆ ಶ್ರೇಯಸ್ಸಾಗುವದು. ದೇವೇಂದ್ರನು ಕುಂಡಲನಿಮಿತ್ತವಾಗಿ ಅನೇಕ ರತ್ನಗಳನ್ನೂ ಸ್ತ್ರೀಯರನ್ನೂ ಗೋವುಗಳನ್ನೂ ನಿನಗೆ ಕೊಡುವದಾಗಿ ಹೇಳ್ಯಾನು? ಅದಕ್ಕೆ ನೀನು ಒಡಂಬಟ್ಟು ಸಹಜವಾದ ನಿನ್ನ ಕವಚಕುಂಡಲಗಳನ್ನು ಆತನಿಗೆ ಕೊಟ್ಟದ್ದೇ ಆದರೆ, ನಿನ್ನ ಆಯುಸ್ಸು ಕ್ಷೀಣವಾಗಿ ನೀನು ಮೃತ್ಯುವಿನ ವಶನಾಗುವೆ. ಸಹಜವಾದ ಆ ಕವಚಕುಂಡಲಗಳಿಂದ ನೀನು ಯುಕ್ತನಾಗಿದ್ದರೆ ಯುದ್ಧರಂಗದಲ್ಲಿ ಯಾವ ಶತ್ರುಗಳೂ ನಿನ್ನನ್ನು ಜಯಿಸಲಾರರು. ನಿನಗೆ ಬದುಕುವದರಲ್ಲಿ ಅಪೇಕ್ಷೆಯಿದ್ದರೆ ಅಮೃತದಿಂದ ಹುಟ್ಟಿದ ಈ ಕುಂಡಲರತ್ನಗಳನ್ನು ನೀನು ರಕ್ಷಿಸಿಕೊ" ಎಂದು ಬೋಧಿಸಿದನು. ಆ ಮಾತನ್ನು ಕೇಳಿ ಕರ್ಣನು ಸ್ವಪ್ನದಲ್ಲಿ ಕಂಡ ಆ ಬ್ರಾಹಣನನ್ನು ಕುರಿತು "ಎಲೈ ಬ್ರಾಹ್ಮಣನೆ, ನೀನು ಯಾರು? ನನ್ನಲ್ಲಿ ಅಧಿಕವಾದ ಪ್ರೀತಿಯನ್ನು ಮಾಡುತ್ತಿರುವೆ; ಹೇಳು" ಎನಲು; ಆ ಬ್ರಾಹ್ಮಣನು "ಎಲೈ ಕರ್ಣನೆ ನಾನು ಸೂರ್ಯನು. ನಿನ್ನಲ್ಲಿ ಪ್ರೀತಿಯಿಂದ ನಿನಗೆ ದರ್ಶನವನ್ನು ಕೊಟ್ಟೆನು. ನನ್ನ ಮಾತನ್ನು ನೀನು ನಡಿಸು. ನಿನಗೆ ಶ್ರೇಯಸ್ಸಾಗುವದು" ಎಂದನು. ಬಳಿಕ ಕರ್ಣನು "ಎಲೈ ಮಹಾತ್ಮನೆ, ಸೂರ್ಯನಾದ ನೀನು ನನ್ನಲ್ಲಿ ಹಿತಾಪೇಕ್ಷೆಯಿಂದ ನನಗೆ ಈ ಮಾತನ್ನು ಹೇಳುವದಕ್ಕೆ ಬಂದ ಬಳಿಕ ನನಗೆ ಶ್ರೇಯಸ್ಸಾಗುವದರಲ್ಲಿ ಸಂಶಯವುಂಟೆ? ಭಕ್ತಿಯಿಂದ ನಾನು ಶ್ರೇಷ್ಠನಾದ ನಿನ್ನನ್ನು ಬೇಡಿಕೊಳ್ಳುವೆನು; ನನ್ನ ಮಾತನ್ನು ಲಾಲಿಸು. ಬ್ರಾಹ್ಮಣರಿಗೆ ಬೇಡಿದ್ದನ್ನು ಕೊಡುವದಾಗಿ ನಾನು ವ್ರತವನ್ನು ಮಾಡಿಕೊಂಡಿರುವದನ್ನು ಲೋಕವೆಲ್ಲವೂ ಬಲ್ಲದು. ನಿನಗೆ ನಾನು ಪ್ರಿಯನಾಗಿದ್ದ ಪಕ್ಷದಲ್ಲಿ ನೀನು ಈ ನನ್ನ ವ್ರತವನ್ನು ಭಂಗಪಡಿಸಬೇಡ. ಎಲೈ ಮಹಾನುಭಾವನೆ, ಪಾಂಡವರ ಹಿತಾರ್ಥವಾಗಿ ಇಂದ್ರನು ಬ್ರಾಹ್ಮಣರೂಪವನ್ನು ಧರಿಸಿ ನನ್ನನ್ನು ಯಾಚಿಸುವದಕ್ಕೋಸ್ಕರ ಇಲ್ಲಿಗೆ ಬಂದು ನನ್ನ ಕುಂಡಲಗಳನ್ನು ಕೇಳಿದರೆ ಅವುಗಳನ್ನು ನಾನು ಕೊಡತಕ್ಕವನೇ ಹೊರತು ಇಲ್ಲವೆಂದು ಹೇಳತಕ್ಕವನಲ್ಲ. ನಾನು ಹಾಗೆ ನಿರಾಕರಿಸಿದರೆ ಲೋಕದಲ್ಲಿ ಪ್ರಖ್ಯಾತವಾಗಿರುವ ನನ್ನ ಕೀರ್ತಿಯು ನಷ್ಟವಾದೀತು. ನಮ್ಮಂಥವರು ಅಪಕೀರ್ತಿಯಿಂದ ಬದುಕುವದಕ್ಕಿಂತಲೂ ಕೀರ್ತಿಯಿಂದ ಮರಣವನ್ನು ಹೊಂದುವದೇ ಉತ್ತಮವಾದದ್ದು. ಆದ್ದರಿಂದ ಇಂದ್ರನು ಪಾಂಡವರ ಹಿತಾರ್ಥವಾಗಿ ಬೇಡುವದಕ್ಕೆ ಬಂದರೆ ಆತನಿಗೆ ನಾನು ಕವಚಕುಂಡಲಗಳನ್ನು ಕೊಡತಕ್ಕದ್ದೇ ಸರಿ. ಇದರಿಂದ ನನಗೆ ಕೀರ್ತಿಯೂ ಇಂದ್ರನಿಗೆ ಅಪಕೀರ್ತಿಯೂ ಪ್ರಾಪ್ತವಾಗುವವು. ಕೀರ್ತಿವಂತನಾದವನು ಸ್ವರ್ಗವನ್ನು ಪಡೆಯುವನೆಂದೂ, ಕೀರ್ತಿರಹಿತನಾದವನು ನಷ್ಟನಾಗಿ ಹೋಗುವನೆಂದೂ ನಾನು ಕೇಳಿರುವೆನು. ಕೀರ್ತಿಯು ಪುರುಷನನ್ನು ತಾಯಿಯು ಸಂರಕ್ಷಿಸುವಂತೆ ರಕ್ಷಿಸುವದು. ಅಪಕೀರ್ತಿಯುಳ್ಳ ಪುರುಷನು ಬದುಕಿದ್ದರೂ ಸತ್ತವನಂತೆಯೇ. ಈ ವಿಷಯದಲ್ಲಿ ಬ್ರಹ್ಮನು ಬಂದು ಪುರಾಣವಚನವನ್ನು ಹೇಳಿರುವನು. ಅದೇನೆಂದರೆ: ಪರಿಶುದ್ಧವಾದ ಕೀರ್ತಿಯೇ ಪುರುಷನಿಗೆ ಆಯುರ್ವೃದ್ಧಿಯನ್ನು ಮಾಡುವದು. ಕೀರ್ತಿಯೇ ಪರಲೋಕದಲ್ಲಿ ಗತಿಪ್ರದವಾದದ್ದು ಎಂದು ಹೇಳಿರುವನು. ಆದ್ದರಿಂದ ಸಹಜವಾದ ಕವಚಕುಂಡಲಗಳನ್ನು ಬ್ರಾಹ್ಮಣನಿಗೆ ಯಥೋಕ್ತವಾಗಿ ದಾನಮಾಡಿ, ಯುದ್ಧರಂಗದಲ್ಲಿ ಸಾಹಸವನ್ನು ಮಾಡಿ ಶತ್ರುಗಳನ್ನು ನಿಗ್ರಹಿಸಿ, ಈ ಶರೀರವನ್ನು ಬಿಟ್ಟು ಶಾಶ್ವತವಾದ ಕೀರ್ತಿಯನ್ನು ಸಂಪಾದಿಸುವೆನು. ಯುದ್ಧರಂಗದಲ್ಲಿ ಭೀತರಾಗಿ ಬದುಕಬೇಕೆಂದು ಅಪೇಕ್ಷಿಸುವರಿಗೆ ಅಭಯದಾನವನ್ನು ಮಾಡಿ, ಬ್ರಾಹ್ಮಣರನ್ನೂ ಬಾಲರನ್ನೂ ವೃದ್ಧರನ್ನೂ ಭಯದ ದೆಸೆಯಿಂದ ಬಿಡಿಸಿ, ಉತ್ತ

ಮವಾದ ಕೀರ್ತಿಯನ್ನು ಪಡೆದುಕೊಂಡು ಸ್ವರ್ಗಕ್ಕೆ ಹೋಗುವೆನು. ಈ ವ್ರತವನ್ನು ನಾನು ಬದುಕಿರುವ ವರೆಗೂ ಬಿಡತಕ್ಕವನಲ್ಲ. ಎಲೈ ಪ್ರಭಾಕರನೆ, ಬಲ ವೃತ್ರ ಮೊದಲಾದ ಶತ್ರುಗಳನ್ನು ಧ್ವಂಸಮಾಡಿದ ತ್ರೈಲೋಕ್ಯಾಧಿಪತಿ ಯಾದ ದೇವೇಂದ್ರನು ಬ್ರಾಹ್ಮಣರೂಪವನ್ನು ಧಾರಣೆಮಾಡಿ ನನ್ನ ಬಳಿಗೆ ಬಂದು ನನ್ನ ಕವಚಕುಂಡಲಗಳನ್ನು ಯಾಚಿಸಿದರೆ ಆತನಿಗೆ ಅವುಗಳನ್ನು ಕೊಟ್ಟು ನಾನು ಉತ್ತಮವಾದ ಗತಿಯನ್ನು ಪಡೆಯುವೆನು" ಎಂದು ಕರ್ಣನು ಸ್ವಪ್ನದಲ್ಲಿ ಸೂರ್ಯನ ಸಂಗಡ ಹೇಳಿದನು.

## ೩೦೦ನೇ ಅಧ್ಯಾಯ.—ಕುಂಡಲಾಹರಣದ ಕಥೆ—(ಸೂರ್ಯಕರ್ಣರ ಸಂವಾದ.)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಆ ಬಳಿಕ ಸೂರ್ಯನು ಕರ್ಣನನ್ನು ಕುರಿತು "ಎಲೈ ಕರ್ಣನೆ, ನೀನು ನಿನಗೂ ನಿನ್ನ ಸ್ನೇಹಿತರಿಗೂ ಪುತ್ರರಿಗೂ ರಾಣಿಯರಿಗೂ ತಂದೆತಾಯಿಗಳಿಗೂ ಸಹ ಅಹಿತವನ್ನು ಆಚರಿಸಬೇಡ. ಶರೀರಕ್ಕೆ ವಿರೋಧವಿಲ್ಲದಂತೆ ಲೋಕದಲ್ಲಿ ಸಕಲಪ್ರಾಣಿಗಳೂ ಕೀರ್ತಿಯನ್ನು ಅಪೇಕ್ಷಿಸಬೇಕು. ಅಂಥ ಕೀರ್ತಿಯು ಸ್ವರ್ಗದಲ್ಲಿ ಸ್ಥಿರವಾಗಿರತಕ್ಕದ್ದು. ಈಗ ನೀನು ಪ್ರಾಣಕ್ಕೆ ಅಪಾಯವುಂಟಾಗತಕ್ಕ ಶಾಶ್ವತವಾದ ಕೀರ್ತಿಯನ್ನು ಬಯಸುತ್ತಿರುವೆ. ಆ ಕೀರ್ತಿಯು ನಿನ್ನ ಪ್ರಾಣಗಳನ್ನು ತೆಗೆದುಕೊಂಡೇ ಹೋಗುವದು. ಈ ವಿಷಯದಲ್ಲಿ ಸಂಶಯವಿಲ್ಲ. ಲೋಕದಲ್ಲಿ ತಾಯಿಯೂ ತಂದೆಯೂ ಮಗನೂ ಬಂಧುಗಳೂ ರಾಜನೂ ಸಹ ಬದುಕಿರತಕ್ಕವರಿಂದಲೇ ಸುಖವನ್ನು ಅನುಭವಿಸುವರು. ನೀನು ಮೃತನಾದಮೇಲೆ ನಿಮ್ಮ ಪಿತೃಾದಿಗಳಿಗೆ ಯಾವ ಸುಖವುಂಟಾದೀತು? ಕೀರ್ತಿಯು ಬದುಕಿರತಕ್ಕವನಿಗೇ ಉಂಟಾದರೆ ಉತ್ತಮವು; ಮೃತನಾಗಿ ಭಸ್ಮೀಭೂತವಾದ ಶರೀರವುಳ್ಳವನಿಗೆ ಕೀರ್ತಿಯಿಂದ ಪ್ರಯೋಜನ ವೇನು? ಮೃತನಾದವನು ಕೀರ್ತಿಯನ್ನೇನುತಿಳಿದಾನು? ಬದುಕಿರತಕ್ಕವನಾದರೆ ಕೀರ್ತಿಯನ್ನು ಅನುಭವಿಸು ವನು. ಮೃತನಾದವನಿಗೆ ಉಂಟಾಗತಕ್ಕ ಕೀರ್ತಿಯು ಸತ್ತವನಿಗೆ ಅಲಂಕರಿಸಿದ ಪುಷ್ಪಮಾಲಿಕೆಯಂತಿರುವದು. ನನ್ನಲ್ಲಿ ಭಕ್ತಿಯುಳ್ಳವರನ್ನು ನಾನು ರಕ್ಷಿಸತಕ್ಕವನು. ನನ್ನಲ್ಲಿ ನೀನು ಭಕ್ತಿಯುಳ್ಳವನಾದ್ದರಿಂದ ನಿನ್ನ ಹಿತಾ ರ್ಥವಾಗಿ ನಾನು ಈ ಮಾತನ್ನು ಹೇಳುತ್ತೇನೆ. ನಿನ್ನಲ್ಲಿ ನನಗೆ ವಾತ್ಸಲ್ಯವಿರುವದರಿಂದ ನನ್ನ ಮಾತನ್ನು ನೀನು ನಡಿಸು. ಈ ವಿಷಯದಲ್ಲೊಂದು ದೇವತಾರಹಸ್ಯವಿರುವದು. ಅದಕ್ಕೋಸ್ಕರ ನಿನಗೆ ನಾನು ಈ ಮಾತನ್ನು ಹೇಳುತ್ತೇನೆ. ವಿಚಾರಮಾಡದೆ ಇದನ್ನು ನೀನು ನಡಿಸು. ಆ ದೇವತಾರಹಸ್ಯವನ್ನು ಈಗ ನೀನು ತಿಳಿಯ ತಕ್ಕವನಲ್ಲವಾದ್ದರಿಂದ ಅದನ್ನು ನಾನು ನಿನಗೆ ಹೇಳುವದಿಲ್ಲ. ಕಾಲಾಂತರದಲ್ಲಿ ನೀನೇ ತಿಳಿದುಕೊಳ್ಳುವೆ. ಇದೋ ಪುನಃಪುನಃ ನಿನಗೆ ಹೇಳುತ್ತೇನೆ: ಇಂದ್ರನು ಬಂದು ಕೇಳಿದರೆ ಸಹಜವಾದ ಕರ್ಣಕುಂಡಲಗಳನ್ನೂ ಕವಚ ವನ್ನೂ ನೀನು ಕೊಡಬೇಡ. ಈ ಕುಂಡಲಗಳನ್ನು ಧರಿಸಿರುವ ನಿನ್ನ ಮುಖವು ವಿಶಾಖ ನಕ್ಷತ್ರಗಳ ಮಧ್ಯದಲ್ಲಿ ರತಕ್ಕ ಚಂದ್ರಬಿಂಬದಂತೆ ಶೋಭಿಸುತ್ತಿರುವದು. ನೀನು ಸವಿನುಡಿಗಳಿಂದ ಇಂದ್ರನನ್ನು ಸಂತೋಷಪಡಿಸಿ ಆತನಿಗೆ ಕುಂಡಲಗಳನ್ನು ಕೊಡದಂತೆ ಉಪಾಯದಿಂದ ತಪ್ಪಿಸಿಕೊ. ಯಾವಾಗಲೂ ನೀನೂ ಅರ್ಜುನನೂ ಸಹ ಒಬ್ಬರ ನ್ನೊಬ್ಬರು ಜಯಿಸಬೇಕೆಂದು ಸ್ಪರ್ಧೆಯನ್ನು ಮಾಡುತ್ತಿರುವಿರಿ. ನೀನು ಕವಚಕುಂಡಲಗಳಿಂದ ಕೂಡಿದ್ದರೆ, ಇಂದ್ರನೇ ಅರ್ಜುನನಿಗೆ ಸಹಾಯವಾದರೂ ಆತನು ಯುದ್ಧದಲ್ಲಿ ನಿನ್ನನ್ನು ಜಯಿಸಲಾರನು. ಹಲವುಮಾತುಗಳಿಂ ದೇನು ಪ್ರಯೋಜನ? ಯುದ್ಧರಂಗದಲ್ಲಿ ಅರ್ಜುನನನ್ನು ಜಯಿಸಬೇಕೆಂದು ನಿನಗೆ ಅಪೇಕ್ಷೆಯಿದ್ದರೆ, ಈ ಕವಚ ಕುಂಡಲಗಳನ್ನು ಇಂದ್ರನಿಗೆ ಕೊಡಬೇಡ" ಎಂದು ಸೂರ್ಯನು ಕರ್ಣನಿಗೆ ಹೇಳಿದನು

## ೩೦೧ನೇ ಅಧ್ಯಾಯ.—ಕುಂಡಲಾಹರಣದ ಕಥೆ—(ಸೂರ್ಯಕರ್ಣರ ಸಂವಾದ.)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಬಳಿಕ ಕರ್ಣನು ಸೂರ್ಯನನ್ನು ಕುರಿತು "ಎಲೈ ಭಗವಂತನಾದ ಸೂರ್ಯನೆ, ನೀನು ತಿಳಿದಿರುವಂತೆ ನಾನು ನಿನಗೆ ಭಕ್ತನೇ

ಹೌದು. ಆದರೆ ಬ್ರಾಹ್ಮಣರು ನನ್ನನ್ನು ಬೇಡಿದರೆ ಅವರಿಗೆ ನಾನು ಕೊಡದೆ ಇರತಕ್ಕದ್ದು ಯಾವದೂ ಇಲ್ಲ. ನಿನ್ನಲ್ಲಿ ಭಕ್ತಿಯಿಂದ ನಾನು ಎಷ್ಟು ವಿಶ್ವಾಸಮಾಡುವೆನೋ ಪುತ್ರಮಿತ್ರಾದಿಗಳಲ್ಲಿ ಅಷ್ಟು ವಿಶ್ವಾಸವನ್ನು ಮಾಡತಕ್ಕವನಲ್ಲ. ಮಹಾತ್ಮರಾದವರು ತಮ್ಮ ಭಕ್ತರ ವಿಷಯದಲ್ಲಿ ಅಧಿಕವಾಗಿ ಪ್ರೀತಿಯನ್ನು ಮಾಡುವ ರೆಂಬುವದನ್ನು ನೀನು ಬಲ್ಲೆ. ಕರ್ಣನು ನನಗೆ ಭಕ್ತನೆಂದೂ, ನನ್ನನ್ನು ಹೊರತು ಅವನು ಮತ್ತೊಂದು ದೈವವನ್ನು ನಂಬಿಲ್ಲವೆಂದೂ ತಿಳಿದು ನೀನು ನನಗೆ ಹಿತವನ್ನು ಹೇಳಿದೆ. ಆದರೂ ನಾನು ನಿನಗೆ ಪುನಃಪುನಃ ಅಡ್ಡಬಿದ್ದು ಬೇಡಿಕೊಳ್ಳುತ್ತೇನೆ; ನಾನು ಹೇಳತಕ್ಕ ಮಾತನ್ನು ಕ್ಷಮಿಸು. ಬ್ರಾಹ್ಮಣರ ಸಂಗಡ ಅನೃತವನ್ನು ನುಡಿಯುವದಕ್ಕೆ ನಾನು ಹ್ಯಾಗೆ ಭಯಪಡುವೆನೋ ಹಾಗೆ ಮೃತ್ಯುವಿಗೆ ಭಯಪಡತಕ್ಕವನಲ್ಲ. ಬ್ರಾಹ್ಮಣರು ನನ್ನ ಪ್ರಾಣವನ್ನು ಬೇಡಿದಾಗ್ಯೂ ಅವರಿಗೆ ನಾನು ಅದನ್ನೂ ವಿಚಾರಮಾಡದೆ ಕೊಡತಕ್ಕವನು. ಅರ್ಜುನನಿಂದ ನನಗೆ ಭಯವುಂಟಾಗುವದೆಂದು ನೀನು ಸಂತಾಪಪಡಬೇಡ. ಅರ್ಜುನನನ್ನು ನಾನು ಯುದ್ಧರಂಗದಲ್ಲಿ ಜಯಿಸದೆ ಬಿಡತಕ್ಕವನಲ್ಲ. ಮಹಾತ್ಮರಾದ ದ್ರೋಣಾಚಾರ್ಯರ ದೆಸೆಯಿಂದ ಅರ್ಜುನನು ಹ್ಯಾಗೆ ದಿವ್ಯಾಸ್ತ್ರಗಳನ್ನು ಕಲಿತು ಕೊಂಡಿರುವನೋ ಹಾಗೆ, ನಾನೂ ಮಹಾತ್ಮರಾದ ಪರಶುರಾಮರ ದೆಸೆಯಿಂದ ದಿವ್ಯಾಸ್ತ್ರಗಳನ್ನು ಕಲಿತುಕೊಂಡಿರು ವೆನು. ಅದನ್ನೂ ನೀನು ಬಲ್ಲೆ. ನಾನು ಹಿಡಿದಿರುವ ಈ ವ್ರತವು ನೆರವೇರುವಂತೆ ನೀನು ಅನುಜ್ಞೆಯನ್ನು ಕೊಡು. ಇಂದ್ರನು ಬೇಡುವದಕ್ಕೆ ಬಂದರೆ ಪ್ರಾಣವನ್ನಾದರೂ ನಾನು ಕೊಡತಕ್ಕವನೇಸರಿ" ಎನಲು, ಸೂರ್ಯನು "ಎಲೈ ಕರ್ಣನೆ, ನಿನ್ನ ಸಹಜವಾದ ಕರ್ಣಕುಂಡಲಗಳನ್ನು ಇಂದ್ರನಿಗೆ ನೀನು ಕೊಡುವ ಪಕ್ಷದಲ್ಲಿ, ಅರ್ಜುನನ ಜಯಾರ್ಥವಾಗಿ ಇಂದ್ರನ ದೆಸೆಯಿಂದ ಅಮೋಘವಾದ ಒಂದು ಶಕ್ತಿಯನ್ನು ಪ್ರಾರ್ಥಿಸಿ ಅದನ್ನು ಆತನು ಕೊಟ್ಟರೆ ಆತನಿಗೆ ಕವಚಕುಂಡಲಗಳನ್ನು ಕೊಡುವದೆಂದು ನಿಯಮವನ್ನು ಮಾಡಿಕೊಂಡು ಹಾಗೆಯೇ ಕೊಡು. ಆ ಇಂದ್ರನು ಕೊಡತಕ್ಕ ಶಕ್ತಿಯನ್ನು ಯುದ್ಧರಂಗದಲ್ಲಿ ನೀನು ಪ್ರಯೋಗಿಸಿದ್ದೇ ಆದರೆ, ಆ ಶಕ್ತ್ಯಾಯುಧವು ಅನೇಕಸಹಸ್ರವೀರರನ್ನು ಸಂಹರಿಸದೆ ಹಿಂತಿರುಗತಕ್ಕದ್ದಲ್ಲ" ಎಂದು ನುಡಿದು ಅಂತರ್ಧಾನವನ್ನು ಹೊಂದಿದನು. ಬಳಿಕ ಕರ್ಣನು ಎಚ್ಚತ್ತು ಪ್ರಾತಸ್ನಾನವನ್ನು ಮಾಡಿಕೊಂಡು ರಾತ್ರಿ ಸ್ವಪ್ನದಲ್ಲಿ ನಡೆದ ವೃತ್ತಾಂತವನ್ನು ತನ್ನ ಜಪವು ಮುಗಿದಬಳಿಕ ಸೂರ್ಯನಿಗೆ ತಿಳುಹಿಸಲು, ಅದನ್ನು ಕೇಳಿ ಸೂರ್ಯನು ನಸುನಗುತ್ತ ಕರ್ಣನನ್ನು ಕುರಿತು "ಅದು ಹಾಗೆಯೇ ಸರಿ" ಎಂದು ನುಡಿದನು. ಆಮೇಲೆ ಕರ್ಣನು ಸ್ವಪ್ನದಲ್ಲಿ ನಡೆದ ವೃತ್ತಾಂತವು ಯಥಾರ್ಥವಾದ ದ್ದೆಂದು ತಿಳಿದು, ಇಂದ್ರನದೆಸೆಯಿಂದ ಶಕ್ತ್ಯಾಯುಧವನ್ನು ಪಡೆಯಬೇಕೆಂದು ಬಯಸುತ್ತ ಆತನ ಆಗಮನವನ್ನೇ ನಿರೀಕ್ಷಿಸುತ್ತಿದ್ದನು—ಎಂದು ವೈಶಂಪಾಯನಮುನೀಶ್ವರನು ಜನಮೇಜಯರಾಯನಿಗೆ ವಿವರಿಸಿದನು.

### ೩೦೭ನೇ ಅಧ್ಯಾಯ.—ಕುಂಡಲಾಹರಣ—(ಕುಂತಿಭೋಜನು ಕುಂತಿಗೆ ಬುದ್ಧಿ ಹೇಳುವಿಕೆ.)

ಬಳಿಕ ಜನಮೇಜಯರಾಯನು ವೈಶಂಪಾಯನಮುನೀಶ್ವರನನ್ನು ಕುರಿತು—ಎಲೈ ಮುನೀಂದ್ರನೆ, ಸೂರ್ಯನು ಕರ್ಣನ ಸಂಗಡ ಒಂದು ದೇವತಾರಹಸ್ಯವಿರುವದೆಂದು ಹೇಳಿ ಅದನ್ನು ಪ್ರಕಾಶಮಾಡದೆ ಹೋದನಲ್ಲ! ಆ ರಹ ಸ್ಯವೇನು? ಕರ್ಣನ ಕವಚಕುಂಡಲಗಳು ಎಂಥಾವು? ಯಾತಕ್ಕೋಸ್ಕರ ಅವನು ಕವಚಕುಂಡಲಗಳೊಡನೆ ಹುಟ್ಟಿ ದನು? ಇವುಗಳನ್ನೆಲ್ಲಾ ಕೇಳಬೇಕೆಂದು ನನಗೆ ಕುತೂಹಲವಿರುವದು. ನೀನು ವಿವರಿಸಬೇಕು—ಎನಲು; ವೈಶಂ ಪಾಯನನು—ಎಲೈ ಜನಮೇಜಯರಾಯನೇ ಕೇಳು, ತೀಕ್ಷ್ಣವಾದ ತೇಜಸ್ಸುಳ್ಳವನಾಗಿಯೂ ಮಹತ್ತಾದ ಆಕಾರವು ಳ್ಳವನಾಗಿಯೂ, ಗಡ್ಡ ಮೀಸೆ ಜಡೆಗಳನ್ನು ಧರಿಸಿರುವನಾಗಿಯೂ, ದರ್ಶನೀಯನಾಗಿಯೂ, ಜೇನುತುಪ್ಪದಂತೆ ಮೈಬಣ್ಣವುಳ್ಳವನಾಗಿಯೂ, ಮಧುರವಾಗಿ ನುಡಿಯತಕ್ಕವನಾಗಿಯೂ, ತಪಸ್ಸಿನಲ್ಲೂ ವೇದಾಧ್ಯಯನದಲ್ಲೂ ನಿರತ ನಾಗಿಯೂ ಇರುವ ಒಬ್ಬ ಮಹಾತಪಸ್ವಿಯು ಪೂರ್ವದಲ್ಲಿ ಕುಂತಿಭೋಜರಾಯನ ಮನೆಗೆ ಬಂದು ಆತನನ್ನು ಕುರಿತು "ಎಲೈ ಮಹಾರಾಜನೆ, ನಿನ್ನ ಮನೆಯಲ್ಲಿ ಭಿಕ್ಷವನ್ನು ತೆಗೆದುಕೊಂಡು ಭೋಜನಮಾಡುತ್ತ ಇಲ್ಲೇ ವಾಸಮಾಡ ಬೇಕೆಂದು ಅಪೇಕ್ಷಿಸುವೆನು. ನೀನೇ ಆಗಲಿ, ನಿನ್ನವರೇ ಆಗಲಿ, ನನಗೆ ಅಪ್ರಿಯವನ್ನು ಮಾಡಕೂಡದು. ಹಾಗಿದ್ದ

ಪಕ್ಷದಲ್ಲಿ ನಿನ್ನ ಮನೆಯಲ್ಲಿ ನಾನು ವಾಸಮಾಡುವೆನು. ನಾನು ನನ್ನ ಮನಸ್ಸು ಬಂದಾಗ ಬರತಕ್ಕವನು, ಮನಸ್ಸು ಬಂದಾಗ ಹೋಗತಕ್ಕವನು. ನನ್ನ ಶಯನಾಸನಾದಿಗಳ ವಿಷಯದಲ್ಲಿ ಯಾರೂ ಅಪರಾಧವನ್ನು ಮಾಡಕೂಡದು" ಎನಲು ; ಕುಂತಿಭೋಜನು ಆ ಮಾತನ್ನು ಕೇಳಿ ಸಂತೋಷದಿಂದ "ಎಲೈ ಮಹಾತ್ಮರೆ, ಅವಶ್ಯವಾಗಿ ಹಾಗಾಗಬಹುದು. ಶೀಲಸಂಪನ್ನಳಾಗಿಯೂ ಯಶಸ್ವಿನಿಯಾಗಿಯೂ ಇರುವ ಪೃಥೆಯೆಂಬ ನನ್ನ ಕನ್ಯಕೆಯು ಮರ್ಯಾದೆಯಿಂದ ತಮ್ಮ ಶುಶ್ರೂಷೆಯನ್ನು ಮಾಡುವಳು. ಅದರಿಂದ ತಮಗೂ ಸಂತೋಷವಾಗಬಹುದು. ಅವಶ್ಯವಾಗಿ ತಾವು ನನ್ನ ಮನೆಯಲ್ಲಿ ವಾಸಮಾಡಬಹುದು" ಎಂದು ಅವರಿಗೆ ಸತ್ಕಾರವನ್ನು ಮಾಡಿ, ತನ್ನ ಕನ್ಯೆಯಾದ ಪೃಥೆಯನ್ನು ಕುರಿತು "ಎಲೆ ಮಗಳೆ, ಈ ಮಹಾತ್ಮರು ನಮ್ಮ ಮನೆಯಲ್ಲಿ ವಾಸಮಾಡಬೇಕೆಂದು ಅಪೇಕ್ಷಿಸುವರು. ಹಾಗೆಯೇ ಆಗಲೆಂದು ನಾನು ಒಪ್ಪಿಕೊಂಡಿರುವೆನು. ನೀನು ಇವರ ಶುಶ್ರೂಷೆಯನ್ನು ಮಾಡಿಕೊಂಡಿರತಕ್ಕದ್ದು. ನನ್ನ ಮಾತನ್ನು ನೀನು ಕಳೆಯಬೇಡ. ಈ ಬ್ರಾಹ್ಮಣರು ತಪಸ್ವಿಗಳು, ಮತ್ತು ವೇದಾಧ್ಯಯನದಲ್ಲಿ ನಿರತರಾದವರು. ಇವರು ಏನೇನು ಬೇಡುವರೋ ಅದೆಲ್ಲವನ್ನೂ ನೀನು ಮಾತ್ಸರ್ಯವಿಲ್ಲದೆ ಕೊಡು. ಬ್ರಾಹ್ಮಣರು ದೇವತಾಸ್ವರೂಪರು, ಮತ್ತು ತಪೋರೂಪರು. ಬ್ರಾಹ್ಮಣರಿಗೆ ನಮಸ್ಕಾರಮಾಡೋಣದರಿಂದಲೇ ಸೂರ್ಯನು ಆಕಾಶದಲ್ಲಿ ಪ್ರಕಾಶಿಸುವನು. ಮಾನಾರ್ಹರಾದ ಬ್ರಾಹ್ಮಣರಿಗೆ ಅವಮಾನ ಮಾಡಿದ್ದರಿಂದಲೇ ವಾತಾಪಿಯೆಂಬ ಅಸುರನೂ ತಾಲಜಂಘನೂ ಸಹ ಬ್ರಹ್ಮದಂಡದಿಂದ ಹತರಾಗಿ ಹೋದರು. ಈ ಮಹಾತ್ಮರ ಸೇವಾರ್ಥವಾಗಿ ನಿನ್ನನ್ನು ನೇಮಿಸಿರುವೆನು. ನೀನು ಪ್ರಮಾದವಿಲ್ಲದೆ ಯಾವಾಗಲೂ ನೇಮದಿಂದ ಇವರ ಶುಶ್ರೂಷೆಯನ್ನು ಮಾಡು. ಬಾಲ್ಯಪ್ರಭೃತಿ ಬ್ರಾಹ್ಮಣರಲ್ಲಿಯೂ ಗುರುಗಳಲ್ಲಿಯೂ ಬಂಧುಗಳಲ್ಲಿಯೂ ಮಿತ್ರಜನರಲ್ಲಿಯೂ ಮಾತಾಪಿತೃಗಳಲ್ಲಿಯೂ ನೀನು ಭಕ್ತಿವಿಶ್ವಾಸಗಳಿಂದ ನಡೆದುಕೊಳ್ಳುತ್ತಿರುವೆ. ಅಂತಃಪುರದಲ್ಲೂ ಹೊರಗೂ ಸಹ ನಿನ್ನ ಸಚ್ಚರಿತ್ರೆಯಿಂದ ಸಂತುಷ್ಟರಾಗದಿರುವವರು ಯಾರೂ ಇಲ್ಲ. ಆದರೆ ಈ ಬ್ರಾಹ್ಮಣರು ಕೋಪಶೀಲರು. ನೀನು ಬಾಲೆಯಾಗಿಯೂ ನನಗೆ ಮಗಳಾಗಿಯೂ ಇರುವದರಿಂದ, ನೀನು ಎಷ್ಟು ವಿವೇಕವುಳ್ಳವರಾದರೂ ನಿನಗೆ ನಾನು ಬುದ್ಧಿವಾದವನ್ನು ಹೇಳಬೇಕೆಂದು ತಿಳಿದು ಹೇಳಿರುವೆನು. ಶೂರರಾಯನಿಗೆ ಮಗಳಾಗಿ ವೃಷ್ಣಿವಂಶದಲ್ಲಿ ಉತ್ಪನ್ನಳಾಗಿರುವೆ. ನಿನ್ನನ್ನು ಬಾಲ್ಯದಲ್ಲೇ ನಿಮ್ಮ ತಂದೆಯು ಪ್ರೀತಿಯಿಂದ ನನಗೆ ಕೊಟ್ಟನು. ನೀನು ವಸುದೇವನಿಗೆ ತಂಗಿಯಾಗಬೇಕು. ನಿಮ್ಮ ತಂದೆಯು ಮೊದಲು ಹುಟ್ಟಿದ ಮಗಳನ್ನು ನಿನಗೆ ಕೊಡುತ್ತೇನೆಂದು ಪ್ರತಿಜ್ಞೆಮಾಡಿ, ಹಾಗೆಯೇ ನನಗೆ ನಿನ್ನನ್ನು ಕೊಟ್ಟಿರುವನು. ಆದಕಾರಣ ನೀನು ನನ್ನ ಮಕ್ಕಳಲ್ಲಿ ಶ್ರೇಷ್ಠಳಾದವಳು. ಸುಖದಿಂದ ಸುಖವನ್ನು ಹೊಂದಿದ ಹಾಗೂ, ಮಡುವಿನಿಂದ ಮಡುವಿಗೆ ಬಂದಹಾಗೂ, ಆ ಕುಲದಿಂದ ನೀನು ನಮ್ಮ ಕುಲಕ್ಕೆ ಬಂದು ನಮ್ಮ ಕುಲಕ್ಕೆ ವೃದ್ಧಿಯನ್ನುಂಟುಮಾಡಿದೆ. ಲೋಕದಲ್ಲಿ ದುಷ್ಕುಲಪ್ರಸೂತರಾಗಿ ನಿರ್ಬಂಧವನ್ನು ಹೊಂದಿದ ಸ್ತ್ರೀಯರು ಬಾಲಭಾವದಿಂದ ಪ್ರಾಯಶಃ ದುಷ್ಕೃತ್ಯಗಳನ್ನು ಮಾಡುವರು. ನೀನಾದರೋ ರಾಜಕುಲದಲ್ಲಿ ಹುಟ್ಟಿ ಅದ್ಭುತವಾದ ರೂಪವುಳ್ಳವಳಾಗಿ, ಆಯಾ ಸುಗುಣಗಳಿಂದ ಸಂಪನ್ನಳಾಗಿರುವೆ. ಈ ನೀನು ಗರ್ವವನ್ನೂ ಡಂಭವನ್ನೂ ದುರಭಿಮಾನವನ್ನೂ ಬಿಟ್ಟು ಈ ಮಹಾನುಭಾವರ ಶುಶ್ರೂಷೆಯನ್ನು ಮಾಡು. ಇದರಿಂದ ನಿನಗೆ ಶ್ರೇಯಸ್ಸುಂಟಾಗುವದು. ಈ ಮಹಾತ್ಮರು ಕೋಪಗೊಂಡದ್ದೇ ಆದರೆ ನಮ್ಮ ಕುಲವನ್ನೇ ನಾಶಮಾಡಿಬಿಡುವರು" ಎಂದು ಕುಂತಿಭೋಜನು ಪೃಥಾದೇವಿಗೆ ಹೇಳಿದನು.

೩೦೩ನೇ ಅಧ್ಯಾಯ.—ಕುಂಡಲಾಹರಣ—(ಕುಂತಿಯು ದ್ವಿಜಪರಿಚರ್ಯೆಮಾಡುವಿಕೆ.)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಬಳಿಕ ಪೃಥಾದೇವಿಯು ತಂದೆಯನ್ನು ಕುರಿತು "ಎಲೈ ತಂದೆಯೆ, ನೀನು ಭಾಷೆಕೊಟ್ಟಿರುವಂತೆ ನಾನು ಈ ಬ್ರಾಹ್ಮಣನನ್ನು ಶುಶ್ರೂಷೆಮಾಡಿಕೊಂಡಿರುತ್ತೇನೆ. ಇದು ಯಥಾರ್ಥವು. ಬ್ರಾಹ್ಮಣರ ಸೇವೆಯನ್ನು ಮಾಡಿಕೊಂಡಿರಬೇಕೆಂಬುವದೇ ನನ್ನ ಸ್ವಭಾವವು. ಇದರಮೇಲೆ ನಿನ್ನ ಆಜ್ಞಾನುಸಾರವಾಗಿ ನಡೆದುಕೊಂಡು ನಿನಗೆ ಪ್ರಿಯವನ್ನು ಮಾಡು

ವದು ನನಗೆ ಶ್ರೇಯಸ್ಕರವಾದದ್ದು. ಆ ಮಹಾತ್ಮನಾದ ಬ್ರಾಹ್ಮಣನು ಸಾಯಂಕಾಲದಲ್ಲೇ ಆಗಲಿ, ಪ್ರಾತಃಕಾಲದಲ್ಲೇ ಆಗಲಿ, ರಾತ್ರಿಯಲ್ಲೇ ಆಗಲಿ, ಅರ್ಧರಾತ್ರಿಯಲ್ಲೇ ಆಗಲಿ, ಯಾವಾಗ ಬಂದರೂ ನಾನು ಆತನ ಇಷ್ಟಾನುಸಾರವಾಗಿ ಆತನ ಶುಶ್ರೂಷೆಯನ್ನು ಮಾಡುತ್ತ ಆತನು ನನ್ನಮೇಲೆ ಕೋಪವನ್ನು ಮಾಡದಂತೆ ನಡೆದುಕೊಳ್ಳುತ್ತೇನೆ. ನಿನ್ನ ಅಜ್ಞಾನುಸಾರವಾಗಿ ನನಗೆ ಶ್ರೇಯಸ್ಸಾಗುವದಕ್ಕೋಸ್ಕರ ಬ್ರಾಹ್ಮಣರ ಸೇವೆಯನ್ನು ಮಾಡತಕ್ಕದ್ದು ನನಗೆ ಪರಮಲಾಭವಾಗಿರುವದು. ಈ ವಿಷಯದಲ್ಲಿ ನೀನು ನನ್ನಲ್ಲಿ ನಂಬಿಕೆಯನ್ನಿಡು. ಮನಸ್ಸಿನಲ್ಲಿ ಮತ್ತೊಂದೆಣಿಸಬೇಡ. ನಮ್ಮ ಮನೆಯಲ್ಲಿ ಆ ಬ್ರಾಹ್ಮಣನು ಸಂತೋಷದಿಂದ ಹ್ಯಾಗೆ ವಾಸಮಾಡಿಕೊಂಡಿರಬೇಕೋ, ನಿನಗೆ ಹ್ಯಾಗೆ ಶ್ರೇಯಸ್ಸಾಗಬೇಕೋ, ಹಾಗೆ ನಾನು ಪ್ರವರ್ತಿಸುತ್ತೇನೆ. ನೀನು ಮನಸ್ಸಿನಲ್ಲಿರುವ ಸಂತಾಪವನ್ನು ಬಿಡು. ಮಹಾತ್ಮರಾದ ಬ್ರಾಹ್ಮಣರು ನಮ್ಮ ಪೂಜೆಯಿಂದ ಸಂತುಷ್ಟರಾದರೆ ನಮಗೆ ಬೇಕಾದ ಇಷ್ಟಾರ್ಥಗಳು ಸಿದ್ಧಿಸುವವೆಂಬುವದನ್ನೂ, ಅವರು ಕೋಪಗೊಂಡರೆ ನಮಗೆ ಹಾನಿಯಾಗುವದೆಂಬುವದನ್ನೂ ನಾನು ಬಲ್ಲೆನು. ಆದ್ದರಿಂದ ಆ ಬ್ರಾಹ್ಮಣನಿಂದ ನಿನಗೆ ವ್ಯಥೆಯುಂಟಾಗದಂತೆ ನಡೆದುಕೊಳ್ಳುತ್ತ ಆತನಿಗೆ ಸಂತೋಷವುಂಟಾಗುವಂತೆ ಮಾಡುತ್ತೇನೆ. ಪೂರ್ವದಲ್ಲಿ ಸುಕನ್ಯೆಯು ಅಪರಾಧದಿಂದ ಚ್ಯವನಋಷಿಗಳಿಗೆ ಕೋಪವುಂಟಾದದ್ದನ್ನು ನಾನು ಕೇಳಿ ಬಲ್ಲೆನು. ಅಂಥ ಅಪರಾಧವನ್ನು ಮಾಡಿದ್ದೇ ಆದರೆ ಬ್ರಾಹ್ಮಣರು ರಾಜರಿಗೆ ಅಶ್ರೇಯಸ್ಸನ್ನುಂಟುಮಾಡುವರು. ಆದ್ದರಿಂದ ನಾನು ಹೆಚ್ಚಾದ ನಿಯಮದಿಂದ ನಿನ್ನ ಅಜ್ಞಾನುಸಾರವಾಗಿ ಆ ಬ್ರಾಹ್ಮಣನ ಸೇವೆಯನ್ನು ಮಾಡಿಕೊಂಡಿರುತ್ತೇನೆ" ಎಂದು ನುಡಿದಳು. ಆ ಮಾತನ್ನು ಕೇಳಿ ಕುಂತಿಭೋಜರಾಯನು ಆಕೆಯನ್ನು ಆಲಿಂಗನೆಮಾಡಿಕೊಂಡು, "ಎಲೆ ಮಗಳೆ, ನೀನು ಹೇಳಿದಹಾಗೆಯೇ ಸರಿ. ನನ್ನ ಹಿತಕ್ಕೋಸ್ಕರಲೂ ನಿನ್ನ ಹಿತಕ್ಕೋಸ್ಕರಲೂ ನಮ್ಮಕುಲದ ಹಿತಕ್ಕೋಸ್ಕರಲೂ ಆ ಬ್ರಾಹ್ಮಣನ ಶುಶ್ರೂಷೆಯನ್ನು ನೀನು ಸರಿಯಾಗಿ ಮಾಡಿಕೊಂಡಿರತಕ್ಕವಳೇ ಸರಿ" ಎಂದು ಶ್ಲಾಘಿಸಿ, ಆ ಬ್ರಾಹ್ಮಣನ ಶುಶ್ರೂಷೆಗೆ ಆಕೆಯನ್ನು ನೇಮಿಸಿ; ಆತನನ್ನು ಕುರಿತು "ಎಲೈ ಮಹಾತ್ಮನೆ, ಈ ನನ್ನ ಮಗಳು ಬಾಲೆಯು, ಸುಖದಿಂದ ಬೆಳೆದಿರುವಳು. ಈಕೆಯು ಏನಾದರೂ ಅಪರಾಧವನ್ನು ಮಾಡಿದರೂ ಅದನ್ನು ನೀನು ಮನಸ್ಸಿನಲ್ಲಿ ತರಕೂಡದು. ಬಾಲರೂ ವೃದ್ಧರೂ ತಪಸ್ವಿಗಳೂ ಅಪರಾಧಮಾಡಿದರೆ ಅವರ ವಿಷಯದಲ್ಲಿ ಮಹಾತ್ಮರಾದವರು ಕ್ರೋಧಮಾಡದೆ ಕ್ಷಮೆಯನ್ನೇ ತಾಳುವರು. ನಮ್ಮ ಶಕ್ತ್ಯನುಸಾರವಾಗಿಯೂ ನಮ್ಮ ಉತ್ಸಾಹಾನುಸಾರವಾಗಿಯೂ ನಾವು ಎಷ್ಟು ಪೂಜೆಯನ್ನು ಮಾಡುತ್ತೇವೊ ಅದನ್ನು ನೀನು ಸಂತೋಷದಿಂದ ಸ್ವೀಕರಿಸಬೇಕು" ಎಂದು ಬೇಡಿಕೊಂಡನು. ಅದನ್ನು ಕೇಳಿ ಆ ಬ್ರಾಹ್ಮಣನು "ಎಲೈ ರಾಯನೆ, ಹಾಗೆಯೇ ಆಗಲಿ" ಎಂದನು. ಬಳಿಕ ಕುಂತಿಭೋಜನು ಸಂತುಷ್ಟನಾಗಿ ಚಂದ್ರನಂತೆಯೂ ಹಂಸದಂತೆಯೂ ನಿರ್ಮಲವಾಗಿರುವ ಒಂದು ಮನೆಯನ್ನು ಆತನಿಗೋಸ್ಕರ ಬಿಟ್ಟುಕೊಟ್ಟು, ಅಲ್ಲೇ ಹೋಮಶಾಲೆಯನ್ನು ಮಾಡಿಕೊಟ್ಟು, ಪೀಠಾದಿಗಳನ್ನೂ ಆಹಾರಪದಾರ್ಥಗಳನ್ನೂ ತಾನೇ ಸಿದ್ಧಪಡಿಸಿಕೊಟ್ಟು, ತನ್ನ ಮಗಳನ್ನು ಆತನ ಶುಶ್ರೂಷಾರ್ಥವಾಗಿ ಕಳುಹಿಸಿಕೊಡಲು; ಆ ಪೃಥೆಯು ಶುಚಿರ್ಭೂತಳಾಗಿ ಅಧಿಕವಾದ ಪ್ರಯತ್ನದಿಂದ ಆಲಸ್ಯವನ್ನೂ ಅಭಿಮಾನವನ್ನೂ ಬಿಟ್ಟು, ಪೂಜ್ಯನಾದ ಆ ಬ್ರಾಹ್ಮಣನನ್ನು ದೇವತೆಗಳನ್ನು ಸೇವಿಸುವಂತೆ ಸೇವಿಸಿಕೊಂಡಿದ್ದಳು.

### ೩೦೪ನೇ ಅಧ್ಯಾಯ.—ಕುಂಡಲಾಹರಣದ ಕಥೆ—(ಕುಂತಿಗೆ ಮಂತ್ರಪ್ರಾಪ್ತಿ.)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಆಗ ಆ ಪೃಥೆಯು ತಪೋನಿಷ್ಠನಾದ ಆ ಬ್ರಾಹ್ಮಣನನ್ನು ಪ್ರತಿದಿನದಲ್ಲೂ ಶುದ್ಧವಾದ ಮನಸ್ಸಿನಿಂದ ಸೇವಿಸಿಕೊಂಡಿದ್ದಳು: ಆ ಬ್ರಾಹ್ಮಣನು ಒಂದೊಂದುದಿವಸ ಪ್ರಾತಃಕಾಲಕ್ಕೆ ಬರುತ್ತೇನೆಂದು ಹೇಳಿ ಆಗ ಬಾರದೆ ಸಾಯಂಕಾಲದಲ್ಲಿ ಬಂದರೂ, ಅರ್ಧರಾತ್ರಿಯಲ್ಲಿ ಬಂದರೂ, ಆಯಾ ಕಾಲಕ್ಕೆ ಸರಿಯಾಗಿ ಆತನಿಗೆ ಪೀಠವೊದಲಾದವುಗಳನ್ನು ಕೊಟ್ಟು, ಭಕ್ಷ್ಯಭೋಜ್ಯಗಳಿಂದ ಭೋಜನಮಾಡಿಸಿ, ದಿನದಿನವೂ ಅತಿಶಯವಾಗಿ ಉಪಚಾರಮಾಡುತ್ತ, ಆತನು ಜಭರಿಸಿಕೊಂಡರೂ ಬಯ್ದರೂ ಆತನಿಗೆ ಪ್ರತಿಹೇಳದೆ, ಆತನು ಯಾವ ಕಾಲದಲ್ಲಿ ಬಂದು ಯಾವ ದುರ್ಲ

ಭವಾದ ಪದಾರ್ಥವನ್ನು ಅಪೇಕ್ಷಿಸಿದರೂ ಅದನ್ನು ಸಿದ್ಧವಾಗಿರುವದೆಂದು ಆತನಿಗೆ ಸಮರ್ಪಣೆಮಾಡುತ್ತ, ಗುರುವಿಗೆ ಶಿಷ್ಯನು ಉಪಚಾರಮಾಡುವಂತೆಯೂ ತಂದೆಗೆ ಮಗನು ಶುಶ್ರೂಷೆಮಾಡುವಂತೆಯೂ ಮಾವನಿಗೆ ಸೊಸೆಯು ಶುಶ್ರೂಷೆಮಾಡುವಂತೆಯೂ ಆ ಬ್ರಾಹ್ಮಣನಿಗೆ ಶುಶ್ರೂಷೆಯನ್ನು ಮಾಡಿ, ಆತನಿಗೆ ಪ್ರೀತಿಯುಂಟಾಗುವ ಹಾಗೆ ಮಾಡಿದಳು. ಆಗ ಆ ಬ್ರಾಹ್ಮಣನು ಪೃಥೆಯ ಸದ್ವೃತ್ತಿಯಿಂದಲೂ ಆಕೆಯು ಜಾಗರೂಕಳಾಗಿ ಸರಿಯಾಗಿ ತನ್ನ ಸೇವೆಯನ್ನು ಮಾಡುವದರಿಂದಲೂ ಬಹಳವಾಗಿ ಸಂತೋಷಪಟ್ಟನು. ಕುಂತಿಭೋಜರಾಯನು ಪ್ರತಿದಿವಸದಲ್ಲೂ ತನ್ನ ಮಗಳನ್ನು ಕುರಿತು "ಎಲೆ ಮಗಳೆ, ನಿನ್ನ ಸೇವಾವೃತ್ತಿಯಿಂದ ಆ ಬ್ರಾಹ್ಮಣನು ಸಂತೋಷಪಡುವನೆ?" ಎಂದು ಹಗಲೂ ರಾತ್ರಿ ವಿಚಾರಿಸುತ್ತಿದ್ದನು. ಆಗ ಪೃಥೆಯು ತಂದೆಯನ್ನು ಕುರಿತು "ಎಲೈ ತಂದೆಯೆ, ಆ ಬ್ರಾಹ್ಮಣನು ನನ್ನ ಸೇವೆಯಿಂದ ಸಂತೊಷಪಡುತ್ತಿರುವನು" ಎಂದು ನುಡಿಯುತ್ತಿದ್ದಳು. ಬಳಿಕ ಹೀಗೆ ಒಂದು ವರುಷ ಕಳೆಯಲು, ಪೃಥಾದೇವಿಯಲ್ಲಿ ಯಾವ ಅಪರಾಧವೂ ಇಲ್ಲದೆ ಆಕೆಯು ಸರಿಯಾಗಿ ತನ್ನ ಶುಶ್ರೂಷೆಯನ್ನು ಮಾಡುತ್ತಿರುವದನ್ನು ನೋಡಿ ಸಂತೋಷಪಟ್ಟು, ಆಕೆಯನ್ನು ಕುರಿತು "ಎಲೆ ವತ್ಸೆ, ನಿನ್ನ ಶುಶ್ರೂಷೆಯಿಂದ ನಾನು ಸಂತೋಷಪಟ್ಟಿರುವೆನು. ಮನುಷ್ಯರಿಗೆ ದುರ್ಲಭವಾದ ವರವನ್ನು ನೀನು ಬೇಡು. ಆ ವರಗಳಿಂದ ಲೋಕದಲ್ಲಿರುವ ಎಲ್ಲಾ ಸ್ತ್ರೀಯರಿಗಿಂತಲೂ ನೀನು ಅಧಿಕವಾಗಿ ಪ್ರಕಾಶಿಸುವೆ" ಎಂದನು. ಪೃಥಾದೇವಿಯು "ಎಲೈ ಮಹಾತ್ಮನೆ, ನಾನು ಮಾಡಿದ ಶುಶ್ರೂಷೆಯನ್ನು ಒಪ್ಪಿ ನೀನು ಪ್ರಸನ್ನನಾದ್ದರಿಂದಲೂ, ನಮ್ಮ ತಂದೆಯು ಪ್ರಸನ್ನನಾಗಿರುವದರಿಂದಲೂ, ನೀನು ನನಗೆ ವರಗಳನ್ನು ಕೊಟ್ಟದ್ದಕ್ಕಿಂತಲೂ ಹೆಚ್ಚೆಂದು ನಾನು ತಿಳಿದಿರುವೆನು" ಎಂದಳು. ಬಳಿಕ ಆ ಬ್ರಾಹ್ಮಣನು ಪೃಥಾದೇವಿಯನ್ನು ಕುರಿತು "ಎಲೆ ಕುಂತಿಯೆ, ನೀನಾಗಿ ನಾನು ಕೊಡತಕ್ಕ ವರವನ್ನು ಅಪೇಕ್ಷಿಸದೆ ಇದ್ದರೂ ನಾನೇ ವಿಶ್ವಾಸದಿಂದ ದೇವತೆಗಳನ್ನು ಕರೆಯತಕ್ಕ ಈ ಮಂತ್ರವನ್ನು ನಿನಗೆ ಉಪದೇಶಮಾಡುತ್ತೇನೆ. ಈ ಮಂತ್ರದಿಂದ ಯಾವಯಾವ ದೇವತೆಗಳನ್ನು ನೀನು ಕರೆಯುವೆಯೋ, ಆಯಾ ದೇವತೆಗಳು ನಿನ್ನಲ್ಲಿ ಅಪೇಕ್ಷೆ ಇದ್ದರೂ ಇಲ್ಲದಿದ್ದರೂ ಈ ಮಂತ್ರಪ್ರಭಾವದಿಂದ ಭೃತ್ಯರಂತೆ ನಿನ್ನ ಸ್ವಾಧೀನರಾಗುವರು. ಈ ಮಂತ್ರವನ್ನು ನೀನು ಪರಿಗ್ರಹಿಸು" ಎನಲು; ಕುಂತಿಯು ಎರಡನೆಯ ಆವರ್ತಿ ಆ ಬ್ರಾಹ್ಮಣನು ತಾನೇ ವರವನ್ನು ಕೊಡುತ್ತೇನೆಂದು ಹೇಳಿದ ಮಾತನ್ನು ನಿರಾಕರಿಸಿದರೆ ಶಾಪವನ್ನು ಕೊಟ್ಟಾನೆಂಬ ಭೀತಿಯಿಂದ ಹಾಗೆಯೇ ಆಗಲೆಂದು ಒಪ್ಪಿದಳು. ಆ ಮೇಲೆ ಆ ಬ್ರಾಹ್ಮಣನು ಅಥರ್ವಣರಹಸ್ಯದಲ್ಲಿ ಉಕ್ತವಾಗಿರುವ ಮಂತ್ರಗ್ರಾಮವನ್ನು ಆ ಕುಂತೀದೇವಿಗೆ ಉಪದೇಶಮಾಡಿ, ಬಳಿಕ ಕುಂತಿಭೋಜರಾಯನನ್ನು ಕುರಿತು "ಎಲೈ ರಾಯನೆ, ನಿನ್ನ ಮಗಳ ಶುಶ್ರೂಷೆಯಿಂದ ಸಂತುಷ್ಟನಾಗಿ ನಾನು ನಿನ್ನ ಮನೆಯಲ್ಲಿ ವಾಸಮಾಡಿಕೊಂಡಿದ್ದು ನಿನ್ನಿಂದ ಸತ್ಕೃತನಾದೆನು. ಇನ್ನು ನಾನು ಹೋಗಿಬರುತ್ತೇನೆ" ಎಂದು ಹೇಳಿ ಅಂತರ್ಧಾನವನ್ನು ಹೊಂದಿದನು. ಅದನ್ನು ನೋಡಿ ಕುಂತಿಭೋಜನು ಆಶ್ಚರ್ಯಪಟ್ಟು ತನ್ನ ಮಗಳನ್ನು ಶ್ಲಾಘಿಸಿದನು.

### ೩೦೫ನೇ ಅಧ್ಯಾಯ—ಕುಂಡಲಾಹರಣದ ಕಥೆ—(ಕುಂತಿಯು ಸೂರ್ಯನನ್ನು ಕರೆಯುವಿಕೆ.)

ವೈಶಂಪಾಯನಮುನೀಂದ್ರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಕಾರಣಾಂತರದಿಂದ ಆ ಬ್ರಾಹ್ಮಣನು ಹೊರಟುಹೋಗಲು ಕುಂತೀದೇವಿಯು ಆ ಬ್ರಾಹ್ಮಣನು ಉಪದೇಶಮಾಡಿದ ಮಂತ್ರಗ್ರಾಮದ ಬಲಾಬಲವನ್ನು ಪರೀಕ್ಷಿಸಬೇಕೆಂದು ಯೋಚಿಸಿ ಈ ಮಂತ್ರವೆಂಥಾದ್ದು? ಇದರ ಶಕ್ತಿಯನ್ನು ಜಾಗ್ರತೆಯಾಗಿ ತಿಳಿಯಬೇಕೆಂದು ಚಿಂತಿಸುತ್ತ ಹಾಗೆ ಪುಷ್ಪವತಿಯಾಗಿ ಲ್ಲಜ್ಜೆಪಡುತ್ತ ಉಪ್ಪರಿಗೆಯಮೇಲೆ ಹಂಸತೂಲಿಕಾತಲ್ಪದಲ್ಲಿ ಕುಳಿತು ಪೂರ್ವದಿಕ್ಕಿನಲ್ಲಿ ಉದಿಸಿದ ಸೂರ್ಯಮಂಡಲವನ್ನು ನೋಡಿ ಅಲ್ಲೇ ಮನಸ್ಸನ್ನಿಟ್ಟು ಆ ಸೂರ್ಯನ ರೂಪವನ್ನು ದೃಷ್ಟಿಸಿ ನೋಡುತ್ತಿದ್ದರೂ ತಾಪಪಡದೆ ಕವಚಕುಂಡಲಾದಿಗಳಿಂದ ಅಲಂಕೃತನಾದ ಸೂರ್ಯದೇವನನ್ನು ಚೆನ್ನಾಗಿ ನೋಡಿ ಕುತೂಹಲದಿಂದ ತನ್ನ ಕಣ್ಣನ್ನೂ ಕಿವಿಯನ್ನೂ ಮುಟ್ಟಿಕೊಂಡು ಆ ಸೂರ್ಯನನ್ನು ಮಂತ್ರದಿಂದ

ಕರೆದಳು. ಆಗ ಜೇನುತುಪ್ಪದಂತೆ ಮಯ್ಯಬಣ್ಣವುಳ್ಳವನಾಗಿಯೂ ಮಹಾಬಾಹುಶಾಲಿಯಾಗಿಯೂ ಮೂರು ರೇಖೆಗಳುಳ್ಳ ಕಂಠವುಳ್ಳವನಾಗಿಯೂ ಕುಂಡಲ ಕಿರೀಟಾದಿಗಳಿಂದ ಅಲಂಕೃತನಾಗಿಯೂ ಇರುವ ಸೂರ್ಯನು ತನ್ನ ಯೋಗಮಹಿಮೆಯಿಂದ ಮತ್ತೊಂದು ರೂಪವನ್ನು ತಾಳಿ ಅಲ್ಲಿಗೆ ಬಂದು ಆ ಕುಂತಿಗೆ ಮನ್ಮಥವೇದನೆಯನ್ನುಂಟುಮಾಡಿ, ಆಕೆಯನ್ನು ನೋಡಿ "ಎಲೆಕುಂತಿಯೆ, ನಿನ್ನ ಮಂತ್ರಪ್ರಭಾವದಿಂದ ನಿನ್ನವಶನಾಗಿ ನಾನು ಬಂದಿರುವೆನು. ನನಗೆ ಯಾವ ಕೆಲಸವನ್ನು ಕಟ್ಟುಮಾಡುವೆಯೋ ಆ ಕೆಲಸವನ್ನು ನಾನು ಮಾಡುವೆನು" ಎಂದು ಸವಿನುಡಿಗಳನ್ನು ನುಡಿಯಲು; ಕುಂತಿಯು "ಭಗವಂತನಾದ ಸೂರ್ಯನೆ, ಮಂತ್ರಪ್ರಭಾವವನ್ನು ಪರೀಕ್ಷಿಸಬೇಕೆಂಬ ಕುತೂಹಲದಿಂದ ನಾನು ನಿನ್ನನ್ನು ಕರೆದೆನು. ನೀನು ಪ್ರಸನ್ನನಾಗಿ ನನ್ನಲ್ಲಿ ಅನುಗ್ರಹವನ್ನಿಟ್ಟು ಬಂದಂತೆ ಹೊರಟುಹೋಗಬಹುದು" ಎಂದು ನುಡಿದಳು. ಆ ಮಾತನ್ನು ಕೇಳಿ ಸೂರ್ಯನು "ಎಲೆ ಸುಂದರಾಂಗಿಯೆ, ನಾನು ಹೋಗುತ್ತೇನೆ. ಆದರೂ ದೇವಪುರುಷನಾದ ನನ್ನನ್ನು ಕರೆದು ಸುಮ್ಮನೆ ಕಳುಹಿಸತಕ್ಕದ್ದು ಧರ್ಮವಲ್ಲ. ನಿನಗೆ ಮಗನಾಗಬೇಕೆಂದು ಅಭಿಲಾಷೆಯಿರುವ ಪ್ರಕಾರ ಅಸದೃಶವಾದ ಪರಾಕ್ರಮವುಳ್ಳವನಾಗಿಯೂ ಸಹಜವಾದ ಕವಚಕುಂಡಲಗಳಿಂದ ಅಲಂಕೃತನಾಗಿಯೂ ಇರುವ ಪುತ್ರನು ನಿನ್ನಲ್ಲಿ ಉತ್ಪನ್ನನಾಗುವನು. ನನ್ನ ಇಷ್ಟಾನುಸಾರವಾಗಿ ನೀನು ನಿನ್ನ ಶರೀರವನ್ನು ನನಗೆ ಕೊಡು. ಬಳಿಕ ನಾನು ನಿನ್ನೊಡನೆ ವಿಹರಿಸಿ, ಬಂದಂತೆ ಹೊರಟುಹೋಗುವೆನು. ಹಾಗೆ ನೀನು ನನಗೆ ಪ್ರಿಯವನ್ನು ಮಾಡದೆ ಹೋದಪಕ್ಷದಲ್ಲಿ, ನಾನು ನಿನಗೂ ನಿಮ್ಮ ತಂದೆಗೂ ನಿನ್ನ ಸ್ವಭಾವವನ್ನು ತಿಳಿಯದೆ ನಿನಗೆ ಮಂತ್ರೋಪದೇಶವನ್ನು ಮಾಡಿದ ದೂರ್ವಾಸನಿಗೂ ಸಹ ಕೋಪದಿಂದ ಶಾಪವನ್ನುಕೊಟ್ಟು ಎಲ್ಲರನ್ನೂ ಭಸ್ಮಮಾಡಿಬಿಡುತ್ತೇನೆ. ಬಳಿಕ ನಿನ್ನ ವಂಚನೆಯನ್ನು ನೋಡಿ ಆಕಾಶದಲ್ಲಿ ಸಂಚರಿಸುವ ಇಂದ್ರಾದಿ ದೇವತೆಗಳು ಪರಿಹಾಸಮಾಡುವರು. ಇದೋ ನಿನಗೆ ದಿವ್ಯದೃಷ್ಟಿಯನ್ನು ಕೊಡುತ್ತೇನೆ. ನೀನು ನನ್ನನ್ನೂ ಆಕಾಶದಲ್ಲಿ ಸಂಚರಿಸುತ್ತಿರುವ ಇಂದ್ರಾದಿದೇವತೆಗಳನ್ನೂ ಸಹ ಚೆನ್ನಾಗಿನೋಡು" ಎಂದು ದಿವ್ಯದೃಷ್ಟಿಯನ್ನು ಕೊಡಲು ; ಕುಂತಿಯು ಆಕಾಶಮಾರ್ಗದಲ್ಲಿ ವಿಮಾನಗಳನ್ನೇರಿ ಸಂಚರಿಸುವ ಮಹಾತ್ಮರಾದ ಇಂದ್ರಾದಿ ದೇವತೆಗಳನ್ನೂ ತೇಜೋವಂತನಾದ ಸೂರ್ಯನನ್ನೂ ಸಹ ನೋಡಿ, ಲಜ್ಜಾಯುಕ್ತಳಾಗಿ, ಸೂರ್ಯನನ್ನು ಕುರಿತು "ಎಲೈ ಮಹಾನುಭಾವನೆ, ನಾನು ಬಾಲೆಯಾದ್ದರಿಂದ ನನಗೆ ಭಯವಾಗುವದು. ನೀನು ವಿಮಾನಾರೂಢನಾಗಿ ಹೊರಟುಹೋಗು. ಬಾಲತ್ವದಿಂದ ನಾನು ನಿನಗೆ ಅಪರಾಧವನ್ನು ಮಾಡಿರುವೆನು. ಗುರುಗಳಾದ ನಮ್ಮ ತಂದೆತಾಯಿಗಳು ಕನ್ಯೆಯಾದ ನನ್ನನ್ನು ಮತ್ತೊಬ್ಬರಿಗೆ ಕೊಡುವದಕ್ಕೆ ಬಾಧ್ಯರಾದವರು. ಲೋಕದಲ್ಲಿ ಸ್ತ್ರೀಯರು ಸದ್ವೃತ್ತಿಯಿಂದ ತಮ್ಮ ದೇಹವನ್ನು ರಕ್ಷಿಸಿಕೊಳ್ಳಬೇಕು. ನಾನು ಧರ್ಮಲೋಪವನ್ನು ಮಾಡಿಕೊಳ್ಳಲಾರೆ. ಮಂತ್ರಪ್ರಭಾವವನ್ನು ಪರೀಕ್ಷಿಸಬೇಕೆಂದು ಬಾಲಭಾವದಿಂದ ನಿನ್ನನ್ನು ಕರೆದೆನು. ನಾನು ಬಾಲೆಯೆಂದು ತಿಳಿದು ನನ್ನ ಅಪರಾಧವನ್ನು ನೀನು ಕ್ಷಮಿಸಬೇಕು" ಎಂದಳು. ಅದಕ್ಕೆ ಸೂರ್ಯನು "ಎಲೆ ಕುಂತಿಯೇ, ನೀನು ಬಾಲೆಯೆಂದು ತಿಳಿದೇ, ನಾನು ನಿನಗೆ ಇಷ್ಟು ಅನುನಯವನ್ನು ಹೇಳಿದೆನು. ನೀನು ನನಗೆ ಆತ್ಮಪ್ರದಾನವನ್ನು ಮಾಡು. ನಿನ್ನ ವಿಷಯದಲ್ಲಿ ನಾನು ಶಾಂತನಾಗಿರುವೆನು. ಮಂತ್ರದಿಂದ ಕರಿಸಿಕೊಂಡು ಬಂದಿರುವ ನಾನು ನಿನ್ನೊಡನೆ ವಿಹರಿಸದೆ ವ್ಯರ್ಥವಾಗಿ ಹೋಗುವದು ಯುಕ್ತವಾದದ್ದಲ್ಲ. ಹಾಗೆ ನಾನು ಹೋದದ್ದೇ ಆದರೆ, ಲೋಕದಲ್ಲಿ ಅಪಹಾಸಾಸ್ಪದನಾಗುತ್ತೇನೆ. ದೇವತೆಗಳು ನನ್ನನ್ನು ಆಡಿಕೊಳ್ಳುವರು. ಆದ್ದರಿಂದ ನನ್ನೊಡನೆ ವಿಹರಿಸಿ ನೀನು ನನಗೆ ಸಮಾನನಾದ ಪುತ್ರನನ್ನು ಪಡೆ. ಇದರಿಂದ ನೀನು ಲೋಕದಲ್ಲಿ ಎಲ್ಲಾ ಸ್ತ್ರೀಯರಿಗಿಂತಲೂ ಶ್ರೇಷ್ಠಳೆನಿಸಿಕೊಳ್ಳುವೆ. ಈ ವಿಷಯದಲ್ಲಿ ಸಂಶಯಪಡಬೇಡ" ಎಂದು ಸೂರ್ಯನು ಕುಂತಿಗೆ ಹೇಳಿದನು.

### ೩೦೭ನೇ ಅಧ್ಯಾಯ.--ಕುಂಡಲಾಹರಣದ ಕಥೆ—(ಕುಂತೀಸೂರ್ಯರಿಗೆ ಸಂಗಮ.)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಎಲೈ ಜನಮೇಜಯರಾಯನೆ ಕೇಳು, ಕುಂತಿಯು ಸೂರ್ಯನಸಂಗಡ ಬಹಳವಾಗಿ ಬಳ್ಳೇ ಮಾತುಗಳನ್ನಾಡಿದರೂ ಆತನನ್ನು ಒಡಂಬಡಿಸುವದು ಅಶಕ್ಯ

ನಾಗಲು, ಆತನನ್ನು ನಿರಾಕರಿಸಿದರೆ ಶಾಪವನ್ನೇನಾದರೂ ಕೊಟ್ಟಾನೆಂದು ಭಯಪಟ್ಟು, ಯಾವ ಅಪರಾಧವನ್ನೂ ಮಾಡದಿರತಕ್ಕ ನಮ್ಮ ತಂದೆಗೂ ಮಂತ್ರೋಪದೇಶವನ್ನು ಮಾಡಿದ ಆ ಬ್ರಾಹ್ಮಣನಿಗೂ ನನ್ನ ನಿಮಿತ್ತವಾಗಿ ಈತನು ಕೋಪಗೊಂಡು ಶಾಪವನ್ನು ಹ್ಯಾಗೆ ಕೊಡದೆ ಇದ್ದಾನು ? ಲೋಕದಲ್ಲಿ ಬಾಲನಾದರೂ ಅಜ್ಞಾನದಿಂದ ಪಾಪವಮಾಡಿದರೆ ಅದರಿಂದ ದೊಡ್ಡವರಾದವರಿಗೆ ಕೋಪವುಂಟಾಗದಹಾಗೆ ಮಾಡಿಕೊಳ್ಳಬೇಕು. ಈಗ ನಾನು ಈತನ ಕೈಗೆ ಸಿಕ್ಕಿ ಭಯಪಡುತ್ತಿದೇನೆ. ಈತನಿಗೆ ಆತ್ಮಪ್ರದಾನವನ್ನು ಮಾಡಿ ಅಕಾರ್ಯವನ್ನು ಮಾಡತಕ್ಕದ್ದು ಹ್ಯಾಗೆ? ಎಂದು ಚಿಂತಿಸುತ್ತ, ಏನುಮಾಡುವದಕ್ಕೂ ತೋರದೆ, ಆತನು ಶಾಪವನ್ನು ಕೊಟ್ಟಾನೆಂದು ಭಯಪಡುತ್ತಲೂ ಹಾಗೆಯೇ ಆಶ್ಚರ್ಯಪಡುತ್ತಲೂ ಸಖಿಯರ ಮಧ್ಯದಲ್ಲಿ ಲಜ್ಜೆಪಡುತ್ತ ಸೂರ್ಯನನ್ನು ಕುರಿತು “ ಎಲೈ ಮಹಾತ್ಮನೆ, ನಮ್ಮ ತಂದೆತಾಯಿಗಳೂ ಬಂಧುಜನರೂ ಜೀವವಂತರಾಗಿರುವ ಕಾಲದಲ್ಲಿ ಶಾಸ್ತ್ರಮರ್ಯಾದೆಯನ್ನು ಉಲ್ಲಂಘಿಸಿ ನಿನ್ನೊಡನೆ ನಾನು ವಿಹರಿಸಿದರೆ ನಮ್ಮ ಕುಲಕ್ಕೆ ಅಪಕೀರ್ತಿ ಬರುವದು. ನಾನು ಆತ್ಮಪ್ರದಾನ ಮಾಡುವದು ಶಾಸ್ತ್ರಸಮ್ಮತವಾದದ್ದೆಂದು ನಿನಗೆ ತೋರಿದಪಕ್ಷದಲ್ಲಿ, ನಮ್ಮ ಮಾತಾಪಿತೃಗಳು ಕನ್ಯಾಪ್ರದಾನವನ್ನು ಮಾಡಬೇಕೆಂಬುವದನ್ನು ಕೋರದೆ ನಾನೇ ಆತ್ಮಪ್ರದಾನದಿಂದ ನಿನ್ನ ಮನೋರಥವನ್ನು ನೆರವೇರಿಸುವೆನು. ನಮ್ಮಗಳ ಧರ್ಮವೂ ಯಶಸ್ಸೂ ಕೀರ್ತಿಯೂ ಆಯುಸ್ಸೂ ಸಹ ನಿನ್ನನ್ನು ಕೂಡಿದ್ದು ” ಎನಲು ; ಸೂರ್ಯನು “ ಎಲೆ ಮಂಗಳಾಂಗಿಯೆ, ನನಗೆ ನೀನು ಆತ್ಮಪ್ರದಾನವನ್ನು ಮಾಡತಕ್ಕ ವಿಷಯದಲ್ಲಿ ನಿಮ್ಮ ತಂದೆತಾಯಿಗಳೂ ಗುರುಜನರೂ ಸಹ ಗೊತ್ತಲ್ಲ. ಎಲೆ ಭಾಮಿನಿಯೆ, ತನಗೆ ಬೇಕಾದ ವರನನ್ನು ಅಪೇಕ್ಷಿಸಿ ವರಿಸುವದೇ ಕಮಧಾತುವಿನ ದೆಸೆಯಿಂದ ನಿಷ್ಪನ್ನವಾದ ಕನ್ಯಾಶಬ್ದಾರ್ಥವು. ನನ್ನನ್ನು ವರಿಸಿದ ಮಾತ್ರಕ್ಕೆ ನೀನು ಅಧರ್ಮವನ್ನೇನೂ ಮಾಡಿದ ಹಾಗಾಗುವದಿಲ್ಲ. ಲೋಕಕ್ಕೇ ಪ್ರಿಯವನ್ನು ಅಪೇಕ್ಷಿಸತಕ್ಕ ನಾನುತಾನೆ ಯಾತಕ್ಕೆ ಅಧರ್ಮದಲ್ಲಿ ಪ್ರವರ್ತಿಸೇನು ? ಸ್ತ್ರೀಪುರುಷರು ತಾವುತಾವೇ ಅನ್ಯೋನ್ಯವಾಗಿ ವಿವಾಹಮಾಡಿಕೊಳ್ಳತಕ್ಕ ವಿಷಯದಲ್ಲಿ ನಿರ್ಬಂಧವೇನೂ ಇಲ್ಲ. ಇದು ಲೋಕಸ್ವಭಾವವಾದದ್ದು. ಇತರ ವಿವಾಹನಿಬಂಧನೆಗಳು ವಿಕಾರವಾದವುಗಳು. ಈಗ ನೀನು ನನ್ನೊಡನೆ ವಿಹರಿಸಿದ ಬಳಿಕ ಪುನಃ ಕನ್ಯೆಯೇ ಆಗುವೆ. ಇದರಿಂದ ನಿನ್ನಲ್ಲಿ ಯಶೋವಂತನಾದ ಪುತ್ರನೂ ಹುಟ್ಟುವನು ” ಎಂದನು. ಆ ಮಾತನ್ನು ಕೇಳಿ ಕುಂತಿಯು “ ಎಲೈ ಸೂರ್ಯನೆ, ನಿನ್ನ ದೆಸೆಯಿಂದ ನನ್ನಲ್ಲಿ ಪುತ್ರನು ಉತ್ಪನ್ನನಾಗುವ ಪಕ್ಷದಲ್ಲಿ, ಆತನು ಮಹಾಬಲಶಾಲಿಯಾಗಿಯೂ ಮಹಾಬಾಹುವಾಗಿಯೂ ಸಹಜವಾದ ಕವಚಕುಂಡಲಗಳಿಂದ ಕೂಡಿದವನಾಗಿಯೂ ಹುಟ್ಟಲಿ ” ಎಂದಳು. ಸೂರ್ಯನು “ ಎಲೆ ಕುಂತಿಯೆ, ನನ್ನ ದೆಸೆಯಿಂದ ನಿನ್ನಲ್ಲಿ ಹುಟ್ಟತಕ್ಕ ಪುತ್ರನು ಅಮೃತಮಯವಾಗಿಯೂ ಅಭೇದ್ಯವಾಗಿಯೂ ಇರತಕ್ಕ ಕವಚಕುಂಡಲಗಳಿಂದ ಕೂಡಿಯೇ ಉತ್ಪನ್ನನಾಗುವನು ” ಎಂದನು. ಆ ಮಾತನ್ನು ಕೇಳಿ ಕುಂತಿಯು “ ಎಲೈ ಮಹಾನುಭಾವನೆ, ಹಾಗಾದರೆ ನಿನ್ನಂತೆ ಪರಾಕ್ರಮವುಳ್ಳವನಾಗಿಯೂ ತೇಜಸ್ವಿಯಾಗಿಯೂ ಧರ್ಮಾತ್ಮನಾಗಿಯೂ ಇರುವ ಕುಮಾರನು ನನ್ನಲ್ಲಿ ಹುಟ್ಟುವ ಪಕ್ಷದಲ್ಲಿ ನಿನ್ನ ಸಂಗವು ನನಗಾಗಬಹುದು ” ಎನಲು ; ಸೂರ್ಯನು “ ಎಲೆ ರಾಜಪುತ್ರಿಯೆ, ದಿವ್ಯವಾದ ಅದಿತಿದೇವಿಯ ಕುಂಡಲಗಳನ್ನೂ ಅಮೃತಮಯವಾದ ಕವಚವನ್ನೂ ನಿನ್ನ ಮಗನಿಗೋಸ್ಕರ ನಾನು ಕೊಡುತ್ತೇನೆ ” ಎಂದನು. ಬಳಿಕ ಕುಂತಿಯು “ ಎಲೈ ಸೂರ್ಯನಾರಾಯಣನೆ, ನೀನು ಹೇಳಿದಪ್ರಕಾರ ನನ್ನಲ್ಲಿ ಪುತ್ರನು ಹುಟ್ಟುವ ಪಕ್ಷದಲ್ಲಿ ನಿನ್ನೊಡನೆ ನಾನು ವಿಹರಿಸುವೆನು ” ಎಂದಳು. ಬಳಿಕ ಸೂರ್ಯನು ಆಕೆಯ ಶರೀರವನ್ನು ಯೋಗಮಹಿಮೆಯಿಂದ ಸ್ಪರ್ಶಮಾಡಿ, ಆಕೆಯ ನಾಭಿಪ್ರದೇಶವನ್ನು ಸ್ಪರ್ಶಮಾಡಿ, ತನ್ನ ತೇಜಸ್ಸಿನಿಂದ ಆಕೆಯನ್ನು ಮೋಹಪಡಿಸಿದನು. ಬಳಿಕ ಸೂರ್ಯನ ತೇಜಸ್ಸಿನಿಂದ ಪರವಶಳಾದ ಕುಂತಿಯು ಮೂಢಚಿತ್ತಳಾಗಿ ಹಾಗೆಯೇ ಹಾಸಿಗೆಯಮೇಲೆ ಬಿದ್ದಳು. ಆಗ ಸೂರ್ಯನು “ ಎಲೆ ಮಂಗಳಾಂಗಿಯೆ, ಧನುರ್ಧಾರಿಗಳಲ್ಲಿ ಶ್ರೇಷ್ಠನಾದ ಮಗನು ನಿನ್ನಲ್ಲಿ ಹುಟ್ಟುವನು. ಆ ಬಳಿಕ ನೀನು ದೋಷಕ್ಕೆ ಗುರಿಯಾಗದಂತೆ ಪುನಃ ಕನ್ಯಾವಸ್ಥೆಯನ್ನೇ ಪಡೆಯುವೆ. ನಾನು ಹೋಗಿಬರುವೆನು ” ಎಂದು ನುಡಿದನು. ಬಳಿಕ ಕುಂತಿಯು ಲಜ್ಜೆಯಿಂದ ತೇಜೋರಾಶಿಯಾದ ಸೂರ್ಯನನ್ನು ಕುರಿತು ಒಳ್ಳೇದು ಹಾಗಾಗಲೆಂದು ನುಡಿಯಲು, ಸೂರ್ಯನು ಅಂತರ್ಧಾನವನ್ನು ಹೊಂದಿದನು.

೩೦೭ನೇ ಅಧ್ಯಾಯ.—ಕುಂಡಲಾಹರಣದ ಕಥೆ—(ಕುಂತಿಯು ತನ್ನ ಶಿಶುವನ್ನು ನದಿಯಲ್ಲಿ ಬಿಡುವಿಕೆ.)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಆ ಬಳಿಕ ಕುಂತೀದೇವಿಯು ಗರ್ಭಿಣಿಯಾಗಿ ಆ ಗರ್ಭವು ಮಾಘಶುಕ್ಲಪಕ್ಷದ ಚಂದ್ರನಂತೆ ದಿನದಿನವೂ ಅಭಿವೃದ್ಧಿಯನ್ನು ಹೊಂದುತ್ತ ಬರಲು, ಆಕೆಯು ಬಂಧುಜನಗಳ ಭಯದಿಂದ ಯಾರಿಗೂ ತೋರದಂತೆ ಆ ಗರ್ಭವನ್ನು ಮರೆಮಾಡಿಕೊಂಡು ಚತುರಳಾಗಿ ಸಂರಕ್ಷಿಸುತ್ತಿದ್ದಳು. ಆಕೆಯ ದಾದಿಹೊರತು ಮತ್ತ್ಯಾರೂ ಅದನ್ನು ತಿಳಿಯದೆ ಇದ್ದರು. ಪ್ರಸವಕಾಲಪ್ರಾಪ್ತವಾಗಲು, ಕುಂತಿಯು ಕವಚಕುಂಡಲಾದಿಗಳಿಂದ ಅಲಂಕೃತನಾಗಿಯೂ ಸಿಂಹದಂತೆ ಕಣ್ಣುಗಳುಳ್ಳವನಾಗಿಯೂ ಗೂಳಿಯಂತೆ ಭುಜ ಶಿರಸ್ಸುಳ್ಳವನಾಗಿಯೂ ಇರುವ ಪುತ್ರನನ್ನು ಹೆತ್ತು, ಸೂರ್ಯನಾರಾಯಣನ ಅನುಗ್ರಹದಿಂದ ಪುನಃ ಕನ್ಯಾವಸ್ಥೆಯನ್ನೇ ಹೊಂದಿ, ಬಳಿಕ ತನ್ನ ದಾದಿಯಸಂಗಡ ಆಲೋಚಿಸಿ ಕನ್ಯೆಯು ಗರ್ಭವನ್ನು ಧರಿಸುವದು ಅಯುಕ್ತವಾದದ್ದೆಂದು ತಿಳಿದು, ಒಂದು ಪೆಟ್ಟಿಗೆಗೆ ಜೇನುಮೇಣವನ್ನು ಸವರಿ ಅದರಲ್ಲಿ ಚಿಕ್ಕದಾಗಿ ಹಾಸಿಗೆಯನ್ನು ಹಾಸಿ ಅದರಲ್ಲಿ ಆ ಮಗುವನ್ನು ಮಲಗಿಸಿ, ಪುತ್ರಸ್ನೇಹದಿಂದ ಕನಿಕರಹುಟ್ಟಿ ರೋದನಮಾಡುತ್ತ "ಎಲೆ ಮಗನೆ, ಆಕಾಶದಲ್ಲಿ ಸಂಚರಿಸತಕ್ಕ ಪ್ರಾಣಿಗಳೂ ನೀರಿನಲ್ಲಿ ಸಂಚರಿಸತಕ್ಕ ಪ್ರಾಣಿಗಳೂ ಭೂಮಿಯಲ್ಲಿ ಸಂಚರಿತಕ್ಕ ಪ್ರಾಣಿಗಳೂ ಸಹ ನಿನಗೆ ಒಳ್ಳೇದನ್ನು ಮಾಡಲಿ. ನೀನು ಹೋಗತಕ್ಕ ಮಾರ್ಗವು ನಿಶ್ಶತ್ರುವಾಗಿರಲಿ. ಸಕಲಪ್ರಾಣಿಗಳೂ ನಿನ್ನ ವಿಷಯದಲ್ಲಿ ದ್ರೋಹವನ್ನೆಣಿಸದೆ ಇರಲಿ. ಸಮುದ್ರರಾಜನಾದ ನದೀಪತಿಯಾದ ವರುಣನು ನಿನ್ನನ್ನು ರಕ್ಷಿಸಲಿ. ಅಂತರಿಕ್ಷದಲ್ಲಿ ಸಂಚರಿಸುವ ಸೂರ್ಯನೂ ವಾಯುವೂ ಸಹ ನಿನ್ನನ್ನು ಸರ್ವತ್ರ ರಕ್ಷಿಸಲಿ. ಸೂರ್ಯನು ದಿವ್ಯವಿಧಿಯಿಂದ ನಿನ್ನನ್ನು ನನಗೆ ಕೊಟ್ಟನು. ದ್ವಾದಶಾದಿತ್ಯರೂ ಅಷ್ಟವಸುಗಳೂ ಏಕಾದಶರುದ್ರರೂ ಸಾಧ್ಯರೂ ವಿಶ್ವೇದೇವತೆಗಳೂ ಏಕೋನಪಂಚಾಶನ್ಮರುತ್ತುಗಳೂ ಇಂದ್ರಾದಿದಿಕ್ಪಾಲಕರೂ ಸಮಪ್ರದೇಶದಲ್ಲೂ ವಿಷಮಪ್ರದೇಶದಲ್ಲೂ ಸಹ ನಿನ್ನನ್ನು ರಕ್ಷಿಸಲಿ" ಎಂದು ನುಡಿದು, ಆ ಪೆಟ್ಟಿಗೆಯನ್ನು ಅರ್ಧರಾತ್ರಿವೇಳೆಯಲ್ಲಿ ನದಿಯಲ್ಲಿ ಹಾಕಿ, "ಎಲೆ ಮಗನೆ, ದಿವ್ಯವಾದ ಕವಚಕುಂಡಲಗಳಿಂದ ಅಲಂಕೃತನಾಗಿರುವ ನೀನು ಸೂರ್ಯನದೆಸೆಯಿಂದ ಉತ್ಪನ್ನನಾದ್ದರಿಂದ ಧನ್ಯನಾದವನು. ಈಗ ಈ ನದಿಯಲ್ಲಿ ಹರಿದುಹೋಗತಕ್ಕ ನಿನ್ನನ್ನು ಆ ಸೂರ್ಯನು ದಿವ್ಯದೃಷ್ಟಿಯಿಂದ ನೋಡಿ ರಕ್ಷಿಸುವನು. ಯಾವ ಸ್ತ್ರೀಯು ನಿನ್ನನ್ನು ಮಗನನ್ನಾಗಿ ಮಾಡಿಕೊಂಡು ನಿನಗೆ ಸ್ತನ್ಯವನ್ನು ಕೊಡುವಳೋ ಅವಳೇ ಧನ್ಯಳಾದವಳು. ನಾನು ನಿನ್ನನ್ನು ನೋಡಿದ್ದು ಸ್ವಪ್ನದಲ್ಲಿ ನೋಡಿದಂತಾಯಿತು. ಸೂರ್ಯನಂತೆ ತೇಜೋವಂತನಾಗಿಯೂ, ದಿವ್ಯವಾದ ಕವಚಕುಂಡಲಗಳಿಂದ ಅಲಂಕೃತನಾಗಿಯೂ, ಕೆಂದಾವರೆಯಂತೆ ವಿಶಾಲವಾದ ನೇತ್ರಗಳುಳ್ಳವನಾಗಿಯೂ, ಕೆಂದಾವರೆಯಂತೆ ಕೆಂಪಾದ ರೂಪುಳ್ಳವನಾಗಿಯೂ, ಸುಂದರಾಂಗನಾಗಿಯೂ, ಇರುವ ನೀನು ನೆಲದಮೇಲೆ ಅಂಬೆಗಾಲಿಡುತ್ತ ಮಯ್ಯನ್ನೆಲ್ಲಾ ಧೂಳುಮಾಡಿಕೊಂಡು ಮುದ್ದುಮುದ್ದಾಗಿ ಮಾತನಾಡುವದನ್ನೂ ಬಳಿಕ ಯೌವನವನ್ನು ಪಡೆದು ಹಿಮವತ್ಪರ್ವತದ ವನದಲ್ಲಿರತಕ್ಕ ಸಿಂಹದಂತೆ ಸಂಚರಿಸತಕ್ಕದ್ದನ್ನೂ ಸಹ ನೋಡಿ ಪುಣ್ಯಶಾಲಿಗಳು ಸಂತೋಷಪಡುವರು" ಎಂದು ನುಡಿದು ಕಳವಳಪಡುತ್ತ, ತಂದೆಯ ಭಯದಿಂದ ರೋದನಮಾಡುತ್ತ, ಅರಮನೆಗೆ ಬಂದು ಸೇರಿಕೊಂಡಳು. ಆ ಪೆಟ್ಟಿಗೆಯು ಆ ನದಿಯಿಂದ ಚರ್ಮಣ್ವತೀನದಿಗೆ ಹೋಗಿ ಸೇರಿ, ಅಲ್ಲಿಂದ ಯಮುನಾನದಿಗೆ ಬಂದು, ಅಲ್ಲಿಂದ ಗಂಗಾನದಿಯನ್ನು ಸೇರಿ, ಸೂತರಾಜನಿರತಕ್ಕ ಚಂಪಾಪುರಿಯ ಬಳಿಗೆ ತೇಲಿಕೊಂಡು ಬಂತು. ಆಗ ಆ ಪೆಟ್ಟಿಗೆಯಲ್ಲಿದ್ದ ಶಿಶುವನ್ನು ಅಮೃತದಿಂದ ಉತ್ಪನ್ನವಾದ ಆ ದಿವ್ಯವಾದ ಕವಚಕುಂಡಲಗಳು ಗಂಗಾನದಿಯ ತೆರೆಗಳಿಂದ ಅಪಾಯಬರದಂತೆ ರಕ್ಷಿಸುತ್ತಿದ್ದವು.

೩೦೮ನೇ ಅಧ್ಯಾಯ.—ಕುಂಡಲಾಹರಣದ ಕಥೆ—(ರಾಧಾಪುತ್ರನಾದ ಕರ್ಣನ ಬಳಿಗೆ ಇಂದ್ರನು ಬರುವಿಕೆ.)

ವೈಶಂಪಾಯನಮುನೀಂದ್ರನು ಜನಮೇಜಯರಾಯನನ್ನು ಕುರಿತು—ಎಲೈ ಜನಮೇಜಯರಾಯನೆ, ಇಷ್ಟರಲ್ಲಿ ಧೃತರಾಷ್ಟ್ರರಾಯನಿಗೆ ಮಿತ್ರನಾದ ಅಧಿರಥನೆಂಬ ಸೂತನು ಪತ್ನೀಸಮೇತನಾಗಿ ಗಂಗಾತೀರಕ್ಕೆ

ಬಂದನು. ಆತನ ಪತ್ನಿಯಾದ ರೂಪವತಿಯಾದ ರಾಧೆ ಎಂಬುವಳು ಸಂತಾನವಿಲ್ಲದೆ ಅದಕ್ಕಾಗಿ ವ್ರತನಿಯಮಗಳಿಂದ ಬಹಳವಾದ ಪ್ರಯತ್ನಗಳನ್ನು ಮಾಡುತ್ತಿದ್ದಳು. ಆ ದಿವಸ ದೈವಯೋಗದಿಂದ ಗಂಗಾನದಿಯಲ್ಲಿ ತೇಲಿಕೊಂಡು ಹೋಗುತ್ತಿದ್ದ ಆ ಪೆಟ್ಟಿಗೆಯನ್ನು ಕಂಡಳು. ಮಗುವಿನ ಸಂರಕ್ಷಣಾರ್ಥವಾಗಿ ದೂರ್ವೆಮೊದಲಾದದ್ದನ್ನು ಮೇಲಿಟ್ಟು ಕುಂಕುಮದ ಕಯ್ಯಿಂದ ಚಟ್ಟುಬಡಿದು ಗುರುತುಮಾಡಿದ್ದ ಆ ಪೆಟ್ಟಿಗೆಯು ಆ ಗಂಗಾನದಿಯ ತೆರೆಗಳಿಂದ ತನ್ನ ಸಮೀಪಕ್ಕೆ ಬರಲು, ಕುತೂಹಲದಿಂದ ಅದನ್ನು ಹಿಡಿದುಕೊಂಡು, ತನ್ನ ಗಂಡನಾದ ಸೂತನಿಗೆ ಹೇಳಿ ನೀರಿನಿಂದ ಮೇಲಕ್ಕೆ ತೆಗೆಯಿಸಿ, ಅದರ ಮುಚ್ಚಳವನ್ನು ತೆಗೆದು ನೋಡಿದಳು. ಆಗ ಆ ಪೆಟ್ಟಿಗೆಯಲ್ಲಿ ಬಾಲಸೂರ್ಯನಂತೆ ಪ್ರಕಾಶಿಸುತ್ತ ಕವಚಕುಂಡಲಗಳಿಂದ ಅಲಂಕೃತನಾದ ಆ ಬಾಲಕನನ್ನು ನೋಡಿ ಆ ದಂಪತಿಗಳಿಬ್ಬರೂ ಬಹಳವಾಗಿ ಆಶ್ಚರ್ಯಪಟ್ಟರು. ಬಳಿಕ ಸೂತನು ಆ ಬಾಲಕನನ್ನು ತನ್ನ ತೊಡೆಯಮೇಲಿರಿಸಿಕೊಂಡು, ತನ್ನ ಪತ್ನಿಯಾದ ರಾಧೆಯನ್ನು ಕುರಿತು “ ಎಲೆ ಭೀರುವೆ, ನಾನು ಹುಟ್ಟಿದಂದಿನಿಂದಲೂ ಇಂಥ ಮಗುವನ್ನು ನೋಡಿಲ್ಲ. ಈಗ ದೇವಕುಮಾರನಿಗೆ ಸಮಾನನಾಗಿ ಆಶ್ಚರ್ಯಕರವಾಗಿರುವ ಈ ಮಗುವನ್ನು ನೋಡಿದೆನು. ದೈವಯೋಗದಿಂದಲೇ ನಮ್ಮ ಸಮೀಪಕ್ಕೆ ಈ ಪೆಟ್ಟಿಗೆ ತೇಲಿಕೊಂಡು ಬಂತು. ಅಪುತ್ರನಾದ ನನಗೆ ದೇವತೆಗಳು ಅನುಗ್ರಹಮಾಡಿ ಈ ಮಗುವನ್ನು ಕೊಟ್ಟರು ” ಎಂದು ನುಡಿದು, ಆ ಮಗುವನ್ನು ತನ್ನ ಪತ್ನಿಯಾದ ರಾಧೆಗೆ ಕೊಟ್ಟನು. ರಾಧೆಯು ದಿವ್ಯರೂಪವುಳ್ಳ ಆ ಮಗುವನ್ನು ಬಹು ಪ್ರೀತಿಯಿಂದ ಕರೆದುಕೊಂಡು ಪೋಷಿಸುತ್ತ ಬರಲು, ಆ ಮಗುವು ದಿನದಿನವೂ ವೃದ್ಧಿಯನ್ನು ಹೊಂದುತ್ತ ಬಂತು. ಆಗ ಬ್ರಾಹ್ಮಣರು ಆ ಮಗುವು ಸುವರ್ಣಕವಚವನ್ನೂ ದಿವ್ಯವಾದ ಕುಂಡಲಗಳನ್ನೂ ಧರಿಸಿಕೊಂಡಿರುವದನ್ನು ನೋಡಿ ಅದಕ್ಕೆ ವಸುಷೇಣನೆಂಬದಾಗಿ ನಾಮಕರಣವನ್ನು ಮಾಡಿದರು.

ಎಲೈ ಜನಮೇಜಯರಾಯನೆ, ಈ ಪ್ರಕಾರ ಕರ್ಣನು ವಸುಷೇಣನೆಂತಲೂ ಸೂತನೆಂತಲೂ ವೃಷನೆಂತಲೂ ಪ್ರಸಿದ್ಧಿಯನ್ನು ಪಡೆದು ಅಂಗದೇಶದಲ್ಲಿ ಅಭಿವೃದ್ಧಿಯನ್ನು ಹೊಂದಿದನು. ಆ ವೃತ್ತಾಂತವನ್ನು ಆಗಿಂದಾಗ್ಯೆ ಕುಂತಿಯು ಚಾರರ ಮುಖದಿಂದ ತಿಳಿಯುತ್ತಿದ್ದಳು. ಬಳಿಕ ಅಂಗದೇಶಾಧಿಪತಿಯಾದ ಆ ಸೂತನಿಗೆ ಔರಸಪುತ್ರರೂ ಹುಟ್ಟಿದರು. ಆಗ ಸೂತನು ವಸುಷೇಣನು ದೊಡ್ಡವನಾದದ್ದನ್ನು ನೋಡಿ, ಆತನನ್ನು ದ್ರೋಣಾಚಾರ್ಯರಲ್ಲಿ ಗುರುಕುಲವಾಸದಿಂದ ವಿದ್ಯಾಭ್ಯಾಸಮಾಡುವದಕ್ಕಾಗಿ ಹಸ್ತಿನಾನಗರಕ್ಕೆ ಕಳುಹಿಸಿಕೊಡಲು ; ಕರ್ಣನು ಹಸ್ತಿನಾನಗರಕ್ಕೆ ಹೋಗಿ ದುರ್ಯೋಧನನಲ್ಲಿ ಸ್ನೇಹವನ್ನು ಬೆಳಸಿ, ದ್ರೋಣಾಚಾರ್ಯರ ದೆಸೆಯಿಂದಲೂ ಕೃಪಾಚಾರ್ಯರ ದೆಸೆಯಿಂದಲೂ ಅಶ್ವತ್ಥಾಮಾಚಾರ್ಯರ ದೆಸೆಯಿಂದಲೂ ನಾಲ್ಕುವಿಧವಾದ ಅಸ್ತ್ರಗ್ರಾಮವನ್ನು ಕಲಿತು, ಧನುರ್ಧಾರಿಗಳೊಳಗೆ ಶ್ರೇಷ್ಠನಾದವನೆಂದು ಲೋಕದಲ್ಲಿ ಪ್ರಖ್ಯಾತಿಯನ್ನು ಪಡೆದು, ಪಾಂಡವರಲ್ಲಿ ದ್ವೇಷವನ್ನು ಮಾಡುತ್ತ, ಮಹಾತ್ಮನಾದ ಅರ್ಜುನನನ್ನು ಕಂಡಕಂಡಾಗಲೆಲ್ಲಾ ಆತನ ಸಂಗಡ ಯುದ್ಧಮಾಡಬೇಕೆಂದು ಸ್ಪರ್ಧೆಮಾಡುತ್ತಿದ್ದನು. ಅರ್ಜುನನೂ ಆತನ ಸಂಗಡ ಯುದ್ಧಮಾಡಬೇಕೆಂದು ಸ್ಪರ್ಧೆಮಾಡುತ್ತಿದ್ದನು.

ಈ ಪ್ರಕಾರ ಸೂರ್ಯನು ಗೂಢವಾಗಿ ಕುಂತೀದೇವಿಯಲ್ಲಿ ಕರ್ಣನನ್ನು ಸೃಜಿಸಿದನು. ಇದರಿಂದ ಅಧಿರಥನ ಕುಲವು ವೃದ್ಧಿಯಾಯಿತು. ಎಲೈ ಜನಮೇಜಯರಾಯನೆ, ಸಹಜವಾದ ಕವಚಕುಂಡಲಗಳಿಂದ ಅಲಂಕೃತನಾದ ಕರ್ಣನು ಅವಧ್ಯನೆಂಬುವದನ್ನು ತಿಳಿದು, ಅಂಥವನು ಅರ್ಜುನನ ಸಂಗಡ ಸ್ಪರ್ಧೆಮಾಡುತ್ತಿರುವದನ್ನು ನೋಡಿ, ಧರ್ಮರಾಯನು ಮನಸ್ಸಿನಲ್ಲಿ ಸಂತಾಪಪಡುತ್ತಿದ್ದನು. ಆ ಮಹಾತ್ಮನಾದ ಕರ್ಣನು ಪ್ರತಿದಿವಸದಲ್ಲೂ ಸ್ನಾನಮಾಡಿ ಮಧ್ಯಾಹ್ನಸಮಯದಲ್ಲಿ ಸೂರ್ಯೋಪಾಸನೆ ಮಾಡುವಾಗ ಯಾಚಕರಾಗಿ ಯಾವ ಬ್ರಾಹ್ಮಣರು ಬಂದರೂ ಅವರಿಗೆ ಬೇಕಾದದ್ದನ್ನು ಕೊಡುತ್ತಿದ್ದನು. ಆ ಸಂದರ್ಭವನ್ನು ತಿಳಿದು ಒಂದಾನೊಂದು ದಿವಸ ದೇವೇಂದ್ರನು ಬ್ರಾಹ್ಮಣರೂಪವನ್ನು ತಾಳಿ ಕರ್ಣನು ಸೂರ್ಯೋಪಾಸನೆ ಮಾಡುವ ಸಮಯದಲ್ಲಿ ಆತನ ಬಳಿಗೆ ಬಂದು ‘ ಭಿಕ್ಷಾಂ ದೇಹಿ ’ ಎಂದನು. ಅದನ್ನು ಕೇಳಿ ಕರ್ಣನು “ ಎಲೈ ಬ್ರಾಹ್ಮಣನೆ, ನಿನಗೆ ಸುಖಾಗಮನವೆ? ” ಎಂದು ಕುಶಲಪ್ರಶ್ನೆಯನ್ನು ಮಾಡಿದನು.

## ೩೦೯ನೇ ಅಧ್ಯಾಯ.–ಕುಂಡಲಾಹರಣದ ಕಥೆ–(ಕರ್ಣನು ಕವಚಕುಂಡಲಗಳನ್ನು ದಾನಮಾಡುವಿಕೆ.)

ವೈಶಂಪಾಯನಮುನೀಶ್ವರನು ಜನಮೇಜಯರಾಯನನ್ನು ಕುರಿತು–ಕೇಳು ಜನಮೇಜಯರಾಯನೆ, ಆಗ ಕರ್ಣನು ಇಂದ್ರನೇ ಬ್ರಾಹ್ಮಣರೂಪವನ್ನು ಧರಿಸಿಕೊಂಡು ಬಂದಿರುವನೆಂಬುವದನ್ನು ತಿಳಿಯದೆ, ಆ ಬ್ರಾಹ್ಮಣನನ್ನು ಕುರಿತು "ಎಲೈ ಬ್ರಾಹ್ಮಣನೆ, ನಿನಗೆ ಸುವರ್ಣದ ಕಂಠಸರಗಳು ಬೇಕೋ? ಉತ್ತಮರಾದ ಸ್ತ್ರೀಯರು ಬೇಕೋ? ಗ್ರಾಮಗಳು ಬೇಕೋ? ಗೋಧನ ಬೇಕೋ? ಯಾವದನ್ನು ನಾನು ಕೊಡಲಿ? ಹೇಳು" ಎನಲು, ಆ ಬ್ರಾಹ್ಮಣನು "ಎಲೈ ಕರ್ಣನೆ, ಸುವರ್ಣದ ಕಂಠಸರಗಳನ್ನೂ ಸ್ತ್ರೀಯರನ್ನೂ ಗೋಧನವನ್ನೂ ಸಹ ನಾನು ಅಪೇಕ್ಷಿಸತಕ್ಕವನಲ್ಲ. ಅವುಗಳನ್ನು ಯಾಚಿಸತಕ್ಕವರಿಗೆ ಅವುಗಳನ್ನುಕೊಡು. ನೀನು ಸತ್ಯವ್ರತನಾಗಿದ್ದ ಪಕ್ಷದಲ್ಲಿ ನಿನ್ನ ಸಹಜವಾದ ಕವಚಕುಂಡಲಗಳನ್ನು ತೆಗೆದು ನನಗೆ ಕೊಡು. ಇವುಗಳನ್ನು ನೀನು ಕೊಟ್ಟದ್ದೇ ಆದರೆ, ಇವು ಎಲ್ಲಕ್ಕಿಂತಲೂ ಹೆಚ್ಚಾದದ್ದನ್ನು ಕೊಟ್ಟಂತೆ ನಾನು ಭಾವಿಸುತ್ತೇನೆ" ಎಂದನು. ಆ ಮಾತನ್ನು ಕೇಳಿ ಕರ್ಣನು "ಎಲೈ ಬ್ರಾಹ್ಮಣನೆ, ಬಹು ವರ್ಷ ಜೀವಿಸತಕ್ಕ ಭೂಮಿಯನ್ನೂ ಮನೆಯನ್ನೂ ಉತ್ತಮರಾದ ಸ್ತ್ರೀಯರನ್ನೂ ಅನೇಕ ಗೋವುಗಳನ್ನೂ ನಾನು ಕೊಡುತ್ತೇನೆ; ಸಹಜವಾದ ಕವಚಕುಂಡಲಗಳನ್ನು ಕೊಡತಕ್ಕದ್ದು ಹ್ಯಾಗೆ?" ಎಂದು ಸಮಾಧಾನವನ್ನು ಹೇಳುತ್ತ, ಮರ್ಯಾದೆಯಿಂದ ಎಷ್ಟು ಪೂಜಿಸಿದರೂ ಅದಕ್ಕೆ ಆ ಬ್ರಾಹ್ಮಣನು ಒಪ್ಪದಿರಲು, ಕರ್ಣನು ನಸುನಗುತ್ತ "ಎಲೈ ಬ್ರಾಹ್ಮಣನೆ, ಈ ನನ್ನ ಕವಚವು ಸಹಜವಾಗಿ ಹುಟ್ಟಿರತಕ್ಕದ್ದು. ಈ ಕುಂಡಲಗಳು ಅಮೃತದಿಂದ ಉತ್ಪನ್ನವಾಗಿರುವವು. ಇವುಗಳಿಂದ ನಾನು ಲೋಕದಲ್ಲಿ ಅವಧ್ಯನಾಗಿರುವೆನು. ಆದ್ದರಿಂದ ನಾನು ಇವುಗಳನ್ನು ಕೊಡಲಾರೆನು. ವಿಸ್ತಾರವಾಗಿಯೂ ನಿಷ್ಕಂಟಕವಾಗಿಯೂ ಕ್ಷೇಮವಾಗಿಯೂ ಇರುವ ರಾಜ್ಯವನ್ನು ಬೇಕಾದರೂ ನಿನಗೆ ನಾನು ಕೊಡುವೆನು, ಅದನ್ನು ನೀನು ಪರಿಗ್ರಹಿಸು. ಈ ಸಹಜವಾದ ಕವಚಕುಂಡಲಗಳನ್ನು ನಿನಗೆ ನಾನು ಕೊಟ್ಟದ್ದೇ ಆದರೆ ಶತ್ರುಗಳು ನನ್ನನ್ನು ಸಂಹಾರಮಾಡಿ ಬಿಡುವರು" ಎನಲು; ಇಂದ್ರನು ಮತ್ತೊಂದನ್ನು ಅಪೇಕ್ಷಿಸದೆ ಕವಚಕುಂಲಡಗಳನ್ನೇ ಬಿಡದೆ ಪ್ರಾರ್ಥಿಸುತ್ತಿದ್ದನು. ಆಗ ಕರ್ಣನು ನಕ್ಕು ಆತನನ್ನು ಕುರಿತು "ಎಲೈ ದೇವೋತ್ತಮನೆ, ನೀನು ಯಾಚಕನಾಗಿ ಇಲ್ಲಿಗೆ ಬರುತ್ತೀಯೆಂದು ನಾನು ಮೊದಲೇ ತಿಳಿದಿದ್ದೆನು. ನಿನ್ನ ಇಷ್ಟಾರ್ಥವನ್ನು ನೆರವೇರಿಸತಕ್ಕದ್ದು ನನಗೆ ನ್ಯಾಯವಾಗಿ ತೋರುವದಿಲ್ಲ. ನೀನು ಸಾಕ್ಷಾದ್ದೇವೇಂದ್ರನು. ಸಕಲಪ್ರಾಣಿಗಳಿಗೂ ನೀನು ಈಶ್ವರನಾದವನು. ನೀನೇ ನನಗೆ ಬೇಕಾದ ವರವನ್ನು ಕೊಡಬೇಕು. ನಿನಗೆ ನಾನು ಕವಚಕುಂಡಲಗಳನ್ನು ಕೊಟ್ಟರೆ ನಾನು ಶತ್ರುಗಳಿಗೆ ವಧ್ಯನಾಗಿ ಅಪಹಾಸಾಸ್ಪದನಾಗುತ್ತೇನೆ. ಆದರೆ ಇದಕ್ಕೆ ಪ್ರತಿಯಾಗಿ ನೀನೇನಾದರೂ ಕೊಟ್ಟು ಇವುಗಳನ್ನು ಸ್ವೀಕರಿಸು. ಸುಮ್ಮನೆಬೇರೆ ನಾನು ಕವಚಕುಂಡಲಗಳನ್ನು ಕೊಡತಕ್ಕವನಲ್ಲ" ಎಂದನು. ಇಂದ್ರನು "ಎಲೈ ಕರ್ಣನೆ, ಪೂರ್ವದಲ್ಲಿ ಸೂರ್ಯನು ನಿನ್ನ ಸಮೀಪಕ್ಕೆ ಬಂದದ್ದನ್ನು ನಾನು ತಿಳಿದಿರುವೆನು. ಆದ್ದರಿಂದ ನೀನು ಈ ಮಾತನಾಡುತ್ತೀಯೆ; ಇದರಲ್ಲಿ ಸಂಶಯವಿಲ್ಲ. ನಿನ್ನ ಅಪೇಕ್ಷೆಯೂ ನೆರವೇರುವಂತೆ ನೀನು ನನ್ನಲ್ಲಿರತಕ್ಕ ವಜ್ರಾಯುಧ ಹೊರತು ಇತರವಾದ ಆಯುಧವನ್ನು ಬೇಡಿಕೊ, ಕೊಡುವೆನು" ಎಂದನು. ಬಳಿಕ ಕರ್ಣನು ಸಂತುಷ್ಟನಾಗಿ "ಎಲೈ ದೇವೇಂದ್ರನೆ, ಯುದ್ಧದಲ್ಲಿ ಶತ್ರುನಾಶಕವಾಗಿಯೂ ಅಮೋಘವಾಗಿಯೂ ಇರತಕ್ಕ ನಿನ್ನ ಶಕ್ತ್ಯಾಯುಧವನ್ನು ನನಗೆಕೊಟ್ಟು, ನನ್ನ ಕವಚಕುಂಡಲಗಳನ್ನು ನೀನು ಸ್ವೀಕರಿಸು" ಎನಲು; ಇಂದ್ರನು ಒಂದುಮುಹೂರ್ತ ಆಲೋಚಿಸಿ "ಎಲೈ ಕರ್ಣನೆ, ನನ್ನಲ್ಲಿರತಕ್ಕ ಶಕ್ತ್ಯಾಯುಧವು ನನ್ನ ಕಯ್ಯಿಂದ ಬಿಟ್ಟದ್ದೇ ಆದರೆ, ಅನೇಕಶತ್ರುಗಳನ್ನು ಸಂಹರಿಸಿ ಪುನಃ ನನ್ನ ಕಯ್ಯನ್ನು ಸೇರುವದು. ಎಷ್ಟಾವರ್ತಿ ಬಿಟ್ಟರೂ ಅದೇ ಪ್ರಕಾರ ಅನೇಕ ಶತ್ರುಗಳನ್ನು ಸಂಹರಿಸಿ ನನ್ನ ಕೈಗೇ ಬರುವದು. ಇಂಥ ಶಕ್ತಿಯನ್ನು ನೀನು ನಿನಗೆ ಭಯವು ಪ್ರಾಪ್ತವಾದಾಗ ಒಬ್ಬನ ಮೇಲೆ ಪ್ರಯೋಗಿಸಬೇಕು. ಒಂದಾವರ್ತಿ ಇದನ್ನು ಪ್ರಯೋಗಿಸಿ ಮತ್ತೊಂದಾವರ್ತಿ ಇದನ್ನು ಪ್ರಯೋಗಿಸಕೂಡದು. ಈ ಸಮಯನಿಬಂಧನೆಯನ್ನು ನೀನು ಒಪ್ಪಿದರೆ ನಿನಗೆ ನನ್ನ ಶಕ್ತ್ಯಾಯುಧವನ್ನು ಕೊಡುವೆನು" ಎಂದನು. ಆ ಮಾತನ್ನು ಕೇಳಿ ಕರ್ಣನು "ಎಲೈ ಮಹಾತ್ಮನೆ, ನನಗೆ ಭಯವುಂಟಾದ ಕಾಲದಲ್ಲಿ ಯುದ್ಧರಂಗದಲ್ಲಿ ಗರ್ಜನೆಯನ್ನು ಮಾಡತಕ್ಕ ಒಬ್ಬ ಶೂರನಮೇಲೆ ಮಾತ್ರವೇ ನಿನ್ನ ನಿಬಂಧನೆಯ ಪ್ರಕಾರ ಈ ಶಕ್ತಿಯನ್ನು

ಪ್ರಯೋಗಿಸುತ್ತೇನೆ. ಇದಕ್ಕೆ ನಾನು ತಪ್ಪತಕ್ಕವನಲ್ಲ" ಎನಲು; ಇಂದ್ರನು "ಎಲೈ ಕರ್ಣನೆ, ಈ ಶಕ್ತ್ಯಾಯುಧವನ್ನು ನೀನು ಯುದ್ಧರಂಗದಲ್ಲಿ ಯಾವ ಪುರುಷನನ್ನು ಸಂಹರಿಸಬೇಕೆಂದು ಅಪೇಕ್ಷಿಸುವಿಯೋ ಆತನನ್ನು, ಅಜಯ್ಯನೆಂದೂ ನಾರಾಯಣನ ಅಂಶಭೂತನೆಂದೂ ಅಚಿಂತ್ಯನೆಂದೂ ವೇದಜ್ಞರಾದ ದೊಡ್ಡವರು ಹೇಳುವರು. ಮಹಾತ್ಮನಾದ ಶ್ರೀಕೃಷ್ಣನು ಆತನನ್ನು ಸಂರಕ್ಷಿಸುತ್ತಿರುವನು" ಎಂದನು. ಬಳಿಕ ಕರ್ಣನು "ಎಲೈ ದೇವೇಂದ್ರನೆ, ಹಾಗೆಯೇ ಆಗಲಿ. ಯುದ್ಧರಂಗದಲ್ಲಿ ಪ್ರತಾಪಶಾಲಿಯಾದ ಒಬ್ಬನನ್ನೇ ನಾನು ಸಂಹರಿಸುತ್ತೇನೆ. ಆ ಶಕ್ತ್ಯಾಯುಧವನ್ನು ನನಗೆ ಕೊಡು. ಆ ಮೇಲೆ ನನ್ನ ಸಹಜವಾದ ಕವಚಕುಂಡಲಗಳನ್ನು ತೆಗೆದು ನಿನಗೆ ಕೊಡುತ್ತೇನೆ. ಇದರಿಂದ ನನ್ನ ಶರೀರಕ್ಕೆ ವಿಕಾರವುಂಟಾಗದಂತೆ ನೀನು ನನಗೆ ಅನುಗ್ರಹವನ್ನು ಮಾಡು" ಎನಲು; ಆ ಮಾತನ್ನು ಕೇಳಿ ಇಂದ್ರನು "ಎಲೈ ಕರ್ಣನೆ, ನೀನು ಸತ್ಯವಾದಿಯಾದ್ದರಿಂದ ಸಹಜವಾದ ಕವಚಕುಂಡಲಗಳನ್ನು ಕಿತ್ತು ತೆಗೆಯತಕ್ಕ ನಿನ್ನ ಶರೀರಕ್ಕೆ ವ್ರಣವೂ ವಿಕಾರವೂ ಸಹ ಉಂಟಾಗಲಾರವು. ನಿಮ್ಮ ತಂದೆಯ ಶರೀರಕಾಂತಿಯಂತೆ ನಿನ್ನ ಶರೀರಕಾಂತಿಯೂ ಆಗುವದು. ಇನ್ನೂ ಅನೇಕ ಶತ್ರುಗಳಿರತಕ್ಕ ಕಾಲದಲ್ಲಿ ಈ ಶಕ್ತಿಯನ್ನು ನೀನು ಯಾರಮೇಲಾದರೂ ಪ್ರಮಾದದಿಂದ ಪ್ರಯೋಗಿಸಿದರೆ ಇದು ನಿನ್ನನ್ನೇ ನಾಶಮಾಡಿಬಿಡುವದು" ಎಂದು ಹೇಳಿದನು. ಕರ್ಣನು "ಎಲೈ ದೇವೇಂದ್ರನೆ, ನಿನ್ನ ಮಾತಿನಪ್ರಕಾರ ನನಗೆ ತುಂಬಾ ಶ್ರಮವುಂಟಾದ ಸಮಯದಲ್ಲೇ ಈ ಶಕ್ತಿಯನ್ನು ಒಬ್ಬ ಪುರುಷನಮೇಲೆ ಪ್ರಯೋಗಿಸುತ್ತೇನೆ. ಇದು ಯಥಾರ್ಥವು" ಎಂದನು. ಅನಂತರ ಇಂದ್ರನು ತನ್ನ ಜಾಜ್ವಲ್ಯಮಾನವಾದ ಶಕ್ತ್ಯಾಯುಧವನ್ನು ಕರ್ಣನಿಗೆ ಕೊಟ್ಟನು. ಅದನ್ನು ಪರಿಗ್ರಹಿಸಿ ಕರ್ಣನು, ಶಸ್ತ್ರವನ್ನು ಕಯ್ಯಲ್ಲಿ ಹಿಡಿದು ತನ್ನ ಅವಯವಗಳನ್ನು ಛೇದಿಸಿ, ರಕ್ತದಿಂದ ನೆನೆದಿರುವ ಕವಚಕುಂಡಲಗಳನ್ನು ತೆಗೆದು, ಸ್ವಲ್ಪವೂ ಮುಖ ವಿಕಾರವಿಲ್ಲದೆ ಇಂದ್ರನಿಗೆ ಕೊಟ್ಟನು. ಆಗ ಆಕಾಶಮಾರ್ಗದಲ್ಲಿ ಸಂಚರಿಸುತ್ತಿದ್ದ ದೇವತೆಗಳೂ ದಾನವರೂ ಮತ್ತು ಮನುಷ್ಯರೂ ಸಹ ಆ ಅದ್ಭುತಕೃತ್ಯವನ್ನು ನೋಡಿ ಆಶ್ಚರ್ಯಪಡುತ್ತ, ಸಿಂಹನಾದಗಳನ್ನು ಮಾಡಿ ದೇವದುಂದುಭಿಯನ್ನು ಬಾರಿಸಿ ಕರ್ಣನಮೇಲೆ ಪುಷ್ಪವೃಷ್ಟಿಯನ್ನು ಕರೆದರು. ಬಳಿಕ ಇಂದ್ರನು ನಗುತನಗುತ ಕರ್ಣನಿಗೆ ವಂಚನೆಯನ್ನು ಮಾಡಿ ಕವಚಕುಂಡಲಗಳನ್ನು ತೆಗೆದುಕೊಂಡು, ಕರ್ಣನಿಗೆ ಲೋಕದಲ್ಲಿ ಅಪಾರವಾದ ಯಶಸ್ಸುಂಟಾಗುವಹಾಗೆ ಮಾಡಿ, ಪಾಂಡವರ ಕೆಲಸವು ನೆರವೇರಿತೆಂದು ತಿಳಿದು ಸ್ವರ್ಗಕ್ಕೆ ತೆರಳಿದನು. ಬಳಿಕ ದುರ್ಯೋಧನಾದಿಗಳು ಕರ್ಣನು ಕವಚಕುಂಡಲಗಳನ್ನು ಇಂದ್ರನಿಗೆ ಕಳೆದುಕೊಟ್ಟದ್ದನ್ನು ಕೇಳಿ ತಮ್ಮ ದರ್ಪವು ಅಡಗಿಹೋಗಲು ದೀನರಾದರು. ಆ ಸಮಾಚಾರವನ್ನು ಕೇಳಿ ಪಾಂಡವರು ಬಹಳವಾಗಿ ಸಂತೋಷಪಟ್ಟರು.

ಈ ರೀತಿಯಲ್ಲಿ ವೈಶಂಪಾಯನಮುನೀಶ್ವರನು ಜನಮೇಜಯರಾಯನಿಗೆ ಹೇಳಲು, ಜನಮೇಜಯರಾಯನು—ಎಲೈ ವೈಶಂಪಾಯನಮುನೀಂದ್ರನೆ, ಇಂದ್ರನು ಕರ್ಣನ ಕವಚಕುಂಡಲಗಳನ್ನು ತೆಗೆದುಕೊಂಡು ಹೋದ ಕಾಲದಲ್ಲಿ ಪಾಂಡವರೆಲ್ಲಿದ್ದರು? ಅವರಿಗೆ ಈ ಶುಭಸಮಾಚಾರವು ಹ್ಯಾಗೆ ತಿಳಿಯಿತು? ಹನ್ನೆರಡು ವರ್ಷವಾದ ಬಳಿಕ ಅವರು ಏನು ಮಾಡುತ್ತಿದ್ದರು? ಇದನ್ನು ನೀನು ವಿಸ್ತರಿಸಬೇಕು—ಎನಲು, ವೈಶಂಪಾಯನಮುನೀಂದ್ರನು ಜನಮೇಜಯರಾಯನನ್ನು ಕುರಿತು—ಎಲೈ ಜನಮೇಜಯರಾಯನೆ, ಸೈಂಧವನು ಕಾಮ್ಯಕವನದಲ್ಲಿ ದ್ರೌಪದಿಯನ್ನು ಅಪಹರಿಸಲು, ಆತನನ್ನು ಓಡಿಸಿ ಪಾಂಡವರು ದ್ರೌಪದಿಯನ್ನು ಕರೆದುಕೊಂಡು, ಬ್ರಾಹ್ಮಣರಿಂದಲೂ ಸಾರಥಿ ಮೊದಲಾದ ಪರಿಜನಗಳಿಂದಲೂ ಕೂಡಿ, ಮಾರ್ಕಂಡೇಯರು ಹೇಳುವ ಪುರಾಣಗಳನ್ನೂ ದೇವರ್ಷಿಚರಿತ್ರಗಳನ್ನೂ ಕೇಳುತ್ತ, ರಥಗಳನ್ನೇರಿ ಪುಣ್ಯತಮವಾದ ದ್ವೈತವನಕ್ಕೆ ಬಂದು, ಹನ್ನೆರಡು ವರುಷ ವನವಾಸವನ್ನು ಸಂಪೂರ್ಣವಾಗಿ ಮುಗಿಸಿದರು—ಎಂದು ವೈಶಂಪಾಯನಮುನೀಶ್ವರನು ಜನಮೇಜಯರಾಯನಿಗೆ ವಿವರಿಸಿದನು.

ಶ೧೦ನೇ ಅಧ್ಯಾಯ.—ಆರಣೇಯಪರ್ವ—(ಪಾಂಡವರು ಜಿಂಕೆಯನ್ನು ಹುಡುಕುವಿಕೆ.)

ಬಳಿಕ ಜನಮೇಜಯರಾಯನು ವೈಶಂಪಾಯನಮುನೀಂದ್ರನನ್ನು ಕುರಿತು—ಎಲೈ ಮುನೀಂದ್ರನೆ, ಪಾಂಡವರು ಸೈಂಧವನನ್ನು ಶಿಕ್ಷಿಸಿ ಅವನಿಂದ ದ್ರೌಪದಿಯನ್ನು ಬಿಡಿಸಿಕೊಂಡು ಬಂದು, ಇಂಥ ಕ್ಲೇಶಗಳನ್ನು ಅನುಭವಿಸುತ್ತ ಅರಣ್ಯದಲ್ಲಿ ಏನುಮಾಡುತ್ತಿದ್ದರು ?—ಎನಲು, ವೈಶಂಪಾಯನಮುನೀಂದ್ರನು—ಎಲೈ ಜನಮೇಜಯರಾಯನೆ, ಆಗ ಧರ್ಮರಾಯನು ತಮ್ಮಂದಿರೊಡನೆಯೂ ದ್ರೌಪದಿಯೊಡನೆಯೂ ಕೂಡಿ ಕಾಮ್ಯಕವನವನ್ನು ಬಿಟ್ಟು, ವಿಚಿತ್ರವಾದ ವೃಕ್ಷಗಳಿಂದಲೂ ಮಧುರವಾದ ಕಂದಮೂಲಫಲಗಳಿಂದಲೂ ರಮ್ಯವಾದ ದ್ವೈತವನಕ್ಕೆ ಬಂದು, ಅಲ್ಲಿ ಕಂದಮೂಲಫಲಗಳನ್ನು ಮಿತವಾಗಿ ಆಹಾರಮಾಡಿಕೊಂಡು ಸುಖವಾಗಿ ವಾಸಮಾಡುತ್ತಿದ್ದನು. ಆಗ ಆ ಮಹಾತ್ಮರೆಲ್ಲರೂ ತಮ್ಮ ಸಾಮರ್ಥ್ಯದಿಂದ ಬ್ರಾಹ್ಮಣರನ್ನು ರಕ್ಷಿಸುತ್ತ, ವ್ರತನಿಷ್ಠರಾಗಿ, ಮುಂದಾಗತಕ್ಕ ಶ್ರೇಯಸ್ಸನ್ನು ನಿರೀಕ್ಷಿಸಿಕೊಂಡು ತತ್ಕಾಲದಲ್ಲಿ ಉಂಟಾದ ಕ್ಲೇಶಗಳನ್ನು ಸಹಿಸುತ್ತ, ಆ ದ್ವೈತವನದಲ್ಲಿ ನಡಿಸಿದ ಕಾರ್ಯವನ್ನು ತಿಳುಹಿಸುವೆನು ಕೇಳು : ಆ ವನದಲ್ಲಿ ತಪಸ್ಸು ಮಾಡಿಕೊಂಡಿದ್ದ ಬಬ್ಬ ಬ್ರಾಹ್ಮಣನು ಯಜ್ಞಸಾಧನವಾದ ಅರಣಿಯನ್ನು ಬಂದು ಗಿಡಕ್ಕೆ ತಗಲಹಾಕಿದ್ದನು. ಅಲ್ಲಿಗೆ ಬಂದು ಜಿಂಕೆಯು ಬಂದು ತನ್ನ ಮೈಯನ್ನು ಆ ಗಿಡಕ್ಕೆ ಹಾಕಿ ಉಜ್ಜುತ್ತಿರುವ ಸಮಯದಲ್ಲಿ, ಆ ಅರಣಿಯು ಅದರ ಕೊಂಬಿನಲ್ಲಿ ಸಿಕ್ಕಿಕೊಂಡಿತು. ಬಳಿಕ ಆ ಜಿಂಕೆಯು ತನ್ನ ಕೊಂಬಿನಲ್ಲಿ ಸಿಕ್ಕಿಕೊಂಡ ಆ ಅರಣಿಯೊಡನೆ ಬಹು ವೇಗದಿಂದ ನೆಗೆಯುತ್ತ ಆ ಆಶ್ರಮದ ಆಚೆ ಬಹುದೂರ ಓಡಿಹೋಯಿತು. ಅದನ್ನು ನೋಡಿ ಆ ಬ್ರಾಹ್ಮಣನು ತನ್ನ ಅಗ್ನಿಹೋತ್ರಕ್ಕೆ ಸಾಧನವಾದ ಅರಣಿಯನ್ನು ಜಿಂಕೆಯು ತೆಗೆದುಕೊಂಡು ಹೋಯಿತಲ್ಲಾ ಎಂದು ವ್ಯಸನಪಡುತ್ತ, ತಮ್ಮಂದಿರೊಡನೆ ಸುಖವಾಗಿ ಆ ವನದಲ್ಲಿ ಕುಳಿತಿದ್ದ ಧರ್ಮರಾಯನ ಬಳಿಗೆ ಬಂದು "ಎಲೈ ಧರ್ಮರಾಯನೆ, ನನ್ನ ಅಗ್ನಿಹೋತ್ರದ ಅರಣಿಯನ್ನು ಬಂದು ಗಿಡದಲ್ಲಿ ತಗಲಹಾಕಿದ್ದೆನು. ಬಂದು ಜಿಂಕೆಯು ಅಲ್ಲಿಗೆ ಬಂದು ಆ ಗಿಡದಲ್ಲಿ ತನ್ನ ಮೈಯನ್ನು ಉಜ್ಜಿಕೊಳ್ಳುತ್ತಿತ್ತು. ಆ ಸಮಯದಲ್ಲಿ ಅದರ ಕೋಡಿಗೆ ಆ ಅರಣಿಯು ಸಿಕ್ಕಿಕೊಳ್ಳಲು, ಅದರೊಡನೆ ನಮ್ಮ ಆಶ್ರಮದಿಂದ ಬಹುದೂರ ಓಡಿಹೋಯಿತು. ಈ ಅರಣಿಯಿಲ್ಲದ್ದರಿಂದ ನನ್ನ ಅಗ್ನಿಹೋತ್ರವು ನಿಂತುಹೋಗುವ ಕಾಲವು ಬಂದಿರುವದು. ನೀನು ಜಾಗ್ರತೆಯಾಗಿ ಅದನ್ನು ಅಟ್ಟಿಕೊಂಡು ಹೋಗಿ ನನ್ನ ಅರಣಿಯನ್ನು ತೆಗೆದುಕೊಂಡು ಬಂದು ನನಗೆ ಕೊಡಬೇಕು" ಎಂದು ನುಡಿಯಲು ; ಆ ಮಾತನ್ನು ಕೇಳಿ ಧರ್ಮರಾಯನೂ ಭೀಮಸೇನಾದಿಗಳೂ ಸಹ ಬ್ರಾಹ್ಮಣನ ಕಾರ್ಯವನ್ನು ನೆರವೇರಿಸುವದಕ್ಕೋಸ್ಕರ ತಮ್ಮತಮ್ಮ ಧನುಸ್ಸುಗಳನ್ನು ಧರಿಸಿಕೊಂಡು, ಆ ಜಿಂಕೆಯು ಹೋದ ಮಾರ್ಗವನ್ನೇ ಅನುಸರಿಸಿಕೊಂಡು ಕರ್ಣಿ ನಾಳೀಕ ನಾರಾಚಗಳೆಂಬ ತೀಕ್ಷ್ಣವಾದ ಬಾಣಗಳನ್ನು ಪ್ರಯೋಗಿಸುತ್ತ, ವೇಗದಿಂದ ಬಹುದೂರ ಹೋಗಿ, ಅಲ್ಲಿ ಆ ಜಿಂಕೆಯನ್ನು ಕಂಡು ಅದನ್ನು ಸಂಹರಿಸದೆ ಹಿಡಿದುಕೊಳ್ಳಬೇಕೆಂದು ಯತ್ನಿಸುತ್ತಿದ್ದರು. ಅಷ್ಟರಲ್ಲೇ ಅದು ಕಣ್ಣಿಗೆ ಕಾಣಿಸದೆ ಓಡಿಹೋಯಿತು. ಆಗ ಪಾಂಡವರು ಜಿಂಕೆಯನ್ನು ಕಾಣದೆ ಬಹುದೂರದ ವರೆಗೂ ಹೋಗಿ ಹುಡುಕಿ, ಎಲ್ಲಿಯೂ ಅದನ್ನು ಕಾಣದೆ, ಮಾರ್ಗಾಯಾಸದಿಂದ ಬಹಳವಾಗಿ ಬಳಲಿ, ಆ ಅರಣ್ಯದಲ್ಲಿ ತಂಪಾದ ನೆರಳುಳ್ಳ ಬಂದು ಆಲದಮರ ಕೆಳಗೆ ಕುಳಿತುಕೊಂಡು, ಹಸಿವು ಬಾಯಾರಿಕೆಗಳಿಂದ ಪೀಡಿತರಾಗಿ ಚಿಂತಿಸುತ್ತಿದರು. ಆ ವೇಳೆಯಲ್ಲಿ ನಕುಲನು ದುಃಖವನ್ನು ಸಹಿಸಲಾರದೆ ಧರ್ಮರಾಯನನ್ನು ಕುರಿತು "ಎಲೈ ಅಗ್ರಜನೆ, ನಮ್ಮ ವಂಶದಲ್ಲಿ ಹುಟ್ಟಿದವರು ಯಾವಾಗಲೂ ಆಲಸ್ಯದಿಂದ ಧರ್ಮಾರ್ಥಗಳನ್ನು ಕೆಡಿಸಿಕೊಳ್ಳಲಿಲ್ಲ. ನಾವೂ ಕೂಡ ಇದುವರೆಗೂ ಯಾರು ಏನು ಹೇಳಿಕೊಂಡರೂ ಆ ಕಾರ್ಯವನ್ನು ಮಾಡಿಕೊಡುತ್ತಿದ್ದೆವು. ಈಗ ಬಬ್ಬ ಬ್ರಾಹ್ಮಣನು ಅರಣಿಯನ್ನು ಕಳೆದುಕೊಂಡು ಅದರಿಂದ ತನ್ನ ಅಗ್ನಿಹೋತ್ರವು ನಿಂತುಹೋಗುವದೆಂದು ನಮ್ಮ ಸಂಗಡ ಹೇಳಿಕೊಂಡದ್ದಕ್ಕೆ ನಾವು ಆತನ ಕಾರ್ಯವನ್ನು ಮಾಡಿಕೊಡದೆ ಆ ದೋಷಕ್ಕೆ ಗುರಿಯಾಗಬೇಕಾಯಿತಲ್ಲಾ !" ಎಂದು ನುಡಿದನು.

### ೩೧೧ನೇ ಅಧ್ಯಾಯು.—ಆರಣ್ಯೇಯಪರ್ವ—(ಧರ್ಮರಾಯನು ಯಕ್ಷಸರೋವರಕ್ಕೆ ಬರುವಿಕೆ.)

ವೈಶಂಪಾಯನಮುನೀಂದ್ರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, ಬಳಿಕ ಧರ್ಮರಾಯನು ನಕುಲನನ್ನು ಕುರಿತು "ಎಲೈ ನಕುಲನೆ, ಆಪತ್ತು ಬರುವದಕ್ಕೆ ಇಂಥ ಕಾಲವೆಂಬುವದೇನಾದರೂ ಉಂಟೆ? ಅಂಥ ಆಪತ್ತು ಬರುವದಕ್ಕೆ ಕಾರಣವೇನೋ, ಅದರಿಂದೇನಾಗುವದೋ, ಗೊತ್ತಾಗದೆ ಇರುವದು. ಪುಣ್ಯಪಾಪಕರ್ಮಗಳಿಗೆ ಸುಖದುಃಖರೂಪವಾದ ಫಲಗಳನ್ನು ದೇವರೇ ಉಂಟುಮಾಡತಕ್ಕವನು" ಎನಲು, ಭೀಮಸೇನನು "ಎಲೈ ಅಗ್ರಜನೆ, ಪಾಪಾತ್ಮನಾದ ದುಶ್ಯಾಸನನು ಯಾವಾಗ ದ್ರೌಪದಿಯನ್ನು ಗೌಡಿಯಂತೆ ಸಭೆಗೆ ಎಳೆದುತಂದನೋ ಆಗಲೇ ನಾನು ಆತನನ್ನು ಸಂಹಾರಮಾಡದೆ ಹೋದದ್ದರಿಂದ ನಾವು ಇಂಥ ದುಃಖಕ್ಕೆ ಗುರಿಯಾದೆವು" ಎಂದನು. ಬಳಿಕ ಅರ್ಜುನನು "ಎಲೈ ಅಣ್ಣನೆ, ಸೂತಪುತ್ರನಾದ ಕರ್ಣನು ತೀಕ್ಷ್ಣವಾಗಿಯೂ ಶರೀರದ ಅಸ್ಥಿಗಳನ್ನೂ ಕೂಡ ಭೇದಿಸುವದಾಗಿಯೂ ಇರುವ ಕಠಿಣೋಕ್ತಿಗಳನ್ನು ಸಭೆಯಲ್ಲಿ ಆಡಿದನು. ಆ ಮಾತುಗಳನ್ನು ನಾನು ಸಹಿಸಿಕೊಂಡಿದ್ದದ್ದರಿಂದ ಇಂಥ ಕಷ್ಟಕ್ಕೆ ಸಿಕ್ಕಬೇಕಾಯಿತು" ಎಂದನು. ಸಹದೇವನು "ಎಲೈ ರಾಯನೆ, ಯಾವಾಗ ಶಕುನಿಯು ನಿನ್ನನ್ನು ಪಗಡೆಯ ಆಟದಲ್ಲಿ ಗೆದ್ದನೋ ಆಗಲೇ ನಾನು ಆತನನ್ನು ಸಂಹಾರಮಾಡದೆ ಹೋದದ್ದರಿಂದ ಇಂಥ ಕ್ಲೇಶವನ್ನು ಅನುಭವಿಸಬೇಕಾಯಿತು" ಎಂದು ಹೇಳಿದನು. ಬಳಿಕ ಧರ್ಮರಾಯನು ನಕುಲನನ್ನು ಕುರಿತು "ಎಲೆ ವತ್ಸನೆ, ನಾಲ್ವರೂ ಬಾಯಾರಿಕೆಯಿಂದ ಬಹಳವಾಗಿ ಬಳಲಿರುವೆವು. ಎಲ್ಲಾದರೂ ಸಮೀಪದಲ್ಲಿ ನೀರೂ ಉದಕಾಶ್ರಿತಗಳಾದ ವೃಕ್ಷಗಳೂ ಇರುವವೆ.? ಈ ಮರವನ್ನೇರಿ ನೋಡು" ಎಂದನು. ನಕುಲನು ಮರವನ್ನೇರಿ ಸುತ್ತಲೂ ನೋಡಿ, ಧರ್ಮರಾಯನನ್ನು ಕುರಿತು "ಎಲೈ ಆರ್ಯನೆ, ಇದೋ ಇತ್ತಲಾಗಿ ಉದಕಾಶ್ರಿತವಾದ ವೃಕ್ಷಗಳು ಕಾಣಿಸುತ್ತಿರುವವು. ಅತ್ತಲಾಗಿ ಹಂಸ ಸಾರಸಪಕ್ಷಿಗಳ ಧ್ವನಿಯೂ ಕೇಳಬರುತ್ತಿರುವದು. ಅಲ್ಲಿ ನೀರಿರುವದರಲ್ಲಿ ಸಂದೇಹವಿಲ್ಲ" ಎನಲು, ಧರ್ಮರಾಯನು "ಎಲೈ ತಮ್ಮನೆ, ಹಾಗಾದರೆ ನೀನು ಈ ಬತ್ತಳಿಕೆಗಳನ್ನು ತೆಗೆದುಕೊಂಡು ಅಲ್ಲಿಗೆ ಹೋಗಿ ಇವುಗಳಲ್ಲಿ ನೀರುತುಂಬಿಕೊಂಡು ಜಾಗ್ರತೆಯಾಗಿಬಾ" ಎಂದು ಹೇಳಿದನು.

ಅನಂತರ ನಕುಲನು ಹಾಗಾಗಲಿ ಎಂದು ನುಡಿದು, ಶೀಘ್ರವಾಗಿ ನೀರಿರುವ ಆ ಪ್ರದೇಶಕ್ಕೆ ಹೋಗಿ, ಅಲ್ಲಿ ಹಂಸ ಸಾರಸಪಕ್ಷಿಗಳಿಂದ ಕೂಡಿ ರಮ್ಯವಾಗಿರುವ ನಿರ್ಮಲವಾದ ಶೀತೋದಕವನ್ನು ನೋಡಿ ಆ ಉದಕವನ್ನು ಕುಡಿಯಬೇಕೆಂದು ಯತ್ನಿಸಿದನು. ಆಗ ಅಲ್ಲಿದ್ದ ಒಬ್ಬ ಯಕ್ಷನು ಅದೃಶ್ಯರೂಪನಾಗಿ "ಎಲೈ ನಕುಲನೆ, ನೀನಿಲ್ಲಿ ನೀರು ಕುಡಿಯುವದಕ್ಕೆ ಸಾಹಸಮಾಡಬೇಡ. ನಾನು ಕೇಳುವ ಪ್ರಶ್ನೆಗಳಿಗೆ ಉತ್ತರ ಕೊಟ್ಟವನೇ ಇಲ್ಲಿ ಜಲಪಾನಮಾಡಬೇಕೆಂದು ಮೊದಲಿಂದಲೂ ನಾನು ನಿಯಮವನ್ನು ಮಾಡಿಕೊಂಡಿರುವದರಿಂದ ನನ್ನ ಪ್ರಶ್ನೆಗಳಿಗೆ ಉತ್ತರವನ್ನು ಕೊಟ್ಟು ಬಳಿಕ ನೀನು ಈ ನೀರನ್ನು ಕುಡಿದು ಬೇಕಾದಷ್ಟು ತೆಗೆದುಕೊಂಡ ಹೋಗಬಹುದು" ಎನಲು; ಆ ವಾಕ್ಯವನ್ನು ಗಣನೆಗೆ ತಾರದೆ ನಕುಲನು, ಬಾಯಾರಿಕೆಯನ್ನು ಸಹಿಸದೆ ಆ ಶೀತಳವಾದ ಉದಕವನ್ನು ಪಾನಮಾಡಿ ಸಂಗಡಲೇ ಭೂಮಿಯಲ್ಲಿ ಬಿದ್ದನು. ಅತ್ತಲಾ ಧರ್ಮರಾಯನು ಸಹದೇವನನ್ನು ಕುರಿತು "ಎಲೈ ಸಹದೇವನೆ, ನಕುಲನು ಹೋಗಿ ಬಹಳ ಹೊತ್ತಾಯಿತು. ಇನ್ನೂ ಯಾತಕ್ಕೆ ಬರಲಿಲ್ಲವೋ ತಿಳಿಯಲಿಲ್ಲ. ನೀನು ಜಾಗ್ರತೆಯಾಗಿ ಹೋಗಿ ಆತನನ್ನು ಕರೆದುಕೊಂಡು ನೀರನ್ನು ತೆಗೆದುಕೊಂಡುಬಾ" ಎನಲು; ಸಹದೇವನು ಜಾಗ್ರತೆಯಾಗಿ ಆ ಸರೋವರದ ಬಳಿಗೆ ಹೋಗಿ ಅಲ್ಲಿ ಜ್ಞಾನವಿಲ್ಲದೆ ನೆಲದಮೇಲೆ ಬಿದ್ದಿರುವ ನಕುಲನನ್ನು ನೋಡಿ ಬಹಳವಾಗಿ ದುಃಖಪಡುತ್ತ, ತಾನೂ ಬಾಯಾರಿಕೆಯನ್ನು ಸಹಿಸಲಾರದೆ ಆ ನೀರನ್ನು ಕುಡಿಯುವದಕ್ಕೆ ಹೋದನು. ಆಗ ಅದೃಶ್ಯನಾದ ಯಕ್ಷನು "ಎಲೈ ಸಹದೇವನೆ, ನನ್ನ ಪ್ರಶ್ನೆಗಳಿಗೆ ಉತ್ತರವನ್ನು ಕೊಟ್ಟವರೇ ಇಲ್ಲಿ ಜಲಪಾನವನ್ನು ಮಾಡಬೇಕೆಂದು ಮೊದಲಿಂದಲೂ ನಿಯಮವನ್ನು ಮಾಡಿಕೊಂಡಿರುವೆನು. ನೀನೂ ನನ್ನ ಪ್ರಶ್ನೆಗಳಿಗೆ ಉತ್ತರವನ್ನು ಕೊಟ್ಟೇ ಈ ನೀರನ್ನು ಕುಡಿದು ಬೇಕಾದಷ್ಟು ತೆಗೆದುಕೊಂಡು ಹೋಗು" ಎಂದು ನುಡಿಯಲು; ಅದನ್ನು ಲಕ್ಷ್ಯಮಾಡದೆ ಸಹದೇವನು ಬಾಯಾರಿಕೆಯಿಂದ ಆ ನೀರನ್ನು ಕುಡಿದು ಅಲ್ಲೇ ಜ್ಞಾನವಿಲ್ಲದೆ ಬಿದ್ದ

ಕೊಂಡನು. ಆ ಬಳಿಕ ಧರ್ಮರಾಯನು ಅರ್ಜುನನನ್ನು ಕುರಿತು “ಎಲೈ ಅರ್ಜುನನೆ, ನಕುಲಸಹದೇವರು ನೀರುತರುವದಕ್ಕೆ ಹೋಗಿ ಬಹಳ ಹೊತ್ತಾಯಿತು. ಇನ್ನೂ ಯಾತಕ್ಕೆ ಬರಲಿಲ್ಲವೋ ತಿಳಿಯಲಿಲ್ಲ. ದುಃಖಕಾಲ ದಲ್ಲಿ ನೀನು ನಮಗಾಗತಕ್ಕವನಾದ್ದರಿಂದ ನೀನು ಜಾಗ್ರತೆಯಾಗಿ ಹೋಗಿ ಅವರಿಬ್ಬರನ್ನೂ ಕರೆದುಕೊಂಡು ನೀರನ್ನೂ ತೆಗೆದುಕೊಂಡು ಬಾ” ಎಂದನು. ಆಗ ಅರ್ಜುನನು ಹಾಗೆಯೇ ಆಗಲೆಂದು ಧನುರ್ಬಾಣಗಳನ್ನು ತೆಗೆದುಕೊಂಡು, ಬರೆಯಿಂದ ಕತ್ತಿಯನ್ನು ಹಿರಿದುಕೊಂಡು, ಬೇಗನೆ ಆ ಸರೋವರದ ಬಳಿಗೆ ಹೋಗಿ ನಿದ್ರೆಮಾ ಡುತ್ತಿರುವರಂತೆ ಜ್ಞಾನವಿಲ್ಲದೆ ಭೂಮಿಯ ಮೇಲೆ ಬಿದ್ದಿರುವ ನಕುಲಸಹದೇವರನ್ನು ನೋಡಿ ಬಹು ದುಃಖಿತನಾಗಿ, ಧನುಸ್ಸನ್ನು ಹಿಡಿದು ಆ ವನದ ಸುತ್ತಲೂ ನೋಡಿ ಎತ್ತಲಾಗಿಯೂ ಯಾವ ಭೂತವನ್ನೂ ಕಾಣದೆ, ಬಾಯಾರಿಕೆ ಯನ್ನು ಸೈರಿಸಲಾರದೆ ನೀರನ್ನು ಕುಡಿಯುವದಕ್ಕೆ ಹೋದನು. ಆಗ ಅಲ್ಲಿದ್ದ ಅದೃಶ್ಯನಾದ ಯಕ್ಷನು “ಎಲೈ ಅರ್ಜುನನೆ, ನೀನು ಯಾತಕ್ಕೋಸ್ಕರ ಸಾಹಸಮಾಡುತ್ತಿರುವೆ? ನನ್ನ ಪ್ರಶ್ನೆಗಳಿಗೆ ಉತ್ತರವನ್ನು ಕೊಡದೆ ಬಲಾ ತ್ಕಾರದಿಂದ ಈ ನೀರನ್ನು ಕುಡಿಯುವದು ಅಶಕ್ಯವು. ನನ್ನ ಪ್ರಶ್ನೆಗಳಿಗೆ ಉತ್ತರವನ್ನು ಕೊಟ್ಟು ಬಳಿಕ ನೀನು ಬೇಕಾದಷ್ಟು ನೀರನ್ನು ಕುಡಿದು ತೆಗೆದುಕೊಂಡೂ ಹೋಗು” ಎನಲು; ಅರ್ಜುನನು “ಎಲೈ ಭೂತವೆ, ನನ್ನೆ ದುರಿಗೆ ನೀನು ಪ್ರತ್ಯಕ್ಷವಾಗಿ ಬಂದು ಇಂಥ ಮಾತುಗಳನ್ನಾಡಿದ್ದೇ ಆದರೆ, ನಿನ್ನನ್ನು ನನ್ನ ಬಾಣಗಳಿಂದ ತುಂಡು ತುಂಡಾಗಿ ಕತ್ತರಿಸಿ ಎಂದಿಗೂ ನೀನು ಇಂಥಾ ಮಾತುಗಳನ್ನಾಡದಂತೆ ಮಾಡುವೆನು” ಎಂದು ಹೇಳಿ, ಧನುಸ್ಸಿನಲ್ಲಿ ಬಾಣಗಳನ್ನು ಹೂಡಿ, ಶಬ್ದವೇಧವಿದ್ಯೆಯಿಂದ ಆ ಶಬ್ದವಾದ ಸ್ಥಳಕ್ಕೆ ಗುರಿಯಿಟ್ಟು ಅಮೋಘವಾದ ಕರ್ಣಿ ನಾಳೀಕ ನಾರಾಚಗಳೆಂಬ ಬಾಣಗಳನ್ನು ಪ್ರಯೋಗಿಸಿ, ಬಾಯಾರಿಕೆಯನ್ನು ತಡೆಯಲಾರದೆ ಮತ್ತಷ್ಟು ಕೋಪವುಳ್ಳವ ನಾಗಿ, ಆಕಾಶದಲ್ಲಿ ಬಾಣವೃಷ್ಟಿಯನ್ನು ಕರೆದನು. ಅದನ್ನು ನೋಡಿ ಯಕ್ಷನು “ಎಲೈ ಅರ್ಜುನನೆ, ಈ ಸಾಹ ಸದಿಂದ ಏನು ಪ್ರಯೋಜನ? ನನ್ನ ಪ್ರಶ್ನೆಗಳಿಗೆ ಉತ್ತರವನ್ನು ಹೇಳದೆ ನೀನು ನೀರನ್ನು ಕುಡಿದರೆ ನಿನಗೆ ಹಾನಿ ಯು ತಪ್ಪದು” ಎನಲು, ಆ ಮಾತನ್ನು ಲಕ್ಷೀಕರಿಸದೆ ಅರ್ಜುನನು ಆ ಸರೋವರದಲ್ಲಿ ನೀರನ್ನು ಕುಡಿದು ಅಲ್ಲೇ ಜ್ಞಾನತಪ್ಪಿ ಬಿದ್ದುಕೊಂಡನು. ಆ ಬಳಿಕ ಧರ್ಮರಾಯನು ಭೀಮಸೇನನನ್ನು ನೋಡಿ “ಎಲೈ ಭೀಮ ಸೇನನೆ, ನಕುಲನೂ ಸಹದೇವನೂ ಅರ್ಜುನನೂ ಸಹ ನೀರುತರುವದಕ್ಕೆ ಹೋಗಿ ಬಹಳ ಹೊತ್ತಾಯಿತು. ಇಷ್ಟು ಹೊತ್ತಾದರೂ ಯಾತಕ್ಕೆ ಬರಲಿಲ್ಲವೋ ತಿಳಿಯದು. ನೀನು ಜಾಗ್ರತೆಯಾಗಿ ಹೋಗಿ ಅವರನ್ನು ಕರೆದು ಕೊಂಡು ನೀರನ್ನೂ ತೆಗೆದುಕೊಂಡು ಜಾಗ್ರತೆಯಾಗಿ ಬಾ” ಎನಲು, ಹಾಗೆಯೇ ಆಗಲೆಂದು ಭೀಮಸೇನನು ಆ ಸರೋವರದ ಬಳಿಗೆ ಹೋಗಿ, ಅಲ್ಲಿ ಬಿದ್ದಿದ್ದ ತಮ್ಮಂದಿರನ್ನು ನೋಡಿ ದುಃಖಿತನಾಗಿ “ಈ ಮೂರುಮಂದಿಯೂ ಇಲ್ಲಿ ಮೃತಪ್ರಾಯರಾಗಿ ಬಿದ್ದಿರುವದನ್ನು ನೋಡಿದರೆ ಇದು ಯಕ್ಷರೋ ರಾಕ್ಷಸರೋ ಮಾಡಿದ ಕಾರ್ಯವೆಂದು ತೋರುವದು. ಈಗ ನಾನು ಆ ಯಕ್ಷರಾಕ್ಷಸರ ಸಂಗಡ ಯುದ್ಧಮಾಡಬೇಕಾಗುವದು. ಆದ್ದರಿಂದ ಮೊದಲು ಈ ನೀರನ್ನು ಕುಡಿದು ಬಾಯಾರಿಕೆಯನ್ನು ಪರಿಹರಿಸಿಕೊಂಡು ಬಳಿಕ ಆ ರಾಕ್ಷಸರ ಸಂಗಡ ಯುದ್ಧಕ್ಕೆ ನಿಲ್ಲುವೆನು” ಎಂದು ಯೋಚಿಸಿ, ನೀರನ್ನು ಕುಡಿಯುವದಕ್ಕೆ ಹೋದನು. ಆಗ ಯಕ್ಷನು “ಎಲೈ ಭೀಮನೆ, ನೀನು ಜಲಪಾ ನಕ್ಕಾಗಿ ಸಾಹಸ ಮಾಡಬೇಡ. ನನ್ನ ಪ್ರಶ್ನೆಗಳಿಗೆ ಉತ್ತರವನ್ನು ಕೊಟ್ಟವನೇ ಈ ಉದಕವನ್ನು ಪಾನಮಾಡತ ಕ್ಕದ್ದೆಂದು ನಾನು ಮೊದಲಿನಿಂದಲೂ ನಿಬಂಧನೆಯನ್ನು ಮಾಡಿಕೊಂಡಿರುವೆನು. ನೀನು ನನ್ನ ಪ್ರಶ್ನೆಗಳಿಗೆ ಉತ್ತ ರವನ್ನು ಕೊಟ್ಟು ಈ ಉದಕವನ್ನು ಪಾನಮಾಡಿ ಬೇಕಾದಷ್ಟು ನೀರನ್ನು ತೆಗೆದುಕೊಂಡು ಹೋಗು” ಎನಲು, ಭೀಮಸೇನನು ಯಕ್ಷನ ಪ್ರಶ್ನೆಗಳಿಗೆ ಉತ್ತರವನ್ನು ಕೊಡದೆ ಆ ಉದಕವನ್ನು ಪಾನಮಾಡಿ ತಾನೂ ಅಲ್ಲೇ ಬಿದ್ದನು. ಬಳಿಕ ಧರ್ಮರಾಯನು, ಭೀಮನೂ ಹೋಗಿ ಬಹಳ ಹೊತ್ತಾದರೂ ಬಾರದಿರುವದನ್ನು ನೋಡಿ ತಾನೇ ಅಲ್ಲಿಂದ ಹೊರಟು, ಚಿಂತೆಪಡುತ್ತ, ನಿರ್ಜನವಾಗಿಯೂ, ಅನೇಕ ಕೃಷ್ಣಮೃಗಗಳಿಂದಲೂ ಕಾಡುಹಂದಿಗಳಿಂದಲೂ ನಾನಾ ವಿಧವಾದ ಪಕ್ಷಿಗಳಿಂದಲೂ ಭಯಂಕರವಾಗಿಯೂ, ನೀಲವರ್ಣವುಳ್ಳ ವೃಕ್ಷಗಳಿಂದ ಶೋಭಿಸುತ್ತಿರುವದಾಗಿಯೂ, ಇರುವ ಆ ಅರಣ್ಯವನ್ನು ಪ್ರವೇಶಮಾಡಿ, ಬಹಳವಾಗಿ ಶ್ರಾಂತನಾಗಿ, ಸುವರ್ಣಕೇಸರಗಳಿಂದ ಶೋಭಿತವಾಗಿ ಕಮಲ ಕಲ್ಹಾರಾದಿ ಪುಷ್ಪಗಳಿಂದ ಪ್ರಕಾಶಮಾನವಾದ ಆ ಸರೋವರವನ್ನು ಕಂಡು, ಅದರ ತಟದಲ್ಲಿ ತಾಳೆ ಕಣಗಲೆ ಮೊದ

ಲಾದ ಹೂವಿನಗಿಡಗಳೂ ಅಶ್ವತ್ಥ ಮೊದಲಾದ ಛಾಯಾವೃಕ್ಷಗಳೂ ಸಿಬಿಡವಾಗಿರುವದನ್ನು ನೋಡಿ, ಈ ಸರೋವರವು ವಿಶ್ವಕರ್ಮನಿಂದ ನಿರ್ಮಿತವಾಗಿರಬಹುದು ಎಂದು ಆಶ್ಚರ್ಯಪಟ್ಟನು.

### ೩೧೭ನೇ ಅಧ್ಯಾಯ.—ಆರಣ್ಯಪರ್ವ—(ಯಕ್ಷ ಯುಧಿಷ್ಠಿರರ ಪ್ರಶ್ನೋತ್ತರಗಳು.)

ವೈಶಂಪಾಯನಮುನೀಂದ್ರನು ಜನಮೇಜಯರಾಯನನ್ನು ಕುರಿತು—ಎಲೈ ರಾಯನೆ, ಆಗ ಧರ್ಮರಾಯನು ಪ್ರಳಯಕಾಲದಲ್ಲಿ ತೇಜೋಹೀನರಾಗಿ ದೇವಲೋಕದಿಂದ ಕೆಳಕ್ಕೆ ಬಿದ್ದ ಲೋಕಪಾಲಕರಂತೆ ನಿಶ್ಚೇಷ್ಟರಾಗಿ ಆ ಸರೋವರದ ಬಳಿಯಲ್ಲಿ ಬಿದ್ದಿದ್ದ ಭೀಮಾರ್ಜುನನಕುಲಸಹದೇವರನ್ನು ನೋಡಿ, ಬಹು ದುಃಖದಿಂದ ನಿಟ್ಟುಸುರುಬಿಟ್ಟು, ಚಿಂತಾಕುಲನಾಗಿ, ಕಂಬನಿಗಳನ್ನು ತುಂಬಿ ರೋದನವನ್ನು ಮಾಡುತ್ತ, ಅಲ್ಲಿ ಮೃತಪ್ರಾಯನಾಗಿ ಬಿದ್ದಿದ್ದ ಭೀಮನನ್ನು ನೋಡಿ "ಎಲೈ ಮಹಾಬಾಹುವಾದ ವೃಕೋದರನೆ ! ಯುದ್ಧರಂಗದಲ್ಲಿ ಪಾಪಿಯಾದ ದುರ್ಯೋಧನನ ತೊಡೆಗಳನ್ನು ಗದೆಯಿಂದ ಭೇದಿಸುತ್ತೇನೆಂದು ನೀನು ಪ್ರತಿಜ್ಞೆಯನ್ನು ಮಾಡಿದೆಯಲ್ಲಾ ! ಅಯ್ಯೋ ! ನೀನು ಇಲ್ಲಿ ಮೃತಪ್ರಾಯನಾಗಿ ಬಿದ್ದಿರುವದನ್ನು ನೋಡಿದರೆ ಆ ಪ್ರತಿಜ್ಞೆಯು ನಿರರ್ಥಕವಾದ ಹಾಗೆ ಕಾಣಿಸುವದಲ್ಲಾ ! ಒಂದು ಪಕ್ಷದಲ್ಲಿ ಮನುಷ್ಯರ ಪ್ರತಿಜ್ಞೆಯು ಸುಳ್ಳಾಗುವದುಂಟು ; ದೇವತೆಗಳಮಾತೂ ಕೂಡ ಸುಳ್ಳಾದದ್ದು ಹ್ಯಾಗೆ ? ಮೊದಲು ಉತ್ತರಪಾರಿಯಾತ್ರಪರ್ವತದಲ್ಲಿ ಅರ್ಜುನನು ಹುಟ್ಟುವ ಕಾಲದಲ್ಲಿ ದೇವತೆಗಳೂ ಸಕಲಪ್ರಾಣಿಗಳೂ ಸಹ 'ಎಲೆ ಕುಂತೀದೇವಿಯೆ, ಈ ನಿನ್ನ ಮಗನು ಇಂದ್ರನಿಗೆ ಸಮಾನನಾದವನು. ಈತನು ನಷ್ಟವಾಗಿರುವ ನಿಮ್ಮ ಐಶ್ವರ್ಯವನ್ನು ಸಂಪಾದಿಸುವನು. ಯುದ್ಧರಂಗದಲ್ಲಿ ಈತನಿಗೆ ಜಯಿಸಲಶಕ್ಯರಾಗಿಯೂ ಈತನನ್ನು ಜಯಿಸತಕ್ಕವರಾಗಿಯೂ ಯಾರೂ ಇಲ್ಲವು' ಎಂದು ನುಡಿದರು. ಈಗ ಅಂಥ ಪರಾಕ್ರಮಶಾಲಿಯಾದ ಅರ್ಜುನನು ಮೃತ್ಯುವಶವಾದದ್ದು ಹ್ಯಾಗೆ ? ಅಯ್ಯೋ ! ಇವನು ಶತ್ರುಗಳನ್ನು ಜಯಿಸಿ ನಮ್ಮ ರಾಜ್ಯವನ್ನು ಗೆಲ್ಲುವನೆಂದು ತಿಳಿದಿದ್ದೆನಲ್ಲಾ ! ನನ್ನ ಆಶೆಯನ್ನೆಲ್ಲಾ ಹೋಗಲಾಡಿಸಿ ಇವನು ಹೀಗೆ ನೆಲದಮೇಲೆ ಬಿದ್ದಿರುವದನ್ನು ನೋಡಿ ನಾನು ಹ್ಯಾಗೆ ಸೈರಿಸಲಿ ? ನಾವು ಎಂಥ ಕಷ್ಟದಶೆಯನ್ನು ಹೊಂದಿದ್ದರೂ ಇವನು ನಮ್ಮ ದುಃಖವನ್ನು ಪರಿಹಾರಮಾಡತಕ್ಕವನೆಂದು ತಿಳಿದು ಇವನನ್ನು ನೋಡಿಕೊಂಡು ಆ ಕಷ್ಟವನ್ನೆಲ್ಲಾ ಸಹಿಸಿಕೊಂಡಿದ್ದೆವು. ಸಕಲಾಸ್ತ್ರಗಳನ್ನೂ ಬಲ್ಲವರಾಗಿಯೂ ಯುದ್ಧದುರ್ಮದರಾಗಿಯೂ ಪರಾಕ್ರಮಶಾಲಿಗಳಾಗಿಯೂ ಶತ್ರುಸಂಹಾರಕರಾಗಿಯೂ ವೀರಾಗ್ರೇಸರರಾಗಿಯೂ ಇರುವ ಈ ಭೀಮಾರ್ಜುನರು ಹ್ಯಾಗೆ ಮತ್ತೊಬ್ಬ ಶತ್ರುವಿನ ಕೈಗೆ ಸಿಕ್ಕಿದರು ? ಅಕಟಕಟಾ ! ಇಂಥ ದುರವಸ್ಥೆಗೆ ಗುರಿಯಾದ ಈ ನಕುಲಸಹದೇವರನ್ನು ನೋಡುತ್ತಿದ್ದರೂ ಇನ್ನೂ ನನ್ನ ಈ ಕೆಟ್ಟಹೃದಯವು ಒಡೆದು ಹೋಗದಿರುವದಲ್ಲಾ ! ಇದು ಕಲ್ಲಿನಿಂದ ಮಾಡಿದ್ದಾಗಿರಬಹುದು. ಇಲ್ಲದಿದ್ದರೆ ಇಷ್ಟು ಕಠಿನವಾಗಿರುವದಕ್ಕೆ ನಿಮಿತ್ತವಿಲ್ಲ. ಹಾ ! ತಮ್ಮಂದಿರೆ, ಸಕಲ ಶಾಸ್ತ್ರಗಳನ್ನೂ ಬಲ್ಲವರಾಗಿಯೂ ದೇಶಕಾಲಗಳನ್ನು ತಿಳಿದವರಾಗಿಯೂ ತಪೋನಿಷ್ಠರಾಗಿಯೂ ಸಾಹಸಿಗಳಾಗಿಯೂ ಪುರುಷಶ್ರೇಷ್ಠರಾಗಿಯೂ ಇರುವ ನೀವು ನಿಮ್ಮ ಸಾಮರ್ಥ್ಯಕ್ಕೆ ತಕ್ಕ ಕಾರ್ಯವನ್ನು ಮಾಡದೆ ಯಾತಕ್ಕೋಸ್ಕರ ಹೀಗೆ ಜ್ಞಾನವಿಲ್ಲದೆ ಮಲಗಿರುವಿರಿ ? ಅಯ್ಯೋ ! ವತ್ಸರೆ, ಧನುಸ್ಸುಗಳನ್ನು ಹಿಡಿದು ಬಾಣಗಳಿಂದ ಶರೀರದಲ್ಲಿ ಘಾಯವಡೆಯದೆಯೂ ಯಾರಿಂದಲೂ ಪರಾಜಿತರಾಗದೆಯೂ ಯಾತಕ್ಕೋಸ್ಕರ ಹೀಗೆ ನೆಲದಮೇಲೆ ಬಿದ್ದಿರುವಿರಿ ?" ಎಂದು ಪ್ರಲಾಪಮಾಡಿದನು. ಧರ್ಮರಾಯನು ಹೀಗೆ ಕಳಚಿಕೊಂಡುಬಿದ್ದ ಪರ್ವತಶಿಖರಗಳಂತೆ ನೆಲದಮೇಲೆ ಜ್ಞಾನವಿಲ್ಲದೆ ಮಲಗಿರುವ ತಮ್ಮಂದಿರನ್ನು ನೋಡಿ, ಅಂಥ ಕಷ್ಟದಶೆಯನ್ನು ಹೊಂದಿ ಬಹು ದುಃಖದಿಂದ ಬಹಳವಾಗಿ ಮೈಯೆಲ್ಲಾ ಬೆವರಿ ವ್ಯಾಕುಲಚಿತ್ತನಾಗಿ, ವೀರಾಗ್ರೇಸರರಾದ ನನ್ನ ತಮ್ಮಂದಿರು ಇಂಥಾ ದುರವಸ್ಥೆಯನ್ನು ಹೊಂದುವದಕ್ಕೆ ಕಾರಣವೇನೆಂದು ಮನಸ್ಸಿನಲ್ಲಿ ವಿಚಾರಮಾಡುತ್ತ, ಯಾವ ಯೋಚನೆಯೂ ಹರಿಯದೆ ಚಿಂತಾಕ್ರಾಂತನಾಗಿ, ಹಾಗೆಯೇ ಮನಸ್ಸನ್ನು ತಾನೇ ಸ್ವಲ್ಪ ಸಮಾಧಾನಪಡಿಸಿಕೊಂಡು, ನಿಧಾನವಾಗಿ ಆಲೋಚಿಸುತ್ತ "ಶೂರರಾದ ಇವರನ್ನು ಭೂಮಿಯ ಮೇಲೆ ಈ ಪ್ರಕಾರ ಕೆಡವಿರತಕ್ಕವರು ಯಾರು ? ಇವರ ಮೈಮೇಲೆ ಶಸ್ತ್ರದ ಗಾಯವೂ ಇಲ್ಲ. ಹೀಗಾಗುವದಕ್ಕೆ

ಮತ್ತ್ಯಾವ ಗುರುತೂ ಕಾಣಿಸುವದಿಲ್ಲ. ಯಾವದೋ ಒಂದು ಭೂತವೇ ನನ್ನ ತಮ್ಮಂದಿರನ್ನು ಹೀಗೆ ಮಾಡಿರುವದೋ! ಅಥವಾ ದುರ್ಯೋಧನನೇ ಯಾರಿಗೂ ತಿಳಿಯದಹಾಗೆ ಕಪಟದಿಂದ ಇಂಥಾ ವಿಪತ್ತನ್ನುಂಟುಮಾಡಿದನೋ! ಅಥವಾ ದುರ್ಬುದ್ಧಿಯಾದ ಶಕುನಿಯೇನಾದರೂ ಕಾರ್ಯಾಕಾರ್ಯವಿವೇಕವಿಲ್ಲದೆ ಕಪಟೋಪಾಯದಿಂದ ಇಂಥ ಕೇಡನ್ನುಂಟುಮಾಡಿದನೋ! ದುರಾತ್ಮನಾದ ಅವನನ್ನು ಯಾರುತಾನೇ ನಂಬುವದಕ್ಕಾದೀತು? ಅಥವಾ ದುರ್ಯೋಧನನ ಕಡೆಯ ಗೂಢಚಾರರು ಯಾರಾದರೂ ಬಂದು ಇವರು ಹೀಗಾಗುವಹಾಗೆ ಕಪಟಪ್ರಯೋಗವನ್ನು ಮಾಡಿದರೋ!" ಎಂದು ಬಹು ಪ್ರಕಾರವಾಗಿ ಊಹಿಸುತ್ತ, ಅವರನ್ನು ನೋಡಿ, "ಇವರೆಲ್ಲರೂ ಮೃತರಾಗಿದ್ದರೂ ವಿಕಾರವೇನೂ ತೋರುವದಿಲ್ಲ. ಎಲ್ಲರ ಮುಖಕಾಂತಿಯೂ ಪ್ರಸನ್ನವಾಗಿಯೇ ಕಾಣಿಸುತ್ತಿರುವದು. ಇದನ್ನು ನೋಡಿದರೆ ಇವರು ಪಾನಮಾಡಿದ ಈ ಜಲವು ವಿಷಮಿಶ್ರವಾಗಿರುವಂತೆ ತೋರುವದಿಲ್ಲ. ಹಾಗಿದ್ದಪಕ್ಷದಲ್ಲಿ ಇವರ ಮುಖದಲ್ಲೇನಾದರೂ ವಿಕಾರವು ತೋರಬೇಕು. ಇವರಲ್ಲಿ ಯಾರನ್ನು ನೋಡಿದರೂ ಎಲ್ಲರೂ ಮಹಾಪ್ರವಾಹದಂತೆ ಪರಾಕ್ರಮವೇಗವುಳ್ಳವರಾಗಿ ತೇಜೋವಿಶೇಷದಿಂದ ಕಾಣಿಸಿಕೊಳ್ಳುತ್ತಿರುವರು. ಇಂಥ ಇವರನ್ನು ಹೀಗೆ ಮಾಡಬೇಕಾದರೆ ಅಂತಕನಾದ ಯಮನು ಹೊರತಾಗಿ ಇನ್ನ್ಯಾವನು ಸಮರ್ಥನಾದವನು? ಬಳಿಕ್ಕೇದಿರಲಿ, ಇಲ್ಲಿ ಜಲಪಾನವನ್ನು ಮಾಡಿ ಬಾಯಾರಿಕೆಯನ್ನು ಹಿಂಗಿಸಿಕೊಂಡು ಆ ಮೇಲೆ ಏಕಾಗ್ರಚಿತ್ತನಾಗಿ ಯೋಚಿಸಿ ಇದರ ಕಾರಣವನ್ನು ತಿಳಿಯುತ್ತೇನೆ" ಎಂದು ನೀರನ್ನು ಕುಡಿಯುವದಕ್ಕೋಸ್ಕರ ಆ ಸರೋವರದಲ್ಲಿ ಇಳಿದು ನೀರಿಗೆ ಕೈಯಿಟ್ಟನು. ಅಷ್ಟರೊಳಗೆ ಅದೃಶ್ಯರೂಪನಾದ ಆ ಯಕ್ಷನು "ಎಲೈ ಯುಧಿಷ್ಠಿರನೆ, ನೀನು ಇಲ್ಲಿ ನೀರುಕುಡಿಯುವದಕ್ಕೆ ಸಾಹಸವನ್ನು ಮಾಡಬೇಡ. ನನ್ನ ಪ್ರಶ್ನೆಗಳಿಗೆ ಉತ್ತರವನ್ನು ಕೊಟ್ಟವನೇ ಇಲ್ಲಿ ನೀರನ್ನು ಕುಡಿಯತಕ್ಕದ್ದೆಂದು ನಾನು ಮೊದಲಿನಿಂದಲೂ ನಿಬಂಧನೆಯನ್ನು ಮಾಡಿಕೊಂಡಿರುವೆನು. ಆದ್ದರಿಂದ ನೀನು ನನ್ನ ಪ್ರಶ್ನೆಗಳಿಗೆ ಉತ್ತರವನ್ನು ಕೊಟ್ಟು ಬಳಿಕ ಈ ಸರೋವರದಲ್ಲಿ ಯಥೇಚ್ಛವಾಗಿ ನೀರನ್ನು ಕುಡಿದು ತೃಪ್ತಿಪಡು. ನಾನು ಈ ಸರೋವರದಲ್ಲಿ ಹಾವಚೀಬಳ್ಳಿಗಳನ್ನೂ ಮೀನುಗಳನ್ನೂ ಆಹಾರಮಾಡಿಕೊಂಡಿರತಕ್ಕ ಬಕಪಕ್ಷಿಯು. ನಿನ್ನ ನಾಲ್ಕುಮಂದಿ ತಮ್ಮಂದಿರೂ ನನ್ನಿಂದಲೇ ಹತರಾದರು. ಈಗ ನೀನು ಐದನೆಯವನಾಗಿ ಬಂದಿರುವೆ" ಎಂದು ಅಂತರಿಕ್ಷದಲ್ಲಿ ನುಡಿದನು. ಆ ಮಾತನ್ನು ಕೇಳಿ ಧರ್ಮರಾಯನು "ಎಲೈ ನಿನ್ನ ಕೆಲಸವನ್ನು ನೋಡಿದರೆ ನೀನು ಪಕ್ಷಿಮಾತ್ರನಾಗಿ ತೋರುವದಿಲ್ಲ. ನೀನು ಯಾರು? ಏಕಾದಶರುದ್ರರಲ್ಲಿ ಮುಖ್ಯನಾದವನೋ ಅಥವಾ ಅಷ್ಟವಸುಗಳಲ್ಲಿ ಮುಖ್ಯನಾದವನೋ? ಅಲ್ಲದಿದ್ದರೆ ಏಕೋನಪಂಚಾಶನ್ಮರುತ್ತುಗಳಲ್ಲಿ ಮುಖ್ಯನಾದವನೋ ಹೇಳು: ನಿನ್ನನ್ನು ನೋಡಿದರೆ ದೇವತೆಯಂತೆ ತೋರುತ್ತಿದೆ. ಅಕಟಕಟಾ! ಹಿಮವಂತ, ಪಾರಿಯಾತ್ರ, ವಿಂಧ್ಯ, ಮಲಯಗಳೆಂಬ ನಾಲ್ಕು ಮಹಾಪರ್ವತಗಳಂತಿರುವ ಮಹಾ ತೇಜೋವಂತರಾದ ನನ್ನ ನಾಲ್ಕುಮಂದಿ ತಮ್ಮಂದಿರನ್ನೂ ಹೀಗೆ ಕೆಡಹಿದವರು ಯಾರು? ಎಲೈ ಮಹಾಬಲಶಾಲಿಯೆ, ನೀನು ಮಾಡಿದ ಕೆಲಸವು ಮಹತ್ತರವಾದದ್ದು. ಯುದ್ಧದಲ್ಲಿ ದೇವತೆಗಳಿಂದಲೂ ಗಂಧರ್ವರಿಂದಲೂ ಅಸುರರಿಂದಲೂ ರಾಕ್ಷಸರಿಂದಲೂ ಸಹಿಸಲಶಕ್ಯವಾದ ಪರಾಕ್ರಮವುಳ್ಳ ಈ ನಾಲ್ಕುಮಂದಿ ನನ್ನ ತಮ್ಮಂದಿರನ್ನು ಹೀಗೆ ಭೂಮಿಯಮೇಲೆ ಬೀಳುವಹಾಗೆ ಮಾಡಿದ ನಿನ್ನ ಸಾಹಸವು ಬಹಳ ಆಶ್ಚರ್ಯಕರವಾದದ್ದು. ಹೀಗೆ ಮಾಡಿದ್ದರಿಂದ ನಿನಗಾಗತಕ್ಕ ಕಾರ್ಯವೇನೋ ಮತ್ತು ನಿನ್ನ ಕೋರಿಕೆಯೇನಿರುವದೋ ನಾನು ತಿಳಿಯೆನು. ಇದನ್ನು ಕೇಳಬೇಕೆಂದು ನನಗೆ ಬಹಳ ಕುತೂಹಲವುಂಟಾಗಿರುವದು. ಇದನ್ನು ನೋಡಿ ನನಗೆ ಬಹಳವಾದ ದಿಗಿಲೂ ಎದೆನಡುಕವೂ ತಲೆನೋವೂ ಸಹ ಉಂಟಾಗಿರುವವು. ಆದ್ದರಿಂದ ನೀನು ಯಾರು? ಇಲ್ಲಿ ಯಾತಕ್ಕೋಸ್ಕರ ಇರುವೆ? ಇದೋ ನಾನು ಕೇಳುತ್ತಿರುವೆನು, ಹೇಳು" ಎನಲು, ಯಕ್ಷನು "ಎಲೈ ರಾಯನೇ ಕೇಳು, ನಿನಗೆ ಮಂಗಳವಾಗಲಿ. ನಾನು ಜಲಚರಪಕ್ಷಿಯಲ್ಲ; ನಾನೊಬ್ಬ ಯಕ್ಷನು. ಮಹಾಪರಾಕ್ರಮಶಾಲಿಗಳಾದ ನಿನ್ನ ತಮ್ಮಂದಿರು ನನ್ನಿಂದಲೇ ಹತರಾದರು" ಎಂದು ನುಡಿದನು.

ಆ ಅಮಂಗಳವಾದ ಕರ್ಣಕಠೋರವಾದ ಮಾತನ್ನು ಕೇಳಿ ಭರತಕುಲಶ್ರೇಷ್ಠನಾದ ಧರ್ಮರಾಯನು, ಭಯದಿಂದ ಆ ಸರೋವರದ ಮೇಲಕ್ಕೆ ಬಂದು ನಿಂತು, ವಿಕಾರವಾದ ಕಣ್ಣುಗಳುಳ್ಳವನಾಗಿಯೂ ತಾಳೇಮರದಂತೆ ಉದ್ದವಾದ ಶರೀರವುಳ್ಳವನಾಗಿಯೂ ಸೂರ್ಯಾಗ್ನಿಗಳಂತೆ ಜಾಜ್ವಲ್ಯಮಾನವಾದ ತೇಜಸ್ಸುಳ್ಳವನಾಗಿಯೂ ಪರ್ವತಾಕಾ

ರನಾಗಿ ಮತ್ತೊಬ್ಬರಿಂದ ತಿರಸ್ಕರಿಸಲಶಕ್ಯನಾಗಿಯೂ ಮೇಘಧ್ವನಿಯಂತೆ ಗಭೀರವಾದ ಗರ್ಜನೆಯಿಂದ ಭಯಪಡಿಸು ವನಾಗಿಯೂ ತೋರುತ್ತ, ಒಂದು ದೊಡ್ಡಮರವನ್ನು ಒರಗಿಕೊಂಡು ನಿಂತು ಪ್ರತ್ಯಕ್ಷನಾದ ಆ ಯಕ್ಷನನ್ನು ನೋಡಿದನು. ಬಳಿಕ ಆ ಯಕ್ಷನು “ ಎಲೈ ರಾಯನೆ, ಈ ನಿನ್ನ ತಮ್ಮಂದಿರು ನಾನೆಷ್ಟು ಅಡ್ಡಿಮಾಡಿದರೂ ಕೇಳದೆ ಬಲಾತ್ಕಾರದಿಂದ ಈ ನೀರನ್ನು ಕುಡಿಯುವದಕ್ಕೆ ಯತ್ನಿಸಿದರು. ಆದ್ದರಿಂದ ಇವರು ನನ್ನಿಂದ ಹೀಗೆ ಕೊಲಲ್ಪ ಟ್ಟರು. ಎಲೈ ಪಾರ್ಥನೆ, ಅವರಂತೆ ನೀನೂ ಸಾಹಸವನ್ನು ಮಾಡಬೇಡ. ನನ್ನ ಪ್ರಶ್ನೆಗಳಿಗೆ ಉತ್ತರವನ್ನು ಕೊಟ್ಟು ಬಳಿಕ ನೀನು ಈ ನೀರನ್ನು ಪರಿಗ್ರಹಿಸು ” ಎನಲು, ಧರ್ಮರಾಯನು ಯಕ್ಷನನ್ನು ಕುರಿತು “ ಎಲೈ ಯಕ್ಷನೆ, ನೀನು ಕಟ್ಟುಮಾಡಿಕೊಂಡಿರುವ ಈ ಸರೋವರದ ನೀರನ್ನು ನಾನು ಬಯಸುವದಿಲ್ಲ. ಸತ್ಪುರುಷರು ಬೇಕಾದಂತೆ ತಮ್ಮನ್ನು ತಾವು ಪ್ರಶಂಸೆಮಾಡಿಕೊಳ್ಳುವದಿಲ್ಲ. ಆದರೆ ತಮ್ಮ ಗುಣಗಳನ್ನು ಮತ್ತೊಬ್ಬರಿಗೆ ತಿಳಿ ಯಪಡಿಸುವದಕ್ಕೋಸ್ಕರ ಆತ್ಮಪ್ರಶಂಸೆಯನ್ನು ಮಾಡಿಕೊಳ್ಳದೆ ಇರುವದಕ್ಕಾಗುವದಿಲ್ಲ. ನನ್ನ ಜ್ಞಾನವಿದ್ದಷ್ಟು ನಿನ್ನ ಪ್ರಶ್ನೆಗಳಿಗೆ ಉತ್ತರವನ್ನು ಹೇಳುತ್ತೇನೆ. ಇದನ್ನು ಆತ್ಮಪ್ರಶಂಸೆಯೆಂದು ತಿಳಿಯಬೇಡ ” ಎಂದು ನುಡಿದನು.

ಯಕ್ಷನು.—ಎಲೈ ಧರ್ಮರಾಯನೆ, ದೇಹಕ್ಕಿಂತಲೂ ಆತ್ಮನು ಬೇರೆಯೆಂಬುವದನ್ನು ತಿಳಿಯಿಸತಕ್ಕದ್ದು ಯಾವದು ? ಇದಕ್ಕೆ ಸಹಾಯಗಳು ಯಾವವು ? ಹೃದಯಾಕಾಶದಲ್ಲಿ ಆತ್ಮನನ್ನು ಪ್ರವೇಶಮಾಡಿಸತಕ್ಕದ್ದು ಯಾ ವದು ? ಆ ಆತ್ಮನು ಹ್ಯಾಗಿರುವನು ?

ಧರ್ಮರಾಯನು.—ಎಲೈ ಯಕ್ಷನೆ, ದೇಹಾತ್ಮ ವಿವೇಕ ಜ್ಞಾನವನ್ನು ವೇದವಾಕ್ಯಗಳು ಉಂಟುಮಾಡಿಕೊಡು ವವು. ಅದಕ್ಕೆ ಸಹಾಯಗಳು ಶಮದಮಾದಿ ಗುಣಗಳು. ಆ ಆತ್ಮನನ್ನು ಹೃದಯಾಕಾಶದಲ್ಲಿ ಪ್ರವೇಶಮಾಡಿಸ ತಕ್ಕದ್ದು ಧರ್ಮಾಚರಣೆಯು. ಆ ಆತ್ಮನು ಶುದ್ಧಜ್ಞಾನಸ್ವರೂಪನಾಗಿರುವನು.

ಯ.—ಯಾತರಿಂದ ಬ್ರಾಹ್ಮಣನು ಶ್ರೋತ್ರಿಯನೆನ್ನಿಸಿಕೊಳ್ಳುವನು ? ಆ ಶ್ರೋತ್ರಿಯನು ಯಾತರಿಂದ ಆತ್ಮನನ್ನು ತಿಳಿಯುವನು ? ಆತ್ಮನು ಎರಡನೆಯ ಪದಾರ್ಥವೆಂದು ಆತನು ಯಾತರಿಂದ ತಿಳಿಯುವನು ? ಮತ್ತು ಆತನು ಯಾತರಿಂದ ಜ್ಞಾನಿಯಾಗುವನು ?

ಧ.—ಆಚಾರ್ಯಮುಖದಿಂದ ವೇದಾರ್ಥವನ್ನು ತಿಳಿಯುವದರಿಂದ ಬ್ರಾಹ್ಮಣನು ಶ್ರೋತ್ರಿಯನೆನ್ನಿಸಿಕೊಳ್ಳು ವನು. ಆ ಶ್ರೋತ್ರಿಯನು ತಾನು ತಿಳಿದುಕೊಂಡ ವೇದಾರ್ಥದ ಪರ್ಯಾಲೋಚನೆಯಿಂದ ಆತ್ಮನನ್ನು ತಿಳಿಯುವನು. ಆ ಶ್ರೋತ್ರಿಯನು ವೇದಾರ್ಥವನ್ನು ತಿಳಿದು, ನಿಧಿಧ್ಯಾಸನದಿಂದ ಆತ್ಮನು ಎರಡನೆಯ ಪದಾರ್ಥವೆಂದು ತಿಳಿದು ಕೊಳ್ಳುವನು. ಆತನು ಜ್ಞಾನಿಗಳ ಶುಶ್ರೂಷೆಯಿಂದ ಜ್ಞಾನಿಯಾಗುವನು.

ಯ.—ಬ್ರಾಹ್ಮಣನಿಗೆ ಯಾತರಿಂದ ಸ್ವರ್ಗಪ್ರಾಪ್ತಿಯಾಗುವದು ? ಆತನು ಯಾತರಿಂದ ಸಾಧುವೆನ್ನಿಸಿ ಕೊಳ್ಳುವನು ? ಮತ್ತು ಆತನಿಗೆ ಯಾತರಿಂದ ಮನುಷ್ಯಭಾವವುಂಟಾಗುವದು ? ಆತನು ಯಾತರಿಂದ ಅಸಾಧು ವೆನ್ನಿಸಿಕೊಳ್ಳುವನು ?

ಧ.—ಬ್ರಾಹ್ಮಣನಿಗೆ ವೇದಾಧ್ಯಯನದಿಂದ ಸ್ವರ್ಗಪ್ರಾಪ್ತಿಯಾಗುವದು. ಆತನು ತಪಸ್ಸಿನಿಂದ ಸಾಧುವೆನ್ನಿಸಿ ಕೊಳ್ಳುವನು. ಆತನಿಗೆ ಜನನ ಮರಣಗಳಿಂದ ಮನುಷ್ಯಭಾವವುಂಟಾಗುವದು. ಆತನು ದೇವಬ್ರಾಹ್ಮಣರ ದೂಷಣೆಯಿಂದ ಅಸಾಧುವೆನ್ನಿಸಿಕೊಳ್ಳುವನು.

ಯ.—ಕ್ಷತ್ರಿಯನು ಯಾತರಿಂದ ಸ್ವರ್ಗವನ್ನು ಪಡೆಯುವನು ? ಆತನು ಯಾತರಿಂದ ಸಾಧುವೆನ್ನಿಸಿ ಕೊಳ್ಳುವನು.

ಧ.—ಕ್ಷತ್ರಿಯನು ಧನುರ್ವಿದ್ಯಾಭ್ಯಾಸಮಾಡಿ ಯುದ್ಧದಲ್ಲಿ ಮೃತನಾದರೆ ಸ್ವರ್ಗವನ್ನು ಪಡೆಯುವನು. ಆತನು ಯಜ್ಞಗಳನ್ನು ಮಾಡುವದರಿಂದ ಸಾಧುವೆನ್ನಿಸಿಕೊಳ್ಳುವನು. ಆತನಿಗೆ ಭಯದಿಂದ ದೇಹಾಭಿಮಾನ ವುಂಟಾಗುವದು. ಆತನು ಸ್ವಧರ್ಮತ್ಯಾಗದಿಂದ ಅಸಾಧುವೆನ್ನಿಸಿಕೊಳ್ಳುವನು.

ಯ.—ಜ್ಞಾನಯಜ್ಞಕ್ಕೆ ಸಾಧಕವಾದ ಸಾಮವೂ ಯಜುಸ್ಸೂ ಯಾವವು ? ಜ್ಞಾನಸಾಧಕವಾದದ್ದು ಯಾ ವದು ? ಜ್ಞಾನವು ಯಾವದನ್ನು ಅತಿಕ್ರಮಿಸದೆ ಇರುವದು ?

ಧ.—ಜ್ಞಾನಯಜ್ಞಕ್ಕೆ ಪ್ರಾಣವೆಂಬ ಸಾಮವೂ ಮನಸ್ಸೆಂಬ ಯಜುಸ್ಸೂ ಸಾಧಕವಾದವುಗಳು. ವೇದಋಕ್ಕು ಜ್ಞಾನಕ್ಕೆ ಸಾಧಕವಾದದ್ದು. ಜ್ಞಾನವು ವೇದಋಕ್ಕನ್ನು ಅತಿಕ್ರಮಿಸಿರುವದು.

ಯ.—ತೃಪ್ತಿ ಪಡಿಸತಕ್ಕ ವಸ್ತುಗಳಲ್ಲಿ ಶ್ರೇಷ್ಠವಾದದ್ದು ಯಾವದು? ಪಿತೃತರ್ಪಣವನ್ನು ಮಾಡತಕ್ಕವರಿಗೆ ಯಾವದು ಶ್ರೇಷ್ಠವಾದದ್ದು? ಈ ಲೋಕದಲ್ಲಿ ಪ್ರತಿಷ್ಠೆಯನ್ನು ಅಪೇಕ್ಷಿಸತಕ್ಕವರಿಗೆ ಯಾವದು ಉತ್ತಮವಾದದ್ದು? ಸಂತತಿಯನ್ನು ಅಪೇಕ್ಷಿಸತಕ್ಕವರಿಗೆ ಯಾವದು ಶ್ರೇಷ್ಠವಾದದ್ದು?

ಧ.—ತೃಪ್ತಿ ಪಡಿಸತಕ್ಕ ವಸ್ತುಗಳಲ್ಲಿ ವೃಷ್ಟಿಯು ಶ್ರೇಷ್ಠವಾದದ್ದು. ಪಿತೃತರ್ಪಣವನ್ನು ಮಾಡತಕ್ಕವನಿಗೆ ಕ್ಷೇತ್ರಾರಾಮಾದಿಗಳು ಶ್ರೇಷ್ಠವಾದವುಗಳು. ಈ ಲೋಕದಲ್ಲಿ ಪ್ರತಿಷ್ಠೆಯನ್ನು ಅಪೇಕ್ಷಿಸತಕ್ಕವರಿಗೆ ಗೋವುಗಳು ಶ್ರೇಷ್ಠವಾದವುಗಳು. ಸಂತಾನವನ್ನು ಅಪೇಕ್ಷಿಸತಕ್ಕವರಿಗೆ ಪುತ್ರನು ಶ್ರೇಷ್ಠನಾದವನು.

ಯ.—ಯಾವಾಗಲೂ ಸ್ರಕ್ಚಂದನಾದಿ ವಿಷಯಗಳಲ್ಲಿ ಆಸಕ್ತನಾಗಿದ್ದುಕೊಂಡು, ಬುದ್ಧಿಶಾಲಿಯಾಗಿ, ಸರ್ವಪ್ರಾಣಿಗಳಿಗೂ ಬೇಕಾದದ್ದನ್ನು ಕೊಡಲು ಶಕ್ತನಾಗಿದ್ದರೂ, ದ್ರವ್ಯವಂತನೆಂದು ಮರ್ಯಾದೆಯನ್ನು ಪಡೆದಿದ್ದರೂ, ಯಾವ ಪುರುಷನು ಜೀವನ್ಮೃತನೆನ್ನಿಸಿಕೊಳ್ಳುವನು?

ಧ.—ದೇವತೆಗಳಿಗೂ ಅತಿಥಿಗಳಿಗೂ ಭೃತ್ಯರಿಗೂ ಪಿತೃಗಳಿಗೂ ಆತ್ಮನಿಗೂ ಯಾವನು ತನ್ನ ದ್ರವ್ಯವನ್ನು ವಿಭಾಗಮಾಡಿ ಕೊಡದೆ ಇರುವನೋ ಅವನೇ ಜೀವನ್ಮೃತನು.

ಯ.—ಭೂಮಿಗಿಂತಲೂ ದೊಡ್ಡದು ಯಾವದು? ಆಕಾಶಕ್ಕಿಂತಲೂ ಶ್ರೇಷ್ಠವಾದದ್ದು ಯಾವನು? ವಾಯುವಿಗಿಂತಲೂ ಶೀಘ್ರವಾದದ್ದು ಯಾವದು? ಮನುಷ್ಯನಿಗೆ ಎಲ್ಲಾದಕ್ಕಿಂತಲೂ ಅಧಿಕವಾಗಿರುವದು ಯಾವದು?

ಧ.—ಭೂಮಿಗಿಂತಲೂ ತಾಯಿ ಶ್ರೇಷ್ಠಳಾದವಳು. ಆಕಾಶಕ್ಕಿಂತಲೂ ತಂದೆಯು ಶ್ರೇಷ್ಠನಾದವನು. ವಾಯುವಿಗಿಂತಲೂ ಮನಸ್ಸು ವೇಗವುಳ್ಳದ್ದು. ಮನುಷ್ಯನಿಗೆ ಎಲ್ಲಾದಕ್ಕಿಂತಲೂ ಅಧಿಕವಾದದ್ದು ಚಿಂತೆಯು.

ಯ.—ಯಾವದು ಮಲಗಿದ್ದರೂ ಕಣ್ಣನ್ನು ಮುಚ್ಚದೆ ಇರುವದು? ಯಾವದು ಹುಟ್ಟಿ ಚಲಿಸದೆ ಇರುವದು? ಯಾವದು ಹೃದಯವಿಲ್ಲದೆ ಇರುವದು? ಯಾವದು ವೇಗದಿಂದ ವೃದ್ಧಿಯನ್ನು ಪಡೆಯುವದು?

ಧ.—ಮತ್ಸ್ಯವು ಮಲಗಿದ್ದರೂ ಕಣ್ಣನ್ನು ಮುಚ್ಚದೆ ಇರುವದು. ಬ್ರಹ್ಮಾಂಡವು ಹುಟ್ಟಿ ಚಲಿಸದೆ ಇರುವದು. ಯೋಗಿಯಾಗಿ ದೇಹಾಭಿಮಾನವನ್ನು ಬಿಟ್ಟವನಿಗೆ ಹೃದಯವಿಲ್ಲವು. ಚಿತ್ತನದಿಯು ವೇಗದಿಂದ ವೃದ್ಧಿಯನ್ನು ಹೊಂದುವದು.

ಯ.—ಪ್ರವಾಸಮಾಡತಕ್ಕವನಿಗೆ ಯಾವನು ಮಿತ್ರನು? ಮನೆಯಲ್ಲಿ ವಾಸಮಾಡತಕ್ಕವನಿಗೆ ಯಾವನು ಮಿತ್ರನು? ರೋಗಿಗೆ ಯಾವನು ಮಿತ್ರನು? ಮರಣೋನ್ಮುಖನಾದವನಿಗೆ ಯಾವನು ಮಿತ್ರನು?

ಧ.—ಪ್ರವಾಸಮಾಡತಕ್ಕವನಿಗೆ ಜೊತೆಯಲ್ಲಿ ಬರತಕ್ಕವನು ಮಿತ್ರನು. ಮನೆಯಲ್ಲಿ ವಾಸಮಾಡತಕ್ಕವನಿಗೆ ಪತ್ನಿಯೇ ಮಿತ್ರಳು. ರೋಗಿಗೆ ವೈದ್ಯನೇ ಮಿತ್ರನು. ಮರಣೋನ್ಮುಖನಾದವನಿಗೆ ದಾನವೇ ಮಿತ್ರವು.

ಯ.—ಪ್ರಾಣಿಗಳಿಗೆ ಅತಿಥಿಯಾರು? ಸನಾತನವಾದ ಮೋಕ್ಷಕ್ಕೆ ಸಾಧನವಾದ ಧರ್ಮವು ಯಾವದು? ಯಾತರಿಂದ ಈ ಜಗತ್ತು ನಿಂತಿರುವದು?

ಧ.—ಆಹವನೀಯಾದಿರೂಪನಾದ ಯಜ್ಞೇಶ್ವರನು ಪ್ರಾಣಿಗಳಿಗೆ ಅತಿಥಿಯಾದವನು. ಹೋಮಾರ್ಹವಾದ ಗೋಕ್ಷೀರವೆಂಬ ಸೋಮವು ಸನಾತನವಾದ ಮೋಕ್ಷಕ್ಕೆ ಸಾಧನವಾದದ್ದು. ವ್ಯಷ್ಟಿಸಮಷ್ಟಿರೂಪವಾದ ವಾಯುವಿನಿಂದ ಈ ಜಗತ್ತು ನಿಂತಿರುವದು.

ಯ.—ಒಬ್ಬನೇ ಸಂಚರಿಸತಕ್ಕವನು ಯಾವನು? ಹುಟ್ಟಿ ಪುನಃ ಹುಟ್ಟತಕ್ಕವರು ಯಾರು? ಹಿಮಕ್ಕೆ ಔಷಧವು ಯಾವದು? ಬೀಜವನ್ನು ಹಾಕುವದಕ್ಕೆ ಪಾತ್ರವಾದದ್ದು ಯಾವನು?

ಧ.—ಒಬ್ಬನೇ ಸಂಚರಿಸತಕ್ಕವನು ಸೂರ್ಯನು. ಹುಟ್ಟಿ ಪುನಃ ಹುಟ್ಟತಕ್ಕವನು ಚಂದ್ರನು. ಹಿಮಕ್ಕೆ ಔಷಧವು ಅಗ್ನಿಯು. ಬೀಜವನ್ನು ಹಾಕುವದಕ್ಕೆ ಭೂಮಿಯು ಪಾತ್ರವಾದದ್ದು.

ಯ.—ಯಾವಾಗಲೂ ಧರ್ಮಪರನಾದವನಿಗೆ ಮುಖ್ಯವಾದ ಗುರುತು ಯಾವದು? ಯಶಸ್ಸಿಗೆ ಮುಖ್ಯವಾದದ್ದು ಯಾವದು? ಸ್ವರ್ಗಲೋಕಪ್ರಾಪ್ತಿಯಾಗುವದಕ್ಕೆ ಮುಖ್ಯವಾದದ್ದು ಯಾವದು? ಸುಖಕ್ಕೆ ಮುಖ್ಯವಾದದ್ದು ಯಾವದು?

ಧ.—ಯುಕ್ತಾಯುಕ್ತವಿಚಾರವು ಧರ್ಮಪರನಾದವನಿಗೆ ಮುಖ್ಯವಾದ ಗುರುತು. ಯಶಸ್ಸಿಗೆ ದಾನವು ಮುಖ್ಯವಾದದ್ದು. ಸ್ವರ್ಗಲೋಕಪ್ರಾಪ್ತಿಗೆ ಸತ್ಯವೇ ಮುಖ್ಯವಾದದ್ದು. ಸುಖಕ್ಕೆ ಸದ್ವೃತ್ತಿಯು ಮುಖ್ಯವಾದದ್ದು.

ಯ.—ಮನುಷ್ಯನಿಗೆ ಶರೀರಭೂತನಾದವನು ಯಾವನು? ದೇವರುಮಾಡಿದ ಸ್ನೇಹಿತನು ಯಾರು? ಆತನಿಗೆ ಜೀವನವನ್ನು ಕಲ್ಪಿಸತಕ್ಕದ್ದು ಯಾವದು? ಆತನಿಗೆ ಗತಿಪ್ರದವಾದದ್ದು ಯಾವದು?

ಧ.—ಮನುಷ್ಯನಿಗೆ ಪುತ್ರನು ಶರೀರಭೂತನಾದವನು. ಪತ್ನಿಯು ದೇವರುಮಾಡಿದ ಸ್ನೇಹಿತಳು. ಆತನಿಗೆ ಪರ್ಜನ್ಯನು ಜೀವನವನ್ನು ಕಲ್ಪಿಸುವನು. ಆತನಿಗೆ ಗತಿಪ್ರದವಾದದ್ದು ದಾನವು.

ಯ.—ಧನವಂತರಿಗೆ ಮುಖ್ಯವಾಗಿ ಬೇಕಾದದ್ದು ಯಾವದು? ಧನಕ್ಕೆ ಮುಖ್ಯವಾಗಿ ಬೇಕಾದದ್ದು ಯಾವದು? ಲಾಭಗಳಲ್ಲಿ ಉತ್ತಮವಾದದ್ದು ಯಾವದು? ಸುಖಗಳಲ್ಲಿ ಉತ್ತಮವಾದದ್ದು ಯಾವದು?

ಧ.—ಧನವಂತರಿಗೆ ವಿವೇಕವು ಉತ್ತಮವಾದದ್ದು. ಧನಕ್ಕೆ ವಿದ್ಯೆಯು ಉತ್ತಮವಾದದ್ದು. ಲಾಭಕ್ಕೆ ಆರೋಗ್ಯವು ಉತ್ತಮವಾದದ್ದು. ಸುಖಗಳಲ್ಲಿ ಸಂತೋಷವು ಉತ್ತಮವಾದದ್ದು.

ಯ.—ಲೋಕದಲ್ಲಿ ಉತ್ತಮವಾದ ಧರ್ಮವು ಯಾವದು? ಯಾವ ಧರ್ಮವು ನಿತ್ಯವಾದ ಫಲವನ್ನು ಕೊಡುವದು? ಯಾವದನ್ನು ನಿಗ್ರಹಮಾಡಿದರೆ ದುಃಖವು ತಪ್ಪುವದು? ಯಾರ ಮೈತ್ರಿಯು ನಷ್ಟವಾಗದೆ ಇರುವದು?

ಧ.—ಸಾಧುತ್ವವು ಉತ್ತಮವಾದ ಧರ್ಮವು. ವೇದೋಕ್ತವಾದ ಧರ್ಮವು ನಿತ್ಯವಾದ ಮೋಕ್ಷಫಲವನ್ನು ಕೊಡುವದು. ಮನಸ್ಸನ್ನು ನಿಗ್ರಹಮಾಡಿದರೆ ದುಃಖನಿವೃತ್ತಿಯಾಗುವದು. ಸಜ್ಜನರ ಮೈತ್ರಿಯು ನಷ್ಟವಾಗದೆ ಇರುವದು.

ಯ.—ಪುರುಷನು ಯಾವದನ್ನು ತ್ಯಜಿಸಿದರೆ ಎಲ್ಲರಿಗೂ ಪ್ರಿಯನಾಗುವನು? ಯಾವದನ್ನು ಬಿಟ್ಟರೆ ದುಃಖಪಡದೆ ಇರುವನು? ಯಾವದನ್ನು ಬಿಟ್ಟರೆ ಅರ್ಥವಂತನಾಗುವನು? ಯಾವದನ್ನು ಬಿಟ್ಟರೆ ಸುಖವನ್ನು ಪಡೆಯುವನು?

ಧ.—ಅಭಿಮಾನವನ್ನು ಬಿಟ್ಟರೆ ಎಲ್ಲರಿಗೂ ಪ್ರಿಯನಾಗುವನು. ಕ್ರೋಧವನ್ನು ಬಿಟ್ಟವನಿಗೆ ದುಃಖವು ತಪ್ಪುವದು. ಕಾಮವನ್ನು ಬಿಟ್ಟವನು ಅರ್ಥವಂತನಾಗುವನು. ಲೋಭವನ್ನು ಬಿಟ್ಟರೆ ಸುಖವನ್ನು ಪಡೆಯುವನು.

ಯ.—ಯಾತಕ್ಕೆ ಬ್ರಾಹ್ಮಣರಿಗೆ ಧನವನ್ನು ಕೊಡಬೇಕು? ಕುಣಿಯುವವರಿಗೂ ವೇಷಧಾರಿಗಳಿಗೂ ಯಾತಕ್ಕೆ ದ್ರವ್ಯವನ್ನು ಕೊಡಬೇಕು? ಸೇವೆಮಾಡತಕ್ಕವರಿಗೆ ಯಾತಕ್ಕೆ ಧನವನ್ನು ಕೊಡಬೇಕು? ರಾಜರಿಗೆ ದ್ರವ್ಯವನ್ನು ಯಾತಕ್ಕೆ ಕೊಡಬೇಕು?

ಧ.—ಬ್ರಾಹ್ಮಣರಿಗೆ ಧರ್ಮಾರ್ಥವಾಗಿ ಧನವನ್ನು ಕೊಡಬೇಕು. ಕುಣಿಯುವವರಿಗೂ ವೇಷಧಾರಿಗಳಿಗೂ ಕೀರ್ತಿಗೋಸ್ಕರ ದ್ರವ್ಯವನ್ನು ಕೊಡಬೇಕು. ಜೀವನಾರ್ಥವಾಗಿ ಸೇವಕರಿಗೆ ಸಂಬಳವನ್ನು ಕೊಡಬೇಕು. ಭಯನಿವಾರಣಾರ್ಥವಾಗಿ ರಾಜರಿಗೆ ಧನವನ್ನು ಕೊಡಬೇಕು.

ಯ.—ಯಾತರಿಂದ ಲೋಕವು ವ್ಯಾಪ್ತವಾಗಿರುವದು? ಯಾತರಿಂದ ಲೋಕವು ಪ್ರಕಾಶವಾಗದೆ ಇರುವದು? ಯಾತರಿಂದ ಮಿತ್ರರು ಬಿಟ್ಟುಬಿಡುವರು? ಯಾತರಿಂದ ಸ್ವರ್ಗಪ್ರಾಪ್ತಿಯಾಗದೆ ಇರುವದು?

ಧ.—ಅಜ್ಞಾನದಿಂದ ಲೋಕವು ವ್ಯಾಪ್ತವಾಗಿರುವದು. ಮೂಲಾಜ್ಞಾನದಿಂದ ಲೋಕವು ಪ್ರಕಾಶಿಸದೆ ಇರುವದು. ಲೋಭದಿಂದ ಮಿತ್ರರು ತ್ಯಜಿಸುವರು. ಸಂಗದೋಷದಿಂದ ಸ್ವರ್ಗಪ್ರಾಪ್ತಿಯಾಗದೆ ಇರುವದು.

ಯ.—ಬದುಕಿದ್ದರೂ ಯಾವನು ಮೃತನೆನ್ನಿಸಿಕೊಳ್ಳುವನು? ಯಾವ ರಾಜ್ಯವು ಮೃತವಾದದ್ದು? ಯಾವ ಶ್ರಾದ್ಧವು ಮೃತವಾದದ್ದು? ಯಾವ ಯಜ್ಞವು ಮೃತವಾದದ್ದು?

ಧ.—ದರಿದ್ರನಾದವನು ಬದುಕಿದ್ದರೂ ಮೃತನೆನ್ನಿಸಿಕೊಳ್ಳುವನು. ಅರಾಜಕವಾದ ರಾಜ್ಯವು ಮೃತವಾದದ್ದು. ಶ್ರೋತ್ರಿಯನಿಲ್ಲದ ಶ್ರಾದ್ಧವು ಮೃತವಾದದ್ದು. ದಕ್ಷಿಣೆಯಿಲ್ಲದ ಯಜ್ಞವು ಮೃತವಾದದ್ದು.

ಯ.—ಯಾರು ಸದುಪದೇಶವನ್ನು ಮಾಡತಕ್ಕವರು? ಎಲ್ಲಾ ಪ್ರಾಣಿಗಳಿಗೂ ಆಶ್ರಯವು ಯಾವದು? ಗ್ರಾಹ್ಯವಾದದ್ದು ಯಾವದು? ವಿಷರೂಪವಾದದ್ದು ಯಾವದು? ಶ್ರಾದ್ಧಕ್ಕೆ ಕಾಲವು ಯಾವದು? ಇವುಗಳಿಗೆ ಉತ್ತರವನ್ನು ಕೊಟ್ಟು ಈ ಉದಕವನ್ನು ಪಾನಮಾಡು.

ಧ.—ಸಜ್ಜನರು ಸದುಪದೇಶವನ್ನು ಮಾಡತಕ್ಕವರು. ಪ್ರಾಣಿಗಳಿಗೆಲ್ಲಾ ಆಶ್ರಯವು ಭಗವಂತನು. ಶಬ್ದಾದಿ ವಿಷಯಗಳು ಇಂದ್ರಿಯಗಳಿಗೆ ಗ್ರಾಹ್ಯಗಳು. ಯಾಚನೆಯು ವಿಷಕ್ಕೆ ಸಮವಾದದ್ದು. ವೇದಜ್ಞನಾದ ಬ್ರಾಹ್ಮಣನು ದೊರೆಯುವದೇ ಶ್ರಾದ್ಧಕ್ಕೆ ಕಾಲವು. ಎಲೈ ಯಕ್ಷನೆ, ನಿನ್ನ ಪ್ರಶ್ನೆಗಳಿಗೆ ಉತ್ತರವು ಬಂತೆ?

ಯ.—ತಪಸ್ಸಿಗೇನು ಲಕ್ಷಣ? ಯಾವದು ಧರ್ಮವೆನ್ನಿಸಿಕೊಳ್ಳುವದು? ಉತ್ತಮವಾದ ಕ್ಷಮೆಯು ಯಾವದು? ಲಜ್ಜೆಗೇನು ಲಕ್ಷಣ? ಇವುಗಳನ್ನು ಹೇಳು.

ಧ.—ಸ್ವಧರ್ಮವನ್ನು ಅನುವರ್ತಿಸಿರುವದೇ ತಪಸ್ಸಿಗೆ ಲಕ್ಷಣವು. ಮನೋನಿಗ್ರಹ ಮಾಡುವದೇ ಧರ್ಮವೆನ್ನಿಸಿಕೊಳ್ಳುವದು. ಸುಖದುಃಖಗಳನ್ನು ಸಹಿಸುವದೇ ಉತ್ತಮವಾದ ಕ್ಷಮೆಯು. ಅಕಾರ್ಯವನ್ನು ಬಿಡುವದೇ ಲಜ್ಜೆಗೆ ಲಕ್ಷಣವು.

ಯ.—ಜ್ಞಾನವು ಯಾವದು? ಶಮವು ಯಾವದು? ದಯೆ ಯಾವದು? ಆರ್ಜವವೆಂದರೇನು?

ಧ.—ತತ್ವಾರ್ಥವನ್ನು ತಿಳಿಯುವದೇ ಜ್ಞಾನವು. ಚಿತ್ತದ ಪ್ರಶಾಂತಿಯೇ ಶಮವು. ಸರ್ವರಿಗೂ ಸುಖವಾಗಲೆಂದು ಅಪೇಕ್ಷಿಸುವದೇ ದಯೆಯು. ಎಲ್ಲರನ್ನೂ ಸಮಾನವಾಗಿ ತಿಳಿಯುವದೇ ಆರ್ಜವವು.

ಯ.—ಪುರುಷರಿಗೆ ಜಯಿಸಲಶಕ್ಯವಾದ ಶತ್ರು ಯಾವದು? ಪರಿಹಾರವಾಗದೆ ಇರತಕ್ಕ ರೋಗವು ಯಾವದು? ಯಾವನು ಸಾಧುವಾದವನು? ಅಸಾಧುವಾದವನು ಯಾರು?

ಧ.—ಮನುಷ್ಯರಿಗೆ ಕ್ರೋಧವೆಂಬ ಶತ್ರುವು ಜಯಿಸಲಶಕ್ಯವಾದದ್ದು. ಲೋಭವೆಂಬ ವ್ಯಾಧಿಯು ಪರಿಹಾರವಾಗದೆ ಇರತಕ್ಕದ್ದು. ಸರ್ವಪ್ರಾಣಿಗಳಿಗೂ ಹಿತನಾದವನು ಸಾಧುವೆನ್ನಿಸುವನು. ದಯಾಶೂನ್ಯನಾದವನು ಅಸಾಧುವೆನ್ನಿಸುವನು.

ಯ.—ಯಾವದು ಮೋಹವು? ಮಾನವೆಂಬುವದು ಯಾವದು? ಆಲಸ್ಯವು ಯಾವದು? ಶೋಕವು ಯಾವದು?

ಧ.—ಧರ್ಮವನ್ನು ತಿಳಿಯದೆ ಇರುವದೇ ಮೋಹವು. ದೇಹಾಭಿಮಾನವೇ ಮಾನವೆನ್ನಿಸುವದು. ಧರ್ಮದಲ್ಲಿ ಪ್ರವರ್ತಿಸದೆ ಇರುವದೇ ಆಲಸ್ಯವು. ಅಜ್ಞಾನವೇ ಶೋಕವು.

ಯ.—ಋಷಿಗಳು ಹೇಳಿರತಕ್ಕ ಸ್ಥೈರ್ಯವು ಯಾವದು? ಅಂಥ ಧೈರ್ಯವು ಯಾವದು? ಉತ್ತಮವಾದ ಸ್ನಾನವು ಯಾವದು? ದಾನವೆಂಬುವದು ಯಾವದು?

ಧ.—ಸ್ವಧರ್ಮದಲ್ಲಿ ಸ್ಥಿರವಾಗಿರೋಣವೇ ಸ್ಥೈರ್ಯವು. ಇಂದ್ರಿಯನಿಗ್ರಹವೇ ಧೈರ್ಯವು. ಮನಸ್ಸಿನಲ್ಲಿರತಕ್ಕ ಕಲ್ಮಷವನ್ನು ಬಿಡುವದೇ ಉತ್ತಮವಾದ ಸ್ನಾನವು. ಪ್ರಾಣಿರಕ್ಷಣಕ್ಕಿಂತಲೂ ಮತ್ತೊಂದು ದಾನವು ಇಲ್ಲ.

ಯ.—ಪಂಡಿತನಾದವನು ಯಾರು? ನಾಸ್ತಿಕನು ಯಾರು? ಮೂರ್ಖನು ಯಾರು? ಕಾಮವು ಯಾವದು? ಮತ್ಸರವು ಯಾವದು?

ಧ.—ಧರ್ಮಿಷ್ಠನಾದವನೇ ಪಂಡಿತನು. ಮೂಢನಾದವನೇ ನಾಸ್ತಿಕನು. ನಾಸ್ತಿಕನೇ ಮೂಢನಾದವನು. ಕರ್ಮವಾಸನೆಯೇ ಕಾಮವು. ಹೃದಯಸಂತಾಪವೇ ಮತ್ಸರವು.

ಯ.—ಅಹಂಕಾರವು ಯಾವದು? ದಂಭವೆಂಬುವದು ಯಾವದು? ದೈವವೆಂಬುವದು ಯಾವದು? ದೌರ್ಜನ್ಯವೆಂಬುವದು ಯಾವದು? ಹೇಳು.

ಧ.—ನಾನೆಲ್ಲರಿಗಿಂತಲೂ ಹೆಚ್ಚಾಗಿ ತಿಳಿದಿರುವೆನೆಂಬುವದೇ ಅಹಂಕಾರ. ಧರ್ಮದ ಚಿಹ್ನೆಗಳನ್ನು ಆಡಂಬರವಾಗಿ ತೋರಿಸುವದೇ ದಂಭವು. ದಾನದಿಂದ ಉಂಟಾಗತಕ್ಕ ಫಲವೇ ದೈವವೆನ್ನಿಸುವದು. ಪರರನ್ನು ದೂಷಿಸುವದೇ ದೌರ್ಜನ್ಯವೆನ್ನಿಸುವದು.

ಯ.—ಧರ್ಮವೂ ಅರ್ಥವೂ ಕಾಮವೂ ಸಹ ಪರಸ್ಪರವಿರೋಧಿಗಳು. ಇವೆಲ್ಲವೂ ಒಂದುಕಡೆ ಸೇರಿರುವದು ಹ್ಯಾಗೆ?

ಧ.—ಧರ್ಮವೂ ಹೆಂಡತಿಯೂ ತನ್ನ ವಶದಲ್ಲಿ ಸರಿಯಾಗಿದ್ದರೆ, ಆಗ ಧರ್ಮಾರ್ಥಕಾಮಗಳು ಮೂರೂ ಏಕತ್ರ ಸೇರುವವು.

ಯ.—ಯಾವನಿಗೆ ಅಕ್ಷಯವಾದ ನರಕಪ್ರಾಪ್ತಿಯಾಗುವದು? ಈ ಪ್ರಶ್ನೆಗೆ ಉತ್ತರವನ್ನು ಹೇಳು.

ಧ.—ಯಾವ ಮನುಷ್ಯನು ದರಿದ್ರನಾಗಿಯೂ ಯಾಚಕನಾಗಿಯೂ ಇರುವ ಬ್ರಾಹ್ಮಣನನ್ನು ತಾನಾಗಿ ಕರೆದು ಆಮೇಲೆ ಆತನಿಗೆ ಏನೂ ಇಲ್ಲವೆಂದು ಹೇಳುವನೋ, ಅವನಿಗೆ ಅಕ್ಷಯವಾದ ನರಕಪ್ರಾಪ್ತಿಯಾಗುವದು. ವೇದದಲ್ಲಿಯೂ ಧರ್ಮಶಾಸ್ತ್ರದಲ್ಲಿಯೂ ಬ್ರಾಹ್ಮಣರಲ್ಲಿಯೂ ದೇವತೆಗಳಲ್ಲಿಯೂ ಪಿತೃಕಾರ್ಯಗಳಲ್ಲಿಯೂ ಯಾವನು ದ್ವೇಷವನ್ನು ಮಾಡುವನೋ ಅಂಥವನಿಗೂ ಅಕ್ಷಯವಾದ ನರಕಪ್ರಾಪ್ತಿಯಾಗುವದು. ಮತ್ತು ಯಾವನು ಯಥೇಚ್ಛವಾಗಿ ಧನವಿದ್ದರೂ ಲೋಭದಿಂದ ಮತ್ತೊಬ್ಬರಿಗೂ ಕೊಡದೆ ತಾನೂ ಅನುಭವಿಸದೆ ಯಾಚಕರಿಗೂ ಇಲ್ಲವೆಂದು ಹೇಳುವನೋ ಅಂಥವನಿಗೂ ಅಕ್ಷಯವಾದ ನರಕಪ್ರಾಪ್ತಿಯಾಗುವದು.

ಯ.—ಯಾವ ಕುಲದಿಂದ ಯಾವ ಚರ್ಯದಿಂದ ಯಾವ ವೇದಾಧ್ಯಯನದಿಂದ ಯಾವ ಶಾಸ್ತ್ರಾಭ್ಯಾಸದಿಂದ ಪುರುಷನಿಗೆ ಬ್ರಾಹ್ಮಣ್ಯವುಂಟಾಗುವದು? ಯಥಾರ್ಥವಾಗಿ ತಿಳುಹಿಸು?

ಧ.—ಬ್ರಾಹ್ಮಣ್ಯಕ್ಕೆ ಕುಲವೂ ವೇದಾಧ್ಯಯನವೂ ಶಾಸ್ತ್ರಾಭ್ಯಾಸವೂ ಕಾರಣವಲ್ಲ; ಉತ್ತಮವಾದ ಚರ್ಯವೇ ಕಾರಣವು. ಇದು ನಿಸ್ಸಂಶಯವು. ಬ್ರಾಹ್ಮಣನಾದವನು ವಿಶೇಷವಾಗಿ ತನ್ನ ಉತ್ತಮವಾದ ಚರ್ಯವನ್ನು ರಕ್ಷಿಸಿಕೊಳ್ಳಬೇಕು. ಉತ್ತಮವಾದ ಚರ್ಯವು ನಷ್ಟವಾಗಲು, ಬ್ರಾಹ್ಮಣ್ಯವು ನಷ್ಟವಾಗುವದು. ವೇದಪಾಠಕನೂ ಶಾಸ್ತ್ರಾಧ್ಯಯನಮಾಡತಕ್ಕವನೂ ಸಹ ಮೂರ್ಖನಾಗಿ ಯಾವಾಗಲೂ ಅದರಲ್ಲೇ ವ್ಯಸನಪಡುತ್ತಿರುವರು. ಯಾವನು ಶಾಸ್ತ್ರೋಕ್ತವಾದ ಕರ್ಮಗಳನ್ನು ಆಚರಿಸುವನೋ ಆತನೇ ವಿದ್ವಾಂಸನೆನ್ನಿಸಿಕೊಳ್ಳುವನು. ನಾಲ್ಕು ವೇದವನ್ನೂ ಅಭ್ಯಾಸಮಾಡಿದವನಾದರೂ ದುರ್ವೃತ್ತನಾಗಿದ್ದರೆ ಆತನು ಶೂದ್ರನಿಗಿಂತಲೂ ನೀಚನು. ಯಾವನು ಜಿತೇಂದ್ರಿಯನಾಗಿ ಅಗ್ನಿಹೋತ್ರಪರನಾಗಿರುವನೋ ಆತನೇ ಬ್ರಾಹ್ಮಣನೆನ್ನಿಸಿಕೊಳ್ಳುವನು.

ಯ.—ಎಲ್ಲರಿಗೂ ಪ್ರಿಯನಾಗಿ ಮಾತನಾಡತಕ್ಕವನೂ, ವಿಮರ್ಶೆಯಿಂದ ಕಾರ್ಯವನ್ನು ಮಾಡತಕ್ಕವನೂ, ಅನೇಕ ಮಿತ್ರರನ್ನು ಸಂಪಾದಿಸಿದವನೂ, ಧರ್ಮರತನಾದವನೂ ಸಹ, ಏನನ್ನು ಪಡೆಯುವರು?

ಧ.—ಪ್ರಿಯವಾಗಿ ಮಾತನಾಡಕ್ಕವನು ಎಲ್ಲರ ಪ್ರೀತಿಯನ್ನೂ ಸಂಪಾದಿಸುವನು. ವಿಮರ್ಶೆಯಿಂದ ಕಾರ್ಯವನ್ನು ಮಾಡತಕ್ಕವನು ಅಧಿಕವಾಗಿ ಜಯವನ್ನು ಪಡೆಯುವನು. ಬಹುಮಿತ್ರರುಳ್ಳವನು ಸುಖವನ್ನು ಪಡೆಯುವನು. ಧರ್ಮಿಷ್ಠನು ಸದ್ಗತಿಯನ್ನು ಪಡೆಯುವನು.

ಯ.—ಯಾವನು ಸಂತೋಷಪಡತಕ್ಕವನು? ಆಶ್ಚರ್ಯವು ಯಾವದು? ಯಾವದು ಮಾರ್ಗವು? ಲೋಕವಾರ್ತೆಯೇನು? ಈ ನಾಲ್ಕು ಪ್ರಶ್ನೆಗಳಿಗೂ ಉತ್ತರವನ್ನು ಹೇಳು. ಮೃತವಾಗಿರುವ ನಿನ್ನ ತಮ್ಮಂದಿರು ಬದುಕಲಿ.

ಧ.–ದಿವಸದ ಅಪರಾಹ್ಣಕ್ಕೆ ಆಗಲಿ, ಸಾಯಾಹ್ನಕ್ಕೆ ಆಗಲಿ, ಒಂದಾವರ್ತಿಯಾದರೂ ಯಾವನು ತನ್ನ ಮನೆಯಲ್ಲಿ ಸೊಪ್ಪನ್ನಾದರೂ ಬೇಯಿಸಿಕೊಂಡು ಊಟಮಾಡುವನೋ ಅವನು, ಋಣಬಾಧೆಯಿಲ್ಲದೆ ಮತ್ತೊಬ್ಬರ ಅಧೀನನಾಗಿರದೆ ಸುಖದಿಂದ ಸಂತೋಷಪಡುವನು. ದಿನದಿನದಲ್ಲೂ ಅನೇಕಪ್ರಾಣಿಗಳು ಯಮನ ಪಟ್ಟಣಕ್ಕೆ ಹೋಗುತ್ತಲೇ ಇವೆ. ಉಳಿದಿರತಕ್ಕವರು ಶಾಶ್ವತವಾದ ಸ್ಥಿತಿಯನ್ನು ಅಪೇಕ್ಷಿಸುತ್ತಿದಾರೆ. ಇದಕ್ಕಿಂತಲೂ ಆಶ್ಚರ್ಯವು ಯಾವದು? ತರ್ಕಶಾಸ್ತ್ರವು ನಿರ್ಣಯವಿಲ್ಲದೆ ಇರತಕ್ಕದ್ದು. ವೇದಗಳು ಪರಸ್ಪರವಿರುದ್ಧವಾದ ಅರ್ಥಗಳನ್ನು ಹೇಳುವವು. ಭಾಷ್ಯಕಾರರಾದ ಮುನಿಗಳಲ್ಲಿಯೂ ಅನೇಕರು ಒಬ್ಬೊಬ್ಬರು ಒಂದೊಂದು ಪ್ರಕಾರವಾಗಿ ಹೇಳುವರು. ಇದರಲ್ಲಿ ಯಾರ ವಚನವು ಪ್ರಮಾಣವಾದದ್ದು? ಧರ್ಮತತ್ವವೆಂಬುವದು ಎಲ್ಲೋ ಗುಹೆಯಲ್ಲಿ ಅಡಗಿಕೊಂಡಿರುವದು. ಆದ್ದರಿಂದ ಬಹುಜನಗಳು ಯಾವ ಮಾರ್ಗದಲ್ಲಿ ಹೋಗುವರೋ ಅದೇ ಮಾರ್ಗವು. ಕಾಲವು ಪ್ರಾಣಿರಾಶಿಗಳನ್ನು ಈ ಅಜ್ಞಾನಮಯವಾದ ಬ್ರಹ್ಮಾಂಡವೆಂಬ ಕೊಪ್ಪರಿಗೆಯಲ್ಲಿ ಹಾಕಿ, ಮಾಸ ಋತುಗಳೆಂಬ ಸಾಟನ್ನು ತಿರುಗಿಸುತ್ತ, ಸೂರ್ಯನೆಂಬ ಅಗ್ನಿಯಿಂದಲೂ ಹಗಲುರಾತ್ರಿಗಳೆಂಬ ಕಟ್ಟಿಗೆಗಳಿಂದಲೂ ಪಚನ ಮಾಡುತ್ತಿರುವದು. ಇದಕ್ಕಿಂತಲೂ ಮತ್ತೊಂದು ಲೋಕವಾರ್ತೆ ಯಾವದು?

ಯ.–ನನ್ನ ಪ್ರಶ್ನೆಗಳಿಗೆ ಸರಿಯಾಗಿ ನೀನು ಉತ್ತರವನ್ನು ಕೊಟ್ಟೆ. ಯಾವನು ಪುರುಷನೆನ್ನಿಸಿಕೊಂಡಿರುವನು? ಮತ್ತು ಯಾವನು ಸಕಲ ಇಷ್ಟಾರ್ಥಗಳನ್ನೂ ಪಡೆದಿರುವನು?

ಧ.–ಯಾವನು ತನ್ನ ಪುಣ್ಯಕರ್ಮದಿಂದ ಭೂಮಿಯನ್ನೂ ಆಕಾಶವನ್ನೂ ವ್ಯಾಪಿಸಿಕೊಂಡಿರುವಂತೆ ಹೊಗಳಿಸಿಕೊಳ್ಳುವನೋ ಆತನೇ ಪುರುಷನೆನ್ನಿಸಿಕೊಳ್ಳುವನು. ಮತ್ತು ಯಾವನು ಸುಖದುಃಖಗಳಲ್ಲಿಯೂ ಪ್ರಿಯಾಪ್ರಿಯಗಳಲ್ಲಿಯೂ ಅತೀತನಾಗತಗಳಲ್ಲಿಯೂ ಸಮವಾಗಿರುವನೋ ಅವನೇ ಸಕಲೇಷ್ಟಾರ್ಥಗಳನ್ನೂ ಪಡೆದವನು.

ಯ.–ನೀನು ನನ್ನ ಪ್ರಶ್ನೆಗಳಿಗೆಲ್ಲ ಸರಿಯಾಗಿ ಉತ್ತರಕೊಟ್ಟದ್ದರಿಂದ ನಿನ್ನ ತಮ್ಮಂದಿರಲ್ಲಿ ಯಾವನನ್ನಾದರೂ ಒಬ್ಬನನ್ನು ಬದುಕಿಸಿಕೊಡುವೆನು. ಯಾರನ್ನು ಬದುಕಿಸಲಿ ಹೇಳು?

ಧ.–ನೀಲಮೇಘಶ್ಯಾಮನೂ ದೊಡ್ಡದಾದ ವೃಕ್ಷದಂತೆ ಉನ್ನತನೂ ವಿಸ್ತಾರವಾದ ವಕ್ಷಸ್ಥಳವುಳ್ಳವನೂ ಆಜಾನುಬಾಹುವೂ ಕೆಂಪಾದ ಕಣ್ಣುಗಳುಳ್ಳವನೂ ಆದ ನಕುಲನನ್ನು ಬದುಕಿಸಿಕೊಡು.

ಯ.–ಹತ್ತು ಸಾವಿರ ಆನೆಯಬಲವುಳ್ಳ ಭೀಮನಲ್ಲಿ ನಿನಗೆ ತುಂಬಾ ಪ್ರೀತಿಯಿರುವದು. ಅರ್ಜುನನಿಂದ ಮುಂದೆ ನಿನಗೆ ರಾಜ್ಯಪ್ರಾಪ್ತಿಯಾಗುವದು. ಹೀಗಿರುವಲ್ಲಿ, ಅವರಿಬ್ಬರನ್ನೂ ಬಿಟ್ಟು ನೀನು ಮಲತಾಯಿಯ ಮಗನಾದ ನಕುಲನು ಬದುಕಬೇಕೆಂದು ಯಾತಕ್ಕೋಸ್ಕರ ಅಪೇಕ್ಷಿಸಿದೆ?

ಧ.–ಧರ್ಮವನ್ನು ಕೆಡಿಸಿಕೊಂಡವನು ಸುಖವಾಗಿ ಬದುಕನು. ಆದ್ದರಿಂದ ನಾನು ಧರ್ಮವನ್ನು ಬಿಟ್ಟು ನಡೆಯತಕ್ಕವನಲ್ಲ. ಧರ್ಮವನ್ನು ಬಿಟ್ಟದ್ದೇ ಆದರೆ ಹಾನಿ ತಪ್ಪಲಾರದು. ವೈಷಮ್ಯವಿಲ್ಲದೆ ನಡೆಯುವದೇ ಉತ್ತಮವಾದ ಧರ್ಮವೆಂದು ತಿಳಿದು ನಾನು ನಕುಲನು ಬದುಕಲಿ ಎಂದು ಪ್ರಾರ್ಥಿಸಿದೆನು. ನನ್ನನ್ನು ಧರ್ಮಾತ್ಮನೆಂದು ಎಲ್ಲರೂ ಹೇಳುತ್ತಿರುವರು. ಆದ್ದರಿಂದ ನಾನೆಂದಿಗೂ ಸ್ವಧರ್ಮವನ್ನು ಬಿಟ್ಟು ನಡೆಯತಕ್ಕವನಲ್ಲ. ನಮ್ಮ ತಂದೆಯಾದ ಪಾಂಡುರಾಯನಿಗೆ ಕುಂತೀದೇವಿಯೂ ಮಾದ್ರೀದೇವಿಯೂ ಸಹ ಪತ್ನಿಯರು. ನನಗೆ ಕುಂತೀದೇವಿಯಲ್ಲಿ ಹ್ಯಾಗೆ ಭಕ್ತಿಯಿರುವದೋ ಹಾಗೆಯೇ ಮಾದ್ರೀದೇವಿಯಲ್ಲೂ ಭಕ್ತಿಯಿರುವದು. ಅವರಿಬ್ಬರ ವಿಷಯದಲ್ಲೂ ನಾನು ಸಮಾನವಾಗಿ ನಡೆದುಕೊಳ್ಳುವೆನು. ನಕುಲನು ಬದುಕಿದರೆ ಅವರಿಬ್ಬರೂ ಪುತ್ರವತಿಯರಾಗುವರು. ಆದ್ದರಿಂದ ನೀನು ನಕುಲನನ್ನು ಬದುಕಿಸು.

ಯ.–ಅರ್ಥಕಾಮಗಳಲ್ಲಿ ವೈಷಮ್ಯವಿಲ್ಲದೆ ನಡೆಯುವದೇ ಉತ್ತಮವಾದದ್ದೆಂದು ನೀನು ದೃಢವಾಗಿ ತಿಳಿದುಕೊಂಡಿರುವೆಯಾದ್ದರಿಂದ, ನಿನ್ನ ತಮ್ಮಂದಿರೆಲ್ಲರೂ ಬದುಕಲಿ.

## ೩೧೩ನೇ ಅಧ್ಯಾಯ.—ಯಕ್ಷಪ್ರಶ್ನೆ.—(ಧರ್ಮರಾಯನು ಯಮನಿಂದ ವರಗಳನ್ನು ಪಡೆಯುವಿಕೆ.)

ವೈಶಂಪಾಯನನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯರಾಯನೆ, 'ನಾಲ್ಕುಮಂದಿ ತಮ್ಮಂದಿರೂ ಜೀವಿಸಲಿ' ಎಂದು ಯಕ್ಷನು ನುಡಿದಕ್ಷಣದಲ್ಲೇ, ಭೀಮಾರ್ಜುನನಕುಲಸಹದೇವರು ಜೀವಸಹಿತರಾಗಿ ಎದ್ದು ಹಸಿವೂ ಬಾಯಾರಿಕೆಯೂ ಇಲ್ಲದೆ ಸುಖವಾಗಿದ್ದರು. ಬಳಿಕ ಧರ್ಮರಾಯನು ಆ ಸರೋವರದಲ್ಲಿ ಒಂದು ಕಾಲಿನಿಂದ ನಿಂತಿರತಕ್ಕ ಯಕ್ಷನನ್ನು ನೋಡಿ "ಎಲೈ ಯಕ್ಷನೆ, ನೀನು ಯಾರು? ನಿನ್ನನ್ನು ನೋಡುವರೆ ಯಕ್ಷನಂತೆ ಕಾಣಿಸುವದಿಲ್ಲ. ನೀನು ಅಷ್ಟವಸುಗಳಲ್ಲಿ ಒಬ್ಬನೋ? ಅಥವಾ ಏಕಾದಶರುದ್ರರಲ್ಲಿ ಒಬ್ಬನೋ? ಹಾಗಲ್ಲದಿದ್ದರೆ ದೇವತಾಶ್ರೇಷ್ಠನಾದ ಇಂದ್ರನೋ? ಯಾರೋ ಹೇಳು. ನನ್ನ ತಮ್ಮಂದಿರು ಅನೇಕಸಹಸ್ರ ಯೋಧರೊಡನೆ ಯುದ್ಧಮಾಡಿ ಅವರನ್ನು ಜಯಿಸಬಲ್ಲರು. ಇಂಥ ವೀರರನ್ನು ನಿಗ್ರಹಿಸಿದ ನಿನ್ನಂಥವನನ್ನು ನಾನು ಎಲ್ಲಿಯೂ ನೋಡಲಿಲ್ಲ. ಈಗ ನನ್ನ ತಮ್ಮಂದಿರು ನಿನ್ನ ಅನುಗ್ರಹದಿಂದ ನಿದ್ರೆಯನ್ನು ಮಾಡಿ ಎದ್ದವರಂತೆ ಎದ್ದು ಸುಖವಾಗಿರುವರು. ಆದ್ದರಿಂದ ನೀನು ನನಗೆ ಮಿತ್ರನೋ ಅಥವಾ ನನಗೆ ತಂದೆಯೋ ಆಗಿರಬಹುದು" ಎನಲು, ಯಕ್ಷನು "ಎಲೈ ಧರ್ಮರಾಯನೆ, ನಾನು ಕ್ರೂರವಾದ ಪರಾಕ್ರಮವುಳ್ಳ ಯಮಧರ್ಮರಾಯನು, ನಿನಗೆ ತಂದೆಯು. ನಿನ್ನನ್ನು ನೋಡಬೇಕೆಂದು ಇಲ್ಲಿಗೆ ಬಂದೆನು. ಖ್ಯಾತಿ, ಸತ್ಯ, ಇಂದ್ರಿಯನಿಗ್ರಹ, ಶುಚಿತ್ವ, ಋಜುಸ್ವಭಾವ, ಅಕಾರ್ಯನಿವೃತ್ತಿ, ಮನಸ್ಥೈರ್ಯ, ತಪಸ್ಸು, ದಾನ, ಬ್ರಹ್ಮಚರ್ಯ, ಇವುಗಳು ನನಗೆ ಅಂಗಭೂತವಾದವುಗಳು. ತ್ರಿಕರಣದಿಂದಲೂ ಪರರನ್ನು ಹಿಂಸೆಮಾಡದಿರೋಣವೂ ವೈಷಮ್ಯವಿಲ್ಲದಿರೋಣವೂ ಮನೋನಿಗ್ರಹವೂ ಕೃಛ್ರಚಾಂದ್ರಾಯಣಾದಿ ವ್ರತಗಳೂ ಶುಚಿತ್ವವೂ ಮಾತ್ಸರ್ಯವಿಲ್ಲದಿರೋಣವೂ ಸಹ ಧರ್ಮವನ್ನು ಸಂಪಾದಿಸುವದಕ್ಕೆ ಮಾರ್ಗಗಳು. ಎಲೈ ಧರ್ಮರಾಯನೆ, ನೀನು ಶಮ, ದಮ, ಉಪರಮ, ತಿತಿಕ್ಷೆ, ಸಮಾಧಾನಗಳೆಂಬ ಈ ಐದು ಗುಣಗಳನ್ನೂ ಜನ್ಮಾಂತರಸುಕೃತದಿಂದ ಪಡೆದಿರುವೆ. ಬಾಲ್ಯವಯಸ್ಸಿನಲ್ಲಿ ಕ್ಷುತ್ಪಿಪಾಸೆಗಳೂ ಯೌವನವಯಸ್ಸಿನಲ್ಲಿ ಶೋಕಮೋಹಗಳೂ ಅಪರವಯಸ್ಸಿನಲ್ಲಿ ಜರಾಮೃತ್ಯುಗಳೂ ಉಂಟಾಗುವವು. ಈ ಷಡೂರ್ಮಿಗಳನ್ನೂ ಜಯಿಸಿರುವೆ. ನಿನ್ನಲ್ಲಿರತಕ್ಕ ಸದ್ಗುಣಗಳಿಗೆ ನಾನು ಸಂತುಷ್ಟನಾದೆನು. ನಿನಗೆ ಬೇಕಾದ ವರವನ್ನು ಬೇಡು, ಕೊಡುವೆನು. ನನ್ನ ಭಕ್ತರು ಎಂದಿಗೂ ದುರ್ಗತಿಯನ್ನು ಪಡೆಯತಕ್ಕವರಲ್ಲ" ಎನಲು; ಧರ್ಮರಾಯನು "ಎಲೈ ಯಮಧರ್ಮನೆ, ಬ್ರಾಹ್ಮಣನ ಅರಣಿಯನ್ನು ಮೃಗವು ಅಪಹರಿಸಿಕೊಂಡು ಹೋಗಿರುವದು. ಅದರಿಂದ ಆ ಬ್ರಾಹ್ಮಣನ ಅಗ್ನಿಹೋತ್ರವು ನಷ್ಟವಾಗದಂತೆ ಮೊದಲು ವರವನ್ನು ಕೊಡು" ಎಂದನು. ಅದನ್ನು ಕೇಳಿ ಯಕ್ಷನು "ಎಲೈ ಧರ್ಮರಾಯನೆ, ನಾನೇ ನಿನ್ನನ್ನು ಪರೀಕ್ಷಿಸಬೇಕೆಂದು ಮೃಗರೂಪದಿಂದ ಆ ಬ್ರಾಹ್ಮಣನ ಅರಣಿಯನ್ನು ಅಪಹರಿಸಿದೆನು. ಈಗ ಅದನ್ನು ಕೊಡುತ್ತೇನೆ. ನೀನು ಇನ್ನೊಂದು ವರವನ್ನು ಕೇಳು" ಎನಲು; ಧರ್ಮರಾಯನು "ಎಲೈ ಯಕ್ಷನೆ, ನಾವು ಈ ಅರಣ್ಯದಲ್ಲಿ ಹನ್ನೆರಡುವರುಷಗಳನ್ನು ಕಳೆದೆವು. ಹದಿಮೂರನೆಯ ಸಂವತ್ಸರವು ಪ್ರಾಪ್ತವಾಗಿರುವದು. ಈ ವರ್ಷದಲ್ಲಿ ನಾವು ಅಜ್ಞಾತವಾಸಮಾಡುವದನ್ನು ಯಾರೂ ಕಾಣದಂತೆ ವರವನ್ನು ಅನುಗ್ರಹಿಸು" ಎಂದು ಪ್ರಾರ್ಥಿಸಿದನು. ಯಕ್ಷನು "ಎಲೈ ಧರ್ಮರಾಯನೆ, ಅದೇಪ್ರಕಾರ ನಿನಗೆ ವರವನ್ನು ಕೊಟ್ಟಿರುವೆನು. ನೀವು ಇದೇ ರೂಪಿನಿಂದಲೇ ಸಂಚರಿಸುತ್ತಿದ್ದರೂ, ನನ್ನ ಅನುಗ್ರಹದಿಂದ ಹದಿಮೂರನೆಯ ವರ್ಷದ ಅಜ್ಞಾತವಾಸದಲ್ಲಿ ನಿಮ್ಮನ್ನು ಯಾರೂ ತಿಳಿಯಲಾರರು. ಆದರೆ ನೀವು ಗೋಪ್ಯವಾಗಿ ವಿರಾಟನಗರದಲ್ಲಿ ಅಜ್ಞಾತವಾಸವನ್ನು ಮಾಡತಕ್ಕದ್ದು. ನೀವು ಬೇಕಾದ ರೂಪವನ್ನು ಧರಿಸಿ ಸಂಚರಿಸಬಹುದು. ಈ ಅರಣಿಯನ್ನು ಆ ಬ್ರಾಹ್ಮಣನಿಗೆ ಕೊಟ್ಟುಬಿಡಿರಿ. ಎಲೈ ಧರ್ಮರಾಯನೆ, ನೀನೂ ವಿದುರನೂ ಸಹ ನನ್ನ ಅಂಶದಿಂದ ಉತ್ಪನ್ನರಾದವರು. ನಿನಗೆ ಎಷ್ಟುವರಗಳನ್ನು ಕೊಟ್ಟರೂ ನನಗೆ ತೃಪ್ತಿಯಿಲ್ಲದಿರುವದು. ಇನ್ನೂ ನಿನಗೆ ಬೇಕಾದ ಮೂರನೇ ವರವನ್ನು ಕೊಡುವೆನು ಕೇಳು" ಎನಲು; ಧರ್ಮರಾಯನು ಯಮಧರ್ಮನನ್ನು ಕುರಿತು "ಎಲೈ ಮಹಾನುಭಾವನೆ, ದೇವದೇವನಾದ ನಿನ್ನ ದರ್ಶನವು ನನಗೆ ಲಭಿಸಿತು. ನೀನು ಸಂತುಷ್ಟನಾಗಿ ಯಾವ ವರವನ್ನು ಕೊಟ್ಟರೂ ಅದನ್ನು ನಾನು

ಸ್ವೀಕರಿಸುವೆನು. ಕಾಮಕ್ರೋಧಲೋಭಮೋಹಗಳನ್ನು ಜಯಿಸಿ ನಾನು ದಾನದಲ್ಲಿಯೂ ಸತ್ಯದಲ್ಲಿಯೂ ತಪಸ್ಸಿನಲ್ಲಿಯೂ ಯಾವಾಗಲೂ ಆಸಕ್ತನಾಗಿರುವಂತೆ ಅನುಗ್ರಹವನ್ನು ಮಾಡು" ಎಂದು ಪ್ರಾರ್ಥಿಸಿದನು. ಯಮಧರ್ಮನು "ಎಲೈ ಧರ್ಮನಂದನನೆ, ಸ್ವಭಾವದಿಂದ ನೀನು ಗುಣಸಂಪನ್ನನಾಗಿಯೇ ಇರುವೆ. ನನ್ನ ಅನುಗ್ರಹದಿಂದ ನಿನಗೆ ಮತ್ತಷ್ಟು ಅಧಿಕವಾಗಿ ಧರ್ಮದಲ್ಲಿ ಬುದ್ಧಿಯು ಪ್ರವರ್ತಿಸುವದು" ಎಂದು ನುಡಿದು, ಅಂತರ್ಧಾನವನ್ನು ಹೊಂದಿದನು. ಬಳಿಕ ಪಾಂಡವರು ನಿರಾಯಾಸದಿಂದ ತಮ್ಮ ಆಶ್ರಮಕ್ಕೆ ಬಂದು ಆ ಬ್ರಾಹ್ಮಣನಿಗೆ ಅರಣಿಯನ್ನು ಕೊಟ್ಟರು. ಎಲೈ ಜನಮೇಜಯರಾಯನೆ, ಯಕ್ಷನಿಗೂ ಧರ್ಮರಾಯನಿಗೂ ಪರಸ್ಪರವಾಗಿ ನಡೆದ ಸಂವಾದವನ್ನು ಯಾರು ಪಠನೆಮಾಡುವರೋ ಅವರು ಜಿತೇಂದ್ರಿಯರಾಗಿ ಪುತ್ರಪೌತ್ರಸಹಿತರಾಗಿ ನೂರುವರುಷ ಸುಖವಾಗಿ ಜೀವಿಸುವರು. ಮತ್ತು ಈ ಇತಿಹಾಸವನ್ನು ಪಠಿಸತಕ್ಕವರು ಅಧರ್ಮದಲ್ಲಿಯೂ ಮಿತ್ರಭೇದದಲ್ಲಿಯೂ ಪರದಾರ ಪರದ್ರವ್ಯಾಪಹಾರದಲ್ಲಿಯೂ ಕೃಪಣತ್ವದಲ್ಲಿಯೂ ಮನಸ್ಸನ್ನು ಇಡದೆ ಸುಖವಾಗಿ ಜೀವಿಸುವರು—ಎಂದು ವೈಶಂಪಾಯನಮುನೀಂದ್ರನು ಜನಮೇಜಯರಾಯನಿಗೆ ವಿವರಿಸಿದನು.

## ೩೧೪ನೇ ಅಧ್ಯಾಯ.—ಪಾಂಡವರು ಅಜ್ಞಾತವಾಸಮಾಡಲಾಲೋಚಿಸಿದ್ದು.

ಅನಂತರದಲ್ಲಿ ವೈಶಂಪಾಯನಮುನೀಂದ್ರನು ಜನಮೇಜಯರಾಯನನ್ನು ಕುರಿತು—ಕೇಳು ಜನಮೇಜಯನೆ, ಬಳಿಕ ಸತ್ಯಪರಾಕ್ರಮರಾದ ಪಾಂಡವರು ಯಮಧರ್ಮರಾಯನ ಅಜ್ಞಾನುಸಾರವಾಗಿ ರೂಪಾಂತರದಿಂದ ಹದಿಮೂರನೆಯ ವರ್ಷದಲ್ಲಿ ಅಜ್ಞಾತವಾಸವನ್ನು ಮಾಡಬೇಕೆಂದಪೇಕ್ಷಿಸಿ, ತಮ್ಮ ಸಮೀಪದಲ್ಲಿರತಕ್ಕ ವಿದ್ವಾಂಸರನ್ನೂ ತಮ್ಮನ್ನು ಆಶ್ರಯಿಸಿಕೊಂಡಿರತಕ್ಕ ವನವಾಸಿಗಳಾದ ತಪಸ್ವಿಗಳನ್ನೂ ಕುರಿತು, ಕೈಮುಗಿದುಕೊಂಡು ನಿಂತು, "ಎಲೈ ಮಹಾತ್ಮರೆ, ಕೌರವರು ನೀತಿಯನ್ನು ಬಿಟ್ಟು ಕಪಟದಿಂದ ದ್ಯೂತವನ್ನಾಡಿ ನಮ್ಮನ್ನು ಅರಣ್ಯವಾಸಕ್ಕೆ ಕಳುಹಿಸಿದ್ದು ನಿಮಗೆ ತಿಳಿದೇ ಇರುವದಷ್ಟೆ? ಅವರ ನಿಬಂಧನೆಯ ಪ್ರಕಾರ ನಾವು ಹನ್ನೆರಡು ವರುಷ ವನವಾಸವನ್ನು ನೆರವೇರಿಸಿದ್ದಾಯಿತು. ಇನ್ನು ಅಜ್ಞಾತವಾಸವನ್ನು ಮಾಡತಕ್ಕ ಹದಿಮೂರನೆಯ ವರ್ಷವೊಂದು ಉಳಿದಿರುವದು. ಆದ್ದರಿಂದ ನಾವು ಯಾರಿಗೂ ತಿಳಿಯದಹಾಗೆ ಬಂದುವರುಷ ವಾಸಮಾಡುವದಕ್ಕೆ ತಾವೆಲ್ಲರೂ ಅಪ್ಪಣೆಯನ್ನು ಕೊಡಿಸಬೇಕು. ನಮ್ಮಲ್ಲಿ ಯಾವಾಗಲೂ ವೈರವನ್ನು ಮಾಡುತ್ತಾ ಅಲ್ಲಲ್ಲಿ ಗೂಢಚಾರರನ್ನಿಟ್ಟು ದುರಾಲೋಚನೆಯನ್ನು ಮಾಡುತ್ತಿರುವ ದುರ್ಯೋಧನ ಕರ್ಣ ಶಕುನಿಗಳು ಅಜ್ಞಾತವಾಸದಲ್ಲಿ ನಮ್ಮನ್ನು ಕಂಡು ಹಿಡಿದರೆ, ನಮ್ಮವರಾದ ಪುರಜನಗಳಿಗೂ ನಮ್ಮ ಸ್ವಜನಗಳಿಗೂ ಕೆಟ್ಟದ್ದನ್ನು ಮಾಡಿಯಾರು? ಆದ್ದರಿಂದ ಅವರಿಗೆ ಸಿಕ್ಕದಂತೆ ನಾವು ದೇಶಾಂತರದಲ್ಲಿ ಅಜ್ಞಾತವಾಸವನ್ನು ಮಾಡುತ್ತೇವೆ" ಎಂದು ಕೇಳಿಕೊಂಡರು. ಆಗ ಶುಚಿಭೂತನಾದ ಧರ್ಮರಾಯನು ಅಧಿಕವಾದ ದುಃಖದಿಂದಲೂ ವ್ಯಸನದಿಂದಲೂ ಕಂಬನಿಗಳನ್ನು ತುಂಬಿಕೊಂಡು, ಗದ್ಗದಸ್ವರದಿಂದ ಮಾತನಾಡುತ್ತಲೇ ಮೂರ್ಛಿತನಾದನು. ಕೂಡಲೆ ಅಲ್ಲಿದ್ದ ಬ್ರಾಹ್ಮಣರು ಭೀಮಾದಿಗಳೊಡನೆ ಆತನನ್ನು ಸಂತೈಸಲು, ಆತನನ್ನು ಕುರಿತು ಧೌಮ್ಯಾಚಾರ್ಯರು "ಎಲೈ ರಾಯನೆ, ನೀನು ವಿದ್ವಾಂಸನಾಗಿಯೂ ಜಿತೇಂದ್ರಿಯನಾಗಿಯೂ ಸತ್ಯಸಂಧನಾಗಿಯೂ ಇರುವೆ. ಎಂಥ ವಿಪತ್ತು ಬಂದರೂ ನಿಮ್ಮಂಥವರು ಹೀಗೆ ಮನಸ್ಸು ಕೆಟ್ಟು ವ್ಯಸನಪಡುವದುಂಟೆ? ದೇವತೆಗಳು ಕೂಡ ಶತ್ರುಗಳ ನಿಗ್ರಹಾರ್ಥವಾಗಿ ಯಾರಿಗೂ ತಿಳಿಯದಹಾಗೆ ಅಲ್ಲಲ್ಲಿ ವಾಸಮಾಡುತ್ತ ಕಷ್ಟದಶೆಯನ್ನು ಅನುಭವಿಸಲಿಲ್ಲವೆ? ಪೂರ್ವದಲ್ಲಿ ಇಂದ್ರನು ನಿಷಧದೇಶಕ್ಕೆ ಹೋಗಿ ಗಿರಿಪ್ರಸ್ಥಾಶ್ರಮದಲ್ಲಿ ಮರೆಯಾಗಿ ವಾಸಮಾಡಿಕೊಂಡಿದ್ದು ಶತ್ರುನಿಗ್ರಹಾರ್ಥವಾಗಿ ಮಹತ್ತಾದ ಕಾರ್ಯವನ್ನು ಮಾಡಲಿಲ್ಲವೆ? ಮಹಾವಿಷ್ಣುವು ಕುದುರೆತಲೆಯ ಆಕಾರವುಳ್ಳವನಾಗಿ ಅದಿತಿಯ ಗರ್ಭದಲ್ಲಿ ದೈತ್ಯರ ಸಂಹಾರಕ್ಕೋಸ್ಕರ ಬಹುಕಾಲ ಅಜ್ಞಾತವಾಸವನ್ನು ಮಾಡಲಿಲ್ಲವೆ? ಆ ಮಹಾವಿಷ್ಣುವು ತಾನು ಇಂಥವನೆಂದು ಯಾರಿಗೂ ತಿಳಿಯದಂತೆ ಬ್ರಾಹ್ಮಣರೂಪದಿಂದ ವಾಮನಾವತಾರವನ್ನು ಮಾಡಿ ಮೂರುಹೆಜ್ಜೆಗಳಿಂದ ಬಲಿಚಕ್ರವರ್ತಿಯ ರಾಜ್ಯವನ್ನು ತೆಗೆ

ದುಕೊಂಡ ಸಂಗತಿಯನ್ನು ನೀನು ಕೇಳಿಲ್ಲವೆ? ಅಗ್ನಿಯೂ ಕೂಡ ಉದಕವನ್ನು ಹೊಕ್ಕು ಅಲ್ಲಿ ಯಾರಿಗೂ ತಿಳಿಯದಂತೆ ಇದ್ದುಕೊಂಡು ಮಹತ್ತಾದ ದೇವತೆಗಳ ಕಾರ್ಯವನ್ನು ಸಾಧಿಸಿದ ವೃತ್ತಾಂತವು ನಿನಗೆ ವಿದಿತವಾಗಿಲ್ಲವೆ? ಶ್ರೀಹರಿಯು ಯಾರಿಗೂ ಗೊತ್ತಾಗದಹಾಗೆ ಇಂದ್ರನ ವಜ್ರಾಯುಧದಲ್ಲಿ ಪ್ರವೇಶಮಾಡಿ ಯಾವ ಕಾರ್ಯವನ್ನು ಮಾಡಿದನೋ ಅದು ನಿನ್ನ ಕಿವಿಗೆ ಬಿದ್ದಿಲ್ಲವೆ? ಇದಲ್ಲದೆ ಬ್ರಹ್ಮರ್ಷಿಯಾದ ಔರ್ವನು ತನ್ನ ತಾಯಿಯ ತೊಡೆಯಲ್ಲಿ ಮರೆಯಾಗಿದ್ದುಕೊಂಡು ದೇವತೆಗಳ ವಿಷಯದಲ್ಲಿ ಮಹತ್ತಾದ ಕಾರ್ಯವನ್ನು ಮಾಡಲಿಲ್ಲವೆ? ಇದೇ ಪ್ರಕಾರ ತೇಜೋವಂತನಾದ ಸೂರ್ಯನೂ ಕೂಡ ಭೂಮಿಯಲ್ಲಿ ಎಲ್ಲಾ ಕಡೆಯಲ್ಲೂ ಗೂಢವಾಗಿದ್ದುಕೊಂಡು ಶತ್ರುಗಳನ್ನೆಲ್ಲಾ ದಹಿಸಿಬಿಡಲಿಲ್ಲವೆ? ಮತ್ತು ಮಹಾವಿಷ್ಣುವು ಮನುಷ್ಯರೂಪದಿಂದ ದಶರಥರಾಯನ ಮನೆಯಲ್ಲಿದ್ದುಕೊಂಡು ಪರಾಕ್ರಮಶಾಲಿಯಾಗಿ ರಾವಣನನ್ನು ಸಂಹರಿಸಲಿಲ್ಲವೆ? ಈ ಪ್ರಕಾರ ಅನೇಕಮಂದಿ ಮಹಾತ್ಮರು ತಮ್ಮನ್ನು ಯಾರೂ ತಿಳಿಯದಂತೆ ಅಲ್ಲಲ್ಲಿ ಗುಪ್ತವಾಗಿ ವಾಸಮಾಡುತ್ತ ಶತ್ರುಗಳನ್ನು ಜಯಿಸಿರುವರು. ಹಾಗೆ ನೀನೂ ಶತ್ರುಗಳನ್ನು ಜಯಿಸುವೆ" ಎಂದು ಸಮಾಧಾನವನ್ನು ಹೇಳಿದರು. ಆ ಮಾತುಗಳನ್ನು ಕೇಳಿ ಧರ್ಮಜ್ಞನಾದ ಧರ್ಮರಾಯನು ಮನಸ್ಸಿಗೆ ಹರ್ಷವನ್ನು ತಂದುಕೊಂಡು, ಶಾಸ್ತ್ರಜ್ಞಾನದಿಂದಲೂ ಸ್ವಬುದ್ಧಿಯಿಂದಲೂ ಸ್ಥೈರ್ಯವನ್ನು ಹೊಂದಿದನು. ಆ ಬಳಿಕ ಮಹಾಬಲಶಾಲಿಯಾದ ಭೀಮಸೇನನು ಧರ್ಮರಾಯನಿಗೆ ಸಂತೋಷವುಂಟಾಗುವಹಾಗೆ ಮಾತನಾಡುತ್ತ, ಆತನನ್ನು ಕುರಿತು "ಎಲೈ ಅಗ್ರಜನೆ, ನಿನ್ನ ಧರ್ಮಬುದ್ಧಿಯಿಂದಲೇ ಗಾಂಡೀವಧನುರ್ಧಾರಿಯಾದ ಅರ್ಜುನನು ಯಾವ ಸಾಹಸವನ್ನೂ ಮಾಡದಿರುವನು. ಶತ್ರುಗಳನ್ನು ಧ್ವಂಸಮಾಡತಕ್ಕ ವಿಷಯದಲ್ಲಿ ಸಮರ್ಥರಾದ ನಕುಲಸಹದೇವರನ್ನೂ ನನ್ನೊಡನೆ ಶತ್ರುಗಳನ್ನು ಜಯಿಸತಕ್ಕ ವಿಷಯದಲ್ಲಿ ತಡೆಯುತ್ತಿರುವೆ. ನಾವೆಲ್ಲರೂ ನಿನ್ನ ಅಪ್ಪಣೆಯಾದಂತೆ ನಡೆದುಕೊಳ್ಳುವ ವಿಷಯದಲ್ಲಿ ಸಿದ್ಧರಾಗಿರುವೆವು. ಈಗ ನಾವು ಏನುಮಾಡಬೇಕೋ ಅದನ್ನು ನೀನು ವಿಧಿಸು. ಜಾಗ್ರತೆಯಾಗಿ ಶತ್ರುಗಳನ್ನು ಜಯಿಸಿಬಿಡೋಣ" ಎಂದನು. ಅನಂತರ ವೇದವೇತ್ತರೂ ಶ್ರೇಷ್ಠರೂ ಆದ ಅಲ್ಲಿದ್ದ ಬ್ರಾಹ್ಮಣರೂ ಯತಿಗಳೂ ಋಷಿಗಳೂ ಸಹ ಪಾಂಡವರಿಗೆ ಆಶೀರ್ವಾದಮಾಡಿ "ಅವರೆಲ್ಲರ ಸಂಗಡಲೂ ಹೋಗಿಬರುತ್ತೇವೆ. ಪುನಃ ನಿಮ್ಮನ್ನು ನೋಡುವೆವು" ಎಂದು ಹೇಳಿ ತಮ್ಮತಮ್ಮ ವಾಸಸ್ಥಾನಗಳಿಗೆ ಹೊರಟು ಹೋದರು. ಅನಂತರ ವೀರರಾದ ಪ್ರಜ್ಞಾಶಾಲಿಗಳಾದ ಪಾಂಡವರೈವರೂ ಧನುರ್ಧಾರಿಗಳಾಗಿ ಧೌಮ್ಯಾಚಾರ್ಯರೊಡಗೂಡಿ, ದ್ರೌಪದಿಯನ್ನು ಜೊತೆಯಲ್ಲಿ ಕರೆದುಕೊಂಡು, ನಿಮಿತ್ತಮಾತ್ರಕ್ಕೆ ಆ ದಿವಸ ಆ ಸ್ಥಳವನ್ನು ಬಿಟ್ಟು ಒಂದು ಹರದಾರಿಯದೂರ ಹೋಗಿ, ಎಲ್ಲರೂ ಶಾಸ್ತ್ರಜ್ಞರೂ ಮಂತ್ರಾಲೋಚನೆಯನ್ನು ಮಾಡತಕ್ಕ ವಿಷಯದಲ್ಲಿ ಸಮರ್ಥರೂ ಸಂಧಿವಿಗ್ರಹಕಾಲಗಳನ್ನು ಬಲ್ಲವರೂ ಆದ್ದರಿಂದ ಮುಂದೇನುಮಾಡತಕ್ಕದ್ದೆಂದು ಮಂತ್ರಾಲೋಚನೆಯನ್ನು ಮಾಡುವದಕ್ಕೆ ಒಂದು ಸ್ಥಳದಲ್ಲಿ ಕೂತುಕೊಂಡರು" ಎಂದು ವೈಶಂಪಾಯನಮುನೀಂದ್ರನು ಜನಮೇಜಯರಾಯನಿಗೆ ವಿವರಿಸಿದನು.

## ಅರಣ್ಯಪರ್ವ ಶ್ರವಣ ಫಲ.

ಸೂತಪೌರಾಣಿಕರು ಶೌನಕಾದಿಋಷಿಗಳನ್ನು ಕುರಿತು—ಎಲೈ ಶೌಕಾದಿಋಷಿಗಳಿರಾ, ಈ ಅರಣ್ಯಪರ್ವದ ಕಥೆಯನ್ನು ಕೇಳಿದವನು ಸಕಲ ಪಾಪಗಳನ್ನೂ ಕಳೆದುಕೊಂಡು, ಧನವಂತನಾಗಿ, ಪುತ್ರಪೌತ್ರರಿಂದ ಕೂಡಿ, ಯಾವ ಯಾವ ಮನೋರಥವನ್ನು ಬಯಸುವನೋ ಅವುಗಳನ್ನೆಲ್ಲಾ ನಿಜವಾಗಿ ಪಡೆಯುವನು. ಸ್ತ್ರೀಯರೇ ಆಗಲಿ, ಪುರುಷರೇ ಆಗಲಿ, ನೇಮದಿಂದ ಈ ಅರಣ್ಯಪರ್ವದ ಕಥೆಯನ್ನು ಶ್ರವಣಮಾಡಿ ಬ್ರಾಹ್ಮಣರಿಗೆ ಪಾಯಸಮೃಷ್ಟಾನ್ನಗಳಿಂದ ಭೋಜನವನ್ನು ಮಾಡಿಸಿ ವಸ್ತ್ರ ಗೋ ಸ್ವರ್ಣಗಳನ್ನು ದಾನಮಾಡಿ ರತ್ನಗಳಿಂದ ಅವರನ್ನು ಪೂಜಿಸಿದರೆ, ಅವರು ಸಕಲೇಷ್ಟಾರ್ಥಗಳನ್ನೂ ಪಡೆಯುವರು. ಬ್ರಾಹ್ಮಣರು ಸಂತುಷ್ಟರಾದರೆ, ಪಾಂಡವರೂ ಬ್ರಹ್ಮವಿಷ್ಣುಮಹೇಶ್ವರರೂ ಇಂದ್ರಾದಿದೇವತೆಗಳೂ ಸಕಲ ಪ್ರಾಣಿಗಳೂ ಸಕಲ ಋಷಿಗಳೂ ಸಕಲ

ದೇವತಾ ಸ್ತ್ರೀಯರೂ ಸಕಲ ಪಿತೃಗಳೂ ಸಹ ತೃಪ್ತರಾಗುವರು. ಈ ಅರಣ್ಯಪರ್ವವನ್ನು ಪುರಾಣ ಹೇಳಿದ ಬ್ರಾಹ್ಮಣನನ್ನು ಯಾರು ತಮ್ಮತಮ್ಮ ಶಕ್ತ್ಯನುಸಾರವಾಗಿ ಅನ್ನವಸ್ತ್ರಗಳಿಂದಲೂ ಸುವರ್ಣಾಲಂಕಾರದಿಂದಲೂ ವಿಶೇಷವಾಗಿ ಪೂಜೆಯನ್ನು ಮಾಡಿ, ಬೆಳ್ಳೀ ಗೊರಸುಗಳುಳ್ಳದ್ದಾಗಿಯೂ ಚಿನ್ನದ ಕೊಂಬುಗಳುಳ್ಳದ್ದಾಗಿಯೂ ಇರುವ ಕಪಿಲಾಗೋವನ್ನು ಹಾಲುಕರೆಯತಕ್ಕ ಕಂಚಿನ ಪಾತ್ರೆಯೊಡನೆ ಆತನಿಗೆ ದಾನಮಾಡಿ, ಪಾಂಡವರ ಸಂತೋಷಾರ್ಥವಾಗಿ ಬ್ರಾಹ್ಮಣರಿಗೆ ಅಧಿಕವಾಗಿ ಅನ್ನದಾನವನ್ನು ಮಾಡುವರೋ ಅವರು, ಈ ಲೋಕದಲ್ಲಿ ಬೇಕಾದ ಸುಖವನ್ನು ಪಡೆದು ಬಳಿಕ ಸ್ವರ್ಗಸುಖವನ್ನು ಅನುಭವಿಸುವರು—ಎಂದು ಸೂತಪೌರಾಣಿಕರು ಶೌನಕಾದಿಋಷಿಗಳಿಗೆ ನಿರೂಪಿಸಿದರು.

ಇಂತು ಕರ್ಣಾಟಕಭಾಷೆಯಲ್ಲಿ ಶ್ರೀಮತ್ಸಮಸ್ತ ಭೂಮಂಡಲ ಮಂಡಸಾಯಮಾನ ನಿಖಿಲದೇಶಾವತಂಸ ಕರ್ಣಾಟಕ ಜನಪದ ಸಂಪದಧಿಷ್ಠಾನಭೂತ ಶ್ರೀಮನ್ಮಹೀಶೂರ ಮಹಾಸಂಸ್ಥಾನಮಧ್ಯದೇದಿಪ್ಯಮಾನಾವಿಕಲಕಲಾನಿಧಿ ಕುಲಕ್ರಮಾಗತ ರಾಜ ಕ್ಷಿತಿಪಾಲಪ್ರಮುಖ ನಿಖಿಲನಿಜರಾಜಾಧಿರಾಜ ಮಹಾರಾಜ ಚಕ್ರವರ್ತಿಮಂಡಲಾನುಭೂತ ದಿವ್ಯರತ್ನಸಿಂಹಾಸನಾರೂಢ ಶ್ರೀಮದ್ರಾಜಾಧಿರಾಜ ಪರಮೇಶ್ವರ ಪ್ರೌಢಪ್ರತಾಪಾಪ್ರತಿಮವೀರ ನರಪತಿಬಿರುದೆಂತೆಂಬರಗಂಡ ಲೋಕೈಕವೀರ ಯದು ಕುಲಪಯಃಪಾರಾವಾರಕಲಾನಿಧಿ ಶಂಖಚಕ್ರಕುಠಾರಾಂಕುಶಮಕರಮತ್ಸ್ಯಸಾಳ್ವಗಂಡಭೇರುಂಡ ಧರಣೀವರಾಹ ಹನುಮದ್ಗರುಡ ಕಂಠೀರವಾದ್ಯನೇಕ ಬಿರುದಾಂಕಿತ ಶ್ರೀಚಾಮರಾಜ ಮಹೀಪಾಲ ಧರ್ಮಪತ್ನೀ ಕೆಂಪನಂಜ ಮಾಂಬಾ ಗರ್ಭಸುಧಾಂಬುಧಿ ರಾಕಾಸುಧಾಕರಾಯಮಾಣ ಶ್ರೀಚಾಮುಂಡಿಕಾ ವರಪ್ರಸಾದೋದ್ಭವರಾದ ಆತ್ರೇಯಸಗೋತ್ರ ಅಶ್ವಲಾಯನಸೂತ್ರ ಋಕ್ಶಾಖಾನುವರ್ತಿಗಳಾದ ಶ್ರೀಮಹೀಶೂರ ಪುರವರಾಧೀಶ ಶ್ರೀಮತ್ಕೃಷ್ಣರಾಜ ಒಡೆಯರ್ ಬಹದ್ದೂರ್, ಜಿ. ಸಿ. ಎಸ್. ಐ ಯವರು ಲೋಕೋಪಕಾರಾರ್ಥವಾಗಿ ರಚಿಸಿದ ಶ್ರೀಕೃಷ್ಣರಾಜವಾಣೀವಿಲಾಸವೆಂಬ ಮಹಾಭಾರತದ ಟೀಕಿನಲ್ಲಿ ಅರಣ್ಯಪರ್ವದ ೩೧೪ನೇ ಅಧ್ಯಾಯಾರ್ಥನಿರೂಪಣಕ್ಕೆ ಮಂಗಳಮಸ್ತು.

ಅರಣ್ಯಪರ್ವ ಸಂಪೂರ್ಣವು.